ಕರ್ನಾಟಕ ವಿಧಾನ ಸಭೆಯ ನಡೆವಳಿಕೆಗಳು

KARNATAKA LEGISLATIVE ASSEMBLY DEBATES

ಕರ್ನಾಟಕ ರಾಜ್ಯ ಪತ್ರಾಗಾರ,
ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು
ಪ್ರ.ಸಂ. [illegible] ದಿನಾಂಕ 31.8.95

ಅಧಿಕೃತ ವರದಿ

OFFICIAL REPORT

ಹದಿಮೂರನೆಯ ಅಧಿವೇಶನ

THIRTEENTH SESSION

ಸಂಪುಟ ೬ (ಕ್ರಮಾಂಕ ೧ ರಿಂದ ೫)

VOLUME VI - (NOS. 1 TO 5)

(೨೬ನೇ ಆಗಸ್ಟ್ ೧೯೯೪, ೨೯ನೇ ಆಗಸ್ಟ್ ೧೯೯೪,
೩೦ನೇ ಆಗಸ್ಟ್ ೧೯೯೪ ರಿಂದ ೩೧ನೇ ಆಗಸ್ಟ್ ೧೯೯೪ ರವರೆಗೆ
ಮತ್ತು ೧ನೇ ಸೆಪ್ಟೆಂಬರ್ ೧೯೯೪)

(26th August 1994, 29th August 1994,
30th August 1994 to 31st August 1994 & 1st September 1994)

ಕರ್ನಾಟಕ ವಿಧಾನ ಮಂಡಲದ ಕಾರ್ಯಾಲಯ ಬೆಂಗಳೂರು

Karnaṭaka Legislature Secretariat, Bangalore

CONTENTS

TO THE

KARNATAKA LEGISLATIVE ASSEMBLY DEBATES

Volume VI - (Nos 1 to 5)

(೨೬ನೇ ಆಗಸ್ಟ್ ೧೯೯೪, ೨೯ನೇ ಆಗಸ್ಟ್ ೧೯೯೪,
೩೦ನೇ ಆಗಸ್ಟ್ ೧೯೯೪ ರಿಂದ ೩೧ನೇ ಆಗಸ್ಟ್ ೧೯೯೪ ರವರೆಗೆ
ಮತ್ತು ೧ನೇ ಸೆಪ್ಟೆಂಬರ್ ೧೯೯೪ರವರೆಗೆ)

ಶುಕ್ರವಾರ, ೨೬ನೇ ಆಗಸ್ಟ್ ೧೯೯೪
ಭಾದ್ರಪದ, ಶಕ ೧೯೧೬

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು 1-40
2. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು 40-41
3. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳು 41-103
4. ಪ್ರಕಟಣೆ 103
5. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು 103
    1. ರಾಜ್ಯದಲ್ಲಿ ಕೆಲವು ಕಡೆ ಅತಿವೃಷ್ಟಿಯಿಂದ ರೈತರು ಕಂಗಾಲಾಗಿರುವುದು 103-104
    2. ಬೆಳಗಾಂನಲ್ಲಿ ವಕೀಲರ ಸಂಘದವರ ಧರಣಿ 104-107
    3. ಅಂಗನವಾಡಿ ಕಾರ್ಯಕರ್ತೆಯರನ್ನು ಬಂಧಿಸಿರುವುದು 107-112
6. ಗಮನ ಸೆಳೆಯುವ ಸೂಚನೆ 112
    1. ಕರ್ನಾಟಕ ಭೂ ಸುಧಾರಣಾ ಕಾಯ್ದೆಯ 1974 ಕಲಂ 48 (ಎ) ಪ್ರಕಾರ ಭೂ ಸ್ವಾಧೀನಾನುಭವ ಪಡೆಯಲು ಫಾರಂ - 7 ರಲ್ಲಿ ಡಿಕ್ಲರೇಷನ್

ಕೊಡದಿರುವಂತಹ ರೈತರಿಗೆ ಭೂಮಿ ಸ್ವಾಧೀನದ
ಹಕ್ಕನ್ನು ಕೊಡಲು ಸಾಧ್ಯವಾಗದೆ ಇರುವುದು
ಹಂಗಾಮಿ ಸಾಗುವಳಿ ಮಾಡುತ್ತಿರುವ ರೈತರಿಗೆ
ಆಗುತ್ತಿರುವ ಅನಾನುಕೂಲ 112-116
7. ಮಂತ್ರಿಗಳ ಹೇಳಿಕೆ 116
ರಾಜ್ಯದಲ್ಲಿನ 1994ರ ಜೂನ್-ಜುಲೈ ತಿಂಗಳಿನ
ಭಾರಿ ಮಳೆ ಪ್ರವಾಹ ಹಾಗೂ ರಾಜ್ಯದ ಕೆಲವು
ಭಾಗಗಳ ಬರ ಪರಿಸ್ಥಿತಿ ವಿಚಾರ 116-120
8. ವಿತ್ತೀಯ ಕಾರ್ಯಕಲಾಪಗಳು 120
1994-95ನೇ ಸಾಲಿನ ಬೇಡಿಕೆಗಳ ಮಂಡನೆ 120-123
(ಬೇಡಿಕೆ ಸಂಖ್ಯೆ 23, 16, 11, 12, 13, 37, 38, 53)

ಸೋಮವಾರ, ೨೯ನೇ ಆಗಸ್ಟ್ ೧೯೯೪

ಭಾದ್ರಪದ, ಶಕ ೧೯೧೬

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ
ಮೂಲಕ ನೀಡಲಾದ ಉತ್ತರಗಳು 125-149
2. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ 149-153
3. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ
ನೀಡಲಾದ ಉತ್ತರಗಳು 153-198
4. ವರದಿಯನ್ನೊಪ್ಪಿಸುವುದು ,,,,, 198
5. ಅಧ್ಯಕ್ಷರ ಅಪ್ಪಣೆ ಪಡೆದು ಪ್ರಸ್ತಾಪಿಸಲಾದ ವಿಷಯಗಳು 198-199
1. ಬರಗಾಲದ ಬಗ್ಗೆ ಹಾಗೂ ವಸತಿ ಸಚಿವರು
ಭೂಸುಧಾರಣೆ ಕಾಯ್ದೆ ಉಲ್ಲಂಘನೆ ಮಾಡಿರುವುದು 199
2. ಕರ್ನಾಟಕ ಲೋಕಸೇವಾ ಆಯೋಗದವರು ನಡೆಸಿರುವ
ಗ್ರೂಪ್-ಎ, ಗ್ರೂಪ್ -ಬಿ ಹುದ್ದೆಗಳಿಗೆ ಲಿಖಿತ
ಪರೀಕ್ಷೆಯಲ್ಲಿ ಲೋಪದೋಷಗಳು ನಡೆದಿರುವುದು 199-216
3. ಜೀವನ್‌ಭೀಮ ನಗರದಲ್ಲಿ ಕನ್ನಡ ಚಳುವಳಿ
ಕಾರ್ಯಕರ್ತನ ಮೇಲೆ ಪೊಲೀಸರು ದೌರ್ಜನ್ಯ
ನಡೆಸಿರುವುದು 216-217
4. ಗಮನ ಸೆಳೆಯುವ ಸೂಚನೆ 217
ತುಂಗಭದ್ರಾ ಎಡದಂಡೆ ನಾಲೆ ಸತತವಾಗಿ
8 ಸಾರಿ ಬಿರುಕುಬಿಟ್ಟು ನೀರು ಬಿಡುವುದರಿಂದ
ರೈತರಿಗೆ ತುಂಬಾ ತೊಂದರೆಯಾಗಿರುವುದು 217-225
7. ಶಾಸನ ರಚನಾ ಕಾರ್ಯಕಲಾಪಗಳು 225
1994 ಕರ್ನಾಟಕ ಮನರಂಜನಾ ತೆರಿಗೆ(ತಿದ್ದುಪಡಿ) ವಿಧೇಯಕ 225-230

8. ಶ್ರೀ ಗೋಪಿನಾಥ್ ಆರ್. ಸಾಂಡ್ರ, ವಸತಿ ಸಚಿವರು ಭೂಮಿ ಖರೀದಿ ವಿಚಾರದಲ್ಲಿ ಮಾಡಿರುವ ಕಾನೂನಿನ ಉಲ್ಲಂಘನೆ 230-266
9. ಅನುಬಂಧ I 267-279

ಮಂಗಳವಾರ, ೩೦ನೇ ಆಗಸ್ಟ್ ೧೯೯೪

ಭಾದ್ರಪದ, ಶಕ ೧೯೧೬

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು 281-311
2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು 311-377
3. ಪ್ರಕಟಣೆ 377
4. ವರದಿಯನ್ನೊಪ್ಪಿಸುವುದು. 378
5. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು 378
   1. ಉತ್ತರ ಕನ್ನಡ ಜಿಲ್ಲೆಯ ಕೈಗಾ ನ್ಯೂಕ್ಲಿಯರ್ ಪ್ಲಾಂಟ್ ಬಗ್ಗೆ 378-380
   2. ರಾಜ್ಯ ಪೋಲೀಸ್ ಪಡೆಯಲ್ಲಿ ನೇಮಕವಾಗಿರುವ ಸುಮಾರು 5 ಸಾವಿರಕ್ಕೂ ಹೆಚ್ಚು ಜನ ಬೀದಿ ಪಾಲಾಗಿರುವ ಸಂದರ್ಭ 380-384
   3. ವಿಭಾಗಾಧಿಕಾರಿಗಳು ಜಿಲ್ಲಾಧಿಕಾರಿಯವರು ತಹಶೀಲ್ದಾರ್‌ರು ಮಾಜಿ ಶಾಸಕರನ್ನು ಕರೆದೊಯ್ಯಲು ಜಿಲ್ಲಾ ಮಂತ್ರಿಗಳ ಸೂಚನೆ 384-389
6. ಗಮನ ಸೆಳೆಯುವ ಸೂಚನೆಗಳು 390
   1. ಕನ್ನಡ ಚಳುವಳಿಗಾರ ಶ್ರೀ ಎ.ಟಿ. ರಂಗನಾಥ್‌ರವರ ಮೇಲೆ ಬೆಂಗಳೂರಿನ ಜೀವನ ಭೀಮನಗರದ ಪೋಲೀಸ್ ಠಾಣೆಯಲ್ಲಿ ಆದ ದೌರ್ಜನ್ಯ 390-396
   2. ರೈತರಿಂದ ಖರೀದಿಸುವ ಕಬ್ಬಿನ ಬೆಲೆಯ ಮೇಲೆ ಶೇಕಡಾ 7ರಷ್ಟು ಆಡ್ವೋಲೆರಮ್ ಹಾಗೂ ಶೇಕಡಾ 1 ರಷ್ಟು ಸೆಸ್‌ನ್ನು ವಿಧಿಸಿರುವುದರಿಂದ ತೊಂದರೆಯಾಗಿರುವುದು 396-404
7. ವಿತ್ತೀಯ ಕಾರ್ಯಕಲಾಪಗಳು 404
   1. 1994-95ನೇ ಸಾಲಿನ ಸಂಬಂಧಿಸಿದ ಅನುಪೂರಕ ಅಂದಾಜುಗಳ (ಮೊದಲನೆ ಕಂತು)ನ್ನು ಸದನಕ್ಕೆ ಒಪ್ಪಿಸುವುದು 404

2. 1994-95ನೇ ಸಾಲಿನ ಬೇಡಿಕೆಗಳ ಮಂಡನೆ
(42, 51, 52, 24, 62, 59, 60, 31, 32, 01, 2, 4, 49) 404-407
8. ನೆರೆ ಹಾವಳಿ ಮತ್ತು ಅನಾವೃಷ್ಟಿಯಿಂದ ರಾಜ್ಯದ
ಕೆಲವು ಭಾಗಗಳಲ್ಲಿ ಉಂಟಾಗಿರುವ ಹಾನಿ 407-455

ಬುಧವಾರ, ೩೧ನೇ ಆಗಸ್ಟ್ ೧೯೯೪

ಭಾದ್ರಪದ, ಶಕ ೧೯೧೬

1. ಸಂತಾಪ ಸೂಚನೆ 457
2. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ 457
ಸುಪ್ರೀಂ ಕೋರ್ಟ್‌ನ ನಿರ್ದೇಶನ ಬಂದಿರುವ 86ರ
ಮೀಸಲಾತಿ ಆದೇಶವನ್ನು ತಡೆಹಿಡಿದಿರುವುದು 457-462
3. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ
ಮೂಲಕ ನೀಡಲಾದ ಉತ್ತರಗಳು 462-478
4. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು 478-485
5. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ
ನೀಡಲಾದ ಉತ್ತರಗಳು 485-532
6. ಪ್ರಕಟಣೆ 532
7. ವರದಿಯನ್ನೊಪ್ಪಿಸುವುದು 532
8. ಶಾಸನ ರಚನಾ ಕಾರ್ಯಕಲಾಪಗಳು 532
ಎ) ವಿಧೇಯಕದ ಪರ್ಯಾಲೋಚನಾ ಪ್ರಸ್ತಾವ 532
1. 1992ರ ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾನಿಲಯ ವಿಧೇಯಕ 532-533
2. ಕರ್ನಾಟಕ ಮನರಂಜನಾ ತೆರಿಗೆ ತಿದ್ದುಪಡಿ
ವಿಧೇಯಕದ 1994 533-534
3. ಕರ್ನಾಟಕ ಅಗ್ನಿಶಾಮಕ ದಳ ತಿದ್ದುಪಡಿ
ವಿಧೇಯಕ 1992 534-535
9. ವಿತ್ತೀಯ ಕಾರ್ಯಕಲಾಪಗಳು 535
1. 1994-95ನೇ ಸಾಲಿನ ಈ ಕೆಳಕಂಡ
ಬೇಡಿಕೆಗಳ ಮಂಡನೆ 535-537
(61, 5, 6, 7, 21, 25, 33, 44, 34, 54)
10. ನೆರೆಹಾವಳಿ ಮತ್ತು ಅನಾವೃಷ್ಟಿಯಿಂದ ರಾಜ್ಯದ
ಕೆಲವು ಭಾಗಗಳಲ್ಲಿ ಉಂಟಾಗಿರುವ ಹಾನಿ 537-552

ಗುರುವಾರ, ೧ನೇ ಸೆಪ್ಟೆಂಬರ್ ೧೯೯೪

ಭಾದ್ರಪದ, ಶಕ ೧೯೧೬

1. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ 553
   ರಾಜ್ಯದಲ್ಲಿ ಮೀಸಲಾತಿಯ ಅನುಷ್ಠಾನದಿಂದ ಉಂಟಾದ ಪರಿಸ್ಥಿತಿ 553-596
2. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು 596-623
3. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು 623-661
4. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು 662
   1. ಬೆಂಗಳೂರು ಮಿಲ್ಲರ್ಸ್ ರಸ್ತೆಯಲ್ಲಿರುವ ಕ್ರಿಕೆಟ್ ಮೈದಾನವನ್ನು ಜಮಖಾನ ಕ್ಲಬ್‌ಗೆ ಲೀಸ್ ಮೇರೆಗೆ ನೀಡಿರುವುದು 662-665
   2. ಅತಿವೃಷ್ಟಿಯಿಂದ ಬೆಳೆ ಹಾಳಾದವರಿಗೆ ಪರಿಹಾರ 665-673
5. ಗಮನ ಸೆಳೆಯುವ ಸೂಚನೆಗಳು 673
   1. ಕೊಬ್ಬರಿಯನ್ನು ಸರ್ಕಾರ ಅಥವಾ ವ್ಯಾಪಾರಸ್ಥರು ಕೊಳ್ಳದೇ ಇರುವುದರಿಂದ ರೈತರಿಗೆ ಉಂಟಾಗಿರುವ ತೊಂದರೆ 673-678
   2. ರಾಜ್ಯದಲ್ಲಿ ಅಲ್ಪ ಸಂಖ್ಯಾತರು ನಡೆಸುತ್ತಿರುವ ವೈದ್ಯಕೀಯ ಕಾಲೇಜುಗಳು 679-682
6. ವಿತ್ತೀಯ ಕಾರ್ಯಕಲಾಪಗಳು 682
   1994-95ನೇ ಸಾಲಿನ ಈ ಕೆಳಕಂಡ ಬೇಡಿಕೆಗಳ ಮಂಡನೆ ಮತ್ತು ಮತಕ್ಕೆ ಹಾಕುವುದು 682-685
   (36, 50, 14, 30, 29, 15, 55, 26, 8)
7. ಶಾಸನ ರಚನಾ ಕಾರ್ಯಕಲಾಪಗಳು 685
   1. 1994ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ 685-712
      (ಪರ್ಯಾಲೋಚನಾ ಪ್ರಸ್ತಾವ)
8. ಪ್ರಕಟಣೆ 712-713
   (ಕಾರ್ಯಕಲಾಪಗಳ ಸಲಹಾ ಸಮಿತಿಯ ಶಿಫಾರಸ್ಸು)

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ ೨೬ನೇ ಆಗಸ್ಟ್ ೧೯೯೪, ಭಾದ್ರಪದ, ಶಕ ೧೯೧೬

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೨-೦೦ ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು : (ಶ್ರಿ ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಪ್ರವಾಹ ಪೀಡಿತ ಪ್ರದೇಶಗಳಿಗೆ ಪರಿಹಾರ

457 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಪ್ರವಾಹ ಪೀಡಿತ್ ಪ್ರದೇಶಗಳಿಗೆ ಸಹಾಯ ಕೇಳಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಬೇಡಿಕೆಗಳನ್ನು ಸಲ್ಲಿಸಿದೆಯೇ? ಸಲ್ಲಿಸಿದ್ದಲ್ಲಿ ಅದರ ಪರಿಣಾಮಗಳೇನು?

ಆ) ಈ ದಿಸೆಯಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಕೊಟ್ಟಿರುವ ಹಣವೆಷ್ಟು?

ಇ) ಈ ವರ್ಷದಲ್ಲಿ ಪ್ರವಾಹ ಪೀಡಿತ ಪ್ರದೇಶಗಳ ಸಂತ್ರಸ್ಥರಿಗೆ ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಹಣ ಎಷ್ಟು? (ಜಿಲ್ಲಾವಾರು ವಿವರಗಳನ್ನೊದಗಿಸುವುದು)

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಹೌದು

1991-92ರಿಂದ 1993-94ರ ವರೆಗೆ, ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಪ್ರವಾಹ ಪೀಡಿತ ಕಾರ್ಯಗಳಿಗೆ ನೆರವು ಕೋರಿ ಈ ಕೆಳಕಂಡಂತೆ ಮನವಿಗಳನ್ನು ಸಲ್ಲಿಸಿದೆ

	(ಕೋಟಿ ರೂ.ಗಳಲ್ಲಿ)
1991-92	144.00
1992-93	200.00
1993-94	200.00

ಆದರೆ, ಕೇಂದ್ರ ಸರ್ಕಾರವು, ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ಕೊಡಬೇಕಾಗಿರುವ ವಾರ್ಷಿಕ ವಂತಿಗೆ ರೂ. 20.25 ಕೋಟಿಗಳನ್ನು ಹೊರತುಪಡಿಸಿ, ಬೇರೆ ಯಾವ ಆರ್ಥಿಕ ನೆರವನ್ನು ಇದುವರೆಗೆ ನೀಡಿಲ್ಲ.

ಆ) ಮೇಲೆ (ಅ) ನಲ್ಲಿ ನೀಡಿರುವ ಉತ್ತರವೇ ಈ ಪ್ರಶ್ನೆಗೂ ಅನ್ವಯಿಸುತ್ತದೆ.

ಇ) ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಅನುಬಂಧ

ದಿನಾಂಕ 1.4.94ರಿಂದ ದಿನಾಂಕ 12.8.94ರ ವರೆಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ವಿವಿಧ ಜಿಲ್ಲೆಗಳಿಗೆ ಪರಿಹಾರ ಕಾರ್ಯಗಳಿಗೆ ಬಿಡುಗಡೆ ಮಾಡಿದ ಹಣದ ವಿವರ.

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಹಾನಿಗೊಂಡ ಸಣ್ಣ ನೀರಾವರಿ ಕೆರೆ ಕಾಲುವೆಗಳ ದುರಸ್ತಿಗೆ	ಬೆಳೆ ಹಾನಿಗೆ	ನೆರೆಹಾವಳಿ ಪರಿಹಾರ ಕಾರ್ಯಗಳಿಗೆ	ಒಟ್ಟು
(1)	ಕೋಲಾರ	-	-	50.00	50.00
(2)	ತುಮಕೂರು	-	-	51.00	51.00
(3)	ಶಿವಮೊಗ್ಗ	40.00	-	55.00	95.00
(4)	ಮೈಸೂರು	-	-	50.00	50.00
(5)	ಚಿಕ್ಕಮಗಳೂರು	20.00	-	75.00	95.00
(6)	ಹಾಸನ	-	-	60.00	60.00
(7)	ಕೊಡಗು	-	-	70.00	70.00
(8)	ದಕ್ಷಿಣ ಕನ್ನಡ	35.00	-	140.50	175.50
(9)	ಗುಲ್ಬರ್ಗಾ	35.00	-	-	35.00
(10)	ರಾಯಚೂರು	13.00	13.00	27.00	53.00
(11)	ಬೆಳಗಾಂ	-	-	60.00	60.00
(12)	ಬಿಜಾಪುರ	15.00	-	25.00	40.00
(13)	ಧಾರವಾಡ	-	-	39.00	39.00
(14)	ಉತ್ತರ ಕನ್ನಡ	30.00	-	60.00	90.00
(15)	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	-	-	25.00	25.00
	ಒಟ್ಟು	188.00	13.00	788.00	989.00

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮಂತ್ರಿಗಳು ಕೊಟ್ಟಂತಹ ಉತ್ತರವನ್ನು ತಾವು ಗಮನಿಸಬೇಕು. 1991-92, 92-93, 93-94 ಈ ಮೂರು ವರ್ಷಗಳಲ್ಲಿ ಪ್ರವಾಹ ಪರಿಹಾರಕ್ಕೆಂದು ಕೇಂದ್ರ ಸರ್ಕಾರಕ್ಕೆ ಕೇಳಿರತಕ್ಕಂತಹ ಹಣ 544 ಕೋಟಿ ರೂಪಾಯಿಗಳು. ಈ 544 ಕೋಟಿಯಲ್ಲಿ ಇದುವರೆಗೂ ಕೇಂದ್ರ ಸರ್ಕಾರದವರು ಯಾವ ಆರ್ಥಿಕ ನೆರವನ್ನೂ ನೀಡಿಲ್ಲ, 20.21 ಕೋಟಿಗಳನ್ನು ಹೆಚ್ಚುವರಿ ವಾರ್ಷಿಕ ವಂತಿಗೆ ಕೊಟ್ಟಿದ್ದಾರೆಂದು ಜಿಲ್ಲಾವಾರು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ನಾನು ಮಂತ್ರಿಗಳಲ್ಲಿ ಉಪ ಪ್ರಶ್ನೆಯನ್ನು ಕೇಳತಕ್ಕಂಥಾದ್ದು ಕೇಂದ್ರ ಸರಕಾರ ಈ ನಮ್ಮ ಸರಕಾರದ ಬಗ್ಗೆ ತಾಳಿರತಕ್ಕಂತಹ ಮಲತಾಯಿ ಧೋರಣೆಯನ್ನು ಖಂಡಿಸಿ, ಈ ಸದನದಲ್ಲಿ 544 ಕೋಟಿ ಹಣವನ್ನು ಬಿಡುಗಡೆ ಮಾಡಲಿಕ್ಕೆ ಒತ್ತಾಯಿಸಿ, ಇಲ್ಲಿ ಠರಾವನ್ನು ಮಂಡಿಸಲಿಕ್ಕೆ ಸಾಧ್ಯವಿಲ್ಲವೇ?

ಶ್ರೀ ಧರ್ಮಸಿಂಗ್ : ಮಾನ್ಯ ಸಭಾಧ್ಯಕ್ಷರೆ, ಉಪ ನಾಯಕರಾದ ಶ್ರೀ ಸಿಂಧ್ಯರವರು ಠರಾವನ್ನು ಪಾಸ್ ಮಾಡಬೇಕೆಂದು ಹೇಳುತ್ತಿದ್ದಾರೆ. 3 ವರ್ಷಗಳ ನೆರೆ ಹಾವಳಿ ಪರಿಹಾರಕ್ಕೆ ಬೇಕಾಗಿರತಕ್ಕಂತಹ ಹಣದ ಸಹಾಯವನ್ನು ಕರ್ನಾಟಕ ಸರಕಾರ ಕೇಂದ್ರ ಸರಕಾರಕ್ಕೆ ಕೋರಿದೆ. ಇಲ್ಲಿಯವರೆಗೆ ಕೇಂದ್ರ ಸರಕಾರದಿಂದ ಒಂದು ಪೈಸೆ ಕೂಡ ಬಂದಿಲ್ಲ, ಅದಕ್ಕೆ ನಾವು ಈ ಅಧಿವೇಶನದಲ್ಲಿ ಠರಾವನ್ನು ಪಾಸು ಮಾಡಬೇಕು ಕೇಂದ್ರ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತ

ಮಾಡಿದ್ದೀರಿ. ತಮಗೇ ಗೊತ್ತು ತಾವೂ ಮಂತ್ರಿಯಾಗಿ ಕೆಲಸ ಮಾಡಿದ್ದೀರಿ ಸಾಕಷ್ಟು ಅನುಭವ ತಮಗೂ ಇದೆ. 91-92, 92-93, 93-94 ರಲ್ಲಿ ನಮ್ಮ ರಾಜ್ಯದಲ್ಲಿ ಎಷ್ಟು ಅನಾಹುತವಾಗಿದೆ ಎಷ್ಟು ಹಾನಿಯಾಗಿದೆ ಎಂಬ ಬಗ್ಗೆ ಕೇಂದ್ರ ಸರಕಾರಕ್ಕೆ ಪ್ರಥಮವಾಗಿ ವರದಿ ಕಳಿಸಿದೆ ಪ್ರಥಮವಾಗಿ ವರದಿ ಕಳಿಸತಕ್ಕಂತಹ ಜವಾಬ್ದಾರಿ ನಮಗೂ ಇದೆ. 9ನೇ ಹಣಕಾಸು ಕಮಿಷನ್ ನೆರೆ ಹಾವಳಿ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಅವಕಾಶವಾಗುವಂತೆ ಈಗಾಗಲೇ 27 ಕೋಟಿ ಎಂದು ನಿಗಧಿ ಮಾಡಿದ್ದಾರೆ. ಕೇಂದ್ರ ಸರಕಾರದಿಂದ ಬರತಕ್ಕಂತಹ ಹಣ 20 ಕೋಟಿ 75 ಲಕ್ಷ, ರಾಜ್ಯ ಸರಕಾರದಿಂದ 6 ಕೋಟಿ 25 ಲಕ್ಷ ಬರುತ್ತದೆ. ರಾಜ್ಯ ಸರಕಾರದಿಂದಲೂ ಕೂಡ ಇಂಥ ಒಂದು ಅನಾಹುತಗಳಿಗೆ ಬೇರೆ ಬೇರೆ ಇಲಾಖೆಯಿಂದ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಒಂದು ಆದೇಶ ಇದೆ.

ಆದರೂ ಕೂಡ ನಾವು ಮನವಿ ಮಾಡಿದ್ದೇವೆ. ಹೋದ ವರ್ಷ ಕೂಡ ಎರಡು ಸಲ ನಾನು ಕಂದಾಯ ಮಂತ್ರಿಯಾದ ಮೇಲೆ 201 ಕೋಟಿ ರೂಪಾಯಿಗಳು ಬೇಕೆಂದು ಕೇಂದ್ರ ಸರ್ಕಾರಕ್ಕೆ ಬಲರಾಂ ಜಾಖಡ್‌ರವರಿಗೆ, ಮನಮೋಹನ್‌ಸಿಂಗ್‌ರವರಿಗೆ ಮನವಿಗಳನ್ನು ಕೊಟ್ಟಿದ್ದೇವೆ. ಈಗ ಇರತಕ್ಕಂಥ 27 ಕೋಟಿ ಸಾಲದು, ನಮಗೆ ಹೆಚ್ಚಿನ ಹಣ ಸಹಾಯ ಬೇಕು ಎನ್ನುವ ಪ್ರತಿಪಾದನೆಯನ್ನು ಕೂಡ ಮಾಡಿದ್ದೇವೆ. ಈ ವರ್ಷವೂ ಕೂಡ ನಾವು ಹೇಳಿದ್ದೇವೆ. ಏಕೆಂದರೆ ಬೈ ವೇಸ್ ಅಂಡ್ ಮೀನ್ಸ್ ಕೊಟ್ಟರೆ ಅದು, ಆಗುವುದಿಲ್ಲ ಎನ್ನುವುದನ್ನು ಹೇಳಿದ್ದೇವೆ. ಇದರಲ್ಲಿ ಈ ವರ್ಷ ಅಡಿಷನಲ್ಲಾಗಿ ಅಟ್‌ಲೀಸ್ಟ್ ಎಲ್ಲಾ ಕಡೆಗೆ ಏನು ಹಾನಿಯಾಗಿದೆ, 50 ಕೋಟಿ ರೂಪಾಯಿ ಬೇಕು ಎಂದು ನಾನು ಮತ್ತು ಮುಖ್ಯಮಂತ್ರಿಗಳು ಹೋದ ತಿಂಗಳು 27ನೇ ತಾರೀಖು ಹೋದಾಗ ಮನಮೋಹನ್‌ಸಿಂಗ್‌ರವರನ್ನು ಭೇಟಿಯಾದಾಗ, ಮತ್ತು ಅಗ್ರಿಕಲ್ಚರ್ ಮಿನಿಸ್ಟರ್ ಅವರನ್ನು ಭೇಟಿಯಾದಾಗ ಹೇಳಿದ್ದೇವೆ. ಅಗ್ರಿಕಲ್ಚರ್ ಮಿನಿಸ್ಟರ್ ಕೂಡ ಕನ್‌ವಿನ್ಸ್ ಆಗಿದ್ದಾರೆ. ಅವರು ನಾನು ಫೈನಾನ್ಸ್ ಮಿನಿಸ್ಟರ್‌ಗೂ ಕೂಡ ಒಂದು ಶಿಫಾರಸ್ಸು ಮಾಡಿ ಕಳುಹಿಸುತ್ತೇನೆ ಎಂದು ಹೇಳಿದ್ದಾರೆ. ನಾನು ಉಪನಾಯಕರ ಗಮನಕ್ಕೆ ತರುವುದೇನೆಂದರೆ, ಈ ವರ್ಷ ನಮಗೆ ರೇ ಆಫ್ ಹೋಪ್ ಏನು ಎಂದರೆ ಈ ನೆರೆ ಹಾವಳಿ ಎಲ್ಲಾ ಕಡೆಗೆ ಬಂದಾಗ ಪ್ರಥಮವಾಗಿ ಪ್ರಧಾನಮಂತ್ರಿಯವರು ಕೇಂದ್ರದ ರಾಜ್ಯ ರಕ್ಷಣಾ ಸಚಿವರನ್ನು ಕೂಡ ಕಳುಹಿಸಿದ್ದರು. ಮಲ್ಲಿಕಾರ್ಜುನ್ ಅವರು ಬಂದಿದ್ದರು. ಅವರೂ ಕೂಡ ಬಂದು ಎಲ್ಲಾ ಕಡೆ ನೋಡಿದ್ದಾರೆ. ಅವರು ವರದಿಯನ್ನು ಕೂಡ ಕೊಟ್ಟಿದ್ದಾರೆ ಮತ್ತು ನಾನು ನಮ್ಮ ಎಲ್ಲಾ ಲೋಕಸಭಾ ಸದಸ್ಯರುಗಳನ್ನು ಹೋಗಿ ಭೇಟಿಯಾದಾಗ ಅವರಿಗೆ ಕೂಡ ಮನವರಿಕೆ ಮಾಡಿಕೊಟ್ಟ ಮೇಲೆ ಅವರು ಕೂಡ ಪ್ರಧಾನಮಂತ್ರಿಯವರನ್ನು ಮತ್ತು ಮನ್‌ಮೋಹನ್ ಸಿಂಗ್‌ರವನ್ನೂ ಭೇಟಿಯಾಗಿದ್ದಾರೆ. ಕೇಂದ್ರದಿಂದ ಸಹಾಯ ಬರುವುದು ಇದೆ. ನಮ್ಮ ಶಾಸನಸಭೆಯಲ್ಲಿ ಕೇಂದ್ರ ಬಗ್ಗೆ ಖಂಡನೆ ಮಾಡತಕ್ಕಂಥ ನಿರ್ಣಯ ಮಾಡುವ ಅವಶ್ಯಕತೆ ಇಲ್ಲ. ಇದಕ್ಕೆ ಎಷ್ಟು ನಾವು ಎಫೆಕ್ಟೀವ್ ಆಗಿ ಕೇಂದ್ರ ಸರ್ಕಾರದಿಂದ ಹಣ ಪಡೆಯುವುದಕ್ಕೆ ಅವರ ಮನಸ್ಸಿಗೆ ಬರುವ ಹಾಗೆ ರೆಕಮೆಂಡೇಷನ್‌ನನ್ನು ಮಾಡಿದ್ದೇವೆ. ಅದು ಬರುವ ನಿರೀಕ್ಷೆ ಇದೆ. ಕಾದು ನೋಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಎರಡು ಉಪಪ್ರಶ್ನೆಗಳು ಇದರಿಂದ ಉದ್ಭವವಾಗುತ್ತದೆ. ಈಗ 94-95ರದ್ದು ಇದರಲ್ಲಿ ಇನ್ನೂ ಸೇರಿಲ್ಲ. ಇವರು ಉತ್ತರ ಕೊಟ್ಟಿರತಕ್ಕಂಥದ್ದು, 544 ಕೋಟಿ ರೂಪಾಯಿಗಳ ಪರಿಹಾರವನ್ನು ತಾವು ಕೇಳಿರುವುದು, ಕೇವಲ 93-94 ರವರೆಗೆ. 94-95ರದ್ದು ಇದರಲ್ಲಿ ಇನ್ನೂ ಸೇರಿಲ್ಲ, ಈಗ ಬೇರೆ ರಾಜ್ಯಗಳಿಗೆ ಹೇಗೆ ಕೊಟ್ಟಿದ್ದಾರೆ? ಕೇರಳಕ್ಕೆ ಏತಕ್ಕೆ ಕೊಟ್ಟಿದ್ದಾರೆ? ತಮಿಳುನಾಡಿಗೆ ಏತಕ್ಕೆ ಕೊಟ್ಟಿದ್ದಾರೆ? ಮತ್ತೆ ಮಾನ್ಯ ಪ್ರಧಾನಮಂತ್ರಿಗಳು ಅಥವಾ

ಹಣಕಾಸಿನ ಮಂತ್ರಿಗಳು ಇಲ್ಲಿ ಕೇಂದ್ರ ಸರ್ಕಾರದ ಮಂತ್ರಿಗಳನ್ನು ಏತಕ್ಕೋಸ್ಕರ ಕಳುಹಿಸುತ್ತಾರೆ? ಇವರು ಒಂದು ರೂಪಾಯಿಯನ್ನೂ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದಮೇಲೆ ಹೆಲಿಕಾಪ್ಟರ್‌ನಲ್ಲಿ ಬಂದು ನೋಡುವ ಪ್ರಮೇಯವಾದರೂ ಏನಿದೆ? ನಾನು ನಿಮ್ಮ ಮತ್ತು ನಿಮ್ಮ ಮುಖ್ಯಮಂತ್ರಿಗಳ ಕೈಯನ್ನು ಬಲಪಡಿಸಬೇಕು ಎಂದು ಹೇಳಿದ್ದೇನೆ. ಈ ಸದನದಲ್ಲಿ ಒಂದು ಠರಾವನ್ನು ಮಾಡಿದರೆ ತೊಂದರೆಯೇನು ಸ್ವಾಮಿ. ಕೇಂದ್ರದ ಹಣಕಾಸಿನ ಮಂತ್ರಿಗಳು ಕೂಡ ನಮ್ಮ ರಾಜ್ಯದವರೇ. ಅವರು ಬಂದು ನೋಡಲಿಲ್ಲ. ಎಲ್ಲಾ ಕಡೆಗಳಲ್ಲೂ ರೈತರು ಒದ್ದಾಡುತ್ತಿದ್ದಾರೆ. 13 ಲಕ್ಷ ಬೆಳೆ ಪರಿಹಾರವೆಂದು ಕೊಟ್ಟಿದ್ದಾರೆ. ಆಗಿರತಕ್ಕಂಥದ್ದು 200 ಕೋಟಿ ರೂಪಾಯಿ. ಠರಾವು ಮಾಡಿದರೆ ತಪ್ಪೇನು ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕು. ಮತ್ತೆ ಬೇರೆ ರಾಜ್ಯಗಳಿಗೆ ಏತಕ್ಕೆ ಅವರು ಕೊಟ್ಟಿದ್ದಾರೆ? ಇದಾದ ಮೇಲೆ ಕೇಂದ್ರ ಮಂತ್ರಿಗಳನ್ನು ಅವರು ಏತಕ್ಕೆ ಕಳುಹಿಸುತ್ತಾರೆ? ಏತಕ್ಕೆ ಇವರು ಕಳುಹಿಸಬೇಕು? ಜನಗಳಿಗೆ ನೀವು ಮೋಸ ಮಾಡುತ್ತೀರಾ? ನಾವು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿಬಿಡಿ. ನಿಮ್ಮ ಕಷ್ಟ ನೀವು ನೋಡಿಕೊಳ್ಳಿ. ಎಂದು ಹೇಳಿಬಿಡಿ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಈ ಒಂದು ದೊಡ್ಡ ಅನಾಹುತ ಆದಮೇಲೆ ಪ್ರಧಾನಮಂತ್ರಿಗಳು ಕೂಡ ನಿಜವಾದ ಪರಿಸ್ಥಿತಿ ಏನಿದೆ ಎಂದು ತಮ್ಮ ಪ್ರತಿನಿಧಿಗಳನ್ನು ಕಳುಹಿಸಿದ್ದಾರೆ. ಅವರು ಬಂದಿದ್ದಾರೆ. ಹೋಗಿದ್ದಾರೆ. ನಾನು ಕೂಡ ಮರು ದಿವಸವೇ ಮಲ್ಲಿಕಾರ್ಜುನ್ ಅವರನ್ನು ಭೇಟಿಯಾಗಿದ್ದೆ. ನಾನೂ ಕೂಡ ಪ್ರಧಾನಮಂತ್ರಿಗಳಿಗೆ ಆಗಿರತಕ್ಕಂಥ ಸೀರಿಯಸ್‌ನೆಸ್ ಬಗ್ಗೆ ಅಪ್ರೈಸ್ ಮಾಡಿದ್ದೇನೆ ಎಂದು ಅವರು ಹೇಳಿದ್ದಾರೆ. ಅದೊಂದು ಪದ್ಧತಿ. ತಮ್ಮದೊಂದು ಭಾವನೆ ಏನು ?ಇದೆ. ಅದು ನನಗೆ ಗೊತ್ತಿದೆ. ನಾವೂ ಕೂಡ ಅಷ್ಟೇ ಎಫೆಕ್ಟಿವಾಗಿ ಹೇಳಿದ್ದೇವೆ. ಹೋದ ತಿಂಗಳು ಹತ್ತನೇ ಹಣಕಾಸಿನ ಆಯೋಗ ಕೂಡ ಬಂದಿತ್ತು. ಪಂತ್ ಅವರು ಬಂದಾಗ ನಾವು ಅವರಿಗೂ ಕೂಡ ಪ್ರತಿಪಾದನೆ ಮಾಡಿದ್ದೇವೆ. 27 ಕೋಟಿ ರೂಪಾಯಿ ಏನು ನಿಗಧಿ ಮಾಡಿದ್ದೀರಿ, ಅದು ಸಾಲದು, ಅಟ್‌ಲೀಸ್ಟ್ you must provide hundred crores, ಎಂದು ಅವರಿಗೆ ಕೂಡ ನಾವು ಹೇಳಿದ್ದೇವೆ. ಅದಕ್ಕೆ ಇವತ್ತು ನಾನು ನಿಮಗೆ ಹೇಳುವುದೇನೆಂದರೆ ಅಡಿಷನಲ್ಲಾಗಿ ಫೈನಾನ್ಸ್ ಮಿನಿಸ್ಟರನ್ನು ಭೇಟಿಯಾಗಿ ಕೃಷಿ ಸಚಿವರನ್ನು ಭೇಟಿಯಾಗಿ ಮತ್ತೆ ಸ್ವತಃ ಮುಖ್ಯಮಂತ್ರಿಗಳು ಕೂಡ ಪ್ರಧಾನಮಂತ್ರಿಗಳನ್ನು ಭೇಟಿಯಾಗಿ ವಿಷಯ ತಿಳಿಸಿ ಬಂದಿದ್ದಾರೆ. ಸ್ವಲ್ಪ ಹಣ ಸಿಗಬಹುದು ಎಂದು ಆಸೆ ಇದೆ. ಕಾದು ನೋಡಿ ಅದನ್ನು ಸರಿಪಡಿಸೋಣ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ನಮಗೆ ಆಗಿರುವ ತೊಂದರೆಯಾದರೂ ಸಹ ಸರ್ಕಾರದ ಗಮನಕ್ಕೆ ಬರಬೇಕಲ್ಲ, ಏಕೆಂದರೆ ಕಂದಾಯ ಮಂತ್ರಿಗಳು ಏನು ಹೇಳುತ್ತಿದ್ದಾರೆ ಈಗ, ನೀವು ನಿಗಧಿ ಮಾಡಿರುವ 27 ಕೋಟಿ ರೂಪಾಯಿ ಈ ಪರಿಸ್ಥಿತಿಗಾಗಿಯೇ ನಿಗದಿ ಮಾಡಿದ್ದೀರಿ. ಇದಕ್ಕಿಂತ ಹೆಚ್ಚಿಗೆ ಕೊಡಿ ಎಂದು ಕೇಳುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. This is not the point. ಇದು ಒಂದು, This is the minimum fixed by the central Government after the IX finance Commission has agreed to this proposal. ಕೇಂದ್ರದಲ್ಲಿ ವಿ.ಪಿ ಸಿಂಗ್‌ರವರ ಸರ್ಕಾರ ಇದ್ದಂಥ ಕಾಲದಲ್ಲಿ ಒಂದು ನಿಯಮ ಮಾಡಿದರು. ಮಿನಿಮಮ್ ಇಷ್ಟು ಎಂದು ನಿಗಧಿ ಮಾಡಿದ್ದರು. ಈಗ ಲಾತೂರ್‌ನಲ್ಲಿ ದೊಡ್ಡ ಭೂಕಂಪ ಆಯಿತು. ನಮಗೇನು ಭೀತಿ ಎಂದರೆ ಭೂಕಂಪ ಕರ್ನಾಟಕ ಭಾಗದಲ್ಲೂ ಆಯಿತು. ಆಗ ಮುಖ್ಯಮಂತ್ರಿಗಳು ನಮ್ಮ ಯೋಗಕ್ಷೇಮ ನಾವೇ ನೋಡಿಕೊಳ್ಳುತ್ತೇವೆ. ನಮಗೆ ಹಣ ಬೇಡ ಎಂದರು. ಇವರು ತಮ್ಮ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೆ ಏನೋ ಎನ್ನುವ ಭೀತಿ ನಮಗೆ

ಇದೆ. ನಿಮಗೆ ಹೇಳುತ್ತೇನೆ, ನಮ್ಮ ಪ್ರದೇಶದಲ್ಲಿ ಈ ರೀತಿ ಹೇಳಿದ್ದಾರೋ ಮಳೆ 350 ಇಂಚು ದಾಟಿದೆ. ಸಾವಿರಾರು ಮನೆಗಳು ಬಿದ್ದಿವೆ. ಇವತ್ತು ನಾನು ರೆಸಲ್ಯೂಷನನ್ನು ನೋಡುತ್ತಾ ಕುಳಿತಿದ್ದೆ. ಪರಿಸ್ಥಿತಿ ಈ ರೀತಿ ಇರುವಾಗ ಒಂದು ಕಡೆ ದಕ್ಷಿಣ ಕನ್ನಡ ಜಿಲ್ಲೆಗೆ ಹಣ ಕೊಟ್ಟಿದ್ದಾರೆಂದು ನಾನು ಆಪಾದನೆ ಮಾಡುವುದಿಲ್ಲ. ಅವರಿಗೂ ಕೊಡಬೇಕು, ನಮಗೂ ಕೊಡಬೇಕು, ಹತ್ತು ಸಾವಿರ ರೂಪಾಯಿಗಳನ್ನು ಮನೆ ಬಿದ್ದವರಿಗೆ ಕೊಟ್ಟಿದ್ದಾರೆ. ನಾನು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಕ್ಷೇತ್ರದಿಂದ ಬರತಕ್ಕಂಥವನು. ಅಲ್ಲಿ ಬಿದ್ದಂಥ ಮನೆಗಳಿಗೆ 500 ರೂಪಾಯಿಗಳನ್ನು ಕೊಟ್ಟಿದ್ದಾರೆ. ಏತಕ್ಕೆ ಈ ಪರಿಸ್ಥಿತಿ? ಕೇಂದ್ರ ಸರ್ಕಾರದಿಂದ ನಿಮಗೆ ಹಣವನ್ನು ತರಿಸುವುದಕ್ಕೆ ಸಾಧ್ಯವಾಗದಿದ್ದರೆ ರಾಜ್ಯ ಸರ್ಕಾರದಿಂದ ವಿಶೇಷವಾಗಿ ಹಣ ಬಿಡುಗಡೆ ಮಾಡಿಸುತ್ತೀರಾ? ಒಂದು. ಕೇಂದ್ರ ಸರ್ಕಾರಕ್ಕೆ ಇರತಕ್ಕ ಪರಿಸ್ಥಿತಿಯನ್ನು ಹೇಳಿ, ಇದು ವಿಶೇಷ ಪರಿಸ್ಥಿತಿ. ಲಾತೂರಿನ ಪ್ರಕರಣವನ್ನಾದರೂ ಹೇಳಿ.

ಭೂಕಂಪದ ವಿಚಾರವನ್ನಾದರೂ ಹೇಳಿ. ಡ್ರೌಟ್ ಕೇಸನ್ನಾದರೂ ಹೇಳಿ. ವಿಶೇಷವಾದಂಥ ಹಣ ಕೇಂದ್ರ ಸರ್ಕಾರ ಕೊಡುವುದಕ್ಕೆ ಸಾಧ್ಯವೇ ಆಗುವುದಿಲ್ಲ ಎಂದು ಹೇಳಿದರೆ ಈ ವ್ಯವಹಾರದಲ್ಲಿ 12ನೇ ತಾರೀಖಿನಿಂದ ಯಾವ ಕೆಲಸವನ್ನೂ ಮಾಡಬೇಡಿ ಎಂದು ಹೇಳಿ ಚುನಾವಣಾ ಆಯೋಗದವರು ಆಗಲೇ ನಿರ್ದೇಶನ ಕೊಟ್ಟು ಬಿಟ್ಟಿದ್ದಾರೆ ಎಂದು ನನಗೆ ಬಂದಿರುವ ಸುದ್ದಿ ಇದೆ. ಮುಂದೆ ಇವರನ್ನು ಕೇಳುವುದೂ ಇಲ್ಲ. ಇವರ ಪಾಡಿಗೆ ಇವರು ಚುನಾವಣೆಗೆ ಹೋಗುತ್ತಾರೆ. ನಮ್ಮ ಪಾಡಿಗೆ ನಾವು ಚುನಾವಣೆಗೆ ಹೋಗುತ್ತೇವೆ ಜನರ ಗತಿಯೇನು? ವಿಶೇಷವಾಗಿ ರಾಜ್ಯ ಸರ್ಕಾರವೇ 50 ಕೋಟಿ ರೂಪಾಯಿ ಮಿನಿಮಮ್ ಬಿಡುಗುಡೆ ಮಾಡತಕ್ಕಂಥ ಆಲೋಚನೆಯನ್ನು ಮಾಡಿ ಆಮೇಲೆ ಇನ್ನಾವುದಾದರೂ ರೂಪದಲ್ಲಿ ಕೇಂದ್ರ ಸರ್ಕಾರ ಹಣ ಕೊಟ್ಟಾಗ ಅದನ್ನು ಹೊಂದಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಚಂದ್ರೇಗೌಡರು ಹೇಳಿದಹಾಗೆ ಒಂಭತ್ತನೇ ಹಣಕಾಸಿನ ಆಯೋಗದಲ್ಲಿ 27 ಕೋಟಿ ರೂಪಾಯಿ ವಿಪಿ ಸಿಂಗ್‌ರವರ ಕಾಲದಲ್ಲಿ ಅದನ್ನು ನಿಗಧಿ ಮಾಡಿದ್ದಾರೆ, ಅದನ್ನು ಒಪ್ಪುತ್ತೇನೆ. ನಾನು ಹೇಳುವುದು ಇಷ್ಟೆ. ಏನೆಂದರೆ ಪದೇ ಪದೇ ಅರ್ತ್‌ಕ್ವೇಕ್ ಆಗಲಿ, ನೆರೆಹಾವಳಿ ಆಗಲಿ ಆಗಾಗ ಬರುತ್ತದೆ. ಇದಕ್ಕೆ ಸಾಕಷ್ಟು ಹಣ ನಮಗೆ ಬೇಕಾಗುತ್ತದೆ. ಅದರಲ್ಲಿ ಖರ್ಚು ಮಾಡಿ ಎಂದು ಹೇಳಿದರೆ ಆಗುವುದಿಲ್ಲ ಎಂದು ಅಡಿಷನಲ್ ಆಗಿ ಹಣವನ್ನು ಕೇಳಿದ್ದೇವೆ ಎನ್ನುವ ಮಾತನ್ನು ಹೇಳಿದ್ದೇವೆ. ಆದರೆ ಕೇಂದ್ರ ಸರ್ಕಾರದಿಂದ ಹಣ ಬರದಿದ್ದರೆ, ರಾಜ್ಯ ಸರ್ಕಾರದ ಬೊಕ್ಕಸದಿಂದ ಖರ್ಚು ಮಾಡಬೇಕು ಎಂದು ಕೇಳುತ್ತಿದ್ದೀರಿ. ಈಗಾಗಲೇ ನಾವು ತೊಂದರೆಗೆ ಈಡಾಗಿರುವ ಪ್ರತಿಯೊಂದು ಜಿಲ್ಲೆಗೂ ಹಣ ಬಿಡುಗಡೆ ಮಾಡುವುದಕ್ಕೆ ಹಿಂಜರಿದಿಲ್ಲ. ಏಕೆಂದರೆ we have given a statement, ಇಲ್ಲಿಯವರೆಗೆ ನಾವು 11 ಕೋಟಿ 90 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಜಿಲ್ಲಾವಾರು ಎಷ್ಟೆಷ್ಟು ಬಿಡುಗಡೆ ಮಾಡಿದ್ದೇವೆ, ಎನ್ನುವ ಪಟ್ಟಿಯನ್ನು ಕೂಡ ಒದಗಿಸಿದ್ದೇವೆ. ಅಲ್ಲಿಂದ ಬರಬಹುದು ಎಂದು ಇಗಲೂ ಕೂಡ ನಮಗೆ ಆಸೆ ಇದೆ, ಆದರೂ ಕೂಡ we have taken a decision ಇದರಲ್ಲಿ ಜನರಿಗೆ ತೊಂದರೆಯಾಗದ ರೀತಿಯಲ್ಲಿ ವ್ಯವಸ್ಥಿತವಾಗಿ ಹಣವನ್ನು ಬಿಡುಗಡೆ ಮಾಡಿ, ತಾವು ಹೇಳಿದ ಹಾಗೆ ಒಂದು ಕಡೆ ಹತ್ತು ಸಾವಿರ ರೂಪಾಯಿ ಕೊಟ್ಟಿದ್ದಾರೆ, ಒಂದು ಕಡೆ 500 ಕೊಟ್ಟಿದ್ದಾರೆ ಎನ್ನುವುದನ್ನು ತಾವು ಗಮನಕ್ಕೆ ತಂದಿದ್ದೀರಿ. ಅವರ ಬಗ್ಗೆಯೂ ನೋಡೋಣ. ಆದರೂ ಕೂಡ ಇಮ್ಮಿಡಿಯೇಟ್‌ಆಗಿ ಪರಿಹಾರ ಕೊಡುವ ರೀತಿಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಹೇಳಿದ್ದೇನು, 27 ಕೋಟಿ ರೂಪಾಯಿ ಇದಕ್ಕಾಗಿ ನಿಗಧಿಯಾದಂಥ ಹಣದಲ್ಲಿ ಬರೀ 11 ಕೋಟಿ ನಿಗಧಿ ಮಾಡಿದ್ದಾರೆ.

ಉಳಿದ 16 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕೆ ಸರ್ಕಾರದ ತೊಂದರೆ ಏನಿದೆ?

ಶ್ರೀ ಧರ್ಮಸಿಂಗ್ : 20 ಕೋಟಿ 75 ಲಕ್ಷ ರೂಪಾಯಿಗಳು ಕೇಂದ್ರದಿಂದ ಬರುವ ಹಣ. 6 ಕೋಟಿ 25 ಲಕ್ಷ ರೂಪಾಯಿಗಳನ್ನು ರಾಜ್ಯ ಸರ್ಕಾರ ಕೊಡುವ ಹಣ. ನಾವು ways and means, we have not taken. ಅವರಿಂದ ಎಷ್ಟು ಹಣ ಬರುತ್ತದೆಯೋ ಬರುತ್ತದೆ. ಆದರೂ ಕೂಡ ನಮ್ಮ ಬೊಕ್ಕಸದಿಂದ ನಾವು ಇಲ್ಲಿಯವರೆಗೆ ಇಷ್ಟು ಬಿಡುಗಡೆ ಮಾಡಿದ್ದೇವೆ. ಒಂದು ತಿಂಗಳ ಹಿಂದೆ ನೆರೆಹಾವಳಿ ಯಾವಾಗ ಉದ್ಭವವಾಯಿತು, ಆಗಿನಿಂದಲೂ ಇಷ್ಟು ಹಣವನ್ನು ಬಡುಗಡೆ ಮಾಡಿದ್ದೇವೆ ಎಂದು ಹೇಳುತ್ತಿರುವುದು

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ 157 ಕೋಟಿ ರೂಪಾಯಿ ನಷ್ಟವಾಗಿದೆ. ತಾವು 11 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ ಎಂದು ಹೇಳಿದರೆ ಹೇಗೆ?

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವು ನಿಲುವಳಿ ಸೂಚನೆ ಬಂದಾಗ ಮಾತನಾಡಿ. ಆಗ ಸಾಕಷ್ಟು ಸಮಯವನ್ನು ಕೊಡುತ್ತೇನೆ.

ಶೃಂಗೇರಿ ತಾಲ್ಲೂಕು ತುಂಗಾನದಿಯ ಮೇಲ್ಭಾಗದ ಗಂಗಡಿಕಲ್ಲಿನಲ್ಲಿ ಅದಿರು ತೆಗೆಯಲು ಅನುಮತಿ

86 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಶೃಂಗೇರಿ ತಾಲ್ಲೂಕು ತುಂಗಾ ನದಿಯ ಮೇಲ್ಭಾಗದಲ್ಲಿ ಗಂಗಡಿಕಲ್ಲಿನಲ್ಲಿ ಅದಿರು ತೆಗೆಯಲು ರಾಜ್ಯ ಸರ್ಕಾರದವರು ಅನುಮತಿ ನೀಡಿರುವರೆ?*

ಆ) *ಹಾಗಿದ್ದಲ್ಲಿ ಹಾಗೆ ಅನುಮತಿಯನ್ನು ಖಾಸಗಿಯವರಿಗೆ ಅಥವಾ ಸರ್ಕಾರಿ ಅಥವಾ ಅರೆ ಸರ್ಕಾರಿ ಸಂಸ್ಥೆಗಳಿಗೋ ಕೊಡಲಾಗಿದೆಯೇ, ಅನುಮತಿ ನೀಡಿರುವ ಸಂಸ್ಥೆಗಳು ಯಾವುವು (ವಿವರ ನೀಡುವುದು)*

ಇ) *ಇಂತಹ ಅನುಮತಿಗೆ ಸಾರ್ವಜನಿಕರಿಂದ ಪ್ರತಿರೋಧ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಶ್ರೀ ಡಿ.ಎ.. ಚಿಣ್ಣಪ್ಪ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಹೌದು

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಪತ್ರಿಕೆಯಲ್ಲಿ ಬಂದಿರತಕ್ಕ ವರದಿ ಮತ್ತು ನಾವು ಪ್ರತ್ಯಕ್ಷವಾಗಿ ಕಂಡಿರತಕ್ಕ ಸತ್ಯವನ್ನು ಸರ್ಕಾರ ಮುಚ್ಚಿಡುವುದಕ್ಕೆ ಪ್ರಯತ್ನ ಮಾಡುತ್ತಿದೆ. ಚಿಕ್ಕಮಗಳೂರು ಜಿಲ್ಲೆಯ ಮಂತ್ರಿಗಳು ಇಲ್ಲಿ ಕುಳಿತಿದ್ದಾರೆ. ಅವರು ತುಂಗಾನದಿಯ ಮೇಲ್ದಂಡೆಯಲ್ಲಿ ಈ ಗಣಿ ಕಾರ್ಯ ಪ್ರಾರಂಭವಾಗಿರುವುದನ್ನು ನೋಡಿಕೊಂಡು ಬರಲು ಹೋಗಿದ್ದರು. ಆದರೆ, ತಾವು ತಮ್ಮ ಉತ್ತರದಲ್ಲಿ 'ಇಲ್ಲ' ವೆಂದು ಹೇಳುತ್ತಿದ್ದೀರಿ. ಜಯಪ್ರಕಾಶ್ ಕನ್‌ಸ್ಟ್ರಕ್ಷನ್ ಕಂಪನಿಯುವರು ಮತ್ತು ಕುದುರೆಮುಖ ಕಬ್ಬಿಣ ಅದಿರು ಯೋಜನಾ ಅಧ್ಯಕ್ಷರು ಮತ್ತು ಅವರ ವಕ್ತಾರ ಇದರಲ್ಲಿ ನಾವು ಆಸಕ್ತಿ ಹೊಂದಿದ್ದೇವೆಂದು ಹೇಳಿದ್ದಾರೆ. ಅಲ್ಲಿ ಅವರು 'ಸ್ಯಾಂಪಲ್ ಪಿಟ್ಸ್' ತೆಗೆಯುತ್ತಿದ್ದಾರೆನ್ನುವ ಕಾರಣಕ್ಕಾಗಿ ಅಲ್ಲಿನ ಪರಿಸರ ಹೋರಾಟದವರು ದೊಡ್ಡ ಪ್ರಮಾಣದಲ್ಲಿ ಗಲಾಟೆ ಮಾಡಿದ್ದಾರೆ. ಗಂಗಡಿಕಲ್ಲಿನಲ್ಲಿ ಅದಿರು ತೆಗೆಯಲು ರಾಜ್ಯ ಸರ್ಕಾರ ಅನುಮತಿ ನೀಡಿಲ್ಲವೆಂದು ಸಚಿವರು ತಮ್ಮ ಉತ್ತರದಲ್ಲಿ ಹೇಳುತ್ತಿದ್ದಾರೆ.

ಆದುದರಿಂದ, ಗಂಗಡಿಕಲ್ಲಿನಲ್ಲಿ ಯಾವುದೇ ಕಾರಣಕ್ಕಾಗಿ ಅದಿರು ತೆಗೆಯಲು ಸರ್ಕಾರದವರು ಅನುಮತಿ ಕೊಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೀರಾ?

ಶ್ರೀ ಡಿ.ಎ. ಚಿನ್ನಪ್ಪ : ಮಾನ್ಯ ಅಧ್ಯಕ್ಷರೆ, ಮೆ: ಕುದುರೆಮುಖ ಕಬ್ಬಿಣದ ಅದಿರು ಕಂಪನಿ ಲಿಮಿಟೆಡ್, ಭಾರತ ಸರ್ಕಾರದ ಉದ್ಯಮ, ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಮತ್ತು ಮೂಡಿಗೆರೆ ತಾಲ್ಲೂಕಿನ ಗಂಗಡಿಕಲ್ಲು ಇತ್ಯಾದಿ ಗ್ರಾಮದಲ್ಲಿ 3538 ಹೆಕ್ಟೇರ್ ಪ್ರದೇಶದಲ್ಲಿ ಹಾಗೂ ಮೂಡಿಗೆರೆ ತಾಲ್ಲೂಕಿನ ನೆಲ್ಲಿಬೀಡು ಇತ್ಯಾದಿ ಗ್ರಾಮಗಳ 2397 ಹೆಕ್ಟೇರ್ ಪ್ರದೇಶದಲ್ಲಿ ಕಬ್ಬಿಣದ ಅದಿರು ಖನಿಜ ಅನ್ವೇಷಣಾ ಲೈಸೆನ್ಸ್‌ಗಳಿಗಾಗಿ ಅರ್ಜಿಗಳನ್ನು ದಿನಾಂಕ 23.4.92ರಂದು ಸಲ್ಲಿಸಿರುತ್ತಾರೆ. ಅರ್ಜಿದಾರ ಕಂಪನಿಯವರು ಕೋರಿರುವ ಪ್ರದೇಶಗಳ ವಿಸ್ತೀರ್ಣವನ್ನು ಕಡಿಮೆ ಮಾಡಿ ಗಂಗಡಿಕಲ್ಲು ಪ್ರದೇಶದಲ್ಲಿ 912 ಹೆಕ್ಟೇರ್‌ಗಳಿಗೆ ಮತ್ತು ನೆಲ್ಲಿಬೀಡು ಪ್ರದೇಶದಲ್ಲಿ 310 ಹೆಕ್ಟೇರ್‌ಗಳಿಗೆ ಮಾತ್ರ ಪರಿಷ್ಕೃತ ನಕ್ಷೆಗಳನ್ನು ದಿನಾಂಕ 10.3.93ರಂದು ಸಲ್ಲಿಸಿರುತ್ತಾರೆ. ಗಂಗಡಿಕಲ್ಲು ಪ್ರದೇಶದಲ್ಲಿ ಅನ್ವೇಷಣಾ ಲೈಸೆನ್ಸ್ ಮಂಜೂರಾತಿಯ ಪ್ರಸ್ತಾವನೆಗೆ 1980 ಅರಣ್ಯ ಸಂರಕ್ಷಣಾ ಅಧಿನಿಯಮದ ಅಡಿಯಲ್ಲಿ ಭಾರತದ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ. ಅನುಮೋದನೆ ಇನ್ನೂ ಕೊಟ್ಟಿಲ್ಲ. ಮತ್ತು 1994 ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಸ್ಥಳೀಯ ಜನರಿಂದ ಮತ್ತು ಲೋಕಸಭಾ ಸದಸ್ಯರಾದ ಶ್ರೀ ಹೆಚ್.ಡಿ. ದೇವೇಗೌಡರಿಂದ ಗಂಗಡಿಕಲ್ಲು ಪ್ರದೇಶದಲ್ಲಿ ಅದಿರು ತೆಗೆಯಲು ಮೆ ಜಯಪ್ರಕಾಶ್ ಇಂಡಸ್ಟ್ರೀಸ್ ಕಂಪನಿಗೆ ಅನುಮತಿ ನೀಡುವ ಬಗ್ಗೆ ಪ್ರತಿಭಟನೆ ವ್ಯಕ್ತವಾಗಿದೆ. ಈ ಪ್ರದೇಶದಲ್ಲಿ ಅನುಮತಿಯನ್ನು ನೀಡುವುದರಿಂದ ಜೀವ ಪರಿಸ್ಥಿತಿಯಲ್ಲಿ ಅಸಮತೋಲನವುಂಟಾಗುವುದೆಂದು ಮತ್ತು ಅರಣ್ಯ ಪರಿಸರವು ಹಾಳಾಗಿ ತುಂಗಭದ್ರಾ ಮತ್ತು ನೇತ್ರಾವತಿ ನದಿಗಳ ಜಲಾನಯನ ಪ್ರದೇಶದಲ್ಲಿ ದುಷ್ಪರಿಣಾಮದ ಬಗ್ಗೆ ಆತಂಕ ವ್ಯಕ್ತಪಡಿಸಿರುತ್ತಾರೆ. ಆದರೆ, ಸರ್ಕಾರವು ಮೆ: ಜಯಪ್ರಕಾಶ್ ಇಂಜಿನಿಯರಿಂಗ್ ಸಂಸ್ಥೆಗೆ ಆಗಲೀ ಅಥವಾ ಯಾವುದೇ ಸಂಸ್ಥೆಗೆ ಆಗಲೀ ಗಂಗಡಿಕಲ್ಲು ಪ್ರದೇಶದಲ್ಲಿ ಅದಿರನ್ನು ತೆಗೆಯಲು ಅನುಮತಿಯನ್ನು ನೀಡಿರುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಅನುಮತಿ ನೀಡಿಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ, ಮತ್ತೆ ಅದನ್ನು ವಿವರವಾಗಿ ಹೇಳಬೇಕಾಗಿಲ್ಲ, ಗಂಗಡಿಕಲ್ಲು ಪ್ರದೇಶದಲ್ಲಿ ಯಾವುದೇ ಅದಿರನ್ನು ತೆಗೆಯುವುದಕ್ಕೆ ಪರವಾನಗಿ ಕೊಡುವುದಿಲ್ಲ ಇದು ಸರ್ಕಾರದ ನೀತಿಯಾಗಿದೆಯೆಂದು ಸ್ಪಷ್ಟವಾಗಿ ಹೇಳಬೇಕು. ಎರಡನೆಯದಾಗಿ, ಅಲ್ಲಿ ಅದಿರು ತೆಗೆಯಲು ಅನುಮತಿ ಇಲ್ಲದಿದ್ದರೂ ಕೂಡ ಜೆ.ಪಿ.ಸಿ.ಸಿ. ಯವರು ಈಗಾಗಲೇ ಅಲ್ಲಿ 'ಟೆಸ್ಟ್ ಪಿಟ್ಸ್' ತೆಗೆಯುತ್ತಿದ್ದಾರೆ, ಈ ಪ್ರಾಜೆಕ್ಟ್‌ಗೆ ಅನುಮತಿ ಕೊಡುವುದಿಲ್ಲವೆಂಬುದು ಸರ್ಕಾರದ ನೀತಿಯಾಗಿದ್ದಲ್ಲಿ ಇವರು ಹೇಗೆ ಅಲ್ಲಿಗೆ ಹೋಗಿ ಟೆಸ್ಟ್ ಪಿಟ್ಸ್ ತೆಗೆದರು? ಟೆಸ್ಟ್ ಪಿಟ್ಸ್ ತೆಗೆಯುತ್ತಿದ್ದರೆ, ಪರವಾನಗಿ ಕೊಟ್ಟಿದ್ದಾರೆಂತಾಯಿತು. ಪರವಾನಗಿ ಕೊಡದಿದ್ದರೆ ಹೇಗೆ ತೆಗೆಯುತ್ತಾರೆ? ಭದ್ರಾ ನದಿಯನ್ನು ನೋಡಿದರೆ, ನಾವು ಚಿಕ್ಕಂದಿನಲ್ಲಿ ನೋಡಿದ್ದೆವಲ್ಲಾ, ಹಾಗೆ ಈಗಿಲ್ಲ, ಅದರ ಬಣ್ಣವೇ ಬದಲಾಗಿ ಬರೀ ಬಗ್ಗಡದ ನೀರು ಅಲ್ಲಿ ಬರುತ್ತದೆ. ಇವರು ಯಾವ ಭಾಗದಲ್ಲಿ ಪಿಟ್ಸ್ ತೆಗೆಯುತ್ತಿದ್ದಾರೋ ಅಲ್ಲಿಯೇ ತುಂಗಾ ನದಿಯ ಮೂಲಸ್ಥಾನವಿದೆ. ಕೃಷ್ಣಾನದಿಯಲ್ಲೇನಾದರೂ ನೀರು ಬರುತ್ತಿದ್ದರೆ, ಈ ನದಿ ನಿಜವಾಗಿಯೂ ಜೀವಂತವಾಗಿದ್ದರೆ ಅದಕ್ಕೆ ತುಂಗಾ ನದಿಯ ಮೂಲಸ್ಥಾನವೇ ಆಧಾರ. ಅಲ್ಲಿಯೇ ಟೆಸ್ಟ್ ಪಿಟ್ಸ್ ತೆಗೆಯುತ್ತಿರುವುದರಿಂದ ಇಡೀ ನದಿಯೇ ಬತ್ತಿಹೋಗುತ್ತದೆ ದೊಡ್ಡ ಸಮಸ್ಯೆ ಇದೆ ಮತ್ತು ಬಗ್ಗಡದಿಂದ ಕೂಡಿದ ನೀರು ಬರುವಂಥ ಸಮಸ್ಯೆ ಇದೆ. ಆದುದರಿಂದ ಸರ್ಕಾರ ಸ್ಪಷ್ಟವಾಗಿ ಹೇಳಬೇಕು. ಯಾವುದೇ ಕಾರಣಕ್ಕಾಗಿ ಈ ಪ್ರದೇಶದಲ್ಲಿ ಅದಿರು ತೆಗೆಯಲು ಅವಕಾಶ ಕೊಡುವುದಿಲ್ಲ, ಇದು ಸರ್ಕಾರದ ನೀತಿಯಾಗಿದೆ ಎಂದೂ ಮತ್ತು ಅಲ್ಲಿ ಏನಾದರೂ ಪಿಟ್ ತೆಗೆದಿದ್ದರೆ ಯಾವ ರೀತಿಯ ಕಾನೂನು ಕ್ರಮ ತೆಗೆದುಕೊಳ್ಳುತ್ತೀರಿ? ಅವರು ಪಿಟ್ಸ್ ಅನ್ನು ಯಾರ ಪರವಾನಗಿ ಮೇಲೆ ತೆಗೆದರು?

ಶ್ರೀ ಡಿ.ಎ. ಚಿನ್ನಪ್ಪ : ಇದರ ಬಗ್ಗೆ ವಿಚಾರಿಸಲಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ವಿಚಾರಿಸುವುದೇನಿದೆ? ವಿಚಾರ ಸ್ಪಷ್ಟವಾಗಿದೆ. ಅಲ್ಲಿ ಅದಿರು ತೆಗೆಯುತ್ತಿರುವುದರಿಂದ ಪರಿಸರ ಹೋರಾಟಗಾರರು ಪ್ರತಿಭಟನೆ ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಇಲ್ಲಿಯವರೆಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆಯೆಂದು ಹೇಳಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಸದಸ್ಯರಾದ ಚಂದ್ರೇಗೌಡರು ಆ ಭಾಗದಿಂದಲೇ ಬರತಕ್ಕಂಥವರು, ಅಲ್ಲಿ ಅದಿರನ್ನು ತೆಗೆಯುತ್ತಿದ್ದಾರೆಂದು ಹೇಳುತ್ತಿದ್ದಾರೆ. ಇದರಲ್ಲಿ ಏನೋ ಒಳಸಂಚು, ವ್ಯವಹಾರ ನಡೆಯುತ್ತಿದೆ.

ಶ್ರೀ ಡಿ.ಎ. ಚಿನ್ನಪ್ಪ : ಅಲ್ಲಿ ಅದಿರು ತೆಗೆಯುತ್ತಿದ್ದರೆ ಅದನ್ನು ಕೂಡಲೇ ನಿಲ್ಲಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ : ಹಾಗಾದರೆ ಅಲ್ಲಿ ಕಾನೂನು ಬಾಹಿರವಾಗಿ ಪಿಟ್ಸ್ ತೆಗೆದಿದ್ದರೆ ಅವರ ಮೇಲೆ ಏನು ಕಾನೂನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಡಿ.ಎ. ಚಿನ್ನಪ್ಪ : ಅಲ್ಲಿ ಪಿಟ್ಸ್ ತೆಗೆಯುತ್ತಿದ್ದರೆ ಕೂಡಲೇ ನಿಲ್ಲಿಸಿ, ಕಾನೂನು ರೀತ್ಯ ಕ್ರಮ ತೆಗೆದುಕೊಳ್ಳುತ್ತೇವೆ.

ಬೀದರ್ ಜಿಲ್ಲೆಯಲ್ಲಿ ಆಶ್ರಯ ಯೋಜನೆ

272 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಕಳೆದ 2 ವರ್ಷಗಳಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ (ತಾಲ್ಲೂಕುವಾರು ವಿವರಗಳನ್ನು ನೀಡುವುದು)?

ಆ) ಇದೇ ಅವಧಿಯಲ್ಲಿ ಜಿಲ್ಲೆಯಲ್ಲಿ ಎಷ್ಟು ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿತ್ತು?

ಇ) ಇದಕ್ಕಾಗಿ ಕಳೆದ 2 ವರ್ಷಗಳಿಂದ ಮೀಸಲಾಗಿಟ್ಟಿದ್ದ ಹಣದ ಪ್ರಮಾಣವೆಷ್ಟು? ಮತ್ತು ಖರ್ಚು ಮಾಡಲಾದ ಹಣದ ಪ್ರಮಾಣವೆಷ್ಟು?

ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ವಸತಿ ಸಚಿವರು) :

ಅ) ಆಶ್ರಯ ಯೋಜನೆ ಅನುಷ್ಠಾನದ ಪ್ರಾರಂಭದಿಂದ 1994 ಜುಲೈ ಅಂತ್ಯದ ವರೆಗೆ ಬೀದರ್ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಗೃಹ ಮಂಡಳಿಯಿಂದ ನಿರ್ಮಿಸಿದ ಮನೆಗಳ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ

	ತಾಲ್ಲೂಕು	ಜಿಲ್ಲಾಧಿಕಾರಿಗಳು		ಕರ್ನಾಟಕ ಗೃಹ ಮಂಡಳಿ	
		ಗ್ರಾಮ	ನಗರ	ಗ್ರಾ.	ನಗರ
1)	ಬೀದರ್	118	16	32	93
2)	ಔರಾದ್	204	-	-	-
3)	ಬಸವ ಕಲ್ಯಾಣ	214	29	15	-
4)	ಭಾಲ್ಕಿ	206	-	64	-
5)	ಹುಮ್‌ನಾಬಾದ್	162	-	-	20
	ಒಟ್ಟು	904	45	111	113

ಆ) ಸದರಿ ಅವಧಿಯಲ್ಲಿ ಜಿಲ್ಲಾಧಿಕಾರಿಗಳಿಂದ 2,250 ಹಾಗೂ ಕರ್ನಾಟಕ ಗೃಹ ಮಂಡಳಿಯಿಂದ 750 ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ

ಇ) ಇದಕ್ಕಾಗಿ ಕಳೆದ 2 ವರ್ಷಗಳಿಂದ ಮೀಸಲಾಗಿಟ್ಟಿದ್ದ ಮತ್ತು ಖರ್ಚು ಮಾಡಲಾದ ಹಣದ ಪ್ರಮಾಣ ಕೆಳಕಂಡಂತಿದೆ

	ಜಿಲ್ಲಾಧಿಕಾರಿಗಳು	ಕರ್ನಾಟಕ ಗೃಹ ಮಂಡಳಿ (ರೂ. ಲಕ್ಷಗಳಲ್ಲಿ)
ಮೀಸಲು	339.35	114.85
ಖರ್ಚು	178.05	35.55

ಶ್ರೀ ನಾರಾಯಣರಾವ್ ಮನಹಳ್ಳಿ : ಸನ್ಮಾನ್ಯ ಅಧ್ಯಕ್ಷರೇ, ಪ್ರತಿಯೊಂದು ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯ ಅಡಿಯಲ್ಲಿ ಸಾವಿರ ಮನೆಗಳನ್ನು ಕೊಡುತ್ತೇವೆಂದು ಮೊದಲು ಹೇಳಿದ್ದರು. ಈಗ ಆ ಸಾವಿರ ಮನೆಗಳು ಆಗಿಲ್ಲ. ಆಗಿರತಕ್ಕ ಮನೆಗಳೂ ಸಹ ವಾಸಮಾಡತಕ್ಕ ರೀತಿಯಲ್ಲಿ ಇಲ್ಲ. ಏಕೆಂದರೆ ಕಳಪೆ ದರ್ಜೆಯನ್ನು ಮನೆಗಳನ್ನು ಕಟ್ಟಲಾಗಿದೆ. ಫಲಾನುಭವಿಗಳಿಗೆ ಮನೆಗಳನ್ನು ಅಲಾಟ್ ಮಾಡುವುದಕ್ಕೆ ನಮಗೆ ಧೈರ್ಯವಿಲ್ಲ. ಏಕೆಂದರೆ ನಾವೇ ಅದರ ಅಧ್ಯಕ್ಷರಾಗಿದ್ದೇವೆ. ಆದ್ದರಿಂದ ಈ ಪರಿಸ್ಥಿತಿಯನ್ನು ಹೇಗೆ ಸುಧಾರಿಸುತ್ತಾರೆ? ಮತ್ತು ಮುಂದೆ ಇವರು ಹೇಳಿರುವಂತೆ ಪ್ರತಿಯೊಂದು ತಾಲ್ಲೂಕಿಗೆ ಸಾವಿರ ಮನೆಗಳನ್ನು ಕೊಡತಕ್ಕ ಯೋಜನೆ ಮಾಡುತ್ತಾರೋ ಇಲ್ಲವೋ ಎಂಬ ಬಗ್ಗೆ ಕೇಳಬಯಸುತ್ತೇನೆ.

ಶ್ರೀ ಗೋಪಿನಾಥ್ ಆರ್. ಸಾಂಡ್ರ : ಸರ್ಕಾರದವರು ಈಗಾಗಲೇ ಪ್ರತಿಯೊಂದು ಮತದಾನ ಕ್ಷೇತ್ರಕ್ಕೆ ಒಂದು ಸಾವಿರ ಮನೆಗಳನ್ನು ನಿರ್ಮಿಸಿ ಕೊಡಬೇಕೆಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಅದಕ್ಕೆ ಬೇಕಾಗಿರತಕ್ಕ ಹಣವನ್ನು ಮುಂಗಡವಾಗಿ ಕೊಡಲಾಗಿದೆ. ಅದರಲ್ಲಿ ನಾನು ಹೇಳಿದ ಉತ್ತರದಂತೆ ಮನೆಗಳನ್ನು ಕಟ್ಟಿಸಲಾಗಿದೆ. ಇನ್ನೂ ಕಟ್ಟಬೇಕಾಗಿರುವ ಮನೆಗಳು ಬಹಳ ಇವೆ. ಇವೆಲ್ಲವನ್ನು ಟಾಸ್ಕ್ ಫೋರ್ಸ್ ಕಮಿಟಿಯವರಿಗೆ ಕೊಟ್ಟು ಅವರು ಮುತುವರ್ಜಿ ವಹಿಸಿ ಕೆಲಸ ಮಾಡಿಕೊಡಬೇಕೆಂದಿದೆ.

ಶ್ರೀ ಶಿವಾನಂದ ಎಸ್. ಕೌಜಲಗಿ : ಹಣ ಇಲ್ಲವೇ ಇಲ್ಲ. ಹೇಗೇ ಕೊಡುತ್ತೀರಿ?

ಶ್ರೀ ಜೆ.ಸಿ. ಮಾಧುಸ್ವಾಮಿ : ಇದು ನೇರವಾದ ಸುಳ್ಳು. ಯಾರ ಕೈಯಲ್ಲಿ ಹಣವನ್ನು ಕೊಟ್ಟಿದ್ದೀರಿ. ನಾವು ಕೇಳಿಕೊಂಡು ಹೋಗುತ್ತೇವೆಂದು ಇವ ಸುಳ್ಳನ್ನು ಹೇಳುತ್ತಲೇ ಇರುವುದೇ?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ ಈ ಮನೆಗಳನ್ನು ಕಟ್ಟುವುದಕ್ಕೆ ಎರಡು ಏಜೆನ್ಸಿಗಳಿವೆ. ಒಂದು ಗೃಹ ಮಂಡಳಿ, ಒಂದು ಜಿಲ್ಲಾಧಿಕಾರಿಗಳು. ಈ ಹಿಂದೆ ಜಿಲ್ಲಾಧಿಕಾರಿಗಳಿಗೆ ಮನೆಗಳನ್ನು ಕಟ್ಟುವುದಕ್ಕೆ ಅಧಿಕಾರ ಹಸ್ತಾಂತರವಾಗಿದ್ದಕ್ಕೆ ಕಾರಣ ಗೃಹ ಮಂಡಳಿಗೆ. ಪರಿಪೂರ್ಣವಾದಂಥ ಜವಾಬ್ದಾರಿಯನ್ನೇನೂ ಕೊಟ್ಟಿದ್ದರು. ಹಿಂದಿನ ಸರ್ಕಾರ ಅದಕ್ಕೆ 20 ಕೋಟಿ ರೂಪಾಯಿಗಳ ಮುಂಗಡವನ್ನು ಕೊಟ್ಟಿತ್ತು, ಅದರಲ್ಲಿ ಯಾರ್ಯಾರೋ ಏಜೆನ್ಸಿಗೋ ಮುಂಗಡ ಕೊಟ್ಟಿದ್ದರು, ಅವರಿಂದ ಮುಂಗಡವನ್ನು ವಸೂಲಿ ಮಾಡುವ ಬಗ್ಗೆ ಏನು ಮಾಡಿದ್ದಾರೋ ನನಗೆ ಗೊತ್ತಿಲ್ಲ, ಸಿ.ಓ.ಡಿ ತನಿಖೆಗೆ ಹಿಂದಿನ ಶಾಸನ ಸಮಿತಿಯ ಸಭೆಯಲ್ಲಿ ಆಜ್ಞೆ ಮಾಡಿದ್ದೇವೆಂದು ಹೇಳಿದ್ದರು. ಆ ತನಿಖೆಯ ವರದಿಯು ಬರದಿದ್ದರೆ, 20 ಕೋಟಿ ರೂಪಾಯಿಗಳೇನು ಮುಂಗಡ ಕೊಟ್ಟಿದ್ದಾರೆ. ಸಿ.ಓ.ಡಿ ತನಿಖೆಯಾಗಿ ವರದಿ ಬಂದು ತೀರ್ಮಾನವಾಗುವವರೆಗೆ ಗೃಹ ಮಂಡಳಿಯವರು ಮನೆಗಳನ್ನು ಕಟ್ಟುವುದಕ್ಕಾಗುವುದಿಲ್ಲ. ಜಿಲ್ಲಾಧಿಕಾರಿಗಳಿಗೇನು ಏಜೆನ್ಸಿ ಕೊಟ್ಟಿದ್ದಾರೆ ಇವರಿಗೆ ಹಣವು ಬಿಡುಗಡೆ ಆಗುತ್ತಿಲ್ಲ. ಈ ಕಾರ್ಯಕ್ರಮದಲ್ಲಿ

ಪರಿಪೂರ್ಣವಾಗಿ ಕಾಯಾ ವಾಚ ಮನಸ ನಿಮಗೆ ಪೊಲಿಟಿಕಲ್ ವಿಲ್ ಇದ್ದರೆ ಈ ಗೃಹ ಮಂಡಳಿಗೆ ಕೊಟ್ಟಂತಹ 20 ಕೋಟಿ ಮುಂಗಡ ವಸೂಲಿ ಆಗಿದೆಯೇ? ಅದು ಆಗದಿದ್ದರೆ ಗೃಹ ಮಂಡಳಿ ಇನ್ನು ಯಾವ ಹಂತದಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಮುಂದಾಗಿವೆ. ಇವರಿಗೆ ಅಧಿಕಾರಕ್ಕೆ ಬಂದಾಗ ಇದ್ದ ಉತ್ಸಾಹ ಈಗ ಇಲ್ಲ.

12.30 ಪಿ.ಎಂ

ಗೃಹ ಮಂಡಳಿಯ ಮೇಲಿನ ತನಿಖೆ ಏನಾಯಿತು? ಗೃಹ ಮಂಡಳಿ ಮನೆ ಕಟ್ಟುವುದಕ್ಕೆ ಸಿ.ಓ.ಡಿ ತನಿಖೆ ಭಾದಕವಾಗಿಲ್ಲವೆ?

ಶ್ರೀ ಗೋಪಿನಾಥ್ ಆರ್. ಸಾಂಡ್ರ : ಸನ್ಮಾನ್ಯ ಅಧ್ಯಕ್ಷರೇ, ನಾವು ಅಧಿಕಾರಕ್ಕೆ ಬಂದ ಮೇಲೆ ತೋರಿದಂತಹ ಉತ್ಸಾಹ ಕಡಿಮೆಯಾಗಿದೆ ಎಂದು ಶ್ರೀ ಚಂದ್ರೇಗೌಡರು ಹೇಳಿದ್ದಾರೆ. ಅವರು ಉತ್ಸಾಹ ಕಡಿಮೆಯಾಗಿದೆ ಎಂದು ಯಾವ ಪ್ಯಾರಾಮೀಟರಿಂದ ಹೇಳಿದರೂ ಗೊತ್ತಿಲ್ಲ. ನಾವು ಯಾವ ರೀತಿ ಜನರಿಗೆ ಮತ್ತು ಶಾಸಕರಿಗೆ ವಚನ ಕೊಟ್ಟಿದ್ದೆವೋ, ಅದೇ ರೀತಿ ಒಂದು ಲಕ್ಷ ಮನೆಗಳು. ಈಗಾಗಲೇ ತಯಾರಾಗಿ ಹಂಚಿಕೆ ಎಲ್ಲಾ ನಡೆದಿದೆ. ಇಲ್ಲಿ ನಾವು ಯಾವ ರೀತಿ ಅನಾದರಣೆ ವಹಿಸಿದ್ದೇವೆಯೋ ಅದನ್ನು ಅವರು ಹೇಳಬೇಕು. ನಾವು ಸಾಕಷ್ಟು ಹಣವನ್ನು ಕೊಟ್ಟಿದ್ದೇವೆ. ಉದಾಹರಣೆಗೆ ಬೀದರ್ ಜಿಲ್ಲೆಗೆ 339.35 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆದರೆ ಅಲ್ಲಿ ಖರ್ಚು ಮಾಡಿದಂತಹ ಹಣ 178.05 ಲಕ್ಷ ರೂಪಾಯಿಗಳನ್ನು ಮಾತ್ರ ಅವವು ಸಾಕಷ್ಟು ಹಣವನ್ನು ಇಟ್ಟುಕೊಂಡಿದ್ದಾರೆ. ಶ್ರೀಮಾನ್ ಚಂದ್ರೇಗೌಡರು ಹೇಳಿದ ಹಾಗೆ ಹಿಂದಿನ ಸರ್ಕಾರದವರು ಹಿಂದೆ ಏನು ಹೌಸಿಂಗ್ ಬೋರ್ಡ್ ಕೆಲಸ ಮಾಡಿದರೊ ಅವರ ಸುಮಾರು 20-21 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು. ಅದನ್ನು ವಸೂಲು ಮಾಡಿಲ್ಲ ಎಂಬುದನ್ನು ಕೂಡ ಹೇಳಿದರು. ನಾವು ಈಗ ಸುಮಾರು 6 ಕೋಟಿ ರೂಪಾಯಿಗಳನ್ನು ವಸೂಲು ಮಾಡಿದ್ದೇವೆ. ಅವರ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೇವೆ. ಇದು ಕೋರ್ಟಿಗೆ ಹೋಗಿ ನಿಧಾನ ಆಗುತ್ತಿದೆ. ಆದರೆ ಮನೆಗಳನ್ನು ಕಟ್ಟುವ ಕಾರ್ಯಕ್ರಮದಲ್ಲಿ ಎಲ್ಲಿಯೂ ಎಡವದೆ ಪ್ರಾರಂಭ ಮಾಡಿದ್ದೇವೆ. ಆ ದುಡ್ಡು ಬರಲಿ, ಬರದೇ ಇರಲಿ ಅದು ಬೇರೆ ವಿಚಾರ. ನಾವು ಈಗ ಪ್ರತಿ ಜಿಲ್ಲೆಗೂ ಎಷ್ಟು ಮನೆಗಳನ್ನು ನಿಗಧಿ ಮಾಡಿದ್ದೆವೊ, ಡೆಪ್ಯೂಟಿ ಕಮೀಷನರ್‌ಗೆ ಎಷ್ಟು ಹಣವನ್ನು ಕೊಡಬೇಕೋ ಅಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ. ಹೌಸಿಂಗ್ ಬೋರ್ಡ್‌ನವರಿಗೂ ಒತ್ತಾಯ ಪೂರ್ವಕವಾಗಿ ನೀವು ಮನೆಗಳನ್ನು ಕಟ್ಟುವಂತಹ ವ್ಯವಸ್ಥೆಯನ್ನು ಮಾಡಿ ಆದಷ್ಟು ಬೇಗನೆ ನಮ್ಮ ಗುರಿ ಏನಿದೆ ಅದನ್ನು ಸಾಧಿಸಿ ಎಂದು ಹೇಳಿದ್ದೇವೆ. ನಾವು ಎಲ್ಲಾ ಕಡೆಗೂ ಹಣವನ್ನು ಕೊಟ್ಟಿದ್ದೇವೆ. ಮತ್ತು ವಿಶೇಷವಾದಂಥ ಆರ್ಡರ್ ಅನ್ನು ಕೊಟ್ಟಿದ್ದೇವೆ. ಟಾಸ್ಕ್ ಪೋರ್ಸ್ ಕಮಿಟಿಯವರು ಹೆಚ್ಚಿನ ಜವಾಬ್ದಾರಿಯಿಂದ ಮಾನಿಟರಿಂಗ್ ಮಾಡಬೇಕು. ಅಲ್ಲಿ ಮಹತ್ವವಾದಂತಹ ನಿರ್ಣಯವನ್ನು ತೆಗೆದುಕೊಂಡು ಅದನ್ನು ಜಾರಿಗೆ ತರುವುದಕ್ಕೆ ಟಾಸ್ಕ್ ಪೋರ್ಸ್ ಕಮಿಟಿಯವರು......

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಟಾಸ್ಕ್ ಪೋರ್ಸ್‌ನವರು ಏನು ಮಾಡುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮುಖ್ಯಮಂತ್ರಿಗಳು 6 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ. ಎಂದು ಭಾಷಣ ಮಾಡುತ್ತಾರೆ. ಇಲ್ಲಿ ನೀವು ಹೇಳಿಕೆ ಕೊಡುತ್ತೀರಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಚಂದ್ರೇಗೌಡರು ಏನು ಪ್ರಶ್ನೆ ಕೇಳಿದರು. ಸಿ.ಓ.ಡಿ ಎನ್‌ಕ್ವೈರಿಯರಿಗೆ ಘೋಷಣೆ ಮಾಡಿದ್ದೀರಲ್ಲಾ, ಆ ಸಿ.ಓ.ಡಿ ತನಿಖೆ ಯಾವ ಹಂತದಲ್ಲಿದೆ. ಅದನ್ನು ತಾವು ಹೇಳಿಲ್ಲ. ಅದಕ್ಕೆ ತಾವು ಉತ್ತರ ಕೊಡಿ. ಸಿ.ಓ.ಡಿ ಎನ್‌ಕ್ವೈಯರಿ ಹಾಕಿದ್ದೀರಿ. ಯಾರ ಮೇಲಾದರೂ ಕೇಸ್ ಹಾಕಿದ್ದರೋ, ಇಲ್ಲವೋ? ಅದನ್ನು ಹೇಳಿ. ಈಗ ಅವರು ಕೇಳುತ್ತಿರುವುದು ಸಿ.ಓ.ಡಿ ಎನ್‌ಕ್ವೈಯರಿ ಏನಾಯಿತು. ಸಿ.ಓ.ಡಿ ಯಿಂದ ಏಜೆನ್ಸಿಯವರು ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ ಮತ್ತು ತಾವು ಹಣ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೀರಿ, 1994-95ರಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ, ಯಾವ ಯಾವ ಜಿಲ್ಲೆಗೆ ಎಷ್ಟು? ಮತ್ತು ಅದರ ಮೇಲೆ ಟ್ರೆಜರಿ ಬ್ಯಾನ್ ಇದೆಯೋ, ಇಲ್ಲವೋ, ಇದನ್ನು ಸ್ಪಷ್ಟವಾಗಿ ಹೇಳಿ.

ಶ್ರೀ ಗೋಪಿನಾಥ್ ಆರ್. ಸಾಂಡ್ರಾ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಬೇರೆ ಪ್ರಶ್ನೆ ಹಾಕಿದರೆ ಅದಕ್ಕೆ ಉತ್ತರವನ್ನು ಒದಗಿಸಲಾಗುವುದು. ಆ ಪ್ರಶ್ನೆಗೂ ಈ ಪ್ರಶ್ನೆಗೂ ಸಂಬಂಧವಿಲ್ಲ. ನಮ್ಮ ಖಾತೆಯ ಮಟ್ಟಿಗೆ ಹೇಳಬೇಕಾದರೆ ನಾವು ಏನು ಮನೆಗಳನ್ನು ಕಟ್ಟಬೇಕು ಎಂದು ಮಾಡಿದೆಯೋ ಅದಕ್ಕೆ ಬೇಕಾದಂತಹ ಹಣವನ್ನು ಡೆಪ್ಯೂಟಿ ಕಮೀಷನರ್‌ಗೆ ಕೊಡಲಾಗಿದೆ. ಬ್ಯಾನ್ ಏನೂ ಇಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮೊನ್ನೆ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೀರಿ. ನಿಶ್ಚಿತವಾದಂತಹ ಒಂದು ಗೇಜ್‌ನಲ್ಲಿ ಕಿಟಕಿ, ಬಾಗಿಲುಗಳನ್ನು ಮಾಡಬೇಕೆಂದು ಇತ್ತು. ಆದರೆ ಈಗ ಕಡಿಮೆ ಗೇಜ್‌ನಲ್ಲಿ ಕಿಟಕಿ, ಬಾಗಿಲುಗಳನ್ನು ಮಾಡಬಹುದು ಎಂದು ಅನುಮತಿಯನ್ನು ಕೊಟ್ಟು ಕೋಟ್ಯಾಂತರ ರೂಪಾಯಿಗಳನ್ನು ಉಳಿಸುವುದಕ್ಕೆ ಹೊರಟಿದ್ದೀರಿ. ಈ ರೀತಿಯಾದ ಆಜ್ಞೆಯನ್ನು ಹೊರಡಿಸಿರುವುದು ನಿಜ ತಾನೆ? ಇದಕ್ಕೆ ಸಂಬಂಧಪಟ್ಟ ಪ್ರತಿಗಳು ಇದೆ.

SRI D.B. CHANDRE GOWDA : Construction of houses was given to an agency against which COD enquiry was instituted. ಸಿಓಡಿ ತನಿಖೆ ವರದಿ ಏನಾಯಿತು? ಆ ವರದಿ ಬೇಡವೇ Whether the enquiry has been dispensed with? ಏನಾಗಿದೆ ತಿಳಿಸಿ?

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ : ಇವುಗಳಿಗೆ ಯಾವುದಕ್ಕೂ ಕೂಡ ದುಡ್ಡೇ ಇಲ್ಲ.

(ಗೊಂದಲ)

ಶ್ರೀ ಶಿವಾನಂದ ಹೆಚ್. ಕೌಜಲಗಿ : 20 ಕೋಟಿ ರೂಪಾಯಿ ತಿಂದಿದ್ದಾರೆ. ಅದೆಲ್ಲಾ ಏನಾಯಿತು ಎಂದು ಹೇಳಲಿ.

(ಗೊಂದಲ)

ಅಧ್ಯಕ್ಷರು : ಬೇರೆ ರೂಪದಲ್ಲಿ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ ಎಂದು ಮಂತ್ರಿಗಳು ಹೇಳಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಈಗಾಗಲೇ ನೀವು ಅಧಿವೇಶನಗಳನ್ನು ಕರೆಯುತ್ತಿಲ್ಲ. ನೀವು ಅಧಿವೇಶನ ಕರೆದಾಗ ಅದು ಯಾವಾಗ ಶುರುವಾಗುತ್ತದೆ, ಯಾವಾಗ ಬಂದ್ ಆಗುತ್ತದೆ ಎನ್ನುವುದು ನಮಗೆ ಗೊತ್ತಾಗುವುದಿಲ್ಲ. ಈ ಅಧಿವೇಶನ 11 ದಿನ ಮಾತ್ರ. ಒಂದು ವಿಷಯ ಪ್ರಸ್ತಾಪ ಆಗಿದೆ. ಅವರು ಆರ್ಡರ್ ಮಾಡಿದ್ದಾರೆ ಸಿಓಡಿ ಎನ್‌ಕ್ವೈಯರಿ ಏನಾಯಿತು? 20 ಕೋಟಿ ರೂಪಾಯಿ ಲೂಟಿ ಮಾಡಿದ್ದಾರೆ.

ಅಧ್ಯಕ್ಷರು : ಒಂದು ಪ್ರಶ್ನೆಗೆ ಒಂದು ಗಂಟೆ ಕಾಲವಕಾಶ ತೆಗೆದುಕೊಳ್ಳುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಇತರೆ ಪ್ರಶ್ನೆಗಳಿಗೆ ಸ್ವಲ್ಪ ಅವಕಾಶ ಬೇಡವೇ?

ಶ್ರೀ ಆರ್.ವಿ. ದೇಶಪಾಂಡೆ : ಇದು ಜನಕ್ಕೆ ಗೊತ್ತಾಗಬೇಕಾಗಿದೆ, ಜನಸಾಮಾನ್ಯರ ಹಣ ಲೂಟಿಯಾಗಿದೆ.

ಶ್ರೀ ಗೋಪಿನಾಥ್ ಆರ್. ಸಾಂಡ್ರಾ : ನಾವು ಸಿಓಡಿಗೆ ಆ ಪ್ರಶ್ನೆ ರೆಫರ್ ಮಾಡಿದ್ದೇವೆ. ಅದರ ಬಗ್ಗೆ ಅದಷ್ಟು ಬೇಗ ರಿಪೋರ್ಟ್ ಕಳುಹಿಸಿ ಎಂದು ಒತ್ತಾಯ ಮಾಡಿ ಹೇಳಿದ್ದೇವೆ. ಅವರು ಆದಷ್ಟು ಬೇಗ ಕಳುಹಿಸುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಸಿಓಡಿಗೆ ನೀವು ಯಾವತ್ತು ಕಳುಹಿಸಿದ್ದೀರಿ? ಸಿಓಡಿಯವರು ಯಾವತ್ತು ವರದಿ ಕೊಡುತ್ತಾರೆ? ಸಿಓಡಿ ವರದಿ ಬಂದಿದೆಯೆ?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಸಿಓಡಿ ಪೋಲೀಸರ ಮೇಲೆ ಒತ್ತಡ ತರಲಾಗಿದೆ. ಈ ಸರ್ಕಾರ ಮಾಡಿರತಕ್ಕಂತಹ ಭ್ರಷ್ಟಾಚಾರ ಹೊರಗಡೆ ಬರುತ್ತದೆ ಎಂದು ಹೇಳಿ, ಈ ಮಂತ್ರಿ ಮಂಡಲದಲ್ಲಿ ಇರತಕ್ಕಂತಹ ಕೆಲವು ಸದಸ್ಯರನ್ನು ಡಿಫೆಂಡ್ ಮಾಡಿಕೊಳ್ಳಬೇಕು, ಶೀಲ್ಡ್ ಮಾಡಬೇಕು ಎನ್ನುವ ದೃಷ್ಟಿಯಿಂದಾಗಿ ಸಿಓಡಿ ಪೋಲೀಸರು ವರದಿ ಕೊಡುವುದನ್ನು ಇವರೇ ನಿಲ್ಲಿಸಿದ್ದಾರೆಂದು ನಾನು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರೇ, ಸಿಓಡಿ ಎನ್‌ಕ್ವೈಯರಿ, ಗುಂಪು ಬದಲಾಯಿಸುತ್ತಿದ್ದ ಹಾಗೆ ಡ್ರಾಪ್ ಆಗಿಹೋಗಿದೆ. ಎನ್‌ಕ್ವೈಯರಿ ನಿಂತುಹೋಗಿದೆ.

ಅಧ್ಯಕ್ಷರು : ಅವರು ಏನು ಹೇಳುತ್ತಾರೆ ಕೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಕಾಂಗ್ರೆಸ್‌ನಲ್ಲಿ ಗುಂಪು ಬದಲಾವಣೆ ಆಗುತ್ತಿದ್ದ ಹಾಗೆ ಎಲ್ಲಾ ಎನ್‌ಕ್ವೈಯರಿ ನಿಂತುಹೋಗಿ ಬಿಡುತ್ತದೆ.

ಶ್ರೀ ಸಿ. ಬೈರೇಗೌಡ : ನನ್ನ ಮಾಹಿತಿ ಪ್ರಕಾರ ಸಿಓಡಿ ವರದಿ ಸರ್ಕಾರದ ಕೈ ತಲುಪಿದೆ. ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಇವರು ಹಿಂದು ಮುಂದು ನೋಡುತ್ತಿದ್ದಾರೆ. ಸಿಓಡಿಯನ್ನು ರಾಜಕೀಯ ದಾಳವಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದನ್ನು ನಾವು ಪ್ರತಿಭಟನೆ ಮಾಡಲೇಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಈ ಸದನದಲ್ಲಿ ಸಿಓಡಿ ವರದಿ ಬಂದಿದ್ದರೂ ಸಹ ಸಿಓಡಿ ವರದಿ ಬಂದಿಲ್ಲ ಎಂದು ಹೇಳಿ ಸದನಕ್ಕೆ ತಪ್ಪು ಮಾಹಿತಿ ನೀಡಿರುವುದರಿಂದ ಇದು ಹಕ್ಕುಚ್ಯುತಿ ಆಗುತ್ತದೆ. ಆದುದರಿಂದ ಮಾನ್ಯ ಸಚಿವರು ಹಕ್ಕುಚ್ಯುತಿಯನ್ನು ಎದುರಿಸಬೇಕಾಗುತ್ತದೆ. ಈ ಮಾತು ನಿಮಗೆ ಹೇಳುತ್ತಿದ್ದೇನೆ, ನೀವು ಅಧಿಕಾರಕ್ಕೆ ಬಂದಾಗ ಏನು ಹೇಳಿದ್ದೀರಿ ನೇರವಾಗಿ ಹೇಳಿ ನೀವು ಮಂತ್ರಿಯಾದಾಗ ಏನು ಹೇಳಿದ್ರಿ ನೀವು ಪತ್ರಿಕೆಯಲ್ಲಿ ಏನು ಹೇಳಿದ್ರಿ. ಇದರ ಬಗ್ಗೆ ಪತ್ರಕರ್ತರಿಗೆ ಏನೇನು ಹೇಳಿದ್ದೀರಿ ನೀವು ಅದಕ್ಕೆ ಕಟ್ಟು ಬಿದ್ದಿದ್ದೀರಾ? ಯಾರನ್ನು ಮೆಚ್ಚಿಸುವುದಕ್ಕೆ ಹೋಗುತ್ತಿದ್ದೀರಿ ನೀವು. ನೀವು ನೇರವಾಗಿ ಹೇಳಬೇಕು.

(ಮಾನ್ಯ ಸದಸ್ಯರುಗಳಾದ ಆರ್.ವಿ. ದೇಶಪಾಂಡೆ, ಶ್ರೀ ಪಿ.ಜಿ.ಆರ್. ಸಿಂಧ್ಯಾ ಶ್ರೀ ಸಿ. ಬೈರೇಗೌಡ, ಶ್ರೀ ಶಿವಾನಂದ ಹೆಚ್. ಕೌಜಲಗಿ, ಮತ್ತು ಶ್ರೀ ಜೆ.ಸಿ. ಮಾಧುಸ್ವಾಮಿ ಇವರುಗಳು ಸಭಾತ್ಯಾಗ ಮಾಡಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಲಕ್ಷಾಂತರ ಬಡವರಿಗೆ ಮನೆ ಕಟ್ಟುವಂತಹ ಸಂದರ್ಭದಲ್ಲಿ ಈ ಸಮಸ್ಯೆ ಬಂದಿದೆ. ಸಿಓಡಿಯವರು ಒಂದು ಇಂಟರಿಯಂ ವರದಿಯನ್ನು ಕೊಟ್ಟಿದ್ದಾರೆ. ಇಷ್ಟು ದಿವಸವಾದರೂ ಇದು ಇನ್ನೂ ಕೈಸೇರಿಲ್ಲ ಎಂದು ಹೇಳುತ್ತಾರೆ. ಕಾರಣ ಒಂದೇ ಒಂದು. ಅವತ್ತಿನ ಗೃಹಮಂಡಳಿ ಅಧ್ಯಕ್ಷರು ಇವತ್ತು ಮಂತ್ರಿಗಳಾಗಿದ್ದಾರೆ. ಆದುದರಿಂದ ಬಣ್ಣ ಬಯಲಾಗುತ್ತದೆ ಎಂದು ಇನ್ನು 3 ತಿಂಗಳು ಮುಂದೆ ಹಾಕುವ ಪ್ರಯತ್ನ ಮಾಡುತ್ತಿದ್ದಾರೆ. ಅಧ್ಯಕ್ಷರೇ, ನೀವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ಲಕ್ಷಾಂತರ ಜನರು ಮನೆ ಕಟ್ಟುವಂತಹ ಪ್ರಶ್ನೆ ಇದು. 25-30 ಕೋಟಿ ರೂಪಾಯಿ ಲೂಟಿ ಮಾಡಿರುವ ಪ್ರಶ್ನೆ. ಸರ್ಕಾರ ಬದುಕಿದ್ದರೆ ಸಿಓಡಿ ವರದಿ ಏಕೆ ನಿಮ್ಮ ಕೈಸೇರಿಲ್ಲ. ಎಷ್ಟು ರಿಮೈಂಡರ್ ಹಾಕಿದ್ದೀರಿ? ಯಾವ ಹಂತದಲ್ಲಿ ಇದೆ? ಇಂಟರೀಯಂ ಆರ್ಡರ್ ಬಂದಿದೆಯೇ ಇಲ್ಲವೇ? ಅದನ್ನು ಸ್ಪಷ್ಟ ಮಾಡಿ. ಉತ್ತರ ಪೌರುಷನಂತೆ ನೀವು ಮಂತ್ರಿಗಳಾದಾಗ ಮಾತನಾಡಿದಿರಿ. ಸತ್ಯ ಸಂಗತಿಯನ್ನು ಸದನಕ್ಕೆ ಕೊಡಿ

(ಗೊಂದಲ)

ಇವರು ಅಧಿಕಾರಕ್ಕೆ ಬಂದಾಗ ಏನೇನು ಹೇಳಿದರು ಅಂತ ಸ್ವಲ್ಪ ಧೈರ್ಯ ಇದ್ದರೆ ಹೇಳಿ, ಏಕೆ ಹಿಂದಕ್ಕೆ ಹೋಗುತ್ತಿದ್ದಿರಿ?

ಶ್ರೀ ಗೋಪಿನಾಥ್ ಆರ್. ಸಾಂಡ್ರಾ : ನಾವು ಅಧಿಕಾರಕ್ಕೆ ಬಂದಮೇಲೆ ಎಲ್ಲರ ಅಭಿಪ್ರಾಯವನ್ನು ತಿಳಿದುಕೊಂಡ ನಂತರವೇ ಸಿ.ಓ.ಡಿಗೆ ನಾವು ಇನ್‌ಪಾರಂ ಮಾಡಿದ್ದು, ಇಂಟೀರಿಯಂ ರಿಪೋರ್ಟ್ ಬಂದಿದೆ........

ಶ್ರೀ ವಾಟಾಳ್ ನಾಗರಾಜ್ : ಮಧ್ಯಂತರ ವರದಿಯನ್ನು ಸಭೆಯ ಮುಂದಿಡಿ.

ಶ್ರೀ ಗೋಪಿನಾಥ್ ಆರ್. ಸಾಂಡ್ರ : ವರದಿ ಬಂದಿದೆ, ಆ ವರದಿಯಲ್ಲಿ ಹೇಳಿದಂತೆ ಕೆಲವು ಅಧಿಕಾರಿಗಳಲ್ಲಿ ಯಾರ‍್ಯಾರನ್ನು ಸಸ್ಪೆಂಡ್ ಮಾಡಲಿಕ್ಕೆ ಸಾಧ್ಯವೋ ಅವರನ್ನು ಸಸ್ಪೆಂಡ್ ಮಾಡಿ ಕೇಸ್ ಹಾಕಬೇಕು ಅಂತ ಮಾಡಿದ್ದೇವೆ ಫೈನಲ್ ರಿಪೋರ್ಟ್ ಬರುವುದಿದೆ ಸತ್ಯಕ್ಕೆ ದೂರವಾದ ಆ ವರದಿಯಲ್ಲಿ....

ಶ್ರೀ ವಾಟಾಳ್ ನಾಗರಾಜ್ : ವರದಿ ಬಯಲಾಗಬೇಕು, ಆ ವರದಿಯಲ್ಲಿ ತಮಗೆ ಇಚ್ಛೆ ಬಂದಂತೆ ನಡೆದಿದೆ ವರದಿಯನ್ನು ಇಲ್ಲಿ ಮಂಡಿಸಬೇಕು ವರದಿಯ ಸಮಗ್ರ ಚರ್ಚೆ ಆಗಲೇ ಬೇಕು, ಆ ವರದಿ ಏನು ಎಂದು ಈ ಸದನಕ್ಕೂ ಗೊತ್ತಾಗಲಿ

ಅಧ್ಯಕ್ಷರು : ಯಡಿಯೂರಪ್ಪನವರೆ, ಇದು ಪ್ರಶ್ನೋತ್ತರ ಕಾಲ ಇದೆ. ಈ ಪ್ರಶ್ನೆಗೂ ಅದಕ್ಕೂ ಸಂಬಂಧವಿಲ್ಲ. ಅದರ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದರೆ ಬರೆದು ಕಳುಹಿಸಿ

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ವಾಕ್‌ಔಟ್ ಮಾಡುವುದಿಲ್ಲ ಸ್ವಾಮಿ, ದಯವಿಟ್ಟು ನಮಗೆ ವರದಿ ಕೊಡಿ ಇವತ್ತು ಮಧ್ಯಾಹ್ನದ ಮೇಲಾದರೂ ನಮಗೆ ವರದಿಯನ್ನು ಕೊಡುತ್ತೀರಾ?

ಶ್ರೀ ಗೋಪಿನಾಥ್ ಆರ್. ಸಾಂಡ್ರಾ : ಯಡಿಯೂರಪ್ಪನವರೆ ಮಧ್ಯಾಹ್ನ ನಿಮ್ಮ ಮನೆಗೆ ವರದಿಯನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮನೆಗೆ ಬೇಡ, ಸಭೆಗೆ ತನ್ನಿ ವರದಿಯನ್ನು ಮಧ್ಯಾಹ್ನ ತಂದು ಕೊಡಿ ಆಮೇಲೆ ಮುಂದಿನದನ್ನು ಗಮನಿಸೋಣ.

ರಾಜ್ಯದಲ್ಲಿ ಸಹಕಾರಿ ನೂಲಿನ ಗಿರಣಿಗಳು

48 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನೂಲಿನ ಗಿರಣಿಗಳು ಸಹಕಾರ ಕ್ಷೇತ್ರದಲ್ಲಿ ಎಷ್ಟು ಇವೆ ಹಾಗೂ ಅವು ಯಾವುವು?

ಆ) ಈ ನೂಲಿನ ಗಿರಣಿಗಳು ಕಳೆದ ಮೂರು ವರ್ಷಗಳಲ್ಲಿ ಲಾಭದಲ್ಲಿದೆಯೇ ಅಥವಾ ನಷ್ಟದಲ್ಲಿದೆಯೇ ಮತ್ತು 31-3-94ಕ್ಕೆ (ಯಾವ) ಗಿರಣಿಗಳ ಮುಚ್ಚುವಿಕೆಯಿಂದ ಹಾನಿ ಎಷ್ಟು?

ಶ್ರೀ ಹೆಚ್.ಕೆ. ಪಾಟೀಲ್ (ಜವಳಿ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 12 ಸಹಕಾರಿ ನೂಲಿನ ಗಿರಣಿಗಳಿವೆ. (ಗಿರಣಿಗಳ ಹೆಸರನ್ನು ಅನುಬಂಧ 1ರಲ್ಲಿ ಕೊಡಲಾಗಿದೆ)

ಆ) ಕಳೆದ ಮೂರು ವರ್ಷಗಳಲ್ಲಿ 2 ಗಿರಣಿಗಳು ಲಾಭದಲ್ಲೂ 10 ಗಿರಣಿಗಳು ನಷ್ಟದಲ್ಲಿಯೂ ನಡೆದಿರುತ್ತದೆ (ಈ 10 ಗಿರಣಿಗಳ ಪೈಕಿ 2 ಗಿರಣಿಗಳು 1993-94ರಲ್ಲಿ ಲಾಭ ಗಳಿಸಿದೆ) ಬಿಜಾಪುರ, ಬಾಗಲಕೋಟೆ ಮತ್ತು ರಾಯಚೂರು ಸಹಕಾರಿ ನೂಲಿನ ಗಿರಣಿಗಳು ಮುಚ್ಚಲ್ಪಟ್ಟಿದ್ದು 31-3-94ಕ್ಕೆ 470.64 ಲಕ್ಷ ನಷ್ಟ ಆಗಿರುತ್ತದೆ. (ಎಲ್ಲಾ ಗಿರಣಿಗಳ 3 ವರ್ಷಗಳ ಲಾಭ ಮತ್ತು ನಷ್ಟದ ತಃಖ್ತೆಯನ್ನು ಅನುಬಂಧ 2ರಲ್ಲಿ ಕೊಡಲಾಗಿದೆ)

ಅನುಬಂಧ -1

ಕರ್ನಾಟಕದಲ್ಲಿರುವ ಸಹಕಾರಿ ನೂಲಿನ ಗಿರಣಿಗಳು
ಸ್ಥಾಪನೆಯಾಗಿರುವ ಗಿರಣಿಗಳು

1) ಗದಗ್ ಸಹಕಾರಿ ನೂಲಿನ ಗಿರಣಿ, ನಿ, ಹುಲಕೋಟಿ, ಧಾರವಾಡ ಜಿಲ್ಲೆ.
2) ಬನಹಟ್ಟಿ ಸಹಕಾರಿ ನೂಲಿನ ಗಿರಣಿ, ಬನಹಟ್ಟಿ, ಬಿಜಾಪುರ ಜಿಲ್ಲೆ,
3) ಬೆಳಗಾಂ ಸಹಕಾರಿ ನೂಲಿನ ಗಿರಣಿ, ಬೆಳಗಾಂ
4) ರೈತರ ಸಹಕಾರಿ ನೂಲಿನ ಗಿರಣಿ, ಹುಲಕೋಟಿ, ಧಾರವಾಡ ಜಿಲ್ಲೆ.
5) ಮಲಪ್ರಭಾ ಸಹಕಾರಿ ನೂಲಿನ ಗಿರಣಿ, ಸೌಂದತ್ತಿ, ಬೆಳಗಾವಿ ಜಿಲ್ಲೆ.
6) ಶ್ರೀ ಸೋಮೇಶ್ವರ ರೈತರ ಸಹಕಾರಿ ನೂಲಿನ ಗಿರಣಿ, ಲಕ್ಷ್ಮೇಶ್ವರ, ಧಾರವಾಡ ಜಿಲ್ಲೆ,
7) ತುಂಗಭದ್ರಾ ರೈತರ ಸಹಕಾರಿ ನೂಲಿನ ಗಿರಣಿ, ರಾಮಿಬೆನ್ನೂರ್, ಧಾರವಾಡ ಜಿಲ್ಲೆ
8) ಶ್ರೀ ವೆಂಕಟೇಶ್ ಸಹಕಾರ ನೂಲಿನ ಗಿರಣಿ, ಅಣ್ಣಿಗೇರಿ, ಧಾರವಾಡ ಜಿಲ್ಲೆ.
9) ರೈತರ ಸಹಕಾರಿ ನೂಲಿನ ಗಿರಣಿ ನಿಯಮಿತ, ಬಿಜಾಪುರ
10) ಬಿಜಾಪುರ ಸಹಕಾರಿ ನೂಲಿನ ಗಿರಣಿ, ಬಿಜಾಪುರ
11) ಬಾಗಲಕೋಟೆ ಸಹಕಾರಿ ನೂಲಿನ ಗಿರಣಿ, ಬಾಗಲಕೋಟೆ
12) ಸಹಕಾರಿ ನೂಲಿನ ಗಿರಣಿ, ರಾಯಚೂರು.

ಅನುಬಂದ - 2

ಸಹಕಾರಿ ನೂಲಿನ ಗಿರಣಿಗಳ ಲಾಭ ನಷ್ಟಗಳ ತಃಖ್ತೆ

ಕ್ರ.ಸಂ	ನೂಲಿನ ಗಿರಣಿಗಳ ಹೆಸರು	1991-92	1992-93	1993-94
1.	ಗದಗ್ ಸಹಕಾರಿ ನೂಲಿನ ಗಿರಣಿ, ಹುಲಕೋಟಿ	+91.57	+14.43	+142.71
2.	ಬನಹಟ್ಟಿ ಸಹಕಾರಿ ನೂಲಿನ ಗಿರಣಿ, ಬನಹಟ್ಟಿ	+199.29	+91.54	+175.86
3.	ಬೆಳಗಾಂ ಸಹಕಾರಿ ನೂಲಿನ ಗಿರಣಿ, ಬೆಳಗಾಂ	-171.60	-103.01	-14.90

4.	ರೈತರ ಸಹಕಾರಿ ನೂಲಿನ ಗಿರಣಿ, ಹುಲಕೋಟಿ	-88.92	-145.50	+9.95
5.	ಮಲಪ್ರಭಾ ಸಹಕಾರಿ ನೂಲಿನ ಗಿರಣಿ, ಸೌಂದತ್ತಿ	-112.98	-268.92	-71.80
6.	ತುಂಗಭದ್ರಾ ರೈತರ ಸಹಕಾರಿ ನೂಲಿನ ಗಿರಣಿ, ರಾಣಿಬೆನ್ನೂರ್	-127.86	-88.50	-23.88
7.	ಸೋಮೇಶ್ವರ ರೈತರ ಸಹಕಾರಿ ನೂಲಿನ ಗಿರಣಿ, ಲಕ್ಷ್ಮೇಶ್ವರ	-181.90	-233.64	+32.84
8.	ರಾಯಚೂರು ಸಹಕಾರಿ ನೂಲಿನ ಗಿರಣಿ, ರಾಯಚೂರು	-21.83	-39.72	-89.72
9.	ಬಿಜಾಪುರ ಸಹಕಾರಿ ನೂಲಿನ ಗಿರಣಿ, ಬಿಜಾಪುರ	-36.21	-185.05	-185.05
10.	ಬಾಗಲಕೋಟೆ ಸಹಕಾರಿ ನೂಲಿನ ಗಿರಣಿ, ಬಾಗಲಕೋಟೆ	-36.15	-195.69	-195.69
11.	ವೆಂಕಟೇಶ ಸಹಕಾರಿ ನೂಲಿನ ಗಿರಣಿ, ಅಣ್ಣಿಗೇರಿ	-	-105.03	ಎನ್.ಎ
12.	ರೈತರ ಸಹಕಾರಿ ನೂಲಿನ ಗಿರಣಿ, ರಾಣಿಬೆನ್ನೂರ್	-	-	-57.79

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ರಾಜ್ಯದಲ್ಲಿ ಒಟ್ಟು 12 ಸಹಕಾರಿ ನೂಲಿನ ಗಿರಣಿಗಳು ಇದೆ ಎಂದು ಹೇಳಿದ್ದಾರೆ. ಸಂತೋಷ ಅದರಲ್ಲಿ ನಿಮ್ಮ ಕ್ಷೇತ್ರದ ಗದಗ್ ನಿಮ್ಮ ಜಿಲ್ಲೆಯದು, ಬನಹಟ್ಟಿ ಬಿಜಾಪುರ ಜಿಲ್ಲೆಯದು ಲಾಭದಾಯಕವಾಗಿ ನಡೆಯುತ್ತಿದೆ ಎಂದು ಹೇಳಿದ್ದಿರಾ ಇನ್ನು 10ರಲ್ಲಿ 31.03.94ಕ್ಕೆ 470.64 ಲಕ್ಷ ರೂ ನಷ್ಟವಾಗಿದೆ ಎಂದು ಹೇಳಿದ್ದೀರಿ, ಇಲ್ಲಿ ಎರಡು ಲಾಭದಾಯಕವಾಗಿ ನಡೆಯುತ್ತಿದೆ ಉಳಿದ ಕಡೆ ನಷ್ಟದಿಂದ ನಡೆಯುತ್ತಿದೆ, ಅಂದರೆ ಅರ್ಥ ಇಲ್ಲಿ ಒಳ್ಳೆಯ ಆಡಳಿತ ಇದೆ, ಅಲ್ಲಿ ಆಡಳಿತ ಸರಿಯಾಗಿ ಇಲ್ಲದೆ ದುರುಪಯೋಗ ಮಾಡಿಕೊಂಡಿರುವುದರಿಂದ ನಷ್ಟದಿಂದ ನಡೆಯುತ್ತಿದೆ. ಈ ಖಾಸಗೀ ಗಿರಣಿಗಳು ಎಷ್ಟಿವೆ? ಅವು ಲಾಭದಾಯಕವಾಗಿ ನಡೆಯುತ್ತಿವೆ ತಾನೆ, ಈ ಕೋ-ಆಪರೇಟಿವ್ ಸೆಕ್ಟರ್‌ನಲ್ಲಿ 12ರಲ್ಲಿ 10 ನಷ್ಟದಿಂದ ನಡೆಯುವುದಕ್ಕೆ ಕಾರಣ ಏನು? ಇದರ ಸುಧಾರಣೆಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಹೆಚ್.ಕೆ. ಪಾಟೀಲ್ : ಅಧ್ಯಕ್ಷರೆ, 1993-94ರ ಆರ್ಥಿಕ ವರ್ಷದಲ್ಲಿ ನಮ್ಮ ರಾಜ್ಯದಲ್ಲಿ ಒಟ್ಟು ನಾಲ್ಕು ಮಿಲ್ಲುಗಳು ಲಾಭದಲ್ಲಿವೆ. ಅದರ ವಿವರವನ್ನು ತಮಗೆ ಈಗಾಗಲೇ ಒದಗಿಸಲಾಗಿದೆ. ಇನ್ನು ಉಳಿದ ಎಂಟು ಮಿಲ್ಲುಗಳು ಏನು, ಹಾನಿಯಲ್ಲಿ ನಡೆಯುತ್ತಿವೆ ಎಂಬುದಕ್ಕೆ ಈಗಾಗಲೇ ಮಾಹಿತಿಯನ್ನು ಕೊಟ್ಟಿದ್ದೇವೆ. ಅದರಲ್ಲಿ ಮೂರು ಮಿಲ್ಲುಗಳು ಸಧ್ಯ ಕೆಲಸ ಮಾಡುತ್ತಿಲ್ಲ ಬಂದಾಗಿವೆ. ಹಲವಾರು ಕಾರಣಗಳಿಂದಾಗಿ ಬಂದಾಗಿದೆ. ಆ ಮೂರು ಮಿಲ್ಲುಗಳ ಬಡ್ಡಿಯ ಬಾಕಿಯೂ ಇದ್ದು ನಷ್ಟಕ್ಕೆ ಆ ಒಂದು ಕಾರಣವೂ ಇದೆ. ಆ ಮೂರು ಮಿಲ್ಲುಗಳ ಒಟ್ಟು ಹಾನಿಗೆ 470 ಲಕ್ಷ ಇನ್ನೂ ಎರಡು ಮಿಲ್ಲು ಹೊಸದಾಗಿ ಪ್ರಾರಂಭವಾಗಿದೆ ರಾಣಿಬೆನ್ನೂರಿನ ರೈತರ ನೂಲಿನ ಗಿರಣಿ ಇದು ಉತ್ಪಾದನೆಯನ್ನು ಶುರು ಮಾಡಿ. ಆರು ತಿಂಗಳು ಕೂಡ ಕಳೆದಿಲ್ಲ ಇನ್ನೂ ಪ್ರಾಯೋಗಿಕ ಉತ್ಪಾದನೆಯಲ್ಲಿ ಇದೆ.

ಅದೇ ರೀತಿ ವರ್ಲ್ಡ್ ಬ್ಯಾಂಕಿನಿಂದ ಇನ್ನೊಂದು ಪ್ರಾಜೆಕ್ಟ್ ಅಣ್ಣಿಗೇರಿಯದು, ಅದು ಕಾರ್ಯಾರಂಭ ಮಾಡಿ 9 ತಿಂಗಳಾಗಿವೆ. ಯಾವುದೇ ದೊಡ್ಡ ಕಾರ್ಖಾನೆ ಅಲ್ಲಿನ ಕಾರ್ಮಿಕರನ್ನು ತರಬೇತಿ ಮಾಡಿ ಕಾರ್ಖಾನೆ ಸಂಪೂರ್ಣವಾಗಿ ಓಡುವವರೆಗೆ, ಕಂಪ್ಲೀಟ್ ಮೆಷಿನರಿ ಯುಟಿಲೈಸ್ ಮಾಡುವರೆಗೆ ಬಹಳಷ್ಟು ತೊಂದರೆದಾಯಕವಾಗಿರತಕ್ಕದ್ದು ಇದೆ. ಉಳಿದ ಎರಡು ಕಾರ್ಖಾನೆಗಳು ಒಂದು ತುಂಗಭದ್ರ ಮತ್ತು ಇನ್ನೊಂದು ರಾಣಿಬೆನ್ನೂರು ಹಾಗು ಬೆಳಗಾಂ ಮಿಲ್ ಕೂಡ. ಬೆಳಗಾಂ ಮಿಲ್ ಸಾಕಷ್ಟು ಹಾನಿ ಮಾಡುತ್ತಿದೆ.

ಅದನ್ನು ಗಮನಿಸಿ ಅಲ್ಲಿರತಕ್ಕ ಆಡಳಿತ ಮಂಡಲಿಯನ್ನು ಸಹ ಸೂಪರ್‌ಸೀಡ್ ಮಾಡಿ, ಇವತ್ತು ಅಲ್ಲಿ ಸ್ವಲ್ಪಮಟ್ಟಿಗೆ ಹಾನಿ ಏನಾಗುತ್ತಿತ್ತು ಅದನ್ನು ಕನಿಷ್ಟಗೊಳಿಸುವುದಕ್ಕೆ ಪ್ರಯತ್ನ ನಡೆಸಿದ್ದೇವೆ. ತುಂಗಭದ್ರಾ ಮಿಲ್‌ನಲ್ಲಿ ವರ್ಕಿಂಗ್ ಕ್ಯಾಪಿಟಲ್ ಪ್ರಾಬ್ಲಂ ಇದೆ. ಅದರ ಜೊತೆಗೆ ಅವರಿಗೆ ಏನು ಕೆಲವು ಮೆಷಿನರಿ ಕಂಪ್ಲೀಟ್ ಆಗಿ ಬರಬೇಕಾಗಿತ್ತು ಅದು ಬಂದಿಲ್ಲ ಎಂಬುದು ಒಂದು ಕಾರಣ. ಜೊತೆಗೆ ಅಲ್ಲಿ ತಾಂತ್ರಿಕವಾಗಿ ಇರತಕ್ಕ ವ್ಯಕ್ತಿಗಳು ಸಂಪೂರ್ಣವಾಗಿ ಜವಾಬ್ದಾರಿ ನಿರ್ವಹಿಸಿಲ್ಲ ಎಂಬ ಭಾವನೆ ಬರುವ ರೀತಿಯಲ್ಲಿ ಅಲ್ಲಿ ಕೆಲಸ ನಡೆದಿದೆ. ಆ ಕಾರಣಕ್ಕಾಗಿ ಎರಡು ಮಿಲ್ಲುಗಳು ಹಾನಿ ಅನುಭವಿಸುತ್ತಿವೆ. ಒಟ್ಟಿನಲ್ಲಿ ತಮಗೆ ಹೇಳುವುದಾದರೆ ಈ ಟೆಕ್ಸ್‌ಟೈಲ್ ಇಂಡಸ್ಟ್ರಿಯಲ್ಲಿ ಒಂದೊಂದು ವರ್ಷ ಬಹಳ ಒಳ್ಳೆಯ ಪೀರಿಯಡ್ ಬರುತ್ತದೆ. 1993-94 ಒಳ್ಳೆಯ ಪೀರಿಯಡ್ ಇತ್ತು ಎಂಬುದನ್ನು ನಾನು ಒಪ್ಪಬೇಕಾಗುತ್ತದೆ. ಈ ಅವಧಿಯಲ್ಲಿ ಬಿಜಾಪುರ, ಬಾಗಲಕೋಟೆ, ರಾಯಚೂರು ಮಿಲ್ಲುಗಳು ಕೆಲಸ ಮಾಡಿದರೆ ಬಹುಶಃ ನಮ್ಮ ರಾಜ್ಯದಲ್ಲಿ ಇವೆಲ್ಲ ಲಾಭದಿಂದ ಬರುತ್ತಿತ್ತೋ ಏನೋ ಎಂಬುದು ನನ್ನ ಅನಿಸಿಕೆ.

ಮೇಲಿಂದ ಮೇಲೆ ಸಹಕಾರಿ ನೂಲಿನ ಗಿರಣಿಗಳ ಬಗ್ಗೆ ಪ್ರಸ್ತಾಪ ಮಾಡಿ, ರಾಯಚೂರು ಮಿಲ್ಲು ಸಹಕಾರಿ ಆಡಳಿತದಲ್ಲಿದೆ, ಸಹಕಾರಿ ಮ್ಯಾನೇಜ್‌ಮೆಂಟ್ ಸರಿಯಿಲ್ಲ ಅದಕ್ಕಾಗಿ ಹಾನಿಯಾಗುತ್ತಿದೆ ಅಥವಾ ಬಂದ್ ಆಗಿದೆ ಎಂಬ ಅಭಿಪ್ರಾಯವನ್ನು ಅನೇಕ ಸಂದರ್ಭಗಳಲ್ಲಿ ರಾಜಕಾರಣಿಗಳು ನೇತಾರರು ವ್ಯಕ್ತಪಡಿಸುತ್ತಿರುತ್ತಾರೆ. ಆದರೆ ರಾಯಚೂರು ಮಿಲ್ ಮಾತ್ರ ಸಹಕಾರಿ ಕೈಯೊಳಗೆ 15 ವರ್ಷಕ್ಕಿಂತ ಹೆಚ್ಚು ಕಾಲದಿಂದ ಇಲ್ಲ. ಅದಕ್ಕೆ ಅಲ್ಲಿ ಮ್ಯಾನೇಜ್‌ಮೆಂಟ್ ಇಲ್ಲ. ಅದು ಮಾನ್ಯ ಎಂ.ಎಸ್. ಪಾಟೀಲರಿಗೆ ಗೊತ್ತಿದೆ, ಅದು ಯಾವಾಗ ಪ್ರಾರಂಭವಾಯಿತು ಆಗ 6 ತಿಂಗಳು ಒಂದು ವರ್ಷ ಸಹಕಾರಿಗಳ ಕೈಯಲ್ಲಿತ್ತು. ಆಮೇಲೆ ಅದು ಬಂದ್ ಆಯಿತು, ಆಮೇಲೆ ಸರ್ಕಾರದ ಕೈಯಲ್ಲಿ ಬಂತು, ಮತ್ತೆ ಬಂದ್ ಆಯಿತು. ಮತ್ತೆ ಮಾರ್ಕೆಟಿಂಗ್ ಫೆಡರೇಷನ್ನಿಗೆ ಲೀಸ್‌ಗೆ ಕೊಟ್ಟರು, ಮತ್ತೆ ಬಂದ್ ಆಗಿದೆ. ಪುನಃ ಪ್ರಾರಂಭ ಮಾಡತಕ್ಕ ಕಾರ್ಯಾಚರಣೆ ಹಾಕಿಕೊಂಡಿದ್ದೇವೆ. ಈಗಾಗಲೇ ಎಂ.ಡಿ. ಅವರನ್ನು ಪೋಸ್ಟ್ ಮಾಡಿದ್ದೇವೆ. ಕೆ.ಇ.ಬಿ.ಯವರು ಏನು ವಿದ್ಯುತ್ ಒದಗಿಸಬೇಕಾಗಿತ್ತು, ಅದಕ್ಕೆ ಕಾರ್ಯಕ್ರಮ ಕೈಗೊಳ್ಳಲಾಗಿದೆ. ಹಣಕಾಸಿನ ಸೌಲಭ್ಯ ಕಾಯುತ್ತಿದ್ದೇವೆ, ಅದು ಬಂದತಕ್ಷಣ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಹೇಳಿದ ಹಾಗೆ 3 ಸಹಕಾರಿ ನೂಲಿನ ಗಿರಣಿಗಳು ಬಂದ್ ಆಗಿವೆ. ನನ್ನ ಚಿಂತೆ ಏನೆಂದರೆ ಅಲ್ಲಿರತಕ್ಕ ನೌಕರ ವರ್ಗ ಬೀದಿ ಪಾಲಾಗಿದೆ. ಅವರದ್ದೇನು ತಪ್ಪಿಲ್ಲ. ತಾವು ಈ ಕ್ಷೇತ್ರದಲ್ಲಿ ನುರಿತವರು, ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಮ್ಯಾನೇಜ್‌ಮೆಂಟಿನ ತಪ್ಪಿನಿಂದ ಅಲ್ಲಿರತಕ್ಕ ಕಾರ್ಮಿಕರು ಒದ್ದಾಡುವ ಸ್ಥಿತಿಗೆ ಬಂದಿದ್ದಾರೆ. ಆ ಕಾರ್ಮಿಕರ ರಕ್ಷಣೆ ಬಗ್ಗೆ ತಾವೇನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ? ಅವರಿಗೆ ಸಂಬಳ ಸಾರಿಗೆ ಸಿಕ್ಕಿ ಅವರು ಬದುಕುವುದಕ್ಕೆ ವ್ಯವಸ್ಥೆ ಮಾಡುತ್ತೀರಾ? ಎರಡನೆಯದಾಗಿ, ವರ್ಕಿಂಗ್ ಕ್ಯಾಪಿಟಲ್ ಒದಗಿಸುವುದಕ್ಕೆ ಸರ್ಕಾರದ ಕಡೆಯಿಂದ ನಿರ್ದಿಷ್ಟ ಕಾರ್ಯಕ್ರಮ ಏನು? ಮೂರನೆಯದಾಗಿ, ತಮಗೆ ಗೊತ್ತಿರುವ ಹಾಗೆ ರಾಯಚೂರು ಬಗ್ಗೆ ತಾವು ಹೇಳಿದಿರಿ. ರಾಯಚೂರು ಹತ್ತಿ ಗಿರಣಿಯನ್ನು ಖಾಸಗಿಯವರು ತೆಗೆದುಕೊಂಡು ನಡೆಸುವುದಕ್ಕೆ ಸಿದ್ಧರಿದ್ದಾರೆ. ಅದನ್ನು ಬಾಗಿಲು ಹಾಕುವ ಬದಲು ಆ ರೀತಿ ಮುಂದೆ ಬಂದವರಿಗೆ ರಾಯಚೂರು ಹತ್ತಿ ಗಿರಣಿಯನ್ನು ಕೊಡುವುದಕ್ಕೆ ಸಿದ್ಧರಿದ್ದೀರಾ?

ಶ್ರೀ ಹೆಚ್.ಕೆ. ಪಾಟೀಲ್ : ಅಧ್ಯಕ್ಷರೆ, ಈ ನೂಲಿನ ಗಿರಣಿಗಳ ಕಾರ್ಮಿಕರಿಗೆ ಉದ್ಯೋಗ ಕೊಡಬೇಕು, ಕಾರ್ಮಿಕರಿಗೆ ಆಗಿರತಕ್ಕ ತೊಂದರೆ ಬಗ್ಗೆ ಸರ್ಕಾರಕ್ಕೆ

ಸಾಕಷ್ಟು ಅನುಕಂಪ ಇದೆ. ಆ ಕಾರಣದಿಂದ ಆ ಸಂಸ್ಥೆಗಳನ್ನು ತೀವ್ರವಾಗಿ ಪುನಃ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಇದ್ದಾಗ ಸರಿ ಮಾಡಬೇಕು, ಮುಂದೆ ಸರಿ ಹೋಗುವುದಿಲ್ಲ. ಈಗ ನೀವು ನೌಕರರನ್ನು ಉಳಿಸುವುದಕ್ಕೆ ಏನು ಮಾಡುತ್ತೀರಿ?

ಶ್ರೀ ಹೆಚ್.ಕೆ. ಪಾಟೀಲ್ : ಕಾರ್ಮಿಕರಿಗೆ ಅಲ್ಲಿ ಪುನಃ ಕೆಲಸ ಕೊಡುತ್ತೇವೆ. ಅದರಲ್ಲೇನು ಅಭ್ಯಂತರವಿಲ್ಲ. ಪುನಃ ಪ್ರಾರಂಭ ಮಾಡಿದರೆ ಮಾತ್ರ ಕೆಲಸ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕಿಂತ ಹೆಚ್ಚಾಗಿ ಮಿಲ್ಲುಗಳು ಏನಿವೆ ಇವು ರೈತರಿಂದ ಸ್ಥಾಪನೆಯಾಗಿರತಕ್ಕ ಮಿಲ್ಲುಗಳು. ಈ ಮಿಲ್ಲುಗಳ ಸ್ಥಾಪನೆಯ ಉದ್ದೇಶ ಕೇವಲ ಕಾರ್ಮಿಕರಿಗೆ ಕೆಲಸ ಕೊಡಬೇಕೆಂಬುದು ಅಲ್ಲ. ಆ ಭಾಗದ ರೈತರಿಗೆ ಸರಿಯಾಗಿ ಮಾರುಕಟ್ಟೆ ಒದಗಿಸಬೇಕು, ಹತ್ತಿಯ ನೂಲಿನ ಗಿರಣಿಗೆ ಸರಿಯಾದ ಬೆಲೆ ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಸ್ಥಾಪನೆಯಾಗಿವೆ. ದುರ್ದೈವದಿಂದ ಯಾವ ಗಿರಣಿ ಸ್ಥಾಪನೆ ಮಾಡಿರತಕ್ಕ ರೈತ ಇದ್ದಾನೆ ಅವನ ಬಗ್ಗೆ ಕಾಳಜಿ ಇದುವರೆಗೆ ಕಡಿಮೆ ಇತ್ತು. ಆ ಕಾರಣಕ್ಕಾಗಿ ಸಹಕಾರಿ ನೂಲಿನ ಗಿರಣಿಗಳಲ್ಲಿ ಇವತ್ತು ಕಾರ್ಮಿಕರು ಹಾಗೂ ರೈತರು ಇಬ್ಬರಿಗೂ ಏನು ಲಾಭವಾಗಬೇಕು ಆ ದಿಸೆಯಲ್ಲಿ ನಾವು ಕಾರ್ಯಕ್ರಮವನ್ನು ಜರುಗಿಸುತ್ತಿದ್ದೇವೆ. ರಾಯಚೂರು ಮಿಲ್ಲನ್ನು ಖಾಸಗಿಯವರು ಕೇಳುತ್ತಿದ್ದಾರೆಂದು ತಾವು ಹೇಳಿದಿರಿ. ರಾಯಚೂರು ಒಂದೇ ಅಲ್ಲ. ಕರ್ನಾಟಕದಲ್ಲಿ ಎಷ್ಟು ಸಹಕಾರಿ ನೂಲಿನ ಗಿರಣಿಗಳು ಇವೆ ಅಷ್ಟನ್ನು ಕೊಡುತ್ತೇವೆಂದರೆ ಖಾಸಗಿಯವರು ತೆಗೆದುಕೊಳ್ಳುತ್ತಾರೆ. ಮಹದೇವ್ ಟೆಕ್ಸ್‌ಟೈಲ್ ಮಿಲ್ ಸಹಕಾರಿ ಕ್ಷೇತ್ರದಲ್ಲಿತ್ತು. ಕೆಲವು ಕಾಲ ಸರ್ಕಾರಿ ಕ್ಷೇತ್ರಕ್ಕೆ ತೆಗೆದುಕೊಂಡು ಖಾಸಗಿಯವರಿಗೆ ಕೊಟ್ಟರು. ಆಮೇಲೆ, ಏನಾಯಿತೆಂದು ತಮಗೆ ಗೊತ್ತಿದೆ. ಇವತ್ತು ಅಲ್ಲಿ ಎಷ್ಟು ಕೋಟಿ ರೂಪಾಯಿ ಮೆಷಿನರಿ ಇತ್ತು ಆ ಮೆಷಿನರಿ ಎಲ್ಲ ಉಳಿಯಲಿಲ್ಲ ಖಾಸಗಿಯವರಿಗೆ ಕೊಟ್ಟರು ಎಂದು. ಇವತ್ತು ನೀವು ಖಾಸಗಿಯವರಿಗೆ ಸಹಕಾರಿ ನೂಲಿನ ಗಿರಣಿಗಳನ್ನು ಲೀಸ್ ಕೊಟ್ಟೆವು ಅಥವಾ ಮಾರಾಟ ಮಾಡಿದೆವು ಅಂದರೆ ನೂರು ನೂರು ರೂಪಾಯಿ, ಸಾವಿರ ಸಾವಿರ ರೂಪಾಯಿ ಹಾಕಿ ಮಿಲ್ ಕೊಟ್ಟಿದ್ದಾರೆ ಆ ರೈತರ ಗತಿ ಏನು

ಶ್ರೀ ಬಿ.ಎಸ್. ಯಡಿಯೂರಪ್ಪ : ಖಾಸಗಿಯವರಿಗೆ ಕೊಡಿ ಎಂದು ನಾನು ಹೇಳುತ್ತಿಲ್ಲ. ಖಾಸಗಿಯವರಿಗೆ ತೆಗೆದುಕೊಂಡು ಲಾಭದಾಯಕವಾಗಿ ನಡೆಸುವುದಕ್ಕೆ ಸಿದ್ಧರಿದ್ದಾರೆ. ಈಗ ಮ್ಯಾನೇಜ್‌ಮೆಂಟ್ ಸರಿ ಇಲ್ಲದೆ ರೈತರು ಸಾಯುತ್ತಿದ್ದಾರೆ. ಕಾರ್ಮಿಕರು ಸಾಯುತ್ತಿದ್ದಾರೆ, ಇದಕ್ಕೆ ಪರಿಹಾರ ಏನು?

ಶ್ರೀ ಹೆಚ್.ಕೆ. ಪಾಟೀಲ್ : ಪರಿಹಾರ ಇಷ್ಟೆ. ನಾವು ಉತ್ತಮ ಮ್ಯಾನೇಜ್‌ಮೆಂಟನ್ನು ಗುರುತಿಸಿ ಸಹಕಾರಿ ನೂಲಿನ ಗಿರಣಿಗಳನ್ನು ಕೊಡಬೇಕೆಂದು ಮಾಡುತ್ತಿದ್ದೇವೆ. ಖಾಸಗಿಯವರಿಗೆ ಯಾವುದೇ ಹಂತದಲ್ಲಿ ಸಹ ನೂಲಿನ ಗಿರಣಿಗಳನ್ನು ವಹಿಸಿಕೊಡುವುದನ್ನು ಸರ್ಕಾರ ಪರಿಶೀಲನೆ ಮಾಡುವುದಕ್ಕೆ ಸಿದ್ಧವಿಲ್ಲ. ಬಂದ್ ಆಗಿರತಕ್ಕ ಮಿಲ್ಲುಗಳನ್ನು ಪುನಃ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ವರ್ಕಿಂಗ್ ಕ್ಯಾಪಿಟಲ್ ಬಗ್ಗೆ ಕೇಳಿದರು. ರಾಯಚೂರಿಗೆ ಹೈದರಾಬಾದ್ ಡೆವಲಪ್‌ಮೆಂಟ್ ಬೋರ್ಡ್‌ನಿಂದ 50 ಲಕ್ಷ ರೂಪಾಯಿ ಕೊಡುತ್ತೇವೆಂದು ಒಪ್ಪಿದ್ದಾರೆ. ಆ ಕ್ಷೇತ್ರದ ಶಾಸಕರು ತಮ್ಮ ಪಾಲಿನಲ್ಲಿ ಬರತಕ್ಕ ಫಂಡನ್ನು ಇದಕ್ಕೆ ವರ್ಗಾವಣೆ ಮಾಡಬೇಕೆಂದು ಸೂಚನೆ ಮಾಡಿದ್ದಾರೆಂದು ಕೇಳಿದೆ. ರಾಯಚೂರಿಗೆ ಏನೂ ತೊಂದರೆ ಆಗುವುದಿಲ್ಲ. ಅಲ್ಲದೆ, ನಮ್ಮ ಬಿಜಾಪುರದಲ್ಲಿರತಕ್ಕ ಹಣದಲ್ಲಿ 85 ಲಕ್ಷ ರೂಪಾಯಿ ರಾಯಚೂರು ಮಿಲ್ಲಿಗೆ ಕೊಡಬೇಕೆಂದು ಈಗಾಗಲೇ ನಮ್ಮ ಸರ್ಕಾರದ ಪರಿಶೀಲನೆಯಲ್ಲಿದೆ. ಅದು ಬಂದರೆ ರಾಯಚೂರಿಗೆ ಮಿಲ್ಲಿಗೆ ವರ್ಕಿಂಗ್ ಕ್ಯಾಪಿಟಲ್ ಆಗುತ್ತದೆ.

ಇವತ್ತು ಉಳಿದ ಎರಡು ನೂಲಿನ ಗಿರಣಿಗಳಿಗೆ ಹಾಗೂ ಯಾವುದು ಸಿಕ್ ಇಂಡಸ್ಟ್ರಿ ಇದೆ ಸಹಕಾರ ಕ್ಷೇತ್ರದಲ್ಲಿ ಅದಕ್ಕೆ ಎನಿಸಿಡಿಸಿಯವರು ಇದುವರೆಗೆ

ರೀಹ್ಯಾಬಿಲಿಟೇಷನ್ ಸಲುವಾಗಿ ಕೇವಲ ಒಂದು ಕೋಟಿ ರೂಪಾಯಿ ಒದಗಿಸುತ್ತಿದ್ದರು. ಆದರೆ ಅದನ್ನು ಅವರು ಹೆಚ್ಚು ಮಾಡಬೇಕು. ಏಕೆಂದರೆ ಈಗಾಗಲೇ ಕರ್ನಾಟಕ ಸರ್ಕಾರದವರು ಕೆಲವು ಮಿಲ್ಲುಗಳನ್ನು ತೆಗೆದುಕೊಂಡಿದ್ದಾರೆ. ಅವರು ಹೆಚ್ಚು ಮಾಡದೆ ಹೋದರೆ ತಮ್ಮ ಲಿಮಿಟ್ ಬದಲಾವಣೆ ಮಾಡದಿದ್ದರೆ ನಮಗೆ ಅನುಕೂಲ ಆಗುವುದಿಲ್ಲವೆಂದು ಅದನ್ನು ಹೆಚ್ಚು ಮಾಡಬೇಕೆಂದು ಸಂಬಂಧಪಟ್ಟ ಮಂತ್ರಿಗಳಿಗೆ ಮನವಿ ಮಾಡಿಕೊಂಡಿದ್ದೆವು. ಅವರು ಲಿಮಿಟ್ 2 ಕೋಟಿ ರೂಪಾಯಿ ಮಾಡುವುದಕ್ಕೆ ಎನ್‌ಸಿಡಿಸಿ ಎಕ್ಸಿಕ್ಯೂಟೀವ್ ಕೌನ್ಸಿಲ್ ಏನಿದೆ ಅದು ನಿರ್ಣಯ ಮಾಡಿದೆ. ಆ ನಿರ್ಣಯ ಅನುಷ್ಠಾನ ಆದಾಗ ನಮಗೆ ಹೆಚ್ಚಿನ ಅನುಕೂಲತೆ ಬರಬಹುದು. ಆಗ ಎಲ್ಲ ಮಿಲ್ಲುಗಳು ಪ್ರಾರಂಭವಾಗುತ್ತವೆ.

ರಾಜ್ಯದಲ್ಲಿ ಹುಡ್ಕೋ ಯೋಜನೆ

307 - ಶ್ರೀ ವಿ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹುಡ್ಕೋ ಯೋಜನೆಯಲ್ಲಿ ಫಲಾನುಭವಿಗಳಿಗೆ ಹಣ ಪಾವತಿಸಲು ಬಾಕಿ ಇದೆಯೇ? ಇದ್ದರೆ ಎಷ್ಟು?

ಆ) ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುವುದು?

ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ವಸತಿ ಸಚಿವರು) :

ಅ) ಹುಡ್ಕೋ ನೆರವಿನ ವಸತಿ ಯೋಜನೆಯು 1978-79 ರಿಂದ 1989-90ರ ವರೆಗೆ ಜಾರಿಯಲ್ಲಿತ್ತು. ಈ ಯೋಜನೆಯಡಿಯಲ್ಲಿ, ಹಣವನ್ನು ಫಲಾನುಭವಿಗಳಿಗೆ ಸಂಬಂಧಪಟ್ಟ ಜಿಲ್ಲಾ ಪಂಚಾಯ್ತಿಗಳ ಮೂಲಕ ಬಿಡುಗಡೆ ಮಾಡಲಾಗುತ್ತಿತ್ತು. ಕರ್ನಾಟಕ ಗೃಹ ಮಂಡಳಿಯು ಹುಡ್ಕೋದಿಂದ ಸಾಲ ಪಡೆದು ಜಿಲ್ಲೆಗಳಿಗೆ ವಿತರಿಸಲು ಮಧ್ಯವರ್ತಿ ಸಂಸ್ಥೆಯಾಗಿದೆ. ಈ ಯೋಜನೆಯಡಿಯಲ್ಲಿ 1041.89ಲಕ್ಷ ರೂ. ಹಣವು ಫಲಾನುಭವಿಗಳಿಗೆ ಬಿಡುಗಡೆಯಾಗಬೇಕಾಗಿದೆ.

ಆ) ಈಗ ರಾಜ್ಯದಲ್ಲಿ ಆಶ್ರಯ ವಸತಿ ಯೋಜನೆ ಜಾರಿಯಲ್ಲಿರುವುದರಿಂದ ಹುಡ್ಕೋ ನೆರವಿನ ವಸತಿ ಯೋಜನೆಯಡಿಯಲ್ಲಿ ಬಾಕಿಯಿರುವ ಹಣವನ್ನು ಬಿಡುಗಡೆ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಅಧ್ಯಕ್ಷರೆ, ಬಡವರಿಗೆ ಹುಡ್ಕೋ ನೆರವಿನ ವಸತಿ ಯೋಜನೆ ಮೂಲಕ ಮನೆಗಳನ್ನು ಕೊಡುವ ಯೋಜನೆ 1989-90ರವರೆಗೆ ಇತ್ತು. ಈ ಸಂದರ್ಭದಲ್ಲಿ ಮನೆ ಕಟ್ಟಿತಕ್ಕ ಫಲಾನುಭವಿಗಳಿಗೆ ಪಾವತಿ ಆಗಲಿಕ್ಕೆ ಹತ್ತು ಕೋಟಿ 41 ಲಕ್ಷ, 87 ಸಾವಿರ ರೂಪಾಯಿ ಬಾಕಿ ಇದೆ. ಆದರೆ ಇವತ್ತು ಹುಡ್ಕೋ ಫಲಾನುಭವಿಗಳು ಮನೆಯನ್ನು ಪೂರ್ತಿ ಮಾಡುವುದಕ್ಕೆ ಆಗಿಲ್ಲ. ಕೆಲವರಿಗೆ ಎರಡು ಸಾವಿರ ರೂಪಾಯಿ ಸಿಕ್ಕಿದೆ, ಕೆಲವರಿಗೆ ನಾಲ್ಕು ಸಾವಿರ ರೂಪಾಯಿ ಸಿಕ್ಕಿದೆ, ಕೆಲವರಿಗೆ ಏನೂ ಸಿಕ್ಕಿಲ್ಲ. ಆರು ಸಾವಿರ ರೂಪಾಯಿನ ಮನೆ ಅದು. ಇವತ್ತು ಅದು ಪೂರ್ತಿಯಾಗದೆ, ಅವರಿಗೆ ಮುಂದೆ ಆಶ್ರಯ ಯೋಜನೆಯಲ್ಲಿ ಹಣ ಮಂಜೂರ್ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುವುದು ಎಂದು ಕೇಳಿದ್ದಕ್ಕೆ ರಾಜ್ಯದಲ್ಲಿ ಆಶ್ರಯ ವಸತಿ ಯೋಜನೆ ಜಾರಿಯಲ್ಲಿರುವುದರಿಂದ ಹುಡ್ಕೋ ನೆರವಿನ ವಸತಿ ಯೋಜನೆಯಲ್ಲಿ ಬಾಕಿ ಇರುವ ಹಣವನ್ನು ಬಿಡುಗಡೆ ಮಾಡಲಾಗುವುದೆಂದು ಹೇಳಿದ್ದಾರೆ. ಅವತ್ತು ಆರು ಸಾವಿರ ರೂಪಾಯಿಗಳಿಗೆ ಕಟ್ಟಿಸಿಕೊಡುತ್ತಿದ್ದ ಮನೆಯನ್ನು ಇವತ್ತು ಆರು ಸಾವಿರ ರೂಪಾಯಿಗಳಿಗೆ ಕಟ್ಟಿಸಿಕೊಡುತ್ತೀರಾ? ಈಗ ಆಶ್ರಯ ಯೋಜನೆ ಮೂಲಕ 15ಸಾವಿರ ರೂಪಾಯಿಗಳನ್ನು ಕೊಡುತ್ತೀರಾ? ಆರು ಸಾವಿರ ರೂಪಾಯಿಗಳನ್ನು ಕೊಡುವುದರಿಂದ ಏನೂ

ಪ್ರಯೋಜನವಾಗುವುದಿಲ್ಲ. 15 ಸಾವಿರ ರೂಪಾಯಿಗಳನ್ನು ಹುಡ್ಕೋ ಯೋಜನೆ ಅಡಿಯಲ್ಲಿ ಫಲಾನುಭವಿಗಳಿಗೆ ಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಗೋಪಿನಾಥ ಆರ್. ಸಾಂಡ್ರ : ಈ ಹುಡ್ಕೋ ನೆರವಿನ ಯೋಜನೆ 1978-79 ರಿಂದ 1990ರವರೆಗೆ ಏನಿತ್ತು ಅದನ್ನು ಈಗ ಬಂದ್ ಮಾಡಲಾಗಿದೆ. ಹುಡ್ಕೋನಿಂದ ಬಂದಂತ ಹಣವನ್ನು ಜಿಲ್ಲಾ ಪರಿಷತ್ತಿನ ಮೂಲಕ ನಾವು ಹುಡ್ಕೋ ಯೋಜನೆಗಾಗಿ ವಿತರಣೆ ಮಾಡಿದ್ದೇವೆ. ಇನ್ನೂ ಹತ್ತು ಕೋಟಿ ರೂಪಾಯಿ ಹಣ ಇದೆ. ಈಗ ಅರ್ಧಂಬರ್ಧ ಕೆಲಸ ಆಗಿರುವುದರಿಂದ ನಾವು ಅದನ್ನು ಪೂರ್ತಿಗೊಳಿಸುವುದಕ್ಕೆ ಆಶ್ರಯ ಯೋಜನೆ ಅಡಿಯಲ್ಲಿ ತರಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಮುಂದಿನ ಕ್ಯಾಬಿನೆಟ್ನಲ್ಲಿ ಆ ವಿಷಯ ಬರುತ್ತದೆ. ಎಂಟು ಸಾವಿರ ರೂಪಾಯಿ ಹಣ ಆಗ ಕೊಟ್ಟಿದ್ದೇವೆ, ಈಗ ಹದಿನೈದು ಸಾವಿರ ರೂಪಾಯಿ ಇದೆ. ಇದನ್ನು ಆಶ್ರಯ ಯೋಜನೆಯಲ್ಲಿ ಪರಿವರ್ತನೆ ಮಾಡಬೇಕೆಂದು ಸರ್ಕಾರ ಯೋಚಿಸಿದೆ. ಅದರ ಬಗ್ಗೆ ವಿಶೇಷ ನೋಟನ್ನು ಕ್ಯಾಬಿನೆಟ್‌ಗೆ ಕಳುಹಿಸಿ ಅದನ್ನು ಆದಷ್ಟು ಮಟ್ಟಿಗೆ ಹುಡ್ಕೋ ಯೋಜನೆಯಿಂದ ಆಶ್ರಯ ಯೋಜನೆಗೆ ಪರಿವರ್ತನೆ ಮಾಡಿ 15 ಸಾವಿರ ರೂಪಾಯಿ ಕೊಡಬೇಕೆಂದು ಆದಷ್ಟು ಬೇಗ ನಿರ್ಣಯ ಮಾಡಲಾಗುವುದು.

ನೆರೆ ಹಾವಳಿಯಿಂದ ಆಗಿರುವ ಬೆಳೆ ಹಾನಿ ಬಗ್ಗೆ

267 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಇತ್ತೀಚಿನ ನೆರೆ ಹಾವಳಿಯೂ ಸೇರಿದಂತೆ ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಪ್ರವಾಹ, ನೆರೆ ಹಾವಳಿ ಹಾಗೂ ಅತಿವೃಷ್ಟಿಗಳಿಂದ ಉಂಟಾಗಿರುವ ಬೆಳೆ ಹಾನಿಯ ಅಂದಾಜು ಮೊತ್ತವೆಷ್ಟು ? (ವರ್ಷಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಸದರಿ ಅವಧಿಯಲ್ಲಿ ಕೇಂದ್ರ ಸರ್ಕಾರಕ್ಕೆ ಎಷ್ಟು ಮೊತ್ತದ ಪರಿಹಾರಕ್ಕಾಗಿ ಮನವಿ ಸಲ್ಲಿಸಲಾಗಿತ್ತು ? ಕೇಂದ್ರ ಸರ್ಕಾರದಿಂದ ಬಂದಿರುವ ನೆರವಿನ ಮೊತ್ತವೆಷ್ಟು ? (ವರ್ಷಾವಾರು ಅಂಕಿಅಂಶಗಳನ್ನು ಒದಗಿಸುವುದು)

ಇ) ಇದೇ ಅವಧಿಯಲ್ಲಿ ರಾಜ್ಯ ಸರ್ಕಾರವು ಎಷ್ಟು ಮೊತ್ತವನ್ನು ಪರಿಹಾರಕ್ಕಾಗಿ ಬಿಡುಗಡೆ ಮಾಡಿದೆ ?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ರಾಜ್ಯದಲ್ಲಿ ಪ್ರವಾಹ, ನೆರೆಹಾವಳಿ ಹಾಗೂ ಅತಿವೃಷ್ಟಿಯಿಂದ ಕಳೆದ ಮೂರು ವರ್ಷದಲ್ಲಿ ಆಗಿರುವ ಕೃಷಿ ಬೆಳೆ ಹಾನಿಯ ವಿವರಗಳು ಈ ಕೆಳಕಂಡಂತಿವೆ -

ವರ್ಷ	ಬೆಳೆ ಹಾನಿ (ಲಕ್ಷ ಹೆಕ್ಟೇರ್ ಗಳಲ್ಲಿ)	ಅಂದಾಜು ಹಾನಿಯ ಮೊತ್ತ (ಲಕ್ಷ ರೂ.ಗಳಲ್ಲಿ)
1991-92	1.75	2153.79
1992-93	3.132	14046.62
1993-94	2.977	11622.88
1994-95	1.57	6302.67
	ಒಟ್ಟು	34125.96

ಆ) ನೆರೆ ಪರಿಹಾರ ಕಾರ್ಯಗಳಿಗೆ ಕೇಂದ್ರದ ನೆರವನ್ನು ಕೋರಿ ಸಲ್ಲಿಸಲಾದ ಮನವಿ ಪತ್ರಗಳ ವಿವರ ಕೆಳಕಂಡಂತಿದೆ-

ವರ್ಷ	ಕೋರಲಾಗಿದ್ದ ಮೊತ್ತ (ಕೋಟಿ ರೂ.ಗಳಲ್ಲಿ)
1991-92	144.00
1992-93	200.00
1993-94	200.00
1994-95	100.00 (ಮಧ್ಯಂತರ ವರದಿ)
ಒಟ್ಟು	644.00

ಕೇಂದ್ರ ಸರ್ಕಾರವು ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ನೀಡಬೇಕಾಗಿರುವ ವಾರ್ಷಿಕ ವಂತಿಗೆಯಾದ ರೂ. 20.25 ಕೋಟಿಗಳನ್ನು ಹೊರತುಪಡಿಸಿ ಬೇರೆ ಯಾವ ಆರ್ಥಿಕ ನೆರವನ್ನೂ ಇದುವರೆಗೆ ನೀಡಿಲ್ಲ.

ಇ) ಈ ವರ್ಷಗಳಲ್ಲಿ ರಾಜ್ಯ ಸರ್ಕಾರವು ನೆರೆ ಪರಿಹಾರ ಕಾರ್ಯಗಳಿಗೆ ಬಿಡುಗಡೆ ಮಾಡಿದ ಹಣದ ವಿವರ ಈ ಕೆಳಕಂಡಂತಿದೆ

ವರ್ಷ	ರಾಜ್ಯ ಸರ್ಕಾರ ಬಿಡುಗಡೆ ಮಾಡಿದ ಮೊಬಲಗು (ರೂ. ಕೋಟಿಗಳಲ್ಲಿ)
1991-92	31.45
1992-93	63.67
1993-94	43.69
1994-95	9.89
ಒಟ್ಟು	147.70

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸನ್ಮಾನ್ಯ ಅಧ್ಯಕ್ಷರೆ, ನೆರೆಹಾವಳಿ ಬಗ್ಗೆ ಒಟ್ಟು ಎಷ್ಟು ಲುಕ್ಸಾನಾಗಿದೆ. ಯಾವ ಯಾವ ವರ್ಷ ಎಷ್ಟೆಷ್ಟಾಗಿದೆ ಎಂಬುದಕ್ಕೆ 1991-92 ರಿಂದ 1994-95ರವರೆಗೆ ಎಲ್ಲಾ ಸೇರಿ 34,125.96 ಲಕ್ಷ ಹಾನಿಯಾಗಿದೆ ಎಂದು ಹೇಳಿದ್ದೀರಿ. ಕೇಂದ್ರಸರ್ಕಾರಕ್ಕೆ ಕೇಳಿದ್ದು ಎಷ್ಟು ಎಂದು ಕೇಳಿದ್ದೆ. ಅದು 644 ಕೋಟಿ ರೂಪಾಯಿ ಎಂದು ಕೊಟ್ಟಿದ್ದೀರಿ. ಇದರಲ್ಲಿ 1994-95ಕ್ಕೆ 100 ಕೋಟಿ ಕೇಳಿದ್ದೀರಿ. ತಮ್ಮ ಮೆಮೋರ್ಯಾಂಡಂ ಇಲ್ಲಿದೆ. ಅಲ್ಲಿಂದ ಬಂದಂಥದ್ದು ಎಲ್ಲಾ ಸೇರಿ 20.25 ಕೋಟಿ. ಇದರಲ್ಲಿ ಯಾವ ನೆರೆಹಾವಳಿ ಪರಿಹಾರವಾಗುತ್ತದೆ? ಎಲ್ಲಾ ಸೇರಿ 20 ಕೋಟಿ ಕೊಟ್ಟಿದ್ದಾರೆ. ತಾವು ಲುಕ್ಸಾನಾಗಿರುವುದು. 644 ಕೋಟಿ ಎಂದು ಕೇಳಿದ್ದೀರಿ, ಕೊಟ್ಟಿದ್ದು 20 ಕೋಟಿ. ಅಂದರೆ ಇದರ ಪರಿಹಾರ ಸರ್ಕಾರದವರು ಕೊಟ್ಟಿದ್ದಾರಾ? ತಾವೂ ಕೊಟ್ಟಿಲ್ಲ, ಅವರೂ ಕೊಟ್ಟಿಲ್ಲ. 147 ಕೋಟಿ ಇದರಲ್ಲಿ ಕೊಟ್ಟಿದ್ದೇವೆ ಎಂದು 1991 ರಿಂದ 1994-95 ರವರೆಗೆ ಹೇಳಿದ್ದೀರಿ. ಈ ವರ್ಷ 9 ಲಕ್ಷ 89 ಸಾವಿರ ಮಾತ್ರ ಕೊಟ್ಟಿರುವುದು. ಹೀಗಾದರೆ ಹೇಗೆ ಪರಿಹಾರವಾಗುತ್ತದೆ? ಇದರ ಬಗ್ಗೆ ತಮ್ಮ ಧೋರಣೆ ಏನು ಎಂಬುದು ಮೊದಲನೇ ಪ್ರಶ್ನೆ. ಔರಾದ್ನಲ್ಲಿ ಮತ್ತು ಬೀದರ್ನಲ್ಲಿ ಮಳೆ ಇಲ್ಲ. ಕುಡಿಯುವ ನೀರಿಲ್ಲ. ಅಲ್ಲಿ ಪಂಚಾಯತ್ರಾಜ್ ಸಮಿತಿ ಬಂದಿತ್ತು. ಬಂದು ಊರು ಊರಿಗೆಲ್ಲಾ ಹೋಗಿ ನೋಡಿದ್ದಾರೆ. ಬರಗಾಲದ ಬಗ್ಗೆ ಪರಿಹಾರ

ಮಾಡಿದ್ದಾರಾ? ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ? ನಾವು ಬರೀ ನೆರೆಹಾವಳಿ ಬಗ್ಗೆ ಕೇಳಿದ್ದೇವೆ. ಅದರ ಬಗ್ಗೆ ಏನು ಹೇಳಿದ್ದೀರಿ? ಅದರ ಬಗ್ಗೆ ಏನಾದರೂ ಯೋಚನೆ ಇದೆಯೇ? ಇದರ ಬಗ್ಗೆ ಸ್ಪಷ್ಟವಾಗಿ ತಾವು ಉತ್ತರ ಕೊಡಬೇಕು.

ಶ್ರೀ ಧರ್ಮಸಿಂಗ್ : ಮಾನ್ಯ ಸದಸ್ಯರಾದ ಗುರುಪಾದಪ್ಪ ನಾಗಮಾರಪಲ್ಲಿಯವರು ಮೂರು ಸಾಲಿನಿಂದ ಆಗಿರುವ ಬೆಳೆ ಹಾನಿ ಬಗ್ಗೆ ಕೇಳಿದ್ದಾರೆ. ಬೆಳೆಹಾನಿ ವಿವರ ಕೊಟ್ಟಿದ್ದೇವೆ. ಎಷ್ಟು ಕಡೆ ಬಿತ್ತಿದ್ದೇವೆ, ಎಷ್ಟು ಕಡೆ ಬಿತ್ತನೆ ಆಗಿಲ್ಲ, ಬಿತ್ತಿದ್ದರೂ ಎಷ್ಟು ಬೆಳೆ ಹಾನಿಯಾಗಿದೆ ಎಂಬುದನ್ನು ನಾವು ಕೊಟ್ಟಿದ್ದೇವೆ. ಈಗ ನಾವು ಒಟ್ಟು 644 ಕೋಟಿ ಎಂದು ಹೇಳಿದೆ., ಹಾನಿಯಾಗಿರುವುದನ್ನೆಲ್ಲಾ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ಅದಕ್ಕೆ ಒಂದು ಪರ್ಸೆಂಟೇಜ್ ಇದೆ. 100 ಕೋಟಿ ಆದರೆ ನಾರ್ಮ್ಸ್ ಪ್ರಕಾರ ಎಷ್ಟು ಕೊಡಬೇಕೋ ಅಷ್ಟು ಕೊಡುತ್ತಾರೆ. ಕೇಂದ್ರಕ್ಕೆ ಮನವಿ ಸಲ್ಲಿಸುವುದನ್ನು ಕೂಡ ಹೇಳಿದ್ದೇವೆ. ತಮಗೆ ಕೊಟ್ಟಿರುವ ಮಧ್ಯಂತರ ವರದಿ. ತದನಂತರ ಇನ್ನೊಂದು ವರದಿ ಕಳುಹಿಸಿದ್ದೇವೆ.

ಇಂಟೇರಿಯಂ ರಿಪೋರ್ಟ್ ಬಗ್ಗೆ ತಾವು ಹೇಳುತ್ತಿದ್ದೀರಿ. ಇಲ್ಲಿಯವರೆಗೆ ನಿಗದಿ ಮಾಡಿದ್ದು ಮಾನ್ಯ ಸದಸ್ಯರಾದ ಸಿಂಧ್ಯಾ ಅವರ ಪ್ರಶ್ನೆಗೆ ಉತ್ತರವಾಗಿ ಹೇಳಿದ್ದೇವೆ. 20 ಕೋಟಿ 25 ಲಕ್ಷ ರೂಪಾಯಿ ಕೇಂದ್ರ ಸರ್ಕಾರದ ಫೈನಾನ್ಸ್ ಸ್ಕೀಂನಲ್ಲಿ ನಿಗದಿ ಮಾಡಿದಂಥ ಹಣ ಎಂದು ಹೇಳಿದ್ದೇವೆ. ಆದರೂ ಸಹ ಸತತವಾಗಿ 1991ರಿಂದ ಇಲ್ಲಿಯವರೆಗೆ 147 ಕೋಟಿ ರೂಪಾಯಿ ಹಣ ಬಿಡುಗಡೆ ಮಾಡಿರುವುದು. 9 ಕೋಟಿ ಇಲ್ಲಿ ಕೊಟ್ಟಿರುವುದು, ಮತ್ತೆ 2 ಕೋಟಿ 25 ಲಕ್ಷ ರೂಪಾಯಿ ಸೇರಿಸಿ 11 ಕೋಟಿ 90 ಲಕ್ಷ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಅಂದರೆ ಕೇಂದ್ರದಿಂದ 20.25 ಕೋಟಿ ರೂಪಾಯಿ ಹಣ ಏನು ಬರಬೇಕಾಗಿದೆ ಅದು ಬರುತ್ತದೆ. ಆದರೆ ನಮ್ಮ ಸರ್ಕಾರ ಕೂಡ ಹಣವನ್ನು ಬಿಡುಗಡೆ ಮಾಡಿದೆ. ಈ ಹಣ ಏನು ಬಿಡುಗಡೆ ಮಾಡಿದ್ದೇವೆ ಅಂದರೆ ತಾತ್ಕಾಲಿಕವಾಗಿ ಪರಿಹಾರ ಕೊಡುವ ರೀತಿಯಲ್ಲಿ ಗಂಡಾಂತರ ಪರಿಸ್ಥಿತಿಯಲ್ಲಿ ತಕ್ಷಣ ಮಾಡಬೇಕೆಂಬುದನ್ನು ಗಮನದಲ್ಲಿಟ್ಟುಕೊಂಡು ಮಾಡಿದ್ದೇವೆ. ಬೀದರ್‌ನಲ್ಲಿ ಕುಡಿಯುವ ನೀರಿನ ತೊಂದರೆ ಇದೆ ಎಂದು ತಾವು ಹೇಳಿದ್ದೀರಿ. ಈಗಾಗಲೇ ಬೀದರ್ಗೆ 90 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಎಲ್ಲ ಕಡೆ ಎಷ್ಟು ಮಾಡಿದೆ ಎಂಬುದನ್ನು ಕೊಡುತ್ತೇನೆ. 1 ಕೋಟಿ 96 ಲಕ್ಷ ರೂಪಾಯಿ ಎಕ್ಸಪೆಂಡಿಚರ್ ಮಾಡಿರುವುದನ್ನು ಬಿಡುಗಡೆ ಮಾಡಬೇಕೆಂದು ಜಿಲ್ಲಾಧಿಕಾರಿಗಳು ಕೇಳಿದ್ದಾರೆ. ಅದರಲ್ಲೂ ಕೂಡ ಸ್ವಲ್ಪ ಹಣವನ್ನು ಬಿಡುಗಡೆ ಮಾಡಿದ್ದೇವೆ. ಬೀದರ್ ಆರು ತಾಲ್ಲೂಕುಗಳನ್ನೊಳಗೊಂಡ ಜಿಲ್ಲೆಯಾದರೂ ಕೂಡ ಅಲ್ಲಿ ಕುಡಿಯುವ ನೀರನ ಸಮಸ್ಯೆ ಪರಿಹಾರ ಮಾಡುವುದಕ್ಕೆ ಬಿಡುಗಡೆ ಮಾಡಿದ್ದೇವೆ.

1.00 ಪಿ.ಎಂ

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ : ಈಗ ನೀವು ಏನು ಹೇಳುತ್ತಿದ್ದೀರಿ ಅದು ಹಿಂದೆ ಮಾಡಿದ ಕೆಲಸಕ್ಕೆ ಕೊಟ್ಟುಬಿಟ್ಟರು. ಈಗ ಅಲ್ಲಿ ಹಣ ಇಲ್ಲ. ಈ ವರ್ಷಕ್ಕೆ ಹಣ ಇಲ್ಲ. ಯಾರು ಬೋರ್ ಹಾಕಿದ್ದಾರೆ ಅವರಿಗೆ ಹಣ ಇಲ್ಲ. ಬೋರ್ ಹಾಕಿ ಅವರು ಅಳುತ್ತಾ ಹೋಗಿದ್ದಾರೆ. ಹಣ ಏನು ಇಲ್ಲ. ಮೊನ್ನೆ ತಾವು 25 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ತಾವು 1 ಕೋಟಿ ಎಂದು ಏನು ಹೇಳುತ್ತಿದ್ದೀರಿ ಅದು ಇಲ್ಲ. 25 ಲಕ್ಷ ಮಾತ್ರಕೊಟ್ಟಿದ್ದೀರಿ. 50 ಲಕ್ಷವನ್ನು ಜಿಲ್ಲಾಧಿಕಾರಿಗಳು ಬೋರ್‌ವೆಲ್ಗೆ ಕೇಳಿದ್ದರು. ಮತ್ತೆ ಇದಕ್ಕೆ 50 ಲಕ್ಷದಂತೆ ಒಟ್ಟು 1ಕೋಟಿ ಕೇಳಿದ್ದರು. ಆದರೆ ಕೊಟ್ಟಿದ್ದು 25 ಲಕ್ಷ. ನೀವು ಕೊಟ್ಟಿದ್ದು ಎಲ್ಲಾ - ಹಳೇ ಬಿಲ್ಲಲ್ಲಿ

ಹೋಗಿದೆ. ಈಗ ಹೊಸದಾಗಿ ಕುಡಿಯುವುದಕ್ಕೆ ನೀರು ಇಲ್ಲ. ಅದರ ಬಗ್ಗೆ ಏನಾದರೂ ಯೋಚನೆ ಮಾಡಿದ್ದೀರಾ? ಅದರ ಬಗ್ಗೆ ಸಧ್ಯದಲ್ಲಿ ಪರಿಹಾರ ಕೊಡುವವರಿದ್ದೀರಾ? ಈಗ ಮಳೆಗಾಲದಲ್ಲಿ ಕುಡಿಯುವುದಕ್ಕೆ ನೀರಿಲ್ಲ ಅದಕ್ಕೆ ಹಣ ಕೊಟ್ಟಿಲ್ಲ ಎಂದರೆ ಹೇಗೆ? ಎಲ್ಲಾ ಹಿಂದಿನ ಬಿಲ್ಲಿನಲ್ಲಿಯೇ ನಡೆಯುತ್ತಿದೆ. ಇದನ್ನು ತಾವು ಪರಿಶೀಲನೆ ಮಾಡಿ. ಹಿಂದಿನ ಬಿಲ್ ಕೊಡುವುದು ಅಲ್ಲ. ಈಗ ಮುಂದೆ ಏನು ಮಾಡುವವರಿದ್ದೀರಿ?

ಶ್ರೀ ಧರ್ಮಸಿಂಗ್ : ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಾವು ಈಗಾಗಲೇ ಒಂದು ಆದೇಶವನ್ನು ಹೊರಡಿಸಿದ್ದೇವೆ. ಈಗ ನೆರೆ ಹಾವಳಿ ಮತ್ತು ಬರ....

ಶ್ರೀ ಗುರುಪಾದಪ್ಪ ನಾಗಮಾರನಪಳ್ಳಿ : ಅದು ಹಾಗಲ್ಲ.

ಶ್ರೀ ಧರ್ಮಸಿಂಗ್ : ಈಗ ಇರುವಂತಹ ಅವಾಯ್ಲಬಲ್ ಫಂಡ್ಸ್‌ನಲ್ಲಿ 1·ಕೋಟಿ ರೂಪಾಯಿ ಖರ್ಚು ಮಾಡತಕ್ಕ ಸರ್ಕಾರಿ ಆಜ್ಞೆ ಒಂದು ಇದೆ. ತಾವು - 25 ಲಕ್ಷ ಮಾತ್ರ ಕೊಟ್ಟಿದ್ದು ಎಂದು ಹೇಳುತ್ತಿದ್ದೀರಿ. 50 ಲಕ್ಷ, 25 ಲಕ್ಷ ಮತ್ತು ಮೊನ್ನೆ ಕೊಟ್ಟಿದ್ದು 15 ಲಕ್ಷ. ಹೀಗೆ ಒಟ್ಟು 90 ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಇಷ್ಟುಕೊಟ್ಟು ಡಿವಿಜನಲ್ ಲೆವೆಲ್ಸ್‌ನಲ್ಲಿ ರೆವ್ಯೂ ಮಿಟಿಂಗ್ ಮಾಡತಕ್ಕ ಕಾಲದಲ್ಲಿ ಜಿಲ್ಲಾಧಿಕಾರಿಗಳಿಗೆ ನಿರ್ದಿಷ್ಟವಾದಂತಹ ಆದೇಶ ಏನು ಕೊಟ್ಟಿದ್ದೇವೆ ಎಂದರೆ, ಪೆಂಡಿಗ್ ಬಿಲ್ ಕ್ಲಿಯರ್ ಮಾಡುವುದಕ್ಕೆ ಈ ಹಣ ಕೊಡುತ್ತಿಲ್ಲ, ಇದರಲ್ಲಿ ಬೋರ್‌ವೆಲ್ ಆಗಲೀ, ಟ್ರಾನ್ಸ್‌ಪೋರ್ಟೇಷನ್ ಆಗಲೀ, ಬೇರೆ ನದಿಯಿಂದ ಪೈಪ್ ಮುಖಾಂತರ ನೀರು ತರುವ ಬಗ್ಗೆ ಆಗಲಿ ಖರ್ಚು ಮಾಡಬೇಕು ಎನ್ನತಕ್ಕಂತಹ ಆದೇಶನವನ್ನು ಕೊಟ್ಟಿದ್ದೇವೆ. ಪೆಂಡಿಂಗ್ ಬಿಲ್ 1 ಕೋಟಿ 96 ಲಕ್ಷ ಏನು ಇದೆ ಅದೇ ಎಲ್ಲಾದಕ್ಕೂ ತಾವು ಕಾಂಟ್ರಾಕ್ಟರ್‌ಗೆ ಕೊಡತಕ್ಕಂತಹ ರೀತಿ ಅಲ್ಲ. ಮತ್ತೆ ಭೋರ್‌ವೆಲ್ ಹಾಕುವುದರ ಬಗ್ಗೆ ಹೇಳಬೇಕೆಂದರೆ, ವಾಟರ್ ಟೇಬಲ್ ಕೆಳಕ್ಕೆ ಹೋಗಿದೆ, ಇವತ್ತು ಬೋರ್‌ವೆಲ್ಗೆ ಆಲ್ಟರ್ ನೇಟಿವ್ ಏನು ಎನ್ನತಕ್ಕದ್ದನ್ನೂ ನಾವು ಯೋಚನೆ ಮಾಡಬೇಕಾಗುತ್ತದೆ. ಆ ಬಗ್ಗೆ ಕೂಡ ಆದೇಶ ಕೊಟ್ಟಿದೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ : ಈಗ ಅಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಜನರು ಬಂದು ನಮ್ಮನ್ನು ಘೇರಾವ್ ಮಾಡುತ್ತಿದ್ದಾರೆ. ಈಗ ಅಲ್ಲಿ ತಾವು ಹೊಸದಾಗಿ ಹಣ ಕೊಡುವುದಕ್ಕೆ ತಯಾರು ಇದ್ದೀರಾ? ತಾವು 85 ಲಕ್ಷ ಎಂದು ಹೇಳಿದರಿ. ಆ 85 ಲಕ್ಷ ಕೂಡಾ ಹಳೆಯದರಲ್ಲಿ ಹೋಗಿದೆ. ಹೊಸ ಹಣ ಬಂದಿದೆಯೇ ಎಂದು ಜಿಲ್ಲಾಧಿಕಾರಿಗಳಿಗೆ ನಾನು ದೂರವಾಣಿ ಮಾಡಿ ಕೇಳಿದೆ. ಬರೀ 25 ಲಕ್ಷ ರೂಪಾಯಿ ಬಂದಿದೆ, ಇನ್ನೂ 25 ಲಕ್ಷ ರೂಪಾಯಿ ಕೊಡುತ್ತೇವೆ ಎಂದು ಹೇಳಿದ್ದಾರೆ ಎಂದು ಹೇಳಿದರು. ಇಂತಹ ಪರಿಸ್ಥಿತಿ ಇರುವಾಗ ನೀವು 1 ಕೋಟಿ ರೂಪಾಯಿ ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ವಿಶೇಷವಾಗಿ ಔರಾದ್ ತಾಲ್ಲೂಕಿಗೆ ನೀರು ಇಲ್ಲ. ನೀರಿನ ಮಟ್ಟ ಅಲ್ಲಿ ಕೆಳಕ್ಕೆ ಹೋಗಿದೆ. ಅದರ ಬಗ್ಗೆ ತಾವು ಏನಾದರೂ ವ್ಯವಸ್ಥೆ ಮಾಡುತ್ತೀರಾ? ಆ ಬಗ್ಗೆ ತಾವು ವ್ಯವಸ್ಥೆ ಮಾಡಬಾರದೇ?

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಬೇರೆ ಬೇರೆ ಭಾಗದಲ್ಲಿ ಡಿವಿಜನಲ್ ಹೆಡ್‌ಕ್ವಾರ್ಟಸ್ ನಲ್ಲಿ ಮೀಟಿಂಗ್ ಮಾಡಿ, ಪ್ರತಿಯೊಂದು ಜಿಲ್ಲಾಧಿಕಾರಿ ಒಂದು ಕೋಟಿಯವರೆಗೆ ಹಣ ಖರ್ಚು ಮಾಡಬಹುದು ಎಂದು ಹೇಳಿ ಆದೇಶ ಕೊಟ್ಟಿದ್ದಾರೆ. ತಾವು ಸರ್ಕಾರದಿಂದ ಒಂದು ಆದೇಶವನ್ನು ಕೊಡಬೇಕು.

ಅಧ್ಯಕ್ಷರು : ತಾವು ನಿಲುವಳಿ ಸೂಚನೆಯ ವಿಚಾರ ಬಂದಾಗ ವಿವರವಾಗಿ ಮಾತನಾಡಿ.

ಶ್ರೀ ಆರ್. ವಿ. ದೇಶಪಾಂಡೆ : ಈಗ 8 ದಿವಸ ಮಾತ್ರ ಸೆಷನ್ ಇದೆ. Let me get the answer. ಅವರು 1 ಕೋಟಿ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ. ನಿಲುವಳಿ ಸೂಚನೆ ವಿಚಾರ ಬಂದಾಗ ನಾನು ಮಾತನಾಡುತ್ತೇನೆ. ಕೆಲಮಿಟಿ ರಿಲೀಫ್ ಫಂಡ್ನಲ್ಲಿ ಕೇಂದ್ರ ಸರ್ಕಾರದಿಂದ 20 ಕೋಟಿ 25 ಲಕ್ಷ ರೂಪಾಯಿ ಬರಬೇಕು. ರಾಜ್ಯ ಸರ್ಕಾರದ್ದು ಸುಮಾರು 6 ಕೋಟಿ ರೂಪಾಯಿ ಇದೆರಡೂ ಸೇರಿ 27 ಕೋಟಿ ರೂಪಾಯಿ. ಈಗಾಗಲೇ ಕೇಂದ್ರ ಸರ್ಕಾರದವರು 20.6 ಕೋಟಿ ರಿಲೀಫ್ ಮಾಡಿದ್ದಾರೆ. 4ನೇ ಇನ್‌ಸ್ಟಾಲ್ಮೆಂಟ್ ಸಹ ರಿಲೀಸ್ ಆಗಿದೆ. ಆದರೆ ಇವತ್ತು ರಾಜ್ಯ ಸರ್ಕಾರ ಹಣವನ್ನು ರಿಲೀಸ್ ಮಾಡಿಲ್ಲ. ಆ ಹಣ ರಿಲೀಸ್ ಮಾಡಿದರೆ ಗುರುಪಾದಪ್ಪನವರ ಸಮಸ್ಯೆ ಬಗೆಹರಿಯುತ್ತದೆ. ಇವತ್ತಿನವರೆಗೆ ಇವರು ಒಟ್ಟು ಹಣ ಕೊಟ್ಟಿದ್ದು 19 ಕೋಟಿ. Already the Government of India have released the money. But the State Government has not released the money.. Till today the money released was Rs.19 Crores, 7 crores for drinking water Ten and {ØØ crores for floods, 2 Crores fro minor accidents. Nineteen and odd Crores was released out of 27 crores. will you please release the balance money?

ಶ್ರೀ ಧರ್ಮಸಿಂಗ್ : ಈಗ ವಿರೋಧಪಕ್ಷದ ನಾಯಕರ ಪ್ರಶ್ನೆಗೆ ಬರುತ್ತೇನೆ. ಔರಾದ್ ತಾಲ್ಲೂಕಿನಲ್ಲಿ ಸಾಕಷ್ಟು ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ಗುರುಪಾದಪ್ಪನವರು ಹೇಳುತ್ತಿದ್ದಾರೆ. ತಮಗೆ ಎಲ್ಲೆಲ್ಲಿ ಬೋರ್ವೆಲ್ಗಳು ಬೇಕು, ಎಲ್ಲಿಗೆ ಟ್ರಾನ್ಸ್‌ಪೋರ್ಟೇಷನ್ ಬೇಕು ಎಂದು ಕೊಡಿ, ನಾನು ನೇರವಾಗಿ ಬೀದರ್ ಜಿಲ್ಲಾಧಿಕಾರಿಗೆ ಆದೇಶ ಕೊಟ್ಟು ಅದನ್ನು ಪರಿಹಾರ ಮಾಡಿಸುತ್ತೇನೆ. ಆ ಬಗ್ಗೆ ಏನೂ ತೊಂದರೆ ಇಲ್ಲ. ಮಾನ್ಯ ಸಿಂಧ್ಯಾ ಅವರೂ ಕೂಡ ಕನಕಪುರದಲ್ಲಿ ಹೀಗೇ ಆಗಿದೆ ಎಂದು ಹೇಳಿದ್ದಾರೆ. ಬೇರೆ ಯಾವುದೇ ಕ್ಷೇತ್ರದಲ್ಲಿ ಆಗಲಿ. ಈಗ 72 ಕ್ಷೇತ್ರಗಳಲ್ಲಿ ಈ ರೀತಿಯ ಅಭಾವ ಪರಿಸ್ಥಿತಿ ಇದೆ ಎಂದು ನಮಗೆ ವರದಿ ಬಂದಿದೆ. ಆ ವರದಿ ಪ್ರಕಾರ ನಮಗೆ ಹಣದ ಕೊರತೆ ಇಲ್ಲ. ಮುಖ್ಯಮಂತ್ರಿಗಳು 1 ಕೋಟಿ ರೂಪಾಯಿ ಕೊಡುತ್ತೇನೆಂದು ಹೇಳಿರುವ ಬಗ್ಗೆ ಪದೇ ಪದೇ ಹೇಳುತ್ತಿದ್ದೀರಿ, ದೇಶಪಾಂಡೆಯವರು ಹೇಳುತ್ತಿದ್ದಾರೆ. ಈ ಬಗ್ಗೆ ಸರ್ಕಾರದಿಂದ ಏನೂ ಒಂದು ಆದೇಶ ಬರುತ್ತಾ ಇಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ 72 ತಾಲ್ಲೂಕುಗಳೂ ಬರಗಾಲ ಪೀಡಿತ ಪ್ರದೇಶಗಳು ಎಂದು ಡಿಕ್ಲೇರ್ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ನನ್ನ ಕ್ಷೇತ್ರದಲ್ಲಿ ಕುಡಿಯುವ ನೀರಿಗೆ ಅಭಾವ ಇದೆ ಎಂದು ಎಷ್ಟು ಮನವಿ ಕೊಟ್ಟಿದ್ದೇನೆ. ನನ್ನ ವಿಚಾರವನ್ನು ತಾವು ಏಕೆ ಮರೆತಿದ್ದೀರಿ? ಸಿಂಧ್ಯಾ ಅವರು ಹೇಳಿದರು ಎಂದು ಹೇಳಿದಿರಿ. ನಾನು ನಿಮಗೆ ಎಷ್ಟು ಬಾರಿ ಮನವಿ ಕೊಟ್ಟಿಲ್ಲ? ಎಷ್ಟು ಬಾರಿ ನಿಮ್ಮ ಮನೆಯ ಬಾಗಿಲಿಗೆ ಬಂದಿಲ್ಲ ಎಂದು ಹೇಳಿ. ಅಷ್ಟು ಬಾರಿ ನಿಮ್ಮ ಮನೆ ಬಾಗಿಲಿಗೆ ಬಂದರೂ ನನ್ನ ಬಗ್ಗೆ ಹೇಳದಿದ್ದರೆ ನನ್ನ ಪರಿಸ್ಥಿತಿ ಏನು ಸ್ವಾಮಿ?

ಶ್ರೀ ಧರ್ಮಸಿಂಗ್ : ಮಾನ್ಯ ವಾಟಾಳ್ ನಾಗರಾಜ್ ಅವರೂ ಕೂಡ ಚಾಮರಾಜನಗರಕ್ಕೆ ಸಂಬಂಧಪಟ್ಟ ಹಾಗೆ ಹೇಳಿದ್ದಾರೆ. ನಾವು ಈಗಾಗಲೇ ಅವರ ಕ್ಷೇತ್ರಕ್ಕೆ 10ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿನ ಸಲುವಾಗಿ ಖರ್ಚುಮಾಡತಕ್ಕಂತಹ ಸರ್ಕಾರದ ಆದೇಶವನ್ನು ಕೊಟ್ಟಿದ್ದೇವೆ. ಅದನ್ನೂ ಕೂಡ ಏನಾದರೂ ಅನುಷ್ಠಾನಕ್ಕೆ ತರಲಾರದೇ ಹೋದರೆ ಜಿಲ್ಲಾಧಿಕಾರಿಗಳಿಗೆ ಹೇಳಿ ಕೆಲಸ ಮಾಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಜಿಲ್ಲಾಧಿಕಾರಿಗಳಿಗೆ ಒಂದು 100 ಸಾರಿ ಹೇಳಿದ್ದುದು ಆಯಿತು. ತಮ್ಮ ಹತ್ತಿರ 50 ಸಾರಿ ಹೇಳಿದ್ದುದು ಆಯಿತು. ಇದುವರೆವಿಗೂ ಏನು ಆಗಿಲ್ಲ.

ಅಧ್ಯಕ್ಷರು : ಮಾನ್ಯ ಕಂದಾಯ ಮಂತ್ರಿಗಳು, ಮಧ್ಯಾಹ್ನ ತಾವು ನಿಲುವಳಿ ಸೂಚನೆಗೆ ಉತ್ತರ ಕೊಡುವ ಮುನ್ನ ವಿವರವಾಗಿ ಹೇಳಿ, ಈಗ ನಾಗಮಾರಪಳ್ಳಿಯವರಿಗೆ ತಮ್ಮ ಉತ್ತರವನ್ನು ಹೇಳಿ.

ಶ್ರೀ ಧರ್ಮಸಿಂಗ್ : ಈಗಾಗಲೇ 27 ಕೋಟಿ ರೂಪಾಯಿ ಇದೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಆದರೆ 1993-94 ರಲ್ಲಿ ಈಗಾಗಲೇ ನಾವು 17 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ. ಅದರಲ್ಲಿ ಈಗ ಬಾಕಿ 7 ಅಥವಾ 8 ಕೋಟಿ ರೂಪಾಯಿ ಇದೆ. ನಮ್ಮ ರಾಜ್ಯ ಬೊಕ್ಕಸದಿಂದಲೂ ಸಹ ಹಣವನ್ನು ಬಿಡುಗಡೆ ಮಾಡಿದ್ದೇವೆ. ಒಂದು ಕೋಟಿ ರೂಪಾಯಿ ಬಗ್ಗೆ ಏನೂ ಅನುಮಾನ ಪಡತಕ್ಕದ್ದಲ್ಲ. ನಾವು ಈಗಾಗಲೇ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಆ ಒಂದು ಆದೇಶ ತಲುಪುವುದರಲ್ಲಿ ಸ್ವಲ್ಪ ತಡ ಆಗಿರಬಹುದು. And that order will goo to the Deputy Commissioner. ಡೆಪ್ಯುಟಿ ಕಮೀಷನರ್ಗೆ ನಾವು ಅಲ್ಲೇ ಹೇಳಿದ್ದೇವೆ.

SRI R.V. DESHAPANDE : Will the Deputy Coommissioner pass an order without your order?

ಶ್ರೀ ಧರ್ಮಸಿಂಗ್ : ದೇಶಪಾಂಡೆಯವರೇ, ಡೆಪ್ಯೂಟಿ ಕಮಿಷನರ್‌ರವರಿಗೆ ಫ್ಲಡ್ ಬಗ್ಗೆಯಾಗಲೀ....

ಶ್ರೀ ಆರ್.ವಿ ದೇಶಪಾಂಡೆ : ಸ್ವಲ್ಪ ಕೇಳಿ. ನೀವು ಇನ್ನು 2-3 ತಿಂಗಳ ಬಾದಷಾಗಳು. ನಿಮ್ಮ ಮಾತಿನಮೇಲೆ ಜಿಲ್ಲಾಧಿಕಾರಿಗಳು ಆರ್ಡರ್ ಮಾಡುತ್ತಾರೆಯೇ? ನೀವು ಆರ್ಡರ್ ಕೊಟ್ಟರೆ ಅವರು ಮಾಡುತ್ತಾರೆ.

ಶ್ರೀ ಧರ್ಮಸಿಂಗ್ : ಜಿಲ್ಲಾಧಿಕಾರಿಗಳೇ ಅವಾಯ್ಲಬಲ್ ಫಂಡ್ನಿಂದ ಖರ್ಚು ಮಾಡತಕ್ಕಂಥದ್ದು, ನೀವು ಸರ್ಕಾರದ ಆಜ್ಞೆಗೆ ಕಾಯಬೇಕಾಗಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೇವೆ. ಮಾನ್ಯ ಯಡಿಯೂರಪ್ಪನವರು ಎಲ್ಲಾ 72 ತಾಲ್ಲೂಕುಗಳನ್ನು ಬಲಗಾಲ ಪ್ರದೇಶ ಎಂದು ಸಾರಬೇಕು ಎಂದು ಹೇಳಿದ್ದಾರೆ. ಮುಂದೆ ಬರುವ ಚರ್ಚೆಯಲ್ಲಿ ನಾನು ಅದರ ಬಗ್ಗೆ ಹೇಳುತ್ತೇನೆ.

ಬೇಲೂರು ಪಟ್ಟಣದಲ್ಲಿ ಮನೆಗಳ ನಿರ್ಮಾಣ

14 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ಪಟ್ಟಣದಲ್ಲಿ ಮನೆಗಳನ್ನು ಕಟ್ಟಲು ಗೃಹ ಮಂಡಳಿಯವರು ಅರ್ಜಿದಾರರಿಂದ ಮುಂಗಡ ಹಣ ಕಟ್ಟಿಸಿ ಕೊಂಡಿರುವುದು ನಿಜವೇ? ಯಾವ ವರ್ಷ ಹಣ ಕಟ್ಟಿಸಿಕೊಳ್ಳಲಾಯಿತು?

ಆ) ಈವರೆಗೆ ಗೃಹ ನಿರ್ಮಾಣ ಮಾಡದಿರಲು ಕಾರಣವೇನು? ಮತ್ತು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ವಸತಿ ಸಚಿವರು) :

ಅ) ಕರ್ನಾಟಕ ಗೃಹ ಮಂಡಳಿಯು 1984 ರಲ್ಲಿ ಮನೆಗಳ ಬೇಡಿಕೆ ಸಮೀಕ್ಷೆ ನಡೆಸಲಾಗಿದ್ದು ಅರ್ಜಿಯೊಂದಿಗೆ ನೋಂದಣಿ ಹಣವನ್ನು ಪಡೆಯಲಾಗಿದೆ. ಇದರ ಮೊತ್ತ ರೂ. 53,900-00

ಆ) ಬೇಲೂರು ಪಟ್ಟಣದಲ್ಲಿ ವಸತಿ ಯೋಜನೆಗಾಗಿ 6 ಎಕರೆ 27 ಗುಂಟೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಕ್ರಮ ಜರುಗಿಸಲಾಗಿದೆ. ಆದರೆ, ಕರ್ನಾಟಕ ಉಚ್ಚ ನ್ಯಾಯಾಲಯದವರು ತಡೆಯಾಜ್ಞೆ ನೀಡಿದ್ದರಿಂದ ಭೂ ಸ್ವಾಧೀನ ಪ್ರಕರಣವನ್ನು ಇತ್ಯರ್ಥಗೊಳಿಸಲಾಗಿಲ್ಲ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೇ, 1984ರಲ್ಲಿ ಸಮೀಕ್ಷೆ ನಡೆಸಿ ಅರ್ಜಿಯೊಂದಿಗೆ ನೋಂದಣಿ ಹಣ ರೂ. 53,900-00 ಪಡೆಯಲಾಗಿದೆ ಎಂದು, ಹೇಳಿದ್ದೀರಿ. ಎರಡನೆಯ ಪ್ರಶ್ನೆಗೆ ಉತ್ತರವಾಗಿ, - ಕರ್ನಾಟಕ ಉಚ್ಚ ನ್ಯಾಯಾಲಯದವರು ತಡೆಯಾಜ್ಞೆ ನೀಡಿದ್ದರಿಂದ ಭೂ ಸ್ವಾಧೀನ ಪ್ರಕರಣವನ್ನು ಇತ್ಯರ್ಥಗೊಳಿಸಲಾಗಿಲ್ಲ ಎಂದು ತಿಳಿಸಿದ್ದೀರಿ. ಸ್ವಾಮಿ, ತಮ್ಮ ಸರ್ಕಾರ ತೂಕಡಿಸುತ್ತಿದೆಯೇ ಎಂದು ನಾನು ಕೇಳುತ್ತೇನೆ. 1984ರಿಂದ 1994ರ ವರೆಗೆ 10 ವರ್ಷಗಳಲ್ಲಿ ತಡೆಯಾಜ್ಞೆಯನ್ನು ತೆಗೆಸುವುದಕ್ಕೆ ಆಗದೇ ಇದ್ದರೆ ಇನ್ನುಯಾವ ಕಾಲಕ್ಕೆ ತಾವು ಮನೆಗಳನ್ನು ಕಟ್ಟುತ್ತೀರಿ?

ಶ್ರೀ ಗೋಪೀನಾಥ್ ಆರ್. ಸಾಂಡ್ರ : ಮಾನ್ಯ ಸಭಾಪತಿಯವರೇ, 1984ರಲ್ಲಿ ಸಮೀಕ್ಷೆ ಮಾಡಲಾಯಿತು. ನಂತರ ಇ.ಡಬ್ಲ್ಯು.ಎಸ್.ನ 29, ಎಲ್.ಐ.ಜಿ.ನ 30 ಮನೆಗಳು, ಎಂ.ಐ.ಜಿ.ಯ 32 ಹಾಗೂ ಹೆಚ್.ಐ.ಜಿ.ಯ 2 ಮನೆಗಳನ್ನು ಮಾಡುವುದಕ್ಕೆ ಕಾರ್ಯಕ್ರಮ ಹಾಕಲಾಯಿತು. ಆನಂತರ ನಮಗೆ ಅವರಿಂದ 53,900 ರೂಪಾಯಿಗಳು ಮುಂಗಡವಾಗಿ ಹಣ ಬಂತು. 12 ಎಕರೆ 24 ಗುಂಡೇ ಜಮೀನಿನಲ್ಲಿ ಈ ಕಟ್ಟಡಗಳಿಗೆ ಸರ್ವೇ ಮಾಡಿ ಅದನ್ನು ಅಕ್ವಿಸಿಷನ್ ಮಾಡಿದೆವು. ಅಕ್ವಿಸಿಷನ್ ಮಾಡಿದ ನಂತರ ಭೂಮಾಲೀಕರು ಹೈಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತೆಗೆದುಕೊಂಡು ಬಂದರು. ಇದಕ್ಕೂ ಮೊದಲೂ 6 ಎಕರೆ ಜಮೀನನ್ನು ಅಂದಿನ ಅಸಿಸ್ಟೆಂಟ್ ಕಮೀಷನರ್ ಅವರು ಅದು ಹರಿಜನರಿಗಾಗಿ ಮೀಸಲಾಗಿಟ್ಟಿದ್ದ ಜಮೀನು ಇದರಲ್ಲಿ ಬೇರೆ ಮಾಡುವುದಕ್ಕೆ ಬರುವುದಿಲ್ಲ ಎಂದು 6 ಎಕರೆಯನ್ನು ತೆಗೆದುಕೊಂಡರು. ಈ 6 ಎಕರೆ ಹೋದಮೇಲೆ ಮಿಕ್ಕ 6 ಎಕರೆಗೆ ಅವರು ಹೈಕೋರ್ಟ್‌ನಲ್ಲಿ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಆದಷ್ಟು ಸ್ಟೇ ವೆಕೇಟ್ ಮಾಡಬೇಕೆಂದು ನಮ್ಮ ಆಡ್ವೊಕೇಟ್ ಜನರಲ್‌ರವರಿಗೆ ಈಗಾಗಲೇ ತಿಳಿಸಿದ್ದೇವೆ. ನಾವೂ ಕೂಡ ಬಹಳಷ್ಟು ಪ್ರಯತ್ನ ಮಾಡುತ್ತಾ ಇದ್ದೇವೆ, ಆದರೂ ಕೂಡ ಇನ್ನೂ ಸ್ಟೇ ವೇಕೆಟ್ ಆಗಿಲ್ಲ. ನಮ್ಮ ಪ್ರಯತ್ನ ಸರಾಗವಾಗಿ ಸಾಗಿದೆ. ಆದಷ್ಟು ಹೈಕೋರ್ಟ್‌ನವರನ್ನು ಮನವೊಲಿಸಿ, ವೆಕೇಟ್ ಮಾಡಿಸಿಕೊಡುತ್ತೇವೆ. ಇದಲ್ಲದೆ, ಅಕಸ್ಮಾತ್ತಾಗಿ ಅವರು ಟಾಸ್ಕ್ ಫೋರ್ಸ್ ಕಮಿಟಿ ಚೇರ್ಮನ್ ಆಗಿದ್ದಾರೆ. ಅವರು ಮನಸ್ಸು ಮಾಡಿದರೆ, ನೆಗೋಷಿಯೇಷನ್ ಮೇಲೆ, ಲ್ಯಾಂಡ್ಸ್‌ಗಳನ್ನು ಕೊಡಿಸಿದರೆ, ನಾವು ಹಣ ಕೊಟ್ಟು, ಅದನ್ನು ತೆಗೆದುಕೊಳ್ಳುವುದಕ್ಕೆ ತಯಾರಿದ್ದೇವೆ. ಅವರು, ಆ ದಿಸೆಯಲ್ಲಿ ಪ್ರಯತ್ನ ಮಾಡಿ, ನಮಗೆ ಸಲಹೆ ಮಾಡಿದರೆ ಆ ರೀತಿಯಿಂದ ನಡೆದುಕೊಳ್ಳುತ್ತೇವೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೇ, ತಡೆಯಾಜ್ಞೆ ಯಾವಾಗಿ ಬಂತು? ತಡೆಯಾಜ್ಞೆ ಬಂದ ಮೇಲೆ, ಗವರ್ನಮೆಂಟ್ ಅಡ್ವೊಕೇಟ್ಸ್ ಇಲ್ಲವೇ? ಅಡ್ವೊಕೇಟ್ ಜನರಲ್ ಇಲ್ಲವೇ? 10 ವರ್ಷ ನಿಲ್ಲುವುದಕ್ಕೆ ಕಾರಣವೇನು? ತಡೆಯಾಜ್ಞೆ ತೆಗೆಸುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಗೋಪಿನಾಥ್ ಆರ್. ಸಾಂಡ್ರಾ : 3-4-90ರಲ್ಲಿ ತಡೆಯಾಜ್ಞೆ ಬಂದಿದೆ; ಅದಕ್ಕಾಗಿ, ನಾನು ಆಗಲೇ ಹೇಳಿದಂತೆ ಆದಷ್ಟು ಬೇಗನೆ ವೆಕೇಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಹೈಕೋರ್ಟನ್ನು ಒತ್ತಾಯ ಮಾಡುವುದಕ್ಕಾಗುವುದಿಲ್ಲ. ಅದು ತಮಗೂ ತಿಳಿದಿದೆ. ನಾನು ಅದಕ್ಕೇ ಹೇಳಿದೆ. ನೆಗೋಷಿಯೇಷನ್ ಮೇಲೆ, ಆ ಭೂಮಿಯನ್ನು ಇವರಿಗೆ ಕೊಡಬೇಕೆಂದು ಪ್ರಯತ್ನ ಮಾಡಿದರೆ, ನಿಮಗೆ ಎಲ್ಲಾ ಅನುಕೂಲತೆಗಳನ್ನು ಮಾಡಿಕೊಡುತ್ತೇವೆ.

ಬೆಳಗಾವಿ ಜಿಲ್ಲೆಯಲ್ಲಿ ಅತಿವೃಷ್ಟಿ ಹಾಗೂ ಅನಾವೃಷ್ಟಿಯಿಂದ ಆದ ಹಾನಿ

312 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯಲ್ಲಿ ಈ ವರ್ಷ ಅತಿವೃಷ್ಟಿ ಹಾಗೂ ಅನಾವೃಷ್ಟಿಯಿಂದ ಎಷ್ಟು ಹಾನಿಯಾಗಿರುವುದು? (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಬೆಳಗಾವಿ ಜಿಲ್ಲೆಗೆ ಈ ವರ್ಷ ಅತಿವೃಷ್ಟಿ ಹಾಗೂ ಅನಾವೃಷ್ಟಿಯಲ್ಲಿ ಎಷ್ಟು ಹಣ ಸರ್ಕಾರದವರು ಬಿಡುಗಡೆ ಮಾಡಿರುವರು? ಜಿಲ್ಲಾಧಿಕಾರಿಗಳು ಸರ್ಕಾರದಿಂದ ಬಂದ ಹಣದಲ್ಲಿ ಎಷ್ಟೆಷ್ಟು ಹಣವನ್ನು ಪ್ರತಿಯೊಂದು ತಾಲ್ಲೂಕಿಗೆ ಬಿಡುಗಡೆ ಮಾಡಿರುವರು? (ತಾಲ್ಲೂಕುವಾರು ಮಾಹಿತಿ ನೀಡುವುದು)

ಇ) ಜಿಲ್ಲಾಧಿಕಾರಿಗಳು ಯಾವ ತಾಲ್ಲೂಕಿಗೆ ಎಷ್ಟು ಹಣವನ್ನು ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳನ್ನು ದುರಸ್ತಿ ಮಾಡಲು ಹಾಗೂ ಜಿಲ್ಲಾ ಪಂಚಾಯತ್ ರಸ್ತೆಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಿರುವರು?

ಈ) ಜಿಲ್ಲಾಧಿಕಾರಿಗಳು ಸವದತ್ತಿ ತಾಲ್ಲೂಕಿನ ಓಬಲದಿನ್ನಿ ರಸ್ತೆಗೆ ಹಾಗೂ ಇಂಚಲ ಮುರಗೋಡ ವಯಾ ಚಳಕೊಪ್ಪ ರಸ್ತೆ ದುರಸ್ತಿ ಮಾಡಲು ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಈ ಕೆಲಸಗಳಿಗೆ ಜಿಲ್ಲಾ ಪಂಚಾಯತಿಯವರಿಗೆ ಎಷ್ಟು ಹಣ ಬಿಡುಗಡೆ ಮಾಡಿರುವರು ಮತ್ತು ಜಿಲ್ಲಾ ಪಂಚಾಯತ್ ಇವರು ಎಷ್ಟು ಹಣವನ್ನು ಈ ಕೆಲಸಕ್ಕೆ ಬಿಡುಗಡೆ ಮಾಡಿದ ಹಣದಲ್ಲಿ ಖರ್ಚು ಮಾಡಲಾಗಿದೆ?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಬೆಳಗಾವಿ ಜಿಲ್ಲೆಯಲ್ಲಿ ಈ ವರ್ಷ ಅತಿವೃಷ್ಟಿಯಿಂದ ಆಗಿರುವ ಹಾನಿಯ ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿವೆ -

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ತಾಲ್ಲೂಕಿನ ಹೆಸರು	ಖಾಸಗಿ ಆಸ್ತಿಗಳಿಗಾಗಿರುವ ಹಾನಿ	ಸಾರ್ವಜನಿಕ ಆಸ್ತಿಪಾಸ್ತಿ ಗಳಿಗಾಗಿರುವ ಹಾನಿ	ಒಟ್ಟು
1.	ಬೆಳಗಾವಿ	85.43	207.00	292.43
2.	ಖಾನಾಪುರ	211.65	106.35	318.00
3.	ಹುಕ್ಕೇರಿ	31.48	81.75	113.23
4.	ಬೈಲಹೊಂಗಲ	4.74	64.80	69.54
5.	ಸವದತ್ತಿ	0.38	-	0.38
6.	ರಾಮದುರ್ಗ	0.88	8.00	8.88
7.	ಗೋಕಾಕ್	1147.92	108.68	1256.60
8.	ಚಿಕ್ಕೋಡಿ	198.22	70.25	268.47
9.	ರಾಯಭಾಗ್	1037.53	21.35	1058.88
10.	ಅಥಣಿ	121.77	41.00	162.77
	ಒಟ್ಟು :	2840.00	709.18	3549.18

ಪ್ರಸ್ತುತದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಅನಾವೃಷ್ಟಿಯಿಂದ ಯಾವುದೇ ತಾಲ್ಲೂಕು ಬಾಧಿತವಾಗಿರುವುದಿಲ್ಲ.

ಆ) ಈ ವರ್ಷದಲ್ಲಿ ಸರ್ಕಾರದಿಂದ ನೆರೆ ಪರಿಹಾರ ಕಾರ್ಯಗಳಿಗೆ ರೂ. 60.00 ಲಕ್ಷಗಳನ್ನು ಮತ್ತು ಕುಡಿಯುವ ನೀರಿನ ಪೂರೈಕೆಗಾಗಿ ರೂ. 50.00 ಲಕ್ಷಗಳನ್ನು

ಬಿಡುಗಡೆ ಮಾಡಿದೆ ಅಲ್ಲದೇ, 1993-94ನೇ ಸಾಲಿನ ಬೆಳೆ ಪರಿಹಾರದ ಬಾಕಿ ಹಣ ರೂ. 20.00 ಲಕ್ಷಗಳೂ ಸಹ 1994ನೇ ಸಾಲಿನ ಅತಿವೃಷ್ಟಿಯಲ್ಲಿ ನೊಂದ ಸಂತ್ರಸ್ಥರ ಪರಿಹಾರಕ್ಕಾಗಿ ಉಪಯೋಗಿಸಲು ಅನುಮತಿ ನೀಡಲಾಗಿದೆ.

(1) ಅತಿವೃಷ್ಟಿಯಿಂದ ಪ್ರಾಣ ಹಾನಿ ಸಂಭವಿಸಿದ 6 ಪ್ರಕರಣಗಳಿಗೆ ರೂ. 6.00 ಲಕ್ಷಣಗಳನ್ನು ಪಾವತಿಸಿದೆ.

(2) ಈ ವರ್ಷದಲ್ಲಿ ಜಿಲ್ಲಾಧಿಕಾರಿಗಳು ಖಾಸಗಿ ಆಸ್ತಿ-ಪಾಸ್ತಿಗಳ ನಷ್ಟಕ್ಕೆ ಪರಿಹಾರ ನೀಡಲು ಮತ್ತು ಕುಡಿಯುವ ನೀರಿನ ಪೂರೈಕೆಗಾಗಿ ತಾಲ್ಲೂಕುವಾರು ಬಿಡುಗಡೆ ಮಾಡಿರುವ ಹಣದ ವಿವರ ಈ ಕೆಳಕಂಡಂತಿದೆ -

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ತಾಲ್ಲೂಕಿನ ಹೆಸರು	ನೆರೆ ಪರಿಹಾರ ಕಾರ್ಯ ಗಳಿಗೆ	ಕುಡಿಯುವ ನೀರಿನ ಪೂರೈಕೆಗೆ	ಒಟ್ಟು
1.	ಬೆಳಗಾವಿ	5.00	2.75	7.75
2.	ಖಾನಾಪುರ	4.00	0.72	4.72
3.	ಗೋಕಾಕ್	20.00	-	20.00
4.	ಸವದತ್ತಿ	2.00	3.78	5.78
5.	ಹುಕ್ಕೇರಿ	2.00	5.76	7.76
6.	ಬೈಲಹೊಂಗಲ	2.00	4.63	6.63
7.	ರಾಮದುರ್ಗ	2.00	6.41	8.41
8.	ಅಥಣಿ	2.00	-	2.00
9.	ರಾಯಭಾಗ್	2.00	3.06	5.06
10.	ಚಿಕ್ಕೋಡಿ	2.00	5.65	7.65
	ಒಟ್ಟು :	43.00	32.76	75.76

(3) ಅತಿವೃಷ್ಟಿ : ಪ್ರವಾಹದಿಂದ ಜಲಾವೃತಗೊಂಡ ಗ್ರಾಮಗಳಲ್ಲಿ ತುರ್ತು ಸಾರ್ವಜನಿಕ ಆಸ್ತಿ ದುರಸ್ತಿಗಾಗಿ ಹಾಗೂ ಸಂತ್ರಸ್ಥರಿಗೆ ಉದ್ಯೋಗ ಕಲ್ಪಿಸುವುದಕ್ಕಾಗಿ ಈ ಕೆಳಕಂಡ ತಾಲ್ಲೂಕುಗಳಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್, ಬೆಳಗಾವಿ ಇವರ ಮುಖಾಂತರ ಬಿಡುಗಡೆ ಮಾಡಲಾಗಿದೆ -

1.	ಗೋಕಾಕ್	-	ರೂ. 10.00 ಲಕ್ಷಗಳು
2.	ಅಥಣಿ	-	ರೂ. 5.00 ಲಕ್ಷಗಳು
3.	ರಾಯಭಾಗ್	-	ರೂ. 5.00 ಲಕ್ಷಗಳು
4.	ಚಿಕ್ಕೋಡಿ	-	ರೂ. 5.00 ಲಕ್ಷಗಳು
	ಒಟ್ಟು :		25.00 ಲಕ್ಷಗಳು

ಇ) ಲೋಕೋಪಯೋಗಿ ಇಲಾಖೆಗೆ ಅತಿವೃಷ್ಟಿಯಿಂದ ಹಾನಿಗೊಳಗಾದ ಸಾರ್ವಜನಿಕ ಆಸ್ತಿಪಾಸ್ತಿಗಳ ದುರಸ್ತಿಗೆ ಹಣ ಬಿಡುಗಡೆ ಮಾಡಿರುವುದಿಲ್ಲ. ಪ್ರವಾಹದಿಂದ ಜಲಾವೃತಗೊಂಡ ಗ್ರಾಮಗಳಲ್ಲಿ ತುರ್ತು ಸಾರ್ವಜನಿಕ ಆಸ್ತಿಪಾಸ್ತಿಗಳ ದುರಸ್ತಿಗಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ ಇವರಿಗೆ (ಗೋಕಾಕ್, ಅಥಣಿ,

ರಾಯಭಾಗ್ ಮತ್ತು ಚಿಕ್ಕೋಡಿ ತಾಲ್ಲೂಕುಗಳಲ್ಲಿ)ರೂ. 25.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ಈ) 1993-94ನೇ ಸಾಲಿನಲ್ಲಿ ಸಾರ್ವಜನಿಕ ಆಸ್ತಿಪಾಸ್ತಿಗಳ ದುರಸ್ತಿಗಾಗಿ ಅನುದಾನ ಲಭ್ಯವಿಲ್ಲದ್ದರಿಂದ ಹಣ ಬಿಡುಗಡೆ ಮಾಡಿರುವುದಿಲ್ಲ. ಈ ಸಾಲಿನಲ್ಲಿ ಈ ಕಾಮಕಾರಿಗಳಿಗೆ ಹಣ ಬಿಡುಗಡೆ ಮಾಡಲಾಗುವುದು.

ಶ್ರೀ ಎಸ್.ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ, ಇವತ್ತಿನದಿವಸ ಈ ನೆರೆಹಾವಳಿಯಿಂದ ನಮ್ಮ ಬೆಳಗಾಂ ಜಿಲ್ಲೆಯಲ್ಲಿ 3 ಕೋಟಿ 54 ಲಕ್ಷ ಚಿಲ್ಲರೆ ಹಾನಿಯಾಗಿದೆ ಎಂದು ತಿಳಿಸಿದ್ದಾರೆ. ಆದರೆ, ಇದಕ್ಕೆ 40 ಲಕ್ಷ ರೂಪಾಯಿಗಳನ್ನು ಮಾತ್ರ ಇಲ್ಲಿಯವರೆಗೆ ಬಿಡುಗಡೆ ಮಾಡಿದ್ದೀರಿ ಎಂಬುದು ತಾವು ಕೊಟ್ಟಂಥ ಅಂಕಿಸಂಖ್ಯೆಗಳಿಂದ ತಿಳಿಯುತ್ತಿದೆ. ಮೊದಲು ಹಾನಿಯಾದದ್ದು 3 ಕೋಟಿ 5 ಲಕ್ಷ ಒಟ್ಟು ಸುಮಾರು 15-20 ಕೋಟಿ ರೂಪಾಯಿಗಳು ಹಾನಿಯಾಗಿದೆ ಎಂದು ಕೇಂದ್ರಸರ್ಕಾರಕ್ಕೆ ತಮ್ಮ ರಿಪೋರ್ಟನಲ್ಲಿ ಕೊಟ್ಟಿದ್ದೀರಿ. ಇವತ್ತು ತಾವು ಕೇಂದ್ರಸರ್ಕಾರಕ್ಕೆ ಕೊಟ್ಟಂಥ ರಿಪೋರ್ಟ ಸರಿಯೋ ಅಥವಾ ಇಲ್ಲಿ ಕೊಟ್ಟಂಥ ಉತ್ತರ ಸರಿಯೋ ಎನ್ನುವುದನ್ನು ಹೇಳಬೇಕು. ನಮ್ಮ ಬೈಲಹೊಂಗಲ ಮತಕ್ಷೇತ್ರದಲ್ಲಿ ಯಾರ ಮನೆಗಳು ಬಿದ್ದಿವೆ, ಅವರಿಗೆ ನೂರು ರೂಪಾಯಿ ಚೆಕ್ ಕೊಡುತ್ತಾರೆ. ನೂರು ರೂಪಾಯಿ ಚೆಕ್ ತೆಗೆದುಕೊಳ್ಳಬೇಕಾದರೆ, ತಲಾಟಿಯಿಂದ ಪಂಚನಾಮ ಆಗಬೇಕು, ರೆವಿನ್ಯೂ ಇನ್ಸ್‌ಪೆಕ್ಟರಿಂದ ಪಂಚನಾಮ ಆಗಬೇಕು, ತಹಶೀಲ್ದಾರ್ ಇನ್ಸ್‌ಪೆಕ್ಷನ್ ಆಗಬೇಕು. ಅನಂತರ, ಆ ಚೆಕ್ ತೆಗೆದುಕೊಂಡು- ಸ್ಟೇಟ್ ಬ್ಯಾಂಕ್ಗೆ ಹೋಗಿ ಅಕೌಂಟ್ - ತೆಗೆಯಬೇಕಾದರೆ, ಸುಮಾರು 7 ಸಾರಿ ಎಡತಾಕಬೇಕು.

ಅಧ್ಯಕ್ಷರು : ತಮಗೇನು ಪರಿಹಾರ ಬೇಕೆಂಬುದನ್ನು ಹೇಳಿ?

ಶ್ರೀ ಎಸ್.ಹೆಚ್. ಕೌಜಲಗಿ : ನಮಗೆ ರೊಕ್ಕ ಬೇಕು, ಮತ್ತೇನೂ ಬೇಡ. ತಾವು ಬೆಳಗಾಂ ಜಿಲ್ಲೆಯ ಮತಕ್ಷೇತ್ರವಾದ ಬೈಲಹೊಂಗಲ ಕ್ಷೇತ್ರಕ್ಕೆ 2 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಈ ಎರಡು ಲಕ್ಷ ರೂಪಾಯಿಗಳಲ್ಲಿ ಏನು ಕೆಲಸ ಆಗುತ್ತದೆ. ರಸ್ತೆ ರಿಪೇರಿ ಆಗಬೇಕು, ಪ್ರೈವೇಟ್ ಮನೆಗಳು ಬಿದ್ದಿವೆ, ಅವರಿಗೆ ಕೊಡಬೇಕು. ತಹಶೀಲ್ದಾರ್ ಅವರನ್ನು ಕೇಳಿದರೆ ಏನು ಹೇಳುತ್ತಾರೆಂದರೆ, ಸರ್ಕಾರದಿಂದ ನಮಗೆ ಬರೀ ಎರಡು ಲಕ್ಷ ರೂಪಾಯಿಗಳು ಮಾತ್ರ ಬಿಡುಗಡೆಯಾಗಿದೆ, ಎಲ್ಲರಿಗೂ ಸಮಾಧಾನ ಮಾಡಬೇಕೆಂದೂ, ನಾನೂ ಕೂಡ Retiring stageಗೆ ಬಂದಿದ್ದೇನೆ, ಸ್ವಲ್ಪ ಸುಮ್ಮನೆ ಇರಿ ಎಂದು ಅವರು ಹೇಳುತ್ತಾರೆ. ಇಲ್ಲಿ ನಮಗೆ ಈ ಎರಡು ಲಕ್ಷ ರೂಪಾಯಿಗಳಲ್ಲಿ ಏನಾಗುತ್ತದೆ ಎಂಬುದನ್ನು ತಾವು ವಿಚಾರ ಮಾಡಬೇಕು. ಹಣ ಎಷ್ಟು ಹೆಚ್ಚಿಗೆ ಬಿಡುಗಡೆ ಮಾಡುತ್ತೀರಿ ಮತ್ತು ನೀವೇನು ನೂರು ರೂಪಾಯಿ ಚೆಕ್ ಕೊಡುತ್ತೀರಲ್ಲ ಅದನ್ನು ಕನಿಷ್ಟ 500 ರೂಪಾಯಿಗಳಿಗೆ ಏರಿಸಿರಿ ಅಥವಾ ಎಷ್ಟು ಹಾನಿಯಾಗಿದೆ ಅಷ್ಟು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಶಿವಾನಂದ ಕೌಜಲಗಿಯವರು ಹೇಳಿದಂತೆ, 3 ಕೋಟಿ ರೂಪಾಯಿ ಹಾನಿಯಾಗಿದೆ ಎಂಬುದು ಸರಿಯಲ್ಲ, ಒಟ್ಟು ಹಾನಿಯಾದ ಅಂದಾಜು ಮಾಡಿದ್ದು 35 ಕೋಟಿ ರೂಪಾಯಿಗಳಾಗಿದೆ ಎಂಬ ವರದಿಯನ್ನು ಸಲ್ಲಿಸಿದ್ದೇವೆ. ಈ ವರ್ಷದಲ್ಲಿ ನೆರೆಹಾವಳಿ ಬಾಬಿಗಾಗಿ 60 ಲಕ್ಷ ರೂಪಾಯಿ, 50 ಲಕ್ಷ ರೂಪಾಯಿ ಕುಡಿಯುವ ನೀರಿಗೆ ಒಟ್ಟು 110 ಲಕ್ಷ ಮತ್ತು 20 ಲಕ್ಷ ಹೋದವರ್ಷ ನೆರೆ ಹಾವಳಿ ಬಾಬಿಗೆ ಸಂಬಂಧಿಸಿದಂತೆ ಫಂಡ್ಸ್ ಏನಿತ್ತು ಅದನ್ನು ಸೇರಿಸಿ 130 ಲಕ್ಷ ಎಲ್ಲಾ ಸೇರಿ ಮತ್ತು ಪ್ರಾಣಹಾನಿಗೆ ಸಂಬಂಧಿಸಿದಂತೆ 6 ಲಕ್ಷ ಎಲ್ಲಾ ಸೇರಿ 136 ಲಕ್ಷ ರೂಪಾಯಿ ಕೊಟ್ಟು ಇದರ ಜೊತೆಗೆ

ಪಂಚಾಯಿತಿಗಳಲ್ಲಿರತಕ್ಕ ಹಣ 25 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಆದೇಶವನ್ನು ಕೊಟ್ಟಿದ್ದೇವೆ.

ಒಟ್ಟಾರೆ ಒಂದೂವರೆ ಕೋಟಿ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ. ಆದರೂ ಕೂಡ ಸಾಲದು. ಕರ್ನಾಟಕ ರಾಜ್ಯದಲ್ಲಿ ನೆರೆಹಾವಳಿಯಿಂದ ಯಾವಯಾವ ಜಿಲ್ಲೆಗಳಿಗೆ ತೊಂದರೆಯಾಗಿದೆ ಆ ಜಿಲ್ಲೆಗಳಿಗೆ ಸೌತ್ ಕೆನರಾ, ಶಿವಮೊಗ್ಗ ಅದರಂತೆ ಬೆಳಗಾಂನಲ್ಲೂ ಪ್ರವಾಹದಿಂದ ಹಾನಿಯಾಗಿದೆ. ನಾವೂ ಕೂಡ ಒಂದೆರಡು ಸಲ ಹೋಗಿ ಬಂದಿದ್ದೇವೆ. ಎಲ್ಲಾ ಜಿಲ್ಲಾ ತಾಲ್ಲೂಕಿಗೆ ಬರಲಿಕ್ಕಾಗಲಿಲ್ಲ, ಬೆಳಗಾಂಗೆ ಬಂದು ಹೋಗಿದ್ದೇವೆ, ಅಲ್ಲಿ ಜಿಲ್ಲಾಧಿಕಾರಿಗಳ ಜೊತೆ ಮತ್ತು ಸಂಬಂಧಪಟ್ಟಂಥ ಪ್ರತಿನಿದಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದೇವೆ. ಗೋಕಾಕ್ ಕೂಡ ವರ್ಸ್ಟ್ ಎಫೆಕ್ಟೆಡ್ ಏರಿಯಾ ಇದೆ. ಅಲ್ಲಿಗೂ ಕೂಡ ನಾವು ಹೋಗುವುದಕ್ಕಾಗಲಿಲ್ಲ. ಮಾನ್ಯಸಭಾಧ್ಯಕ್ಷರೇ, ತಮ್ಮ ಕ್ಷೇತ್ರವೂ ಕೂಡ ಮೋಸ್ಟ್ ಎಫೆಕ್ಟೆಡ್ ಏರಿಯಾ ಆಗಿದೆ. ಮತ್ತು ಗೋಕಾಕ್ ದಲ್ಲಿ ಷುಗರ್ಕೇನ್ ಹೋಗಿದೆ. ಎಲ್ಲಾ ಕಡೆಗೂ ಆಗಿದೆ. ಆದರೆ, ಇವತ್ತು ಹೇಳುವ ರೀತಿಯಲ್ಲಿ ನಮಗೆ ಎರಡೇ ಲಕ್ಷ ಕೊಟ್ಟಿದ್ದಾರೆಂದಲ್ಲ, 6 ಲಕ್ಷ 63 ಸಾವಿರ ರೂಪಾಯಿಗಳನ್ನು ತಮ್ಮ ಬೈಲಹೊಂಗಲ ಕ್ಷೇತ್ರಕ್ಕೆ ಕೊಟ್ಟಿದ್ದೇವೆ. ಈಗ ನಾವು ಮಾಡತಕ್ಕ ಕೆಲಸವೇನೆಂದರೆ, ಒಂದು ತಿಂಗಳ ಹಿಂದೆ ಈ ಒಂದು ಪರಿಸ್ಥಿತಿ ಬಂದಾಗ ಕೆಲಸ ಮಾಡತಕ್ಕ ರೀತಿಯಲ್ಲಿ ಆದೇಶ ಕೊಟ್ಟಿದ್ದೇವೆ. ಅದು ಆಗಿನ ಕಾಲದ ರಿಪೋರ್ಟ್ ಮತ್ತೆ ಮುಂದೆಯೂ ಕೂಡ ಖರ್ಚುಮಾಡುತ್ತಿದ್ದೇವೆ, ಕೆಲಸಕಾರ್ಯಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಮತ್ತು ತಮ್ಮ ಕ್ಷೇತ್ರದಲ್ಲಿ ಏನೇನು ಕೆಲಸಕಾರ್ಯಗಳಾಗಬೇಕೆಂದು ಹೇಳಿದರೆ, ಅಲ್ಲಿಯೂ ಕೂಡ ಹಣ ಬಿಡುಗಡೆ ಮಾಡೋಣ

ಶ್ರೀ ಎಸ್.ಹೆಚ್. ಕೌಜಲಗಿ : ನೀವು ನೂರು ರೂಪಾಯಿ ಚೆಕ್ ಕೊಡುತ್ತೀರಿ, ಅದರಲ್ಲಿ ಏನು ಬರುತ್ತದೆ, ಈ ನೂರು ರೂಪಾಯಿಗಳಲ್ಲಿ ಮನೆ ಕಟ್ಟುವುದಕ್ಕಾಗುತ್ತದೆಯೇ?

ಶ್ರೀ ಧರ್ಮಸಿಂಗ್ : ಜಿಲ್ಲಾಧಿಕಾರಿಗಳಿಗೆ ನಿರ್ದಿಷ್ಟವಾದ ಆದೇಶವನ್ನು ಕೊಟ್ಟಿದ್ದೇವೆ. ತ್ವರಿತವಾಗಿ ಪರಿಹಾರ ಕೊಡಬೇಕು, ನೂರು ರೂಪಾಯಿ ಕೊಡುವ ಬದಲು ಕನಿಷ್ಟಪಕ್ಷ 500 ರೂಪಾಯಿ ಅಥವಾ ಇದಕ್ಕೂ ಮೇಲ್ಪಟ್ಟು ಕೊಡಬೇಕು ಎಂದು ಹೇಳಿದ್ದೇವೆ. 100 ರೂಪಾಯಿ ಕೊಡುವುದನ್ನು ನಿಲ್ಲಿಸಿದ್ದೇವೆ. ಜಿಲ್ಲಾಧಿಕಾರಿಗಳು ಮತ್ತೆ ಅದೇರೀತಿ ಕೊಡುತ್ತಾ ಇದ್ದರೆ ಆ ರೀತಿ ಕೊಡುವುದನ್ನು ನಿಲ್ಲಿಸುತ್ತೇವೆ.

ಶ್ರೀ ಎಸ್.ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ, ಇವತ್ತೂ ಕೂಡ ಒಂದು ನೂರು ರೂಪಾಯಿಗಳ ಚೆಕ್ಕನ್ನು ಎಲ್ಲರಿಗೂ ಕೊಟ್ಟಿದ್ದಾರೆ. ಇದು ಕರೆ ಇದೆಯೋ ಇಲ್ಲವೋ ಎಂಬುದನ್ನು ಪರಿಷ್ಕೈ ಮಾಡಬೇಕು. 500 ರೂಪಾಯಿ ಕೊಡಬೇಕೆಂದು ಹೇಳುವುದು ಸತ್ಯಕ್ಕೆ ದೂರವಿದೆ. ಈ ಸರ್ಕಾರ ಬರೀಕಣ್ಣೊರೆಸುವ ಕೆಲಸ ಮಾಡುತ್ತಿದೆ. ಬರೀ ಪಾರ್ಟ್ ಮಾಡುತ್ತಾರೆ. ಬಡವರಿಗೆ ತೊಂದರೆ ಕೊಡುವ ಕರ್ತವ್ಯ ಮಾಡುತ್ತಾರೆಯೋ ಹೊರತಾಗಿ, ಅನುಕೂಲ ಮಾಡುತ್ತಾ ಇಲ್ಲ. ನಿಜವಾಗಿಯೂ ಮಂತ್ರಿಗಳು ಹೇಳಿದಹಾಗೆ ಕೊಡುತ್ತಾ ಇಲ್ಲ.

ಶ್ರೀ ಧರ್ಮಸಿಂಗ್ : ನೂರು ರೂಪಾಯಿ ಕೊಡುತ್ತಾರೆ ಎನ್ನುವುದನ್ನು ನಾನು ಅಲ್ಲಗಳೆಯುತ್ತಾ ಇಲ್ಲ. ನಮ್ಮ ಗಮನಕ್ಕೆ ಬಂದಾಗ, ನಾವು ಕೆಲವು ಕಡೆ ಹೇಳಿದ್ದೇವೆ. ರಾಯಚೂರು ಮತ್ತು ಬೇರೆ ಬೇರೆ ಕಡೆಗಳಲ್ಲಿ ಹೋದಾಗ ಈ ವಿಷಯಬಂತು. ನೂರು ರೂಪಾಯಿ ಪರಿಹಾರ ಕೊಟ್ಟರೆ, ಅವರಿಗೆ ಏನೂ ಆಗುವುದಿಲ್ಲ, ಇದನ್ನು ನಿಲ್ಲಿಸಿಬಿಡಿ ಎಂದು ನಾವು ಹೇಳಿದ್ದೇವೆ. ಒಂದು ವೇಳೆ ನೂರು ರೂಪಾಯಿಗಳನ್ನೇ ಕೊಡುತ್ತಿದ್ದಾರೆ ಎಂದರೆ, ಅದನ್ನು ನಿಲ್ಲಿಸಿ, ಹೆಚ್ಚು ಪರಿಹಾರ ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಸ್.ಹೆಚ್. ಕೌಜಲಗಿ : 2 ಲಕ್ಷ ರೂಪಾಯಿಗಳನ್ನು ಆಸ್ತಿ ಪಾಸ್ತಿಗಳಿಗೆ ಕೊಟ್ಟಿದ್ದೇವೆ, 4 ಲಕ್ಷ ರೂಪಾಯಿಗಳನ್ನು ಬೈಲಹೊಂಗಲ ಮತಕ್ಷೇತ್ರಕ್ಕೆ ಕುಡಿಯುವ ನೀರಿನ ಸಲುವಾಗಿ ಕೊಟ್ಟಿದ್ದೇವೆಂದು ಅವರು ಹೇಳಿದರು. 6 ಲಕ್ಷ ರೂಪಾಯಿ ಕೊಟ್ಟರು. ಕುಡಿಯುವ ನೀರಿಗೆ ಏನು ಕೊಡುತ್ತೀರಿ, ಜಿಲ್ಲಾಪರಿಷತ್ತಿನ ಫಂಡ್ ನಿಲ್ಲಿಸಿ, ಇಲ್ಲಿ ನೀವು ಕೊಡುತ್ತಿದ್ದೀರಿ. ಇದನ್ನು ಹೊರತಾಗಿ, ನೀವು ನಿಜವಾಗಿಯೂ ಕುಡಿಯುವ ನೀರಿನ ಸಲುವಾಗಿ ರೊಕ್ಕ ಕೊಡುತ್ತಾ ಇಲ್ಲ. ಗೋಕಾಕ್ಗೆ ತಾವು ಹೋಗಬೇಕು, ಗೋಕಾಕ್ ತಾಲ್ಲೂಕಿನಲ್ಲಿ ಒಂದೊಂದು ಊರಿಗೆ 50ಲಕ್ಷ ರೂಪಾಯಿಗಳು ಲುಕ್ಸಾನಾಗಿದೆ. ಯಾರೂ ಹೇಳುವವರೂ ಇಲ್ಲ, ಕೇಳುವವರೂ ಇಲ್ಲ. ನಿಮ್ಮಕಲ್ಪನೆ ಏನಾಗುತ್ತದೆಂದರೆ, ಇಲ್ಲಿ ಕುಳಿತಿರುವ ಅಧಿಕಾರಿಗಳು ಏನು ಅಂಕಿಅಂಶಗಳನ್ನು ಕಳುಹಿಸುತ್ತಾರೆ ಅದು ಸರಿಯಾಗಿರುವುದಿಲ್ಲ, ಆದರೆ, ಪ್ರತಿಯೊಬ್ಬರೂ ಇವತ್ತು ಮನೆ ಕಟ್ಟಬೇಕಾದರೆ, 8-10 ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಈಗಿನ ಕಾಲದಲ್ಲಿ 10ಸಾವಿರ ರೂಪಾಯಿಗಳಲ್ಲಿ ಮನೆ ಕಟ್ಟುವಾಗ ನೀವು 500 ರೂಪಾಯಿಗಳ ಚೆಕ್ ಕೊಟ್ಟರೆ ಏನಾಗುತ್ತದೆ. ಇವತ್ತಿನದಿವಸ ಯಾರು ಕೇಳುತ್ತಾರೆ.

ಇವತ್ತಿನ ದಿವಸ ನಮಗೆ 35 ಕೋಟಿ ರೂಪಾಯಿಗಳ ಲಾಸ್ ಆದರೆ, ನಮಗೆ ಬರೀ ದೀಡ್ ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳುತ್ತೀರಿ. ಇವೆಲ್ಲಾ ನಿವಾರಣೆಯಾಗಬೇಕಾದರೆ ಇನ್ನೂ ಎಷ್ಟುವರ್ಷ ಬೇಕಾಗುತ್ತದೆ? ಇನ್ನೊಂದೂ ಪ್ರಶ್ನೆ ಇದೆ, ಇದು ತಮಗೂ ಗೊತ್ತಿರಬೇಕು. 1993-94ನೇ ಸಾಲಿನಲ್ಲಿ ಆಸ್ತಿಪಾಸ್ತಿ ಹಾನಿ ಬಗ್ಗೆ ಮತ್ತು ರೋಡ್ ಸಲುವಾಗಿ ಜಿಲ್ಲಾಪರಿಷತ್ತಿಗೆ ಒಂದು ಪೈಸೆ ಕೊಟ್ಟಿಲ್ಲವೆಂದು ಹೇಳುತ್ತಾರೆ. 1993-94ನೇ ಸಾಲಿನಲ್ಲಿ ಸಾರ್ವಜನಿಕ ಆಸ್ತಿಪಾಸ್ತಿ ದುರಸ್ತಿಗಾಗಿ ಅನುದಾನ ಲಭ್ಯವಿಲ್ಲದೇ ಇರುವುದರಿಂದ ಹಣ ಬಿಡುಗಡೆ ಮಾಡಿಲ್ಲ. ಅಂದರೆ, ಈ ಸಾಲಿನಲ್ಲಿ ಕಾಮಗಾರಿಗಳಿಗಾಗಿ ಹಣ ಬಿಡುಗಡೆ ಮಾಡಲಾಗುವುದು 1993-94ನೇ ಸಾಲಿನಲ್ಲಿ ನೀವು ಬಿಡುಗಡೆ ಮಾಡಲಿಲ್ಲ. ಜಿಲ್ಲಾ ಪರಿಷತ್ತಿನ ರೋಡುಗಳು ಸರಿಯಿಲ್ಲ, ಬಸ್ಸು ಹೋಗುವಹಾಗಿಲ್ಲ, ಚಕ್ಕಡಿ ಹೋಗುವಹಾಗಿಲ್ಲ. ಸೈಕಲ್ ಸಹ ಹೋಗದಂಥ ಪರಿಸ್ಥಿತಿಯಾಗಿದೆ. ಇನ್ನು ಮುಂದಕ್ಕೆ ನೀವು ಏನು ರೊಕ್ಕ ಬಿಡುಗಡೆ ಮಾಡುತ್ತೀರಿ. ನಿಜವಾಗಿಯೂ ಎಷ್ಟುದಿವಸದಲ್ಲಿ ನಮ್ಮ ಬೆಳಗಾಂ ಜಿಲ್ಲೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡುತ್ತೀರಿ ಎಂಬುದನ್ನು - ನಿರ್ದಿಷ್ಟವಾಗಿ ಹೇಳಬೇಕು.

ಶ್ರೀ ಧರ್ಮಸಿಂಗ್ : ಇಲ್ಲಿ ಗೋಕಾಕ್ ಬಗ್ಗೆ ಹೇಳುವಂತಾದ್ದಿಲ್ಲ, ಏನೋ ತಮಗೆ ಸಂಬಂಧ ಇದೆ ಆದ್ದರಿಂದ ಹೇಳಿದ್ದಾರೆ. ತಾವು ಕೂಡ 4-5 ಸಲ ಗೋಕಾಕ್ಗೆ ಹೋಗಿದ್ದೀರಿ. ಅಲ್ಲಿರತಕ್ಕ ಪರಿಸ್ಥಿತಿಯನ್ನು ನೋಡಿದ್ದೀರಿ. ಸರ್ಕಾರಕ್ಕೆ ವರದಿಯನ್ನೂ ಕೂಡ ಕಳುಹಿಸಿದ್ದೀರಿ, ಅಲ್ಲಿಯೂ ಕೂಡ ಕೆಲಸಕಾರ್ಯಕಗಾಗುತ್ತಿವೆ. ಆಗತಕ್ಕಂಥ ಕೆಲಸಕಾರ್ಯ ಇಂತಹ ದೊಡ್ಡ ಅನಾಹುತ ಆದಾಗ ಸರ್ಕಾರ ಮಾಡುವುದು ಪೂರ್ಣವಾಗುವುದಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ, ವಿರೋಧಪಕ್ಷದ ನಾಯಕರಿಗೆ ಒಂದು ಮಾತು ಹೇಳುತ್ತೇನೆ. ನೆರೆ ಹಾವಳಿ ಬಂದಾಗ ತ್ವರಿತವಾಗಿ ಸರ್ಕಾರ ಹಣ ಬಿಡುಗಡೆ ಮಾಡತಕ್ಕ ಕಾಲದಲ್ಲಿ - ಪ್ರಪ್ರಥಮವಾಗಿ ಕರ್ನಾಟಕ ರಾಜ್ಯದಲ್ಲಿ ಇಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ನಾವು ಎಲ್ಲಾ ಕಡೆಗೂ ನೋಡಿಲ್ಲ. ಬಿಡುಗಡೆ ಮಾಡಿದ್ದೂ ಪೂರ್ಣವಾಗಿ ಆಗಿದೆ, ಎಂದಲ್ಲ. ಆದರೆ, ನಾವು - ಏನು ಆದೇಶ ಕೊಡುತ್ತಿದ್ದೇವೆ, ಜಿಲ್ಲಾ ಪರಿಷತ್ತಾಗಲೀ, ಪಿ.ಡಬ್ಲ್ಯೂ.ಡಿ ಇಲಾಖೆಯಾಗಲೀ, ಎಲ್ಲಾ ಕಡೆಗೂ ಕೂಡ ಬಜೆಟ್‌ನಲ್ಲಿ ಪ್ರಿಯಾರಿಟಿ ಬದಲಾವಣೆ ಮಾಡಬೇಕೆಂದು ಹೇಳಿದ್ದೇವೆ. ಆಯಾ ಜಿಲ್ಲಾಪರಿಷತ್ತಿಗೆ ಹೇಳಿದ್ದೇವೆ, ಸೆಂಟ್ರಲ್ ಸೆಕ್ಟರ್ ಮತ್ತು ಸ್ಟೇಟ್ ಸೆಕ್ಟರ್‌ನಲ್ಲಿ ಬರತಕ್ಕ ಹಣ ಏನಿದೆ, ಅದನ್ನೂ ಕೂಡ ರೋಡ್ ರಿಪೇರಿಗೆ ಮಾಡಬೇಕು, ಲೋಕೋಪಯೋಗಿ ಇಲಾಖೆಗೂ ನಾವು ಹೇಳಿದ್ದೇವೆ. ಆದರೆ, ಇನ್ನೂ ಕೂಡ

ಹೆಚ್ಚಿನ ಹಣ ಬಿಡುಗಡೆ - ಮಾಡುವುದಕ್ಕೆ ಸರ್ಕಾರ ಡೆಫೆನೆಟ್ ಹಾಗಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ.

ಮುಂಡರಗಿ ತಾಲ್ಲೂಕಿನಲ್ಲಿ ಅತಿವೃಷ್ಟಿ ಹಾನಿಗೆ ಹಣ ಬಿಡುಗಡೆ

445 - ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದ, ಮನೆ ಮತ್ತು ಪಂಪುಸೆಟ್ಟು ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿರುವ ವಿಷಯದಲ್ಲಿ ಸರ್ಕಾರದವರು ಆದೇಶವನ್ನು ಹೊರಡಿಸಿದರೂ ಪೂರ್ತಿ ಹಣ ಬಿಡುಗಡೆಯಾಗಿರುವುದಿಲ್ಲದಿರುವುದು ನಿಜವೇ? ಹಾಗಿದ್ದಲ್ಲಿ ಯಾವಾಗ ಹಣ ಬಿಡುಗಡೆ ಮಾಡಲಾಗುವುದು?

ಆ) ಮುಂಡರಗಿ ತಾಲ್ಲೂಕಿನಲ್ಲಿ ಆ ಹಳ್ಳಿಗಳು ಪ್ರವಾಹದಿಂದ ಮೇಲಿಂದ ಮೇಲೆ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಹಳ್ಳಿಗಳನ್ನು ಬೇರೆ ಕಡೆಗೆ ಸ್ಥಳಾಂತರಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) 1992ನೇ ನವೆಂಬರ್ ಅತಿವೃಷ್ಟಿಯಿಂದ ಮುಂಡರಗಿ ತಾಲ್ಲೂಕಿನಲ್ಲಿ 940 ಪೂರ್ತಿ ಬಿದ್ದ ಮನೆಗಳ ನೊಂದ ಸಂತ್ರಸ್ಥರಿಗೆ ರೂ. 50,37,417 ಹಾಗೂ 8295 ಭಾಗಶಃ ಬಿದ್ದ ಮನೆಗಳ ನೊಂದ ಸಂತ್ರಸ್ಥರಿಗೆ ರೂ. 49,20,240-00 ಪರಿಹಾರ ನೀಡಿದೆ. ಈ ತಾಲ್ಲೂಕಿನಲ್ಲಿ ಒಟ್ಟು 563 ನೀರಾವರು ಪಂಪ್ ಸೆಟ್ಟು, 811 ಪಂಪ್‌ಹೌಸ್ ಹಾಗೂ 911 ನೀರಾವರಿ ಭಾವಿಗಳು ಹಾನಿಯಾಗಿರುವುವು. ನೊಂದ ಸಂತ್ರಸ್ಥರಿಗೆ ಪರಿಹಾರ ನೀಡಲು ತಹಶೀಲ್ದಾರ್ ಮುಂಡರಗಿ ಇವರಿಗೆ ಒಟ್ಟು 15.63 ಲಕ್ಷ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿತ್ತು. ಇಲ್ಲಿಯವರೆಗೆ ಪ್ರತಿಯೊಬ್ಬ ನೊಂದ ಸಂತ್ರಸ್ಥರಿಗೆ ರೂ. 1000-00ದಂತೆ ಒಟ್ಟು 13.48 ಲಕ್ಷ ರೂ.ಗಳ ಪರಿಹಾರವನ್ನು ನೀಡಿದ್ದಾರೆ.

ಆ) ಹೌದು, ಆದರೆ ಪ್ರವಾಹಕ್ಕೆ ತುತ್ತಾಗಿರುವ ಗ್ರಾಮುಗಳ ಸಂಖ್ಯೆ - 5

ಇ) ಹೌದು. ಇದಕ್ಕಾಗಿ ಇದುವರೆಗೆ ರೂ. 6.50 ಲಕ್ಷ ಬಿಡುಗಡೆ ಮಾಡಲಾಗಿದ್ದು; ರೂ. 5.50 ಲಕ್ಷ ಖರ್ಚಾಗಿದ್ದು, ಕೆಲಸ ಪ್ರಗತಿಯಲ್ಲಿದೆ.

ಶ್ರೀ ಕೆ.ಎಚ್. ಕುರಡಗಿ : ಮಾನ್ಯ ಅಧ್ಯಕ್ಷರೇ, 92ನೇ ಸಾಲಿನಲ್ಲಿ ಈ ಸ್ಕೇರ್ ಸಿಟಿ, ಬಂದಾಗಿನ ಬಾಬ್ತು ಇನ್ನೂ ಅಮೌಂಟ್ ಪೂರ್ಣ ಬಿಡುಗಡೆಯಾಗಿಲ್ಲ, ಬಿಡುಗಡೆ ಮಾಡುತ್ತೇವೆಂದು ಹೇಳಿದ್ದೀರಿ. ಆಗ ಒಂದು ಸಾವಿರ ಕೊಟ್ಟಿದ್ದಾರೆ. ತಾವು ಸರಕಾರದಿಂದ ಮೂರು ಸಾವಿರ ಎಂದು ಅನೌನ್ಸ್ ಮಾಡಿದ್ದೀರಿ. ಒಂದೊಂದು ಸಾವಿರ ರೂಪಾಯಿ ಕೊಟ್ಟು ಉಳಿದ ಅಮೌಂಟ್ ಕೊಡದೇ ಇರುವುದರಿಂದ ಪರಿಸ್ಥಿತಿ ಬಹಳ ಹದಗೆಟ್ಟಿದೆ. ಇದು 92 ರದ್ದು ಆಯಿತು. 94-95 ರಲ್ಲಿಯೂ ಫ್ಲಡ್ ಬಂದಿದೆ, ಅದಕ್ಕೆ ತಾವು ಏನು ಮಾಡುತ್ತೀರಿ ಹೇಳಿರಿ.

ಶ್ರೀ ಧರ್ಮಸಿಂಗ್ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರಾದ ಕುರಡಗಿಯವರು ಮೂರು ವಿಷಯಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಪೂರ್ತಿ ಬಿದ್ದ ಮನೆಗಳಿಗೆ, ಭಾಗಶಃ ಬಿದ್ದ ಮನೆಗಳಿಗೆ ಹಾಗೂ ಪಂಪ್ಸೆಟ್ಟಗಳಿಗೆ ಸರಕಾರದವರು ಎಷ್ಟು ದುಡ್ಡು ಕೊಟ್ಟಿದ್ದಾರೆ ಎಂದು ಕೇಳಿದ್ದಾರೆ, ಅವರು ಕೇಳಿದ ಪ್ರಶ್ನೆ ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಪ್ರಶ್ನೆಯಾಗಿದೆ. ಈಗಾಗಲೇ ಒಂದು ಪಂಪ್ಸೆಟ್ಗೆ ಮ್ಯಾಕ್ಸಿಮಮ್ ಮೂರು ಸಾವಿರ ರೂಪಾಯಿ ಕೊಡಬೇಕೆಂದು ಸರ್ಕಾರದ ಆದೇಶ ಆಗಿದೆ. ಇವತ್ತು

ಅಲ್ಲಿಯ ಜಿಲ್ಲಾಧಿಕಾರಿಗಳು ಪ್ರತಿಯೊಂದು ಪಂಪ್ಸೆಟ್ಟಿಗೆ ಒಂದು ಸಾವಿರ ರೂಪಾಯಿ ಬಿಡುಗಡೆ ಮಾಡಿದ್ದಾರೆ. ಇನ್ನೂ ಕೂಡಾ ಹೆಚ್ಚು ಬೇಕಾದರೆ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಬಹುದು. ಒಂದನ್ನು ತಮ್ಮ ಗಮನಕ್ಕೆ ತರುತ್ತೇನೆ 9040 ಬಿದ್ದ ಮನೆಗಳಿಗೆ ಈಗಾಗಲೇ 50 ಲಕ್ಷ 37 ಸಾವಿರ ರೂಪಾಯಿ ಮುಂಡರಗಿ ಕ್ಷೇತ್ರಕ್ಕೆ ಬಿಡುಗಡೆ ಮಾಡಿದ್ದೇವೆ. 8295 ಮನೆಗಳು ಭಾಗಶಃ ಏನು ಬಿದ್ದಿವೆ ಅದಕ್ಕೆ 49 ಲಕ್ಷ ಬಿಡುಗಡೆ ಮಾಡಿದ್ದೇವೆ, ಮತ್ತು ನೀರಾವರಿ ಪಂಪುಸೆಟ್ಟುಗಳು 563, ನೀರಾವರಿ ಬಾವಿಗಳು 911, ಪಂಪ್ ಹೌಸ್ಗಳು 811 ಒಟ್ಟಿಗೆ ಇವುಗಳಿಗೆ 13ಲಕ್ಷ 48 ಸಾವಿರ ಬಿಡುಗಡೆ ಮಾಡಿದ್ದೇವೆ. ಒಟ್ಟು ಮುಂಡರಗಿ ಕ್ಷೇತ್ರಕ್ಕೆ ಹೋದವರ್ಷ 1 ಕೋಟಿ 13 ಲಕ್ಷ ಬಿಡುಗಡೆ ಮಾಡಿದ್ದೇವೆ, ದೊಡ್ಡ ಮೊತ್ತ ಬಿಡುಗಡೆ ಮಾಡಿದ್ದೇವೆ. ಪಂಪ್ಸೆಟ್ಟಿಗೆ ಮೂರು ಸಾವಿರ ರೂಪಾಯಿ ಕೊಡಬೇಕೆಂದು ಏನು ಆದೇಶ ಇದೆ ಕೇವಲ ಒಂದು ಸಾವಿರ ಬಂದಿದೆ ಎಂದು ಏನು ಹೇಳಿದ್ದಾರೆ, ಅದರ ಬಗ್ಗೆ ಚೆಕಪ್ ಮಾಡಿಸಿ ಮ್ಯಾಕ್ಸಿಮಮ್ ಎಷ್ಟು ಕೊಡಬೇಕೋ ಅದನ್ನೂ ಕೂಡಾ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೆ.ಹೆಚ್. ಕುರಡಗಿ : ಐದು ಹಳ್ಳಿಗಳನ್ನು ಸ್ಥಳಾಂತರ ಮಾಡುತ್ತೇವೆ ಎಂದು ಹೇಳಿದ್ದೀರಿ, ಇವತ್ತಿನವರೆಗೆ ಅವುಗಳನ್ನು ಸ್ಥಳಾಂತರ ಮಾಡಲಿಲ್ಲ. ಅದಕ್ಕೆ ಅಮೌಂಟ್ ಕೂಡಾ ಕೊಡಲಿಲ್ಲ, ಮತ್ತೆ 94-95ರ ಒಳಗೂ ಮತ್ತೆ ಫ್ಲಡ್ ಬಂದು ಮನೆಗಳು ಬಿದ್ದು ಹೋಗುತ್ತಿದೆ, ಅದಕ್ಕೆ ತಾವು ಏನು ಮಾಡುತ್ತೀರಿ?

ಶ್ರೀ ಧರ್ಮಸಿಂಗ್ : ಅಲ್ಲಿಯ ಕೆಲವು ಹಳ್ಳಿಗಳನ್ನು ಸ್ಥಳಾಂತರ ಮಾಡುವುದಕ್ಕೆ ಒಟ್ಟು 66 ಲಕ್ಷ ರೂಪಾಯಿಗಳ ಅಂದಾಜು ಮಾಡಿದ್ದಾರೆ. ಈಗಾಗಲೇ 6 ಲಕ್ಷ 50 ಸಾವಿರ ಬಿಡುಗಡೆ ಮಾಡಿದ್ದೇವೆ. ಒಟ್ಟಾರೆ ಹೋದವರ್ಷ 92-93ನೇ ಸಾಲಿನಲ್ಲಿ ರಾಯಚೂರು, ಚಿತ್ರದುರ್ಗ, ಧಾರವಾಡ ಜಿಲ್ಲೆ ಮತ್ತು ಬೇರೆ ಕಡೆಗೆ ರಿಹ್ಯಾಬಿಲಿಟೇಷನ್ ಮಾಡತಕ್ಕ 126 ಹಳ್ಳಿಗಳಿಗೆ 1050 ಕೋಟಿ ರೂಪಾಯಿಗಳ ಯೋಜನೆ ಮಾಡಿ ಕೇಂದ್ರ ಸರ್ಕಾರದಿಂದ ಅಪ್ಪಣೆ ಪಡೆದು ವಿಶ್ವಬ್ಯಾಂಕ್ ನೆರವು ಪಡೆಯುವುದಕ್ಕೆ ಹೋಗಿದೆ. ಹೋದವರ್ಷ ಕೂಡಾ ಕೆಲವು ಎಫೆಕ್ಟೆಡ್ ವಿಲೇಜಸ್ಗಳನ್ನು ಗುರುತಿಸಿ ಇವುಗಳನ್ನು ಸೇರಿಸಬೇಕೆಂದು ಕೇಂದ್ರ ಸರಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಆದರೂ ಕೂಡ ಸ್ಥಳಾಂತರ ಮಾಡುವುದಕ್ಕೆ ಲ್ಯಾಂಡ್ ಅಕ್ವೈರ್ ಮಾಡುವುದು ಬೇರೆ ಬೇರೆ ಕೆಲಸಕಾರ್ಯಗಳಿಗೆ 66 ಲಕ್ಷ ಅಂದಾಜು ಮಾಡಿ, ಈಗಾಗಲೇ 6 ಲಕ್ಷ 50 ಸಾವಿರ ನಾವು ಖರ್ಚು ಮಾಡಿದ್ದೇವೆ, ಲ್ಯಾಂಡ್ ಅವೈಲ್ಬಲ್ ಆದಮೇಲೆ ಸ್ಥಳಾಂತರ ಮಾಡತಕ್ಕ ಕೆಲಸ ಮಾಡುತ್ತೇವೆ.

ಶ್ರೀ ಧರ್ಮಸಿಂಗ್ : ಪ್ರಶ್ನೆ ಸಂಖ್ಯೆ : 191 ಸ್ವಲ್ಪ ಕಾಲಾವಕಾಶ ಕೇಳಿದ್ದೇವೆ.

ಶ್ರೀ ಜಿ.ಎಸ್. ಶಿವನಂಜಪ್ಪ : ಈ ಸೆಕ್ಷನ್ನಲ್ಲೇ ಉತ್ತರ ಕೊಡುತ್ತೀರಾ?

ಶ್ರೀ ಧರ್ಮಸಿಂಗ್ : ಪೋಲೀಸ್ ಡಿಪಾರ್ಟ್ಮೆಂಟ್ನವರ ಜೊತೆ ಮೀಟಿಂಗ್ ಮಾಡಬೇಕಾಗಿದೆ. ಮಾಡಿ ಉತ್ತರ ಕೊಡುತ್ತೇವೆ.

ತುಮಕೂರು ನಗರಸಭೆಯ ವ್ಯಾಪ್ತಿಯಲ್ಲಿರುವ ಸ್ಥಳಗಳಿಗೆ ಮೂಲಭೂತ ನಾಗರೀಕ ಸೌಲಭ್ಯ

13 - ಶ್ರೀ ಶಫೀ ಅಹ್ಮದ್ (ತುಮಕೂರು) : ಮಾನ್ಯ ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಗರಸಭೆ ತುಮಕೂರು ವ್ಯಾಪ್ತಿಯೊಳಗಡೆ ಸೇರಿಸಲು ಉದ್ದೇಶಿಸಿರುವ ಕ್ಯಾತಸಂದ್ರ, ಸತ್ಯಮಂಗಲ, ಮೇಲುಕೋಟೆ ಮತ್ತು ಮಲ್ಲಸಂದ್ರ ಮಂಡಲ ಪ್ರದೇಶಗಳಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಲು ಏನು ಕ್ರಮ ಕೈಗೊಳ್ಳಲಾಗಿದೆ?

ಆ) ಈ ಬಗ್ಗೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆಯೇ?
ಇ) ಮುನಿಸಿಪಾಲಿಟಿಗೆ ಸೇರಿದ ಈ ಪ್ರದೇಶದ ಸಾರ್ವಜನಿಕರಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸದೇ ಇರುವುದರಿಂದ ತೊಂದರೆಯುಂಟಾಗಿರುವುದು ನಿಜವಲ್ಲವೇ?

ಶ್ರೀ ಸಿ. ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಮತ್ತು ವಕ್ಫ ಸಚಿವರು):

ಅ) ತುಮಕೂರು ನಗರಸಭೆಯ ವ್ಯಾಪ್ತಿಗೆ ಕ್ಯಾತಸಂದ್ರ, ಸತ್ಯಮಂಗಲ ಮತ್ತು ಮೇಲುಕೋಟೆ ಮಂಡಲ ಪ್ರದೇಶಗಳು ವಿಲೀನಗೊಂಡ ನಂತರ ಇವುಗಳಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಲಾಗುವುದು.

ಆ) ಇಲ್ಲ.

ಇ) ಈ ಹಳ್ಳಿಗಳು ತುಮಕೂರು ನಗರಸಭೆ ವ್ಯಾಪ್ತಿಯಲ್ಲಿ ಇನ್ನೂ ಸೇರ್ಪಡೆಯಾಗಿರುವುದಿಲ್ಲ.

ಶ್ರೀ ಎಸ್. ಶಫೀ ಅಹಮದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತುಮಕೂರು ನಗರದ ವ್ಯಾಪ್ತಿಯಲ್ಲಿ ಮೊನ್ನೆ ತಾನೆ ಪ್ರಿಲಿಮಿನರಿ ನೋಟಿಫಿಕೇಷನ್ನಾಗಿದ್ದ ನಾಲ್ಕು ಮಂಡಲಗಳಿಗೆ ಚುನಾವಣೆ ಇನ್ನೂ ನಡೆದಿಲ್ಲ. ಕಳೆದ ಆರು ತಿಂಗಳಿಂದ ಜಿಲ್ಲಾ ಪರಿಷತ್ ವತಿಯಿಂದಾಗಲೀ, ಟಿ.ಎಂ.ಸಿ. ವತಿಯಿಂದಾಗಲೀ ಅಲ್ಲಿ ಯಾವ ವಿಧವಾದ ಕಾರ್ಯಕ್ರಮಗಳೂ ಆಗುತ್ತಿಲ್ಲ. ಅಲ್ಲಿರುವ ಸುಮಾರು ಒಂದು ಲಕ್ಷ ಜನಗಳಿಗೆ ಬಹಳ ತೊಂದರೆಯಾಗಿದೆ. ಆದುದರಿಂದ ಮಾನ್ಯ ಸಚಿವರು ಫೈನಲ್ ನೋಟಿಫಿಕೇಶನ್ ಯಾವಾಗ ಮಾಡುತ್ತಾರೆ ಮತ್ತು ಅಲ್ಲಿರುವ ಜನಗಳಿಗೆ ಸೌಕರ್ಯ ಒದಗಿಸುವ ಬಗ್ಗೆ ಯಾವ ರೀತಿ ಕಾರ್ಯಕ್ರಮ ಕೈಗೊಳ್ಳುತ್ತಾರೆ ಎಂಬುದನ್ನು ದಯವಿಟ್ಟು ತಿಳಿಸಬೇಕು.

1.30 ಪಿ.ಎಂ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ನಗರಪಾಲಿಕೆ ತಿದ್ದುಪಡಿ ಕಾಯ್ದೆಯನ್ನು ಈ ಅಧಿವೇಶನದಲ್ಲೇ ನಾವು ತರುತ್ತಿದ್ದೇವೆ. ಇದರಲ್ಲಿ ನಾವು ಈಗಾಗಲೇ ಗ್ರಾಮೀಣ ಪ್ರದೇಶ ಮತ್ತು ಪಟ್ಟಣದ ಹತ್ತಿರ ಇರುವ ಗ್ರಾಮೀಣ ಪ್ರದೇಶವನ್ನು ನಗರಪಾಲಿಕೆ ಅಥವಾ ನಗರಸಭೆಗಳ ವ್ಯಾಪ್ತಿಯಲ್ಲಿ ಸೇರಿಸಬೇಕು ಎನ್ನುವ ಉದ್ದೇಶ ಸರ್ಕಾರದ್ದು ಇದೆ. ಇವರು ಕೇಳಿರುವಂತಹ ಗ್ರಾಮಗಳೂ ಸಹ ತುಮಕೂರು ನಗರಸಭೆಯ ವ್ಯಾಪ್ತಿಯಲ್ಲಿ ಬರುತ್ತವೆ. ಈ ನಗರಸಭೆಯ ವ್ಯಾಪ್ತಿಯನ್ನು ನಿಗಧಿಪಡಿಸುವಂತಹ ಸಂದರ್ಭದಲ್ಲಿ ಇವುಗಳನ್ನು ನಾವು ನಗರಸಭಾ ವ್ಯಾಪ್ತಿಯಲ್ಲಿ ಸೇರಿಸುತ್ತೇವೆ ಎನ್ನುವಂತಹ ಒಂದು ವಿಚಾರವನ್ನು ಸಹ ಈಗಾಗಲೇ ಸಾರ್ವಜನಿಕ ತಿಳುವಳಿಕೆಗಾಗಿ ಮತ್ತು ಶಾಸಕರ ತಿಳುವಳಿಕೆಗಾಗಿ ಆಗಲೇ ಕೊಟ್ಟಿದ್ದೇವೆ. ಇನ್ನು ಕೆಲವು ದಿವಸಗಳಲ್ಲಿ ನಾವು ಈ ಗ್ರಾಮಗಳನ್ನು ತುಮಕೂರು ನಗರಸಭಾ ವ್ಯಾಪ್ತಿಯಲ್ಲಿ ಸೇರಿಸಿಕೊಳ್ಳುವಂತಹ ಯೋಜನೆ ಇದೆ. ಇನ್ನು ಎರಡು ಮೂರು ತಿಂಗಳುಗಳಲ್ಲಿ ನಾಗರೀಕ ಸೌಲತ್ತುಗಳನ್ನು ದೊರಕಿಸಿಕೊಡುವ ಭರವಸೆ ಕೊಡುತ್ತೇನೆ?

ಶ್ರೀ ಎಸ್. ಶಫೀ ಅಹಮದ್ : ಮಾನ್ಯ ಅಧ್ಯಕ್ಷರೇ, ತಾವು ಸಿ.ಎಂ. ಸಿ. ಅವರಿಗೆ ಆದೇಶ ಕೊಟ್ಟು ಬೀದಿ ದೀಪ, ಕುಡಿಯುವ ನೀರು, ಮತ್ತು ಸ್ಯಾನಿಟೇಶನ್ ಇತ್ಯಾದಿ ಕನಿಷ್ಠ ಸೌಲಭ್ಯಗಳನ್ನು ಒದಗಿಸಿಕೊಟ್ಟರೆ ಅಲ್ಲಿಯವರೆಗೂ ಅನುಕೂಲವಾಗುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಒದಗಿಸಿಕೊಡುವ ಪ್ರಯತ್ನ ಮಾಡುತ್ತೇನೆ.

ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಸ್ಯಾನಿಟರಿ ಇಂಜಿನಿಯರಿಂಗ್ ಸೆಲ್ನ ಕಾರ್ಯ

265 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಸ್ಯಾನಿಟರಿ ಇಂಜಿನಿಯರಿಂಗ್ ಸೆಲ್ ಕೆಲಸ ಮಾಡುತ್ತಿದೆಯೇ?

ಆ) ಇಲ್ಲದಿದ್ದಲ್ಲಿ 19-2-1991ರಲ್ಲಿ ಬೆಂಗಳೂರು ಮಹಾನಗರಪಾಲಿಕೆಯವರು ಹೊಸದಾಗಿ ಸ್ಯಾನಿಟರಿ ಇಂಜಿನಿಯರಿಂಗ್ ಸೆಲ್ ತೆರೆಯಲು ನಿರ್ಧರಿಸಿರುವುದು ನಿಜವೇ?

ಇ) ಹೊಸದಾಗಿ ಸ್ಯಾನಿಟರಿ ಇಂಜಿನಿಯರಿಂಗ್ ಸೆಲ್ಗಾಗಿ ಎಷ್ಟು ಜನ ಸಿಬ್ಬಂದಿಯನ್ನು ತೆಗೆದುಕೊಳ್ಳಲಾಗುವುದು?

ಈ) ಬೆಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಬರತಕ್ಕ ಜನತೆಗೆ ಅನುಕೂಲವಾಗಲು ಕೂಡಲೇ ಬೆಂಗಳೂರು ಮಹಾನಗರಪಾಲಿಕೆಯು ನಿರ್ಣಯ ಮಾಡಿರುವ ರೀತಿಯಲ್ಲಿ ಹೊಸದಾಗಿ ಸ್ಯಾನಿಟರಿ ಇಂಜಿನಿಯರಿಂಗ್ ಸೆಲ್ ಅನ್ನು ತೆರೆಯಲು ಸರ್ಕಾರ ಅನುಮತಿ ನೀಡುವುದೇ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):

ಅ) ಇಲ್ಲ

ಆ) ಹೌದು

ಇ) ಮತ್ತು ಈ) ಹೊಸದಾಗಿ ಸ್ಥಾಪಿಸಬೇಕೆಂದಿರುವ ಸ್ಯಾನಿಟರಿ ಇಂಜಿನಿಯರಿಂಗ್ ಸೆಲ್ಗೆ ಬೇಕಾಗುವ ಸಿಬ್ಬಂದಿಯನ್ನು ಮಂಜೂರು ಮಾಡುವ ಬೆಂಗಳೂರು ಮಹಾನಗರಪಾಲಿಕೆಯ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಅಧ್ಯಕ್ಷರೇ, ಬೆಂಗಳೂರು ಮಹಾ ನಗರಪಾಲಿಕೆಯಲ್ಲಿ ಸ್ಯಾನಿಟರಿ ಇಂಜನೀಯರಿಂಗ್ ಸೆಲ್ ಕೆಲಸ ಮಾಡುತ್ತಿದೆಯೇ ಅಂದ್ರೆ 'ಇಲ್ಲ' ಎಂದು ಹೇಳಿದ್ದಾರೆ. ಇಂಜನೀಯರಿಂಗ್ ಸೆಲ್ ತೆರೆಯತಕ್ಕಂಥ ಉದ್ದೇಶ ಇದೆಯೇ ಅಂದ್ರೆ 'ಹೌದು' ಅಂತ ಹೇಳಿದ್ದಾರೆ ಮತ್ತು ಸಿಬ್ಬಂದಿ ಮಂಜೂರಾತಿ ಮಾಡತಕ್ಕಂಥಾದ್ದು ಸರ್ಕಾರದ ಪರಿಶೀಲನೆಯಲ್ಲಿದೆ ಅಂತ ಹೇಳಿದ್ದಾರೆ. ಇದರಿಂದ ಬೆಂಗಳೂರಿನಲ್ಲಿರತಕ್ಕಂಥ ಸ್ಯಾನಿಟರಿ ಸಿಸ್ಟಂ ಸಂಪೂರ್ಣವಾಗಿ ಹದಗೆಟ್ಟು ಹೋಗಿದೆ ಎನ್ನುವುದನ್ನು ನಾನು ಈ ಸಮಯದಲ್ಲಿ ಹೆಚ್ಚು ಹೇಳುವ ಅಗತ್ಯ ಇಲ್ಲ. ಎಲ್ಲಾ ಮ್ಯಾನ್-ಹೋಲ್ಗಳು, ಚರಂಡಿ ವ್ಯವಸ್ಥೆ ಬೆಂಗಳೂರು ನಗರದಲ್ಲಿ ಅವ್ಯವಸ್ಥೆಯ ಸ್ಥಾನಗಳು ಆಗಿವೆ. ಇದಕ್ಕೆ ಒಂದು ಸೆಲ್ ಓಪನ್ ಮಾಡಬೇಕೆಂದು ಹೇಳಿ 1991ನೇ ಇಸವಿಯಲ್ಲಿ ಬೆಂಗಳೂರು ನಗರ ಪಾಲಿಕೆಯವರು ಒಂದು ನಿರ್ಣಯ ಮಾಡಿ ಸರ್ಕಾರಕ್ಕೆ ಕಳುಹಿಸಿದರು ಇವತ್ತಿನವರೆಗೂ ಆ ಪ್ರಸ್ತಾವನೆ ಸರ್ಕಾರದ ವತಿಯಿಂದ ಅಂಗೀಕಾರ ಆಗಲಿಲ್ಲ. ಸರ್ಕಾರಕ್ಕೆ ಇದರ ಬಗ್ಗೆ ಆಸಕ್ತಿ ಇದೆಯೋ ಇಲ್ಲವೋ ಎಂದು ನಾಗರೀಕರು ಯೋಚನೆ ಮಾಡುವ ಕಾಲ ಬಂದಿದೆ. ಇದು ಪರಿಶೀಲನೆಯಲ್ಲಿದೆ ಎನ್ನುವುದಕ್ಕೆ ಬದಲಾಗಿ ಸಚಿವರು ನಿರ್ದಿಷ್ಟವಾಗಿ ಇಂತಹ ತಾರೀಖಿನಲ್ಲಿ ಇದನ್ನು ಮಾಡುತ್ತೇವೆ ಇಂತಹ ದಿವಸ ಇದನ್ನು ಆರಂಭ ಮಾಡುತ್ತೇವೆ ಎನ್ನತಕ್ಕಂಥ ಸ್ಪಷ್ಟ ಉತ್ತರ ಈ ಸಭೆಗೆ ಕೊಡಬೇಕೆಂದು ನಾನು ಈ ಸಮಯದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಮಾನ್ಯ ಅಧ್ಯಕ್ಷರೇ, ಅವರ ಮೂಲಭೂತವಾದ ಪ್ರಶ್ನೆ ಇರುವುದು ಸ್ಯಾನಿಟರಿ ಇಂಜನೀಯಹಿಂಗ್ ಸೆಲ್ ಅಂತ. ಅದು ಮಿಸ್ ಲೀಡಿಂಗ್ ಆಗಿದೆ. ಈ ಸೆಲ್ ಕ್ರಿಯೇಟ್ ಮಾಡಿರುವುದು ಒಂದು ಎರಡು ಸಾವಿರ

ಟನ್ ಕಸ ಕಡ್ಡಿ ತೆಗೆದು ಹೊರಗೆ ಹಾಕುವುದಕ್ಕೆ, ಆರೋಗ್ಯ ಇಲಾಖಾಧಿಕಾರಿಗಳು ಆರು ಸಾವಿರ ಪೌರ ಕಾರ್ಮಿಕರನ್ನು ಇಟ್ಟುಕೊಂಡು ಅದನ್ನು ತೆಗೆಯುತ್ತಿದ್ದಾರೆ. ಆ ಸೆಲ್ ಮಾಡಿದ ಉದ್ದೇಶ ಏನು ಅಂತ ಸರ್ಕಾರದ ಗಮನಕ್ಕೆ ಬಂದಿದೆ. ಒಂದು 9ಜನ ಇಂಜಿನೀಯರ್ಗ್ಳ ಕೆಲಸ ಕೊಡುವುದು. ಇಡೀ ಭಾರತದಲ್ಲಿ ಯಾವ ವಿಶ್ವವಿದ್ಯಾನಿಲಯದಲ್ಲೂ ಕೂಡ ಇಂಜನೀಯರ್ಗ್ಳ ಕಸ ಕಡ್ಡಿ ತೆಗೆಯುವುದು ಹೊರಗೆ ಹಾಕುವುದು ಈ ರೀತಿ ವಿದ್ಯೆ ಕಲಿಸಿಲ್ಲ, ಆದರೆ ಇವರು ರೆಜಲೂಶನ್ ಮಾಡಿ ಕಳುಹಿಸಿದ್ದಾರೆ. ಇದನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆ, ಇದನ್ನು ರಿಜೆಕ್ಟ್ ಮಾಡಿ ಕಳುಹಿಸುತ್ತೇವೆ. ಇನ್ನೊಂದು ಹೇಳಿದರು ಬೆಂಗಳೂರಿನಲ್ಲಿ ಮ್ಯಾನ್-ಹೋಲ್ಸ್ ಎಲ್ಲಾ ಕಟ್ಟಿ ಕೊಂಡಿದೆ ಹೋಲ್ಗಳು ಮತ್ತು ಸ್ಯಾನಿಟೇಶನ್ ಕೆಲಸವನ್ನು ಬೆಂಗಳೂರು ವಾಟರ್ ಸಪ್ಲೈ ಅಂಡ್ ಸಿವರೇಜ್ ಬೋರ್ಡ್ನವರು ಮಾಡುತ್ತಿದ್ದಾರೆ? ಕಾರ್ಪೊರೇಷನ್ನಲ್ಲಿ ಆ ಕೆಲಸ ಮಾಡುತ್ತಿಲ್ಲ ಈ ಸ್ಯಾನಿಟರಿ ಇಂಜನೀಯರಿಂಗ ಸೆಲ್ ಕಾರ್ಪೊರೇಶನ್ಗೆ ಅವಶ್ಯಕತೆ ಇಲ್ಲ ಆದಷ್ಟು ಬೇಗ ಫೈಲ್ ಬಂದ ತಕ್ಷಣ ರಿಜೆಕ್ಟ್ ಮಾಡಿ ಕಳುಹಿಸುತ್ತಿದ್ದೇನೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಬಿ. ಹಂಪನಗೌಡ : ಮಾನ್ಯ ಅಧ್ಯಕ್ಷರೇ ಎರಡೇ ಎರಡು ಪ್ರಶ್ನೆಗಳು ಇವೆ ನನಗೆ ಅವಕಾಶ ಮಾಡಿಕೊಡಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಬೆಳಗ್ಗೆಯಿಂದ ಕೇಳುತ್ತಿದ್ದಾರೆ, ಎರಡೇ ಎರಡು ಪ್ರಶ್ನೆಗಳು ಇವೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ನಾನು ಬೆಳಗ್ಗೆಯಿಂದ ಹೇಳುತ್ತಿದ್ದೇನೆ. ಒಂದೊಂದೂ ಪ್ರಶ್ನೆಗೆ 15-20 ನಿಮಿಷ ತೆಗೆದುಕೊಂಡರೆ ಹೇಗೆ? ತಾವೆಲ್ಲ ನನಗೆ ಸಹಕಾರ ಕೊಡಬೇಕು ಇಲ್ಲದಿದ್ದರೆ ಆಗುವುದಿಲ್ಲ.

ಸಿಂಧನೂರು ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ

453 - ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆಯ ಮಂಜೂರಾಗಿದ್ದು ಅದು ಯಾವ ಹಂತದಲ್ಲಿದೆ?

ಆ) ಈ ಯೋಜನೆಗೆ ಮಂಜೂರಾದ ಹಣವೆಷ್ಟು? ಹಾಗೂ ಖರ್ಚಾಗಿರುವ ಹಣವೆಷ್ಟು?

ಇ) ಈ ಯೋಜನೆಯು ಯಾವಾಗ ಪೂರ್ಣಗೊಳ್ಳುತ್ತದೆ?

ಶ್ರೀ. ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಸಚಿವರು) :

ಅ) ಈ ಕೆಲಸವು ಈಗ ಪ್ರಗತಿಯಲ್ಲಿದ್ದು, ಯೋಜನೆಯನ್ನು 1995ನೇ ಮಾರ್ಚ್ ತಿಂಗಳ ಅಂತ್ಯದೊಳಗೆ ಚಾಲು ಮಾಡಲು ಉದ್ದೇಶಿಸಲಾಗಿದೆ.

ಆ) ಈ ಯೋಜನೆಗೆ ಮಂಜೂರಾದ ಹಣ ರೂ. 250.00 ಲಕ್ಷಗಳು, ಖರ್ಚಾದ ಹಣ ರೂ. 336.57 ಲಕ್ಷಗಳು

ಇ) ಈ ಯೋಜನೆಯನ್ನು ಮಾರ್ಚ್ 1995ರ ವೇಳೆಗೆ ಚಾಲು ಮಾಡಲು ಉದ್ದೇಶಿಸಲಾಗಿದೆ.

ಶ್ರೀ ಹಂಪನಗೌಡ : ಮಾನ್ಯ ಅಧ್ಯಕ್ಷರೇ ನನ್ನ ಪ್ರಶ್ನೆ ಸಿಂಧನೂರು ಪಟ್ಟಣದ ಕುಡಿಯುವ ನೀರಿನ ಯೋಜನೆ ಬಗ್ಗೆ. ಈ ಯೋಜನೆಯಡಿಯಲ್ಲಿ ತೆಗೆದುಕೊಂಡಂತಹ

ಕಾಮಗಾರಿಗಳು ಯಾವುವು? ಯಾವ ಯಾವ ಕಾಮಗಾರಿಗಳು ಪೂರ್ಣಗೊಂಡಿವೆ. ಯಾವ ಕಾಮಗಾರಿಗಳು ಅಪೂರ್ಣವಾಗಿವೆ? ಇದಕ್ಕೆ ಖರ್ಚು ಮಾಡಿರತಕ್ಕಂಥ ಹಣ ಎಷ್ಟು ಮತ್ತು ಈ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸುತ್ತೀರಿ? ಇದರಲ್ಲಿ ಅವರು ಈ ಯೋಜನೆಗೆ ಬೇಕಾಗಿರತಕ್ಕಂಥ ಅಂದಾಜು ಮೊತ್ತ 250 ಲಕ್ಷ ಎಂದು ಹೇಳಿದ್ದಾರೆ. ಈಗಾಗಲೇ 336 ಲಕ್ಷ ರೂಪಾಯಿಗಳ ಹಣವನ್ನು ಖರ್ಚು ಮಾಡಿದ್ದಾರೆ. ಆದರೆ ಈ ಯೋಜನೆ ಇನ್ನೂ ಪೂರ್ಣಗೊಂಡಿಲ್ಲ ಆದ್ದರಿಂದ ಸನ್ಮಾನ್ಯ ಮಂತ್ರಿಗಳು ಈ ಯೋಜನೆಯಲ್ಲಿ ಅಪೂರ್ಣಗೊಂಡಿರತಕ್ಕಂಥ ಕಾಮಗಾರಿಗಳ ವಿವರ ಪೂರ್ಣಗೊಂಡಿರತಕ್ಕಂಥ ಕಾಮಗಾರಿಗಳ ವಿವರ ಹೇಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಈ ಯೋಜನೆಗೆ ಸರ್ಕಾರ ಮಂಜೂರಾತಿ ನೀಡಿರುವಂತಹ ಸಂದರ್ಭದಲ್ಲಿ 250 ಲಕ್ಷ ರೂಪಾಯಿಗಳಿಗೆ ಮಂಜೂರಾತಿ ನೀಡಿರುವುದು ಸರಿಯಷ್ಟೇ. ಆದರೆ ಪ್ರತಿನಿತ್ಯ ಬೇಕಾದಂತಹ ಸಾಮಗ್ರಿಗಳ ಪದಾರ್ಥಗಳ ಬೆಲೆ ಏರಿಕೆ ಆಗಿರುವುದರಿಂದ ಅದರ ಅಂದಾಜು ವೆಚ್ಚವು 336.57 ಲಕ್ಷಕ್ಕೆ ಏರಿದೆ. ಇವತ್ತಿನ ಪರಿಸ್ಥಿತಿಯಲ್ಲಿ ಈ ಕುಡಿಯುವ ನೀರಿನ ಯೋಜನೆಗಾಗಿ 336 ಲಕ್ಷ ರೂಪಾಯಿಗಳಷ್ಟು ಹಣ ಖರ್ಚು ಮಾಡಿದ್ದೇವೆ. ಈ ಯೋಜನೆಯನ್ನು 1995ರ ಮಾರ್ಚಿ ಒಳಗೆ ಪೂರ್ಣಗೊಳಿಸುವಂತಹ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಿದೆ. ಇನ್ನು ಆಗಬೇಕಾದಂತಹ ಕೆಲಸಗಳಲ್ಲಿ ಓವರ್ ಹೆಡ್ ಟ್ಯಾಂಕ್ ಎಂದು ಏನು ಹೇಳುತ್ತೇವೆ ಆ ಓವರ್ ಹೆಡ್ ಟ್ಯಾಂಕ್‌ನ ಕೆಲಸ ಪೂರ್ಣ ಆಗಿದೆ. ಜೊತೆಗೆ ನೀರು ಸಂಗ್ರಹಿಸುವಂತಹ ತೊಟ್ಟಿ ಕೆಲಸ ಏನು ಆಗಬೇಕಾಗಿದೆ ಆ ಕೆಲಸ ಕೂಡ ಆಗಿದೆ. ಹೆಚ್ಚು ಕಡಿಮೆ 17 ಕಿಲೋಮೀಟರ್ ಕೊಳವೆಗಳನ್ನು ನಾವು ಅಳವಡಿಸಬೇಕಾಗಿದೆ. ಇದರಲ್ಲಿ ನಾವು 2600 ಮೀಟರ್‌ನಷ್ಟು ಪೈಪ್‌ಗಳನ್ನು ಸರಬರಾಜು ಮಾಡಲಾಗಿದೆ. ಇದರಲ್ಲಿ ನಾವು 1250 ಮೀಟರ್‌ನಷ್ಟು ಪೈಪ್‌ಗಳನ್ನು ಹಾಕಲಾಗಿದೆ. ಇನ್ನು ಉಳಿದ ಪೈಪ್‌ಗಳ ಸಂಗ್ರಹಣೆ ಮಾಡಿ 1995ನೇ ಮಾರ್ಚಿ ಒಳಗಡೆ ಕುಡಿಯುವ ನೀರಿನ ಸರಬರಾಜು ಈ ಪಟ್ಟಣಕ್ಕೆ ಕೊಡುತ್ತೇವೆ ಎಂದು ಭರವಸೆ ಕೊಡುತ್ತೇನೆ.

ಶ್ರೀ ಹಂಪನಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೇ ಇಷ್ಟು ವಿಳಂಬವಾಗಿ ಈ ಯೋಜನೆ ಸಾಗುತ್ತಿದೆ. ಇದಕ್ಕೆ ಅತಿ ಮುಖ್ಯವಾಗಿ ಬೇಕಾಗಿರತಕ್ಕಂಥದ್ದು ಸರ್ಕಾರದ ಮೂಲ ಉದ್ದೇಶ ಇರತಕ್ಕಂಥಾದ್ದು ಕುಡಿಯುವ ನೀರನ್ನು ಒದಗಿಸುವಂಥಾದ್ದು. ಸರ್ಕಾರ ಯಾವ ಕಾಮಗಾರಿ ಮೊದಲು ತೆಗೆದುಕೊಳ್ಳಬೇಕು ಎಂದು ಹೇಳುವಂಥಾದ್ದು ತಾಂತ್ರಿಕ ತಜ್ಞರು ಹೇಳಬೇಕಾದಂತಹ ವಿಷಯ. ಕೇಸಿಂಗ್ ಪೈಪ್ ಮೊದಲು ಮಾಡಿ ಶುದ್ಧವಾದ ಫಿಲ್ಟರ್ ಬೆಡ್ ಮಾಡಿ ನೀರು ಕೊಟ್ಟಿದ್ದರೆ ಈ ಸಮಸ್ಯೆ ಉದ್ಭವವಾಗುತ್ತಿರಲಿಲ್ಲ. ಆದರೆ ಇವರು ಇಂಪೋರ್ಟಿಂಗ್ ರಿಜರ್‌ವಾಯರ್ ಕೆರೆ ಕೆಲಸ ಇನ್ನಿತರೆ ಬೇರೆ ಬೇರೆ ಕೆಲಸಗಳನ್ನು ಮಾಡಿ 5 ವರ್ಷ ವಿಳಂಬವಾಗಿದೆ. ಅಲಕ್ಷ್ಯತನದಿಂದ ಈ ರೀತಿ ಆಗಿದೆ ಎಂದು ನಾನು ನೇರವಾಗಿ ಆರೋಪ ಮಾಡುತ್ತಿದ್ದೇನೆ. ಮೊದಲು ಈ ಕೇಸಿಂಗ್ ಪೈಪ್‌ಗಳನ್ನು ಸಪ್ಲೈ ಮಾಡುವುದಕ್ಕೆ ಹೆಚ್ಚು ಒತ್ತಡ ಕೊಡಬೇಕು, ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ, ಬೇಗನೆ ಮಾಡಿಸಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರು ಹೇಳಿದ ಹಾಗೆ ಈ ಯೋಜನೆಗಳು ನಿಧಾನವಾಗುವುದಕ್ಕೆ ಕಾರಣಗಳು ಏನು ಅಂದರೆ ಟೆಂಡರ್ ಕರೆಯುವಂತಹ ಸಂದರ್ಭದಲ್ಲಿ ವಿಳಂಬವಾಗಿದೆ. ಮಾನ್ಯ ಶಾಸಕರು ಹೇಳಿದ ಹಾಗೆ ತುರ್ತಾಗಿ ಕುಡಿಯುವ ನೀರನ್ನು ಒದಗಿಸಿಕೊಡುವಂಥದ್ದು ನಾನು ಹೇಳಿದಂತಹ ನಿಗಧಿತ ತಾರೀಖಿನೊಳಗೆ ವ್ಯವಸ್ಥೆ ಮಾಡಿಕೊಡುತ್ತೇನೆಂದು ಭರವಸೆ ಕೊಡುತ್ತೇನೆ.

ರೋಜ್‌ಗಾರ್ ಯೋಜನೆ ಕುರಿತು

315 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೋಜ್‌ಗಾರ್ ಯೋಜನಾ ಅವಧಿಯಲ್ಲಿ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಸಹಾಯ ಒದಗಿಸುವುದು ಸರ್ಕಾರಕ್ಕೆ ತಿಳಿದಿದೆಯೇ?

ಆ) ಹಾಗಿದ್ದಲ್ಲಿ, ಕೆಲವು ಕಡೆ ಆಯ್ಕೆ ಸಮಿತಿಯವರು ಅರ್ಹತೆಯನ್ನು ಬಿಟ್ಟು ಬೇರೆ ಕಾರಣಗಳಿಂದ ಆಯ್ಕೆ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಇ) ಸದರಿ ಫಲಾನುಭವಿಗಳನ್ನು ತಾಲ್ಲೂಕುವಾರು ಗುರಿ ನಿಗಧಿ ಮಾಡಿ ಆಯ್ಕೆ ಸಮಿತಿಯನ್ನು ರಚಿಸುವಲ್ಲಿ ಸರ್ಕಾರಕ್ಕೆ ಇರುವ ತೊಂದರೆಗಳೇನು?

ಈ) ಇಂತಹ ಆಯ್ಕೆ ಸಮಿತಿಯಲ್ಲಿ ಸ್ಥಳೀಯ ಶಾಸಕರನ್ನು ಸದಸ್ಯರನ್ನಾಗಿ ಮಾಡುವುದು ಉಚಿತವಲ್ಲವೆ?

ಶ್ರೀ ಎ.ಎಂ. ಹಿಂಡಸಗೇರಿ (ಸಣ್ಣಪ್ರಮಾಣದ ಕೈಗಾರಿಕಾ ಸಚಿವರು) :

ಅ) ಹೌದು.

ಆ) ಇಲ್ಲ

ಇ) ಕೇಂದ್ರ ಸರ್ಕಾರದ ಆದೇಶದಂತೆ ಪ್ರಧಾನ ವ್ಯವಸ್ಥಾಪಕರು, ಜಿಲ್ಲ ಕೈಗಾರಿಕಾ ಕೇಂದ್ರ ಇವರ ಅಧ್ಯಕ್ಷತೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಜಿಲ್ಲಾವಾರು ಟಾಸ್ಕ್ ಫೋರ್ಸ್ ಸಮಿತಿಗಳನ್ನು ರಚಿಸಲಾಗಿದೆ. ತಾಲ್ಲೂಕುವಾರು ಆಯ್ಕೆ ಸಮಿತಿಯನ್ನು ರಚಿಸಲು ಅವಕಾಶವಿರುವುದಿಲ್ಲ. ಜಿಲ್ಲಾಮಟ್ಟದ ಸಮಿತಿಯು ತಾಲ್ಲೂಕುವಾರು ಗುರಿಯನ್ನು ನಿಗಧಿಪಡಿಸುತ್ತದೆ.

ಈ) ಪ್ರಧಾನಮಂತ್ರಿಯವರ ರೋಜ್‌ಗಾರ್ ಯೋಜನೆಯ ಮಾರ್ಗಸೂಚಿಯನ್ವಯ ಆಯ್ಕೆ ಸಮಿತಿಯಲ್ಲಿ ಸ್ಥಳೀಯ ಶಾಸಕರನ್ನು ಸದಸ್ಯರನ್ನಾಗಿ ಮಾಡಲು ಅವಕಾಶ ಇರುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಮ್‌ನಲ್ಲಿ ವಿದ್ಯಾವಂತ ನಿರುದ್ಯೋಗಿಗಳಿಗೆ ನಾವು ಏನು ಲೋನ್ ಕೊಡುತ್ತಿದ್ದೆವು, ಅದನ್ನು ಇವತ್ತು ಪ್ರಧಾನಮಂತ್ರಿಗಳ ರೋಜ್‌ಗಾರ್ ಯೋಜನೆ ಎಂದು ಹೊಸದಾಗಿ ಲೋನ್ ಮತ್ತು ಸಬ್ಸಿಡಿ ಕೊಡುತ್ತಿದ್ದೀರಿ ಅಂತ ನಾವು ಭಾವಿಸುತ್ತೇನೆ. ಇದರಲ್ಲಿ ಒಂದೊಂದು ಜಿಲ್ಲೆಗೆ ಒಂದೊಂದು ಗುರಿ ನಿಗಧಿ ಆಗಿದೆ. ತುಮಕೂರು ಜಿಲ್ಲೆಮಟ್ಟಿಗೆ ಹೇಳುವುದಾದರೆ 770 ಅಂತ ನಮಗೆ ನಿಗಧಿ ಮಾಡಿ, ನಮಗೆ 20 ಕೊಡುವುದು, 30 ಕೊಡುವುದು ಒಂದು ಕಡೆ 200 ಕೊಡುವುದು 300 ಕೊಡುವುದು ಈ ರೀತಿ ಇಲಾಖೆಯಲ್ಲಿ ಆಗಿದೆ. ತಾವು ಟಾರ್‌ಗೇಟ್ ಫಿಕ್ಸ್ ಮಾಡುತ್ತೀರಾ ಅಂತ ಕೇಳಿದರೆ ಅಲ್ಲಿಯವರೇ ಫಿಕ್ಸ್ ಮಾಡುತ್ತಾರೆಂದು ಹೇಳುತ್ತಾರೆ. ಅದು ತಮಗೆ ಗೊತ್ತಿರಬೇಕಾಗಿತ್ತು. ತಮ್ಮ ಜಿ.ಎಂ. ಅಲ್ಲಿ ಛೇರ್ಮನ್ ಆಗಿಲ್ಲ, ಡಿ.ಸಿ. ಮತ್ತು ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಅಲ್ಲಿ ಸಭೆ ನಡೆಯುತ್ತದೆ.

ನನಗೆ ಅವರು ಉತ್ತರ ಕೊಟ್ಟಿದ್ದಾರೆ. ಇದನ್ನು ಏನಾದರೂ ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆಯೇ? ಇಲ್ಲೊಂದು ಸರಕಾರ ಇದೆಯೇ ಎಂದು ಮೂಲಭೂತವಾಗಿ ಕೇಳುತ್ತೇನೆ. 770 ಟಾರ್ಗೆಟ್ ಇರುವ ತುಮಕೂರಿನಲ್ಲಿ ನನಗೆ 32 ವೀರಭದ್ರಪ್ಪನವರಿಗೆ 22 ಶಿವನಂಜಪ್ಪನವರ ಕ್ಷೇತ್ರಕ್ಕೆ 20 ಕೊಟ್ಟು ತುಮಕೂರು ಒಂದಕ್ಕೇ 350 ಕೊಟ್ಟಿದ್ದಾರೆ. ತಾವುಗಳು ಇದನ್ನೆಲ್ಲಾ ತೆಗೆಸಿ ನೋಡಬೇಕು. ಲೋಕಲ್ ಎಂಎಲ್‌ಎ ಗಳನ್ನು ಆಯ್ಕೆ ಸಮಿತಿಯಲ್ಲಿ ಹಾಕಬೇಕು. ಜಿಲ್ಲೆಯಲ್ಲಿ ನಾನು ಮತ್ತು ವೈ.ಕೆ. ರಾಮಯ್ಯನವರನ್ನು

ಬಿಟ್ಟರೆ ಎಲ್ಲರೂ ಕಾಂಗ್ರೆಸ್‌ನವರೇ ಇದ್ದಾರೆ. ಆದ್ದರಿಂದ ಯಾವ ತೊಂದರೆಯೂ ಬರಲಾರದು. ಆ ದಿಸೆಯಲ್ಲಿ ಅಲ್ಲಿನ ಆಕ್ಟಿವಿಟೀಸ್‌ಗಳನ್ನು ರ್‍ಯಾಶನಲ್ಸ್ ಮಾಡುವುದಕ್ಕೆ ಸಾಧ್ಯವೇ, ಇದನ್ನು ರೆಕ್ಟಿಫೈ ಮಾಡುತ್ತೀರಾ ಎಂದು ನಾನು ಕೇಳಿಕೊಳ್ಳುತ್ತೇನೆ. ಅಂತೆಯೇ ಕೊಟ್ಟಿರುವ ಗುರಿಯನ್ನು ತಾಲ್ಲೂಕುವಾರು ಮಾಡಲು ನಿಮಗೆ ಇರುವ ತೊಂದರೆ ಏನು ಎಂದು ಕೇಳಲಿಚ್ಛಿಸುತ್ತೇನೆ.

ಶ್ರೀ ಎ.ಎಂ. ಹಿಂಡಸಗೇರಿ : ಮಾನ್ಯ ಅಧ್ಯಕ್ಷರೇ, ಈ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಒಟ್ಟು ಸುಮಾರು 58 ಸಾವಿರ ಅರ್ಜಿಗಳು ಬಂದಿವೆ. ಅದರಲ್ಲಿ ಈಗಾಗಲೇ ನಾವು 30 ಸಾವಿರ ಅರ್ಜಿಗಳನ್ನು ಪರಿಶೀಲಿಸಿ ಪ್ರತಿಯೊಂದು ಜಿಲ್ಲೆಗೆ ಟಾರ್ಗೆಟ್‌ನ್ನು ಫಿಕ್ಸ್ ಮಾಡಿ ಕೊಟ್ಟಿದ್ದೇವೆ. ಅದರಲ್ಲಿ 15,000 ಬೆನಿಫೀಶಿಯರ್ಸ್‌ನ್ನು ಆರಿಸಿ ಈ ಯೋಜನೆಯಲ್ಲಿ ಅವರಿಗೆ ಫೈನಾನ್‌ಶಿಯಲ್ ಏಯಿಡ್ ಕೊಡಬೇಕೆಂದಿದ್ದೇವೆ. ಇದಕ್ಕಾಗಿ ಒಂದು ಸಮಿತಿಯನ್ನು ಮಾಡಲಾಗಿದೆ. ಆ ಕಮಿಟಿಯಲ್ಲಿ ಸ್ಥಳೀಯ ಶಾಸಕರುಗಳನ್ನು ಹಾಕಬೇಕೆಂದು ಮಾನ್ಯ ಸದಸ್ಯರು ಹೇಳಿ ಒಂದು ಒಳ್ಳೆಯ ಸಲಹೆ ಕೊಟ್ಟಿದ್ದಾರೆ ಅಂತೆಯೇ ಟಾರ್ಗೆಟ್ ಫಿಕ್ಸ್ ಮಾಡುವುದನ್ನು ಜಿಲ್ಲಾ ಕಮಿಟಿಗೆ ಬಿಡಲಾಗಿದೆ. ಅದರಲ್ಲಿ ಏನಾದರೂ ತಾರತಮ್ಯ ಇದ್ದರೆ ಅದನ್ನು ನಾನು ಪರಿಶೀಲಿಸಿ ಸರಿಪಡಿಸಲು ಪ್ರಯತ್ನ ಮಾಡುತ್ತೇನೆ ಎಂಬ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಬ್ಯಾಂಕ್‌ಗಳ ಆಧಾರದ ಮೇಲೆ ಬೆನಿಫೀಶಿಯರ್ಸ್‌ನ್ನು ಕೊಡುತ್ತೇವೆ ಎಂದು ಹೇಳುತ್ತಿರುವುದು ಇದೊಂದೇ ಸ್ಕೀಮ್‌ನಲ್ಲಿ. ಚಿಕ್ಕನಾಯಕನ ಹಳ್ಳಿಯಲ್ಲಿ ಬ್ಯಾಂಕ್ ಕಡಿಮೆ ಎಂದು ಫಲಾನುಭವಿಗಳನ್ನು ಕಡಿಮೆ ಮಾಡಿರುವುದು ನಮಗೆ ಮಾಡಿರುವ ದ್ರೋಹವಾಗಿದೆ. ಬ್ಯಾಂಕ್‌ನ್ನು ಗಣನೆಗೆ ತೆಗೆದುಕೊಳ್ಳುವ ಬದಲು ಕ್ಷೇತ್ರದಲ್ಲಿರುವ ಜನಸಂಖ್ಯೆ, ನಿರುದ್ಯೋಗಿಗಳು ಇತ್ಯಾದಿ ಮಾನದಂಡಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಲೀಡ್ ಬ್ಯಾಂಕ್ ಆಫೀಸರ್ ಹೇಳುತ್ತಾರೆ ಎಂಬ ಒಂದು ಕಾರಣಕ್ಕೆ ಹೀಗೆ ಟಾರ್ಗೆಟ್ ಕೊಟ್ಟು ಶೇಕಡಾ 50ರಷ್ಟು ಟಾರ್ಗೆಟ್ಟನ್ನು ತುಮಕೂರು ತಾಲ್ಲೂಕು ಒಂದಕ್ಕೇ ಕೊಟ್ಟರೆ ಜಿಲ್ಲೆಯ ಇತರ ತಾಲ್ಲೂಕುಗಳ ನಾವು ಏನು ಮಾಡಬೇಕು? ತಾವುಗಳು ಅದನ್ನು ತರಿಸಿಕೊಂಡು ಸೂಕ್ತವಾಗಿ ನೋಡಬೇಕು ಮತ್ತು ಕೊಟ್ಟಿರುವ ಟಾರ್ಗೆಟನ್ನು ಎಲ್ಲಾ ತಾಲ್ಲೂಕುಗಳಿಗೆ ಸರಿಯಾಗಿ ಹಂಚಿಕೆಯಾಗುವಂತೆ ನೋಡಿಕೊಳ್ಳಬೇಕು.

ಶ್ರೀ ಎ.ಎಂ. ಹಿಂಡಸಗೇರಿ : ಅಧ್ಯಕ್ಷರೇ, ನಗರ ಪ್ರದೇಶಗಳಲ್ಲಿ ಬ್ಯಾಂಕ್‌ಗಳು ಜಾಸ್ತಿ ಇರುತ್ತವೆ. ಗ್ರಾಮೀಣ ಭಾಗದಲ್ಲಿ ಬ್ಯಾಂಕ್‌ಗಳ ಸಂಖ್ಯೆಯು ಕಡಿಮೆ ಇರುತ್ತದೆ. ಪ್ರತಿಯೊಂದು ಬ್ಯಾಂಕ್‌ಗೆ ನಾವು ಟಾರ್ಗೆಟ್ ಮಾಡಿ ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರು ವ್ಯಕ್ತ ಮಾಡಿದ ಕಳಕಳಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ನಾನು ಅದನ್ನು ಪರಿಶೀಲಿಸಿ ಸರಿಪಡಿಸಲು ಯತ್ನಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಕೆಜಿಬಿಗಳನ್ನು ಈ ಗುಂಪಿನಲ್ಲಿ ಇವರು ಸೇರಿಸುವುದಿಲ್ಲ, ಗ್ರಾಮೀಣ ಪ್ರದೇಶಕ್ಕೆ ತಂದು ಅದನ್ನು ಗ್ರಾಮೀಣ ಬ್ಯಾಂಕ್ ಎಂದು ಮಾಡುತ್ತೀರಿ. ಐಆರ್‌ಡಿಪಿ, ಎಸ್‌ಸಿಪಿ ಪ್ರೋಗ್ರಾಂಗಳಲ್ಲಿ ಕೆಜಿಬಿಗಳಿಗೆ ಕೊಡಿ ಎಂದು ಹೇಳುತ್ತೀರಿ. ಆದರೆ ಇದೊಂದೇ ಸ್ಕೀಮ್‌ನಲ್ಲಿ ಯಾಕೆ ಕೆಜಿಬಿಗಳನ್ನು ಟಾರ್ಗೆಟ್‌ಗೆ ತೆಗೆದುಕೊಂಡಿಲ್ಲ? ವೈಶ್ಯಬ್ಯಾಂಕ್, ವಿಜಯಬ್ಯಾಂಕ್, ಕರ್ನಾಟಕ ಬ್ಯಾಂಕ್ ಮುಂತಾದವರು ಗ್ರಾಮೀಣ ಭಾಗದಲ್ಲಿ ಬಂದು ಶಾಖೆಗಳನ್ನು ತೆಗೆಯುವುದಿಲ್ಲ ಇರುವ ಗ್ರಾಮೀಣ ಬ್ಯಾಂಕ್‌ಗಳಿಗೆ ಟಾರ್ಗೆಟ್ ಫಿಕ್ಸ್ ಮಾಡಲು ನಿಮಗೆ ಇರುವ ತೊಂದರೆ ಏನು?

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದ್ದುದು ಕೇವಲ ತುಮಕೂರಿಗೆ ಮಾತ್ರ ಸೀಮಿತವಾದುದಲ್ಲ. ಚಿತ್ರದುರ್ಗ ನಗರಕ್ಕೆ ಎಷ್ಟು ಟಾರ್ಗೆಟನ್ನು ಕೊಟ್ಟಿದ್ದಾರೆ. ಇದನ್ನು ಕೆಲವು ವ್ಯಕ್ತಿಗಳ ಪ್ರಭಾವಕ್ಕೆ ಒಳಗಾಗಿ ಸಚಿವರು

ಮಾಡಿದ್ದಾರೋ ಅಥವಾ ಯಾವುದಾದರೂ ನಿರ್ದಿಷ್ಟವಾದಂಥ ನೀತಿ ಇದಕ್ಕೆ ಇದೆಯೇ? ತುಮಕೂರಿನಲ್ಲಿ ಒಂದು ರೀತಿಯಾಗಿ ಮಾಡುವುದು ಚಿತ್ರದುರ್ಗಕ್ಕೆ ಒಂದು ರೀತಿಯಾಗಿ ಮಾಡುವುದು ಸರಿಯಲ್ಲ. ಇದಕ್ಕೆ ಏನಾದರೂ ಒಂದು ಅರ್ಥ ಇರುವ ಹಾಗೆ ಮಾಡಬೇಕಾಗುತ್ತದೆ.ನಿಮಗೆ ಪ್ರಭಾವ ಇರುವ ಕಡೆಗೆ ಮಾತ್ರ ಜಾಸ್ತಿ ಕೊಡುತ್ತೀರೋ ಅಥವಾ ಎಲ್ಲಿ ನಿರುದ್ಯೋಗಿಗಳು ಜಾಸ್ತಿ ಇದ್ದಾರೆ ಎಂಬುದನ್ನು ಪರಿಗಣನೆಗೆ ತೆಗೆದಕೊಳ್ಳುತ್ತೀರೋ? ಬ್ಯಾಂಕ್‌ಗಳು ಎಷ್ಟು ಇವೆ ಎಂಬುದನ್ನು ನೋಡುತ್ತೀರೋ? ಆದ್ದರಿಂದ ನಿರ್ದಿಷ್ಟವಾದ ನೀತಿಗಳು ಈ ಬಗ್ಗೆ ಬೇಕಾಗಿದೆ. ಸರಕಾರದಲ್ಲಿ ಆ ಕುರಿತಾದ ನೀತಿಗಳು ಇವೆಯೇ? ಇದ್ದರೆ ಅವುಗಳು ಯಾವುವು?

ಶ್ರೀ ಎ.ಎಂ. ಹಿಂಡಸಗೇರಿ : ಮಾನ್ಯ ಹಿರಿಯ ಸದಸ್ಯರು ಹೇಳಿದ ಹಾಗೆ ನಾವು ಯಾರ ಪ್ರಭಾವಕ್ಕೂ ಒಳಗಾಗಿ ಈ ಕೆಲಸವನ್ನು ಮಾಡುತ್ತಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ಪ್ರಭಾವ ಇಲ್ಲದೆ ಮತ್ತೇನು? ಹಾಗಾದರೆ ತುಮಕೂರಿಗೆ ಎಷ್ಟು ಕೊಟ್ಟಿದ್ದೀರಿ? ಚಿತ್ರದುರ್ಗಕ್ಕೆ ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ಹೇಳಿ?

ಶ್ರೀ ಎ.ಎಂ. ಹಿಂಡಸಗೇರಿ : ನಾನು ಯಾರ ಪ್ರಭಾವಕ್ಕೂ ಒಳಗಾಗಿಲ್ಲ. ಪ್ರಭಾವಕ್ಕೆ ಒಳಗಾಗಿ ಯಾರಿಗಾದರೂ ಅನ್ಯಾಯ ಮಾಡಬೇಕೆಂಬುದು ಸರಕಾದ ಉದ್ದೇಶವೂ ಅಲ್ಲ. ಆದಷ್ಟು ಸೂಕ್ತವಾಗಿ ಪ್ರತಿಯೊಂದು ತಾಲ್ಲೂಕು ಮತ್ತು ಜಿಲ್ಲೆಗಳಿಗೆ ಕೊಡಬೇಕೆಂಬುದು ನಮ್ಮ ಗುರಿಯಾಗಿದೆ. ಎಲ್ಲಿಬ್ಯಾಂಕ್ ಜಾಸ್ತಿ ಇದೆ ಅಲ್ಲಿ ಸ್ವಲ್ಪ ಹೆಚ್ಚು ಹೋಗಿರಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಕೆಲವು ತಾಲ್ಲೂಕುಗಳಲ್ಲಿ ಬ್ಯಾಂಕ್‌ಗಳೇ ಇಲ್ಲ. ಅವರು ಏನು ಮಾಡಬೇಕು? ಆದ್ದರಿಂದ ಬ್ಯಾಂಕ್‌ಗಳ ಆಧಾರ ಮಾಡಬಾರದು, ತಾಲ್ಲೂಕಿಗೆ ಇಷ್ಟು ಎಂದು ನಿಗದಿ ಮಾಡಿ.

ಶ್ರೀ ಹೆಚ್. ಏಕಾಂತಯ್ಯ : ಎಲ್ಲಾ ಜಿಲ್ಲೆಗಳಿಗೂ ಸರಿಯಾದ ರೀತಿಯಲ್ಲಿ ಹಂಚಬೇಕು. ಒಂದು ನಿರ್ದಿಷ್ಟವಾದ ನೀತಿ ಇರಬೇಕು. ಬೇರೆ ಬೇರೆ ಜಿಲ್ಲೆ ಮತ್ತು ತಾಲ್ಲೂಕುಗಳಿಗೆ ಎಷ್ಟೆಷ್ಟು ಫಿಕ್ಸ್ ಮಾಡಿದ್ದೀರಿ ಎಂಬುದನ್ನು ಹೇಳಿ..

ಶ್ರೀ ಬಿ.ಎಚ್. ಬನ್ನಿಕೋಡ್ : ಎಲ್ಲಾ ತಾಲ್ಲೂಕುಗಳು ಮತ್ತು ಜಿಲ್ಲೆಗಳಿಗೆ ಸರಿಸಮವಾಗಿ ಹಂಚಿಕೆ ಮಾಡುವ ವ್ಯವಸ್ಥೆ ಮಾಡಬೇಕು. ಅಧಿಕಾರಿಗಳು ಇಷ್ಟ ಬಂದ ಹಾಗೆ ಮಾಡುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು : ಅವರಿಗೆ ಉತ್ತರ ಕೊಡಲು ಮೊದಲು ಅವಕಾಶ ಕೊಡಿ, ಸರಕಾರ ಏನು ಹೇಳುತ್ತದೆ ಎಂಬುದನ್ನು ಮೊದಲು ಕೇಳಿಕೊಳ್ಳಿ........

ಶ್ರೀ ಬಿ.ಎಸ್. ಯಡಿಯೂರಪ್ಪ : ಬ್ಯಾಂಕ್ ಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡರೆ ಕೆಲವು ಕಡೆಗಳಲ್ಲಿ 8-10 ಬ್ಯಾಂಕ್‌ಗಳು ಇವೆ, ಕೆಲವು ಕಡೆಗಳಲ್ಲಿ 2 ಬ್ಯಾಂಕ್‌ಗಳು ಇವೆ. ಹೀಗೆ 2 ಬ್ಯಾಂಕ್‌ಗಳು ಇದ್ದರೂ ಕೂಡ ಟಾರ್ಗೆಟ್ ರೀಚ್ ಆಗುವ ಹಾಗೆ, ಸಬ್ಸಿಡಿ ಕೊಡುವ ಹಾಗೆ ಎಂದು ಕ್ರಮವನ್ನು ತೆಗೆದುಕೊಳ್ಳಿ.

ಶ್ರೀ ಎ.ಎಂ. ಹಿಂಡಸಗೇರಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳ ಕಳಕಳಿಯು ನನಗೆ ಅರ್ಥವಾಗಿದೆ. ನಾನು ಅದಕ್ಕೆ ವಿರೋಧವಿಲ್ಲ. ಆದರೆ ತಮಗೆ ಏನು ತೊಂದರೆ ಇದೆ, ಬ್ಯಾಂಕ್‌ಗಳು ಕಡಿಮೆ ಇರುವಲ್ಲಿ ಫಲಾನುಭವಿಗಳ ಸಂಖ್ಯೆ ಏನು ಕಡಿಮೆಯಾಗಿದೆ ಅದನ್ನು ಸರಿಪಡಿಸಲು ಸಾಧ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ : ತುಮಕೂರು ಜಿಲ್ಲೆಗೆ ಜಾಸ್ತಿ, ಚಿತ್ರದುರ್ಗಕ್ಕೆ ಕಡಿಮೆ ಟಾರ್ಗೆಟ್ ಏತಕ್ಕಾಗಿ ಫಿಕ್ಸ್ ಮಾಡಿದ್ದೀರಿ? ಎಲ್ಲಾ ತಾಲ್ಲೂಕುಗಳಿಗೂ ಕೆಲವು ನಾರ್ಮ್ಸ್ ಇಟ್ಟುಕೊಂಡು ಹಂಚಬಹುದಾಗಿತ್ತಲ್ಲ.

ಶ್ರೀ ಸಿ. ಬೈರೇಗೌಡ : ಈ ಸ್ಕೀಮ್ ಇರತಕ್ಕಂಥಾದ್ದು ನಿರುದ್ಯೋಗಿಗಳಿಗಾಗಿ. ಅದನ್ನು ಕೊಡುವಾಗ ಬ್ಯಾಂಕ್ ಹೆಚ್ಚು ಇರುವಲ್ಲಿ ಹೆಚ್ಚು ಜನರಿಗೆ ಕೊಡುತ್ತೇವೆ ಅಂದರೆ ಅದು ಸರಿಯಲ್ಲ... ಹಾಗೆ ಮಾಡಿದರೆ ಆ ಕಾರ್ಯಕ್ರಮಕ್ಕೆ ಅರ್ಥವೂ ಇಲ್ಲ. ನಿರುದ್ಯೋಗಿಗಳು ಹೆಚ್ಚು ಇರುವ ಕಡೆಗೆ ಹೆಚ್ಚು ಕೊಟ್ಟರೆ ಮಾತ್ರ ಒಂದು ಅರ್ಥ ಬರುತ್ತದೆ. ನಾನು ಸರಕಾರದವರಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ನಿರುದ್ಯೋಗಿಗಳಿಗೆ ಸರಿಸಮಾನವಾದಂಥ ರೀತಿಯಲ್ಲಿ ಇಡೀ ರಾಜ್ಯದಲ್ಲಿ ಈ ವ್ಯವಸ್ಥೆಯನ್ನು ಜಾರಿಗೊಳಿಸುತ್ತೀರಾ?

ಶ್ರೀ ಹೆಚ್. ಏಕಾಂತಯ್ಯ : ಟಾರ್ಗೆಟ್ ಫಿಕ್ಸ್ ಮಾಡುವಾಗ ನಿರುದ್ಯೋಗಿಗಳ ಸಂಖ್ಯೆ ಆಧಾರವಾಗಿರಬೇಕು. ಸಂಬಂಧಪಟ್ಟ ಸವಲತ್ತುಗಳು ಇರಬೇಕು, ಇವೇ ಮುಂತಾದ ಎಲ್ಲಾ ವಿಚಾರಗಳನ್ನು ಗಣನೆಗೆ ತೆಗೆದುಕೊಂಡು ಜಾರಿಗೆ ತರುವ ವಿಚಾರ ಸರಕಾರಕ್ಕೆ ಇದೆಯೇ?

ಅಧ್ಯಕ್ಷರು : ಮಾನ್ಯ ಸಚಿವರು ಈ ಕುರಿತಾಗಿ ಸೋಮವಾರ ದಿನ ಯಾವ ಆಧಾರದ ಮೇಲೆ ತಾವುಗಳು ಇದನ್ನು ಜಾರಿ ಮಾಡುತ್ತೀರಿ ಎಂಬ ಬಗ್ಗೆ ಒಂದು ವಿವರಣೆಯನ್ನು ಕೊಡಲಿ.

ಶ್ರೀ ಜಿ.ಎಸ್. ಶಿವನಂಜಪ್ಪ : ಅಧ್ಯಕ್ಷರೇ, ಇದು ಕೇವಲ ತುಮಕೂರು ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ಎಲ್ಲಾ ಕಡೆಗಳಲ್ಲಿಯೂ ತಾರತಮ್ಯವಾಗಿದೆ. ಅದಕ್ಕೆ ಯಾವುದಾದರೂ ಒಂದು ನೀತಿಯನ್ನು ನಿಗದಿಪಡಿಸಬೇಕು.

ಅಧ್ಯಕ್ಷರು : ನಾನು ಮಾನ್ಯ ಸಚಿವರಿಗೆ ಆ ಬಗ್ಗೆ ವಿವರಗಳನ್ನು ಸೋಮವಾರ ದಿನದಂದು ಕೊಡಲು ಹೇಳಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ : ನಮ್ಮ ಮಾನ್ಯ ಸ್ನೇಹಿತ ಸದಸ್ಯರುಗಳು ಹೇಳಿದ ಹಾಗೆ ಟಾರ್ಗೆಟ್ ಫಿಕ್ಸ್ ಮಾಡುವಲ್ಲಿ ಸಾಕಷ್ಟು ಹೆಚ್ಚು ಕಡಿಮೆಯಾಗಿದೆ. ಒಂದು ಕಡೆ ಹತ್ತು, ಇನ್ನೊಂದು ಕಡೆ 15, ಮತ್ತೊಂದು ಕಡೆ 5, ಮಗದೊಂದು ಕಡೆ 3 ಹೀಗೆ ಕೊಡುತ್ತಾ ಬಂದಿರುವುದರಿಂದ ತಾರತಮ್ಯವಾಗಿದೆ. ತಮಗೆ ಮನಸ್ಸಿಗೆ ಬಂದ ಹಾಗೆ ಮಾಡುತ್ತಿದ್ದಾರೆ. ಅದಕ್ಕಿಂತಲೂ ಹೆಚ್ಚಿನ ವಿಚಾರ ಅಂದರೆ ಬ್ಯಾಂಕ್‌ಗಳು ಈ ಬಗ್ಗೆ ಕೋ-ಆಪರೇಟ್ ಮಾಡುತ್ತಾ ಇಲ್ಲ. ನಿಮ್ಮ ಜನರಲ್ ಮ್ಯಾನೇಜರ್ ಡಿಐಸಿ ಯವರು ಲೋನ್ ಸ್ಯಾಂಕ್ಷನ್ ಮಾಡಿ ಕಳುಹಿಸಿದರೂ ಕೂಡ ಸ್ಯಾಂಕ್ಷನ್ ಮಾಡುತ್ತಾ ಇಲ್ಲ. ಸರಕಾರಕ್ಕೆ ಇದನ್ನು ಕಂಟ್ರೋಲ್ ಮಾಡಲು ಏನು ವಿಲ್‌ಪವರ್ ಇದೆ? ಎಷ್ಟು ಜನರಿಗೆ ನೀವು ಸಹಾಯ ಮಾಡಿದ್ದೀರಿ? ಅದರ ಬಗ್ಗೆ ವಿವರಗಳನ್ನು ಹೇಳಿ?

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ರಾಜ್ಯದಲ್ಲಿ ಅಕ್ರಮ ಸಾಗುವಳಿಯನ್ನು ಖಾಯಂ ಮಾಡುವುದು

233 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಕ್ರಮ ಸಾಗುವಳಿಯನ್ನು ಖಾಯಂ ಮಾಡಲು ಬಂದಿರುವ ಅರ್ಜಿಗಳು ಎಷ್ಟು?

ಆ) ದರಲ್ಲಿ ಎಷ್ಟು ಜನರಿಗೆ ಸಕ್ರಮಗೊಳಿಸಿ ಸಾಗುವಳಿ ಚೀಟಿ ನೀಡಲಾಗಿದೆ?

ಇ) 1984-85ನೇ ಸಾಲಿನಲ್ಲಿ ಕಂದಾಯ ಇಲಾಖೆಯ ರಿಜಿಸ್ಟಿನಲ್ಲಿ ಸಿ ಮತ್ತು ಡಿ ಜಮೀನನ್ನು ಸಾಗುವಳಿ ಮಾಡಿರುವುದನ್ನು ಪರಿಗಣಿಸದೆ ಫಾರೆಸ್ಟ್ ಎಂದು ಬರೆದಿರುವ ಬಗ್ಗೆ ಕಾರಣವೇನು?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) 10,86,826

ಆ) 1,55,203

ಇ) ವನೀಕರಣಕ್ಕೋಸ್ಕರವಾಗಿ ಸುಮಾರು 18 ಲಕ್ಷ ಎಕರೆ ಸಿ ಮತ್ತು ಡಿ ವರ್ಗದ ಜಮೀನನ್ನು 1978ರಿಂದ 1982ರವರೆಗೆ ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿತ್ತು. ಆ ನಂತರ ಸಾಗುವಳಿಗೆ ಯೋಗ್ಯವಾದ ಮತ್ತು ಬಗರ್ ಹುಕುಂ ಸಾಗುವಳಿಯಲ್ಲಿರುವ ಜಮೀನನ್ನು ಸಹ ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿತ್ತೆಂಬುದು ಸರ್ಕಾರದ ಗಮನಕ್ಕೆ ಬಂದಾಗ, ಸುಮಾರು 16,32 ಲಕ್ಷ ಎಕರೆಯಷ್ಟು ಜಮೀನನ್ನು ದಿನಾಂಕ 3-1-91ರ ಸರ್ಕಾರಿ ಆದೇಶದಂತೆ ಅರಣ್ಯ ಇಲಾಖೆಯಿಂದ ವಾಪಸ್ಸು ಪಡೆಯಲಾಯಿತು. (ಉಳಿದ 1.68 ಲಕ್ಷ ಜಮೀನಿನಲ್ಲಿ ಅದಕ್ಕೆ ಮುಂಚೆಯೇ ಅರಣ್ಯವನ್ನು ಬೆಳೆಸಿ ಅವುಗಳನ್ನು "ಕಾಯ್ದಿಟ್ಟ ಅರಣ್ಯ" ಎಂದು ಘೋಷಿಸಿ ಅರಣ್ಯ ಇಲಾಖೆಯಿಂದ ಅಧಿಸೂಚನೆ ಹೊರಡಿಸಲಾಗಿತ್ತು) ತದನಂತರ ಅರಣ್ಯ ಇಲಾಖೆಯ ಮನವಿಯಂತೆ ಸರ್ಕಾರವು ದಿನಾಂಕ : 7-6-93ರಂದು 2.58 ಲಕ್ಷ ಹೆಕ್ಟೇರ್ (6.45 ಎಕರೆ) ಸಿ ಮತ್ತು ಡಿ ವರ್ಗದ ಜಮೀನನ್ನು "ಲ್ಯಾಂಡ್ ಬ್ಯಾಂಕ್‌ಗಾಗಿ"ಅರಣ್ಯ ಇಲಾಖೆಗೆ ವರ್ಗಾಯಿಸಲು ಆದೇಶಿಸಿತು. ಆದರೆ ಈ ಸಂದರ್ಭದಲ್ಲಿ ಸರ್ಕಾರವು, ಆ ರೀತಿ ಅರಣ್ಯ ಇಲಾಖೆಗೆ ವರ್ಗಾಯಿಸಿದ ಜಮೀನುಗಳು ಒತ್ತುವರಿಯಿಂದ ಮುಕ್ತವಾಗಿರಬೇಕೆಂದು ಸ್ಪಷ್ಟವಾಗಿ ಆದೇಶಿಸಿದೆ.

ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಅಂಗನವಾಡಿ ಕೇಂದ್ರಗಳು

1 - ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ಮಹಿಳಾ ಮತ್ತು ಶಿಶು ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಹೊಸದಾಗಿ 60 ಅಂಗನವಾಡಿ ಕೇಂದ್ರಗಳನ್ನು ಆರಂಭಿಸಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ವಿಷಯದ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀಮತಿ ಮನೋರಮ ಮಧ್ವರಾಜ್ (ಮಹಿಳಾ ಮತ್ತು ಶಿಶು ಅಭಿವೃದ್ಧಿ ಸಚಿವರು) :

ಅ) ಹೌದು

ಆ) ಸೋಮರವಾರಪೇಟೆಗೆ 56 ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ದಿನಾಂಕ 1-8-94ರ ಸರ್ಕಾರಿ ಆದೇಶ ಸಂಖ್ಯೆ : ಸಕಇ 282 ಐಸಿಡಿ 93ರಲ್ಲಿ ಮಂಜೂರು ಮಾಡಲಾಗಿರುತ್ತದೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆಯು ಮುಗಿಯಿತು. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರವನ್ನು ಮಂಡಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, 26-8-94 ರಂದು ಲಿಖಿತ ಮೂಲಕ ಉತ್ತರಿಸುವ ಎರಡನೇ ಪಟ್ಟಿಯಲ್ಲಿನ ಪ್ರಶ್ನೆಗಳಿಗೆ ಉತ್ತರವನ್ನು ಸದನದ ಮುಂದೆ ಮಂಡಿಸುತ್ತೇನೆ.

ಬೆಂಗಳೂರು ಮಹಾನಗರಪಾಲಿಕೆಯ ಆರೋಗ್ಯ ವಿಭಾಗದವರು ಕಲಬೆರಕೆ ಹಾಲಿನ ಮಾರಾಟವನ್ನು ಪತ್ತೆ ಮಾಡುವ ಬಗ್ಗೆ

449 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಬಲ್ಕೆವೆಂಡಿಂಗ್ ಬೂತುಗಳಲ್ಲಿ ಕಲಬೆರಕೆ ಹಾಲಿನ ಮಾರಾಟವು ನಿರಂತರವಾಗಿ ನಡೆಯುತ್ತಿದ್ದರೂ ಮಹಾನಗರ ಪಾಲಿಕೆಯ ಆರೋಗ್ಯ ವಿಭಾಗದವರು ಯಾವುದೇ ಕ್ರಮಗಳನ್ನು ಕೈಗೊಳ್ಳದಿರಲು ಕಾರಣಗಳೇನು ?

ಆ) ಬೂತ್ ನಂ. 315, 316, 317 ಮತ್ತು 318 ಬೂತ್‌ಗಳಿಂದ ಮಹಾನಗರ ಪಾಲಿಕೆಯವರು ಎಷ್ಟು ಬಾರಿ ಕಲಬೆರಕೆಯನ್ನು ಪತ್ತೆ ಹಚ್ಚಲು ಹಾಲಿನ ಸ್ಯಾಂಪಲ್ ಪಡೆದುಕೊಂಡು ಹೋಗಿರುವರು ?

ಇ) ಇದುವರೆವಿಗೂ ಬಲ್ಕ್‌ವೆಂಡಿಂಗ್ ಬೂತ್‌ಗಳ ಎಷ್ಟು ಏಜೆಂಟರು ಕಲಬೆರಕೆ ಪ್ರಕರಣ ಸಲುವಾಗಿ ಮೊಕದ್ದಮೆ ಹೂಡಲಾಗಿದೆ (ಇವರ ಹೆಸರು ಮತ್ತು ವಿವರಗಳನ್ನು ಒದಗಿಸುವುದು)

ಈ) ಈ ಪೈಕಿ ಎಷ್ಟು ಮೊಕದ್ದಮೆಗಳು ಸಾಬೀತಾಗಿವೆ?. ಇನ್ನು ಎಷ್ಟು ಮೊಕದ್ದಮೆಗಳು ನ್ಯಾಯಾಲಯದ ಮುಂದೆ ಇವೆ?

ಉ) ಸರದಿ ಬೂತ್‌ಗಳಲ್ಲಿ ಬೆಳಗಿನ ವೇಳೆ 6 ರಿಂದ 7-30ರವರೆಗೆ ನಿರಂತರವಾಗಿ ಕಲಬೆರಕೆ ಪ್ರಕರಣಗಳು ನಡೆಯುತ್ತಿರುವುದರಿಂದ ಮಹಾನಗರ ಪಾಲಿಕೆಯ ಆರೋಗ್ಯ ವಿಭಾಗದವರು ಇಂತಹ ಬೂತ್‌ಗಳ ಮೇಲೆ (315, 316, 317 ಮತ್ತು 318) ಕ್ರಮಕೈಗೊಳ್ಳುವರೇ ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):

ಅ) ಬಲ್ಕ್‌ವೆಂಡಿಂಗ್ ಬೂತುಗಳಿಂದ ವಿಶ್ಲೇಷಣೆಗಾಗಿ ಮಾದರಿಗಳನ್ನು ಸಂಗ್ರಹಿಸಲಾಗುತ್ತಿದೆ.

ಆ) ಈ ಬೂತುಗಳಿಂದ ಸ್ಯಾಂಪಲ್ ಪಡೆದಿರುವುದಿಲ್ಲ.

ಇ) ಆರು. ವಿವರಗಳು ಈ ಕೆಳಗಿನಂತಿವೆ:

1) ಬೂತ್ ನಂ. 304, ಮಾರ್ಕೆಟ್ ಹತ್ತಿರ ಸಂಪಿಗೆ ರಸ್ತೆ, ಮಲ್ಲೇಶ್ವರ, ಬೆಂಗಳೂರು.

2) ಬೂತ್ ನಂ. 201, 5ನೇ ಕ್ರಾಸ್, ಗಾಂಧಿನಗರ, ಬೆಂಗಳೂರು - 560 009.

3) ಬೂತ್ ನಂ. 205, ವೆಂಕಟೇಶ್, ಪುಟ್ಟಸ್ವಾಮಿಯವರ ಮಗ, ನಂಜಾಂಬ ಅಗ್ರಹಾರ, ಚಾಮರಾಜಪೇಟೆ, ಬೆಂಗಳೂರು -560 018.

4) ಬೂತ್ ನಂ. 501, ಕೆ. ಸುರೇಶ್ ಕುಮಾರ್ ಹಳೆ ಬಿನ್ನಮಂಗಲ,2ನೇ ಸ್ಟೇಜ್, ಇಂದಿರಾನಗರ, ಬೆಂಗಳೂರು -560 038.

5) ಬೂತ್ ನಂ. 502, ತಿಮ್ಮಯ್ಯ, ಪಾರ್ಕ್‌ರೋಡ್, 12ನೇ ಕ್ರಾಸ್, ಇಂದಿರಾನಗರ, ಬೆಂಗಳೂರು - 560 038.

6) ಬೂತ್ ನಂ. 402, ಸಿ. ಸುಶೀಲನ್, ರಂಗಸ್ವಾಮಿ ಮೊದಲಿಯರ್ ರಸ್ತೆ, ಬೆಂಗಳೂರು - 560 042.

ಈ) ಆರು ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಇವೆ.

ಉ) ಸೂಕ್ತಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲಾಗಿದೆ.

ಗದಗ ಪೂರ್ವ ಭಾಗದಲ್ಲಿ ಮಳೆ ಬಾರದೆ ಬೆಳೆ ಹಾನಿ

448 - ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ಮತ್ತು ಗದಗ ಪೂರ್ವ ಭಾಗ ಮಳೆ ಬಾರದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಪ್ರದೇಶದಲ್ಲಿ ಬರಗಾಲ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುತ್ತಿದೆ?

ಇ) ಮುಂಡರಗಿ ತಾಲ್ಲೂಕ್‌ನ ತುಂಗಭದ್ರಾ ಹೊಳೆಯಲ್ಲಿ ಮಹಾಪೂರದಿಂದ ಫ್ಲಡ್ ಬಂದು ಬೆಳೆ ನಾಶವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬೆಳೆ ನಾಶವಾದ ರೈತರ ಹಿತಾಸಕ್ತಿಯನ್ನು ಕಾಪಾಡುವುದಕ್ಕಾಗಿ ಎಷ್ಟು ಪರಿಹಾರ ಧನವನ್ನು ನೀಡಲಾಗುವುದು ಮತ್ತು ಯಾವಾಗ ನೀಡಲಾಗುವುದು?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಹೌದು

ಆ) ಪ್ರಸ್ತುತ ಯೋಜನೆಯಡಿಯಲ್ಲಿನ ಜವಾಹರ್ ರೋಜ್‌ಗಾರ್, ಡಿ.ಪಿ.ಎ.ಪಿ. ಮತ್ತು ಉದ್ಯೋಗ ಭರವಸೆ ಇತ್ಯಾದಿ ಕಾಮಗಾರಿಗಳನ್ನು ತ್ವರಿತಗೊಳಿಸಲಾಗಿದೆ. ಅಗತ್ಯವಿದ್ದಲ್ಲಿ, ಬರ ಪರಿಹಾರ ಕಾರ್ಯಕ್ರಮದಡಿಯಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಇ) ಹೌದು. ಮುಂಡರಗಿ ತಾಲ್ಲೂಕಿನಲ್ಲಿ ಜುಲೈ ತಿಂಗಳಿನಲ್ಲಿ ತುಂಗಭದ್ರಾ ನದಿಯ ಪ್ರವಾಹದಿಂದ ಒಟ್ಟಾರೆ 1599 ಹೆಕ್ಟೇರ್ ಪ್ರದೇಶದಲ್ಲಿನ ಅಂದಾಜು ರೂ. 1.17 ಕೋಟಿಗಳ ಬೆಳೆಗೆ ಹಾನಿಯಾಗಿರುತ್ತದೆ.

ಈ) ಬೆಳೆ ಹಾನಿಗೊಂಡ ರೈತರ ಕುಟುಂಬದ ವಾರ್ಷಿಕ ವರಮಾನ ರೂ. 18000.00 ಗಳಿಗೆ ಮೀರದಿದ್ದಲ್ಲಿ, ಪ್ರತಿ ಹೆಕ್ಟೇರಿಗೆ ರೂ. 500.00 ರಂತೆ ಪರಿಹಾರ ನೀಡಲಾಗುವುದು. ಈ ನಿಟ್ಟಿನಲ್ಲಿ, ಮುಂಡರಗಿ ತಾಲ್ಲೂಕಿಗೆ ರೂ. 7.37 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಹರಿಜನ - ಗಿರಿಜನರಿಗೆ ಕಾಲೇಜು ಮಟ್ಟದಲ್ಲಿ ಕೊಡುವ ಸ್ಕಾಲರ್‌ಶಿಪ್

321 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹರಿಜನ - ಗಿರಿಜನರಿಗೆ ಕಾಲೇಜು ಮಟ್ಟದಲ್ಲಿ ಓದುವ ಎರಡು ಮಕ್ಕಳಿಗೆ ಸ್ಕಾಲರ್‌ಶಿಪ್ ಕೊಡಲು ಬರುವುದಿಲ್ಲವೆಂಬುದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇತರೆ ಹಿಂದುಳಿದವರ ಮಕ್ಕಳಿಗೆ ಗ್ರೂಪ್ (1) ಮತ್ತು ಗ್ರೂಪ್ (2)ಕ್ಕೆ ಯಾವ ನಿಯಮವು ಇಲ್ಲದೆ ಇವರಿಗೆ ಸ್ಕಾಲರ್‌ಶಿಪ್ ಸಿಗುತ್ತಿರುವುದು ನಿಜವೇ?

ಇ) ಹಾಗಿದ್ದಲ್ಲಿ ಈ ತಾರತಮ್ಯವಿರಲು ಕಾರಣವೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು

ಆ) ರಾಜ್ಯಸರ್ಕಾರದ ನಿಯಮಾವಳಿ ಮೇರೆಗೆ ಹಿಂದುಳಿದ ವರ್ಗಗಳ 'ಎ' ಗುಂಪಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡುವುದಕ್ಕೆ ಆದಾಯ ಮಿತಿ ಮತ್ತು ಕುಟುಂಬದ ಮಕ್ಕಳ ಸಂಖ್ಯೆಯ ನಿರ್ಬಂಧವಿರುವುದಿಲ್ಲ.

ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನವನ್ನು ಕೇಂದ್ರ ಸರ್ಕಾರ ರೂಪಿಸಿರುವ ನಿಯಮಗಳ ಅನುಸಾರವಾಗಿ ನೀಡಲಾಗುತ್ತಿದೆ. ಆದರೆ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆಯಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಚಾಲ್ತಿಯಲ್ಲಿರುವ ರಾಜ್ಯ ಸರ್ಕಾರದ ನಿಯಮಗಳನ್ವಯ ಮಂಜೂರು ಮಾಡಲಾಗುತ್ತಿದೆ. ಆದ್ದರಿಂದ ಹರಿಜನ-ಗಿರಿಜನರಿಗೆ ಹಾಗೂ ಹಿಂದುಳಿದ ವರ್ಗಗಳ ಕಾಲೇಜು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡುವಲ್ಲಿ ತಾರತಮ್ಯವಿದೆ.

ಕೆಂಗೇರಿ ಹೋಬಳಿ ಪಟ್ಟಣಗೆರೆ ಗ್ರೂಪ್ ಪಂಚಾಯಿತಿಗೆ ಸೇರಿದ ಹಲಗೇವಡೇರ ಹಳ್ಳಿ ಗ್ರಾಮದ ಸರ್ವೆ ನಂಬರ್ 1 ರ ಬಗ್ಗೆ

403 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ ಪಟ್ಟಣಗೆರೆ, ಗ್ರೂಪ್ ಪಂಚಾಯಿತಿಗೆ ಸೇರಿದ ಹಲಗೇವಡೇರ ಹಳ್ಳಿ ಗ್ರಾಮದ ಸರ್ವೆ ನಂಬರ್ 1ರ ವಿಸ್ತೀರ್ಣವೆಷ್ಟು?*

ಆ) *ಸದರಿ ಸರ್ವೆ ನಂಬರಿನಲ್ಲಿರುವ ಜಮೀನನ್ನು ಉಚಿತ ನಿವೇಶನ ಹಾಗೂ ಇತರೇ ನಾಗರೀಕ ಸೌಕರ್ಯಗಳ ಮಂಜೂರಾತಿಗಾಗಿ ಯಾರಾದರೂ ಅರ್ಜಿ ಸಲ್ಲಿಸಿದ್ದಾರೆಯೇ, ಹಾಗಿದ್ದಲ್ಲಿ ಅವರುಗಳ ಹೆಸರು ಮತ್ತು ವಿಳಾಸಗಳ ಮಾಹಿತಿ ನೀಡುವುದು?*

ಇ) *ಇವರುಗಳು ಯಾವ ಉದ್ದೇಶಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆ?*

ಈ) *ಸದರಿ ಸರ್ವೆ ನಂಬರ್ ಜಮೀನನ್ನು ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದವರಿಗೆ ಮಂಜೂರಾತಿ ನೀಡುವ ಆಲೋಚನೆ ಸರ್ಕಾರಕ್ಕೆ ಇದೆಯೇ?*

ಉ) *ಇದ್ದರೆ ಯಾವ ನಿಯಮದ ಮೇಲೆ ಮಂಜೂರಾತಿ ನೀಡಲಾಗುವುದು?*

ಊ) *ಈಗಾಗಲೇ ಯಾರಿಗಾದರೂ ಮಂಜೂರಾತಿ ನೀಡಿದೆಯೇ? ಇಲ್ಲದಿದ್ದಲ್ಲಿ ಕಾರಣಗಳೇನು?*

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಸರ್ವೆನಂಬರ್ 1 ರ ಒಟ್ಟು ವಿಸ್ತೀರ್ಣ 17 ಎಕರೆ 10 ಗುಂಟೆ.

ಆ) ಈ ಜಮೀನನ್ನು ಸರ್ಕಾರದ ಆದೇಶದ ಸಂಖ್ಯೆ ಪಿಡಬ್ಲ್ಯುಡಿ 82 ಐಎಎನ್ 2 : 85, ದಿನಾಂಕ 11-2-1988ರಂತೆ ಅರಣ್ಯ ಇಲಾಖೆಗೆ ಕಾಯ್ದಿರಿಸಿರುವುದರಿಂದ, ಉಚಿತ ನಿವೇಶನವನ್ನಾಗಿ ಮಾರ್ಪಡಿಸಿ ಹಂಚಲು ಬರುವುದಿಲ್ಲವಾಗಿರುತ್ತದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಇಲ್ಲ.

ಬಗರ್ ಪರವಾನಿಗೆ ಖಾಯಂ ಸಾಗುವಳಿ ಮಾಡಲು ವಿಧಿಸಿರುವ ಕರಾರುಗಳು

47 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಬಗರ್ ಪರವಾನಿಗೆಯಿಂದ ಸಾಗುವಳಿ ಮಾಡುತ್ತಿರುವವರಿಗೆ ಖಾಯಂ ಹಕ್ಕುಪತ್ರ ನೀಡಲು ಸರ್ಕಾರದವರು ವಿಧಿಸಿರುವ ಕರಾರುಗಳೇನು?*

ಹಾಗೂ ದಿನಾಂಕ 30-6-1994ರವರೆವಿಗೆ ಸಾಗುವಳಿ ಪರವಾನಿಗೆ ನೀಡಬೇಕಾಗಿರುವ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಅಕ್ರಮವಾಗಿ ಸಾಗುವಳಿ ಮಾಡಲಾಗುತ್ತಿರುವ ನೀರಾವರಿ ಕೆರೆಕಟ್ಟೆಗಳ ಕ್ಷೇತ್ರದವರಿಗೆ ಹಾಗೂ ಹುಲ್ಲುಗಾವಲು ಕ್ಷೇತ್ರದವರಿಗೆ ಹಕ್ಕುಪತ್ರ ಕೊಡಲಾಗುವುದೇ?

ಶ್ರೀ ಧರ್ಮ್‌ಸಿಂಗ್ (ಕಂದಾಯಸಚಿವರು) :

ಅ) ಜಮೀನು ಮಂಜೂರು ಮಾಡಲು ಅರ್ಹತೆ ಎಂದರೆ ಅರ್ಜಿದಾರರು, ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 108-ಎಫ್‌ದಲ್ಲಿನ ಕರಾರುಗಳನ್ನು ಪೂರೈಸಿರಬೇಕು, ಮತ್ತು ಆ ಜಮೀನು ಸದರಿ ನಿಯಮಗಳ ನಿಯಮ 108(ಐ) ನಲ್ಲಿ ಹೇಳಿರುವಂತೆ ಮಂಜೂರಾತಿಗೆ ಪ್ರತಿಬಂಧಿತವಾಗಿರಬಾರದು.

ಒಟ್ಟು 6,30,975 ಪ್ರಕರಣಗಳು, ದಿನಾಂಕ 30-6-94ರಂದು ವಿಲೇವಾರಿಗಾಗಿ ಬಾಕಿ ಇದ್ದವು. ಈ ಎಲ್ಲ ಪ್ರಕರಣಗಳು ಪರಿಶೀಲನೆಯ ವಿವಿಧ ಹಂತದಲ್ಲಿದೆ. ಶೀಘ್ರವಾಗಿ ಪರಿಶೀಲಿಸಿ, ತೀರ್ಮಾನ ತೆಗೆದುಕೊಳ್ಳಲು ಸಹಾಯವಾಗುವಂತೆ ಹಲವಾರು ತೀರ್ಮಾನಗಳನ್ನು ಈಚೆಗೆ ತೆಗೆದುಕೊಳ್ಳಲಾಗಿದೆ. (ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ).

ಆ) ಅಕ್ರಮ ಸಾಗುವಳಿಯಲ್ಲಿ ಪ್ರತಿ ಪ್ರಕರಣವನ್ನು ಅದರದರ ಮೆರಿಟ್ ಮೇಲೆ ಪರಿಶೀಲಿಸಿ, ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು. ಸಾಮೂಹಿಕ ಉಪಯೋಗಕ್ಕಾಗಿ ಮೀಸಲಾಗಿಟ್ಟಿರುವ ಗೋಮಾಳ, ಹುಲ್ಲುಗಾವಲು, ಕೆರೆಕಟ್ಟೆಇಂತಹ ಜಮೀನುಗಳ ಸಕ್ರಮೀಕರಣವೂ ಸೇರಿದಂತೆ ಇಡೀ ವಿಷಯ ಸಚಿವ ಸಂಪುಟದ ಪರಿಶೀಲನೆಯಲ್ಲಿದೆ.

ಅನುಬಂಧ

ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸುವ ಪ್ರಗತಿ ವರದಿ ಜೂನ್ 1994

ಕ್ರ. ಸಂ.	ಜಿಲ್ಲೆಗಳ ಹೆಸರು	ಬಾಕಿ ಇರುವ ಪ್ರಕರಣಗಳು ನಂ.
1.	ಬೆಂಗಳೂರು (ನಗರ)	9836
2.	ಬೆಂಗಳೂರು (ಗ್ರಾಮಾಂತರ)	34807
3.	ತುಮಕೂರು	62705
4.	ಕೋಲಾರ	54950
5.	ಶಿವಮೊಗ್ಗ	102889
6.	ಚಿತ್ರದುರ್ಗ	26877
7.	ಮೈಸೂರು	40667
8.	ಮಂಡ್ಯ	35440
9.	ಹಾಸನ	54243
10.	ಚಿಕ್ಕಮಗಳೂರು	36011
11.	ಕೊಡಗು	11687
12.	ದಕ್ಷಿಣ ಕನ್ನಡ ಜಿಲ್ಲೆ	120100
13.	ಬೆಳಗಾಂ	697
14.	ಬಿಜಾಪುರ	1858
15.	ಧಾರವಾಡ	5089

16.	ಉತ್ತರ ಕನ್ನಡ ಜಿಲ್ಲೆ	3206
17.	ಗುಲ್ಬರ್ಗಾ	6603
18.	ಬೀದರ್	7293
19.	ಬಳ್ಳಾರಿ	13013
20.	ರಾಯಚೂರು	4853

ಹುಕ್ಕೇರಿ ಹಾಗೂ ಸಂಕೇಶ್ವರ ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆ

94 - ಶ್ರೀ ಉಮೇಶ್ ವಿ.ಕತ್ತಿ (ಹುಕ್ಕೇರಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ಹಾಗೂ ಸಂಕೇಶ್ವರ ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆಗಳು ಮಂಜೂರಾಗಿವೆಯೇ?

ಆ) ಹಾಗಿದಲ್ಲಿ ಈ ಯೋಜನೆಗಳು ಪೂರ್ಣ ಗೊಂಡಿವೆಯೇ, ಹಾಗಿಲ್ಲದಲ್ಲಿ ಕಾರಣಗಳೇನು ಹಾಗೂ ಈ ಯೋಜನೆಗಾಗಿ ಈವರೆಗೆ ಖರ್ಚಾಗಿರುವ ಹಣವೆಷ್ಟು?

ಶ್ರೀ ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಸಚಿವರು):

ಅ) ಹೌದು

ಆ) ಹುಕ್ಕೇರಿ - ಸಂಕೇಶ್ವರ ಮತ್ತು ಸುತ್ತ ಮುತ್ತಲಿನ 16 ಹಳ್ಳಿಗಳಿಗೆ ಸೇರಿ ಒಂದು ಪ್ರಾಂತೀಯ ನೀರು ಸರಬರಾಜು ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿವೆ. ಜೂನ್ 94ರ ಅಂತ್ಯದವರೆಗೆ ಒಟ್ಟು 78.94 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪಂಗಡಗಳ ಅಭಿವೃದ್ಧಿಗಾಗಿ 93-94ರಲ್ಲಿ ಮೀಸಲಿಟ್ಟ ಹಣ

330 - ಶ್ರೀ ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವರ ಅಭಿವೃದ್ಧಿಗಾಗಿ 1993-94ನೇ ವರ್ಷದಲ್ಲಿ ಮೀಸಲಿಟ್ಟ ಹಣವೆಷ್ಟು?

ಆ) ಆ ಹಣದಲ್ಲಿ ಖರ್ಚಾದ ಹಾಗೂ ಉಳಿಕೆ ಹಣ ಎಷ್ಟು?

ಇ) ಉಳಿಯಲು ಕಾರಣಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ)1993-94ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರ ಏಳಿಗೆಗೆ ಮೀಸಲಿರಿಸಿದ ಹಣದ ವಿವರಣೆ ಈ ಕೆಳಗೆ ತೋರಿಸಿದೆ.

	ಇಲಾಖಾ ಕಾರ್ಯಕ್ರಮಗಳು ಯೋಜನೆ: ಯೋಜನೇತರರದಲ್ಲಿ ಮೀಸಲಿಟ್ಟ ಹಣ	ವಿಶೇಷ ಘಟಕ ಯೋಜನೆ ರೂ.	ಗಿರಿಜನ ಉಪಯೋಜನೆ ಲಕ್ಷಗಳಲ್ಲಿ
	10271.55	29.352.20	4168.72
ಖರ್ಚು	9747.17	27176.66	3637.08
ಉಳಿಕೆ	524.38	2175.54	531.64

ಇ) 1993-94 ನೇ ಸಾಲಿನಲ್ಲಿ ಕೆಲವು ಇಲಾಖೆಗಳ ಹೊಸ ಯೋಜನೆಗಳಿಗೆ ಅಂಗೀಕಾರ ಸಕಾಲದಲ್ಲಿ ದೊರೆಯದೇ ಇದ್ದ ಕಾರಣ ಹಣ ಬಾಕಿ ಉಳಿದಿದೆ?

ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಹಿಂದುಳಿದವರ ವಿದ್ಯಾರ್ಥಿನಿಲಯ

2 - ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯ ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗದವರ ಇಲಾಖೆಯಿಂದ ಮಾದಾಪುರದಲ್ಲಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಆರಂಭಿಸಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಸೋಮವಾರ ಪೇಟೆ ತಾಲ್ಲೂಕಿನ ಶಿರಂಗಾಲದಲ್ಲಿ ರೇಷ್ಮೆ ಇಲಾಖಾ ವತಿಯಿಂದ ಚಾಕಿ ಸಾಕಾಣಿಕೆ ಕೇಂದ್ರಕ್ಕೆ ಹೊಸ ಕಟ್ಟಡ ಮಂಜೂರು

3 - ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರ ಪೇಟೆ) : ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರ ಪೇಟೆ ತಾಲ್ಲೂಕಿನ ಶಿರಂಗಾಲ ಚಾಕಿ ಸಾಕಾಣಿಕಾ ಕೇಂದ್ರಕ್ಕೆ ಹೊಸ ಕಟ್ಟಡ ಮಂಜೂರು ಮಾಡುವ ವಿಷಯ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ಕಾಮಗಾರಿಯನ್ನು ಎಂದು ಪ್ರಾರಂಭಿಸಲಾಗುವುದು.

ಡಾ॥ ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಕೊಡಗು ಜಿಲ್ಲೆಯ ಅಕ್ರಮ ಭೂಮಿಯನ್ನು ಸಕ್ರಮ ಮಾಡುವ ಬಗ್ಗೆ ಇರುವ ತೊಡಕುಗಳು

4 - ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರ ಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಅಕ್ರಮ ಭೂಮಿ ಸಕ್ರಮಗೊಳಿಸುವ ಸಂದರ್ಭದಲ್ಲಿ ಕೆಲವೇ ಕಾಫಿ ಗಿಡಗಳು ಇದ್ದರೂ ಅದನ್ನು ಕಾಫಿ ತೋಟ ಎಂದು ಪರಿಗಣಿಸಲಾಗುತ್ತಿರುವುದರಿಂದ ಸಣ್ಣ ರೈತರು ಮತ್ತು ಬಡಜನರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ತೊಂದರೆಯನ್ನು ಸರ್ಕಾರದವರು ಬಗೆಹರಿಸಲು ಕೈಗೊಳ್ಳುವ ಕ್ರಮವೇನು?

ಇ) ಈ ಜನಗಳಿಗೆ ವಿತರಣೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ??

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಹೌದು.

ಆ) ಕಾಫಿ ಸಾಗುವಳಿ ಸಕ್ರಮಗೊಳಿಸುವ ಸಲುವಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆಗೆ ಸೂಕ್ತ ತಿದ್ದುಪಡಿ ತರುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ತಿದ್ದುಪಡಿ ವಿಧೇಯಕವಾದ ನಂತರ ಪರಿಗಣಿಸಲಾಗುವುದು.

ಸೋಮವಾರಪೇಟೆ ತಾಲ್ಲೂಕಿನಲ್ಲಿ ರೇಷ್ಮೆಇಲಾಖೆ ವತಿಯಿಂದ ಹರಿಜನಗಿರಿಜನರಿಗೆ ಸೌಲಭ್ಯ.

5 - ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರ ಪೇಟೆ) : ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರ ಪೇಟೆ ತಾಲ್ಲೂಕಿನಲ್ಲಿ ರೇಷ್ಮೆ ಇಲಾಖಾ ವತಿಯಿಂದ ಎಷ್ಟು ಜನ ಹರಿಜನ ಗಿರಿಜನರಿಗೆ ಸರ್ಕಾರದಿಂದ ಸಾಲ ಕಲ್ಪಿಸಲಾಗಿದೆ.

ಆ) ಸ್ಕೀಂಗಳ ವಿವರಗಳೇನು?

ಇ) ಒಟ್ಟು ಮಂಜೂರಾದ ಹಣವೆಷ್ಟು?

ಡಾ|| ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು) :

ಅ) ಸರ್ಕಾರದಿಂದ ಸಾಲ ನೀಡುವ ಯೋಜನೆ ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಇಲ್ಲ. ಆದರೆ ಬ್ಯಾಂಕುಗಳಿಂದ ಸಾಲ ಪಡೆದುಕೊಂಡಿರುವ ಹರಿಜನ ಮತ್ತು ಗಿರಿಜನರಿಗೆ ಈ ಕೆಳಗಿನಂತೆ ಇಲಾಖಾ ವತಿಯಿಂದ ಸಹಾಯ ಧನ ನೀಡಲಾಗಿದೆ.

ಆ) **ಪರಿಶಿಷ್ಟ ಜಾತಿ ಫಲಾನುಭವಿಗಳಿಗಾಗಿ**

1. ರೇಷ್ಮೆಹುಳು ಸಾಕುವ ಮನೆ 2. ಹುಳುಸಾಕಣೆ ಉಪಕರಣಗಳು
3. ಹಿಪ್ಪುನೇರಳೆ ವ್ಯವಸಾಯಕ್ಕೆ ಪ್ರೋತ್ಸಾಹ 4. ಪ್ರೋಗ್ರಾಂ ಆಫ್ ಪ್ಯಾಕೇಜ್ ಬೆನಿಫಿಟ್

ಪರಿಶಿಷ್ಟ ವರ್ಗ ಫಲಾನುಭವಿಗಳಿಗಾಗಿ

1. ಹಿಪ್ಪುನೇರಳೆ ವ್ಯವಸಾಯಕ್ಕೆ ಪ್ರೋತ್ಸಾಹ ಧನ
2. ರೇಷ್ಮೆ ಹುಳುಸಾಕಣೆ ಸಲಕರಣೆಗಳ ಸರಬರಾಜು

ಇ) ಒಟ್ಟು ಸಹಾಯ ಧನ ರೂ. 1,68,000-00

ಬೇಲೂರು ತಾಲ್ಲೂಕಿನಲ್ಲಿ ಪ್ರವಾಹ ಪರಿಹಾರ

15 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ತಾಲ್ಲೂಕಿನಲ್ಲಿ 1993-94 ಹಾಗೂ 1994-95ರಲ್ಲಿ ಅತಿವೃಷ್ಟಿಯಿಂದಾಗಿ ಹಾನಿಗೊಳಗಾದ ಕೆರೆಗಳು, ರಸ್ತೆಗಳು (ಜಿಲ್ಲಾ ಪರಿಷತ್ ಮತ್ತು ಲೋಕೋಪಯೋಗಿ) ಮತ್ತು ಖಾಸಗಿ ಕಟ್ಟಡಗಳು, ಬೆಳೆ ಒಡ್ಡುಗಳು ಹಾಗೂ ಪಂಪುಸೆಟ್ಟುಗಳು ಎಷ್ಟು? ವಿವರ ಒದಗಿಸುವುದು.

ಆ) 1993-94 ಮತ್ತು 1994-95ರಲ್ಲಿ ಪರಿಹಾರ ಕಾರ್ಯಗಳಿಗಾಗಿ ಮಂಜೂರಾದ ಹಣವೆಷ್ಟು?

ಇ) 1993-94 ರಲ್ಲಿ ಹಾನಿಗೊಳಗಾದ ಕೆಲವು ಕಾಮಗಾರಿಗಳನ್ನು • ಜಿಲ್ಲಾ ಸಚಿವರು ಖುದ್ದಾಗಿ ಪರಿಶೀಲಿಸಿ, ಸದರಿ ಕಾಮಗಾರಿಯ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂಬುದಾಗಿ ತಿಳಿಸಿದ್ದರು. ಇನ್ನೂ ಕೈಗೊಳ್ಳದಿರಲು ಕಾರಣವೇನು?

• ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) 1) 1993-94ನೇ ಸಾಲಿನಲ್ಲಿ ಹಾಸನಜಿಲ್ಲೆಗೆ ರೂ.94.00ಲಕ್ಷಗಳನ್ನು ಬಿಡುಗಡೆಮಾಡಿದ್ದು, ಇದರಲ್ಲಿ ಬೇಲೂರು ತಾಲ್ಲೂಕಿಗೆ ರೂ.23,72,043.00 ಗಳನ್ನು ಬಿಡುಗಡೆ ಮಾಡಿದೆ.

2) 1994-95ನೇ ಸಾಲಿನಲ್ಲಿ ಹಾಸನಜಿಲ್ಲೆಗೆ ರೂ.60.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಈ ಪೈಕಿ ರೂ.15.00 ಲಕ್ಷಗಳನ್ನು ಬೇಲೂರು ತಾಲ್ಲೂಕು ಖಾಸಗಿ ಆಸ್ತಿಪಾಸ್ತಿಗಳ ಪರಿಹಾರ ನೀಡಲು ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಳ ದುರಸ್ಥಿ ಕೈಗೊಳ್ಳಲು ಬಿಡುಗಡೆ ಮಾಡಿದೆ.

ಇ) 1993-94ನೇಸಾಲಿನಲ್ಲಿ ಬೇಲೂರು ತಾಲ್ಲೂಕಿನಲ್ಲಿ ಬಾರಿ ಮಳೆಯಿಂದ ಹಾನಿಗೊಂಡ ಸಾರ್ವಜನಿಕ ಆಸ್ತಿಪಾಸ್ತಿಗಳ ದುರಸ್ತಿಗಾಗಿ ರೂ.21.30 ಲಕ್ಷಗಳು ಖರ್ಚು ಮಾಡಿದೆ. ಪ್ರಕೃತಿವಿಕೋಪ ಪರಿಹಾರನಿಧಿಯಲ್ಲಿ ಲಭ್ಯವಿರುವ ಹಣದ ಆಧಾರದ ಮೇಲೆ ಇತರೆ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಅನುಬಂಧ

1993ನೇ ಅಕ್ಟೋಬರ್‌ನಲ್ಲಿ ಉಂಟಾದ ಅತಿವೃಷ್ಟಿಯಿಂದ ಬೇಲೂರು ತಾಲ್ಲೂಕಿನಲ್ಲಿ ಆಗಿರುವ ಹಾನಿಯ ವಿವರಗಳು.

(ರೂ. ಲಕ್ಷಗಳಲ್ಲಿ)

ತಾಲ್ಲೂಕಿನ ಹೆಸರು	ಜಾನುವಾರು ಹಾನಿ		ಕೃಷಿ ಬೆಳೆ ಹಾನಿ		ಮನೆಗಳ ಹಾನಿ				ನೀರಾವರಿ ಪಂಪು ಸೆಟ್ಟುಗಳು		ಒಟ್ಟು ಖಾಸಗಿ ಆಸ್ತಿಗೆ ಆಗಿರುವ ಹಾನಿ
	ಸಂಖ್ಯೆ	ಹಾನಿ	ವಿಸ್ತೀರ್ಣ	ಹಾನಿ	ಪೂರ್ಣ ಕುಸಿದ ಮನೆಗಳು		ಭಾಗಶ ಕುಸಿದ ಮನೆಗಳು		ಸಂಖ್ಯೆ	ಹಾನಿ	
					ಸಂಖ್ಯೆ	ಹಾನಿ	ಸಂಖ್ಯೆ	ಹಾನಿ			
ಬೇಲೂರು	5	00.05	275	7.52	69	1.50	97	1.82	6	00.15	11.04

ಸಾರ್ವಜನಿಕ ಆಸ್ತಿಪಾಸ್ತಿಗಳಿಗಾಗಿರುವ ಹಾನಿ ವಿವರ

ಕಟ್ಟಡಗಳು		ಸೇತುವೆ ಮತ್ತು ಅಡಿಗಾಲುವೆಗಳು		ಜಿಲ್ಲಾ ಪರಿಷತ್ತಿನ ರಸ್ತೆಗಳು		ಲೋಕೋಪಯೋಗಿ ಇಲಾಖೆಯ ರಸ್ತೆಗಳು		ಸಣ್ಣ ನೀರಾವರಿ ಕೆರೆಗಳು		ಒಟ್ಟು ಸಾರ್ವಜನಿಕ ಆಸ್ತಿಗಾಗಿರುವ ಹಾನಿ
ಸಂಖ್ಯೆ	ಹಾನಿ	ಸಂಖ್ಯೆ	ಹಾನಿ	ಸಂಖ್ಯೆ	ಹಾನಿ	ಸಂಖ್ಯೆ	ಹಾನಿ	ಸಂಖ್ಯೆ	ಹಾನಿ	
–	–	7	1.75	6	5.00	20	10.00	10	6.00	22.75

1994ನೇ ಜುಲೈ ತಿಂಗಳಲ್ಲಿ ಉಂಟಾದ ಅತೀವೃಷ್ಟಿಯಿಂದ ಬೇಲೂರು ತಾಲ್ಲೂಕಿನಲ್ಲಿ ಆಗಿರುವ ಹಾನಿಯ ವಿವರಗಳು

ತಾಲ್ಲೂಕಿನ ಹೆಸರು	ಜಾನುವಾರು ಹಾನಿ		ಕೃಷಿ ಬೆಳೆ ಹಾನಿ		ಮನೆಗಳ ಹಾನಿ				ನೀರಾವರಿ ಪಂಪು ಸೆಟ್ಟುಗಳು		ನೀರಾವರಿ ಬಾವಿಗಳು		ಒಟ್ಟು ಖಾಸಗಿ ಆಸ್ತಿಗಳಿಗೆ ಆಗಿರುವ ಹಾನಿ
	ಸಂಖ್ಯೆ	ಹಾನಿ	ವಿಸ್ತೀರ್ಣ	ಹಾನಿ	ಪೂರ್ಣ	ಕುಸಿತ	ಭಾಗಶಃ	ಕುಸಿತ	ಸಂಖ್ಯೆ	ಹಾನಿ	ಸಂಖ್ಯೆ	ಹಾನಿ	
					ಸಂಖ್ಯೆ	ಹಾನಿ	ಸಂಖ್ಯೆ	ïøf					
ಬೇಲೂರು	4	0.15	1250	128.50	44	6.60	361	14.44	9	0.90	13	1.95	22.75

ಸಾರ್ವಜನಿಕ ಆಸ್ತಿಪಾಸ್ತಿಗಳಿಗಾಗಿರುವ ಹಾನಿಯ ವಿವರ

ಕಟ್ಟಡಗಳು				ಸಣ್ಣ ನೀರಾವರಿ ಕೆರೆಗಳು				ಒಟ್ಟು ಸಾರ್ವಜನಿಕ ಆಸ್ತಿಪಾಸ್ತಿಗಳಿಗಾಗಿರುವ ಹಾನಿ
ಜಿಲ್ಲಾ ಪರಿಷತ್		ಲೋಕೋಪಯೋಗಿ ಇಲಾಖೆ		ಜಿಲ್ಲಾ ಪರಿಷತ್		ನೀರಾವರಿ ಇಲಾಖೆ		
ಸಂಖ್ಯೆ	ಹಾನಿ	ಸಂಖ್ಯೆ	ಹಾನಿ	ಸಂಖ್ಯೆ	ಹಾನಿ	ಸಂಖ್ಯೆ	ಹಾನಿ	
27	1.10	7	2.75	20	10.00	16	7.75	40.50

ಕರ್ನಾಟಕ ರಾಜ್ಯ ವಿಧಾನಮಂಡಲ,
ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು,
ದಿನಾಂಕ.................

ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪೌರಕಾರ್ಮಿಕರ ನೇಮಕಾತಿ

271 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಲಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಇರುವ ಪೌರ ಕಾರ್ಮಿಕರ ಸಂಖ್ಯೆ ಎಷ್ಟು? ಎಷ್ಟು ಪೌರ ಕಾರ್ಮಿಕರ ಹುದ್ದೆಗಳು ಖಾಲಿ ಇವೆ? ಇವುಗಳನ್ನು ತುಂಬಲು ಕೈಗೊಂಡ ಕ್ರಮಗಳೇನು? ಇವುಗಳಿಗೆ ನಿಗಧಿಪಡಿಸಿದ ವಿದ್ಯಾರ್ಹತೆಗಳು ಎಷ್ಟು?

ಆ) ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲು ಅನುಸರಿಸುತ್ತಿರುವ ನಿಯಮಗಳು ಯಾವುವು? ಇದರಲ್ಲಿ ಸ್ಥಳೀಯರಿಗೆ ಕಟ್ಟುನಿಟ್ಟಾಗಿ ನೇಮಕಾತಿಯನ್ನು ನೀಡಲು ಕ್ರಮವನ್ನು ಅನುಸರಿಸಲಾಗುತ್ತಿದೆಯೇ?

ಇ) ಖಾಲಿ ಇರುವ ಪೌರ ಕಾರ್ಮಿಕರ ಹುದ್ದೆಗಳನ್ನು ಇನ್ನೆಷ್ಟು ದಿನಗಳಲ್ಲಿ ತುಂಬಲು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):

ಅ) 643

616 ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ತುಂಬಲು ಅರ್ಜಿಗಳನ್ನು ಕರೆಯಲಾಗಿದೆ.

ಈ ಹುದ್ದೆಗಳಿಗೆ ಯಾವುದೇ ವಿದ್ಯಾರ್ಹತೆ ನಿಗದಿಪಡಿಸಿರುವುದಿಲ್ಲ.

ಆ) ವೃಂದ ಮತ್ತು ನೇಮಕಾತಿ ನಿಯಮಾವಳಿ ಪ್ರಕಾರ ನೇರ ನೇಮಕಾತಿಯ ನಿಯಮದಂತೆ ಸ್ಥಳೀಯರಿಗೆ ಕಟ್ಟುನಿಟ್ಟಾಗಿ ನೇಮಕಾತಿ ಮಾಡಬೇಕೆಂಬ ನಿಯಮವಿರುದಿಲ್ಲ.

ಇ) ಆದಷ್ಟು ಶೀಘ್ರವಾಗಿ

ರಾಜ್ಯದಲ್ಲಿ ಪ್ರವಾಹದಿಂದ ಉಂಟಾಗಿರುವ ಹಾನಿ

266 - ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿನ ಪ್ರವಾಹದಿಂದ ಯಾವ ಯಾವ ಜಿಲ್ಲೆಗಳು ನಷ್ಟಕ್ಕೆ ಒಳಗಾಗಿವೆ?

ಆ) ಈ ಜಿಲ್ಲೆಗಳಲ್ಲಿ ಆಗಿರತಕ್ಕ ನಷ್ಟದ ಅಂದಾಜಿನ ಪ್ರಮಾಣ ಎಷ್ಟು?

ಇ) ಈ ಪ್ರವಾಹಗಳಿಂದ ಸತ್ತ ಜನರ ಸಂಖ್ಯೆ ಎಷ್ಟು?

ಈ) ಪರಿಹಾರ ಹಾಗೂ ಪುನರ್ವಸತಿಗಾಗಿ ರಾಜ್ಯ ಸರ್ಕಾರವು ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಉ) ರಾಜ್ಯ ಸರ್ಕಾರವು ಪರಿಹಾರಕ್ಕಾಗಿ ಎಷ್ಟು ಹಣವನ್ನು ನೀಡಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿದೆ?

ಊ) ಕೇಂದ್ರ ಸರ್ಕಾರವು ಪ್ರವಾಹ ಪರಿಹಾರಕ್ಕಾಗಿ ರಾಜ್ಯಕ್ಕೆ ನೀಡಿರುವ ಹಣವೆಷ್ಟು?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಈ ಕೆಳಕಂಡ ಜಿಲ್ಲೆಗಳು ಇತ್ತೀಚಿನ ನೆರೆ ಹಾವಳಿಗೆ ತುತ್ತಾಗಿವೆ -

1. ಬೆಳಗಾವಿ 2. ಬಳ್ಳಾರಿ 3. ಬಿಜಾಪುರ 4. ಚಿಕ್ಕಮಗಳೂರು 5. ಚಿತ್ರದುರ್ಗ 6. ಹಾಸನ 7. ದಕ್ಷಿಣ ಕನ್ನಡ 8. ಧಾರವಾಡ 9. ಶಿವಮೊಗ್ಗ 10. ಕೊಡಗು 11. ಕೋಲಾರ 12. ಮಂಡ್ಯ 13. ಮೈಸೂರು ಮತ್ತು 14. ಉತ್ತರ ಕನ್ನಡ

ಆ) ಜಿಲ್ಲಾಧಿಕಾರಿಗಳ ಅಂತಿಮ ವರದಿಯಂತೆ ನೆರೆ ಹಾವಳಿಯಿಂದಾದ ನಷ್ಟ ರೂ. 16646.76 ಲಕ್ಷಗಳು

ಇ) ಮೃತರ ಸಂಖ್ಯೆ 71

ಈ) ಜಿಲ್ಲಾವಾರು ನೆರೆ ಪರಿಹಾರ ಕಾರ್ಯಗಳಿಗೆ ಖರ್ಚು ಮಾಡಿದ ಹಣದ ವಿವರ ಕೆಳಕಂಡಂತಿದೆ -

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಖರ್ಚು ಮಾಡಿದ ಹಣ	ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಖರ್ಚು ಮಾಡಿದ ಹಣ
1)	ಬೆಳಗಾವಿ	14.21	10)	ಕೊಡಗು	6.35
2)	ಬಳ್ಳಾರಿ	29.00	11)	ಕೋಲಾರ	10.74
3)	ಬಿಜಾಪುರ	21.80	12)	ಮಂಡ್ಯ	5.75
4)	ಚಿಕ್ಕಮಗಳೂರು	-	13)	ಮೈಸೂರು	3.52
5)	ಚಿತ್ರದುರ್ಗ	0.41	14)	ರಾಯಚೂರು	92.23
6)	ದಕ್ಷಿಣ ಕನ್ನಡ	10.89	15)	ಶಿವಮೊಗ್ಗ	21.89
7)	ಧಾರವಾಡ	131.10	16)	ಉತ್ತರ ಕನ್ನಡ	24.35
8)	ಹಾಸನ	-			
9)	ಗುಲ್ಬರ್ಗಾ	29.25			
				ಒಟ್ಟು	401.49

ಉ) ನೆರೆ ಪರಿಹಾರ ಕಾರ್ಯಗಳಿಗೆ ರೂ. 100.00 ಕೋಟಿಗಳನ್ನು ಬಿಡುಗಡೆ ಮಾಡಬೇಕೆಂದು ಕೋರಿ ದಿನಾಂಕ 26.7.94ರಂದು ಕೇಂದ್ರ ಸರ್ಕಾರಕ್ಕೆ ಮನವಿ ಪತ್ರವನ್ನು ಸಲ್ಲಿಸಿದೆ.

ಊ) ಕೇಂದ್ರ ಸರ್ಕಾರವು ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ತನ್ನ ವಾರ್ಷಿಕ ವಂತಿಗೆ ರೂ. 20.25 ಕೋಟಿಗಳನ್ನು ಬಿಡುಗಡೆ ಮಾಡಿದೆ. ಹಾಗೂ ಪ್ರವಾಹದಿಂದ ಸತ್ತವರ ಕುಟುಂಬಗಳಿಗೆ, ಪ್ರತಿ ಮರಣಕ್ಕೆ ರೂ. 50,000.00 ನಂತೆ ಅನುಕಂಪ ಪರಿಹಾರ ನೀಡಲು ರೂ. 32.00 ಲಕ್ಷಗಳನ್ನು ಪ್ರಧಾನ ಮಂತ್ರಿಯವರ ಪರಿಹಾರ ನಿಧಿಯಿಂದ ಬಿಡುಗಡೆ ಮಾಡಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಪಾವತಿ ಬಗ್ಗೆ ತೊಂದರೆ

530 - ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಪಾವತಿ ಬಗ್ಗೆ ತೊಂದರೆಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕೆಲವು ಖಾಸಗಿ ಕಾಲೇಜುಗಳಲ್ಲಿ ಸರ್ಕಾರದ ಆದೇಶದಂತೆ ಜಾಯಿಂಟ್ ಅಕೌಂಟಿನಲ್ಲಿ ಹಣ ಪಾವತಿ ಮಾಡಿರುವುದರಿಂದ ಶಾಲಾ ಶುಲ್ಕವನ್ನು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮರುಪಾವತಿ ಮಾಡುವಾಗ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಅಕಾಡಮಿ ಚೀಫ್ ಜನರಲ್ ಎಜುಕೇಷನ್ ನಡೆಸುವ ಕಾಲೇಜುಗಳಲ್ಲಿ ಈ ಫೀಸು ವಸೂಲಾತಿಯಾಗುವುದರಿಂದ ಇದನ್ನು ಹೇಗೆ ಪರಿಹರಿಸಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜಕಲ್ಯಾಣ ಸಚಿವರು) :

ಅ) ಇಲ್ಲ

ಆ) ಇಲ್ಲ

ಇ) 'ಅ' ನಲ್ಲಿ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹುಬ್ಬಳ್ಳಿ - ಧಾರವಾಡ ಮಹಾನಗರ ಸಭೆಯ ವ್ಯಾಪ್ತಿಯಲ್ಲಿ ಬಡಜನರಿಗೆ ಆಶ್ರಯ ಯೋಜನೆಯಲ್ಲಿ ನಿವೇಶನ

314 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ವ್ಯಾಪ್ತಿಯಲ್ಲಿ ಬರುವ ನೀವೇಶನ ರಹಿತ ಬಡಜನರಿಗೆ ನಿವೇಶನ ಒದಗಿಸಲು 1989 ರಿಂದ 1994ರ ವರೆಗೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆಯೇ? (ವಿವರ ನೀಡುವುದು)

ಆ) ಪ್ರತಿ ಸಾಲಿಗೆ ಗುರುತಿಸಲಾದ ಫಲಾನುಭವಿಗಳ ಸಂಖ್ಯೆ ಎಷ್ಟು?

ಇ) ಹಾಗೂ ಮಂಜೂರು ಮಾಡಿದ ನಿವೇಶನಗಳ ಸಂಖ್ಯೆ ಎಷ್ಟು? ಮಂಜೂರು ಮಾಡಬೇಕಾಗಿರುವ ಸಂಖ್ಯೆ ಎಷ್ಟು?

ಈ) ನಿವೇಶನ ರಹಿತ ಬಡಜನರಿಂದ ಪ್ರತಿಯೊಂದು ನಿವೇಶನಕ್ಕೆ ರೂ. 750-00 ರಂತೆ ಹಣ ತುಂಬಿಸಿ ಕೊಂಡಿರುವುದು ನಿಜವೇ? ಈ ರೀತಿ ಎಷ್ಟು ಜನರಿಂದ ಎಷ್ಟು ಹಣ ಪಡೆಯಲಾಗಿದೆ?

ಉ) ನಿವೇಶನ ರಹಿತ ಫಲಾನುಭವಿಗಳ ಸಂಖ್ಯೆ ಎಷ್ಟು? ಇವರಿಗೆ ನಿವೇಶನ ಒದಗಿಸಲು ಸರ್ಕಾರ ಮಾಡಿರುವ ಯೋಜನೆ ಹಾಗೂ ಕಾರ್ಯಕ್ರಮಗಳೇನು ಮತ್ತು ಯಾವಾಗ ನಿವೇಶನಗಳನ್ನು ಒದಗಿಸಲಾಗುವುದು?

ಶ್ರೀ ಗೋಪಿನಾಥ ಆರ್. ಸಾಂಡ್ರಾ (ವಸತಿ ಸಚಿವರು) :

ಅ) ಹುಬ್ಬಳ್ಳಿ ಧಾರವಾಡ ಮಹಾನಗರ ಸಭೆ ವ್ಯಾಪ್ತಿಯಲ್ಲಿರುವ ಮೂರು ವಿಧಾನಸಭೆ ಕ್ಷೇತ್ರ ಟಾಸ್ಕ್ ಫೋರ್ಸ್ ಸಮಿತಿಯು ಸನ್ 1989 ರಿಂದ 1994ರ ವರೆಗೆ ಒಟ್ಟು 6495 ಫಲಾನುಭವಿಗಳನ್ನು ಗುರುತಿಸಲಾಗಿದೆ.

ಆ)

ಸನ್	1991-92	-	ಇಲ್ಲ
	1992-93	-	3600
	1993-94	-	ಇಲ್ಲ
	1994-95	-	2895

ಇ) ಈ ವರೆಗೆ ಒಟ್ಟು 1423 ಫಲಾನುಭವಿಗಳಿಗೆ ನಿವೇಶನಗಳನ್ನು ಮಂಜೂರು ಮಾಡಲಾಗಿದೆ. ನಿವೇಶನ ಮಂಜೂರು ಮಾಡಬೇಕಾದ ಫಲಾನುಭವಿಗಳ ಸಂಖ್ಯೆ 5072.

ಈ) ಹೌದು, ಒಟ್ಟು 3857 ಜನರಿಂದ ಪ್ರತಿಯೊಬ್ಬನು 750-00 ರಂತೆ ಒಟ್ಟು ರೂ. 28,92,750-00 ಪಡೆಯಲಾಗಿದೆ ಹಾಗೂ ಫೆಬ್ರವರಿ 94 ರಿಂದ ಈ ರೀತಿ ವಸೂಲಿ ಮಾಡುವುದು ನಿಲ್ಲಿಸಲಾಗಿದೆ.

ಉ) ಒಟ್ಟು 6495 ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಅದರಲ್ಲಿ 1423 ಫಲಾನುಭವಿಗಳಿಗೆ ನಿವೇಶನ ವಿತರಿಸಲಾಗಿದೆ. ಉಳಿದ 5072 ಫಲಾನುಭವಿಗಳಿಗೆ ನಿವೇಶನ ಹಂಚಿಕೆಗಾಗಿ ಜಮೀನುಗಳನ್ನು ಗುರುತಿಸುವ ಕ್ರಮ ಕೈಕೊಳ್ಳಲಾಗುತ್ತಿದೆ.

ಮುಂಡರಗಿಯಲ್ಲಿನ ರೇಷ್ಮೆ ಫಾರಂ

443 - ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿಯಲ್ಲಿ ರೇಷ್ಮೆ ಫಾರಂ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ಫಾರಂನಲ್ಲಿ ನೀರಿನ ಕೊರತೆ ಇರುವುದು ನಿಜವೇ?

ಇ) ಹಾಗಿದ್ದಲ್ಲಿ ಇದನ್ನು ನೀಗಿಸಲು ಸರ್ಕಾರವು ತುಂಗಭದ್ರಾ ನದಿಯಿಂದ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳುವುದೇ?

ಈ) ಹಾಗಿದ್ದಲ್ಲಿ ಈ ಕೆಲಸವನ್ನು ಇನ್ನು ಎಷ್ಟು ದಿನಗಳಲ್ಲಿ ಪ್ರಾರಂಭಿಸಲಾಗುವುದು?

ಡಾ|| ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು) :

ಅ) ಬಂದಿದೆ.

ಆ) ಕೊರತೆ ಇದೆ.

ಇ) ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಈ) ಶೀಘ್ರದಲ್ಲಿ.

ಮುಂಡರಗಿಯಲ್ಲಿ ಮಿನಿ ವಿಧಾನಸೌಧ

446 - ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿಯಲ್ಲಿ ಮಿನಿ ವಿಧಾನ ಸೌಧದ ಬಹುದಿನದ ಬೇಡಿಕೆ ಇದ್ದರೂ ಸಹ ಇಲ್ಲಿಯವರೆಗೂ ಕಾರ್ಯಗತ ಮಾಡದಿರಲು ಕಾರಣವೇನು?

ಶ್ರೀ ಧರ್ಮಸಿಂಗ್ (ಕಂದಾಯ ಮಂತ್ರಿಗಳು):

ಅ) ಆದ್ಯತೆ ಮೇರೆಗೆ ಹಂತ ಹಂತವಾಗಿ ಕೈಗೊಳ್ಳಲಾಗುತ್ತಿದೆ.

ಮೀಸಲಾತಿ ನೀತಿ ನಿಯಮಗಳು

452 - ಶ್ರೀ ಹಂಪನಗೌಡ (ಸಿಂಧನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಮೀಸಲಾತಿ ರೀತಿ ನಿಯಮಗಳೇನು?

ಆ) ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿ ಆಯೋಗದ ವರದಿಯ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಸರ್ಕಾರದ ಮೀಸಲಾತಿ ನಿಯಮಾವಳಿಗಳನ್ನು ಆದೇಶ ಸಂಖ್ಯೆ ಸಕಇ 75 ಬಿಸಿಎ 92ರ ದಿನಾಂಕ : 20-4-94ರಲ್ಲಿ ಮತ್ತು 25-7-94 ರಲ್ಲಿ ನ್ಯಾಯ ಮೂರ್ತಿ ಚಿನ್ನಪ್ಪ ರೆಡ್ಡಿ ಆಯೋಗದ ಆಧಾರದ ಮೇಲೆ ಹೊರಡಿಸಿದೆ.

ಆ) 'ಅ' ಭಾಗದ ಉತ್ತರದಿಂದ ಉದ್ಭವಿಸುವುದಿಲ್ಲ.

ಆಶ್ರಯ ಮತ್ತು ಇತರೆ ಯೋಜನೆಗಳಡಿಯಲ್ಲಿ ಕಟ್ಟುವ ಮನೆಗಳ ಬಗ್ಗೆ

458 - ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92, 92-93 ಮತ್ತು 93-94 ಸಾಲುಗಳಲ್ಲಿ ರಾಜ್ಯದಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಬಡವರಿಗಾಗಿ ಎಷ್ಟು ಮನೆಗಳನ್ನು ಕಟ್ಟಲಾಗಿದೆ.

ಆ) ಇವುಗಳಿಗೆ ಖರ್ಚಾಗಿರುವ ಹಣವೆಷ್ಟು?

ಇ) ಇವುಗಳಲ್ಲಿ ಕಟ್ಟುತ್ತಿರುವ ವಿವಿಧ ಹಂತದಲ್ಲಿರುವ ಮನೆಗಳು ಎಷ್ಟು?

ಈ) ಇವುಗಳಿಗೆ ಬಿಡುಗಡೆ ಮಾಡಬೇಕಾಗಿರುವ ಹಣ ಎಷ್ಟು?

ಶ್ರೀ ಗೋಪಿನಾಥ್ ಸಾಂಡ್ರಾ (ವಸತಿ ಸಚಿವರು) :

ಅ) 1994ರ ಜುಲೈ ಅಂತ್ಯದ ವೇಳೆಗೆ ಆಶ್ರಯ ಯೋಜನೆಯಡಿ 47936 ಮನೆಗಳ ಹಾಗೂ ಡಾ: ಅಂಬೇಡ್ಕರ್ ಯೋಜನೆಯಡಿ 18456 ಮನೆಗಳ ನಿರ್ಮಾಣ ಪೂರ್ಣಗೊಂಡಿರುತ್ತದೆ.

ಆ) ಆಶ್ರಯ ಯೋಜನೆಯಡಿ ರೂ. 8707.07 ಲಕ್ಷಗಳು ಹಾಗೂ ಡಾ|| ಅಂಬೇಡ್ಕರ್ ಯೋಜನೆಯಡಿ ರೂ. 3034.26 ಲಕ್ಷ ಮೇಲ್ಕಂಡ ಸಂಖ್ಯೆಯ ಮನೆಗಳಿಗೆ ಖರ್ಚಾಗಿರುತ್ತದೆ.

ಇ)

ಆಶ್ರಯ	ಅಂಬೇಡ್ಕರ್
24737	6967

ಈ) ಆಶ್ರಯ ಯೋಜನೆಯಡಿ ಜಿಲ್ಲಾಧಿಕಾರಿಗಳಿಗೆ ಬೇಕಾದ ಹಣವನ್ನು ಸಂಪೂರ್ಣವಾಗಿ ಸರ್ಕಾರ ಬಿಡುಗಡೆ ಮಾಡಿದೆ.

ಡಾ|| ಅಂಬೇಡ್ಕರ್ ಮನೆಗಳಿಗೆ ಒಟ್ಟು ಬಿಡುಗಡೆ ಮಾಡಬೇಕಾದ ಹಣ ರೂ. 4920.00 ಲಕ್ಷ

ಈಗಾಗಲೇ ಬಿಡುಗಡೆ ಮಾಡಲಾಗಿರುವುದು	3872.00
ಗೃಹ ಮಂಡಳಿಯ ಬಿಡುಗಡೆ ಮಾಡಬೇಕಾದ ಹಣ	ರೂ. 1047.70 ಲಕ್ಷ

ರಾಜ್ಯದಲ್ಲಿ ಕಂದಾಯ ಭೂಮಿಯ ರೀ-ಸರ್ವೆ

316 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಕಂದಾಯ ಭೂಮಿಯ ರೀ ಸರ್ವೇ ಕೆಲಸ ನಡೆದು ಸುಮಾರು ಎಷ್ಟು ವರ್ಷಗಳಾಗಿವೆ;

ಆ) ರೀ - ಸರ್ವೇ ಮಾಡಿಸದಿರಲು ಕಾರಣವೇನು?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಸುಮಾರು 77 ವರ್ಷಗಳಾಗಿವೆ.

ಆ) ರೀ-ಸರ್ವೆ ಕಾರ್ಯಕ್ಕೆ ಬಹಳಷ್ಟು ಹಣ ಅಂದರೆ ರೂ. 717.00 ಕೋಟಿ ಬೇಕಾಗುತ್ತದೆ. ರೀ-ಸರ್ವೆ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಹೆದ್ದಾರಿಗಳಲ್ಲಿ ಸಾರ್ವಜನಿಕ ಸ್ಥಳದ ಒತ್ತುವರಿ ಬಗ್ಗೆ

316 ಎ - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೆದ್ದಾರಿಗಳಿಂದ ಹಿಡಿದು ದಾರ ಖರಾಬು, ಕೆರೆ ಅಂಗಳ ಹಾಗೂ ಹಳ್ಳಿಗಳನ್ನು ಒತ್ತುವರಿ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಸಾರ್ವಜನಿಕ ಮಹತ್ವದ ಸ್ಥಳ ಉಳಿಸಿಕೊಳ್ಳಲು ಸರ್ಕಾರಿ ಅಧಿಕಾರಿಗಳು ಆಸಕ್ತರಾಗಿಲ್ಲದಿರಲು ಕಾರಣವೇನು;

ಇ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಹೌದು.

ಆ) ಮತ್ತು ಇ) ಇಂತಹ ಸಾರ್ವಜನಿಕ ಉಪಯೋಗಕ್ಕಾಗಿ ಮೀಸಲಿಟ್ಟಿರುವ ಜಮೀನಿನಲ್ಲಿ ಒತ್ತುವರಿ ಆಗಿದ್ದರೆ, ಅದನ್ನು ಸಕ್ರಮಗೊಳಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಇಂತಹ ಜಮೀನಿನಲ್ಲಿ ಒತ್ತುವರಿಯನ್ನು ಒಕ್ಕಲೆಬ್ಬಿಸಲು ಕಾನೂನಿನಲ್ಲಿಯೇ ಅವಕಾಶವಿರುತ್ತದೆ. ಆದರೂ ಸರ್ಕಾರಿ ಸುತ್ತೋಲೆ ಸಂಖ್ಯೆ : ಆರ್ಡಿ 91 ಎಲ್ಜಿಪಿ 92, ದಿನಾಂಕ 22-5-93 ರಲ್ಲಿ ಕೂಡ ಸ್ಪಷ್ಟವಾಗಿ ಕಂದಾಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಚಿಕ್ಕನಾಯ್ಕನಹಳ್ಳಿ, ತಾಲ್ಲೂಕಿನಲ್ಲಿ ಶೇಂದಿವನದ ಜಮೀನಿನ ವಿಸ್ತೀರ್ಣ

316 - ಶ್ರೀ ಜೆ.ಸಿ. ಮಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ವಿತರಣೆ ಆಗದೆ ಉಳಿದಿರುವ ಶೇಂದಿವನ ಜಮೀನಿನ ವಿಸ್ತೀರ್ಣವೆಷ್ಟು?

ಆ) ಇದರಲ್ಲಿರಬಹುದಾದ ಮರಗಳ ಸಂಖ್ಯೆ ಎಷ್ಟು?

ಇ) ಈಗಾಗಲೇ ಈ ಜಮೀನಿನಲ್ಲಿ ಸಾಗುವಳಿ ಮಾಡಿರಬಹುದಾದ ವಿಸ್ತೀರ್ಣವೆಷ್ಟು?

ಈ) ಸದರಿ ಜಮೀನನ್ನು ಬಗರ್ಹುಕುಂ ವ್ಯಾಪ್ತಿಯಲ್ಲಿ ತಂದು ಮಂಜೂರು ಮಾಡಲು ಸರ್ಕಾರಕ್ಕೆ ಇರುವ ತೊಂದರೆ ಏನು?

ಉ) ಮಾಡುವುದಾದಲ್ಲಿ ಯಾವಾಗ ಕ್ರಮ ಕೈಗೊಳ್ಳುವಿರಿ?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) 12,289-00 ಎಕರೆಗಳು

ಆ) ಮರಗಳು ಯಾವುದು ಇಲ್ಲಾ.

ಇ) 12,289-00 ಎಕರೆಗಳು.

ಈ) ಶೇಂದಿ-ವನದ ಜಮೀನಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವವರಿಗೆ ಸಕ್ರಮಣ ಮಾಡುವುದರ ಬಗ್ಗೆ ಸರ್ಕಾರ ಒಂದು ಪಾಲಿಸಿ ನಿರ್ಧಾರ ತೆಗೆದುಕೊಳ್ಳಬೇಕಾಗಿದ್ದು, ಪ್ರಸ್ತಾವನೆ ಸಚಿವ ಸಂಪುಟದ ಪರಿಶೀಲನೆಯಲ್ಲಿದೆ.

ಉ) ತೀರ್ಮಾನ ತೆಗೆದುಕೊಂಡ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಕರ್ನಾಟಕ ಸಣ್ಣ ಕೈಗಾರಿಕಾ ಮಾರುಕಟ್ಟೆ ನಿಗಮದ ವ್ಯವಹಾರದಲ್ಲಿ ಕೆಲವು ಸಂಶಯಗಳು

270 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಸಣ್ಣ ಪ್ರಮಾಣ ಕೈಗಾರಿಕೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಣ್ಣದ ಟಿ.ವಿ. ಮತ್ತು ಫ್ರಿಡ್ಜಳನ್ನು ಖಾಯಂ ಉದ್ಯೋಗಿಗಳಿಗೆ ವಿತರಿಸಲು ದಿನಾಂಕ 20-5-1993 ರಿಂದ 18-1-1994ರವರೆಗೆ ಕೆ.ಎಸ್.ಐ.ಎಂ.ಸಿ.ಯವರು ಸದರಿ ವಸ್ತುಗಳ ಅಧಿಕೃತ ಮಾರಾಟಗಾರರಿಗೆ ಎಷ್ಟು ಕೋಟಿ ಹಣ ಬಿಡುಗಡೆ ಮಾಡಿದ್ದಾರೆ. ಈ ರೀತಿ ಹಣ ಬಿಡುಗಡೆ ಮಾಡಲು ಸರ್ಕಾರ ಅನುಮತಿ ಕೊಟ್ಟಿದೆಯೇ; ಮುಂಗಡ ಹಣ ಪಡೆದ ಅಧಿಕೃತ ಮಾರಾಟಗಾರರು ಯಾರು;

ಆ) ಕೆ.ಎಸ್.ಐ.ಎಂ.ಸಿ.ಯವರು ಈ ರೀತಿ ವಿತರಿಸಿದ ವಸ್ತುಗಳಿಗೆ ಯಾವ ದರದಲ್ಲಿ ಬಡ್ಡಿ ಹಾಕುವರು; ಯಾವ ದರದವರೆಗೂ ಬಡ್ಡಿ ಹಾಕಲು ಸರ್ಕಾರ ಅನುಮತಿ ಕೊಟ್ಟಿದೆ. ಸಮ ಬಡ್ಡಿ ಅಥವಾ ಅಸಲಿನ ಆಧಾರಿತ ಬಡ್ಡಿಯೇ (ಫ್ಲಾಟ್ರೇಟ್ ಇನ್ಟರೆಸ್ಟ್ ಆರ್ ರೆಡ್ಯೂಜಬಲ್ ರೇಟ್ ಇನ್ಟರೆಸ್ಟ್)?

ಶ್ರೀ ಎ.ಎಮ್. ಹಿಂಡಸಗೇರಿ (ಸಣ್ಣ ಪ್ರಮಾಣ ಕೈಗಾರಿಕೆಗಳ ಸಚಿವರು) :

ಅ) ಕೆ.ಎಸ್.ಐ.ಎಂ.ಸಿ. ಯಿಂದ ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ, ಹಾಗೂ ಸರ್ಕಾರದಿಂದ ಅನುಮತಿಯನ್ನು ಸಹ ನೀಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಹುಬ್ಬಳ್ಳಿ ಐ.ಟಿ.ಐ. ಸರ್ಕಾರಿ ಕಾಲೇಜಿನಿಂದ ಕೆಲವು ಟ್ರೇಡ್ಗಳನ್ನು ಶಿಗ್ಗಾವ್ಗೆ ಸ್ಥಳಾಂತರಿಸುವ ಬಗ್ಗೆ

527 - ಶ್ರೀ ಮಂಜುನಾಥ್ ಸಿ. ಕುನ್ನೂರ (ಶಿಗ್ಗಾವ್) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91 ರಿಂದ 1993-94ರ ವರೆಗೆ ಎಷ್ಟು ಐ.ಟಿ.ಐ. ಸರ್ಕಾರಿ ಕಾಲೇಜುಗಳು ಮಂಜೂರು ಆಗಿವೆ, ಎಲ್ಲಿ ಆಗಿವೆ, ಹಾಗೂ ಅವು ಪ್ರಾರಂಭವಾಗಿದೆಯೇ, ವಿವರ ನೀಡುವುದು ;

ಆ) ಹುಬ್ಬಳ್ಳಿ ಸರ್ಕಾರಿ ಐ.ಟಿ.ಐ. ದಿಂದ ರಾಯಚೂರು ಜಿಲ್ಲಾ ಕುಕನೂರಿಗೆ ಎಷ್ಟು ಟ್ರೇಡ್ಗಳನ್ನು ಸ್ಥಳಾಂತರಿಸಲಾಗಿದೆ;

ಇ) ಅದೇ ಮಾದರಿಯಲ್ಲಿ ಹುಬ್ಬಳ್ಳಿಯಿಂದ ಶಿಗ್ಗಾವ್ಗೆ ಕೆಲವು ಟ್ರೇಡ್ಗಳನ್ನು ಸ್ಥಳಾಂತರಿಸಲು ಮನವಿ ಬಂದಿದೆಯೇ;

ಈ) ಹಾಗಿದ್ದಲ್ಲಿ ಸರ್ಕಾರವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :

ಅ) ಒಟ್ಟು 12 ಕೈಗಾರಿಕಾ ತರಬೇತಿ ಸಂಸ್ಥೆಗಳು ಮಂಜೂರಾಗಿರುತ್ತವೆ ಹಾಗೂ ಪ್ರಾರಂಭವಾಗಿವೆ. (ವಿವರಗಳನ್ನು ಅನುಬಂಧದಲ್ಲಿ ನೀಡಿದೆ).

ಆ) ಎರಡು ವೃತ್ತಿಗಳು - ವೆಲ್ಡರ್

- ಎಲೆಕ್ಟ್ರಿಷಿಯನ್

ಇ) ಹೌದು.

ಈ) ಮುಂದೆ ಹಣಕಾಸು ಪರಿಸ್ಥಿತಿ ನೋಡಿ ಹೊಸ ಐಟಿಐ ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು.

ಅನುಬಂಧ

ಕೈಗಾರಿಕಾ ತರಬೇತಿ ಸಂಸ್ಥೆಯು ಸ್ಥಾಪನೆಯಾದ ವರ್ಷ	ಸಂಖ್ಯೆ	ಸ್ಥಳ	ಮಹಿಳಾ ಜನರಲ್	ವೃತ್ತಿಗಳು
1	2	3	4	5
1990-91	-	-	-	-
1991-92	4	(1) ಕುಕನೂರು	ಜನರಲ್	ವೆಲ್ಡರ್ (2 ಘಟಕಗಳು) ಎಲೆಕ್ಟ್ರಿಷಿಯನ್

				ಫಿಟ್ಟರ್, ಟರ್ನರ್.
		(2) ಗದಗ	ಮಹಿಳಾ	ಡಿಪಿಸಿಎಸ್ (ಕಂಪ್ಯೂಟರ್) ಎಲೆಕ್ಟ್ರಾನಿಕ್ ಮೆಕ್ಯಾನಿಕ್ ರೇಡಿಯೋ ಮತ್ತು ಟಿವಿ ಮೆಕ್ಯಾನಿಕ್.
		(3) ಗುಂಡ್ಲುಪೇಟೆ	ಮಹಿಳಾ	ಎಲೆಕ್ಟ್ರಾನಿಕ್ ಮೆಕ್ಯಾನಿಕ್ ರೇಡಿಯೋ ಮತ್ತು ಟಿವಿ ಮೆಕ್ಯಾನಿಕ್.
		(4) ನಾಲತವಾಡ	ಮಹಿಳಾ	ಎಲೆಕ್ಟ್ರಾನಿಕ್ ಮೆಕ್ಯಾನಿಕ್ ರೇಡಿಯೋ ಮತ್ತು ಟಿವಿ ಮೆಕ್ಯಾನಿಕ್.
1992-93	5	(1) ಕೋಲಾರ	ಮಹಿಳಾ	ಎಲೆಕ್ಟ್ರಾನಿಕ್ ಮೆಕ್ಯಾನಿಕ್ ರೇಡಿಯೋ ಮತ್ತು ಟಿ.ವಿ. ಮೆಕ್ಯಾನಿಕ್
		(2) ತಿಪಟೂರು	ಮಹಿಳಾ	"
		(3) ಪುತ್ತೂರು	ಮಹಿಳಾ	"
		(4)ಬೆಂಗಳೂರು-29	ಮಹಿಳಾ	ಎಲೆಕ್ಟ್ರಾನಿಕ್ ಮೆಕ್ಯಾನಿಕ್ ರೇಡಿಯೋ ಮತ್ತು ಟಿವಿ ಮೆಕ್ಯಾನಿಕ್ ಡಿಪಿಸಿಎಸ್ (ಕಂಪ್ಯೂಟರ್)
		(5) ವಿವೇಕನಗರ, ಬೆಂಗಳೂರು	ಜನರಲ್	ವೆಲ್ಡರ್, ಎಲೆಕ್ಟ್ರೀಷಿಯನ್, ಫಿಟ್ಟರ್ ಎಲೆಕ್ಟ್ರಾನಿಕ್ ಮೈಕಾನಿಕ್ ರೇಡಿಯೋ ಮತ್ತು ಟಿ.ವಿ. ಮೆಕ್ಯಾನಿಕ್.
1993-94	3	(1) ಬಾಗಲಕೋಟೆ	ಮಹಿಳಾ	ಎಲೆಕ್ಟ್ರಾನಿಕ್ ಮೈಕಾನಿಕ್ ರೇಡಿಯೋ ಮತ್ತು ಟಿ.ವಿ.
		(2) ಚೆನ್ನರಾಯಪಟ್ಟಣ	ಮಹಿಳಾ	"
		(3) ಚಿತ್ರದುರ್ಗ	ಮಹಿಳಾ	"

ರೈತರ ಭೂಮಿಯನ್ನು ಸರ್ಕಾರಿ ಪಡಾ ಎಂದು ದಾಖಲಿಸಿರುವುದರ ಬಗ್ಗೆ

526 - ಶ್ರೀ ಪ್ರೊ.ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

5*

ಅ) ಹತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಕಂದಾಯ ಬಾಕಿಗಾಗಿ "ಸರ್ಕಾರಿ ಪಡಾ" ಎಂದು ನಮೂದಿಸಿರುವುದನ್ನು ದಾಖಲೆಗಳಿಂದ ಕಡಿಮೆ ಮಾಡಿ ಹಿಂದಿನ ಭೂ ಮಾಲೀಕರಿಗೆ ಜಮೀನನ್ನು ವರ್ಗಾಯಿಸುವ ಕಂದಾಯ ಕಾಯಿದೆ ತಿದ್ದುಪಡಿಯಾದ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಮೇಲ್ಕಂಡ ತಿದ್ದುಪಡಿ ಆಧಾರಿಸಿ ಸರ್ಕಾರಿ ಆಜ್ಞೆ ಜಾರಿಗೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಪ್ರತಿಯನ್ನು ಶಾಸಕರಿಗೆ ಒದಗಿಸಲಾಗಿದೆಯೇ?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಕರ್ನಾಟಕ ಭೂ ಕಂದಾಯ ಕಾಯ್ದೆ 1964ಕ್ಕೆ ಕರ್ನಾಟಕ ಕಾಯ್ದೆ 28:1991ರ ಮೂಲಕ ತಂದ ತಿದ್ದುಪಡಿಯಂತೆ ತಹಶೀಲ್ದಾರರು ಯಾವುದೇ ಭೂ ಹಿಡುವಳಿಯನ್ನು ಭೂ ಕಂದಾಯ ಬಾಕಿ ರೂ. 10,000-0ಕ್ಕೆ ಮೀರಿಲ್ಲದೆ ಇದ್ದರೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತಿಲ್ಲ. ಮತ್ತು ದಿನಾಂಕ 7-8-91ಕ್ಕೆ ಮುಂಚೆ ರೂ. 10,000-00 ಕ್ಕಿಂತ ಹೆಚ್ಚು ಭೂ ಕಂದಾಯ ಬಾಕಿ ಇರದಿದ್ದ ಪ್ರಕರಣದಲ್ಲಿ ಜಮೀನು ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸಿದ್ದರೆ, ಅಂತಹ ಪ್ರಕರಣಗಳನ್ನು ಅಂತ್ಯಗೊಳಿಸಲಾಗಿದೆಯೆಂದು ಭಾವಿಸತಕ್ಕದ್ದು.

ಆ) ಮತ್ತು ಇ) ಕಾಯ್ದೆಗೆ ತಿದ್ದುಪಡಿಯನ್ನು ತಂದಿರುವ ಕಾರಣ ಸರ್ಕಾರಿ ಆದೇಶವನ್ನು ಹೊರಡಿಸುವ ಅವಶ್ಯಕತೆ ಇರುವುದಿಲ್ಲ. ಸದರಿ ತಿದ್ದುಪಡಿಯನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

ಕೊಳಚೆ ನಿರ್ಮೂಲನ ಮಂಡಳಿಯಿಂದ ನಿರ್ಮಿಸಿರುವ ಮನೆಗಳ ಸಂಖ್ಯೆ

525 - ಶ್ರೀ ಎಂ. ಮಹದೇವ್ (ನಂಜನಗೂಡು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಕೊಳಚೆ ನಿರ್ಮೂಲನ ಮಂಡಳಿಯಿಂದ ರಾಜ್ಯದಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ? ಇವುಗಳಲ್ಲಿ ಪೂರ್ಣಗೊಂಡಿರುವ ಮನೆಗಳೆಷ್ಟು ಮತ್ತು ಅಪೂರ್ಣಗೊಂಡಿರುವ ಮನೆಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಅಪೂರ್ಣಗೊಂಡಿದ್ದಲ್ಲಿ ಪೂರ್ಣಗೊಳಿಸಲು ತಗಲುವ ವೆಚ್ಚವೆಷ್ಟು?

ಇ) ಕೊಳಚೆ ನಿರ್ಮೂಲನ ಮಂಡಳಿಯಿಂದ ನಿರ್ಮಿಸಲ್ಪಟ್ಟಿರುವ ಮನೆಗಳು ಕೀಳು ದರ್ಜೆಯದೆಂದು ದೂರು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಈ) ಆಗಿದ್ದಲ್ಲಿ ತೆಗೆದುಕೊಂಡ ಕ್ರಮವೇನು?

ಉ) ಮುಂದೆ ಈ ಮಂಡಳಿಯಿಂದ ಎಷ್ಟು ಮನೆಗಳ ನಿರ್ಮಾಣ ಮಾಡಲು ಯೋಚಿಸಲಾಗಿದೆ?

ಊ) ಕೊಳಚೆ ನಿರ್ಮೂಲನ ಮಂಡಳಿಯಿಂದ ಕಂಟ್ರಾಕ್ಟ ಮಾಡುತ್ತಿರುವವರ ಹೆಸರು ಮತ್ತು ಅವರುಗಳಿಗೆ ಕೊಟ್ಟಿರುವ ಮನೆಯ ಕಟ್ಟಡದ ಕೆಲಸ ಮತ್ತು ನೀಡಿರುವ ಮುಂಗಡ ಹಣವೆಷ್ಟು?

ಶ್ರೀ ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಸಚಿವರು) :

ಅ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು ಮಂಡಳಿಯ ಪ್ರಾರಂಭದಿಂದ (1975)1994ರ ಮಾರ್ಚ್ ಅಂತ್ಯದವರೆಗೆ 15433 ಆರ್ಥಿಕವಾಗಿ ದುರ್ಬಲ ವರ್ಗದ ಮನೆಗಳನ್ನು ನಿರ್ಮಿಸುತ್ತಿದ್ದು, ಇವುಗಳ ಪೈಕಿ 10665ಎಲ್ಲಾ ರೀತಿಯಲ್ಲೂ ಪೂರ್ಣಗೊಂಡಿದೆ ಉಳಿದ 4768 ಮನೆಗಳು ಪೂರ್ಣಗೊಳ್ಳುವ ಹಂತದಲ್ಲಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಕೊಡಲಾಗಿದೆ.

ಆ) ಅಪೂರ್ಣಗೊಂಡಿರುವ 4768 ಮನೆಗಳು ಪೂರ್ಣಗೊಳ್ಳಲು 852.81 ಲಕ್ಷ ರೂಗಳು ಬೇಕಾಗುತ್ತದೆ.

ಇ) ಇಲ್ಲ

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಪ್ರಸಕ್ತ 1994-95ರ ಸಾಲಿನಲ್ಲಿ ಒಟ್ಟು 6500 ಮನೆಗಳನ್ನು ಪ್ರಾರಂಭಿಸಲು ಯೋಜಿಸಲಾಗಿದೆ.

ಊ) ಪ್ರಸ್ಥುತ ಮಂಡಳಿಯಲ್ಲಿ ಕಂಟ್ರಾಕ್ಟ ಮಾಡುತ್ತಿರುವವರ ಹೆಸರು ಅವರುಗಳಿಗೆ ಕೊಟ್ಟಿರುವ ಮನೆಯ ಕಟ್ಟಡದ ಕೆಲಸದ ಪಟ್ಟಿಯನ್ನು ಅನುಬಂಧ-2ರಲ್ಲಿ ಕೊಡಲಾಗಿದೆ. ಯಾವುದೇ ಗುತ್ತಿಗೆದಾರರಿಗೆ ಮಂಡಳಿಯಿಂದ ಮುಂಗಡ ಹಣ ನೀಡಿರುವುದಿಲ್ಲ.

ಅನುಬಂಧ-1

ಮಂಡಳಿಯ ಪ್ರಾರಂಭದಿಂದ (1975) ತೆಗೆದುಕೊಂಡು ಪೂರ್ಣಗೊಳಿಸಿರುವ ವಸತಿ ಗೃಹಗಳ ಪಟ್ಟಿ

ಕ್ರಮ ಸಂಖ್ಯಾ	ಜಿಲ್ಲೆಯ ಹೆಸರು	ನಿರ್ಮಿಸುತ್ತಿರುವ ಒಟ್ಟು ಮನೆಗಳು	ಪೂರ್ಣಗೊಂಡಿರುವ ಮನೆಗಳು	ಅಪೂರ್ಣಗೊಂಡಿರುವ ಮನೆಗಳು	ಪೂರ್ಣಗೊಳ್ಳಲು ಬೇಕಾಗುವ ಹಣ (ಲಕ್ಷ ರೂಗಳಲ್ಲಿ)
1.	ಬೆಂಗಳೂರು ನಗರ	5370	3446	1924	412.43
2.	ಬೆಂಗಳೂರು ಗ್ರಾಮೀಣ	685	473	212	51.52
3.	ತುಮಕೂರು	252	192	60	25.00
4.	ಕೋಲಾರ	460	322	138	27.00
5.	ಶಿವಮೊಗ್ಗ	243	143	100	25.00
6.	ಚಿತ್ರದುರ್ಗ	483	396	42	32.49
7.	ಮೈಸೂರು	2639	1976	663	82.82
8.	ಮಂಡ್ಯ	1184	998	186	29.96
9.	ಕೊಡಗು	-	-	-	-
10.	ಹಾಸನ	462	430	32	76.34
11.	ಚಿಕ್ಕಮಗಳೂರು	50	-	50	19.50
12.	ದಕ್ಷಿಣ ಕನ್ನಡ	100	46	54	7.20
13.	ಹುಬ್ಬಳ್ಳಿ	1201	850	351	15.00
14.	ಉತ್ತರ ಕನ್ನಡ	204	104	100	2.00
15.	ಬಳ್ಳಾರಿ	488	70	418	8.00
16.	ರಾಯಚೂರು	324	264	60	6.00
17.	ಗುಲ್ಬರ್ಗಾ	467	287	180	5.25
18.	ಬೀದರ್	322	170	152	6.30
19.	ಬಿಜಾಪುರ್	324	324	-	-
20.	ಬೆಳಗಾಂ	220	174	46	21.00
	ಒಟ್ಟು	15433	10665	4768	852.81

ಅನುಬಂಧ-2

ಮಂಡಳಿಯಲ್ಲಿ ಹಾಲಿ ಕೆಲಸ ಮಾಡುತ್ತಿರುವ ಕಂಟ್ರಾಕ್ಟರುಗಳ ಹೆಸರು ಮತ್ತು ಅವರುಗಳಿಗೆ ಕೊಟ್ಟಿರುವ ಕೆಲಸದ ಪಟ್ಟಿ.

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು	ಕೆಲಸದ ಹೆಸರು	ಮನೆಗಳು
1	2	3	4
	ಶ್ರೀಯುತರುಗಳು:		
1.	ಕೆ.ಕೆ. ರಾಧಕೃಷ್ಣ	ಸಂಜಯಗಾಂಧಿ ನಗರ, ಬೆಂಗಳೂರು	100
2.	ಜಿ. ವೆಂಕಟೇಶ ರೆಡ್ಡಿ	ರಾಜೇಶ್ವರಿ ಕೊಳಚೆ ಪ್ರದೇಶ, ಬೆಂಗಳೂರು	48
3.	ಜಿ. ವೆಂಕಟೇಶ ರೆಡ್ಡಿ	- ಡಿಟೋ - 2ನೇ ಹಂತ	56
4.	ಜಿ. ವೆಂಕಟೇಶ ರೆಡ್ಡಿ	ಸರ್ವೆ ನಂ 11 ಮತ್ತು 12 ಲಗ್ಗೇರೆ (ಗುಲ್ಬರ್ಗ ಕೊಳಚೆ ಪ್ರದೇಶ ನಿವಾಸಿಗಳನ್ನು ಸ್ಥಳಾಂತರಿಸಲು)	88
5.	ಸಿ.ಎಲ್. ಮುನಿಯಪ್ಪ	- ಡಿಟೋ - 2ನೇ ಹಂತ	64
6.	ರಾಮಕೃಷ್ಣ	ಹೆಗ್ಗಡೆ ಕಾಲೋನಿ, ತುಮಕೂರು	192
7.	ಜಯರಾಮರೆಡ್ಡಿ	ದೇವರ ಹೊಸಹಳ್ಳಿ, ಗೌರಿಬಿದನೂರು	100
8.	ಜಯರಾಮರೆಡ್ಡಿ	ವೆಂಕಟಗಿರಿ ಕೋಟೆ, ಚಿಂತಾಮಣಿ	60
9.	ಸದಾಶಿವರೆಡ್ಡಿ	- ಡಿಟೋ -	60
10.	ಶಿವಕುಮಾರ್	ಎ.ಕೆ. ಕಾಲೋನಿ, ಮಾಲೂರು	36
11.	ಯು.ಎನ್. ಪದ್ಮನಾಭರಾವ್	ನೆಲ್ಲೂರು ಶೇಡ್, 2ನೇ ಹಂತ, ಮೈಸೂರು 4ನೇ ಬ್ಲಾಕ್	48
12.	ಎಂ. ಸುಬ್ರಮಣ್ಯ	- ಡಿಟೋ - 5ನೇ ಬ್ಲಾಕ್	48
13.	ಎಂ. ಸುಬ್ರಮಣ್ಯ	- ಡಿಟೋ - 6ನೇ ಬ್ಲಾಕ್	32
14.	ಸಿದ್ದೇಗೌಡ ಮತ್ತು ಮಕ್ಕಳು	ಸಹಕಾರ ಭವನ ಹಿಂಭಾಗ, ಮೈಸೂರು	50
15.	ಯು.ಎನ್. ಪದ್ಮನಾಭರಾವ್	ಎ.ಕೆ. ಕಾಲೋನಿ, 2ನೇ ಹಂತ, ನಂಜನಗೂಡು	50
16.	ಯು.ಎನ್. ಪದ್ಮನಾಭರಾವ್	- ಡಿಟೋ -	20
17.	ಯು.ಎನ್. ಪದ್ಮನಾಭರಾವ್	ಅಶೋಕಪುರಂ, ನಂಜಗೂಡು	40
18.	ಸೋಮಶೇಖರ್	ಪೌರಕಾರ್ಮಿಕ ಕಾಲೋನಿ, ಕೊಳ್ಳೇಗಾಲ	90

19.	ರಾಮಚಂದ್ರ	ಡಿಟೋ	
20.	ಆರ್. ಜಯರಾಮರೆಡ್ಡಿ	ಗಿರಿಜಾ ಟಾಕೀಸ್ ಮುಂಭಾಗ, ಮಂಡ್ಯ	120
21.	ಹೆಚ್. ಕೃಷ್ಣ	ಗೌರಿಸಮಾಜ, ಮಂಡ್ಯ	80
22.	ಹೆಚ್.ಕೆ. ಮಂಜುನಾಥ್	ಪೌರಕಾರ್ಮಿಕ ಕಾಲೋನಿ, ಮಳವಳ್ಳಿ	30
23.	ಶಿವಾರೆಡ್ಡಿ	ಮಂಡಕ್ಕಿಭಟ್ಟಿ ಎರಿಯಾ, ದಾವಣಗೆರೆ	64
24.	ಸಿ.ಎಸ್. ಪುರುಶೋತ್ತಮ	ಇಂದಿರ ಕಾಟೇಜ್, ಚೆನ್ನಪಟ್ಟಣ	50
25.	ಸಿ.ಎಸ್. ಪುರುಶೋತ್ತಮ	ಅನಂದಪುರಂ, ಚೆನ್ನಪಟ್ಟಣ	50
26.	ಬಿ. ಗೋವಿಂದರಾಜ್	ವರಹಾ ಕಾಲೋನಿ, ಮಾಗಡಿ	30
27.	ಟಿ.ಜಿ. ಸೇಠ್, ಹುಬ್ಬಳ್ಳಿ	ಗಾಂಧಿನಗರ, ಬೆಂಗೇರಿ, ವೀರಾಪುರ ಒಣಿ	90
28.	ಟಿ.ಜಿ. ಸೇಠ್, ಹುಬ್ಬಳ್ಳಿ	ಗೊಲ್ಲರ ಓಣಿ ಕಾಲೋನಿ, ಮೋಹರ್ ಜೋಪಡಿ.	90
29.	ಎಸ್.ಬಿ. ಕಾಬ್ರಾ	ಇಂದಿರಾನಗರ, ಹಾನಗಲ್	119
30.	ಜಿ.ವಿ. ಪಂಚಾಂಗಮಠ	ಜೌಳಸ್ಲಮ್, ಗದಗ	150
31.	ಟಿ.ಜಿ. ಶೇಟ್	ಕೈಪಾಲಿ ಎಸ್ಟೇಟ್, ಹುಬ್ಬಳ್ಳಿ	40
32.	ಟಿ.ಜಿ ಶೇಟ್	ಸುಡುಗಾಡು ಸಿದ್ದ ಸಮಾಜ, ಧಾರವಾಡ	70
33.	ಶಿವರಾಜ್ ಕಾಮಶೆಟ್ಟಿ	ಹೊಸ ಹರಿಜನವಾಡ, ಬಸವಕಲ್ಯಾಣ	116
34.	ಷಣ್ಮುಗಪ್ಪ	ಹರಿಜನವಾಡ, ಶಹಪುರ	30
35.	ಸೈಯದ್ ಖುರ್ಶಿದ್ ಹುಸೇನ್	ಜೋಷಿವಾಡ, ಗುಲ್ಬರ್ಗ	31
36.	ಪಿ.ಆರ್. ಶ್ರೀನಿವಾಸನ್	ಬಿದರಿಗ್ರಾಮ, ಬೀದರ್	74
37.	ಸೋಮಕೊಂಡರೆಡ್ಡಿ	ಲಂಬಾಣಿತಾಂಡ, ರಾಯಚೂರು	50
38.	ಪಿ. ಸೋಮಕೊಂಡರೆಡ್ಡಿ	ವಡ್ಡವಾಡಿ, ಗಂಗಾವತಿ	50
39.	ಸೈಯದ್ ಶರೀಫ್ ಹುದ್ದೀನ್	ಗದ್ವಲ್ ಕ್ಯಾಂಪ್, ಗಂಗಾವತಿ	25
40.	ಸೈಯದ್ ಶರೀಫ್ ಹುದ್ದೀನ್	ಬಲ್ಡಟ್ರಂಚ್ ನಿಯರ್ ಕಿಲ್ಲು, ಗಂಗಾವತಿ	25
41.	ಮುತ್ಯಾಲು	ಕೊಪ್ಪಳದಲ್ಲಿ ಕಟ್ಟುತ್ತಿರುವ ಮನೆಗಳು	50
42.	ಮುತ್ಯಾಲು	- ಡಿಟೋ - ಬ್ಲಾಕ್-2	50

43.	ಕೆ.ಎಂ. ಕೊಟ್ರಯ್ಯ	ಶಿರಗುಪ್ಪ ಪಟ್ಟಣದ ಬ್ಲಾಕ್ ನಂ. 4 ಚೆನ್ನಮ್ಮನಹಳ್ಳಿ ಕೊಳಚೆ ಪ್ರದೇಶ ಬ್ಲಾಕ್-2	50
44.	ವಿ. ರಾಜೇಂದ್ರ	- ಡಿಟ್ಟೋ - ಬ್ಲಾಕ್-1	50
45.	ಬಿ.ಆರ್. ಪಾಟೀಲ್	ನಿಪ್ಪಾಣಿ ನಗರದ ನೆಲಗೆಜಾಳ ಕೊಳಚೆ ಪ್ರದೇಶ	30
46.	ವಿ. ಮುತ್ಯಾಲು	ಬಸವನ ಬಗೇವಾಡಿ, ಬಸವನಗರ	25

ವಿಶೇಷ ಘಟಕ ಯೋಜನೆ ಅಡಿ ಬಿಡುಗಡೆಯಾದ ಹಣದ ಬಗ್ಗೆ

85 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಅಡಿ ನಿಗದಿಗೊಳಿಸಿದ ಒಟ್ಟು ಹಣವೆಷ್ಟು; ಇದರಲ್ಲಿ ಖರ್ಚಾದ ಹಣ ಹಾಗೂ ಬಾಕಿ ಉಳಿದ ಹಣವೆಷ್ಟು?

ಆ) ಹಣ ಖರ್ಚಾಗದೆ ಉಳಿಯಲು ಕಾರಣವೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) 1993-94ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯ ಕಾರ್ಯಕ್ರಮಗಳಿಗೆ ನಿಗದಿಗೊಳಿಸಿದ ಒಟ್ಟು ಹಣ ವಿಶೇಷ ಕೇಂದ್ರೀಯ ಸಹಾಯಧನ ಸೇರಿ ರೂ. 293.52 ಕೋಟಿಗಳು.

ಇದರಲ್ಲಿ ಖರ್ಚಾದ ಹಣ ರೂ. 271.76 ಕೋಟಿಗಳು ಮತ್ತು ಬಾಕಿ ಉಳಿದ ಹಣ ರೂ. 21.75 ಕೋಟಿಗಳು.

ಆ) 1993-94ನೇ ಸಾಲಿನಲ್ಲಿ ಕೆಲವು ಇಲಾಖೆಗಳ ಹೊಸ ಯೋಜನೆಗಳಿಗೆ ಅಂಗೀಕಾರ ಸಕಾಲದಲ್ಲಿ ದೊರೆಯದೇ ಇದ್ದ ಕಾರಣ ಹಣ ಬಾಕಿ ಉಳಿದಿದೆ.

ಪ್ರಕೃತಿ ವಿಕೋಪದಿಂದಾಗಿರುವ ಹಾನಿ

89 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)

1990-91, 1991-92, 1992-93, 1993-94ನೇ ಸಾಲುಗಳಲ್ಲಿ ಪ್ರಕೃತಿ ವಿಕೋಪಕ್ಕೆ ಒಳಗಾದ ನಷ್ಟವೆಷ್ಟು?

ಆ) ಈ ಸಾಲುಗಳಲ್ಲಿ ಕೇಂದ್ರದ ನೆರವನ್ನು ಕೋರಿ ರಾಜ್ಯ ಸರ್ಕಾರದವರು ಮನವಿಗಳನ್ನೇನಾದರೂ ಸಲ್ಲಿಸಿರುವರೆ?

ಇ) ಹಾಗಿದ್ದಲ್ಲಿ, ಕೇಂದ್ರ ಸರ್ಕಾರದಿಂದ ಸದರಿ ಸಾಲುಗಳಲ್ಲಿ ಬಂದ ಪರಿಹಾರ ಎಷ್ಟು? ಮತ್ತು ಯಾವ ರೂಪದಲ್ಲಿ ವರ್ಷಾವಾರು ವಿವರಗಳನ್ನು ಒದಗಿಸುವುದು)

ಶ್ರೀ ಧರಮ್‌ಸಿಂಗ್ (ಕಂದಾಯ ಸಚಿವರು) :

ಅ) ಈ ಸಾಲುಗಳಲ್ಲಿ ರಾಜ್ಯದಲ್ಲಿ ಪ್ರಕೃತಿ ವಿಕೋಪದಿಂದ ಉಂಟಾದ ನಷ್ಟ ಕೆಳಕಂಡಂತೆ ಇದೆ:

ವರ್ಷ	ಪ್ರಕೃತಿ ವಿಕೋಪದ ವಿವರ	ಅಂದಾಜು ನಷ್ಟ (ಕೋಟಿ ರೂ.ಗಳಲ್ಲಿ)
1990-91	ನೆರೆ ಹಾವಳಿ	21.54
1991-92	ನೆರೆ ಹಾವಳಿ	146.21
	ಬರ	50.00
1992-93	ನೆರೆ ಹಾವಳಿ	307.87
1993-94	ನೆರೆ ಹಾವಳಿ	247.97

ಆ) ಹೌದು

ಇ) ಈ ಸಾಲುಗಳಲ್ಲಿ ಕೇಂದ್ರ ಸರ್ಕಾರವು ರಾಜ್ಯ ಪ್ರಕೃತಿ ವಿಕೋಪ ನಿಧಿಗೆ ಸಾಮಾನ್ಯವಾಗಿ ನೀಡಬೇಕಾದ ವಾರ್ಷಿಕ ಅನುಧಾನ ರೂ. 20.25 ಕೋಟಿಗಳನ್ನು ಹೊರತು ಪಡಿಸಿ, ಬೇರೆ ಯಾವುದೇ ಅನುದಾನ ನೀಡಿಲ್ಲ. ಅದರೆ, 1992-93ನೇ ಸಾಲಿನಲ್ಲಿ 50.00 ಕೋಟಿ ರೂ.ಗಳನ್ನು ಮುಂಗಡವಾಗಿ ನೀಡಿದ್ದು ಅದೇ ಆರ್ಥಿಕ ವರ್ಷದಲ್ಲಿ ತೀರುವಳಿ ಮಾಡಲಾಗಿದೆ.

ಅತಿ ಹೆಚ್ಚಿನ ಮಳೆಯಿಂದ ಹಾನಿಯುಂಟಾದ ತಾಲ್ಲೂಕುಗಳ ವಿವರ

90 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇತ್ತೀಚೆಗೆ ಬಿದ್ದ ಮಳೆಯ ಹಾನಿಗೆ ಒಳಗಾದ ತಾಲ್ಲೂಕುಗಳೆಷ್ಟು? (ತಾಲ್ಲೂಕುವಾರು ಆಗಿರುವ ಹಾನಿಯ ವಿವರಗಳನ್ನು ಒದಗಿಸುವುದು);

ಆ) ಒಟ್ಟು, ಹಾನಿಗೊಳಗಾದ ಕೃಷಿ ಭೂಮಿ, ಸಾರ್ವಜನಿಕ ಆಸ್ತಿ ಪಾಸ್ತಿಗಾದ ನಷ್ಟವೆಷ್ಟು?

ಇ) ಕೇಂದ್ರ ಸರ್ಕಾರವನ್ನು ಪರಿಹಾರಕ್ಕಾಗಿ ಕೇಳಿಕೊಳ್ಳಲಾಗಿದೆಯೇ;

ಈ) ಕೇಳಿಕೊಳ್ಳಲಾದ ಹಣದ ಮೊತ್ತವೆಷ್ಟು? ಕೇಂದ್ರ ಸರ್ಕಾರದಿಂದ ಬಂದ ಹಣವೆಷ್ಟು?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ವಿವರಗಳನ್ನು ಅನುಬಂಧ 'ಅ'ನಲ್ಲಿ ನೀಡಿದೆ.

ಆ) ಹಾನಿಗೊಳಗಾದ ಕೃಷಿ ಭೂಮಿ 157482 ಹೆಕ್ಟೇರ್‌ಗಳು

ಸಾರ್ವಜನಿಕ ಆಸ್ತಿಪಾಸ್ತಿಗಾದ ನಷ್ಟ ರೂ. 8751.37 ಲಕ್ಷಗಳು

ಇ) ಹೌದು

ಈ) ನೆರೆ ಪರಿಹಾರ ಕಾರ್ಯಗಳಿಗೆ ಕೇಂದ್ರದಿಂದ ಕೋರಿರುವ ಮೊತ್ತ ರೂ. 100.00 ಕೋಟಿಗಳು. ಕೇಂದ್ರದಿಂದ ಪ್ರಕೃತಿ ಪರಿಹಾರ ನಿಧಿಗೆ ನೀಡಬೇಕಾಗಿರುವ ವಾರ್ಷಿಕ ವಂತಿಗೆ ರೂ. 20.25 ಕೋಟಿಗಳು ಮತ್ತು ಪ್ರಧಾನ ಮಂತ್ರಿಯವರ ಪರಿಹಾರ ನಿಧಿಯಿಂದ ಮೃತರ ವಾರಸುದಾರರಿಗೆ ತಲಾ ರೂ. 50,000.00 ನಂತೆ ನೀಡಲು ರೂ. 32.00 ಲಕ್ಷಗಳು.

ಅನುಬಂಧ - ಅ

ಜೂನ್ - ಜುಲೈ 1994 ರ ಭಾರಿ ಮಳೆ : ಪ್ರವಾಹದಿಂದ ಆದ ಹಾನಿಯ ತಾಲ್ಲೂಕುವಾರು ವಿವರಗಳನ್ನು ತೋರುವ ತಃಖ್ತೆ

1) ರೂ.ಲಕ್ಷಗಳಲ್ಲಿ
2) ಕ್ಷೇತ್ರ ಹೆಕ್ಟೇರುಗಳಲ್ಲಿ

ಕ್ರಮ ಸಂಖ್ಯೆ	ಜಿಲ್ಲೆಯ:ತಾಲ್ಲೂಕಿನ ಹೆಸರು	ಖಾಸಗಿಆಸ್ತಿಪಾಸ್ತಿಗಳ ಹಾನಿ	ಸಾರ್ವಜನಿಕ ಆಸ್ತಿಪಾಸ್ತಿಗಳ ಹಾನಿ	ಒಟ್ಟು ಹಾನಿ
(1)	ಬೆಳಗಾಂ ಜಿಲ್ಲೆ:			
	1. ಬೆಳಗಾವಿ	85.43	207.00	292.43
	2. ಖಾನಾಪುರ	211.65	106.35	318.00
	3. ಹುಕ್ಕೇರಿ	31.48	81.75	113.23
	4. ಬೈಲಹೊಂಗಲ	4.74	64.80	69.54
	5. ಸವದತ್ತಿ	0.38	-	0.38
	6. ರಾಮದುರ್ಗ	0.88	8.00	8.88
	7. ಗೋಕಾಕ್	1147.92	108.68	1256.60
	8. ಚಿಕ್ಕೋಡಿ	198.22	70.25	268.47
	9. ರಾಯಭಾಗ್	1037.53	21.35	1058.88
	10. ಅಥಣಿ	121.77	41.00	162.77
	ಒಟ್ಟು:	2840.00	709.18	3549.18
(2)	ಬಿಜಾಪುರ ಜಿಲ್ಲೆ:			
	1. ಬಿಜಾಪುರ	70.42	30.00	100.42
	2. ಬ-ಬಾಗೇವಾಡಿ	65.10	-	65.10
	3. ಇಂಡಿ	107.01	17.80	124.81
	4. ಸಿಂಧಗಿ	18.80	1.50	20.30
	5. ಜಮಖಂಡಿ	396.98	132.30	529.28
	6. ಮುಧೋಳ	413.27	227.60	640.37
	7. ಬೀಳಗಿ	98.71	39.50	138.21
	8. ಬಾಗಲಕೋಟೆ	102.23	54.75	156.98
	ಒಟ್ಟು:	1272.52	503.45	1775.97
(3)	ಚಿಕ್ಕಮಗಳೂರು ಜಿಲ್ಲೆ:			
	1. ಚಿಕ್ಕಮಗಳೂರು	140.62	156.79	297.41
	2. ಮಧುಗಿರಿ	64.66	343.80	408.46
	3. ಕೊಪ್ಪ	73.53	55.84	129.37
	4. ಶೃಂಗೇರಿ	16.79	35.18	51.97
	5. ಎನ್.ಆರ್. ಪುರ	9.56	41.62	51.18
	6. ತರೀಕೆರೆ	9.88	77.70	87.58
	7. ಕಡೂರು	12.09	51.80	63.89
	ಒಟ್ಟು:	327.14	770.73	1097.87
(4)	ಚಿತ್ರದುರ್ಗ ಜಿಲ್ಲೆ:			
	1. ಹರಿಹರ	7.48	97.81	105.29
	2. ದಾವಣಗೆರೆ	0.60	0.40	1.00
	ಒಟ್ಟು:	8.08	98.21	106.29

(5)	ದಕ್ಷಿಣ ಕನ್ನಡ ಜಿಲ್ಲೆ:			
	1. ದಕ್ಷಿಣ ಕನ್ನಡ	318.31	875.13	1193.44
	2. ಬಂಟ್ವಾಳ	56.04	280.25	336.29
	3. ಪುತ್ತೂರು	34.49	230.29	264.78
	4. ಸುಳ್ಯ	10.95	83.20	94.15
	5. ಬೆಳ್ತಂಗಡಿ	12.44	100.70	113.14
	6. ಕುಂದಾಪುರ	243.37	170.99	414.36
	7. ಉಡುಪಿ	214.60	533.73	748.33
	8. ಕಾರ್ಕಳ	116.83	130.41	247.24
	ಒಟ್ಟು:	1007.03	2404.70	3411.73
(6)	ಧಾರವಾಡ ಜಿಲ್ಲೆ:			
	1. ಧಾರವಾಡ	16.73	87.28	104.01
	2. ಹುಬ್ಬಳ್ಳಿ	21.82	87.38	109.20
	3. ಕಲಘಟಗಿ	16.40	15.74	32.14
	4. ಸವಣೂರು	37.81	12.65	50.46
	5. ಶಿರಹಟ್ಟಿ	5.95	0.75	6.70
	6. ಕುಂದಗೋಳ್	6.12	14.25	20.37
	7. ಶಿಗ್ಗಾಂವ್	183.10	13.03	196.13
	8. ಹಾನಗಲ್	61.92	29.76	91.68
	9. ಹಾವೇರಿ	64.40	51.73	116.13
	10. ರಾಣೆಬೆನ್ನೂರು	93.39	50.67	144.06
	11. ಬ್ಯಾಡಗಿ	8.68	22.40	31.08
	12. ಹಿರೆಕೆರೂರು	114.83	34.20	149.03
	13. ಗದಗ್	0.76	-	0.76
	14. ಮುಂಡರಗಿ	120.66	1.00	121.66
	ಒಟ್ಟು:	752.58	420.84	1173.42
(7)	ಹಾಸನ ಜಿಲ್ಲೆ:			
	1. ಆಲೂರು	10.00	54.75	64.75
	2. ಅರಕಲಗೂಡು	7.26	71.60	78.86
	3. ಅರಸೀಕೆರೆ	1.45	29.63	31,08
	4. ಬೇಲೂರು	152.54	126.85	279.39
	5. ಚನ್ನರಾಯಪಟ್ಟಣ	5.80	8,95	14.75
	6. ಹಾಸನ	26.35	39.00	65.35
	7. ಹೊಳೆನರಸೀಪುರ	26.48	21.55	48.03
	8. ಸಕಲೇಶಪುರ	12.66	242.25	254.91
	ಒಟ್ಟು:	242.53	594.58	837.11
(8)	ಕೊಡಗು ಜಿಲ್ಲೆ:			
	1. ಮಡಿಕೇರಿ	32.94	209.91	242.85
	2. ವಿರಾಜಪೇಟೆ	77.65	196.43	274.08
	3. ಸೋಮವಾರಪೇಟೆ	26.02	242.21	268.23
	ಒಟ್ಟು:	136.61	648.55	785.16
(9)	ಕೋಲಾರ ಜಿಲ್ಲೆ:			
	1. ಶ್ರೀನಿವಾಸಪುರ	10.77	-	10.77

	2. ಮುಳಬಾಗಿಲು	1.12	18.35	19.47
	ಒಟ್ಟು:	11.89	18.35	30.24
(10)	ಮಂಡ್ಯ ಜಿಲ್ಲೆ:			
	1. ಕೃಷ್ಣರಾಜಪೇಟೆ	18.53	34.06	52.59
	2. ಪಾಂಡವಪುರ	0.33	0.50	0.83
	ಒಟ್ಟು:	18.86	34.56	53.42
(11)	ಮೈಸೂರು ಜಿಲ್ಲೆ:			
	1. ಮೈಸೂರು	1.59	150.85	152.44
	2. ನಂಜನಗೂಡು	1.58	29.5	31.08
	3. ಟೀನರಸೀಪುರ	4.41	33.0	37.41
	4. ಕೊಳ್ಳೇಗಾಲ	38.38	17.4	55.78
	5. ಹುಣಸೂರು	143.06	26.1	169.16
	6. ಪಿರಿಯಾಪಟ್ಟಣ	78.5	50.79	129.29
	7. ಹೆಗ್ಗಡದೇವನಕೋಟೆ	27.12	59.45	86.57
	8. ಕೆ.ಆರ್. ನಗರ	-	10.00	10.00
	ಒಟ್ಟು:	294.64	377.09	671.73
(12)	ಶಿವಮೊಗ್ಗ ಜಿಲ್ಲೆ:			
	1. ಶಿವಮೊಗ್ಗ	73.24	115.50	188.74
	2. ಭದ್ರಾವತಿ	50.35	135.72	186.07
	3. ಚನ್ನಗಿರಿ	3.55	18.55	22.10
	4. ಹೊನ್ನಾಳಿ	30.90	29.79	60.69
	5. ತೀರ್ಥಹಳ್ಳಿ	7.85	106.80	114.65
	6. ಸಾಗರ	14.34	85.32	99.66
	7. ಶಿಕಾರಿಪುರ	55.51	444.13	499.64
	8. ಸೊರಬ	106.29	101.37	207.66
	9.ಹೊಸನಗರ	24.64	118.93	143.57
	ಒಟ್ಟು:	366.67	1156.11	1522.78
(13)	ಉತ್ತರ ಕನ್ನಡ ಜಿಲ್ಲೆ:			
	1. ಕಾರವಾರ	55.72	214.90	270.62
	2. ಅಂಕೋಲ	26.10	61.95	88.05
	3. ಕುಮುಟಾ	83.73	116.45	200.18
	4. ಹೊನ್ನಾವರ	64.01	67.05	131.06
	5. ಭಟ್ಕಳ	20.84	60.35	081.19
	6. ಶಿರಸಿ	42.35	134.80	177.15
	7. ಸಿದ್ದಾಪುರ	47.22	72.40	119.62
	8. ಯಲ್ಲಾಪುರ	83.09	88.15	171.24
	9. ಮುಂದಗೋಡ	24.56	153.16	77.26
	10.ಹಳಿಯಾಳ	12.07	180.19	192.26
	11.ಜೊಯಿಡಾ	12.39	30.90	43.29
	ಒಟ್ಟು:	472.10	1080.30	1552.40

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಪ್ರಕೃತಿ ವಿಕೋಪದಿಂದುಂಟಾದ ನಷ್ಟ

91 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92,1992-93, ಮತ್ತು 1993-94ರ ಸಾಲುಗಳಲ್ಲಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಪ್ರಕೃತಿ ವಿಕೋಪಕ್ಕೆ ಒಳಗಾದ ಒಟ್ಟು ನಷ್ಟವೆಷ್ಟು?

ಆ) ಈ ಸಾಲುಗಳಲ್ಲಿ ರಾಜ್ಯ: ಸರ್ಕಾರ ಬಿಡುಗಡೆ ಮಾಡಿದ ಪರಿಹಾರದ ಮೊತ್ತವೆಷ್ಟು?

ಇ) ಸಾರ್ವಜನಿಕ ನಷ್ಟ ಎಷ್ಟು ಹಾಗೂ ಖಾಸಗಿಗೆ ಸಂಬಂಧಿಸಿದ ನಷ್ಟವೆಷ್ಟು ಹಾಗೂ ಒದಗಿಸಿದ ಪರಿಹಾರವೆಷ್ಟು?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) 1991-92ರಿಂದ 1993-94ರವರೆಗೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಪ್ರಕೃತಿ ವಿಕೋಪದಿಂದಾದ ನಷ್ಟ ಈ ಕೆಳಕಂಡಂತಿದೆ -

(ರೂ. ಲಕ್ಷಗಳಲ್ಲಿ)

ಆರ್ಥಿಕ ವರ್ಷ	ಖಾಸಗಿ ಆಸ್ತಿಗಳಿಗೆ	ಸಾರ್ವಜನಿಕ ಆಸ್ತಿಗಳಿಗೆ	ಒಟ್ಟು
1991-92	3.82	5.80	9.62
1992-93	2.45	5.92	8.37
1993-94	0.12	3.40	3.52
ಒಟ್ಟು:	6.39	15.12	21.51

ಆ) ಮತ್ತು ಇ) ಸಾಲುಗಳಲ್ಲಿ ತೀರ್ಥಹಳ್ಳಿ ತಾಲ್ಲೂಕಿಗೆ ಬಿಡುಗಡೆ ಮಾಡಿದ ಪರಿಹಾರದ ಮೊತ್ತ ಈ ಕೆಳಕಂಡಂತೆ ಇರುತ್ತದೆ -

(ರೂ. ಲಕ್ಷಗಳಲ್ಲಿ)

ಆರ್ಥಿಕ ವರ್ಷ	ಖಾಸಗಿ ಆಸ್ತಿಪಾಸ್ತಿಗಳ ಪರಿಹಾರಕ್ಕಾಗಿ	ಸಾರ್ವಜನಿಕ ಆಸ್ತಿ ಪಾಸ್ತಿಗಳಿಗೆ ದುರಸ್ತಿಗಾಗಿ	ಒಟ್ಟು
1991-92	2.80	4.624	7.424
1992-93	1.50	4.72	6.220
1993-94	0.50	2.58	3.080
ಒಟ್ಟು:	4.80	11.924	16.724

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಈ ಮೂರು ಸಾಲುಗಳಲ್ಲಿ ಖಾಸಗಿ ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಾದ ಹಾನಿ ಮತ್ತು ಒದಗಿಸಿದ ಪರಿಹಾರ ಈ ಕೆಳಕಂಡಂತಿರುತ್ತದೆ-

(ರೂ. ಲಕ್ಷಗಳಲ್ಲಿ)

ಖಾಸಗಿ ಆಸ್ತಿ		ಸಾರ್ವಜನಿಕ ಆಸ್ತಿಪಾಸ್ತಿ		ಒಟ್ಟು	
ಅಂದಾಜು ನಷ್ಟ	ಒದಗಿಸಿದ ಪರಿಹಾರ	ಅಂದಾಜು ನಷ್ಟ	ದುರಸ್ತಿಗಾಗಿ ಒದಗಿಸಲಾದ ಹಣ	ಅಂದಾಜು ನಷ್ಟ	ಒದಗಿಸಿದ ಪರಿಹಾರ
6.39	3.20	15.12	11.92	21.51	15.12

ಅಕ್ರಮ ಭೂಮಿ ಸಕ್ರಮಗೊಳಿಸಲು ರಚಿಸಲಾದ ಸಮಿತಿಗಳು

88 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಕ್ರಮ ಭೂಮಿ ಸಕ್ರಮಗೊಳಿಸಲು ಹೊಸ ಅಪರ ಸಮಿತಿಗಳನ್ನು ರಚಿಸಲು ಸರ್ಕಾರ ತೀರ್ಮಾನಿಸಿದೆಯೇ?

ಆ) ಹಾಗಿದ್ದಲ್ಲಿ, ಎಷ್ಟು ತಾಲ್ಲೂಕುಗಳಲ್ಲಿ ಇಂತಹ ಸಮಿತಿಗಳನ್ನು ರಚಿಸಲಾಗುವುದು;

ಇ) ಈಗಿರುವ ಸಮಿತಿಗಳ ಕಾರ್ಯನಿರ್ವಹಣೆಗೆ ಇರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ತೊಂದರೆಗಳನ್ನು ಪರಿಹರಿಸಲು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಧರಮ್ ಸಿಂಗ್ (ಕಂದಾಯ ಸಚಿವರು) :

ಅ) ಹೌದು.

ಆ) ಯಾವ ಯಾವ ತಾಲ್ಲೂಕಿನಲ್ಲಿ ಉಳಿದಿರುವ ಪ್ರಕರಣಗಳು ಜಾಸ್ತಿ ಇವೆ ಅಂತಹ ತಾಲ್ಲೂಕುಗಳಲ್ಲಿ ಅಪರ ಸಮಿತಿಯನ್ನು ರಚಿಸಲಾಗುವುದು. ಇದಕ್ಕಾಗಿ ಆಯಾಯಾ ಮಾನ್ಯ ಶಾಸಕರುಗಳಿಂದಲೂ ಮತ್ತು ಜಿಲ್ಲಾಧಿಕಾರಿಗಳಿಂದಲೂ ಸಲಹೆಗಳನ್ನು ಕೇಳಲಾಗಿದೆ. ಸಲಹೆಗಳು ಬಂದಕಡೆಗಳಲ್ಲಿ ಅಪರ ಸಮಿತಿಗಳನ್ನು ರಚಿಸಲಾಗಿದೆ.

ಇ) ಮತ್ತು ಈ) ಈಗಿರುವ ಸಮಿತಿಗಳು ಕಾಲಕಾಲಕ್ಕೆ ಸೇರಿ ಉಳಿದಿರುವ ಪ್ರಕರಣಗಳನ್ನು ಶೀಘ್ರವಾಗಿ ವಿಲೇ ಮಾಡುತ್ತಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆ. ಆದಕಾರಣ ಸರ್ಕಾರವು ಅಪರ ಸಮಿತಿಗಳನ್ನು ರಚಿಸಲು ತೀರ್ಮಾನಿಸಿದೆ. ಇದಕ್ಕೆ ಅನುವಾಗುವಂತೆ ಸಂಬಂಧಿಸಿದ ನಿಯಮಾವಳಿಗಳನ್ನು ತಿದ್ದುಪಡಿ ಮಾಡಿ ಸುಗ್ರೀವಾಜ್ಞೆ ಸಹಾ ಈಗಾಗಲೇ ಹೊರಡಿಸಲಾಗಿದೆ.

ಕೇಂದ್ರ ಸರ್ಕಾರದ ಸಹಾಯ ಧನದಿಂದ ಕೈಮಗ್ಗ ನೇಕಾರರಿಗೆ ವಸತಿ

325 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ಸಹಾಯಧನದೊಂದಿಗೆ ಕೈಮಗ್ಗ ನೇಕಾರರಿಗೆ ವಸತಿ ಹಾಗೂ ಕಾರ್ಯಾಗಾರ ಯೋಜನೆಯಡಿಯಲ್ಲಿ ಈ ರಾಜ್ಯದಲ್ಲಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು?

ಆ) ಈ ಮನೆಗಳನ್ನು ಕಟ್ಟಿಸುವ ಕೆಲಸ ಯಾವ ಹಂತದಲ್ಲಿ ಇದೆ.

ಇ) ಈ ಯೋಜನೆಯಡಿಯಲ್ಲಿ ಈ ವರ್ಷ ಎಷ್ಟು ಮನೆಗಳಿಗೆ ಕೇಂದ್ರ ಸರ್ಕಾರದ ಮಂಜೂರಾತಿ ಪಡೆಯಲಾಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜವಳಿ ರಾಜ್ಯ ಸಚಿವರು) :

ಅ) 759

ಆ) 280 ಮನೆಗಳ ನಿರ್ಮಾಣ ಕೆಲಸವು ಪೂರ್ಣಗೊಂಡಿರುತ್ತದೆ. 48 ಮನೆಗಳ ನಿರ್ಮಾಣದ ಕೆಲಸವು ಪ್ರಗತಿಯಲ್ಲಿದೆ. ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ 431ನೇಕಾರರಿಗೆ ಮನೆಗಳನ್ನು ನಿರ್ಮಿಸಿ ಕೊಡಲು ಸಹಾಯಧನವಾಗಿ ಒಟ್ಟು ರೂ.60.34 ಲಕ್ಷಗಳು ಕೇಂದ್ರ ಸರ್ಕಾರದಿಂದ ಮಂಜೂರಾಗಿದ್ದು, ಇದಕ್ಕೆ ಸರಿಸಮಾನವಾಗಿ ಸಾಲದ ಮೊತ್ತ ರೂ. 60.34 ಲಕ್ಷಗಳ ಮಂಜೂರಾತಿಗಾಗಿ ಹೆಚ್.ಡಿ.ಎಫ್.ಸಿ.ಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಹಣ ಬಿಡುಗಡೆಯಾದ ನಂತರ ಮನೆಗಳನ್ನು ನಿರ್ಮಿಸಲು ಪ್ರಾರಂಭಿಸಲಾಗುವುದು.

ಇ) 2,490

ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಕುಶಲ ಕರ್ಮಿಗಳಿಗೆ ಉಪಕರಣಗಳನ್ನು ತೆಗೆದು ಕೊಳ್ಳಲು ಸಹಾಯಧನ

326 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ 1000 ಕುಶಲಕರ್ಮಿಗಳಿಗೆ ಆಯವ್ಯಯ ಭಾಷಣದಲ್ಲಿ ಕೊಟ್ಟ ಭರವಸೆಯಂತೆ ಉಪಕರಣಗಳನ್ನು ಕೊಳ್ಳಲು ಸಹಾಯ ಧನ ಕೊಡುವ ಕಾರ್ಯಕ್ರಮ ಯಾವಾಗ ಕಾರ್ಯಗತಗೊಳಿಸಲಾಗುವುದು;

ಆ) ಇದನ್ನು ಈ ಸಾಲಿನ ಸೆಪ್ಟೆಂಬರ್ ತಿಂಗಳೊಳಗಾಗಿ ಎಲ್ಲಾ ಕುಶಲಕರ್ಮಿಗಳಿಗೆ ಕೊಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಎ.ಎಂ. ಹಿಂಡಸಗೇರಿ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ಶೀಘ್ರದಲ್ಲಿಯೇ ಕಾರ್ಯಗತಗೊಳಿಸಲಾಗುವುದು.

ಆ) ಆರ್ಥಿಕ ವರ್ಷದ ಕೊನೆಯೊಳಗಾಗಿ.

ಗದಗ್ ನಗರದಲ್ಲಿ ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯ ತೆಗೆಯುವ ಬಗ್ಗೆ

327 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ್ ನಗರದಲ್ಲಿ ಪೋಸ್ಟ್ ಮೆಟ್ರಿಕ್ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಬೇರೆ ಬೇರೆ ವಸತಿ ನಿಲಯಗಳನ್ನು ಪ್ರಾರಂಭಿಸಲು ಸರ್ಕಾರ ಯಾವಾಗ ಮಂಜೂರಾತಿ ನೀಡುವುದು?

ಆ) ಈ ಶೈಕ್ಷಣಿಕ ವರ್ಷದಿಂದಲೇ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಇ) ಈ ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗಾಗಿ ಸರ್ಕಾರ ವಿದ್ಯಾರ್ಥಿ ನಿಲಯವನ್ನು ಗದಗ್ದಲ್ಲಿ ಪ್ರಾರಂಭಿಸುವುದೇ?

ಈ) ಹೋದ ವರ್ಷದಿಂದಲೇ ಈ ಬೇಡಿಕೆಗಳು ಸರ್ಕಾರದ ಮುಂದಿದ್ದರೂ ಈ ಬಗ್ಗೆ ವಿಳಂಬ ಮಾಡಲು ಕಾರಣಗಳೇನು?

ಶ್ರೀ: ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಮತ್ತು ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಈ) 1993-94ನೇ ಸಾಲಿನಲ್ಲಿ ಹೊಸ ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ಬಗ್ಗೆ ಆದೇಶ ಹೊರಡಿಸಿದ ನಂತರ ಗದಗ್ನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ಅವಶ್ಯಕವಿದೆಯೆಂದು ಮನವಿ ಬಂದ ಕಾರಣ ಆ ಸಾಲಿನಲ್ಲಿ ಪರಿಗಣಿಸಲು ಸಾಧ್ಯವಾಗಲಿಲ್ಲ. ಆದಾಗ್ಯೂ ಪ್ರಸಕ್ತ ಸಾಲಿನಲ್ಲಿ ಹಣದ ಲಭ್ಯತೆಯನ್ನು ಆಧರಿಸಿ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು.

ವಿವಿಧ ಸಮಿತಿಗಳ ವರದಿಯ ಪ್ರಕಾರ ಹೊಸದಾಗಿ ಗದಗ್ ಹಾಗೂ ಇನ್ನಿತರ ಜಿಲ್ಲೆಗಳ ರಚನೆ

328 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ರಾಜ್ಯದಲ್ಲಿನ ವಿವಿಧ ಸಮಿತಿಗಳು ಸಲ್ಲಿಸಿದ ವರದಿಯ ಪ್ರಕಾರ ಗದಗ್ ಹಾಗೂ ಇನ್ನಿತರ ಜಿಲ್ಲೆಗಳನ್ನು ಹೊಸದಾಗಿ ಯಾವಾಗ ರಚಿಸಲಾಗುವುದು;

ಆ). ಅದನ್ನು ಜಾರಿಗೊಳಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

ಇ) ಪ್ರಸ್ತುತ ವಿಧಾನ ಸಭಾ ಸದಸ್ಯರ ಅವಧಿಯು ಮುಗಿಯುವುರೊಳಗಾಗಿ ಹೊಸ ಜಿಲ್ಲೆಗಳನ್ನು ರಚನೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಈ ವಿಷಯ ಸಚಿವ ಸಂಪುಟದ ಉಪ-ಸಮಿತಿಯ ಪರಿಶೀಲನೆಯಲ್ಲಿದೆ. ಪರಿಶೀಲನೆಯ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಆ) ವಿಷಯ ಮುಖ್ಯ ಮತ್ತು ಗಂಭೀರವಾಗಿರುವ ಕಾರಣ, ಎಲ್ಲಾ ಶಿಫಾರಸ್ಸುಗಳು ಸಚಿವ ಸಂಪುಟದ ಉಪ-ಸಮಿತಿಯ ಪರಿಶೀಲನೆಕುಲ್ಲಿದೆ.

ಇ) ಸಚಿವ ಸಂಪುಟದ ತೀರ್ಮಾನದ ನಂತರ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

ನಗರ ಪ್ರದೇಶಗಳ ಜನರಿಗೆ ಏಕರೂಪವಾದ ಕುಡಿಯುವ ನೀರಿನ ದರ

329 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ನಗರ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಸರಬರಾಜು ಮಾಡುವ ಕುಡಿಯುವ ನೀರಿನ ದರವನ್ನು ಏಕರೂಪವಾಗಿ ಮಾಡುವುದಾಗಿ ಮಾನ್ಯ ಮುಖ್ಯ ಮಂತ್ರಿಗಳು ಭರವಸೆ ಕೊಟ್ಟಿರುವುದು ನಿಜವೇ?

ಆ) ಹಾಗಿದ್ದಲ್ಲಿ ಯಾವಾಗ ಜಾರಿಯಲ್ಲಿ ತರಲಾಗುವುದು?

ಶ್ರೀ ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು

ಆ) ದಿನಾಂಕ : 1-4-95 ರಿಂದ ಜಾರಿಗೆ ತರಲಾಗುವುದು.

ಮೂಡಿಗೆರೆ ತಾಲ್ಲೋಕಿನಲ್ಲಿ ಗೃಹಮಂಡಳಿ ಮನೆಗಳ ಸಂಖ್ಯೆ

264 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ಕಟ್ಟಲ್ಪಡುತ್ತಿರುವ ಮನೆಗಳೆಷ್ಟು?

ಆ) ಯಾವಾಗ ಮಂಜೂರು ಮಾಡಲಾಯಿತು? ಇವುಗಳ ಕೆಲಸ ಬಹಳ ಮಂದಗತಿಯಲ್ಲಿ ನಡೆಯಲು ಕಾರಣವೇನು?

ಶ್ರೀ ಗೋಪಿನಾಥ ಸಾಂಡ್ರಾ (ವಸತಿ ಸಚಿವರು) :

ಅ) 41 (ನಲವತ್ತೊಂದು)

ಆ) 1989-90 ರಲ್ಲಿ ಮಂಜೂರು ಮಾಡಲಾಯಿತು. 22-6-90 ರಲ್ಲಿ ಕಾಮಗಾರಿ ಪ್ರಾರಂಭ ಮಾಡಲಾಯಿತು. ಕಾಮಗಾರಿಯ ಕೆಲಸ ಪ್ರಾರಂಭಿಸಿದ ನಂತರ ಮಣ್ಣಿನ ಗುಣಮಟ್ಟದಲ್ಲಿ ನ್ಯೂನತೆ ಕಂಡು ಬಂದು ವಿವರವಾದ ಮಣ್ಣಿನ ಪರೀಕ್ಷೆ ಮಾಡಲಾಗಿ ತಳಪಾಯದ ವಿಶಿಷ್ಟ ವಿವರಣೆಯನ್ನು ಮಾರ್ಪಾಡು ಮಾಡಲಾಗಿರುವುದರಿಂದ, ಕಾಮಗಾರಿ ವಿಳಂಬವಾಗಿರುತ್ತದೆ ಹಾಗೂ ಕಬ್ಬಿಣ ಮತ್ತು ಸಿಮೆಂಟ್ ಒದಗಿಸಲು ಕೆಲಕಾಲ ವಿಳಂಬವಾಗಿರುತ್ತದೆ. ಗುತ್ತಿಗೆದಾರರು ಕರಾರಿನ ದರದಂತೆ ಕೆಲಸ ಮುಂದುವರೆಸಲು ಮುಂದೆ ಬಾರದೆ ಹೆಚ್ಚಿಗೆ ದರವನ್ನು ಕೇಳುತ್ತಿರುತ್ತಾರೆ.

ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಬೀದರ್ನಲ್ಲಿ ಸಣ್ಣ ಉದ್ದಿಮೆ ಪ್ರಾರಂಭಿಸಲು ನೀಡಿರುವ ಹಣಕಾಸಿನ ಬಗ್ಗೆ

275 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 2 ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯಿಂದ ಸಣ್ಣ ಪ್ರಮಾಣದ ಉದ್ದಿಮೆ ಪ್ರಾರಂಭಿಸಲು ಎಷ್ಟು ಅರ್ಜಿದಾರರಿಗೆ ಧನಸಹಾಯವನ್ನು ನೀಡಲಾಗಿದೆ; (ಧನಸಹಾಯದ ಮೊತ್ತ ಫಲಾನುಭವಿಗಳ ಹೆಸರು, ವಿವರಗಳನ್ನು ತಾಲ್ಲೂಕುವಾರು ಅಂಕಿ ಅಂಶಗಳಲ್ಲಿ ಒದಗಿಸುವುದು.

ಆ) ಇವುಗಳ ಪೈಕಿ ಎಷ್ಟು ಉದ್ದಿಮೆಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ; ಹಾಗೂ ಎಷ್ಟು ಉದ್ದಿಮೆಗಳು ರೋಗಗ್ರಸ್ಥವಾಗಿವೆ. (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು).

ಇ) ರೋಗಗ್ರಸ್ಥವಾಗಿರುವ ಉದ್ದಿಮೆಗಳ ಪುನರುಜ್ಜೀವನಗೊಳಿಸಲು ಮಂಡಳಿಯು ಹಮ್ಮಿಕೊಂಡಿರುವ ಕಾರ್ಯಗಳೇನು?

ಶ್ರೀ ಎ.ಎಂ. ಹಿಂಡಸಗೇರಿ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

ಅ) 218

ಧನಸಹಾಯದ ಮೊತ್ತ

ಸಾಲ ರೂ. 87,99,335
ಅನುದಾನ 63,902
ಒಟ್ಟು ರೂ. 88,63,237

(ಫಲಾನುಭವಿಗಳ ಹೆಸರು ಮತ್ತು ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ)

ಆ) 114 ಘಟಕಗಳು ಕಾರ್ಯನಿರ್ವಹಿಸುತ್ತಿವೆ. (ವಿವರಗಳನ್ನು ಅನುಬಂಧ-2ರಲ್ಲಿ ಕೊಡಲಾಗಿದೆ) ರೋಗಗ್ರಸ್ಥ ಘಟಕಗಳು ಯಾವುದೂ ಇರುವುದಿಲ್ಲ.

ಉಳಿದ 104 ಘಟಕಗಳು ಸ್ಥಾಪನೆಯ ವಿವಿಧ ಹಂತದಲ್ಲಿದೆ.

ಇ) - ಉದ್ಭವಿಸುವುದಿಲ್ಲ -

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಜಿಲ್ಲಾ ಕಛೇರಿ ಬೀದರ್ 1992-93 ರಿಂದ 1993-94 ರವರೆಗೆ ಖಾದಿ ಮಂಡಳಿಯಿಂದ ಧನಸಹಾಯ ಪಡೆದ ವಿವರ

(ಚುಕ್ಕೆ ಗುರುತಿಲ್ಲದ ಸಂಖ್ಯೆ: 275ಕ್ಕೆ ಅನುಬಂಧ-1

ಕ್ರಮ ಸಂಖ್ಯೆ	ಹೆಸರು	ಕೈಗಾರಿಕಾ	ಸಾಲ	ಸಹಾಯಧನ	ಘಟಕ ಸ್ಥಾಪನೆ	ಕೆಲಸ ನಡೆಯುತ್ತಿರ ಬಗ್ಗೆ
	ಬೀದರ್ ಜಿಲ್ಲೆ 1992-93					
1)	ಅಬ್ದುಲ್ ಖಯಂ ತಂದೆ ಅಬ್ದುಲ್ ರಜಾಕ ಸಾತಂಗನಕೋಟೆ	ಸಾ:ಕಂಗನ ಜಿ.ಕೆ.	41400-00-	-	ಆಗಿದೆ	ಕೆಲಸ ನಡೆಯುತ್ತಿದೆ
2)	ಮಹ್ಮದ್ ಮೋಹಿನೋದ್ದಿನ್ ತಂದೆ ಬಸಿರೋದ್ದಿನ್ ಬಗದಲ್	ಜಿ.ಕೆ.	41,400-00	-	"	"
3)	ವೀರಯ್ಯ ಮಹಾಲಿಂಗಯ್ಯ	ರಸವಂತಿ	10000-00	-	"	"

4)	ಬಾಬುರಾವ್ ಚಂದ್ರಪ್ಪಾ ಸಾವದಗೇರಿ	ಕುಂಬಾರಿಕೆ	9650-00	-	"	"
5)	ಈಶ್ವರಿಬಾಯಿ ಗಂಡ ಅರ್ಜುನ್ ಸಾವದಗೇರಿ	"	9650-00	-	"	"
6)	ವಿಶ್ವನಾಥ ತಂದೆ ವೀರಯ್ಯ ಸಾ: ಅಣದೂರ	ಬಡಿಗೆತನ	4800-00	-	"	"
7)	ಸಾದತಬೇಗಂ ಗಂಡ ಶೇಕ್ ಶಹತರ ಸಾ:ಚಿದ್ರಿ	ಮಸಾಲಾ	5000-00	-	"	"
8)	ಲಕ್ಷ್ಮಿ ಕುಂಬಾರ ಕೈ.ಸಂ. ಚೌಂಡಿ	ಕುಂಬಾರಿಕೆ	124000-00	-	"	"
9)	ಗೋರಾ ಕುಂಬಾರ ಕೈ.ಸಂ.	"	298000-00	-	"	"
10)	ನೀಲಮ್ಮ ಗೈಬಪ್ಪಾ ಸಾ: ಕುಂಬಾರವಾಡಾ	ಸುಣ್ಣ	25000-00	-	"	"
11)	ಅಬ್ದುಲ್ ಮುಜೀಬ್ ತಂದೆ ಅಬ್ದುಲ್ ಅಲೀಮ್	ಸಾವದಗೇರಿ	15000-00	-	"	"
12)	ಕಿಶನ್ರಾವ್ ತಂದೆ ಪಾಂಡು ಜನವಾಡಾ	ಕಮ್ಮಾರಿಕೆ	6600-00	-	"	"
13)	ಎಸ್.ಕೆ.ಬಿ. ರಾವ್ ಚಿದ್ರಿ	"	6500-00	-	"	"
14)	ಬಾಬು ತಂದೆ ಹುಲೆಪ್ಪಾ ಸಾ:ಇಸ್ಲಾಂಪುರ	ಮೋಚಿ	1000-00	1500	"	"
15)	ಶ್ರೀಮತಿ ನಾಗಮ್ಮ ಗಂಡ ವೈಜಿನಾಥ ಸಾ:ಸೌಬಾದ	ಕುಂಬಾರಿಕೆ	9650-00	-	"	"
16)	ಸುಭಾಷ ತಂದೆ ಶರಣಪ್ಪಾ ಧನ್ನೂರ	ಮೋಚಿ	1000-00	1500	"	"
17)	ಗೋವಿಂದ ಸಿದ್ರಾಮ ಗೋರನಳ್ಳಿ	"	1000-00	1500	"	"
18)	ಬಸವರಾಜ ತಂದೆ ತುಕಾರಾಮ ಚಿಕ್ಕಪೇಟೆ	"	1800-00	2700	"	"
19)	ಮಾಪಣ್ಣಾ ತಂದೆ ಬಸಪ್ಪಾ ಸಾ:ಧನ್ನೂರ	"	1800-00	2700	"	"
20)	ಬಾವರಾಜ ತಂದೆ ರಾಮಣ್ಣಾ ಸಾ:	"	1000-00	1500	"	"
21)	ಭೀಮರಾವ್ ಸಾ: ಚಿಕ್ಕಬಾಡಿ	"	1000-00	1500	"	"
22)	ಶಂಕರ ತಂದೆ ಭೀಮಣ್ಣಾ ಸಾ: ಧನ್ನೂರ	"	1000-00	1500	"	"
23)	ಕಸ್ತೂರಿಪಾಶಾ ತಂದೆ ಶೇಖ್ ಮಹ್ಮದ್ ಸಾಬ್ ಸಾ: ಮೈಲೂರ	ಮುಂಮುರಾ	5000-00	-	"	"
24)	ಎಸ್.ಎಂ.ಪಿ.ಫುಡ್ ಪ್ರೋಜೆಕ್ಟ ಸಾ:ಸೌಬಂದ	ಮಸಾಲಾ	123700-00	-	"	"
25)	ಪಂಡರಿ ತಂದೆ ಅರ್ಜುನರಾವ ಸಾ: ನಾವದಗೇರಿ	ಮುರಮುರಾ	7000-00	-	"	"
26)	ಅಶೋಕ ಬಕ್ಕಚೌಡಿ	ಮೋಚ್	1000-00	1500	"	"
27)	ನರಸಪ್ಪಾ ತಂದೆ ಬಾಬಣ್ಣಾ ಸಾ: ಕಡಪಳ್ಳಿ	ಮೋಚ್	1000-00	1500	"	"

28)	ಸುಭಾಷ ತಂದೆ ಗುಂಡಪ್ಪಾ ಕುಂಬಾರವಾಡ	”	1000-00	1500	”	”
29)	ಮಾಣಿಕ ತಂದೆ ಶಿವರಾಮ ಸಾ:	”	1800-00	2700	”	”
30)	ನಾಗಪ್ಪಾ ಸಿದ್ರಾಮ ಸಾ: ಮೈಲೂರು	ಮುರಮುರಾ	7000-00	-	”	”
31)	ಬಾಬಣ್ಣಾ ಅಂಬಾಜೀ ಧನ್ನೂರ	ಬಡಿಗೆತನ	4800-00	-	ಆಗಿದೆ	ಕೆಲಸ ನಡೆಯುತ್ತಿದೆ
32)	ರತ್ನಮ್ಮಾ ಗಂಡ ಶಂಕರ ಸಾ: ನಾವಡಗೇರಿ	ಮೋಚಿ	1000-00	1000-00	”	”
33)	ನಾಗೇಶ ಸಾ: ಅಲಿಯಂಬರ	ಕಮ್ಮಾರಿಕೆ	6600-00	-	”	”
34)	ಅಬ್ದುಲ್ ಹಮೀದ್ ಮುಕ್ತಾರ ಅಹ್ಮದ್	ಬ್ರಾಸ್ ಕಾಪರ	9000-00	-	”	”
35)	ಶೇಕ್ ಅಹ್ಮದ್ ತಂದೆ ಮುಕ್ತಾರ್ ಅಹ್ಮದ್ ಸಾ:ಸಾತೋಲೆ	ಕಮ್ಮಾರಿಕೆ	6600-00	-	”	”
36)	ದೇವೇಂದ್ರ ಮಲ್ಲಪ್ಪಾ ಸಾ: ಶಮಶರಪುರ ವಾಡಿ	ಬಡಿಗೆತನ	4800-00	-	”	”
37)	ಅಮ್ಮಲೋದ್ದಿನ್ ಸಾ: ಸುಲಸಪುರ	ಕಮ್ಮಾರಿಕೆ	6600-00	-	”	”
38)	ಸೂರ್ಯಕಾಂತ ಲೆಂಬಾಜೀ ಸಾ:ಹಾಜನಾಳ	ಮಸಾಲಾ	16100-00	16900- 00	”	”
39)	ಶಕುಂತಾಲಾ ಗಂಡ ಬಾಬುರಾವ್ ಲಾಲಗೇರಿ	ಅಗರಬತ್ತಿ	8000-00	-	”	”
40)	ನ್ಯೂ ಹೈದ್ರಾಬಾದ್ ಕರ್ನಾಟಕ ಇಂ.ಅ. ಮಂಡಕನಳ್ಳಿ	ಅಲ್ಯೂಮಿನಿಯಂ	259000.00	-	-	-
41)	ಚಂದ್ರಪ್ರಕಾಶ ಇಂ,ಅ, ಬೌಬಾದ	ಮೆಡಿಕಲ್ ಪ್ಲಾಂಟ್	656800-00	-	-	-
42)	ಪ್ರಫುಲ್‌ಒಲೇಜ್ ಇಂ,ಅ, ನಾವಡಗೇರಿ	ದೊಡ್ಡ ಕಾರ್ಯಗಾರ	200000-00	-	-	-
43)	ರವಿ ಕ್ರಾಂತಿ ಖಾದಿ ಗ್ರಾಹಕ ಸಂಘ, ಹಿಪ್ಪಳಗಾಂವ	ಅಲ್ಯೂಮಿನಿಯಂ	259000-00	-	-	-
44)	ವಿಶಾಲ ಇಂ. ಅ.ಚಿಟ್ಟಾ	ಬೆಲ್ಲಖಿಂಡ ಸಾರಿ	50000-00	-	ಆಗಿದೆ	ಕೆಲಸ ನಡೆದಿದೆ
45)	ಝರೆಪ್ಪಾ ತಂದೆ ಮರೆಪ್ಪಾ ಸಾ: ಕಮಠಾಣಾ	ಎಣ್ಣೆಗಾಣ	35000-00	-	”	”
46)	ಸಂತೋಷ ಅ.ದರದಲ್	ಬೆಲ್ಲಖಿಂಡಸಾರಿ	205000-00	-	”	”

47)	ಕಲ್ಲಪ್ಪಾ ಭೀಮರಾವ್	ಪ್ಲಂಬರಿಂಗ್	10000-00	-	ಆಗಿದೆ	ಕೆಲಸ ನಡೆದಿದೆ
48)	ರಮೇಶ ಮಲ್ಲಾರಾದ ಸಾ: ಜನವಾಡಾ	ಬ್ರಾಸ್ಕ್ಯಾಪರ್	9000-00	-	-	-
49)	ಪಲ್ಲವಿ ಕುಂಬಾರ ಕೈ.ಸ.ಸಿಕಂದ್ರಪುರ	ಕುಂಬಾರಿಕೆ	124000-00	-	ಆಗಿದೆ	ಕೆಲಸ ನಡೆದಿದೆ.
50)	ಸೈಯದ್ ಇಂ.ಅ. ನೌಬಾದ.	ಕಮ್ಮಾರಿಕೆ	50000-00	-	"	"
51)	ಸಾಯಿ ಇಂ.ಅ,ನೌಬಾದ್	ಬ್ರಾಸ್ ಕಾಪರ್	116000-00	-	-	-
52)	ವಿಶಾಲ ಖಾದಿ ಗ್ರಾ 'ಸ' ಚಿಕ್ಕಪೇಟೆ .	ಅಲ್ಯೂಮಿನಿಯಂ	259000-00	-	ಆಗಿದೆ	ಕೆಲಸ ನಡೆದಿದೆ
53)	ಮುಸೂಫ್ ತಂದೆ ಬಾಬಾಸಾಬ್, ಕರುಥಾಣಾ	ಬ್ರೆಡ್	55000-00	-	"	"
54)	ಮಾಣಿಕೇಶ್ವರ ಅಗರಬತ್ತಿ ವರ್ಕ್ಸ್, ಲಾಡಗೇರಿ	ಅಗರಬತ್ತಿ	60000-00	-	"	"
55)	ಶ್ರೀಮತಿ. ರಾಜಮ್ಮಾ ತುಳಸಿರಾಮ, ಚಿದ್ರಿ	ಬಿದಿರು ಬೆತ್ತ	6500-00	-	"	"
56)	ಸುಂದರ್ ಲೋಕಪ್ಪ, ಹಿಪ್ಪಳಗಾವಂ	ಮೋಚಿ	1000-00	1500-00	-	-
57)	ಬಾಬುರಾವ್ ವೈಜನಾಥ, ಕೋಳಾರ(ಬಿ)	ಮುರಮುರಾ	10000-00	-	-	-
58)	ಎಸ್.ಸಿ.ಎಸ್.ಟಿ.ಅಗ್ರಿ.ಅ; ಮೈಸೂರು	ಬಿದಿರುಬಿತ್ತ	154000-00	-	-	-
59)	ಸಿಂಡೆಪ್ಪಾ ತಂದೆ ಭೀಮರಾವ್, ಚಿಮಕೋಡಿ	ಬಿಲ್ಲ	41400--00	-	ಆಗಿದೆ	ಕೆಲಸ ನಡೆದಿದೆ
			31,78,500-00		40,300-00	

1992-93 ಭಾಲ್ಕಿ ತಾಲ್ಲೂಕು

1)	ಸಿದ್ಧಾರೂಡ ಇಂ.ಅ.ತರನಳ್ಳಿ	ಬೆಲ್ಲಖಂಡಸಾರಿ	205000-00	-	-	-
2)	ಜರಗೊಂಡ ತಂದೆ ಹಣಮಂತ ಸಾ, ಬಾಳಕಾಪುರ	ಟೈಲರಿಂಗ್	3560-00	5340-00	ಸ್ಥಾಪನೆ	ಆಗಿದೆ
3)	ಅರಮಾನ್ ಅಗರಬತ್ತಿ ವರ್ಕ್ಸ್, ಭಾತಂಬ್ರಾ	ಅಗರಬತ್ತಿ	60000-00	-	"	"
4)	ಸಂಗಪ್ಪ ಹಾವಗಿರಾವ್, ಅಳವಾಯಿತ	ಗ್ರಾ.ಎಣ್ಣೆ	25000-00	-	"	"
5)	ಬಾಜೀರಾವ್ ದೇವರಾವ್ ಕೂಡ್ಲಿ	ಇಟ್ಟಂಗಿ	15000-00	-	"	"
6)	ರಾಜಪ್ಪ ರುದ್ರಪ್ಪಾ, ಕೊಟಗ್ಯಾಳ	ಬಡಗಿತನ	6800-00	-	"	"
			3,13,360-00	5340-00	-	-

1992-93 ಹುಮನಾಬಾದ್ ತಾಲ್ಲೂಕು

1)	ಅಶೋಕ ಶಿವರಾಜಪ್ಪ, ನಿರ್ಣಾ	ಸುಣ್ಣ	25000-00	- -	"	"
2)	ಖಾಜಾ ಸಾಹೇಬ್ ಮ. ಖಾಜಾ	ಬಡಗಿತನ	3653-00	1147-00	"	"
3)	ಮಲಶೆಟ್ಟಿ ರಾಮಲಿಂಗಶೆಟ್ಟಿ, ನಾಗನಕೇರಾ	ಮೋಚಿ	1000-00	1500-00	"	"

4)	ವಿಠಲರಾವ್, ತಿಪ್ಪಣ್ಣಾ, ”	”	1000-00	1500-00	”	”
5)	ಸಿದ್ದಪ್ಪಾ ತಂದೆ ಹಣಮಂತ ”	”	1000-00	1500-00	”	”
6)	ವಿಠಲರಾವ್ ಮಲ್ಲಪ್ಪಾ, ಕೊಡಲಂಬಾ	ಸುಣ್ಣ	25000-00	-	”	”
7)	ಶರಣಪ್ಪ ಹಣಮಂತ, ನಾಗನಕೇರಾ	ಮೋಚಿ	1000-00	1500-00	”	”
8)	ನಿರ್ಣಾ ಮುತ್ತಂಗಿ ಗುಡ್ ಮತ್ತು ಖಂಡಸಾರಿ,	ನಿರ್ಣಾ, ಜಿ.ಕೆ.	50000-00	-	”	”
9)	ಪ್ರಕಾಶ್ ಗುರಪ್ಪ ಯರಂಗಗಿ,	ಕಮ್ಮಾರಿಕೆ	65000-00	-	”	”
10)	ನಾಗಪ್ಪಾ ಚಂದ್ರಪ್ಪಾ, ನಾಗನಕೇರಾ	ಮೋಚಿ	1000-00	1500-00	”	”
11)	ರೇವಣಸಿದ್ಧೇಶ್ವರ ಖಾದಿ ಗ್ರಾ.ಸಂಘ,	ಭೋತಗಿ, ಜಿ.ಕೆ.	50000-00	-	”	”
			2,48,253-00	8,647-00	-	-
	1992--93 ಬಸವಕಲ್ಯಾಣ ತಾಲ್ಲೂಕು					
1)	ಚಂದ್ರಕಾಂತ ಮಾರುತಿ ಸಾ:ಉರ್ಕಿ	ಕುಂಬಾರಿಕೆ	9550	-	ಆಗಿದೆ	ಕೆಲಸ ನಡೆದಿದೆ
	1992-93 ಔರಾದ ತಾಲ್ಲೂಕು.					
1)	ದಿಲೀಪ್ ಕುಮಾರ್ ತಂದೆ ತಪ್ಪಣ್ಣಾ ಸಾ: ಬಾಳೂರು	ಡೀಜಲ್ ಇಂಜಿನ್	30000 ”	- ”	-	-
2)	ತುಕಾರಾಮ ಜೆಟಿಪ್ಪಾ ಸಾ: ಬೋಜನಾ	ಮೋಚಿ	1000	1500	”	”
3)	ಮಾರುತಿ ಬಾಬು ಸಾ: ”	”	1000	1500	”	”
4)	ಮಾಣಿಕ ಸಿದ್ದಪ್ಪಾ ”	”	1000	1500	”	”
5)	ಬಸಪ್ಪಾ ಅರ್ಜುನ ”	”	1000	1500	”	”
6)	ಪ್ರಲ್ಹಾದ ಶಂಕರ ಸಾ: ಜಂಬಗಿ	ಬಿದಿರುಬೆತ್ತ	5525	975	”	”
7)	ಕಲ್ಲಪ್ಪ ಭೀಮರಾವ್	ಫ್ಲಂಬರಿಂಗ್	10000	-	”	”
8)	ಕಲ್ಲಪ್ಪ ಶಿವರಾಜ ಎಕಲಾರ	ಇಟ್ಟಂಗಿ	10000	-	”	”
9)	ಮಹ್ಮದ್ ಜಾವಿದ ಮಹ್ಮದ್ ಕಮೀಮ್	ಬಡಗಿತನ	4800	-	”	”
10)	ವೆಂಕಟರಾವ್ ವಿಠಲರಾವ್ ಧೂಪರಿವಾಡಿ ಜಮೇಗಾಂವ	ಮಸಾಲಾ	33000	-	”	”
			1,02,325,	6,975		
	1993-94 ಬೀದರ್ ತಾಲ್ಲೂಕು					
1)	ಬಿಲ್ಲು ದೌಲಪ್ಪಾಸಾ: ಚಿಂತಲಗೇರಾ	ಗ್ರಾ.ಎಣ್ಣೆ	7000	-	ಆಗಿದೆ	ಕೆಲಸ ನಡೆದಿದೆ
2)	ಮಸ್ತಾನ ತಂದೆ ಮಹೇಬೂಬ್ ಸಾ: ಔರಾದ (ಎಸ್)	ಅಗರಬತ್ತಿ	35000	-	”	”
3)	ಸಂಗ್ರಾಮ ತಂದೆ ಭೀಮಸಾ ಸಾ: ಬರಿದಾಬಾದ್	ಗ್ರಾ.ಎಣ್ಣೆ	40000	-	”	”
4)	ಬಸವೇಶ್ವರ ಖಿದಿ ಗ್ರಾ. ಸಂಘ ಅಲಿಯಂಬರ	ಅಗರಬತ್ತಿ	60000	-	ಆಗಿದೆ	ಕೆಲಸ ನಡೆದಿದೆ.
5)	ಝರೆಪ್ಪಾ ತಂದೆ ಮರೆಪ್ಪಾ ಸಾ: ಕಮಠಾಣಾ	ಗ್ರಾ.ಎಣ್ಣೆ	6000	-	-	-

6)	ಭಾಗೀರಥಿ ತಂದೆ ಭೀಮಣ್ಣಾ ಸಾ: ಅಲಿಯಂಬಾರ	ಹಪ್ಪಳ	5000	-	ಆಗಿದೆ ನಡೆದಿದೆ	ಕೆಲಸ
7)	ಪಂಡರೀನಾಥ ತಂದೆ ಹಣಮಂತಾಪ್ಪಾ ಸಾ: ಅಲಿಯಂಬಾರ	ಕಮ್ಮಾರಿಕೆ	8600	"		"
8)	ಎಸ್.ಎಸ್.ನೌಕತಅಲಿ ತಂದೆ ಸನ್ನುಲ್ಲಾ ಅಲಿ ಸಾ: ತುಳಜಾಪುರ	ಬಡಗಿತನ	6800	-	-	"
9)	ಕುಮಾರ ತಂದೆ ಬಾಳಪ್ಪಾ ಸಾ: ಜಾಂಬೋಳ	ಕಮ್ಮಾರಿಕೆ	8600	-	-	
10)	ನಾಗಯಾ ಗುರಯ್ಯಾ ಸಾ: ಇಸ್ಲಾಂಪುರ	ಟೈಲರಿಂಗ್	8900	-	-	-
11)	ನಸೀಮಬಾನು ತಂದೆ ಶಮಶೋದ್ದಿನ್ ಸಾ:ಚಿಟ್ಟಾವಾಡಿ	"	8900	-	-	-
12)	ಚಂದ್ರಕಾಂತ ತಂದೆ ನರಸೋಜೀ ಸಾ:ನೌಬಾದ	"	8900	-	-	-
13)	ಶೋಭಾ ಗಂಡ ಶಂಕರ ಸಾ: ಕುಂಬಾರವಾಡಾ	ಬಿದಿರುಬೆತ್ತ	6500	-	-	-
14)	ಲಲಿತಮ್ಮಾ ಗಂಡ ಶಿವರಾಜ ಸಾ:ಚಕಬಾಡಿ	"	6500	- -	-	
15)	ಅಬ್ಬುಲ್ ಅಕೀಲ್ ತಂದೆ ಅಬ್ದುಲ್ ಅಜೀಜ್ ಸಾ: ಮೈಲೂರು	ಬ್ರಾಸ್ಸ್ಕಾಪರ್	9000	-		-
16)	ಅಶೋಕ ತಂದೆ ಬಲರಾಮ ಸಾ: ಮೈಲೂರು	"	9000	-	-	-
17)	ಶಂಕರ ತಂದೆ ಹನುಮಂತಂ ಸಾ: ಜಾಂಬೋಳ	ಕುಂಬಾರಿಕೆ	9650	-	-	-
18)	ಆಶಾ ತಂದೆ ದೇವಿದಾಸ್ ಸಾ: ಲಾಲವಾಡಿ	ಅಗರಬತ್ತಿ	8000			
19)	ಬಾಬು ತಂದೆ ಮಾರಪ್ಪಾ ಸಾ: ಪಾತರಹಳ್ಳಿ	ಗ್ರಾ.ಎಣ್ಣೆ	25000	-	-	-
20)	ಜಯನೋದ್ದಿನ್ ಕರೀಮಸಾಬ್ ಸಾ: ರಂಜೋಳ	ಡೀಸಲ್ ಇಂಜಿನ್	30000	-	-	-
21)	ಸಂತೋಷ ಅಸೋಸಿಯೇಷನ್	ಬಗದಲ್ ಜಿ.ಕೆ.	50.000	-	-	-
22)	ಮಾಣಿಕರಾವ್ ಚೆನ್ನಬಸಪ್ಪ ಸಾ: ರೆಕುಳಗಿ	"	50750	-	-	-
23)	ತುಕಾರಾಮ ಶಂಕರಪ್ಪಾ ಸಾ: ನೌಬಾದ್	ಕುಂಬಾರಿಕೆ	9,650	-	-	-
24)	ಅಶೋಕ ಕುಮಾರ ತಂದೆ ಚಂದ್ರಪ್ಪಾ ಸಾ: ನೌಬಾದ್	"	9,650	-	-	-
25)	ಸೀಬಾ ಇಂ.ಅ. ಮೈಲೂರು	ಅ.ಎ.ಸಾ	225,000	-	-	-
26)	ವಿಶಾಲ ಖಾದಿ ಗ್ರಾ. ಸಂಘ, ಚಿಕ್ಕಪೇಟೆ,	ಅಲ್ಯೂಮಿನಿಯಂ	50,000	-	-	-
27)	ಟಿಲ್ಲು ತಂದೆ ದೌಲಪ್ಪ ಸಾ: ಚಿಂತಲೇಖಿ	ಎಣ್ಣೆಗಾಣ	25,000	-	-	-

28)	ಚಂದ್ರಪ್ರಕಾಶ ಇಂ.ಅಸೋಸಿಯೇಶನ್ ನೌಬಾದ್	ಮೆಡಿಕಲ್ ಪ್ಲಾಂಟ್	50,000	-	-	-
29)	ಶಂಕರಾವ್ ದತ್ತಾತ್ರೇಯರಾವ್	ಸಾ:ಮಂಡಕನಹಳ್ಳಿ ಜಿಕೆ	50,750	-	-	-
30)	ರವಿಕ್ರಾಂತಿ ಗ್ರಾಮ ಸಂಘ ಚೌಳಿ	ಅಲ್ಯೂಮಿನಿಯಂ	50,000	-	-	-
31)	ಸಂಗ್ರಾಮ ತಂದೆ ಅಮೃತ ಸಾ: ಕೋಳಾರ (ಕೆ) ಗ್ರಾ.	ಎಣ್ಣೆ	40.000	-	-	-
32)	ಕಮಲಾಬಾಯಿ ಗಂಡಾ ಸಾಗನಾಥ ಸಾ:ಬಿದ್ರಿ.	ಬಿದಿರುಬೆತ್ತ.	6,500	-	-	-
33)	ದುರ್ಗಮ್ಮ ಗಂ ಸುಧಾಕರ ಸಾ:ಚಿಕ್ಕಚೌಡಿ	ಬಿದಿರುಬೆತ್ತ	6,500	-	-	-
34)	ಲಲಿತಮ್ಮ ಗಂ. ಶಿವರಾಜ, ಸಾ: ಗೋರನಳ್ಳಿ.	ಆಗರಬತ್ತಿ	8,000	-	-	-
35)	ರಮೇಶ ತಂದೆ ಶಂಕರಪ್ಪ ಸಾ: ನಿಷ್ಟಳ ಗೆರೆ.	ಬಡಗಿತನ	6,800	-	-	-
36)	ಬಾಬು ತಂದೆ ಕುಲ್ಲೆಪ್ಪ ಸಾ;ನಾ ವಡಗೇರಿ	ಬ್ರಾಸ್ಸ್ಯಾಪೆರ್	9,000	-	-	-
37)	ವನಿತಾ ಗಂಡ ಮಾರುತಿ ಸಾ: ಗೋರಾಳ	ಬಿದಿರುಬೆತ್ತ	6,500	-	-	-
38)	ಪ್ರದೀಪ್ಪ ತಂದೆ ಡೇವಿಡ್ ಸಾ:ಬಿದ್ರಿ.	ಪ್ಲಂಬರಿಂಗ್	10,000	-	-	-
39)	ತೇಜಮ್ಮ ಗಂ. ಶಂಕರ ಸಾ: ಮೈಲೂರ	ಬಿದಿರುಬೆತ್ತ	6,500	-	-	-
40)	ಮುನೀರ್ ತಂದೆ ಅಲ್ಲಾಬಕ್ಷ ಸಾ:ಬಿದ್ರಿ	ಹಪ್ಪಳ	5,000	-	-	ಕೆಲಸ ನಡೆದಿದೆ
41)	ಸೈಯದ್ ಫರೂಕ್ ತಂದೆ ಸೈಯದ್ ಯಾಕೋಬ್ ಸಾ : ಬಗದಾಲ್	ಟೈಲರಿಂಗ್	8,900	-	-	-
42)	ರಾಜು ತಂದೆ ಮಾರುತಿ ಸಾ: ರೇಮುಳಳಿ	ಬಡಗಿತನ	6,800	-	ಆಗಿದೆ	ಕೆಲಸ ನಡೆದಿದೆ
43)	ರತ್ನದೀಪ ಕಾರ್ಯಸಮಿತಿ ಪ್ರತಾಪ್ಪನಗರ	ಅಗರಬತ್ತಿ	60,000	-	-	-
44)	ಹುಲ್ಲೆಪ್ಪಾ ತಂದೆ ಭೀಮಣ್ಣಾ ಸಾ: ಇಸ್ಲಾಂಪುರ	ಕುಂಬಾರಿಕೆ	9,650	-	-	-
45)	ದಯಾನಂದ ರಾಜಣ್ಣ ರಾಜನಾಳ,	ಕುಂಬಾರಿಕೆ	9,650	-	-	-
46)	ಸುನೀತಾ ಇಂ. ಅಸೋನಿಯೇಷನ್ ನವಾಬಾದ್	ಮಸಾಲಾ	1,23,700	-	-	-
47)	ಸುಭಾಷ್ ಫುಟವೇರ್ ಡಂ. ಅಸೋಸಿಯೇಶನ್ ಹವಾಯಿ ಬೀದರ್	ಚಪ್ಪಲ್	1,00,000	-	-	-
48)	ಡೆಕ್ಕನ್ ಇಂಡಸ್ಟ್ರಿಯಲ್ ಅಸೋಸಿಯೇಷನ್, ಬೀದರ್	ಎಲೆಕ್ಟ್ರಾನಿಕ್ಸ್	5,20,000	-	-	-

49)	ಸುಧೀರ್ ತಂದೆ ಕಾಳಪ್ಪ, ಚಿಕ್ಕಪೇಟೆ	ನೀರಾಪಾಮಗರ್	880	-	-	-
50)	ರಮೇಶ್ ತಂದೆ ಬಸಪ್ಪ ಸಾ: ಚಿಕ್ಕಪೇಟೆ	"	880	-	-	-
51)	ಗುಂಡಪ್ಪ ಗಂ ಶರಣಪ್ಪ ಸಾ:	"	880	-	-	-
52)	ಧನರಾಜ್ ತಂದೆ ತುಕಾರಾಮ್	"	880	-	-	-
53)	ಶರಣಪ್ಪ ತಂದೆ ಗುಂಡಪ್ಪಾ	"	880	-	-	-
54)	ಜನತಾ ಅಸೋಸಿಯೇಷನ್, ಬೀದರ್	ಲೆದರ್	75,000	-	ಅಗಿದೆ ಕೆಲಸ ನಡೆದಿದೆ.	
55)	ಮೌಲು ತಂದೆ ರಾಮಚಂದ್ರ ಸಿದ್ದಾಪುರ	ಲೆದರ್	7,000	-	-	-
56)	ಜೀವನಕುಮಾರ, ತಂದೆ ಮಾಣಿಕರಾವ್ ಸಾ:ಹಿಪ್ಪಳಗಾಂ	ಬ್ರಾಸ್ಸಾಪರ	9,000	-	ಅಗಿದೆ ಕೆಲಸ ನಡೆದಿದೆ.	
57)	ಅಪ್ಪಾರಾವ್ ತಂದೆ ಮಾಣಿಕರಾವ್ ಸಾ: ಜಾಂಬೋಳಾ	"	9,000	-	ಅಗಿದೆ ಕೆಲಸ ನಡೆದಿದೆ.	
58)	ಸತ್ಯ ನಾರಾಯಣ ಇಂ ಅಸೋಸಿಯೇಷನ್ ಸಿಂದೋಳ್.	ಲೆದರ್	1,60,000	-	-	-
59)	ಈರಪ್ಪ ತಂದೆ ಮಾಣಿಕಪ್ಪಾ ಸಾ:	ಕೊಳಾರ(ಕೆ) ಜಿ.ಕೆ.	50,750	-	-	-
60)	ಅಶೋಕ ಕುಮಾರ್ ತಂದೆ ವಿಶ್ವನಾಥರಾವ್, ಅರೂರ್ ಗೇರಿ. ಒಡಗಿತನ	ಕಮ್ಮಾರಿಕೆ	82,000	-	-	-
61)	ಬಾಬು ಇಂಡಸ್ಟ್ರಿಯಲ್ ಅಸೋಷಿಯೇಷನ್,	ಹವಾಯಿ ಚಪ್ಪಲ್	1,00,000	-	-	-
62)	ಫೈದಾ ಹುಸೇನ್ ತಂದೆ ಇನಾಯತ್ ಹುಸೇನ್ ಸಾ ,ಕಮಠಾಣಾ	ಮಸಾಲಾ	33,000-00	-	-	-
63)	ಪ್ರೇಮಿಯರ್ ಇಂ.ಅ.ಕೋಳಾರ(ಕೆ)	ಗ್ರಾ.ಸೇ.ಡಿಪೊ	55,000-00	-	-	-
64)	ಮಾರುತಿ ಗುಂಡಪ್ಪಾ,ಹಳ್ಳದಕೇರಿ	ಗ್ರಾ.ಎಣ್ಣೆ	40,000-00	-	-	-
65)	ಕಣ್ಯಾಣ ಕ್ರಾಂತಿ ಶಿವಶರಣ ಸಮಾಜ ಸುಧಾರಕ ಸಂಘ ಜನವಾಡ	ಪಾಲಿವಸ್ತ್ರ	3,47,950-00	-	-	-
66)	ರವಿ ತಂದೆ ಮಾಣಿಕ್ ರಾವ್ ಸಾ, ಕೋಳಾರ(ಕೆ)	ಡೀಸಲ್ಇಂಜಿನ್	30,000-00	-	-	-
67)	ಜುಬೇದಾ ಬೇಗಂ ಗಂಡ ಶೇಕ್ ಅಬ್ದುಲ್ ಶಲಿ,ಸಾ,ಆಲಿಯಂಬಾ	ಪಿ.ಸಿ.ಪಿ.ಐ	5,000-00	-	-	-
68)	ವಿಶ್ವ ಇಂ.ಅಸೋಸಿಯೇಷನ್, ನೌಬಾದ್	ಕುಂಬಾರಿಕೆ	2,98,00-00	-	-	-
69)	ಕಾವೇರಿ ಗ್ರಾ.ಸಂಘ, ಜಿಲ್ಲಗ್ಗಿ	ಅಲ್ಯೂಮಿನಿಯ	2,59,000-00	-	-	-
70)	ಯಹಶನ್ ತಂದೆ ಶಿರೋಮಣಿ ಸಾ,ಚಾಂಬೋಳ	ಕಮ್ಮಾರಿಕೆ	8,600-00	-	-	-

71)	ಮಹಮದ್ ಜಾಫರ್ ತಂದೆ ಮಹಮದ್ ರಸೂಲ್ ಸಾ,ಮೈಲೂರ	"	8,600-00	-	-	-
72)	ಗುಂಡಪ್ಪ ತಂದೆ ಶಂಕರಪ್ಪ,ಸಾ, ಜನವಾಡ	ಬಡಗಿತನ	6,800-00	-	-	-
73)	ರಾಜಪ್ಪಾ ತಂದೆ ಶಿವರಾಮ,ಸಾ,ಶಹಾಪುರ	"	6,800-00			
74)	ಅನಿಲ್ ಕುಮಾರ್ ತಂದೆ ಪುಂಡಲೀಕರಾವ್ ಸಾ,ನಾವದಗೇರಿ	ಕಮ್ಮಾರಿಕೆ	8,600-00	-	-	-
75)	ಅಶೋಕ ತಂದೆ ಅರ್ಜುನ್ ಸಾ,ಸಿಪ್ಪಲಗೇರಾ	ಬಡಗಿತನ	6,800-00	-	-	-
76)	ಶಿವರಾಜ ತಂದೆ ಭೀಮರಾವ್,ಸಾ, ನವದಗೇರಿ	"	6,800-00	-	-	-
77)	ಲಕ್ಷ್ಮಿಬಾಯಿ ಗಂಡ ರಾಜಪ್ಪಾ ಸಾ,ಆಲಿಯಂಬರ	ಮುರಮುರಾ	7,000-00	-	-	-
78)	ಕಮಲಮ್ಮ ಗಂಡ ಸೈದಪ್ಪಾ ಸಾ,ಚಿಕ್ಕಪೇಟೆ ನೀರಾ	ಪಾಮಗರ್	880-00	-	-	-
79)	ಸುರೇಶ್ ತಂದೆ ಲಕ್ಷ್ಮಣರಾವ್, ಸಾ,ಹೊನ್ನುರ	"	880-00	-	-	-
80)	ಕುಮಾರಿ ಶರಣಮ್ಮಾ ತಂದೆ ಸಿದ್ರಾಮ ಸಾ,ನವಲಸಪುರ	ಟೈಲರಿಂಗ್	8,900-00	-	-	-
81)	ಶ್ರೀಮತಿ ಚಂದ್ರಮ್ಮಾ ಗಂಡ ದೇವೇಂದ್ರ	"	8,900-00	-	-	-
82)	ಚಂದ್ರಮ್ಮ ಗಂಡ ಗೋವಿಂದಪ್ಪ ಸಾ, ಇಸ್ಲಾಮಪುರ	ಅಗರಬತ್ತಿ	8,000-00	-	-	-
83)	ಶಿವರಾಜ ತಂದೆ ಮುರೆಪ್ಪಾ ಸಾ,ಗಾವಂತಿ	"	8,000-00	-	-	-
84)	ಬಾಸ್ಕರ ತಂದೆ ಸಿದ್ದಪ್ಪಾ ಸಾ,ನವಲಸಪುರ	ಬಡಗಿತನ	6,800-00	-	-	-
85)	ಅಲಿನಾವಜ್ ಖಾನ್ ತಂದೆ ಸಮೀಯೋಜಮಾ ಸಾ,ಹಮೀಲಾಪುರ	"	6,800-00	-	-	-
86)	ಹುಲೆಪ್ಪಾ ತಂದೆ ನಾಗಪ್ಪಾ,ಸಾ, ಸಂಗನಪಳ್ಳಿ	ಅಗರಬತ್ತಿ	8,000-00	-	-	-
87)	ಗೊಪಣ್ಣಾ ತಂದೆ ಲಾಲಪ್ಪಾ,ಸಾ, ಹಳ್ಳದಕೇರಿ	ಬಿದಿರುಬೆತ್ತ	6,500-00	-	-	-
88)	ವಿಜಯಕುಮಾರಿ ಗಂಡ ಧನರಾಜ್ ಸಾ,ಕೋಳಾರ(ಬಿ)	ಪಾಪಡ್	5,000-00	-	-	-
89)	ಶೋಭಾ ಗಂಡ ಶಂಬರಾವ್,ಸಾ, ತಾಜಲಾಪುರ	"	5,000-00	-	-	-
90)	ಶಕುಂತಲಾ ಗಂಡ ತುಕರಾಮ,ಸಾ, ಬಗದಲ್	ಟೈಲರಿಂಗ್	8,900-00			
91)	ಮಹಾದೇವಿ ಗಂಡ ಅರ್ಜುನ ಸಾ, ನರಲಸಪುರ	"	8,900-00	-	-	-
92)	ಸುಚಿತ್ರಾ ಗಂಡ ಭೀಮರಾವ್ ಸಾ,ಲಂಬೋಳ ಪೇಣಿ ನೀರಾ	ಪಾಮಗರ	880-00	-	-	-
93)	ಕವಿತಾ ಗಂಡ ರಾಮರಾವ್ ಸಾ, ಮಿರ್ಜಾಪುರ	ಪಾಪಡ್	5,000-00	-	-	-
94)	ಖಾದಿ ಗ್ರಾ.ಸಂಘ,ಬೀದರ್ ಇನಸೆಂಟಿವ್	ವೇಜಸ್	62,697-00	-	-	-

95)	ಸಂಜೀವಕುಮಾರ್ ತಂದೆ ಬೆಂಬಲ್ ನಿರಾಪಾಮಗರ್	-	1320-00	-	-	-
96)	ಧನಸಿಂಗ್ ತಂದೆ ಭೀಮ ಸಾ, ಬೀದರ್ "	-	1320-00			

1993-94 ಹುಮನಾಬಾದ್ ತಾಲ್ಲೂಕು

1)	ಚಾಮುಂಡೇಶ್ವರಿ ಇ. ಅಸೋಸಿಯೇಷನ್ ತಾಳಮಡಗಿ	ಬ್ರಾಸ್ ಕಾಪರ್	1,16,000-00	-	-	-
2)	ಶಿವರಾಜ್ ತಂದೆ ಝುರಸಾಬೇ ಸಾ, ನಿರ್ಣಾ	ಟೈಲರಿಂಗ್	8,900-00	-	-	-
3)	ಅಲೆಕ್ ಅಹ್ಮದ್ ತಂದೆ ಮಕಬುಲ್ ಸಾ,,ಮನ್ನಾಎಖೇಳ್ಳಿ	ಎಲೆಕ್ಟ್ರಿಕ್ ವೈರಿಂಗ್	20,000-00	-	-	-
4)	ಸಂಗಮೇಶ್ವರ ಖಾದಿ ಗ್ರಾ.ಸಂಘ, ಬೆನಚಿಂಚೋಳಿ	ಅಗರಬತ್ತಿ	60,000-00	-	-	-
5)	ಪ್ರಕಾಶ ತಂದೆ ತುಕಾರಾಮ ಶೇಡೋಳ	ಕುಂಬಾರಿಕೆ	9,650-00	-	-	-
6)	ಮುರಳಿಧಾರರಾವ್ ತಂದೆ ಹಣಮಂತರಾವ್ ಬೆನಚಿಂಚೋಳಿ	ಡೀಸಲ್ಇಂಜಿನ್	30,000-00	-	-	-
7)	ತಾ,ಲೆ.ಅ.ಮ ಕೋ.ಸೂ. ಹುಮನಾಬಾದ್	ಬಡಗಿತನ	6,800-00	-	-	-
			2,51,350-00			

1993-94 ಭಾಲ್ಕಿ ತಾಲ್ಲೂಕು

1)	ಮಹಮದ್ ಇಸ್ಮಾಯಿಲ್ ತಂದೆ ಮಹಮದ್ ಅಬ್ದುಲ್ ರಹೀಮ್ ಸಾ,ಹಾಲಹಳ್ಳಿ	ಕಮ್ಮಾರಿಕೆ	8,600-00	-	-	-
2)	ಪ್ರಕಾಶ ತಂದೆ ಮಾರುತಿರಾವ್ ಸಾ ವರವಟ್ಟಿ ಎಕ್ಸರ್‌ಸೈಜ್	ನೋಟ್ ಬುಕ್	1,16,000-00	-	-	-
3)	ಅಬ್ದುಲ್ ಗಫಾರ ತಂದೆ ಬಾಬುಮಿಯ್ಯ	ಕ್ಯಾಂಪರ್	45,000-00	-	-	-
4)	ಸಿದ್ಧಾರೂಢ್ ಇಂ.ಅ.ತರಹಳ್ಳಿ	ಜಿ.ಕೆ.	50,000-00	-	-	-
5)	ಶ್ರೀಕಾಂತ್ ತಂದೆ ಮಲ್ಲಯ್ಯ ಸಾ ತರಹಳ್ಳಿ	ಪಿಕಲ್ಸ್	15,000-00	-	-	-
6)	ಕಮಾಲಕರ ತಂದೆ ಸಂಬಣ್ಣಾ ಸಾ, ಬ್ಯಾಲಹಳ್ಳಿ	ನೀರಪಾಮಗರ್	880-00	-	-	-
7)	ಬಾಬುರಾವ್ ತಂದೆ ಜಟೆಪ್ಪಾ ಸಾ,ದೇವರಗಾಂವ	ಲೆದರ್	7,000-00		-	-
8)	ಜಗನಾಥ್ ತಂದೆ ರಾಮಾ ಸಾ, ಕೂಡ್ಲಿ	ಕಮ್ಮಾರಿಕೆ	8,800-00	-	-	-
			2,51,080-00			

1993-94 ಔರಾದ ತಾಲ್ಲೂಕು

1)	ವಾಮನರಾವ್ ತಂದೆ ಗ್ಯಾನೋಬಾ ಸಾ;,ನಾಗನಕೇರಾ	ಅಗರಬತ್ತಿ	35,000-00			-

2)	ಸಂಗಪ್ಪಾ ತಂದೆ ಮಹದೇವಪ್ಪಾ ಸಾ,,ಏಕಲಾರ	ಬಡಗಿತನ	66,800-00	-	-	-
3)	ಮಲ್ಲಿಕಾರ್ಜುನ ತಂದೆ ವೀರಶೆಟ್ಟಿ ಸಾ,,ಉಜನಿ	ಮುರಮುರಾ	7,000-00	-	-	-
4)	ನಾಗಶೆಟ್ಟಿ ತಂದೆ ಬಂಡೆಪ್ಪಾ ಸಾ, ,ಧಾಪತಮಹಾಗಾಂವ	ಮುರಮುರಾ	7,000-00	-	-	-
5)	ಪುಷ್ಪರಾಣಿ ಗಂಡ ಶಂಕರರಾವ ,ಸಾ, ಬಲ್ಲೂರ	ಟೈಲರಿಂಗ್	8,900-00	-	-	-
6)	ಮಹ್ಮದ್ ಸಾಧಿಕ ತಂದೆ ಮಹ್ಮದ್ ಇಮಾಮಸಾಬ್ ಸಾ,, ಕೌಠಾ (ಬಿ)	ಬಡಗಿತನ	27,500-00	-	-	-
7)	ನೀಲಕಂಠರಾವ ತಂದೆ ವೆಂಕಟರಾವ್, ಕಮಲನಗರ	ಡಿಸ್ಟೆಂಪರ್	75,000-00	-	-	-
8)	ಸಂಗಶೆಟ್ಟಿ ತಂದೆ ಬಂಡೆಪ್ಪಾ,ಸಾ,, ಮಹಾಗಾಂವ	ಧೂಪತ ಸಿಲ್ಕು	66,000-00	-	-	-
9)	ಬಾಲಾಜಿ ತಂದೆ ದೇವರಾವ್ ಸಾ, ಡಿಗ್ಗಿ	ಪ್ಲಂಬರಿಂಗ್	10.000-00	-	-	-
10)	ಪ್ರೇಮಸಾಗರ ಇಂ.ಅ.ಬೇರಗಾ(ಬಿ)	ಸುಣ್ಣ	98,000-00	-	-	-
11)	ಜೀವನ ಜ್ಯೋತಿ ಕೈಸಂಘ, ಬರಿದಾಬಾದ	ಅಲ್ಯೂಮಿನಿಯಂ	2,59,000-00	-	-	-
12)	ವಿಜಯಕುಮಾರ್ ತಂದೆ ತರಾಣಪ್ಪಾ ಸಾ ಎಕಲಾರ	ಸುಣ್ಣ	47,000-00	-	-	-
13)	ಪ್ರಫುಲ್ಲಾ ವಿ.ಇ.ಅಸೋಸಿಯೇಷನ್, ಬಡಗಿತನ ಕಮಲನಗರ	ಕಮ್ಮಾರಿಕೆ	56,000-00	-	-	-
14)	ನಾಗಪ್ಪಾ ತಂದೆ ಬಾಜಿರಾವ್ ಸಾ,,ಕೋರಕಲ	ಬಡಗಿತನ	27,500-00			
15)	ದತ್ತಾತ್ರೆ ತಂದೆ ಶಂಕರರಾವ್ ಸಾ,,ಸೋಲಾಸ	ಕಮ್ಮಾರಿಕೆ	8,600-00	-	-	-
16)	ದೊಂಡಿಬಾ ತಂದೆ ಹರಿಚಂದ್ರ ಸಾ,, ಚಿಕ್ಕಲಿ	ನೀರಾಪಾಮಗರ	880-00			
17)	ವೆಂಕಟರಾವ್ ತಂದೆ ವಿಶ್ವನಾಥ್ ರಾವ್ ಸಾ,,ಮುಧೋಳ	ಟೈಲರಿಂಗ್	8,900-00	-	-	-
			8,10,280-00			

1993-94 ನೇ ಬಸವಕಲ್ಯಾಣ ತಾಲ್ಲೂಕು

1)	ಅನ್ನಪೂರ್ಣ ಗಂಡ ತುಳಸಿರಾಮ ಸಾ,, ಕೋಹಿನೂರ	ಟೈಲರಿಂಗ್	8,900-00	-	-	--
2)	ಕುಮಾರಿ ನಜಮಾ ಬೇಗಂ ತಂದೆ ಖಮೀರೋದ್ದಿನ್ ಸಾ,, ಪರತಾಪುರ	"	8,900-00	-	-	-
			17,800-00			

ಬೀದರ್ ಜಿಲ್ಲೆ

1992-93 ರಿಂದ 1993-94 ರವರೆಗೆ ಖಾದಿ ಮಂಡಳಿಯಿಂದ ಧನಸಹಾಯ ಪಡೆದ, ಘಟಕ ಸ್ಥಾಪನೆಯಾದ, ಸ್ಥಗಿತ ಇತ್ಯಾದಿ ವಿವರಗಳುಳ್ಳ ತ:ಖ್ತೆ

ಖಾದಿ ಮತ್ತು ಗ್ರಾಮೋದ್ಯೋಗಗಳಿಗೆ ಧನಸಹಾಯದ ವಿವರ		ಬೀದರ್	ಭಾಲ್ಕಿ	ಹುಮನಾಬಾದ್	ಬ.ಕಲ್ಯಾಣ	ಔರಾದ್
	ಸಂಖ್ಯೆ	155	14	19	27	3
	ರಕಂ.ಸಂ.	67,95,237-00	5,64,440-00	4,99,603-00	9,12,605-00	27,450-00
	ಸಹಾಯಧನ	42,940-00	5,340-00	8,647-00	6,975-00	-
2) ಕಾರ್ಯನಿರ್ವಹಿಸುತ್ತಿರುವ ಘಟಕಗಳು	ಸಂಖ್ಯೆ	64	8	16	14	2
3) ಸ್ಥಗಿತಗೊಂಡ ಘಟಕಗಳು		_	_	_	_	_
4) ಪುನಶ್ಚೇತನಕ್ಕೆ ಕ್ರಮ ಕೈಗೊಂಡ ಘಟಕಗಳು		-	-	-	1	_

ರೂ.ಲಕ್ಷಗಳಲ್ಲಿ	ಘಟಕಗಳು	ಸಾಲ	ಸಹಾಯಧನ
1) ಧನಸಹಾಯ ಒಟ್ಟು	218	88.04	0.63
2) ಕಾರ್ಯನಿರ್ವಹಿಸುತ್ತಿರುವ ಘಟಕಗಳು	115	47.99	0.61
3) ಸ್ಥಗಿತಗೊಂಡ ಘಟಕಗಳು.	_	_	_

ವಿಧಾನಸಭೆ ಚುಕ್ಕೆ ಗುರ್ತಿಲ್ಲದ ಸಂಖ್ಯೆ 275ಕ್ಕೆ ಉತ್ತರ:

ವರ್ಷ	ವಿವರ	ಬೀದರ್	ಭಾಲ್ಕಿ	ಹುಮನಾಬಾದ್	ಬಸವಕಲ್ಯಾಣ	ಔರಾದ್	ಒಟ್ಟು
1992-93	ಕೆಲಸ ನಿರ್ವಹಿಸುವ ಘಟಕಗಳು	51	5	11	1	9	77
"	ಸ್ಥಾಪನೆ ವಿವಿಧ ಹಂತಗಳಲ್ಲಿ ಇರುವ ಘಟಕ	8	1	1	-	1	11
	ಒಟ್ಟು	59	6	12	1	10	88
1993-94	ಕೆಲಸ ನಿರ್ವಹಿಸುವ ಘಟಕಗಳು	31	1	-	1	4	37
"	ಸ್ಥಾಪನೆ ವಿವಿಧ ಹಂತಗಳಲ್ಲಿ ಇರುವ ಘಟಕ	65	7	7	1	13	93
	ಒಟ್ಟು	96	8	7	2	17	130

ಬೀದರ್ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ನಗರ ನೀರು ಸರಬರಾಜು ಮಂಡಳಿಯ ಯೋಜನೆಗಳನ್ನು ಕಾರ್ಯಗತ

273 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯ ನಗರ ನೀರು ಸರಬರಾಜು ಮಂಡಲಿಯ ವತಿಯಿಂದ ಎಷ್ಟು ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದೆ. (ತಾಲ್ಲೂಕುವಾರು ಅಂಕಿಅಂಶಗಳನ್ನು ಒದಗಿಸುವುದು).

ಆ) ಇದಕ್ಕಾಗಿ ಖರ್ಚು ಮಾಡಿದ ಮೊತ್ತವೆಷ್ಟು?

ಇ) ಜಿಲ್ಲೆಯಲ್ಲಿ ಹೊಸದಾಗಿ ಎಷ್ಟು ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಈ ಕೆಳಕಂಡ ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದೆ.

1) ಬಾಲ್ಕಿ ಪಟ್ಟಣಕ್ಕೆ ಸುಧಾರಿತ ನೀರು ಸರಬರಾಜು ಯೋಜನೆ

2) ಬೀದರ್ ಪಟ್ಟಣಕ್ಕೆ ಸುಧಾರಿತ ನೀರು ಸರಬರಾಜು ಯೋಜನೆ

3) ಬೀದರ್ ಪಟ್ಟಣಕ್ಕೆ ಒಳಚರಂಡಿ ಯೋಜನೆ.

ಆ)

1)	ಬಾಲ್ಕಿ ಪಟ್ಟಣದ ನೀರು ಸರಬರಾಜು ಯೋಜನೆ	ರೂ.	147.17 ಲಕ್ಷಗಳು
2)	ಬೀದರ್ ಪಟ್ಟಣದ ನೀರು ಸರಬರಾಜು ಯೋಜನೆ	ರೂ.	174.33 ಲಕ್ಷಗಳು
3)	ಬೀದರ್ ಪಟ್ಟಣ ಒಳಚರಂಡಿ ಯೋಜನೆ	ರೂ.	169.96 ಲಕ್ಷಗಳು
	ಒಟ್ಟು ಮೊತ್ತ	ರೂ.	491.46 ಲಕ್ಷಗಳು

ಇ) ಬೀದರ್ ಜಿಲ್ಲೆಯಲ್ಲಿ ಈ ಕೆಳಕಂಡ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.

1) ಬಸವಕಲ್ಯಾಣ ಪಟ್ಟಣಕ್ಕೆ ಸುಧಾರಿತ ನೀರು ಸರಬರಾಜು ಯೋಜನೆ

2) ಹುಮಾನಾಬಾದ್ ಪಟ್ಟಣಕ್ಕೆ ಸುಧಾರಿತ ನೀರು ಸರಬರಾಜು ಯೋಜನೆ

3) ಚಿಟಗುಪ್ಪ ಪಟ್ಟಣಕ್ಕೆ ಕೊಳವೆ ನೀರು ಸರಬರಾಜು ಯೋಜನೆ

ಈ ಮೇಲಿನ ಮೂರು ಯೋಜನೆಯನ್ನು ಸರ್ಕಾರದ ಆದೇಶ ಸಂಖ್ಯೆ : ವನಇ 10 ಯುಡಬ್ಲ್ಯೂಎಸ್94 ದಿ: 11-8-94ರಲ್ಲಿ.......... ಮಂಜೂರಾತಿಯನ್ನು ನೀಡಿದೆ. ಅಂದಾಜು ವೆಚ್ಚದಲ್ಲಿ ಸ್ಥಳೀಯ ಸಂಸ್ಥೆಯು ತನ್ನ ವಂತಿಗೆಯಲ್ಲಿನ 1/3 ಭಾಗದ ಹಣವನ್ನು ಪಾವತಿ ಮಾಡಿದ ನಂತರ ಯೋಜನೆಯನ್ನು ಪ್ರಾರಂಭಿಸಲಾಗುವುದು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಕ್ರಮ ಸಾಗುವಳಿಯ ಸಕ್ರಮ

280 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಇದುವರೆಗೂ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವಲ್ಲಿ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಸಕ್ರಮಗೊಳಿಸಲಾಗಿದೆ? ಎಷ್ಟು ತಿರಸ್ಕರಿಸಲಾಗಿದೆ?

ಆ) ತರಿ, ಖುಷ್ಕಿ ಜಮೀನಿನಲ್ಲಿ ಕಾಫಿ ಹಾಗೂ ಇತರ ಬೆಳೆ ಬೆಳೆದಿದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲು ಕಾರಣವೇನು?

ಇ) ಇಂತಹ ಅಕ್ರಮ ಸಾಗುವಳಿ ಪ್ಲಾಂಟೇಷನ್ ಆಗುವುದು ಹೇಗೆ?

ಶ್ರೀ . ಧರಮ್‌ಸಿಂಗ್ (ಕಂದಾಯ ಸಚಿವರು) :

ಅ)

	ತಾಲ್ಲೂಕಿನ ಹೆಸರು	ಮಂಜೂರಾದ ಸಂಖ್ಯೆ	ಪ್ರಕರಣ ವಿಸ್ತೀರ್ಣ	ತಿರಸ್ಕೃತ ಸಂಖ್ಯೆ	ಪ್ರಕರಣ ವಿಸ್ತೀರ್ಣ
1)	ಚಿಕ್ಕಮಗಳೂರು	2870	6888-32	5515	16391-29
2)	ಕಡೂರು	1820	3903-08	3824	11348-23
3)	ತರೀಕೆರೆ	833	1999-28	4633	13738-10
4)	ನರಸಿಂಹರಾಜಪುರ	250	479-37	237	1095-21
5)	ಕೊಪ್ಪ	465	224-08	6644	16968-30
6)	ಶೃಂಗೇರಿ	-	-	697	1678-00
7)	ಮೂಡಿಗೆರೆ	1257	825-14	7501	19796-20
	ಒಟ್ಟು :	7495	14321-07	29051	81017-13

ಆ) ಅನಧಿಕೃತವಾಗಿ ಕಾಫಿ ಸಾಗುವಳಿ ಸಕ್ರಮಗೊಳಿಸಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ.

ಇ) ಮೇಲೆ "ಆ" ಉಪ ಪ್ರಶ್ನೆಗೆ ನೀಡಿದ ಉತ್ತರದ ಹಿನ್ನಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಭಾರಿ ಮಳೆಯಿಂದ ಕೃಷಿ ಬೆಳೆಗಾದ ನಷ್ಟ

261 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜುಲೈ ತಿಂಗಳಲ್ಲಿ ಬಿದ್ದ ಮಳೆಯಿಂದಾಗಿ ಎಷ್ಟು ಹೆಕ್ಟೇರ್ ಜಮೀನು ಪ್ರವಾಹದಿಂದ ಹಾನಿಯಾಗಿದೆ? ಎಷ್ಟು ಎಕರೆ ಜಮೀನಿಗೆ ಬೆಳೆ ಹಾಳಾಗಿದೆ? (ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಪೂರ್ಣ ಮಾಹಿತಿ ಒದಗಿಸುವುದು);

ಆ) ಎಷ್ಟು ಜನ ರೈತರಿಗೆ ಈ ಜಿಲ್ಲೆಯಲ್ಲಿ ಹಾನಿಯಾಗಿದೆ?

ಇ) ಎಷ್ಟು ಜನ ರೈತರಿಗೆ ಪರಿಹಾರ ವಿತರಣೆ ಮಾಡಲಾಗಿದೆ? (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

ಈ) ಮೂಡಿಗೆರೆ ತಾಲ್ಲೂಕಿನಲ್ಲಿ ಯಾವ ಬೆಳೆಗೆ ಹೆಚ್ಚು ಹಾನಿಯಾಗಿದೆ?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಹಾನಿಗೊಳಗಾದ ಜಮೀನು ಮತ್ತು ಬೆಳೆಯ ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಜಮೀನು ಹಾನಿ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)	ಬೆಳೆ ಹಾನಿ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)
1)	ಚಿಕ್ಕಮಗಳೂರು	1820.00	326.00
2)	ಮೂಡಿಗೆರೆ	886.00	886.00
3)	ಕೊಪ್ಪ	141.00	141.00

4)	ನರಸಿಂಹರಾಜಪುರ	1035.00	1004.00
5)	ಶೃಂಗೇರಿ	404.35	57.17
6)	ತರೀಕೆರೆ	513.00	19.00
7)	ಕಡೂರು	166.00	-
	ಒಟ್ಟು	4965.35	2433.17

ಆ) ಹಾನಿಗೊಳಗಾದ ರೈತರ ಸಂಖ್ಯೆ - 10605
ರೈತರಿಗೆ ನೀಡಿದ ತಾಲ್ಲೂಕುವಾರು ಪರಿಹಾರ ಕೆಳಕಂಡಂತಿದೆ:

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಪರಿಹಾರ ವಿತರಿಸಿರುವ ರೈತರ ಸಂಖ್ಯೆ
1)	ಚಿಕ್ಕಮಗಳೂರು	1083
2)	ಮೂಡಿಗೆರೆ	2079
3)	ಕೊಪ್ಪ	1657
4)	ನರಸಿಂಹರಾಜಪುರ	1
5)	ಶೃಂಗೇರಿ	2
6)	ತರೀಕೆರೆ	8
7)	ಕಡೂರು	-
	ಒಟ್ಟು	62

ಹೆಚ್ಚಿನ ಹಾನಿಗೊಳಗಾದ ಬೆಳೆಗಳೆಂದರೆ, ಭತ್ತದ ಸಸಿ, ಅಡಿಕೆ ... ಕಾಫಿ.

ಇಂದಿರಾ ಅವಾಜ್ ಮತ್ತು ಅಂಬೇಡ್ಕರ್ ಶತಾಬ್ಧಿ ಯೋ... ಡಿಯಲ್ಲಿ ನಿರ್ಮಿಸಿರುವ ಮನೆಗಳು

276 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ... ವಸತಿ ಸಚಿರರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 1 ವರ್ಷದಿಂದ ಜುಲೈ 1994ರವರೆಗೆ ರಾಜ... ಇಂದಿರಾ ಅವಾಜ್ ಮತ್ತು ಅಂಬೇಡ್ಕರ್ ಶತಾಬ್ದಿ ಯೋಜನೆ ... ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ. (ಜಿಲ್ಲಾವಾರು ಅಂಕಿಅಂಶಗ... ಗಿಸುವುದು)

ಆ) ಈ ಅವಧಿಯಲ್ಲಿ ಮೇಲ್ಕಂಡ ಸಹಯೋಜನೆಗಳಲ್ಲಿ ... ಮನೆಗಳ ನಿರ್ಮಾಣದ ಗುರಿಯನ್ನು ಹೊಂದಲಾಗಿತ್ತು.

ಇ) ಈ ಮನೆಗಳ ನಿರ್ಮಾಣಕ್ಕಾಗಿ ಎಷ್ಟು ಹಣವನ್ನು ...ಿಸಲಾಗಿತ್ತು ಹಾಗೂ ಎಷ್ಟು ಹಣವನ್ನು ಬಿಡುಗಡೆ ಮಾಡಲಾಯಿ...

ಈ) ಆಗಸ್ಟ್ 15, 1994ರ ವೇಳೆಗೆ ರಾಜ್ಯಾದ್ಯಂತ ಒಂದ... ಕ್ಷ ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ವಿತರಿಸುವ ಸರ್ಕಾರದ ಯೋ...ನೆ ಸ್ಥಗಿತವಾಯಿತೆ?

ಉ) ಹಾಗಿದ್ದಲ್ಲಿ, ಆಗಸ್ಟ್ 15,1994ರ ವೇಳೆಗೆ ಎಷ್ಟು ಮನೆಗ... ಪೂರ್ಣಗೊಳ್ಳುತ್ತದೆ.

ಶ್ರೀ ಗೋಪಿನಾಥ್ ಸಾಂಡ್ರಾ (ವಸತಿ ಸಚಿವರು) :

ಅ) ಇಂದಿರಾ ಅವಾಜ್ ಯೋಜನೆಯಡಿಯಲ್ಲಿ 1993-94ರ ಸಾ...ಲ್ಲಿ ಹಾಗೂ 31-7-94ರ ವರೆಗೆ 12176 ಮನೆಗಳನ್ನು ನಿರ್ಮಿಸಲಾಗಿದೆ. ಹಾಗ... ಅಂಬೇಡ್ಕರ್ ಯೋಜನೆಯಡಿಯಲ್ಲಿ 18459 ಮನೆಗಳನ್ನು ನಿರ್ಮಿಸಲಾಗಿದೆ.

(ಜಿಲ್ಲಾವಾರು ಅಂಕಿ ಅಂಶಗಳನ್ನು ಅನುಬಂಧ 1ರಲ್ಲಿ ಒ...

ಅ) ಈ ಅವಧಿಯಲ್ಲಿ ಇಂದಿರಾ ಅವಾಜ್ ಯೋಜನೆ ಅಡಿ 15943 ಮನೆಗಳ ಹಾಗೂ ಡಾ॥ಅಂಬೇಡ್ಕರ್ ಯೋಜನೆಯಡಿಯಲ್ಲಿ 32134ಮನೆಗಳ ಗುರಿ ಹೊಂದಲಾಗಿತ್ತು.

ಇ) ಈ ಅವಧಿಯಲ್ಲಿ ಇಂದಿರಾ ಅವಾಜ್ ಯೋಜನೆಗೆ 2270.32 ಲಕ್ಷಗಳನ್ನು ಮೀಸಲಿಟ್ಟಿದ್ದು ಸಂಪೂರ್ಣ ಮೊತ್ತ ಬಿಡುಗಡೆ ಮಾಡಲಾಗಿದೆ.

ಡಾ॥ ಅಂಬೇಡ್ಕರ್ ಯೋಜನೆಗೆ ರೂ. 73.53 ಕೋಟಿ ಮೀಸಲಿಟ್ಟು ಇದರಲ್ಲಿ 1993-94ರ ವರೆಗೆ 38.72 ಕೋಟಿ ಹಾಗೂ 1-7-94ರ ವರೆಗೆ 5.00 ಕೋಟಿ ಬಿಡುಗಡೆ ಮಾಡಲಾಗಿದೆ.

ಈ) ಈ ಅವಧಿಯಲ್ಲಿ ಈ ಎರಡು ಯೋಜನೆಗಳಲ್ಲಿ 30,635 ಮನೆಗಳನ್ನು ನಿರ್ಮಿಸಲಾಗಿದೆ. ಹಾಗೂ ಅವುಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿದೆ.

ಉ) ಇಂದಿರಾ ಅವಾಜ್ ಯೋಜನೆಯಲ್ಲಿ 12176 ಪೂರ್ಣಗೊಂಡಿದೆ.

ಡಾ॥ ಅಂಬೇಡ್ಕರ್ ಯೋಜನೆಯಲ್ಲಿ 1994 ಜುಲೈ ಅಂತ್ಯದವರೆಗೆ 18459 ಮನೆಗಳು ಪೂರ್ಣಗೊಂಡಿವೆ.

ಅನುಬಂಧ -1

		ಇಂದಿರಾ ಅವಾಜ್ ಯೋಜನೆ 1993-94 ಹಾಗೂ 31-7-94ರ ವರೆಗೆ ಕಟ್ಟಿದ ಮನೆಗಳು	ಡಾ॥ ಅಂಬೇಡ್ಕರ್ ಯೋಜನೆ ಯಡಿಯಲ್ಲಿ 1993-94 ಹಾಗೂ ದಿನಾಂಕ : 31-7-94ವರೆಗೆ ಕಟ್ಟಿದ ಮನೆಗಳು
1)	ಬೆಂಗಳೂರು ಗ್ರಾ	521	936
2)	ಬೆಂಗಳೂರು ನಗರ	380	449
3)	ಚಿತ್ರದುರ್ಗ	1069	780
4)	ಕೋಲಾರ	829	541
5)	ಶಿವಮೊಗ್ಗ	401	926
6)	ತುಮಕೂರು	777	1279
7)	ಮೈಸೂರು	1033	1313
8)	ಚಿಕ್ಕಮಗಳೂರು	303	378
9)	ದಕ್ಷಿಣ ಕನ್ನಡ	342	764
10)	ಹಾಸನ	537	907
11)	ಕೊಡಗು	126	240
12)	ಬೆಳಗಾಂ	647	1462
13)	ಮಂಡ್ಯ	421	831
14)	ಬಿಜಾಪುರ	852	1342
15)	ಧಾರವಾಡ	856	2200
16)	ಉತ್ತರ ಕನ್ನಡ	95	309
17)	ಗುಲ್ಬರ್ಗಾ	1059	764
18)	ಬೀದರ್	598	635
19)	ಬಳ್ಳಾರಿ	623	1083
20)	ರಾಯಚೂರು	707	1320
		12176	18459

ಬಸವ ಕಲ್ಯಾಣ ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆ

189 - ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಬಸವ ಕಲ್ಯಾಣ ಪಟ್ಟಣವು 50 ಸಾವಿರದ ಜನಸಂಖ್ಯೆಯನ್ನು ಹೊಂದಿದ್ದು, ಐತಿಹಾಸಿಕ ಹಾಗೂ ವ್ಯಾಪಾರಿ ಕೇಂದ್ರವಾಗಿದ್ದು, ಸದರಿ ಪಟ್ಟಣದಲ್ಲಿ ಕುಡಿಯುವ ನೀರಿನ ತೊಂದರೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಚುಳ್ಕಿ ನಾಲಾ ನೀರಾವರಿ ಯೋಜನೆಯಿಂದ ಬಸವಕಲ್ಯಾಣ ಪಟ್ಟಣಕ್ಕೆ ನೀರನ್ನು ಒದಗಿಸುವ ಯೋಜನೆಯೊಂದನ್ನು ರೂಪಿಸಿರುವುದು ನಿಜವೇ? ಹಾಗಿದ್ದಲ್ಲಿ ಇದಕ್ಕೆ ಎಷ್ಟು ಹಣ ತಗಲುವುದು. ಈಗಾಗಲೇ ಈ ಕಾರ್ಯಕ್ರಮಕ್ಕಾಗಿ ಎಷ್ಟು ವೆಚ್ಚ ಮಾಡಲಾಗಿದೆ ಮತ್ತು ಎಷ್ಟು ಪ್ರಯೋಜನವಾಗಿದೆ?

ಇ) ಹಿಂದಿನ ಅಧಿವೇಶನದಲ್ಲಿ, ಹಿಂದಿನ ನಗರಾಭಿವೃದ್ಧಿ ಸಚಿವರು ಬಸವ ಕಲ್ಯಾಣ ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಕೂಡಲೇ ಕ್ರಮಕೈಗೊಳ್ಳುವುದಾಗಿ ಆಶ್ವಾಸನೆ ನೀಡಿರುವುದು ನಿಜವೇ? ಹಾಗಿದ್ದಲ್ಲಿ ಇದುವರೆಗೆ ಕಾರ್ಯಗತ ಗೊಳಿಸದಿರಲು ಕಾರಣವೇನು?

ಶ್ರೀ ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು

ಆ) ಹೌದು

ಈ ಯೋಜನೆಯ ಅಂದಾಜು, 1994-95ರ ದರ ಪಟ್ಟಿಯ ಮೇರೆಗೆ ಸುಮಾರು 658 ಲಕ್ಷ ರೂ.ಗಳು ಆಗುತ್ತದೆ. ಈ ಯೋಜನೆಗೆ ಸರ್ಕಾರದ ಆಜ್ಞೆ ಸಂಖ್ಯೆ ವನಇ 10 ಯುಡಬ್ಲ್ಯೂಎಸ್:94 ದಿ: 11-8-94ರಲ್ಲಿ ತಾತ್ವಿಕ, ಮಂಜೂರಾತಿಯನ್ನು ನೀಡಿದ್ದು, ಯೋಜನೆಯನ್ನು ಈವರೆವಿಗೂ ಕೈಗೆತ್ತಿ ಕೊಂಡಿರುವುದಿಲ್ಲ.

ಇ) ಉತ್ತರ (ಆ) ನಲ್ಲಿ ತಿಳಿಸಿರುವ ಹಾಗೆ ಸರ್ಕಾರದ ತಾತ್ವಿಕ ಮಂಜೂರಾತಿಯನ್ನು ನೀಡಿದೆ.

To be declare as drought affected district of Bidar

190 - Sri Basavaraj Patil Attur (Basavakalyna) : Will the Hon'ble Revenue Minister be pleased to state?

a) Whether it has come to the notice of the Government that ther is no rainfall in Bidar district and as a result there is no sowing?

b) Furnish the details of rainfall & Khariff sowing during the year and last year.

c) What steps have been taken by the Government in non-sown areas of the Taluks? wat steps have been taken for remission of land revenue?

d) Steps taken for drinking water supply and opening of Fodder Bank?

Sri. Dharma Singh (Hon'ble Minister for Revenue) :

a) Yes. Action has been taken to create employment and to provide drinking water in the affected taluks.

b) Details of rainfall in Bidar district for last year and current year.

Sl. No. Taluk	Rainfall during last year	Rainfall during the current year
1. Howrad	463.2	239.6
2. Basavakalyan	328.5	308.0
3. Bhalki	483.9	336.6
4. Bidar	464.6	343.5
5. Humnabad	379.2	247.4

The details of Khariff sowing in Bidar District is given below :

Sl. No.	Taluk	Khariff sown in last year	Khariff sown in current year
1.	Howrad	80781	68930
2.	Basavakalyan	63024	64247
3.	Bhalki	57240	83553
4.	Bidar	24777	43725
5.	Humnabad	48412	39860
	Total	274234	300315

c) A Contingency action plan for Rs. 529.00 lakhs has been prepared for employment generation, drinking water supply and supply of fodder etc. The State Govt. has already released a sum of Rs. 70.00 lakhs to the district for drinking water supply from 1.4.94 to 12.8.94.

d) YES

ರಾಜ್ಯದಲ್ಲಿ ಪ್ರವಾಹದಿಂದ ಮೃತಪಟ್ಟವರ ಸಂಖ್ಯೆ

186-ಶ್ರೀ ಬಸವರಾಜಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿನ ಪ್ರವಾಹದಿಂದ ರಾಜ್ಯದಲ್ಲಿ ಮೃತಪಟ್ಟವರ ಸಂಖ್ಯೆ ಎಷ್ಟು?

ಆ) ಇದುವರೆಗೂ ಸರ್ಕಾರ ನೀಡಿರುವ ಪರಿಹಾರವೆಷ್ಟು?

ಇ) ಮನೆ ಮತ್ತು ಬೆಳೆಗಳನ್ನು ಕಳೆದುಕೊಂಡವರ ಸಂಖ್ಯೆ ಎಷ್ಟು?

ಈ) ಮನೆಗಳ ನಿರ್ಮಾಣ ಅಥವಾ ದುರಸ್ಥಿಗಾಗಿ ಬಿಡುಗಡೆ ಮಾಡಿರುವ ಮೊತ್ತವೆಷ್ಟು?

ಉ) ಬೆಳೆ ಹಾನಿಗೆ ನೀಡಿರುವ ಪರಿಹಾರವೆಷ್ಟು?

ಊ) ನೆರೆ ಹಾವಳಿ ಪರಿಹಾರ ಕಾರ್ಯಗಳಿಗೆ ಇದುವರೆಗೂ ಸರ್ಕಾರ ಖರ್ಚು ಮಾಡಿರುವ ಮೊತ್ತವೆಷ್ಟು?

ಋ) ಕೇಂದ್ರ ಸರ್ಕಾರದಿಂದ ಕೋರಿರುವ ನೆರವು ಎಷ್ಟು?
ೠ) ಇದಕ್ಕಾಗಿ ಇದುವರೆಗೂ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಮೊತ್ತವೆಷ್ಟು?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಮೃತಪಟ್ಟವರ ಸಂಖ್ಯೆ 71

ಆ) ಮೃತಪಟ್ಟವರ ಹತ್ತಿರದ ವಾರಸುದಾರರಿಗೆ ಈ ಕೆಳಕಂಡಂತೆ ಪರಿಹಾರ ನೀಡಲಾಗಿದೆ.

1.	ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ	-	55.00 ಲಕ್ಷಗಳು
2.	ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ	-	32.00 ಲಕ್ಷಗಳು
	ಒಟ್ಟು		87.00 ಲಕ್ಷಗಳು

ಇ) ಮನೆಗಳನ್ನು ಕಳೆದುಕೊಂಡವರ ಸಂಖ್ಯೆ-41998

ಬೆಳೆ ಕಳೆದುಕೊಂಡ ರೈತರ ಸಂಖ್ಯೆ155080

ಈ) ಜೂನ್-ಜುಲೈ ಪ್ರವಾಹ ಪರಿಹಾರ ಕಾರ್ಯಗಳಿಗಾಗಿ ಸರ್ಕಾರ ದಿನಾಂಕ 23.8.1994ರವರೆಗೆ ರೂ. 10.15 ಕೋಟಿಗಳನ್ನು ಬಿಡುಗಡೆ ಮಾಡಿದ್ದು; ಈ ಪೈಕಿ ರೂ. 1.84 ಕೋಟಿಗಳನ್ನು ಮನೆ ಕುಸಿತಕ್ಕೆ ಪರಿಹಾರವಾಗಿ ನೀಡಲಾಗಿದೆ.

ಉ) ಒಟ್ಟಾರೆ ಮೇಲೆ ಬಿಡುಗಡೆ ಮಾಡಿರುವ ಹಣದ ಪೈಕಿ, ರೂ. 36.42 ಲಕ್ಷಗಳನ್ನು ಬೆಳೆ ಹಾನಿಗೆ ಪರಿಹಾರವಾಗಿ ನೀಡಲಾಗಿದೆ.

ಊ) ನೆರೆ ಹಾವಳಿ ಪರಿಹಾರ ಕಾರ್ಯಗಳಿಗಾಗಿ ಇದುವರೆಗೆ ಒಟ್ಟು ರೂ. 4.00 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಋ) ರಾಜ್ಯ ಸರ್ಕಾರವು ದಿನಾಂಕ 26.7.94 ರಂದು ರೂ. 100.00 ಕೋಟಿಗಳ ನೆರವು ಕೋರಿ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದೆ.

ೠ) ಕೇಂದ್ರ ಸರ್ಕಾರವು ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ತನ್ನ ವಾರ್ಷಿಕ ವಂತಿಗೆಯಾದ ರೂ. 20.25 ಕೋಟಿಗಳನ್ನು ಹೊರತು ಪಡಿಸಿ ಇನ್ನಾವುದೇ ನೆರವು ನೀಡಿಲ್ಲ. ಆದರೆ, ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ ಮೃತಪಟ್ಟವರ ಹತ್ತಿರದ ವಾರಸುದಾರರಿಗೆ ಪರಿಹಾರ ನೀಡಲು ರೂ. 32.00 ಲಕ್ಷಗಳನ್ನು ನೀಡಲಾಗಿದೆ.

ಭೂ ಮಂಜೂರಾತಿಯ ವಿಚಾರವಾಗಿ ಬೀದರ್ ಜಿಲ್ಲೆಯಲ್ಲಿ ಅಧಿಕಾರಿಗಳ ಮೇಲೆ ಕ್ರಮ

279 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಬೀದರ್ ನಗರದಲ್ಲಿ ಭೂ ಮಂಜೂರಾತಿಯ ಸಂಬಂಧವಾಗಿ ಕಾನೂನು ಉಲ್ಲಂಘನೆ ಮಾಡಿರುವ ಎಷ್ಟು ಜನ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆ?

ಆ) ಸದರಿ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಎಷ್ಟು ಸಹಾಯಕ ಆಯುಕ್ತರು ಹಾಗೂ ತಹಶೀಲ್ದಾರ್‌ರನ್ನು ಅಮಾನತ್ತಿನಲ್ಲಿ ಇಡಲಾಗಿದೆ. (ಅಮಾನತ್ತಿನಲ್ಲಿರುವ ಅಧಿಕಾರಿಗಳ ಹೆಸರು ಮತ್ತು ವಿವರ ಒದಗಿಸುವುದು)

ಇ) ಶಿಸ್ತಿನ ಕ್ರಮಕ್ಕೆ ಒಳಪಟ್ಟಿರುವ ಅಧಿಕಾರಿಗಳ ಮೇಲಿರುವ ಆಪಾದನೆಗಳ ವಿವರಗಳನ್ನು ಒದಗಿಸುವುದು.

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಭೂ ಮಂಜೂರಾತಿ ಕಾಯ್ದೆ ಅಡಿಯಲ್ಲಿ ಯಾವುದೇ ಕಾನೂನು ಉಲ್ಲಂಘನೆ ಪ್ರಕರಣಗಳು ಇರುವುದಿಲ್ಲ. ಆದರೆ, ಭೂ ಸುಧಾರಣೆ ಕಾಯ್ದೆ ಅಡಿಯಲ್ಲಿ ಬೀದರ್ ನಗರದಲ್ಲಿ ಭೂ ಮಂಜೂರಾತಿಗೆ ಸಂಬಂಧಿಸಿದ ಈ ಕೆಳಗೆ ಕಾಣಿಸಿದ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲು ಅವರನ್ನು ಅಮಾನತ್ತಿನಲ್ಲಿ ಇಡಲಾಗಿದೆ.

1) ಸಹಾಯಕ ಆಯುಕ್ತರು, ಬೀದರ್.
2) ತಹಶೀಲ್ದಾರ್, ಬೀದರ್.
3) ಉಪನೊಂದಣಾಧಿಕಾರಿ, ಬೀದರ್.
4) ಕಂದಾಯ ನಿರೀಕ್ಷಕ, ಬೀದರ್.
5) ಗ್ರಾಮಲೆಕ್ಕಿಗರು, ಬೀದರ್.
6) ಎರಡನೆಯ ದರ್ಜೆ ಸಹಾಯಕರು, ಬೀದರ್.

ಆ) 1) ಶ್ರೀ ವೇದಮೂರ್ತಿ ಸಹಾಯಕ ಆಯುಕ್ತರು, ಬೀದರ್.

2) ಶ್ರೀ ಬಾಲಾಜಿಸಿಂಗ್, ತಹಶೀಲ್ದಾರ್, ಬೀದರ್.

ಇ) ಬೀದರ್ ತಾಲ್ಲೂಕಿನ ಗುಲ್ಲರ ಹವೇಲಿ ಗ್ರಾಮಕ್ಕೆ ಸೇರಿದ ಅತಿ ಮಹತ್ವವುಳ್ಳ ಬೆಲೆ ಬಾಳುವ ಸರ್ವೆ ನಂ:49, 50, 36 ಮತ್ತು 51 ಜಮೀನುಗಳನ್ನು ಭೂ ಸುಧಾರಣೆ ಕಾಯ್ದೆ ವಿರುದ್ಧವಾಗಿ ಭೂ ನ್ಯಾಯಮಂಡಳಿ ವತಿಯಿಂದ ಹಕ್ಕುಪತ್ರ ನೀಡಿ, ಭೂಪರಿವರ್ತನೆಗೆ ಅನುಮತಿ ನೀಡಿರುವುದು.

ನೈಸರ್ಗಿಕ ವಿಕೋಪಕ್ಕಾಗಿ ಕೇಂದ್ರದಿಂದ ಬಂದಿರುವ ಪರಿಹಾರ

278 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿನ ನೆರೆ ಹಾವಳಿಯೂ ಸೇರಿದಂತೆ ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಸಂಭವಿಸಿದ ಅತಿವೃಷ್ಟಿ ಅನಾವೃಷ್ಟಿಯಿಂದ ಉಂಟಾದ ಅಂದಾಜು ನಷ್ಟವೆಷ್ಟು? (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು)

ಆ) ಮೇಲ್ಕಂಡ ಅವಧಿಯಲ್ಲಿ ರಾಜ್ಯ ಸರ್ಕಾರವು ಕೇಂದ್ರಕ್ಕೆ ಎಷ್ಟೆಷ್ಟು ಮೊತ್ತದ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿತ್ತು?

ಇ) ಈ ಅವಧಿಯಲ್ಲಿ ಕೇಂದ್ರದಿಂದ ಬಂದಿರುವ ಪರಿಹಾರದ ಮೊತ್ತವೆಷ್ಟು?

ಈ) ಇದೇ ಅವಧಿಯಲ್ಲಿ ಸರ್ಕಾರ ಖರ್ಚು ಮಾಡಿದ ಹಣದ ಮೊತ್ತವೆಷ್ಟು? (ವರ್ಷವಾರು ಅಂಕಿ ಅಂಶಗಳನ್ನು ಒದಗಿಸುವುದು) ;

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ)

ವರ್ಷ	ಕೋರಿದ್ದ ಮೊತ್ತ (ಕೋಟಿ ರೂ.ಗಳಲ್ಲಿ)
1991-92	194.00
1992-93	200.00
1993-94	200.00
1994-95	100.00
ಒಟ್ಟು	694.00

ಇ) ಈ ಅವಧಿಗಳಲ್ಲಿ ಕೇಂದ್ರ ಸರ್ಕಾರವು ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ಪ್ರತಿವರ್ಷ ತನ್ನ ವಂತಿಗೆಯಾದ ರೂ. 20.25 ಕೋಟಿಗಳಂತೆ ಒಟ್ಟು ರೂ. 81.00 ಕೋಟಿಗಳನ್ನು ನೀಡಿದೆ. ಅಲ್ಲದೇ, ಈ ಅವಧಿಯಲ್ಲಿ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ ಮೃತಪಟ್ಟವರ ಹತ್ತಿರದ ವಾರಸುದಾರರಿಗೆ ಪರಿಹಾರ ನೀಡಲು ಕೆಳಕಂಡಂತೆ ಅನುದಾನವನ್ನು ನೀಡಲಾಗಿದೆ.

(ರೂ. ಲಕ್ಷಗಳಲ್ಲಿ)

ವರ್ಷ	ಮೊಬಲಗು
1991-92	12.40
1992-93	23.00
1993-94	43.00
1994-95	32.00
ಒಟ್ಟು	110.40

ಈ) ವಿವಿಧ ಪರಿಹಾರ ಕಾರ್ಯಗಳಿಗಾಗಿ ರಾಜ್ಯ ಸರ್ಕಾರ ವೆಚ್ಚ ಮಾಡಿದ ಹಣದ ವಿವರ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

ವರ್ಷ	ರಾಜ್ಯ ಸರ್ಕಾರ ಖರ್ಚು ಮಾಡಿದ ಹಣ
1991-92	38.78
1992-93	72.83
1993-94	56.46
1994-95 (ಜೂನ್ವರೆಗೆ)	7.93
ಒಟ್ಟು	176.00

1991-92ರಿಂದ 1994-95ರವರೆಗೆ (ಜುಲೈ ಅಂತ್ಯದವರೆಗೆ) ರಾಜ್ಯದಲ್ಲಿ ಅತಿವೃಷ್ಟಿ ಹಾಗೂ ಅನಾವೃಷ್ಟಿಯಿಂದ ಉಂಟಾದ ಹಾನಿಯ ಜಿಲ್ಲಾವಾರು ವಿವರದ ತಖ್ತೆ :

1. ರೂ. ಕೋಟಿಗಳಲ್ಲಿ
2. ಸಂಖ್ಯೆ ಲಕ್ಷಗಳಲ್ಲಿ
3. ಕ್ಷೇತ್ರ ಲಕ್ಷ ಹೆಕ್ಟೇರ್‌ಗಳಲ್ಲಿ

ಕ್ರಮ ಸಂ	ಜಿಲ್ಲೆಯ ಹೆಸರು	ನೆರೆ ಹಾವಳಿಯಿಂಧ ಉಂಟಾದ ನಷ್ಟ						ನೆರೆ ಹಾವಳಿಯಿಂದ ಉಂಟಾದ ನಷ್ಟ					
		1991-92			1992-93			1993-94			1994-95		
		ಖಾಸಗಿ ಆಸ್ತಿಪಾಸ್ತಿಗಳ ಹಾನಿ	ಸಾರ್ವಜನಿಕ ಆಸ್ತಿಗಳ ಹಾನಿ	ಒಟ್ಟು ನಷ್ಟ	ಖಾಸಗಿ ಆಸ್ತಿ ಪಾಸ್ತಿಗಳ ಹಾನಿ	ಸಾರ್ವಜನಿಕ ಆಸ್ತಿಗಳ ಹಾನಿ	ಒಟ್ಟು ನಷ್ಟ	ಖಾಸಗಿ ಆಸ್ತಿಗಳ ಹಾನಿ	ಸಾರ್ವಜನಿಕ ಆಸ್ತಿಗಳ ಹಾನಿ	ಒಟ್ಟು ನಷ್ಟ	ಖಾಸಗಿ ಆಸ್ತಿಗಳ ಹಾನಿ	ಸಾರ್ವಜನಿಕ ಆಸ್ತಿಗಳ ಹಾನಿ	ಒಟ್ಟು ನಷ್ಟ
1	2	3	4	5	6	7	8	9	10	11	12	13	14
1.	ಬೆಳಗಾವಿ	0.35	2.57	2.92	1.38	0.46	1.84	6.32	4.01	10.33	28.33	7.09	35.42
2.	ಬಳ್ಳಾರಿ	0.76	0.86	1.62	40.58	21.83	62.41	8.25	3.56	11.81	1.54	_	1.54
3.	ಬಿಜಾಪುರ	0.15	1.11	1.26	1.41	3.03	4.44	37.81	2.60	40.41	12.73	5.49	18.22
4.	ಚಿಕ್ಕಮಗಳೂರು	0.55	2.46	3.01	2.13	12.92	15.05	1.05	5.93	6.98	3.27	7.71	10.98
5.	ಚಿತ್ರದುರ್ಗ	_	_	_	11.72	14.42	26.14	1.03	1.75	2.78	0.08	0.98	1.06
6.	ದ. ಕನ್ನಡ	0.23	3.87	4.10	0.65	9.38	10.03	0.09	8.76	8.85	8.53	22.94	31.47

7.	ಧಾರವಾಡ	4.16	4.03	8.19	23.15	11.15	34.30	14.98	9.68	24.66	7.53	4.21	11.74
8.	ಗುಲ್ಬರ್ಗಾ	0.52	1.66	2.18	1.81	3.76	5.57	1.89	5.57	7.46	–	–	–
9.	ಹಾಸನ	1.26	–	1.26	0.35	3.84	4.19	0.31	1.93	2.24	2.43	5.95	8.38
10.	ಕೊಡಗು	0.64	3.05	3.69	0.80	8.85	9.65	0.04	2.22	2.26	1.74	6.48	8.22
11.	ಕೋಲಾರ	24.86	7.56	32.42	–	–	–	0.15	1.72	1.87	0.42	0.22	0.64
12.	ಮಂಡ್ಯ	0.52	1.05	1.57	–	–	–	0.12	2.35	2.47	0.02	0.33	0.35
13.	ಮೈಸೂರು	3.26	2.12	5.38	0.60	0.75	1.35	0.05	3.58	3.63	2.95	3.77	6.72
14.	ರಾಯಚೂರು	1.34	2.18	3.52	116.29	16.00	132.29	93.97	11.23	105.20	–	–	–
15.	ಶಿವಮೊಗ್ಗ	0.83	2.06	2.89	6.88	10.29	17.17	0.65	2.99	3.64	4.67	11.55	16.22
16.	ಉತ್ತರ ಕನ್ನಡ	0.14	1.31	1.45	2.10	5.70	7.80	0.34	2.47	2.81	4.71	10.80	15.51
17.	ಬೀದರ್	–	–	–	–	–	–	0.03	4.16	4.19	–	–	–
18.	ತುಮಕೂರು	8.73	5.39	14.12	0.11	3.27	3.38	0.16	3.15	3.31	–	–	–
19.	ಬೆಂಗಳೂರು (ನ)	4.57	1.79	6.36	–	–	–	0.06	1.83	1.89	–	–	–
20.	ಬೆಂಗಳೂರು (ಗ್ರಾ)	9.56	3.04	12.60	–	–	–	0.13	1.00	1.13	–	–	–
	ಒಟ್ಟು	62.43	46.11	110.54	209.96	125.65	335.61	167.43	80.49	247.92	78.95	87.52	166.47

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	1991-92				1994-95				ಷರಾ
		ತೊಂದರೆಗೊಳಗಾದ				ತೊಂದರೆಗೊಳಗಾದ				
		ಜನಸಂಖ್ಯೆ	ಜಾನುವಾರು	ಕೃಷಿ ಕಾರ್ಮಿಕರು ಅತಿಸಣ್ಣ, ಸಣ್ಣ ರೈತರ ಸಂಖ್ಯೆ	ಹಾನಿಗೊಂಡ ಕೃಷಿ ಬೆಳೆಗಳ ವಿಸ್ತೀರ್ಣ	ಜನಸಂಖ್ಯೆ	ಜಾನುವಾರು	ಕೃಷಿ ಕಾರ್ಮಿಕರು ಅತಿಸಣ್ಣ, ಸಣ್ಣ ರೈತರು	ಹಾನಿ ಗೊಂಡ ಕೃಷಿ ಬೆಳೆಗಳ ವಿಸ್ತೀರ್ಣ	
		15	16	17	18	19	20	21	22	23
1.	ಬೀದರ್	10.08	4.21	0.60	0.65	1.71	1.26	0.44	0.37	1991-92ನೇ ಸಾಲಿನಲ್ಲಿ ಅಭಾವಕ್ಕೆ ಒಳಗಾದ ಪ್ರದೇಶಗಳಲ್ಲಿ ಕುಡಿಯುವ ನೀರಿನ ಪೂರೈಕೆಗಾಗಿ ಉದ್ಯೋಗಸೃಜನೆ ಜಾನುವಾರು ಆರೈಕೆ ಮತ್ತು ಕೃಷಿ ಚಟುವಟಿಕೆಗಳ ಪುನಶ್ಚೇತನಕ್ಕಾಗಿ ರೂ. 50.00 ಕೋಟಿಗಳ ನೆರವು ಕೋರಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು.
2.	ಗುಲ್ಬರ್ಗಾ	19.70	9.64	0.45	1.61	13.27	5.16	3.91	0.34	
3.	ರಾಯಚೂರು	18.25	8.23	0.20	1.70	7.63	4.06	2.59	0.95	
4.	ಬಳ್ಳಾರಿ	13.21	6.65	0.25	0.90	3.31	1.08	0.69	0.54	
5.	ಬಿಜಾಪುರ	22.30	8.31	0.30	3.26	10.18	4.90	3.09	1.67	
6.	ಧಾರವಾಡ	_	_	_	_	0.91	0.61	0.31	0.44	
7.	ಚಿತ್ರದುರ್ಗ	_	_	_	_	4.01	1.94	1.12	0.91	
8.	ತುಮಕೂರು	_	_	_	_	8.20	2.49	3.32	2.28	
9.	ಬೆಂಗಳೂರು (ಗ್ರಾ)	_	_	_	_	2.97	_	1.95	0.99	

10.	ಕೋಲಾರ	–	–	–	–	4.88	–	1.04	0.05	ಪ್ರಸ್ತುತ ವರ್ಷ ಅಭಾವಕ್ಕೊಳಗಾದ ಪ್ರದೇಶಗಳಲ್ಲಿ ಕುಡಿಯುವ ನೀರಿನ ಪೂರೈಕೆ ಉದ್ಯೋಗ ಸೃಜನೆ, ಜಾನುವಾರು ಆರೈಕೆ ಹಾಗೂ ಕೃಷಿ ಚಟುವಟಿಕೆಗಳ ಪುನಶ್ಚೇತನಗೊಳಿಸಲು ರೂ. 232.00 ಕೋಟಿಗಳು ಬೇಕೆಂದು ಅಂದಾಜು ಮಾಡಿದ್ದು ಕೇಂದ್ರ ಸರ್ಕಾರದ ನೆರವು ಕೋರಲು ಯೋಜಿಸಲಾಗಿದೆ.
11.	ಮಂಡ್ಯ	–	–	–	–	2.38	0.79	0.20	0.01	
12.	ಮೈಸೂರು	–	–	–	–	0.10	0.35	0.14	0.13	
	ಒಟ್ಟು	83.54	37.04	1.80	8.12	59.55	22.64	18.80	8.68	

ಹೊಳೆನರಸೀಪುರದಲ್ಲಿ ರೇಷ್ಮೆ ಇಲಾಖೆಯ ಗ್ರೈನೇಜ್ ಕಟ್ಟಡವನ್ನು ಪ್ರಾರಂಭಿಸದೇ ಇರುವ ಬಗ್ಗೆ

282 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಳೇನರಸೀಪುರದಲ್ಲಿ ರೇಷ್ಮೆ ಇಲಾಖಾವತಿಯಿಂದ ಗ್ರೈನೇಟ್ ಕಟ್ಟಡ ಕಟ್ಟಲು ಸರ್ಕಾರ ಆಡಳಿತಾತ್ಮಕ ಮಂಜೂರಾತಿ ನೀಡಿರುವುದು ನಿಜವಲ್ಲವೇ?

ಆ) ಈ ಕೆಲಸಕ್ಕಾಗಿ 94-95ರ ಆಯವ್ಯಯದಲ್ಲಿ ಇಟ್ಟಿರುವ ಹಣವೆಷ್ಟು?

ಇ) ಮೇಲ್ಕಂಡ ಕಟ್ಟಡದ ಕೆಲಸವನ್ನು ಪ್ರಾರಂಭಿಸಲಾಗಿದೆಯೇ? ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಈ) ಸದರಿ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು?

ಡಾ|| ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು) :

ಅ) ನಿಜ.

ಆ) ರೂ. 5.00 ಲಕ್ಷಗಳು

ಇ) ಟೆಂಡರ್ ಅನುಮೋದನೆಯಾಗಿದ್ದು ಕಟ್ಟಡ ನಿರ್ಮಾಣ ಕೆಲಸಕ್ಕೆ ಆದೇಶ ನೀಡಲಾಗಿದೆ. ಶೀಘ್ರದಲ್ಲೇ ಪ್ರಾರಂಭಿಸಲಾಗುವುದು.

ಈ) ಕೆಲಸ ಪ್ರಾರಂಭಿಸಿದ ಒಂದು ವರ್ಷದೊಳಗೆ ಕಟ್ಟಡ ನಿರ್ಮಾಣ ಪೂರ್ಣಗೊಳಿಸಲಾಗುವುದು.

ಸುಳ್ಳು ಜಾತಿ ಸರ್ಟಿಫಿಕೇಟ್ ಪಡೆದು, ನೌಕರಿ ಮತ್ತು ವಿದ್ಯಾಭ್ಯಾಸಕ್ಕೆ ಸೇರಿದವರ ಸಂಖ್ಯೆ

319 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸೇರಿದವರೆಂಬುದಾಗಿ ತಿಳಿಸಿ ಇದುವರೆಗೆ ಸುಳ್ಳು ಜಾತಿ ಸರ್ಟಿಫಿಕೇಟ್ ಪಡೆದು ಸರ್ಕಾರಿ ನೌಕರಿ ಮತ್ತು ವಿಧ್ಯಾಭ್ಯಾಸಕ್ಕೆ ಸೇರಿದವರ ಸಂಖ್ಯೆ ಎಷ್ಟು?

ಆ) ಇವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಕ್ರಮ ಕೈಗೊಳ್ಳದಿದ್ದಲ್ಲಿ ಕಾರಣಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) 1981 ರಿಂದ 1994ನೇ ಜುಲೈ ಅಂತ್ಯದವರೆಗೆ 926 ಪ್ರಕರಣಗಳು.

ಆ) ಯಾವುದೇ ವ್ಯಕ್ತಿಯು ಸುಳ್ಳು ಜಾತಿ ಪತ್ರದ ಸಹಾಯದಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟ ನೌಕರಿಯನ್ನು ಪಡೆದುಕೊಂಡಿರುವುದು ಸಾಬೀತಾದ ಮೇಲೆ ಇಲಾಖಾ ಕ್ರಮವನ್ನು ತೆಗೆದುಕೊಳ್ಳುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ತಿಳಿಸಲಾಗಿದೆ. ಮತ್ತು ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯದಿಂದ ಭಾರತೀಯ ದಂಡ ಸಂಹಿತೆ 420ರ ಪ್ರಕಾರ ಮೊಕದ್ದಮೆಯನ್ನು ದಾಖಲು ಮಾಡಿ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ.

ಇ) ಉದ್ಭವಿಸುವುದಿಲ್ಲ.

ಹೊಳೇನರಸೀಪುರದಲ್ಲಿ ವಿದ್ಯಾರ್ಥಿನಿಲಯಗಳನ್ನು ತೆರೆಯುವ ಬಗ್ಗೆ

283 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿನಲ್ಲಿ ಹೊಳೇ ನರಸೀಪುರ ತಾಲ್ಲೂಕಿನಲ್ಲಿ ಸರ್ಕಾರ ಮಂಜೂರು ಮಾಡಿರುವ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು?

ಆ) ಇದಕ್ಕಾಗಿ 1993-94ರಲ್ಲಿ ಎಷ್ಟು ಹಣವನ್ನು ಆಯವ್ಯಯದಲ್ಲಿ ಮಂಜೂರು ಮಾಡಲಾಗಿತ್ತು?

ಇ) 1993-94ನೇ ಸಾಲಿನಲ್ಲಿ ಮಂಜೂರು ಮಾಡಿದಂತಹ ವಿದ್ಯಾರ್ಥಿನಿಲಯವನ್ನು ಇಲ್ಲಿಯವರೆಗೆ ಪ್ರಾರಂಭಿಸದೇ ಇರಲು ಕಾರಣವೇನು?

ಈ) 1994-95ರಲ್ಲಿ ಹೊಸದಾಗಿ ಎಷ್ಟು ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗಿದೆ?

ಉ) 1993-94ನೇ ಸಾಲಿನಲ್ಲಿ ಮಂಜೂರಾದ ವಿದ್ಯಾರ್ಥಿನಿಲಯವನ್ನು 1994-95ರಲ್ಲಿ ಪ್ರಾರಂಭಿಸಲಾಗುವುದೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ)

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ	ಸಮಾಜ ಕಲ್ಯಾಣ ಇಲಾಖೆ
1993-94ನೇ ಸಾಲಿನಲ್ಲಿ ಹೊಳೇ ನರಸೀಪುರ ತಾಲ್ಲೂಕಿನಲ್ಲಿ ಸರ್ಕಾರವು 3 ಮೆಟ್ರಿಕ್ಪೂರ್ವ ಬಾಲಕರ ವಿದ್ಯಾರ್ಥಿನಿಲಯಗಳ ಮಂಜೂರು ಮಾಡಿದೆ.	2 ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯಗಳು ಮಂಜೂರಾಗಿವೆ.

ಆ)

1993-94ನೇ ಸಾಲಿನಲ್ಲಿ ರಾಜ್ಯದಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಮಂಜೂರಾತಿಗಾಗಿ ರಾಜ್ಯವಲಯದಲ್ಲಿ 35.23 ಲಕ್ಷರೂ.ಗಳನ್ನು ಜಿಲ್ಲಾ ವಲಯದಲ್ಲಿ 181.43 ಲಕ್ಷರೂಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.	1993-94ನೇ ಸಾಲಿನಲ್ಲಿ ಇದಕ್ಕಾಗಿ 2.97 ಲಕ್ಷ ರೂ. ಗಳನ್ನು ಮಂಜೂರು ಮಾಡಲಾಗಿತ್ತು.

ಇ)

1993-94ನೇ ಸಾಲಿನಲ್ಲಿ ಹೊಳೇ ನರಸೀಪುರ ತಾಲ್ಲೂಕಿಗೆ ಮಂಜೂರಾಗಿದ್ದ ಒಟ್ಟು 3 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಪೈಕಿ ಎರಡನ್ನು ಪ್ರಸಕ್ತ ಸಾಲಿನಲ್ಲಿ ಈಗಾಗಲೇ ಪ್ರಾರಂಭಿಸಲಾಗಿದೆ.	ನಿಡುವಣಿಗೆ ಮಂಜೂರಾಗಿದ್ದ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯವನ್ನು ದಿ: 15-8-93 ರಿಂದ ಪ್ರಾರಂಭಿಸಲಾಗಿದೆ. ಆದರೆ ಅನೇಕ ಬಾಡಿಗೆ ಮಂಜೂರಾಗಿದ್ದ ಮೆಟ್ರಿಕ್

ಉಳಿದ ಒಂದು ಅಂದರೆ ದೊಡ್ಡ ಕುಂಟೆಗೆ ಮಂಜೂರಾದ ವಿದ್ಯಾರ್ಥಿ ನಿಲಯವನ್ನು ಸಾಕಷ್ಟು ಸಂಖ್ಯೆ ಯಲ್ಲಿ ವಿದ್ಯಾರ್ಥಿಗಳು ದೊರೆಯ ದೇ ಕಾರಣ ಇದೇ ತಾಲ್ಲೂಕಿನ ಹಳೇ ಕೋಟೆಗೆ ವರ್ಗಾಯಿಸುವ ಪ್ರಸ್ತಾ ವನೆಯು ಸರ್ಕಾರದ ಪರಿಶೀಲನೆ ಯಲ್ಲಿದೆ.	ಪೂರ್ವ ಬಾಲಕರ ವಿದ್ಯಾರ್ಥಿ ನಿಲಯವನ್ನು ಸಾಕಷ್ಟು ವಿದ್ಯಾರ್ಥಿಗಳು ಸಿಗುವುದಿಲ್ಲವೆಂಬ ಕಾರಣದಿಂದ ಇದೇ ತಾಲ್ಲೂಕಿನ ದೊಡ್ಡಕುಂಟೆಗೆ ದಿನಾಂಕ : 25-3-94ರ ಆದೇಶದಲ್ಲಿ ವರ್ಗಾಯಿಸಿದ ಪ್ರಯುಕ್ತ ಈ ವಿದ್ಯಾರ್ಥಿನಿಲಯದ ಪ್ರಾರಂಭವು ವಿಳಂಬವಾಗಿರುತ್ತದೆ.
ಈ) ಈವರೆವಿಗೂ ಮಂಜೂರು ಮಾಡಿರು ವುದಿಲ್ಲ.	ಈವರೆಗೆ 94-95ನೇ ಸಾಲಿ ನಲ್ಲಿ ಯಾವುದೇ ಹೊಸ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡಿರುವುದಿಲ್ಲ.
ಉ) ಹೌದು	ದೊಡ್ಡಕುಂಟೆ ಗ್ರಾಮಕ್ಕೆ ಮಂಜೂರಾಗಿರುವ ವಿದ್ಯಾರ್ಥಿ ನಿಲಯವನ್ನು ದಿನಾಂಕ : 4-7-94 ರಿಂದ ಪ್ರಾರಂಭಿಸಲಾಗಿದೆ.

ಬೈಲಹೊಂಗಲ ನಗರದಲ್ಲಿ ಹೊಸ ಬಡಾವಣೆಗಳಲ್ಲಿ ಒಳಚರಂಡಿ ವ್ಯವಸ್ಥೆ

309 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರಸಭೆ ಸರಹದ್ದಿನಲ್ಲಿನ ಹೊಸ ಬಡಾವಣೆಗಳಲ್ಲಿ ಒಳಚರಂಡಿ ಇಲ್ಲದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಒಳಚರಂಡಿ ಯೋಜನೆ ಇಲ್ಲದೇ ಇರುವುದರಿಂದ ಹೊಸ ಬಡಾವಣೆಗಳಲ್ಲಿ ವಾಸಿಸುವ ಜನರಿಗೆ ತುಂಬಾ ತೊಂದರೆಯಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ ಈ ಒಳಚರಂಡಿ ಯೋಜನೆ, ಕೈಕೊಳ್ಳಲು ಸರ್ಕಾರದವರು ಯಾವ ಕ್ರಮಕೈಗೊಳ್ಳುವರು?*

ಈ) *ಈ ಹೊಸ ಬಡಾವಣೆಗಳಲ್ಲಿ ಒಳಚರಂಡಿ ಯೋಜನೆ ಕೈಕೊಳ್ಳಲು ಎಷ್ಟು ಹಣ ಬೇಕಾಗುವುದು?*

ಉ) *ಈ ಒಳಚರಂಡಿ ಯೋಜನೆಯನ್ನು ಕೈಗೊಳ್ಳಲು ಸರ್ಕಾರವರು ಪುರಸಭೆಗೆ ಸಾಲ ರೂಪವಾಗಿ ಸಹಾಯ ಮಾಡಲು ಕ್ರಮ ಕೈಗೊಳ್ಳುವರೇ?*

ಶ್ರೀ ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಸಚಿವರು) :

ಅ) - ಹೌದು -

ಆ) - ಹೌದು -

ಕರ್ನಾಟಕ ರಾಜ್ಯ ವಿಧಾನ ಮಂಡಲ, ಗ್ರಂಥಾಲಯ,

ಇ) ಪುರಸಭೆಯ ವಿನಂತಿಯ ಮೇರೆಗೆ ಹೊಸ ಬಡಾವಣೆಗಳಿಗೆ ಒಳಚರಂಡಿ ಕಲ್ಪಿಸುವ ನಕ್ಷೆ ತಯಾರಿಸಲಾಗಿದ್ದು, ಅಂದಾಜುಪಟ್ಟಿ ತಯಾರಿಸಲು ಸರ್ವೆ ಕೆಲಸವನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಪ್ರಾರಂಭಿಸಿದೆ.

ಈ) ಅಂದಾಜು ತಯಾರಿಸಿದ ನಂತರ ಯೋಜನೆಯ ವೆಚ್ಚ ಗೊತ್ತಾಗುತ್ತದೆ.

ಉ) ಅಂದಾಜು ವೆಚ್ಚದ ಶೇಕಡ 30 ರಷ್ಟನ್ನು ಸಾಲ ನೀಡಲು ಕ್ರಮ ಕೈಗೊಳ್ಳಲಾಗುವುದು.

೩೦,634

ಬೈಲಹೊಂಗಲ ತಾಲ್ಲೂಕಿನ ನೇಸರ್ಗಿ ಗ್ರಾಮದಲ್ಲಿ ಸರ್ಕಾರಿ ಐ.ಟಿ.ಐ. ಪ್ರಾರಂಭ

311 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ನೇಸರಗಿ ಗ್ರಾಮದಲ್ಲಿ ಸರ್ಕಾರಿ ಐ.ಟಿ.ಐ. ಕಾಲೇಜನ್ನು ಪ್ರಾರಂಭಿಸುವ ಸಲುವಾಗಿ ಸರ್ಕಾರಕ್ಕೆ ಮನವಿಗಳು ಬಂದಿದೆಯೇ?

ಆ) ಹಾಗಿದ್ದಲ್ಲಿ ಇಲ್ಲಿ ಸರ್ಕಾರಿ ಐ.ಟಿ.ಐ ಕಾಲೇಜನ್ನು ಪ್ರಾರಂಭಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :

ಅ) ಹೌದು

ಆ) ಹಣದ ಅಭಾವದಿಂದ ಸದ್ಯಕ್ಕೆ ಸ್ಥಾಪನೆ ಮಾಡಲು ಸಾಧ್ಯವಿಲ್ಲ.

ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ನಯಾನಗರ ಗ್ರಾಮದಲ್ಲಿ ಸರ್ಕಾರಿ ಪ್ರೀಮೆಟ್ರಿಕ್ಯುಲೇಟ್ ಹಾಸ್ಟೆಲ್ ಪ್ರಾರಂಭಿಸುವ ಬಗ್ಗೆ.

310 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ನಯಾನಗರ ಗ್ರಾಮದಲ್ಲಿ ಸರ್ಕಾರಿ ಪ್ರೀ ಮ್ಯಾಟ್ರಿಕ್ಯುಲೇಟ್ ಹಾಸ್ಟಲ್ ಪ್ರಾರಂಭಿಸುವ ಸಲುವಾಗಿ ಸರ್ಕಾರಕ್ಕೆ ಮನವಿಗಳು ಬಂದಿದೆಯೇ?

ಆ) ಹಾಗಿದ್ದಲ್ಲಿ ಇಲ್ಲಿ ಪ್ರೀ ಮ್ಯಾಟ್ರಿಕುಲೇಟ್ ಹಾಸ್ಟಲ್ ಪ್ರಾರಂಭಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?

ಇ) ಈ ಗ್ರಾಮದಲ್ಲಿ ಸರ್ಕಾರಿ ಪ್ರೌಢ ಶಾಲೆಯಿದ್ದು ಆ ಶಾಲಾ ವಿದ್ಯಾರ್ಥಿಗಳಿಗೆ ಹಾಸ್ಟಲ್ ಸೌಲಭ್ಯವಿಲ್ಲದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ನಯಾನಗರದಲ್ಲಿ ಸರ್ಕಾರದ ಪ್ರೌಢ ಶಾಲೆ ಇದ್ದು ಈ ಸ್ಥಳದಲ್ಲಿ ವಿದ್ಯಾರ್ಥಿನಿಲಯ ಪ್ರಾರಂಭಿಸುವ ಅವಶ್ಯಕತೆ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಹುಬ್ಬಳ್ಳಿ ಮಹಾದೇವ ಟೆಕ್ಸ್‌ಟೈಲ್ಸ್ ಮಿಲ್ ಸುಧಾರಣೆ

308 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ಮಹದೇವ ಟೆಕ್ಸ್‌ಟೈಲ್ ಮಿಲ್ ಮುಚ್ಚುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಮಿಲ್ಲನ್ನು ಸುಧಾರಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?

ಇ) ಈ ಟೆಕ್ಸ್‌ಟೈಲ್ ಮಿಲ್ಲಿನಲ್ಲಿ ಎಷ್ಟು ಜನರು ಕೆಲಸ ಮಾಡುತ್ತಿರುವರು?

ಈ) ಕಳೆದ ಮೂರು ವರ್ಷಗಳಲ್ಲಿ ಈ ಮಿಲ್‌ನಲ್ಲಿ ಆದ ಲಾಭ ಹಾನಿಯೆಷ್ಟು? (ಸಂಪೂರ್ಣ ವಿವರ ನೀಡುವುದು)

ಉ) ಈ ಮಿಲ್‌ನಲ್ಲಿ ಈಗಿರುವ ಯಂತ್ರಗಳು ಬಹಳ ಹಳೆಯದಾಗಿದ್ದು ಇವುಗಳನ್ನು ತೆಗೆದು ಹೊಸ ಯಂತ್ರಗಳನ್ನು ಹಾಕಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ಮತ್ತು ಇದಕ್ಕೆ ಎಷ್ಟು ಹಣ ಬೇಕಾಗುವುದು?

ಊ) ಕೇಂದ್ರ ಸರ್ಕಾರದ ನೆರವು ಪಡೆದು ಈ ಮಿಲ್ಲನ್ನು ನವೀಕರಿಸಲು ರಾಜ್ಯ ಸರ್ಕಾರದವರು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಕೆ. ಪಾಟೀಲ್ (ಜವಳಿ ರಾಜ್ಯ ಸಚಿವರು) :

ಅ) ಹೌದು

ಆ) ಸ್ಪಿನ್‌ಫೆಡ್, ಎನ್.ಟಿ.ಸಿ. ಹಾಗೂ ಸಿಟ್ರಾ ಸಂಸ್ಥೆಗಳ ಪ್ರತಿನಿಧಿಗಳು ಒಳಗೊಂಡು ರಚಿಸಲಾದ ತಾಂತ್ರಿಕ ಸಮಿತಿಯು ಮಹದೇವ ಟೆಕ್ಸ್‌ಟೈಲ್ಸ್ ಮಿಲ್ಲನ್ನು ಸಂದರ್ಶಿಸಿ ಕನಿಷ್ಟ ರಿಪೇರಿ ಹಾಗೂ ಅತ್ಯವಶ್ಯಕವಾದ ಆಧುನೀಕರಣಕ್ಕಾಗಿ 46.60 ಲಕ್ಷ ರೂ. ಬಂಡವಾಳ ಹೂಡಿಕೆಯ ಸಲಹೆಗಳನ್ನೊಳಗೊಂಡ ವರದಿ ನೀಡಿದೆ. ಈ ವರದಿ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಇ) 572

ಈ) ಗಿರಣಿಯು ಕಳೆದ 3 ವರ್ಷಗಳಲ್ಲಿ ಅನುಭವಿಸಿದ ನಷ್ಟದ ವಿವರಗಳು (ತಾತ್ಕಾಲಿಕ) ಈ ಕೆಳಕಂಡಂತೆ ಇವೆ.

ಕ್ರಮ ಸಂಖ್ಯೆ	ವರ್ಷ	ನಿವ್ವಳ ನಷ್ಟ (ರೂ. ಲಕ್ಷಗಳಲ್ಲಿ)
1.	1990-91	35.09
2.	1991-92	95.15
3.	1992-93	81.00

ಉ) ಮಿಲ್ಲಿನ ಆಧುನೀಕರಣ ಕೈಕೊಂಡಾಗ ಹಳೇ ಯಂತ್ರೋಪಕರಣ ಬದಲಿಸಿ ಆಧುನಿಕ ಯಂತ್ರೋಪಕರಣ ಬಳಸಲಾಗುವುದು. ಹಣಕಾಸಿನ ಅಂದಾಜು ಆಧುನೀಕರಣ ಅಧ್ಯಯನ ಕೈಗೊಂಡಾಗ ಖಚಿತವಾಗಿ ತಿಳಿಯುವುದು.

ಊ) ಯಾವುದೇ ಯೋಜನೆಯಡಿಯಲ್ಲಿ ಸಂಪನ್ಮೂಲ ಲಭ್ಯವಾಗುವುದಾದಲ್ಲಿ, ಕೇಂದ್ರ ಸರ್ಕಾರವೂ ಸಹ ಸೇರಿದಂತೆ ವಿವಿಧ ಮೂಲಗಳಿಂದ ಹಣ ಪಡೆಯುವ ವಿಷಯವನ್ನು ಸೂಕ್ತ ಸಮಯದಲ್ಲಿ ಪರಿಶೀಲಿಸಲಾಗುವುದು.

ರಾಜ್ಯದಲ್ಲಿ ಸರ್ವೆ ಮಾಡುವವರ ಸಂಖ್ಯೆ

317 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಸರ್ವೆ ಮಾಡುವವರ ಸಂಖ್ಯೆ ಎಷ್ಟು?
ಆ) ಇದರಿಂದ ರಾಜ್ಯದ ಸರ್ವೆ ಕೆಲಸ ಸುಗಮವಾಗಿ ನಡೆಯುತ್ತಿದೆಯೇ?
ಇ) ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ಹಾಗೂ ಇದನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) 2,950

ಆ) ಮಂಜೂರಾಗಿರುವ ಹುದ್ದೆಗಳು 2,950 ಇದ್ದು, ಅದರಲ್ಲಿ ಕೇವಲ 1,513 ಜನ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು, ಉಳಿದ 1,437 ಹುದ್ದೆಗಳು ಖಾಲಿ ಇರುವ ಕಾರಣ, ಸರ್ವೇ ಕೆಲಸ ಸುಗಮವಾಗಿ ನಡೆಯುತ್ತಿಲ್ಲ.

ಇ) 1, 437

ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ ಮಾಡಲಾಗಿದೆ. ಅದರಂತೆ ನೇರ-ನೇಮಕಾತಿ ಮತ್ತು ಮುಂಬಡ್ತಿ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರವನ್ನು ಮಂಡಿಸಲಾಯಿತು.

ಪ್ರಕಟಣೆ

ಅಧ್ಯಕ್ಷರು : ಭಾರತ ಸಂವಿಧಾನದ 203 (3)ನೇ ಅನುಚ್ಛೇದದ ಪ್ರಕಾರ 1994-95ನೇ ಸಾಲಿನ ಅನುದಾನಗಳ ಮೇಲಿನ ಬೇಡಿಕೆಗಳನ್ನು ವಿಧಾನ ಸಭೆಯ ಮುಂದೆ ಮಂಡಿಸಲು ಮಾನ್ಯ ರಾಜ್ಯಪಾಲರು ಶಿಫಾರಸ್ಸನ್ನು ನೀಡಿರುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಬರಗಾಲ ಮತ್ತು ಅತಿವೃಷ್ಟಿಯ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ವಿರೋಧ ಪಕ್ಷದ ನಾಯಕರು, ನಾವುಗಳು ಎಲ್ಲರೂ ಸೇರಿ ಕಳುಹಿಸಿಕೊಟ್ಟಿದ್ದೇವೆ. ಸಂತ್ರಸ್ತರಿಗೆ ಯಾವುದೇ ಸವಲತ್ತು ಸಿಕ್ಕಿಲ್ಲ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

(1) ರಾಜ್ಯದಲ್ಲಿ ಕೆಲವು ಕಡೆ ಅತಿವೃಷ್ಟಿಯಿಂದ ರೈತರು ಕಂಗಾಲಾಗಿರುವುದು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಸುಮಾರು 94 ತಾಲ್ಲೂಕುಗಳಲ್ಲಿ ಅತಿವೃಷ್ಟಿಯಿಂದ ರೈತರು ಕಂಗಾಲಾಗಿದ್ದಾರೆ, ಸರಕಾರದಿಂದ ಯಾವುದೇ ಪರಿಹಾರವೂ ಸಿಕ್ಕಿಲ್ಲ, ಹಾಗಾಗಿ ಇದು ಅತಿಮುಖ್ಯವಾದ ವಿಷಯ, ಅದನ್ನು ಅಡ್‌ಜರ್ನ್‌ಮೆಂಟ್ ಮೋಷನ್ ಮುಖಾಂತರ ಎಲ್ಲಾ ಕಾರ್ಯಕಲಾಪಗಳನ್ನು ನಿಲ್ಲಿಸಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾವು ಮತ್ತು ಬಿಜೆಪಿ ಸ್ನೇಹಿತರು ಮತ್ತಿತರು ಎಲ್ಲರೂ ಸೇರಿ ಒತ್ತಾಯ ಮಾಡುತ್ತಿದ್ದೇವೆ. ಇವೊತ್ತು ಅಡ್‌ಜರ್ನ್‌ಮೆಂಟ್ ಮೋಷನ್ ಬಗ್ಗೆ ಪ್ರಸ್ತಾವನೆ ಮಾಡಲು ನಮಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಲವಾರು ಬಾರಿ ಮಾನ್ಯ ಮುಖ್ಯಮಂತ್ರಿಯವರು ಮತ್ತು ಕಂದಾಯ ಸಚಿವರು ಸಭೆಯನ್ನು ಕೂಡ ಮಾಡಿದ್ದಾರೆ. ಆ ಸಭೆಯಲ್ಲಿ ನಾವು ಇದ್ದು, ಅಧಿಕಾರಿಗಳಿಗೆ ಹಲವಾರು ಸಲಹೆಗಳನ್ನು ಕೊಟ್ಟಿದ್ದೇವೆ. ಆದರೆ ಯಾವುದೇ ಸಲಹೆಗಳು ಇವೊತ್ತಿಗೂ ಜಾರಿಗೆ ಬರುತ್ತಾ ಇಲ್ಲ. ಕೇವಲ ಮಾತುಗಳು ಮತ್ತು ಭರವಸೆಗಳು ಮಾತ್ರ ಬರುತ್ತವೆಯೇ ವಿನಹ ಪ್ರೊಸೀಡಿಂಗ್ಸ್ ಎಲ್ಲಿವೆ ಅವುಗಳು ಏಕೆ ಇಂಪ್ಲಿಮೆಂಟ್ ಆಗುತ್ತಾ ಇಲ್ಲ, ಅದಕ್ಕೆ ಯಾರು ಅಡ್ಡ ಬರುತ್ತಿದ್ದಾರೆ ಎಂಬುದು ನಮಗೆ ಗೊತ್ತಾಗುತ್ತಿಲ್ಲ.

ಕಳೆದ 5 ವರ್ಷಗಳ ಕಾಲ 89 ರಿಂದ ಇಲ್ಲಿಯವರೆಗೆ ಬರಗಾಲದಿಂದ ನಾಡಿನ ರೈತರು ಕಂಗಾಲಾಗಿದ್ದಾರೆ ಕೂಲಿಕಾರರು ಬಹಳ ಕಷ್ಟದಲ್ಲಿದ್ದಾರೆ. ಸರಕಾರಕ್ಕೆ ಇವರ ಬಗ್ಗೆ ಕಾಳಜಿ ಇಲ್ಲ, ಚಿಂತನೆ ಇಲ್ಲ. ಆ ದೃಷ್ಟಿಯಿಂದ ಇದನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ತಮ್ಮ ಚೇಂಬರಿನಲ್ಲಿ ಮಾತನಾಡಿದಾಗ ಇದರ ಬಗ್ಗೆ ಒಂದು ಹೇಳಿಕೆ ಕೊಡುತ್ತೇವೆ ಎಂದು ಹೇಳಿದರು. ಸ್ಟೇಟ್‌ಮೆಂಟ್ ಮಾಡುವುದಾದರೆ ಮಾಡಲಿ ಇಲ್ಲವೆ ಮೊದಲೇ ಚರ್ಚೆ ಪ್ರಾರಂಭ ಮಾಡಬೇಕೆಂದು ಹೇಳಿದರೆ ನಾವು ಸಿದ್ಧರಿದ್ದೇವೆ. ತಾವೇನು ಹೇಳುತ್ತೀರಿ ಹಾಗೆ ಮಾಡೋಣ. ಅವರನ್ನೂ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬೆಳಗ್ಗೆ ತಮ್ಮ ಕೊಠಡಿಗೆ ಬಂದು ಬೆಳಗಾಂನಲ್ಲಿ ಒಂದು ವಿಚಿತ್ರ ಪರಿಸ್ಥಿತಿ ಇದೆ. ಅಲ್ಲಿನ ವಕೀಲರ ಸಂಘದವರು ಕಳೆದ ಒಂದು ವಾರದಿಂದ ಧರಣಿ ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಿಲುವಳಿ ಸೂಚನೆ ಬಗ್ಗೆ ನಾವು ನೋಟೀಸ್ ಕೊಟ್ಟಿದ್ದೇವೆ ಅದರ ಬಗ್ಗೆ ತಾವು ಏನು ಮಾಡುತ್ತೇವೆಂದು ಮೊದಲು ಹೇಳಿ.

ಅಧ್ಯಕ್ಷರು : ಮೊನ್ನೆ ಮಾತನಾಡಿದ ಹಾಗೆ ಅವರು ನಿಲುವಳಿ ಸೂಚನೆ ಕಳುಹಿಸಿದ್ದಾರೆ. ಅವರು ಚರ್ಚೆ ಮಾಡಿದ ಮೇಲೆ ಹೇಳಿಕೆ ಕೊಡುತ್ತೀರೋ ಇಲ್ಲವೇ ಹೇಳಿಕೆ ಕೊಟ್ಟ ಮೇಲೆ ಚರ್ಚೆಯಾಗಬೇಕೋ.,....

ಶ್ರೀ ಧರ್ಮಸಿಂಗ್ : ಅದು ಅವರ ಮೇಲೇ ಬಿಟ್ಟದ್ದುದು, ನಾವು ಹೇಳಿಕೆ ಕೊಡಲಿಕ್ಕೆ ಸಿದ್ಧರಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ : ಹುಬ್ಬಳ್ಳಿ, ಧಾರವಾಡದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ನಾವು ಹೇಳಿಕೆ ಮಾಡುತ್ತೇವೆಂದು ಹೇಳಿದರು.

ಶ್ರೀ ಧರ್ಮಸಿಂಗ್ : ಹೇಳಿಕೆ ಮಾಡುತ್ತೇವೆ.

(2) ಬೆಳಗಾಂನ ವಕೀಲ ಸಂಘದವರಿಂದ ಕೋರ್ಟಿಗೆ ಬಹಿಷ್ಕಾರ

+ ಶ್ರೀ ಬಿ.ಎಸ್. ಯಡಿಯೂರಪ್ಪ : ಬೆಳಗಾಂನಲ್ಲಿರುವ ವಕೀಲರ ಸಂಘದವರು ಯಾವುದೇ ಕಾರಣಕ್ಕೆ ನಾವು ಕೋರ್ಟಿಗೆ ಹೋಗುವುದಿಲ್ಲವೆಂದು ಕಳೆದ 8 ದಿವಸದಿಂದ ಬಹಿಷ್ಕಾರ ಹಾಕಿದ್ದಾರೆ. ಅಕ್ಷಯ ಅಪ್ಪೆ ಎನ್ನುವ ವಕೀಲರು ಕೆಲವು ಮಾಹಿತಿ ಬೇಕು ಎಂದು ಪೋಲೀಸ್ ಸ್ಟೇಷನ್ನಿಗೆ ಹೋದಾಗ, ಬೆಳಗಾಂನಲ್ಲಿನ ಕಡೇ ಬಜಾರ್ ಸ್ಟೇಷನ್ ಸಿ.ಪಿ.ಐ. ಸಿಂಗ್ ಎನ್ನುವವರು ಅವರ ಮೇಲೆ ಹಲ್ಲೆ ಮಾಡಿ, ಅವರು ಆಸ್ಪತ್ರೆಗೆ ಸೇರಿದರು. ಆ ಸರ್ಕಲ್ ಇನ್ಸ್‌ಪೆಕ್ಟರ್ ಅನ್ನು ಸಸ್ಪೆಂಡ್ ಮಾಡಿ ತನಿಖೆ ಮಾಡಿಸಬೇಕೆಂದು ಬಾರ್ ಅಸೋಸಿಯೇಷನ್‌ನವರು ರಿಕ್ವೆಸ್ಟ್ ಮಾಡಿಕೊಂಡರು. ಅದು ಯಾವುದಕ್ಕೂ ಸರಕಾರ ಗಮನ ಕೊಡದೆ ಕಳೆದ 8 ದಿವಸದಿಂದ ಅಲ್ಲಿ ಒಂದು ರೀತಿಯ ಪ್ರಕ್ಷುಬ್ಧ ಪರಿಸ್ಥಿತಿ ಬರುತ್ತಿದೆ. ಬಾಯ್‌ಕಾಟ್ ಮಾಡಿದ್ದಾರೆ ತಮಗೇ ಗೊತ್ತಿದೆ ಬೆಂಗಳೂರು ನಗರ ಬಿಟ್ಟರೆ ಸುಮಾರು 700 ಕ್ಕೂ ಹೆಚ್ಚು ಜನ ವಕೀಲರು ಇರತಕ್ಕಂತಹ ಒಂದು ಸ್ಥಳ ಬೆಳಗಾಂ ಜಿಲ್ಲೆ. ಅದು ಅತ್ಯಂತ ಪ್ರಮುಖವಾದ ಕೇಂದ್ರ. ಇದರ ಪರಿಣಾಮ ಬಿಜಾಪುರ, ತುಮಕೂರು ಜಿಲ್ಲೆಯ ಬಾರ್ ಅಸೋಸಿಯೇಷನ್ ಅವರು ತೀರ್ಮಾನ ತೆಗೆದುಕೊಂಡು ಕೋರ್ಟಿಗೆ ಬಹಿಷ್ಕಾರ ಹಾಕಿದ್ದಾರೆ. ಬೆಂಗಳೂರಿನಲ್ಲೂ ಸಹ ಇವತ್ತು ಸಭೆ ನಡೆಯುತ್ತಿದೆ ಅವರೂ ಬಹಿಷ್ಕಾರ ಹಾಕುತ್ತಿದ್ದಾರೆ. ಅಂದರೆ ಸರಕಾರ ಕಳೆದ 8 ದಿವಸದಿಂದ ಇಂತಹ ಮಹಾ ನಗರದಲ್ಲಿ 700 ಜನ ವಕೀಲರು ಬಹಿಷ್ಕಾರ ಹಾಕಿದಾಗ ಕಕ್ಷಿಗಾರರಿಗೆ ಏನು ಪರಿಸ್ಥಿತಿ ಆಗಿರಬಹುದು ಅದನ್ನು ವಿಚಾರ ಮಾಡಿ.

ಅಧಿವೇಶನ ನಡೆಯುತ್ತಿದೆ ನಾವಿಲ್ಲಿ ಪ್ರಸ್ತಾಪಿಸುತ್ತಿದ್ದೇವೆ ಅಧಿವೇಶನ ನಡೆಯದಿದ್ದರೆ ಅವರು ಏನು ಮಾಡಬೇಕಾಗಿತ್ತು. ಸರಕಾರದ ಹೋಮ್ ಇಲಾಖೆ ಇಲ್ಲಿ ಇದೆಯೇ ಅದು ಬದುಕಿದೆ ಎನ್ನುವುದಾದರೆ ಪೋಲೀಸ್ ಇಲಾಖೆ ಇದೆ ಎನ್ನುವುದಾದರೆ ಕೂಡಲೇ ಅಲ್ಲಿ ಹೋಗಿ ವಕೀಲರ ಹತ್ತಿರ ಮಾತನಾಡಿ ತಪ್ಪು ಮಾಡಿದವರ ಮೇಲೆ ಅಂದರೆ ಆ ಸಿ.ಪಿ.ಐ. ಅವರ ಮೇಲೆ ಕ್ರಮ ತೆಗೆದುಕೊಂಡು ಅಲ್ಲಿನ ವಾತಾವರಣವನ್ನು ತಿಳಿ ಮಾಡಬೇಕಾದ್ದು ಅವರ ಆದ್ಯ ಕರ್ತವ್ಯ. ಈ ಘಟನೆ ಬಗ್ಗೆ ವಿಚಾರ ಮಾಡಿದ ಮೇಲೆ, ಸದನದಲ್ಲಿ ಪ್ರಸ್ತಾಪ ಮಾಡಿದ ಮೇಲೆ ಗಮನ ಕೊಡುತ್ತೇವೆಂದು ಹೇಳುವುದಾದರೆ ಈ ಸರಕಾರ ಇದೆಯೇ ಎನ್ನುವ ಪ್ರಶ್ನೆ ಬರುತ್ತದೆ. ಇಡೀ ರಾಜ್ಯದಲ್ಲಿ ನಾಳೆಯಿಂದ ಬಂದ್ ಮಾಡುವುದು, ಬಾರ್ ಅಸೋಸಿಯೇಷನ್‌ವರು ಬಾಯ್‌ಕಾಟ್ ಮಾಡುವಂತಹ ಪರಿಸ್ಥಿತಿ ಬಂದಿದೆ. ಅದಕ್ಕೆ ನಾನು ಸರಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಆ ಸಿ.ಪಿ.ಐ. ಅನ್ನು ಸಸ್ಪೆಂಡ್ ಮಾಡಬೇಕು. ವಕೀಲರ ಮೈ ಮುಟ್ಟುವಂತಹ ಮಟ್ಟಕ್ಕೆ ಹೋದ ಮೇಲೆ ಸಾಮಾನ್ಯ ಜನರ ಪರಿಸ್ಥಿತಿ ಏನಾಗಬಹುದು. ಪೋಲೀಸ್ ಇಲಾಖೆ ಈ ರೀತಿ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವಂತಹ ಒಂದು ಪ್ರಯತ್ನ ಮತ್ತು ಒಂದು ರೀತಿಯ ಪೋಲೀಸ್ ರಾಜ್ಯ ಕಾರ್ಯಾಚರಣೆ ನಡೆಸುತ್ತಿರತಕ್ಕಂತಹ ಪರಿಸ್ಥಿತಿ ನಡೆಯುತ್ತಿದೆ. ಸಾಮಾನ್ಯ ಮುಗ್ಧರ ಮೇಲೆ ಹಲ್ಲೆ ಮಾಡಿದ್ದಾರೆ. ಒಬ್ಬ ವಕೀಲರ ಮೈ ಮುಟ್ಟುವಂತಹ ಪ್ರಯತ್ನ ಅಲ್ಲಿರುವ ಸಿ.ಪಿ.ಐ. ಮಾಡುತ್ತಾನೆಂದು ಹೇಳುವುದಾದರೆ ಅದನ್ನು ಸಹಿಸುವುದಕ್ಕೆ ಸಾಧ್ಯವಿಲ್ಲ.

ತಕ್ಷಣ ಸಂಬಂಧಪಟ್ಟ ಉನ್ನತಾಧಿಕಾರಿಗಳು ಹೋಗಿ ಅಲ್ಲಿನ ಬಾರ್ ಅಸೋಸಿಯೇಷನ್ ಜೊತೆ ಮಾತನಾಡಿ, ನಾಳೆ ಇಡೀ ರಾಜ್ಯದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಬರುತ್ತದೆ. ಬಾರ್ ಅಸೋಸಿಯೇಷನ್ ಅವರು ಎಲ್ಲಾ ಕಡೆ ಬಾಯ್‌ಕಾಟ್ ಮಾಡುತ್ತಿದ್ದಾರೆ. ಬೆಳಗಾಂನಲ್ಲಿ ಕಳೆದ 8 ದಿವಸ ಹಿಂದೆ ಈ ಘಟನೆ ನಡೆದಿದೆ. ಆ ಸಿ.ಪಿ.ಐ. ಅನ್ನು ಸಸ್ಪೆಂಡ್ ಮಾಡಿ, ಸಿ.ಓ.ಡಿ ತನಿಖೆಗೆ ವ್ಯವಸ್ಥೆ ಮಾಡಿ ಈ ಒಂದು ಸಮಸ್ಯೆಯನ್ನು ಬಗೆಹರಿಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

+ಶ್ರೀ ವಾಟಾಳ್ ನಾಗರಾಜ್ : ಈ ಬಗ್ಗೆ ಸರಕಾರವೇನು ಕ್ರಮ ತೆಗೆದುಕೊಂಡಿದೆ ಎಂದು ಹೇಳಬೇಕು. ಆ ಸರ್ಕಲ್ ಇನ್ಸ್‌ಪೆಕ್ಟರ್‌ನ್ನು ಇದುವರೆಗೆ ಸಸ್ಪೆಂಡ್ ಮಾಡಿಲ್ಲ. ಇದೊಂದು ದೊಡ್ಡ ದುರಂತ ನಡೆದಿದೆ. ಲಾಯರ್‌ಗಳ ಮೇಲೆ ಈ ರೀತಿ ದೌರ್ಜನ್ಯ ದುರಂತ ನಡೆದರೆ ಎಲ್ಲಿ ಉಳಿಯುವುದಕ್ಕೆ ಸಾಧ್ಯ? ಈ ಬಗ್ಗೆ ಸರ್ಕಾರ ನೇರವಾದ ಒಂದು ಉತ್ತರವನ್ನು ಕೊಡಬೇಕು. ಏನು ಕ್ರಮ ಕೈಗೊಂಡಿದ್ದೀರಿ ಎನ್ನುವುದನ್ನು ತಾವು ಹೇಳಬೇಕು.

+ ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಇದಕ್ಕೆ ನಾವೂ ಸಹ ನೋಟೀಸನ್ನು ಕೊಟ್ಟಿದ್ದೇವೆ. ನಾನು ಜೋಷಿಯವರು ಇದರ ಬಗ್ಗೆ ನೋಟೀಸ್ ಕೊಟ್ಟಿದ್ದೇವೆ. ಆದರೆ ನಾವು ಶೂನ್ಯ ವೇಳೆಯಲ್ಲಿ ಇದನ್ನು ಪ್ರಸ್ತಾಪ ಮಾಡುವುದು ಬೇಡ, ಬೇರೆ ರೀತಿಯಲ್ಲಿ ತೆಗೆದುಕೊಳ್ಳಬೇಕೆಂದು ಎಂದು ಹೇಳಿ ಕೊಟ್ಟಿದ್ದೆವು. ನಮ್ಮದು ಮತ್ತು ಯಡಿಯೂರಪ್ಪನವರು ಹಲವಾರು ವಿಚಾರದಲ್ಲಿ ಭಿನ್ನಾಭಿಪ್ರಾಯವಿದ್ದರೂ ಸಹಾ ಈ ವಿಚಾರದಲ್ಲಿ ಸಂಪೂರ್ಣವಾಗಿ ಸಹಮತ ಇದೆ. ಬೆಳಗಾಂನಲ್ಲಿ ಅಕ್ಷಯ ಅಪ್ಪೆ ಅವರು ಬಹಳ ದೊಡ್ಡ ಸೋಷಿಯಲಿಸ್ಟರು, ಬಹಳ ದೊಡ್ಡ ಯೂನಿಯನ್ ಲೀಡರ್, ಅವರು ವಕ್ಕಾಲತ್ತು ಮಾಡುತ್ತಾರೆ. ನಮ್ಮ ಬೆಳಗಾಂ ರೋಟರಿ ಕ್ಲಬ್ ಸೆಕ್ರೆಟರಿ ಕೂಡ ಇದ್ದಾರೆ. ಯಾರು ಪತ್ರಿಕೆಗಳನ್ನು ಹಂಚುತ್ತಾರಲ್ಲ, ಅವರನ್ನು ಹಿಡಿದಿದ್ದರು. ಏತಕ್ಕೆ ಅವರನ್ನು ಹಿಡಿದಿದ್ದೀರಿ ಎಂದು ಖಡೆಬಜಾರ್ ಪೋಲಾಸ್ ಸ್ಟೇಷನ್‌ಗೆ ಕೇಳುವುದಕ್ಕೆ ಹೋದರೆ ರಾತ್ರಿ ಒಂಭತ್ತು ಕಾಲು ಗಂಟೆಗೆ 16-8-94ರಂದು

ಇವರಿಗೆ ಯಾವ ಪ್ರಕಾರ ಅಸಾಲ್ಟ್ ಮಾಡಿದ್ದಾರೆ, ಮತ್ತು ಯಾವ ಪ್ರಕಾರ ಹೊಡೆದಿದ್ದಾರೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ.

He is admitted in the hospital He is getting treatment there. ಈ ಪ್ರಕಾರ ನಿಮ್ಮ ಪೋಲೀಸ್‌ನವರ ಕೈಗೆ ರಾಜ್ಯ ಕೊಟ್ಟು ನೀವು ನಡೆಸುವುದಿದ್ದರೆ ನಾವು ಏನು ಹೇಳುವುದಕ್ಕಾಗುತ್ತದೆ? ಇದನ್ನು ನಾವು ಖಂಡಿಸಬೇಕಾಗುತ್ತದೆ. ಇವತ್ತು ನ್ಯಾಯವಾದಿಗಳಿಗೂ ಸಂರಕ್ಷಣೆ ಇಲ್ಲ. ಅವರು ಹೇಳಿದ ಹಾಗೆ ಬೆಳಗಾಂ ಬಾರ್ ಅಸೋಸಿಯೇಷನ್ ಎಂಟು ದಿವಸದಿಂದ ಬಂದ್ ಇದೆ. ತುಮಕೂರಿನಲ್ಲಿ ಮತ್ತು ಬೇರೆ ಬೇರೆ ಭಾಗದಲ್ಲೂ ಇದು ಹಬ್ಬುವುದಕ್ಕೆ ಸಾಧ್ಯ ಇದೆ. ಈ ಬಾರ್ ಮೆಂಬರ್ಸ್ ಸ್ಟ್ರೈಕ್ ಮಾಡಬೇಕು ಎಂದು ಎಲ್ಲಾ ಕಡೆಗೂ ವಿಚಾರ ಮಾಡುತ್ತಿದ್ದಾರೆ. ಆ ದೃಷ್ಟಿಯಿಂದ ನಾನು ಸರ್ಕಾರಕ್ಕೆ ತಮ್ಮ ಮುಖಾಂತರ ಎಚ್ಚರಿಕೆ ಕೊಡುತ್ತಿದ್ದೇನೆ, ಈ ಪ್ರಕಾರ ಅಮಾಯಕರ ಮೇಲೆ, ಅಡ್ವೋಕೇಟ್ ಮೇಲೆ, ಡಾಕ್ಟರ್ಸ್ ಮೇಲೆ ಅತ್ಯಾಚಾರ, ಅನ್ಯಾಯ ನಡೆದರೆ ಜನರು ಸರಿಯಾದ ಪಾಠವನ್ನು ಸರಿಯಾದ ಸಮಯದಲ್ಲಿ ಕಲಿಸುತ್ತಾರೆ. ಇದನ್ನು ನೀವು ತಿಳಿದುಕೊಳ್ಳಬೇಕು. ಹಾಗಾಗಿ ತಕ್ಷಣ ಸಿಂಗ್ ಎನ್ನುವ ಸಿಪಿಐ ಏನು ಇದ್ದಾರೆ, ಒಂದು ವೇಳೆ ಅವರು ಕಾಯ್ದೆ ಬದ್ಧವಾಗಿ ತಪ್ಪು ಮಾಡಿದ್ದರೆ ಕ್ರಮ ತೆಗೆದುಕೊಳ್ಳಿ. ನಮ್ಮದೇನೂ ಅದರ ಬಗ್ಗೆ ಆಕ್ಷೇಪಣೆ ಇಲ್ಲ. ಯಾರೂ ಬೇಡ ಎಂದು ಹೇಳುವುದಿಲ್ಲ. ಆದರೆ ಇನೋಸೆಂಟನ್ನು ಹಿಡಿದಿದ್ದೀರಿ; ಏತಕ್ಕೆ ಎಂದು ಕೇಳುವುದಕ್ಕೆ ಹೋದ ಅಡ್ವೋಕೇಟ್‌ಗೆ ಈ ಪ್ರಕಾರ ಅಸಾಲ್ಟ್ ಮಾಡಿದರೆ ಈ ರಾಜ್ಯದಲ್ಲಿ ಯಾರಿಗೆ ಪ್ರೊಟೆಕ್ಷನ್ ಕೊಡುವುದಕ್ಕೆ ಸಾಧ್ಯವಿದೆ? ನಿನ್ನೆ ಮುಖ್ಯಮಂತ್ರಿಗಳು ಮಾರಲ್ಸ್ ಬಗ್ಗೆ ಬಹಳ ವಿಚಾರಗಳನ್ನು ಹೇಳಿದ್ದಾರೆ. ಜನರಿಗೆ ಸಂರಕ್ಷಣೆ ಕೊಡಬೇಕು ಎಂದು ಹೇಳಿದ್ದಾರೆ. ನನ್ನ ಜೀವವನ್ನು ಅರ್ಪಣೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಈ ರೀತಿ ಜೀವಾರ್ಪಣೆ ಮಾಡುವುದು ಬೇಡ. ಜನರ ಜೀವ ಉಳಿಯಲಿ. ತಾವು ಇದರ ಬಗ್ಗೆ ಇಮ್ಮೆಡಿಯೇಟ್ ಆಗಿ ಆ ಸಿಪಿಐಯನ್ನು ಸಸ್ಪೆಂಡ್ ಮಾಡಬೇಕಾಗುತ್ತದೆ, ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ಎನ್‌ಕ್ವೈರಿ ಮಾಡಿ. ಇಲ್ಲದಿದ್ದರೆ ಇದು ಬಹಳ ಗಂಭೀರವಾದ ಸಮಸ್ಯೆ ಇದೆ. ನಿಮ್ಮ ಕೈಮೀರಿ ಹೋದರೆ ಇದು ಬಹಳ ಕಷ್ಟವಾಗುತ್ತದೆ. ಮಾನ್ಯ ಜೋಷಿಯವರು ಕೂಡ ಒಂದು ನಿಮಿಷ ಮಾತನಾಡುತ್ತಾರೆ. ಅವರಿಗೆ ಅವಕಾಶ ಮಾಡಿಕೊಡಿ ಎಂದು ಹೇಳುತ್ತೇನೆ.

+ SRI SUBHASH S. JOSHI : Mr Speaker, Sir, The fact is that the C.P.I is fabricating and tampering with the evidence. Therefore, he should be suspended immediately. Otherwise, he should be transferred. They have assured the Bar that they will enquire now. Days have passed. He had gone to the Police Station for enquiry when they have kept two persons illegally. He is the Secretary of the Rotary Club. His father is an eminent lawyer and also a respectable person in the whole of Belgaum District. Advocate Apte when he went there, was assaulted and slapped and vulgar language used against him. C.P.I should be suspended immediately because the whole issue of assault is now spreading to all the taluk Bars. Even Bangalore Bar Association is conducting an emergent meeting. Therefore, he should be suspended immediately.

SRI B.I. PATIL : My request is also that the C.P.I should be suspended immediately.

ಶ್ರೀ ವಾಟಾಳ್ ನಾಗರಾಜ್ : ತಾವು ಕೂಡ ಬೆಳಗಾಂನವರು ಇದ್ದೀರಿ. ಅವರನ್ನು ಸಸ್ಪೆಂಡ್ ಮಾಡಿ ಎಂದು ತಾವು ಕೂಡ ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಯಡಿಯೂರಪ್ಪನವರು, ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ವಿರೋಧ ಪಕ್ಷದ ನಾಯಕರಾದ ದೇಶಪಾಂಡೆಯವರು, ಜೋಷಿಯವರು ಪ್ರಸ್ತಾಪ ಮಾಡಿದಂಥ ವಿಷಯ ಬಹಳ ಪ್ರಾಮುಖ್ಯವಾದ ವಿಷಯ. ಅದನ್ನು ನಾವೇನು ಅಲ್ಲಗಳೆಯುವುದಿಲ್ಲ. ಆದರೆ ಯಾವ ರೀತಿಯಾಗಿದೆ ಆಗಿದೆ, ಯಾವ ಸಂದರ್ಭದಲ್ಲಿ ಆಗಿದೆ, ಅವರ ಬಗ್ಗೆ ಸಂಬಂಧಪಟ್ಟಂಥ ಚೌಡರೆಡ್ಡಿಯವರು ಗೃಹಸಚಿವರು ಇದ್ದಾರೆ, ಅವರು ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್‌ನ್ನು ಮಾಡುವುದಕ್ಕೆ ನಾನು ಹೇಳುತ್ತೇನೆ. ಇವತ್ತು ಅಲ್ಲದಿದ್ದರೆ ನಾಳೆ ಮಾಡುವುದಕ್ಕೆ ಹೇಳುತ್ತೇನೆ.

SRI SUBASH S. JOSHI : Records tampering is being done.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಗೃಹಮಂತ್ರಿಗಳಿಗೆ ತಾವು ಹೇಳಿಕಳುಹಿಸಿ. ಇವತ್ತು ಸಂಜೆಯೊಳಗೆ ಒಂದು ಹೇಳಿಕೆಯನ್ನು ಕೊಡುವಂತೆ ಮಾಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರ ಬಗ್ಗೆ ಇನ್ನೂ ಸರ್ಕಾರಕ್ಕೆ ಸುದ್ದಿ ಬಂದಿಲ್ಲವೇ? ಎಂಟು ದಿವಸವಾಯಿತು. ಇದು ಇಡೀ ರಾಜ್ಯಕ್ಕೆ ಹಬ್ಬುತ್ತದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವತ್ತಾದರೆ ಇವತ್ತೇ ಮಾಡಿಸುತ್ತೇನೆ. ಆರು ಗಂಟೆಯೊಳಗೆ ಆದರೆ ಒಂದು ವೇಳೆ ಸಂಪೂರ್ಣವಾದ ಮಾಹಿತಿ ಇಲ್ಲದೇ ಹೋದರೆ ಏಕೆಂದರೆ ತಾವು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ. ಆ ಎಲ್ಲಾ ವಿಷಯಗಳನ್ನು ಕ್ರೋಢೀಕರಿಸಿ ಒಂದು ಸ್ಟೇಟ್‌ಮೆಂಟ್‌ನ್ನು ಮಾಡಬೇಕು ಮತ್ತು ಜೋಷಿಯವರು ಎನ್‌ಕ್ವೈರಿ ಮಾಡ್ರಿ, ತಕ್ಷಣ ಸಸ್ಪೆಂಡ್ ಮಾಡಿ ಎಂದು ಕೇಳಿದ್ದಾರೆ. ತಾವು ಕೂಡ ಕೇಳಿದ್ದೀರಿ. ಅದಕ್ಕಾಗಿ ಆ ವಿಷಯಗಳನ್ನು ತರಿಸಿ ಗೃಹಸಚಿವರಿಂದ ಸ್ಟೇಟ್‌ಮೆಂಟ್‌ನ್ನು ಮಾಡಿಸುತ್ತೇನೆ. ಮುಂದೆ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳುತ್ತೇವೆ. ಅಲ್ಲಿಯವರೆಗಾದರು ತಾವು ಸಮಯವನ್ನು ಕೊಡಿ.

ಶ್ರೀ ಸುಭಾಷ್ ಎಸ್. ಜೋಷಿ : ಅವರು ರೆಕಾರ್ಡನ್ನು ಟ್ಯಾಂಪರ್ ಮಾಡುತ್ತಿದ್ದಾರೆ.

(ಗೊಂದಲ)

(3) ಅಂಗನವಾಡಿ ಕಾರ್ಯಕರ್ತೆಯರನ್ನು ಬಂಧಿಸಿರುವುದು

ಶ್ರೀ ವಾಟಾಳ್ ನಾಗರಾಜ್ : ನಿನ್ನೆ ಸಾವಿರಾರು ಅಂಗನವಾಡಿ ಕಾರ್ಯಕರ್ತೆಯರನ್ನು ಬಂಧಿಸಿದ್ದಾರೆ. ಅವರಿಗೆ ಬಹಳ ತೊಂದರೆ ಕೊಡುತ್ತಿದ್ದಾರೆ ಎಂದು ತಮಗೆ ಹೇಳಿದ್ದೆ.

ಅಧ್ಯಕ್ಷರು : ಮಂತ್ರಿಗಳು ಅದರ ಬಗ್ಗೆ ನಿನ್ನೆ ಹೇಳಿದ್ದಾರಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಯನ್ನು ಇವರು ಈಡೇರಿಸಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ಹೆಣ್ಣುಮಕ್ಕಳಿಗೆ ಇವರು ಕುಡಿಯುವುದಕ್ಕೆ ನೀರನ್ನು ಕೊಟ್ಟಿಲ್ಲ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಅಂಗನವಾಡಿ ಕಾರ್ಯಕರ್ತೆಯರನ್ನು ಅರೆಸ್ಟ್ ಮಾಡಿದ್ದಾರೆ. ಇವರಿಗೆ ನಾಚಿಕೆ ಬರಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅವರನ್ನು ಒಳಗಡೆ ಹಾಕಿ ಬೀಗ ಹಾಕಿ ಕೂಡಿ ಹಾಕಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರ ಬೇಡಿಕೆಯನ್ನು ಈಡೇರಿಸಿ ಎಂದು ಬಂದರೆ ಅವರನ್ನು ಅರೆಸ್ಟ್ ಮಾಡಿದ್ದಾರೆ. ಅವರಿಗೆ ಕುಡಿಯುವುದಕ್ಕೆ ನೀರನ್ನು ಕೊಟ್ಟಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅವರಿಗೆ ತೊಂದರೆ ಕೊಟ್ಟಿದ್ದಾರೆ. ಅವರಿಗೆ ಲಾಠಿ ಏಟನ್ನು ಹೊಡೆದಿದ್ದಾರೆ, ಅವರನ್ನು ನೂಕಿದ್ದಾರೆ. ಹೆಣ್ಣುಮಕ್ಕಳ ಮಾನ ಅಪಹರಣವಾಗಿದೆ ಎನ್ನುವ ಮಾತನ್ನು ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಇದರ ಬಗ್ಗೆ ಸಮಗ್ರವಾಗಿ ನ್ಯಾಯಾಂಗ ತನಿಖೆಯನ್ನು ಮಾಡಬೇಕೆಂದು ಹೇಳುತ್ತೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಪ್ರೊಸೀಜರ್ ಪ್ರಕಾರ ನೋಟೀಸ್ ಕೊಟ್ಟರೆ ಸರ್ಕಾರ ಉತ್ತರವನ್ನು ಕೊಡುತ್ತದೆ. ಬೇಡಿಕೆ ಈಡೇರಿಸಿ ಎಂದು ಹೇಳಿದರೆ ಹೇಗೆ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅವರು ಒಂದು ವಿಧಾನಸೌಧಕ್ಕೆ ಮುತ್ತಿಗೆಯನ್ನು ಹಾಕುತ್ತೇವೆ ಎಂದು ಹೇಳಿದ್ದಾರೆ, ನಿಜ. ಆದರೆ ನೀವು ಅವರನ್ನು ಎಲ್ಲಿ ಹಿಡಿಯಬೇಕಾಗಿತ್ತು? ವಿಧಾನಸೌಧದ ಹತ್ತಿರ ಬಂದಾಗ ಅವರನ್ನು ತಡೆಹಿಡಿಯಬೇಕಾಗಿತ್ತು. ಅದನ್ನು ಬಿಟ್ಟು ರೈಲಿನಿಂದ ಬಂದು ಇಳಿದತಕ್ಷಣ ಅವರನ್ನು ಬಂಧನ ಮಾಡಿ ಎಲ್ಲಿ ನೀವು ಇಟ್ಟಿದ್ದೀರಿ? ತೋಟದಪ್ಪ ಛತ್ರದಲ್ಲಿ ಇಟ್ಟು ಅವರನ್ನು ಒಳಗಡೆ ಇಟ್ಟು ಬೀಗ ಹಾಕಿ ಊಟ ಕೊಡದೆ, ನೀರನ್ನು ಕೊಡದೆ, ನೀರನ್ನು ಕೊಡದೆ, ಅವರಿಗೆ ತೊಂದರೆ ಕೊಟ್ಟು ರಾತ್ರಿ ಐದೂವರೆ ಗಂಟೆ ಮೇಲೆ ಅವರನ್ನು ನೀವು ಹೊರಗಡೆ ಹಾಕುತ್ತಿದ್ದೀರಿ, ಏನು ಸ್ವಾಮಿ ಇದು?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರನ್ನು ಬಂಧನ ಮಾಡುವ ಪ್ರಶ್ನೆ ಎಲ್ಲಿ ಬರುತ್ತದೆ? ಅಧಿಕಾರಿಗಳು ಹೋಗಿ ಕಾಣಬೇಕಾಗಿತ್ತು. ಅವರ ಕಷ್ಟಸುಖವನ್ನು ಕೇಳಬೇಕಾಗಿತ್ತು. ಅದನ್ನು ಈಡೇರಿಸುವುದಕ್ಕಾದರೆ ಈಡೇರಿಸುತ್ತೇವೆ ಎಂದು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಆ . ಹೆಣ್ಣು ಮಕ್ಕಳು ತಮ್ಮ ಬೇಡಿಕೆಯ ಬಗ್ಗೆ ಸುಮಾರು ನಾಲ್ಕು ವರ್ಷದಿಂದ ಈ ಸರ್ಕಾರಕ್ಕೆ ಸತತವಾಗಿ ಒತ್ತಾಯ ಮಾಡುತ್ತಿದ್ದಾರೆ. ಅವರ ಬೇಡಿಕೆಯನ್ನು ಈಡೇರಿಸುವುದರಲ್ಲಿ ಸರ್ಕಾರದವರು ಸಂಪೂರ್ಣವಾಗಿ ವಿಫಲವಾಗಿದ್ದಾರೆ. ಅವರು ಜೀವನ ಮಾಡುವುದೇ ಕಷ್ಟವಾಗಿದೆ. ಅವರಿಗೆ ಕೊಡುವ ಸಂಬಳವೆಷ್ಟು 300 ರೂಪಾಯಿ, 250 ರೂಪಾಯಿ, ಈ ರೀತಿ ತೆಗೆದುಕೊಂಡು ಅವರು ಎಲ್ಲಿ

ಬದುಕುವುದು? ಈ ಬಗ್ಗೆ ಒಂದು ವ್ಯವಸ್ಥೆ ಇಲ್ಲ. ಹೆಣ್ಣು ಮಕ್ಕಳು ಬಂದರೆ ಅವರನ್ನು ತಳ್ಳಿ, ಅವಮಾನವಾಗುವ ಹಾಗೆ ನಡೆದುಕೊಂಡಿರುವುದು ಅತ್ಯಂತ ಹೇಯ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ.

+ ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು ವಿಧಾನಸೌಧಕ್ಕೆ ಅವರು ಮುತ್ತಿಗೆ ಹಾಕುತ್ತಿದ್ದರು, ನಾವು ಡಿಟೈನ್ ಮಾಡಿದ್ದೇವೆ ಎಂದು ಹೇಳಿದರು. ಅಂದರೆ ಅರ್ಥವೇನು? ಅವರು ನಮ್ಮ ಸ್ನೇಹಿತರಾದಂಥ ಕಂದಾಯ ಸಚಿವರು ಸಮಾಜಕಲ್ಯಾಣ ಇಲಾಖೆಯ ಮಂತ್ರಿ ಇದ್ದಾಗ ಈ ಸಮಸ್ಯೆ ಬಂದಾಗ ತಾವೇ ಭರವಸೆಯನ್ನು ಅವರಿಗೆ ಕೊಟ್ಟಿದ್ದೀರಿ. ಈಗ ಮಹಾರಾಷ್ಟ್ರದಲ್ಲಿ ಪ್ಯಾಟ್ರನ್ ಏನಿದೆ, ಅದನ್ನು ನೋಡುವುದಕ್ಕೆ ನಾನು ಅಧಿಕಾರಿಯನ್ನು ಕಳುಹಿಸುತ್ತೇನೆ ಎಂದು ಹೇಳಿದರು. ಇಲ್ಲಿ ಅವರಿಗೆ 400 ರೂಪಾಯಿ ಕೊಡುತ್ತಾರೆ, ಅಲ್ಲಿ ಮಹಾರಾಷ್ಟ್ರದಲ್ಲಿ 500 ರೂಪಾಯಿ ಕೊಡುತ್ತಾರೆ ಎಂದು ತಾವೇ ಹೇಳಿದ್ದೀರಿ. ಏತಕ್ಕೆ ನಿಮ್ಮ ಅಧಿಕಾರಿಗಳು ಹೋಗಲಿಲ್ಲ? ನಿಮ್ಮ ಅಧಿಕಾರಿಗಳು ದೆಹಲಿ, ಬಾಂಬೆ ಎಲ್ಲಾ ಕಡೆ ಹೋಗುವುದಕ್ಕಾಗುತ್ತದೆ. ಈ ಸಮಸ್ಯೆ ಬಗ್ಗೆ ಬಾಂಬೆಗೆ ಹೋಗಿ ಬರಲಿಕ್ಕೆ ಆಗಲಿಲ್ಲ. ಇದೇನು? ನೀವೇ ಭರವಸೆಯನ್ನು ಕೊಟ್ಟಿದ್ದೀರಿ. ನೀವು ಕೊಟ್ಟಿರುವ ಭರವಸೆಯನ್ನು ನೀವೇ ಈಡೇರಿಸುವುದಕ್ಕೆ ಆಗಲಿಲ್ಲ ಎಂದರೆ ಪುನಃ ಅವರು ಬಂದು ಎಜಿಟೇಟ್ ಮಾಡಿದರೆ ಪಾಪ ಅವರದೇನು ತಪ್ಪಿದೆ? ನಿಜವಾಗಿಯೂ ತಾವು ಕ್ಷಮೆ ಕೇಳಬೇಕು. ತಾವು ಅವರಿಗೆ ಭರವಸೆಯನ್ನು ಕೊಟ್ಟಿದ್ದೀರಿ. ಆ ಭರವಸೆ ಈಡೇರಿಸುವುದಕ್ಕೆ ನಿಮಗೆ ಆಗಲಿಲ್ಲ. ಅವರು ಬಡವರು. 200, 300, 400 ರೂಪಾಯಿ ಖರ್ಚು ಮಾಡಿಕೊಂಡು ಬರಬೇಕು. ನಿನ್ನೆ ಅವರಿಗೆಲ್ಲ ಡಿಟೈನ್ ಮಾಡಿದ್ದಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದರೆ ಅಲ್ಲಿ ಡಿಸಿಪಿ ಕುಳಿತಿದ್ದರು, ಅವರನ್ನು ಕೇಳಿದರು. ಅವರು ಆ ಕಡೆಯಿಂದ ಉತ್ತರ ಕೊಟ್ಟರು. ಇದು ಸರಿಯೇ? ನಿಮಗೆ ಏನಾಗಿದೆ? ಚುನಾವಣೆ ಸಮಯ ಬಂದಾಗ "ವಿನಾಶಕಾಲೇ ವಿಪರೀತ ಬುದ್ಧಿ" ಎನ್ನುತ್ತಾರಲ್ಲ ಆ ರೀತಿ ಆಗಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ನೀವೇ ಸರಿಯಾಗಿ ಹೇಳುವುದನ್ನು ಬಿಟ್ಟು ನಾವು ನಿಮಗೆ ಕರೆಕ್ಟ್ ಆಗಿ ಹೇಳುವ ಪ್ರಸಂಗ ಬಂತು.

ಶ್ರೀ ಆರ್.ವಿ. ದೇಶಪಾಂಡೆ : ಸರ್ಕಾರಕ್ಕೆ ಏನಾಗಿದೆ?

2.00 ಪಿ.ಎಂ

ನೀವು ಯಾವ ಮಟ್ಟಕ್ಕೆ ಹೋಗಿದ್ದೀರಿ? ನಮಗೆ ನಾಚಿಕೆಯಾಗುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಂಗನವಾಡಿ ಕಾರ್ಯಕರ್ತೆಯವರನ್ನು ಸರ್ಕಾರ ಬಂಧನ ಮಾಡಿಸಿರುವುದಕ್ಕೆ ಅವರ ಕ್ಷಮಾಪಣೆಯನ್ನು ಕೇಳಬೇಕು. ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳೆಂದರೆ ಏನು ಬೇಕಾದರೂ ಮಾಡುತ್ತೀರಿ ಹೇಳುವವರು, ಕೇಳುವವರು ಯಾರೂ ಇಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ಅವರನ್ನು ಏತಕ್ಕಾಗಿ ಬಂಧಿಸಬೇಕಾಗಿತ್ತು? ಬಂಧನ ಮಾಡತಕ್ಕಂಥ ಪರಿಸ್ಥಿತಿ ಏನು ಉದ್ಭವವಾಗಿತ್ತು? ಅವರನ್ನು ಬಂಧಿಸುವುದಕ್ಕೆ ಅಲ್ಲಿ ಏನಾದರೂ ಹೋರಾಟ ನಡೆದಿತ್ತೆ? ಆ ರೀತಿ ಅವರು ಏನಾದರೂ ಮಾಡಿದ್ದಾರೆಯೇ? ಎಂಬುದನ್ನು ಸರ್ಕಾರ ಮೊದಲು ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರ 'ಹಿಟ್ಲರ್ ಸಂಸ್ಕೃತಿ' ಯಂತೆ ನಡೆದುಕೊಂಡಿದೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಸರ್ಕಾರಕ್ಕೆ ಹೇಳುತ್ತಿದ್ದೇನೆ. ತಾವೇ ಭರವಸೆ ಕೊಟ್ಟಿದ್ದೀರಿ, ಅದನ್ನು ಈಡೇರಿಸಬೇಕಾಗಿತ್ತು. ಭರವಸೆ ಈಡೇರಿಸಿದ್ದರೆ ಅಂಗನವಾಡಿ ಕಾರ್ಯಕರ್ತೆಯರು ಇಲ್ಲಿಗೆ ಏಕೆ ಬಂದು ಹೋರಾಟ ಮಾಡುತ್ತಿದ್ದರು? ಅವರನ್ನು ಖಾಯಂಗೊಳಿಸುವುದು ಒಂದು ಸಮಸ್ಯೆಯಾಗಿರುವುದು ಗೊತ್ತಿರುವಂಥ ವಿಚಾರ. ಇದರ ಬಗ್ಗೆ ಮಾತನಾಡಬೇಕು, ಚರ್ಚೆಯಾಗಬೇಕು. ಆರ್ಥಿಕ ಅಡಚಣೆಯಿರುವುದು ಅರ್ಥವಾಗುತ್ತದೆ. ಪರಿಶೀಲಿಸಲು ಅರ್ಹವಾಗಿರುವ ಕೆಲವು ಬೇಡಿಕೆಗಳಿವೆ. ಅವನ್ನು ಪರಿಶೀಲಿಸುವುದು ಬಿಟ್ಟು, ಅವರುಗಳನ್ನು ಬಂಧಿಸಿದ್ದೀರಿ. ಇಷ್ಟರೊಳಗಾಗಿ ತಾವು ಆಜ್ಞೆಯನ್ನು ಕಳುಹಿಸಿ ಕೊಡಬೇಕಾಗಿತ್ತು. ಈ ರೀತಿ ನಡೆದುಕೊಂಡಿರುವುದಕ್ಕೆ ಸರ್ಕಾರಕ್ಕೆ ಗೌರವ ಬರುತ್ತದೆಯೇ? ಇದರಿಂದ ಸಿಗುವ ಲಾಭವಾದರೂ ಏನು? ಹೆಣ್ಣುಮಕ್ಕಳ ಶಾಪದಿಂದ ನೀವು ಮುಕ್ತರಾಗುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ನಾನು ಹೇಳುತ್ತಿದ್ದೇನೆ ಈ ಕುರಿತು ನಿನ್ನೆಯೂ ಸಹ ಮೇಲ್ಮನೆಯಲ್ಲಿ ಪ್ರಸ್ತಾಪವಾಗಿರುವುದನ್ನು ಪತ್ರಿಕೆಗಳಲ್ಲಿ ನೋಡಿದ್ದೇನೆ. ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಇದಕ್ಕೆ ಸಂಬಂಧಪಟ್ಟ ಮಂತ್ರಿಗಳನ್ನು ಕರೆಯಿಸಿ ಅವರಿಂದ ಒಂದು ಹೇಳಿಕೆ ಕೊಡಿಸಬೇಕು ಮತ್ತು ಅಂಗನವಾಡಿ ಕಾರ್ಯಕರ್ತೆಯರನ್ನು ತಕ್ಷಣ ಬಿಡುಗಡೆಗೊಳಿಸುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು.

(ಈ ಹಂತದಲ್ಲಿ ಸರ್ಕಾರದ ಕಡೆಯಿಂದ ಯಾವುದೇ ಉತ್ತರ ಬರಲಿಲ್ಲ)

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ಇದೆಯೇ? ಇಲ್ಲವೇ? ಸದನದಲ್ಲಿ ಗೃಹಮಂತ್ರಿಗಳೂ ಇಲ್ಲ, ಮುಖ್ಯಮಂತ್ರಿಗಳೂ ಇಲ್ಲ. ಈ ಶಾಸನಸಭೆ ಸೇರಿ ಎರಡು ದಿವಸಗಳಾಯಿತು. ಸದನಕ್ಕೆ ಎಷ್ಟು ಮಹತ್ವವಿರಬೇಕು? ಸಚಿವರುಗಳಿಗೆ ಸದನದ ಬಗ್ಗೆ ಎಷ್ಟು ಗೌರವವಿರಬೇಕು? ಪ್ರತಿಯೊಂದಕ್ಕೂ ತಾವಿಬ್ಬರೇ ಉತ್ತರ ಕೊಟ್ಟರೆ ಹೇಗೆ? ನಿಮ್ಮ ಬಗ್ಗೆ ಬಹಳ ಗೌರವವಿದೆ. ಸರ್ಕಾರವೆಂದರೆ ನೀವಿಬ್ಬರು ಮಾತ್ರವೇ? ಸರ್ಕಾರ ಇದೆಯೇ? ಇಲ್ಲವೇ? ಹೇಳಿ

ಶ್ರೀ ಬಿ.ಎಸ್. ಯಡಿಯೂರಪ್ಪ : ಅಂಗನವಾಡಿ ಕಾರ್ಯಕರ್ತೆಯರನ್ನು ಬಂಧಿಸಿದ ನಂತರ ಅವರಿಗೆ ಊಟೋಪಚಾರ ವ್ಯವಸ್ಥೆ ಮಾಡಿದೆಯೇ? ಅವರುಗಳನ್ನು ಬಿಡುಗಡೆಗೊಳಿಸಿ ಪುನಃ ವಾಪಸ್ ತಂತಮ್ಮ ಊರುಗಳಿಗೆ ಕಳುಹಿಸಿಕೊಟ್ಟಿದ್ದಾರೆಯೇ? ಇದರ ಬಗ್ಗೆ ಸಂಪೂರ್ಣ ಮಾಹಿತಿ ಬೇಕು.

ಶ್ರೀ ವಾಟಾಳ್ ನಾಗರಾಜ್ : ಅವರುಗಳನ್ನು ಯಾವ್ಯಾವ ಲಾಕಪ್‌ಗಳಲ್ಲಿ ಬಂಧಿಸಿಟ್ಟಿದ್ದೀರಿ? ಯಾವ್ಯಾವ ಛತ್ರಗಳಲ್ಲಿ ಇಟ್ಟಿದ್ದೀರಿ? ಎಷ್ಟೊತ್ತಿಗೆ ಅವರುಗಳ ಬಿಡುಗಡೆಯಾಯಿತು? ಬಂಧಿಸುವುದಕ್ಕೆ ಯಾವ ಪರಿಸ್ಥಿತಿ ಉದ್ಭವವಾಗಿತ್ತು? ಅವರ ತೊಂದರೆಗಳೇನು? ಅನೇಕ ಜನ ಹೆಣ್ಣುಮಕ್ಕಳು ತಪ್ಪಿಸಿಕೊಂಡಿರತಕ್ಕ ವರದಿಗಳು ಬಂದಿವೆ. ಆದುದರಿಂದ, ಈ ಬಗ್ಗೆ ಸಮಗ್ರವಾಗಿ ನ್ಯಾಯಾಂಗ ತನಿಖೆಯಾಗಬೇಕು. ಮತ್ತು ಈ ಕುರಿತು ಸರ್ಕಾರದ ನಿರ್ಧಾರವೇನು? ಸರ್ಕಾರ ಅವರುಗಳನ್ನು ಹೆದರಿಸಿ, ಮತ್ತೆ ನೀವುಗಳು ವಿಧಾನಸೌಧಕ್ಕೆ ಬರುವುದಾದರೆ ತೀವ್ರತರವಾದ ಶಿಕ್ಷೆಗೊಳಪಡಿಸಬೇಕಾಗುತ್ತದೆಂದು ಅವರನ್ನು ಭಯಭೀತರನ್ನಾಗಿಸಿ ಅವರುಗಳು ಊರು ಬಿಟ್ಟು ಹೊರಹೋಗುವಂಥ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆ. ಸದನಕ್ಕೆ ಸಂಬಂಧಪಟ್ಟ ಸಚಿವರು ಬಂದು ಒಂದು ಹೇಳಿಕೆ ಕೊಡಬೇಕು. ಅವರು ಎಲ್ಲಿ ಹೋಗಿದ್ದಾರೆ. ಇಷ್ಟೊಂದು ದುರಂತ ನಡೆದಿದ್ದು, ಈ ವಿಷಯ ಶಾಸನಸಭೆಯಲ್ಲಿ ಪ್ರಸ್ತಾಪವಾಗಬಹುದೆಂಬ ಮುನ್ಸೂಚನೆಯಿಂದಲಾದರೂ ಅವರು ಇರಬೇಕಾಗಿತ್ತು. ಅದನ್ನು ಬಿಟ್ಟು ಸಚಿವರು ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವಾಟಾಳ್ ನಾಗರಾಜ್‌ರವರ ಬಗ್ಗೆ ನಮಗೆ ಅಪಾರ ಗೌರವವಿದೆ. ಅವರು ಹಿರಿಯ ಸದಸ್ಯರಾಗಿದ್ದು, ನನಗಿಂತಲೂ

ಮುಂಚಿತವಾಗಿ ಈ ವಿಧಾನ ಸಭೆಗೆ ಬಂದವರಾಗಿದ್ದಾರೆ. ಮತ್ತು ಮಂತ್ರಿಗಳ ಬಗ್ಗೆ ತಮಗೆ ಗೊತ್ತಿರುವಂತೆ ಅವರೇನೂ ಉತ್ತರ ಕೊಡಬೇಕೆಂದು ತಪ್ಪಿಸಿಕೊಳ್ಳುವಂಥ ಮಂತ್ರಿಗಳಲ್ಲಿ ಕಾಗೋಡು ತಿಮ್ಮಪ್ಪನವರು ಬಹಳ ಆತ್ಮೀಯ ಮಂತ್ರಿಗಳಾಗಿದ್ದು ಉತ್ತರ ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಇದಕ್ಕೆ ಉತ್ತರ ಕೊಡಬೇಕಾಗಿರತಕ್ಕಂಥವರು ಗೃಹ ಸಚಿವರೇ ಹೊರತು ಕಾಗೋಡು ತಿಮ್ಮಪ್ಪನವರಲ್ಲ. ಹೆಣ್ಣುಮಕ್ಕಳನ್ನು ಬಂಧಿಸಿರುವವರು ಪೋಲೀಸಿನವರು. ಆದ್ದರಿಂದ, ಇದು ಗೃಹ ಇಲಾಖೆಗೆ ಸಂಬಂಧಿಸಿರುವುದರಿಂದ ಗೃಹ ಮಂತ್ರಿಗಳಾದ ಚೌಡರೆಡ್ಡಿಯವರು ಇಲ್ಲಿಗೆ ಬಂದು ಹೇಳಿಕೆ ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಚೌಡರೆಡ್ಡಿಯವರು ನಾಮಕಾವಸ್ಥೆಗಷ್ಟೆ ಗೃಹ ಮಂತ್ರಿಗಳು. ಇದಕ್ಕೆ ಉತ್ತರವನ್ನು ಮುಖ್ಯಮಂತ್ರಿಗಳು ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಅವರುಗಳನ್ನು ಏತಕ್ಕಾಗಿ ಬಂಧಿಸಿದರು? ಬಂಧಿಸುವಂಥ ಪರಿಸ್ಥಿತಿಯೇನಾದರೂ ನಿರ್ಮಾಣವಾಗಿತ್ತೆ? ಅವರು ವಿಧಾನಸೌಧಕ್ಕೆ ಮುತ್ತಿಗೆ ಹಾಕುತ್ತೇವೆಂದು ಹೇಳಿದ್ದರು. ಮುತ್ತಿಗೆ ಹಾಕಬೇಕಾದರೆ ವಿಧಾನಸೌಧದ ಸುತ್ತ ಪೊಲೀಸ್ ಕಾಯ್ದೆಯಂತೆ ಕಾನೂನನ್ನು ಜಾರಿಗೊಳಿಸಲಾಗಿತ್ತು. ಕಾನೂನನ್ನು ಉಲ್ಲಂಘಿಸಿ ದಾಟಿ ಬರುವ ಪರಿಸ್ಥಿತಿಯಲ್ಲಿ ಅವರು ಇರಲಿಲ್ಲ. ಅವರುಗಳೇನಾದರೂ ಮೆರವಣಿಗೆ, ಚಳುವಳಿ ಮಾಡಿದ್ದರೆ ಅದನ್ನು ಕಬ್ಬನ್ ಪಾರ್ಕಿನಲ್ಲಿ ತಡೆಯುವಂಥ ವ್ಯವಸ್ಥೆ ಇದೆ. ಆ ರೀತಿ ಮಾಡುವುದನ್ನು ಬಿಟ್ಟು ಅವರೆಲ್ಲರನ್ನೂ ತೋಟದಪ್ಪ ಛತ್ರದಲ್ಲಿಟ್ಟಿದ್ದೀರಿ, ಆಡುಗೋಡಿಯಲ್ಲಿಟ್ಟಿದ್ದೀರಿ ಮತ್ತು ಕೆಲವು ಪೊಲೀಸ್ ಠಾಣೆಗಳಿಗೆ ಕಳುಹಿಸಿದ್ದೀರಿ. ಅವರು ಮುಂಜಾನೆ ಐದೂವರೆ ಗಂಟೆಗೆ ತಪ್ಪಿಸಿಕೊಂಡು ಹೋಗುವುದಕ್ಕೆ ವ್ಯವಸ್ಥೆ ಮಾಡಿದ್ದು ಹೊರಗಡೆ ಈ ರೀತಿ ಅವರನ್ನು ಬಯ್ದು ಹೇಳುತ್ತಿದ್ದೀರಾ? ಅವರನ್ನು ಎಲ್ಲಿಗೆ ಕಳುಹಿಸಿದ್ದೀರಿ? ಅವರುಗಳು ತಂತಮ್ಮ ಊರುಗಳಿಗೆ ತಲುಪುವುದಕ್ಕೆ ಹಣ ಕೊಟ್ಟಿದ್ದೀರಾ? ಇದರ ಬಗ್ಗೆ ಸರ್ಕಾರ ಹೇಳಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಡುತ್ತಾರೆ, ಆದರೆ ಇದುವರೆಗೂ ಉತ್ತರವಿಲ್ಲ. ಕೊನೆಯದಾಗಿ ಸರ್ಕಾರಕ್ಕೆ ನಿವೇದನೆ ಮಾಡಿ ಸಮಸ್ಯೆಯನ್ನು ಹೇಳುವುದಕ್ಕೆ ಬಂದರೆ ಆ ಕಾರ್ಯಕರ್ತರ ಮೇಲೆ ಹಿಂಸೆಯನ್ನು ಮಾಡಿ ಅವರುಗಳನ್ನು ಪೋಲೀಸ್‌ನವರಿಂದ ಬಂಧಿಸಿ ಅವರುಗಳಿಗೆ ಯಾವುದೇ ಊಟೋಪಚಾರವನ್ನು ಕೊಡದೆ ಹಿಂಸೆಯನ್ನು ಕೊಡತಕ್ಕ ಸರ್ಕಾರದ ನೀತಿಯನ್ನು ತಾವು ದಯಮಾಡಿ ಗಮನಿಸಬೇಕು. ಅನೇಕ ಜನ ಮಹಿಳೆಯರು ಏನಾಗುತ್ತಯೋ, ಏನೋ ಎಂದು ಅಂಜಿದ್ದಾರೆ. ಅವರುಗಳಿಗೆ ಪೋಲೀಸ್‌ನವರು ನೀವು ಇಲ್ಲಿಂದ ಬಿಟ್ಟು ಹೋಗಬೇಕು, ಇಲ್ಲದಿದ್ದರೆ ನಿಮ್ಮನ್ನು ಅರೆಸ್ಟ್ ಮಾಡುತ್ತೇವೆ, ಹಿಂಸೆ ಕೊಡುತ್ತೇವೆಂದು ಬೆದರಿಸಿದ್ದಾರೆ. ಅವರುಗಳೆಲ್ಲ ಶಾಸಕರ ಭವನಕ್ಕೆ ಬಂದು ನಮ್ಮೆಲ್ಲರನ್ನು ಭೇಟಿಯಾಗಿ ಈ ರೀತಿ ತೊಂದರೆಗಳನ್ನು ಕೊಡುತ್ತಿದ್ದಾರೆಂದು ಹೇಳಿಕೊಂಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಸಮಸ್ಯೆಗಳನ್ನು ಬಗೆಹರಿಸತಕ್ಕದ್ದು ಸರ್ಕಾರದ ಕೆಲಸ. ಇವರು ಸಮಸ್ಯೆಯನ್ನು ಬಗೆಹರಿಸದೆ ಬಿಟ್ಟಿದ್ದಾರೆ. ಸಮಸ್ಯೆಯನ್ನು ಹೇಳಲು ಬಂದರೆ ಅದನ್ನು ಕೇಳತಕ್ಕ ದಯೆ, ಸೌಜನ್ಯ ಸರ್ಕಾರದಲ್ಲಿ, ಮಂತ್ರಿಗಳಲ್ಲಿ, ಮುಖ್ಯಮಂತ್ರಿಗಳಲ್ಲಿ ಇಲ್ಲ, ಆದ್ದರಿಂದ ದಯಮಾಡಿ ಈ ಕೂಡಲೇ ಗೃಹಸಚಿವರು ಅವರುಗಳನ್ನು ಬಂಧನ ಮಾಡಿರುವ ಬಗ್ಗೆ ಹೇಳಿಕೆಯನ್ನು ಕೊಡಬೇಕು, ಸಂಬಂಧಪಟ್ಟ ಮಹಿಳಾ ಕಲ್ಯಾಣ ಇಲಾಖೆಯ ಸಚಿವರು ಸಹ ಇವರ ಸಮಸ್ಯೆಗಳನ್ನು ಪರಿಹರಿಸಲು ಪರಿಹಾರವನ್ನು ಕಂಡುಹಿಡಿಯಬೇಕು, ಅದರ ಬಗ್ಗೆ ಸರ್ಕಾರ ಹೇಳಿಕೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, ಅವರು ಈ ವಿಷಯವನ್ನು ಈಗ ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಮೊದಲೇ ಇದರ ಬಗ್ಗೆ ನೋಟೀಸ್ ಕೊಟ್ಟಿದ್ದರೆ ಇದಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ತಯಾರು ಮಾಡಿಕೊಂಡು ಬಂದು ಇಲ್ಲಿ ಹೇಳಿಕೆಯನ್ನು ಕೊಡುತ್ತಿದ್ದರು. ಆದ್ದರಿಂದ ತಾವು ಆದೇಶವನ್ನು ಕೊಟ್ಟರೆ ಸಂಬಂಧಪಟ್ಟ ಮಂತ್ರಿಗಳಿಂದ ಹೇಳಿಕೆಯನ್ನು ಕೊಡಿಸುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ನಾವು ನಿನ್ನೆಯೇ ಇದರ ಬಗ್ಗೆ ಹೇಳಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆದರೆ ಒಂದು ಮಾತನ್ನು ತಾವು ಮರೆಯಬಾರದು. ಇದು ಈ ಅಂಗನವಾಡಿ ಕಾರ್ಯಕರ್ತೆಯರು ಇವತ್ತೇ, ಇಂದೇ, ದಿಢೀರನೆ ಬಂದು ಸಮಸ್ಯೆಗಳನ್ನು ಹೇಳುತ್ತಿರುವುದಲ್ಲ. ಅವರು ಪ್ರತಿ ವರ್ಷ ಪ್ರೊಸೆಷನ್ ಬರುತ್ತಾರೆ, ಪ್ರತಿ ವರ್ಷ ಇಲ್ಲಿ ಕೂರುತ್ತಾರೆ. ಅದರ ಬಗ್ಗೆ ಈ ಯೋಜನೆ ಯಾರಿಗೆ ಸಂಬಂಧಪಡುತ್ತದೆ, ಇದರಲ್ಲಿ ಕೇಂದ್ರ ಸರ್ಕಾರದ ಪಾತ್ರ ಎಷ್ಟು, ರಾಜ್ಯ ಸರ್ಕಾರದ ಪಾತ್ರವೆಷ್ಟು, ಎಷ್ಟರ ಮಟ್ಟಿಗೆ ರಾಜ್ಯ ಸರ್ಕಾರ ಇದಕ್ಕೆ ಸಹಾಯ ಮಾಡುತ್ತದೆ ಎನ್ನತಕ್ಕ ಚರ್ಚೆ ಬಹುಶಃ ಹಲವಾರು ಸಲ ಆಗಿದೆ. ಆ ಚರ್ಚೆಯನ್ನು ಬಹುಶಃ ಯಡಿಯೂರಪ್ಪನವರು, ದೇಶಪಾಂಡೆಯವರು, ವಾಟಾಳ್ ನಾಗರಾಜ್‌ರವರೆಲ್ಲರೂ ಸಹ ಇಲ್ಲಿ ಮಾಡಿದ್ದಾರೆ. ಅವರಿಂದ ಎಜಿಟೇಷನ್ ಬಂದಾಗ 50, 100, 150 ಈ ರೀತಿ ಅವರಿಗೆ ಪರಿಹಾರವನ್ನು ಹೆಚ್ಚು ಮಾಡಿಕೊಂಡು ಹೋಗಿದ್ದೇವೆ. ಆದ್ದರಿಂದ ಇವೆಲ್ಲವುಗಳ ಬಗ್ಗೆ ಸಂಬಂಧಪಟ್ಟ ಸಚಿವರು ಹೇಳಿಕೆಯನ್ನು ಕೊಡುತ್ತಾರೆ. ಅನಂತರ ಅವರುಗಳನ್ನು ಅರೆಸ್ಟ್ ಮಾಡಿ ಕಲ್ಯಾಣ ಮಂಟಪದಲ್ಲಿಟ್ಟಿದ್ದಾರೋ, ಎಲ್ಲೋ ಇಟ್ಟಿದ್ದಾರೆ, ಲಾಕಪ್‌ನಲ್ಲಿಟ್ಟಿದ್ದಾರೆ ಎಂಬ ಬಗ್ಗೆ ತಾವು ಏನು ಹೇಳಿದ್ದೀರಿ ಅದರ ಬಗ್ಗೆ ಗೃಹ ಸಚಿವರೆ ಸ್ಟೇಟ್‌ಮೆಂಟ್ ಮಾಡಬೇಕೆಂದು ಅಧ್ಯಕ್ಷರು ಹೇಳಿದರೆ ಅವರು ಅದನ್ನು ಸಹ ಮಾಡುತ್ತಾರೆ. ಅದಕ್ಕಾಗಿ ಅಧ್ಯಕ್ಷರೆ ನಾನು ಸಂಬಂಧಪಟ್ಟಂಥ ಮಂತ್ರಿಗಳಿಗೆ ಇದರ ಬಗ್ಗೆ ಹೇಳಿ ಅವರಿಂದ ಸ್ಟೇಟ್‌ಮೆಂಟ್ ಮಾಡಿಸುತ್ತೇನೆ.

(ಗೊಂದಲ)

(ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ವಾಟಾಳ್ ನಾಗರಾಜ್ ಮತ್ತು ಶ್ರೀ ರುಕ್ಮಯ್ಯ ಪೂಜಾರ್‌ರವರು ಮಂತ್ರಿಗಳ ಹೇಳಿಕೆಯನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು)

ಗಮನ ಸೆಳೆಯುವ ಸೂಚನೆ

ಕರ್ನಾಟಕ ಭೂ ಸುಧಾರಣಾ ಕಾಯ್ದೆ 1974 ಕಲಂ 48 (ಎ) ಪ್ರಕಾರ ಭೂಸ್ವಾಧೀನಾನುಭವ ಪಡೆಯಲು ಫಾರಂ 7ರಲ್ಲಿ ಡಿಕ್ಲೆರೇಷನ್ ಕೊಡದಿರುವಂತಹ ರೈತರಿಗೆ ಭೂಮಿ ಸ್ವಾಧೀನದ ಹಕ್ಕನ್ನು ಕೊಡಲು ನಿರಾಕಾರ.

ಶ್ರೀ ಆರ್.ವಿ. ದೇಶ್‌ಪಾಂಡೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ ಕರ್ನಾಟಕ ಭೂ ಸುಧಾರಣಾ ಕಾಯ್ದೆ 1974 ಕಲಂ 48 (ಎ) ಪ್ರಕಾರ ಭೂ ಸ್ವಾಧೀನಾನುಭವ ಪಡೆಯಲು ಫಾರಂ - 7ರಲ್ಲಿ ಡಿಕ್ಲರೇಷನ್ ಕೊಡದಿರುವ ರೈತರಿಗೆ ಭೂಮಿ ಸ್ವಾಧೀನದ ಹಕ್ಕನ್ನು ಕೊಡಲು ಸಾಧ್ಯವಾಗದೆ ಇರುವುದರಿಂದ ಹಂಗಾಮಿ ಸಾಗುವಳಿ ಮಾಡುತ್ತಿರುವ ರೈತರಿಗೆ ಆಗುತ್ತಿರುವ ಅನಾನುಕೂಲ ಕುರಿತು ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) : ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ಕಲಂ 48ಎ ಅಡಿಯಲ್ಲಿ ಅರ್ಹ ಗೇಣಿದಾರರು ಭೂ ನ್ಯಾಯ ಮಂಡಳಿಯ ಮುಂದೆ ನಿಗಧಿತ ನಮೂನೆ 7ರಲ್ಲಿ ಅರ್ಜಿ ಸಲ್ಲಿಸಲು ತಾರೀಖು 30-6-1979ನ್ನು ಕೊನೆಯ ದಿನಾಂಕವೆಂದು ನಿಗಧಿ ಪಡಿಸಲಾಗಿತ್ತು. ಈ ಅವಧಿಯಲ್ಲಿ

ಬಂದ ಅರ್ಜಿಗಳನ್ನು ಭೂ ನ್ಯಾಯ ಮಂಡಳಿಯು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗಿದೆ. ಈ ನಿಗಧಿತ ದಿನಾಂಕದ ಅವಧಿಯೊಳಗೆ ಗೇಣಿ ಜಮೀನಿಗೆ ಅರ್ಜಿಗಳು ಬರದೆ ಇರುವ ಪ್ರಕರಣಗಳ ಬಗ್ಗೆ ಕೊನೆಯ ದಿನಾಂಕವನ್ನು ವಿಸ್ತರಿಸುವ ಬಗ್ಗೆ ಯಾವುದೇ ಪ್ರಸ್ತಾವನೆಗಳು ಈಗ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

ಗೊತ್ತಾದ ಅವಧಿಯಲ್ಲಿ ಡಿಕ್ಲರೇಷನ್ ಕೊಡದಿದ್ದರೂ ವಾಸ್ತವವಾಗಿ ಪಹಣಿಯಲ್ಲೂ ಅವರ ಹೆಸರು ದಾಖಲಾಗಿದ್ದು, ಅನುಭವದಲ್ಲಿದ್ದರೂ, ಅವರಿಗೆ ಹಕ್ಕು ದಾರಿ ಸಿಗದಿರುವ ಬಗ್ಗೆ ತೊಂದರೆಯಾಗಿದೆಯೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರೆ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ.

ಬೆಳಗಾಂ ವಿಭಾಗದ ವಿಮರ್ಶನಾ ಸಭೆ ನಡೆದ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ಸಹಾ ಈ ವಿಚಾರ ತರಲಾಯಿತು.

ಈ ಎಲ್ಲ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು, ಕಾನೂನಿನ ಪರಿಮಿತಿಯಲ್ಲಿ ಹೇಗೆ ಸಹಾಯ ಮಾಡಬಹುದೆಂಬ ಬಗ್ಗೆ ಸರ್ಕಾರ ಅಗತ್ಯ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬಹುದು.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಈಗಾಗಲೇ ಇದರ ಬಗ್ಗೆ ಬೆಳಗಾಂನಲ್ಲಿ ನಡೆದಂಥ ರೆವ್ಯೂ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೀರಿ. ಹಾಗೆಯೇ ಕಾರವಾರದಲ್ಲಿ ಮುಖ್ಯ ಮಂತ್ರಿಗಳ ಸಮ್ಮುಖದಲ್ಲಿ ಸಹ ನಮ್ಮ ಗಮನಕ್ಕೆ ತಂದಿದ್ದೀರಿ. ನಾನು ಈಗಾಗಲೇ ಅಧಿಕಾರಿಗಳ ಜೊತೆ ಇದರ ಬಗ್ಗೆ ಸಮಾಲೋಚನೆ ಮಾಡಿದ್ದೇನೆ. ಎಲ್ಲೆಲ್ಲಿ ಆ ರೀತಿ ರೆಕಾರ್ಡ್ಸ್ ಇದೆ ಮತ್ತು ಎಲ್ಲೆಲ್ಲಿ ಆ ಒಂದು ಫಾರ್ಮು ತುಂಬಿ ಕೊಡಲಿಲ್ಲ ಎಂಬುದು ಇದೆ. ಇವೆಲ್ಲವುಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಂಡಿದೆ. ಮತ್ತು ಸರ್ಕಾರ ಇದರ ಬಗ್ಗೆ ತಿದ್ದುಪಡಿ ಮಾಡಿ ಅದನ್ನು ಯಾವ ರೀತಿ ಮಾಡಬೇಕು ಎಂಬ ಬಗ್ಗೆ ನಾವು ವಿಚಾರ ಮಾಡುತ್ತಿದ್ದೇವೆ. ರೈತರಿಗೆ ಇದರಿಂದ ಬಹಳ ಅನಾನುಕೂಲವಾಗುತ್ತಿದೆ ಬಡಜನರಿಗೆ ಸಂಬಂಧಪಟ್ಟಂಥ ಮತ್ತು ರೈತರಿಗೆ ಸಂಬಂಧಪಟ್ಟಂಥ ಈ ವಿಚಾರದ ಬಗ್ಗೆ ನಾವು ಗಮನ ಹರಿಸಿದ್ದೇವೆ.

\+ ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು, ರೈತರ ಈ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಅದನ್ನು ಬಗೆಹರಿಸುತ್ತೇನೆಂದು ಆಶ್ವಾಸನೆಯನ್ನು ಕೊಟ್ಟಿರುವುದಕ್ಕೆ ಬಹಳ ಸಂತೋಷ. ದಿವಂಗತ ದೇವರಾಜ ಅರಸುರವರು ಒಂದು ಕ್ರಾಂತಿಕಾರವಾದ ಮಸೂದೆಯನ್ನು ಈ ರಾಜ್ಯದಲ್ಲಿ 1-3-74ರಲ್ಲಿ ತಂದರು. ರೈತರು 7ನೇ ಫಾರಂನಲ್ಲಿ ಡಿಕ್ಲರೇಷನ್ ಮಾಡಬೇಕಾಗಿತ್ತು. ಅದನ್ನು ಸೆಕ್ಷನ್ 48 (ಬಿ)ನ ಪ್ರಕಾರ ಮಾಡಬೇಕಾಗಿತ್ತು. ಆ ಪ್ರಕಾರ ಹಲವಾರು ಬಡವರು, ನಿರಕ್ಷರಸ್ತರಿಗೆ 7ನೇ ಫಾರಂನಲ್ಲಿ ಡಿಕ್ಲರೇಷನ್ ಕೊಡಲು ಸಾಧ್ಯವಾಗಲಿಲ್ಲ. ಆದ್ದರಿಂದ ಏನಾಗಿದೆ ಎಂದರೆ 1-3-74ರ ಪ್ರಕಾರ ಭೂಮಿಯು ಕಬ್ಜೆದಾರನ ಪರವಾಗಿ ಸರ್ಕಾರದ್ದಾಗಿದೆ. ಪಹಣಿಯಲ್ಲಿ ರೈತರದ್ದಿದೆ. ಇದು ಟ್ರಿಬ್ಯುನಲ್ ಮುಂದೆ ಕೇಸ್ ಆಗಿ ಬರುವುದಿಲ್ಲ. ಏಕೆಂದರೆ ಅವರು ಫಾರಂ ನಂ 7 ನ್ನು ತುಂಬಿಲ್ಲ. ಅವರ ಸದಸ್ಯತ್ವ, ಅಥವಾ ಆರ್ಡಿನರಿ ಟೆನೆಂಟ್ ದಾಖಲೆಯಲ್ಲಿ ದಾಖಲಾಗಿಲ್ಲ. ಈಗ ನಾವು ಏನು ಡಿಕ್ಲರೇಷನ್ ಫಾರಂ 7ನ್ನು ಕೊಡಲು ಸಮಯ ಕೊಟ್ಟಿದ್ದೇವೆ ಅದಕ್ಕೆ ಸಮಯ ಕೊಡಿ ಎಂದು ಕೇಳುತ್ತಿಲ್ಲ. ಏಕೆಂದರೆ ಸಮಯ ಕೊಟ್ಟರೆ ಫ್ಲಡ್‌ಗೇಟ್ಸ್ ಓಪನ್ ಆಗಬಹುದು. ಆದ್ದರಿಂದ ನಾನು ಏನು ಸಲಹೆಯನ್ನು ಕೊಡುತ್ತಿದ್ದೇನೆಂದರೆ ಇವತ್ತು ಯಾರು ನಿಜವಾಗಿ ಫಾರಂ 7 ನ್ನು ತುಂಬಲು ಆಗಿಲ್ಲ ಆದರೆ ಅವರ ಅಸೆಸರ್ ಪಹಣಿಯಲ್ಲಿ ನಮೂದಾಗಿದೆ, ಕಲ್ಟಿವೇಟರ್ಸ್ ಕಾಲಂ, ಆದರೆ ರೈಟ್ ಕಾಲಂನಲ್ಲಿದೆ, ರೊಟೇಷನ್ ಎಂಟ್ರಿ ಇದೆ.

ಅಂತದ ಒಂದು ಪ್ರಕರಣ ಈಗಾಗಲೇ ತಹಸೀಲ್ದಾರ ಮತ್ತು ಅಧಿಕಾರಿಗಳ ಮುಂದಿದೆ. ಜಿಲ್ಲಾಧಿಕಾರಿಗಳು ತಕ್ಷಣ ಅನುಮತಿಯನ್ನು ಕೊಡುವುದಕ್ಕೆ ಸಾಧ್ಯವಿದೆ. ಇದು ಜ್ವಲಂತ ಸಮಸ್ಯೆಯಾಗುತ್ತದೆ. ರೈತರಿಗೆ ಕಷ್ಟವಾಗುತ್ತದೆ. ಹಾಗಾಗಿ ತಾವು ಏನು ಮಾಡುತ್ತೀರಿ ಎಂದು ಹೇಳಿದರೆ ಸಂತೋಷ. ಇದರ ಬಗ್ಗೆ ಟೈಮ್ ಬೌಂಡ್ ಹಾಕಬೇಕು. ಆಗ ತಾವು ಬಡ ರೈತರ ಆಶೀರ್ವಾದಕ್ಕೆ ಪಾತ್ರರಾಗುತ್ತೀರಿ. ಆ ದೃಷ್ಟಿಯಿಂದ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಧರ್ಮಸಿಂಗ್ : ಆಶ್ವಾಸನೆಯನ್ನು ಕೊಟ್ಟಿದ್ದೇವೆ. ಇದರ ಬಗ್ಗೆ ಜಿಲ್ಲಾಧಿಕಾರಿಗಳನ್ನು ಕರೆಯಿಸಿ ಮಾತನಾಡುತ್ತಿದ್ದೇನೆ. ಎಲ್ಲೆಲ್ಲಿ ಈ ತರಹ ಪ್ರಕರಣಗಳು, ಎಷ್ಟು ಇದೆ, ಹೇಗೆ ಇದೆ, ಎನ್ನತಕ್ಕದ್ದು ಅವನ್ನು ನೋಡಿ We will take decision.

+ ಶ್ರೀ ಶಿವಾನಂದ ಹೆಚ್. ಕೌಜಲಗಿ : 1-4-1974ಕ್ಕೆ ಯಾರು ರೈತರು ಇದ್ದಾರೆ ಅವರು ಫಾರಂ-7ರಲ್ಲಿ ಭರ್ತಿ ಮಾಡಿಕೊಡಬೇಕಾಗಿತ್ತು. ಕೆಲವು ಮಂದಿ ಅದೇ ರೀತಿ ಫಾರಂ-7 ಭರ್ತಿ ಮಾಡಿಕೊಟ್ಟರು. ಅದಾದನಂತರ ಏನು ಮಾಡಿದರು. ಆಗ ಟ್ರಿಬ್ಯುನಲ್‌ನವರು Applicants are in possession of the land as owners not as tenants, hence applicantion is rejected. ಎಂದು ಹೇಳಿದರು. Hence application is rejected ಎಂದ ಕೂಡಲೇ ಕರಡುವಿನಲ್ಲಿ ಕರ್ನಾಟಕ ಸರ್ಕಾರವೆಂದು ಇದೆ. Their names are appearing in other rights columns. As well as ವ್ಯವಸಾಯ column ಆದಕಾರಣ the record of rights are not at all been corrected. ತಮ್ಮಲ್ಲಿ ನಾನು ಏನು ಕೇಳಿಕೊಳ್ಳುತ್ತಿದ್ದೇನೆ ಎಂದರೆ ಮೊದಲಿನಿಂದಲೂ not only one or two, the entire village of chachadi. ನವದತ್ತಿ ತಾಲ್ಲೂಕಿನಲ್ಲಿ ಚಚಡಿ ಎಂಬ ಗ್ರಾಮವಿದೆ. ಆ ಹಳ್ಳಿಯಲ್ಲಿ ಪೂರ್ತಿ ಪರಿವರ್ತನಾ ಜಮೀನು ಎಂದು ಆಗಿದೆ. ಮಾನ್ಯ ದೇಶಪಾಂಡೆಯವರು ಏನು ಹೇಳಿದರು. ಅದೇ ಪ್ರಕಾರ ಬೈಲಹೊಂಗಲದ ಅಸಿಸ್ಟೆಂಟ್ ಕಮೀಷನರ್‌ನ್ನು ಕಳುಹಿಸಿ. ಇವೆಲ್ಲಾ ವೆರಿಫೈ ಮಾಡಿ ' record of rights ನಲ್ಲಿ ಏನು ತಪ್ಪಾಗಿದೆ. ಅದನ್ನು ಸರಿ ಮಾಡಿ ಎಂದು ಹೇಳಬೇಕು. ಯಾರು possession ಇದ್ದಾರೆ. their names are appearing...

ಅವರು ಹೇಳಿದ ಹಾಗೆ ಬೋಗಸ್ ಮಾಡುವುದು ಬೇಡ. ಆದುದರಿಂದ ಯಾರು 60-70 ವರ್ಷಗಳಿಂದ ಇದ್ದಾರೆ. ಅವನ್ನು ಟ್ರಿಬ್ಯುನಲ್ ಒಳಗೆ ತೆಗೆದುಕೊಂಡು ನೋಡಿ the lands are in actual possession of the applicant, hence they are rejected, they are not tenants ಎಂದು ಹೇಳುತ್ತಾರೆ.

ನವದತ್ತಿ ತಾಲ್ಲೂಕಿನ ಚಚಡಿ ಗ್ರಾಮದ ಬಗ್ಗೆ ಅಸಿಸ್ಟೆಂಟ್ ಕಮೀಷನರ್ ಮತ್ತು ಡೆಪ್ಯೂಟಿ ಕಮೀಷನರ್‌ಗಳಿಗೆ ವೆರಿಫೈ ಮಾಡುವುದಕ್ಕೆ ಹೇಳಿ, ರೆಕಾರ್ಡ್ ಆಫ್ ರೈಟ್ಸ್ ಕರೆಕ್ಟ್ ಮಾಡಬೇಕು. ಏಕೆಂದರೆ ಅವರು ಏನು ಮಾಡಿದ ಹಾಗಿಲ್ಲ. ಒಂದು ಊರು ಪೂರ್ತಿ ಲುಕ್ಸಾನ್ ಆಗಿದೆ. ಚಚಡಿ ಗ್ರಾಮಕ್ಕೆ ಭೇಟಿ ನೀಡಿದಾಗ ಒಂದು ನಂಬರ್ ಕೊಟ್ಟಿದ್ದಾರೆ. It is my constituency. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ರೆವಿನ್ಯೂ ಮಿನಿಸ್ಟರ್ ಆಗಿದ್ದಾಗ ಸಹಿತ ಇದು ಬೋಗಸ್ ಆಗಿದೆ. ಇದನ್ನು ತನಿಖೆ ಮಾಡಿಸಿ ಎಂದು ಹೇಳಿದೆ. ತಾವು ಇದನ್ನು ತೆಗೆದುಕೊಂಡು ,ಜನರಿಗೆ ಸಾಗುವಳಿ ಮಾಡುವುದಕ್ಕೆ ಸರಿಯಾದ ರೆಕಾರ್ಡ್ ಮಾಡಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಉಪಾಧ್ಯಕ್ಷರೇ, ಈ ವಿಷಯ 3-4 ಸಲ ಈ ಸದನದಲ್ಲಿ ಚರ್ಚೆಯಾಗಿದೆ. ಆದರೆ ಸಚಿವರು ಇದೇ ರೀತಿ ಅದನ್ನು ಸರಿಪಡಿಸುತ್ತೇವೆಂದು ಹೇಳಿ ಯಾವ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಇಲ್ಲಿ ಪ್ರಶ್ನೆಗೆ ಉತ್ತರ ಕೇಳುತ್ತೇವೆ. ಈಗ ಕಾಲಿಂಗ್ ಅಟೆನ್ಷನ್ ಕೇಳಿದ್ದೇವೆ. ಆದರೆ ಯಾವುದೇ ಪರಿಹಾರವಾಗಿಲ್ಲ. ಇದರಿಂದ ಏನು ಸಮಸ್ಯೆ ಉದ್ಭವವಾಗಿದೆ ಎಂದರೆ ಅನೇಕ ವರ್ಷಗಳಿಂದ ಯಾರು ಸಾಗುವಳಿ ಮಾಡಿದ್ದಾರೆ ಅವರು ಫಾರಂ ನಂ. 7ರಲ್ಲಿ

ಅರ್ಜಿ ಕೊಡದಿದ್ದಕ್ಕಾಗಿ ಅವರಿಗೆ ಭೂಮಿ ಪಟ್ಟಾ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಇದನ್ನು ಸರಿಪಡಿಸಬೇಕು. ಅನಂತರ ಯಾರು ಸಾಗುವಳಿ ಮಾಡಿಲ್ಲ ದಾಖಲೆಗಳಲ್ಲಿ ಬೇನಾಮಿ ಎಂದು ಇದ್ದಾವೆ. ಅಲ್ಲಿ ಅವರು ಸಾಗುವಳಿಯನ್ನು ಮಾಡಿಲ್ಲ ಜಮೀನು ಅವರ ಹತ್ತಿರ ಇಲ್ಲ. 50ನೇ ಇಸವಿಯಲ್ಲಿ ಸಾಗು ಮಾಡಿದ್ದಕ್ಕೆ ಇವನು ಸಾಗುವಳಿಗಾರ ಎಂದು ಬರೆದು, ಇಲ್ಲಿಯವರೆಗೆ ಅವನ ಹೆಸರು ಕಡತದಲ್ಲಿ ಇಲ್ಲ. ಅಂಥವರಿಗೆ ಸಾಲ ಸಿಗುವ ಹಾಗೆ ಇಲ್ಲ. ಯಾವ ಬ್ಯಾಂಕಿನಿಂದಲೂ ಸಾಲ ಸೌಲಭ್ಯಗಳು ಸಿಗುವುದಿಲ್ಲ. ಅದನ್ನು ಸರಿಪಡಿಸಬೇಕು. ಮಾನ್ಯ ಸಚಿವರಿಗೆ ಗೊತ್ತಿರಬೇಕು. ಈ ಹಿಂದೆ ಈ ವ್ಯವಸ್ಥೆಗೆ ಸರ್ಕಾರದ ಆಜ್ಞೆ ಇತ್ತು. ಸಾಗುವಳಿ ಕಾಲಂನಲ್ಲಿ ಬೇನಾಮಿ ದಾಖಲೆ ಇವೆ, ರೈತ ಅದನ್ನು ಸಾಗುವಳಿ ಮಾಡುತ್ತಿಲ್ಲ, ನೋಟೀಸ್ ಕೊಟ್ಟು ಅವರ ಜವಾಬು ತೆಗೆದುಕೊಂಡು ಅಂಥವರಿಗೆ ನಾವು ಸಾಗುವಳಿ ಮಾಡಿಲ್ಲವೆಂದು ಹೇಳಿದರೆ ರೆಕಾರ್ಡ್‌ಗಳನ್ನು ದುರಸ್ತಿ ಮಾಡುವುದಕ್ಕೆ ಸರ್ಕಾರದ ಒಂದು ಸುತ್ತೋಲೆ ಇತ್ತು. ಅದನ್ನು ತಾವು ಈಗ ತಡೆಹಿಡಿದ್ದೀರಿ. ಈಗಾಗಲೇ ಸುತ್ತೋಲೆ ಇದೆ. ಇದರಿಂದ ಬಡವರಿಗೆ, ಸಣ್ಣ ಹಿಡುವಳಿದಾರರಿಗೆ, ಇವತ್ತು ನೀರಾವರಿ ಬೋರ್‌ಗಳನ್ನು ಹಾಕಿಸುವುದಕ್ಕೆ ಸಾಧ್ಯವಾಗಿಲ್ಲ. ಬೆಳೆ ಸಾಲ ಸಿಗುವ ಹಾಗಿಲ್ಲ. ಆರ್ಥಿಕ ಸುಧಾರಣೆಗಳು ಅವರಿಗೆ ಯಾವುದೇ ಸಹಾಯ ಸಿಗದಂತಹ ಪರಿಸ್ಥಿತಿಯಾಗಿದೆ. ಇದು ಬಹಳ ವಿಳಂಬವಾಗಿದೆ. ಈಗಲಾದರೂ ಕೂಡಲೇ ಮಾನ್ಯ ಸಚಿವರು ದಾಖಲೆಗಳನ್ನು ಸರಿಪಡಿಸಲಿಕ್ಕೆ ಮೊದಲು ಏನು ಸುತ್ತೋಲೆ ಇತ್ತು, ಬೇನಾಮಿ ದಾಖಲೆಗಳನ್ನು ನಾಮಕಾವಸ್ಥೆ ಖಾತೆಗಳನ್ನು ಸರಿಪಡಿಸಿ ಅವರಿಗೆ ಸಾಲ ಸೌಲಭ್ಯ ಸಿಗುವ ರೀತಿಯಲ್ಲಿ ಕೂಡಲೇ ತಾವು ಏನಾದರೂ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ನಮ್ಮ ಶಿವಾನಂದ ಕೌಜಲಗಿಯವರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಮೊನ್ನೆ ಕೂಡ ನಾನು ಆಶ್ವಾಸನೆ ಕೊಟ್ಟಿದ್ದೇನೆ. ಶೀಘ್ರವಾಗಿ ಒಂದು ವಾರದೊಳಗೆ ನಾನು ಅದನ್ನು ಪರಿಶೀಲಿಸುತ್ತೇನೆ.

ಉಪಾಧ್ಯಕ್ಷರು : ಈಗ 1994-95ನೇ ವಿತ್ತೀಯ ಕಾರ್ಯಕಲಾಪಗಳು

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷರೆ, ನಾವು ಕೆಲವು ನಿಯಮಗಳನ್ನು ಹಾಕಿಕೊಂಡಿದ್ದೇವೆ. ಶುಕ್ರವಾರ ಪ್ರೈವೇಟ್ ಮೆಂಬರ್ ಡಿಸ್‌ಕಷನ್ಸ್ ಎಂದು ಇದೆ. ಆ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ತಮಗೂ ಅಧಿಕಾರ ಇಲ್ಲ. ಇದರಿಂದ ತಾವು ತಪ್ಪು ತಿಳಿದುಕೊಳ್ಳಬೇಡಿ. The House has to go according to the rules. ಆದುದರಿಂದ ನಮ್ಮ ಬಿಸಿನೆಸ್ ರೂಲ್ಸ್ ಪ್ರಕಾರ......

ಉಪಾಧ್ಯಕ್ಷರು : ಇದು ಆದಮೇಲೆ ಖಾಸಗಿ ನಿರ್ಣಯ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇದು ಆದಮೇಲೆ ಅಲ್ಲ. ಖಾಸಗಿ ನಿರ್ಣಯಗಳ ಹಾಲಿ ಚರ್ಚೆಗೆ... we have to spend $2\frac{1}{2}$ hours, So, even the Chair or the House cannot take away the right of the Member....

ಉಪಾಧ್ಯಕ್ಷರು : ಇದಾದಮೇಲೆ ಅದನ್ನೇ ತೆಗೆದುಕೊಳ್ಳುತ್ತೇವೆ. ಅಜೆಂಡಾ ಪ್ರಕಾರ ಆ ತರಹ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಹಾಗೆ ಆಗುವುದಿಲ್ಲ ಅದು. ಅಜೆಂಡಾ ಪ್ರಕಾರ ಎಂದು ಹೇಳಿದರೆ ಈಗಾಗಲೇ ನಾವು ಎರಡೂವರೆ ಗಂಟೆ ಕಳೆದಿದ್ದೇವೆ. ಇವತ್ತು ಖಾಸಗೀ ನಿರ್ಣಯದ ದಿವಸ .ಸಾಧಾರಣವಾಗಿ ಅಫಿಷಿಯಲ್ ಬಿಸಿನೆಸ್ ಹಾಕುವುದಿಲ್ಲ. ನೀವು ಹಾಕಿದ್ದೀರಿ. ಈಗ ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಕಳೆದ ಸಾರಿಯೂ ಕೂಡ ಈ ಪ್ರಶ್ನೆ ಬಂದಿತ್ತು. ಹೊಂದಾಣಿಕೆ ಬೇರೆ. ಆದರೆ ಖಾಸಗಿ ನಿರ್ಣಯಕ್ಕೆ

ನಿಗಧಿಯಾದಂತಹ ಈ ದಿವಸವನ್ನು ಆ ಕಲಾಪವನ್ನು ಬೇರೆ ಕಲಾಪಕ್ಕಾಗಿ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಇದರಲ್ಲಿ Even the chair or the House can not take away the rights of the members.

ಉಪಾಧ್ಯಕ್ಷರು : ತಾವು ಗಮನಿಸಬೇಕು. ಇದರಲ್ಲಿ ಛೇರ್‌ಆಗಲಿ, ಅಥವಾ ಹೌಸ್ ಆಗಲಿ ನಿಮ್ಮ ರೈಟ್ಸ್ ಯಾವುದನ್ನೂ ತೆಗೆದುಕೊಳ್ಳುವುದಕ್ಕೆ ಹೋಗುತ್ತಿಲ್ಲ. ಇದು ವಿತ್ತೀಯ ಕಲಾಪ ಆದಮೇಲೆ ಮುಂದೆ ತೆಗೆದುಕೊಳ್ಳುತ್ತಿರುವುದು ಇದನ್ನು ಕೊನೆಯಲ್ಲಿ ತೆಗೆದುಕೊಂಡು ನಿಮಗೆ ಕಾಲವಕಾಶ ಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಿನ್ನೆ ದಿವಸ ಚರ್ಚೆಯಾದದ್ದು ಇದು ಕ್ಲಿಯರ್ ಅಂಡರ್‌ಸ್ಟಾಡಿಂಗ್ ಇವತ್ತು 12 ಗಂಟೆಗೆ ಸಭೆ ಸೇರತಕ್ಕಂಥಾದ್ದು ಮತ್ತು ಈ ಚರ್ಚೆಯನ್ನು ಮುಗಿಸಿ ಖಾಸಗಿ ನಿರ್ಣಯವನ್ನು ಕೈಗೊಳ್ಳುವುದು. ತಮಗೆ ಗೊತ್ತಿಲ್ಲ with clear understanding the Leader of the Opposition and other Leaders have agreed to.. ಹೇಳದೇ ಕೇಳದೆ ಡಿಮ್ಯಾಂಡ್ಸ್ ತೆಗೆದುಕೊಂಡರೆ ಹೇಗೆ none of us are ready to discuss on any one of the demands...

ಶ್ರೀ ಆರ್.ವಿ. ದೇಶಪಾಂಡೆ : ಈ ಬಿಸಿನೆಸ್ ಅಡ್ವೈಸರಿಯಲ್ಲಿ ಏನು ಡಿಸ್‌ಕಷನ್ ಆಗಿತ್ತು ಎಂದರೆ ನೀವು ಇವತ್ತು ಡಿಮ್ಯಾಂಡ್ ತೆಗೆದುಕೊಳ್ಳುತ್ತೇವೆ ಎಂದು ಹೇಳಿದಿರಿ ಅದಕ್ಕೆ ನಾನು ಹೇಳಿದೆ ಅದು ಇಷ್ಟು ಬೇಗ ಸಾಧ್ಯವಾಗುವುದಿಲ್ಲ. ಏಕೆಂದರೆ ಈದ್ರಾ, ಫ್ಲಡ್ಸ್ ಸಮಸ್ಯೆಗಳು ಇದ್ದು ಅದನ್ನು ಚರ್ಚೆ ಮಾಡಬೇಕು ಎಂದು ಹೇಳಿದಾಗ ಮಾನ್ಯ ಚಂದ್ರೇಗೌಡರು ಒಂದು ಸಲಹೆ ಮಾಡಿದರು. ಬೇಕಾದರೆ ಸರ್ಕಾರದವರು ಒಂದು ಸ್ಟೇಟ್‌ಮೆಂಟ್ ಮಾಡಲಿ.

ಅವರು ಸ್ಟೇಟ್‌ಮೆಂಟ್ ಮಾಡುವುದಿದ್ದರೆ ಸ್ಟೇಟ್‌ಮೆಂಟ್ ಮಾಡಲಿ ಅದರ ಬಗ್ಗೆ ನಾವು ಚರ್ಚೆ ಮಾಡುವುದಕ್ಕೆ ಸಾಧ್ಯ ಇದೆ. ತಾವು ಹೇಳಿದ ಹಾಗೆ ಇವತ್ತು ಶುಕ್ರವಾರ ಇವತ್ತು ನಾವು ಇರುವುದು 5 ಜನ. ಏನು ನಿರ್ಣಯಗಳು ಇದೆ ಅದರ ಬಗ್ಗೆ ಕಾಯ್ದಿಟ್ಟ ದಿನ ಇದು. ಬೇರೆ ದಿನವನ್ನು ಇಡುವುದಕ್ಕಾಗುವುದಲ್ಲ ಹಾಗಾಗಿ ಇವತ್ತು ನಮಗೆ ಕಾರ್ಯಕಲಾಪಗಳಲ್ಲಿ ಅಡ್ಡಿ ಬರುವ ಇಚ್ಛೆ ಇಲ್ಲ. ನಾನು ತಮಗೆ ಏನು ವಿನಂತಿ ಮಾಡುತ್ತೇನೆ ಅಂದರೆ ಬೇಕಾದರೆ ಅವರ ಸಪ್ಲಿಮೆಂಟರಿ ಎಸ್ಟಿಮೇಟನ್ನು ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ ನಾವು ಯಾವ ಡಿಮ್ಯಾಂಡ್ ಮೇಲೂ ರೆಡಿಯಾಗಿ ಬಂದಿಲ್ಲ ಇವತ್ತು ಡಿಮ್ಯಾಂಡ್ ಬರುತ್ತದೆ ಎಂದು ಗೊತ್ತಿಲ್ಲ. ಹಾಗಾಗಿ ಮೊದಲು ತಾವು ಖಾಸಗಿ ಸದಸ್ಯರ ಡಿಮ್ಯಾಂಡ್ ಏನಿದೆ ಅದನ್ನು ತೆಗೆದುಕೊಳ್ಳಿ ಅದಾದನಂತರ ಬೇಕಾದರೆ ತಾವು ಬೇರೆ ವಿಚಾರವನ್ನು ತೆಗೆದುಕೊಳ್ಳಿ.

ಮಂತ್ರಿಗಳಿಂದ ಹೇಳಿಕೆ

ರಾಜ್ಯದಲ್ಲಿನ 1994ರ ಜೂನ್-ಜುಲೈ ತಿಂಗಳಿನ ಭಾರಿ ಮಳೆ ಪ್ರವಾಹ ಹಾಗೂ ಕೆಲವು ಭಾಗಗಳ ಬರ ಪರಿಸ್ಥಿತಿ ವಿಚಾರಗಳ ಬಗ್ಗೆ

+ ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ..

ಪ್ರಸ್ತುತ ದಶಕದಲ್ಲಿ ಸತತವಾಗಿ 4ನೇ ವರ್ಷ ಪ್ರಕೃತಿಯು ಕರ್ನಾಟಕದ ಮೇಲೆ ಮುನಿಸು ತೋರಿದೆ. ರಾಜ್ಯವು ಪ್ರವಾಹ ಹಾಗೂ ಬರ ಪರಿಸ್ಥಿತಿಯನ್ನು ಒಮ್ಮೆಗೆ ಎದುರಿಸುತ್ತಿದೆ.

1. ಜೂನ್ - ಜುಲೈ 1994ರ ಭಾರಿ ಮಳೆ ಮತ್ತು ಪ್ರವಾಹ :

ಮುಂಗಾರು ಮಳೆಯು ಪ್ರಸ್ತುತ ವರ್ಷ ಸಕಾಲದಲ್ಲಿ ಪ್ರಾರಂಭವಾಯಿತು. ಆದರೆ, ಇದು ಅಸಮರ್ಪಕವಾಗಿತ್ತು. ಕರಾವಳಿ ಮತ್ತು ಪಶ್ಚಿಮ ಘಟ್ಟದ ಜಿಲ್ಲೆಗಳಲ್ಲಿ ಮಳೆಯು

ಅತ್ಯುಘ್ರವಾಗಿತ್ತು. ದಕ್ಷಿಣ ಒಳನಾಡಿನ ಕೆಲವು ಭಾಗಗಳಲ್ಲಿ ಮತ್ತು ಉತ್ತರ ಒಳನಾಡಿನಲ್ಲಿ ಮಳೆ ಕಡಿಮೆಯಾಗಿತ್ತು.

1994ರ ಆಗಸ್ಟ್ 24ರವರೆಗೆ, ರಾಜ್ಯದ 10 ಜಿಲ್ಲೆಗಳಾದ ಬೆಳಗಾವಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಧಾರವಾಡ, ಹಾಸನ, ಕೊಡಗು, ಕೋಲಾರ, ಮೈಸೂರು, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದ ತೀವ್ರ ತೊಂದರೆ ಉಂಟಾಗಿದ್ದರೆ, ಉಳಿದ 6 ಜಿಲ್ಲೆಗಳಲ್ಲಿ ಬಳ್ಳಾರಿ, ಬಿಜಾಪುರ, ಚಿತ್ರದುರ್ಗ, ಗುಲ್ಬರ್ಗಾ, ಮಂಡ್ಯ ಮತ್ತು ರಾಯಚೂರು ಮೇಲ್ಭಾಗದ ಅಣೆಕಟ್ಟುಗಳಿಂದ ಹೊರಬಿಟ್ಟ ನೀರಿನಿಂದ ತೊಂದರೆಯುಂಟಾಯಿತು.

1994ರ ಆಗಸ್ಟ್ 12ರ ವರೆಗೆ, ರಾಜ್ಯದಲ್ಲಿ ಮುಂಗಾರು ಮಳೆ 71 ಮಾನವ ಪ್ರಾಣಗಳನ್ನು ಹಾಗೂ 2768 ಜಾನುವಾರುಗಳನ್ನು ಬಲಿ ತೆಗೆದುಕೊಂಡಿರುತ್ತದೆ. ತೊಂಭತ್ತೆರೆಡು ಮಂದಿ ಗಾಯಗೊಂಡಿರುತ್ತಾರೆ, 4124 ಮನೆಗಳು ಪೂರ್ಣವಾಗಿ ಮತ್ತು 37874 ಮನೆಗಳು ಭಾಗಶಃ ಹಾನಿಯಾಗಿವೆ, 2695 ನೀರಾವರಿ ಪಂಪ್‌ಸೆಟ್ಟುಗಳು ಮತ್ತು 124 ನೀರಾವರಿ ಭಾವಿಗಳು ಹಾನಿಗೊಂಡಿವೆ, 1,57,482 ಹೆಕ್ಟೇರ್ ಪ್ರದೇಶದಲ್ಲಿನ ಕೃಷಿಬೆಳೆ ಹಾನಿಗೊಂಡಿರುತ್ತದೆ. ಖಾಸಗಿ ಆಸ್ತಿ-ಪಾಸ್ತಿಗಳ ಒಟ್ಟು ಹಾನಿಯನ್ನು ರೂ. 78.95 ಕೋಟಿಗಳೆಂದು ಅಂದಾಜು ಮಾಡಲಾಗಿದೆ.

2466ಕ್ಕೂ ಮೇಲ್ಪಟ್ಟು ಸಾರ್ವಜನಿಕ ಕಟ್ಟಡಗಳು, 1027 ಸೇತುವೆಗಳು, 1535 ಸಣ್ಣ ನೀರಾವರಿ ಕೆರೆಗಳು ಮತ್ತು 161 ನೀರಾವರಿ ಕಾಲುವೆಗಳು ಹಾನಿಗೊಂಡಿವೆ, 2243 ಕಿ.ಮೀ. ನಷ್ಟ ಸಾರ್ವಜನಿಕ ರಸ್ತೆಗಳು ಹಾಗೂ 2760 ತುಂಡು ರಸ್ತೆಗಳೂ ಸಹ ಹಾನಿಗೊಂಡಿವೆ. ಅಲ್ಲದೇ, ಸಮುದ್ರ ಕೊರೆತದಿಂದ ರೂ. 5.30 ಕೋಟಿಗಳಷ್ಟು ಹಾನಿಯಾಗಿರುತ್ತದೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಆಸ್ತಿ-ಪಾಸ್ತಿಗಳಿಗೆ ರೂ. 6.16 ಕೋಟಿಗಳಷ್ಟು ಹಾನಿ ಉಂಟಾಗಿರುತ್ತದೆ. ಒಟ್ಟಾರೆ ಸಾರ್ವಜನಿಕ ಆಸ್ತಿಪಾಸ್ತಿಗಳ ಹಾನಿಯನ್ನು ರೂ. 87.51 ಕೋಟಿಗಳೆಂದು ಅಂದಾಜಿಸಲಾಗಿದೆ.

1994ರ ಆಗಸ್ಟ್ 12ರವರೆಗೆ, ಅಂದಾಜಿಸಿರುವಂತೆ ಒಟ್ಟಾರೆ ಖಾಸಗಿ ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಳ ಹಾನಿ ರೂ. 166.47 ಕೋಟಿಗಳಾಗಿರುತ್ತವೆ.

ಕೈಗೊಂಡ ರಕ್ಷಣೆ ಹಾಗೂ ಪರಿಹಾರ ಕಾರ್ಯಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

ಕ್ರ. ಸಂ.	ಜಿಲ್ಲೆಯ ಹೆಸರು	ಮುಳುಗಡೆಯಾದ ಗ್ರಾಮಗಳು	ತೊಡಗಿಸಿದ್ದ ದೋಣಿಗಳು ಎಂಇಜಿ	ಸ್ಥಳೀಯ	ಪ್ರಾರಂಭಿಸಿದ್ದ ಗಂಜೀಕೇಂದ್ರ ಪರಿಹಾರ ಕೇಂದ್ರಗಳು	ಪರಿಹಾರ ಕೇಂದ್ರಗಳಲ್ಲಿದ್ದ ಸಂತ್ರಸ್ಥರು
1.	ದಕ್ಷಿಣ ಕನ್ನಡ	159 (ಭಾಗಶಃ)	-	54	22	2831
2.	ಕೊಡಗು	20	3	4	16	4500
3.	ಹಾಸನ	6	-	4	2	53
4.	ಮೈಸೂರು	9	3	8	8	6007
5.	ಶಿವಮೊಗ್ಗ	25	-	2	32	7820
6.	ಬೆಳಗಾವಿ	39	-	5	25	10042
7.	ಉತ್ತರ ಕನ್ನಡ	9	-	2	4	900
8.	ಧಾರವಾಡ	33	4	2	31	8804
9.	ಚಿಕ್ಕಮಗಳೂರು	6	3	-	6	1500

10.	ಬಿಜಾಪುರ	34	4	2	23	18642
11.	ಚಿತ್ರದುರ್ಗ	7	-	-	6	2715
	ಒಟ್ಟು	347	17	83	175	63814

ರಾಜ್ಯ ಸರ್ಕಾರ ದಿನಾಂಕ 8.6.1994ರಿಂದ 23.8.1994ರವರೆಗೆ ಪ್ರವಾಹ ಪರಿಸ್ಥಿತಿಯನ್ನು ಎದುರಿಸಲು ಕೆಳಕಂಡ ಜಿಲ್ಲೆಗಳಿಗೆ ರೂ. 1015.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.

	ಜಿಲ್ಲೆಯ ಹೆಸರು	ರೂ. ಲಕ್ಷಗಳಲ್ಲಿ
1.	ದಕ್ಷಿಣ ಕನ್ನಡ	160.00
2.	ಉತ್ತರ ಕನ್ನಡ	80.00
3.	ಕೊಡಗು	70.00
4.	ಶಿವಮೊಗ್ಗ	80.00
5.	ಮೈಸೂರು	40.00
6.	ಚಿಕ್ಕಮಗಳೂರು	95.00
7.	ಹಾಸನ	60.00
8.	ಬಿಜಾಪುರ	25.00
9.	ತುಮಕೂರು	5.00
10.	ಕೋಲಾರ	10.00
11.	ಬೆಳಗಾವಿ	80.00
12.	ಧಾರವಾಡ	285.00
13.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಪ್ರವಾಹ ಪೀಡಿತ ಜಿಲ್ಲೆಗಳಲ್ಲಿ ಆರೋಗ್ಯ ರಕ್ಷಣೆಗೆ	25.00
	ಒಟ್ಟು	1015.00

ಮುಂಗಾರಿನಿಂದ ರಾಜ್ಯದಲ್ಲಿ ಉಂಟಾದ ಪರಿಸ್ಥಿತಿಯ ವೀಕ್ಷಣೆಗಾಗಿ ಮಾನ್ಯ ಪ್ರಧಾನ ಮಂತ್ರಿಗಳು ಮಾನ್ಯ ರಕ್ಷಣಾ ಖಾತೆ ರಾಜ್ಯ ಸಚಿವರಾದ ಶ್ರೀ ಮಲ್ಲಿಕಾರ್ಜುನರವನ್ನು ವೈಯಕ್ತಿಕ ಪ್ರತಿನಿಧಿಯಾಗಿ ಕಳುಹಿಸಿದ್ದು; ಶ್ರೀ ಮಲ್ಲಿಕಾರ್ಜುನ್‌ರವರು ದಿನಾಂಕ ೨೦ ಮತ್ತು 21ನೇ ಜುಲೈ, 1994ರಂದು ಮಾನ್ಯ ಮುಖ್ಯಮಂತ್ರಿಯವರು, ನಾನು ಮತ್ತು ಅಧಿಕಾರಿಗಳೊಂದಿಗೆ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಪ್ರವಾಸ ಕೈಗೊಂಡಿರುತ್ತಾರೆ. 1994ರ ಜುಲೈ 24ರ ಸಂಜೆ, ಶ್ರೀ ಮಲ್ಲಿಕಾರ್ಜುನ್‌ರವರು ಬೆಂಗಳೂರಿನಲ್ಲಿ ಸಭೆಯೊಂದನ್ನು ಇಟ್ಟುಕೊಂಡಿದ್ದರು. ಶ್ರೀ ಸಿ.ಕೆ. ಜಾಫರ್ ಶರೀಫ್, ಮಾನ್ಯ ಕೇಂದ್ರ ರೈಲ್ವೆ ಮಂತ್ರಿಗಳೂ ಸಹ ಈ ಸಭೆಯಲ್ಲಿ ಹಾಜರಿದ್ದರು.

ರಾಜ್ಯ ಸರ್ಕಾರ ಶ್ರೀ ಮಲ್ಲಿಕಾರ್ಜುನ್‌ರವರಿಗೆ ಭಾರಿ ಮಳೆ : ಪ್ರವಾಹದಿಂದ ಆದ ಹಾನಿಯ ಬಗ್ಗೆ ವರದಿಯನ್ನು ಸಲ್ಲಿಸಿತು. ಇದರ ಹಿಂದೆಯೇ, ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಪ್ರಧಾನ ಮಂತ್ರಿಯವರಿಗೆ, ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ರೂ. 100.00 ಕೋಟಿಗಳ ಕೇಂದ್ರದ ನೆರವು ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ.

2. ಬರ ಪರಿಸ್ಥಿತಿ :

ರಾಜ್ಯದ 12 ಜಿಲ್ಲೆಗಳಲ್ಲಿನ 72 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿಯ ಛಾಯೆ ಕಂಡು ಬಂದಿದೆ. ಜಿಲ್ಲೆಯ ಕೆಲವು ಭಾಗ ಭಾರಿ ಮಳೆ : ಪ್ರವಾಹವನ್ನು ಕಂಡಿದ್ದರೆ, ಅದೇ ಜಿಲ್ಲೆಯ ಉಳಿದ ಕೆಲವು ಭಾಗ ಬರದ ಸ್ಥಿತಿಯಲ್ಲಿರುವುದು ಒಂದು ವಿರೋಧಾಭಾಸವಾಗಿದೆ.

ಬಹಳಷ್ಟು ಅಭಾವ ಪೀಡಿತ ತಾಲ್ಲೂಕುಗಳಲ್ಲಿ ಜೂನ್ - 1994ರ ಮುಂಗಾರು ಮಳೆಯ ಪ್ರಾರಂಭದಿಂದಲೂ ದೀರ್ಘ ಒಣ ಹವೆಯಿದೆ.

ಬೆಂಗಳೂರು (ಗ್ರಾಮಾಂತರ), ಬಳ್ಳಾರಿ, ಬೀದರ್ ಬಿಜಾಪುರ, ಚಿತ್ರದುರ್ಗ, ಧಾರವಾಡ, ಗುಲ್ಬರ್ಗಾ, ಕೋಲಾರ, ಮಂಡ್ಯ, ರಾಯಚೂರು ಮತ್ತು ತುಮಕೂರು ಜಿಲ್ಲೆಗಳ ಬಹಳಷ್ಟು ತಾಲ್ಲೂಕುಗಳಲ್ಲಿ ದೀರ್ಘ ಒಣಹವೆಯಿಂದಾಗಿ ಖಾರೀಫ್ ಬೆಳೆಯ ಬಿತ್ತನೆ ಕುಂಠಿತವಾಗಿರುತ್ತದೆ.

ಅಭಾವ ಪೀಡಿತ 72 ತಾಲ್ಲೂಕುಗಳ ಸಾಮಾನ್ಯ ಬಿತ್ತನೆ ಕ್ಷೇತ್ರವಾದ 43.28 ಲಕ್ಷ ಹೆಕ್ಟೇರ್ ಪ್ರದೇಶಗಳ ಪೈಕಿ, ಕೇವಲ 24.76 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ. ಮಳೆಯ ಕೊರತೆಯಿಂದಾಗಿ ಬಹಳಷ್ಟು ಪ್ರದೇಶಗಳಲ್ಲಿ ಬಿತ್ತನೆ ಕಾರ್ಯ ನಡೆದಿರುವುದಿಲ್ಲ. ಒಟ್ಟಾರೆ ಶೇಕಡಾ 57.21 ಭಾಗಗಳಲ್ಲಿ ಬಿತ್ತನೆಯಾಗಿರುತ್ತದೆ. ಅಲ್ಲದೇ, ಬಿತ್ತಿರುವ ಕ್ಷೇತ್ರಗಳ ಪೈಕಿಯೂ 8.68 ಲಕ್ಷ ಹೆಕ್ಟೇರ್ ಪ್ರದೇಶ ತೊಂದರೆಗೊಳಗಾಗಿದ್ದು; ಹಾನಿಯ ಪ್ರಮಾಣ ಶೇಕಡಾ 35.06 ಆಗಿರುತ್ತದೆ. ಮಳೆಯ ಅಭಾವದಿಂದ ಬೆಂಗಳೂರು (ಗ್ರಾ), ಬಿಜಾಪುರ, ಗುಲ್ಬರ್ಗಾ, ಕೋಲಾರ, ರಾಯಚೂರು ಮತ್ತು ತುಮಕೂರು ಜಿಲ್ಲೆಗಳ ಕೆಲವು ತಾಲ್ಲೂಕುಗಳಲ್ಲಿ ಬೆಳೆ ಒಣಗುತ್ತಿದೆ. ಬಾಧಿತ ಬಿತ್ತನೆ ಕ್ಷೇತ್ರ ಹಾಗೂ ಬಿತ್ತದಿರುವ ಪ್ರದೇಶಗಳೆರಡೂ ಸೇರಿದಲ್ಲಿ, ಒಟ್ಟಾರೆ 27.20 ಲಕ್ಷ ಹೆಕ್ಟೇರ್‌ಗಳು ಬಾಧಿತವಾಗಿದ್ದು, ಶೇಕಡಾವಾರು 62.85 ಪ್ರಮಾಣವಾಗಿರುತ್ತದೆ. ರೂ. 205.97 ಕೋಟಿಗಳಷ್ಟು ಹಾನಿಯಾಗಿರುವುದಾಗಿ ಅಂದಾಜಿಸಲಾಗಿದೆ.

ಬೆಂಗಳೂರು (ಗ್ರಾಮಾಂತರ), ಬಳ್ಳಾರಿ, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳ ಕೆಲವು ತಾಲ್ಲೂಕುಗಳಲ್ಲಿ ಸತತವಾಗಿ ಮಳೆ ಬಾರದಿರುವುದರಿಂದ ಹಾಗೂ ಭೂಮಿಯ ಮೇಲ್ಭಾಗದ ಮತ್ತು ಒಳಭಾಗದ ನೀರಿನ ನೆಲೆ ಕಡಿಮೆಯಾಗಿರುವುದರಿಂದ, ಕುಡಿಯುವ ನೀರು ದೊರಕುವುದು ದುರ್ಬಲವಾಗುತ್ತಿದೆ.

ಪ್ರಬಲವಾಗುತ್ತಿರುವ ಬರದ ಪರಿಸ್ಥಿತಿಯಿಂದ 22.64 ಲಕ್ಷ ಜಾನುವಾರುಗಳು ತೊಂದರೆಗೊಳಗಾಗಿವೆ. ಪ್ರಚಲಿತ ಜಾರಿಯಲ್ಲಿರುವ ಉದ್ಯೋಗ ಸೃಜಿಸುವ ಕಾರ್ಯಕ್ರಮಗಳಾದ ಜವಹಾರ್ ರೋಜಗಾರ್ ಯೋಜನೆ, ಎನ್‌ಆರ್‌ವೈ, ಡಿಪಿಎಪಿ; ಇತರೆ ಕಾಮಗಾರಿಗಳನ್ನು ತ್ವರಿತ ಗೊಳಿಸಲಾಗಿದೆ. ಉದ್ಯೋಗವಿಲ್ಲದ ಎಲ್ಲಾ ಕೃಷಿ ಕಾರ್ಮಿಕರನ್ನು ಈ ಯೋಜನೆಗಳಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಿಲ್ಲದಿದ್ದಲ್ಲಿ, ಜಿಲ್ಲಾಧಿಕಾರಿಗಳು ಪ್ರಕೃತಿ ವಿಕೋಪ ಪರಿಹಾರ ನಿಧಿ ಅಡಿಯಲ್ಲಿ ಉದ್ಯೋಗ ಸೃಜನೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಿದ್ದಾರೆ. ಈ ನಿಟ್ಟಿನಲ್ಲಿ ಪ್ರತಿ ಜಿಲ್ಲೆಯಲ್ಲಿಯೂ ಕಾರ್ಯಯೋಜನೆಯನ್ನು ತಯಾರಿಸಲಾಗಿದೆ.

ಬರ ಪರಿಹಾರ ಕಾರ್ಯಗಳಿಗಾಗಿ ದಿನಾಂಕ 1.4.1994ರಿಂದ 23.8.1994ರವರೆಗೆ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಿದೆ

	ಜಿಲ್ಲೆಯ ಹೆಸರು	ರೂ. ಲಕ್ಷಗಳಲಿ
1.	ಬೆಂಗಳೂರು (ನಗರ)	10.00
2.	ಬೆಂಗಳೂರು (ಗ್ರಾಮಾಂತರ)	20.00
3.	ಕೋಲಾರ	35.00
4.	ತುಮಕೂರು	45.00
5.	ಚಿತ್ರದುರ್ಗ	15.00
6.	ಶಿವಮೊಗ್ಗ	15.00
7.	ಮೈಸೂರು	30.00
8.	ಮಂಡ್ಯ	15.00
9.	ಚಿಕ್ಕಮಗಳೂರು	15.00

10.	ಹಾಸನ	25.00
11.	ಕೊಡಗು	5.00
12.	ದಕ್ಷಿಣ ಕನ್ನಡ	20.00
13.	ಗುಲ್ಬರ್ಗಾ	85.00
14.	ಬೀದರ್	70.00
15.	ರಾಯಚೂರು	85.00
16.	ಬಳ್ಳಾರಿ	50.00
17.	ಬೆಳಗಾವಿ	50.00
18.	ಬಿಜಾಪುರ	80.00
19.	ಉತ್ತರ ಕನ್ನಡ	10.00
	ಒಟ್ಟು	680.00

ರಾಜ್ಯ ಸರ್ಕಾರವು ಪ್ರವಾಹ ಮತ್ತು ಬರ ಪರಿಹಾರ ಕಾರ್ಯಗಳಿಗಾಗಿ ಕೇಂದ್ರದಿಂದ ಆರ್ಥಿಕ ನೆರವು ಕೋರುವ ವಿವರವಾದ ಮನವಿಪತ್ರವನ್ನು ತಯಾರಿಸುತ್ತಿದ್ದು ಭಾರತ ಸರ್ಕಾರಕ್ಕೆ ಶೀಘ್ರದಲ್ಲಿಯೇ ಸಲ್ಲಿಸಲಾಗುವುದು.

ದಿನಾಂಕ 23.7.94 ಮತ್ತು ಪುನಃ 5.8.94, ಹೀಗೆ ಎರಡು ಬಾರಿ ವಿರೋಧ ಪಕ್ಷಗಳ ನಾಯಕರೊಂದಿಗೆ ಸಮಾಲೋಚಿಸಿರುತ್ತಾರೆ.

ಎಲ್ಲಾ ನೊಂದ ಸಂತ್ರಸ್ಥರಿಗೂ ತುರ್ತು ಪರಿಹಾರವನ್ನು ಒದಗಿಸಲಾಗಿದೆ. ಕೆಲವು ಸಮಯದಲ್ಲಿ, ಖಾಸಗಿ ಆಸ್ತಿಪಾಸ್ತಿಗಳ ಹಾನಿಗೆ ನೀಡಬೇಕಾಗಿರುವ ಪರಿಹಾರವನ್ನು ಪೂರ್ಣವಾಗಿ ವಿತರಿಸಲಾಗುವುದು. ಎಲ್ಲಾ ಅತ್ಯಗತ್ಯ ಸಾರ್ವಜನಿಕ ಆಸ್ತಿಗಳನ್ನು ತಕ್ಷಣ ದುರಸ್ಥಿಗೊಳಿಸಲಾಗುವುದು. ಪ್ರವಾಹ ಮತ್ತು ಬರದಿಂದ ನೊಂದ ಸಂತ್ರಸ್ಥರನ್ನು ಉಪಶಮನಗೊಳಿಸಲು ನಾವು ಶಕ್ತಿಮೀರಿ ಪ್ರಯತ್ನಿಸುತ್ತೇವೆ ಹಾಗೂ ಶೀಘ್ರವಾಗಿ ಬಾಧಿತ ಪ್ರದೇಶಗಳಲ್ಲಿ ಸಾಮಾನ್ಯ ಸ್ಥಿತಿ ಮರಳಲು ಯತ್ನಿಸುತ್ತೇವೆ.

ಉಪಾಧ್ಯಕ್ಷರು : ಈಗ ಖಾಸಗಿ ಸದಸ್ಯರ ನಿರ್ಣಯ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಕಂದಾಯ ಸಚಿವರು ಏನು ಸ್ಟೇಟ್‌ಮೆಂಟ್ ಮಾಡಿದರು ಅದರ ಮೇಲೆ ಚರ್ಚೆ ಆಗಬೇಕಲ್ಲ. ಅದಕ್ಕೆ ಬಹಳ ಸಮಯ ಬೇಕಾಗುತ್ತದೆ. ನಿನ್ನೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಅಂಡರ್‌ಸ್ಟ್ಯಾಂಡಿಂಗ್ ಏನಾಗಿತ್ತು ಅಂದರೆ, ಸರ್ಕಾರದವರು ಏನು ಸ್ಟೇಟ್‌ಮೆಂಟ್ ಮಾಡುತ್ತಾರೆ. ಅದರ ಮೇಲೆ ಚರ್ಚೆ ಮಾಡಬೇಕು ಎಂದು. ಈ ಮುಂಜಾನೆ ಅಸೆಂಬ್ಲಿ ಬೇಡ, ಫಂಕ್ಷನ್ ಇದೆ 12 ಕ್ಕೆ ಸೇರೋಣ ಎಂದು ಆಯಿತು. ಈಗ ಸದನದಲ್ಲಿ 15 ಜನ ಸದಸ್ಯರು ಇಲ್ಲ. ಹೀಗಿರುವಾಗ ನನ್ನ ಮಾತು ಯಾರು ಕೇಳಬೇಕು? ನಾನು ಏನು ಸಲಹೆ ಮಾಡುತ್ತಿದ್ದೇನೆಂದರೆ, ಕಂದಾಯ ಸಚಿವರು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಕೆಲವು ಇವೆ, ಅವುಗಳನ್ನು ಮೂವ್ ಮಾಡಿಕೊಳ್ಳಲಿ. ಅದರ ಜೊತೆಗೆ ಖಾಸಗಿ ಸದಸ್ಯರ ನಿರ್ಣಯ ಇರುವುದರಿಂದ ಮಾನ್ಯ ವಾಟಾಳ್ ನಾಗರಾಜ್ ಅವರು ಬಂದರೆ ಮಾತನಾಡುತ್ತಾರೆ. ಸೋಮವಾರ ಪ್ರಶ್ನೋತ್ತರ ಆದಮೇಲೆ ಮಾನ್ಯ ಕಂದಾಯ ಸಚಿವರು ಏನು ಸ್ಟೇಟ್‌ಮೆಂಟ್ ಮಾಡಿದ್ದಾರೆ ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ವಿತ್ತೀಯ ಕಾರ್ಯಕಲಾಪಗಳು

1994-95ನೇ ಸಾಲಿನ ಬೇಡಿಕೆಗಳ ಮಂಡನೆ ಮತಕ್ಕೆ ಹಾಕುವುದು

ಉಪಾಧ್ಯಕ್ಷರು : ಈಗ ಬೇಡಿಕೆಗಳನ್ನು ಮಂಡಿಸುವುದು, ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು.

1994-95ನೇ ಸಾಲಿನ ಬೇಡಿಕೆಗಳ ಮಂಡನೆ - ಬೇಡಿಕೆಗಳ ಸಂ: 23, 16, 11, 12, 13, 37, 38, 53

ಅಭಿಯಾಚನೆ ಕ್ರಮಾಂಕ : 23 - ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು

ಶ್ರೀ ಬಿ.ಎಸ್. ಪಾಟೀಲ್ (ಆಹಾರ ಮತ್ತು ನಾಗರೀಕ ಸರಬರಾಜುಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜುಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,25,85,66,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ನಾನು ಸಭೆಯ ಮುಂದೆ ಮಂಡಿಸುತ್ತೇನೆ.

ಅಭಿಯಾಚನೆ ಕ್ರಮಾಂಕ : 16- ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ :

ಶ್ರೀಮತಿ ನಾಗಮ್ಮ ಕೇಶವ ಮೂರ್ತಿ (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 13,36,04, 02,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ನಾನು ಸಭೆಯ ಮುಂದೆ ಮಂಡಿಸುತ್ತೇನೆ.

ಅಭಿಯಾಚನೆ ಕ್ರಮಾಂಕ: 11 - ಲೇಖನ ಸಾಮಗ್ರಿ ಮತ್ತು ಮುದ್ರಣ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯ ಸಚಿವರು ಸ್ವಲ್ಪ ತಡವಾಗಿ ಬರುವುದರಿಂದ ಅವರ ಹೆಸರಿನಲ್ಲಿರತಕ್ಕ ಬೇಡಿಕೆಗಳನ್ನು ನಾನು ಮಂಡಿಸುವುದಕ್ಕೆ ತಮ್ಮ ಅಪ್ಪಣೆ ಕೋರುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : 46 ಜನ ಮಂತ್ರಿಗಳು ಇರುವಾಗ ಅವರ ಪರವಾಗಿ ಇವರೇ ಎಲ್ಲ ಬೇಡಿಕೆಗಳನ್ನು ಮಂಡನೆ ಮಾಡುವುದು ಸರಿಯಲ್ಲ. ಡಿಮ್ಯಾಂಡ್ ಎಲ್ಲ ಮಂಡನೆ ಮಾಡುವುದಾದರೆ ಅವರು ಏತಕ್ಕೆ ಮಂತ್ರಿಗಳಾಗಿ ಇರಬೇಕು? ಡಿಮ್ಯಾಂಡ್ ಮಂಡನೆ ಮಾಡುವುದಕ್ಕೆ ಇವರಿಗೆ ಎಲ್ಲಾ ಅಧಿಕಾರ ಕೊಟ್ಟಿದ್ದೀರಾ?

(ಶ್ರೀ ಕೆ. ಶಿವಮೂರ್ತಿಯವರು ಸದನಕ್ಕೆ ಆಗಮಿಸಿದರು)

ಶ್ರೀ ಕೆ. ಶಿವಮೂರ್ತಿ (ವಯಸ್ಕರ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಲೇಖನ ಸಾಮಗ್ರಿ ಮತ್ತು ಮುದ್ರಣ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 21,71,52,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ನಾನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಕೆ. ಶಿವಮೂರ್ತಿ : (ವಯಸ್ಕರ ಶಿಕ್ಷಣ ರಾಜ್ಯ ಸಚಿವರು)

ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಸಾರ್ವಜನಿಕ ವಾಚನಾಲಯ ಇತ್ಯಾದಿ" ಗೆ

ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 36,16,31,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ನಾನು ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು : ಬೇಡಿಕೆ ಮಂಡಿಸಲಾಗಿದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

(ಉನ್ನತ ಶಿಕ್ಷಣ ಸಚಿವರ ಪರವಾಗಿ)

ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉನ್ನತ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 242,62,92,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 30,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯ ವಿಧಾನಮಂಡಲಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 10,39,32,000ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನ್ಯಾಯ ಪರಿಪಾಲನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 61,35,80,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮತೀಯ ಮತ್ತು ಧರ್ಮದಾಯ ಸಂಸ್ಥೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲಲ್ಲಿ 21,65,25,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತೇನೆ.

ಉಪಾಧ್ಯಕ್ಷರು : ಎಲ್ಲ ಬೇಡಿಕೆಗಳನ್ನು ಮಂಡಿಸಲಾಗಿದೆ. ಸೋಮವಾರ ಇದನ್ನು ಚರ್ಚೆಗೆ ಮುಂದೂಡಲಾಗಿದೆ. ಈಗ ವಾಟಾಳ್ ನಾಗರಾಜ್ ಅವರ ಖಾಸಗಿ ನಿರ್ಣಯ.

ಶ್ರೀ ಬಿ.ಎಚ್. ಬನ್ನಿಕೋಡ್ : ಕಳೆದ 5 ವರ್ಷದಿಂದ ಈ ನಿರ್ಣಯ ಬರುತ್ತಿದೆ.

ಉಪಾಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ವಾಟಾಳ್ ನಾಗರಾಜ್ ಅವರನ್ನು ಖಾಸಗಿ ನಿರ್ಣಯದ ಬಗ್ಗೆ ಮಾತನಾಡಲು ಕರೆದಿದ್ದೇನೆ. ಸಿಂಧ್ಯಾ ಅವರು ಮುಂದುವರೆಸುವುದಾದರೆ ಮುಂದುವರೆಸಬಹುದು.

ಶ್ರೀ ಬಿ.ಎಚ್. ಬನ್ನಿಕೋಡ್ : ಅದರ ಬಗ್ಗೆ ಹೇಳುತ್ತಿದ್ದೇನೆ. ಉಪಾಧ್ಯಕ್ಷರೇ, ನಾನು ಶಾಸನಸಭೆಗೆ ಬಂದಾಗಿನಿಂದ ಈ ನಿರ್ಣಯ ಇದೆ. ಬೇರೆ ನಿರ್ಣಯ ಮಾಡಿದರೆ ಏನೂ ಪ್ರಯೋಜನ ಇಲ್ಲ. ಇದನ್ನೇ ಎಷ್ಟು ದಿವಸ ಇಡುತ್ತೀರಿ? 5 ವರ್ಷದ ಅವಧಿಯಲ್ಲಿ ಒಂದು ನಿರ್ಣಯ ಪೂರ್ಣ ಆಗಿಲ್ಲ. ಅದಕ್ಕೆ ಕಾಲ ಮಿತಿ ಇದೆ. ಎಷ್ಟು ಅವಧಿ ಕೊಡಬೇಕೆಂದು ಇದೆ. ಈ ರೀತಿ ಐದು ವರ್ಷ ಒಂದು ನಿರ್ಣಯ ಇಟ್ಟುಕೊಂಡು ಇದಕ್ಕೆ ಮಹತ್ವ ಕೊಡಬಾರದು ಎಂದು ಇಲ್ಲ. ಕೊಡಬೇಕು. ಅದಕ್ಕೆ ಎಷ್ಟು ಕೊಡಬೇಕೋ ಅಷ್ಟು ಕೊಡಬೇಕು, ಮುಕ್ತಾಯ ಮಾಡಬೇಕು. ನಾನು ಈ ಸದನಕ್ಕೆ ಸದಸ್ಯನಾಗಿ ಬಂದಾಗ ತಾಲ್ಲೂಕು ಕೇಂದ್ರಗಳಲ್ಲಿ ರಾಷ್ಟ್ರಧ್ವಜವನ್ನು ತಹಶೀಲ್ದಾರರು ಹಾರಿಸುತ್ತಿದ್ದಾರೆ, ಅಧಿಕಾರಿಗಳು ಹಾರಿಸುತ್ತಿದ್ದಾರೆ, ಆದರೆ ಆಯಾ ತಾಲ್ಲೂಕಿನಲ್ಲಿ ಶಾಸಕರು ಜನಪ್ರತಿನಿಧಿಗಳು ಸಾರ್ವಜನಿಕ ಧ್ವಜಾರೋಹಣ ಮಾಡಲಿಕ್ಕೆ ಇಂಡಿಯನ್ ನ್ಯಾಷನಲ್ ಫ್ಲಾಗ್ ಕೋಡ್‌ಗೆ ತಿದ್ದುಪಡಿ ಮಾಡಲಿಕ್ಕೆ ಈ ಸದನದಲ್ಲಿ ಸರ್ವಾನುಮತದ ನಿರ್ಣಯವನ್ನು ಕೈಗೊಂಡು ಕೇಂದ್ರಸರ್ಕಾರಕ್ಕೆ ಕಳುಹಿಸಿಕೊಡಲಿಕ್ಕೆ ಒಂದು ನಿರ್ಣಯವನ್ನು ತಂದರೆ ಐದು ವರ್ಷವಾದರೂ ಅದು ಸಾಧ್ಯವಾಗಲಿಲ್ಲ. ದಯವಿಟ್ಟು ಈ ನಿರ್ಣಯವನ್ನು ಮುಕ್ತಾಯ ಮಾಡಿ ಬೇರೆ ನಿರ್ಣಯಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಆಗಬಹುದು.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ಅವರು ಚರ್ಚೆಗೆ ಉತ್ತರ ಕೊಡಬೇಕು. ಸದನದ ನಿಯಮಾವಳಿ ಪ್ರಕಾರ ಅವರು ಚರ್ಚೆ ಮಾಡಿ ಮುಗಿದ ಮೇಲೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡಬೇಕು.

ಉಪಾಧ್ಯಕ್ಷರು : ಸಚಿವರಿಗೆ ಸೂಚಿಸುತ್ತೇನೆ. ಸಂಬಂಧಪಟ್ಟವರು ಬರುವ ಶುಕ್ರವಾರ ಉತ್ತರ ಕೊಡುತ್ತಾರೆ.

ಶ್ರೀ ಸಿ. ಬೈರೇಗೌಡ : ಹಾಗಾದರೆ ಬೇರೆ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ ಅಷ್ಟೆ.

ಉಪಾಧ್ಯಕ್ಷರು : ಈಗ ಸದನವನ್ನು ಮುಂದೂಡಿ ಮತ್ತೆ ಸೋಮವಾರ ದಿನಾಂಕ 29-8-94ರಂದು ಬೆಳಗ್ಗೆ 11 ಗಂಟೆಗೆ ಸಮಾವೇಶವಾಗುತ್ತದೆ.

(ಸದನವು 2 ಗಂಟೆ 40 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ದಿನಾಂಕ 29-8-94ರಂದು ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿರ್ಣಯಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

BLANK PAGE

ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASEMBLY

ಸೋಮವಾರ ೨೯ನೇ ಆಗಸ್ಟ್ ೧೯೯೪, ಭಾದ್ರಪದ, ಶಕ ೧೯೧೬

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ. ಎಸ್. ಕೌಜಲಗಿ) ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರ

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಹಾಸನ ನಗರ ಬೈಪಾಸ್ ರಸ್ತೆ

24 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು - ಮಂಗಳೂರು ರಾಷ್ಟ್ರೀಯ ಹೆದ್ದಾರಿಯನ್ನು ಹಾಸನ ನಗರದ ಬಳಿ ಬೈಪಾಸ್ ರಸ್ತೆ ಮಾಡಲು ಯೋಜಿಸಿರುವುದು ನಿಜವೇ?

ಆ) ಹಾಸನ ನಗರದ ಮೂಲಕ ಹಾಯ್ದು ಹೋಗುವ ಬೆಂಗಳೂರು - ಮಂಗಳೂರು ಹೆದ್ದಾರಿ ಬಹಳ ಇಕ್ಕಟ್ಟಾಗಿದ್ದು, ವಾಹನ ದಟ್ಟಣೆಯಿಂದ ಕೂಡಿದ್ದರೂ ಬೈಪಾಸ್ ರಸ್ತೆ ನಿಧಾನವಾಗಿರಲು ಕಾರಣವೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ನಿಜ

ಆ) ಈ ಕಾಮಗಾರಿಯು ಇನ್ನೂ ಪ್ರಸ್ತಾವನೆ ಹಂತದಲ್ಲಿರುವುದರಿಂದ ನಿಧಾನವಾಗುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೇ, ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಯನ್ನು ಹಾಸನ ನಗರದ ಬಳಿ ಬೈಪಾಸ್ ರಸ್ತೆ ಮಾಡಲು ಯೋಜಿಸಿರುವುದು ನಿಜವೇ ಎಂದು ಪ್ರಶ್ನೆ ಕೇಳಿರುವುದಕ್ಕೆ 'ನಿಜ' ವೆಂದು ಸಚಿವರು ಉತ್ತರ ಕೊಟ್ಟಿದ್ದಾರೆ. ಈ ಯೋಜನೆ ಎಂದಿನಿಂದ ಶುರುವಾಯಿತು? ಸುಮಾರು 1962ನೇ ಇಸವಿಯಲ್ಲಿ ಈ ಯೋಜನೆ ಹಮ್ಮಿಕೊಂಡಿದ್ದು ಅಂದಿನಿಂದಲೂ ಈ ಬೈಪಾಸ್ ರಸ್ತೆ ಯೋಜನೆ ಪೂರ್ಣಗೊಂಡಿಲ್ಲವೇ? ಸದರಿ ಯೋಜನೆ ಇದುವರೆವಿಗೂ ಮಂಜೂರಾಗದಿರುವುದಕ್ಕೆ ಕಾರಣವೇನು?

ಶ್ರೀ ಕೆ.ಎಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಈ ಯೋಜನೆಯನ್ನು ಬಹಳ ಹಿಂದೆಯೇ ತೆಗೆದುಕೊಳ್ಳಲಾಗಿದ್ದು 1988ರ ಸುಮಾರಿಗೆ ಇದಕ್ಕೆ ಅಗತ್ಯವಾಗಿ ಬೇಕಾಗಿರತಕ್ಕ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಇದಕ್ಕೆ ಕೇಂದ್ರ ಸರ್ಕಾರದಿಂದ ಅನುಮತಿ ಬರಬೇಕಾಗಿದೆ, ಅನುಮತಿ ಸಿಕ್ಕಿದ ನಂತರ ಮುಂದಿನ ವರ್ಷದ ಆಯವ್ಯಯದಲ್ಲಿ ಅದನ್ನು ಸೇರ್ಪಡೆಗೊಳಿಸಲಾಗುತ್ತದೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : 1962ರಲ್ಲಿ ಸದರಿ ಬೈಪಾಸ್ ರಸ್ತೆ ಯೋಜನೆ ಮಾಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದ್ದು 1988ರ ಸುಮಾರಿಗೆ

ಅಗತ್ಯವಾದ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದೇವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಈಗ 1994ನೇ ಇಸವಿಯಲ್ಲಿ ನಾವಿದ್ದೇನೆ. 1962ರಲ್ಲಿ ಹಾಸನದ ಜನಸಂಖ್ಯೆ 30,000 ಇತ್ತು, ಈಗ ಒಂದೂಕಾಲು ಜನಸಂಖ್ಯೆ ಮೀರಿದೆ. ಅಲ್ಲಿರುವ ರಸ್ತೆ ಬಹಳ ಇಕ್ಕಟ್ಟಾಗಿರುವುದಲ್ಲದೆ ವಾಹನ ಸಂಚಾರ ಬಹಳ ಒತ್ತಡದಿಂದ ಕೂಡಿದ್ದು ಜನರು ತಿರುಗಾಡುವಂಥ ಸ್ಥಿತಿಯಲ್ಲಿಲ್ಲ, ಆದುದರಿಂದ, ಯೋಜನೆ ಕೈಗೊಳ್ಳಲು ಕೇಂದ್ರ ಸರ್ಕಾರದ ಅನುಮತಿಗಾಗಿ ಕಾಯಲಾಗುತ್ತಿದೆಯೆಂದು ಹೇಳುತ್ತಿದ್ದೀರಿ. ರಾಷ್ಟ್ರೀಯ ಹೆದ್ದಾರಿಯ ಎಲ್ಲಾ ಕಡೆ ಬೈಪಾಸ್ ರಸ್ತೆ ಮಾಡುತ್ತಿರುವಾಗ ಹಾಸನ ನಗರದಲ್ಲಿ ಜನದಟ್ಟಣೆ ಇರುವುದರಿಂದ ಆದಷ್ಟು ಬೇಗ ಬೈಪಾಸ್ ರಸ್ತೆ ಮಾಡಬೇಕಾಗಿರುವುದು ಅಗತ್ಯವಲ್ಲವೇ?

ಶ್ರೀ ಕೆ. ಎಚ್. ರಂಗನಾಥ್ : ಆದಷ್ಟು ಬೇಗ ಬೈಪಾಸ್ ರಸ್ತೆಯನ್ನು ಮಾಡಬೇಕೆಂಬುದೇ ಸರ್ಕಾರದ ಚಿಂತನೆಯಾಗಿದೆ. ಆದರೆ, ಈ ಯೋಜನೆಗೆ ಪೂರ್ಣ ಹಣವನ್ನು ಕೇಂದ್ರ ಸರ್ಕಾರವೇ ಕೊಡುವುದರಿಂದ ಅವರ ಒಪ್ಪಿಗೆಗಾಗಿ ಕಾಯಬೇಕಾಗಿರುತ್ತದೆ. ರಾಜ್ಯ ಸರ್ಕಾರ ಈ ಬಗ್ಗೆ ಎಲ್ಲಾ ರೀತಿಯ ಅಗತ್ಯ ಕ್ರಮ ಕೈಗೊಂಡಿದೆ. ಈ ಕುರಿತ ಪ್ರಸ್ತಾವನೆ ಕೇಂದ್ರ ಸರ್ಕಾರಕ್ಕೆ 1992ರಲ್ಲಿ ಹೋಗಿದ್ದು, 1993ರಲ್ಲಿ ಮತ್ತೆ ಕೆಲವು ವಿವರಣೆಯನ್ನು ಕೇಳಿದ್ದರು. ಅದನ್ನು ಮತ್ತೆ ನಾವು ಪರಿಶೀಲಿಸಿ ಪುನಃ ವಾಪಸ್ ಕಳುಹಿಸಿದ್ದೇವೆ. ಸದರಿ ಯೋಜನೆಯನ್ನು ಬಹುಶಃ ಮುಂದಿನ ವರ್ಷದಲ್ಲಿ ತೆಗೆದುಕೊಳ್ಳಬಹುದು.

ವಿದ್ಯುತ್ ಉಪಕೇಂದ್ರದ ಮಂಜೂರಾತಿ

461 - ಶ್ರೀ ಎನ್. ತಮ್ಮಣ್ಣ (ಕೆರಗೂಡು) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಮಂಡ್ಯ ತಾಲ್ಲೂಕು ಕೆರಗೋಡು ಹೋಬಳಿ ಹಂಪಾಪುರ ಗ್ರಾಮದಲ್ಲಿ 250 ಕೆ.ವಿ. ಪವರ್ ಸಬ್-ಸ್ಟೇಷನ್ ಮಂಜೂರು ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?*

ಆ) *ಹಾಗಿದ್ದಲ್ಲಿ ಇದರ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ಇದರ ಅಂದಾಜು ವೆಚ್ಚವೆಷ್ಟು? ಇದರಿಂದ ಜಿಲ್ಲೆಯ ವಿದ್ಯುಚ್ಛಕ್ತಿ ಅಭಾವ ಕಡಿಮೆಯಾಗುವುದೆ?*

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಹೌದು

ಆ) ನಿರ್ಮಾಣ ಕಾರ್ಯವನ್ನು ಜನವರಿ 95ರ ವೇಳೆಗೆ ಪ್ರಾರಂಭಿಸಲು ಉದ್ದೇಶಿಸಿದೆ. ನಿರ್ಮಾಣ ಕಾರ್ಯಗಳಿಗೆ ತಗಲುವ ಒಟ್ಟು ಅಂದಾಜು ವೆಚ್ಚ 3107 ಲಕ್ಷ ರೂ. ಇದರಿಂದ ಮಂಡ್ಯ ಜಿಲ್ಲೆಯಾದ್ಯಂತ ವಿದ್ಯುತ್ ಸರಬರಾಜಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸುಧಾರಣೆಯಾಗುವುದು.

ಪ್ರಶ್ನೆಯ ಸಂಖ್ಯೆ : 461

ಉತ್ತರ ಲಗತ್ತಿಸಿದೆ

ಶ್ರೀ ಎನ್. ತಮ್ಮಣ್ಣ : ಸನ್ಮಾನ್ಯ ಅಧ್ಯಕ್ಷರೆ, ಮಂಡ್ಯ ತಾಲ್ಲೂಕಿನ ಕೆರೆಗೋಡು ಹೋಬಳಿ ಹಂಪಾಪುರ ಗ್ರಾಮದಲ್ಲಿ 250 ಕೆ.ವಿ. ಪವರ್ ಸಬ್-ಸ್ಟೇಷನ್ ಮಂಜೂರು ಮಾಡುತ್ತೇವೆಂದು ಸರ್ಕಾರ ಹೇಳಿದೆ. ಇದಕ್ಕೆ ಲಭ್ಯವಾಗಿರತಕ್ಕ 25 ಎಕರೆ ಜಮೀನನ್ನೂ ಸಹ ಸರ್ಕಾರ ಮಂಜೂರು ಮಾಡಿದೆ. ಇದಕ್ಕೆ ಕೇಂದ್ರದ ಪವರ್ ಫೈನಾನ್ಸ್ ಕಾರ್ಪೊರೇಷನ್‌ನಿಂದ ಅನುಮತಿ ದೊರಕಿದೆಯೇ? ಆ ರೀತಿ ದೊರಕಿದ್ದರೆ ಜನವರಿ 95ರವರೆಗೆ ಏಕೆ ಕಾಯುತ್ತೀರಿ?

ಶ್ರೀ ವಿ. ಮುನಿಯಪ್ಪ : ಸನ್ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ನಾವು ಈಗಾಗಲೇ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಅದಕ್ಕೆ ಬೇಕಾಗಿರುವ ಜಮೀನನ್ನು ಸ್ವಾಧೀನಪಡಿಸಿಕೊಂಡು ಅದಕ್ಕೆ ಬೇಕಾಗಿರುವ ಹಣವನ್ನು ಒದಗಿಸತಕ್ಕ ವ್ಯವಸ್ಥೆಯನ್ನು ಸರ್ಕಾರದ ವತಿಯಿಂದ ಈಗಾಗಲೇ ಮಾಡುತ್ತಿದ್ದೇವೆ. ಬಹುಶಃ ಅದನ್ನು 1995ರಲ್ಲಿ ಪ್ರಾರಂಭ ಮಾಡತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಎನ್. ತಮ್ಮಣ್ಣ : ಈ ಹೈಟೆನ್ಷನ್ ಲೈನ್‌ನಿಂದ ಎರಡು ಕಡೆಯಿಂದ ತರಬಹುದು. ಒಂದು ಕುಣಿಗಲ್ ಕಡೆಯಿಂದ ಮತ್ತೊಂದು ಕೆಆರ್‌ಎಸ್‌ನ ಕಡೆಯಿಂದ. ಕೆಆರ್‌ಎಸ್‌ನ ಕಡೆಯಿಂದ ಲೈನ್ ತಂದರೆ 35 ಕಿ.ಮೀ. ಆಗುತ್ತದೆ. ಕುಣಿಗಲ್‌ನ ಕಡೆಯಿಂದ ತಂದರೆ 45 ಕಿ.ಮೀ. ಆಗುತ್ತದೆ. ಆದ್ದರಿಂದ ಹತ್ತಿರವಿರುವ ಮಾರ್ಗದಿಂದ ತಂದರೆ ಬೇಗ ಆಗುತ್ತದೆ. ಆದ್ದರಿಂದ ಈ ಕೆಲಸವನ್ನು ಜನವರಿ 95 ಮೊದಲೇ ಏತಕ್ಕೆ ಮಾಡಲು ಆಗುವುದಿಲ್ಲ? ಅದಕ್ಕೆ ಏನಾದರೂ ಸಮಸ್ಯೆ ಇದ್ದರೆ ದಯಮಾಡಿ ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಮುನಿಯಪ್ಪ : ಇದು ಸುಮಾರು 3107 ಲಕ್ಷದ ಅಂದಾಜು ವೆಚ್ಚದಲ್ಲಿ ನಿರ್ಮಾಣವಾಗಬೇಕಾಗಿರತಕ್ಕ ಕಾರ್ಯಕ್ರಮ. ಅದಕ್ಕೆ ಸ್ಟ್ರಕ್ಚರ್ ಎಲ್ಲಿಂದ ಬರಬೇಕು ಎಂಬ ಬಗ್ಗೆ ಸರ್ವೆ ಮಾಡಬೇಕಾಗಿದೆ. ಪಾಂಡವಪುರದ ಕಡೆಯಿಂದ 40 ಕಿ.ಮೀ. ಉದ್ದದಲ್ಲಿ 250 ಕೆ.ವಿ.ಯ ಪ್ರಸರಣ ಮಾರ್ಗವನ್ನು ನಿರ್ಮಾಣ ಮಾಡಬೇಕಾಗಿದೆ. ಆದ್ದರಿಂದ ಅದನ್ನು ಸಂಪೂರ್ಣವಾಗಿ ಸರ್ವೆ ಮಾಡಿದಮೇಲೆ ಆ ಕೆಲಸವನ್ನು ಪ್ರಾರಂಭ ವ್ಯವಸ್ಥೆ ಮಾಡಬೇಕಾಗುತ್ತದೆ.

ತೀರ್ಥಹಳ್ಳಿ ತಾಲ್ಲೂಕಿನ ಕುಂದಗ್ರಾಮದ ಮಾಲತಿ ನದಿಗೆ ಸೇತುವೆ ನಿರ್ಮಾಣ

207- ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ತೀರ್ಥಹಳ್ಳಿ ತಾಲ್ಲೂಕಿನ ಕುಂದಗ್ರಾಮದ ಮಾಲತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಬೇಕೆಂಬ ಬೇಡಿಕೆ ಬಹಳ ದಿನಗಳಿಂದ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಹಿಂದೆ ಈ ಸೇತುವೆ ನಿರ್ಮಾಣದ ಬಗ್ಗೆ ಸ್ವಲ್ಪ ಕಾಮಗಾರಿ ಆಗಿ ಹಾಗೆಯೇ ನಿಂತಿದ್ದು ಈ ಬಗ್ಗೆ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಸೇತುವೆ ನಿರ್ಮಿಸಬೇಕೆಂಬ ಬೇಡಿಕೆ ಗಮನಕ್ಕೆ ಬಂದಿದೆ?

ಆ) ಈ ಸೇತುವೆ ಕಾಮಗಾರಿಯನ್ನು 1962ರಲ್ಲಿ ಕಾರ್ಯಾರಂಭ ಮಾಡಲಾಗಿತ್ತು. ಅಡಿಪಾಯದ ವಿನ್ಯಾಸದ ಬದಲಾವಣೆಯಿಂದ ನಿರ್ಮಾಣ ಕಾರ್ಯದ ಮೊತ್ತ ಹೆಚ್ಚಳವಾಗಿದೆ. ಮಾಲತಿ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸುವುದರಿಂದ ಈ ಸೇತುವೆ ಮುಳುಗಡೆ ಆಗುವ ಸಂದರ್ಭದ ಹಿನ್ನೆಲೆಯಲ್ಲಿ ಸೇತುವೆ ನಿರ್ಮಾಣ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ.

ಪ್ರಶ್ನೆಯ ಸಂಖ್ಯೆ : 207

ಉತ್ತರವನ್ನು ಲಗತ್ತಿಸಲಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ :ಸನ್ಮಾನ್ಯ ಅಧ್ಯಕ್ಷರೆ, ಪಿಡಬ್ಲ್ಯೂಡಿ ಇಲಾಖೆಯು ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎನ್ನುವ ಬಗ್ಗೆ ಒಂದು ನಿದರ್ಶನ ಇಲ್ಲಿ ಇದೆ. 1962ನೇ ಇಸವಿಯಲ್ಲಿ ಮಂಜೂರಾದ ಸೇತುವೆಯು ಅನಂತರ ಅದರ ವಿನ್ಯಾಸದಲ್ಲಿ ಬದಲಾವಣೆಯಾಯಿತು ಎಂದು ಮುಂದೂಡಲಾಗಿದೆ. ಸೇತುವೆಯನ್ನು

ಮಾಡುವ ಮೊದಲು ತಾಂತ್ರಿಕವಾಗಿ ಮಂಜೂರಾತಿಯು ದೊರೆಯುತ್ತದೆ, ಅನಂತರ ಆಡಳಿತಾತ್ಮಕವಾದ ಮಂಜೂರಾತಿ ದೊರಕುತ್ತದೆ. ಈ ರೀತಿ ಎರಡೂ ಮಂಜೂರಾತಿಯು ದೊರಕಿದ ಮೇಲೆ ವಿನ್ಯಾಸದಲ್ಲಿ ಬದಲಾವಮೆಯಾಗಲು ಕಾರಣವೇನೋ ನನಗೆ ಗೊತ್ತಿಲ್ಲ. ಕಾರಣವಿದ್ದರೆ ದಯಮಾಡಿ ಮಂತ್ರಿಗಳು ತಿಳಿಸಬೇಕು. ಎರಡನೆಯದಾಗಿ ಕಾರಣವನ್ನು ಚೆನ್ನಾಗಿ ಕೊಟ್ಟಿದ್ದಾರೆ. ಅದೇನೆಂದರೆ ಮಾಲತಿ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸುವುದರಿಂದ ಈ ಸೇತುವೆ ಮುಳುಗಡೆ ಆಗುವ ಸಂದರ್ಭದ ಹಿನ್ನೆಲೆಯಲ್ಲಿ ಸೇತುವೆ ನಿರ್ಮಾಣ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆಯೆಂದು ಹೇಳಿದ್ದಾರೆ. ಈ ಸೇತುವೆಯೇನಾದರೂ ಆಗಿದ್ದರೆ 32 ವರ್ಷಗಳು ಕಳೆದುಹೋಗಿರಬೇಕಾಗಿತ್ತು. ಈ ಸಮಯದಲ್ಲಿ ಆ ಸೇತುವೆಯ ಯುಟಿಲಿಟಿ ಮುಗಿದುಹೋಗಿರಬೇಕಾಗಿತ್ತು. ನೀವು ಮುಂದೆ ಪ್ರಾಜೆಕ್ಟ್‌ನ್ನು ಮಾಡುತ್ತೇವೆಂದು, ಜನರಿಗೆ ತುರ್ತಾಗಿ, ಅಗತ್ಯವೆಂದು ಕಂಡು ಬಂದು ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡಿರತಕ್ಕದ್ದನ್ನು ಈ ರೀತಿ ನಿಲ್ಲಿಸತಕ್ಕದ್ದು ಸರಿಯೇ?

ಶ್ರೀ ಕೆ.ಹೆಚ್. ರಂಗನಾಥ್ : ಸನ್ಮಾನ್ಯ ಅಧ್ಯಕ್ಷರೆ, ನಾನು ಸರಿಯೆಂದು ಹೇಳಲು ತಯಾರಿಲ್ಲ. ಆದರೆ ವಿಷಯಕ್ಕೆ ಅದರದ್ದೇ ಆದಂಥ ಚರಿತ್ರೆ ಇರುತ್ತದೆ. ಹಾಗೆಯೇ ಈ ಸೇತುವೆಗೂ ಅದರದ್ದೇ ಆದಂಥ ಚರಿತ್ರೆ ನಡೆದು ಬಂದಿದೆ. ಇದರ ಅಂದಾಜು ವೆಚ್ಚ 1960ನೇ 2.42 ಲಕ್ಷವಾಗಿತ್ತು. 1968ರಲ್ಲಿ ಇದರ ಕೆಲಸಕ್ಕೆ ಗುತ್ತಿಗೆಯನ್ನು ಕೊಟ್ಟಿದ್ದಾರೆ. ಮತ್ತು ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಮಾಡಿದ್ದಾರೆ. ಆದರೆ ತಳಪಾಯದಲ್ಲಿ ಏನೋ ತೊಂದರೆ ಇದೆ. ಸರಿಯಾಗಿಲ್ಲವೆಂದು ವಿನ್ಯಾಸದಲ್ಲಿ ಬದಲಾವಣೆ ಮಾಡಬೇಕೆಂದು ಸರ್ಕಾರಕ್ಕೆ ವಾಪಸ್ ಬಂದಿದೆ. ಅದರ ಪರಿಷ್ಕೃತ ಅಂದಾಜು ವೆಚ್ಚ 7.78 ಲಕ್ಷಕ್ಕೆ ಅನಂತರ ಅನುಮೋದನೆಯನ್ನು ಕೊಟ್ಟಿದ್ದಾರೆ.

ಈ ಮಧ್ಯ 68ರಲ್ಲಿ ಇದನ್ನು ನಿಲ್ಲಿಸಿಬಿಡಿ ಎಂದು ಹೇಳಿದ್ದಾರೆ. ಮುಂದೆ ನಾವು ಕುಂದಗ್ರಾಮದ ಬಳಿ ಒಂದು ಅಣೆಕಟ್ಟು ಕಟ್ಟುತ್ತೇವೆಂದಾಗ ಈ ನದಿಗೆ ಸೇತುವೆ ಕಟ್ಟುವುದರಿಂದ ಅದು ಮುಳುಗಡೆಯಾಗುತ್ತದೆ. ಆದ್ದರಿಂದ ಇದು ಬೇಡವೆಂದು ಅದು ಹಾಗೆಯೇ ಉಳಿದುಕೊಂಡಿದೆ. ಅಪ್ಪರ್ ತುಂಗಾ ಬೇರೆ ಬರುವುದರಿಂದ ಇದೂ ಕೂಡ ಮುಳುಗಡೆಯಾಗುತ್ತದೆ ಎಂದು ಹೇಳಿ ಆ ವಿಚಾರವನ್ನು ಯೋಚನೆ ಮಾಡಿ ಬೇಡವೆಂದು ತೀರ್ಮಾನ ತೆಗೆದುಕೊಳ್ಳುವುದು ಸೂಕ್ತವೆನಿಸುತ್ತದೆ. ಏಕೆಂದರೆ ತುಂಗಅಣೆಕಟ್ಟು ಅಲ್ಲಿ ಬರುವುದಾದರೆ ಇದು ಮುಳುಗಡೆಯಾಗುವುದಾದರೆ ಈ ಸೇತುವೆ ಕಟ್ಟಿ ಏನೂ ಪ್ರಯೋಜನವಾಗುವುದಿಲ್ಲ. ಇವತ್ತಿನ ಪರಿಷ್ಕೃತ ಅಂದಾಜಿನ ಪ್ರಕಾರ 45 ಲಕ್ಷ ರೂಪಾಯಿಗಳು ಆಗುತ್ತದೆ. ಮಾನ್ಯ ಸದಸ್ಯರು ಹೇಳಿದಹಾಗೆ ಇದು ಒಂದು ದೊಡ್ಡ ಚರಿತ್ರೆಯೇ ಆಗಿದೆ. ಈ ಸೇತುವೆ ಬಗ್ಗೆ ಇರುವಂಥ ವಸ್ತು ಸ್ಥಿತಿಯನ್ನು ಸದನದ ಮುಂದೆ ಇಟ್ಟಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇವರು ಇದನ್ನು ಮಾಡುವ ಆಲೋಚನೆ ಇಲ್ಲವೆನ್ನುವಂತಹ ಅಭಿಪ್ರಾಯಕ್ಕೆ ಬಂದಹಾಗೆ ಆಯಿತು. ಇದು ಜನರು ಮಾಡಿದ ಅಪರಾಧವಲ್ಲ, ಅಲ್ಲಿನ ಇಂಜಿನಿಯರ್‌ಗಳು ನಿಮ್ಮ ಇಲಾಖೆಯಿಂದ ಮಾಡಿದ ಅಪರಾಧ. ಅಪ್ಪರ್ ತುಂಗಾ ಪ್ರಾಜೆಕ್ಟ್‌ಗೂ ಮಾಲತಿ ನದಿಗೂ ಕಟ್ಟುವಂತಹ ಸೇತುವೆಗೂ 30-35 ಕಿ.ಮೀ. ಇದೆ. ಇದಕ್ಕೂ ಅದಕ್ಕೂ ಅರ್ಥಾತ್ ಸಂಬಂಧವಿಲ್ಲ. ಮಾಲತಿ ಅಣೆಕಟ್ಟಿನ ಮೇಲೆ ಕಟ್ಟಿದರೆ ಮಾತ್ರ ಈ ಸೇತುವೆಗೆ ಅಪಾಯ ಆಗುತ್ತದೆ. ಇದನ್ನು ಕೈಬಿಟ್ಟು ಅಪ್ಪರ್ ತುಂಗಾ ಪ್ರಾಜೆಕ್ಟ್ ಮಾಡಬೇಕೆಂದು ಹೇಳಿ 333 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಮಾಡಿ ಹಿಂದಿನ ಮುಖ್ಯಮಂತ್ರಿಗಳು ಅಲ್ಲಿ ಫೌಂಡೇಷನ್ ಮಾಡಿದ್ದಾರೆ. ಇದರಿಂದ 13.8ಅಡಿ ಏರಿಸಬೇಕೆಂದು ಹೇಳಿ, ಅದನ್ನು ಏರಿಸುವುದಕ್ಕೈಇದಕ್ಕೂ ಏನೂ ಸಂಬಂಧವಿಲ್ಲ. ಆದುದರಿಂದ ಇದನ್ನು ಪುನರ್ ಪರಿಶೀಲನೆ ಮಾಡಿ ಇದಕ್ಕೆ

ಮಂಜೂರಾತಿಯನ್ನು ಕೊಡಬೇಕು. ಒಂದು ವೇಳೆ ಅದು ಅಪ್ಪರ್ ತುಂಗಾದಲ್ಲಿ ಆಗುತ್ತದೆ ಎನ್ನತಕ್ಕಂಥ ಕಲ್ಪನೆ ಇದ್ದರೆ, ಇದನ್ನು ಕೈ ಬಿಡಿ, ಸಂಪೂರ್ಣವಾದ ಜವಾಬ್ದಾರಿ ವಹಿಸಿಕೊಳ್ಳಿ, ಇಲಾಖೆಯಿಂದ ಆದಂತಹ ತಪ್ಪನ್ನು ಕುಂದಾಪುರದ ಜನರಿಗೆ ಹಾಕುವುದು ಒಳ್ಳೆಯದಲ್ಲ. ಆದುದರಿಂದ ಅಲ್ಲಿ ಸೇತುವೆಯನ್ನು ಕಟ್ಟುವುದಕ್ಕೆ ಆಜ್ಞೆ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ನಾನು ಯೋಚನೆ ಮಾಡಿದ್ದೆ ಹಾಗೂ ಇಲ್ಲವೆಂದು ಹೇಳಬೇಕೆಂದು ಮನಸ್ಸು ಮಾಡಿದ್ದೆ. ಮಾನ್ಯ ಸದಸ್ಯರು ಅಪ್ಪರ್ ತುಂಗಾಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲವೆಂದು ಪ್ರಸ್ತಾಪ ಮಾಡಿದ್ದಾರೆ. ಇದು ದೂರದಲ್ಲಿದೆ. ಮುಳುಗಡೆಯಾಗುವುದಿಲ್ಲವೆನ್ನುವ ಮಾತನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ನಾನು ಇರಿಗೇಷನ್ ಇಲಾಖೆಯವರೊಂದಿಗೆ ಸಂಪರ್ಕಿಸಿ ಮಾಲತಿ ಅಣೆಕಟ್ಟು ಆಗುತ್ತದೆಯೇ ಅದು ಅಪ್ಪರ್ ತುಂಗಾದಲ್ಲಿ ಮುಳುಗಡೆಯಾಗುತ್ತದೆಯೇ ಎಂಬುದನ್ನು ಪರಿಶೀಲನೆ ಮಾಡಿಸಿ ಆ ರೀತಿಯಾಗುವುದಿಲ್ಲವೆಂದು ಹೇಳಿದರೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ವಿದ್ಯುತ್ ಯೋಜನೆಗೆ ವಿಶ್ವಬ್ಯಾಂಕ್ ನೆರವು

286 - ಶ್ರೀ ಗುರುಪಾದಪ್ಪ ನಾಗ್ಮಾರ್ಪಳ್ಳಿ (ಔರಾದ್) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ವಿದ್ಯುತ್ ಯೋಜನೆಗಳಿಗೆ ವಿಶ್ವಬ್ಯಾಂಕಿನಿಂದ ಕೇಳಲಾಗಿದ್ದ ನೆರವಿನ ಮೊತ್ತವೆಷ್ಟು?

ಆ) ಈ ಯೋಜನೆಗಳಿಗೆ ನೆರವನ್ನು ನೀಡಲು ವಿಶ್ವಬ್ಯಾಂಕ್ ನಿರಾಕರಿಸಿರುವುದು ನಿಜವೆ, ಕಾರಣವೇನು?

ಇ) ಇತ್ತೀಚೆಗೆ ರಾಜ್ಯದ ಮುಖ್ಯಮಂತ್ರಿಗಳು ತಮ್ಮ ವಿದೇಶ ಪ್ರವಾಸದ ಸಮಯದಲ್ಲಿ ವಿಶ್ವಬ್ಯಾಂಕಿನ ಅಧಿಕಾರಿಗಳ ಜೊತೆ ಈ ವಿಷಯವಾಗಿ ಚರ್ಚೆ ನಡೆಸಿದ್ದಾರೆಯೇ?

ಈ) ವಿಶ್ವ ಬ್ಯಾಂಕ್ ಸಾಲದ ನೆರವನ್ನು ನಿರಾಕರಿಸಿರುವುದರಿಂದ ರಾಜ್ಯದ ವಿದ್ಯುತ್ ಯೋಜನೆಗಳನ್ನು ಪೂರ್ಣಗೊಳಿಸಲು ಯಾವ ರೀತಿ ಹಣ ಸಂಗ್ರಹಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಕರ್ನಾಟಕ ವಿದ್ಯುತ್ ನಿಗಮದ ಯೋಜನೆಗಳಿಗೆ 425.36ಕೋಟಿ ರೂಪಾಯಿಗಳ ಸಾಲದ ನೆರವನ್ನು ಒದಗಿಸಲಾಗಿತ್ತು.

ಆ) ಹೌದು. ನಿರಾಕರಣೆಯ ಕಾರಣಗಳು ಕೆಳಕಂಡಂತಿವೆ.

1) ಶರಾವತಿ ಟೇಲ್ ರೇಸ್ ಸ್ಕೀಮಿಗೆ ಕೇಂದ್ರ (ಭಾರತ ಸರ್ಕಾರ) ಪರಿಸರ ಹಾಗೂ ಅರಣ್ಯ ಇಲಾಖೆಯ ಅನುಮತಿ ದೊರೆಯದಿರುವುದು.

2) ಕರ್ನಾಟಕ ವಿದ್ಯುತ್ ಯೋಜನೆಗಳು-1 ರಡಿಯ ಕದ್ರಾ ಮತ್ತು ಕೊಡಸಳ್ಳಿ ಯೋಜನೆಯ ಪುನರ್ವಸತಿಗಾಗಿ ಬೇಕಾಗಿರುವ ಅರಣ್ಯ ಭೂಮಿಗೆ ಅನುಮೋದನೆ ದೊರೆಯದೆ ಇದ್ದುದರಿಂದ.

3) ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಿಂದ ಬಂಡವಾಳ ಹೂಡುವಿಕೆಯ ಮೇಲಿನ ಶೇ. 3 ರಷ್ಟು ಮತ್ತು ಮೇಲ್ಪಟ್ಟು ಲಾಭ ಪಡೆಯದಿರುವುದು, ಮತ್ತು

4) ತಲಕಳಲಿ ಅಣೆಕಟ್ಟಿನ ದುರಸ್ತಿ ಕೆಲಸದ ಸಲುವಾಗಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ವಿಶ್ವ ಬ್ಯಾಂಕಿಗೆ ತೃಪ್ತಿ ಆಗುವ ರೀತಿಯಲ್ಲಿ ಒಪ್ಪಂದವನ್ನು ಮಾಡಿಕೊಳ್ಳದೆ ಇರುವುದು.

ಇ) ಹೌದು.

ಈ) ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಂದ ದೀರ್ಘಾವಧಿ ಸಾಲ ಸಂಪತ್ತುಗಳನ್ನು ಪಡೆದುಕೊಳ್ಳಲು ಕರ್ನಾಟಕ ವಿದ್ಯುತ್ ನಿಗಮವು ಪ್ರಯತ್ನಿಸುತ್ತಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, ರಾಜ್ಯದ ವಿದ್ಯುತ್ ಯೋಜನೆಗಳಿಗೆ ವಿಶ್ವಬ್ಯಾಂಕಿನಿಂದ ಕೇಳಲಾಗಿದ್ದ ನೆರವಿನ ಮೊತ್ತವೆಷ್ಟು ಎಂದು ನಾನು ಕೇಳಿದ್ದೆ. ಅದಕ್ಕೆ 425.36 ಕೋಟಿ ರೂ.ಗಳು ಒದಗಿಸಲಾಗಿತ್ತು ಎಂದು ಹೇಳಿದ್ದಾರೆ. ವಿಶ್ವಬ್ಯಾಂಕಿನವರು ಸಾಲವನ್ನು ನೀಡಲು ನಿರಾಕರಿಸಿದ್ದಾರೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಅದಕ್ಕೆ ಕೆಲವು ಕಾರಣಗಳನ್ನು ನೀಡಿದ್ದಾರೆ. ಶರಾವತಿ ಟೈಲ್ ರೇಸ್ ಸ್ಕೀಮಿಗೆ ಕೇಂದ್ರ ಪರಿಸರ ಹಾಗೂ ಅರಣ್ಯ ಇಲಾಖೆಯ ಅನುಮತಿ ದೊರಕಿಲ್ಲವೆಂದು ಹೇಳಿದ್ದಾರೆ. ಇದಕ್ಕೆ ಅನುಮತಿ ದೊರೆಕಿಲ್ಲವೆಂದರೆ ಇದಕ್ಕೆ ಕಾರಣಗಳೇನು ಎನ್ನುವುದು ಒಂದು; ಎರಡನೆಯದಾಗಿ ಕರ್ನಾಟಕ ವಿದ್ಯುತ್ ಯೋಜನೆಗಳಡಿಯಲ್ಲಿ ಕದ್ರಾ ಮತ್ತು ಕೊಡಸಳ್ಳಿ ಯೋಜನೆಯ ಪುನರ್ವಸತಿಗಾಗಿ ಬೇಕಾಗಿರುವ ಅರಣ್ಯ ಭೂಮಿಗೆ ಅನುಮೋದನೆ ಸಿಕ್ಕಿಲ್ಲವೆಂದು ಹೇಳಿದ್ದಾರೆ. ಇದಕ್ಕೆ ಅನುಮತಿಯನ್ನು ಯಾರು ಕೊಡಬೇಕು? ಅನುಮತಿ ಸಿಗಲಿಲ್ಲವೆಂದರೆ ಅದಕ್ಕೆ ಕಾರಣಗಳೇನು? ಇದಕ್ಕೆ ಯಾರು ಜವಾಬ್ದಾರರು ಶೇಕಡಾ 3ರಷ್ಟು ಲಾಭ ಗಳಿಸಬೇಕಾಗಿತ್ತು, ಲಾಭ ಗಳಿಸಿಲ್ಲ ಎಂದು ಹೇಳಿದ್ದಾರೆ. ಅಂದರೆ ಇದಕ್ಕೆ ಕಾರಣರು ಯಾರು? ಏಕೆ ಆಗಿಲ್ಲವೆನ್ನುವುದು ಮತ್ತು ಕಾರಣವೇನು? ಎಂಬುದನ್ನು ತಿಳಿಸಬೇಕು. ಮೂರನೆಯದು, ಮಾನ್ಯ ಮುಖ್ಯಮಂತ್ರಿಗಳು ವಿದೇಶಕ್ಕೆ ಹೋಗಿದ್ದರು. ಅವರು ಹೋಗಿದ್ದಾಗ ಇದರ ಬಗ್ಗೆ ಚರ್ಚೆ ಮಾಡಿದ್ದಾರೆ ಎಂದು ಕೇಳಿದ್ದಕ್ಕೆ ಹೌದು ಎಂದು ಹೇಳಿದ್ದಾರೆ. ಏನು ಚರ್ಚೆ ಮಾಡಿದ್ದಾರೆ ಹಾಗೂ ಅದರ ಪರಿಣಾಮವೇನಾಯಿತು ಎಂಬುದನ್ನು ತಿಳಿಸಬೇಕು. ನಿರಾಕರಣೆಯಾದ ಮೇಲೆ ಪರಿಣಾಮವೇನೂ ಆಗಿಲ್ಲ. ಚರ್ಚೆ ಮಾಡಿದ್ದಾರೋ, ಇಲ್ಲವೋ ಎಂಬ ಬಗ್ಗೆ ಸಂಶಯ ಬರುತ್ತದೆ. ಇದಕ್ಕೆ ತಾವು ಕಾರಣಗಳು ಹೇಳಬೇಕು. ಯಾವ ಯಾವ ಯೋಜನೆಗಳಿಗೆ ಏನು ಮಾಡಿದ್ದೀರಿ, ಹಣ ಎಲ್ಲಿಂದ ತರುತ್ತಿದ್ದೀರಿ, ಎಂದು ಕೇಳಿದಾಗ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಂದ ಎಂದು ಉತ್ತರ ಕೊಟ್ಟಿದ್ದಾರೆ. ಈಗ ಎಷ್ಟು ಸಾಲ ತರಿಸಿದ್ದೀರಿ, ಎಷ್ಟು ಮಂಜೂರಾಗಿದೆ, ಎಷ್ಟು ಖರ್ಚು ಮಾಡಿದ್ದೀರಿ ಎಂಬುದರ ಬಗ್ಗೆ ಖಚಿತವಾಗಿ ಉತ್ತರ ಕೊಡಿ.

11.30 ಎ.ಎಂ.

ಶ್ರೀ ವಿ. ಮುನಿಯಪ್ಪ : ಈಗ ನಾವು ರಾಜ್ಯದ ವಿದ್ಯುತ್ ಯೋಜನೆಗಳಿಗೆ ವಿಶ್ವ ಬ್ಯಾಂಕಿನಿಂದ 425 ಕೋಟಿ ರೂಪಾಯಿ ಏನು ಕೇಳಿದ್ದೇವೆ ಅದು ನಮ್ಮ ಕರ್ನಾಟಕ ಪವರ್ ಕಾರ್ಪೊರೇಷನ್‌ಗೆ ಸಂಬಂಧಪಟ್ಟಹಾಗೆ ಕೇಳಿದ್ದೆವು. ಅದಕ್ಕೆ ಅವರು ಒಂದು ಕಂಡೀಷನ್ ಹಾಕಿದ್ದಾರೆ. ಅದು ಇಷ್ಟನೇ ವರ್ಷದೊಳಗೆ ನೀವು ಆ ಟಾರ್ಗೆಟ್ ಪ್ರಕಾರ ಮುಗಿಸಬೇಕು ಎನ್ನುವುದು. ಈ ಮಧ್ಯೆ ನಾವು ಪ್ರಾಜೆಕ್ಟ್ ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಫಾರೆಸ್ಟ್ ಮತ್ತು ಎನ್‌ವಿರಾನ್‌ಮೆಂಟ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿಕೊಟ್ಟಾಗ ಅಲ್ಲಿ ಅದು ಬಹಳ ನಿಧಾನವಾಯಿತು. ಈ ಮಧ್ಯೆ ಈ ವಿಚಾರವನ್ನು ಪರಿಸರವಾದಿಗಳು ಸುಪ್ರೀಂ ಕೋರ್ಟಿನಲ್ಲಿ ಕೇಸ್ ಹಾಕಿದಾಗ ಅದು ನಿಧಾನವಾಗುವುದಕ್ಕೆ ಕಾರಣವಾಗಿರುವ ವಿಷಯ ತಮಗೂ ಗೊತ್ತಿದೆ. ಆ ಕಾರಣದಿಂದ ಏನು ವಿಶ್ವಬ್ಯಾಂಕ್‌ನವರು ಒಂದು ಗುರಿ ನಿಗದಿ ಮಾಡಿ ಹಣವನ್ನು ತೆಗೆದುಕೊಳ್ಳಬೇಕು ಮತ್ತು ಆ ಕೆಲಸವನ್ನು ಮಾಡಬೇಕು ಎಂದು ಮಾಡಿದ್ದರೋ ಆ ಗುರಿ ಒಳಗಡೆ ನಾವು ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಆಗದೇ ಇದ್ದುದರಿಂದ ವಿಶ್ವಬ್ಯಾಂಕ್‌ನವರು ಹಣವನ್ನು ಇವತ್ತು ನಮಗೆ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿ ನಿರಾಕರಿಸಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನು 3-4 ಪ್ರಶ್ನೆ ಕೇಳಿದ್ದೇನೆ. ತಾವು ಒಂದೇ ಸಾರಿ ನಿರಾಕರಿಸಿಬಿಟ್ಟರು ಎಂದು ಹೇಳಿಬಿಟ್ಟರೆ ಹೇಗೆ? ನಾನು ಮೂರು ಕಾರಣಗಳನ್ನು ಕೇಳಿದ್ದೇನೆ. ಏಕೆ ಪ್ರಯತ್ನ ಪಟ್ಟಿಲ್ಲ ಎನ್ನುವ ಪ್ರಶ್ನೆಗೆ ಹೇಳಿದಿರಿ. ಇನ್ನೊಂದು ಪ್ರಶ್ನೆ ಇದಕ್ಕೆ ಯಾರು ಅನುಮೋದನೆ ಮಾಡುವವರು? ಅದು ಕೇಂದ್ರಸರ್ಕಾರವೇ? ಮತ್ತು ಅದು ಸುಪ್ರೀಂ ಕೋರ್ಟಿನಲ್ಲಿ ಇದೆಯಾ? ಅದರ ಬಗ್ಗೆ ತಾವು ಏನೂ ಹೇಳಿಲ್ಲ. ಮತ್ತು ಇನ್ನೊಂದು ತಾವು ಶೇ. 3 ರಷ್ಟು ಭಾಗ ಲಾಭವಾಗಿಲ್ಲ ಎಂದು ಹೇಳಿದಿರಿ, ಏಕೆ ಆಗಿಲ್ಲ? ಏನು ಕಾರಣ ಇದೆ, ಅದಕ್ಕೂ ಸಹ ತಾವು ಉತ್ತರ ಕೊಟ್ಟಿಲ್ಲ. ಮಾನ್ಯ ಮುಖ್ಯಮಂತ್ರಿಗಳು ವಿದೇಶಕ್ಕೆ ಹೋಗಿದ್ದರು. ಅಲ್ಲಿ ಅವರು ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ? ತಾವು ಹೌದು ಎಂದು ಹೇಳಿಬಿಟ್ಟರೆ ಉತ್ತರ ಮುಗಿದು ಹೋಯಿತೇ? ನೀವು ಮುಖ್ಯವಾದುದನ್ನು ಬಿಟ್ಟು ಬೇರೆ ಏನೋ ಹೇಳುತ್ತಿದ್ದೀರಿ.

ಶ್ರೀ ವಿ. ಮುನಿಯಪ್ಪ : ಇದರಲ್ಲಿ ಕೊಡಸಳ್ಳಿ ಮತ್ತು ತಳಕಳಲೆ ಅಣೆಕಟ್ಟು ಎಂದು ಹೇಳಿಬಿಟ್ಟು ಅವರು ಆ ವರದಿ ಬಗ್ಗೆ ಒಂದು ಕಂಡೀಷನ್ ಹಾಕಿ ಆ ಕಂಡೀಷನ್ ಪ್ರಕಾರವೇ ಕೆಲಸ ಕೈಗೆತ್ತಿಕೊಳ್ಳಬೇಕು ಎನ್ನುವಂತಹ ಸೂಚನೆಯನ್ನು ಕೊಟ್ಟಿದ್ದರು. ಆದರೆ ನಮ್ಮ ರಾಜ್ಯದ ಎಂಜಿನಿಯರುಗಳು ಏನಿದ್ದಾರೆ ಅವರು ಅದರ ಬಗ್ಗೆ ಪರಿಶೀಲನೆ ಮಾಡಿ ಅವರು ಹಾಕಿರತಕ್ಕಂತಹ ಕಂಡೀಷನ್ ಪ್ರಕಾರ ಮಾಡಿದರೆ ಅದು ಸುಮಾರು 50 ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟು ಆಗಬಹುದೆಂಬ ಅಂದಾಜಿನಿಂದ ಅದು ಬೇಡ, ಅದನ್ನು ನಾವು ಕಡಿಮೆ ವೆಚ್ಚದಲ್ಲಿ ನಮ್ಮ ಟೆಕ್ನಾಲಜಿಯಲ್ಲಿ ಇರುವ ಹಾಗೆ ಮಾಡುತ್ತೇವೆ ಎಂದು ಹೇಳಿ ಈಗಾಗಲೇ ಆ ವಿಶ್ವ ಬ್ಯಾಂಕ್‌ನವರು ಕೊಟ್ಟಿರತಕ್ಕಂತಹ ಅಸಿಸ್ಟೆನ್ಸ್‌ನ್ನು ಬಿಟ್ಟು ಬಿಟ್ಟು ನಮ್ಮಿಂದಲೇ ಅದನ್ನು ಕೈಗೆತ್ತಿಕೊಳ್ಳತಕ್ಕಂತಹ ಕೆಲಸ ಮಾಡಿದ್ದೇವೆ. ಆದುದರಿಂದ ಇದರಿಂದ ಒಳ್ಳೆಯ ಪ್ರತಿಫಲವೂ ಬಂದಿದೆ. ಕೇವಲ 3-4 ಕೋಟಿ ರೂಪಾಯಿ ಖರ್ಚು ಮಾಡಿ ಅಲ್ಲಿ ಏನು ಲೀಕೇಜ್ ಆಗುತ್ತಿತ್ತು. ಅದನ್ನು ಬಹಳಷ್ಟು ಕಡಿಮೆ ಮಾಡಿದ್ದೇವೆ. ಆದುದರಿಂದ ವಿಶ್ವ ಬ್ಯಾಂಕಿನವರು ಸಾಲವನ್ನು ನಾವು ಬೇಡವೆಂದು ನಿರಾಕರಿಸಿದ್ದೇವೆ. ಜೊತೆಗೆ ಉಳಿದಿರತಕ್ಕಂತಹ 3 ಪರ್ಸೆಂಟ್ ಎಂದು ಏನು ಹೇಳಿದ್ದೇವೆ ಮತ್ತು ಬರತಕ್ಕಂತಹ ನಮ್ಮ ರಿಟರ್ನ್ಸ್ ಏನಿದೆ ಅದನ್ನು ನಾವು ಸರ್ಕಾರದಿಂದ ಕಡಿಮೆ ಬಂದ ಸಂದರ್ಭದಲ್ಲಿ ರೀ-ಇಂಬರ್ಸ್‌ಮೆಂಟ್ ಎಂದು ಕೊಟ್ಟು ಬೋರ್ಡ್‌ಗೆ ತುಂಬುತ್ತಿದ್ದೇನೆ. ಬೋರ್ಡ್‌ಗೆ 3 ಪರ್ಸೆಂಟ್ ಸೇರಿಸಿ ರಿಟರ್ನ್ ಬರುತ್ತಿದೆ. ಅದರ ವಿಚಾರದಲ್ಲಿ ನಾವೇನೂ ನಷ್ಟ ಮಾಡುತ್ತಿಲ್ಲ. ಬೋರ್ಡ್‌ಗೆ ಆಗತಕ್ಕಂತಹ ನಷ್ಟದ 3 ಪರ್ಸೆಂಟ್ ಅನ್ನು ನಮ್ಮ ಸರ್ಕಾರವು ಸಂದರ್ಭಕ್ಕೆ ಸರಿಯಾಗಿ ಕೊಡುತ್ತಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸರಿಯಾದ ಉತ್ತರ ಸಿಗಲಿಲ್ಲ. ನಮಗೆ ವಿಶ್ವ ಬ್ಯಾಂಕ್ ಸಹಾಯ ಬೇಕಾಗಿಲ್ಲವೆಂದು ಹೇಳುತ್ತಿದ್ದೀರಿ. ಮತ್ತೊಂದು ಕಡೆ ಏಕೆ ಕೇಳಿದಿರಿ? ನಮಗೆ ವಿಶ್ವ ಬ್ಯಾಂಕ್ ಸಹಾಯ ಬೇಕಾಗಿಲ್ಲವೆಂದಾಗ ಕೇಳುವ ಅವಶ್ಯಕತೆ ಇರಲಿಲ್ಲ. ಆದರೆ ಮೊದಲು ತಾವು ಏನು ಹೇಳಿದಿರಿ, ಸುಪ್ರೀಂ ಕೋರ್ಟ್‌ನಲ್ಲಿ ಇದೆ ಅದಕ್ಕೆ ಎಂದು ಹೇಳುತ್ತಿದ್ದೀರಿ. ಈ ಎರಡು ರೀತಿಯ ದ್ವಂದ್ವ ಉತ್ತರಗಳು ಬರುತ್ತಿವೆ. ತಾವು ಇದಕ್ಕೆ ಸರಿಯಾದ ಉತ್ತರ ಹೇಳುತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಉಪಮುಖ್ಯಮಂತ್ರಿಯವರಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದಾರೆ.

ಶ್ರೀ ಎಸ್.ಎಂ. ಕೃಷ್ಣ : ತಾವು ಮಾನ್ಯ ಮುಖ್ಯಮಂತ್ರಿಯವರ ವಿದೇಶ ಪ್ರವಾಸದ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ಮುಖ್ಯಮಂತ್ರಿಯವರ ಔದಾರ್ಯವನ್ನು

ನಾವು ಮೆಚ್ಚಬೇಕು. ಏಕೆಂದರೆ ಅವರು ಖಾಸಗಿ ಪ್ರವಾಸ ಮಾಡಿದರೂ ಕೂಡ ಆ ಖಾಸಗಿ ಪ್ರವಾಸವನ್ನು ಬದಿಗಿಟ್ಟು ವಿಶ್ವಬ್ಯಾಂಕ್ ಅಧಿಕಾರಿಗಳ ಜೊತೆಯಲ್ಲಿ ಮಾತುಕತೆ ನಡೆಸಿದರು. ಆದರೆ ವಿಶ್ವ ಬ್ಯಾಂಕ್‌ನವರು ಒಂದು ನಮೂನೆಯವರು. ಅವರು ಯಾವುದಾದರೂ ಒಂದು ಪ್ರಾಜೆಕ್ಟ್‌ಗೆ ಲೋನ್‌ಗಳನ್ನು ಸ್ಯಾಂಕ್ಷನ್ ಮಾಡಿದರೆ ಆ ಲೋನ್‌ಗಳನ್ನು ಸಸ್ಪೆಂಡ್ ಮಾಡಿದರೆ ಪುನಃ ಆ ಲೋನ್‌ಗಳನ್ನು ರಿವೈವ್ ಮಾಡತಕ್ಕಂತಹ ಪ್ರಾಕ್ಟೀಸ್ ವಿಶ್ವಬ್ಯಾಂಕ್‌ನಲ್ಲಿ ಇಲ್ಲ, ಅವರು ಸದ್ಯದಲ್ಲೇ ಒಂದು ಟೀಮ್ ಕಳುಹಿಸಿಕೊಡುತ್ತಿದ್ದಾರೆ. ಆ ಟೀಮು ಕಂಪ್ಲೀಷನ್ ರಿಪೋರ್ಟ್ ಏನಿದೆ ಆ ರೀತಿ ಮಾಡಿ ಆಗ ಪುನಃ ನಮ್ಮ ಮಂಡಲಿ ಯಾವ ರೀತಿ ನಡೆಯುತ್ತಿದೆ ಎಂಬ ಬಗ್ಗೆ ಅವರು ಇವರ ವಿಮರ್ಶೆ ಮಾಡುತ್ತಾರೆ ಎನ್ನುವಂತಹ ಆಸೆಯನ್ನು ನಮ್ಮ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿ ಅವರ ಜೊತೆಯಲ್ಲಿ ಪ್ರಾಸಂಗಿಕವಾಗಿ ಚರ್ಚೆ ಮಾಡಿದ ಮೇಲೆ ಆ ಒಂದು ಆಸೆ ನಮ್ಮಲ್ಲಿ ಉಂಟಾಗಿದೆ.

ಆದರೆ ವಿಶ್ವ ಬ್ಯಾಂಕ್‌ನವರು ನಮಗೆ ಸಾಲಗಳನ್ನು ಕೊಡುವುದನ್ನು ನಿಲ್ಲಿಸಿದ ಮಾತ್ರಕ್ಕೆ ನಾವು ಕೈಗೆತ್ತಿಕೊಂಡಿರತಕ್ಕಂಥ ಕೆಲಸ ಕಾರ್ಯಗಳನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಯಾವುದಾದರೂ ಮೂಲದಿಂದ ನಾವು ಹಣವನ್ನು ಕ್ರೋಡೀಕರಿಸಬೇಕಾಗುತ್ತದೆ, ಕೈಗೆತ್ತಿಕೊಂಡಿರತಕ್ಕ ಕೆಲಸಕಾರ್ಯಗಳನ್ನು ಪೂರ್ಣ ಮಾಡಬೇಕಾಗುತ್ತದೆ. ಭದ್ರಾ 120 ಮೆಗಾವ್ಯಾಟ್ ಕೊಡಸಳ್ಳಿ 150 ಮೆಗಾವ್ಯಾಟ್ ಮತ್ತು ಗೇರುಸೊಪ್ಪುಪೇಟೆ 240ಮೆಗಾವ್ಯಾಟ್. ಇವು ನಮ್ಮ ರಾಜ್ಯಕ್ಕೆ ಅತ್ಯಂತ ಸಂಪದ್ಭರಿತವಾದಂಥ, ಸಂಪತ್ತನ್ನು ತಂದುಕೊಡತಕ್ಕ ಮಹತ್ವದ ಹೈಡ್ರೋ ಪ್ರಾಜೆಕ್ಟ್‌ಗಳು ಆದುದರಿಂದ ಇದಕ್ಕೆ ನಾವು ಪರ್ಯಾಯವಾದಂಥ ಏರ್ಪಾಡುಗಳನ್ನು ಮಾಡುತ್ತಿದ್ದೇವೆ. ಪವರ್ ಫೈನಾನ್ಸ್ ಕಾರ್ಪೊರೇಷನ್ ರವರು ಮತ್ತು ಏಷ್ಯಾ ಅಭಿವೃದ್ಧಿ ಬ್ಯಾಂಕ್ ನವರು ಇನ್ನೂ ನಮ್ಮ ಸಾಲಗಳನ್ನು ಸಸ್ಪೆಂಡ್ ಮಾಡಿಲ್ಲ, ವಾಪಸ್ಸು ಕಳುಹಿಸುವ ಪರಿಸ್ಥಿತಿಯೂ ಕಾಣುತ್ತಾ ಇಲ್ಲ, ಆದುದರಿಂದ ಪರ್ಯಾಯ ವ್ಯವಸ್ಥೆಯನ್ನು ಮಾಡಿ ಕರ್ನಾಟಕ ಪವರ್ ಕಾರ್ಪೊರೇಷನ್ ರವರು ಕೈಗೊಂಡಿರತಕ್ಕ ಈ ಎಲ್ಲಾ ವಿದ್ಯುತ್ ಉತ್ಪಾದನಾ ಘಟಕಗಳನ್ನು ಪೂರ್ಣವಾಗಿ ಕರ್ನಾಟಕದ ಜನಗಳಿಗೆ ಈ ನೀರಿನ ಬಳಕೆಯನ್ನು ಒದಗಿಸಿಕೊಡತಕ್ಕಂಥ ಸ್ಥಿರ ನಿರ್ಧಾರವನ್ನು ನಾವು ಮಾಡಿದ್ದೇವೆ.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷರೇ ಇದರಲ್ಲಿ ಅವರು ಉತ್ತರ ಕೊಡುವಾಗ ಎರಡು ಸಾವಿರ ವರ್ಷಕ್ಕೆ ಸುಮಾರು 9 ಸಾವಿರ ಮೆಗಾವ್ಯಾಟ್ ವಿದ್ಯುತ್‌ಛಕ್ತಿ ಬೇಕಾಗುತ್ತದೆ ಎಂದು ಹೇಳಿದ್ದಾರೆ. ಇದು ಶಾರ್ಟ್ ಟರ್ಮ್ ಅಂದರೆ ಎರಡು ಸಾವಿರ ವರ್ಷ ಬರಬೇಕಾದರೆ ಇನ್ನೂ 6-7 ವರ್ಷ ಬೇಕಾಗುತ್ತದೆ. ನಮಗೆ ಅರ್ಜೆಂಟಾಗಿ ಬೇಕಾಗಿದೆ; ಅದಕ್ಕೆ ಏನಾದರೂ ಏರ್ಪಾಡು ಮಾಡಿದ್ದೀರಾ, ಮತ್ತು ಈ ಸಿಸ್ಟಂ ಇಂಪ್ರೂವ್‌ಮೆಂಟ್ ಸರಿಯಾಗಿ ಇಲ್ಲದ ಕಾರಣ ಈ ವರ್ಷಕ್ಕೆ ಮತ್ತು ಮುಂದಿನ ವರ್ಷಕ್ಕೆ ಸಿಸ್ಟಂ ಇಂಪ್ರೂವ್‌ಮೆಂಟ್‌ಗೆ ಎಷ್ಟು ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ ಎಂಬುದನ್ನು ಮಾನ್ಯ ಉಪಮುಖ್ಯಮಂತ್ರಿಗಳು ಉತ್ತರ ನೀಡಬೇಕು.

ಶ್ರೀ ಎಸ್.ಎಂ. ಕೃಷ್ಣ : ದೊಡ್ಡ ದೊಡ್ಡ ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪನೆ ಮಾಡಬೇಕು ಎನ್ನುವ ಉದ್ದೇಶದಿಂದ ನಾವು ಈಗಾಗಲೇ ಕೊಜನ್‌ಟ್ರಿಕ್ಸ್, ಹೆಚ್ ಒಕೆ, ಟ್ಯಾಪ್ಕೊ ಮತ್ತು ಇನ್ನೂ ಕೆಲವು ವಿದೇಶಿ ಸಂಸ್ಥೆಗಳ ಜೊತೆಯಲ್ಲಿ, ವಿದೇಶಿ ಬಂಡವಾಳಸ್ಥರ ಜೊತೆಯಲ್ಲಿ ನಾವು ಪೂರ್ವಭಾವಿ ಒಂದು ಮೆಮರಾಂಡಂ ಅಂಡರ್‌ಸ್ಟಾಂಡಿಂಗ್ ಅನ್ನು ಮಾಡಿ ಕೊಂಡಿದ್ದೇವೆ. ಇದನ್ನು ಆಗಿಂದಾಗ್ಗೆ ನಾನು ಸಭೆಯಲ್ಲಿ ತಿಳಿಸಿದ್ದೇನೆ. ಈಗ ಕೊಜನ್‌ಟ್ರಿಕ್ಸ್ ಎನ್ನತಕ್ಕಂಥ ಸಂಸ್ಥೆ ಸಾವಿರ ಮೆಗಾವ್ಯಾಟ್‌ನ್ನು ಮಂಗಳೂರಿನಲ್ಲಿ ಉತ್ಪಾದನೆ ಮಾಡುವುದಕ್ಕೆ ನಮ್ಮ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಜೊತೆಯಲ್ಲಿ ಪವರ್ ಪರ್‌ಚೇಸ್ ಅಗ್ರಿಮೆಂಟ್ ಅನ್ನು ಫೈನಲೈಸ್ ಮಾಡತಕ್ಕ

ಘಟ್ಟದಲ್ಲಿದ್ದೇವೆ. ಮಾನ್ಯ ವೆಂಕಟಪ್ಪನವರು ಶಾರ್ಟ್ ಟರ್ಮ್ ಮೆಷರ್ಸ್ ಏನು ತೆಗೆದುಕೊಳ್ಳುತ್ತೀರಿ ಎಂದು ಹೇಳಿದ್ದಾರೆ ಶಾರ್ಟ್ ಟರ್ಮ್ ಮೆಷರ್ ಗೋಸ್ಕರವಾಗಿ ನಾವು ಇತ್ತೀಚೆಗೆ ನಡೆದ ಮಂತ್ರಿಮಂಡಲದ ಸಭೆಯಲ್ಲಿ ಆರು ಮಲ್ಟಿ ಫ್ಯೂಯರ್ ಜನರೇಟಿಂಗ್ ಸೆಟ್ಟನ್ನು ಇಡೀ ರಾಜ್ಯಾದ್ಯಂತ ಹಾಕುವುದಕ್ಕಾಗಿ ಖಾಸಗೀ ಬಂಡವಾಳಸ್ಥರಿಗೆ ಪರವಾನಗಿಯನ್ನು ಕೊಡಬೇಕು ಎನ್ನತಕ್ಕ ಮಹತ್ವದ ನಿರ್ಧಾರವನ್ನು ನಾವು ತೆಗೆದುಕೊಂಡಿದ್ದೇವೆ ಮೆ: ಐಪಿಸಿ ಸಿಯಾಟಿಕ್ಸ್ ಯುಎಸ್‌ಎ, ಅವರು 76 ಮೆಗಾವ್ಯಾಟ್, ದೇವನ್ ಗೋನ್ರಿ, ಕೋಡ್ ಇಂಡಿಯಾ 40 ಮೆಗಾವ್ಯಾಟ್ ಹೂಡಿ, ಬೆಂಗಳೂರು ಇಲ್ಲಿ, ಮೆ: ಹೆಚ್.ಎಂ. ಟಿ. ಪವರ್, ಬಾಂಬೆ ಅವರು 20 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಘಟಕಗಳನ್ನು ಕೋಲಾರ, ಇಂಡಿ, ಬೀದರ್ ಮತ್ತು ಜಮಖಂಡಿಗಳಲ್ಲಿ ಸ್ಥಾಪನೆ ಮಾಡಬೇಕೆಂದು, ಕೆಇಎಲ್ ಎನರ್‌ಜಿ ಮದ್ರಾಸ್, ಅವರು 150 ಮೆಗಾವ್ಯಾಟ್ ಬಿಜಾಪುರದಲ್ಲಿ ಕಿರ್ಲೋಸ್ಕರ್ ಜನರಲ್ ಇಂಜಿನಿಯರ್, ಬೆಂಗಳೂರು, ಇವರು 50 ಮೆಗಾವ್ಯಾಟ್ ಕೊಪ್ಪಳದಲ್ಲಿ ಮತ್ತು ಮೆ: ಇಂಡಿಯಾ ಪವರ್ ಪಾರ್ಟ್ನರ್ಸ್, ದೆಹಲಿ, ಇವರು 130 ಮೆಗಾವ್ಯಾಟ್, ತೂಬಿನಕೆರೆ, ಇಷ್ಟು ಪ್ರಮಾಣದ ಮೆಗಾವ್ಯಾಟ್ಸ್‌ನ್ನು ಮಲ್ಟಿ ಫ್ಯೂಯಲ್ ಜನರೇಟಿಂಗ್ ಸೆಟ್ಸ್ ಮೂಲಕ ಸುಮಾರು 2 ವರ್ಷಗಳಲ್ಲಿ ಪೂರ್ಣಗೊಳಿಸುವುದಕ್ಕೆ ರಾಜ್ಯಸರ್ಕಾರದವರು ಅವರಿಗೆ ಪರವಾನಗಿಯನ್ನು ಕೊಡುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಮುಖವಾದ ಪ್ರಶ್ನೆ. ಉತ್ತರವನ್ನು ಕೊಡುವಾಗ ಕೆಲವು ಅಂಶಗಳನ್ನು ಹೇಳಿದ್ದಾರೆ. ಮೊದಲನೆಯದು ವಿಶ್ವ ಬ್ಯಾಂಕ್‌ನಿಂದ ಹಣ ಬಾರದೇ ಇರುವುದಕ್ಕೆ ಕಾರಣಗಳನ್ನು ಹೇಳುತ್ತಾ, ಬಂಡವಾಳ ಹೂಡಿಕೆಯ ಶೇಕಡ 3 ರಷ್ಟು ಭಾಗ ಹಣ ವಾಪಸು ಬಂದಿಲ್ಲವೆಂಬ ಒಂದು ಕಾರಣ, ವಿದ್ಯುತ್ ನಿಗಮ ತೃಪ್ತಿಕರವಾದ ರೀತಿಯಲ್ಲಿ ಒಪ್ಪಂದವನ್ನು ಮಾಡಿಕೊಂಡಿಲ್ಲದ್ದು ಇನ್ನೊಂದು ಕಾರಣ, ಹೀಗೆ ಇವೆರಡೂ ಕಾರಣಕ್ಕೆ ಇಲಾಖೆ ಕಾರಣವಾಗಿದೆ. ಇದರ ಜೊತೆಗೆ ಖಾಸಗಿ ಸಂಸ್ಥೆಯಿಂದ ಅಂದರೆ ಪಿಯರ್‌ಲೆಸ್ ಸಂಸ್ಥೆಯಿಂದ ವಿದ್ಯುತ್ ಉತ್ಪಾದನೆಗಾಗಿ ಸುಮಾರು 200 ಕೋಟಿ ರೂ.ಗಳನ್ನು ಸಾಲ ತಂದಿದ್ದಾರೆಂದು ನಮಗೆ ತಿಳಿದುಬಂದಿದೆ. ಖಾಸಗಿ ಸಂಸ್ಥೆಗಳಿಂದ ಸಾಲ ತರುವಂಥ ವಿಚಾರಕ್ಕೆ ಸಂಬಂಧಪಟ್ಟಂತೆ ನನಗೆ ತಿಳಿದ ಪ್ರಕಾರ ಕೇಂದ್ರದ ಎಲೆಕ್ಟ್ರಿಸಿಟಿ ಆಕ್ಟ್ ಪ್ರಕಾರ ಹೇಳುವುದಾದರೆ ಖಾಸಗಿ ಸಂಸ್ಥೆಯಿಂದ 10 ಕೋಟಿ ರೂ.ಗಿಂತ ಹೆಚ್ಚಿಗೆ ಸಾಲವನ್ನು ತರಬೇಕಾದರೆ ನಮ್ಮ ಈ ಸದನದ ಒಪ್ಪಿಗೆ ಬೇಕಾಗುತ್ತದೆ. ಆದರೆ ಈ ಸದನದ ಒಪ್ಪಿಗೆಯನ್ನು ಪಡೆಯದೇ ಖಾಸಗೀ ಸಂಸ್ಥೆಯಿಂದ ಸಾಲವನ್ನು ತಂದಿದ್ದಾರೆಂಬುದು ನಿಜವೇ? ಹೀಗೆ 200 ಕೋಟಿ ರೂ. ಏನು ಸಾಲವನ್ನು ತಂದಿದ್ದೀರಿ ಇದರಲ್ಲಿ ಕೇವಲ 40 ಕೋಟಿ ರೂ.ಗಳನ್ನು ಮಾತ್ರ ವಿದ್ಯುತ್ ಉತ್ಪಾದನೆಗೆ ಉಪಯೋಗಿಸಿಕೊಂಡು ಉಳಿದ 160 ಕೋಟಿ ರೂ.ಗಳನ್ನು ವಿದ್ಯುಚ್ಛಕ್ತಿಯೇತರ ಕೆಲಸಗಳಿಗೆ ಸರ್ಕಾರ ಬಳಸಿದೆ ಎಂಬುದು ನನ್ನ ಆಪಾದನೆ. ಇನ್ನು ಮೂರನೆಯದಾಗಿ, ಹೀಗೆ ತಂದಿರತಕ್ಕ ಹಣವನ್ನು ಬ್ಯಾಂಕ್‌ನಲ್ಲಿ ಇಡದೆ ಟ್ರೆಜರಿಯಲ್ಲಿ ಜಮಾ ಮಾಡಿದ್ದಾರೆಂಬುದು ನನ್ನ ಮೂರನೇ ಆಪಾದನೆ.

ಅಧ್ಯಕ್ಷರು : ನೀವು ಕೇವಲ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಂತೆ ಮಾತ್ರ ಕೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಂತೆಯೇ ನಾನು ಕೇಳುತ್ತಿರುವುದು. ವಿದ್ಯುಚ್ಛಕ್ತಿಗಾಗಿ ಪಿಯರ್‌ಲೆಸ್ ಕಂಪೆನಿಯಿಂದ ತಂದಂಥ 200 ಕೋಟಿ ರೂ.ಗಳಲ್ಲಿ ಕೇವಲ 40 ಕೋಟಿ ರೂ.ಗಳನ್ನು ವಿದ್ಯುಚ್ಛಕ್ತಿಗಾಗಿ ಉಪಯೋಗ ಮಾಡಿ ಉಳಿದ 1.60 ಕೋಟಿ ರೂ.ಗಳನ್ನು ಸರ್ಕಾರ ದುರುಪಯೋಗ ಮಾಡಿದೆ ಎಂಬ ಆಪಾದನೆ ನನ್ನದು. ಈ ರೀತಿ ಸಾಲ ತರುವುದಕ್ಕೆ ಅವಕಾಶ ಇದೆಯೇ? ಹಣ ದುರುಪಯೋಗವಾಗಿದೆಯೇ? ಈ ಹಣವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಇಲ್ಲದೇ ಟ್ರೆಜರಿಯಲ್ಲಿಟ್ಟಿರತಕ್ಕ ಉದ್ದೇಶವಾದರೂ ಏನು?

ಶ್ರೀ ಎಸ್.ಎಂ. ಕೃಷ್ಣ : ಪಿಯರ್‌ಲೆಸ್ ಎಂಬ ಸಂಸ್ಥೆಯಿಂದ ನಾವು ಹಣವನ್ನು ತರುವುದಕ್ಕೆ ಕಾರಣ ಏನೆಂದರೆ, ಯಾವಾಗ ವಿಶ್ವ ಬ್ಯಾಂಕ್‌ನವರು ಸಾಲವನ್ನು ಕೊಡುವುದನ್ನು ನಿಲ್ಲಿಸಿದರೋ ಆಗ ವಿಧಿಯಿಲ್ಲದೆ ನಾವು ಕಲ್ಕತ್ತಾದ ಈ ಪಿಯರ್‌ಲೆಸ್ ಸಂಸ್ಥೆಯಿಂದ 200 ಕೋಟಿ ರೂ.ಗಲ ಸಾಲವನ್ನು ತೆಗೆದುಕೊಳ್ಳಬೇಕಾಯಿತು. ಆ ಹಣದ ಬಗ್ಗೆ ಹೇಳುವುದಾದರೆ, ಇದರಲ್ಲಿ ಒರಡು ಸಿನಾರಿಯೋ ಇರುತ್ತದೆ. ಮೊದಲನೆಯದು, ನಮಗೆ ಬೇಕಾದ ಹಣವನ್ನು ಯಾವುದಾದರೂ ನಮಗೆ ಬೇಕಾದ ಬ್ಯಾಂಕ್‌ನಲ್ಲಿ ಇಡತಕ್ಕದ್ದು, ಇನ್ನೊಂದು, ನಮ್ಮದ್ರೇ ಆದಂಥ ಟ್ರೆಜರಿಯಲ್ಲಿ ಇಡತಕ್ಕದ್ದು. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ ಒಮ್ಮೆಗೇ 200 ಕೋಟಿ ರೂ. ಬೇಕಾಗಿರಲಿಲ್ಲ. ಕೆಲಸಗಳು ನಡೆದಂತೆಲ್ಲಾ ಹಣವನ್ನು ಉಪಯೋಗಿಸಿಕೊಳ್ಳಬೇಕೆಂಬ ಉದ್ದೇಶದಿಂದ ಈ 200 ಕೋಟಿ ರೂ.ಗಳನ್ನು ತಂದೆವು. ಕರ್ನಾಟಕ ಮಂಡಲಿಗೆ ನಾವು ಇದರಲ್ಲಿ ಸುಮಾರು 90 ರಿಂದ 100 ಕೋಟಿ ರೂ.ಗಳನ್ನು ಉಪಯೋಗಿಸಿಕೊಂಡಿದ್ದೇವೆ. ಇನ್ನು ಸುಮಾರು 104 ಕೋಟಿ ರೂ.ಗಳಷ್ಟನ್ನು ಟ್ರೆಜರಿಯಲ್ಲಿದ್ದೇವೆ. ರಾಜ್ಯಸರ್ಕಾರದವರು ಈ ಹಣಕ್ಕೆ ಬ್ಯಾಂಕ್ ಗ್ಯಾರಂಟಿಯನ್ನು ಕೊಟ್ಟಿರುವುದರಿಂದ ಈ ಹಣವನ್ನು ನಾವು ಟ್ರೆಜರಿಯಲ್ಲಿದ್ದೇವೆ, ಮತ್ತು ಈ ಹಣಕ್ಕೆ ಕೊಡಬೇಕಾದ 16.5 ಪರ್ಸೆಂಟ್ ಹಣವನ್ನು ರಾಜ್ಯಸರ್ಕಾರ ವಿದ್ಯುಚ್ಛಕ್ತಿ ಮಂಡಲಿಗೆ ತುಂಬಿಕೊಡುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಈ ಹಣವನ್ನು ನೀವು ಯಾವುದಕ್ಕೆ ಖರ್ಚು ಮಾಡಿದ್ದೀರಿ ಎಂಬುದನ್ನು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಣ ಇಲ್ಲದೆ ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳು ಸ್ಥಗಿತವಾಗಿರುವಾಗ 104 ಕೋಟಿ ರೂ.ಗಳಿಗೆ ಬಡ್ಡಿ ಕೊಟ್ಟುಕೊಂಡು ಟ್ರೆಜರಿಯಲ್ಲಿಡುವುದಾದರೆ ಇದಕ್ಕೆ ನಿಮಗೆ ಯಾರು ಅಧಿಕಾರವನ್ನು ಕೊಟ್ಟಿದ್ದಾರೆ?

(ಗೊಂದಲ)

ಅಧ್ಯಕ್ಷರು : ತಮಗೇನಾದರೂ ಅನುಮಾನವಿದ್ದರೆ ಬೇರೆ ರೀತಿಯಲ್ಲಿ ಪ್ರಸ್ತಾವನೆ ಮಾಡಿ. ಬೇಡವೆಂದು ನಾನು ಹೇಳುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೇ ಹಣವಿಲ್ಲ.

ಅಧ್ಯಕ್ಷರು : ತಾವು ಈ ವಿಷಯವನ್ನು ಬೇರೆ ರೂಪದಲ್ಲಿ ತನ್ನಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಂತ್ರಿ ಮಂಡಲದಲ್ಲಿ ಇದಕ್ಕೆ ಅನುಮತಿ ಸಿಕ್ಕಿಲ್ಲ. ಈ ಸದನದ ಗಮನಕ್ಕೆ ಇದನ್ನು ತಂದಿಲ್ಲ. ಈ ಸದನದ ಅನುಮತಿ ತೆಗೆದುಕೊಂಡಿಲ್ಲ. ಕಳೆದ ಮಾರ್ಚಿ ತಿಂಗಳಲ್ಲಿ ಬಡ್ಜೆಟ್ ಇಟ್ಟಾಗ ಈ ಸದನವನ್ನು ಗಣನೆಗೇ ತೆಗೆದುಕೊಳ್ಳಲಿಲ್ಲ.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ನಾನು ಚಂದ್ರೇಗೌಡರನ್ನು ಕರೆದಿದ್ದೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹೋದ ಬಡ್ಜೆಟ್ ಅಧಿವೇಶನದಲ್ಲಿ ಇದನ್ನು ಸದನದ ಗಮನಕ್ಕೆ ತರಲಿಲ್ಲ. ಕಳೆದ ಸಾರಿ ನೀವು 200 ಕೋಟಿ ರೂ. ಸಾಲ ತಂದಿದ್ದನ್ನು ಈ ಸದನದ ಗಮನಕ್ಕೆ ತರಲಿಲ್ಲ.

(ಗೊಂದಲ)

ಅಧ್ಯಕ್ಷರು : ಈ ರೀತಿ ಮಾತನಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಅಲ್ಲದೆ ನೀವು ಹೇಳುವುದು ಯಾವುದೂ ಕೂಡ ರೆಕಾರ್ಡ್‌ಗೆ ಹೋಗುವುದಿಲ್ಲ. ನಾನು ಮಾನ್ಯ ಚಂದ್ರೇಗೌಡರನ್ನು ಕರೆದಿದ್ದೇನೆ. ತಾವು ಕುಳಿತುಕೊಳ್ಳಿ. ಅದು ಪಾಲಿಸಿ ಮ್ಯಾಟರ್ ಇರಲಿ ಅಥವಾ ಬೇರೆ ಯಾವುದೇ ಇರಲಿ, ತಮ್ಮ ಪ್ರಸ್ತಾವನೆಗೆ ನಾನು ಅಡ್ಡ ಬರುತ್ತಿಲ್ಲ. ಪ್ರಶ್ನೋತ್ತರ ಕಾಲದಲ್ಲಿ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ತಮಗೆ ಸಮಾಧಾನವಾಗದಿದ್ದರೆ ಬೇರೆ ರೂಪದಲ್ಲಿ ಇದೇ ವಿಚಾರವನ್ನು ತನ್ನಿ, ನಾನು ಅವಕಾಶ ಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಪ್ರಶ್ನೋತ್ತರ ಕಾಲದಲ್ಲಿ ನಾನು ವ್ಯವಸ್ಥೆಯ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಏಕೆಂದರೆ ಇದು ಈ ಸದನದ ಹಕ್ಕು ಚ್ಯುತಿಯಾಗುತ್ತದೆ. ಇದು ಈ ಸದನದ ಗೌರವದ ಪ್ರಶ್ನೆಯಾಗುತ್ತದೆ. ಸದನದ ಗೌರವ ರಕ್ಷಣೆಯ ಜವಾಬ್ದಾರಿಯನ್ನು ತಮಗೆ ವಹಿಸಿದ್ದೇನೆ. ಕೇಂದ್ರ ಸರ್ಕಾರದ ಎಲೆಕ್ಟ್ರಿಸಿಟಿ ಆಕ್ಟ್ ಪ್ರಕಾರ 10 ಕೋಟಿ ರೂ.ಗಿಂತ ಹೆಚ್ಚಿಗೆ ಹಣವನ್ನು ಸಾಲ ತರಬೇಕಾದರೆ ಅದಕ್ಕೆ ಈ ಸದನದ ಅನುಮೋದನೆ ಬೇಕಾಗುತ್ತದೆ. ಇದು ನನ್ನ ಮೂಲ ಪ್ರಶ್ನೆ. ಈ ಸದನದ ಮಂಜೂರಾತಿ ಇಲ್ಲದೆ, ಇಷ್ಟು ದೊಡ್ಡ ಪ್ರಮಾಣದ ಹಣವನ್ನು ನೀವು ಸಾಲ ತಂದು ಟ್ರೆಜರಿಯಲ್ಲಿಟ್ಟಿದೀರಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕು. ಏಕೆಂದರೆ ಈ ಸದನದ ಮಂಜೂರಾತಿ ಇಲ್ಲದೆ ನೀವು 10 ಕೋಟಿ ರೂ.ಗಿಂತ ಹೆಚ್ಚಿಗೆ ಹಣವನ್ನು ಸಾಲ ತರುವುದಕ್ಕೆ ಸಾಧ್ಯವೇ ಇಲ್ಲ. ಇದು ನನ್ನ ಮೂಲಭೂತ ಪ್ರಶ್ನೆ. ಇಷ್ಟೊಂದು ಹಣವನ್ನು ಸದನದ ಮಂಜೂರಾತಿ ಇಲ್ಲದೆ ತಂದಿರುವುದು ಸದನದ ಹಕ್ಕುಚ್ಯುತಿಯಾಗುತ್ತದೆ, ಸದನದ ಗೌರವಕ್ಕೆ ಧಕ್ಕೆ ತಂದಿದ್ದೀರಿ. ನೀವು ತಂದಿರತಕ್ಕ ಸಾಲ ಸಿಂಧುವಾಗುವುದಿಲ್ಲ. ಮಾನ್ಯ ಉಪ ಮುಖ್ಯ ಮಂತ್ರಿಗಳು ಬ್ಯಾರಿಸ್ಟರ್ ಆಗಿದ್ದಾರೆ, ಕಾನೂನಿನ ಬಗ್ಗೆ ನಾವು ಅವರಿಂದ ನಿರೀಕ್ಷಣೆ ಮಾಡದೆ ಇನ್ನಾರಿಂದ ಮಾಡುವುದಕ್ಕೆ ಸಾಧ್ಯ? ನಾನಾದರೂ ಅವರಿಂದ ಕೇಳಬಯಸುತ್ತೇನೆ. ಸೆಂಟ್ರಲ್ ಆಕ್ಟ್ ಆಫ್ ಪಾರ್ಲಿಮೆಂಟ್‌ನಲ್ಲಿರತಕ್ಕ ನಿಯಮಾವಳಿಗಳ ಉಲ್ಲಂಘನೆ ಆಗಿದೆಯೇ ಇಲ್ಲವೇ?

ಅಧ್ಯಕ್ಷರು : ಇದು ಕ್ಲಾರಿಫಿಕೇಷನ್ ಅಲ್ಲ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೂರಾನಾಲ್ಕು ಕೋಟಿ ರೂ.ಗಳನ್ನು ಟ್ರೆಜರಿಯಲ್ಲಿ ಇಟ್ಟಿದ್ದಾರಲ್ಲಾ ಇದು ಯಾರ ದುಡ್ಡು?

ಅಧ್ಯಕ್ಷರು : ಈ ರೀತಿ ಆದರೆ ನಾವು ಸದನವನ್ನು ನಡೆಸುವುದಕ್ಕಾಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೆ ಮಾತನಾಡಲು ಅನಂತರ ಅವಕಾಶ ಕೊಡಿ.

ಅಧ್ಯಕ್ಷರು : ಕೊಡುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಏತಕ್ಕೆ ಹೀಗೆ ಮಾಡುತ್ತೀರಿ ಸ್ವಾಮಿ? ಇಂಥ ಪ್ರಮುಖವಾದ ವಿಷಯದ ಬಗ್ಗೆ ಚರ್ಚೆ ಮಾಡಲು ತಾವು ಏತಕ್ಕೆ ಅವಕಾಶ ಕೊಡುವುದಿಲ್ಲವೇ?

ಅಧ್ಯಕ್ಷರು : ತಾವು ಇದನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರದಲ್ಲಿ ದುಡ್ಡಿಲ್ಲ. 104 ಕೋಟಿ ರೂ.ಗಳನ್ನು ಟ್ರೆಜರಿಯಲ್ಲಿಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಬಡ್ಡಿ ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಆ ಹಣವನ್ನು ಯಾವುದಕ್ಕೆ ತಂದರು? ಯಾವುದಕ್ಕೆ ಬಳಸಿಕೊಂಡಿದ್ದಾರೆ ಎಂಬುದನ್ನು ಹೇಳಲಿ.

(ಗೊಂದಲ)

ಅಧ್ಯಕ್ಷರು : ನೀವು ಕುಳಿತುಕೊಳ್ಳಿ. ನಥಿಂಗ್ ವಿಲ್ ಗೋ ಆನ್ ರೆಕಾರ್ಡ್.

ಶ್ರೀ ಬಿ.ಎಸ್.ಯಡಿಯೂರಪ್ಪ : ತಾವು ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು : ಕುಳಿತುಕೊಳ್ಳಿ. ನಾನು ಹೇಳಿದ್ದನ್ನು ತಾವು ಕೇಳಬೇಕು

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕಡತಕ್ಕೆ ಹೋಗುವುದಿಲ್ಲ, ನೀವು ಮಾತನಾಡಬೇಡಿ ಎಂದರೆ ಏನು ಅರ್ಥ?

ಅಧ್ಯಕ್ಷರು : ಉತ್ತರ ಹೇಳುವುದಕ್ಕೆ ಅವರಿಗೆ ಹೇಳುತ್ತಿದ್ದೇನೆ. ಆದರೆ ನಿಮ್ಮದನ್ನೇ ನೀವು ಹೇಳುತ್ತಿದ್ದರೆ ಅದರ ಅರ್ಥ ಏನು? ಇದು ಪ್ರಶ್ನೋತ್ತರ ಕಾಲ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೇ, ಕೇವಲ ಪ್ರಶ್ನೋತ್ತರ ವೇಳೆಯನ್ನೇ ಇಷ್ಟು ಹೊತ್ತು ತೆಗೆದುಕೊಂಡರೆ ಹೇಗೆ? ಇದೇ ವಿಷಯವನ್ನೇ ಇವರು ಬೇರೆ ರೂಪದಲ್ಲಿ ತರಲಿ. ಇವರು ಪ್ರಶ್ನೋತ್ತರ ವೇಳೆಯನ್ನು ಹಾಳುಮಾಡಿದರೆ ಹೇಗೆ? ಬೇರೆಯವರಿಗೆ ಅವಕಾಶ ಬೇಡವೇ? ಪ್ರಶ್ನೆ ನಿಮ್ಮೊಬ್ಬರದ್ದೇ ಇದೆಯೇ? ನಾವೂ ಕೂಡ ಪ್ರಶ್ನೆ ಕೇಳಬೇಕಾಗುತ್ತದೆ. ನೀವು ಇದನ್ನೇ ಬೇರೆ ರೂಪದಲ್ಲಿ ತನ್ನಿ.

(ಗೊಂದಲ)

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಉಪಮುಖ್ಯಮಂತ್ರಿಗಳಲ್ಲಿ ಒಂದೇ ಒಂದು ಉಪಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಸದನವನ್ನು ಮಿಸ್‌ಗೈಡ್ ಮಾಡುತ್ತಿದ್ದಾರೆ. ಸತ್ಯಕ್ಕೆ ದೂರವಾದ ಸಂಗತಿ ಹೇಳುತ್ತಿದ್ದಾರೆ. ಟ್ರೆಜರಿಯಲ್ಲಿ ಈ ಹಣ ಯಾವ ಲೆಕ್ಕದಲ್ಲಿದೆ? 104 ಕೋಟಿ ರೂ. ಎಲ್ಲಿದೆ ಎಂಬುದನ್ನು ಸ್ಪಷ್ಟಪಡಿಸಬೇಕು.

ಅಧ್ಯಕ್ಷರು : ಇದು ಪ್ರಶ್ನೋತ್ತರ ಕಾಲ. ಇದೇ ವಿಚಾರವನ್ನು ಬೇರೆ ರೂಪದಲ್ಲಿ ತನ್ನಿ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಸಭಾಧ್ಯಕ್ಷರೇ,

ಅಧ್ಯಕ್ಷರು : ಪ್ರೊಫೆಸರ್‌ರವರೇ ಕುಳಿತುಕೊಳ್ಳಿ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಒಂದೇ ಒಂದು ವಿಷಯ. ತಾವು ಅವಕಾಶ ಕೊಟ್ಟರೆ..

ಅಧ್ಯಕ್ಷರು : ಈ ರೀತಿ ಆದರೆ ನಾನು ಸಭೆ ನಡೆಸುವುದಕ್ಕಾಗುವುದಿಲ್ಲ. ತಾವು ಕುಳಿತುಕೊಳ್ಳಿ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಬಹುಮುಖ್ಯವಾದ ಪ್ರಶ್ನೆ.

ಅಧ್ಯಕ್ಷರು : ತಾವು ಪ್ರಶ್ನೆ ಕಳುಹಿಸಿ. ಈಗ ತಾವು ದಯವಿಟ್ಟು ಕುಳಿತುಕೊಳ್ಳಿ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ನಾನು ಏನು ಹೇಳುತ್ತಿದ್ದೇನೆಂದರೆ...

ಅಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಿ ಪ್ರೊ. ನಂಜುಂಡಸ್ವಾಮಿಯವರೇ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಚಂದ್ರೇಗೌಡರು ಎತ್ತಿದ್ದಕ್ಕೆ ಉಪಮುಖ್ಯಮಂತ್ರಿಗಳು ಕೊಟ್ಟಂಥ ಉತ್ತರ it directly..

ಅಧ್ಯಕ್ಷರು : ತಾವು ಹೇಳುವುದನ್ನು ಹೇಳಲು ನಾನು ಅವಕಾಶ ಕೊಡುತ್ತೇನೆ.

Prof. M.D. Nanjundaswamy : It directly relates to the definition of a State under the Indian Constitution.

ಅಧ್ಯಕ್ಷರು : ತಾವು ಕಾನ್‌ಸ್ಟಿಟ್ಯೂಷನ್ ಅದೆಲ್ಲಾ ಹೇಳಿ. ಆದರೆ ಈಗ ಆಗುವುದಿಲ್ಲ. ಈಗ ನಾನು ತಮಗೆ ಅವಕಾಶ ಕೊಡುತ್ತಿಲ್ಲ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಇದು ಹಣಕಾಸಿನ ವ್ಯವಹಾರ. this Government cannot come under the definition of State under the Constitution. Whether your Government comes under the definition of State under the Indian Constitution with this kind of financial indicipline?

ಅಧ್ಯಕ್ಷರು : ಈ ರೀತಿ ನೀವು ಮಾಡುವುದಾದರೆ ನಾನು ಕಲಾಪ ನಡೆಸುವುದಕ್ಕಾಗುವುದಿಲ್ಲ. ದಯವಿಟ್ಟು ಕ್ಷಮಿಸಿ.

ಪ್ರೊ : ಎಂ.ಡಿ.ನಂಜುಂಡಸ್ವಾಮಿ : ಸಂವಿಧಾನದ ಚೌಕಟ್ಟಿನೊಳಗೆ ಉಪಮುಖ್ಯಮಂತ್ರಿಗಳಿಗೆ ಗೊತ್ತಾಗುತ್ತಿದೆ. ಅವರಿಗೆ ಅರ್ಥವಾಗುತ್ತಿದೆ. ಅವರೇ ಹೇಳಬಹುದು ನಮಗೆ.

ಅಧ್ಯಕ್ಷರು : ತಾವು ಕುಳಿತುಕೊಳ್ಳಬೇಕು. ಈ ರೀತಿ ಆದರೆ ಸಭೆಯ ಕಾರ್ಯಕಲಾಪಗಳನ್ನು ನಡೆಸುವುದಕ್ಕಾಗುವುದಿಲ್ಲ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಉಪಮುಖ್ಯಮಂತ್ರಿಗಳು ಕಾನೂನು ಪಂಡಿತರು ಅವರೇ ಹೇಳಬೇಕು.

ಅಧ್ಯಕ್ಷರು : ತಾವು (ಉಪಮುಖ್ಯಮಂತ್ರಿಗಳಿಗೆ) ಉತ್ತರ ಹೇಳಿ. ಅದೇನೂ ರೆಕಾರ್ಡ್‌ನಲ್ಲಿ ಹೋಗುವುದಿಲ್ಲ.

ಶ್ರೀ ಎಸ್.ಎಂ.ಕೃಷ್ಣ (ಉಪಮುಖ್ಯಮಂತ್ರಿಗಳು):

ಒರಿಜಿನಲ್ ಪ್ರಾವಿಷನ್ ಪ್ರಕಾರ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ 10 ಕೋಟಿ ಮಾತ್ರ ಬಾರೋ ಮಾಡಬಹುದಾಗಿತ್ತು. ಇದನ್ನು By a Notification and then with the approval of the Karnataka Electricity Board 600 ಕೋಟಿ ರೂಪಾಯಿಗೆ 1991ರಲ್ಲಿ ಅವರು ಸಾಲ ಮಾಡಬೇಕಾದಂಥ ಮೊತ್ತವನ್ನು ಏರಿಸಿದ್ದಾರೆ. ಅದನ್ನು ಮೊನ್ನೆ ನಾವು 1000 ಕೋಟಿ ರೂಪಾಯಿಗಳಿಗೆ ಏರಿಸಿದ್ದೇವೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಎಷ್ಟು ಹಣವನ್ನು ಸಾಲವಾಗಿ ಪಡೆಯಬಹುದು ಎಂಬುದನ್ನು ಮಾಡಿದ್ದೇವೆ. ಎರಡನೆಯದು ಅದನ್ನು ಹೇಗೆ ಉಪಯೋಗಿಸುತ್ತಿದ್ದಾರೆಂದರೆ ರಾಜ್ಯದ ಉದ್ದಗಲ ನಡೆಯುತ್ತಾ ಇರತಕ್ಕ ಹೊಸ ಸಬ್-ಸ್ಟೇಷನ್ಸ್, ಹೊಸ ಲೈನ್‌ಗಳನ್ನು ಎಳೆಯುತ್ತಿದ್ದೇವೆ. ಹೊಸ ಕೆಪಾಸಿಟರ್ ಬ್ಯಾಂಕ್‌ಗಳನ್ನು ಮಾಡುತ್ತಿದ್ದೇವೆ. ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು ಜೋಡಿಸುತ್ತಿದ್ದೇನೆ. ಇದೆಲ್ಲಾ ಕಣ್ಣಿಗೆ ಕಾಣತಕ್ಕ ವಿಚಾರಗಳು. ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಏನೇನಾಗುತ್ತಿದೆ ಎಂಬುದು....

ಶ್ರೀ ವಾಟಾಳ್ ನಾಗರಾಜ್ : ನಮ್ಮ ಕ್ಷೇತ್ರದಲ್ಲಿ ಕತ್ತಲೆ ಇದೆ.

ಶ್ರೀ ಎಸ್.ಎಂ.ಕೃಷ್ಣ : ಒಂದು ನಿಮಿಷ ಇರಿ. ಕತ್ತಲೆ ಇದೆ ನಿಜ.ಸಂಪೂರ್ಣವಾಗಿ ಬೆಳಗಿಸುತ್ತಿದ್ದೇನೆ ಎಂದು ನಾನು ಹೇಳುತ್ತಿಲ್ಲ. ನಿಜ ಈ ತೊಂದರೆಗಳಿರುವುದರಿಂದಲೇ ನಾವು ಸಾಲ ಮಾಡುತ್ತಿದ್ದೇವೆ. ವರ್ಲ್ಡ್ ಬ್ಯಾಂಕಿನಿಂದ ನಾವು ಸಾಲ ಮಾಡಬಹುದಂತೆ. ಆದರೆ ನಮ್ಮ ಕಂಪೆನಿಗಳಿಂದ ನಾವು ಸಾಲ ಮಾಡುವುದಕ್ಕೆ ಏನು ಅಡ್ಡಿ? ಇದು ನಮಗೆ ಅರ್ಥವಾಗುವುದಿಲ್ಲ. ಸಾಲ ಎಂದರೆ ಸಾಲ. ವರ್ಲ್ಡ್ ಬ್ಯಾಂಕ್ ಸಾಲಕ್ಕೆ ಪರ್ಯಾಯ ವ್ಯವಸ್ಥೆಯೊಂದನ್ನು ಮಾಡಿದ್ದೇವೆ ಎಂದು ಹೇಳಿದಮೇಲೆ ಎಲ್ಲಿಟ್ಟಿದ್ದೀರಿ ದುಡ್ಡು, ತೋರಿಸಿ ಎಂದರೆ, ಬನ್ನಿ ನನ್ನ ಜೊತೆಯಲ್ಲಿ ಟ್ರೆಜರಿಗೆ, ತೋರಿಸುತ್ತೇನೆ ಎಲ್ಲಿಟ್ಟಿದ್ದೇವೆ ಎಂದು. ನಾನು ಮಾನ್ಯ ಸದಸ್ಯರನ್ನು ಅತ್ಯಂತ ವಿನಯದಿಂದ ಕೇಳುತ್ತಿದ್ದೇನೆ, ನಾವು ಕಷ್ಟ ಪರಿಸ್ಥಿತಿಯಲ್ಲಿದ್ದೇವೆ. ಏಕಾಏಕಿ ನಮಗೆ ಯಾವ ನೋಟೀಸು ಕೊಡದೆ ಈ ರೀತಿ ಮಾಡಿದ್ದರಿಂದ ಪರಿಸ್ಥಿತಿ ಗಂಭೀರವಾಗಿದೆ. ವಿಶ್ವಬ್ಯಾಂಕಿನಿಂದ ಸಾಲ ಬರುತ್ತದೆಂದು ನಾನಾ ಯೋಜನೆಗಳನ್ನು ನಾವು ಹಮ್ಮಿಕೊಂಡಿದ್ದೇವೆ.

ಮೊನ್ನೆ ಟ್ಯಾರಿಫ್ ಜಾಸ್ತಿ ಮಾಡುತ್ತೇವೆಂದು ಹೇಳಿದರೆ ನೀವೇ ಧರಣ ಮಾಡಿ ಟಾರಿಫ್ ಕಡಿಮೆ ಮಾಡಿಸಿದಿರಿ.

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೇ....

ಶ್ರೀ ಎಸ್.ಎಂ. ಕೃಷ್ಣ : ಒಂದು ನಿಮಿಷ, ನಾನು ಮುಗಿಸಿಬಿಡುತ್ತೇನೆ. ಧರಣ ಮಾಡಿದ್ದೀರೋ ಇಲ್ಲವೋ ಇಲ್ಲಿ ಟ್ಯಾರಿಫ್‌ಗೋಸ್ಕರ?

ಶ್ರೀ ಸಿ. ಬೈರೇಗೌಡ : ನೀವು ಹೇಳುವುದು ಸರಿಯಲ್ಲ. ಟ್ಯಾರಿಫ್ ಬಗ್ಗೆ ಸದನ ಸಮಿತಿ ಒಂದು ವರದಿ ಕೊಟ್ಟಿದೆ. ಅದು ಹಾಗಾಗುವುದಿಲ್ಲ ಎಂದು ತಾವು ಹೇಳುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ರೈತರಿಗೆ ವಿಧಿಸುವ ವಿದ್ಯುತ್‌ಬೆಲೆ ಕಡಿಮೆ ಮಾಡಿ ಕಾರ್ಖಾನೆಗಳ ಬೆಲೆ ಜಾಸ್ತಿ ಮಾಡಿ ಎಂದು ಹೇಳಿದ್ದೇವೆ ಸ್ವಾಮಿ.

ಶ್ರೀ ಎಸ್.ಎಂ. ಕೃಷ್ಣ : ಕರ್ನಾಟಕದ ಕಾರ್ಖಾನೆಗಳ ಮೇಲೆ ನಾವು ಹಾಕಿರತಕ್ಕ ಟ್ಯಾರಿಫ್ ಬಹಳ ಜಾಸ್ತಿ, ನೀವು ಇದೇ ರೀತಿ ಹೆಚ್ಚಿಸುತ್ತಾ ಹೋದರೆ ಇನ್ನು ಮೇಲೆ ಕರ್ನಾಟಕದಲ್ಲಿ ನಾವು ಕಾರ್ಖಾನೆಗಳನ್ನೇ ತೆರೆಯುವುದಿಲ್ಲ ಎಂಬ ಬೆದರಿಕೆಯನ್ನು ಕೆಲವರು ಹಾಕುತ್ತಿದ್ದಾರೆ. ಆದ್ದರಿಂದ ಒಂದು ಬ್ಯಾಲೆನಸ್ಡ್ ಅಪ್ರೋಚ್ ಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ಸದಸ್ಯರನ್ನು ನಾನು ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ ನಮ್ಮ ಬ್ಯಾಲೆನಸ್ಡ್ ಅಪ್ರೋಚ್‌ಗೆ ತಮ್ಮ ಇನ್‌ಪುಟ್ಸ್ ಏನಿದೆ ಅದನ್ನು ಕೊಟ್ಟರೆ ನಾವು ಅದನ್ನು ಅಳವಡಿಸಿಕೊಳ್ಳುವುದಕ್ಕೆ ಸದಾ ಸಿದ್ಧರಾಗಿದ್ದೇವೆ. ಸದನದ ಸಮಿತಿಯೊಂದನ್ನು ಮಾಡಿದ್ದೆವು. ತಾವು ಅತ್ಯಂತ ಅಮೂಲ್ಯವಾದ ಒಂದು ವರದಿಯನ್ನು ಕೊಟ್ಟಿದ್ದೀರಿ. ಆ ವರದಿ ಆಧಾರದ ಮೇಲೆ ನಾವು ತೀರ್ಮಾನಗಳನ್ನು ಮಾಡತಕ್ಕ ದೃಷ್ಟಿಯಲ್ಲಿ ನಮ್ಮನ್ನು ತೊಡಗಿಸಿಕೊಂಡಿದ್ದೇವೆ.

ತುಮಕೂರು ನೆಲಮಂಗಲ ರಾಷ್ಟ್ರೀಯ ಹೆದ್ದಾರಿಯನ್ನು ನಾಲ್ಕು ರಸ್ತೆಗಳನ್ನಾಗಿ ರೂಪಿಸುವುದು

170- ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರು ನೆಲಮಂಗಲ ರಾಷ್ಟ್ರೀಯ ಹೆದ್ದಾರಿಯನ್ನು ಫೋರ್‌ಲೈನ್ ರಸ್ತೆ ಮಾಡುವ ಯೋಜನೆ ಸರ್ಕಾರದ ಆಲೋಚನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ, ಈ ರಸ್ತೆಯ ಅಕ್ಕಪಕ್ಕದಲ್ಲಿ ಇರುವ ಜಮೀನನ್ನು ವಶಪಡಿಸಿಕೊಳ್ಳಲು ಸರ್ಕಾರದವರು ಕ್ರಮ ಕೈಗೊಂಡಿರುವರೆ?

ಇ) ಹಾಗಿಲ್ಲದಿದ್ದಲ್ಲಿ ಎಂದು ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಇದೆ

ಆ) ಇಲ್ಲಾ

ಇ) ಕೇಂದ್ರ ಸಾರಿಗೆ ಮಂತ್ರಾಲಯದವರಿಂದ ಅನುಮೋದನೆ ದೊರೆತ ನಂತರ ಕಾರ್ಯಗತಗೊಳಿಸಲಾಗುವುದು.

12.00 ನೂನ್

ಶ್ರೀ ಸಿ. ವೀರಭದ್ರಯ್ಯ : ಮಾನ್ಯ ಅಧ್ಯಕ್ಷರೇ, ನೆಲಮಂಗಲ - ತುಮಕೂರು ರಸ್ತೆಯಲ್ಲಿ ದಿನಬೆಳಗಾದರೆ 2-3 ಅಪಘಾತಗಳು ಆಗುತವೆ. ರಸ್ತೆ ಅಗಲ ಇಲ್ಲದೇ ಇರುವುದರಿಂದ ಅನೇಕ ಅಪಘಾತಗಳು ಆಗುತ್ತವೆ. ಕಳೆದ ಸಾರಿ ಈ ಪ್ರಶ್ನೆಯನ್ನು ಹಾಕಿದಾಗ ಸರ್ಕಾರ ಇದು ಆಲೋಚನೆಯಲ್ಲಿದೆ ಎಂದು ಹೇಳುತ್ತಿದ್ದರು. ಕಾರ್ಯಕ್ರಮ ಏನೂ ತೆಗೆದುಕೊಂಡಿಲ್ಲ. ದಿನಬೆಳಗಾದರೆ 10-15 ಅಪಘಾತಗಳು ಆಗಿ ಜನರು ಸಾಯುತ್ತಿದ್ದಾರೆ. ಸರ್ಕಾರಕ್ಕೆ ತಮ್ಮ ಮೂಲಕ ರಾಷ್ಟ್ರೀಯ ಹೆದ್ದಾರಿ ರಸ್ತೆಯನ್ನು ಅಗಲ ಮಾಡಬೇಕೆಂದು ಕೇಳುತ್ತಿದ್ದೇನೆ. ರಸ್ತೆ ಅಗಲ ಮಾಡಲಿಕ್ಕೆ ಅಕ್ಕಪಕ್ಕದ ಜಮೀನು ಅಕ್ವೈರ್ ಆಗಿದೆಯೇ ಎಂದು ಕೇಳುತ್ತಿದ್ದೇನೆ. ದಯಮಾಡಿ ಮಾನ್ಯ ಮಂತ್ರಿಗಳು ಈ ಬಗ್ಗೆ ಸರಿಯಾದ ಉತ್ತರವನ್ನು ಕೊಡಬೇಕೆಂದು ಕೇಳುತ್ತಿದ್ದೇನೆ. ಅಲ್ಲಿ ಡಬ್ಬಲ್ ರಸ್ತೆ ಆಗದಿದ್ದರೆ ಅಲ್ಲಿ ಪ್ರಯಾಣ ಮಾಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ದ್ವಿಬದಿಯ ರಸ್ತೆ ಆಗಬೇಕೆಂದು ಸರ್ಕಾರ ಕೇಂದ್ರಸರ್ಕಾರದ ಜೊತೆಯಲ್ಲಿ ವ್ಯವಹಾರ ನಡೆಸುತ್ತಿದ್ದೇವೆ. ಬೆಂಗಳೂರಿನಿಂದ ನೆಲಮಂಗಲದವರೆಗೂ ಈಗಾಗಲೇ ಡಬ್ಬಲ್ ರಸ್ತೆಯಿದೆ. ನೆಲಮಂಗಲದಿಂದ ತುಮಕೂರಿನವರೆಗೆ ಡಬ್ಬಲ್ ರಸ್ತೆಯಾಗಬೇಕೆಂದು ಸರ್ಕಾರ ಒತ್ತಾಯ ಮಾಡುತ್ತಿದೆ. ಕೇಂದ್ರ ಸರ್ಕಾರ ಕೂಡ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕಿನ ಯೋಜನೆಯಲ್ಲಿ ಬ್ಯಾಂಕಿನವರು ಅಥವಾ ಜಪಾನ್ ಏಡೆಡ್ ಪ್ಯಾಕೇಜಸ್ ಸ್ಕೀಮ್‌ನಲ್ಲಿ ಮಾಡುತ್ತೇವೆಂದು ಮೊನ್ನೆ ತಾನೇ ಕೇಂದ್ರದ ಮಂತ್ರಿಗಳು ಇಲ್ಲಿ ಬಂದು ನಮ್ಮ ಕೆಲವು ಬೇಡಿಕೆಗಳನ್ನು ಪರಿಶೀಲನೆ ಮಾಡುವಾಗ ಆಶ್ವಾಸನೆ ಕೊಟ್ಟಿದ್ದಾರೆ. ನಮಗೆ ಇದು ಬಹಳ ಜಾಗ್ರತೆಯಾಗಿ ಪ್ರಾರಂಭವಾಗಬೇಕೆಂಬ ಆಸೆ ಇದೆ.

ಶ್ರೀ ಸಿ. ವೀರಭದ್ರಯ್ಯ : ದಿನಾ ಎಷ್ಟು ಪ್ರಾಣಗಳು ಹೋಗಬೇಕೆಂದು ಕಾಯುತ್ತಾ ಇದ್ದೀರಿ? ದಿನಾ 10-15 ಜನ ಸಾಯುತ್ತಿದ್ದಾರೆ. ತುರ್ತಾಗಿ ಮಾಡದಿದ್ದರೆ ತೊಂದರೆಯಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್ : ಬೇರೆ ಬೇರೆ ಕಾರಣಗಳಿಗೆ ಜನರು ಸಾಯುತ್ತಿದ್ದಾರೆ. ದಿನಾ ನೀವು ಓಡಾಡುತ್ತಾ ಇದ್ದೀರಿ. ನಾವೂ ಸಹ ಓಡಾಡುತ್ತೇವೆ. ಆದರೆ ಆಕ್ಸಿಡೆಂಟುಗಳು ಆಗುವುದೇ ಬೇರೆ ಕಾರಣಕ್ಕೆ. ನೆಲಮಂಗಲ ಮತ್ತು ಬೆಂಗಳೂರು ರಸ್ತೆಯಲ್ಲಿ 4 ಲೈನುಗಳು ಇವೆ. ಅಲ್ಲಿ ಅಕ್ಸಿಡೆಂಟುಗಳು ಆಗುತ್ತಿಲ್ಲವೇ?

ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ನೇಸರಗಿ ಹಾಗೂ ದೊಡವಾಡ ಸರ್ಕಾರಿ ಜ್ಯೂನಿಯರ್ ಕಾಲೇಜು ಕಟ್ಟಡ ಕಟ್ಟುವ ಬಗ್ಗೆ

549 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ದೊಡವಾಡ ಮತ್ತು ನೇಸರಗಿ ಸರ್ಕಾರಿ ಜೂನಿಯರ್ ಕಾಲೇಜು ಕಟ್ಟಡ ಕಟ್ಟಲು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಎಂದು ಹೊರಡಿಸಲಾಯಿತು?

ಆ) ಈ ಕಟ್ಟಡ ಕಟ್ಟುವ ಕೆಲಸಕ್ಕೆ ಗುತ್ತಿಗೆದಾರರು ಬರದೇ ಇರುವ ವಿಷಯ ನಿಜವೇ?

ಇ) ಈ ಕಟ್ಟಡಗಳನ್ನು ಇಲಾಖೆವತಿಯಿಂದ ಕಟ್ಟಲು ಒಪ್ಪಿಗೆ ನೀಡಲಾಗುವುದೇ

ಈ) ಈ ಕಟ್ಟಡಗಳ ಕೊರತೆಯಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಈ ಕಟ್ಟಡಗಳನ್ನು ಕಟ್ಟಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ)

		ಆಡಳಿತಾತ್ಮಕ ಮಂಜೂರಾತಿ	ತಾಂತ್ರಿಕ ಮಂಜೂರಾತಿ
1)	ದೂಡವಾಡ	22-3-93	16-8-93
2)	ನೇಸರಗಿ	22-3-93	9-9-93

ಆ) ನಿಜ

ಇ) ನೀಡಲಾಗುವುದು

ಈ) ಬಂದಿದೆ

ಉ) ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಸ್. ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ, ಈ ಕಾಲೇಜು ಕಟ್ಟಡವನ್ನು ಇಲಾಖೆಯ ವತಿಯಿಂದ ಕಟ್ಟಲಿದ್ದೇವೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಇಲಾಖೆಯ ವತಿಯಿಂದ ಕಟ್ಟಡ ಕಟ್ಟಲು ಎಷ್ಟು ದಿವಸಗಳಲ್ಲಿ ಮಾಡಲಾಗುವುದು? ಎರಡನೆಯದು, ಇವತ್ತಿನ ದಿವಸ ಗುತ್ತಿಗೆದಾರರು ಮುಂದೆ ಬರುತ್ತಿಲ್ಲವೆಂದರೆ ಮುಖ್ಯ ಇಂಜಿನಿಯರ್ ಇದ್ದವರು ಶಿಕ್ಷಣ ಹೆಡ್ ಮತ್ತು ಟೂರಿಸಂ ಹೆಡ್‌ಗೆ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ಶಿಕ್ಷಣ ಮತ್ತು ಯುವಜನ ಸೇವೆ ಟೂರಿಸಂ ಹೆಡ್‌ಗೆ ಹಣ ಬಿಡುಗಡೆ ಮಾಡದ ಕಾರಣ ಗುತ್ತಿಗೆದಾರರು ಮುಂದೆ ಬರುತ್ತಿಲ್ಲ. ಈ ಹೆಡ್‌ಗಳಿಗೆ ಹಣವನ್ನು ಬಿಡುಗಡೆ ಮಾಡಲು ತಾವು ಮುಖ್ಯ ಇಂಜಿನಿಯರ್‌ರವರಿಗೆ ಆದೇಶ ನೀಡುತ್ತೀರಾ? ಮೂರನೆಯದಾಗಿ ಗುತ್ತಿಗೆದಾರರು ಮುಂದೆ ಬಾರದೆ ಇರುವುದಕ್ಕೆ ಕಾರಣ ಸಿಮೆಂಟ್ ಮತ್ತು ಸ್ಟೀಲ್ ಇತ್ಯಾದಿಗಳನ್ನು ಗುತ್ತಿಗೆದಾರರು ತರಬೇಕೆಂದು ನಿಯಮವಿದೆ. ಸರಿಯಾದ ಸಮಯಕ್ಕೆ ಎಲ್‌ಒಸಿ ಬರುತ್ತಿಲ್ಲ, ಅವರು ರೊಕ್ಕ ಹಾಕಿ ಎಲ್ಲವನ್ನೂ ತರಬೇಕು. ಮೊದಲು ಇದ್ದಹಾಗೆ ಡಿಪಾರ್ಟ್‌ಮೆಂಟ್‌ನವರೇ ಸಿಮೆಂಟ್ ಮತ್ತು ಕಬ್ಬಿಣವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕೆ.ಹೆಚ್. ರಂಗನಾಥ್ : ಕಟ್ಟಡಗಳನ್ನು ಕಟ್ಟಲು ಖಾಸಗಿ ಗುತ್ತಿಗೆದಾರರು ಹೆಚ್ಚು ಮುಂದೆ ಬರುತ್ತಿಲ್ಲ. ರಸ್ತೆಯ ಕೆಲಸಕ್ಕೆ ಬಹಳ ಜಾಗ್ರತೆಯಾಗಿ ಬರುತ್ತಾರೆ. ಅದರಲ್ಲೂ ಮಣ್ಣಿನ ಕೆಲಸವೆಂದರೆ ಬಹಳ ಜಾಗ್ರತೆಯಾಗಿ ಬರುತ್ತಾರೆ. ಅದು ಏನೋ ಅವರಿಗೆ ಯಾವುದು ಅನುಕೂಲವಿದೆಯೋ ಅದನ್ನು ಅವರು ಮಾಡುತ್ತಾರೆ. ನಾವು ಇಂತಹದ್ದೇ ಮಾಡಿಯೆಂದು ಹೇಳುವುದಕ್ಕಾಗುವುದಿಲ್ಲ ಆ ಅಧಿಕಾರ ನಮಗೆ ಇಲ್ಲ. ಕಟ್ಟಡ ಕಟ್ಟುವುದು ತಡವಾಗುತ್ತಿದೆ ಎನ್ನುವುದನ್ನು ಒಪ್ಪುತ್ತೇನೆ. ಅದಕ್ಕೆ ಈ ವರ್ಷ ಎರಡು ಕಟ್ಟಡಗಳಿಗೆ ಅನುದಾನ ಕೊಟ್ಟಿದ್ದೇವೆ. ಅದಕ್ಕೆ ಅಡ್ಮಿನಿಸ್ಟ್ರೇಷನ್ ಅಪ್ರೂವಲ್ ಕೊಡಲಾಗಿದೆ. ಹಿಂದೆ ಸರ್ಕಾರ ಸಿಮೆಂಟ್ ಮತ್ತು ಕಬ್ಬಿಣವನ್ನು ಒದಗಿಸತಕ್ಕ ಒಂದು ಕಾರ್ಯಕ್ರಮವಿತ್ತು ಅದನ್ನು ಕಾರಣಾಂತರಗಳಿಂದ ನಿಲ್ಲಿಸಿದ್ದಾರೆ. ಮತ್ತೆ ಸರ್ಕಾರ ಪರಿಶೀಲನೆ ಮಾಡಿ 1 ಕೋಟಿವರೆಗೆ ಅದರ ಕೆಳಗೆ ಬರತಕ್ಕ ಕಾಮಗಾರಿಗಳಿಗೆ

ಸಿಮೆಂಟ್ ಮತ್ತು ಕಬ್ಬಿಣವನ್ನು ಒದಗಿಸಬೇಕೆಂದು ಈಗಾಗಲೇ ಸರ್ಕಾರ ತೀರ್ಮಾನ ತೆಗೆದುಕೊಂಡು ಆದೇಶ ಕೊಡಲಾಗಿದೆ. ಮಾನ್ಯ ಸದಸ್ಯರು ಹೇಳುವ ಎರಡು ಕಟ್ಟಡಗಳು ಶೀಘ್ರವಾಗಬೇಕೆಂದು ಏನು ಆಸೆಯಿದೆ ಅದು ಆದಷ್ಟುಬೇಗ ಪೂರ್ಣವಾಗುತ್ತವೆ.

ಶ್ರೀ ಎಸ್.ಹೆಚ್. ಕೌಜಲಗಿ : ಆ ಕಟ್ಟಡಗಳು ಎಷ್ಟು ದಿವಸದೊಳಗೆ ಅಗುತ್ತವೆ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಸದಸ್ಯರು ಚುನಾವಣೆಗೆ ಹೋಗುವುದರಲ್ಲಿ ಆಗುತ್ತವೆ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ತಮ್ಮ ಪ್ರಶ್ನೆಗೆ ಮಂತ್ರಿಗಳು ಸಮಯ ಕೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾನು ತಮ್ಮನ್ನು ಕೇಳುತ್ತೇನೆ, ಉತ್ತರವನ್ನು ಆಮೇಲೆ ಕೊಡಿಸಿ. ಅಲ್ಲಿ ಏನಾದರೂ ಉತ್ತರ ಕೊಡುವುದಕ್ಕೆ ಆಗದಿದ್ದರೆ ತಾವು ನಮ್ಮ ರಕ್ಷಣೆಗೆ ಬರಬೇಕು. ಅಪರೂಪಕ್ಕೆ ನಮ್ಮದು ಒಂದು ಪ್ರಶ್ನೆ ಬರುತ್ತದೆ. ನಾನು ಏನು ಪ್ರಶ್ನೆ ಕೇಳಿದ್ದೇನೆ? ರಾಜ್ಯದಲ್ಲಿ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು? ಅದಕ್ಕೆ ಏನು ಉತ್ತರ ತರಿಸಬೇಕು ಸ್ವಾಮಿ? ವಿಶೇಷ ದುರಸ್ತಿಯಿಂದ ಕೆರೆಗಳ ಹೂಳು ತೆಗೆಯುತ್ತೀರಾ? ಇದು ಸಣ್ಣ ಪ್ರಶ್ನೆ ಇದೆಲ್ಲ ರೆಕಾರ್ಡ್‌ನಲ್ಲಿರುತ್ತದೆ ಅದಕ್ಕೂ ಉತ್ತರ ಕೊಡುವುದಿಲ್ಲವೆಂದರೆ ಅದಕ್ಕೆ ಉತ್ತರ ಬಂದಿಲ್ಲವೆಂದರೆ ನಾವು ಏಕೆ ಪ್ರಶ್ನೆ ಕೇಳಬೇಕು? ನಾವು ಇಲ್ಲಿ ಕೆಲಸ ಮಾಡುವುದು ಹೇಗೆ? ತಮಗೆ ಗೊತ್ತಿದೆ ಖುಷ್ಕಿ ಜಮೀನು ಹೊಂದಿರುವವರಿಗೆ ಬಹಳ ತೊಂದರೆಯಿದೆ. ಕೃಷ್ಣಾ ಕಾವೇರಿಯ ಹಾಗೆ ದೊಡ್ಡ ನೀರಾವರಿ ಏನೂ ಇಲ್ಲ. ರೈತರಿಗೆ ಅನುಕೂಲವಾಗುವಂತೆ ಕೆರೆಕಟ್ಟೆಗಳು ರಿಪೇರಿಯಾಗಬೇಕು ಅವುಗಳಲ್ಲಿನ ಹೂಳನ್ನು ತೆಗೆಸಬೇಕು ಇದು ಬಹಳ ಪ್ರಮುಖವಾದ ಪ್ರಶ್ನೆ ಇದಕ್ಕೆ ಯಾವಾಗ ಉತ್ತರ ಕೊಡಿಸುತ್ತೀರಿ? ಖುಷ್ಕಿ ಜಮೀನು ಮಾಡುವವರಿಗೆ ಒಂದು ರೀತಿಯ ಜೀವನಾಡಿ ಇದ್ದಹಾಗೆ ಹೂಳು ತೆಗೆಯದೆ ಕಣ್ಣುಮುಚ್ಚಿ ಕುಳಿತಿದ್ದಾರೆ. ಉತ್ತರ ಕೊಡಿ ನನಗೆ. ನನಗೆ ಅಂಕಿಸಂಖ್ಯೆಗಳು ಬೇಡ. ಹೂಳು ತೆಗೆಯುವುದಕ್ಕೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಯಾವಾಗ ಮಾಡುತ್ತೀರಿ ಎನ್ನುವುದನ್ನು ಹೇಳಿದರೆ ಸಾಕು. ಅಧ್ಯಕ್ಷರು ನಮ್ಮ ರಕ್ಷಣೆಗೆ ಬರಬೇಕು. ಒಂದು ಸಾರಿ ಇಲ್ಲಿ ಪ್ರಶ್ನೆ ಬಂದಮೇಲೆ ಅದನ್ನು ಮುಂದೂಡುವುದಕ್ಕೆ ಬರುವುದಿಲ್ಲ.

ಶ್ರೀ ಎಂ.ಪಿ. ಕೇಶವಮೂರ್ತಿ : ನಮ್ಮ ಸಣ್ಣನೀರಾವರಿ ಇಲಾಖೆಯಲ್ಲಿ ಎರಡು ವಿಭಾಗಗಳಿವೆ. ಒಬ್ಬರು ಬೆಂಗಳೂರಿನಲ್ಲಿ ಮುಖ್ಯ ಇಂಜನಿಯರ್ ಇದ್ದಾರೆ ಮತ್ತೊಬ್ಬರು ಬಿಜಾಪುರದಲ್ಲಿದ್ದಾರೆ. ಬೆಂಗಳೂರು ವಿಭಾಗದಿಂದ ಮಾಹಿತಿ ಬಂದಿದೆ. ಬಿಜಾಪುರದಿಂದ ಮಾಹಿತಿ ಬಂದಿಲ್ಲ ಆದ್ದರಿಂದ ಸ್ವಲ್ಪ ವೇಳೆಯನ್ನು ಕೇಳುತ್ತೇನೆ. ಮಾನ್ಯಸದಸ್ಯರಾದ ಯಡಿಯೂರಪ್ಪನವರು ಹೇಳಿದಹಾಗೆ ಹೂಳು ತೆಗೆಯುವ ಕಾರ್ಯಕ್ರಮ ಇದು ಸರ್ಕಾರದ ಒಂದು ಕಾರ್ಯಕ್ರಮವಿದೆ. ಈ ವರ್ಷದ ಅನುದಾನದಲ್ಲಿ ಅದಕ್ಕಾಗಿ 3 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಎಷ್ಟು ಮಾಡಿದ್ದೀರಿ, ಯಾವ್ಯಾವ ಕೆರೆಗಳನ್ನು ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಾರೆ,ಅದಕ್ಕಾಗಿ ಕಾಲಾವಕಾಶ ಕೇಳಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕೆರೆಗಳನ್ನು ದುರಸ್ತಿ ಪಡಿಸಿದ್ದೀರಿ? ಹೂಳು ಎತ್ತುವುದಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ?

ಶ್ರೀ ಎಂ.ಪಿ. ಕೇಶವಮೂರ್ತಿ : ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗೆ ಬಿಜಾಪುರದಿಂದ ಉತ್ತರ ಬರಬೇಕಾಗಿದೆ. ಅದನ್ನು ತರಿಸಿಕೊಡುತ್ತೇನೆ.

ಮುಂಡರಗಿ ತಾಲ್ಲೂಕು ತುಂಗಭದ್ರಾ ನದಿಗೆ ಬ್ಯಾರೇಜ್ ಸೇತುವೆ ನಿರ್ಮಾಣ

477-ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ಉಪಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ಮುಂಡರಗಿ ತಾಲ್ಲೂಕು ತುಂಗಭದ್ರಾ ನದಿಗೆ ಬ್ರಿಡ್ಜ್ ಕಮ್ ಬ್ಯಾರೇಜಿನ ಯೋಜನೆಯ ಅಂದಾಜು ಮೊತ್ತ ಎಷ್ಟು?

ಆ) ಶಿಲಾವಿನ್ಯಾಸ ಕೆಲವು ತಿಂಗಳುಗಳಾದರೂ ಇದುವರೆಗೂ ಕಾರ್ಯಗತವಾಗಲಿಲ್ಲದ್ದಕ್ಕೆ ಕಾರಣವೇನು?

ಇ) ಇಲ್ಲಿಯವರೆಗೆ ಬ್ಯಾರೇಜಿಗೆ ಖರ್ಚಾದ ಮೊತ್ತವೆಷ್ಟು? ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಮುಂಡರಗಿ ತಾಲ್ಲೂಕಿನಲ್ಲಿ ತುಂಗಭದ್ರಾ ನದಿಗೆ ಬ್ರಿಡ್ಜ್ ಕಮ್ ಬ್ಯಾರೇಜ್ ನಿರ್ಮಿಸುವ ಪ್ರಸ್ತಾವ ಯಾವುದೂ ಇರುವುದಿಲ್ಲ. ಅದರ ಮುಂಡರಗಿ ತಾಲ್ಲೂಕಿನ ಹಮ್ಮಿಗಿ ಬಳಿ ತುಂಗಭದ್ರಾ ನದಿಗೆ ಬ್ಯಾರೇಜ್ ನಿರ್ಮಿಸಿ ಏತ ನೀರಾವರಿ ಮೂಲಕ ಧಾರವಾಡ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳ 16,188 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಸಿಂಗಟಲೂರು ಏತ ನೀರಾವರಿ ಯೋಜನೆಯ 63.62 ಕೋಟಿ ರೂ.ಗಳ ಅಂದಾಜಿಗೆ ದಿ: 19-9-92 ರಂದು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಆ) ಈ ಯೋಜನೆಯ ವಿವರವಾದ ವರದಿಯನ್ನು ತಯಾರಿಸಲಾಗುತ್ತಿದ್ದು ಇದಕ್ಕೆ ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆದು ನಂತರ ಕಾಮಗಾರಿಯ ಕೈಗೊಳ್ಳಬೇಕಾಗಿದೆ. ಇದೂ ಅಲ್ಲದೆ, ಬ್ಯಾರೇಜ್ ನಿರ್ಮಿಸುವ ಸ್ಥಳದಲ್ಲಿ ಭೂಗರ್ಭ ಪರಿಶೀಲನಾ ಕಾಮಗಾರಿಯು ಪ್ರಗತಿಯಲ್ಲಿದೆ. ಪ್ರಸ್ತುತ ಸಾಲಿನಲ್ಲಿ ಈ ಯೋಜನೆಗೆ 10.00 ಲಕ್ಷ ರೂ.ಗಳ ಅನುದಾನವನ್ನು ನಿಗದಿಪಡಿಸಲಾಗಿದೆ.

ಶ್ರೀ ಕೆ.ಹೆಚ್. ಕುರಡಗಿ : ಮಾನ್ಯ ಅಧ್ಯಕ್ಷರೆ, 63 ಕೋಟಿ ರೂಪಾಯಿ ಅಂದಾಜಿನ ಯೋಜನೆಗೆ 10 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. 63 ಕೋಟಿ ರೂಪಾಯಿ ಅಂದಾಜಿಗೆ 10 ಲಕ್ಷ ರೂಪಾಯಿಯಲ್ಲಿ ಯಾವ ಕೆಲಸವೂ ಆಗುವುದಿಲ್ಲ. ಕನಿಷ್ಠ 20 ಕೋಟಿ ರೂಪಾಯಿ ಪ್ರೊವೈಡ್ ಮಾಡಿದರೆ ಆ ಕೆಲಸ ತೀವ್ರಗತಿಯಲ್ಲಿ ಆಗುತ್ತದೆ. ಅದಕ್ಕೆ ತಾವು ಏನು ಮಾಡುತ್ತೀರಿ ಎಬುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಎಸ್.ಎಂ. ಕೃಷ್ಣ : ನಿಜ, ಅತ್ಯಂತ ಪ್ರಮುಖವಾದ ನೀರಾವರಿ ಯೋಜನೆಗೆ ಕೇವಲ 10 ಲಕ್ಷ ರೂಪಾಯಿ ಒದಗಿಸಿ ಕೊಟ್ಟಿದ್ದೇವೆ. ಹಣ ಕಡಿಮೆ; ವಿನ್ಯಾಸ ಮಾಡುವುದಕ್ಕೆ ಮುನ್ನ ಗೌರವಯುತವಾದ ಪ್ರಮಾಣದಲ್ಲಿ ಹಣವನ್ನು ಒದಗಿಸಿ ಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಅದೇನು ಸ್ವಾಮಿ? ಗೌರವಯುತವಾದ ಹಣ ಅಂದರೆಷ್ಟು?

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ಇಂಗ್ಲಿಷ್ ಪದವನ್ನು ಕನ್ನಡಕ್ಕೆ ಟ್ರಾನ್ಸ್‌ಲೇಷನ್ ಮಾಡಿ ಹೇಳಿದ್ದೇನೆ. ರೆಸ್‌ಪೆಕ್ಟಬಲ್ ಅಮೌಂಟ್ ಎಂದು ಹೇಳಿದ್ದೇನೆ.

ಶ್ರೀ ವಾಟಾಳ್‌ನಾಗರಾಜ್: ಹಾಗಾದರೆ ಗೌರವವೆಂದರೆ ಎಷ್ಟು? ಗೌರವದ ಬೆಲೆ ಎಷ್ಟು? ಅಗೌರವದ ಬೆಲೆ ಎಷ್ಟು?

ಶ್ರೀ ಎಸ್.ಎಂ. ಕೃಷ್ಣ : ಅದು ಆಯಾಯ ಸದಸ್ಯರ ಮೇಲೆ ನಿಲ್ಲುತ್ತದೆ. ಅದು ಅಯಾಯ ಯೋಜನೆಗಳ ಮೇಲೆ ನಿಲ್ಲುತ್ತದೆ ಸ್ವಾಮಿ.

ಬಸವ ಕಲ್ಯಾಣದಲ್ಲಿ ಸಿವಿಲ್ ಜಡ್ಜ್ ನ್ಯಾಯಾಲಯವು ಕಾರ್ಯ ನಿರ್ವಹಿಸುವ ಬಗ್ಗೆ

193 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯ ಬಸವಕಲ್ಯಾಣದ ಸಿವಿಲ್ ಜಡ್ಜ್ ನ್ಯಾಯಾಲಯವು ವಾರದಲ್ಲಿ ನಾಲ್ಕು ದಿನಗಳು ಕಾರ್ಯನಿರ್ವಹಿಸುತ್ತಿರುವುದು ನಿಜವೆ?

ಆ) ಹಾಗಿದ್ದಲ್ಲಿ, ಈ ನ್ಯಾಯಾಲಯವು ಭಾಲ್ಕಿಯಲ್ಲಿಯೂ ಕಾರ್ಯ ನಿರ್ವಹಿಸುವಂತೆ ವ್ಯವಸ್ಥೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಭಾಲ್ಕಿಯಲ್ಲಿ ನ್ಯಾಯಾಲಯವು ಕಾರ್ಯ ನಿರ್ವಹಿಸುತ್ತಿರುವುದು ಬಸವಕಲ್ಯಾಣ ಮತ್ತು ಹುಮ್ನಾಬಾದ್ ತಾಲ್ಲೂಕುಗಳ ಸಾರ್ವಜನಿಕರಿಗೂ ಮತ್ತು ಪ್ರಿಸೈಡಿಂಗ್ ಅಧಿಕಾರಿಗಳಿಗೂ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಕಕ್ಷಿದಾರರ ಹಿತದೃಷ್ಟಿಯಿಂದ ಬಸವಕಲ್ಯಾಣದ ನ್ಯಾಯಾಲಯವನ್ನು ಬಸವಕಲ್ಯಾಣದಲ್ಲಿಯೇ ಸಂಪೂರ್ಣವಾಗಿ ನಡೆಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಹೌದು

ಆ) ಹೌದು, ವಾರದಲ್ಲಿ ಎರಡು ದಿನಗಳು.

ಇ) ಹೌದು

ಈ) ಅಂತಹ ಯಾವ ಪ್ರಸ್ತಾವನೆಯೂ ಸರ್ಕಾರದ ಮುಂದಿಲ್ಲ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು : ಮಾನ್ಯ ಅಧ್ಯಕ್ಷರೇ, ಬಸವಕಲ್ಯಾಣದಲ್ಲಿ ಹೋದವರ್ಷದಲ್ಲಿ ಸಿವಿಲ್ ನ್ಯಾಯಾಲಯವು ಪ್ರಾರಂಭವಾಗಿದ್ದುದು ತಮಗೆಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಮಾನ್ಯ ಮಂತ್ರಿಗಳಿಗೆ ಕೂಡ ಈ ವಿಷಯ ಬಗ್ಗೆ ಸವಿಸ್ತಾರವಾಗಿ ಸಾಕಷ್ಟು ಮಾಹಿತಿ ಇದೆ. ಅದು ಆದಮೇಲೆ ನಮ್ಮಲ್ಲಿ ಒಂದು ವಾರ ಸಿವಿಲ್ ಕೋರ್ಟು ನಡೆಯುತ್ತಿತ್ತು. ಆದಾದ ಎರಡು ತಿಂಗಳಲ್ಲಿ ಎರಡರಿಂದ ನಾಲ್ಕು ದಿವಸ ಬಸವಕಲ್ಯಾಣದಲ್ಲಿ, ಮತ್ತೆರಡು ದಿವಸ ಭಾಲ್ಕಿಯಲ್ಲಿ ಮಾಡಬೇಕೆಂದು ಸರ್ಕಾರದವರು ನಿರ್ಣಯ ತೆಗೆದುಕೊಂಡಿದ್ದಾರೆ. ಇದರಿಂದ ಹುಮ್ನಾಬಾದ್, ಬಸವಕಲ್ಯಾಣ ಮತ್ತು ಭಾಲ್ಕಿ ಈ ವಿಭಾಗಗಳಿಂದ ಬರತಕ್ಕಂಥ ಸಾಮಾನ್ಯ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಇದರ ಸಲುವಾಗಿ ನಾನು ಕೇಳಿದ ಪ್ರಶ್ನೆಗೆ ಸಮರ್ಪಕವಾದ ಉತ್ತರ ಮಾನ್ಯ ಮಂತ್ರಿಗಳಿಂದ ನನಗೆ ದೊರೆತಿಲ್ಲ. ನಾನು ಈ ಸಂದರ್ಭದಲ್ಲಿ ಇಷ್ಟೇ ಅವರಿಂದ ಕೇಳುತ್ತಿದ್ದೇನೆ, ಅದೇನೆಂದರೆ, ನ್ಯಾಯಾಲಯಗಳಿಂದ ಜನರಿಗೆ ಅನುಕೂಲವಾಗಬೇಕು ಎನ್ನುವ ಉದ್ದೇಶವನ್ನು ತಾವು ಇಟ್ಟುಕೊಂಡಿದ್ದೀರಿ. ಆದರೆ ಹೀಗೆ ಮಾಡುವುದರಿಂದ ಮೂರೂ ತಾಲ್ಲೂಕಿನ ಜನರಿಗೆ ತೊಂದರೆಯಾಗುತ್ತಿದೆ. ಇದರ ಬಗ್ಗೆ ತಾವು ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಹೇಗೆ? ಇದು ಒಂದು. ಎರಡನೇಯದು ನಮ್ಮದು ಹೆಡ್‌ಕ್ವಾಟರ್ಸ್. ಇಲ್ಲಿ ಸಿವಿಲ್ ಕೋರ್ಟ್

ಇದ; ಸರ್ವೆ ಕಚೇರಿ ಇದೆ, ಕಂದಾಯ ಉಪವಿಭಾಗ ಇದೆ. ಎಲ್ಲಾ ಸಬ್ ಡಿವಿಜನ್‌ಗಳು ಬಸವಕಲ್ಯಾಣದಲ್ಲಿ ಇದೆ. ಈಗ ಬಸವಕಲ್ಯಾಣಕ್ಕೆ ಅಷ್ಟೇ ಅಲ್ಲ, ಮೂರೂ ತಾಲ್ಲೂಕಿನ ಜನರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ತಾವು ಭಾಲ್ಕಿಯಲ್ಲಿ ಏನು ಎರಡು ದಿನದ ಶಿಫ್ಟ್ ಇದೆ, ಅದನ್ನು ಬದಲಾವಣೆ ಮಾಡಿ ಬಸವಕಲ್ಯಾಣದಲ್ಲೇ ಒಂದುವಾರ ಕಂಟಿನ್ಯೂ ಮಾಡುವ ಸಲುವಾಗಿ ತಾವು ಏನಾದರೂ ಕ್ರಮ ತೆಗೆದುಕೊಳ್ಳುತ್ತೀರೋ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಈ ಕೋರ್ಟು ಸ್ಥಾಪನೆ ಮಾಡುವುದು ಮತ್ತು ಯಾವ್ಯಾವ ತಾಲ್ಲೂಕು ಮತ್ತು ಊರುಗಳು ಕೋರ್ಟಿನ ಪರಿಸರಕ್ಕೆ ಬರಬೇಕು ಎಂಬುದು ನಮ್ಮ ಉಚ್ಚನ್ಯಾಯಾಲಯದ ಅಭಿಪ್ರಾಯ ಕೇಳಿ ನಾವು ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳಿರುವ ಕಷ್ಟಗಳು ನಮಗೆ ಗೊತ್ತಿದೆ. ಇದರ ಬಗ್ಗೆ ನಾವು ಒಮ್ಮೆ ಉಚ್ಚನ್ಯಾಯಾಲಯಕ್ಕೆ ತಿಳಿಸಿದ್ದೆವು. ಸಧ್ಯಕ್ಕೆ ಇದು ಬೇಕಿಲ್ಲ, ಈಗ ಇರುವ ವ್ಯವಸ್ಥೆಯೇ ಮುಂದುವರೆಯಲಿ ಎಂದು ಅವರು ಉತ್ತರ ಬರೆದಿದ್ದಾರೆ. ಪುನಃ ಉಚ್ಚ ನ್ಯಾಯಾಲಯಕ್ಕೆ ಬರೆದು ತಾವು ಹೇಳಿದ ಸಮಸ್ಯೆಗಳು ಏನಿವೆ, ಆದರಿಂದ ಈ ಬೇಡಿಕೆ ಏನಿದೆ, ಅದನ್ನು ಮಂಜೂರು ಮಾಡುವುದು ಅವಶ್ಯಕತೆ ಇದೆ ಎಂದು ನಾವು ಉಚ್ಚನ್ಯಾಯಾಲಯಕ್ಕೆ ತಿಳಿಸುತ್ತೇವೆ. ಅಲ್ಲಿಂದ ಒಪ್ಪಿಗೆ ಬಂದನಂತರ ನಾವು ತೀರ್ಮಾನ ಮಾಡೋಣ.

ಶ್ರೀ ಬಸವರಾಜಪಾಟೀಲ್ ಅಟ್ಟೂರು : ಸನ್ಮಾನ್ಯ ಅಧ್ಯಕ್ಷರೇ, ಇದು ಏನಾಗಿದೆ ಎಂದರೆ, ನಮ್ಮಲ್ಲಿ ಮೊದಲು ಆರು ದಿನ ನಡೆಯುತ್ತಾ ಇತ್ತು. ಅದನ್ನು ಬದಲಾವಣೆ ಮಾಡಿದ್ದಾರೆ. ಇದನ್ನು ಉದ್ದೇಶಪೂರ್ವಕವಾಗಿ ಈ ಬದಲಾವಣೆಯನ್ನು ಮಾಡಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಸ್ವತಃ ಚೀಫ್ ಜಸ್ಟೀಸ್‌ಅವರೇ ಬಂದು ಉದ್ಘಾಟನೆ ಮಾಡಿದ್ದಾರೆ. ಆದರೆ ಆದಾದ ಎರಡು ತಿಂಗಳಲ್ಲೇ ದಿಢೀರನೆ ಬದಲಾವಣೆ ಮಾಡಿದ್ದರಿಂದ ಅಲ್ಲಿರುವ ಎಲ್ಲಾ ರೈತರಿಗೆ, ತೊಂದರೆಯಾಗಿದೆ. ಹಿಂದೆ ಕೂಡ ನಾನು ಇದೇ ಪ್ರಶ್ನೆಯನ್ನು ಕೇಳಿದ್ದೇನೆ. ತಾವು ದಯವಿಟ್ಟು ಹೈಕೋರ್ಟಿಗೆ ಬರೆಯಿರಿ. ತಾವು ಹೈಕೋರ್ಟಿಗೆ ಬರೆದ ಮೇಲೆ ನಿಖರವಾದ ಸಮಯ ಏನಾದರೂ ಇದೆಯಾ ಇದನ್ನು ಬಸವಕಲ್ಯಾಣದಲ್ಲಿ ಪುನಃ ಪ್ರಾರಂಭ ಮಾಡುವುದಕ್ಕೆ? ಮತ್ತೊಂದು ಪ್ರಶ್ನೆ ಏನೆದರೆ, ಇಲ್ಲಿರತಕ್ಕಂಥ ನ್ಯಾಯಾಧೀಶರಿಗೆ ಭಾಲ್ಕಿಗೆ ಹೋಗಬೇಕಾದರೆ ಬಸ್ಸಿನ ವ್ಯವಸ್ಥೆ ಸರಿಯಾಗಿಲ್ಲ. ಬೆಳಿಗ್ಗೆ ಅವರು ಹೋಗಬೇಕಾದರೆ ಬಸ್ಸಿನ ತೊಂದರೆ ಇದೆ. ನ್ಯಾಯಾಧೀಶರಿಗೂ ತೊಂದರೆಯಾಗುತ್ತಿದೆ ಮತ್ತು ಕಚೇರಿಯ ಕೆಲಸಗಾರರಿಗೂ ಕೂಡ ತೊಂದರೆಯಾಗುತ್ತಿದೆ. ಆದ್ದರಿಂದ ತಾವು ಹೈಕೋರ್ಟಿಗೆ ಪತ್ರ ಬರೆದು ಈ ಮೂರೂ ತಾಲ್ಲೂಕುಗಳ ಜನರ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಸದಸ್ಯರು ಹೇಳಿರುವ ಸಲಹೆಗಳನ್ನು ಪರಿಶೀಲನೆ ಮಾಡಿ ಅವರ ಸ್ಥಳದಲ್ಲಿ ಕೋರ್ಟಿನ ಅನುಕೂಲತೆ ಬರುವ ರೀತಿಯಲ್ಲಿ ಪ್ರಯತ್ನ ಮಾಡುತ್ತೇವೆ. ಅಷ್ಟೇ ಪ್ರಯತ್ನವನ್ನು ತಾವೂ ಮಾಡಿ ಮಾನ್ಯ ಮಂತ್ರಿಗಳಾದ ರಂಗನಾಥ್ ಅವರು ಇದರ ಬಗ್ಗೆ ಯೋಚನೆ ಮಾಡುವುದಕ್ಕೆ ಹೇಳಬೇಕು.

ವಿದ್ಯುತ್ ಬಾಕಿ ಬಿಲ್ಲುಗಳು

143 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಗ್ರಾಹಕರಿಂದ ಸಂಘ ಸಂಸ್ಥೆಗಳಿಂದ ಹಾಗೂ ಕಾರ್ಖಾನೆಗಳಿಂದ ಇದುವರೆವಿಗೂ ಬರಬೇಕಾಗಿರುವ ಬಾಕಿ ಹಣ ಎಷ್ಟು?

ಆ) ಐದು ಲಕ್ಷಕ್ಕಿಂತ (5 ಲಕ್ಷ) ಮೇಲ್ಪಟ್ಟು ಎಷ್ಟು ಕಾರ್ಖಾನೆಗಳಿಂದ ಬಾಕಿ ಬರಬೇಕಾಗಿರುತ್ತದೆ ?

ಇ) ಸರ್ಕಾರದಿಂದ ಮಂಡಳಿಗೆ ಎಷ್ಟು ಹಣ ಬಾಕಿ ಬರಬೇಕಾಗಿದೆ ?

ಈ) ಕರ್ನಾಟಕ ವಿದ್ಯುತ್ ನಿಗಮಕ್ಕೆ (ಕೆಪಿಸಿ) ವಿದ್ಯುಚ್ಛಕ್ತಿ ಮಂಡಳಿಯಿಂದ ಎಷ್ಟು ಹಣ ಕೊಡಬೇಕಾಗಿದೆ ?

ಉ) ವಿಶ್ವ ಸಂಸ್ಥೆಯಿಂದ ಸಾಲದ ನೆರವು ಪಡೆಯಬೇಕಾದರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಇರಬೇಕಾದ ಅರ್ಹತೆಗಳೇನು ?

ಶ್ರೀ ವಿ. ಮುನಿಯಪ್ಪ (ಇಂಧನ ರಾಜ್ಯ. ಸಚಿವರು) :

ಅ) 30-6-94ರಲ್ಲಿದ್ದಂತೆ ಬರಬೇಕಾದ ಬಾಕಿ ಹಣ 439.12 ಕೋಟಿ ರೂ. ಗಳು.

ಆ) 144.

ಇ) ಸರ್ಕಾರದ ಇಲಾಖೆಗಳು ಮಂಡಳಿಗಳು, ಪುರಸಭೆ ಪಂಚಾಯತ್‌ಗಳಿಂದ ಕ.ವಿ. ಮಂಡಳಿಗೆ ಒಟ್ಟು 131.46 ಕೋಟಿ ರೂ.ಗಳ ಬಾಕಿ ಬರಬೇಕಾಗಿದೆ.

ಈ) 199.55 ಕೋಟಿ ರೂ.ಗಳು.

ಉ) ಪ್ರತಿ ಯೋಜನೆಯ ಹಿನ್ನೆಲೆಯಲ್ಲಿ ಪ್ರತ್ಯೇಕವಾಗಿ ಅರ್ಹತೆಯನ್ನು ವಿಶ್ವ ಬ್ಯಾಂಕ್ ಸೂಚಿಸುತ್ತದೆ.

ಶ್ರೀ ಜಿ. ರಾಜುಗೌಡ : ಸ್ವಾಮಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ 439.12 ಕೋಟಿ ರೂ. ಬಾಕಿ ಬರಬೇಕೆಂಬ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಬಹುಶಃ ಕಳೆದ ವರ್ಷಕ್ಕೆ ಈ ವರ್ಷವನ್ನು ಹೋಲಿಸಿದಾಗ, ಶೇಕಡಾ ಹತ್ತರಷ್ಟು ಬಾಕಿ ಜಾಸ್ತಿ ಇದೆ. ಬಹುಶಃ ಸರ್ಕಾರದ ವಸೂಲಾತಿ ರೀತಿಯನ್ನು ನೋಡಿದಾಗ, ಇನ್ನು ಐದು ವರ್ಷಗಳಲ್ಲಿ ಸಾವಿರ ಕೋಟಿ ರೂಪಾಯಿಗಳ ಬಾಕಿಯಾಗುತ್ತದೆ ಎಂದು ನನಗನ್ನಿಸುತ್ತದೆ. ಕಳೆದ ವರ್ಷ ಎಷ್ಟು ಬಾಕಿ ಇತ್ತು ಹಾಗೂ ಈ ವರ್ಷ ಎಷ್ಟು ಬಾಕಿ ಎಂಬುದನ್ನು ಹೇಳಬೇಕು. 5 ಲಕ್ಷಕ್ಕೆ ಮೇಲ್ಪಟ್ಟು 140 ಕಾರ್ಖಾನೆಗಳು ಬಾಕಿ ಕೊಡಬೇಕು. ಯಾವ ಕಾರ್ಖಾನೆಗಳು ಬಾಕಿ ಕೊಡಬೇಕೋ, ಆ ಕಾರ್ಖಾನೆಗಳಿಗೆ ವಿದ್ಯುತ್ ಸರಬರಾಜನ್ನು ತಾವು ನಿಲ್ಲಿಸಿದ್ದೀರಾ? ವಸಲು ಮಾಡುವುದಕ್ಕೆ ತಾವು ಏನು ಏರ್ಪಾಡು ಮಾಡಿದ್ದೀರಿ?

ಶ್ರೀ ವಿ. ಮುನಿಯಪ್ಪ : ಸನ್ಮಾನ್ಯ ಅಧ್ಯಕ್ಷರೇ, ಈಗ ವಿದ್ಯುಚ್ಛಕ್ತಿ ಮಂಡಳಿಗೆ ಬಾಕಿ ಇರತಕ್ಕಂಥಾದ್ದು 570 ಕೋಟಿ ರೂಪಾಯಿಗಳು. ಈ ಪೈಕಿ ಸರ್ಕಾರದ ಸಂಸ್ಥೆಗಳಾದ ನಗರಸಭೆ, ಮಂಡಲ್ ಪಂಚಾಯತಿಗಳು, ಇವುಗಳಿಂದ ಬರಬೇಕಾಗಿರುವುದು ಸುಮಾರು 131 ಕೋಟಿ ರೂಪಾಯಿ. ಇವುಗಳು ಕೊಡಬೇಕಾದ ಬಾಕಿಗೆ, ಸರ್ಕಾರವು ಮಾನವೀಯತೆ ದೃಷ್ಟಿಯಿಂದ ವಸೂಲಿಗೆ ಕ್ರಮ ತೆಗೆದುಕೊಳ್ಳಬೇಕೇ ಹೊರತು ವಿದ್ಯುತ್ ಸರಬರಾಜನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಜೊತೆಗೆ ಖಾಸಗಿಯವರು ಗ್ರಾಹಕರು ಮತ್ತು ಸಂಸ್ಥೆಗಳಿಂದ ಬರಬೇಕಾಗಿರುವ ಬಾಕಿ ಎಂದರೆ 439 ಕೋಟಿ ರೂಪಾಯಿ ಇದೆ. ಬಾಕಿ ಇರುವುದರ ವಸೂಲಾತಿ ಮಾಡುವುದಕ್ಕೆ ಕಾನೂನುಗಳು ಏನೇನಿವೆ, ಆ ಎಲ್ಲಾ ಕಾನೂನುಗಳನ್ನು ನಾವು ಈಗಾಗಲೇ ಅಳವಡಿಸಿಕೊಂಡು ವಸೂಲನ್ನು ಮಾಡುತ್ತಾ ಇದ್ದೇವೆ. ಮಧ್ಯೆ ಏನಾಗಿದೆ ಎಂದರೆ, ನಾವು ಕಾನೂನನ್ನು ಅಳವಡಿಸತಕ್ಕಂಥ ಸಂದರ್ಭದಲ್ಲಿ ಅನೇಕ ವಿವಾದಗಳು ಮೇಲ್ಮನವಿಗಳು ಕೋರ್ಟುಗಳಲ್ಲಿದೆ. ಈ ವಿವಾದವಿರುವುದನ್ನು ಬಿಟ್ಟು ಉಳಿದ ಎಲ್ಲಾ ಬಾಕಿ ಇರುವುದನ್ನು ವಸೂಲು ಮಾಡುವ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ.

ಶ್ರೀ ಜಿ. ರಾಜುಗೌಡ : ಸ್ವಾಮಿ, ಒಬ್ಬ ಗ್ರಾಹಕ ವಿದ್ಯುತ್ ಶುಲ್ಕವನ್ನು ಸಕಾಲದಲ್ಲಿ ಕೊಡದೇ ಇದ್ದಾಗ, ವಿದ್ಯುತ್ ಸರಬರಾಜನ್ನು ಅವರು ನಿಲ್ಲಿಸುತ್ತಾರೆ. ಹೀಗಿರುವಾಗ ತಾವು ಏತಕ್ಕೆ ಕಾರ್ಖಾನೆಗಳಿಗೆ ವಿದ್ಯುತ್ ಸರಬರಾಜನ್ನು ನಿಲ್ಲಿಸಲಿಲ್ಲ? ಅದರ ಬಗ್ಗೆ ತಾವು ನನಗೆ ಸಮಜಾಯಿಷಿಯನ್ನು ಕೊಡಬೇಕು. ನನಗೆ ತಿಳಿದ ಹಾಗೆ ಮೂರುವರ್ಷಗಳ ನಂತರ ಅದು ಲಿಮಿಟೇಷನ್ ಆಗುತ್ತದೆ ಎನ್ನತಕ್ಕಂಥಾದ್ದು ಒಂದು. ನಾಲ್ಕನೆಯದು ಅವನು ಕೋರ್ಟಿಗೆ ಹೋಗಬೇಕಾದರೆ ಕೂಡ ಬ್ಯಾಕ್‌ಬಿಲ್ ಕಟ್ಟಿಯೇ ಕೋರ್ಟಿಗೆ ಹೋಗಬೇಕಾಗುತ್ತದೆ. ಅದೇ ರೀತಿ ತಾವು ಇರತಕ್ಕಂಥ ಕಾನೂನನ್ನು ಏಕೆ ತಿದ್ದುಪಡಿ ಮಾಡಬಾರದು? ಗ್ರಾಹಕರಿಗೆ ಏತಕ್ಕೆ ವಿದ್ಯುತ್ ಸರಬರಾಜು ನಿಲ್ಲಿಸುತ್ತೀರಿ? ಈ ತಾರತಮ್ಯವನ್ನು ಏತಕ್ಕೆ ಮಾಡುತ್ತಿದ್ದೀರಿ?

ಶ್ರೀ ವಿ. ಮುನಿಯಪ್ಪ : ಸನ್ಮಾನ್ಯ ಅಧ್ಯಕ್ಷರೇ, ಅನೇಕ ವಿಧವಾದ ತಾಂತ್ರಿಕ ದೋಷಗಳನ್ನು ಅವರು ಇಟ್ಟುಕೊಂಡು ಕೋರ್ಟಿಗೆ ಹೋಗುತ್ತಿದ್ದಾರೆ. ನಾವು ಅವರಿಂದ ವಸೂಲು ಮಾಡುವುದಕ್ಕೆ ತೀವ್ರವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳದ ಹೊರತು, ಬೇರೆ ಅವರ ಮೇಲೆ ಯಾವ ಕಾರಣವೂ ಇಲ್ಲ. ಅಷ್ಟೇ ವಿನಹ ಅವರು ಸಣ್ಣ ಗ್ರಾಹಕರಿರಬಹುದು, ದೊಡ್ಡ ಗ್ರಾಹಕರೇ ಇರಬಹುದು, ಸಮಾನವಾದ ರೀತಿಯಲ್ಲಿ ವಸೂಲು ಮಾಡತಕ್ಕಂಥ ಕ್ರಮ ತೆಗೆದುಕೊಂಡು ವಸೂಲು ಮಾಡುತ್ತಿದ್ದೇವೆ.

ಶ್ರೀ ಜಿ. ರಾಜುಗೌಡ : ನನ್ನ ಪ್ರಶ್ನೆಗೆ ಉತ್ತರವೇ ಬರಲಿಲ್ಲ. ನನ್ನ ಪ್ರಶ್ನೆ ಏನೆಂದರೆ, ಸಾಮಾನ್ಯ ಗ್ರಾಹಕರು ವಿದ್ಯುತ್ ಶುಲ್ಕವನ್ನು ಸಕಾಲದಲ್ಲಿ ಪಾವತಿ ಮಾಡದೇ ಇದ್ದಾಗ, ಅವನಿಗೆ ಸರಬರಾಜು ಮಾಡುವುದನ್ನು ತಾವು ನಿಲ್ಲಿಸುತ್ತೀರಿ. ಇದು ಸತ್ಯವಾದ ವಿಷಯ. ಇದೇ ಕಾನೂನನ್ನು ತಾವು ಏತಕ್ಕೆ ಕಾರ್ಖಾನೆಗಳಿಗೆ ಅನ್ವಯಿಸಬಾರದು? ಇದರ ಬಗ್ಗೆ ತಾವು ಹೇಳಿ. ತಾವು ಪಕ್ಷಪಾತ ತೋರಿಸತಕ್ಕದ್ದು ಬೇಡ. ಮಾನವೀಯತೆ ದೃಷ್ಟಿಯೆಂದರೆ ಅದನ್ನು ಗ್ರಾಹಕರ ಬಗ್ಗೆಯೂ ಉಪಯೋಗಿಸಿ. ಮತ್ತೆ ನನ್ನ ಕೊನೆಯ ಪ್ರಶ್ನೆ ಎಂದರೆ, ಈ ವಿಶ್ವ ಬ್ಯಾಂಕಿನಿಂದ ಸಾಲ ಪಡೆಯಬೇಕಾದರೆ ಪ್ರತ್ಯೇಕವಾದ ಅರ್ಹತೆಯನ್ನು ಕೇಳುತ್ತಾರೆ. ವಿಶ್ವಸಂಸ್ಥೆಯಿಂದ ವ್ಯವಸಾಯ ಕ್ಷೇತ್ರಕ್ಕೆ, ಕೈಗಾರಿಕಾ ಕ್ಷೇತ್ರಕ್ಕೆ ಸಾಲವನ್ನು ಪಡೆಯಬೇಕಾದರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಇರಬೇಕಾದ ಅರ್ಹತೆ ಏನು? ತಾವು ದಯಮಾಡಿ ತಿಳಿಸಿ.

ಶ್ರೀ ವಿ. ಮುನಿಯಪ್ಪ : ಇದಕ್ಕೆ ವಿಶೇಷವಾದ ಅರ್ಹತೆ, ನಾರ್ಮ್ಸ್‌ನ್ನು ಅವರು ಫಿಕ್ಸ್ ಮಾಡಿಲ್ಲ. ನಾವು ಪ್ರಾಜೆಕ್ಟ್ ಏನು ಕೊಡುತ್ತೇವೆ, ಸಾರ್ವಜನಿಕ ದೃಷ್ಟಿಯಿಂದ ಅದು ಬಹಳ ಉಪಯೋಗಕರ ಎಂದು ಗೊತ್ತಾದರೆ ಆಗ ಅವರು ಸರ್ವೆ ಕಂಡಕ್ಟ್ ಮಾಡುತ್ತಾರೆ. ವಿಶ್ವಬ್ಯಾಂಕ್‌ನ ಎಕ್ಸಪರ್ಟ್ಸ್ ಬರುತ್ತಾರೆ. ನಾವು ಕೊಟ್ಟಿರತಕ್ಕಂಥ ಪ್ರಪೋಸಲ್ಸ್ ಈ ರಾಷ್ಟ್ರದ ಜನತೆಗೆ ಅನುಕೂಲವಾಗುತ್ತದೆ ಎನ್ನುವುದಾದರೆ, ಅದರ ಮೇಲೆ ಲೋನ್ ಕೊಡುವುದಕ್ಕೆ ಅವರು ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಾರೆ.

ಶ್ರೀ ಜಿ. ರಾಜುಗೌಡ : ಸದ್ಯದ ಪರಿಸ್ಥಿತಿಯಲ್ಲಿ ಯಾವ ಕ್ಷೇತ್ರದಲ್ಲೂ ತಮಗೆ ಸಾಲ ಪಡೆಯುವುದಕ್ಕೆ ಅರ್ಹತೆ ಇಲ್ಲ.

ಶ್ರೀ ಸಿ. ಭೈರೇಗೌಡ : ಇವರು ಸುಮಾರು ಇದು ಐದು ನೂರು ಕೋಟಿ ರೂಪಾಯಿಯಷ್ಟು ಸಾಲ ಬಾಕಿ ಉಳಿಸಿಕೊಂಡಿದ್ದಾರೆ. ಇದು ಒಂದು ಕಡೆ ಇನ್ವೆಸ್ಟ್‌ಮೆಂಟ್ ಆಗಬೇಕು. ಅದು ಅಲ್ಲಿ ಸಿಕ್ಕಿಹಾಕಿಕೊಂಡಿದೆ. ಈಗ ಬಾಕಿ ಇರತಕ್ಕಂಥಾದ್ದು ಎರಡು ರಂಗದಲ್ಲಿ. ಒಂದು ಖಾಸಗಿ ರಂಗ. ಸರ್ಕಾರಿ ರಂಗಕ್ಕೆ ಸರ್ಕಾರದಿಂದ ಹಣವನ್ನು ಬಿಡುಗಡೆ ಮಾಡುತ್ತಾರೆ. ಕಾರ್ಪೊರೇಷನ್‌ಗಳಿಗೆ, ಮುನಿಸಿಪಾಲಿಟಿಗಳಿಗೆ, ಅರ್ಬನ್ ವಾಟರ್ ಬೋರ್ಡ್, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಗೆ ಸರ್ಕಾರದಿಂದ ಹಣ ಬಿಡುಗಡೆ ಮಾಡುತ್ತಾರೆ. ನೀವು ಈ ಹಣವನ್ನು ಬಿಡುಗಡೆ ಮಾಡತಕ್ಕಂಥ ಸಂದರ್ಭದಲ್ಲಿ

ಮಂಡಳಿಗಳು ಏನು ಹಣ ಕೊಡಬೇಕೋ, ಆ ಸೋರ್ಸ್ ಮುರಿದುಕೊಂಡು ಇರುವಂಥ ಏರ್ಪಾಡು ಏತಕ್ಕೆ ಮಾಡಬಾರದು? ಎರಡನೇಯದು ಖಾಸಗಿ ರಂಗದಲ್ಲಿ ಹೆಚ್ಚಿಗೆ ಹಣ ಇದೆ. ಇದಕ್ಕೆ ವಿಶೇಷವಾದಂಥ ನ್ಯಾಯಾಲಯಗಳನ್ನು ರಚನೆ ಮಾಡಿ ಬಾಕಿ ಬರತಕ್ಕಂಥ ಹಣ ಏನಿದೆ, ಅದನ್ನು ಶೀಘ್ರವಾಗಿ ವಸೂಲು ಮಾಡುವುದಕ್ಕೆ ಏತಕ್ಕೆ ಕ್ರಮ ಕೈಗೊಳ್ಳಬಾರದು?

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಸದಸ್ಯರು ಮಾಡಿರತಕ್ಕಂಥ ಎರಡು ಸಲಹೆಗಳು ಕೂಡ ಪರಿಶೀಲನೆಗೆ ಅರ್ಹವಾದಂಥ ಸಲಹೆಗಳು. ಈಗ ನಗರಸಭೆಗಳು, ಮಂಡಲ ಪಂಚಾಯತಗಳಿಗೆ ನೇರವಾಗಿ ರೋಜಗಾರ್ ಯೋಜನೆಗಳಿಂದ ಹಣ ಬರುತ್ತದೆ. ಆದ್ದರಿಂದ ಅವರು ವಿದ್ಯುಚ್ಛಕ್ತಿ ಬಾಕಿ ಉಳಿಸಿಕೊಳ್ಳುವುದಕ್ಕೆ ಸಕಾರಣಗಳು ಇಲ್ಲ. ಆದ್ದರಿಂದ ಸರ್ಕಾರ ಈ ತೀರ್ಮಾನವನ್ನು ಮಾಡಿದ್ದೇವೆ. ಈ ಮಂಡಳಿಗೆ ಬರಬೇಕಾದಂಥ ಹಣವನ್ನು ಅಟ್‌ಸೋರ್ಸ್ ರೆಟ್ರಾಸ್ಪೆಕ್ಟೀವ್ ಆಗಿಯಲ್ಲ, ಪ್ರಾಸ್ಪೆಕ್ಟೀಟಿವ್ ಆಗಿ ಹಿಡಿಯಬೇಕೆಂದು ಮಾಡಿದ್ದೇವೆ. ಇನ್ನು ಈ ಬಾಕಿ ಬರಬೇಕಾದುದಕ್ಕೆ ಒಂದು ಅದಾಲತ್ ರೀತಿಯಲ್ಲಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಯಾರು ಕೋರ್ಟಿಗೆ ಹೋಗಿದ್ದಾರೆ, ಯಾರು ಕೋರ್ಟಿಗೂ ಹೋಗದೆ ಹಾಗೆಯೇ ಸತಾಯಿಸುತ್ತಿದ್ದಾರೆ, ಅವರನ್ನೂ ಸೇರಿಸಿ ಅದಾಲತ್ ಮಾಡಿ ಅದನ್ನು ಚುಕ್ತಾ ಮಾಡಬೇಕೆಂದು ಸಲಹೆಯಿದೆಯಲ್ಲಾ, ಅದನ್ನು ಮಾಡಬೇಕೆಂದು ವಿದ್ಯುಚ್ಛಕ್ತಿ ಮಂಡಳಿಗೆಯವರಿಗೆ ನಾನು ನಿರ್ದೇಶನವನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಎನ್ ಚಿಕ್ಕೇಗೌಡ : ಮಾನ್ಯ ಅಧ್ಯಕ್ಷರೇ, ಈ ಬಾಕಿ ಬಗ್ಗೆ ಈ 500 ಕೋಟಿ ಚಿಲ್ಲರೆ ಏನು ಇದೆ ಇದರಲ್ಲಿ ಸಾಮಾನ್ಯ ರೈತರು ಏನಾದರೂ ಒಂದು ತಿಂಗಳು ಕಟ್ಟದೇ ಹೋದರೆ ಕೂಡಲೇ ಡಿಸ್‌ಕನೆಕ್ಷನ್ ಮಾಡಿಬಿಡುತ್ತಾರೆ. ಇಲ್ಲಿ ವೈಯುಕ್ತಿಕವಾಗಿ ನೂರಾರು ಕೋಟಿ ರೂಪಾಯಿಗಳು ಬಾಕಿ ಇದೆ. ಮತ್ತು ಕೆಲವರು ಕೋರ್ಟಿಗೆ ಹೋಗಿದ್ದಾರೆ; ಜಾಸ್ತಿ ಬಾಕಿ ಇರುವವರೇ ಕೋರ್ಟಿಗೆ ಹೋಗಿರುವುದು. ರೈತರು ಕೋರ್ಟಿಗೆ ಹೋಗುವುದಕ್ಕೆ ಆಗುವುದಿಲ್ಲ. ಅವರಿಗೆ ನೀವು ವಿದ್ಯುಚ್ಛಕ್ತಿಯನ್ನು ನಿಲ್ಲಿಸಿಬಿಡುತ್ತೀರಿ. ಮತ್ತು ಅವರಿಗೆ ಕೊಡುವ ವಿದ್ಯುತ್ಛ್ಕ್ತಿಯನ್ನು ಸರಿಯಾಗಿ ಕೊಡುವುದಿಲ್ಲ. ದಿವಸದಲ್ಲಿ 5-6 ಗಂಟೆ ಕೂಡ ವಿದ್ಯುತ್ ಇರುವುದಿಲ್ಲ. ವಿದ್ಯುತ್ ಕಣ್ಣಾಮುಚ್ಚಾಲೆ ಆಗುತ್ತದೆ. ನೀವು ಗ್ರಾಹಕರಿಂದ ಹಣ ವಸೂಲಿ ಮಾಡಿ ಅವರಿಗೆ ಸರಿಯಾಗಿ ವಿದ್ಯುತ್ ಸರಬರಾಜು ಮಾಡದೇ ಯಾರೋ ಒಂದು ತಿಂಗಳು ವಿದ್ಯುತ್ ಬಾಕಿ ಇರುವವರದ್ದು ಡಿಸ್‌ಕನ್‌ಕ್ಷನ್ ಮಾಡಿಬಿಟ್ಟು ಬಡ್ಡಿ ಮತ್ತು ಸುಸ್ತಿ ಬಡ್ಡಿ ಹಾಕುತ್ತೀರಿ; ಇದು ಯಾವ ನ್ಯಾಯ ಸ್ವಾಮಿ?

ಶ್ರೀ ಎಸ್ ಎಂ ಕೃಷ್ಣಾ : ನಾವು ರೈತರ ತಂಟೆಗೆ ಹೋಗುತ್ತಿಲ್ಲವಲ್ಲಾ ಸ್ವಾಮಿ. ಅವರನ್ನು ಮುಟ್ಟುವುದಕ್ಕೆ ಹೋಗುತ್ತಿಲ್ಲ ಇನ್ನು ಡಿಸ್‌ಕನ್‌ಕ್ಷನ್ ಮಾಡುವ ಪರಿಸ್ಥಿತಿ ಎಲ್ಲಿ ಬಂತು? ಈಗ ಮನೆ ಲೈಟಿಗೆ ದುಡ್ಡು ಕಟ್ಟದಿದ್ದರೆ ಡಿಸ್‌ಕನೆಕ್ಷನ್ ಮಾಡುತ್ತೇವೆ.

ಪ್ರಶ್ನೆ ಸಂಖ್ಯೆ : 50 (466)

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಸ್ವಲ್ಪ ಕಾಲಾವಕಾಶ ಕೇಳಿದ್ದಾರೆ.

ಶ್ರೀ ಬಿ. ಹಂಪನಗೌಡ : ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಮುಖವಾದ ಪ್ರಶ್ನೆ.

ಶ್ರೀ ಎಂ. ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ, ವಿವರಗಳು ಏನೂ ಕೊಡಬೇಕಾಗಿಲ್ಲ.

ಶ್ರೀ ಎಂ.ಎಸ್. ಪಾಟೀಲ್ : ಇದು ಬಹಳ ಮಹತ್ವದ ಪ್ರಶ್ನೆ ಮಾನ್ಯ ಅಧ್ಯಕ್ಷರೇ?

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ನಾಡಿದ್ದು ತೆಗೆದುಕೊಳ್ಳೋಣ, ಅಷ್ಟರಲ್ಲಿ ನಾನು ವಿವರಗಳನ್ನು ಕಲೆಕ್ಟ್ ಮಾಡುತ್ತೇನೆ.

ಅಧ್ಯಕ್ಷರು : ಆಗಬಹುದು.

ಪ್ರಶ್ನೆ ಸಂಖ್ಯೆ : 51(164)

ಶ್ರೀ ಎಂ.ಪಿ. ಕೇಶವಮೂರ್ತಿ : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ಸ್ವಲ್ಪ ಕಾಲಾವಕಾಶ ಬೇಕು. 31ನೇ ತಾರೀಖು ತೆಗೆದುಕೊಂಡರೆ ಪೂರ್ಣ ಉತ್ತರ ತರಿಸಿ ಕೊಡುತ್ತೇನೆ.

ಅಧ್ಯಕ್ಷರು : ಆಗಬಹುದು.

ಸವಣೂರು ತಾಲ್ಲೋಕು ಕುಣಿಮೇಳ್ಳಿಹಳ್ಳಿ ಏತ ನೀರಾವರಿ ಯೋಜನೆ

591 - ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸವಣೂರು ತಾಲ್ಲೂಕು ಕುಣಿಮೇಳ್ಳಿ ಹಳ್ಳಿ ಏತ ನೀರಾವರಿ ಬ್ಯಾರೇಜ್ ಕೆಲಸ ಎಂದು ಪ್ರಾರಂಭವಾಯಿತು? ಅದು ಯಾವ ಹಂತದಲ್ಲಿದೆ?

ಆ) ಸದರಿ ಕೆಲಸ ಎಷ್ಟು ದಿನಗಳಲ್ಲಿ ಮುಗಿಸಲಾಗುವುದು?

ಶ್ರೀ ಎಂ.ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಸವಣೂರು ತಾಲ್ಲೂಕು ಕುಣಿಮೇನ ಹಳ್ಳಿ ಬ್ಯಾರೇಜ್ ಕೆಲಸವು 7-1-86 ರಲ್ಲಿ 18.10 ಲಕ್ಷ ರೂ.ಗಳ ಅಂದಾಜಿಗೆ ಅನುಮೋದನೆ ನೀಡಲಾಗಿದೆ. ದಿನಾಂಕ : 30-3-88 ರಂದು ಕರ್ನಾಟಕ ರಾಜ್ಯ ನಿರ್ಮಾಣ ನಿಗಮ, ಬೆಂಗಳೂರು ಇವರಿಗೆ ಜಿಲ್ಲಾ ಪರಿಷತ್ ಧಾರವಾಡ ಇವರು ವಹಿಸಿಕೊಟ್ಟದ್ದು ಮಾರ್ಚ್ 1989ರಲ್ಲಿ ಡಿ.ಪಿ.ಎ.ಪಿ ಯೋಜನೆಯಡಿಯಲ್ಲಿ ಕೆಲಸ ಪ್ರಾರಂಭವಾಯಿತು. ಬ್ಯಾರೇಜಿನ ತಳಪಾಯದ ಕಾಂಕ್ರೀಟ್ ಮತ್ತು ಒಂದು ಬದಿಯ ಅಬಟಮೆಂಟ ಭಾಗವನ್ನು ನಿರ್ವಹಿಸಲಾಗಿದೆ. ಸುಮಾರು 21.59 ಲಕ್ಷ ರೂ.ಗಳ ಕೆಲಸವನ್ನು ನಿರ್ವಹಿಸಲಾಗಿದೆ. ಬ್ಯಾರೇಜನ ಗೇಟಿನ ಕಾಮಗಾರಿಗಳನ್ನು ಕೈಗೊಂಡಿದ್ದು ಒಟ್ಟು 30.00 ಲಕ್ಷ ರೂ.ಗಳ ಮೊತ್ತವನ್ನು ನಿಗಮಕ್ಕೆ ಪಾವತಿ ಮಾಡಬೇಕಾಗಿದೆ. 94-95ನೇ ಸಾಲಿನ ಆಯವ್ಯಯದಲ್ಲಿ ಈ ಕಾಮಗಾರಿಗೆ 1.00 ಲಕ್ಷ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

ಆ) ಸದರಿ ಕಾಮಗಾರಿಯು 53.00 ಲಕ್ಷ ರೂ.ಗಳಿಗೆ ಪರಿಷ್ಕೃತ ಅಂದಾಜು ಪರಿಶೀಲನೆಯಲ್ಲಿದ್ದು ಪರಿಷ್ಕೃತ ಅಂದಾಜಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತ ನಂತರ ಆದ್ಯತೆ ಮೇಲೆ ಕೆಲಸವನ್ನು ಪೂರ್ಣಗೊಳಿಸಲಾಗುವುದು.

ಶ್ರೀ ಮಂಜುನಾಥ ಸಿ. ಕುನ್ನೂರು : ಮಾನ್ಯ ಅಧ್ಯಕ್ಷರೇ, ಮಾನ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಈ ಬ್ಯಾರೇಜನ್ನು 1989ನೇ ಇಸವಿಯಲ್ಲಿ ಡಿ ಪಿ ಎ ಪಿ ಯೋಜನೆಯಡಿಯಲ್ಲಿ ಕೆಲಸ ಪ್ರಾರಂಭಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ಅರ್ಧಂಬರ್ಧ ಕೆಲಸ ಮಾಡಿ ಈಗ ಕೆಲಸವನ್ನು ನಿಲ್ಲಿಸಿದ್ದಾರೆ. ಮಾನ್ಯ ಮಂತ್ರಿಗಳು ಏನು ಉತ್ತರದಲ್ಲಿ ಕೊಟ್ಟಿದ್ದಾರೆ ಅದು ವಸ್ತು ಸ್ಥಿತಿ ನಿಜ. ಮತ್ತೆ ಮುಂದೆ ತಾವು ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ 30 ಲಕ್ಷ ರೂಪಾಯಿಗಳು ನೀವು ಕೊಡಬೇಕೆನ್ನುವ ಮಾತನ್ನು ಹೇಳಿದ್ದೀರಿ. ಅದೂ ಸತ್ಯ. ತಾವು ಬಾಕಿ ಕೊಡಬೇಕಾದ ಹಣವನ್ನು ಯಾವಾಗ ಕೊಡುತ್ತೀರಿ? ಮತ್ತು ಕೆಲಸ ಪ್ರಾರಂಭ ಮಾಡಬೇಕಾದರೆ ಬಾಕಿ ಹಣ ಪಾವತಿ ಮಾಡದೇ ಕೆಲಸ ಪ್ರಾರಂಭವಾಗುವುದಿಲ್ಲ, ಎರಡನೆಯದಾಗಿ, ಇದರ ಪರಿಷ್ಕೃತ ಅಂದಾಡು 53 ಲಕ್ಷ ರೂಪಾಯಿಗಳು ಎಂದು ಮಾಡಿದ್ದೀರಿ. ಇದಕ್ಕೆ

ಸರ್ಕಾರದ ಅನುಮತಿ ದೊರೆಯಬೇಕು ಎನ್ನುವ ಮಾತನ್ನು ಸಹ ತಾವು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಅನುಮತಿ ಯಾವಾಗ ದೊರಕಿಸಿಕೊಳ್ಳುತ್ತೀರಿ? ಮತ್ತೊಂದು 1994-95ನೇ ಸಾಲಿನಲ್ಲಿ ತಾವು 1 ಲಕ್ಷ ರೂಪಾಯಿ ಅನುದಾನವನ್ನು ಒದಗಿಸಿದ್ದೀರಿ. 53 ಲಕ್ಷ ರೂಪಾಯಿಗಳ ಯೋಜನೆಗೆ 1 ಲಕ್ಷ ರೂಪಾಯಿ ಅನುದಾನ ಒದಗಿಸಿದರೆ ಏನೂ ಕೆಲಸಆಗುವುದಿಲ್ಲ. ಇದನ್ನು ನೋಡಿದರೆ ಸರ್ಕಾರ ಈ ಕೆಲಸವನ್ನು ಪೂರ್ಣಗೊಳಿಸಬೇಕೆನ್ನುವ ಇಚ್ಛೆ ಇದೆ ಎನ್ನುವಂತಾಗುವುದಿಲ್ಲ. ದಯಮಾಡಿ ಈ ಬ್ಯಾರೇಜ್ ಕೆಲಸ ಮಾಡಿದರೆ 4-6 ತಾಲ್ಲೂಕುಗಳಿಗೆ ಉಪಯೋಗವಾಗುತ್ತದೆ. ಆದ್ದರಿಂದ ಸರ್ಕಾರ ತ್ವರಿತಗತಿಯಲ್ಲಿ ಜನಗಳಿಗೆ ಉಪಯೋಗವಾಗುವಂತಹ ಈ ಕೆಲಸವನ್ನು ಪೂರ್ಣ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಮತ್ತು ಪರಿಷ್ಕೃತ ಅಂದಾಜು 53 ಲಕ್ಷ ರೂಪಾಯಿಗಳ ಹಣವನ್ನು ಸರ್ಕಾರ ಯಾವಾಗ ಬಿಡುಗಡೆ ಮಾಡುತ್ತದೆ ಎನ್ನುವ ಮಾತನ್ನು ನಿಖರವಾಗಿ ಹೇಳಬೇಕು.

ಶ್ರೀ ಎಂ.ಪಿ. ಕೇಶವಮೂರ್ತಿ : ಮಾನ್ಯ ಅಧ್ಯಕ್ಷರೇ, ಈ ಒಂದು ಯೋಜನೆಯನ್ನು 1986ನೇ ಇಸವಿ ಜನವರಿ ತಿಂಗಳಲ್ಲಿ ಪ್ರಾರಂಭ ಮಾಡಿದ್ದು 14 ಲಕ್ಷ 10 ಸಾವಿರ ರೂಪಾಯಿಗಳನ್ನು ಈ ಯೋಜನೆಯಡಿಯಲ್ಲಿ ಒದಗಿಸಿಕೊಟ್ಟು ಜಿಲ್ಲಾಪರಿಷತ್ತು ವತಿಯಿಂದ ಕಾಮಗಾರಿ ಪ್ರಾರಂಭವಾಗಿದ್ದು, ತದನಂತರ ಇದನ್ನು ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ಇವರಿಗೆ ವಹಿಸಿಕೊಟ್ಟು 1988ನೇ ಇಸವಿಯಲ್ಲಿ ಕೆಲಸ ಪ್ರಾರಂಭವಾಗಿದೆ. ಈಗಾಗಲೇ ಇದಕ್ಕೆ 9.79 ಲಕ್ಷ ರೂಪಾಯಿಗಳ ಹಣವನ್ನು ಖರ್ಚು ಮಾಡಿದೆ. ಆದರೆ 1988-89ನೇ ಸಾಲಿನ ಬಡ್ಜೆಟ್‌ನಲ್ಲಿ ಈ ಯೋಜನೆಯನ್ನು ಸೇರಿಸಿಲ್ಲ. ಆ ಕಾರಣದಿಂದ ಜಿಲ್ಲಾ ಪರಿಷತ್ ಈ ಕಾಮಗಾರಿಯನ್ನು ನಿಲ್ಲಿಸಿದರು. ಅದಾದ ನಂತರ ನಾವು ವರ್ಗಾವಣೆ ಮಾಡಿದ್ದೇವೆ. ಈಗ ನಾವು 30 ಲಕ್ಷ ರೂಪಾಯಿಗಳ ಬಾಕಿ ಕೊಡಬೇಕಾಗಿದೆ. 94-95ನೇ ಸಾಲಿನಲ್ಲಿ ಆಯವ್ಯಯದಲ್ಲಿ ಇದಕ್ಕೆ 1ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಇನ್ನು ಇದಕ್ಕೆ 53 ಲಕ್ಷ ರೂಪಾಯಿಗಳು ಬೇಕಾಗಿದೆ. ಈಗ ಆಡಳಿತಾತ್ಮಕ ಮಂಜೂರಾತಿ ಮಂಜೂರಾತಿ ಈ ವಿಷಯದಲ್ಲಿ ಕೊಟ್ಟು ಆದ್ಯತೆ ಮೇರೆಗೆ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಆರಾಧನಾ ಯೋಜನೆ

541 - ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *1993-94ನೇ ಸಾಲಿನಲ್ಲಿನ ಆರಾಧನಾ ಯೋಜನೆಯಡಿಯಲ್ಲಿ ಹೊಳೆ ನರಸೀಪುರ ತಾಲ್ಲೂಕಿಗೆ ಮುಜರಾಯಿ ದೇವಸ್ಥಾನಗಳಿಗಾಗಿ ಬಿಡುಗಡೆಯಾದ ಹಣವೆಷ್ಟು?*

ಆ) *1993-94ನೇ ಸಾಲಿನಲ್ಲಿ ಯಾವ ಯಾವ ಮುಜರಾಯಿ ದೇವಸ್ಥಾನಗಳಿಗೆ ಈ ಯೋಜನೆಯಡಿಯಲ್ಲಿ ಹಣವನ್ನು ನೀಡಲಾಗಿದೆ?*

ಇ) *1994-95ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಬಿಡುಗಡೆ ಮಾಡಿದ ಹಣವೆಷ್ಟು?*

ಈ) *ಅವುಗಳ ಪೈಕಿ ಹೊಳೆನರಸೀಪುರ ತಾಲ್ಲೂಕಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ?*

ಉ) *ಎಲ್ಲಾ ತಾಲ್ಲೂಕುಗಳಿಗೂ ಒಂದೇ ಪ್ರಮಾಣದಲ್ಲಿ ಹಣವನ್ನು ಬಿಡುಗಡೆ ಮಾಡಲಾಗುವುದೇ?*

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಮುಜರಾಯಿ ಸಚಿವರು) :

ಅ) ರೂ 3.20 ಲಕ್ಷ ಬಿಡುಗಡೆ ಮಾಡಲಾಗಿದೆ.

ಆ) 1) ಶ್ರೀಲಕ್ಷ್ಮೀದೇವರು, ಎಚನಹಳ್ಳಿ 25,000-00 (ನಿರ್ಮಾಣ)
(2) ಶ್ರೀ ಶಂಭುಲಿಂಗೇಶ್ವರಸ್ವಾಮಿ ದೇವರು ಅಂಬೇಡ್ಕರ್ ನಗರ ಹೊಳೆನರಸೀಪುರ ಟೌನ್ 25,000-00 (ರಿಪೇರಿ)
(3) ಶ್ರೀ ಚನ್ನವೀರಸ್ವಾಮಿ ತೇಜೂರು 25,000-00 (ನಿರ್ಮಾಣ)
(4) ಶ್ರೀ ಕನ್ನಂಬಾಡಿಅಮ್ಮ ರಂಗೇನಹಳ್ಳಿ 25,000-00 (ನಿರ್ಮಾಣ)

ಇ) 1994-95ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿಯಲ್ಲಿ ಈವರೆಗೆ 2 ಕೋಟಿ ರೂಗಳನ್ನು ಬಿಡುಗಡೆ ಮಾಡಿದ್ದು ಆ ಪೈಕಿ ಹಾಸನ ಜಿಲ್ಲೆಗೆ 7,14,285-00 ರೂ.ಗಳನ್ನು ನಿಗದಿಸಿದೆ.

ಈ) ಹಾಸನ ಜಿಲ್ಲೆಗೆ ನೀಡಲಾದ ಒಟ್ಟು ಹಣದಲ್ಲಿ ಪ್ರತಿವಿಧಾನ ಸಭಾ ಕ್ಷೇತ್ರಕ್ಕೆ ರೂ. 89285 ಗಳಂತೆ ಹೊಳೆ ನರಸೀಪುರ ಕ್ಷೇತ್ರಕ್ಕೆ ರೂ. 89,285-00 ರೂ.ಗಳು ನೀಡಬಹುದಾಗಿದೆ.

ಉ) ಹೌದು.

ಬ್ರಹ್ಮಾವರ ಕ್ಷೇತ್ರದಲ್ಲಿ ರಸ್ತೆ ದೀಪಗಳು

200 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಪಕ್ಕದಲ್ಲಿ ಬಹುತೇಕ ಬೀದಿ ದೀಪಗಳು ರಾತ್ರಿ ವೇಳೆಯಲ್ಲಿ 'ಉರಿಯದೇ ಇರುವುದು ವಿದ್ಯುತ್ ಮಂಡಳಿಯ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು?

ಆ) ಇದರಿಂದಾಗಿ ರಾತ್ರಿ ವೇಳೆಯಲ್ಲಿ ಸಂಚರಿಸುವ ವಾಹನಗಳಿಗೆ ಹಾಗೂ ಸಾರ್ವಜನಿಕರಿಗೆ ತೀವ್ರ ತರಹದ ತೊಂದರೆಗಳು ಉಂಟಾಗಿ ಸಂಚಾರಕ್ಕೆ ಅನಾನುಕೂಲವಾಗಿರುವುದು ನಿಜವಲ್ಲವೇ, ಮಂಡಳಿಯು ಈ ಸಮಸ್ಯೆಯನ್ನು ಪರಿಹರಿಸಲು ಸಕಾಲಿಕ ಕ್ರಮಗಳನ್ನು ಕೈಗೊಳ್ಳುವುದೇ?

ಶ್ರೀ ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು) :

ಅ) ಮತ್ತು ಆ) ಹೌದು ಬಂದಿದೆ. ಕೆಟ್ಟಿರುವ ಬೀದಿ ದೀಪಗಳ ದುರಸ್ತಿ ಕಾರ್ಯವನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿ ಮತ್ತು ಪುರಸಭೆಗಳೇ ನಿರ್ವಹಿಸುತ್ತಿವೆ. ದುರಸ್ತಿಪಡಿಸಲಾದ ಕೊಳವೆ ದೀಪಗಳ ಫಿಟ್ಟಿಂಗ್‌ಗಳನ್ನು ಗ್ರಾಮ ಪಂಚಾಯಿತಿ : ಪುರಸಭೆ ಒದಗಿಸಿದ ನಂತರ, ಮಂಡಳಿ ಅಳವಡಿಸುವ ಕ್ರಮ ತೆಗೆದುಕೊಳ್ಳುತ್ತದೆ.

ಕೋಟೆ ವೆಂಕಟರಮಣ ಸ್ವಾಮಿ ದೇವಸ್ಥಾನದ ಆಸ್ತಿ ಕುರಿತು

535 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದ ಕೋಟೆ ವೆಂಕಟರಮಣ ಸ್ವಾಮಿ ದೇವಾಲಯಕ್ಕೆ ಸೇರಿದ ಆಸ್ತಿಯ ವಿವರಗಳೇನು: (ಕಟ್ಟಡ ಹಾಗೂ ಜಾಗದ ಬಗ್ಗೆ ಪ್ರತ್ಯೇಕ ವಿವರಗಳನ್ನು ಒದಗಿಸುವುದು).

ಆ) ಈ ದೇವಾಲಯಕ್ಕೆ ದಾನವಾಗಿ ಕೊಟ್ಟಿರುವ ಜಾಗ ಇಲ್ಲವೆ ಕಟ್ಟಡದ ವಿವರಗಳೇನು?

ಇ) ದೇವಾಲಯಕ್ಕೆ ಸೇರಿದ ಕಟ್ಟಡವನ್ನು ಬಾಡಿಗೆ ಅಥವಾ ಲೀಸ್ ಆಧಾರದ ಮೇಲೆ ಯಾರಿಗೆ ವಹಿಸಿಕೊಡಲಾಗಿದೆ: (ವಹಿಸಿಕೊಂಡಿರುವರ ಹೆಸರು ಪದನಾಮ ವಿವರಗಳನ್ನು ಒದಗಿಸುವುದು)

ಈ) ಈ ಕಟ್ಟಡವನ್ನು ಬಾಡಿಗೆ ಅಥವಾ ಲೀಸ್ ಆಧಾರದ ಮೇಲೆ ವಹಿಸಿಕೊಡುವಾಗ ಯಾವ ಯಾವ ಮಾನದಂಡವನ್ನು ಅನುಸರಿಸಲಾಯಿತು.

ಉ) ವೃತ್ತ ಪತ್ರಿಕೆಗಳಲ್ಲಿ ಜಾಹೀರಾತನ್ನು ನೀಡಲಾಗಿತ್ತೇ; ನೀಡಲಾಗಿದ್ದರೆ ಅದರ ವಿವರಗಳನ್ನು ಒದಗಿಸುವುದು.

ಊ) ನಿಯಮಗಳನ್ನು ಉಲ್ಲಂಘನೆ ಮಾಡಿ ಪ್ರಭಾವಿ ವ್ಯಕ್ತಿಗಳಿಗೆ ದೇವಾಲಯಕ್ಕೆ ಸೇರಿದ ಕಟ್ಟಡವನ್ನು ವಹಿಸಿಕೊಟ್ಟಿರುವುದು ನಿಜವೇ?

ಋ) ಇವರುಗಳನ್ನು ಕೂಡಲೇ ತೆರವು ಮಾಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಮುಜರಾಯಿ ಸಚಿವರು) : •

ಅ) ಆಸ್ತಿಯ ವಿವರಗಳು

(1) ದೇವಾಲಯಕ್ಕೆ ಹೊಂದಿಕೊಂಡಂತೆ ಇರುವ 10 X 10 ವಿಸ್ತೀರ್ಣದ 5 ಅಂಗಡಿಗಳು

(2) ಜಯನಗರದಲ್ಲಿ 4 ಮನೆಗಳು ಮತ್ತು 14 X 8 ಅಡಿ ವಿಸ್ತೀರ್ಣದ 1 ಅಂಗಡಿ

(3) ಪ್ಯಾಲೆಸ್ ಗುಟ್ಟಹಳ್ಳಿಯಲ್ಲಿ 25 X 25 ವಿಸ್ತೀರ್ಣದ 1 ಮನೆ

ಆ) (1) ದಾನವಾಗಿ ನೀಡಲಾದ ಯಾವ ಜಾಗಗಳಿಲ್ಲ,

(2) ದಾನವಾಗಿ ನೀಡಲಾದ ಕಟ್ಟಡಗಳ ವಿವರಗಳು

(ಅ) ದಿ: ರಾಮಯ್ಯನವರಿಂದ ಜಯನಗರದಲ್ಲಿ 4 ಮನೆ ಮತ್ತು 1 ಅಂಗಡಿ

(ಆ) ಶ್ರೀ ಹೆಚ್. ಸೀತಾರಾಮಯ್ಯರವರಿಂದ ಪ್ಯಾಲೇಸ್‌ಗುಟ್ಟಹಳ್ಳಿಯ 1 ಮನೆ.

ಇ) ವಿವರಗಳನ್ನು ಅನುಬಂಧ 'ಅ' ನಲ್ಲಿ ನೀಡಿದೆ.

ಉ) ಸಿಆಸಂಖ್ಯೆ : ಆರ್‌ಡಿ: 67 : ಎಂಎಲ್‌ಡಿ: 79 ದಿ : 10-10-80 ಹಾಗೂ ಆರ್‌ಡಿ :33:ಎಂಎಲ್‌ಡಿ:88 ದಿ:26-9-90ರ ಕ್ರಮವನ್ನು ಅನುಸರಿಸಿ ನೀಡಿದೆ.

ಉ) ವೃತ್ತ ಪತ್ರಿಕೆಗಳಲ್ಲಿ ಜಾಹೀರಾತನ್ನು ನೀಡಿರುವುದಿಲ್ಲ.

ಊ) ನಿಜವಲ್ಲ.

ಋ) 'ಊ'ನಲ್ಲಿ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕ ರಾಜ್ಯ ಪತ್ರಾಗಾರ,
ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು
ಪ್ರಸಂ...............ದಿನಾಂಕ...............

ಅನುಬಂಧ - ಅ

ಬೆಂಗಳೂರು ಸಿಟಿ ಕೋಟೆ ಶ್ರೀ ವೆಂಕಟರಮಣಸ್ವಾಮಿ ದೇವಾಲಯ ಗುತ್ತಿಗೆ : ಬಾಡಿಗೆದಾರರ ವಿವರ

	ಗುತ್ತಿಗೆದಾರರ ಹೆಸರು	ವಿಸ್ತೀರ್ಣ	ಹಾಲಿ ತಿಂಗಳ	ನೀಡುತ್ತಿರುವ ಬಾಡಿಗೆ
ಅ) ಕೋಟೆ ಶ್ರೀ ವೆಂಕಟರಮಣಸ್ವಾಮಿ ದೇವಾಲಯದ ಆವರಣದ ಅಂಗಡಿಗಳ ವಿವರ?	1) ಶ್ರೀ ಹೆಚ್.ಎನ್. ಶಿವರುದ್ರಪ್ಪ (ವ್ಯಾಪಾರಸ್ಥರು)	10 x 10	ರೂ.450-00	ಅಂಗಡಿಗಳು
	2) - ” -	10 x 10	450-00	”
	3) ಶ್ರೀ ಬಿ.ಎಂ. ಮಂಜುನಾಥ್ (ವ್ಯಾಪಾರಸ್ಥರು)	10 x 10	450-00	”
	4) ಶ್ರೀ ಕೆ.ಟಿ. ರಾಜಶೇಖರ್ (ವ್ಯಾಪಾರ)	10 x 10	450-00	”
	5) ಶ್ರೀ ಡಿ. ಪಾಂಡುರಂಗ (ವ್ಯಾಪಾರ)	10 x 10	450-00	”
ಆ) ದಿ:ರಾಮಯ್ಯನವರ ಮನೆ ಮತ್ತು ಅಂಗಡಿ	1) ಶ್ರೀ ಬಿ.ವಿ. ಶ್ರೀಧರ್ (ಶೀಘ್ರಲಿಪಿಗಾರರು) ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು.	$26\frac{1}{2} \times 26\frac{1}{2}$	ಒಟ್ಟು	ಸಂಬಳದಶೇಕಡ10 ಮನೆ
	2) ಶ್ರೀ ಬಸವರಾಜ ಹೊರಟ್ಟಿ (ವಿಧಾನ ಪರಿಷತ್ತಿನ ಸದಸ್ಯರು)	19 x 25	495-00	ಮನೆ
	3) ಶ್ರೀ ಲಕ್ಷ್ಮೀನಾರಾಯಣ ಸಮೂಹ ‘ಡಿ’ ನೌಕರರು. ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು	10 x 20		
	4) ಶ್ರೀ ಟಿ.ವಿ. ಕೃಷ್ಣನ್, ಖಾಸಗಿ ವ್ಯಕ್ತಿ	15 x 26	140-00	”
	5) ಶ್ರೀ ಎಂ.ಜಿ. ಶ್ರೀಕಾಂತ್ (ರವಿಕುಮಾರ್, ಬಾಬು) (ವ್ಯಾಪಾರ)	14 x 8	140-00	ಅಂಗಡಿ
ಇ) ಶ್ರೀ ಹೆಚ್. ಸೀತಾರಾಮಯ್ಯನವರ ಮನೆ : ಪ್ಯಾಲೇಸ್ ಗುಟ್ಟಹಳ್ಳಿ.	1) ಎಂ.ಸಿ. ಕೃಷ್ಣಪ್ಪ (ಗೀತಾಸ್ವಾಮಿ)	25 x 25	75-00	ಮನೆ

ರಸ್ತೆಗಳ ದುರಸ್ತಿ ಕಾರ್ಯ

345 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಲೋಕೋಪಯೋಗಿ ಇಲಾಖೆಯ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ ರಸ್ತೆಗಳು ಈ ವರ್ಷ ಅತಿಯಾದ ಮಳೆಯಿಂದ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ರಿಪೇರಿಗಾಗಿ ಹೆಚ್ಚಿಗೆ ಹಣವನ್ನು ಒದಗಿಸಿ ಕ್ರಮ ಕೈಗೊಳ್ಳುವರೇ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಈ ಸಾಲಿನ ಅತಿವೃಷ್ಟಿಯಿಂದ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ 32.64 ಕಿ.ಮೀ. ಉದ್ದದ ರಸ್ತೆಗಳಿಗೆ ಮತ್ತು 33 ಅಡ್ಡ ಮೋರಿಗಳಿಗೆ ಹಾನಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸಂಪರ್ಕಕ್ಕೆ ತೊಂದರೆ ಉಂಟಾಗಿದ್ದ ರಸ್ತೆಯ ಭಾಗಗಳನ್ನು ತಾತ್ಕಾಲಿಕವಾಗಿ ದುರಸ್ತಿಗೊಳಿಸಲಾಗಿದೆ. ತುರ್ತು ದುರಸ್ತಿಗಾಗಿ 12.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಸ್ಥಿರವಾದ ದುರಸ್ತಿಗಾಗಿ ಅತಿವೃಷ್ಟಿ ಪರಿಹಾರ ನಿಧಿಯಿಂದ ಹೆಚ್ಚುವರಿ ಅನುದಾನಕ್ಕೆ ಬೇಡಿಕೆ ಸಲ್ಲಿಸಲಾಗಿದೆ. ವಿಷಯವು ಕಂದಾಯ ಇಲಾಖೆಯ ಪರಿಶೀಲನೆಯಲ್ಲಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು, ಮುಜರಾಯಿ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಅಧ್ಯಕ್ಷರ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸವದತ್ತಿ ತಾಲ್ಲೋಕು ಎಣಗಿ ಮತ್ತು ಮಾಟೊಳ್ಳಿ ಏತ ನೀರಾವರಿ ಯೋಜನೆ

553 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸವದತ್ತಿ ತಾಲ್ಲೂಕಿನ ಮಾಟೊಳ್ಳಿ ಹಾಗೂ ಎಣಗಿ ಗ್ರಾಮಗಳಲ್ಲಿ ಅಗ್‌ಮೆಂಟೇಶನ್ ಆಫ್ ಲಿಫ್ಟ್ ಇರಿಗೇಶನ್ ನೀರಾವರಿ ಯೋಜನೆಗಳನ್ನು ಮೂರು ತಿಂಗಳೊಳಗಾಗಿ ಕೈಕೊಳ್ಳಬೇಕೆಂದು ಹಾಗೂ ಬೇಕಾಗುವ ಹಣವನ್ನು ಸರಕಾರದವರು ಬಿಡುಗಡೆ ಮಾಡಬೇಕೆಂದು ಅಂದಾಜು ಸಮಿತಿಯವರು ಶಿಫಾರಸ್ಸು ಮಾಡಿರುವ ವಿಷಯ ನಿಜವೇ;

ಆ) ಸಮಿತಿಯ ಶಿಫಾರಸ್ಸಿನ ಮೇರೆಗೆ ಸವದತ್ತಿ ತಾಲ್ಲೂಕಿನ ಎಣಗಿ -ಮಾಟೊಳ್ಳಿ ಏತ ನೀರಾವರಿ ಯೋಜನೆಗಳ ಅಗ್‌ಮೆಂಟೇಶನ್ ಕೆಲಸ ಕೈಕೊಳ್ಳಲು ಪ್ರಸ್ತಾವನೆಗಳನ್ನು ಮುಖ್ಯ ಇಂಜಿನೀಯರ್ ನೀರಾವರಿ (ಉತ್ತರ) ಬೆಳಗಾಂವಿ ಇವರಿಗೆ ಕಳುಹಿಸಿದ ವಿಷಯ ನಿಜವೇ;

ಇ) ಸಮಿತಿಯ ಶಿಫಾರಸ್ಸಿನ ಮೇರೆಗೆ ಸರಕಾರದವರು ಕೂಡಲೇ ಅಗ್‌ಮೆಂಟೇಶನ್ ಏತ ನೀರಾವರಿ ಯೋಜನೆಗಳಿಗೆ ಮುಳುಗಡೆ ಪ್ರದೇಶದ ರೈತರ ಅನುಕೂಲತೆಗಾಗಿ ಮಂಜೂರಾತಿ ನೀಡಲಾಗಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯ ಮಂತ್ರಿಗಳು) :

ಅ) ನಿಜ.

ಆ) ನಿಜ.

ಇ) ಇಲ್ಲ, ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಸವನೂರು 110 ಕೆ.ವಿ. ಸ್ಟೇಷನ್ ಕೆ.ಇ.ಬಿ. ಇಲಾಖೆಯವರು ಕೂಡಲೆ ಪ್ರಾರಂಭಿಸುವುದು

589 - ಶ್ರೀ ಮಂಜುನಾಥ್ ಸಿ. ಕುನ್ನೂರು (ಶಿಗ್ಗಾಂವ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸವಣೂರು ಮತ್ತು ಶಿಗ್ಗಾಂವ್ ತಾಲ್ಲೂಕುಗಳಲ್ಲಿ ವಿದ್ಯುಚ್ಛಕ್ತಿ ಎಷ್ಟು (ಕಿ.ವಾ. ಸ್ಟೇಷನ್) ವಿದ್ಯುತ್ ಸ್ಥಾವರಗಳಿವೆ.

ಆ) ಸದರೀ ವಿದ್ಯುತ್ ಘಟಕದಿಂದ ಇನ್‌ಕಮಿಂಗ್ ವೋಲ್ಟೇಜ್ ಎಷ್ಟು?

ಇ) ಉಭಯ ತಾಲ್ಲೂಕುಗಳಲ್ಲಿ ವಿದ್ಯುಚ್ಛಕ್ತಿ ಅಭಾವವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಸವಣೂರು ತಾಲ್ಲೂಕಿಗೆ 110 ಕೆವಿ ಸ್ಟೇಷನ್ ಮಂಜೂರಾಗಿ ಎಷ್ಟು ದಿವಸಗಳಾದವು?

ಉ) ಸದರೀ ವಿದ್ಯುತ್ ಘಟಕಗಳನ್ನು ಎಂದು ಪ್ರಾರಂಭಿಸಲಾಗುವುದು?

ಶ್ರೀ ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು) :

ಅ) ಸವಣೂರು ಮತ್ತು ಶಿಗ್ಗಾಂವ್‌ಗಳಲ್ಲಿ ತಲಾ ಒಂದೊಂದು 33:11 ಕೆವಿ ವಿದ್ಯುತ್ ಸಬ್‌ಸ್ಟೇಷನ್ ಇದೆ. ಸವಣೂರಿನಲ್ಲಿರುವ ವಿದ್ಯುತ್ ಸಬ್-ಸ್ಟೇಷನ್ನಿನ ಸಾಮರ್ಥ್ಯ 10ಎವಿಎ ಮತ್ತು ಶಿಗ್ಗಾಂವ್‌ನಲ್ಲಿರುವ ವಿದ್ಯುತ್ ಸಬ್-ಸ್ಟೇಷನ್ನಿನ ಸಾಮರ್ಥ್ಯ 5 ಎಂವಿಎ.

ಆ) ಸದರೀ ವಿದ್ಯುತ್ ಸಬ್-ಸ್ಟೇಷನ್‌ಗಳಿಗೆ ಇನ್‌ಕಮಿಂಗ್ ವೋಲ್ಟೇಜ್ 33 ಕೆವಿ ಇರುತ್ತದೆ.

ಇ) ಹೌದು.

ಈ) ಸವಣೂರಿನಲ್ಲಿ ಹಾಲಿ ಇರುವ 33:11 ಕೆವಿ ಸಬ್-ಸ್ಟೇಷನ್ನನ್ನು 110 ಕೆವಿ ಸ್ಟೇಷನ್ನಾಗಿ ಮೇಲ್ದರ್ಜೆಗೊಳಿಸಲು ಮಂಡಳಿಯ ತಾಂತ್ರಿಕ ಸಮಿತಿಯ ಒಪ್ಪಿಗೆ ದೊರೆತಿದ್ದು, ಮಂಡಳಿಯ ಆಡಳಿತಾತ್ಮಕ ಮಂಜೂರಾತಿಯನ್ನು ಪಡೆಯಲು ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ.

ಉ) ಈ ಕೆಲಸವನ್ನು 1996ನೇ ಮಾರ್ಚ್ ವೇಳೆಗೆ ಮುಗಿಸಲು ಉದ್ದೇಶಿಸಲಾಗಿದೆ.

ದ.ಕನ್ನಡ ಜಿಲ್ಲೆಯಲ್ಲಿ ನೂತನವಾಗಿ ಬರಲಿರುವ ಕೈಗಾರಿಕಾ ಉದ್ಯಮಗಳಿಗೆ ವಿದ್ಯುಚ್ಛಕ್ತಿ ಸರಬರಾಜು

545 - ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂತನವಾಗಿ ಬರುವ ಕೈಗಾರಿಕಾ ಉದ್ಯಮಿಗಳಿಗೆ ಎಷ್ಟು ಮೆಗಾ ವ್ಯಾಟ್ ವಿದ್ಯುತ್ ಅಗತ್ಯವಿದೆ.

ಆ) ಅಗತ್ಯವಿರುವ ವಿದ್ಯುಚ್ಛಕ್ತಿಯನ್ನು ಹೇಗೆ ಪೂರೈಸಲಾಗುವುದು?

ಇ) ಅಗತ್ಯವಿರುವ ವಿದ್ಯುಚ್ಛಕ್ತಿಯನ್ನು ಸರ್ಕಾರವೇ ಪೂರೈಸುತ್ತದೆಯೇ ಅಥವಾ ಕೈಗಾರಿಕೋದ್ಯಮಿಗಳು ಖಾಸಗಿಯಾಗಿ ಪೂರೈಸಲಾಗುತ್ತಿರುವರೆ?

ಶ್ರೀ. ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು) :

ಅ) ಒಟ್ಟು 208 ಎಂ.ವಿ.ಎ. (ಮೆಗಾ ವೋಲ್ಟ್ ಆಂಪಿಯರ್)ಗಳೆಂದು ಅಂದಾಜು ಮಾಡಿದೆ.

ಆ) ಈ ಬೇಡಿಕೆಯ ಬಹುಭಾಗವನ್ನು ವಿದ್ಯುಚ್ಛಕ್ತಿ ಮಂಡಲಿಯೇ ಪೂರೈಸುತ್ತಿದೆ. 500 ಕೆ.ವಿ.ಎ. ಮೇಲ್ಪಟ್ಟು ಬೇಡಿಕೆ ಇರುವ ಕೈಗಾರಿಕೆಗಳು ಒಟ್ಟು ಬೇಡಿಕೆಯ $\frac{1}{3}$ ಭಾಗವನ್ನು ಕ್ಯಾಪ್ಟಿವ್ ಜನರೇಷನ್ ಮೂಲಕ ಉತ್ಪಾದಿಸಬೇಕೆಂಬ ಶರತ್ತು ಹಾಕಲಾಗಿದೆ. ಅಲ್ಲದೆ ಖಾಸಗಿ ವಲಯದಲ್ಲಿ ನಿರೀಕ್ಷಿಸಿರುವ ವಿದ್ಯುತ್ ಉತ್ಪಾದನೆ ಕೂಡ ಮುಂಬರುವ ವರ್ಷಗಳಲ್ಲಿ ಮಂಡಳಿಗೆ ಲಭ್ಯವಿರುತ್ತದೆ.

ಬೆಳಗಾಂವ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಹೋಳಿನಾಗಲಾಪೂರ ಗ್ರಾಮದ ಸ್ಥಳಾಂತರ

550 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂವ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಹೋಳಿನಾಗಲಾಪೂರ ಗ್ರಾಮವನ್ನು ಸ್ಥಳಾಂತರಿಸಲು ಸರ್ಕಾರಕ್ಕೆ ಮನವಿಗಳು ಬಂದಿವೆಯೇ;

ಆ) ಈ ಗ್ರಾಮದ ಸುತ್ತಲೂ ನೀರು ನಿಂತಿದ್ದು ಜನರ ಆರೋಗ್ಯ ಕೆಡುತ್ತಿರುವ ಬಗ್ಗೆ ಹಾಗೂ ಸುರಕ್ಷತೆ ದೃಷ್ಟಿಯಿಂದ ಆ ಗ್ರಾಮದ ಜನರನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದೇ; ಹಾಗಿದ್ದಲ್ಲಿ ಈ ಗ್ರಾಮವನ್ನು ಸ್ಥಳಾಂತರಿಸಲು ಯಾವ ಕ್ರಮ ಕೈಕೊಳ್ಳಲಾಗಿದೆ;

ಇ) ಈಗಾಗಲೇ ಕಂದಾಯ ಅಧಿಕಾರಿಗಳು ಹಾಗೂ ಸ್ಪೆಷಲ್ ಡೆಪ್ಯೂಟಿ ಕಮೀಷನರ್‌ಮಲಪ್ರಭಾ ಪ್ರಾಜೆಕ್ಟ್ ಇವರು ಈ ಗ್ರಾಮಕ್ಕೆ ಭೇಟಿ ಕೊಟ್ಟಿರುವರೇ?

ಶ್ರೀ ಎಸ್. ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಹೌದು

ಆ) ಮಲಪ್ರಭಾ ಜಲಾಶಯದಲ್ಲಿ ಪೂರ್ಣ ನೀರಿನ ಮಟ್ಟ ಸಂಗ್ರಹವಾದಾಗ ಹೋಳಿನಾಗಲಿಪುರದ ಸಮೀಪದಲ್ಲಿರುವ ಹಳ್ಳಗಳಲ್ಲಿ ಸುಮಾರು 400 ರಿಂದ 500 ಮೀ. ಅಂತರದಲ್ಲಿ ಹಿನ್ನೀರು ನಿಲ್ಲುತ್ತದೆ. ಈ ಗ್ರಾಮದ ಪುನರ್ ನಿವೇಶನದ ಅವಶ್ಯಕತೆಯನ್ನು ಪರಿಶೀಲಿಸಲಾಗುತ್ತಿದೆ.

ಇ) ವಿಶೇಷ ಜಿಲ್ಲಾಧಿಕಾರಿಗಳು (ಮಲಪ್ರಭಾ ಯೋಜನೆ) ಇವರು ಭೇಟಿ ನೀಡಿರುವುದಾಗಿ ತಿಳಿದು ಬಂದಿದೆ. ಕಂದಾಯ ಇಲಾಖೆ ಅಧಿಕಾರಿಗಳ ಭೇಟಿ ಬಗ್ಗೆ ಮಾಹಿತಿ ಇಲ್ಲ.

ಸ್ಥಗಿತಗೊಂಡ ಚಿಕ್ಕಬುದನೂರು ನೀರಾವರಿ ಕೆರೆ ಕೆಲಸವನ್ನು ಪ್ರಾರಂಭಿಸುವುದು

551 - ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂವ ಜಿಲ್ಲಾ, ಸವದತ್ತಿ ತಾಲ್ಲೂಕಿನ ಚಿಕ್ಕಬುದನೂರ ಕೆರೆ ಕಟ್ಟುವ ಕೆಲಸಕ್ಕೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಯಾವಾಗ ನೀಡಲಾಯಿತು;

ಆ) ಈ ಕೆಲಸಕ್ಕೆ ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿರುವುದು;

ಇ) ಹಣಕಾಸಿನ ತೊಂದರೆಯಿಂದ ಈ ಕೆಲಸ ಸ್ಥಗಿತಗೊಂಡ ಸಂಗತಿ ನಿಜವೇ;

ಈ) ಈ ಕೆಲಸ ಪ್ರಾರಂಭಿಸಲು ಸರಕಾರದವರು ಕ್ರಮ ಕೈಗೊಳ್ಳವರೇ;

ಉ) ಈ ಕೆಲಸ ಪ್ರಾರಂಭಿಸಲು ಹಣಕಾಸಿನ ತೊಂದರೆ ಇದೆಯೇ?

ಶ್ರೀ ಎಂ.ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ದಿನಾಂಕ : 13-1-93 ರಂದು ಆಡಳಿತಾತ್ಮಕ ಅನುಮೋದನೆಯನ್ನು ಮತ್ತು ದಿನಾಂಕ : 17-2-93ರಂದು ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ.

ಆ)ಈವರೆಗೆ 1.08 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಇ) ಈ ಕಾಮಗಾರಿಯನ್ನು ಇಲಾಖಾವತಿಯಿಂದ ಪ್ರಾರಂಭಿಸಲಾಗಿದೆ. ಕೆರೆ ನಿವೇಶನದ ಹಳ್ಳದಲ್ಲಿ ನೀರು ಹರಿಯುತ್ತಿರುವುದರಿಂದ ಸಾಮಗ್ರಿಗಳ ಸಾಗಾಣಿಕೆಗೆ ಆಗುತ್ತಿರುವ ತೊಂದರೆ ಮತ್ತು ಕೋಡಿ ಕೆಲಸಕ್ಕಾಗಿ ಸಿಮೆಂಟನ್ನು ಒದಗಿಸುವಲ್ಲಿ ಆಗಿರುವ ವಿಳಂಬ ಕಾರಣಗಳಿಂದ ಕಾಮಗಾರಿಯ ಪ್ರಗತಿ ಕುಂಠಿತವಾಗಿರುತ್ತದೆ.

ಈ) ಈ ಕಾಮಗಾರಿಯ ಪ್ರಗತಿಯನ್ನು ತ್ವರಿತಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಉ) - ಇಲ್ಲಾ -

ಹಳ್ಳೂರು, ರಾಮತೀರ್ಥ, ಬೈರನಪಾದ ಎರಡನೇ ಹಂತದ ಏತ ನೀರಾವರಿ ಯೋಜನೆ

340 - ಶ್ರೀ ಬಿ.ಎಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ (1) ಹಳೂರು (2) ರಾಮತೀರ್ಥ (3) ಬೈಲನಪಾಡ ಎರಡನೇ ಹಂತದ ಏತ ನೀರಾವರಿ ಯೋಜನೆಗಳನ್ನು ಮಂಜೂರು ಮಾಡಿರುವುದನ್ನು ಸರ್ಕಾರ ಗಮನಿಸಿದೆಯೇ;

ಆ) ಹಾಗಿದ್ದಲ್ಲಿ, ಈ ಯೋಜನೆಗಳಿಗೆ ತಗಲುವ ವೆಚ್ಚ ಹಾಗೂ ಅವುಗಳಿಂದ ಆಗಬಹುದಾದ ನೀರಾವರಿ ಕ್ಷೇತ್ರ ಎಷ್ಟು;

ಇ) ಈ ಯೋಜನೆಗಳಿಗೆ ಜಾಗತಿಕ ಬ್ಯಾಂಕಿನಿಂದ ಹಣ ದೊರೆತಿದೆಯೇ;

ಈ) ಹಾಗಿದ್ದಲ್ಲಿ, ಸದರಿ ಯೋಜನೆಗಳನ್ನು ಪ್ರಾರಂಭಿಸಲು ವಿಳಂಬಕ್ಕೆ ಕಾರಣವೇನು?

ಶ್ರೀ ಎಂ.ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಹಳ್ಳೂರು ಏತ ನೀರಾವರಿ ಯೋಜನೆಗೆ ಮಾತ್ರ ಮಂಜೂರಾತಿ ದೊರೆತಿದೆ.

ಆ)

	ಯೋಜನೆಯ ಹೆಸರು	ತಗಲುವ ವೆಚ್ಚ ರೂ. ಲಕ್ಷಗಳಲ್ಲಿ	ನೀರಾವರಿ ಯಾಗುವ ಕ್ಷೇತ್ರ
1.	ಹಳ್ಳೂರ ಏತ ನೀರಾವರಿ ಯೋಜನೆ	197.793	890
2.	ರಾಮತೀರ್ಥ ಏತ ನೀರಾವರಿ ಯೋಜನೆ	32.000	607
3.	ಬೈರನಪಾದ 2ನೇ ಹಂತ ಏತ ನೀರಾವರಿ ಯೋಜನೆ	142.00	1822

ಇ) ಇಲ್ಲ.

ಈ) ಹಳ್ಳೂರು ಏತ ನೀರಾವರಿ ಯೋಜನೆಯನ್ನು ಈಗಾಗಲೇ ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದಿಂದ ಕೈಗೊಳ್ಳಲಾಗಿದೆ. ನಿಗಮವನ್ನು ರದ್ದುಪಡಿಸಲು ಸರ್ಕಾರ ತೀರ್ಮಾನಿಸಿರುವುದರಿಂದ ನಿಗಮ ಕೈಗೊಂಡ ಯೋಜನೆಗಳನ್ನು ಸಣ್ಣ ನೀರಾವರಿ ವಹಿಸಿಕೊಳ್ಳಲು ನಿರ್ಧರಿಸಿದೆ.

ತುಂಗಾ ಮೇಲ್ದಂಡೆ ನೀರಾವರಿ ಯೋಜನೆ

341-ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಂಗಾ ಮೇಲ್ದಂಡೆ ಯೋಜನೆ-ನೀರಾವರಿ ಯೋಜನೆಗೆ ಕೇಂದ್ರದ ಅನುಮತಿ ಪಡೆಯಲು ರಾಜ್ಯ ಸರ್ಕಾರ ಈವರೆಗೆ ಕೈಗೊಂಡಿರುವ ಕ್ರಮವೇನು?

ಆ) ಈ ಯೋಜನೆಯ ಅಂದಾಜು ವೆಚ್ಚವೆಷ್ಟು ಈವರೆಗೆ ಮಾಡಿರುವ ವೆಚ್ಚವೆಷ್ಟು, ಹಾಗೂ 1994-95ರಲ್ಲಿ ರಾಜ್ಯದ ಆಯವ್ಯಯದಲ್ಲಿ ಒದಗಿಸಿರುವ ಹಣವೆಷ್ಟು.

ಇ) ಈ ಯೋಜನೆಯನ್ನು ಕಾರ್ಯಗತ ಮಾಡಲು ತುಂಗಾ ಅಣೆಕಟ್ಟನ್ನು ಭದ್ರಗೊಳಿಸುವ ಅವಶ್ಯವಿದ್ದು ಈ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು?

ಈ) ಈ ಯೋಜನೆಯ ಮುಖ್ಯ ಕಾಲುವೆಯ ಕೆಲಸವನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಉ) ಈ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಲು ಹಾಗೂ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿ) :

ಅ) ಮೂಲತಃ ಈ ಯೋಜನೆಯ 271.41 ಕೋಟಿ ರೂ.ಗಳ ಅಂದಾಜನ್ನು ಒಪ್ಪಿಗೆಗಾಗಿ ಕೇಂದ್ರ ಜಲ ಆಯೋಗಕ್ಕೆ ಕಳುಹಿಸಲಾಗಿತ್ತು. ಆಗಸ್ಟ್ 91ರಲ್ಲಿ ಕೇಂದ್ರ ಜಲ ಆಯೋಗವು ತಿಳಿಸಿದ್ದ ಹಲವು ವಿಚಾರಗಳ ಹಿನ್ನೆಲೆಯಲ್ಲಿ ಯೋಜನೆಯ 379.87 ಕೋಟಿ ರೂ.ಗಳ ಪರಿಷ್ಕೃತ ಅಂದಾಜನ್ನು ಫೆಬ್ರವರಿ 1992ರಲ್ಲಿ ಕೇಂದ್ರ ಜಲ ಆಯೋಗಕ್ಕೆ ಕಳುಹಿಸಲಾಗಿದೆ. ಸದರಿ ಆಯೋಗವು ಆಗಸ್ಟ್ 91 ರಿಂದ ಡಿಸೆಂಬರ್ 92ರವರೆಗೆ ಹಲವಾರು ವಿಚಾರಗಳ ಬಗ್ಗೆ ಸಮಜಾಯಿಷಿ : ಮಾಹಿತಿ ಕೋರಿತ್ತು. ನೀರಿನ ಲಭ್ಯತೆ ಅಚ್ಚುಕಟ್ಟು ಅಭಿವೃದ್ಧಿ ತಳಪಾಯದ ಭದ್ರತೆ, ಯಾಂತ್ರಿಕ ಉಪಕರಣ ಮುಂತಾದ ವಿಷಯಗಳ ಬಗ್ಗೆ ಕೇಳಲಾದ ವಿವರಗಳಿಗೆ ಉತ್ತರವನ್ನು ನವೆಂಬರ್ 93ರಲ್ಲಿ ಕಳುಹಿಸಲಾಗಿದೆ. ಇತರ ಹಲವು ವಿಚಾರಗಳ ಬಗ್ಗೆ ಯೋಜನೆಯ ತಾಂತ್ರಿಕ ಅಧಿಕಾರಿಗಳು ಕೇಂದ್ರ ಜಲ ಆಯೋಗಕ್ಕೂ ಭೇಟಿ ನೀಡಿ ಸಮಜಾಯಿಷಿ ನೀಡಿದ್ದಾರೆ. ಕೃಷಿ ಇಲಾಖೆಗೆ ಸಂಬಂಧಪಟ್ಟ ವಿವರಗಳನ್ನು ಸದ್ಯದಲ್ಲೇ ಒದಗಿಸಲಾಗುವುದು.

ಆ) ಈ ಯೋಜನೆಯ ಅಂದಾಜು 379.87 ಕೋಟಿ ರೂ.ಗಳು ಮತ್ತು 1994ರ ಜುಲೈ ಅಂತ್ಯದವರೆಗೆ 2.74 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ. 1994-95ನೇ ಸಾಲಿನಲ್ಲಿ ಈ ಯೋಜನೆಗೆ 4.00 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ.

ಇ) ತುಂಗಾ ಅಣೆಕಟ್ಟನ್ನು ಭದ್ರಗೊಳಿಸುವ ಬಗ್ಗೆ ಕೃಷ್ಣರಾಜಸಾಗರದಲ್ಲಿರುವ ಕರ್ನಾಟಕ ಇಂಜನಿಯರಿಂಗ್ ಸಂಶೋಧನಾ ಕೇಂದ್ರದ ವತಿಯಿಂದ ಮಾಡೆಲ್ ಅಧ್ಯಯನ ನಡೆಸಲಾಗುತ್ತಿದೆ, ಇದಲ್ಲದೆ ಈ ವಿಚಾರದಲ್ಲಿ ಕೇಂದ್ರ ಜಲ ಆಯೋಗದ ತಜ್ಞರಿಂದ ಸಹ ಸಲಹೆ ಪಡೆಯಲಾಗುತ್ತಿದೆ.

ಈ) ತುಂಗಾ ಮೇಲ್ದಂಡೆ ನಾಲೆಯ ಮೊದಲ 45 ಕಿ.ಮೀ. ವರೆಗಿನ ಸರ್ವೆ ಕೆಲಸ ಪೂರ್ಣಗೊಂಡಿದೆ. ಮೊದಲ 10ಕಿ.ಮೀ. ಭಾಗದ ಅಂದಾಜನ್ನು ತಯಾರಿಸಲಾಗಿದ್ದು, ಇದಕ್ಕೆ ಅವಶ್ಯವಾದ ಅರಣ್ಯ ಪ್ರದೇಶದ ಬಿಡುಗಡೆ ಆದ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಉ) ಈ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಿ ತುರ್ತಾಗಿ ಪೂರ್ಣಗೊಳಿಸುವ ಸಲುವಾಗಿ ಒಂದು ಮುಖ್ಯ ಇಂಜನಿಯರ್ ಕಛೇರಿ, ಮೂರು ವಿಭಾಗ ಮಟ್ಟದ ಹಾಗೂ ಆರು ಉಪ ವಿಭಾಗ ಮಟ್ಟದ ಕಛೇರಿಗಳನ್ನು ಸೃಜಿಸಲಾಗಿದೆ. ಇದಲ್ಲದೆ

ಯೋಜನೆಯ ಮುಖ್ಯ ಕಾಲುವೆಗೆ ಅವಶ್ಯಕವಾದ ಅರಣ್ಯ ಪ್ರದೇಶವನ್ನು ಆ ಇಲಾಖೆಯಿಂದ ಪಡೆದು ಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಉಡಿಕೇರಿ ಗ್ರಾಮದಲ್ಲಿ ಸಮುದಾಯ ಭವನ

552 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಉಡಿಕೇರಿ ಗ್ರಾಮದಲ್ಲಿ ಪುನರ್ವಸತಿ ಫಂಡಿನಿಂದ ಸಮುದಾಯ ಭವನ ಕಟ್ಟಲು ಸರಕಾರಿ ಆದೇಶ ನೀಡಿರುವ ವಿಷಯ ನಿಜವೇ;

ಆ) ಸರಕಾರಿ ಆದೇಶದ ಪ್ರಕಾರ ಸಮುದಾಯ ಭವನ ಕಟ್ಟಲು ಸಹಾಯಕ ಕಾರ್ಯಕಾರಿ ಅಭಿಯಂತರು ಏತ ನೀರಾವರಿ ಉಪ-ವಿಭಾಗ ನಂ.5 ಬೈಲಹೊಂಗಲ ಇವರು ಸರಕಾರದ ಮುಖ್ಯ ವಾಸ್ತುಶಿಲ್ಪಿಗಳು ಬೆಂಗಳೂರು ಇವರಿಂದ ನಕಾಶೆ ಮಾಡಿಸಿರುವ ವಿಷಯ ನಿಜವೇ;

ಇ) ಸರಕಾರಿ ಆದೇಶದ ಅನ್ವಯ ಈ ಕೆಲಸಕ್ಕೆ ಅಂದಾಜು ವೆಚ್ಚ ಪತ್ರಿಕೆ ತಯಾರಿಸಿದ ವಿಷಯ ನಿಜವೇ?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಪುನರ್ವಸತಿ ಕೇಂದ್ರಗಳಲ್ಲಿ ಮಾತ್ರ ಸಮುದಾಯ ಭವನ ಮತ್ತು ಇನ್ನಿತರ ಅನುಮೋದಿತ ಕೆಲಸಗಳನ್ನು ಕೈಗೆತ್ತಿಕೊಳ್ಳುವ ಅವಕಾಶ ಇದೆ. ಆದರೆ ಉಡಕೇರಿ ಗ್ರಾಮವು ಪುನರ್ವಸತಿ ಕೇಂದ್ರವಾಗಿರದ ಕಾರಣ ಅಲ್ಲಿ ಸಮುದಾಯ ಭವನದ ಕೆಲಸವನ್ನು ಕೈಗೊಂಡಿಲ್ಲ.

ಆ) ಹೌದು.

ಇ) (ಅ) ದಲ್ಲಿ ತಿಳಿಸಿರುವ ಕಾರಣ ಪ್ರಶ್ನೆ ಉದ್ಭವಿಸುವುದಿಲ್ಲ.

ಮಳೆಯಿಂದ ಹಾಳಾದ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಯ ಕುರಿತು

546 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಾರಿ ಮಳೆಯಿಂದ ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಗಳು ಹಾಳಾಗಿರುವುದು ನಿಜವೆ ಹಾಗಿದ್ದಲ್ಲಿ ಅವು ಯಾವುವು?

ಆ) ಹಾಗಿದ್ದಲ್ಲಿ ಈ ರಸ್ತೆಗಳ ದುರಸ್ತಿಗಾಗಿ ಎಷ್ಟು ಹಣವನ್ನು ಈತನಕ ಮಂಜೂರು ಮಾಡಿದೆ.

ಇ) ಹಾಗೂ ರಸ್ತೆ ದುರಸ್ತಿ ಕೆಲಸವನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಈ ಸಾಲಿನ ಅತಿವೃಷ್ಟಿಯಿಂದ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ 322.64 ಕಿಮೀ. ಉದ್ದದ ರಸ್ತೆಗಳಿಗೆ, 33 ಅಡ್ಡ ಮೋರಿಗಳಿಗೆ ಹಾಗೂ ರಾಷ್ಟ್ರೀಯ ಹೆದ್ದಾರಿಯ ಕೆಲವು ಭಾಗಗಳಿಗೆ ಹಾನಿ ಉಂಟಾಗಿದೆ.

ಆ) ಲೋಕೋಪಯೋಗಿ ಇಲಾಖೆ ರಸ್ತೆಗಳ ತುರ್ತು ದುರಸ್ತಿಗಾಗಿ ಈ ತನಕ 12.00 ಲಕ್ಷ ರೂ.ಗಳು ಮಂಜೂರು ಆಗಿದೆ.

ಇ) ತುರ್ತು ದುರಸ್ತಿಗಳನ್ನು ಮಾಡಿದ್ದು, ಸಂಚಾರಕ್ಕೆ ತೊಂದರೆ ಆಗದಂತೆ ನೋಡಿಕೊಳ್ಳಲಾಗಿದೆ. ಶಾಶ್ವತ ದುರಸ್ತಿ ಕಾಮಗಾರಿಗಳನ್ನು ಅತಿವೃಷ್ಟಿ ಪರಿಹಾರ ನಿಧಿಯಿಂದ ಬೇಡಿಕೆ ಕೋರಿದ್ದು ಅನುದಾನ ದೊರೆತ ನಂತರ ಮಾಡಲಾಗುವುದು.

ಸಿ.ಡಿ.ಎಸ್. ನಾಲೆಯ ಕುರಿತು

470 - ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿ.ಡಿ.ಎಸ್. ನಾಲೆಯ ಮೇಲೆ ಮಂಟಪ ಮಾದರಿಯ ಕುಸಿದಿರುವ ಸೇತುವೆಗಳೆಷ್ಟು?

ಆ) ಅತಿ ಜರೂರಾಗಿ ರಿಪೇರಿ ಮಾಡಬೇಕಾಗಿರುವ ಸೇತುವೆಗಳೆಷ್ಟು?

ಇ) ಈ ವಿಚಾರದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮ.

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಮೂರು

ಆ) ಇಪ್ಪತ್ತಾರು

ಇ) ಹೊಸದಾದ ಸೇತುವೆಗಳನ್ನು ನಿರ್ಮಿಸುವ ಕೆಲಸವನ್ನು ಕಾವೇರಿ ಅಣೆಕಟ್ಟಿನ ನಾಲೆಗಳ ಆಧುನೀಕರಣ ಯೋಜನೆಯಡಿ ಕೈಗೊಳ್ಳುವ ಕಾರ್ಯಕ್ರಮವಿದೆ.

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಸಾಮರ್ಥ್ಯದ ಬಗ್ಗೆ

548 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಇಂಧನ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ನಿರ್ಮಿಸಲು ಉದ್ದೇಶಿಸಿರುವ ತಾಪ ವಿದ್ಯುತ್ ಯೋಜನೆಗಳು ಯಾವುವು? ಪ್ರತಿಯೊಂದು ಸಾಮರ್ಥ್ಯವೇನು ಮತ್ತು ಯಾವ ಸ್ಥಳಗಳಲ್ಲಿ ನಿರ್ಮಿಸಲಾಗುವುದು?

ಆ) ಈ ಸ್ಥಾವರಗಳನ್ನು ನಿರ್ಮಿಸಲು ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ವ್ಯಕ್ತಿ ಅಥವಾ ಸಂಸ್ಥೆಗಳು ಯಾರಾದರೂ ಮುಂದೆ ಬಂದಿದ್ದಾರೆಯೇ, ಬಂದಿದ್ದರೆ ಅವರ ಪ್ರಸ್ತಾಪಗಳ ವಿವರಗಳನ್ನು ಕೊಡುವುದು ಈ ಸ್ಥಾವರಗಳಿಂದ ಉತ್ಪತ್ತಿಯನ್ನು ವಿದ್ಯುತ್ ಸಾಗಾಣಿಕೆ ಮತ್ತು ವಿತರಣೆ ಮಾಡುವುದರ ಬಗ್ಗೆ ವಿವರ ಒದಗಿಸುವುದು?

ಶ್ರೀ ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ನಿರ್ಮಿಸಲು ಉದ್ದೇಶಿಸಿರುವ ತಾಪ ವಿದ್ಯುತ್ ಯೋಜನೆಗಳು ಈ ಕೆಳಗಿನಂತಿವೆ :

1) ರಾಯಚೂರು ಘಟಕ 5 ಮತ್ತು 6 ಸಾಮರ್ಥ್ಯ ರೂ 210 ಮೆ.ವ್ಯಾ.

2) ಹೊಸಪೇಟೆ ಕೇಂದ್ರ (ಮೊದಲನೇ ಹಂತ) ಸಾಮರ್ಥ್ಯ 500 ಮೆವ್ಯಾ.

3) ಚಮಲಾಪುರ (ಮೈಸೂರಿನ ಹತ್ತಿರ) ಕೇಂದ್ರ (ಮೊದಲನೇ ಹಂತ) ಸಾಮರ್ಥ್ಯ 500 ಮೆವ್ಯಾ

4) ಮಂಗಳೂರು ಸಾಮರ್ಥ್ಯ 1000ಮೆವ್ಯಾ

ಆ) ಬಂದಿದ್ದಾರೆ. ಈ ಸ್ಥಾವರಗಳನ್ನು ನಿರ್ಮಿಸಲು ರಾಯಚೂರಿನ 5ನೇ ಮತ್ತು 6ನೇ ಘಟಕಗಳನ್ನು ಪಬ್ಲಿಕ್ ಪವರ್ ಇಂಟರ್‌ನ್ಯಾಷನಲ್ (ಯುಎಸ್‌ಎ) ರವರ ಜೊತೆ ಎಂ.ಓ.ಯು. ಕರ್ನಾಟಕ ಸರ್ಕಾರ ಮಾಡಿದೆ ಇದೇ ರೀತಿ ಹೊಸಪೇಟೆ ವಿದ್ಯುತ್ ಸ್ಥಾವರಕ್ಕೆ ಹೆಚ್.ಓ.ಕೆ. (ಯು.ಎಸ್.ಎ) ರವರೊಡನೆ ಎಂಒಯು ಸರ್ಕಾರ ಮಾಡಿಕೊಂಡಿದೆ. ಚಮಲಾಪುರಕ್ಕೆ ಇನ್ನು ಯಾವ ಸಂಸ್ಥೆಗಳು ಎಂಒಯು ಮಾಡಿಕೊಂಡಿಲ್ಲ. ಮಂಗಳೂರಿನಲ್ಲಿ 1000 ಮೆವ್ಯಾ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಕೇಂದ್ರವನ್ನು

ಸ್ಥಾಪಿಸಲು ಖಾಸಗಿ ಸಂಸ್ಥೆಯ ಮೇ: ಕೊಜೆಂಟ್ರಿಕ್ಸ್ (ಯು.ಎಸ್.ಎ) ಇವರೊಂದಿಗೆ ಕರ್ನಾಟಕ ಸರ್ಕಾರ ಒಡಂಬಡಿಕೆ ಮಾಡಿಕೊಂಡಿದೆ.

ಈ ಸ್ಥಾವರಗಳಿಂದ ಉತ್ಪತ್ತಿಯಾದ ವಿದ್ಯುತ್ ಸಾಗಾಣಿಕೆ ಮತ್ತು ವಿತರಣೆ ಮಾಡುವುದರ ಬಗ್ಗೆ ಕರ್ನಾಟಕ ವಿದ್ಯುತ್ ನಿಗಮ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗಳ ಜೊತೆ ಚರ್ಚೆ ನಡೆಯುತ್ತಿದೆ.

ಹೇಮಾವತಿ ಯೋಜನೆ ಕಾಮಗಾರಿ ಕೆಲಸ

459 - ಶ್ರೀ ಎಸ್.ಶಫೀ ಅಹ್ಮದ್ (ತುಮಕೂರು) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೇಮಾವತಿ ಯೋಜನೆ ಕಾಮಗಾರಿಗಳ ಇತ್ತೀಚಿನ ಪರಿಷ್ಕೃತ ಅಂದಾಜು ಮೊತ್ತ ಹಾಗೂ ಇತ್ತೀಚಿನ ಎಡದಂಡೆ ನಾಲೆಯ ಕಾಮಗಾರಿಗಳ ಪ್ರಗತಿ ಮತ್ತು ಕೆಲಸದ ಹಂತ ಹಾಗೂ ಅಂದಾಜು ಮೊತ್ತ;

ಆ) ಬುಗುಡನಹಳ್ಳಿ ಅಮಾನಿಕೆರೆ ಕೆರೆಯವರೆಗಿನ ನಾಲಾ ಕಾಮಗಾರಿಗಳನ್ನು ಮುಗಿಸಲು ಬೇಕಾಗುವ ಕಾಲಾವಧಿ.

ಇ) ತುಮಕೂರು ವೃತ್ತದಲ್ಲಿ ತೆಗೆದುಕೊಂಡಿರುವ ಅಡ್ಡ ಮೋರಿಗಳ ಸಂಖ್ಯೆ : ಹಾಗೂ ಅವುಗಳಿಗೆ ಆಗುವ ಅಂದಾಜು ಮೊತ್ತ.

ಈ) ಎಡದಂಡೆ ನಾಲೆಯ ವಿತರಣಾ ಕೆಲಸಗಳನ್ನು ಏಕಕಾಲದಲ್ಲಿ ಕೈಗೊಳ್ಳಲಾಗಿದೆಯೇ? ಹಾಗಿದ್ದಲ್ಲಿ ಅವುಗಳ ಪ್ರಗತಿಯ ಹಂತ ಮತ್ತು ಬೇಕಾಗುವ ಅಂದಾಜು ಮೊತ್ತ.

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಹೇಮಾವತಿ ಯೋಜನೆಗಳ ಪರಿಷ್ಕೃತ ಅಂದಾಜು ಮೊತ್ತ ರೂ. 1215.00 ಕೋಟಿಗಳು. ಸಿ.ಡಿ. ಮತ್ತು ವಿತರಣಾ ನಾಲೆಗಳೂ ಸೇರಿದಂತೆ ಟಿ.ಬಿ.ಸಿ.ಯ 0 ಕಿ.ಮೀ. ಇಂದ 131 ಕಿಮೀ. ವರೆಗಿನ ಕಾಮಗಾರಿಗಳು ಪ್ರಗತಿಯ ಹಂತದಲ್ಲಿವೆ. ಇದರಲ್ಲಿ ಕೆಲವು ಮುಕ್ತಾಯ ಹಂತದಲ್ಲಿರುತ್ತವೆ. ಕಿಮೀ. 81,83,84 ಮತ್ತು 115 ರಲ್ಲಿ ಕೆಲವು ಕ್ಲಿಷ್ಟಕರವಾದ ಭೂ ಸ್ವಾಧೀನ ಸಮಸ್ಯೆಗಳು ಇರುವುದರಿಂದ ನಾಲಾ ಕೆಲಸ ನಿಂತಿರುತ್ತದೆ. ಇವುಗಳ ಪರಿಷ್ಕೃತ ಅಂದಾಜು ಮೊತ್ತ ರೂ. 360.40 ಕೋಟಿಗಳು.

ಆ) ಡಿಸೆಂಬರ್-94ರ ಒಳಗಾಗಿ ಮುಗಿಸಲು ಕಾರ್ಯ ಕ್ರಮ ಹಮ್ಮಿಕೊಳ್ಳಲಾಗಿದೆ

ಇ) ತುಮಕೂರು ಶಾಖಾ ನಾಲೆಯ ಅಡಿಯಲ್ಲಿ 257 ಅಡ್ಡಮೋರಿ ಕೆಲಸಗಳಿದ್ದು, ಈ ಎಲ್ಲಾ ಅಡ್ಡಮೋರಿ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಟಿ. ಮರಿಯಪ್ಪ ನಾಲೆಯ ಅಡಿಯಲ್ಲಿ 146 ಅಡ್ಡಮೋರಿ ಕೆಲಸಗಳದ್ದು, 133 ಅಡ್ಡಮೋರಿ ಕೆಲಸಗಳು ಪ್ರಗತಿಯಲ್ಲಿದ್ದು, ಈ ಎಲ್ಲಾ ಅಡ್ಡ ಮೋರಿಗಳಿಗೆ ಆಗುವ ಅಂದಾಜು ಮೊತ್ತ ರೂ. 5663.53 ಲಕ್ಷಗಳು (1-1-94)

ಈ) ಹೌದು. ಟಿಬಿಸಿ ನಾಲೆಯ 0 ಇಂದ 122 ಕಿ.ಮಿ. ವರೆಗೆ ವಿತರಣಾ ನಾಲಾ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಟಿ. ಮರಿಯಪ್ಪ ನಾಲೆಯ 48 ಕಿಮಿ ವರೆಗಿನ ವಿತರಣಾ ನಾಲಾ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ. ತುಮಕೂರು ಉಪನಾಲೆಯ ಎಲ್ಲಾ ವಿತರಣಾ ನಾಲೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಈ ಜಿಲ್ಲಾ ವಿತರಣಾ ನಾಲೆಗಳಿಗೆ ಬೇಕಾಗುವ ಅಂದಾಜು ಮೊತ್ತ ರೂ. 3033.65 ಲಕ್ಷಗಳು (1-4-94ರಲ್ಲಿ)

ವಿದೇಶಿ ಸಹಾಯದಿಂದ ವಿದ್ಯುಚ್ಛಕ್ತಿ ಉತ್ಪಾದನೆ

537 - ಪ್ರೊ. ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿದೇಶಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಗೆ ಮಾಡಿಕೊಂಡಿರುವ ಕರಾರುಗಳ ವಿವರಗಳೇನು?

ಆ) ಉತ್ಪಾದನೆಗೆ ಸಂಬಂಧಿಸಿದ ಷರತ್ತುಗಳು, ವಿತರಣೆಗೆ ಸಂಬಂಧಿಸಿದ ಷರತ್ತುಗಳು ಹಾಗೂ ವಿದೇಶಿ ಸಂಸ್ಥೆಗಳಿಗೆ ಪಾವತಿಸುವ ಸಂಬಂಧ ಷರತ್ತುಗಳ ವಿವರಗಳೇನು?

ಇ) ವಿವಿಧ ಸಂಸ್ಥೆಗಳ ಜೊತೆಗೆ ಮಾಡಿಕೊಂಡಿರುವ ಒಪ್ಪಂದಗಳ ವಿವರಗಳೇನು?

ಶ್ರೀ ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು) :

ಅ) ಈವರೆಗೆ ಯಾವ ವಿದೇಶಿ ಸಂಸ್ಥೆಯೊಂದಿಗೂ ಸಹ ಭಾಗಿತ್ವದಲ್ಲಿ ಕರಾರು (ಅಗ್ರಿಮೆಂಟ್) ಮಾಡಿಕೊಂಡಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬೆಳಗಾಂ ಜಿಲ್ಲೆಯ ಕಂಗ್ರಾಳಿ (ಕೆ.ಹೆಚ್) ಹತ್ತಿರವಿರುವ ಸೇತುವೆ ಬಗ್ಗೆ

464 - ಶ್ರೀ ಬಿ.ಐ. ಪಾಟೀಲ (ಉಚ್ಚಾಗಾಂವ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂವ ಜಿಲ್ಲೆಯ ಬೆಳಗಾಂವ ತಾಲ್ಲೂಕಿನ ಕಂಗ್ರಾಳಿ(ಕೆ.ಹೆಚ್) ಹತ್ತಿರವಿರುವ ಸೇತುವೆಯ ಮೇಲೆ (ಮಳೆಗಾಲದಲ್ಲಿ) ನೀರು ಹರಿಯುವುದು ಸರಕಾರದ ಗಮನಕ್ಕೆ ಬಂದಿರುವುದೆಯೇ?

ಆ) ಈ ಸೇತುವೆ ಕಾಮಗಾರಿಗಾಗಿ ಅಂದಾಜು ನಕ್ಷೆ ಹಾಗೂ ಪತ್ರಿಕೆಯನ್ನು ತಯಾರಿಸಲಾಗಿದೆಯೇ? ಹಾಗಿದ್ದಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಇ) ಸದರಿ ಸೇತುವೆಯ ಕಾಮಗಾರಿಗೆ ಆದ ವಿಳಂಬಕ್ಕೆ ಕಾರಣವೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಇಲ್ಲ. ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸದರಿ ಕಾಮಗಾರಿಯು 1993-94 ಹಾಗೂ 1994-95ನೇ ಸಾಲಿನಲ್ಲಿ ಸೇರ್ಪಡೆಯಾಗಿಲ್ಲ.

ಖಾಸಗಿ ವಿದ್ಯುತ್ ಉತ್ಪಾದನೆ ಕುರಿತು

534 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಖಾಸಗಿಯವರು ವಿದ್ಯುತ್ ಉತ್ಪತ್ತಿ ಮಾಡಲು ಉದ್ದೇಶಿಸಿದ್ದರೆ ಆ ವಿದ್ಯುತ್ತಿನ ವಿತರಣೆ ಮಾಡುವ ಸಂಸ್ಥೆಯೊಡನೆ ಯಾವುದಾದರೂ ಒಪ್ಪಂದ ಆಗಿದೆಯೇ? ಅಥವಾ ಚರ್ಚೆ ನಡೆಯುತ್ತಾ ಇದೆಯೇ? ಅವರು ಅಪೇಕ್ಷಿಸಿರುವ ಯೂನಿಟ್‌ದ ದರವೇನು?

ಆ) ಅಸಾಂಪ್ರದಾಯಕ ಮೂಲಗಳಿಂದ ವಿದ್ಯುತ್ ಉತ್ಪಾದನೆ ಮಾಡುವ ಯೋಜನೆಗಳೇನಾದರೂ ಪರಿಶೀಲನೆಯಲ್ಲಿವೆಯೇ? ಇದ್ದರೆ ಹೆಸರು ಅಗತ್ಯವಾದ ಬಂಡವಾಳ ಮತ್ತು ಬಂಡವಾಳದ ಮೂಲ ಇವುಗಳನ್ನು ಒದಗಿಸುವುದು.

ಶ್ರೀ ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು) :

ಅ) ಆಗಿಲ್ಲ. ಆದರೆ ಮಂಗಳೂರಿನಲ್ಲಿ ಪ್ರಸ್ತಾಪಿಸಿದ 1000 ಮೆ.ವ್ಯಾ. ಸಾಮರ್ಥ್ಯದ ಸ್ಥಾವರದಿಂದ ವಿದ್ಯುಚ್ಛಕ್ತಿಯನ್ನು ಖರೀದಿಸಲು ಮೆ: ಕೋಜೆಂಟ್ರಿಕ್ಸ್, ಅಮೆರಿಕ ಇವರೊಡನೆ ಚರ್ಚೆ ನಡೆಯುತ್ತಿದೆ. ಒಪ್ಪಂದಕ್ಕೆ ಸಂಬಂಧಿಸಿದ ಹಲವಾರು ವಿಷಯಗಳ ಮೇಲೆ ಇನ್ನೂ ಚರ್ಚಿಸುತ್ತಿರುವುದರಿಂದ ಸದರೀ ದರವನ್ನು ನಿಗಧಿಪಡಿಸಿಲ್ಲ.

ಆ) 31 ಕಿರು ಜಲವಿದ್ಯುತ್ ಯೋಜನೆ ಹಾಗೂ 6 ವಾಯುಶಕ್ತಿ (ವಿಂಡ್ ಎನರ್ಜಿ) ಘಟಕಗಳು, ಖಾಸಗಿ ಕ್ಷೇತ್ರದಲ್ಲಿ ಅನುಮೋದಿಸಲಾಗಿದೆ. ಇವುಗಳಲ್ಲಿ ಅಗತ್ಯ ಬಂಡವಾಳದ ವಿವರದ ಪೂರ್ಣ ಮಾಹಿತಿ ಇರುವುದಿಲ್ಲ. ವಿಂಡ್ ಪ್ರಾಜೆಕ್ಟ್‌ಗಳನ್ನು ಕರ್ನಾಟಕ ವಿದ್ಯುತ್ ನಿಗಮದವರು ಎಂ.ಇ.ಎಸ್.ರವರ ಸಹಾಯಧನದೊಂದಿಗೆ ಕೈಗೊಳ್ಳುತ್ತಿದೆ. ಈ ಬಗ್ಗೆ ಈಗಾಗಲೇ ಕಪ್ಪಟಗುಡ್ಡ ಬೆಟ್ಟದ ಮೇಲೆ 2 ಮೆ. ವ್ಯಾ. ಸಾಮರ್ಥ್ಯದ ಪ್ರಾತಕ್ಷಿಕ ಯೋಜನೆಯನ್ನು ಕೈಗೆತ್ತಿಕೊಂಡು ಕೆಲಸ ಪ್ರಾರಂಭಿಸಲಾಗಿದೆ. ಇದಕ್ಕೆ ಬೇಕಾಗುವ ಬಂಡವಾಳ 1120 ಲಕ್ಷ ರೂ.ಗಳು. (ಇದರಲ್ಲಿ 642.2 ಲಕ್ಷ ರೂ.ಗಳನ್ನು ಎಂ.ಎನ್.ಇ.ಎಸ್. ರವರು ಸಹಾಯಧನವಾಗಿ ಕೊಡುತ್ತಾರೆ)

ಹೊಳೇನರಸೀಪುರ ತಾಲ್ಲೋಕಿನ ರಸ್ತೆ ದುರಸ್ತಿಕಾರ್ಯ

540 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) *ಹೊಳೆನರಸೀಪುರ ತಾಲ್ಲೂಕಿನಲ್ಲಿ ರಸ್ತೆ ದುರಸ್ಥಿಗಾಗಿ ಹಾಗೂ ಇತರೇ ಕಾಮಗಾರಿಗಾಗಿ 1993-94ರಲ್ಲಿ ಖರ್ಚು ಮಾಡಿದ ಹಣವೆಷ್ಟು ?*

ಆ) *1994-95ರಲ್ಲಿ ಲೋಕೋಪಯೋಗಿ ಇಲಾಖಾವತಿಯಿಂದ ಹೊಳೆನರಸೀಪುರ ತಾಲ್ಲೂಕಿಗೆ ಮಂಜೂರಾದ ಹಣವೆಷ್ಟು ?*

ಇ) *ಹೊಳೆನರಸೀಪುರ ತಾಲ್ಲೂಕಿನಲ್ಲಿ ರಸ್ತೆಯಲ್ಲಾ ದುರಸ್ಥಿಯಲ್ಲಿದ್ದು 1994-95ರಲ್ಲಿ ಹೆಚ್ಚುವರಿ ಹಣವನ್ನು ಮಂಜೂರು ಮಾಡುವ ಪ್ರಸ್ತಾಪ ಸರ್ಕಾರದ ಮುಂದೆ ಇದೆಯೇ ?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) 1993-94ರ ಸಾಲಿನಲ್ಲಿ ಹೊಳೆನರಸೀಪುರ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆವತಿಯಿಂದ ಖರ್ಚು ಮಾಡಿದ ವಿವರ ಕೆಳಕಂಡಂತಿದೆ:

1) ರಸ್ತೆಗಳ ಅಭಿವೃದ್ಧಿ	:	35.06 ಲಕ್ಷ ರೂ.
2) ರಸ್ತೆಗಳ ದುರಸ್ಥಿ	:	44.55 ಲಕ್ಷ ರೂ.
3) ಕಟ್ಟಡಗಳ ನಿರ್ಮಾಣ	:	17.34 ಲಕ್ಷ ರೂ.
4) ಕಟ್ಟಡಗಳ ದುರಸ್ಥಿ	:	4.01 ಲಕ್ಷ ರೂ.
ಒಟ್ಟು		**100.96 ಲಕ್ಷ ರೂ.**

ಆ) 1994-95ರ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆವತಿಯಿಂದ ಹೊಳೆನರಸೀಪುರ ತಾಲ್ಲೂಕಿಗೆ ಮಂಜೂರಾದ ಅನುದಾನ ಕೆಳಕಂಡಂತಿದೆ :

1) ರಸ್ತೆಗಳ ಅಭಿವೃದ್ಧಿ	:	22.90 ಲಕ್ಷ ರೂ.
2) ರಸ್ತೆಗಳ ದುರಸ್ಥಿ	:	44.27 ಲಕ್ಷ ರೂ.
3) ಕಟ್ಟಡಗಳ ನಿರ್ಮಾಣ	:	22.10 ಲಕ್ಷ ರೂ.
4) ಕಟ್ಟಡಗಳ ದುರಸ್ಥಿ	:	1.82 ಲಕ್ಷ ರೂ.
ಒಟ್ಟು		**91.09 ಲಕ್ಷ ರೂ.**

ಇ) ಇಲ್ಲ.

ಉಚ್ಛಾಗಾಂವ್ ಮತಕ್ಷೇತ್ರದ ಏತ ನೀರಾವರಿ ಯೋಜನೆಗಳು

467 - ಶ್ರೀ ಬಿ. ಐ. ಪಾಟೀಲ (ಉಚ್ಛಾಗಾಂವ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉಚ್ಛಾಗಾಂವ್ ಮತಕ್ಷೇತ್ರದಲ್ಲಿ ಮಂಜೂರಾತಿ ಪಡೆದ ಏತ ನೀರಾವರಿ ಯೋಜನೆಗಳೆಷ್ಟು;

ಆ) ಇವುಗಳಲ್ಲಿ ಎಷ್ಟು ಯೋಜನೆಗಳನ್ನು ಪ್ರಾರಂಭಿಸಲಾಗಿದೆ. ಮತ್ತು ಎಷ್ಟು ಯೋಜನೆಗಳನ್ನು ಇನ್ನು ಪ್ರಾರಂಭಿಸಬೇಕಾಗಿದೆ;

ಇ) ಯೋಜನೆಗಳನ್ನು ತ್ವರಿತಗತಿಯಿಂದ ಪ್ರಾರಂಭಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಯಾವುದು ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) - ಸದರ -

ಬಚಾವತ್ ತೀರ್ಪಿನ ಪ್ರಕಾರ ಯೋಜನೆ ಕಾರ್ಯ

605 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಚಾವತ್ ತೀರ್ಪಿನ ಪ್ರಕಾರ ಕ್ರಿ.ಶ. 2000 ವರ್ಷಗಳಲ್ಲಿ ಕೃಷ್ಣಾಯೋಜನೆಯನ್ನು ಮುಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ). ಆಂಧ್ರ ಸರ್ಕಾರ ಕೈಗೊಂಡಿರುವ ತೆಲುಗು ಗಂಗಾ ಯೋಜನೆಯನ್ನು ಕರ್ನಾಟಕ ಸರ್ಕಾರ ವಿರೋಧಿಸಿದೆಯೇ.

ಶ್ರೀ ಎಸ್ ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು)

ಅ) ಪ್ರಸ್ತುತ ಜಾರಿಯಲ್ಲಿರುವ ಬಚಾವತ್ ತೀರ್ಪಿನ ಸ್ಕೀಮ್ 'ಎ' ಅನುಸಾರ ಕರ್ನಾಟಕಕ್ಕೆ ಕೃಷ್ಣಾ ಕೊಳ್ಳದ ಯೋಜನೆಗಳಿಗಾಗಿ 734 ಟಿಎಂಸಿ ಪ್ರಮಾಣದಷ್ಟು ನೀರು ಲಭ್ಯವಿದ್ದು, ದಿ:31-3-94ರ ವರೆಗೆ 482.45 ಟಿಎಂಸಿ ಪ್ರಮಾಣದಷ್ಟು ನೀರನ್ನು ಪ್ರಸ್ತುತ ಪೂರ್ಣಗೊಂಡಿರುವ ಹಾಗೂ ಭಾಗಶಃ ಕಾರ್ಯರೂಪದಲ್ಲಿರುವ ಯೋಜನೆಗಳ ಅಡಿ ಉಪಯೋಗಿಸಿಕೊಳ್ಳಬಹುದಾಗಿದೆ. 1977ರ ಒಪ್ಪಂದದ ಅನುಸಾರ ಮದ್ರಾಸ್ ನಗರದ ಕುಡಿಯುವ ನೀರಿನ ಪೂರೈಕೆಗಾಗಿ 5 ಟಿಎಂಸಿ ನೀರನ್ನು ಒದಗಿಸಬೇಕಾಗಿದ್ದು, ಬಾಕಿ ಉಳಿದ 246.55 ಟಿಎಂಸಿ ನೀರನ್ನು ಪ್ರಸ್ತುತ ನಿರ್ಮಾಣದ ವಿವಿಧ ಹಂತಗಳಲ್ಲಿರುವ ಹಾಗೂ ಇನ್ನೂ ಕೈಗೊಳ್ಳಬೇಕಾಗಿರುವ ಯೋಜನೆಗಳ ಅಡಿ ಉಪಯೋಗಿಸಿಕೊಳ್ಳಬೇಕಾಗಿದೆ. ಈ ಎಲ್ಲಾ ಯೋಜನೆಗಳನ್ನು ಕ್ರಿ.ಶ. 2000 ಇಸವಿಯೊಳಗೆ ಕಾರ್ಯಗತಗೊಳಿಸಿ ರಾಜ್ಯದ ಪಾಲಿನ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಸಮಗ್ರಯೋಜನೆಯನ್ನು ತಯಾರಿಸಲಾಗಿದ್ದು, ಈ ಯೋಜನೆಯ ಅನುಸಾರ ವರ್ಷವಾರು ಆರ್ಥಿಕ ಮತ್ತು ಭೌತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದಲ್ಲದೆ, ಈ ವಿಚಾರದಲ್ಲಿ ತೊಡಗಿಸಬೇಕಾಗಿರುವ ಸಂಪನ್ಮೂಲವನ್ನು ಕ್ರೋಢೀಕರಿಸುವ ಸಲುವಾಗಿ ಪ್ರಸ್ತುತ ಕೃಷ್ಣಾ ಮೇಲ್ದಂಡೆ ಯೋಜನೆಗಾಗಿಯೇ ಕೃಷ್ಣಾ ಭಾಗ್ಯ ಜಲ ನಿಗಮವನ್ನು ಸ್ಥಾಪಿಸಲಾಗಿದ್ದು. ಕೃಷ್ಣಾ ಕೊಳ್ಳದ ಇತರ ಯೋಜನೆಗಳನ್ನು ಈ ನಿಗಮದ ವ್ಯಾಪ್ತಿಗೆ ಒಳಪಡಿಸುವ ಉದ್ದೇಶವಿದೆ.

ಆ) ಹೌದು.

ನೀರಾವರಿ ಯೋಜನೆಗಳಲ್ಲಿ ಗುತ್ತಿಗೆದಾರರ ಬಗ್ಗೆ

468 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾವೇರಿ ಮತ್ತು ಹೇಮಾವತಿ ನೀರಾವರಿ ಯೋಜನೆಗಳಲ್ಲಿ ಹೊರ ರಾಜ್ಯಗಳಿಂದ ಬಂದಿರುವ ಗುತ್ತಿಗೆದಾರರ ಸಂಖ್ಯೆ ಎಷ್ಟು?

ಆ) ಈ ರಾಜ್ಯದ ಗುತ್ತಿಗೆದಾರರಿಗೆ ಆದ್ಯತೆ ಕೊಡಲು ಸಾಧ್ಯವಿಲ್ಲವೆ

ಇ) ಕೊಡದಿರುವುದಕ್ಕೆ ಕಾರಣಗಳೇನು?

ಶ್ರೀ ಎಸ್.ಎಂ.ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಈ ಪ್ರಶ್ನೆ ಉದ್ಭವಿಸುವುದಿಲ್ಲ. ಏಕೆಂದರೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ಗುತ್ತಿಗೆದಾರರು ನೊಂದಾಯಿಸಿದಲ್ಲಿ ಅಂತಹವರುಗಳಿಗೆ ಮಾತ್ರ ಕಾಮಗಾರಿಗಳನ್ನು ನೀಡಲಾಗುವುದು.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಏತ ನೀರಾವರಿ ಯೋಜನೆ

469 - ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಮೂರು ವರ್ಷಗಳಲ್ಲಿ ವಿವಿಧ ನೀರಾವರಿ ಯೋಜನೆಗಳಿಂದ ಎಷ್ಟು ಅಚ್ಚುಕಟ್ಟು ಪ್ರದೇಶವನ್ನು ಹೊಸದಾಗಿ ನಿರ್ಮಿಸಲಾಗಿದೆ.

ಆ) ಕಾವೇರಿ ಮತ್ತು ಕೃಷ್ಣ ಯೋಜನೆಗಳಿಗೆ ಬಿಡುಗಡೆಯಾಗಿರುವ ಹಣ ಎಷ್ಟು

ಇ) ಕಾಮಗಾರಿಗಳಾಗಿದ್ದು ಹಣ ಬಿಡುಗಡೆಯಾಗಬೇಕಾಗಿರುವ (ಬಾಕಿ ಇರುವ) ಬಿಲ್ಲುಗಳ ಮೊತ್ತವೆಷ್ಟು?

ಶ್ರೀ ಎಸ್.ಎಂ.ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಸಾಲು	ಭಾರಿ ಹಾಗೂ ಮಧ್ಯಮ ನೀರಾವರಿ	ಸಣ್ಣ ನೀರಾವರಿ	ಒಟ್ಟು
	(ಹೆಕ್ಟೇರ್ ಗಳಲ್ಲಿ)		
1991-92	42492	4653	47145
1992-93	44044	6096	50140
1993-94	69985	5092	75077

ಸಾಲು	ಕಾವೇರಿ ಕೊಳ್ಳದ ಯೋಜನೆಗಳು	ಕೃಷ್ಣ ಕೊಳ್ಳದ ಯೋಜನೆಗಳು
	ಖರ್ಚಾಗಿರುವ ಹಣ (ಕೋಟಿ ರೂ.ಗಳಲ್ಲಿ)	
1991-92	144.34	203.25
1992-93	216.73	282.79
1993-94	240.95	424.44

ಇ) 146.36 ಕೋಟಿ ರೂ.ಗಳು (1-8-1994 ರಂದು ಇದ್ದಂತೆ)

ಶಿಗ್ಗಾಂವ್ ತಾಲ್ಲೂಕ ಬಾಡ- ಬಂಕಾಪುರ ರಸ್ತೆ ಸುಧಾರಣೆ

587 - ಶ್ರೀ ಮಂಜುನಾಥ್ ಸಿ. ಕುನ್ನೂರ (ಶಿಗ್ಗಾಂವ್) : ಮಾನ್ಯ ಲೋಕೋಪಯೋಗಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಗ್ಗಾಂವ ತಾಲ್ಲೂಕು ಬಾಡ ಗ್ರಾಮ (ಸಂತ ಕನಕದಾಸ ಹುಟ್ಟಿದ ಸ್ಥಳ) ದಿಂದ ಬಂಕಾಪುರದವರೆಗೆ 6 ಕಿ.ಮೀ. ರಸ್ತೆ ಡಾಬಂರೀಕರಣ ಮಾಡಲಾಗುವುದೇ

ಆ) ಸಂತ ಕನಕದಾಸ ಪೀಠ ಕಾಗಿನೆಲೆಯಿಂದ ಬ್ಯಾಡಗಿವರೆಗೆ ಎಷ್ಟು ಕಿ.ಮಿ.ಡಾಂಬರು ರಸ್ತೆ ಮಾಡಲಾಗಿದೆ.

ಇ) ಹಾಗಿದ್ದಲ್ಲಿ ಇನ್ನು ಎಷ್ಟು ದಿವಸಗಳಲ್ಲಿ ಸದರಿ ಬಾಡ-ಬಂಕಾಪುರ ರಸ್ತೆ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು)

ಅ) ಈ ರಸ್ತೆಯ 6 ಕಿ.ಮೀ. ಉದ್ದದಲ್ಲಿ 1 ಕಿ.ಮೀ.ಉದ್ದಕ್ಕೆ ಡಾಂಬರೀಕರಣ ಮಾಡಲಾಗಿದೆ. 2.50 ಕಿ.ಮೀ. ಉದ್ದಕ್ಕೆ 4.00 ಲಕ್ಷ ರೂ.ಗಳ ಅಂದಾಜಿನಲ್ಲಿ ಡಾಂಬರೀಕರಣ ಮಾಡುವ ಪ್ರಸ್ತಾಪ ಇರುತ್ತದೆ.

ಆ) ಕಾಗಿನೆಲೆಯಿಂದ ಬ್ಯಾಡಗಿವರೆಗೆ ಒಟ್ಟು 17 ಕಿ.ಮೀ. ಉದ್ದವಿದ್ದು ಒಟ್ಟು 5. ಕಿ.ಮೀ. ಡಾಂಬರೀಕರಣವಾಗಿದೆ. 5 ಕಿ.ಮೀ. ಉದ್ದಕ್ಕೆ ಡಾಂಬರೀಕರಣಕ್ಕಾಗಿ ಗುತ್ತಿಗೆಯನ್ನು ಆಹ್ವಾನಿಸಲಾಗಿದೆ.

ಇ) ಸದರಿ ರಸ್ತೆಯ 2.50 ಕಿ.ಮೀ.ಉದ್ದಕ್ಕೆ ಡಾಂಬರೀಕರಣ ಮಾಡುವುದಕ್ಕೆ ಮಲೆನಾಡು ಅಭಿವೃದ್ಧಿ ಮಂಡಳಿಗೆ ಅಂದಾಜು ಸಲ್ಲಿಸಿದ್ದು, ಅದು ಅನುಮೋದನೆಯಾದ ನಂತರ ಕಾಮಗಾರಿಯನ್ನು ತೆಗೆದುಕೊಳ್ಳಲಾಗುವುದು. ಉಳಿದ 2.5 ಕಿ.ಮೀ. ಉದ್ದದ ರಸ್ತೆಯ ಡಾಂಬರೀಕರಣವನ್ನು ಅನುದಾನ ಲಭ್ಯತೆಯನ್ನು ಅನುಸರಿಸಿ ಮುಂದಿನ ಸಾಲಿನಲ್ಲಿ ಪರಿಗಣಿಸಲಾಗುವುದು.

ತುಂಗಾ ಎಡದಂಡೆ ನಾಲೆ ದುರಸ್ಥಿ

100-ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಂಗಭದ್ರಾ ಎಡದಂಡೆ ನಾಲೆ ಇತ್ತೀಚೆಗೆ ಒಡೆದಿರುವುದರಿಂದ ನಾಲೆ ದುರಸ್ಥಿಗೆ ತಗಲುವ ವೆಚ್ಚವನ್ನು ಅಂದಾಜು ಮಾಡಲಾಗಿದೆಯೇ?

ಆ) ಅಂದಾಜು ಮಾಡಿದ್ದಲ್ಲಿ ಮಂಜೂರಾದ ಹಣವೆಷ್ಟು ಮತ್ತು ಬಿಡುಗಡೆಯಾದ ಹಣ ಎಷ್ಟು?

ಶ್ರೀ ಎಸ್.ಎಂ.ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಹೌದು

ಆ) ತಾತ್ಕಾಲಿಕ ದುರಸ್ಥಿ	ರೂ.	14.90 ಲಕ್ಷಗಳು
ಪುನರ್ ನಿರ್ಮಾಣಕ್ಕಾಗಿ	ರೂ.	86.80 ಲಕ್ಷಗಳು
ಬಿಡುಗಡೆ ಆಗಿರುವ ಹಣ	ರೂ.	84.00 ಲಕ್ಷಗಳು

ಭದ್ರಾ ಅಣೆಕಟ್ಟಿನ ನಾಲೆಯ ದುರಸ್ತಿ

100 ಎ - ಶ್ರೀ ಡಿ.ಬಿ. ಚಂದ್ರೇಗೌಡ. (ತೀರ್ಥಹಳ್ಳಿ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭದ್ರಾ ಅಣೆಕಟ್ಟಿನ ನಾಲೆಯ ಪ್ರವೇಶ ದ್ವಾರ ಒಡೆದು ಹೋಗಿದ್ದು, ಇದರ ದುರಸ್ಥಿ ಕಾರ್ಯ ಯಾವ ಹಂತದಲ್ಲಿದೆ?

ಆ) ದುರಸ್ಥಿ ಕಾರ್ಯಕ್ಕಾಗಿ ಒಟ್ಟು ತಗಲುವ ಅಂದಾಜು ಎಷ್ಟು?
ಇ) ಒದಗಿಸಲಾಗಿರುವ ಹಣ ಎಷ್ಟು?
ಈ) ಪ್ರಗತಿ ಯಾವ ಹಂತದಲ್ಲಿದೆ?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು)

ಭದ್ರಾಬಲದಂಡೆ ನಾಲೆಯ ಪ್ರಾರಂಭದಲ್ಲಿನ ಕಲ್ಲುಗಾರೆ ಗೋಡೆಗೆ ಹಾನಿ ಉಂಟಾಗಿದ್ದು, ಇದರ ಖಾಯಂ ದುರಸ್ಥಿಗಾಗಿ 9.75 ಕೋಟಿ ರೂಗಳ ಅಂದಾಜು ಮುಖ್ಯ ಇಂಜಿನಿಯರ್ ಅವರಿಂದ ಸ್ವೀಕೃತವಾಗಿದ್ದು, ಇದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಸದರಿ ಕಾಮಗಾರಿಯ ವಿನ್ಯಾಸ ಮತ್ತು ರೂಪರೇಷೆಗಳನ್ನು ತಯಾರಿಸಲಾಗಿದ್ದು, ಇದಕ್ಕೆ ಸದರಿ ವಿಚಾರದಲ್ಲಿ ರಚಿಸಲಾಗಿರುವ ತಾಂತ್ರಿಕ ಸಮಿತಿ-1ರ ವತಿಯಿಂದ ಒಪ್ಪಿಗೆ ದೊರೆತಿದೆ. ಒಡೆದು ಹೋಗಿರುವ ಕಲ್ಲುಗಾರೆ ಗೋಡೆಯನ್ನು ಸಂಪೂರ್ಣವಾಗಿ ತೆಗೆದು ಹಾಕಲಾಗಿದ್ದು, ಹೊಸ ತಳಪಾಯದ ಕಾಂಕ್ರೀಟ್ ಕೆಲಸ ಪ್ರಗತಿಯಲ್ಲಿದೆ. ಖಾಯಂ ದುರಸ್ಥಿ ಕಾಮಗಾರಿಗೆ ದಿನಾಂಕ 31-3-1994 ರವರೆಗೆ 1.96ಕೋಟಿ ರೂಗಳನ್ನು ವೆಚ್ಚ ಮಾಡಲಾಗಿದೆ. ಪ್ರಸ್ತುತ ಸಾಲಿನಲ್ಲಿ ಈ ಕಾಮಗಾರಿಗೆ 4.00 ಕೋಟಿ ರೂಗಳನ್ನು ನಿಗದಿಪಡಿಸಲಾಗಿದೆ.

ಏತ ನೀರಾವರಿ ಯೋಜನೆ

473 ಸಿ : ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಕ್ಕೂರು 2ನೇ ಹಂತದ ಕೆಲಸ ಸ್ಥಗಿತಗೊಂಡಿದ್ದು, ಯಾವಾಗ ಪೂರ್ತಿ ಮಾಡಲಾಗುವುದು?

ಶ್ರೀ ಎಂ.ಪಿ. ಕೇಶವ ಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಕಕ್ಕೂರು 2ನೇ ಹಂತದ ಬಾಕಿ ಉಳಿದ ಕಾಮಗಾರಿಗಳ 17.00 ಲಕ್ಷ ರೂ.ಗಳ ಪರಿಷ್ಕೃತ ಅಂದಾಜು ತಯಾರಿಕಾ ಹಂತದಲ್ಲಿದ್ದು, ಸದರಿ ಕಾಮಗಾರಿಗೆ 94-95ನೇ ಸಾಲಿನ ಆಯವ್ಯಯದಲ್ಲಿ ಒಂದು ಲಕ್ಷ ರೂ.ಗಳ ಅನುದಾನವಿರುತ್ತದೆ. ಅಂದಾಜಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ ಆದ್ಯತೆ ಮೇರೆಗೆ ಪೂರ್ಣಗೊಳಿಸಲಾಗುವುದು.

ಮುಂಡರಗಿ ತಾಲ್ಲೂಕಿನ ಏತನೀರಾವರಿ ಯೋಜನೆ.

473ಎ- ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಂಡರಗಿ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆಗಳು ಎಷ್ಟು ಅವುಗಳಲ್ಲಿ 5 ಏತ ನೀರಾವರಿಗಳ ಅಶ್ವಶಕ್ತಿ ಕಡಿಮೆ ಇರುವುದು ಸರಕಾರದ ಗಮನಕ್ಕೆ ಬಂದರೂ ಸಹ ಇಲ್ಲಿಯವರೆಗೆ ಅವುಗಳನ್ನು ಬದಲಿ ಮಾಡಿರುವುದಿಲ್ಲ ಕಾರಣವೇನು?

ಶ್ರೀ ಎಂ. ಪಿ. ಕೇಶವ್ ಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಮುಂಡರಗಿ ತಾಲ್ಲೂಕಿನಲ್ಲಿ ಒಟ್ಟು 5 ಏತ ನೀರಾವರಿ ಯೋಜನೆಗಳಿವೆ.

1. ಕಕ್ಕೂರು 1ನೇ ಹಂತ
2. ಹಮ್ಮಿಗಿ
3. ಕೂರ್ಲಹಳ್ಳಿ
4. ತಿಂಗಟಾಲೂರ
5. ವಿಠಲಾಪುರ

ಈ ಯೋಜನೆಗಳು 15-20 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವುದರಿಂದ ಪಂಪುಗಳ ಸವಕಳಿ ಬಂದು, ಸಾಮರ್ಥ್ಯ ಕಡಿಮೆಯಾಗಿರುವುದು.

94-95ನೇ ಸಾಲಿನ ಆಯವ್ಯಯದಲ್ಲಿ ಹಮ್ಮಿಗಿ ಏತ ನೀರಾವರಿ ಯೋಜನೆಯ ಪುನರ್ ಸ್ಥಿತಿಗೆ ತರುವ ಕಾಮಗಾರಿಯನ್ನು 2.00 ಲಕ್ಷ ರೂ.ಗಳ ಅನುದಾನದೊಂದಿಗೆ ಇಡಿಗಂಟಿನಲ್ಲಿ ಸೇರಿಸಲಾಗಿದೆ. ಪಂಪುಗಳ ಬದಲಾವಣೆಗೆ ಅನುದಾನದ ಲಭ್ಯತೆಯ ಮೇಲೆ ಆದ್ಯತೆ ನೀಡಲಾಗುವುದು.

ನ್ಯಾರೋಗೇಜ್ ರೈಲು ಮಾರ್ಗವನ್ನು ಬ್ರಾಡ್ ಗೇಜ್‌ಗೆ ಪರಿವರ್ತನೆ

531 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಂಗಾರುಪೇಟೆಯಿಂದ ಕೋಲಾರ ಚಿಂತಾಮಣಿ, ಚಿಕ್ಕಬಳ್ಳಾಪುರದ ಮಾರ್ಗವಾಗಿ ಬೆಂಗಳೂರಿಗೆ ಇರುವ ನ್ಯಾರೋಗೇಜ್ ರೈಲು ಮಾರ್ಗವನ್ನು ಬ್ರಾಡ್‌ಗೇಜ್‌ಗೆ ಪರಿವರ್ತನೆ ಮಾಡುವ ಕಾರ್ಯವನ್ನು ತೆಗೆದುಕೊಳ್ಳಲು ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಅದರ ವಿವರಗಳೇನು?

ಇ) ರಾಜ್ಯದಲ್ಲಿ ಮೀಟರ್ ಗೇಜ್‌ನಿಂದ ಬ್ರಾಡ್‌ಗೇಜ್‌ಗೆ ಪರಿವರ್ತನೆ ಮಾಡಬೇಕೆಂದಿರುವ ರೈಲು ಮಾರ್ಗಗಳಾವುವು?

ಶ್ರೀ ಕೆ.ಹೆಚ್.ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು)

ಅ) ಇಲ್ಲ

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮಾಹಿತಿ ಲಭ್ಯವಿರುವುದಿಲ್ಲ.

ಚಿಕ್ಕ ದೇವರಾಯನಾಲಾ ಪ್ರದೇಶಗಳಲ್ಲಿ ಸೇತುವೆಗಳು ಕುಸಿದಿರುವುದು

97 ಶ್ರೀ ಡಿ.ಹಲಗೇಗೌಡ (ಪಾಂಡವಪುರ) ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ಅಚ್ಚುಕಟ್ಟು ಪ್ರದೇಶದ ನದಿ ಕಾಲುವೆಗಳಲ್ಲಿ ಬಹುಮುಖ್ಯ ಕಾಲುವೆಯಾದ ಚಿಕ್ಕದೇವರಾಯ ನಾಲಾ ಪ್ರದೇಶಗಳಲ್ಲಿ ಹಳೆಯ ಸೇತುವೆಗಳು ಕುಸಿದು ಆ ಪ್ರದೇಶದ ಜನ ಜಾನುವಾರು, ವ್ಯವಸಾಯ ಮತ್ತು ಸಾಗಾಣಿಕೆಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅದರಲ್ಲೂ ಪಾಂಡವಪುರ ತಾಲ್ಲೂಕಿನ ಹರವು ಮತ್ತು ಪುಟ್ಟಸೋಮನಹಳ್ಳಿ ಗ್ರಾಮಗಳ ಬಳಿ ಕಾಲುವೆಯ 5 ಮತ್ತು 25ನೇ ಮೈಲಿಗಳಲ್ಲಿರುವ ಸೇತುವೆಗಳು ಕುಸಿದು ಬಿದ್ದು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಎಸ್.ಎಂ.ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಹೌದು

ಆ) ಹೌದು

ಇ) ಕುಸಿದಿರುವ ಸೇತುವೆಗಳ ಜಾಗದಲ್ಲಿ ಹೊಸ ಸೇತುವೆಗಳನ್ನು ಕಟ್ಟಲು ಅಂದಾಜನ್ನು ತಯಾರಿಸಲಾಗುತ್ತಿದ್ದು ಈ ಕಾಮಗಾರಿಗಳನ್ನು ಕಾವೇರಿ ಅಣೆಕಟ್ಟು ನಾಲೆಗಳ ಆಧುನೀಕರಣ ಯೋಜನೆಯಡಿ ಕೈಗೊಳ್ಳುವ ಕಾರ್ಯಕ್ರಮವಿದೆ.

ಭಾರಿ ಮಧ್ಯಮ ಹಾಗೂ ಚಿಕ್ಕ ನೀರಾವರಿ ಯೋಜನೆಗಳು

55 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಭಾರೀ ಮಧ್ಯಮ ಹಾಗೂ ಚಿಕ್ಕ ನೀರಾವರಿ ಯೋಜನೆಗಳಿಗೆ 1991-92,1992-93, 1993-94 ರಲ್ಲಿ ನಿಗದಿಪಡಿಸಿದ ಹಣವೆಷ್ಟು ಖರ್ಚಾದ ಹಣವೆಷ್ಟು ಖರ್ಚುಮಾಡದೆ ಉಳಿದ ಹಣವೆಷ್ಟು?

ಆ) ಕೃಷ್ಣ ಕೊಳ್ಳ ಹಾಗೂ ಕಾವೇರಿ ಕೊಳ್ಳದಲ್ಲಿ ಕೇಂದ್ರ ಸರ್ಕಾರದ ಮಂಜೂರಿಗೊಳಪಟ್ಟು ಪ್ರಾರಂಭಿಸಿರುವ ಯೋಜನೆಗಳ ಹೆಸರು ಹಾಗೂ ಪ್ರಾರಂಭಿಸಿದ ವರ್ಷವೇನು?

ಇ) ಕೃಷ್ಣ ಕೊಳ್ಳಕ್ಕೆ, ಕಾವೇರಿ, ಕೊಳ್ಳಕ್ಕೆ ಅಲ್ಲಲ್ಲಿಯ ಯೋಜನೆಗಳಿಗೆ 1991-92,1992-93,1993-94ರಲ್ಲಿ ನಿಗದಿಪಡಿಸಿದ ಹಣವೆಷ್ಟು ಹಾಗೂ ಖರ್ಚಾದ ಹಣವೆಷ್ಟು?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಸಾಲು		ಭಾರಿ ಹಾಗೂ ಮಧ್ಯಮ ನೀರಾವರಿ	ಸಣ್ಣ ನೀರಾವರಿ (ಕೋಟಿ ರೂ.ಗಳಲ್ಲಿ)
1991-92	ಅನುದಾನ	318.20	35.19
	ಖರ್ಚು:	352.86	23.13
	ಉಳಿಕೆಹಣ :	-	12.06
1992-93	ಅನುದಾನ :	472.80	48.74
	ಖರ್ಚು :	478.15	43.61
	ಉಳಿಕೆ	-	5.13
1993-94	ಅನುದಾನ :	784.30	59.10
	ಖರ್ಚು :	638.89	53.40
	ಉಳಿಕೆ ಹಣ:	145.41	5.70

ಯೋಜನಾವಾರು ವಿವರಗಳನ್ನು ಲಗತ್ತಿಸಲಾಗಿರುವ ಅನುಬಂಧ -1ರಲ್ಲಿ ನೀಡಲಾಗಿದೆ.

ಸಾಲು .		ಕೃಷ್ಣ ಕೊಳ್ಳ (ಕೋಟಿ ರೂ.ಗಳಲ್ಲಿ)	ಕಾವೇರಿ ಕೊಳ್ಳ
1991-92	ಅನುದಾನ	191.81	148.56
	ಖರ್ಚು :	203.25	144.34
1992-93	ಅನುದಾನ :	276.17	230.09

	ಖರ್ಚು :	282.79	216.73
1993-94	ಅನುದಾನ:	519.15	295.84
	ಖರ್ಚು :	424.44	240.95

ಅನುಬಂಧ - 1

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 55 ಕ್ಕೆ ಉತ್ತರಗಳು

(ಕೇಂದ್ರಸರ್ಕಾರದ ಮಂಜೂರಿಗೊಳಪಟ್ಟು ಪ್ರಾರಂಭಿಸಿರುವ ಯೋಜನೆಗಳು)

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಯೋಜನೆ ಪ್ರಾರಂಭವಾದ ವರ್ಷ
1	2	3
ಅ)	ಕೃಷ್ಣಾ ಕೊಳ್ಳದ ಯೋಜನೆಗಳು	
1.	ಕೃಷ್ಣಾ ಮೇಲ್ದಂಡೆ-1	1969
2.	ಘಟಪ್ರಭಾ-3	1972
3.	ಮಲಪ್ರಭ	1960
4.	ಹಿಪ್ಪರಗಿ	1973
5.	ಬೆಣ್ಣೆತೊರ	1973
6.	ಭದ್ರ	1947
7.	ತುಂಗಭದ್ರ ಎಡದಂಡೆ ಕಾಲುವೆ	1945
8.	ತುಂಗಭದ್ರ ಬಲದಂಡೆ ಮೇಲ್ಗಾಲುವೆ	1959
9.	ಅಮರ್ಜ	1975
10.	ಮುಲ್ಲಾಮಾರಿ ಮೇಲ್ದಂಡೆ	1976
11.	ಮುಲ್ಲಾಮಾರಿ ಕೆಳದಂಡೆ	1975
12.	ಹಿರೇಹಳ್ಳ	1977
13.	ಮಸ್ಕಿನಾಲಾ	1976
14.	ರಾಣಿಕೆರೆ ಪೂರಕ ಕಾಲುವೆ	1979
15.	ಹರಿನಾಲಾ	1993
16.	ಗಂಡೋರಿನಾಲಾ	1993
17.	ರಾಷ್ಟ್ರೀಯ ಜಲ ನಿರ್ವಹಣಾ ಯೋಜನೆ	1987
ಆ)	ಕಾವೇರಿ ಕೊಳ್ಳದ ಯೋಜನೆಗಳು	
1.	ಕೃಷ್ಣರಾಜ ಸಾಗರ ಆಧುನೀಕರಣ	1979
2.	ಮಂಚನಬೆಲೆ	1970
3.	ತಾರಕ	1970
4.	ವೋಟೆಹೊಳೆ	1977

ಸವಣೂರ ತಾಲ್ಲೂಕು ಹತ್ತಿಮತ್ತೂರ ಕೆರೆ ಕಾಮಗಾರಿ ಕೆಲಸ

590 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸವಣೂರ ತಾಲ್ಲೂಕ ಹತ್ತಿಮತ್ತೂರ ಕೆರೆ ಹೂಳು ತೆಗೆಯುವ ಕೆಲಸಕ್ಕೆ 1993-94ರ ಬಜೆಟ್‌ನಲ್ಲಿ ಎಷ್ಟು ಹಣ ಇಡಲಾಗಿತ್ತು.

ಆ) ಸದರಿ ಕೆಲಸ ಎಂದು ಪ್ರಾರಂಭ ಮಾಡಲಾಗುವುದು.

ಇ) ಅದಕ್ಕೆ ತಗಲಿದ ಖರ್ಚು ಎಷ್ಟು

ಈ) ಬಾಕಿ ಉಳಿದ ಕೆಲಸ ಯಾವಾಗ ಮಾಡಲಾಯಿತು

ಉ) ಸದರಿ ಕೆರೆ ಏರಿ ಮೇಲೆ ಮಣ್ಣು ಹಾಕಿ ಸಾರ್ವಜನಿಕರ ವಾಹನಗಳಿಗೆ, ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಸದರಿ ಕೆರೆ ಕೆಲಸ ಕಳಪೆ ಕಾಮಗಾರಿಯಾಗಿದ್ದು ಸಾರ್ವಜನಿಕರ ದೂರುಗಳು ಬಂದಿರುವ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) 14.47 ಲಕ್ಷರೂ.ಗಳು

ಆ) ದಿನಾಂಕ 4.4.94 ರಂದು

ಇ) ಜುಲೈ ಅಂತ್ಯದವರೆಗೆ 11.12 ಲಕ್ಷರೂ.ಗಳು

ಈ) ಈ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿದೆ.

ಉ) ಸಾರ್ವಜನಿಕ ವಾಹನಗಳಿಗೆ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳಲಾಗಿದೆ.

ಊ) ಈ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ.

ವಿವಿಧ ಮುಜರಾಯಿ ಕಾಯ್ದೆಗಳು.

49 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಮುಂಬೈ ಕರ್ನಾಟಕ ಹೈದರಾಬಾದ್ ಕರ್ನಾಟಕ ಮದರಾಸು ಕರ್ನಾಟಕ ಹಳೇ ಮೈಸೂರು ಹಾಗೂ ಕೊಡಗು ಕರ್ನಾಟಕದಲ್ಲಿ ಜಾರಿ ಇರುವ ಮುಜರಾಯಿ ಕಾಯ್ದೆಗಳು ಯಾವುವು?

ಆ) ಇವುಗಳೆಲ್ಲವನ್ನು ಕ್ರೋಢೀಕರಿಸಿ ಒಂದೇ ಸಾಮೂಹಿಕ ಮುಜರಾಯಿ ಧಾರ್ಮಿಕ ಕಾಯ್ದೆ ಮಾಡುವಲ್ಲಿ ಸರ್ಕಾರ ವಿಫಲವಾಗಲು ಕಾರಣವೇನು ಹಾಗಿದ್ದಲ್ಲಿ ಒಂದೇ ಸಾಮೂಹಿಕ ಕಾಯ್ದೆ ಮಾಡಲು ಸರ್ಕಾರದರು ಕ್ರಮ ಕೈಗೊಳ್ಳುವರೆ ಹಾಗಿದ್ದಲ್ಲಿ ಎಂದು?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಮುಜರಾಯಿ ಸಚಿವರು)

ಅ) ಧಾರ್ಮಿಕ ದತ್ತಿ ಇಲಾಖೆಯಲ್ಲಿ ಜಾರಿಯಲ್ಲಿರುವ ಕಾಯ್ದೆಗಳು ಈ ಕೆಳಕಂಡಂತೆ ಇದೆ.

1. ಮುಂಬೈ ಕರ್ನಾಟಕ ಪ್ರಾಂತ್ಯಕ್ಕೆ ದಿ ಬಾಂಬೆ ಪಬ್ಲಿಕ್ ಆಕ್ಟ್ 1950 (ಹಳೇ ಮುಂಬೈಯಿನ 4 ಜಿಲ್ಲೆಗಳು)

2. ಹೈದರಾಬಾದ್ ಕರ್ನಾಟಕ ಪ್ರಾಂತ್ಯಕ್ಕೆ ದಿ ಹೈದರಾಬಾದ್ ಎಂಡೋಮೆಂಟ್ ರೆಗ್ಯೂಲೇಷನ್ ಫ 1349 (ಹಳೆಹೈದರಾಬಾದ್‌ನ 3 ಜಿಲ್ಲೆಗಳು)

3. ಮದರಾಸು ಕರ್ನಾಟಕ ಪ್ರಾಂತ್ಯಕ್ಕೆ ದಿ ಮದರಾಸು ಹಿಂದೂ ಮತೀಯ ಮತ್ತು ಧರ್ಮಾರ್ಥ ಉಂಬಳಿ ಕಾಯ್ದೆ 1951 (2 ಜಿಲ್ಲೆಗಳು ದಕ್ಷಿಣ ಕನ್ನಡ ಮತ್ತು ಬೆಳಗಾಂ)

4. ಕೊಡಗು ಕರ್ನಾಟಕ ಪ್ರಾಂತ್ಯಕ್ಕೆ ದಿ ಕೂರ್ಗ ಟೆಂಪಲ್ ಫಂಡ್ಸ್ ಮ್ಯಾನೇಜ್ ಮೆಂಟ್ ಆಕ್ಟ್ 1956 (ಕೊಡಗು ಜಿಲ್ಲೆ)

5. ಹಳೇ ಮೈಸೂರು ಪ್ರಾಂತ್ಯಕ್ಕೆ ಮೈಸೂರು ರಿಲಿಜಿಯನ್ ಚಾರಿಟಬಲ್ ಇನ್ಸಿಟಿಟ್ಯೂಷನ್ ಆಕ್ಟ್ - 1927 ಹಳೇ ಮೈಸೂರಿನ 10 ಜಿಲ್ಲೆಗಳು

ವಿಫಲವಾಗಿಲ್ಲ

ಏಕರೂಪ ಶಾಸನವನ್ನು ಅಂತಿಮ ರೂಪಗೊಂಡಿದ್ದು ಸದ್ಯದಲ್ಲಿಯೇ ಉಭಯ ಸನಗಳ ಒಪ್ಪಿಗೆಗೆ ಸಲ್ಲಿಸಲಾಗುವುದು.

ರಾಷ್ಟ್ರೀಯ ಹೆದ್ದಾರಿ ಹಾಗೂ ಅನಾಹುತಗಳು

54 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ಬೆಂಗಳೂರು-ಪೂನಾ ಹೆದ್ದಾರಿಯ ಡಾಂಬರೀಕರಣ ರಸ್ತೆಯ ಅಗಲ ಕಾರವಾರ ಮಂಗಳೂರು ಹೆದ್ದಾರಿಯ ಡಾಂಬರೀಕರಣ ರಸ್ತೆಯ ಅಗಲಕ್ಕಿಂತ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬೆಂಗಳೂರು ಪೂನಾ ಹೆದ್ದಾರಿಯ ಡಾಂಬರ್ ರಸ್ತೆ ಅಗಲವಿಲ್ಲದಿರುವುದರಿಂದ ಈ ರಸ್ತೆಯಲ್ಲಿ ಅನಾಹುತಗಳ ಸಂಖ್ಯೆ ಹೆಚ್ಚುತ್ತಿರುವುದು ನಿಜವೇ?

ಇ) ರಾಜ್ಯದಲ್ಲಿ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳೆಷ್ಟು, ಅವು ಯಾವುವು

ಈ) ಈ ರಸ್ತೆಗಳ ಹೆಸರು ಹಾಗೂ ಉದ್ದ ಎಷ್ಟು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು)

ಅ) ಇಲ್ಲ, ಈ ಎರಡೂ ಹೆದ್ದಾರಿಗಳ ಡಾಂಬರೀಕರಣದ ಅಗಲ ದ್ವಿಪಥಕ್ಕೆ ಅನುಗುಣವಾಗಿ ಏಳು ಮೀಟರ್ ಅಗಲ ಇದೆ.

ಆ) ನಿಜವಲ್ಲ

ಇ) 1. 7 ರಾಷ್ಟ್ರೀಯ ಹೆದ್ದಾರಿಗಳು

2. 78 ರಾಜ್ಯ ಹೆದ್ದಾರಿಗಳು

ಈ) ಪಟ್ಟಿ ಲಗತ್ತಿಸಿದೆ.

ಈ) ಪಟ್ಟಿ ಲಗತ್ತಿಸಿದೆ.

ಅಡಕ - 1

ಕರ್ನಾಟಕ ರಾಜ್ಯದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳ ಪಟ್ಟಿ

1.	ರಾಷ್ಟ್ರೀಯ ಹೆದ್ದಾರಿ ನಂ.4	::	ತಮಿಳುನಾಡು-ಕೋಲಾರ-ಬೆಂಗಳೂರು ಹುಬ್ಬಳ್ಳಿ-ಬೆಳಗಾಂ-ಪೂನಾ ಬಾಂಬೆ	700 ಕಿ.ಮೀ.
2.	ರಾಷ್ಟ್ರೀಯ ಹೆದ್ದಾರಿ ನಂ.4ಎ	::	ಬೆಳಗಾಂ-ಖಾನಾಪುರ-ಅನ್‌ಮೋದ್ ಪಣಜಿ	84 ಕಿ.ಮೀ
3.	ರಾಷ್ಟ್ರೀಯ ಹೆದ್ದಾರಿ ನಂ.7	::	ಬೆನಾರಸ್-ನಾಗಪುರ-ಹೈದರಾಬಾದ್-ಕರ್ನೂಲ್-ಬಾಗೇಪಲ್ಲಿ-ಬೆಂಗಳೂರು ಹೊಸೂರು-ಕೃಷ್ಣಗಿರಿ-ತಮಿಳು ನಾಡು-ಕೇಪ್ ಕ್ಯಾಮರಿನ್.	128 ಕಿ.ಮೀ
4.	ರಾಷ್ಟ್ರೀಯ ಹೆದ್ದಾರಿ ನಂ.9	::	ಪೂನಾ-ಸೊಲಾಪುರ-ಹುಮ್ನಾಬಾದ್ ಹೈದರಾಬಾದ್-ವಿಜಯವಾಡ.	75 ಕಿ.ಮೀ

5.	ರಾಷ್ಟ್ರೀಯ ಹೆದ್ದಾರಿ ನಂ.13. ::	ಚಿತ್ರದುರ್ಗ-ಹೊಸಪೇಟೆ-ಬಿಜಾಪುರ ಸೊಲಾಪುರ	390 ಕಿ.ಮೀ
6.	ರಾಷ್ಟ್ರೀಯ ಹೆದ್ದಾರಿ ನ.17 ::	ಪಣವೆಲ್ - ಪಣಜಿ - ಕಾರವಾರ-ಕುಂದಾಪುರ-ಉಡುಪಿ ಮಂಗಳೂರು- ಕಣ್ಣಾನೂರು ತಿರುಚೂರ್.	300 ಕಿ.ಮೀ
7.	ರಾಷ್ಟ್ರೀಯ ಹೆದ್ದಾರಿ ನಂ.48 ::	ಬೆಂಗಳೂರು-ನೆಲಮಂಗಲ-ಕುಣಿಗಲ್ - ಹಾಸನ-ಸಕಲೇಶಪುರ ಮಂಗಳೂರು.	320 ಕಿ.ಮೀ
		ಒಟ್ಟು ಉದ್ದ	1,997 ಕಿ.ಮೀ.

ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿರುವ ರಾಜ್ಯ ಹೆದ್ದಾರಿಯ ವಿವರಗಳು

ಕ್ರ. ಸಂ.	ರಾಜ್ಯ ಹೆದ್ದಾರಿಯ ಹೆಸರು		ರಸ್ತೆಯ ಒಟ್ಟು ಉದ್ದ,ಕಿಮೀ.ಗಳಲ್ಲಿ
	ರಾಜ್ಯ ಹೆದ್ದಾರಿ - 1		
1)	ರಾಜ್ಯ ಹೆದ್ದಾರಿ - ಗಂಗಾಮೂಲ (ಗಣಪತಿ ಕಟ್ಟೆ) ದಿಂದ ಶೃಂಗೇರಿ ಕೊಪ್ಪ ತೀರ್ಥಹಳ್ಳಿ, ಆನಂದಪುರ ಶಿಕಾರಿಪುರ, ಹಾನಗಲ್ ತಡಸ್ ರಾಜ್ಯ ಹೆದ್ದಾರಿ-4	::	267.84
2)	ರಾಜ್ಯ ಹೆದ್ದಾರಿ - 2 ರಾಜ್ಯ ಹೆದ್ದಾರಿ - ಸಿರ್ಸಿ, ಉಕ್ಕುಂಟೆ, ಹಾವೇರಿ, ಮೈಲಾರ ಹರಪನಹಳ್ಳಿ ಕೂಡ್ಲಿಗಿ ಮೊಳಕಾಲ್ಮೂರು, ರಾಜ್ಯದಗಡಿ (ಸಿರ್ಸಿ, ಉಕ್ಕುಂಡೆ ಹರಪನಹಳ್ಳಿ ಕೂಡ್ಲಿಗಿ ಇವುಗಳನ್ನು ಹೊರತುಪಡಿಸಿ ಇವುಗಳನ್ನು ಈಗಾಗಲೇ ರಾಜ್ಯ ಹೆದ್ದಾರಿಯು ಭಾಗಗಳಾಗಿಸಿ)	::	175.23
3)	ರಾಜ್ಯ ಹೆದ್ದಾರಿ - 3 ರಾಜ್ಯ ಹೆದ್ದಾರಿ ತಮಿಳುನಾಡು ರಾಜ್ಯ ಗಡಿಯಿಂದ ಕನಕಪುರ ರಾಮನಗರ ಮಾಗಡಿ ಸೋಲೂರು ಸೋಂಪುರ ಕೊಲಟಗೆರೆ ಮಧುಗಿರಿ ಪಾವಗಡ ಆಂಧ್ರದ ರಾಜ್ಯದ ಗಡಿ	::	248.80
4)	ರಾಜ್ಯ ಹೆದ್ದಾರಿ - 4 ರಾಜ್ಯ ಹೆದ್ದಾರಿ ಅಲಂದಹಳ್ಳಿಯಿಂದ (ಮಹಾರಾಷ್ಟ್ರ ಗಡಿ ನಾನಡೆಡ್‌ನಿಂದ) ಆಂಧ್ರಗಡಿಗೆ	::	69.00
5)	ರಾಜ್ಯ ಹೆದ್ದಾರಿ - 5 ರಾಜ್ಯ ಹೆದ್ದಾರಿ ಬಾಗೇಪಲ್ಲಿ ಮತ್ತು ಬಂಗಾರು ಪೇಟೆಯನ್ನು ಚಿಂತಾಮಣಿ ಮತ್ತು ಕೋಲಾರದ	::	106.00

ಮೂಲಕ ಸೇರುವ ರಸ್ತೆ

6) ರಾಜ್ಯ ಹೆದ್ದಾರಿ - 6
ರಾಜ್ಯ ಹೆದ್ದಾರಿ ಕಾರವಾರ ಬೈಗಾ ಜಿಲ್ಲಾಪುರ ಮಂಚ ಹೊಂಡು ಬಂಕಾಪುರ (ರಾಜ್ಯ ಹೆದ್ದಾರಿ 4ರ ಮೇಲೆ ಸಾವನೂರು ಗದಗ್ ಗಜೇಂದ್ರ ಗಡ ಕುಷ್ಟಗಿ ಹಿಲ್‌ಕಲ್:: 319.02
ಮೂಲಕ ಹಾದು ಹೋಗುವ ರಸ್ತೆ.

7) ರಾಜ್ಯ ಹೆದ್ದಾರಿ 6ಎ
ರಾಜ್ಯ ಹೆದ್ದಾರಿ ರಾಷ್ಟ್ರೀಯ ಹೆದ್ದಾರಿ 13 ರಿಂದ ಹಿಲ್‌ಕಲ್ ಹತ್ತಿರದಿಂದ ಕುಷ್ಟಗಿ ಬೇವೂರು ಕೊಪ್ಪಳ್‌ಗೆ :: 69.06
ಮತ್ತು ರಾಜ್ಯ ಹೆದ್ದಾರಿ 42ನ್ನು ಸೇರುವ ರಸ್ತೆ

8) ರಾಜ್ಯ ಹೆದ್ದಾರಿ 7
ರಾಜ್ಯ ಹೆದ್ದಾರಿ ಶ್ರೀರಂಗಪಟ್ಟಣ ಪಾಂಡವಪುರ ಕೆ.ಆರ್. ಪೇಟೆ ಚೆನ್ನರಾಯಪಟ್ಟಣ ಅರಸೀಕೆರೆ ಮೂಲಕ ಹೋಗುವ:: 107.50
ರಸ್ತೆ

9) ರಾಜ್ಯ ಹೆದ್ದಾರಿ - 8
ರಾಜ್ಯ ಹೆದ್ದಾರಿ ಹಿರೇಸಾಡ್, ಶ್ರವಣಬೆಳಗೊಳ ಚನ್ನರಾಯಪಟ್ಟಣ ಹೊಳೆನರಸೀಪುರ ಅರಕಲಗೂಡು ಶನಿವಾರ ಸಂತೆ ಮೂಲಕ :: 93.50
ಹೋಗುವ ರಸ್ತೆ

10) ರಾಜ್ಯ ಹೆದ್ದಾರಿ - 9
ರಾಜ್ಯ ಹೆದ್ದಾರಿ ಯಲಂಕ ಕುಡುಮನಕುಂಟೆ ಗ್ರಾಮ (ಹಿಂದೂಪುರ) (ಆಂಧ್ರಪ್ರದೇಶ)ಕ್ಕೆ ಹೋಗುವ ರಸ್ತೆ :: 74.00
ದೊಡ್ಡಬಳ್ಳಾಪುರ ಮತ್ತು ಗೌರಿಬಿದನೂರು ಮೂಲಕ ಸೇರುವ ರಸ್ತೆ.

11) ರಾಜ್ಯ ಹೆದ್ದಾರಿ 10
ರಾಜ್ಯ ಹೆದ್ದಾರಿ ಶಿರಸಾಂಬ ಗ್ರಾಮ (ಮಹಾರಾಷ್ಟ್ರ) ರಾಜ್ಯ ಗಡಿಯ ವಾಗ್ದಾಯಿಂದ ಕಿಬ್ಬನಹಳ್ಳಿ (ಆಂಧ್ರ ಗಡಿಯ ಕೋಡುಗಲ್‌ಗೆ) ಆಂಧ್ರ ಗುಲ್ಬರ್ಗಾ ಮತ್ತು :: 146.60
ಸೇಲಂ ಮೂಲಕ ಸೇರುವ ರಸ್ತ.

12) ರಾಜ್ಯ ಹೆದ್ದಾರಿ - 11
ರಾಜ್ಯ ಹೆದ್ದಾರಿ ರಾಜ್ಯದ ಗಡಿಯಿಂದ ಹುಲಸೂರು ಬಾಲಕುಂದ ಬಸವಕಲ್ಯಾಣ ಮುದ್ದ ಮನಗಾನ್ ಮೂಲಕ:: 63.80
ಹೋಗುವ ರಸ್ತೆ.

13) ರಾಜ್ಯ ಹೆದ್ದಾರಿ - 12
ರಾಜ್ಯ ಹೆದ್ದಾರಿ ಜೇವರ್ಗಿ ಮತ್ತು ಸಂಕೇಶ್ವರವನ್ನು ರಾಜ್ಯ ಹೆದ್ದಾರಿ 4ರಲ್ಲಿ ಸಂಪರ್ಕಿಸುವ ರಸ್ತೆ ಸಿಂಧಗಿ :: 237.50
ಬಿಜಾಪುರ ಅಥಣಿ ತೋಡಬಾಳ್ ಚಿಕ್ಕೋಡಿ ಮೂಲಕ

ಹೋಗುವ ರಸ್ತೆ.

14) ರಾಜ್ಯ ಹೆದ್ದಾರಿ 12 ಎ
ರಾಜ್ಯ ಹೆದ್ದಾರಿ ಸಂಪರ್ಕಿಸುವ ರಸ್ತೆ (ಮಹಾರಾಷ್ಟ್ರ)
ಕನಮೋಡಿಗೆ ಗಡಿ ಜಾಥಾ ಮೂಲಕ ಹಾದು
ಹೋಗುವ ರಸ್ತೆ :: 23.3

15) ರಾಜ್ಯ ಹೆದ್ದಾರಿ 13
ರಾಜ್ಯ ಹೆದ್ದಾರಿ ಮೇನಸೂಗೂರನ್ನು ಸಂಪರ್ಕಿಸುವ ರಸ್ತೆ
ಆಂಧ್ರಪ್ರದೇಶದ ಮೆಹಬೂಬ್ ನಗರದ ಮೂಲಕ
ಕಟ್ಟುಗ್ಡ್‌ನ್ನು ಸೇರುವ ರಸ್ತೆ (ಆಂಧ್ರದ ಗಡಿಯ ;; 51.50
ಅಥೋಣಿಯನ್ನು ಸೇರುವ ರಸ್ತೆ ರಾಯಚೂರು
ಮೂಲಕ ಹೋಗುವ ರಸ್ತೆ.

16) ರಾಜ್ಯ ಹೆದ್ದಾರಿ 14
ರಾಜ್ಯ ಹೆದ್ದಾರಿ ರಾಯದುರ್ಗ ಬಾದಾಮಿ
ಪಟ್ಟದಕಲ್ ಮತ್ತು ಹೊನಗುಂದ್‌ನ್ನು ಸೇರುವ ರಸ್ತೆ. :: 95.20

17) ರಾಜ್ಯ ಹೆದ್ದಾರಿ 15
ರಾಜ್ಯ ಹೆದ್ದಾರಿ ವಾರಂಪಲ್ಲಿಯನ್ನು ರಾಯಚೂರ್ಗೆ
ಸಂಪರ್ಕಿಸುವ ರಸ್ತೆ ಔರಾದ್ ಸಂತಪುರ ಬೀದರ್ :: 289.70
ಚಿಂಚೋಳಿ ಸೇಡಂ ಯಾದಗೀರ್ ಹಟ್ಟಿಗೂಡೂರ್ ದೇವದುರ್ಗ
ಮುಖಾಂತರ ಹೋಗುವ ರಸ್ತೆ.

18) ರಾಜ್ಯ ಹೆದ್ದಾರಿ - 16
ರಾಜ್ಯ ಹೆದ್ದಾರಿ ಸಿಂಧಗಿಯನ್ನು ಮೆಹಪುರದೊಡನೆ
ಸಂಪರ್ಕಿಸುವ ರಸ್ತೆ :: 76.70

19) ರಾಜ್ಯ ಹೆದ್ದಾರಿ 17
ರಾಜ್ಯ ಹೆದ್ದಾರಿ ಬೆಂಗಳೂರನ್ನು ಬಂಡಿಪುರಕ್ಕೆ ಸಂಪರ್ಕಿಸುವ
ರಸ್ತೆ ರಾಮನಗರ ಚನ್ನಪಟ್ಟಣ ಮದ್ದೂರು ಮಂಡ್ಯ :: 227.40
ಶ್ರೀರಂಗಪಟ್ಟಣ, ಮೈಸೂರು ನಂಜನಗೂಡು ಗುಂಡ್ಲಪೇಟೆ
ಮುಖಾಂತರ ಹೋಗುವ ರಸ್ತೆ.

20) ರಾಜ್ಯ ಹೆದ್ದಾರಿ 17 ಎ
ರಾಜ್ಯ ಹೆದ್ದಾರಿ ಮೈಸೂರನ್ನು ಹಸನೂರ್ ಘಾಟ್‌ಗೆ
ಸಂಪರ್ಕಿಸುವ ರಸ್ತೆ (ತಮಿಳುನಾಡು ಗಡಿ ಕೊಯಮತ್ತೂರಿಗೆ):: 110.20
ಕೊಳ್ಳೇಗಾಲ ಮತ್ತು ಬಿಳಿಗಿರಿರಂಗನಬೆಟ್ಟದ ಮೂಲಕ
ಹೋಗುವ ರಸ್ತೆ.

21) ರಾಜ್ಯ ಹೆದ್ದಾರಿ 17-ಬಿ
ರಾಜ್ಯ ಹೆದ್ದಾರಿ - (ನಂಜನಗೂಡನ್ನು ಪುಂಜನೂರ್
ಗ್ರಾಮಕ್ಕೆ ಸಂಚರಿಸುವ ರಸ್ತೆ (ತಮಿಳುನಾಡು ಗಡಿ :: 75.00
ಕೊಯಮತ್ತೂರಿಗೆ) ಚಾಮರಾಜನಗರ
ಮುಖಾಂತರ ಹೋಗುವ ರಸ್ತೆ

22) ರಾಜ್ಯಹೆದ್ದಾರಿ 17-ಸಿ

ರಾಜ್ಯ ಹೆದ್ದಾರಿ ಗುಂಡ್ಲಪೇಟೆಯನ್ನು
ಮದ್ದೂರಿಗೆ ಸಂಪರ್ಕಿಸುವ ರಸ್ತೆ (ಕೇರಳದ ರಾಜ್ಯ
ಗಡಿಯಲ್ಲಿ ಸುಲ್ತಾನ್ ಬತ್ತೇರಿಯನ್ನು ಸೇರುವ ರಸ್ತೆ. :: 35.40

23) ರಾಜ್ಯಹೆದ್ದಾರಿ 17-ಡಿ
ರಾಜ್ಯ ಹೆದ್ದಾರಿ - ಮೈಸೂರನ್ನು ಬಾಚಳ್ಳಿ
ಗ್ರಾಮವನ್ನು ಸಂಪರ್ಕಿಸುವ ರಸ್ತೆ (ಕೇರಳ ರಾಜ್ಯ :: 93.00
ಗಡಿಯ ಮಾನಂತಾಡಿಗೆ ಹೆಗ್ಗಡದೇವನಕೋಟೆಯ ಮುಖಾಂತರ

24) ರಾಜ್ಯಹೆದ್ದಾರಿ 17-ಇ
ರಾಜ್ಯ ಹೆದ್ದಾರಿ ಬೆಂಗಳೂರನ್ನು ಮಾಗಡಿಗೆ
ಸಂಪರ್ಕಿಸುವ ರಸ್ತೆ ತಿಪ್ಪಗೊಂಡನಹಳ್ಳಿ ಮುಖಾಂತರ
ಹೋಗುವ ರಸ್ತೆ (ಬೆಂಗಳೂರು ಮಾಗಡಿ
ಹುಲಿಯೂರುದುರ್ಗ ರಸ್ತೆ) :: 52.20

25) ರಾಜ್ಯಹೆದ್ದಾರಿ 18
ರಾಜ್ಯ ಹೆದ್ದಾರಿ ಮುಧೋಳನ್ನು ನಿಪ್ಪಾಣಿಯೊಡನೆ
ಸಂಪರ್ಕಿಸುವ ರಸ್ತೆ ಚಿಕ್ಕೋಡಿಯ ಮುಖಾಂತರ :: 110.50

26) ರಾಜ್ಯಹೆದ್ದಾರಿ 19
ರಾಜ್ಯ ಹೆದ್ದಾರಿ (ಶ್ರೀರಂಗಪಟ್ಟಣವನ್ನು ಬೀದರ್ಗೆ
ಸಂಪರ್ಕಿಸುವ ರಸ್ತೆ ನಾಗಮಂಗಲ
ಚಿಕ್ಕನಾಯಕನಹಳ್ಳಿ ಹಿರಿಯೂರು ಚಳ್ಳಕೆರೆ ಬಳ್ಳಾರಿ :: 749.70
ಸಿರಗುಪ್ಪ ಸಿಂಧನೂರು ಲಿಂಗಸೂಗೂರು ಪೋರಾಪುರ
ಷಹಪುರ ಜೇವರ್ಗಿ ಗುಲ್ಬರ್ಗಾ ಮತ್ತು ಹುಮ್ನಾಬಾದ್
ಮುಖಾಂತರ ಹೋಗುವ ರಸ್ತೆ

27) ರಾಜ್ಯಹೆದ್ದಾರಿ 19-ಎ
ರಾಜ್ಯ ಹೆದ್ದಾರಿ ಹುವಿಯಾರನ್ನು ಅನಗೋಡುಗೆ
ಸಂಪರ್ಕಿಸುವ ರಸ್ತೆ ಹೊಳಲ್ಕೆರೆ ಮತ್ತು ಹೊಸದುರ್ಗ
ಮುಖಾಂತರ

28) ರಾಜ್ಯಹೆದ್ದಾರಿ - 20
ರಾಜ್ಯ ಹೆದ್ದಾರಿ ರಾಯಚೂರನ್ನು ಬಾಚಿಯೊಡನೆ
ಸಂಪರ್ಕಿಸುವ ರಸ್ತೆ ಮಹಾರಾಷ್ಟ್ರ ರಾಜ್ಯ ಗಡಿಯ :: 353.90
ವೆನ್ಗೂರ್ಲಾಗೆ) ಲಿಂಗಸೂಗೂರು ಹುನಗುಂದ ಬಾಗಲಕೋಟೆ
ಲೋಕಾಪುರ ಯರಗಟ್ಟಿ ಮತ್ತು ಬೆಳಗಾವಿ ಮುಖಾಂತರ

29) ರಾಜ್ಯಹೆದ್ದಾರಿ -21
ರಾಜ್ಯ ಹೆದ್ದಾರಿ ಹಳೇಬೀಡು ಹಾಸನ ಅರಕಲಗೂಡು
ಪೆರಿಯಾಪಟ್ಟಣ ಕೊನೂರು ರಾಜ್ಯ ಗಡಿಯ ಮುಖಾಂತರ :: 162.20
ಹೋಗುವ ರಸ್ತೆ.

30) ರಾಜ್ಯಹೆದ್ದಾರಿ -22
ರಾಜ್ಯ ಹೆದ್ದಾರಿ ಗುಲ್ಬರ್ಗಾ ಅಪಜಲ್ಪುರ ಹೊಸುರೂ
ಮತ್ತು ರಾಜ್ಯ ಗಡಿಯನ್ನು ಸಂಪರ್ಕಿಸುವ ರಸ್ತೆ :: 96.24

31) ರಾಜ್ಯಹೆದ್ದಾರಿ -23
ರಾಜ್ಯ ಹೆದ್ದಾರಿ ರಾಯಚೂರನ್ನು ಗಿನಿಗೆರಾವನ್ನು
ಸಂಪರ್ಕಿಸುವ ರಸ್ತೆ ಮಾನ್ವಿ ಸಿಂಧನೂರು ಮತ್ತು
ಗಂಗಾವತಿಯ ಮೂಲಕ ಹೋಗುವ ರಸ್ತೆ :: 161.60

32) ರಾಜ್ಯಹೆದ್ದಾರಿ -24
ರಾಜ್ಯ ಹೆದ್ದಾರಿ ತರೀಕೆರೆಯನ್ನು ಹೊಸದುರ್ಗಕ್ಕೆ ಸಂಪರ್ಕಿಸುವ
ರಸ್ತೆ ವಿವಿಪುರ ಹಿರಿಯೂರು (ರಾ.ಹೆ.-4) ಮುಂದೆ
ರಾಜ್ಯದ ಗಡಿಯವರೆಗೆ :: 136.50

33) ರಾಜ್ಯ ಹೆದ್ದಾರಿ 25
ರಾಜ್ಯ ಹೆದ್ದಾರಿ ಹೊಸಪೇಟೆಯನ್ನು ಮಂಗಳೂರನ್ನು :: 374.00
ರಾ.ಹೆ. 17ರಲ್ಲಿ ಸಂಪರ್ಕಿಸುವ ರಸ್ತೆ ಹರಪನ
ಹಳ್ಳಿ ಹರಿಹರ ಹೊನ್ನಾಳಿ
ಆಗುಂಬೆ ಕಾರ್ಕಳ ಮುಖಾಂತರ ಹೋಗುವ ರಸ್ತೆ

34) ರಾಜ್ಯ ಹೆದ್ದಾರಿ 25 ಎ
ರಾಜ್ಯ ಹೆದ್ದಾರಿ ಆಗುಂಬೆಯನ್ನು ಮಲ್ಪೆಯೊಡನೆ :: 43.40
ಸಂಪರ್ಕಿಸುವ ರಸ್ತೆ ಹೆಬ್ರಿ ಉಡುಪಿ ಮುಖಾಂತರದ

35) ರಾಜ್ಯ ಹೆದ್ದಾರಿ 26
ರಾಜ್ಯ ಹೆದ್ದಾರಿ ಹೊನ್ನಾಳಿ ಆಯನೂರು ಅರಸಾಟು :: 148.70
ಹೊಸನಗರ ಹುಲಿಕಲ್ಲು ಬೆಂದೂರುಗಳನ್ನು ಸಂಪರ್ಕಿಸುವ ರಸ್ತೆ.

36) ರಾಜ್ಯ ಹೆದ್ದಾರಿ 27
ರಾಜ್ಯ ಹೆದ್ದಾರಿ ಸಕಲೇಶಪುರ (ರಾ.ಹೆ. 48) :: 131.10
ಸೋಮವಾರಪೇಟೆ ಮಡಿಕೇರಿ ವಿರಾಜಪೇಟೆಯನ್ನು
ಸಂಪರ್ಕಿಸುವ ದಸ್ತೆ.

37) ರಾಜ್ಯ ಹೆದ್ದಾರಿ 28
ರಾಜ್ಯ ಹೆದ್ದಾರಿ ಸೂಪ ಹುಳಿಯಾರು ಧಾರವಾಡ :: 92.15
ಹೆಬ್ಬೂರುಗಳನ್ನು ಸಂಪರ್ಕಿಸುವ ರಸ್ತೆ.

38) ರಾಜ್ಯ ಹೆದ್ದಾರಿ - 29
ರಾಜ್ಯ ಹೆದ್ದಾರಿ ಲಿಂಗಸೂಗೂರು ಮುರಗಲ್
ತಾವರೆಕೆರೆ ಗಂಗಾವತಿ ಕಂಪ್ಲಿ ಕುಡುತಿಕೆಗಳನ್ನು
ಸಂಪರ್ಕಿಸುವ ರಸ್ತೆ (ಲಿಂಗಸೂಗೂರು
ಮಡಗಲ್‌ಗಳನ್ನು ಹೊರತು ಪಡಿಸಿ :: 116.60

39) ರಾಜ್ಯ ಹೆದ್ದಾರಿ 30
ರಾಜ್ಯ ಹೆದ್ದಾರಿ ಸಿಂಧನೂರು ನರಗುಂದ್ಗೆ ಸಂಪರ್ಕಿಸುವ
ರಸ್ತೆ ಕುಷ್ಠಗಿ ಮತ್ತು ರೋಣ ಮುಖಾಂತರ :: 156.20

40) ರಾಜ್ಯ ಹೆದ್ದಾರಿ - 31
ರಾಜ್ಯ ಹೆದ್ದಾರಿ ಜಾಥಾ ಅನಂತಪುರ ಅಥಣಿ
ಗುರುಲಾಪುರ ಗೋಕಾಕ್ ನೇಸರಿ ಬೈಲಹೊಂಗಲ್
ಖಾನಾಪುರ (ರಾಹೆ-4ಎ ನಲ್ಲಿ) : 244.80

ಜಂಬೋಟಿ ಕೊನಕುಂಟೆ ಗೋವಾಗಡಿಯನ್ನು
ಸಂಪರ್ಕಿಸುವ ರಸ್ತೆ

41) ರಾಜ್ಯ ಹೆದ್ದಾರಿ 32
ರಾಜ್ಯ ಹೆದ್ದಾರಿ ಉಮರ್ಗ ಗಡಿ ಅಲಂದ
ಮಹಾಗಾನ್ಕೊಡಿಲಿ ಸೂಳಿಪೇಟೆ ಚಿಂಚೋಳಿ
ರಸ್ತೆಯಿಂದ ರಾಜ್ಯ ಹೆದ್ದಾರಿ 15ನ್ನು ಸೂಳಿಪೇಟೆ :: 118.60
ಹತ್ತಿರ ಸೇರುವ ರಸ್ತೆ.

42) ರಾಜ್ಯ ಹೆದ್ದಾರಿ 33
ರಾಜ್ಯ ಹೆದ್ದಾರಿ ಕೊಳ್ಳೇಗಾಲ ಮಳವಳ್ಳಿ ಮದ್ದೂರು
ಕುಣಿಗಲ್ ತುಮಕೂರು ಕೊರಟಗೆರೆಯಿಂದ ರಾಜ್ಯ ಹೆದ್ದಾರಿ :: 167.70
3ನ್ನು ಕೊರಟಗೆರೆ ಹತ್ತಿರ ಸೇರುವ ರಸ್ತೆ.

43) ರಾಜ್ಯ ಹೆದ್ದಾರಿ 34
ರಾಜ್ಯ ಹೆದ್ದಾರಿ ಧಾರವಾಡವನ್ನು ಅನ್ಮೋಡ್ಗೆ ಸಂಪರ್ಕಿಸುವ
ರಸ್ತೆ (ಧಾರವಾಡ ಗೋವಾ ರಸ್ತೆ) :: 61.30

44) ರಾಜ್ಯ ಹೆದ್ದಾರಿ 35
ರಾಜ್ಯ ಹೆದ್ದಾರಿ ಶಿಡ್ಲಘಟ್ಟದಿಂದ ರಾಜ್ಯದ ಗಡಿಯವರೆಗೆ
ಹೊಸಕೋಟೆ ಮತ್ತು ಆನೇಕಲ್ ಮುಖಾಂತರ :: 88.70

45) ರಾಜ್ಯ ಹೆದ್ದಾರಿ - 37
ರಾಜ್ಯ ಹೆದ್ದಾರಿ ಸುಬ್ರಹ್ಮಣ್ಯವನ್ನು ಉಡುಪಿಗೆ ಸಂಪರ್ಕಿಸುವ
ರಸ್ತೆ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಮುಖಾಂತರ :: 131.00

46) ರಾಜ್ಯ ಹೆದ್ದಾರಿ - 39
ರಾಜ್ಯ ಹೆದ್ದಾರಿ ಬೆಂಗಳೂರನ್ನು ಹೆಸರುಘಟ್ಟದೊಡನೆ
ಸಂಪರ್ಕಿಸುವ ರಸ್ತೆ :: 13.40

47) ರಾಜ್ಯ ಹೆದ್ದಾರಿ - 40
ರಾಜ್ಯ ಹೆದ್ದಾರಿ ಬಳ್ಳಾರಿಯನ್ನು ಕುಡುತಿಣಿ ಹರಪನಹಳ್ಳಿ
ಯೊಡನೆ ಸಂಪರ್ಕಿಸುವ ರಸ್ತೆ ಸಂಡೂರು ಕೂಡ್ಲಿಗಿ
ಹರಪನಹಳ್ಳಿ ಕೊಟ್ಟುರು ಸಂಡೂರು ಕೋರಂಗಲ್ ರಸ್ತೆ :: 99.40

48) ರಾಜ್ಯ ಹೆದ್ದಾರಿ - 41
ರಾಜ್ಯ ಹೆದ್ದಾರಿ ಶಿರಾಡಾನ್ ಗ್ರಾಮ (ಮಹಾರಾಷ್ಟ್ರ ರಾಜ್ಯದ
ಗಡಿಯ ಪಂಡರಾಪುರ ಲಿಂಗಸೂಗೂರನ್ನು ಸಂಪರ್ಕಿಸುವ
ರಸ್ತೆ ಗಲ್ಕಿ ಇಂಡಿ ಹೂವಿನಹಪ್ಪರಗಿ ಮುದ್ದೇಬಿಹಾಳ ಮತ್ತು
ನಾರಾಯಣಪುರ ಡ್ಯಾಂ ಮುಖಾಂತರ :: 190.60

49) ರಾಜ್ಯ ಹೆದ್ದಾರಿ - 41 ಎ ರಾಜ್ಯ ಹೆದ್ದಾರಿ
ಮುದ್ದೆ ಬಿಹಾಳ್ನಿಂದ ಹುನಗುಂಡಗೆ :: 31.20

50) ರಾಜ್ಯ ಹೆದ್ದಾರಿ - 41 ಬಿ
ರಾಜ್ಯ ಹೆದ್ದಾರಿ ರಾಜ್ಯ ಹೆದ್ದಾರಿ 41ನ್ನು ರಾಹೆ
13ನ್ನು ಸಂಪರ್ಕಿಸುವ ರಸ್ತೆ ಹೂವಿನಹಡರಗಿ ಬಸವನ

ಬಾಗೇವಾಡಿ ಮತ್ತು ಮನೆಗುಳಿ ಮುಖಾಂತರ :: 33.30

51) ರಾಜ್ಯ ಹೆದ್ದಾರಿ - 42
ರಾಜ್ಯ ಹೆದ್ದಾರಿ ಅಂಕೋಲವನ್ನು ಜೋಳದರ ಗ್ರಾಮ ಆಂದ್ರಗಡಿಯ ಯಲ್ಲಾಪುರ ಕಲ್ಘಟಗಿ ಹುಬ್ಬಳ್ಳಿ ಗಡಿಗೆ ಕೊಪ್ಪಳ ಹೊಸಪೇಟೆ ಮತ್ತು ಬಳ್ಳಾರಿಯ ಮುಖಾಂತರ. :: 357.90

52) ರಾಜ್ಯ ಹೆದ್ದಾರಿ - 42 ಎ
ರಾಜ್ಯ ಹೆದ್ದಾರಿ 48ನ್ನು ಗಂಗಾವತಿಯೊಡನೆ ಸಂಪರ್ಕಿಸುವ ರಸ್ತೆ :: 8.00

53) ರಾಜ್ಯ ಹೆದ್ದಾರಿ - 48
ರಾಜ್ಯ ಹೆದ್ದಾರಿ ಕಮುಟಾವನ್ನು ಕೊಡಮಡುಗೆ ಸಂಪರ್ಕಿಸುವ ರಸ್ತೆ (ಆಂಧ್ರಗಡಿಯ ದೊಡ್ಡಂಗೆ) ಸಿದ್ಧಾಪುರ ಸೊರಬ ಶಿಕಾರಿಪುರ ಹೊನ್ನಾಳಿ ಬಸವಪಟ್ಟಣ ಚಿತ್ರದುರ್ಗ ಚಳ್ಳಕೆರೆ ಮತ್ತು ಪಾವಗಡ ಮುಖಾಂತರ. :: 384.00

54) ರಾಜ್ಯ ಹೆದ್ದಾರಿ - 50
ರಾಜ್ಯ ಹೆದ್ದಾರಿ ಚಿತ್ರದುರ್ಗವನ್ನು ಭದ್ರಾವತಿಯೊಡನೆ ಸಂಪರ್ಕಿಸುವ ರಸ್ತೆ ಹೊಳಲ್ಕೆರೆ ಚೆನ್ನಗಿರಿ (ಚಿತ್ರದುರ್ಗ ಭದ್ರಾವತಿ ರಸ್ತೆ) ಮಾರ್ಗವಾಗಿ :: 98.40

55) ರಾಜ್ಯ ಹೆದ್ದಾರಿ - 52
ರಾಜ್ಯ ಹೆದ್ದಾರಿ ಆಗುಂಬೆಯನ್ನು ಬೈಂದೂರಿಗೆ ಸಂಪರ್ಕಿಸುವ ರಸ್ತೆ ರಾಷ್ಟ್ರೀಯ ಹೆದ್ದಾರಿ 17 ರಲ್ಲಿ :: 88.80

56) ರಾಜ್ಯ ಹೆದ್ದಾರಿ -57
ರಾಜ್ಯ ಹೆದ್ದಾರಿ ಬಿಳಿಗೆರೆಯನ್ನು ಸರಿಕೆರೆಗೆ ಸಂಪರ್ಕಿಸುವ ರಸ್ತೆ ಕೃಷ್ಣರಾಜ ಸಾಗರ ಹೊಳೇನರಸೀಪುರ ಹಾಸನ ಬೇಲೂರು ಮತ್ತು ಚಿಕ್ಕಮಗಳೂರು ಮಾರ್ಗವಾಗಿ :: 204.95

57) ರಾಜ್ಯ ಹೆದ್ದಾರಿ -68
ರಾಜ್ಯ ಹೆದ್ದಾರಿ ಮೂಡಿಗೆರೆಯನ್ನು ರಾಜ್ಯದ ಗಡಿಗೆ ಸಂಪರ್ಕಿಸುವ ರಸ್ತೆ ಆಂಧ್ರ ವೆಂಕಟುಗಿಕೋಟೆಗೆ ಸೇರುವ ರಸ್ತೆ ಬೇಲೂರು ಹಳೇಬೀಡು ಬಾಣಾವರ ಹುಳಿಯಾರು ಗೌರಿಬಿದನೂರು ಚಿಕ್ಕಬಳ್ಳಾಪುರ ಚಿಂತಾಮಣಿ ಮುಳಬಾಗಿಲು ಮುಖಾಂತರ ಹೋಗುವ ರಸ್ತೆ. :: 389.80

58) ರಾಜ್ಯ ಹೆದ್ದಾರಿ -63
ರಾಜ್ಯ ಹೆದ್ದಾರಿ ಬಿಜಾಪುರವನ್ನು ರಾಷ್ಟ್ರೀಯ ಹೆದ್ದಾರಿ 13ನ್ನು ಹುಬ್ಬಳ್ಳಿಯನ್ನು ರಾಹೆ 4ರಲ್ಲಿ ನರಗುಂದ ನವಲಗುಂದಾ ಮುಖಾಂತರ ಹೋಗುವ ರಸ್ತೆ. :: 197.10

59) ರಾಜ್ಯ ಹೆದ್ದಾರಿ -64
ರಾಜ್ಯ ಹೆದ್ದಾರಿ ಕದೂರನ್ನು ಬಂಟ್ವಾಳದೊಡನೆ ಸಂಪರ್ಕಿಸುವ

ರಸ್ತೆ ಚಿಕ್ಕಮಗಳೂರು ಮೂಡಿಗೆರೆ ಬೆಳ್ತಂಗಡಿ ಮಾರ್ಗ
ವಾಗಿ ಸೇರುವ ರಸ್ತೆ. :: 167.10

60) ರಾಜ್ಯ ಹೆದ್ದಾರಿ -64 ಎ
ರಾಜ್ಯ ಹೆದ್ದಾರಿ ಬೆಳ್ತಂಗಡಿಯನ್ನು ಮುಲ್ಕಿಯೊಡನೆ
ಸಂಪರ್ಕಿಸುವ ರಸ್ತೆ ಮೂಡಬಿದ್ರಿಯ ಮುಖಾಂತರ :: 57.40

61) ರಾಜ್ಯ ಹೆದ್ದಾರಿ -65
ರಾಜ್ಯ ಹೆದ್ದಾರಿ ಬಿಜಾಪುರವನ್ನು ರಾ ಹೆ 13ರಲ್ಲಿ
ಧಾರವಾಡವನ್ನು ರಾಹೆ 4ರಲ್ಲಿಯೂ ಸಂಪರ್ಕಿಸುವ ರಸ್ತೆ.
ಜಮಖಂಡಿ ಮುದೋಳ್ ಲೋಕಾಪುರ ರಾಮದುರ್ಗ
ಸವದತ್ತಿ ಮುಖಾಂತರ :: 211.90

62) ರಾಜ್ಯ ಹೆದ್ದಾರಿ -66
ರಾಜ್ಯ ಹೆದ್ದಾರಿ ಪಡುಬಿದ್ರಿಯನ್ನು ಕೊಟ್ಟಿಗೆ ಹಾರದೊಡನೆ
ಸಂಪರ್ಕಿಸುವ ರಸ್ತೆ ಕಾರ್ಕಳ ಬಡಗೋವಿ ಮಲ್ಲೇಶ್ವರ ಕಳಸ
ಮೂಗಾಂಡಿಯ ಮುಖಾಂತರ. :: 149.50

63) ರಾಜ್ಯ ಹೆದ್ದಾರಿ -66 ಎ
ರಾಜ್ಯ ಹೆದ್ದಾರಿ 66ನ್ನು ಬಿಳಮಂಡೆಯ ಹತ್ತಿರ
ಮಂಗಳೂರಿಗೆ ಹೋಗುವ ರಸ್ತೆಯನ್ನು ರಾ ಹೆ
17 ರಲ್ಲಿ ಸೇರುವ ರಸ್ತೆ ಕಟೀಲು ಬಾಬ್ವೆ ಮುಖಾಂತರ:: 40.70

64) ರಾಜ್ಯ ಹೆದ್ದಾರಿ 68
ರಾಜ್ಯ ಹೆದ್ದಾರಿ ತುಮಕೂರನ್ನು ರಾಜ್ಯ ಹೆದ್ದಾರಿ
4ರಲ್ಲೂ ಹೊನ್ನಾವರವನ್ನು ರಾ ಹೆ 17 ರಲ್ಲಿಯೂ
ಸಂಪರ್ಕಿಸುವ ರಸ್ತೆ ಗುಬ್ಬಿ ತಿಪಟೂರು ಅರಸೀಕೆರೆ
ಕಡೂರು ತರೀಕೆರೆ ಭದ್ರಾವತಿ ಶಿವಮೊಗ್ಗ ಸಾಗರ
ತಾಳಗುಪ್ಪ ಮುಖಾಂತರ :: 380.33

65) ರಾಜ್ಯ ಹೆದ್ದಾರಿ -68 ಎ
ರಾಜ್ಯ ಹೆದ್ದಾರಿ ತಿಪಟೂರನ್ನು ಹಾಸನದೊಡನೆ ರಾಹೆ
48ರಲ್ಲಿ ಸಂಪರ್ಕಿಸುವ ರಸ್ತೆ :: 49.00

66) ರಾಜ್ಯ ಹೆದ್ದಾರಿ -69
ರಾಜ್ಯ ಹೆದ್ದಾರಿ ಕುಮಟಾವನ್ನು ರಾಹೆ 4 ರೊಡನೆ
ಸಂಪರ್ಕಿಸುವ ರಸ್ತೆ ಸಿರಿಸಿ ಮುಂಡಗೋಲು ಮತ್ತು
ಕಡಪಾ ಮುಖಾಂತರ :: 189.80

67) ರಾಜ್ಯ ಹೆದ್ದಾರಿ 14
ರಾಜ್ಯ ಹೆದ್ದಾರಿ ನೆಲಮಂಗಲವನ್ನು ರಾ ಹೆ 4 ರಲ್ಲಿ
ಚಿಕ್ಕಬಳ್ಳಾಪುರವನ್ನು ರಾ ಹೆ 7 ರಲ್ಲಿ ಸಂಪರ್ಕಿಸುವ ರಸ್ತೆ
(ದೊಡ್ಡಬಳ್ಳಾಪುರದ ಮುಖಾಂತರ). :: 62.80

68) ರಾಜ್ಯ ಹೆದ್ದಾರಿ 74 ಎ
ರಾಜ್ಯ ಹೆದ್ದಾರಿ ನದಿಯನ್ನು ಬೆಂಗಳೂರಿನೊಡನೆ ಸಂಪರ್ಕಿ

	ಸುವ ರಸ್ತೆ ದೇವನಹಳ್ಳಿ ಮುಖಾಂತರ (ದೇವನಹಳ್ಳಿಯಿಂದ ಬೆಂಗಳೂರಿಗೆ)	::	14.60
69)	ರಾಜ್ಯ ಹೆದ್ದಾರಿ 62 ರಾಜ್ಯ ಹೆದ್ದಾರಿ ಹೊಸಕೋಟೆಯನ್ನು ರಾ ಹೆ 6ರಲ್ಲಿ ಗೌನಪಲ್ಲಿಯೊಡನೆ ಸಂಪರ್ಕಿಸುವ ರಸ್ತೆ ಮುಂದಕ್ಕೆ ಆಂಧ್ರಪ್ರದೇಶದ ಕಡಪದೊಡನೆ ಚಿಂತಾಮಣಿಯ ಮೂಲಕ ಸೇರುವ ರಸ್ತೆ	::	87.60
70)	ರಾಜ್ಯ ಹೆದ್ದಾರಿ 86 ರಾಜ್ಯ ಹೆದ್ದಾರಿ ಬೆಂಗಳೂರನ್ನು ಮೈಸೂರಿನೊಡನೆ ಸಂರ್ಪಕಿಸುವ ರಸ್ತೆ ಕನಕಪುರ ಮಳವಳ್ಳಿ ಮತ್ತು ಬನ್ನೂರು ಮೂಲಕ	::	147.50
71)	ರಾಜ್ಯ ಹೆದ್ದಾರಿ 86 ಎ ರಾಜ್ಯ ಹೆದ್ದಾರಿ ಬೆಂಗಳೂರನ್ನು ತಮಿಳುನಾಡು ರಾಜ್ಯ ಗಡಿಯನ್ನು ಸೇರುವ ರಸ್ತೆ ಬನ್ನೇರುಘಟ್ಟ ಆನೇಕಲ್ ಮುಖಾಂತರ	::	48.70
72)	ರಾಜ್ಯ ಹೆದ್ದಾರಿ 86 ಬಿ ರಾಜ್ಯ ಹೆದ್ದಾರಿ 3 ಅನ್ನು ಕನಕಪುರ ಎಂ.ಎ. ಸಂಗಮಕ್ಕೆ ಹೋಗುವ ರಸ್ತೆಯ ಹತ್ತಿರ ಸೇರುವ ರಸ್ತೆ	::	30.10
73)	ರಾಜ್ಯ ಹೆದ್ದಾರಿ 88 ರಾಜ್ಯ ಹೆದ್ದಾರಿ ಮೈಸೂರನ್ನು ಬಂಟ್ವಾಳದೊಡನೆ ಸಂಪರ್ಕಿಸುವ ರಸ್ತೆ ಹುಣಸೂರು ಪೆರಿಯಾಪಟ್ಟಣ ಕುಶಾಲನಗರ ಶುಂಠಿಕೊಪ್ಪಲು ಮಡಿಕೆರೆ ಸೂಳ್ಯ	::	22.40
	ಮತ್ತು ಪುತ್ತೂರು ಮುಖಾಂತರ ಹೋಗುವ ರಸ್ತೆ.		
74)	ರಾಜ್ಯ ಹೆದ್ದಾರಿ 88 ಎ ರಾಜ್ಯ ಹೆದ್ದಾರಿ ಹುಣಸೂರನ್ನು ವಿರಾಜಪೇಟೆಯೊಡನೆ ಸಂಪರ್ಕಿಸುವ ರಸ್ತೆ.	::	55.60
75)	ರಾಜ್ಯ ಹೆದ್ದಾರಿ 88 ಬಿ ರಾಜ್ಯ ಹೆದ್ದಾರಿ ಮಡಿಕೇರಿಯನ್ನು ಮುಕುಟ ಗ್ರಾಮದೊಡನೆ ಸಂಪರ್ಕಿಸುವ ರಸ್ತೆ (ಕೇರಳ ರಾಜ್ಯ ಗಡಿಯಿಂದ ಖಾನಾಪುರಕ್ಕೆ ಹೋಗುವ ರಸ್ತೆ.	::	69.70
	ಸಿದ್ದಾಪುರ ಮತ್ತು ವಿರಾಜಪೇಟೆಯ ಮೂಲಕ.		
76)	ರಾಜ್ಯ ಹೆದ್ದಾರಿ 88 ಸಿ ರಾಜ್ಯ ಹೆದ್ದಾರಿ ಕಲ್ಲಡಕವನ್ನು ಕೇರಳ ರಾಜ್ಯದ ಗಡಿಯಿಂದ ಖಾನಾಪುರಕ್ಕೆ	::	26.40
77)	ರಾಜ್ಯ ಹೆದ್ದಾರಿ 93 ರಾಜ್ಯ ಹೆದ್ದಾರಿ ಖಾನಾಪುರವನ್ನು ರಾ ಹೆ 4.00 ನಲ್ಲೂ ತಾಳಗುಪ್ಪ ದೊಡನೆ ಸಂಪರ್ಕಿಸುವ ರಸ್ತೆ ಹುಳಿಯೂರು ಯಲ್ಲಾಪುರ ಸಿರ್ಸಿ ಮತ್ತು ಸಿದ್ದಾಪುರವನ್ನು		

	ಸಂಪರ್ಕಿಸುವ ರಸ್ತೆ.	::	195.80
78)	ರಾಜ್ಯ ಹೆದ್ದಾರಿ 95 ರಾಜ್ಯ ಹೆದ್ದಾರಿ ಖಾನಾಪುರವನ್ನು ಸದಾಶಿವಗಡಕ್ಕೆ ಸಂಪರ್ಕಿಸುವ ರಸ್ತೆ ಲೋಂಡಾ ಮತ್ತು ಸೂಪದ ಮುಖಾಂತರ	::	120.20
	ಒಟ್ಟು ರಾಜ್ಯ ಹೆದ್ದಾರಿಗಳ ಉದ್ದ		11288.00

ಹಾರಂಗಿ ಜಲಾಶಯದ ಕೆಳಭಾಗದಲ್ಲಿರುವ ಜನರಿಗೆ ಪುನರ್ವಸತಿ

9 - ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರ ಪೇಟೆ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾರಂಗಿ ಜಲಾಶಯದ ಕೆಳಭಾಗದಲ್ಲಿ ಇರುವವರಿಗೆ ಪುನರ್ವಸತಿ ಕಲ್ಪಿಸಲು ಸರ್ಕಾರ ಕ್ರಮ ಕೈಗೊಂಡಿದೆಯೆ ?

ಆ) ಹಾಗಿದ್ದಲ್ಲಿ ಇವರಿಗೆ ಯಾವಾಗ ಈ ಸೌಕರ್ಯವನ್ನು ಕಲ್ಪಿಸಲಾಗುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಮತ್ತು ಆ) ಹಾರಂಗಿ ಜಲಾಶಯದ ಕೆಳಭಾಗದಲ್ಲಿ 194 ಕಾರ್ಮಿಕ ಕುಟುಂಬಗಳು ಅಲ್ಲಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ. ಇವರುಗಳು ಜಲಾಶಯದ ಮುಳುಗಡೆ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ಖಾಯಂ ಪುನರ್ವಸತಿ ಕಲ್ಪಿಸುವ ಪ್ರಸ್ತಾವೆ ಇರುವುದಿಲ್ಲ. ಆದರೂ ಸಹ, ಮಾನವೀಯತೆ ದೃಷ್ಟಿಯಿಂದ ಈ ಜನರಿಗೆ 20 ಅಡಿ X 30 ಅಡಿ ಅಳತೆಯ 194 ನಿವೇಶನಗಳನ್ನು ಗುತ್ತಿಗೆಯ ಆಧಾರದ ಮೇಲೆ ಹಾರಂಗಿ ಜಲಾಶಯದ ಕೆಳಭಾಗದ "ರಿಸ್ಟ್ರಿಕ್ಟೆಡ್ ಏರಿಯಾ" ದಲ್ಲಿ ನೀಡುವ ವಿಚಾರವು ಕಂದಾಯ ಇಲಾಖೆವತಿಯಿಂದ ಪರಿಶೀಲನೆಯಲ್ಲಿದೆ.

ದಾಬಸ್ಪೇಟೆ ಕೊರಟಗೆರೆ ರಸ್ತೆಯಲ್ಲಿ ರೈಲ್ವೆ ಲೈನ್ ಮೇಲೆ ಓವರ್ ಬ್ರಿಡ್ಜ್

167 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾಬಸ್ಪೇಟೆ - ಕೊರಟಗೆರೆ ರಸ್ತೆಯಲ್ಲಿ ರೈಲ್ವೆ ಲೈನ್ ಮೇಲೆ ಓವರ್ ಬ್ರಿಡ್ಜ್ ಕಟ್ಟಲು ಲೋಕೋಪಯೋಗಿ ಸಚಿವರು ಕಳೆದ ವಿಧಾನ ಸಭೆಯ ಅಧಿವೇಶನದದಲ್ಲಿ ಆಶ್ವಾಸನೆ ಕೊಟ್ಟಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಈ ಕೆಲಸ ತ್ವರಿತವಾಗಿ ಪ್ರಾರಂಭಿಸಲು ಸರ್ಕಾರ ಏನು ಕ್ರಮತೆಗೆದುಕೊಳ್ಳುವುದೇ ?

ಇ) ಈ ಕೆಲಸ ಪೂರೈಸಲು ಎಷ್ಟು ಕಾಲಾವಕಾಶ ಬೇಕಾಗುವುದು ?

ಶ್ರೀ ಕೆ.ಹೆಚ್.ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು)

ಅ) ಪರಿಶೀಲಿಸಲಾಗುವುದು ಎಂದು ಉತ್ತರ ಕೊಡಲಾಗಿದೆ

ಆ) ಈ ವಿಷಯದ ಬಗ್ಗೆ ರೈಲ್ವೆ ಇಲಾಖೆಯವರಿಂದ ರೇಖಾ ಅಂದಾಜನ್ನು ತಯಾರಿಸಲಾಗಿದೆ. ಈ ಅಂದಾಜು ಪರಿಶೀಲನೆಯಲ್ಲಿದೆ

ಇ) ವಿಧಿವಿಧಾನಗಳನ್ನು (ಫಾರ್ಮಾಲಿಟೀಸ್) ಪಾಲಿಸಿ, ಹಣ ಲಭ್ಯತೆಯ ಮೇರೆಗೆ ಈ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ಈ ಕಾಮಗಾರಿಯನ್ನು ರೈಲ್ವೆ ಇಲಾಖೆಯವರು ನಿರ್ವಹಿಸಬೇಕಾಗಿರುವುದರಿಂದ ಕೆಲಸ ಪೂರೈಸಲು ಎಷ್ಟು ಕಾಲ ಬೇಕಾಗುತ್ತದೆ ಎಂಬುದನ್ನು ನಿಖರವಾಗಿ ತಿಳಿಸಲಾಗುವುದಿಲ್ಲ

ವಿದ್ಯುತ್ - ಸಬ್ ಸ್ಟೇಷನ್ಗಳ ಕಾಮಗಾರಿ

343 - ಶ್ರೀ ಎ.ರುಕ್ಮಯ್ಯ ಪೂಜಾರಿ.(ವಿಟ್ಲ) : ಮಾನ್ಯ ಇಂಧನ ರಾಜ್ಯ ಸಚಿವರು : ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಜೂರಾಗಿ ಪೂರ್ತಿ ಕಾಮಗಾರಿ ಕೆಲಸ ಆಗದೇ ಇರುವ ವಿದ್ಯುತ್ ಸಬ್ ಸ್ಟೇಷನ್ಗಳು ಎಷ್ಟು?

ಆ) ವಿಟ್ಲ ವಿದ್ಯುತ್ ಸಬ್ ಸ್ಟೇಷನ್ ಎಂದಿನಿಂದ ಕಾರ್ಯಾಚರಣೆಯಲ್ಲಿದೆ. ಸದರಿ ಸಬ್ಸ್ಟೇಷನ್ನಲ್ಲಿ ಭರ್ತಿಯಾಗದೇ ಉಳಿದಿರುವ ಹುದ್ದೆಗಳ ಸಂಖ್ಯೆ ಎಷ್ಟು?

ಇ) ಹಾಗಿದ್ದಲ್ಲಿ ಸದರಿ ವಿಷಯಗಳಲ್ಲಿ ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ?

ಶ್ರೀ ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು)

ಅ) ವಿದ್ಯುತ್ ಸಬ್ ಸ್ಟೇಷನ್ಗಳ ಸಂ.5

ಆ) ವಿಟ್ಲ ವಿದ್ಯುತ್ ಸಬ್ ಸ್ಟೇಷನ್ 12.6.93ರಿಂದ ಕಾರ್ಯಾಚರಣೆಯಲ್ಲಿದೆ. ಸದರೀ ಸಬ್ ಸ್ಟೇಷನ್ನಲ್ಲಿ ಹಾಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ 8.

ಇ) ಮುಂಗಾರು ಮಳೆ ಕಳೆದ ನಂತರ ನಿರ್ಮಾಣ ಕಾರ್ಯವನ್ನು ಚುರುಕು ಗೊಳಿಸ ಆದಷ್ಟು ಶೀಘ್ರಗತಿಯಲ್ಲಿ ಪೂರ್ಣಗೊಳಿಸಲಾಗುವುದು. ವಿಟ್ಲ ವಿದ್ಯುತ್ ಸಬ್ ಸ್ಟೇಷನ್ನಲ್ಲಿ ಹಾಲಿ ಖಾಲಿ ಇರುವ ಹುದ್ದೆಗಳನ್ನು ಆದಷ್ಟು ಜಾಗ್ರತೆ ಭರ್ತಿ ಮಾಡಲಾಗುವುದು.

ರಟ್ಟೀ ಹಳ್ಳಿ ಬ್ಯಾರೇಜ್ ನಿರ್ಮಾಣ

338 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲಾ ಹಿರೇಕೆರೂರು ರಟ್ಟೆಹಳ್ಳಿ ಗ್ರಾಮದ ಹತ್ತಿರ ಕುಮದ್ವತಿ ನದಿಗೆ ಬ್ಯಾರೇಜ್ ನಿರ್ಮಾಣ ಮಾಡಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಆ) ಈ ಕಾಮಗಾರಿಯ ಅಂದಾಜು ಮೊತ್ತವೆಷ್ಟು? 1994-95ರ ಆಯವ್ಯಯದಲ್ಲಿ ಒದಗಿಸಿರುವ ಹಣವೆಷ್ಟು?

ಇ) ಈ ಕಾಮಗಾರಿಯನ್ನು ಪ್ರಾರಂಭ ಮಾಡದೇ ಇದ್ದಲ್ಲಿ, ಈಗಾಗಲೇ ಪೂರ್ಣಗೊಂಡಿರುವ ಯಲಿವಾಳ ಏತ ನೀರಾವರಿ ಯೋಜನೆಗೆ ಸಾಕಷ್ಟು ನೀರು ಲಭ್ಯವಿಲ್ಲದೆ ಸದರಿ ಏತ ನೀರಾವರಿ ಯೋಜನೆ ನಿರುಪಯುಕ್ತ ಆಗುವ ಬಗ್ಗೆ ಸರ್ಕಾರ ಗಮನಿಸಿದೆಯೇ; ಹಾಗಿದ್ದಲ್ಲಿ ಸದರಿ ಯೋಜನೆಯ ಬ್ಯಾರೇಜ್ ನಿರ್ಮಾಣಕ್ಕೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ.ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಹಿರೇಕೆರೂರು ತಾಲ್ಲೂಕು ರಟ್ಟೆಹಳ್ಳಿ ಗ್ರಾಮದ ಹತ್ತಿರ ಕುಮದ್ವತಿ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಅಂದಾಜು ಪಟ್ಟೆ ಸರ್ಕಾರದ ಪರಿಶೀಲನೆಯಲ್ಲಿದೆ

ಆ) ಅಂದಾಜು ಮೊತ್ತ 96.60 ಲಕ್ಷ ರೂ.ಗಳು 94-95ನೇ ಸಾಲಿನ ಆಯವ್ಯಯದಲ್ಲಿ ಈ ಕಾಮಗಾರಿಗೆ 1.00 ಲಕ್ಷ ರೂ.ಅನುದಾನವನ್ನು ಒದಗಿಸಲಾಗಿದೆ.

ಇ) ಗಮನಿಸಿದ, ರಟ್ಟೆಹಳ್ಳಿ ಬ್ಯಾರೇಜ್ ನಿರ್ಮಾಣದಿಂದ ಎಲವಾಳ ಏತ ನೀರಾವರಿ ಯೋಜನೆಗೆ ಈಗ ಕೊಡುತ್ತಿರುವ ಮುಂಗಾರು ಬೆಳೆಗಳಿಗೆ ನೀರು ಪೂರೈಸುವುದರ ಜೊತೆಗೆ ಹಿಂಗಾರು ಬೆಳೆಗೂ ನೀರು ಪೂರೈಸಲು ಸಾಧ್ಯವಾಗುವುದು.

ಧಾರವಾಡ ಜಿಲ್ಲೆ ಹಿರೇಕೆರೂರು ತಾಲ್ಲೂಕು ಮುನ್ಸೀಫ್ ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಕಟ್ಟಡ ಪೂರ್ಣಗೊಳಿಸುವ ಬಗ್ಗೆ

336-ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಿರೇಕೆರೂರು ತಾಲ್ಲೂಕಿನ ಮುನ್ಸೀಫ್ ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಕಟ್ಟಡದ ಕೆಲಸ ಪ್ರಾರಂಭಿಸಿ ಎಷ್ಟು ವರ್ಷಗಳಾದವು ?

ಆ) ಸದರಿ ಕಟ್ಟಡದ ಕೆಲಸ ಯಾವ ಹಂತದಲ್ಲಿದೆ ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಐದು ವರ್ಷಗಳು

ಆ) ಸದರಿ ಕಟ್ಟಡ ಮುಕ್ತಾಯ ಹಂತದಲ್ಲಿದ್ದು, ಡಿಸೆಂಬರ್ 1994ರ ಅಂತ್ಯದೊಳಗೆ ಪೂರ್ಣಗೊಳಿಸಲು ಉದ್ದೇಶಿಸಿದೆ.

ಹುಕ್ಕೇರಿ ತಾಲ್ಲೂಕಿಗೆ ವಿದ್ಯುಚ್ಛಕ್ತಿ ಮಂಜೂರಾತಿ

101-ಶ್ರೀ ಉಮೇಶ್ .ವಿ. ಕತ್ತಿ (ಹುಕ್ಕೇರಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಕ್ಕೇರಿ ತಾಲ್ಲೂಕಿನ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘದವರು ವಿದ್ಯುತ್ ಸರಬರಾಜು ಸರಿಪಡಿಸಲು 5 ಸಬ್-ಸ್ಟೇಷನ್ ಸ್ಥಾಪಿಸಲು ಸರ್ಕಾರಕ್ಕೆ ಅರ್ಜಿ ಸಲ್ಲಿಸಿರುವರೇ ?

ಆ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಎಸ್. ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು)

ಅ) ಹುಕ್ಕೇರಿ ತಾಲ್ಲೂಕು ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘವು 3 ಸಬ್-ಸ್ಟೇಷನ್ ಸ್ಥಾಪಿಸಲು ಕವಿಮಂಗೆ ಅರ್ಜಿ ಸಲ್ಲಿಸಿದೆ.

ಆ) ಈ ಸಂಬಂಧ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಯೋಜನಾ ವರದಿಗೆ ಮಂಡಳಿಯ ತಾಂತ್ರಿಕ ಸಮಿತಿಯ ಅನುಮೋದನೆ ದೊರಕಬೇಕಾಗುತ್ತದೆ.

ಕೊಟಬಾಗಿ ಏತ ನೀರಾವರಿ ಯೋಜನೆ

104-ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಟಬಾಗಿ ಏತ ನೀರಾವರಿ ಯೋಜನೆ ಮಂಜೂರಾದದ್ದು ಯಾವಾಗ, ಕೆಲಸ ಪ್ರಾರಂಭವಾಗಿದೆಯೇ; ಮುಖ್ಯ ಮಂತ್ರಿಗಳು 3 ವರ್ಷಗಳಲ್ಲಿ ಹಂತ ಹಂತವಾಗಿ ಯೋಜನೆ ಪೂರ್ಣಗೊಳಿಸಲಾಗುವುದು ಎಂಬ ಆಶ್ವಾಸನೆ ನೀಡಿರುವುದು ನಿಜವೇ, ಹಾಗಿದ್ದಲ್ಲಿ ಈ ಯೋಜನೆ ಯಾವ ಹಂತದಲ್ಲಿದೆ ?

ಆ) ವಾಗ್ದಾನದ ಪ್ರಕಾರ ಪ್ರಥಮ ಹಂತದ ಹಣ ಬಿಡುಗಡೆಯಾಗಿದೆಯೇ

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) 31-10-1992 ರಲ್ಲಿ ಮಂಜೂರಾಗಿದೆ. ಕೆಲಸ ಪ್ರಾರಂಭವಾಗಿಲ್ಲ ಯೋಜನೆಯನ್ನು ಶೀಘ್ರದಲ್ಲಿ ಪ್ರಾರಂಭ ಮಾಡಲಾಗುತ್ತದೆ

ಆ) ಘಟಪ್ರಭಾ ಯೋಜನೆ ಮೂರನೇ ಹಂತಕ್ಕೆ ಒದಗಿಸಲಾಗಿರುವ ಅನುದಾನದಲ್ಲಿ ಈ ಯೋಜನೆಯ ವೆಚ್ಚವನ್ನು ಭರಿಸಲಾಗುವುದು

ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತನೆ

462 -ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲಾಗುವುದು;

ಆ) ಇವುಗಳಿಗೆ ಕೇಂದ್ರದ ಮಂಜೂರಾತಿ ದೊರೆತಿದೆಯೇ;

ಇ) ಇವುಗಳನ್ನು ಹೊರತುಪಡಿಸಿ ರಾಜ್ಯಕ್ಕೆ ಹೊಸ ರಾಷ್ಟ್ರೀಯ ಹೆದ್ದಾರಿಗಳನ್ನು ಮಂಜೂರು ಮಾಡಲಾಗಿದೆಯೇ;

ಈ) ಮಾಡಿದ್ದಲ್ಲಿ, ಯಾವ ಮಾರ್ಗಗಳನ್ನು ಹೊಸ ರಾಷ್ಟ್ರೀಯ ಹೆದ್ದಾರಿಗಳೆಂದು ಪರಿಗಣಿಸಲಾಗಿದೆ;

ಉ) ಇವುಗಳಲ್ಲಿ ಎಷ್ಟು ಮಾರ್ಗಗಳಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿವೆ;

ಊ) ಇದಕ್ಕೆ ಕೇಂದ್ರ ಸರ್ಕಾರದಿಂದ ಬಂದಿರುವ ಹಣವೆಷ್ಟು?

ಶ್ರೀ ಕೆ.ಹೆಚ್.ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಪಟ್ಟಿಯಲ್ಲಿ ಲಗತ್ತಿಸಲಾದ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಘೋಷಿಸಲು ಕೇಂದ್ರ ಸರ್ಕಾರವನ್ನು ಕೇಳಲಾಗಿದೆ

ಆ) - ಇಲ್ಲ -

ಇ) - ಇಲ್ಲ -

ಈ) - ಉದ್ಭವಿಸುವುದಿಲ್ಲ -

ಉ) - ಉದ್ಭವಿಸುವಿದಿಲ್ಲ -

ಊ) - ಉದ್ಭವಿಸುವುದಿಲ್ಲ -

ಕ್ರಮ ಸಂಖ್ಯೆ	ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಿಸುವಂತೆ ಕೋರಿರುವ ರಾಜ್ಯ ಹೆದ್ದಾರಿಗಳು		ಉದ್ದ (ಕಿ.ಮೀ.)
1)	ಆಂಧ್ರಪ್ರದೇಶದ ಗೂಟಿಯಿಂದ ಗುಂಟಕಲ್ - ಬಳ್ಳಾರಿ - ಹೊಸಪೇಟೆ -ಕೊಪ್ಪಳ - ಗದಗ್ - ಹುಬ್ಬಳ್ಳಿ - ಕಾರವಾರ (ಇವುಗಳನ್ನು ಸೇರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ-17)	::	422
2)	ಬೆಂಗಳೂರು - ಮೈಸೂರು - ನಂಜನಗೂಡು - ಗುಂಡ್ಲುಪೇಟೆ - ಊಟಿ - ಕೊಯಮತ್ತೂರು (ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: 47 ತಮಿಳುನಾಡಿನಲ್ಲಿ ಸೇರುವಂತೆ)	::	220
3)	ಮೈಸೂರು - ಶ್ರೀರಂಗಪಟ್ಟಣ - ನಾಗಮಂಗಳ - ಚಿಕ್ಕನಾಯಕನಹಳ್ಳಿ - ಹುಳಿಯಾರ್ -ಹಿರಿಯೂರ್ - ಬಳ್ಳಾರಿ - ಷಹಪುರ ಗುಲ್ಬರ್ಗಾ - ಹುಮ್ನಾಬಾದ್ (ರಾಷ್ಟ್ರೀಯ ಹೆದ್ದಾರಿ 9ನ್ನು ಸೇರುವಂತೆ)	::	678

4)	ತುಮಕೂರು - ಅರಸೀಕೆರೆ - ಶಿವಮೊಗ್ಗ - ಸಾಗರ - ಹೊನ್ನಾವರ - (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ)	::	332
5)	ಬೆಂಗಳೂರು - ಮೈಸೂರು - ಮಡಿಕೇರಿ - ಮಂಗಳೂರು (ರಾಷ್ಟ್ರೀಯ ಹೆದ್ದಾರಿ 17 ರಲ್ಲಿ ಸೇರುವಂತೆ)	::	385
6)	ಬೆಳಗಾಂ - ಬಿಜಾಪುರ - ಗುಲ್ಬರ್ಗಾ- ಹುಮ್ನಾಬಾದ್ (ರಾಷ್ಟ್ರೀಯ ಹೆದ್ದಾರಿ 9ನ್ನು ಸೇರುವಂತೆ)	::	364
7)	ಬೆಳಗಾಂ - ಬಾಗಲಕೋಟೆ - ರಾಯಚೂರು - ಮೆಹಬೂಬ್ನಗರ (ಆಂಧ್ರ ಪ್ರದೇಶದಲ್ಲಿ)	::	336
8)	ಚಿತ್ರದುರ್ಗ - ಹೊಳಲ್ಕೆರೆ - ಹೊಸದುರ್ಗ - ಚಿಕ್ಕಮಗಳೂರು - ಮೂಡಿಗೆರೆ - ಬೆಳ್ತಂಗಡಿ - ಬಂಟ್ವಾಳ - ಮಂಗಳೂರು (ರಾಷ್ಟ್ರೀಯ ಹೆದ್ದಾರಿ 17 ರಲ್ಲಿ ಸೇರುವಂತೆ)	::	283
9)	ಧಾರವಾಡ - ಲೋಂಡಾ - ಅನ್ಮೋಡ್ - ಪಣಜಿ (ರಾಷ್ಟ್ರೀಯ ಹೆದ್ದಾರಿ 17 ರಲ್ಲಿ ಸೇರುವಂತೆ)	::	95
10)	ಪಡುಬಿದ್ರಿ - ಕಾರ್ಕಳ - ಶೃಂಗೇರಿ - ತೀರ್ಥಹಳ್ಳಿ - ಶಿಕಾರಿಪುರ - ಶಿರಾಳಕೊಪ್ಪ - ಹುಬ್ಬಳ್ಳಿ - ಬಾಗಲಕೋಟೆ - ಹುನಗುಂದ	::	550
11)	ಶಿರಾ - (ಬೆಂಗಳೂರು - ಪೂನಾ ರಾಷ್ಟ್ರೀಯ ಹೆದ್ದಾರಿ 4) ಮಧುಗಿರಿ - ಗೌರಿಬಿದನೂರ್ - ಚಿಕ್ಕಬಳ್ಳಾಪುರ - ಚಿಂತಾಮಣಿ- ಶ್ರೀನಿವಾಸಪುರ - ಮುಳಬಾಗಿಲು (ಬೆಂಗಳೂರು - ಮದ್ರಾಸ್ ರಾಷ್ಟ್ರೀಯ ಹೆದ್ದಾರಿ ನಂ .4)	::	160
12)	ಚಿತ್ರದುರ್ಗ - ಶಿವಮೊಗ್ಗ - ಸಕಲೇಶಪುರ - ಮಡಿಕೇರಿ ಹಾಗೂ ಕೇರಳದಲ್ಲಿರುವ ತಲ್ಲಿಚೇರಿ	::	325
13)	ಬೆಂಗಳೂರು - ಕನಕಪುರ - ಮಳವಳ್ಳಿ - ನಂಜನಗೂಡು - ಸುಲ್ತಾನಬತ್ತೇರಿ - ಹಾಗೂ ಕೇರಳದಲ್ಲಿರುವ ಕಲ್ಲಿಕೋಟೆ	::	250
	ಒಟ್ಟು ಉದ್ದ		**4400 ಕಿ.ಮೀ.**

ರಾಜ್ಯದ ವಿದ್ಯುತ್ ಯೋಜನೆಗಳನ್ನು ಕಾರ್ಯಗೊಳಿಸುವುದು

287 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಉಪ ಮುಖ್ಯಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ನಾಲ್ಕು ವರ್ಷಗಳಲ್ಲಿ ಎಷ್ಟು ಮಿನಿ ಜಲವಿದ್ಯುತ್ ಹಾಗೂ ಇತರ ಜಲವಿದ್ಯುತ್ ಯೋಜನೆಗಳನ್ನು ಒಪ್ಪಿಗೆಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದೆ. (ವರ್ಷಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಅನುಮತಿ ದೊರೆಯದೆ ಇರುವ ವಿದ್ಯುತ್ ಯೋಜನೆಗಳು ಈಗ ಯಾವ ಹಂತದಲ್ಲಿವೆ?

ಇ) ಇವುಗಳಲ್ಲಿ ಎಷ್ಟು ವಿದ್ಯುತ್ ಯೋಜನೆಗಳಿಗೆ ಕೇಂದ್ರದ ಅನುಮತಿ ದೊರೆತಿದೆ?

ಈ) ಸದರಿ ಅವಧಿಯಲ್ಲಿ ಕೇಂದ್ರ ಸರ್ಕಾರದೊಡನೆ ಈ ವಿಷಯವಾಗಿ ಎಷ್ಟು ಬಾರಿ ವ್ಯವಹರಿಸಲಾಗಿದೆ? ಈ ಎಲ್ಲಾ ವಿದ್ಯುತ್ ಯೋಜನೆಗಳನ್ನು ಎಂದು ಕಾರ್ಯಗತ ಗೊಳಿಸಲಾಗುವುದು?

ಉ) ರಾಜ್ಯದಲ್ಲಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ಕೇಂದ್ರದ ಅನುಮತಿಗಾಗಿ ಕಾಯುತ್ತಿರುವ ವಿದ್ಯುತ್ ಯೋಜನೆಗಳಿಗೆ ಅನುಮತಿ ದೊರಕಿಸಿಕೊಡಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವುದೆ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು)

ಅ) ಕಿರುಜಲವಿದ್ಯುತ್ ಯೋಜನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿಲ್ಲ.

ಆ) ಈ ಕೆಳಕಂಡ ಜಲವಿದ್ಯುತ್ ಯೋಜನೆಗಳನ್ನು ಕೇಂದ್ರ ಸರ್ಕಾರದ ಅನುಮತಿಗಾಗಿ ಕಳುಹಿಸಿ ಕೊಡಲಾಗಿದ್ದು ವಿವರಗಳು ಕೆಳಗಿನಂತಿವೆ.

1) ಸರಪಾಡಿ ಜಲವಿದ್ಯುತ್ ಯೋಜನೆ: ಈ ಯೋಜನೆಗೆ ಡಿಸೆಂಬರ್ 1990ರಲ್ಲಿ ಕೇಂದ್ರ ವಿದ್ಯುತ್ ಪ್ರಾಧಿಕಾರದಿಂದ ಅನುಮತಿ ಬಂದಿದೆ. ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯಿಂದ ಅನುಮತಿ ದೊರೆಯಬೇಕಾದಿದೆ. ಕೇಂದ್ರ ಪರಿಸರ ಇಲಾಖೆಯವರು ಕೇಳಿರುವ ಕೆಲವೊಂದು ವಿವರಗಳನ್ನು ಕಳುಹಿಸಿಕೊಟ್ಟಿದ್ದು ಕೇಂದ್ರ ಸರ್ಕಾರದ ಪರಿಸರ ಅನುಮತಿ ದೊರೆಯ ಬೇಕಾಗಿದೆ.

2) ಶಿವನ ಸಮುದ್ರ ಜಲವಿದ್ಯುತ್ ಯೋಜನೆ: ವಿವರವಾದ ಯೋಜನಾ ವರದಿಯನ್ನು ಕೇಂದ್ರ ವಿದ್ಯುತ್ ಪ್ರಾಧಿಕಾರಕ್ಕೆ ಅಕ್ಟೋಬರ್ 1987ರಲ್ಲಿ ಅನುಮತಿಗಾಗಿ ಕಳುಹಿಸಿಕೊಟ್ಟಿದೆ. ಕೇಂದ್ರ ವಿದ್ಯುತ್ ಪ್ರಾಧಿಕಾರದಿಂದ ಮತ್ತು ಕೇಂದ್ರ ಪರಿಸರ ಇಲಾಖೆಯಿಂದ ಅನುಮತಿ ದೊರೆಯಬೇಕಾಗಿದೆ.

3) ಮಹಾದಾಯಿ ಜಲವಿದ್ಯುತ್ ಯೋಜನೆ: ವಿವರವಾದ ಯೋಜನಾ ವರದಿಯನ್ನು ಕೇಂದ್ರ ವಿದ್ಯುತ್ ಪ್ರಾಧಿಕಾರಕ್ಕೆ ಆಗಸ್ಟ್ 91ರಲ್ಲಿ ಅನುಮತಿಗಾಗಿ ಕಳುಹಿಸಿಕೊಟ್ಟಿದೆ. ಈ ಯೋಜನೆಗೆ ಕೇಂದ್ರ ವಿದ್ಯುತ್ ಪ್ರಾಧಿಕಾರದಿಂದ ಮತ್ತು ಕೇಂದ್ರ ಅರಣ್ಯ ಮತ್ತು ಪರಿಸರ ಇಲಾಖೆಯಿಂದ ಅನುಮತಿ ದೊರೆಯಬೇಕಾಗಿದೆ. ಈ ಯೋಜನೆಯನ್ನು ಕಾರ್ಯಗತಗೊಳಿಸಲು ಬೇಕಾಗಿರುವ ಗೋವಾ ಸರ್ಕಾರದ ಅನುಮತಿಯನ್ನು ಪಡೆಯಲು ಕರ್ನಾಟಕ ರಾಜ್ಯ ಸರ್ಕಾರವು ಮಾತುಕತೆಯನ್ನು ನಡೆಸುತ್ತಿದ್ದು ಪ್ರಗತಿಯಲ್ಲಿದೆ.

ಇ) ಸರಪಾಡಿ ಜಲವಿದ್ಯುತ್ ಯೋಜನೆಗೆ ಮಾತ್ರ ಡಿಸೆಂಬರ್ 1990ರಲ್ಲಿ, ಕೇಂದ್ರ ವಿದ್ಯುತ್ ಪ್ರಾಧಿಕಾರದ ಮಂಜೂರಾತಿ ದೊರೆತಿದೆ. ಮಹಾದಾಯಿ ಮತ್ತು ಶಿವನಸಮುದ್ರದ ಯೋಜನೆಗಳಿಗೆ ಕೇಂದ್ರ ವಿದ್ಯುತ್ ಫ್ರಾಧಿಕಾರದ ಅನುಮತಿ ದೊರೆಯಬೇಕಾಗಿದೆ. ಈಮೇಲೆ ತಿಳಿಸಿರುವ ಎಲ್ಲಾ ಯೋಜನೆಗಳಿಗೂ ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯಿಂದ ಅನುಮತಿ ದೊರೆಯಬೇಕಾಗಿದೆ.

ಈ) ವಿದ್ಯುತ್ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಬೇಕಾದ ಅನುಮತಿಯನ್ನು ಕೊಡಲು ಕೇಂದ್ರ ಸರ್ಕಾರಕ್ಕೆ ಮೇಲಿಂದ ಮೇಲೆ ಕೇಳಿಕೊಳ್ಳಲಾಗಿದೆ. ಕೇಂದ್ರ ಸರ್ಕಾರದ ಅನುಮತಿ ದೊರೆತ ನಂತರ ಈ ಎಲ್ಲಾ ಯೋಜನೆಗಳನ್ನು 8 ಮತ್ತು 9ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಯಗತಗೊಳಿಸಲಾಗುವುದು.

ಉ) ಹಾದು

ರಾಜ್ಯದ ವಿದ್ಯುತ್ ಯೋಜನೆಗಳಿಗೆ ವಿಶ್ವಬ್ಯಾಂಕ್ ಸಾಲ

289-ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ವಿದ್ಯುತ್ ಯೋಜನೆಗಳಿಗೆ ವಿಶ್ವಬ್ಯಾಂಕ್‌ನಿಂದ ಕೇಳಲಾಗಿದ್ದ ನೆರವಿನ ಮೊತ್ತವೆಷ್ಟು?

ಆ) ಈ ಯೋಜನೆಗಳಿಗೆ ನೆರವನ್ನು ನೀಡಲು ವಿಶ್ವಬ್ಯಾಂಕ್ ನಿರಾಕರಿಸಿರುವುದು ನಿಜವೆ, ಕಾರಣವೇನು?

ಇ) ಇತ್ತೀಚೆಗೆ ರಾಜ್ಯದ ಮುಖ್ಯಮಂತ್ರಿಗಳು ತಮ್ಮ ವಿದೇಶ ಪ್ರವಾಸದ ಸಮಯದಲ್ಲಿ ವಿಶ್ವಬ್ಯಾಂಕಿನ ಅಧಿಕಾರಿಗಳ ಜೊತೆ ಈ ವಿಷಯವಾಗಿ ಚರ್ಚೆ ನಡೆಸಿದ್ದಾರೆಯೇ?

ಈ) ವಿಶ್ವಬ್ಯಾಂಕ್ ಸಾಲದ ನೆರವನ್ನು ನಿರಾಕರಿಸಿರುವುದರಿಂದ ರಾಜ್ಯದ ವಿದ್ಯುತ್ ಯೋಜನೆಗಳನ್ನು ಪೂರ್ಣಗೊಳಿಸಲು ಯಾವ ರೀತಿ ಹಣ ಸಂಗ್ರಹಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) 425.36 ಕೋಟಿ ರೂಪಾಯಿಗಳ ಸಾಲದ ನೆರವನ್ನು ಒದಗಿಸಲಾಗಿತ್ತು.

ಆ) ಹೌದು. ನಿರಾಕರಣೆಯ ಕಾರಣಗಳು ಕೆಳಕಂಡಂತಿವೆ.

1)ಶರಾವತಿ ಟೇಲ್ ರೇಸ್ ಸ್ಕೀಮಿಗೆ ಕೇಂದ್ರ (ಭಾರತ ಸರ್ಕಾರ) ಪರಿಸರ ಹಾಗೂ ಅರಣ್ಯ ಇಲಾಖೆಯ ಅನುಮತಿ ದೊರೆಯದಿರುವುದು.

2) ಕರ್ನಾಟಕ ವಿದ್ಯುತ್ ಯೋಜನೆಗಳು - 1ರಡಿಯ ಕದ್ರಾ ಮತ್ತು ಕೊಡಸಳ್ಳಿ ಯೋಜನೆಯ ಪುನರ್ವಸತಿಗಾಗಿ ಬೇಕಾಗಿರುವ ಅರಣ್ಯ ಭೂಮಿಗೆ ಅನುಮೋದನೆ ದೊರೆಯದೆ ಇದ್ದುದರಿಂದ.

3)ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಿಂದ ಬಂಡವಾಳ ಹೂಡುವಿಕೆಯ ಮೇಲಿನ ಶೇಕಡಾ 3 ರಷ್ಟು ಮತ್ತು ಮೇಲ್ಪಟ್ಟು ಲಾಭ ಪಡೆಯದಿರುವುದು ಮತ್ತು

4)ತಲಕಳಲೆ ಅಣೆಕಟ್ಟಿನ ದುರಸ್ತಿ ಕೆಲಸದ ಸಲುವಾಗಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ವಿಶ್ವಬ್ಯಾಂಕಿಗೆ ತೃಪ್ತಿ ಆಗುವ ರೀತಿಯಲ್ಲಿ ಒಪ್ಪಂದವನ್ನು ಮಾಡಿಕೊಳ್ಳದೆ ಇರುವುದು.

ಇ) ಹೌದು.

ಈ) ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಂದ ದೀರ್ಘಾವಧಿ ಸಾಲ ಸಂಪತ್ತುಗಳನ್ನು ಪಡೆದುಕೊಳ್ಳಲು ಕರ್ನಾಟಕ ವಿದ್ಯುತ್ ನಿಗಮವು ಪ್ರಯತ್ನಿಸುತ್ತಿದೆ.

ಹೇಮಾವತಿ ಎಡದಂಡೆ ನಾಲಾ ವಿಭಾಗದಲ್ಲಿ ಚಟಂಗೆರೆ ಸುರಂಗಕಾಲುವೆ

96-ಶ್ರೀ ಡಿ.ಹಲಗೇಗೌಡ (ಪಾಂಡವಪುರ) : ಮಾನ್ಯ ಉಪಮುಖ್ಯಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೇಮಾವತಿ ಎಡದಂಡೆ ನಾಲಾ ವಿಭಾಗದಲ್ಲಿ ಚಟ್ಟಂಗೆರೆ ಸುರಂಗ ಕಾಲುವೆಯ ಬಳಿ ಸುರಂಗ ಕಾಲುವೆಯಿಂದ ತೊಂದರೆಗೀಡಾದ ಹಳ್ಳಿಗಳ ರೈತರುಗಳಿಗೆ ವ್ಯವಸಾಯ ಮತ್ತು ಕುಡಿಯುವ ನೀರಿಗೆ ತೊಂದರೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಗ್ಗೆ ಸಾರ್ವಜನಿಕರಿಂದ ಸರ್ಕಾರಕ್ಕೆ ಮನವಿಗಳು ಬಂದಿವೆಯೇ?

ಇ) ತೊಂದರೆಗೊಳಗಾದ ರೈತರುಗಳಿಗೆ ಏತ ನೀರಾವರಿ ಸೌಲಭ್ಯ ಕಲ್ಪಿಸಲು ಸರ್ಕಾರ ತೀರ್ಮಾನ ತೆಗೆದುಕೊಂಡಿದೆಯೇ?

ಈ) ಹಾಗಾದರೆ ಇನ್ನೂ ಏತ ನೀರಾವರಿ ಕಾಮಗಾರಿಗಳನ್ನು ಪ್ರಾರಂಭಿಸದಿರುವುದಕ್ಕೆ ಕಾರಣವೇನು?

ಉ) ಸುರಂಗ ಕಾಲುವೆಯ ಬಳಿ ಯಾವಾಗ ಏತ ನೀರಾವರಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಬಂದಿದೆ.

ಆ) ಬಂದಿದೆ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಪರಿಶೀಲಿಸಿದ ನಂತರ ಅಗತ್ಯ ಕ್ರಮ ತೆಗೆದು ಕೊಳ್ಳಲಾಗುವುದು.

ಕರ್ನಾಟಕ ರಾಜ್ಯದ ಮುಜರಾಯಿ ಇಲಾಖೆಯ ಕಾನೂನು ಕುರಿತು

293 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯಲ್ಲಿ ಹೈದ್ರಾಬಾದ್ ಕರ್ನಾಟಕ ಮುಂಬೈ ಕರ್ನಾಟಕ ಹಾಗೂ ಹಳೇ ಮೈಸೂರು ಬೇರೆ ಬೇರೆ ಕಾನೂನುಗಳಿರುವುದರಿಂದ ದೇವಸ್ಥಾನಗಳಲ್ಲಿ ಅಭಿವೃದ್ಧಿಯಾಗದೆ ಅವ್ಯವಸ್ಥೆಯಾಗಿರುವುದು ನಿಜವೇ ?

ಆ) ಹೈದ್ರಾಬಾದ್ ಕರ್ನಾಟಕ ಧಾರ್ಮಿಕ ದತ್ತಿ ಇಲಾಖೆಯ ಕಾನೂನುಗಳಿಂದ ಹೆಚ್ಚು ಆದಾಯವಿರುವ ದೇವಸ್ಥಾನಗಳಲ್ಲಿ ಅರ್ಚಕರೇ ಇದರ ಲಾಭ ಪಡೆದು ಮಂದಿರಗಳು ದುಸ್ಥಿತಿಯಾಗಿ ಬಿದ್ದು ಹೋಗುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಆದಕ್ಕಾಗಿ ಧಾರ್ಮಿಕ ದತ್ತಿ ಇಲಾಖೆಯಲ್ಲಿ ಏಕರೂಪ ಕಾನೂನು ಮಾಡಿ ಈ ದುಸ್ಥಿತಿಯಲ್ಲಿರುವ ದೇವಸ್ಥಾನಗಳನ್ನು ಸರ್ಕಾರವೇ ವಹಿಸಿಕೊಂಡು ಅಭಿವೃದ್ಧಿ ಮಾಡಲು ಕ್ರಮ ಕೈಗೊಳ್ಳುವುದೇ ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಮುಜರಾಯಿ ಸಚಿವರು) :

ಕಾವೇರಿ ಜಲ ವಿವಾದ ಕುರಿತು

98- ಶ್ರೀ ಡಿ.ಬಿ.ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾವೇರಿ ಜಲ ವಿವಾದದ ವಿಚಾರಣೆ (ಟ್ರಿಬ್ಯುನಲ್) ಯಾವ ಹಂತದಲ್ಲಿದೆ ?

ಆ) ಈ ವಿವಾದ ಮುಗಿಯಲು ಇನ್ನು ಎಷ್ಟು ಸಮಯ ಬೇಕಾಗುತ್ತದೆ ?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ತಮಿಳುನಾಡಿನ ಸಾಕ್ಷಿಯ ಪಾಟೀಸವಾಲು ನಡೆಯುತ್ತಿದೆ.

ಆ) ಖಚಿತವಾಗಿ ಹೇಳಲಸಾಧ್ಯ.

ನೆಲಮಂಗಲ ತಾಲ್ಲೋಕು ಮಣ್ಣೆ-ಮರಾರಿ ಪಾಳ್ಯ ನಿಡವಂದದಿಂದ ಎಲಿಕ್ಯಾತನಹಳ್ಳಿ ರಸ್ತೆ ದುರಸ್ತಿ

169-ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನೆಲಮಂಗಲ ತಾಲ್ಲೂಕು ಮಣ್ಣೆ ಮರಾರಿ ಪಾಳ್ಯ ನಿಡವಂದ ಎಲೇಕ್ಯಾತನಹಳ್ಳಿ ರಸ್ತೆ ದುರಸ್ತಿಯಿಲ್ಲದ ಪ್ರಯುಕ್ತ ಈ ರಸ್ತೆಯಲ್ಲಿ ಓಡಾಡುತ್ತಿದ್ದ 15-20

ಖಾಸಗಿ ಮತ್ತು ಸರ್ಕಾರಿ ಬಸ್ಸುಗಳ ಓಡಾಟ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ರಸ್ತೆಯ ದುರಸ್ತಿಗಾಗಿ ಸರ್ಕಾರ ಕ್ರಮ ತೆಗೆದುಕೊಂಡಿದೆಯೇ?

ಇ) ಈ ಕೆಲಸ ಪೂರೈಸಲು ಎಷ್ಟು ಕಾಲಾವಕಾಶ ಬೇಕಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) 1) ಸಪ್ರಸ್ತಾವಿತ ರಸ್ತೆ ಮಣ್ಣೆ - ಮರಾಠಿಪಾಳ್ಯ (ಶಿವಾಜಿಪಾಳ್ಯ) ರಸ್ತೆಯು ಲೋಕೋಪಯೋಗಿ ಇಲಾಖೆಯ ನಿರ್ವಹಣೆಯಲ್ಲಿದ್ದು ಸಂಚಾರ ಯೋಗ್ಯವಾಗಿದೆ.

2) ನಿಡವಂದ - ಎಲೇಕ್ಯಾತನಹಳ್ಳಿ ರಸ್ತೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿದ್ದು ಲಭ್ಯವಿರುವ ಅನುದಾನ ಮಿತಿಯಲ್ಲಿ ಜಲ್ಲಿ ಮೇಲ್ಮೈಯನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಲಾಗದ ಕಾರಣ ಕೆಲವು ಬಸ್‌ಗಳು ಸಂಚಾರ ಕಡಿಮೆಯಾಗಿರುವ ಬಗ್ಗೆ ಸಾರ್ವಜನಿಕರಿಂದ ದೂರು ಇರುತ್ತದೆಂದು ಸರ್ಕಾರದ ಗಮನಕ್ಕೆ ಬಂದಿದೆ.

ಆ) 1) ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ಮಣ್ಣೆ-ಶಿವಾಜಿಪಾಳ್ಯ ರಸ್ತೆಯಲ್ಲಿ 1993-94ನೇ ಸಾಲಿನಲ್ಲಿ 1 ಕಿ.ಮೀ. ಡಾಂಬರು ಹಾಗೂ 3 ಕಿ.ಮೀ. ಮರು ಜಲ್ಲಿ ಹಾಸಲಾಗಿದೆ. ಹಾಗೂ 1994-95ನೇ ಸಾಲಿನಲ್ಲಿ 2:45 ಕಿ.ಮೀ. ಡಾಂಬರು ಹಾಗೂ 1 ಕಿ.ಮೀ. ಮರು ಜಲ್ಲಿ ಹಾಸುವ ಕಾಮಗಾರಿ ಪ್ರಗತಿಯಲ್ಲಿದೆ.

2) ನಿಡವಂದ - ಎಲೆಕ್ಯಾತನಹಳ್ಳಿ ರಸ್ತೆಯಲ್ಲಿ 94-95ರ ಸಾಲಿನಲ್ಲಿ ರಸ್ತೆ ಅಗಲಪಡಿಸಿ, ಮಳೆ ನೀರು ಸರಾಗ ಹರಿದು ಹೋಗಲು ಚರಂಡಿಗಳನ್ನು 1 ಕಿ.ಮೀ. ಮರುಜಲ್ಲಿ ಮಾಡಿ ಡಾಂಬರು ಮಾಡುವ ಕೆಲಸಗಳು ಪ್ರಗತಿಯಲ್ಲಿದೆ. ಹಾಗೂ 1.30 ಕಿ.ಮೀ. ಡಾಂಬರು ಹಾಗೂ 2.65 ಕಿ.ಮೀ. ಮರು ಜಲ್ಲಿ ಮಾಡುವ ಕಾರ್ಯಕ್ರಮವಿರುತ್ತದೆ.

ಇ) ಹಾಲಿ ಪ್ರಗತಿಯಲ್ಲಿರುವ ಕೆಲಸಗಳನ್ನು ಸೆಪ್ಟೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

ಕೊರಟಗೆರೆ ತಾಲ್ಲೂಕಿನಲ್ಲಿ ಜಂಪೇನಹಳ್ಳಿ ಕೆರೆ ಪುನರಾರಂಭಿಸುವುದು.

168-ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊರಟಗೆರೆ ತಾಲ್ಲೂಕು ಜಂಪೇನಹಳ್ಳಿ ಕೆರೆ ನಿರ್ಮಾಣ ತ್ವರಿತವಾಗಿ ತೆಗೆದುಕೊಳ್ಳುವಂತೆ ಸಣ್ಣ ನೀರಾವರಿ ಸಚಿವರು ಕಳೆದ ವಿಧಾನ ಸಭೆಯ ಅಧಿವೇಶನದಲ್ಲಿ ಆಶ್ವಾಸನೆ ನೀಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಈ ಕಾಮಗಾರಿ ಕಾರ್ಯಗತ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ? ಹಾಗಿದ್ದಲ್ಲಿ ಎಂದು?

ಶ್ರೀ ಎಂ.ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಹೌದು.

ಆ) ಈ ಕಾಮಗಾರಿಯನ್ನು ಕಾರ್ಯಗಳ ಮಾಡಲು ಸರ್ಕಾರ ಈಗಾಗಲೇ ಕ್ರಮ ಕೈಗೊಂಡಿದ್ದು ಕೋಡಿ ಕೆಲಸ ಪ್ರಗತಿಯಲ್ಲಿದೆ.

ದ. ಕನ್ನಡ ಜಿಲ್ಲೆಯ ಬ್ರಹ್ಮಾವರದಲ್ಲಿ ಟ್ರಕ್ ಪಾರ್ಕಿಂಗ್ ಸೌಲಭ್ಯ

199-ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬ್ರಹ್ಮಾವರದಲ್ಲಿ ಸಕ್ಕರೆ ಕಾರ್ಖಾನೆಯ ಬೆಳವಣಿಗೆಯಿಂದಾಗಿ ಅಸಂಖ್ಯಾತ ಟ್ರಕ್‌ಗಳು ರಾಷ್ಟ್ರೀಯ ಹೆದ್ದಾರಿಯಲ್ಲಿ ನಿಂತುಕೊಳ್ಳುವುದರಿಂದ ಕೆಲವೊಮ್ಮೆ ಈ ಹೆದ್ದಾರಿಯಲ್ಲಿ ಇತರ ವಾಹನಗಳ ಓಡಾಟಕ್ಕೆ ಅಡಚಣೆ ಉಂಟಾಗಿರುವುದು ಲೋಕೋಪಯೋಗಿ ಇಲಾಖೆಯ ಗಮನಕ್ಕೆ ಬಂದಿದೆಯೇ? ಬ್ರಹ್ಮಾವರದ ಪ್ರವಾಸಿ ಮಂದಿರದ ಹತ್ತಿರದಲ್ಲಿ ಟ್ರಕ್ ಪಾರ್ಕಿಂಗ್ ನಿರ್ಮಿಸಿ ಈ ಸಮಸ್ಯೆಯನ್ನು ಬಗೆಹರಿಸಲು ಇಲಾಖೆಯು ಕ್ರಮ ಕೈಗೊಳ್ಳ ಬಯಸುತ್ತದೆಯೇ?

ಆ) ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸುಗಮವಾಗಿ ವಾಹನ ಸಂಚಾರವಾಗುವಂತೆ ಸರ್ಕಾರದವರು ಕೈಗೊಳ್ಳಬಯಸುವ ಕ್ರಿಯಾಯೋಜನೆಗಳಾವುವು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ

ಆ) ಹೌದು

ಇ) ಸಂಚಾರದಟ್ಟಣೆಯನ್ನು ಆಧರಿಸಿ ನಾಲ್ಕು ಪಥ ವಾಹನ ಮಾರ್ಗ ನಿರ್ಮಿಸುವುದು, ಷೇವ್ಡ್ ಶೋಲ್ಡರ್ಸ್, ಹಾಗೂ ಲೇಬೈಗಳನ್ನು ನಿರ್ಮಿಸುವುದು ಇತ್ಯಾದಿ.

ಉಡುಪಿ ತಾಲ್ಲೋಕು ಬ್ರಹ್ಮಾವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಕೆಲವು ಸ್ಥಳಗಳನ್ನು ರಾಷ್ಟ್ರೀಯ ಹೆದ್ದಾರಿಯನ್ನು ಅಗಲಗೊಳಿಸುವುದು

198-ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬ್ರಹ್ಮಾವರ ವಿಧಾನಸಭಾ ಕ್ಷೇತ್ರದ ರಾಷ್ಟ್ರೀಯ ಹೆದ್ದಾರಿ 17ರ, 295 ಕಿ.ಮೀ. ಕೋಟದಲ್ಲಿ, 301 ಕಿ.ಮೀ. ಸಾಸ್ತಾನದಲ್ಲಿ, 307 ಕಿ.ಮೀ. ಬ್ರಹ್ಮಾವರದಲ್ಲಿ 311.4 ಕಿ.ಮೀ. ಉಪ್ಪೂರಿನಲ್ಲಿ 314.4 ಕಿ.ಮೀ ಕಲ್ಯಾಣಪುರದಲ್ಲಿ, ರಾಷ್ಟ್ರೀಯ ಹೆದ್ದಾರಿಯ ಯಾವುದಾದರೂ ಒಂದು ಬದಿಯನ್ನು ಸಾರ್ವಜನಿಕರ, ಓಡಾಡುವ ವಾಹನಗಳ ಹಿತದೃಷ್ಟಿಯಿಂದ ಅಗಲಗೊಳಿಸುವ ಅವಶ್ಯಕತೆ ಲೋಕೋಪಯೋಗಿ ಇಲಾಖೆಗೆ ಕಂಡು ಬಂದಿಲ್ಲವೆ?

ಆ) ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರದವರು ಈ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಕಂಡುಬಂದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಚುಳ್ಕಿನಾಲಾ ಯೋಜನೆಗಾಗಿ ಹಣ ಬಿಡುಗಡೆ

196 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯ, ಬಸವಕಲ್ಯಾಣ ತಾಲ್ಲೂಕಿನ ಚುಳ್ಕಿನಾಲಾ ಯೋಜನೆಗೆ ಸರ್ಕಾರವು ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಹಾಗೂ ಇದುವರೆಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ?

ಆ) ಈ ಯೋಜನೆಗಾಗಿ ಸರ್ಕಾರವು ಪ್ರತಿ ಸಾಲಿನಲ್ಲಿ 7.00 ಕೋಟಿ ಹಣ ಬಿಡುಗಡೆ ಮಾಡಲು ಸರ್ಕಾರವು ಏನಾದರೂ ಕ್ರಮವನ್ನು ಕೈಗೊಂಡಿದೆಯೇ? ಹಾಗಿಲ್ಲದಿದ್ದಲ್ಲಿ ಕಾರಣವೇನು?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಆ) ಇಲ್ಲಿಯವರೆಗೂ ಬಿಡುಗಡೆಯಾಗಿರುವ ಹಣ ರೂ.15.47 ಕೋಟಿಗಳು. ಯೋಜನೆಗೆ ವೆಚ್ಚಮಾಡಿರುವ ಹಣ: ರೂ. 16.76 ಕೋಟಿಗಳು

ಆ) ಪರಿಶೀಲಿಸಲಾಗುವುದು.

ಕಾರಂಜಾ ನೀರಾವರಿ ಯೋಜನೆ

194 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾರಂಜಾ ನೀರಾವರಿ ಯೋಜನೆಗೆ ತಗಲುವ ವೆಚ್ಚ ಎಷ್ಟು? ಈವರೆಗೆ ಖರ್ಚು ಮಾಡಿರುವ ಹಣವೆಷ್ಟು? ಈ ಯೋಜನೆಯಿಂದ ಎಷ್ಟು ಎಕರೆ ನೀರಾವರಿಗೆ ಒಳಪಟ್ಟಿದೆ?

ಆ) ಮುಖ್ಯಮಂತ್ರಿಯವರು ಬೀದರ್ ಜಿಲ್ಲೆಗೆ ಇತ್ತೀಚೆಗೆ ಭೇಟಿ ನೀಡಿದಾಗ ಈ ಯೋಜನೆಗೆ 50 ಕೋಟಿ ನೀಡುವ ಬಗ್ಗೆ ಆಶ್ವಾಸನೆಯನ್ನು ನೀಡಿರುವುದು ನಿಜವೇ? ಹಾಗಿದ್ದಲ್ಲಿ ಬಿಡುಗಡೆ ಮಾಡಲಾದ ಹಣವೆಷ್ಟು?

ಇ) ವರ್ಷದಲ್ಲಿ ಈ ಯೋಜನೆಗಾಗಿ ಎಷ್ಟು ಹಣ ಮಂಜೂರು ಮಾಡಲಾಗಿದೆ ಮತ್ತು ಎಷ್ಟು ವೆಚ್ಚ ಮಾಡಲಾಗಿದೆ (ತಿಂಗಳುವಾರು ಪೂರ್ಣ ವಿವರಗಳನ್ನು ಒದಗಿಸುವುದು)

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಯೋಜನೆಗೆ ತಗಲುವ ವೆಚ್ಚ ರೂ. 250.00 ಕೋಟಿಗಳು. ಈವರೆಗೆ ಖರ್ಚು ಮಾಡಿದ ಹಣ (7:94ರವರೆಗೆ) ರೂ. 111.54 ಕೋಟಿಗಳು. ನೀರಾವರಿಗೆ ಒಳಪಡುವ ಪ್ರದೇಶ : 35,614 ಹೆಕ್ಟೇರುಗಳು. ಮಾರ್ಚ್ 94ರವರೆಗೆ 6075 ಹೆಕ್ಟೇರುಗಳು ನೀರಾವರಿಗೆ ಒಳಪಟ್ಟಿರುತ್ತದೆ.

ಆ) ಹೌದು ರೂ. 167.37 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಈ ವರ್ಷ ಕಾರಂಜಾ ಯೋಜನೆಗಾಗಿ ರೂ. 30 ಕೋಟಿ ಅನುದಾನ ಮಂಜೂರು ಮಾಡಲಾಗಿದೆ. ಮತ್ತು ಏಪ್ರಿಲ್ 94ರಿಂದ ಜುಲೈ 94ರವರೆಗೆ ಆಗಿರುವ ವೆಚ್ಚದ ವಿವರಗಳು ಈ ಕೆಳಗಿನಂತಿವೆ.

1) ಏಪ್ರಿಲ್ - 94 .... ರೂ. 31.52 ಲಕ್ಷ

2) ಮೇ - 94 ... ರೂ. 23.40 ಲಕ್ಷ

3) ಜೂನ್ - 94 .... ರೂ. 44.59 ಲಕ್ಷ

4) ಜುಲೈ - 94 .... ರೂ. 67.86 ಲಕ್ಷ

ಒಟ್ಟು .... ರೂ. 167.37 ಲಕ್ಷ

ಕುಡುಪಲಿ ಬ್ಯಾರೇಜ್ ಕಾಮಗಾರಿ ಕಾರ್ಯ

339- ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಕುಮದ್ವತಿ ನದಿಗೆ ಕುಡುಪಲಿ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ ಮಾಡಲು ಸರ್ಕಾರ ತಾಂತ್ರಿಕ ಹಾಗೂ ಆಡಳಿತಾತ್ಮಕ ಮಂಜೂರಾತಿ ನೀಡಿದೆಯೇ?

ಆ) ಹಾಗಿದ್ದಲ್ಲಿ ಈ ಕಾಮಗಾರಿಯನ್ನು ಕಾರ್ಯಗತ ಮಾಡಲು ಬೇಕಾಗುವ ಅಂದಾಜು ಮೊತ್ತವೆಷ್ಟು? 94-95ರ ಆಯವ್ಯಯದಲ್ಲಿ ಒದಗಿಸಿರುವ ಹಣ. ಎಷ್ಟು?

ಇ) ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲು ಉದ್ದೇಶಿಸಲಾಗಿದೆ? ಈ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಎಂ.ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಕುಮದ್ವತಿ ನದಿಗೆ ಕುಡುಪಲಿ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣದ 73.28 ಲಕ್ಷ ರೂ.ಗಳ ಅಂದಾಜಿಗೆ ದಿನಾಂಕ : 31-3-94ರಂದು ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ. ತಾಂತ್ರಿಕ ಮಂಜೂರಾತಿಗಾಗಿ ಅಂದಾಜು ಪತ್ರಿಕೆ ಪರಿಶೀಲನೆಯಲ್ಲಿದೆ.

ಆ) ಕಾಮಗಾರಿಯ ಅಂದಾಜು ಮೊತ್ತ 73.28ಲಕ್ಷ ರೂ.ಗಳು 1994-95ರಆಯವ್ಯಯದಲ್ಲಿ ಈ ಕಾಮಗಾರಿಗೆ 1.00 ಲಕ್ಷ ರೂ.ಗಳ ಅನುದಾನವಿರುತ್ತದೆ.

ಇ) ಅಂದಾಜಿಗೆ ತಾಂತ್ರಿಕ ಮಂಜೂರಾತಿ ದೊರೆತ ಮೇಲೆ ಕೆಲಸ ಪ್ರಾರಂಭಿಸಲಾಗುವುದು.

ಗದಗ್ ತಾಲ್ಲೂಕಿನ ಬಿಂಕದಕಟ್ಟಿ ಗ್ರಾಮದ ಬಳಿ ಇರುವ ಪ್ರಾಣಿಸಂಗ್ರಹಾಲಯಕ್ಕೆ ಹೋಗುವ ರಸ್ತೆ ದುರಸ್ತಿ

331- ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾರವಾರ - ಬಳ್ಳಾರಿ ಹೆದ್ದಾರಿಗೆ ಹೊಂದಿದಂತೆ ಎರಡು ಕಿಲೋಮೀಟರ್ ಅಂತರದ ಮೇಲೆ ಬಿಂಕದಕಟ್ಟಿ ಗ್ರಾಮದ ಬಳಿ ಇರುವ ಪ್ರಾಣಿ ಸಂಗ್ರಹಾಲಯಕ್ಕೆ ಹೋಗುವ ರಸ್ತೆಯನ್ನು ಲೋಕೋಪಯೋಗಿ ಇಲಾಖೆ ತೆಗೆದುಕೊಂಡು ಅದನ್ನು ಸುಧಾರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಕಾರವಾರ ಬಳ್ಳಾರಿ ರಾಜ್ಯ ಹೆದ್ದಾರಿಯಿಂದ ಅಸುಂಡಿ ಗ್ರಾಮಕ್ಕೆ ಬಿಂಕದಕಟ್ಟಿ ಪ್ರಾಣಿ ಸಂಗ್ರಹಾಲಯದ ಮುಖಾಂತರ ಇರುವ 3 ಕಿ.ಮೀ. ರಸ್ತೆಯು ಗ್ರಾಮೀಣ ರಸ್ತೆಯಾಗಿದ್ದು ಜಿಲ್ಲಾ ಪರಿಷತ್ತಿನ ಅಧೀನದಲ್ಲಿದೆ. ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯಿಂದ ಅಭಿವೃದ್ಧಿಪಡಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

ಕೃಷ್ಣ ಮೇಲ್ದಂಡೆ ಅಣೆಕಟ್ಟನಲ್ಲಿ ಹೂಳು ತುಂಬುವುದನ್ನು ತಡೆಗಟ್ಟುವುದು.

166 - ಶ್ರೀ ಡಿ. ಆರ್. ಪಾಟೀಲ್ (ಗದಗ್) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷ್ಣಾ ಮೇಲ್ದಂಡೆ ಅಣೆಕಟ್ಟಿನಲ್ಲಿ ಹೂಳು ತುಂಬುವುದನ್ನು ತಡೆಯಲು ಹಾಗೂ ಕೃಷ್ಣಾ ನದಿಯ ಹಿನ್ನಾಡುಪ್ರದೇಶದಲ್ಲಿ ಭೂಸವಕಳಿ ತಡೆಯಲು ಹಾಗೂ ಭೂಸಾರ ಸಂರಕ್ಷಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಆ) ಇದಕ್ಕಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯ ಹಣದಲ್ಲಿ ಕೆಲಭಾಗವನ್ನು ಈ ಕಾರ್ಯಕ್ಕೆ ನಿಗಧಿಪಡಿಸುವ ಬಗ್ಗೆ ಸರ್ಕಾರ ಪರಿಶೀಲಿಸುವುದೇ?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಅಣೆಕಟ್ಟುಗಳಲ್ಲಿ ಹೂಳು ತುಂಬುವುದನ್ನು ತಡೆಯಲು ಕೃಷ್ಣಾ ನದಿಯ ಹಿನ್ನಾಡು ಪ್ರದೇಶದಲ್ಲಿ ಭೂಸವಕಳಿ ತಡೆಯಲು, ಭೂಸಾರ ಸಂರಕ್ಷಿಸಲು ಕ್ಯಾಚ್‌ಮೆಂಟ್ ಏರಿಯಾ ಜಲಾನಯನ ಪ್ರದೇಶದ ಟ್ರೀಟ್‌ಮೆಂಟ್ ಮಾಡಲಾಗುತ್ತಿದೆ. ಜಲಾನಯನ ಪ್ರದೇಶ ಟ್ರೀಟ್‌ಮೆಂಟಿನಲ್ಲಿ (1) ಭೂಸಾರ ಸಂರಕ್ಷಣೆ (2) ಅರಣ್ಯೀಕರಣ ಈ ಎರಡೂ ಕ್ರಮಗಳನ್ನು ಕೈಗೊಳ್ಳುವುದಿದ್ದು, ಅದಕ್ಕಾಗಿ ಮಾಸ್ಟರ್ ಆಕ್ಷ್ಯನ್ ಪ್ಲಾನ್ ತಯಾರು ಮಾಡಲಾಗಿದೆ.

ಆ) ಕೃಷ್ಣಾ ಮೇಲ್ದಂಡೆ ಯೋಜನೆಯ ಹಣದಲ್ಲಿ ಅರಣ್ಯೀಕರಣ ಸಲುವಾಗಿ ಈಗಾಗಲೇ 4 ವರ್ಷ ಅವಧಿಯ ಕಾರ್ಯಗಳನ್ನು 1000 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದ ಮಾಸ್ಟರ್ ಆಕ್ಷನ್ ಪ್ಲಾನ್ ತಯಾರಿಸಿದ್ದು, ಕೆಲಸಗಳನ್ನು 1992ರಿಂದ ಕೈಗೊಳ್ಳಲಾಗಿದೆ. ಮತ್ತು ಭೂ ಸಂರಕ್ಷಣೆ ಸಲುವಾಗಿ ರೂ. 29557 ಲಕ್ಷದ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

ಡೀಸೆಲ್ ಜನರೇಟರ್ ಸ್ಥಾಪಿಸುವ ಬಗ್ಗೆ

290- ಶ್ರೀ ನಾರಾಯಣ ರಾವ್ ಮನಹಳ್ಳಿ (ಬೀದರ್) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಡೀಸಲ್ ಜನರೇಟರ್‌ಗಳನ್ನು ಸ್ಥಾಪಿಸಲಾಗಿದೆ?

ಆ) ಹೊಸದಾಗಿ ಯಾವ ಯಾವ ಜಿಲ್ಲೆಗಳಲ್ಲಿ ಡೀಸಲ್ ಜನರೇಟರ್‌ಗಳನ್ನು ಸ್ಥಾಪಿಸಲಾಗುವುದು ಇದಕ್ಕೆ ತಗಲುವ ವೆಚ್ಚವೆಷ್ಟು?

ಇ) ಇದಕ್ಕಾಗಿ ವಿದೇಶಿ ನೆರವನ್ನು ಕೋರಿದೆಯೇ?

ಈ) ರಾಜ್ಯದ ಅತಿ ಹಿಂದುಳಿದ ಜಿಲ್ಲೆಯಾದ ಬೀದರ್‌ನಲ್ಲಿ ಡೀಸಲ್ ಜನರೇಟರ್ ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುವುದೇ?

ಉ) ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):

ಅ) ಬೆಂಗಳೂರು ಜಿಲ್ಲೆಯ ಯಲಹಂಕದಲ್ಲಿ ಕ.ವಿ. ಮಂಡಳಿಯವರು 127.9 ಮೆ.ವಾ.ಸಾಮರ್ಥ್ಯದ ಡೀಸಲ್ ಜನರೇಟರ್ ಸ್ಥಾವರ ಸ್ಥಾಪಿಸಿದ್ದಾರೆ.

ಆ) ಕೋಲಾರ, ಬೀದರ್, ಬಿಜಾಪುರ ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ಖಾಸಗಿ ಕ್ಷೇತ್ರದಲ್ಲಿ ಡೀಸಲ್ ಜನರೇಟರ್ ಸ್ಥಾವರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

ಇ) ಇಲ್ಲ

ಈ) ಖಾಸಗಿ ಕ್ಷೇತ್ರದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ಖಾಸಗಿಯವರು ವಿದ್ಯುತ್ ಯೋಜನೆಗಳನ್ನು ಸ್ಥಾಪಿಸಲು ಮುಂದಾದರೆ ಕರ್ನಾಟಕ ವಿದ್ಯುತ್ ನಿಗಮ: ಕರ್ನಾಟಕ ಸರ್ಕಾರವು ಕ್ಲಿಯರೆನ್ಸ್‌ಗಳನ್ನು ಅವರಿಗೆ ವರ್ಗಾಯಿಸಲು ತೀರ್ಮಾನಿಸಿತು. ಅದರಂತೆ ಈ ಯೋಜನೆಯನ್ನು ಕರ್ನಾಟಕ ವಿದ್ಯುತ್ ನಿಗಮವು ಖಾಸಗಿಯವರಿಗೆ ಕೊಡುವ ಬಗ್ಗೆ ಪರಿಶೀಲನೆಯಲ್ಲಿದೆ.

ಉ) -ಅನ್ವಯಿಸುವುದಿಲ್ಲ-

ಜಲವಿದ್ಯುತ್ ಘಟಕಗಳು

99-ಶ್ರೀ ಡಿ.ಬಿ. ಚಂದ್ರೇಗೌಡರು (ತೀರ್ಥಹಳ್ಳಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸದಾಗಿ ಕೈಗೊಳ್ಳಲು ಉದ್ದೇಶವಿರುವ ಜಲವಿದ್ಯುತ್ ಘಟಕಗಳೆಷ್ಟು?

ಆ) ಇವುಗಳಲ್ಲಿ ಎಷ್ಟನ್ನು ಕೇಂದ್ರದ ಅನುಮತಿಗಾಗಿ ಕಳುಹಿಸಿಕೊಡಲಾಗಿದೆ?

ಇ) ಕೇಂದ್ರ ಸರ್ಕಾರದಿಂದ ಇದುವರೆಗೂ ಅನುಮತಿ ಸಿಗದಿರಲು ಕಾರಣಗಳೇನು?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಆರು (6)

ಆ) ಮೂರು (3)

ಇ) 1. ಸರಪಾಡಿ ಯೋಜನೆಯ ಬಗ್ಗೆ ಪರಿಸರದ ಮೇಲಾಗುವ ಪರಿಣಾಮಗಳ ಬಗ್ಗೆ ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯವರು ಕೆಲವು ವಿವರಗಳನ್ನು ಕೇಳಿದ್ದು ಅವುಗಳಿಗೆ ಈಗಾಗಲೇ ಉತ್ತರಗಳನ್ನು ಪ್ರಸ್ತುತ ಪಡಿಸಲಾಗಿದೆ. ಆದಾಗ್ಯೂ ಪರಿಸರದ ದೃಷ್ಟಿಯಿಂದ ಇನ್ನೂ ಕೆಲವು ವಿವರಗಳನ್ನು ಪರಿಸರ ಇಲಾಖೆಯವರು ಕೇಳಿರುತ್ತಾರೆ.

2. ಶಿವಸಮುದ್ರಂ ಯೋಜನೆಯನ್ನು ಕಾವೇರಿ ಜಲವಿವಾದದಲ್ಲಿ ಸೇರಿಸಲಾಗಿದೆ.

3. ಮಹಾದಾಯಿ ವಿದ್ಯುತ್ ಯೋಜನೆಯನ್ನು ಕೈಗೆತ್ತಿಕೊಳ್ಳುವ ಮುನ್ನ ಗೋವಾ ಸರ್ಕಾರದ ಸಮ್ಮತಿಯನ್ನು ಪಡೆಯಬೇಕಾಗಿದೆ.

ಉಚ್ಚ ನ್ಯಾಯಾಲಯ ಬಿಟ್ಟು ಕೆಳಮಟ್ಟದ ನ್ಯಾಯಾಲಯಗಳಲ್ಲಿ ಕನ್ನಡದ ಬಳಕೆ

93- ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಚ್ಚ ನ್ಯಾಯಾಲಯ ಬಿಟ್ಟು ಉಳಿದ ನ್ಯಾಯಾಲಯಗಳಲ್ಲಿ ಕನ್ನಡವನ್ನು ಬಳಸಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಉಚ್ಚ ನ್ಯಾಯಾಲಯವನ್ನು ಬಿಟ್ಟು ಉಳಿದ ನ್ಯಾಯಾಲಯಗಳಲ್ಲಿ ಕನ್ನಡವನ್ನು ಬಳಸಲು ಈ ಕೆಳ ಕಾಣಿಸಿದ ಕ್ರಮಗಳನ್ನು ಕೈಗೊಂಡಿದೆ

1. ಅಧೀನ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯಗಳಲ್ಲಿ ಕನ್ನಡವನ್ನು ನ್ಯಾಯಾಲಯದ ಭಾಷೆ ಎಂದು ಘೋಷಿಸಲಾಗಿದೆ.

2. ಕನ್ನಡ ಬೆರಳಚ್ಚು ಯಂತ್ರಗಳನ್ನು ನ್ಯಾಯಾಲಯಗಳಿಗೆ ಸರಬರಾಜು ಮಾಡಲು ಸರ್ಕಾರಿ ಮುದ್ರಣ ಮತ್ತು ಲೇಖನ ಸಾಮಗ್ರಿ ಇಲಾಖೆಗೆ ಸೂಚನೆ ನೀಡಲಾಗಿದೆ.

3. ಮಾನ್ಯ ಉಚ್ಚ ನ್ಯಾಯಾಲಯದ ಸುತ್ತೋಲೆ ಸಂಖ್ಯೆ: 3:89, ದಿನಾಂಕ 20-9-89ರಲ್ಲಿ ಅಧೀನ ನ್ಯಾಯಾಲಯದ ನ್ಯಾಯಾಧೀಶರಿಗೆ ತೀರ್ಮಾನಗಳನ್ನು : ಆದೇಶಗಳನ್ನು ಕನ್ನಡದಲ್ಲಿಯೇ ಬರೆಯಲು ಪ್ರಾಮಾಣಿಕ ಪ್ರಯತ್ನವನ್ನು ಮಾಡುವಂತೆ ಕೋರಲಾಗಿದೆ.

ರುಸ್ತುಂಪುರ ಏತ ನೀರಾವರಿ ಯೋಜನೆ

103-ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರುಸ್ತುಂಪುರ ಏತ ನೀರಾವರಿ ಯೋಜನೆ ಯಾವಾಗ ಮಂಜೂರಾಗಿದೆ? ಎಷ್ಟು ಅಂದಾಜಿನ ವೆಚ್ಚ ರೂಪಿಸಲಾಗಿದೆ?

ಆ) ಯೋಜನೆಯು ಯಾವ ಹಂತದಲ್ಲಿದೆ? ಇದನ್ನು ಪ್ರಾರಂಭಿಸಿ ಯಾವಾಗ ಪೂರ್ಣಗೊಳಿಸಲಾಗುವುದು? ಯೋಜನೆ ಪೂರ್ಣಗೊಳಿಸಲು ಏನಾದರೂ ತೊಂದರೆಗಳಿವೆಯೇ?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):

ಅ) ರುಸ್ತುಂಪುರ ಏತ ನೀರಾವರಿ ಯೋಜನೆಗೆ ಮಾರ್ಚ್ 94ರಲ್ಲಿ ಮಂಜೂರಾತಿ ನೀಡಲಾಗಿದೆ. ಯೋಜನೆಯ ಅಂದಾಜು ವೆಚ್ಚ 658 ಲಕ್ಷರೂ.ಗಳು

ಆ) ಯೋಜನೆಯ ಕಾಮಗಾರಿಗಳನ್ನು ಕೈಗೊಳ್ಳಲು ಟೆಂಡರ್‌ಗಳನ್ನು ಕರೆಯಲಾಗಿದೆ. ಗುತ್ತಿಗೆದಾರರನ್ನು ನಿರ್ಧರಿಸಿದ ನಂತರ ಕೆಲಸವನ್ನು ಪ್ರಾರಂಭಿಸಲಾಗುವುದು. ಯೋಜನೆಯನ್ನು ಮೂರು ವರ್ಷ ಅವಧಿಯಲ್ಲಿ ಪೂರ್ಣಗೊಳಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ಕೊಡಗು ಮತ್ತು ಮೈಸೂರು ಜಿಲ್ಲೆಗೆ ಸಂಪರ್ಕ ಕಲ್ಪಿಸುವ ಸೇತುವೆ

10 - ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಹಾಗೂ ಮೈಸೂರು ಜಿಲ್ಲೆಗೆ ಸಂಪರ್ಕ ಕಲ್ಪಿಸಲು ಸುಮಾರು 150 ವರ್ಷಗಳ ಹಿಂದೆ ಕಾವೇರಿ ನದಿಗೆ ಕುಶಾಲನಗರದಲ್ಲಿ ನಿರ್ಮಿಸಲಾಗಿರುವ ಸೇತುವೆಯು ಪೂರ್ಣ ಶಿಥಿಲಗೊಂಡು ಅಪಾಯದ ಹಂತದಲ್ಲಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?
(ಬೆಂಗಳೂರು - ಮಂಗಳೂರು ರಾಜ್ಯ ಹೆದ್ದಾರಿಯನ್ನು ಕಲ್ಪಿಸುವ ಸೇತುವೆ)

ಆ) ಹಾಗಿದ್ದಲ್ಲಿ ಸೇತುವೆಯನ್ನು ನೂತನವಾಗಿ ನಿರ್ಮಿಸಲು ಸರ್ಕಾರದವರು ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಹೆಚ್.ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಶಿಥಿಲಗೊಂಡು ಅಪಾಯ ಹಂತದಲ್ಲಿರುವುದಿಲ್ಲ.

ಆ) ಪರಿಶೀಲಿಸಲಾಗುವುದು.

ಸೋಮವಾರಪೇಟೆ ಕೆರೆಗಳ ಬಗ್ಗೆ

16 - ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ) :ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಎಷ್ಟು ಕೆರೆಗಳಿವೆ? ಈ ಕೆರೆಗಳಲ್ಲಿ ಎಷ್ಟು ಕೆರೆಗಳು ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಬರುತ್ತವೆ?

ಆ) ಈ ಕೆರೆಗಳಲ್ಲಿ ಎಷ್ಟು ಎಷ್ಟು ಕೆರೆಗಳಲ್ಲಿ ಹೂಳನ್ನು ತೆಗೆಯಲಾಗಿರುತ್ತದೆ?

ಇ) ಹೂಳೆತ್ತಲು ಬಾಕಿ ಇರುವ ಕೆರೆಗಳೆಷ್ಟು?

ಈ) ಇದಕ್ಕಾಗಿ ಎಷ್ಟು ಹಣವನ್ನು ಇಲಾಖೆಯಿಂದ ಬಿಡುಗಡೆ ಮಾಡಲಾಗಿದೆ?

ಶ್ರೀ ಎಂ.ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಸೋಮವಾರ ಪೇಟೆ ತಾಲ್ಲೂಕಿನ ಒಟ್ಟು ಕೆರೆಗಳ ಸಂಖ್ಯೆ : 357 ಇವುಗಳಲ್ಲಿ ಒಟ್ಟು 24 ಕೆರೆಗಳು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುತ್ತದೆ.

ಆ) ಸಣ್ಣ ನೀರಾವರಿ ವ್ಯಾಪ್ತಿಯ 3 ಕೆರೆಗಳಲ್ಲಿ ಮತ್ತು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯ 25 ಕೆರೆಗಳಲ್ಲಿ ಹೂಳನ್ನು ತೆಗೆಯಲಾಗಿರುತ್ತದೆ.

ಇ) ಸಣ್ಣ ನೀರಾವರಿ ವ್ಯಾಪ್ತಿಯ 21 ಕೆರೆಗಳು ಮತ್ತು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯ 308 ಕೆರೆಗಳಲ್ಲಿ ಹೂಳು ತೆಗೆಯಬೇಕಾಗಿರುತ್ತದೆ.

ಈ) ಸಣ್ಣ ನೀರಾವರಿ ಇಲಾಖೆಗಳಲ್ಲಿ 0.90 ಲಕ್ಷ ರೂ. ಮತ್ತು ಜಿಲ್ಲಾ ಪರಿಷತ್ತಿನಿಂದ 11.77 ಲಕ್ಷರೂ ಬಿಡುಗಡೆ ಮಾಡಲಾಗಿದೆ.

ಗದಗದಲ್ಲಿ ಧಾರವಾಡದಲ್ಲಿರುವ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯ ನಡೆಸುವ ಬಗ್ಗೆ

165-ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗದಗದಲ್ಲಿ ಧಾರವಾಡದಲ್ಲಿರುವ ಜಿಲ್ಲಾ ನ್ಯಾಯಾಲಯ ನಡೆಸುವಂತೆ ಗದಗ ವಕೀಲರ ಸಂಘದಿಂದ ಮನವಿ ಸರ್ಕಾರಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಸರ್ಕಾರ ಈ ಬೇಡಿಕೆ ಈಡೇರಿಸಲು ಯಾವ ಕ್ರಮ ಕೈಗೊಂಡಿದೆ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ಹೌದು.

ಆ) ಮಾನ್ಯ ಉಚ್ಚನ್ಯಾಯಾಲಯದ ಪರಿಶೀಲನೆಯಲ್ಲಿದೆ.

ಸೋಮವಾರ ಪೇಟೆ ತಾಲ್ಲೂಕಿನ ಹಾರಂಗಿ ನಾಲೆಯ ಏತ ನೀರಾವರಿ ಯೋಜನೆ

17 - ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ಉಪಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಹಾರಂಗಿ ನಾಲೆಯಿಂದ ಒಂದು ಏತ ನೀರಾವರಿ ಯೋಜನೆ ಪ್ರಾರಂಭಿಸಿ 12 ವರ್ಷ ಆಗಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಈ ಯೋಜನೆಯನ್ನು ಈವರೆವಿಗೆ ಪೂರ್ಣಗೊಳಿಸದಿರಲು ಕಾರಣವೇನು? ಹಾಗೂ ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):

ಅ) ಹಾರಂಗಿ ಯೋಜನೆಯ ಒದು ಅಂಗವಾಗಿರುವ ಸೋಮವಾರಪೇಟೆ ಏತ ನೀರಾವರಿ ಯೋಜನೆಗೆ ಅಕ್ಟೋಬರ್ 1984 ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದ್ದು, ಈ ಯೋಜನೆಯ ಕಾಮಗಾರಿಯನ್ನು 1986-87ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದೆ.

ಆ) ಈ ಯೋಜನೆಗೆ ಅವಶ್ಯವಾಗಿರುವ ವಿದ್ಯುತ್ ಸರಬರಾಜಿನ ಕಾಮಗಾರಿಗಳು ಕರ್ನಾಟಕ ವಿದ್ಯುತ್ ಮಂಡಳಿ ವತಿಯಿಂದ ಪ್ರಾರಂಭವಾಗಿಲ್ಲದಿರುವುದೂ ಮತ್ತು ಹೆಡ್‌ವರ್ಕ್ಸ್ ಕಾಮಗಾರಿಯ ಬಗ್ಗೆ ಗುತ್ತಿಗೆಯನ್ನು ನೀಡಿರುವವರ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಹೂಡಲಾಗಿದ್ದ ದಾವೆಯನ್ನು ತೆರವು ಮಾಡುವುದರಲ್ಲಿ ಆದ ವಿಳಂಬ ಇವುಗಳೇ ಈ ಯೋಜನೆಯನ್ನು ಪೂರ್ಣಗೊಳಿಸಲು ವಿಳಂಬ ಆಗಿರುವುದಕ್ಕೆ ಮುಖ್ಯ ಕಾರಣ. ಸದರಿ ಯೋಜನೆಯ ಕಾಮಗಾರಿಯನ್ನು ಮುಂದುವರೆಸಲಾಗುತ್ತಿದ್ದು, ಇದನ್ನು 1995-96ನೇ ಸಾಲಿನಲ್ಲಿ ಪೂರ್ಣಗೊಳಿಸುವ ಸಾಧ್ಯತೆಯಿದೆ.

ಪಾಂಡವಪುರ ಕ್ಷೇತ್ರದ ಲೋಕೋಪಯೋಗಿ ಇಲಾಖೆ ಸೇರಿದ ರಸ್ತೆ ದುರಸ್ತಿ

95 - ಶ್ರೀ ಡಿ. ಹಲಗೇಗೌಡ (ಪಾಂಡವಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪಾಂಡವಪುರ ಕ್ಷೇತ್ರದ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳಿಗೆ 1992-93 ಮತ್ತು 1993-94ನೇ ವರ್ಷಗಳಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ?

ಆ) ಈ ಕ್ಷೇತ್ರದಲ್ಲಿ ಬಹುಪಾಲು ರಸ್ತೆಗಳು ಶಿಥಿಲವಾಗಿ ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಮಂಡ್ಯ ಜಿಲ್ಲೆಯ ಬೇರೆ ಕ್ಷೇತ್ರಗಳಿಗೆ ಹೋಲಿಸಿದರೆ ಈ ಕ್ಷೇತ್ರದಲ್ಲಿ ಇಲಾಖೆಯ ರಸ್ತೆ ಕಾಮಗಾರಿಗಳು ಬಹಳ ಕಡಿಮೆ ಪ್ರಮಾಣದಲ್ಲಿ ನಡೆದಿರುವುದು ನಿಜವೇ?

ಈ) ಈ ವಿಷಯದಲ್ಲಿ ತಾರತಮ್ಯ ತೋರಿರುವ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಕೆ.ಹೆಚ್.ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಪಾಂಡವಪುರ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳಿಗೆ ವೆಚ್ಚ ಮಾಡಿರುವ ವಿವರ ಕೆಳಕಂಡಂತಿದೆ :

ವರ್ಷ	ಅನುದಾನ	ವೆಚ್ಚ (ಲಕ್ಷ ರೂ.ಗಳಲ್ಲಿ)
1992-93	28.03	53.06
1993-94	40.35	29.97

ಆ) ಈ ಕ್ಷೇತ್ರದಲ್ಲಿ ಕೆಲವು ರಸ್ತೆಗಳು ನಾದುರಸ್ತೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಮಂಡ್ಯ ಜಿಲ್ಲೆಯ ಇತರೇ ಕ್ಷೇತ್ರದಲ್ಲಿ ನಡೆದಿರುವ ರಸ್ತೆ ಕಾಮಗಾರಿಗಳಿಗೆ ಮಾಡಿರುವ ವೆಚ್ಚದ ಹೋಲಿಕೆ ಮಾಡಿದಲ್ಲಿ ಪಾಂಡವಪುರ ಕ್ಷೇತ್ರ, ಕಿರುಗಾವಲು ಹಾಗೂ ಕೆ.ಆರ್. ಪೇಟೆ ಕ್ಷೇತ್ರದಲ್ಲಿ ರಸ್ತೆ ಕಾಮಗಾರಿ ಕಡಿಮೆ ಪ್ರಮಾಣದಲ್ಲಿ ನಡೆದಿರುವುದು ಕಂಡು ಬರುತ್ತದೆ.

ಕ್ಷೇತ್ರಗಳು	ವೆಚ್ಚ	
	1992-93	1993-94
ಮಂಡ್ಯ	68.46	155.45
ಕೆರೆಗೋಡು	20.01	32.08
ಮದ್ದೂರು	78.99	36.98
ಮಳವಳ್ಳಿ	29.43	42.58
ಕಿರುಗಾವಲು	28.61	22.54
ನಾಗಮಂಗಲ	38.90	62.21
ಕೆ.ಆರ್.ಪೇಟೆ	33.06	25.77
ಶ್ರೀರಂಗಪಟ್ಟಣ	31.62	43.88
ಪಾಂಡವಪುರ	53.06	29.97

ಈ) ವಿಷಯವನ್ನು ಪರಿಶೀಲಿಸಿ ಅಗತ್ಯ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಭಾರಿ ಮಳೆಯಿಂದ ವಿದ್ಯುತ್ ಮಂಡಲಿಗೆ ಆದ ನಷ್ಟದ ಬಗ್ಗೆ

288 - ಶ್ರೀಮತಿ ಮೋಟಮ್ಮ (ಮೂಡಿಗೆರೆ) :ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ತಿಂಗಳು ಬಿದ್ದ ಭಾರಿ ಮಳೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕರ್ನಾಟಕ ವಿದ್ಯುತ್ ಮಂಡಳಿಗೆ ಆದ ನಷ್ಟವೆಷ್ಟು?

ಆ) ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಕಂಬಗಳು, ಟ್ರಾನ್ಸ್‌ಫಾರ್ಮರ್‌ಗಳು ಮತ್ತು ಪಂಪ್ ಹೌಸ್‌ಗಳು ಹಾಳಾಗಿವೆ ಹಾಗೂ ಮುರಿದಿವೆ (ವಿವರ ನೀಡುವುದು)

ಇ) ಎಷ್ಟು ದಿನಗಳಲ್ಲಿ ಇವುಗಳನ್ನು ಸರಿಪಡಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಉಂಟಾದ ನಷ್ಟ ಸುಮಾರು 14.1 ಲಕ್ಷ ರೂ.

ಆ) ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಇ) ಸರಿಪಡಿಸುವ ಕಾರ್ಯವು ಸಮರೋಪಾದಿಯಲ್ಲಿ ಜರುಗುತ್ತಿದ್ದು, ಆದಷ್ಟು ಜಾಗ್ರತೆ ಪೂರ್ಣಗೊಳಿಸಲಾಗುವುದು.

ವಿಧಾನ ಸಭಾ ಸದಸ್ಯರಾದ ಶ್ರೀಮತಿ ಮೋಟಮ್ಮನವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 288ಕ್ಕೆ ಅನುಬಂಧ

ಕ್ರಮ ಸಂಖ್ಯೆ	ತಾಲ್ಲೂಕು	ಹಾಳಾದಮತ್ತು ಮುರಿದಕಂಬಗಳ ಸಂಖ್ಯೆ	ಹಾಳಾದ ವಿತರಣಾ ಟ್ರಾನ್ಸ್‌ಫಾರ್ಮರ್ ಗಳಸಂಖ್ಯೆ	ವಿದ್ಯುತ್ ಸಂಪರ್ಕ ಕಡಿತಗೊಂಡ ನೀರಾವರಿ ಪಂಪ್ ಸೆಟ್‌ಗಳ ಸಂಖ್ಯೆ
1.	ಚಿಕ್ಕಮಗಳೂರು	167	5	165
2.	ಕೊಪ್ಪ	137	-	45
3.	ಮೂಡಿಗೆರ	193	4	305
4.	ನರಸಿಂಹರಾಜಪುರ	81	-	17
5.	ಶೃಂಗೇರಿ	151	-	33
6.	ತರೀಕೆರೆ	23	-	24
7.	ಕಡೂರು	-	1	-
	ಒಟ್ಟು	752	10	589

ಅಧ್ಯಕ್ಷರು : ಚುಕ್ಕೆ ಗುರುತಿಲ್ಲದ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ವರದಿಯನ್ನು ಒಪ್ಪಿಸುವುದು

ಶ್ರೀ ಎಂ.ಎಸ್ ಪಾಟೀಲ್ : ಮಾನ್ಯ ಅಧ್ಯಕ್ಷರೇ, ವಿಧಾನ ಸಭೆಯ ಅಂದಾಜು ಸಮಿತಿಯ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಮೇಲೆ 7ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನು ಒಪ್ಪಿಸಲಾಯಿತು, ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

(i) ಕರ್ನಾಟಕ ಲೋಕಸೇವಾ ಆಯೋಗದ ಪರೀಕ್ಷೆಗಳಲ್ಲಿ ನಡೆದಿರುವ ಹಗರಣದ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಬೆಳಿಗ್ಗೆ ತಮ್ಮ ಕೊಠಡಿಗೆ ಬಂದು ಒಂದು ಪ್ರಮುಖ ವಿಷಯವನ್ನು ಪ್ರಸ್ತಾವ ಮಾಡಲು ಅವಕಾಶ ಕೇಳಿದ್ದೆ. ಅದೇನೆಂದರೆ ಕರ್ನಾಟಕ ಲೋಕಸೇವಾ ಆಯೋಗದವರು ನಡೆಸಿರುವ....

+ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾವಿಬ್ಬರೂ ಬೆಳಿಗ್ಗೆ ಕೊಠಡಿಗೆ ಬಂದು ತಮ್ಮನ್ನು ಕಂಡು ಕರ್ನಾಟಕ ರಾಜ್ಯ ಲೋಕಸೇವಾ ಆಯೋಗದಲ್ಲಿ ನಡೆದಿರುವ ಹಗರಣಗಳ ಬಗ್ಗೆ ಚರ್ಚೆ ಮಾಡಬೇಕೆಂದು ಕೇಳಿದ್ದೆವು....

(ii) ಬರಗಾಲದ ಬಗ್ಗೆ ಹಾಗೂ ವಸತಿ ಸಚಿವರು ಭೂ ಸುಧಾರಣಾ ಕಾಯ್ದೆ ಉಲ್ಲಂಘನೆ ಮಾಡಿರುವ ಬಗ್ಗೆ

ಶ್ರೀ ಆರ್. ವಿ ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮೊನ್ನೆ ಮಾನ್ಯ ಕಂದಾಯ ಸಚಿವರು ಬರಗಾಲದ ಬಗ್ಗೆ ಒಂದು ಸ್ಟೇಟ್ಮೆಂಟ್ ಮಾಡಿದರು. ಆಗ ನಮ್ಮ ನಮ್ಮಲ್ಲಿ ಒಂದು ಅಂಡರ್ ಸ್ಟ್ಯಾಂಡಿಂಗ್ ಬಂದು ಈ ಬರಗಾಲದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಬೇಕೆಂದು ತೀರ್ಮಾನ ಆಯಿತು. ಅದರೆ ಇವತ್ತಿನ ಅಜೆಂಡಾದಲ್ಲಿ ಆ ಬಗ್ಗೆ ಇಲ್ಲ. ಇದರ ಬಗ್ಗೆ ತಾವು ಚರ್ಚೆಗೆ ಯಾವಾಗ ಅವಕಾಶ ಮಾಡಿಕೊಡುತ್ತೀರಿ? ಇವತ್ತು ತಮಗೆ ಗೊತ್ತಿದೆ ರಾಜ್ಯದ ರೈತರು ಕಂಗಾಲಾಗಿದ್ದಾರೆ. ಎರಡನೆಯದು ನಾನು ನಿಯಮ 311ರ ಕೆಳಗೆ ಒಂದು ನೋಟೀಸ್ ಶುಕ್ರವಾರ ಕಳುಹಿಸಿಕೊಟ್ಟಿದ್ದೇನೆ. ಅದೇನೆಂದರೆ ಹೌಸಿಂಗ್ ಅಂಡ್ ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ಶ್ರೀ ಗೋಪಿನಾಥ ಸಾಂಡ್ರಾರವರು 30 ಎಕರೆ ಭೂಮಿಯನ್ನು ಭೂ ಸುಧಾರಣಾ ಕಾಯ್ದೆ ಮತ್ತು ಸ್ಟಾಂಪ್ ರಿಜಿಸ್ಟ್ರೇಷನ್ ಆಕ್ಟ್ ಉಲ್ಲಂಘನೆ ಮಾಡಿ ಪಡೆದುಕೊಂಡಿದ್ದಾರೆ, ಅದರ ಬಗ್ಗೆ ಚರ್ಚೆಮಾಡಬೇಕೆಂದು ನಾವು ನೋಟೀಸ್ ಕೊಟ್ಟಿದ್ದೇವೆ. ತಾವು ಆ ವಿಷಯವನ್ನು ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳುತ್ತೇನೆ. ಮೂರನೆಯದು ಕೆಪಿಎಸ್‌ಸಿ ಬಗ್ಗೆ ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಮಾತನಾಡಲಿ. ಅಮೇಲೆ ನಾವು ಮಾತನಾಡುತ್ತೇವೆ. ನಾವು ನೋಟೀಸ್ ಕೊಟ್ಟಿದ್ದೇವೆ.

ಕರ್ನಾಟಕ ಲೋಕಸೇವಾ ಆಯೋಗದ ಪರೀಕ್ಷೆಗಳಲ್ಲಿ ನಡೆದಿದೆ ಎನ್ನಲಾದ ಹಗರಣಗಳ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಕರ್ನಾಟಕ ಲೊಕಸೇವಾ ಆಯೋಗದವರು ನಡೆಸಿರುವ ಗ್ರೂಪ್ ಎ ಮತ್ತು ಗ್ರೂಪ್ ಬಿ ಹುದ್ದೆಗಳಿಗೆ ಲಿಖಿತ ಪರೀಕ್ಷೆ ನಡೆಸಿದರು. ಆ ಲಿಖಿತ ಪರೀಕ್ಷೆಯಲ್ಲಿ 28 ಸಾವಿರ ಅಭ್ಯರ್ಥಿಗಳು ಭಾಗವಹಿಸಿದ್ದರು. ಅದರ ರಿಸಲ್ಟನ್ನು ದಿನಾಂಕ 6-8-94 ರಂದು ಪ್ರಕಟ ಮಾಡಿದ್ದಾರೆ. ಈ ಲಿಖಿತ ಪರೀಕ್ಷೆ ಪ್ರಾರಂಭವಾದಾಗಿನಿಂದ ಅನೇಕ ಲೋಪದೋಶಗಳು ನಡೆದಿವೆ. ತಮಗೆ ಗೊತ್ತಿರುವ ಹಾಗೆ ಯಾವ ರೀತಿ ಅವರಿಗೆ ಬೇಕಾದವರಿಗೆ ಕಾನೂನು ಬಾಹಿರವಾಗಿ ಅಯ್ಕೆ ಮಾಡಿದ್ದಾರೆ, ಇನ್ನೂ ಅನೇಕ ಷಡ್ಯಂತರಗಳು ಇಲ್ಲಿ ನಡೆದಿವೆ.

12.30 ಪಿ. ಎಂ

ಆ ಪರೀಕ್ಷೆ ಸಂದರ್ಭದಲ್ಲೇ ಹಿಂದಿ ಐತಿಹಾಸಿಕ ಮತ್ತು ಸಾಮಾನ್ಯ ಜ್ಞಾನ ಮುಂತಾದ ಪ್ರಶ್ನೆಪತ್ರಿಕೆಗಳು ಬಯಲಾಗಿವೆ. ಹಿಂದೆ ಪಿಯುಸಿ ಎಸ್‌ಎಸ್‌ಎಲ್‌ಸಿ ಪ್ರಶ್ನೆಪತ್ರಿಕೆಗಳು ಬಯಲಾಗುತ್ತಿದ್ದುದ್ದನ್ನು ನಾವು ನೋಡುತ್ತಿದ್ದೆವು. ಆದರೆ ಈ ಸಾರಿ ಕೆಪಿಎಸ್‌ಸಿಯ ಇಂತಹ ಪ್ರಮುಖ ಪರೀಕ್ಷೆಗಳಲ್ಲೇ ಪ್ರಶ್ನೆಪತ್ರಿಕೆ ಪ್ರಕಟವಾಗಿದ್ದನ್ನು ನಾವೆಲ್ಲಾ ನೋಡಿದ್ದೇವೆ. 1993 ರವರೆಗೆ ಈ ಪರೀಕ್ಷೆ ನಡೆಯಬೇಕಾದರೆ ಇವುಗಳಲ್ಲಿ ಭಾಗವಹಿಸುವಂತಹ ಅಭ್ಯರ್ಥಿಗಳಿಗೆ ಪರೀಕ್ಷಾ ಕೊಠಡಿಯಲ್ಲಿ ಪ್ರತಿದಿನ ಅವರ ಹಾಜರಿ ಪತ್ರವನ್ನು ನೀಡಿ ಪರೀಕ್ಷೆ ಮುಕ್ತಾಯವಾದ ಮೇಲೆ ವಾಪಸ್ ತೆಗೆದುಕೊಳ್ಳುವಂತಹ ಪದ್ಧತಿ ಇತ್ತು. ಇಲ್ಲಿ ತಮಗೆ ಒಂದು ಒರಿಜಿನಲ್ ಕಾಪಿ ಕಳುಹಿಸುತ್ತೇನೆ. ಈ ಪರೀಕ್ಷೆಗೆ ಕೂತಂಥವರು ಫೋಟೋ ಇದೆ. ಆ ಫೋಟೋದಲ್ಲಿ ಕೆಪಿಎಸ್‌ಸಿಯ ಒಂದು ಸೀಲ್ ಇರಬೇಕಾಗಿತ್ತು. ಅವರು ಪರೀಕ್ಷೆಗೆ ಬಂದ ತಕ್ಷಣ ಸಹಿ "ಪಡೆದು

ಅದನ್ನು ಅಲ್ಲೇ ಇಟ್ಟುಕೊಳ್ಳುತ್ತಿದ್ದರು. ನೆಕ್ಸ್ಟ್‌ಡೇ ಬಂದಾಗ ಪುನಃ ಕೊಡುವಂಥ ಪದ್ಧತಿ ಇತ್ತು. ಈ ಸಾರಿ ಕಾನೂನು ಬಾಹಿರವಾಗಿ ಅಭ್ಯರ್ಥಿಯ ಹಾಜರಿಪತ್ರವನ್ನು ಅವರಿಗೇ ಕೊಡುವಂಥ ಪದ್ಧತಿಯನ್ನು ಅನುಸರಿಸಲಾಯಿತು.

ಇದರ ಪರಿಣಾಮ ಏನಾಯಿತು? ಅಲ್ಲಿರುವ ಫೋಟೋ ತೆಗೆದುಹಾಕಿ ಬೇರೆ ಫೋಟೋ ಅಂಟಿಸಿಕೊಂಡು ಬಂದು ಅವರ ಬದಲಿಗೆ ಬೇರೆ ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಬರೆದಿರುವಂತಹ ನೂರಾರು ದಾಖಲೆಗಳು ನನ್ನ ಹತ್ತಿರ ಇವತ್ತು ಇವೆ. ಮತ್ತೆ ಯಾರು ಈ ನಕಲಿ ಹಾಜರಾತಿ ತೆಗೆದುಕೊಂಡಿದ್ದರೋ ಅಂಥವರು ಈ ಪರೀಕ್ಷೆಯಲ್ಲಿ ಭಾಗವಹಿಸಿ ಪಾಸಾಗಿರುವಂತಹ ಒಂದು ಅವ್ಯವಹಾರ ಈ ಸಂದರ್ಭದಲ್ಲಿ ನಡೆದಿವೆ. ಮತ್ತೆ ಆಯೋಗದ ಕಾರ್ಯದರ್ಶಿಗಳಿರಬಹುದು ಅಧ್ಯಕ್ಷರಿರಬಹುದು, ಕೆಲವು ಸದಸ್ಯರು ಇರಬಹುದು, ಅವರಿಗೆ ಬೇಕಾದಂಥವರಿಗೆ ಪ್ರಶ್ನೆಪತ್ರಿಕೆಗಳನ್ನು ಕಳುಹಿಸಿ ಹೆಚ್ಚಿನ ಅಂಕಗಳನ್ನು ಕೊಡಲಿಲ್ಲ ಎಂದು ಅವನ್ನು ವಾಪಸ್ ಪಡೆದು ತಮಗೆ ಬೇಕಾದಂಥವರಿಗೆ ಕಳುಹಿಸಿಕೊಟ್ಟಿರುವ ಉದಾಹರಣೆ ಇವೆ, ಉದಾಹರಣೆಗೆ ರಿಜಿಸ್ಟರ್ ನಂ. 26537, 00239 ಇನ್ನೊಂದು ಪ್ರಶ್ನೆಪತ್ರಿಕೆ, 26380, 503, 28076 - ಈ ಅಭ್ಯರ್ಥಿಗಳು ಹೆಚ್ಚು ಅಂಕವನ್ನು ಗಳಿಸುವ ದೃಷ್ಟಿಯಿಂದ ಒಬ್ಬರಿಗೆ ಕಳುಹಿಸಿ ಬೇರೆಯವರಿಗೆ ವರ್ಗಾವಣೆ ಮಾಡಿರುವಂಥದ್ದು ಇದೆ. ಮತ್ತು ಅಧ್ಯಕ್ಷರೇ, ನಿಮಗೆ ಆಶ್ಚರ್ಯವಾಗಬಹುದು, ಇದನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ; ಯಾರು ಪರೀಕ್ಷೆ ಬರೆಯುವಂಥವರಿಗೆ, ಅವರ ಫೋಟೋ ಮೇಲೆ ಸೀಲ್ ಹಾಕದೆ ಫೋಟೋಗಳನ್ನು ಬದಲಾಯಿಸಿ ಬೇರೆಯವರು ಪರೀಕ್ಷೆ ಬರೆಯುವುದಕ್ಕೆ ಕಾರಣವಾಗಿರುವಂಥ ಉದಾಹರಣೆಯ ದಾಖಲೆಗಳನ್ನು ತಮಗೆ ಕೊಡುತ್ತಿದ್ದೇನೆ.

ಮತ್ತೆ ತಮಗೆ ಗೊತ್ತಿದೆ: ಈ ಉತ್ತರಪತ್ರಿಕೆಗಳನ್ನು ಕಳುಹಿಸುವಾಗ ಒಂದು ಗುಪ್ತನಂ. ಇರುತ್ತದೆ. ಈ ನಿಮಿಷದವರೆಗೆ ಯಾರಿಗೂ ಗೊತ್ತಾಗುವುದಕ್ಕೆ ಸಾಧ್ಯವಿಲ್ಲ. ನಾನು ಪರೀಕ್ಷಾಪ್ರಶ್ನೆಪತ್ರಿಕೆ ಕಳುಹಿಸಿದ ಕೋಡ್ ನಂಬರ್ ಹೇಳುತ್ತಿದ್ದೇನೆ, 379010, 279067, 378969 ಈ ರೀತಿ ಕೆಲವು ಪ್ರಶ್ನೆಪತ್ರಿಕೆಗಳ ಗುಪ್ತನಂಬರ್ ಬಹಿರಂಗವಾಗಿ ಅವರಿಗೆ ಬೇಕಾದವರಿಗೆ ಕೊಟ್ಟು ಅವರನ್ನು ಪಾಸ್ ಮಾಡಿಸಿರುವಂಥ ಉದಾಹರಣೆಗಳಿವೆ. ಅಲ್ಲಿನ ಕಾರ್ಯದರ್ಶಿ ಮಾಡಿರುವ ಉದಾಹರಣೆಯನ್ನು ನಾನು ಕೊಡುತ್ತೇನೆ: ಪುಟ್ಟಸ್ವಾಮಿ ಎಂದು ಮೈಸೂರು ಮಹಾರಾಣಿ ಕಾಲೇಜಿನ ಆಂಗ್ಲ ಪ್ರಾಧ್ಯಾಪಕರಿದ್ದಾರೆ. ಸಾಮಾನ್ಯ ಇಂಗ್ಲೀಷ್ ಪತ್ರಿಕೆ ಮೌಲ್ಯಮಾಪನಕ್ಕೆ ಅವರಿಗೆ ಕಳುಹಿಸಿಕೊಟ್ಟರು, ಸೆಕ್ರೆಟರಿ ಅವರನ್ನು ನೀವು ಹೆಚ್ಚು ಅಂಕ ಕೊಡಬೇಕು ಎಂದು ಕೇಳುತ್ತಾರೆ. ಹೆಚ್ಚು ಅಂಕ ಕೊಡಲಿಲ್ಲ ಎಂದು ಆ ಪ್ರಶ್ನೆಪತ್ರಿಕೆ ವಾಪಸ್ಸ್ ತರಿಸಿ ಕೆಆರ್‌ಪುರಂನ ಕಾಲೇಜಿನ ಅಧ್ಯಕ್ಷರಿಗೆ ಅದನ್ನು ಕಳುಹಿಸಕೊಡುತ್ತಾರೆ. ಅಂದರೆ ಕೆಪಿಎಸ್‌ಸಿಯ ಸೆಕ್ರೆಟರಿಯೇ ತನಗೆ ಬೇಕಾದ ಪ್ರಶ್ನೆಪತ್ರಿಕೆ ಕಳುಹಿಸಿಕೊಡುವುದು ಹೆಚ್ಚು ಅಂಕ ಕೊಡದೇ ಇದ್ದಾಗ ಅದನ್ನು ವಾಪಸ್ ತರಿಸಿ ಹೆಚ್ಚುಅಂಕ ಕೊಡಿಸಿ ಈಗ ಫಲಿತಾಂಶ ಅನೌನ್ಸ್ ಮಾಡಿಸಿರುವ ನೂರಾರು ಉದಾಹರಣೆಗಳಿವೆ. ಅದಕ್ಕಾಗಿ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತಿರುವುದು: ಈ ಪರೀಕ್ಷೆಯನ್ನು ರದ್ದುಗೊಳಿಸಿ ಹೊಸಪರೀಕ್ಷೆ ನಡೆಸಬೇಕು; ಎರಡನೆಯದು ಇಲ್ಲಿ ಬೇಕಾದಂತಹ ಅಭ್ಯರ್ಥಿಗಳ ಬಗ್ಗೆ ಕಾನೂನುಬಾಹಿರವಾಗಿ ಪುನರ್ ಮೌಲ್ಯಮಾಪನ ಮಾಡಿ ಹೆಚ್ಚು ಅಂಕವನ್ನು ಕೊಡಿಸುವಂತಹ ಅತ್ಯಂತ ಭ್ರಷ್ಟ ಹಗರಣ ನಡೆದಿದೆ. ಇದರ ಬಗ್ಗೆ ಕಾನೂನು ಕ್ರಮ ತೆಗೆದು ಕೊಳ್ಳುವ ದೃಷ್ಟಿಯಿಂದ ಸಿಓಡಿ ತನಿಖೆಗೆ ವ್ಯವಸ್ಥೆ ಮಾಡುವಂತಹ ಅಗತ್ಯ ಇದೆ ಎಂದು ಅಧ್ಯಕ್ಷರಲ್ಲಿ ಅರಿಕೆ ಮಾಡುತ್ತೇನೆ. ಇನ್ನು ನನ್ನ ಹತ್ತಿರ ಕೆಲವು ಉದಾಹರಣೆಗಳಿವೆ. ಸನ್ಮಾನ್ಯ ಉಪಮುಖ್ಯಮಂತ್ರಿಗಳಿಗೆ ಆಶ್ಚರ್ಯವಾಗಬಹುದು; ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕೆಲವು ಪ್ರಶ್ನೆಪತ್ರಿಕೆಗಳು ಇನ್ನೂ ಪರೀಕ್ಷಕರ ಹತ್ತಿರವೇ ಇದೆ. ಅದಿನ್ನೂ ಕೆಪಿಎಸ್ಸಿಗೆ ತಲುಪೇ ಇಲ್ಲ, ಅವರ ರಿಸಲ್ಟನ್ನು ಅನೌನ್ಸ್ ಮಾಡಿರುವಂತಹ ನೂರಾರು ಉದಾಹರಣೆಗಳು ನನ್ನ ಹತ್ತಿರ ಇವೆ. ಹೀಗಾಗಿ ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಸ್ಪರ್ಧೆ ಮಾಡಿದಂಥವರಿಗೆ ಮೋಸವಾಗಿದೆ. ಇಲ್ಲಿ

ಕರ್ನಾಟಕ ರಾಜ್ಯ ಪತ್ರಾಗಾರ,
ಗ್ರಂಥಾಲಯ,

ಅವ್ಯವಹಾರದಲ್ಲಿ ತೊಡಗಿ ತನಗೆ ಬೇಕಾದಂಥವರಿಗೆ [illegible] ಮಾಡಿಕೊಳ್ಳುವಂತಹ ಒಂದು ಷಡ್ಯಂತ್ರ ನಡೆದಿದೆ? ಅದಕ್ಕಾಗಿ ತಮ್ಮಲ್ಲಿ...ಒತ್ತಾಯ ಮಾಡುತ್ತಿದ್ದೇನೆ... ಈ ಪರೀಕ್ಷೆಯನ್ನು ಸಂಪೂರ್ಣ ರದ್ದುಪಡಿಸಿ ಹೊಸ ಪರೀಕ್ಷೆಯನ್ನು ನಡೆಸುವ ಅವಕಾಶ ಮಾಡಿಕೊಡಬೇಕು. ಮೂರು ಪ್ರಮುಖ ಆರೋಪ ನನ್ನದು. ಒಂದು, ಯಾರು ಪರೀಕ್ಷೆಗೆ ಹಾಜರಾಗಬೇಕಾಗಿತ್ತೋ ಇವರ ನ್ಯೂನತೆಯಿಂದ ಆ ಫೋಟೋದಲ್ಲಿ ಕೆಪಿಎಸ್‌ಸಿ ಸೀಲ್ ಇಲ್ಲದೆ ಇರುವುದರಿಂದ ಪ್ರತನಿತ್ಯ ಯಾರೂ ಬೇಕಾದರೂ ಬಂದು ಪ್ರಶ್ನೆಪತ್ರಿಕೆ ಬರೆಯುವಂತಹ ಕೆಲಸ ನಡೆದಿದೆ. ಎರಡನೆಯದು ನನ್ನ ಹತ್ತಿರ ದಾಖಲೆ ಇದೆ, ಪರೀಕ್ಷೆ ಹಿಂದಿನ ದಿವಸವೇ ಉತ್ತರಪತ್ರಿಕೆಯನ್ನು ರೆಡಿ ಮಾಡಿಸಿ ಪರೀಕ್ಷೆ ದಿವಸ ಆ ಶೀಟ್ಸನ್ನು ಸೇರಿಸಿರುವ ಉದಾಹರಣೆಯ ಅನೇಕ ನಂಬರ್‌ಗಳ ದಾಖಲೆಗಳು ನನ್ನ ಹತ್ತಿರ ಇದೆ. ಮೂರನೆಯದು ಮೌಲ್ಯಮಾಪನಕ್ಕೆ ಕಳುಹಿಸಿಕೊಟ್ಟಂತಹ ಸಂಬಂಧಪಟ್ಟ ಪ್ರೊಫೆಸರ್‌ಗಳು ಸರಿಯಾದ ರೀತಿ ಇವರು ಹೇಳಿದಂತೆ ಅಂಕಗಳನ್ನು ಕೊಡಲಿಲ್ಲ ಎನ್ನುವ ಕಾರಣಕ್ಕಾಗಿ ಅವನ್ನು ವಾಪಸ್ಸ್ ತರಿಸಿ ಬೇರೆಯವರಿಗೆ ಕೊಡಿಸಿರುವುದು ನಡೆದಿದೆ. ತಮಗೊಂದು ಆಶ್ಚರ್ಯವಾಗಬಹುದು ಅಧ್ಯಕ್ಷರೇ. ಡಾ: ರಾಜೀವನ್ ಎಂಬ ಸಹಾಯಕ ಅಪರಾಧ ಶಾಸ್ತ್ರಜ್ಞರು, ಕೇರಳ ರಾಜ್ಯದ ಪೋಲಿಸ್ ತರಬೇತಿ ಕೇಂದ್ರದಿಂದ ಅವರನ್ನು ವಜಾ ಮಾಡಲಾಗಿದೆ ಸ್ವಾಮಿ. ಅವರು ಮಾನಸಿಕ ಆಸ್ಪತ್ರೆಯಲ್ಲಿರುವ ಕಾರಣ ಅವರ ಹೆಂಡತಿ ವಿವಾಹವಿಚ್ಛೇದನಕ್ಕೆ ಅರ್ಜಿ ಹಾಕಿದ್ದಾರೆ. ಇಂತಹ ವ್ಯಕ್ತಿಗೆ ಅಪರಾಧ ಶಾಸ್ತ್ರದ ಮೌಲ್ಯಮಾಪನ ಮಾಡುವುದಕ್ಕಾಗಿ ಕೆಪಿಎಸ್ಸಿಯವರು ಕಳುಹಿಸಿಕೊಟ್ಟಿದ್ದಾರೆ. ಉತ್ತರ ಪತ್ರಿಕೆಗಳ ಗುಪ್ತನಂಬರ್ ಏನಿದೆ ಅವೆಲ್ಲಾ ಎಲ್ಲಿಹೋಗಿದೆ, ಯಾರು ಬೇಕಾದರೂ ತೆಗೆದುಕೊಂಡು ಹೋಗಿ ಹೆಚ್ಚಿನ ಅಂಕ ಪಡೆಯುವಂತಹ ವ್ಯವಸ್ಥೆಮಾಡಿರುವ ಬಗ್ಗೆ ತಮಗೆ ಕೋಡ್‌ನಂಬರ್‌ಗಳನ್ನು ಕೋಟ್ ಮಾಡಿದ್ದೇನೆ. ಮತ್ತೆ ಯಾವುದೇ ಕಾರಣಕ್ಕೆ ಮರುಮೌಲ್ಯಮಾಪನ ಮಾಡಕೂಡದು ಎಂದು ಕೆಎಟಿ, ಹೈಕೋರ್ಟ್ ಹೇಳಿದೆ. ರೀ ವ್ಯಾಲ್ಯೂಯೇಷನ್ ಮಾಡಲು ಅವಕಾಶ ಇಲ್ಲ. ಆದರೆ ಇವತ್ತು ಅವರಿಗೆ ಬೇಕಾದವರಿಗೆ ಕಾನೂನು ಚೌಕಟ್ಟುಮೀರಿ ಮರುಮೌಲ್ಯಮಾಪನ ಮಾಡಲು ಕಳುಹಿಸಿಕೊಟ್ಟಿರುವ ಉದಾಹರಣೆ ಎಲ್ಲಾ ಕಡೆ ಇದೆ. ಮತ್ತೆ ದುಃಖವಾಗುವ ಸಂಗತಿ ಎಂದರೆ ಅತ್ಯಂತ ಪ್ರಮುಖ ಸ್ಥಾನದಲ್ಲಿರುವ ಕೆಪಿಎಸ್‌ಸಿಯ ಹಿಂದಿನ ಚೇರ್ಮನ್‌ರ ಮಗಳೇ ಪರೀಕ್ಷೆಯಲ್ಲಿ ಒಂದೆರಡು ಗಂಟೆ ಕೂತುಕೊಳ್ಳದಿದ್ದರೂ ಹೆಚ್ಚಿನ ಅಂಕ ಕೊಟ್ಟಿರುವ ಉದಾಹರಣೆಗಳಿವೆ. ಕೆಪಿಎಸ್‌ಸಿ ಸೆಕ್ರೆಟರಿ, ಚೇರ್ಮನ್, ಅಲ್ಲಿನ ಸದಸ್ಯರು, ಅಧಿಕಾರಿಗಳು ಮನಬಂದಂತೆ ತಮಗೆ ಬೇಕಾದ ಕಡೆ ಮೌಲ್ಯಮಾಪನ ಮಾಡಲು ಕಳುಹಿಸಿಕೊಟ್ಟು ಹೆಚ್ಚು ಅಂಕ ಕೊಡಿಸಿ ಪರೀಕ್ಷೆಯಲ್ಲಿ ಪಾಸ್ ಮಾಡಿಸಿರುವಂತಹ ಅತ್ಯಂತ ಖಂಡನೀಯವಾದ ಭ್ರಷ್ಟಾಚಾರ ಹಗರಣ ಈವತ್ತು ನಡೆದಿದೆ. ಅದಕ್ಕಾಗಿ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ: ಈ ರಿಸಲ್ಟ್ ಏನು ಅನೌನ್ಸ್ ಆಗಿದೆ, ಅದನ್ನು ಯಾವುದೇ ಕಾರಣಕ್ಕೂ ಕಾರ್ಯರೂಪಕ್ಕೆ ತರಬಾರದು, ಅದಕ್ಕೆ ಸ್ಟೇ ಕೊಡಬೇಕು, ಹೊಸದಾಗಿ ಪರೀಕ್ಷೆ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಈ ಅವ್ಯವಹಾರದ ಮೇಲೆ ಸಿಓಡಿ ತನಿಖೆ ಮಾಡಿಸಲು ಸರ್ಕಾರ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಅದ್ಯಕ್ಷರೇ ಈ ಬಗ್ಗೆ ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವಂಥದ್ದು ಪ್ರಥಮ ಹಾಗೂ ದ್ವಿತೀಯ ವರ್ಗದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ನಡೆದಿರುವ ಅವ್ಯವಹಾರ ಬಹಳ ತೀವ್ರವಾಗಿದೆ. ಅವ್ಯವಹಾರಗಳನ್ನು ಗಮನಿಸಿ ಪರೀಕ್ಷೆಗಳನ್ನು ಕೂಡಲೇ ರದ್ದುಮಾಡಬೇಕಾದದ್ದು ಅತಿ ಮುಖ್ಯವಾಗಿ ಸರ್ಕಾರ ಮಾಡಬೇಕಾದ ಕೆಲಸ ಒಂದು ಕಡೆ, ಪ್ರವೇಶಪತ್ರಿಕೆ ನೀಡಿಕೆಯಿಂದ ಹಿಡಿದು ಉತ್ತರಪತ್ರಿಕೆಯ ಮೌಲ್ಯಮಾಪನದವರೆಗೂ ನಡೆದಿರುವ ಅನ್ಯಾಯ ಏನಿದೆ ಇದೂ ಇತಿಹಾಸದಲ್ಲೇ ನಡೆದಿರುವಂತಹ ಒಂದು ದೊಡ್ಡ ಹಗರಣ. ಇದನ್ನು ಯಾವರೀತಿ ಯಾವ ಏಜೆನ್ಸಿ ಮೂಲಕ ತನಿಖೆ ಮಾಡಬೇಕೆಂಬುದನ್ನು ಸರ್ಕಾರ ತೀರ್ಮಾನ ಮಾಡಲಿ. ನನಗನ್ನಿಸುತ್ತದೆ, ಸಿಓಡಿಗಿಂತ ಇನ್ನೂ ಉನ್ನತವಾದ ಸಮಗ್ರವಾದ

ನ್ಯಾಯಾಂಗ ತನಿಖೆಯಾಗಲಿ ಎಂಬುದು ನನ್ನ ವಾದ: ಆದರೆ ಶ್ರೀ ಯಡಿಯೂರಪ್ಪನವರು ಸಿಓಡಿ ತನಿಖೆ ಕೇಳುತ್ತಿದ್ದಾರೆ, ಆದ್ದರಿಂದ ಯಾವುದೋ ಒಂದು ತನಿಖೆಯಂತೂ ಆಗಲೇಬೇಕು. ಈ ಲೋಕಸೇವಾ ಆಯೋಗದಲ್ಲಿ ನಡೆಯುತ್ತಿರುವ ಅನ್ಯಾಯಗಳು ನಿರಂತರವಾಗಿ ನಡೆಯುತ್ತಿವೆ. ಇದೆ ಸದನದಲ್ಲಿ ಹಿಂದಿನ ಸರ್ಕಾರವಿದ್ದಾಗ ಸಮಗ್ರ ಚರ್ಚೆ ನಡೆಯಿತು, ಈ ಕೆಪಿಎಸ್‌ಸಿಯಲ್ಲಿ ನಡೆದಿರುವ ಎಲ್ಲಾ ಹಗರಣಗಳ ಬಗ್ಗೆ ತೀವ್ರವಾದ ತನಿಖೆ ಮಾಡಬೇಕಾಗಿದೆ. ಅಲ್ಲಿನ ಅನೇಕ ಸದಸ್ಯರು ಇದರಲ್ಲಿ ಭಾಗಿಯಾಗಿದ್ದಾರೆ, ಕಾರ್ಯದರ್ಶಿ . ಮತ್ತು ಅಧಿಕಾರಿವರ್ಗಗಳು ಭಾಗಿಯಾಗಿದ್ದಾರೆ. ಮೇಲ್ನೋಟಕ್ಕೆ ಇದರಲ್ಲಿ ಏನೂ ಇಲ್ಲ ಎಂದು ಕಂಡರೂ ಸಮಗ್ರ ನ್ಯಾಯಾಂಗ ತನಿಖೆ ನಡೆಯುವುದಾದರೆ ಇದರಲ್ಲಿ ಅನೇಕ ಅನ್ಯಾಯ ನಡೆದಿರುವುದು ಬೆಳಕಿಗೆ ಬರುತ್ತವೆ. ಆದ್ದರಿಂದ ಈ ಬಗ್ಗೆ ಸಮಗ್ರ ನ್ಯಾಯಾಂಗ ತನಿಖೆ ನಡೆಸಲು ಸರ್ಕಾರ ತೀರ್ಮಾನ ಕೈಗೊಳ್ಳಬೇಕು. ಸರ್ಕಾರ ಸಮಂಜಸವಾದ ಪರಿಣಾಮಕಾರಿಯಾದ ಒಂದು ಉತ್ತರವನ್ನು ಈಗ ನಮಗೆ ಕೊಡಬೇಕು. ಮತ್ತು 1ನೇ ತಾರೀಖಿನಿಂದ ಏನು ಅನ್ಯಾಯ ನಡೆದಿದೆ ಇದರ ಬಗ್ಗೆ ಅಲ್ಲಿರುವ ನೌಕರವರ್ಗದವರು ಮತ್ತು ಹೊರಗಡೆ ಪರೀಕ್ಷೆಯಲ್ಲಿ ಅನ್ಯಾಯವಾಗಿರುವವರೂ ಚಳುವಳಿ ನಡೆಸುವಂತಹ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ತಮಗೆ ಹೇಳುವುದಾದರೆ ಯಾರು ಬುದ್ಧಿವಂತರು ನಿಜವಾಗಿಯೂ ಬರೆದು ಪಾಸ್ ಮಾಡಬೇಕೆನ್ನುವವರಿಗೆ ಅಲ್ಲಿ ಯೋಗ್ಯತೆ ಇಲ್ಲ. ಯಾರು ಕದ್ದು ಅಂಕ ಹಾಕಿಸಿಕೊಳ್ಳುತ್ತಾರೆ ಅಂಥವರಿಗೆ ಮಾತ್ರ ಇದರಿಂದ ಅನುಕೂಲವಾಗಿದೆ, ಇದು ನಿರಂತರವಾಗಿ ನಡೆಯುತ್ತಿದೆ. ಆದ್ದರಿಂದ ಇದರ ಬಗ್ಗೆ ಸಂಪೂರ್ಣ ಸಮಗ್ರ ತನಿಖೆ ಆಗಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

+ಶ್ರೀ ಆರ್. ವಿ. ದೇಶಪಾಂಡೆ : (ವಿರೋಧ ಪಕ್ಷದ ನಾಯಕರು): ಅಧ್ಯಕ್ಷರೇ, ಗಂಭೀರವಾದ ಆಪಾದನೆ ಕೆ.ಪಿ.ಎಸ್.ಸಿ ಮೇಲೆ ಆಗಿದೆ. ಹಾಗಾಗಿ ಕೆ.ಪಿ.ಎಸ್.ಸಿ ಮೇಲೆ ವಿಶ್ವಾಸ ಜನ ಇಡಬೇಕಾದರೆ ವಿಚಾರಣೆ ಆಗಬೇಕಾಗುತ್ತದೆ. ಇವತ್ತು ನಿಜವಾಗಿಯೂ ಏನಾಗಿದೆ ಎಂಬದರ ಬಗ್ಗೆ ಸತ್ಯ ಹೊರಗೆ ಬರಬೇಕಾದರೆ ಸಿ.ಓ.ಡಿ. ಎನಕ್ವೈರಿ ಮಾಡಿ. ಮಾನ್ಯ ಯಡಿಯೂರಪ್ಪನವರು ಮತ್ತು ವಾಟಾಳ್ ಹೇಳಿದ್ದರ ಬಗ್ಗೆ ಸರ್ಕಾರದಿಂದ ಉತ್ತರ ಬರಬೇಕಾಗುತ್ತದೆ. ಕೇವಲ ಪಾರ್ಲಿಮೆಂಟರಿ ಅಫೈರ್ಸ್ ಮಿನಿಸ್ಟರ್ ಹೇಳಬಹುದು. ಇವತ್ತೇ ನಮಗೆ ಉತ್ತರ ಬೇಕಾಗುತ್ತದೆ. ಏನಾಗಿದೆ ಎಂದರೆ ಹೊಸದಾಗಿ ಅಧ್ಯಕ್ಷರು ವಿಚಾರಣೆ ಮಾಡುವುದಕ್ಕೆ ಎಂದು ಒಂದು ಕಮಿಟಿ ಮಾಡಿದ್ದರು. ಆದರೆ ಈ ಕಮಿಟಿಗೆ ಅವಕಾಶ ಕೊಟ್ಟಿಲ್ಲ. 25ನೇ ಆಗಸ್ಟ್‌ಗೆ ಪರೀಕ್ಷೆಗೆ ಯಾರು ಕುಳಿತಿದ್ದರು, ಅವರದ್ದು ದೂರು ಇದ್ದರೆ, ಆ ಕಮಿಟಿ ಮುಂದೆ ಅದನ್ನು ಹೇಳಬಹುದು ಎಂದು ಪ್ರಕಟನೆ ಮಾಡಿದರು. ಆದರೆ ಆ ಪ್ರಕಟನೆ ಯಾವ ದಿವಸ ಬಂತು. ಆದರೂ ಸಹ ಒಂದೂವರೆ, ಎರಡು ಸಾವಿರ ಹುಡುಗರು ಒಟ್ಟಾಗಿ ಬಂದು ದೂರು ಹೇಳಿದ್ದಾರೆ. ಈ ಪ್ರಕಾರ ಎನ್‌ಕ್ವೈರಿ ಆಗಬಾರದು. ಕೆ.ಪಿ.ಎಸ್.ಸಿ ಯಿಂದ ವಿಚಾರಣೆ ಆಗಬೇಕಾದರೆ ಅದಕ್ಕೆ ಸರಿಯಾಗಿ ಸಮಯ ಕೊಟ್ಟು ಮಾಡಿಸಬೇಕಾಗುತ್ತದೆ. ಇವರು ಏನು ಮಾಡಿದ್ದಾರೆ, ಭಾಷಾ ಪತ್ರಿಕೆಗಳು ಏನಿವೆ ಯಾವ ವಿದ್ಯಾರ್ಥಿಗಳಿಗೆ ಎರಡು ನೂರರಲ್ಲಿ 146 ಕೊಟ್ಟಿದ್ದಾರೆ, ಆ ಎಲ್ಲಾ ಪೇಪರ್ಗಳನ್ನು ರೀವಾಲ್ಯೂವೇಷನ್ ಮಾಡಿದ್ದಾರೆ. ಅದರೆ ಕೆಲವು ಹಿಂದಿಯಂಥ ಪೇಪರ್‌ನಲ್ಲಿ ಯಾವ ವಿದ್ಯಾರ್ಥಿಗಳಿಗೆ 94 ಕೊಟ್ಟಿದ್ದಾರೆ, ಅವು ರೀವಾಲ್ಯೂವೇಷನ್ ಆಗಿಲ್ಲ. ಮೊದಲನೆಯದಾಗಿ ನಮಗೆ ಗೊತ್ತಾಗಬೇಕಾಗಿದೆ, ರೀವಾಲ್ಯೂವೇಷನ್ ಮಾಡುವ ಅವಶ್ಯಕತೆ ಏನಿತ್ತು? ಅದಕ್ಕೆ ಅವಕಾಶವೇ ಇಲ್ಲ. ಮಾಡಿದ್ದರೆ ಎಲ್ಲಾ ಪೇಪರ್ಗಳನ್ನು ಏಕೆ ಮಾಡಲಿಲ್ಲ. ಹಾಗಾಗಿ ಯಾರಿಗೋ ಸಹಾಯ ಮಾಡುವುದಕ್ಕೆ ಎಂದು ವೆಸ್ಟೆಡ್ ಇಂಟರಸ್ಟ್ ತೆಗೆದುಕೊಂಡು ಕೆಲಸ ಆಗಿದೆ. ಹಾಗಾಗಿ ಇವತ್ತು ಆ ಸಂಸ್ಥೆಯ ಪಾವಿತ್ರ್ಯತೆ, ಗೌರವ ಮತ್ತು ಅಲ್ಲಿ ಕೆಲಸ ಮಾಡುವಂತಹ ಮಾನ್ಯ ಮೆಂಬರ್ಸ್, ಅಧ್ಯಕ್ಷರು ಇವರುಗಳ ಬಗ್ಗೆ ಗೌರವ ಇರಬೇಕಾದರೆ ಇದರಲ್ಲಿ ಸತ್ಯ ಏನು ಎನ್ನುವುದು

ಹೊರಗೆ ಬರಬೇಕು. ಇಲ್ಲಿ ಯಾರು ಸೆಲೆಕ್ಟ ಆಗಿದ್ದಾರೆ, ಯಾರು ಸೆಲೆಕ್ಟ್ ಆಗಿಲ್ಲ ಎನ್ನುವುದು ಮುಖ್ಯವಲ್ಲ. 3000 ಯುವಕರು ಪರೀಕ್ಷೆಗೆ ಕುಳಿತಿದ್ದವರು ಪ್ರತಿಭಟನೆ ಮಾಡಿದಾಗ, ಸರ್ಕಾರ ಸ್ಪಂದಿಸಬೇಕಾಗುತ್ತದೆ. ಇದರ ಬಗ್ಗೆ ವಿಚಾರಣೆ ನಡೆಯಬೇಕಾಗುತ್ತದೆ. ಸತ್ಯ ಹೊರಗೆ ಬರಬೇಕಾಗುತ್ತದೆ. ಒಂದು ವೇಳೆ ಸರಿಯಾಗಿ ನಡೆದಿದ್ದರೆ ಸರಿ. ಹಾಗಾಗಿ ಇದರ ಬಗ್ಗೆ ವಿಚಾರಣೆ ಆಗಬೇಕು. ನಾನು ನೋಡಿದೆ, ಯಾರಿಗೆ ಹಿಂದಿ ಪೇಪರ್ ಕೊಡಬೇಕಾಗಿತ್ತೋ ಆ ಪೇಪರ್ ಅವರಿಗೆ ಕೊಡಲಿಲ್ಲ, ಬೇರೆ ಪೇಪರ್ ಕೊಟ್ಟರು; ಹೀಗಾಗಿ ಹಲವಾರು ದೂರುಗಳು ಇವೆ, ಯಡಯೂರಪ್ಪನವರು ಮತ್ತು ವಾಟಾಳ್ ನಾಗರಾಜ್‌ರವರು ಹೇಳಿದ್ದಾರೆ. ನಾನು ಇಷ್ಟೇ ಹೇಳುವುದು. ಸರ್ಕಾರ ತಕ್ಷಣ ಇದರ ಬಗ್ಗೆ ಒಂದು ವಿಚಾರಣೆ ಮಾಡಬೇಕು. ಸಿ.ಓ.ಡಿ ಎನ್‌ಕ್ವೈರಿ ಮಾಡಿ. ಇವತ್ತು ಮೂರು ಸಾವಿರ ಜನ ಪರೀಕ್ಷೆಗೆ ಯಾರು ಕುಳಿತಿದ್ದರು ಅವರು ನನ್ನನ್ನು ಭೇಟಿ ಮಾಡಿ ಬಂದು ಹಲವಾರುದೂರು ಹೇಳಿದ್ದಾರೆ. ಸಮಯ ಅಭಾವದಿಂದ ನಾನು ಎಲ್ಲಾ ದೂರುಗಳನ್ನು ನಾನು ಹೇಳುವುದಿಲ್ಲ. ಪ್ರೈಮಾಫೇಸಿಯಾಗಿ ಇಲ್ಲಿ ಸರಿಯಾಗಿ ನಡೆದಿಲ್ಲ ಎಂದು ನನಗೆ ಅನ್ನಿಸುತ್ತಿದೆ. ಸರ್ಕಾರದವರು ಇದರ ಬಗ್ಗೆ ವಿಚಾರಣೆ ಮಾಡಬೇಕು ಎಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ.

+ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಅಧ್ಯಕ್ಷರೇ, ಈ ಭಾರೀ ಪರೀಕ್ಷೆಯಲ್ಲಿ ಅಧಿಕಾರ ದುರುಪಯೋಗವಾಗಿದೆ. ಜೊತೆಗೆ ಜಾತಿ ಮತ್ತು ಸಂಬಂಧ ಇಟ್ಟು ಕೊಂಡಿದಂಥ ವ್ಯಕ್ತಿಗಳಿಗೆ ಮಾತ್ರ ಈ ರಾಜ್ಯದಲ್ಲಿ ಅವಕಾಶ ಸಿಗುತ್ತದೆ. ಎಂಬುದನ್ನು ತೋರಿಸುತ್ತಿದೆ. ಬುದ್ದವಂತಿಕೆಗೆ ಈ ಪರೀಕ್ಷೆಯಿಂದ ಸಂಪೂರ್ಣ ಬೆಂಕಿ ಬಿದ್ದಿದೆ. ಯಾರು ಪರೀಕ್ಷೆ ವ್ಯಾಲ್ಯೂವೇಷನ್ ಮಾಡಿದ್ದಾರೆ ಅವರಿಗೆ ಸ್ಪಷ್ಟವಾಗಿ ತಲೆ ಕೆಟ್ಟಿದೆ ಎಂಬ ಸರ್ಟಿಫಿಕೇಟ್ ಇದೆ. ಅಂತಹ ಒಬ್ಬ ಹುಚ್ಚನ ಹತ್ತಿರ ಉತ್ತರ ಪತ್ರಿಕೆಗಳ ವ್ಯಾಲ್ಯೂಯೇಷನ್ ಮಾಡಿಸಿದ್ದಾರೆ. ಇದು ವಿಚಿತ್ರವಾದ ಸಂಗತಿ. ಪ್ರಶ್ನೆ ಪತ್ರಿಕೆಗಳು ಹೊರಗಡೆ ಬರುವುದು ತುಂಬಾ ಆಶ್ಚರ್ಯವಾದ ಸಂಗತಿ. ಇನ್ನೊಂದು ಆಶ್ಚರ್ಯದ ಸಂಗತಿ ಎಂದರೆ ಯಾರ್ಯಾರು ವ್ಯಾಲ್ಯೂಯೇಷನ್ ಮಾಡಿದ್ದಾರೆ ಆ ಪ್ರೊಫೆಸರ್‌ಗಳ ಲಿಸ್ಟ್ ಹೊರಗೆ ಬಂದಿದೆ. ಆ ಲಿಸ್ಟ್ ಅನ್ನು ಮಾರಾಟ ಮಾಡುತ್ತಿದ್ದಾರೆ. ಇಂತಿಂಥ ಪ್ರೊಫೆಸರ್‌ರಿಂದ ಈ ಬಾರಿ ವ್ಯಾಲ್ಯುಯೇಷನ್ ಮಾಡಿಸುತ್ತಿದ್ದಾರೆ. ಪ್ರೊಫೆಸರ್‌ಗಳ ಲಿಸ್ಟ ಬೇಕೇ ಹಣ ಕೊಟ್ಟು ಲಿಸ್ಟ್ ತೆಗೆದುಕೊಳ್ಳಿ ಎಂದು ನಡೆಯುತ್ತಿದೆ. ಪೇಪರ್ ನಂಬರ್ ಹೊರಗೆ ಬರುತ್ತಿದೆ. ಈ ಒರಿಜಿನಲ್ ಷೀಟ್ನಲ್ಲಿ ಬೇಕಾದರೆ ರಿಜಿಸ್ಟರ್ ನಂಬರ್ ಬರೆಯಬೇಕಂತೆ ಅಡಿಷನಲ್ ಷೀಟ್ನಲ್ಲಿ ನಂಬರ್ ಬರಯಬಾರದಂತಹ ಉತ್ತರ ಪತ್ರಿಕೆಗಳ ರಿಸಲ್ಟ್ ಅನ್ನು ವಿತ್‌ಹೆಲ್ಡ್ ಮಾಡಿದ್ದಾರೆ. ರಿಸಲ್ಟಗಳನ್ನು ಹೊರಗೆ ಹಾಕಿಲ್ಲ. ಇಂತಹ ವಿಚಿತ್ರ ಸಂಗತಿ ನಡೆದಿದೆ. ತುಂಬಾ ಆಶ್ಚರ್ಯದ ಸಂಗತಿ ಎಂದರೆ ಯಾರು 140 ನಂಬರ್ ಪಡೆದಿರುತ್ತಾರೆ ಅವರ ಉತ್ತರ ಪತ್ರಿಕೆಗಳನ್ನು ರೀ ವ್ಯಾಲ್ಯುಯೇಷನ್ ಮಾಡುತ್ತಾರೆ. ರೀ ವ್ಯಾಲ್ಯುಯೇಷನ್ ಮಾಡುವುದಕ್ಕೆ ಯಾರು ಅಧಿಕಾರ ಕೊಟ್ಟರೋ ನನಗೆ ಗೊತ್ತಿಲ್ಲ. ಅವರು ಅಕಾಡಮಿಕ್ ರೂಲ್ಸ್‌ಗಳನ್ನು ನಾವಿಲ್ಲಿ ತಂದಿದ್ದೇವೆಂದು ಹೇಳುತ್ತಾರೆ. ಆದರೆ ಇದನ್ನು ತರಬೇಕಾದರೆ ರೆಸಲ್ಯೂಷನ್ ಪಾಸ್ ಮಾಡಬೇಕು. ರೆಸಲ್ಯೂಷನ್ ಪಾಸ್ ಮಾಡಬೇಕಾದರೆ 8 ಜನ ಸದಸ್ಯರು ಇರಬೇಕು, 4 ಜನ ಸದಸ್ಯರು ಇಲ್ಲ, ಬರೀ 4 ಜನ ಸದಸ್ಯರಿರುವ ಸಂದರ್ಭದಲ್ಲಿ ರೆಸಲ್ಯೂಷನ್ ಪಾಸ್ ಮಾಡಿಕೊಳ್ಳುತ್ತಾರೆ. ಇದಕ್ಕೇನಾದರೂ ಬೆಲೆ ಇದೆಯೇ? ಒಬ್ಬರು ಬೆಂಗಳೂರಿನ ಜಯನಗರದಲ್ಲಿ ಒಬ್ಬ ಹೆಣ್ಣು ಮಗಳ ಹತ್ತಿರ ವ್ಯಾಲ್ಯುಯೇಷನ್ ಮಾಡಿಸಿದರು. ಆಕೆಗೆ ಕನ್ನಡ ಓದುವುದಕ್ಕೆ ಬರೆಯುವುದಕ್ಕೆ ಮತ್ತು ಮಾತನಾಡುವುದಕ್ಕೂ ಬರುವುದಿಲ್ಲ, ಅಂತಹವರ ಹತ್ತಿರ ಕನ್ನಡ ಪರೀಕ್ಷೆಯನ್ನು ವ್ಯಾಲ್ಯುಯೇಷನ್ ಮಾಡಿಸಿದ್ದಾರೆ. ಕರ್ನಾಟಕದಲ್ಲಿ ಈ ರೀತಿಯ ದುರುಪಯೋಗ ಇಷ್ಟೊಂದು ಅನ್ಯಾಯ, ಭ್ರಷ್ಟಾಚಾರ ಇನ್ಯಾವ ಪರೀಕ್ಷೆಯಲ್ಲೂ ಇತಿಹಾಸದಲ್ಲಿ ನಡೆದಿರಲಿಕ್ಕಿಲ್ಲ. ನಡೆದು ಹೋಗಿದೆ, ಆದರೆ ಇದನ್ನು ಮುಚ್ಚಿ ಹಾಕುವ ಪ್ರಯತ್ನ ಮಾಡಿದರೆ ಇನ್ನೂ ಕೆಟ್ಟ ಹೆಸರು ನಿಮ್ಮ ಸರಕಾರಕ್ಕೆ

ಬರುತ್ತದೆ. ಭ್ರಷ್ಟಾಚಾರವಾಗಿರುವ ಸಂದರ್ಭದಲ್ಲಿ ಹರಿಯಾಣದಲ್ಲಿ ಮತ್ತೆ ಮರುಪರೀಕ್ಷೆ ಮಾಡಿ ಇಡೀ ದೇಶಕ್ಕೆ ಮಾರ್ಗದರ್ಶನ ಮಾಡಿದ್ದಾರೆ. ಅನ್ಯಾಯವಾಗಿರುವಂತಹ ದಾಖಲಾತಿಗಳು ಇವೆ. ಇದರಲ್ಲಿ ಆ ಪಕ್ಷ ಈ ಪಕ್ಷವೆಂದು ಇಲ್ಲ. ಭ್ರಷ್ಟಾಚಾರ ಮಾಡಿದಂತಹ ವ್ಯಕ್ತಿಗಳಿಗೆ ಖಂಡಿತ ಶಿಕ್ಷೆಯಾಗಬೇಕು. ಈ ರೀತಿ ಅನ್ಯಾಯವಾಗುತ್ತಿರುವಂತಹ ಸಂದರ್ಭದಲ್ಲಿ ಈ ರಾಜ್ಯದಲ್ಲಿ ನಾವು ಸಹಿಸಲಿಕ್ಕೆ ಸಾಧ್ಯವಿಲ್ಲವೆನ್ನುವುದನ್ನು ಸರಕಾರ ತೋರಿಸಿಕೊಡಬೇಕು. ಮತ್ತು ಯಾರು ಪರೀಕ್ಷೆಗೆ ಕೂರುವಂತಹ ವ್ಯಕ್ತಿಗಳಿದ್ದಾರೆ ಅವರಿಗೆ ಮುಂದೆ ನಂಬಿಕೆ ಬರಬೇಕು. ಇಲ್ಲದಿದ್ದರೆ ಕೆಪಿಎಸ್‌ಸಿ ಬಗ್ಗೆ ಜನಗಳಲ್ಲಿ ಪೂರ್ಣ ನಂಬಿಕೆ ಹೊರಟು ಹೋಗುತ್ತದೆ. ಇಲ್ಲಿ ಯಾರ ಹತ್ತಿರ ಹಣವಿರುತ್ತದೋ ಅವರು ಮಾತ್ರ ಪರೀಕ್ಷೆಗೆ ಕೂರಬಹುದು. ಯಾರು ಅವರ ಜಾತಿ ಇರುತ್ತಾರೆ ಯಾರು ಅವರ ಸಂಬಂಧಿಕರಿದ್ದಾರೆ ಅವರು ಮಾತ್ರ ಪರೀಕ್ಷೆಗೆ ಕೂರಬೇಕು; ಇಂತಹ ದುಸ್ಥಿತಿಗೆ ಬರುತ್ತದೆ. ಬುದ್ಧಿವಂತಿಕೆಗೆ ಪ್ರೋತ್ಸಾಹ ಇದೆ ಎಂದು ತೋರಿಸಿಕೊಡಬೇಕಾಗುತ್ತದೆ. ಬುದ್ಧಿವಂತಿಕೆಗೆ ಬೆಂಕಿ ಹಚ್ಚುವುದಕ್ಕೆ ಹೊರಟಿಲ್ಲವೆಂಬುದನ್ನು ತೀರ್ಮಾನ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಯಾರು ಅನ್ಯಾಯ ಮಾಡಿದ್ದಾರೆ ಅಂತಹ ವ್ಯಕ್ತಿಗಳ ಕಡೆಗೆ ಗಮನ ಕೊಡಬೇಕಾಗುತ್ತದೆ. ಇದರ ಬಗ್ಗೆ ತನಿಖೆ ಮಾಡುತ್ತೀರಿ ಎಂಬ ವಿಶ್ವಾಸ ನನಗೆ ಇದೆ ಯಾರು ಭ್ರಷ್ಟಾಚಾರ ಮಾಡಿದ್ದಾರೆಂದು ಮೇಲುನೋಟಕ್ಕೆ ಕಾಣುತ್ತಿದೆ. ಪತ್ರಿಕೆಗಳು ಸಿಕ್ಕಿದೆ. ಯಡಿಯೂರಪ್ಪನವರು ಹೇಳಿದರು ಪುಟ್ಟಸ್ವಾಮಿ ಎನ್ನುವಂತಹ ವ್ಯಕ್ತಿಗೆ ಸ್ವತಃ ಸನ್ನಾ ಉಲ್ಲಾ ಎಂಬ ಕಾರ್ಯದರ್ಶಿ ಪತ್ರ ಬರೆದಿದ್ದಾರೆ. ನಾನು ನಿಮಗೆ ಮಾರ್ಕ್ಸ್ ಹಾಕಬೇಕೆಂದು ಹೇಳಿದ್ದೆ, ನೀವು ಮಾರ್ಕ್ಸ ಹಾಕಿಲ್ಲ, ಅದಕ್ಕೋಸ್ಕರ ಪತ್ರಿಕೆಗಳನ್ನು ವಾಪಸ್ಸ್ ಕೊಡಿ ನಾನು ಬೇರೆ ಕಡೆ ಕಳುಹಿಸಿಕೊಡುತ್ತೇನೆಂದು ಇದೆ. ನೀವು ದಾಖಲಾತಿಗಳನ್ನು ಕೇಳಿದರೆ ಸಂಪೂರ್ಣವಾಗಿ ಕೊಡುತ್ತೇವೆ. ಇವತ್ತೇ ಇಂತಹ ವ್ಯಕ್ತಿಯನ್ನು ಸಸ್ಪಂಡ್ ಮಾಡಬೇಕು. ಇಲ್ಲದಿದ್ದರೆ ಈ ರಾಜ್ಯದಲ್ಲಿ ಏನೂ ಬೇಕಾದರೂ ನಡೆಯುತ್ತದೆ ಎಂಬ ಸಂಶಯ ಬರುತ್ತದೆ. ವ್ಯಾಲ್ಯುಯೇಷನ್ ಮಾಡಬೇಕಾದರೆ ಕನಿಷ್ಟ 15 ವರ್ಷ ಅನುಭವವಿರಬೇಕೆಂದು ಇದೆ. ಆದರೆ 2-3 ವರ್ಷವಾಗಿರುವ ವ್ಯಕ್ತಿಗಳು ಈಗ ಟೀಚಿಂಗ್ ಮಾಡುತ್ತಿರುವ ವ್ಯಕ್ತಿಗಳಿಗೆ ವ್ಯಾಲ್ಯುಯೇಷನ್ ಮಾಡಲಿಕ್ಕೆ ಪೇಪರ್‌ಗಳನ್ನು ಕಳುಹಿಸಿದ್ದಾರೆ. ಇವೆಲ್ಲಾ 15 ವರ್ಷದ ಪ್ರಶ್ನೆಯೇ ಇಲ್ಲ. ಎಲ್ಲಾ ಕಾನೂನುಗಳನ್ನು ಗಾಳಿಗೆ ತೂರಿ ಪರೀಕ್ಷೆ ನಡೆದಿದೆ. ಪರೀಕ್ಷೆ ನಡೆದಿದೆ ಎನ್ನುವ ಸಮಾಧಾನ ಬಿಟ್ಟರೆ ಬೇರೇನೂ ಇಲ್ಲ. ಕೆಪಿಎಸ್‌ಸಿಯಲ್ಲಿ ನ್ಯಾಯ ಸಿಗುವುದಿಲ್ಲವೆನ್ನುವ ಪರಿಸ್ಥಿತಿ ಬಂದಿದೆ. ನಾನು ರಾಜ್ಯ ಸರಕಾರಕ್ಕೆ ಒತ್ತಾಯ ಮಾಡುವುದಿಷ್ಟೇ, ಈ ತಕ್ಷಣ ಮರು ಪರೀಕ್ಷೆಗೆ ಆರ್ಡರ್ ಮಾಡಬೇಕು. ತಪ್ಪಿತಸ್ಥರು ಯಾರು ಅಧ್ಯಕ್ಷರು ಕಾರ್ಯದರ್ಶಿಯವರು ಇದ್ದಾರೆ ಅವರನ್ನು ಸಸ್ಪೆನ್‌ಷನ್ನಲ್ಲಿಡಬೇಕು ಈ ದಿಟ್ಟ ಕ್ರಮವನ್ನು ಸರ್ಕಾರ ಘೋಷಣೆ ಮಾಡಬೇಕು.

+ಶ್ರೀ ಪಿ. ಜಿ. ಆರ್ ಸಿಂಧ್ಯ : (ಕನಕಪುರ): 2-3 ವರ್ಷದ ಹಿಂದೆ ಮಾನ್ಯ ಉಪಮುಖ್ಯಮಂತ್ರಿಗಳು ಈ ಸಭೆಯ ಅಧ್ಯಕ್ಷರಾದಂತಹ ಸಂದರ್ಭದಲ್ಲಿ ಲೋಕಸೇವಾ ಆಯೋಗದಲ್ಲಿ ಸರ್ಕಾರಿ ನೌಕರರ ಮತ್ತು ಕೆಲವು ಅಧಿಕಾರಿಗಳನ್ನು ನೇಮಕ ಮಾಡತಕ್ಕಂತಹ ವಿಚಾರದಲ್ಲಿ ಲೋಕೋಪಯೋಗಿ ಇಲಾಖೆ ಬಗ್ಗೆ ನಾನು ಆಕ್ಷೇಪ ಎತ್ತಿದಾಗ ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಅವಕಾಶವಿದೆಯೋ ಇಲ್ಲವೋ ಎನ್ನುವುದನ್ನು ವಿಮರ್ಶೆ ಮಾಡಿ ನಂತರ ಪರವಾನಗಿ ಕೊಟ್ಟಿದ್ದರು. ಇದು ಅತ್ಯಂತ ದುರ್ದೈವದ ವಿಚಾರ. ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಸಂಸ್ಥೆಗಳನ್ನು ಇನ್ಸ್‌ಟಿಟ್ಯೂಷನ್‌ಗಳನ್ನು ಕಟ್ಟತಕ್ಕಂಥಾದ್ದು ಕಷ್ಟದ ಕೆಲಸ. ಅಂಥಾದ್ದರಲ್ಲಿ ಈ ಸಂಸ್ಥೆಗಳ ಕ್ರೆಡಿಬಿಲಿಟಿಯನ್ನು ವಿಶ್ವಾಸವನ್ನು ಪ್ರಶ್ನೆ ಮಾಡಿದಾಗ ಪ್ರಜಾತಂತ್ರ ವ್ಯವಸ್ಥೆಗೆ ಬಹಳ ತೊಂದರೆಯಾಗುತ್ತದೆ.

ಲೋಕಸೇವಾ ಆಯೋಗದಲ್ಲಿ ಸಾಮಾನ್ಯವಾಗಿ ಬಹಳ ನಿವೃತ್ತರಾದ, ಉನ್ನತವಾದ ಸ್ಥಾನದಲ್ಲಿದ್ದು ಕೆಲಸ ಮಾಡಿರತಕ್ಕಂಥ ಅಧಿಕಾರಿಗಳನ್ನು ಅಥವಾ ಸಮಾಜದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಬಹಳ ಎತ್ತರಕ್ಕೆ ಬೆಳೆದಿರತಕ್ಕಂಥ ವ್ಯಕ್ತಿಗಳನ್ನು ನೇಮಕ ಮಾಡಿಕೊಂಡು

ಬಂದಿರತಕ್ಕಂಥ ಒಂದು ಸತ್ಸಂಪ್ರದಾಯವನ್ನು ಹಾಕಿಕೊಂಡು ಬಂದಿದ್ದೇವೆ. ಅತ್ಯಂತ ದುರ್ದೈವ ವಿಚಾರ, ಕಳೆದ ಹಲವಾರು ವರ್ಷಗಳಲ್ಲಿ ಈ ಒಂದು ಸಂಸ್ಥೆಗೆ, ಸಂಸ್ಥೆಯ ಹೆಸರಿಗೆ ಕಳಂಕ, ಲೋಪ ಬಂದಿರತಕ್ಕಂಥದ್ದು ಅತ್ಯಂತ ದುರ್ದೈವದ ವಿಚಾರ. ಇಂತಹ ಒಂದು ವಿಚಾರವನ್ನು ಸದನದಲ್ಲಿ ನಾವು ಚರ್ಚೆ ಮಾಡಬಾರದು ಎನ್ನತಕ್ಕ ಮನಸ್ಸು ಇದೆ. ಏಕೆಂದರೆ ಇದನ್ನು ಸಾರ್ವಜನಿಕವಾಗಿ ಚರ್ಚೆ ಮಾಡುವುದರಿಂದಲೇ ಇದರ ವಿಶ್ವಾಸಾರ್ಹತೆಯ ಪ್ರಶ್ನಾರ್ಹವಾಗುತ್ತದೆ ಮತ್ತು ಜನಗಳಿಗೆ ಇದರ ಬಗ್ಗೆ ವಿಶ್ವಾಸ ಹೋಗುತ್ತದೆ. ಮತ್ತೆ ಯಾವ ಲೋಕಸೇವಾ ಆಯೋಗದಲ್ಲಿ ನಾವು ಭ್ರಷ್ಟಾಚಾರದ ಆಪಾದನೆಯನ್ನು ಮಾಡಿದ ಮೇಲೆ ಲೋಕಸೇವಾ ಆಯೋಗ ನೇಮಕ ಮಾಡಿದಂತಹ ನಮ್ಮ ಕಾರ್ಯಾಂಗ ಯಾವ ಮಟ್ಟಿಗೆ ಕೆಲಸ ಮಾಡಬೇಕು ಎಂಬುದನ್ನು ಸಹ ನಾವು ವಿಚಾರ ಮಾಡಬೇಕಾಗುತ್ತದೆ. ಏಕೆಂದರೆ ಯಾರು ನೇಮಕ ಮಾಡುತ್ತಾರೆ, ಅವರೇ ಮುಂದೆ ಕಾರ್ಯಾಂಗದ ಎಲ್ಲಾ ಜವಾಬ್ದಾರಿಯನ್ನು ಸಹ ಹೊರತಕ್ಕ ಜನ. ಇದು ದುರ್ದೈವ. ಇದಕ್ಕೆ ಯಾರೇ ಜವಾಬ್ದಾರಿ ಇರಲಿ, ಇಲ್ಲಿ ವಿರೋಧ ಪಕ್ಷ, ಆಡಳಿತ ಪಕ್ಷ, ಬೇರೆ ಪಕ್ಷ ಎನ್ನುವುದಕ್ಕಿಂತ ಹೆಚ್ಚಾಗಿ ಅದು ಯಾರೇ ಆಗಿರಲಿ ಇಂತಹ ಒಂದು ಅವಕಾಶ ಮಾಡಿ ಕೊಟ್ಟಿರತಕ್ಕದ್ದೇ ತಪ್ಪು ಎಂದು ನಾನು ತಿಳಿದುಕೊಂಡಿದ್ದೇನೆ. ಇಂಗ್ಲೀಷ್‌ನಲ್ಲಿ ಒಂದು ಗಾದೆ ಇರುವ ಹಾಗೆ 'Caesar's Wife should be above suspicion.' ಎನ್ನುವ ರೀತಿಯಲ್ಲಿ ಇದು ಆಗಬೇಕಾಗುತ್ತದೆ. ಆದರೆ ಇದು ಬಯಲಿಗೆ ಬಂದಿದೆ. ಇಂತಹ ಸಂದರ್ಭದಲ್ಲಿ ನಮ್ಮ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಒಂದು ದೊಡ್ಡ ಕಳಂಕ ಇದೆ ಎಂದು ನಾನು ತಿಳಿದಿದ್ದೇನೆ. ಏಕೆಂದರೆ ನನಗೆ ತಿಳಿದಿರುವ ಹಾಗೆ ಇವತ್ತಿಗೂ ಸಹ ನಮ್ಮ ರಾಷ್ಟ್ರದ ಅನೇಕ ರಾಜ್ಯ ಸರ್ಕಾರಗಳಿಗೆ ಹೋಲಿಕೆ ಮಾಡಿಕೊಂಡು ನೋಡಿದಾಗ ನಮ್ಮ ಕಾರ್ಯಾಂಗ ಇರುವುದರಲ್ಲಿ ಒಳ್ಳೆಯ ಹೆಸರು ಸಂಪಾದನೆ ಮಾಡಿರತಕ್ಕದ್ದು, ಒಳ್ಳೆಯ ಅಧಿಕಾರಿಗಳು ಇರತಕ್ಕ ಕಾರ್ಯಾಂಗ ಇದು. ಆದರೆ ಇಂತಹ ವ್ಯವಸ್ಥೆಗೆ ನಾವು ಬೀಜವನ್ನು ನೆಡತಕ್ಕ ಸಂಧರ್ಭದಲ್ಲಿ ತಪ್ಪು ಮಾಡುತ್ತಿದ್ದೇವೇನೋ ಎಂದು ಎನ್ನಿಸುತ್ತಿದೆ. ಆದರೆ ಕಳೆದ ಸಾರಿ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ಆವತ್ತಿನ ಮುಖ್ಯಮಂತ್ರಿಗಳು ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿರಲಿಲ್ಲ. ಮಾನ್ಯ ಅಧ್ಯಕ್ಷರೂ ಸಹ ಸಮ್ಮತಿಯನ್ನು

ಕೊಟ್ಟಿದ್ದರು. ಇದರ ಬಗ್ಗೆ ವಿಚಾರಣೆ ಮಾಡಬೇಕು ಎಂದು. ಅದೇನು ವಿಚಾರಣೆ ಆಯಿತೋ ನನಗಂತೂ ಗೊತ್ತಿಲ್ಲ. ಅಂತೂ ಅವರೆಲ್ಲಾ ಕೆಲಸದಲ್ಲಿ ಇವತ್ತಿಗೂ ಇದ್ದಾರೆ. ಹಲವಾರು ಆಪಾದನೆಗಳು ಅವರ ಮೇಲೆ ಇತ್ತು. ಅವೆಲ್ಲವನ್ನೂ ನಾನು ಸದನದಲ್ಲಿ ಪ್ರಸ್ತಾವ ಮಾಡಿದ್ದೇನೆ. ಮತ್ತೆ ಅದು ಆದ ನಂತರ ಪದೇ ಪದೇ ಈ ರೀತಿ ದೂರುಗಳು ಬರುತ್ತಿವೆ. ಪ್ರಶ್ನೆ ಪ್ರತ್ರಿಕೆ ಬಯಲಾಗಿರುವುದು ಹಾಗೂ ಹಣವನ್ನು ತೆಗೆದುಕೊಂಡು ನಂಬರ್ಗಳನ್ನು ಕೊಟ್ಟರು ಎಂದು ಹೇಳುತ್ತಿರತಕ್ಕ ಅನೇಕ ಆಪಾದನೆಗಳು ಬರುತ್ತಿವೆ. ಇದು ಅಲ್ಲಿ ಕೆಲಸ ಮಾಡುತ್ತಿರತಕ್ಕ ಪ್ರಾಮಾಣಿಕವಾದ ಜನ ಇರಬಹುದು, ಆದರೆ ಅವರ ಬಗ್ಗೆ ಸಹ ಇವತ್ತು ದೂರು ಬಂದಿದೆ. ಅವರೂ ತಲೆ ತಗ್ಗಿಸತಕ್ಕ ವಿಚಾರ ಇದು. ಆದ್ದರಿಂದ ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದನ್ನು ಬಹಳ ಪಕ್ಷ ಮತ್ತು ಸರ್ಕಾರ ಎನ್ನುವುದಕ್ಕಿಂತ ಹೆಚ್ಚಾಗಿ ಈ ಸಂಸ್ಥೆಯನ್ನು ಮತ್ತು ನಮ್ಮ ರಾಜ್ಯದ ಕಾರ್ಯಾಂಗಕ್ಕೆ ಚ್ಯುತಿ ಬರದೆ ಇರುವ ಹಾಗೆ ಒಂದು ಕ್ರಮ ತೆಗೆದುಕೊಳ್ಳಬೇಕು ಹಾಗೂ ಇದರ ಬಗ್ಗೆ ಒಂದು ಉನ್ನತ ಮಟ್ಟದ ವಿಚಾರಣೆ ಆಗಬೇಕು. ಯಾರೋ ಒಬ್ಬ ಡಿವೈಎಸ್ಪಿ ಕಳುಹಿಸಿ ಸಿಓಡಿ ಎನ್‌ಕ್ವೈರಿ ಮಾಡಿಸುವುದರಲ್ಲಿ ನನ್ನ ಅಭಿಪ್ರಾಯದಲ್ಲಿ ಅರ್ಥ ಇಲ್ಲ, ಅಥವಾ ಐಜಿಪಿ ಅಧಿಕಾರಿ ಹೋಗಿ ಎನ್‌ಕ್ವೈರಿ ಮಾಡುವುದರಲ್ಲಿ ಅರ್ಥ ಇಲ್ಲ, ನನಗೆ ಅನಿಸುತ್ತದೆ ಯಾರಾದರೂ ಒಬ್ಬ ನಿವೃತ್ತ ಹೈಕೋರ್ಟಿನ

ನ್ಯಾಯಾಧೀಶರ ಮುಖಾಂತರವಾಗಿ ಈ ಸಂಸ್ಥೆಯನ್ನು ಸರಿಮಾಡುವ ದೃಷ್ಟಿಯಿಂದಾಗಿ ಈ ಸಂಸ್ಥೆಯ ಬಗ್ಗೆ ಈ ರೀತಿ ಆಪಾದನೆಗಳು ಬರದೆ ಇರುವ ಹಾಗೆ ಮತ್ತು ಕಳೆದ ಎರಡು ಮೂರು ವರ್ಷಗಳಲ್ಲಿ ನಡೆದಿದೆ ಎಂದು ಹೇಳಿರತಕ್ಕ ಆಪಾದನೆಗಳ ಬಗ್ಗೆ ಒಂದು ವಿಚಾರಣೆ ಮಾಡಿ, ಒಂದು ವಿಚಾರಣಾ ಆಯೋಗವನ್ನು ನೇಮಕ ಮಾಡತಕ್ಕದ್ದು ಸೂಕ್ತ ಎನ್ನತಕ್ಕದ್ದು ನನ್ನ ಅಭಿಪ್ರಾಯ. ತಾವು ಹೇಳಲಿಕ್ಕೆ ಅವಕಾಶ ಕೊಟ್ಟಿದ್ದೀರಿ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಬಿ.ಎಸ್. ಯಡಿಯೂರಪ್ಪ : (ಶಿಕಾರಿಪುರ): ನಾನು ಒಂದು ಪೇಪರ್ ಕಳುಹಿಸಿಕೊಡುತ್ತೇನೆ; ಮಾನ್ಯ ಉಪ ಮುಖ್ಯಮಂತ್ರಿಗಳಿಗೆ , ಇಲ್ಲಿ ಈ ರೀತಿ ಇದೆ; 17.11.93ರಲ್ಲಿ ಕೆಪಿಎಸ್‌ಸಿ ಸೆಕ್ರೆಟರಿಯವರು ಲೆಟರ್ ಬರೆದಿದ್ದಾರೆ. ಶ್ರೀ ಪುಟ್ಟಸ್ವಾಮಿ ಎನ್ನುವಂತಹ ಒಬ್ಬ ವ್ಯಾಲುಯೇಷನ್ ಮಾಡುವಂತಹ ಒಬ್ಬ ವ್ಯಕ್ತಿಗೆ, ಲೆಟರ್ ಈ ರೀತಿ ಇದೆ:

> "I have received a complaint against you that you are openly canvassing that KAS English papers are being valued by you. You are hereby requested to return back all the answer books to me immediately,"

ಇದನ್ನು ಕೆಪಿಎಸ್‌ಸಿ ಸೆಕ್ರೆಟರಿಯವರು ಬರೆದಿರುವುದು. ಅಷ್ಟು ಹೊತ್ತಿಗೆ ವ್ಯಾಲುಯೇಷನ್ ಮಾಡಿ ಆಗಿದೆ. ಈ ರೀತಿ ನನ್ನ ಹತ್ತಿರ ಮೂರು ಲೆಟರ್ ಇದೆ. ಅಂದರೆ ಯಾವ ರೀತಿ ಪರೀಕ್ಷೆಗಳು ನಡೆಯುತ್ತಿತ್ತು ಎಂಬುದಕ್ಕೆ ಇದು ಉದಾಹರಣೆ. ಇನ್ನೂ ಹತ್ತಾರು ಒರಿಜನಲ್ ಕಾಫಿ ನನ್ನ ಹತ್ತಿರ ಇದೆ. ಸರ್ಕಾರ ಉತ್ತರ ಕೊಟ್ಟ ಮೇಲೆ ನಾನು ಅದನ್ನು ಪ್ರೊಡ್ಯೂಸ್ ಮಾಡುತ್ತೇನೆ.

+ಶ್ರೀ ಎಸ್.ಎಂ.ಕೃಷ್ಣ (ಮಾನ್ಯ ಉಪ ಮುಖ್ಯಮಂತ್ರಿ): ಲೋಕಸೇವಾ ಆಯೋಗದ ಇನ್‌ಸ್ಟಿಟ್ಯೂಷನಲ್ ಸ್ಯಾಂಕ್ಟಿಟಿಯನ್ನು ಉಳಿಸತಕ್ಕದ್ದು ಮತ್ತು ಬೆಳೆಸತಕ್ಕದ್ದು ನಮ್ಮೆಲ್ಲರ ಹೊಣೆಗಾರಿಕೆ ಇದೆ ಎಂದು ಭಾವನೆ ಮಾಡುತ್ತೇನೆ. ಆದ್ದರಿಂದ ಇಲ್ಲಿ ಪಕ್ಷ ಮತ್ತು ಸರ್ಕಾರ ಎಂಬ ಪ್ರಶ್ನೆ ಇಲ್ಲ. ಇದರಲ್ಲಿ ತಪ್ಪು ಒಪ್ಪುಗಳ ಪ್ರಶ್ನೆ ಮಾತ್ರ ಇದೆ. ಲೋಕಸೇವಾ ಆಯೋಗಕ್ಕೆ ರಾಜ್ಯಾಂಗದಲ್ಲಿ ಒಂದು ವಿಶೇಷವಾದಂತಹ ಸ್ಥಾನ ಕಲ್ಪಿಸಿ ಕೊಡಲಾಗಿದೆ. ಅದರಿಂದಾಗಿ ಲೋಕಸೇವಾ ಆಯೋಗವನ್ನು ರಚನೆ ಮಾಡುವಾಗ ಯಾರು ನೇಮಕ ಮಾಡಬೇಕಾಗುತ್ತದೆ ಅವರ ಕ್ರೆಡಿಬಿಲಿಟಿ, ಇದರ ಜೊತೆಗೆ ಬೆಸುಗೆಯಾಗಿ ಹೋಗಿದೆ, ಹೊಸದಿದೆ. ಮಾನ್ಯ ಸದಸ್ಯರುಗಳು ಗಂಭೀರ ಸ್ವರೂಪದ ಕೆಲವು ಆರೋಪಗಳನ್ನು ಲೋಕ ಸೇವಾ ಆಯೋಗದ ಪರೀಕ್ಷೆಗಳ ಬಗ್ಗೆ ಮಾಡಿದ್ದಾರೆ. ಮತ್ತು ಕೆಲವು ದಾಖಲೆಗಳನ್ನು ಕೂಡ ನಮಗೆ ಒದಗಿಸಿದ್ದಾರೆ. ಇಲ್ಲಿ ಎರಡು ವಿಚಾರಗಳಿವೆ. ಒಂದು ವಿಚಾರ ಈ ಸದನದಲ್ಲಿ ಈಗಾಗಲೇ ರಚಿಸಿರತಕ್ಕ ಸಬ್ಜೆಕ್ಟ್ ಕಮಿಟಿ ಕೂಡ ಈ ವಿಚಾರವನ್ನು ಪರಶೀಲನೆ ಮಾಡತಕ್ಕ ಹಂತದಲ್ಲಿದೆ ಎನ್ನತಕ್ಕ ವರ್ತಮಾನವನ್ನು ನಮ್ಮ ಸೆಕ್ರೆಟರಿಯೇಟ್‌ನವರು ತಿಳಿಸಿದ್ದಾರೆ. ತಾವು ಒಬ್ಬ ನಿವೃತ್ತ ನ್ಯಾಯಾಧೀಶರ ಮುಖೇನ ವಿಚಾರಣೆ ಮಾಡಬೇಕು ಎಂದು ಹೇಳುತ್ತಿದ್ದೀರಿ, ಮಾನ್ಯ ವಿರೋಧ ಪಕ್ಷದ ನಾಯಕರು ಈ ರೀತಿ ಸೂಚನೆ ಮಾಡಿದ್ದಾರೆ ಮಾನ್ಯ ವಾಟಾಳ್ ನಾಗರಾಜ್ ಅವರು ಸಿಓಡಿ ಬೇಡ ಅದಕ್ಕಿಂತ ಮೇಲೆ ಯಾವುದಾದರೂ ಇದ್ದರೆ ಅದನ್ನು ಮಾಡಿ ಎಂದು ಹೇಳಿದರು. ಅದು ಉಪಯೋಗ ಇಲ್ಲ ಎಂಬ ಮಾತು ಅವರದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಿಬಿಐ ಮಾಡಿ.

ಶ್ರೀ ಎಸ್. ಎಂ. ಕೃಷ್ಣ : ನಾನು ತಮಗೇ ಬಿಡುತ್ತೇನೆ. ಸಿಬಿಐ ಎಂದು ಹೇಳಲೋ ಸದನ ಸಮಿತಿ ಎಂದು ಹೇಳಲೋ, ಹೇಗೆ ನೀವು ಮೂರು ಜನ ಹೇಳುತ್ತೀರಿ ಅದನ್ನು ನಿಮಗೇ ಬಿಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನನ್ನದು ಒಂದು ಸಲಹೆ. ನಾವು ಮೇಲುನೋಟಕ್ಕೆ ಅಪರಾಧ ಆಗಿದೆ ಎಂದು ತೀರ್ಮಾನಕ್ಕೆ ಬಂದು ತನಿಖೆಗೆ ಅಜ್ಞೆ ಮಾಡುವ ಮುನ್ನ ಸ್ವಲ್ಪ ಆಲೋಚನೆ ಮಾಡಿ ಸರ್ಕಾರ ಆಯೋಗವನ್ನು ಸಂಪರ್ಕ ಮಾಡಿ ಏನು ನಡೆದಿದೆ ಎಂದು ತಿಳಿದುಕೊಂಡು ಅನಂತರ ತನಿಖೆ ಮಾಡುವುದು ಒಳ್ಳೆಯದೆಂದು ನನ್ನ .ಸಲಹೆ.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಚಂದ್ರೇಗೌಡರು ಏನು ಸೂಚನೆ ಮಾಡಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಏಕಾಏಕಿ ತಾವು ಏನು ಆರೋಪಗಳನ್ನು ಮಾಡಿದ್ದೀರಿ, ಅದರ ಆಧಾರದ ಮೇಲೆ ನಾನು ತತ್ಕ್ಷಣ ಇದರ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ. 2-3 ದಿವಸದ ನಂತರ ಸರ್ಕಾರದ ವತಿಯಿಂದ ತಾವುಗಳು ಮಾಡಿರತಕ್ಕ ಗಂಭೀರ ಸ್ವರೂಪದ ಆರೋಪಗಳ ಬಗ್ಗೆ ನಾವು ಒಂದು ಹೇಳಿಕೆ ಮೂಲಕ ಸದನದ ಮುಂದೆ ಬರುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕೊನೆಯ ಪಕ್ಷ ಪರೀಕ್ಷೆ ರದ್ದು ಮಾಡಿ. ಹೊಸದಾಗಿ ಪರೀಕ್ಷೆ ಮಾಡುವಂತಹ ವ್ಯವಸ್ಥೆಯನ್ನು ತಾವು ಮಾಡಬೇಕಾಗುತ್ತದೆ. ತಾವು ಈ ಸದನದಲ್ಲಿ ಆ ಅಶ್ಯೂರೆನ್ಸ್ ಕೊಡಬೇಕಾಗುತ್ತದೆ. ಏಕೆಂದರೆ ರಾಜ್ಯಾದ್ಯಂತ ಒಂದು ಹೋರಾಟ ನಡೆದಿದ್ದು, ಜನ ಬೀದಿಗೆ ಇಳಿಯುತ್ತಿದ್ದಾರೆ. ಇದು ಯಾವುದೂ ಆಗಬಾರದು ಎಂದು ನಾನು ಸದನದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇದು ಬಹಳ ಗಂಭೀರವಾಗಿ ಇರತಕ್ಕ ವಿಷಯ. ತಾವು ಯಾವುದೇ ತನಿಖೆ ಮಾಡಿ. ಆ ಇನ್‌ಸ್ಟಿಟ್ಯೂಷನ್ • ಬಗ್ಗೆ. ಇದ್ದಂತಹ ಗೌರವವನ್ನು ತಾವು ಹೇಳಿದ ಹಾಗೆ ನಾವು ಎತ್ತಿ ಹಿಡಿಯಬೇಕಾಗುತ್ತದೆ. ವಿದ್ಯಾರ್ಥಿ ವಿಧ್ಯಾರ್ಥಿನಿಯರಿಗೆ ವಿಶ್ವಾಸ ಮೂಡಿಸಬೇಕಾಗಿದೆ. ಇಂತಹ ಕಡೆ ಅವ್ಯವಹಾರ ನಡೆದರೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಇನ್ನು ಮುಂದೆ ಇದು ನಡೆಯುವುದಿಲ್ಲ ಎನ್ನುವುದು ಆಗಬೇಕಾಗುತ್ತದೆ ಮತ್ತು ಎಲ್ಲಕ್ಕಿಂತ ಇಲ್ಲಿ ನಾನು ಲೆಟರ್ ತೋರಿಸಿದ್ದೇನೆ. ಯಾವ ಸೆಕ್ರೆಟರಿ ಎಂದು. ತಮ್ಮ ಕೋಡ್ ನಂಬರ್ಸ್ ಕೋಟ್ ಮಾಡಿದ್ದೇನೆ. ಅಂದರೆ ಒಬ್ಬ ಸೆಕ್ರೆಟರಿ ಅಫಿಷಿಯಲ್ ಆಗಿ ಅವ್ಯವಹಾರ ನಡೆಸಿದ್ದಾರೆ. ಒಬ್ಬ ಎಕ್ಸಾಮಿನರ್ ಬಹಿರಂಗವಾಗಿ ನನ್ನ ಬಳಿ ಇಂಗ್ಲೀಷ್ ಪೇಪರ್ ಇದೆ, ಬಾ ನೀನು ದುಡ್ಡು ಕೊಟ್ಟು ಕೆಲಸ ಮಾಡಿಸಿಕೊಂಡು ಹೋಗು ಎಂದು ಹೇಳುತ್ತಾನೆ ಎನ್ನುವುದನ್ನು ಆತ ಬರೆಯುತ್ತಾನೆ. ಇಂತಹ ನೂರಾರು ಆಗಿದೆ. ಬೇರೆ ದಾಖಲೆಗಳು ಬೇಕಾಗುವುದಿಲ್ಲ, ಮಾನ್ಯ ಚಂದ್ರೇಗೌಡರು ಏಕೆ ಈ ಮಾತನ್ನು ಹೇಳಿದರೋ ನನಗೆ ಗೊತ್ತಿಲ್ಲ. ನಮ್ಮ ಹತ್ತಿರ ಎಲ್ಲಾ ಪುರಾವೆಗಳು ಇವೆ. ದಾಖಲೆ ನೋಡಿ ಯಾದರೂ ಪರೀಕ್ಷೆ ರದ್ದು ಮಾಡಿ. ಹೊಸ ಪರೀಕ್ಷೆ ಮಾಡುತ್ತೇವೆ ಎಂದು ಹೇಳಿ. ತನಿಖೆ ಯಾರಿಂದ ಮಾಡಿಸುತ್ತೀರಿ? ಯಾರನ್ನು ಸಸ್ಪೆಂಡ್ ಮಾಡುತ್ತೀರೋ ಅಥವಾ ಡಿಸ್ಮಿಸ್ ಮಾಡುತ್ತೀರೋ ಅದು ಬೇರೆ ವಿಷಯ. ಆದರೆ ಹೊಸದಾಗಿ ಪರೀಕ್ಷೆ ಮಾಡಿ, ಈ ಪರೀಕ್ಷೆ ರದ್ದು ಮಾಡುತ್ತೇವೆ ಎನ್ನುವಂತಹ ಅಶ್ಯೂರೆನ್ಸ್ ಅನ್ನು ಸರ್ಕಾರ ನಮಗೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಕೃಷ್ಣ ಅವರೇ, ನನ್ನ ಪ್ರಾರ್ಥನೆ ಇಷ್ಟೇ. ನಾನು ಏನು ಹೇಳಿದೆ ಎಂದರೆ it is a creation of the Constitution You should keep that in mind

ಜೊತೆಗೆ ಇದು ಒಂದು ಅಟಾನಾಮಸ್ ಬಾಡಿ ಎಂದು ನಾವು ಕರೆದಿದ್ದೇವೆ. ಅನೇಕ ಸಲ ಇದರ ಬಗ್ಗೆ ಚರ್ಚೆ ಮಾಡಬೇಕೋ ಬೇಡವೇ ಎಂದಾಗಿದೆ. ಕೆಲವು ದೂರುಗಳು ಮತ್ತು ದೋಷಗಳು ಬಂದಿದ್ದಾವೆ ಎಂದು ಕೇಳಿದ ತಕ್ಷಣ ತನಿಖೆ ಮಾಡುವುದಕ್ಕೆ ಹೋಗುವುದು ಬೇಡ. ಅವರು ಎಲ್ಲಾ ಆಯಾಮವನ್ನು ಹೇಳಿದ್ದಾರೆ. ಪರೀಕ್ಷೆ ತಪ್ಪು ಅಗಿದ್ದರೆ ತಪ್ಪು ಎಂದು ಹೇಳೋಣ, ಅಥವಾ ಪರೀಕ್ಷೆ ಮಾಡಿಸೋಣ ಎಂದರೆ ಮಾಡಿಸೋಣ ಅಥವಾ ಅನ್ಯಾಯಗಳು ಏನು ನಡೆದಿದೆ ಇಂತಹ ವಿಚಾರಗಳ

ಮೇಲೆ ಕ್ರಮ ತೆಗೆದುಕೊಳ್ಳೋಣ. ಅದರೆ ಒಬ್ಬ ಆಯೋಗದ ಸದಸ್ಯರನ್ನು ವಜಾ ಮಾಡುವ ಹಕ್ಕು ಸರ್ಕಾರಕ್ಕೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾವು ಯಾವ ಸದಸ್ಯರನ್ನೂ ವಜಾ ಮಾಡಿ ಎಂದು ಹೇಳುತ್ತಾ ಇಲ್ಲ, ನಡೆದಿರತಕ್ಕ ಹಗರಣಗಳ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು ಈಗ ತಾನೇ ಹೇಳಿದರು, ಇದರ ಬಗ್ಗೆ ಸಬ್ಜೆಕ್ಟ್ ಕಮಿಟಿಯಲ್ಲಿ ಚರ್ಚೆ ಆಗುತ್ತಿದೆ, ಈ ವಿಚಾರ ಅಲ್ಲಿ ಬಂದಾಗ ನಾವು ಈ ಸಭೆಯಲ್ಲಿ ಚರ್ಚೆ ನಡೆಸುವುದಕ್ಕೆ ಏನೂ ಅಭ್ಯಂತರ ಇಲ್ಲ.

ಆದುದರಿಂದ, ನಾನು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ. ಇನ್ನು 3-4 ದಿವಸಗಳ ಕಾಲದವರೆಗೆ ವಿಚಾರವನ್ನು ತಳ್ಳುವುದು ಬೇಕಾಗಿಲ್ಲ. ನಡೆದಿರುವ ಸದರಿ ಪರೀಕ್ಷೆಯನ್ನು ಸಂಪೂರ್ಣವಾಗಿ ರದ್ದು ಮಾಡಬೇಕು ಮತ್ತು ಇದರ ಬಗ್ಗೆ ಉನ್ನತವಾದ ತನಿಖೆಯಾಗಲೇಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಪೂರ್ವಭಾವಿಯಾಗಿ ಅಂತಹ ನಿರ್ಧಾರಕ್ಕೆ ಬರುವುದಕ್ಕಿಂತ ಮುಂಚಿತವಾಗಿ ಸರ್ಕಾರಕ್ಕೆ ಸಾಕಷ್ಟು ಮಾಹಿತಿಗಳು ಬೇಕಾಗುತ್ತದೆ. ಆ ಮಾಹಿತಿಗಳಲ್ಲಿ ಮೇಲ್ನೋಟಕ್ಕೆ ಸತ್ಯಾಂಶ ಕಂಡುಬಂದರೆ ತನಿಖೆಗೆ ಆಜ್ಞೆ ಮಾಡಿ, ನನ್ನದೇನೂ ವಿರೋಧವಿಲ್ಲ. ಆದರೆ, ಏಕಾಏಕಿಯಾಗಿ ನಿರ್ಣಯಕ್ಕೆ ಬರುವುದು ಬೇಡವೆಂದು ಹೇಳಿದೆ ಅಷ್ಟೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಕೆ.ಪಿ.ಎಸ್.ಸಿ. ನಡೆಸಿರುವ ಪರೀಕ್ಷೆಯಲ್ಲಿನ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳು ನನ್ನ ಹತ್ತಿರವಿದ್ದರೂ ಇವೊತ್ತು ಅದನ್ನು ನಾನು ತರುವುದನ್ನು ಮರೆತು ಬಂದಿದ್ದರಿಂದ ಮಾತನಾಡದೆ ಸುಮ್ಮನಿದ್ದೆ. ಪೂರ್ಣ ದಾಖಲೆಗಳನ್ನು ತಾವು ನೋಡಿದರೆ, ಕೆಪಿಎಸ್ಸಿ ಸಂಸ್ಥೆ ಭ್ರಷ್ಟಾಚಾರಕ್ಕೆ ದೀಕ್ಷೆ ಕೊಡುವಂಥ ಒಂದು ಸಂಸ್ಥೆಯಾಗಿದೆ. ತಾವು ಮಂಚೆಯೇ ಹೇಳಿದಿರಿ, ಅದು ಎಂತಹ ಸಂಸ್ಥೆ, ಅದರ ಸ್ಥಾನಮಾನ ಏನೆಂದು. ಇಲ್ಲಿನ ಎಲ್ಲಾ ಅವ್ಯವಹಾರಗಳು ನಡೆದಿರುವುದು ಅಲ್ಲಿರುವ ಕಾರ್ಯದರ್ಶಿಗಳಿಂದ. ಏನೇನು ಮಾಡಬಾರದೋ ಅದೆಲ್ಲವನ್ನೂ ಮಾಡಿದ್ದಾರೆ. ಆದಕಾರಣ ಯಾವುದೇ ಅಳತೆಗೋಲಿನಿಂದಲೂ ಇದೊಂದು ಪರೀಕ್ಷೆಯಿನಿಸಿಕೊಳ್ಳುವುದಿಲ್ಲ. ಪರೀಕ್ಷೆಯಲ್ಲಿ ಏನು ಅಂಕಗಳನ್ನು ಕೊಟ್ಟಿದ್ದಾರೆ, ಮತ್ತು ನೇಮಕಾತಿ ಮಾಡುವಂಥ ಕ್ರಮವೇನಿದೆ, ಅದನ್ನು ಕೂಡಲೇ ಸ್ಥಗಿತಗೊಳಿಸಬೇಕು ಮತ್ತು ಕೆಪಿಎಸ್‌ಸಿ ಕಾರ್ಯದರ್ಶಿಯವರು ಏನು ಅವ್ಯವಹಾರ ಮಾಡಿದ್ದಾರೆ ಅದನ್ನೂ ತನಿಖೆಗೊಳಪಡಿಸಬೇಕು.

ಶ್ರೀ ಎಸ್.ಎಂ. ಕೃಷ್ಣ : ಕೆಪಿಎಸ್‌ಸಿ ನಡೆಸಿರುವ ಗ್ರೂಪ್ ಎ ಮತ್ತು ಬಿ ಪರೀಕ್ಷೆಗಳಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಇವೊತ್ತು ಸದನದಲ್ಲಿ ತಾವು ಪ್ರಸ್ತಾಪಿಸಿದ್ದೀರಿ, ಮತ್ತು ಇದಕ್ಕೆ ಸಂಬಂಧಿಸಿದಂತೆ ಕೆಲವು ದಾಖಲೆಗಳನ್ನು ನನ್ನ ಕಡೆಗೆ ಕಳುಹಿಸಿಕೊಟ್ಟಿದ್ದೀರಿ. ಹಾಗೆಯೇ ತಮ್ಮಲ್ಲಿ ಇರತಕ್ಕಂಥ ಎಲ್ಲಾ ದಾಖಲೆಗಳನ್ನು ಸಹ ಸರ್ಕಾರಕ್ಕೆ ಕಳುಹಿಸಿ ಕೊಟ್ಟರೆ ಸರ್ಕಾರ ಇದರ ಬಗ್ಗೆ ಯೋಗ್ಯ ರೀತಿಯಲ್ಲಿ ಸ್ಪಂದಿಸುತ್ತದೆ. ಇನ್ನೆರಡು ದಿವಸಗಳಲ್ಲಿ ನಾವು....

ಶ್ರೀ ಬಿ.ಎಸ್. ಯಡಿಯೂರಪ್ಪ : ಸದನದ ಕಾರ್ಯಕಲಾಪಗಳು ನಡೆಯುತ್ತಿರುವಂಥ ಸಂದರ್ಭದಲ್ಲಿ ಈ ವಿಷಯವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಪಟ್ಟಿದ್ದೇವೆ. ನಾನು ಹೇಳುವಂಥಾದ್ದು ಏನೆಂದರೆ, ಆವೊತ್ತಿನಿಂದ ಇವೊತ್ತಿನವರೆಗೆ ಪ್ರಶ್ನೆ ಪತ್ರಿಕೆ ಬಹಿರಂಗವಾದಾಗಿನಿಂದ ಹಿಡಿದು ಪ್ರತಿನಿತ್ಯ ಒಂದಲ್ಲ ಒಂದು ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗುತ್ತದೆ, ಇದು ಚರ್ಚೆಯ ವಿಷಯವಾಗಿದೆ. ಬರುವ ತಿಂಗಳು ಒಂದನೇ ತಾರೀಖಿನಿಂದ ದೊಡ್ಡ ಹೋರಾಟ ನಡೆಯುವುದಿದೆ. ಗೆಜೆಟೆಡ್ ಪ್ರೊಬೇಷನರ್ 'ಎ' ಮತ್ತು 'ಬಿ' ವರ್ಗಗಳ ಲಿಖಿತ ಪರೀಕ್ಷೆ ಬರೆದಿರುವ ಅಭ್ಯರ್ಥಿಗಳು ನಾಳೆ

ಉನ್ನತ ಸ್ಥಾನದಲ್ಲಿ ಕುಳಿತು ಕೊಂಡು ಈ ನಾಡಿಗೆ ಮಾರ್ಗದರ್ಶನ ನೀಡಬೇಕಾಗಿರುವಂಥವರು. ಇಂತಹ ಪರೀಕ್ಷೆಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ದಾಖಲೆಗಳು ಸಿಕ್ಕಿದ್ದು, ವಿಷಯ ಬಹಿರಂಗವಾಗಿ ಚರ್ಚೆಯಾಗುತ್ತಿದ್ದು ನಾವುಗಳೆಲ್ಲರೂ ತಲೆಗಗ್ಗಿಸಬೇಕಾಗಿದೆ. ಇದರಿಂದ ಸರ್ಕಾರದ ಮನಸ್ಸಿಗೆ ಎಷ್ಟು ನೋವಾಗಿದೆಯೆಂದು ನಮಗೆ ಅರ್ಥವಾಗಿದೆ. ಪರಿಸ್ಥಿತಿಯ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳುವಂಥ ಶಕ್ತಿ ಉಪ ಮುಖ್ಯಮಂತ್ರಿಯವರಿಗೆ ಇದೆಯೆಂದು ತಿಳಿದುಕೊಂಡಿದ್ದೇನೆ. ನಾವು ಹೇಳುವಂಥ ವಿಚಾರ ಮೇಲ್ನೋಟಕ್ಕೆ ಸಾಬೀತಾಗಿದೆ, ಅವರು ಅಧಿಕಾರೇತರು ತಲೆತಗ್ಗಿಸುವಂಥ ಅಪರಾಧವೆಸಗಿದ್ದಾರೆ. ಆ ಸಂಸ್ಥೆಯ ಕಾರ್ಯದರ್ಶಿ ಮತ್ತು ಕೆಲವು ಸದಸ್ಯರುಗಳನ್ನು ಸದಸ್ಯತ್ವದಿಂದ ತೆಗೆಯಿರಿ ಎಂದು ನಾವು ಹೇಳುತ್ತಿಲ್ಲ. ಇವೊತ್ತು ಅಲ್ಲಿ ಅವ್ಯವಹಾರ ನಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಈಗಾಗಲೇ ನಡೆಸಲಾದ ಪರೀಕ್ಷೆಯನ್ನು ರದ್ದುಪಡಿಸಿ ಹೊಸದಾಗಿ ಪರೀಕ್ಷೆಯನ್ನು ನಡೆಸಲಾಗುತ್ತದೆ. ಎಂಬುದನ್ನು ಘೋಷಿಸಿ ಸದನದಲ್ಲಿ ತಾವು ಭರವಸೆಯನ್ನು ಕೊಡಬೇಕಾಗುತ್ತದೆ. ಅದರ ಆಧಾರದ ಮೇಲೆ ನಾವು ಇಲ್ಲಿ ಕಳಕಳಿಯಿಂದ ಕುಳಿತುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ, ಬಹುಶಃ ಯಾರಾದರೂ ರಕ್ಷಣೆ ಮಾಡುವಂಥ ಒಂದು ಪರಿಸ್ಥಿತಿ ಬರಬಹುದೆಂದು ನಾವು ನಿಮ್ಮನ್ನು ನಿರೀಕ್ಷಿಸುವುದಿಲ್ಲ, ಆದರೆ, ಸರ್ಕಾರ ಈ ರೀತಿ ನೇರವಾಗಿ ಹೆಜ್ಜೆ ಇಡುವಂಥ ಸಂದರ್ಭ ಇರುವುದರಿಂದ, ಎಲ್ಲಾ ರೀತಿಯ ಅವ್ಯವಹಾರ ನಡೆದಿರುವುದರಿಂದ ನೀವು ಧೈರ್ಯವಾಗಿ ಮುನ್ನಡೆಯಬೇಕು, ಈ ಸದನ ನಿಮ್ಮ ಬೆಂಬಲಕ್ಕಿದೆ. ದಯಮಾಡಿ ನಡೆದಿರುವ ಪರೀಕ್ಷೆಯನ್ನು ರದ್ದು ಮಾಡಿ ಕಾನೂನು ರೀತ್ಯ ಯಾವ ರೀತಿ ಕ್ರಮ ಕೈಗೊಳ್ಳುತ್ತೀರೋ ಕೈಗೊಂಡು, ಅಲ್ಲಿರುವ ಅಧಿಕಾರಿಗೆ ತಕ್ಕ ಶಿಕ್ಷೆಯಾಗಬೇಕು. ಅಲ್ಲಿನ ಕಾರ್ಯದರ್ಶಿಗಳು ಎಲ್ಲಾ ದಾಖಲೆಗಳನ್ನು ಟ್ಯಾಂಪರ್ ಮಾಡುತ್ತಾರೆ. ಅವರನ್ನು ಅಲ್ಲಿ ಮುಂದುವರೆಯುವುದಕ್ಕೆ ಹೇಗೆ ಬಿಟ್ಟಿದ್ದೀರಿ? ಅವರು ಹೇಗೆ ಮುಂದುವರಿಯುತ್ತಿದ್ದಾರೆ. ಅಲ್ಲಿ ಅವ್ಯವಹಾರ ನಡೆದಿದೆಯೆಂದು ಗೊತ್ತಾದ ನಂತರ ಅವರು ಒಂದು ನಿಮಿಷವೂ ಅಧಿಕಾರದಲ್ಲಿ ಮುಂದುವರೆಯಬಾರದು. ಅದಕ್ಕೋಸ್ಕರ ನಾನು ಹೇಳುತ್ತೇನೆ: ಇನ್ನು 24 ಗಂಟೆಯೊಳಗಾಗಿ ಅವರನ್ನು ಅಮಾನತುಗೊಳಿಸಬೇಕು ಅಥವಾ ಅವರನ್ನು ಹೊರಗಿಟ್ಟು ಪರೀಕ್ಷೆಯನ್ನು ರದ್ದು ಮಾಡುವಂಥ ಘೋಷಣೆ ಮಾಡಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ ಗೆಜೆಟೆಡ್ ಪ್ರೊಫೇಷನರ್ 'ಎ' ಮತ್ತು 'ಬಿ' ಗುಂಪಿನ ಹುದ್ದೆಯ ಲಿಖಿತ ಪರೀಕ್ಷೆಯ ಫಲಿತಾಂಶವನ್ನು ಈ ತಿಂಗಳ 2ನೇ ತಾರೀಖು ಮಧ್ಯಾಹ್ನ ಪ್ರಕಟಿಸಿದರು. ಆದರೆ ಮಾರನೇ ದಿವಸ (8ನೇ ತಾರೀಖು) ನಾನು ಜರುಗಿಸಿರುವ ಪರೀಕ್ಷೆಯಲ್ಲಿ ಆಯೋಗದ ಕಾರ್ಯದರ್ಶಿಯವರು ಎಸಗಿರುವ ಅನ್ಯಾಯಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ದಾಖಲೆಗಳನ್ನು ಮುಖ್ಯಮಂತ್ರಿಯವರಿಗೆ ಕಳುಹಿಸಿಕೊಟ್ಟಿದ್ದು, ನಡೆಸಿರುವ ಪರೀಕ್ಷೆಯನ್ನು ರದ್ದುಪಡಿಸಿ ಮತ್ತೆ ಮರುಪರೀಕ್ಷೆ ನಡೆಸಬೇಕೆಂದು ತಿಳಿಸಿದ್ದೆ. ಮತ್ತು ಆಯೋಗದ ಕಾರ್ಯದರ್ಶಿಯವರನ್ನು ಅಮಾನತುಗೊಳಿಸಬೇಕೆಂದೂ ಹೇಳಿದ್ದೆ. ಅದರೆ, ಅವೊತ್ತಿನಿಂದ ಇವೊತ್ತಿನವರೆವಿಗೂ ಸರ್ಕಾರ ಸುಮ್ಮನಿದ್ದು, ಇವೊತ್ತು ಸದನದಲ್ಲಿ ಆ ವಿಚಾರ ಪ್ರಸ್ತಾಪವಾಗುವಂಥ ಸಂದರ್ಭದಲ್ಲಿ ಈ ಕುರಿತ ಮಾಹಿತಿಗಳನ್ನು ಮತ್ತೆ ತರಿಸಿಕೊಂಡು ನೋಡುತ್ತೇವೆಂಬುದನ್ನು ಉಪ ಮುಖ್ಯಮಂತ್ರಿಗಳು ಏಕೆ ಹೇಳುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಈ ಹಿರಿದೆ ಕಳುಹಿಸಿಕೊಟ್ಟಿರುವ ದಾಖಲೆಗಳು ತಮ್ಮ ಗಮನಕ್ಕೆ ಬಂದಿಲ್ಲವೇ? ಬಂದಿದ್ದರೆ ನೋಡಿಲ್ಲವೇ? ಈಗಾಗಲೇ ಸಾಕಷ್ಟು ಮಾಹಿತಿಗಳು ಬಂದಿದೆ. ಆದುದರಿಂದ, ತುರ್ತಾಗಿ ಸರ್ಕಾರ ಇಡೀ ರಾಜ್ಯದ ಜನತೆಗೆ, ಸರ್ಕಾರ ಅನ್ಯಾಯದ ವಿರುದ್ಧ ಇದೆ, ಬುದ್ಧಿವಂತಿಕೆಗೆ ಬೆಂಕಿ ಹಚ್ಚಲು ನಾವು ಬಿಡುವುದಿಲ್ಲವೆನ್ನುವ ಮಾತನ್ನು ಹೇಳಬೇಕೆಂದು ಕಳಕಳಿಯಿಂದ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

1.00 ಪಿ.ಎಂ.

ಶ್ರೀ ಆರ್.ವಿ. ದೇಶಪಾಂಡೆ : ಈಗ ತಾವು ಹೇಳಿದಂತೆ ಹಲವಾರು ಸಲಹೆಗಳು ಬಂದಿದೆ. ಸಿಬಿಐ, ಸಿಓಡಿ ಮತ್ತು ಸದನದ ಸಮಿತಿಯನ್ನು ಮಾಡಬೇಕೆಂದು ಸಲಹೆಗಳು ಬಂದಿದೆ, ನಾನು ಸರ್ಕಾರಕ್ಕೆ ಯಾವುದು ಯೋಗ್ಯವೆಂದು ಕಾಣಿಸುತ್ತದೆ ಅದನ್ನು ಮಾಡಿ ಎಂದು ಹೇಳಿದ್ದೇನೆ. ಒಟ್ಟಿನಲ್ಲಿ ಇದರ ಬಗ್ಗೆ ತನಿಖೆಯಾಗಬೇಕೆಂದು ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಿಓಡಿ, ಸಿಬಿಐ, ನ್ಯಾಯಾಧೀಶರಿಂದ ಯಾರಿಂದಾದರೂ ವಿಚಾರಣೆ ಮಾಡಿಸುವುದಾದರೆ ನಾವು ಸಿದ್ಧರಾಗಿದ್ದೇವೆ.

ಶ್ರೀ ಆರ್.ವಿ. ದೇಶ್‌ಪಾಂಡೆ : ಇವತ್ತು ಒಂದು ಆಪಾದನೆ ಕೆಪಿಎಸ್‌ಸಿ ಮೇಲೆ ಅಗಿದೆ. ಅದನ್ನು ತಾವೂ ಸಹ ಒಪ್ಪಿಕೊಂಡಿದ್ದೀರಿ. ಆ ಸಂಸ್ಥೆಯ ಗೌರವ, ಪಾವಿತ್ರತೆಯನ್ನು ಸದಸ್ಯರು ಕಾಪಾಡಬೇಕಾಗಿದೆ. ಹಲವಾರು ಸದಸ್ಯರು ಇಂಟರ್‌ವ್ಯೂದಲ್ಲಿದ್ದರು. ಈ ವಿಚಾರದ ಬಗ್ಗೆ ವಿದ್ಯಾರ್ಥಿಗಳು, ಅಭ್ಯರ್ಥಿಗಳು ಪುನಃ ಪರೀಕ್ಷೆಗೆ ಇಂಟರ್‌ವ್ಯೂಗೆ ವಿಶ್ವಾಸವನ್ನಿಡಬೇಕಾಗುತ್ತದೆ. ಆದ್ದರಿಂದ ತಮ್ಮಲ್ಲಿ ನಾನು ಏನು ಸಲಹೆ ಮಾಡುತ್ತಿದ್ದೇನೆಂದರೆ ಇವತ್ತು ತಾವು ಇದರ ಬಗ್ಗೆ ಸ್ಪಷ್ಟವಾಗಿ ವಿಚಾರಣೆ ಮಾಡುತ್ತೇವೆಂದು, ಭರವಸೆಯನ್ನು ಕೊಡಿ.

ಶ್ರೀ ವಾಟಾಳ್‌ನಾಗರಾಜ್ : ಅದಷ್ಟೇ ಆದರೆ ಆಗುವುದಿಲ್ಲ. ತನಿಖೆಯನ್ನು ಯಾವಾಗಿ ಮಾಡುತ್ತಾರೆ?

(ಗೊಂದಲ)

ಶ್ರೀ ಆರ್. ವಿ. ದೇಶ್‌ಪಾಂಡೆ : ನಾನು ಇಲ್ಲಿ ಅದರ ಬಗ್ಗೆ ಸಲಹೆಯನ್ನು ಕೊಡುತ್ತಿದ್ದೇನೆ. ಬೇಕಾದರೆ ತಾವೂ ಸಹ ತಮ್ಮ ಸಲಹೆಗಳನ್ನು ಕೊಡಬಹುದು. ಇಲ್ಲಿ ಎಲ್ಲಾ ವಿರೋಧ ಪಕ್ಷದವರೂ ಸಹ ಇದನ್ನು ಒಪ್ಪಿಕೊಂಡಿದ್ದೀರಿ, ಅದರ ಬಗ್ಗೆ ವಿಚಾರಣೆಯಾಗಬೇಕು ಎಂದು ಅದರೆ ಇದನ್ನು ಮಾಡುವುದಕ್ಕೆ ಎರಡುಮೂರು ದಿವಸ ಸಮಯಬೇಕು ಎಂಬುದು ಬೇಡ. ಆದ್ದರಿಂದ ನಾನು ಹೇಳುವುದೇನೆಂದರೆ ಇದರ ಬಗ್ಗೆ ಇವತ್ತು ವಿಚಾರಣೆಯಾಗಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ಹಿಂದೆಹೋದರೆ ನಿಮ್ಮ ಮೇಲೆ ಸಂಶಯ ಬರಬಹುದು. You are also trying to shield somebody ಅಂತ, ನಾವೂ ಸರ್ಕಾರವನ್ನು ನಡೆಸಿದ್ದೇವೆ. ಆದ್ದರಿಂದ ಯಾವ ಪ್ರಕಾರ ಸಮಸ್ಯೆಗಳಿಗೆ ಉತ್ತರವನ್ನು ಕೊಡಬೇಕಾಗುತ್ತದೆ ಎಂಬುದು ನಮಗೂ ಗೊತ್ತು. ಆದ್ದರಿಂದ ಈಗಾಗಲೇ ಕೆಲವು ಸದಸ್ಯರು ಕಾರ್ಯದರ್ಶಿಯವರನ್ನು ಸಸ್‌ಪೆಂಡ್ ಮಾಡಬೇಕೆಂದು, ಕೆಲವು ಜನರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು, ಕೆಲವು ದಾಖಿಲೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳೆಲ್ಲವೂ ಸಹ ಒಳ್ಳೆಯ ಸಲಹೆಗಳೇ. ಅದರ ಬಗ್ಗೆ ಯಾವ ರೀತಿಯಾದ ಸಂದೇಹವಿಲ್ಲ. ಅದನ್ನು ಮಾಡಬೇಕಾಗುತ್ತದೆ. ಆದರೆ ತಾವು ಅದನ್ನು ಮಾಡುವುದಕ್ಕೆ ಎರಡುಮೂರು ದಿವಸಗಳ ಕಾಲ ಸಮಯ ಕೊಡಿ ಎಂದು ಕೇಳಿದ್ದೀರಿ. ಈ ಎರಡುಮೂರು ದಿವಸ ಸಮಯದಲ್ಲಿ ಅಲ್ಲಿ ಸಾಕಷ್ಟು ಅನಾಹುತವಾಗಲು ಸಾಧ್ಯತೆಗಳಿವೆ. ಅಲ್ಲಿ ಪೇಪರ್ಸ್‌ಗಳನ್ನು ಟ್ಯಾಂಪರ್ ಮಾಡಬಹುದು. ಇದರ ಬಗ್ಗೆ ಈಗಾಗಲೇ ಪತ್ರಿಕೆಗಳಲ್ಲಿ ಬಂದಿದೆ. ಅವರು ಇದರ ಲಾಭವನ್ನು ಪಡೆದುಕೊಳ್ಳಲು ಸಾಧ್ಯವಿದೆ. ಆದ್ದರಿಂದ ನಾವು ಯಾವ ರೀತಿಯಲ್ಲಿ ವಿಚಾರಣೆ ಇರಬೇಕು ಎಂಬ ಬಗ್ಗೆ ಹಲವಾರು ಸಲಹೆಗಳನ್ನು ಕೊಟ್ಟಿದ್ದೇವೆ. ತಾವು ಅವುಗಳಲ್ಲಿ ಯಾವುದೇ ಸಲಹೆಯನ್ನು ಬೇಕಾದರೂ ಪರಿಗಣನೆ ಮಾಡಿಕೊಳ್ಳಬಹುದು. ಸಿಬಿಐ, ಸಿಓಡಿ, ಒಬ್ಬರು ಪ್ರಾಮಾಣಿಕ ಹಿರಿಯ ಅಧಿಕಾರಿಯಿಂದ ಬೇಕಾದರೂ ವಿಚಾರಣೆ ಮಾಡಿದರೂ ಸರಿ. ಅದರ ಬಗ್ಗೆ ನಮ್ಮ ಅಭ್ಯಂತರವಿಲ್ಲ ಆದರೆ ಇದರ ವಿಚಾರಣೆಯಾಗಬೇಕು. ಅದರ ನಿರ್ಣಯವನ್ನು ಸರ್ಕಾರ ಈಗಲೇ ಮಾಡಬೇಕು: ಏಕೆಂದರೆ ಅದರ ಬಗ್ಗೆ ನಮ್ಮಲ್ಲಿ ಭಿನ್ನಾಭಿಪ್ರಾಯಬೇಡ.

ಇದರ ಬಗ್ಗೆ ನಿರ್ಣಯವನ್ನು ಮಾಡಲು ಸರ್ಕಾರಕ್ಕೆ ಬಿಟ್ಟು ಕೊಡುತ್ತೇವೆ. ತನಿಖೆಯ ಬಗ್ಗೆ ನಿರ್ಣಯವನ್ನು ಮಾಡಲು ಸರ್ಕಾರಕ್ಕೆ ಬಿಟ್ಟು ಕೊಡುತ್ತೇವೆ. ಆದರೆ ಈ ಕೂಡಲೇ ಅಲ್ಲಿರುವ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಅದನ್ನು ಯಾವ ಪ್ರಕಾರ ಮಾಡಬೇಕು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಕೆಪಿಎಸ್‌ಸಿಯಲ್ಲಿ ಇಂಥ ದುರ್ವ್ಯವಹಾರವಾದಾಗ ಸರ್ಕಾರ ಯಾವ ರೀತಿ ಪೇಪರ್ಸನ್ನು ತಮ್ಮ ಹದ್ದುಬಸ್ತಿಗೆ ತೆಗೆದುಕೊಳ್ಳಬೇಕು ಎಂಬ ಬಗ್ಗೆ ನೋಡಬೇಕಾಗುತ್ತದೆ. ಅದನ್ನು ಕಾಯಿದೆಯ ಬದ್ಧವಾಗಿ ಯಾವ ರೀತಿ ಮಾಡಬೇಕು ಎಂಬುದನ್ನು ನೋಡಬೇಕಾಗುತ್ತದೆ. ಅದನ್ನು ಕಾಯಿದೆಯ ಪ್ರಕಾರ ತಾವು ಮಾಡಬೇಕು. ಆ ದಾಖಲೆಗಳನ್ನು ತಕ್ಷಣವೇ ಮುಟ್ಟುಗೋಲು ಹಾಕಿಕೊಂಡು ಇವತ್ತೇ ಅದರ ಬಗ್ಗೆ ಕಾರ್ಯಕ್ರಮವಾಗಬೇಕು. ಅದಕ್ಕೆ ಎರಡುಮೂರು ದಿವಸ ಬೇಕು ಎಂದರೆ ಆಗುವುದಿಲ್ಲ. ಅಷ್ಟು ದಿವಸ ಸಮಯಕೊಟ್ಟರೆ. ಸರಿಯಾಗುವುದಿಲ್ಲ. ಆದ್ದರಿಂದ ಇದಕ್ಕೆ ಸತ್ವವೂ ಸಹ ಬರುವುದಿಲ್ಲ. ಆ ದೃಷ್ಟಿಯಿಂದ ಇದನ್ನು ತಾವು ತಕ್ಷಣ ಕಾರ್ಯರೂಪಕ್ಕೆ ತೆಗೆದುಕೊಳ್ಳಬೇಕು. ವಿಚಾರಣೆಯನ್ನು ಯಾವ ರೀತಿಯಲ್ಲಿ ಮಾಡಬೇಕು ಎಂಬುದಕ್ಕೆ ಲಿಬರ್ಟಿಯನ್ನು ತಮಗೆ ಬಿಡುತ್ತೇವೆ. ಆದರೆ ತಾವು ಯಾವ ರೀತಿ ವಿಚಾರಣೆ ಮಾಡುತ್ತೀರಿ ಎಂಬ ಬಗ್ಗೆ ಈಗಲೇ ಹೇಳಬೇಕು.

ಶ್ರೀ ವಾಟಾಳ್‌ನಾಗರಾಜ್ : ನ್ಯಾಯಾಂಗ ತನಿಖೆಯ ಜೊತೆಗೆ ಪ್ರಥಮವಾಗಿ ಆ ಪರೀಕ್ಷೆಯನ್ನು ರದ್ದು ಮಾಡಿದ್ದೇವೆಂದು ಸರ್ಕಾರ ಭರವಸೆಯನ್ನು ಸ್ಪಷ್ಟವಾಗಿ ಇಲ್ಲಿ ಕೊಡಬೇಕು. ಆಗ ಅದಕ್ಕೆ ನ್ಯಾಯ ದೊರಕುತ್ತದೆ. ಅದನ್ನು ಬಿಟ್ಟು ದೇಶ್‌ಪಾಂಡೆಯವರು ವಿಚಾರಣೆಯನ್ನು ಮಾಡುತ್ತೇವೆಂದು ಹೇಳಿಬಿಡಿ, ಸಾಕು ಎಂದು ಏನು ಹೇಳಿದರು, ಅಷ್ಟಕ್ಕೆ ಸಾಕಾಗುವುದಿಲ್ಲ. ಅವರು ಯಾವಾಗ ವಿಚಾರಣೆ ಮಾಡುವುದು?

ಶ್ರೀ ಆರ್.ವಿ. ದೇಶ್‌ಪಾಂಡೆ : ಪರೀಕ್ಷೆಯನ್ನು ತಕ್ಷಣ ರದ್ದು ಮಾಡಿ ಎಂದು ಹೇಳುವುದನ್ನು ನಾವು ಒಪ್ಪಿಕೊಳ್ಳುವುದಿಲ್ಲ. ಮೊದಲು ವಿಚಾರಣೆಯಾಗಬೇಕು. ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ. ಹಲವಾರು ಕಡೆ ಪರೀಕ್ಷೆಯಾಗುತ್ತದೆ, ದೂರುಗಳು ಬರುತ್ತದೆ ಆ ರೀತಿ ದೂರು ಬಂದಾಗ ವಿಚಾರಣೆಯಾಗುತ್ತದೆ. ವಿಚಾರಣೆಯಲ್ಲಿ ಸತ್ಯಾಂಶವಿದ್ದರೆ ಸಂಪೂರ್ಣವಾಗಿ ಪರೀಕ್ಷೆಯನ್ನು ರದ್ದು ಮಾಡಿ. ಆದರೆ ವಿಚಾರಣೆ ಮಾಡದೆ ವಿನಹ ಪರೀಕ್ಷೆಯನ್ನು ರದ್ದು ಮಾಡಿದರೆ ತಪ್ಪಾಗುತ್ತದೆ. ನಾವು ಆ ಬಗ್ಗೆ ವಿಚಾರಣೆ ಮಾಡಬೇಕಾಗುತ್ತದೆ. ಮೊದಲು ವಿಚಾರರಣೆ ಆಗಬೇಕು. ಅದಾಗದೆ ರದ್ದು ಮಾಡುವುದು ಹೇಗಾಗುತ್ತದೆ?

ಶ್ರೀ ವಾಟಾಳ್‌ನಾಗರಾಜ್ : ಅಕ್ರಮವಾಗಿದೆಯೆಂದು ಪತ್ರಿಕೆಗಳಲ್ಲಿ ಬಂದಿದೆ. ಸರ್ಕಾರಕ್ಕೆ ಗೊತ್ತಿದೆ. ಪುನಃ ಇದರ ಬಗ್ಗೆ ತನಿಖೆಯನ್ನು ನಡೆಸುವುದಕ್ಕೆ ಮೊದಲು ಇದನ್ನು ರದ್ದು ಮಾಡಬೇಡಿ ಎಂದು ಹೇಳತಕ್ಕ ವಿರೋಧ ಪಕ್ಷದ ನಾಯಕರ ಹೇಳಿಕೆಯನ್ನು ನಾವು ಒಪ್ಪುವುದಿಲ್ಲ.

ಶ್ರೀ ಆರ್. ವಿ. ದೇಶ್‌ಪಾಂಡೆ : ಹಾಗಾದರೆ ತಾವು ವಿಚಾರಣೆಯನ್ನು ಏಕೆ ಕೇಳಿದಿರಿ?

ಶ್ರೀ ವಾಟಾಳ್‌ನಾಗರಾಜ್ : ನ್ಯಾಯಾಂಗ ತನಿಖೆಯಾಗಲೂ ಬೇಕು, ಪರೀಕ್ಷೆ ರದ್ದಾಗಲೂ ಬೇಕು. ಪರೀಕ್ಷೆ ರದ್ದಾಗಲೇ ಬೇಕು, ಅದು ನಮ್ಮ ವಾದ.

ಶ್ರೀ ಬಿ.ಎಸ್. ಯಡಿಯೂರಪ್ಪ : ಉಪ ಮುಖ್ಯಮಂತ್ರಿಗಳು ಎದ್ದು ನಿಂತುಕೊಂಡು ಉತ್ತರವನ್ನು ಕೊಡಲು ಹೊರಟಿದ್ದರು. ನಮಗೆ ವಿಶ್ವಾಸವಿತ್ತು. ಈ ಕಡೆಯಿಂದ ಯಾವ ತನಿಖೆಗೆ ತಾವೆಲ್ಲಾ ಒಂದಾಗಿ ಹೇಳುತ್ತೀರೋ ಅದನ್ನು ಮಾಡಿಸಲು ನಾನು ಸಿದ್ಧನಾಗಿದ್ದೇನೆ ಎನ್ನತಕ್ಕ ಮಾತನ್ನು ಅವರು ಹೇಳುತ್ತಿದ್ದರು. ಈಕ್ಷಣವೇ ಪರೀಕ್ಷೆಯನ್ನು

ರದ್ದು ಮಾಡುತ್ತೇವೆ ಎನ್ನತಕ್ಕ ಮಾತನ್ನು ಅವರು ಎದ್ದು ನಿಂತು ಹೇಳತಕ್ಕ ಸಮಯದಲ್ಲಿ ಈ ಕಡೆ ವಿರೋಧ ಪಕ್ಷದ ನಾಯಕರು ನಿಂತು ಕೊಂಡು ಸರ್ಕಾರ ಮಾಡುತ್ತಿರತಕ್ಕ ಕೆಲಸಕ್ಕೆ ಅಡ್ಡಿ ಮಾಡತಕ್ಕದ್ದು, ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತೇವೆಂದು ಸರ್ಕಾರ ಹೇಳುವುದರ ಜೊತೆಗೆ, ಅದನ್ನು ಯಾವ ಹಿತವನ್ನು ಇಟ್ಟುಕೊಂಡು ಅವರು ಹೇಳುತ್ತಿದ್ದಾರೋ ನನಗೆ ಗೊತ್ತಿಲ್ಲ. ವಿರೋಧ ಪಕ್ಷದವರಾಗಿ ನೀವು ನಿಮ್ಮ ಕರ್ತವ್ಯವನ್ನು ಮಾಡುತ್ತಿಲ್ಲ. ಆಡಳಿತ ಪಕ್ಷಕ್ಕೆ ಶಾಮೀಲಾಗಿ ಅವ್ಯವಹಾರವನ್ನು ಮುಚ್ಚಿಹಾಕುವಂತಹ ಕೆಲಸವನ್ನು ಮಾಡುತ್ತಿದ್ದೀರಿ, ಎಂದು ನೇರವಾಗಿ ಆರೋಪ ಮಾಡಬೇಕಾಗುತ್ತದೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಕೊನೆಯ ಪಕ್ಷ ಪರೀಕ್ಷೆಯನ್ನು ರದ್ದು ಮಾಡುತ್ತೇವೆ, ಸೆಕ್ರೆಟರಿಯನ್ನು ಸಸ್ಪೆಂಡ್ ಮಾಡಿದ್ದೇವೆಂದು ಘೋಷಣೆ ಮಾಡಬೇಕಾಗಿತ್ತು

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್ : ಪರೀಕ್ಷೆ ರದ್ದು ಆಗಬೇಕು ಇಲ್ಲದಿದ್ದರೆ....

ಶ್ರೀ ಆರ್. ವಿ. ದೇಶಪಾಂಡೆ : ರೆಕಾರ್ಡ ತೆಗೆದುಕೊಂಡು ನೋಡಿ ಹೇಳಿ, ಎಲ್ಲಿಯಾದರೂ ಏನ್‌ಕ್ವೊಯರಿ ಮಾಡಬಾರದು ಎಂದು ಹೇಳಿದ್ದರೆ If there is truth, the entire examination results may be setaside. They have to enquire into the matter.

ಯಡಿಯೂರಪ್ಪನವರೆ, ಬೇಜವಾಬ್ದಾರಿಯಿಂದ ಮಾತನಾಡಬೇಡಿ

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಜವಾಬ್ದಾರಿಯಿಂದಲೇ ಹೇಳುತ್ತಿದ್ದೇನೆ. ಇದಕ್ಕೆ ನೀವು ರಕ್ಷಣೆ ಕೊಡುತ್ತಿದ್ದೀರಾ, ಬೆಂಬಲ ಕೊಡುತ್ತಿದ್ದೀರಾ ?

ಶ್ರೀ ಆರ್. ವಿ. ದೇಶ್‌ಪಾಂಡೆ : ನೀವು ಬಹಳ ಹಾನೆಸ್ಟ್....

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೊಡ್ : ಕೇವಲ ಪ್ರಚಾರಕ್ಕಾಗಿ ಇದು ಶ್ರೀ ಯೂಡಿಯೂರಪ್ಪನವರು ಈ ರೀತಿ ವಿವೇಚನೆ ಇಲ್ಲದೆ ಮಾಡುವುದು ಸರಿಯಲ್ಲ

ಕಾನೂನಿನ ರೀತಿಯಲ್ಲಿ ಸರಿಯಲ್ಲ....

ಶ್ರೀ ಕೆ.ಎಸ್.ಈಶ್ವರಪ್ಪ : ಅನ್ಯಾಯವಾಗಿರುವುದರ ಪರವಾಗಿ ವಿರೋಧಪಕ್ಷದ ನಾಯಕರು ಮಾತನಾಡಬೇಕು. ಸರ್ಕಾರದ ಪರವಾಗಿ ಮಾತನಾಡುವಂಥ ಪರಿಸ್ಥಿತಿ ಬಂತಲ್ಲಾ....

ಶ್ರೀ ಆರ್. ವಿ. ದೇಶಪಾಂಡೆ : ಶ್ರೀ ಯಡಿಯೂರಪ್ಪನವರು ಏನು ಆಪಾದನೆ ಮಾಡಿದ್ದಾರೆ. ಆ ಪ್ರಕಾರ ಇದ್ದರೆ I am prepare to apologise. ರೆಕಾರ್ಡ ತರಿಸಿ ನೋಡಿ, Otherise he should apologise, I will not leave him for cheap publicity.

ಶ್ರೀ ಬಿ.ಎಸ್. ಯಡಿಯೂರಪ್ಪ: ನೀವೂ ಮರು ಪರೀಕ್ಷೆ ಮಾಡಿ ಎಂದು ಹೇಳಿಲ್ಲವೇ ? ರೆಕಾರ್ಡ್ ತೆಗೆದು ನೋಡಿ.

(ಗೊಂದಲ)

ಅಧ್ಯಕ್ಷರು : ಈಗ ತಾವು ಒತ್ತಾಯಿಸಿದ್ದೀರಿ, ತೀರ್ಮಾನ ಏನು ಎಂದು ಕೇಳಿದ್ದೀರಿ. ಸರ್ಕಾರ ಅದಕ್ಕೆ ಸರಿಯಾದ ಉತ್ತರ ಕೊಡುತ್ತದೆ. ತಾವು ಕುಳಿತುಕೊಳ್ಳಬೇಕು. ಅವರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೆಂಬುದನ್ನು....

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಸರ್ಕಾರ ನಿರ್ಣಯ ಕೊಡಬೇಕು.

ಶ್ರೀ ಆರ್. ವಿ. ದೇಶಪಾಂಡೆ : ನಾನು ಏನಾದರೂ ಎನ್‌ಕ್ವೈರಿ ಮಾಡಬೇಡಿ ಎಂದು ಹೇಳಿದ್ದರೆ ಈ ಜಾಗದಲ್ಲಿ I will not function from this place ಅವರು ಜವಾಬ್ದಾರಿಯಿಂದ ಮಾತನಾಡಬೇಕು. ಚೀಪ್ ಪಬ್ಲಿಕ್ಸಿಟಿಯ ಸಲುವಾಗಿ ನಾನ್‌ಸೆನ್ಸ್‌ಸಾಗಿ ಮಾತನಾಡುತ್ತಿದ್ದಾರಲ್ಲಾ....

ನಾಳೆ ಅದು ಪೇಪರ್‌ನಲ್ಲಿ ಬಂದರೆ ಏನಾಗುತ್ತದೆ ಎಂಬುದನ್ನು ಯೋಚಿಸಬೇಕು.ಇದನ್ನು ಯಾರು ಕೇಳಬೇಕು.

ಅಧ್ಯಕ್ಷರು : ರೆಕಾರ್ಡ ತರಿಸಿ ನೋಡುತ್ತೇನೆ. ತಾವು ಕುಳಿತುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸನ್ಮಾನ್ಯ ಅಧ್ಯಕ್ಷರೇ, ಏನಾಗುತ್ತಿದೆ ಎಂದರೆ ಈ ಕಡೆ ಕುಳಿತಿರುವಂತಹ ನಮ್ಮ ಸದಸ್ಯರ ಉದ್ದೇಶ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕೆನ್ನುವ ಉದ್ದೇಶವಾದರೆ ಸರ್ಕಾರವನ್ನು ನಾವು ವಿರೋಧಪಕ್ಷದಲ್ಲಿ ನಾವು ಸರ್ಕಾರದ ಎಲ್ಲಾ ವಿಚಾರಗಳಲ್ಲೂ ಇಕ್ಕಟ್ಟಿಗೆ ನಿಕ್ಕಿಸಬೇಕು ಮತ್ತೆ ಸರ್ಕಾರ ಮಾಡಿರುವಂತಹ ತಪ್ಪುಗಳನ್ನು ಹೊರಗಡೆ ತರತಕ್ಕದ್ದು ನಮ್ಮ ಕರ್ತವ್ಯ, ನಮ್ಮ ಧರ್ಮ, ನಾನು ಏನು ಹೇಳಿದೆ ಕರ್ನಾಟಕ ಲೋಕ ಸೇವಾ ಆಯೋಗ ಇದರ ಬಗ್ಗೆ ಚರ್ಚೆ ಮಾಡುರಂಥಾದ್ದು, ಇದು ಸರಿಯೋ ತಪ್ಪೋ ಎನ್ನುವ ಸಂಶಯ ಅನೇಕ ಸಂದರ್ಭದಲ್ಲಿ ಬರುತ್ತದೆ. ಏಕೆಂದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಂಸ್ಥೆಗಳನ್ನು ಕಟ್ಟತಕ್ಕದ್ದು ಬಹಳ ಕಷ್ಟ, ಸಂಸ್ಥೆಗಳ ವಿಶ್ವಾಸ ಹೋದ ಮೇಲೆ ಇನ್ನು ಏನು ಉಳಿಯುತ್ತದೆ. ಎನ್ನುವಂಥ ಮಾತನ್ನು ನಾನು ಮಾತನಾಡುವಂತಹ ಸಂದರ್ಭದಲ್ಲಿ ಹೇಳಿದ್ದೆ. ಈಗ ಏನಾಗಿದೆ ಎಂದರೆ ನಮ್ಮ ಕೆಲವು ಮಿತ್ರರು ನಾಳೆ ಚುನಾವಣೆ ಇದೆ ಇಲ್ಲಿ ಪ್ರಚಾರ ಬೇಕಾಗುತ್ತದೆ. ಮಾನ್ಯ ಯಡಿಯೂರಪ್ಪನವರಿಗೆ ಏನಾಗಿದೆ ಎಂದರೆ ಕಾಂಗ್ರೆಸ್ ಪಕ್ಷಕ್ಕಿಂತ ಹೆಚ್ಚಾಗಿ ಜನತಾದಳ ಇರಬಾರದು. ಜನತಾದಳದವರು ಪ್ರತಿಯೊಂದು ಸಂದರ್ಭದಲ್ಲೂ ಸಹಿತ ಶಾಮೀಲಾಗಿದ್ದಾರೆ, ರಕ್ಷಣೆ ಮಾಡುತ್ತಾರೆ, ಸರ್ಕಾರವನ್ನು ಡಿಫೆಂಡ್ ಮಾಡುತ್ತಾರೆ. ಎಂಬ ಧಾಟಿಯಲ್ಲಿ ಅವರು ಮಾತನಾಡುತ್ತಾರೆ, ಯಾರು ಬೇಡ ಎನ್ನುತ್ತಾರೆ ಸಿಬಿಐ ತನಿಖೆ ಮಾಡಿಸಿ, ನಾವು ಏನು ಹೇಳುವುದು ಸಿಬಿಐ ತನಿಖೆ ಮಾಡಿಸಿ ಸಿಓಡಿ ತನಿಖೆ ಬೇಡ ಎಂದು ಹೇಳುವುದು.

ಈಗ ದೇಶಪಾಂಡೆಯವರು ಹೇಳಿದ್ದು 'ಏನು' ಚಂದ್ರೇಗೌಡರು ಹೇಳಿದ್ದು 'ಏನು' ನಾನು ಹೇಳುವುದು 'ಏನು' ನಾವೆಲ್ಲಾ ಒಂದೇ ಮಾತಿನಿಂದ ಹೇಳಿದ್ದೇವೆ. ಅಧ್ಯಕ್ಷರೆ,ತಾವು ಇಂಥದಕ್ಕೆಲ್ಲಾ ಅವಕಾಶ ಕೊಡಬಾರದು. ನಮ್ಮ ಮೇಲೆ ಹೊರಗಡೆ ಏನು ರಿಫ್ಲೆಕ್ಷನ್ ಆಗುತ್ತದೆ ಎಂಬುದನ್ನು ಗಮನಿಸಬೇಕು ನಾಳೆ ಪತ್ರಿಕೆಗಳಲ್ಲಿ ಇದೆಲ್ಲಾ ಬರುತ್ತವೆ. ಆಗ ನಾವೆಲ್ಲಾ ನಮ್ಮ ಕರ್ತವ್ಯ ಮಾಡುತ್ತಿಲ್ಲವೆನ್ನುವಂತಹ ಅಭಿಪ್ರಾಯ ಬರುತ್ತದೆ. ತಾವು ದಯವಿಟ್ಟು ಅದನ್ನು ತರಿಸಿ ನೋಡಿ. ಆ ರೀತಿ ಅವರು ಹೇಳಿದ್ದಾರೆ.

ಅಧ್ಯಕ್ಷರು : ಇದರ ಮೇಲೆ ಡಿಬೇಟ್ ಬೇಡ, ಅದು ಸರಿಯೋ ತಪ್ಪೋ ಎಂದು ನಾನು ಕಡತ ತರಿಸಿ ನೋಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗಲ್ಲ ಮಾನ್ಯ ಅಧ್ಯಕ್ಷರೇ, ನೀವು ಏನು ತೀರ್ಮಾನ ತೆಗೆದುಕೊಳ್ಳುತ್ತೀರೋ ಅದಕ್ಕೆ ನಾವು ತಲೆ ಬಾಗುತ್ತೇವೆ. ನನ್ನದು ಒಂದು ಪಾಯಿಂಟ್, ನಾನು ಒಬ್ಬ ಜವಾಬ್ದಾರಿ ಇರುವಂತಹ ಒಂದು ಪಕ್ಷದ ಕಾರ್ಯಕರ್ತನಾಗಿ ಚುನಾಯಿತ ಸದಸ್ಯನಾಗಿ ಒಂದು ಮಾತು ಹೇಳುತ್ತಿದ್ದೇನೆ. ಸನ್ಮಾನ್ಯ ದೇಶಪಾಂಡೆಯವರ ಮಾತನಾಡಿರುವ ಬಗ್ಗೆ ಕಡತವನ್ನು ತೆಗೆದು ನೋಡಿ.ಅವರೂ ಹೇಳಿದ್ದು ಪರೀಕ್ಷೆಯನ್ನು ರದ್ದು ಮಾಡಿ ಮರು ಪರೀಕ್ಷೆ ಮಾಡಬೇಕು ಎಂದು. ಅಷ್ಟಕ್ಕೂ ಮೊದಲನೆಯದಾಗಿ ಸರ್ಕಾರ ಬದಲಾಗಬೇಕು. ಎರಡನೆಯದು ಮೇಲುನೋಟಕ್ಕೆ ಅವ್ಯವಹಾರ ಸಾಬೀತಾಗಿರುವುದರಿಂದ ಇದನ್ನು ಎನ್‌ಕ್ವೈಯರಿ ಮಾಡಿ ನೋಡುವಂತಹ ಅಗತ್ಯವೇ ಇಲ್ಲ, ತಕ್ಷಣವೇ ಆ ಸೆಕ್ರೆಟರಿಯನ್ನು ಸಸ್ಪೆಂಡ್ ಮಾಡಬೇಕು. ಅವರ ಮೇಲೆ ಕಾನೂನಿನ ಕ್ರಮ ತೆಗೆದುಕೊಳ್ಳಬೇಕು. ಯಾವ ತನಿಖೆ ಅಗತ್ಯ ಇದೆ ಆ ತನಿಖೆಯನ್ನು

ಮಾಡಬೇಕು ಎಂಬುದು ನಮ್ಮ ವಾದ. ಈ ಕಡೆಯವರು ಏನು ಹೇಳಿದರು ಇವತ್ತು ತನಿಖೆ ಮಾಡಿ ಆಮೇಲೆ ಮಾಡಿ ಎಂದು ಹೇಳುವಂಥದ್ದು. ಒಂದು ಸರ್ಕಾರಕ್ಕೆ ಈ ರೀತಿ ಸಲಹೆ ಕೊಡುವಂತಾದ್ದು, ವಿರೋಧ ಪಕ್ಷದ ನಾಯಕರಾದಂಥವರ ಒಂದು ಜವಾಬ್ದಾರಿ ಅಲ್ಲ. ಇದರಿಂದ ನೀವು 28 ಸಾವಿರ ಜನ ವಿದ್ಯಾರ್ಥಿಗಳು ಏನಿದ್ದಾರೆ ಅವರ ಜೀವನದಲ್ಲಿ ಚೆಲ್ಲಾಟ ಆಡಿದಂತೆ ಆಗುತ್ತದೆ. ನೀವು ಈ ರೀತಿಯಾಗಿ ಸರ್ಕಾರಕ್ಕೆ ಶಾಮೀಲಾದ ಹಾಗೆ ಆಗುತ್ತದೆ. ವಿರೋಧ ಪಕ್ಷದ ನಾಯಕರೇ, ನಿಮ್ಮ ಕರ್ತವ್ಯ ಸರಿಯಲ್ಲ ಎಂದು ನಾನು ಹೇಳಿದ್ದೇನೆ ಸ್ವಾಮಿ. ನನಗೆ ಹೇಳುವುದಕ್ಕೆ ಅಧಿಕಾರ ಇದೆ. ಯಡಿಯೂರಪ್ಪನವರು ಹೇಳಿದ್ದು ತಪ್ಪು ಎಂದು ಅವರು ಹೇಳಲಿ. ನಾನು ಹೇಳುತ್ತಿದ್ದೇನೆ, ಅಧ್ಯಕ್ಷರೆ, ತಾವು ರೂಲ್ಸ್‌ಬುಕ್ ತೆಗೆದು ನೋಡಿ. ನೀವು ನಾವೆಲ್ಲಾ ಸೇರಿ ಆ ರೂಲ್ಸ್ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ. ನಾನು ಹೇಳುತ್ತೇನೆ, ಇವತ್ತು ವಿರೋಧ ಪಕ್ಷದ ನಾಯಕರು ಅಲ್ಲಿ ಶಾಮೀಲಾಗಿದ್ದರೆ, ಈ ರೀತಿ ಇದು ಸರಿಯಲ್ಲ ಎಂದು ಹೇಳುತ್ತೇನೆ. ಹೇಗೆ ದಾಖಲೆಯಿಂದ ತೆಗೆಯುತ್ತೀರಿ? ಎಲ್ಲಿ ಅಪರಾಧವಾಗಿದೆ?

ಅವರು ಆಡಿದಂತಹ ಮಾತಿನಲ್ಲೇ ಅವರ ದಂಧ್ವ ಕಾಣುತ್ತದೆ. ಅವರು ಸರ್ಕಾರದ ಪರವಾಗಿ ಇರುವಂಥವರಾಗಿದ್ದಾರೆ. ಅವ್ಯವಹಾರ ಮಾಡಿರುವುದನ್ನು ಬಹಿರಂಗವಾಗಿ ಒಪ್ಪಿಕೊಳ್ಳುವುದಕ್ಕೆ ಸಿದ್ಧವಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ವಿರೋಧ ಪಕ್ಷದ ನಾಯಕರಾಗಿ ಅವರ ಕರ್ತವ್ಯವನ್ನು ಅವರು ನಿರ್ವಹಿಸುತ್ತಿಲ್ಲವೆಂದು ನಾನು ಹೇಳಬೇಕಾಗುತ್ತದೆ. ಇಲ್ಲಿ ಹೇಳಿದನ್ನು 'ಒಗೊಟ್ಟುವುದಕ್ಕೆ ಬಂದಿಲ್ಲ ನಾನು. ಜನತಾ ದಳವನ್ನು ಇಕ್ಕಟ್ಟಿಗೆ ನಿಲ್ಲಿಸುವುದಕ್ಕೆ ಬಂದಿಲ್ಲ. ವಿರೋಧ ಪಕ್ಷದ ನಾಯಕರಾಗಿ ಕರ್ತವ್ಯವನ್ನು ಮಾಡದೇ ಇದ್ದಾಗ ಅದು ತಪ್ಪು ಎಂದು ಹೇಳುವುದು ನನ್ನ ಕರ್ತವ್ಯ ಇದೆ ಅದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ವಿರೋಧ ಪಕ್ಷದ ನಾಯಕರಾಗಿದ್ದೀರಾ ನೀವು? We have been a recognised opposition party. What ever debate goes on, ಕರ್ನಾಟಕ ಜನ ಈ ಕಡೆ ಗಮನ ಕೊಡುತ್ತಿದ್ದಾರೆ,ನಾವು 'ಏನು ಮಾತನಾಡಿದರೂ ಸಹ ಅದು ಪತ್ರಿಕೆಗಳಲ್ಲಿ ಬರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬರೆದು ಕೊಟ್ಟು ಬಿಡಿ.

ಅಧ್ಯಕ್ಷರು : ಯಡಿಯೂರಪ್ಪನವರೇ, ಈ ರೀತಿ ಮಾತನಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಸಾರ್ವಜನಿಕ ಹಿತದೃಷ್ಟಿ ಇದ್ದಾಗಲು ಸಹ ರಾಜಕೀಯ ಮಾಡುವಂತಹ ಕೆಲಸ ಈ ಸದನದಲ್ಲಿ ನಡೆಯುತ್ತಿರುವುದು ಸರಿಯಲ್ಲ.

ಶ್ರೀಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ,ನಾನೂ ಸಹ ಈಗ ಬೇಕಾದಷ್ಟು ವಿಚಾರ ಹೇಳುವುದಕ್ಕೆ ಹೋಗಬಹುದು. ಆದರೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರು ಯಾರು ನನಗೆ ಸಂಬಂಧ ಇಲ್ಲ. ಅಲ್ಲಿರತಕ್ಕಂತಹ ಒಬ್ಬ ಖಯಾಂ ಎನ್ನುವಂತಹ ಒಬ್ಬ ಐಎಎಸ್ ಅಥವಾ ಐಪಿಎಸ್ ಅಧಿಕಾರಿ ಸಹ ನನಗೆ ಗೊತ್ತಿಲ್ಲ. ಕಾರ್ಯದರ್ಶಿ ಅವರು ಯಾರು ಎನ್ನುವುದೂ ಸಹ ನನಗೆ ಗೊತ್ತಿಲ್ಲ. ಆದರೆ ಇವರು ಇನ್‌ಸಿಸ್ಟ ಮಾಡುತ್ತಿದ್ದಾರಲ್ಲಾ, ನೀವು ಸರ್ಕಾರ ಎನ್‌ಕ್ವೊಯರಿ ಮಾಡಿ ನೋಡಿ

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ, ಲೋಕಸೇವಾ ಆಯೋಗದ ಮೇಲೆ ಚರ್ಚೆ ಮಾಡುವುದಕ್ಕೆ ಈಗ ಸಾಧ್ಯವೇ ಇಲ್ಲವೇ ಎನ್ನುವ ಅನುಮಾನವನ್ನು ನಮ್ಮ ವಿರೋಧ ಪಕ್ಷದ ನಾಯಕರು,ಉಪನಾಯಕರು ಹೇಳಿದ್ದಾರೆ. ಅದರ ಬಗ್ಗೆ ಏನೂ, ಅನುಮಾನ ಪಡಬೇಕಾಗಿಲ್ಲ. ಚರ್ಚೆ ಮಾಡಬಹುದು. ಏಕೆಂದರೆ ಸಂವಿಧಾನದಲ್ಲಿ

ಯಾರ ಬಗ್ಗೆ ಚರ್ಚೆ ಮಾಡಬಹುದು, ಯಾರ ಬಗ್ಗೆ ಚರ್ಚೆ ಮಾಡಬಾರದು ಎನ್ನುವುದು ಸ್ಪಷ್ಟವಾಗಿ ಹೇಳಿದೆ.It is not rule by convention.It is the rule of law.

ನಮ್ಮ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದ ನ್ಯಾಯಧೀಶರ ನಡತೆ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಅದು ಬಿಟ್ಟು ಸಂವಿಧಾನ ಒಳಗಡೆ ಏನೇನು ವಿಷಯ ಬರುತ್ತದೆ ಎಲ್ಲವನ್ನು ಚರ್ಚೆ ಮಾಡುತ್ತೇವೆಂದು ನಾವು ಪ್ರಮಾಣ ವಚನ ಸ್ವೀಕಾರ ಮಾಡಿರುವುದು. ಅದನ್ನು ರಕ್ಷಣೆ ಮಾಡುತ್ತೇವೆ ಎಂದೇ ತೆಗೆದುಕೊಂಡಿರುವುದು. ಆದುದರಿಂದ ಲೋಕಸೇವಾ ಆಯೋಗ ಏನು ನಮ್ಮ ಈ ಸದನಕ್ಕಿಂತ ಮೇಲ್ಪಟ್ಟ ಒಂದು ಸಂಸ್ಥೆ ಅಲ್ಲ.ಅದನ್ನು ಇಲ್ಲಿ ಚರ್ಚೆ ಮಾಡಬಹುದು. ಆದರೆ ನಾವು ಸರ್ಕಾರಕ್ಕೆ ಕೇಳುತ್ತಿರುವುದು ಇಷ್ಟೇನೇ. ಯಾವುದೇ ಅಳತೆಗೋಲಿನಿಂದಲೂ ಈಗ ನಡೆದಿರುವಂತ ಪರೀಕ್ಷೆ, ಪರೀಕ್ಷೆಯೇ ಅಲ್ಲ. ನಾನು ವಿವರಗಳನ್ನು ಮತ್ತು ದಾಖಲೆಗಳನ್ನು ತಂದಿಲ್ಲ. ಆದುದರಿಂದ ನಾನು ಮೊದಲೇ ನಿಂತು ಮಾತನಾಡಲಿಲ್ಲ. ಒಬ್ಬ ಹೆಣ್ಣುಮಗಳು ಹೆರಿಗೆಯಾದ ದಿವಸವೇ ಪರೀಕ್ಷೆ ಬರೆದಿದ್ದಾಳೆ. ಇದಕ್ಕೆ ದಾಖಲೆ ನನ್ನ ಹತ್ತಿರ ಇದೆ. ಅದನ್ನು ಕಳುಹಿಸಿಕೊಡುತ್ತೇನೆ. ಅಷ್ಟರಮಟ್ಟಿಗೆ ಇಂಪರ್ಸೊನೇಷನ್ ಆಗುಂತಹ ಒಂದು ಸಂಸ್ಥೆ. ಅದಕ್ಕೆ ನಾನು ಹೇಳಿದ್ದು ಇದು ಭ್ರಷ್ಟಾಚಾರಕ್ಕೆ ದೀಕ್ಷೆ ಕೊಡುವಂತಹ ಒಂದು ಮಠವಾಗಿದೆ.

ಆ ಮಟ್ಟಕ್ಕೆ ಬಂದು ಮುಟ್ಟಿದ್ದೇವೆ. ಆ ಕಾರಣ ನನ್ನ ವಿನಂತಿ ಇಷ್ಟೇ. ನಿಮ್ಮ ಈ ಸರ್ಕಾರಕ್ಕೂ ಗೌರವ ಬರಬೇಕಾದರೆ ಈ ಪರೀಕ್ಷೆಗಳು ಏನು ಇದೆ ಅದನ್ನು ತಡೆ ಹಿಡಿದಿದ್ದೇವೆ ಎಂದು ಇವತ್ತು ಘೋಷಣೆ ಮಾಡಬೇಕು, ನಂತರ ತಾವು ತನಿಖೆ ಮಾಡಬಹುದು.

ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಲೋಕಸೇವಾ ಆಯೋಗ ಮಾಡಿರತಕ್ಕಂತ ತಪ್ಪುಗಳನ್ನು ನಾವು ಗಮನಿಸಿದ್ದೇವೆ. ಇದರಲ್ಲಿ ತಪ್ಪುಗಳನ್ನು ವಿಚಾರ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಲಿಕ್ಕೆ ನಾವು ಬಲವಾದ ಪಕ್ಷಪಾತ ಮಾಡುತ್ತೇವೆ. ಈಗ ತಾನೆ ಉಪಮುಖ್ಯಮಂತ್ರಿಗಳು ನನಗೆ ಎರಡು ದಿವಸ ಸಮಯಬೇಕು ಅದು ಮೇಲ್ನೋಟಕ್ಕೆ ಏನಿದೆ ಅನ್ನುವುದನ್ನು ನೋಡಿ ನಾವು ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಅದಕ್ಕಾಗಿ ಕೂಡಲೇ ರದ್ದುಪಡಿಸಲಿಕ್ಕೆ, ಅಥವಾ ಸಸ್ಪೆಂಡ್ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ನಮ್ಮ ನಾಯಕರು ಹೇಳಿದರೇ ವಿನಹ ಅದರ ವಿಚಾರಣೆಯಾಗಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಯಾವ ರೀತಿಯ ವಿರೋಧ ಇಲ್ಲ. ನಾವು ಅವರಿಗಿಂತ ಹೆಚ್ಚು ಕಳಕಳಿಯಿಂದ ಈ ಲೋಕ ಸೇವಾ ಆಯೋಗದ ಬಗ್ಗೆ ತನಿಖೆ ಆಗಬೇಕು ಎಂದು ಒತ್ತಾಯ ಮಾಡುತ್ತೇನೆ. ಉಪಮುಖ್ಯ ಮಂತ್ರಿಗಳು ಎರಡು ದಿವಸ ಕಾಲಾವಕಾಶ ಕೇಳಿದರು, ಅಲ್ಲಿರತಕ್ಕ ಕಾಗದಪತ್ರಗಳನ್ನು ವ್ಯಾಪಾರ ಮಾಡಬಹುದು ಎನ್ನುವ ಉದ್ದೇಶದಿಂದ ಈ ದಿವಸವೇ ಸರ್ಕಾರ ಅದರ ಕಾಗದಪತ್ರಗಳನ್ನು ಪರಿಶೀಲನೆ ಮಾಡಿ ಮೇಲ್ನೋಟಕ್ಕೆ ಅದು ಸಾಬೀತು ಎಂದು ಕಂಡಲ್ಲಿ ಪರೀಕ್ಷೆಗಳನ್ನು ತಡೆಹಿಡಿಯತಕ್ಕಂಥ ಮತ್ತು ಅಲ್ಲಿರತಕ್ಕ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು ಹಾಗೂ ಇದನ್ನು ಸಾರ್ವಜನಿಕ ದೃಷ್ಟಿಯಿಂದ ಇಂದೇ ಮಾಡಬೇಕೆಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ನಾನಾ ವಿಧವಾದಂತಹ ಸಲಹೆಗಳು ಬಂದಿವೆ ಪರೀಕ್ಷೆಗಳನ್ನು ರದ್ದುಮಾಡುತ್ತೇವೆ ಎಂದು ಹೇಳಿ, ಕಾರ್ಯದರ್ಶಿಯವರನ್ನು ಅಮಾನತ್ತಿನಲ್ಲಿ ಇಡುತ್ತೇವೆ ಎಂದು ಹೇಳಿ ಮತ್ತು ಮಾಜಿ ನ್ಯಾಯಾಧೀಶರಿಂದ ವಿಚಾರಣೆ ನಡೆಸಿ ಸಿಓಡಿ ಸಿಬಿಐ ಯಾವುದರಲ್ಲಾದರೂ ತನಿಖೆ ಮಾಡಿ ಎಂದು ಹೇಳಿದ್ದಾರೆ. ಈ ಎಲ್ಲಾ ಹ್ಯಾಂಗ್ ಮಾಡುವುದನ್ನು ಬಿಟ್ಟು ಬಾಕಿ ಎಲ್ಲಾ ಸಲಹೆಗಳು ಸ್ವಾಗತಾರ್ಹ. ಯಡಿಯೂರಪ್ಪನವರು ಬರೀ ಹ್ಯಾಂಗ್ ಮಾಡುವುದರಲ್ಲಿಯೇ ಇದ್ದಾರೆ.

ಮೊದಲನೇ ದಿವಸದಿಂದ ಐದು ದಿವಸವಾದರೂ ಇನ್ನೂ ಹ್ಯಾಂಗ್ ಮೂಡ್ನಲ್ಲಿಯೇ ಅವರು ಇದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹ್ಯಾಂಗ್ ಮಾಡಬೇಕಾದರೆ ಏನೇನು ಅಪರಾಧ ಮಾಡಬೇಕೆಂಬುದನ್ನು ಹೇಳಿಬಿಡಿ. ಆಮೇಲೆ ಇನ್ನು ಮುಂದೆ ಆ ಶಬ್ದ ಉಪಯೋಗಿಸುವುದಿಲ್ಲ.

ಶ್ರೀ ಎಸ್.ಎಂ. ಕೃಷ್ಣ : ಧನ್ಯವಾದಗಳು.

ಈ ಕಾನೂನಿನ ಚೌಕಟ್ಟಿನಲ್ಲಿ ನಾವು ಮುಂದುವರಿಯಬೇಕಾಗುತ್ತದೆ. ಮೇಲ್ನೋಟಕ್ಕೆ ತುಂಬಾ ತಪ್ಪುಗಳು ನಡೆದಿವೆ ಎನ್ನತಕ್ಕದ್ದು ನನಗೂ ಅರ್ಥವಾಗುತ್ತದೆ. ಆದರೆ ಇದಕ್ಕೆ ಯಾವ ರೀತಿ ನಾವು ಇದನ್ನು ಸರಿಪಡಿಸಬೇಕು ಎನ್ನುವುದಕ್ಕೆ ಕಾನೂನಿನ ಚೌಕಟ್ಟಿನಲ್ಲಿ ನಾವು ಮುಂದುವರಿಯಬೇಕಾಗುತ್ತದೆ. ನಾವು ತೆಗೆದುಕೊಳ್ಳತಕ್ಕ ತೀರ್ಮಾನದಿಂದ ಇನ್ನೊಬ್ಬರು ಕೋರ್ಟಿಗೆ ಹೋಗತಕ್ಕಂಥದ್ದಕ್ಕೆ ಅವಕಾಶ ಕೊಡಬಾರದು. ಆ ದೃಷ್ಟಿಯಿಂದ ನಾನು ಕೆಲವು ಗಂಟೆಗಳ ಕಾಲವಕಾಶವನ್ನು ಕೇಳಿದ್ದೇನೆ. ಇದರಲ್ಲಿ ನಾನು ಮೊದಲೇ ಹೇಳಿದ ಹಾಗೆ ಪಕ್ಷ, ಪ್ರತಿಪಕ್ಷ, ಸರ್ಕಾರ, ವಿರೋಧ ಪ್ರಶ್ನೆ ಅಲ್ಲ, ಪರೀಕ್ಷೆಗಳು ನಿಷ್ಪಕ್ಷಪಾತವಾಗಿ ನಡೆಯಬೇಕು. ಪರೀಕ್ಷೆಗಳಿಗೆ ಮರ್ಯಾದೆ ಬರಬೇಕು. ಆದ್ದರಿಂದ, ಈ ಪರೀಕ್ಷೆ ಇಷ್ಟು ಅವ್ಯವಸ್ಥೆಯಲ್ಲಿ ನಡೆದಿರತಕ್ಕಂಥದ್ದು ಅಥವಾ ಉದ್ದೇಶಪೂರ್ವಕವಾದಂತ ಅವ್ಯವಸ್ಥೆ ಎಂದು ಹೇಳಿ ತಾವು ಏನು ಹೇಳಿದ್ದೀರಿ. ಇವೆಲ್ಲವನ್ನು ಕೂಡ ಸರ್ಕಾರ ಗಮನಿಸುತ್ತದೆ. ಆದುದರಿಂದ ಇವತ್ತು ನಾನು ಕಾನೂನು ಸಲಹೆಗಾರರ ಸಭೆ ಕರೆದು ನಾಳೆ ಪ್ರಶ್ನೋತ್ತರ ಕಾಲ ಆದಮೇಲೆ ಇದರಬಗ್ಗೆ ಸರ್ಕಾರ ಏನು ನಿಲುವು ತೆಗೆದುಕೊಳ್ಳುತ್ತದೆ ಎನ್ನುವುದನ್ನು ಸದನದ ಮುಂದೆ ಇಡುತ್ತೇನೆ.

ಜೀವನಭೀಮಾನಗರದಲ್ಲಿ ಕನ್ನಡ ಚಳುವಳಿಯ ಕಾರ್ಯಕರ್ತನ ಮೇಲೆ ಪೋಲೀಸರು ದೌರ್ಜನ್ಯ ನಡೆಸಿರುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ನಾನು ಇವತ್ತು ಬೆಳಿಗ್ಗೆ ಒಂದು ಗಮನಸೆಳೆಯುವ ಸೂಚನೆ ಬಗ್ಗೆ ತಮ್ಮಲ್ಲಿ ಹೇಳಿದ್ದೆ. ನಮ್ಮ ಕನ್ನಡ ಚಳುವಳಿಯ ಕಾರ್ಯಕರ್ತ ರಂಗನಾಥ್ ಎಂಬುವವನನ್ನು ವಿನಾಕಾರಣ ಬಂಧಿಸಿ ಜೀವನ ಭೀಮಾನಗರದಲ್ಲಿ ಕೈಗೆ ಬಳೆ ಹಾಕಿ, ಒದ್ದು ಬೂಟಿನಿಂದ ಹೊಡೆದು ಮೆರವಣಿಗೆ ಮಾಡಿದ್ದಾರೆ. ಈ ಪೋಲಿಸ್ ವ್ಯವಸ್ಥೆ ಎಷ್ಟು ಕುಲಗೆಟ್ಟು ಹೋಗಿದೆ ಎಂಬುದಕ್ಕೆ ನಾನು ಇದನ್ನು ಹೇಳುತ್ತಿದ್ದೇನೆ. ಇದರ ಬಗ್ಗೆ ನಾವೆಲ್ಲರೂ ಸಹಿ ಹಾಕಿ ತಮಗೆ ಕಳುಹಿಸಿಕೊಟ್ಟಿದ್ದೇವೆ. ನ್ಯಾಯ ಕೇಳುವುದಕ್ಕೆ ಹೋದಂಥ ನಮ್ಮ ಕಾರ್ಯಕರ್ತನಿಗೆ ಕೈಗೆ ಬಳೆ ಹಾಕಿ, ಹೊಡೆದಿದ್ದಾರೆ. ನಾನು ತಮ್ಮಲ್ಲಿ ಅನೇಕ ಸಾರಿ ಮನವಿ ಮಾಡಿಕೊಂಡಿದ್ದೇನೆ. ನಮ್ಮ ವಿರೋಧಪಕ್ಷದವರೆಲ್ಲರೂ ಅದಕ್ಕೆ ಸಹಿ ಹಾಕಿ ಕಳುಹಿಸಿಕೊಟ್ಟಿದ್ದೇವೆ. ಆ ಕಾರ್ಯಕರ್ತ ಏನು ಅಪರಾಧವನ್ನು ಮಾಡಟಿದ್ದಾನೆಂಬುದನ್ನು ನಿಮ್ಮ ಅಧಿಕಾರಿಗಳು ಹೇಳಲಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಕೈಗೆ ಬೇಡಿ ಹಾಕತಕ್ಕ ಪರಿಸ್ಥಿತಿ ಆದರೆ ಏನು ಹೇಳಬೇಕು? ಇದು ಬಹಳ ಅನ್ಯಾಯ.

(ಗೊಂದಲ)

ಅಧ್ಯಕ್ಷರು : ನಾಗರಾಜ್ರವರೇ ತಾವು ಬಂದು ಹೇಳಿದಿರಿ. ನಾನು ಇದನ್ನು ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ತಪ್ಪು ಮಾಡಿದ್ದರೆ ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಿ. ಆದರೆ ಕೈಗೆ ಬೇಡಿ ಹಾಕುವ ಕ್ರಮ ಏತಕ್ಕೆ ತೆಗೆದುಕೊಂಡರು?

ಅಧ್ಯಕ್ಷರು : ಬೈರೇಗೌಡರೆ, ನಾಳೆ ಇದನ್ನು ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗಾರಾಜ್ : ಈ ರೀತಿ ರಾಜ್ಯದಲ್ಲಿ ಪೋಲಿಸ್ ವ್ಯವಸ್ಥೆ ಇರುವುದಾದರೆ ಯಾರೂ ಕೂಡ ಬದುಕಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು : ನಾಳೆ ನಾನು ಇದಕ್ಕೆ ಕಾಲಾವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೇನಲ್ಲಾ.

ಶ್ರೀ ಕೆ. ಲಕ್ಕಣ್ಣ : 23ನೇ ತಾರೀಖು ಹೊಡೆದಿದ್ದನ್ನು ನಾವು ಕಣ್ಣಾರೆ ನೋಡಿದ್ದೇವೆ. ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಇದುವರೆಗೂ ಅವರ ವಿರುದ್ಧ ಕ್ರಮವನ್ನು ತೆಗೆದುಕೊಂಡಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಗೃಹ ಮಂತ್ರಿಗಳು ಇಲ್ಲೇ ಇದ್ದಾರೆ. ಇದರ ಬಗ್ಗೆ ಅವರು ಯಾವತ್ತು ಹೇಳಿಕೆಯನ್ನು ಕೊಡುತ್ತಾರೆಂಬುದನ್ನು ಹೇಳಲಿ.

ಅಧ್ಯಕ್ಷರು : ನಾಳೆ ಅವಕಾಶ ಮಾಡಿಕೊಡುತ್ತೇನೆಂದು ನಾನು ಹೇಳುತ್ತಿದ್ದೇನಲ್ಲಾ.

ಶ್ರೀ ಕೆ. ಲಕ್ಕಣ್ಣ : ಒಂದು ತಿಂಗಳ ಮೇಲಾಗಿದೆ. ಇನ್ನೂ ಇಲ್ಲ.

ಅಧ್ಯಕ್ಷರು : ಅವಕಾಶವನ್ನು ಮಾಡಿಕೊಡುತ್ತೇನೆಂದು ಹೇಳುತ್ತಿದ್ದೇನಲ್ಲಾ. ಕುಳಿತುಕೊಳ್ಳಿ ಪ್ರತಿಯೊಂದನ್ನೂ ಇದೇ ರೀತಿಮಾಡಿದರೆ ನಮಗೆ ಕಾಲಾವಕಾಶ ಬೇಕಲ್ಲಾ.

ಶ್ರೀ ವಾಟಾಳ್ ನಾಗರಾಜ್ : ತಮ್ಮಲ್ಲಿ ನಮ್ಮ ಮನವಿ ಏನೆಂದರೆ, ಅವರಿಗೆ ವಿಚಾರ ಗೊತ್ತಿದೆ, ಗೃಹಮಂತ್ರಿಗಳು ಇಲ್ಲೇ ಕೂತಿದ್ದಾರೆ. ನಾವೆಲ್ಲರೂ ಹೋಗಿ ಅವರಿಗೆ ಮನವಿಕೊಟ್ಟು ಹೇಳಿದ್ದೇವೆ. ನಾನು ಆಸ್ಪತ್ರೆಗೆ ಹೋಗಿನೋಡಿಕೊಂಡು ಬಂದಿದ್ದೇನೆ. ಪೋಲಿಸ್ ಸ್ಟೇಷನ್ಗೆ ಹೋಗಿಬಂದಿದ್ದೇನೆ. ಆ ಪೋಲೀಸರನ್ನು ಏನೇ ಆದರೂ ಬದಲಾವಣೆ ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಅವರಿಗೆ ಕಾಂಗ್ರೆಸ್ನ ಕೆಲವು ಮಂತ್ರಿಗಳ ಬೆಂಬಲ ಇದೆ. ಯಾವ ಕಾರಣಕ್ಕೂ ಬದಲಾವಣೆ ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಪರಿಸ್ಥಿತಿ ಈ ರೀತಿ ಆದರೆ ಸಾರ್ವಜನಿಕ ಜೀವನದಲ್ಲಿ ಯಾರಾದರೂ ಬದುಕುವುದಕ್ಕೆ ಸಾಧ್ಯವೇ ಎಂಬುದನ್ನು ಕೇಳುತ್ತಿದ್ದೇನೆ. ಗೃಹಮಂತ್ರಿಗಳು ಇಲ್ಲೇ ಇದ್ದಾರೆ.

ಅಧ್ಯಕ್ಷರು : ನಾಳೆ ಇದಕ್ಕೆ ಸರಿಯಾದ ಉತ್ತರವನ್ನು ಕೊಡುತ್ತಾರೆ. ಈಗಲೇ ಉತ್ತರ ಹೇಳಿಸಿ ಅಂದರೆ ಕಷ್ಟವಾಗುತ್ತದೆ. ನಾಳೆ ನಾನು ತಮಗೆ ಅವಕಾಶ ಮಾಡಿಕೊಡುತ್ತೇನೆ. ಅದಕ್ಕೆ ಅವರು ಉತ್ತರವನ್ನೂ ಕೂಡ ಕೊಡುತ್ತಾರೆ.

ಗಮನ ಸೆಳೆಯುವ ಸೂಚನೆ

ತುಂಗಭದ್ರಾ ಎಡದಂಡೆ ನಾಲೆ ಸತತವಾಗಿ 8 ಸಾರಿ ಬಿರುಕುಬಿಟ್ಟು ನೀರು ಬಿಡದಿರುವುದರಿಂದ ರೈತರಿಗೆ ತುಂಬಾ ತೊಂದರೆಯಾಗಿರುತ್ತದೆ, ಇದರ ರಿಪೇರಿಗಾಗಿ ಸರ್ಕಾರ ಇನ್ನೂ ಯಾವುದೇ ಕ್ರಮ ತೆಗೆದುಕೊಳ್ಳದೇ ಇರುವ ಬಗ್ಗೆ

ಶ್ರೀ ಆರ್.ವಿ. ದೇಶಪಾಂಡೆ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮೇಲ್ಕಂಡ ವಿಷಯದ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,

ತುಂಗಭದ್ರಾ ಎಡದಂಡೆ ನಾಲೆಯು 141 ಮೈಲಿಗಳು ಉದ್ದವಿದ್ದು, ಕಾಲುವೆಯು ಬಹಳ ಹಳೆಯ ಕಾಲುವೆಯಾಗಿದ್ದು, ಬಹಳಷ್ಟು ಸಲ ಒಡೆದು ಅಚ್ಚುಕಟ್ಟು ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಮಾಡುವಲ್ಲಿ ಆಗಾಗ್ಗೆ ತೊಂದರೆಯಾಗಿರುತ್ತದೆ. ಮಾರ್ಚ್ 94 ರಿಂದ ಈಚೆಗೆ ಈ ಎಡದಂಡೆ ಕಾಲುವೆಯು ವಿವಿಧ ಚೈನೇಜ್ಗಳಲ್ಲಿ 8 ಕಡೆ ಕಾಲುವೆ ಬಿರುಕುಗೊಂಡಿದ್ದು ಈ ಭಾಗಗಳಲ್ಲಿ ಕೂಡಲೇ ದುರಸ್ಥಿ ಕಾರ್ಯ ಕೈಗೆತ್ತಿಕೊಂಡು

4-5 ದಿವಸಗಳಲ್ಲಿ ಸರಿಪಡಿಸಿ ಮತ್ತೆ ನೀರನ್ನು ಕಾಲುವೆಯಲ್ಲಿ ಬಿಡಲಾಗಿರುತ್ತದೆ. ಬಿರುಕುಗೊಂಡ ವಿವರಗಳು ಈ ಕೆಳಕಂಡಂತಿವೆ.

ದಿನಾಂಕ	ಮೈಲು ಸಂಖ್ಯೆ	ಚೈನೇಜ್
1) 22-3-94	10	517.00 (ಕಲ್ವರ್ಟ್)
2) 14-7-94	117	6254.50 (ಕರ್ನಾಟಕ ವಿದ್ಯುತ್ ನಿಗಮ ಇವರಿಗೆ ಸಂಬಂಧವಿರುತ್ತದೆ)
3) 22-7-94	69	3614
4) 31-7-94	40	2219
5) 2-8-94	39	2097 ಎರಡು ಕಡೆ
6) 7-8-94	39	2092
7) 14-8-94	61	3256
8) 18-8-94	77	4117 ಎರಡು ಕಡೆ

ಈ ತರಹದ ತೊಂದರೆಯನ್ನು ನಿವಾರಿಸುವಲ್ಲಿ ಕಾಲುವೆಯನ್ನು ಭದ್ರಪಡಿಸುವ ಹಾಗೂ ಇತರ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳುವ ಸಲುವಾಗಿ 1981ರಲ್ಲಿ ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಯು ತನ್ನ ವರದಿಯನ್ನು ನೀಡಿದ್ದು 1982 ರಿಂದ ಹಂತ ಹಂತವಾಗಿ ಒಳಮೈ ಹಾಗೂ ಹೊರಮೈ ಭದ್ರಪಡಿಸುವ ಹಾಗೂ ಇತರೆ ಕೆಲಸಗಳನ್ನು ತೆಗೆದುಕೊಳ್ಳಲಾಗಿರುತ್ತದೆ. 1992ರವರೆಗೆ ಒಟ್ಟು 2,784 ಸರಪಳಿಗಳಲ್ಲಿ (84.56 ಕಿ.ಮೀ. ಅಥವಾ 42.18 ಕಿ.ಮೀ. ಎರಡು ಬದಿಯಲ್ಲಿ) ಒಳಮೈ ಬಲಪಡಿಸುವ ಕೆಲಸಗಳನ್ನು ತೆಗೆದುಕೊಳ್ಳಲಾಗಿದ್ದು ರೂ. 2,897 ಲಕ್ಷಗಳನ್ನು ಖರ್ಚುಮಾಡಲಾಗಿದೆ. ತಜ್ಞರ ಸಮಿತಿಯ ಶಿಫಾರಸ್ಸಿನಂತೆ ಬಾಕಿ ಉಳಿದಿರುವ ಕೆಲಸಗಳ ಜೊತೆಗೆ ಇನ್ನೂ 15 ಕಿ.ಮೀ. ಉದ್ದದಷ್ಟು ನಾಲೆಗಳ ಒಳಮೈ ಭದ್ರತೆ ಮಾಡಬೇಕಿದ್ದು, ರೂ. 3,985 ಲಕ್ಷಗಳ ಅಗತ್ಯವಿರುತ್ತದೆ. 1995ನೇ ವಾರ್ಷಿಕ ಕ್ಲೋಶರ್‌ನಲ್ಲಿ ಒಳಮೈ ಮತ್ತು ಹೊರಮೈ ಬಲಪಡಿಸುವ ಹಾಗೂ ಇತರೆ ಕೆಲಸಗಳನ್ನು ಕೈಗೊಳ್ಳುವ ಸಲುವಾಗಿ ರೂ. 2,000 ಲಕ್ಷಗಳ ಪ್ರಸ್ತಾವನೆಯನ್ನು ಯೋಜನಾ ಅಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸಿದ್ದು ಇದನ್ನು ಪರಿಶೀಲಿಸಿ 1995ನೇ ಕ್ಲೋಶರ್ ಅವಧಿಯಲ್ಲಿ ಸದರಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

ಈ ತರಹದ ಬಿರುಕುಗಳು ಆಗುತ್ತಿರುವ ಬಗ್ಗೆ ವಿವರವಾದ ತನಿಖೆ ಹಾಗೂ ಶಾಶ್ವತ ಪರಿಹಾರ ಕಂಡುಹಿಡಿಯುವ ಸಲುವಾಗಿ 3 ಸದಸ್ಯರನ್ನೊಳಗೊಂಡ ತಜ್ಞರ ಸಮಿತಿಯನ್ನು ಸಹ ಇಷ್ಟರಲ್ಲೇ ರಚಿಸಲಾಗುವುದು.

+ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಉಪಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ತುಂಗಭದ್ರಾ ಎಡದಂಡೆ ನಾಲೆಯಲ್ಲಿ ಬಿರುಕು ಬಿಟ್ಟು ರೈತರಿಗೆ ಆಗಿರುವಂಥ ತೊಂದರೆಯ ಬಗ್ಗೆ ಅವರೇ ಒಪ್ಪಿಕೊಂಡಿದ್ದಾರೆ. ಮಾರ್ಚ್ 94ರಿಂದ ಈ ಎಡದಂಡೆ ನಾಲೆ ಹಲವಾರು ಸಾರಿ ಬಿರುಕುಬಿಟ್ಟಿದೆ. ಈಗಾಗಲೇ ಇದರ ಬಗ್ಗೆ ಅಲ್ಲಿನ ಮುಖ್ಯ ಇಂಜಿನಿಯರ್‌ರವರು ತಾ : 17-6-94 ರಲ್ಲಿ ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸಿದ್ದಾರೆ. 543 ಕಡೆ ನಾವು ತಕ್ಷಣ ರಿಪೇರಿ ಕೆಲಸಮಾಡಬೇಕಾಗಿದ್ದು ಅದಕ್ಕೆ 11 ಕೋಟಿ ರೂ. ಬೇಕಾಗಿದೆ ಎಂದು ಸರ್ಕಾರಕ್ಕೆ ವರದಿ ಕೊಟ್ಟಿದ್ದಾರೆ. ಆದರೆ ಇವತ್ತಿನವರೆಗೂ ಸರ್ಕಾರದಿಂದ ಒಂದು ಪೈಸೆ ಕೂಡ ಬಿಡುಗಡೆ ಆಗಿಲ್ಲ. ಇದರ ಬಗ್ಗೆ ಸರ್ಕಾರದ ಆದೇಶ ಏನಿದೆ ಎಂಬುದನ್ನು ಮಾನ್ಯ ಉಪಮುಖ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ. ಅಷ್ಟೇ ಅಲ್ಲ ಇವತ್ತು ಅಲ್ಲಿ ಸುಮಾರು 5-6

ಲಕ್ಷ ಎಕರೆ ಜಮೀನಿಗೆ ನೀರಾವರಿ ಆಗಬೇಕಾಗಿದೆ. ಅಲ್ಲಿ ರಿಸರ್ವಾಯಿರ್ನಲ್ಲಿ ನೀ ಆದರೆ ರೈತರಿಗೆ ನೀರು ಸಿಕ್ಕುತ್ತಿಲ್ಲ. ಇಂಥ ಪರಿಸ್ಥಿತಿ ನಿರ್ಮಾಣವಾದಾಗ ಸಕಾ ಪ್ರೈಯಾರಿಟಿ ಮೇಲೆ ಕೆಲಸಮಾಡಬೇಕಾಗಿದೆ. ಏಕೆಂದರೆ, ರಾಜ್ಯದಲ್ಲಿ ಒಂದುಕಡೆ ಬರಗ ಇದೆ, ಇನ್ನೊಂದು ಕಡೆ ಅತಿವೃಷ್ಟಿ ಆಗಿದೆ. ಇಲ್ಲಿ ನೀರಿದೆ; ಆದರೆ ಕಾಲ ಒಡೆಯುತ್ತಿರುವುದರಿಂದ ರೈತರಿಗೆ ನೀರು ಸಿಕ್ಕುತ್ತಿಲ್ಲ. ಅವರು ಭಿತ್ತನೆ ಮಾಡುವು ಆಗುತ್ತಿಲ್ಲ. ಅಂದಮೇಲೆ ಸರ್ಕಾರ ಎಷ್ಟೊಂದು ನಿರ್ಲಕ್ಷ್ಯತನದಿಂದ ಇದೆ ಎಂಬುದ ತಾವು ಯೋಚನೆ ಮಾಡಬೇಕು. ನಾನಾದರೂ ಮಾನ್ಯ ಉಪಮುಖ್ಯಮಂತ್ರಿಗಳ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ; ತಾವು ಬಜೆಟ್ನಲ್ಲಿ ಏನು ಹಣವ ಮಂಜೂರು ಮಾಡಿದಿರಿ ಅದು ಯಾವಾಗ ಹೋಗಿ ಮುಟ್ಟುತ್ತದೋ ಗೊತ್ತಿ ಏಕೆಂದರೆ ಮಾರ್ಚ್ 94ರ ಬಿಲ್ಲುಗಳು ಇನ್ನೂ ಪೇಮೆಂಟ್ ಆಗಿಲ್ಲ. ಅಂದಮೇ ಬಜೆಟ್ನಲ್ಲಿ ಕೊಟ್ಟಂಥ ಹಣ ಯಾವಾಗ ಹೋಗಿ ಅಲ್ಲಿ ಮುಟ್ಟುತ್ತದೆಂದು ತಾ ತಕ್ಷಣ ಉತ್ತರವನ್ನು ಇಲ್ಲಿ ಹೇಳಬೇಕಾಗುತ್ತದೆ. 11 ಕೋಟಿ ರೂ.ಗಳನ್ನು ತಕ್ಷ ಬಿಡುಗಡೆ ಮಾಡಬೇಕೆಂದು ಮಾನ್ಯ ಚೀಫ್ ಇಂಡಿನಿಯರ್ರವರು ಏನು ಒಂದ ವರದಿಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ ಅದನ್ನು ಕೂಡಲೇ ಬಿಡುಗಡೆ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಬಾಕಿ ವಿಚಾರವನ್ನು ಆ ಭಾಗದ ಶಾಸಕರು ಪ್ರಸ್ತಾವ ಮಾಡುತ್ತಾರೆಂದು ಹೇಳಬಯಸುತ್ತೇನೆ.

+ ಶ್ರೀ ಎಂ.ಎಸ್. ಪಾಟೀಲ್ (ರಾಯಚೂರು) : ಮಾನ್ಯ ಅಧ್ಯಕ್ಷರೇ, ರಾಯಚೂರುಜಿಲ್ಲೆಯ ಜೀವಾಳವಾದಂಥ ಈ ತುಂಗಭದ್ರಾ ಎಡದಂಡೆನಾಲೆ ವಿಚಾರದಲ್ಲಿ ಒಂದು ಪ್ರಮುಖವಾದ ಸಮಸ್ಯೆಯನ್ನು ನಾವೆಲ್ಲರೂ ಎದುರಿಸುತ್ತಿದ್ದೇವೆ. ಈ ಕಾಲುವೆ ಕಳೆದ ಸುಮಾರು 30 ವರ್ಷಗಳಿಂದ ಈ ಭಾಗದ ಸುಮಾರು 6.40 ಲಕ್ಷ ಎಕರೆಗೆ ನೀರನ್ನು ಒದಗಿಸುತ್ತಾ ಬಂದಿದೆ. ಕಳೆದ 30 ವರ್ಷಗಳಲ್ಲಿ ಈ ನಾಲೆ ಸುಮಾರು 106 ಸಾರಿ ಬಿರುಕುಬಿಟ್ಟಿದೆ. ವಿಶೇಷವಾಗಿ ವರ್ಷ 8ನೇ ಸಾರಿ ಬಿರುಕು ಕಳೆದ 2 ತಿಂಗಳಲ್ಲಿ ಕಂಡುಬಂದಿದೆ. ಇದನ್ನು ಒಂದು ಗಂಭೀರವಾದ ರೀತಿಯಲ್ಲಿ ತೆಗೆದುಕೊಳ್ಳದೇ ಹೋದರೆ ಆ ಭಾಗದ ರೈತರಿಗೆ ಉಂಟಾಗಿರುವ ಸಮಸ್ಯೆಗೆ ಪರಿಹಾರ ಸಿಕ್ಕುವುದಿಲ್ಲ. ಒಂದು ಮಾತನ್ನು ಹೇಳುವುದಾದರೆ ಯಾರಿಗೆ ನೋವಿದೆ ಅವರಿಗೆ ಮಾತ್ರ ಆ ನೋವು ಎಷ್ಟೆಂದು ಅರ್ಥವಾಗುತ್ತದೆ. ಬೇರೆಯವರಿಗೆ ಅರ್ಥವಾಗುವುದಿಲ್ಲ. ರೈತನ ನೋವನ್ನು ರೈತ ಮಾತ್ರ ಅರ್ಥಮಾಡಿ ಕೊಳ್ಳಬೇಕೇ ಹೊರತು ಬೇರೆಯವರಿಗೆ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ನಮ್ಮ ಉಪಮುಖ್ಯಮಂತ್ರಿಗಳು ರೈತರ ಕುಟುಂಬದಿಂದ ಬಂದಿರುವುದರಿಂದ ರೈತರ ನೋವಿಗೆ ಸ್ಪಂದಿಸುತ್ತಾರೆಂದು ಭಾವಿಸಿಕೊಂಡು ನಾನು ಕೆಲವು ಸೂಚನೆಗಳನ್ನು ಇಲ್ಲಿ ಕೊಡ ಬಯಸುತ್ತೇನೆ. ಇದು ಕೇವಲ ರೈತರ ಮತ್ತು ಕೂಲಿಕಾರರ ಸಮಸ್ಯೆ ಅಲ್ಲ. ಇದು ಉತ್ಪಾದನೆಯ ಸಮಸ್ಯೆ ಕೂಡ. ಅಲ್ಲಿರತಕ್ಕ ಸಾವಿರಾರು ರೈಸ್ ಮಿಲ್ಸ್ ಮತ್ತು ಅಲ್ಲಿ ಕೆಲಸ ಮಾಡುವ ಸಾವಿರಾರು ಕೂಲಿಕಾರರ ಮತ್ತು ಇವೆಲ್ಲದರ ಹಿಂದಿರುವ ಹಿನ್ನೆಲೆ. ಇದರ ಬಗ್ಗೆ ಈಗಾಗಲೇ ತಜ್ಞರ ವರದಿಯನ್ನು ನಾವು ನೋಡಿದ್ದೇವೆ. ತಾವೇ ಹೇಳಿದಂತೆ 1981ರಲ್ಲಿ ಇದರ ಬಗ್ಗೆ ಒಂದು ಸುದೀರ್ಘವಾದ ವರದಿಯನ್ನು ಕೊಟ್ಟಿದ್ದಾರೆ.

1.30 ಪಿ.ಎಂ.

ಅಧ್ಯಕ್ಷರೆ, ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ. ಈ ವರದಿಗಳು ಕೇವಲ ವರದಿಯಾಗಿಯೇ ಉಳಿಯುತ್ತದೆ. ನಮ್ಮಲ್ಲಿರತಕ್ಕ ಹಲವಾರು ವರದಿಗಳು ಏನಿದೆ ನಾವು ಅವುಗಳ ಬಗ್ಗೆ ಗಮನ ಕೊಡುವುದಿಲ್ಲ. ಇದರ ತೀವ್ರತೆ ಮುಗಿದು ಹೋಗುತ್ತದೆ. ಸರ್ಕಾರ ಬಂದು ವರದಿ ಬರುವ ಸಮಯದೊಳಗೆ ಗಮನ ಅಷ್ಟು ತೀವ್ರಗತಿಯಲ್ಲಿ ಇರುವುದಿಲ್ಲ. ಸಾರ್ವಜನಿಕ ಉದ್ಧಿಮೆಗಳ ಬಗ್ಗೆ ಇರತಕ್ಕ

ವರದಿಗಳನ್ನು ಈ ಸರ್ಕಾರ ಅಥವಾ 40 ವರ್ಷದಲ್ಲಿ ಎಲ್ಲಾ ಸರ್ಕಾರಗಳೂ ನೋಡಿ ಗಮನ ಹರಿಸಿಲ್ಲ, ವರದಿ ಹೋಗುತ್ತದೆಯೇ ಹೊರತು ಒಂದು ವರದಿಯೂ ಸಹ ಸದನದಲ್ಲಿ ಚರ್ಚೆಯಾಗಿಲ್ಲ. ಇದಕ್ಕೆ ಗಮನ ಹರಿಸುವುದಿಲ್ಲ. ಇವತ್ತು ಇರತಕ್ಕ ವರದಿ ಮತ್ತು ಮುಂದೆ ಬರತಕ್ಕ ವರದಿ ಯಾವುದನ್ನೂ ನಾವು ನೋಡಿಲ್ಲ. ಆದ್ದರಿಂದ ವರದಿಯನ್ನು ತೀವ್ರಗತಿಯಲ್ಲಿ ಮನ್ನಣೆ ಮಾಡಿದಾಗ ಮಾತ್ರ ಆ ವರದಿಗೆ, ಸಮಿತಿಗೆ ಮತ್ತು ಅದರ ತೀರ್ಮಾನಕ್ಕೆ ಗಮನ ಕೊಟ್ಟಂತೆ ಆಗುತ್ತದೆ. ಮತ್ತೆ ತಜ್ಞರ ಸಮಿತಿ ನೇಮಿಸುತ್ತೇವೆ ಎಂದು ಹೇಳುತ್ತಾರೆ. ಈಗ ಇದ್ದಂಥ ವರದಿಗಳೇನಿವೆ ಅದು ಸಂಪೂರ್ಣವಾದ ವರದಿ. ಆದ್ದರಿಂದ ಇದನ್ನು ಕಾರ್ಯಗತ ಮಾಡುವಂಥ ಮನೋವೃತ್ತಿ ಅತೀ ಅವಶ್ಯ. 1981ರಲ್ಲಿ ಕೊಟ್ಟಂಥ ವರದಿಯಲ್ಲಿ ಒಂದು ತೋರಿಸಿದ್ದಾರೆ. ಏನು ಮಾಡಿದರೆ ಸಮಸ್ಯೆ ಪರಿಹಾರವಾಗುವುದಕ್ಕೆ ಸಾಧ್ಯ ಎಂಬುದನ್ನು ಹೇಳಿದ್ದಾರೆ. ಇದು 125 ಮೈಲಿ ಉದ್ದ, ಸುಮಾರು 200 ಕಿಲೋಮೀಟರ್ ಉದ್ದದ ಕೆನಾಲ್. ಬಂಡಿಂಗ್ ಹೆಚ್ಚು ಇದೆಯೇ ಹೊರತು ತೋಡತಕ್ಕ ಭಾಗ ಕಡಿಮೆ. 125 ಮೈಲಿ ಉದ್ದದ ಒಂದೇ ಒಂದು ಕೆನಾಲ್ನಿಂದ 6 ಲಕ್ಷ 40 ಸಾವಿರ ಎಕರೆಗೆ ನೀರಾವರಿ ಮಾಡತಕ್ಕದ್ದು ಇದು ಬಿಟ್ಟರೆ ಬೇರೆ ಉದಾಹರಣೆಗಳು ನಮ್ಮಲ್ಲಿಲ್ಲ. ಇಷ್ಟು ಉದ್ದ ಅಳತೆಯಲ್ಲಿ ಈ ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಆ ವರದಿಯಲ್ಲಿ ಒಂದು ಸೂಚನೆಯನ್ನೂ ಕೊಟ್ಟಿದ್ದಾರೆ. ಪ್ಯಾರಲಲ್ಲಾಗಿ ಒಂದು ಕೆನಾಲ್ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. 200 ಕಿಲೋಮೀಟರ್ ಅವಶ್ಯಕತೆ ಇಲ್ಲ. ಇವತ್ತು ಏನಾಗಿದೆ? 30 ವರ್ಷದ ಇತಿಹಾಸದಲ್ಲಿ ಈ ಕೆನಾಲ್ ಮುಖಾಂತರ 4000 ಕ್ಯೂಸೆಕ್ಸ್ ನೀರನ್ನು ಡಿಸ್ಚಾರ್ಜ್ ಮಾಡಿದಾಗ ಟೈಲ್ ಎಂಡರ್ಸ್‌ಗೆ ನೀರು ಮುಟ್ಟತಕ್ಕ ವ್ಯವಸ್ಥೆಯಾಗುತ್ತದೆ. ಆದರೆ 30 ವರ್ಷದಲ್ಲಿ ಒಂದು ದಿವಸವೂ ನಾಲ್ಕು ಸಾವಿರ ಕ್ಯೂಸೆಕ್ಸ್ ಡಿಸ್ಚಾರ್ಜ್ ಮಾಡಿದ ಯಾವ ಉದಾಹರಣೆಗಳೂ ಇಲ್ಲ. 3500 ಕ್ಯೂಸೆಕ್ಸ್ ಅಥವಾ ಅತೀ ಹೆಚ್ಚು ಎಂದರೆ 3600 ಕ್ಯೂಸೆಕ್ಸ್ ಮಾತ್ರ ಮಾಡಿದ್ದಾರೆ. ಆದ್ದರಿಂದ ಈ ಸಮಸ್ಯೆಗೆ ಪರಿಹಾರ ಸಿಗಬೇಕಾದರೆ ಪ್ಯಾರಲಲ್ಲಾಗಿ ಒಂದು ಕೆನಾಲ್ ತೋಡತಕ್ಕದ್ದು ಅವಶ್ಯಕ ಇದೆ. ನಾಲ್ಕು ಸಾವಿರ ಕ್ಯೂಸೆಕ್ಸ್ ಹರಿಯತಕ್ಕ ವ್ಯವಸ್ಥೆ ಮಾಡಿದಾಗ ಕೆನಾಲ್ ತಡೆದುಕೊಳ್ಳುವ ಶಕ್ತಿ ಇಲ್ಲ. ಆದ್ದರಿಂದ 100 ಕಿಲೋಮೀಟರ್ ಪ್ಯಾರಲಲ್ ಆಗಿ ತೆಗೆದುಕೊಂಡು ಹೋಗುವುದರಿಂದ 2 ಸಾವಿರ ಕ್ಯೂಸೆಕ್ಸ್ ಮತ್ತು 2 ಸಾವಿರ ಕ್ಯೂಸೆಕ್ಸ್ ಎರಡರ ಮುಖಾಂತರ ಹರಿಸಿ 100ನೇ ಕಿಲೋಮೀಟರ್ನಲ್ಲಿ ಎರಡು ಸಾವಿರ ಕ್ಯೂಸೆಕ್ಸ್ ನೀರನ್ನು ಮೈನ್ಕೆನಾಲ್ಗೆ ಬಿಡುವುದರಿಂದ ಕೆಳಭಾಗದ ರೈತರಿಗೆ ನೀರು ಬಿಡತಕ್ಕ ವ್ಯವಸ್ಥೆಯಾಗುತ್ತದೆ. ಇಲ್ಲದೇ ಇದ್ದರೆ ಶಾಶ್ವತ ಪರಿಹಾರವಾಗುವುದಕ್ಕೆ ಸಾಧ್ಯವೇ ಇಲ್ಲ. ತಾವು ಒಂದು ಹೇಳಿಕೆಯಲ್ಲಿ ಅದನ್ನು ಬಲಪಡಿಸುವುದಕ್ಕೆ 2 ಸಾವಿರ ಲಕ್ಷ 3 ಸಾವಿರ ಲಕ್ಷ ಕೊಡುತ್ತಿದ್ದೇವೆ ಶಾಶ್ವತ ಪರಿಹಾರಕ್ಕಾಗಿ ಎಂದು ಹೇಳಿದ್ದೀರಿ. ಕೇವಲ ಇದ್ದಂಥ ಕೆನಾಲ್ ಬಲಪಡಿಸುವ ಬಗ್ಗೆ ಯೋಜನೆ ಇದೆಯೇ ಹೊರತು ಪ್ಯಾರಲಲ್ ಕೆನಾಲ್ ಮಾಡುವ ಉದ್ದೇಶ ತಮ್ಮ ವರದಿಯಲ್ಲಿ ಇಲ್ಲ. ಇದು ಅತಿ ಮುಖ್ಯವಾದುದು. ಇದನ್ನು ಗಣನೆಗೆ ತೆಗೆದುಕೊಂಡಾಗ ಮಾತ್ರ ಸಾಧ್ಯವಾಗುತ್ತದೆ. ಆದ್ದರಿಂದ ನನ್ನ ಸಲಹೆ 100 ಕಿಲೋಮಿಟರ್ ಉದ್ದದ ಪ್ಯಾರಲಲ್ ಕೆನಾಲ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅದಕ್ಕೆ ಎಷ್ಟು ವೆಚ್ಚವಾಗುತ್ತದೆ? ನಾನು ತಜ್ಞರಿಂದ ಕೆಲವು ವಿಚಾರಗಳನ್ನು ಕೇಳಿಕೊಂಡು ಬಂದಿದ್ದೇನೆ. ಅದರ ಬಗ್ಗೆ ಸರ್ಕಾರಕ್ಕೆ ಸಲಹೆ ಕೊಡುವುದಕ್ಕೆ ಇಚ್ಛೆ ಪಡುತ್ತಿದ್ದೇನೆ. 200 ಅಡಿ ಅಗಲದ 100 ಕಿಲೋಮೀಟರ್ ಉದ್ದ ಹೋಗತಕ್ಕ ಒಂದು ಭೂಮಿಯನ್ನು ನಾವು ವಶಪಡಿಸಿಕೊಳ್ಳಬೇಕಾದರೆ ಸುಮಾರು 4 ಸಾವಿರ ಎಕರೆಗಳಿಗೆ ಅಂದಾಜು ಹಾಕಬೇಕಾಗುತ್ತದೆ. ಅಷ್ಟು ಉದ್ದದ ಎಸ್ಟಿಮೇಟ್ ಹಾಕಬೇಕಾಗುತ್ತದೆ. 4 ಸಾವಿರ ಎಕರೆಗೆ 50 ಸಾವಿರ ರೂಪಾಯಿ ಅಂದಾಜು ರೇಟಿನಲ್ಲಿ ಲೆಕ್ಕಹಾಕಿದರೆ 20 ಕೋಟಿ ರೂಪಾಯಿ ಭೂ ಸ್ವಾಧೀನಕ್ಕೆ ಬೇಕಾಗುತ್ತದೆ. 100 ಕಿಲೋಮೀಟರ್ ಉದ್ದ ನಾವು ತೋಡಿದರೆ ಬಂಡ್ ಹಾಕಿದರೆ ತಜ್ಞರ ಅಭಿಪ್ರಾಯದ ಪ್ರಕಾರ ಒಂದು ಕಿಲೋಮೀಟರ್ಗೆ ಒಂದು

ಕೋಟಿಯಂತೆ 100 ಕಿಲೋಮೀಟರ್ಗೆ 100 ಕೋಟಿ ರೂಪಾಯಿ ಆಗುತ್ತದೆ. ಬ್ರಿಡ್ಜಸ್ ಇನ್ನಿತರ ಯಾವುದಾದರೂ ಕೆಲಸ ತೆಗೆದುಕೊಳ್ಳಬೇಕಾದಾಗ ಇನ್ನೂ 50 ಕೋಟಿ ರೂಪಾಯಿ ಬೇಕಾಗುತ್ತದೆ.

ಅಂದರೆ 170 ಕೋಟಿ ರೂಪಾಯಿ ವೆಚ್ಚದಲ್ಲಿ ಮಾಡಿದರೆ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಆಗುತ್ತದೆ ಇಲ್ಲದಿದ್ದರೆ ಸಮಾನಾಂತರ ಕಾಲುವೆಯ ಕೆಲಸವಾಗುವುದಿಲ್ಲ. ಇದರ ಜೊತೆಯಲ್ಲಿ ಇನ್ನೊಂದು ವಿಚಾರವನ್ನು ನಿಮ್ಮ ಗಮನಕ್ಕೆ ತಂದಿದ್ದೇನೆ. ಈ ಎರಡೂ ಕೆನಾಲ್ ನಡುವೆ ಒಡ್ಡನ್ನು ಇಟ್ಟುಕೊಂಡು ಹೋಗಬಹುದೇ ಇಲ್ಲವೇ ಎನ್ನುವುದರ ಬಗ್ಗೆ ತಜ್ಞರನ್ನು ಕೇಳಬೇಕು.

ಅಧ್ಯಕ್ಷರು : ಪಾಟೀಲ್‌ರೇ, ಸ್ವಲ್ಪವಾದರೂ ಹೇಳಿ, ಹೇಳುವುದು ಬೇಡವೆಂದು ಹೇಳುವುದಿಲ್ಲ.

ಶ್ರೀ ಎಂ.ಎಸ್. ಪಾಟೀಲ್ : ನಾನು ಸಂಪೂರ್ಣ ವಿವರವನ್ನು ಕೊಡುತ್ತಿದ್ದೇನೆ. ಇದು ಒಬ್ಬರ ಪ್ರಶ್ನೆಯಲ್ಲ. 15 ಲಕ್ಷ ಜನ ಉಪಜೀವನದ ಪ್ರಶ್ನೆ. ಮೇಲಾಗಿ ಉತ್ಪಾದನೆ ಕೊಡತಕ್ಕದ್ದು. ಇದರಿಂದ ಸರ್ಕಾರಕ್ಕೆ ಬರತಕ್ಕ ಆದಾಯವನ್ನು ನಿಮ್ಮ ಗಮನಕ್ಕೆ ತಂದಾಗ ಮಾತ್ರ ಇದರ ತೀವ್ರತೆ ನಿಮಗೆ ಅರ್ಥವಾಗುತ್ತದೆ. 6 ಲಕ್ಷದ 40 ಸಾವಿರ ಎಕರೆಯೊಳಗೆ ರೈತ ಬೆಳೆಯತಕ್ಕ ಬೆಳೆಯ ಉತ್ಪಾದನೆಯನ್ನು 10 ಸಾವಿರ ಒಂದು ಎಕರೆಗೆ ಎಂದು ಇಟ್ಟುಕೊಂಡರೂ 6 ಕೋಟಿ 40 ಲಕ್ಷ ಉತ್ಪಾದನೆಯನ್ನು ಅದು ಕೊಡುತ್ತದೆ ಇದು ಒಂದು ಬೆಳೆಗೆ. ಬೇಸಿಗೆ ಬೆಳೆ ಅರ್ಧದಷ್ಟು ಅಂದರೆ 3 ಕೋಟಿ 20 ಲಕ್ಷ ಅಂದರೆ ಸುಮಾರು 10 ಕೋಟಿ ರೂಪಾಯಿ ನಮ್ಮ ದೇಶಕ್ಕೆ ಆದಾಯ ಬರುತ್ತದೆ. ಸರ್ಕಾರಕ್ಕೆ ಬರತಕ್ಕ ಟ್ಯಾಕ್ಸ್ ಅದು ಇದು ಎಲ್ಲಾ ಸೇರಿಸಿ 50 ಕೋಟಿ ರೂಪಾಯಿ ಮುಖಾಂತರ ಸರ್ಕಾರದ ಬೊಕ್ಕಸಕ್ಕೆ ಬರುತ್ತದೆ. ಅದರಿಂದ ಉತ್ಪಾದನೆಯಾಗತಕ್ಕ ರೈಸ್‌ಮಿಲ್ ಸ್ಪಿನ್ನಿಂಗ್ ಮಿಲ್ ಅವುಗಳಿಂದ ಬರತಕ್ಕ ಟ್ಯಾಕ್ಸ್ ವಗೈರೆ ಲೆಕ್ಕಹಾಕಿದರೆ 100-120 ಕೋಟಿ ರೂಪಾಯಿ ಆದಾಯ ಬರುತ್ತದೆ. ಈ ಜನರು ಕೊಡತಕ್ಕ ಇನ್‌ಡೈರೆಕ್ಟ್ ಟ್ಯಾಕ್ಸ್ ಅದೆಲ್ಲಾ ಸೇರಿದರೆ ಸುಮಾರು 200 ಕೋಟಿ ರೂಪಾಯಿ ಆದಾಯವನ್ನು ಒಂದು ವರ್ಷದಲ್ಲಿ ಬರುತ್ತದೆ. 200 ಕೋಟಿ ರೂಪಾಯಿ ಖರ್ಚು ಮಾಡತಕ್ಕ ಮನೋಭೂಮಿಕೆಯನ್ನು ತಯಾರು ಮಾಡಲಿಲ್ಲವೆಂದರೆ ಶಾಶ್ವತ ಪರಿಹಾರ ಸಿಗುವುದಿಲ್ಲ. ತಮ್ಮ ಮೂಲಕ ಮುಖ್ಯಮಂತ್ರಿಗಳಲ್ಲಿ ಅತಿ ವಿನಮ್ರತೆಯಿಂದ ಕೇಳಿಕೊಳ್ಳುತ್ತಿದ್ದೇನೆ, ಸಾವಿರಾರು ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ, ಕೆನಾಲ್ ಜೊತೆಗೆ ರಾಯಚೂರು ನಗರಕ್ಕೆ ಒಂದು ದಿವಸ ನೀರು ಇಲ್ಲದೇ ಹೋಯಿತು ಅಂದರೆ ಕೆಟ್ಟ ಪರಿಣಾಮವಾಗುತ್ತದೆ. ಗುಲ್ಬರ್ಗದಲ್ಲಿ ಮಾಡಿದ್ದಾರೆ. ಗುಲ್ಬರ್ಗದಲ್ಲಿ ನೀರು ಸಿಗತಕ್ಕ ಸಂದರ್ಭದಲ್ಲಿ ಕೋಟ್ಯಾಂತರ ರೂಪಾಯಿ ಆದಾಯ ಬರುವ ರೀತಿಯಲ್ಲಿ ಸಾಗು ಮಾಡತಕ್ಕ ಪರಿಸ್ಥಿತಿ ಬರುತ್ತದೆ. ಈ ಕೆನಾಲ್‌ನ ತೀವ್ರತೆಯನ್ನು ಜನರ ಸಮಸ್ಯೆಯನ್ನು ಅರಿತು ಕಾಮಗಾರಿ ಮಾಡುವುದಕ್ಕೆ ಸಾಧ್ಯವಿದೆ ಅದನ್ನು ಮಾಡುತ್ತೀರಿ ಎನ್ನುವ ಭರವಸೆ ನಮಗೆ ಬೇಕಾಗಿದೆ. ರೈತರ ಸಮಸ್ಯೆಯನ್ನು ಬಗೆಹರಿಸಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿಯನ್ನು ಮಾಡುತ್ತೇನೆ, ಇದರ ಬಗ್ಗೆ ಮಾನ್ಯಮಂತ್ರಿಗಳಿಂದ ಒಂದು ಹೇಳಿಕೆಯನ್ನು ಪಡೆಯಲಿಕ್ಕೆ ಇಚ್ಛೆಪಡುತ್ತೇನೆ. ಈ ಬಗ್ಗೆ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ ಎನ್ನುವ ಆಶ್ವಾಸನೆಯನ್ನು ಈ ಸದನದ ಮುಖಾಂತರ ತಾವು ಕೊಡಬೇಕೆಂದು ಹೇಳಿ ಈ ಸಮಯದಲ್ಲಿ ನಾನು ಒಂದೆರಡು ವಿಚಾರಗಳನ್ನು ಹೇಳಲಿಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ಅಧ್ಯಕ್ಷರೇ, ತುಂಗಭದ್ರ ದಂಡೆ ನಾಲೆ ಬಿರುಕು ಬಿಟ್ಟಿರುವ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಗೂ ಎಂ.ಎಸ್. ಪಾಟೀಲ್‌ರವರು ಈ ಸಭೆಯಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಡಿದ್ದಾರೆ ಈ ಎಡದಂಡೆ ನಾಲೆ ಏನಿದೆ ಸ್ವಲ್ಪ ಹೆಚ್ಚಿನ ನೀರಾವರಿಯಾಗತಕ್ಕ ಯಿದೆ. ಅದು ಹೆಚ್ಚಿನ ನೀರಾವರಿ ಸೌಲಭ್ಯವನ್ನು ಕೊಡತಕ್ಕ ಕಾಲುವೆಯಿದೆ. ಲುವೆಯ ಬಿರುಕು ಹೊಸದೇನೂ ಅಲ್ಲ, ಸುಮಾರು 20-25 ವರ್ಷಗಳಿಂದ ಒಂದು ರ್ಷದಲ್ಲಿ 18 ಸಲ ಬಿರುಕು ಬಂದಿತ್ತು. ಅವೊತ್ತಿನ ಪರಿಸ್ಥಿತಿಗೂ ಇವತ್ತಿನ ಪರಿಸ್ಥಿತಿಗೂ ತ್ಯಾಸವುಂಟು. ಕಳೆದ ಎರಡು ಮೂರು ವರ್ಷಗಳಿಂದ ನಮ್ಮ ರಾಯಚೂರು ಲ್ಲೆಯಲ್ಲಿ ಅತಿವೃಷ್ಟಿಯಿಂದ ಬಹಳಷ್ಟು ರೈತರಿಗೆ ಕೋಟ್ಯಾಂತರ ರೂಪಾಯಿ ಹಾಳಾಗಿದ್ದು ಂಟು. ಪುನಃ ಈ ಕಾಲುವೆ ಹೋದವರ್ಷ ಮಾರ್ಚಿ 23ನೇ ತಾರೀಖು ರುಕುಬಿಟ್ಟು ಅದರ ರಿಪೇರಿಯಾದ ಮೇಲೆ ಜುಲೈನಲ್ಲಿ ಪುನಃ ಒಡೆದಿದೆ. ಮಾಡುವಂತಹ ಮಗಾರಿ ಕೆಲಸವನ್ನು ಮಾಡದೆ ಕಾಮಗಾರಿ ಕೆಲಸ ಕಳಪೆ ಕೆಲಸ ಮಾಡಿರುವುದರಿಂದ ಲಸ ಸರಿಯಾಗಿ ಆಗದೆ ಇದುವರೆಗೆ ಯಾರಾದರೂ ಸಂಬಂಧಪಟ್ಟ ಮಂತ್ರಿಗಳಾಗಲೀ ಸಂಬಂಧಪಟ್ಟ ಅಧಿಕಾರಿಗಳಾಗಲೀ ಹೇಳಿಕೆಗಳನ್ನು ನೀಡುತ್ತಿಲ್ಲ. ಅವರ ಹೇಳಿಕೆ ಯಾವ ರೀತಿ ಇದೆಯೆಂದರೆ ಪತ್ರಿಕಾ ಹೇಳಿಕೆಯನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ, ಮುಖ್ಯಮಂತ್ರಿಗಳು ಯಾವ ರೀತಿ ಬೇಜವಾಬ್ದಾರಿ ಹೇಳಿಕೆಗಳನ್ನು ಕೊಡುತ್ತಿದ್ದಾರೆಂದರೆ ಮಣ್ಣು ಮುದಿಯಾಗಿದೆಯೆಂದು ಹೇಳುತ್ತಾರೆ, ಕಾಲುವೆಯಲ್ಲಿ ಹೋಗುವುದು ಹೊಸ ಮಣ್ಣು ಎಂದು ಅವರಿಗೆ ಅರಿವು ಇಲ್ಲ ಅವರು ಆ ರೀತಿಯ ಹೇಳಿಕೆಯನ್ನು ಕೊಡುತ್ತಾರೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಮುಖ್ಯಮಂತ್ರಿಗಳು ಹೇಳಿದ್ದನ್ನು ಸರಿಯಾಗಿ ನೀವು ಹೇಳುತ್ತಿಲ್ಲ. ಎಲ್ಲೆಲ್ಲಿ ಕಾಲುವೆ ಮುದಿಯಾಗಿದೆ ಅದರಿಂದ ಎಲ್ಲಾ ಇಂಜಿನಿಯರ್‌ಗಳಿಗೆ ಬಹಳ ಸಂತೋಷವಾಗಿದೆಯಂತೆ, ಬಹಳ ಖುಷಿಯಾಗಿದೆಯಂತೆ. ಸರ್ವಕಾಲಿಕ ರಕ್ಷಣೆ ಕೊಟ್ಟಿದ್ದಾರೆ ನಮಗೆ, ಕಾಲುವೆ ಮುದಿಯಾಗಿದೆ ಎನ್ನುವ ವಿಚಾರ ಏನಿದೆ ಅದು ಬಹಳ ಹೊಸ ವಿಚಾರ ಕರ್ನಾಟಕಕ್ಕೆ.

ಶ್ರೀ ಬಿ. ಹಂಪನಗೌಡ : ನಾನು ಸರ್ಕಾರಕ್ಕೆ ಒತ್ತಾಯಪಡಿಸುವುದು ಇಷ್ಟೇ ಯಾವಾಗ ಕಾಲುವೆಯನ್ನು ಭದ್ರಗೊಳಿಸುವ ಕೆಲಸವನ್ನು ತೆಗೆದುಕೊಳ್ಳುತ್ತೀರಿ? ಆಂಧ್ರಪ್ರದೇಶದವರು ಯಾವ ರೀತಿಯಾಗಿ ನಾಲ್ಕೈದು ತಿಂಗಳು ಕಾಲುವೆಯನ್ನು ಬಂದ್ ಮಾಡಿ ನೀರು ಹರಿಯುವುದನ್ನು ನಿಲ್ಲಿಸಿ ಕೆಲಸ ಮಾಡುತ್ತಾರೆ ಅದೇ ರೀತಿ ನಮ್ಮ ಸರ್ಕಾರ ದಿಟ್ಟತನದಿಂದ ಒಂದು ಹೆಜ್ಜೆ ಮುಂದಿಟ್ಟು ಬೇಕಾಗಿರತಕ್ಕ ಸಂಪನ್ಮೂಲವನ್ನು ಒದಗಿಸಿ ಆ ಭಾಗದಲ್ಲಿನ ರೈತರಿಗೆ ಏನು ಅನ್ಯಾಯವಾಗಿದೆ ಅದನ್ನು ಸರಿಪಡಿಸಬೇಕು ಆ ಬಗ್ಗೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಅದರ ಬಗ್ಗೆ ಈ ಸದನದಲ್ಲಿ ಘೋಷಣೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರ್) : ಈಗಾಗಲೇ ಮಾನ್ಯ ಉಪಮುಖ್ಯಮಂತ್ರಿಗಳು ತುಂಗಭದ್ರ ಎಡದಂಡೆ ನಾಲೆಯ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರೆ ಮುಖ್ಯಮಂತ್ರಿಗಳು ಹೇಳಿರುವುದು ಈ ಕಾಲುವೆ ಹಳೆಯದಾಗಿದೆ ಮುದಿಯಾಗಿದೆಯೆನ್ನುವ ಮಾತನ್ನು ಹೇಳಿದರೆ ಆ ಭಾಗದ ಜನ ನಗೆಪಾಟಲಿಗೆ ಈಡಾಗತಕ್ಕ ಹೇಳಿಕೆ ಇದು. ಮಾರ್ಚಿ 23ನೇ ತಾರೀಖಿನಿಂದ ಇಲ್ಲಿಯವರೆಗೆ ಕಾಲುವೆ 4 ಸಾರಿ ಒಡೆದಿದೆ, ನಾಲ್ಕು ಸಾರಿ ದುರಸ್ಥಿಯಾಗಿದೆ. ಹೊಸದಾಗಿ ನೀರು ಬಿಟ್ಟ ನಾಲ್ಕು ದಿವಸದಲ್ಲಿ ಮತ್ತೆ ಬಿರುಕು ಕಾಣಿಸಿಕೊಂಡಿದೆ. ಮುಖ್ಯಮಂತ್ರಿಗಳು ಈ ರೀತಿ ಹೇಳಿಕೆ ಕೊಟ್ಟಿದ್ದಾರೆ. ಶಾಶ್ವಾತ ಪರಿಹಾರವನ್ನು ಕಂಡುಹಿಡಿಯದಿದ್ದರೆ, ಮೊದಲಿನಿಂದಲೂ ಕಾಲುವೆ ಒಡೆದು ಹೀಗೆ ಬೆಳೆ ಹಾಳಾದರೆ ರೈತರು ಸಾಲ ಸೋಲ ಮಾಡಿ

ಗೊಬ್ಬರ ಬೀಜ ಹೀಗೆ ಕೋಟ್ಯಾಂತರ ರೂಪಾಯಿ ಲಾಸ್ ಆಗುತ್ತದೆ. ಉದ್ಯಮಗಳು ಸಹಿತ ವ್ಯವಸಾಯೋತ್ಪನ್ನಗಳು ಇಲ್ಲದಿದ್ದರೆ ಬಂದ್ ಆಗುತ್ತವೆ. ಕಾರ್ಮಿಕರಿಗೆ ಕೆಲಸವಿಲ್ಲದಂತಾಗುತ್ತದೆ. ಕುಡಿಯುವ ನೀರು ನೂರಾರು ಗ್ರಾಮಗಳಿಗೆ ಇಲ್ಲದಂತಹ ಗಂಭೀರ ಪರಿಸ್ಥಿತಿ ಉಂಟಾಗುತ್ತದೆ. ನೀರನ್ನು ಒದಗಿಸುವುದಕ್ಕೆ ಸರ್ಕಾರ ಕೋಟ್ಯಾಂತರ ರೂಪಾಯಿ ಹಣ ಖರ್ಚು ಮಾಡಬೇಕಾಗುತ್ತದೆ. ಎಲ್ಲಾ ವಿಚಾರಗಳನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಗಮನದಲ್ಲಿಟ್ಟುಕೊಂಡಿದ್ದಾರೆಂದು ಭಾವಿಸುತ್ತೇನೆ. ತಾತ್ಪೂರ್ವಿಕವಾಗಿ ಹೆಚ್ಚು ಹಣವನ್ನು ಖರ್ಚು ಮಾಡಿ ಕುಡಿಯುವ ನೀರು ನೀರಾವರಿಗೆ ಶಾಶ್ವತ ಪರಿಹಾರವನ್ನು ನಮ್ಮ ಸ್ನೇಹಿತರು ಹೇಳಿದಂತೆ ಮಾಡಿದರೆ ಎಲ್ಲ ಪರಿಹಾರವಾಗುತ್ತದೆ. ಆದಷ್ಟು ಬೇಗ ಈ ಸದನದಲ್ಲಿ ಹೇಳಿಕೆಯನ್ನು ಕೊಟ್ಟು ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) : ಮಾನ್ಯ ವಿರೋಧಪಕ್ಷದ ನಾಯಕರು, ಎಂ.ಎಸ್. ಪಾಟೀಲ್‌ರವರು ಹಂಪನಗೌಡರು, ಬನ್ನಿಕೋಡ್‌ರವರು ತುಂಗಭದ್ರ ಎಡದಂಡೆನಾಲೆ ಆಗಿಂದಾಗ್ಗೆ ಬಿರುಕುಬಿಟ್ಟು ಅದರಿಂದ ಹಣವೂ ಖರ್ಚು ಆಗಿ ನಷ್ಟವುಂಟಾಗಿ ರೈತಾಪಿ ಜನಗಳಿಗೆ ಬಹಳ ತೊಂದರೆಯಾಗಿದೆ ಕೋಟ್ಯಾಂತರ ರೂಪಾಯಿಯ ಆಹಾರಪದಾರ್ಥಕ್ಕೆ ಇದರಿಂದ ನಷ್ಟವುಂಟಾಗಿದೆ ಎನ್ನುವುದರಲ್ಲಿ ನನ್ನ ಸಂಪೂರ್ಣವಾದ ಸಹಮತವಿದೆ. ಹಳೆಯ ಕಾಲುವೆ ಎನ್ನತಕ್ಕ ಮಾತಿನ ಮೇಲೆ ಸಾಕಷ್ಟು ವಿಶ್ಲೇಷಣೆಗಳು ನಡೆದಿದೆ. ಹಳೆಯ ಕಾಲುವೆಯನ್ನು ಹಳೆಯ ಕಾಲುವೆ ಎನ್ನುವುದರಲ್ಲಿ ಹೊಸ ಕಾಲುವೆಯನ್ನು ಹೊಸ ಕಾಲುವೆಯೆಂದು ಹೇಳುವುದರಲ್ಲಿ ನನಗೇನೂ ತಪ್ಪು ಕಾಣಿಸುವುದಿಲ್ಲ. ವಸ್ತುಸ್ಥಿತಿ ಹೇಗಿದೆ ಹಾಗೆ ಹೇಳಬಹುದು. ನೀವು ಆ ಭಾಗದಿಂದ ಬಂದಿರತಕ್ಕವರು ಅದನ್ನು ಹಳೆಯ ಕಾಲುವೆಯೆಂದು ಹೇಳುತ್ತೀರಿ. ನನ್ನ ದೃಷ್ಟಿಯಲ್ಲಿ ಹಳೆಯ ಕಾಲುವೆ ನಮ್ಮ ವಿಶ್ವೇಶ್ವರಯ್ಯ ಕೆನಾಲ್ ಅನ್ನು ಹಳೆಯ ಕಾಲುವೆಯನ್ನು ಹೇಳಿದರೆ ಅದರ ಬಗ್ಗೆ ನಾವು ಹೆಮ್ಮೆಪಡುತ್ತೇವೆ. ಹಾಗೆ ನೀವೂ ಸಹ ಹೆಮ್ಮೆಪಟ್ಟುಕೊಳ್ಳಬೇಕು.

ಇನ್ನು ಆಂಧ್ರಪ್ರದೇಶದವರು ಬಂದೋಬಸ್ತು ಮಾಡುತ್ತಿದ್ದಾರೆ ಎಂದು ಹೇಳಿದರು. ನಮ್ಮ ರಾಜ್ಯದಲ್ಲಿ ಮಾತ್ರ ಕಳಪೆ ಕೆಲಸ ಆಗಿ ನಮ್ಮ ಇಂಜಿನಿಯರುಗಳು ನಲವತ್ತು ವರ್ಷಗಳ ಹಿಂದೆ ಮಾಡಿದ ಕೆಲಸದಿಂದ ಈ ಬಿರುಕುಗಳು ಬರುತ್ತಾ ಇವೆಯೆಂದು ಹೇಳಿದರೆ, ಆಂಧ್ರಪ್ರದೇಶದವರು ಯಾಕೆ ಹೊರಮ್ಮೆ, ಒಳಮ್ಮೆ ಒಂದು ಇಡೀ ಸೀಸನನ್ನೇ ಕ್ಲೋಸ್ ಮಾಡಿಬಿಟ್ಟು ಯಾಕೆ ಮಾಡುತ್ತಾ ಇದ್ದಾರೆ? ನಮ್ಮ ಕರ್ನಾಟಕದ ಇಂಜಿನಿಯರುಗಳು ಹೋಗಿ ಆಂಧ್ರ ಪ್ರದೇಶದಲ್ಲಿ ಕೆಲಸ ಮಾಡಿದರೇನು? ಆದ್ದರಿಂದ ಆ ಮಣ್ಣು ಏನಿದೆ, ಆ ಮಣ್ಣಿನ ಗುಣದ ಆಧಾರದಿಂದ ನಾವು ಒಂದು ಕಾಲುವೆಯ ಲೈಫ್‌ನ್ನು, ಲಾಂಗ್ವಿಯಿಟಿ ಆಫ್ ಕೆನಲ್ ಅನ್ನು ತೀರ್ಮಾನ ಮಾಡಬೇಕಾಗುತ್ತದೆ. ನನಗೆ ಅಷ್ಟು ಪರಿಣಿತಿ ಇಲ್ಲ. ನಮ್ಮ ಪರಿಣಿತರು ಹೇಳಿದ್ದನ್ನು ಕೇಳಿಕೊಂಡು ನಿಮಗೆ ಹೇಳುತ್ತಿದ್ದೇನೆ. ಆದ್ದರಿಂದ ಇದಕ್ಕೆ 81ನೇ ಇಸವಿಯಲ್ಲಿ ಒಂದು ಸಮಿತಿಯನ್ನು ಮಾಡಿದರು. ಅವರು ಕೆಲವು ಶಿಫಾರಸ್ಸುಗಳನ್ನು ಮಾಡಿದ್ದಾರೆ. ಆ ಶಿಫಾರಸ್ಸುಗಳ ಕೆಲವು ಭಾಗವನ್ನು ಅನುಷ್ಠಾನಕ್ಕೆ ತಂದಿದ್ದೇವೆ. ಎಲ್ಲವನ್ನೂ ಕೂಡ ಅನುಷ್ಠಾನಕ್ಕೆ ತರುವುದಕ್ಕೆ ಸಾಧ್ಯವಾಗಿಲ್ಲ. 81ರಿಂದ ಬಂದಂಥ ಸರ್ಕಾರಗಳು ಇದಕ್ಕೆ ಜವಾಬ್ದಾರರಾಗಬೇಕಾಗುತ್ತದೆ. ಏಳು ವರ್ಷದ ಜವಾಬ್ದಾರಿಯನ್ನು ನೀವು ತೆಗೆದುಕೊಳ್ಳಿ, ಐದು ವರ್ಷದ ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳುತ್ತೇನೆ. ಮಾನ್ಯ ಎಂ.ಎಸ್. ಪಾಟೀಲರು ಒಂದು ಪರ್ಯಾಯ ಕಾಲುವೆ ಮಾಡಿ ಎಂದು ಹೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ಕರ್ನಾಟಕದ ನೀರಾವರಿ ಪರಿಸ್ಥಿತಿ ಬಗ್ಗೆ ಚಿಂತನೆ ನನ್ನದೊಬ್ಬನದ್ದೇ ಆಗುವುದಿಲ್ಲ. ನಿಮ್ಮದೂ ಆಗಬೇಕಾಗುತ್ತದೆ. ಎರಡು ಸಾವಿರ ಇಸವಿ ಒಳಗಡೆ ಕೃಷ್ಣಾ ಜಲಾಯನ ಭಾಗದಲ್ಲಿ ನಮಗೆ ಬರುವಂಥ ನೀರನ್ನು ಸಂಪೂರ್ಣವಾಗಿ ನಾವು ಉಪಯೋಗ ಮಾಡಿಕೊಳ್ಳಬೇಕು ಎನ್ನತಕ್ಕಂಥ ಒಂದು ದೃಷ್ಟಿ ಒಂದು ಕಡೆ. ಆದ್ದರಿಂದ ಈ ಪರ್ಯಾಯ ಕಾಲುವೆಯ 150 ಕೋಟಿ ರೂಪಾಯಿಗಳ ಅಂದಾಜನ್ನು ನೀವು

ನನಗೆ ಕೊಟ್ಟಿದ್ದೀರಿ. ಈ 150 ಕೋಟಿ ರೂಪಾಯಿಗಳ ಸಂಪನ್ಮೂಲಗಳನ್ನು ಆಗಲೇ ಒಂದು ಕಾಲುವೆ ಆಗುತ್ತಾ ಇರುವ ಪ್ರಸಂಗದಲ್ಲಿ ನಾವು ಇದರ ಬಗ್ಗೆ ಇವತ್ತೇ ಈ ಸದನದಲ್ಲಿ ಘೋಷಣೆ ಮಾಡುವುದರ ಮೂಲಕ 150 ಕೋಟಿ ರೂಪಾಯಿಗಳನ್ನು ಅಲ್ಲಿ ಖರ್ಚು ಮಾಡುವ ಸಾಧ್ಯತೆ ಮತ್ತು ಅಸಾಧ್ಯತೆ, ಸೂಕ್ತತೆ ಮತ್ತು ಅಸೂಕ್ತತೆಯನ್ನು ಕೂಡ ವಿಚಾರ ಮಾಡುವುದಕ್ಕೆ ಹೊಸದಾಗಿ

ಶ್ರೀ ಎಂ.ಎಸ್. ಪಾಟೀಲ್ : ನೀರಾವರಿ ಬಾಂಡುಗಳನ್ನು ರೈಸ್ ಮಾಡಿ. ಅಲ್ಲಿರತಕ್ಕಂಥ ಎಲ್ಲರೂ ಸಿದ್ಧವಾಗಿದ್ದಾರೆ. ಅದರ ಬಗ್ಗೆ ಡಿಸ್‌ಪ್ಯೂಟ್ ಇಲ್ಲ.

ಶ್ರೀ ಎಸ್.ಎಂ. ಕೃಷ್ಣ : ಈ ನೀರಾವರಿ ಬಾಂಡುಗಳಿಗೆ ಕೇಂದ್ರ ಸರ್ಕಾರಕ್ಕೆ ಹೋಗಬೇಕು. ಕೇಂದ್ರ ಸರ್ಕಾರದವರು ನೀರಾವರಿ ಬಾಂಡುಗಳ ಬಗ್ಗೆ ಹೇಗೆ ಪ್ರತಿಕ್ರಿಯಿಸುತ್ತಿದ್ದಾರೆ ಎಂದು ನೀವೇ ಹಲವಾರು ಸಲ ಹೇಳಿದ್ದೀರಿ.

ಶ್ರೀ ಬಸವರಾಜ ರಾಯರೆಡ್ಡಿ : ಸ್ಟೇಟ್ ಫೈನಾನ್ಸ್ ಮಾಡಿ.

ಶ್ರೀ ಎಸ್.ಎಂ. ಕೃಷ್ಣ : ಅದಕ್ಕೆ ಪರ್ಮಿಷನ್ ಕೊಡುವವರು ಯಾರು?

ಶ್ರೀ ಬಸವರಾಜ ರಾಯರೆಡ್ಡಿ : ನಾನು ಹೇಳುತ್ತಿರುವುದು, ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ನಮ್ಮ ಸ್ಟೇಟ್‌ನಿಂದಲೇ ಕೆಲವು ಬಾಂಡುಗಳನ್ನು ಖರೀದಿ ಮಾಡುತ್ತಾರೆ. ಆ ರೀತಿ ನೀವು ರಾಜ್ಯ ಸರ್ಕಾರದಿಂದ ಬಾಂಡ್ ಖರೀದಿ ಮಾಡಿ ಬಡ್ಡಿಕೊಡಿ ಎಂದು ನಾನು ಹೇಳುತ್ತಿರುವುದು.

ಶ್ರೀ ಎಸ್.ಎಂ. ಕೃಷ್ಣ : ಆದ್ದರಿಂದ ಈ ಎಲ್ಲಾ ಸಮಸ್ಯೆಗಳಿವೆ. ಈ ಸಮಸ್ಯೆಗಳೆಲ್ಲವನ್ನೂ ನಾವು ಒಟ್ಟು ರಾಜ್ಯದ ದೃಷ್ಟಿಯಿಂದ ನೋಡಬೇಕಾಗುತ್ತದೆ. ಆದ್ದರಿಂದ ಆ ಭಾಗದಿಂದ ಪ್ರತಿನಿಧಿಸತಕ್ಕಂಥ ತಾವು ಮತ್ತು ಈ ಭಾಗದಲ್ಲಿ ಕುಳಿತಿರತಕ್ಕಂಥ ಮಾನ್ಯ ಸದಸ್ಯರುಗಳು ಏನಿದ್ದಾರೆ, ಇನ್ನು ಎರಡು-ಮೂರು ದಿವಸಗಳಲ್ಲಿ ನಾನು ಸಮಾಲೋಚನೆಗೆ ಕರೆಯುತ್ತೇನೆ. ನಿಮ್ಮೊಡನೆ ಸಮಾಲೋಚನೆ ಮಾಡಿ ಮುಂದೆ ಏನು ಮಾಡಬೇಕೆಂದು ನಿರ್ಧಾರ ಮಾಡೋಣ.

ಅಧ್ಯಕ್ಷರು : ಶ್ರೀಮತಿ ಮೋಟಮ್ಮ.....

ಶ್ರೀ ಆರ್.ವಿ. ದೇಶಪಾಂಡೆ : ತಾವು ಈಗ ಸಾಂಡ್ರಾ ವಿಷಯ ತೆಗೆದುಕೊಳ್ಳುತ್ತೀರೇನು?

ಅಧ್ಯಕ್ಷರು : ಹೌದು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಮುಖ್ಯಮಂತ್ರಿಗಳು ಆ ಸಂದರ್ಭದಲ್ಲಿ ಇರಬೇಕಾಗುತ್ತದೆ. ಸಂಬಂಧಪಟ್ಟ ಮಂತ್ರಿಗಳೂ ಇರಬೇಕು. ಆಮೇಲೆ ಡ್ರಾಟ್‌ದ್ದು ಏನು ಮಾಡುವುದು?

ಅಧ್ಯಕ್ಷರು : ಅದನ್ನು ನಾಳೆ ತೆಗೆದುಕೊಳ್ಳೋಣ. ಏಕೆಂದರೆ ಎರಡೂ ಆಗುವುದಿಲ್ಲ. ಬಜೆಟ್‌ದ್ದು ಬೇರೆ ಇದೆ. ಚರ್ಚೆ ನಾಳೆ ಮಾಡೋಣ.

ಶ್ರೀ ಆರ್.ವಿ. ದೇಶಪಾಂಡೆ : ಒಂದು ವೇಳೆ ಶ್ರೀ ಸಾಂಡ್ರಾ ಅವರದ್ದು ಇವತ್ತು ಮುಗಿದರೆ, ಡ್ರಾಟ್ ಬಗ್ಗೆ ಚರ್ಚೆ ಪ್ರಾರಂಭ ಮಾಡಬಹುದು.

ಅಧ್ಯಕ್ಷರು : ಆಗಬಹುದು. ಈಗ ಸಭೆಯ ಕಲಾಪಗಳನ್ನು ಮುಂದೂಡಿ ಮತ್ತೆ ಮೂರುಗಂಟೆಗೆ ಸೇರುತ್ತದೆ.

(ಸದನವು 1 ಗಂಟೆ 50 ನಿಮಿಷಕ್ಕೆ ಸಭೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 3 ಗಂಟೆಗೆ ಸೇರಲು ತೀರ್ಮಾನಿಸಿತು)

(ಸದನವು 3-40 ನಿಮಿಷಕ್ಕೆ ಪ್ರಾರಂಭಗೊಂಡಿತು. ಅಧ್ಯಕ್ಷರು (ಶ್ರೀ ವಿ.ಎಸ್. ಕೌಜಲಗಿಯವರು) ಪೀಠವನ್ನಲಂಕರಿಸಿದ್ದರು)

ಅಧ್ಯಕ್ಷರು : ಇವತ್ತು ಬೆಳಿಗ್ಗೆ ಸದನದಲ್ಲಿ ಕಾರ್ಯಕಲಾಪ ನಡೆದಾಗ ಮಾನ್ಯ ಯಡಿಯೂರಪ್ಪನವರು ವಿರೋಧಪಕ್ಷದ ನಾಯಕರ ಮೇಲೆ ಏನು ಹೇಳಿದರು ಅದು ನಮ್ಮ ಪ್ರೊಸಿಡಿಂಗ್ಸ್‌ನಲ್ಲಿ ಆ ರೀತಿ ಇಲ್ಲ. ಆದರೂ ಅವರು ಹೇಳಿದ್ದು ಅಷ್ಟೇನೂ ವಿರೋಧಪಕ್ಷದ ನಾಯಕರ ಮೇಲೆ ಹೇಳಿದ್ದು ಸರಿಯಲ್ಲ ಈ ರೀತಿ ಆಗಬಾರದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶಾಸನ ರಚನೆ

1994 ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೇ, 1994ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ 1994ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ. ಯಾವ ಮಂತ್ರಿಗಳು ಈ ಒಂದು ವಿಧೇಯಕವನ್ನು ಮಂಡಿಸಬೇಕೋ ಅವರು ಈ ಸಭೆಯಲ್ಲಿ ಇದ್ದು ಮಂಡಿಸಬೇಕು. ಅವರ ಪರವಾಗಿ ಬೇರೆಯವರು ಮಂಡಿಸಲು ಬರುವುದಿಲ್ಲ. Who has piloted this Bill ?

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು......

ಶ್ರೀ ಹೆಚ್. ಏಕಾಂತಯ್ಯ : ಯಾರೋ ಮಂತ್ರಿಗಳ ಪರವಾಗಿ ವಿಧೇಯಕವನ್ನೂ ಮಂಡಿಸಲು ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ಇನ್ನೂ ನಮ್ಮ ನಿಯಮಗಳನ್ನು ತಿದ್ದುಪಡಿ ಮಾಡಿಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮುಖ್ಯ ಮಂತ್ರಿಗಳು ನನಗೆ ಅಧಿಕಾರ ವಹಿಸಿದ್ದಾರೆ.

ಶ್ರೀ ಹೆಚ್.ಏಕಾಂತಯ್ಯ : ಮಾನ್ಯ ಕಾನೂನು ಮಂತ್ರಿಗಳೇ ಹೀಗೆ ಹೇಳಿದರೆ ನಾವೆಲ್ಲರೂ ಈ ನಿಯಮಗಳನ್ನು ಹರಿದು ಹಾಕಿ ಹೊರಗಡೆ ಹೋಗೋಣ What is the propriety ಮಾನ್ಯ ಮುಖ್ಯಮಂತ್ರಿಗಳ ಈ ವಿಧೇಯಕವನ್ನು ಮಂಡಿಸಲು ಈ ಸಭೆಗೆ ಬರಲು ಆಗಲಿಲ್ಲ ಅಂದರೆ ಅವರು ಏತಕ್ಕೆ ಮುಖ್ಯಮಂತ್ರಿಗಳಾಗಿ ಮುಂದುವರಿಯಬೇಕು? ಬೇರೆ ಕೆಲಸ ಇದ್ದರೆ ಅವರು ಆ ಕೆಲಸ ಮಾಡಲಿ. ಮಾನ್ಯ ಅಧ್ಯಕ್ಷರೇ, ನಾನು ತಮಗೆ ಇರುವಂತಹ ನಿಯಮಗಳನ್ನು ಪರಿಚಯ ಮಾಡಿಕೊಡುವಂತಹ ಅವಶ್ಯಕತೆ ಇಲ್ಲ. ಪದೇ ಪದೇ ಈ ರೀತಿ ನಿಯಮಗಳ ಉಲ್ಲಂಘನೆ ಆಗಿದೆ. ತಾವು ಸಂಬಂಧಪಟ್ಟವರಿಗೆ ಪದೇ ಪದೇ ಈ ರೀತಿ ಆಗಬಾರದು ಎಂದು ಸೂಚನೆಯನ್ನು ಕೊಟ್ಟಿದ್ದೀರಿ. ತಮ್ಮ ಸೂಚನೆಗೆ ಯಾವುದೇ ಒಂದು ರೀತಿ ಬೆಲೆ ಕೊಡುವಂತಹ ಪ್ರವೃತ್ತಿ ಸರ್ಕಾರದ ಮಂತ್ರಿಗಳಲ್ಲಿ ಬೆಳೆದು ಬಂದಿಲ್ಲ. ತಾವು ಇದನ್ನು ತಡೆಗಟ್ಟಬೇಕು ಮತ್ತು ತಾವು ಈ ವಿಧೇಯಕವನ್ನು ಮಂಡಿಸುವುದಕ್ಕೆ ಅನುಮತಿ ಕೊಡಬಾರದು ಎಂಬುದು ನನ್ನ ವಿನಂತಿ.

ಅಧ್ಯಕ್ಷರು : ಈಗ ನಾವು ಅರ್ಧಕ್ಕೆ ಹೋಗಿದ್ದೇವೆ. ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ಸ್ವಾಮಿ ತಾವು ನಮ್ಮ ರಕ್ಷಣೆ ಮಾಡದಿದ್ದರೆ ಇಲ್ಲಿ ಯಾವುದೇ ಕಾನೂನುಗಳಿಗೆ ಬೆಲೆ ಬರುವುದಿಲ್ಲ.

ಅಧ್ಯಕ್ಷರು : ಏಕಾಂತಯ್ಯನವರೇ, ನಾವು ಅರ್ಧ ದಾರಿಗೆ ಬಂದಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಅರ್ಧ ದಾರಿಗೆ ಬಂದಿದ್ದೀರಿ. ಇದು ಸರಿಯಲ್ಲ ಎಂದು ಹೇಳಿದಾಗ ತಾವು ವಾಪಸ್ಸ್ ಹೋಗಬೇಕು.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ, ನಾವು ನಿಯಮಗಳನ್ನು ಪಾಲನೆ ಮಾಡದಿದ್ದರೆ ಇಲ್ಲಿ ಯಾರಿಗೂ ಗೌರವ ಬರುವುದಿಲ್ಲ. ಸ್ವಾಮಿ, ತಾವು ಅರ್ಧ ದಾರಿಗೆ ಬಂದಿದ್ದೀರಿ. ಅವರು ಅಡ್ಡ ದಾರಿಯಲ್ಲಿದ್ದಾರೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ತಾವು ಅರ್ಧ ದಾರಿಗೆ ಬಂದಿದ್ದೀರಿ ಅವರು ಪುನಃ ವಾಪಸ್ಸ್ ಹೋಗಲಿ.

ಶ್ರೀ ಹೆಚ್. ಏಕಾಂತಯ್ಯ : ಯಾವ ಮಂತ್ರಿಗಳು ವಿಧೇಯಕವನ್ನು ಪೈಲಟ್ ಮಾಡುತ್ತಿದ್ದಾರೆ ಆಯಾ ಮಂತ್ರಿಗಳೇ ಇದನ್ನು ಮಂಡಿಸಬೇಕೇ ಹೊರತಾಗಿ ಬೇರೆಯವರು ಮಂಡಿಸಲಿಕ್ಕೆ ನಿಯಮದಲ್ಲಿ ಮತ್ತು ಸಂಪ್ರದಾಯದಲ್ಲಿ ಅವಕಾಶ ಇಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಬೇರೆ ಸಚಿವರು ಪೈಲಟ್ ಮಾಡಬಹುದು. ಆದರೆ ಕನ್‌ಸಿಡರೇಷನ್ ಸಮಯದಲ್ಲಿ ಸಂಬಂಧಿಸಿದ ಸಚಿವರು ಇರಬೇಕಾಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ : ತಮ್ಮನ್ನು ಕೇಳುತ್ತಿದ್ದೇನೆ. Who has piloted this Bill? ಮನೆಯ ಮುಂದೆ ಇಡಲಿಕ್ಕೆ ತಮಗೆ ಅಧಿಕಾರ ಕೊಟ್ಟವರು ಯಾರು?

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಅಧ್ಯಕ್ಷರೇ, ಇಲ್ಲೇನಾದರೂ ಸಾಧನೆ ಮಾಡುವುದಿದ್ದರೆ ಪ್ರತಿ ದಿನ ಪ್ರತಿ ಘಳಿಗೆಯಲ್ಲಿ ಕೂಡ ಈ ನಿಯಮಕ್ಕೆ ವಿರುದ್ಧವಾಗಿ ತಾವು ಅನೇಕರು ನಡೆದುಕೊಳ್ಳುತ್ತಿದ್ದೀರಿ ಅಧ್ಯಕ್ಷರ ನಿರ್ಧಾರ.....

ಗೊಂದಲ

ಶ್ರೀ ವಾಟಾಳ್ ನಾಗರಾಜ್ : ಕಾನೂನು ಸಚಿವರು ಈ ರೀತಿ ಸದನವನ್ನು ತಪ್ಪು ದಾರಿಗೆಳೆಯುವುದು ಸರಿಯಾದ್ದಲ್ಲ

ಶ್ರೀ ಆರ್.ವಿ. ದೇಶಪಾಂಡೆ : ಕಾನೂನು ಸಚಿವರೇ, ನಾವು ಕಾಯ್ದೆಬದ್ಧವಾಗಿ ನಡೆಯುತ್ತಿಲ್ಲ ಎಂದರೆ ಅದರ ಅರ್ಥ ಏನು? ಇದು ಸದನಕ್ಕೆ ಅವಮಾನ. ಮಾನ್ಯ ಸಚಿವರು ಆ ರೀತಿ ಹೇಗೆ ಹೇಳಿದರು ಎಂಬುದು ನನಗೆ ಆಶ್ಚರ್ಯವಾಗುತ್ತದೆ. ಏಕೆಂದರೆ ತಮ್ಮ ಕಡೆಯಿಂದ ಇಂಥಹ ಮಾತನ್ನು ನಾವು ನಿರೀಕ್ಷೆ ಮಾಡಿಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಈ ವಿಧೇಯಕವನ್ನು ಮಂಡಿಸಲು ಮುಖ್ಯಮಂತ್ರಿಗಳು ನನಗೆ ಅಧಿಕಾರ ಕೊಟ್ಟಿದ್ದಾರೆ. ಆದ್ದರಿಂದ ಮಂಡಿಸುತ್ತೇನೆ. ಅದರಲ್ಲಿ ಯಾವ ದೋಷವೂ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ತಮಗೆ ಸರ್ವಾಧಿಕಾರ ಕೊಟ್ಟಿದ್ದಾರೆ ಮುಖ್ಯಮಂತ್ರಿಗಳು. ನಿಮ್ಮನ್ನು ಬಿಟ್ಟರೆ ಯಾರಿದ್ದಾರೆ? ಎಲ್ಲಾ ಪ್ರಶ್ನೆಗೂ ಉತ್ತರ ನೀವೇ ಕೊಡಬೇಕು, ಗಮನ ಸೆಳೆಯುವವ ಸೂಚನೆಗೂ ಉತ್ತರವನ್ನು ನೀವೇ ಕೊಡಬೇಕು. ನಾವು ಸಹಿಸಿಕೊಳ್ಳುತ್ತಿದ್ದೇವೆ. ಅದರ ದುರುಪಯೋಗ ತೆಗೆದುಕೊಳ್ಳಬೇಡಿ. ಮಾನ್ಯ ಮುಖ್ಯಮಂತ್ರಿಗಳು ನಿಮಗೆ ಅಧಿಕಾರ ಕೊಟ್ಟಿದ್ದರೆ ಅದು ನಿಮ್ಮದು ಅವರ ವ್ಯವಹಾರ. ಇವತ್ತು ಈ ಸದನಕ್ಕೆ ಕೆಲವು ರೂಲ್ಸ್ ರೆಗ್ಯುಲೇಷನ್ಸ್ ಇವೆ, ಆ ಪ್ರಕಾರ ನಾವು ನಡೆಯಬೇಕಾಗುತ್ತದೆ. ರೂಲ್ಸ್ ರೆಗ್ಯುಲೇಷನ್ಸ್‌ನಲ್ಲಿ ಈ ತರಹ ಬಿಲ್ಲನ್ನು ಪೈಲಟ್ ಮಾಡಲಿಕ್ಕೆ ಇದೆ

ಎಂದರೆ ಮಾಡಿ ಇಲ್ಲದಿದ್ದರೆ ಹೇಳಿ, ಮುಖ್ಯಮಂತ್ರಿಗಳು ಬರುತ್ತಾರೆ ಆಗ ಮಾಡೋಣ ಎಂದು ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು

ಏನು ಬೆಂಗಳೂರಿನಲ್ಲಿದ್ದಾರೋ ಇಲ್ಲವೋ? 27ನೇ ತಾರೀಖು ಸದನಕ್ಕೆ ಬರಲಿಲ್ಲ, ಇವತ್ತು ಮುಂಜಾನೆ ಬರಲಿಲ್ಲ, ಬೆಂಗಳೂರಲ್ಲಿದ್ದಾರೋ ದೆಹಲಿಗೆ ಹೋಗಿದ್ದಾರೋ ಪ್ರೈ ಮಿನಿಸ್ಟರ್ ಬರಬೇಕಾಗಿದೆಯಲ್ಲಾ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮೇಲ್ಮನೆಯಲ್ಲಿ ಚುನಾವಣೆ ಇತ್ತು.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಕಾನೂನು ಸಚಿವರು ನೇರವಾಗಿ ಒಂದು ಮಾತು ಆಡಿದ್ದಾರೆ. ಇದುವರೆಗೂ ಈ ತರಹ ಕಾನೂನು ಬಿಟ್ಟು ಬೇಕಾದಷ್ಟು ನಡೆದುಹೋಗಿದೆ. ಇದೇನು ಮಹಾ ಎಂದು ಹೇಳಿದ್ದಾರೆ. ಇದು ಯಾರ ಮೇಲೆ ಪರಿಣಾಮ ಬೀರುತ್ತದೆ ಎಂದರೆ ಈ ಸಭೆಯ ಮೇಲೆ ಮತ್ತು ಸಭೆ ನಡೆಸತಕ್ಕ ಅಧ್ಯಕ್ಷರ ಮೇಲೆ ಆದ್ದರಿಂದ ಕಾನೂನು ಸಚಿವರು ಬೇಕಾದರೆ ಅವರ ಕಾರ್ಯಾಲಯದಲ್ಲಿ ಅಥವಾ ಸದನ ಬಿಟ್ಟುಹೊರಗಡೆ ಆಡಲಿ, ಈ ಸದನದಲ್ಲಿ ಏನೇನೋ ಇದುವರೆಗೂ ಕಾನೂನು ಬಿಟ್ಟು ನಡೆದುಹೋಗಿದೆ, ಇದೇನು ಮಹಾ ಎನ್ನುವ ರೀತಿ ಅವರು ಮಾತನಾಡುವುದಾದರೆ ಇದನ್ನು ತಾವು ಒಪ್ಪುತ್ತೀರೋ? ಇದು ಲಘುವಾಗಿ ತೆಗೆದುಕೊಳ್ಳುವಂಥದ್ದಲ್ಲ. ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಇದು ನಿಮ್ಮ ಮೇಲೆ, ನಿಮ್ಮ ಪೀಠದ ಮೇಲೆ ಈ ಸದನದ ಮೇಲೆ ಬಹಳ ದುಷ್ಪರಿಣಾಮ ಬೀರುವಂಥ ಮಾತು, ಹಿರಿಯ ಸಚಿವರು, ಈ ತರಹ ಮಾತಾಡುತ್ತಾರೆ ಎಂದು ನಾನು ಎಂದಿಗೂ ಅಂದುಕೊಂಡಿರಲಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಕಾನೂನು ಸಚಿವರು ಸದನದ ಕ್ಷಮೆ ಕೇಳಬೇಕು. ಏಕೆಂದರೆ ಕೇವಲ ನಿಮಗಲ್ಲ, ಈ ಸದನಕ್ಕಲ್ಲ ಇಡೀ ರಾಜ್ಯದ ಜನತೆಗೆ ಅವಮಾನ ಮಾಡಿದ್ದಾರೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಕಾನೂನು ಸಚಿವರು ಮತ್ತೊಂದು ಮಾತಾಡಿದ್ದಾರೆ. ನೀವು ಕೇಳುವುದಕ್ಕೆ ಅಧಿಕಾರ ಇಲ್ಲವೆಂದು ನಮ್ಮ ಕಡೆ ಕೈತೋರಿಸಿ, ನೀವು ಅಲ್ಲಿ ಪ್ರತಿನಿಮಿಷ ಕಾನೂನಿಗೆ ವಿರುದ್ಧವಾಗಿ ಇಲ್ಲಿ ಕೆಲಸ ಮಾಡುತ್ತಿದ್ದೀರಿ, ಆದ್ದರಿಂದ ನಿಮಗೆ ಇದನ್ನು ಕೇಳುವುದಕ್ಕೆ ಅಧಿಕಾರ ಇಲ್ಲವೆಂಬ ಮಾತೂ ಸಹ ಬಂದಿದೆ ಅದರ ಬಾಯಿಂದ ಅದು ಕಡತದಲ್ಲಿದೆ ಸ್ವಾಮಿ. ನಾನು ಸ್ಪಷ್ಟವಾಗಿ ಕೇಳಿಸಿಕೊಂಡಿದ್ದೇನೆ, ನನಗೆ ಕಿವಿ ಚೆನ್ನಾಗಿ ಕೇಳುತ್ತಿದೆ. ನಿಮಗೆ ಕೇಳುವುದಕ್ಕೆ ಅಧಿಕಾರ ಇಲ್ಲವೆಂಬ ಮಾತು ಅವರ ಬಾಯಿಂದ ಬಂದದ್ದನ್ನು ಕೇಳಿಕೊಂಡು ಸುಮ್ಮನೆ ಕೂತುಕೊಳ್ಳುವುದಕ್ಕೆ ನಾವು ತಯಾರಾಗಿಲ್ಲ. ಈ ಸದನದಲ್ಲಿ ಕೆಲವು ನಿಯಮಾವಳಿ ಏನಿವೆ ಅವುಗಳ ಪ್ರಕಾರ ಕೆಲಸ ಮಾಡುವುದಕ್ಕೆ ನಾವು ಬಂದಿರುವುದು, ನಾವೇನಾದರೂ ನಿಯಮಾವಳಿ ತಪ್ಪಿದರೆ ತಾವಿದ್ದೀರಿ ನಮ್ಮನ್ನು ಸರಿಪಡಿಸುವುದಕ್ಕೆ, ಆ ರೀತಿಯೇನಾದರೂ ಆಗಿದ್ದರೆ ಅದು ತಮ್ಮ ಅನುಮತಿ ಪ್ರಕಾರ. ಎಲ್ಲಿಯವರೆಗೂ ತಾವು ಈ ಸದನದ ಅಧ್ಯಕ್ಷತೆ ವಹಿಸಿರುತ್ತೀರೋ ಅಲ್ಲಿಯವರೆಗೂ ಸದನವನ್ನು ಕಾನೂನು ರೀತಿಯಲ್ಲಿ ನಡೆಸಿಕೊಂಡು ಹೋಗುವ ಅಧಿಕಾರ ನಿಮಗೆ ಇದ್ದೇ ಇದೆ. ನಿಮ್ಮ ಅಧಿಕಾರವನ್ನು ನಾವು ಯಾವಾಗಲೂ ಪ್ರಶ್ನೆ ಮಾಡಿಲ್ಲ, ಅಂತಹ ಪ್ರಸಂಗವೂ ಉಂಟಾಗಿಲ್ಲ. ಆದ್ದರಿಂದ ಇವತ್ತು ಕಾನೂನು ಸಚಿವರ ಬಾಯಲ್ಲೇ ಇಂತಹ ಮಾತು ಬಂದಮೇಲೆ ಇದು ಇಡೀ ಸದನಕ್ಕೆ ಆಗಿರುವ ಅವಮಾನ ಎಂಬುದನ್ನು ನಾನು ಕಳಕಳಿಯಿಂದ ತಮ್ಮ ಗಮನಕ್ಕೆ ತಂದು ಅವರು ಆಡಿರುವ ಮಾತುಗಳನ್ನು ಅವರು ವಾಪಸ್ಸ್ ಪಡೆಯಬೇಕು, ಇಲ್ಲದೇ ಇದ್ದರೆ ಅದನ್ನು ತಾವು ಕಡತದಿಂದ ತೆಗೆಯಲಿಕ್ಕೆ ತಾವು ಮನಸ್ಸು ಮಾಡಬೇಕೆಂದು ವಿನಂತಿ ಮಾಡುತ್ತೇನೆ.

+ ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಅಧ್ಯಕ್ಷರೇ, ನಾನು ಹಾಗೆ ಹೇಳಿಲ್ಲ, 115ನೇ ವಿಧಿ ಪ್ರಕಾರ "At any time after the bill has been so laid on the table, any Minister in the case of Government bill or in any other case, any member of the House who may give notice of his intention to move that bill be taken into consideration." ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ "Any Minister in the case of Government Bill" ಎಂದು ಇದೆ.

(ಗೊಂದಲ)

ನಾನು ಎರಡು ಮಾತನ್ನೂ ಹೇಳಿದ್ದೇನೆ.

"At any time after the Bill has been so laid on the table, any Minister in the case of a Government Bill or in any other case any Member may give notice of his intention to move the Bill and be taken for consideration." Further, " on 16th April 79, Karnataka Motor Vehicles Taxation Second Amendment Bill 79 was taken up for consideration and passing. The Hon'ble Leader of Opposition S.R. Bommai, raising a point of order, pointed out that as per the agenda circulated the Minister who was incharge of piloting the Bill should move the consideration motion and seek passage of the Bill. He objected to the consideration motion being moved by the Minister who was not in charge of piloting the Bill and quoted Rule 75 which is equivalent to Rule 115, of the conduct of business, No motion that the bill be taken into consideration shall be made by any member other than the member incharge of the bill and no motion that the bill be circulated or re-circulated for the purpose of eliciting opinion. shall be made by any member except by way of an amendment to the motion. Thereupon, the Hon'ble Speaker gave a ruling that rule 75 refers to Private Member's Bill. According to chapter I, short title and definition, Finance Minister includes any Minister. Therefore, the question does not arise."

ಇದರ ಬಗ್ಗೆ ಹಿಂದಿನ ತೀರ್ಮಾನಗಳು ಕೂಡ ಇವೆ. ನಾನು ಹೇಳಿದೆ ಏನೆಂದರೆ ನಮಗೆ ಅಧಿಕಾರ ಇದೆ, ಮುಖ್ಯಮಂತ್ರಿಗಳು ನಮಗೆ ಆದೇಶವನ್ನು ಕೊಟ್ಟಿದ್ದಾರೆ ಮತ್ತು ನಿಯಮದ ಪ್ರಕಾರ ಈ ವಿಧೇಯಕವನ್ನು ನಾನು ಮಂಡಿಸಿದ್ದೇನೆ. ಆದರೆ ತಮ್ಮ ಅನೇಕ ಸದಸ್ಯರು ವಿಶೇಷವಾಗಿ ಮಾನ್ಯ ಅಧ್ಯಕ್ಷರು ಎದ್ದು ನಿಂತಾಗ, ಎಲ್ಲರೂ ಒಟ್ಟಿಗೆ ನಿಂತುಕೊಂಡು ಮಾತನಾಡುವಂಥ ಸಂದರ್ಭವನ್ನು ನೋಡಿದ್ದೇವೆ. ಮತ್ತು 7, 8 ಜನ ಒಟ್ಟಿಗೆ ಮಾತನಾಡುವುದನ್ನು ನಾವು ನೋಡಿದ್ದೇವೆ. ಆದ್ದರಿಂದ ನಾನು ಸಭೆಯ ಗಮನಕ್ಕೆ ತಂದೆ. ಈ ತರಹ ಪ್ರತಿ ಘಳಿಗೆಯಲ್ಲೂ ನಿಯಮ ಉಲ್ಲಂಘನೆ ಮಾಡಿರುವಂಥದ್ದನ್ನು ಗಮನಕ್ಕೆ ಇಡದೆ ತಾವು ನಿಯಮದ ಬಗ್ಗೆ ಇಷ್ಟು ಕಾತುರರಾಗಿರುವುದು ಈ ಮಸೂದೆಯ ವಿಚಾರದಲ್ಲಿ. ತಾವು ಇಷ್ಟೊಂದು ಆಕ್ಷೇಪಣೆ ಎತ್ತಬಾರದಾಗಿತ್ತು ಎಂದು ಅತ್ಯಂತ ವಿನಯದಿಂದ, ನಮ್ರತೆಯಿಂದ ಮಾನ್ಯ ಏಕಾಂತಯ್ಯನವರು ಮತ್ತು ಇತರ ಮಿತ್ರರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ಅಧ್ಯಕ್ಷರೇ, ಈಗ ಸನ್ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ. ಆದರೆ ಕಾನೂನು ಸಚಿವರು ಏನು ಹೇಳಿದ್ದಾರೆ ಅದು ಯಾವುದೂ

ಕಡತಕ್ಕೆ ಹೋಗುವಂಥ ವಿಚಾರವಲ್ಲ ಎಂದು ನನ್ನ ಭಾವನೆ. ಏತಕ್ಕೆಂದರೆ ನಾನು ಒಂದನ್ನು ಓದುತ್ತೇನೆ:

"On the day appointed for the introduction of the Bill the Speaker calls the Minister incharge who moves the motion for leave to introduce the Bill. After the Speaker has put the question and the motion is adopted, the Bill is introduced by the Minister. At the introduction stage, the Minister who has given notice for leave to introduce can alone introduce it." Page 495, Kaul & Shakdhar.

ನಾನು ಇದಕ್ಕಿಂತಲೂ ಹೆಚ್ಚಿಗೆ ಏನೂ ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅದು ಮುಖ್ಯಮಂತ್ರಿಗಳಿಗೆ ಗೊತ್ತಿದೆ. ಈ ಕಡೆ ಇದ್ದಾಗ ಅವರು ಅದೇ ಕೆಲಸ ಮಾಡಿದ್ದರು. ನಾವು ಅದೇ ಕೆಲಸ ಮಾಡುತ್ತಿದ್ದೇವೆ. ಮುಖ್ಯಮಂತ್ರಿಗಳು ಈಗ ಬಂದಿದ್ದಾರೆ ಅವರು ಮಂಡಿಸಬಹುದು.

ಶ್ರೀ ಸಿ. ಬೈರೇಗೌಡ : ಮಾನ್ಯ ಕಾನೂನು ಸಚಿವರು ಹೇಳಿರುವಂಥದ್ದು ಕಡತಕ್ಕೆ ಹೋಗುವುದಕ್ಕೆ ಲಾಯಕ್ಕಾಗಿಲ್ಲ. ದಯವಿಟ್ಟು ಇದರ ಬಗ್ಗೆ ತಾವು ತಮ್ಮ ತೀರ್ಪನ್ನು ಕೊಡಬೇಕೆಂದು ವಿನಂತಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಈಗ ಬಂದಿದ್ದಾರೆ. ಇನ್ನೇನೂ ಪ್ರಶ್ನೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಅದಲ್ಲ ಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸುವ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಮತ್ತು ಕಾನೂನು ಸಚಿವರು ಹೇಳಿದರು ಇದುವರೆಗೂ ಹೀಗೆಯೇ ನಡೆದಿದೆ ಎಂದು. ಇದು ಏನು ಮಹಾ ಎಂದು. ಇದನ್ನು ತಾವು ಒಪ್ಪುತ್ತೀರಿ ಹೇಗೆ ಅಂಥ? ನೀವು ಒಪ್ಪುವುದಾದರೆ ನಮ್ಮದೇನೂ ಇಲ್ಲ.

ಅಧ್ಯಕ್ಷರು : ಆಯಿತು, ನಾನು ಅದನ್ನು ತರಿಸಿ ನೋಡುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ನಾನು ಹೇಳಿರುವುದರಲ್ಲಿ ಯಾವುದು ಅನ್‌ಪಾರ್ಲಿಮೆಂಟರಿ ಇದ್ದರೆ ನಾನು ಕ್ಷಮಾಪಣೆ ಕೇಳುತ್ತೇನೆ. ನಾನು ವಾಸ್ತವಾಂಶವನ್ನು ತಮಗೆ ಹೇಳಿದೆ. ನಮ್ಮ ವಾಟಾಳ್ ನಾಗರಾಜ್‌ರವರ ನಾಯಕತ್ವದಲ್ಲಿ ಅನೇಕ ಬಾರಿ ಉತ್ಸಾಹದಿಂದ ತಾವು ಮಾಡುತ್ತೀರಿ ಅದನ್ನು ತಮ್ಮ ಗಮನದಲ್ಲಿಟ್ಟುಕೊಳ್ಳಲಿ ಎಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ : ನಾವು ಎಷ್ಟೇ ಉತ್ಸಾಹದಲ್ಲಿ ಏನೇ ಮಾಡಿದರೂ ಈ ರೀತಿ ಎಂದೂ ಅಂದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ತಾವು, ಸನ್ಮಾನ್ಯ ಏಕಾಂತಯ್ಯ ಮತ್ತು ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರ ತುರ್ತು ಬುಲಾವಿಗೆ ಓಗೊಟ್ಟು ನಾನು ಓಡೋ ಡಿ ಬಂದಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1994ನೇ ಸಾಲಿನ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ 1994ನೇ ಸಾಲಿನ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1994ರ ಸಾಲಿನ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಯಿತು

ಶ್ರೀ ಆರ್.ವಿ. ದೇಶಪಾಂಡೆ : ಈಗಿನ ಅಂಡರ್‌ಸ್ಟಾಂಡಿಂಗ್ ಏನು ಎಂದರೆ ಇವತ್ತು ನಾವು ಅತಿವೃಷ್ಟಿ ಮತ್ತು ಬರಗಾಲದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಇತ್ತು. ಆದರೆ ಅದನ್ನು ಅಜೆಂಡಾದಲ್ಲಿ ಹಾಕಿಲ್ಲ. ಹಾಗಾಗಿ ನಾಳೆ ತೆಗೆದುಕೊಳ್ಳುವಿರಾ?

4.00 ಪಿ.ಎಂ

ಶ್ರೀ ವಾಟಾಳ್ ನಾಗರಾಜ್ : ನೆರೆ ಹಾವಳಿ ಬಗ್ಗೆ ಸದನ ಕಾರ್ಯಕಲಾಪ ಸಮಿತಿಯವರು ಎಷ್ಟು ತುರ್ತಾಗಿ ಪ್ರಾರಂಭ ಮಾಡಿ ಚರ್ಚೆ ಮಾಡಬೇಕೆಂದು ನಾವೆಲ್ಲಾ ಒಳಗೆ ಕುಳಿತು ತೀರ್ಮಾನ ಮಾಡಿದ್ದೇವೆ ಅಷ್ಟು ತುರ್ತು ಇಲ್ಲಿ ಕಾಣುತ್ತಿಲ್ಲ. ಈಗಾಗಲೇ ಕಂದಾಯ ಸಚಿವರು ಹೇಳಿಕೆ ಕೊಟ್ಟಿದ್ದಾರೆ. ಚರ್ಚೆ ಪ್ರಾರಂಭವಾಗಬೇಕು. ಯಾವಾಗ ಪ್ರಾರಂಭ ಮಾಡುವುದಕ್ಕೆ ಅವಕಾಶ ಕೊಡುತ್ತೀರಿ? ನಾವೂ ನೀವೆಲ್ಲಾ ಕುಳಿತು ಒಳಗೆ ತೀರ್ಮಾನ ಮಾಡಿದ್ದು ಒಂದು ಆದರೆ ಇಲ್ಲಿ ತೀರ್ಮಾನ ಬೇರೆಯದೇ ಆಗುತ್ತಿದೆ. ಇದು ಸರಿಯೇ?

ಅಧ್ಯಕ್ಷರು : ಶ್ರೀ ಧರ್ಮಸಿಂಗ್ ಅವರು ಆ ಮನೆಯಲ್ಲಿ ಇದ್ದಾರೆ. ನಾಳೆ ತೆಗೆದುಕೊಳ್ಳೋಣ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಕಂದಾಯ ಸಚಿವರು ಅಲ್ಲಿ ಇದ್ದಾರೆ ಉತ್ತರ ಕೊಡುವವರು ಅವರು. ಅಲ್ಲಿ ಇದೇ ವಿಚಾರದ ಬಗ್ಗೆ ಚರ್ಚೆ ನಡೆಯುತ್ತಿದೆ.

SRI R.V. DESHPANDE : The demand is with you and not with the Revenue Minister.

ವಸತಿ ಸಚಿವರಾದ ಶ್ರೀ ಗೋಪಿನಾಥ ಸಾಂಡ್ರಾರವರು ಭೂಮಿ ಖರೀದಿ ವಿಚಾರದಲ್ಲಿ ಕಾನೂನು ಉಲ್ಲಂಘನೆ ಮಾಡಿದ್ದಾರೆನ್ನುವ ಬಗ್ಗೆ

+ ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ರೂಲ್ಸ್ ಆಫ್ ಪ್ರೊಸೀಜರ್ ನಿಯಮ 311ರ ಪ್ರಕಾರ ವಸತಿ ಸಚಿವರಾದ ಶ್ರೀ ಗೋಪಿನಾಥ್ ಸಾಂಡ್ರಾ ಅವರ ಕೆಲವು ಭೂಮಿ ಖರೀದಿ ವಿಚಾರದಲ್ಲಿ ಯಾವ ಪ್ರಕಾರ ಕಾಯಿದೆ ಕಾನೂನಿನ ಉಲ್ಲಂಘನೆಯಾಗಿದೆ ಇದರ ಬಗ್ಗೆ ತಮ್ಮ ಕಚೇರಿಗೆ ನಿಯಮ 311 ಪ್ರಕಾರ ನೋಟೀಸ್ ಕೊಟ್ಟಿದ್ದೇವೆ. ಈ ನಿಯಮದಲ್ಲಿ ಒಂದು ಪ್ರಾವಿಷನ್ ಇದೆ. ನಾವು ಯಾರ ಮೇಲೆ ಯಾವ ವ್ಯಕ್ತಿ ಮೇಲೆ ಆಪಾದನೆ ಮಾಡುತ್ತೇವೆ ಅವರಿಗೂ ಸಹ ನೋಟೀಸು ಕೊಡಬೇಕೆಂದು ಅದರಲ್ಲಿ ಇದೆ. ಅದರಂತೆ ಅವರಿಗೂ ಸಹ 27ನೇ ತಾರೀಖು ನೋಟೀಸ್ ಕೊಟ್ಟಿದ್ದೇವೆ ಒಂದು ಮಾತನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ವೈಯಕ್ತಿಕವಾದ ಪರ್ಸನಲ್ ಅಲಿಗೇಷನ್‌ನಲ್ಲಿ ನನಗೆ ವಿಶ್ವಾಸವಿಲ್ಲ. ಆದರೆ ನಾವು ಅಧಿಕಾರದಲ್ಲಿರುವಾಗ, ಜನರ ಪ್ರತಿನಿಧಿಯಾಗಿ ನಾವು ಸಮಾಜದಲ್ಲಿ ಕೆಲಸ ಮಾಡುವಾಗ ಕಾಯಿದೆ ಕಾನೂನಿನ ಪ್ರಕಾರ ನ್ಯಾಯ ಬದ್ಧವಾಗಿ ನಡೆದುಕೊಳ್ಳಬೇಕಾಗುತ್ತದೆ. ಏಕೆಂದರೆ ನಾವು ಯಾವ ಪ್ರಕಾರದ ಆದರ್ಶ ಹಾಕುತ್ತೇವೆ ಅದೇ ಆದರ್ಶವನ್ನು ಜನ ಆಚರಣೆ ಮಾಡಬೇಕಾಗುತ್ತದೆ. 1991ರಲ್ಲಿ ಮಾನ್ಯ ಸಚಿವರು ಶಾಸಕರಾಗಿದ್ದಾಗ

ಧಾರವಾಡ ಜಿಲ್ಲೆಯ ಅಮರಗೋಳ ಗ್ರಾಮದ ಹರವಾಳದಲ್ಲಿ 614 ಬ್ಲಾಕ್ ನಂಬರ್ ಅನ್ನು ಖರೀದಿ ಮಾಡಿದರು. ಇದು ಕ್ಷೇತ್ರ 30 ಎಕರೆ 2 ಗುಂಟೆ. ಅದೇ ಪ್ರಕಾರ ಮತ್ತೊಂದು ಭೂಮಿ ಸರ್ವೆ ನಂ. 70.1

70.2 ಇದನ್ನು ಅವರ ಚಿರಂಜೀವಿ ಅವರು 9 ಎಕರೆ ಜಮೀನನ್ನು ಖರೀದಿ ಮಾಡಿದ್ದಾರೆ. ಈ ಭೂಮಿ ಖರೀದಿ ಮಾಡುವ ಅಧಿಕಾರ ಅವರಿಗೆ ಇದೆ. ಈ ದೇಶದ ನಾಗರೀಕರಾಗಿ ಅವರು ಈ ಭೂಮಿ ಖರೀದಿ ಮಾಡುವುದಕ್ಕೆ ಅವರಿಗೆ ಅಧಿಕಾರ ಇದೆ. ಅದಕ್ಕೆ ನಾನು ಅಡ್ಡಿ ಬರುವ ಹಾಗಿಲ್ಲ. ಯಾರೂ ಅಡ್ಡಿ ಬರಲು ಸಾಧ್ಯವಿಲ್ಲ. ಅವರು ಆಸ್ತಿ ಖರೀದಿ ಮಾಡಬಹುದು. ಆದರೆ ಆ ದೇಶದ ನಾಗರೀಕ ನಾದನಂತರ ಕಾಯಿದೆ ಬದ್ಧವಾಗಿದೆ ಇರಬೇಕಾಗುತ್ತದೆ. ನ್ಯಾಯ ಬದ್ಧವಾಗಿ ಇರಬೇಕಾಗುತ್ತದೆ. ಆ ಆಸ್ತಿ ಭೂಮಿ ಇರಬಹುದು ಮನೆ ಇರಬಹುದು ಯಾವುದೇ ಖರೀದಿ ಮಾಡಬಹುದು. ಮೂವಬಲ್, ಇಮ್‌ಮೂವಬಲ್ ಇರಬಹುದು. ಅದನ್ನು ಏಕೆ ಖರೀದಿ ಮಾಡಿದಿರಿ ಎಂದು ಕೇಳುವ ಅಧಿಕಾರ ನನಗೆ ಇಲ್ಲ. ಆದರೆ ಅದು ಕಾಯಿದೆ ಬದ್ಧವಾಗಿ ಹಾಗೂ ನ್ಯಾಯ ಬದ್ಧವಾಗಿ ಇರಬೇಕಾಗುತ್ತದೆ. ಆದರೆ ಯಾವಾಗ ಅದು ಕಾಯಿದೆ ಬದ್ಧವಾಗಿ ಇಲ್ಲ, ನ್ಯಾಯ ಬದ್ಧವಾಗಿಲ್ಲ ಆಗ ಯಾರು ನ್ಯಾಯಸ್ಥಾನದಲ್ಲಿದ್ದಾರೆ ಯಾರು ಅಧಿಕಾರದಲ್ಲಿದ್ದಾರೆ ಯಾರು ಜನರ ಪ್ರತಿನಿಧಿ ಎಂದು ನಾವು ಸಾರ್ವಜನಿಕ ಭಾಷಣದಲ್ಲಿ ನಾವು ಹಲವಾರು ಒಳ್ಳೆಯ ಕೆಲಸದ ಬಗ್ಗೆ ಪ್ರಚಾರ ಮಾಡುತ್ತೇವೆ, ಭಾಷಣ ಮಾಡುತ್ತೇವೆ ಆಗ ನಮ್ಮ ಜವಾಬ್ದಾರಿ ಈವತ್ತು ಹೆಚ್ಚಾಗಿದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಒಬ್ಬ ಶಾಸಕನಾದ ನಂತರ ಹಾಗೂ ಮಂತ್ರಿಯಾದ ನಂತರ ಮೊದಲು ನಾವು ಓಥ್ ತೆಗೆದುಕೊಳ್ಳಬೇಕಾಗುತ್ತದೆ. ಆ ಓಥ್‌ನಲ್ಲಿ ನಾವು ಏನು ಹೇಳುತ್ತೇವೆಂದರೆ"

> " That I will bear ture faith and allegience to the Constitution of India as by law established, that I will uphold the sovereignty and integrity of India, that I will faithfully and conscientiously discharge my duties as a Minister and that I will do right to all manner of people in accordance with the Constitution and the Law without fear or favour, affection or ill-will,"

ಈಗಾಗಲೇ ನಾವೆಲ್ಲರೂ ಸಂವಿಧಾನದ ಪ್ರಕಾರ ನಡೆಯುತ್ತೇವೆ ನಾಡಿನ ದೇಶದ ಕಾಯಿದೆ ಕಾನೂನು ಉಲ್ಲಂಘನೆ ಮಾಡುವುದಿಲ್ಲವೆಂದು ಓತ್ ತೆಗೆದುಕೊಂಡಿದ್ದೇವೆ. ಅದು ನಮ್ಮ ಜವಾಬ್ದಾರಿ. ಎಲ್ಲರಿಗಿಂತ ಇದು ಹೆಚ್ಚಾಗಿ ನಮಗೆ ಇದೆ. ಮಾನ್ಯ ಸಚಿವರು 1991ರಲ್ಲಿ ನಿವೇಶನ ಖರೀದಿ ಮಾಡಿದ ಬಗ್ಗೆ ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಧಾರವಾಡ ಜಿಲ್ಲೆಯ ಅಮರಗೋಳ ಗ್ರಾಮದ ಬ್ಲಾಕ್ ನಂ. 614 ಅನ್ನು ನಾಲ್ಕೂವರೆ ಲಕ್ಷ ರೂಪಾಯಿಗೆ ಖರೀದಿ ಮಾಡಿದ್ದಾರೆ. ಇದನ್ನು ಖರೀದಿ ಮಾಡುವುದಕ್ಕೆ ಮುಂಚೆ ನಮ್ಮ ರಾಜ್ಯದ ಕಾನೂನು ಪ್ರಕಾರ ಭೂ ಸುಧಾರಣೆ ಕಾಯಿದೆ ಪ್ರಕಾರ ಯಾರು ಕೃಷಿ ಭೂಮಿ ಖರೀದಿ ಮಾಡುತ್ತಾರೆ ಅವರು ಅಗ್ರಿಕಲ್ಚರಿಸ್ಟ್ ಆಗಿರಬೇಕಾಗುತ್ತದೆ. ಅಗ್ರಿಕಲ್ಚರಿಸ್ಟ್ ಇಲ್ಲದಿದ್ದರೆ ಅವರು ಆ ಭಾಗದ ಅಸಿಸ್ಟೆಂಟ್ ಕಮೀಷನರಿಗೆ ಅರ್ಜಿಹಾಕಿ ಅವರ ಅನುಮತಿ ಕೇಳಬೇಕಾಗುತ್ತದೆ ಅದಕ್ಕೆ ಅವಕಾಶ ಇದೆ. ಆ ಪ್ರಕಾರ ಸಾಂಡ್ರಾ ಅವರು ಸ್ಥಳೀಯ ಎ.ಸಿ. ಅವರಿಗೆ ಅರ್ಜಿ ಹಾಕಿ ಹೀಗೆ ಬೋನಾಫೈಡ್ ಪರ್ಪಸ್‌ಗೆ ನಾನು ಲ್ಯಾಂಡ್ ಖರೀದಿ ಮಾಡಬೇಕು ನನಗೆ ಅನುಮತಿ ಕೊಡಿ ಎಂದು ಅದರಲ್ಲಿ ಹೇಳಿದರು. ಆ ಅರ್ಜಿಯಲ್ಲಿ ಬೋನಾಫೈಡ್ ಕಲ್ಟಿವೇಷನ್‌ಗೆ ಬೇಕಾಗಿದೆ ನನ್ನ ಆನ್ಯುಯಲ್ ಇನ್‌ಕಂ 50 ಸಾವಿರಕ್ಕಿಂತ ಕಡಿಮೆ ಇದೆ, ಎಂದು ಬರೆದಿದ್ದಾರೆ. ಯಾರ ಆದಾಯ 12 ಸಾವಿರಕ್ಕಿಂತ ಜಾಸ್ತಿ

ಕಂಟಿನ್ಯುಯಸ್ ಆಗಿ 5 ವರ್ಷ ಇದೆ ಅವರಿಗೆ ಭೂಮಿ ಖರೀದಿ ಮಾಡುವ ಅಧಿಕಾರ ಇಲ್ಲ. ಈಗ ಅದನ್ನು ಅಮೆಂಡ್ ಮೆಂಟ್ ಮಾಡಿ 50,000 ರೂಗಳಿಂದು ಮಾಡಿದ್ದೇವೆ. ಒಂದು ಬೋನಾಫೈಡ್ ಕಲ್ಟಿವೇಷನ್ ಇರಬೇಕು. ಎರಡನೆಯದು ನನ್ನ ಆದಾಯ 50.000 ಕ್ಕಿಂತ ಒಳಗೆ ಇದೆ ಇಂದು ಹೇಳಿದ್ದು ಅದರ ನಂತರ ಆ ಅಸಿಸ್ಟೆಂಟ್ ಕಮೀಷನರ್ ಜಮಾದಾರ್ ಎಂದು ಯಾರು ಅಲ್ಲಿ ಇದ್ದರು ಅವರು ಇವರು ಯಾವ ದಿನ ಅರ್ಜಿ ಕೊಟ್ಟರು ಅದರ ಮಾರನೇ ದಿವಸ ಅನುಮತಿ ಕೊಟ್ಟರು. 2 ದಿವಸದ ಒಳಗಾಗಿ ಅನುಮತಿ ಕೊಟ್ಟರು. ಒಂದು ಅರ್ಜಿಬಂದ ನಂತರ ಅದರ ಬಗ್ಗೆ ವಿಚಾರಣೆಯಾಗಬೇಕಾಗುತ್ತದೆ. ಅಸಿಸ್ಟೆಂಟ್ ಕಮೀಷನರ್ ಅವರು ತಹಸೀಲ್ದಾರರಿಗೆ ಕಳುಹಿಸಬೇಕಾಗುತ್ತದೆ. ಅಲ್ಲಿ ವಿಲೇಜ್ ಅಕೌಂಟೆಂಟ್ ಅವರು ವಿಚಾರಣೆ ಮಾಡಿ ಇವರ ಇನ್‌ಕಂ ಏನು ಎಂಬುದರ ಬಗ್ಗೆ ವಿಚಾರಣೆ ಮಾಡಬೇಕಾಗುತ್ತದೆ ಇದು ಅವರಿಗೆ ಬೋನಾಫೈಡ್ ಪರ್ಪಸ್‌ಗೆ ಬೇಕೇ ಎಂಬುದನ್ನು ವಿಚಾರಣೆ ಮಾಡಬೇಕಾಗುತ್ತದೆ. ಅದ್ಯಾವುದೂ ವಿಚಾರಣೆ ಮಾಡದೇ ಆ ಜಮಾದಾರ್ ಎನ್ನುವವರು 48ಗಂಟೆಯಲ್ಲಿ ಇವರ ಪ್ರಭಾವ ಮೇರೆಗೆ ಇವರ ಅಧಿಕಾರ ದುರುಪಯೋಗ ಮಾಡಿಕೊಂಡು ಅನುಮತಿ ಕೊಟ್ಟರು ಇದನ್ನು ತೆಗೆದುಕೊಂಡು ನಂತರ ಇವರು ಆ ಭೂಮಿಯನ್ನು ಖರೀದಿ ಮಾಡಿದರು. ಭೂಮಿ ಖರೀದಿ ಮಾಡುವಾಗ 30 ಎಕರೆಗೆ ಇವರು ನಾಲ್ಕೂವರೆ ಲಕ್ಷ ರೂಪಾಯಿ ಎಂದು ಕ್ರಯ ನಿಗದಿ ಮಾಡಿದರು ಒಂದೆರಡು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕು. ಭೂ ಸುಧಾರಣಾ ಕಾಯಿದೆ 79ಎ Acquisition of Land by Certain persons:

" On and from the Commencement of the amendment Act, no person who are a family or a joint family, which has assured annual income of not less than Rs. 12,000/- (now amended as 50,000) from sources other than agriculture shall be entitled to acquire any land whether as land owners, landlords, tenant or mortaged possession or otherwise or partly in one capacity and partly others for the purpose of section I, the aggregate income of all the members of the family or a joint family from sources other than agriclutural land shall be deemed to be the income of the family or joint family as the case may be."

ಅವರು 50 ಸಾವಿರಕ್ಕಿಂತ ತನ್ನ ಇನ್‌ಕಂ ಕಡಿಮೆ ಇದೆ ಎಂದು ಹೇಳಿದರು. ಮತ್ತು ಅಗ್ರಿಕಲ್ಚರಿಸ್ಟ್ ಅಲ್ಲ ಎಂದು ಅವರು ಒಪ್ಪಿಕೊಂಡಿದ್ದಾರೆ. ಬೋನಾಫೈಡ್ ಪರ್ಪಸ್‌ಗೆ ಕೊಟ್ಟಿದ್ದರೆ ಅವರೇ ಅಬ್ಜೆಕ್ಷನ್ ಕೊಟ್ಟಿದ್ದರು. ಏಕೆಂದರೆ ಅವರಿಗೆ ಬೇರೆ ಭೂಮಿ ಇದೆ. ಇಲ್ಲಿ ಎರಡು ವಿಚಾರ ನಾವು ನೋಡಬೇಕಾಗುತ್ತದೆ. ಅಸಿಸ್ಟೆಂಟ್ ಕಮೀಷನರ್ ಅವರು ಇವರ ಪ್ರಭಾವದ ಮೇರೆಗೆ ಪರ್ಮಿಷನ್ ಕೊಟ್ಟರೋ ಅಥವಾ ಎನ್‌ಕ್ವೈರಿ ಮಾಡಿ ಕೊಟ್ಟರೋ. ಇವರ ಇನ್‌ಕಂ 50 ಸಾವಿರಕ್ಕಿಂತ ಮೇಲೆ ಇದೆಯೋ ಕಡಿಮೆ ಇದೆಯೋ? ಬೋನಾಫೈಡ್ ಪರ್ಪಸ್‌ಗೆ ಭೂಮಿಯನ್ನು ಇವರು ತೆಗೆದುಕೊಂಡರೋ? ಇವರು ಬೋನಾಫೈಡ್ ಪರ್ಪಸ್‌ಗೆ ಭೂಮಿಯನ್ನು ಉಪಯೋಗ ಮಾಡಿಕೊಂಡರೋ ಇದನ್ನು ನಾವು ನೋಡಬೇಕು. Whether he has put the land for bonafide use? ಒಂದು ವೇಳೆ ಬೋನಾಫೈಡ್ ಪರ್ಪಸ್‌ಗೆ ಯೂಸ್ ಮಾಡದಿದ್ದರೆ the Government has to cancel the deed and take over the land. That is also mentioned in sec. 80 which says.

" No sale, including sale in execution of a decree of a civile court or for recovery of arrears of land revenue or gift.. of any land or interest thereon, no mortage of land.."

ಅಂದರೆ ಟ್ರಾನ್ಸ್‌ಫರ್ ಆಫ್ ಲ್ಯಾಂಡ್, ಅಗ್ರಿಕಲ್ಚರಲ್ ಲ್ಯಾಂಡ್ ಟು ನಾನ್ ಅಗ್ರಿಕಲ್ಚರಿಸ್ಟ ಈಸ್ ಟೋಟಲಿ ಬ್ಯಾನ್ ಹೀಗಾಗಿ ಇವತ್ತು ಭೂ ಸುಧಾರಣಾ ಕಾಯಿದೆ ಉಲ್ಲಂಘನೆಯಾಗಿದೆ ಇದರ ನಂತರ ಇವರು ನಾಲ್ಕೂವರೆಗೆ ಲಕ್ಷಗಳಿಗೆ ಪಡೆದುಕೊಂಡರು ನಾಲ್ಕೂವರೆ ಲಕ್ಷಕ್ಕೆ ಆ ಭೂಮಿ ಪಡೆದುಕೊಳ್ಳಬೇಕದರೆ, ಆ ಸಮಯದಲ್ಲಿ ಭೂಮಿಯ ಬೆಲೆ ಕನಿಷ್ಠ ಎಕರೆಗೆ 50 ಸಾವಿರ ರೂಪಾಯಿ ಅಂದರೆ ಆ ಭೂಮಿಯ ಬೆಲೆ15 ಲಕ್ಷ. ಆಯಿತು 15 ಲಕ್ಷ ಭೂಮಿಯ ಬೆಲೆ ಇದ್ದಾಗ ಕಾಯಿದೆ ಏನು ಇದೆ, 15 ಪರ್ಸೆಂಟ್ ಪ್ರಕಾರ 15 ಲಕ್ಷಕ್ಕೆ ನಾಲ್ಕೂವರೆ ಲಕ್ಷ ರೂಪಾಯಿ ಸರ್ಕಾರಕ್ಕೆ ಸ್ಟ್ಯಾಂಪ್ ಡ್ಯೂಟಿ ಸೆಸ್ ಇವೆಲ್ಲಾ ತುಂಬ ಬೇಕಾಗಿತ್ತು. ಆದರೆ ಇವರು ಕೇವಲ ನಾಲ್ಕೂವರೆ ಲಕ್ಷಕ್ಕೆ ಸ್ಟಾಂಪ್ ಡ್ಯೂಟಿ ಕಟ್ಟಿದರು. ಹಾಗಾಗಿ ಸಾಧಾರಣ ಮೂರು ಲಕ್ಷ ರೂಪಾಯಿ ಸ್ಟ್ಯಾಂಪ್ ಡ್ಯೂಟಿ ಅವಾಯ್ಡ್ ಮಾಡಿದರು. ಇಲ್ಲಿ ಏನು ಪ್ರಾವಿಷನ್ ಇದೆ.

ತಮಗೆ ಗೊತ್ತು ಬಹಳಷ್ಟು ಪ್ರಕರಣಗಳನ್ನು ಅವರು ರೆಫರ್ ಮಾಡುತ್ತಾರೆ. ಸರ್ಕಾರದಿಂದ ಒಂದು ಆದೇಶ ಹೋಗಿದೆ. ಮಾನ್ಯ ಮುಖ್ಯಮಂತ್ರಿಗಳೇ ತಮಗೆ ಗೊತ್ತಿದೆ. ತಮ್ಮಿಂದ ಒಂದು ಆದೇಶ ಹೋಗಿದೆ. ಬೆಳಗಾಂನಲ್ಲಿ ಪ್ರೈಸ್ ಏನು? ಮಾಲಮಡ್ಡಿಯಲ್ಲಿ ಪ್ರೈಸ್ ಏನು? ಧಾರವಾಡ ಜಿಲ್ಲೆ ಮೂಲಮಡ್ಡಿಗೆ ಏನು ಪ್ರೈಸ್ ಇದೆ? ಅಮರಗೋಳದಲ್ಲಿ ಏನು ಪ್ರೈಸ್ ಇದೆ ಎಂದು ನಿಮ್ಮದೇ ಒಂದು ಸರ್ಕಾರದಿಂದ ಸರ್ಕುಲರ್ ಹೋಗಿದೆ. ಆ ಸರ್ಕುಲರ್ ಪ್ರಕಾರ 48, ಸಾವಿರ ವ್ಯಾಲ್ಯೂ ಸರ್ಕಾರ ಆದೇಶ ಕೊಟ್ಟಿದ್ದಾರೆ. ಆ ಪ್ರಕಾರ ರಿಜಿಸ್ಟರ್ ಆಗಿಲ್ಲ. ಅದಕ್ಕಿಂತ ಕಡಿಮೆ ಬೆಲೆಗೆ ರಿಜಿಸ್ಟರ್ ಆಗಿದೆ ಎಂದು ಹೇಳಿದಾಗ ತಕ್ಷಣ ಸಬ್ ರಿಜಿಸ್ಟ್ರಾರ್ ಅದನ್ನು ಡೆಫರ್ ಮಾಡಬೇಕಾಗಿತ್ತು. ಆದರೆ ಆ ರೀತಿ ಮಾಡಿಲ್ಲ. ಅವರ ಪ್ರಭಾವ, ಅವರ ಇನ್‌ಫ್ಲುಯೆನ್ಸ್ ಅವರ ದಬ್ಬಾಳಿಕೆಯಿಂದ ಅವರಿಗೆ ಏನೂ ಮಾಡಲಿಕ್ಕೆ ಆಗಲಿಲ್ಲ. ಹಾಗಾಗಿ ಇವೇಷನ್ ಆಫ್ ಸ್ಟ್ಯಾಂಪ್ ಡ್ಯೂಟಿ ಆಯಿತು. ಮೊದಲನೆಯದು ಲ್ಯಾಂಡ್ ರಿಫಾರಸ್ಸ್ ಕಾಂಟ್ರವೆನ್‌ಷನ್ ಎರಡನೆಯದು ಸ್ಟ್ಯಾಂಪ್ ಡ್ಯೂಟಿ ಕಾಂಟ್ರವೆನ್‌ಷನ್ ಮೂರನೆಯದು ಏನು ಎಂದರೆ ಇವರು ಭೂಮಿ ಪಡೆದುಕೊಂಡ ನಂತರ ಒಂದು ವರ್ಷದೊಳಗಾಗಿ, ಎಂಟು ಹತ್ತು ತಿಂಗಳ ಒಳಗಾಗಿ ಈ ಭೂಮಿಯನ್ನು ಪುನಃ ಅವರ ಹೆಂಡತಿ ಹೆಸರಿನಲ್ಲಿ, ಮಗನ ಹೆಸರಿನಲ್ಲಿ ಟ್ರಾನ್ಸ್‌ಫರ್ ಮಾಡಿದರು. ಏಕೆ ಟ್ರಾನ್ಸ್‌ಫರ್ ಮಾಡಿದರು?

ಇವರ ಬೋನಾಫೈಡ್ ಪರ್ಪಸ್‌ಗೆ ಬೇಕಾಗಿದ್ದರೆ Why the land was transferred to the name of his wife and son? Under what provision of law, it was transferred?

ಏಕೆಂದರೆ ಯಾರ ಹೆಸರಿನಲ್ಲಿ ಭೂಮಿ ಟ್ರಾನ್ಸ್‌ಫರ್ ಆಯಿತು. ಅವರು ಅಗ್ರಿಕಲ್ಚರಿಸ್ಟ್ ಇರಲಿಲ್ಲ. nor his wife, nor his sons are agriculturists. Their incomes are more than Rs. 50,000/- ಅವರೇನು ಮಾಡಿದರು ಎಂದರೆ ರಿಜಿಸ್ಟರ್ ಮಾಡಲಿಲ್ಲ. ಹಾಗೆಯೇ ಒಂದು ದಾಖಲೆ ಕೊಟ್ಟು ಇವರ ತನ್ನ ಹೆಂಡತಿ ಮತ್ತು ಹುಡುಗರ ಹೆಸರಿನಲ್ಲಿ ಭೂಮಿ ಟ್ರಾನ್‌ಫರ್ ಮಾಡಿದರು. ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟ್ ಯಾವ ಡಾಕ್ಯುಮೆಂಟಿಗೆ ರಿಜಿಸ್ಟ್ರೇಷನ್ ಕಂಪಲ್ಸರಿ ಎಂದು ಹೇಳುತ್ತದೆ ಎಂಬುದನ್ನು ಗಮನಿಸಬೇಕು. ಸೆಕ್ಷನ್ 17(b) ಈ ರೀತಿ ಇದೆ " Other non testimony instruments which purport or operate, to create, declare, assign, limit or extinguish, whether in present or in future, any right, title or interest, whether vested or partitioned of the value of Rs. 100 and upwards to be in immovable property."

ಅಂದರೆ ಒಂದು ನೂರು ರೂಪಾಯಿ ಮೇಲೆ ಇಮ್ಮೂವಬಲ್ ಪ್ರಾಪರ್ಟಿ ಇದ್ದರೆ ಕಂಪಲ್ಸರಿಯಾಗಿ ಸೆಕ್ಷನ್ 17 (ಬಿ) ಪ್ರಕಾರ ಇವರು ವರದಿ ಕೊಟ್ಟಿದ್ದಾರೆ. ಆವಾಗ ರಿಜಿಸ್ಟ್ರೇಷನ್ ಆದರೆ ಈ ಪ್ರಾಪರ್ಟಿ ವರ್ತ್ 17-18 ಲಕ್ಷ ರೂಪಾಯಿ ಆಗುತ್ತಿತ್ತು. ಆ ಸಮಯದಲ್ಲಿ ಸರ್ಕಾರಕ್ಕೆ ಪುನಃ 3-4 ಲಕ್ಷ ರೂಪಾಯಿ ಸ್ಟ್ಯಾಂಪ್ ಡ್ಯೂಟಿ ಬರುತ್ತಿತ್ತು. ಅದನ್ನು ಅವರು ಅವಾಯ್ಡ್ ಮಾಡಿದರು. ಅಷ್ಟೇ ಅಲ್ಲ, Wife and sons are not agriculturists. ಅಷ್ಟೇ ಅಲ್ಲ They have not asked for permission to purchase this land

ಯಾವ ಸೌಭಾಗ್ಯ ವತಿ ಹಾಗೂ ಮಗನ ಹೆಸರಿಗೆ ಭೂಮಿಯನ್ನು ವರ್ಗಾಯಿಸಿದರು, ಅದನ್ನು ಕಾಯಿದೆ ಪ್ರಕಾರ ರಿಜಿಸ್ಟರ್ ಮಾಡಿಸಿ, ಸ್ಟ್ಯಾಂಪ್ ಡ್ಯೂಟಿ ತುಂಬಿ ವರ್ಗಾಯಿಸಬಹುದಾಗಿತ್ತು ಈ ಬಗ್ಗೆ ಒಂದು ವರದಿ ಕೊಟ್ಟರು ಒಂದು ದಾಖಲೆ ಕೊಟ್ಟು ಸ್ಟ್ಯಾಂಪ್ ಡ್ಯೂಟಿ ಇವೇಡ್ ಮಾಡಿದರು. ಅವರ ಮಗ ಕೃಷಿಕನೂ ಅಲ್ಲ, ಪುನಃ ಅವರ ಹೆಸರಿಗೆ ವರ್ಗಾಯಿಸಿದರು. ಇವರು ಭೂಮಿಯನ್ನು ಏತಕ್ಕೋಸ್ಕರ ತೆಗೆದುಕೊಂಡರೆಂದರೆ ಸದುದ್ದೇಶಕ್ಕೋಸ್ಕರ. 1990 ರಲ್ಲಿ ಭೂಮಿಯನ್ನು ತೆಗೆದುಕೊಂಡು ಏಳು ತಿಂಗಳಾದ ನಂತರ ವರ್ಗಾವಣೆ ಮಾಡುತ್ತಾರೆ. ಏಕೆ ಭೂಮಿಯನ್ನು ವರ್ಗಾಯಿಸಿದರು ಎಂದರೆ, within 7 months he transfers, because he wanted to become a small holder. By dividing these lands in the names of wife and son, he became a small holder, so that he can take advantage of different Government schemes. ಇದಕ್ಕೆ ಏನನ್ನಬೇಕು? ಈ ದಿಶೆಯಲ್ಲಿ ಭೂ ಸುಧಾರಣೆ ಕಾಯ್ದೆ ಉಲ್ಲಂಘನೆಯಾಗಿದೆ. ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟ್ ಉಲ್ಲಂಘನೆಯಾಗಿದೆ. ಇಷ್ಟಾದ ನಂತರ ಮಾನ್ಯ ಕಂದಾಯ ಸಚಿವರು ಇವೊತ್ತು ಇಬ್ಬರು ಸಬ್ ರಿಜಿಸ್ಟ್ರಾರ್ ಸಸ್ಪೆಂಡ್ ಮಾಡಿದ್ದಾರೆ.ಏತಕ್ಕೆ ಸ್ಕೇಪ್ ಗೋಟ್ ಅವರಾಗಬೇಕು? ಅವರೇನಾದರೂ ತಪ್ಪು ಮಾಡಿದಲ್ಲಿ ಸರ್ಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಅವರ ಮೇಲೆ ಸರ್ಕಾರ I am not coming in the way ಆದರೆ ಈವತ್ತು ಸಣ್ಣ ಸಣ್ಣ ಜನರನ್ನು ಅಧಿಕಾರದಲ್ಲಿರತಕ್ಕ ವ್ಯಕ್ತಿಗಳು ಬಲಿಪಶುಗಳನ್ನಾಗಿ ಮಾಡಿ ಇಂತಹ ಪಾಪದ ಕೆಲಸವನ್ನು ಅವರ ಕೈಯಲ್ಲಿ ಮಾಡಿಸಿದರಲ್ಲಾ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಲುತ್ತಿದ್ದೇನೆ. ಇವೊತ್ತು ಸಬ್‌ರಿಜಿಸ್ಟ್ರಾರ್ ಅವರನ್ನು ಅಮಾನತ್ತು ಗೊಳಿಸಿದರು. This itself is a conclusive proof that illegal acts have been committed by the Hon'ble Housing Minister and he is unfit to continue as Minister.

ಏಕೆಂದರೆ, ಇವರೆಲ್ಲರೂ ನಾಡಿನ, ದೇಶದ ಸಂವಿಧಾನ, ಕಾಯಿದೆ, ಕಾನೂನುಗಳನ್ನು ಪಾಲಿಸುತ್ತೇವೆಂದು ಹೇಳಿ ಉಲ್ಲಂಘಿಸಿದ್ದಾರೆ. ಭೂ ಸುಧಾರಣೆ ಕಾಯ್ದೆ, ಸ್ಟ್ಯಾಂಪ್ ರಿಜಿಸ್ಟ್ರೇಷನ್ ಆಕ್ಟ್, ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಇವೆಲ್ಲವನ್ನೂ ಉಲ್ಲಂಘಿಸಿದ್ದಾರೆ. ಇವರ ಪ್ರಭಾವ ಇಷ್ಟೇ ಅಲ್ಲ, ಇವರು ಕಂದಾಯ ಅಧಿಕಾರಿಗಳಿಗೆ, ಅಸಿಸ್ಟೆಂಟ್ ಕಮೀಷನರ್ ಅವರಿಗೆ, ತಹಶೀಲ್ದಾರರಿಗೆ, ಸಬ್ ರಿಜಿಸ್ಟ್ರಾರ್ ಇವರಿಗೆಲ್ಲಾ ದುಡ್ಡು ಕೊಟ್ಟು ಭೂಮಿಯನ್ನು ತೆಗೆದುಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಯಾವಾಗಲೂ ಸರ್ಕಾರದ ನೀತಿ, ಮತ್ತು ಮುಕ್ತ ಸರ್ಕಾರದ ಬಗ್ಗೆ ಮಾತನಾಡುತ್ತಾರೆ. ನಿಜವಾಗಿಯೂ ಈ ವಿಷಯದ ಬಗ್ಗೆ ಇಲ್ಲಿ ಮಾತನಾಡಲು ಮಾನ್ಯ ಮುಖ್ಯಮಂತ್ರಿಯವರು ನನಗೆ ಅವಕಾಶ ಕೊಡಬಾರದಿತ್ತು. ಅವರೇ ಈ ಬಗ್ಗೆ ಕ್ರಮ ಕೈಗೊಳ್ಳಬಹುದಿತ್ತು. ಏಕೆಂದರೆ ಕೆಲವು ಜನರು ಮಾನ್ಯ ವಸತಿ ಸಚಿವರ ಮೇಲೆ ಆಪಾದನೆ ಮಾಡಿದರರು. ಆಗ ಇದರ ಬಗ್ಗೆ ವಿಚಾರಣೆಯಾಗಬೇಕೆಂದು ಹೇಳಿದಾಗ ಧಾರವಾಡದ ಜಿಲ್ಲಾಧಿಕಾರಿಗಳು ಇದರ ವಿಚಾರಣೆ ನಡೆಸಿದರು. ನಂತರ ತಮ್ಮ ಕಛೇರಿಗೆ ಒಂದು ಪತ್ರ ಬಂತು.

ಎಸ್.ಕೆ.ಹಜ್ರಾ ಎಂಬುವವರು ತಮ್ಮ ಕಾರ್ಯದರ್ಶಿಯವರಾದ ದಾಸ್ ರವರಿಗೆ ದಿನಾಂಕ 18.6.94ರಲ್ಲಿ ಒಂದು ಪತ್ರ ಬರೆದರು. ಪತ್ರದ ಸಾರಾಂಶವೇನೆಂದರೆ.

" I enclose a copy of letter No. DFO. PA.LTDO/10/94-95 dated 16-6-94 along with a copy of letter NO. 11 DCB 281/93 dated 13-5-94 of the Deputy Commissioner, Dharwar both addressed to the Revenue Commissioner, in which acquisition of land by Sri Gopinath Sandra, Minister for Housing in violation of Karnataka Land Reforms Act, Undervaluation of Stamp Duty and Registration Fee by him and infringement of urban land ceiling and regulation Act, has been reported. You may kindly bring the contents of these two letters to the notice of the Chief Minister."

ನಿಮ್ಮ ಕಾರ್ಯದರ್ಶಿಯವರಾದ ದಾಸ್ .ರವರು ಒಳ್ಳೆಯ ಅಧಿಕಾರಿಗಳು. ಅವರು ಬರೆದಿರುವ ಪತ್ರವನ್ನು ತಮ್ಮ ಗಮನಕ್ಕೆ ತಂದಿರಬೇಕು. ಅವರು ತಮ್ಮ ಗಮನಕ್ಕೆ ತಂದಾಗ ಇದರ ಬಗ್ಗೆ ಏನು ಕ್ರಮ ಕೈಗೊಂಡಿರಿ? ಏನೂ ಕ್ರಮ ಕೈಗೊಂಡಿಲ್ಲ. ಯಾವ ಮುಖ್ಯಮಂತ್ರಿ ತನ್ನ ಮಂತ್ರಿಮಂಡಲದ ಬಗ್ಗೆ, ತನ್ನ ಬಗ್ಗೆ ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೋ, ಮತ್ತು ತನ್ನದು ಮುಕ್ತ ಸರ್ಕಾರ, ಸ್ವಚ್ಛವಾದ ಸರ್ಕಾರ ಮುಂತಾದುವುಗಳ ಬಗ್ಗೆ ಮಾತನಾಡುತ್ತಾರೆ ಆದರೆ ಹಜ್ರಾ ಎನ್ನುವ ಅಧಿಕಾರಿ ಮತ್ತು ಅಗವಾನೆ ಎನ್ನುವ ಪ್ರಾಮಾಣಿಕ, ದಕ್ಷ ಜಿಲ್ಲಾಧಿಕಾರಿಗಳು ವರದಿ ಕಳುಹಿಸಿದಾಗ ಅವರ ಬಗ್ಗೆ ಏಕೆ ಕ್ರಮ ತೆಗೆದುಕೊಂಡಿಲ್ಲ? ಕ್ರಮ ಕೈಗೊಳ್ಳುವುದಕ್ಕೆ ನಿಮಗೆ ಶಕ್ತಿ ಇರಲಿಲ್ಲವೇ? ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಭಯವೇ? ನಿಮ್ಮ ಸ್ಥಾನಕ್ಕೇನಾದರೂ ಚ್ಯುತಿಯುಂಟಾಗುವ ಪ್ರಸಂಗವಿದ್ದಲ್ಲಿ ಅದು ನಮಗೆ ಗೊತ್ತಾಗಬೇಕಾಗುತ್ತದೆ.

ಮತ್ತೊಂದು ಪತ್ರವನ್ನು ನಾನು ಓದುತ್ತೇನೆ. ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಾದ ಶ್ರೀಮಾನ್ ಸಿ.ಟಿ. ಬೆಂಜಿಮನ್‌ರವರಿಗೆ ಅಲ್ಲಿನ ಡಿವಿಜನಲ್ ಕಮೀಷನರ್‌ರವರು 16.6.94ರಲ್ಲಿ ಗುಪ್ತ ಪತ್ರವೊಂದನ್ನು ಬರೆಯುತ್ತಾರೆ. ನಮ್ಮ ಕಂದಾಯ ಕಮೀಷನರ್‌ರವರು ಅತ್ಯಂತ ಪ್ರಾಮಾಣಿಕ ಮತ್ತು ದಕ್ಷ ಅಧಿಕಾರಿಗಳು. ಆ ಪತ್ರವನ್ನು ಅವರ ಹತ್ತಿರ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಅದನ್ನು ಕಂದಾಯ ಸಚಿವರು ಮತ್ತು ಮುಖ್ಯಮಂತ್ರಿಗಳ ಗಮನಕ್ಕೆ ಅವರು ತಂದಿರಲು ಸಾಧ್ಯವಿದೆಯೆಂದು ನಾನು ಭಾವಿಸುತ್ತೇನೆ. ಅದರಲ್ಲಿ ಏನು ಬರೆಯುತ್ತಾರೆಂದರೆ,

"Sub : Illegal acquisition of the land by Sri Gopinath Sandra, Minister for Housing at Amargol and Deshpandenagar in Hubli.

Ref : Report of the Deputy Commissioner, Dharwad, LED 231/94-95 dated 13-5-94

Some villagers of land submitted a representation to the Revenue Minster alleging that Housing Minister and his son Udaya Sandra have illegally acquired the lands in Hubli and requested to take necessary action against the purchasers and officers who helped them in this transaction. This was got enquired into through the Assistant Commissioner, Dharwad. The report of the Deputy Commissioner, Dharwad, is enclosed along with the connected papers for your perusal. Sri Gopinath Sandra obtained permission from the Assistant Commissioner, Dharwad to purchase agricultural land claiming that his annual income does exceed Rs. 50,000/- and intend to take up the

agriculture ನಾಲ್ಕುವರೆ ಲಕ್ಷ ರೂಪಾಯಿಗಳಿಗೆ ಭೂಮಿಯನ್ನು ಕೊಂಡುಕೊಂಡಿದ್ದಾರೆ. ಈ ಭೂಮಿಯನ್ನು ಕೊಂಡುಕೊಳ್ಳದೆ ಅದನ್ನು ಬ್ಯಾಂಕಿನಲ್ಲಿ ಇಟ್ಟಿದ್ದರೆ ಬ್ಯಾಂಕಿನ ಬಡ್ಡಿಯನ್ನೇ ಲೆಕ್ಕಕ್ಕೆ ತೆಗೆದುಕೊಂಡರೆ 12 ಪರ್ ಸೆಂಟ್‌ನಂತೆ 55-60 ಸಾವಿರವಾಗುತ್ತದೆ. Suppose $4\frac{1}{2}$ lakhs keep in the Bank and I ask them to give the interest ಎಷ್ಟು ಬರುತ್ತದೆ?

ಇವರು ಸಾಲ ಮಾಡಿ ಅದನ್ನು ಎರಡು ವರ್ಷದಲ್ಲಿ ವಾಪಸ್ಸ್ ಮಾಡಿದ್ದಾರೆ. ಇನ್ನೂ ಸಾಲ ವಿದ್ದರೆ ದಾಖಲೆಯನ್ನು ತೋರಿಸಿ ನಾಲ್ಕೂವರೆ ಲಕ್ಷವನ್ನು 8-10 ತಿಂಗಳಿನಲ್ಲಿ ರೀಪೇ ಮಾಡಬೇಕಾದರೆ ಅವರಿಗೆ ಆದಾಯ 50 ಸಾವಿರಕ್ಕಿಂತ ಮೇಲೆ ಇರಬೇಕಾಗುತ್ತದೆ. ಇದಕ್ಕಿಂತ ಮಾಹಿತಿ ಬೇರೆ ಏನು ಬೇಕು?

ಶ್ರೀ ಸಿ. ಬೈರೇಗೌಡ : ಇಪ್ಪತ್ತು ಸಾವಿರಕ್ಕಿಂತ ಜಾಸ್ತಿ ಯಾರಾದರೂ ಸಾಲವನ್ನು ತೆಗೆದುಕೊಂಡರೆ ಅದನ್ನು ಚೆಕ್‌ನ ರೂಪದಲ್ಲಿ ಮಾತ್ರ ಪಡೆಯಬೇಕಾಗುತ್ತದೆ. ಅದು ಚೆಕ್‌ನ ರೂಪದಲ್ಲಿ ಮಾತ್ರ ಇರಬೇಕಾಗುತ್ತದೆ. ಕ್ಯಾಷ್‌ನ ರೂಪದಲ್ಲಿ ಇರಬಾರದು ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

SRI R.V. DESHPANDE : He has repaid the entire loan within 8-10 months. Further the letter says.

"The A.C. granted permission without enquiry in to the facts. The applicant land had not specified which land he wanted to purchase by giving details of survey No. extent.

ಒಬ್ಬ ನಾನ್ ಅಗ್ರಿಕಲ್ಚರಿಸ್ಟ್, ಅಗ್ರಿಕಲ್ಚರಲ್ ಲ್ಯಾಂಡ್ ತೆಗೆದುಕೊಳ್ಳಬೇಕಾದರೆ he has to specify. I want to purchase this land in block, survey no. etc., ಪರ್ಮಿಷನ್ ಕೊಡಿ ಎಂದು ಹೇಳಬೇಕು. but here nothing was there.

Further it says:

"On the basis of this permission letter, Sri Gopinath Sandra purchased 30 acres 2 guntas of land in Block No. 61/A of Amargol village for Rs 4,50,000 which was registered on 6-5-1991. His name came to be entered in the record of rights through entry No. 5575 dated 17-6-1992."

ಭೂಮಿಯನ್ನು ತೆಗೆದುಕೊಂಡು ನಮ್ಮ ಹೆಸರನ್ನು ದಾಖಲು ಮಾಡಬೇಕಾದರೆ 6 ತಿಂಗಳುಗಳ ಮುಂಚೆ ಆಗುವುದಿಲ್ಲ. ಮ್ಯುಟೇಷನ್ ಮಾಡಬೇಕಾದರೆ 30 ದಿವಸಗಳ ನೋಟೀಸ್ ಕೊಡಬೇಕು. ಅಬ್ಜೆಕ್ಷನ್ ಇಲ್ಲವೆಂದು ತಿಳಿದುಕೊಂಡು ನಂತರ ಅದನ್ನು ಮಾಡಬೇಕು. ನೋಟೀಸ್ ಕೊಡಬೇಕು, ಮ್ಯಾಂಡೇಟರಿ ಪೀರಿಯಡ್ ಮುಗಿಯಬೇಕಾಗುತ್ತದೆ. ಅಂದರೆ ಯಾವ ರೀತಿ ರೆವಿನ್ಯೂ ಅಧಿಕಾರಿಗಳು ಇವರ ಅಧಿಕಾರ, ದರ್ಪಕ್ಕೆ ಹೇಗೆ ಕುಣಿಯುತ್ತಿದ್ದರು ಎಂಬುದು ಇದರಿಂದ ಸ್ಪಷ್ಟವಾಗಿ ಕಾಣುತ್ತದೆ. ಸಾಮಾನ್ಯ ಜನರಿಗೆ ಇದೇ ಪ್ರಕಾರ ನೀವು ಟ್ರೀಟ್‌ಮೆಂಟ್ ಕೊಡುವುದಕ್ಕೆ ಸಾಧ್ಯವೇನು?

"This land which is quite valuable was under valued for the evasion of stamp duty and registration fee. The District Registrar who submitted a report on 2-2-1994 stated that the value of this land in Amargol village was provisionally fixed at Rs. 49,500 per acre.

ಗೌವರ್ನ್‌ಮೆಂಟ್ ರೆಕಾರ್ಡ್ ಪ್ರಕಾರ Rs. 49,500 per acre is the value according to Government records but the price of the land was shown in the

instrument as 15,000 per acre. This is a clear case of undervaluation of the property. This the Divisional Commissioner says."

"The Sub-Registrar, Hubli, has not referred the matter to the District Registrar as required under Section 45A of the Registration Act. On the other hand, he returned the document to Sri Gopinath Sandra."

ರಿಜಿಸ್ಟ್ರಾರ್ ಇದನ್ನೂ ಎನ್‌ಕ್ವೊಯರಿ ಮಾಡಬೇಕಾಗುತ್ತದೆ. ಅಂಡರ್ ವ್ಯಾಲ್ಯೂಯೇಷನ್ ಮತ್ತೊಂದು ಅದರ ಬಗ್ಗೆ ನೋಟೀಸ್ ಕೊಡಬೇಕು. ಆದರೆ ಇಲ್ಲಿ ಏನೂ ಇಲ್ಲ. ಅಂಡರ್ ವ್ಯಾಲೂಯೇಷನ್ ಗೊತ್ತಿದ್ದರೂ ಸಬ್ ರಿಜಿಸ್ಟ್ರಾರ್ ಕೊಟ್ಟುಬಿಟ್ಟರು. Sri Gopinath Sandra obtained permission from Asst. Commissioner, Dharwad, to purchase agricultural land for bonafide purpose of cultivation. within six months from the date of purchase ie., 7-1-93 he gave 5 acres to his wife and 5 acres each to his two sons Udaya and Anil. Smt. Vidyavathi Sandra and his sons are not agriculturists nor agricultural labourers and as such they are not entitled to acquire agricultural land. This is a clear violation of Section 81(1) A of Karnataka Land Reforms. Act. Moreover the declaration was filed by Sri Gopinath Sandra that his annual income does not exceed Rs. 50,000/- but he did not explain the sources of income for the land he had purchased. The fact that valuable land was purchased, under valued and recorded in the document for Rs. 4,50,000 as agricultural income should be more than 50,000.

This the Divisional Commissioner says. Then in another transaction Mr. Udaya Sandra along with six others purchased 9 acres of land in survey No. 70/1 and 72/2 of Hulkol village. The land of this survey no. had been changed form park to residential purpose.

ಇದು ಪಾರ್ಕ್ ಇತ್ತು, ಪಾರ್ಕ್ ಇದ್ದುದ್ದನ್ನು ರೆಸಿಡೆನ್ಷಿಯಲ್ ಪರ್ಪಸ್‌ಗೆ ಎಂದು ಮಾಡಿಕೊಂಡರು.

vide Govenment order dated 21-5-1991 ಅಂದರೆ ಪಾರ್ಕ್ ಇದ್ದಂತಹ ಭೂಮಿಯನ್ನೂ ಸಹ ಇವರು ಛೇಂಜ್ ಆಫ್ ಲ್ಯಾಂಡ್ ಯೂಸ್ ಮಾಡಿಕೊಂಡರು. ಪಾರ್ಕ್, ಪ್ಲೇಗೌಂಡ್, ಗಾರ್ಡನ್ ಇವುಗಳ ಬಗ್ಗೆ ಕೆಲವು ಕಾನೂನುಗಳು ಇವೆ. ಇದೂ ಸಹ ಛೇಂಜ್ ಆಫ್ ಲ್ಯಾಂಡ್ ಯೂಸ್ ಆಗುತ್ತದೆ. ಈ ಸರ್ಕಾರದಲ್ಲಿ,

4.30 ಪಿ.ಎಂ.

"A ,show-cause notice has been issued by the Deputy Commissioner, Dharwad, for cancelling the transactions and the matter is pending with the Deputy Commissioner for enquiry, for cancellation of change of land use.

Sir, further he says ;

"prima facie there was a violation of Urban Land Ceiling Act. The Divisional Commisoner says this". "To sum up, Sri Gopinath Sandra purchased

30 acres and 2 guntas of land in Block No. 614 of Amargol Village inviolation of Karnataka Land Reforms Act, under-valuation resulting in loss of revenue to Government by way of stamp duty and registration fee. This apart, Urban Ceiling Act was violated. These facts may be brought to the notice of the Chief Minister and the Revenue Minister."

This is what he says. I don't know whether these facts have been brought to your notice or not. I think they should have because these letters have gone to the responsible Officers. According to me and you these officers are dedicated and they should have definitely brought to your notice.

Then, it says :

"The following administrative measures are proposed. The Assistant Commissioner, Dharwad, will be asked to initiate enquiry under Section 82 of the Karnataka Land Reforms Act for acquisition of agricultural land in violation of Section 79A and B of the Act.

2.As his income is more than Rs. 50,000, as he has not used the land for bonafide purpose, rightly the Divisional Commissioner has proposed that this land should be acquired back by the Government."

He has rightly proposed this. I don't know whether you have initiated action on this or not.. ಏಕೆಂದರೆ ಆ ಲೆಟರ್ ಜೂನ್‌ನಲ್ಲಿ ಬಂದಿದೆ. ಆ ಲೆಟರ್ ಬಂದನಂತರ ತಾವು ಇಮ್ಮೀಡಿಯಟ್ ಆಗಿ ಆಕ್ಷನ್ ಅನ್ನು ಅದರ ಮೇಲೆ ಇನಿಷಿಯೇಟ್ ಮಾಡಬೇಕು. ಆದರೆ ಅದು ತಮ್ಮ ಕಡೆಯಿಂದ ಆಗಿಲ್ಲ. ನಿಮಗೆ ಅವರ ಮೇಲೆ ಏನು ಪ್ರೀತಿ ವಿಶ್ವಾಸ ಇದೆಯೋ ನನಗೆ ಗೊತ್ತಿಲ್ಲ. ತಮ್ಮ ಸಲುವಾಗಿ, ತಮ್ಮ ಒಳ್ಳೆಯ ಸರ್ಕಾರ ಸಲುವಾಗಿ ನಾನು ಹೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ತಾವು ಸ್ವತಂತ್ರ ರೀತಿಯಲ್ಲಿ ಹೇಳಿಕೆಗಳನ್ನು ಕೊಡಿ. ಪ್ರಶ್ನೆ ತಮಗೆ ಗೊತ್ತಿದೆ. ನಮ್ಮ ಸರ್ಕಾರದ ಅಧಿಕಾರಿಗಳಾಗಲಿ, ಜಿಲ್ಲಾಧಿಕಾರಿಗಳಾಗಲಿ, ವಿಭಾಗಾಧಿಕಾರಿಗಳಾಗಲಿ ಇದಕ್ಕೆ ವಿವರವಾದಂಥ ತನಿಖೆಯನ್ನು ಮಾಡಿದವರು ಯಾರು? ನಮ್ಮ ಸರ್ಕಾರದ ಅಧಿಕಾರಿಗಳು, ಇದನ್ನು ಮಾಡಿದ್ದು; ಅದನ್ನು ನಾನು ಒಪ್ಪುತ್ತೇನೆ. ಅವರು ಬೇರೆ, ನಾವು ಬೇರೆ ಅಲ್ಲ.

This is part of our whole administration. ಅವರು ತನಿಖೆ ಮಾಡಿದ್ದಾರೆ. ಇದರ ಬಗ್ಗೆ ತಾವು ಏನು ಹೇಳಿದ್ದೀರಿ. ಓಪನ್‌ನೆಸ್ ಎಲ್ಲಿದೆ, ಅಥವಾ ಟ್ರಾನ್ಸ್‌ಪರೆನ್ಸಿ ಎಲ್ಲಿದೆ ಎಂದು. ಓಪನ್‌ನೆಸ್ ಅಥವಾ ಟ್ರಾನ್ಸ್‌ಪರೆನ್ಸಿ ಇಲ್ಲದಿದ್ದರೆ ಅವರು ತನಿಖೆ ಏಕೆ ಮಾಡುತ್ತಿದ್ದರು.

The very fact that we have ordered for an enquiry and it has been enquired.

ಅದನ್ನು ಎನ್‌ಕ್ವಾಯರಿ ಮಾಡಿ ಅವರ ಕರ್ತವ್ಯದ ಪ್ರಕಾರ ವರದಿ ಕೂಡ ಕೊಟ್ಟಿದ್ದಾರೆ. ವರದಿ ಮೇಲೆ ಮುಂದಿನ ಕಾರ್ಯಕ್ರಮ ನಾವೇನು ತೆಗೆದುಕೊಳ್ಳಬೇಕು ಅದರ ಪ್ರಶ್ನೆ ಇದೆ. ಮುಂದಿನ ಕಾರ್ಯಕ್ರಮ ಕೂಡ ನಾವು ತೆಗೆದುಕೊಂಡಿದ್ದೇವೆ. ಇಲ್ಲಿ ನಾವು ಸರ್ಕಾರದ ಕಡೆಯಿಂದ ಮುಚ್ಚಿಡುವಂತಹ ಕೆಲಸವನ್ನು ಮಾಡಿದ್ದೇ ಇಲ್ಲ.

Itis so open, it is so transparent.

ತಾವೇ ಆ ಡಾಕ್ಯೂಮೆಂಟ್ ಅನ್ನೇ ಕೋಟ್ ಮಾಡುತ್ತಿದ್ದಾರೆ. ಅವರು ಬೇರೆ ಸರ್ಕಾರದ ಡಾಕ್ಯೂಮೆಂಟ್ ಕೋಟ್ ಮಾಡುತ್ತಿಲ್ಲ. ನಮ್ಮ ಜಿಲ್ಲಾಧಿಕಾರಿಗಳಾಗಲಿ, ನಮ್ಮ ವಿಭಾಗಾಧಿಕಾರಿಗಳಾಗಲಿ ತನಿಖೆ ಮಾಡಿ, ಇದರಲ್ಲಿ ಮಂತ್ರಿಗಳೇ ಆಗಲಿ ಅಥವಾ ಯಾರೇ ಆಗಲಿ ಏನಾದರೂ ಆಪಾದನೆ ಬಂದರೆ ಅದನ್ನು ತನಿಖೆ ಮಾಡತಕ್ಕಂತಹ ಕರ್ತವ್ಯವನ್ನು ಸರ್ಕಾರ ನಿರ್ವಹಿಸುತ್ತದೆ. ಇದರಲ್ಲಿ ಯಾರೂ ಸಹ ಸಂಶಯ ಪಡಬೇಕಾದಂತಹ ಅವಶ್ಯಕತೆ ಇಲ್ಲ. ಇದರಲ್ಲಿ ನಾನಾ ಹಂತದ ತನಿಖೆಗಳು ಇರಬಹುದು. ನಾನಾ ಹಂತದಲ್ಲಿ ಆ ಹಂತದ ತನಿಖೆಗಳೂ ಕೂಡ ನಾವು ಯಾವುದನ್ನು ತಡೆಹಿಡಿದಿಲ್ಲ. ಅವೆಲ್ಲಾ ಸರಗವಾಗಿ ನಡೆದವು.

The law will take its own course and it has taken its course. The Government at this level or any level has not obstructed the due process of law. We have not stopped the due process of law.

ಅದನ್ನು ನಾವು ನಿಲ್ಲಿಸಲಿಲ್ಲ. You are entitled to interpret on our action. That you are absolutely at liberty but the fact of the matter is that the Government is open, transparent and allow a smooth process of law to take its own course.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅದನ್ನು ನಾನು ಒಂದು ಹಂತಕ್ಕೆ ಒಪ್ಪಿಕೊಳ್ಳುತ್ತೇನೆ. ಯಾವ ಹಂತಕ್ಕೆ ನಾನು ಒಪ್ಪಿಕೊಳ್ಳುತ್ತೇನೆ, ಇವರು ಎನ್‌ಕ್ವೈಯರಿ ಮಾಡಲಿಲ್ಲ. ಅಲ್ಲಿ ಸ್ಥಳೀಯ ಜನ ಒಂದು ಅರ್ಜಿ ಕೊಟ್ಟ ನಂತರ ಅಲ್ಲಿಯ ಸ್ಥಳೀಯ ಅಧಿಕಾರಿಗಳು ಕಂದಾಯ ಮಂತ್ರಿಯವರಿಗೆ ಒಂದು ಅರ್ಜಿ ಕೊಟ್ಟರು.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

SRI M. VEERAPPA MOILY : You see how quick how transparent Our Government is Chronological incident, I am showing to you what we have done.

ಹಿಂದಿನ ಕಂದಾಯ ಸಚಿವರಿಗೆ ಅರ್ಜಿ ಬಂದಿದ್ದು 20.10.93, ಜಿಲ್ಲಾಧಿಕಾರಿಗಳು ವಿಭಾಗಾಧಿಕಾರಿಗಳಿಗೆ ಸಲ್ಲಿಸಿದ ವರದಿ 18:05.94, ವಿಭಾಗಾಧಿಕಾರಿಗಳು ಸರ್ಕಾರಕ್ಕೆ ವರದಿ ಸಲ್ಲಿಸಿದ್ದು 16.06.94, ಮುಖ್ಯಮಂತ್ರಿಗಳು ಜರೂರಾಗಿ ಅಗತ್ಯ ಕ್ರಮವನ್ನು ತೆಗೆದುಕೊಳ್ಳಲು ಆದೇಶ 23-06-94, ಯಾವ ಹಂತದಲ್ಲಿಯೂ ಕೂಡ including me I have not stopped the process. ಅಸಿಸ್ಟೆಂಟ್ ಇನ್‌ಸ್ಪೆಕ್ಟರ್ ಜನರಲ್‌ರವರಿಂದ ಸ್ಥಳ ತನಿಖೆ ವಿಚಾರಣೆ 8ನೇ ಜುಲೈ 94. ಈ ವಿಷಯವನ್ನು ಪತ್ರಿಕೆಯಲ್ಲಿ ಬಂದಮೇಲೆ ಅಥವಾ ತಾವು ಈ ವಿಷಯವನ್ನು ಎತ್ತಿದ ಮೇಲೆ ನಾವು ಗಮನಕ್ಕೆ ತೆಗೆದುಕೊಂಡಿದ್ದಲ್ಲ. ಐಜಿಆರ್‌ರವರು ಸರ್ಕಾರಕ್ಕೆ ವರದಿ ಸಲ್ಲಿಸಿದ್ದು 12.07.94. ಉಣಕಲ್ ಗ್ರಾಮದ ಆಸ್ತಿ ಭೂಮಿತಿ ಕಾಯಿದೆ ಬಾಹಿರವಾಗಿ ಖರೀದಿಸಿದ ಬಗ್ಗೆ ಮತ್ತು ಶ್ರೇಷ್ಠ ನ್ಯಾಯಾಲಯದ ತಡೆ ಆಜ್ಞೆ ಇರುವ ಬಗ್ಗೆ ಸಲ್ಲಿಸಿದ ವರದಿ 26.08.94. ಶ್ರೀ ಸಾಂಡ್ರಾರವರು ಖರೀದಿಸಿದ ಪತ್ರ ರಿಜಿಸ್ಟರ್ ಆದದ್ದು 08.05.92 ಆಗ ಅವರು ಕೇವಲ ಶಾಸಕರು ಮಾತ್ರ; ಮಂತ್ರಿಗಳಾಗಿರಲಿಲ್ಲ. We must also bring to the notice of the House that he was not a Minister; he was only a legislator at that time....

ಪತ್ನಿ ಮತ್ತು ಪುತ್ರಿಗೆ ಜಮೀನು ಕೊಟ್ಟಿದ್ದು 07.01.93. This is the transaction. If you can find fault with any vaccum, any gap anywhere you are entitled to interpret and accuse us, charge use. You can do it but as far as the Government is concerned.

ಕನ್ನಡಿಯಲ್ಲಿ ಎದುರುಗಡೆ ನೋಡಿ ಭೂತಗನ್ನಡಿಯಲ್ಲಿ ನೋಡಿದರೂ ಕೂಡ there is absolute even in thinness, the transparency and openess as far as Government is concerned..

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಈ ಕ್ರಮ ಅಲ್ಲ; ಇದು ಒಂದು ಭಾಗ ಆಯಿತು ಅಷ್ಟೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಕಾನೂನು ಅಂದರೆ, ಭೂ ಮಸೂದೆಯ ಕಾನೂನು, ಅರ್ಬನ್ ಸೀಲಿಂಗ್ ಆಕ್ಟ್; ದೇಶಪಾಂಡೆಯವರು ಅಥವಾ ಅವರ ಹಿಂದೆ ಯಾರೆಲ್ಲಾ ಇದ್ದಾರೆ ಅದರ ಕ್ರಮ ಅಲ್ಲ. The Government has got Land Revenue Act. The Government has to be governed by the law not by a accusation, charges or a statement made by anyone...

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ನೇರವಾಗಿ ಹೇಳಲಿಲ್ಲ ಅಂದರೂ ಸಹ ಒಂದು ಆಪಾದನೆ ನಮ್ಮ ಮೇಲೆ ಮಾಡಿದರು. ನಮ್ಮ ಸರ್ಕಾರ ಇದ್ದಾಗ ನಾವು ಕೆಲವು ಉಲ್ಲಂಘನೆ ಮಾಡಿದ್ದೇವೆ ಎಂದು; ತಮಗೆ 5 ವರ್ಷಗಳ ಕಾಲ ಅಧಿಕಾರ ಇರುವುದರಿಂದ ಕ್ರಮ ತೆಗೆದುಕೊಳ್ಳಬೇಕಾಗಿತ್ತು.

ಶ್ರೀ ವೀರಪ್ಪ ಮೊಯಿಲಿ : ತಾವು ಅಧಿಕಾರದಲ್ಲಿದ್ದಿರಿ, ನಾವೆಲ್ಲಾ ವಿಧಾನಸೌಧಕ್ಕೆ ಬಂದ ಮೇಲೆ ನೀವು ಎಚ್ಚರರಾಗುತ್ತಿದ್ದಿರಿ, ಆದರೆ ಈಗ ಸರ್ಕಾರ ಸದಾ ಜಾಗ್ರತೆಯಾಗಿ, ಎಚ್ಚರಿಕೆಯಾಗಿಯೇ ಇತ್ತು ಎಂಬುದಕ್ಕೆ ಈ ಪ್ರಕರಣದಷ್ಟು ದೊಡ್ಡ ಸಾಕ್ಷಿ ಜಗತ್ತಿನಲ್ಲಿ ಕರ್ನಾಟಕದಲ್ಲಿ ಇರಬೇಕಾಯಿತು.

ಶ್ರೀ ಆರ್.ವಿ. ದೇಶಪಾಂಡೆ : ಈಗ ಮಾನ್ಯ ಮುಖ್ಯಮಂತ್ರಿಯವರು ಒಂದು ವಿಚಾರ ಹೇಳಿದರು. ನಮ್ಮ ಸರ್ಕಾರ ಇದ್ದಾಗ ಹಲವಾರು ಇಂಥ ಪ್ರಕರಣಗಳು ನಡೆದಿವೆ ಎಂದು ಪರೋಕ್ಷವಾಗಿ ಹೇಳಿದರು. ನಾನು ನೇರವಾಗಿ ಅವರನ್ನು ಕೇಳುತ್ತಿದ್ದೇನೆ 89 ರಿಂದ ಇವತ್ತಿನವರೆಗೆ ನಿಮ್ಮ ಕೈಯಲ್ಲಿ ಅಧಿಕಾರ ಇದೆ; ನಿಮ್ಮ ಸರ್ಕಾರದಲ್ಲಿ ಇಂತಹ ತಪ್ಪು ಕೆಲಸ ಆಗಿದ್ದರೆ ನಾವೇನೂ ಕ್ರಮವನ್ನು ತೆಗೆದುಕೊಳ್ಳಬೇಡಿ ಎಂದು ನಿಮಗೆ ಹೇಳಿದ್ದೇವೇನು? ಹಾಗೆ ಹೇಳಿದ್ದರೆ ಆ ಮಾತು ಯಾರು ಒಪ್ಪಿಕೊಳ್ಳುವುದಿಲ್ಲ. ನಿಮ್ಮ ಕೈಯಲ್ಲಿ ಅಧಿಕಾರ ಇದ್ದಾಗ, ರಾಜ್ಯದ ಮುಖ್ಯಮಂತ್ರಿಗಳು ನೀವಾಗಿದ್ದಾಗ, ಕಡತಗಳು ನಿಮ್ಮ ಕೈಯಲ್ಲಿದ್ದಾಗ, ತಮಗೆ ಇನ್ನೂ ಮೂರು ತಿಂಗಳು ಸಮಯ ಇದೆ; ಆ ಕ್ರಮವನ್ನು ಇವತ್ತೇ ತೆಗೆದುಕೊಳ್ಳಿ. ಆದರೆ, ಮಾನ್ಯ ಮುಖ್ಯಮಂತ್ರಿಗಳೇ, ತಾವು ಕ್ರಾನೊಲಾಜಿಕಲ್ ಆರ್ಡರ್‌ನಲ್ಲಿ ಹೇಳಿದಿರಿ. ಏನು ಸರ್ಕಾರ ಮಾಡಿತು ಎಂದು. ಸಂತೋಷ. ಅದರ ಪ್ರಶ್ನೆ ಏನಿದೆ ಯಾವ ಎಂಎಲ್‌ಎ ಇದನ್ನು ಉಲ್ಲಂಘನೆ ಮಾಡಿದ, ಆತನ ಮೇಲೆ ಏನು ಕ್ರಮ ತೆಗೆದುಕೊಂಡಿರಿ? ಆತನಿಗೆ ಪ್ರಮೋಷನ್ ಕೊಟ್ಟು ಮಂತ್ರಿ ಮಾಡಿದಿರಿ. ಈ ರಾಜ್ಯದ ಒಬ್ಬ ಸಾಮಾನ್ಯ ಪ್ರಜೆ ಈ ರೀತಿ ಉಲ್ಲಂಘನೆ ಮಾಡಿದರೆ ಇದೇ ಮಾಡುತ್ತೀರೇನು ಹೇಳಿ?

ಶ್ರೀ ವೀರಪ್ಪ ಮೊಯಿಲಿ : ಈಗ ನಾವು, including you or anybody, ನಾವು ಅದನ್ನೆಲ್ಲಾ ತೆಗೆದುಕೊಂಡರೆ, many many people may be disqualified. ಅದಕ್ಕೂ ಬೇಕಾ ನಿಮಗೆ ಚರಿತ್ರೆ? You want all those things? I am telling you.

ವಸ್ತು ಸ್ಥಿತಿಯ ಪ್ರಕಾರ ಹೋಗೋಣ. As a Minister, show me one instance where as a Minister, if there is evidence to show and demonstrate that he has misused his office as a Minister either in his portfolio or otherwise, you give me one instance, then you see. If I don't do that, you question my propriety and bonafides..

ಅವರು ಏನು ಕ್ರಮ ತೆಗೆದುಕೊಳ್ಳಬೇಕೋ ಅವರು ತೆಗೆದುಕೊಳ್ಳುತ್ತಾರೆ. ಅದೇ ರೀತಿ ನಾನು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ನಾನು ತೆಗೆದುಕೊಳ್ಳುತ್ತೇನೆ. If he has misused his Office as a Minister to purchase the land, you bring it to my notice.

ಆದರೆ ಬಹಳ ಎವಿಡೆನ್ಸ್‌ನ್ನು ಕೊಡಬೇಡಿ.

ಅವರು ಹುಬ್ಬಳ್ಳಿಯಲ್ಲಿ ಹುಟ್ಟಿದಾಗ ಇದು ಮಾಡಿದರು; ಅಥವಾ ಮದುವೆ ಆದಾಗ ಇದು ಮಾಡಿದರು, ಅಥವಾ ಅಜ್ಜ ಆದಾಗ ಇದು ಮಾಡಿದರು ಎಂಬ ಚರಿತ್ರೆ ಇಲ್ಲಿ ಬೇಕಾಗಿಲ್ಲ. As a Minister if there is one single iota of evidence to demonstrate that he has misused the office, then I will come into the picture. ಇದೆಲ್ಲಾ ಮಾಡಿದರೆ, I have to investigate;

ಯಾರ್‍ಯಾರು ಏನೇನು ಮಾಡಿದರೆಂದು ಎಲ್ಲವನ್ನೂ ಭೂತಗನ್ನಡಿ ಇಟ್ಟುಕೊಂಡು ನೋಡುತ್ತಾ ಹೋಗುವುದಾದರೆ perhaps, we are non-plusing ourselves totally. Let us not do that. ಇಂಥ ಪೋಸ್ಟ್‌ಮಾರ್ಟಂ ಬೇಡ.

ಶ್ರೀ ಆರ್.ವಿ. ದೇಶಪಾಂಡೆ : ನೀವು ಅವರನ್ನು ಪ್ರೊಟೆಕ್ಷನ್ ಮಾಡಬೇಕೆಂದು ಇದೆಯೇ? ನಾನು ಉತ್ತರ ಕೊಡುವುದಕ್ಕೆ ಅಥವಾ ಮಾತನಾಡುವುದಕ್ಕೆ ಏತಕ್ಕೆ ಅವಕಾಶ ಕೊಡುತ್ತಿಲ್ಲ. Allow me to reply.

(INTERRUPTIONS)

SRI M. VEERAPPA MOILY : If I wanted to protect, I can protect anybody. I need not protect anybody. Any person mistake whether he is a legislator or a minister or any body committing, under law, is equal. This is a Government which wants to treat everybody equal and we would not like to protect anybody and it is not our business also. It I wanted to protect I need not have made all these enquiries, obtained the order and place it. I have no moral authority in that case. Now I have every moral authority to stand in the earth keeping head above shoulders and say that the Government has not obstructed the due process.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಹೌಸಿಂಗ್ ಮಂತ್ರಿಗಳಿಗೆ ಮಾನ್ಯ ಮಂತ್ರಿಗಳು ರಕ್ಷಣೆಯನ್ನು ಕೊಡುವುದಾದರೆ ನಾನು ಇಲ್ಲಿ ಏನು ಮಾಡುವುದಕ್ಕಾಗುತ್ತದೆ? ನಾನು ಒತ್ತಾಯ ಮಾಡಬಹುದು, ಇಲ್ಲವೇ ಧರಣಿ ಮಾಡಬಹುದು, ಅಥವಾ ಹೊರಗೆ ಹೋಗಬಹುದು; ಇವರು ಅವರನ್ನು ಇನ್ನೆಷ್ಟು ದಿವಸ ರಕ್ಷಣೆ ಮಾಡುತ್ತಾರೆ, ಇನ್ನು 3 ತಿಂಗಳು ಮಾಡಬಹುದು; ಚುನಾವಣೆಗೆ ಹೋದಾಗ ಅವರು ಉತ್ತರವನ್ನು ಕೊಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಏನು ಹೇಳಿದರೆಂದರೆ ಎಂ.ಎಲ್.ಎ.ಗಳನ್ನು ಡಿಗ್ ಮಾಡುತ್ತಾ ಹೋದರೆ ಬಹಳ ಕಷ್ಟವಾಗಬಹುದು ಎಂದು. ತಾವು ಮಾಡಿ. I offer myself

for investigation. I will start from myself; I am a wealth tax payer and I am an income-tax payer. I am the first and I start from first.

ಒಬ್ಬ ಎಂ.ಎಲ್.ಎ. ತಪ್ಪು ಮಾಡಿದ್ದಾನೆ, ಇವನನ್ನು ಡಿಗ್ ಮಾಡಿದರೆ ಇನ್ನೊಬ್ಬ ಎಂ.ಎಲ್.ಎ.ಅನ್ನು ತೆಗೆಯಬೇಕಾಗುತ್ತದೆಂದು ಹೇಳುತ್ತಿದ್ದಾರೆ. ಆದರೆ ಅದು ಅಲ್ಲ.

(INTERRUPTIONS)

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, ಈ ಸದನದ ಎಲ್ಲ ಶಾಸಕರಮೇಲೂ ಮಾನ್ಯ ಮುಖ್ಯಮಂತ್ರಿಗಳು ಆಪಾದನೆ ಮಾಡಿದಂತಾಗಿದೆ. ಇದನ್ನು ಹೇಳುತ್ತಾ ಹೋದರೆ, ಎಲ್ಲರೂ ಈ ರೀತಿ ಕಾನೂನು ಬಾಹಿರ ಕೆಲಸವನ್ನು ಮಾಡಿದ್ದಾರೆ ಎಂದು ಅರ್ಥಬರುತ್ತದೆ. ಆದ್ದರಿಂದ ಯಾರ್‍ಯಾರು ಇಂಥಹ ಕಾನೂನು ಬಾಹಿರ ಕೆಲಸವನ್ನು ಮಾಡಿದ್ದಾರೆ ಅವರೆಲ್ಲರ ವಿರುದ್ಧ ದಯವಿಟ್ಟು ಎನ್‌ಕ್ವೈರಿ ಮಾಡಿ ಎಂದು ನಾವು ಹೇಳುತ್ತೇವೆ. ತಪ್ಪಿದ್ದರೆ ಮಾಡಿ. ಆದರೆ ಎಲ್ಲರ ಮೇಲೂ ಮಾಡಬೇಕಾಗುತ್ತದೆಂಬ ಬೆದರಿಕೆ ಹಾಕುವುದು ಬೇಡ. ಶಾಸಕರ ಗೌರವಕ್ಕೆ ಧಕ್ಕೆ ತರತಕ್ಕ ಕೆಲಸವನ್ನು ಮಾಡುತ್ತಿದ್ದೀರಿ. ಹಿಂದೆ ಜಾಫರ್ ಷರೀಫ್‌ರವರ ಬಗ್ಗೆ ಆಪಾದನೆ ಬಂದಾಗ ನೀವು ಏನು ಮಾಡಿದಿರಿ? ನಾವು ಬಹಳ ಪ್ರಾಮಾಣಿಕರೆಂದು ನೀವು ಹೇಳಿಕೊಳ್ಳುತ್ತಿದ್ದೀರಿ. ಕೇಂದ್ರ ಸರ್ಕಾರದಲ್ಲಿರುವ ಜಾಫರ್ ಷರೀಫ್‌ರ ವಿರುದ್ಧ ಏನು ಮಾಡಿದಿರಿ? ಎಲ್ಲವನ್ನೂ ಮುಚ್ಚಿಹಾಕಲಿಲ್ಲವೇ? ನಾವು ಬಹಳ ಪ್ರಾಮಾಣಿಕ ಸರ್ಕಾರ ಎಂದು ನೀವು ಹೇಳಿಕೊಳ್ಳುತ್ತಿದ್ದೀರಿ? ಇದು ಇಡೀ ರಾಜ್ಯದ ಜನತೆಗೆ ಗೊತ್ತಿರತಕ್ಕದ್ದು. ಈ ರಾಜ್ಯದ ಮುಖ್ಯ ಮಂತ್ರಿಗಳಾಗಿ ಕೇಂದ್ರ ಮಂತ್ರಿ ಜಾಫರ್ ಷರೀಫ್‌ರವರು ಮಾಡಿದಂಥ ಕೃತ್ಯವನ್ನು ನೀವು ಮುಚ್ಚಿ ಹಾಕಿಲ್ಲವೇ?

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ನೀವು ಮಾಡಿರುವುದನ್ನು ಮುಚ್ಚಹಾಕಿಕೊಳ್ಳಲು ಈ ರೀತಿ ಹೇಳಿದರೆ ಜನತೆ ಇದನ್ನು ಒಪ್ಪುವುದಿಲ್ಲ. ಮಾನ್ಯ ಸಾಂಡ್ರಾರವರ ಕ್ಷೇತ್ರಕ್ಕೆ ಮುಖ್ಯ ಮಂತ್ರಿಗಳು ಏನಾದರೂ ಹೇಳುವುದಕ್ಕೆ ಹೋದರೆ ಅದನ್ನು ಜನತೆ ಒಪ್ಪುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಅವರಮೇಲೆ ಒಂದು ಛಾರ್ಜ್ ಇದೆ. ಅದೇನೆಂದರೆ ಅಂದಿನ ಮುಖ್ಯ ಮಂತ್ರಿಯಾಗಿದ್ದ ಮಾನ್ಯ ಬೊಮ್ಮಾಯಿಯವರನ್ನು ಸೋಲಿಸಿದಂಥ ಒಂದು ತಪ್ಪು ಅವರ ಮೇಲಿದೆ. ಅದರ ವಿರುದ್ಧ ಅವರ ಮೇಲೆ ಏನು ಮಾಡಬೇಕೋ ಅದನ್ನು ಅವರು ಮಾಡಲಿ.

SRI R.V. DESHPANDE : With all respects to Moilyji, you should not go to this low level.

ವೀರೇಂದ್ರ ಪಾಟೀಲರು ಡಿಫೀಟ್ ಆಗಿದ್ದಾರೆ, ಬೊಮ್ಮಾಯಿಯವರು ಡಿಫೀಟ್ ಆಗಿದ್ದಾರೆ, ನಾನೂ ಕೂಡ ಡಿಫೀಟ್ ಆಗಿದ್ದೇನೆ. ಎಲ್ಲರೂ ಡಿಫೀಟ್ ಆಗಿದ್ದಾರೆ. ಅದರಲ್ಲೇನು ವಿಶೇಷವಿದೆ? ಇದು ಸಾಂಡ್ರಾಗೆ ಗೊತ್ತಿಲ್ಲವೆ? ಇದು ಯಾರಿಗೆ ಗೊತ್ತಿಲ್ಲ? ಸಾಂಡ್ರಾ ಸೋತಿಲ್ಲವೇ? Was he not defeated by Bommai?

SRI M. VEERAPPA MOILY : I am sorry. You should not say that I gone low level. of all the persons why should you pick up sandra? All this has happened when he was an MLA.

ಎಲ್ಲ ಎಂ.ಎಲ್.ಎ.ಗಳ ಚರಿತ್ರೆಯನ್ನು ತೆಗೆಯುವುದಕ್ಕೆ ನಿಮಗೆ ಯಾರು ವಕಾಲತ್ತನ್ನು ಕೊಟ್ಟಿದ್ದಾರೆ?

ಶ್ರೀ ಆರ್.ವಿ. ದೇಶಪಾಂಡೆ : ಹಾಗಾದರೆ ಯಾವ ಎಂ.ಎಲ್.ಎ.ಗಳ ಚರಿತ್ರೆಯನ್ನೂ ತೆಗೆಯಬಾರದೆಂದು ಘೋಷಣೆ ಮಾಡಿಬಿಡಿ.

(INTERRUPTIONS)

SRI M. VEERAPPA MOILY : Don't do all these things. It is too bad. You are also an MLA. You are also in public service. You must also have purchased certain lands and you must have also built a house. After all, nobody is a 'Sanyasi' here. Whether MLAs are deprived from purchasing lands? Is it the law of the land?

ನಮ್ಮ ನಮ್ಮ ಸಂಪಾದನೆಯಲ್ಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ನಮಗೆ ಹಕ್ಕಿದೆ. ನಮ್ಮ ನಮ್ಮ ಸಂಪಾದನೆಯಲ್ಲಿ ಜಾಗವನ್ನು ತೆಗೆದುಕೊಳ್ಳುವುದಕ್ಕೆ ಹಕ್ಕಿದೆ. If any authority has not properly acted upon under the Land reforms Act and rules thereon, the Government is here to take care of it. We are going to punish them, we are not going to shield anybody here. If Mr. Sandra has misused his Office as an MLA or as a Minister, if there is any evidence, you kindly come out; But, the word used by you that I have gone to a low level, is not correct.

(INTERRUPTIONS)

SRI R.V. DESHPANDE : You should not take out the name of Mr. Bommai. He is not a member of this House.

(ಗೊಂದಲ)

SRI M. VEERAPPA MOILY : Mr. Deshpande, you have no business to say that I have gone to a low level. That means to say that your tongue is low. You have to use some decency. What is the kind of low level I have done it? When I initiate a law. under the law I have directed what it is, I have said, that and I have also said casually and incidentally. It is a political wit. I have nothing about Bommai

(INTERRUPTIONS)

You can come to conclusions about me and my going to low level after going through records, I have never attributed anything about Mr. Bommai. But, politically I have said You can come to conclusion, politically I have told. After all, I am entitled to speak politically.

ಶ್ರೀ ಸಿ. ಬೈರೇಗೌಡ : ನೀವು ಯಾವುದನ್ನು ಯಾವುದಕ್ಕೋ ಹೇಳುತ್ತಿದ್ದೀರಿ.

SRI M. VEERAPPA MOILY : Is it also a charge contested and defeated Mr. Bommai, ಅಲ್ಲಿ ಮಾಲಾಫೈಡೀಸ್ ಎಲ್ಲಿಗೆ? ತಾವು ತಪ್ಪು ತಿಳಿದುಕೊಳ್ಳುವಂಥಾದ್ದು

ಏನಿದೆ? ನಾನು ಲೋಲೆವೆಲ್‌ಗೆ ಎಲ್ಲಿ ಹೋಗತಕ್ಕ ಪ್ರಶ್ನೆ ಬರುತ್ತದೆ? Mr. Deshpande and the Leader of the opposition, we keep you in a very high esteem and I also equally expect you to keep this office in a high esteem. Suddenly if you say, you are going to a low level.

ಎಂದು ಹೇಳಿದರೆ ಕೀಳು ನನಗೆ ಆಗುವುದಿಲ್ಲ. ನಾನು ಇನ್ನೂ ಎತ್ತರಕ್ಕೆ ಹೋಗುತ್ತೇನೆ. ಅದು ನಿಮಗೆ ಕೀಳಾಗುತ್ತದೆ. You don't use that word. I have never used such words against the leader of the opposition. You must be chooay. I hold you in high esteem. Similarly I also expect the same respect here. Supposing if you want politically to use this occasion and politically deal with me also then you must also be prepared to take it back in the same word and in the same coin. After all we are political people. We forget for a while that I am Moily and you are Deshpande. But let us not forget about this. I am first Moily and then Chief Minister and you are first Deshpande and then the leader of the Opposition. Let us maintain that kind of a minimum decency and culture while exchanging views. Don't say that I am going to a low level. What is that low level? If I have gone to low level I will apologise. I am the first man to apologise. As a political wit I said; Is it also a charge against him that he contested against Mr. Bommai and defeated him.

ಅದಕ್ಕಿಂತ ಒಂದು ಶಬ್ದ ಹೆಚ್ಚು ಕಡಿಮೆ ಇದ್ದರೆ, I will withdraw that word and apologise to you. Out of anger you must have used it. Let us forget about it ಆದರೆ ಅದನ್ನೇ ಪ್ರತಿಪಾದನೆ ಮಾಡುವುದಕ್ಕೆ ಹೋಗಬೇಡಿ. ನಾನು ಹೇಳಿದ್ದೇ ಸರಿ ಎಂದು ನೀವು 25 ಸಾರಿ ತಾವು ಹೇಳುವುದಕ್ಕೆ ಹೋದರೆ then you will have to receive something back from me and from all of us. If that is the trend of discussion if you want we don't mind.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಮುಖ್ಯಮಂತ್ರಿಗಳು ಏತಕ್ಕೆ ಇಷ್ಟು ಎಮೋಷನಲ್ ಆಗಿದ್ದಾರೋ ಗೊತ್ತಿಲ್ಲ. Did I talk anything when you spoke? I am very happy that you said about Veerappa Moily now at least. You have realised after two months that he is rational. At least I am happy about it.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ.....

ಶ್ರೀ ಸಿ. ಬೈರೇಗೌಡ : ಭೂತ ಗೀತೆಯನ್ನು ನುಡಿಯಿತು ಇಂದು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು

(ಗೊಂದಲ)

I will not lose my patience. You try to say ten times, I will not lose my patience.

ಈಗ ಮಾನ್ಯ ಮುಖ್ಯಮಂತ್ರಿಗಳು ಬಹಳ ಎಮೋಷನ್ ಆದರು. ಅವರು ಹೇಳಿದರು ನಾನು ಲೋ ಲೆವೆಲ್‌ಗೆ ಹೋದೆ ಎಂದು ತಾವು ಚಾರ್ಜ್ ಮಾಡಿದಿರಿ ಎಂದು.

I have highest respect for the chair you sit. You might have seen how I am functioning. Please understand this. But, one thing you should know.

ತಾವು ಏನು ಹೇಳಿದಿರಿ?

The only charge against Mr. Sandraji is that he defeated Mr. Bommai. This was not in good taste. Because, it gives different meaning, that only because he defeated Mr. Bommai, we are behind him. Please understand this.

ನಾನು ಡಿಬೇಟ್ ಓಪನ್ ಮಾಡುವಾಗ ಹೇಳಿದ್ದೆ

I have nothing against him. Individual personal cases, I do not agree to be discussed. But, people in responsible positions. ಅವರು ಎಂ.ಎಲ್.ಎ ಆಗಲಿ ಮಿನಿಸ್ಟರ್ ಆಗಲಿ ಅವರು ಕಾಯಿದೆ ಬ್ರೀಚ್ ಮಾಡಿದರೆ ಹೇಗೆ? ನಾಳೆ ನಾಡಿನ ಜನರಿಗೆ ಏನು ಹೇಳುತ್ತೀರಿ? ಯಾವ ಉಪದೇಶ ಮಾಡುವ ಅಧಿಕಾರ ನಿಮಗಿದೆ? ಈ ವಿಚಾರವನ್ನು ನಾನು ಹೇಳಿ ನಂತರ ಆ ಮಾತು ಹೇಳಿದೆ. I having nothing personal against him.

ತಾವು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದಿರಿ. ಸಂತೋಷ ಇನ್‌ಸ್ಪೆಕ್ಟರ್ ಜನರಲ್ ಆಫ್ ವ್ಯಾಲ್ಯುಯೇಷನ್‌ಗೆ ಹೇಳಬಹುದು. ಪ್ರಶ್ನೆ ಏನು ಬರುತ್ತದೆ? ತಾವು ಒಂದು ಮಾತು ಹೇಳಿದಿರಿ. ಎಂ.ಎಲ್.ಎ.ಗಳ ಬಗ್ಗೆ ಡಿಗ್ ಮಾಡಿದರೆ ಬಹಳ ಕಷ್ಟವಾಗುತ್ತದೆ ಎಂದು. ನಾನು, ನೀವು ಎಲ್ಲಾ ಬಹಳ ಶಾಸಕರು ಆಸ್ತಿ ಮಾಡಿರಬಹುದು. ಮನೆ ಮಾಡಿರಬಹುದು. ಹೊಲ ಮಾಡಿರಬಹುದು.

But they should do it, subject to the law of this land. If anybody has done contrary to the Law of this land, he may be MLA, he may be Minister, he may be Chief Minister, he cannot be pardoned. I have offered myself as the first person for investigation. You investigate.

ಈಗ ಪ್ರಶ್ನೆ ಏನು ಮಾನ್ಯ ಅಧ್ಯಕ್ಷರೇ ಅಂದರೆ ಒಬ್ಬ ಎಂ.ಎಲ್.ಎ ಇದ್ದಾಗ ಅವರು ಮಾಡಿದ್ದಾರೆ, ಮಿನಿಸ್ಟರ್ ಆದಾಗ ಹೇಳಿದಿರಿ ಅಂದರೆ ನಾನು ಏನು ಉತ್ತರ ಕೊಡುವುದು? ನಾನೇನು ಹೇಳುತ್ತಿದ್ದೇನೆಂದರೆ ಒಬ್ಬ ಎಂ.ಎಲ್.ಎ ಇದ್ದಾಗ ಮಾಡಿದರೆ ಇಂಥಹ ಜನ ನಿಮ್ಮ ಕ್ಯಾಬಿನೆಟ್‌ನಲ್ಲಿ ಇರುವುದಕ್ಕೆ ಅರ್ಹತೆ ಇದೆಯೇ ವಿಚಾರ ಮಾಡಿ. Please understand this important point. ನಾನು ಯಾರ ಮೇಲೆ ಆಪಾದನೆ ಮಾಡುತ್ತಿಲ್ಲ. I have nothing against Mr. Sandra also.

ಆದರೆ ಪ್ರಶ್ನೆ ಏನಿದೆ? ಹಲವಾರು ಕಾಯಿದೆಗಳು ಕಾಂಟ್ರವೆನ್‌ಷನ್ ಆಗಿದೆ. ಲ್ಯಾಂಡ್ ರಿಫಾರ್ಮ್ಸ್ ಲ್ಯಾಂಡ್ ರೆವಿನ್ಯೂ ಅರ್ಬನ್ ಲ್ಯಾಂಡ್‌ಸೀಲಿಂಗ್ ಆಕ್ಟ್ ಇದೆಲ್ಲಾ ಕಾಂಟ್ರವೆನ್‌ಷನ್ ಆದಾಗ ಒಂದು ವೇಳೆ ನಾನು ಇದನ್ನು ಮಾನ್ಯ ಸದನದ ಗಮನಕ್ಕೆ ತರಲಿಲ್ಲ ಎಂದರೆ ಏನಾಗುತ್ತದೆ? ಕರ್ತವ್ಯಚ್ಯುತಿ ಆಗುವುದಿಲ್ಲವೇ? ಇದನ್ನು ಮಾನ್ಯ ಮುಖ್ಯಮಂತ್ರಿಗಳು ತಿಳಿದುಕೊಳ್ಳಬೇಕು. ಅವರೂ ಇಲ್ಲಿ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ಅವರು ಯಾವರೀತಿ ಆಪಾದನೆ ಮಾಡುತ್ತಿದ್ದರು ಎಂಬುದು ನಮಗೆ ಗೊತ್ತಿದೆ. ಎಲ್ಲಿ ಹುರುಳು ಇದ್ದಿಲ್ಲ ಅಲ್ಲಿ ಹುರುಳು ತಯಾರು ಮಾಡುತ್ತಿದ್ದರು ಅವರು. ನಾವು ಇವತ್ತು ಸತ್ಯವಾಗಿ ಆಪಾದನೆ ಮಾಡಿದರೆ ಅವರಿಗೆ ಕಟು ಆಗುತ್ತದೆ. ಅವರ ಮೇಲೆ ನಿಮಗೆ ಪ್ರೀತಿ ಇರಬಹುದು. ನಮ್ಮದೇನೂ ತಕರಾರಿಲ್ಲ. ನಮ್ಮ ಕರ್ತವ್ಯ ನಾವು ಮಾಡುತ್ತೇವೆ. ಮುಖ್ಯಮಂತ್ರಿಯವರಿಗೆ ಅಧಿಕಾರ ಇದೆ. ಅವರು ಏನು ಮಾಡಬೇಕೋ ಅದನ್ನು ಮಾಡಬೇಕಾಗುತ್ತದೆ. ಮುಂದೆ

ಏನಾಗುತ್ತದೆ ಎಂಬುದನ್ನು ಜನರಿಗೆ ಬಿಡಬೇಕಾಗುತ್ತದೆ. ಆದರೆ ಪ್ರಶ್ನೆ ಏನೆಂದರೆ, ಮಾನ್ಯ ಅಧ್ಯಕ್ಷರೆ, ಡಿವಿಷನಲ್ ಕಮಿಷನರ್ ತಮ್ಮ ವರದಿಯಲ್ಲಿ

"Assistant Commissioner, Dharwad will be asked to initiate action under Section 82 of Karnataka Land Reforms Act for acquisition of agricultural land in violation of Section 71A ಎಂದು ಹೇಳಿದ್ದಾರೆ. ಏನು ಮಾಡಿದ್ದೀರಿ ಕ್ರಮ? ಕ್ರಮ ತೆಗೆದುಕೊಂಡಿರುವುದು ಹೇಳಿದ್ದೀರಿ. ಡಿವಿಷನಲ್ ಕಮಿಷನರ್ ಕ್ಲಿಯರ್ ಆಗಿ ಹೇಳಿದ್ದಾರೆ. "This land has been taken over to the Government ಎಂದು ಹೇಳಿದ್ದಾರೆ. ಏನು ಕ್ರಮ ತೆಗೆದುಕೊಂಡಿದ್ದೀರಿ?

ಸುಮ್ಮನೆ ಯಾರೋ ಇಬ್ಬರು ಸಬ್-ರಿಜಿಸ್ಟ್ರಾರ್ ಸಸ್ಪೆಂಡ್ ಮಾಡಿದ್ದೀರಿ. ಸಬ್-ರಿಜಿಸ್ಟ್ರಾರ್ ಸಸ್ಪೆಂಡ್ ಮಾಡಿದ ನಂತರ ಮಾನ್ಯ ವಸತಿ ಸಚಿವರು ಸ್ಟೇಟ್‌ಮೆಂಟ್ ಕೊಟ್ಟರು. ಸಬ್- ರಿಜಿಸ್ಟ್ರಾರ್ ಅವರನ್ನು ಸಸ್ಪೆಂಡ್ ಮಾಡಿದ್ದು ತಪ್ಪು ಎಂದು ಹೇಳಿದರು. ಅಂದರೆ Is it not Mr. Sandra, Hon'ble Housing Minister, helping these people? When the Government took action against two Sub-registrars, the Hon'ble Housing Minister, said, action taken was not correct.

ಇದಕ್ಕೆ ಏನು ಉತ್ತರ ಹೇಳುತ್ತೀರಿ? ಲ್ಯಾಂಡ್ ಅಕ್ವಿಸಿಷನ್ ಮಾಡಿ ಇಷ್ಟುಹೊತ್ತಿಗೆ ಸರ್ಕಾರ ಕ್ರಮ ತೆಗೆದುಕೊಳ್ಳಬಹುದಾಗಿತ್ತು. ಅದರ ಬಗ್ಗೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ? ಇದರ ಬಗ್ಗೆ ನಿಮ್ಮ ಉತ್ತರ ಏನು?

5.00 ಪಿ.ಎಂ

ಪುನಃ ಹೇಳುತ್ತಾರೆ The inspector General of Stamps may be asked to initiate action under the Karnataka Stamps Act and recover the deficit stamp duty.

ಎಷ್ಟು ವಸೂಲಿ ಮಾಡಿದ್ದೀರಿ ಹಣ? ದಿನಾಂಕ 16-6-1994ರಲ್ಲಿ ಲೆಟರ್ ಬಂದಿದೆ ಎರಡೂವರೆ ತಿಂಗಳಾಯಿತು. ಇವತ್ತು ಕನಿಷ್ಠ 15 ಪರ್ಸೆಂಟ್ ಅಂದರೂ 15 ಲಕ್ಷಕ್ಕೆ 3 ಲಕ್ಷ, . 3 ಲಕ್ಷ ಎರಡು ಭಾರಿ ಟ್ರಾನ್ಸ್‌ಸ್ಯಾಕ್ಷನ್ ಮಾಡಿದರೂ 6 ಲಕ್ಷ ಹಣ ಸರ್ಕಾರಕ್ಕೆ ಬರಬೇಕು ಅದರಲ್ಲಿ ಎಷ್ಟು ವಸೂಲಿ ಮಾಡಿದ್ದೀರಿ? ಭೂಮಿಯನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಿಲ್ಲ. ವಿಭಾಗಾಧಿಕಾರಿಗಳ ರೆಕಮೆಂಡೇಷನ್ ಪ್ರಕಾರ ಹಣ ವಸೂಲಿ ಮಾಡಲಿಲ್ಲ. ನಾವು ಕ್ರಮ ತೆಗೆದುಕೊಂಡಿದ್ದೇವೆಂದು ಮುಖ್ಯಮಂತ್ರಿಗಳು ಯಾವ ಅಭಿಮಾನದಿಂದ ಹೇಳುತ್ತಿದ್ದಾರೋ ನನಗೆ ಗೊತ್ತಿಲ್ಲ. ಈ ಮಾತನ್ನು ಮುಖ್ಯಮಂತ್ರಿಗಳಿಂದ ಅಪೇಕ್ಷೆಪಟ್ಟಿಲ್ಲ. ಅವರು ಹೇಳಬೇಕಾಗುತ್ತದೆ ಈ ಲ್ಯಾಂಡನ್ನು ಟೇಕನ್ ಓವರ್ ಮಾಡಿದ್ದೇವೆಂದು ಇದು ಇಲ್‌ಲೀಗಲ್ ಇದೆ. So, we have taken over the land ಎಂದು ಹೇಳಬೇಕಾಗಿತ್ತು. Where is the question of Stamp Duty ಎಂದು ಹೇಳಬೇಕಾಗಿತ್ತು. Suppose, he wanted that it should be made legal ಆಗ ಸ್ಟಾಂಪ್‌ಡ್ಯೂಟಿ ರಿಕವರಿ ಮಾಡಬೇಕಾಗಿತ್ತು ಅದು ಮಾಡಲಿಲ್ಲ. ಹಾಗಾಗಿ, ವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳು ಎಲ್ಲಾ ಇನ್‌ಕ್ವೈಯರಿ ಮಾಡಿ ಭೂಸುಧಾರಣಾ ಕಾನೂನು ಅದು ಆದನಂತರ ಸ್ಟಾಂಪ್ ಅಂಡ್ ರಿಜಿಸ್ಟ್ರೇಷನ್ ಆಕ್ಟ್, ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟ್, ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಉಲ್ಲಂಘನೆಯಾಗಿದೆ ಎಂದು ಹೇಳಿದರೂ ಸಹ ಏನು ಕ್ರಮ ಕೈಗೊಳ್ಳಲಿಲ್ಲ. ಮುಖ್ಯಮಂತ್ರಿಗಳ ಸ್ಥಾನ ಈವತ್ತು ಭದ್ರವಾಗಿದೆ ನನ್ನ ದೃಷ್ಟಿಯಲ್ಲಿ ಇವತ್ತು ಅವರ ಸ್ಥಾನಕ್ಕೆ ಅಸ್ಥಿರತೆಯಿಲ್ಲ. ಚುನಾವಣೆ ಇನ್ನು ಮೂರು ತಿಂಗಳು ಇದೆ ಅದಕ್ಕೆ ಇರಬಹುದೆಂದು ನನಗೆ ಕಾಣುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಪ್ರಾಮಾಣಿಕತೆ,

ಮೊರಾಲಿಟಿ ಎಲ್ಲಾ ಮಾತನಾಡುತ್ತಾರೆ ಏನು ಮಾಡಿದ್ದೀರಿ? ಏನು ಕ್ರಮ ತೆಗೆದುಕೊಂಡಿದ್ದೀರಿ? ಹಾಗಾಗಿ ನಾನು ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ ಇವತ್ತು ನಿಮ್ಮ ಸರ್ಕಾರದ ನೀತಿಯನ್ನು ಇದರ ಬಗ್ಗೆ ಸ್ಪಷ್ಟವಾಗಿ ಹೇಳಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆ, ವಿಧಿಬಿಂದುವನ್ನು ಈ ಸಮಯದಲ್ಲಿ ಎತ್ತುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರು ಕೊಟ್ಟಿರತಕ್ಕ ವಿಷಯ ನಿಯಮ 311ನೇ ವಿಧಿಗನುಗುಣವಾಗಿದೆ. ಈ ಸಭೆಯ ಮತ್ತೊಬ್ಬ ಸದಸ್ಯರ ಮೇಲೆ ವೈಯಕ್ತಿಕವಾದಂಥ ಆಪಾದನೆಗಳ ಬಗ್ಗೆ ಅವರು ಕೊಟ್ಟಿರತಕ್ಕ ನೋಟೀಸ್‌ನಲ್ಲಿ ಕೂಡ ಸರ್ಕಾರದ ಬಗ್ಗೆ ಸರ್ಕಾರದ ಕರ್ತವ್ಯಲೋಪದ ಬಗ್ಗೆ ಯಾವ ಒಂದು ಶಬ್ದವು ಇಲ್ಲ. ಈ ನಿಯಮದ ಪ್ರಕಾರ....

ಶ್ರೀ ಸಿ. ಬೈರೇಗೌಡ : ತಾವೇ ಹೇಳಿದ್ದೀರಿ, ನಿಯಮಗಳು ಇಲ್ಲದೆ ಬೇಕಾದಷ್ಟು ನಡೆದಿವೆಯೆಂದು, ಈಗ ಏಕೆ ಪುಸ್ತಕ ಹಿಡಿದುಕೊಂಡಿದ್ದೀರಿ? ಈ ಪುಸ್ತಕ ಇದೆಯೆಂದು ಈಗ ಗೊತ್ತಾಯಿತಾ ನಿಮಗೆ? ಗೊತ್ತಾಯಿತು ಎಂದು ಈಗಲಾದರೂ ಒಪ್ಪಿಕೊಳ್ಳಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ನಿಯಮವಿದೆಯೆಂದು ಯಾವತ್ತೋ ಗೊತ್ತಿದೆ.

ಶ್ರೀ ಸಿ. ಬೈರೇಗೌಡ : ನಿಯಮಗಳು ಇಲ್ಲದೆ ಬೇಕಾದಷ್ಟು ನಡೆದಿವೆಯೆಂದು ಹೇಳಿದ್ದೀರಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ನಮ್ಮಲ್ಲಿ ಕೆಲವರು ಸದಾ ಕಾಲ ಇಲ್ಲಿ ನಿಯಮವನ್ನು ಉಲ್ಲಂಘನೆ ಮಾಡುತ್ತೀರಿ ಎನ್ನುವುದನ್ನು ತಮ್ಮ ಗಮನಕ್ಕೆ ತಂದಿದ್ದೇನೆ ಅಷ್ಟೆ.

ಶ್ರೀ ಸಿ. ಬೈರೇಗೌಡ : ಬಿಲ್ ಇಂಟರ್‌ಡ್ಯೂಸ್ ಮಾಡುವಾಗ ಎಷ್ಟೋ ನಿಯಮಾವಳಿ ಉಲ್ಲಂಘನೆ ಆಗಿದೆ. ಅದೇ ತರಹ ಇದೂ ಒಂದು. ನೀವು ಹೇಳಿದ್ದೀರಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ನಾನು ನಿಯಮಕ್ಕೆ ವಿರುದ್ಧವಾಗಿ ಎಂದೂ ನಡೆದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷರೇ, ನಿಯಮ 311 ನಮ್ಮ ಲಾ ಮಿನಿಸ್ಟರ್‌ಗೆ ಗೊತ್ತಿಲ್ಲ. ಅವರು ಯಾವ ಲೋಕದಲ್ಲಿದ್ದರೋ ಗೊತ್ತಿಲ್ಲ. ನಿಯಮ 311ರಲ್ಲಿ ಚರ್ಚೆ ಮಾಡಲಿಕ್ಕೆ ಪರ್ಮಿಷನ್ ಕೊಟ್ಟು ಡಿಸ್‌ಕಷನ್ ಶುರುವಾಗಿ ಒಂದು ಗಂಟೆಯಾಯಿತು ಈಗ ನಿದ್ದೆಯಿಂದ ಎದ್ದು ನಾವು ಕೊಟ್ಟಿದ್ದು ನೋಟೀಸ್ ಸರಿಯಿಲ್ಲವೆಂದು ಹೇಳುತ್ತಿದ್ದಾರೆ. ನೀವು ಯಾವ ಲೋಕದಲ್ಲಿ ಇದ್ದೀರಿ?

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಅವರು ಹೇಳುವ ಎಲ್ಲಾ ಅಂಶಗಳು ಬಹುತೇಕ ನಿಯಮಕ್ಕನುಗುಣವಾಗಿದೆ. ಅದು ಒಬ್ಬ ವ್ಯಕ್ತಿಯ ಮೇಲೆ ಇರತಕ್ಕ ಮೂರು ಆಪಾದನೆಗಳು ಇವೆ. ವಿಧಿಯಲ್ಲಿ ಏನು ಹೇಳುತ್ತದೆ ಅಂದರೆ ವ್ಯಕ್ತಿಯ ಬಗ್ಗೆ ತನಿಖೆ ನಡೆಸಿ ಯಾರ ಮೇಲೆ ಆಪಾದನೆ ಇದೆ To make an investigation into the matter for the purpose of reply. ಉತ್ತರ ಕೊಡುವುದಕ್ಕೋಸ್ಕರ ನೀವು ಹೇಳತಕ್ಕ ಆಪಾದನೆ ಸರಿಯಿದೆಯೋ ಇಲ್ಲವೋ ಎನ್ನುವ ಬಗ್ಗೆ ಉತ್ತರ ಕೊಡುವುದಕ್ಕೆ ಒಂದು ಅವಕಾಶವಿರುವ ರೀತಿಯಲ್ಲಿ ನಿಯಮವಿದೆ. ನನ್ನ ಅರಿಕೆ ಏನೆಂದರೆ ತಾವು ಮಾಡಿರತಕ್ಕ ಆಪಾದನೆಗಳು ಸದಸ್ಯರ ಮೇಲೆ ಅದು ಏನಿದೆಯಲ್ಲಾ, ಅದಕ್ಕೆ ಉತ್ತರ ಹೇಳಲು ಸದಸ್ಯರು ಈಗಲೇ ರೆಡಿ ಮಾಡಿದ್ದಾರೆಯೇ ಅಥವಾ ಅದರ ಬಗ್ಗೆ ತನಿಖೆ ಮಾಡಿಸಿ ಸೂಕ್ತ ರೀತಿಯಲ್ಲಿ ಸೂಕ್ತ ಸಮಯದಲ್ಲಿ ಉತ್ತರ ಕೊಡುತ್ತಾರಾ ಎನ್ನುವುದರ ಮೇಲೆ ಅವಲಂಬಿಸಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಾನೂನು ಸಚಿವರು ತಾಂತ್ರಿಕ ಆಬ್ಜೆಕ್ಷನ್ ಎತ್ತಿದ್ದಾರೆ. ಲಾ ಮಿನಿಸ್ಟರ್ ಅವರು ತಿಳಿದುಕೊಳ್ಳಬೇಕಾಗಿತ್ತು. ವಿಚಾರಣೆ ಮಾಡಬೇಕಾದಂಥ ಅತ್ಯಂತ ದೊಡ್ಡ ಜವಾಬ್ದಾರಿ ಸರ್ಕಾರದ್ದು. ಸರ್ಕಾರದಿಂದ ಈ ಜವಾಬ್ದಾರಿಯನ್ನು ನಿಭಾಯಿಸಿದೆ. ಅದು ಒಂದೇ ನಮಗೆ ಸಂತೋಷ. ನಿಭಾಯಿಸಿ ಅದರಲ್ಲಿರತಕ್ಕ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದಾರೆ ಆದ್ದರಿಂದ ನಾವು ಸರ್ಕಾರಕ್ಕೆ ರಾಮಸ್ವಾಮಿಯವರಿಗೆ ತಮ್ಮ ಮೂಲಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಮತ್ತೆ ಯಾವ ತನಿಖೆ ಮಾಡಬೇಕೆಂದು ಹೇಳುತ್ತೀರಿ? ನೀವು ತನಿಖೆ ಮಾಡಿ ವರದಿ ಕೊಟ್ಟು ಅಧಿಕಾರಿಗಳನ್ನು ಸಸ್ಪೆಂಡ್ ಇಡದಿದ್ದರೆ ಈ ಪ್ರಶ್ನೆ ಬರುತ್ತಿರಲಿಲ್ಲ. ಪ್ರೈಮಾಫ್ಯಾಸಿ ಕೇಸು ಇದೆಯೆಂದು ಅಧಿಕಾರಿಗಳನ್ನು ಸಸ್ಪೆಂಡ್‌ನಲ್ಲಿ ಇಟ್ಟಿದ್ದೀರಿ.

I would call it, a conclusive proof has been established by the Government . You have done it. Therefore I don't say it is legal or illegal; you consider whether continuance of such persons in the interest of the State.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಸದಸ್ಯರು ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ವಿರೋಧಪಕ್ಷದ ನಾಯಕರು ಇತರ ಸ್ನೇಹಿತರಲ್ಲಿ, ಕೊಟ್ಟಿರತಕ್ಕ ಈ ಸೂಚನೆಯಲ್ಲಿ ಸರ್ಕಾರದ ಕರ್ತವ್ಯದ ಬಗ್ಗೆ ಹೇಳದಿದ್ದರೂ ಕೂಡ ಬಹಳ ಹಿಂದಿನಿಂದ ಮುಖ್ಯಮಂತ್ರಿಗಳು ಹೇಳಿದ ರೀತಿಯಲ್ಲಿ ಕಂದಾಯ ಮಂತ್ರಿಗಳಿಗೆ ಅರ್ಜಿ ಬಂದ ತಾರೀಖಿನಿಂದ ಒಂದೇ ಸಮನೆ ಇದರಲ್ಲಿ ಸರ್ಕಾರದ ಕರ್ತವ್ಯ ಏನಿದೆ ಅದನ್ನು ಅಲ್ಲಿಂದ ಇಲ್ಲಿಯವರೆಗೆ ಮಾಡಿಕೊಂಡು ಬಂದಿದೆ. ಸರ್ಕಾರ ಯಾವ ಸಮಯದಲ್ಲೂ ಯಾರನ್ನೂ ಮುಚ್ಚಿಹಾಕಿಲ್ಲ, ಯಾರ ರಕ್ಷಣೆ ಮಾಡಿಲ್ಲ ಯಾರನ್ನೂ ಬಿಟ್ಟಿಲ್ಲ ಆದ್ದರಿಂದ ಸರ್ಕಾರ ತನ್ನ ಕರ್ತವ್ಯ ಮಾಡಿಕೊಂಡು ಬಂದಿದೆ. ಇವತ್ತು ತಾವು ಕೊಟ್ಟಿರತಕ್ಕ ಈ ಸೂಚನೆಯ ವ್ಯಾಪ್ತಿ ಏನಿದೆ ವ್ಯಾಪ್ತಿ ಇಷ್ಟೇ What is required is the reply from the person against whom a charge is made.

ವೈಯಕ್ತಿಕವಾದಂತಹ ವಿಷಯಕ್ಕೆ ಸೀಮಿತವಾಗಿದ್ದರೆ ಸೂಕ್ತವೆಂದು ನಾನು ಹೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷರೆ, ನಿಯಮ 311ರ ಪ್ರಕಾರ ನೋಟೀಸ್ ಕೊಟ್ಟಾಗ ಮಾನ್ಯ ಸಚಿವರಿಗೆ 27ನೇ ತಾರೀಖು ನೋಟೀಸ್ ಕೊಟ್ಟಿದ್ದಾರೆ. ನಿಮಗೆ ನಾವು ಯಾವ ಡಾಕ್ಯುಮೆಂಟ್ಸ್ ಕೊಡಬೇಕು? Because, you are the creator of the document. ಏನು ಡಾಕ್ಯುಮೆಂಟ್ಸ್ ನಿಮಗೆ ಕೊಡುವುದು ಇದೆ?

ಶ್ರೀ ಗೋಪಿನಾಥ್ ಸಾಂಡ್ರಾ : ನೀವು ಯಾವುದಾದರೂ ಚಾರ್ಜಸ್ ಮಾಡಬೇಕಾದರೆ ನನಗೆ ಆ ಚಾರ್ಜಸ್ ಹೇಳಬೇಕು. ನಾನು ಹೇಗೆ ಉತ್ತರ ಹೇಳಲಿ? ನೀವು ತಮ್ಮಲ್ಲಿರುವುದನ್ನು ಕಳುಹಿಸಿ ಕೊಡಿ.

ಶ್ರೀ ಆರ್.ವಿ. ದೇಶಪಾಂಡೆ : ಈಗ ತಾವು ಬಹಳ ಶಾಂತವಾಗಿ ಕೇಳಿ. ಈಗ ಏನು ಹೇಳಿದರೂ ಕಾಗದ ಪತ್ರ ಕೊಡಿ ಅಂದರೆ ಬಹಳ ಚೆನ್ನಾಗಿದೆ ತಮ್ಮ ಉತ್ತರ. ನಾನು ತಮ್ಮಲ್ಲಿ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ, ತಾವು ಇದೇ ಪ್ರಕಾರ ಉತ್ತರ ಕೊಡಿ. ಪತ್ರಿಕೆಗಳಲ್ಲಿ ಅದೇ ಪ್ರಕಾರ ಬರಲಿ. ಮಾನ್ಯ ಸಚಿವರು ಹೇಳಿದರು ತಾವು ಹಿರಿಯರು ನಿಮಗೆ ಗೊತ್ತಿದೆ. ಲೋಪ ದೋಷಗಳನ್ನು ಮಾಡುವುದಕ್ಕೆ ಸಾಧ್ಯವಿದೆ. ನಾವು ಸ್ಪೀಕರ್‌ರವರಿಗೆ ನೋಟೀಸ್ ಕೊಡುವಾಗ ಅವರಿಗೂ ಕೊಟ್ಟಿದ್ದೇವೆ ಎಲ್ಲಾ ಡಾಕ್ಯುಮೆಂಟ್ಸ್ ಇದೆ. ನಿಮಗೆ ಬೇಕಾದರೆ ತರಿಸಿಕೊಂಡು ನೋಡಿ. ಸ್ಪೀಕರ್‌ರವರ ಕಛೇರಿಗೆ ಎಲ್ಲಾ ವಿವರಗಳನ್ನು ಕೊಟ್ಟಿದ್ದೇವೆ, ಎಲ್ಲಾ ಡಾಕ್ಯುಮೆಂಟ್ಸ್‌ಗಳು ಇವೆ. We

handed over all the documents to the office of the Speaker. If the Member wants it he would have gone to the speaker's office and looked into those documents. ನಾನು ಯಾವ ಡಾಕ್ಯುಮೆಂಟ್‌ನ್ನು ರಿಲೈ ಮಾಡುತ್ತೇನೆ, ಅದನ್ನು ಅವರ ಕೈಗೆ ಕೊಡಬೇಕೆಂಬ ಯಾವ ಪ್ರೊಸೀಜರ್ ಇಲ್ಲ.

ನಾನು ಯಾರ ಬಗ್ಗೆ ನೋಟೀಸ್ ಕೊಡುತ್ತೇನೆ ಅವರಿಗೂ ಕೂಡ ಕೊಡಲಾಗಿದೆ. But, still I have given all the relevant documents to the Speaker's Office along with notice. ಹಿರಿಯರಾದ ಚಂದ್ರೇಗೌಡರು ಹೇಳಿದ ಹಾಗೆ ಸಬ್ ರಿಜಿಸ್ಟ್ರಾರ್ ರವರನ್ನು ಸಸ್ಪೆಂಡ್ ಮಾಡಿದ್ದೀರಿ. ಅದನ್ನು ಅಭಿನಂದಿಸುತ್ತೇನೆ. You have made them capegoats. But the Sub-Registrars acted on whose instructions?

ನಾನು ಕೇಳುತ್ತೇನೆ, ಇವತ್ತು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಣಿಯಾಗುತ್ತದೆ, ಬಹಳಷ್ಟು ಕಡೆ ಅಂಡರ್ ವ್ಯಾಲ್ಯುಯೇಷನ್ ಆಗುತ್ತದೆ. ಅಂಡರ್ ವ್ಯಾಲ್ಯುಯೇಷನ್‌ನಲ್ಲಿ ಹಣದ ಕನ್ಸಿಡರೇಷನ್ ಇರುತ್ತದೆ. 10 ಸಾವಿರದ್ದು 5 ಸಾವಿರ ಮಾಡಿ ನೀನು ಒಂದು ಸಾವಿರ ತೆಗೆದುಕೊ ಎಂದು ಅವನಿಗೆ ಕೊಡುತ್ತಾರೆ. ಇಲ್ಲಿ ನಿಮ್ಮ ಹೌಸಿಂಗ್ ಮಿನಿಸ್ಟರ್ ಏನು ಹಣ ಕೊಟ್ಟು ಅಂಡರ್ ವಾಲ್ಯುಯೇಷನ್ ಮಾಡಿ ಕೊಂಡಿಲ್ಲವಲ್ಲಾ? ಹಣ ಕೊಟ್ಟಿದ್ದರೆ ಅವರೂ ತಪ್ಪು ಮಾಡಿದ ಹಾಗೆ, ತೆಗೆದುಕೊಂಡವರು ತಪ್ಪ ಮಾಡಿದ ಹಾಗೆ ಆಗುತ್ತಿತ್ತು. Here , the Sub-Registrars obliged the Hon'ble Housing Minister because of his influence, because of his position. Why do you make the two Sub-Registrars as capegoats?

ನೀವು ಕ್ರಮ ತೆಗೆದುಕೊಳ್ಳಬೇಕಾಗಿದೆ ಹೌಸಿಂಗ್ ಮಿನಿಸ್ಟರ್ ವಿರುದ್ಧ. ನಾನು ಪುನಃ ಹೇಳುತ್ತೇನೆ. I have nothing personal. ಆದರೆ ಪಾಯಿಂಟ್ ಏನಿದೆ ಇಲ್ಲ ಎಲ್ಲಾ ಎಂ.ಎಲ್.ಎ.ಗಳದ್ದು ಡಿಗ್ ಮಾಡಿ What is this? Is this the answer the Hon'ble Chief Minister should give? ಸರ್ಕಾರದ ಗಮನಕ್ಕೆ ಬಂದಾಗ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಹಾಗಾಗಿ ಇವತ್ತು ಕ್ರಮ ತೆಗೆದುಕೊಳ್ಳದೆ ಈ ಎಂ.ಎಲ್.ಎ.ಯನ್ನು ತೆಗೆಯಬೇಕು, ಮತ್ತೆ ಡಿಗ್ ಮಾಡಬೇಕು, ನೀವು ಮನೆ ಕಟ್ಟಿರಿ, ಅವರೂ ಮನೆ ಕಟ್ಟಿದ್ದಾರೆ, ನಾನೂ ಮನೆ ಕಟ್ಟಬೇಕು ಎಂದು ಹೇಳಿದರೆ Is this is the answer? This is not the answer. We will become laughing stock. ಈ ಪ್ರಕಾರ ಉತ್ತರ ನಾಳೆ ಪತ್ರಿಕೆಗಳಲ್ಲಿ ಬಂದರೆ We will become laughing stock.

ಹಾಗಾಗಿ ಮಾನ್ಯ ಅಧ್ಯಕ್ಷರೇ, ಇವತ್ತು ಭೂಸುಧಾರಣೆ ಕಾಯಿದೆ, ಸ್ಟಾಂಪ್ ಅಂಡ್ ರಿಜಿಸ್ಟ್ರೇಷನ್ ಆಕ್ಟ್, ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟ್ ಮತ್ತು ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಇವುಗಳ ಉಲ್ಲಂಘನೆಯಾಗಿದೆ. ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ, ಅದರ ಬಗ್ಗೆ ನಮಗೆ ತೃಪ್ತಿ ಇಲ್ಲ. ಸ್ವಲ್ಪ ಕ್ರಮ ತೆಗೆದುಕೊಂಡಿದ್ದಾರೆ, ಸಂತೋಷ. ಆದರೆ ಅದರ ಮುಖ್ಯ ಕ್ರಮ, ಡಿವಿಜನಲ್ ಕಮೀಷನರ್ ಅವರು ಏನು ಹೇಳಿದರು. Take over the land. Because bonafide use ಗೆ ಉಪಯೋಗ ಮಾಡಿಲ್ಲ. That intelligently you have not done, because that will affect the Housing Minister. Violation of Land Reforms Act ಆಗಿದೆ He is not an agriculturist His income is more than Rs. 50,000/- bonafide purpose ಎಂದು ಹೇಳಿ he has transferred the property. ಹಾಗಾಗಿ ಅವರ ಪ್ರಾಪರ್ಟಿಯನ್ನು ಟೇಕ್ ಓವರ್ ಮಾಡುವ ಕೆಲಸವನ್ನು ನೀವು ಮಾಡಿಲ್ಲ. Because it will affect you

your colleague. That you have avoided. You have not tried to recover the stamp duty evaded which is more than Rs 3-6 lakhs So, what have you done?

ಒಂದು ಎನ್‌ಕ್ವೈರಿ ಮಾಡಿದರೆ ನಿಮ್ಮ ಕೆಲಸ ಮುಗಿಯಿತೇನು? ಈಗ ಮತ್ತೊಂದು ಪ್ರಕರಣ ಇದೆ. ಇವರು ಧಾರವಾಡ ಇಂಡಸ್ಟ್ರಿಯಲ್ ಕೋಪರೇಟಿವ್ ಬ್ಯಾಂಕಿನ ಚೇರ್ಮನ್ ಇದ್ದರು. ಮಾನ್ಯ ಮಂತ್ರಿಗಳಾದ ಶ್ರೀ ಹಾರ್ನಳ್ಳಿ ರಾಮಸ್ವಾಮಿಯವರು ಈ ಕಡೆ ಸ್ವಲ್ಪ ಲಕ್ಷ್ಯ ಕೊಡಬೇಕು. ಇದರಲ್ಲಿ ಮಿನಿಸ್ಟರ್ ಅವರ ಇನ್ವಾಲ್ವ್‌ಮೆಂಟ್ ಇದೆ. ಏಕೆಂದರೆ ಇದಕ್ಕೆ ಉತ್ತರ ಕೊಡುವವರು ಮುಖ್ಯಮಂತ್ರಿಗಳು. ಉತ್ತರ ಕೊಡುವಾಗ ನನಗೆ ಏನೂ ಗೊತ್ತಿಲ್ಲ ದೇಶಪಾಂಡೆಯವರೇ ಎಂದು ಅವರು ಹೇಳಬಾರದು. ಧಾರವಾಡ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಬ್ಯಾಂಕ್ ಚೇರ್ಮನ್ ಇವರಿದ್ದರು. ಇವರು ಇದರ ಚೇರ್ಮನ್‌ರಿದ್ದಾಗ ಏನು ಮಾಡಿದ್ದಾರೆ ಎಂಬುದನ್ನು ಹೇಳುತ್ತೇನೆ. ಇದರ ಉದ್ದೇಶ ಏನು? ಇಂಡಸ್ಟ್ರಿಯಲ್ ಕೋ-ಆಪರೇಟಿವ್ಸ್ ಫಾರ್ಮ್ ಮಾಡುವುದು, ಇಂಡಸ್ಟ್ರಿಯಲ್ ಕೋ-ಆಪರೇಟಿವ್ಸ್‌ಗೆ ಸಾಲ ಕೊಡುವುದು, ಮತ್ತು ಕೈಗಾರಿಕೆಗಳ ಬೆಳವಣಿಗೆಯಾಗಬೇಕು, ಬಡಜನರಿಗೆ ಉದ್ಯೋಗ ಸಿಗಬೇಕು. ಪರಿಶಿಷ್ಟ ಜಾತಿ, ಜನಾಂಗದವರಿಗೆ ಉದ್ಯೋಗ ಸಿಗಬೇಕು. ಬಹಳ ಸಂತೋಷ ಒಳ್ಳೆಯ ಉದ್ದೇಶ. ಆದರೆ ಇವರು ಏನು ಮಾಡಿದರು? ಇವರು ಚೇರ್ಮನ್ ಇದ್ದಾಗ ಹಲವಾರು ಇಂಡಸ್ಟ್ರಿಯಲ್ ಕೋ-ಆಪರೇಟಿವ್ಸ್‌ನ್ನು ತಯಾರು ಮಾಡಿದರು ರಿಜಿಸ್ಟರ್ ಮಾಡಿಸಿದರು. ಕೆಲವು ಕಡೆ ತಾವು ಚೇರ್ಮನ್, ಕೆಲವು ಕಡೆ ಮಗ ಚೇರ್ಮನ್, ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಬ್ಯಾಂಕಿನ ಚೇರ್ಮನ್ ಇವರು. ಸಾಲ ಮಂಜೂರು ಮಾಡುವುದು ಯಾರಿಗೆ? ಇವರಿಗೇನೇ ನನ್ನ ಸಾಲ ನಾನೇ ಮಂಜೂರು ಮಾಡಿಕೊಳ್ಳುವುದು. ಈ ಕೆಲಸವನ್ನು ಬಹಳ ಚೆನ್ನಾಗಿ ಮಾಡಿದರು. ಇವತ್ತು ರಿಸರ್ವ್ ಬ್ಯಾಂಕಿನವರು ರಿಪೋರ್ಟ್ ಕೊಟ್ಟಿದ್ದಾರೆ.

ಶ್ರೀ ಬಿ.ಎಚ್. ಬನ್ನಿಕೋಡ್ : ಇವರನ್ನು ಮಂತ್ರಿಮಂಡಲದಿಂದ ತೆಗೆದುಬಿಡಿ. ನಾವೂ ಈ ವಿಷಯವನ್ನು ಬಿಟ್ಟುಬಿಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ಇದು ನೋಡಿ. ಹುಬ್ಬಳ್ಳಿ ಇಂಜನಿಯರಿಂಗ್ ಅಂಡ್ ಟೆಕ್ನಿಕಲ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್. ಇದಕ್ಕೂ ಇವರೇ ಚೇರ್ಮನ್‌ರು. ಈಗಲೂ ಕೂಡ ಇವರೇ ಇದ್ದಾರೆ. ಇಲ್ಲಿ ಎಷ್ಟು ಬಾಕಿ ಇದೆ ಎಂದರೆ ಮೂರು ಲಕ್ಷದ, ಇಪ್ಪತ್ತು ಸಾವಿರ ರೂಪಾಯಿಗಳು. ರಿಸರ್ವ್ ಬ್ಯಾಂಕಿನವರದ್ದು ಏನು ರಿಮಾರ್ಕ್ಸ್ ಇದೆ, ಅದನ್ನು ನಾನು ಓದುತ್ತೇನೆ I will read the remarks of the Reserve Bank of India :

"Previously there was an attachment of the property to safeguard the advances while the Joint Registrar of Belgaum had attached the property by the letter dated 12.12.1984, (copy enclosed). The Bank Chairman had addressed a letter to Sri Veerappa Moily, this is very important.

" The Bank Chairman had addressed a letter to Shri Veerappa Moily, Hon'ble Chief Minister of Karnataka on 4.6.93 to take action for recovery (Ex.B) The office of the Chief Minister forwarded the letter to the Registrar of Co-operative Societies, Bangalore, on 27.8.93 (Ex.H)."

But no action, why? Then, Karnataka Calendaring and Finishing Co-operative association, Hubli.

ಹತ್ತು ಲಕ್ಷ ರೂಪಾಯಿ. ಇಲ್ಲಿ ಏನು ಎಂದರೆ machinery worth of Rupees thirty lakhs installed in the factory. Bank Directors, Chairman and other sitting directors are the office bearers. Directors are safe in the said society.

ಯಾವ ಬ್ಯಾಂಕ್‌ನಲ್ಲಿ ಸಾಲ ಮಂಜೂರು ಮಾಡಿದ ಡೈರೆಕ್ಟರ್ಸ್ ಇದ್ದಾರೋ, ಅವರೇ ಇಲ್ಲಿ ಡೈರೆಕ್ಟರ್‌ಗಳು. ನಾನು ಹಣ ಸ್ಯಾಂಕ್ಷನ್ ಮಾಡುವುದು, ನೀವು ಹಣ ತೆಗೆದುಕೊಳ್ಳುವುದು. ಅಲ್ಲಿಯೂ ನೀವು ಚೇರ್ಮನ್, ಇಲ್ಲಿ ನಾನು ಚೇರ್ಮನ್ The Dharwad District Co-operative Federation Ltd. Long outstandidng, partly secured, goods pledged, wood furniture and steel chairs covering the amount is not there.

ಅಂದರೆ ಎಲ್ಲಾ ಹಂತದಲ್ಲೂ ರಿಸರ್ವ್ ಬ್ಯಾಂಕ್‌ನವರು ಹಲವಾರು ರಿಮಾರ್ಕ್ಸ್, ರಿಪೋರ್ಟ್ ಅನ್ನು ಕೊಟ್ಟಿದ್ದಾರೆ. ಆದರೂ ಹಣ ವಸೂಲು ಆಗುತ್ತಾ ಇಲ್ಲ. ಈ ಸಂಸ್ಥೆಯಿಂದ ಕನಿಷ್ಟ 25 ರಿಂದ 30 ಲಕ್ಷ ರೂಪಾಯಿ ಹಣ ವಸೂಲು ಆಗಬೇಕಾಗಿದೆ. ಇಲ್ಲಿ ಇವರು, ಅಥವಾ ಇವರ ಚಿರಂಜೀವಿ ಚೇರ್ಮನ್. ಹಾಗಾದರೆ ಇವತ್ತು ಇವರು ಮಂತ್ರಿಯಾಗಿದ್ದಾರಲ್ಲಾ? ಯಾಕೆ ಹಣ ವಸೂಲಿಯಾಗುತ್ತಾ ಇಲ್ಲ?

Is he not coming in the way? You want a letter for that? I will show that letter also.

ಈಗ ಪೀರಿಯಡ್ ಆಫ್ ಚೇರ್ಮನ್‌ಶಿಪ್ ಅನ್ನು ಹೇಳುತ್ತೇನೆ.

89-90 - D.K. Paratnal, Chairman, M.S. Chinta - Chairman, 90-91, Sunil Kumar Sandra, 91-92, 92-93 B.V. Bidahalli, 93-94 D.K. Purantan.

ಇವರು ಯಾರು, ಇವರ ಮಗ ಯಾರು, ಇವರ ಸ್ನೇಹಿತರು ಯಾರು? ಇವರ ಹೆಂಚ್‌ಮೆನ್ ಯಾರು ಎಂಬುದನ್ನು ಅವರೇ ಉತ್ತರ ಹೇಳಲಿ. ಅವರು ಡಿಸ್‌ಓನ್ ಮಾಡಲಿ. ನನಗೇನೂ ಪರಿಚಯ ಇಲ್ಲ, ಸಂಬಂಧ ಇಲ್ಲ, ಈ ಸಂಸ್ಥೆಗಳು ಸಂಬಂಧ ಇಲ್ಲ, ಹಾಗೆಂದು ಇವರು ಹೇಳಲಿ. I will withdraw all my argument if he disowns all these people and says that I have nothing to do with these people or if he says that these institutions were not established by him and if he says that those loans were not advanced by him and if he says that the amount is not due and Reserve bank of India has not made audit. If he says that I will withdraw all my arguments and apologise to the House for taking precious time of the House and accusing unnecessarily.

ಮತ್ತೊಂದು ಪತ್ರವನ್ನು ತಮಗೆ ಕೊಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇದ್ದಿದ್ದರೆ ಒಳ್ಳೆಯದಿತ್ತು. ಅವರು ಹೇಳಿದ್ದರಲ್ಲಾ, ಇಂಟರ್‌ಫಿಯರ್ಸ್ ಬಗ್ಗೆ ಹೇಳಿ ಎಂದು ಇದು ಜಾಯಿಂಟ್ ರಿಜಿಸ್ಟ್ರಾರ್ ಕೋ-ಆಪರೇಟಿವ್ ಸೊಸೈಟೀಸ್, ಬೆಳಗಾಂ ಅವರು ಬರೆಯುತ್ತಾರೆ. "Strictly confidential" It is dated 15.4.94.

ಶ್ರೀ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿ, ತಾವು ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಗಳು ಅವರು ಹೌಸಿಂಗ್ ಮಿನಿಸ್ಟರ್. "To the Joint Registrar of Co-operative Societies, Belgaum. Sir, Sub : departmental action - regarding"

ಐದಾರು ಲೆಟರ್ಸ್ ಬರೆದಿದ್ದಾರೆ ಜಾಯಿಂಟ್ ರಿಜಿಸ್ಟ್ರಾರ್ ಅವರು. We regret for the delay in replying to your reference.

ಯಾರು ಉತ್ತರ ಕೊಡುತ್ತಾರೆ ಎಂದರೆ ಮ್ಯಾನೇಜರ್. "The Manager of the Bank i.e Dharwad Industrial Co-operative Bank is writing to the Registrar.

We regret for the delay in replying to your reference referred above. Rs. 8,467.72 dues standing in the name of the Hon'ble Minister.... since 16.3.87 and Rs. 3065 dues standing in the name of Gayatri Printers, Hubli, (of Vijaya Sandra) since 29.6.85, totally Rs. 11,532.72 are yet to be recovered with 18 percent interest from the above named Director."

ಮತ್ತೆ ಏನು ಲೈಬಲಿಟಿಸ್ ಇರುತ್ತದೆ? ಲೈಬಲಿಟೀಸ್ ಕ್ಲಿಯರ್ ಆಗುತ್ತದೆ. ಪಬ್ಲಿಕ್ ಲೈಫ್‌ನಲ್ಲಿ ಯಾವುದಾದರೂ ಒಂದು ಕಂಡಕ್ಟ್ ಇರಬೇಕಲ್ಲಾ how we should be ಅಂತ. "Not a single pie either in principal or interest is repaid by him. Though this fact is brought to the notice of the Board, the action is completely silent for the best reasons which cannot be disclosed here."

ಆಕ್ಷನ್ ಏತಕ್ಕೆ ಆಗುತ್ತಿಲ್ಲ ಅಂದರೆ for the best reasons which cannot be disclosed in this letter." The Manager of the Bank writes to the Joint Registrar on 15-4-94. The Government alone should take action against the defaulter.

ಅಂದರೆ ಒಬ್ಬ ಬ್ಯಾಂಕಿನ ಮ್ಯಾನೇಜರ್ he says what is the amount due. The Board is aware. But he is not able to take action for the reasons best known which cannot be disclosed in this letter.

ಅದು ಏನು ರೀಸನ್ಸ್ ಇರಬಹುದು? He is an influential man. He is a Minister, He is a district minister of Dharwad.

ನಮ್ಮ ಕೋ ಆಪರೇಟಿವ್ ರಿಜಿಸ್ಟ್ರಾರ್ ಏನು ಮಾಡುತ್ತಿದ್ದರೋ ನನಗೆ ಗೊತ್ತಿಲ್ಲ. ಕೋ ಆಪರೇಷನ್ ಸೆಕ್ರೆಟರಿಯವರು ಏನು ಮಾಡುತ್ತಿದ್ದರೋ ನನಗೆ ಗೊತ್ತಿಲ್ಲ.

He should have been disqualified from holding this position. So, a man who is disqualified to hold the position in a Co-operative Society, can he become a Minister of the State? I think it is not a pride to all of us. It is a shame to all of us. I will bow my head in shame. So, I would like to know from this Government, what more you want?

ಇಷ್ಟು ಹೇಳಿದರೆ ಸಾಕು ಮುಖ್ಯಮಂತ್ರಿಗಳೇ? ಆದರೆ ನೀವು ವ್ಯಕ್ತಿಗತ ಈ ರೀತಿ ಮಾಡುವುದು ಸರಿ ಇಲ್ಲ ಅಂದರೆ tell me what personal I have? I have nothing personal.

ನನಗೇನೂ ಕ್ಷೇತ್ರದ ಕಾನ್‌ಫ್ಲಿಕ್ಟ್ ಇದೆಯೋ ಇಲ್ಲಾ ಪರ್ಸನಲ್ ಕಾನ್‌ಫ್ಲಿಕ್ಟ್ ಇದೆಯೋ? ಏನೂ ಇಲ್ಲ. Unfortunately or fortunately we are in some positions. We have to do our duty and we are doing it. If you feel that what we are doing is wrong, tell us clearly.

ಆ ಪ್ರಕಾರ ಇದ್ದರೆ ಹೇಳಿ ನೀವು ತಪ್ಪು ಮಾಡುತ್ತಿದ್ದೀರಿ ತಪ್ಪು ಮಾಡಬೇಡಿ ಎಂದು. ಮಾನ್ಯ ಅಧ್ಯಕ್ಷರೇ ಇವತ್ತು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ ಇದು ಬಹಳ ಗಂಭೀರ ಸಮಸ್ಯೆ ಇದೆ. ಪಬ್ಲಿಕ್ ಲೈಫ್‌ನಲ್ಲಿ ನಾವು ಯಾವ ಪ್ರಕಾರ ಇರಬೇಕು ಎಂಬ ಪ್ರಶ್ನೆ ಇದರ ಬಗ್ಗೆ ಇದೆ. ನಿಮ್ಮ ಸರ್ಕಾರದ ಇಮೇಜ್ ಪ್ರಶ್ನೆ ಇದೆ. ಮುಖ್ಯಮಂತ್ರಿಗಳು ಏನು ಓಪನ್ ಗೌರ್ನಮೆಂಟ್ ಕ್ಲೀನ್ ಗೌರ್ನಮೆಂಟ್

ವ್ಯಾಲ್ಯೂ ಗೌರ್ನಮೆಂಟ್ ಎಂದು ಹಲವಾರು ಬಾರಿ ಹೇಳುತ್ತಿದ್ದಾರೆ ಇದಕ್ಕೆ ಅವರೇ ಉತ್ತರ ಕೊಡಬೇಕಾಗಿದೆ. ಇವತ್ತು ಹಲವಾರು ವಿಚಾರದಲ್ಲಿ ನಾನು ಹೇಳಿದ್ದೇನೆ. ಯಾವ ಪ್ರಕಾರ ಕಾಂಟ್ರವೆನ್‌ಷನ್ ಆಫ್ ವೇರಿಯಸ್ ರೂಲ್ಸ್ ಅಂಡ್ ಆಕ್ಟ್‌ನಲ್ಲಿ ಆಗಿದ್ದಾವೆ ಅದನ್ನು ನಾನು ಪುನಃ ರಿಪೀಟ್ ಮಾಡುವುದಿಲ್ಲ. ಯಾವ ಪ್ರಕಾರ ಕೋ ಆಪರೇಟಿವ್ ಸೊಸೈಟಿಗಳಲ್ಲಿ ಇವರೇ ಕೋ ಆಪರೇಟಿವ್ ಸೊಸೈಟೀಸ್ ನಿರ್ಮಾಣಮಾಡಿ ಇವರೇ ಕೋ ಆಪರೇಟಿವ್ ಕೈಗಾರಿಕೆಗಳನ್ನು ನಿರ್ಮಾಣ ಮಾಡಿ ಯಾವ ಪ್ರಕಾರ ಸಾಲ ಕೊಟ್ಟಿದ್ದಾರೆ. ಅದು 25-30 ಲಕ್ಷರೂಪಾಯಿಗಳು ವಸೂಲು ಆಗುವುದಿಲ್ಲ. ಅದು ಪಬ್ಲಿಕ್ ಮನಿ ಇದೆ, ಅದನ್ನು ಬಿಡುತ್ತೀರೇನು? ಒಬ್ಬ ಬಡವ ನೂರು ರೂಪಾಯಿ ಬ್ಯಾಂಕಿಗೆ ಕೊಟ್ಟಿಲ್ಲ ಅಂದರೆ ಹರಾಜು ಮಾಡುತ್ತಾರೆ.

ಮನೆಯನ್ನು ಹರಾಜು ಮಾಡುತ್ತಾರೆ. ಹಾಗಾದರೆ ನಾನು ಒಬ್ಬ ಎಂಎಲ್ಎ ಇದ್ದೇನೆ ಲೀಡರ್ ಆಫ್ ಅಪೋಜಿಷನ್ ಇದ್ದೇನೆ ಅಂತ ಅಂದರೆ ನನಗೆ ಒಂದು ಸ್ಪೆಷಲ್ ಕನ್‌ಸೀಷನ್ ಇದೆ ಏನು? ಈ ದೇಶದಲ್ಲಿ ಪ್ರಿವಿಲೇಜ್ ಇದೆ ಎಂಎಲ್ಎ ಗಳಿಗೆ ಎಂಪಿಗಳಿಗೆ ಮಿನಿಸ್ಟರ್ಸ್‌ಗೆ ಲೂಟಿಮಾಡಿ ಡಿಫಾಲ್ಟರ್ಸ್ ಆಗಿ ತುಂಬ ಬೇಡಿ ಹಣ ಏನೂ ಆಗುವುದಿಲ್ಲ ಎಂದು ಹೇಳಿ. I have no objection ಹಾಗೆ ಹೇಳಿ. ಇವತ್ತು ಒಂದು ಪ್ರಿನ್ಸಿಪಲ್ಸ್ ಬೇಡವೇ? ನಾನು ಇವತ್ತು ಮಾನ್ಯ ಅಧ್ಯಕ್ಷರೇ ತಮ್ಮ ಮುಖಾಂತರ ಮುಖ್ಯವಾಗಿ ಮುಖ್ಯಮಂತ್ರಿಗಳನ್ನು ವಿನಂತಿ ಮಾಡುತ್ತಿದ್ದೇನೆ. ಹಾಗೆಯೇ ಸನ್ಮಾನ್ಯ ಸಚಿವರಾದ ಸಾಂಡ್ರಾರವರಲ್ಲಿ ವಿನಂತಿ ಮಾಡುತ್ತಿದ್ದೇನೆ. ನಾನು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಬಹಳ ನೊಂದ ಮನಸ್ಸಿನಿಂದ ಮಾಡಿದ್ದೇನೆ ಆದರೆ ಇದು ನನ್ನ ಕರ್ತವ್ಯ. ಇದು ಆಗಬಾರದು. ಹಾಗಾಗಿ ಅವರು ಇಷ್ಟೊಂದು ಕ್ಲಾಡ್ಸ್‌ನಲ್ಲಿದ್ದಾಗ ಅವರ ಇಂಟ್ರೆಸ್ಟ್‌ನಲ್ಲಿ ಸರ್ಕಾರದ ಇಂಟ್ರೆಸ್ಟ್‌ನಲ್ಲಿ ಪಬ್ಲಿಕ್ ಲೈಫ್‌ನಲ್ಲಿ ಒಬ್ಬರು ಯಾವ ರೀತಿ ಇರಬೇಕು ಸಾರ್ವಜನಿಕರು ನಮ್ಮನ್ನು ನಂಬಬೇಕು ಜನರು ನಮ್ಮ ಮೇಲೆ ವಿಶ್ವಾಸ ಕಳೆದುಕೊಳ್ಳಬಾರದು ಎಂಬ ಉದ್ದೇಶದಿಂದ ಅವರಾಗಿಯೇ ರಾಜೀನಾಮೆ ಕೊಟ್ಟು ಸಹಕರಿಸಬೇಕು ಎಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಒಂದು ವೇಳೆ ಅವರು ತಪ್ಪಿದರೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಕ್ಯಾಬಿನೇಟ್‌ನಿಂದ ಅವರನ್ನು ಡಿಸ್‌ಮಿಸ್ ಮಾಡಬೇಕು ಎಂದು ತಮ್ಮ ಮುಖಾಂತರ ನಾನು ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ. ನನಗೆ ಗೊತ್ತು ತಮಗೆ ಶಕ್ತಿ ಇದೆ ಈವತ್ತು; ತಾವು ಮನಸ್ಸಿನಲ್ಲಿ ಒಂದಾಗಿಲ್ಲದಿದ್ದರೂ ಸಹ ಚುನಾವಣೆ ದೃಷ್ಟಿಯಿಂದ ಒಂದಾಗಿದ್ದೀರಿ. ತಮಗೆ ಶಕ್ತಿ ಇದೆ 180 ಜನ ಶಾಸಕರು ಇದ್ದಾರೆ ನನ್ನ ಸಂಖ್ಯೆ ಬಹಳ ಕಡಿಮೆ ಇದೆ. ಆದರೂ ಸಹ ನಾನು ಏನು ಬೇಡಿಕೆಯನ್ನು ಮುಖ್ಯಮಂತ್ರಿಗಳಲ್ಲಿ ಇಟ್ಟಿದ್ದೇನೆ. ಅದನ್ನು ಒಪ್ಪಿಕೊಂಡಿಲ್ಲ. ಅಂದರೆ ಸರಿಯಾದ ಶಿಕ್ಷೆ ಅವರಿಗೆ 3 ತಿಂಗಳ ನಂತರ ಈ ನಾಡಿನ ಜನ ಕೊಡುತ್ತಾರೆ. ಅವರಿಗೆ ಯಾವ ಅಧಿಕಾರ ಯಾವ ಮಾರಲ್ ರೈಟ್ ಇರುವುದಿಲ್ಲ ಚುನಾವಣಾ ಪ್ರಚಾರಕ್ಕೆ ಹೋಗಲು. ಪುನಃನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ ಇದರಲ್ಲಿ ವ್ಯಕ್ತಿಗತ ಏನೂ ಇಲ್ಲ.

Just to keep the records clean and image cleam in public life I am suggesting these and measures requesting the Chief Minister to dismiss him if he does not resign and uphold the Karnatakas tradition and the values for which we have fought. And, if the Chief Minsiter does not want to do this,

ನಾನು ಏನು ಮಾಡಬಹುದು? ನಾನು ಧರಣಿ ಮಾಡಬಹುದು. ವಾಕ್ ಔಟ್ ಮಾಡಬಹುದು, ಇಷ್ಟೇ ಮಾಡಬಹುದು ಅದು ನನ್ನ ಕರ್ತವ್ಯ ನಾನು ಮಾಡುತ್ತೇನೆ ಡೆಮಾಕ್ರಸಿಯಲ್ಲಿ ನಾನು ಮಾಡುತ್ತೇನೆ.

But people will not parden the Chief Minister ಹಾಗಾದರೆ ಹೈ ಪಿಚ್ ಮೇಲೆ ಮಾರಲ್ಸ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಲು ಏನು ಮಾತನಾಡುತ್ತಾರೆ, ಅವರು ನಮ್ಮ ಬೇಡಿಕೆ ಏನು ಇದೆ ನಾನು ಮತ್ತು ನಮ್ಮ ಸ್ನೇಹಿತರು ಕೆಲವು ವಿಚಾರಗಳನ್ನು ಸದನದ ಮುಂದೆ ಏನು ಇಟ್ಟಿದ್ದೇವೆ ಅದಕ್ಕೆ ಅವರು ಗೌರವ ಕೊಟ್ಟು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಪುನಃ ಒತ್ತಾಯಿಸಿ ಮಾನ್ಯ ಅಧ್ಯಕ್ಷರು ನನಗೆ ಸಮಯ ಕೊಟ್ಟಿದ್ದಾರೆ ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ನಾನು ಇಷ್ಟೇ ವಿನಂತಿ ಮಾಡುತ್ತೇನೆ. ಮಾನ್ಯ ಸಾಂಡ್ರರವರಿಗೆ ಉತ್ತರ ಕೊಡುವ ಅವಕಾಶ ಇದೆ ಅವರು ಉತ್ತರ ಕೊಡಬೇಕಾದರೆ ರೆಕಾರ್ಡ್ಸ್ ಇಲ್ಲ ಮತ್ತೊಂದು ಇಲ್ಲ ಅಂದರೆ ಅವರು ಸಮಯ ಬೇಕಾದರೆ ತೆಗೆದುಕೊಳ್ಳಬಹುದು. ಅದಕ್ಕೆ ನಾನು ಅಡ್ಡಿ ಬರುವುದಿಲ್ಲ. ಟೈಮ್ ತೆಗೆದುಕೊಳ್ಳಿ ಏಕೆಂದರೆ ನಾನು ನೋಟೀಸ್ ಕೊಟ್ಟಿದ್ದೇನೆ. Suppose he wants time to reply, I have no objection.

ಆ ಟೈಮ್ ಅವರಿಗೆ ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ. ಮಾನ್ಯ ಕಂದಾಯ ಸಚಿವರ ಕಡೆಯಿಂದ ನಾನು ಉತ್ತರ ಅಪೇಕ್ಷೆ ಪಡುವುದಿಲ್ಲ. ಏಕೆಂದರೆ ಕಂದಾಯ ಸಚಿವರು ಈಗಾಲೇ ಕ್ರಮ ತೆಗೆದುಕೊಂಡಿದ್ದಾರೆ. ಕ್ರಮ ತೆಗೆದುಕೊಳ್ಳಬೇಕಾಗಿರುವುದು ಸಚಿವರ ಮೇಲೆ ಆ ಕ್ರಮವನ್ನು ಕಂದಾಯ ಸಚಿವರು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಕೆಲವು ಕ್ರಮ ಭೂಮಿ ಸರ್ಕಾರಕ್ಕೆ ಜಮಾ ಮಾಡುವುದು ಮತ್ತು ಸ್ಟ್ಯಾಂಪ್ ಡ್ಯೂಟಿ ವಸೂಲಿ ಮಾಡುವುದು ಈ ಕ್ರಮ ಮುಖ್ಯಮಂತ್ರಿಗಳ ಕಡೆಯಿಂದ ಆಗಬೇಕಾಗಿದೆ. ಒಬ್ಬ ಕ್ಯಾಬಿನೇಟ್ ಮಂತ್ರಿ· ಮತ್ತೊಬ್ಬ ಕ್ಯಾಬಿನೇಟ್ ಮಂತ್ರಿಯ ಮೇಲೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಹಾಗಾಗಿ ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳೇ ನನಗೆ ಉತ್ತರ ಕೊಡಬೇಕು ಸಾಂಡ್ರಾರವರು ಉತ್ತರ ಕೊಡಲು ಸಮಯ ಬಯಸಿದರೆ ಅವಕಾಶ ಕೊಡಬೇಕು ಇಷ್ಟು ಹೇಳಿ ತಾವು ಏನು ನನಗೆ ಮಾತನಾಡಲು ಸಮಯ ಕೊಟ್ಟಿ ಅದಕ್ಕೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ. ನಾನೂ ಸಹಿ ಮಾಡಿದ್ದೇನೆ. ನನಗೆ ಅವಕಾಶ ಕೊಡಬೇಕು.

ಶ್ರೀ ಶಿವಾನಂದ ಎಸ್. ಕೌಜಲಗಿ : ಸನ್ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು : ಎರಡು ನಿಮಿಷ ಅವಕಾಶ ಕೊಡುತ್ತೇನೆ. ಅಷ್ಟರಲ್ಲಿ ತಾವು ಮುಗಿಸಿ ಕಾರಣ ದೇಶಪಾಂಡೆಯವರು ಎಲ್ಲಾ ಕವರ್ ಮಾಡಿದ್ದಾರೆ.

+ ಶ್ರೀ ಎಸ್. ಎಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಯಾವುದಾದರೂ ಉನ್ನತ ಸ್ಥಾನದಲ್ಲಿರುವಂತಹವರು ಅಧಿಕಾರ ಉಪಯೋಗ ಮಾಡಿಕೊಂಡರೂ ಸಹ ಇವತ್ತಿನ ದಿವಸ ಸರ್ಕಾರ ಕ್ರಮ ತೆಗೆದುಕೊಳ್ಳಲು ಹಿಂಜರಿಯುವುದಿಲ್ಲ ಎಂದು ಹೇಳಿ. ಒಂದೇ ಒಂದು ನಿದರ್ಶನ ನಾನು ತಮಗೆ ಹೇಳಬೇಕೆಂದರೆ ಡಿವಿಜನಲ್ ಕಮೀಷನರ್ ಅಡ್ವರ್ಸ್ ರಿಪೋರ್ಟ್ ಕೊಟ್ಟ ನಂತರ ಅವರನ್ನು ಅಲ್ಲಿಂದ ಎತ್ತಂಗಡಿ ಆಯಿತು. ಅದೇ ಪ್ರಕಾರ ತಾವು ನೋಡಬಹುದು ಬೆಳಗಾಂ ಅವರು ರಿಪೋರ್ಟ್ ಕೊಟ್ಟನಂತರ ಅವರನ್ನು ವರ್ಗಾವಣೆ ಮಾಡಿದರು. ಜಾಫರ್ ಷರೀಫ್‌ರವರ ಬಗ್ಗೆ ಏನು ರಿಪೋರ್ಟ್ ಕೊಟ್ಟರು ಆಗ ಅಲ್ಲಿದ್ದಂಥ ವೀಣಾ ಶ್ರೀರಾಮ್ ಅವರನ್ನು ವರ್ಗಾವಣೆ ಮಾಡಿದರು. ಮತ್ತೊಂದು ಏನೆಂದರೆ ಸಾಂಡ್ರಾರವರು ಪತ್ರಿಕಾ ಹೇಳಿಕೆಯಲ್ಲಿ ಹೇಳಿದರು ಐಎಎಸ್ ಅಧಿಕಾರಿಗಳು ಸರಿಯಾಗಿ ಕಾನೂನು ಓದಿಲ್ಲ. ಸ್ಪಷ್ಟವಾಗಿ ಹೇಳುತ್ತೇನೆ. ಅವರಿಗೆ ಸರಿಯಾದ ತಿಳುವಳಿಕೆ ಇದ್ದರೆ ಹೀಗೆ ಸರ್ಕಾರಕ್ಕೆ ವರದಿ ಕಳುಹಿಸುತ್ತಿರಲಿಲ್ಲ. ಇದು ಸಂಯುಕ್ತ ಕರ್ನಾಟಕ

ದಿನಾಂಕ 26-8-94 ರಂದು ಬಂದಿದೆ. ಅಂದರೆ ಮಾನ್ಯ ಮಂತ್ರಿಗಳು ಜವಾಬ್ದಾರಿ ಸ್ಥಾನದಲ್ಲಿದ್ದವರು ಈ ರೀತಿ ಹೇಳುತ್ತಾರೆ. ಯಾವ ಜವಾಬ್ದಾರಿ ಸ್ಥಾನದಲ್ಲಿರುವಂತಹ ಅಧಿಕಾರಿಗಳು ಸೀನಿಯರ್ ಐಎಎಸ್ ಅಧಿಕಾರಿಗಳು ಅವರ ಮೇಲೆ ರಿಪೋರ್ಟ್ ಕೊಟ್ಟಾಗ ಆ ಅಧಿಕಾರಿಗಳಿಗೆ ಬುದ್ಧಿ ಇಲ್ಲ ತಲೆ ಇಲ್ಲ ಎಂದು ಹೇಳಿದ್ದಾರೆ.

5.30 ಪಿ.ಎಂ.

ಇವರಿಗೆ ಫೇವರಬಲ್ ವರದಿ ಕೊಟ್ಟಿದ್ದರೆ ಆ ಐಎಎಸ್ ಅಧಿಕಾರಿಗಳು ಚಲೋ ಇರುತ್ತಿದ್ದರು. ಅಧಿಕಾರಿಗಳು ಯಾವಾಗ ಅವರಿಗೆ ಪ್ರತಿಕೂಲ ಕೊಡುತ್ತಾರೆ ಆಗ ಆ ಅಧಿಕಾರಿಗಳಿಗೆ ಯಾವುದೇ ಕಾಯಿದೆ ಜ್ಞಾನ ಇಲ್ಲ, ಅವರೇನೂ ಓದಿಲ್ಲ ಎಂದು ಒಂದು ಪ್ರೆಸ್‌ಸ್ಟೇಟ್‌ಮೆಂಟ್ ಕೊಡುತ್ತಾರೆ. ಇದನ್ನು ತಾವು ಕೊಟ್ಟಿಲ್ಲ ಎಂದು ಡಿನೈ ಮಾಡಿದರೆ ನನಗೆ ಸಂತೋಷವಾಗುತ್ತದೆ. ಇವರು ಯಾವ ಪ್ರಕಾರ ಸಸ್ಪೆನ್‌ಷನ್ ಅನ್ನು ಇಲ್ಲೀಗಲ್ ಎಂದು ಹೇಳುತ್ತಾರೆ. ರೆವಿನ್ಯೂ ಮಿನಿಸ್ಟರ್‌ರವರು ಎಲ್ಲಾ ವರದಿ ತೆಗೆದುಕೊಂಡು ಸಸ್ಪೆನ್‌ಷನ್ ಮಾಡಿದರೆ ಅದು ಇಲ್ಲೀಗಲ್ ಎಂದು ಹೇಳುತ್ತಾರೆ. ಅವರು ಮಾಡಿದನ್ನೆಲ್ಲಾ ತಾವು ಡಿಫೆನ್ಡ್ ಮಾಡಿಕೊಳ್ಳುವುದು ಇದು ಸರಿಯಲ್ಲ. ಆದ್ದರಿಂದ ಈಗಾಗಲೇ ಮಾನ್ಯ ದೇಶಪಾಂಡೆಯವರು ಹೇಳಿದ ಪ್ರಕಾರ ಕಾಯಿದೆ ಪ್ರಕಾರ ತಾವು ಕ್ರಮ ಕೈಗೊಳ್ಳಬೇಕು.

+ ಶ್ರೀ ಸಿ. ಬೈರೇಗೌಡ (ವೇಮಗಲ್) : ಅಧ್ಯಕ್ಷರೇ, ಈ ವಿಷಯದಲ್ಲಿ ಚರ್ಚೆ ಮಾಡುತ್ತಾ ಹೊಸ ಹೊಸ ಆಕಾರಗಳು ಇವತ್ತು ಹೊರಗಡೆ ಬರುತ್ತಿವೆ. ಮಾನ್ಯ ಮುಖ್ಯಮಂತ್ರಿಗಳಿದ್ದಿದ್ದರೆ ಚೆನ್ನಾಗಿತ್ತು. ಇದೇ ಸದನದಲ್ಲಿ ನಾನು ಒಂದು ಸಂದರ್ಭದಲ್ಲಿ ಈ ಸದನದ ವರದಿ ಆಧಾರವಾಗಿಟ್ಟುಕೊಂಡು ರಾಜ್ಯದಲ್ಲಿರುವ ಕೆಲವು ಹಿರಿಯ ಅಧಿಕಾರಿಗಳನ್ನು ಕ್ರಿಮಿನಲ್ಸ್ ಎಂದು ಕರೆದಿದ್ದೆ. ಅಂಥವರು ಒಬ್ಬರು ಮುಖ್ಯಕಾರ್ಯದರ್ಶಿಗಳು ಕೂಡ ಆಗಿದ್ದರು. ಅವರನ್ನು ಈ ಸದನದ ವರದಿ ಕ್ರಿಮಿನಲ್ ಎಂದು ಕರೆದಿತ್ತು. ಅಂಥವರನ್ನು ಮುಖ್ಯ ಕಾರ್ಯದರ್ಶಿಗಳನ್ನಾಗಿ ಮಾಡಿದ್ದರು. ಆ ವಿಚಾರವಾಗಿ ಬಹಳ ಕಟುವಾಗಿ ಆವತ್ತು ನಾನು ಟೀಕೆ ಮಾಡಿದ್ದೆ. ಇವತ್ತು ನನಗೆ ಬಹಳ ಸಂತೋಷವಾಗುತ್ತದೆ. ಎಲ್ಲಾ ಅಧಿಕಾರಿಗಳು ಆ ರೀತಿಯಾಗಿ ಇಲ್ಲ, ತಮ್ಮ ಕರ್ತವ್ಯವನ್ನು ಹಾಗೂ ಹೊಣೆಗಾರಿಕೆ ಅರಿತು ರಾಜ್ಯದ ಹಿತವನ್ನು ಈ ನಾಡಿನ ಕಾನೂನನ್ನು ಚಾಚೂತಪ್ಪದೆ ಪಾಲಿಸುವಂಥವರು ಇದು ಲೋಪ ಆಗಿದೆ ಎಂದು ಅದೂ ಒಬ್ಬ ಸಚಿವರ ಮೇಲೆ ವರದಿ ಕೊಡಬೇಕಾಗಿದ್ದರೆ ಅಂತಹ ಅಧಿಕಾರಿಗಳು ಎಷ್ಟು ದಕ್ಷರು ಎಂದು ಈ ಸಂದರ್ಭದಲ್ಲಿ ಅವರನ್ನು ನಾನು ಅಭಿನಂದಿಸುತ್ತೇನೆ. ಇಲ್ಲದಿದ್ದರೆ ನಾನು ಕರ್ತವ್ಯ ಚ್ಯುತಿ ಮಾಡಿದ ಹಾಗಾಗುತ್ತದೆ. ಏಕೆಂದರೆ ಒಂದು ಸಾರಿ ಅವರು ತಪ್ಪು ಮಾಡಿದಾಗ ನಾನು ಅವರನ್ನು ಕ್ರಿಮಿನಲ್ ಎಂದು ಕರೆದೆ, ಅವರು ಒಳ್ಳೆಯ ಕೆಲಸ ಮಾಡಿದ್ದರೆ ಅವರನ್ನು ಅಭಿನಂದಿಸುವುದು ನನ್ನ ಕರ್ತವ್ಯ ಎಂದು ಈ ಮಾತು ಹೇಳುತ್ತಿದ್ದೇನೆ. ಇವತ್ತೇನು ಆಪಾದನೆ ಇದೆ ಎಂದು ಸಂಪೂರ್ಣವಾಗಿ ಸಾಬೀತಾಗಿದೆ. ನಮ್ಮ ವಿರೋಧಪಕ್ಷದ ನಾಯಕರು ಕಡತದಲ್ಲಿರುವ ಕಾಗದಪತ್ರಗಳನ್ನು ಓದಿದ್ದಾರೆ. ಅವುಗಳು ಯಾವುದನ್ನೂ ಮುಖ್ಯಮಂತ್ರಿಗಳು ಇಲ್ಲ ಎಂದು ಹೇಳಿಲ್ಲ. ಒಪ್ಪಿಕೊಂಡಿದ್ದಾರೆ. ಹೌದು, ನಮ್ಮದು ಟ್ರಾನ್ಸ್‌ಪರೆಂಟ್ ಗವರ್ನ್‌ಮೆಂಟ್, ಆರ್ಡರಲ್ಲಿ ಹೇಳಿದ್ದಾರೆ ಏನೇನು ಆಯಿತು, ಕಾಗದಪತ್ರ ಬಂದಿರುವುದು ನಿಜ ಎಂದು ಎಲ್ಲಾ ಒಪ್ಪಿಕೊಂಡಿದ್ದಾರೆ. ಇವರು ಕ್ರಮ ಯಾರ ಮೇಲೆ ತೆಗೆದುಕೊಂಡಿದ್ದಾರೆ ಎಂದರೆ ಇದಕ್ಕೆ ಸಂಬಂಧಪಟ್ಟವರು ಯಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು ಸರ್ಕಾರ. ಯಾರೋ ಇಬ್ಬರು ಸಬ್ ರಿಜಿಸ್ಟ್ರಾರನ್ನು ಸಸ್ಪೆಂಡ್ ಮಾಡಿದರೆ ಇದಕ್ಕೆ ಅರ್ಥವೇನಿದೆ? ಮತ್ತು ಕೌಜಲಗಿಯವರು ಹೇಳಿದಂತೆ ಈ ರೀತಿ ದಿಟ್ಟ ವರದಿ ಕೊಟ್ಟ ಅಧಿಕಾರಿಗಳಿಗೆ ನೀವು ಶಹಭಾಷ್‌ಗಿರಿ ಕೊಡಬೇಕಾಗಿತ್ತು. ಅವರನ್ನು ವರ್ಗ ಮಾಡುತ್ತಾರೆ ಎಂದರೆ ನಿಮಗೆ ಮಾನಮರ್ಯಾದೆ

ಏನೂ ಇಲ್ಲವೇ? ಅಂತಹ ದಕ್ಷ ಅಧಿಕಾರಿಗಳ ಬಗ್ಗೆ ಹೆಮ್ಮೆ ಪಡಬೇಕಾಗಿತ್ತು. ಅವರನ್ನು ಗೌರವದಿಂದ ಕಾಣಬೇಕಾಗಿತ್ತು. ಬೆಂಗಳೂರಲ್ಲೂ ಅದೇರೀತಿಯ ಒಂದು ವ್ಯವಸ್ಥೆ ನಡೆಯಿತು. ಇಲ್ಲಿದ್ದ ವಿಭಾಗಾಧಿಕಾರಿ ಶ್ರೀಮತಿ ವೀಣಾ ಶ್ರೀರಾಮ ಅನ್ನುವವರನ್ನು ವರ್ಗಾವಣೆ ಮಾಡಿದರೆ. ಇವತ್ತು ಬೆಳಗಾಂ ವಿಭಾಗಾಧಿಕಾರಿಗಳನ್ನು ಯಾವ ಕಾರಣದಿಂದ ವರ್ಗ ಮಾಡಿದಿರೋ ಅದೇ ಕಾರಣದಿಂದ ಬೆಂಗಳೂರು ವಿಭಾಗಾಧಿಕಾರಿಗಳನ್ನು ವರ್ಗ ಮಾಡಿದಿರಿ ಮತ್ತು ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ ಅವರು ಮಂತ್ರಿಗಳಾಗಿ ಅಧಿಕಾರ ದುರುಪಯೋಗ ಮಾಡಿಕೊಂಡಿರುವುದು ಒಂದು ತೃಣ ಇದ್ದರೆ ಹೇಳಿ ಎಂದು. ಇವತ್ತು ರಿಸರ್ವ್‌ಬ್ಯಾಂಕಲ್ಲಿ ಹೇಳಿರುವುದನ್ನು ದೇಶಪಾಂಡೆಯವರು ಉಲ್ಲೇಖಿಸಿದ್ದಾರೆ. ಇವರು ಕೋಟರಿ ನಡೆಸಿರುವ ವ್ಯವಹಾರವನ್ನು ಹೊರಗಡೆ ಇಟ್ಟಿದ್ದಾರೆ. ಇದಕ್ಕೆ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ. ಪುನಃ ಯಾರನ್ನೋ ಗುಮಾಸ್ತರನ್ನು ಹೊಣೆಗಾರರನ್ನು ಮಾಡಿ ಸಸ್ಪೆಂಡ್ ಮಾಡುವುದೋ? ಇಲ್ಲ, ಮುಖ್ಯ ಮಂತ್ರಿಗಳು ಹೇಳುವುದಕ್ಕೆ ಅರ್ಥ ಇದೆ ಎಂದು ಅನ್ನಿಸಿಕೊಳ್ಳಬೇಕಾಗಿದ್ದರೆ ಮೊದಲು ಮಾನ್ಯ ಸಾಂಡ್ರಾ ಅವರನ್ನು ಬರ್ತ್‌ಫ್ ಮಾಡಬೇಕಾದ್ದು ಅವರ ಮೊದಲ ಕರ್ತವ್ಯ. ಅದನ್ನು ಬಿಟ್ಟು ಯಾರೋ ಒಬ್ಬ ಸಬ್‌ರಿಜಿಸ್ಟ್ರಾರನ್ನು ಸಸ್ಪೆಂಡ್ ಮಾಡಿ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆಂಬುದು ಅರ್ಥವಿಲ್ಲತಕ್ಕದ್ದು. ಆ ಕೆಲಸವನ್ನು ಸರ್ಕಾರ ದಯಮಾಡಿ ಮಾಡಬೇಕೆಂದು ನಾನು ತಮ್ಮ ಮೂಲಕ ವಿನಂತಿಮಾಡುತ್ತೇನೆ.

+ ಶ್ರೀ ಬಿ.ಎಚ್. ಬನ್ನಿಕೋಡ್ (ಹಿರೇಕೆರೂರು) : ಉಪಾಧ್ಯಕ್ಷರೇ, ಮಾನ್ಯ ವಸತಿ ಸಚಿವ ಸಾಂಡ್ರಾ ಅವರ ಮೇಲಿನ ಆಪಾದನೆ ಬಗ್ಗೆ ಈ ಸದನದಲ್ಲಿ ಅನಿವಾರ್ಯವಾಗಿ ಚರ್ಚಿಸಬೇಕಾದಂತಹ ಪ್ರಸಂಗ ಒದಗಿವೆ. ಇಲ್ಲಿ ಮುಖ್ಯಮಂತ್ರಿಗಳು ಹೇಳಿದ್ದಾರೆ, ದಕ್ಷಸರ್ಕಾರ, ಬಹಳ ಕಾನೂನು ಬದ್ಧವಾಗಿ ನಡೆಯುತ್ತೇವೆ, ತೆರೆದ ಮನಸ್ಸಿನಿಂದ ನಾವು ವಿಚಾರಣೆ ಮಾಡುತ್ತೇವೆ ಎಂದು. ಇವರ ಅಧಿಕಾರಿಗಳು ಏನೇನು ಮಾಡಿದ್ದಾರೆ ಆಪಾದನೆ ಬಂದ ಕೂಡಲೇ ವಿಚಾರಣೆ ಮಾಡುತ್ತೇವೆ ಎಂದು. ಆದರೆ ಇದು ಸತ್ಯವೇ ಎಂಬುದನ್ನು ನಾವಿಲ್ಲಿ ಪ್ರಶ್ನೆ ಮಾಡಬೇಕಾಗಿದೆ. ಮಾನ್ಯ ವೀರಪ್ಪಮೊಯ್ಲಿಯವರ ಸಚಿವಸಂಪುಟದಲ್ಲಿರುವ ವಸತಿ ಸಚಿವರು ಸರ್ಕಾರದಲ್ಲಿದ್ದು ಮಾಡಿದ ಕಾನೂನುಬಾಹಿರ ಕೃತಿಗೆ ತಾವು ಮಾಡಿದ ತಪ್ಪನ್ನು ಮುಚ್ಚಿಕೊಳ್ಳಲಿಕ್ಕೆ ಸರ್ಕಾರದ ಕಾರ್ಯಾಂಗವೇ ತನಿಖೆಯನ್ನು ಮಾಡಿ ವರದಿ ಸಲ್ಲಿಸಿದೆ.

ಆ ಸರ್ಕಾರದ ಕಾರ್ಯಾಂಗ ಪ್ರಾಮಾಣಿಕವಾಗಿ ದಕ್ಷತೆಯಿಂದ ನಡೆಸಿದ ತನಿಖೆಯನ್ನು ಸರ್ಕಾರ, ರೆವಿನ್ಯೂ ಸಚಿವರು, ಸಂಬಂಧಪಟ್ಟ ಇಬ್ಬರು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದನ್ನು ಸಂಪುಟದಲ್ಲಿದ್ದುಕೊಂಡು ತಮ್ಮ ಕಂದಾಯ ಸಚಿವರಾದ ಸಹೋದ್ಯೋಗಿ ತೆಗೆದುಕೊಂಡ ತೀರ್ಮಾನ ಸರಿಯಲ್ಲವೆಂದು ಹೇಳಿದ ಮಾನ್ಯ ಸಾಂಡ್ರ ಅವರು ಸಚಿವ ಸಂಪುಟದಲ್ಲಿ ಮುಂದುವರೆಯಲಿಕ್ಕೆ ಅರ್ಹರೇ ಎಂದು ನಾನು ಸರ್ಕಾರವನ್ನು ಕೇಳುತ್ತಿದ್ದೇನೆ. ಮತ್ತು ಕಂದಾಯ ಸಚಿವರು ತೆಗೆದುಕೊಂಡ ಕ್ರಮ ಅದು ಸರಿಯಲ್ಲ ಎಂದು, ಸಚಿವ ಸಂಪುಟದಲ್ಲಿ ಜಂಟಿ ಜವಾಬ್ದಾರಿ ಹೊತ್ತ ಒಬ್ಬ ಸಚಿವರು ಇನ್ನೊಬ್ಬ ಸಚಿವರ ಕ್ರಮವನ್ನು ಪ್ರಶ್ನಿಸುವುದಾದರೆ ಇದಕ್ಕೆ ಸರ್ಕಾರ ಎಂದು ಹೇಳಬೇಕೇ? ಇವರನ್ನು ಮುಖ್ಯಮಂತ್ರಿಗಳು ಕೈಬಿಡಬೇಕೇ ಬಿಡಬಾರದೇ ಇಂಥವರ ಜೊತೆ ಇಟ್ಟುಕೊಂಡು ಮುಖ್ಯಮಂತ್ರಿಗಳು ಏನು ಈ ಸರ್ಕಾರದಲ್ಲಿದ್ದಾರೆ ಇವರ ನೀತಿ ನೀತಿ ಏನು ಇವರ ಮಾತಿಗೂ ಕೃತಿಗೂ ಆಕಾಶ ಭೂಮಿಯಷ್ಟು ಅಂತರ ಎಂಬುದನ್ನು ವೀರಪ್ಪಮೊಯ್ಲಿಯವರ ಸಚಿವ ಸಂಪುಟ ಅಥವಾ ಮುಖ್ಯಮಂತ್ರಿಗಳು ಈ ಹಗರಣದಿಂದ ಸಮಾಜಕ್ಕೆ ಮತ್ತು ಜನತೆಗೆ ತೋರಿಸಿಕೊಟ್ಟಿದ್ದಾರೆ. ಸಚಿವರು ಹೇಳಿದಂತಹ ಮಾತನ್ನು ಇಲ್ಲಿ ಹೇಳುತ್ತೇನೆ. "ನಿಮ್ಮ ವಿರುದ್ಧ ಮಾಡಿದ ಭೂಹಗರಣ ಆರೋಪ ನೀವು ನಿರಾಕರಿಸುತ್ತಿದ್ದೀರಿ, ಆದರೆ ಕಂದಾಯ ಮಂತ್ರಿ ಧರ್ಮಸಿಂಗ್‌ರವರು ಈಗಾಗಲೇ

ಸಬ್‌ರಿಜಿಸ್ಟ್ರಾರನ್ನು ಅಮಾನತ್ತುಗೊಳಿಸಿ ಇನ್ನೂ ವಿವರವಾದ ವಿಚಾರಣೆಗೆ ಕ್ರಮ ತೆಗೆದುಕೊಂಡಿದ್ದಾರೆ" ಇದಕ್ಕೇನು ಹೇಳುತ್ತೀರೆಂದು ಅವರನ್ನು ಕೇಳಿದರೆ, 26ನೇ ತಾರೀಖು ಸಂಯುಕ್ತ ಕರ್ನಾಟಕಕ್ಕೆ ಅವರು ಕೊಟ್ಟಂತಹ ಹೇಳಿಕೆ ಇದು, ಸರ್ಕಾರ ಸಚಿವರು ಮುಖ್ಯಮಂತ್ರಿ ಜಂಟಿ ಜವಾಬ್ದಾರಿ ನಾಲ್ಕೂವರೆ ಕೋಟಿ ಜನರಿಗೆ ಕಾನೂನುಬದ್ಧವಾಗಿ ನಡೆಯುತ್ತಿದ್ದೇವೆಂದು ಪ್ರಮಾಣ ತೆಗೆದುಕೊಂಡು ರಾಜ್ಯದ ಜನತೆಗೆ ನ್ಯಾಯ ದೊರಕಿಸಿಕೊಡುತ್ತೇವೆ, ಕಾನೂನು ಪರಿಪಾಲನೆ ಮಾಡುತ್ತೇವೆಂಬ ಸಚಿವರು ಕಾನೂನುಬದ್ಧವಾಗಿ ಮಾಡಿದ್ದನ್ನು ಅಲ್ಲಗಳೆದು ಆ ಮಂತ್ರಿಸ್ಥಾನದಲ್ಲಿ ಒಂದು ಕ್ಷಣ ಕೂತುಕೊಳ್ಳುವುದಕ್ಕೂ ವಸತಿ ಸಚಿವರಿಗೆ ಅರ್ಹತೆ ಇಲ್ಲ. ಆದ್ದರಿಂದ ಅವರು ದಯವಿಟ್ಟು ರಾಜೀನಾಮೆ ಕೊಟ್ಟು ಈ ಕೂಡಲೇ ಹೊರಗೆ ಬರಬೇಕು. ಅವರು ರಾಜೀನಾಮೆ ಕೊಡದೇ ಹೋದರೆ ಮುಖ್ಯಮಂತ್ರಿಗಳು ಅವರನ್ನು ಅನಿವಾರ್ಯವಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಕಾನೂನು ಪರಿಪಾಲನೆ ದೃಷ್ಟಿಯಿಂದ ಅವರನ್ನು ಮಂತ್ರಿಮಂಡಲದಿಂದ ತಗೆದುಹಾಕುವುದು ಅನಿವಾರ್ಯ. ಇವತ್ತು ಮುಖ್ಯಮಂತ್ರಿಗಳು ಬೆನ್ನುತಟ್ಟಿಕೊಂಡರು, ಎಷ್ಟು ಬೇಗ ವಿಚಾರಣೆ ಮಾಡುತ್ತೇವೆ ಎಂದು. ಮುಖ್ಯಮಂತ್ರಿಗಳಿಂದ ವಿಚಾರಣೆ ಆಗಿಲ್ಲ. ಜನಸಾಮಾನ್ಯರು ಈ ಮಂತ್ರಿಯವರ ಕಾನೂನುಬಾಹಿರ ಕೆಲಸಗಳನ್ನು ಕಂಡು ರೋಸಿ ಒಂದು ಅರ್ಜಿ ಕೊಟ್ಟಾಗ ವಿಚಾರಣೆ ತಾನಾಗೇ ಪ್ರಾರಂಭವಾಗಿ ಈ ಮಟ್ಟಕ್ಕೆ ಬರುತ್ತದೆ ಎಂದಿದ್ದರೆ ವಿಚಾರಣೆ ಆಗುತ್ತಿರಲಿಲ್ಲ.

ಸರ್ವೆಸಾಮಾನ್ಯವಾಗಿ ಬರುವ ಅರ್ಜಿಗಳ ಪೈಕಿ ಅದು ವಿಚಾರಣೆಗೆ ಹೋಗಿತ್ತು. ಮುಖ್ಯಮಂತ್ರಿಗಳಾಗಲಿ ಮಂತ್ರಿಗಳಾಗಲಿ ತಾವು ಮಾಡಿದ ಸಾಧನೆ ಎಂದು ಹೇಳಿಕೊಳ್ಳಲು ಸಾಧ್ಯ ಇಲ್ಲ. ಇದು ಈಗ ಬೆಳಕಿಗೆ ಬಂದನಂತರ ಅವರು ಪಶ್ಚಾತ್ತಾಪ ಪಡುತ್ತಿದ್ದಾರೆ,ಇದನ್ನು ಹೇಗೆ ಮರೆಮಾಚಬೇಕು, ಎಂದು. ಈಗ ಮುಖ್ಯಮಂತ್ರಿಗಳು ಹೇಳಿದ ಮಾತನ್ನು ನಾವು ಕೇಳಿದ್ದೇವೆ. ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಮುಂದೇನು ಕ್ರಮ ತೆಗೆದುಕೊಳ್ಳುತ್ತೀರಿ, ಅದಕ್ಕೆ ಉತ್ತರ ಇಲ್ಲ, ಅಧಿಕಾರಿಗಳು ತಮ್ಮ ಪ್ರಾಮಾಣಿಕತೆ ಪ್ರದರ್ಶನ ಮಾಡಿದ್ದಕ್ಕೆ ಮುಖ್ಯಮಂತ್ರಿಗಳು ತಾವು ಮಾಡಿದ್ದು ತಮ್ಮ ಸರ್ಕಾರ ಮಾಡಿದ್ದು ಎಂದು ಹೇಳಿಕೊಳ್ಳುತ್ತಿದ್ದಾರಲ್ಲಾ.

ಒಬ್ಬ ಸಚಿವರು ತೆಗೆದುಕೊಂಡ ಕ್ರಮಕ್ಕೆ ಸಚಿವ ಸಂಪುಟದಲ್ಲಿ ಇದ್ದುಕೊಂಡು ಅದು ಸರಿಯಿಲ್ಲವೆಂದು ಹೇಳುವುದಕ್ಕೆ ಮತ್ತು ಅಧಿಕಾರಿಗಳು ಮಾಡಿದಂಥ ಪ್ರಾಮಾಣಿಕ ತನಿಖೆಯನ್ನು ಸರ್ಕಾರದ ಅಂಗವಾಗಿರತಕ್ಕ ಮಂತ್ರಿಗಳು ಅಲ್ಲಗಳೆದಿರುವುದರಿಂದ ಅವರು ಈ ಸಚಿವ ಸಂಪುಟದಲ್ಲಿರುವುದಕ್ಕೆ ಅರ್ಹತೆ ಇಲ್ಲ, ಕೂಡಲೇ ರಾಜೀನಾಮೆ ಕೊಡಬೇಕು. ಇಲ್ಲದೇ ಹೋದರೆ ಮುಖ್ಯಮಂತ್ರಿಗಳು ಅವರನ್ನು ಹೊರಕ್ಕೆ ಹಾಕಬೇಕು, ಇಲ್ಲದೆ ಹೋದರೆ ಆ ಕ್ಷೇತ್ರದ ಜನ ಇನ್ನು ಮೂರು ತಿಂಗಳೊಳಗೆ ಅವರಿಗೆ ತಕ್ಕ ಪಾಠವನ್ನು ಕಲಿಸುತ್ತಾರೆ. ಈ ಸದನದಲ್ಲಿ ಮುಂದೆ ಡಿಸೆಂಬರ್ ತಿಂಗಳಲ್ಲಿ ಉತ್ತರ ನಮಗೆ ನಿಮಗೆ ಸಿಗುತ್ತದೆ ಎಂಬ ಮಾತನ್ನು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಗೋಪಿನಾಥ ಆರ್. ಸಾಂಡ್ರಾ (ವಸತಿ ಸಚಿವರು) : ಸಭಾಪತಿಗಳೇ, ಈ ದಿನ ನಮ್ಮ ವಿರೋಧ ಪಕ್ಷದ ನಾಯಕರು ಹಾಗೂ ಅವರ ಸಂಗಡಿಗರು, ನನ್ನ ಹಿತಚಿಂತಕರು ಕೆಲವು ಆರೋಪಗಳನ್ನು ಮಾಡಿದ್ದಾರೆ ಹಾಗೂ ಅವರು ಮಾತನಾಡಿದ್ದಕ್ಕೆ ಉತ್ತರಿಸುವುದು ನನ್ನ ಕರ್ತವ್ಯ. ಆದರೆ 311ರಲ್ಲಿ ಹೇಳುತ್ತಿದ್ದೇನೆ, ಏನೆಂದರೆ...

> "...has given previous intimation to the Speaker and also to the Minister concerned, so that the Minister may be able to make investigation into the matter for the purpose of reply."

ಈ ಒಂದು ಸೆಕ್ಷನ್ ಏನಿದೆ ಇದರ ಅರ್ಥ ಅವರು ಸರಿಯಾಗಿ ಮಾಡಿಕೊಂಡಿದ್ದರೆ ಇಷ್ಟೆಲ್ಲಾ ರಾದ್ಧಾಂತ ಹೇಳುತ್ತಿರಲಿಲ್ಲ. ಈಗ ನನ್ನ ಉತ್ತರ ಹೀಗಿದೆ. Notice under Rule 301 of the Legislative Assembly given by the Hon'ble Leader of Opposition and other Opposition Members contains two charges. As far as the first charge is concerned, I have not, I am sorry, I have categorically said, I have not purchased any land to an extent of 9 acres in survey No. 70-72 of Unakal village. In Opposition Leader's letter he says, I will read out the letter and signed by him on 26.8.94. "Rules of procedure and Conduct of Business of Legislative Assembly. With regard to purchase of land by Sri Gopinath R. Sandra, Hon'ble Minister for Housing, at Unakal village 70,70/1, 72, 70/2." I have not purchased land at Unakal and this is the first thing which he has written in the letter. He says very very far from truth. ಇರುವಂಥದ್ದು.

ಹೇಳಿದ್ದಾರೆ ಇದು ಒಂದನ್ನು ಒಪ್ಪಿಕೊಂಡುಬಿಟ್ಟರೆ ಮುಂದೆ ಅಲ್ಲಿರುವಂತಹ ಜನ ಇದರ ಬಗ್ಗೆ ತಿಳಿದುಕೊಳ್ಳುತ್ತಾರೆ. Now I will read out my answer. Notice under rule 31 of the Legislative Assembly rules served on me by the Hon'ble Leader of Opposition and other Opposition members contains two charges. As far as the first charge is concerned, I have not purchased any land to an extent of 9 acres 70/72 of Unakal village. In respect of the Second charge that I misused the office of the Chairman, Dharwad Industrial Co-operative Bank by Sanctioning loans to the various institutions where my kith and kin are there, either chairman or Directors and also I had obstructed recovery of loans, I submit that I have not received the records in support of such charge. Unless I am served with those records, I am unable to verify the facts and submit my explanation because the second charge is two decade ole one. Regarding the incident said to have occured at such a distance of time, I cannot speak without verifying the facts and looking into the relevant records of the bank. Therefore, I submit that the Opposition be asked to make them available to me and grant me time so that I can speak with reference to those papers after due verification.

Since Notice opens with a charge that I have purchased 9 acres of land Survey No. 70, which is actually incorrect. I presume that the 2nd charge also suffers from such infirmities.

ಅವರು ಇನ್ನೊಂದು ಮಾತನ್ನು ಹೇಳಿದರು. ಇವತ್ತಿನವರೆಗೂ ಇಂಜಿನಿಯರಿಂಗ್ ಸೊಸೈಟಿ ಚೇರ್ಮನ್ ಇದ್ದೇನೆ ಇಂಡಸ್ಟ್ರಿಯಲ್ ಬ್ಯಾಂಕ್‌ಗೆ ಚೇರ್ಮನ್ ಇದ್ದೇನೆ ಎಂದು sorry, those persons who have supplied information, given wrong information. I was chairmanin 1972,73,74 ಆಮೇಲೆ ಚೇರ್ಮನ್ ಆಗಿಲ್ಲ. ಎನ್ನುವ ಮಾತನ್ನು ಹೇಳಿದ್ದರೆ ತಪ್ಪಾಗಲಿಕ್ಕಿಲ್ಲ. ಪಾಪ ಅವರದ್ದೇನೂ ತಪ್ಪಿಲ್ಲ. ಯಾರೋ ನನ್ನ ಹಿತಚಿಂತಕರು ಬಂದು ಹೇಳುತ್ತಾರೆ. ಅದನ್ನು ಕೇಳಿಕೊಂಡು ಅವರು ಇಲ್ಲಿ ಹೇಳಿದ್ದಾರೆ. ಇದೇ ರೀತಿಯಾಗಿ ಅವರೇನು ಆಪಾದನೆ ಮಾಡಿದ್ದಾರೆ ಆ ಒಂದೊಂದಕ್ಕೂ ಸರಿಯಾಗಿ ಉತ್ತರ ಕೊಡುವಂತಹ ಶಕ್ತಿ ಸಾಮರ್ಥ್ಯ ಬುದ್ಧಿವಂತಿಕೆ ನನ್ನಲ್ಲಿದೆ. ನಾನು ಯಾವುದೇ

ಕಾಯಿದೆಯನ್ನು ಉಲ್ಲಂಘನೆ ಮಾಡಿಲ್ಲ. ಆ ರೀತಿ ಉಲ್ಲಂಘನೆ ಮಾಡಿದರೆ ನಾನು ತಪ್ಪಿತಸ್ಥ ಯಾವ ಶಿಕ್ಷೆಗೂ ಗುರಿಯಾಗಲಿಕ್ಕೆ ಸಿದ್ಧನಿದ್ದೇನೆ. ಅವರು ಇನ್ನೊಂದು ಮಾತನ್ನು ಹೇಳಿದರು ಐಎಎಸ್ ಅಧಿಕಾರಿಗಳು ಬರೆದಿದ್ದಾರೆ ಎಂದು. ಐಎಎಸ್ ಆಫೀಸರ್ ಬರೆಯಲಿ. ಯಾರೇ ಬರೆಯಲಿ. ಮುಂದೆ ಕೋರ್ಟಿಗೆ ಹೋಗಿ ಅಲ್ಲಿ ಐಎಎಸ್ ಆಫೀಸರ್ಸ್ ಬರೆದಂತಾದ್ದು ಆಗಲಿ ಸರಕಾರ ಮಾಡಿದಂತಹ ಕಾನೂನಾಗಲೀ ಸ್ಟ್ರಕ್ ಆದಂತಹ ಅನೇಕ ಉದಾಹರಣೆಗಳು ನಮ್ಮಲ್ಲಿವೆ. ಅಂತಿಮ ತೀರ್ಮಾನಕ್ಕೆ ತಾವು ಬರಬಾರದು. ಯಾವುದು ಸತ್ಯ ಇದೆ ಯಾವುದು ಒಳ್ಳೆ ರೀತಿಯಿಂದ ನಡೆದಂತಹ ಒಬ್ಬ ವ್ಯಕ್ತಿಯ ಚಾರಿತ್ರ್ಯ ವಧೆ ಮಾಡುವುದು ಸರಿಯಲ್ಲ. ನಾನು 45 ವರ್ಷವಾಯಿತು. ಇವರ ಸರ್ಕಾರವಿದ್ದಾಗ ನನಗೆ ಮಾಡಬಾರದ ಕೇಳಬಾರದ ಘಟನೆಗಳನ್ನು ಮಾಡಿದ್ದಾರೆ. ಅದರ ಬಗ್ಗೆ ವಿಚಾರ ಮಾಡುವುದಿಲ್ಲ. ಇವರು ಎಷ್ಟೋ ಮಾಡಿದರೂ ಕೂಡ ನಾನು ಬದುಕಿದ್ದೇನೆ. ಇವರು ನನ್ನ ಎಲ್ಲಾ ಸೊಸೈಟಿಗಳನ್ನೂ ಸೂಪರ್‌ಸೀಡ್ ಮಾಡಿದರು; ಲಿಕ್ವಿಡೇಷನ್ ಮಾಡಿದ್ದರು. ಒಂದು ಮಾತನ್ನು ಇಲ್ಲಿ ಹೇಳುತ್ತೇನೆ. ಆ ಇಂಜಿನಿಯರಿಂಗ್ ಸೊಸೈಟಿಗೆ 94ರಲ್ಲಿ ನೋಟೀಸ್ ಕೊಟ್ಟಿದ್ದಾರೆ. 10 ವರ್ಷವಾಯಿತು ಲಿಕ್ವಿಡೇಷನ್ ಆಗಿ ; ಅಲ್ಲಿ ಲಿಕ್ವಿಡೇಟರ್ ಅನ್ನು ನೇಮಿಸಿದ್ದಾರೆ. It is his duty to give reply regarding the bank managers, I do not want to tell anything. Unless and untill I see the records and verify it, I am not in a position to reply. But my conscience says that I am right; I have followed the rules and acts of the government.

ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಆಗಲೀ, ಅರ್ಬನ್ ಸೀಲಿಂಗ್ ಆಕ್ಟ್ ಆಗಲೀ, ಸ್ಟಾಂಪ್ ಆಕ್ಟ್ ಆಗಲೀ ಟ್ರಾನ್ಸ್‌ಫರ್ ಆಕ್ಟ್ ಆಗಲೀ ಯಾವುದೂ ಉಲ್ಲಂಘನೆ ಮಾಡಿಲ್ಲ. ಇಲ್ಲಿ ಬೇಡ ಹುಬ್ಬಳ್ಳಿಗೆ ಹೋಗೋಣ ಅವರು ಹೇಳಿದರು. ಹುಬ್ಬಳ್ಳಿಯಲ್ಲಿ ದುರ್ಗದ ಬೈಲ್ ಮೈದಾನದಲ್ಲಿ, ನೆಹರೂ ಮೈದಾನದಲ್ಲಿ ಹೋಗೋಣ ನಾನು ತಯಾರಿದ್ದೇನೆ. ಅವರೂ ಬರಲಿ. ಯಾರು ನನ್ನ ಮೇಲೆ ಆಪಾದನೆ ಮಾಡಿದರು ಅವರೂ ಬರಲಿ, ನಾನೂ ವಾದ ಮಾಡುತ್ತೇನೆ. ಜನರ ನ್ಯಾಯಕ್ಕೆ ಹೋಗಿ ಅವರೇನು ತೀರ್ಪು ಕೊಡುತ್ತಾರೆ ಜನರ ತೀರ್ಪಿಗೆ ನಾನು ತಲೆಬಾಗುತ್ತೇನೆ. ನಮ್ಮ ಮುಖ್ಯಮಂತ್ರಿಗಳು ನನ್ನನ್ನು ಪ್ರೊಟೆಕ್ಷನ್ ಮಾಡಬೇಕೆಂದು ಇಚ್ಛೆ ಇದ್ದರೆ ಇಷ್ಟೆಲ್ಲಾ ರಾದ್ಧಾಂತ ಎಲ್ಲಾ ವಿಚಾರಣೆ ಮಾಡುತ್ತಿದ್ದರಾ? ನಮ್ಮ ಮುಖ್ಯಮಂತ್ರಿಯವರು ವ್ಯಕ್ತಿ ನೋಡುವುದಿಲ್ಲ, ತನ್ನ ಬಂಧು ಎಂದು ನೋಡುವ ಹಾಗಿಲ್ಲ; ಥಿಕ್ ಅಂಡ್ ಥಿನ್ ನೋಡುವುದಿಲ್ಲ, ಕಾಯಿದೆ ಏನು ಇದೆ ಅದರ ಪ್ರಕಾರ ಹೋಗಬೇಕೆನ್ನುವಂತಹ ವ್ಯಕ್ತಿ. ಅವರನ್ನು ಕೀಳುಮಟ್ಟಕ್ಕೆ ಹೋಗಿದ್ದೀರಿ ಎಂದು ಹೇಳುವಂಥಾದ್ದು ನಿಜಕ್ಕೂ ಒಳ್ಳೆಯದಲ್ಲ. ನಮ್ಮ ಹಿರೇಕೆರೂರು ಶಾಸಕರು ಹೇಳಿದರು. ಹುಬ್ಬಳ್ಳಿಗೆ 10 ಮಂದಿ ಬನ್ನಿ ನೀವು ಇವತ್ತೇ ನಾನು ಚಾಲೇಂಜಿನಲ್ಲಿ ಹೇಳುತ್ತೇನೆ. ನಿವ್ಯಾರೇ ಬರ್ರಿ ನನ್ನನ್ನು ಸೋಲಿಸುವಂತ (ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.) ನೀವು ಮಾಡಿ. ಸತ್ಯಕ್ಕೆ ದೂರ ವಾದ ಮಾತು ಹೇಳಬೇಡಿ. ನಿಜವಾದ ಸತ್ಯಕ್ಕೆ ನಾನು ತಲೆಬಾಗುತ್ತೇನೆ.

ಇವತ್ತು ನಾನು ಉಲ್ಲಂಘನೆ ಮಾಡಿದ್ದರೆ ನಾನು ಒಂದು ನಿಮಿಷ ಕೂಡ ಇಲ್ಲಿ ಇರಲಿಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳಿ... .

(ಗೊಂದಲ)

ಶ್ರೀ ಬನ್ನಿಕೋಡ ಬಸಪ್ಪ : ನಿಮ್ಮ ಪ್ರಾಮಾಣಿಕತೆ ಬಗ್ಗೆ ಪ್ರತಿಯೊಂದು ಪೋಲೀಸ್ ಸ್ಟೇಷನ್‌ನಲ್ಲಿ ಹಾಗೂ ಓಣಿಯಲ್ಲಿ ಹೇಳುತ್ತಿದ್ದಾರೆ.........

(ಗೊಂದಲ)

ಶ್ರೀ ಸಿ. ಬೈರೇಗೌಡ : ಅವರು ಉಪಯೋಗಿಸಿರುವ ಪದವನ್ನು ದಯವಿಟ್ಟು ಕಡತದಿಂದ ತೆಗೆಸಿ,

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಬಹಳ ಸೀನಿಯರ್ ಶಾಸಕರು. ಮಂತ್ರಿಗಳಾಗಿದ್ದೀರಿ.ನಿಮಗೆ ವಯಸ್ಸಾಗಿದೆ; ನೀವು ಮಂತ್ರಿಗಳಾಗಿದ್ದೀರಿ. ಅವರು ನಿಮ್ಮ ಮೇಲೆ ಆಪಾದನೆಗಳೇನು ಎಂದು ಹೇಳಿದ್ದಾರೆ. ಅದಕ್ಕೆ ಉತ್ತರ ಕೊಡುವುದಕ್ಕೆ ನೀವು ಒಂದು ಷೆಲ್ಟರ್ ರೂಲ್ 310 ನಲ್ಲಿರತಕ್ಕಂಥಾದ್ದನ್ನು ತೆಗೆದುಕೊಂಡಿದ್ದೀರಿ ತೆಗೆದುಕೊಳ್ಳಿ. ಆದರೆ ನೀವು ಯಾವುದೇ ಕಾರಣದಿಂದ ಉಪಯೋಗಿಸಿರತಕ್ಕ ಶಬ್ದ ಏನು ಇದೆ, ಗಂಡಸ್ಥನ ಇದ್ದರೆ ಎಂದು ಮತ್ತು 10 ಜನ ಹುಬ್ಬಳ್ಳಿಗೆ ಬನ್ನಿ ಎಂದು ಹೇಳತಕ್ಕದ್ದು ಸರಿಯೇ? ನಾವು ಕುಸ್ತಿ ಮಾಡುವುದಕ್ಕೆ ವಿಧಾನಸಭೆಗೆ ಬಂದಿಲ್ಲ. ನೀವು ಹಿರೇಕೆರೂರು ಎಂಎಲ್ಎ ಅಲ್ಲ 10 ಜನರನ್ನು ಕರೆದುಕೊಂಡು ಬನ್ನಿ ಎಂದರೆ ಅರ್ಥ ಏನು? ಎಲ್ಲಿಗೆ ಬರಬೇಕು? ಇದೇನು ಕೆಳಮಟ್ಟವಲ್ಲದೆ ಬಹಳ ದೊಡ್ಡ ಮಟ್ಟವೇ? ನೀವು ಹೇಳಬೇಕು.

ಉಪಾಧ್ಯಕ್ಷರು : ಅವರು ಹೇಳುವುದನ್ನು ಸ್ವಲ್ಪ ಕೇಳಿ..

SRI. P.G.R. SINDHIA : No, I won't allow this. I am not prepared to yield.

ನೀವು ಈ ತರಹ ಇಂಟರ್‌ವೀನ್ ಆಗುವುದಕ್ಕೆ ಆಗುವುದಿಲ್ಲ. ಇದು ಡೆಮಾಕ್ರಸಿ.

ಉಪಾಧ್ಯಕ್ಷರು : ಇಂಟರ್‌ವೀನ್ ಪ್ರಶ್ನೆ ಅಲ್ಲ.

SRI. P.G.R. SINDHIA : Let Sandra defend.

ನಮಗೆ ಏನು ಅನಿಸುತ್ತದೆ ಅದನ್ನು ಹೇಳುವುದಕ್ಕೆ ಬಿಡುವುದಿಲ್ಲ ಎಂದರೆ ಏನು ಅರ್ಥ? Let Sandra defend. I am not making any allegations. ಯಾರು ಬೇಡ ಎಂದು ಹೇಳುತ್ತಾರೆ. ಇಡೀ ರಾಜ್ಯದ ಜನ ವಿಧಾನಸಭೆಯ ಕಲಾಪಗಳನ್ನು ನೋಡುತ್ತಿರುತ್ತಾರೆ. ಈ ಗಂಡಸುತನ, 10 ಜನ ಕುಸ್ತಿಗೆ ಬನ್ನಿ ಎಂದು ಹೇಳುವುದು ಅವರ ವ್ಯಕ್ತಿತ್ವಕ್ಕೆ ಸಲ್ಲತಕ್ಕದ್ದೇ ಎಂಬುದನ್ನು ದಯವಿಟ್ಟು ತಾವು ಹೇಳಿ. ನೀವು ಅಧ್ಯಕ್ಷ ಸ್ಥಾನದಲ್ಲಿ ಕುಳಿತುಕೊಂಡು ಇದನ್ನು ಅಲೋ ಮಾಡಿದರೆ...

ಉಪಾಧ್ಯಕ್ಷರು : ನೀವು ಆ ತರಹ ಮಾತನಾಡುವುದಕ್ಕೆ ಹೋಗಬಾರದು. ನಾನು ಏನು ಪದ ಎಂಬುದನ್ನು ತರಿಸುತ್ತಿದ್ದೇನೆ. ಅದನ್ನು ತೆಗೆಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ನಿಮ್ಮ ಬಗ್ಗೆ ಹೇಳುತ್ತಿಲ್ಲ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಇವರು ಈ ರೀತಿ ಮಾತನಾಡಿದರೆ ಜನರ ಗತಿ ಏನು ಆಗಿರಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ತಮಗೆ ವಯಸ್ಸಾಗಿದೆ ಸಾಂಡ್ರಾ ಅವರೇ, ಓಪನ್ ಹಾರ್ಟ್ ಸರ್ಜರಿ ಮಾಡಿಸಿಕೊಂಡಿದ್ದೀರಿ, ತಾವು ಬೇಕಾದರೆ ಸ್ಪೆಷಲ್ ಪರ್ಮಿಷನ್ ತೆಗೆದುಕೊಂಡು ಕುಳಿತುಕೊಂಡೇ ಉತ್ತರ ಕೊಡಿ.

(ಗೊಂದಲ)

ಶ್ರೀ ಎಂ. ಮಹದೇವ್ : ಅವರು ಹೇಳಿದ್ದು ಬಹುಶಃ ಪದ ಗಂಡಸ್ಥನ ಇದ್ದರೆ ನೀವು ಛಾಲೆಂಜ್ ಮಾಡಿ ಎಂದು ಹೇಳಿದ್ದು ಪೊಲಿಟಿಕಲ್ ಸ್ಟಂಟ್ ಅಷ್ಟೇ.

ಪೊಲಿಟಿಕಲ್ ಸ್ಟಂಟ್‌ನಿಂದ ಹೇಳಿದರೇ ಹೊರತು ಬೇರೆ ಅಪಾರ್ಥದಲ್ಲಿ ಅವರು ಹೇಳಲಿಲ್ಲ. ಪೊಲಿಟಿಕಲ್ ಛಾಲೆಂಜ್ ಅಷ್ಟೆ; ಇನ್ನು ಬೇರೆ ಅಪಾರ್ಥದಲ್ಲಿ ಅವರು ಹೇಳಲಿಕ್ಕೆ ಹೋಗಿಲ್ಲ.

ಶ್ರೀ ಗೋಪಿನಾಥ ಆರ್. ಸಾಂಡ್ರ ; ಸನ್ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ಕೆಣಕಿದಾಗ ಎಮೋಷನಲ್ಲಿರತಕ್ಕಂಥ ಜನ ಒಂದೆರಡು ಶಬ್ದಗಳನ್ನು ಆಡಿದರೆ ಅದು ಡೆರೋಗೇಟರಿ ಆದರೆ ಅದನ್ನು ಅವರು ಹೇಳಿದ ಹಾಗೆ ಹಿಂದಕ್ಕೆ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಾಂಡ್ರಾ ಅವರು ಉತ್ತರವನ್ನು ಕೊಟ್ಟಿದ್ದಾರೆ.

ಉಪಾಧ್ಯಕ್ಷರು : ಅವರು ಇನ್ನೂ ಉತ್ತರ ಹೇಳಿಲ್ಲ.

ಶ್ರೀ ಸಿ. ಬೈರೇಗೌಡ : ತಮ್ಮ ಉತ್ತರವನ್ನು ಕೊಟ್ಟಿದ್ದಾರೆ.

ಉಪಾಧ್ಯಕ್ಷರು : ಅವರು ಇನ್ನೂ ಉತ್ತರ ಹೇಳಿಲ್ಲ.

ಶ್ರೀ ಸಿ. ಬೈರೇಗೌಡ : ತಮ್ಮ ಉತ್ತರವನನು ಹೇಳಿದ್ದಾರೆ. ಸ್ವಲ್ಪಮಟ್ಟಿಗೆ ಒಂದು ಭಾಗಕ್ಕೆ ಸಂಬಂಧಪಟ್ಟ ಹಾಗೆ ಉತ್ತರವನ್ನು ಕೊಟ್ಟಿದ್ದಾರೆ. ಭೂಮಿಯ ಖರೀದಿ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ. ಉಳಿದಿರತಕ್ಕ ವಿಷಯ.

ಶ್ರೀ ಗೋಪಿನಾಥ್ ಆರ್. ಸಾಂಡ್ರಾ : ಉಣಕಲ್ ಬಗ್ಗೆ ಉತ್ತರ ...

ಶ್ರೀ ಸಿ. ಬೈರೇಗೌಡ : ನಾನು ಕೊಂಡುಕೊಂಡಿಲ್ಲ ಎಂಧು ಹೇಳಿದ್ದೀರಲ್ಲಾ.

ಶ್ರೀ ಗೋಪಿನಾಥ ಆರ್. ಸಾಂಡ್ರಾ : ಉಣಕಲ್ ಭೂಮಿಯ 9 ಎಕರೆ ಖರೀದಿ ಮಾಡಿದ್ದೀರಿ ಎಂಬು ನೀವೆಲ್ಲಾ ಹೇಳಿದ್ದೀರಲ್ಲಾ, ಅದನ್ನು ಮಾಡಿಲ್ಲ ಎಂದು ಹೇಳಿದೆ.

ಶ್ರೀ ಸಿ. ಬೈರೇಗೌಡ : ಹಾಗಾದರೆ ಮಾನ್ಯ ಮುಖ್ಯಮಂತ್ರಿಗಳು ನಮ್ಮದು ಓಪನ್ ಗವರ್ನಮೆಂಟ್, ಟ್ರಾನ್ಸ್‌ಪರೆಂಟ್ ಗವರ್ನಮೆಂಟ್ ಎಂದು ಹೇಳಿದ್ದಾರೆ. ಇಂತಹ ದಿವಸ ಅರ್ಜಿ ಬಂತು. ಇಂತಹ ದಿವಸ ಅದನ್ನು ರೆವಿನ್ಯೂ ಮಂತ್ರಿಗಳಿಗೆ. ರೆವಿನ್ಯೂ ಅಧಿಕಾರಿಗಳಿಗೆ ಡಿವಿಜನಲ್ ಕಮೀಷನರಿಗೆ ಇಂತಹ ದಿವಸ ಕಳಿಸಿದ್ದೇವೆ. ಅಲ್ಲಿಂದ ವರದಿ ಇಂತಹ ದಿವಸ ಬಂತು ಎಂದು ಹೇಳಿ ಅದನ್ನೆಲ್ಲಾ ಕ್ರನಾಲಾಜಿಕಲ್ ಆಗಿ ಓದಿದರಲ್ಲಾ ಬಹಳ ಚೆನ್ನಾಗಿ ಅದನ್ನು ಇಲ್ಲಿ ಪ್ರದರ್ಶನ ಮಾಡಿದರಲ್ಲಾ, ಯಾವುದು ಸ್ವಾಮಿ ಅದು? ಯಾವುದು ಹಾಗಾದರೆ? ಯಾರ ಬಗ್ಗೆ ಅರ್ಜಿಬಂದಿರತಕ್ಕದ್ದು? ಯಾರ ಬಗ್ಗೆ ಅಧಿಕಾರಿಗಳು ಓದಿರತಕ್ಕ ಅರ್ಜಿ? ಅಲ್ಲಿಂದ ವರದಿ ಬಂದಿರತಕ್ಕದ್ದು ಯಾರ ಬಗ್ಗೆ ಬಂದಿದೆ? ನಿಮಗೆ ಸಂಬಂಧ ಇಲ್ಲವೋ? ಅದು ಯಾವುದು? ಅವರಿಗೆ ಸಂಬಂಧ ಇದ್ದರೆ ಅವರು ಮಂತ್ರಿಗಳಾಗಿದ್ದಾರೆ, ಜಂಟಿ ಜವಾಬ್ದಾರಿ ಇದೆ, ಇವತ್ತಿನ ದಿವಸ ಯಾರ ಬಗ್ಗೆ ಎನ್ನುವುದನ್ನು ತಿಳಿಸಿ.

ಉಪಾಧ್ಯಕ್ಷರು : ಮಾನ್ಯ ಬೈರೇಗೌಡರೇ, ಸಾಂಡ್ರಾ ಅವರು ಹೇಳಿದ್ದು ಇನ್ನೂ ಪೂರ್ಣ ದಾಖಲೆ ನೋಡಿಲ್ಲ. ನೋಡಿಯಾದ ಮೇಲೆ ರಿಪ್ಲೈ ಕೊಡುತ್ತೇನೆ ಎಂದು ಹೇಳಿದ್ದಾರೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಆರ್.ವಿ. ದೇಶಪಾಂಡೆ : ನಾನೇನು ಸಲಹೆ ಎಂದರೆ, ಕಾಗದ ಪತ್ರಗಳು ಎಂದರೆ ಏನು? ಭೂಮಿ ಖರೀದಿ ಮಾಡಿದ್ದಾರಾ ಅವರು. ಈಗ ತಾವು ಅಗ್ರಿಕಲ್ಚರಿಸ್ಟ್ ಇಲ್ಲ ತನ್ನ 50 ಸಾವಿರ ರೂಪಾಯಿ ಆದಾಯ ಕಡಿಮೆ ಇದೆ. In his own document; in his own creation application; It is in his possession. ಅದರ ಬಗ್ಗೆ ಅವರು ಹೇಳಬಹುದು. ಎರಡನೆಯದು ಅಸಿಸ್ಟೆಂಟ್ ಕಮೀಷನರ್ ಅಗ್ರಿಕಲ್ಚರಿಸ್ಟ್‌ಗೆ ಪರ್ಮಿಷನ್ ಕೊಟ್ಟಿದ್ದಾರೆ. ಆ ಡಾಕ್ಯುಮೆಂಟ್ ಅವರ ಕಡೆ ಇದೆ, ಅದರ ಬಗ್ಗೆ

ಅವರು ಹೇಳಬಹುದು. ಜಮೀನು ಖರೀದಿ ಮಾಡಿದ್ದಾರೆ, ಸ್ಟ್ಯಾಂಪ್ ಅದೂ ಅವರ ಕೈಯಲ್ಲಿ ಡಾಕ್ಯುಮೆಂಟ್ ಇದೆ. ಅದರ ಬಗ್ಗೆ ಅವರು ಹೇಳಬಹುದು. ನಂತರ ಸ್ವತಃ ಇವರು ವರದಿ ಕೊಟ್ಟು ಅವರ ಮಿಸೆಸ್ ಹೆಸರಿನಲ್ಲಿ ಮಗನ ಹೆಸರಿನಲ್ಲಿ ಎರಡು ಪ್ರಾಪರ್ಟಿ ಟ್ರಾನ್ಸ್‌ಫರ್ ಮಾಡಿದ್ದಾರೆ. It is your creation of document. ಅದೂ ನೀವು ಉತ್ತರ ಕೊಡಬಹುದು. Where a property could be transferred under ಸೆಕ್ಷನ್ 17ಕ್ಕೆ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟ್; 100 ರೂಪಾಯಿ ಮೇಲೆ ಇಮ್ಮೂವಬಲ್ ಪ್ರಾಪರ್ಟಿ ವ್ಯಾಲ್ಯೂಡ್ ಇದೆ, ಅದನ್ನು ಟ್ರಾನ್ಸ್‌ಫರ್ ಮಾಡಲಿಕ್ಕೆ ಸಾಧ್ಯ ಇದೆಯೇನು ಎಂದು ತಾವು ಹೇಳಬಹುದು. ಇಂಡಸ್ಟ್ರಿಯಲ್ ಕೋಆಪರೇಟೀವ್ ಸೊಸೈಟಿ ಬಗ್ಗೆ ಹೇಳಿದೆ, ಅದಕ್ಕೆ ತಾವೇ ಛೇರ್ಮನ್ ಇದ್ದೀರಿ. ನೀವೇ ಕಸ್ಟೋಡಿಯನ್. ಈಗ ಇಲ್ಲ.

ಶ್ರೀ ಗೋಪಿನಾಥ ಆರ್. ಸಾಂಡ್ರಾ : 1972ರಲ್ಲಿ ಇದ್ದೆ. 1974ರಲ್ಲಿ 1986ರವರೆಗೆ ಇಸವಿಯೊಳಗೆ ಮಾತ್ರ ಇದ್ದೆ. ಅದರಿಂದ ಇಲ್ಲ ಎನ್ನುವಂತಹ ಮಾತನ್ನು ನೀವು ತಿಳಿದುಕೊಳ್ಳಿರಿ. ನಿಮಗೆ ಯಾರೋ ತಪ್ಪು ತಿಳುವಳಿಕೆ ಕೊಟ್ಟಿದ್ದಾರೆ. ನಿಮ್ಮದೇನೂ ತಪ್ಪು ಇಲ್ಲ. ನಿಮಗೆ ತಪ್ಪು ಬೋಧನೆ ಮಾಡಿದ್ದಾರೆ. ಆ ಪ್ರಕಾರ ನೀವು ಹೇಳಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ : 1986ರಿಂದ ಈಚೆಗೆ I am subsect to correction ಇವತ್ತು ಛೇರ್ಮನ್ ಇಲ್ಲ. That is not an important question, ನೀವು ಈ ಸಂಸ್ಥೆಯ ಅಧ್ಯಕ್ಷರಾಗಿದ್ದಾಗ ಹಲವಾರು ಸಹಕಾರಿ ಇಂಡಸ್ಟ್ರೀಯಲ್ ಕ್ರೆಡಿಟ್ ಸೊಸೈಟಿ ತಯಾರು ಮಾಡಿ, ಅವರಿಗೆ ನೀವು ಸಾಲ ಕೊಡಿಸಿದ್ದೀರಿ. ಸಾಲ ಕೊಡಿಸಿ 25,30 ಲಕ್ಷ ರೂಪಾಯಿ ಸಾಲ ಕೊಡಿಸಿದ್ದೀರಿ. ಒಂದು ದುಡ್ಡೂ ವಸೂಲಿ ಇಲ್ಲ. ಇವತ್ತು ರಿಸರ್ವ್ ಬ್ಯಾಂಕ್ ಆರ್ಡರ್ ಹೋಗುತ್ತಿದೆ, ವಸೂಲಿ ಮಾಡಿ ಎಂದು; ಆ ವಸೂಲಿ ನಿಮ್ಮ ಕಡೆ ಆಗುತ್ತಿಲ್ಲ. ಮೊನ್ನೆ 1994ರಲ್ಲಿ ಒಂದು ಲೆಟರ್ ಮ್ಯಾನೇಜರ್ ಓದಿ ಹೇಳಿದರು. ತಮ್ಮ ಹಣ ತುಂಬಬೇಕಾಗಿದೆ, ತಾವೂ ಸಹ ಡಿಫಾಲ್ಟರ್ ಇದ್ದೀರಿ. ಅವರು ಲೆಟರ್ ಬರೆದಿದ್ದಾರೆ. ಯಾಕೆ ವಸೂಲಾತಿ ಆಗುತ್ತಿಲ್ಲ ಎಂದು ಅವರು ಹೇಳಿದ್ದಾರೆ. ಅಟ್‌ಲೀಸ್ಟ್ ಲೋನ್ ಇದೆ ನಿಮ್ಮದು. ನೀವು ಡೈರೆಕ್ಟರ್ ಆಗಿದ್ದೀರಿ. ನಾವೇನು ಬ್ರಹ್ಮ ದೇವರಾ, ನಿಮ್ಮ ಹಾಗೆ, ಯಾರೋ ಹೇಳಿದ್ದನ್ನು. ನಾವು ಹೇಳಬೇಕಲ್ಲಾ. ಪ್ರಶ್ನೆ ಏನು ಎಂದರೆ...

ಉಪಾಧ್ಯಕ್ಷರು : ಅವರು ಟೈಮ್ ತೆಗೆದುಕೊಳ್ಳುವುದಿದ್ದರೆ ತೆಗೆದುಕೊಳ್ಳಲಿ ಎಂದು ಹೇಳಿದಿರಿ.

SRI. R.V. DESHPANDE : In the interest of justice, time should be given. Why it should not be given?

ನಮಗೆ ಯಾವ ಅಭ್ಯಂತರ ಇಲ್ಲ, ನಾಳೆ ರಿಪ್ಲೈ ಮಾಡಿ, ನಮ್ಮದು ತಕರಾರು ಇಲ್ಲ. ಈಗ ಏನು ಡಾಕ್ಯುಮೆಂಟ್ಸ್ ಅವರು ಕ್ರಿಯೇಟ್ ಮಾಡಿದ್ದಾರೆ ಎಂದು ನಾನು ಹೇಳಿದ್ದೇನೆ. ಡಿವಿಜನಲ್ ಕಮೀಷನರ್ ಕಾನ್‌ಫಿಡೆನ್ಷಿಯಲ್ ಲೆಟರ್ಸ್ ಅವರ ಕೈಗೆ ಸಿಕ್ಕಲಿಲ್ಲ ಎಂದರೆ ನಾನು ಈ ಸಬ್ಜೆಕ್ಟ್‌ಗೆ ಬರುವುದಿಲ್ಲ. ಎಂಟೈರ್ ಸೆಟ್ ಸ್ಪೀಕರ್ ಛೇಂಬರ್‌ಗೆ ಕೊಟ್ಟಿದ್ದೇನೆ. ಅದು ನೋಡಿಕೊಂಡು ನೀವು ಉತ್ತರ ಕೊಡಿ. The important factor is Chief Minister will have to reply.

ಶ್ರೀ ಗೋಪಿನಾಥ ಆರ್. ಸಾಂಡ್ರಾ : ನಿಮ್ಮ ಹತ್ತಿರ ಇರುವ ಡಾಕ್ಯುಮೆಂಟ್ ಸ್ಪೀಕರ್ ಹತ್ತಿರ ಕೊಡಿ ಅಥವಾ ನನ್ನ ಕಡೆ ಕೊಡಿ. ಅದರ ಬಗ್ಗೆ ಉತ್ತರ ಕೊಡುತ್ತೇನೆ. 20 ವರ್ಷದ್ದು ನನಗೆ ಹೇಗೆ ಗೊತ್ತಾಗುತ್ತದೆ ನೀವೇ ಹೇಳಿ. ಏನು

ಆಗಿತ್ತು, ಏನು ಆಗಿಲ್ಲ ಎಂಬುದು ನನಗೆ ಗೊತ್ತಿಲ್ಲ. ಬ್ಯಾಂಕಿನಲ್ಲಿ ರಿಕಾರ್ಡ್ಸ್ ಇರುತ್ತದೆ. ಆ ರಿಕಾರ್ಡ್ಸ್ ಅನ್ನು ಬ್ಯಾಂಕಿನಿಂದ ತೆಗೆದುಕೊಂಡು ಬಂದು ನಿಮಗೆ ಸರಿಯಾದ ಉತ್ತರ ಕೊಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸ್ಪೀಕರ್ ಛೇಂಬರ್‌ನಲ್ಲಿ ಕೊಟ್ಟಿರತಕ್ಕ ಕಾಗದ ಪತ್ರಗಳು ಇವೆ, ತಾವು ಯಾವಾಗ್ಗ ಬೇಕಾದರು ತೆಗೆದುಕೊಳ್ಳಬಹುದು. ಈಗ ಡಿವಿಜನಲ್ ಕಮೀಷನರ್, ಡಿಸಿಗೆ ಲೆಜರ್ಸ್ ಏನು ನಾನು ಕೊಟ್ಟಿದ್ದೇನೆ, ಅದರ ಮೇಲೆ ತಾವು ರಿಲೈ ಆಗಬಹುದು. ಅಥವಾ ಜೆರಾಕ್ಸ್ ಇದ್ದರೆ ನಿಮ್ಮ ಮುಖ್ಯಮಂತ್ರಿ ಕಡೆ ಕಾಗದ ಪತ್ರ ಇದೆ. ರೆವಿನ್ಯೂ ಕಮೀಷನರ್ ಹತ್ತಿರ ಕಾಗದ ಪತ್ರ ಇದೆ, ನೀವು ಕ್ಯಾಬಿನೆಟ್ ಮಿನಿಸ್ಟರ್ ಇದ್ದೀರಿ. ರೆವಿನ್ಯೂ ಕಮೀಷನರ್‌ಗೆ ಫೋನ್ ಮಾಡಿ, ಪಾಪ ಆತ ಆಫೀಸಿಗೆ ಫೈಲ್ ತೆಗೆದುಕೊಂಡು ಬರುತ್ತಾನೆ. ನಮಗೆ ಕಷ್ಟ ಇದೆ ರೆಕಾರ್ಡ್ ತರಿಸಲು, ನಮಗೆ ರೆವಿನ್ಯೂ ಕಮೀಷನರ್ ರೆಕಾರ್ಡ್ ತೋರಿಸುವುದಿಲ್ಲ. ನಿಮಗೆ ಕಷ್ಟ ಇಲ್ಲ, ನೀವು ಫೋನ್ ಮಾಡಿ. Even if I call he may come but he win not disclose the document which we are working. Because that is the system. He is not supposed to show me.

ನಿಮಗೆ ಆ ಅಧಿಕಾರ ಇದೆ. ಕ್ಯಾಬಿನೆಟ್ ಮಿನಿಸ್ಟರ್ ಇದ್ದೀರಿ. ಹಾಗಾಗಿ ಇದು ಒಂದು ಭಾಗ ನಿಮ್ಮದು ಆಯಿತು. ಮಾನ್ಯ ಮುಖ್ಯಮಂತ್ರಿಗಳ ಕಡೆಯಿಂದ ನನಗೆ ಉತ್ತರ ಬೇಕಾಗಿದೆ. ಹಲವಾರು ವಿಚಾರಗಳನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಇವತ್ತು ಅವರ ಕಡೆಯಿಂದ ಉತ್ತರ ಬೇಕಾಗಿದೆ. ಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲು ಟೈಮ್ ತೆಗೆದುಕೊಳ್ಳಲಿ, ನಾಳೆ ಬೇಕಾದರೂ ಉತ್ತರ ಕೊಡಲಿ ನಮ್ಮದು ಏನೂ ಅಭ್ಯಂತರ ಇಲ್ಲ.

ಶ್ರೀ ಗೋಪಿನಾಥ್ ಆರ್. ಸಾಂಡ್ರ : 30 ಎಕರೆ ಭೂಮಿ ತೆಗೆದುಕೊಂಡಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : 30 ಎಕರೆ ಭೂಮಿ ತೆಗೆದುಕೊಂಡಿಲ್ಲ ಎಂದರೆ ಮುಖ್ಯಮಂತ್ರಿ ಏಕೆ ಬೇಕು? 30 ಎಕರೆ ಭೂಮಿ ಇವರು ತೆಗೆದುಕೊಂಡಿಲ್ಲ ಎಂದು ಇವರು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಹಲವಾರು ಕ್ರಮ ತೆಗೆದುಕೊಂಡಿದ್ದೇನೆ ಎಂದು ಹೇಳಿದರು. ಹಲವಾರು ಕ್ರಮ ತೆಗೆದುಕೊಂಡು ತನ್ನ ಬೆನ್ನು ಚಪ್ಪರಿಸಿಕೊಂಡರು. ನಾನು ಸಹ ಅಭಿನಂದನೆ ಮಾಡಿದೆ ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು.ಇವರು ಭೂಮಿಯನ್ನು ತೆಗೆದುಕೊಂಡಿಲ್ಲ ಎಂದರೆ ಮಾನ್ಯ ಮುಖ್ಯಮಂತ್ರಿಗಳು ಕ್ರಮ ಹೇಗೆ ತೆಗೆದುಕೊಳ್ಳುತ್ತಾರೆ? ಡಿವಿಜನಲ್ ಕಮೀಷನರ್, ರೆವಿನ್ಯೂ ಕಮೀಷನರ್ ರಿಪೋರ್ಟ ಹೇಗೆ ಕಳಿಸುತ್ತಾರೆ? ಅವರಿಗೆ ತಲೆ ಸರಿ ಇಲ್ಲವೇನು? Have they gone mad?

ಅವರು ಏಕೆ ಸಸ್ಪೆಂಡ್ ಆಗುತ್ತಾರೆ. ಈಗ ಮಾನ್ಯ ಸಚಿವರು 30 ಎಕರೆ ಭೂಮಿ ತೆಗೆದುಕೊಂಡಿಲ್ಲ ಎಂದು ಹೇಳಿದರು.

ಶ್ರೀ ಹಾರ್‍ನಳ್ಳಿ ರಾಮಸ್ವಾಮಿ: 9ಎಕರೆ ತೆಗೆದುಕೊಂಡಿಲ್ಲವೆಂದು ಹೇಳಿದರು.

ಶ್ರೀ ಆರ್.ವಿ. ದೇಶಪಾಂಡೆ : 9 ಎಕರೆ ಅವರ ಮಗ; ಎಂದು ಹೇಳಿದ್ದೇವೆ. I am subject to correction

ನಾನು ಮಾತನಾಡುವಾಗ ನಿಮ್ಮ ಮಗನಾದ ಉದಯ ಸಾಂಡ್ರಾ ಎಂದು ಹೇಳಿದ್ದೇನೆ. ನಾನು ಹೇಳುವಾಗ ನೀವು ಕೇಳಬೇಕಾಗಿತ್ತು. ನಿಮ್ಮದು 9 ಎಕರೆ ಊಣಕಲ್ ಜಮೀನು ಇದೆ. That is purchased by your son and six others. It is in the Divisional Commissioner's report.

ಅದರ ಬಗ್ಗೆ ನಮ್ಮದೇನೂ ತಕರಾರಿಲ್ಲ. ಆದುದರಿಂದ, ಮಾನ್ಯ ಮುಖ್ಯಮಂತ್ರಿಗಳು ಮತ್ತು ವಸತಿ ಸಚಿವರು ಅದರ ಬಗ್ಗೆ ಏನೂ ಉತ್ತರ ಕೊಡುತ್ತಾರೋ ಕೊಡಲಿ.

ಶ್ರೀ ಎಂ. ವಿರಪ್ಪ ಮೊಯಿಲಿ: ಸನ್ಮಾನ್ಯ ಶಾಸಕರುಗಳಾದ ಶ್ರೀ ಶಿವನಂದ್ ಹೆಚ್. ಕೌಜಲಗಿ ಮತ್ತು ಬಿ.ಹೆಚ್.ಬನ್ನಿಕೋಡ್‌ರವರು ಮಾತನಾಡುತ್ತ ವಿಭಾಗಾಧಿಕಾರಿಗಳು ಸರ್ಕಾರಕ್ಕೆ ವಿರುದ್ಧವಾದ ವರದಿ ಕೊಟ್ಟಿದ್ದರಿಂದ ಇವರ ವರ್ಗಾವಣೆ ಮಾಡಲಾಗಿದೆಯೆಂದು ಹೇಳಿದ್ದಾರೆ. ಇದು ಆಧಾರರಹಿತವಾದ ಆಪಾದನೆಯಾಗಿದ್ದು, ದಯಮಾಡಿ ಅಂತಹ ಆಪಾದನೆ ಮಾಡಬಾರದು. ಏಕೆಂದರೆ,ಆಡಳಿತಾತ್ಮಕ ಕಾರಣಗಳಿಗಾಗಿ ವರ್ಗಾವಣೆ ಮಾಡಿ ಅಲ್ಲಿಗೆ ಶ್ರೀ ಚಿರಂಜೀವಿ ಸಿಂಗ್ ಅವರನ್ನು ಕಳುಹಿಸಿದ್ದೇವೆ. ಅವರನ್ನು ನಾವು ಅಲ್ಲಿಗೆ ವರ್ಗಾವಣೆ ಮಾಡಿರುವುದರಿಂದ ನಮಗೇನಾದರೂ ಅನುಕೂಲ ಮಾಡಿಕೊಡುತ್ತಾರೆಯೇ? He is an officer of higest intigrity.

ನಮ್ಮ ಅನುಕೂಲ ನೋಡಿಕೊಂಡು ಸರ್ಕಾರದ ಮರ್ಜಿಗೆ ಒಳಗಾಗುವ ಅಧಿಕಾರಿಗಳನ್ನು ಅಲ್ಲಿಗೆ ಹಾಕಲಿಲ್ಲ. That is a reflection on Chiranjeevi Singh.

ಅಲ್ಲಿಂದ ವರದಿಯನ್ನು ತರಿಸಿದವರು ನಾವೇ, ತನಿಖೆ ಮಾಡಿಸಿದವರು ನಾವೇ. ಇದರ ಬಗ್ಗೆ ತನಿಖೆ ಮಾಡಬೇಕೆಂದು ಹೇಳಿದ್ದಕ್ಕೆ ವಿಭಾಗಾಧಿಕಾರಿಗಳು ತನಿಖೆ ಮಾಡಿದ್ದಾರೆ. On his own, he has not done. It is borne out by records. ನಮ್ಮ ಸೂಚನೆ ಇಲ್ಲದೆ ವಿಭಾಗಾಧಿಕಾರಿಗಳಾಗಲಿ, ಜಿಲ್ಲಾಧಿಕಾರಿಗಳಾಗಲಿ ವಿಚಾರಣೆ ಮಾಡಿದ್ದರೆ ಆಗ ತಾವು ಮಾಡುವ ಆಪಾದನೆಯಲ್ಲಿ ಹುರುಳಿರುತ್ತದೆ. ಆದರೆ, ನಾವು ಹಾಗೆ ಮಾಡಲಿಲ್ಲ. ಸರ್ಕಾರದ ಆದೇಶದ ಮೇರೆಗೆ ತನಿಖೆ ನಡೆದಿದೆ. ಅಲ್ಲಿಗೆ ನಾವು ಸನ್ಮಾನ್ಯ ಶ್ರೀ ಚಿರಂಜೀವಿಸಿಂಗ್ ಅವರನ್ನು ವರ್ಗಾಯಿಸಿದ್ದೇವೆ. It will be a reflection on the officer, who has come. ಆ ತರಹ ಏನಾದರು ಆಧಾರವಿದ್ದರೆ ಹೇಳಿ. This has no connection with that particular enquiry.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಮುಖ್ಯಮಂತ್ರಿಗಳು ನನ್ನ ಹೆಸರನ್ನು ಸದನದಲ್ಲಿ ಪ್ರಸ್ತಾಪಿಸಿದ್ದರಿಂದ ನಾನು ಈ ಬಗ್ಗೆ ಹೇಳಬೇಕಾಗುತ್ತದೆ. ವಿಭಾಗಾಧಿಕಾರಿಗಳನ್ನು ವರ್ಗಾವಣೆ ಮಾಡಿರುವುದಕ್ಕೂ ಮತ್ತು ಅವರು ವರದಿ ಕೊಟ್ಟಿರುವುದಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲವೆಂದು ಹೇಳಿದ್ದಾರೆ. ಈ ಕುರಿತು ಮಾನ್ಯ ವಸತಿ ಸಚಿವರು ಹೇಳಿರತಕ್ಕಂಥಾದ್ದು ಅದು ಪತ್ರಿಕೆಗಳಲ್ಲಿ ವರದಿಯಾಗುವುದನ್ನು ಗಮನಿಸಬೇಕು."ಐ.ಎ.ಎಸ್.ಅಧಿಕಾರಿಗಳು ಸರಿಯಾಗಿ ಕಾನೂನು ಓದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ.ಅವರಿಗೆ ಸರಿಯಾದ ತಿಳಿವಳಿಕೆ ಇದ್ದರೆ ಹೀಗೆ ಸರ್ಕಾರಕ್ಕೆ ವರದಿ ಕಳುಹಿಸುತ್ತಿರಲಿಲ್ಲ, ನನ್ನ ಹತ್ತಿರ ನಿಜವಾದ ದಾಖಲೆಗಳಿವೆ ಎಂದು ಹೇಳಿದ್ದಾರೆ ತದನಂತರ ಮಾನ್ಯ ಸಚಿವರಾದ ಧರ್ಮಸಿಂಗ್‌ರವರು ಸಬ್ ರಿಜಿಸ್ಟ್ರಾರ್ ಅವರನ್ನು ಅವಮಾನಗೊಳಿಸಿ ವಿವರವಾದ ವಿಚಾರಣೆ ಕೈಗೊಂಡಿರುವುದರ ಬಗ್ಗೆ ನೀವು ಏನು ಹೇಳಿತ್ತೀರೆಂದು ಪತ್ರಕರ್ತರು ಕೇಳಿದಾಗ "ಅವರನ್ನು ಏಕೆ ಅಮಾನತ್ತುಗೊಳಿಸಿದ್ದಾರೆಂದು ಅವರನ್ನೇ ಕೇಳಿ, ಅದು ಅವರ ತೀರ್ಮಾನ. ನಾನು ಅವರನ್ನು ಭೇಟಿ ಮಾಡಿ ಎಲ್ಲಾ ವಿಚಾರವನ್ನು ಹೇಳುತ್ತೇನೆ. ನನ್ನ ಪ್ರಕಾರ ಅಧಿಕಾರಿಗಳ ಅಮಾನತ್ತಿನ ಕ್ರಮ ಸರಿಯಲ್ಲ ಮತ್ತು ಅನಗತ್ಯವಾಗಿತ್ತು "ಎಂದು ಹೇಳಿದ್ದಾರೆ ತಮ್ಮ ಸಚಿವ ಸಂಪುಟದಲ್ಲಿದ್ದು, ಜಂಟಿ ಜವಾಬ್ದಾರಿ ಹೊತ್ತುಕೊಂಡಿರುವ ಸಹದ್ಯೋಗಿ ಒಬ್ಬರು ನಿಮ್ಮ ಮಂತ್ರಿಮಂಡಲದ ಕಂದಾಯ ಸಚಿವರು ತೆಗೆದುಕೊಂಡಿರುವ ಕ್ರಮವನ್ನು ಹಾಗೂ ಪ್ರಾಮಾಣಿಕ ವಿಭಾಗಾಧಿಕಾರಿಗಳು ಕೈಗೊಂಡ ವಿಚಾರಣೆಯನ್ನು ಅಲ್ಲಗಳೆಯುವಂಥ ಒಬ್ಬ ಮಂತ್ರಿಗಳು ತಮ್ಮ ಮಂತ್ರಿಮಂಡಲದಲ್ಲಿ ಮುಂದುವರೆಯಬೇಕೆನ್ನುವುದೇ ತಮ್ಮ ಇಚ್ಛೆಯಾಗಿದ್ದರೆ ಅದನ್ನು ನಿಮಗೆ ಬಿಡುತ್ತೇವೆ. ಇವತ್ತು ಸರ್ಕಾರ ಒಂದು ಪಟ್ಟಿಯನ್ನು ತಯಾರಿಸಿದ್ದು, ಅಧಿಕಾರಿಗಳು ಪ್ರಾಮಾಣಿಕವಾಗಿ ವಿಚಾರಣೆ ಮಾಡಿದ್ದಾರೆ. ಸರ್ಕಾರದ ಒಂದು ಅಂಗವಾಗಿರತಕ್ಕ ಕಾರ್ಯಾಂಗದ ಕ್ರಿಯೆಯ ಬಗ್ಗೆ ಮಂತ್ರಿಗಳು ಈ ರೀತಿ ಹೇಳಿದರೆ

ಇಂತಹ ಸಚಿವರು ಮಂತ್ರಿಮಂಡಲದಲ್ಲಿರುವುದರಿಂದ ಇದನ್ನು ಜವಾಬ್ದಾರಿಯುತ ಮಂತ್ರಿಮಂಡಲವೆಂದು ಹೇಳಬಹುದೇ? ಇದರಿಂದ ತಮಗೇನಾದರೂ ಒಳ್ಳೆಯಾದಾಗಬಹುದೇ? ರಾಜ್ಯದ ಜನತೆಗೇನಾದರೂ ಒಳ್ಳೆಯಾದಾಗಬಹುದೇ? ಈ ಬಗ್ಗೆ ದಯಮಾಡಿ ಆ ಮಂತ್ರಿಗಳಿಗೆ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಗೌರವದಿಂದ ಹೊರ ನಡೆಯುವುದಕ್ಕೆ ಹೇಳಬೇಕು. ಅದು ಸಾಧ್ಯವಾಗದಿದ್ದರೆ ಅವರನ್ನು ಮಂತ್ರಿಮಂಡಲದಿಂದ ಕಿತ್ತುಹಾಕಿ ನಿಮ್ಮ ಸರ್ಕಾರದ ಬಗ್ಗೆ ರಾಜ್ಯದ ಜನತೆಯಲ್ಲಿರುವ ಗೌರವವನ್ನು ಉಳಿಸಿಕೊಳ್ಳಿ ಎಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷರೆ, ನಾನು ತಿಳಿದುಕೊಂಡಿರುವಂತೆ ಮಾನ್ಯ ವಸತಿ ಸಚಿವರು ಈ ಬಗ್ಗೆ ವೈಯಕ್ತಿಕವಾಗಿ ಉತ್ತರ ಕೊಟ್ಟ ನಂತರ ಸರ್ಕಾರದಿಂದ ಉತ್ತರ ನೀಡಲಾಗುವುದೆಂದು ಬಹುಶಃ ಹಿಂದೆ ಪ್ರಸ್ತಾಪಿಸಿದ್ದೆವು. ಅವರು ಉತ್ತರವನ್ನು ಈಗ ಕೊಡುವುದಿದ್ದರೆ, ಅವರು ಕೊಟ್ಟ ನಂತರವೇ ನಾವು ಉತ್ತರ ಕೊಡಬೇಕಾಗುತ್ತದೆ. ಮೊದಲೇ ಸರ್ಕಾರ ಉತ್ತರ ಕೊಡುವುದಕ್ಕಾಗುವುದಿಲ್ಲ. ನಾವು ಉತ್ತರ ಕೊಡುವುದಕ್ಕೆ ಯಾವಾಗಲೂ ಸಿದ್ಧರಿದ್ದೇವೆ. ಉತ್ತರ ನೀಡಲು ಸಚಿವರಿಗೆ ಸ್ವಲ್ಪ ಕಾಲಾವಕಾಶ ನೀಡುವುದು ತಮ್ಮ ನಿರ್ಧಾರಕ್ಕೆ ಬಿಟ್ಟಿದ್ದು.ಅವರು ಉತ್ತರ ಕೊಡದಿದ್ದರೆ ನಾನು ಉತ್ತರ ಕೊಟ್ಟು ಈಗಲೇ ಮುಗಿಸುತ್ತೇನೆ

6.00 ಪಿ.ಎಂ.

ಶ್ರೀ ಸಿ. ಬೈರೇಗೌಡ : ಅವರು ವೈಯಕ್ತಿಕವಾದ ವಿವರಣೆ ಕೊಡುವುದಕ್ಕೆ ಈ ಬಗ್ಗೆ ಸರ್ಕಾರವಲ್ಲಿ ಅಧಿಕೃತವಾದ ವರದಿ ಇದ್ದು, ಸರ್ಕಾರ ತನ್ನದೇ ಆದ ರೀತಿಯಲ್ಲಿ ಕೆಲಸ ಮಾಡುತ್ತದೆ. ಆ ರೀತಿ ಕೆಲಸ ಮಾಡಿದೆಯೆಂದು ಆಗಲೇ ಘಂಟಾಘೋಷವಾಗಿ ಹೇಳಿದ್ದೀರಿ. ಅದು ಏನು ಎನ್ನುವುದು ದಯವಿಟ್ಟು ತಿಳಿಸಿ. ಇದು ಸದನಕ್ಕೆ ಮತ್ತು ಸದನದ ಮುಖಾಂತರ ರಾಜ್ಯದ ಜನತೆಗೆ ಗೊತ್ತಾಗಬೇಕಾಗಿರುವಂಥಾದ್ದು ಅವಶ್ಯಕತೆ ಇದೆ. ಇದರ ಬಗ್ಗೆ ಕ್ರೊನೊಲಾಜಿಕಲ್ ಆರ್ಡರ್‌ನಲ್ಲಿ ಕಂದಾಯ ಮಂತ್ರಿಗಳಿಗೆ ಅರ್ಜಿ ಬಂತು ಆ ಅರ್ಜಿಯನ್ನು ವಿಭಾಗಾಧಿಕಾರಿಗಳಿಗೆ ಒಪ್ಪಿಸಿದ್ದಾರೆ.

ಉಪಾಧ್ಯಕ್ಷರು : ಈಗ ವಸತಿ ಸಚಿವರಿಗೆ ಉತ್ತರ ನೀಡಲು ಸಮಯ ಕೊಡುವುದು ಬೇಡ ಎನ್ನುತ್ತೀರಾ?

ಶ್ರೀ ಸಿ. ಬೈರೇಗೌಡ : ಇದರಲ್ಲಿ ಎರಡು ಅಂಶಗಳಿವೆ. ಮೊದಲನೆಯದು, ಸರ್ಕಾರದ ಕ್ರಮ. ಎರಡನೆಯದು,ಇದರ ಬಗ್ಗೆ ಉತ್ತರ ಕೊಡಬೇಕಾಗಿರುವುದರಿಂದ ಸಮಯ ಬೇಕೆಂದು ಕೇಳಿರುವುದು ಅದು ತಮ್ಮ ನಿರ್ಧಾರಕ್ಕೆ ಬಿಟ್ಟರತಕ್ಕ ವಿಚಾರವಾಗಿದೆ. ಅದರೆ ನಮಗೆ ಅರ್ಜಿ ಬಂದಿರುವಿದು ನಿಜ, ಇದನ್ನು ವಿಚಾರಣೆಗೊಳಪಡಿಸಿರುವುದು ನಿಜ, ಈ ಬಗ್ಗೆ ವರದಿ ಕೊಟ್ಟಿರುವುದೂ ನಿಜವೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದುದರಿಂದ, ಸರ್ಕಾರಕ್ಕೆ ಬಂದಿರುವ ಅಧಿಕೃತ ವರದಿಯಲ್ಲಿ ಏನಿದೆಯೆಂಬುದನ್ನು ತಿಳಿಸಬೇಕು.

ಮಾನ್ಯ ಮುಖ್ಯಮಂತ್ರಿಗಳು ವೈಯಕ್ತಿಕವಾಗಿ ವಿವರಣೆಯನ್ನು ಈ ಕುರಿತು ನೀಡುವುದಕ್ಕೆ ಅವಕಾಶ ಕೊಡಲು ನಮ್ಮದೇನೂ ಅಭ್ಯಂತರವಿಲ್ಲ. ಇವತ್ತು ಸರ್ಕಾರದಲ್ಲಿ ವರದಿ ಇದೆ. ಅವರು ವೈಯಕ್ತಿಕವಾಗಿ ಹೇಳುವಂತಾದ್ದಕ್ಕೂ ಮತ್ತು ಸರ್ಕಾರದ ಕಡತದಲ್ಲಿರುವಂತಾದ್ದಕ್ಕೂ ಯಾವುದೇ ಸಂಬಂಧವಿಲ್ಲ. ಸರ್ಕಾರಕ್ಕೆ ಅಧಿಕೃತವಾದ ವರದಿಯನ್ನು ಅಧಿಕಾರಿಗಳು ಕಳುಹಿಸಿಕೊಟ್ಟಿದ್ದಾರೆ ಮತ್ತು ಮಾನ್ಯ ಕಂದಾಯ ಮಂತ್ರಿಗಳು ಈ ದಿಸೆಯಲ್ಲಿ ತೆಗೆದುಕೊಂಡಿರುವ ಕ್ರಮದ ಬಗ್ಗೆಯೂ ವರದಿ ಇದೆ. ಹಾಗೂ ಕಾನೂನು ರೀತ್ಯ ಕ್ರಮವನ್ನು ಸಹ ತೆಗೆದುಕೊಳ್ಳುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಅಪ್ಪಣೆ ಕೊಡಿಸಿದ್ದಾರೆ. ಆದುದರಿಂದ, ಇವತ್ತಿನ ದಿವಸ

ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳು ಗೌಪ್ಯವಾಗಿರತಕ್ಕಂಥ ಅವಶ್ಯಕತೆಯಿಲ್ಲ. ಇದು ನಮಗೆ ಗೊತ್ತಾಗಬೇಕಾಗಿದ್ದು, ಹೊರಗಡೆ ಇರುವ ರಾಜ್ಯದ ಜನತೆಗೂ ಗೊತ್ತಾಗಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರದ ಅಧಿಕೃತ ದಾಖಲೆಗಳಲ್ಲಿ ಏನಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ವಸತಿ ಸಚಿವರು ತಮ್ಮ ಹೇಳಿಕೆ ಕೊಟ್ಟ ನಂತರ ನಾವು (ಸರ್ಕಾರ) ಹೇಳಿಕೆ ಕೊಡುತ್ತೇವೆನ್ನುವುದು ಸರಿಯಲ್ಲ.

ಉಪಾಧ್ಯಕ್ಷರು : ತಾವು ಹಿರಿಯ ಸದಸ್ಯರಾಗಿದ್ದು, ಸದರಿ ವಿಷಯದ ಬಗ್ಗೆ ಪ್ರಸ್ತಾಪಿಸಲು ನಿಯಮ 311ರ ಸೂಚನೆಯಂತೆ ಪತ್ರ ಕಳುಹಿಸಿದ್ದೀರಿ. ಇದಕ್ಕೆ ಸಂಬಂಧಿಸಿದಂತೆ ಹೇಳಿಕೆ ಕೊಡಲು ಮಂತ್ರಿಗಳಿಗೆ ಅವಕಾಶ ಕೊಡಬೇಕಾಗುತ್ತದೆ. ಆದ್ದರಿಂದ ಮಂತ್ರಿಗಳು ಉತ್ತರ ಕೊಟ್ಟ ನಂತರ ಸರ್ಕಾರ ಉತ್ತರ ಕೊಡಬೇಕಾದ ಸಂದರ್ಭ ಬರುತ್ತದೆ. ಸಚಿವರು ತಮ್ಮ ಹೇಳಿಕೆ ಕೊಡಲು ಸ್ವಲ್ಪ ಕಾಲಾವಕಾಶ ಕೇಳಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ಸಚಿವರು ತಮ್ಮ ಉತ್ತರ ನೀಡಲು ಸಮಯ ಕೇಳಿರುವುದರಿಂದ ಅವರಿಗೆ ಸಮಯ ಕೊಡಬೇಕಾಗುತ್ತದೆ.

ಉಪಾಧ್ಯಕ್ಷರು : ವಸತಿ ಸಚಿವರಾದ ಶ್ರೀ ಗೋಪಿನಾಥ್ ಸಾಂಡ್ರಾರವರು ಈ ಕುರಿತು ತಮ್ಮ ಹೇಳಿಕೆ ನೀಡಲು ಕೆಲವು ದಾಖಲೆಗಳನ್ನು ನೋಡಬೇಕಾಗಿದ್ದು, ಅದಕ್ಕಾಗಿ ಕಾಲಾವಕಾಶ ಕೊಡಿ ಎಂದು ಕೇಳುತ್ತಿದ್ದಾರೆ. ಸಾಧ್ಯವಾದರೆ ನಾಳೆ ಅಥವಾ ನಾಡಿದ್ದು ಉತ್ತರ ಕೊಡುತ್ತಾರೆ. ನಂತರ ಸರ್ಕಾರದ ಪರವಾಗಿ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಈಗ ಸದನವನ್ನು ಮುಂದೂಡಿ ಮತ್ತೆ ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವುದು.

(ಸದನವು ಸಂಜೆ 6 ಗಂಟೆ 5 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 30ನೇ ಆಗಸ್ಟ್ ಮಾಹೆ 1994ರ ಮಂಗಳವಾರದಂದು ಬೆಳಿಗ್ಗೆ 11.00 ಘಂಟೆಗೆ ಸೇರಲು ನಿಶ್ಚಯಿಸಿತು)

+ಈ ಚಿನ್ಹೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕರ್ನಾಟಕ ವಿಧಾನ ಸಭೆ

ಒಂಬತ್ತನೇ ವಿಧಾನ ಸಭೆ

(ಹದಿಮೂರನೇ ಅಧಿವೇಶನ)

ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ, 1994

(1994ರ ವಿಧಾನ ಸಭಾ ವಿಧೇಯಕ ಸಂಖ್ಯೆ 17)

ಕರ್ನಾಟಕ ಮನರಂಜನಾ ತೆರಿಗೆ ಅಧಿನಿಯಮ, 1958ನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ.

ಕರ್ನಾಟಕ ಮನರಂಜನಾ ತೆರಿಗೆ ಅಧಿನಿಯಮ. 1958ನ್ನು (1958ರ ಕರ್ನಾಟಕ ಅಧಿನಿಯಮ 30) ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ

ಭಾರತ ಗಣರಾಜ್ಯದ ನಲವತ್ತೈದನೇ ವರ್ಷದಲ್ಲಿ ಕರ್ನಾಟಕ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು :

1. **ಚಿಕ್ಕ ಶೀರ್ಷಿಕೆ ಮತ್ತು ಪ್ರಾರಂಭ** : (1) ಅಧಿನಿಯಮವನ್ನು ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ, 1994 ಎಂದು ಕರೆಯತಕ್ಕದ್ದು.

2. ಇದು ಕೂಡಲೇ ಜಾರಿಯಲ್ಲಿ ಬರತಕ್ಕದ್ದು.

2. **3ಬಿ ಹೊಸ ಪ್ರಕರಣದ ಸೇರ್ಪಡೆ** : ಕರ್ನಾಟಕ ಮನರಂಜನಾ ತೆರಿಗೆ ಅಧಿನಿಯಮ, 1958ರ (ಕರ್ನಾಟಕ ಅಧಿನಿಯಮ ಸಂಖ್ಯೆ 30)ಇಲ್ಲಿ (ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿತವಾಗಿದೆ) 3 ಎ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ

" **3 ಬಿ. ಚಲನಚಿತ್ರ ಪ್ರದರ್ಶನಗಳ ಮೇಲೆ ತೆರಿಗೆ ವಿಧಿಸುವುದು** : (1)3 ಮತ್ತು 3ಎ ಪ್ರಕರಣಗಳಲ್ಲಿ ಏನೇ ಇದ್ದರೂ ಮತ್ತು ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು ಈ ಕೆಳಕಂಡ ಕೋಷ್ಟಕದ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸ್ಥಳೀಯ ಪ್ರಾಧಿಕಾರ ಅಥವಾ ಪಟ್ಟಣ ಅಥವಾ ಗ್ರಾಮದ ಪರಿಮಿತಿಗಳಲ್ಲಿ ಇರುವ ಚಲನಚಿತ್ರ ಮಂದಿರಗಳಲ್ಲಿ ನಡೆಯುವ ಚಲನಚಿತ್ರ ಪ್ರದರ್ಶನಗಳಿಗೆ ಸಂಬಂಧಪಟ್ಟಂತೆ ಅದರ (3)ನೇ ಅಂಕಣದ ಸಂವಾದಿ ನಮೂದುಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ದರಗಳಲ್ಲಿ ಲೆಕ್ಕ ಹಾಕಲಾಗಿರುವಂತೆ, ವಿಡಿಯೋ ಪ್ರದರ್ಶನಗಳಲ್ಲದ ಪ್ರತಿಯೊಂದು ಚಲನಚಿತ್ರ ಪ್ರದರ್ಶನಕ್ಕೆ ಸಂಬಂಧಿಸಿದಂತೆ ಒಟ್ಟು ಸಂಗ್ರಹಣಾ ಸಾಮರ್ಥ್ಯದ ಮೇಲೆ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು.

ಕೋಷ್ಟಕ

ಕ್ರಮ ಸಂಖ್ಯೆ	ಸ್ಥಳೀಯ ಪ್ರಾಧಿಕಾರ/ಪಟ್ಟಣ ಗ್ರಾಮ-ಅವುಗಳ ಜನಸಂಖ್ಯೆಯು	ಪ್ರತಿಯೊಂದು ಪ್ರದರ್ಶನದ ಒಟ್ಟು ಸಂಗ್ರಹಣಾ ಸಾಮರ್ಥ್ಯದ ಮೇಲೆ ತೆರಿಗೆ
1.	ರೂ.15,000 ಮೀರದಿದ್ದರೆ	ಶೇಕಡಾ ಹದಿನೈದು
2.	ರೂ.15,000 ಮೀರಿದ್ದು ಆದರೆ ರೂ.50,000 ಮೀರದಿದ್ದರೆ	ಶೇಕಡಾ ಹದಿನೆಂಟು
3.	ರೂ.50,000 ಮೀರಿದ್ದು ಆದರೆ ರೂ.1,00,000 ಮೀರದಿದ್ದರೆ	ಶೇಕಡಾ ಇಪ್ಪತ್ತು
4.	ರೂ.1,00,000 ಮೀರಿದ್ದು ಆದರೆ ರೂ. 3,00,000 ಮೀರದಿದ್ದರೆ	ಶೇಕಡಾ ಇಪ್ಪತ್ತೈದು
5.	ರೂ.3,00,000 ಮೀರಿದ್ದು ಆದರೆ ರೂ.5,00,000 ಮೀರದಿದ್ದರೆ	ಶೇಕಡಾ ಇಪ್ಪತ್ತೇಳು
6.	ರೂ 5,00,000 ಮೀರಿದ್ದು ಆದರೆ ರೂ. 10,00,000 ಮೀರದಿದ್ದರೆ	ಶೇಕಡಾ ಮೂವತ್ತು
7.	ರೂ. 10,00,000 ಮೀರಿದ್ದರೆ	ಶೇಕಡಾ ಮೂವತ್ತೂರು

ವಿವರಣೆ : ಈ ಪ್ರಕರಣ ಮತ್ತು 4 ಎ ಪ್ರಕರಣಗಳ ಉದ್ದೇಶಕ್ಕಾಗಿ ಪ್ರತಿಯೊಂದು ಪ್ರದರ್ಶನಕ್ಕೆ ಒಟ್ಟು ಸಂಗ್ರಹಣಾ ಸಾಮರ್ಥ್ಯ ಎಂದರೆ, ಚಲನಚಿತ್ರ ಪ್ರದರ್ಶನಗಳನ್ನು ನಡೆಸುತ್ತಿರುವ ಸ್ಥಳಕ್ಕೆ ಸಂಬಂಧಪಟ್ಟಂತೆ, ಕರ್ನಾಟಕ ಚಲನಚಿತ್ರಗಳ (ನಿಯಂತ್ರಣ) ಅಧಿನಿಯಮ, 1964ರ ಅಡಿಯಲ್ಲಿ ಮಾಲೀಕನು, ಲೈಸೆನ್ಸ್ ನೀಡಿಕೆ ಪ್ರಾಧಿಕಾರವು ನಿರ್ಧರಣೆ ಮಾಡಿದಂತೆ ಪ್ರತಿಯೊಂದು ಪ್ರದರ್ಶನದಲ್ಲಿ ಎಲ್ಲ ಆಸನಗಳು ಅಥವಾ ಸ್ಥಳಾವಕಾಶವು ಭರ್ತಿಯಾಗಿದ್ದು, ನಿಯಮಿಸಲಾದ ಪ್ರಾಧಿಕಾರಿಯು ಈ ಸಂಬಂಧವಾಗಿ ಪ್ರವೇಶಕ್ಕಾಗಿ ನಿರ್ಧರಣೆ ಮಾಡಿರುವ ಗರಿಷ್ಠ ದರದ ಸಂಗ್ರಹಣ ಮಾಡಿದ್ದರೆ ಪ್ರವೇಶಕ್ಕಾಗಿ ಮಾಡಲಾಗಿರುವ ಎಲ್ಲಾ ಸಂದಾಯಗಳ ಕಾಲ್ಪನಿಕ ಸರಾಸರಿ.

2. ಮಾಲೀಕನು, ಅವನು ಒಂದು ವಾರದಲ್ಲಿ ಪ್ರದರ್ಶಿಸಿದ ವಾಸ್ತವಿಕ ಪ್ರದರ್ಶನಗಳ ಮೇಲೆ (1)ನೇ ಉಪ-ಪ್ರಕರಣದಡಿಯ ತೆರಿಗೆ ಮೊಬಲಗನ್ನು ಸಂದಾಯ ಮಾಡತಕ್ಕದ್ದು.

3. ಯಾವನೇ ಮಾಲೀಕನು, ಚಲನಚಿತ್ರಮಂದಿರದ ಒಟ್ಟು ಸಂಗ್ರಹಣಾ ಸಾಮರ್ಥ್ಯವನ್ನು ಲೆಕ್ಕಹಾಕುವುದನ್ನು ಗಣನೆಗೆ ತೆಗೆದುಕೊಂಡು ಪ್ರವೇಶಕ್ಕಾಗಿರುವ ಸಂದಾಯಕ್ಕಿಂತ ಹೆಚ್ಚಿನ ಯಾವುದೇ ಮೊಬಲಗನ್ನು ಸಂಗ್ರಹಿಸತಕ್ಕದ್ದಲ್ಲ ಅಥವಾ ಸಂಗ್ರಹಿಸುವಂತೆ ಮಾಡತಕ್ಕದ್ದಲ್ಲ.

3. 3 ಸಿ. ಪ್ರಕರಣದ ತಿದ್ದುಪಡಿ : ಮೂಲ ಅಧಿನಿಯಮದ 3ಸಿ ಪ್ರಕರಣದಲ್ಲಿ

(i) (1)ನೇ ಉಪ-ಪ್ರಕರಣದಲ್ಲಿ, " 3 ಮತ್ತು 3ಎ" ಎಂಬ ಅಂಕಿ ಅಂಶಗಳು ಮತ್ತು ಅಕ್ಷರಗಳಿಗೆ "3ಬಿ" ಎಂಬ ಅಂಕಿ ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕುದ್ದು.

(ii) (ಬಿ) ಖಂಡದ ತರುವಾಯ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು,ಎಂದರೆ

" ಸಿ) ಯಾವುದೇ ಇತರ ಭಾಷೆಯ ಚಿತ್ರದ ರೀಮೇಕ್ ಆಗಿರುವ ಕನ್ನಡ ಚಿತ್ರದ ಚಲನಚಿತ್ರ ಪ್ರದರ್ಶನವಾಗಿದ್ದ ಸಂದರ್ಭದಲ್ಲಿ,-

(i) ಸೆಂಟ್ರಲ್ ಬೋರ್ಡ್ ಆಫ್ ಫಿಲಂ ಸರ್ಟಿಫಿಕೇಟ್ ಇದು ಅಂಥ ಇತರ ಭಾಷೆಯ ಚಿತ್ರಕ್ಕೆ ಪ್ರಮಾಣಪತ್ರ ನೀಡಿದ ದಿನಾಂಕದಿಂದ ಹತ್ತು ವರ್ಷಗಳ ಅವಧಿಯು ಮುಕ್ತಾಯವಾದ ನಂತರ ಕರ್ನಾಟಕ ರಾಜ್ಯದಲ್ಲಿ ಮತ್ತೆ ನಿರ್ಮಿಸಲಾಗಿದ್ದ ಸಂದರ್ಭದಲ್ಲಿ ಅಥವಾ

(ii) ಕೇಂದ್ರಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರದಿಂದ ಅತ್ಯುತ್ತಮ ಕಥಾ ಚಿತ್ರವೆಂಬ ಪ್ರಶಸ್ತಿಯನ್ನು ಪಡೆದಿರುವ ಅಥವಾ ಅಂತರಾಷ್ಟ್ರೀಯ ಚಿತ್ರೋತ್ಸವದ ಭಾರತೀಯ ಪನೋರಮಾ ವಿಭಾಗದಲ್ಲಿ ಪರಿಗಣಿಸಲಾಗಿದ್ದು ಕರ್ನಾಟಕ ರಾಜ್ಯದಲ್ಲಿ ರೀಮೇಕ್ ಚಿತ್ರವಾಗಿ ನಿರ್ಮಿಸಿದ್ದ ಸಂದರ್ಭದಲ್ಲಿ

ಸಂದಾಯ ಮಾಡಬೇಕಾದ ಮನರಂಜನಾ ತೆರಿಗೆ ದರವು ಅದರಲ್ಲಿ ನಿರ್ದಿಷ್ಟಪಡಿಸಿರುವ ದರದ ಅರ್ಧದಷ್ಟು ಇರತಕ್ಕದ್ದು.

4. 4ನೇ ಪ್ರಕರಣದ ತಿದ್ದುಪಡಿ : ಮೂಲ ಅಧಿನಿಯಮದ(4)ನೇ ಪ್ರಕರಣದಲ್ಲಿ (1) ನೇ ಉಪ-ಪ್ರಕರಣದಲ್ಲಿ

(i) "ಮತ್ತು 3 ಮತ್ತು 3ಎ ಪ್ರಕರಣಗಳ ಅಡಿಯಲ್ಲಿ ವಿಧಿಸಬಹುದಾದ ಅಧಿಭಾರ ಎಂಬ ಪದಗಳ ಅಂಕಿಗಳು ಮತ್ತು ಅಕ್ಷರಗಳಿಗೆ," 3ಬಿ ಪ್ರಕರಣದ ಅಡಿಯಲ್ಲಿ ವಿಧಿಸಬಹುದಾದ" ಎಂಬ ಪದಗಳು, ಅಂಕಿಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು;

ii) ಕೋಷ್ಟಕದಲ್ಲಿ, "ಮನರಂಜನಾ ತೆರಿಗೆ ಮತ್ತು ಅಧಿಭಾರ" ಎಂಬ ಪದಗಳಿಗೆ "ಮನರಂಜನಾ ತೆರಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

iii) ಮೊದಲನೇ ಪರಂತುಕದಲ್ಲಿ

ಎ) "3 ಮತ್ತು 3ಎ ಪ್ರಕರಣಗಳ ಅಡಿಯಲ್ಲಿ ವಿಧಿಸಬಹುದಾದ ಅಧಿಭಾರ" ಎಂಬ ಪದಗಳು, ಅಂಕಿಗಳು ಮತ್ತು ಅಕ್ಷರಗಳಿಗೆ, " 3ಬಿ ಪ್ರಕರಣದ ಅಡಿಯಲ್ಲಿ ವಿಧಿಸಬಹುದಾದ" ಎಂಬ ಅಂಕಿಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) " ಮತ್ತು ಅಧಿಭಾರ" ಎಂಬ ಪದಗಳನ್ನು ಬಿಟ್ಟು ಬಿಡತಕ್ಕದ್ದು.

5. 4ಎ ಪ್ರಕರಣದ ತಿದ್ದುಪಡಿ : ಮೂಲ ಅಧಿನಿಯಮದ 4ಎ ಪ್ರಕರಣದ 1ನೇ ಉಪ-ಪ್ರಕರಣಕ್ಕೆ ಈ ಮುಂದಿನ ಉಪ-ಪ್ರಕರಣವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

"(1) ಕೆಳಗಿನ ಕೋಷ್ಟಕದ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸ್ಥಳೀಯ ಪ್ರಾಧಿಕಾರ ಅಥವಾ ಪಟ್ಟಣ ಅಥವಾ ಗ್ರಾಮದ ಪರಿಮಿತಿಗಳೊಳಗೆ ಇರುವ ಚಲನಚಿತ್ರಮಂದಿರದಲ್ಲಿ ನಡೆಸಲಾದ ಚಲನಚಿತ್ರ ಪ್ರದರ್ಶನಗಳ ಸಂದರ್ಭದಲ್ಲಿ 3 ಬಿ ಪ್ರಕರಣದಡಿ ಸಂದಾಯವಾಗಬೇಕಾದ ಮನೋರಂಜನಾ ತೆರಿಗೆಯ ಬದಲಾಗಿ, ಮಾಲೀಕನು ತನ್ನ ಇಚ್ಛಾನುಸಾರವಾಗಿ ಮತ್ತು ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಆದರ (3)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದಂತೆ ಪ್ರತಿವಾರವೂ ತೆರಿಗೆಯನ್ನು ಸಂದಾಯ ಮಾಡಬಹುದು.

ಕೋಷ್ಟಕ

ಕ್ರಮ ಸಂಖ್ಯೆ	ಸ್ಥಳೀಯ ಪ್ರಾಧಿಕಾರಪಟ್ಟಣ, ಗ್ರಾಮ ಇವುಗಳ ಜನಸಂಖ್ಯೆಯು	ತೆರಿಗೆಯ ದರ
1	2	3
1.	15,000 ರೂ.ಗಳನ್ನು ಮೀರದಿದ್ದರೆ	ಪ್ರತಿ ಪ್ರದರ್ಶನಕ್ಕೆ ಒಟ್ಟು ಸಂಗ್ರಹಣಾ ಸಾಮರ್ಥ್ಯದ ಶೇಕಡಾ ಹತ್ತುx 12
2	15,000 ಗಳನ್ನು ಮೀರಿದ್ದು, ಆದರೆ 50,000 ರೂ.ಗಳನ್ನು ಮೀರದಿದ್ದರೆ	ಪ್ರತಿಪ್ರದರ್ಶನಕ್ಕೆ ಒಟ್ಟು ಸಂಗ್ರಹಣಾ ಸಾಮರ್ಥ್ಯದ ಶೇಕಡಾ ಹದಿಮೂರು x13
3.	50,000 ರೂ.ಗಳನ್ನು ಮೀರಿದ್ದು, ಆದರೆ 1,00,000 ರೂ.ಗಳನ್ನು ಮೀರಿದ್ದರೆ	ಪ್ರತಿ ಪ್ರದರ್ಶನಕ್ಕೆ ಒಟ್ಟು ಸಂಗ್ರಹಣಾ ಸಾಮರ್ಥ್ಯದ ಶೇಕಡಾ ಹದಿನೈದು x 14
4.	1,00.000 ರೂ.ಗಳನ್ನು ಮೀರಿದ್ದು, ಆದರೆ 3,00,000 ರೂ.ಗಳನ್ನು ಮೀರದಿದ್ದರೆ	ಪ್ರತಿಪ್ರದರ್ಶನಕ್ಕೆ ಒಟ್ಟು ಸಂಗ್ರಹಣಾ ಸಾಮರ್ಥ್ಯದ ಶೇಕಡಾ ಇಪ್ಪತ್ತು x 23
5.	3,00,000 ರೂ.ಗಳನ್ನು ಮೀರಿದ್ದು, ಆದರೆ 5,00,000 ರೂ.ಗಳನ್ನು ಮೀರದಿದ್ದರರೆ	ಪ್ರತಿಪ್ರದರ್ಶನಕ್ಕೆ ಒಟ್ಟು ಸಂಗ್ರಹಣಾ ಸಾಮರ್ಥ್ಯದ ಶೇಕಡಾ ಇಪ್ಪತ್ತೆರಡು x 23
6.	5,00,000 ರೂ.ಗಳನ್ನು ಮೀರಿದ್ದು, ಆದರೆ 10,00,000 ರೂ.ಗಳನ್ನು ಮೀರದಿದ್ದರೆ	ಪ್ರತಿಪ್ರದರ್ಶನಕ್ಕೆ ಒಟ್ಟು ಸಂಗ್ರಹಣಾ ಸಾಮರ್ಥ್ಯದ ಶೇಕಡಾ ಇಪ್ಪತ್ತೈದು x 23
7.	10,00,000 ರೂ.ಗಳನ್ನು ಮೀರಿದ್ದರೆ	ಪ್ರತಿ ಪ್ರದರ್ಶನಕ್ಕೆ ಒಟ್ಟು ಸಂಗ್ರಹಣಾ ಸಾಮರ್ಥ್ಯದ ಶೇಕಡಾ ಇಪ್ಪತ್ತೆಂಟು x 23

ಪರಂತು, 1981ರ ಏಪ್ರಿಲ್ ಮೊದಲನೆಯ ದಿನದ ತರುವಾಯ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರವು ನೀಡಿದ ಅತ್ಯುತ್ತಮ ಕಥಾಚಿತ್ರ ಪ್ರಶಸ್ತಿಯನ್ನು ರಾಜ್ಯ ಸರ್ಕಾರವು ಅಧಿಸೂಚಿಸಲಾದ ಅಂತರರಾಷ್ಟ್ರೀಯವಾಗಿ ಮನ್ನಣೆ ಪಡೆದ ಪ್ರಶಸ್ತಿಯನ್ನು ಗಳಿಸಿದಂಥ ಕನ್ನಡ, ಕೊಡವ, ಕೊಂಕಣಿ ಅಥವಾ ತುಳು ಚಿತ್ರಗಳ ಚಲನಚಿತ್ರ ಪ್ರದರ್ಶನದ ಸಂದರ್ಭದಲ್ಲಿ, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಈ ಉಪ-ಪ್ರಕರಣದಡಿ ಯಾವ ತೆರಿಗೆಯನ್ನು ಸಂದಾಯ ಮಾಡತಕ್ಕದ್ದಲ್ಲ.

ಮತ್ತೂ ಪರಂತು, 1981ರ ಏಪ್ರಿಲ್ ಮೊದಲನೆಯ ದಿನದ ತರುವಾಯ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರವು ನೀಡಿದ ಅತ್ಯುತ್ತಮ ಕಥಾ ಚಿತ್ರ ಪ್ರಶಸ್ತಿಯನ್ನು ಅಥವಾ ರಾಜ್ಯ ಸರ್ಕಾರವು ಅಧಿಸೂಚಿಸಲಾದ ಅಂತರರಾಷ್ಟ್ರೀಯವಾಗಿ ಮನ್ನಣೆ ಪಡೆದ ಪ್ರಶಸ್ತಿಯನ್ನುಗಳಿಸಿದಂಥ ಕನ್ನಡ, ಕೊಡವ, ಕೊಂಕಣಿ ಅಥವಾ ತುಳು ಚಿತ್ರಗಳ ಹೊರತು ಇತರ ಚಲನಚಿತ್ರ ಪ್ರದರ್ಶನದ ಸಂದರ್ಭದಲ್ಲಿ, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಆರು ತಿಂಗಳುಗಳ ಅವಧಿಯವರೆಗೆ ಈ ಉಪ - ಪ್ರಕರಣದಡಿ ಯಾವ ತೆರಿಗೆಯನ್ನು ಸಂದಾಯ ಮಾಡತಕ್ಕದ್ದಲ್ಲ

ಮತ್ತೂ ಪರಂತು.

(i) ಕರ್ನಾಟಕ ರಾಜ್ಯದಲ್ಲಿ ನಿರ್ಮಿಸಲಾದ ಕನ್ನಡ,ಕೊಡವ, ಕೊಂಕಣಿ ಅಥವಾ ತುಳು ಚಿತ್ರದ ಚಲನಚಿತ್ರ ಪ್ರದರ್ಶನದ ಸಂದರ್ಭದಲ್ಲಿ, ಸಂದಾಯ ಮಾಡಬೇಕಾದ ಮನೋರಂಜನಾ ತೆರಿಗೆಯ ದರಗಳು, (1) ನೇ ಉಪ -ಪ್ರಕರಣದಡಿ ನಿರ್ದಿಷ್ಟಪಡಿಸಲಾದ ದರಗಳ ಅರ್ಧದಷ್ಟಿರತಕ್ಕದ್ದು.

(ii) ಕರ್ನಾಟಕ ರಾಜ್ಯದ ಹೊರಗೆ ನಿರ್ಮಿಸಲಾದ ಹಾಗೂ 1987ರ ಡಿಸೆಂಬರ್ ಮುವತ್ತೊಂದನೆಯ ದಿನದಂದು ಅಥವಾ ತರುವಾಯ ಸೆಂಟ್ರಲ್ ಬೋರ್ಡ್ ಆಫ್

ಫಿಲಂ ಸರ್ಟಿಫಿಕೇಷನ್ ಇದು ನೀಡಿದ ಸೆನ್ಸಾರ್ ಸರ್ಟಿಫಿಕೇಷನ್ ಪಡೆದಿರುವ ಕನ್ನಡ, ಕೊಡವ, ಕೊಂಕಣಿ ಅಥವಾ ತುಳು ಚಿತ್ರಗಳ ಚಲನಚಿತ್ರ ಪ್ರದರ್ಶನದ ಸಂದರ್ಭದಲ್ಲಿ, ಸಂದಾಯ ಮಾಡಬೇಕಾದ ಮನೋರಂಜನಾ ತೆರಿಗೆಯ ದರಗಳು, (ಗ) ನೇ ಉಪ-ಪ್ರಕರಣದಡಿಯಲ್ಲಿನ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಲಾದ ದರಗಳ ಅರ್ಧದರ್ಷಿರತಕ್ಕದ್ದು.

ಮತ್ತೂ ಪರಂತು 1964ರ ಕರ್ನಾಟಕ ಚಲನಚಿತ್ರಗಳ (ನಿಯಂತ್ರಣ) ಅಧಿನಿಯಮದಡಿ ಲೈಸನ್ಸನ್ನು ನವೀಕರಿದ ಕಾರಣದಿಂದಾಗಿ ಅಥವಾ ನ್ಯಾಯಾಲಯದ ಯಾವುದೇ ಆಜ್ಞೆ ಅಥವಾ ರಾಜ್ಯ ಸರ್ಕಾರದಿಂದ ಅಥವಅ ಯಾವುದೇ ಇತರ ಪ್ರಾಧಿಕಾರದಿಂದ ಹೊರಡಿಸಲಾದ ಯಾವುದೇ ಆದೇಶದ ಕಾರಣದಿಂದಾಗಿ ಇಡೀ ವಾರದ ಅವಧಿಯಲ್ಲಿ ಮಾಲೀಕನಿಗೆ ಪ್ರದರ್ಶನವನ್ನು ನಡೆಸಲು ಸಾಧ್ಯವಾಗದಿದ್ದರೆ, ಅಂಥ ವಾರದ ಸಂಪೂರ್ಣ ಅವಧಿಯಲ್ಲಿ ಯಾವುದೇ ಪ್ರದರ್ಶನವನ್ನು ನಡೆಸದಿರುವ ಬಗ್ಗೆ ರುಜುವಾತನ್ನು ಆತನು ಹಾಜರುಪಡಿಸುವುದಕ್ಕೆ ಒಳಪಟ್ಟು, ಆ ವಾರಕ್ಕೆ ಯಾವ ತೆರಿಗೆಯನ್ನೂ ಸಂದಾಯ ಮಾಡತಕ್ಕದಲ್ಲ.

(2) (6)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ

" (2)(1) ನೇ ಉಪಪ್ರಕರಣದ ಅಡಿ ಸಂದಾಯ ಮಾಡಬೇಕಾಗಿರುವ ತೆರಿಗೆಯ ಮೊಬಲಗನ್ನು, ವಾರದಲ್ಲಿ ಮಾಲೀಕನು ನಡೆಸಿದ ಪ್ರದರ್ಶನಗಳ ವಾಸ್ತವಿಕ ಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳದೆ ಚಲನಚಿತ್ರ ಮಂದಿರದ ಮಾಲೀಕನು ಸಂದಾಯ ಮಾಡತಕ್ಕದ್ದು.

(6 ಎ) ಈ ಪ್ರಕರಣದ ಅಡಿಯಲ್ಲಿ ಅನುಮತಿಸಲಾದ ಆಯ್ಕೆಯ ಅವಕಾಶವು ಅಂಥ ಆಯ್ಕೆಯ ಅವಕಾಶಕ್ಕೆ ಅನುಮತಿಸಲಾದ ಹಣಕಾಸು ವರ್ಷದ ಅಂತ್ಯದವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು."

6. 4ಎಎ ಪ್ರಕರಣದ ತಿದ್ದುಪಡಿ : ಮೂಲ ಅಧಿನಿಯಮ 4 ಎಎ ಪ್ರಕರಣದಲ್ಲಿ "ಪ್ರಕರಣ 3 ಅಥವಾ 4ಎ" ಎಂಬ ಪದಗಳು ಮತ್ತು ಅಕ್ಷರಗಳಿಗೆ " ಪ್ರಕರಣ 3ಬಿ ಅಥವಾ 4ಎ" ಎಂಬ ಪದಗಳು, ಅಂಕಿಗಳನ್ನು ಪ್ರತಿಯೊಜೀಸತಕ್ಕದ್ದು.

7. 4 ಬಿ ಪ್ರಕರಣದ ತಿದ್ದುಪಡಿ : ಮೂಲ ಅಧಿನಿಯಮದ 4 ಬಿ ಪ್ರಕರಣದಲ್ಲಿ " 4 ಅಥವಾ 4ಎ" ಎಂಬ ಅಂಕಿಗಳು, ಪದ ಮತ್ತು ಅಕ್ಷರಗಳಿಗೆ, " ಅಥವಾ 4 "ಎಂಬ ಅಂಕಿಗಳು ಮತ್ತು ಪದವನ್ನು ಪ್ರತಿಯೋಜಿಸತಕ್ಕದ್ದು.

8. 4 ಸಿ ಪ್ರಕರಣದ ತಿದ್ದುಪಡಿ : ಮೂಲ ಅಧಿನಿಯಮದ 4ಸಿ ಪ್ರಕರಣದಲ್ಲಿ, "4ಎ" ಎಂಬ ಅಂಕಿಗಳು ಮತ್ತು ಅಕ್ಷರಗಳನ್ನು ಬಿಟ್ಟುಬಿಡತಕ್ಕದ್ದು.

9. 6ನೇ ಪ್ರಕರಣದ ತಿದ್ದುಪಡಿ : ಮೂಲ ಅಧಿನಿಯಮದ 6ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ, "ಪ್ರಕರಣ 4ಎ" ಎಂಬ ಪದ,ಅಂಕಿ ಮತ್ತು ಅಕ್ಷರಗಳಿಗೆ, " ಪ್ರಕರಣದ 3 ಬಿ, 4ಎ" ಎಂಬ ಪದ, ಅಂಕಿಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

10. 6ಎ ಪ್ರಕಣದ ತಿದ್ದುಪಡಿ : ಮೂಲ ಅಧಿನಿಯಮದ 6ಎ ಪ್ರಕರಣದ (3)ನೇ ಉಪಪ್ರಕರಣದಲ್ಲಿ " ಪ್ರಕರಣ 3,3ಎ" ಎಂಬ ಪದ, ಅಂಕಿಗಳು ಮತ್ತು ಅಕ್ಷರಗಳಿಗೆ, "ಪ್ರಕರಣ 3,3ಎ,3ಬಿ" ಎಂಬ ಪದ, ಅಂಕಿಗಳು ಮತ್ತು ಅಕ್ಷರಗಳನ್ನು ಪ್ರತಿಯೊಜಿಸತಕ್ಕದ್ದು.

11. 6ಬಿ ಪ್ರಕರಣದ ತಿದ್ದುಪಡಿ : ಮೂಲ ಅಧಿನಿಯಮದ 6ಬಿ ಪ್ರಕರಣದ (1) ನೇ ಉಪಪ್ರಕರಣದಲ್ಲಿ" ಪ್ರಕರಣ 3 ಎ" ಎಂಬ ಪದ, ಅಂಕಿ ಮತ್ತು

ಅಕ್ಷರಗಳ ನಂತರ, ಅದು ಕಂಡುಬರುವಲ್ಲೆಲ್ಲಾ "ಅಥವಾ ಪ್ರಕರಣ 3ಬಿ" ಎಂಬ ಪದಗಳು, ಅಂಕಿಗಳು ಮತ್ತು ಅಕ್ಷರವನ್ನು ಸೇರಿಸತಕ್ಕದ್ದು.

12. 17ನೇ ಪ್ರಕರಣದ ತಿದ್ದುಪಡಿ : ಮೂಲ ಅಧಿನಿಯಮದ 17ನೇ ಪ್ರಕರಣದಲ್ಲಿ, (1)ನೇ ಉಪಪ್ರಕರಣದಲ್ಲಿ " ಪ್ರಕರಣದ 3 ಮತ್ತು 3ಎ" ಎಂಬ ಪದಗಳು, ಅಂಕಿಗಳು ಮತ್ತು ಅಕ್ಷರಕ್ಕೆ " ಪ್ರಕರಣ 3, 3ಎ ಮತ್ತು 3ಬಿ" ಎಂಬ ಪದಗಳು, ಅಂಕಿಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

13. 18ನೇ ಪ್ರಕರಣದ ತಿದ್ದುಪಡಿ : ಮೂಲ ಅಧಿನಿಯಮದ 18ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ, (ಬಿಬಿ) ಖಂಡದಲ್ಲಿ," ಪ್ರಕರಣ 4ಎ"ಎಂಬ ಪದ, ಅಂಕಿ ಮತ್ತು ಅಕ್ಷರಕ್ಕೆ "ಪ್ರಕರಣ 3 ಬಿ, 4ಎ" ಎಂಬ ಪದಗಳು, ಅಂಕಿಗಳು, ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶಗಳ ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಚಲನಚಿತ್ರ ಕೈಗಾರಿಕೆಗಾಗಿ ವ್ಯಾಪಕಸರ್ವಗ್ರಾಹಿ ನೀತಿಯನ್ನು ಸೂಚಿಸುವುದಕ್ಕೆ ಶ್ರೀ ವಿ.ಎಸ್. ಸುಬ್ಬರಾವ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯ ವರದಿಯನ್ನು ಕಾರ್ಯರೂಪಕ್ಕೆ ತರಲು ಕರ್ನಾಟಕ ಮನರಂಜನಾ ತೆರಿಗೆ ಅಧಿನಿಯಮ, 1958ನ್ನು ತಿದ್ದುಪಡಿಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ವಿಧೇಯಕವು, ಇತರ ವಿಷಯಗಳೊಂದಿಗೆ ಈ ಮುಂದಿನ ವಿಷಯಗಳ ಬಗ್ಗೆ ಉಪಬಂಧಕಲ್ಪಿಸುತ್ತದೆ.

(i) 15,000 ಕ್ಕಿಂತ ಜನಸಂಖ್ಯೆಯನ್ನು ಹೊಂದಿರುವ ಸ್ಥಳೀಯ ಪ್ರಾಧಿಕಾರ ಅಥವಾ ಪಟ್ಟಣ ಅಥವಾ ಗ್ರಾಮದ ಪರಿಮಿತಿಯೊಳಗೆ ಇರುವ ಚಲನಚಿತ್ರ ಮಂದಿರದಲ್ಲಿ ಮನರಂಜನೆಯ ಸಂಬಂಧದಲ್ಲಿ ನಡೆಸಲಾದ ಚಲನಚಿತ್ರ ಪ್ರದರ್ಶನಗಳ ಸಂದರ್ಭದಲ್ಲಿ ವೀಡಿಯೋ ಪ್ರದರ್ಶನಗಳಿಲ್ಲದ ಪ್ರತಿ ಪ್ರದರ್ಶನದ ಒಟ್ಟು ಸಂಗ್ರಹಣಾ ಸಾಮರ್ಥ್ಯದ ಆಧಾರದ ಮೇಲೆ ಚಲನಚಿತ್ರ ಪ್ರದರ್ಶನಗಳ ಮೇಲೆ ತೆರಿಗೆ ವಿಧಿಸುವುದು.

(ii) ಸೆಂಟ್ರಲ್ ಬೋರ್ಡ್ ಆಫ್ ಫಿಲಂ ಸರ್ಟಿಫಿಕೇಷನ್, ಇದು ಇತರ ಭಾಷೆಯ ಚಲನಚಿತ್ರಕ್ಕೆ ಸರ್ಟಿಫಿಕೇಟನ್ನು ಅದು ಪಡೆದ ದಿನಾಂಕದಿಂದ ಹತ್ತು ವರ್ಷಗಳ ಅವಧಿಯ ನಂತರ ಅಂಥ ಯಾವುದೇ ಇತರ ಭಾಷೆಯ ಒಂದು ಚಲನಚಿತ್ರದಿಂದ ಮರುತಯಾರಿಕೆ ಮಾಡಿದ ಒಂದು ಕನ್ನಡ ಚಲನಚಿತ್ರದ ಸಂಬಂಧದಲ್ಲಿ ಮನೋರಂಜನಾ ತೆರಿಗೆಯ ದರದಲ್ಲಿನ ಅರ್ಧ ಭಾಗದಷ್ಟರ ತೆರಿಗೆಯನ್ನು ವಿಧಿಸತಕ್ಕದ್ದು.

(iii) ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರದಿಂದ ಅತ್ಯುತ್ತಮ ಕಥಾಚಿತ್ರವೆಂದು ಪ್ರಶಸ್ತಿ ಪಡೆದಿರುವ ಅಥವಾ ಅಂತರ ರಾಷ್ಟ್ರೀಯ ಚಿತ್ರೋತ್ಸವದ ಭಾರತೀಯ ಪನೋರಮಾ ವಿಭಾಗದಲ್ಲಿ ಪರಿಗಣಿಲಾಗಿರುವ ಯಾವುದೇ ಇತರ ಭಾಷೆಯ ಚಲನಚಿತ್ರದಿಂದ ಮರುಚಿತ್ರಿಸಲಾದ ಕನ್ನಡ ಭಾಷೆಯ ಚಲನಚಿತ್ರಕ್ಕೆ ಸಂಬಂಧಪಟ್ಟಂತೆ ದರದ ಅರ್ಧದಷ್ಟುಮನರಂಜಾನಾ ತೆರಿಗೆಯನ್ನು ವಿಧಿಸುವುದು.

(vi) ಹದಿನೈದು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಸ್ಥಳೀಯ ಪ್ರಾಧಿಕಾರ ಅಥವಾ ಪಟ್ಟಣ ಅಥವಾ ಗ್ರಾಮದ ಪರಿಮಿತಿಯೊಳಗೆ ಇರುವ ಚಲನಚಿತ್ರ ಮಂದಿರದಲ್ಲಿ ನಡೆಸಲಾದ ಪ್ರತಿಯೊಂದು ಪ್ರದರ್ಶನದ (ವಾಸ್ತವಿಕವಾಗಿ ಪ್ರದರ್ಶನ ನಡೆದಿರಲಿ ಅಥವಾ ನಡೆಯದಿರಲಿ) ಪ್ರತಿ ಪ್ರದರ್ಶನದ ಒಟ್ಟು ಸಂಗ್ರಹಣಾ ಸಾಮರ್ಥ್ಯದ ಆಧಾರದ ಮೇಲೆ ವೀಡಿಯೋ ಪ್ರದರ್ಶನಗಳಿಲ್ಲದ ಚಲನಚಿತ್ರ ಪ್ರದರ್ಶನಗಳಿಗೆ ಸಂಬಂಧಪಟ್ಟಂತೆ 3ಬಿ ಪ್ರಕರಣದ ಅಡಿಯಲ್ಲಿ ತೆರಿಗೆಯ ಬದಲಾಗಿ ಒಟ್ಟು ತೆರಿಗೆಯನ್ನು ಸಂದಾಯ ಮಾಡುವುದು.

(v) ಕೇಂದ್ರ ಸರ್ಕಾರದಿಂದ ಅಥವಾ ಯಾವುದೇ ರಾಜ್ಯ ಸರ್ಕಾರದಿಂದ ಒಂದು ಅತ್ಯುತ್ತಮ ಕಥಾಚಿತ್ರವೆಂದು ಪ್ರಶಸ್ತಿಪಡೆದ ಅಥವಾ ಯಾವುದೇ ಅಂತರಾಷ್ಟ್ರೀಯ ಮನ್ನಣೆ ಪಡೆದ ಪ್ರಶಸ್ತಿಪಡೆದಂಥ ಕನ್ನಡ, ಕೊಂಕಣಿ, ಕೊಡವ ಅಥವಾ ತುಳು ಚಿತ್ರಗಳ ಚಲನಚಿತ್ರ ಪ್ರದರ್ಶನದ ಸಂದರ್ಭದಲ್ಲಿ, ರಾಜ್ಯ ಸರ್ಕಾರವು ನಿರ್ದಿಷ್ಟ ಪಡಿಸಬಹುದಾದಂಥ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಮನರಂಜನಾ ತೆರಿಗೆಯನ್ನು ವಿನಾಯಿತಿಗೊಳಿಸುವುದು.

(vi) ಕೇಂದ್ರ ಸರ್ಕಾರದಿಂದ ಅಥವಾ ಯಾವುದೇ ರಾಜ್ಯ ಸರ್ಕಾರದಿಂದ ಒಂದು ಅತ್ಯುತ್ತಮ ಕಥಾಚಿತ್ರವೆಂದು ಪ್ರಶಸ್ತಿ ಪಡೆದ ಅಥವಾ ಯಾವುದೇ ಅಂತರರಾಷ್ಟ್ರೀಯ ಮನ್ನಣೆ ಪಡೆದ ಪ್ರಶಸ್ತಿಯನ್ನು ಪಡೆದಂಥ ಕನ್ನಡ, ಕೊಂಕಣಿ, ಕೊಡವ ಅಥವಾ ತುಳು ಚಿತ್ರಗಳ ಹೊರತು ಇತರ ಚಲಚಿತ್ರಗಳ ಪ್ರದರ್ಶನದ ಸಂದರ್ಭದಲ್ಲಿ, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಆರು ತಿಂಗಳುಗಳ ಅವಧಿಯವರೆಗೆ ಮನರಂಜನಾ ತೆರಿಗೆಯನ್ನು ವಿನಾಯಿತಿಗೊಳಿಸುವುದು,

(vii) ಕರ್ನಾಟಕ ರಾಜ್ಯದಲ್ಲಿ ನಿರ್ಮಿಸಲಾದ ಕನ್ನಡ, ಕೊಂಕಣಿ, ಕೊಡವ ಅಥವಾ ತುಳು ಚಿತ್ರದ ಚಲನಚಿತ್ರ ಪ್ರದರ್ಶನದ ಸಂದರ್ಭದಲ್ಲಿ, ಸಂದಾಯ ಮಾಡಬೇಕಾದ ಮನೋರಂಜನಾ ತೆರಿಗೆಯ ದರದಲ್ಲಿ ನಿರ್ದಿಷಟಪಡಿಸಲಾದ ದರಗಳ ಅರ್ಧದಷ್ಟನ್ನು ವಿಧಿಸುವುದು.

(viii) ಕರ್ನಾಟಕ ರಾಜ್ಯದ ಹೊರಗೆ ನಿರ್ಮಿಸಲಾದ ಹಾಗೂ 1987ರ ಡಿಸೆಂಬರ್ ಮುವತ್ತೊಂದನೆಯ ದಿನದಂದು ಅಥವಾ ತರುವಾಯ ಸೆಂಟ್ರಲ್ ಬೋರ್ಡ್ ಆಫ್ ಫಿಲಂ ಸರ್ಟಿಫಿಕೇಷನ್, ಇದು ನೀಡಿದ ಸೆನ್ಸಾರ್ ಸರ್ಟಿಫಿಕೇಷನ್ ಪಡೆದಿರುವ ಕನ್ನಡ, ಕೊಡವ, ಕೊಂಕಣಿ ಅಥವಾ ತುಳು ಚಿತ್ರಗಳ ಚಲನಚಿತ್ರ ಪ್ರದರ್ಶನದ ಸಂದರ್ಭದಲ್ಲಿ ನಿರ್ದಿಷ್ಟಪಡಿಸಲಾದ ದರಗಳ ಅರ್ಧದಷ್ಟು ಮನೋರಂಜನಾ ತೆರಿಗೆಯನ್ನು ವಿಧಿಸುವುದು.

ಹಲವು ಆನುಷಂಗಿಕ ಬದಲಾವಣೆಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಸಂಯುಕ್ತ ಯೋಜನೆಯನ್ನು ಪ್ರಾರಂಭಿಸುವುದಕ್ಕೆ ಸಂಬಂಧಿಸಿದಂತೆ ಪ್ರಸ್ತಾಪಿತ ತಿದ್ದುಪಡಿಯಿಂದಾಗಿ ಆದಾಯದಲ್ಲಿ 13.00 ಕೋಟಿ ರೂ.ಗಳಷ್ಟು ನಷ್ಟವುಂಟಾಗುತ್ತದೆ. ಆದರೆ, ರೀಮೇಕ್ ಚಿತ್ರಗಳಿಗೆ ಶೇ. ಐವತ್ತರಷ್ಟು ತೆರಿಗೆ ವಿನಾಯಿತಿಯನ್ನು ನೀಡುವುದಕ್ಕೆ ಸಂಬಂಧಪಟ್ಟಂತೆ, ಈ ಹಂತದಲ್ಲಿ ನಷ್ಟದ ಪ್ರಮಾಣವನ್ನು ನಿರ್ಧರಿಸಲು ಸಾಧ್ಯವಾಗುವುದಿಲ್ಲ. ಪ್ರಸ್ತಾಪಿತ ತಿದ್ದುಪಡಿಯಿಂದಾಗಿ ಯಾವುದೇ ಆರ್ಥಿಕ ಪರಿಣಾಮವುಂಟಾಗುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತು ಜ್ಞಾಪನ

ಖಂಡ 2 : ಈ ಖಂಡದ ಮೂಲಕ ಸೇರಿಸಲು ಉದ್ದೇಶಿಸಲಾಗಿರುವ 3ಬಿ ಪ್ರಕರಣದ (1)ನೇ ಉಪಪ್ರಕರಣವು,

(i) ಸದರಿ ಪ್ರಕರಣದ ಅಡಿ ತೆರಿಗೆಯ ಸಂದಾಯಕ್ಕಾಗಿ, ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರಗಳನ್ನು ನೀಡುತ್ತದೆ.

(ii) 3 ಬಿ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿನ ವಿವರಣೆಯು ನಿಯಮಿತ ಪ್ರಾಧಿಕಾರವನ್ನು ನಿರ್ದಿಷ್ಟಪಡಿಸಲು ರಾಜ್ಯಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ : 5 : ಈ ಖಂಡದ ಅಡಿ ಪ್ರಾತ್ಯಾಯೋಜಿಸಲು ಉದ್ದೇಶಿಸಲಾಗಿರುವ 4ಎ ಪ್ರಕರಣದ (1)ನೇ ಉಪಪ್ರಕರಣವು ಸದರಿ ಉಪ-ಪ್ರಕರಣದ ಅಡಿಯಲ್ಲಿ ಮಾಲೀಕನು ಯಾವ ಷರತ್ತುಗಳಿಗೊಳಪಟ್ಟು ಆಯ್ಕೆಯನ್ನು ಚಲಾಯಿಸಬಹುದಾಗಿದೆಯೋ ಆ ಷರತ್ತುಗಳನ್ನು ನಿರ್ದಿಷ್ಟಪಡಿಸುವ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಪ್ರಸ್ತಾವಿತ ಪ್ರತ್ಯಾಯೋಜಿತ ಶಾಸನ ರಚನಾಧಿಕಾರವು ವಾಡಿಕೆಯ ಸ್ವರೂಪದ್ದಾಗಿದೆ.

ಎಂ. ವೀರಪ್ಪಮೊಯ್ಲಿ
ಮುಖ್ಯಮಂತ್ರಿ

ನಿಂ.ಹು. ಮುತ್ತಲಗೇರಿ
ಕಾರ್ಯದರ್ಶಿ

ಅನುಬಂಧ

ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ, 1958ರ (1958ರ ಕರ್ನಾಟಕ ಅಧಿನಿಯಮ 30) ಉದ್ಧೃತ ಭಾಗ

** ** **

30. ಕೆಲವು .ಚಲನಚಿತ್ರಗಳಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧ (1) -3 ಮತ್ತು 3 ಎ ಪ್ರಕರಣಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ,

** ** **

4. ಚಲನಚಿತ್ರ ಪದರ್ಶನಗಳ ಮೇಲೆ ಹೆಚ್ಚಿನ ತೆರಿಗೆ (1) ಚಲನಚಿತ್ರ ಪ್ರದರ್ಶನಗಳ ಸಂದರ್ಭದಲ್ಲಿ, 3ಮತ್ತು 3ಎ ಪ್ರಕರಣದ ಅಡಿಯಲ್ಲಿ ವಿಧಿಸಬಹುದಾದ ತೆರಿಗೆ ಮತ್ತು ಅಧಿಭಾರದ ಅಥವಾ 4ನೇ ಪ್ರಕರಣದ ಅಡಿಯಲ್ಲಿ ವಿಧಿಸಬಹುದಾದ ತೆರಿಗೆ ಜೊತೆಗೆ, ಈ ಮುಂದಿನ ದರಗಳಲ್ಲಿ ಲೆಕ್ಕ ಹಾಕಲಾದ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು, ಎಂದರೆ:

ಕೋಷ್ಟಕ

ಕ್ರಮ ಸಂಖ್ಯೆ	ಅತ್ಯುನ್ನತ ವರ್ಗದ ಆಸನ ಅಥವಾ ಸ್ಥಳಾವಕಾಶಕ್ಕೆ ವ್ಯಕ್ತಿಯು ಪ್ರವೇಶಿಸುವುದಕ್ಕಾಗಿ ಹಣ ಸಂದಾಯದ ಮನರಂಜನೆಗಳ ತೆರಿಗೆ ಮತ್ತು ಅಧಿಭಾರಗಳನ್ನು ಹೊರತು ಪಡಿಸಿ)	ಪ್ರತಿ ಪ್ರದರ್ಶನಕ್ಕೆ ತೆರಿಗೆಯ ದರ
**	**	**

ಪರಂತು, ಕನ್ನಡ ಕೊಡವ, ಕೊಂಕಣಿ ಅಥವಾ ತುಳು ಚಲನಚಿತ್ರ ಪ್ರದರ್ಶನದ ಸಂದರ್ಭದಲ್ಲಿ 3 ಮತ್ತು 3ಎ ಪ್ರಕರಣಗಳ ಅಡಿ ವಿಧಿಸಬಹುದಾದ ತೆರಿಗೆ ಮತ್ತು ಅಧಿಭಾರವಲ್ಲದೆ, ಈ ಉಪಪ್ರಕರಣದ ಅಡಿ

ಸಂದಾಯ ಮಾಡಬೇಕಾದ ತೆರಿಗೆಯು ಈ ಮುಂದಿನ ದರಗಳಂತೆ ಇರತಕ್ಕದ್ದು, ಎಂದರೆ,

** ** **

4ಎ ಕೆಲವು ಸ್ಥಳಗಳಲ್ಲಿ ಚಲನಚಿತ್ರ ಪ್ರದರ್ಶನಗಳ ಮೇಲೆ ತೆರಿಗೆ : (1) ಈ ಅಧಿನಿಯಮದ 3 ಮತ್ತು 3ಎ ಪ್ರಕರಣದ ಅಡಿ ಸಂದಾಯ ಮಾಡಬೇಕಾದ ಮನರಂಜನೆಗಳ ತೆರಿಗೆ ಮತ್ತು ಅಧಿಭಾರಕ್ಕೆ ಬದಲಾಗಿ ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಒಂದು ಲಕ್ಷ ಜನಸಂಖ್ಯೆಯನ್ನು ಮೀರದ ಸ್ಥಳೀಯ ಪ್ರಾಧಿಕಾರ(ದಂಡು ಪ್ರದೇಶ ಮಂಡಳಿಯನ್ನು ಹೊರತುಪಡಿಸಿ) ಅಥವಾ ಪಟ್ಟಣ ಅಥವಾ ಗ್ರಾಮದ ಪರಿಮಿತಿಗಳಲ್ಲಿ ಇರುವ (ಡ್ರೈವಿನ್-ಚಲನಚಿತ್ರ ಮಂದಿರಗಳನ್ನು ಹೊರತು ಪಡಿಸಿ) ಚಲನಚಿತ್ರ ಮಂದಿರಗಳಲ್ಲಿ ನಡೆಯುವ ಚಲನಚಿತ್ರ ಪ್ರದರ್ಶನಗಳ ಸಂದರ್ಭದಲ್ಲಿ ಪ್ರತಿಯೊಂದು ಚಲನಚಿತ್ರ ಪ್ರದರ್ಶನಕ್ಕೆ ಸಂಬಂಧಿಸಿದಂತೆ ಮನರಂಜನಾ ತೆರಿಗೆಯನ್ನು ಈ ಮುಂದಿನ ದರಗಳಲ್ಲಿ ವಿಧಿಸತಕ್ಕದ್ದು ಹಾಗೂ ಅದನ್ನು ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು, ಎಂದರೆ

ಕೋಷ್ಟಕ

ಕ್ರಮ ಸಂಖ್ಯೆ	ಸ್ಥಳೀಯ ಪ್ರಾಧಿಕಾರ (ಆದರೆ ದಂಡು ಪ್ರದೇಶ ಮಂಡಳಿಯನ್ನು ಹೊರತು ಪಡಿಸಿ) ಅಥವಾ ಪಟ್ಟಣ ಅಥವಾ ಗ್ರಾಮ ಇವುಗಳ ಜನಸಂಖ್ಯೆಯು	ತೆರಿಗೆ ದರ
1	2	3
(ಎ)	ಹದಿನೈದು ಸಾವಿರ ಮೀರದಿದ್ದರೆ	ಒಟ್ಟು ಸಂಗ್ರಹಣಾ ಸಾಮರ್ಥ್ಯದ ಶೇಕಡ ಹದಿನೈದು
(ಬಿ)	ಹದಿನೈದು ಸಾವಿರ ಮೀರಿದ್ದು ಆದರೆ ಇಪ್ಪತ್ತು ಸಾವಿರ ಮೀರದಿದ್ದರೆ	ಒಟ್ಟು ಸಂಗ್ರಹಣಾ ಸಾಮರ್ಥ್ಯದ ಶೇಕಡ ಇಪ್ಪತ್ತು
(ಸಿ)	ಇಪ್ಪತ್ತು ಸಾವಿರ ಮೀರಿದ್ದು ಆದರೆ ಇಪ್ಪತ್ತೈದು ಸಾವಿರ ಮೀರದಿದ್ದರೆ	ಒಟ್ಟು ಸಂಗ್ರಹಣಾ ಸಾಮರ್ಥ್ಯದ ಶೇಕಡ ಇಪ್ಪತ್ತೈದು
(ಡಿ)	ಇಪ್ಪತ್ತೈದು ಸಾವಿರ ಮೀರಿದ್ದು ಆದರೆ ಐವತ್ತು ಸಾವಿರ ಮೀರದಿದ್ದರೆ	ಒಟ್ಟು ಸಂಗ್ರಹಣಾ ಸಾಮರ್ಥ್ಯದ ಶೇಕಡ ಮುವತ್ತು
(ಇ)	ಐವತ್ತು ಸಾವಿರ ಮೀರಿದ್ದು, ಆದರೆ ಎಪ್ಪತ್ತೈದು ಸಾವಿರ ಮೀರದಿದ್ದರೆ	ಒಟ್ಟು ಸಂಗ್ರಹಣಾ ಸಾಮರ್ಥದ ಶೇಕಡ ಮುವತ್ತ ಎರಡುವರೆ
(ಎಫ್)	ಎಪ್ಪತ್ತೈದು ಸಾವಿರ ಮೀರಿದ್ದು ಆದರೆ ಒಂದು ಲಕ್ಷ ಮೀರದಿದ್ದರೆ	ಒಟ್ಟು ಸಂಗ್ರಹಣಾ ಸಾಮರ್ಥ್ಯದ ಶೇಕಡ ಮುವತ್ತೈದು.

ಪರಂತು, ಮೇಲಿನ ಕೋಷ್ಟಕದ ಕ್ರಮಸಂಖ್ಯೆ (ಬಿ),(ಸಿ),(ಡಿ),(ಇ) ಮತ್ತು (ಎಫ್) ಅಡಿಯಲ್ಲಿ ಬರುವ ಸ್ಥಳೀಯ ಪ್ರಾಧಿಕಾರದ ಮಿತಿಯೊಳಗೆ (ಆದರೆ ದಂಡು ಪ್ರದೇಶ ಮಂಡಳಿಯನ್ನು ಹೊರತುಪಡಿಸಿ) ಸ್ಥಾಪನೆಗೊಂಡ ಚಲನಚಿತ್ರ ಮಂದಿರಕ್ಕೆ ಸಂಬಂಧಪಟ್ಟಂತೆ, ಅದರ ಮಾಲೀಕನು ನಿರ್ದಿಷ್ಟ ಪಡಿಸಬಹುದಾದಂಥ ರೀತಿಯಲ್ಲಿ ಮತ್ತು ನಿಯಮಿಸಿದ ಪ್ರಾಧಿಕಾರಕ್ಕೆ ಕೊಡಬೇಕಾದ ತನ್ನ ಆಯ್ಕೆಯಲ್ಲಿ,

(i) ಈ ಅಧಿನಿಯಮದ 3 ಮತ್ತು 3ಎ ಪ್ರಕರಣದ ಅಡಿಯಲ್ಲಿ ಮನರಂಜನಾ ತೆರಿಗೆ ಮತ್ತು ಅಧಿಭಾರವನ್ನು;

ಆಯ್ಕೆಯ ವರ್ಷದಲ್ಲಿ ಒಂದು ಬಾರಿ ಚಲಾಯಿಸತಕ್ಕದ್ದು ಮತ್ತು ಅದು ಆ ವರ್ಷಕ್ಕೆ ಅಂತಿಮವಾಗಿರತಕ್ಕದ್ದು,

ಪರಂತು, 1981ರ ಏಪ್ರಿಲ್ ಮೊದಲದಿನದ ತರುವಾಯ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ನೀಡಿದ ಅತ್ಯುತ್ತಮ ಕಥಾ ಚಿತ್ರ ಪ್ರಶಸ್ತಿಯನ್ನು ಅಥವಾ ರಾಜ್ಯ ಸರ್ಕಾರವು ಅಧಿಸೂಚಿಸಲಾದ ಅಂತರಾಷ್ಟ್ರೀಯವಾಗಿ ಮನ್ನಣೆ ಪಡೆದು ಪ್ರಶಸ್ತಿಗಳಿಸಿದ ಕನ್ನಡ, ಕೊಡವ, ಕೊಂಕಣಿ ಅಥವಾ ತುಳು ಚಿತ್ರಗಳ ಪ್ರದರ್ಶನದ ಸಂದರ್ಭದಲ್ಲಿ, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಈ ಉಪಕಪ್ರಕರಣದಡಿ ಯಾವ ತೆರಿಗೆಯನ್ನು ಸಂದಾಯ ಮಾಡತಕ್ಕದ್ದಲ್ಲ.

ಮತ್ತು ಪರಂತು

(i)ಕನ್ನಡ ಚಿತ್ರಗಳ ಚಲನಚಿತ್ರ ಪ್ರದರ್ಶನದ (1993ರ ಸೆಪ್ಟೆಂಬರ್ ಮೊದಲದಿನದಂದು ಅಥವಾ ತರುವಾಯ ಸೆಂಟ್ರಲ್ ಬೋರ್ಡ್ ಆಫ್ ಫಿಲಂ ಸರ್ಟಿಫಿಕೇಷನ್‌ನಿಂದ ಸೆನ್ಸಾರ್ ಸರ್ಟಿಫಿಕೇಟ್ ಹೊಂದಿದ ಇತರ ಭಾಷೆಯ ಚಲನಚಿತ್ರದ ರೀಮೇಕ್ ಅಥವಾ ಡಬ್ ಮಾಡಿದ್ದನ್ನು ಹೊರತುಪಡಿಸಿ) ಸಂದರ್ಭದಲ್ಲಿ ಅಥವಾ ಕರ್ನಾಟಕ ರಾಜ್ಯದಲ್ಲಿ ತಯಾರಿಸಲಾದ ಕೊಡವ, ಕೊಂಕಣಿ ಅಥವಾ ತುಳು ಚಲನಚಿತ್ರಗಳಿಗೆ ಸಂದಾಯ ಮಾಡಬೇಕಾದ ಮನರಂಜನಾ ತೆರಿಗೆಯ ದರಗಳು (1)ನೇ ಉಪ ಪ್ರಕರಣದ ಅಡಿಯಲ್ಲಿನ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದಂಥ ತೆರಿಗೆಯ ದರಗಳಲ್ಲಿ ಅರ್ಧ ಭಾಗದಷ್ಟು ತೆರಿಗೆಯನ್ನು ವಿಧಿಸತಕ್ಕದ್ದು.

(ii) ಕರ್ನಾಟಕ ರಾಜ್ಯದ ಹೊರಗೆ ನಿರ್ಮಿಸಲಾದ ಹಾಗೂ 1987ರ ಡಿಸೆಂಬರ್ ಮುವತ್ತೊಂದನೆ ದಿನದಂದು ಅಥವಾ ತರುವಾಯ ಸೆಂಟ್ರಲ್ ಬೋರ್ಡ್ ಆಫ್ ಫಿಲಂ ಸರ್ಟಿಫಿಕೇಷನ್ ಇದು ನೀಡಿದ ಸೆನ್ಸಾರ್ ಸರ್ಟಿಫಿಕೇಷನ್ ಪಡೆದಿರುವ ಕನ್ನಡ, ಕೊಡವ, ಕೊಂಕಣಿ ಅಥವಾ ತುಳು ಚಿತ್ರಗಳ ಚಲನಚಿತ್ರ ಪ್ರದರ್ಶನದ ಸಂದರ್ಭದಲ್ಲಿ, ಸಂದಾಯ ಮಾಡಬೇಕಾದ ಮನರಂಜನಾ ತೆರಿಗೆಯ ದರಗಳು, (1) ನೇ ಉಪ ಪ್ರಕರಣದ ಅಡಿಯಲ್ಲಿನ ಕೋಷ್ಟಕದಲ್ಲಿ ನಿರ್ದಿಷ್ಟ ಪಡಿಸಿರುವ ದರಗಳ ಅರ್ಧದಷ್ಟಾಗಿರತಕ್ಕದ್ದು.

ಮತ್ತೂ ಪರಂತು, 1981 ಏಪ್ರಿಲ್ ಮೊದಲನೆಯ ದಿನದ ತರುವಾಯ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರವು ನೀಡಿದ ಅತ್ಯುತ್ತಮ ಕಥಾ ಚಿತ್ರ ಪ್ರಶಸ್ತಿಯನ್ನು ಅಥವಾ ರಾಜ್ಯ ಸರ್ಕಾರವು ಅಧಿಸೂಚಿಸಲಾದ ಅಂತರಾಷ್ಟ್ರೀಯವಾಗಿ ಮನ್ನಣೆ ಪಡೆದು ಪ್ರಶಸ್ತಿಯನ್ನು ಗಳಿಸಿದಂಥ , ಕನ್ನಡ, ಕೊಡವ, ಕೊಂಕಣಿ ಅಥವಾ ತುಳು ಚಿತ್ರಗಳ ಹೊರತು ಇತರ ಚಲನಚಿತ್ರ ಪ್ರದರ್ಶನದ ಸಂದರ್ಭದಲ್ಲಿ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಆರು ತಿಂಗಳುಗಳ ಅವಧಿಯವರೆಗೆ ಈ ಉಪ ಪ್ರಕರಣದಡಿ ಯಾವ ತೆರಿಗೆಯನ್ನು ಸಂದಾಯ ಮಾಡತಕ್ಕದ್ದಲ್ಲ.

ವಿವರಣೆ : ಈ ಪ್ರಕರಣದ ಉದ್ದೇಶಕ್ಕಾಗಿ ಚಲಚಿತ್ರ ಮಂದಿರಕ್ಕೆ ಸಂಬಂಧ ಪಟ್ಟಂತೆ "ಒಟ್ಟು ಸಂಗ್ರಹಣಾ ಸಾಮರ್ಥ್ಯ" ಎಂದರೆ, ಅಂಥ ಚಿತ್ರಮಂದಿರದಲ್ಲಿ ಪ್ರೇಕ್ಷಕ ವೃಂದದವರಿಗೆ, ಲಭ್ಯವಿರುವ ಅಥವಾ ಒದಗಿಸಲಾದ ಎಲ್ಲಾ ಆಸನಗಳು ಮತ್ತು ಸ್ಥಳಾವಕಾಶಕ್ಕೆ ಭರ್ತಿಯಾಗಿರದಿದ್ದರೆ, ಪ್ರದರ್ಶನದ ಪ್ರವೇಶಕ್ಕಾಗಿ ಮಾಡಿದ ಎಲ್ಲಾ ಸಂದಾಯಗಳ ಒಟ್ಟು ಮೊತ್ತಕ್ಕೆ ಸಮಾನಾದ ಮೊತ್ತ ಮತ್ತು ಪ್ರವೇಶಕ್ಕಾಗಿನ

ಎಲ್ಲಾ ಸಂದಾಯಗಳ ಒಟ್ಟು ಮೊತ್ತವನ್ನು ಒದಗಿಸಿದಂಥ ಆಸನಗಳು ಅಥವಾ ಸ್ಥಳಾವಕಾಶದ ಪ್ರವೇಶಕ್ಕಾಗಿನ ಸಂದಾಯದ ದರಗಳಲ್ಲಿ ಲೆಕ್ಕ ಹಾಕತಕ್ಕುದು.

** ** **

(6) ಚಲನಚಿತ್ರ ಮಂದಿರದ ಮಾಲೀಕನು, ಯಾವುದೇ ಅಂಥ ಪ್ರದರ್ಶನವು ನಡೆಯಲಿಲ್ಲವೆಂಬ ಬಗ್ಗೆ ನಿಯಮಿಸಿದ ಪ್ರಾಧಿಕಾರಿಯಿಂದ ನಿಯಮಿಸಿದ ಅರ್ಜಿಯಲ್ಲಿರುವ ಪ್ರಮಾಣಪತ್ರವನ್ನು ತನ್ನ ವಿವರಣ ಪಟ್ಟಿಕೆಯೊಂದಿಗೆ ಸಲ್ಲಿಸಿದ್ದ ಹೊರತು, ಮತ್ತು ಅವನು ಕರ್ನಾಟಕ ಚಲನಚಿತ್ರ (ವಿನಿಯಮನ) ಅಧಿನಿಯಮ, 1964ರ ಅಡಿಯಲ್ಲಿ ನಡೆಸಬೇಕೆಂಬುದಾಗಿ ಅನುಮತಿ ನೀಡಲಾಗಿರುವ ಎಲ್ಲ ಪ್ರದರ್ಶನಗಳನ್ನು ಪ್ರದರ್ಶಿಸಿದ್ದಾನೆಂಬುದಾಗಿ ಭಾವಿಸತಕ್ಕದ್ದು, ಮತ್ತು ಈ ಉದ್ದೇಶಕ್ಕಾಗಿ ನಿಯಮಿಸಿದ ಪ್ರಾಧಿಕಾರಿಯು, ಈ ಸಂಬಂಧವಾಗಿ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಹತ್ತು ದಿನಗಳ ಒಳಗಾಗಿ ಯುಕ್ತವೆಂದು ಭಾವಿಸಬಹುದಾದ ಅಂಥ ವಿಚಾರಣೆಯನ್ನು ನಡೆಸಿದ ತರುವಾಯ, ಪ್ರಮಾಣಪತ್ರವನ್ನು ನೀಡತಕ್ಕದ್ದು.

4ಎಎ. ಸೇವಾ ವೆಚ್ಚಗಳ ವಸೂಲಿ : 3ನೇ ಪ್ರಕರಣ ಅಥವಾ 4ಎ ಪ್ರಕರಣಗಳ ಅಡಿಯಲ್ಲಿ ಚಲನಚಿತ್ರ ಪ್ರದರ್ಶನದ ಮೇಲೆ ತೆರಿಗೆ ಸಂದಾಯ ಮಾಡುವ ಪ್ರತಿಯೊಬ್ಬ ಚಲನ ಚಿತ್ರ ಮಂದಿರದ ಮಾಲೀಕನು ಯಾವುದೇ ವರ್ಗಕ್ಕೆ ಪ್ರವೇಶಕ್ಕಾಗಿ ಮಾಡಲಾದ ಪ್ರತಿಯೊಂದು ಸಂದಾಯದ ಮೇಲೆ ಈ ಕೆಳಗಿನ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಲಾಗಿರುವ ಮೊಬಲಗನ್ನು ಮೀರಿದ ಮೊಬಲಗನ್ನು ಸೇವಾ ವೆಚ್ಚವೆಂಬುದಾಗಿ ವಸೂಲು ಮಾಡಬಹುದು. ಎಂದರೆ.

** ** **

4ಬಿ. : ವೀಡಿಯೋ ಪ್ರದರ್ಶನಗಳಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧ

3,3ಎ,4ಎ ಪ್ರಕರಣಗಳ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆಯ ಬದಲಾಗಿ ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ವೀಡಿಯೋ ಪ್ರದರ್ಶನದ ಪ್ರತಿಸಂದರ್ಭದಲ್ಲಿ ಪ್ರತಿ ತಿಂಗಳಿಗೆ ನೂರು ರೂಪಾಯಿಗಳ ದರದಲ್ಲಿ ಮನೋರಂಜನಾ ತೆರಿಗೆಯನ್ನು ವಿಧಿಸತಕ್ಕುದು ಮತ್ತು ರಾಜ್ಯ ಸರ್ಕಾರಕ್ಕೆ ಅದನ್ನು ಸಂದಾಯ ಮಾಡತಕ್ಕುದ್ದು.

** ** **

4ಸಿ. ಕೆಲವು ಮನರಂಜನೆಗೆ ಸಂಬಂಧಿಸಿದಂತೆ ವಿಶೇಷ ಉಪಬಂಧ : 3, 3 ಎ 4, 4ಎ ಅಥವಾ 4ಬಿ ಪ್ರಕರಣಗಳಲ್ಲಿ ಏನೇ ಇದ್ದಾಗ್ಯೂ, ಮತ್ತು ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು ಒಬ್ಬ ದೂರದರ್ಶನ ವೀಕ್ಷಕನಿಗೆ ಯಾವುದೇ ಚಂದಾ ಅಥವಾ ವಂತಿಗೆ ಸಂದಾಯದ ಮೇಲೆ ಅಥವಾ ಸ್ಥಾಪನೆ ಅಥವಾ ಜೋಡಣೆ ವೆಚ್ಚಗಳು ಅಥವಾ ಬೇರೆ ಯಾವುದೇ ರೀತಿಯಲ್ಲಿ ಯಾವುದೇ ಇತರ ವೆಚ್ಚಗಳನ್ನು ವಸೂಲಿ ಮಾಡಿರುವುದರ ಮೇಲೆ ಆಂಟೆನಾ ಅಥವಾ ಕೇಬಲ್ ದೂರದರ್ಶನ ಜಾಲದ ಸಹಾಯದಿಂದ ಮನರಂಜನೆಯನ್ನು ಒದಗಿಸಿದ್ದ ಸಂದರ್ಭದಲ್ಲಿ ಈ ಮುಂದಿನ ದರಗಳಲ್ಲಿ ಮನರಂಜನಾ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು, ಎಂದರೆ

6. ತೆರಿಗೆ ಸಂದಾಯದ ರೀತಿ. (1) 4 ಎ ಅಥವಾ 4 ಬಿ ಪ್ರಕರಣಗಳಲ್ಲಿ ಅನ್ಯಥಾ ಉಪಬಂಧಿಸಿದಂತೆ ಹೊರತು, ಮನೋರಂಜನಾ ತೆರಿಗೆಯನ್ನು ಸಂದಾಯದ ಮೇಲೆ ಅಥವಾ ಗೌರವಾರ್ಥ ಟಿಕೆಟ್ ಮೂಲಕ ಪ್ರವೇಶ ಪಡೆದ ಪ್ರತಿಯೊಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ ವಿಧಿಸತಕ್ಕುದು ಮತ್ತು ಪ್ರವೇಶಗಳ ಸಂಖ್ಯೆಯ ಮೇಲೆ ಲೆಕ್ಕ ಹಾಕತಕ್ಕುದು ಮತ್ತು ಸಂದಾಯ ಮಾಡತಕ್ಕುದು.

** ** **

6. ವಿವರ ಪಟ್ಟಿಕೆಗಳು (1) ** **

3. (1) ನೇ ಉಪಕರಣದ ಮೇರೆಗೆ ಮನೋರಂಜನೆಯ ಮಾಲೀಕನು, ನಿಯಮಿಸಿದ ದಿನಾಂಕಕ್ಕಿಂತ ಮುಂಚೆ ಯಾವುದೇ ವಿವರಪಟ್ಟಿಕೆಯನ್ನು ಒಪ್ಪಿಸದಿದ್ದರೆ ಅಥವಾ ಅವನು ಒಪ್ಪಿಸಿದ ವಿವರಪಟ್ಟಿಕೆಯೂ ಸರಿಯಾಗಿಲ್ಲ ಅಥವಾ ಅಪೂರ್ಣವಾಗಿದೆ ಎಂದು ನಿಯಮಿಸಿದ ಪ್ರಾಧಿಕಾರಿಗೆ ಕಂಡುಬಂದರೆ, ನಿಯಮಿಸಿದ ಪ್ರಾಧಿಕಾರಿಯು, ಅದು ಅವಶ್ಯವೆಂದು ಪರ್ಯಾಲೋಚಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ, 3,3 ಎ ಮತ್ತು 4 ನೇ ಪ್ರಕರಣಗಳ ಮೇರೆಗೆ ಬಾಕಿ ಇರುವ ತೆರಿಗೆಯನ್ನು ನಿರ್ಧರಿಸತಕ್ಕುದು ಮತ್ತು ಮಾಲೀಕನ ಬಗ್ಗೆ ತನ್ನ ಅತ್ಯುತ್ತಮ ವಿವೇಚನೆಗೆ ಅನುಸಾರವಾಗಿ ತೆರಿಗೆ ನಿರ್ಧರಿಸತಕ್ಕುದು.

** ** **

6ಬಿ. ನಿರ್ಧಾರಣೆಯಿಂದ ತಪ್ಪಿಸಿಕೊಂಡ ಪ್ರವೇಶಕ್ಕಾಗಿನ ಸಂದಾಯ, ಇತ್ಯಾದಿ

1. ಯಾವುದೇ ಕಾರಣಕ್ಕಾಗಿ

(i) ಯಾವುದೇ ಮನರಂಜನೆ ಪ್ರವೇಶಕ್ಕಾಗಿ ಯಾವುದೇ ಗೌರವಾರ್ಥ ಟಿಕೆಟ್ ಯಾವುದೇ ಸಂದಾಯವು 3ನೇ ಪ್ರಕರಣ ಅಥವಾ 3ಎ ಪ್ರಕರಣದ ಮೇರೆಗೆ ತೆರಿಗೆಯ ನಿರ್ಧಾರಣೆಯಿಂದ ತಪ್ಪಿಸಿಕೊಂಡಿರುವಲ್ಲಿ, ಅಥವಾ

ii) ಯಾವುದೇ ಚಲನಚಿತ್ರ ಪ್ರದರ್ಶನವು 4 ಅಥವಾ 4ಎ ಪ್ರಕರಣದ ಮೇರೆಗೆ ತೆರಿಗೆಯ ನಿರ್ಧಾರಣೆಯಿಂದ ತಪ್ಪಿಸಿಕೊಂಡಿರುವಲ್ಲಿ, ಅಥವಾ

iii) ಅಂಥ ಟಿಕೆಟ್, ಸಂದಾಯ ಅಥವಾ ಪ್ರದರ್ಶನವು 3ನೇ ಪ್ರಕರಣ 3 ಎ ಪ್ರಕರಣ ಅಥವಾ 4ನೇ ಪ್ರಕರಣ ಅಥವಾ 4ಎ ಪ್ರಕರಣ ಮೇರೆಗೆ ಅದು ನಿರ್ಧಾರಣೀಯವಾಗಬಹುದಾದಂಥ ದರಕ್ಕಿಂತ ಕಡಿಮೆ ದರದಲ್ಲಿ ನಿರ್ಧರಣೆಯಾಗಿರುವಲ್ಲಿ

6ಎ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ನಿಯಮಿಸಿದ ಪ್ರಾಧಿಕಾರವು, (2)ನೇ ಉಪ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಮತ್ತು ನಿಯಮಿಸಬಹುದಾದಂಥ ಕಾಲದೊಳಗೆ ಯಾವುದೇ ಕಾಲದಲ್ಲಿ ಮಾಲೀಕನಿಗೆ ನೋಟೀಸನ್ನು ಜಾರಿ ಮಾಡಿದ ತರುವಾಯ ಮತ್ತು ಅದು ಅವಶ್ಯವೆಂದು ಪರ್ಯಾಲೋಚಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ ಸಂದರ್ಭಾನುಸಾರ 3ನೇ ಪ್ರಕರಣ ಅಥವಾ 3ಎ ಪ್ರಕರಣದ ಅಥವಾ 4ನೇ ಪ್ರಕರಣ ಅಥವಾ 4ಎ ಪ್ರಕರಣದ ಮೇರೆಗೆ ಅಂಥ ಟಿಕೇಟು, ಸಂದಾಯ ಅಥವಾ ಪ್ರದರ್ಶನದ ಮೇಲೆ ಬಾಕಿಯಿರುವ ತೆರಿಗೆಯನ್ನು ತನ್ನ ಅತ್ಯುತ್ತಮ ವಿವೇಚನೆಗೆ ಅನುಸಾರವಾಗಿ ನಿರ್ಧರಿಸಬಹುದು ಅಥವಾ ಮರು ನಿರ್ಧರಿಸಬಹುದು.

** ** **

17. ಸ್ಥಳೀಯ ಪ್ರಾಧಿಕಾರಗಳಿಗೆ ನಷ್ಟ ಪರಿಹಾರದ ಸಂದಾಯ (1) ಯಾವುದೇ ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗೆ ನಡೆಸಿದ ಮನೋರಂಜನೆಗೆ ಸಂಬಂಧಿಸಿದಂತೆ, ಪ್ರತಿವರ್ಷ ಸಂಗ್ರಹಿಸಿದ ಕ್ರಮವಾಗಿ ಪ್ರಕರಣ 3 ಮತ್ತು 3ಎ ಪ್ರಕರಣಗಳ ಮೇರೆಗಿನ ಮನೋರಂಜನಾ ತೆರಿಗೆಯ ಉತ್ಪತ್ತಿಗಳ ಶೇಕಡ ಹತ್ತರಷ್ಟನ್ನು ರಾಜ್ಯ ಸರ್ಕಾರಕ್ಕೆ ಜಮೆ ಮಾಡತಕ್ಕುದು ಮತ್ತು ಉಳಿದ ಶೇಕಡ ತೊಂಬತ್ತರಷ್ಟನ್ನು ಸ್ಥಳೀಯ ಪ್ರಾಧಿಕಾರಕ್ಕೆ ಸಂದಾಯ ಮಾಡತಕ್ಕುದು.

** ** **

18. ನಿಯಮ ರಚನಾಧಿಕಾರ (1) ** **

(2) ಅಂಥ ನಿಯಮಗಳು ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ,

** ** **

(ಖಖ) 4ಎ ಪ್ರಕರಣದ ಮೇರೆಗೆ ಒಟ್ಟು ಸಂಗ್ರಹಣ ಸಾಮರ್ಥ್ಯ ಮತ್ತು ತೆರಿಗೆಯ ಸಂದಾಯವನ್ನು ನಿರ್ಧರಿಸುವುದಕ್ಕಾಗಿ ;

** ** **

BLANK PAGE

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ ೩೦ನೇ ಆಗಸ್ಟ್ ೧೯೯೪, ಭಾದ್ರಪದ ಶಕ ೧೯೧೬

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ. ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ರಾಜ್ಯದಲ್ಲಿರುವ ಪಶುವೈದ್ಯ ಶಾಲೆಗಳ ಸಂಖ್ಯೆ

59 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿವಿಧ ಜಾನುವಾರು ಪಶು ಚಿಕಿತ್ಸಾಲಯಗಳ ಸಂಖ್ಯೆ ಎಷ್ಟು?

ಆ) ಇವುಗಳಿಗೆ 1991-92, 1992-93,. 1993-94ನೇ ವರ್ಷದಲ್ಲಿ ಜಿಲ್ಲಾವಾರು ನಿಗದಿಪಡಿಸಿದ ಬಿಡುಗಡೆ ಮಾಡಿದ ಖರ್ಚಾದ ಹಾಗೂ ಖರ್ಚಾಗದ ಹಣವೆಷ್ಟು?

ಇ) 1994-95ನೇ ಸಾಲಿಗೆ ನಿಗದಿಪಡಿಸಿದ ಹಣ ಹಾಗೂ 30-6-1994ಕ್ಕೆ ಖರ್ಚಾದ ಹಣವೆಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ)

ಪಶು ಆಸ್ಪತ್ರೆ	240
ಪಶು ಚಿಕಿತ್ಸಾಲಯ	697
ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	1622
ಒಟ್ಟು	**2559**

ಆ) *(ರೂ. ಲಕ್ಷಗಳಲ್ಲಿ)*

ವರ್ಷ	ಬಿಡುಗಡೆ	ಖರ್ಚು	ಖರ್ಚಾಗದಿರುವುದು
1991-92	570.88	437.72	133.16
1992-93	606.41	567.39	39.02
1993-94	805.00	737.27	67.93

(ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಲಾಗಿದೆ)

ಇ) ನಿಗದಿಪಡಿಸಿದ ಹಣ ರೂ. 1157.23 ಲಕ್ಷಗಳು

ಖರ್ಚಾದ ಹಣ ರೂ. 231.33 ಲಕ್ಷಗಳು

1991-92, 1992-93, 1993-94 ಮತ್ತು 1994-95ನೇ ಸಾಲಿನಲ್ಲಿ ಯೋಜನೆಯಡಿಯಲ್ಲಿ ಜಿಲ್ಲಾವಾರು ನಿಗದಿಪಡಿಸಿದ : ಬಿಡುಗಡೆ ಮಾಡಿದ, ಖರ್ಚಾದ ಹಾಗೂ ಖರ್ಚಾಗದ ಹಣದ ಬಗ್ಗೆ ವಿವರಗಳು ಈ ರೀತಿ ಇದೆ.

ಲೆಕ್ಕ ಶೀರ್ಷಿಕೆ : "2403-00-101-0-12 ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ತೆರೆಯುವುದು ಮತ್ತು ಮೇಲ್ದರ್ಜೆಗೇರಿಸುವುದು.

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	1991-92			1992-93			1993-94			1994-95		
		ನಿಗದಿ ಪಡಿಸಿದ ಬಿಡುಗಡೆ ಮಾಡಿದ ಹಣ	ಖರ್ಚಾದ ಹಣ	ಖರ್ಚಾ ಗದ ಹಣ	ನಿಗದಿ ಪಡಿಸಿದ ಬಿಡುಗಡೆ ಮಾಡಿದ ಹಣ	ಖರ್ಚಾದ ಹಣ	ಖರ್ಚಾ ಗದ ಹಣ	ನಿಗದಿ ಪಡಿಸಿದ ಬಿಡುಗಡೆ ಮಾಡಿದ ಹಣ	ಖರ್ಚಾದ ಹಣ	ಖರ್ಚಾ ಗದ ಹಣ	ನಿಗದಿ ಪಡಿಸಿದ ಬಿಡುಗಡೆ ಮಾಡಿದ ಹಣ	ಖರ್ಚಾದ ಹಣ (ತಾ. 30-6-94 ರವರೆಗೆ)	ಖರ್ಚಾಗದ ಹಣ (ತಾ: 30-6-94 ರವರೆಗೆ)
1.	2.	3.	4.	5.	6.	7.	8.	9.	10.	11.	12.	13.	14.
1.	ಬೆಂಗಳೂರು ಗ್ರಾಮಾಂತರ	32.00	18.80	13.20	51.64	28.96	22.68	48.00	40.21	7.79	52.00	12.87	39.13
2.	ಬೆಂಗಳೂರು ನಗರ	7.38	7.37	0.01	12.87	13.01	-0.14	23.00	26.84	-3.84	25.00	9.90	15.10
3.	ತುಮಕೂರು	30.00	17.27	12.73	40.00	38.05	-1.95	45.00	44.34	0.66	90.00	14.07	75.93
4.	ಕೋಲಾರ	12.00	6.60	5.40	22.00	26.58	-4.58	23.00	24.92	-1.92	55.00	5.89	49.11
5.	ಚಿತ್ರದುರ್ಗ	12.00	4.40	7.60	24.28	9.46	14.82	42.00	46.58	-4.58	59.81	12.38	47.43
6.	ಶಿವಮೊಗ್ಗ	31.50	32.47	-0.97	21.24	30.62	-9.38	57.00	42.74	14.26	60.00	10.93	49.07
7.	ಮೈಸೂರು	40.00	20.92	19.08	40.00	29.86	10.14	40.00	41'.50	-1.50	44.00	16.61	27.39

8.	ಮಂಡ್ಯ	26.00	25.69	0.31	20.00	38.00	-18.00	32.00	57.94	-25.94	68.00	22.63	45.37
9.	ಚಿಕ್ಕಮಗಳೂರು	20.00	19.25	0.75	26.55	24.98	1.57	25.00	23.68	1.32	26.00	5.51	20.49
10.	ಹಾಸನ	20.00	17.11	2.89	22.00	22.05	0.05	24.00	24.00	-	75.00	15.29	59.71
11.	ದಕ್ಷಿಣಕನ್ನಡ	50.00	18.53	31.47	54.76	39.35	15.41	55.00	55.40	-0.40	100.00	12.65	87.35
12.	ಕೊಡಗು	3.00	2.25	0.75	4.50	6.60	-2.10	8.00	9.65	-1.65	10.00	3.51	6.49
13.	ಬೆಳಗಾವಿ	25.00	23.18	1.82	29.37	35.12	-5.75	70.00	48.15	21.85	110.00	15.13	94.87
14.	ಧಾರವಾಡ	45.00	42.09	2.91	40.00	26.72	13.28	42.00	38.68	3.32	55.42	12.17	43.25
15.	ಬಿಜಾಪುರ	66.00	61.74	4.26	70.00	68.53	1.47	68.00	47.81	20.19	72.00	14.49	57.51
16.	ಉತ್ತರ ಕನ್ನಡ	15.00	9.97	5.03	17.20	14.89	2.31	18.00	12.64	5.32	24.00	3.54	20.46
17.	ಗುಲ್ಬರ್ಗಾ	70.00	70.00	-	25.00	55.90	-30.90	70.00	53.96	16.04	76.00	14.94	61.06
18.	ಬೀದರ್	18.00	4.43	13.57	29.00	7.75	21.25	30.00	26.54	3.46	34.00	8.52	25.48
19.	ರಾಯಚೂರು	24.00	24.97	-0.97	24.00	27.98	3.98	40.00	41.33	-1.33	69.00	13.35	55.65
20.	ಬಳ್ಳಾರಿ	24.00	10.68	13.32	32.00	22.98	9.02	45.00	30.36	14.64	52.00	6.95	45.05
ಒಟ್ಟು		570.88	437.72	133.16	606.41	567.39	39.02	805.00	737.27	67.93	1157.23	231.33	925.90

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಬಹಳ ಪ್ರಮುಖವಾದಂಥ ಪ್ರಶ್ನೆಯನ್ನು ಕೇಳಿದ್ದೇನೆ. ಪಶು ಆಸ್ಪತ್ರೆ, ಪಶು ಚಿಕಿತ್ಸಾಲಯ, ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಿಗೆ 1991-92, 1992-93, 1993-94ನೇ ಸಾಲಿನಲ್ಲಿ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಎಂಬ ಬಗ್ಗೆ ಅಂಕಿಅಂಶಗಳನ್ನು ಕೊಟ್ಟಿದ್ದೀರಿ. ಮತ್ತು ಎಷ್ಟು ಖರ್ಚು ಮಾಡಿದ್ದೀರಿ ಎಂಬ ಬಗ್ಗೆ ಸಹ ಅಂಕಿಅಂಶಗಳನ್ನು ಕೊಟ್ಟಿದ್ದೀರಿ. ನಾನು ಕೇಳುವುದೇನೆಂದರೆ ಪ್ರತಿಯೊಂದು ಪಶು ಆಸ್ಪತ್ರೆ, ಪಶು ಚಿಕಿತ್ಸಾಲಯ, ಪ್ರಾಥಮಿಕ ಪಶು ಚಿಕಿತ್ಸಾಲಯಗಳಿಗೆ ಎಷ್ಟು ಬೆಲೆ ಬಾಳತಕ್ಕ ಔಷಧಿಗಳನ್ನು ಪ್ರತಿವರ್ಷ ಕೊಡುತ್ತಿದ್ದೀರಿ? ಈಗ ಜಾನುವಾರುಗಳ ಸಂಖ್ಯೆ ಜಾಸ್ತಿಯಾಗಿರುವುದರಿಂದ ಮತ್ತು ಜಾನುವಾರುಗಳಿಗೆ ಬರತಕ್ಕ ರೋಗರುಜಿನಗಳು ಜಾಸ್ತಿಯಾಗಿರುವುದರಿಂದ, ಇಂಥ ಪರಿಸ್ಥಿತಿಯಲ್ಲಿ ತಾವೇನು ಔಷಧಿಗಳಿಗಾಗಿ ಹಣವನ್ನು ಕೊಡುತ್ತಿದ್ದೀರಿ? ಅದರ ಮೊತ್ತವನ್ನು ಜಾಸ್ತಿ ಮಾಡುವುದಕ್ಕೆ ಏನಾದರೂ ಯೋಜನೆ ಮಾಡಿದ್ದೀರಾ?

ಶ್ರೀ ರಾಮಲಿಂಗರೆಡ್ಡಿ (ಕೃಷಿ ಮಾರುಕಟ್ಟೆ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ): ಸನ್ಮಾನ್ಯ ಅಧ್ಯಕ್ಷರೆ, ಈಗ ಇದಕ್ಕಾಗಿ ಸಾಕಷ್ಟು ಹಣವಿದೆ. 1991, 92, 93 ರಲ್ಲಿ ಎಷ್ಟೆಷ್ಟು ಹಣವನ್ನು ನಿಗದಿ ಮಾಡಲಾಗಿತ್ತೋ ಅದರಲ್ಲಿ ಸಾಕಷ್ಟು ಹಣವು ಉಳಿದಿದೆ. ಆದ್ದರಿಂದ ಇದಕ್ಕಾಗಿರುವ ಹಣವನ್ನು ಜಾಸ್ತಿ ಮಾಡುವ ಪ್ರಮೇಯವಿಲ್ಲವೆಂದು ನನ್ನ ಅನಿಸಿಕೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಪ್ರತಿಯೊಂದು ಪಶು ಆಸ್ಪತ್ರೆ, ಚಿಕಿತ್ಸಾಲಯ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಿಗೆ ಏನು ಔಷಧಿಗಳನ್ನು ಸರಬರಾಜು ಮಾಡುತ್ತಿದ್ದೀರಿ ಅದು ಎಲ್ಲೂ ಸಹ ಸಮಯಕ್ಕೆ ಸರಿಯಾಗಿ ಬಿಡುಗಡೆಯಾಗುತ್ತಿಲ್ಲ. ಇದರ ಪರಿಣಾಮವಾಗಿ ರೈತರು ಮಾರುಕಟ್ಟೆಗೆ ಹೋಗಿ 20-30 ರೂಪಾಯಿಗಳನ್ನು ಕೊಟ್ಟು ಅಂಗಡಿಗಳಿಂದ ಔಷಧಿಗಳನ್ನು ತರತಕ್ಕ ಪರಿಪಾಠವಾಗಿದೆ. ರಾಜ್ಯದ ಯಾವುದೇ ಭಾಗಕ್ಕೆ ಹೋದರೂ ಸಹ ಇದು ಕಂಡುಬರುತ್ತದೆ. ಆದ್ದರಿಂದ ನಾನು ತಮ್ಮಲ್ಲಿ ನೇರವಾಗಿ ಕೇಳುವುದೇನೆಂದರೆ ಇವತ್ತು ಸಮಯಕ್ಕೆ ಸರಿಯಾಗಿ ಯಾವ ರೀತಿ ಹಣವನ್ನು ಬಿಡುಗಡೆ ಮಾಡತಕ್ಕ ಪದ್ಧತಿ ಇದೆ? ತಾವು ಮೂರು, ಆರು ಇಲ್ಲವೇ ವರ್ಷಕ್ಕೆ ಒಂದು ಸಾರಿ ಯಾವ ರೀತಿ ಪ್ರತಿಯೊಂದು ಪಶು ಆಸ್ಪತ್ರೆಗೂ, ಪಶು ಚಿಕಿತ್ಸಾ ಕೇಂದ್ರಕ್ಕೂ, ಪ್ರಾಥಮಿಕ ಪಶು ಚಿಕಿತ್ಸಾಲಯಕ್ಕೂ ಎಷ್ಟೆಷ್ಟು ಹಣವನ್ನು ಒಂದೊಂದು ಕೇಂದ್ರಕ್ಕೆ ಬಿಡುಗಡೆ ಮಾಡುತ್ತಿದ್ದೀರಿ, ಅದರ ಮೊತ್ತವನ್ನು ಜಾಸ್ತಿ ಮಾಡುವ ಬಗ್ಗೆ ಏನಾದರೂ ಯೋಚನೆ ಮಾಡುತ್ತಿದ್ದೀರಾ ಎನ್ನತಕ್ಕದ್ದು ನನ್ನ ನೇರವಾದ ಪ್ರಶ್ನೆ. ಇದರ ಬಗ್ಗೆ ಪಾಲಿಸಿ ಡಿಸಿಷನ್ ಏನು?

ಶ್ರೀ ರಾಮಲಿಂಗರೆಡ್ಡಿ : ನಾವು ಇಟ್ಟಿರುವ ಹಣವನ್ನು ತಿಂಗಳ ಪ್ರಕಾರ ಡಿವೈಡ್ ಮಾಡುತ್ತೇವೆ. ಈ ವರ್ಷಕ್ಕೆ 11 ಕೋಟಿ 57 ಲಕ್ಷ ಇಟ್ಟಿದ್ದೇವೆ. ಅದರಲ್ಲಿ ಹೆಚ್ಚಿನ ಹಣವು ನೌಕರರ ಸಂಬಳಕ್ಕಾಗಿ ಮತ್ತು ಔಷಧಿಗಾಗಿ ಮಾತ್ರ ಹೋಗುತ್ತಿದೆ. ತಮಗೆ ಪ್ರತಿಯೊಂದು ತಿಂಗಳು ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೇವೆ ಎಂಬ ಬಗ್ಗೆ ಬೇಕಾದರೆ ಮಾಹಿತಿ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಹೇಳುತ್ತಿರತಕ್ಕ ಉತ್ತರ ಸರಿಯಾಗಿದೆ. ತಾವು ಒಂದೊಂದು ಪಶು ಆಸ್ಪತ್ರೆಗಳಿಗೆ, ಪಶು ಚಿಕಿತ್ಸಾಲಯಗಳಿಗೆ, ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳಿಗೆ ಎಷ್ಟು ಬೆಲೆ ಬಾಳತಕ್ಕ ಔಷಧಿಗಳನ್ನು ಸರಬರಾಜು ಮಾಡುತ್ತಿದ್ದೀರಿ? ಎರಡನೆಯದಾಗಿ ತಾವು ಏನು ಈ ರೀತಿ ಔಷಧಿಗಳನ್ನು ಸರಬರಾಜು ಮಾಡುತ್ತಿದ್ದೀರಿ ಅದು ಈಗ ಜಾನುವಾರುಗಳ ಸಂಖ್ಯೆ ಜಾಸ್ತಿಯಾಗಿರುವುದರಿಂದ ಮತ್ತು ಜಾನುವಾರುಗಳಿಗೆ ಹಲವಾರು ರೋಗ ರುಜಿನಗಳು ಬರುತ್ತಿರುವುದರಿಂದ ಸಾಕಾಗುತ್ತಿಲ್ಲ.

ಇದು ವಾಸ್ತವಿಕವಾದ ಸ್ಥಿತಿ. ಆದ್ದರಿಂದ ತಾವೇನು ಈಗ ಔಷಧಿಗಳನ್ನು ಕೊಡುತ್ತಿದ್ದೀರಿ ಅದನ್ನು ಇನ್ನೂ ಹೆಚ್ಚು ಸರಬರಾಜು ಮಾಡುವ ಯೋಚನೆ ಮಾಡಿದ್ದೀರಾ? ಇದು ಪ್ರಮುಖವಾದುದು.

ಶ್ರೀ ರಾಮಲಿಂಗರೆಡ್ಡಿ : ಔಷಧಿಗಾಗಿ 1994-95ರಲ್ಲಿ 350 ಲಕ್ಷ ಇಟ್ಟಿದ್ದೇವೆ. ಅದರಲ್ಲಿ ಮಾರ್ಚ್ 94ರಲ್ಲಿ 150 ಲಕ್ಷ ಔಷಧಿಗಳನ್ನು ಪರ್ಚೇಸ್ ಮಾಡಿದ್ದೇವೆ. ತಾವು ಇಂಥ ಕಡೆಗಳಲ್ಲಿ ಔಷಧಿಗಳು ಬಂದಿಲ್ಲವೆಂದು ಹೇಳಿದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಶಿಕ್ಷೆಯನ್ನು ಕೊಡುತ್ತೇವೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಎಲ್ಲೆಲ್ಲಿ ಔಷಧಿಗಳು ಜಾಸ್ತಿ ಬೇಕಾಗಿದೆಯೋ ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಒದಗಿಸುವ ಏರ್ಪಾಡು ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ.

ಶ್ರೀ ರಾಮಲಿಂಗರೆಡ್ಡಿ : ತಾವು ಕೇಳುತ್ತಿರುವ ಪ್ರಶ್ನೆ ಪ್ರಶ್ನಾವಳಿಯಲ್ಲಿ ಬಂದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮ್ಮ ಗಮನಕ್ಕೆ ತರುವುದಾದರೆ ಪಶು ಆಸ್ಪತ್ರೆ, ಪಶು ಚಿಕಿತ್ಸಾಲಯ ಮತ್ತು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳೇನಿದೆ ಅದು ಮಾನ್ಯ ನಾಗೇಗೌಡರ ಕಾಲದಲ್ಲಿ ಪ್ರಾರಂಭವಾಯಿತು. ಅವರಿಗೆ ಧನ್ಯವಾದವನ್ನು ಹೇಳಬೇಕು. ಅವರ ಕಾಲದಲ್ಲಿ ಇದು ಬಹಳ ದೊಡ್ಡ ಪ್ರಮಾಣದಲ್ಲಿ ಪ್ರಾರಂಭವಾಯಿತು. ಆದರೆ ಅರ್ಧಕ್ಕೂ ಹೆಚ್ಚು ಭಾಗದಲ್ಲಿ ಇಂಥ ಆಸ್ಪತ್ರೆಗಳಲ್ಲಿ ವೈದ್ಯರುಗಳಿಲ್ಲ, ಸಿಬ್ಬಂದಿಗಳಿಲ್ಲ. ನಮ್ಮ ತಾಲ್ಲೂಕನ್ನೇ ಉದಾಹರಣೆಯಾಗಿ ತೆಗೆದುಕೊಳ್ಳುವುದಾದರೆ ಕರೆಸಂಧಿಹಳ್ಳ, ಹಿರೆಜಂಬೂರು, ಮತ್ತಿಕೋಟೆ, ಬಿಳಕಿ, ತಾಳಗುಡ, ಮಳವಳ್ಳಿ ಮುಂತಾದ ಕಡೆಗಳಲ್ಲಿ ಪಶು ವೈದ್ಯರುಗಳೇ ಇಲ್ಲ, ನಾವೇ ಆ ಕೇಂದ್ರಗಳನ್ನು ಪ್ರಾರಂಭ ಮಾಡಿದ್ದು. ಮಂತ್ರಿಗಳೇ ಬಂದು ಅವುಗಳನ್ನು ಉದ್ಘಾಟನೆ ಮಾಡಿದರು. ಆದರೆ ಅಲ್ಲಿ ಇದುವರೆಗೆ ಪಶುವೈದ್ಯರುಗಳಿಲ್ಲ, ಸಿಬ್ಬಂದಿಗಳಿಲ್ಲ, ಔಷಧಿಗಳು ಸರಬರಾಜಾಗುತ್ತಿಲ್ಲ. ಇದು ಕೇವಲ ನನ್ನ ಒಂದು ತಾಲ್ಲೂಕಿನಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಇಂಥ ಪರಿಸ್ಥಿತಿ ಇದೆ. ಆದ್ದರಿಂದ ಎಲ್ಲೆಲ್ಲಿ ಇಂಥ ಆಸ್ಪತ್ರೆಗಳಿಗೆ ಅಗತ್ಯವಿರತಕ್ಕ ವೈದ್ಯರುಗಳನ್ನು, ಸಿಬ್ಬಂದಿಗಳನ್ನು ಭರ್ತಿ ಮಾಡುವುದಕ್ಕೆ ಏನೇನು ಕ್ರಮ ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ಅಂಕಿಅಂಶಗಳನ್ನು ನೀಡುತ್ತೀರಾ?

ಶ್ರೀ ರಾಮಲಿಂಗರೆಡ್ಡಿ : 1993-94ರಲ್ಲಿ 232 ವೈದ್ಯರುಗಳನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡಿದ್ದೇವೆ. ಕೆಪಿಎಸ್‌ಸಿ ಯಿಂದ 141 ಪಶು ವೈದ್ಯರುಗಳನ್ನು ನೇಮಕ ಮಾಡಿಕೊಂಡಿದ್ದೇವೆ. ಈ ವರ್ಷ ಅಂದರೆ 1994-95ರಲ್ಲಿ 164 ವೈದ್ಯರುಗಳನ್ನು ಗುತ್ತಿಗೆ ಆಧಾರದ ಮೇಲೆ ಮುಂದಿನ ತಿಂಗಳಿನಲ್ಲಿ ತೆಗೆದುಕೊಳ್ಳುತ್ತಿದ್ದೇವೆ; ಮತ್ತು ಇನ್ನೂ 393 ವೈದ್ಯರುಗಳು ಬೇಕು ಎಂದು ಕೆಪಿಎಸ್‌ಸಿಗೆ ಸರ್ಕಾರದ ಮತ್ತು ಇಲಾಖೆಯ ವತಿಯಿಂದ ಬರೆದಿದ್ದೇವೆ. ಅದೇ ರೀತಿ ಪಶು ಪರೀಕ್ಷಕರು 286 ಮಂದಿಯನ್ನು ಆಯ್ಕೆ ಮಾಡಿದ್ದೇವೆ. ಅವರ ದಾಖಲೆಗಳ ವೆರಿಫಿಕೇಷನ್ ಆಗುತ್ತಿದೆ. ಮುಂದಿನ ತಿಂಗಳ ಕೊನೆಯೊಳಗೆ ಅವರುಗಳನ್ನು ತೆಗೆದುಕೊಳ್ಳುತ್ತಿದ್ದೇವೆ. 382 ವೆಟರ್ನರಿ ಇನ್ಸ್‌ಪೆಕ್ಟರ್‌ಗಳ ಹುದ್ದೆ ಖಾಲಿ ಇದೆ. ಅದಕ್ಕೆ 250 ಅರ್ಜಿಗಳು ಮಾತ್ರ ಬಂದಿದೆ. ಅದರ ವೆರಿಫಿಕೇಷನ್ ನಡೆಯುತ್ತಿದೆ, ಅದನ್ನೂ ಸಹ ತೆಗೆದುಕೊಳ್ಳತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಇನ್ನು ವೆಟರ್ನರಿ ಸಹಾಯಕರ 580 ಹುದ್ದೆಗಳು ಖಾಲಿ ಇವೆ, ಅರ್ಜಿಯನ್ನು ಕರೆದಿದ್ದೇವೆ. ಮುಂದಿನ ಎರಡು ತಿಂಗಳಿನಲ್ಲಿ ನೇಮಕಾತಿಯನ್ನು ಮಾಡತಕ್ಕ ಕಾರ್ಯಕ್ರಮವಿದೆ. ಅದೇ ರೀತಿ ಗ್ರೂಪ್ 'ಡಿ' 933 ಹುದ್ದೆಗಳಿಗೆ ಸಿರಿಕಲ್ಚರ್ ಇಲಾಖೆಯಲ್ಲಿ ಅವಶ್ಯಕತೆ ಇಲ್ಲದೇ ಇರತಕ್ಕವರನ್ನು ನಮ್ಮ ಇಲಾಖೆಗೆ ವರ್ಗಾವಣೆ ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಈ ರೀತಿ ಮೇಲೆ ಹೇಳಿರುವಂತೆ ಸಿಬ್ಬಂದಿಯನ್ನು

ನೇಮಕ ಮಾಡಿಕೊಂಡನಂತರ ಈಗ ಏನು ನೌಕರರ ಸಮಸ್ಯೆ ಇದೆ ಅದು ಪರಿಹಾರವಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಕ್ಕಾಗಿ ನಾವು ಸರ್ಕಾರಕ್ಕೆ ಧನ್ಯವಾದವನ್ನು ಅರ್ಪಿಸುತ್ತೇವೆ. ಈ ಇಲಾಖೆಯಲ್ಲಿ ತುಂಬಾ ಕೆಲಸವಾಗಿದೆ. ಅನೇಕ ವೆಟರ್ನರಿ ಆಸ್ಪತ್ರೆಗಳು ಪ್ರಾರಂಭವಾಗಿದೆ. ಆದರೆ ಸಿಬ್ಬಂದಿಗಳಿಲ್ಲದೆ ಈ ರೀತಿ ಪ್ರಾರಂಭವಾಗಿರತಕ್ಕ ಆಸ್ಪತೆಗಳ ಬಾಗಿಲನ್ನೇ ತೆಗೆದಿಲ್ಲ. ಅಲ್ಲಿ ಉದ್ಘಾಟನೆಯನ್ನು ಮಾಡಿ ಬಂದಿದ್ದಾರೆ. ಉದಾಹರಣೆಗೆ ಹೀರೆ ಜಂಬೂರು, ಬೆಳ್ಳಕ್ಕಿ, ತಳಗುಂದ, ಮತ್ತಿಕೋಟೆ, ಮಳವಳ್ಳಿಯೆಂದು ಶಿಕಾರಿಪುರ ತಾಲ್ಲೂಕನ್ನು ಕೊಟ್ಟೆ. ಇಡೀ ರಾಜ್ಯದಲ್ಲಿ ಹೊಸದಾಗಿ ಆಸ್ಪತ್ರೆಗಳು ಆಗಿರುವಂಥಾದ್ದು ಇವತ್ತು ಉದ್ಘಾಟನೆ ಮಾಡಿದ್ದಾರೆ. ಆದರೆ ಯಾವುದೇ ಆಸ್ಪತ್ರೆಗೆ ಸಿಬ್ಬಂದಿಗಳು ಇಲ್ಲದೆ ಅದು ಪ್ರಾರಂಭವಾಗಿಲ್ಲ. ಅದಕ್ಕೆ ತಾವು ಆ ಆಸ್ಪತೆಗಳಿಗೆ ಸಿಬ್ಬಂದಿಗಳನ್ನು ಹಾಕಿ ಬಾಗಿಲು ತೆಗೆದು ಜಾನುವಾರುಗಳಿಗೆ ಔಷಧ ಸಿಕ್ಕುವಂತಹ ವ್ಯವಸ್ಥೆಯನ್ನು ಮಾಡುತ್ತೀರಾ?

ಶ್ರೀ ರಾಮಲಿಂಗಾರೆಡ್ಡಿ : ಶಿವಮೊಗ್ಗ ಜಿಲ್ಲೆಯಲ್ಲಿ 17ಆಸ್ಪತ್ರೆಗಳನ್ನು ಜಿಲ್ಲಾಪರಿಷತ್ತಿನಿಂದ ತೆಗೆದಿದ್ದಾರೆ. ಅದರಲ್ಲಿ ನಾಲ್ಕಕ್ಕೆ ನಮ್ಮ ಸರ್ಕಾರ ಮಾನ್ಯತೆ ಕೊಟ್ಟಿದೆ. ಉಳಿದ 13.....

ಶ್ರೀ ಬಿ.ಎಸ್. ಯಡಿಯೂರಪ್ಪ : ಕೊಟ್ಟಿರುವಂಥಾದ್ದಕ್ಕೆ ಶಿವಮೊಗ್ಗ ಜಿಲ್ಲೆಯಲ್ಲಿ ಸಿಬ್ಬಂದಿಗಳನ್ನು ಕಳುಹಿಸಿ ಆಸ್ಪತೆ ಬಾಗಿಲನ್ನು ತೆಗೆಯುವಂತಹ ವ್ಯವಸ್ಥೆಯನ್ನು ಮಾಡುತ್ತಿರಾ?

ಶ್ರೀ ರಾಮಲಿಂಗಾರೆಡ್ಡಿ : ಈಗ ತಮಗೆ ಎಲ್ಲಾ ಮಾಹಿತಿಯನ್ನು ನಾನು ಕೊಟ್ಟಿದ್ದೇನೆ. ನಾವು ಡಾಕ್ಟರ್‌ಗಳು, ವೆಟರ್ನರಿ ಅಸಿಸ್ಟೆಂಟ್‌ಗಳು ಇವರನ್ನೆಲ್ಲಾ ಇನ್ನು 2-3 ತಿಂಗಳಲ್ಲಿ ನೇಮಕಾತಿ ಆದನಂತರ ಹಾಕಿಕೊಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ನನ್ನ ಪ್ರಶ್ನೆ ಅದಲ್ಲ, ಈಗಾಗಲೇ ಉದ್ಘಾಟನೆ ಆಗಿದೆ, ಬಾಗಿಲು ತೆಗೆದಿದೆ.

ಶ್ರೀ ರಾಮಲಿಂಗಾರೆಡ್ಡಿ : ಎಲ್ಲೆಲ್ಲಿ ಮಾನ್ಯತೆ ಕೊಟ್ಟಿದ್ದೇವೆ, ಅಲ್ಲಿ ಅದಷ್ಟು ಬೇಗ ಮಾಡಿಕೊಡುತ್ತೇವೆ.

ಹುಕ್ಕೇರಿ ಪಟ್ಟಣಕ್ಕೆ ಮುಖ್ಯಮಂತ್ರಿಗಳ ನಿಧಿಯಿಂದ ಹಣ ಬಿಡುಗಡೆ

113 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ) : ಮಾನ್ಯ ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಹುಕ್ಕೇರಿ ಪಟ್ಟಣಕ್ಕೆ ಮುಖ್ಯಮಂತ್ರಿ ಅಭಿವೃದ್ಧಿ ನಿಧಿಯಿಂದ ಅಭಿವೃದ್ಧಿ ಗ್ರಾಂಟ್ ಎಷ್ಟು ಮಂಜೂರಾಗಿದೆ, ಯಾವಾಗ ಬಿಡುಗಡೆಯಾಗಿದೆ; ಎಷ್ಟು ಬಿಡುಗಡೆಯಾಗಿದೆ?

ಶ್ರೀ ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು):

ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ಅಭಿವೃದ್ಧಿ ಕಾರ್ಯಗಳಿಗಾಗಿ ಮುಖ್ಯಮಂತ್ರಿಗಳ ನಿಧಿ ಇರುವುದಿಲ್ಲ. ಸ್ಥಾನಿಕ ಸಂಸ್ಥೆಗಳಿಗೆ ಅಭಿವೃದ್ಧಿ ಅನುದಾನವನ್ನು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯಿಂದ ಬಿಡುಗಡೆ ಮಾಡಲಾಗುತ್ತಿದೆ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೇ, ಹುಕ್ಕೇರಿ ಮುನಿಸಿಪಾಲಿಟಿ ಏನಾಗಿದೆ ಎಂದರೆ ಆದಾಯ ಕಡಿಮೆ ಇದ್ದು, ಖರ್ಚು ಜಾಸ್ತಿಯಾಗಿದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ್ದರೂ ಇದುವರೆಗೂ ಯಾವುದೇ ಡೆವಲಪ್‌ಮೆಂಟ್ ಆಗಿಲ್ಲ, 2-3 ಸಾರಿ ಮಂಜೂರಾತಿಯನ್ನು ಕೊಟ್ಟರು. ಆದರೆ ಏನೂ

ಪ್ರಯೋಜನವಾಗಿಲ್ಲ. ಹಣ ಬಿಡುಗಡೆಯಾಗಿರುವುದಿಲ್ಲ. ನನ್ನ ಪ್ರಶ್ನೆಗೆ ಸಮಂಜಸವಾದ ಉತ್ತರ ಬಂದಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ವಿಶೇಷ ಅನುದಾನದ ಬಿಡುಗಡೆಯ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಈಗ ಇಲಾಖೆಯಿಂದ ಯಾವುದೇ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಅವಕಾಶವಿರುವುದಿಲ್ಲ. ಆದರೆ ನಗರಾಭಿವೃದ್ಧಿ ಕೆಲವು ಪುರಸಭೆಗಳು, ನಗರಸಭೆಗಳು, ಆರ್ಥಿಕವಾಗಿ ದುರ್ಬಲವಿರುವಂತಹ ಸಂದರ್ಭದಲ್ಲಿ ಅವರಿಗೆ ನನ್ನ ಇಲಾಖೆಗೆ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ ಹಂಚಿಕೆಯಲ್ಲಿ ಸ್ವಲ್ಪ ಹಣವನ್ನು ಬಿಡುಗಡೆ ಮಾಡುವಂತಹ ಅವಶ್ಯಕತೆ ಇದೆ. ಅವರ ಬೇಡಿಕೆ ಈಗಾಗಲೇ ನಮ್ಮ ಬಳಿ ಇದೆ. ಅದನ್ನು ಸಧ್ಯದಲ್ಲೇ ಬಿಡುಗಡೆ ಮಾಡುತ್ತೇವೆ.

ಶ್ರೀ ಉಮೇಶ್ ವಿ. ಕತ್ತಿ : ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರಿಗೆ 3-4 ಸಾರಿ ಇದರ ಬಗ್ಗೆ ಪತ್ರ ಬರೆದಿದ್ದೇವೆ. ಅವರು ಮಂಜೂರಾತಿ ಮಾಡಿದ್ದಾರೆ. ದುಡ್ಡು ಬರುತ್ತಿಲ್ಲ. ಹೀಗಾಗಿ ಮುನ್ಸಿಪಾಲಿಟಿ ಲೈಟ್ ಬಿಲ್ ತುಂಬುವ ಪರಿಸ್ಥಿತಿಯು ಇಲ್ಲ. ಇಲ್ಲಿ ಯಾವುದನ್ನು ಮಾಡುವ ಪರಿಸ್ಥಿತಿಯಲಿಲ್ಲ. ಈ ರೀತಿ ಇರುವುದರಿಂದ ಇದನ್ನು ಮುಚ್ಚಬೇಕಾ, ಪ್ರಾರಂಭಿಸಬೇಕಾ? ನೀವೇ ಹೇಳಬೇಕು. ಏಕೆಂದರೆ ಮುನ್ಸಿಪಾಲಿಟಿಗೆ ಆದಾಯವಿಲ್ಲ, ಖರ್ಚು ಇದೆ. ಆದಾಯ 6 ಲಕ್ಷ ರೂ.ಗಳಾದರೆ ಖರ್ಚು 9 ಲಕ್ಷ ರೂ.ಗಳು ಇದೆ. ಅದರ ವಸೂಲು ಹೇಗೆ? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ್ದೇವೆ. ಅವರು ಮಂಜೂರಾತಿ 3 ಲಕ್ಷ ರೂ.ಗಳಿಗೆ ಕೊಟ್ಟರು, 5 ಲಕ್ಷಕ್ಕೆ ಕೊಟ್ಟರು. ಆದರೆ ನಮಗಿಂತ ಹಿಂದಿದ್ದ ಮುನ್ಸಿಪಾಲಿಟಿಯವರಿಗೆ ಗ್ರ್ಯಾಂಟ್ ಬಂದಿದೆ. ಇದರಲ್ಲಿ ಪಕ್ಷಭೇದವಾಗಿದೆಯೋ ಏನೋ ನಮಗೆ ತಿಳಿದುಬಂದಿಲ್ಲ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಸಮಂಜಸವಾದ ಉತ್ತರ ಕೊಡಬೇಕು ಎಂಬುದು ನನ್ನ ವಿನಂತಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಈಗ ನಾನು ತಮ್ಮ ಮುಖಾಂತರ ಸದಸ್ಯರಿಗೆ ಒಂದು ಭರವಸೆ ಕೊಡುವುದೇನೆಂದರೆ ಅವರ ಬೇಡಿಕೆ ಆಗಲೇ ನನ್ನ ಇಲಾಖೆಗೆ ತಲುಪಿದೆ. ಈಗ ಪುರಸಭೆ ಆರ್ಥಿಕವಾಗಿ ಬಹಳ ಹಿಂದುಳಿದಿದೆ ಎಂಬ ವಿಚಾರ ನಮ್ಮ ಗಮನಕ್ಕೆ ಬಂದಿದೆ. ಸಧ್ಯದಲ್ಲೇ ಆರ್ಥಿಕವಾಗಿ ಪುರಸಭೆಗೆ ಸಹಾಯ ಮಾಡುವುದಕ್ಕೆ ಸರ್ಕಾರ ಸಿದ್ಧವಾಗಿದೆ; ಅದನ್ನು ಮಾಡುತ್ತೇವೆ.

ಹೊಳೆನರಸೀಪುರ ಟೌನ್‌ನಲ್ಲಿ ಅಗ್ನಿಶಾಮಕದಳ ಸ್ಥಾಪನೆ

646.- ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಬಂದೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಂದ ದಯವಿಟ್ಟು ಉತ್ತರಿಸುವರೆ?

ಅ) ಹೊಳೆನರಸೀಪುರ ಟೌನ್‌ನಲ್ಲಿ ಅಗ್ನಿಶಾಮಕ ದಳವನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಆ) ಇಲ್ಲದಿದ್ದಲ್ಲಿ, 94-95ರಲ್ಲಿ ಅಗ್ನಿಶಾಮಕ ದಳವನ್ನು ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಡಾ॥ ಆರ್.ಬಿ. **ಚೌಧರಿ** (ಕಾರಾಗೃಹ ರಾಜ್ಯ ಮಂತ್ರಿಗಳು) :

ಅ) ಇಲ್ಲ.

ಆ) ಹಾಸನ ಜಿಲ್ಲೆಯಲ್ಲಿ ಸದ್ಯಕ್ಕೆ ಹಾಸನ, ಅರಸೀಕೆರೆ ಮತ್ತು ಚನ್ನರಾಯಪಟ್ಟಣ ಈ ಮೂರು ಸ್ಥಳಗಳಲ್ಲಿ ಅಗ್ನಿಶಾಮಕ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ. ರಾಜ್ಯದ ಪ್ರತಿಯೊಂದು ತಾಲ್ಲೂಕು ಕೇಂದ್ರದಲ್ಲಿ ಹಂತ ಹಂತವಾಗಿ ಅಗ್ನಿಶಾಮಕ ಠಾಣೆಗಳನ್ನು

ಸ್ಥಾಪಿಸುವುದಕ್ಕೆ ಸರ್ಕಾರದ ನೀತಿಯಾಗಿದೆ. ಆದುದರಿಂದ ಹೊಳೆನರಸೀಪುರದಲ್ಲಿ ಒಂದು ಅಗ್ನಿ ಶಾಮಕ ಠಾಣೆಯನ್ನು ಮುಂಬರುವ ವರ್ಷಗಳಲ್ಲಿ ಸಂಪನ್ಮೂಲ, ಭೂಮಿ ಇತ್ಯಾದಿಗಳನ್ನು ಆಧರಿಸಿ ಸ್ಥಾಪಿಸುವ ಸಾಧ್ಯತೆ ಇದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಅಧ್ಯಕ್ಷರೇ, ಹೊಳೇನರಸೀಪುರ ಪಟ್ಟಣದಲ್ಲಿ ಅಗ್ನಿಶಾಮಕ ದಳವನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ಎಂದು ಕೇಳಿದರೆ ಇಲ್ಲ ಎಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಪ್ರತಿ ತಾಲ್ಲೂಕಿನಲ್ಲೂ ಕೂಡ ಹಂತ ಹಂತವಾಗಿ ಅಗ್ನಿಶಾಮಕ ಕೇಂದ್ರಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದ ನೀತಿಯಿದೆ ಎಂದು ಹೇಳಿದ್ದಾರೆ.

ಶ್ರೀ ಡಿ.ಬಿ. ಚಂದ್ರೆಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಹೇಳುವುದಕ್ಕೆ ಯಾರು ಸಂಬಂಧಪಟ್ಟ ಮಂತ್ರಿಗಳು ಎಂದು ನಿರ್ಧಾರವಾದರೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಚೌದರಿ ಅವರ ಪರವಾಗಿ ರಮಾನಾಥರೈ ಅವರು ಉತ್ತರವನ್ನು ಹೇಳುತ್ತೇನೆಂದರು. ತಾವು ಅದನ್ನು ಕೇಳಿಸಿಕೊಳ್ಳಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಮಂತ್ರಿಗಳು ಒಂದು ಸಾರಿಯಾದರೂ ಸದನಕ್ಕೆ ಬಂದು ಉತ್ತರ ಹೇಳಲಿ, ಸದನ ನಡೆಯುವ ಕಾಲದಲ್ಲಿ ಒಂದು ಸಲ ಅವಕಾಶ ಸಿಕ್ಕಿದಾಗಲೂ ಸಹ ಮಂತ್ರಿಗಳು ಬರುವುದಿಲ್ಲವೆಂದರೆ ಇದು ವ್ಯವಸ್ಥೆ ದೃಷ್ಟಿಯಿಂದ ಸರಿ ಎಂದು ನನಗೆ ಕಾಣುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ನಮ್ಮಲ್ಲಿ ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭ ಮಾಡಬೇಕು ಎಂದು ಕಳೆದ 3 ವರ್ಷಗಳಿಂದ ಸರ್ಕಾರದಲ್ಲಿ ಪ್ರಸ್ತಾವನೆ ನಡೆಯುತ್ತಿದೆ. ಇದಕ್ಕೆ ಹೋಮ್ ಗಾರ್ಡ್ಸ್ ಸೂಪರಿನ್‌ಟೆಂಡೆಂಟ್ ಕೂಡ ಶಿಫಾರಸ್ಸು ಮಾಡಿದ್ದಾರೆ. ಮತ್ತು ಪುರಸಭೆಯವರು ಕೂಡ ರೆಸಲ್ಯೂಷನ್ ಮಾಡಿ ಲ್ಯಾಂಡ್‌ನ್ನು ಫ್ರೀ ಕೊಡುವುದಕ್ಕೆ ಒಪ್ಪಿದ್ದಾರೆ. ಮತ್ತು ಎಪಿಎಂಸಿ ಯಾರ್ಡ್‌ನವರೂ ಕೂಡ ಕನ್‌ಸೆಂಟ್ ಕೊಟ್ಟಿದ್ದಾರೆ. ಇಷ್ಟೆಲ್ಲಾ ಇದ್ದರೂ ಕೂಡ ಪ್ರಸ್ತಾವನೆ ನಮ್ಮ ಮುಂದೆ ಇಲ್ಲ ಎಂದು ಹೇಳಿದ್ದಾರೆ. ಇನ್ನು ಎರಡನೆಯದಾಗಿ ಹಂತ ಹಂತವಾಗಿ ಮಾಡುವಂತಹ ನೀತಿ ಸರ್ಕಾರದ್ದಾಗಿರುವಾಗ ಈ ವರ್ಷದಿಂದಲೇ ಅದನ್ನು ಆರಂಭ ಮಾಡುವುದಕ್ಕೆ ಸರ್ಕಾರ ಒಂದು ಸ್ಪಷ್ಟ ಭರವಸೆ ಕೊಡಬೇಕು ಎಂದು ನಾನು ಮಂತ್ರಿಯವರನ್ನು ಕೇಳುತ್ತೇನೆ.

ಶ್ರೀ ರಮಾನಾಥ ರೈ (ಗೃಹ ಮಂತ್ರಿಗಳು) (ಬಂದೀಖಾನೆ ರಾಜ್ಯ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಈಗಾಗಲೇ ಹಾಸನ ಜಿಲ್ಲೆಯಲ್ಲಿ, ಅರಸೀಕೆರೆ ಮತ್ತು ಚನ್ನರಾಯಪಟ್ಟಣ ಈ ಮೂರು ಕಡೆ ಅಗ್ನಿಶಾಮಕ ಠಾಣೆ ಸ್ಥಾಪನೆಯಾಗಿ ಅಲ್ಲಿ ಕೆಲಸ ನಿರ್ವಹಿಸುತ್ತಿವೆ. ಹೊಳೇನರಸೀಪುರದಲ್ಲಿ ಅಗ್ನಿಶಾಮಕ ಠಾಣೆಯಾಗಬೇಕು ಎಂದು ಸನ್ಮಾನ್ಯ ಸದಸ್ಯರಾದಂತಹ ನಮ್ಮ ಪುಟ್ಟಸ್ವಾಮಿಗೌಡರು ಕೇಳುತ್ತಲೇ ಇದ್ದಾರೆ. ಹಂತ ಹಂತವಾಗಿ ನಾವು ಎಲ್ಲ ತಾಲ್ಲೂಕುಗಳಲ್ಲಿ ಕೂಡ ಇಂತಹ ಅಗ್ನಿಶಾಮಕ ಠಾಣೆಗಳನ್ನು ಮಾಡಬೇಕು ಎಂದು ಆ ಬಗ್ಗೆ ತೀರ್ಮಾನ ತೆಗೆದುಕೊಂಡ ಪ್ರಕಾರ, ಮುಂದಿನ ಹಂತದಲ್ಲಿ ಹೊಳೆನರಸೀಪುರಕ್ಕೆ ಅಗ್ನಿಶಾಮಕ ಠಾಣೆಯನ್ನು ಕೊಡುವುದಕ್ಕೆ ಪರೀಶೀಲನೆ ಮಾಡುತ್ತೇವೆ.

ಸೋಮವಾರಪೇಟೆ ತಾಲ್ಲೋಕು ಕುಶಾಲನಗರದಲ್ಲಿ ಡಿ.ವೈ.ಎಸ್.ಪಿ. ಕಛೇರಿ ಕಟ್ಟಡ ನಿರ್ಮಾಣ

32 - **ಶ್ರೀ** ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ಗೃಹ ಸಚಿವರು ಈ **ಕೆಳಕಂಡ** ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಸೋಮವಾರಪೇಟೆ ತಾಲ್ಲೂಕು ಕುಶಾಲ ನಗರದಲ್ಲಿರುವ ಡಿ.ವೈ.ಎಸ್.ಪಿ. ಕಚೇರಿಗೆ ನೂತನ ಕಟ್ಟಡ ಮಂಜೂರು ಮಾಡಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆಯೇ; ಹಾಗಿದ್ದಲ್ಲಿ ಈ ಕಟ್ಟಡ ಮಂಜೂರಾಗಿದ್ದರೆ ಯಾವಾಗ ಪ್ರಾರಂಭಿಸಲಾಗುವುದು; ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಹೌದು.

ಆ) ಸದರಿ ಕಾಮಗಾರಿಯನ್ನು 1993-94ನೇ ಸಾಲಿನ ಆಧ್ಯತಾ ಪಟ್ಟಿಯಲ್ಲಿ ಸೇರಿಸಿ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕರ್ನಾಟಕ ರಾಜ್ಯ ಪೋಲೀಸ್ ವಸತಿ ನಿಗಮಕ್ಕೆ ಆದೇಶಿಸಿದೆ. ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ಸದರಿ ಕಾಮಗಾರಿಯನ್ನು ತ್ವರಿತವಾಗಿ ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಎ.ಎಂ. ಬೆಳ್ಳಿಯಪ್ಪ : ಮಾನ್ಯ ಅಧ್ಯಕ್ಷರೆ, ಸೋಮವಾರ ಪೇಟೆ ತಾಲ್ಲೂಕಿನ ಕುಶಾಲ ನಗರದಲ್ಲಿ ಒಂದು ಡೆಪ್ಯುಟಿ ಸೂಪರಿನ್‌ಟೆಂಡೆಂಟ್ ಆಫ್ ಪೋಲೀಸ್ ಕಚೇರಿ ಮಂಜೂರಾಗಿ ಸುಮಾರು 12 ವರ್ಷಗಳೇ ಕಳೆದವು. ಈ 12-13 ವರ್ಷಗಳಿಂದ ಅಲ್ಲಿ ಆಫೀಸ್ ಇಲ್ಲ. ನಾಡ ಕಚೇರಿಯ ಎರಡು ಕೊಠಡಿಯಲ್ಲಿ ಈ ಕಚೇರಿಯನ್ನು ನಡೆಸುತ್ತಿದ್ದಾರೆ. ಆ ನಾಡ ಕಛೇರಿ ಕೂಡ 2 ರೂಮು ಇರುವಂಥಾದ್ದು. ಇದರಿಂದ ಅಲ್ಲಿನ ಜನರಿಗೆ, ಗುಮಾಸ್ತರಿಗೆ ಮತ್ತು ಅಧಿಕಾರಿಗಳಿಗೆ ಬಹಳ ತೊಂದರೆಯಾಗಿದೆ. ಆದುದರಿಂದ ಇದರ ಬಗ್ಗೆ ನಾನು ಪ್ರಸ್ತಾವನೆ ಕಳುಹಿಸಿದ್ದೆ. ಪ್ರತ್ಯೇಕವಾಗಿ ಡಿ.ವೈ.ಎಸ್.ಪಿ ಕಚೇರಿಯನ್ನು ಕಟ್ಟಬೇಕು ಎಂದು ಹೇಳಿ ನಾನು 3 ವರ್ಷಗಳಿಂದ ಪ್ರಸ್ತಾವನೆ ಕೊಡುತ್ತಾ ಬಂದಿದ್ದೇನೆ. ಇದಕ್ಕೆ ಮಾನ್ಯ ಮಂತ್ರಿಯವರು ಉತ್ತರ ಕೊಡುತ್ತಿದ್ದಾರೆ, ಸದರಿ ಕಾಮಗಾರಿಯನ್ನು 1993-94ನೇ ಸಾಲಿನ ಆದ್ಯತಾ ಪಟ್ಟಿಯಲ್ಲಿ ಸೇರಿಸಿ, ಕೈಗೆತ್ತಿಕೊಳ್ಳಲು ಕರ್ನಾಟಕ ರಾಜ್ಯದ ಪೋಲೀಸ್ ವಸತಿ ನಿಗಮಕ್ಕೆ ಆದೇಶಿಸಿದೆ. ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ಸದರಿ ಕಾಮಗಾರಿಯನ್ನು ತ್ವರಿತವಾಗಿ ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಬಜೆಟ್‌ನಲ್ಲಿ ಇದಕ್ಕೆ ಎಷ್ಟು ಹಣ ಕೊಟ್ಟಿದ್ದಾರೆ? ಈ ವರ್ಷ ಈ ಕೆಲಸ ಶುರು ಮಾಡಬೇಕಾದರೆ ಎಷ್ಟು ಹಣ ಲಭ್ಯ ಇದೆ ಎಂದು ದಯವಿಟ್ಟು ಸನ್ಮಾನ್ಯ ಗೃಹಮಂತ್ರಿಗಳು ಹೇಳಬೇಕು. ಮತ್ತು ಈ ಕಾಮಗಾರಿಯನ್ನು ತೆಗೆದುಕೊಂಡು ಎಷ್ಟು ತಿಂಗಳುಗಳಲ್ಲಿ ಮುಗಿಸುತ್ತಾರೆ ಎಂಬುದನ್ನು ಹೇಳಬೇಕು. ಇನ್ನೊಂದು ವಿಷಯವೇನೆಂದರೆ ಈ ಪ್ರಸ್ತಾವನೆಯನ್ನು 3 ವರ್ಷಗಳಿಂದ ಕೊಡುತ್ತಾ ಬಂದಿದ್ದಾರೂ ಕೂಡ ಇದು 94ರ ಮಧ್ಯಭಾಗವಾಗಿದ್ದರೂ ಕೂಡ ಇನ್ನೂ ಕಾಮಗಾರಿಯನ್ನು ತೆಗೆದುಕೊಳ್ಳಲಿಲ್ಲ. ಇದನ್ನು ಯಾವಾಗ ತೆಗೆದುಕೊಳ್ಳುತ್ತೀರಿ ಎಂದು ತಿಳಿಸಬೇಕು.

ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೆ, ಡಿ.ವೈ.ಎಸ್.ಪಿ. ಕಛೇರಿಯನ್ನು ಕಟ್ಟಬೇಕು ಎಂದು ಸರ್ಕಾರ ಆದೇಶ 7-3-94ರಲ್ಲಿ ನೀಡಲಾಗಿದೆ. ಈ ಕಾಮಗಾರಿ ಕೆಲಸಕ್ಕೆ ಆಯವ್ಯಯದಲ್ಲಿ 13.11 ಕೋಟಿ ರೂಪಾಯಿಗಳನ್ನು ಅನುದಾನ ನೀಡಿದ್ದೇವೆ. ಇದನ್ನು ಪೋಲೀಸ್ ವಸತಿ ನಿಗಮವೇ ಕೈಗೊಳ್ಳಬೇಕು ಎಂದು ಆದೇಶ ನೀಡಿದೆ.

11.30 ಎಎಂ

ಶ್ರೀ ಎ.ಎಂ. ಬೆಳ್ಳಿಯಪ್ಪ : ದಯವಿಟ್ಟು ಯಾವಾಗ ಇದನ್ನು ತೆಗೆದುಕೊಳ್ಳುತ್ತೀರಿ ಎಂದು ಆಶ್ವಾಸನೆ ಕೊಡಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಚೌಡರೆಡ್ಡಿ : ಅದನ್ನು ನಾನು ಅತಿ ಬೇಗ ತೆಗೆದುಕೊಳ್ಳುವುದಕ್ಕೆ ಆದೇಶ ನೀಡುತ್ತೇನೆ.

ಅಗತ್ಯ ವಸ್ತುಗಳ ಬೆಲೆಯಲ್ಲಿ ಹೆಚ್ಚಳ ಹಾಗೂ ಕೊರತೆ

485 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿನ ದಿನಗಳಲ್ಲಿ ಸಕ್ಕರೆ ಅಕ್ಕಿ ಕಾಫಿಪುಡಿ ಇತ್ಯಾದಿ ದಿನಬಳಕೆಯ ವಸ್ತುಗಳ ಬೆಲೆ ಹೆಚ್ಚಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಇವುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಬೆಲೆಗಳನ್ನು ಕಡಿಮೆ ಮಾಡಲು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದೆಯೇ.

ಈ) ಆದರಿಂದ ಆಗಿರುವ ಪರಿಣಾಮಗಳೇನು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ. ಬಂದಿದೆ.

ಆ. ಇಲ್ಲ.

ಇ. ದಿನಬಳಕೆಯ ಪಡಿತರ ವಸ್ತುಗಳ ಬೆಲೆ ಕಡಿಮೆ ಮಾಡಲು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿಲ್ಲ. ಆದರೆ ರಾಜ್ಯ ಸರ್ಕಾರವು ಈ ದಿಸೆಯಲ್ಲಿ ಹಲವಾರು ಕ್ರಮ ಕೈಗೊಂಡಿದೆ. ಇದೇ ಫೆಬ್ರುವರಿ 1 ರಿಂದ ಕೇಂದ್ರ ಸರ್ಕಾರವು ಪಡಿತರ ಆಹಾರ ಧಾನ್ಯಗಳ ಕೇಂದ್ರ ಮಾರಾಟ ಬೆಲೆಗಳನ್ನು (ಸೆಂಟ್ರಲ್ ಇಸ್ಯೂ ಪ್ರೈಸ್) ಹೆಚ್ಚಿಸಿತು. ಅದರಂತೆ ಸರ್ಕಾರವು ಅಂತಿಮ ಬೆಲೆ ನಿಗದಿಪಡಿಸಿತು. ಸಾಮಾನ್ಯವಾಗಿ ರಾಜ್ಯ ಸರ್ಕಾರವು ತ್ರಿವರ್ಣ ಪಡಿತರ ಚೀಟಿದಾರರಿಗೆ ಸಹಾಯಧನ ನೀಡಿ ಕಡಿಮೆ ಬೆಲೆ ನಿಗದಿ ಮಾಡಿದ್ದರೆ ಈ ಬೆಲೆಯೂ ಹೆಚ್ಚಾಯಿತೆಂದು ಮನವರಿಕೆಯಾಗಿ ತ್ರಿವರ್ಣ ಪಡಿತರ ಚೀಟಿದಾರರಿಗೆ ಪ್ರತಿ ಕೆ.ಜಿ. ಅಕ್ಕಿಗೆ ಇನ್ನೂ ಒಂದು ರೂ. ಹಾಗೂ ಗೋಧಿಗೆ 50 ಪೈಸೆಗಳನ್ನು ಕಡಿಮೆ ಮಾಡಲು ಹೆಚ್ಚಿನ ಸಹಾಯಧನ 42.50 ಕೋಟಿ ರೂ. ಗಳನ್ನು ನೀಡಿ ಒಟ್ಟು ಈ ದಿಸೆಯಲ್ಲಿ 112.50 (70 ಕೋಟಿ ಮತ್ತು 42.50) ಕೋಟಿ ಸಹಾಯಧನ ಒದಗಿಸಲಾಗಿದೆ. ಇದರಿಂದ ತ್ರಿವರ್ಣ ಪಡಿತರ ಚೀಟಿದಾರರು ಒಂದು ಕೆ.ಜಿ. ಅಕ್ಕಿಗೆ ಕೇವಲ ರೂ. 4-45 ಹಾಗೂ ಗೋಧಿಗೆ ರೂ. 2-95 ನೀಡಬೇಕಾಗುತ್ತದೆ. ಅದಲ್ಲದೆ ಮುಕ್ತ ಮಾರುಕಟ್ಟೆ ಬೆಲೆಗಳನ್ನು ನಿಯಂತ್ರಿಸಲು ಅಗತ್ಯವಸ್ತುಗಳ ಅಧಿನಿಯಮದಡಿಯಲ್ಲಿ ಹಲವಾರು ನಿಯಂತ್ರಣ ಆದೇಶಗಳನ್ನು ಕಟ್ಟುನಿಟ್ಟಾಗಿ ಜಾರಿ ತಂದು ಸಂಗ್ರಹಣಾ ಮಿತಿ ಮೀರಿದ ಸಂಗ್ರಹಣೆ ಹಾಗೂ ಕಾಳಸಂತೆಗೆ ಅವಕಾಶಕೊಂಡದಂತೆ ಜಾರಿ ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಿದೆ ಹಾಗೂ ಕ್ರಮ ಕೈಗೊಳ್ಳಲಾಗುತ್ತಿದೆ. ಇದಲ್ಲದೆ ಬೆಂಗಳೂರು ನಗರ ಹಾಗೂ ಜಿಲ್ಲೆಗಳ ಕೇಂದ್ರ ಕಾರ್ಯಸ್ಥಾನದಲ್ಲಿ ಆಹಾರ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳು ಸಗಟು:ಚಿಲ್ಲರೆ ವಿತರಕರ ಸಭೆ ಜರುಗಿಸಿ ಅಗತ್ಯವಸ್ತುಗಳನ್ನು ಸೂಕ್ತ ಬೆಲೆಯಲ್ಲಿ ಮಾರಾಟ ಮಾಡಲು ಮನವರಿಕೆ ಮಾಡಿಕೊಡಲಾಗುತ್ತಿದೆ.

ಈ) ಈ ಮೇಲಿನ ಕ್ರಮಗಳಿಂದಾಗಿ ದಿನಬಳಕೆ ವಸ್ತುಗಳ ಬೆಲೆಗಳು ಮತ್ತಷ್ಟು ಹೆಚ್ಚಾಗದಂತೆ ತಡೆಯಲಾಗುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸಕ್ಕರೆ, ಕಾಫಿಪುಡಿ ಮತ್ತು ಇತರೆ ದಿನಬಳಕೆ ವಸ್ತುಗಳ ಬೆಲೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಹಾಗಾದರೆ ಕೇಂದ್ರ ಸರ್ಕಾರಕ್ಕೆ ಇದರ ಬೆಲೆಗಳನ್ನು ಕಡಿಮೆ ಮಾಡಲಿಕ್ಕೆ ಮನವಿಯನ್ನು ಏಕೆ ಕೊಟ್ಟಿಲ್ಲ ಎಂದು ಮೊದಲನೆಯದಾಗಿ

ಕೇಳುವುದಕ್ಕೆ ಇಷ್ಟಪಡುತ್ತೇನೆ. ಎರಡನೆಯದಾಗಿ, ಕಾಫಿಪುಡಿ ಮತ್ತು ಸಕ್ಕರೆ ಬೆಲೆ ನಿಯಂತ್ರಣ ಮಾಡಲಿಕ್ಕೆ ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು? ಮೂರನೆಯದಾಗಿ, 4 ರೂಪಾಯಿ 45 ಪೈಸೆಗೆ ಒಂದು ಕೆ.ಜಿ. ಅಕ್ಕಿ ಸಿಗುತ್ತದೆ ಎಂದು ಹೇಳುತ್ತಾರೆ ಇದು ತಪ್ಪು ವರದಿ. ಅದಕ್ಕೆ ಬದಲಾಗಿ 5 ರೂಪಾಯಿ 10 ಪೈಸೆಯನ್ನು ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು : ಸನ್ಮಾನ್ಯ ಸಭಾಧ್ಯಕ್ಷರೇ, ನಮ್ಮ ಬೆಲೆಗಳನ್ನು ಕಡಿಮೆ ಮಾಡುವಂಥಾದ್ದು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವಂಥ ವಿಷಯವಲ್ಲ. ಇಡೀ ದೇಶಾದ್ಯಂತ ದರಗಳನ್ನು ಗೊತ್ತುಮಾಡುವುದು ಕೇಂದ್ರ ಸರ್ಕಾರದ ಜವಾಬ್ದಾರಿ, ಆದ್ದರಿಂದ ಕೇಂದ್ರ ಸರ್ಕಾರದವರು ರಾಜ್ಯದಲ್ಲಿ ಯಾವ ರೀತಿಯಾಗಿ ಬೆಲೆಗಳನ್ನು ಹತೋಟಿಯಲ್ಲಿ ಇಡಬೇಕು ಎನ್ನುವುದಕ್ಕೆ ಕೆಲವು ಮಾರ್ಗಸೂಚಿಗಳನ್ನು ಕೊಟ್ಟಿದ್ದಾರೆ. ಆ ರೀತಿಯಾಗಿ ನಾವು ಮಾರ್ಗಸೂಚಿಗಳನ್ನು ಅನುಸರಿಸಿ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಂಡು ಬೆಲೆಗಳನ್ನು ಹತೋಟಿಗೆ ತರಲಿಕ್ಕೆ ನಾವೆಲ್ಲಾ ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ. ಅದಕ್ಕಾಗಿ ಕಳೆದ ಮೂರು ತಿಂಗಳಿನಿಂದ ಅಷ್ಟು ಬೆಲೆಗಳು ಹತೋಟಿಯಲ್ಲಿ ಬರುತ್ತಿದೆ. ಅದರ ಜೊತೆಗೆ ಸಕ್ಕರೆ ಮತ್ತು ಕಾಫಿಪುಡಿ ಬೆಲೆ ಸಲುವಾಗಿ ಕೇಳಿದ್ದೀರಿ, ಕಾಫಿ ಪುಡಿ ನಮ್ಮ ಪಡಿತರ ವಸ್ತುಗಳ ವ್ಯಾಪ್ತಿಯಲ್ಲಿ ಬಾರದಿರುವುದರಿಂದ ಇದರ ಬಗ್ಗೆ ನಾವು ಯಾವುದೇ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ ಮತ್ತು ಸಕ್ಕರೆ ಬೆಲೆಯನ್ನು ಕೇಂದ್ರ ಸರ್ಕಾರವೇ ನಿಗಧಿಪಡಿಸುತ್ತಿರುವುದರಿಂದ ಆ ದರವನ್ನು ಕೂಡ ಕೇಂದ್ರ ಸರ್ಕಾರವೇ ನಿಗಧಿ ಮಾಡಿದ ದರದಲ್ಲಿ ಮಾರಾಟ ಮಾಡುವಂಥದ್ದು ಎಂದು ನಮ್ಮ ಸರ್ಕಾರ ಎಲ್ಲಾ ವ್ಯಾಪಾರಸ್ಥರಿಗೆ ತಿಳಿಸಿದ್ದೂ ಆಗಿದೆ. ಅದರಲ್ಲಿ ಏನಾದರೂ ಹೆಚ್ಚಿಗೆ ಮಾರುವಂಥ ನಿದರ್ಶನಗಳು ಸರ್ಕಾರದ ಗಮನಕ್ಕೆ ಬಂದರೆ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ತಾವು ಹೇಳಿದ ಬೆಲೆಯಲ್ಲಿ ಮಾರಾಟವಾಗದ ರೀತಿಯಲ್ಲಿ ನೀಡಲಿಕ್ಕೆ ಪ್ರಯತ್ನ ಪಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಪಡಿತರ ಚೀಟಿಯಲ್ಲಿ 4 ರೂಪಾಯಿ 45 ಪೈಸೆಗೆ ತಾವೇನು ಮಾರುತ್ತೀದ್ದೇವೆ ಎಂದು ಹೇಳುತ್ತಿದ್ದೀರಿ, ಅದು ತಪ್ಪು ವರದಿ. ಇಡೀ ರಾಜ್ಯದಲ್ಲಿ 5 ರೂಪಾಯಿ 10 ಪೈಸೆಗೆ ಮಾರುತ್ತಿದ್ದಾರೆ. ಯಾವ ಅಂಗಡಿಗೆ ಬೇಕಾದರೂ ಹೋಗಿ ನೋಡಿ, ನೀವು ತ್ರಿವರ್ಣ ಕಾರ್ಡುಗಳನ್ನು ಕೊಟ್ಟಿದ್ದೀರಿ, ಇದು ಒಂದು. ಎರಡನೆಯದಾಗಿ ಈ ಕಾಫಿಪುಡಿ ಬೆಲೆ ಮತ್ತು ಸಕ್ಕರೆ ಬೆಲೆಯನ್ನು ಕಡಿಮೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡುವುದಕ್ಕೆ ನಿಮಗೇನು ತೊಂದರೆ? ಈಗ ಕಾಫಿ ಬೋರ್ಡಿನವರು ನಾವು ಕಾಫಿಯನ್ನು ಓಪನ್ ಮಾರ್ಕೆಟ್ಟಿಗೆ ಎಫ್‌ಪಿಡಿ ಮೂಲಕ ಕೊಡಲಿಕ್ಕೆ ತಯಾರಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. What is the action the State Government has initiated so far?

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು : ಮಾನ್ಯ ಅಧ್ಯಕ್ಷರೆ, ಕಾಫಿಪುಡಿ ನಮ್ಮ ಎಸೆನ್‌ಷಿಯಲ್ ಕಮಾಡಿಟೀಸ್ ನಿಯಂತ್ರಣ ಏನಿದೆ ಇದರಲ್ಲಿ ಈ ನಿಯಮದಲ್ಲಿ ಬಾರದಿರುವುದರಿಂದ ಕಾಫಿಪುಡಿ ಬಗ್ಗೆ ನಾವು ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ, ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಆದರೆ ಸಕ್ಕರೆ ವಿಷಯವಾಗಿ ನಾವು ಕೇಂದ್ರ ಸರ್ಕಾರಕ್ಕೆ ಕೇಳುತ್ತಿದ್ದೇವೆ. ಕೇಂದ್ರ ಸರ್ಕಾರದವರು ಯಾವ ರೀತಿ ಒಂದು ದರವನ್ನು ನಿಗಧಿಪಡಿಸಿ ಕೊಡುತ್ತಾರೆ. ಆ ರೀತಿ ಕೊಡುತ್ತಿದ್ದೇವೆ. ತಾವು ಹೇಳಿದ ಹಾಗೆ 4 ರೂಪಾಯಿ 45 ಪೈಸೆಗೆ ಮಾರಾಟ ಮಾಡುತ್ತಿಲ್ಲ, ಇದು ಸುಳ್ಳು ಎಂದು ಹೇಳತಕ್ಕಂಥದ್ದು ನಂಬುವುದಕ್ಕೆ ಕಷ್ಟ. ಆ ತರಹ ನಿಮಗೆ ಯಾವ ಸ್ಥಳದಲ್ಲಿ ಮಾರಾಟವಾಗುತ್ತಿದೆ ಎಂದು ತಿಳಿಸಿದರೆ ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಏನಾಗಿದೆ ಮಾನ್ಯ ಅಧ್ಯಕ್ಷರೆ, ಇವರು ಕೊಡುತ್ತಿರುವಂಥ ಅಕ್ಕಿಯನ್ನು ಜನ ತೆಗೆದುಕೊಳ್ಳುತ್ತಿಲ್ಲ ಅದು ಬೇರೆ ವಿಚಾರ. ಇಲ್ಲಿ ಪ್ರಶ್ನೆ ಇರತಕ್ಕಂಥಾದ್ದು ಎಲ್ಲಾ ಬೆಲೆಗಳು ಜಾಸ್ತಿಯಾಗಿದೆ. ಸಕ್ಕರೆ ಬೆಲೆಯನ್ನು ಕೇಂದ್ರ ಸರ್ಕಾರ ನಿಗಧಿ ಮಾಡುತ್ತದೆ ಎನ್ನುತ್ತೀರಿ ನೀವು ಬರೀ ಏಜೆನ್ಸಿಯೇ ಅದನ್ನು ಡಿಸ್ಟ್ರಿಬ್ಯೂಟ್ ಮಾಡುವುದಕ್ಕೆ? ನಮ್ಮಲ್ಲಿ ಸಕ್ಕರೆ ಕಾರ್ಖಾನೆಗಳಿಲ್ಲವೇನು? ಹಾಗಾದರೆ ನಾವೇನು ಅಷ್ಟೊಂದು ಹತಾಷರಾಗಿದ್ದೇವ್ರೋ ನಾಳೆ ಪ್ರಧಾನಮಂತ್ರಿಗಳು ಬರುತ್ತಿದ್ದಾರೆ ನೀವು ಸರ್ಕಾರದಿಂದ ಒಂದು ಮೆಮೊರ್‍ಯಾಂಡಮ್ ಅನ್ನು ಸಬ್‌ಮಿಟ್ ಮಾಡಿ. ಕಾಫಿ ಬೋರ್ಡ್ ನಮ್ಮದ್ದೇ ಇದೆ, ಕಾಫಿ ಬೋರ್ಡಿನ ಛೇರ್‌ಮನ್‌ರವರು ಪಿಡಿಎಸ್ ಮೂಲಕ ಕೊಡಲಿಕ್ಕೆ ತಯಾರಿದ್ದೇವೆ ಎಂದು ಹೇಳಿಕೆ ಕೊಟ್ಟಿದ್ದಾರೆ. ನಿಮಗೆ ತೆಗೆದುಕೊಂಡು ಮಾರಾಟ ಮಾಡಲಿಕ್ಕೆ ಏನು ತೊಂದರೆ? ಹೋಗಲಿ ನಾವು ಮಾಡುತ್ತೇವೆ ಎನ್ನತಕ್ಕ ಭರವಸೆಯನ್ನು ಕೊಡುವುದಕ್ಕೂ ಆಗುವುದಿಲ್ಲವೇ? ಇದುವರೆಗೆ ನೀವೇನು ಪ್ರಯತ್ನ ಮಾಡಿದ್ದೀರಿ?

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು : ಅದು ನಮ್ಮ ಸರ್ಕಾರದ ವ್ಯಾಪ್ತಿಯಲ್ಲಿ ಬಂದರೆ ನಾವು ಮಾಡಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕಾಫಿ ಬೆಲೆ ಬಹಳ ಜಾಸ್ತಿಯಾಗಿದೆ. ನೂರು ಗ್ರಾಂ ಕಾಫಿ ಪುಡಿ ಬೆಲೆ 18 ರೂಪಾಯಿ ಆಗಿದೆ. ಕಾಫಿ ಬೋರ್ಡು ನಿಯಂತ್ರಣವನ್ನು ಸಡಿಲ ಮಾಡಿದ ಮೇಲೆ ಕಾಫಿ ಪುಡಿಯ ಬೆಲೆ ಜಾಸ್ತಿಯಾಗಿದೆ. ಕಾಫಿ ಬೋರ್ಡಿನವರು ಹೇಳಿದ್ದಾರೆ. ನಾವು ಪಿಡಿಎಸ್.ಗೂ ಕೊಡುವುದಕ್ಕೆ ತಯಾರಿದ್ದೇವೆಂದು ಹೇಳಿದ್ದಾರೆ. ಎಸೆನ್‌ಷಿಯಲ್ ಕಮಾಡಿಟೀಸ್ ನಮಗೆ ಬರುವುದಿಲ್ಲವೆಂದು ಒಂದೇ ಕಾರಣದಿಂದ ನಾವು ಏನೂ ಮಾಡುವುದಕ್ಕಾಗುವುದಿಲ್ಲವೆಂದು ಸರ್ಕಾರ ಹೇಳಿದರೆ ಜನರು ಏನು ಮಾಡಬೇಕು? ನೀವು ಈ ವಿಷಯದ ಬಗ್ಗೆ ಸ್ವಲ್ಪ ಕ್ರಮ ತೆಗೆದುಕೊಳ್ಳಬೇಕು. ಎಲೆಕ್ಷನ್ ಇಯರ್ ಇರುವುದರಿಂದ ಏನಾದರೂ ಮಾಡಿ ನಾಳೆ ಪ್ರಧಾನ ಮಂತ್ರಿಗಳು ಬರುತ್ತಿದ್ದಾರೆ. 4.45ಕ್ಕೆ ಮಾರುತ್ತಿದ್ದೇವೆಂದು ಹೇಳುತ್ತಿದ್ದಾರೆ. ಪ್ರಧಾನ ಮಂತ್ರಿಗಳಿಗೆ ಮೆಮೋರ್‍ಯಾಂಡಂ ಆದರೂ ಸಬ್‌ಮಿಟ್ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾವು ಪ್ರತ್ಯೇಕವಾಗಿ ಮೆಮೋರ್‍ಯಾಂಡಂ ಅನ್ನು ಸಬ್‌ಮಿಟ್ ಮಾಡುತ್ತಿದ್ದೇವೆ. ಎರಡನೆಯದಾಗಿ, ಪಿಡಿಎಸ್. ಸಿಸ್ಟಂನಲ್ಲಿ ನಾವು ಎಲ್ಲಾ ಐಟಂಗಳನ್ನು ಅಂದರೆ ಅದರಲ್ಲಿ ಕಾಫಿ ಬರಬಹುದು, ಇನ್ನೊಂದು ಐಟಂ ಬರಬಹುದು. ಅದನ್ನು ಸ್ವಲ್ಪ ವ್ಯವಸ್ಥೆಯಿಂದ ಸರಬರಾಜು ಮಾಡುವುದಕ್ಕೆ ಸಮಸ್ಯೆ ಇತ್ತು. ಆ ಸಮಸ್ಯೆ ಹೀಗೇ ಉಳಿದರೆ ನಾವು ಸರ್ಕಾರ ಮಧ್ಯೆ ಪ್ರವೇಶಿಸಬೇಕಾಗುತ್ತದೆ. ಆಗ ಕಾಫಿ ಬೋರ್ಡ್ ಜೊತೆಗೆ ಸಮಾಲೋಚನೆ ಮಾಡಿ ಏನು ಮಾಡಬೇಕು ಅದನ್ನು ಮಾಡೋಣ.

ಅಧ್ಯಕ್ಷರು : ಬೈರೇಗೌಡರೇ, ತಮ್ಮ ಪ್ರಶ್ನೆ 363 ಮಾನ್ಯ ಸಚಿವರು ಕಾಲಾವಕಾಶ ಕೇಳಿದ್ದಾರೆ.

ಬೆಳಗಾಂ ನಗರ ಮತ್ತು ತಾಲ್ಲೂಕಿನಲ್ಲಿ ಬಸ್ಸುಗಳು ಕಡಿಮೆ ಇರುವ ಬಗ್ಗೆ

488 - ಶ್ರೀ ಬಿ.ಐ. ಪಾಟೀಲ್ (ಉಚ್ಚಗಾಂವ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ನಗರ ಸಾರಿಗೆ ಘಟಕದಲ್ಲಿ ವಾಹನಗಳ ಕೊರತೆಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬೆಳಗಾವಿ ನಗರ ಮತ್ತು ತಾಲ್ಲೂಕಿನಲ್ಲಿ ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ವಾಹನ ಕೊರತೆಯಿಂದಾಗಿ ಅನಾನುಕೂಲವಾಗುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸಾರ್ವಜನಿಕರ ಮತ್ತು ವಿದ್ಯಾರ್ಥಿಗಳ ಬೇಡಿಕೆಯನ್ನು ಪೂರೈಸಲು ವಾಹನ ಬಲ ಹೆಚ್ಚಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಮಂತ್ರಿಗಳು) :

ಅ) ಇಲ್ಲ

ಆ) ಇಲ್ಲ, ವಿಭಾಗ ಮತ್ತು ಘಟಕಗಳಲ್ಲಿ ಸಾಕಷ್ಟು ವಾಹನಗಳಿದ್ದು ಮತ್ತು ವಿಶೇಷವಾಗಿ ಬೆಳಗಾವಿ (ಗ್ರಾಮಾಂತರ) ಹಾಗೂ ಬೆಳಗಾವಿ (ನಗರ) ಘಟಕಗಳಲ್ಲಿ ಸಾಕಷ್ಟು ವಾಹನಗಳಿವೆ.

ಇ) ಉದ್ಭವಿಸುವುದಿಲ್ಲ.

SRI B.I. PATIL : As far as Belgaum district is concerned, you know the position. There is shortage of buses in Belgaum District and the City, but the answer given by the Minister is absolutely wrong and contrary to the reality. I met the Dvisional Controller just last week who told me that there is shortage of buses. Will you take action against the officers who have furnished this wrong information?

ಶ್ರೀ ಭೀಮಣ್ಣ ಖಂಡ್ರೆ : ಬೆಳಗಾಂಗೆ ಇದುವರೆಗೆ ಯಾವುದೂ ಕಡಿಮೆ ಇಲ್ಲ. ಒಟ್ಟು 678 ಷೆಡ್ಯೂಲ್‌ನಲ್ಲಿ 757 ಬಸ್‌ಗಳನ್ನು ಕೊಟ್ಟಿದ್ದೇನೆ. ಅದರಲ್ಲಿ ಸಿಟಿ ಬಗ್ಗೆ ಕೇಳಿದಾಗ ಸಿಟಿಗೆ 100 ಬಸ್ಸುಗಳು ಇವೆ. ಅದರಲ್ಲಿ 11.65 ಪರ್ಸೆಂಟ್‌ಗೂ ಹೆಚ್ಚು ಕೊಟ್ಟಿದ್ದೇವೆ. ಆ ದೃಷ್ಟಿಯಿಂದ ಯಾವುದೇ ರೀತಿಯಲ್ಲಿ ಬಸ್ಸುಗಳು ಕಡಿಮೆ ಇಲ್ಲ. ಸಾಕಷ್ಟು ಬಸ್ಸುಗಳನ್ನು ಕೊಟ್ಟಿದ್ದೇವೆ.

SRI B.I. PATIL : Last week we have discussed this issue. There is shortage of buses. The passengers on majority of routes are travelling on the roof tops. I will show you number of such instances. Will you send some higher officers of the KSRTC to assess the ground reality? Last week, the students and public made an agitation. the buses are not plying on time and passengers are made to wait for hours together. This is a serious problem. I want a categorical answer from the Minister.

ಶ್ರೀ ಭೀಮಣ್ಣ ಖಂಡ್ರೆ : ಈಗಾಗಲೇ ಉತ್ತರ ಹೇಳಿದ್ದೇನೆ. ಈಗ ಎಷ್ಟು ಬಸ್ಸುಗಳು ಬೆಳಗಾಂಗೆ ಬೇಕಾಗಿತ್ತು. ಅಷ್ಟು ಬಸ್ಸುಗಳನ್ನು ಕೊಟ್ಟಿದ್ದೇವೆ. ಆ ಡಿವಿಜನ್‌ಗೆ 678 ಷೆಡ್ಯೂಲ್‌ನಲ್ಲಿ 757 ಬಸ್ಸುಗಳನ್ನು ಕೊಟ್ಟಿದ್ದೇವೆ. Exclusively for the city of Belgaum there are 40 buses and 35 schedules.

ಅರ್ಬನ್ ಏರಿಯಾಗಳಿಗೆ 60 ಬಸ್ಸುಗಳು ಮತ್ತು 51 ಷೆಡ್ಯೂಲ್‌ಗಳು. ಈ ಪ್ರಕಾರ ಎಷ್ಟು ಬೇಕೋ ಅದಕ್ಕೂ ಹೆಚ್ಚು ಕೊಟ್ಟಿದ್ದೇವೆ. ಅದಲ್ಲದೆ ಸ್ಪೇರ್ ಕೂಡ ಇಟ್ಟಿದ್ದೇವೆ 11.65 ಪರ್ಸೆಂಟ್ ಮೊಫಿಸಲ್ ಏರಿಯಾಗಳಿಗೆ ಮತ್ತು ಸಿಟಿಗೆ 16.27 ಪರ್ಸೆಂಟ್ ಹೆಚ್ಚಿಗೆ ಇಟ್ಟಿದ್ದೇವೆ. ಅಲ್ಲಿ ಕಡಿಮೆಯಾಗುವ ಪ್ರಶ್ನೆ ಇಲ್ಲ. ಆ ರೂಟ್‌ನಲ್ಲಿ ಕಡಿಮೆಯಾಗುವುದಕ್ಕೆ ಸ್ಟೂಡೆಂಟ್ಸ್ ಬಿಡುವುದಿಲ್ಲ. ಪರಂತು ಇಲ್ಲಿ ಯಾವುದೂ ಕಡಿಮೆ ಇಲ್ಲ.

ಶ್ರೀ ಎಸ್.ಹೆಚ್. ಕೌಜಲಗಿ : ಮಂತ್ರಿಗಳು ಹೇಳಿದರು, ಬೆಳಗಾಂ ಜಿಲ್ಲೆಯಲ್ಲಿ ಬಸ್ಸಿನ ಕೊರತೆ ಇಲ್ಲ. ಎಷ್ಟು ರೂಟ್‌ಗಳು ಇವೆ ಅಷ್ಟು ರೂಟ್‌ಗಳಿಗೆ ಬಸ್ಸುಗಳನ್ನು

ಸಾಕಷ್ಟು ಒದಗಿಸಿದ್ದೇವೆಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದುದು. ಅಲ್ಲಿರತಕ್ಕ ಬಸ್ಸುಗಳು ಎಲ್ಲಾ ಹಳೆಯ ಬಸ್ಸುಗಳು. ಎರಡನೆಯದಾಗಿ, ಹೊಸ ಬಸ್ಸುಗಳನ್ನು ಬೆಳಗಾಂ ಜಿಲ್ಲೆಗೆ ಕೊಡುತ್ತಿಲ್ಲ. ಪ್ರತಿ ದಿವಸ ಸ್ಟ್ರೈಕ್ ಆಗುತ್ತಿದೆ. ವಿದ್ಯಾರ್ಥಿಗಳು ಮತ್ತು ಪಾಲಕರು ಕೂಡಿಕೊಂಡು ಸ್ಟ್ರೈಕ್ ಮಾಡುತ್ತಿದ್ದಾರೆ. ರೂಟ್ ಕೂಡ ಸ್ಟಾಪ್ ಮಾಡಿದ್ದರು. ಮುಖ್ಯ ಮಂತ್ರಿಗಳು ರೆವ್ಯೂ ಮಾಡುವ ಕಾಲಕ್ಕೆ ಕೆ.ಎಸ್.ಆರ್.ಟಿ.ಸಿ ಬಿಟ್ಟು ಬೇರೆ ಯಾವುದೇ ಒಂದು ಇಲಾಖೆ ಬಗ್ಗೆ ತಕರಾರು ಬರಲಿಲ್ಲ. ನಿಜವಾಗಿಯೂ ಬೆಳಗಾಂ ಜಿಲ್ಲೆಯಲ್ಲಿ ಕೆ.ಎಸ್.ಆರ್.ಟಿ.ಸಿ ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಇದರ ಬಗ್ಗೆ ಎಲ್ಲಾ ಶಾಸಕರು ಕೂಡಿಕೊಂಡು ಮುಖ್ಯ ಮಂತ್ರಿಗಳಿಗೆ ಹೇಳಿದೆವು. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲೇ ಹಾಜರಿದ್ದಾರೆ, ತಾವು ಬೇಕಾದರೆ ಕೇಳಬಹುದು. ನಮ್ಮ ಭಾಗಕ್ಕೆ ಹೆಚ್ಚಿಗೆ ಬಸ್ಸುಗಳು ಕೊಡಬೇಕು, ಬಸ್ಸುಗಳಿಗೆ ಟೈರ್, ಟ್ಯೂಬ್, ಸ್ಪೇರ್ ಪಾರ್ಟ್ಸ್ ಇಲ್ಲ. ಯಾವುದೇ ಡಿಪೋಗೆ ಹೋದರೆ 10-12 ಗಾಡಿಗಳು ಟೈರ್ ಟ್ಯೂಬ್ ಇಲ್ಲದೆ ನಿಂತಿರುತ್ತವೆ. ಇಲ್ಲಿ ಬೆಳಗಾಂ ಬಗ್ಗೆ ಹೇಳುವವರು ಇಲ್ಲ. ಏನೇನು ಬಸ್ಸು ಇಲ್ಲ ಹೊಸ ಬಸ್ಸುಗಳನ್ನು ಎಷ್ಟು ದಿನಗಳಲ್ಲಿ ಕೊಡಲು ಕ್ರಮ ಕೈಗೊಳ್ಳುತ್ತೀರೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಭೀಮಣ್ಣ ಖಂಡ್ರೆ : ನನ್ನಲ್ಲಿ ರಿಪೋರ್ಟ್ ಬಂದ ಪ್ರಕಾರ ಅಲ್ಲಿ ಸಾಕಷ್ಟು ಬಸ್ಸುಗಳು ಇವೆ. ಹಳೆಯವು ಅಥವಾ ಹೊಸವು ಇರುವುದು. ಹಳೆಯ ಬಸ್ಸುಗಳ ಬಗ್ಗೆ ಏನಾದರೂ ದೂರುಗಳು ಇದ್ದರೆ ಅದನ್ನು ಸರಿಪಡಿಸಬಹುದು. ಮತ್ತೇನಾದರೂ ಇದ್ದರೆ ನನ್ನ ಹತ್ತಿರ ಮಾತನಾಡಿ. ಅವಶ್ಯಕತೆ ಇದ್ದರೆ ನಾವು ಅದನ್ನು ನೋಡುತ್ತೇವೆ.

ಶ್ರೀ ಉಮೇಶ್ ವಿ. ಕಟ್ಟಿ : ಬೆಳಗಾಂ ಜಿಲ್ಲೆಯಲ್ಲಿ 40 ಪರ್ಸೆಂಟ್ ಷೆಡ್ಯೂಲ್ ಕಟ್ ಮಾಡಿದ್ದಾರೆಂದು ಡಿ.ಸಿ. ಅವರು ಹೇಳುತ್ತಾರೆ. ಆ ರೀತಿ ಕೆ.ಎಸ್.ಆರ್.ಟಿ.ಸಿ ಆದೇಶ ನೀಡಿದೆ ಎಂದು ಹೇಳುತ್ತಾರೆ. ಹಳ್ಳಿಯಲ್ಲಿ 40 ಪರ್ಸೆಂಟ್ ಬಸ್ಸುಗಳನ್ನು ಕಟ್ ಮಾಡಿದ್ದಾರೆ. ಕಟ್ ಮಾಡಿ ವಿದ್ಯಾರ್ಥಿಗಳಿಗೆ ಬಸ್ ಪಾಸ್ ಇಷ್ಯೂ ಮಾಡಿದ್ದಾರೆ. ಆ ಪ್ರಕಾರ ಬಸ್ಸುಗುಳು ಇಲ್ಲ. ನಾನ್ ಸ್ಟಾಪ್ ಬಸ್ಸುಗಳಿಗೆ ಪಾಸ್ ಇದ್ದವರು ಹತ್ತಬಾರದೆಂದು ಡಿ.ಸಿ. ಅವರು ಆರ್ಡರ್ ಇಷ್ಯೂ ಮಾಡಿಲ್ಲ. ವಿದ್ಯಾರ್ಥಿಗಳು ಕಲ್ಲು ತೂರುವುದು, ಧರಣಿ ಕೂಡುವುದು ಎಲ್ಲಾ ನಡೆಯುತ್ತಿದೆ. ಈ ಬಗ್ಗೆ ತಮ್ಮಲ್ಲಿ ಮಾಹಿತಿ ಇಲ್ಲದಿದ್ದರೆ ಪೊಲೀಸ್ ಇಲಾಖೆಯಿಂದ ಮಾಹಿತಿ ತರಿಸಿ. 40 ಪರ್ಸೆಂಟ್ ಷೆಡ್ಯೂಲನ್ನು ಕಟ್ ಮಾಡುವುದಕ್ಕೆ ಕಾರಣವೇನು? ಇನ್‌ಕಂ ಇಲ್ಲವೇ? ಯಾವ ದೃಷ್ಟಿಯಿಂದ 40 ಪರ್ಸೆಂಟ್ ಕಟ್ ಮಾಡಿದ್ದೀರಿ? ಬೆಳಗಾಂ ಡಿವಿಜನ್ ಮೊದಲಿನಿಂದ ಪ್ರಾಫಿಟಬಲ್ ಡಿವಿಜನ್. ಅಲ್ಲಿ ಲಾಸ್ ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಭೀಮಣ್ಣ ಖಂಡ್ರೆ : ಸ್ಟೂಡೆಂಟ್ಸ್ ಡಿಮ್ಯಾಂಡ್ ಮೇಲೆ ಬಸ್ಸುಗಳನ್ನು ಹಾಕುತ್ತಿದ್ದೇವೆ. ಬರೀ ಸ್ಟೂಡೆಂಟ್ಸ್‌ಗೆ ಕೊಡುವುದರಿಂದ 2 ರೂಪಾಯಿ ಒಂದು ಕಿಲೋಮೀಟರ್‌ಗೆ ಬರುವುದಿಲ್ಲ. ಅಂಥ ಪರಿಸ್ಥಿತಿಯಲ್ಲಿ ಕಟ್ ಮಾಡಿದ್ದೇವೆ. ವಾಸ್ತವಿಕವಾಗಿ ಜನರು ಎಲ್ಲಿ ಪ್ರವಾಸ ಮಾಡುತ್ತಿದ್ದಾರೆ, ಎಲ್ಲಿ ಪ್ರಯಾಣಿಕರು ಇದ್ದಾರೆ ಅಲ್ಲಿ ಕಟ್ ಆಗಿಲ್ಲ. ಎಲ್ಲಿ ಬರೀ ಸ್ಟೂಡೆಂಟ್ಸ್ ಇದ್ದಾರೆ, ಇನ್‌ಕಂ ಇಲ್ಲ ಅಂಥ ಕಡೆ ಆ ದೃಷ್ಟಿಯಿಂದ ಕಟ್ ಮಾಡುತ್ತಿದ್ದೇವೆ. ಅದು ಬಿಟ್ಟು ಬೇರೇನೂ ಇಲ್ಲ.

ಶ್ರೀ ಎಸ್.ಹೆಚ್. ಕೌಜಲಗಿ : ಇದು ಸರಿಯಲ್ಲ. ರೆಕಾರ್ಡ್ ತರಿಸಿ ನೋಡಿ. ಬೆಳಗಾಂ ಜಿಲ್ಲೆಯ ಬಗ್ಗೆ ಎಂಎಲ್‌ಎಗಳನ್ನು ಕೆ.ಎಸ್.ಆರ್.ಟಿ.ಸಿ ಸರಿಯಾಗಿ ನಡೆಯುತ್ತಿದೆಯೇ ಎಂದು ಕೇಳಿ. ಮುಖ್ಯ ಮಂತ್ರಿಗಳು ಬಂದಿದ್ದರು, ಅವರನ್ನು ಕೇಳಿ

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇಡೀ ರಾಜ್ಯದಲ್ಲಿ ಈ ಸಮಸ್ಯೆ ಇದೆ.

ಶ್ರೀ ಎಸ್.ಹೆಚ್. ಕೌಜಲಗಿ : ಸುಮಾರು 30 ಪರ್ಸೆಂಟ್ ಬಸ್ಸುಗಳನ್ನು ಕಟ್ ಮಾಡಿ ವಿದ್ಯಾರ್ಥಿಗಳಿಗೆ ಅಷ್ಟೇ ಅಲ್ಲ ಸಾರ್ವಜನಿಕರಿಗೂ ತೊಂದರೆ ಮಾಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಸಾರಿಗೆ ಸಂಸ್ಥೆ ಸಂಪೂರ್ಣವಾಗಿ ದಿವಾಳಿಯಾಗಿದೆ. ಇಡೀ ರಾಜ್ಯಾದ್ಯಂತ ತಮ್ಮ ಗಮನಕ್ಕೆ ತರುತ್ತಿದ್ದೇನೆ, ಖಾಸಗಿ ಬಸ್ಸುಗಳ ಹಾವಳಿ ಜಾಸ್ತಿಯಾಗಿದೆ. ಸರ್ಕಾರಿ ಬಸ್ಸುಗಳು ದಿವಾಳಿಯಾಗಿವೆ, ನಷ್ಟ ಅನುಭವಿಸುತ್ತಿವೆ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲೇ ಇದ್ದಾರೆ, ಅವರೇ ಹೇಳಲಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಸಮಸ್ಯೆ. ಈ ಬಗ್ಗೆ ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು : ಬೆಳಗಾಂ ಜಿಲ್ಲೆಯ ಬಗ್ಗೆ ಕೇಳಿದ್ದಕ್ಕೆ ಹೇಳಿದ್ದಾರೆ. ಇದು ಪ್ರಶ್ನೋತ್ತರ ಸಮಯ. ಲಕ್ಷ್ಮಣಯ್ಯನವರೇ, ತಾವು ತಮ್ಮ ಪ್ರಶ್ನೆ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ, ಅಲ್ಲಿ ವಿದ್ಯಾರ್ಥಿಗಳು ಚಳುವಳಿ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೂ ಪಾಸನ್ನು ಕೊಡಬೇಕು.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಲಕ್ಷ್ಮಣಯ್ಯನವರ ಪ್ರಶ್ನೆಯ ಜೊತೆಗೆ ನನ್ನದೂ ಇದೆ. ಎರಡನ್ನೂ ಕ್ಲಬ್ ಮಾಡಿ ತೆಗೆದುಕೊಳ್ಳಬಹುದು.

ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳನ್ನು ಖಾಸಗೀ ವ್ಯಕ್ತಿಗಳಿಗೆ ವಹಿಸಿಕೊಡುವುದು

25 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರಿ ಸ್ವಾಮ್ಯದಲ್ಲಿರುವ ಯಾವ ಯಾವ ಕೈಗಾರಿಕೆಗಳನ್ನು ಖಾಸಗಿಯವರಿಗೆ ವಹಿಸಿಕೊಡಲು ಸರ್ಕಾರ ನಿರ್ಧರಿಸಿರುತ್ತದೆ ಕಾರಣವೇನು?*

ಆ) *ಪ್ರತಿ ವರ್ಷ ಕೆಲವು ಕೈಗಾರಿಕೆಗಳು ನಷ್ಟ ಹೊಂದುತ್ತಿದ್ದರೂ ಅವುಗಳನ್ನು ನಷ್ಟದಿಂದ ಮುಕ್ತ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಸಾರ್ವಜನಿಕ ಉದ್ಯಮಗಳನ್ನು ಖಾಸಗೀಕರಣ ಗೊಳಿಸುವ ಬಗ್ಗೆ ಇನ್ನೂ ಅಂತಿಮ ತೀರ್ಮಾನವಾಗಿರುವುದಿಲ್ಲ.

ಆ) ನಿವ್ವಳ ಮೌಲ್ಯ ನಕಾರಾತ್ಮಕವಾಗಿರುವ ಸಾರ್ವಜನಿಕ ವಲಯದ ನಷ್ಟ ಅನುಭವಿಸುತ್ತಿರುವ ಉದ್ಯಮಗಳ ಪ್ರಕರಣಗಳನ್ನು ಬಿ.ಐ.ಎಫ್.ಆರ್. ಮುಂದೆ ಸಿಕ್ ಇಂಡಸ್ಟ್ರೀಯಲ್ ಕಂಪನೀಸ್ (ಸ್ಪೆಷಲ್ ಪ್ರಾವಿಷನ್ಸ್) ಆಕ್ಟ್‌ನಲ್ಲಿ ನಮೂದಿಸಿದಂತೆ ಹಾಗೂ ಇತರ ಸಂದರ್ಭದಲ್ಲೂ ತರಲಾಗುವುದು. ಸದರಿ ಘಟಕಗಳ ವಿದ್ಯಮಾನಗಳನ್ನು ಆಯಾ ನಿರ್ದೇಶಕ ಮಂಡಳಿಗಳಲ್ಲದೆ ಸರ್ಕಾರದ ಮಟ್ಟದಲ್ಲೂ ಸಹ ಅವಲೋಕಿಸಲಾಗುವುದು.

ಖಾಸಗಿ ವ್ಯಕ್ತಿಗಳಿಗೆ ಸರ್ಕಾರಿ ಉದ್ದಿಮೆಗಳ ಹಸ್ತಾಂತರ

110 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರಿ ಉದ್ದಿಮೆಗಳನ್ನು ಖಾಸಗಿಯವರಿಗೆ ಹಸ್ತಾಂತರ ಮಾಡಲು ಸರ್ಕಾರ ಆಲೋಚಿಸಿದೆಯೇ?

ಆ) ಈಗಾಗಲೇ ಹಸ್ತಾಂತರಿಸಿರುವ ಉದ್ದಿಮೆಗಳ ಸಂಖ್ಯೆ ಎಷ್ಟು?

ಇ) ಇಂತಹ ಸರ್ಕಾರಿ ಉದ್ದಿಮೆಗಳಿಗೆ ತೊಡಗಿಸಿದ ಶೇರು ಬಂಡವಾಳವನ್ನು ಹಸ್ತಾಂತರಿಸಲಾಗಿದೆಯೇ?

ಈ) ಷೇರು ಬಂಡವಾಳದ ಮೊತ್ತ ಎಷ್ಟು?

ಉ) ಇದರ ಆರ್ಥಿಕ ಪರಿಣಾಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಈ ಪ್ರಸ್ತಾವನೆ ಸರ್ಕಾರದ ಗಮನದಲ್ಲಿದೆ. ಕೂಲಂಕುಷವಾಗಿ ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು.

ಆ) ಇದುವರೆಗೂ ಯಾವ ಉದ್ದಿಮೆಯನ್ನು ಹಸ್ತಾಂತರ ಮಾಡಿಲ್ಲ.

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರಿ ಸ್ವಾಮ್ಯದಲ್ಲಿರುವ ಯಾವ ಯಾವ ಕೈಗಾರಿಕೆಯನ್ನು ಖಾಸಗಿಯವರಿಗೆ ವಹಿಸುವುದಕ್ಕೆ ಸರ್ಕಾರ ನಿರ್ಧರಿಸಿರುತ್ತದೆ ಎಂದು ಕೇಳಿರುವುದಕ್ಕೆ ಇನ್ನೂ ತೀರ್ಮಾನವಾಗಿರುವುದಿಲ್ಲ ಎಂದು ಹೇಳಿದ್ದೀರಿ. ಆದರೆ ಎಷ್ಟು ಕೈಗಾರಿಕೆಗಳನ್ನು ತಾವು ಖಾಸಗೀಕರಣ ಮಾಡುವುದಕ್ಕೆ ವಿಮರ್ಶೆ ಮಾಡುತ್ತಿದ್ದೀರಿ ಸ್ವಾಮಿ?

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, ಈಗ ಯಾವುದೇ ಕೈಗಾರಿಕೆಯನ್ನು ಖಾಸಗೀಕರಣ ಮಾಡತಕ್ಕ ಕ್ರಮ ನಾವು ತೆಗೆದುಕೊಂಡಿಲ್ಲ. ಖಾಸಗೀಕರಣ ಮಾಡಬೇಕೆಂಬ ದೃಷ್ಟಿಯಲ್ಲಿ ಇಲ್ಲಿಯವರೆಗೆ ಪ್ರಯತ್ನ ಕೂಡ ಮಾಡಲಿಲ್ಲ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೆ, ಎರಡನೇ ಪ್ರಶ್ನೆಗೆ ಪ್ರತಿವರ್ಷ ಕೆಲವು ಕೈಗಾರಿಕೆಗಳು ನಷ್ಟ ಹೊಂದುತ್ತಿದ್ದರೂ ಅವುಗಳನ್ನು ನಷ್ಟದಿಂದ ಮುಕ್ತ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಎಂಬುದಕ್ಕೆ ಬಿ.ಐ.ಎಫ್.ಆರ್. ಮುಂದೆ ಸಿಕ್ ಇಂಡಸ್ಟ್ರಿಯಲ್ ಕಂಪೆನೀಸ್ ಆಕ್ಟ್‌ನಲ್ಲಿ ನಮೂದಿಸಿದಂತೆ ಹಾಗೂ ಇತರ ಸಂದರ್ಭದಲ್ಲೂ ತರಲಾಗುವುದು ಎಂದು ಹೇಳಿದ್ದಾರೆ. ಸ್ವಾಮಿ, ಪ್ರತಿ ವರ್ಷ ಈ ಕೈಗಾರಿಕೆಗಳು, ಸರ್ಕಾರಿ ಸ್ವಾಮ್ಯದಲ್ಲಿರುವ ಕೈಗಾರಿಕೆಗಳು ನಷ್ಟ ಅನುಭವಿಸುತ್ತಿವೆ. ಈ ನಷ್ಟ ಅನುಭವಿಸುತ್ತಿದ್ದರೂ ಸರ್ಕಾರ ನಷ್ಟವಾಗುತ್ತಿದೆ ಎಂದು ಹೇಳುತ್ತಿದೆಯೇ ಹೊರತು ಏತಕ್ಕೆ ನಷ್ಟ ಆಯಿತು ಎಂಬುದನ್ನು ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಾ? ಮಾಡಿದ್ದರೆ ಯಾವ ತರಹ ಪ್ರಯತ್ನ ಮಾಡಿದ್ದೀರಿ? ಪ್ರತಿ ವರ್ಷ ಜಾಸ್ತಿ ಜಾಸ್ತಿ ನಷ್ಟವಾಗುವುದಕ್ಕೆ ಕಾರಣ ಏನು?

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಈಗ ಪ್ರತಿಯೊಂದು ಕೈಗಾರಿಕೆಗಳ ಸ್ಥಿತಿಗತಿಗಳನ್ನು ನಾವು ಆಗಾಗ ರೆವ್ಯೂ ಮಾಡುತ್ತಲೇ ಇದ್ದೇವೆ. ಕ್ಯಾಬಿನೆಟ್‌ಗೂ ಅನೇಕ ಬಾರಿ ಬರುತ್ತದೆ. ಮತ್ತು ಬಿ.ಐ.ಎಫ್.ಆರ್. ಕೇಸ್ ಎಲ್ಲಾದರೂ

ಹೋಗಿದ್ದರೆ ಅದನ್ನೂ ಕೂಡ ಯಾವ ರೀತಿ ವ್ಯವಹರಿಸಬೇಕು ಎಂಬ ಬಗ್ಗೆ ಕಾರ್ಯಕ್ರಮ ಮಾಡುತ್ತಿದ್ದೇವೆ. ನಷ್ಟ ಅನುಭವಿಸುವುದಕ್ಕೆ ಹಲವಾರು ಕಾರಣಗಳಿವೆ. ಮುಖ್ಯವಾಗಿ ಕೆ.ಎಸ್.ಆರ್.ಟಿ.ಸಿ. ಕೆ.ಎಸ್.ಆರ್.ಟಿ.ಸಿಯಲ್ಲಿ ಖಾಸಗಿಗಿಂತಲೂ ಜಾಸ್ತಿ ಟ್ಯಾಕ್ಸ್ ಸರ್ಕಾರಕ್ಕೆ ಅಲ್ಲಿದೆ. ಮತ್ತೆ ಅನ್‌ಎಕನಾಮಿಕಲ್ ರೂಟ್‌ಗಳನ್ನು ಕೂಡ ನಾವು ಸಾರ್ವಜನಿಕ ದೃಷ್ಟಿಯಿಂದ ನಡೆಸಬೇಕಾಗುತ್ತದೆ. ಸ್ಟೂಡೆಂಟ್ ಪಾಸ್ ಆಗಲೀ ಅಥವಾ ಬೇರೆ ಬೇರೆ ರೀತಿಯ ಪಾಸ್‌ಗಳನ್ನು ಕೊಡುವುದಕ್ಕೆ ಸುಮಾರು 85 ಕೋಟಿ ರೂಪಾಯಿ ಹೋಗುತ್ತಿದೆ.

ಎಕ್ಸ್‌ಪ್ರೆಸ್ ಬಸ್‌ಗೆ ಪಾಸ್ ಕೊಟ್ಟು ಅದರಿಂದ ನಷ್ಟವಾಗುತ್ತಿದೆ. ಸುಮಾರು 100-150 ಕೋಟಿ ರೂಪಾಯಿ ಪಾಸ್ ಮತ್ತಿತರ ಖರ್ಚುಗಳಿಗೇ ಹೋಗುತ್ತದೆ. ಬಹುಶಃ ಖಾಸಗಿಯವರಿಗೆ ಸಾಮಾಜಿಕ ಜವಾಬ್ದಾರಿ ಯಾವುದೂ ಇರುವುದಿಲ್ಲ. ಆದ್ದರಿಂದ ನಷ್ಟ ಕೆಲವು ಸಾರಿ ಅನ್ನಿಸುತ್ತದೆ ಈ ನಷ್ಟಗಳು ಸಾರ್ವಜನಿಕ ವ್ಯವಸ್ಥೆಯಲ್ಲಿ ಕೂಡ ಹೋಗುತ್ತದೆ. ಆದರೆ ಅದು ನೆಪ ಅಲ್ಲ. ನಾವು ಇದನ್ನು ಸರಿಯಾಗಿ ನಿರ್ವಹಿಸಬೇಕು ಎಂದು ಈಗಾಗಲೇ ಪ್ರತಿಯೊಂದು ಕೈಗಾರಿಕೆಗಳನ್ನು, ಸಾರ್ವಜನಿಕ ಉದ್ಯಮಗಳನ್ನು ನಾವು ಪರಿಶೀಲನೆಗೆ ಒಳಪಡಿಸಿದ್ದೇವೆ. ಅದನ್ನು ಯಾವ ರೀತಿಯಲ್ಲಿ ದುರಸ್ತಿಗೊಳಿಸಬೇಕು ನೋಡಿ ದುರಸ್ತಿಗೊಳಿಸುವುದಕ್ಕೆ ಸಾಧ್ಯತೆ ಇಲ್ಲದಂಥ ಸಂಸ್ಥೆಗಳು ಇರಬೇಕಾಗಿಲ್ಲ. ಅದನ್ನು ನಾವು ವಜಾ ಮಾಡುವಂಥ ಪರಿಸ್ಥಿತಿಯಲ್ಲಿದ್ದೇವೆ. ಆದ್ದರಿಂದ ಇದು ಬೇರೆ ಬೇರೆ ಹಂತದಲ್ಲಿದೆ. ಈಗ ಯಾವುದು ಖಾಸಗೀಕರಣ ಮಾಡಬೇಕು ಎಂದು ಹೇಳಿ, ಎನ್.ಜಿ.ಇ.ಎಫ್.ನ ಕೆಲವು ಷೇರುಗಳನ್ನು ಕೊಡಬೇಕೆಂದಿತ್ತು. ನಾವು ಹೇಳಿದೆವು ಅದನ್ನು ಕೂಡ ಖಾಸಗೀಕರಣ ಮಾಡುವುದು ಬೇಡ ಎಂದು. ಬಿ.ಎಚ್.ಇ.ಎಲ್ ಪ್ರೊಪೋಸಲ್ ನಮ್ಮ ಎಗ್ಸಾಮಿನೇಷನ್‌ನಲ್ಲಿದೆ. ತಮಗೆ ಗೊತ್ತಿದೆ ಅದು ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಒಳಪಡುವಂಥದ್ದು. ಎನ್.ಜಿ.ಇ.ಎಫ್ ಕೂಡ ಖಾಸಗೀಕರಣ ಮಾಡಬೇಕು ಎಂಬ ಪ್ರಸ್ತಾವ ಬಹಳ ಸಮಯದಿಂದ ಇತ್ತು. ಅದನ್ನು ಕೂಡ ಇವತ್ತು ಕೈಬಿಟ್ಟು ಬಿ.ಎಚ್.ಇ.ಎಲ್. ಪ್ರಸ್ತಾವವನ್ನು ಇವತ್ತು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೆ, ಕೆಲವು ವರ್ಷಗಳ ಹಿಂದೆ ನಮ್ಮ ರಾಜ್ಯದ ಸ್ವಾಮ್ಯದಲ್ಲಿರುವ ಕೈಗಾರಿಕೆಗಳು ಲಾಭದಲ್ಲಿದ್ದವು. ಕೆ.ಎಸ್.ಆರ್.ಟಿ.ಸಿ. ಬಿಡಿ. ಬೇರೆ ಫ್ಯಾಕ್ಟರಿಗಳು ಲಾಭದಲ್ಲಿ ಕೆಲಸ ಮಾಡುತ್ತಿದ್ದವು. ಇತ್ತೀಚಿನ ವರ್ಷಗಳಲ್ಲಿ ಈ ನಷ್ಟ ಆಗುತ್ತಿದೆ. ಖಾಸಗಿ ಫ್ಯಾಕ್ಟರಿಗಳು ಲಾಭ ಮಾಡುತ್ತಿವೆ. ಸರ್ಕಾರದ ಫ್ಯಾಕ್ಟರಿಗಳು ಲಾಸ್ ಆಗುವುದಕ್ಕೆ ಕಾರಣ ಏನು? ಇದಕ್ಕೆ ಆಡಳಿತ ಮಂಡಳಿಗೆ ಹಾಕತಕ್ಕ ಜನ ಈ ಕೈಗಾರಿಕೆಯಲ್ಲಿ ಆಸಕ್ತಿ ಇರತಕ್ಕವರನ್ನು ಹಾಕದೆ ಯಾರೋ ಐ.ಎ.ಎಸ್ ಅಧಿಕಾರಿಗಳನ್ನು ಅಲ್ಲಿ ಕೂರಿಸಿ ಈ ತರಹ ನಷ್ಟ ಆಗುವುದಕ್ಕೆ ಕಾರಣವಾಗಿದೆ ಎಂದು ಸಾರ್ವಜನಿಕ ಅಭಿಪ್ರಾಯ ಇದೆ. ಸರಿಯಾದಂಥ ರೀತಿಯಲ್ಲಿ ಒಳ್ಳೆಯ ಆಸಕ್ತಿ ಇರತಕ್ಕ ಜನರನ್ನು ಸರ್ಕಾರಿ ಕೈಗಾರಿಕೆಗಳಿಗೆ ಹಾಕಿದರೆ ಖಾಸಗಿಯವರು ಲಾಭ ಮಾಡಿದಂತೆ ಮಾಡುವುದಕ್ಕೆ ಏನೂ ತೊಂದರೆ ಇಲ್ಲ. ಮತ್ತೆ ಖಾಸಗಿಯವರಿಗೆ ಹಣಕಾಸಿನ ಅಡ್ಡಿಯಾದರೂ ಇರುತ್ತದೆ. ಸರ್ಕಾರಿ ಕೈಗಾರಿಕೆಗಳಿಗೆ ಹಣಕಾಸಿನ ಅಡ್ಡಿ ಏನೂ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಮೇನೇಜ್‌ಮೆಂಟ್ ವಿಚಾರ ಹೇಳಿದ್ದಾರೆ. ಆಡಳಿತದ ವಿಚಾರದಲ್ಲಿ ತಮಗೆ ಗೊತ್ತಿದೆ. ಮೇನೇಜಿಂಗ್ ಡೈರೆಕ್ಟರ್ ಬಿಟ್ಟರೆ ಎಲ್ಲಾ ಹಂತದಲ್ಲಿಯೂ ಕೂಡ ಪ್ರೊಫೆಷನಲ್ಸ್ ಮೇನೇಜರ್ಸ್ ಇರತಕ್ಕದ್ದು. ಅದಕ್ಕೆ ಯಾರೂ ಹೊರಗಿನವರನ್ನು ಕಳುಹಿಸುತ್ತಾ ಇಲ್ಲ. ಎಂಡಿ ಅಥವಾ ಛೇರ್ಮನ್ ಬದಲಾವಣೆ ಆಗುತ್ತಾರೆ. ಆದರೆ ಎಂ.ಡಿ. ಅಥವಾ ಛೇರ್ಮನ್ನಿಂದಲೇ

ಅದು ಕೆಟ್ಟುಹೋಗಿದೆ ಎಂದು ಹೇಳತಕ್ಕದ್ದು ಸರಿಯಲ್ಲ. ಏಕೆಂದರೆ ಐಎಎಸ್‌ನಲ್ಲೂ ಕೂಡ ಉತ್ತಮ ಮ್ಯಾನೇಜರ್ ಇದ್ದಾರೆ, ಉತ್ತಮ ಅಲ್ಲದಿರತಕ್ಕ ಮ್ಯಾನೇಜರ್ ಕೂಡ ಇರಬಹುದು. ಆದರೆ ಇವತ್ತು ವ್ಯವಸ್ಥೆ ಏನಾಗಿದೆ ಎಂದರೆ, ಇವತ್ತು ನಮ್ಮ ಕೈಗಾರಿಕೆಗಳು ಹಿಂದಿನ ಹಾಗೆ ಅಲ್ಲ. ಹಿಂದೆ ಬಹಳ ಪ್ರೊಟೆಕ್ಟೀವ್ ಅಂಬ್ರೆಲಾ ಕೆಳಗೆ ಎಲ್ಲಾ ಕೈಗಾರಿಕೆಗಳು ಇದ್ದವು. ಆದರೆ ಈಗ ಸಾಕಷ್ಟು ಸ್ಪರ್ಧೆ ಬಂದುಬಿಟ್ಟಿದೆ. ಸ್ಪರ್ಧೆಯಲ್ಲಿ ನಾವೂ ಕೂಡ ಸರಿಯಾಗಿ ಭಾಗವಹಿಸಬೇಕಾಗುತ್ತದೆ. ಹಿಂದಿನಹಾಗೆ ಪ್ರೊಟೆಕ್ಷನ್ ನಮಗೆ ಸಿಗುವುದಿಲ್ಲ. ಇನ್ನು ಸಾಲ ತೆಗೆದುಕೊಳ್ಳುವ ಪ್ರಶ್ನೆ ಬಂದಾಗ ಬ್ಯಾಂಕಿನವರು ಒಂದೇ ರೀತಿ ನೋಡುತ್ತಾರೆ. ಹಿಂದೆ ಬ್ಯಾಂಕಿನವರು ಸಾರ್ವಜನಿಕ ಉದ್ಯಮಗಳಿಗೆ ಸಂಬಂಧಪಟ್ಟ ಹಾಗೆ ಸ್ವಲ್ಪ ಉದಾರ ಮನಸ್ಸಿನಿಂದ ಮಾಡುತ್ತಿದ್ದರು. ಈಗ ಬ್ಯಾಂಕಿನವರು ಹಾಗೆ ಮಾಡುತ್ತಿಲ್ಲ. Unless it is commercially viable they don't give. ಅವರು ಬ್ಯಾಂಕಿನವರು ನಮಗೆ ಪ್ರತ್ಯೇಕವಾದ ಒಂದು ರಕ್ಷಣೆ ಕೊಡತಕ್ಕ ಪ್ರಶ್ನೆ ಈಗ ಇರುವುದಿಲ್ಲ. ಆದ್ದರಿಂದ ಐಡಿಬಿಐ ಆಗಲೀ, ಐಎಫ್‌ಸಿ ಆಗಲೀ, ಯಾವುದೇ ಸಾರ್ವಜನಿಕ ಹಣ ಹೂಡತಕ್ಕ ಸಂಸ್ಥೆಗಳು ಆಗಲೀ, ಈಗ ಅವು ಸರಿಯಾದ ರೀತಿಯಲ್ಲಿ ನಡೆಯುತ್ತವೆ ಎಂದರೆ ಮಾತ್ರ ಸಹಾಯ ಮಾಡುತ್ತಾರೆಯೇ ಹೊರತು ಇಲ್ಲದಿದ್ದರೆ ಸಹಾಯ ಮಾಡುವುದಿಲ್ಲ. ಆದ್ದರಿಂದ ಇವತ್ತು ನಮ್ಮ ಸಾರ್ವಜನಿಕ ಉದ್ಯಮಗಳು, ಕೈಗಾರಿಕೆಗಳು ಆಗಲೀ ಅವುಗಳ ಕಾಲಮೇಲೆ ಅವುಗಳು ನಿಂತು ಸ್ವಾವಲಂಬನೆಯಿಂದ ತಮ್ಮ ವ್ಯವಸ್ಥೆಯನ್ನು ಮಾಡತಕ್ಕ ಕಾಲ ಈಗ ಒದಗಿದೆ. ಆ ವ್ಯವಸ್ಥೆಯನ್ನು ಯಾರು ಮಾಡುವುದಿಲ್ಲ they will have no place. Even our State Public Undertakings. ಅದಕ್ಕೆ ಏನು ಮಾಡಬೇಕು? ಆ ಒಂದು ವ್ಯವಸ್ಥೆ ಬಗ್ಗೆ ನಾವು ಇವತ್ತು ಕಾರ್ಯಕ್ರಮ ಹಾಕಿಕೊಳ್ಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಬದಲಾದ ಆರ್ಥಿಕ ನೀತಿಯಿಂದಾಗಿ ಬಹುಶಃ ಈ ಪ್ರಶ್ನೆಗೆ ಉತ್ತರವನ್ನು ಕೊಡುವಾಗ ಪ್ರಸ್ತಾವನೆ ಸರ್ಕಾರದ ಗಮನದಲ್ಲಿದೆ ಎಂದು ಒಂದು ಮಾತನ್ನು ಹೇಳಿದ್ದಾರೆ. ಸಾರ್ವಜನಿಕ ಉದ್ಯಮಗಳನ್ನು ಸ್ಥಾಪಿಸಿದ ಉದ್ದೇಶ, ನಿರ್ವಹಣೆಯಲ್ಲಿರತಕ್ಕ ತೊಂದರೆ, ಅವುಗಳ ಕಾರ್ಯಸಾಧನೆ ಮತ್ತು ಎಲ್ಲಕ್ಕಿಂತಲೂ ಹೆಚ್ಚಾಗಿ ಹೇಳುವುದಾದರೆ ಅವುಗಳ ಭವಿಷ್ಯ ಹಾಗೂ ರಾಜ್ಯದ ಜನತೆಗೆ ಉದ್ಯೋಗಾವಕಾಶದಲ್ಲಿ ಆಗತಕ್ಕ ಪರಿಣಾಮ ಇವೆಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡು ಸುಮಾರು ಆರು ಸಹಸ್ರ ಕೋಟಿ ರೂಪಾಯಿಗಳ ಬಂಡವಾಳ ಹಾಕಿದ್ದೇವೆ. 1,62,000 ಸಾವಿರ ಜನ ಸಾರ್ವಜನಿಕ ಉದ್ಯಮಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಆ ಕಾರಣ ಈ ಉದ್ಯಮಗಳನ್ನು ಸರಿಪಡಿಸುವುದಕ್ಕೆ ಸಾರ್ವಜನಿಕ ಉದ್ಯಮ ವರದಿ ಎರಡು ವರದಿಗಳನ್ನು ಕೊಟ್ಟಿದೆ. ಈ ಎರಡೂ ವರದಿಗಳಲ್ಲಿ ಅವರು ಮಾಡಿರತಕ್ಕ ಶಿಫಾರಸ್ಸುಗಳನ್ನು ಸರ್ಕಾರ ಗಮನಿಸಿದೆಯೇ? ಹಾಗೂ ಹಾಗೆ ಗಮನಿಸಿದ್ದರೆ ಅದನ್ನು ಕಾರ್ಯಗತ ಗೊಳಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಚಂದ್ರೇಗೌಡರು ಹೇಳತಕ್ಕ ಸಾರ್ವಜನಿಕ ಉದ್ಯಮಗಳ ಸಮಿತಿಯ ಏನು ವರದಿಗಳು ಇವೆ ಅವುಗಳ ಬಗ್ಗೆ ತೀವ್ರವಾದ ಗಮನ ಕೊಟ್ಟು ಅವುಗಳ ಆಧಾರದ ಮೇಲೆಯೇ ಈಗ ನಾವು ಕೆಲಸವನ್ನು ಮಾಡುತ್ತಾ ಇರುವುದು. ಉದಾಹರಣೆಗೆ ಕಿಂಕೋ ಕಾರ್ಖಾನೆ ಇದೆ. ಅದು ತನ್ನ ಕಾಲಮೇಲೆ ತಾನು ನಿಲ್ಲುವುದಕ್ಕೆ ಆಗುವುದಿಲ್ಲ. ಇವತ್ತು ಹಾಸನ ವಿಭಾಗ ಮತ್ತು ಇಲ್ಲಿ ಇರತಕ್ಕದ್ದನ್ನು ಇವತ್ತು ಮುಚ್ಚಿ ಅಥವಾ ಅದರ ಅಸೆಟ್ಸ್‌ಗಳನ್ನು ಇವತ್ತು ಕೆಎಸ್‌ಆರ್‌ಟಿಸಿಗೆ ಕೊಡತಕ್ಕ ಕಾರ್ಯಕ್ರಮ, ಅದು ಆ ರೀತಿ ಇಟ್ಟುಕೊಂಡಿದ್ದೇವೆ. ಇನ್ನು ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ತಮಗೆ ಗೊತ್ತಿದ್ದ ಹಾಗೆ ಕಳೆದ 20-25 ವರ್ಷಗಳಿಂದ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈಗ ಅದನ್ನು ನಾವು

ಮುಂದುವರೆಸಿಕೊಂಡು ಹೋಗತಕ್ಕ ಪ್ರಶ್ನೆ ಇಲ್ಲ. ಈಗ ಅದನ್ನು ಮುಚ್ಚಲೇಬೇಕಾಗುತ್ತದೆ. ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮ ಏನಿದೆ ಅದನ್ನು ಉಳಿಸಿಕೊಳ್ಳತಕ್ಕದ್ದು ಅಪ್ರಸ್ತುತ ಎಂದು ಹೇಳಿ, ಏಕೆಂದರೆ ಅದು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಅದನ್ನು ಇವತ್ತು ಸಹಕಾರಿ ಕೇಂದ್ರ ಸಂಸ್ಥೆ ಮುಖಾಂತರ ಏನಾದರೂ ಮಾಡಬೇಕೆಂದು ಹೇಳಿ ಆ ವಿಚಾರ ಮಾಡುತ್ತಿದ್ದೇವೆ. ಅದೇ ಪ್ರಕಾರ ಕರ್ನಾಟಕ ಪಲ್ಪ್ ಉಡ್ ನಿಯಮಿತ ಏನಿದೆ ಅದಕ್ಕೆ ಇವತ್ತು ಸಾರ್ವಜನಿಕ ವಿರೋಧ ಇದೆ. ಆದ್ದರಿಂದ ಅದನ್ನೂ ಕೂಡ ಮುಂದುವರಿಸತಕ್ಕ ಒಂದು ವಿಚಾರ ಇಲ್ಲ. ಇನ್ನು ಮೈಸೂರು ಟೊಬ್ಯಾಕೋ ಕಂಪೆನಿಯನ್ನು ಮುಚ್ಚತಕ್ಕ ಕ್ರಮವನ್ನು ನಾವು ತೆಗೆದುಕೊಂಡಿದ್ದೇವೆ. ಕರ್ನಾಟಕ ಸಾಬೂನು ಮತ್ತು ಮಾರ್ಜಕನ್ಯ ನಿಯಮದ ಕೂಡಾ ಅದನ್ನು ಖಾಸಗೀಕರಣ ಮಾಡಬೇಕು ಎಂದು ಹಿಂದೆ ಪ್ರಸ್ತಾಪ ಇತ್ತು. ಈಗ ಅದು ಸ್ವಲ್ಪ ಅಭಿವೃದ್ಧಿಗೊಳ್ಳುತ್ತಿದೆ. ಅದನ್ನು ಪುನರುತ್ಥಾನ ಮಾಡುವುದಕ್ಕೆ ಕ್ಯಾಬಿನೆಟ್‌ನಲ್ಲಿ ಒಂದು ನಿರ್ಣಯ ತೆಗೆದುಕೊಂಡು ರೀಹ್ಯಾಬಿಲಿಟೇಷನ್ ಪ್ಯಾಕೇಜ್ ಅನ್ನೂ ಕೂಡ ಮಾಡಿ ನಾವು ಪುನಃ ಪರಿಶೀಲಿಸಿ ಪರಿಷ್ಕರಿಸಿ ಈಗ ನಾವು ಫೈನಾನ್ಷಿಯಲ್ ಇನ್‌ಸ್ಟಿಟ್ಯೂಷನ್ಸ್‌ಗೆ ಒಂದು ಯೋಜನೆಯನ್ನು ಕೂಡಾ ಕಳುಹಿಸುತ್ತಿದ್ದೇವೆ. ಇವೆಲ್ಲಾ ಒಂದು ಸ್ಟೇಜ್‌ಗಳಲ್ಲಿವೆ. ಆದ್ದರಿಂದ ಇವತ್ತು ನಾವು ಪ್ರತಿಯೊಂದು ಯೂನಿಟ್‌ನ್ನು, ಕೈಗಾರಿಕೆಯನ್ನು ಅವುಗಳ ಸಾಧಕಬಾಧಕಗಳನ್ನು ನಾವು ಪರಿಶೀಲಿಸಿ ಅವುಗಳನ್ನು ಪುನರುತ್ಥಾನ ಮಾಡಲಿಕ್ಕೆ ಏನೇನು ಸಾಧ್ಯ ಇದೆ, ಆ ಕಾರ್ಯಕ್ರಮಗಳನ್ನು ಇವತ್ತು ಕೈಗೊಳ್ಳುತ್ತಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸಾರ್ವಜನಿಕ ಉದ್ಯಮಗಳ ಸಮಿತಿ ಎರಡು ಬಾರಿ ತನ್ನ ಶಿಫಾರಸ್ಸು ಮಾಡಿದೆ. ಪ್ರಶ್ನೋತ್ತರ ಕಾಲ ಆದ್ದರಿಂದ ಆ ಶಿಫಾರಸ್ಸುಗಳ ವಿವರಕ್ಕೆ ನಾನು ಹೋಗುವುದಿಲ್ಲ. ಬಹಳ ಮುಖ್ಯವಾದುದು ಎಂದರೆ, ಮೇನೇಜ್‌ಮೆಂಟ್‌ನಲ್ಲಿ ಇರತಕ್ಕ ದೋಷ. ಅದಕ್ಕೆ ತಾಂತ್ರಿಕ ತಜ್ಞರನ್ನೇ ಮ್ಯಾನೇಜೀರಿಯಲ್ ಪೋಸ್ಟ್‌ಗೆ ಹಾಕಬೇಕು ಹಾಗೂ ಇವನ್ನು ಎಕನಾಮಿಕ್ ಯೂನಿಟ್ಸ್ ಆಗಿ ರನ್ ಮಾಡಬೇಕು ಆರ್ಥಿಕ ಸಾಮರ್ಥ್ಯದಿಂದ ಎನ್ನುವ ಮಾತನ್ನು ಒಪ್ಪಿಕೊಂಡು ತಾ 8.6.94ರ ಸಚಿವ ಸಂಪುಟದ ಸಭೆಯಲ್ಲಿ ಆದ ತೀರ್ಮಾನವನ್ನು ಶ್ರೀಮಾನ್ ಕಾನೂನು ಮಂತ್ರಿಗಳು ಪತ್ರಿಕೆಯವರಿಗೆ ಹೇಳುವಾಗ, ಎನ್‌ಜಿಇಎಫ್ ಸಂಸ್ಥೆಯಲ್ಲಿ ಶೇಕಡಾ 51ರಷ್ಟು ಷೇರುಗಳನ್ನು ಮಾತ್ರ ರಾಜ್ಯ ಸರ್ಕಾರ ಇಟ್ಟುಕೊಂಡು ಉಳಿದ ಷೇರನ್ನು ಬೇರೆಯವರಿಗೆ ಕೊಡತಕ್ಕ ಆಲೋಚನೆ ಮಾಡಿದ್ದೇವೆ ಎಂದು ಪತ್ರಿಕೆಗಳಿಗೆ ಹೇಳಿದ್ದಾರೆ. ಇದು ನಿಜವೇ? ಹಾಗಿದ್ದರೆ, ಎನ್‌ಜಿಇಎಫ್‌ನಲ್ಲಿ ಶೇಕಡಾ 51ರಷ್ಟು ಷೇರು ಉಳಿಸಿಕೊಳ್ಳಲು ಉದ್ದೇಶ ಏನೆಂದರೆ, ಅದು ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿ ಇದೆ ಎಂದು ಹೇಳುವುದಕ್ಕೆ ಮಾತ್ರ. 49 ಆದರೆ ಅದು ಖಾಸಗಿ ಆಗುತ್ತದೆ. ಆ ದೃಷ್ಟಿಯಿಂದ ಈ ರೀತಿ ನಿರ್ಣಯ 8.6.94ರ ಸಚಿವ ಸಂಪುಟದ ಸಭೆಯಲ್ಲಿ ತೀರ್ಮಾನ ಆಗಿತ್ತೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಈಗ ಬದಲಾವಣೆ ಆದಂತಹ ಗ್ಲೋಬಲ್ ಎಕಾನಮಿ ಅಥವಾ ನಮ್ಮ ರಾಷ್ಟ್ರದ ಎಕಾನಮಿ ಪ್ರಕಾರ ಮಾರುಕಟ್ಟೆ ಅಗ್ರೆಸೀವ್ ಕ್ಯಾಂಪೈನ ಆಗಬೇಕು. ಟೆಕ್ನಿಕಲ್ ಇನ್‌ಪುಟ್ ಬೇಕು. ಅಪ್‌ಟುಡೇಟ್ ಬಂಡವಾಳ ಅದಕ್ಕೆ ಬೇಕು. ಇಷ್ಟು ಬೃಹತ್ತಾಗಿ ನಾವು ಇವತ್ತು ಎನ್‌ಜಿಇಎಫ್‌ನ್ನು ನಾವು ಸಜ್ಜುಗೊಳಿಸದೇ ಇವತ್ತು ನಾವು ಸ್ಪರ್ಧೆಯಲ್ಲಿ ಉಳಿಯುವುದು ಬಹಳ ಕಷ್ಟ ಆಗುತ್ತದೆ. ಎನ್‌ಜಿಇಎಫ್ ಅಪ್ರಸ್ತುತ ಆಗುತ್ತದೆ. ಅದು ಒಳ್ಳೆಯ ಕಂಪೆನಿ. ಆ ಒಳ್ಳೆಯ ಕಂಪೆನಿಯನ್ನು ಸಫಲಗೊಳಿಸತಕ್ಕ ಪ್ರಯತ್ನದ ಬಗ್ಗೆ ಸಾಕಷ್ಟು ಎಕ್ಸರ್‌ಸೈಸ್ ಆಗುತ್ತಾ ಇದೆ. ಅವರು ಮೊದಲು ಖಾಸಗೀ ಸಂಸ್ಥೆಯವರೊಡನೆ ನೆಗೋಷಿಯೇಷನ್ಸ್ ಮಾಡುತ್ತಿದ್ದರು. ಆಗ ನಾವು ಹೇಳಿದೆವು. ನಮ್ಮ ಎನ್‌ಜಿಇಎಫ್‌ನ್ನು ಇವತ್ತು ಸಾರ್ವಜನಿಕ ಸ್ವಾಮ್ಯದಲ್ಲಿ ಉಳಿಸಿಕೊಳ್ಳಬೇಕಾಗುತ್ತದೆ. ಅದನ್ನು ಉಳಿಸಿಕೊಳ್ಳುವುದಕ್ಕೆ

ಏನು ಮಾಡಿದರೆ ಬರುತ್ತದೆ? ಅದಕ್ಕೆ ನಾವು ಹೇಳಿದೆವು. ಇವತ್ತು ಮಾರ್ಕೆಟಿಂಗ್. ಅಥವಾ ಬಂಡವಾಳ. ಅಥವಾ ಟೆಕ್ನಿಕಲ್. ಈ ಮೂರೂ ವಿಧದಲ್ಲಿ ಕೂಡಾ ನೀವು ಸಫಲಗೊಳಿಸದೇ ಇದ್ದರೆ ಎನ್‌ಜಿಇಎಫ್ ಉಳಿಸುವುದಕ್ಕೂ ಆಗುವುದಿಲ್ಲ, ಬೆಳೆಸಲಿಕ್ಕೂ ಆಗುವುದಿಲ್ಲ. ಆದ್ದರಿಂದ, ನಾವು ಏನು ಮಾಡಿದ್ದೇವೆ ಎಂದರೆ, ಆ ನಿರ್ಣಯದ ಪ್ರಕಾರ 51 ಪರ್ಸೆಂಟ್ ನಾವು ನಮ್ಮ ಷೇರ್ಸ್ ಉಳಿಸಿಕೊಂಡು ಉಳಿದ ಷೇರುಗಳನ್ನು ಬಿಹೆಚ್‌ಇಎಲ್ ಅವರ ಜೊತೆಯಲ್ಲಿ ಅವರು ಅದರ ಬಗ್ಗೆ ಹೆಚ್ಚು ಶಕ್ತಿಯನ್ನು ಕೊಡಲಿಕ್ಕೆ ನಾವು ಅದರ ಬಗ್ಗೆ ನೆಗೋಷಿಯೇಟ್ ಮಾಡಬಹುದು ಎಂದು ಹೇಳಿ ನಾವು ಕ್ಯಾಬಿನೆಟ್‌ನಲ್ಲಿ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಬೇರೆ ಯಾರಿಗೋ ಕೊಡಬೇಕೆಂದೂ ಏನೂ ಅಲ್ಲ. ಆ ಒಂದು ಆಫರ್ ಕೇವಲ ಬಿಹೆಚ್‌ಇಎಲ್‌ಗೆ ಮಾತ್ರ ಸಂಬಂಧಪಟ್ಟಂತೆ ಮಾತ್ರ.

ಬಿಹೆಚ್‌ಇಎಲ್‌ನವರ ಬಗ್ಗೆ ತಮಗೆ ಗೊತ್ತಿದೆ. ಅವರು ರೆಂಕೋ, ಕಿಂಕೋ ಅದನ್ನು ತೆಗೆದುಕೊಂಡಿದ್ದಾರೆ. ಬಹಳ ಚೆನ್ನಾಗಿ ನಡೆಸುತ್ತಿದ್ದಾರೆ. ಮತ್ತೆ ಪೋರ್ಸಲಿನ್ ಫ್ಯಾಕ್ಟರಿ ಇದೆ. ಅದನ್ನೂ ಬಹಳ ಚೆನ್ನಾಗಿ ತೆಗೆದುಕೊಂಡು ಹೋಗುತ್ತಿದ್ದಾರೆ. ಅದು ಇವತ್ತು ಕೇಂದ್ರದ ಸಾರ್ವಜನಿಕ ಸ್ವಾಮ್ಯದ ಕೈಗಾರಿಕೆ ಆದ್ದರಿಂದ ಪಬ್ಲಿಕ್ ಸೆಕ್ಟಾರ್ ಕಾನ್‌ಸೆಪ್ಟ್‌ನಿಂದ ಅದು ಹೊರಗಡೆಗೆ ಹೋಗುವುದಿಲ್ಲ. ರಾಜ್ಯದಿಂದ ಹೊರಗೆ ಹೋಗಬಹುದು. ಎನ್‌ಜಿಇಎಲ್ ಸದೃಢವಾಗಿ ಬೆಳೆಯಬೇಕಾದರೆ ಬಹುಶಃ ನಾವೇ ಉಳಿಸಿಕೊಳ್ಳುತ್ತೇವೆ, ನಾವೇ ಬೆಳೆಸುತ್ತೇವೆ ಎಂದರೆ ಅದು ಅಸಾಧ್ಯವಾದ್ದರಿಂದ, ಈಗಿನ ಬದಲಾವಣೆ ಅದಂತಹ ಒಂದು ಆರ್ಥಿಕ ಓಟದಲ್ಲಿ, ವೇಗದಲ್ಲಿ ಇದು ಅಸಾಧ್ಯವಾಗುತ್ತದೆ. ಆದ್ದರಿಂದ ಈ ಮಟ್ಟಿಗೆ ನಾವು ನಿರ್ಣಯ ತೆಗೆದುಕೊಂಡಿದ್ದೇವೆಯೇ ಹೊರತು ಯಾರಿಗೋ ಕೊಡಬೇಕು ಎಂದು ನಿರ್ಣಯ ತೆಗೆದುಕೊಳ್ಳಲಿಲ್ಲ.

ಶ್ರೀ ಸಿ. ಬೈರೇಗೌಡ : ಹಿಂದಿನ ಅಧಿವೇಶನದಲ್ಲಿ ನಾನು ವಿಶೇಷವಾದ ಚರ್ಚೆ ನಡೆಯಬೇಕು ಎಂದು ನಾನು ತಮ್ಮನ್ನು ಕೇಳಿದ್ದೆ. ಆದರೆ, ಅದಕ್ಕೆ ಅವಕಾಶವಾಗಲಿಲ್ಲ. ಈ ವಿಷಯವಾಗಿ ಹೆಚ್ಚಿನ ಅಭ್ಯಾಸ ಮಾಡಿರುವುದರಿಂದ, ದಯಮಾಡಿ ಕೆಲವು ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಕೊಡಬೇಕು.

12.00 ನೂನ್

ಅಧ್ಯಕ್ಷರು : ಈಗ ಬೇಡ, ಮತ್ತೆ ನಿಮಗೆ ಅವಕಾಶ ಕೊಡುತ್ತೇನೆ. ತಾವು ಅಭ್ಯಾಸ ಮಾಡಿದ್ದೀರಿ. ಏಕೆಂದರೆ, ಈಗ ಬೇರೆ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ. ಡಿಮ್ಯಾಂಡ್ ಮೇಲೆ ಮಾತನಾಡುವಾಗ ತಾವು ಹೇಳಿ. ನಾವು ಮತ್ತೆ ತಮಗೆ ಅವಕಾಶ ಕೊಡುತ್ತೇವೆ.

ಶ್ರೀ ಸಿ. ಬೈರೇಗೌಡ : ದಯಮಾಡಿ ನನ್ನ ಮೇಲೆ ಸ್ವಲ್ಪ ಕರುಣೆ ಇಡಿ. ಇವತ್ತು ಇದ್ದಂಥ ನನ್ನ ಪ್ರಶ್ನೆಯೂ ಮುಂದಕ್ಕೆ ಹೋಗಿದೆ.

ಅಧ್ಯಕ್ಷರು : ದಯವಿಟ್ಟು ಈಗ ಬೇಡ, ಕುಳಿತುಕೊಳ್ಳಿ.

ಬಯಲು ಸೀಮೆ ಅಭಿವೃದ್ಧಿ ಮಂಡಲಿ ಸ್ಥಾಪನೆ

107 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಬಂದೀಖಾನೆಗಳು, ನಾಗರೀಕ ರಕ್ಷಣೆ ಮತ್ತು ಮೈದಾನ ಪ್ರದೇಶಾಭಿವೃದ್ಧಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95ನೇ ಆಯವ್ಯಯದಲ್ಲಿ ರಾಜ್ಯದಲ್ಲಿ ಬಯಲು ಸೀಮೆ ಅಭಿವೃದ್ಧಿ ಮಂಡಳಿ, ಸ್ಥಾಪನೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೋ?

ಆ) ಹಾಗಿದ್ದಲ್ಲಿ ಅಂದಾಜು ವೆಚ್ಚ ಎಷ್ಟು?

ಇ) ಮುಖ್ಯ ಮಂತ್ರಿಗಳು ಒಂದೂವರೆ ವರ್ಷದ ಹಿಂದೆ ಸದರಿ ಮಂಡಳಿಯ ಬಗ್ಗೆ ಸುಗ್ರೀವಾಜ್ಞೆ ಹೊರಡಿಸುತ್ತೇನೆಂದು ಬೆಂಗಳೂರು ವಿಭಾಗದ ಶಾಸಕರ ಲೋಕಸಭೆಯ ಸದಸ್ಯರ ಮತ್ತು ಅಧಿಕಾರಿಗಳ ಸಮೀಕ್ಷೆ ಸಭೆಯಲ್ಲಿ ತಿಳಿಸಿದ್ದರೂ ಸಹಾ ನಿಧಾನವಾಗಲು ಕಾರಣವೇನು?

ಈ) ವಿನಾ ಕಾರಣ ನಿಧಾನ ಮಾಡುತ್ತಿರುವ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವರೇ?

ಡಾ|| ಆರ್.ಬಿ. ಚೌಧರಿ (ಬಂದೀಖಾನೆಗಳು, ನಾಗರೀಕ ರಕ್ಷಣೆ ಮತ್ತು ಮೈದಾನ ಪ್ರದೇಶಾಭಿವೃದ್ಧಿ ರಾಜ್ಯ ಮಂತ್ರಿಗಳು) :

ಅ) ಇದೆ

ಆ) 1994-95ನೇ ಸಾಲಿನಲ್ಲಿ ಬಯಲು ಸೀಮೆ ಅಭಿವೃದ್ಧಿ ಮಂಡಳಿಯನ್ನು 30 ಕೋಟಿ ರೂ.ಗಳ ವೆಚ್ಚದಲ್ಲಿ ರಚಿಸಲು ಸರ್ಕಾರವು ನಿರ್ಣಯಿಸಿದೆ. 1994-95ನೇ ಸಾಲಿನ ಆಯವ್ಯಯದಲ್ಲಿ ಇದಕ್ಕಾಗಿ 863 ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ಇ) ಬಯಲು ಸೀಮೆ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲು ಈಗ ಕಾರ್ಯ ನಿರ್ವಹಿಸುತ್ತಿರುವ ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಮತ್ತು ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ, ಇವುಗಳನ್ನು ಗಮನದಲ್ಲಿಟ್ಟುಕೊಂಡು, ಇತರೆ ಹಲವಾರು ಇಲಾಖೆಗಳಿಂದ ಮಾಹಿತಿ ಸಂಗ್ರಹಿಸಿ, ಕ್ರೋಢೀಕರಿಸಿ ಪರಿಶೀಲಿಸಬೇಕಾಗಿದ್ದರಿಂದ ಹೆಚ್ಚಿನ ಕಾಲಾವಕಾಶವಾಗಿದೆ. ಇತ್ತೀಚಿನ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಎರಡು ಸದನದಲ್ಲಿ "ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ವಿಧೇಯಕ 1994" ರನ್ನು ಮಂಡಿಸಲು ಅನುಮೋದನೆ ನೀಡಲಾಗಿದ್ದು ಈ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಉದ್ಭವಿಸುವುದಿಲ್ಲ

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷರೇ, ನನ್ನ ಅನುಮಾನ ಇಷ್ಟೆ. ಏಕೆಂದರೆ, ಸುಮಾರು ಒಂದೂವರೆ ವರ್ಷದಿಂದ ಈ ಫೈಲ್ ಫಾಲೋ ಆಫ್ ಮಾಡಿಕೊಂಡು ಬಂದಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಸುಮಾರು 60-70 ಸಲ ಆಶ್ವಾಸನೆ ಕೊಟ್ಟಿದ್ದಾರೆ. It is under the purview of the Parliamentary Affairs Minister. It is under print ಎಂದು ಗೊತ್ತಾಗುತ್ತದೆ. ಈ ಅಧಿವೇಶನದಲ್ಲಿಯೇ ಪಾಸ್ ಮಾಡುತ್ತೀರಾ ಎಂದು ಕೆಟಗಾರಿಕಲ್ ಆಗಿ ಭರವಸೆ ಬೇಕು.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಂತ್ರಿಮಂಡಲದ ಒಪ್ಪಿಗೆಯಾಗಿ, ಈ ಸಭೆಯ ಮುಂದೆ ಮಂಡಿಸುವುದಕ್ಕೆ ಸರ್ಕಾರ ಸಿದ್ಧವಾಗಿದೆ. ಈ ಅಧಿವೇಶನ ಮುಗಿಯುವುದರೊಳಗಾಗಿ, ಈ ಸಭೆಯ ಮುಂದೆ ಮಂಡಿಸುವುದಕ್ಕೆ ಸರ್ಕಾರ ಎಲ್ಲಾ ತಯಾರಿ ಮಾಡಿಕೊಳ್ಳುತ್ತಿದೆ.

ಶ್ರೀ ಎಂ.ವಿ. ವೆಂಕಟಪ್ಪ : ಸರ್ಕಾರದವರು ಮನಸ್ಸು ಮಾಡಿದರೆ ತಾನೇ ಪಾಸ್ ಆಗುವುದು.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ತಮ್ಮ ಮುಂದೆ ಮಂಡಿಸುತ್ತೇವೆ, ಅದನ್ನು ಪಾಸ್ ಮಾಡಿಕೊಡುವುದು ತಮಗೆ ಅಂದರೆ, ಈ ಮಹಾಸಭೆಗೆ ಬಿಟ್ಟಿದ್ದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಬಯಸುವುದೇನೆಂದರೆ, ಬಯಲು ಸೀಮೆ ಅಭಿವೃದ್ಧಿ ಮಂಡಳಿ ಬಂದಮೇಲೆ, ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಇದೆಯಲ್ಲಾ, ಅದು ಏನಾಗುತ್ತದೆ?

ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್‌ಗೆ ಬದಲಾಗಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ ಎಂದು ಮಾಡಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಬಯಲು ಸೀಮೆ ಬಂದಮೇಲೆ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್, ಇವೆಲ್ಲಾ ಮರ್ಜ್ ಆಗುತ್ತದೆ. ಇದು ವ್ಯಾಪಕವಾದಂಥ ಮತ್ತು ಸಮಗ್ರವಾದಂಥ ಕಾರ್ಯಕ್ರಮ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರ ಚುನಾವಣೆ

557 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಆಯ್ಕೆಯಾಗದೇ ಉಳಿದಿರುವಂತಹ ಗ್ರಾಮ ಪಂಚಾಯತ್‌ಗಳ ಸಂಖ್ಯೆ ಎಷ್ಟು (ಹೆಸರಿನೊಂದಿಗೆ ಸವಿವರ ನೀಡುವುದು)

ಆ) ಈ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಆಯ್ಕೆ ತಡೆವುಂಟಾಗಲು ಕಾರಣವೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಯವರು) :

ಅ) 23. ವಿವರ ಅನುಬಂಧದಲ್ಲಿ ನೀಡಲಾಗಿದೆ.

ಆ) ನಾಮ ನಿರ್ದೇಶನ ಸಲ್ಲಿಸದೆ ಇದ್ದುದರಿಂದ ಆಯ್ಕೆಯಾಗಿಲ್ಲ. ಬೆಳ್ತಂಗಡಿ ತಾಲ್ಲೂಕು ವೇಣೂರು ಮತ್ತು ಅಂಬೋಡಿ ಗ್ರಾಮ ಪಂಚಾಯತಿಗಳ ಚುನಾವಣೆ ಉಚ್ಛ ನ್ಯಾಯಾಲಯ ತಡೆಯಾಜ್ಞೆ ಇರುವುದರಿಂದ ನಡೆದಿರುವುದಿಲ್ಲ.

ಅನುಬಂಧ

ಕ್ರ.ಸಂ	ತಾಲ್ಲೂಕು	ಗ್ರಾ.ಪಂ.ಹೆಸರು	ಚುನಾವಣೆ ನಡೆಯದಿರುವ ಹುದ್ದೆಯ ಹೆಸರು	
			ಅಧ್ಯಕ್ಷರು	ಉಪಾಧ್ಯಕ್ಷರು
1.	ಕುಂದಾಪುರ	1) ಗೋಳಿಹೊಳೆ	ಆಗಿಲ್ಲ	ಆಗಿಲ್ಲ
		2) ಉಪ್ಪುಂದ	ಆಗಿಲ್ಲ	ಆಗಿಲ್ಲ
		3) ಆಲೂರು	ಆಗಿಲ್ಲ	ಆಗಿಲ್ಲ
		4) ಚಿತ್ತೂರು	ಆಗಿಲ್ಲ	ಆಗಿಲ್ಲ
		5) ಅಂಪಾರು	ಆಗಿಲ್ಲ	ಆಗಿಲ್ಲ
		6) ಕೊಲ್ಲೂರು	ಚುನಾವಣೆ ಆಗಿದೆ	ಆಗಿಲ್ಲ
		7) ತ್ರಾಸಿ	ಚುನಾವಣೆ ಆಗಿದೆ	ಆಗಿಲ್ಲ
2.	ಉಡುಪಿ	8) ಐರೋಡಿ	ಆಗಿಲ್ಲ	ಆಗಿಲ್ಲ
		9) ಬಾರ್ಕೂರು	ಆಗಿಲ್ಲ	ಆಗಿಲ್ಲ
		10) ವಡ್ಡರ್ಸೆ	ಆಗಿಲ್ಲ	ಆಗಿಲ್ಲ
		11) ಕುರ್ಕಾಲು	ಆಗಿಲ್ಲ	ಆಗಿಲ್ಲ
		12) ಕುಕ್ಕೆಹಳ್ಳಿ	ಆಗಿಲ್ಲ	ಚುನಾವಣೆ ಆಗಿದೆ
		13) ಎಲ್ಲೂರು	ಚುನಾವಣೆ ಆಗಿದೆ	ಆಗಿಲ್ಲ
3.	ಕಾರ್ಕಳ	14) ಬೆಳುವಾಯಿ	ಆಗಿಲ್ಲ	ಆಗಿಲ್ಲ
		15) ವಾರಂಗ	ಆಗಿಲ್ಲ	ಚುನಾವಣೆ ಆಗಿದೆ

4.	ಮಂಗಳೂರು	16) ಬೋಳಿಯಾರು	ಆಗಿಲ್ಲ	ಆಗಿಲ್ಲ
5.	ಬಂಟ್ವಾಳ	17) ರಾಯಿ	ಆಗಿಲ್ಲ	ಆಗಿಲ್ಲ
		18) ಕಡೇಶಾಲ್ಯ	ಚುನಾವಣೆ ಆಗಿದೆ	ಆಗಿಲ್ಲ
6.	ಸುಳ್ಯ	19) ಸಂಪಾಜ್	ಆಗಿಲ್ಲ	ಚುನಾವಣೆ ಆಗಿದೆ
7.	ಬೆಳ್ತಂಗಡಿ	20) ಬಾರ್ಯ	ಚುನಾವಣೆ ಆಗಿದೆ	ಆಗಿಲ್ಲ
		21) ಅಳಗಂಗಡಿ	ಚುನಾವಣೆ ಆಗಿದೆ	ಆಗಿಲ್ಲ
		22) ಮಿತ್ತಬಾಗಿಲು	ಚುನಾವಣೆ ಆಗಿದೆ	ಆಗಿಲ್ಲ
8.	ಪುತ್ತೂರು	23) ಸವಣೂರು	ಚುನಾವಣೆ ಆಗಿದೆ	ಆಗಿಲ್ಲ

ಶ್ರೀ ಪಿ. ಬಸವರಾಜ್ : ಅಧ್ಯಕ್ಷರೇ, ಗ್ರಾಮ ಪಂಚಾಯ್ತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ. ಇದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 23 ಗ್ರಾಮ ಪಂಚಾಯ್ತಿಗಳಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯಾಗಲಿಲ್ಲವೆಂದು ಉತ್ತರ ಬಂದಿದೆ. ಆದರೆ, ಕಳೆದ 25ನೇ ತಾರೀಖು ಎಲ್ಲಾ ಗ್ರಾಮ ಪಂಚಾಯ್ತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯಾಗಿದೆ. ಇದರಲ್ಲಿ, ನನ್ನ ಕ್ಷೇತ್ರದಲ್ಲಿ ಸುಮಾರು 4 ಗ್ರಾಮ ಪಂಚಾಯ್ತಿಗಳಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯಾಗಿದೆ. ಇದರಲ್ಲಿ ಒಂದು ಕಡೆಯಲ್ಲಿ, ಈಗ ಸರ್ಕಾರ ಹಿಂದುಳಿದವರ್ಗದವರಿಗೆ ಏನು ಮೀಸಲಾತಿಯನ್ನು ಕೊಟ್ಟಿದೆ, ಅದಕ್ಕೆ ವಿರುದ್ಧವಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯಾಗಿದೆ. ಅದು ಬಾರ್ಕೂರು ಪಂಚಾಯ್ತಿಯಲ್ಲಿ ಆಗಿದೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂದು ಕೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಈ 23 ಗ್ರಾಮ ಪಂಚಾಯಿತಿಗಳಲ್ಲಿ, 12 ಗ್ರಾಮ ಪಂಚಾಯಿತಿಗಳಲ್ಲಿ ಮಾತ್ರ ಉಪಾಧ್ಯಕ್ಷರ ಚುನಾವಣೆಯಾಗಲಿಲ್ಲ, ಅಧ್ಯಕ್ಷರ ಚುನಾವಣೆಯಾಗಲಿಲ್ಲ. ಆದರೆ, ಉಳಿದ ಗ್ರಾಮ ಪಂಚಾಯಿತಿಗಳೇನಿವೆ, ಅದರಲ್ಲಿ ಅಧ್ಯಕ್ಷರ ಚುನಾವಣೆಯಾಗಿದೆ, ಉಪಾಧ್ಯಕ್ಷರ ಚುನಾವಣೆಯಾಗಲಿಲ್ಲ. ಕೆಲವು ಕಡೆ ಉಪಾಧ್ಯಕ್ಷರ ಚುನಾವಣೆಯಾಗಿದೆ ಅಧ್ಯಕ್ಷರ ಚುನಾವಣೆಯಾಗಲಿಲ್ಲ. ಆದ್ದರಿಂದ, ಸೆಕ್ಷನ್ 47ರ ಪ್ರಕಾರ, ಇದಕ್ಕೆ ಒಂದು ತಾತ್ಕಾಲಿಕವಾದ ಏರ್ಪಾಡು ಮಾಡುವುದಕ್ಕೆ ಅವಕಾಶವಿದೆ. ಈ ಆದೇಶವನ್ನು ಕೊಟ್ಟು, ಗ್ರಾಮಪಂಚಾಯ್ತಿಗಳು ಆ ಕಡೆಯಲ್ಲೂ ಕೆಲಸಮಾಡುವ ಹಾಗೆ ಸೂಕ್ತವಾದ ಏರ್ಪಾಡು ಮಾಡುತ್ತೇವೆ. ಸನ್ಮಾನ್ಯ ಶಾಸಕರು ಹೇಳಿದರು, ಬಾರ್ಕೂರು ಪಂಚಾಯಿತಿಯಲ್ಲಿ ಮೀಸಲಾತಿಗೆ ವಿರುದ್ಧವಾಗಿ, ಅಧ್ಯಕ್ಷರ ಚುನಾವಣೆಯಾಗಿದೆ ಎಂದು ಹೇಳಿದರು. ಅದು ಕೋರ್ಟ್ ಮುಖಾಂತರ ಆಗಿದೆಯೋ ಏನೋ ಗೊತ್ತಿಲ್ಲ. ಅದರ ಬಗ್ಗೆ ಮಾಹಿತಿಯನ್ನು ತರಿಸಿ ನೋಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಹೈಕೋರ್ಟ್ ಜಡ್ಜ್‌ಮೆಂಟ್ ತಾವು ತರಿಸಿ. ಇಡೀ ರಾಜ್ಯದಲ್ಲಿ ವ್ಯಾಪಕವಾದ ಪರಿಣಾಮದಿಂದ ಈ ಸ್ಥಿತಿ ಇದೆ. ಬಾರ್ಕೂರು ಪಂಚಾಯಿತಿ ಒಂದೇ ಅಲ್ಲ. ಅನೇಕ ಪಂಚಾಯಿತಿಗಳಲ್ಲಿ, ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯಾಗದಿರುವಂತಾದ್ದು ಇದೆ, ನನ್ನ ಕ್ಷೇತ್ರದಲ್ಲಿಯೂ ಇದೆ. ಇದಕ್ಕೆ ಏನಾದರೊಂದು ವ್ಯವಸ್ಥೆಯಾಗಬೇಕು. ನ್ಯಾಯಾಲಯದಿಂದ ಬಂದಂಥ ತೀರ್ಪಿನ ಆಧಾರದ ಮೇಲೆ ಉಳಿದ ಪಂಚಾಯಿತಿಗಳಿಗೂ ಚುನಾವಣೆಯನ್ನು ಮಾಡುವುದಕ್ಕೆ ಸರ್ಕಾರ ಗಮನಿಸುತ್ತದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಉಚ್ಚ ನ್ಯಾಯಾಲಯದ ತೀರ್ಪನ್ನು ನಾವು ಪರಿಶೀಲನೆ ಮಾಡುತ್ತಾ ಇದ್ದೇವೆ. ಅದರ ಪ್ರಕಾರ ಏನು ಪರಿಣಾಮವಾಗುತ್ತದೆಂಬುದನ್ನು ನೋಡಿ, ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡುತ್ತೇವೆ.

ಶ್ರೀ ಪಿ. ಬಸವರಾಜ್ : ನ್ಯಾಯಾಲಯದ ಇಂಟರೀಯಮ್ ಆರ್ಡರ್ ಪ್ರಕಾರ ಚುನಾವಣೆ ನಡೆದಿದೆ. ಅದನ್ನು ತಡೆಗಟ್ಟುವುದಕ್ಕೆ ಸರ್ಕಾರ ಏನು ಸಿದ್ಧತೆ ಮಾಡಿದೆ ಅಥವಾ ಏನು ಮಾಡುತ್ತದೆ ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗಾಗಲೇ ಹೇಳಿದ ಪ್ರಕಾರ, ನ್ಯಾಯಾಲಯದ ತೀರ್ಪನ್ನು ಪರಿಶೀಲನೆ ಮಾಡುತ್ತೇವೆ, ಪರಿಶೀಲನೆ ಮಾಡಿದ ಮೇಲೆ ಸರ್ಕಾರ ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತದೆ.

ಅಪೇಕ್ಷಣಾ ರಹಿತ ಪತ್ರ ನೀಡಿಕೆ

489 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಶವಂತಪುರ ಹೋಬಳಿ, ಮೊಳಗಾಲ ಗ್ರಾಮದ ಸರ್ವೆ ನಂ. 46ರ 6ಎ-26ಗುಂಟೆ ಜಮೀನನ್ನು ಹರಿಜನ, ಗಿರಿಜನ ಮತ್ತು ಆರ್ಥಿಕ ಹಿಂದುಳಿದ ಮನೆ ನಿವೇಶನ ರಹಿತರ ಸಂಘದ ಪರವಾಗಿ ಗೃಹ ಮಂಡಳಿಗೆ ಬಡಾವಣೆ ಕಾಮಗಾರಿ ಕೈಗೊಳ್ಳಲು ತಕರಾರು ರಹಿತ ಪತ್ರ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಯಾವ ದಿನಾಂಕದಂದು ತಕರಾರು ಪತ್ರ ನೀಡಿದೆ.*

ಆ) *ಬೆಂಗಳೂರರು ಅಭಿವೃದ್ಧಿ ಪ್ರಾಧಿಕಾರವು ತನ್ನ : ಸಭೆಯ ಠರಾವು ಸಂಖ್ಯೆ: 102 :93,19.10.1992 ರಂದು ಉದ್ಯಾನ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗವನ್ನು ಬದಲಾಯಿಸುವಂತೆ ಶಿಫಾರಸ್ಸು ಮಾಡಿದ್ದನ್ನು ಲಕ್ಷಣರಾವ್ ವರದಿಯ ಆಧಾರದ ಮೇಲೆ 15.6.1993ರ ಸಭೆಯಲ್ಲಿ ಹಿಂತೆಗೆದುಕೊಳ್ಳಲು ತೀರ್ಮಾನಿಸಿದ್ದು ಸರಿಯೇ, ಹಾಗೂ ಇದರ ಔಚಿತ್ಯವೇನು, ಈ ವರದಿಗೂ ಸದರಿ ಸ್ವತ್ತಿಗೂ ಏನು ಸಂಬಂಧವಿದೆ.*

ಇ) *ಶ್ರೀ ಲಕ್ಷಣರಾವ್ ಸಮಿತಿ ವರದಿ ಸರ್ಕಾರ ಜಾರಿಗೊಳಿಸಿದ್ದು ಯಾವ ದಿನಾಂಕದಿಂದ*

ಈ) *ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಡಾಲರ್ ಯೋಜನೆಗೆ ಬದಲಿ ನಿವೇಶನ ನೀಡಲು ಬಿಳಿಕೇನಹಳ್ಳಿ ಗ್ರಾಮದ ಸರ್ವೆ ನಂ. 167ರ 56ಎ 34 ಗುಂಟೆ ಜಮೀನಿಗೆ ಉದ್ಯಾನ ವಲಯದಿಂದ ವಸತಿ ವಲಯಕ್ಕೆ ಶಿಫಾರಸ್ಸು ಮಾಡಿ ಜೂನ್ 94 ರಲ್ಲಿ ಸರ್ಕಾರಿ ಆದೇಶ ಪಡೆದಿದ್ದು ಹರಿಜನ, ಗಿರಿಜನರಿಗೆ ಮೊಳಗಾಲ ಗ್ರಾಮದ ಕೆರೆ ಸರ್ವೆ ನಂ. 46ರ ಕೇವಲ 6 ಎಕರೆ - 26 ಗುಂಟೆ ಜಮಿನಿಗೆ ಉದ್ಯಾನ ವಲಯದಿಂದ ವಸತಿವಲಯಕ್ಕೆ ಭೂ ಪರಿವರ್ತನೆಗೆ ಶಿಫಾರಸ್ಸು ಮಾಡದಿರುವುದು ಸರಿಯೇ?*

ಉ) *ಪರಿವರ್ತನೆಯ ಆದೇಶವನ್ನು ಯಾವಾಗ ನೀಡಲಾಗುವುದು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಕರ್ನಾಟಕ ಗೃಹ ಮಂಡಳಿಗೆ ಬಡಾವಣೆ ಕಾಮಗಾರಿ ಕೈಗೊಳ್ಳಲು ತಕರಾರು ರಹಿತ ಪತ್ರವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನೀಡಿರುವುದಿಲ್ಲ. ಆದರೆ ಸದರಿ ಜಮೀನನ್ನು ಸಂಘಕ್ಕೆ ಹಸ್ತಾಂತರಿಸಿರುವುದಕ್ಕೆ ಅಭ್ಯಂತರವಿಲ್ಲವೆಂದು ಬೆಂಗಳೂರು ಜಿಲ್ಲಾಧಿಕಾರಿಗಳಿಗೆ ದಿನಾಂಕ 1.12.93ರಂದು ತಿಳಿಸಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ದಿನಾಂಕ 19.10.92ರಂದು ನಡೆದ ಸಭೆಯ ವಿಷಯ ಸಂಖ್ಯೆ : 326 : 92ರಲ್ಲಿ ಬೆಂಗಳೂರು ಉತ್ತರ ತಾಲ್ಲೂಕ್ ಯಶವಂತಪುರ ಹೋಬಳಿ ಮಳಗಾಲ ಗ್ರಾಮದ ಸರ್ವೆ ನಂ. 46ರ 6ಎ-26 ಗುಂಟೆ ಜಮೀನಿನಲ್ಲಿ

ನಿವೇಶನಗಳನ್ನು ರಚಿಸಿ ಹರಿಜನ, ಗಿರಿಜನ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಹಂಚುವುದಕ್ಕಾಗಿ ಕರ್ನಾಟಕ ಗೃಹ ಮಂಡಳಿಯ ಪರವಾಗಿ ಉದ್ಯಾನವನ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ವಿಶೇಷ ಪ್ರಕರಣವೆಂದು ಪರಿಗಣಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು.

ತದನಂತರ ದಿನಾಂಕ 23.4.1993ರಂದು ಬಿಡಿಎ ಅಧ್ಯಕ್ಷರು ಮತ್ತು ಆಯುಕ್ತರು ಇತರ ಅಧಿಕಾರಿಗಳೊಂದಿಗೆ ಸ್ಥಳ ಪರಿವೀಕ್ಷಣೆ ಮಾಡಿದರು. ಪ್ರಸ್ತಾವಿತ ಪ್ರದೇಶವು ಮಳಗಾಲ ಗ್ರಾಮಕ್ಕೆ ಸೇರಿದ ಕೆರೆಯಂಗಳವಾಗಿದ್ದು, ವ್ಯಾಪಕಾಭಿವೃದ್ಧಿ ಯೋಜನೆಯಂತೆ ಉದ್ಯಾನವನಕ್ಕಾಗಿ ಮೀಸಲಿಟ್ಟಿದೆ. ಸರ್ಕಾರದ ಇತ್ತೀಚಿನ ನೀತಿಯಂತೆ ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿ ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಬೇರೆ ಉಪಯೋಗಗಳಿಗೆ ಬದಲಾಯಿಸುವಂತಿಲ್ಲ ಹಾಗೂ ನಗರ ಸುತ್ತ ಮುತ್ತಲಿನ ಪ್ರದೇಶದಲ್ಲಿ ಬರುವ ಸಣ್ಣ ಮತ್ತು ದೊಡ್ಡ ಕೆರೆಗಳನ್ನು ಜೀರ್ಣೋದ್ಧಾರ ಮತ್ತು ಸಂರಕ್ಷಣೆ ಮಾಡಲು ಶ್ರೀ ಲಕ್ಷ್ಮಣರಾವ್ ಕಮಿಟಿಯು ಶಿಫಾರಸ್ಸು ಮಾಡಿದ್ದು ಅದರಂತೆ ಈ ಕೆರೆಯನ್ನು ಉದ್ಯಾನ ವನವನ್ನಾಗಿ ಸಂರಕ್ಷಿಸಲು ಅರಣ್ಯ ಇಲಾಖೆಯ ವಶಕ್ಕೆ ನೀಡಲಾಗಿದೆ. ಅದರಂತೆ ಈ ಹಿಂದೆ ಪ್ರಾಧಿಕಾರವು ಭೂ ಉಪಯೋಗ ಬದಲಾವಣೆಗೆ ಮಾಡಿದ್ದ ಶಿಫಾರಸ್ಸು ಹಿಂತೆಗೆದುಕೊಳ್ಳಲು ದಿನಾಂಕ 15.6.93ರ ಸಭೆಯಲ್ಲಿ ನಿರ್ಣಯಿಸಿದೆ.

ಇ) ದಿನಾಂಕ 11.2.1988 ರಿಂದ ಜಾರಿಗೊಳಿಸಲಾಗಿದೆ.

ಈ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬಿಳೇಕನಹಳ್ಳಿ ಗ್ರಾಮದ ಕೆರೆಯಂಗಳದಲ್ಲಿ ಈಗಾಗಲೇ ಲೇಔಟನ್ನು ನಿರ್ಮಿಸಿದೆ ಎಂಬ ಕಾರಣದ ಮೇಲೆ ಲಕ್ಷ್ಮಣರಾವ್ ಸಮಿತಿಯ ವರದಿಯಲ್ಲಿ ಬಿಳೇಕನಹಳ್ಳಿ ಕೆರೆಯನ್ನು ಅಭಿವೃದ್ಧಿ ಪಡಿಸಲು ಶಿಫಾರಸ್ಸು ಮಾಡಿರುವುದಿಲ್ಲ. ಬಿಳೇಕನಹಳ್ಳಿ ಗ್ರಾಮದ ಸರ್ವೆ ನಂ. 167ರ 56 ಎಕರೆ 34 ಗುಂಟೆ ಪ್ರದೇಶವು ಕೆರೆ ಅಂಗಳ ಪ್ರದೇಶದಲ್ಲಿದ್ದು ಅಲ್ಲಿ ಬಿಡಿಎಯು ಈಗಾಗಲೇ ನಿವೇಶನವನ್ನು ರಚಿಸಿ ಹಂಚಿಕೆ ಮಾಡಲಾಗಿದ್ದು ಹಂಚಿಕೆದಾರರಿಗೆ ಅನಾನುಕೂಲವಾಗದಿರಲೆಂಬ ಕಾರಣದಿಂದ ಭೂ ಉಪಯೋಗ ಬದಲಾವಣೆಗೆ ಶಿಫಾರಸ್ಸು ಮಾಡಿದ್ದನ್ನು ಒಪ್ಪಿ ಮಂಜೂರಾತಿ ನೀಡಿದೆ

ಉ) ಯಶವಂತಪುರ ಹೋಬಳಿ ಮೊಳಗಾಲ ಗ್ರಾಮದ ಸರ್ವೆ ನಂ. 46ರ 6 ಎಕರೆ 26 ಗುಂಟೆ ಪ್ರದೇಶದ ಭೂ ಉಪಯೋಗ ಬದಲಾವಣೆಯ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದ್ದು ಆದಷ್ಟು ಬೇಗನೆ ತೀರ್ಮಾನ ತೆಗೆದುಕೊಳ್ಳಲಾಗುವುದು.

ಶ್ರೀ ಆರ್. ನಾರಾಯಣ್ (ಶ್ರೀ ಟಿ.ಬಿ. ಜಯಚಂದ್ರ ಅವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಯಶವಂತಪುರ ಹೋಬಳಿ, ಮೊಳಗಾಲ ಗ್ರಾಮದ ಸರ್ವೆ ನಂ. 46ರಲ್ಲಿ 6 ಎಕರೆ 26 ಗುಂಟೆ ಜಮೀನನ್ನು, ಸರ್ಕಾರದವರೇ, 1975ರಲ್ಲಿ, ಹರಿಜನ ಗಿರಿಜನರು, ಆರ್ಥಿಕವಾಗಿ ಹಿಂದುಳಿದವರಿಗೆ ಮನೆ ಕಟ್ಟುವುದಕ್ಕೋಸ್ಕರ ಮಂಜೂರ್ಮಾಡಿದೆ. ಮತ್ತೆ ಅದಕ್ಕೆ ಕನ್‌ವರ್ಷನ್ ಫೀ ಕೂಡ ಕೊಟ್ಟಿದೆ. ಕೆರೆ ಅಂಗಳ ಎಂಬ ಕಾರಣದ ಮೇಲೆ, ಅದನ್ನು ಉದ್ಯಾನವಲಯಕ್ಕೆ ಮೀಸಲಿಟ್ಟಿದ್ದಾರೆ ಎಂಬ ಹಿನ್ನೆಲೆಯಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡ್‌ಗೆ ಹ್ಯಾಂಡ್ ಓವರ್ ಮಾಡಿದರು. ಅವರು ಲೇಔಟ್ ಮಾಡತಕ್ಕ ಸಂದರ್ಭದಲ್ಲಿ, ಇತ್ತೀಚಿಗೆ, ಲಕ್ಷಣ ರಾವ್ ಕಮಿಟಿ ವರದಿ ಪ್ರಕಾರ, ಎಲ್ಲಾ ಕೆರೆಗಳನ್ನೂ ಉದ್ಯಾನವನ ಮಾಡಬೇಕೆಂಬ ಹಿನ್ನೆಲೆಯಲ್ಲಿ, ಅದನ್ನು ಉದ್ಯಾನವಲಯದಿಂದ ವಸತಿ ವಲಯಕ್ಕೆ ಪರಿವರ್ತನೆ ಮಾಡಲು ಬಿ.ಡಿ.ಎ.ದಿಂದ ಶಿಫಾರಸ್ ಬಂದಿದೆ. ಅದು ಸರ್ಕಾರದ ಕನ್‌ಸಿಡರೇಷನ್‌ನಲ್ಲಿ ಇದೆಯೆಂದು ಹೇಳಿದ್ದೀರಿ. ಈ ಕೆರೆಯನ್ನು ಬ್ರೀಚ್ ಮಾಡಬೇಕೆಂದು 1991ರಲ್ಲಿ ಸರ್ಕಾರ, ಇದಕ್ಕೆ ಸಂಬಂಧಪಟ್ಟ ಪರ್ಮಿಷನ್ ಕೊಡಕೊಟ್ಟಿದೆ. ಇದು ಹರಿಜನರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಸೇರಿರುವುದರಿಂದ,

ಸರ್ಕಾರ ಉದ್ಯಾನವಲಯದಿಂದ, ವಸತಿ ವಲಯಕ್ಕೆ ಪರಿವರ್ತನೆ ಮಾಡುವ ಬೇಡಿಕೆ ಇರುವುದರಿಂದ, ಖಚಿತವಾಗಿ, ಇದನ್ನು ಉದ್ಯಾನವಲಯದಿಂದ ವಸತಿ ವಲಯಕ್ಕೆ ಪರ್ಮಿಷನ್ ಕೊಡುತ್ತೇವೆಂಬ ಭರವಸೆಯನ್ನು ಮಾನ್ಯಮುಖ್ಯಮಂತ್ರಿಗಳು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಇದು ಎರಡು ಜಮೀನಿಗೆ ಸಂಬಂಧಪಟ್ಟ ವಿಚಾರ. ಒಂದು ಮಾಳಗಾಲ ಮತ್ತೊಂದು ಬಿಳಿಕಲ್ಲು. ಬಿಳೀಕಲ್ಲಿಗೆ ಸೇರಿದ 56ಎಕರೆ, ಇದು ಲೇಔಟ್ ಕ್ಲಿಯರ್ ಮಾಡಿದ್ದಾರೆ. 1986ರಲ್ಲಿ ನಿವೇಶನವನ್ನು ಕೂಡ ಹಂಚಲಾಗಿದೆ. ಇದರಲ್ಲಿ ಸುಮಾರು ಒಟ್ಟು 600 ನಿವೇಶನ ಮಾಡಿದ್ದಾರೆ. ಈಗಾಗಲೇ ಹೈಕೋರ್ಟ್ ಸ್ಟೇ ಇರುವುದರಿಂದ, ಈ ಜಾಗವನ್ನು ಉಪಯೋಗ ಮಾಡಬಾರದೆಂದು ಹೇಳಿದ್ದಾರೆ. ಏಕೆಂದರೆ, ಅದನ್ನು ಪಾರ್ಕ್‌ಗೆ ನಿಗದಿ ಮಾಡಲಾಗಿದೆ. ಮತ್ತು ಸಿ.ಡಿ.ಪಿ. ಪ್ರಕಾರ ಇದನ್ನು ಚೇಂಜ್ ಆಫ್ ಲ್ಯಾಂಡ್ ಯೂಸ್, ಪಾರ್ಕ್ ಎಂದು, ಓಪನ್ ಸ್ಪೇಸ್ ಒಂದು ಹೇಳಿದೆ. ಇದನ್ನು ವಸತಿ ವಲಯಕ್ಕೆ ಕನ್‌ವರ್ಟ್ ಮಾಡಕೂಡದು, ಈ ವಿಚಾರದಲ್ಲಿ ಸ್ಟೇ ಇದೆ. ಆದುದರಿಂದ, ಇದು ಸದ್ಯ ಹಾಗೆಯೇ ಉಳಿದಿದೆ. ಮತ್ತು ಮಾಳಗಾಲಕ್ಕೆ ಸಂಬಂಧಪಟ್ಟಿದ್ದು ಸರ್ವೆ ನಂ. 46ರಲ್ಲಿ 6 ಎಕರೆ 26 ಗುಂಟೆ ಇದೆ. ಇದೂ ಕೂಡ ಸರ್ಕಾರದ ಸ್ವಾಧೀನದಲ್ಲಿದೆ. ಹಿಂದೆ ಇದರ ಬಗ್ಗೆ ಏನು ಪರ್ಮಿಷನ್ ಕೊಟ್ಟಿದ್ದೇವೆ, ಅದನ್ನು ಹಾಗೆಯೇ ತಡೆಹಿಡಿದಿದ್ದೇವೆ.

ಶ್ರೀ ಆರ್. ನಾರಾಯಣ್ : ಚೇಂಜ್ ಮಾಡುವುದು ಬೇಡ, ಆ ಭೂಮಿ ಉಪಯೋಗ ಮಾಡುವುದು ಬೇಡವೆಂದು ಪರ್ಮಿಷನ್ ವಿತ್‌ಹೆಲ್ಡ್ ಮಾಡಿದ್ದೀರಿ. ಮತ್ತೆ ಕನ್‌ಸಿಡರೇಷನ್‌ನಲ್ಲಿದೆ ಎಂದು ಹೇಳುತ್ತೀರಿ. ಅದು ಬಡವರಿಗೆ, ಹರಿಜನ ಗಿರಿಜನರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಅನುಕೂಲವಾದ ಜಾಗ. ಮತ್ತೆ ಸರ್ಕಾರದವರೇ ಆ ಕೆರೆಯನ್ನು ಬ್ರೀಚ್ ಮಾಡಬೇಕೆಂದು ಹೇಳುತ್ತಾರೆ ಮತ್ತು ಆ ಟ್ಯಾಂಕ್ ಏರಿಯಾವನ್ನು ಗ್ರಾಂಟ್ ಮಾಡಿರುತ್ತಾರೆ. ಈ ಎಲ್ಲಾ ಹಿನ್ನೆಲೆಯಲ್ಲಿ, ದಯಮಾಡಿ, ತಾವು ಚೇಂಜ್ ಆಫ್ ಲ್ಯಾಂಡ್ ಯೂಸ್‌ಗೆ ಪರ್ಮಿಷನ್ ಕೊಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ವಿಚಾರ ಮಾಡುತ್ತೇನೆ.

ನಂಜನಗೂಡು ಗ್ರಾಮೀಣ ಕುಡಿಯುವ ನೀರಿನ ಯೋಜನೆ

503 - ಶ್ರೀ ಎಂ. ಮಹದೇವು (ನಂಜನಗೂಡು) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಂಜನಗೂಡು ಗ್ರಾಮಾಂತರ ಕುಡಿಯುವ ನೀರು ಯೋಜನೆಯಡಿಯಲ್ಲಿ ಬರುವ ಮಾದನ ಹಳ್ಳಿಗುಡ್ಡ,ಮಲ್ಲೂರು ಗುಡ್ಡ ಹಾಗೂ ಕಡಜಟ್ಟಿಗುಡ್ಡ ಗಳಿಗೆ ಸರ್ಕಾರ ಕಾಮಗಾರಿಗಳನ್ನು ತೆಗೆದುಕೊಳ್ಳದೇ ಇರುವುದಕ್ಕೆ ಕಾರಣವೇನು?

ಆ) ಈ ವಿಷಯದಲ್ಲಿ ಮುಖ್ಯಮಂತ್ರಿಯವರು ವಿಧಾನಸಭೆಯಲ್ಲಿ ಮಂಜೂರಾತಿ ಬಗ್ಗೆ ಆಶ್ವಾಸನೆ ನೀಡಿರುವುದು ನಿಜವೇ?

ಇ) ಹಾಗಿದ್ದಲ್ಲಿ ಈ ಕಾಮಗಾರಿಯನ್ನು ಯಾವಾಗ ತೆಗೆದುಕೊಳ್ಳಲಾಗುವುದು. ಹಾಗೂ ಈ ಯೋಜನೆಗೆ ಕಾಲಾವಧಿಯನ್ನು ನಿಗದಿಗೊಳಿಸಲಾಗಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ : 159 : ಗ್ರಾನೀಸ್ (1)90 ಬೆಂಗಳೂರು ದಿ : 10-1-91 ರಲ್ಲಿ ಈ ಮೂರು ಪ್ರಾಂತೀಯ ನೀರು

ಸರಬರಾಜು ಯೋಜನೆಗಳಿಗೆ ರೂ. 580.00 ಲಕ್ಷಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ಸರ್ಕಾರದ ವವತಿಯಿಂದ ನೀಡಲಾಗಿತ್ತು. ಈ ಪ್ರಾಂತೀಯ ಯೋಜನೆಯಲ್ಲಿ ಒಂದಾದ ಮಾದನ ಹಳ್ಳಿ ಗುಡ್ಡದಲ್ಲಿ ಜಲಸಂಗ್ರಹಾಲಯವನ್ನೊಳಗೊಂಡ ಕಬಿನಿ ನದಿಯ ದಡದಲ್ಲಿರುವ 16 ಗ್ರಾಮಗಳಿಗೆ ರೂ. 200.00 ಲಕ್ಷಗಳ ಪ್ರಾಂತೀಯ ನೀರು ಸರಬರಾಜು ಯೋಜನೆಯ ಅಂದಾಜು ವೆಚ್ಚದ ಮೂರನೆಯ ಒಂದು ಭಾಗದಷ್ಟು ಅಂದರೆ, ರೂ. 67.00 ಲಕ್ಷಗಳಿಗೆ ಸರ್ಕಾರದ ಆದೇಶ ಸಂಖ್ಯೆ ಅಇ:43:ಜಿ.ಪಣ : 92 ದಿ: 19-2-92ರಲ್ಲಿ ಸರ್ಕಾರವು ಬಿಡುಗಡೆ ಮಾಡಲಾಗಿತ್ತು. ಹಾಗೂ ಸದರಿ ಯೋಜನೆಯನ್ನು ನಿರ್ವಹಿಸಲು ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ವಹಿಸಿಕೊಡಲಾಗಿತ್ತು. ಈ ಯೋಜನೆಯ ಸಮೀಕ್ಷೆ ಕಾರ್ಯವನ್ನು ಮಂಡಳಿಯವರು ಕೈಗೆತ್ತಿಕೊಂಡಿದ್ದಾಗ ಸ್ಥಳೀಯ ಶಾಸಕರು ಇನ್ನೂ 8 ಗ್ರಾಮಗಳನ್ನು ಸೇರಿಸಲು ಒತ್ತಾಯಿಸಿದ್ದುದರಿಂದ ಈ ಯೋಜನೆಯಡಿಯಲ್ಲೆ ಒಟ್ಟು 24ಗ್ರಾಮಗಳನ್ನು ಪ್ರಸ್ತಾಪಿಸಲಾಗಿತ್ತು. 1992-93ರ ದರ ಪಟ್ಟಿಯಂತೆ ಈ ಯೋಜನೆಗೆ 525 ಲಕ್ಷ ರೂ. ವೆಚ್ಚ ತಗಲುವುದು ಎಂದು ಅಂದಾಜು ಮಾಡಲಾಗಿತ್ತು. ಈ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಮುಂಚೆ ಈ 24 ಗ್ರಾಮಗಳ ಈಗಿನ ಕುಡಿಯುವ ನೀರಿನ ಸ್ಥಿತಿಯನ್ನು ಪರಿಶೀಲಿಸಲಾಗಿ, 9 ಗ್ರಾಮಗಳಲ್ಲಿ ಪ್ರತಿಯೊಬ್ಬರಿಗೆ ದಿನಕ್ಕೆ 40 ಲೀಟರ್ ಗಿಂತ ಹೆಚ್ಚಿನ ಪ್ರಮಾಣದಲ್ಲಿ ನೀರು ಸರಬರಾಜು ಆಗುತ್ತಿದೆ ಎಂದು ತಿಳಿದುಬಂದಿದೆ. ಮತ್ತು ಮಿಕ್ಕ 15 ಗ್ರಾಮಗಳಲ್ಲಿ ನೀರಿನ ಪ್ರಮಾಣವನ್ನು 40 ಲೀಟರ್‌ಗೆ ಏರಿಸಲು ಪ್ರತಿಹಳ್ಳಿಗೂ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಮಂಜೂರು ಮಾಡಿ ಅಥವಾ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ ಎಂದು ತಿಳಿದುಬಂದಿದೆ. ಈ ಗ್ರಾಮಗಳು ಕುಡಿಯುವ ನೀರಿನ ತೊಂದರೆಗೆ ಒಳಗಾಗುತ್ತವೆಯೇ ಎಂಬುದನ್ನು ಪರಿಶೀಲಿಸಿ ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸಬೇಕೆಂದು ಜಿಲ್ಲಾಧಿಕಾರಿ, ಮೈಸೂರು ಇವರನ್ನು ಕೋರಿದೆ. ವರದಿಯು ಈಗ ಸ್ವೀಕೃತಿಯಾಗಿದ್ದು ಪರಿಶೀಲನೆಯಲ್ಲಿದೆ.

ಆ) 28-12-92ರಂದು ವಿಧಾನ ಸಭೆಯಲ್ಲಿ ಈ ಕುಡಿಯುವ ನೀರಿನ ಸಂಯುಕ್ತ ಯೋಜನೆಗಳ ಕೆಲಸಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮಂಡಳಿಗೆ ವಹಿಸಲಾಗಿದೆ ಎಂದು ಈ ಯೋಜನೆಗಳ ಅಂದಾಜುಪಟ್ಟಿಗೆ ತಾಂತ್ರಿಕ ಮಂಜೂರಾತಿ ದೊರಕಿದ ನಂತರ ಕೆಲಸವನ್ನು ಪ್ರಾರಂಭಿಸಲಾಗುವುದೆಂದು ತಿಳಿಸಲಾಗಿತ್ತು.

ಇ) ಉತ್ತರ 'ಅ'ನಲ್ಲಿ ನಮೂದಿಸಿರುವ ಕಾರಣಗಳಿಂದಾಗಿ ಸಂಪೂರ್ಣ ವಿಷಯವನ್ನು ಸರ್ಕಾರವು ಮತ್ತೊಮ್ಮೆ ಅಮೂಲಾಗ್ರವಾಗಿ ಪರಿಶೀಲಿಸಿ ಶೀಘ್ರದಲ್ಲಿಯೇ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾದ ಪ್ರಶ್ನೆ. ಗ್ರಾಮಾಂತರ ಪ್ರದೇಶಗಳಿಗೆ ಸರ್ಕಾರದ ಯೋಜನೆ ಗ್ರಾಮಾಂತರ ಪ್ರದೇಶದ ಜನತೆಗೆ ಕುಡಿಯುವ ನೀರನ್ನು ಒದಗಿಸಿಕೊಡುತ್ತೇವೆ. ಅದಕ್ಕೆ ಮೊದಲ ಆದ್ಯತೆ ಎಂದು ಸರ್ಕಾರದವರ ಘೋಷಣೆ ಇದೆ ಆದರೆ 1991ನೇ ಇಸವಿಯಲ್ಲಿ ನಂಜನಗೂಡು ತಾಲ್ಲೂಕಿನ ಈ ಮೂರು ಮಾದನಹಳ್ಳಿ ಗುಡ್ಡ, ಮಲ್ಲಾರು ಗುಡ್ಡ ಮತ್ತು ಕಡಜಟ್ಟಿಗುಡ್ಡ, ಒಂದೊಂದು ಯೋಜನೆಗೆ 2 ಕೋಟಿ ರೂಪಾಯಿಗಳಂತೆ ಮೂರು ಯೋಜನೆಗಳಿಗೆ ಒಟ್ಟು 6 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಮಂಜೂರಾಗಿ ಅದಕ್ಕೆ ಆಡಳಿತಾತ್ಮಕ ಒಪ್ಪಿಗೆಯನ್ನು ಕ್ಯಾಬಿನೆಟ್‌ನಲ್ಲಿ ಇಟ್ಟು ಸ್ಯಾಂಕ್ಷನ್ ಮಾಡಿದ್ದಾರೆ. ಮಾದನಹಳ್ಳಿ ಗುಡ್ಡಕ್ಕೆ 67 ಲಕ್ಷ ರೂಪಾಯಿಗಳನ್ನು ಸಹ ಬಿಡುಗಡೆ ಮಾಡಿದ್ದಾರೆ. ಬಿಡುಗಡೆ ಮಾಡಿರುವ ಹಣವನ್ನು ಕೆ.ಯುಡಬ್ಲಿಯೋ ಎಸ್ ಎಸ್ ನವರನ್ನು ಉಪಯೋಗಿಸಿಕೊಂಡಿಲ್ಲ. 1994ನೇ ಇಸವಿಗೆ ನಾವು ಬಂದಿದ್ದರೂ ಸಹ

ಅದನ್ನು ಕಾರ್ಯಗತ ಮಾಡುವ ವಿಚಾರಕ್ಕೆ ಅವರು ಹೋಗಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಬಹಳ ಇವೆ. ಮಲ್ಲಾರುಗುಡ್ಡದ ಮತ್ತು ಮಾದನಹಳ್ಳಿ ಗುಡ್ಡದ ಪ್ರದೇಶಗಳು ಬರಗಾಲ ಪ್ರದೇಶ ಇದ್ದಂತೆ ಇದೆ. ಒಂದೊಂದು ಯೋಜನೆಯಲ್ಲಿ ಸುಮಾರು 25-30 ಗ್ರಾಮಗಳು ಕವರ್ ಆಗುತ್ತವೆ. ಅದೂ ಕಪಿಲಾ ನದಿಯಿಂದ ತೆಗೆದುಕೊಳ್ಳತಕ್ಕಂಥ ನೀರು. ಅಲ್ಲಿರುವ ನೈಸರ್ಗಿಕ ಹಿನ್ನಲೆಯಾವ ಪ್ರದೇಶದಲ್ಲೂ ಇಲ್ಲ. ಬೋರ್‌ವೆಲ್‌ಗಳನ್ನು ಅಲ್ಲಿ ತೆಗೆದು ಅವು ಫೇಲ್ಯೂರ್ ಆಗಿವೆ. ಬೋರ್‌ವೆಲ್‌ಗಳನ್ನು ತೆಗೆದು ಗ್ರಾಮಾಂತರ ಪ್ರದೇಶಕ್ಕೆ ನೀರನ್ನು ಒದಗಿಸಿಕೊಡುವುದಕ್ಕಿಂತ ಬದಲಾಗಿ ಕಪಿಲಾ ನದಿಯಿಂದ ನೀರನ್ನು ತೆಗೆದುಕೊಂಡು 25-30 ಗ್ರಾಮಗಳು ಆ ಯೋಜನೆಗೆ ಸೇರುವ ಹಾಗೆ ಆ ಯೋಜನೆಯನ್ನು ಕಾರ್ಯಗತಗೊಳಿಸಿಕೊಟ್ಟರೆ ಬಹಳ ಜನಗಳಿಗೆ ಅನುಕೂಲವಾಗುತ್ತದೆ.

ಈ ಯೋಜನೆಯನ್ನು ಸರ್ಕಾರ ತಡೆಹಿಡಿದಿದೆಯೋ ಅಥವಾ ಇದಕ್ಕೆ ಏನು ಕಾರಣ? ಏತಕ್ಕೋಸ್ಕರ ಈ ರೀತಿ ಮಾಡಿದ್ದೀರಿ ? ಅಥವಾ ಗ್ರಾಮಾಂತರ ಪ್ರದೇಶದ ಜನಗಳಿಗೆ ಕುಡಿಯುವ ನೀರನ್ನು ಒದಗಿಸಿಕೊಡಲು ನಿಮಗೆ ಇಚ್ಛೆ ಇದೆಯೇ ಇಲ್ಲವೇ? ಇದಕ್ಕೆ ನಾನು ಅನೇಕ ಸಾರಿ ಒತ್ತಡ ಕೊಟ್ಟರೂ ಸಹ ಇದು ಕಾರ್ಯಗತ ಆಗಿಲ್ಲ. ನಾನು 4 ವರ್ಷಗಳಿಂದಲೂ ಪ್ರಯತ್ನ ಮಾಡುತ್ತಿದ್ದೇನೆ. ಹಣ ಕೂಡ ಇದಕ್ಕೆ ಬಿಡುಗಡೆ ಆಗಿದೆ. ಈಗ ಆಡಳಿತಾತ್ಮಕ ಮಂಜೂರಾತಿ ಮತ್ತು ಟೆಕ್ನಿಕಲ್ ಮಂಜೂರಾತಿ ಮತ್ತು ಕ್ಯಾಬಿನೇಟ್‌ನ ಪುನರ್ ಪರಿಶೀಲನೆ ಎಂದು ಹೇಳುತ್ತಿದ್ದೀರಿ ಏಕೆ? ಈ ರೀತಿ ಮಾಡುತ್ತಿದ್ದೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಈ ಯೋಜನೆ ಮುಖ್ಯವಾಗಿ ಕುಡಿಯುವ ನೀರಿನ ಯೋಜನೆ. ಈ ಗ್ರಾಮಾಂತರ 3 ನೀರು ಸರಬರಾಜು ಯೋಜನೆ ಇದನ್ನು ಇವತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅವರಲ್ಲಿ ನಾನು ಚರ್ಚೆ ಮಾಡಿದಾಗ ಅವಾಗ 5.25 ಕೋಟಿ ರೂಪಾಯಿ ಲೈನ್ ಎಸ್ಟಿಮೇಟ್ ಎಂದು ಹೇಳಿ ಇತ್ತು ಆಮೇಲೆ 92-93ನೇ ಸಾಲಿನಲ್ಲಿ ಅದರ ವಿವರವಾದ ಅಂದಾಜು ಮೊತ್ತ ಅದು ಹನ್ನೆರಡೂವರೆ ಕೋಟಿ ಎಂದು ಮೊದಲು ಲೈನ್ ಎಸ್ಟಿಮೇಟ್‌ನಲ್ಲಿ ಮಂಜೂರಾತಿ ಆಗಬೇಕು ಎಂದು ಹೇಳಿದಾಗ ಈಗ ಅದು ಡಿಟೇಲ್ಡ್ ಎಸ್ಟಿಮೇಟ್ ಮಾಡಿದಾಗ 12 ಕೋಟಿ 50 ಲಕ್ಷ ರೂಪಾಯಿ ಆಯಿತು. 94-95ನೇ ಸಾಲಿನ ಪ್ರಕಾರ ದರಗಳ ಮೊತ್ತ 15 ಕೋಟಿ ರೂಪಾಯಿಗಳು ಆಗುತ್ತದೆ. ಆಮೇಲೆ ಅದು ಮುಗಿದಾಗ 18 ಕೋಟಿ ರೂಪಾಯಿ ಆಗುತ್ತದೆ. ಈಗ ಇದನ್ನೆಲ್ಲಾ ಪರಿಶೀಲನೆ ಮಾಡಿದಾಗ ಈ ವರದಿ ಪ್ರಕಾರರ ಈ ಪರ್ ಕ್ಯಾಪಿಟಾ ಎಕ್ಸ್‌ಪೆಂಡಿಚರ್ ಅದು ಎಷ್ಟಾಗುತ್ತದೆ ಅಂದರೆ ಗ್ರಾಮಾಂತರ ಪ್ರದೇಶದ ಯೋಜನೆಗಳಿಗೆ 300 ರೂಪಾಯಿ, ಈ ಯೋಜನೆಯಲ್ಲಿ ಎಷ್ಟಾಗುತ್ತದೆ ಅಂದರೆ ಒಂದೂವರೆ ಸಾವಿರ ರೂಪಾಯಿ. ಅದು 15 ಕೋಟಿಗೆ ಲೆಕ್ಕ ಹಾಕಿದರೆ, 18 ಕೋಟಿಗೆ ಲೆಕ್ಕ ಹಾಕಿದರೆ ಅದುತಲಾ ಇನ್ನು ಜಾಸ್ತಿಯಾಗುತ್ತದೆ.

ಇದರ ಮೈಂಟನೆನ್ಸ್‌ಗೆ 18 ಪರ್ಸೆಂಟ್ ಎಂದು ಇಟ್ಟುಕೊಂಡರೂ ಕೂಡ ಅದು ವರ್ಷಕ್ಕೆ ಈಗಿನ ಲೆಕ್ಕದಲ್ಲಿ ಎರಡೂ ಕಾಲು ಲಕ್ಷ ರೂಪಾಯಿ ಬೇಕಾಗುತ್ತದೆ. ಮೈಂಟನೆನ್ಸ್‌ಗೆ ಬಹುಶಃ ಯಾವ ಗ್ರಾಮಪಂಚಾಯತಿ ಕೂಡ ಎರಡೂ ಕಾಲುಲಕ್ಷ ಖರ್ಚು ಮಾಡಿ ಮಾಡುವುದಕ್ಕೆ ಆಗುವುದಿಲ್ಲ. ಮತ್ತು ಈ ಯೋಜನೆಯ ಖರ್ಚು ಕೂಡ ಪರ್ ಕ್ಯಾಪಿಟಾ ವೆಚ್ಚ ದುಭಾರಿಯಾಗುತ್ತದೆ. ಇದನ್ನೆಲ್ಲಾ ಪರಿಶೀಲಿಸಿ ಪುನಃ 31-5-94ರ ಕ್ಯಾಬಿನೇಟ್‌ಗೆ ಬಂದಾಗ ಈ ಯೋಜನೆಯನ್ನು ಕೈಬಿಟ್ಟರೆ ಈ 24 ಗ್ರಾಮಗಳ ಕುಡಿಯುವ ನೀರಿನ ಗತಿ ಏನು ಆ ಗ್ರಾಮದ ಜನರು ತೊಂದರೆಗೆ

ಈಡಾಗುತ್ತಾರೆ ಎಂದು ಹೇಳಿ ನಾವು ಅದನ್ನು ಮುಂದೂಡಿದ್ದೇವೆ. ರದ್ದು ಮಾಡಿಲ್ಲ ಮುಂದೂಡಿ ಜಿಲ್ಲಾಧಿಕಾರಿಗಳ ಕಡೆಯಿಂದ ಒಂದು ವರದಿಯನ್ನು ತರಿಸಬೇಕು ಎಂದು ಹೇಳಿ ಅದು ಈಗಾಗಲೇ ಆ ವರದಿ ಕೂಡ ಬಂದಿದೆ. ಪುನಃ ದಿನಾಂಕ 25-8-94ರಂದು ಪುನಃ ಸಭೆಗೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪ್ರಧಾನ ಮಾಡಿದಾಗ ಅದನ್ನು ಬಹಳ ದೀರ್ಘವಾಗಿ ನಾವು ಅಲೋಚನೆ ಮಾಡಿದ್ದೇವೆ. ಇದು ಬಹಳ ಗಂಭೀರವಾದ ಸಮಸ್ಯೆ ಇದೆ. 300 ರೂಪಾಯಿಗಳ ಪರ್ ಕ್ಯಾಪಿಟಾ ಹೋಗಿ ಅದು ಒಂದೂವರೆ ಎರಡು ಸಾವಿರ ರೂಪಾಯಿ ಅದೂ ಒಂದು ಪ್ರಾಜೆಕ್ಟ್‌ಗೆ ಮಾಡಿದರೆ ಅದರಿಂದ ಜನಗಳಿಗೆ ಪ್ರಯೋಜನ ಬರಬೇಕು. ಅದನ್ನು ಮೈಂಟೈನ್ ಮೂಡಲಿಕ್ಕೂ ಎರಡು ಮೂರು ಕೋಟಿ ರೂಪಾಯಿಗಳು ಬೇಕು. ಇದು ಇನ್ನೂ ಪುನರ್ ಪರಿಶೀಲನೆಯಲ್ಲಿಯೇ ಇದೆ. ಇದನ್ನು ರದ್ದು ಮಾಡಲಿಲ್ಲ. ಇದರ ಬಗ್ಗೆ ಚರ್ಚೆ ಮಾಡಲು ನಮ್ಮ ಅಧಿಕಾರಿಗಳನ್ನು ಕರೆಯಿಸಿ ತಮ್ಮನ್ನು ಕರೆಯಿಸಿ ತಮ್ಮ ಮನಸ್ಸಿಗೆ ನಮ್ಮೆದಿಯಾಗುವ ಹಾಗೆ ಇದಕ್ಕೆ ಏನು ಪರಿಹಾರ ಕಂಡುಹಿಡಿಯಬೇಕೋ ಅದನ್ನು ನಾವು ಹುಡುಕುತ್ತೇವೆ.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೇ, ಜಾಸ್ತಿ ಹಣ ಖರ್ಚಾಗುತ್ತದೆ. ಅಂತ ಹೇಳಿ ಕುಡಿಯುವ ನೀರಿನ ಯೋಜನೆಯನ್ನು ರದ್ದು ಮಾಡಲಿಕ್ಕೆ ಆಗುತ್ತದೆಯೇ? ಸರ್ಕಾರಕ್ಕೆ ಎಷ್ಟೇ ಹಣ ಖರ್ಚಾಗಲಿ ಯಾರು ದೀನರು ದಲಿತರು ಬಡಜನರು ಬಹಳ ಜನ ಇರತಕ್ಕಂಥ ಕಡೆ ಕುಡಿಯುವ ನೀರು ಸಿಕ್ಕಿದರೆ ಸಾಕಷ್ಟು ಊಟ ಮಾಡಿದಂತೆ ಆಗುತ್ತದೆ, ಇಂಥಹ ಪರಿಸ್ಥಿತಿ ಇರುವಾಗ ಈ ಯೋಜನೆಯನ್ನು ಜಾರಿಗೊಳಿಸಿ ಎಂದು ನಾನು ಕೇಳಿದಾಗ ಇದಕ್ಕೆ ಜಾಸ್ತಿವೆಚ್ಚ ಆಗುತ್ತದೆಂದು ಹೇಳಿ ತಾವು ಪುನರ್ ಪರಿಶೀಲನೆ ಮಾಡೋಣ ವಿಚಾರ ಮಾಡೋಣ ಎಂದು ಹೇಳುವುದು ಬೇಡ. ದಯುವಿಟ್ಟು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡುತ್ತೇನೆ. ದಯವಿಟ್ಟು ತಾವು ನಮ್ಮ ಮೇಲೆ ಗಧಾಪ್ರಹಾರ ಮಾಡಬೇಡಿ, ತಾವು ಸೌಜನ್ಯ ತೋರಿಸಿ, ತಾವು ಇಡೀ ರಾಜ್ಯಕ್ಕೆ ಮುಖ್ಯಮಂತ್ರಿಗಳು. ಈ ಯೋಜನೆ ಬಹಳ ಪ್ರಾಮುಖ್ಯವಾದ ಯೋಜನೆ ಇದಕ್ಕೆ ಎಷ್ಟೇ ಖರ್ಚಾಗಲಿ ಹಿಂದುಮುಂದು ನೋಡಬೇಡಿ. 3 ಪರ್ಸೆಂಟ್ ಅಲ್ಲ ಒಂದೂವರೆಲಕ್ಷ ಆಗಲಿ ಕೂಡಲೇ ಕಾರ್ಯಗತ ಮಾಡಬೇಕು.

ಅಧ್ಯಕ್ಷರು : ತಮ್ಮನ್ನು ಕರೆಯುತ್ತೇನೆಂದು ಹೇಳಿದ್ದಾರಲ್ಲಾ,

ಶ್ರೀ ಎಂ. ಮಹದೇವ್ : ಅಲ್ಲ ಎಷ್ಟೇ ಖರ್ಚಾಗಲಿ ನಾನು ಮಾಡಿಕೊಡುತ್ತೇನೆ ಎನ್ನುವ ಭರವಸೆಯನ್ನು ತಾವು ಕೊಡಿಸಬೇಕು ಅಧ್ಯಕ್ಷರೇ?

ಶ್ರೀ ವಾಟಾಳ್ ನಾಗರಾಜ್ : ಮಹದೇವ್‌ರವರ ಭಾಷೆ ಬದಲಾವಣೆ ಆಗಿದೆ. ಮೊದಲು ಇದ್ದಂತಹ ಭಾಷೆ ಇಲ್ಲ, ತಾವು ಕರುಣೆ ತೋರಿ ಮಾಡಿಯೇ ಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಮಾಡಿಕೊಡಿ, ಭಾಷೆ ಬದಲಾವಣೆ ಆಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಗದಾಪ್ರಹಾರ ಮಾಡುವುದಿದ್ದರೆ ಅನ್‌ಮೆರೀಟ್ ಈ ಕೇಸ್ ನಾಪಾಸು ಆಗುತ್ತಿತ್ತು. ಆದರೆ ನನಗೆ ಬಹಳ ಅನುಕಂಪ ತಮ್ಮಮೇಲೆ, ಆದ್ದರಿಂದ ಇದನ್ನುರದ್ದು ಮಾಡಿಲ್ಲ. ಎಲ್ಲಾ ಶಾಸಕರನ್ನು ಕೇಳಿ, ಪರ್ ಕ್ಯಾಪಿಟಾ 300 ರೂಪಾಯಿಗಳಿಗೂ ಮೇಲ್ಪಟ್ಟ ಎಲ್ಲೂ ಯೋಜನೆಗಳನ್ನು ಮಂಜೂರು ಮಾಡಿಲ್ಲ, ಒಂದೂವರೆ ಸಾವಿರ ರೂಪಾಯಿ ಅಲ್ಲ, ಎಲ್ಲಾ ಆಗುವ ಹೊತ್ತಿಗೆ 3 ಸಾವಿರ ರೂಪಾಯಿ ಆಗುತ್ತದೆ. ಮೈಂಟನೆನ್ಸ್ 3 ಕೋಟಿ ಯಾವ ಗ್ರಾಮಪಂಚಾಯತಿ ಮಾಡಲು ಸಾಧ್ಯ?

ಶ್ರೀ ಎಂ. ಮಹದೇವ್ : 3 ಕೋಟಿ ಆಗುವುದಿಲ್ಲ ಸ್ವಾಮಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಇಷ್ಟೆಲ್ಲಾ - ಮಾಡಿ ಕುಡಿಯಲು ನೀರು ಬರುತ್ತದೆಯೇ ಎಂಬುದನ್ನು ಆಲೋಚನೆ ಮಾಡಬೇಕು. ತಮಗೆ ಗೊತ್ತಿದೆ ಅನೇಕ ಯೋಜನೆಗಳು ಮಾಡಿ ಅದ ಮೇಲೆ ಫೈಲ್ ಆಗಿವೆ. ಏಕೆಂದರೆ ನಾವು ಇದಕ್ಕೆ 18 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಏನಾದರೂ ಊರಿನವರಿಗೆ ಪ್ರಯೋಜನವಾಗುವುದಿದ್ದರೆ ಅದೂ ಮಾಡಬಹುದು ಇದರ ಪರಿಸ್ಥಿತಿ ನೋಡಿದರೆ ಕೊನೆಗೆ ಅದು ಬಿಳಿ ಆನೆ ಆಗಬಹುದು. ಈ ರೀತಿ ವೈಟ್ ಎಲಿಫೆಂಟ್ ಅದರೆ ಜನಗಳಿಗೆ ಏನು ಪ್ರಯೋಜನ? 18 ಕೋಟಿ ರೂಪಾಯಿಗಳನ್ನು ಬೇರೆ ರೀತಿ ಖರ್ಚು ಮಾಡಿದರೆ ಬಹುಶಃ 50 ಗ್ರಾಮಗಳಿಗೆ ಕುಡಿಯುವನೀರು ಕೊಡಬಹುದು. ಅದೆಲ್ಲಾ ಆಲೋಚನೆ ಮಾಡೋಣ. 3 ಗ್ರಾಮಕ್ಕೆ ನೀರು 18 ಕೋಟಿ ರೂಪಾಯಿ ಕೊಟ್ಟರೆ ಅದರಿಂದಲೇ ಇಡೀ ನಿಮ್ಮ ಕ್ಷೇತ್ರಕ್ಕೆ ನೀರು ಸರಬರಾಜು ಆಗುವುದಿದ್ದರೆ ಅದನ್ನು ಉಪಯೋಗ ಮಾಡೋಣ ಆದ್ದರಿಂದ ನಾನು ಅದನ್ನು ತೆಗೆದು ಹಾಕಿಲ್ಲ ಬಹಳ ವಿಶೇಷ ಕಳಕಳಿಯಿಂದ ತಮ್ಮನ್ನು ಕರೆದು ಇದಕ್ಕೆ ಒಂದು ಪರಿಹಾರ ಹುಡುಕೋಣ ಯಾವ ಸಮಸ್ಯೆಗೆ ಅದರೂ ಪರಿಹಾರ ಇದ್ದೇ ಇದೆ. ಆದಷ್ಟು ಜಾಗ್ರತೆ ನಾನು ತಮ್ಮನ್ನು ಕರೆದು ಪರಿಹಾರ ಕೊಡುತ್ತೇನೆ.

ಮುಂಡರಗಿ ತಾಲ್ಲೂಕು ಡಂಬಳದಲ್ಲಿ ಯುವಕ ಮಂಡಳ ಕಟ್ಟಡ ನಿರ್ಮಾಣ

481 - ಶ್ರೀ ಕೆ. ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ಪ್ರವಾಸೋದ್ಯಮ ಹಾಗೂ ಯುವಜನ ಸೇವಾಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕು ಡಂಬಳದಲ್ಲಿ ಯುವಜನ ಮಂಡಲ ಅರ್ಧಕ್ಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಓಂ ಪ್ರಕಾಶ್ ಕಣಗಲಿ (ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಕ್ರೀಡಾ ರಾಜ್ಯ ಸಚಿವರು) :

ಅ) ಹೌದು

ಆ) ಇಲಾಖಾ ವತಿಯಿಂದ ಸದರಿ ಸಂಘಕ್ಕೆ 84-85ನೇ ಸಾಲಿನಲ್ಲಿ ರೂ. 5,000-00ಗಳ ಕಟ್ಟಡ ಕಟ್ಟಲು ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಕಟ್ಟಡ ಕಟ್ಟಲು ನಿವೇಶನದ ತೊಂದರೆಯಿಂದ ಕಟ್ಟಡ ನಿರ್ಮಾಣ ಮಾಡಲು ಸಾಧ್ಯವಾಗಿರುವುದಿಲ್ಲ. ಆದರೂ ಸದರಿ ಯುವಕ ಮಂಡಲಕ್ಕೆ ನಿವೇಶನ ಪಡೆಯುವಲ್ಲಿ ಸೂಕ್ತ ಮಾರ್ಗದರ್ಶನವನ್ನು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ ನೀಡಲಾಗುವುದು.

ಶ್ರೀ ಕೆ.ಎಚ್. ಕುರಡಗಿ : ಉತ್ತರದೊಳಗೆ ಜಾಗ ಕೊಟ್ಟಿಲ್ಲ ಎಂದು ಹೇಳಿದ್ದೀರಿ. ಜಾಗ ಕೊಟ್ಟು 5000 ರೂ. ದೊಳಗೆ ಕಟ್ಟಡ ಅರ್ಧಕ್ಕೆ ನಿಂತಿದೆ ಇದರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಓಂ ಪ್ರಕಾಶ್ ಕಣಗಲಿ : ಅಧ್ಯಕ್ಷರೇ, ಸ್ವಾಯತ್ತ ಸಂಸ್ಥೆ. ಅದಕ್ಕೆ ನಾವು ಸಹಾಯಧನ ಎಂದು 5000 ರೂ ಕೊಟ್ಟಿದ್ದೇವೆ. ಕಟ್ಟಡವಾಗಲಿ, ಸೈಟಾಗಲಿ ಅದನ್ನು ಅವರೆ ಮಾಡಿಕೊಳ್ಳಬೇಕು, ಅದು ನಮ್ಮಿಂದಾಗುವುದಿಲ್ಲ.

ಶ್ರೀ ಕೆ.ಎಚ್. ಕುರಡಗಿ : ಸೈಟ್ ಕೊಟ್ಟಿದ್ದೇವೆ, ಬಿಲ್ಡಿಂಗ್ ಅರ್ಧಕ್ಕೆ ನಿಂತಿದೆ, ಇನ್ನಷ್ಟು ಹಣ ಕೊಡುತ್ತೀರಾ?

ಶ್ರೀ ಓಂ ಪ್ರಕಾಶ್ ಕಣಗಲಿ : ಈಗಾಗಲೇ 5 ಸಾವಿರ ರೂ ಕೊಟ್ಟಿದ್ದೇವೆ.

ಅಧ್ಯಕ್ಷರು : ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ದಿನಾಂಕ 30-8-94ರಂದು ಲಿಖಿತ ಮೂಲಕ ಉತ್ತರಿಸುವ 4ನೇ ಪಟ್ಟಿಯಲ್ಲಿರುವ 77 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಮೂಲ್ಕಿ ಪೋಲೀಸ್ ಸ್ಟೇಷನ್ನಿನ ಜೀಪಿನ ಬಗ್ಗೆ

561 - ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಅಧಿವೇಶನದಲ್ಲಿ ಏಪ್ರಿಲ್ 1994ರ ಮೊದಲು ಮೂಡಬಿದಿರೆ-ಮೂಲ್ಕಿ ಸ್ಟೇಷನ್ನಿಗೆ ಜೀಪು ಒದಗಿಸಲಾಗುವುದೆಂದು ಸರ್ಕಾರದವರು ಆಶ್ವಾಸನೆ ನೀಡಿದ್ದು ನಿಜವೇ?

ಆ) ಹಾಗಿದ್ದಲ್ಲಿ ಈ ತನಕ ಜೀಪು ಒದಗಿಸದಿರಲು ಕಾರಣವೇನು? ಹಾಗೂ ಎಂದು ಒದಗಿಸಲಾಗುವುದು?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಹೌದು

ಆ) ಮೂಲ್ಕಿಯು ಸರ್ಕಲ್ ಪೋಲೀಸ್ ಕಛೇರಿ ಹಾಗೂ ಪೋಲೀಸ್ ಠಾಣೆ ಹೊಂದಿರುತ್ತದೆ. ಸರ್ಕಲ್‌ಗೆ ಜೀಪು ಒದಗಿಸಲಾಗಿದ್ದು, ಪೋಲೀಸ್ ಠಾಣೆಗಳಾದ ಮೂಡಬಿದಿರೆ-ಮೂಲ್ಕಿಗೆ ಮೋಟಾರ್ ಸೈಕಲ್‌ಗಳನ್ನು ಒದಗಿಸಲಾಗಿದೆ. ಈ ಪೋಲೀಸ್ ಠಾಣೆಗಳಿಗೆ ಮುಂಬರುವ ವರ್ಷಗಳಲ್ಲಿ ಹಣ ಒದಗಿಸಿಕೊಂಡು ಆದ್ಯತೆ, ಅಗತ್ಯತೆಯನ್ನು ಅನುಸರಿಸಿ ಜೀಪನ್ನು ಒದಗಿಸಲಾಗುವುದು.

ಮುಖ್ಯಮಂತ್ರಿಯವರ ವಿದೇಶಿ ಪ್ರವಾಸದ ಬಗ್ಗೆ

559 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಹಾಲಿ ಮುಖ್ಯಮಂತ್ರಿಯವರು ಇತ್ತೀಚೆಗೆ ಅಮೇರಿಕಾಕ್ಕೆ ನೀಡಿದ ಭೇಟಿ ಅಧಿಕೃತವೇ ಅಥವಾ ಖಾಸಗಿಯೇ ಇವರೊಡನೆ ಹೋಗಿದ್ದವರು ಯಾರು ಯಾರು ಈ ಪ್ರವಾಸದಿಂದ ಸರ್ಕಾರಕ್ಕೆ ಆದ ಖರ್ಚು ಎಷ್ಟು?

ಆ) ಇವರು ಭೇಟಿಯಾದ ಪ್ರಮುಖ ವ್ಯಕ್ತಿಗಳು ಅಥವಾ ಸಂಸ್ಥೆಗಳು ಯಾವುವು, ಚರ್ಚಿಸಿದ ವಿಷಯಗಳು ಯಾವುವು, ಅವುಗಳ ಫಲಶ್ರುತಿಯೇನು ಹಾಗೂ ವಾಪಸ್ಸಾದ ನಂತರ ಈ ವಿಷಯಗಳಲ್ಲಿ ಆಗಿರುವ ಬೆಳವಣಿಗೆಗಳು ಏನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಇದು ಒಂದು ಖಾಸಗಿ ಭೇಟಿಯಾಗಿದ್ದು, ನನ್ನ ಜೊತೆ ನನ್ನ ಪತ್ನಿಯವರು ಪ್ರವಾಸ ಮಾಡಿದ್ದಾರೆ. ಇದರಿಂದ ಸರ್ಕಾರಕ್ಕೆ ಯಾವುದೇ ರೀತಿಯ ಖರ್ಚಾಗಿಲ್ಲ.

ಆ) ಪ್ರವಾಸವು ಖಾಸಗಿಯಾಗಿದ್ದರೂ ಸಹ ರಾಜ್ಯದ ಹಿತ ದೃಷ್ಟಿಯ ಸಲುವಾಗಿ ಪ್ರಯತ್ನ ಮಾಡಲಾಗಿದೆ. ರಾಜ್ಯದ ವಿವಿಧ ಯೋಜನೆಗಳಿಗೆ ಅತ್ಯಾವಶ್ಯಕವಾಗಿರುವ ಬಂಡವಾಳ ಹೂಡಿಕೆ ಬಗ್ಗೆ ಮತ್ತು ತಂತ್ರಜ್ಞಾನದ ಬಗ್ಗೆ ಅಮೇರಿಕ ದೇಶದ ಕೆಲವು ಪ್ರತಿಷ್ಠಿತ ಕಂಪೆನಿ ಸಂಸ್ಥೆಗಳ ಮುಖ್ಯಸ್ಥರುಗಳೊಂದಿಗೆ ಭೇಟಿಯನ್ನು ಈ ಪ್ರವಾಸ

ಸಂದರ್ಭದಲ್ಲಿ ಮಾಡಲಾಗಿದೆ. ಭೇಟಿಯಾದ ಮತ್ತು ಚರ್ಚೆ ನಡೆಸಿದ ಕಂಪನಿ ಸಂಸ್ಥೆಗಳ ವಿವರ ಈ ಕೆಳಕಂಡಂತಿದೆ.

ಸ್ಥಳ	ಕಂಪೆನಿ/ಸಂಸ್ಥೆ	ಉದ್ದೇಶ
ವಾಷಿಂಗ್ಟನ್	ವಿಶ್ವಬ್ಯಾಂಕ್ ಮುಖ್ಯಸ್ಥ ರೊಂದಿಗೆ	ವಿದ್ಯುತ್ ಯೋಜನೆಗಳ ಕುರಿತು
ವಾಷಿಂಗ್ಟನ್	ನಾರ್ತ್ ಈಸ್ಟ್ ಎನರ್ಜಿ ಸರ್ವೀಸಸ್	ರಾಯಚೂರು ವಿದ್ಯುತ್ ಯೋಜನೆ
ವಾಷಿಂಗ್ಟನ್	ಚಿಕಾಗೋ ಪವರ್	ಮೈಸೂರು ವಿದ್ಯುತ್ ಯೋಜನೆ
ವಾಷಿಂಗ್ಟನ್	ಏಷ್ಯನ್‌ಪವರ್ ಕಂ.	ಯು.ಕೆ.ಪಿ.ಯಲ್ಲಿ ಜಲವಿದ್ಯುತ್ ಯೋಜನೆ
ವಾಷಿಂಗ್ಟನ್	ಹೆಚ್‌ಒಕೆ ಇಂಟರ್ ನ್ಯಾಷನಲ್	ಹೊಸಪೇಟೆ ವಿದ್ಯುತ್ ಯೋಜನೆ
ವಾಷಿಂಗ್ಟನ್	ಹಾರ್ಜ್ ಇಂಜಿನಿಯರಿಂಗ್ ಕಂ.	ಶಿವನಸಮುದ್ರ ವಿದ್ಯುತ್ ಯೋಜನೆ
ವಾಷಿಂಗ್ಟನ್	ಕೋಜೆಂಟ್ರಿಕ್ಸ್	ಮಂಗಳೂರು ವಿದ್ಯುತ್ ಯೋಜನೆ
ವಾಷಿಂಗ್ಟನ್	ರೇಥಿಯಾನ್	ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು
ಕೂಪರ್ಟಿನೊ	ಟ್ಯಾಂಡೆಮ್ ಕಂಪ್ಯೂಟರ್ಸ್	ಕಂಪ್ಯೂಟರ್ ತಂತ್ರಜ್ಞಾನದ ಬಗ್ಗೆ.
ಕೊಪರ್ಟಿನೊ	ನೋವೆಲ್ ಸಾಫ್ಟ್ ವೇರ್ ಕಂ.	ಕಂಪ್ಯೂಟರ್ ತಂತ್ರಜ್ಞಾನದ ಬಗ್ಗೆ
ಕೂಪರ್ಟಿನೊ	ಇಂಟೆಲ್‌ಚಿಪ್ ಮ್ಯಾನು ಫ್ಯಾಕ್ಚರಿಂಗ್ ಕಂ.	- ಅದೇ -
ಕೂಪರ್ಟಿನೊ	ವೆರಿಫೈನ್ ಕಂಪ್ಯೂಟರ್ ಕಂ. ಕಂಪ್ಯೂಟರ್ ಕಂ.	- ಅದೇ -
ಕೂಪರ್ಟಿನೊ	ಹೆವ್ಲೆಟ್ ಪ್ಯಾಕರ್ಡ್ ಕಂಪ್ಯೂಟರ್ ಕಂ.	- ಅದೇ -

ಈ ಎಲ್ಲ ಭೇಟಿಗಳಿಂದ ಉಪಯೋಗ ಆಗಿದೆ ಹಾಗೂ ಮುಂದೆ ಇನ್ನೂ ಹೆಚ್ಚಿನ ಉಪಯೋಗವಾಗುವುದೆಂದು ಭಾವಿಸಲಾಗಿದೆ.

ಪ್ರದೇಶಿ ಸಾರಿಗೆ ಇಲಾಖಾವತಿಯಿಂದ ನೀಡಿದ ಪರ್ಮಿಟ್‌ಗಳು

365 - ಶ್ರೀ ಕೆ. ಲಕ್ಕಣ್ಣ (ರಾಜಾಜೀನಗರ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರಾದೇಶಿಕ ಸಾರಿಗೆ ಇಲಾಖಾವತಿಯಿಂದ 1993-94ರಲ್ಲಿ ಖಾಸಗಿ ಹಾಗೂ ರಾಷ್ಟ್ರೀಕೃತ ಮಾರ್ಗಗಳಲ್ಲಿ ನೀಡಲಾದ ಪರ್ಮಿಟುಗಳೆಷ್ಟು ?

ಆ) ಇದರಿಂದ ಸಾರಿಗೆ ಸಂಸ್ಥೆಗೆ ನಷ್ಟ ಹೆಚ್ಚಿಲ್ಲವೆ, ಮತ್ತು ಅಪಘಾತಗಳು ಹೆಚ್ಚಾಗಿಲ್ಲವೆ.

ಇ) ಈ ನಷ್ಟ ಹಾಗೂ ಅಪಘಾತವನ್ನು ತಪ್ಪಿಸಲು ಸಂಸ್ಥೆಯು ಕೈಗೊಂಡು ದಿಟ್ಟ ಕ್ರಮಗಳೇನು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) 1993-94ನೇ ಸಾಲಿನಲ್ಲಿ 591 ರಹದಾರಿಯನ್ನು ಖಾಸಗಿ ಮಾಲೀಕರಿಗೆ ರಾಷ್ಟ್ರೀಕರಣವಲ್ಲದ ಮಾರ್ಗದಲ್ಲಿ ಸಂಚರಿಸಲು ಮತ್ತು 21ರಹದಾರಿಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರಿಗೆ ಖಾಸಗಿ ಹಾಗೂ ರಾಷ್ಟ್ರೀಕರಣ ಮಿಶ್ರ ಮಾರ್ಗದಲ್ಲಿ ಸಂಚರಿಸಲು ನೀಡಲಾಗಿರುತ್ತದೆ. ಯೋಜನೆಯಂತೆ ಸಂಪೂರ್ಣ ರಾಷ್ಟ್ರೀಕರಣ ಮಾರ್ಗಗಳಲ್ಲಿ ಯಾವುದೇ ರಹದಾರಿಯನ್ನು ನೀಡಿರುವುದಿಲ್ಲ.

ಆ) ಖಾಸಗಿ ಮಾಲೀಕರಿಗೆ ರಾಷ್ಟ್ರೀಕರಣವಲ್ಲದ ಮಾರ್ಗದಲ್ಲಿ ರಹದಾರಿಯನ್ನು ನೀಡಿರುವುದರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ನಷ್ಟ ಅನುಭವಿಸುವ ಸಂದರ್ಭವಿರುವುದಿಲ್ಲ. ರಹದಾರಿ ನೀಡಿಕೆಯಿಂದ ಅಪಘಾತಗಳು ಹೆಚ್ಚುತ್ತವೆ ಎಂಬ ಕಾರಣವು ಸರಿಯಲ್ಲ.

ರಾಷ್ಟ್ರೀಕೃತ ಮಾರ್ಗಗಳಲ್ಲಿ ಅನಧಿಕೃತವಾಗಿ ಓಡಾಡುವ ಮ್ಯಾಕ್ಸಿಕ್ಯಾಬ್‌ಗಳು ಮತ್ತು ಟೂರಿಸ್ಟ್ ಬಸ್ಸುಗಳಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ನಷ್ಟ ಉಂಟಾಗುತ್ತಿದೆ. ಇವುಗಳ ಕಳ್ಳಾಟಿಕೆ ಓಡಾಟವನ್ನು ತಡೆಗಟ್ಟಲು ಸರ್ಕಾರವು ಜಿಲ್ಲಾ ಮಟ್ಟದಲ್ಲಿ ಸಮಿತಿಗಳನ್ನು ರಚಿಸಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಅಪಘಾತಗಳನ್ನು ತಡೆಗಟ್ಟುವ ಬಗ್ಗೆ ತೆಗೆದು ಕೊಂಡಿರುವ ಮುಖ್ಯ ಕ್ರಮಗಳು ಈ ಕೆಳಗೆನಂತಿದೆ.

1) ಅಜಾಗುರೂಕತೆ ಮತ್ತು ಅತಿವೇಗದಿಂದ ವಾಹನ ಚಾಲನೆ ಮಾಡಿ,ಮಧ್ಯಪಾನ ಮಾಡಿ ವಾಹನ ಚಾಲನೆ ಮಾಡಿ ಮರಣಾಂತರ ಹಾಗು ದೊಡ್ಡ ಪ್ರಮಾಣದ ಅಪಘಾತಗಳಿಗೆ ಕಾರಣರಾದ ಚಾಲಕರನ್ನು ಸೇವೆಯಿಂದ ವಜಾ ಮಾಡುವುದನ್ನು ಒಳಗೊಂಡಂತೆ ಸೂಕ್ತ ಶಿಸ್ತಿನ ಕ್ರಮ ಜರುಗಿಸುವುದಲ್ಲದೆ ಅಪಘಾತಕ್ಕೆ ಕಾರಣರಾದ ಚಾಲಕರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತಿನಲ್ಲಿಡುವುದಾಗಿದೆ.
2) ಚಾಲಕರುಗಳಿಗೆ ಕರ್ತವ್ಯದ ಮೇಲಿದ್ದಾಗ ಉತ್ತಮ ನಡುವಳಿಕೆ ಹಾಗೂ ಸಂಚಾರ ನಿಯಮಗಳ ಬಗ್ಗೆ ತರಬೇತಿ ನೀಡಲಾಗುವುದು.
3) ಚಾಲಕರ ನೇಮಕಾತಿ ವಿಧಾನವನ್ನು ಸಂಕೀರ್ಣಗೊಳಿಸಲಾಗಿದೆ.
4) ಚಾಲಕರ ನೇಮಕಾತಿಗೆ ನಿಗದಿಪಡಿಸಿಲಾಗಿದ್ದು ಕನಿಷ್ಟ ವಯೋಮಿತಿಯನ್ನು 21 ವರ್ಷದಿಂದ 24 ವರ್ಷಗಳಿಗೆ ಹೆಚ್ಚಿಸಲಾಗಿದೆ.
5) 20ವರ್ಷ ಮತ್ತು 5ವರ್ಷಗಳ ಅಪಘಾತ ರಹಿತ ಸೇವೆ ಸಲ್ಲಿಸಿದ ಚಾಲಕರುಗಳಿಗೆ ಕ್ರಮವಾಗಿ, ಮುಖ್ಯ ಮಂತ್ರಿಯವರ ಚಿನ್ನದ ಪದಕ ಮತ್ತು ಬೆಳ್ಳಿ ಪದಕವನ್ನು ನೀಡಲಾಗುತ್ತಿದೆ. ಬೆಂಗಳೂರು ನಗರ ಸಾರಿಗೆ ಚಾಲಕರುಗಳಿಗೆ ಈ ಅವಧಿಯನ್ನು ಕ್ರಮವಾಗಿ 7 ವರ್ಷ ಮತ್ತು 3 ವರ್ಷಗಳಿಗೆ ಇಳಿಸಲಾಗಿದೆ.

ಈ ಮೇಲಿನ ಕ್ರಮಗಳಿಂದಾಗಿ ಪ್ರತಿ ಲಕ್ಷ ಕಿ.ಮೀ.ಗಳಿಗೆ ಉಂಟಾಗುತ್ತಿರುವ ಅಪಘಾತದ ದರ ರಾಷ್ಟ್ರದ ಇತರ ದೊಡ್ಡ ಸಾರಿಗೆ ಸಂಸ್ಥೆಗಳಿಗೆ ಹೋಲಿಸಿದಾಗ ಕರ್ನಾಟಕ ,ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕಡಿಮೆ ಇರುತ್ತದೆ.

11

ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಡಿಯುತ್ತಿರುವ ಅಪಘಾತಗಳು

625 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬಳ್ಳ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ ನಂ.4ರ ವ್ಯಾಪ್ತಿಯಲ್ಲಿ ಬರುವ ಕಳ್ಳಂಬೆಳ್ಳ ಆರಕ್ಷಕ ಠಾಣೆಯ ಸರಹದ್ದಿನಲ್ಲಿ ದಿನೇದಿನೇ ಹೆಚ್ಚುತ್ತಿರುವ ಅಪಘಾತಗಳಿಂದಾಗಿ ಸಾರ್ವಜನಿಕರಲ್ಲಿ ಭೀತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಇಲಾಖೆಯು ಅನುಸರಿಸುತ್ತಿರುವ ಕಾರ್ಯತಂತ್ರ ಮತ್ತು ವಿಧಾನಗಳೇನು?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಹೌದು.

ಆ) ಅಪಘಾತಗಳನ್ನು ತಡೆಗಟ್ಟಲು ಈ ಕೆಳಕಂಡ ಕಾರ್ಯ ವಿಧಾನಗಳನ್ನು ಕೈಗೊಳ್ಳಲಾಗಿದೆ:-

1) ರಾಷ್ಟ್ರೀಯ ಹೆದ್ದಾರಿಯಲ್ಲಿ ಗಸ್ತುಕಾರ್ಯಾಚರಣೆ ತೀವ್ರಗೊಳಿಸಲಾಗಿದೆ.

2) ಮೋಟಾರು ವಾಹನ ಕಾಯಿದೆ ಮತ್ತು ನಿಯಮಗಳನ್ನು ಪಾಲಿಸಲು ಹೆಚ್ಚಿನ ಶಕ್ತಿ ಪೂರ್ಣ ಕ್ರಮ ಕೈಗೊಳ್ಳಲಾಗಿದೆ.

3) ಸೂಚನಾ ಫಲಕಗಳನ್ನು ಹೆಚ್ಚಿನ ಅಪಘಾತ ಸ್ಥಳಗಳಲ್ಲಿ ಅಳವಡಿಸಲಾಗಿದೆ.

4) ಡಾಂಬರ ರಸ್ತೆಗಳನ್ನು ಉತ್ತಮಗೊಳಿಸಲಾಗಿದೆ ಮತ್ತು ತಿರುವುಗಳನ್ನು ನಿರೂಪಿಸುವ ಫಲಕಗಳನ್ನು ಸಹ ಜೋಡಿಸಲಾಗಿದೆ.

5) ಪ್ರಮುಖ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ವೈದ್ಯಕೀಯ ಸಂಚಾರ ಘಟಕಗಳನ್ನು ಮತ್ತು ತಾಲ್ಲೂಕು ಮತ್ತು ಜಿಲ್ಲಾಕೇಂದ್ರಗಳಲ್ಲಿ ವೈದ್ಯಕೀಯ ಕೇಂದ್ರಗಳನ್ನು (ಟ್ರಾಮಾಸೆಂಟರ್) ಸ್ಥಾಪಿಸುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ.

ದ.ಕ. ಜಿಲ್ಲೆಯಲ್ಲಿರುವ ಗೇರು ಬೀಜ ಕಾರ್ಖಾನೆ ಕುರಿತು

565 - ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ವಿಜ್ಞಾನ, ಯಂತ್ರಕಲಾ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಗೇರು ಬೀಜ ಕಾರ್ಖಾನೆಯ ಹೊಗೆಯಿಂದ ವಾತಾವರಣ ಕಲುಷಿತವಾಗದು ಎಂದು ಸರ್ಕಾರವು ಆದೇಶ ನೀಡಿರುವುದು ನಿಜವೇ?

ಆ) ಹೊಸ ಗೇರು ಬೀಜ ಕಾರ್ಖಾನೆಯನ್ನು ತೆರೆಯುವಾಗ ಪರಿಸರ ಮಾಲಿನ್ಯವನ್ನು ಕಾಪಾಡಲು ಸರ್ಕಾರವು ಏನಾದರೂ ಹೊಸ ನಿಯಮವನ್ನು ತಂದಿದೆಯೇ?

ಇ) ತಂದಲ್ಲಿ ಆ ನಿಯಮಗಳ ವಿವರಗಳೇನು?

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗುತ್ತಿರುವ ಗೇರು ಬೀಜ ಕಾರ್ಖಾನೆಗಳ ಸಂಖ್ಯೆ ಎಷ್ಟು ಹಾಗೂ ಹಳೆಕಾರ್ಖಾನೆಗಳ ಸಂಖ್ಯೆ ಎಷ್ಟು?

ಉ) ಗೇರು ಬೀಜ ಕಾರ್ಖಾನೆಯ ಮಾಲೀಕರು ಕೊಡುವ ಮೂಲ ಭೂತ ಸೌಕರ್ಯ ಸೌಲಭ್ಯಗಳೇನು?

ಡಾ|| ಹೆಚ್.ಆರ್. ರಾಜು (ವಿಜ್ಞಾನ, ಯಂತ್ರಕಲಾ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ರಾಜ್ಯ ಸಚಿವರು) :

ಅ) ಇಲ್ಲ

ಆ) ಇಲ್ಲ

ಇ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಈ) ಕಾರ್ಖಾನೆ ಮತ್ತು ಬಾಯ್ಲರುಗಳ ಮುಖ್ಯ ಪರಿವಿಕ್ಷಕರ ವರದಿಯಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂತನವಾಗಿ ಎರಡು ಕಾರ್ಖಾನೆಗಳನ್ನು ಪ್ರಾರಂಭಿಸಲಾಗಿದ್ದು, ಈಗಾಗಲೆ 67 ಹಳೆಯ ಕಾರ್ಖಾನೆಗಳು ಇರುತ್ತವೆ.

ಉ) ಕಾರ್ಖಾನೆ ಮತ್ತು ಬಾಯ್ಲರುಗಳ ಮುಖ್ಯ ಪರಿವೀಕ್ಷಕರವರಿಂದ ವರದಿಯಾದಂತೆ ಕಾರ್ಖಾನೆಗಳ ಕಾಯ್ದೆ ಮತ್ತು ಅದರಡಿಯಲ್ಲಿ ರಚಿಸುವ ನಿಯಮಗಳಂತೆ ಸೌಕರ್ಯ ಸೌಲಭ್ಯಗಳನ್ನು ಒದಗಿಸುವ ಅಗತ್ಯವಿದ್ದು, ಈ ಅಗತ್ಯಗಳನ್ನು ಉದ್ಯಮಗಳವರು ಪೂರೈಸುತ್ತಾರೆ.

ಕುಂದಾಪುರದ ಹಂಗ್ಲೂರಿನ ಗುರುರಾಜಭಟ್ಟರ ಪ್ರಕರಣ

555 - ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರದ ಹಂಗಳೂರಿನಲ್ಲಿ ಲಿಲ್ಲಿಬಾಯಿ ಹಾರ್ದಳ್ಳಿ ಮಂಡಳಿಯ ಗಣಪ ಮಡಿವಾಳ ಕೋಟೇಶ್ವರದ ಗುರುರಾಜಭಟ್ಟ ಪ್ರಕರಣಗಳನ್ನು ಸಿಒಡಿ ತನಿಖೆ ಒಳಪಡಿಸಿದ್ದು ನಿಜವೇ?

ಆ) ನಿಜವಾಗಿದ್ದಲ್ಲಿ ಈತನಕ ಸಿಒಡಿಯವರು ಕಾರ್ಯನಿರ್ವಹಿಸದಿರಲು ಕಾರಣವೇನು?

ಇ) ಒಂದು ಪಕ್ಷ ಸಿಒಡಿ ತನಿಖೆಗೆ ಒಳಪಡಿಸದಿದ್ದಲ್ಲಿ ಒಳಪಡಿಸುವ ಯೋಜನೆ ಸರ್ಕಾರದ ಮುಂದಿವೆಯೇ?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಹೌದು

ಆ) ಸರ್ಕಾರದ ಪತ್ರ ಸಂಖ್ಯೆ : ಒಇ 130 ಸಿಒಡಿ 94 ದಿನಾಂಕ 18-7-94ರ ಪ್ರಕಾರ ಶ್ರೀಮತಿ ಲಿಲ್ಲಿಬಾಯಿ, ಗಣಪ ಮಡಿವಾಳ, ಗುರುರಾಜ ಭಟ್ಟ, ಇವರುಗಳ ಕೊಲೆ ಪ್ರಕರಣಗಳನ್ನು ದಿನಾಂಕ 9-8-94ರಂದು ಸಿಒಡಿಯಲ್ಲಿ ತನಿಖೆಗೆ ಕೈಗೆತ್ತಿಕೊಳ್ಳಲಾಗಿದೆ. ತನಿಖೆಯು ತೀವ್ರ ಪ್ರಗತಿಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ಪೂರಕ ಟಿಪ್ಪಣಿ

ದಿನಾಂಕ 4-9-90 ರಂದು ಬೆಳಿಗ್ಗೆ 7-45 ರಿಂದ ರಾತ್ರಿ 9.30 ಗಂಟೆಯೊಳಗಾಗಿ ಫಿರ್ಯಾದಿ ಕೆ.ಎಂ. ಶಿವಾನಂದ, ಹಂಗಳೂರು ಇವರು ತಮ್ಮ ಮನೆಯಲ್ಲಿ ಇಲ್ಲದಿರುವಾಗ ಅವರ ಉಪ ಪತ್ನಿ ಶ್ರೀಮತಿ ಲಿಲ್ಲಿಬಾಯಿ, ಇವರನ್ನು ಯಾರೋ ದುಷ್ಕರ್ಮಿಗಳು ಕೊಲೆ ಮಾಡಿ ಮೃತಳ ಕೈಯಲ್ಲಿದ್ದ ಎರಡು ಚಿನ್ನದ ಬಳೆಗಳು ಮತ್ತು ಒಂದು ಜೊತೆ ಕಿವಿಯಲ್ಲಿನ ಬಂಗಾರದ ಬೆಂಡೋಲೆಯನ್ನು ಅಪಹರಿಸಿರುತ್ತಾರೆ. ಈ ಬಗ್ಗೆ ಕುಂದಾಪುರ ಪೊಲೀಸ್ ಠಾಣೆ, ಅಪರಾಧ ಸಂಖ್ಯೆ : 137 : 90 ಕಲಂ 302, 392 ಐ.ಪಿ.ಸಿ. ಪ್ರಕಾರ ಮೊಕದ್ದಮೆ ದಾಖಲಿಸಿಕೊಂಡು ತನಿಖೆ ನಡೆಸಿ ಇದು

ಪತ್ತೆಯಾಗದ ಪ್ರಕರಣವೆಂದು ನ್ಯಾಯಾಲಯಕ್ಕೆ ದಿನಾಂಕ 20-4-92ರಂದು ಅಂತಿಮ 'ಸಿ' ವರದಿಯನ್ನು ಸಲ್ಲಿಸಲಾಗಿರುತ್ತದೆ. ಈ ಪ್ರಕರಣವನ್ನು ದಿನಾಂಕ 9-8-94ರಂದು ಸಿಡಿಯಲ್ಲಿ ತನಿಖೆಗೆ ಕೈಗೆತ್ತಿಕೊಳ್ಳಲಾಗಿದೆ.

ದಿನಾಂಕ 7-5-94ರ ರಾತ್ರಿ 8.30ರ ಸಮಯದಲ್ಲಿ ಕೋಟೇಶ್ವರ ಗ್ರಾಮದ ಫಿರ್ಯಾದಿ ರಾಘವೇಂದ್ರರ ಮನೆಯ ಗೇಟಿನ ಸಮೀಪದಲ್ಲಿ ಫಿರ್ಯಾದಿಯವರ ತಂದೆ ಕೆ.ಆರ್. ಗುರುರಾಜ ಭಟ್ಟರವರು ತಿವಿತದ ಗಾಯಗಳಿಂದ ಕುಸಿದು ಬಿದ್ದಿದ್ದರು. ಫಿರ್ಯಾದಿಯು ಹತ್ತಿರದ ಎನ್.ಆರ್. ಆಚಾರ್ಯ ನರ್ಸಿಂಗ್ ಹೋಂಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಅವರು ಮೃತಪಟ್ಟಿರುತ್ತಾರೆ. ಈ ಪ್ರಕರಣವನ್ನು ದಿನಾಂಕ 9-8-94 ರಂದು ಸಿಒಡಿಯಲ್ಲಿ ತನಿಖೆಗೆ ಕೈಗೆತ್ತಿಕೊಳ್ಳಲಾಗಿದೆ.

ದಿನಾಂಕ 24-8-93ರಂದು ರಾತ್ರಿ ಸುಮಾರು 8 ಘಂಟೆಯ ಸಮಯದಲ್ಲಿ ಹಾರ್ದಹಳ್ಳಿ ಮಂಡಳ್ಳಿ ಗ್ರಾಮದ ಜನ್ನಾಡಿಯಲ್ಲಿ ವಾಸವಾಗಿದ್ದ ಗಣಪ ಮಡಿವಾಳರವರು ತನ್ನ ಮನೆಯ ಎದುರಿನಲ್ಲಿರುವ ಬಾವಿಯಲ್ಲಿ ನೀರು ಸೇದುತ್ತಿದ್ದಾಗ ಯಾರೋ ಅಪರಿಚಿತರು ಜೀಪಿನಲ್ಲಿ ಬಂದು ಆತನನ್ನು ಕರೆದುಕೊಂಡು ಹೋಗಿ ಮನೆಯ ಹಿಂಭಾಗದ ಕಾಡಿನಲ್ಲಿ ಕೊಲೆ ಮಾಡಿರುತ್ತಾರೆ. ಈ ಪ್ರಕರಣವನ್ನು ದಿನಾಂಕ 9-8-94ರಂದು ಸಿಒಡಿಯಲ್ಲಿ ತನಿಖೆಗೆ ಕೈಗೆತ್ತಿಕೊಂಡಿರುತ್ತದೆ.

ಕರ್ನಾಟಕ ಸರ್ಕಾರ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಮಾಡುವುದು

27 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದವರು ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಎಲ್ಲಾ ಇಲಾಖೆಗಳಿಗೂ ಆದೇಶ ನೀಡಿಲ್ಲವೆ?

ಆ) ಇದುವರೆಗೆ ಯಾವ ಯಾವ ಇಲಾಖೆಗಳಲ್ಲಿ ಎಷ್ಟು ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ (ವಿವರ ನೀಡುವುದು)

ಇ) ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದಿರುವ ಇಲಾಖೆ ಮುಖ್ಯಸ್ಥರ ಮೇಲೆ ತೆಗೆದುಕೊಂಡಿರುವ ಕ್ರಮವೇನು?

ಈ) ಮೀಸಲಾತಿ ಜಾರಿಯಲ್ಲಿ ಉಪೇಕ್ಷೆ ಮಾಡಿರುವ ಅಧಿಕಾರಿಗಳ ವಿರುದ್ಧ 6 ತಿಂಗಳ ಸಜಾ 1000 ರೂಪಾಯಿಗಳ ದಂಡ ಎಂದು ಸರ್ಕಾರ ಆದೇಶ ಹೊರಡಿಸಿರುವುದನ್ನು ಅನುಸರಿಸಿ ಎಷ್ಟು ಅಧಿಕಾರಿಗಳ ಮೇಲೆ ಈ ಆದೇಶ ಜಾರಿ ಮಾಡಲಾಗಿದೆ?

ಉ) 1993ರ ಜನವರಿಯಲ್ಲಿ ಮುಖ್ಯ ಮಂತ್ರಿಗಳು ಸದನದಲ್ಲಿ ಉತ್ತರಿಸುತ್ತಾ ಡಿ.ಪಿ.ಎ.ಆರ್.ನಲ್ಲಿ ಮಾನಿಟರಿಂಗ್ ಸೆಲ್ ಮಾಡಿ ಒಂದು ತಿಂಗಳೊಳಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿಸುತ್ತೇನೆಂದು ಆಶ್ವಾಸನೆ ನೀಡಿರುವುದು ನಿಜವೇ? ಹಾಗಿದ್ದಲ್ಲಿ ಈ ಆಶ್ವಾಸನೆ ನೆರವೇರಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ನೀಡಿದೆ.

ಆ) ಇಲಾಖಾವಾರು ಮಾಹಿತಿ ಲಭ್ಯವಿಲ್ಲ. ಒಟ್ಟು 535 ಹುದ್ದೆಗಳನ್ನು ಭರ್ತಿ ಮಾಡಿದೆ.

ಇ) ಅಂತಹ ಪ್ರಕರಣ ಯಾವುದೂ ಇರುವುದಿಲ್ಲ.

ಈ) ಅಂತಹ ಪ್ರಕರಣ ಯಾವುದೂ ಇರುವುದಿಲ್ಲ.

ಉ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಬ್ಯಾಕ್‌ಲಾಗನ್ನು ದಿನಾಂಕ 31.3.94ರ ವೇಳೆಗೆ ಭರ್ತಿ ಮಾಡಿ ಸರಿದೂಗಿಸಲು ಸರ್ಕಾರ ದಿನಾಂಕ 20.11.1993 ರಂದು ಆದೇಶ ಹೊರಡಿಸಿದೆ.

ಸಾರ್ವಜನಿಕ ಉದ್ಯಮಗಳಲ್ಲಿ ಇರುವ ಎಸ್.ಸಿ/ಎಸ್.ಟಿ. ಜನಾಂಗದವರ ಸಂಖ್ಯೆ

360 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ಉದ್ಯಮಗಳಲ್ಲಿ ಇರುವ ಹರಿಜನ- ಗಿರಿಜನ ನೌಕರರ ಸಂಖ್ಯೆ ಎಷ್ಟು?

ಆ) ಈ ಉದ್ಯಮಗಳು ಮೀಸಲಾತಿಯ ಪ್ರಮಾಣವನ್ನು ಅನುಸರಿಸಿರುವರೆ?

ಇ) ಮೀಸಲಾತಿ ಅನುಸರಿಸದಿದ್ದರೆ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) 31-3-1994ರ ಅನ್ವಯ ಸಾರ್ವಜನಿಕ ಉದ್ದಿಮೆಗಳಲ್ಲಿ 25759 ಹರಿಜನ-ಗಿರಿಜನ ನೌಕರರು ಇದ್ದರು.

ಆ) ಸಾಮಾನ್ಯವಾಗಿ ಎಲ್ಲಾ ಉದ್ದಿಮೆಗಳೂ ಮೀಸಲಾತಿ ಪ್ರಮಾಣವನ್ನು ಅನುಸರಿಸುತ್ತಿರುವರು.

ಇ) ಸಾರ್ವಜನಿಕ ಉದ್ದಿಮೆಗಳಿಗೆ ರೋಸ್ಟರ್ ಪದ್ಧತಿಯನ್ವಯ ನೇಮಕ: ಪದೋನ್ನತಿ ಮಾಡಬೇಕೆಂದು ಹಾಗೂ ಮೀಸಲಾತಿಯಲ್ಲಿ ಬಾಕಿ ಇರುವ ಸ್ಥಾನಗಳನ್ನು ಶೀಘ್ರವಾಗಿ ತುಂಬುವಂತೆ ಸೂಚಿಸಲಾಗಿದೆ.

ಸಾಮಾನ್ಯ ನೇಮಕಾತಿಗಳಿಗೆ ಇರುವ ನಿಷೇಧವು ಹರಿಜನ - ಗಿರಿಜನರಿಗೆ ಮೀಸಲಾಗಿಟ್ಟ ಹುದ್ದೆಗಳಿಗೆ ಅನ್ವಯವಾಗುವುದಿಲ್ಲವೆಂದು ಸ್ಪಷ್ಟಪಡಿಸಲಾಗಿದೆ. ಹಾಗೂ ಜ್ಞಾಪಿಸಲಾಗಿದೆ.

ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಆರ್.ಎಲ್.ಇ.ಜಿ.ಪಿ. ಇಂದಿರಾ ಆವಾಜ್ ಹುಡ್ಕೋ ಇತ್ಯಾದಿ ಯೋಜನೆ

296 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರಕ್ಕೆ ಒಳಪಡುವ ಚಿತ್ತಾಪೂರ ತಾಲ್ಲೂಕಿನ 11 ಗ್ರಾಮಗಳು ಸೇರಿ 1989-90 ರಿಂದ ಇಲ್ಲಿಯವರೆಗೂ ಆರ್‌ಎಲ್‌ಇಜಿಪಿ, ಇಂದಿರಾ ಆವಾಸ್ ಯೋಜನೆ, ಹುಡ್ಕೋ ಇತ್ಯಾದಿ ಯೋಜನೆಗಳಲ್ಲಿ ಭೂ ಸೇನಾ ನಿಗಮ ಹಾಗೂ ತಾಲ್ಲೂಕು ಪಂಚಾಯತಿ ಸಮಿತಿಯವರು ನಿರ್ಮಾಣ ಮಾಡಿರುವ ಗ್ರಾಮವಾರು ಫಲಾನುಭವಿಗಳ ಒಟ್ಟು ಮನೆಗಳು ಎಷ್ಟು (ಆಯಾ ಇಲಾಖೆವಾರು ಭೂ ಸೇವಾ ನಿಗಮ, ತಾಲ್ಲೂಕು ಪಂಚಾಯತ್ ವಿವರ ನೀಡುವುದು)

ಆ) ನಿರ್ಮಾಣ ಮಾಡಿದರೆ ಇವುಗಳಲ್ಲಿ ಪೂರ್ತಿ ತಯಾರಾಗಿ ಫಲಾನುಭವಿಗಳ ವಶದಲ್ಲಿ ಕೊಟ್ಟಿರುವ ಮನೆಗಳು ಎಷ್ಟು? ಉಳಿದಿರುವ ಮನೆಗಳು ಎಷ್ಟು (ಫಲಾನುಭವಿಗಳ ಗ್ರಾಮಾವಾರು ಯಾದಿ)

ಇ) ಉಳಿದಿರುವ ಮನೆಗಳು ಫಲಾನುಭವಿಗಳ ಅಧೀನದಲ್ಲಿ ಕೊಟ್ಟಿಲ್ಲವೇಕೆ?

ಈ) ಈ ಮನೆಗಳು ನಿರ್ಮಾಣ ಮಾಡಿದರೆ ಗಟ್ಟಿಮುಟ್ಟಾಗಿ ಉಳಿದಿದೆಯೇ ಅಥವಾ ಬಿದ್ದುಹೋಗಿ ಇರಲು ಸಾಧ್ಯವಿಲ್ಲದಂತೆಯಾಗಿರುವ ಅವುಗಳ ವಿವರ, ಗ್ರಾಮವಾರು,

ಫಲಾನುಭವಿಗಳ ಅಧೀನದಲ್ಲಿ ಕೊಟ್ಟರೂ ಸಹ ಕೇವಲ ರಿಕಾರ್ಡ್‌ನಲ್ಲಿ ಮಾತ್ರ ಇದ್ದು, ಆ ಮನೆಗಳಲ್ಲಿ ಫಲಾನುಭವಿಗಳು ಇರಲಾರದಂತೆಯಾಗಿರುವ ಸಂಖ್ಯೆ ಎಷ್ಟು? (ಗ್ರಾಮವಾರು ಫಲಾನುಭವಿಗಳ ಯಾದಿ)

ಉ) ಈ ಪ್ರಕಾರ ನಿರ್ಮಾಣ ಸರಿಯಾಗಿ ಆಗದೇ ಬಿದ್ದು ಹೋಗಿರುವ ಮನೆಗಳು ಹಾಗೂ ಕೇವಲ ರಿಕಾರ್ಡ್‌ನಲ್ಲಿ ಫಲಾನುಭವಿಗಳ ವಶದಲ್ಲಿ ಕೊಟ್ಟಿರುವ ಮನೆಗಳನ್ನು ದುರಸ್ಥಿ ಮಾಡಿ ಈ ಬಡ ಫಲಾನುಭವಿಗಳಿಗೆ ವಾಸ ಮಾಡಲು ಅನುಕೂಲ ಮಾಡಿಕೊಡುವುದು ಯಾವಾಗ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಸೇಡಂ ಕ್ಷೇತ್ರಕ್ಕೆ ಒಳಪಡುವ ಚಿತ್ತಾಪೂರ ತಾಲ್ಲೂಕಿನ 11 ಗ್ರಾಮಗಳು ಸೇರಿ 1989-90 ರಿಂದ ಈ ಕೆಳಕಂಡಂತೆ ಮನೆಗಳನ್ನು ನಿರ್ಮಿಸಲಾಗಿದೆ.

1.	ಇಂದಿರಾ ಆವಾಸ್ ಯೋಜನೆ	-	10
2.	ಅಂಬೇಡ್ಕರ್ ಯೋಜನೆ	-	04
3.	ಆಶ್ರಯ	-	25
4.	ಹುಡ್ಕೋ ಯೋಜನೆ	-	38
	ಒಟ್ಟು		77

ತಃಖ್ತೆ ಲಗತ್ತಿಸಿದೆ

ಆ) ಹುಡ್ಕೋ ಯೋಜನೆಯ (12) ಮನೆಗಳು ಫಲಾನುಭವಿಗಳ ವಶಕ್ಕೆ ಕೊಡಲಾಗಿದೆ. ಉಳಿದಿರುವ ಮನೆಗಳು 65 ಇರುವುವು. ತಃಖ್ತೆ ಲಗತ್ತಿಸಿದೆ.

ಇ) ಉಳಿದಿರುವ ಮನೆಗಳು ವಿವಿಧ ಹಂತದಲ್ಲಿರುವುದರಿಂದ, ಪೂರ್ಣಗೊಳಿಸಿ, ಫಲಾನುಭವಿಗಳಿಗೆ ಕೊಡಲಾಗುವುದು.

ಈ) ಈವರೆಗೆ ಕಟ್ಟಿದ ಎಲ್ಲಾ ಮನೆಗಳು ಗಟ್ಟಿಮುಟ್ಟಾಗಿ ಉಳಿದಿವೆ. ಅವುಗಳಲ್ಲಿ ಫಲಾನುಭವಿಗಳು ಹಾಲಿ ವಾಸಿಸುತ್ತಿರುವರು.

ಉ) "ಈ"ನಲ್ಲಿ ಉತ್ತರಿಸಿರುವ ಪ್ರಕಾರ ಉದ್ಭವಿಸುವುದಿಲ್ಲ

ಆಶ್ರಯ ಮನೆಗಳು

ಕ್ರಮ ಸಂಖ್ಯೆ	ಫಲಾನುಭವಿಗಳ ಹೆಸರು	ಗ್ರಾಮ	ಕೆಲಸದ ಹಂತ
1	2	3	4
1.	ವೆಂಕಟಪ್ಪಾ ಕೃಷ್ಣಪ್ಪಾ	ರಾಮತೀರ್ಥ	ಮುಗಿದಿದೆ ಫೈನಲ್ ಮಾಡಿ
2.	ಗಂಗಮ್ಮಾ ರಾಮಣ್ಣಾ	"	"
3.	ಶಿವಲಿಂಗಮ್ಮಾ ಬಸ್ಸಪ್ಪಾ	"	"
4.	ಭೀಮಣ್ಣಾ ತಮ್ಮಣ್ಣಾ	"	"
5.	ತಾನಾಸಿಂಗ್ ಮಾಣಿಕ್ಯಪ್ಪಾ	"	"
6.	ದೇವಪ್ಪಾ ಮಲ್ಲಪ್ಪಾ	ರಾಚೋಳಾ	"
7.	ಶರಣಪ್ಪಾ ಶಿವಪ್ಪಾ	"	"
8.	ಮೈಹಿಭೂಬ ಘುದುಸಾಬ	"	"

9.	ಸಾಬಣ್ಣಾ ಮಲ್ಲಪ್ಪಾ	"	"
10.	ಮಹಾದೇವಪ್ಪಾ ಮಲ್ಲಪ್ಪಾ.	"	"
11.	ಬಸವರಾಜ ಮಲ್ಲಣ್ಣಾ	ಅಲ್ಲಹಳ್ಳಿ	ಮುಗಿದಿದೆ ವಾಸಿಸುತ್ತಿದ್ದಾರೆ
12.	ಜಗದೇವಿ ನಾಗಣ	"	"
13.	ತಿಪ್ಪಣ್ಣಾ ಚೆನ್ನಬಸಪ್ಪಾ	"	"
14.	ಅಂತಪಾಪ ಮಲ್ಲಪ್ಪಾ	"	"
15.	ಪೀರಪ್ಪಾ ಸಾಬಣ್ಣಾ	"	"
16.	ಮರೆಣ್ಣಾ ಚಂದ್ರಯ್ಯ	"	"
17.	ಸಿದ್ದಮ್ಮ ಮಹಾದೇವಪ್ಪಾ	ಹಣ್ಣಕೇರಾ	ಮುಗಿದಿದೆ ಫೈನಲ್ ಬಿಲ್ಲು ಮಾಡಿಲ್ಲ
18.	ನೀಲಮ್ಮ ಮಾಳಪ್ಪಾ	"	"
19.	ಭೀಮರಾಯ ಸಿದ್ದಣ್ಣಾ	"	"
20.	ವಾಲು ಮಾನ್ಯಾ	"	"
21.	ಸೀತು ನಾಯಕ	"	"
22.	ಭೀಮಣ್ಣಾ ಚೆನ್ನಬಸಪ್ಪ	ದಂಡಗುಂಡ	"
23.	ದುರ್ಗಪ್ಪಾ ದುರ್ಗಪ್ಪಾ	"	ಮುಗಿಯುವ ಹಂತದಲ್ಲಿದೆ
24.	ಶಾಂತಪ್ಪಾ ಚೆನ್ನಬಸಪ್ಪಾ	"	"
25.	ಶರಣಪ್ಪಾ ಹಣಮಂತ	"	"

ಈ ಮನೆಗಳು ಯಾವುದೇ ಪರಿಸ್ಥಿತಿಯಲ್ಲಿ ಬೀಳುವಂತಿಲ್ಲಾ

ಇಂದಿರಾ ಆವಾಸ ಮನೆಗಳು ಗ್ರಾಮ:ಬಿಳಿಗೇರಾ ಸೇಡಂ ಮತ ಕ್ಷೇತ್ರ

ಕ್ರಮ ಸಂಖ್ಯೆ	ಫಲಾನುಭವಿಗಳ ಹೆಸರು	ಗ್ರಾಮ	ಕೆಲಸದ ಹಂತ
1.	ಶ್ರೀ ಸಿದ್ರಾಮಪ್ಪ ತಂದೆ ಬಸಪ್ಪಾ	ಬಿಳಿಗೇರಾ	ಕೆಲಸ ಪ್ರಗತಿಯಲ್ಲಿದೆ.
2.	ಶ್ರಿ ಚೆನ್ನಬಸಪ್ಪಾ ತಂದೆ ದೇವಿಂದ್ರಪ್ಪ	"	"
3.	ಶ್ರೀ ಮಲ್ಲಪ್ಪಾ ನಾಗಪ್ಪಾ	ಬಿಳಿಗೇರಾ	"
4.	ಶ್ರೀ ಶರಣಪ್ಪಾ ಹಣಮಂತಪ್ಪ	"	"
5.	ಶ್ರೀ ರಾಜಣ್ಣಾ ಅಯ್ಯಪ್ಪಾ	"	"
6.	ಶ್ರೀ ಬುಗ್ಗಪ್ಪಾ ಬಸಪ್ಪಾ	"	"
7.	ಶ್ರೀ ಭೀಮರಾಯ ತಂದೆ ದುರ್ಗಪ್ಪಾ	"	"
8.	ಶ್ರೀ ಆನಂದಪ್ಪಾ ಅಯ್ಯಪ್ಪಾ	"	"
9.	ಶ್ರೀ ಮರಿಯಪ್ಪ ಹಣವಂತ	"	"
10.	ಶ್ರೀ ಸಿದ್ರಾಮಪ್ಪಾ ತಂದೆ ಲಿಂಗಪ್ಪಾ	"	"

ಅಂಬೇಡ್ಕರ್ ಯೋಜನೆಯಲ್ಲಿ ಸೇಡಂ ಮತ ಕ್ಷೇತ್ರಗಳ ಮನಗೆಳ ವಿವರ

ಕ್ರಮ ಸಂಖ್ಯೆ	ಫಲಾನುಭವಿಗಳ ಹೆಸರು	ಗ್ರಾಮ	ಮನೆಗಳ ಹಂತ	ಷರಾ
1.	ಯೇಶಪ್ಪಾ ಸೈಬಣ್ಣಾ	ಭೀಮನಹಳ್ಳಿ	ಪೂರ್ಣಗೊಂಡಿದೆ	ಮನೆ ಫೈನಲು ಮಾಡಿ ಫಲಾನುಭವಿಗಳಿಗೆ ಕೊಡಬೇಕಾಗಿದೆ
2.	ಸಾಬವ್ವಾ ಮಲ್ಲಪ್ಪಾ	”	”	”
3.	ಕರಮಣ್ಣಾ ದಂಡಪ್ಪಾ	”	”	”
4.	ಪಾರ್ವತಿ ಲಿಂಗಪ್ಪಾ	”	ರೂಫ್‌ಲೇವಲ್	ಮನೆ ಮುಗಿಯುವ ಹಂತದಲ್ಲಿದೆ.

ಸೇಡಂ ಮತ ಕ್ಷೇತ್ರದ ಹುಡ್ಕೋ ಮನೆಗಳ ಫಲಾನುಭವಿಗಳ ಯಾದಿ:

ಜಿಲ್ಲಾ : ಗುಲ್ಬರ್ಗಾ

ಕ್ರಮ ಸಂಖ್ಯೆ	ಫಲಾನುಭವಿಗಳ ಹೆಸರು	ಗ್ರಾಮ	ಮನೆಗಳ ಹಂತ	ಷರಾ
1	2	3	4	5
1.	ದಾನಬಾಯಿ ಗರು ನಾಯ್ಕಾ	ಬಿಳಿಗೇರಾ	ಮನೆ ಪೂರ್ಣವಾಗಿದೆ	ಮನೆಯ ವಾಸವಾಗಿ
2.	ದೇವಕಿಬಾಯಿ ರಾಮಚಂದ್ರ	”	”	”
3.	ಗುಮಲಿಬಾಯಿ ತುಳ್ಯಾ	”	”	”
4.	ನರಸಿಂಗ ಹಣಮು	”	”	”
5.	ಕಾಶಿರಾಮ ದೇಮಲಾ	”	”	”
6.	ಕೇಷ್ಲಿಬಾಯಿ ಸೂರ‍್ಯ	”	ಮನೆ ಪ್ರಗತಿಯಲ್ಲಿದೆ	”
7.	ಚಂದ್ರಮ್ಮಾ ತಿಪ್ಪಣ್ಣಾ	ಭೀಮನಹಳ್ಳಿ	-ಅದೇ-	”
8.	ಸುಶೀಲಮ್ಮಾ ಸುಬ್ಬಣ್ಣಾ	”	”	”
9.	ಮಲ್ಲಮ್ಮಾ ನಿಂಗಪ್ಪಾ	ಆಲಹಳ್ಳಿ	ಮನೆ ಪ್ರಗತಿಯಲ್ಲಿದೆ	”
10.	ನಾಗಪ್ಪಾ ಹಣಮಯ್ಯಾ	ಸಂಕನೂಗ	”	”
11.	ಶಿವಪ್ಪಾ ಹಣಮಂತಾ	ಅಲ್ಲೂರ(ಕ)	”	”
12.	ಮಲ್ಲಪ್ಪಾ ನಿಂಗಪ್ಪ	”	”	”
13.	ಸುಬ್ಬಣ್ಣಾ ಗೋವಿಂದಪ್ಪಾ	ದಂಡಗುಂಡ	”	”
14.	ನಿಂಗಪ್ಪಾ ಸಾಬಣ್ಣಾ	ಯಾಗಾಪೂರ	”	”
15.	ಸುಬ್ಬಣ್ಣಾ ಶಿವಪ್ಪಾ	”	”	”
16.	ಯಲ್ಲಪ್ಪಾ ದುರ್ಗಪ್ಪಾ	”	”	”
17.	ಗುಂಡಪ್ಪಾ ದುರುಗುಪ್ಪಾ	ಅಲ್ಲೂರ(ಬಿ)	ಪೂರ್ಣಗೊಂಡಿದೆ	ಮನೆಯಲ್ಲಿ ವಾಸವಾಗಿದ್ದಾರೆ
18.	ತಂಗಮ್ಮಾ ಮಲ್ಲಪ್ಪಾ	”	”	”
19.	ಸಾಬಣ್ಣಾ ಬಸಪ್ಪಾ	ಭೀಮಬಳ್ಳಿ	ಮನೆ ಪ್ರಗತಿ ಯಲ್ಲಿದೆ	”
20.	ಶರಣಪ್ಪಾ ಹಣಮಂತ	”	”	”
21.	ಸೀತಾಬಾಯಿ ಥಾವರು	ಬಿಳಿಗೇರಾ	ಪೂರ್ಣಗೊಂಡಿದ	ಮನೆಯಲ್ಲಿ ವಾಸವಾಗಿದ್ದಾರೆ
22.	ಗೇಮಲಿಬಾಯಿ ಸೇವು	”	”	”

23.	ಸೋನಿಬಾಯಿ ಸೂರ್ಯ	"	ಮನೆ ಪ್ರಗತಿಯಲ್ಲಿದೆ	"
24.	ಭೀಮಪ್ಪಾ ಹಣಮಂತ	"	"	"
25.	ಭಾಗಮ್ಮ ಮರಪ್ಪಾ	ಹಣ್ಣಿಕೇರಾ	"	"
26.	ದೊಡ್ಡಪ್ಪಾ ಸಾಬಣ್ಣಾ	"	"	"
27.	ಧಾವರು ಧಾನ್ಯಾ	"	"	"
28.	ತೋಟಯ್ಯಾ ಶರಣಯ್ಯಾ	ಆಲಹಳ್ಳಿ	ಪೂರ್ಣಗೊಂಡಿದೆ	ಮನೆಯಲ್ಲಿ ವಾಸವಾಗಿದ್ದಾರೆ
29.	ಮೌಲಾನಶಾಹಾ ಸುಲೇಮಾನಶಾಹಾ	ಆಲಹಳ್ಳಿ	ಮನೆ ಪ್ರಗತಿಯಲ್ಲಿದೆ	-
30.	ಅಕಬರಅಲಿ ಅರಸಾಬ	ಆಲಹಳ್ಳಿ	ಪೂರ್ಣಗೊಂಡಿದೆ	ಮನೆಯಲ್ಲಿ ವಾಸವಾಗಿದ್ದಾರೆ
31.	ಶರಣಯ್ಯಾ ಚೆನ್ನಬಸಯ್ಯಾ	ಆಲಹಳ್ಳಿ	ಮನೆ ಪ್ರಗತಿಯಲ್ಲಿದೆ	-
32.	ಈರಣ್ಣಾ ಶರಣಪ್ಪಾ	ಸಂಕನೂರ	"	-
33.	ಶಿವಪ್ಪಾ ಶರಣಪ್ಪಾ	"	"	-
34.	ಮಹಾದೇವಪ್ಪಾ ರಾಮಣ್ಣಾ	ದಂಡಗುಂಡ	"	-
35.	ಮೌಲಾಬಿ ಇಮಾಮಸಾಬ	ರಾಮತೀರ್ಥ	"	-
36.	ಭೀಮರಾಯ ರಂಗಪ್ಪಾ	"	"	-
37.	ಮಹಾದೇವ ಮಲ್ಲಪ್ಪಾ	ರಾಚೋಟಾ	ಪೂರ್ಣಗೊಂಡಿದೆ	ಮನೆಯಲ್ಲಿ ವಾಸವಾಗಿದ್ದಾರೆ.
38.	ದುರಗಮ್ಮಾ ಭೀಮಣ್ಣಾ	ಅಲೂರು (ಕ)	ಮನೆ ಪ್ರಗತಿ ಯಲ್ಲಿದೆ	

ಬೆಂಗಳೂರು ಜಯನಗರದ ಬಳಿಯಿರುವ ವಿಜಯ ಪ್ರೌಢಶಾಲೆ ಬಳಿ ಸಂಚಾರಿ ಪೋಲೀಸ್ ವ್ಯವಸ್ಥೆ

645 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಸೌತ್‌ಎಂಡ್ ವೃತ್ತದ ಬಳಿ ಇರುವ ವಿಜಯ ಪ್ರೌಢ ಶಾಲೆಯಲ್ಲಿ 2 ಸಾವಿರಕ್ಕೂ ಹೆಚ್ಚು ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದು ರಸ್ತೆ ದಾಟಲು ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬೆಂಗಳೂರಿನ ಸೋಫಿಯಾ ಶಾಲೆ, ಬಿಷಪ್ ಕಾಟನ್ ಶಾಲೆ ಮುಂತಾದ ಶಾಲೆಗಳ ಮುಂದೆ ಶಾಲೆ ಪ್ರಾರಂಭವಾಗುವ ವೇಳೆ ಹಾಗೂ ಬಿಡುಗಡೆಯಲ್ಲಿ ಸಂಚಾರಿ ಪೋಲೀಸರನ್ನು ನಿಯೋಜಿಸಿರುವುದು ನಿಜವಲ್ಲವೇ?

ಇ) ಹಾಗಿದ್ದಲ್ಲಿ, ಕೂಡಲೇ ವಿಜಯ ಪ್ರೌಢಶಾಲೆ ಬಳಿ ಬೆಳಿಗ್ಗೆ 10 ಗಂಟೆಯಿಂದ ಹಾಗೂ ಸಂಜೆ 5 ಗಂಟೆಯಿಂದ ಒಂದು ಗಂಟೆ ವೇಳೆ ಸಂಚಾರಿ ಪೋಲೀಸ್ ವ್ಯವಸ್ಥೆಯನ್ನು ಹಾಕಿ ಶಾಲಾ ಮಕ್ಕಳು ರಸ್ತೆ ದಾಟಲು ಅನುಕೂಲ ಕಲ್ಪಿಸಲಾಗುವುದೇ?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಇಲ್ಲ

ಆ) ಹೌದು

ಇ) ಬೆಂಗಳೂರು ನಗರ ಸಂಚಾರಿ ಪೋಲೀಸರ ಸಂಖ್ಯೆ ಕಡಿಮೆ ಇದ್ದು,ಸಂಚಾರ ಸಮಸ್ಯೆಗಳು ಅಧಿಕವಾಗಿರುವುದರಿಂದ ಇಂತಹ ಶಾಲೆಗಳ ಬಳಿ ಹಿರಿಯ ವಿದ್ಯಾರ್ಥಿಗಳಿಗೆ ಪೋಲೀಸರು ಸಂಚಾರ ನಿಯಂತ್ರಣದ ತರಬೇತಿ ನೀಡುತ್ತಿದ್ದು, ಅವರುಗಳು ಅದೇ ಶಾಲೆಗಳ ಬಳಿ ಉತ್ತಮ ಕೆಲಸ ಮಾಡುತ್ತಿದ್ದಾರೆ. ಸಂಚಾರಿ ಪೋಲೀಸರ ಸಂಖ್ಯೆ

ಉತ್ತಮಗೊಂಡಾಗ ಈ ಶಾಲೆಯ ಬಳಿ ಪೋಲೀಸರನ್ನು ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದು.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಭವಿಸುತ್ತಿರುವ ಅಪಘಾತಗಳು

355 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಗೃಹಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ಮೂಲಕ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಪಘಾತಗಳ ಸಂಖ್ಯೆ ಎಷ್ಟು?

ಆ) ಇದರಿಂದ ಎಷ್ಟು ಸಾವು-ನೋವುಗಳು ಸಂಭವಿಸಿವೆ?

ಇ) ದೇಶದ ಇತರ ರಾಜ್ಯಗಳನ್ನು ಹೋಲಿಸಿದರೆ ಅಪಘಾತಗಳಲ್ಲಿ ರಾಜ್ಯ ಯಾವ ಸ್ಥಾನದಲ್ಲಿದೆ?

ಈ) ಇತ್ತೀಚಿನ ದಿನಗಳಲ್ಲಿ ಬೆಂಗಳೂರು-ತುಮಕೂರು ರಸ್ತೆಯಲ್ಲಿ ಸರಣಿ ಅಪಘಾತಗಳು ಸಂಭವಿಸುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ?

ಉ) ರಸ್ತೆ ಅಪಘಾತಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಊ) ರಸ್ತೆ ಅಪಘಾತಗಳಲ್ಲಿ ಸಿಲುಕಿದವರಿಗೆ ತುರ್ತು ಚಿಕಿತ್ಸೆ ನೀಡಲು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಯಾವ ರೀತಿಯಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸಲಾಗಿದೆ?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ)

ವರ್ಷ	ಅಪಘಾತಗಳ ಸಂಖ್ಯೆ
1992	6736
1993	6974

ಆ)

	ಮೃತಪಟ್ಟವರು	ಗಾಯಾಳುಗಳು
1992	1542	7991
1993	1586	7769

ಇ) ಅಪಘಾತಗಳ ಪ್ರಮಾಣ ಕಡಿಮೆ ಇದೆ.

ಈ) ಹೌದು

ಉ) ರಸ್ತೆ ಅಪಘಾತಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ

1) ಅತಿ ವೇಗದ ವಾಹನಗಳನ್ನು ತಪಾಸಣೆ ಮಾಡಲಾಗುತ್ತಿದೆ.
2) ಪಾನಮತ್ತ ಚಾಲಕರನ್ನು ಪತ್ತೆ ಮಾಡಲಾಗುತ್ತಿದೆ.
3) ಅಧಿಕ ಭಾರ ಸರಕುಗಳನ್ನು ಸಾಗಿಸುವ ವಾಹನಗಳನ್ನು ಪತ್ತೆಹಚ್ಚಲಾಗುತ್ತಿದೆ.
4) ರಸ್ತೆಯ ಬದಿಯಲ್ಲಿ ವಾಹನಗಳನ್ನು ನಿಲ್ಲಿಸದಂತೆ ತಡೆಗಟ್ಟಲಾಗುತ್ತಿದೆ.
5) ನಿಧಾನ ಮತ್ತು ವೇಗವಾಗಿ ಚಲಿಸುವ ವಾಹನಗಳಿಗೆ ಪ್ರತ್ಯೇಕವಾಗಿ ಸಂಚಾರ ವ್ಯವಸ್ಥೆ ಮಾಡಲಾಗಿದೆ.
6) ರಾಷ್ಟ್ರೀಯ ಹೆದ್ದಾರಿಗಳಲ್ಲಿ ಗಸ್ತು ಕಾರ್ಯಾಚರಣೆಯನ್ನು ತೀವ್ರಗೊಳಿಸಲಾಗಿದೆ.
7) ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪಘಾತಕ್ಕೊಳಗಾಗಿ ಅಥವಾ ಬ್ರೇಕ್ ವೈಫಲ್ಯದಿಂದ ರಸ್ತೆಯ ಮಧ್ಯದಲ್ಲಿಯೇ ನಿಲ್ಲುವ ವಾಹನಗಳನ್ನು ತೆಗೆಯುವ ಸಲುವಾಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುವ ಜಿಲ್ಲೆಗಳಿಗೆ ರ್‍ಯಾಕರ್ಸ್ ಒದಗಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

8) ರಾಷ್ಟ್ರೀಯ ಹೆದ್ದಾರಿಗಳಲ್ಲಿ ವೇಗವಾಗಿ ಸಂಚರಿಸುವ ವಾಹನಗಳನ್ನು ಗುರ್ತಿಸುವ ಸಲುವಾಗಿ ರ್‍ಯಾಡಾರ್ ಗನ್ ಒದಗಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

9) ಪಾನಮತ್ತ ಚಾಲಕರ ಪತ್ತೆಗಾಗಿ ಆಲ್ಕೋಹಾಲ್ ವೈಜ್ಞಾನಿಕ ಸಲಕರಣೆಗಳನ್ನು ಸಂಚಾರಿ ಮತ್ತು ಜಿಲ್ಲಾ ಪೊಲೀಸರಿಗೆ ಒದಗಿಸಲಾಗಿದೆ.

ಅಪಘಾತಕ್ಕೊಳಗಾದವರಿಗೆ ಚಿಕಿತ್ಸೆ ನೀಡಲು ಈ ಕೆಳಕಂಡ ಸೌಲಭ್ಯ ಒದಗಿಸಲಾಗುತ್ತಿದೆ.

1) ಪ್ರಮುಖ ಜಿಲ್ಲೆಗಳ ಪೋಲೀಸ್ ಅಧೀಕ್ಷಕರ ಮೇಲ್ವಿಚಾರಣೆಯಲ್ಲಿ ಆಂಬುಲೆನ್ಸ್ ವಾಹನ ಒದಗಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ. ಇದರಿಂದ ಅಪಘಾತಕ್ಕೊಳಗಾದ ಗಾಯಾಳುಗಳನ್ನು ಶೀಘ್ರವಾಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂಗಳಿಗೆ ಸಾಗಿಸಲು ಅನುಕೂಲವಾಗುವುದು.

2) ಪ್ರಮುಖ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ವೈದ್ಯಕೀಯ ಸಂಚಾರಿ ಘಟಕಗಳನ್ನು ಮತ್ತು ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ವೈದ್ಯಕೀಯ ಕೇಂದ್ರಗಳನ್ನು (ಟ್ರಾಮಾ ಸೆಂಟರ್ಸ್) ಸ್ಥಾಪಿಸುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ.

3) ರಾಷ್ಟ್ರೀಯ ಹೆದ್ದಾರಿಗಳ ಪಕ್ಕದಲ್ಲಿ ಬರುವ ನರ್ಸಿಂಗ್ ಹೋಂ ಮತ್ತು ಟೆಲಿಫೋನ್ ಬೂತ್‌ಗಳನ್ನು ಗುರುತಿಸಲಾಗಿದೆ.

ಸರ್ಕಾರಿ ಟೂಲ್ ರೂಂ ತರಬೇತಿ ಕೇಂದ್ರಕ್ಕೆ ವಿದ್ಯಾರ್ಥಿಗಳನ್ನು ನೇಮಕಾತಿ ಸಮಿತಿ ಮೂಲಕ ಆಯ್ಕೆ ಮಾಡುವುದು

353 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಟೂಲ್ ರೂಂ ಮತ್ತು ತರಬೇತಿ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಈ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಇ) ಈ ತರಬೇತಿ ಕೇಂದ್ರಕ್ಕೆ ವಿದ್ಯಾರ್ಥಿಯು ಆಯ್ಕೆಯಾಗಬೇಕಾದರೆ ಯಾವ ಅರ್ಹತೆ ಹೊಂದಿರಬೇಕು?

ಈ) ಈ ಕೇಂದ್ರಗಳಿಗೆ ತರಬೇತಿಗಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಾಗ ಯಾವ ವಿಧಾನವನ್ನು ಅನುಸರಿಸಲಾಗುತ್ತಿದೆ?

ಉ) ಆಯ್ಕೆ ಸಮಿತಿಯನ್ನು ನೇಮಿಸಲಾಗಿದೆಯೇ? ನೇಮಿಸಿದ್ದಲ್ಲಿ ಸಮಿತಿಯ ವಿವರಗಳನ್ನು ಒದಗಿಸುವುದು

ಊ) ಇಲ್ಲದಿದ್ದಲ್ಲಿ ಎಲ್ಲ ಅಭ್ಯರ್ಥಿಗಳಿಗೂ ಸಮವಾಗಿ ಅವಕಾಶ ದೊರೆಯಲು ಸಾಧ್ಯವಾಗುವಂತೆ ಸಮಾಜ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ, ಮತ್ತು ಕೈಗಾರಿಕಾ ಇಲಾಖೆ ಅಧಿಕಾರಿಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಲಾಗುವುದೇ?

ಋ) ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಎರಡು - ಒಂದು ಬೆಂಗಳೂರು ಮತ್ತೊಂದು ಮೈಸೂರು

ಆ) 734

ಇ) ಒಟ್ಟು 8 ದೀರ್ಘಾವಧಿ ಮತ್ತು 4 ಅಲ್ಪಾವಧಿ ತರಬೇತಿಗಳಿದ್ದು, ಬೇರೆ ಬೇರೆ ರೀತಿಯ ತರಬೇತಿಗಳಿಗೆ ಬೇರೆ ಬೇರೆ ರೀತಿಯ ಅರ್ಹತೆಗಳಿರಬೇಕಾಗಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ಕೊಟ್ಟಿದೆ.

ಈ) ಬೇರೆ ಬೇರೆ ತರಬೇತಿಗಳಿಗೆ ಆಯ್ಕೆಯ ರೀತಿಯನ್ನು ಅನುಬಂಧದಲ್ಲಿ ಕೊಟ್ಟಿದೆ. ಸಾಧಾರಣವಾಗಿ ಆಯ್ಕೆ ಲಿಖಿತ ಪರೀಕ್ಷೆ ಅಪ್ಟಿಟ್ಯೂಡ್ ಟೆಸ್ಟ್, ಪ್ರಾಯೋಗಿಕ ಪರೀಕ್ಷೆ ಮತ್ತು ಮೌಖಿಕ ಸಂದರ್ಶನಗಳಿರುತ್ತವೆ. ಅಭ್ಯರ್ಥಿಗಳ ಆಯ್ಕೆಯು ಅರ್ಹತೆಯ ಆಧಾರದ ಮೇಲೆ ಆಗುತ್ತದೆ. ಆದಾಗ್ಯೂ ಅಲ್ಪಾವಧಿ ತರಬೇತಿಗೆ ಆಯ್ಕೆಯು ಮೊದಲು ಬಂದವರಿಗೆ ಮೊದಲ ಪ್ರಾಶಸ್ತ್ಯ ನೀಡಲಾಗುವುದು.

ಉ) ಇಲ್ಲಾ

ಊ) ಸದ್ಯಕ್ಕೆ ಸರ್ಕಾರದ ಮುಂದೆ ಅಂತಹ ಪ್ರಸ್ತಾವನೆ ಇರುವುದಿಲ್ಲ. ಸರ್ಕಾರಿ ಟೂಲ್ ರೂಂ ಮತ್ತು ತರಬೇತಿ ಸಂಸ್ಥೆಯು ಪ.ಜಾತಿ : ಪ. ಪಂಗಡ ಅಭ್ಯರ್ಥಿಗಳಿಗೆ ಅವಶ್ಯ ಕೋಟಾ ನೀಡಿ ಸಮಾನ ಅವಕಾಶ ಕಲ್ಪಿಸುತ್ತದೆ. ಅಭ್ಯರ್ಥಿಗಳ ಆಯ್ಕೆ ಪರೀಕ್ಷೆಗಳನ್ನು ವೃತ್ತಿ ರೀತಿಯಲ್ಲಿ ನಡೆಸಲಾಗುತ್ತಿದೆ.

ಋ) ಸರ್ಕಾರಿ ಟೂಲ್ ರೂಂ ಮತ್ತು ತರಬೇತಿ ಸಂಸ್ಥೆಯು ಸ್ವಾಯತ್ತ ಸಂಸ್ಥೆ ಆಗಿರುತ್ತದೆ. ಸಂಸ್ಥೆಯ ನಿರ್ದೇಶಕರು ಪ್ರವೇಶ ಪರೀಕ್ಷೆ ನಡೆಸಲು ಅರ್ಹತೆ ನಿಗಧಿಪಡಿಸಲು ಮತ್ತು ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಪೂರ್ಣಾಧಿಕಾರವುಳ್ಳವರಾಗಿರುತ್ತಾರೆ.

ANNEXURE to L.A. question No. 353

Sl. No.	Name of the course	Duration	Entry level	Intake	Mode of Selection
1.	Diploma in tool & Die making Die making	4 1/2 years	SSLC 50% marks in Science, Maths & English Age 16-18 Years Sc/St Marks 45% age 16-20 years	Bangalore -32 Mysore - 40 Gulbarga - 30 Hassan -25	Stage 1. Premliminary Selection depending upon the marks scored in SSLC exam in maths Science & English Stage 2 : Written Test Stage 3: Aptitude Test Stage 4: Practical Test Stage 5 : Personal Interview
2.	Machinist Course	2 years	SSLC 45% marks in Science, Maths & English Age 16-20 years, SC/ST Marks 40% Age: 16-22 Yrs.	Bangalore -32 Mysore : Not Yet started	-do-
3.	Advanced Machinist's Course	2 years	Pass in NCVT Exam in the relevant field	15	Stage 1: Selection based Stage 2 : Practical test + theory test stage 3 : Personal Interview

1	2	3	4	5	6
4.	Post Graduate Course in Tool Engineering	2 Years	B.E. (Mech)., or Indl. Production first Class	Bangalore - 35 Mysore-35	Stage 1: Preliminary selection on the basis of marks scored in the BE Exam (fial year) Stage 2 : Written Test Stage 3 : Personal Interview
5.	Post Diploma in Tool Design	2 years (part-time)	Dip. in Mech./Engg. or Indl. Production B.E., in Mech., or Indl., production. Two years of experience preferred	Bangalore-30 Mysore - Not yet started	Stage 1 : Preliminary Selection on the basis of marks scored in the qualifying Exam stage 2 : Written Test Stage 3 : Personal Interview
6.	Diploma in Tool Engineering (started on experi-mental basis)	3 1/2 years	PUC I Class (PCM) 18-20 years SC/ST Marks relaxable by 5% upper age relaxable by 2 years	10	Stage 1 : Preliminary Selection on the basis of marks scored in the PCM in II PUC Stage 2 : Written Test Stage 3: Practical Test + Aptitude test Stage 4 : Personal Interview

1	2	3	4	5	6
7.	Technical Instructor's Course (Started on Experimental basis)	2 years	Dip. in Mech Engineering I Class Age: 19-21 Years SC/ST: relaxable Marks 5% Upper age 2 years	5	-do-
8.	Electronic Machinists Course for Girls (NCVT affiliated)	2 years	SSLC 60% Science & Maths Age : 16-21 Yrs SC/ST:	38	Stage 1 : Preliminary Selection on the basis of marks scored in the SSLC Exam (Science & Maths) Stage 2 : Written Test Stage 3 : Practical Test + Aptitude Test Stage 4 : Personal Interview

SHORT TERM TRAINING PROGRAMMING

1.	Auto CAD	2 weeks (Full time) 6 weeks (part-time)	BE/DME/ATS/ NCVT	Bangalore-10 Mysore - 16	First come First serve

2.	Computer Aided Manufacturing	6 weeks	BE/DME/ATS/ NCVT	Bangalore-16 Mysore-16	-do-
3.	CNC Machine Programming & Operation	4 weeks	BE/DME/ATS/NCVT or Tech. Experience	Bangalore - 16 Mysore-16	-do-
4.	Skill Development Programmes in Electronics (for women)	2-4 weeks	SSLC/some exposure in the field or sponsored from industries	Bangalore -24	

ನಷ್ಟದಲ್ಲಿರುವ ಸಾರ್ವಜನಿಕ ಉದ್ಯಮಗಳಿಗೆ ಕಾಯಕಲ್ಪ

351 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರಿ ಮತ್ತು ಮಧ್ಯಮ ಕೈಗಾರಿಕಾ ಖಾತೆಯ ಆಧೀನದಲ್ಲಿ ಬರುವ ಸಾರ್ವಜನಿಕ ಉದ್ಯಮಗಳು ಯಾವುವು (ಇವುಗಳ ಕಾರ್ಯ ಚಟುವಟಿಕೆಯ ಬಗ್ಗೆ ವಿವರಗಳನ್ನು ನೀಡುವುದು)

ಆ) ಇವುಗಳಲ್ಲಿ ಸರ್ಕಾರ ತೊಡಗಿಸಿರುವ ಬಂಡವಾಳದ ಮೊತ್ತವೆಷ್ಟು (ಉದ್ದಿಮೆವಾರು ಅಂಕಿ ಅಂಶಗಳನ್ನು ಒದಗಿಸುವುದು)

ಇ) ಇವುಗಳಲ್ಲಿ ಎಷ್ಟು ಉದ್ದಿಮೆಗಳು ಲಾಭದಲ್ಲಿ ನಡೆಯುತ್ತಿವೆ (ಉದ್ದಿಮೆಗಳ ಹೆಸರು ಮತ್ತು ವಿವರ ಒದಗಿಸುವುದು)

ಈ) ಕಳೆದ ನಾಲ್ಕು ವರ್ಷಗಳಿಂದ ಈ ಮೇಲ್ಕಂಡ ಉದ್ದಿಮೆಗಳು ಅನುಭವಿಸುತ್ತಿರುವ ನಷ್ಟದ ಪ್ರಮಾಣವೆಷ್ಟು?

ಉ) ನಷ್ಟದಲ್ಲಿ ನಡೆಯುತ್ತಿರುವ ಸಾರ್ವಜನಿಕ ಉದ್ದಿಮೆಗಳಿಗೆ ಕಾಯಕಲ್ಪ ನೀಡಲು ಸರ್ಕಾರ ಯಾವ ಕಾರ್ಯಕ್ರಮಗಳನ್ನು ರೂಪಿಸಿದೆ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಮಂತ್ರಿಗಳು) :

ಅ ಯಿಂದ ಈ ವರೆಗೆ) ಲಗತ್ತಿಸಿರುವ ತಃಖ್ತೆಯಲ್ಲಿ ಕೊಡಲಾಗಿದೆ.

ಉ) ನಿವ್ವಳ ಮೌಲ್ಯ ನಕಾರಾತ್ಮಕವಾಗಿರುವ ಸಾರ್ವಜನಿಕ ವಲಯದ ನಷ್ಟ ಅನುಭವಿಸುತ್ತಿರುವ ಉದ್ಯಮಗಳ ಪ್ರಕರಣಗಳನ್ನು ಬಿ.ಐ.ಎಫ್.ಆರ್. ಮುಂದೆ ಸಿಕ್ ಇಂಡಸ್ಟ್ರಿಯಲ್ ಕಂಪನೀಸ್ (ಸ್ಪೆಷಲ್ ಪ್ರಾವಿಷನ್ಸ್) ಆಕ್ಟ್‌ನಲ್ಲಿ ನಮೂದಿಸಿದಂತೆ ಹಾಗೂ ಇತರ ಸಂದರ್ಭದಲ್ಲೂ ತರಲಾಗುವುದು. ಸದರಿ ಘಟಕಗಳ ವಿದ್ಯಮಾನಗಳನ್ನು ಆಯಾ ನಿರ್ದೇಶಕ ಮಂಡಳಿಗಳಲ್ಲದೆ ಸರಕಾರದ ಮಟ್ಟದಲ್ಲೂ ಸಹ ಅವಲೋಕಿಸಲಾಗುವುದು.

ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಅಧೀನದಲ್ಲಿರುವ ಸಾರ್ವಜನಿಕ ಉದ್ಯಮಗಳು, ಅವುಗಳಲ್ಲಿ ಹೂಡಿರುವ ಬಂಡವಾಳ, ಸದರಿ ಉದ್ಯಮಗಳ ಕಳೆದ ನಾಲ್ಕು ವರ್ಷಗಳಲ್ಲಿ ಗಳಿಸಿದ ಲಾಭ : ಅನುಭವಿಸಿದ ನಷ್ಟ ಹಾಗೂ ಅವುಗಳ ಕಾರ್ಯಚಟುವಟಿಕೆಗಳ ಬಗ್ಗೆ ವಿವರಗಳನ್ನೊಳಗೊಂಡ ತಃಖ್ತೆ

(ರೂ. ಲಕ್ಷಗಳಲ್ಲಿ)

1	2	3	4				5
ಕ್ರಮ ಸಂಖ್ಯೆ	ಕಂಪನಿ ಮತ್ತು ನಿಗಮಗಳ ಹೆಸರು	ಸಂದಾಯ ಮಾಡಿದ ಬಂಡವಾಳ	ಗಳಿಸಿದ ಲಾಭ-ನಷ್ಟ ಈ ಕೆಳಕಂಡ ವರ್ಷಗಳಲ್ಲಿ 1989-90	1990-91	1991-92	1992-93	ಕಾರ್ಯಚಟುವಟಿಕೆಗಳು
1)	ಮೈಸೂರು ಕಾಗದದ ಕಾರ್ಖಾನೆ ನಿಯಮಿತ	6453.01	-	+2086.00	+ 1808.22	-522.12	ಕಾಗದ ನ್ಯೂಸ್ ಪ್ರಿಂಟ್ ಉತ್ಪಾದನೆ
2)	ಕೆ.ಎಸ್.ಐ.ಐ.ಡಿ.ಸಿ	4174.13	-7.21	+251.00	+ 275.00	+269.30	ಕೈಗಾರಿಕೆಗಳ ಪ್ರವರ್ಧನೆ (ಮಧ್ಯಮ ಭಾರಿ)
3)	ಎನ್.ಜಿ.ಇ.ಎಫ್. ನಿಯಮಿತ	2000.00	+ 415.25	+ 273.00	+ 696.44	-2089.05	ಸ್ವಿಚ್‌ಗೇರ್, ಟ್ರಾನ್ಸ್‌ಫಾರ್ಮರ್ ಇತ್ಯಾದಿ ತಯಾರಿಕೆ
4)	ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ	266.20	+244.27	+166.00	+ 1038.21	+272.66	ಚಿನ್ನದ ಉತ್ಪಾದನೆ
5)	ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿ.,	60.00	+20.65	+171.00	+ 74.94	+ 123.92	ಮಾರಾಟ ಚಟುವಟಿಕೆ
6)	ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತ	136.60	+ 42.49	+267.00	+ 123.30	+ 27.92	
7)	ಮಾರ್ಕೆಟಿಂಗ್ ಕನ್ಸಲ್‌ಟೆಂಟ್ ಅಂಡ್ ಏಜನ್ಸೀಸ್ ಲಿ.,	5.00	+ 7.74	+13.71	+ 3.56	+ 5.91	ಜಾಹೀರಾತು ಮತ್ತು ಮಾರ್ಕೆಟಿಂಗ್ ಚಟುವಟಿಕೆ
8)	ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ	385.96	+ 59.24	+ 84.00	+ 159.63	+ 30.02	ಟ್ರಾನ್ಸ್‌ಫಾರ್ಮರ್ ಉತ್ಪಾದನೆ

9) ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಕಂಪನಿ ನಿ.,	647.00	+ 149.71	+ 462.00	+ 2.85	+ 354.70	ಅಸಿಟಿಕ್ ಆಮ್ಲ ಮೂಲದ ರಾಸಾಯನಿಕಗಳು ಬಲ್ಬುಗಳ ತಯಾರಿಕೆ
10) ಮೈಸೂರು ಕಾಸ್ಮೆಟಿಕ್ಸ್ ನಿಯಮಿತ	15.00	- 6.53	-10.85	-10.32	15.65	ಸ್ಯಾಂಡಲ್ ಟಾಲ್ಕ ತಯಾರಿಕೆ
11) ಕಿಂಕೋ ನಿಯಮಿತ	485.34	-155.55	-287.00	-324.24	-308.88	ಕೆಎಸ್‌ಆರ್‌ಟಿಸಿ ಬಸ್‌ಗಳ ಕವಚ ನಿರ್ಮಾಣ
12) ಚಾಮುಂಡಿ ಮೆಷಿನ್ ಟೂಲ್ಸ್ ನಿಯಮಿತ	63.50	-28.11	-23.00	-42.96	-36.68	ಎಲ್‌ಬಿ-17 ಲೇತ್‌ಗಳ ತಯಾರಿಕೆ
13) ಕರ್ನಾಟಕ ಸಾಬೂಬು ಮತ್ತು ಮಾರ್ಜಕ ನಿ.,	1763.12	-1230.49	-1394.34	-1026.82	-1145.67	ಸಾಬೂನು ಮತ್ತು ಮಾರ್ಜಕಗಳ ಉತ್ಪಾದನೆ
14) ಮೈಸೂರು ಸಕ್ಕರೆ ಕಾರ್ಖಾನೆ ನಿಯಮಿತ	273.43	+ 465.00	+329.73	-17.12	-275.42	ಸಕ್ಕರೆ ಮತ್ತು ಕಾಕಂಬಿ ತಯಾರಿಕೆ
15) ಕಿಯಾನಿಕ್ಸ್ ನಿಯಮಿತ	683.00	+84.21	-198.00	-74.00	-307.89	ಎಲೆಕ್ಟ್ರಾನಿಕ್ಸ್ ಕೈಗಾರಿಕೆಗಳ ಅಭಿವೃದ್ಧಿಗೆ ಉತ್ತೇಜನ
16) ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿ.,	141.05	+ 44.87	-85.19	+39.29	+95.18	ಸ್ವಿಚ್‌ಗೇರ್, ಸರ್‌ಕ್ಯೂಟ್ ಬ್ರೇಕರ್ಸ್ ತಯಾರಿಕೆ
17) ಮೈಸೂರು ಕ್ರೋಂ ಟ್ಯಾನಿಂಗ್ ಕಂಪನಿ	75.74	-74.27	-54.27	-56.41	-67.98	ಚರ್ಮ ಹದಗೊಳಿಸುವಿಕೆ
18) ಮೈಸೂರು ಬಣ್ಣ ಮತ್ತು ಅರಗು ನಿಯಮಿತ	71.65	+34.47	-10.00	+21.72	+10.79	ಬಣ್ಣ ಮತ್ತು ಅರಗು ಉತ್ಪಾದನೆ
19) ಕರ್ನಾಟಕ ಟೆಲಿಕಾಂ ನಿಯಮಿತ	100.00	+ 126.34	+100.07	+125.18	478.52	ಟೆಲಿಕಾಂ ಸಲಕರಣೆಗಳ ಉತ್ಪಾದನೆ

ಕುಂದಾಪುರದಲ್ಲಿ ನೂತನವಾಗಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣವನ್ನು ಮಾಡುವ ಕುರಿತು

564 - ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣವನ್ನು ನೂತನವಾಗಿ ರಚಿಸುವ ಯೋಜನೆ ಸರಕಾರದ ಮುಂದಿದೆಯೇ?

ಆ) ಇದ್ದಲ್ಲಿ, ಬಸ್ ನಿಲ್ದಾಣದ ನಿರ್ಮಾಣಕ್ಕೆ ತಗಲುವ ಅಂದಾಜು ವೆಚ್ಚ ಹಾಗೂ ನಕ್ಷೆಯ ತಯಾರಿಕೆ ಮಾಡಲಾಗಿದೆಯೇ?

ಇ) ಮಾಡಿದ್ದಲ್ಲಿ ಮೇಲಿನ ಕಾರ್ಯವನ್ನು ಎಂದಿನಿಂದ ಕೈಗೊಳ್ಳಲಾಗುವುದು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಮಂತ್ರಿಗಳು) :

ಅ) ಹೌದು

ಆ) ಭೂಸ್ವಾಧೀನತೆಯ ಕಾರ್ಯವು ಇನ್ನೂ ಪ್ರಗತಿಯಲ್ಲಿರುತ್ತದೆ. ನಿವೇಶನವು ಸ್ವಾಧೀನಕ್ಕೊಳಪಟ್ಟ ಮೇಲೆ ನಕ್ಷೆ ಮತ್ತು ವೆಚ್ಚದ ವಿವರಗಳನ್ನು ತಯಾರು ಮಾಡಲಾಗುವುದು.

ಇ) ಉದ್ಭವಿಸುವುದಿಲ್ಲ.

ವೇತನ ವಿವಿಧ ಬಡ್ತಿಗೆ ಖರ್ಚಾಗುವ ಹಣ ಹಾಗೂ ನೌಕರರ ಸಂಖ್ಯೆ

60-ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ ಮಂಜೂರಾಗಿರುವ ವಿವಿಧ ಶ್ರೇಣಿಯ ನೌಕರರ ಸಂಖ್ಯೆ ಎಷ್ಟು? ಹಾಗೂ 31-3-1994ರಂದು ಖಾಲಿಯಿದ್ದ ಹುದ್ದೆಗಳ ಸಂಖ್ಯೆ ಎಷ್ಟು?

ಇ) 1992-93, 1993-94 ರಲ್ಲಿ ಎಲ್ಲಾ ವರ್ಗದಸರ್ಕಾರಿ ಅಧಿಕಾರಿ ಹಾಗೂ ನೌಕರರಿಗೆ ಕೊಟ್ಟ ವೇತನ ಭತ್ಯೆ, ಇವರ ಬಡ್ತಿಯ ಮೊತ್ತವೆಷ್ಟು ಹಾಗೂ ನಿವೃತ್ತರಿಗೆ ಕೊಟ್ಟ ನಿವೃತ್ತಿವೇತನ ಭತ್ಯೆ ಎಷ್ಟು

ಇ) 1994-95ರಲ್ಲಿ ಆಯವ್ಯಯದಲ್ಲಿ ನಿಗದಿಪಡಿಸಿರುವ ವೇತನ ಹಾಗೂ ವಿವಿಧ ಭತ್ಯೆ ಎಷ್ಟು?

ಈ) 4ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಗೆ ತಂದಿದೆಯೇ? ತಂದಿದ್ದಲ್ಲಿ ಇದರಿಂದಾಗುವ ಹಣಕಾಸು ಭಾರವೆಷ್ಟು? ಜಾರಿಯಲ್ಲಿ ತರದಿದ್ದ ಪಕ್ಷದಲ್ಲಿ ಇನ್ನೂ ಏಕೆ ತಂದಿಲ್ಲ ಹಾಗೂ ಎಂದು ಜಾರಿಗೆ ತರಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ (ಜಿಲ್ಲಾ ಪಂಚಾಯತ್‌ಗಳು ಸೇರಿದಂತೆ) ಮಂಜೂರಾದ ವಿವಿಧ ಶ್ರೇಣಿಯ ಹುದ್ದೆಗಳ ಸಂಖ್ಯೆ 612638ಹಾಗೂ 31-3-1994ರಂದು ಖಾಲಿಯಿದ್ದ ಹುದ್ದೆಗಳ ಸಂಖ್ಯೆ 84022.

ಆ) ಎಲ್ಲಾ ವರ್ಗದ ಸರ್ಕಾರಿ ಅಧಿಕಾರಿ: ನೌಕರರಿಗೆ ಕೊಟ್ಟ ವೇತನ ಭತ್ಯೆಯ ಮೊತ್ತ.

1992-93	170765.25 ಲಕ್ಷ ರೂ.ಗಳು
1993-94	202261.63 ಲಕ್ಷ ರೂ.ಗಳು

ನಿವೃತ್ತರಿಗೆ ಕೊಟ್ಟ ನಿವೃತ್ತಿವೇತನ, ಭತ್ಯೆ

1992-93 34850.17 ಲಕ್ಷ ರೂ.ಗಳು
1993-94 41000.00 ಲಕ್ಷ ರೂ.ಗಳು

ಇ) 241555.65 ಲಕ್ಷ ರೂಪಾಯಿಗಳು

ಈ) 4ನೇ ರಾಜ್ಯವೇತನ ಆಯೋಗದ ಶಿಫಾರಸ್ಸುಗಳನ್ನಾಧರಿಸಿ ರಾಜ್ಯಸರ್ಕಾರವು ದಿನಾಂಕ: 1-7-1993ರಿಂದ ಜಾರಿಗೆ ಬರುವಂತೆ ತತ್ಸಮಾನ ಸಂವಾದಿ ಪರಿಷ್ಕೃತ ವೇತನ ಶ್ರೇಣಿಗಳನ್ನು ನೀಡಿ ವೇತನ ಶ್ರೇಣಿಗಳನ್ನು ಪರಿಷ್ಕರಿಸಿದೆ. ಇದರಿಂದಾಗಿ (ಮಧ್ಯಂತರ ಪರಿಹಾರ ಸೇರಿದಂತೆ) ಸರ್ಕಾರಕ್ಕೆ ರೂ. 178.69 ಕೋಟಿ, ವರ್ಷಕ್ಕೆ ವೆಚ್ಚ ತಗಲುತ್ತದೆ. ಆ ಆಯೋಗದ ಶಿಫಾರಸ್ಸುಗಳ ಉಳಿದ ಅಂಶಗಳನ್ನು ಪರಿಶೀಲಿಸಲು ಹಾಗೂ ಸರ್ಕಾರಕ್ಕೆ ವರದಿ ನೀಡಲು ಪದೀಯ ಸಮಿತಿಯನ್ನು ರಚಿಸಲಾಗಿದೆ. ಆ ಸಮಿತಿಯು ಈ ನಿಮಿತ್ತ ಕಾರ್ಯೋನ್ಮುಖವಾಗಿದೆ.

ಹೊಸ ಪೋಲೀಸ್ ಠಾಣೆಗಳ ಪ್ರಾರಂಭ

356(ಎ) - 188 ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸ ಪೊಲೀಸ್ ಠಾಣೆ ಆರಂಭಿಸಲು ಸರ್ಕಾರಕ್ಕೆ ಏನಾದರೂ ನೀತಿ, ಮಾರ್ಗದರ್ಶಿಗಳು ಹಾಗೂ ಆದ್ಯತೆಗಳಿವೆಯೇ?

ಆ) ಹಾಗಿದ್ದಲ್ಲಿ ಅವುಗಳನ್ನು ಅನುಸರಿಸಲಾಗುತ್ತಿದೆಯೇ?

ಇ) ಅಗತ್ಯತೆಯ ಆಧಾರದ ಮೇರೆಗೆ ಮಾಡಬಹುದಾಗಿದ್ದ ಕೆಲಸಗಳನ್ನು ರಾಜಕೀಯ ಒತ್ತಡಗಳಿಗೆ ಮಾಡಲಾಗುತ್ತಿದೆಯೇ?

ಈ) ಇಲ್ಲವಾದಲ್ಲಿ ಕಳೆದ ವರ್ಷ ಆರಂಭಿಸಿದ ಪೊಲೀಸ್ ಠಾಣೆಗಳಲ್ಲಿ ಎಷ್ಟು ತೀರಾ ಅವಶ್ಯಕವಾಗಿದ್ದವು?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಒಂದು ಪ್ರದೇಶದ ಜನಸಂಖ್ಯೆ, ವ್ಯಾಪ್ತಿ ವರದಿಯಾಗುತ್ತಿರುವ ಅಪರಾಧಗಳ ಪ್ರಮಾಣ ಮತ್ತು ಕಾನೂನು ಸುವ್ಯವಸ್ಥೆ ಪರಿಸ್ಥಿತಿಯನ್ನು ಗಮನದಲ್ಲಿರಿಸಿ ಹೊಸ ಪೊಲೀಸ್ ಠಾಣೆಗಳನ್ನು ಪ್ರಾರಂಬಿಸಲಾಗುವುದು.

ಆ) ಹೌದು

ಇ) ಇಲ್ಲ

ಈ) ಮಂಜೂರಾದ ಎಲ್ಲ ಪೊಲೀಸ್ ಠಾಣೆಗಳು ಅವಶ್ಯಕವಾದವುಗಳು

ಶಿಗ್ಗಾಂವದಲ್ಲಿ ಸ್ಟೇಡಿಯಂ ಮಂಜೂರಾತಿ

622 - ಶ್ರೀ ಮಂಜುನಾಥ್ ಸಿ. ಕುನ್ನೂರು (ಶಿಗ್ಗಾಂವ) : ಮಾನ್ಯ ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಎಷ್ಟು ತಾಲ್ಲೂಕು ಸ್ಟೇಡಿಯಂ ಪ್ರಾರಂಭಿಸಲಾಗಿದೆ?

ಆ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಸ್ಟೇಡಿಯಂ ತೆಗೆದುಕೊಳ್ಳಲಾಗಿದೆ?

ಇ) ಶಿಗ್ಗಾಂವಿನಲ್ಲಿ ಎಷ್ಟು ಎಕರೆ ಜಮೀನು ಯುವಜನ ಇಲಾಖೆಗೆ ಹಸ್ತಾಂತರಿಸಲಾಗಿದೆ?

ಈ) ಶಿಗ್ಗಾಂವ ತಾಲ್ಲೂಕು ಸ್ಟೇಡಿಯಂ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಓಂ ಪ್ರಕಾಶ್ ಕಣಗಲಿ (ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) 1993-94ನೇ ಸಾಲಿನಲ್ಲಿ 10 ತಾಲ್ಲೂಕು ಮಟ್ಟದ ಕ್ರೀಡಾಂಗಣಗಳನ್ನು ಪ್ರಾರಂಭಿಸಲಾಗಿದೆ.

ಆ) 4 ತಾಲ್ಲೂಕು ಮಟ್ಟದ ಕ್ರೀಡಾಂಗಣವನ್ನು ಪ್ರಾರಂಭಿಸಲಾಗಿದೆ.

ಇ) 6.23 ಗುಂಟೆ ಜಮೀನನ್ನು ಇಲಾಖೆಯ ವಶಕ್ಕೆ ತೆಗೆದುಕೊಳ್ಳಲಾಗಿದೆ.

ಈ) ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ ಕೂಡಲೇ ಕ್ರೀಡಾಂಗಣ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು.

ರಾಜ್ಯದಲ್ಲಿ ಐ.ಎ.ಎಸ್. ಅಧಿಕಾರಿಗಳು ಕನ್ನಡದಲ್ಲಿ ವ್ಯವಹರಿಸುತ್ತಿರುವ ಕ್ರಮಗಳೇನು

641 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ವಾರ್ತಾ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಐ.ಎ.ಎಸ್. ಅಧಿಕಾರಿಗಳು ಕನ್ನಡದಲ್ಲಿ ವ್ಯವಹರಿಸುವುದಿಲ್ಲವೆಂಬ ದೂರು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ರಾಜ್ಯದಲ್ಲಿ ಕನ್ನಡ ಮಾತೃ ಭಾಷೆಯಲ್ಲದ ಎಷ್ಟು ಐ.ಎ.ಎಸ್. ಅಧಿಕಾರಿಗಳಿದ್ದಾರೆ ಹಾಗೂ ಅಂಥವರಿಗೆ ಕನ್ನಡ ಕಲಿಯಲು ಎಷ್ಟನೇ ತರಗತಿಯ ಪುಸ್ತಕ ನಿಗದಿಪಡಿಸಲಾಗಿದೆ?

ಇ) ಐ.ಎ.ಎಸ್. ಅಧಿಕಾರಿಗಳು ಸರಿಯಾಗಿ ಕನ್ನಡ ಕಲಿಯುವ ಬಗ್ಗೆ ಅವರು ಎದುರಿಸಬೇಕಾದ ಪರೀಕ್ಷಾ ಮಟ್ಟವನ್ನು ವಿಸ್ತರಿಸಿ ಎಸ್.ಎಸ್.ಎಲ್.ಸಿ. ಮಟ್ಟಕ್ಕೆ ತರುವ ವಿಷಯ ಸರ್ಕಾರದ ಮುಂದಿದೆಯೇ?

ಶ್ರೀ ಆರ್.ಎನ್. ನಾಯ್ಕ (ವಾರ್ತಾ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ನಿರ್ದಿಷ್ಟವಾದ ದೂರುಗಳು ಬಂದಿಲ್ಲ

ಆ) ಕನ್ನಡ ಮಾತೃಭಾಷೆಯಲ್ಲದ ಐಎಎಸ್ ಅಧಿಕಾರಿಗಳ ಸಂಖ್ಯೆ : 145 ಕನ್ನಡ ಪ್ರಾಥಮಿಕ 4ನೇ ತರಗತಿಯ ಪುಸ್ತಕ.

ಇ) ಹೌದು.

ಸೇಡಂ ಕ್ಷೇತ್ರದಲ್ಲಿ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಕಾಮಗಾರಿ ಕೆಲಸ

295 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ಉಳಿತಾಯ, ಲಾಟರಿ, ಕೆ.ಜಿ.ಐ.ಡಿ. ಹಾಗೂ ಹೆಚ್.ಕೆ.ಡಿ.ಬಿ. ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಡಿಯಲ್ಲಿ 1993-94ನೇ ಸಾಲಿನಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಕ್ರಿಯಾ ಯೋಜನೆಯನ್ನು ಜಿಲ್ಲಾ ಪಂಚಾಯಿತಿಗೆ ಮಂಜೂರು ಮಾಡಲು ಮುಖ್ಯಮಂತ್ರಿಗಳು ಆದೇಶ ನೀಡಿದರೂ ಸಹ ಜೂನ್ ಅಂತಿಮದವರೆಗೆ ಸದರೀ ಕಾಮಗಾರಿಗಳನ್ನು ಪ್ರಾರಂಭ ಮಾಡದಿರಲು ಕಾರಣವೇನು?

ಆ) ಹಾಗಿದ್ದಲ್ಲಿ ಎಂದು ಪ್ರಾರಂಭ ಮಾಡಲಾಗುವುದು?

ಶ್ರೀ ಮದನಗೋಪಾಲ ನಾಯಕ್ (ಸಣ್ಣ ಉಳಿತಾಯ, ಲಾಟರಿ, ಕೆ.ಜಿ.ಐ.ಡಿ. ಹಾಗೂ ಹೆಚ್.ಕೆ.ಡಿ.ಬಿ. ರಾಜ್ಯ ಸಚಿವರು) :

ಅ) ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಡಿಯಲ್ಲಿ 1993-94ನೇ ಸಾಲಿಗೆ ಸೇಡಂ ಕ್ಷೇತ್ರದ ಶಾಸಕರು ಕೊಟ್ಟಿದ್ದ ಕಾಮಗಾರಿಯ ಪಟ್ಟಿಯನ್ನು ಬದಲಾವಣೆ ಮಾಡಿದ್ದರಿಂದ, ಈ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಲಿಲ್ಲ.

ಆ) ಬದಲಾವಣೆಗೆ ಪ್ರಸ್ತಾಪಿಸಿರುವ ಕಾಮಗಾರಿಗಳನ್ನು ಮಂಜೂರು ಮಾಡಿದ ನಂತರ ಅವುಗಳನ್ನು ಪ್ರಾರಂಭ ಮಾಡಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯ ನರಹರಿ ಬೆಟ್ಟವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡುವುದು

368 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆ ನರಹರಿ ಬೆಟ್ಟವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಇದ್ದರೆ ಯಾವಾಗ ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಓಂ ಪ್ರಕಾಶ್ ಕಣಗಲಿ (ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು) :

ಅ) ಹೌದು

ಆ) ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ ಈ ಸ್ಥಳವನ್ನು "ಬಿ" ಗುಂಪಿನಡಿಯಲ್ಲಿ ಸೇರಿಸಲಾಗಿದೆ. ಇಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳಲು ಮುಂದೆ ಬರುವ ಖಾಸಗಿ ಉದ್ಯಮಿಗಳಿಗೆ ಬಂಡವಾಳ ಹೂಡಿಕೆ ಮೇಲೆ ಶೇಕಡ 20 ಸಬ್ಸಿಡಿ ಹಾಗೂ ಇತರ ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡಲಾಗುವುದು.

ಶಿಗ್ಗಾಂವ ತಾಲ್ಲೂಕಿನ ಪ್ರವಾಸಿ ಅಭಿವೃದ್ಧಿ ಕೇಂದ್ರಗಳ ಬಗ್ಗೆ

620 - ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ) : ಮಾನ್ಯ ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ತಾಲ್ಲೂಕ್ ಶ್ರೀ ಶರೀಫ್ ಶಿವಯೋಗಿ ಸುಕ್ಷೇತ್ರ ಶಿಶುವಿನಹಾಳ, ಇದನ್ನು ಪ್ರವಾಸಿ ಅಭಿವೃದ್ಧಿ ಕೇಂದ್ರವೆಂದು ಪರಿಗಣಿಸಲಾಗಿದೆಯೇ?

ಆ) ಶಿಗ್ಗಾಂವ ತಾಲ್ಲೂಕು ಬಾಡ ಸುತ ಕನಕದಾಸರು ಹುಟ್ಟಿದ ಕ್ಷೇತ್ರವನ್ನು ಪ್ರವಾಸಿ ಅಭಿವೃದ್ಧಿ ಕೇಂದ್ರವೆಂದು ಗುರುತಿಸಲಾಗಿದೆಯೇ?

ಇ) ಶಿಗ್ಗಾಂವ ತಾಲ್ಲೂಕ್ ಗಂಗೆ ಬಾವಿ ಸುಕ್ಷೇತ್ರ ಪ್ರವಾಸಿ ಅಭಿವೃದ್ಧಿ ಸ್ಥಳವಾಗಿ ಪರಿಗಣಿಸಲಾಗುವುದೇ?

ಈ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಓಂ ಪ್ರಕಾಶ್ ಕಣಗಲಿ (ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು) :

ಅ) ಹೌದು

ಆ) ಹೌದು

ಇ) ಹೌದು

ಈ) ಪ್ರವಾಸೋದ್ಯಮ ನೀತಿಯಲ್ಲಿ ಈ ಸ್ಥಳವನ್ನು "ಬಿ" ಗುಂಪಿನಡಿಯಲ್ಲಿ ಸೇರಿಸಲಾಗಿದೆ. ಖಾಸಗಿಯವರು ಈ ಸ್ಥಳದಲ್ಲಿ ಪ್ರವಾಸಿ ಸೌಲಭ್ಯವನ್ನು ನಿರ್ಮಿಸಲು ಮುಂದೆ ಬಂದವರಿಗೆ ಶೇಕಡ 20 ಸಬ್ಸಿಡಿಯನ್ನು ಮತ್ತು ಇತರೆ ರಿಯಾಯಿತಿಗಳನ್ನು ನೀಡಲಾಗುವುದು.

ಹೊಳೇ ನರಸೀಪುರಕ್ಕೆ ಬಸ್ ಡಿಪೋವನ್ನು ಮಂಜೂರು

644 - ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಳೆ ನರಸೀಪುರದಲ್ಲಿ ರಾಜ್ಯ ರಸ್ತೆ ಸಾರಿಗೆ ಡಿಪೋವನ್ನು 1994Ë95ರಲ್ಲಿ ಮಂಜೂರು ಮಾಡಲಾಗಿದೆಯೇ?

ಆ) ಇಲ್ಲವಾದಲ್ಲಿ ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಹೌದು

ಆ) ಉದ್ಭವಿಸುವುದಿಲ್ಲ

ಆರ್.ಟಿ.ಒ. ಕಛೇರಿಯಲ್ಲಿ ದ್ವಿಚಕ್ರ ವಾಹನಗಳ ಲೈಸೆನ್ಸ್ ನೀಡಿಕೆ

362 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1992ರ ಜುಲೈನಿಂದ ಸೆಪ್ಟೆಂಬರ್ 92ರ ವರೆಗೆ ರಾಜಾಜಿನಗರ ಆರ್.ಟಿ.ಒ. ಕಛೇರಿಯಿಂದ ಎಷ್ಟು ದ್ವಿಚಕ್ರ ವಾಹನಗಳ ಲೈಸೆನ್ಸ್‌ಗಳ ಹಾಗೂ ಪ್ಲಾಸ್ಟಿಕ್ ಕಾರ್ಡ್‌ಗಳನ್ನು ನೀಡಲಾಗಿದೆ. (ಲೈಸೆನ್ಸ್ ಮತ್ತು ಪ್ಲಾಸ್ಟಿಕ್ ಕಾರ್ಡ್‌ಗಳನ್ನು ಪಡೆದವರ ಹೆಸರು ಮತ್ತು ನಂಬರುಗಳ ವಿವರಗಳನ್ನು ಒದಗಿಸುವುದು)

ಆ) ಆ ವರ್ಷದಲ್ಲಿ ಮೇಲ್ಕಂಡ ಕಛೇರಿಯಿಂದ ಬಂದ ಆದಾಯವೆಷ್ಟು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ರಾಜಾಜಿನಗರ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಛೇರಿಯಲ್ಲಿ ನೀಡಲಾದ ಡ್ರೈವಿಂಗ್ ಲೈಸೆನ್ಸ್ ಮತ್ತು ಪ್ಲಾಸ್ಟಿಕ್ ಕಾರ್ಡ್ ನೀಡಿದ ಬಗ್ಗೆ ಈ ಕೆಳಕಂಡ ವಿವರಗಳನ್ನು ಕೊಡಲಾಗಿದೆ.

ಮಾಹೆ		ದ್ವಿಚಕ್ರ ವಾಹನಗಳ ಡ್ರೈವಿಂಗ್ ಲೈಸೆನ್ಸ್	ದ್ವಿಚಕ್ರ ವಾಹನ ಗಳಿಗೆ ನೀಡಲಾದ ನೀಲಿ ಪ್ಲಾಸ್ಟಿಕ್ ಕಾರ್ಡ್‌ಗಳು
ಜುಲೈ	92	525	639
ಆಗಸ್ಟ್	92	447	531
ಸೆಪ್ಟೆಂಬರ್	92	460	499
ಒಟ್ಟು		**1432**	**1669**

ಆ) ಪಡೆದವರ ಹೆಸರು ಮತ್ತು ನಂಬರುಗಳ ವಿವರಗಳನ್ನು ಒದಗಿಸಲಾಗುವುದಕ್ಕೆ ಕಾಲಾವಕಾಶ ಬೇಕು.

1992-93ರ ವರ್ಷದಲ್ಲಿ ಸದರಿ ಕಛೇರಿಯಿಂದ ಬಂದ ರಾಜಸ್ವ ವಸೂಲಾತಿ ಒಟ್ಟು ರೂಪಾಯಿ 6,42,60,677-00

ಖಾಲಿ ಇರುವ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ಹುದ್ದೆಗಳ ಬಗ್ಗೆ

367 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಗೃಹ ಇಲಾಖೆಯಲ್ಲಿ ಖಾಲಿಯಿರುವ ಪೋಲೀಸ್ ಸಬ್- ಇನ್ಸ್‌ಪೆಕ್ಟರ್ ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್‌ಗಳ ಹುದ್ದೆಗಳೆಷ್ಟು?

ಆ) ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಪೋಲೀಸ್ ಸಬ್-ಇನ್ಸ್‌ಪೆಕ್ಟರ್ ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ಹುದ್ದೆಗಳಿವೆ (ವಿವರವನ್ನು ಒದಗಿಸುವುದು)

ಇ) ಸದರಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಪೋಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್) - 114
ರಿಸರ್ವ್ ಸಬ್-ಇನ್ಸ್‌ಪೆಕ್ಟರ್ (ಸಿಎಆರ್: ಡಿಎಆರ್) - 65
ವಿಶೇಷ ರಿಸರ್ವ್ ಸಬ್-ಇನ್ಸ್‌ಪೆಕ್ಟರ್ (ಕೆಎಸ್‌ಆರ್‌ಪಿ) - 65
ಪೋಲೀಸ್ ಸಬ್-ಇನ್ಸ್‌ಪೆಕ್ಟರ್ (ಎಫ್.ಪಿ.ಬಿ) - 30
ಪೋಲೀಸ್ ಸಬ್-ಇನ್ಸ್‌ಪೆಕ್ಟರ್ (ವೈರ್‌ಲೆಸ್) - 11
ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ - 61

ಆ) ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ

ಇ) ಈ ಹುದ್ದೆಗಳನ್ನು ನೇರ ನೇಮಕಾತಿ ಹಾಗೂ ಮುಂಬಡ್ತಿಯಿಂದ ಚಾಲ್ತಿಯಲ್ಲಿರುವ ನೇಮಕಾತಿ ನಿಯಮಗಳನ್ವಯ ಅರ್ಹ ಅಭ್ಯರ್ಥಿಗಳ ಲಭ್ಯತೆಯನ್ನು ಆಧರಿಸಿ ಆದಷ್ಟು ಬೇಗ ಭರ್ತಿ ಮಾಡಲಾಗುವುದು.

STATEMENT

Vacancy Position of PSI/CIP'S

	Place	Police Sub-Inspector			Circle Police
		Civil	Armed	Special RSIS	Inspector
1	2	3	4	5	6
1.	C.P., Bangalore city	4	26	-	16
2.	C.P., Mysore City	1	2	-	2
3.	C.P., Hubli-Dharwad	-	1	-	-
4.	D.I.G., C.R., B'lore	-	-	-	-
5.	S.P., B'lore District	3	4	-	1
6.	S.P., Kolar	4	-	-	2
7.	S.P., K.G.F.	2	2	-	1
8.	S.P., Tumkur	2	2	-	3
9.	D.I.G., S.R., Mysore	-	-	-	-
10.	S.P., Mysore	4	-	-	1
11.	S.P., Hassan	-	-	-	-
12.	S.P., Kodagu	6	-	-	1
13.	S.P., Mandya	4	-	-	-
14.	D.I.G.P., E.R., Davanagere	-	—		
15.	S.P., Chitradurga	2	1	-	-
16.	S.P., Shimoga	-	-	-	1

17.	S.P., Bellary	1	-	-	-
18.	D.I.G.P., W.R. Mangalore	1	—		
19.	S.P., D.K., Mangalore	-	-	-	2
20.	S.P., U.K., Karwar	3	2	-	-
21.	S.P., Chickmagalur	3	Ë	Ë	4
22.	D.I.G.P., N.R., Belgaum	-	-	–	
23.	S.P., Dharwad	6	2	-	2
24.	S.P., Bijapur	7	2	-	1
25.	S.P., Belgaum	10	-	-	1
26.	D.I.G.P., NER, Gulbarga	-	-	–	
27.	S.P., Raichur	1	4	-	1
28.	S.P., Bidar	-	3	-	1
29.	S.P., Gulbarga	4	6	-	5
30.	D.G.P., CRE Cell, B'lore	1	1	–	3
31.	I.G.P., Forest Cell, B'lore	-	—		
32.	I.G.P., Intelligence, B'lore	-	-	-	3
33.	I.G.P., COD, B'lore	5	-	-	1
34.	Principal, P.T.S., Channapatna	10	1	-	1
35.	Principal, P.T.S., Khanapur	11	—		
36.	S.P., S.C.R.B	9	-	-	1
37.	K.P.A., Mysore	-	2	-	-
38.	S.P., MTO	-	1	-	-
39.	S.P., Railways	-	-	-	-
40.	A.P.T.S	-	-	-	-
41.	P.R.C.	-	-	-	-
42.	High Court (Vig)	-	-	-	2
43.	K.E.B. (Vig)	-	-	-	1
44.	L & O, Chief office	-	-	-	1
45.	Home Guards	-	-	-	2
46.	K.L.A.	-	-	-	1
47.	I Bn., KSRP, B'lore	-	-	5	-
48.	II Bn., KSRP, Belgaum	-	-	3	-
49.	III Bn., KSRP, B'lore	-	-	1	-
50.	IV Bn., KSRP, B'lore	-	-	6	-
51.	V Bn., KSRP, Mysore	-	-	2	-
52.	VI Bn., KSRP, Gulbarga	-	-	-	-
53.	VII Bn., Mangalore KSRT	-	-	2	-
54.	VIII Bn., KSRP, Shimoga	-	-	–	
55.	IX Bn., KSRP, Yelahanka	-	-	22	-
56.	X Bn., KSRP, Shiggaon	-	-	22	-
57.	KSRP Training School	-	-	2	-
	Total	**114**	**65**	**65**	**61**

PSIS (EPB) - 30

PSIS (Wireless) - 11

ಸಾರಿಗೆ ಸಂಸ್ಥೆಯಲ್ಲಿ ವಿಭಾಗ ನಿಯಂತ್ರಣಾಧಿಕಾರಿ ಹುದ್ದೆಗೆ ಬಡ್ತಿ

364 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರಿಗೆ ಸಂಸ್ಥೆಯಲ್ಲಿ ಡಿಪ್ಲೋಮಾ ಮಾಡಿದವರಿಗೆ ಕ್ಲಾಸ್ -1 ಸೀನಿಯರ್ ಸ್ಕೇಲ್ ಹುದ್ದೆಯಾದ ವಿಭಾಗ ನಿಯಂತ್ರಣಾಧಿಕಾರಿ ಹುದ್ದೆಗೆ ಬಡ್ತಿ ನೀಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ವೃಂದ ಮತ್ತು ನೇಮಕಾತಿ ನಿಯಮವನ್ನು ಅನುಸರಿಸಿ ನೀಡಲಾಗಿದೆಯೇ?

ಇ) ಇದೇ ಹುದ್ದೆಗೆ ಬಿ.ಇ. (ಮೆಕ್ಯಾನಿಕಲ್) ಪದವೀಧರರಿಗೆ ಬಡ್ತಿ ನೀಡಲು ಅನುಸರಿಸುವ ನಿಯಮ ಯಾವುದು?

ಈ) ಸದರಿ ಬಡ್ತಿಯನ್ನು ಜೇಷ್ಠತಾ ಪಟ್ಟಿಗನುಗುಣವಾಗಿ ನೀಡಲಾಗಿದೆಯೇ ಹಾಗಿಲ್ಲದಿದ್ದಲ್ಲಿ ತಪ್ಪಿತಸ್ಥರ ಮೇಲೆ ಕೈಗೊಂಡ ಕ್ರಮವೇನು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಮಂತ್ರಿಗಳು) :

ಅ) ಇಲ್ಲ

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಪದವೃಂದ ಮತ್ತು ನೇಮಕಾತಿ) ನಿಯಮಾವಳಿ 1982ನ್ನು ಅನುಸರಿಸಿ ಬಡ್ತಿ ನೀಡಲಾಗಿದೆ

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪದವೃಂದ ಮತ್ತು ನೇಮಕಾತಿ ನಿಯಮಾವಳಿ 1982ರ ಪ್ರಕಾರವೇ ಪರಿಗಣಿಸಲಾಗುವುದು.

ಈ) ವಿಭಾಗ ನಿಯಂತ್ರಣಾಧಿಕಾರಿಗಳ ಹುದ್ದೆಗಳು ದರ್ಜೆ-1(ಹಿರಿಯ) ಹುದ್ದೆಗಳಾಗಿದ್ದು ದರ್ಜೆ -1 (ಕಿರಿಯ) ಅಧಿಕಾರಿಗಳನ್ನು ಜೇಷ್ಟತೆ ಹಾಗೂ ಆಯ್ಕೆ ಆಧಾರದ ಮೇಲೆ ಪರಿಗಣಿಸಿ ಬಡ್ತಿ ನೀಡಿ ಹುದ್ದೆಗಳನ್ನು ತುಂಬಿರುವುದರಿಂದ ಯಾವುದೇ ತಪ್ಪು ಉಂಟಾಗಿರುವುದಿಲ್ಲ. ಆದುದರಿಂದ, ಯಾವುದೇ ಶಿಸ್ತು ಕ್ರಮ ತೆಗೆದುಕೊಳ್ಳುವ ಪ್ರಮೇಯವಿರುವುದಿಲ್ಲ.

ನದಿಗಳಲ್ಲಿ ಮಾಲಿನ್ಯಕ್ಕೆ ಕಾರಣರಾದವರ ಮೇಲೆ ಕ್ರಮ

578 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ವಿಜ್ಞಾನ ಮತ್ತು ಯಂತ್ರಕಲಾ ಮತ್ತು ಮಲೆನಾಡು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ನಗರಗಳಲ್ಲಿ ಮತ್ತು ನದಿಗಳಲ್ಲಿ ವಿವಿಧ ಬಗೆಯ ಮಾಲಿನ್ಯವುಂಟಾಗಿರುವುದು. ಮಾಲಿನ್ಯಕ್ಕೆ ಕಾರಣರಾದವರಲ್ಲಿ ಯಾರ ಯಾರ ಮೇಲೆ ಕಾನೂನು ಕ್ರಮ ಜರುಗಿಸಲಾಗಿದೆ?

ಆ) ಅನೇಕ ವಾಹನಗಳಲ್ಲಿ 'ಏರ್ ಹಾರನ್' ಗಳನ್ನು ಹಾಕಿ ಶಬ್ದ ಮಾಲಿನ್ಯವುಂಟಾಗುತ್ತಿದ್ದರೂ ಇವುಗಳನ್ನು ನಿಷೇದಿಸದೆ ಇರುವುದಕ್ಕೆ ಕಾರಣವೇನು?

ಡಾ|| ಎಚ್.ಆರ್. ರಾಜು (ವಿಜ್ಞಾನ, ಯಂತ್ರಕಲಾ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಮಲೆನಾಡು ಅಭಿವೃದ್ಧಿ ಮಂಡಳಿ ರಾಜ್ಯ ಸಚಿವರು) :

ಅ) ನಗರಗಳು ಹಾಗೂ ನದಿಗಳಲ್ಲಿ ಉಂಟಾಗುವ ಮಾಲಿನ್ಯವೆಂದರೆ ಜಲ ಮಾಲಿನ್ಯ ವಾಯು ಮಾಲಿನ್ಯ ಹಾಗೂ ಶಬ್ದ ಮಾಲಿನ್ಯ.

ನಗರಗಳಲ್ಲಿ ಜಲ ಮಾಲಿನ್ಯವು ಕಾರ್ಖಾನೆಗಳಿಂದ ಹೊರಬರುವ ಕಲ್ಮಷ ನೀರು ಹಾಗೂ ಗೃಹ ಬಳಕೆಯಿಂದ ಹೊರ ಬರುವ ಕೊಳಚೆ ನೀರಿನಿಂದ ಉಂಟಾಗುತ್ತದೆ.

ನಗರಗಳಲ್ಲಿ ವಾಯು ಮಾಲಿನ್ಯವು ಬಹುತೇಕವಾಹನಗಳಿಂದ ಉಂಟಾಗುತ್ತದೆ ಹಾಗೂ ಸ್ವಲ್ಪ ಮಟ್ಟಿಗೆ ಕೈಗಾರಿಕೆಗಳಿಂದ ಉಂಟಾಗುತ್ತದೆ. ವಾಹನಗಳಿಂದ ಉಂಟಾಗುವ ವಾಯು ಮಾಲಿನ್ಯವನ್ನು ತಡೆಯಲು ಅಧಿಕಾರವು ಪೋಲೀಸ್ ಹಾಗೂ ಸಾರಿಗೆ ಇಲಾಖೆಗಳಿಗೆ ವಹಿಸಲ್ಪಟ್ಟಿದೆ. ಕೈಗಾರಿಕೆಗಳಿಂದ ಉಂಟಾಗುವ ವಾಯು ಹಾಗೂ ಶಬ್ದ ಮಾಲಿನ್ಯವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮಾಪನ ಮಾಡುತ್ತಿದೆ. ವಾಹನಗಳ ಹಾರನ್, ಧ್ವನಿವರ್ಧಕ ಮುಂತಾದವುಗಳಿಂದ ಉಂಟಾಗುವ ಶಬ್ಧ ಮಾಲಿನ್ಯವನ್ನು ತಡೆಯುವ ಹೊಣೆಗಾರಿಕೆ ಪೋಲೀಸ್ ಇಲಾಖೆಯದ್ದಾಗಿರುತ್ತದೆ.

ನದಿಗಳ ಮಾಲಿನ್ಯಕ್ಕೆ ಪಟ್ಟಣ ಪ್ರದೇಶಗಳ ಕೊಳಚೆ, ನೀರು ಹಾಗೂ ಕಾರ್ಖಾನೆಗಳು ಹೊರಬಿಡುವ ಕಲುಷಿತ ನೀರು ಸೇರುವುದು ಕಾರಣವಾಗಿದೆ. ಕೊಳಚೆ ನೀರನ್ನು ಶುದ್ಧೀಕರಿಸಿ ಬಿಡಲು ವಿಫಲವಾಗಿರುವ ಭದ್ರಾವತಿ ಮತ್ತು ಮಂಗಳೂರು ನಗರ ಪಾಲಿಕೆಗಳ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿದೆ.

ಆ) ಕೇಂದ್ರ ಮೋಟಾರು ವಾಹನ ಕಾಯ್ದೆ 89ರ ನಿಯಮ 119ರ ಪ್ರಕಾರ ವಾಹನಗಳಿಗೆ ಅಳವಡಿಸಲಾದ ಹಾರ್ನ್‌ನ್ನು ಬಿರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ ಮಾನಕಕ್ಕೆ ಸರಿ ಹೊಂದುವಂತಿರಬೇಕು. ಈ ಹಾರ್ನ್‌ನಿಂದ ಹೊರಡುವ ಶಬ್ದವು ಕರ್ಕಷವಾಗಲಿ ಸೀಳು ಧ್ವನಿಯಲ್ಲಿ ಹೊರಡಿಸಬಾರದು. ಈ ನಿಯಮವನ್ನು ಉಲ್ಲಂಘಿಸಿದ ವಾಹನ ಚಾಲಕರ ಮೇಲೆ ಮೊದಲ ಅಪರಾಧಕ್ಕೆ ರೂ. 1,000-00ಗಳು ಹಾಗೂ ತದನಂತರ ಅಪರಾಧಕ್ಕೆ ರೂ. 2,000-00ಗಳು ದಂಡವನ್ನು ವಿಧಿಸುವ ಅವಕಾಶವನ್ನು ಮೇಲಿನ ಮೋಟಾರು ಕಾಯ್ದೆ ನಿಯಮ 190 (2)ರ ಪ್ರಕಾರ ಅವಕಾಶ ಮಾಡಲಾಗಿದೆ. ವಿವಿಧ ವರ್ಗಗಳ ಎಲ್ಲ ವಾಹನಗಳಿಗೆ ಸಮಾನಾಂತರ ಶಬ್ದವನ್ನು ಹೊರಡಿಸುವಂತೆ ಹಾರ್ನ್‌ನ್ನು ಅಳವಡಿಸುವುದು ಕಾರ್ಯರೂಪದಲ್ಲಿ ಸಾಧ್ಯವಾಗದ ಕಾರಣ ನಿರ್ದಿಷ್ಟ ನಿಯಮವನ್ನು ರೂಪಿಸುವುದು ಕಷ್ಟಸಾಧ್ಯವೆಂದು ಸಾರಿಗೆ ಇಲಾಖೆಯು ತಿಳಿಸಿದೆ.

ಮುಂಡರಗಿ ತಾಲ್ಲೂಕಿನಲ್ಲಿ ಪೋಲೀಸ್ ಸಿಬ್ಬಂದಿ ಬಗ್ಗೆ

479 - ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕಿಗೆ ಪೋಲೀಸ್ ಸಿಬ್ಬಂದಿ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹೆಚ್ಚಿನ ಸಿಬ್ಬಂದಿಯನ್ನು ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಮುಂಡರಗಿ ಪೋಲೀಸ್ ಠಾಣೆಯಲ್ಲಿ ಸಾಕಷ್ಟು ಪೋಲೀಸ್ ಸಿಬ್ಬಂದಿ ಇರುತ್ತದೆ.

ಆ) ಉದ್ಭವಿಸುವುದಿಲ್ಲ

ಮುಳುಗುಂದ ಪೋಲೀಸ್ ಠಾಣೆ ಸಿಬ್ಬಂದಿ ಕೊರತೆ

479 ಎ - ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳುಗುಂದ ಪೋಲೀಸ್ ಠಾಣೆಯಲ್ಲಿನ ಸಿಬ್ಬಂದಿಗೆ ಮುಳುಗುಂದದಲ್ಲಿ ಪೋಲೀಸ್ ಕ್ವಾರ್ಟರ್ಸ್ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಹೌದು

ಆ) 1993-94ನೇ ಸಾಲಿನ ಆಧ್ಯತಾ ಪಟ್ಟಿಯಲ್ಲಿ ಈ ಕಾಮಗಾರಿಯನ್ನು ಸೇರಿಸಿ ಮುಳುಗುಂದದಲ್ಲಿ 8 ಪೋಲೀಸ್ ವಸತಿ ಗೃಹಗಳು ಒಂದು ಪೋಲೀಸ್ ಠಾಣೆಯನ್ನು ಕಟ್ಟಲು ಸರ್ಕಾರದ ಮಂಜೂರಾತಿಯನ್ನು ದಿನಾಂಕ 07-03-94ರಂದು ನೀಡಲಾಗಿದೆ. ಸದರಿ ಕಾಮಗಾರಿಯನ್ನು ಪೋಲೀಸ್ ವಸತಿ ನಿಗಮವು ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ತ್ವರಿತವಾಗಿ ಕೈಗೆತ್ತಿಕೊಳ್ಳುವುದು.

ರಾಜಕೀಯ ಸಂತ್ರಸ್ಥರಿಗೆ ಮಾಸಾಶನ

26-ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಈವರೆಗೆ ರಾಜಕೀಯ ಸಂತ್ರಸ್ಥರಿಗೆ ಮಾಸಾಶನ ಎಷ್ಟು ಜನರಿಗೆ ಕೊಡಲಾಗಿದೆ. ಇನ್ನು ಕೊಡಬೇಕಾದವರು ಎಷ್ಟು?

ಆ) ಮಾಸಾಶನ ಮಂಜೂರಾತಿಯಲ್ಲಿ ಅನುಸರಿಸುವ ನಿಯಮಗಳೇನು?

ಇ) ಹಿಂದೆ ಮಾಸಾಶನ ಕೊಟ್ಟಿರುವವರಿಗೆ ಅವರು ಹಾಕಿದ ಅರ್ಜಿ ತಾರೀಖಿನಿಂದಲೇ ಮಾಸಾಶನ ನೀಡಿರುವುದು ನಿಜವಲ್ಲವೇ?

ಈ) ಈಚೆಗೆ ಮಾಸಾಶನ ಮಂಜೂರಾತಿಯಲ್ಲಿ ಅರ್ಜಿ ಹಾಕಿದ ದಿನಾಂಕ ಬಿಟ್ಟು ಮಂಜೂರಾದ ದಿನಾಂಕದಿಂದ ಕೊಡುತ್ತಿರುವುದು ರಾಜಕೀಯ ಸಂತ್ರಸ್ಥರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ?

ಉ) ಕೆಲವು ರಾಜಕೀಯ ಸಂತ್ರಸ್ಥರುಗಳು, ಒಂದೇ ದಿವಸ ಅರ್ಜಿ ಹಾಕಿ ಮಂಜೂರಾತಿಯಲ್ಲಿ ಕೆಲವರಿಗೆ ನಿಧಾನವಾಗಿ ಮಂಜೂರಾತಿ ಆದಾಗ ಮಂಜೂರಾತಿ ದಿನದಿಂದ ಕೊಡುವುದು ತಾರತಮ್ಯ ಮಾಡಿದಂತಾಗುವುದಿಲ್ಲವೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) (1) 1994ನೇ ಜುಲೈ ತಿಂಗಳ ಅಂತ್ಯದವರೆಗೆ 25,961 ಮಂದಿ ಸ್ವಾತಂತ್ರ್ಯ ಯೋಧರಿಗೆ ರಾಜ್ಯ ಗೌರವಧನ ಮಂಜೂರು ಮಾಡಲಾಗಿದೆ.

(2) 1994ನೇ ಜುಲೈ ತಿಂಗಳ ಅಂತ್ಯದ ವರೆಗೆ 2,694 ಪ್ರಕರಣಗಳು ಬಾಕಿ ಇರುತ್ತದೆ.

ಆ) ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಸೈನಿಕ ಸನ್ಮಾನ ಗೌರವಧನ ಪರಿಯೋಜನೆ, 1969, ಮತ್ತು ಕಾಲ ಕಾಲಕ್ಕೆ ತಿದ್ದುಪಡಿ ಮಾಡಲಾದ ನಿಯಮಗಳ ಪ್ರಕಾರ ಗೌರವಧನ ಮಂಜೂರು ಮಾಡಲಾಗುತ್ತಿದೆ.

ಇ) ಗೌರವಧನ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಲು ದಿನಾಂಕ 31-12-82 ಕೊನೆಯ ದಿನಾಂಕವಾಗಿದ್ದಿತು. ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 1626 ಪಿಎಫ್ಎಸ್ 87ರ ಪ್ರಕಾರ ದಿನಾಂಕ 31-12-82ರೊಳಗೆ ಅರ್ಜಿ ಹಾಕಿದವರಿಗೆ, ಅರ್ಜಿ ಹಾಕಿದ ದಿನಾಂಕದಿಂದ ಅಥವಾ ದಿನಾಂಕ 4-9-80 ಇದರಲ್ಲಿ ಯಾವುದು ಕೊನೆಯದೋ ಆ ದಿನಾಂಕದಿಂದ ಗೌರವಧನ ಮಂಜೂರು ಮಾಡಬಹುದಾಗಿದೆ. ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 34 ಪಿಎಫ್‌ಜಿ 92, ದಿನಾಂಕ 2-6-92ರ ಪ್ರಕಾರ ದಿನಾಂಕ 1-1-83 ಮತ್ತು 30-6-92ರ ಅವಧಿಯಲ್ಲಿ ಅರ್ಜಿ ಹಾಕಿದವರಿಗೆ ಮಂಜೂರಾದ ದಿನಾಂಕದಿಂದ ಗೌರವಧನ ಮಂಜೂರು ಮಾಡಬಹುದಾಗಿದೆ.

ಈ) 'ಇ'ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಉ) ಸ್ವಾತಂತ್ರ್ಯ ಹೋರಾಟಗಾರರು ನಿಖರವಾದ ದಾಖಲೆಗಳನ್ನು ಒದಗಿಸುವುದರಲ್ಲಿ ವಿಳಂಬವಾದರೆ ಮಂಜೂರಾತಿಯು ವಿಳಂಬವಾಗುತ್ತದೆ. ಮತ್ತು 'ಇ'ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಮೂಡಬಿದರೆ ಬೆಂಗಳೂರು ಸುಖಾಸೀನ ಬಸ್ಸಿನ ಬಗ್ಗೆ

556 - ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದರೆ ಬೆಂಗಳೂರು ಬಸ್ಸು ಮೂಡಬಿದರೆಯಿಂದ ಬೆಂಗಳೂರಿಗೆ ಇರುವ ಬಸ್ಸಿನ ಸಂಚಾರ ಪ್ರತಿದಿನ ಸರಿ ಇಲ್ಲದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಜೈನ ಕಾಶಿಯೆಂದು ಸಾವಿರಾರು ಯಾತ್ರಿಕರು ಸಂದರ್ಶಿಸುತ್ತಿರುವ ಈ ಊರಿನಲ್ಲಿ ಸರಿಯಾದ ಬಸ್ಸುಗಳ ವ್ಯವಸ್ಥೆ ಮಾಡಲಾಗುವುದೇ?

ಇ) ಮಂಗಳೂರು ವಿಭಾಗವು ಲಾಭದಾಯಕವಾಗಿ ಕಾರ್ಯ ನಿರ್ವಹಿಸುತ್ತಿದ್ದರೂ ಇಲ್ಲಿಯ ಹಲವಾರು ಬಸ್ಸುಗಳು ಸಮಯ ಕ್ಲಪ್ತತೆ ಕಾಪಾಡದೇ ವಾಹನದ ಸ್ಥಿತಿ ಉತ್ತಮವಿಲ್ಲದ ಕಾರಣ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಬೆಂಗಳೂರು - ಮೂಡಬಿದರೆ ಮಂಗಳೂರು ಮೂಲಕ ಆಚರಣೆಯಾಗುತ್ತಿದ್ದ ಸುವಿಹಾರಿ ಬಸ್ಸು ಜನ ಮನ್ನಣೆ ಪಡೆಯದೆ ಸಂಸ್ಥೆಯು ನಷ್ಟ ಅನುಭವಿಸುತ್ತಿತ್ತು. ಆದುದರಿಂದ ಈ ಮೇಲಿನ ಸಾರಿಗೆಯನ್ನು ದಿನಾಂಕ 21-7-94ರಿಂದ ರದ್ದುಗೊಳಿಸಲಾಗಿದೆ.

ಆ) ಮೂಡಬಿದರೆಯು ರಾಷ್ಟ್ರೀಕೃತವಲ್ಲದ ವಲಯದಲ್ಲಿದೆ. ಖಾಸಗಿ ಮಾಲೀಕರು ಅವರ ಬಸ್ಸುಗಳನ್ನು ಆಚರಣೆ ಮಾಡುತ್ತಿದ್ದಾರೆ. ಆದಾಗ್ಯೂ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು 17 ಬಸ್ಸುಗಳನ್ನು ಮೂಡಬಿದರೆ ಮುಖಾಂತರ ಹಲವಾರು ಸ್ಥಳಗಳಿಗೆ ಆಚರಿಸುತ್ತಿದೆ. ಈ ಮೇಲಿನ 17 ಬಸ್ಸುಗಳಿಗೂ ಮೂಡಬಿದರೆಯಲ್ಲಿ ನಿಲುಗಡೆಯನ್ನು ಕಲ್ಪಿಸಲಾಗಿದೆ.

ಇ) ಇಲ್ಲ

ರಾಜ್ಯದಲ್ಲಿ ಪಡಿತರ ಚೀಟಿಯ ಮುದ್ರಣದ ಬಗ್ಗೆ

642 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಪಡಿತರ ಚೀಟಿಗಳ ಸಂಖ್ಯೆ ಎಷ್ಟು?

ಆ) ಈ ಪಡಿತರ ಚೀಟಿಗಳಲ್ಲಿ ಹಾಳೆಗಳು ಮುಗಿದು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹೊಸದಾಗಿ ಪಡಿತರ ಚೀಟಿ ಕಾರ್ಡುಗಳನ್ನು ಹಾಲಿ ಕಾರ್ಡುದಾರರಿಗೆ ನೀಡಲಾಗುತ್ತಿದೆಯೇ?

ಈ) ಹೊಸದಾಗಿ ಪಡಿತರ ಕಾರ್ಡುಗಳನ್ನು ಮುದ್ರಿಸಲು ಖಾಸಗಿಯವರಿಗೆ ಆದೇಶ ನೀಡಲಾಗಿದೆಯೇ?

ಉ) ಹಾಗಿದ್ದಲ್ಲಿ ಇದಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಬಿ.ಎಸ್. ಪಾಟೀಲ (ಸಾಸನೂರು) (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) 96,89,963

ಆ) ಕೇಸರಿ ಮತ್ತು ಫೋಟೋ ಪಡಿತರ ಚೀಟಿಗಳ ಹಾಳೆಗಳು ಮುಗಿದಿದೆ. ತ್ರಿವರ್ಣ ಪಡಿತರ ಚೀಟಿಗಳ ಹಾಳೆಗಳು ಮುಗಿದಿಲ್ಲ.

ಇ) ಫೋಟೋ ಕಾರ್ಡುಗಳಿಗೆ ಹೆಚ್ಚುವರಿ ಪುಸ್ತಕಗಳನ್ನು ನೀಡಲು ಕ್ರಮ ವಹಿಸಲಾಗಿದೆ. ಕೇಸರಿ ಕಾರ್ಡುಗಳಿಗೆ ಹೆಚ್ಚುವರಿ ಪುಸ್ತಕಗಳ ಮುದ್ರಣ ನಡೆಯುತ್ತಿದ್ದು ಶೀಘ್ರವಾಗಿ ವಿತರಿಸುವ ಕಾರ್ಯ ಕೈಗೊಳ್ಳಲಾಗುವುದು.

ಈ) ಇಲ್ಲ

ಉ) ಉದ್ಭವಿಸುವುದಿಲ್ಲ.

ಶಿಗ್ಗಾಂವ್‌ನಲ್ಲಿ 10ನೇ ಕೆ.ಎಸ್.ಆರ್.ಪಿ ಬೆಟಾಲಿಯನ್ ಪ್ರಾರಂಭಿಸುವುದು

621 - ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವದಲ್ಲಿ 10ನೇ ಪಡೆ ಕೆ.ಎಸ್.ಆರ್.ಪಿ ಬೆಟಾಲಿಯನ್ ಯಾವಾಗ ಮಂಜೂರಾಗಿದೆ?

ಆ) ಸದರಿ ಬೆಟಾಲಿಯನ್‌ಗೆ ಯಾವ ಎಸ್.ಪಿಯನ್ನು ವರ್ಗಾವಣೆ ಮಾಡಲಾಗಿದೆ ಹಾಗೂ ಸದರಿಯವರು ಇನ್ನೂ ಹಾಜರಾಗದಿರಲು ಕಾರಣಗಳೇನು?

ಇ) ಸದರಿ ಬೆಟಾಲಿಯನ್ ಕೂಡಲೇ ಪ್ರಾರಂಭಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯ ಮುಖ್ಯಮಂತ್ರಿಗಳಿಂದ ಎಷ್ಟು ಸಲ ಆದೇಶ ಮಾಡಲಾಗಿದೆ?

ಈ) ಈ ಬಗ್ಗೆ ಅಧಿಕಾರಿಗಳು ವಿಳಂಬ ಮಾಡಲು ಕಾರಣವೇನು?

ಉ) ಇನ್ನು ಎಷ್ಟು ದಿವಸಗಳಲ್ಲಿ ಸದರಿ ಬೆಟಾಲಿಯನ್ ಪ್ರಾರಂಭಿಸಲಾಗುವುದು?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಶಿಗ್ಗಾಂವದಲ್ಲಿ ಕೆ.ಎಸ್.ಆರ್.ಪಿ. 10ನೇ ಬೆಟಾಲಿಯನ್ ಸರ್ಕಾರಿ ಆದೇಶ ಸಂಖ್ಯೆ ಹೆಚ್‌ಡಿ 135 ಪಿಓಪಿ 93, ದಿನಾಂಕ 16-9-93ರಲ್ಲಿ ಮಂಜೂರಾಗಿರುವುದು.

ಆ) 10ನೇ ಬೆಟಾಲಿಯನ್‌ಗೆ ಶ್ರೀ ಕೆ. ಲಕ್ಷ್ಮಣಯ್ಯರವರನ್ನು ಕಮಾಂಡೆಂಟ್ ಆಗಿ ವರ್ಗಾವಣೆ ಮಾಡಲಾಗಿದ್ದು, ಅವರು ದಿ 3-3-94ರಿಂದ ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಇ) ಮುಖ್ಯ ಮಂತ್ರಿಯವರಿಂದ ಯಾವ ಆದೇಶ ಬಂದಿಲ್ಲ.

ಈ) ಉ) ಈ ಪಡೆಯನ್ನು ಪೂರ್ಣ ಪ್ರಮಾಣದಲ್ಲಿ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಅನುದಾನ ಪ್ರೌಢಶಾಲೆಗಳಿಗೆ ಕ್ರೀಡೆ ಉಪಕರಣಗಳನ್ನು ನೀಡುವುದು

643 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಪ್ರವಾಸೋದ್ಯಮ ಹಾಗೂ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅನುದಾನ ಪಡೆಯುತ್ತಿರುವ ಪ್ರೌಢಶಾಲೆಗಳಿಗೆ ಯುವಜನಸೇವಾ ಇಲಾಖೆಯು ಪ್ರತಿ ವರ್ಷ ಕ್ರೀಡೋಪಕರಣಗಳನ್ನು ಒದಗಿಸುತ್ತಿದೆಯೇ?

ಆ) ಹಾಗಿದ್ದಲ್ಲಿ 1993-94ರಲ್ಲಿ ಎಷ್ಟು ಶಾಲೆಗಳಿಗೆ ಇವುಗಳನ್ನು ನೀಡಲಾಗಿದೆ?

ಇ) ಇಲ್ಲದಿದ್ದಲ್ಲಿ, 1994-95ರಲ್ಲಿ ಅನುಧಾನ ಪ್ರೌಢಶಾಲೆಗಳಿಗೆ ಕ್ರೀಡೋಪಕರಣಗಳನ್ನು ಒದಗಿಸಲು ಅಥವಾ ಅದಕ್ಕಾಗಿ ಧನಸಹಾಯ ನೀಡುವ ಯೋಜನೆಯನ್ನು ಸರ್ಕಾರ ಕೈಗೊಳ್ಳುತ್ತಿದೆಯೇ?

ಶ್ರೀ ಓಂ ಪ್ರಕಾಶ್ ಕಣಗಲಿ (ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು) :

ಅ) ಇಲ್ಲ

ಆ) ಅನ್ವಯಿಸುವುದಿಲ್ಲ

ಇ) ಇಲ್ಲ

ಹೆಚ್ಚುವರಿ ಪಿ.ಎಸ್.ಐ ಹುದ್ದೆಗಳನ್ನು ನೇಮಕ ಮಾಡುವುದು

647 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈಗಾಗಲೇ ರಾಜ್ಯದಲ್ಲಿ ಪಿ.ಎಸ್.ಐ ಮತ್ತು ಎಫ್.ಪಿ.ಬಿ. ಇತರೆ ಪೋಲೀಸ್ ಇಲಾಖೆಯಲ್ಲಿ ಹಾಲಿ ಖಾಲಿ ಇರುವ ಹುದ್ದೆಗಳೆಷ್ಟು?

ಆ) ಪಿ.ಎಸ್.ಐ (ಸಿವಿಲ್) ಹುದ್ದೆ ತುಂಬಲು ಸರ್ಕಾರ ಮಂಜೂರಾತಿ ಕೊಟ್ಟಿದ್ದು ಎಷ್ಟು?

ಇ) ಸರ್ಕಾರದ ಆದೇಶದ ನಂತರ ಪೋಲೀಸ್ ಇಲಾಖೆಯವರು ನೇಮಕಾತಿ ಜಾಹೀರಾತು ಮಾಡಿದ ಹುದ್ದೆಗಳೆಷ್ಟು?

ಈ) ಈಗಾಗಲೇ ನೇಮಕಾತಿ ಮಾಡಿದ ಹುದ್ದೆಗಳೆಷ್ಟು?

ಉ) ಕೆ.ಎಸ್.ಸಿ.ಎಸ್. ನಿಯಮದಲ್ಲಿ ಶೇಕಡ 10ಮತ್ತು 50ಹೆಚ್ಚುವರಿ ನೇಮಕಾತಿಯನ್ನು ಮಾಡಲು ಅವಕಾಶವಿರುವುದು ನಿಜವೇ?

ಊ)ಆಗಿದ್ದಲ್ಲಿ ಶೇಕಡಾ 10 ಹೆಚ್ಚುವರಿ ಪಟ್ಟಿ ಮಾಡಿರುವುದು ನಿಜವೇ ಸರಿಯೇ?

ಋ) ಪಿ.ಎಸ್.ಐ. ಹುದ್ದೆಗಳು ಖಾಲಿ ಇರುವುದರಿಂದ ಶೇಕಡಾ 50 ಹೆಚ್ಚುವರಿ ಮಾಡಲು ಅವಕಾಶವಿದ್ದು, ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಕ್ರಮ ಕೈಗೊಳ್ಳುವುದೇ ಇಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ)	(1) ಪಿ.ಎಸ್.ಐ (ಸಿವಿಲ್) -	114
	(2) ಆರ್.ಎಸ್.ಐ (ಸಿಎಆರ್/ಡಿಎಆರ್)	65
	(3) ವಿಶೇಷ ಆರ್.ಎಸ್.ಐ (ಕೆಎಸ್ಆರ್‌ಪಿ)	65
	(4) ಪಿ.ಎಸ್.ಐ (ವೈರ್‌ಲೆಸ್)	11
	(5) ಪಿ.ಎಸ್.ಐ. (ಎಫ್.ಪಿ.ಬಿ)	30
ಆ) 327		
ಇ)	ಪಿ.ಎಸ್.ಐ (ಸಿವಿಲ್)	164
	ಆರ್.ಎಸ್.ಐ (ಸಿಎಆರ್/ಡಿಎಆರ್)	15
	ವಿಶೇಷ ಆರ್.ಎಸ್.ಐ (ಕೆಎಸ್ಆರ್‌ಪಿ)	15
ಈ)	ಪಿ.ಎಸ್ಐ (ಸಿವಿಲ್)	121
	ಆರ್.ಎಸ್.ಐ (ಸಿಎಆರ್/ಡಿಎಆರ್)	7
	ವಿಶೇಷ ಆರ್.ಎಸ್.ಐ (ಕೆಎಸ್ಆರ್‌ಪಿ)	4

ಉ) ಹೌದು. ಕೆ.ಎಸ್.ಸಿ.ಎಸ್. (ಡೈರೆಕ್ಟ್ ರೆಕ್ರೂಟ್‌ಮೆಂಟ್ ಬೈ ಸೆಲೆಕ್ಷನ್) ನಿಯಮಗಳು, 1973ರ ಪ್ರಕಾರ.

ಊ) ಹೌದು

ಋ) ಪರಿಶೀಲಿಸಲಾಗುತ್ತಿದೆ.

ಹೊಸ ರೇಷನ್ ಕಾರ್ಡ್ ಒದಗಿಸುವುದು

369 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈಗ ಉಪಯೋಗದಲ್ಲಿರುವ ರೇಷನ್ ಕಾರ್ಡುಗಳು ಉಪಯೋಗ ಮಾಡಲಾಗದೆ ಅಜೀರ್ಣಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹೊಸ ಕಾರ್ಡುಗಳನ್ನು ಯಾವಾಗ ಒದಗಿಸಲಾಗುವುದು?

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ)- ಹೌದು

ಫೋಟೋ ಪಡಿತರ ಚೀಟಿ ಮತ್ತು ಕೇಸರಿ ಪಡಿತರ ಚೀಟಿಗಳು ಮಾತ್ರ.

ಆ) 1. ಹಾಗೆ ಮುಗಿದಿರುವ ಪಡಿತರ ಚೀಟಿಗಳಿಗೆ ಹೆಚ್ಚುವರಿ ಪುಸ್ತಕಗಳನ್ನು ಶೀಘ್ರವಾಗಿ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ.

2. ಉಪಯೋಗಿಸಲು ಬಾರದಂತೆ ಪಡಿತರ ಚೀಟಿಗಳು ಹಾಳಾಗಿದ್ದಲ್ಲಿ ಹೊಸ ಪಡಿತರ ಚೀಟಿಗಳನ್ನು ನೀಡಲಾಗುವುದು.

ಮೂಡಬಿದರೆ ಕ್ರೀಡಾಂಗಣದ ಬಗ್ಗೆ

558 - ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಪ್ರವಾಸೋದ್ಯಮ ಹಾಗೂ ಯುವಜನಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದಿರೆಯ ಸ್ವರಾಜ್ಯ ಮೈದಾನಿನಲ್ಲಿ ಕ್ರೀಡಾಂಗಣ ರಚಿಸುವ ಬಗ್ಗೆ ಜನರಿಂದ ಬೇಡಿಕೆ ಬಂದಿದೆಯೇ?

ಆ) ಇಲ್ಲಿ ಕ್ರೀಡಾಂಗಣ ಇಲ್ಲದಿರುವ ತೊಂದರೆ ಸರಕಾರದ ಗಮನಕ್ಕೆ ಬಂದಿದೆಯೇ?

ಇ) ಕ್ರೀಡಾಂಗಣ ನಿರ್ಮಾಣ ಯಾವಾಗ ಆಗುವುದು ಮತ್ತು ಸರಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಓಂ ಪ್ರಕಾಶ್ ಕಣಗಲಿ (ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು) :

ಅ) ಇಲ್ಲ

ಆ) ಹೌದು

ಇ) ನಿವೇಶನವು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ವರ್ಗಾವಣೆ ಆದ ಕೂಡಲೇ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಗ್ರಾಮ ಪಂಚಾಯಿತಿ ಸಿಬ್ಬಂದಿಗೆ ಸೇವಾ ಸೌಲಭ್ಯ

357 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯದರ್ಶಿಗಳನ್ನು ಹೊರತುಪಡಿಸಿ ಇತರ ಸಿಬ್ಬಂದಿ ವರ್ಗದವರಿಗೆ ಸರ್ಕಾರಿ ನೌಕರರಿಗೆ ನೀಡುತ್ತಿರುವ ಸಂಬಳ ಇತರೆ ಸೇವಾ ಸೌಲಭ್ಯಗಳು ದೊರೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ಕ್ರಮ ಹಾಗೂ ನೀತಿ ಏನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಗ್ರಾಮ ಪಂಚಾಯತ್ ಸಿಬ್ಬಂದಿ ವರ್ಗದವರಿಗೆ ಗ್ರಾಮ ಪಂಚಾಯತ್ ನಿಧಿಯಿಂದ ಸಂಬಳವನ್ನು ನೀಡಲಾಗುತ್ತಿದೆ. ಗ್ರಾಮ ಪಂಚಾಯತ್ ನೌಕರರು ಸರ್ಕಾರಿ ನೌಕರರುಗಳಲ್ಲ ಮತ್ತು ಇವರು ಸರ್ಕಾರಿ ನೌಕರರಿಗೆ ಲಭ್ಯವಿರುವ ಸೇವಾ ಸೌಲಭ್ಯಗಳನ್ನು ಹೊಂದಲು ಹಕ್ಕುದಾರರಲ್ಲ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 112ರಲ್ಲಿ ನಿರ್ದಿಷ್ಟಪಡಿಸಿರುವಂತೆ ಇವರಿಗೆ ಸೇವಾ ಸೌಲಭ್ಯಗಳನ್ನು ನೀಡುವ ಬಗ್ಗೆ ಗ್ರಾಮ ಪಂಚಾಯಿತಿಗಳು ಸೂಕ್ತವಾಗಿ ನಿರ್ಧರಿಸಿ ಕ್ರಮ ಕೈಗೊಳ್ಳಲು ದಿನಾಂಕ 10.1.1994ರಂದು ಸರ್ಕಾರದ ಆದೇಶವನ್ನು ಹೊರಡಿಸಲಾಗಿದೆ.

ಸಾರಿಗೆ ಸಂಸ್ಥೆ ನಿರಂತರವಾಗಿ ನಷ್ಟವನ್ನು ಅನುಭವಿಸಿಕೊಂಡು ಬರುತ್ತಿರುವ ಬಗ್ಗೆ

361 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1985 ರಿಂದ 1989ರ ವರೆಗೆ ಸಾರಿಗೆ ಸಂಸ್ಥೆ ಅನುಭವಿಸಿದ ನಷ್ಟವೆಷ್ಟು (ವರ್ಷಾವಾರು ಅಂಕಿಅಂಶಗಳನ್ನು ಒದಗಿಸುವುದು)

ಆ) 1990ರಿಂದ ಪ್ರಸಕ್ತ ವರ್ಷವೂ ಸೇರಿದಂತೆ ಸಾರಿಗೆ ಸಂಸ್ಥೆ ಎಷ್ಟು ನಷ್ಟವನ್ನು ಅನುಭವಿಸಿದೆ?

ಇ) ಇದಕ್ಕೆ ಕಾರಣಗಳೇನು?

ಈ) ನಿರಂತರವಾಗಿ ಸಾರಿಗೆ ಸಂಸ್ಥೆ ಅನುಭವಿಸುತ್ತಿರುವ ನಷ್ಟವನ್ನು ತಪ್ಪಿಸಲು ಯಾವ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ?

ಉ) ನಗರ ಸಾರಿಗೆ ಮಾರ್ಗಗಳನ್ನು ಖಾಸಗಿಯವರಿಗೆ ವಹಿಸಿಕೊಡುವ ವಿಚಾರ ಪರಿಶೀಲನೆಯಲ್ಲಿದೆಯೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಮಂತ್ರಿಗಳು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು 1984-85 ನೇ ಸಾಲಿನಿಂದ 1988-89ನೇ ಸಾಲುಗಳಲ್ಲಿ ಅನುಭವಿಸಿದ ನಷ್ಟದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಸಾಲು	***ನಷ್ಟದ ಮೊಬಲಗು (ಲಕ್ಷ ರೂ.ಗಳಲ್ಲಿ)***
1984-85	2048.50
1985-86	1413.51
1986-87	797.71
1987-88	499.59
1988-89	5400.05

ಆ) ಸದರಿ ಸಾಲಿನಲ್ಲಿ ಸುಮಾರು 85 ರಿಂದ 87 ಕೋಟಿ ರೂಪಾಯಿಗಳ ನಷ್ಟ ಸಂಭವಿಸಿರಬಹುದೆಂದು ಅಂದಾಜು ಮಾಡಲಾಗಿದೆ. 1989-90ರಿಂದ 1993-94ನೇ ಸಾಲುಗಳಲ್ಲಿ ಅನುಭವಿಸಿದ ಲಾಭ/ನಷ್ಟದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಸಾಲು	***ಮೊಬಲಗು ಲಾಭ***	***ಮೊಬಲಗು ನಷ್ಟ***
1989-90	-	3770.12

1990-91	130.44	-
1991-92	-	1909.46
1992-93	-	6128.69
1993-94	-	8700.00 (ತಾತ್ಕಾಲಿಕ)

ಇ) ಸಂಸ್ಥೆಯ ನಷ್ಟಕ್ಕೆ ಸಂಬಂಧಿಸಿದ ಹಲವು ಪ್ರಮುಖ ಕಾರಣಗಳು ಈ ಕೆಳಕಂಡಂತೆ ಇರುತ್ತವೆ.

1) ಸರ್ಕಾರದ ಆದೇಶದ ಮೇರೆಗೆ ವಿದ್ಯಾರ್ಥಿಗಳೂ ಸೇರಿದಂತೆ ವಿವಿಧ ಪ್ರಯಾಣಿಕ ವರ್ಗಕ್ಕೆ ಸಾರಿಗೆ ದರಗಳಲ್ಲಿ ರಿಯಾಯಿತಿಯನ್ನು ನೀಡಿರುವುದರಿಂದ ಸಾರಿಗೆ ಆದಾಯದಲ್ಲಿ ಸಂಭವಿಸುತ್ತಿರುವ ಕಡಿತ.

2) ಇಂಧನ, ಟೈರುಗಳು, ಟ್ಯೂಬುಗಳು, ಬಿಡಿಭಾಗಗಳು ಮತ್ತು ಇತರೆ ಬಳಕೆ ಸಾಮಗ್ರಿಗಳು ಬೆಲೆಗಳಲ್ಲಿ ಕಾಲ ಕಾಲಕ್ಕೆ ಆಗಿರುವ ಹೆಚ್ಚಳ.

3) ಅಧಿಕ ಬಡ್ಡಿಯ ಹೊರೆ

4) ಕಾಲಕಾಲಕ್ಕೆ ಸಂಭವಿಸುತ್ತಿರುವ ಸಿಬ್ಬಂದಿ ವೇತನ ಪರಿಷ್ಕರಣ

5) ಕಾಲಕಾಲಕ್ಕೆ ರಾಜ್ಯ ಸರ್ಕಾರವು ಬಿಡುಗಡೆ ಮಾಡುತ್ತಿರುವ ಹೆಚ್ಚುವರಿ ತುಟ್ಟಿ ಭತ್ಯೆಯನ್ನು ಸಂಸ್ಥೆಯ ಸಿಬ್ಬಂದಿ ನೌಕರ ವರ್ಗಕ್ಕೂ ನೀಡುತ್ತಿರುವಿಕೆ.

6) ಲಾಭದಾಯಕವಲ್ಲದ ಮಾರ್ಗಗಳಲ್ಲಿ ನಗರ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿರುವಿಕೆ.

7) ಲಾಭದಾಯಕವಲ್ಲದಿದ್ದರೂ ಸಹ ಕುಗ್ರಾಮಗಳೂ ಸೇರಿದಂತೆ ಹಲವಾರು ಗ್ರಾಮಾಂತರ ಪ್ರದೇಶಗಳಿಗೆ ನೀಡುತ್ತಿರುವ ಸಾರಿಗೆ ಸೌಲಭ್ಯ.

8) ಇಂಧನ ಟೈರುಗಳು, ಬಿಡಿಭಾಗಗಳು ಮುಂತಾದುವುಗಳ ಬೆಲೆಗಳಲ್ಲಿ ಹೆಚ್ಚಳ ಉಂಟಾಗದಲ್ಲೆಲ್ಲಾ ಪ್ರಯಾಣದ ದರಗಳನ್ನು ಪರಿಷ್ಕರಿಸಲು ಸಾಧ್ಯವಾಗದೆಯಿರುವಿಕೆ.

ಈ) ನಷ್ಟವನ್ನು ಕಡಿಮೆ ಮಾಡಲು ಸಂಸ್ಥೆಯು ತೆಗೆದುಕೊಂಡಿರುವ ಹಲವು ಕ್ರಮಗಳು ಈ ಕೆಳಕಂಡಂತೆ ಇರುತ್ತವೆ.

1) ಚಾಲಕ ಮತ್ತು ನಿರ್ವಾಹಕರ ನಿರೂಪಿತ ಕೆಲಸದ ಪುನರ್‌ರಚನೆಯ ಮೂಲಕ ಹೆಚ್ಚು ಆದಾಯವನ್ನು ಗಳಿಸುವುದು.

2) ಆದಾಯವನ್ನು ಹೆಚ್ಚಿಸಲು ವಾಹನ ತನಿಖೆಯನ್ನು ಚುರುಕುಗೊಳಿಸುವಿಕೆ.

3) ವಾಹನ ಬಳಕೆಯನ್ನು ಅಧಿಕಗೊಳಿಸಿ ಪ್ರತಿ ಕಿ.ಮೀ. ಗೆ ತಗಲುತ್ತಿರುವ ವೆಚ್ಚವನ್ನು ಕಡಿಮೆಗೊಳಿಸುವಿಕೆ.

4) ಇಂಧನ ಬಳಕೆಯನ್ನು ನಿಗಧಿಗೊಳಿಸಿ ಸದರಿ ಬಾಬ್ತಿನ ಮೇಲೆ ವೆಚ್ಚವನ್ನು ಕಡಿಮೆಗೊಳಿಸುವಿಕೆ.

5) ನಿಗಧಿತ ಪ್ರಮಾಣದಲ್ಲಿ ಹಳೆಯ ಮತ್ತು ಹೊಸ ಟೈರುಗಳನ್ನು ಬಳಸುವ ಮೂಲಕವೂ ಹಳೆಯ ಟೈರುಗಳನ್ನು ಶೀತಲ ಸಂಸ್ಕರಣದ ಮೂಲಕ ಪುನಶ್ಚೇತನಗೊಳಿಸುವ ಮೂಲಕವೂ ಸದರಿ ಬಾಬ್ತಿನ ಮೇಲೆ ವೆಚ್ಚವನ್ನು ಕಡಿಮೆಗೊಳಿಸುವಿಕೆ.

6) ವಾಹನ ಸುಧಾರಣೆ ಮತ್ತು ದುರಸ್ತಿ ಕಾರ್ಯವನ್ನು ಉತ್ತಮಗೊಳಿಸಿ ವಾಹನ ವೈಫಲ್ಯವನ್ನು ಸಂಚಾರ ರದ್ದನ್ನು ಕಡಿಮೆಗೊಳಿಸುವಿಕೆ ಮತ್ತು ಮೇಲ್ಕಾಣಿಸಿರುವ ಯೋಜನೆಯನ್ನು ಕಾರ್ಯಗತಗೊಳಿಸಲು ವಾಹನ ದುರಸ್ತಿ ಕಾರ್ಯವನ್ನು ಎರಡು ಹಂತಗಳಿಗೆ ಸೀಮಿತಗೊಳಿಸುವಿಕೆ.

7) ಕಾರ್ಯ ಯೋಜನೆಯಲ್ಲಿ ನಿರೂಪಿಸಿರುವಂತೆ ಸಂಚಾರ ಚಟುವಟಿಕೆಗಳ ನಿರ್ವಹಣೆಯ ಮೇಲೆ ನಿಗಾಯಿರಿಸಿ, ನಿರ್ವಹಣೆಯನ್ನು ಪರಿಶೀಲಿಸಿ ಅವಶ್ಯ ಸೂಕ್ತ ಕ್ರಮಗಳನ್ನು ತೆಗೆದುಕೊಂಡು ಗುರಿ ಸಾಧಿಸುವಿಕೆ.

ಉ) ಇಲ್ಲ

ಮಲೆನಾಡು ಅಭಿವೃದ್ಧಿ ಮಂಡಳಿ

58 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ವಿಜ್ಞಾನ ಯಂತ್ರ ಕಲೆ ಮತ್ತು ಪರಿಸರ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೆನಾಡು ಅಭಿವೃದ್ಧಿ ಯೋಜನಾ ಮಂಡಳಿಯಲ್ಲಿ 31.3.94 ಇರತಕ್ಕ ತಾಲ್ಲೂಕುಗಳು ಯಾವುವು?

ಆ) 91-92, 92-93 ಮತ್ತು 93-94ರಲ್ಲಿ ಈ ಮಂಡಳಿಗೆ ಆಯವ್ಯಯದಲ್ಲಿ ನಿಗಧಿ ಪಡಿಸಿದ ಮೊತ್ತವೆಷ್ಟು? ಬಿಡುಗಡೆ ಮಾಡಿದ ಹಣವೆಷ್ಟು? ಖರ್ಚಾದ ಹಣವೆಷ್ಟು? ಖರ್ಚಾಗದೇ ಉಳಿದ ಹಣವೆಷ್ಟು

ಇ) 94-95ರಲ್ಲಿ ಈ ಮಂಡಳಿಗೆ ಎಷ್ಟು. ಹಣ ನಿಗಧಿಪಡಿಸಿದೆ? 30.6.94 ವರೆಗೆ ಖರ್ಚಾದ ಹಣವೆಷ್ಟು?

ಡಾ|| ಹೆಚ್. ಆರ್. ರಾಜು (ವಿಜ್ಞಾನ, ಯಂತ್ರಕಲೆ ಮತ್ತು ಪರಿಸರ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ರಾಜ್ಯ ಸಚಿವರು) :

ಅ) ಮಲೆನಾಡು ಅಭಿವೃದ್ಧಿ ಮಂಡಳಿಯಡಿಯಲ್ಲಿ ಬರುವ ತಾಲ್ಲೂಕುಗಳ ವಿವರವನ್ನು ಅನುಬಂಧ - 1ರಲ್ಲಿ ನೀಡಲಾಗಿದೆ.

ಆ) ಆಯವ್ಯಯದಲ್ಲಿ ನಿಗಧಿ ಮಾಡಿದ ಹಣ ಬಿಡುಗಡೆ ಮಾಡಿದ ಹಣ, ಖರ್ಚಾದ ಹಣ ಮತ್ತು ಬಾಕಿ ಉಳಿದ ಹಣದ ವಿವರಗಳು ಈ ಕಳಗಿಂತಿರುತ್ತವೆ. (ಕೋಟಿ ರೂ. ಗಳಲ್ಲಿ)

ಕ್ರ. ಸಂ.	ವರ್ಷ	ನಿಗಧಿಯಾದ ಆಯವ್ಯಯ	ಬಿಡುಗಡೆ ಯಾದ ಹಣ	ಖರ್ಚಾದ ಹಣ	ಬಾಕಿ ಉಳಿದ ಹಣ
1.	91-92	10	10	ಇಲ್ಲ	10
2.	92-93	35	-	0.11	9.89
3.	93-94	33	33	15.59	27.30

ಇ) 94-95ರಲ್ಲಿ ಮಂಡಳಿಗೆ 35ಕೋಟಿ ರೂ.ಗಳನ್ನು ನಿಗಧಿಪಡಿಸಿರುತ್ತದೆ. 30.6.94ರ ವರೆಗೆ ಹಿಂದಿನ ವರ್ಷಗಳ ಉಳಿಕೆ ಹಣದಿಂದ 8.46ಕೋಟಿ ರೂ.ಗಳು ಖರ್ಚಾಗಿರುತ್ತದೆ.

ಅನುಬಂಧ - 1

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ತಾಲ್ಲೂಕುಗಳ ಹೆಸರು
1	2	3
1.	ಬೆಳಗಾಂ	1. ಖಾನಾಪುರ
		2. ಹುಕ್ಕೇರಿ
		3. ಬೆಳಗಾಂ

		4 .	ಬೈಲಹೊಂಗಲ
		5.	ಸೌದತ್ತಿ
2.	ಚಿಕ್ಕಮಗಳೂರು	1.	ಕೊಪ್ಪ
		2.	ಮೂಡಿಗೆರೆ
		3.	ಶೃಂಗೇರಿ
		4.	ಚಿಕ್ಕಮಗಳೂರು
		5.	ಎನ್.ಆರ್.ಪುರ
		6.	ತರೀಕೆರೆ
3.	ಕೊಡಗು	1.	ಮಡಿಕೇರಿ
		2.	ಸೋಮವಾರಪೇಟೆ
		3.	ವಿರಾಜಪೇಟೆ
4.	ಹಾಸನ	1.	ಸಕಲೇಶಪುರ
		2.	ಆಲೂರು
		3.	ಬೇಲೂರು
		4.	ಹಾಸನ
		5.	ಅರಕಲಗೂಡು
5.	ಮೈಸೂರು	1.	ಹೆಗ್ಗಡದೇವನಕೋಟೆ
		2.	ಗುಂಡ್ಲುಪೇಟೆ
		3.	ಪಿರಿಯಾಪಟ್ಟಣ
		4.	ಹುಣಸೂರು
		5.	ಕೊಳ್ಳೇಗಾಲ
		6.	ಚಾಮರಾಜನಗರ
6.	ಉತ್ತರಕನ್ನಡ	1.	ಅಂಕೋಲ
		2.	ಭಟ್ಕಳ
		3.	ಹೊನ್ನಾವರ
		4.	ಕುಮಟಾ
		5.	ಕಾರವಾರ
		6.	ಸಿದ್ದಾಪುರ
		7.	ಸಿರ್ಸಿ
		8.	ಸೂಪ
		9.	ಯಲ್ಲಾಪುರ
		10.	ಹಳಿಯಾಳ
		11.	ಮುಂಡಗೋಡು
7.	ದಕ್ಷಿಣ ಕನ್ನಡ	1.	ಬೆಳ್ತಂಗಡಿ
		2.	ಕುಂದಾಪುರ
		3.	ಕಾರ್ಕಳ
		4.	ಪುತ್ತೂರು

		5.	ಸೂಳ್ಯ
		6.	ಉಡುಪಿ
		7.	ಮಂಗಳೂರು
		8.	ಬಂಟ್ವಾವಳ
8.	ಶಿವಮೊಗ್ಗ	1.	ಹೊಸನಗರ
		2.	ತೀರ್ಥಹಳ್ಳಿ
		3.	ಸಾಗರ
		4.	ಶಿವಮೊಗ್ಗ
		5.	ಶಿಕಾರಿಪುರ
		6.	ಸೊರಬ
		7.	ಚನ್ನಗಿರಿ
		8.	ಭದ್ರಾವತಿ
9.	ಧಾರವಾಡ	1.	ಧಾರವಾಡ
		2.	ಕಲಘಟಗಿ
		3.	ಶಿಗ್ಗಾವಿ
		4.	ಸವಣೂರು
		5.	ಹಾನಗಲ್
		6.	ಬ್ಯಾಡಗಿ
		7.	ಹಿರೇಕೆರೂರು
	ಒಟ್ಟು ತಾಲ್ಲೂಕುಗಳು	59	

ಸರ್ಕಾರಿ ಟೂಲ್‌ರೂಂ ಮತ್ತು ತರಬೇತಿ ಕೇಂದ್ರಗಳು

352 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈಗ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಟೂಲ್ ರೂಂ ಮತ್ತು ತರಬೇತಿ ಕೇಂದ್ರಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಈಗ ಹೊಸದಾಗಿ ಯಾವ ಯಾವ ಸ್ಥಳಗಳಲ್ಲಿ ಈ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು:

ಇ) ರಾಜ್ಯದಲ್ಲಿ ಅತಿ ಹಿಂದುಳಿದ ಜಿಲ್ಲೆಯಾದ ಬೀದರ್‌ನಲ್ಲಿ ಸರ್ಕಾರಿ ಟೂಲ್ ರೂಂ ಮತ್ತು ತರಬೇತಿ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆ?

ಈ) ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಎರಡು.

ಆ) ಈಗ ಹೊಸದಾಗಿ ಗುಲ್ಬರ್ಗಾ, ಹಾಸನ ಮಂಗಳೂರು ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ತರಬೇತಿ ಕೇಂದ್ರಗಳನ್ನು ಹಂತ ಹಂತವಾಗಿ ಪ್ರಾರಂಭಿಸಲಾಗುವುದು.

ಇ) ಈಗ ಅಂತಹ ಯಾವುದೇ ಪ್ರಸ್ತಾಪವಿಲ್ಲ.

ಈ) ಹಣಕಾಸಿನ ಮತ್ತು ಆಡಳಿತಾತ್ಮಕ ಮೂಲಭೂತ ಬಂಡವಾಳ ಹೂಡಬೇಕಾಗಿರುವ ಕಾರಣ ಎಲ್ಲಾ ಸ್ಥಳಗಳಲ್ಲಿ ಏಕಕಾಲಕ್ಕೆ ಜಿ.ಟಿ.ಟಿ.ಸಿ. ಕೇಂದ್ರಗಳನ್ನು ಸ್ಥಾಪಿಸಲು ವಸ್ತುತ ಸಾಧ್ಯವಾಗುವುದಿಲ್ಲ.

ಅಬ್ಕಾರಿ ಇಲಾಖೆಯ 1991-92 ರಿಂದ 93-94 ರ ವರಗಿನ ಆದಾಯ ಹಾಗೂ ಖರ್ಚು

348 - ಶ್ರೀ ಡಿ.ಅರ್. ಪಾಟೀಲ್ (ಗದಗ್) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಬೊಕ್ಕಸಕ್ಕೆ ಸಾರಾಯಿ ಅಂಗಡಿಗಳಿಂದ : ಮದ್ಯದ ಅಂಗಡಿಗಳಿಂದ ಹಾಗೂ ಬಾರ್‌ಗಳಿಂದ 1991-92 ರಿಂದ 1993-94 ರ ವರೆವಿಗೆ ಬಂದ ಆದಾಯದ ವಾರ್ಷಿಕ ವಿವರವನ್ನು ಪ್ರತ್ಯೇಕವಾಗಿ ನೀಡುವುದು?

ಆ) ಅಬಕಾರಿ ಇಲಾಖೆಗೆ 1991-92 ರಿಂದ 1993-94 ರ ವರೆಗೆ ಮಾಡಲಾಗಿರುವ ವೆಚ್ಚದ ವಾರ್ಷಿಕ ವಿವರ ನೀಡುವುದು?

ಶ್ರೀ. ರಮನಾಥ್ ರೈ (ಅಬಕಾರಿ ರಾಜ್ಯ ಸಚಿವರು) :

ಅ) 1991-92 ರಿಂದ 1993-94 ರ ವರೆಗೆ ಸಾರಾಯಿ ಅಂಗಡಿಗಳಿಂದ ಹಾಗೂ ಮದ್ಯದ ಅಂಗಡಿಗಳಿಂದ (ಚಿಲ್ಲರೆ ಮದ್ಯದ ಅಂಗಡಿಗಳು ಹಾಗೂ ಬಾರ್ ಗಳು ಒಳಗೊಂಡಂತೆ) ರಾಜ್ಯದ ಬೊಕ್ಕಸಕ್ಕೆ ಬಂದ ವರ್ಷವಾರು ಆದಾಯ ಈ ಕೆಳಕಂಡಂತಿದೆ:

ವರ್ಷ	ಸಾರಾಯಿ ಮೂಲದಿಂದ ಬಂದ ಆದಾಯ	ಭಾರತೀಯ ತಯಾರಿಕಾ ಮದ್ಯದ ಮೂಲದಿಂದ ಬಂದ ಆದಾಯ
		(ಕೋಟಿ ರೂ.ಗಳಲ್ಲಿ)
1991-92	405.55	80.67
1992-93	376.18	111.56
1993-94	473.08	122.88

ಆ) ಅಬಕಾರಿ ಇಲಾಖೆಗೂ ಈ ಕೆಳಗಿಂತೆ ಹಣ ಖರ್ಚಾಗಿದೆ.

ವರ್ಷ	ರೂ. (ಕೋಟಿಗಳಲ್ಲಿ)
1991-92	11.79
1992-93	13.48
1993-94	17.17

ಬಸವಕಲ್ಯಾಣ ಹಾಗೂ ಕೂಡಲಸಂಗಮ ಪ್ರಾಧಿಕಾರ ರಚನೆ

214 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೀದರ್ ಜಿಲ್ಲೆಯ ಬಸವಕಲ್ಯಾಣ ಹಾಗೂ ಕೂಡಲಸಂಗಮ ಪ್ರಾಧಿಕಾರ ರಚನೆಯ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು; ಇದುವರೆವಿಗೂ ಪ್ರಾಧಿಕಾರ ರಚಿಸದಿರಲು ಕಾರಣಗಳೇನು;

(ಆ) ಈ ಪ್ರಾಧಿಕಾರ ರಚನೆಯ ಉದ್ದೇಶವೇನು;

(ಇ) ಈ ಪ್ರಾಧಿಕಾರ ರಚನೆಗೆ ಸರ್ಕಾರವು ಹಣವನ್ನು ಬಿಡುಗಡೆ ಮಾಡಿದೆಯೇ; ಮಾಡಿದ್ದಲ್ಲಿ, ಎಷ್ಟು ; ಹಣ ಬಿಡುಗಡೆ ಮಾಡಿಲ್ಲದಿದ್ದರೆ ಹಣ ಬಿಡುಗಡೆ ಮಾಡುವ ಉದ್ದೇಶವೇನಾದರೂ ಇದೆಯೇ; ಎಷ್ಟು;

(ಈ) ಹಾಗಿದ್ದಲ್ಲಿ, ಎಷ್ಟು ಹಣ ಬಿಡುಗಡೆ ಮಾಡಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

(ಅ) ಕೂಡಲಸಂಗಮ ಅಭಿವೃದ್ಧಿ ಮಂಡಳಿಯನ್ನು ಶಾಸನಬದ್ಧ ಮಂಡಳಿಯಾಗಿ ರಚಿಸಲು ಕರಡು ವಿಧೇಯಕವನ್ನು ತಯಾರು ಮಾಡಲಾಗಿದೆ. ಇತ್ತೀಚೆಗಷ್ಟೇ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯು ಕರಡು ವಿಧೇಯಕವನ್ನು ಪರಿಶೀಲಿಸಿ, ಕಂದಾಯ ಇಲಾಖೆಗು ಕಳುಹಿಸಿದೆ. ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

(ಆ) ಉದ್ದೇಶಿತ ಶಾಸನಬದ್ಧ ಮಂಡಳಿಯು ಕೂಡಲ ಸಂಗಮದಲ್ಲಿ ಶ್ರೀ ಸಂಗಮನಾಥ ದೇವಸ್ಥಾನವನ್ನು ರಕ್ಷಿಸುವುದೇ ಅಲ್ಲದೇ ಕೂಡಲಸಂಗಮ ಕ್ಷೇತ್ರವನ್ನು ಸುಮಾರು 400 ಎಕರೆ ಪ್ರದೇಶದಲ್ಲಿ ಒಂದು ಅಂತರಾಷ್ಟ್ರೀಯ ಯಾತ್ರಾ, ಸಂಸ್ಕೃತಿ ಮತ್ತು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿ ಪಡಿಸುವುದು. ಅಲ್ಲದೆ, ಪೂಜ್ಯ ಶ್ರೀ ಬಸವೇಶ್ವರರು ಮತ್ತು ಅವರ ಸಮಕಾಲೀನರಿಗೆ ಸಂಬಂಧಪಟ್ಟ ಸ್ಥಳಗಳನ್ನೂ ಅಭಿವೃದ್ಧಿ ಪಡಿಸುವುದೇ ಆಗಿದೆ.

(ಇ) ಇನ್ನೂ ಅಭಿವೃದ್ಧಿ ಮಂಡಳಿಯೇ ರಚಿತವಾಗಿಲ್ಲದಿರುವುದರಿಂದ, ಹಣ ಬಿಡುಗಡೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

(ಈ) (ಇ)ಗೆ ಕೊಟ್ಟಿರುವ ಉತ್ತರದಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪಂಚಾಯತ್ ರಾಜ್ ಕಾನೂನಿನನ್ವಯ ಅಧ್ಯಕ್ಷ/ಉಪಾಧ್ಯಕ್ಷ ಸದಸ್ಯರಿಗೆ ತರಬೇತಿ

162 - ಶ್ರೀ. ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ನೂತನ ಪಂಚಾಯತ್ ರಾಜ್ ಕಾನೂನಿನನ್ವಯ ಅಧಿಕಾರಕ್ಕೆ ಬಂದಿರುವ ಕೆಲವು ಜನ ಅಧ್ಯಕ್ಷ ಉಪಾಧ್ಯಕ್ಷರು ಅನಕ್ಷರಸ್ಥರಿದ್ದು, ಅವರಿಗೆಲ್ಲ ತಮ್ಮ ಅಧಿಕಾರ ಹಾಗೂ ಜವಾಬ್ದಾರಿಗಳನ್ನು ತಿಳಿಸಿಕೊಡಲು ಸರ್ಕಾರ ಯಾವಕ್ರಮ ಕೈಗೊಂಡಿದೆ?

(ಆ) ಪಂಚಾಯಿತಿಗಳ ನೂತನ ಸದಸ್ಯರಿಗೆ ಅವರ ಹೊಣೆಗಾರಿಕೆ ತಿಳಿಸಿಕೊಡಲು ಸರ್ಕಾರ ತರಬೇತಿ ನೀಡಲು ಕ್ರಮ ಕೈಗೊಂಡಿದೆಯೇ ಒಂದು ವೇಳೆ ಕ್ರಮ ಕೈಗೊಂಡಿರದಿದ್ದರೆ ಸರ್ಕಾರ ಈ ದಿಶೆಯಲ್ಲಿ ಯಾವ ಕ್ರಮ ಕೈಗೊಳ್ಳಲಿದೆ (ವಿವರಗಳನ್ನೊದಗಿಸುವುದು).

ಶ್ರೀ. ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತಿಗಳು) :

(ಅ) ಹೊಸದಾಗಿ ಚುನಾಯಿತರಾಗಿ ಬಂದಿರುವ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯರಿಗೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅವರ ಕರ್ತವ್ಯ ಹಾಗೂ ಜವಾಬ್ದಾರಿಗಳ ಬಗ್ಗೆ ಎಲ್ಲಾ ಜಿಲ್ಲಾ ಪಂಚಾಯತ್‌ಗಳು ತರಬೇತಿ ನಡೆಸಬೇಕೆಂದು ಸರ್ಕಾರ ತನ್ನ ದಿನಾಂಕ 8-4-1994ರ ಸುತ್ತೋಲೆಯಲ್ಲಿ ತಿಳಿಸಿದೆ.

(ಆ) ಈ ಪ್ರಕಾರ ಎಲ್ಲಾ ಜಿಲ್ಲಾ ಪಂಚಾಯತ್ಗಳು ತರಬೇತಿ ಶಿಬಿರಗಳನ್ನು ನಡೆಸುತ್ತಿವೆ.

1993-94 ರಲ್ಲಿ ರಾಜ್ಯದ ವರಮಾನ

146 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಯೋಜನಾ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ರಲ್ಲಿ ರಾಜ್ಯದ ಪ್ರಜೆಯ ತಲಾ ವರಮಾನ ಎಷ್ಟಿದ್ದಿತು;

ಆ) ಇದು ದೇಶದಲ್ಲಿ ಎಷ್ಟನೇ ಸ್ಥಾನ ಪಡೆದಿದೆ;

ಇ) ಚರ, ಸ್ಥಿರ ಸೊತ್ತುಗಳಿಲ್ಲದ ಕುಟುಂಬದವರ ಆದಾಯವನ್ನು ಯಾವ ಆಧಾರದ ಮೇಲೆ ಪರಿಗಣಿಸಲಾಗುತ್ತದೆ.

ಈ) ಸರ್ಕಾರದ ವಿವಿಧ ಯೋಜನೆಗಳ ಮುಖಾಂತರ ದೊರೆಯುವ ಸವಲತ್ತುಗಳನ್ನು ವಿತರಿಸುವಾಗ ಎಲ್ಲರಿಗೂ ಅನ್ವಯವಾಗುವಂತೆ ಒಂದೇ ರೀತಿಯ ಆದಾಯ ಮಿತಿಯನ್ನು ನಿಗಧಿಗೊಳಿಸುವುದು ಸೂಕ್ತವಲ್ಲವೇ?

ಶ್ರೀ ಕೆ.ಹೆಚ್. ಹನುಮೇಗೌಡ (ಯೋಜನೆ, ಅಚ್ಚುಕಟ್ಟು ಮತ್ತು ಪ್ರದೇಶಾಭಿವೃದ್ಧಿ ಸಚಿವರು) :

ಅ) 1993-94ರಲ್ಲಿ ರಾಜ್ಯದ ಪ್ರಜೆಯ ನಿರೀಕ್ಷಿತ ತಲಾ ವರಮಾನ ಚಾಲ್ತಿ ಹಾಗೂ ಸ್ಥಿರ ಬೆಲೆಗಳಲ್ಲಿ ಈ ಕೆಳಕಂಡಂತಿತ್ತು.

ಚಾಲ್ತಿ ಬೆಲೆಗಳಲ್ಲಿ (ರೂ.ಗಳಲ್ಲಿ)	ಸ್ಥಿರ (1980-81) ಬೆಲೆಗಳಲ್ಲಿ (ರೂ.ಗಳಲ್ಲಿ)
6,809-00	2,296-00

ಆ) ದೇಶದಲ್ಲಿ ಕರ್ನಾಟಕವು ತಲಾವಾರು ಆದಾಯದ ಅಂದಾಜಿನ ಪ್ರಕಾರ 1992-93ರಲ್ಲಿ ಆರನೆಯ ಸ್ಥಾನದಲ್ಲಿದೆ. 1993-94ನೇ ಸಾಲಿನ ಅಧಿಕೃತ ಅಂಕಿ ಅಂಶ ಇನ್ನೂ ಲಭ್ಯವಿರುವುದಿಲ್ಲ.

ಇ) ಚರ ಸ್ಥಿರ ಸೊತ್ತುಗಳಿಲ್ಲದ ಕುಟುಂಬದ ಆದಾಯದ ಮಾಹಿತಿಯು ದೊರೆಯುವುದಿಲ್ಲ, ಏಕೆಂದರೆ ಅರ್ಥ ವ್ಯವಸ್ಥೆಯಲ್ಲಿನ ವಲಯಗಳಾದ ಕೃಷಿ, ಅರಣ್ಯ, ಕೈಗಾರಿಕೆ ಇತ್ಯಾದಿಗಳಿಂದ ಬರುವ ಆದಾಯದ ಅಂದಾಜನ್ನು ಮೂಲ ಉದ್ಯಮಗಳ ಪ್ರಕಾರ ತಯಾರಿಸಲಾಗುತ್ತಿದೆ.

ಈ) ಇದು ಧೋರಣೆಯ ವಿಷಯ.

ವಿಧಾನ ಸೌಧದ ಸಭಾಂಗಣದ (ಬ್ಯಾಂಕ್ವೆಟ್ ಹಾಲ್) ಸೌಂದರ್ಯ ಉಳಿಸುವುದು.

298 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಧಾನ ಸೌಧವು ಅತ್ಯಂತ ನಯನಮನೋಹರ ಕಟ್ಟಡ ಎಂಬುದು ನಿಜವೆ.

ಆ) ಇದನ್ನು ನೋಡಿದ ಪ್ರತಿ ಪ್ರವಾಸಿಗನೂ ಈ ಕಟ್ಟಡ ಹಾಗೂ ಇದರ ನಿರ್ಮಾತೃವಾದ ಮಾನ್ಯ ಕೆಂಗಲ್ ಹನುಮಂತಯ್ಯನವರನ್ನು ಶ್ಲಾಘಿಸುತ್ತಿರುವುದು ನಿಜವೆ.

ಇ) ಈ ಕಟ್ಟಡದ ಒಳಭಾಗದಲ್ಲಿರುವ ಪ್ರಶಾಂತ ಹಾಗೂ ತಂಪು ಹವೆಯ ಬೃಹತ್ ಸಭಾಂಗಣ (ಬ್ಯಾಂಕ್ವೆಟ್ ಹಾಲ್)ವನ್ನು ವಿವಿಧ ಪರೀಕ್ಷೆ ಮತ್ತು ಪ್ರದರ್ಶನಗಳನ್ನು ನಡೆಸಲು ಆಗಿಂದ್ದಾಗ್ಗೆ ನೀಡುತ್ತಿರುವುದು ನಿಜವೆ.

ಈ) ಉದ್ದೇಶಕ್ಕಾಗಿ ತರುವ ಕುರ್ಚಿ ಮೇಜು ಮತ್ತಿತರ ಸಾಮಾನುಗಳನ್ನು ತಂದು ಮನಸ್ವೇಚ್ಛೆಯಾಗಿ ಎತ್ತಿ ಹಾಕುತ್ತಿರುವುದರಿಂದ .ನೆಲವೆಲ್ಲಾ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಉ) ಹಾಗಿದ್ದಲ್ಲಿ ಇನ್ನು ಈ ಸಭಾಂಗಣ (ಬ್ಯಾಂಕ್ವೆಟ್ ಹಾಲನ್ನು) ಯಾವುದೆ ರೀತಿಯ ಪರೀಕ್ಷೆಗೂ ಹಾಗು ಪ್ರದರ್ಶನಗಳಿಗೆ ನೀಡುವುದಿಲ್ಲವೆಂದು ಭರವಸೆ ನೀಡಲಾಗುವುದೆ?

ಶ್ರೀ. ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಹೌದು

ಇ) ಹೌದು

ಈ) ಮತ್ತು ಉ) ರಾಜ್ಯ ಕೇಂದ್ರ ಲೋಕ ಸೇವಾ ಆಯೋಗಗಳ ವತಿಯಿಂದ ನಡೆಯುವ ಪರೀಕ್ಷೆಗಳು ಅಥವಾ ಸರ್ಕಾರದ ವತಿಯಿಂದ ನಡೆಯುವ ಪ್ರದರ್ಶನಗಳಿಗೆ ಬ್ಯಾಂಕ್ವೆಟ್ ಹಾಲ್‌ನ್ನು ನೀಡಿದ ಸಂದರ್ಭದಲ್ಲಿ ಯಾವುದೇ ಭಾರೀ ತೂಕದ ಉಪಕರಣ: ವಸ್ತುಗಳನ್ನು ಈ ಸಭಾಂಗಣಕ್ಕೆ ತರಬಾರದೆಂದೂ ಇಲ್ಲಿನ ನೆಲಕ್ಕೆ ಧಕ್ಕೆ ಆಗುವಂತಹ ಪೀಠೋಪಕರಣಗಳು: ಉಪಕರಣ ಇತ್ಯಾದಿಗಳನ್ನು ಉಪಯೋಗಿಸಬಾರದೆಂದೂ ಪ್ಲಾಸ್ಟಿಕ್ ಕುರ್ಚಿಗಳನ್ನಾಗಲಿ ಅಥವಾ ಕುರ್ಚಿ: ಮೇಜುಗಳಿಗೆ ಬುಶ್ ಇರುವ ಪೀಠೋಪಕರಣಗಳನ್ನು ಮಾತ್ರ ಉಪಯೋಗಿಸಬೇಕೆಂಬ ಷರತ್ತುಗಳನ್ನು ವಿಧಿಸಿ ನೀಡಲಾಗುತ್ತಿದೆ.

ಸೋಮವಾರಪೇಟೆ ತಾಲ್ಲೂಕು ಶುಂಠಿಕೊಪ್ಪಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ.

33 - ಶ್ರೀ. ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರ ಪೇಟೆ ತಾಲ್ಲೂಕು ಶುಂಠಿಕೊಪ್ಪ ಗ್ರಾಮಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ. ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಶುಂಠಿಕೊಪ್ಪ ಗ್ರಾಮಕ್ಕೆ ಶಾಶ್ವತ ಕುಡಿಯುವ ನೀರು ಸರಬರಾಜು ವ್ಯವಸ್ಥೆ ಒದಗಿಸಲು 1994-95ನೇ ಸಾಲಿನ ಅನುಭಂಧ-ಇ ನಲ್ಲಿ ರಾಜ್ಯ ವಲಯದ ಅಡಿಯಲ್ಲಿ ಒಂದು ಹೊಸ ನಲ್ಲಿ ನೀರು ಸರಬರಾಜು ಯೋಜನೆಯನ್ನು ರೂ. 5 ಲಕ್ಷಗಳ ಅಂದಾಜು ಮೊತ್ತದೊಂದಿಗೆ ಸೇರಿಸಲಾಗಿದೆ. ಈ ಸಾಲಿನಲ್ಲಿ ಈ ಕಾಮಗಾರಿಗೆ ರೂ. 1.31 ಲಕ್ಷ ಅನುದಾನ ನೀಡಲಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ತ್ರಿವರ್ಣ ಪಡಿತರ ಚೀಟಿ

160 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಿಟ್ಟು ಉತ್ತರಿಸುವರೆ?

1. ತ್ರಿವರ್ಣ ಪಡಿತರ ಕಾರ್ಡುಗಳ ವಿತರಣೆ ಗ್ರಾಮಾಂತರ ಪ್ರದೇಶಗಳಲ್ಲಿ ಸರಿಯಾಗಿ ನಡೆಯದಿರುವುದು ಹಾಗೂ ಅರ್ಹ ಫಲಾನುಭವಿಗಳಲ್ಲಿ ಅನೇಕರಿಗೆ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

2. *ಗ್ರಾಮಾಂತರದಲ್ಲಿರುವ ಎಲ್ಲಾ ಅರ್ಹ ಫಲಾನುಭವಿಗಳಿಗೆ ತ್ರಿವರ್ಣ ಕಾರ್ಡು ವಿತರಣೆಯನ್ನು ಪೂರ್ಣಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? ಹಾಗಿದ್ದಲ್ಲಿ ಈ ಕೆಲಸ ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.*

ಶ್ರೀ. ಬಿ.ಎಸ್. ಪಾಟೀಲ (ಸಾನನೂರು) (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

1. ಇಲ್ಲ.

2. ತ್ರಿವರ್ಣ ಕಾರ್ಡು ವಿತರಣೆಯನ್ನು ಗ್ರಾಮಾಂತರದಲ್ಲಿರುವ ಎಲ್ಲಾ ಅರ್ಹ ಫಲಾನುಭವಿಗಳಿಗೆ ನೀಡುವಲ್ಲಿ ಜಿಲ್ಲೆಯ ಎಲ್ಲಾ ಜಿಲ್ಲಾಧಿಕಾರಿಗಳಿಗೆ ತಿಳುವಳಿಕೆ ನೀಡಲಾಗಿದೆ. ಈಗಾಗಲೇ 51.82 ಲಕ್ಷ ಫಲಾನುಭವಿಗಳನ್ನು ಗುರುತಿಸಿ ಅವರುಗಳಲ್ಲಿ 50.82ಲಕ್ಷ ತ್ರಿವರ್ಣದ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. ಉಳಿದ ಫಲಾನುಭವಿಗಳಿಗೆ ತ್ರಿವರ್ಣ ಪಡಿತರ ಚೀಟಿಗಳನ್ನು ವಿತರಿಸಲು ಶೀಘ್ರ ಕ್ರಮ ತೆಗೆದುಕೊಳ್ಳಲಾಗಿದೆ.

ಮುಖ್ಯಮಂತ್ರಿಯವರು ವಿಭಾಗ ಮಟ್ಟದಲ್ಲಿ ಸಭೆಯನ್ನು ನಡೆಸುವುದು

218 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಇತ್ತೀಚೆಗೆ ಮುಖ್ಯಮಂತ್ರಿಗಳು ವಿಭಾಗ ಮಟ್ಟದಲ್ಲಿ ಸಭೆಗಳನ್ನು ನಡೆಸುತ್ತಿರುವುದು ನಿಜವೇ? ಇದರ ಉದ್ದೇಶವೇನು? ಇದಕ್ಕೆ ತಗಲುವ ವೆಚ್ಚವೇನು? ಈಗಾಗಲೇ ಎಷ್ಟು ವೆಚ್ಚ ತಗಲಿರುವುದು? ಇದರಿಂದಾಗಿ ಆಗುವ ಪ್ರಯೋಜನಗಳೇನು? ಇದುವರೆಗೆ ಏನಾದರೂ ಪ್ರಯೋಜನವಾಗಿದೆಯೇ?*

ಆ) *ಈಗಾಗಲೇ ಯಾವ ಯಾವ ವಿಭಾಗಗಳಲ್ಲಿ ಸಭೆಗಳನ್ನು ನಡೆಸಲಾಗಿದೆ? ಈ ಸಭೆಗಳನ್ನು ಕರೆದ ಉದ್ದೇಶವೇನು? ಈ ಸಭೆಗೆ ಹಾಜರಾದ ಇಲಾಖಾ ಮಟ್ಟದ ಮುಖ್ಯಸ್ಥರುಗಳ ಪೂರ್ಣ ವಿವರಗಳನ್ನು ನೀಡುವುದು? ಹಾಗೂ ಈ ಸಭೆಗಳಿಂದ ಆದ ಪ್ರಯೋಜನಗಳನ್ನು ವರದಿಸುವುದು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಹೌದು, 1994-95ನೇ ಸಾಲಿನ 200 ದಿನಗಳ ಕಾರ್ಯಕ್ರಮಗಳಲ್ಲಿ ಈ ತನಕ ಸಾಧಿಸಿರುವ ಪ್ರಗತಿಯ ಪರಿಶೀಲನೆಯ ಜೊತೆಗೆ ಜಿಲ್ಲಾ ಸಮಸ್ಯೆಗಳನ್ನು ಅಧಿಕಾರಿಗಳ ಹಾಗೂ ಅಧಿಕಾರೇತರ ಸದಸ್ಯರೊಡನೆ ಚರ್ಚಿಸಿ ಸೂಕ್ತ ರೀತಿಯಲ್ಲಿ ಸಾಮೂಹಿಕ ನಿರ್ಣಯಗಳನ್ನು ಕೈಗೊಂಡು ಜಿಲ್ಲೆಗಳ ಸರ್ವತೋಮುಖ ಅಭಿವೃದ್ಧಿಗಾಗಿ ಸಭೆಗಳನ್ನು ನಡೆಸಲಾಗುತ್ತಿದೆ. ಗುಲ್ಬರ್ಗಾ ಮತ್ತು ಬೆಳಗಾಂ ವಿಭಾಗದಲ್ಲಿ ನಡೆಸಿದ ಸಭೆಗೆ 2,36,776 ರೂ.ಗಳು ವೆಚ್ಚವಾಗಿದ್ದು ಇನ್ನೆರಡು ವಿಭಾಗಗಳ ಮಾಹಿತಿ ಸಂಗ್ರಹಿಸಬೇಕಾಗಿದೆ. ಈ ಸಭೆಗಳಲ್ಲಿ ಸ್ಥಳೀಯ ಸಮಸ್ಯೆಗಳನ್ನು ಚರ್ಚಿಸಿ, ಸ್ಥಳದಲ್ಲಿಯೇ ಸೂಕ್ತ ಪರಿಹಾರ ನೀಡಲು ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಎಲ್ಲಾ ವಿಭಾಗಗಳಲ್ಲಿ ನಡೆದ ಸಭೆಯ ನಿರ್ಣಯಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಆ) ಎಲ್ಲಾ ನಾಲ್ಕು ವಿಭಾಗಗಳಲ್ಲೂ ಸಭೆಗಳನ್ನು ನಡೆಸಲಾಗಿದ್ದು, ಸಭೆಗೆ ಹಾಜರಾದ ಇಲಾಖಾ ಮುಖ್ಯಸ್ಥರುಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ. ಎಲ್ಲಾ ವಿಭಾಗಗಳಲ್ಲಿ ನಡೆದ ಸಭೆಯ ನಿರ್ಣಯಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ವಿಭಾಗಮಟ್ಟದ ಸಭೆಯಲ್ಲಿ ಹಾಜರಾದ ಇಲಾಖಾ ಮುಖ್ಯಸ್ಥರುಗಳ ವಿವರಗಳು

ಬೆಳಗಾಂ ವಿಭಾಗ

1. ಸರ್ಕಾರ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಆರ್ಥಿಕ ಆಯುಕ್ತರು
2. ಅಭಿವೃದ್ಧಿ ಆಯುಕ್ತರು
3. ಸರ್ಕಾರದ ಕಾರ್ಯದರ್ಶಿಗಳು, ಇಂಧನ ಇಲಾಖೆ
4. ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
5. ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ
6. ಸರ್ಕಾರದ ಕಾರ್ಯದರ್ಶಿಗಳು, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ
7. ಸರ್ಕಾರದ ಕಾರ್ಯದರ್ಶಿಗಳು, ನೀರಾವರಿ ಇಲಾಖೆ
8. ಸರ್ಕಾರದ ಕಾರ್ಯದರ್ಶಿಗಳು, ಸಮಾಜಕಲ್ಯಾಣ ಇಲಾಖೆ
9. ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
10. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ.
11. ಸರ್ಕಾರದ ಕಾರ್ಯದರ್ಶಿಗಳು, ಅರಣ್ಯ ಇಲಾಖೆ.
12. ಮಾನ್ಯ ಮುಖ್ಯಮಂತ್ರಿಗಳು, ಕಾರ್ಯದರ್ಶಿಗಳು
13. ಅಧ್ಯಕ್ಷರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ
14. ಮುಖ್ಯ ಅಭಿಯಂತರರು, ಸಿ ಮತ್ತು ಬಿ. ಲೋಕೋಪಯೋಗಿ ಇಲಾಖೆ, ಧಾರವಾಡ

ನೀರಾವರಿ ಉತ್ತರ ವಲಯ, ಬೆಳಗಾವಿಃ ಸಣ್ಣ ನೀರಾವರಿ, ವಿಜಾಪುರ .

ಲಿಫ್ಟ್ ಇರಿಗೇಶನ್, ವಿಜಾಪುರ ಕೆ.ಎ.ಸಿ.ಕದ್ರಾ ಹಾಗೂ ಗಣೇಶಗುಡಿ

ಕರ್ನಾಟಕ ವಿದ್ಯುತ್ ನಿಗಮ, ಹುಬ್ಬಳ್ಳಿ.

ಗುಲ್ಬರ್ಗಾ ವಿಭಾಗ

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಆರ್ಥಿಕ ಆಯುಕ್ತರು
2. ಅಭಿವೃದ್ಧಿ ಆಯುಕ್ತರು
3. ಸರ್ಕಾರದ ಕಾರ್ಯದರ್ಶಿಗಳು, ಇಂಧನ ಇಲಾಖೆ
4. ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ
5. ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ
6. ಸರ್ಕಾರದ ಕಾರ್ಯದರ್ಶಿಗಳು, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ
7. ಸರ್ಕಾರದ ಕಾರ್ಯದರ್ಶಿಗಳು, ನೀರಾವರಿ ಇಲಾಖೆ
8. ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
9. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ
10. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ

11. ಸರ್ಕಾರದ ಕಾರ್ಯದರ್ಶಿಗಳ, ಅರಣ್ಯ ಇಲಾಖೆ.
12. ಮಾನ್ಯ ಮುಖ್ಯಮಂತ್ರಿಗಳು ಕಾರ್ಯದರ್ಶಿಗಳು
13. ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಕಾರ್ಯದರ್ಶಿಗಳು
14. ಅಧ್ಯಕ್ಷರು, ಕರ್ನಾಟಕ ರಾಜ್ಯರಸ್ತೆ ಸಾರಿಗೆ ಸಂಸ್ಥೆ
15. ವಿಭಾಗಾಧಿಕಾರಿಗಳು, ಬೆಳಗಾವಿ
16. ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ), ಧಾರವಾಡ
17. ಮುಖ್ಯ ಅಭಿಯಂತರರು, ನೀರಾವರಿ (ಉತ್ತರ), ಬೆಳಗಾವಿ
18. ಮುಖ್ಯ ಅಭಿಯಂತರರು, ಸಣ್ಣ ನೀರಾವರಿ ವಿಜಾಪುರ
19. ಮುಖ್ಯ ಅಭಿಯಂತರರು, ಲಿಫ್ಟ್ ಇರಿಗೇಶನ್, ವಿಜಾಪುರ
20. ಮುಖ್ಯ ಅಭಿಯಂತರರು, ಕರ್ನಾಟಕ ಪವರ್ ಕಾರ್ಪೊರೇಷನ್, ಕದ್ರಾ
21. ಮುಖ್ಯ ಅಭಿಯಂತರರು, ಕರ್ನಾಟಕ ಪವರ್ ಕಾರ್ಪೊರೇಷನ್, ಗಣೇಶಗುಡಿ
22. ಮುಖ್ಯ ಅಭಿಯಂತರರು, ಕರ್ನಾಟಕ ವಿದ್ಯುತ್ ನಿಗಮ, ಹುಬ್ಬಳ್ಳಿ
23. ಬೆಳಗಾವಿ ವಿಭಾಗದ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಬೆಂಗಳೂರು ವಿಭಾಗ

1. ಶ್ರೀ ದೆ. ಪುಟ್ಟಸ್ವಾಮಿ, ಅಪರ ಕಾರ್ಯದರ್ಶಿಗಳು, ಕೃಷಿ ಮತ್ತು ತೋಟಗಾರಿಕೆ ಇಲಾಖೆ
2. ಶ್ರೀ ಜಿ.ಸಿ.ಆರ್. ಸುಬ್ರಮಣ್ಯಂ, ಅಪರ ಕಾರ್ಯದರ್ಶಿಗಳು, ವಾರ್ತಾ ಮತ್ತು ಪ್ರಚಾರ ಇಲಾಖೆ
3. ಶ್ರೀಮತಿ ಮಾಲತಿದಾಸ್, ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
4. ಶ್ರೀಮತಿ ಶಮೀಮ್ ಬಾನು, ಸರ್ಕಾರದ ಕಾರ್ಯದರ್ಶಿ - 2, ಆರ್ಥಿಕ ಇಲಾಖೆ
5. ಶ್ರೀ ಬಿ.ಕೆ. ಭಟ್ಟಾಚಾರ್ಯ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ.
6. ಶ್ರೀ ಸಿ.ಟಿ. ಬೆಂಜಮಿನ್, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ
7. ಶ್ರೀ ಈಶ್ವರಪ್ಪ, ಸರ್ಕಾರದ ಕಾರ್ಯದರ್ಶಿಗಳು-2, ಕಂದಾಯ ಇಲಾಖೆ
8. ಶ್ರೀ ಸಿ.ಗೋಪಾಲರೆಡ್ಡಿ ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
9. ಶ್ರೀ ಗೌತಮ್ ಬಸು, ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಇಲಾಖೆ
10. ಶ್ರೀ ಜೆ. ವಾಸುದೇವನ್, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ
11. ಶ್ರೀ ಸುಧೀರ್ ಕುಮಾರ್, ಸರ್ಕಾರದ ಕಾರ್ಯದರ್ಶಿ - 2, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ
12. ಶ್ರೀ ಜಿ.ಕೆ. ಅರೋರ, ಅಭಿವೃದ್ಧಿ ಆಯುಕ್ತರು

13. ಶ್ರೀ ಎನ್. ಆರ್. ವೆಂಕಟೇಶ ಪ್ರಸಾದ್, ಸರ್ಕಾರದ ಕಾರ್ಯದರ್ಶಿಗಳು, ನೀರಾವರಿ ಇಲಾಖೆ
14. ಶ್ರೀ ದಿಲೀಪ್ ರಾವ್, ಸರ್ಕಾರದ ಕಾರ್ಯದರ್ಶಿಗಳು, ಸಹಕಾರ ಇಲಾಖೆ
15. ಶ್ರೀ ಜೆ.ಬಿ. ಶರ್ಮ, ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ
16. ಶ್ರೀ ಎಂ.ಸಿ. ಸತ್ಯವಾದಿ, ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
17. ಶ್ರೀ ಜೆ. ಮುನಿಯಪ್ಪ, ಸರ್ಕಾರದ ಕಾರ್ಯಧರ್ಶಿಗಳು, ಸಮಾಜಕಲ್ಯಾಣ ಇಲಾಖೆ.

ಮೈಸೂರು ವಿಭಾಗ

ಮೈಸೂರು ವಿಭಾಗದಲ್ಲೂ ಸಹ ಇಲಾಖಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದು, ವಿವರಗಳು ಕೂಡಲೇ ದೊರೆಯುತ್ತಿಲ್ಲ.

ಪೋಲಿಸ್ ಇಲಾಖೆಯಲ್ಲಿ ಪಿ.ಎಸ್.ಐ ನೇಮಕಾತಿ

217 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇತ್ತೀಚೆಗೆ ಪೋಲಿಸ್ ಇಲಾಖೆಗೆ ಪಿ.ಎಸ್.ಐ ಗಳನ್ನು ನೇಮಕಾತಿ ಮಾಡಿರುವ ಸಂಖ್ಯೆ ಎಷ್ಟು; (ಜಿಲ್ಲಾವಾರು ಪ್ರತ್ಯೇಕ ಮಾಹಿತಿ ನೀಡುವುದು)

ಆ) ಪಿ.ಎಸ್.ಐ. ನೇಮಕಾತಿ ಮಾಡುವ ಸಂದರ್ಭದಲ್ಲಿ ಹಿಂದುಳಿದ ಜಿಲ್ಲೆಯಾದ ಬೀದರ್ ಜಿಲ್ಲೆಯನ್ನು ಕಡೆಗಣಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮರೇನು

ಶ್ರೀ ಚೌಡರೆಡ್ಡಿ, (ಗೃಹ ಸಚಿವರು) :

ಅ) ಪಿ.ಎಸ್.ಐ (ಸಿವಿಲ್) - 121

ಆರ್.ಎಸ್.ಐ (ಸಶಸ್ತ್ರ) - 7

ವಿಶೇಷ ಆರ್.ಎಸ್.ಐ .- 4

(ಕೆ.ಎಸ್.ಆರ್.ಪಿ)

(ಲಗತ್ತಿಸಿರುವ ಪಟ್ಟಿಯಲ್ಲಿ ಜಿಲ್ಲಾವಾರು ವಿವರಗಳನ್ನು ನೀಡಲಾಗಿದೆ)

ಆ) ಇಲ್ಲ. ಬೀದರ್ ಜಿಲ್ಲೆಯಿಂದ ಇಬ್ಬರು ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಆದುದರಿಂದ ಬೀದರ್ ಜಿಲ್ಲೆಯನ್ನು ಕಡೆಗಾಣಿಸಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

STATEMENT

DISTRICT-WISE APPOINTMENT OF PSI (CIVIL) RSI/SPL.RSI

Bangalore city	—	20
Bangalore Dist.,	—	4
Tumkur Dist.	—	7
kolar Dist.,	—	4

Mysore Dist.,	—	10
Mandya Dist.,	—	8
Hassan Dist.,	—	4
Kodagu Dist.,	—	9
D.k.Dist.,	—	2
U.k.Dist.,	—	9
Chickmagalur Dist.,	—	7
Shimoga Dist.,	—	5
Chitradurga Dist.,	—	13
Bellary Dist.,	—	5
Belgaum Dist.,	—	7
Dharwad Dist.,	—	11
Bijapur Dist.,	—	4
Raichur Dist.,	—	3
Total		132

NOTE: Totally 191 candidates have been selected for the posts of PSI (Civil) RSI/SPL. RSI out of which 132 candidates have already been issued with appointment orders. Remaining selected candidates are yet to be appointed for want of verifcation and medical reports. Out of these, two candidates selected from Bidar District are included.

ಹೆಣ್ಣೂರು ಬಳ್ಳಾರಿ ರಸ್ತೆಯ ಬಿಡಿಎ ನಿವಾಸಿಗಳಿಗೆ ಅನುಕೂಲಗಳನ್ನು ಒದಗಿಸುವುದು

216 - ಶ್ರೀ ಬಸವರಾಜ ಪಾಟೀಲ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ 10ನೇ ಬಿಟಿಎಸ್ ಡಿಪೋ ಹೆಣ್ಣೂರು ಬಳ್ಳಾರಿ ರಸ್ತೆಯಲ್ಲಿ 4ನೇ ಹಾಗೂ 5ನೇ ಬ್ಲಾಕಿನಲ್ಲಿ ನಿರ್ಮಿಸಿರುವ ಬಿ.ಡಿ.ಎ. ನಿವೇಶನಗಳಿಗೆ ಒಳಚರಂಡಿ ವ್ಯವಸ್ಥೆ, ಬೀದಿ ದೀಪಗಳ ವ್ಯವಸ್ಥೆ ಹಾಗೂ ರಸ್ತೆಗಳನ್ನು ನಿರ್ಮಿಸದಿರುವುದು ನಿಜವೇ?

ಆ) ಈ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ಕೈಗೊಳ್ಳಲಿರುವ ಕ್ರಮವೇನು?

ಶ್ರೀ. ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಹೆಣ್ಣೂರು ಬಳ್ಳಾರಿ ರಸ್ತೆ ಬಡಾವಣೆಯ 4ನೇ ಬ್ಲಾಕ್‌ಗೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲಾಗಿದೆ. ಈ ಬಡಾವಣೆಯ 4ನೇ ಮತ್ತು 5ನೇ ಬ್ಲಾಕ್‌ಗಳಲ್ಲಿ ರಸ್ತೆ ಕೆಲಸ ಮುಗಿಸಿಕೊಟ್ಟು ಬೀದಿ ದೀಪ ವ್ಯವಸ್ಥೆಗಳನ್ನು ಒದಗಿಸಿಕೊಡಲಾಗಿದೆ.

ಆ) ಇನ್ನು ಈ ಬಡಾವಣೆಯ 5ನೇ ಬ್ಲಾಕಿಗೆ ಸಂಬಂಧಪಟ್ಟಂತೆ ಒಳಚರಂಡಿ ವ್ಯವಸ್ಥೆ ಒದಗಿಸಲು ಈಗಾಗಲೇ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಶೀಘ್ರದಲ್ಲಿಯೇ ಈ ಕೆಲಸವನ್ನು ಕೈಗೆತ್ತಿಕೊಂಡು ಮುಗಿಸಿಕೊಡಲಾಗುವುದು.

ನೂರು ಬಾವಿ ಯೋಜನೆಯಲ್ಲಿ ನಿಗಧಿಯಾದ ಮೊತ್ತ

57 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾವಾರು ನೂರು ಬಾವಿ ಯೋಜನೆಯಲ್ಲಿ 1991-92, 1992-93, 1993-94 ರಲ್ಲಿ ಆಯವ್ಯಯದಲ್ಲಿ ನಿಗದಿಪಡಿಸಿದ, ಖರ್ಚಾದ ಹಾಗೂ ಖರ್ಚಾಗದ ಹಣದ ಮೊತ್ತವೆಷ್ಟು?

ಆ) ಜಿಲ್ಲಾವಾರು ಈ ವರ್ಷದಲ್ಲಿ ತೋಡಿಸಿರುವ ಬಾವಿಗಳ ಸಂಖ್ಯೆ ಎಷ್ಟು?

ಇ) 1994-95ರಲ್ಲಿ ಈ ಯೋಜನೆಯಲ್ಲಿ ನಿಗದಿಪಡಿಸಿದ ಹಣವೆಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ತಃಖ್ತೆ ಸಂಖ್ಯೆ 1,2 ಮತ್ತು 3ರಲ್ಲಿ ವಿವರ ಒದಗಿಸಿದೆ.

ಆ) ತಃಖ್ತೆ ಸಂಖ್ಯೆ 1, 2 ಮತ್ತು 3 ರಲ್ಲಿ ವಿವರ ಒದಗಿಸಿದೆ.

ಇ) ತಃಖ್ತೆ ಸಂಖ್ಯೆ 4 ರಲ್ಲಿ ವಿವರ ಒದಗಿಸಿದೆ. ಈ ಯೋಜನೆಯಲ್ಲಿ ನಿಗದಿಪಡಿಸಿದ ಹಣ ರೂ. 305.160 (ಲಕ್ಷ ರೂ.ಗಳಲ್ಲಿ)

ತಃಖ್ತೆ -1

ನೂರುಬಾವಿ ಯೋಜನೆ - ವರ್ಷವಾರು ವರದಿ 1991-92

(ಲಕ್ಷ ರೂ.ಗಳಲ್ಲಿ)

ಕ್ರ.ಸಂ.	ಜಿಲ್ಲೆಯ ಹೆಸರು	ನಿಗದಿಪಡಿಸಿರುವ ಗುರಿ	ಖರ್ಚಾದ ಮೊತ್ತ	ಉಳಿಕೆ ಹಣ	ತೋಡಿಸಿರುವ ಬಾವಿಗಳ ಸಂಖ್ಯೆ
1.	ಬೆಂಗಳೂರು (ನ)	7.200	4.374	2.826	24
2.	ಬೆಂಗಳೂರು (ಗ್ರಾ)	21.600	21.600	-	118
3.	ಬೆಳಗಾಂ	21.600	26.185	-4.585	122
4.	ಬಳ್ಳಾರಿ	18.000	18.409	-0.409	180
5.	ಬೀದರ್	14.400	20.480	-6.080	191
6.	ಬಿಜಾಪುರ	25.200	6.440	18.760	36
7.	ಚಿಕ್ಕಮಗಳೂರು	14.400	11.090	3.310	95
8.	ಚಿತ್ರದುರ್ಗ	18.000	12.335	5.665	106
9.	ದಕ್ಷಿಣ ಕನ್ನಡ	18.000	10.741	7.259	32
10.	ಧಾರವಾಡ	25,200	24.668	0.532	272
11.	ಗುಲ್ಬರ್ಗ	21.600	15.661	5.939	141
12.	ಹಾಸನ	14.400	23.872	9.472	328
13.	ಕೊಡಗು	7.200	4.431	2.769	8
14.	ಕೋಲಾರ	14.400	9.000	5.400	-
15.	ಮಂಡ್ಯ	14.400	19.861	-5.461	235
16.	ಮೈಸೂರು	21.600	14.757	6.843	152
17.	ರಾಯಚೂರು	21.600	9.712	11.888	99
18.	ಶಿವಮೊಗ್ಗ	21.600	18.701	2,899	146
19.	ತುಮಕೂರು	25.200	35.370	-10.170	198
20.	ಉತ್ತರ ಕನ್ನಡ	14.400	13.583	0.817	81
	ಒಟ್ಟು	360.000	321.270	38.730	2504

(-) ಹಿಂದಿನ ವರ್ಷದ ವೆಚ್ಚದಲ್ಲಿ ಬಾಕಿ ಉಳಿದ ಹಣದಲ್ಲಿ ವೆಚ್ಚವನ್ನು ಭರಿಸಲಾಗಿದೆ.

ತಃಖ್ತೆ - 2
ನೂರುಬಾವಿ ಯೋಜನೆ - ವರ್ಷವಾರು ವರದಿ 1992-93

(ಲಕ್ಷ ರೂ.ಗಳಲ್ಲಿ)

ಕ್ರ.ಸಂ.	ಜಿಲ್ಲೆಯ ಹೆಸರು	ನಿಗದಿಪಡಿಸಿರುವ ಹಣದ ಗುರಿ	ಖರ್ಚಾದ ಮೊತ್ತ	ಖರ್ಚಾಗದ ಮೊತ್ತ	ತೋಡಿಸಿರುವ ಬಾವಿಗಳ ಸಂಖ್ಯೆ
1	2	3	4	5	6
1.	ಬೆಂಗಳೂರು (ನ)	7.339	7.180	0.159	57
2.	ಬೆಂಗಳೂರು (ಗ್ರಾ)	22.026	21.786	0.240	-
3.	ಬೆಳಗಾಂ	22.026	22.530	-0.504	125
4.	ಬಳ್ಳಾರಿ	18.324	21.020	Ë2.696	5
5.	ಬೀದರ್	14.687	19.167	-4.480	185
6.	ಬಿಜಾಪುರ	25.682	25.690	-0.008	133
7.	ಚಿಕ್ಕಮಗಳೂರು	14.687	11.830	2.857	128
8.	ಚಿತ್ರದುರ್ಗ	18.324	12.690	5.634	122
9.	ದಕ್ಷಿಣ ಕನ್ನಡ	18.324	15.989	2.335	45
10.	ಧಾರವಾಡ	25.682	29.720	-4.038	381
11.	ಗುಲ್ಬರ್ಗ	21.980	14.169	-7.811	4
12.	ಹಾಸನ	14.687	18.133	-3.446	234
13.	ಕೊಡಗು	7.339	3.000	4.339	92
14.	ಕೋಲಾರ	14.687	14.680	0.007	-
15.	ಮಂಡ್ಯ	14.687	14.038	0.649	135
16.	ಮೈಸೂರು	22.026	19.330	2.696	190
17.	ರಾಯಚೂರು	22.026	22.551	-0.525	183
18.	ಶಿವಮೊಗ್ಗ	22.026	28.283	-6.257	241
19.	ತುಮಕೂರು	25.754	33.350	-7.596	231
20.	ಉತ್ತರ ಕನ್ನಡ	14.687	14.833	-0.146	-
	ಒಟ್ಟು	**367.000**	**369.969**	**Ë2.969**	**2491**

(-) ಹಿಂದಿನ ವರ್ಷದ ವೆಚ್ಚದಲ್ಲಿ ಬಾಕಿ ಉಳಿದ ಹಣದಲ್ಲಿ ವೆಚ್ಚವನ್ನು ಭರಿಸಲಾಗಿದೆ.

ತಃಖ್ತೆ -3
ನೂರುಬಾವಿ ಯೋಜನೆಯಡಿ - ವರ್ಷವಾರು ವರದಿ 1993-94

(ಲಕ್ಷ ರೂ.ಗಳಲ್ಲಿ)

ಕ್ರ.ಸಂ.	ಜಿಲ್ಲೆಯ ಹೆಸರು	ನಿಗದಿಪಡಿಸಿರುವ ಗುರಿ	ಖರ್ಚಾದ ವೆಚ್ಚ	ಖರ್ಚಾಗದ ಮೊತ್ತ	ತೋಡಿಸಿರುವ ಬಾವಿಗಳ ಸಂಖ್ಯೆ
1	2	3	4	5	6
1.	ಬೆಂಗಳೂರು (ನ)	6.900	6.762	0.138	- -
2.	ಬೆಂಗಳೂರು (ಗ್ರಾ)	20.740	16.074	-4.666	-
3.	ಬೆಳಗಾಂ	20.740	37.710	-16.970	148
4.	ಬಳ್ಳಾರಿ	17.250	10.090	-0.840	145
5.	ಬೀದರ್	13.830	11.660	2.170	124

6.	ಬಿಜಾಪುರ	24.180	20.100	4.080	100
7.	ಚಿಕ್ಕಮಗಳೂರು	16.260	15.440	0.820	144
8.	ಚಿತ್ರದುರ್ಗ	17.250	2.000	15.250	8
9.	ದಕ್ಷಿಣ ಕನ್ನಡ	17.250	31.426	-14.176	24
10.	ಧಾರವಾಡ	24.180	49.226	-25.046	-
11.	ಗುಲ್ಬರ್ಗಾ	20.700	20.792	-0.092	-
12.	ಹಾಸನ	13.830	10.295	3.535	132
13.	ಕೊಡಗು	6.910	3.020	3.890	29
14.	ಕೋಲಾರ	13.830	3.440	10.390	-
15.	ಮಂಡ್ಯ	13.830	13.597	0.233	136
16.	ಮೈಸೂರು	20.740	19.760	0.980	191
17.	ರಾಯಚೂರು	20.740	21.300	0.560	244
18.	ಶಿವಮೊಗ್ಗ	20.740	21.255	0.560	148
19.	ತುಮಕೂರು	24.260	28.815	-4.555	189
20.	ಉತ್ತರ ಕನ್ನಡ	13.840	9.582	4.258	-
	ಒಟ್ಟು	**348.000**	**360.344**	**-12.344**	**1762**

ತಃಖ್ತೆ -4

ಕ್ರ.ಸಂ.	ಜಿಲ್ಲೆಯ ಹೆಸರು	1994-95ನೇ ಸಾಲಿನಲ್ಲಿ ನಿಗದಿ ಪಡಿಸಿದ ಮೊತ್ತ
1	2	3
1.	ಬೆಂಗಳೂರು (ನ)	6.900
2.	ಬೆಂಗಳೂರು (ಗ್ರಾ)	20.740
3.	ಬೆಳಗಾಂ	20.740
4.	ಬಳ್ಳಾರಿ	18.970
5.	ಬೀದರ್	10.220
6.	ಬಿಜಾಪುರ	25.500
7.	ಚಿಕ್ಕಮಗಳೂರು	14.200
8.	ಚಿತ್ರದುರ್ಗ	17.250
9.	ದಕ್ಷಿಣ ಕನ್ನಡ	18.000
10.	ಧಾರವಾಡ	25.020
11.	ಗುಲ್ಬರ್ಗ	21.000
12.	ಹಾಸನ	14.000
13.	ಕೊಡಗು	3.910
14.	ಕೋಲಾರ	5.000
15.	ಮಂಡ್ಯ	10.000
16.	ಮೈಸೂರು	22.900
17.	ರಾಯಚೂರು	10.740
18.	ಶಿವಮೊಗ್ಗ	15.070
19.	ತುಮಕೂರು	15.000
20.	ಉತ್ತರ ಕನ್ನಡ	10.000
	ಒಟ್ಟು	**305.160**

ಬೆಳಗಾಂ ನಗರದ ಕೋಟೆಯ ಹತ್ತಿರ ಬಸ್ ಷೆಲ್ಟರ್

487 - ಶ್ರೀ ಬಿ.ಐ. ಪಾಟೀಲ್ (ಉಚ್ಛಗಾಂವ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ನಗರದ ಕೋಟೆ ಹತ್ತಿರ ಬಸ್ ತಂಗುದಾಣವನ್ನು ನಿರ್ಮಿಸಲು ಸರ್ಕಾರ ಯಾವಾಗ ಕ್ರಮವನ್ನು ತೆಗೆದುಕೊಳ್ಳುವುದು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಕೋಟೆ ಪ್ರದೇಶದಲ್ಲಿ ಬಸ್ ತಂಗುದಾಣವನ್ನು ನಿರ್ಮಿಸಲು ಬೇಕಾಗುವ ನಿವೇಶವು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸ್ವಾಧೀನದಲ್ಲಿರುವುದಿಲ್ಲ. ನಿವೇಶನವು ದೊರೆತಾಗ ಸದರಿ ವಿಷಯದ ಬಗ್ಗೆ ಪರಿಶೀಲಿಸಲಾಗುವುದು.

ಮಲೆನಾಡು ಅಭಿವೃದ್ಧಿ ಮಂಡಳಿಗೆ ಸೇರಿದ ತಾಲ್ಲೂಕುಗಳು

111 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ವಿಜ್ಞಾನ, ಯಂತ್ರಕಲೆ ಮತ್ತು ಪರಿಸರ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೆನಾಡು ಅಭಿವೃದ್ಧಿ ಮಂಡಳಿಗೆ ಸೇರಿದ ಒಟ್ಟು ತಾಲ್ಲೂಕುಗಳೆಷ್ಟು?

ಆ) ಈ ವ್ಯಾಪ್ತಿಗೆ ಸೇರಿಸಲು ಹಾಕಿಕೊಂಡಿರುವ ಮಾನದಂಡವೇನು?

ಇ) 1992-93, 1993-94ರಲ್ಲಿ ಮಲೆನಾಡು ಅಭಿವೃದ್ಧಿಗಾಗಿ ಒದಗಿಸಲಾಗಿರುವ ಹಣ ಎಷ್ಟು?

ಈ) ಖರ್ಚಾಗಿರುವ ಹಣ ಎಷ್ಟು?

ಉ) ಈ ಸಾಲಿನ ಆಯವ್ಯಯದಲ್ಲಿ ನಿಗಧಿಪಡಿಸಿರುವ ಹಣವೆಷ್ಟು?

ಡಾ|| ಹೆಚ್.ಆರ್. ರಾಜು (ವಿಜ್ಞಾನ, ಯಂತ್ರಕಲೆ ಮತ್ತು ಪರಿಸರ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ರಾಜ್ಯ ಸಚಿವರು) :

ಅ) 59 ತಾಲ್ಲೂಕುಗಳು.

ಆ) ಪಶ್ಚಿಮ ಘಟ್ಟದ ಯೋಜನೆಯಡಿಯಲ್ಲಿ ಭಾರತ ಸರ್ಕಾರವು ಸೇರಿಸಿರುವ ತಾಲ್ಲೂಕುಗಳನ್ನು ಸೇರಿಸಿರುವ ಹಾಗೆಯೇ ರಾಜ್ಯ ಸರ್ಕಾರವು ಕೆಲವು ತಾಲ್ಲೂಕುಗಳನ್ನು ಪಶ್ಚಿಮ ಘಟ್ಟದ ಯೋಜನೆಯಡಿಯಲ್ಲಿ ಸೇರಿಸಲು ಭಾರತ ಸರ್ಕಾರವನ್ನು ಕೇಳಿಕೊಂಡಿದೆ. ಅಂತಹ ತಾಲ್ಲೂಕುಗಳನ್ನು ಸಹ ಈ ಮಂಡಳಿಯಡಿಯಲ್ಲಿ ಸೇರಿಸಲಾಗಿದೆ.

ಇ) 1992-93ನೇ ಸಾಲಿನಲ್ಲಿ 35 ಕೋಟಿ ರೂ.ಗಳನ್ನು ಹಾಗೂ 1993-94ರಲ್ಲಿ 33 ಕೋಟಿ ರೂ.ಗಳನ್ನು ಮಲೆನಾಡು ಅಭಿವೃದ್ಧಿ ಮಂಡಳಿಗೆ ಒದಗಿಸಲಾಗಿತ್ತು.

ಈ) 15.70 ಕೋಟಿ ರೂ.ಗಳು.

ಉ) 35 ಕೋಟಿ ರೂ.ಗಳು

ಕೇಂದ್ರ ಸರ್ಕಾರದ ಆರ್ಥಿಕ ನೀತಿಯಿಂದ ಕೈಗಾರಿಕೆಗಳ ಮೇಲೆ ಆಗಿರುವ ಪರಿಣಾಮ

486 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೇಂದ್ರ ಸರ್ಕಾರದ ಉದಾರ ಆರ್ಥಿಕ ನೀತಿಯಿಂದ ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಸಣ್ಣ, ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳ ಶೇಕಡವಾರು ಪ್ರಗತಿ ಎಷ್ಟು?*

ಆ) *ಖಾಸಗೀ ಕ್ಷೇತ್ರದಲ್ಲಿ ಈ ಉದಾರೀಕರಣ ನೀತಿಯ ಹಿನ್ನೆಲೆಯಲ್ಲಿ ವಿದೇಶಗಳಿಂದ ಮತ್ತು ಹೊರರಾಜ್ಯಗಳಿಂದ ಬಂದಿರುವ ಬಂಡವಾಳದ ಮೊತ್ತ ಎಷ್ಟು? (ಜಿಲ್ಲಾವಾರು ಪ್ರಾರಂಭವಾಗಿರುವ ಕೈಗಾರಿಕೆಗಳ ಪಟ್ಟಿಯನ್ನು ಒದಗಿಸುವುದು)*

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು) :

ಅ) 1990-91ಕ್ಕೆ ಹೋಲಿಸಿದಂತೆ ಕಳೆದ 3 ವರ್ಷಗಳಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳ ಹೊಸ ಘಟಕಗಳ ಮಂಜೂರಾತಿ ಪ್ರಮಾಣದ ಕೈಗಾರಿಕೆಗಳ ಹೊಸ ಘಟಕಗಳ ಮಂಜೂರಾತಿಯಲ್ಲಿ ಸಾಧಿಸಿದ ಪ್ರಗತಿ ಈ ಕೆಳಗಿನಂತಿದೆ.

ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು : ರಾಜ್ಯ ಏಕ ಗವಾಕ್ಷಿ ಯಶಸ್ವಿ:ರಾಜ್ಯ ಮಟ್ಟದ ಸಮಿತಿಯಿಂದ ಅನುಮತಿ ನೀಡಲ್ಪಟ್ಟವೆ

	ವರ್ಷ	ಘಟಕಗಳ ಸಂಖ್ಯೆ	ಬಂಡವಾಳ ಹೂಡಿಕೆ (ರೂ. ಕೋಟಿಗಳಲ್ಲಿ)	ಉದ್ಯೋಗ ಅವಕಾಶ (ಸಂಖ್ಯೆಗಳಲ್ಲಿ)
	1990-91	75	273	8351
	1991-92			
	1992-93	442	16199	73130
	1993-94			
	ಒಟ್ಟು ಶೇಕಡವಾರು ಪ್ರಗತಿ :	ಶೇ. 539	ಶೇ. 5933	ಶೇ. 826
ಸಣ್ಣ	**ಪ್ರಮಾಣದ**	**ಕೈಗಾರಿಕೆಗಳು :**	**(ನೊಂದಾಯಿಸಲ್ಪಟ್ಟವು)**	
	1990-91	9884	11843	53568
	1991-92			
	1992-93	34570	58286	194351
	1993-94			
	ಒಟ್ಟು ಶೇಕಡವಾರು ಪ್ರಗತಿ :	ಶೇ.349	ಶೇ.492	ಶೇ. 362

ಆ) ಭಾರತ ಸರ್ಕಾರವು ಹೊಸ ಕೈಗಾರಿಕಾ ನೀತಿಯನ್ನು ಘೋಷಿಸಿದ ಜುಲೈ 1991ರ ನಂತರ ಖಾಸಗೀ ವಲಯದಲ್ಲಿ ದೊಡ್ಡ ಮೊತ್ತದ ಪಾಲುದಾರಿಕೆಯಿಂದ ವಿದೇಶಿ ಹಾಗೂ ಹೊರ ರಾಜ್ಯಗಳ ವತಿಯಿಂದ 36 ಘಟಕಗಳು ಉತ್ಪಾದನೆ ಪ್ರಾರಂಭವಾಗಿರುತ್ತದೆ. ಈ ಘಟಕಗಳಲ್ಲಿ ರೂ. 468.84 ಕೋಟಿ ಬಂಡವಾಳ ಹೂಡಲಾಗಿದೆ ಹಾಗೂ 7698 ಜನರಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ (ವಿವರಗಳನ್ನು ಅನುಬಂಧ-1 ರಲ್ಲಿ ಸೂಚಿಸಲಾಗಿದೆ).

ವಿಧಾನಸಭೆ ಪ್ರಶ್ನೆ ಸಂಖ್ಯೆ : 486ಕ್ಕೆ ಅನುಬಂಧ-1

ವಿದೇಶಗಳಿಂದ ಮತ್ತು ಹೊರರಾಜ್ಯಗಳ ವತಿಯಿಂದ ಉತ್ಪಾದನೆ ಪ್ರಾರಂಭವಾಗಿರುವ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಪಟ್ಟಿ (ಜಿಲ್ಲಾವಾರು)

ಕ್ರಮ ಸಂಖ್ಯೆ	ಘಟಕದ ಹೆಸರು	ಸ್ಥಳ	ಬಂಡವಾಳ (ಲಕ್ಷಗಳಲ್ಲಿ)	ಉದ್ಯೋಗಿಗಳ ಸಂಖ್ಯೆ	ಉತ್ಪನ್ನಗಳು
	ಬೆಂಗಳೂರು ನಗರ ಜಿಲ್ಲೆ :				
1.	ಮೂಗ್ ಕಂಟ್ರೋಲ್ಸ್ ಪ್ರೈ.ಲಿ., ನಂ.1,2 ಮತ್ತು 3, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು.	ಎಲೆಕ್ಟ್ರಾನಿಕ್ ಬೆಂಗಳೂರು	224.94	30	ಸರ್ವೋ ಕಂಟ್ರೋಲ್ ಮೆಕಾನಿಸಂ ಅಂಡ್ ಕಾಂಪೊನೆಂಟ್ಸ್
2.	ಇಂಡೊ ನಿಸ್ಸಾನ್ ಫುಡ್ಸ್ ಪ್ರೈ.ಲಿ., 2ಎ, ಭಾರತ್ ಅಪಾರ್ಟ್‌ಮೆಂಟ್ಸ್, ಫೇರ್‌ಫೀಲ್ಡ್‌ಲೇ ಔಟ್, ರೇಸ್ಕೋರ್ಸ್ ರಸ್ತೆ, ಬೆಂಗಳೂರು.	ಜಿಗಣಿ ಇಂಡಸ್ಟ್ರಿಯಲ್ ಏರಿಯಾ ಬೆಂಗಳೂರು	735.00	210	ಇನ್‌ಸ್ಟೆಂಟ್ ಫುಡ್
3.	ಏಷಿಯನ್ ಟ್ರಾಕ್ಟರ್ಸ್ ಲಿ., 1:1, ಕಾಸಾ ಆಗಸ್ಟಾ ಕರ್ಲಿ ಸ್ಟ್ರೀಟ್ ರಿಚ್‌ಮಂಡ್ ಟೌನ್, ಬೆಂಗಳೂರು-25	ಬೆಂಗಳೂರು	121.00	22	ಟ್ರಾಕ್ಟರ್‌ಗಳು
4.	ಟಾಟಾ ಎಲಾಕ್ಸಿ ಇಂಡಿಯಾ ಲಿಮಿಟೆಡ್, 50, ಇಂದಿರಾನಗರ 2ನೇ ಹಂತ, ಬೆಂಗಳೂರು-78	ಬೆಂಗಳೂರು	860.13	315	ಮಲ್ಟಿ-ಪ್ರಾಸೆಸರ್ ಬೇಸ್ಡ್ ಸೂಪರ್‌ಕಂಪ್ಯೂಟರ್ ಸಿಸ್ಟಮ್ ಅಂಡ್ ಕೇಬಲ್ ಕನೆಕ್ಟರ್ಸ್.

5.	ಬಿರ್ಲಾ 3 ಎಂ, ಲಮಿಟೆಡ್, ಜಿಗಣಿಬಿಲ್ಡಿಂಗ್,45, ಮ್ಯೂಸಿಯಂ ರಸ್ತೆ ಬೆಂಗಳೂರು.	ಬೆಂಗಳೂರು	672.50	186	ಸ್ಪೆಷಾಲಿಟಿ ಪ್ರೆಷರ್ ಸೆನ್ಸಿಟಿವ್ ಕೋಟೆಡ್‌ಟೇಪ್
6.	ವಿಪ್ರೊ ಜಿಇ ಮೆಡಿಕಲ್ ಸಿಸ್ಟಮ್ಸ್ ಲಿ., ಕಾಡುಗೋಡಿ ಕೈಗಾರಿಕಾಪ್ರದೇಶ ವೈಟ್‌ಫೀಲ್ಡ್, ಬೆಂಗಳೂರು.	ಬೆಂಗಳೂರು	465.00	180	ಸಿ.ಟಿ. ಸ್ಕ್ಯಾನರ್
7.	ಗ್ರಾಮ್ಕೊ ಗ್ರಾನೈಟ್ ಲಿಮಿಟೆಡ್, 227,18ನೇ ಮುಖ್ಯ ರಸ್ತೆ, ಬನಶಂಕರಿ 1ನೇ ಹಂತ, 2ನೇ ಬ್ಲಾಕ್, ಬೆಂಗಳೂರು.	ಅತ್ತಿಬೆಲೆ	1050.31	125	ಗ್ರಾನೈಟ್ ಟೈಲ್ಸ್ ಅಂಡ್ ಸ್ಲಾಬ್ಸ್
8.	ಬಿ.ಸೊರಾಬ್ಜಿ ಪ್ಲಾಟ್ ನಂ. 28 :11 ಎಂ.ಐ.ಡಿ.ಸಿ., ಮರೋಲ್, ಅಂದೇರಿ ವೆಸ್ಟ್., ಬಾಂಬೆ- 400 093.	ಜಕ್ಕೂರು ಪ್ಲಾಂಟೇಷನ್ ಯಲಹಂಕ, ಬೆಂಗಳೂರು	109.83	300	ಸಿದ್ಧಪಡಿಸಿದ ಉಡುಪುಗಳು
9.	ಬಿಪಿಎಲ್ ಸಾನ್ಯೊ ಯುಟಿಲಿಟೀಸ್, 14, ಚರ್ಚ್ ಸ್ಟ್ರೀಟ್, ಬೆಂಗಳೂರು.	ಬೊಮ್ಮಸಂದ್ರ ಬೆಂಗಳೂರು	485.00	700	ವಾಷಿಂಗ್ ಮೆಷಿನ್
10.	ಆಕ್ಸಿಲರೇಟೆಡ್ ಫ್ರೀಜ್ ಡ್ರೈಯಿಂಗ್ ಕಂ., ಪಿಬಿ ನಂ.618, 4ನೇ ಮುಖ್ಯರಸ್ತೆ, ವಿಲ್ಲಿಂಗ್‌ಟನ್ ಐಲ್ಯಾಂಡ್, ಕೊಚಿನ್-3.	ಜಿಗಣಿ ಕೈಗಾರಿಕಾಪ್ರದೇಶ ಬೆಂಗಳೂರು.	256.19	205	ಫ್ರೀಜ್‌ಡ್ರೈಡ್‌ಫುಡ್‌ಪ್ರಾಡಕ್ಟ ಫ್ರೋಜನ್ ಪೇಪರ್.
11.	ಮೋಲೆಕ್ಸ್ ಕನೆಕ್ಟರ್ ಸಿಸ್ಟಮ್ಸ್, ಗ್ಲೋಬ್ ಎಕ್ಸ್‌ಪ್ರೆಸ್‌ಬಿಲ್ಡಿಂಗ್,	81:2ಎ 12ನೇ ಕಿ.ಮೀ. ಹೊಸೂರು ರಸ್ತೆ	870.00	190	ಕನೆಕ್ಟರ್ ಸಿಸ್ಟಮ್ಸ್ ಫಾರ್ ಕಂಪ್ಯೂಟರ್ಸ್

	2ನೇ ಮಹಡಿ,ರಿಚ್‌ಮಂಡ್‌ರಸ್ತೆ, ಬೆಂಗಳೂರು.	ಸಿಂಗಸಂದ್ರ ಬೆಂಗಳೂರು.			
12.	ಫೋಟೋರೋಲ ಇಂಡಿಯಾ ಲಿ., ಸೇಂಟ್‌ಮಾರ್ಕ್ಸ್ ರಸ್ತೆ, ಬೆಂಗಳೂರು.	ಸೇಂಟ್‌ಮಾರ್ಕ್ಸ್ ರಸ್ತೆ ಬೆಂಗಳೂರು.	1175.00	-	ಕಂಪ್ಯೂಟರ್ ಸಾಫ್ಟ್‌ವೇರ್
13.	ಫೋಟೋರೋಲ ಬ್ಲೂ ಸ್ಟಾರ್, ಕಸ್ತೂರಿ ಬಿಲ್ಡಿಂಗ್, ಜಮ್‌ಷೆಡ್‌ಜೀ ಟಾಟಾ ರಸ್ತೆ, ಬಾಂಬೆ.	ಬೆಂಗಳೂರು	150.00	150	ಕಂಪ್ಯೂಟರ್ ಸಾಫ್ಟ್‌ವೇರ್ ಹಾರ್ಡ್‌ವೇರ್
14.	ಬಿಪಿಎಲ್ ಎಲೆಕ್ಟಾನಿಕ್ಸ್ ಲಿಮಿಟೆಡ್, 14, ಚರ್ಚ್ ರಸ್ತೆ, ಬೆಂಗಳೂರು.	ವೈಟ್‌ಫೀಲ್ಡ್	8210.00	265	ರೆಫ್ರಿಜರೇಟರ್
15.	ಟಾಟಾ ಇನ್‌ಫರ್ಮೇಷನ್ ಸಿಸ್ಟಮ್ ಲಿ., ಗೋಲ್ಡನ್ ಎನ್‌ಕ್ಲೇವ್ ಕಾಂಪ್ಲೆಕ್ಸ್, ಏರ್‌ಪೋರ್ಟ್ ರಸ್ತೆ, ಬೆಂಗಳೂರು-೧೭.	ಗೋಲ್ಡನ್ ಎನ್‌ಕ್ಲೇವ್, ಕಾಂಪ್ಲೆಕ್ಸ್, ಬೆಂಗಳೂರು	9000.00	1000	ಸಾಫ್ಟ್‌ವೇರ್ ವಿಭಾಗವು ಪ್ರಾರಂಭವಾಗಿದ್ದು ಹಾರ್ಡ್‌ವೇರ್ ವಿಭಾಗವು ಪ್ರಾರಂಭವಾಗಬೇಕಿದೆ.
16.	ಮ್ಯಾಟ್ರಿಕ್ಸ್ ಮೆಟೀರಿಯಲ್ಸ್, 10, ಜಿಗಣಿ ಕೈಗಾರಿಕಾ ಪ್ರದೇಶ, ಆನೇಕಲ್ ತಾಲ್ಲೂಕು, ಬೆಂಗಳೂರು	ಜಿಗಣಿ ಕೈಗಾರಿಕಾ ಪ್ರದೇಶ		593.15	181 ಸಬ್‌ಅಸೆಂಬ್ಲೀಸ್ ಇನ್‌ರಿ-ಇನ್ ಫೋರ್ಸ್ಡ್ ಕ್ಲಾಸ್ಟಿಕ್ ಎಂಡ್ ಅಡ್ವಾನ್ಸ್ ಕಾಂಪ್ರೊಸಿಟ್ ಮೆಟೀರಿಯಲ್ಸ್
17.	ಸೋಲಿಡೇರ್ ಇಂಡಿಯಾ ಲಿಮಿಟೆಡ್, ನಂ. 235- ಆರ್. ಬೊಮ್ಮಸಂದ್ರ, ಕೈಗಾರಿಕಾ ಪ್ರದೇಶ, ಆನೇಕಲ್ ತಾ: ಬೆಂಗಳೂರು.	ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ		31.75	12 ಟಿ.ವಿ. ರಿಸೀವಿಂಗ್ ಸೆಟ್

18.	ಹ್ಯೂಲೆಟ್ ಪ್ಯಾಕಾರ್ಡ್ ಇಂಡಿಯಾ ಲಿ. ಕನ್ನಿಂಗ್‌ಹ್ಯಾಂರಸ್ತೆ, ಬೆಂಗಳೂರು.	ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು.	1796.00	315	ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್
19.	ಬಿಪಿಎಲ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಅರಮನೆ ರಸ್ತೆ, ಬೆಂಗಳೂರು.	ಕಾಡುಗೋಡಿ: ಸಾದರಮಂಗಲ ಬೆಂಗಳೂರು.	10100.00	1000	ರೆಫ್ರಿಜರೇಟರ್
20.	ಸೀಮನ್ಸ್ ಲಿಮಿಟೆಡ್, ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು-1	ಬೆಂಗಳೂರು	3055.00	600	ಕಂಪ್ಯೂಟರ್ ಸಾಫ್ಟ್‌ವೇರ್
21.	ಬುಲೇರ್ ಇಂಡಿಯಾ ಲಿಮಿಟೆಡ್, ಪ್ಲಾಟ್ ನಂ. 13-ಡಿ, ಕೆ.ಐ.ಎ.ಡಿ.ಬಿ. ಕೈಗಾರಿಕಾ ಪ್ರದೇಶ, ಅತ್ತಿಬೆಲೆ, ಆನೇಕಲ್ ತಾಲ್ಲೂಕು, ಬೆಂಗಳೂರು.	ಅತ್ತಿಬೆಲೆ ಕೈಗಾರಿಕಾ ಪ್ರದೇಶ		166.57	25 ಇ.ಆರ್.ಡಬ್ಲ್ಯು. ಪ್ರಿಸಿಷನ್ ಟೂಲ್ಸ್
22.	ಸುಪ್ರೀಮ್ ಟೆಲಿಕಮ್ಯೂನಿಕೇಷನ್ ಪ್ರೈ ಲಿ., ಎ-312, ಎಂ.ಎಸ್. ಇಂಡಸ್ಟ್ರಿಯಲ್ ಪ್ಲಾಟ್ಸ್, ಎಲೆಕ್ಟ್ರಾನಿಕ್ಸ್ ಸಿಟಿ, ಬೆಂಗಳೂರು.	ಅತ್ತಿಬೆಲೆ ಕೈಗಾರಿಕಾ ಪ್ರದೇಶ	277.59	18	ಡಿಜಿಟಲ್ ಕಮ್ಯೂನಿಕೇಷನ್ ಸಿಸ್ಟಮ್ಸ್ ಇನ್ ಫ್ರೀಕ್ವೆನ್ಸಿ ರೇಂಜ್
	ಬೆಂಗಳೂರು (ಗ್ರಾಮಾಂತರ) ಜಿಲ್ಲೆ :				
23.	ಕೇಸರ್ ಮಾರ್ಬಲ್ಸ್ ಅಂಡ್‌ಗ್ರಾನೈಟ್ ಲಿ., 4ನೇ ಮಹಡಿ, ದೇವತಾ ಪ್ಲಾಜಾ,	ನೆಲಮಂಗಲ ತಾಲ್ಲೂಕು	153.50	30	ಪಾಲಿಷ್ಡ್ ಗ್ರಾನೈಟ್ ಸ್ಲಾಬ್ಸ್ ಪ್ಯಾನೆಲ್ಸ್ ಅಂಡ್

	131:32, ಕೆ.ಎಂ. ಕಾರಿಯಪ್ಪ ರಸ್ತೆ, ಬೆಂಗಳೂರು.				ಮಾನ್ಯುಮೆಂಟ್ಸ್
24.	ಗ್ರೈಂಢ್‌ವೆಲ್ ನಾರ್ಟನ್(ಕೋಟೆಡ್ ಅಬ್ರೇಸಿವ್ ಪ್ಲಾಂಟ್),ಸೆಂಟನರಿ ಬಿಲ್ಡಿಂಗ್, ೨೮, ಎಂ.ಜಿ. ರಸ್ತೆ, ಬೆಂಗಳೂರು.	ಹೊಸಕೋಟೆ ತಾಲ್ಲೂಕ್ ಬೆಂಗಳೂರು.	598.40	80	ಕೋಟೆಡ್ ಅಬ್ರಿಸಿವ್
25.	ಹಿಂದೂಸ್ಥಾನ್ ಗ್ಯಾಸ್ ಲಿಮಿಟೆಡ್, ಪ್ಲಾಟ್ ನಂ. 27. ಎ1, ಕೆ.ಐ.ಎ.ಡಿ.ಬಿ. ಕೈಗಾರಕಾ ಪ್ರದೇಶ, ದೊಡ್ಡ ಬಳ್ಳಾಪುರ, ಬೆಂಗಳೂರು ಜಿಲ್ಲೆ.	ದೊಡ್ಡ ಬಳ್ಳಾಪುರ ಕೈಗಾರಿಕಾ ಪ್ರದೇಶ	125.36	9	ಪ್ಯೂರ್ ಏರೋಜನ್‌ಗ್ಯಾಸ್
ಮೈಸೂರು ಜಿಲ್ಲೆ :					
26.	ಎಲ್.ಅಂಡ್. ಟಿ ಲಿಮಿಟೆಡ್, ಎಲ್ ಅಂಡ್ ಟಿ ಹೌಸ್, ಬಲ್ಲಾರ್ಡ್ ಎಸ್ಟೇಟ್, ಬಾಂಬೆ.	ಮೈಸೂರು	700.00	400	ಟೆಲಿಫೋನಿಕ್: ಟೆಲಿಗ್ರಾಫಿಕ್ ಸ್ವಿಚಿಂಗ್ ಆಪರೇಟಸ್.
27.	ಬನ್ನಾರಿ ಆಮ್ಮನ್ ಶುಗರ್ಸ್ ಲಿ., 252, ಮೆಟ್ಟುಪಾಳ್ಯಂ ರಸ್ತೆ ಕೊಯಂಬತ್ತೂರು.	ನಂಜನಗೂಡು	2250.00	522	ಸಕ್ಕರೆ
ಧಾರವಾಡ ಜಿಲ್ಲೆ :					
28.	ಕುಂತಲ್ ಗ್ರಾನೈಟ್ಸ್, 65, ಎಂ.ಜಿ.ರಸ್ತೆ, 2ನೇ ಮಹಡಿ, ಫ್ಲೋರಾ ಮೌಂಟೈನ್, ಬಾಂಬೆ-23.	ಬೇಲೂರು ಕೈಗಾರಿಕಾಪ್ರದೇಶ, ಧಾರವಾಡ,	150.50	42	ಕಟ್ ಅಂಡ್ ಪಾಲಿಷ್ಡ ಗ್ರಾನೈಟ್ಸ್

29.	ಲಿಪ್ಟನ್ ಇಂಡಿಯಾ ಲಿಮಿಟೆಡ್, ಲಿಪ್ಟನ್ ಹೌಸ್, 9:2, ಎಂ.ಜಿ. ರಸ್ತೆ, ಬೆಂಗಳೂರು	ಧಾರವಾಡ	808.00	192	ಟೀ ಬ್ಲಾಕ್(ಪರ್ಮಂಟೆಡ್) ಇನ್‌ಪ್ಯಾಕೆಟ್ಸ್ (25 ಗ್ರಾಂ)
30.	ಕಾರ್ನ್ ಪ್ರಾಡಕ್ಟ್ ಆಫ್ ಇಂಡಿಯಾ ಲಿ., ಶ್ರೀನಿವಾಸ ಹೌಸ್, ಎಚ್. ಸೋಮನಿ ಮಾರ್ಗ, ಬಾಂಬೆ-1.	ಧಾರವಾಡ	329.50	79	ಫುಡ್ ಪ್ರಾಡಕ್ಟ್
31.	ಬ್ರೂಕ್ ಬಾಂಡ್ ಇಂಡಿಯಾ ಲಿ. 235-ಆರ್. ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಆನೇಕಲ್ ತಾಲ್ಲೂಕು, ಬೆಂಗಳೂರು.	ಧಾರವಾಡ ಗ್ರೋಥ್ ಸೆಂಟರ್	360.13	20	ಪ್ರೋಸೆಸಿಂಗ್ ಬ್ಲೆಂಡಿಂಗ್ ಅಂಡ್‌ಪ್ಯಾಕೇಜಿಂಗ್.
32.	ಸ್ಟೀಫನ್ ಕೆಮಿಕಲ್ಸ್ ಲಿಮಿಟೆಡ್, ಧಾರವಾಡ ಗ್ರೋಥ್ ಸೆಂಟರ್, ಧಾರವಾಡ.	ಧಾರವಾಡ ಗ್ರೋಥ್ ಸೆಂಟರ್, ಧಾರವಾಡ	104.70	24	ಡಿಟರ್ಜೆಂಟ್ ಕೇಕ್ಸ್
33.	ಜೋಜ ಕೆಮಿಕಲ್ಸ್, ಪ್ಲಾಟ್‌ನಂ. 169:ಬಿ, ಬೇಲೂರು ಕೈಗಾರಿಕಾ ಪ್ರದೇಶ ಧಾರವಾಡ.	ಧಾರವಾಡ	248.34	45	ಪ್ಯಾರಾ ಮಿಟ್ರೊ ಕ್ಲೋರೋ ಬೆನ್‌ಜೀನ್ ಅರ್ಥೋ ನೈಟ್ರೋ ಕ್ಲೋರೋ ಬೆನ್‌ಜೀನ್.
ತುಮಕೂರು ಜಿಲ್ಲೆ :					
34.	ಪಿ.ಜೆ. ಮಾರ್ಗೋ ಪ್ರೈ. ಲಿಮಿಟೆಡ್,	ತುಮಕೂರು	490.00	75	ನೀಮ್ ಆಯಿಲ್‌ಎಕ್ಸ್‌ಟ್ರಾಕ್ಷನ್

	ಪ್ಲಾಟ್‌ನಂ.16, 2ನೇ ಫೇಸ್ ಪೀಣ್ಯಾ ಕೈಗಾರಿಕಾ ಪ್ರದೇಶ, ಬೆಂಗಳೂರು.				
ಬೀದರ್ ಜಿಲ್ಲೆ :					
35.	ವೆಟ್ ಸಿಂಥೋ ಮೆಡಿಕೇಮೆಂಟ್ಸ್ (ಪ್ರೈ) ಲಿಮಿಟೆಡ್ ಕೊಲ್ಲಾರ ಕೈಗಾರಿಕಾ ಪ್ರದೇಶ, ಬೀದರ್.	ಕೊಲ್ಲಾರ ಕೈಗಾರಿಕಾ ಪ್ರದೇಶ ಬೀದರ್.	124.20	86	ಎಥೋಪ್ರೋಬೇಟ್ ಬಿಪಿ(ವೆಟ್) ಡೈಮಿಟ್ರೊ-ಓ-ಟೋಲ್ಯೂಮೈಡ್ ಬ್ಯಾಕ್ಟೊ
ಗುಲ್ಬರ್ಗಾ ಜಿಲ್ಲೆ :					
36.	ಡಿಟರ್ಜೆಂಟ್ಸ್ ಇಂಡಿಯಾ ಲಿಮಿಟೆಡ್, ನಂ.105, ಈಶ್ವರ ನಗರ ತಾಜ್, ಸುಲ್ತಾನ್‌ಪುರ, ಗುಲ್ಬರ್ಗಾ.	ಗುಲ್ಬರ್ಗಾ	36.89	65	ಸಿಂಥೆಟಿಕ್ಸ್ ಡಿಟರ್ಜೆಂಟ್ಸ್.
	ಒಟ್ಟು		**46884.48**	**7698**	

ತುಮಕೂರು-ಬೆಂಗಳೂರು ರಸ್ತೆಯಲ್ಲಿ ಆಗುತ್ತಿರುವ ಅಪಘಾತಗಳನ್ನು ತಡೆಗಟ್ಟುವ ಬಗ್ಗೆ

171 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು-ಬೆಂಗಳೂರು ರಸ್ತೆಯಲ್ಲಿ ಕಳೆದ ವರ್ಷದಲ್ಲಿ ಎಷ್ಟು ವಾಹನಗಳು ಅಪಘಾತಕ್ಕೀಡಾಗಿವೆ;

ಆ) ಹಾಗಿದ್ದಲ್ಲಿ, ಈ ವಾಹನಗಳ ಅಪಘಾತದಲ್ಲಿ ತಹಲ್‌ವರೆಗೂ ಎಷ್ಟು ಜನಗಳು ಸತ್ತಿದ್ದಾರೆ.

ಇ) ಇದನ್ನು ಸರಿಪಡಿಸಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೆ?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ)	ತುಮಕೂರು	-	410
	ಭೆಂಗಳೂರು	-	730
	ಒಟ್ಟು	**-**	**1140**
ಆ)	ತುಮಕೂರು	-	95
	ಬೆಂಗಳೂರು ಜಿಲ್ಲೆ	-	108
	ಒಟ್ಟು	**-**	**203**

ಇ) ಅಪಘಾತಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮ ಕೈಗೊಳ್ಳಲಾಗಿದೆ :

1) ಅತಿ ವೇಗ ಮತ್ತು ಪರವಾನಿಗೆ ವಾಹನ ಚಾಲನೆ ಮಾಡುವವರ ವಿರುದ್ಧ ಪದೇ ಪದೇ ತಪಾಸಣೆ ಕೈಗೊಳ್ಳಲಾಗುತ್ತಿದೆ.
2) ಸಂಚಾರ ನಿಯಮ ಮತ್ತು ರಸ್ತೆ ಸುರಕ್ಷತೆಯ ಪಾಲನೆಯ ಬಗ್ಗೆ ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಳ್ಳಲಾಗಿದೆ.
3) ಸಂಚಾರಕ್ಕೆ ಅಡೆತಡೆಯಾಗುವ ವಾಹನಗಳ ಮೇಲೆ ಸೂಕ್ತ ಕ್ರಮ ಜರುಗಿಸಲಾಗಿದೆ ಮತ್ತು
4) ಸಂಬಂಧಪಟ್ಟ ಚಾಲಕರ ವಿರುದ್ಧ ಸಹ ಕ್ರಮ ಕೈಗೊಳ್ಳಲಾಗಿದೆ.
5) ಮಧ್ಯಪಾನ ಮಾಡಿ ವಾಹನ ನಡೆಸಿದವರ ವಿರುದ್ಧ ತಪಾಸಣೆಗಳು ಕೈಗೊಳ್ಳಲಾಗಿದೆ.
6) ಸೂಚನಾ ಫಲಕಗಳನ್ನು ರಸ್ತೆಯಲ್ಲಿ ಅಳವಡಿಸಲಾಗಿದೆ.
7) ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುವ ಜಿಲ್ಲಾ , ಪೋಲೀಸರಿಗೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಗಸ್ತು ಕಾರ್ಯಾಚರಣೆ, ರ್‍ಯಾಕರ್ಸ್ ಮತ್ತು ಅಂಬುಲೆನ್ಸ್‌ಗಳನ್ನು ನೀಡಲು ಸರ್ಕಾರ ಪರಿಶೀಲಿಸುತ್ತಿದೆ.
8) ಪ್ರಮುಖ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ವೈದ್ಯಕೀಯ ಸಂಚಾರ ಘಟಕಗಳನ್ನು ಮತ್ತು ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ವೈದ್ಯಕೀಯ ಕೇಂದ್ರಗಳನ್ನು (ಟ್ರಾಮಾಸೆಂಟರ್) ಸ್ಥಾಪಿಸುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ.

ವೀರಪ್ಪನ್ ಬಂಧನ

112 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೀರಪ್ಪನ್‌ನನ್ನು ಹಿಡಿಯಲು ಬಂದಿದ್ದ ಕೇಂದ್ರ ಮೀಸಲು ಪಡೆ ಹಿಂದಿರುಗಿದೆಯೇ?

ಆ) ಹಿಂದಿರುಗಿದ್ದರೆ, ಕಾರಣಗಳೇನು?

ಇ) ಇದುವರೆಗೆ ಇದಕ್ಕಾಗಿ ಖರ್ಚಾದ ಒಟ್ಟು ಮೊತ್ತ ಎಷ್ಟು?

ಶ್ರೀ ಚೌಡರೆಡ್ಡಿ (ಗೃಹ ಮಂತ್ರಿಗಳು) :

ಅ) ವೀರಪ್ಪನ್ ಮತ್ತು ಅವನ ಸಹಚರರ ಬಂಧನದ ಕಾರ್ಯದಲ್ಲಿ ಕರ್ನಾಟಕ ವಿಶೇಷ ಕಾರ್ಯಾಚರಣೆ ಪಡೆಗೆ ನೆರವಾಗಲು ದಿನಾಂಕ : 5-6-93 ರಂದು ಗಡಿಭದ್ರತಾ ಪಡೆಯ 5ಕಂಪನಿಗಳ ಸೇವೆಯನ್ನು ಪಡೆಯಲಾಗಿತ್ತು. ಅವುಗಳಲ್ಲಿ ಮೂರು ಕಂಪನಿಗಳನ್ನು ದಿನಾಂಕ : 9-3-94ರಂದು ಹಿಂದಿರುಗಿಸಲಾಗಿದೆ. ಎರಡು ಕಂಪನಿಗಳು ಇನ್ನೂ ಉಳಿದಿದ್ದು ಕಾರ್ಯಾಚರಣೆಯಲ್ಲಿ ತೊಡಗಿವೆ.

ಆ) ಕಾರ್ಯಾಚರಣೆ ಪಡೆಯು ದಿನಾಂಕ : 190-4-93 ರಿಂದ 9-3-94ರ ವರೆಗೆ ನಡೆಸಿದ ಕಾರ್ಯಾಚರಣೆಯ ಅವಧಿಯಲ್ಲಿ, ವೀರಪ್ಪನ್ ತಂಡದ ಬಲವನ್ನು 150 ರಿಂದ 8 ಸದಸ್ಯರಿಗೆ ಇಳಿಸಲಾಯಿತು. ಅದೇ ರೀತಿ ಶಸ್ತ್ರಗಳ ಸಂಖ್ಯೆಯನ್ನು 150 ರಿಂದ 7ಕ್ಕೆ ಇಳಿಸಲಾಯಿತು. ಆದ್ದರಿಂದ, ಐದು ಕಂಪನಿಗಳ ಸೇವೆ ಅನವಶ್ಯಕ ಎಂದು ಕಂಡು ಬಂದಿದ್ದರಿಂದ, ಕೇವಲ ಎರಡು ಕಂಪನಿಗಳನ್ನು ಇಟ್ಟುಕೊಂಡು, ಮೂರು ಕಂಪನಿಗಳನ್ನು ವಾಪಸ್ ಕಳುಹಿಸಲಾಗಿದೆ.

ಇ) ಗಡಿ ಭದ್ರತಾ ಪಡೆಯ ಸೇವೆಯನ್ನು ದಿನಾಂಕ 5-6-1993 ರಿಂದ 31-7-1994ರವರೆಗಿನ ಅವಧಿಯಲ್ಲಿ ಪಡೆದಿದ್ದಕ್ಕಾಗಿ, ಒಟ್ಟು 1 ಕೋಟಿ 15 ಲಕ್ಷ ರೂಪಾಯಿಗಳ ಮೊತ್ತವನ್ನು ಕೇಂದ್ರ ಸರ್ಕಾರಕ್ಕೆ ಸಂದಾಯ ಮಾಡಬೇಕಾಗಿದೆ.

ಬೆಂಗಳೂರು ನಗರದಲ್ಲಿ ಏಕಮುಖ ಸಂಚಾರದ ವ್ಯವಸ್ಥೆ

212 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಹಲವಾರು ರಸ್ತೆಗಳನ್ನು 'ಏಕಮುಖ ಸಂಚಾರ' ಮಾಡಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಹೌದು.

ಆ) ಸಾರ್ವಜನಿಕರಿಗೆ ತೊಂದರೆಯಾಗಿದೆ ಎಂಬುದು ಗಮನಕ್ಕೆ ಬಂದ ತಕ್ಷಣವೇ ಏಕಮುಖ ಸಂಚಾರದಲ್ಲಿ ಕೆಲವು ಮಾರ್ಪಾಡು ಮಾಡಲಾಗಿದೆ.

ಬೆಂಗಳೂರಿನಿಂದ - ತುಮಕೂರಿಗೆ ಬರುವ ಸರ್ಕಾರಿ ಬಸ್ಸು ತುಮಕೂರು ಎಚ್.ಎಂ.ಟಿ. ಗೇಟ್ ಹತ್ತಿರ ಸ್ಟಾಪ್ ಕೊಡುವ ಬಗ್ಗೆ

172 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಿಂದ - ತುಮಕೂರಿಗೆ ಬರುವ ಸರ್ಕಾರಿ ಬಸ್ಸು ತುಮಕೂರು ಎಚ್.ಎಂ.ಟಿ. ಗೇಟ್ ಹತ್ತಿರವಿರುವ ಗೋಕುಲ ಎಕ್ಸಟೆನ್‌ಷನಲ್ಲಿ ನಿಲುಗಡೆ ಮಾಡದೆ ಇರುವ ಪ್ರಯುಕ್ತ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಕೊರಟಗೆರೆ ತಾಲ್ಲೂಕು ಕೋಳಾಲ ಗ್ರಾಮಕ್ಕೆ ಹೊಸದಾಗಿ ಪೋಲೀಸ್ ಠಾಣೆ ಮಂಜೂರಾತಿ

173 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊರಟಗೆರೆ ತಾಲ್ಲೂಕ್ ಕೋಳಾಲ ಗ್ರಾಮದಲ್ಲಿ ಹೊಸದಾಗಿ ಪೋಲೀಸ್ ಸ್ಟೇಷನ್ ಮಂಜೂರು ಮಾಡುವುದಾಗಿ ಕಳೆದ ವಿಧಾನಸಭೆಯ ಅಧಿವೇಶನದಲ್ಲಿ ಗೃಹ ಸಚಿವರು ಆಶ್ವಾಸನೆ ನೀಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಏನು ಕ್ರಮಕೈಗೊಂಡಿದೆ?

ಇ) ಈ ಪೋಲೀಸ್ ಸ್ಟೇಷನ್ ತೆರೆಯಲು ಎಷ್ಟು ಕಾಲಾವಕಾಶ ಬೇಕಾಗುವುದು?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಹೌದು.

ಆ) ರಾಜ್ಯದಲ್ಲಿ ಆದ್ಯತೆ ಹಾಗೂ ಅಗತ್ಯತೆಯನ್ನು ಅನುಸರಿಸಿ ವರ್ಷಕ್ಕೆ 10 ಪೋಲೀಸ್ ಠಾಣೆಗಳನ್ನು ತೆರೆಯಲು ಉದ್ದೇಶಿಸಿದ್ದು ಅದರಂತೆ ಈ ಸಾಲಿಗೆ ತೆರೆಯಬೇಕಾಗಿರುವ ಪೋಲೀಸ್ ಠಾಣೆಗಳಲ್ಲಿ ಕೋಳಾಲ ಗ್ರಾಮಕ್ಕೆ ಪೋಲೀಸ್ ಠಾಣೆ ಮಂಜೂರು ಮಾಡುವ ವಿಷಯವನ್ನು ಪರಿಶೀಲಿಸಲಾಗುವುದು.

ಇ) ಸರ್ಕಾರ ಪೋಲೀಸ್ ಠಾಣೆಯ ಮಂಜೂರಾತಿ ಆದೇಶ ಹೊರಡಿಸಿದ ನಂತರ ಅದನ್ನು ತೆರೆಯುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಲೋಕಾಯುಕ್ತದಲ್ಲಿ ಕೇಸುಗಳು ಹಾಗೂ ಪರಿಣಾಮ

53 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕಾಯುಕ್ತರಿಂದ 1990-91, 91-92, 92-93, 93-94ರಲ್ಲಿ ಹಿಡಿದಿರುವ ಕೇಸುಗಳೆಷ್ಟು? ದೋಷಿಗಳೆಂದು ಎಷ್ಟು ಕೇಸುಗಳಲ್ಲಿ ತೀರ್ಮಾನಿಸಲಾಗಿದೆ?

ಆ) ದೋಷಿಗಳೆಂದು ತೀರ್ಮಾನವಾದ ಕೇಸುಗಳಲ್ಲಿ ಅಥವಾ ಪ್ರಕರಣಗಳಲ್ಲಿ ಎಷ್ಟು ಕೇಸುಗಳಲ್ಲಿ ತಪ್ಪಿತಸ್ಥರನ್ನು ವಾರ್ನಿಂಗ್ ಮಾಡಲಾಗಿದೆ? ಶಿಕ್ಷೆ ಮಾಡಲಾಗಿದೆ ಹಾಗೂ ಯಾವ ಶಿಕ್ಷೆ ಕೊಡಲಾಗಿದೆ?

ಇ) ತಪ್ಪಿತಸ್ಥರು ನಿವೃತ್ತರಾದಲ್ಲಿ ಅಂತಹ ಎಷ್ಟು ಪ್ರಕರಣಗಳನ್ನು ಮುಚ್ಚಲಾಗಿದೆ?

ಈ) 31-3-1994ಕ್ಕೆ ಲೋಕಾಯುಕ್ತದಲ್ಲಿ ಪೆಂಡಿಂಗ್ ಇರುವ ಕೇಸುಗಳ ಸಂಖ್ಯೆ ಎಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ವರ್ಷ	ಲಂಚ ಪ್ರಕರಣದಲ್ಲಿ ನೊಂದಾಯಿಸಿದ ಕೇಸುಗಳು	ದಾಳಿಯಲ್ಲಿ ನೊಂದಾಯಿಸಿದ ಪ್ರಕರಣಗಳು
1990-91	147	13

1991-92	121	15
1992-93	123	11
1993-94	186	16
ಒಟ್ಟು	577	55

ಆ) ಸಂಬಂಧಪಟ್ಟ ನಿಯಮಗಳಲ್ಲಿ ಎಚ್ಚರಿಕೆಯು ಒಂದು ದಂಡನೆಯಲ್ಲ. ಕಾನೂನಿನಲ್ಲಿ ಶಿಕ್ಷಿಸಲು ಅಥವಾ ಬಿಡುಗಡೆ ಹೊಂದಲು ಅವಕಾಶವನ್ನು ಕಲ್ಪಿಸಿದೆ. ಎರಡು ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಿದ್ದು ಅವುಗಳ ಪೈಕಿ ಒಂದು ಪ್ರಕರಣದಲ್ಲಿ 6 ತಿಂಗಳು ಕಠಿಣ ಶಿಕ್ಷೆ ಮತ್ತು ರೂ. 5,000-00 ದಂಡ ವಿಧಿಸಿದ್ದು, ದಂಡ ತೆರಲು ತಪ್ಪಿದಲ್ಲಿ ಪುನಃ 6 ತಿಂಗಳು ಕಠಿಣ ಸಜೆ ವಿಧಿಸಲಾಗಿದೆ. ಇನ್ನೊಂದು ಪ್ರಕರಣದಲ್ಲಿ ಒಂದು ವರ್ಷ ಕಠಿಣ ಶಿಕ್ಷೆ ಮತ್ತು ರೂ. 5,000-00 ದಂಡ ವಿಧಿಸಿದ್ದು, ದಂಡ ತೆರಲು ತಪ್ಪಿದಲ್ಲಿ 6 ತಿಂಗಳು ಕಠಿಣ ಸಜೆ ವಿಧಿಸಲಾಗಿದೆ.

ಇ) - ಇಲ್ಲ -

ಈ) - 213 ಕೇಸುಗಳು -

ಮೇಲುಕೋಟೆ ಮತ್ತು ತೊಣ್ಣೂರು ಕ್ಷೇತ್ರಗಳಲ್ಲಿ ಪ್ರವಾಸಿಗರಿಗೆ ಸೌಲಭ್ಯ

109 - ಶ್ರೀ ಡಿ. ಹಲಗೇಗೌಡ (ಪಾಂಡವಪುರ) : ಮಾನ್ಯ ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಮ್ಮ ನಾಡಿನ ಪ್ರಸಿದ್ಧ ಯಾತ್ರಾ ಸ್ಥಳಗಳಾದ ಮೇಲುಕೋಟೆ ಮತ್ತು ತೊಣ್ಣೂರು ಕ್ಷೇತ್ರಗಳು ಪ್ರವಾಸಿಗರ ಸೌಲಭ್ಯಗಳಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಎರಡೂ ಕ್ಷೇತ್ರಗಳು ಪ್ರವಾಸೋದ್ಯಮ ದೃಷ್ಟಿಯಿಂದ ಯಾತ್ರಾರ್ಥಿಗಳು ಮತ್ತು ಪ್ರವಾಸಿಗಳನ್ನು ಆಕರ್ಷಿಸುವ ಕೇಂದ್ರಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಎರಡೂ ಮುಖ್ಯ ಕ್ಷೇತ್ರಗಳನ್ನು ಪ್ರವಾಸೋದ್ಯಮ ಕೇಂದ್ರಗಳನ್ನಾಗಿ ಪರಿಗಣಿಸಲಾಗುವುದೇ?

ಶ್ರೀ ಓಂ ಪ್ರಕಾಶ್ ಕಣಗಲಿ (ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು) :

ಅ) ಹೌದು.

ಆ) ಹೌದು.

ಇ) ಹೌದು.

ಪರಿಶಿಷ್ಟ ಜಾತಿ ಮತ್ತು ಪಂಗಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರಥಮದರ್ಜೆ, ದ್ವಿತೀಯ ದರ್ಜೆ ಹುದ್ದೆಗಳ ನೇಮಕಾತಿ

31 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿಭಾವಂತ ಪದವೀಧರರಿಗೆ ಪ್ರಥಮ ದರ್ಜೆ ಹಾಗೂ ದ್ವಿತೀಯ ದರ್ಜೆ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ನೇಮಿಸಿಕೊಳ್ಳಲಾಗುವುದೆಂಬ ಸರ್ಕಾರಿ ಆದೇಶದಂತೆ ಯಾವ ಯಾವ ವರ್ಷ ಎಷ್ಟು ಜನರನ್ನು ನೇಮಿಸಿಕೊಳ್ಳಲಾಗಿದೆ. (ವಿವರವನ್ನೊದಗಿಸುವುದು).

ಆ) ಎರಡನೆ ವರ್ಷ ಹುದ್ದೆಗಳನ್ನು ತುಂಬಲು ಸಂದರ್ಶನ ನಡೆಸಿ ನಂತರ ಆ ಹುದ್ದೆಗಳನ್ನು ಲೋಕ ಸೇವಾ ಆಯೋಗಕ್ಕೆ ವಹಿಸಿಕೊಟ್ಟಿದ್ದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಅನ್ಯಾಯವಾಗಲಿಲ್ಲವೆ.

ಇ) ಈ ಜನಾಂಗಗಳ ಪ್ರತಿಭಾವಂತ ಪದವೀಧರರಿಗೆ ಹುದ್ದೆಗಳನ್ನು ಕೊಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) 1982-83 1983-84

44 07

ಆ) ಈ ರೀತಿ ಆಗಿಲ್ಲ.

ಇ) 1984-85 ರಿಂದ 1993-94 ಶೈಕ್ಷಣಿಕ ವರ್ಷಗಳಿಗೆ ಸಂಬಂಧಿಸಿದ ನೇಮಕಾತಿಯನ್ನು ಒಂದೇ ಬಾರಿಗೆ ಮಾಡುವ ಕ್ರಮ ತೆಗೆದುಕೊಂಡು ಈ ಪ್ರಕ್ರಿಯೆಯನ್ನು ಆದ್ಯತೆ ಮೇಲೆ ಮಾಡಲಾಗುತ್ತಿದೆ.

ಗುಲ್ಬರ್ಗಾ ಜಿಲ್ಲೆಯಲ್ಲಿ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಡಿಯಲ್ಲಿ ಕಾಮಗಾರಿ ಕೆಲಸ

649 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ಉಳಿತಾಯ, ಲಾಟರಿ, ಕೆ.ಜಿ.ಐ.ಡಿ. ಹಾಗೂ ಹೆಚ್.ಕೆ.ಡಿ.ಬಿ. ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಯೋಜನೆಯಡಿಯಲ್ಲಿ ಪ್ರತಿ ಕ್ಷೇತ್ರಕ್ಕೆ ಜಿಲ್ಲಾ ಪಂಚಾಯಿತಿ ಕಾಮಗಾರಿಗಳಿಗಾಗಿ ಶಾಸಕರಿಗೆ ನೀಡಿರುವ ಅಧಿಕಾರದ ಹಣ ಪ್ರಾರಂಭದಿಂದಲೂ 1993-94ನೇ ಸಾಲಿನವರೆವಿಗೂ ಮಂಜೂರು ಮಾಡಿದ ಹಾಗೂ ಖರ್ಚು ಮಾಡಿದ ಹಣ ಎಷ್ಟು ? (ವಿವರ ನೀಡುವುದು)

ಶ್ರೀ ಮದನಗೋಪಾಲ ನಾಯಕ್ (ಸಣ್ಣ ಉಳಿತಾಯ, ಲಾಟರಿ, ಕೆ.ಜಿ.ಐ.ಡಿ. ಹಾಗೂ ಹೆಚ್.ಕೆ.ಡಿ.ಬಿ. ರಾಜ್ಯ ಸಚಿವರು) :

ಅ) ಸದರಿ ಮಾಹಿತಿಯು ಈ ಕೆಳಕಂಡಂತೆ ಇದೆ :

ಕ್ರ. ಸಂ.	ವಿಧಾನ ಸಭಾ ಮತ ಕ್ಷೇತ್ರ	1993-94ನೇ ಸಾಲಿನವರೆಗೆ ಮಂಜೂರಾದ ಕಾಮಗಾರಿಗಳ ಒಟ್ಟು ಮೊತ್ತ (ಲಕ್ಷ ರೂ. ಗಳಲ್ಲಿ)	ಜುಲೈ 94 ರವರೆಗೆ ಆದ ಖರ್ಚು (ಲಕ್ಷ ರೂ.ಗಳಲ್ಲಿ
1	2	3	4
1.	ಚಿಂಚೋಳಿ	328.57	97.11
2.	ಕಮಲಾಪುರ	211.86	135.14
3.	ಆಳಂದ	214.89	141,03
4.	ಶಹಾಬಾದ್	199.95	105.24
5.	ಅಫ್ಜಲ್‌ಪುರ	199.19	123.18

6.	ಚಿತ್ತಾಪೂರ	302.10	71
7.	ಸೇಡಂ	218.07	98
8.	ಜೇವರ್ಗಿ	153.15	09
9.	ಗುರಮಿಟಕಾಲ	199.68	94
10.	ಯಾದಗೀರ	206.48	70
11.	ಶಹಾಪೂರ	152.41	27
12.	ಶೋರಾಪೂರ	190.74	81
	ಒಟ್ಟು	2577.09	[illegible]20

ಗುಲ್ಬರ್ಗಾ ಜಿಲ್ಲೆಯ ಸಂಚಾರ ಅನುಕೂಲಕ್ಕಾಗಿ ರಾಷ್ಟ್ರೀಕರಣ [illegible] ಖಾಸಗೀ ವ್ಯವಸ್ಥೆ ಅನುಕೂಲ ಮಾಡಿಕೊಡುವುದು

650 - ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ನಾಗರೀಕರ ಸಂಚಾರದ ಅನುಕೂಲಕ್ಕಾಗಿ ರಾಷ್ಟ್ರೀಕರಣವಾಗಿ ಸಹ ಜನಸಂಚಾರಕ್ಕೆ ಅನಾನುಕೂಲತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಾಷ್ಟ್ರೀಕರಣಕ್ಕೆ ಬದಲು ಮೊದಲು ಖಾಸಗೀ ವಾಹನಗಳು ಪ್ರಯಾಣಿಕರಿಗೆ ವೇಳೆಯಲ್ಲಿ ವಾಹನಗಳು ಸಂಚರಿಸಿ ಪ್ರತಿ ಗ್ರಾಮಕ್ಕೆ ಹೋಗುವುದರಿಂದ ಅನುಕೂಲತೆಗಳು ಇದ್ದಿಲ್ಲವೆ,

ಇ) ರಾಷ್ಟ್ರೀಕರಣ ಇದ್ದರೂ ಸಹ ಖಾಸಗೀಯವರಿಗೆ ಪರವಾನಿಗೆ ನೀಡಿ ಈ ಎರಡು ವ್ಯವಸ್ಥೆಗಳಿಂದ ನಾಗರೀಕರ ಸಂಚಾರಕ್ಕೆ ಅನುಕೂಲ ಮಾಡಿ ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲ.

ಆ) ಸಾರಿಗೆ ಸೇವೆಯನ್ನು ಅತ್ಯುತ್ತಮವಾಗಿ ನಿರ್ವಹಿಸಲು ಸಾಕಷ್ಟು ಸೇವೆಯನ್ನು ನೀಡುವ ಸಲುವಾಗಿ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಲಾಗಿದೆ.

ಇ) ಸರ್ಕಾರವು ಹೊಸ ಸಾರಿಗೆ ನೀತಿಯನ್ನು ರೂಪಿಸುವ ಬಗ್ಗೆ ತೀವ್ರವಾಗಿ ಪರಿಶೀಲಿಸುತ್ತಿದ್ದು ಕೆಲವು ರಾಷ್ಟ್ರೀಕೃತ ಮಾರ್ಗಗಳನ್ನು ಖಾಸಗೀಕರಣಗೊಳಿಸುವ ಪ್ರಸ್ತಾವನೆಯೂ ಇರುತ್ತದೆ.

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಪ್ರಕಟಣೆ

ಅಧ್ಯಕ್ಷರು : ಈಗ ಪ್ರಕಟಣೆ

1994-95ನೇ ಸಾಲಿನ ಪೂರಕ ಅಂದಾಜುಗಳ ಪ್ರಥಮ ಕಂತನ್ನು ವಿಧಾನಸಭೆಯಲ್ಲಿ ಮಂಡಿಸಲು ಸಂವಿಧಾನದ 205(1)ನೇ ಅನುಚ್ಛೇದದ ಪ್ರಕಾರ ಮಾನ್ಯ ರಾಜ್ಯಪಾಲರಿಂದ ಶಿಫಾರಸ್ಸು ಬಂದಿರುತ್ತದೆ.

13

ಶ್ರೀ ಎಂ.ವಿ. ವೀರಪ್ಪ ಮೊಯಿಲಿ : ಅಧ್ಯಕ್ಷರೇ, 1992-93ನೇ ಸಾಲಿನ ಧನ ವಿನಿಯೋಗ ಸಾಲಿನ ಲೆಕ್ಕಪತ್ರಗಳು, 92-93 ಸಾಲಿನ ಹಣಕಾಸು ಲೆಕ್ಕಪತ್ರಗಳು, 93ನೇ ಇಸವಿ ಮಾರ್ಚ್ 31ಕ್ಕೆ ಕೊನೆಗೊಂಡಂತೆ ವಾರ್ಷಿಕ ನಿಯಂತ್ರಕ ಮತ್ತು ಮಹಾಲೇಖಪರೀಕ್ಷಕರ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಕೈಗಾ ನ್ಯೂಕ್ಲಿಯರ್ ಪ್ಲಾಂಟ್‌ನ ಡೋಮ್ ಬಿದ್ದು ಹೋಗಿರುವ ಬಗ್ಗೆ

+ ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ನಮ್ಮ ರಾಜ್ಯದ ಉತ್ತರಕನ್ನಡ ಜಿಲ್ಲೆಯಲ್ಲಿ ಕೈಗಾ ನ್ಯೂಕ್ಲಿಯರ್ ಪ್ಲಾಂಟ್ ಬರುತ್ತಿದೆ. ಮುಖ್ಯಮಂತ್ರಿಗಳು ಸ್ವಲ್ಪ ಗಮನಕೊಡಬೇಕು. 13-5-1994ಕ್ಕೆ ಈ ಕೈಗಾ ಪ್ಲಾಂಟಿನ ಒಳಗಿನ ಡೂಂ ಕೊಲಾಪ್ಸ್ ಆಯಿತು; ಆದ್ದರಿಂದ ಉತ್ತರ ಕನ್ನಡ ಜಿಲ್ಲೆಯಲ್ಲಷ್ಟೇ ಅಲ್ಲ ಇಡೀ ರಾಜ್ಯದಲ್ಲಿ ಹಾಗೂ ದೇಶದಲ್ಲಿ ಇದರ ಬಗ್ಗೆ ಒಂದು ಭಯದ ವಾತಾವರಣ ನಿರ್ಮಾಣವಾಗಿದೆ. ಈ ನ್ಯೂಕ್ಲಿಯರ್ ಪವರ್ ಪ್ರಾಜೆಕ್ಟ್ ಸೇಫ್ಟಿ ಬಗ್ಗೆ ಜನರಲ್ಲಿ ಭಯದ ವಾತಾವರಣ ನಿರ್ಮಾಣವಾಗಿ ಪುನಃ ಜನರಲ್ಲಿ ಇದಕ್ಕೆ ವಿರೋಧ ಪ್ರಾರಂಭವಾಗಿದೆ. ನಾನು ಸ್ವತಃ ಈ ಪ್ರಾಜೆಕ್ಟ್‌ಗೆ ಭೇಟಿ ಕೊಟ್ಟಿದ್ದೇನೆ. ಇದರ ಬಗ್ಗೆ ಮುಖ್ಯಮಂತ್ರಿಗಳಿಗೆ ನಾನು ಪತ್ರ ಬರೆದಿದ್ದೆ. ಪ್ರಧಾನಿಗಳಿಗೂ ಪತ್ರ ಬರೆದಿದ್ದೆ, ಮತ್ತು ನ್ಯೂಕ್ಲಿಯರ್ ಅಟಾಮಿಕ್ ಎನರ್ಜಿ ರೆಗ್ಯುಲೇಷನ್ ಬೋರ್ಡಿನ ಅಧ್ಯಕ್ಷರಿಗೆ ಪತ್ರ ಬರೆದಿದ್ದೆ ಮತ್ತು ನ್ಯೂಕ್ಲಿಯರ್ ಪವರ್ ಪ್ರಾಜೆಕ್ಟನ ಚೇರ್ಮನರಿಗೂ ಪತ್ರ ಬರೆದಿದ್ದೆ. ಮಾನ್ಯ ಪ್ರಧಾನಿ ಸಹ ಇದರ ಬಗ್ಗೆ ನನಗೆ ಉತ್ತರ ಕೊಟ್ಟಿದ್ದಾರೆ. "I have received your letter on 20th June 94 regarding Kaiga Nuclear power project and I have noted your concern."

ಹಾಗಾಗಿ ಪ್ರಧಾನಿ ಮಟ್ಟದಲ್ಲಿ ಸಹ ಇದರ ಬಗ್ಗೆ ವಿಚಾರ ನಡೆದಿದೆ. ಮುಖ್ಯಮಂತ್ರಿಗಳು ಸಹ ಇದರ ಬಗ್ಗೆ ವಿಚಾರವಿನಿಮಯ ಮಾಡಿರಬಹುದು. ಗೋಪಾಲಕೃಷ್ಣ ಎಂದು ಅಟಾಮಿಕ್ ಎನರ್ಜಿ ರೆಗ್ಯುಲೇಷನ್ ಬೋರ್ಡಿನ ಅಧ್ಯಕ್ಷರು ತಮ್ಮ ಉತ್ತರದಲ್ಲಿ ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆ. "It is true that there have been some deviations at site from the designs which were presented to the DERB at the time of review. But whether or not and to what extent these deviations may be responsible for the dome failure is a matter which will be clear only when the investigating committees which are looking into these questions complete their evaluations.

ಈಗಾಗಲೇ ಎರಡು ಕಮಿಟಿಗಳ ರಚನೆ ಆಗಿದೆ. ಒಂದು ರೆಗ್ಯುಲೇಟೆಡ್ ಬೋರ್ಡ್‌ನವರು ಮಾಡಿದ್ದಾರೆ. ಇನ್ನೊಂದು ನ್ಯೂಕ್ಲಿಯರ್ ಪವರ್ ಪ್ರಾಜೆಕ್ಟ್‌ನವರು ಮಾಡಿದ್ದಾರೆ. ಆ ಎರಡೂ ಸಮಿತಿಗಳ ವರದಿ ಇನ್ನೂ ಬಂದಿಲ್ಲ; ಜೂನ್, ಜುಲೈ, ಆಗಸ್ಟ್, ಮೂರೂವರೆ ತಿಂಗಳಾಯಿತು. ಹಾಗಾಗಿ ನಾನು ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ. ತಮ್ಮ ಕಡೆಯಿಂದ, ಜನರ ಮನಸ್ಸಿನಲ್ಲಿ ಒಂದು ಭಯ ನಿರ್ಮಾಣವಾಗಿದೆ. ಆ ಭಯ ನಿರ್ಮೂಲನೆ ಮಾಡುವುದಕ್ಕೆ ತಾವೇನು ಮಾಡಿದ್ದೀರಿ? ನಾನು ಕೆಲವು ಸಲಹೆಗಳನ್ನು ಕೊಟ್ಟಿದ್ದೆ. ಈ ಎರಡೂ ಕಮಿಟಿಗಳ ರಿಪೋರ್ಟ್ ತಕ್ಷಣ ಪಬ್ಲಿಷ್ ಆಗಬೇಕು. ಲೋಕಲ್ ಭಾಷೆಗಳಲ್ಲಿ ಪ್ರಕಟವಾಗಬೇಕು. ಅಲ್ಲೇನಾಗಿದೆ ಎಂದರೆ ಸಾಮಾನ್ಯ ಜನರಿಗೆ ಇವತ್ತು ಪ್ರಾಜೆಕ್ಟ್ ನೋಡುವುದಕ್ಕೆ ಬಿಡುವುದಿಲ್ಲ. ಆದರಿಂದ ಜನರಲ್ಲಿ ಒಂದು ಸಂಶಯ ಭಯ ನಿರ್ಮಾಣವಾಗಿದೆ, ಏಕೆ ಇವರು ಬಿಡುವುದಿಲ್ಲ, ಪತ್ರಿಕಾ ವರದಿಗಾರರಿಗೆ ಬಿಡುವುದಿಲ್ಲ, ಏನು ಭಯ ಇದೆ, ಇದು ನನಗೆ ಗೊತ್ತಾಗಬೇಕು.

ನನಗೂ ಅಡ್ಡಿ ಮಾಡಿದರು, ಆದರೆ ನಾನು ಸ್ವಲ್ಪ ದಬಾಯಿಸಿದ ನಂತರ they allowed me to see the dome collapse. ಹಾಗಾಗಿ ನಮ್ಮ ಜಿಲ್ಲಾಮಂತ್ರಿಗಳೂ ಹೋಗಿದ್ದರು. ಸೇಫ್ಟಿ ಆಫ್ ದಿ ನೇಷನ್ ದೃಷ್ಟಿಯಿಂದ ಏನಾದರೂ ಈ ರೀತಿ ಮಾಡಿದ್ದೀರಾ ಹೇಗೆ? ಆ ವಿಚಾರ ಇಲ್ಲದಿದ್ದರೂ ಸಾಮಾನ್ಯ ಜನರಿಗೂ, ಜರ್ನಲಿಸ್ಟ್‌ಗೂ ಅಧಿಕಾರ ಇರಬೇಕು, ಸೈಂಟಿಸ್ಟ್‌ಗೂ ಇರಬೇಕು, ಅದು ಏಕೆ ಇಲ್ಲ ನನಗೆ ಗೊತ್ತಾಗುತ್ತಿಲ್ಲ ಇಲ್ಲ. ಆ ಎರಡು ಕಮಿಟಿಗಳ ವರದಿ ಏನಾಗಿದೆ ಅದೂ ಗೊತ್ತಾಗುತ್ತಿಲ್ಲ. ಹೀಗಾಗಿ ಇಡೀ ಜಿಲ್ಲೆಯಲ್ಲಿ ಇದರ ಬಗ್ಗೆ ಭಯದ ವಾತಾವರಣ ಇದೆ, ಎಜಿಟೇಷನ್ ನಡೆಯುತ್ತಿದೆ ಮತ್ತು ಇದು ಕೇವಲ it is not a question of Kaiga project, it will affect the other projects in the country. ಈಗಾಗಲೇ ಅವರು ಹೇಳಿದ್ದಾರೆ ನೋಡಿ " BRBB has ordered the stoppage of construction work on the inner containment structure at kaiga 1&2, as well as Rajasthan 3 & 4 projects at kota and this will be relaxed only after results for the kaiga mishap are established and corrective action taken to prevent the recurrence of this in future."

ಅಂದರೆ ಇವತ್ತು ಕೈಗಾದಲ್ಲಿ ಆದ ಪರಿಣಾಮದಿಂದ, ರಾಜಾಸ್ತಾನಲ್ಲಿ ಕೋಟಾದಲ್ಲಿ ಸಹ ಬಂದ್ ಮಾಡಿದ್ದಾರೆ. ಆದರೆ ಇವರೇನು ಮಾಡಿದ್ದಾರೆ, ಇನ್ನರ್‌ಡೂಂ ಬಿದ್ದಿದೆ ಅಷ್ಟೇ ಕೆಲಸ ಬಂದ್ ಮಾಡಿದ್ದಾರೆ, ಎಂಟೈರ್ ಪ್ರಾಜೆಕ್ಟ್ ಕೆಲಸ ಬಂದ್ ಮಾಡಿಲ್ಲ. ಹಾಗಾಗಿ ನಾನು ಮುಖ್ಯಮಂತ್ರಿಗಳನ್ನು ಏನು ಒತ್ತಾಯ ಮಾಡುತ್ತಿದ್ದೇನೆಂದರೆ ರಾಜ್ಯದ ಹಾಗೂ ದೇಶದ ದೃಷ್ಟಿಯಿಂದ ಆ ಪ್ರಾಜೆಕ್ಟ್‌ನಿಂದ ಒಳ್ಳೆಯದಾಗುವುದಿದ್ದರೆ ನನ್ನ ಅಭ್ಯಂತರ ಇಲ್ಲ, ಆದರೆ ಜನರ ಮನಸಿನಲ್ಲಿ ಭಯ ಇದ್ದಾಗ ಆ ಭಯ ಹೋಗುವತನಕ ಕೆಲಸ ನಿಲ್ಲಿಸಬೇಕಾಗಿದೆ. ಎರಡೂ ಕಮಿಟಿಗಳ ವರದಿ ಲೋಕಲ್ ಭಾಷೆಗಳಲ್ಲಿ ರಿಲೀಸಾಗಬೇಕಾಗಿದೆ. ಮತ್ತು ಎಲ್ಲಾ ಜನರಿಗೂ ಈ ಪ್ರಾಜೆಕ್ಟ್ ನೋಡಲಿಕ್ಕೆ ಅವಕಾಶವಾಗಬೇಕು. ಆಗ ಜನರಿಗೆ ಅಲ್ಲಿ ವಿಶ್ವಾಸ ಬರುತ್ತದೆ. ಏನೂ ಇಲ್ಲ ಎಂದು. ಯಾವಾಗ ನೀವು ಮುಚ್ಚಲಿಕ್ಕೆ ಹೋಗುತ್ತೀರಿ ಅಲ್ಲಿ ಸಂಶಯದ ವಾತಾವರಣ ನಿರ್ಮಾಣ ಆಗುತ್ತದೆ. ನಾನೊಂದು ಸಜೆಷನ್ ಪ್ರಧಾನಿಗಳಿಗೂ ಮಾಡಿದ್ದೆ, ಇವತ್ತು ಈ ನ್ಯೂಕ್ಲಿಯರ್ ಪ್ರಾಜೆಕ್ಟ್ ಪರ ವಿರೋಧಿ ಜನರಿದ್ದಾರೆ, ವಿಜ್ಞಾನಿಗಳಿದ್ದಾರೆ, ಪರಿಸರವಾದಿಗಳಿದ್ದಾರೆ, ನಮ್ಮ ಸರ್ಕಾರ ಇದ್ದಾಗ ಆಗಲೂ ಕೈಗಾ ಪ್ರಾಜೆಕ್ಟ್ ಬಗ್ಗೆ ಸಾಕಷ್ಟು ವಿರೋಧ ಆಯಿತು. ನಾವೇನು ಮಾಡಿದ್ದೆವು ಎಂದರೆ ನಮ್ಮ ಜಿಲ್ಲೆಯ 5 ಜನ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿ ಏನು ನ್ಯೂಕ್ಲಿಯರ್ ಪ್ರಾಜೆಕ್ಟ್ ದೇಶದಲ್ಲಿ ಬರುತ್ತಾ ಇದೆ ಅಲ್ಲೆಲ್ಲಾ ಭೇಟಿ ಕೊಟ್ಟಿದ್ದೆವು.

ರಾಜಾರಾಮಣ್ಣ ಅವರಂಥ ವಿಜ್ಞಾನಿಗಳನ್ನು ಕರೆಸಿ ಅವರ ಕಡೆಯಿಂದ ಎಕ್ಸ್‌ಪ್ಲೇನ್‌ಮಾಡಿಸಿದ್ದೇವೆ. ಹಾಗಾಗಿ ಪುನಃ ಜನರ ಮನಸಿನಲ್ಲಿ ವಿಶ್ವಾಸ ಕ್ರಿಯೇಟ್ ಮಾಡಿಸಬೇಕಾಗಿದೆ. ಒಂದು ವೇಳೆ ಈ ಪ್ರಾಜೆಕ್ಟ್‌ನಿಂದ ಜನರ ಹಿತ ಇಲ್ಲ ಎಂದರೆ we will have to leave this. ನೀವು 500 ಕೋಟಿ ಖರ್ಚು ಮಾಡಿದ್ದಿರೋ ಅದು ಇಂಪಾರ್ಟೆಂಟಲ್. ಇದರಿಂದ ನಾಡಿನ ಜನರಿಗೆ ಹಿತ ಇಲ್ಲಾಂದರೆ . we have to leave this project. We cannot take up this project. ಹಾಗಾಗಿ ಪುನಃ ಜನರ ಮನಸಿನಲ್ಲಿ ಸಂಶಯ ನಿರ್ಮಾಣವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ. ಮತ್ತು ಈ ಎರಡೂ ಕಮಿಟಿಗಳ ವರದಿ ರಿಲೀಸ್ ಮಾಡಲಿಕ್ಕೆ ಏನು ಮಾಡುತ್ತೀರಿ ಅಲ್ಲಿ ಜನರಿಗೆ ನೋಡಲಿಕ್ಕೆ ಅವಕಾಶ ಮಾಡಿಕೊಡಲಿಕ್ಕೆ ಏನು ಮಾಡುತ್ತೀರಿ ಎಂಬುದನ್ನು ಹೇಳಬೇಕು ಮತ್ತು ತಾವು ಕೇಂದ್ರ ಸರ್ಕಾರದ ಸಹಾಯದಿಂದ ವರದಿ ಬರುವ ತನಕ ಮತ್ತು ಜನರ ಮನಸ್ಸಿನಲ್ಲಿ

ವಿಶ್ವಾಸ ಹುಟ್ಟುವತನಕ ಈ ಪ್ರಾಜೆಕ್ಟ್‌ನಿಂದ ಭಯ ಇಲ್ಲವೆಂಬ ವಿಶ್ವಾಸ ಹುಟ್ಟುವತನಕ ಆ ಪ್ರಾಜೆಕ್ಟ್‌ನ್ನು ನಿಲ್ಲಿಸಬೇಕು. ಮತ್ತೊಂದು ನಾನು ತಮಗೂ ಪ್ರಧಾನಿಗಳಿಗೂ ಸಲಹೆ ಮಾಡಿದ್ದೇನೆ. ತಾವು ಇದನ್ನು ಪ್ರಧಾನಿಗಳ ಜೊತೆ ಡಿಸ್ಕಸ್ ಮಾಡಿ, ಪರ ವಿರೋಧ ವಿಜ್ಞಾನಿಗಳಿದ್ದಾರೆ, ಅವರದೊಂದು ಕಮಿಟಿ ಮಾಡಿ let them visit the spot.ಸೈಂಟಿಸ್ಟ್ ಇರಲಿ, ಟೆಕ್ನೋಕ್ರಾಟ್ಸ್ ಇರಲಿ, ಪರಿಸರವಾದಿಗಳಿರಲಿ, ಸಮಾಜಸೇವಕರಿರಲಿ, ಹೋಗಿ ನೋಡಿ ಆ ಪ್ರಾಜೆಕ್ಟ್ ಪರಿಸ್ಥಿತಿ ಏನಾಗಿದೆ ಎಂದು ತಿಳಿದುಕೊಳ್ಳಬೇಕು. ಏಕೆಂದರೆ ಒಂದು ಕೈಗಾ ಪ್ರಾಜೆಕ್ಟ್‌ನಿಂದ ಇಡೀ ದೇಶದಲ್ಲಿ ಬೇರೆ ಕಡೆ ಅವರು ಬಂದ್ ಮಾಡಿದ್ದಾರೆ. ಮತ್ತು ರೆಗ್ಯುಲೇಟರಿ ಬೋರ್ಡ್ ಚೇರ್ಮನರು ಒಪ್ಪಿ ಉತ್ತರಕೊಟ್ಟಿದ್ದಾರೆ 'It is a fact that there have been deviations from the design. ಇಂತಹ ಪರಿಸ್ಥಿತಿಯಲ್ಲಿ ಇದನ್ನು ತಾವು ಗಂಭೀರವಾಗಿ ಪರಿಗಣಿಸಬೇಕು ಮತ್ತು ಈಗಾಗಲೇ ಏನು ಕ್ರಮ ತೆಗೆದುಕೊಂಡಿದ್ದೀರಿ ಮತ್ತು ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಕೈಗಾ ಬಗ್ಗೆ ಪ್ರಸ್ತಾವ ಎತ್ತಿರುವುದರ ಬಗ್ಗೆ ನಾಳೆ ನಾನು ಉತ್ತರ ಕೊಡುತ್ತೇನೆ.

ರಾಜ್ಯದ ಕಾಯ್ದಿರಿಸಿದ ಪೋಲೀಸ್ ಪಡೆಯಲ್ಲಿ ನೇಮಕವಾಗಿರುವ 5ಸಾವಿರಕ್ಕೂ ಹೆಚ್ಚು ಜನ ಬೀದಿಪಾಲು

ಶ್ರೀ ಬಿ.ಎಸ್. ಯಡಿಯೂರಪ್ಪ -(ಶಿಕಾರಿಪುರ) : ಕರ್ನಾಟಕ ರಾಜ್ಯ ಕಾಯ್ದಿಟ್ಟ ಪೋಲಿಸ್ ಪಡೆಯಲ್ಲಿ ನೇಮಕವಾಗಿರುವ ಸುಮಾರು 5 ಸಾವಿರಕ್ಕೂ ಹೆಚ್ಚು ಜನ ಇವತ್ತು ಬೀದಿಪಾಲಾಗಿರುವ ಸಂದರ್ಭ ಇವತ್ತು ಬಂದಿದೆ. ತಮಗೆ ಗೊತ್ತಿರುವ ಹಾಗೆ 1994ರಲ್ಲಿ ಈಗಾಗಲೇ ಆಯ್ಕೆ ಆಗಿರುವ 3050 ಪೇದೆಗಳು ಮತ್ತೆ 193 ಅನುಯಾಯಿಗಳನ್ನು ಕೆಎಟಿ ತೀರ್ಪಿನ ಹಿನ್ನೆಲೆಯಲ್ಲಿ ಸರ್ಕಾರ ಇನ್ನೂ ನೇಮಕಾತಿ ಮಾಡಿಲ್ಲ. ತಾವೇ ಇದರ ಅಗತ್ಯ ಇದೆಯೆಂದು 3050 ಪೇದೆಗಳ್ನು ನೇಮಕ ಮಾಡಿದ್ದೀರಿ. ಅದಕ್ಕಾಗಿ ಒಂದು ಸಮಿತಿಯನ್ನು ರಚನೆ ಮಾಡಿದ್ದಿರಿ.

12.30 ಪಿಎಂ

ತಾವೇ ಇದರ ಅಗತ್ಯ ಬಹಳ ಇದೆ ಎಂದು 3050 ಪೋಲಿಸರ ಪಡೆ ನೇಮಕಾತಿ ಮಾಡಿದ್ದೀರಿ. ಅದಕ್ಕಾಗಿ ಒಂದು ಸಮಿತಿಯನ್ನು ರಚನೆ ಮಾಡಿದ್ದೀರಿ. ಇದರ ಛೇರ್ಮನರಾಗಿ ಡಿ.ಜಿ.ಪಿ. ಕೆ.ಸಿ.ಆರ್.ಪಿ. ಪೋಲೀಸ್ ವಸತಿ ಮತ್ತು ಕಲ್ಯಾಣ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಒಬ್ಬ ಕಮಾಂಡೆಂಟ್ ಮತ್ತು ಎರಡು ಸಹಾಯಕ ಕಮಾಂಟ್‌ರ ಉಪ ಸಮಿತಿಯನ್ನು ಮಾಡಿದ್ದೀರಿ. ರೋಸ್ಟರ್ ಪದ್ಧತಿಯನ್ನು ಅನುಸರಿಸಿ, ಎಲ್ಲಾ ಕಾನೂನ್ನನ್ನು ಅನುಸರಿಸಿ ಆಯ್ಕೆ ಮಾಡಿ ಅದರ ಮೂಲಕ 3050 ಪೇದೆ ಗಳನ್ನು ಈಗಾಗಲೇ ಆಯ್ಕೆ ಮಾಡಿದ್ದೀರಿ. ಇದರ ಆಧಾರದ ಮೇಲೆ ಹಿಂದೆ ಸಹ ಆಯ್ಕೆ ಮಾಡಿದಂಥ ಅಭ್ಯರ್ಥಿಗಳಿಗೆ ಈಗಾಗಲೇ ನೇಮಕಾತಿ ಮಾಡಿಕೊಂಡು ಅವರು ಕೆಲಸ ಮಾಡುತ್ತಿದ್ದರೆ. ಆದರೆ ಇವತ್ತು ಕೆ.ಎ.ಟಿ. ತೀರ್ಮಾನದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ಕಾಯ್ದಿಟ್ಟ ಪೋಲೀಸ್ ಪಡೆಯಲ್ಲಿ ನೇಮಕವಾಗಿರುವ ಸುಮಾರು 5000 ಜನ ಕೆಲಸವನ್ನು ಕಳೆದುಕೊಳ್ಳುವಂಥ ಸಂದರ್ಭ ನಿರ್ಮಾಣವಾಗಿದೆ. ಮತ್ತೇ ಈಗ ನೇಮಕಾತಿಯಾಗಿರುವವರಿಗೆ ಇನ್ನು ನೇಮಕಾತಿ ಆದೇಶ ತಾವು ಕೊಟ್ಟಿಲ್ಲ. ತಮಗೆ ಅದಕ್ಕಾಗಿ ನಾನು ವಿನಂತಿ ಮಾಡುವುದು. ಸರ್ಕಾರ ಈ ಗೌರವಾನ್ವಿತ ಕೆ.ಎ.ಟಿ.ಗೆ ಒಂದು ಅಪೀಲು ಸಲ್ಲಿಸಿ ಹಿಂದೆ ಯಾವುದೋ ಒಂದು ಆಧಾರದ ಮೇಲೆ ಆಯ್ಕೆ ಮಾಡಿದ್ದೀರಿ, ಅದೇ ಆಧಾರದ ಮೇಲೆ ಇವತ್ತೂ ಸಹ ಆಯ್ಕೆ ಮಾಡಿದ್ದೀರಾ?

ರೋಸ್ಟರ್ ಪದ್ಧತಿಯನ್ನು ಅನುಸರಿಸಿದ್ದೀರಾ? ಅದಕ್ಕಾಗಿ ಸನ್ಮಾನ್ಯ ಅಧ್ಯಕ್ಷರೇ, ಆಯ್ಕೆಯಾಗಿ, ಸರ್ಕಾರಿ ಆಜ್ಞೆ ಹೋಗಿ ಈಗಾಗಲೇ ಕೆಲವು ಕಡೆ ಸುಮಾರು 2500 ಕ್ಕೂ ಹೆಚ್ಚು ಜನ ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ ಇವತ್ತು ಅವರು ಬೀದಿಪಾಲಾಗುವಂಥ ಸಂದರ್ಭ ಇದೆ. ಸುಮಾರು 2280 ಮಂದಿ ಈಗಾಗಲೇ ಆಯ್ಕೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಪ್ರೊಬೇಷನರಿರೀರಿಯಡ್ ಮುಗಿದು ಖಾಯಂ ಸಹ ಮಾಡಿದ್ದೀರಿ. ಈಗ ಕೆ.ಎ.ಟಿ. ಆಜ್ಞೆ ಹಿನ್ನೆಲೆಯಲ್ಲಿ, ಈಗಾಗಲೇ ನೇಮಕ ಆಗಿರುವವರಿಗೆ ಹೊರ ಬರುವಂತಹ • ಸಂದರ್ಭ ಇದೆ. ಈಗ ಯಾರು 3050 ಮಂದಿಗೆ ನೇಮಕಾತಿ ಆದೇಶ ಹೋಗದೆ ಅವರು ಬೀದಿಪಾಲಾಗುವಂಥ ಸಂದರ್ಭ ಬಂದಿದೆ ಅದಕ್ಕೆ ದಯಮಾಡಿ ಈ ವಿಷಯದಲ್ಲಿ ವಾಸ್ತವಿಕ ಸ್ಥಿತಿ ಏನು, ಆಯ್ಕೆ ಸಮಿತಿಯವರು ಆಯ್ಕೆಯಾಗಿರುವವರಿಗೆ ಉದ್ಯೋಗ ಭರವಸೆ ಕೊಟ್ಟು, ಅವರಿಗೂ ನೇಮಕಾತಿ ಆದೇಶವನ್ನು ಕೊಟ್ಟು ಅವರು ಗೌರವದಿಂದ ಕೆಲಸ ಮಾಡುವಂಥ ವ್ಯವಸ್ಥೆಯನ್ನು ಮಾಡುತ್ತೀರಾ? ಆಗಿರುವಂಥ ಗೊಂದಲ ಏನು ಎಂಬ ಬಗ್ಗೆ ಮುಖ್ಯಮಂತ್ರಿಗಳು ಇಲ್ಲಿ ಸದನದಲ್ಲಿ ಇರುವುದರಿಂದ ದಯಮಾಡಿ ಉತ್ತರವನ್ನು ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಅಧ್ಯಕ್ಷರೇ, ಇನ್ನೊಂದು ಏನಾಗಿದೆ ಎಂದರೆ 92ನೇ ಇಸವಿಯಿಂದ ಸನ್ಮಾನ್ಯ ಮುಖ್ಯಮಂತ್ರಿಗಳು 2280 ಜನಕ್ಕೆ ಪರ್ಮನೆಂಟ್ ಮಾಡಿ, ಈಗಾಗಲೇ ಅವರು ಕೆಲಸ ಮಾಡಲಿಕ್ಕೆ ಶುರು ಮಾಡಿಬಿಟ್ಟಿದ್ದಾರೆ. ಇನ್ನು 3243 ಜನಕ್ಕೆ ಜನವರಿ 94 ರಂದು ಆಯ್ಕೆ ಮಾಡಿದ್ದೇವೆ ಎಂದು ಅಭ್ಯರ್ಥಿಗಳಿಗೆ ಲೆಟರ್ ಕೂಡ ಹೋಗಿದೆ. ದಾಖಲಾತಿಗಳನ್ನೂ ಕೂಡ ತರಿಸಿಕೊಂಡು ನೋಡಿ ಆಗಿದೆ. ಆದರೆ ಈ ಮಧ್ಯೆ ಕೆ.ಎ.ಟಿ.ಸ್ಟೇ ಕೊಟ್ಟಿರುವುದರಿಂದ ಇವೆಲ್ಲಾ ಅತಂತ್ರವಾಗಿವೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಅವರ ಹೆಸರುಗಳನ್ನು ತೆಗೆದು ಹಾಕಲಾಗಿದೆ. ಮತ್ತೇ ಬೇರೆ ಇಂಟರ್‌ವ್ಯೂ ಬರುವ ಸ್ಥಿತಿಯಲ್ಲಿ ಅವರು ಇಲ್ಲ, ಮತ್ತು ಏಜ್ ಬಾರ ಕೂಡ ಆಗುತ್ತಿದೆ. ಇಂತಹ ಸಂದರ್ಭದಲ್ಲಿ ಸುಮಾರು 20 ಲಕ್ಷ ರೂ.ಗಳನ್ನು ಸರ್ಕಾರ ಕೂಡ ಖರ್ಚು ಮಾಡಿದೆ. ಆಯ್ಕೆ ಮಾಡುವುದಕ್ಕೆ ಎಲ್ಲಾ ಸೇರಿಕೊಂಡು ಇಂತಹ ಸಂದರ್ಭದಲ್ಲಿ ಕೆ.ಎ.ಟಿ.ಸ್ಟೇ ಬಂದಿರುವುದರಿಂದ ಒಟ್ಟು 5500 ಜನ ಯುವಕರಿಗೆ ಇದರಿಂದ ತುಂಬಾ ಅನ್ಯಾಯವಾಗಿದೆ. ಅದಕ್ಕೋಸ್ಕರ ಸರ್ಕಾರ ಖಂಡಿತ ಅಷ್ಟು ಜನಕ್ಕೆ ಭದ್ರತೆ ಮಾಡುವ ದೃಷ್ಟಿಯಿಂದ ಏನೇನು ನೇಮಕಾತಿ ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಿಕೊಟ್ಟು ಅವರ ನೆರವಿಗೆ ನಾವು ಬರುತ್ತೇವೆ ಎಂದು ಅವರಿಗೆ ಆಶ್ವಾಸನೆ ಕೊಡಬೇಕು ಎಂದು ಈ ಸಂದರ್ಭದಲ್ಲಿ ಅವರ ನೆರವಿಗೆ ಸರ್ಕಾರ ಬರಲಿಲ್ಲ ಎಂದರೆ ಅಷ್ಟು ಜನರು ಬೀದಿಪಾಲಾಗುತ್ತಾರೆ. ಮತ್ತೆ ಎಲ್ಲಾ ಅನ್ಯಾಯಗಳಿಗೂ ಸರ್ಕಾರವೇ ಕಾರಣವಾಗುವಂಥ ಪರಿಸ್ಥಿತಿ ಬರುತ್ತದೆ. ಇದಕ್ಕೆ ಸರ್ಕಾರ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಾನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಇದು ನೀವು ಮಾಡಿದಂಥ ಸಮಿತಿ. ಸರ್ಕಾರಕ್ಕೆ ಅನೇಕ ಸಾರಿ ಮನವಿಗಳನ್ನು ಅವರು ಕೊಟ್ಟಿದ್ದಾರೆ. ಆ ಮನಿವಿಗಳ ಬಗ್ಗೆ ನ್ಯಾಯಾಲಯದ ಮುಂದೆ ನಿಮ್ಮ ಸರ್ಕಾರದ ಮನವಿ ಏನಿದೆ ಅದನ್ನು ನೀವು ಸಲ್ಲಿಸಿದಿರಾ? ಈಗ ಅವರು ಬೀದಿ ಪಾಲಾಗುವಂಥ ಸನ್ನಿವೇಶ ಬಂದಿದೆ. ಇದರಲ್ಲಿ ಅನುಮಾನವೇ ಇಲ್ಲ. ಸುಮಾರು 3-4 ತಿಂಗಳು ಮೇಲಾಗಿದೆ. ಹಗಲು ರಾತ್ರಿ ನಿಮ್ಮ ಹತ್ತಿರ ಬರುತ್ತಿದ್ದಾರೆ. ಅವರ ಬಗ್ಗೆ ಸರ್ಕಾರ ಗಮನ ಕೊಟ್ಟಿಲ್ಲ. ಎಂದರೆ ನಿವೇ ಆಯ್ಕೆ ಮಾಡಿ, ನೀವೇ ನೇಮಕಾತಿ ಕೊಟ್ಟು . 5000 ಜನಕ್ಕೆ, ಪ್ರತಿಯೊಬ್ಬರಿಗೂ ಸಂದರ್ಶನಕ್ಕೆ ಬಂದು ಹೋಗುವುದಕ್ಕೆ ಎಷ್ಟೇಷ್ಟೊ ಖರ್ಚಾಗುತ್ತದೆ. ಇವೆಲ್ಲವನ್ನೂ ಕ್ರಮಬದ್ಧವಾಗಿ ಮಾಡಿ ನೀವು ಆಯ್ಕೆ ಮಾಡಿದ ಮೇಲೆ ಅಲ್ಲಿ ತಡೆಯಾಜ್ಞೆ ಕೊಟ್ಟಾಗ, ಆ ತಡೆಯಾಜ್ಞೆಗಳನ್ನು ತೆರವು ಮಾಡಿಸಲು

ಯಾವ ರೀತಿ ಪರಿಶೀಲನೆ ಮಾಡಬೇಕು ಎನ್ನುವಂಥದ್ದು ಸರ್ಕಾರದ ಒಂದು ಕರ್ತವ್ಯ. ಇದುವರೆಗೂ ಸರ್ಕಾರ ಏನೂ ಮಾಡಿಲ್ಲ ಎಂಬ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ, ಕೂಡಲೇ ಈ ಬಗ್ಗೆ ಸ್ಪಷ್ಟವಾದ ಭರವಸೆಯನ್ನು ಸರ್ಕಾರ ಕೊಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಚೌಡರೆಡ್ಡಿ (ಗೃಹ ಮಂತ್ರಿಗಳು) : ಅಧ್ಯಕ್ಷರೇ, ಎಲ್ಲಾ ವಿವರಗಳನ್ನು ತರಿಸಿ ನಾನು ಒಂದು ಸ್ಟೇಟ್ ಮೆಂಟ್ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಸಚಿವರಿಗೆ ಗೊತ್ತಿದೆ. ಹಾಗೆ ತಾವೇ ಸಮಿತಿ ಮಾಡಿ ಅದರ ಮೂಲಕ ಆಯ್ಕೆ ಮಾಡಿದ್ದೀರಿ ಹಾಗೂ ಆಯ್ಕೆ ಆದವರಿಗೆ ಕೆ.ಎಸ್.ಆರ್.ಪಿ. ಡಿ.ಐ.ಜಿ. ಹಾಗೂ ಆಯ್ಕೆ ಸಮಿತಿ ಅಧ್ಯಕ್ಷ ಶ್ರೀ ಎಚ್.ಎಫ್. ನಾಯ್ಕರ್ ಅವರು ಒಂದು ಆದೇಶವನ್ನು ಕಳುಹಿಸಿ ತಮ್ಮನ್ನು ಕೆ.ಎಸ್.ಆರ್.ಪಿ.ರವರು ತಾತ್ಕಾಲಿಕ ಹುದ್ದೆಗೆ ಹೊರಡಿಸಿರುವ ಕಾರಣ ಜೊತೆಗೆ ತಾವು ಸರ್ಟಿಫಿಕೇಟ್‌ಗಳನ್ನು ಕಳುಹಿಸಿ ಕೊಡಿ ಎಂದು, ಒಂದು ಕಡೆ ಎಲ್ಲವನ್ನೂ ಕಳುಹಿಸಿ ಅವರ ನೇಮಕಾತಿ ಮಾಡಿಕೊಳ್ಳುವುದಕ್ಕೆ ಒಂದು ಹೆಜ್ಜೆ ಮುಂದೆ ಇಟ್ಟಿದ್ದಾರೆ. ಎರಡನೆಯದು ಇದೇ ಸಮಿತಿಯವರು 2280 ಜನರನ್ನು ಹಿಂದೆ ನೇಮಕಮಾಡಿ ಅವರು ಈಗಾಗಲೇ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಅದೇ ಸಮಿತಿಯಿಂದ ಆದೇಶ ಕಳುಹಿಸಿ ಅವರ ಪ್ರೊಬೇಷನರಿ ಪೀರಿಯಡ್ ಮುಗಿದು ಖಾಯಂ ಆಗುವಂಥ ಸಂದರ್ಭದಲ್ಲಿ ಕೆ.ಎ.ಟಿ. ಆದೇಶದಿಂದ ಹಿಂದೆ ಏನು ನೀವು 2280 ಜನ ಕೆಲಸ ಮಾಡುತ್ತಿದ್ದಾರೆ ಅವರೂ ಸಹ ಬೀದಿಪಾಲಾಗುವಂಥ ಸಂದರ್ಭ ಬಂದಿದೆ. ಸರ್ಕಾರಿ ಆದೇಶ ಇಷ್ಯೂ ಆಗಿಲ್ಲವೆಂದು ಬೀದಿಪಾಲಾಗುವಂಥ ಸಂದರ್ಭ ಇದೆ. ಅದಕ್ಕೋಸ್ಕರ ಆರ್ಟಿಕಲ್ 226ರ ಪ್ರಕಾರ ಕೆ.ಎ.ಟಿ. ವಿರುದ್ಧ ಏನಾದರೂ ಮೇಲ್ಮನವಿ ಸಲ್ಲಿಸುತ್ತೀರಾ? ಅಥವಾ ಇಲ್ಲೇ ಅವರ ಮನವೊಲಿಸಿ ಹಿಂದೆ ಇದ್ದ ಸಮಿತಿ ಇದನ್ನು ಆಯ್ಕೆ ಮಾಡಿದ್ದರಿಂದ ರೋಸ್ಟರ್ ಪದ್ಧತಿ ನಾವು ಅನುಸರಿಸಿದ್ದೇವೆ, ಮತ್ತು ಇನ್ನೂ ಏನಾದರೂ ಕೊರತೆಗಳು ಇದರಲ್ಲಿ ಇದ್ದರೆ ಅದನ್ನು ಸರಿಪಡಿಸಿ ಇವರನ್ನು ನೇಮಕ ಮಾಡಿಕೊಳ್ಳುತ್ತೇವೆಂಬ ಆಶ್ವಾಸನೆ ಕೊಟ್ಟರೆ, ಅವರು ಸತ್ಯಾಗ್ರಹ ಚಳುವಳಿ ಮಾಡುವುದನ್ನು ಬಿಡುತ್ತಾರೆ ಮತ್ತು ಇದರಿಂದ ಅವರು ಬೀದಿ ಪಾಲಾಗುವುದು ಸಹ ತಪ್ಪುತ್ತದೆ. ಮತ್ತು ಪ್ರಾಮಾಣಿಕವಾಗಿ ಮುಂದೆ ಕೆಲಸ ಮಾಡುವುದಕ್ಕಾಗುತ್ತದೆ. ಮಾನ್ಯ ಈಶ್ವರಪ್ಪನವರು ಹೇಳಿದ ಹಾಗೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ಈಗಾಗಲೇ ಅವರ ಹೆಸರು ತೆಗೆದುಹಾಕಿದ್ದಾರೆ. ಆದ್ದರಿಂದ ಸೀನಿಯಾರಿಟಿ ಮುಗಿದುಹೋಗಿದೆ. ಉದ್ಯೋಗ ಸಿಕ್ಕಿದೆ ಎಂದು ಅವರ ಬಂಧುಬಳಗದವರು ಆನಂದದಲ್ಲಿ ಇದ್ದಾರೆ.

ಅವರು ಯಾವುದೇ ತಪ್ಪು ಮಾಡದೇ ಇರುವಂತಹ ಸಂದರ್ಭದಲ್ಲಿ ಈ ರೀತಿ ಮಾಡುವುದು ಸರಿಯಲ್ಲ. ಅವರದೇನೂ ತಪ್ಪು ಇದೆ ಇದರಲ್ಲಿ? ಸಮಿತಿಯಲ್ಲಿ ವ್ಯತ್ಯಾಸ ಆಗಿದ್ದರೆ ಅದನ್ನು ಸರಿಪಡಿಸಿಕೊಳ್ಳೋಣ ಮುಂದೆ ಆ ತಪ್ಪನ್ನು ಸರಿಪಡಿಸಿಕೊಳ್ಳುತ್ತೇವೆನ್ನುವ ಆಶ್ವಾಸನೆ ಕೆಎಟಿಗೆ ಕೊಟ್ಟು ಇವತ್ತು ಅವರಿಗೆ ನೇಮಕಾತಿ ಮಾಡುವಲ್ಲಿ ವಿಶೇಷವಾದ ಗಮನ ಕೊಡಬೇಕು. ಈಗಾಗಲೇ ನೇಮಕವಾಗಿರುವ 2280 ಜನರಿಗೆ ರಕ್ಷಣೆ ಕೊಡುವ ಜವಾಬ್ದಾರಿ ಸರಕಾರದ್ದು ಇದೆ. ಇದರಲ್ಲಿ ಪರಿಶೀಲನೆ ಮಾಡುವುದೇನು ಇದೆ. ಅಲ್ಲಿ ಸತ್ಯಾಗ್ರಹ ಮಾಡಿ ಜನರು ಬೀದಿಗಿಳಿಯಬೇಕಾದರೆ, ಹತ್ತಾರು ಬಾರಿ ನಿಮ್ಮನ್ನು ಭೇಟಿ ಮಾಡಿದ್ದರೂ ಕೂಡ ಅವರ ಬೇಡಿಕೆ ಈಡೇರಿಲ್ಲ. ಈ ಸದನದಲ್ಲಿ ತಾವು ಉತ್ತರ ಕೊಡದಿದ್ದರೆ ನಾವು ಇಲ್ಲಿ ಕುಳಿತು ಕೆಲಸ ಮಾಡುವುದು ಹೇಗೆ? ಎಷ್ಟು ಹೆಜ್ಜೆ ಮುಂದೆ ಹೋಗಿದ್ದೀರಿ? ಕೊನೇ ಪಕ್ಷ ಯಾವುದೇ ಕಾರಣಕ್ಕೆ ಇಲ್ಲಿ ಆಯ್ಕೆಯಾಗಿರುವವರಿಗೆ ತೊಂದರೆ ಮಾಡುವುದಿಲ್ಲ ನೇಮಕಾತಿ ಆದೇಶ ಕೊಡುತ್ತೇವೆ. ಈಗಾಗಲೇ ಕೆಲಸ ಮಾಡಿ ಪ್ರೊಬೇಷನರಿ

ಪೀರಿಯಡ್ ಮುಗಿದಿರುವವರಿಗೆ ಅಂದರೆ ಖಾಯಂ ಆಗಿರುವವರಿಗೆ ತೊಂದರೆಯಾಗುವುದಿಲ್ಲ. ಈ ಬಗ್ಗೆ ಗಮನ ಕೊಡುತ್ತೇವೆ ಎಂದು ಎಷ್ಟು ಹೇಳಿದರೆ ಸಾಕು. ಮುಂದೆ ಕಾನೂನಿನಲ್ಲಿರುವಂತೆ ಮುಂದುವರಿಸಿ. ಈ ಸದನಕ್ಕೆ ತಾವು ಆಶ್ವಾಸನೆ ಕೊಡಬೇಕು.

ಶ್ರೀ ಚೌಡರೆಡ್ಡಿ : ಇದರ ಬಗ್ಗೆ ಪ್ರತಿಯೊಂದು ವಿವರ ತರಿಸಿ ಸಭೆಯ ಮುಂದೆ ಹೇಳುತ್ತೇನೆ. ಸಧ್ಯಕ್ಕೆ ನನ್ನ ಹತ್ತಿರ ಮಾಹಿತಿ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಡೀಟೈಲ್ಸ್ ಯಾವಾಗ ತರಿಸುತ್ತೀರಿ? ನಾನು ಕೈಗಾ ಬಗ್ಗೆ ಹೇಳಿದಾಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಇದು ಬಹಳ ಸೆನ್ಸಿಟೀವ್ ಇದೆ ಅದರ ಬಗ್ಗೆ ವಿಚಾರ ಮಾಡಬೇಕೆಂದು ಹೇಳಿದರು. ಇದು ಇರಲಿ. ಆದರೆ ಇದು ನಿಮ್ಮ ಇಲಾಖೆ. ನೀವು ಆ ಇಲಾಖೆಯ ಮುಖ್ಯಸ್ಥರು. ಆ ಇಲಾಖೆಯಲ್ಲಿ ಏನು ನಡೆಯುತ್ತದೆ ಎಂದು ತಮಗೆ ಗೊತ್ತಿದೆ. ಕಮಿಟಿಗಳು ಆಗಿದೆ 2000 ಆರ್ಡರ್ಸ್ ಹೋಗಿದೆ 6 ತಿಂಗಳು ಇಂಟರ್‌ವ್ಯೂ ನಡೆದಿದೆ. ಸೆಲೆಕ್ಷನ್ ಮಾಡಿ ಆರ್ಡರ್ಸ್ ಕಳುಹಿಸಿದ್ದೀರಿ. ಅವರ ರೆಕಾರ್ಡ್ಸ್ ಬುಕ್ ವೆರಿಫಿಕೇಷನ್ ಆದೆ. ಇದರಲ್ಲಿ ನು ನಿಮಗೆ ಸಮಸ್ಯೆ ಇದೆ? ಹೌದು ನಮ್ಮ ಸರಕಾರದಿಂದ ಆರ್ಡರ್ಸ್ ಕಳುಹಿಸಿದ್ದೇವೆ. ಅವರನ್ನು ನೇಮಕ ಮಾಡುತ್ತೇವೆ, ಭಯ ಪಟ್ಟು ಕೊಳ್ಳಬಾರದು ಎಂದು ನೀವು ಹೇಳಬೇಕಾಗುತ್ತದೆ. ಏನಾದರೂ ಸರಿ ಮಾಡುವುದಿದ್ದರೆ ಕೆಎಟಿಗೆ ಹೇಳಿ ಸರಿ ಮಾಡುತ್ತೇವೆಂದು ಹೇಳಬೇಕು. ಇದರಲ್ಲಿ ಸ್ಟೇಟ್‌ಮೆಂಟ್ ಮಾಡುವುದು ಏನಿದೆ?

ಶ್ರೀ ವಾಟಾಳ್ ನಾಗರಾಜ್ : ಇದು ನ್ಯಾಯಾಲಯದಲ್ಲಿರುವುದು ತಮಗೆ ಗೊತ್ತಿದೆ. ಈ ಬಗ್ಗೆ ತಾವು ಸ್ಪಷ್ಟಪಡಿಸಬಹುದಲ್ಲವೇ? ಗೃಹ ಖಾತೆಯ ಮಂತ್ರಿಗಳಾಗಿ ತಮಗೆ ಅಷ್ಟೆಲ್ಲಾ ಗೊತ್ತಿಲ್ಲವೇ? ನೀವು ಅವರನ್ನು ಆಯ್ಕೆ ಮಾಡಿರುವಂಥಾದ್ದು ಸಮಿತಿ ರಚನೆಯಾಗಿರುವುದು ಎಲ್ಲವೂ ನಿಮ್ಮಿಂದಲೇ ಹೋಗಿರತಕ್ಕಂಥಾದ್ದು. ಇಂಥಾದ್ದರಲ್ಲಿ ನಾಳೆ ನಾನು ರೆಕಾರ್ಡ್ಸ್ ತರಿಸಿ ನೋಡಿ ಹೇಳುತ್ತೇನೆಂದು ಹೇಳಿದರೆ, ಅದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಯ್ಕೆ ಸಮಿತಿ ಸರಿ ಇಲ್ಲವೆಂದರೆ ಅದರಲ್ಲಿ ಆಯ್ಕೆಯಾಗಿರುವ ಯುವಕರು ಇದಕ್ಕೆ ಜವಾಬ್ದಾರರೇ? ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಆಗಿದೆ ಹಿಂದೆ ಅದೇ ಸಮಿತಿಯಲ್ಲಿ ಆಯ್ಕೆಯಾದ 2280 ಜನರಿಗೆ ಕೆಲಸ ಕೊಟ್ಟಿದ್ದೀರಿ. 6 ತಿಂಗಳ ಕಾಲ ಸಂದರ್ಶನ ನಡೆಸಿ ನೇಮಕ ಮಾಡಿರುವಂತಹ ಸಂದರ್ಭದಲ್ಲಿ ಒಂದು ನಿರ್ದಿಷ್ಟವಾದ ಆಶ್ವಾಸನೆಯನ್ನು ಮಾನ್ಯ ಮುಖ್ಯಮಂತ್ರಿಗಳಾದರೂ ನೀಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಯಾರು ಸೆಲೆಕ್ಟ್ ಆಗಿಲ್ಲ ಅವರು ಕೆಎಟಿಗೆ ಹೋಗಿದ್ದಾರೆ. ನಮಗೆ ಬಂದ ವರದಿಯನ್ನು ಹೇಳುತ್ತಿದ್ದೇನೆ. ಪೂರ್ತಿ ಅಥೆಂಟಿಕೇಟೆಡ್ ಎಂದು ಹೇಳುವುದಿಲ್ಲ. ಅಲ್ಲಿಗೆ ಹೋದಾಗ "Certain procedures adopted by the Committees are not correct." ಎಂದು ಆ ಆಧಾರದ ಮೇಲೆ ಸ್ಟೇ ಕೊಟ್ಟಿದ್ದಾರೆ. ಆ ಸ್ಟೇ ಈಗಲೂ ಇದೆ ಎಂದು ಅಭಿಪ್ರಾಯ ಇದೆ. ಯಾವುದಕ್ಕೂ ಸಂಜೆಯೊಳಗೆ ಉತ್ತರ ಕೊಡುತ್ತೇವೆ. ಏಕೆಂದರೆ ಸ್ಟೇ ಇರುವಾಗ ನಾನು ನೇಮಕಾತಿ ಮಾಡುತ್ತೇನೆಂದು ಹೇಳಿದರೆ ಕಂಟೆಂಪ್ಟ್ ಆಫ್ ಕೋರ್ಟ್ ಆಗುತ್ತದೆ. ಸಂಜೆಯೊಳಗಾಗಿ ಕೊಡುತ್ತೇನೆ. We will get the materials and we give a clear statement.

ಶ್ರೀ ಆರ್.ವಿ. ದೇಶಪಾಂಡೆ : ಉತ್ತರ ಕೊಡುವುದಕ್ಕಿಂತ ಮುಂಚೆ ಒಂದು ಹೇಳುತ್ತೇನೆ. We have to respect the KAT. I don't say we should flout. Appointment orders have gone. ಸೆಲೆಕ್ಷನ್ ಆರ್ಡರ್ಸ್ ಹೋದ ನಂತರ ಅವರು ೯ ಮಾಡಿದ್ದರೆ ಆ ಸ್ಟೇಗೆ ಬೆಲೆ ಇಲ್ಲ. ಹಾಗಾಗಿ automatically they will

have to be issued. Even if there is a stay, it has no effect because orders have been issued.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗಾಗಲೇ ಆದೇಶ ಕೊಟ್ಟಿರುವುದರಿಂದ....

ಮಾಜಿ ಶಾಸಕರನ್ನು ಹಳ್ಳಿಗಳಿಗೆ ಕರೆದುಕೊಂಡು ಹೋಗಿ ಕಾರ್ಯಕ್ರಮಗಳನ್ನು ಗುರುತಿಸುವ ಆದೇಶ ನೀಡಿರುವ ಬಗ್ಗೆ

+ ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿರುವಂತಹ ಒಂದು ವಿಚಾರವನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಮೈಸೂರು ಜಿಲ್ಲೆಯ ಚಾಮರಾಜ ನಗರದಲ್ಲಿ ಇರತಕ್ಕಂಥಾದ್ದು ನನ್ನ ಕ್ಷೇತ್ರ ಅದು ಎಲ್ಲರಿಗೂ ತಮಗೂ ತಿಳಿದಿದೆ. ತಾವು ಒಂದು ಸಲ ಅಲ್ಲಿಗೆ ಬನ್ನಿ ಅಂದರೆ ಬರುವುದಿಲ್ಲ. ಅನೇಕ ಸಾರಿಯಿಂದ ಕರೆಯುತ್ತಿದ್ದೇನೆ. ನಮಗೆ ಅದೇ ಬಂದಿರುವ ತಾಪತ್ರಯ. ನಿಮ್ಮನ್ನು ಕರೆದು ವೈಭವವಾಗಿ ಗೌರವ ಕೊಡಬೇಕೆಂದು ಕಾದಿದ್ದೇನೆ. ಮಾನ್ಯ ಮೊಯಿಲಿಯವರು ನಮ್ಮ ಕ್ಷೇತ್ರಕ್ಕೆ ಬಂದರೆ ಮತ್ತೆ ನೀವು ಇರುತ್ತೀರಿ. ಆದುದರಿಂದ ನೀವು ಬರಬೇಕು. ನಮ್ಮ ಈಶ್ವರಪ್ಪನವರು ಆ ರೀತಿ ಹೇಳಬೇಡಿ ಎಂದು ಹೇಳುತ್ತಾರೆ. ನಾನು ನಿಮಗೆ ಹೇಳುತ್ತೇನೆ, ಅದರಿಂದ ಏನೂ ತಲೆಕೆಡಿಸಿಕೊಳ್ಳಬೇಕಾಗಿಲ್ಲ, ನೀವು ಬರಬಹುದು. ನೀವು ಬಂದರೆ ಮತ್ತೆ ನೀವೇ ಇರುತ್ತೀರಿ ಎನ್ನತಕ್ಕಂಥ ನಂಬಿಕೆ ನನಗಿದೆ. ನಮ್ಮ ಕ್ಷೇತ್ರಕ್ಕೆ ಯಾರನ್ನೂ ಬರಬೇಡಿ ಎಂದು ಹೇಳುವುದಿಲ್ಲ. ಬರುವುದಕ್ಕೆ ನೀವು ತಯಾರಾಗಿಲ್ಲ ನೀವು. ಅದೊಂದು ಪ್ರಶ್ನೆ. ಮಾಜಿ ಶಾಸಕರನ್ನು ಕರೆದುಕೊಂಡು ಹೋಗಿ, ಅಧಿಕಾರಿಗಳು ಯಾವ ಯಾವ ಹಳ್ಳಿಗಳಿಗೆ ಹೋಗಬೇಕು ಎಂದು ಹೇಳಿ ಅವರ ಮೂಲಕ ಹಳ್ಳಿಗಳನ್ನು ಗುರುತಿಸಿ ಅದಾದನಂತರ ಅಲ್ಲಿ ಜಿಲ್ಲೆಯ ಮಂತ್ರಿಗಳು ಯಾರಿದ್ದಾರೆ, ಆ ಜಿಲ್ಲೆಯ ಮಂತ್ರಿಗಳು ಅಲ್ಲಿ ಸಭೆ ನಡೆಸಿ ಅದಾದನಂತರ ಆ ಕ್ಷೇತ್ರದಲ್ಲಿ ಏನೇನು ಕಾರ್ಯಕ್ರಮವಾಗಿದೆ ಎಂದು ಹೇಳುವಂಥ ಈ ಮಾತನ್ನು ಜಿಲ್ಲಾಧಿಕಾರಿಯವರು ನಮ್ಮ ವಿಭಾಗಾಧಿಕಾರಿಯವರಿಗೆ ಸೂಚನೆಯನ್ನು ಕೊಟ್ಟು ಇದನ್ನು ಕೂಡಲೇ ನೀವು ತಹಶೀಲ್ದಾರ್‌ರವರಿಗೆ ತಿಳಿಸಬೇಕು ಎಂದು ಹೇಳಿ ಆಗಿದೆ. ಇದು ಸರ್ಕಾರದ ಹೊಸ ನೀತಿ. ಸರ್ಕಾರದ ಹೊಸ ಆದೇಶ ಯಾವಾಗ ಹೊರಡಿತು ಎಂಬುದು ನನಗೆ ಬೇಕು. ಏಕೆಂದರೆ ಮಾಜಿ ಶಾಸಕರನ್ನು ಅಧಿಕಾರಿಗಳು ಕರೆದುಕೊಂಡು ಹೋಗಿ ಅವರ ಹಳ್ಳಿಗಳನ್ನು ನೋಡತಕ್ಕಂಥದ್ದು, ಆ ಜಿಲ್ಲೆಯ ಮಂತ್ರಿಗಳು ಈ ಆದೇಶವನ್ನು ಹೊರಡಿಸಿದ್ದರೆ ಎಂದು ಹೇಳಿ ಜಿಲ್ಲಾಧಿಕಾರಿಯವರು ಅಲ್ಲಿನ ವಿಭಾಗಾಧಿಕಾರಿಗೆ ಹೇಳಿ ಅಲ್ಲಿಂದ ತಹಶೀಲ್ದಾರ್‌ರವರಿಗೆ ಹೇಳುವಂಥ ಈ ಆದೇಶ ಸರ್ಕಾರ ಅದು ನಿಮ್ಮ ಕಾಲದಲ್ಲಿ ಯಾವಾಗ ಆದೇಶ ಹೊರಡಿದೆ? ಈ ರೀತಿ ಆದೇಶ ಹೊರಡುವುದಾದರೆ ಆ ಆದೇಶ ಏನು ಎಂದು ಈ ಸಭೆಯಲ್ಲಿ ಚರ್ಚೆಯಾಗಲಿ. ಆದೇಶದ ಪ್ರತಿಯನ್ನು ತಮ್ಮ ಸರ್ಕಾರದ ಮೂಲಕ ಇಲ್ಲಿ ಇಡಬೇಕಾದುದು ಕರ್ತವ್ಯ. ಇದಿಲ್ಲದಿದ್ದರೆ ಇದು ಸರ್ವಾಧಿಕಾರಿಯ ಮನೋಭಾವನೆಯಾಗುತ್ತದೆ. ಯಾರು ಶಾಸಕರಿದ್ದಾರೆ, ಆ ಶಾಸಕರಿಗೆ ಅಗೌರವ ಮಾಡಿದಂತಾಗುತ್ತದೆ. ಶಾಸಕರನ್ನು ಬಿಟ್ಟು ಮಾಜಿ ಶಾಸಕರನ್ನು ಕರೆದುಕೊಂಡು ಅಧಿಕಾರಿಗಳನ್ನು ಕರೆದುಕೊಂಡು ಒಂದು ಕಡೆ ಜಿಲ್ಲಾಮಂತ್ರಿಯ ಕಾಟ, ಮತ್ತೊಂದು ಕಡೆ ಲೋಕಸಭಾ ಸದಸ್ಯರ ಕಾಟ, ಇನ್ನೊಂದು ಕಡೆ ಅಧಿಕಾರಿಗಳ ಕಾಟ ಏನು ನಮ್ಮ ಪರಿಸ್ಥಿತಿ? ನಾವು ಎಲ್ಲಿಗೆ ಹೋಗಬೇಕಾಗಿದೆ? ಇದು ನನ್ನ ವೈಯಕ್ತಿಕ ಪ್ರಶ್ನೆಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ವೈಯಕ್ತಿಕ ಪ್ರಶ್ನೆಯಲ್ಲ. ಇದು ಎಲ್ಲಾ ಶಾಸಕರಿಗೂ ಸಂಬಂಧಿಸಿದ್ದುದು- ಆ ಕಡೆ ಇರಲಿ, ಈ ಕಡೆ ಇರಲಿ ಮಾಜಿ ಶಾಸಕರಿಗೆ ನಾವು ಪ್ರಾತಿನಿಧ್ಯ ಕೊಡುತ್ತೇವೆ, ಅವರನ್ನು ಸಭೆಗೆ ಕರೆಯುತ್ತೇವೆ ಎಂದು ಹೇಳಿದರೆ. ಹಾಲಿ ಶಾಸಕರ ಗತಿಯೇನು ಸ್ವಾಮಿ? ಯಾವುದೇ ಅಧಿಕಾರಿಗಳು ಇರಲಿ.

ಎಲ್ಲಾ ಕಡೆಗೂ ಈ ರೀತಿಯ ಪರಿಪಾಠ ಇದೆ. ಇದು ಗೌರವ ತರುವಂಥದ್ದಲ್ಲ. ಚುನಾಯಿತ ಶಾಸಕರಿಗೆ ಅಪಮಾನ ಮಾಡಿದಂತಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನನಗಂತೂ ಬಹಳ ನೋವಾಗಿದೆ. ತಾವು ರಾಜೀನಾಮೆ ಕೊಟ್ಟುಬಿಡಿ ಎಂದು ಹೇಳಿದರೆ ಕೊಟ್ಟುಬಿಡುತ್ತೇನೆ. ನನ್ನ ರಾಜೀನಾಮೆಯನ್ನು ಕೇಳಿದರೆ ಈಗ ಕೊಡುವುದಕ್ಕೆ ತಯಾರು ಇದ್ದೇನೆ. ಶಾಸಕರ ಪರಿಸ್ಥಿತಿಯೇನು ಈ ರೀತಿ ಪರಿಸ್ಥಿತಿಯಾದರೆ? ಜಿಲ್ಲಾಧಿಕಾರಿಗಳು ಈ ಮಟ್ಟಕ್ಕೆ ಇಳಿಯುವುದಾದರೆ, ಅಲ್ಲಿನ ಜಿಲ್ಲಾ ಮಂತ್ರಿಗಳು ಈ ಮಟ್ಟಕ್ಕೆ ಇಳಿಯುವುದಾದರೆ ನಾವು ಏಕೆ ರಾಜಕೀಯ ಮಾಡಬೇಕು? ನಾವ್ಯಾಕೆ ಶಾಸಕರಾಗಿರಬೇಕು? ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಕೇವಲ ಇದು ನಾಗರಾಜ್ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದಲ್ಲ. ನಾನು ಮುಖ್ಯಮಂತ್ರಿಗಳಿಗೆ ವಿನಂತಿ ಮಾಡುವುದೇನೆಂದರೆ ಈ ಕಡೆ 20-30 ಜನರು ಇದ್ದೇವೆ. ಒಂದು ವಿರೋಧ ಪಕ್ಷದ ಅವಶ್ಯಕತೆ ಇದೆ. ಪ್ರಜಾತಂತ್ರದ ವ್ಯವಸ್ಥೆಯಲ್ಲಿ, ಒಂದು ಸಾರಿ ನಿಮ್ಮ ಅಧಿಕಾರಿಗಳಿಗೆ ವಿರೋಧಪಕ್ಷದ ಹಾಲಿ ಶಾಸಕರಿಗೆ ಗೌರವ ಇಲ್ಲ, ಅವರ ಮಾತಿನಂತೆ ನಡೆದುಕೊಳ್ಳಬೇಡಿ ಎನ್ನುವಂಥ ಸೂಚನೆ ಹೋದರೆ ಅಲ್ಲಿ ಮಾಜಿ ಶಾಸಕರಿಗೆ ಬೆಲೆಯನ್ನು ಕೊಡಿ ಎಂದು ತಾವು ಹೇಳಿಲ್ಲ ಎಂದು ನಾನಂದುಕೊಂಡಿದ್ದೇನೆ. ಆ ರೀತಿ ಸಾಧ್ಯವೂ ಇಲ್ಲ. ಆದರೆ ಅಲ್ಲಿರುವಂಥ ಜಿಲ್ಲಾಧಿಕಾರಿ ಈ ರೀತಿ ಚುನಾವಣೆ ಮೂರು ತಿಂಗಳು ಇರುವಂಥ ಸಂದರ್ಭದಲ್ಲಿ ಆ ರೀತಿ ವರ್ತನೆಯನ್ನು ಮಾಡಿದರೆ ಪ್ರಾಮಾಣಿಕವಾಗಿ ನಾವು ಜನಸೇವೆಯನ್ನು ಮಾಡುವುದಕ್ಕಾಗುವುದಿಲ್ಲ. ಶಾಸಕರ ಬಗ್ಗೆ ವಿರೋಧಪಕ್ಷದವರಿಗೆ ಕಳಂಕ ತಂದಂತಾಗುತ್ತದೆ. ಇದು ಕೇವಲ ನಾಗರಾಜ್‌ರವರ ಕ್ಷೇತ್ರಕ್ಕೆ ಸಂಬಂಧಿಸಿಲ್ಲ. ಇದು ಎಲ್ಲಾ ಕಡೆ ಈ ರೀತಿ ಒಂದು ಅನುಭವ ನಮಗೆ ಬರುತ್ತದೆ. ಇದು ಅಷ್ಟೇ ಅಲ್ಲ, ಜಿಲ್ಲಾ ಮಂತ್ರಿಗಳು ಇಲ್ಲಿ ಸದನ ನಡೆಯುತ್ತಿದೆ, ಆ ಸಂದರ್ಭದಲ್ಲಿ ಕಾರ್ಯಕ್ರಮ ಮಾಡುವುದಕ್ಕೆ ಹೋಗುತ್ತಾರೆ. ನಾನು ಅಧ್ಯಕ್ಷರಿಗೆ ಕೇಳುತ್ತೇನೆ, ನಾನು ನನ್ನ ಕ್ಷೇತ್ರಕ್ಕೆ ಹೋಗಿ ಕೆಲಸ ಮಾಡಲೋ, ಈಶ್ವರಪ್ಪನವರ ಕ್ಷೇತ್ರಕ್ಕೆ ಹೋಗಿ ಕೆಲಸ ಮಾಡಬೇಕೋ ಅಥವಾ ಸದನದ ಕಾರ್ಯಕಲಾಪದಲ್ಲಿ ಭಾಗವಹಿಸ ಬೇಕೋ ಈ ರೀತಿ ಇಲ್ಲಿ ಕಾರ್ಯಕಲಾಪ ಕರೆದಂಥ ಸಮಯದಲ್ಲಿ ಅಲ್ಲಿ ಒಂದು ಸೈಟನ್ನು ಹಂಚುತ್ತೇವೆ, ಇನ್ನೊಂದು ಮಾಡುತ್ತೇವೆ ಎಂದು ಜಿಲ್ಲಾ ಮಂತ್ರಿಗಳು ಹೋಗುವುದಾಗಲಿ ಅಥವಾ ಮಾಜಿ ಶಾಸಕರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡಬೇಕೆಂದು ಏನಾದರೂ ತಾವು ಸೂಚನೆಯನ್ನು ನೀಡಿದ್ದರೆ ಬಹುಶಃ ಈ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ವಿರೋಧಪಕ್ಷದಲ್ಲಿದ್ದು ನಾವು ಕೆಲಸ ಮಾಡುವುದಕ್ಕಾಗುವುದಿಲ್ಲ. ಇದು ಆಡಳಿತ ಪಕ್ಷಕ್ಕೆ ಗೌರವ ತರತಕ್ಕಂಥ ಒಂದು ಸಂಗತಿಯಲ್ಲ. ಜಿಲ್ಲಾಧಿಕಾರಿಗಳು ಈ ರೀತಿ ವರ್ತನೆ ಮಾಡಿದರೆ ಬಹುಶಃ ಇದರ ಬಗ್ಗೆ ಸೂಕ್ತವಾದಂಥ ತಿಳಿವಳಿಕೆ ಕೇವಲ ಆ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ವಾಟಾಳ್ ನಾಗರಾಜ್‌ರವರಿಗೆ ಸೀಮಿತವಾಗಿಲ್ಲ. ಇಡೀ ರಾಜ್ಯದಲ್ಲಿ ಈ ಸಮಸ್ಯೆಯನ್ನು ನಾವು ಈ ಕಡೆ ಕುಳಿತುಕೊಂಡು ಎದುರಿಸುತ್ತಿದ್ದೇವೆ. ಅದಕ್ಕೇನಾದರೂ ಸರಿಯಾದಂಥ ಆದೇಶವನ್ನು ಕೊಡುತ್ತೀರೋ ವಾಸ್ತವಿಕ ಸ್ಥಿತಿಯೇನು? ಈ ರೀತಿಯೇನಾದರೂ ತಿಳಿವಳಿಕೆಯನ್ನು ತಾವು ಕೊಟ್ಟಿದ್ದೀರಾ? ಅದರ ಬಗ್ಗೆ ತಾವು ಹೇಳಿಕೆಯನ್ನು ಕೊಡಬೇಕಾಗುತ್ತದೆ ಸ್ವಾಮಿ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೇ, 24 ನೇ ತಾರೀಖು ಅಸೆಂಬ್ಲಿ. ಅಸೆಂಬ್ಲಿಗೆ ಬರುವ ದಿವಸವೇ ನಾನು ಬಂದ ದಿನವೇ ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ನನ್ನ ಕ್ಷೇತ್ರದಲ್ಲಿ ಹೋಗಿ ಆಶ್ರಯ ಸಮಿತಿಯ ಸೈಟಿನ ಪೂಜೆ ಮಾಡುತ್ತೇನೆ ಎಂದು ಹೋಗಿದ್ದಾರೆ. 24ನೇ ತಾರೀಖು ಅಸೆಂಬ್ಲಿ. ನಾನು ಇಲ್ಲಿ ಇದ್ದೇನೆ. ಮಂತ್ರಿಗಳು ನನ್ನ ಕ್ಷೇತ್ರಕ್ಕೆ ಹೋಗಿದ್ದಾರೆ. ನಾನಿಲ್ಲದೇ ಇರುವ ಸಂದರ್ಭದಲ್ಲಿ

ಇವರನ್ನು ಯಾರು ಸ್ವಾಮಿ ಅಲ್ಲಿಗೆ ಹೋಗುವುದಕ್ಕೆ ಹೇಳಿದ್ದು? ಈ ರೀತಿ ರಾಜಕೀಯ ಮಾಡುತ್ತಾ ಹೊರಟರೆ ನಾವೇನು ಮಾಡಬೇಕು ಹೇಳಿ. ಜಿಲ್ಲಾಧಿಕಾರಿಗಳು ದೂರವಾಣಿ ಮುಖಾಂತರ ಹೇಳಿ ಇದನ್ನು ನಿಲ್ಲಿಸುವಂಥ ಸ್ಥಿತಿ ಬಂತು. ಈ ರೀತಿ ವಿರೋಧಪಕ್ಷದಲ್ಲಿರುವ ಶಾಸಕರು ಕೆಲಸ ಮಾಡುವುದಕ್ಕೆ ಅವಶ್ಯಕತೆ ಇಲ್ಲ ಎಂದು ಈ ಸರ್ಕಾರ ತೀರ್ಮಾನ ಮಾಡಿಬಿಟ್ಟರೆ ರಗಳೇನೇ ಇಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಅಧ್ಯಕ್ಷರೇ, ಭೀಮಣ್ಣ ಖಂಡ್ರೆಯವರು ನಮ್ಮ ತಾಲ್ಲೂಕಿಗೆ ಹೋಗಿ ಭಾಷಣ ಮಾಡುವುದು, ಊರೂರಿಗೆ ಹೋಗಿ ಸಮಾರಂಭಗಳನ್ನು ಮಾಡುವುದು, ನಾವಿಲ್ಲದೇ ಇರುವ ಸಂದರ್ಭದಲ್ಲಿ ಮೂರು-ನಾಲ್ಕು ಉದ್ಘಾಟನೆ ಮಾಡಿದ್ದಾರೆ. ಇಂಥ ಪರಿವರ್ತನೆ ಸರಿಯಾದುದಲ್ಲ. ಯಡಿಯೂರಪ್ಪನವರು ಹೇಳಿದ ಹಾಗೆ ಅಸೆಂಬ್ಲಿ ನಡೆಯುತ್ತಿರಬೇಕಾದರೆ ಊರೂರಿಗೆ ಹೋಗುತ್ತಾರೆ. ಅವರಿಗೆ ಬಂದ ರೀತಿಯಲ್ಲಿ ಮಾಡುವುದು ಮಾಜಿ ಶಾಸಕರಿಗೆ ಪ್ರೋತ್ಸಾಹ ಕೊಡುವುದು. ಅವರು ಹೇಳಿದಂತೆ ಮಾಡಬೇಕು ಎಂದು ಡಿ.ಸಿ. ಅವರು ನಿರ್ದೇಶನವನ್ನು ಕೊಟ್ಟಿದ್ದಾರೆ. ಇಂಥ ಪರಿವರ್ತನೆ ಇದ್ದರೆ ಸರಿಯಾದುದಲ್ಲ. ಇದು ವಾಟಾಳ್ ನಾಗರಾಜ್ ಅವರೊಬ್ಬರದೇ ಅಲ್ಲ. ಇದರಲ್ಲಿ ಇಡೀ ನಮ್ಮ ಶಾಸಕರ ಮರ್ಯಾದೆ ಪ್ರಶ್ನೆ ಇದೆ. ನಮಗೆ ಮರ್ಯಾದೆ ಬೇಡ ಎಂದು ನಿರ್ಣಯವೇನಾದರೂ ಮಾಡಿದ್ದರೆ ಹೇಳಿ. ತಮ್ಮಲ್ಲಿ ಏನಾದರೂ ಆಗಿದ್ದರೆ ಹೇಳಿ.

ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೇ, ಸ್ನೇಹಿತರಾದಂಥ ವಾಟಾಳ್ ನಾಗರಾಜ್‌ರವರು ಬಹಳ ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಬರೀ ಇವತ್ತಿನ ದಿವಸ ಮಾಜಿ ಶಾಸಕರು ಅಲ್ಲ. ಇನ್ನು ಚೋಟಾ ಮೋಟಾ ಇರತಕ್ಕಂಥವರು ಸಹಾ ಇವತ್ತಿನ ದಿವಸ ಅವರನ್ನು ದೊಡ್ಡ ನಾಯಕರನ್ನಾಗಿ ಮೆರೆಸತಕ್ಕಂಥ ಒಂದು ಪ್ರಯತ್ನ ಎಲ್ಲಾ ಕಡೆಗೂ ನಡೆಯುತ್ತಿದೆ. ಅದರಲ್ಲೂ ಎಲ್ಲಿ ವಿರೋಧಪಕ್ಷದವರು ಗೆದ್ದುಬಂದಿದ್ದಾರೆ, ಅಲ್ಲಿ ಚುನಾವಣೆ ಹತ್ತಿರ ಇರುವಂಥ ಸಂದರ್ಭದಲ್ಲಿ ಮಾಡಬಾರದ್ದನ್ನು ಮಾಡತಕ್ಕಂಥ ವ್ಯವಸ್ಥೆ ಇವತ್ತಿನ ದಿವಸ ಎಲ್ಲಾ ಕಡೆಗೂ ನಡೆಯುತ್ತಿದೆ. ಸರ್ಕಾರಕ್ಕೇನಾದರೂ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದೆಯೇ ಎಂದು ಇವತ್ತಿನ ದಿವಸ ನಮಗೆ ಅಪನಂಬಿಕೆ ಉಂಟಾಗುತ್ತಿದೆ. ಅವರೂ ಕೂಡ ವಿರೋಧ ಪಕ್ಷದಲ್ಲಿ ಕುಳಿತು ಒಂದು ಸಾರಿ ಕೆಲಸ ಮಾಡಿದ್ದಾರೆ. ಮಾನ್ಯ ವೀರಪ್ಪಮೊಯಿಲಿಯವರೂ ಸಹ ವಿರೋಧ ಪಕ್ಷದ ನಾಯಕರಾಗಿದ್ದರು. ವಿರೋಧ ಪಕ್ಷದಲ್ಲಿ ಕೆಲಸ ಮಾಡಬೇಕಾಗಿದ್ದರೆ ಎಷ್ಟು ತೊಂದರೆ ಇರುತ್ತದೆ, ಎಷ್ಟು ಅನಾನುಕೂಲತೆ ಇರುತ್ತದೆ. ಏನೇನು ಕಷ್ಟ ಇರುತ್ತದೆ ಎನ್ನುವುದೂ ಕೂಡ ಅವರೇ ಸ್ವತಃ ಅನುಭವಿಸಿದ್ದಾರೆ. ಅವರಿಗೆ ಗೊತ್ತಿದ್ದರೂ ಸಹ ಇವತ್ತಿನ ದಿವಸ ರಾಜ್ಯಾದ್ಯಂತ ಎಲ್ಲಾ ಕಡೆಗೂ ಸಹ ವಿರೋಧ ಪಕ್ಷದ ಮುಖಂಡರುಗಳನ್ನು ವಿರೋಧ ಪಕ್ಷದವರು ಗೆದ್ದುಬಂದಿರುವ ಕಡೆ ಇವರು ಮನಸ್ಸೇಚ್ಛೆ ವ್ಯವಹಾರವನ್ನು ನಡೆಸುತ್ತಾರೆ ಎಂದರೆ ಇದು ಸರಿಯಾದುದಲ್ಲ. . ಇದರ ಬಗ್ಗೆ ತೀವ್ರವಾದ ಪ್ರತಿಭಟನೆಯನ್ನು ಹೊರಗಡೆ ಸೂಚಿಸಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಮಹದೇವ್ (ನಂಜನಗೂಡು) : ಮಾನ್ಯ ಅಧ್ಯಕ್ಷರೇ, ಯಾವುದೇ ವಿಧಾನಸಭಾ ಕ್ಷೇತ್ರವಾಗಲಿ, ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎಂದರೆ ಅವರೇ ಯಾರು ಯಾರನ್ನು ಬೇಕೋ ಅವರನ್ನು ಆಹ್ವಾನಿತರು, ಮುಖ್ಯ ಅತಿಥಿಗಳು ಎಂದು ಎಲ್ಲಾ ಪ್ರಿಂಟ್ ಮಾಡಿ ಆಮೇಲೆ ವಿಧಾನಸಭಾ ಸದಸ್ಯರಿಗೆ ತೋರಿಸುವುದು, ಮತ್ತು ಇಲ್ಲಿಗೆ ನೀವು ಆಹ್ವಾನಿತರಾಗಿ ಬನ್ನಿ ಎಂದು ಕರೆಯುತ್ತಾರೆ. ಈ ಒಂದು ಸಿಸ್ಟಂ ಚೆನ್ನಾಗಿರುತ್ತದೆಯೇ? ಯಾವುದೇ ಸರ್ಕಾರಿ ಸಮಾರಂಭಗಳಾಗಲಿ ಯಾವ ದಿನಾಂಕವನ್ನು ಕೊಡುತ್ತೀರಿ ಯಾರು ಯಾರನ್ನು ಕರೆಯಬೇಕು ಎಂಬುದನ್ನು ವಿಧಾನಸಭಾ ಸದಸ್ಯರಿಂದ ಕೇಳಿ ಮಾಡಬೇಕು. ಅವರೇನೂ ಮಾಡುವುದಿಲ್ಲ. ಕೆಲವು ವಿಧಾನಸಭಾ ಕ್ಷೇತ್ರದಲ್ಲಿ

ಯಾರು ಯಾರು ಬೇಕೋ ಅವರೇ ಪ್ರಿಂಟ್ ಮಾಡಿಸಿ ಕೊನೆಗೆ ನಮ್ಮನ್ನು ಸಮಾರಂಭಕ್ಕೆ ಬನ್ನಿ ಎಂದು ಕರೆಯುವ ಪರಿಸ್ಥಿತಿಗೆ ಬಂದಿದೆ.

+ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ವಾಟಾಳ್ ನಾಗರಾಜ್‌ರವರು ಮತ್ತು ಸ್ನೇಹಿತರು ಇವತ್ತು ಮಾಜಿ ಶಾಸಕರು ಮತ್ತು ಶಾಸಕರ ಬಗ್ಗೆ ಏನೊಂದು ಗಾಂಭೀರವಾದ ಸಮಸ್ಯೆಯನ್ನು ಎತ್ತಿದ್ದಾರೆ, ನನಗೆ ಅನಿಸುತ್ತದೆ, ಮಾನ್ಯ ಮುಖ್ಯ ಮಂತ್ರಿಗಳು ಆ ಪ್ರಕಾರ ಆದೇಶವನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ನನಗೆ ನಿಮ್ಮ ಮೇಲೆ ಅಷ್ಟು ಭರವಸೆ ಇದೆ. ಮಾನ್ಯ ಮಾಜಿ ಶಾಸಕರುಗಳಿಗೆ ಗೌರವ ಕೊಡಬಾರದು ಎಂದು ನಾನು ಹೇಳುವುದಿಲ್ಲ. ಇವತ್ತು ನಮ್ಮಲ್ಲಿರುವವರು ಎಷ್ಟೋ ಜನ ಮಾಜಿ ಶಾಸಕರುಗಳಾಗಬಹುದು. ಆದರೆ ತಾವು ಮಾಜಿ ಶಾಸಕರುಗಳಿಗೆ ಸರ್ಕಾರಿ ಸಮಾರಂಭಕ್ಕೆ ಹೇಗೆ ಇನ್ವೈಟ್ ಮಾಡುತ್ತೀರಿ? ಮಾಜಿ ಶಾಸಕರುಗಳನ್ನು ಕನ್ಸಲ್ಟ್ ಮಾಡಿ ಹಳ್ಳಿಗಳಿಗೆ ಹೇಗೆ ಕರೆದುಕೊಂಡು ಹೋಗುತ್ತೀರಿ? ಮಾಜಿ ಶಾಸಕರು ನಿಮ್ಮ ಕಚೇರಿಗೆ ಬಂದರೆ ಗೌರವ ಕೊಡಿ. ಅವರಿಗೆ ಏನು ಕೆಲಸ ಮಾಡಬೇಕೋ ಅದನ್ನು ಮಾಡಿಕೊಡಿ. ಅದರ ಬಗ್ಗೆ ಯಾವುದೂ ಇಲ್ಲ. ಇಲ್ಲಿ ಖಾಯಂ ಆಗಿ ಯಾರೂ ಶಾಸಕರಾಗಿ ಉಳಿಯುವುದಕ್ಕೆ ಬಂದಿಲ್ಲ. ಮಾಜಿ ಶಾಸಕರು ಆಗಬೇಕಾಗುತ್ತದೆ. ಆದರೆ ಇವತ್ತು ಹಲವಾರು ಮಂತ್ರಿಗಳು ಸ್ಥಳೀಯ ಶಾಸಕರನ್ನು ಕೇಳದೆ ಪ್ರೋಗ್ರಾಮನ್ನು ಹಾಕುತ್ತಿದ್ದಾರೆ. ಇದು ದೂರು ನಮ್ಮ ಕಡೆಯದು ಅಷ್ಟೇ ಅಲ್ಲ. ರೂಲಿಂಗ್ಪಾರ್ಟಿ ಮೆಂಬರ್ಸ್ ಮಾಡುತ್ತಿದ್ದಾರೆ. ಈಗ ಮಹದೇವ್ ಅವರು ಮಾಡಿದರು. ನಾನೊಂದು ಉದಾಹರಣೆ ಕೊಡುತ್ತೇನೆ. ಶ್ರೀ ಆರ್.ಎನ್. ನಾಯಕ್ ಬಗ್ಗೆ ನಾನು ಅವರ ಮೇಲೆ ದೂರು ಮಾಡುತ್ತಿಲ್ಲ. ನನ್ನ ಕ್ಷೇತ್ರಕ್ಕೆ ಅವರು ಹೋಗುತ್ತೇವೆ ಎಂದು ಹೇಳಿದರು. ನಾನು ಹೋಗಿ ಎಂದು ಹೇಳಿದೆ. ನನಗೆ ಹೋಗಲಿಕ್ಕಾಗಲಿಲ್ಲ. But, I have no complaints, because I admire him. ಏಕೆಂದರೆ ಅವರು ನನ್ನನ್ನು ಕೇಳಿದರು, ನಾನು ಹೋಗಲೇನು ಎಂದು ನನ್ನನ್ನು ಬನ್ನಿ ಎಂದು ಕರೆದರು. ನನಗೆ ಹೋಗಲಿಕ್ಕೆ ಆಗಲಿಲ್ಲ. ಅವರನ್ನು ಸ್ಟಾಪ್ ಮಾಡಲಿಕ್ಕೆ ಆಗುವುದಿಲ್ಲ, ಆದರೆ ಒಂದು ಸೌಜನ್ಯವನ್ನು ಯಾವ ಪ್ರಕಾರ ಆರ್.ಎನ್. ನಾಯಕ್‌ರವರು ತೋರಿಸಿದರು. ಅದೇ ಪ್ರಕಾರ ಸೌಜನ್ಯತೆಯನ್ನು ಬಾಕಿ ಎಲ್ಲಾ ಮಂತ್ರಿಗಳು ತೋರಿಸಬೇಕಾಗುತ್ತದೆ. ನಮ್ಮ ಖಂಡ್ರೆಯವರು ಅವರು ಸೀನಿಯರ್ ಪರ್ಸನ್ ನಮ್ಮ ಗುರುಪಾದಪ್ಪನವರ ಕ್ಷೇತ್ರ, ಅವರಿಗೆ ವಿತಕ್ಕೆ ಭಯ, ಗುರುಪಾದಪ್ಪನವರು ಆ ಒಂದು ಜಿಲ್ಲೆಯಲ್ಲಿ ಸಿಂಹಸ್ವಪ್ನ. ಆದರೆ ಚುನಾವಣೆಯಲ್ಲಿ ಜನರು ನಿರ್ಣಯ ಮಾಡುತ್ತಾರೆ. ಅವರದೇ ಕ್ಷೇತ್ರದಲ್ಲಿ ಮಿನಿ ವಿಧಾನಸೌಧದ ಯಾವ ಸ್ಟೇಟು ಇದೆ, ಆ ಸ್ಟೇಟು ಸರಿಯಿಲ್ಲ. ಅಲ್ಲಿ naxalite activity ಇದೆ, ಬೇಡ ಎಂದು ಹೇಳಿದರೂ ಸಹ ಕೇಳಲಿಲ್ಲ. ಜಿಲ್ಲಾಧಿಕಾರಿಗಳು ಬರೆದು ಕಳುಹಿಸಿದ್ದಾರೆ. ಅಲ್ಲಿ ಬೇಡ ಮತ್ತೊಂದು ಕಡೆ ಮಾಡಿ ಎಂದು ಹೇಳಿದರು. ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಮಾನ್ಯ ಮುಖ್ಯ ಮಂತ್ರಿಗಳನ್ನು ಕರೆದುಕೊಂಡು ಹೋಗಿ ಅಡಿಗಲ್ಲನ್ನು ಹಾಕುತ್ತೇವೆ ಎಂದು ಹೇಳುತ್ತಾರೆ. ಇದು ಸರಿಯೇನು? ಮಿನಿ ವಿಧಾನಸೌಧ ಅಲ್ಲಿಯೇ ಮಾಡುತ್ತೇವೆ. ಡಿಸಿ ರಿಪೋರ್ಟು ಇದೆ. ಯಾವ ಸ್ಥಳದಲ್ಲಿ ಮಾಡಬೇಕು ಎಂದು ಡಿಸಿ ರಿಪೋರ್ಟ್ ಇದೆ. ಗುರುಪಾದಪ್ಪನವರ ಮಾತು ಬೇಡ, ಡಿಸಿಯವರ ಮಾತನ್ನಾದರೂ ಕೇಳಿ. ಜನಗಳಿಗೆ ಅನುಕೂಲವಾಗುವ ಹಾಗೆ ಮಾಡಿ.

ಇದರಲ್ಲಿ ಮುಖ್ಯ ಮಂತ್ರಿಯವರ ಕೈವಾಡವಿದ್ದು, ಆದ್ದರಿಂದ ಆದೇಶ ಕೊಟ್ಟಿದ್ದಾರೆಂಬ ಆಪಾದನೆಯನ್ನು ನಿಮ್ಮ ಮೇಲೆ ಹೊರಿಸುವುದಕ್ಕೆ ನಾನು ತಯಾರಿಲ್ಲ. ಈ ಬಗ್ಗೆ ಸೂಕ್ತ ನಿರ್ದೇಶನವನ್ನು ತಾವು ಎಲ್ಲಾ ಅಧಿಕಾರಿಗಳಿಗೆ ಕೊಡಬೇಕು ಮತ್ತು ನಿಮ್ಮ ಮಂತ್ರಿಮಂಡಲದ ಸದಸ್ಯರಿಗೂ ಸಹ ಸೂಚನೆ ಕೊಡಬೇಕು. ಯಾವುದೇ ಕ್ಷೇತ್ರಗಳಿಗೆ ಹೋದರೂ ಸಹ ಕನಿಷ್ಠ ಪಕ್ಷ ಆಯಾ ಕ್ಷೇತ್ರದ ಶಾಸಕರುಗಳನ್ನು ಸಂಪರ್ಕಿಸಿ ಹೋಗುವ ಸೌಜನ್ಯತೆ ಇರಬೇಕು. ಒಂದು ವೇಳೆ ಪ್ರತಿದಿನವೂ ಶಾಸಕರು ಬರುವುದಕ್ಕೆ ಸಾಧ್ಯವಾಗದೇ ಹೋದರೆ ಮತ್ತೊಂದು ದಿವಸ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಇಲ್ಲದಿದ್ದರೆ, ಮಂತ್ರಿಗಳು ಹೋಗಲಿ. ಆದರೆ, ಹೇಳದೆ ಕೇಳದೆ ಮಂತ್ರಿಗಳೇ ಹೋಗಿ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದರೆ, ಆ ಕಾರ್ಯಕ್ರಮಕ್ಕೆ ಶೋಭೆ ಬರುವುದಿಲ್ಲ, ಸರ್ಕಾರಕ್ಕೂ ಗೌರವ ಬರುವುದಿಲ್ಲ. ಇದರಿಂದ ಮನಸ್ತಾಪವುಂಟಾಗಿ ಸಾಧನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದಕಾರಣ ಸಂಬಂಧಿಸಿದವರಿಗೆ ಸೂಕ್ತ ನಿರ್ದೇಶನ ಕೊಡಬೇಕೆಂದು ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

+ ಡಾ|| ಎನ್.ಬಿ. ನಂಜಪ್ಪ (ಶ್ರವಣಬೆಳಗೊಳ) : ನನ್ನ ಕ್ಷೇತ್ರದಲ್ಲಿ ಸರ್ಕಾರಿ ಕಟ್ಟಡಗಳಲ್ಲಿ ಕಾರ್ಯಕ್ರಮಗಳನ್ನು ನೆರವೇರಿಸುವ ಸಂದರ್ಭದಲ್ಲಿ ನಾವು ಆಹ್ವಾನ ಪತ್ರಿಕೆ ಮುದ್ರಿಸಿದರೆ, ಅವರು ಬೇರೆ ರೀತಿಯ ಆಹ್ವಾನ ಪತ್ರಿಕೆ ಮುದ್ರಿಸಿ ತಮ್ಮದೇ ಅಧ್ಯಕ್ಷತೆ ಇರಬೇಕೆಂದು ಮಾಡಿರುತ್ತಾರೆ. ಈಗ ಜಿಲ್ಲಾ ಮಂತ್ರಿಗಳು ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಇದೆ. ಆದರೆ, ತಮ್ಮ ಮನಸ್ಸಿಗೆ ಬಂದಂತೆ ಯಾರನ್ನೋ ಅಧ್ಯಕ್ಷತೆ ವಹಿಸುವ ವ್ಯವಸ್ಥೆ ಬಂದಿದೆ. ಈ ಕುರಿತು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಆದೇಶ ಕಳುಹಿಸಿದ್ದು, ಸುತ್ತೋಲೆ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿದ್ದರೂ ಸಹ ಪ್ರೊಟೋಕಾಲ್ ಅನ್ನು ಸಂಪೂರ್ಣವಾಗಿ ಉಲ್ಲಂಘಿಸುವುದರಿಂದ ಪಕ್ಷಕ್ಕೂ ತೊಂದರೆ ಮತ್ತು ನಮಗೆ ಅವಮಾನವಾಗುವ ರೀತಿಯಲ್ಲಿ ನಡೆಯುತ್ತಿದೆ. ಅಧ್ಯಕ್ಷರು ಮತ್ತು ಮುಖ್ಯಮಂತ್ರಿಗಳು ಈಗಾಗಲೇ ಎಲ್ಲಾ ಅಧಿಕಾರಿಗಳೂ ಸರ್ಕಾರಿ ಆದೇಶವನ್ನು ಕಳುಹಿಸಿಕೊಟ್ಟಿದ್ದೀರಿ. Govt. officers should not participate and they should not ಎಂದು ಹೇಳಬೇಕು. ನನ್ನ ಕ್ಷೇತ್ರದಲ್ಲಿ ಈ ಹಿಂದೆ ಹಾಕಿದ್ದ ಶಿಲಾನ್ಯಾಸವನ್ನು ಸರ್ಕಾರಿ ಅಧಿಕಾರಿಗಳು ಕಿತ್ತು ಹಾಕಿ ಬೇರೆ ಶಿಲೆಗಳನ್ನು ನೆಡತಕ್ಕಂಥ ವ್ಯವಸ್ಥೆ ಮಾಡುತ್ತಿರುವುದು ನಮ್ಮ ಪಕ್ಷಕ್ಕೆ ದೊಡ್ಡ ಆಘಾತದ ವಿಷಯ ಮತ್ತು ನನಗೆ ಅವಮಾನ ಮಾಡುವಂಥ ಕೆಲಸವಾಗಿದೆ. ಆದುದರಿಂದ, ನನ್ನ ಕ್ಷೇತ್ರದಲ್ಲಿ ಇಲ್ಲಿಯವರೆಗೆ ಆಗಿರತಕ್ಕಂಥ ಇರ್ರೆಗ್ಯುಲಾರಿಟಿಸ್ ಮತ್ತು ಸರ್ಕಾರವನ್ನು ಕೇರ್ ಮಾಡದೆ ಮಾಡಿರತಕ್ಕ ಕೆಲಸಗಳ ಬಗ್ಗೆ ಕನಿಷ್ಠ ಪಕ್ಷ ಮಾನ್ಯ ಮುಖ್ಯಮಂತ್ರಿಗಳು ಸಂಬಂಧಿಸಿದವರಿಗೆ ಸೂಕ್ತ ನಿರ್ದೇಶನ ಕೊಟ್ಟು ಕ್ರಮ ಕೈಗೊಳ್ಳಬೇಕೆಂದು ಅಧ್ಯಕ್ಷರ ಮುಖಾಂತರ ಮಾನ್ಯ ಸಭಾಧ್ಯಕ್ಷರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು, ವಿರೋಧ ಪಕ್ಷದ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಮತ್ತಿತರ ಸದಸ್ಯರುಗಳು ಎತ್ತಿದಂಥ ಪ್ರಶ್ನೆಗಳನ್ನು ಪುಷ್ಟೀಕರಿಸಿ ಸದಸ್ಯರಾದ ಡಾ ಎನ್.ಬಿ. ನಂಜಪ್ಪ ಮತ್ತು ಮಹದೇವಪ್ಪನವರು ಮಾತನಾಡಿದ್ದಾರೆ. ಇದು ಪಕ್ಷಾತೀತ ಪ್ರಶ್ನೆಯಾಗಿರುವುದಲ್ಲದೆ, ಸಮಸ್ಯೆಯೂ ಆಗಿದೆ. ಇದು ಕೆಲವು ಪಕ್ಷಗಳಿಗೆ ಮಾತ್ರ ಸೀಮಿತವಾದ ಪ್ರಶ್ನೆಯಲ್ಲ. ಸನ್ಮಾನ್ಯ ಶಾಸಕರುಗಳಿಗೆ ಕೊಡಬೇಕಾಗಿರತಕ್ಕಂಥ ಗೌರವ, ಮರ್ಯಾದೆ, ಶಿಷ್ಟಾಚಾರ ಮುಂತಾದುವೆಲ್ಲಾ ಸರಿಯಾಗಿರಬೇಕೆಂಬುದು ಒಟ್ಟಾರೆ ಚರ್ಚೆಯ ಒಂದು ಸಾರಾಂಶ. ಇದಕ್ಕೆ ನಾನೂ ತಮ್ಮೊಂದಿಗೆ ಧ್ವನಿಗೂಡಿಸುತ್ತೇನೆ. ಏಕೆಂದರೆ, ಶಾಸಕರುಗಳಿಗೆ ಕೊಡಬೇಕಾಗಿರುವ ಶಿಷ್ಟಾಚಾರದಲ್ಲೇನಾದರೂ ಲವಲೇಷ ಕೊರತೆ ಕಂಡುಬರಬಾರದು. ಇದರ ಬಗ್ಗೆ ಸಾಕಷ್ಟು ಸುತ್ತೋಲೆಗಳನ್ನು ಕಳುಹಿಸಿರುವುದಲ್ಲದೆ ಜ್ಞಾಪನ ಪತ್ರಗಳನ್ನೂ ಸಹ ಕಳುಹಿಸಿದ್ದೇವೆ. ಶಾಸಕರುಗಳನ್ನು ಕಡೆಗಣಿಸಿ ಅವರವರ ಕ್ಷೇತ್ರದಲ್ಲಿ ಸಾರ್ವಜನಿಕ ಸರ್ಕಾರಿ ಕಾರ್ಯಕ್ರಮಗಳನ್ನು ನಡೆಸಬಾರದು. ಇದು ಬಹಳ ಮುಖ್ಯವಾದ ವಿಚಾರ. ಇದನ್ನು ಮಂತ್ರಿಗಳು ಅಥವಾ ಯಾರೇ ಮಾಡಿದರೂ ಕೂಡ ತಪ್ಪು. That is wrong, it is unwarranted, it is inappropriate it is discourteous.

ಇದಕ್ಕೆ ನನ್ನ ಸಹಮತವಿದೆ. ತಾವು ಹೇಳಿದ್ದನ್ನು ಗಮನಿಸಿದ್ದು, ಈ ಕೂಡಲೇ ಜಿಲ್ಲಾಧಿಕಾರಿಗಳಿಗೆ ಹೇಳುತ್ತೇನೆ. ಇಂತಹ ಕಾರ್ಯಕ್ರಮಗಳನ್ನು ನೆರವೇರಿಸಬೇಕಾಗಿದ್ದಲ್ಲಿ, ಶಾಸಕರು ಈ ಸದನದಲ್ಲಿರುವಾಗ ಅಲ್ಲಿ ಯಾವುದೇ ಸಚಿವರಾಗಲಿ ಯಾವುದೇ ಕಾರಣದಿಂದ ಏನಾದರೂ ತುರ್ತು ಇದ್ದರೆ ಅದು ಆಗುತ್ತದೆಯೇ ಹೊರತು ನಿರಂತರವಾಗಿ ನಡೆಯುವ ಸರ್ಕಾರಿ ಕಾರ್ಯಕ್ರಮಗಳಲ್ಲಿ ಶಾಸಕರನ್ನು ಕಡೆಗಣಿಸಿ ಕಾರ್ಯಕ್ರಮ ನಡೆಸುವಂಥದ್ದು ಸರಿಯಲ್ಲ. ಈ ರೀತಿ ಕೆಲವು ಸಂದರ್ಭದಲ್ಲಿ ಆದರೆ ಅದಕ್ಕೆ ತಾವೂ ಸಹಕಾರ ಕೊಡಬೇಕು. ಈಗ ಜಿಲ್ಲಾ ಮಂತ್ರಿಗಳಿರುತ್ತಾರೆ ಅಥವಾ ಮುಖ್ಯಮಂತ್ರಿಗಳಿರುತ್ತಾರೆ. ಅವರು ಒಂದು ಕಾರ್ಯಕ್ರಮವನ್ನು ನಿಗದಿಪಡಿಸಿದ್ದರೆ ತಮ್ಮ

ಶಿಷ್ಟಾಚಾರದ ದೃಷ್ಟಿಯಲ್ಲಿ ಆಹ್ವಾನ ಪತ್ರಿಕೆಯಲ್ಲಿ ಹೆಸರನ್ನು ಮುದ್ರಿಸಬೇಕು. ಬಹುಶಃ ಅಂತಹ ಕಾರ್ಯಕ್ರಮಗಳಲ್ಲಿ ಅವರೇ ಅಧ್ಯಕ್ಷತೆ ವಹಿಸಬೇಕೆಂದು ಸುತ್ತೋಲೆಯಲ್ಲಿ ಹೇಳಿದ್ದೇವೆ. ಅದನ್ನು ಖಂಡಿತವಾಗಿಯೂ ಮಾಡಲೇಬೇಕು. ಇದರೊಂದಿಗೆ ಯಾವುದೇ ರಾಜೀ ಇಲ್ಲ. ಆದರೆ ಜಿಲ್ಲಾ ಮಂತ್ರಿಗಳಿಗೆ ತಾವೂ ಕೂಡ (ಶಾಸಕರು) ಸಹಕಾರ ಕೊಡಬೇಕಾಗುತ್ತದೆ. ಏಕೆಂದರೆ, ಅವರಿಗೆ ಜಿಲ್ಲೆಯ ಸಂಪೂರ್ಣ ಜವಾಬ್ದಾರಿ ಕೊಟ್ಟಿರುತ್ತೇವೆ. ನಮ್ಮಲ್ಲಿ ಭಿನ್ನಾಭಿಪ್ರಾಯವಿರಬಹುದು. ಆದರೆ, ಆ ಭಿನ್ನಾಭಿಪ್ರಾಯ ನಿಮ್ಮ ಕ್ಷೇತ್ರಗಳ ಜನರ ಕೆಲಸಗಳಿಗೆ ತೊಂದರೆಯಾಗುವಂತಿರಬಾರದು. ಇಲ್ಲಿ ಜಿಲ್ಲಾ ಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಬರಲೇ ಬಾರದು ಎನ್ನತಕ್ಕದ್ದು ನಡೆಯಬಾರದು.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ : ಜಿಲ್ಲಾ ಮಂತ್ರಿಗಳಿಗೆ ಇಂಟರ್ಫಿಯರ್ನಾವು ಮಾಡುತ್ತಿಲ್ಲ. ಅದನ್ನು ಅವರೇ ಮಾಡುತ್ತಿದ್ದಾರೆ. ಪ್ರತಿಯೊಂದಕ್ಕೂ ಅಡ್ಡಗಾಲನ್ನು ಇಡುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಆದ್ದರಿಂದ ನಾವು ಈಗ ಏನು ಶಿಷ್ಟಾಚಾರವನ್ನು, ನಿರ್ದೇಶನವನ್ನು ಪಾಲಿಸುವ ಬಗ್ಗೆ ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದೇವೆ, ಅದಕ್ಕೆ ವಿರುದ್ಧವಾಗಿ ಯಾವುದೇ ಮಾನ್ಯ ಸಚಿವರುಗಳು, ಯಾವುದೇ ಕೆಲಸವನ್ನು ಮಾಡದಂತೆ ಅವರುಗಳಿಗೆ ನಾನು ಪುನರ್ ಒಂದು ಪತ್ರವನ್ನು ಬರೆಯುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಅವರಲ್ಲಿ ಕೇಳುವುದೇನೆಂದರೆ, ನನ್ನ ಕ್ಷೇತ್ರದಲ್ಲಿ ನಾಲ್ಕು ಸಮಾರಂಭಗಳು ಬರುವ 7ನೇ ತಾರೀಖಿನಂದು ಇದೆ. ತಾವು ಬರುತ್ತೀರಾ? ತಮ್ಮಲ್ಲಿ ಕೈಮುಗಿದು ಕೇಳಕೊಳ್ಳುತ್ತೇವೆ. ತಾವು ಬರುತ್ತೀರಾ? ಅದಕ್ಕೆ ನಮ್ಮ ಅಭ್ಯಂತರವೇನಿಲ್ಲ. ಆದರೆ ತಾವೂ ಬರುವುದಿಲ್ಲ. ನಮಗೂ ಮಾಡುವುದಕ್ಕೆ ಬಿಡುವುದಿಲ್ಲ. ಇಂಥ ಪರಿಸ್ಥಿತಿಯನ್ನು ತಂದು ನಮ್ಮನ್ನು ಸಿಕ್ಕಿಸಿದರೆ ಹೇಗೆ?

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ತಮ್ಮ ಕ್ಷೇತ್ರದಲ್ಲಿ ಸರ್ಕಾರಿ ಮತ್ತು ಸಾರ್ವಜನಿಕ ಕಾರ್ಯಕ್ರಮಗಳನ್ನು ಮಾಡುವ ಸಂಪೂರ್ಣವಾದ ಹಕ್ಕು ತಮಗೆ ಇದೆ. ಅದರಲ್ಲಿ ಹಸ್ತಕ್ಷೇಪವನ್ನು ಮಾಡುವುದಕ್ಕೆ ನಾವು ಹೋಗುವುದಿಲ್ಲ. ನಾವು ಮನಃ ಪೂರ್ವಕವಾಗಿ ಆಗಲಿ, ಪ್ರತ್ಯಕ್ಷವಾಗಿಯಾಗಲಿ, ಅಪ್ರತ್ಯಕ್ಷವಾಗಿಯಾಗಲಿ, ಯಾವುದೇ ಪಕ್ಷಕ್ಕೇ ಸೇರಿದ ಸನ್ಮಾನ್ಯ ಶಾಸಕರಾಗಿರಲಿ, ಪಾರ್ಲಿಮೆಂಟ್ನ ಸದಸ್ಯರುಗಳಾಗಿರಲಿ ಶಿಷ್ಟಾಚಾರ ಎಲ್ಲರಿಗೂ ಸಮಾನ ಎಲ್ಲರನ್ನೂ ಸಮಾನ ದೃಷ್ಟಿಯಲ್ಲಿ ನೋಡಬೇಕು ಎಂದು ನಾವು ಬಹಳ ಕಟ್ಟುನಿಟ್ಟಿನ ಸುತ್ತೋಲೆಯನ್ನು ಕೊಟ್ಟಿದ್ದೇವೆ. ಅದನ್ನು ಎಲ್ಲರೂ ಪಾಲಿಸಬೇಕೆಂದು ನಮ್ಮ ಅಗ್ರಹಪೂರ್ವಕ ಆದೇಶ ಇದೆ. ಇದರ ಬಗ್ಗೆ ನಾನು ಪುನಹ ಸಚಿವರುಗಳಿಗೆ ತಿಳಿಸುತ್ತೇನೆ. ಆದರೆ ಪರಸ್ಪರ ವಿಶ್ವಾಸದಿಂದ ನಾವುಗಳು ನಮ್ಮನಮ್ಮ ಜಿಲ್ಲೆಯಲ್ಲಿದ್ದರೆ ಒಳ್ಳೆಯದೆಂದು ಕಿವಿ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆ

(ಗೊಂದಲ)

ಶ್ರೀ ಸಿ. ಬೈರೇಗೌಡ : ನಾನು ಪದೇ ಪದೇ ಎದ್ದು ನಿಲ್ಲತಕ್ಕವನಲ್ಲ. ನನಗೆ ಯಾವಾಗ ಅವಕಾಶ ಕೊಡುತ್ತೀರಿ?

ಅಧ್ಯಕ್ಷರು : ನಾಳೆ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿನ್ನೆ ಕೆಪಿಎಸ್ಸಿಯ ಬಗ್ಗೆ ಸ್ಟೇಟ್ಮೆಂಟ್ ಮಾಡುತ್ತೇವೆ ಎಂದಿದ್ದರು, ಅದನ್ನು ಯಾವಾಗ ಮಾಡುತ್ತಾರೆ?

ಅಧ್ಯಕ್ಷರು : ಅದನ್ನು ಮಾಡುತ್ತಾರೆ. ನಾವು ಕಾರ್ಯಕ್ರಮ ಪಟ್ಟಿಯ ರೀತಿ ಹೋಗೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಜೈಭೀಮಾ ನಗರದಲ್ಲಿ...

ಶ್ರೀ ಸಿ. ಬೈರೇಗೌಡ : ಜೀವನ್ಭೀಮಾನಗರ. ಅಧ್ಯಕ್ಷರೇ, ಬೆಂಗಳೂರಿನಲ್ಲಿ ಹೆಸರುಗಳನ್ನಿಡುವಾಗ ಏನಾಗಿದೆ ಎಂದರೆ, ವಾಟಾಳ್ನಾಗರಾಜ್ರವರೇ ಜೀವನ್ಭೀಮಾನಗರ ಎನ್ನತಕ್ಕದಕ್ಕೆ ಜೈಭೀಮನಗರ ಎಂದು ಹೇಳಿದ್ದಾರೆ. ಅದು ಯಾವ ಭಾಷೆಯೊ ಗೊತ್ತಾಗುತ್ತಿಲ್ಲ. ಸ್ವಚ್ಛವಾದ ಕನ್ನಡ ಭಾಷೆಯನ್ನು ಬಿಟ್ಟು ಯಾವುದೋ ಭಾಷೆಯ ಹೆಸರನ್ನು ತಂದು ಇಲ್ಲಿ ಇಟ್ಟಿದ್ದಾರೆ. ವಾಟಾಳ್ ನಾಗರಾಜ್ವರೂ ಸಹ ಅದನ್ನು ಹೇಳಲು ತಪ್ಪಿಬಾಗುವ ಪರಿಸ್ಥಿತಿಯುಂಟಾಗಿದೆ. ಆದ್ದರಿಂದ ಜೀವನ್ಭೀಮಾನಗರ ಎನ್ನುವ ಹೆಸರನ್ನು ತೆಗೆದುಹಾಕಿ ಸ್ವಚ್ಛ ಕನ್ನಡದಲ್ಲಿ ಹೆಸರನ್ನು ಇಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ? ಹೆಸರನ್ನು ಇಡುವುದಕ್ಕೆ ಅರ್ಥವೇ ಇಲ್ಲ. ಜೀವನ್ಭೀಮಾನಗರ ಇದು ಯಾವ ಭಾಷೆ? ಇದನ್ನು ಏಕೆ ಇಟ್ಟಿದ್ದೀರಿ. ಸ್ವಚ್ಛವಾದ ಕನ್ನಡದಲ್ಲಿ ಜೀವನ್ಭೀಮಾನಗರ ಎಂದು ಹೆಸರನ್ನಿಡಿ. ಜೀವನ್‌ವಿಮಾನಗರವೆಂದು ಏಕೆ ಕರೆಯಬೇಕು?

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಬಂಗಾಳಿ ಭಾಷೆಯಲ್ಲಿ ಆ ರೀತಿ ಕರೆಯುತ್ತಾರೆ. ಅದರ ಪುಷ್ಟೀಕರಣವನ್ನು ನಾನು ಮಾಡುತ್ತಿಲ್ಲ. ಅದರ ಬಗ್ಗೆ ವಿವರಣೆ ಕೊಡುತ್ತಿದ್ದೇನೆ. 'ಭಿ' ಎನ್ನತಕ್ಕದನ್ನು ನಾವು ಇರಬೇಕಾಗಿರಲಿಲ್ಲ. ವಿಮಾನಗರವೆಂದು ಇಡಬೇಕಾಗಿತ್ತು.

ಶ್ರೀ ಸಿ. ಬೈರೇಗೌಡ : ಹಾಗಾದರೆ ಅದನ್ನು ಬದಲಾವಣೆ ಮಾಡಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಬಂಗಾಳಿ ಭಾಷೆಯಲ್ಲಿ 'ವ'ಕ್ಕೆ ಬದಲಾಗಿ 'ಬ'ವನ್ನು ಉಪಯೋಗಿಸುತ್ತಾರೆ. ಎಲ್ಲೊ ದೆಹಲಿಯಲ್ಲಿ ಜೀವನವಿಮ ಎನ್ನುವುದಕ್ಕೆ ಬದಲಾಗಿ ಜೀವನ್ ಭೀಮಾ ಎಂದು ಹಾಕಿದ್ದಾರೆ. ಅದನ್ನು ಬದಲಾವಣೆ ಮಾಡಬೇಕಾಗಿತ್ತು. ಆದರೆ ಮಾಡಿಲ್ಲ. ಜೀವನ್ಭೀಮಾನಗರ ಎನ್ನುವುದು ಸಂಸ್ಕೃತ ಪದ. ಅದರಲ್ಲಿ ತಪ್ಪೇನಿಲ್ಲ.

1.00 ಪಿ.ಎಂ

ಶ್ರೀ ವಾಟಾಳ್ ನಾಗರಾಜ್ : ತಪ್ಪು ಆಗಿದ್ದು ನಿಜ ಜೈ ಭೀಮಾನಗರ ವೋ, ಜೀವನ್ಭೀಮ ನಗರವೋ ಬೆಂಗಳೂರಿನಲ್ಲಿ ಸುತ್ತ ಹೆಸರುಗಳಿವೆ. ಈ ರೀತಿಯಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಇದು ಎಷ್ಟು ವರ್ಷಗಳ ಇತಿಹಾಸವೆಂದರೆ ನಾನು ಎಲ್ಐಸಿಯಲ್ಲಿ ಕೆಲಸ ಮಾಡುತ್ತಿದ್ದಾಗ ಅಂದರೆ 62-63ನೇ ಇಸವಿಯದ್ದು, ಆದರೆ ಮಾನ್ಯ ಬೈರೇಗೌಡರಿಗೆ ನಾವೇ ಆ ಹೆಸರನ್ನು ಇಟ್ಟಿದ್ದೇವೆ ಎನ್ನುವಂತೆ ರೋಷ ಬಂದಿದೆ.

ಶ್ರೀ ಸಿ. ಬೈರೇಗೌಡ : ಯಾರಾದರೂ ಇಡಲಿ. ಅದನ್ನು ಬದಲಾಯಿಸಿ, ಸರಳವಾದ ಕನ್ನಡದಲ್ಲಿಡಿ.

ಗಮನ ಸೆಳೆಯುವ ಸೂಚನೆ

ಬೆಂಗಳೂರಿನ ಜೀವನ್ಭೀಮ ನಗರದ ಪೊಲೀಸ್‌ಠಾಣೆಯಲ್ಲಿ ಎ.ಟಿ. ರಂಗನಾಥ್‌ರವರ ಮೇಲೆ ದೌರ್ಜನ್ಯ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಜೀವನ್ಭೀಮ ನಗರದ ಪೊಲೀಸ್ ಠಾಣೆಯಲ್ಲಿ ಕನ್ನಡ ಚಳುವಳಿಗಾರ. ಶ್ರೀ ಅತಿ. ರಂಗನಾಥರವರ ಮೇಲೆ

ಆದ ದೌರ್ಜನ್ಯದ ಬಗ್ಗೆ ಸಿ. ಬೈರೇಗೌಡರು, ಪಿ.ಜಿ.ಆರ್. ಸಿಂಧ್ಯಾ, ಶ್ರೀ ಬಿ.ಎಸ್. ಯಡಿಯೂರಪ್ಪನವರು ಇದರ ಬಗ್ಗೆ ಗಮನ ಸೆಳೆಯುತ್ತಿದ್ದೇವೆ.

ಶ್ರೀ ಚೌಡರೆಡ್ಡಿ (ಗೃಹ ಮಂತ್ರಿಗಳು) : ದಿನಾಂಕ 23-7-94ರಂದು ಸುಮಾರು ಬೆಳಿಗ್ಗೆ 10.30 ಗಂಟೆಯಲ್ಲಿ ಜೀವನಭೀಮಾನಗರ ಪೋಲೀಸ್ ಠಾಣೆಯ ಕಾನೂನು ಮತ್ತು ಸುವ್ಯವಸ್ಥೆಯ ಪೋಲೀಸ್ ಸಬ್ ಇನ್ಸೆಕ್ಟರ್‌ರವರಾದ ಶ್ರೀ ವೆಂಕಟಶೆಟ್ಟಿಯವರು ಠಾಣೆಯಲ್ಲಿದ್ದಾಗ, ಶ್ರೀ ಪ್ರಭಾಕರ ಎಂಬುವರು ಬಂದು ನೀಡಿದ ಮೌಖಿಕ ಹೇಳಿಕೆಯಲ್ಲಿ, ಹೆಚ್.ಎ.ಎಲ್. ಮೂರನೇ ಘಟ್ಟ, ಬೆಂಗಳೂರು ಇಲ್ಲಿನ ಸೈಟ್ ನಂ. 2625ರ ಹತ್ತಿರ ಕೆಲವು ಮಂದಿ ಸೈಟಿನ ಮಾಲೀಕನಾದ ಆರ್ಮುಗಂರವರಿಗೆ ಪ್ರಾಣ ಬೆದರಿಕೆ ಒಡ್ಡುತ್ತಿದ್ದಾರೆಂದು ಅವರು ತಮ್ಮ ಸೈಟಿನಲ್ಲಿ ಶೆಡ್ಡನ್ನು ನಿರ್ಮಾಣ ಮಾಡಲು ಬಿಡುತ್ತಿಲ್ಲವೆಂದು ಅವರಿಗೆ ಪ್ರಾಣ ರಕ್ಷಣೆಯನ್ನು ಕೊಡಬೇಕೆಂದು ಪಿ.ಎಸ್.ಐ. ರವರನ್ನು ಕೋರಿಕೊಂಡಿದ್ದರು.

ಪಿ.ಎಸ್.ಐ.ರವರು ಫಿರ್ಯಾದುದಾರರ ಮೌಖಿಕ ದೂರಿನ ಮೇಲೆ ತಮ್ಮ ಸಿಬ್ಬಂದಿಯೊಂದಿಗೆ (ಶ್ರೀ ಮಲ್ಲಿಕಾರ್ಜುನ ಆಚಾರ್, ಎ.ಎಸ್.ಐ. ಹೆಚ್.ಸಿ. 215 ನಾರಾಯಣ ಮತ್ತು ಪಿಸಿ 6227 ಜಯರಾಮು) ಸ್ಥಳಕ್ಕೆ ಭೇಟಿ ನೀಡಿದಾಗ, ಮೂರು ಮಂದಿ ಶೆಡ್ಡನ್ನು ಕಟ್ಟುತ್ತಿದ್ದುದಕ್ಕೆ ತಡೆ ಒಡ್ಡುತ್ತಿದ್ದು ಮತ್ತು ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದುದು ಕಂಡು ಬಂತು. ಪಿ.ಎಸ್.ಐ ರವರು ಈ ಘಟನೆಯ ಬಗ್ಗೆ ವಿಚಾರಣೆ ಮಾಡಿರುತ್ತಾರೆ.

ಈ ಕೂಡಲೇ ಪಿ.ಎಸ್.ಐ.ರವರು ಮಧ್ಯ ಪ್ರವೇಶಿಸಿ, ವಿಚಾರಿಸುವಾಗ ಈ ಮೂರು ಜನರಾದ ಶ್ರೀ ಎ.ಟಿ. ರಂಗನಾಥ್, ನಾಗರಾಜ, ಮೋಹನ ಪ್ರಸಾದ್‌ರವರು ಪಿ.ಎಸ್.ಐ. ರವರಿಗೆ ಪ್ರಾಣ ಬೆದರಿಕೆ ಒಡ್ಡಿ, ಅವಾಚ್ಯ ಶಬ್ದಗಳಿಂದ ಬೈದಿರುತ್ತಾರಲ್ಲದೆ, ಈ 3 ಜನರಲ್ಲಿ ಒಬ್ಬರಾದ ಎ.ಟಿ. ರಂಗನಾಥ್ರು ಪಿ.ಎಸ್.ಐ. ರವರ ಶರ್ಟಿನ ಕಾಲರನ್ನು ಹಿಡಿದ್ದು, ದೈಹಿಕವಾಗಿ ಅವರ ಮೇಲೆ ಎರಗಿ ಅವರನ್ನು ಬದಿಗೆ ತಳ್ಳಿ, ನೀವು ಈ ವಿಷಯದಲ್ಲಿ ಮಧ್ಯ ಪ್ರವೇಶಿಸಕೂಡದು ಎಂದು ಹೇಳಿದ್ದಾರೆ. ಆಗ ಪಿ.ಎಸ್.ಐರವರು ತಮ್ಮ ಸಿಬ್ಬಂದಿಯವರ ಸಹಾಯದಿಂದ ಈ ಮೂರು ಜನರನ್ನು ಠಾಣೆಗೆ ಕರೆತಂದರು. ಈ ಮೂರು ಜನರನ್ನು ಠಾಣೆಗೆ ಕರೆದುಕೊಂಡು ಹೋಗುವಾಗ ಮಾರ್ಗದಲ್ಲಿ ಪಿಎಸ್ಐ ರವರಿಗೆ ಈ ಮೂವರು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ.

ಆ ಬಗ್ಗೆ ಪಿಎಸ್ಐ ರವರು ಕೊಟ್ಟ ಲಿಖಿತ ವರದಿಯ ಮೇರೆಗೆ, ದಿನಾಂಕ 23-7-94ರಂದು ಬೆಳಿಗ್ಗೆ 11.30 ಗಂಟೆಯಲ್ಲಿ ಜೀವನಭೀಮಾನಗರದ ಪೋಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ 285.94 ಕಲಂ 353. ಭಾ.ದಂ.ಸಂ. ಪ್ರಕಾರ ಪ್ರಕರಣವು ದಾಖಲಾಗಿರುತ್ತದೆ. ಠಾಣೆಯಲ್ಲಿದ್ದಾಗ ಸಹ ಶ್ರೀ ಎ.ಟಿ. ರಂಗನಾಥ್ ರವರು ಭಾವೋದ್ರೇಕದಿಂದ ವರ್ತಿಸುತ್ತಿದ್ದುದಲ್ಲದೆ, ಆಕ್ರಮಣಕಾರಿಯಂತೆ ವರ್ತಿಸುತ್ತಿದ್ದರು ಹಾಗೂ ಕೂಗಾಡುತ್ತಿದ್ದರು. ಸುಮಾರು 11.45 ಗಂಟೆಯಲ್ಲಿ ಶ್ರೀ ಎ.ಟಿ. ರಂಗನಾಥ್ ತಾನು ಬಿ.ಪಿ.ಪೇಶೆಂಟ್ ಎಂದು ಹೇಳಿ ತನಗೆ ಹೃದಯ ತೊಂದರೆ ಇದೆ ಎಂದು ಹಾಗೂ ತನಗೆ ವೈದ್ಯಕೀಯ ಚಿಕಿತ್ಸೆಯನ್ನು ಕೊಡಿಸಬೇಕೆಂದು ಕೇಳಿದ್ದರು. ಆತನ ಕೋರಿಕೆಯಂತೆ ಪಿಎಸ್ಐ ರವರು ಆತನನ್ನು ಎಎಸ್ಐ ಮುನಿಯಪ್ಪ ಮತ್ತು ಹೆಚ್ಸಿ 289 ಮಾಲಗಯ್ಯ ಇವರನ್ನು ನೇಮಿಸಿ ಹೆಚ್.ಎ.ಎಲ್. ಆಸ್ಪತ್ರೆ ಚಿಕಿತ್ಸೆಗೆಂದು ಕರೆದುಕೊಂಡು ಹೋದರು. ಹೆಚ್.ಎ.ಎಲ್. ಆಸ್ಪತ್ರೆಯಲ್ಲಿ ಎ.ಟಿ. ರಂಗನಾಥರವರನ್ನು..... ಆರೋಗಿ ಎಂದು ಚಿಕಿತ್ಸೆಗಾಗಿ ದಾಖಲು ಮಾಡಿಕೊಳ್ಳಲಾಯಿತು.

ತನಿಖೆಯ ಕಾಲದಲ್ಲಿ ಕಂಡು ಬಂದ ವಿಷಯವೇನೆಂದರೆ, ಸೈಟ್ ನಂ. 2625ಕ್ಕೆ ಸಂಬಂಧಿಸಿದಂತೆ ಆರೋಪಿ ಮೋಹನ್‌ಪ್ರಸಾದ್ ಹಾಗೂ ಆರುಗಂ ಇವರ ಮಧ್ಯ

ವಿವಾದವಿತ್ತೆಂದು ಕಂಡು ಬರುತ್ತದೆ. ಈ ಸೈಟನ್ನು ಆರುಗ್ಗಂ ಇವರಿಗೆ ಬಿ.ಡಿ.ಎ.ಯವರು ಮಂಜೂರು ಮಾಡಿದ ಬಗ್ಗೆ ಅಲಾಟ್‌ಮೆಂಟ್ ಪತ್ರವಿದ್ದು, ಅದು ಅವರ ಸ್ವಾಧೀನದಲ್ಲಿರುತ್ತದೆ.

ಶ್ರೀ ಎ.ಟಿ. ರಂಗನಾಥರವರು ಮೋಹನಪ್ರಸಾದ್‌ರವರಿಗೆ ಬೆಂಬಲ ನೀಡುತ್ತಿದ್ದರೆಂದು ತಿಳಿದು ಬಂದಿದೆ. ಶ್ರೀ ಮೋಹನಪ್ರಸಾದ್ ಈ ಹಿಂದೆ ಈ ಭೂಮಿಯನ್ನು ಪಾಪಯ್ಯ ಎಂಬುವವರಿಂದ 1991ರಲ್ಲಿ ಕೊಂಡುಕೊಂಡಿರುವುದಾಗಿಯೂ, ಆದರೆ ಬಿ.ಡಿ.ಎ. ರವರು ಆರುಗ್ಗಂ ರವರಿಗೆ 1983ರಲ್ಲಿ ಹಂಚಿಕೆ ಮಾಡಿದ್ದು, ಇದನ್ನು ಶ್ರೀ ಆರುಗ್ಗಂರವರು ದಿನಾಂಕ 20-4-1991ರಂದು ತಮ್ಮ ವಶಕ್ಕೆ ತೆಗೆದುಕೊಂಡಿರುವುದಾಗಿಯೂ ತಿಳಿದು ಬಂದಿದೆ.

ಈ ಪ್ರಕರಣದಲ್ಲಿ ಆರೋಪಿಗಳಾದ 1) ಶ್ರೀ ಜೆ. ನಾಗರಾಜ, 40 ವರ್ಷ ತಂದೆ ಜವರೇಗೌಡ, 7ನೇ ಅಡ್ಡರಸ್ತೆ, ಚನ್ನಕೇಶವನಗರ, ಮೈಕೋ ಹತ್ತಿರ, ಬೆಂಗಳೂರು ವಾಸಿ 2) ಮೋಹನಪ್ರಸಾದ್ 35 ವರ್ಷ ತಂದೆ ಪಾರ್ಶ್ವನಾಥಪ್ಪ, 109:2, ಶಿವಲಿಂಗಯ್ಯ ಕಾಲೋನಿ, ಮುರುಗೇಶಪಾಳ್ಯ, ಬೆಂಗಳೂರುರವರನ್ನು ದಸ್ತಗಿರಿ ಮಾಡಿ, ಹತ್ತನೆ ಎ.ಸಿ.ಎಂ.ಎಂ. ನ್ಯಾಯಾಲಯದಲ್ಲಿ ಹಾಜರಪಡಿಸಿದ ನಂತರ ಅವರು ನ್ಯಾಯಾಲಯದಿಂದ ಜಮೀನಿನ ಮೇರೆಗೆ ಬಿಡುಗಡೆ ಹೊಂದಿರುತ್ತಾರೆ.

ಹೀಗಿದ್ದರೂ ಸಹ ಜೀವನಭೀಮಾನಗರ ಪೋಲೀಸ್ ಠಾಣೆಯಲ್ಲಿ ತಮಗೆ ಹೊಡೆಯಲಾಯಿತು ಎಂದು ಪೋಲೀಸರ ಮೇಲೆ ಶ್ರೀ ಎ.ಟಿ. ರಂಗನಾಥ್‌ರವರು ತೀವ್ರವಾದ ಆರೋಪಗಳನ್ನು ಮಾಡಿದ್ದಲ್ಲದೆ, ತಮಗೆ ಚೇಡಿ ತೊಡಿಸಲಾಯಿತು ಎಂದು ಆರೋಪಿಸಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯ ಪೇದೆ 215 ಶ್ರೀ ನಾರಾಯಣ, ಪೇದೆ 6227 ಶ್ರೀ ಜಯರಾಂ ಎಂಬುವವರನ್ನು ಅಮಾನತ್ತಿನಲ್ಲಿಡಲಾಗಿದೆ ಹಾಗೂ ಪಿ.ಎಸ್.ಐ. ಶ್ರೀ ವೆಂಕಟಶೆಟ್ಟಿ, ಜೆ.ಬಿ. ನಗರ ಠಾಣೆರವರಿಗೆ ಕೆ.ಎಸ್.ಪಿ. (ಡಿಪಿ) ನಿಯಮ 7ರ ಅನ್ವಯ ದೋಷಾರೋಪಣಾ ಪತ್ರವನ್ನು ನೀಡಲಾಗಿದೆ. ವಿಚಾರಣೆಯು ಪ್ರಗತಿಯಲ್ಲಿರುತ್ತದೆ.

+ ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದಿಷ್ಟು ಸಾಮಾನ್ಯವಾಗಿ ಒಬ್ಬ ದಫೇದಾರ್ ಪೋಲೀಸ್ ಸ್ಟೇಷನ್ನಲ್ಲಿ ಯಾರಿಗೋ ಬರೆಸುತ್ತಾರಲ್ಲಾ, ಈ ಕಂಪ್ಲೇಂಟನ್ನು ಈ ರೀತಿ ಬರೆಯಬೇಕು, ಈ ತರಹ ಬರೆದರೆ ನಿನ್ನ ಕೇಸ್ ಉಳಿಯುತ್ತದೆ, ಇಲ್ಲದಿದ್ದರೆ ಕೇಸ್ ಉಳಿಯುವುದಿಲ್ಲ ಎಂದು ಕಾಣುವ ಹಾಗೆ ಮಾನ್ಯ ಗೃಹ ಮಂತ್ರಿಗಳು ಕೊಡುತ್ತಿರುವ ಹೇಳಿಕೆ ಇದೆ. ಇದರಿಂದ ನನಗೆ ಬಹಳ ನೋವಾಗುತ್ತದೆ. ನನಗೆ ಮಾನ್ಯ ಚೌಡರೆಡ್ಡಿಯವರ ಬಗ್ಗೆ ಬಹಳ ಗೌರವ ಇತ್ತು. ಇವತ್ತು ಆ ಗೌರವವೆಲ್ಲಾ ನೀರು ಪಾಲಾಗಿ ಹೋಯಿತು. ಒಬ್ಬ ದಫೇದಾರ್ ಮಟ್ಟಕ್ಕೆ ತಾವು ಗೃಹ ಸಚಿವರು ಇಳಿದಿರಿ ಎಂದು ಹೇಳಿ ನನಗೆ ಬಹಳ ವ್ಯಥೆಯಾಗುತ್ತಿದೆ. ಇದೆಲ್ಲಾ ಸಹ ಸತ್ಯಕ್ಕೆ ದೂರವಾದುದು. ಇದರಲ್ಲಿ ಒಂದು ಅಕ್ಷರವೂ ಸಹ ನಿಜವಿಲ್ಲ. ಈ ಸದನದಲ್ಲಿ ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ನಾನು ಹೆಜ್ಜೆ ಹೆಜ್ಜೆಗೂ ಸಹ ಇದನ್ನು ಗಮನಿಸಿದ್ದೇನೆ. ಇದರಲ್ಲಿ ಒಂದು ಅಕ್ಷರವೂ ಸಹ ನಿಜವಿಲ್ಲ. ಇದರಲ್ಲಿ ಪ್ರತಿ ಅಕ್ಷರವು ಸಹ ತಯಾರು ಮಾಡಿ ಅದನ್ನು ಇಲ್ಲಿ ಓದಿ ಎಂದು ನಿಮಗೆ ಕಳುಹಿಸಿ ಕೊಟ್ಟಿರತಕ್ಕಂಥಾದ್ದು. ಆ ಸಂದರ್ಭದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ನಿಮ್ಮ ಪಕ್ಷದ ಅನೇಕ ಶಾಸಕರು ನಿಮಗೆ ಬಂದು ಹೇಳಿದ್ದಾರೆ. ಇಲ್ಲಿ ಅನ್ಯಾಯ ನಡೆದಿದೆ, ಇದರ ಬಗ್ಗೆ ಗುರುತರವಾದ ಅನ್ಯಾಯವಾಗಿದೆ ಎನ್ನುವಂತಹ ಮಾತನ್ನು ತಮಗೆ ಮನವರಿಕೆ ಮಾಡುವ ರೀತಿಯಲ್ಲಿ ಹೇಳಿದ್ದಾರೆ. ಇಷ್ಟೆಲ್ಲಾ ಆದರೂ ಸಹ ನೀವು ಕೊನೆಯಲ್ಲಿ ಇದೆಲ್ಲಾ ರಂಗನಾಥ್

ಅನ್ಯಾಯ ಮಾಡಿದ್ದಾರೆ, ಅವರು ಹೊಡೆಯುವುದಕ್ಕೆ ಹೋಗಿದ್ದರು, ಸೈಟ್ ಹತ್ತಿರ ಹೋಗಿದ್ದರು, ಎಂದೆಲ್ಲಾ ಹೇಳಿಕೊಂಡು ಬರುತ್ತೀರಿ. ಇದೆಲ್ಲಾ ಆದಮೇಲೂ ನೀವು ಆ ಇಬ್ಬರೂ ಪೇದೆಗಳನ್ನು ಸಸ್ಪೆಂಡ್ ಮಾಡುವುದಕ್ಕೆ ಹೋದಿರಿ. ಹಾಗಾದರೆ ಯಾವ ಉದ್ದೇಶಕ್ಕೆ ಮಾಡಿದಿರಿ? ನಿಮ್ಮದೆಲ್ಲಾ ಸರಿ ಇದ್ದು ನಾಲ್ಕು ಜನ ಅಪರಾಧಿಗಳು, ಅಪರಾಧ ಮಾಡಿದ್ದಾರೆ. ಇವರು ಅನ್ಯಾಯ ಮಾಡಿದ್ದಾರೆ ಎಂದು ನಿಮಗೆ ರುಜುವಾತು ಆದಮೇಲೆ ನೀವು ಆ ಪೇದೆಗಳನ್ನು ಸಸ್ಪೆಂಡ್ ಮಾಡತಕ್ಕಂತಹ ಪ್ರಶ್ನೆ ಎಲ್ಲಿ ಉದ್ಭವವಾಗುತ್ತದೆ? ಆದುದರಿಂದ ನೀವು ಆ ಇಬ್ಬರು ಪೇದೆಗಳನ್ನು ಸಸ್ಪೆಂಡ್ ಮಾಡಬೇಕಾದರೆ ಸ್ಟೇಷನ್ನಲ್ಲಿ ಅಪರಾಧ, ಅನ್ಯಾಯ ನಡೆದಿರಬೇಕು ಎನ್ನುವಂತಾದ್ದು ನೂರಕ್ಕೆ ನೂರು ಸತ್ಯ. ನೀವು ಆ ಇಬ್ಬರು ಪೇದೆಗಳನ್ನು ಸಸ್ಪೆಂಡ್ ಮಾಡಬೇಕಾದರೆ ನಿಮ್ಮ ಉದ್ದೇಶವೇನು? ಅವರುಗಳನ್ನು ಸಸ್ಪೆಂಡ್ ಮಾಡಬೇಕಾಗಿರಲಿಲ್ಲ. ರಂಗನಾಥ್ ಮತ್ತು ಅವರ ಜೊತೆಯಲ್ಲಿ ಇರತಕ್ಕಂತಹ ಮೂರು ಜನ ಅನ್ಯಾಯ ಮಾಡಿದ್ದರೆ ನೀವು ಅವರನ್ನು ಸಸ್ಪೆಂಡ್ ಮಾಡತಕ್ಕಂತಹ ಪ್ರಶ್ನೆ ಏಕೆ ಬರುತ್ತದೆ? ನೀವು ಸಸ್ಪೆಂಡ್ ಮಾಡತಕ್ಕಂತಹ ಉದ್ದೇಶ ಏನೂ ಅದು ಆಗಿರಲಿಲ್ಲ. ನಿಮಗೆ ನಿಜ ಹೇಳಬೇಕಾದರೆ ರಂಗನಾಥ್ ಅವರ ನಾದಿನಿಯ ನಿವೇಶನ ಅದು. ಆ ನಿವೇಶನವನ್ನು ಬೇರೆಯವರು ಪಡೆಯುವುದಕ್ಕೆ ಹೊರಟ್ಟಿದ್ದರು. ಈ ನಿವೇಶನವನ್ನು ಬೇರೆಯವರಿಗೆ ಕೊಡಬಾರದು, ಅದನ್ನು ಅವರ ನಾದಿನಿಗೆ ಕೊಡಬೇಕು ಎಂದು ಹೇಳಿ ಹೈಕೋರ್ಟ್ ತಡೆಯಾಜ್ಞೆ ಇದೆ. ಈ ತಡೆಯಾಜ್ಞೆ ಇದ್ದರೂ ಕೂಡ ನನ್ನ ನಾದಿನಿ ಈ ನಿವೇಶನದಲ್ಲಿ ಕಟ್ಟುವುದಕ್ಕೆ ಬರುತ್ತಿದ್ದಾರೆ ಎಂದು ಹೇಳಿ ನೇರವಾಗಿ ಅವರು ಪೊಲೀಸ್ ಸ್ಟೇಷನ್ಗೆ ಹೋಗಿ ತಮ್ಮ ಅಹವಾಲು ನೇರವಾಗಿ ಹೋಗವಂತಾದ್ದು ಇದೆ. ಪೊಲೀಸ್ನವರು ಬೇರೆಯವರ ಪರ ಸೇರಿ ಒಬ್ಬ ಐಎಎಸ್ ಅಧಿಕಾರಿಯ ಹಿಂದೆ ಇರತಕ್ಕಂತಹ ಅವರ ಜೊತೆಯಲ್ಲಿ ಸೇರಿ ಆ ಒಂದು ನಿವೇಶನ ಯಾರು ಅಕ್ರಮವಾಗಿ ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಹೋಗಿದ್ದಾರೆ ಅವರ ನಾದಿನಿ ನಿವೇಶನದ ಜಾಗದಲ್ಲಿ ಅವರಿಗೆ ಬೆಂಬಲವಾಗಿ ಕೊಡುವುದಕ್ಕೆ ಹೊರಟಂತಹ ಪೊಲೀಸರು ತಮ್ಮ ತಪ್ಪನ್ನು ಮುಚ್ಚಿಕೊಳ್ಳುವುದಕ್ಕೆ ರಂಗನಾಥ್ ಮೇಲೆ ಈ ರೀತಿ ಮಾಡಿದ್ದಾರೆ. ಸುಮಾರು 25-30 ವರ್ಷಗಳಿಂದ ರಂಗನಾಥ್ ನನ್ನ ಜೊತೆಯಲ್ಲಿ ಇದ್ದಾರೆ. 30 ವರ್ಷಗಳಿಂದ ಅವರು ಪೋಲೀಸ್ ಸ್ಟೇಷನ್ಗೆ ಹೋಗಿ, ಪಟ್ಟಿ ಹಿಡಿದು ಪೊಲೀಸ್ನವರನ್ನು ಎಳೆದುದಾಗಲಿ, ಜೀವನದಲ್ಲಿ ಇದುವರೆಗೂ ಮಾಡಿಲ್ಲ. ಈತ ಏನೂ ರೌಡಿಯಲ್ಲ. ಬಹಳ ಒಳ್ಳೆಯ ಸಂಸ್ಕೃತವಾದಂತಹ ವ್ಯಕ್ತಿ. ನೀವು ಅವರಿಗೆ ತೊಂದರೆ ಕೊಡುವುದಲ್ಲದೆ ಪೊಲೀಸ್ ಸ್ಟೇಷನ್ನಲ್ಲಿ ಬೇಡಿ ಹಾಕುವುದಲ್ಲದೆ ಬೂಟ್ಸ್ನಲ್ಲಿ ಒಡೆಯುವುದಲ್ಲದೆ ಇವತ್ತು ನೀವು ಈ ರೀತಿಯ ಹೇಳಿಕೆ ಕೊಡುತ್ತಾ ಅವನು ಒಂದು ರೀತಿಯ ಕೆಟ್ಟ ಮನುಷ್ಯ ಎನ್ನುವ ರೀತಿಯಲ್ಲಿ ಹೇಳಿಕೆಯನ್ನು ಕೊಡುತ್ತಿದ್ದೀರಿ.

ನನಗೆ ಅನ್ನಿಸುತ್ತದೆ ಇದು ಸರಿಯಲ್ಲ, ನೀವು ಹೇಳತಕ್ಕಂಥ ಮಾತು ಇದೆಯಲ್ಲಾ ಇದಕ್ಕಿಂತ ಅವಮಾನ, ಇದಕ್ಕಿಂತ ಅಗೌರವ ನಿಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು, ಯಾವ ಮಟ್ಟಕ್ಕೆ ನೀವು ಸ್ಟೇಟ್ಮೆಂಟ್ ಕೊಡುತ್ತಿದ್ದೀರಿ, ನಿಮ್ಮ ಹೇಳಿಕೆಯನ್ನು ಸತ್ಯವಾಗಿ ಕೊಡುತ್ತಿದ್ದೀರೋ ಪ್ರಾಮಾಣಿಕವಾಗಿ ಕೊಡುತ್ತಿದ್ದೀರೋ? ಈ ಅನ್ಯಾಯವನ್ನು ಸರಿಪಡಿಸುತ್ತೇವೆಂದು ಸಬ್ಇನ್ಸ್ಪೆಕ್ಟರನ್ನು ಸಸ್ಪೆಂಡ್ ಮಾಡುತ್ತೇವೆ ಎಂದು ಹೇಳಿದ್ದಾರಾ? ಈ ಕೆಟ್ಟ ಹೇಳಿಕೆಯನ್ನು ಇಲ್ಲಿ ಯಾರಿಗೆ ಕೊಡುತ್ತಿದ್ದೀರಿ. ಇಂಥ ಹೇಳಿಕೆಯನ್ನು ಕೊಡುವುದು ಸರಿಯಲ್ಲ ಎಂಬ ಮಾತನ್ನು ನಾನು ಹೇಳುತ್ತಿದ್ದೇನೆ. ನೀವು ಪ್ರಾಮಾಣಿಕವಾಗಿ, ಪ್ರತ್ಯಕ್ಷವಾಗಿ ಇದರ ಬಗ್ಗೆ ಒಂದು ನ್ಯಾಯಾಂಗ ತನಿಖೆಯನ್ನು ಮಾಡಿ, ನ್ಯಾಯಾಂಗ ತನಿಖೆಯಲ್ಲಿ ಯಾರು ಹೊರಗಡೆ ಬರುತ್ತಾರೆ ಹೇಳುತ್ತೇನೆ. ನಿಮ್ಮ ಉದ್ದೇಶ ಏನು ಎಂಬುದನ್ನು ಹೇಳಿ. ನಿಮ್ಮ ಬಗ್ಗೆ ನನಗೆ ಬಹಳ ಗೌರವ ಇತ್ತು ಈ ತರಹದ ಪೊಲೀಸ್ ದಫೇದಾರ ಕೊಟ್ಟಿರತಕ್ಕ ಹೇಳಿಕೆಯನ್ನು ಈ

ಸಭೆಯಲ್ಲಿ ಕನ್ನಡಕ್ಕಾಗಿ ಹೋರಾಟ ಮಾಡಿದಂಥ ಒಬ್ಬ ಕಾರ್ಯಕರ್ತನ ಮೇಲೆ ಮಸಿ ಬಳಿಯ ತಕ್ಕಂಥ ನೀತಿಗೆ ನೀವು ಹೊರಟಿರತಕ್ಕಂಥದ್ದು ಸರಿಯಲ್ಲ. ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಮತ್ತೆ ಈ ಹೇಳಿಕೆಯನ್ನು ಪುನರ್ ಪರಿಶೀಲನೆ ಮಾಡಿ, ಮತ್ತೆ ತನಿಖೆ ಮಾಡಿ ಸಮಗ್ರವಾದ, ಸತ್ಯವಾದ ಹೇಳಿಕೆಯನ್ನು ಈ ಸಭೆಯಲ್ಲಿ ಕೊಡಿ ಎಂದು ತಮಗೆ ಹೇಳುತ್ತಿದ್ದೇನೆ.

ಪ್ರೊ|| ಎಂ.ಡಿ. ನಂಜುಂಡಸ್ವಾಮಿ : ಸಭಾಧ್ಯಕ್ಷರೇ, ಲಾಠಿ ಚಾರ್ಜ್ ಅಥವಾ ಹೊಡೆಯುತ್ತಿದ್ದುದನ್ನು ನಾನು ಕಣ್ಣಾರೆ ನೋಡಿದ್ದೇನೆ ಎಂದು ನಮ್ಮ ಶಾಸಕ ಮಿತ್ರರು ಹೇಳುತ್ತಿದ್ದಾರೆ. ಅದನ್ನು ಸ್ವಲ್ಪ ಗಮನಕ್ಕೆ ತೆಗೆದುಕೊಂಡು ಇದರ ಬಗ್ಗೆ ಲಘುವಾಗಿ ತೆಗೆದುಕೊಳ್ಳಬೇಡಿ.

\+ ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಸನ್ಮಾನ್ಯ ಅಧ್ಯಕ್ಷರೇ, ಹೊಡೆದಂಥಹದ್ದು ನಿಜ ಎಂದು ಸಬ್ ಇನ್ಸ್‌ಪೆಕ್ಟರ್ ರವರು ಒಪ್ಪಿಕೊಂಡು ಹೇಳಿದ್ದಾರೆ. ಬೇಡಿ ಹಾಕಿದ್ದುದು ನಿಜ. ಸುತ್ತ ಮುತ್ತ 7-8 ಜನ ನೋಡಿರುವುದು ನಿಜ. ನಾನು ಕಣ್ಣಿನಿಂದ ನೋಡಿ ಕಮೀಷನರ್ ರವರಿಗೆ ಈ ಬಗ್ಗೆ ದೂರು ಕೊಟ್ಟಾಗ ಪರಿಶೀಲನೆ ಮಾಡುತ್ತೇವೆ, ಸಂಬಂಧಪಟ್ಟವರನ್ನು ಸಸ್ಪೆಂಡ್ ಮಾಡುತ್ತೇವೆ ಎಂದು ಹೇಳಿದರು. ಆದರೆ ಇದುವರೆಗೂ ಏನೂ ಮಾಡಲಿಲ್ಲ. ಮಾನ್ಯ ಗೃಹ ಸಚಿವರಿಗೂ ನಾನೇ ಹೋಗಿ ಹೇಳಿದ್ದೇನೆ. ನಾವು ಕಣ್ಣಿನಿಂದ ನೋಡಬೇಕು, ನಂತರ ಪರಿಶೀಲನೆ ಮಾಡಬೇಕು ನಾಳೆ ಹೋಗೋಣ ಎಂದು ಹೇಳಿ, ಯಾವುದೋ ಸಮಾರಂಭ ಇದೆ ಎಂದು ಹೋದರು. ಇದರ ಬಗ್ಗೆ ನಾನು ಲಿಖಿತವಾಗಿ ಮುಖ್ಯಮಂತ್ರಿಗಳಿಗೂ ಕೊಟ್ಟಿದ್ದೇನೆ. ಗೃಹಸಚಿವರಿಗೂ ಕೊಟ್ಟಿದ್ದೇನೆ. ಇದುವರೆಗೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಪ್ರತಿ ಸ್ಟೇಷನ್ನಲ್ಲೂ ಈ ರೀತಿ ಅಮಾಯಕರನ್ನು ಹೊಡೆಯತಕ್ಕ ವ್ಯವಸ್ಥೆ ನಡೆಯುತ್ತಲೇ ಇದೆ, ಇದು ಬಹಳ ಚಿಂತನೆ ಮಾಡತಕ್ಕ ವಿಚಾರ. ಯಾವುದೇ ದೂರು ಕೊಡತಕ್ಕಂಥವರನ್ನು ಅದೂ ಏನೂ ತಪ್ಪು ಮಾಡದೆ ಇರತಕ್ಕಂಥವರನ್ನು ಈ ರೀತಿ ಮಾಡುತ್ತಿರುವುದು ಬಹಳ ಅನ್ಯಾಯವಾಗಿದೆ. ಆ ದೃಷ್ಟಿಯಲ್ಲಿ ಸಂಬಂಧಪಟ್ಟ ಸಬ್‌ಇನ್ಸ್‌ಪೆಕ್ಟರ್‌ರನ್ನು, ತಕ್ಷಣ ಸಸ್ಪೆಂಡ್ ಮಾಡಬೇಕು, ಮಾಡಿ ನಂತರ ತನಿಖೆ ಮಾಡಬೇಕು ಎಂದು ತಮ್ಮ ಮುಖಾಂತರ ಗೃಹ ಸಚಿವರನ್ನು ಒತ್ತಾಯ ಮಾಡುತ್ತಿದ್ದೇನೆ.

\+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ನಾನು ಇವತ್ತು ಸನ್ಮಾನ್ಯ ಗೃಹ ಸಚಿವರನ್ನು ವಿನಂತಿ ಮಾಡುವಂಥದ್ದು, ಇವತ್ತು ಸನ್ಮಾನ್ಯ ಗೃಹಸಚಿವರು ಒಂದು ಹೇಳಿಕೆಯನ್ನು ಕೊಡುವುದಕ್ಕೆ ಮುಂಚೆ ಅವರ ಅಧಿಕಾರಿಗಳು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ ಅದನ್ನು ಪರಾಂಬರಿಸಿ ಓದಿ, ಸತ್ಯಾಸತ್ಯತೆಯನ್ನು ನೋಡಿ ಮನದಟ್ಟಾದ ಮೇಲೆ ಅವರು ಈ ಸದನದಲ್ಲಿ ಹೇಳಿಕೆಯನ್ನು ಕೊಡಬೇಕು. ಆಡಳಿತ ಪಕ್ಷದ ಸದಸ್ಯರಾದ ಲಕ್ಕಣ್ಣನವರು ಪೊಲೀಸಿನವರು ಲಾಠಿ ಚಾರ್ಜ್ ಮಾಡಿದ್ದನ್ನು ಅವರ ಕೈಗೆ ಬೇಡಿಯನ್ನು ಹಾಕಿದ್ದನ್ನು ನೋಡಿದ್ದೇವೆ. ಆ ರೀತಿ ಅನೇಕ ಜನ ಆಡಳಿತ ಪಕ್ಷದ ಸದಸ್ಯರು ಸಹ ಹೇಳುವವರಿದ್ದಾರೆ. ಇಲ್ಲಿ ಸನ್ಮಾನ್ಯ ಅಧ್ಯಕ್ಷರೇ, ಕೊನೆಯ ಪುಟವನ್ನು ಓದಿ ತಾವು ಮೊದಲು ಹೇಳಿದಂತೆ ಆರೋಪಗಳು ನಿಜವಾಗಿದ್ದರೆ ಕೊನೆಯಲ್ಲಿ ಆ ಇಬ್ಬರು ಪೇದೆಗಳನ್ನು ಆ ರಂಗನಾಥ್ ಹೇಳಿದಂಥ ಹೇಳಿಕೆಯ ಮೇಲೆ ಸಸ್ಪೆನ್‌ಷನ್‌ನಲ್ಲಿ ಏಕೆ ಇಟ್ಟಿರಿ? ಯಾವುದು ಸತ್ಯ? ಅಂದರೆ ಒಂದು ಕಡೆ ಅವರ ಕತ್ತಿನಪಟ್ಟಿ ಹಿಡಿದುಕೊಂಡು ಪೊಲೀಸ್ ಸ್ಟೇಷನ್‌ನಲ್ಲಿ ಗೂಂಡಾಗಿರಿ ನಡೆಸಿದ ಎಂದು ಹೇಳುತ್ತೀರಿ? ಮತ್ತೊಂದು ಕಡೆ ಆ ಪೇದೆಗಳು ಮಾಡಿದ ತಪ್ಪಿಗೆ ಸಸ್ಪೆನ್‌ಷನ್‌ನಲ್ಲಿ ಇಟ್ಟಿದ್ದೇವೆ ಎಂದು ಹೇಳುತ್ತೀರಿ ಅಂದರೆ ನಿಮ್ಮ ಉತ್ತರದಲ್ಲಿ ಒಂದಕ್ಕೊಂದು ಸಂಬಂಧವಿಲ್ಲದ ಉತ್ತರವನ್ನು ನಿಮ್ಮ ಅಧಿಕಾರಿಗಳು ನಿಮ್ಮ ಬಾಯಲ್ಲಿ ಹೇಳಿಸಿರಬೇಕಾದರೆ ಒಬ್ಬ ಗೃಹಸಚಿವರಾಗಿ, ಇದನ್ನು ಹೇಳುವುದಕ್ಕೆ ಮುಂಚೆ ತಾವು

ಜವಾಬ್ದಾರಿಯುತವಾಗಿ ಹೇಳಿಕೆಯನ್ನು ಕೊಡಬೇಕಾಗುತ್ತದೆ. ಇದೊಂದೆ ಅಲ್ಲ ಕರ್ನಾಟಕದ ಎಲ್ಲಾ ಪೊಲೀಸ್ ಸ್ಟೇಷನ್‌ನಲ್ಲೂ ಈ ರೀತಿ ಅಮಾಯಕರನ್ನು ಕರೆದುಕೊಂಡು ಹೋಗಿ ಮನಬಂದಂತೆ ಒಂದು ರೀತಿಯ ದೌರ್ಜನ್ಯ ನಡೆಯುತ್ತಿದೆ ಎಂಬುದಕ್ಕೆ ಒಂದು ಜೀವಂತ ಸಾಕ್ಷಿ ಎಂದು ಆಡಳಿತ ಪಕ್ಷದ ಸದಸ್ಯರಿಗೆ ಈ ಮಾತನ್ನು ಹೇಳುತ್ತಿದ್ದೇನೆ. ಅದಕ್ಕೆ ನಾನು ಹೇಳುತ್ತೇನೆ. ಇವತ್ತು ಹೇಳಿಕೆಯನ್ನು ವಾಪಸ್ಸು ಪಡೆಯಿರಿ, ತಾವು ಹೋಗಿ ಶಾಸಕರನ್ನು ಕರೆದುಕೊಂಡು ಹೋಗಿ ಸತ್ಯಸಂಗತಿಯನ್ನು ತಿಳಿದುಕೊಂಡು ಅವರ ಮೇಲೆ ಮಾಡಿರತಕ್ಕಂಥ ದೌರ್ಜನ್ಯ ಅನ್ಯಾಯ ಅಂತ ಅಂದರೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಂಡು ನಾಳೆ ಬೇಕಾದರೆ ಹೇಳಿಕೆಯನ್ನು ಕೊಡಿ. ದಯಮಾಡಿ ತಾವು ಎದ್ದು ನಿಂತುಕೊಂಡು ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಗೃಹಸಚಿವರಾಗಿದ್ದು ನಿಮಗೆ ಗೌರವ ತರುವಂಥ ಸಂಗತಿಯಲ್ಲ, ದಯಮಾಡಿ ಇದನ್ನು ಹಿಂತೆಗೆದುಕೊಂಡು ಸತ್ಯಾಸತ್ಯತೆಯನ್ನು ತಿಳಿದುಕೊಂಡು ನಾಳೆ ಹೇಳಿಕೆಯನ್ನು ಕೊಡಬೇಕು. ಈ ರೀತಿಯ ದೌರ್ಜನ್ಯ ಕರ್ನಾಟಕ ರಾಜ್ಯದಲ್ಲಿ ನಡೆಯದಂತೆ ತಾವು ನೋಡಿಕೊಳ್ಳಬೇಕು ಎಲ್ಲಾ ಕಡೆಯೂ ಇದೇ ಆಗಿದೆ. ಪೊಲೀಸ್ ಸ್ಟೇಷನ್‌ಗಳು ತನಗೆ ಮನಬಂದಂತೆ ಸರ್ವಾಧಿಕಾರಿಗಳಾಗುವುದಕ್ಕಾಗುವುದಿಲ್ಲ. ಈ ರೀತಿಯಾದರೆ ಮುಂದಿನ ಭವಿಷ್ಯ ಏನು? ಆ ಹೇಳಿಕೆಯನ್ನು ಹಿಂತೆಗೆದುಕೊಳ್ಳುವುದಕ್ಕೆ ಅವರಿಗೆ ಹೇಳಿ.

ಅಧ್ಯಕ್ಷರು : ಗೃಹ ಸಚಿವರು ನನಗನ್ನಿಸಿದ ಮಟ್ಟಿಗೆ ಸರಿಯಾಗಿ ಕೂಲಂಕಷವಾಗಿ ವಿಚಾರ ಮಾಡಿಕೊಂಡು ಬಂದು ಸದನಕ್ಕೆ ಹೇಳಿಕೆಯನ್ನು ಕೊಡಬೇಕೆಂದು ಪುನಃ ಹೇಳುತ್ತೇನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ತಾವು ಅನ್ಯಥಾ ಭಾವಿಸಬೇಡಿ. ತಾವು ಸರ್ಕಾರಕ್ಕೆ ಆದೇಶ ಕೊಡತಕ್ಕದ್ದು ತಮ್ಮ ಅಧ್ಯಕ್ಷ ಪೀಠದಿಂದ ಉಚಿತವಾದ ಕ್ರಮ. ತಾವು ಮಾಡಿರತಕ್ಕದ್ದು ಸರಿ. ಆದರೆ ಪ್ರಜಾತಂತ್ರ ವ್ಯವಸ್ಥೆಯನ್ನು ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಸರ್ಕಾರ ಮಾಡತಕ್ಕದ್ದನ್ನೆಲ್ಲಾ ಒಪ್ಪಿಕೊಂಡು ಕೇಳಿಕೊಂಡು ಹೋಗುವುದಕ್ಕೆ ನಾವು ಬಂದಿಲ್ಲ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ತೀವ್ರವಾಗಿ ಗಮನಿಸಬೇಕಾಗುತ್ತದೆ. ಶ್ರೀ ರಂಗನಾಥ್ ಅವರು ಕನ್ನಡಕ್ಕೋಸ್ಕರ ಹೋರಾಟ ಮಾಡಿರತಕ್ಕ ವ್ಯಕ್ತಿ. ಅವರು ಬಂದು ಕಣ್ಣಲ್ಲಿ ನೀರು ಹಾಕಿಕೊಂಡು ನಮ್ಮಲ್ಲಿ ಅನೇಕರನ್ನು ಭೇಟಿ ಮಾಡಿ ನಮಗೆ ಈ ರೀತಿ ಮಾಡಿದ್ದಾರೆಂದು ಹೇಳಿದರು. ನಾನು ಚೌಡರೆಡ್ಡಿಯವರಿಂದ ಇದನ್ನು ಎಕ್ಸ್‌ಪೆಕ್ಟ್ ಮಾಡಿರಲಿಲ್ಲ. ಏಕೆಂದರೆ ಚೌಡರೆಡ್ಡಿಯವರು ಎರಡು ಕಡೆ ವಿಮರ್ಷೆ ಅಧಿಕಾರಿಗಳು ಹೇಳುವುದನ್ನು ಮತ್ತು ಸಾರ್ವಜನಿಕರು ಹೇಳುವುದನ್ನು ಕೇಳಿ ವಿಮರ್ಶೆ ಮಾಡಿ ಸತ್ಯಾಂಶ ಪರಿಶೋಧನೆ ಮಾಡತಕ್ಕ ಶಕ್ತಿ ಇರತಕ್ಕ ಮಂತ್ರಿಗಳು ಎಂದು ತಿಳಿದುಕೊಂಡಿದ್ದೇನೆ. ಇದು ಒಂದು ರೀತಿಯಲ್ಲಿ ಸದನಕ್ಕೆ ಅಗೌರವ ತರತಕ್ಕದ್ದು. ಈಗ ಪ್ರಾಪರ್ಟಿ ಡಿಸ್‌ಪ್ಯೂಟ್ ಏನಿದೆ ಅದರ ಬಗ್ಗೆ ನಮಗೆ ಸಂಬಂಧ ಇಲ್ಲ. ಆದರೆ ನಮ್ಮ ಜವಾಬ್ದಾರಿ ಶಾಸಕರು ಈ ರೀತಿ ಹೇಳಿರುವಾಗ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಇಂಟರ್‌ವೀನ್ ಆಗಬೇಕಾಗುತ್ತದೆ. ಮುಖ್ಯ ಮಂತ್ರಿಗಳು ತಾವು ಹೇಳಿಕೆ ಕೊಡಬೇಕಾಗುತ್ತದೆ ಮತ್ತು ತಾವು ಕರೆಸಿ ಮಾತನಾಡಬೇಕಾಗುತ್ತದೆ. ಒಬ್ಬ ಡಿಸಿಪಿ ಅಥವಾ ಎಸಿಪಿ.ಯನ್ನು ಎನ್‌ಕ್ವೈರಿ ಆಫೀಸರ್ ಆಗಿ ಅಪಾಯಿಂಟ ಮಾಡಿದ್ದೀರಿ. ಎಸಿಪಿ ಹೇಳುತ್ತಾರೆಂತೆ ಬಹಳ ಅವಾಚ್ಯ ಶಬ್ದಗಳಲ್ಲ, ಅದನ್ನು ಸದನದಲ್ಲಿ ಅಲ್ಲ, ಖಾಸಗಿಯಾಗಿ ಕೂಡ ನಾವು ಹೇಳುವುದಕ್ಕಾಗುವುದಿಲ್ಲ, ಅಂಥ ಶಬ್ದಗಳನ್ನು ಉಪಯೋಗಿಸಿ ನೀವು ಏನು ಮಾಡಿಕೊಳ್ಳಬಲ್ಲಿರಿ ಎಂದು ಶಾಸಕರ ಮೇಲೆ ವಿರೋಧ ಪಕ್ಷದ ನಾಯಕರ ಮೇಲೆ ಮಂತ್ರಿಗಳ ಮೇಲೆ ಮಾತನಾಡಿದ್ದಾರೆ. ಹೀಗೆ ಮಾತನಾಡಿರಬೇಕಾದರೆ ಇದನ್ನು ಅಷ್ಟಕ್ಕೆ ಲಘುವಾಗಿ ಬಿಟ್ಟು ನಾಳೆ ಒಂದು ಹೇಳಿಕೆ ಕೊಡುತ್ತಾರೆ, ನಾಡಿದ್ದು ಸದನ ಮುಗಿಯುತ್ತದೆಂದರೆ ಇದನ್ನು ನಾವು ಹಾಗೆ ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ. ಮುಖ್ಯ ಮಂತ್ರಿಗಳು ನಿರ್ಧಿಷ್ಟವಾಗಿ ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು

ಹೇಳಬೇಕು. ಒಬ್ಬ ಕಾನ್‌ಸ್ಟೇಬಲ್ ಅನ್ನು ಸಸ್ಪೆಂಡ್ ಮಾಡಿದರೆ ಏನೂ ಉಪಯೋಗ ಇಲ್ಲ. ಇಂಥ ಸಂದರ್ಭದಲ್ಲಿ ಸಬ್ ಇನ್ಸ್‌ಪೆಕ್ಟರ್ ಅಥವಾ ಎನ್‌ಕ್ವೈರಿ ಆಫೀಸರ್ ಚೇಂಜ್ ಮಾಡುವುದರ ಬಗ್ಗೆ ಮುಖ್ಯ ಮಂತ್ರಿಗಳು ಹೇಳಬೇಕಾಗುತ್ತದೆ. ಇವತ್ತು ಹೇಳುವುದಕ್ಕಾಗುವುದಿಲ್ಲವೆಂದರೆ, ತಮ್ಮ ಗಮನಕ್ಕೆ ಬಾರದೆ ಇದ್ದರೆ ಪೊಲೀಸ್ ಕಮಿಷನರ್ ಜೊತೆ ಮಾತನಾಡಿ ನಾಳೆ ಮುಖ್ಯ ಮಂತ್ರಿಗಳು ಇದರ ಬಗ್ಗೆ ಹೇಳಿಕೆಯನ್ನು ಕೊಡಬೇಕು. ಮುಖ್ಯ ಮಂತ್ರಿಗಳೇ, ತಾವು ಈ ಹೇಳಿಕೆಯನ್ನು ಓದಿ ಇದು ತಮ್ಮ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ. ಇದು ತಮ್ಮ ಗಮನಕ್ಕೆ ಬರುವುದಕ್ಕೆ ಸಾಧ್ಯವಿಲ್ಲ. ಇದು ಪೊಲೀಸ್ ಸ್ಟೇಷನ್‌ನಲ್ಲಿ ಹೆಡ್ ಕಾನ್‌ಸ್ಟೇಬಲ್ ಬರೆದಿರತಕ್ಕ ರಿಪೋರ್ಟು.

ಶ್ರೀ ಚೌಡರೆಡ್ಡಿ : ನಾನು ಅದನ್ನು ಪರಿಶೀಲನೆ ಮಾಡಿ ಎಂದು ಹೇಳಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ತಾವು ಅವರನ್ನು ಕರೆಯಿಸಿ ಮಾತನಾಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಬಹಳ ಗಂಭೀರವಾದ ಪ್ರಶ್ನೆಯನ್ನು ಮಾನ್ಯ ವಿರೋಧ ಪಕ್ಷದ ಉಪ ನಾಯಕರು ಮತ್ತಿತರ ಸದಸ್ಯರು ಎತ್ತಿದ್ದಾರೆ. ಯಾರನ್ನು ಮುಚ್ಚಿಡಬೇಕಾದ ಅವಶ್ಯಕತೆ ನಮಗೆ ಇಲ್ಲ. ಅನ್ಯಾಯ ಮಾಡಿದ್ದರೆ ಯಾರೇ ಆಗಲಿ ನಾವು ಸಹಿಸುವುದಿಲ್ಲ. ಅದಕ್ಕೆ ನಾವು ಪೊಲೀಸ್ ಕಮೀಷನರನ್ನು ಕರೆಯಿಸಿ ಅವರೊಡನೆ ಕೂಲಂಕಷವಾಗಿ ಚರ್ಚೆ ಮಾಡಿ ಒಂದನೇ ತಾರೀಖು ನಾವು ಹೇಳಿಕೆ ಕೊಡುತ್ತೇವೆ.

ಕಬ್ಬಿನ ಮೇಲೆ ವಿಧಿಸಿರುವ ತೆರಿಗೆಯಿಂದ ರೈತರಿಗೆ ತೊಂದರೆ

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಾನು ಹಂಪನಗೌಡ, ಸಿಂಧ್ಯ ಮತ್ತಿತರ ಶಾಸಕರು, ಸರ್ಕಾರದವರು ರೈತರ ಕಡೆಯಿಂದ ಖರೀದಿಸುವ ಕಬ್ಬಿನ ಬೆಲೆಯ ಮೇಲೆ ಶೇಕಡ 7ರಷ್ಟು ಅಡ್ವೋಲೆರಮ್ ಹಾಗೂ ಶೇಕಡ 1ರಷ್ಟು ಸೆಸ್ ಅನ್ನು ವಿಧಿಸಿರುವುದರಿಂದ ರೈತರಿಗೆ ಆಗಿರುವ ತೊಂದರೆಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷರೇ, ತಮ್ಮ ಅಪ್ಪಣೆ ಕೋರಿ ನಾನು ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ.

1. ಕಬ್ಬು ರಾಜ್ಯದಲ್ಲಿ ಕೊನೆಯ ಖರೀದಿಯ ಹಂತದ ಮೇಲೆ ಕರ್ನಾಟಕ ಮಾರಾಟ ತೆರಿಗೆ ಮೂರನೇ ಅನುಸೂಚಿಯ 6ನೇ ಕ್ರಮಾಂಕದಲ್ಲಿ ತೆರಿಗೆಗೆ ಒಳಪಡುತ್ತದೆ.

2. ಸಕ್ಕರೆ ಕಾರ್ಖಾನೆಗಳ ಮೇಲಿನ ಖರೀದಿ ತೆರಿಗೆ ದರ ದಿನಾಂಕ 31-3-93ರವರೆಗೆ ಶೇಕಡ 8 ಇದ್ದು ದಿನಾಂಕ 1-4-94ರಿಂದ ಶೇಕಡ 6 ಆಗಿರುತ್ತದೆ. ದಿನಾಂಕ 1-4-94ರಿಂದ ಶೇಕಡ 1 ರಂತೆ ಉಪಕರ (ಸೆಸ್) ಅನ್ನು ಕೂಡ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಉಪಬಂಧ 6Ëಬಿಬಿ ಅಡಿಯಲ್ಲಿ ವಿಧಿಸಲಾಗಿದ್ದು ಅದನ್ನು ಕಬ್ಬು ಬೆಳೆಯುವ ಪ್ರದೇಶಗಳಲ್ಲಿನ ರಸ್ತೆಗಳ ಸುಧಾರಣೆಗಾಗಿ ಮೀಸಲಾಗಿಡಲಾಗಿದೆ.

3. ಕಬ್ಬಿನ ಬೆಲೆಯನ್ನು ಸರ್ಕಾರಿ ಸಲಹೆಯಂತೆ ಪ್ರತಿ ವರ್ಷ ಗೊತ್ತುಪಡಿಸುವಾಗ ಕಬ್ಬು ಬೆಳೆಗಾರರ ಮೇಲೆ ಈ ತೆರಿಗೆಯ ಹೊರೆ ಬೀಳದಂತೆ ಎಚ್ಚರ ವಹಿಸಲಾಗುತ್ತದೆ. ಸರ್ಕಾರಿ ಸಲಹೆಯಂತೆ ಗೊತ್ತುಪಡಿಸಲಾಗುವ ಕನಿಷ್ಠ ದರವು ಕಬ್ಬು ಬೆಳೆಗಾರರಿಗೆ ಕಾರ್ಖಾನೆಯಿಂದ ನೀಡಬೇಕಾದ ಹಣವಾಗಿದ್ದು ತೆರಿಗೆ ಮೊತ್ತ ಇದರಲ್ಲಿ ಸೇರಿರುವುದಿಲ್ಲ. ಅಲ್ಲದೆ, ಒಟ್ಟು ಸಂಗ್ರಹಿಸಲಾದ ಖರೀದಿ ತೆರಿಗೆ ಮೊತ್ತದಲ್ಲಿ ಪ್ರತಿ ಟನ್‌ಗೆ ರೂ 12.00ರಂತೆ ಪ್ರೋತ್ಸಾಹಕ ಸಹಾಯ ಧನವನ್ನು ಕಬ್ಬು ಬೆಳೆಗಾರರಿಗೆ ನೀಡಲಾಗುತ್ತದೆ.

4. 1993-94ನೇ ಸಕ್ಕರೆ ವರ್ಷದಲ್ಲಿ ಸರ್ಕಾರಿ ಸಲಹೆಯಂತೆ, ನಿಗಧಿಪಡಿಸಲಾದ ಕನಿಷ್ಠ ದನವು ಟನ್ನಿಗೆ ರೂ. 465.00 ಆಗಿರುತ್ತದೆ. (8.5 ವಸೂಲಿಗೆ ಸೀಮಿತ)

5. ಕಳೆದ ನಾಲ್ಕು ವರ್ಷಗಳಲ್ಲಿ ಕಬ್ಬಿನಿಂದ ಸಂಗ್ರಹಿಸಲಾದ ತೆರಿಗೆ ಈ ಕೆಳಗಿನಂತಿದೆ:

ವರ್ಷ ಖರೀದಿ	ತೆರಿಗೆ (ಕೋಟಿ ರೂ.ಗಳಲ್ಲಿ)
1990-91	18.89
1991-92	20.15
1992-93	24.13
1993-94	32.78

6. ನೆರೆಯ ರಾಜ್ಯಗಳಾದ ತಮಿಳುನಾಡು ಮತ್ತು ಕೇರಳದಲ್ಲಿ ಕೂಡ ಖರೀದಿ ತೆರಿಗೆಯನ್ನು ಕ್ರಯಾನುಸಾರ ವಿಧಿಸಲಾಗುತ್ತಿದೆ.

7. ಸರ್ಕಾರಿ ಸಲಹೆಯಂತೆ ಕಬ್ಬಿನ ಖರೀದಿಗೆ ಮಾಡಲಾದ ಕನಿಷ್ಠ ಬೆಲೆಯಿಂದ ಕಬ್ಬು ಬೆಳೆಗಾರರು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದಡಿ ಯಾವ ತೆರಿಗೆಯ ಹೊರೆಗೂ ಗುರಿಯಾಗದೆ ತಮ್ಮ ಫಸಲಿನ ಮೇಲೆ ಪೂರ್ಣ ಹಣ ಪಡೆಯುವಲ್ಲಿ ಸಹಾಯಕವಾಗಿದೆ.

+ ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿಕೆ ಕೊಟ್ಟಿದ್ದಾರೆ ಅದರಲ್ಲಿ ಈಗ ಯಾವ ಪ್ರಕಾರ ಸರ್ಕಾರ ತೆರಿಗೆ ಹಾಕುತ್ತಿದೆ ಎಂಬ ಬಗ್ಗೆ ವಿವರ ಕೊಟ್ಟಿದ್ದಾರೆ, ನಿಜ. ಮುಂದೆ 1-1-93 ರಿಂದ 1-4-94ರವರೆಗೆ ಸರ್ಕಾರ ಈ ಒಂದು ತೆರಿಗೆಯನ್ನು ಹಾಕುವಾಗ ಪ್ರತಿಯೊಂದು ಟನ್ ಲೆಕ್ಕದ ಮೇಲೆ ಹಾಕುತ್ತಿತ್ತು. ಅದು 1982-83ರಲ್ಲಿ 17.60 ಪರ್ ಟನ್ ಇತ್ತು. 80-81ರಲ್ಲಿ 19.20 ಪೈಸೆ ಇತ್ತು. 81-82ರಲ್ಲಿ 18.80 ಪೈಸೆ, 82-83ರಲ್ಲಿ 17.60 ಪೈಸೆ, 1-4-90ಕ್ಕೆ 20 ರೂಪಾಯಿ. ಒಂದು ಟನ್‌ಗೆ 20 ರೂಪಾಯಿ ಆಯಿತು. ಈಗ ಒಂದು ಟನ್ನಿಗೆ 20 ರೂಪಾಯಿ ಇದ್ದಾಗ 12 ರೂಪಾಯಿಗಳನ್ನು ತಾವು ರೈತರಿಗೆ ವಾಪಸ್ಸು ಕೊಡುತ್ತಿದ್ದೀರಿ. 20 ರೂಪಾಯಿ ತೆರಿಗೆ ವಸೂಲ್ಮಾಡಿದ್ದರಲ್ಲಿ 12 ರೂಪಾಯಿಗಳನ್ನು ರೈತರಿಗೆ ಪ್ರೋತ್ಸಾಹಕ ರೂಪದಲ್ಲಿ ವಾಪಸ್ಸು ಕೊಡುತ್ತಿದ್ದೀರಿ. ಈಗ ತಾವು ಏನು ಮಾಡಿದಿರಿ ಅಂದರೆ ಇದರಲ್ಲಿ ಬದಲಾವಣೆ ಮಾಡಿ 1-4-94ಕ್ಕೆ ತಾವು ಅಡ್ವೊಲರ ಟ್ಯಾಕ್ಸ್ ಹಾಕಿ 6 ಪರ್ಸೆಂಟ್ ಎಂದು ತಾವು ಹೇಳಿದಿರಿ, 7 ಪರ್ಸೆಂಟ್ ಎಂದು ಮಾಹಿತಿ ಇದೆ. ಇದನ್ನು ತಾವು ಚೆಕ್‌ಅಪ್ ಮಾಡಿ ನೋಡಿ. ಅಡ್ವೊಲರ್ 1-4-94ರಿಂದ 7 ಪರ್ಸೆಂಟ್ ಎಂದು ಹೇಳಿದ್ದಾರೆ. ತಾವು ಉತ್ತರದಲ್ಲಿ 6 ಪರ್ಸೆಂಟ್ ಹೇಳಿದ್ದೀರಿ. ಒಂದು ಪರ್ಸೆಂಟ್ ಸೆಸ್ ಎಂದು ಡೆವಲಪ್‌ಮೆಂಟ್ ವರ್ಕ್ಸ್ ಮೇಲೆ ನಾವು ಖರ್ಚು ಮಾಡುತ್ತೇವೆಂದು ಹೇಳುತ್ತೀರಿ. ಅಭಿವೃದ್ಧಿ ಸಲುವಾಗಿ, ರೋಡ್ಸ್ ಇತ್ಯಾದಿ ಮೇಲೆ ಹಣ ಖರ್ಚು ಮಾಡುತ್ತೀರಿ. 6 ಪರ್ಸೆಂಟ್ ಆದಾಗ ಏನಾಗುತ್ತದೆ? ಇವತ್ತು ಕಬ್ಬಿನ ಮೇಲೆ ರಿಕವರಿ ಪರ್ಸೆಂಟೇಜ್ 8.5ಕ್ಕೆ ನಿಗದಿ ಮಾಡಿದರೂ ಸಹ ಸಕ್ಕರೆ ಕಾರ್ಖಾನೆಗಳು 800 ರಿಂದ ಒಂದು ಸಾವಿರದವರೆಗೆ ರೇಟ್ ಕೊಡುತ್ತಿವೆ. ಒಂದು ಸಾವಿರ ರೂಪಾಯಿ ರೇಟ್ ಆದಾಗ ತಾವು ಏನು ಮಾಡಿದಿರಿ? 1-4-92ರಿಂದ ಟರ್ನ್ ಓವರ್ ಟ್ಯಾಕ್ಸ್ ಬದಲಾವಣೆ ಮಾಡಿದಿರಿ. ಹಾಗಾಗಿ ಇವತ್ತು ಸಕ್ಕರೆ ಕಾರ್ಖಾನೆಗಳು 800-900-1000 ರೂಪಾಯಿ ರೇಟ್ ಕೊಡುತ್ತಿವೆ. ಏನಾಯಿತು? 6 ಪರ್ಸೆಂಟ್ ಪ್ಲಸ್ ಸೆಸ್ ಪ್ಲಸ್ ಟರ್ನ್ ಓವರ್ ಟ್ಯಾಕ್ಸ್ ಕೂಡಿ ಅಂದಹಾಗೆ ಆಯಿತು. 82-83 ಪರ್ಸೆಂಟ್ ಟ್ಯಾಕ್ಸ್ ಆದಾಗ ಏನು ಮಾಡಬೇಕು? 20 ರೂಪಾಯಿ

ಒಂದು ಟನ್ನಿಗೆ ಟ್ಯಾಕ್ಸ್ ಹಾಕಿದಾಗ 12 ರೂಪಾಯಿಗಳನ್ನು ರೈತರಿಗೆ ವಾಪಸ್ಸು ಕೊಡುತ್ತಿದ್ದೀರಿ. ಈಗ ನೀವು 85 ರೂಪಾಯಿ ಒಂದು ಟನ್ನಿಗೆ ಮಾಡಿ ವಾಪಸ್ಸು ಕೊಡುವುದು 12 ರೂಪಾಯಿ. ಒಂದು ಕಡೆ ರೈತರಿಗೆ ಹಾನಿ ಮಾಡಿದಿರಿ. ರೈತರಿಗೆ ನೀವು ಸರಿಯಾಗಿ ಪ್ರೋತ್ಸಾಹಧನವನ್ನು ಕೊಡುತ್ತಿಲ್ಲ. ಆದ್ದರಿಂದ ಅಡ್ವೊಲರ ಟ್ಯಾಕ್ಸನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಸಕ್ಕರೆ ಕಾರ್ಖಾನೆಗಳ ರೇಟಿಗೆ ಮತ್ತು ಟ್ಯಾಕ್ಸಿಗೆ ಏನೂ ಸಂಬಂಧ ಇಲ್ಲವೆಂದು ಹೇಳಿದಿರಿ. ಇಲ್ಲ, ಸಂಬಂಧ ಇದೆ.

ಯಾವ ಕಾರ್ಖಾನೆಗಳು ತೆರಿಗೆಯನ್ನು ಹೆಚ್ಚು ಕೊಡಬೇಕಾಗುತ್ತದೆ ಅವುಗಳ ಕಾಸ್ಟ್ ಆಫ್ ಪ್ರೊಡಕ್ಷನ್ ಒಂದು ಚೀಲ ಸಕ್ಕರೆ ತಯಾರಿಸಬೇಕಾದರೆ 85 ರೂಪಾಯಿ ಬೀಳುತ್ತದೆ. ಹಾಗಾಗಿ ರೈತರಿಗೆ ಟ್ಯಾಕ್ಸ್ ಪುನಃ ಟನ್ ಬೇಸಿಸ್ ಮೇಲೆ ಹಾಕಿದರೆ ಕಾರ್ಖಾನೆಗಳು ರೇಟ್ ಹೆಚ್ಚು ಕೊಡಬಹುದು. ತಾವು ಇದನ್ನು ವಾಪಸ್ಸು ಪಡೆದುಕೊಳ್ಳಬೇಕು. ಟನ್ ಬೇಸಿಸ್ ಮೇಲೆ ಹಾಕಿ. 20 ರೂಪಾಯಿ ಇರುವುದನ್ನು ಬದಲಾವಣೆ ಮಾಡಿ ಟನ್ ಬೇಸಿಸ್ ಮೇಲೆ ಹಾಕಿ. ಅದರಿಂದ ರೈತರಿಗೆ ಅನಾನುಕೂಲವಾಗುವುದಿಲ್ಲ. ರೈತರಿಗೆ ಹೆಚ್ಚು ರೇಟ್ ಸಿಗುತ್ತದೆ. 85 ರೂಪಾಯಿ ಟ್ಯಾಕ್ಸ್ ವಸೂಲ್ಮಾಡಿ ರೈತರಿಗೆ ನೀವು ಕೊಡುವುದು 12 ರೂಪಾಯಿ.

ಆಗ 20 ರೂಪಾಯಿ ಕಲೆಕ್ಟ್ ಮಾಡಿ 12 ರೂಪಾಯಿ ಕೊಡುತ್ತಾ ಇದ್ದೀರಿ. ಹಾಗಾಗಿ ಇವರ ಬಗ್ಗೆ ಒಂದು ಚಿಂತನೆ ಮಾಡಬೇಕು. ಎರಡನೆಯದು ರೋಡ್ಸ್ ಮತ್ತು ಬ್ರಿಡ್ಜ್‌ಗಳ ಡೆವಲಪ್‌ಮೆಂಟಿಗೆ 1 ಪರ್ಸೆಂಟ್ ಸೆಸ್ ಇದೆ. ಒಂದು ಪರ್ಸೆಂಟ್ ಸೆಸ್‌ನಿಂದ ಎಷ್ಟು ರೋಡ್ಸ್ ಮತ್ತು ಬ್ರಿಡ್ಜ್‌ಗಳ ಮೇಲೆ ಖರ್ಚು ಮಾಡಿದ್ದೀರಿ ನೀವು? ಹಣ ಬರುತ್ತಿದೆ. ಆದರೆ ಅದು ಅಲ್ಲಿಗೆ ಹೋಗುತ್ತಿಲ್ಲ. ರಿಸರ್ವ್ ಏರಿಯಾದಲ್ಲಿ ಯಾವ ದುಡ್ಡೂ ಖರ್ಚಾಗುತ್ತಿಲ್ಲ, ಇದು ಎರಡನೆಯದು, ಮೂರನೆಯದು, ಇವತ್ತು ಹೊರರಾಜ್ಯಗಳಲ್ಲಿ ಷುಗರ್ ಫ್ಯಾಕ್ಟರಿಗಳಿವೆ. ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಬಹಳಷ್ಟು ಕಡೆ ಸರ್‌ಪ್ಲಸ್ ಕಬ್ಬು ಇದೆ. ಸರ್‌ಪ್ಲಸ್ ಕಬ್ಬು ಇರುವುದರಿಂದ ಅದು ಮಹಾರಾಷ್ಟ್ರಕ್ಕೆ ಗೋವಾಕ್ಕೆ ಹೋಗಲಿಕ್ಕೆ ಪರ್ಮಿಷನ್ ಕೊಟ್ಟಿದ್ದಾರೆ. ಸಂತೋಷ, ಹೋಗಲಿ. ಇಲ್ಲಿ ಕಬ್ಬು ಕ್ರಷ್‌ಮಾಡುವುದಕ್ಕೆ ಆಗದಿದ್ದರೆ ಇನ್ನೇನು ಮಾಡಬೇಕು? ರೈತರಿಗೆ ಸಹಾಯ ಆಗಬೇಕಾಗುತ್ತದೆ, ಕಬ್ಬು ಹೊರಗಡೆ ಹೋಗಬೇಕಾಗುತ್ತದೆ. ಆದರೆ ಅಲ್ಲಿ ಏನು ಮಾಡಿದ್ದಾರೆ? ಕಳೆದ ವರ್ಷ ಆ ಎಲ್ಲಾ ಷುಗರ್ ಫ್ಯಾಕ್ಟರಿಗಳಿಗೆ ಟ್ಯಾಕ್ಸ್‌ನಿಂದ ಎಗ್ಸೆಂಪ್‌ಷನ್ ಮಾಡಿದರು. ಈ ವರ್ಷ ಏನು ಮಾಡಿದ್ದಾರೆ? ಗೋವಾ ಬಿಟ್ಟು ಬೇರೆ ಫ್ಯಾಕ್ಟರಿಗಳಿಂದ ಟ್ಯಾಕ್ಸ್ ವಸೂಲು ಮಾಡುತ್ತಿದ್ದೀರಿ. ಹಾಗಾಗಿ ಮಹಾರಾಷ್ಟ್ರದಲ್ಲಿ ಏನು ಫ್ಯಾಕ್ಟರಿ ಮಾಡುತ್ತಿದ್ದಾರೆ ಅವರು ರೈತರ ಬಿಲ್‌ನಲ್ಲಿ ಹಣ ವಸೂಲು ಮಾಡುತ್ತಿದ್ದಾರೆ. ಕಳೆದ ವರ್ಷ ಸರ್‌ಪ್ಲಸ್ ಕಬ್ಬು ಹೋಗುವುದಕ್ಕೆ ಪರ್ಮಿಷನ್ ಕೊಟ್ಟಿರಿ. ಏಕೆಂದರೆ ಕ್ರಷ್ ಮಾಡಲಿಕ್ಕೆ ಆಗುವುದಿಲ್ಲ ಎಂದು. ಆದ್ದರಿಂದ ಮಹಾರಾಷ್ಟ್ರದಲ್ಲಿರುವ ಗೋವಾದಲ್ಲಿರುವ ಫ್ಯಾಕ್ಟರಿಗಳಿಗೆ ಕಬ್ಬು ಹೋಗುತ್ತಿತ್ತು. ಪೇಮೆಂಟ್ ಆಫ್ ಟ್ಯಾಕ್ಸ್‌ನಿಂದ ಎಗ್ಸೆಂಪ್‌ಷನ್ ಕೊಟ್ಟಿರಿ. ಈ ವರ್ಷ ಗೋವಾಕ್ಕೆ ಮಾತ್ರ ಎಗ್ಸೆಂಪ್‌ಷನ್ ಕೊಟ್ಟು ಬೇರೆಕಡೆ ಎಗ್ಸೆಂಪ್‌ಷನ್ ಕೊಟ್ಟಿಲ್ಲ. ಆದರೆ ಫ್ಯಾಕ್ಟರಿಯವರು ಏನು ಮಾಡುತ್ತಿದ್ದಾರೆ? ಮಹಾರಾಷ್ಟ್ರದಲ್ಲಿ ಫಾರ್ಮರ್ಸ್ ಬಿಲ್‌ನಲ್ಲಿ ಈ ಟ್ಯಾಕ್ಸ್ ಡಿಡಕ್ಟ್ ಮಾಡುತ್ತಿದ್ದಾರೆ. ಉದಾಹರಣೆಗೆ ಬಿದರಿ ಷುಗರ್ ಫ್ಯಾಕ್ಟರಿ ಇದೆ. ಮಹಾರಾಷ್ಟ್ರದ ನಿಪ್ಪಾಣಿಯಲ್ಲಿ ಬಿದರಿ ಷುಗರ್ ಫ್ಯಾಕ್ಟರಿ ಏನಿದೆ ಅವರು ಫಾರ್ಮರ್ಸ್ ಬಿಲ್‌ನಲ್ಲಿ ಡಿಡಕ್ಟ್ ಮಾಡುತ್ತಿದ್ದಾರೆ. ಹೀಗಾಗಿ ರೈತರಿಗೆ ಎಲ್ಲಾ ಕಡೆಯಿಂದ ಇವತ್ತು ಕಷ್ಟವಾಗಿದೆ. ಷುಗರ್ ಫ್ಯಾಕ್ಟರಿಯವರಿಗೂ ಬಹಳ ಬರ್ಡನ್ ಆಗಿದೆ. ಅವರ ಕಾಸ್ಟ್ ಆಫ್ ಪ್ರೊಡಕ್ಷನ್ ಕೂಡ ಹೆಚ್ಚಾಗಿದೆ. ಈಗಾಗಲೇ ಸಕ್ಕರೆ ಬೆಲೆ ಎಷ್ಟು ಹೆಚ್ಚಾಗಿದೆ

ಎನ್ನುವುದು ತಮಗೆ ಗೊತ್ತು. ಸಾಮಾನ್ಯ ಜನರ ಮೇಲೆ ಇದರಿಂದ ಪರಿಣಾಮವಾಗುತ್ತದೆ. ಕನ್‌ಸ್ಯೂಮರ್ ಮೇಲೆ ಪರಿಣಾಮವಾಗಿದೆ. ಟ್ಯಾಕ್ಸ್ ಸ್ಟಕ್ಚರ್ ಪ್ರಾಕ್ಟಿಕಲ್ ಆಗಿಲ್ಲ. ತಾವು ಟನ್ ಬೇಸಿಸ್ ಮೇಲೆ ಹಾಕಿದರೆ ರೈತರಿಗೂ ಅನುಕೂಲವಾಗುತ್ತದೆ, ಷುಗರ್ ಫ್ಯಾಕ್ಟರಿಗೂ ಅನುಕೂಲವಾಗುತ್ತದೆ, ಸಕ್ಕರೆ ದರವೂ ಕಡಿಮೆಯಾಗಿ ಕನ್‌ಸ್ಯೂಮರ್‌ಗೆ ಬೆನಿಫಿಟ್ ಆಗುತ್ತದೆ. ಈ ದೃಷ್ಟಿಯಿಂದ ಮತ್ತು ಇದು ಎಸೆನ್‌ಷಿಯಲ್ ಕಮೊಡಿಟಿ ಆಗಿರುವುದರಿಂದ, ಸಾಮಾನ್ಯ ಜನರು ಇದನ್ನು ಉಪಯೋಗಿಸುವುದರಿಂದ ಅವರಿಗೂ ಸಹ ಯೋಗ್ಯ ದರದಲ್ಲಿ, ಕಡಿಮೆ ದರದಲ್ಲಿ ಸಿಗಬೇಕು. ರೈತರಿಗೂ ಸಹ ಹೆಚ್ಚಿನ ಕಬ್ಬಿನ ದರ ಸಿಗಬೇಕು. ಈ ಉದ್ದೇಶ ನಿಜವಾಗಿ ಸಫಲವಾಗಬೇಕಾದರೆ ಟನ್ ಬೇಸಿಸ್ ಮೇಲೆ ಟ್ಯಾಕ್ಸ್ ಹಾಕಬೇಕು ಎಂದು ತಮ್ಮಲ್ಲಿ ಒತ್ತಾಯಿಸುತ್ತೇನೆ.

+ ಪ್ರೊ: ಎಂ.ಡಿ. ನಂಜುಂಡಸ್ವಾಮಿ (ಧಾರವಾಡ (ಗ್ರಾಮಾಂತರ) : ಖರೀದಿ ತೆರಿಗೆ ಹಿಂದೆ ಟನ್ ಆಧಾರದ ಮೇಲೆ ಇತ್ತು. ಈಗ ದರದ ಆಧಾರದ ಮೇಲೆ ಹಾಕುತ್ತಿದ್ದಾರೆ. ಮತ್ತೆ ತಮ್ಮ ಹೇಳಿಕೆಯಲ್ಲಿ ಕೊಟ್ಟಿದ್ದೀರಿ 1990-91 ರಿಂದ ಸುಮಾರು ಹೆಚ್ಚುಕಡಿಮೆ ಎರಡು ಪಟ್ಟು ವಸೂಲಿಯಾಗಿದೆ ಎಂದು. ನನಗೆ ಇರುವ ಮಾಹಿತಿ ಪ್ರಕಾರ ಎಲ್ಲಾ ಕಾರ್ಖಾನೆಗಳು ಯಾವ ದರದ ಮೇಲೆ ಇದನ್ನು ಕೊಡಬೇಕು ಎಂದು ಒಂದು ಪ್ರಶ್ನೆ ಎತ್ತಿಕೊಂಡು ನ್ಯಾಯಾಲಯಕ್ಕೆ ಹೋಗಿದ್ದಾರೆ. ಕೇಂದ್ರಸರ್ಕಾರ ನಿಗದಿ ಮಾಡಿದ ಬೆಲೆಯ ಮೇಲೆ 7 ಪರ್ಸೆಂಟ್ ಕೊಡಬೇಕೋ ಅಥವಾ ರಾಜ್ಯಸರ್ಕಾರ ಪ್ರಕಟಣೆ ಮಾಡಿದ ಬೆಲೆ ಮೇಲೆ 7 ಪರ್ಸೆಂಟ್ ಕೊಡಬೇಕೋ ಅಥವಾ ಸಹಕಾರಿ ಕಾರ್ಖಾನೆಗಳು ಎಷ್ಟು ಬೆಲೆ ಕಟ್ಟಿದೆ ಅದರ ಆಧಾರದ ಮೇಲೆ ಏಳು ಪರ್ಸೆಂಟ್ ಕೊಡಬೇಕೋ ಎಂಬುದು ನಿಖರವಾಗಿ ಇಲ್ಲದೇ ಇರುವುದರಿಂದ ಏನೂ ಸಂದಾಯವಾಗುತ್ತಿಲ್ಲ ಎಂಬುದು ನನಗೆ ಇರುವಂಥ ಮಾಹಿತಿ. ಇದು ಮೊದಲನೆಯದು. ಎರಡನೆಯದು, ಹೆಚ್ಚುವರಿ ಕಬ್ಬು ಬೇರೆ ರಾಜ್ಯಕ್ಕೆ ಏನು ಹೋಗುತ್ತಾ ಇದೆ ಅಲ್ಲಿ ಬೇರೆ ರಾಜ್ಯದಲ್ಲಿ ಮಾರಾಟವಾಗುವ ಕರ್ನಾಟಕದ ಕಬ್ಬು ಅದಕ್ಕೂ ಪರ್ಚೇಸ್ ಟ್ಯಾಕ್ಸ್ ನಿಗದಿ ಮಾಡಿದ್ದೀರಿ. ನಮ್ಮ ರಾಜ್ಯದ ಉಚ್ಛ ನ್ಯಾಯಾಲಯದಲ್ಲಿ ಒಂದು ತೀರ್ಪು ಕೊಟ್ಟಿದ್ದಾರೆ. ಇದು ನಿಮ್ಮ ಸರ್ಕಾರದ ಗಮನಕ್ಕೆ ಬಂದಿಲ್ಲ. ಮಹಾರಾಷ್ಟ್ರದಲ್ಲಿ ಪರ್ಚೇಸ್ ಮಾಡುವ ಕಬ್ಬಿಗ ತೆರಿಗೆ ಹಾಕುವುದಕ್ಕೆ ನಿಮಗೆ ಅಧಿಕಾರವೇ ಇಲ್ಲ. ಅದರ ಮೇಲೆ When the Sale and Purchase takes place in Maharashtra.

1.30 ಪಿ.ಎಂ.

ನಿಮಗೆ ತೆರಿಗೆ ಹಾಕುವುದಕ್ಕೆ ಎಲ್ಲಿ ಅಧಿಕಾರ ಬಂತೋ ಎಂದು ನನಗಂತೂ ಗೊತ್ತಿಲ್ಲ. ನಿಮಗೆ ಇಲ್ಲ ಎಂದು ನ್ಯಾಯಾಲಯ ಹೇಳಿದೆ. ಅದನ್ನು ಗಮನಕ್ಕೆ ತೆಗೆದುಕೊಳ್ಳದೇ ನೀವು ಮಾಡಿದ್ದೀರಿ. ಕಳೆದ 2 ವರ್ಷಗಳಲ್ಲಿ ಮಹಾರಾಷ್ಟ್ರದ ಕಾರ್ಖಾನೆಗಳು ನಿಮ್ಮ ಪರವಾಗಿ ಹಣ ಸಂಗ್ರಹಣೆ ಮಾಡಿ ಇಟ್ಟುಕೊಂಡಿದ್ದಾರೆ ಎಂಬುದು ನಿಮ್ಮ ಸರ್ಕಾರಕ್ಕೆ ಬಹುಶಃ ಗೊತ್ತಿಲ್ಲ. ಆ ಕಾರ್ಖಾನೆಯವರು ನೀವು ಕೇಳಿದರೆ ಆ ಹಣವನ್ನು ಕಳುಹಿಸಿಕೊಡುವುದಕ್ಕೆ ತಯಾರು ಇದ್ದಾರೆ. ಕರ್ನಾಟಕ ಸರ್ಕಾರಕ್ಕೆ ನಾವು ಕೊಡಬೇಕಾದ ತೆರಿಗೆ ಎಂದು ಹೇಳಿ ಅವರು ಹಾಗೆಯೇ ತೆಗೆದು ಇಟ್ಟಿದ್ದಾರೆ. ಈ ಸರ್ಕಾರಕ್ಕೆ ತಮಗೆ ಬರಬೇಕಾದ ಹಣದ ಬಗ್ಗೆ ಪ್ರಜ್ಞೆಯೇ ಇಲ್ಲ. ನಾವು ಕೊಡುವುದಕ್ಕೇ ಸಂಗ್ರಹಣೆ ಮಾಡಿ ಇಟ್ಟಿದ್ದೇವೆ ಎಂದು ಆ ಕಾರ್ಖಾನೆಯವರು ಕಾಯುತ್ತಿದ್ದಾರೆ. ಇವರು ಇನ್ನೂ ಕೇಳಿಲ್ಲ, ಅವರು ಕೊಟ್ಟಿಲ್ಲ. ಇಂತಹವೆಲ್ಲ ಅವ್ಯವಹಾರ ನಡೆಯುತ್ತಾ ಇವೆ. ಆ ಕಾರಣ ನನ್ನ ವಿನಂತಿ ಏನೆಂದರೆ, ಹಿಂದೆ ಟನ್‌ಗೆ ಇಷ್ಟು ಎಂದು ಹೇಳಿ ಯಾವ ಪದ್ಧತಿ ಇತ್ತೋ, ಟನ್ ಆಧಾರದ ಮೇಲೆ ನೀವು ನಿಗಧಿ ಮಾಡಿದರೆ ನಿಮಗೆ ಬಹಳ ಸರಳವಾಗಿ ತೆರಿಗೆ ಬಂದು ಸೇರುತ್ತದೆ. ಈ

ಕಾರ್ಖಾನೆಯವರು ಯಾರೂ ನಿಮಗೆ ಪರ್ಚೇಸ್ ಟ್ಯಾಕ್ಸ್ ಕೊಟ್ಟಿಲ್ಲ. ನನ್ನ ಪ್ರಕಾರ ತಾವು ಇಲ್ಲಿ ಕೊಟ್ಟಿರುವುದು ಸುಳ್ಳು ಮಾಹಿತಿ. ಯಾವ ದರದ ಮೇಲೆ ಕೊಡಬೇಕು ಎಂದು ಎಲ್ಲರೂ ನ್ಯಾಯಾಲಯಕ್ಕೆ ಹೋಗಿದ್ದಾರೆ. ಇದು ಒಂದು ಪ್ರಶ್ನೆ ಇದೆ. ಏಕೆಂದರೆ ಕೇಂದ್ರ ಸರ್ಕಾರ ನಿಗದಿ ಮಾಡಿದ ಬೆಲೆ ಬೇರೆ. ನಾವು ಪ್ರಕಟಣೆ ಮಾಡುವ ಬೆಲೆ ಬೇರೆ. ಸಹಕಾರಿ ಕಾರ್ಖಾನೆಗಳು ನಿಗದಿ ಮಾಡಿರುವ ಬೆಲೆ ಬೇರೆ. ಯಾವ ಬೆಲೆಯ ಮೇಲೆ ಕೊಡಬೇಕು ಎನ್ನುವ ವಿಷಯದ ಮೇಲೆ ಎಲ್ಲರೂ ನ್ಯಾಯಾಲಯಕ್ಕೆ ಹೋಗಿದ್ದಾರೆ. ಒಬ್ಬರೂ ತೆರಿಗೆ ಕೊಡಲಿಲ್ಲ. ಮತ್ತೆ ಪರ್ಚೇಸ್ ಟ್ಯಾಕ್ಸ್‌ನ್ನು ಬಹಳ ದಿವಸದಿಂದ ಬಾಕಿ ಉಳಿಸಿಕೊಳ್ಳುವಂತಹ ಚಾಳಿ ಎಲ್ಲ ಕಾರ್ಖಾನೆಗಳು ಬೆಳೆಸಿಕೊಂಡಿವೆ. ನಿಮಗೆ ಬಂದಿರುವುದು ಸುಳ್ಳು ಮಾಹಿತಿ. ಆ ಕಾರಣ ಇದನ್ನು ಸರಳಗೊಳಿಸಿ ಇಷ್ಟು ದಿವಸ ನಾವು ಏನು ಟನ್‌ಗೆ ಇಷ್ಟು ಎಂದು ನಿಖರವಾದ ತೆರಿಗೆ ಹಾಕುತ್ತಿದ್ದೆವು. ಅದನ್ನೇ ಮುಂದುವರಿಸಬೇಕೆಂದು ನನ್ನ ಆಶಯ. ಮತ್ತೆ ಸುಮಾರು 50 ಲಕ್ಷ ಟನ್ ಸರ್‌ಪ್ಲಸ್ ನಮ್ಮ ಕರ್ನಾಟಕದಲ್ಲಿ ಇದೆ. ನಮಗೆ ಅದನ್ನು ಅರೆಯುವ ಶಕ್ತಿ ಇಲ್ಲ. ಅದನ್ನು ನಾವು ಹೊರಗೆ ತೆಗೆದುಕೊಂಡು ಹೋಗಬೇಕಾದರೂ ಅಡ್ಡಿ ಮಾಡುತ್ತಿದ್ದೀರಿ. ಹೊರಗಡೆ ರಾಜ್ಯದಿಂದ ಆಚೆ ನಾವು ಏನು ಕಬ್ಬನ್ನು ಮಾರುತ್ತೇವೆ, ಆ ಕಬ್ಬಿಗೆ ಪರ್ಚೇಸ್ ಟ್ಯಾಕ್ಸ್ ಇಲ್ಲ ಎಂದು ತಾವು ಘೋಷಣೆ ಮಾಡಬೇಕು.

+ ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ) : ಮಾನ್ಯ ಅಧ್ಯಕ್ಷರೇ, ಮಹಾರಾಷ್ಟ್ರದಲ್ಲಿ ಶುಗರ್ ಫ್ಯಾಕ್ಟರಿಗೆ ಕೊಡುವಷ್ಟು ಕಬ್ಬು ಇಲ್ಲ. ಈಗ ಅವರು ಕರ್ನಾಟಕದಿಂದ ಕಬ್ಬನ್ನು ಖರೀದಿ ಮಾಡುವುದು ಖರೇ ಇದೆ. ಈಗ ಅವರು ಕಬ್ಬು ಖರೀದಿ ಮಾಡುವ ರೈತರಿಗೆ ಹೇಳುವುದು ಏನೆಂದರೆ, ಕರ್ನಾಟಕ ಸರ್ಕಾರದವರು ನಿಮ್ಮ ಕಬ್ಬಿನ ಮೇಲೆ 100 ರೂಪಾಯಿ ಟ್ಯಾಕ್ಸ್ ಇದೆ. ನಮಗೆ ನೀವು ಕಬ್ಬನ್ನು ಕೊಟ್ಟರೆ ನೀವು ಟ್ಯಾಕ್ಸ್ ಕೊಡಬೇಕಾಗಿಲ್ಲ ಎಂದು ಹೇಳಿ ಈ ರೀತಿಯ ಅಡ್ವಾನ್ಸ್ ಖರೀದಿ ನಮ್ಮ ಭಾಗದಲ್ಲಿ ಈಗಾಗಲೇ ನಡೆದಿದೆ. ಗಡಿಂಗ್ಲ, ಹಿಂತಲಕರಂಜಿ ಈ ಎಲ್ಲಾ ಸಕ್ಕರೆ ಕಾರ್ಖಾನೆಯವರು ಕರ್ನಾಟಕದಲ್ಲಿ ತಮ್ಮ ಫೀಲ್ಡ್ ಮೆನ್ಸ್‌ಗಳನ್ನು ಕಳುಹಿಸಿ ಕರ್ನಾಟಕಕ್ಕೆ ಕೊಡುವ ಟ್ಯಾಕ್ಸ್ ಕೊಡಬೇಕಾಗಿಲ್ಲ ಎಂದು ಹೇಳಿ ಈಗಾಗಲೇ ಅಡ್ವಾನ್ಸ್ ಆಗಿ ಟನ್‌ಗೆ 200 ರೂಪಾಯಿಯಂತೆ ಕೊಟ್ಟು ಕರ್ನಾಟಕದಲ್ಲಿ ಅವರು ಕಬ್ಬು ಖರೀದಿ ಮಾಡುತ್ತಿದ್ದಾರೆ. ಈ ರೀತಿ ಮಾಡಿದರೆ ಕರ್ನಾಟಕದ ಫ್ಯಾಕ್ಟರಿಗೆ ಒಂದು ಟನ್ ಸಹಾ ಕಬ್ಬು ಉಳಿಯುವುದಿಲ್ಲ. ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಮಹಾರಾಷ್ಟ್ರ ಬಾರ್ಡರ್ ಬರುವುದರಿಂದ, 8-10ಮಹಾರಾಷ್ಟ್ರದ ಫ್ಯಾಕ್ಟರಿಗಳು ಕರ್ನಾಟಕದ ಬಾರ್ಡರ್‌ನಲ್ಲಿ ಬರುವುದರಿಂದ, ನಮ್ಮ ಬೆಳಗಾಂ ಜಿಲ್ಲೆಯ ಕಬ್ಬೆಲ್ಲಾ ಮಹಾರಾಷ್ಟ್ರಕ್ಕೆ ಹೋಗುವ ಹೆಚ್ಚಿನ ಲಕ್ಷಣ ಕಂಡುಬರುತ್ತಾ ಇದೆ. 1000 ರೂಪಾಯಿ ಕಬ್ಬಿಗೆ ಟ್ಯಾಕ್ಸ್ 200 ರೂಪಾಯಿ ಸೇರಿಸಿ 1200 ರೂಪಾಯಿ ಕೊಡುತ್ತೇವೆ ಎಂದು ಹೇಳಿ ಮಹಾರಾಷ್ಟ್ರದವರು ಅಡ್ವಾನ್ಸ್ ಕೊಟ್ಟು ಕಬ್ಬು ಖರೀದಿ ಮಾಡುತ್ತಿದ್ದಾರೆ. ಈ ಹಲವು ರೀತಿಯಿಂದ ನಮ್ಮ ಕರ್ನಾಟಕದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಇಲ್ಲದ ಸ್ಥಿತಿ ಕೂಡ ಈ ಸಲ ಉಂಟಾದರೂ ಆಗಬಹುದು. ನಮ್ಮಲ್ಲಿ ಪ್ರೊಡಕ್ಷನ್ ಕಡಿಮೆ ಆಗಿ ಫ್ಯಾಕ್ಟರಿಗಳು ಬಂದ್ ಆಗುವ ಸ್ಥಿತಿಗೆ ಹೋಗಬಹುದಾದ್ದರಿಂದ ಈ ಟ್ಯಾಕ್ಸ್‌ನ್ನು ವಜಾ ಮಾಡಬೇಕು ಹಾಗೂ ಮೊದಲು ಇದ್ದ ಪ್ರಕಾರ ಟನ್‌ಗೆ 20 ರೂಪಾಯಿ ಅಖೈರು ಮಾಡಬೇಕೆಂದು ಅಧ್ಯಕ್ಷರ ಮೂಲಕ ಒತ್ತಾಯ ಮಾಡುತ್ತೇನೆ.

+ ಶ್ರೀ ಶಿವಾನಂದ ಎಸ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಅಧ್ಯಕ್ಷರೇ, ಮಾನ್ಯ ನಂಜುಂಡಸ್ವಾಮಿ ಅವರು ಹೇಳಿದ ಪ್ರಕಾರ ಹೋದ ವರ್ಷ ಮತ್ತು ಆಚೇ ವರ್ಷ ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆಯವರು, ಏನು ಅವರು 1200 ರೂಪಾಯಿ

ರೊಕ್ಕ ತೆಗೆದುಕೊಂಡರು. ಆ ಹಣ ಇವತ್ತು ಮಹಾರಾಷ್ಟ್ರದ ಕಾರ್ಖಾನೆಗಳ ಹತ್ತಿರ ಇದ್ದುದು ನಿಜ. ಇವತ್ತು ಅಂತಹದ್ದು ಕೋಟ್ಯಾಂತರ ರೂಪಾಯಿ ಇವತ್ತು ಮಹಾರಾಷ್ಟ್ರದ ಆ ಕಾರ್ಖಾನೆಗಳ ಹತ್ತಿರ ಇದೆ. ನಿಮ್ಮ ಸರ್ಕಾರದಿಂದ ಪತ್ರ ಬರೆದರೆ ನಾವು ಕೊಡಲು ಸಿದ್ಧ ಇದ್ದೇವೆ ಎಂದು ಅವರು ಹೇಳುತ್ತಾರೆ. ಇದೇ ವಿಷಯವನ್ನು ನಾವು ಹೋದ ಸಲದ ವಿಧಾನಸಭೆಯಲ್ಲೂ ಸಹ ಚರ್ಚೆ ಮಾಡಿದೆವು. ತಾವು ಸರ್ಕಾರದಿಂದ ಆ ಹಣವನ್ನು ಇನ್ನೂ ತರಿಸಿಕೊಂಡಿಲ್ಲ. ದಯಮಾಡಿ ಅದನ್ನು ತರಿಸಿಕೊಳ್ಳಬೇಕು. ಇನ್ನು ಎರಡನೆಯದಾಗಿ, ಏನು ರೊಕ್ಕ ಕಲೆಕ್ಟ್ ಮಾಡುತ್ತೇವೆ ಅದರಿಂದ ಆ ಭಾಗದ ಅಭಿವೃದ್ಧಿ ಕಾರ್ಯ ಆಗಬೇಕೆಂದು ಇತ್ತು. ಆದರೆ ಇವತ್ತು ಆ ಭಾಗದಲ್ಲಿ ಅಂತಹ ಅಭಿವೃದ್ಧಿ ಮಾಡುವುದನ್ನು ಬಿಟ್ಟಿದ್ದೀರಿ. ಒಂದು ಸಕ್ಕರೆ ಕಾರ್ಖಾನೆಯಿಂದ ಪ್ರತಿ ವರ್ಷ ನಿಮಗೆ ಸುಮಾರು 8 ಕೋಟಿ ರೂಪಾಯಿ ಆದಾಯ ಬರುತ್ತಾ ಇದೆ. ಇಷ್ಟು ಹಣ ನಾವು ಆದಾಯ ಕೊಡುವ ಸಮಯದಲ್ಲಿ ಇವತ್ತಿನದಿವಸ ನಮ್ಮ ಬೆಳಗಾಂ ಜಿಲ್ಲೆಯಲ್ಲಿ 8 ಸಕ್ಕರೆ ಕಾರ್ಖಾನೆ ಇದ್ದರೂ ಸಹಿತಾ ನಮ್ಮ ಅಲ್ಲಿನ ರಸ್ತೆಗಳ ಸ್ಥಿತಿ ತಾವು ನೋಡಿಕೊಳ್ಳಬೇಕು. ಇವತ್ತು ಕನಿಷ್ಠ 8 ಕಾರ್ಖಾನೆಗಳ ಪೈಕಿ ಕಡಿಮೆ ಎಂದರೆ 8 ಕೋಟಿ ರೂಪಾಯಿಗಳನ್ನಾದರೂ ತಾವು ಖರ್ಚು ಮಾಡುತ್ತಾ ಇಲ್ಲ. ಒಂದು ಮೋಟರ್ ಟೈರ್‌ನ ಬೆಲೆ 8 ಸಾವಿರ ರೂಪಾಯಿ ಆಗಿದೆ. ಅಲ್ಲಿನ ರಸ್ತೆಗಳ ಸ್ಥಿತಿ ನೋಡಬೇಕು. ಆ ರಸ್ತೆಗಳಲ್ಲಿ ಹೆವಿ ಟ್ರಕ್ ಓಡಾಡುವುದರಿಂದ ಪೂರ್ಣ ರಸ್ತೆ ಹಾಳಾಗಿ ಹೋಗಿದೆ. ಆದ್ದರಿಂದ ಏನು ಹೇಳುವುದು ಎಂದರೆ, ಏನು ಹಣವನ್ನು ತಾವು ಇವತ್ತು ಡಿಡಕ್ಟ್ ಮಾಡುತ್ತಿದ್ದೀರಿ ಆ ಹಣದಲ್ಲಿ ಬೆಳಗಾಂ ಜಿಲ್ಲೆಯಲ್ಲಿ ಪ್ರತಿಯೊಂದು ಸಕ್ಕರೆ ಕಾರ್ಖಾನೆಯ ಕಮಾಂಡ್ ಏರಿಯಾ ಏನು ಬರುತ್ತದೆ ಆ ಏರಿಯಾ ಸಲುವಾಗಿ ತಾವು ಹಣವನ್ನು ಖರ್ಚು ಮಾಡಬೇಕು. ಹಾಗೂ ಮಹಾರಾಷ್ಟ್ರದಲ್ಲಿ ಏನು ರೊಕ್ಕ ಪೆಂಡಿಂಗ್ ಇದೆ ಅದನ್ನು ಪತ್ರ ಬರೆದು ವಾಪಸ್ ಪಡೆಯಬೇಕು. ಆ ನಂತರ ಮೊದಲು ಇದ್ದ ಪ್ರಕಾರ 20 ರೂಪಾಯಿಯಂತೆ ವಸೂಲಿ ಮಾಡಿ ರೈತರಿಗೆ 12 ರೂಪಾಯಿ ಕೊಡಬೇಕು ಎಂದು ನಾನು ಇವತ್ತು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

SRI K.C. MODGEKAR DESAI : Sir, due to imposition of purchase tax, the hardship is being caused by the farmers. We always talk about the upliftment of farmers. As an MLA of Border area, I urge the Government to kindly remove this Purchase Tax which is being collected from the farmers.

+ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರ್) : ಮಾನ್ಯ ಅಧ್ಯಕ್ಷರೇ, ಅಭಿವೃದ್ಧಿ ಸಲುವಾಗಿ ಏನು ಈ ಟ್ಯಾಕ್ಸ್ ಕಲೆಕ್ಟ್ ಮಾಡಿದ್ದೇವೆಂದು ಏನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದರ ಬಗ್ಗೆ ಹೇಳಬೇಕೆಂದರೆ, ಇವತ್ತು ಅಲ್ಲಿ ಇರತಕ್ಕಂತಹ ರಸ್ತೆಗಳು, ಕಬ್ಬು ಸಾಗಾಣಿಕೆಗೆ ಅಲ್ಲಿರತಕ್ಕ ತೊಂದರೆಗಳನ್ನು ನೋಡಿದರೆ ಕಬ್ಬು ಬೆಳೆಯುವುದೇ ಬೇಡ ಎನ್ನುವ ರೀತಿಯಲ್ಲಿ ರೈತರಿಗೆ ಆಗಿದೆ. ಇವತ್ತು ಅಲ್ಲಿ ಯಾವ ಟ್ರಕ್‌ಗಳೂ ಹೋಗುವುದಕ್ಕೇ ಸಾಧ್ಯವಿಲ್ಲ. ಆ ರಸ್ತೆಗಳು ವಾಹನಗಳ ಸಂಚಾರಕ್ಕೆ ಬಾರದ ಸ್ಥಿತಿಯಲ್ಲಿ ಇದೆ. ಆದ್ದರಿಂದ ಆ ಟ್ಯಾಕ್ಸ್‌ನ್ನು ಆಯಾ ಫ್ಯಾಕ್ಟರಿಗಳ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಅಭಿವೃದ್ಧಿಗಾಗಿ ಕೊಡಬೇಕು. ಮತ್ತು ಈ ಟ್ಯಾಕ್ಸ್ ಹಾಕುವುದರಿಂದ ಬೇರೆ ರಾಜ್ಯಗಳಿಗೆ ಸಾಗಾಣಿಕೆ ಮಾಡತಕ್ಕ ರೈತರಿಗೆ ಆಗಿರತಕ್ಕ ತೊಂದರೆ ಬಗ್ಗೆ ಪದೇ ಪದೇ ಈ ಸದನದಲ್ಲಿ ಸರ್ಕಾರದ ಗಮನಕ್ಕೆ ತಂದರೂ ಸಹಾ ಆ ಬಗ್ಗೆ ಸರ್ಕಾರ ಗಮನ ಹರಿಸಿಲ್ಲ. ಈಗಲಾದರೂ ಸಹ ಈ ಟ್ಯಾಕ್ಸ್‌ನ್ನು ರೈತರ ಮೇಲೆ ಹಾಕುವುದಿಲ್ಲ. ಫ್ಯಾಕ್ಟರಿಯಲ್ಲೇ ವಸೂಲಿ ಮಾಡುತ್ತೇವೆ ಎಂದರೆ, ಆ ಫ್ಯಾಕ್ಟರಿಯವರು ರೈತರ ಮೇಲೆ ಅಪ್ರತ್ಯಕ್ಷವಾಗಿ ಅದನ್ನು ವಸೂಲು ಮಾಡಿ ಸರ್ಕಾರಕ್ಕೆ ಕೊಡಬೇಕಾಗುತ್ತದೆಯೇ?

ವಿನಹ ಫ್ಯಾಕ್ಟರಿಯವರು ಏನೂ ಸ್ವಂತವಾಗಿ ಕೊಡುವುದಿಲ್ಲ. ಅದಕ್ಕಾಗಿ ಈಗಿರತಕ್ಕಂತಹ ಟ್ಯಾಕ್ಸ್‌ನ್ನು ರದ್ದುಪಡಿಸಿ ಮೊದಲ ರೀತಿಯಲ್ಲಿ ಸರಳವಾದಂತಹ ರೀತಿಯಲ್ಲಿ ಟನ್ ಮೇಲೆ ತೆರಿಗೆ ವಿಧಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಹಲವಾರು ಪ್ರಶ್ನೆಗಳನ್ನು ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರು ಎತ್ತಿದ್ದಾರೆ. ಇದು ತಮಗೆಲ್ಲಾ ಗೊತ್ತಿರುವ ಪ್ರಕಾರ 1983ರಲ್ಲಿ ಬದಲಾವಣೆ ಆಗಿದೆ. ಅದಕ್ಕಿಂತ ಮೊದಲು ನಾನು ವಿತ್ತ ಮಂತ್ರಿ ಆಗಿದ್ದಾಗ ಕೂಡ ನಾವು ಟನ್ ಮೇಲೆ ತೆರಿಗೆ ಹಾಕುತ್ತಿದ್ದೆವು. ಈ ಪದ್ಧತಿಯನ್ನು ಬದಲಾವಣೆ ಮಾಡಬೇಕೆಂದು ತಾವು ಹೇಳಿದ್ದೀರಿ. ಮುಂದೆ ಬರತಕ್ಕ ಆಯವ್ಯಯದ ಪ್ರಸ್ತಾವನೆ ಮತ್ತು ಹಣಕಾಸು, ತೆರಿಗೆ ಬಗ್ಗೆ ಬಂದಾಗ ವಿಶೇಷವಾಗಿ ಮಾಡಿದಂತಹ ಚರ್ಚೆಯನ್ನು ಗಮನದಲ್ಲಿ ಇಟ್ಟುಕೊಂಡು ನಾವು ಮುಂದೆ ಕಾರ್ಯಕ್ರಮವನ್ನು ಮಾಡುತ್ತೇವೆ. ಟರ್ನ್ ಓವರ್ ಟ್ಯಾಕ್ಸ್ ಏನಿದೆ ಅದನ್ನು ಫ್ಯಾಕ್ಟರಿಯವರೇ ಅಬ್ಸರ್ವ್ ಮಾಡುತ್ತಾರೆ. ಅದು ಬೆಳೆಗಾರರಿಗೆ ಹೋಗುವುದಿಲ್ಲ. ಇನ್ನು ಮುಖ್ಯವಾಗಿ ರಸ್ತೆಗಳ ವಿಚಾರ ಪ್ರಸ್ತಾಪ ಆಯಿತು. ಏಕೆಂದರೆ 1 ಪರ್ಸೆಂಟ್ ಸೆಸ್ ಮಾಡಿದ್ದೇವೆ. ಅದರಿಂದ ಈ ವರ್ಷ ಸುಮಾರು 6 ಕೋಟಿ ರೂಪಾಯಿಗಳು ನಮಗೆ ಬರಲಿಕ್ಕೆ ಸಾಧ್ಯವಾಗುತ್ತದೆ. ಈ 6 ಕೋಟಿ ಮತ್ತು ಬಜೆಟ್‌ನಲ್ಲಿ 4.83ಕೋಟಿ ಏನು ಕೊಟ್ಟಿದ್ದೇವೆ ,ಒಟ್ಟು ಸುಮಾರು 11 ಕೋಟಿ ರೂಪಾಯಿ ಈ ವರ್ಷ ವಸೂಲಿ ಮಾಡಿದ್ದು ಈ ಇರಿಗೇಷನ್ ಟ್ರಕ್ ರೋಡಿಗೆ ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಮಾನ್ಯ ಕೌಜಲಗಿಯವರು ಹೇಳಿದ ಹಾಗೆ ನಿಮ್ಮ ಬೆಳಗಾಂನಲ್ಲಿ ಹೆಚ್ಚು ಶುಗರ್ ಫ್ಯಾಕ್ಟರಿ ಏರಿಯಾಸ್ ಇದ್ದರೆ ಪ್ರಪೋರ್ಷನೇಟ್‌ಲಿ ನಿಮಗೆ ಹೆಚ್ಚು ಸಿಗುತ್ತದೆ. ಆ ದಾಮಾಷವನ್ನು ಸರಿಯಾಗಿ ಮಾಡುತ್ತೇವೆ. ಇದರ ಬಗ್ಗೆ ವ್ಯತ್ಯಾಸ ಆಗದ ರೀತಿಯಲ್ಲಿ ಖಂಡಿತವಾಗಿ ನೋಡುತ್ತೇವೆ. ಸೆಸ್ ಏನು 1 ಪರ್ಸೆಂಟ್ ಮಾಡುತ್ತೇವೆ ಅಂದು ನೂರಕ್ಕೆ ನೂರು ಪಾಲು ಅದನ್ನು ಬಿಡುಗಡೆ ಮಾಡಿ ಅದರ ಜೊತೆಗೆ ಬಜೆಟ್ ಪ್ರಾವಿಷನ್ ಏನು 4 ಕೋಟಿ 83 ಲಕ್ಷ ಇದೆ ಅದನ್ನು ಉಪಯೋಗ ಮಾಡಿಕೊಂಡು ಸುಮಾರು 11 ಕೋಟಿ ರೂಪಾಯಿಯನ್ನು ಐ.ಟಿ.ರಸ್ತೆಗಳನ್ನು ವೃದ್ಧಿ ಮಾಡುವುದಕ್ಕೆ ನಾವು ಉಪಯೋಗ ಮಾಡುತ್ತೇವೆ.

ಇನ್ನು ವಸೂಲಾತಿ . ಬಗ್ಗೆ ಪ್ರೊಫೆಸರ್‌ರವರು ಹೇಳಿದಂಥ ಕೆಲವು ವಿಚಾರ. ಕರ್ನಾಟಕದಲ್ಲಿ ಶುಗರ್ ಫ್ಯಾಕ್ಟರಿ ಬಾಕಿ ಇದ್ದರೆ, ಅದನ್ನು ವಸೂಲ್ಮಾಡುತ್ತೇವೆ. ತಮಗೆ ಹೇಳಿದ ಪ್ರಕಾರ, 1993-94ರಲ್ಲಿ ಸುಮಾರು 32.78 ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ್ದೇವೆ. ಬಾಕಿ ಇರಬಹುದು. ಬಾಕಿ ಇದ್ದರೂ ಕೂಡ ಅದನ್ನು ವಸೂಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. 1992-93ರಲ್ಲಿ 24.13 ಕೋಟಿ ವಸೂಲಾಗಿದೆ. ಅಂದರೆ, ಸುಮಾರು 8 ಕೋಟಿ ಚಿಲ್ಲರೆ ಹೆಚ್ಚು ವಸೂಲಿ 1993-94ರಲ್ಲಿ ಆಗಿದೆ. ಇನ್ನು ಮಹಾರಾಷ್ಟ್ರದ್ದು, ಫ್ಯಾಕ್ಟರಿಯವರು ಕೊಡಬೇಕು. ಏಕೆಂದರೆ, ಅವರು ಪರ್ಚೇಸ್ ಮಾಡಿರುವುದರಿಂದ ಅವರು ಕೊಡಬೇಕು. ಲಾಸ್ಟ್ ಟೈಮ್ ಎಕ್ಸೆಮ್ಪ್ಟ್ ಮಾಡಿದ್ದೆವು. ಆದರೆ, ಈ ವರ್ಷ ಗೋವಾಕ್ಕೆ ಎಕ್ಸೆಮ್ಪ್ಟ್ ಮಾಡಿರಬಹುದೆಂದೆನಿಸುತ್ತದೆ. ಮಹಾರಾಷ್ಟ್ರಕ್ಕೆ ಮಾಡಿಲ್ಲ. ಅದು ವಸೂಲಾಗುತ್ತದೆ, ಖಂಡಿತವಾಗಿಯೂ ನಾವು ವಸೂಲ್ಮಾಡುತ್ತೇವೆ. ಇನ್ನು ತಾವು ಪದ್ಧತಿಯನ್ನು ಬದಲಾವಣೆ ಮಾಡಬೇಕೆಂದು ಹೇಳಿದ್ದೀರಿ. ಆದರೆ, ಹಿಂದಿನ ಪದ್ಧತಿಯೇ ಸರಿ ಎಂದು ನನ್ನ ವೈಯಕ್ತಿಕ ಅಭಿಪ್ರಾಯ. ಒಮ್ಮೆಲೇ ಬದಲಾವಣೆ ಮಾಡಬೇಕೆಂದು ಹೇಳಿದ್ದೀರಿ, ಇದನ್ನು ಪರಿಶೀಲನೆ ಮಾಡುತ್ತೇನೆ. ಮುಂದೆ ಟ್ಯಾಕ್ಸೇಷನ್ ಪ್ರಪೋಸಲ್ ಬಂದಾಗ, ಇದಕ್ಕೆ ಹೆಚ್ಚು ಗಮನ ಕೊಟ್ಟು ಪ್ರಯತ್ನ ಮಾಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ಒಂದು ಅಂಶವನ್ನು ತಾವು ಗಮನಿಸಬೇಕು. ಮಾನ್ಯ ಪ್ರೊಫೆಸರ್‌ರವರು ಏನು ಹೇಳಿದ್ದಾರೆ. ಮಹಾರಾಷ್ಟ್ರದಲ್ಲಿ ಕಬ್ಬು ಏನು

ಪರ್ಚೇಸ್ ಆಗುತ್ತದೆ, ಅದು ಅಲ್ಲಿ ಆಗುತ್ತದೆ. ಹಾಗಾಗಿ, ಪರ್ಚೇಸ್ ಟ್ಯಾಕ್ಸ್ ನೀವು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂದು ತೀರ್ಮಾನವಾಗಿದೆ. ಇದರ ಬಗ್ಗೆ ತಾವು ನಿರ್ಣಯ ತೆಗೆದುಕೊಳ್ಳಬೇಕು ಮತ್ತು ಮಹಾರಾಷ್ಟ್ರದವರು ಏನು ಮಾಡುತ್ತಿದ್ದಾರೆಂದರೆ, ರೈತರಿಗೇನು ಹಣ ಸಲ್ಲಬೇಕು, ಅದರಲ್ಲಿ ಟ್ಯಾಕ್ಸ್ ಡಿಡಕ್ಟ್ ಮಾಡುತ್ತಿದ್ದಾರೆ. ಉದಾಹರಣೆಗಾಗಿ ಬೀದರ್ ಫ್ಯಾಕ್ಟರಿ, ನಿಪ್ಪಾಣಿ ಫ್ಯಾಕ್ಟರಿ ಇತ್ಯಾದಿ. ಹಾಗಾಗಿ ರೈತರಿಗೆ ಕಷ್ಟವಾಗುತ್ತದೆ. ತಮ್ಮ ಕಡೆಯಿಂದ ನಿರ್ದೇಶನ ಹೋಗಬೇಕಾಗುತ್ತದೆ. ರೈತರಿಗೆ ಸಲ್ಲಬೇಕಾಗಿರುವುದರಲ್ಲಿ ಯಾವುದೂ ಡಿಡಕ್ಟ್ ಮಾಡಬಾರದೆಂದು ಹೇಳಬೇಕು. ಈ ಪ್ರಕಾರ ಸೂಕ್ತ ನಿರ್ದೇಶನ ಕಳುಹಿಸಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಪ್ರೊ|| ಎಂ.ಡಿ. ನಂಜುಂಡಸ್ವಾಮಿ : ವಿಶೇಷವಾಗಿ ಈ ವರ್ಷ ಸುಮಾರು 50-60 ಲಕ್ಷ ಟನ್ ಸರ್‌ಪ್ಲಸ್ ಕೇನ್, ಮೈಸೂರು, ಮಂಡ್ಯ, ಬೀದರ್, ಬಿಜಾಪುರ, ಬೆಳಗಾಂ ಮತ್ತು ಧಾರವಾಡ ಜಿಲ್ಲೆಯಲ್ಲಿದೆ. ಇದಕ್ಕೆ ನೀವೇನಾದರೂ ಪರ್ಚೇಸ್ ಟ್ಯಾಕ್ಸ್ ಹಾಕಿ, ತೊಂದರೆ ಮಾಡಿದರೆ, ಕಬ್ಬು ಬೆಳೆಗಾರರು ಬಹಳ ತೊಂದರೆಗೆ ಈಡಾಗುತ್ತಾರೆ. ಕಾನೂನು ಪ್ರಕಾರ, You have no powers to levy tax on sale or purchase which takes place outside the State. Where do you get the powers? Do you want me to supply the High Court Orders? Where do you get powers to levy purchase tax on the sale or purchase which takes place outside the State of Karnataka?

ಇದನ್ನು ದಯವಿಟ್ಟು ಈಗ ಘೋಷಣೆ ಮಾಡಬೇಕು. ಹೊರಗಡೆ ರಾಜ್ಯದಲ್ಲಿ ಏನು ಕಬ್ಬು ಮಾರಾಟವಾಗುತ್ತಿದೆ. ಅದಕ್ಕೆ ತೆರಿಗೆಯನ್ನು ಹಾಕುವುದಿಲ್ಲ ಎಂದು.

ಶ್ರೀ ಎಂ. ವೀರಪ್ಪ ಮೊಯ್ಲಿ : ಕೆಲವರು ಕೋರ್ಟಿಗೆ ಹೋಗಿದ್ದಾರೆ, ಕೆಲವರು ಕೋರ್ಟಿಗೆ ಹೋಗಲಿಲ್ಲ. ಅಧಿಕಾರದ ಪ್ರಶ್ನೆ. ಇದನ್ನು ಕಾನೂನು ಪ್ರಕಾರ ಅಥವಾ ಹೈಕೋರ್ಟ್ ತೀರ್ಪು ಕೊಟ್ಟಂಥ ಆಧಾರದ ಮೇಲೆ ಮಾಡುತ್ತೇವೆ.

PROF. M.D. NANJUNDA SWAMY : Do you have extra-territorial powers to levy the tax?

SRI M. VEERAPPA MOILY : But still we are recovering.

PROF. M.D. NANJUNDASWAMY : It is illegal. You are doing illegal things. It is impossible. Don't tell that. It is going on record.

ಶ್ರೀ ಎಂ. ವೀರಪ್ಪಮೊಯಿಲಿ : ಈ ರಾಜ್ಯದ ಸಂಪನ್ಮೂಲದ ದೃಷ್ಟಿಯಿಂದ ಮಾಡುತ್ತೇವೆ.

ಪ್ರೊ|| ಎಂ.ಡಿ. ನಂಜುಂಡಸ್ವಾಮಿ : ದಯಮಾಡಿ ಆ ಮಾತು ಹೇಳಬೇಡಿ. ರೆಕಾರ್ಡಿಗೆ ಹೋಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ರೈತರಿಗೆ ಬರತಕ್ಕದ್ದರಲ್ಲಿ, ಮಹಾರಾಷ್ಟ್ರದಲ್ಲಿ ಟ್ಯಾಕ್ಸ್ ಕಲೆಕ್ಟ್ ಮಾಡುತ್ತಿದ್ದಾರೆ. ಇದನ್ನು ಮಾಡಬಾರದೆಂದು ನಿರ್ದೇಶನ ಹೋಗಬೇಕಾಗುತ್ತದೆ.

ಪ್ರೊ|| ಎಂ.ಡಿ. ನಂಜುಂಡಸ್ವಾಮಿ : ಮುಖ್ಯಮಂತ್ರಿಗಳಲ್ಲಿ ನನ್ನ ವಿನಂತಿ. Your last sentence should not go on record. "ರಾಜ್ಯದ ಸಂಪನ್ಮೂಲದ ದೃಷ್ಟಿಯಿಂದ ಇಲ್ಲೀಗಲ್ ಟ್ಯಾಕ್ಸ್ ಹಾಕುತ್ತೇವೆಂದು."

ಶ್ರೀ ಎಂ. ವೀರಪ್ಪ ಮೊಯಿಲಿ : ರಾಜ್ಯದ ಸಂಪನ್ಮೂಲದ ದೃಷ್ಟಿಯಿಂದ ವಿನಾಯಿತಿ ಮಾತು ಸಾಧುವಲ್ಲವೆಂದು ಹೇಳಿದ್ದೇನೆಯೇ ಹೊರತು, ರಾಜ್ಯದ ಸಂಪನ್ಮೂಲದ

ದೃಷ್ಟಿಯಿಂದ ನ್ಯಾಯಬಾಹಿರವಾದ ತೆರಿಗೆಯನ್ನು ವಸೂಲಿ ಮಾಡುತ್ತೇವೆಂದು ಹೇಳಲೇ ಇಲ್ಲ. ಮಾನ್ಯ ದೇಶಪಾಂಡೆಯವರು ಹೇಳಿದಪ್ರಕಾರ, ರೈತರ ಮೇಲೆ ಬೀಳಬಾರದು, ಕಾರ್ಖಾನೆಯವರೇ ಕೊಡಬೇಕೆಂದು ಹೇಳುತ್ತಿದ್ದಾರೆ, ಅದರ ಬಗ್ಗೆ ನಾವು ಸುತ್ತೋಲೆಯನ್ನು ಕೊಡುತ್ತೇವೆ.

SRI. K.C. MODGEKAR DESAI : I request the Governemnt not to impose this purchase Tax atleast on marginal farmers. Are you going to cancel this purchase Tax?

4. ವಿತ್ತೀಯ ಕಾರ್ಯಕಲಾಪಗಳು

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೇ, ಭಾರತ ಸಂವಿಧಾನ 205(1)ನೇ ಅನುಚ್ಛೇದದ ಮೇರೆಗೆ, 1994-95ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಅಂದಾಜುಗಳ (ಮೊದಲನೇ ಕಂತು)ನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಉಪಾಧ್ಯಕ್ಷರು : ಒಪ್ಪಿಸಲಾಯಿತು.

1994-95ನೇ ಸಾಲಿನ ಅನುದಾನದ ಬೇಡಿಕೆಗಳ ಮಂಡನೆ

ಅಭಿಯಾಚನೆ ಕ್ರಮಾಂಕ : 42 ಜಿಲ್ಲಾಡಳಿತ

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ, 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜಿಲ್ಲಾಡಳಿತಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 60,46,24,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತಿದ್ದೇನೆ"

ಅಭಿಯಾಚನೆ ಕ್ರಮಾಂಕ : 51 - ಭೂಕಂದಾಯ ಇತ್ಯಾದಿ

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3- 1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂ ಕಂದಾಯ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 69,92,83,000 ರೂಪಾಯಿಗಳಿಗಿಂತ ಮೀರದ ಹಣವನ್ನು ಮತ್ತು ಬಂಡವಾಳ ಖಾತೆಯಲ್ಲಿ 6,01,75,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತಿದ್ದೇನೆ."

ಅಭಿಯಾಚನೆ ಕ್ರಮಾಂಕ : 52 - ಮುದ್ರಾಂಕಗಳು ಮತ್ತು ನೋಂದಣಿ:

ಶ್ರೀ ಧರ್ಮಸಿಂಗ್ (ಕಂದಾಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-95ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುದ್ರಾಂಕಗಳು ಮತ್ತು ನೋಂದಣಿಗಳಿಗೆ ಸಂದಾಯ ಮಾಡುವಲ್ಲಿ, ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 11,13,60,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತಿದ್ದೇನೆ."

ಅಭಿಯಾಚನೆ ಕ್ರಮಾಂಕ : 24 - ಅರಣ್ಯ

ಶ್ರೀ ಹೆಚ್. ವಿಶ್ವನಾಥ್ (ಅರಣ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ, ದಿನಾಂಕ : 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ, ಅರಣ್ಯಕ್ಕೆ ಸಂದಾಯಮಾಡುವಲ್ಲಿ, ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 151,16,16,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,25,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತೇನೆ."

ಅಭಿಯಾಚನೆ ಕ್ರಮಾಂಕ : 62 - ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ

ಶ್ರೀ ಹೆಚ್.ಆರ್. ರಾಜು (ವಿಜ್ಞಾನ ಮತ್ತು ಯಂತ್ರ, ಕಲೆ ಮತ್ತು ಪರಿಸರ ರಾಜ್ಯಸಚಿವರು) : ಮಾನ್ಯ ಉಪಾಧ್ಯಕ್ಷರೇ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 42,14,50,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತಿದ್ದೇನೆ."

ಅಭಿಯಾಚನೆ ಕ್ರಮಾಂಕ : 59. - ಕಾರ್ಮಿಕ ಮತ್ತು ಉದ್ಯೋಗ

ಶ್ರೀ ಬ್ಲೇಸಿಯಸ್ ಡಿಸೋಜ (ಕಾರ್ಮಿಕ ಸಚಿವರು) : ಮಾನ್ಯ ಉಪಾಧ್ಯಕ್ಷರೇ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ, ದಿನಾಂಕ : 31-3-95ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಾರ್ಮಿಕ ಮತ್ತು ಉದ್ಯೋಗಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 59,96,05,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತೇನೆ."

ಅಭಿಯಾಚನೆ ಕ್ರಮಾಂಕ : 60 - ಹರಿಜನ, ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಉಪಾಧ್ಯಕ್ಷರೇ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ, ದಿನಾಂಕ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ, ಹರಿಜನ, ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣಗಳಿಗೆ ಸಂದಾಯ ಮಾಡುವಲ್ಲಿ, ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 230,29,74,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 30,56,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತಿದ್ದೇನೆ."

ಅಭಿಯಾಚನೆ ಕ್ರಮಾಂಕ : 31 - ವೈದ್ಯಕೀಯ ಶಿಕ್ಷಣ

ಶ್ರೀ ಎಂ. ವೀರಪ್ಪ ಮೊಯಿಲಿ (ಶ್ರೀ ಬಿ. ಶಿವಣ್ಣ, ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೇ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ, 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 112,70,75,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರಾ ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತೇನೆ."

ಅಭಿಯಾಚನೆ ಕ್ರಮಾಂಕ : 32 - ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು :

ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಉಪಾಧ್ಯಕ್ಷರೇ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ, 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 374,21,06,000ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತೇನೆ"

ಅಭಿಯಾಚನೆ ಕ್ರಮಾಂಕ : 01 - ವ್ಯವಸಾಯ (ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ನಿಗಮ ಹೊರತುಪಡಿಸಿ)

ಶ್ರೀ ಎಂ. ವೀರಪ್ಪ ಮೊಯಿಲಿ (ಶ್ರೀ ಹೆಚ್.ಎಂ. ರೇವಣ್ಣ, ಕೃಷಿ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೇ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವ್ಯವಸಾಯ (ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ನಿಗಮ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 225,91,38,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 13,95,51,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತಿದ್ದೇನೆ."

ಶ್ರೀ ಎಂ. ವೀರಪ್ಪ ಮೊಯಿಲಿ (ಶ್ರೀ ಎ. ಕೃಷ್ಣಪ್ಪ, ತೋಟಗಾರಿಕೆ ಸಚಿವರ ಪರವಾಗಿ) :

ಮಾನ್ಯ ಅಧ್ಯಕ್ಷರೇ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-95ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ತೋಟಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 55,07,33,000 ಕೋಟಿ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 75,00,000 ರೂಪಾಯಿಗಳಿಗೆ ಮೀರದ ಮೊತ್ತವನ್ನು ಮಂಜೂರು ಮಾಡುವ ಅನುದಾನ ಬೇಡಿಕೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ".

ಅಭಿಯಾಚನೆ ಕ್ರಮಾಂಕ 4 ಮೀನುಗಾರಿಕೆ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-95ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮೀನುಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 18,53,46,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 23,02,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರುಮಾಡುವ ಅನುದಾನ ಬೇಡಿಕೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಭಿಯಾಚನೆ ಕ್ರಮಾಂಕ 49 ರೇವು ಮತ್ತು ಜಲಸಾರಿಗೆ ಸೇವೆಗಳು

ಮಾನ್ಯ ಅಧ್ಯಕ್ಷರೇ "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31Ë3Ë1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜಲಸಾರಿಗೆ ಸೇವೆಗಳಿಗಾಗಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ

ಖಾತೆಯಲ್ಲಿ 3,03,61,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 11,57,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಲು ಸಭೆಯ ಮುಂದೆ ಅನುದಾನ ಬೇಡಿಕೆಯನ್ನು ಮಂಡಿಸುತ್ತೇನೆ."

ಉಪಾಧ್ಯಕ್ಷರು : ಬೇಡಿಕೆಗಳನ್ನು ಮಂಡಿಸಲಾಗಿದೆ. ಈಗ ಸಭೆಯನ್ನು ಮುಂದೂಡಿ ಮತ್ತೆ ಸಭೆಯು 3-00 ಗಂಟೆ ಸಮಾವೇಶಗೊಳ್ಳುವುದು.

(ಸಭೆಯು 1-55 ನಿಮಿಷಕ್ಕೆ ಮುಂದೂಡಲಾಯಿತು)

ಸದನವು ಮತ್ತೆ ಮಧ್ಯಾಹ್ನ 3-25ಕ್ಕೆ ಸಮಾವೇಶಗೊಂಡಿತು.

(ವಿಧಾನ ಸಭಾಧ್ಯಕ್ಷರಾದ ಶ್ರೀ ವಿ.ಎಸ್. ಕೌಜಲಗಿಯವರು ಅಧ್ಯಕ್ಷಪೀಠದಲ್ಲಿ ಉಪಸ್ಥಿತರಿದ್ದರು)

6. ನೆರೆ ಹಾವಳಿ ಮತ್ತು ಅನಾವೃಷ್ಟಿಯಿಂದ ರಾಜ್ಯದ ಕೆಲವು ಭಾಗಗಳಲ್ಲಿ ಉಂಟಾಗಿರುವ ಹಾನಿಯ ಬಗ್ಗೆ ಮುಂದುವರೆದ ಚರ್ಚೆ

+ ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು, ಈ ವರ್ಷ ಅತಿವೃಷ್ಟಿ ಮತ್ತು ಬರಗಾಲ, ಇದರ ಬಗ್ಗೆ ನಾವೇನು ನಿಲುವಳಿ ಸೂಚನೆ ಕೊಟ್ಟಿದ್ದೇವೆ, ಈ ವಿಷಯವಾಗಿ ಈಗಾಗಲೇ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ಹೇಳಿಕೆಯಲ್ಲಿ ಎಲ್ಲಾ ಅಸತ್ಯವಿದೆಯೆಂದು ನಾನು ಹೇಳುವುದಿಲ್ಲ. ಕೆಲವು ವಿಚಾರಗಳನ್ನು ನಾನು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ, ಕೆಲವು ವಿಚಾರದಲ್ಲಿ, ಅವರೇನು ಮಾಹಿತಿ ಕೊಟ್ಟಿದ್ದಾರೆ. ಅದು ಸರಿಯಲ್ಲ. ಮತ್ತು ಇವತ್ತು ನಾಡಿನ' ರೈತ, 1990-91ನೇ ಇಸವಿಯಿಂದ ಎಷ್ಟು ಕಷ್ಟದಲ್ಲಿದ್ದಾನೆ, ಎಷ್ಟು ತೊಂದರೆಯಲ್ಲಿದ್ದಾನೆ. ಮಾನ್ಯ ಧರ್ಮಸಿಂಗ್‌ರಂಥವರು, ಒಬ್ಬ ಅನುಭವೀ ಸಚಿವರು. ಆದ್ದರಿಂದ ಅವರಿಗೆ ನಾವು ಹೆಚ್ಚು ಹೇಳುವ ಅವಶ್ಯಕತೆ ಇಲ್ಲ. ಏಕೆಂದರೆ, ಅವರಿಗೆ ರೈತರ ಪರಿಸ್ಥಿತಿ, ರೈತರ ಕಷ್ಟ ಚೆನ್ನಾಗಿ ಗೊತ್ತು, ಎಂದು ನಾನು ಭಾವಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಕಳೆದ ನಾಲ್ಕು ವರ್ಷದಿಂದ ಅಂದರೆ, 1990-91 ರಿಂದ ರಾಜ್ಯದಲ್ಲಿ ಬರಗಾಲ ಅಥವಾ ಅತಿವೃಷ್ಟಿ ಸಮಸ್ಯೆ ಇವೆ. ಪ್ರತಿವರ್ಷ ನಾವು ಇಲ್ಲಿ, ನಿಲುವಳಿ ಸೂಚನೆ ಮುಖಾಂತರ ಅಥವಾ ರೂಲ್ 68ರ ಮುಖಾಂತರ ನೋಟೀಸ್ ಕೊಡುವುದು ಮತ್ತು ಅದಕ್ಕೆ ಸರ್ಕಾರದಿಂದ ಉತ್ತರ ಬರುತ್ತದೆ. ಆದರೆ, ನಿಜವಾಗಿಯೂ ರೈತರಿಗೆ ಏನು ಸಹಾಯವಾಗಬೇಕಾಗಿದೆ, ಏನು ಅನುವು ಆಗಬೇಕು, ಏನು ರಿಯಾಯಿತಿ ಆಗಬೇಕಾಗಿದೆ, ಅದು ಆಗುತ್ತಾ ಇಲ್ಲವೆಂದು ಇವತ್ತು ನಾವು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕಾಗಿದೆ. ಸರ್ಕಾರ ಪ್ರತಿಸಾರಿ ಬರಗಾಲ ಬಂದಾಗ, ಅಥವಾ ಅತಿವೃಷ್ಟಿ ಬಂದಾಗ ಕೇಂದ್ರಸರ್ಕಾರಕ್ಕೆ ಮನವಿ ಕೊಡುವ ಕೆಲಸವಷ್ಟೇ ನಡೆಯುತ್ತಿವೆ. ಒಂದು ಮೆಮೊರ್‍ಯಾಂಡಂ ತಯಾರು ಮಾಡುವುದು, ಕೇಂದ್ರ ಸರಕಾರಕ್ಕೆ ಕೊಡುವುದು. ಮತ್ತು ಮೆಮೊರ್‍ಯಾಂಡಂ ಕೊಡುವ ಅವಶ್ಯಕತೆ ಇದೆಯೇ? ಇದರ ಬಗ್ಗೆಯೂ ಸಹ ನಾವು ಚರ್ಚೆ ಮಾಡಬೇಕಾಗುತ್ತದೆ. ಏಕೆಂದರೆ, ಕೇಂದ್ರಸರ್ಕಾರಕ್ಕೆ ಮೆಮೊರ್‍ಯಾಂಡಂ ಕೊಡುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಹೋಗುತ್ತಾರೆ, ನಮ್ಮ ಕಂದಾಯ ಸಚಿವರು ಹೋಗುತ್ತಾರೆ ಮತ್ತು ರೆವಿನ್ಯೂ ಕಮೀಷನರ್ ಅವರು ಹೋಗುತ್ತಾರೆ. ನಮ್ಮ ಅಧಿಕಾರಿಗಳು ಕಷ್ಟಪಟ್ಟಿದ್ದಾರೆ, ಕಷ್ಟಪಟ್ಟು ಎಲ್ಲಾ ಅಂಕಿಅಂಶಗಳನ್ನು ಸಂಗ್ರಹಣೆ ಮಾಡಿ ಆ ಮೆಮೋರ್‍ಯಾಂಡಂ ಕೊಡುತ್ತಾರೆ.

ನಂತರ ನಮ್ಮ ಮಾನ್ಯ ಸಚಿವರು ಹೇಳಿದ ಹಾಗೆ ಪ್ರಧಾನ ಮಂತ್ರಿಗಳು ಅವರ ಸ್ಪೆಷಲ್ ಶಬ್ದದಲ್ಲಿ ಹೇಳುವುದಾದರೆ ಪರ್ಸನಲ್ ರೆಪ್ರಸೆಂಟೇಟಿವ್ ಎಂಬ್ಯಾಸಿಗಳು ಬರುತ್ತಾರೆ. ಅವರು ಬಂದು ಹೆಲಿಕ್ಯಾಪ್ಟರ್‌ನಲ್ಲಿ ತಿರುಗಾಡುತ್ತಾರೆ. ಇಷ್ಟು ಆದ ನಂತರ

ಪತ್ರಿಕಾ ಹೇಳಿಕೆಕೊಡುತ್ತಾರೆ. ನಾವು ಸಹಾಯ ಮಾಡುತ್ತೇವೆಂದು ಎಷ್ಟು ಸಹಾಯ ಮಾಡಿದ್ದಾರೆ? ಅದಕ್ಕೆ ಬರೋಣ. ಮಾನ್ಯ ಅಧ್ಯಕ್ಷರೇ, ಇವರ ಅಧಿಕಾರದಲ್ಲಿ ಬಂದ ನಂತರ ಮೊದಲನೇ ಮೆಮೋರ್ಯಾಂಡಮ್ ನವೆಂಬರ್ 92ರಲ್ಲಿ ಇವರು ಸೆಂಟ್ರಲ್ ಅಸಿಸ್ಟೆನ್ಸ್‌ಸಾಟ್ ಎಂದು ಚಾಪ್ಟರ್ 4 ಪುಟ 30ರಲ್ಲಿ ಕೇಂದ್ರಸರ್ಕಾರವನ್ನು ಏನು ಕೇಳಿದ್ದಾರೆಂದರೆ "Central Assitance sought - Chapter IV - Page 30 : The State Government while submitting the Memorandum hopes that the Government of India will release the extent of damage caused to the people and the properties of Karnataka and release at least a sum Rs. 200/- crores so that the relief and rehabilitation of flood victims and repairs & restoration of damaged public properties and civil amentities are undertaken and restore them to normal position. ಆಗ 200 ಕೋಟಿ ರೂಪಾಯಿಗಳನ್ನು ಕೇಳಿದರು ನವೆಂಬರ್ 92ರಲ್ಲಿ. ಆಮೇಲೆ ಮಾನ್ಯ ಅಧ್ಯಕ್ಷರೇ, ಮತ್ತೊಂದು ಮೆಮೊರ್ಯಾಂಡಮ್ ಅನ್ನು ಕೊಟ್ಟರು ಡಿಸೆಂಬರ್ 92ರಲ್ಲಿ ಆಗ ಇವರು ಕೇಳಿದ ಹಣ ಸೆಂಟರ್ ಅಸಿಸ್ಟೆನ್ಸ್ 112 ಕೋಟಿ ರೂಪಾಯಿಗಳು ಶಾರ್ಟ್ ಟರ್ಮ್‌ಗೆ. ಸೆಂಟ್ರಲ್ ಅಸಿಸ್ಟೆನ್ಸ್ ಫಾರ್ ಲಾಂಗ್‌ಟರ್ಮ್ 220 ಕೋಟಿ ರೂಪಾಯಿಗಳು ಒಟ್ಟು 336.54 ಕೋಟಿ ರೂಪಾಯಿಗಳನ್ನು ಕೇಳಿದರು ಯಾವಾಗ ಡಿಸೆಂಬರ್ 1992ರಲ್ಲಿ. ಇದಾದ ನಂತರ 3ನೇ ಮೆಮೋರಂಡಂ ಕೊಟ್ಟರು ನವೆಂಬರ್ 93ರಲ್ಲಿ. ಪುನಃ ಇವರು ಮತ್ತೊಂದು ಮೆಮೊರ್ಯಾಂಡಮ್ ಅನ್ನು ಕೊಟ್ಟರು. ಆಗ ಎಷ್ಟು ಕೇಳಿದರು ಅಂದರೆ ಸೆಂಟ್ರಲ್ ಅಸಿಸ್ಟೆನ್ಸ್ ಫಾರ್ ಶಾರ್ಟ್ ಟರ್ಮ್ ಅಂಡ್ ರಿಲೀಫ್ ಮೆಷರ್ಸ್‌ಗೆ 75.65 ಕೋಟಿ ರೂಪಾಯಿಗಳು ಮತ್ತೆ ಸೆಂಟ್ರಲ್ ಅಸಿಸ್ಟೆನ್ಸ್ ಫಾರ್ ಲಾಂಗ್‌ಟರ್ಮ್‌ಗೆ 123.90 ಕೋಟಿ ರೂಪಾಯಿಗಳು ಒಟ್ಟು 201 ಕೋಟಿ 87 ಲಕ್ಷ ರೂಪಾಯಿಗಳನ್ನು ಕೇಳಿದರು. ತಕ್ಷಣ 200 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿ ಎಂದು ಕೇಳಿದರು. ನವೆಂಬರ್ 93ರಲ್ಲಿ ಇದಾದ ನಂತರ ಬಹಳ ಅತಿವೃಷ್ಟಿಯಾಯಿತು. ಸರ್ಕಾರದ ಹತ್ತಿರ ಹಣ ಇಲ್ಲ. ಅದಕ್ಕೆ ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ತೆಗೆದುಕೊಳ್ಳಬೇಕೆಂದು ಮತ್ತೊಂದು ಮೆಮೊರ್ಯಾಂಡಮ್ ಕೊಟ್ಟರು. ಯಾವಾಗ ಅಂದರೆ 93ರಲ್ಲಿ ಇರಬೇಕು ಅದು ಸರಿಯಾಗಿ ಗೊತ್ತಾಗಲಿಲ್ಲ. ಕೇಂದ್ರ ಸರ್ಕಾರದ ಮುಖಾಂತರ ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ಬೇಕು ಎಂದು ಕೇಳಿದರು ಆಂಧ್ರಪ್ರದೇಶ, ಗುಜರಾತ್ ಮತ್ತು ಮಹಾರಾಷ್ಟ್ರ ಸರ್ಕಾರಗಳಿಗೆ ಕೊಟ್ಟಂತೆ ನಮಗೂ 935 ಕೋಟಿ ರೂಪಾಯಿಗಳು ಬೇಕು ಎಂದು ಕೇಳಿದರು.

ಮತ್ತೊಂದು ಮೆಮೊರ್ಯಾಂಡಮ್ ಅನ್ನು ಜೂನ್ 94ರಲ್ಲಿ ಕೊಟ್ಟರು. 94ರಲ್ಲಿ ಪುನಃ ಎಷ್ಟು ಹಣ ಕೇಳಿದರು ಅಂದರೆ 100 ಕೋಟಿ ರೂಪಾಯಿಗಳು. The State Government seeks the Central Assistance of Rs. 100/- crores.

ಮಾನ್ಯ ಅಧ್ಯಕ್ಷರೇ, ಒಂದು, ಎರಡು ಮೂರು, ಮೆಮೊರ್ಯಾಂಡಮ್‌ಗಳನ್ನು ಕೊಟ್ಟಾಯಿತು. ಇವರ 5 ವರ್ಷಗಳ ಅವಧಿಯಲ್ಲಿ 5 ಮೆಮೊರ್ಯಾಂಡಮ್‌ಗಳನ್ನು ಕೊಟ್ಟರು. 5 ವರ್ಷಗಳ ಅವಧಿಗೆ ಜನ ಇವರನ್ನು ಚುನಾಯಿಸಿ ಕಳುಹಿಸಿದ ಮೇಲೆ 5 ಮೆಮೊರ್ಯಾಂಡಮ್‌ಗಳನ್ನು ಕೊಟ್ಟರು. ಮಾನ್ಯ ಅಧ್ಯಕ್ಷರೇ, ಮೆಮೊರ್ಯಾಂಡಮ್‌ಗಳನ್ನು ಪ್ರಿಂಟ್ ಮಾಡಲಿಕ್ಕೆ ಎಷ್ಟು ಹಣ ಖರ್ಚಾಗಿದೆ ಎಂದು ಮಾನ್ಯ ಸಚಿವರು ಹೇಳಬೇಕು.

ಶ್ರೀ ಧರ್ಮಸಿಂಗ್ : 5 ಲಕ್ಷ ರೂಪಾಯಿ ಆಗಿದೆ.

ಶ್ರೀ ಆರ್.ವಿ. ದೇಶಪಾಂಡೆ : 5 ಲಕ್ಷ ರೂಪಾಯಿಗಳನ್ನು ಪ್ರಿಂಟ್ ಮಾಡಲಿಕ್ಕೆ ಖರ್ಚು ಮಾಡಿದ್ದರೂ ಸಹ 5 ರೂಪಾಯಿ ಕೇಂದ್ರ ಸರ್ಕಾರ ಕೊಟ್ಟಿದ್ದಾರೆ ಎಂದು

ಹೇಳಿದರೆ ನಾನು ಈ ಸ್ಥಾನದಲ್ಲಿ ಒಂದು ನಿಮಿಷ ಕೂಡ ನಾನು ಇರುವುದಿಲ್ಲ. ಏತಕ್ಕೆ ಈ ನಾಟಕ? ಇದರ ಅವಶ್ಯಕತೆ ಏನಿದೆ?

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದ ನಾಯಕರು ಈ ರೀತಿಯ ಒಂದು ಸವಾಲು ಹಾಕುತ್ತಿರುವಾಗ ಸರ್ಕಾರ ಏತಕ್ಕೆ ಅದನ್ನು ಸ್ವೀಕಾರ ಮಾಡಬಾರದು?

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಿದ ಮೇಲೆ ನಾನು ಉತ್ತರ ಕೊಡಲೋ ಅಥವಾ ಅದರ ಮಧ್ಯೆದಲ್ಲಿಯೇ ಹೇಳಲೋ?

ಶ್ರೀ ಆರ್.ವಿ. ದೇಶಪಾಂಡೆ : ನಂತರ ಹೇಳಿ. ನೀವು ಏನು ಹೇಳುತ್ತೀರಿ ಎಂಬುದು ನನಗೆ ಗೊತ್ತಿದೆ. ನನ್ನ ಪ್ರತಿಯೊಂದು ಮಾತಿಗೂ ತಾವು ಉತ್ತರ ಕೊಡಿ ತಮಗೆ ಅವಕಾಶ ಇದೆ.

ಶ್ರೀ ಸಿ. ಬೈರೇಗೌಡ : ನ್ಯಾಚುರಲ್ ಕೆಲಾಮಿಟೀಸ್ ರೀಲೀಫ್ ಫಂಡ್‌ನಲ್ಲಿ ಬಂದಿರತಕ್ಕ ಅಂಕಿ ಅಂಶಗಳನ್ನು ನೀವು ಕೊಡುತ್ತೀರಿ. ಅದನ್ನು ಯಾರು ಇದ್ದರೂ ಕೂಡ ಕೂಡಲೇ ಬೇಕು. ಆದರೆ ನೀವು ಬ್ಯಾಗ್ ಹಿಡಿದುಕೊಂಡು ಹೋಗಿ ಹಿಂದೆ ತಿರುಗಾಡುತ್ತಿದ್ದರಲ್ಲಾ, ಅದರಿಂದ ರಾಜ್ಯಕ್ಕೆ ಪ್ರತಿಫಲ ಆಯಿತು ಎಂಬುದನ್ನು ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ : ನಮ್ಮ ಮಾನ್ಯ ಕಂದಾಯ ಸಚಿವರು ಏನು ಉತ್ತರ ಕೊಡುತ್ತಾರೆಂದು ನನಗೆ ಗೊತ್ತಿದೆ. ನಿಮ್ಮ ಉತ್ತರ ನಾನೇ ಹೇಳುತ್ತೇನೆ. ಪ್ರಧಾನ ಮಂತ್ರಿಗಳು ಸತ್ತವರಿಗೆ 1 ಲಕ್ಷ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಿದ್ದಾರೆ. ಸತ್ತವರ ಕುಟುಂಬಗಳಿಗೆ 1 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದಾರೆ. ಆದರೆ ಈ ಮೆಮೊರ್‍ಯಾಂಡಮ್‌ನಲ್ಲಿ ಸತ್ತವರಿಗೆ ಅವರ ಕುಟುಂಬದವರಿಗೆ ಹಣ ಕೊಡಿ ಎಂದು ಇಲ್ಲ. ರೈತರಿಗೆ ಕಷ್ಟ ಇದೆ. ರೈತರ ಮನೆ ಬಿದ್ದು ಹೋಗಿದೆ. ರೈತರ ಬೆಳೆ ಹಾಳಾಗಿದೆ ಇತ್ಯಾದಿಗಳಿಗೆ ಏನೂ ದುಡ್ಡು ಕೊಟ್ಟಿಲ್ಲ ಎಂದು ನಾನು ಹೇಳುತ್ತೇನೆ. ಒಂದು ಲಕ್ಷ ರೂಪಾಯಿಗಳನ್ನು ಸತ್ತವರ ಕುಟುಂಬಕ್ಕೆ ಪ್ರಧಾನ ಮಂತ್ರಿಗಳ ರಿಲೀಫ್ ಫಂಡ್‌ನಿಂದ ಕೊಟ್ಟಿದ್ದಾರೆ. ಆ ಒಂದು ಒಳ್ಳೆಯ ಕೆಲಸ ಪ್ರಧಾನಮಂತ್ರಿಗಳು ಮಾಡಿದ್ದಾರೆ. ಅದಕ್ಕೆ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಎರಡನೆಯದು ಅವರು ಏನು ಮಾಡಿದ್ದಾರೆ, ಅವರು ಹೇಳಬಹುದು 9ನೇ ಹಣಕಾಸಿನ ಆಯೋಗದವರು ಕೆಲಾಮಿಟಿ ಫಂಡ್ ಎಂದು 27 ಕೋಟಿ ರೂಪಾಯಿಗಳೆಂದು ಮಾಡಿದ್ದಾರೆ. ಆ 27 ಕೋಟಿಯಲ್ಲಿ 75 ಪರ್ಸೆಂಟ್ ಸೆಂಟ್ರಲ್ ಕಾಂಟ್ರಿಬ್ಯೂಷನ್ ಇದೆ. ನಮ್ಮದು 25 ಪರ್ಸೆಂಟ್ ಕಾಂಟ್ರಿಬ್ಯೂಷನ್ ಈ ಹಣ 20-25 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದಾರೆ. ಈ ಉತ್ತರ ಅವರು ಕೊಡುತ್ತಾರೆ. ಮಾನ್ಯ ಅಧ್ಯಕ್ಷರೇ ಇಷ್ಟು ಕಸರತ್ತು ಮಾಡಿ ರೆವಿನ್ಯೂ ಕಮೀಷನರ್ ಜಿಲ್ಲಾಧಿಕಾರಿಗಳು ಎಲ್ಲಾ ಕಡೆಯಿಂದ ಮಾಹಿತಿಯನ್ನು ಸಂಗ್ರಹಿಸಿ ಮೆಮೋರ್‍ಯಾಂಡಮ್ ಕೊಡಲು ಮುಖ್ಯಮಂತ್ರಿಗಳು ಡೆಲ್ಲಿಗೆ ಹೋಗುವುದು ಕಂದಾಯ ಸಚಿವರು ಡೆಲ್ಲಿಗೆ ಹೋಗುವುದು ಕೇಂದ್ರ ಸಚಿವರು ಬರುವುದು ಅವರು ಹೆಲಿಕ್ಯಾಫ್ಟ್‌ರ್‌ನಲ್ಲಿ ತಿರುಗಾಡಿ ಕೊನೆಗೆ ಪತ್ರಿಕಾ ಹೇಳಿಕೆ ಕೊಟ್ಟು ಸಹಾಯ ಮಾಡುತ್ತೇನೆಂದು ಹೇಳುವುದು, ಇಷ್ಟೆಲ್ಲಾ ಕಸರತ್ತು ಮಾಡಿದ ಮೇಲೆ ಎಷ್ಟು ಹಣ ಬಂದಿದೆ ಕೇಂದ್ರದಿಂದ? ನಿಮ್ಮದೇ ಸರ್ಕಾರ ಇದೆ. ನಮ್ಮ ಕಾಲದಲ್ಲಿ ನಿಮ್ಮ ಸರ್ಕಾರ ಅಲ್ಲಿ ಇತ್ತು. ಆಗ ನಾವು ರೈತರಿಗೆ ಬಡ್ಡಿ ರಿಯಾಯಿತಿ ಕೊಟ್ಟಿದ್ದೇವೆ. ರೈತ ತೊಂದರೆಯಲ್ಲಿದ್ದಾನೆ ಎಂದು ಸುಸ್ತಿ ಬಡ್ಡಿಯನ್ನು ರಿಯಾಯಿತಿ ಮಾಡಿದೆವು. ವಿ.ಪಿ.ಸಿಂಗ್‌ರವರು ಪ್ರಧಾನ ಮಂತ್ರಿಗಳಾಗಿದ್ದಾಗ 10 ಸಾವಿರ ರೂಪಾಯಿಗಳವರೆಗಿನ ಸಾಲವನ್ನು ಮನ್ನಾ ಮಾಡಿದ್ದೇವೆ.

14

ಶ್ರೀ ಧರ್ಮಸಿಂಗ್ : ಮಾನ್ಯ ವಿರೋಧಪಕ್ಷದ ನಾಯಕರು ಮುಂದಿನ ಚುನಾವಣಾ ಭಾಷಣವನ್ನು ಈಗಲೇ ಶುರು ಮಾಡಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ನನ್ನ ಮತಕ್ಷೇತ್ರದಲ್ಲಿ ಭಾಷಣ ಮಾಡುವುದಿಲ್ಲ. ನನಗಿಂತ ಒಳ್ಳೆಯ ಅಭ್ಯರ್ಥಿ ಇದ್ದರೆ ಅವರಿಗೆ ಓಟು ಕೊಡಿ ಎಂದು ಹೇಳಿಬಿಟ್ಟಿದ್ದೇನೆ. ನನ್ನ ಮತದಾರರಿಗೆ ನನಗಿಂತ ಒಳ್ಳೆಯ ಅಭ್ಯರ್ಥಿ ಕಾಂಗ್ರೆಸ್ ಅಥವಾ ಬಿಜೆಪಿ ಪಕ್ಷದಲ್ಲಿದ್ದರೆ ಅವರಿಗೇ ಓಟು ಕೊಡಿ ಎಂದು ಹೇಳಿದ್ದೇನೆ. ಅದರಲ್ಲಿ ನನಗೆ ಹೆಚ್ಚು ವಿಶ್ವಾಸ. ಇಲ್ಲಿ ಪ್ರಶ್ನೆ ಏನಿದೆ ಅಂದ್ರೆ ಮೆಮೊರ್ಯಾಂಡಮ್ ಕೊಡುವ ಅವಶ್ಯಕತೆ ಏನಿದೆ? ಇವತ್ತು ಫ್ಲಡ್ ಬಗ್ಗೆ ಮೆಮೊರ್ಯಾಂಡಮ್ ಕೊಟ್ಟಿರಿ? ಬರಗಾಲದ ಬಗ್ಗೆ ಮೆಮೊರ್ಯಾಂಡಮ್ಸ್ ಕೊಟ್ಟಿದ್ದೀರಿ. ಅದರಿಂದ ಏನು ಉಪಯೋಗ? ನೀವು ಕೇಂದ್ರ ಸರ್ಕಾರಕ್ಕೆ ಚೀಮಾರಿ ಹಾಕಬೇಕು. ಕೇಂದ್ರ ಸರ್ಕಾರ ಮಲತಾಯಿ ಧೋರಣೆಯಿಂದ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗಿದೆ. ನೀವು ನಿಮ್ಮ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಬೀರುವುದಕ್ಕೆ ಅಶಕ್ತರಾಗಿದ್ದೀರೇನು? ಇವು ಎರಡರಲ್ಲಿ ಒಂದು ಇರಬಹುದು. ಎರಡೂ ಕಡೆ ನಿಮ್ಮ ಸರ್ಕಾರವೇ ಇದೆ. ನಾನು ಒಪ್ಪುತ್ತೇನೆ. 9ನೇ ಹಣಕಾಸಿನ ಆಯೋಗ ಇತಿಮಿತಿಯಲ್ಲಿ ತೊಂದರೆ ಇರಬಹುದು. ಇದ್ದರೂ ಸಹ ವಿಶೇಷವಾಗಿ ಒಂದು ರಾಜ್ಯ ಸತತವಾಗಿ 4 ವರ್ಷಗಳ ಕಾಲ ಬರಗಾಲಕ್ಕೆ ಜನ ತುತ್ತಾಗಿ ಕಷ್ಟದಲ್ಲಿ ಇರುವಾಗ ಕೇಂದ್ರ ಸರ್ಕಾರಕ್ಕೆ ನಿಮ್ಮ ಬಗ್ಗೆ ಅನುಕಂಪ ಇಲ್ಲ. ಈ ನಾಡಿನ ಜನರ ಬಗ್ಗೆ ಅನುಕಂಪ ಇಲ್ಲ. ಈ ನಾಡಿನ ರೈತರ ಬಗ್ಗೆ ಚಿಂತೆ ಇಲ್ಲ. ಹೀಗಾಗಿ ಮಾನ್ಯ ಅಧ್ಯಕ್ಷರೇ, ನಾನು ಹೇಳುತ್ತೇನೆ ನಾವು ಮೆಮೋರ್ಯಾಂಡಮ್‌ಗಳನ್ನು ಕೊಡುವುದು ಏತಕ್ಕೆ? ಮೆಮೊರ್ಯಾಂಡಮ್ ಪ್ರಿಂಟ್ ಮಾಡಲು ಏನು ಹಣ ಖರ್ಚು ಮಾಡಿದ್ದಾರೆ ಅಷ್ಟು ಹಣವನ್ನೂ ಸಹ ಕೇಂದ್ರ ಸರ್ಕಾರದಿಂದ ಕೊಟ್ಟಿಲ್ಲ. ಅಷ್ಟು ಹಣ ಕೂಡ ಕೇಂದ್ರ ಸರ್ಕಾರದಿಂದ ವಸೂಲಿ ಆಗಲಿಲ್ಲ. ಮುಖ್ಯವಾಗಿ ಇವತ್ತು ನಾವು ವಿಚಾರ ಮಾಡಬೇಕಾಗಿದೆ ಮೆಮೋರ್ಯಾಂಡಮ್ಸ್ ಕೊಟ್ಟರೆ ಏನು ಲಾಭ ಇದೆ?

ನಾಳೆ ಪ್ರಧಾನ ಮಂತ್ರಿಗಳು ಬರುತ್ತಿದ್ದಾರೆ. ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ನಮಗೆ 15 ನಿಮಿಷ ಅವಕಾಶ ಮಾಡಿಕೊಡಿ. ಮಾನ್ಯ ಮುಖ್ಯಮಂತ್ರಿಗಳಿಗೆ ಕಷ್ಟ ಇರುತ್ತದೆ. ತೊಂದರೆ ಇರುತ್ತದೆ ನಮ್ಮ ಧ್ವನಿ ದೊಡ್ಡದು ಇದೆ. ನಾವು ಪ್ರಧಾನಿಗಳ ಮುಂದೆ ಮಾತನಾಡುತ್ತೇವೆ, ಈ ರಾಜ್ಯದ ಪರವಾಗಿ ವಕಾಲತ್ತು ಮಾಡಲು ಮುಖ್ಯಮಂತ್ರಿಗಳಿಗೆ ಸಾಧ್ಯವಿಲ್ಲದಿದ್ದರೆ ನಮಗೆ ಅವಕಾಶ ಮಾಡಿಕೊಡಲಿ. ನಾವು ಅವರ ಮುಂದೆ ರಾಜ್ಯದ ಪರವಾಗಿ ವಕಾಲತ್ತು ಮಾಡುತ್ತೇವೆ.

ಪ್ರತಿಯೊಂದು ರಾಜ್ಯಸರ್ಕಾರಕ್ಕೂ ಒಂದು ಇತಿಮಿತಿ, ಹಣಕಾಸಿನ ತೊಂದರೆ ಇದೆ. ಸತತವಾಗಿ 5 ವರ್ಷ ಹೀಗಾದರೆ ನಮ್ಮ ಅಭಿವೃದ್ಧಿ ಮೇಲೆ ಎಷ್ಟು ಪರಿಣಾಮ ಆಗಿದೆ ಹೇಳಿ. ಪ್ಲಾನ್‌ನಲ್ಲಿ ಏನು ಪರಿಣಾಮವಾಗಿದೆ. ಪ್ರತಿಯೊಂದು ರಾಜ್ಯಸರ್ಕಾರವೂ ಸಂಪನ್ಮೂಲ ಸಂಗ್ರಹಣೆ ಮಾಡುವುದಕ್ಕೆ ಒಂದು ಲಿಮಿಟೇಷನ್ ಇದೆ. ಹಾಗೆ ಸಂಗ್ರಹ ಮಾಡಿದ್ದನ್ನು ಈ ಪ್ರಕಾರ ನಾವು ಖರ್ಚುಮಾಡಲಿಕ್ಕೆ ಹೋದರೆ ಯಾವ ಪ್ರಕಾರ ರಾಜ್ಯದಲ್ಲಿ ಅಭಿವೃದ್ಧಿ ಆಗಲು ಸಾಧ್ಯ? ಹಾಗಾಗಿ ಇವತ್ತು ಕೇಂದ್ರ ಸರ್ಕಾರ ಒಂದು ವಿಶೇಷ ಕೇಸೆಂದು ನಿರ್ಧರಿಸಿ ಕರ್ನಾಟಕಕ್ಕೆ ಹೆಚ್ಚಿನ ಸಹಾಯವನ್ನು ಹಾಗೂ ರಿಯಾಯಿತಿಯನ್ನು ಕೊಡಬೇಕಾಗಿತ್ತು. ಆದರೆ ನಾಡಿನ ರೈತರ ಬಗ್ಗೆ ಜನರ ಬಗ್ಗೆ ಇವರಿಗೆ ಕಾಳಜಿ ಇಲ್ಲ. ಯಾರ ಮನೆ ಬಿದ್ದಿದೆ, ಯಾರ ಬೆಳೆ ಹಾಳಾಗಿದೆ ಅವರ ಬಗ್ಗೆ ಯಾವ ಚಿಂತನೆ ರಾಜ್ಯ ಸರ್ಕಾರಕ್ಕೆ ಇಲ್ಲ, ಕೇಂದ್ರ ಸರ್ಕಾರಕ್ಕೆ ಇಲ್ಲ. 10ನೇ ಫೈನಾನ್ಸ್ ಕಮೀಷನ್ ಮುಂದೆ ನಾವೂ ವಾದ ಮಾಡಿದ್ದೇವೆ. ಸರ್ಕಾರವೂ ವಾದ ಮಾಡಿದೆ. ಏನೆಂದರೆ 9ನೇ ಫೈನಾನ್ಸ್ ಕಮಿಷನ್ ನಾರ್ಮ್ಸ್ ಏನು ಮಾಡಿದ್ದಾರೆ,

ಅಡ್‌ಹಾಕಾಗಿ ಏನು ಫಿಕ್ಸ್ ಮಾಡಿದ್ದಾರೆ ಅದು ಸರಿಯಲ್ಲ ಎಂದು ಹಿಂದೊಂದು ಪದ್ಧತಿ ಇತ್ತು, ಗ್ರಾಂಟ್ ರೂಪದಲ್ಲಿ ಹಣ ಕೊಡುತ್ತಿದ್ದರು, ಕೆಲವು ಪರ್ಸೆಂಟ್ ಕೊಡಬೇಕೆಂದು ನಾವೂ ನೀವೂ ವಾದ ಮಾಡಿದ್ದೇವೆ. ಆದ್ದರಿಂದ ಇಮ್ಮಿಡಿಯೇಟಾಗಿ ಏನು ಮಾಡಬೇಕಾಗಿದೆ ಯಾವ ರೈತರು ಇವತ್ತು ಕಷ್ಟದಲ್ಲಿದ್ದಾರೆ ತೊಂದರೆಯಲ್ಲಿದ್ದಾರೆ ಅವರಿಗೆ ಯಾವ ರಿಯಾಯ್ತಿ ನಿಮಗೆ ಸಾಧ್ಯ ಅದನ್ನು ಕೊಡಬೇಕೆಂದು ನಾನು ಕೇಳುತ್ತಿದ್ದೇನೆ ಅಧ್ಯಕ್ಷರೇ,ನಮ್ಮ ಸ್ನೇಹಿತರಾದ ಧರ್ಮಸಿಂಗ್‌ರವರು ಮೊನ್ನೆ ಏನು ಹೇಳಿದರು.

ಡಾ॥ಎನ್.ಬಿ. ನಂಜಪ್ಪ : ಅಧ್ಯಕ್ಷರೇ, ವಿರೋಧಪಕ್ಷದ ನಾಯಕರು ಮಾತನಾಡುವಾಗ ಅವರು ಬಹಳ ಕಾಳಜಿ ವಹಿಸಿ ನಿಮ್ಮ ಕಾಲದಲ್ಲಿ ಏನೂ ಅಭಿವೃದ್ಧಿ ಕಾರ್ಯಗಳಾಗಿಲ್ಲ, ಸಾಕಷ್ಟು ಹಣ ಬಂದಿಲ್ಲ, ಕೇಂದ್ರ ಮತ್ತು ರಾಜ್ಯಸರ್ಕಾರಗಳೆರಡೂ ನಿಮ್ಮದೇ ಇದೆ ಎಂದು ಹೇಳುತ್ತಿದ್ದಾರೆ. ಅದು ನಮಗೆ ಅಥವಾ ರಾಜ್ಯದ ಜನತೆಗೆ ಸರಿಯಾಗಿ ಗೊತ್ತಾಗಬೇಕಾದರೆ ಅವರ ಅವಧಿಯಲ್ಲಿ ಎಷ್ಟೆಷ್ಟು ಹಣವನ್ನು ಕೇಂದ್ರಸರ್ಕಾರದಿಂದ ಇಲ್ಲಿಗೆ ತಂದಿದ್ದರು.......

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನೀವೆಲ್ಲಾ ಕಾಂಗ್ರೆಸ್‌ನವರು ಕೇಂದ್ರದ ಜೊತೆ ಹೋರಾಟ ಮಾಡಿ ನಮ್ಮ ರಾಜ್ಯಕ್ಕೆ ಬೇಕಾದ ಅನುಕೂಲಗಳನ್ನು ಪಡೆಯಿರಿ, ಏನೇನು ಮಾಡಬೇಕೋ ಅದನ್ನು ಮಾಡಿ. ನಿಮ್ಮ ಕರ್ತವ್ಯ ಬಿಟ್ಟು ಇಲ್ಲಿ ಬಂದು ಏನೋ ಹೇಳುತ್ತಿದ್ದೀರಲ್ಲಾ.

DR. N.B. NANJAPPA : You just listen to me. You compare those five years with the present five years as to how much of developmental works have taken place in Karnataka. We will given an account. You should judge it properly.

(ಗೊಂದಲ)

ಡಾ॥ ಎನ್.ಬಿ. ನಂಜಪ್ಪ : ಆರ್ಥಿಕ ವ್ಯವಸ್ಥೆಯಲ್ಲಿ ಪ್ರತಿಕಾಸಿಗೂಲೆಕ್ಕಾಚಾರವಿದೆ. ನಿಮ್ಮ 5 ವರ್ಷದ ಅವಧಿಯಲ್ಲಿ ಎಷ್ಟು ಹಣತಂದು ಏನು ಅಭಿವೃದ್ಧಿ ಮಾಡಿದ್ದೀರಿ ಎಂಬುದನ್ನು ತೋರಿಸಿ.

ಶ್ರೀ ಕೆ.ಎಸ್. ಈಶ್ವರಪ್ಪ : ನಾವು ಅಧಿಕಾರಕ್ಕೆ ಬಂದಾಗ ತೋರಿಸುತ್ತೇವೆ. ವಿರೋಧಪಕ್ಷದವರು ಸಹಕಾರ ಕೊಡಲು ಸಿದ್ಧರಿದ್ದೇವೆ. ಆದರೆ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು : ನಂಜಪ್ಪನವರೇ ಕುಳಿತುಕೊಳ್ಳಿ.

ಡಾ॥ ಎನ್.ಬಿ. ನಂಜಪ್ಪ : ಖಂಡಿತ ಕುಳಿತುಕೊಳ್ಳುತ್ತೇನೆ. I know the Rules of Procedure of this House. ಅವರ ಹಾಗೆ ಬಾಯಿಗೆ ಬಂದಂತೆ ಮಾತನಾಡುವುದು ನನಗಿಷ್ಟವಿಲ್ಲ. ನಾನು ಅವರನ್ನು ಕೇಳುವುದು, ನಮಗೆ ಅರ್ಥವಾಗುವ ಹಾಗೆ ಕ್ಲಿಯರಾಗಿ ಹೇಳಬೇಕು ಎಂದು.

ಶ್ರೀ ವಾಟಾಳ್ ನಾಗಾರಾಜ್ : ಇವರಿಗೆ ಕಿವಿ ಕೇಳುವುದಿಲ್ಲ. ಹೇಳಲು ಬಾಯಿ ಬರುವುದಿಲ್ಲ. ಒಂದು ತರಹ ಹೆಳವರಾಗಿದ್ದಾರೆ.

ಡಾ॥ ಎನ್.ಬಿ. ನಂಜಪ್ಪ : ವಾಟಾಳ್‌ನಾಗರಾಜ್ ಇವರಿಗೆಲ್ಲಾ ಈ ತರಹ ಏಕೆ ಎರಚಲು ಎಂಬುದು ನನಗರ್ಥವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇಷ್ಟು ಬೇಜವಾಬ್ದಾರಿಯುತವಾಗಿಯೂ ಮಾತನಾಡುವ ಸದಸ್ಯರನ್ನು ನಾನು ಎಂದು ನೋಡಿಲ್ಲ, 67 ರಿಂದ ಈ ಸದನದಲ್ಲಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ : ಆಯಿತು, ಮಾನ್ಯ ಸದಸ್ಯರು ಒಂದು ವಿಚಾರ ಹೇಳಿದ್ದಾರೆ, ದೇಶಪಾಂಡೆಯವರೇ, ನಿಮ್ಮ ಸರ್ಕಾರ ಇದ್ದಾಗ ಕೇಂದ್ರ ಎಷ್ಟು ಹಣ ಕೊಟ್ಟಿತು ಎಂದು. ನಾನು ಒಪ್ಪಿಕೊಳ್ಳುತ್ತೇನೆ. ನಮ್ಮ ಸರ್ಕಾರ ಆರೂವರೆ ವರ್ಷ ಕಾಲ ಇಲ್ಲಿದ್ದಾಗ 5 ವರ್ಷಕಾಲ ನೀವೇ ಅಲ್ಲಿದ್ದೀರಿ. ಹಾಗಾಗಿ ನಮ್ಮ ಯಾವ ಕಾರ್ಯಕ್ರಮಕ್ಕೂ ಬೆಂಬಲ ನಮಗೆ ನಿಮ್ಮ ಕಡೆಯಿಂದ ಸಿಕ್ಕಲೇ ಇಲ್ಲ. ಅದೇನೇ ಇರಲಿ, ನಾನು ಒಂದು ಮಾತು ಹೇಳಿದೆ ಅವರು ಕೇಳಲಿಲ್ಲ. ನಮ್ಮ ಕಾಲದಲ್ಲಿ ಸತತವಾಗಿ ಬರಗಾಲ ಬಂದಾಗ ನಾವು ರೈತರಿಗೆ 7 ಪರ್ಸೆಂಟ್ ಸಾಲ ಕೊಟ್ಟೆವು. ಒಂದು ವರ್ಷ ಇಡೀ ಬಡ್ಡಿ ಮನ್ನಾ ಮಾಡಿದೆವು. ಒಂದು ವರ್ಷ ಚಕ್ರಬಡ್ಡಿ ಮನ್ನಾ ಮಾಡಿದೆವು. ವಿ.ಪಿ. ಸಿಂಗ್ ಇದ್ದಾಗ 10 ಸಾವಿರ ಸಾಲ ಮನ್ನಾ ಮಾಡಿದೆವು. ಮತ್ತೇನು ಮಾಡಬೇಕು ನಾವು? ನೀವು 5 ವರ್ಷ ಅಧಿಕಾರದಲ್ಲಿದ್ದೀರಿ, ರೈತ ಇಷ್ಟು ಕಷ್ಟದಲ್ಲಿದ್ದಾನೆ, ಮಾನ್ಯ ಸಚಿವರು ಒಪ್ಪಿಕೊಳ್ಳುತ್ತಾರೆ. 4 ವರ್ಷ ಈ ರಾಜ್ಯದಲ್ಲಿ ಸತತವಾಗಿ ಬರಗಾಲ ಅತಿವೃಷ್ಟಿ ಇದೆ ಎಂದು ಕಂದಾಯ ಸಚಿವರು ಒಪ್ಪಿಕೊಳ್ಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳನ್ನು ಒಂದು ಬಡ್ಡಿಯಲ್ಲಿ ರಿಯಾಯ್ತಿ ಕೊಡಿ ಎಂದರೆ ಅವರು ಹೇಳುತ್ತಾರೆ ನನ್ನ ಹತ್ತಿರ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ನೀವು ಏನು ಮಾತನಾಡುತ್ತೀರಿ ಸ್ವಾಮಿ? ಅದಕ್ಕೆ ಮೊದಲು ಉತ್ತರ ಕೊಡಿರಿ. ಎಲ್ಲಾ ವಿರೋಧಪಕ್ಷಗಳೂ, ಬಿ.ಜೆ.ಪಿ.ಯವರಿರಬಹುದು ವಾಟಾಳ್‌ನಾಗರಾಜ್ ಇರಬಹುದು, ನಮ್ಮ ಮಾತು ಕೇಳಲಿಕ್ಕೆ ನಿಮಗೆ ಸೌಜನ್ಯತೆ ಇಲ್ಲ. ಕೇಂದ್ರಸರ್ಕಾರಕ್ಕೆ We have to make a strong plea now. ಏನು ಪ್ಲೀ ಮಾಡಬೇಕಾಗಿದೆ ಎಂದರೆ it may be before the Tenth Finance Commission or before the Hon'ble Prime Minister or before the Planning Commission, for sanctioning non-plan funds on the basis of the realistic assessment.

ರಿಯಾಲಿಸ್ಟಿಕ್ ಅಸೆಸ್‌ಮೆಂಟ್ ಮೇಲೆ ನೀವು ನಮಗೆ ಫಂಡ್ಸ್ ರಿಲೀಸ್ ಮಾಡಿ: ಇವತ್ತು ಸಾವಿರಾರು ಕೋಟಿ ರೂ. ಬೆಳೆ ಹಾಳಾಗಿದೆ, ಮನೆ ಬಿದ್ದಿವೆ, ಪಬ್ಲಿಕ್ ಅಂಡ್ ಪ್ರೈವೇಟ್ ಪ್ರಾಪರ್ಟೀಸ್ ಲಾಸಾಗಿದೆ. ಅವರೇ ಹೇಳುತ್ತಾರೆ ಮೆಮೊರ್ಯಾಂಡಂನಲ್ಲಿ Thousands of crores in the last four years, but what we got every year Rs 27 crores.

ಹಾಗಾಗಿ ರಿಯಾಲಿಸ್ಟಿಕ್ಕಾಗಿ ಏನು ಹಾನಿಯಾಗಿದೆ ಅದನ್ನು ಪ್ರಾಕ್ಟಿಕಲಾಗಿ ಕೇಂದ್ರ ಸರ್ಕಾರ ತೆಗೆದುಕೊಂಡು ಹಣ ಬಿಡುಗಡೆ ಮಾಡಬೇಕಾಗುತ್ತದೆ. ಆ ತರಹದ ವಾದ ರಾಜ್ಯಸರ್ಕಾರ ಕೇಂದ್ರ ಸರ್ಕಾರದ ಮುಂದೆ ಮಾಡಬೇಕಾಗುತ್ತದೆ. ಇದು ಪಕ್ಷಾತೀತವಾಗಿ ಆಗಬೇಕು, ಇದುಕೇವಲ ಕಾಂಗ್ರೆಸ್ ಪಕ್ಷದ ಕೆಲಸ, ನಮ್ಮ ಮೇಲೆ ಜವಾಬ್ದಾರಿ ಇಲ್ಲ ಎಂದು ನಾನು ಹೇಳುವುದಿಲ್ಲ. ಅಧಿಕಾರ ನಿಮ್ಮ ಕೈಲಿದೆ, ಕೊಡಿ ರೈತನಿಗೆ ರಿಯಾಯಿತಿ; ಕಷ್ಟದಲ್ಲಿದ್ದಾರೆ; ಅವರಿಗೆ ಸಹಾಯ ಮಾಡಿರಿ. ಅದರಿಂದ ಅವರು ನಿಮಗೇ ವೋಟ್ ಕೊಡುತ್ತಾರೆ. ಪುನಃ ನೀವೇ ಆರಿಸಿಬನ್ನಿ. We have no objection. ಕಾಂಗ್ರೆಸ್ ಪಕ್ಷ ಈ ರಾಜ್ಯದಲ್ಲಿ ಪುನಃ ಅಧಿಕಾರಕ್ಕೆ ಬರಬೇಕೆಂದು ನಾವೇನು ಮಾಡುವುದಕ್ಕಾಗುತ್ತದೆ? ಆದರೆ ನೀವು ಈ ಪ್ರಕಾರ ಬಿಹೇವ್ ಮಾಡಿದರೆ, ಅವರಿಗೆ ಸಹಾಯ ಮಾಡಲಿಲ್ಲ ಎಂದರೆ ಹೇಗೆ ಅಪೇಕ್ಷೆ ಮಾಡುತ್ತೀರಿ, ಯಾವ ಕನಸು

ನೋಡುತ್ತೀರಿ ನೀವು ಅಧಿಕಾರಕ್ಕೆ ಬರುವುದಕ್ಕೆ? ಹಾಗಾಗಿ ನಾನು ಹೇಳುತ್ತೇನೆ, ದೇವರು ನಿಮ್ಮ ಕೈಗೆ ಒಂದು ಅಧಿಕಾರ ಕೊಟ್ಟಿದ್ದಾನೆ, ನಮ್ಮ ಠಾಕೂರ್ ಸಾಹೇಬರಿಗೆ ದೊಡ್ಡ ಮನಸ್ಸಿದೆ, ಏಕೆ ಅವರು ಸಹಾಯ ರೈತರಿಗೆ ಕೊಟ್ಟಿದ್ದಾನೆ, ನಮ್ಮ ಠಾಕೂರ್ ಸಾಹೇಬರಿಗೆ ದೊಡ್ಡ ಮನಸ್ಸಿದೆ, ಏಕೆ ಅವರು ಸಹಾಯ ರೈತರಿಗೆ ಮಾಡುತ್ತಿಲ್ಲವೋ ನನಗೆ ಗೊತ್ತಿಲ್ಲ. ನಮ್ಮ ಮುಖ್ಯಮಂತ್ರಿ ಯಾವಾಗಲೂ ಹೇಳುತ್ತಾರೆ. money is no problem ಎಂದು. ಹಣದ ತೊಂದರೆ ಇಲ್ಲ finances are strong ಎಂದು. ಯಾರ ಫೈನಾನ್ಸ್ ಸ್ಟ್ರಾಂಗ್ ಎಂದು ಅವರು ಹೇಳಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಬಹಳ ಹಣ ಇದೆ ಎಂದು ಮುಖ್ಯಮಂತ್ರಿಗಳು ಹೇಳುತ್ತಾರೆಂದು ಹೇಳುತ್ತೀರಿ ಖಜಾನೆಯಲ್ಲಿ ಹಣ ಇಲ್ಲವೆಂದು ನೀವು ಹೇಳುತ್ತೀರಿ, ಹಾಗಾದರೆ ಹಣ ಎಲ್ಲಿ, ಎಲ್ಲಿಟ್ಟಿದ್ದಾರೆ?

ಶ್ರೀ ಬಿ.ಎಚ್. ಬನ್ನಿಕೋಡ್ : ಸಮಾಜ ಕಲ್ಯಾಣ ಇಲಾಖೆಯಲ್ಲಿ ಎರಡು ತಿಂಗಳಿಂದ ಸಂಬಳ ಕೊಟ್ಟಿಲ್ಲ. ಅವರು ಪಗಾರ ಇಲ್ಲದೆ ಗೋಳಾಡುತ್ತಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ಹಾಗಾಗಿ, ರೈತರು ಕಷ್ಟದಲ್ಲಿದ್ದಾರೆ. ನಾಲ್ಕು ವರ್ಷದಿಂದ ಸತತವಾಗಿ ಬರಗಾಲವಿದೆ. ಅತಿವೃಷ್ಟಿ ಇದೆ ಎಂದು ಸರ್ಕಾರವು ಒಪ್ಪಿಕೊಳ್ಳುತ್ತಿದೆ. ಅದನ್ನು ಸ್ಟೇಟ್‌ಮೆಂಟ್‌ನಲ್ಲಿ ಒಪ್ಪಿಕೊಂಡಿದ್ದೀರಿ. ರೈತರು ಇಷ್ಟು ಕಷ್ಟದಲ್ಲಿದ್ದಾಗ ನೀವು ರೈತರಿಗಾಗಿ ಏನು ಮಾಡಿದ್ದೀರಿ? ಏನು ಸಹಾಯ ರೈತರಿಗಾಗಿ ಈ ಸರ್ಕಾರದಿಂದ ಸಿಕ್ಕಿದೆ. ನಿಮ್ಮ ನೀತಿಯಿಂದ ಇವತ್ತು ಬೆಲೆ ಏರಿಕೆಯಾಗಿದೆ, ಎಲ್ಲಾ ಬೆಲೆಗಳು ಗಗನಕ್ಕೆ ಏರಿವೆ. ಸಕ್ಕರೆ, ಕಾಫಿ, ಅಕ್ಕಿ ಬಟ್ಟೆ ಇವೆಲ್ಲಾ ನೋಡಿದರೆ ರೈತರು ಜೀವನ ಮಾಡುವುದಕ್ಕೆ ಆಗುತ್ತಿಲ್ಲ. ಗೊಬ್ಬರ ಬೆಲೆ ಹೆಚ್ಚು ಮಾಡಿದ್ದರ ಕೀರ್ತಿ ನಿಮಗೆ ಹೋಗಬೇಕು. ಈ ಎಲ್ಲಾ ದರಗಳ ಹೆಚ್ಚು ಮಾಡಿರುವ ಕೀರ್ತಿ ನಿಮಗೆ ಹೋಗಬೇಕು. ಒಂದು ಕಡೆ ಸಾಲಗಳು ಬಹಳ ಹೆಚ್ಚಾಗುತ್ತಿದೆ. ಸಾಲ ಮರುಪಾವತಿ ಮಾಡುವ ಶಕ್ತಿ ನಮ್ಮ ರೈತರಿಗೆ ಉಳಿದಿಲ್ಲ. ಆ ರೈತರದ್ದು ಏನೂ ತಪ್ಪಿಲ್ಲ. ರೈತರು ಪ್ರಾಮಾಣಿಕರಾಗಿದ್ದಾರೆ. ಆದರೆ ಬೆಳೆ ಬರಲಿಲ್ಲ. ಅಂದರೆ ಅವನು ಏನು ಏನು ತಾನೇ ಮಾಡುತ್ತಾನೆ? ನೀವೂ ಸಹ ಒಪ್ಪಿಕೊಂಡಿದ್ದೀರಿ, ಬೆಳೆ ಬಂದಿಲ್ಲ. ಅತಿವೃಷ್ಟಿಯಾಗಿದೆ. ಬರಗಾಲ ಬಿದ್ದಿದೆ ಎಂದು. ಆದರೆ ನಿಮಗೆ ಇದರ ಬಗ್ಗೆ ಚಿಂತನೆ ಇಲ್ಲ. ಒಂದು ಕಡೆ ಅವ ತೊಂದರೆಯಲ್ಲಿದ್ದಾನೆ, ಕಷ್ಟದಲ್ಲಿದ್ದಾನೆ, ಮತ್ತೊಂದು ಕಡೆ ತಾವು ಬೆಲೆ ಏರಿಕೆ ನಡೆಸುತ್ತಿದ್ದೀರಿ. ಗೊಬ್ಬರ ಬೆಲೆ ಹೆಚ್ಚಾಗುತ್ತಿದೆ. ಕೀಟನಾಶಕಗಳ ಬೆಲೆ ಹೆಚ್ಚಾಗುತ್ತಿದೆ. ಯಾವ ಪ್ರಕಾರ ಜೀವನ ಮಾಡುವುದಕ್ಕೆ ಸಾಧ್ಯವಿದೆ. ಹಾಗಾಗಿ ಮಾನ್ಯ ಸಚಿವರು ಉತ್ತರ ಕೊಡಬೇಕು. ಕಳೆದ 5 ವರ್ಷದಲ್ಲಿ ನೀವು ರೈತರಿಗಾಗಿ ಏನು ಮಾಡಿದ್ದೀರಾ? ಪ್ರತಿವರ್ಷ ಬಿಡುಗಡೆಯಾಗುವ ಈ 21 ಕೋಟಿ ಇದೆಯಲ್ಲಾ, ನಿಮ್ಮ ಸರ್ಕಾರದಿಂದ ಇದರಲ್ಲಿ ಏನಾಗಿದೆ. ಇದರಿಂದ ಏನು ಲಾಭ ರೈತರಿಗೆ ಆಗಿದೆ? ಅದು ನನಗೆ ಗೊತ್ತಾಗಬೇಕಾಗಿದೆ. ಹಾಗಾಗಿ ಇವರು ವಿಶ್ವಬ್ಯಾಂಕ್ ಸಹಾಯ ಕೇಳಿದರು. 200 ಕೋಟಿ ರೂ. ಕೇಳಿದರು. ಸಂತೋಷ ಕೇಳಿ, ಏನಾಯಿತು, ಇನ್ನೂ ಮೆಮೊರ್‍ಯಾಂಡಮ್ ಬೆಂಗಳೂರಿನಲ್ಲಿದೆ. ನವಂಬರ್ 93ರಲ್ಲಿ ಅವರು ಬಂದರು. ಅದು ಇನ್ನೂ ವಿಶ್ವಬ್ಯಾಂಕ್‌ಗೆ ಹೋಗಿ ಮುಟ್ಟಿಲ್ಲ. ಮಹಾರಾಷ್ಟ್ರ ಸರ್ಕಾರದ ಬಗ್ಗೆ ಹೇಳಿದರೆ ಯಾಕ್ರೀ ಅವರ ಬಗ್ಗೆ ಮಾತನಾಡುತ್ತೀರಾ ಎಂದು ಹೇಳುತ್ತೀರಿ.

ಶರದ್ ಪವಾರ್ ಅಲ್ಲಿ ಒಳ್ಳೆಯ ಕೆಲಸ ಮಾಡಿದರೆ, ಒಳ್ಳೆಯದ್ದನ್ನು ಮಾಡಿದ್ದಾರೆ ಎಂದು ನಾನು ಹೇಳಬೇಕಾಗುತ್ತದೆ. ಹಾಗೆ ಹೇಳುವುದರಲ್ಲಿ ನಾಚಿಕೆ ಏನೂ ಇಲ್ಲ. ಲಾತೂರಿಗೆ ನಾನು ಹೋಗಿ ಬಂದಿದ್ದೇನೆ. ಯಾವಾಗ ಭೂಕಂಪ ಆಯಿತು. ಆಗ

ಮಹಾರಾಷ್ಟ್ರಕ್ಕೆ ವಿಸಿಟ್ ಮಾಡಿ ಬಂದಿದ್ದೇನೆ. ನಾನು ನೋಡಿದ್ದೇನೆ. ಯಾವ ಪ್ರಕಾರ ಅವರು ವಾರ್ ಫುಟಿಂಗ್‌ನಲ್ಲಿ ಕೆಲಸ ಮಾಡಿದ್ದಾರೆ ಎಂದು. ಆದರೆ ನಮ್ಮ ಮುಖ್ಯಮಂತ್ರಿಗಳು ಏನು ಹೇಳಿದರು. ಅಂದರೆ ನನಗೆ ಹಣದ ಅವಶ್ಯಕತೆ ಇಲ್ಲ. ಕೇಂದ್ರ ಸರ್ಕಾರದ ಹಣ ಸಹಾಯ ನಾನು ಕೇಳುವುದಿಲ್ಲ ಎಂದು. ಇದೂ ಒಂದು ಕಾರಣವಿರಬಹುದು. ಶ್ರೀ ನರಸಿಂಹರಾಯರು ಏನು ಹಣ ರಿಲೀಸ್ ಮಾಡುತ್ತಿಲ್ಲವಲ್ಲಾ, ಇದಕ್ಕೆ ಒಂದು ಕಾರಣವಿರಬಹುದು. ಒಂದು ನಮ್ಮ ಮುಖ್ಯಮಂತ್ರಿಗಳ ಪ್ರತಿ ದಿವಸ ಸ್ಟೇಟ್‌ಮೆಂಟ್‌ನಲ್ಲಿ The financial condition of the State is very sound and Secondly, I do not want any central assistance, he said at the time of earthquake. These two points might have also gone against us.

ಇಲ್ಲಿ ಫೈನಾನ್ಷಿಯಲ್ ಪೊಸಿಷನ್ ಬಹಳ ಚೆನ್ನಾಗಿದೆ. ಆದ್ದರಿಂದ ಶ್ರೀ ನರಸಿಂಹರಾಯರು ಏಕೆ ವಿಚಾರಮಾಡಬೇಕು. ಇಲ್ಲಿಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದರೆ ಅವರು ಏಕೆ ವಿಚಾರ ಮಾಡುತ್ತಾರೆ? ನಮಗೆ ಹಣ ಬೇಡ ಎಂದು ಹೇಳಿದರೆ ಅವರು ಏಕೆ ಹಣ ಕೊಡುತ್ತಾರೆ? ಹಾಗಾಗಿ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಏನು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದರ ಪರಿಣಾಮವಾಗಿ ಈ ರೀತಿ ಆಗಿರುವುದಕ್ಕೆ ಸಾಧ್ಯ. ವಿಶ್ವಬ್ಯಾಂಕ್ ನೆರವು ಏನಾಗಿದೆ ಅದನ್ನು ಕಂದಾಯ ಸಚಿವರು ಹೇಳಬೇಕು. ಇವತ್ತು ನಿಮ್ಮ ನೆರವಿನ ಮೆಮೊರ್‍ಯಾಂಡಮ್ ಇನ್ನೂ ವಿಶ್ವಬ್ಯಾಂಕ್ ಕಛೇರಿಗೆ ಮುಟ್ಟಿಲ್ಲ. ಅಂದರೆ ಯಾವ ಹಂತದಲ್ಲಿ ನಾವು ಇದ್ದೇವೆ ಇನ್ನು 90 ದಿವಸ ಇದೆ. ಈ 90 ದಿವಸದಲ್ಲಿ ಏನು ಮಾಡುತ್ತೀರಾ? ಸರ್ಕಸ್ ಮಾಡಬೇಕು ಆದ್ದರಿಂದ ನೀವು ಏನು ಹೇಳಿದರೂ ಜನ ಕೇಳುವುದಿಲ್ಲ. ಹಾಗಾಗಿ ವಿಶ್ವಬ್ಯಾಂಕ್‌ನಿಂದ ನೆರವು ತೆಗೆದುಕೊಳ್ಳುವುದಕ್ಕೆ ಏನು ತೊಂದರೆ. ಕಷ್ಟ ಆಯಿತು? If Sharad Pawar of Maharashtra Government can bring If the A.P. Chief Minister can bring, why not Karnataka?

ಆಂಧ್ರದವರು 1000 ಕೋಟಿರೂ. ವಿಶ್ವಬ್ಯಾಂಕ್‌ನಿಂದ ನೆರವು ತಂದಿದ್ದಾರೆ. 4-5 ವರ್ಷದಿಂದ ಅತಿವೃಷ್ಟಿಯಾಗಿದೆ. ನಿಮಗೆ ಏನು ಕಷ್ಟವಾಗಿದೆ. ಸ್ವಲ್ಪ ಹೇಳಿ, ಗೊತ್ತಾಗಲೀ, ಆದ್ದರಿಂದ ಸರ್ಕಾರಕ್ಕೆ ಮನಸ್ಸು ಇಲ್ಲ, ಕಳೆದ 2, 3, ತಿಂಗಳಿಂದ ಏನೋ ಒಗ್ಗಟ್ಟಿನಿಂದ ಇದ್ದಾರೆ ಹೋಗಲಿ ಒಂದಾಗಿ ಹೋಗಲಿ I do not want parties to split. I am not interested in that. In Democracy, we want strong parties.

ಪ್ರಜಾಪ್ರಭುತ್ವ ಉಳಿಯಬೇಕಾದರೆ ಸದೃಢ, ಆರೋಗ್ಯವಾದ ಪಕ್ಷಗಳು ಇರಬೇಕು. ನಿಮ್ಮ ಪಕ್ಷ ಇನ್ನು ಗಟ್ಟಿಯಾಗಲೀ, ನಮಗೆ ತೊಂದರೆ ಇಲ್ಲ.

ಶ್ರೀ ಧರ್ಮಸಿಂಗ್ : ಅಧ್ಯಕ್ಷರೇ, ಉತ್ತರ ಕೊಡುವ ಕಾಲದಲ್ಲಿ ವಿರೋಧ ಪಕ್ಷದವರು ಮರೆಯಬಹುದು. ನಾನು ಕೇಳುತ್ತಿದ್ದೇನೆ, ಮಹಾರಾಷ್ಟ್ರ ಸರ್ಕಾರ, ಆಂಧ್ರಪ್ರದೇಶ ಸರ್ಕಾರಗಳಿಗೆ ಯಾವಾಗ ಸಾವಿರ ಕೋಟಿ ರೂ. ಬಂತು? ಭೂಕಂಪ ವಿಷಯದಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಹೋದವರ್ಷ 9 ಕೋಟಿ ರೂ. ಹಾನಿ ಸಂಭವಿಸಿದೆ ಎಂದು ಹೇಳಿದ್ದೇವೆ.

3.55 ಪಿ.ಎಂ

ಆದರೂ 48 ವಿಲೇಜಸ್‌ನಲ್ಲಿ ಎಲ್ಲಿ ಅರ್ತ್‌ಕ್ವೇಕ್ ಪ್ರೋನ್ಸ್ ಏರಿಯಾ ಇದೆ ಎಲ್ಲಿ ವಿಲೇಜಸ್ ಅನ್ನು ಕನ್‌ಸ್ಟ್ರಕ್ಟ್ ಮಾಡಬೇಕೆಂದು 94 ಕೋಟಿಗಳ ಅಸಿಸ್ಟೆನ್ಸ್‌ನ ಬೇಕಾಗುತ್ತದೆ ಎಂದು ವಿಶ್ವಬ್ಯಾಂಕಿಗೆ ಕಳುಹಿಸಿದ್ದೇವೆ. ಅವರ ಕ್ಲಾರಿಫಿಕೇಷನ್ ಕೇಳಿದ್ದಾರೆ. ಅದನ್ನೂ ಕಳುಹಿಸಿದ್ದೇವೆ. ಮಹಾರಾಷ್ಟ್ರದಲ್ಲಿ ಕೂಡ 500 ಕೋಟಿ ಸಿಕ್ಕಿದೆ. ಪ್ರಥಮವಾಗಿ ಏನೆಂದರೆ ಇಲ್ಲಿ ನಮ್ಮ ಅರ್ತ್‌ಕ್ವೇಕ್ ಆದಮೇಲೆ ಮಹಾರಾಷ್ಟ್ರದಲ್ಲಿ ಆಯಿತಲ್ಲಾ?

ಆಗ ಚವಾಣ್ ಅವರು ಲಾತೂರಿಗೆ ಬಂದರು. ಮಾನ್ಯ ಮುಖ್ಯ ಮಂತ್ರಿಗಳು ಕೂಡ ಬೀದರಿಗೆ ಗುಲ್ಬರ್ಗಕ್ಕೆ ಕೂಡ ಬಂದಾಗ ಅವರು ಏನು ಹೇಳಿದರು ಎಂದರೆ ಕಂಪ್ಯಾರಿಟೀವ್‌ಲೀ ಮಹಾರಾಷ್ಟ್ರ, ಕರ್ನಾಟಕದಲ್ಲಿ ಹೆಚ್ಚಾಗಿದೆ ಎಂದು ಹೇಳಿದರು. ನಂತರ ನಾವು ಮೆಮೊರ್ಯಾಂಡಮ್ ಪ್ರಿಪೇರ್ ಮಾಡಿ ಕಳುಹಿಸಿದ್ದೇವೆ. ನಮ್ಮ ಕಂದಾಯ ಕಮಿಷನರ್ ಅವರು 3-4 ಸಲ ಹೋಗಿದ್ದಾರೆ. ಕ್ಲಾರಿಫಿಕೇಷನ್ ಕೊಟ್ಟಿದ್ದಾರೆ. ಒಂದು ಸಾವಿರ ಕೋಟಿ ರೂಪಾಯಿ ಆಂಧ್ರಕ್ಕೆ ಬಂತು ಮಹಾರಾಷ್ಟ್ರದಲ್ಲಿ ಬಂತು ಎಂದು ತಾವು ವೇಗ್ ಆಗಿ ಹೇಳುತ್ತೀರಿ. ಮಹಾರಾಷ್ಟ್ರದಲ್ಲಿ ಪ್ರಪಂಚದಲ್ಲಿ ಮೊದಲನೇ ಸಲ ಈ ರೀತಿಯಾಗಿದೆ ಬೇರೆಲ್ಲೂ ಆಗಿಲ್ಲ. ಅದಕ್ಕೆ ಅವರಿಗೆ ಸಿಕ್ಕಿದೆ. ನಾವೂ ಕೂಡ ಕೊಟ್ಟಿದ್ದೇವೆ ಅದಕ್ಕೆ ಕೂಡ ಸಿಗುತ್ತಿದೆ. ತಾವು ವೇಗ್ ಆಗಿ ಎಲ್ಲಾ ಕಡೆ ಕೊಟ್ಟಿದ್ದಾರೆಂದು ಹೇಳುವುದು ಸರಿಯಲ್ಲ. We have prepared Rs 1500 crores plan.

ಅಲ್ಲಿ ಕೂಡ126 ವಿಲೇಜಸ್‌ಗೆ ರಿಹ್ಯಾಬಿಲಿಟೇಷನ್ ಮಾಡುವುದು ಇದೆ. ಅದು ಕೇಂದ್ರ ಸಚಿವ ಸಂಪುಟದ ಮುಂದೆ ಇದೆ. ನಂತರ ವಿಶ್ವಬ್ಯಾಂಕಿಗೆ ಹೋಗುತ್ತದೆ. ಎಲ್ಲಾ ಕಡೆಗೆ ಅಷ್ಟೇ ಇದೆ. ಆಂಧ್ರದಲ್ಲಿ ಒಂದು ಸಾವಿರ ಮಹಾರಾಷ್ಟ್ರದಲ್ಲಿ ಹೀಗಾಗಿದೆ ಎಂದು ಏನು ಹೇಳುತ್ತಿದ್ದೀರಿ ಅದು ಸರಿಯಲ್ಲ. ನಾವೂ ಕೂಡ ನಮ್ಮ ಎಫರ್ಟ್ ಅನ್ನು ಮಾಡಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ : ಮಹಾರಾಷ್ಟ್ರಕ್ಕೆ ಹಣ ಬಂದಿದೆ ಎಂದು ಹೇಳಿದ್ದೇನೆ. ಆಂಧ್ರ ಪ್ರದೇಶಕ್ಕೆ ಹಣ ಬಂದಿರುವ ಬಗ್ಗೆ ಆರ್ಡರ್ ಅನ್ನು ತಂದುಕೊಡುತ್ತೇನೆ. ಈ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಆಂಧ್ರಕ್ಕೆ ಬಂದಿದ್ದು ನಿಜ ಎಂದು ಹೇಳಿದ್ದಾರೆ. 3-4 ವರ್ಷದ ಮಾತು ಹೇಳುತ್ತಿದ್ದೇನೆ. ಮಾನ್ಯ ಕಂದಾಯ ಸಚಿವರು ಬಹಳ ಅಭಿಮಾನದಿಂದ ಮೊನ್ನೆ ಹೇಳಿದರು. ಮಾನ್ಯ ಪ್ರಧಾನಿಯವರು ತಮ್ಮ ರೆಪ್ರೆಸೆಂಟೇಟಿವ್ ಆಗಿ ಮಲ್ಲಿಕಾರ್ಜುನ್ ಅವರನ್ನು ಕಳುಹಿಸಿದರು. ಅವರು ಬಂದು ಎಲ್ಲಾ ಕಡೆ ರೆವ್ಯೂ ಮಾಡಿದರು. ಮಾನ್ಯ ಕಂದಾಯ ಸಚಿವರು ಇದನ್ನು ಕೇಳಬೇಕು. ಬೆಂಗಳೂರಿನಲ್ಲಿ ಹೇಳಿದರು ಅಸಿಸ್ಟೆನ್ಸ್ ಕೊಡುತ್ತೇವೆ ಎಂದು What has happened in Parliament, I want to tell. ನಮಗೆ ಬಹಳ ವಿಶ್ವಾಸ ಇದೆ ಹಣ ಬರುತ್ತದೆ ಎಂದು ಹೇಳಿದರು. 27ರಲ್ಲಿ ಈ ಮಾತನ್ನು ಹೇಳಿದ್ದಾರೆ. ಯಾವ ದಿನ ನಮಗೆ ಅಸಿಸ್ಟೆನ್ಸ್ ಬರುತ್ತದೆಂದು ಹೇಳಿದ್ದಾರೆ ಅದೇ ದಿನ ಪಾರ್ಲಿಮೆಂಟ್‌ನಲ್ಲಿ ಹೇಳಿದ್ದಾರೆ. ಇದು ಯಾವ ದಿನ ಇವರು ಹೇಳಿಕೆ ನೀಡಿದ್ದಾರೆ ಅದೇ ದಿನ ಪಾರ್ಲಿಮೆಂಟಿನಲ್ಲಿ ಆದ ಹೇಳಿಕೆ "Centre rejects Karnataka Plea for flood relief. The Centre rejected the Karnataka Government plea for special financial assistance in order to carry out flood relief measures. It became clear today that the Union Government did not envisage any additional assistance to the State for flood relief beyond what it contributes to the corpus of the State Calamity Relief Fund. The Ninth Finance Commission has fixed an annual sum of Rs. 27 crores for the States C.R.F. corpus, of which the Central Government contribution is Rs. 20.25 crores. Answering a question from Mr. B.K. Hariprasad and Mr. K. Rehman khan in the Rajya Sabha today, the Union Minister of State for Agriculture Sri Arvind Netam said that there is no provision for any additional assistance for relief expenditure other than the States C.R.F."

ಯಾವ ದಿವಸ ಇವರು ಇಲ್ಲಿ ಹಣ ಬರುತ್ತದೆಂದು ಹೇಳಿದರೋ ಅದೇ ದಿನ ಅಲ್ಲಿ ಹಣ ಇಲ್ಲವೆಂದು ಹೇಳಿದ್ದಾರೆ. ಅಂದರೆ ಯಾವ ಪ್ರಕಾರ ನಿಮ್ಮ ಪ್ರಭಾವ ಅಲ್ಲಿ ಬೀರಿದೆ ಎಂದು ತಿಳಿಯಬೇಕಾಗುತ್ತದೆ. ಮಲ್ಲಿಕಾರ್ಜುನ್ ಏಕೆ ಇಲ್ಲಿಗೆ ಬರಬೇಕು? ಬರಲಿ ಬೆಂಗಳೂರಿನ ಕ್ಲೈಮೇಟ್ ಚೆನ್ನಾಗಿದೆ 4 ದಿನ ಉಳಿದು ಹೋಗಲಿ ನನ್ನದೇನೂ ಅಬ್ಜೆಕ್ಷನ್ ಇಲ್ಲ. ಆದರೆ ತಮಾಷೆ ಮಾಡಲಿಕ್ಕೆ ನಾಟಕ ಮಾಡಲಿಕ್ಕೆ ಇಡೀ ರಾಜ್ಯದಲ್ಲಿ ಪ್ರವಾಸ ಮಾಡಿ ಇಲ್ಲಿ ಒಂದು ದೊಡ್ಡ ಪ್ರೆಸ್ ಕಾನ್‌ಫೆರೆನ್ಸ್ ಮಾಡುವುದು. ಅಲ್ಲಿ ಹೋಗಿ ಪಾರ್ಲಿಮೆಂಟಿನಲ್ಲಿ ಈ ಪ್ರಕಾರ ಒಂದು ಹೇಳಿಕೆ ಕೊಡುವುದು ಇದ್ದರೆ ಯಾವ ಸೆಂಟ್ರಲ್ ಟೀಮ್ ಏಕೆ ಬರಬೇಕು ಯಾರು ಬರಬೇಕು ಇದರ ಅವಶ್ಯಕತೆ ಏನು ಇದೆ. ಒಬ್ಬ ಎಂ.ಪಿ. ಯವರಾದ ದೇವರಾಯ ನಾಯಕ್ ಅವರು ನಮ್ಮ ಸ್ನೇಹಿತರು ಅವರೊಂದು ಹೇಳಿಕೆ ಕೊಟ್ಟರು. Prime Minister has agreed to give Rs. 50 crores. 'Alright I will do it', ಎಂದು ಹೇಳಿದರು. ಅವರು ಹೇಳಿದ್ದಾರೆ. ಪ್ರಧಾನಿಗಳ ಆರ್ಡರ್ ತೆಗೆದುಕೊಂಡು ಹೇಳಬೇಕಾಗಿತ್ತು. ಪಾಪ ಹೇಳಿ ಬಿಟ್ಟರು. 50ಕೋಟಿ ಇಲ್ಲ 50ಕೋಟುಗಳು ಬಂದಿದ್ದರೆ ಒಳ್ಳೆಯದಾಗುತ್ತಿತ್ತು.

ಹಾಗಾಗಿ ಇವತ್ತು ಎಲ್ಲಾ ಹಂತದಲ್ಲೂ ಕೇಂದ್ರ ಸರ್ಕಾರ ಟೋಟಲ್ ಫೈಲ್ಯೂರ್ ಆಗಿದೆ. ಮುಂದೆ ಮಾತನಾಡಬೇಕೇ ಬೇಡವೇ ಈ ಪರಿಸ್ಥಿತಿಯಾಗಿದೆ. ಇವತ್ತು ಏನು 93ರಲ್ಲಿ ಅತಿವೃಷ್ಟಿ ಆಯಿತು, ರಾಯಚೂರು, ಬಳ್ಳಾರಿ ಡಿಸ್ಟ್ರಿಕ್ಟ್‌ನಲ್ಲಿ, ಇವತ್ತಿನವರೆಗೂ ಆ ಜನರಿಗೆ ರಿಲೀಫ್ ಕೊಡುವುದಕ್ಕಾಗಿಲ್ಲ. ಈ ತರಹದ ಕಷ್ಟ ಇದ್ದಾಗ ಮಾನ್ಯ ಮುಖ್ಯಮಂತ್ರಿಗಳು ಮತ್ತು ಕಂದಾಯ ಮಂತ್ರಿಗಳು ಕೂಡಿ ಏನು ಮಾಡಿದ್ದಾರೆ, 27 ಕೋಟಿ ರೂಪಾಯಿ ಹಣ 94-95 ಈ ಹಣ ಯಾವತ್ತು ಬಿಡುಗಡೆಯಾಗಿದೆ. ಕೇಂದ್ರ ಸರ್ಕಾರ all the four instalments, they have released. ಈಗ 1-4-94ರಿಂದ ಇಷ್ಟೊಂದು ಅತಿವೃಷ್ಟಿ ಇಷ್ಟೊಂದು ಕಷ್ಟವಾಗಿದೆ. ಇವರ ಲೆಕ್ಕದ ಪ್ರಕಾರ, ಸಾಧಾರಣ 300-400 ಕೋಟಿ ರೂಪಾಯಿ ಹಾನಿಯಾಗಿದೆ ನಿಮ್ಮ ಲೆಕ್ಕದ ಪ್ರಕಾರವೇ ಹಣ ಎಷ್ಟು ರಿಲೀಸ್ ಮಾಡಿದ್ದೀರಿ. 1-4-94ರಿಂದ ಇವತ್ತಿನತನಕ to the best of my knowledge, subject to correction, 22 ಕೋಟಿ ರೂಪಾಯಿ ಮಾತ್ರ ರಿಲೀಸ್ ಮಾಡಿದ್ದೀರಿ. 6 ಕೋಟಿ 90 ಲಕ್ಷ ರೂಪಾಯಿ ನೀವು ರಿಲೀಸ್ ಮಾಡಿದಿರಿ ಕುಡಿಯುವ ನೀರು ಮತ್ತು ಬರಗಾಲ ಪ್ರದೇಶಗಳಿಗೆ ರಿಲೀಸ್ ಮಾಡಿದಿರಿ. ಅದರ ನಂತರ ತಾವು ಎರಡು ಕೋಟಿ ರೂಪಾಯಿಗಳನ್ನು ಫೈರ್ ಆಕ್ಸಿಡೆಂಟಿಗೆ ರಿಲೀಸ್ ಮಾಡಿದಿರಿ. ಒಂದು ಅತಿವೃಷ್ಟಿ ಕ್ರಾಪ್ ಕಾಂಪೆನ್‌ಸೇಷನ್, ಮನೆ ಕೊಡುವುದಕ್ಕೆ ಕಾಂಪೆನ್‌ಸೇಷನ್ ಮತ್ತು ರೋಡ್ಸ್ ಬ್ರಿಡ್ಜಸ್ ಅದರ ಬಗ್ಗೆ ನನಗೆ ಗೊತ್ತಿರುವಂತೆ 12-13 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದಿರಿ. ಟೋಟಲಿ ನಿಮ್ಮ ರಿಲೀಸ್ ಎಷ್ಟು? 1-4-94ರಿಂದ ಇವತ್ತಿನತನಕ total releases are not more than Rs. 20 crores. 20-21ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದಿರಿ. ಹಣ ನಿಮಗೆ ಬಿಡುಗಡೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ತನ್ನ ಆರೋಗ್ಯ ಬಹಳ ಆರ್ಥಿಕವಾಗಿ ಚೆನ್ನಾಗಿದೆ ಎಂದು ಹೇಳುತ್ತಾರೆ. ಹಣಕಾಸಿನ ಪರಿಸ್ಥಿತಿ ಚೆನ್ನಾಗಿದ್ದರೆ ಈ 27 ಕೋಟಿ ರೂಪಾಯಿ ಏತಕ್ಕೆ ರಿಲೀಸ್ ಆಗುತ್ತಿಲ್ಲ? ಅಡಿಷನಲ್ ಆಗಿ ಎಷ್ಟು ಹಣವನ್ನು ಕೊಡುತ್ತೀರಿ ಎನ್ನುವುದನ್ನು ಮುಂದೆ ನೋಡೋಣ.

Atleast that money 27 ಕೋಟಿ ರೂಪಾಯಿ ರಿಲೀಸ್ ಆಗಬೇಕಾಗಿತ್ತು. ಅದು ಏತಕ್ಕೆ ಆಗಲ್ಲ? I want to categorical assurance from the Revenue Minister, Latest by tomorrow all the 27 crores, Will be released because you have no right to keep that money. ನ್ಯಾಚುರಲ್ ಕೆಲಾಮಿಟಿಗೆ ಏನು ಗೌರ್ನಮೆಂಟ್ ಆಫ್

ಇಂಡಿಯಾದಿಂದ ಹಣ ಬಂದಿದೆ. ಮತ್ತು ರಾಜ್ಯ ಸರ್ಕಾರದ ಕಾಂಟ್ರಿಬ್ಯೂಷನ್ ಏನಿದೆ, you can't keep it with you.

ನೀವು ಇಷ್ಟೊಂದು higher magnitude ದಲ್ಲಿ ಇವತ್ತು ರೈತರು, ಬಡವರು ಕಷ್ಟದಲ್ಲಿದ್ದಾಗ ನೀವು ಹಣವನ್ನು ಇಟ್ಟುಕೊಳ್ಳುವುದಕ್ಕೆ ಏನು ಮಾರಲ್ ಅಧಿಕಾರವಿದೆ? ಲೀಗಲ್ ಅಧಿಕಾರ ಏನಿದೆ? ಹಾಗಾಗಿ ನಾನು ಹೇಳುತ್ತಿದ್ದೇನೆ. ನಿಮಗೆ ಯಾವ ಚಿಂತನೆ ಆ ಮಾರ್ಗದ ಬಗ್ಗೆ ಇಲ್ಲ. ರೈತರ ಬಗ್ಗೆ, ಬಡವರ ಬಗ್ಗೆ ಚಿಂತನೆ ಇದ್ದರೆ ಎಲ್ಲಾ ಹಣವೂ ರಿಲೀಸ್ ಆಗುತ್ತಿತ್ತು. The money is not released.

ಇವತ್ತು ಮಾನ್ಯ ಕಂದಾಯ ಸಚಿವರು ಕೆಲವು ವಿಚಾರಗಳನ್ನು ಎಂದು ತಮ್ಮ ಹೇಳಿಕೆಯಲ್ಲಿ ಹೇಳಿದ್ದಾರೆ. ಅದಕ್ಕೆ ನಾನು ಬರುತ್ತೇನೆ. ರಾಜ್ಯದ 94 ತಾಲ್ಲೂಕುಗಳ ಅತಿವೃಷ್ಟಿಯಿಂದ ಬೆಳೆಗಳು ಹಾಳಾಗಿವೆ, ಮನೆಗಳು ಬಿದ್ದಿವೆ, ಜನಗಳು ಕಷ್ಟದಲ್ಲಿದ್ದಾರೆ ಮತ್ತು ಬರಗಾಲ 72 ತಾಲ್ಲೂಕುಗಳಿಗೆ ಸೀಮಿತವಾಗಿದೆ. ಚಿಕ್ಕಮಗಳೂರು ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆ, ಶಿವಮೊಗ್ಗ ಜಿಲ್ಲೆ, ಕೊಡಗು ಜಿಲ್ಲೆ, ಬೆಳಗಾಂ ಜಿಲ್ಲೆಯ ಕೆಲವು, ಭಾಗ, ಧಾರವಾಡ ಜಿಲ್ಲೆಯ ಕೆಲವು ಭಾಗ ಬಿಜಾಪುರ ಜಿಲ್ಲೆಯ ಕೆಲವು ಭಾಗ ಅತಿವೃಷ್ಟಿ ಇದ್ದರೆ ಬರಗಾಲ ಇದ್ದಾಗ ಕುಡಿಯುವುದಕ್ಕೆ ನೀರಿಲ್ಲ. ನಮ್ಮ ಗುರುಪಾದಪ್ಪನವರು ಬೆಳಿಗ್ಗೆಯಿಂದಲೂ ಅದನ್ನೇ ಹೇಳುತ್ತಿದ್ದಾರೆ. ಅವರಿಗೆ ಕುಡಿಯುವುದಕ್ಕೆ ಅಲ್ಲಿನ ಜನರಿಗೆ ನೀರಿಲ್ಲ. ಅಲ್ಲಿನ ಜನರು ಅವರಿಗೆ ಹೇಳಿದ್ದಾರೆ, ಮೊದಲು ನೀರು ಕೊಡಿಸು, ಇಲ್ಲದಿದ್ದರೆ ಅವರನ್ನು ಮನೆಗೆ ಹೋಗು ಎಂದು ಹೇಳುತ್ತಾರೆ. ಅವರು ಪುನಃ ವಾಪಸ್ಸು ಬರಬೇಕಾದರೆ ಹಣವನ್ನು ರಿಲೀಸ್ ಮಾಡಿ ರೈತರಿಗೆ, ಬಡವರಿಗೆ ನೀರನ್ನು ಕೊಡಬೇಕು. ಆ ರೀತಿಯ ಪರಿಸ್ಥಿತಿಯಾಗಿದೆ. ನಿಮ್ಮ ರಾಯಚೂರಿನಲ್ಲಿ ನೀರಿಲ್ಲ, ಬಿಜಾಪುರದಲ್ಲಿ ನೀರಿಲ್ಲ, ಬಿಜಾಪುರದಲ್ಲಿ ಬರಗಾಲ, ಗುಲ್ಬರ್ಗಾದಲ್ಲಿ ನಮ್ಮ ಕಂದಾಯ ಸಚಿವರ ಜಿಲ್ಲೆಯಲ್ಲಿ ಬರಗಾಲ. ಮಳೆಯಿಲ್ಲ, ಹೌದೋ ಅಲ್ಲವೇ ಹೇಳಿ. ಮೆಡಿಕಲ್ ಎಜುಕೇಷನ್ ಮಿನಿಸ್ಟರ್ ಆದರೂ ಹೇಳ್ರಿ. ರಾಯಚೂರಿನಲ್ಲಿ ಕಷ್ಟದಲ್ಲಿದ್ದಾರೆ. ಗುಲ್ಬರ್ಗಾದಲ್ಲಿದ್ದಾರೆ, ಬೀದರ್, ಬಳ್ಳಾರಿ, ಬಿಜಾಪುರದಲ್ಲಿ major portion is under drought. ಮೈಸೂರಿನಲ್ಲಿ ಗುಂಡ್ಲುಪೇಟೆಯಲ್ಲಿ ಬರಗಾಲ ಇದೆ. ಈ ರೀತಿ ಎಲ್ಲಾ ಇದ್ದಾಗ ನೀವು ಕೇವಲ ಮಾತುಗಳು, ಪ್ರಾಮಿಸ್‌ಗಳು, ಭರವಸೆಗಳು, ಎಷ್ಟು ಭರವಸೆಗಳನ್ನು ಕೊಡುತ್ತೀರಿ? ಆ ಭರವಸೆಗಳನ್ನು ರಿಸರ್ಚ್ ವಿಂಗ್‌ನಲ್ಲಿ ತರುವುದಕ್ಕೆ ಹೇಳಿದ್ದೇನೆ. Assurance by the Chief Minister ತನ್ನಿ ಎಂದು ಹೇಳಿದ್ದೇನೆ. ಈ ಬರಗಾಲ ಬಿದ್ದಮೇಲೆ ನಿಮ್ಮದು ಎಷ್ಟು ಭರವಸೆಯಾಗಿದೆ, I will come to that one by one. ಪ್ರತಿಯೊಂದು ಸಭೆಯಲ್ಲಿ ಒಂದು ಮನವಿ ಬಂದಾಗ ಒಂದು ಭರವಸೆ. ಒಂದು ಬಜೆಟ್ ಇದೆ. ಬಜೆಟ್ ಮಂಡನೆ ಇಲ್ಲಿ ಮಾಡಿದಿರಿ. ಅದಕ್ಕೊಂದು ಪ್ರಾವಿತ್ರ್ಯತೆ ಇದೆ. ಒಂದು ಕಡೆ ನಿಮ್ಮ ಸಂಪನ್ಮೂಲ ಇದೆ, ಮತ್ತೊಂದು ಕಡೆ ಎಕ್ಸ್‌ಪೆಂಡಿಚರ್ ಇದೆ, ಅದರ ಬಗ್ಗೆ ನೀವು ಚಿಂತನೆ ಮಾಡಬೇಕಲ್ಲಾ. ನಾಳೆ ಪ್ರಧಾನಮಂತ್ರಿಗಳು ಬರುತ್ತಾರೆ. ಒಂದು ಜಾಹೀರಾತು Rs. 2000 crores in the name of P.V. Narasimha Rao? ಎಲ್ಲಿಂದ ಹಣವನ್ನು ತರುತ್ತೀರಿ? ಯಾವಾಗ? ನೀವು ಇನ್ನು ಮೂರು ತಿಂಗಳು ಇರುತ್ತೀರಿ. ಅದರ ನಂತರ ನಾವು ಅಲ್ಲಿಗೆ ನಡೆಸುವುದಕ್ಕೆ ಬರಬೇಕು. ಏನು ನಾವು ಮಾಡಬೇಕು? ಉತ್ತರ ಕೊಡಿ ಸ್ವಾಮಿ? 16ನೇ ಆಗಸ್ಟ್‌ಗೆ ಮತ್ತೊಂದು ಜಾಹೀರಾತು. 550 ಕೋಟಿ. ಮಾಡಿ. ನೀವು ಹಣವನ್ನು ಎಲ್ಲಿಂದ ತರುತ್ತೀರಿ? ಮತ್ತೊಂದು ಆರ್ಡರ್. ಎಲ್ಲಾ Muslim ladies wil have hostels in every taluk ಮಾಡಿ. I am happy about it. ಆದರೆ ಹಣ ಎಲ್ಲಿದೆ? Where is the budget provision? ಚುನಾವಣೆ ಇದೆ ಎಂದು ಮಾಡುತ್ತಿದ್ದೀರೋ? ಏನು ಫೈನಾನ್ಸಿಯಲ್ ಡಿಸಿಪ್ಲಿನ್ ಇದೆ? ಬಜೆಟನ್ನು ಏತಕ್ಕೆ ಮಂಡನೆ ಮಾಡುತ್ತೀರಿ?

ಬೇಡವೇ ಬೇಡ ಬಜೆಟ್. ನಿಮ್ಮ ಮನಸ್ಸಿಗೆ ಬಂದಂತೆ ಹೇಳಿಕೆಗಳನ್ನು ಕೊಡಿ. ಒಂದೊಂದು ದಿನ ಒಂದೊಂದು ಮಾತು. ಮುಖ್ಯ ಮಂತ್ರಿಗಳ ಮನೆಯಿಂದ ಬುಲೆಟಿನನ್ನು ರಿಲೀಸ್ ಮಾಡುವುದು. ಇಲ್ಲಿ ಬಜೆಟ್ ಮಂಡನೆ ಬೇಡ. ಬಜೆಟ್ ಚರ್ಚೆ ಬೇಡ. ಇವತ್ತು Financial discipline has been destroyed, totally destroyed. ಏಕೆಂದರೆ ಬಜೆಟ್‌ಗೆ ಮಹತ್ವ ಇಲ್ಲ, ಪಾವಿತ್ರ್ಯತೆ ಇಲ್ಲ, ಮನ ಬಂದಂತೆ ಮಾತನಾಡುತ್ತಾರೆ. ಮನಸ್ಸಿಗೆ ಬಂದಂತೆ ಹೇಳುತ್ತಾರೆ. ಮನಸ್ಸು ಚೆನ್ನಾಗಿರಬಹುದು. ಮುಖ್ಯಮಂತ್ರಿಗಳಿಗೆ ಒಳ್ಳೆಯದು ಮಾಡುವುದು ಮನಸ್ಸು ಇದೆ. I do not want to challenge his bonafides. But what is the use of it. In your attempt you are fooling yourself. Tomorrow you will have to explain this. Because neither you are permanent nor I am.

ನೀವು ಎಷ್ಟು ಕೋಟಿ ಕೊಟ್ಟಿದ್ದೀರಿ ಎಂದು ಲೆಕ್ಕ ಇಲ್ಲ.ಮಾನ್ಯ ಮುಖ್ಯಮಂತ್ರಿಗಳು ಅಗ್ರಿಕಲ್ಚರ್ ಕಿಟ್ಸ್‌ನ್ನು ಕೊಡುತ್ತೇನೆ ಎಂದು ಹೇಳಿದರು. ಸಂತೋಷ. ಅಗ್ರಿಕಲ್ಚರ್ ಕಿಟ್ ಎಂದರೇನು, ಗೊಬ್ಬರ, ಬೀಜ ಮತ್ತು ಔಷಧಿ. ಏನಾಯಿತು ಸ್ವಾಮಿ? ಈ ಮಾತನ್ನು ಬಿಜಾಪುರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಈ ಮಾತನ್ನು ಹೇಳಿ ಎರಡೂವರೆ ತಿಂಗಳಾಯಿತು. ನಾನು ಕಂದಾಯ ಸಚಿವರಿಗೆ ಮತ್ತು ಕೃಷಿ ಸಚಿವರಿಗೆ ಕೇಳುತ್ತಿದ್ದೇನೆ, ಎಲ್ಲಿ ನಿಮ್ಮ ಅಗ್ರಿಕಲ್ಚರಲ್ ಕಿಟ್ಸ್? ಯಾವ ಕಿಟ್ ಬಂದಿವೆ? ನನಗೆ ಗೊತ್ತಿಲ್ಲ. ಅಗ್ರಿಕಲ್ಚರ್ ಕಿಟ್ಸ್ ಬಂದಿಲ್ಲ. ಅದಕ್ಕೆ 30 ಕೋಟಿ ರೂಪಾಯಿ ನಿಮಗೆ ಬೇಕು. ಎಲ್ಲಿದೆ ನಿಮಗೆ ಹಣ? ಕೇಂದ್ರ ಸರ್ಕಾರ ಬಿಡುಗಡೆ ಮಾಡಿದಂಥ ಹಣವನ್ನು ನೀವು ಬಿಡುಗಡೆ ಮಾಡುತ್ತಿಲ್ಲ? ಎಲ್ಲಿಂದ ಅಗ್ರಿಕಲ್ಚರ್ ಕಿಟ್ಸ್‌ನ್ನು ಕೊಡುತ್ತೀರಿ? ಏತಕ್ಕೆ ಹೇಳಬೇಕಾಗಿತ್ತು? ಒಳ್ಳೆಯ ಮನಸ್ಸಿನಿಂದ ಹೇಳಿದರಲ್ಲಾ, ಅದನ್ನು ಇಂಪ್ಲಿಮೆಂಟ್ ಮಾಡಿ. ಕೊಡುವವರು ಯಾರು? ತಾವೇ ಹೇಳಿ. ಇದನ್ನು ಅಗ್ರಿಕಲ್ಚರರ್ ಮಿನಿಸ್ಟರ್ ತಾವೇ ಹೇಳಿ. ಇವತ್ತು ಅತಿವೃಷ್ಟಿಯಾಗಿ ನಾಲ್ಕು, ಐದು ತಿಂಗಳಾಯಿತು. ಬರಗಾಲ ಬಂತು.ಯಾವಾಗ ಕೊಡುತ್ತೀರಿ? ಅಗ್ರಿಕಲ್ಚರ್ ಕಿಟ್ಸ್‌ನ್ನು ಜವರಿಯಲ್ಲಿ ಕೊಡುತ್ತೀರೋ? ಡಿಸೆಂಬರ್‌ನಲ್ಲಿ ಕೊಡುತ್ತೀರೋ? ಚುನಾವಣೆಯಲ್ಲಿ ವೋಟರ್‌ಗೆ ಒಂದೊಂದು ಕೊಡುತ್ತೀರಾ? ಎಲೆಕ್ಷನ್ ವೇಳೆಯಲ್ಲಿ ಅಗ್ರಿಕಲ್ಚರ್ ಕಿಟ್‌ನ್ನು ಕೊಡುವುದು, ತೆಗೆದುಕೊಳ್ಳಿ ಎಂದು. ಆ ರೀತಿಯ ಕಾರ್ಯಕ್ರಮವೇನಾದರೂ ಇದೆಯೇ? ಅಗ್ರಿಕಲ್ಚರ್ ಕಿಟ್‌ನ್ನು ಏತಕ್ಕೆ ಕೊಡಬೇಕು? ಆ ರೈತರಿಗೆ ಅನುಕೂಲವಾಗಬೇಕು. ಆ ಜನರು ಕಷ್ಟದಲ್ಲಿದ್ದಾರೆ. ಅವರಿಗೆ ಒಂದು ದಿನ ನಾಲ್ಕು ಕಾಳು ಬರಬಹುದು. ಏನಾಗಿದೆ? ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಎಲ್ಲಿ? ಅಗ್ರಿಕಲ್ಚರ್ ಕಿಟ್ ಕೊಡುವುದು ಎಲ್ಲಿ? ನನಗೇನೇನೂ ಗೊತ್ತಾಗುತ್ತಿಲ್ಲ. ಮಾನ್ಯ ಸಚಿವರು ನನಗೆ ಹೇಳಬೇಕು, ಅಗ್ರಿಕಲ್ಚರ್ ಕಿಟ್ ಏನಾಯಿತು? ಎರಡನೆಯದು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಿಂದ ಇವತ್ತು ಕಾಂಟಿನ್‌ಜೆನ್ಸಿ ಪ್ರೋಗ್ರಾಮ್‌ನ್ನು ತಯಾರು ಮಾಡಬೇಕಾಗಿದೆ. ಒಂದು ಕಾಂಟಿನ್‌ಜೆನ್ಸಿ ಪ್ರೋಗ್ರಾಮ್. ಈ ಬೆಳೆ ಹಾಳಾದಾಗ ಪರ್ಯಾಯ ಬೆಳೆ ಏನು ತೆಗೆದುಕೊಳ್ಳುತ್ತೀರಿ? ಇದನ್ನು ನಾವೇ ನೋಡಿಲ್ಲ. ಹಲವಾರು ಡಿಸ್ಟ್ರಿಕ್ಟ್‌ಗೆ ವಿಸಿಟ್ ಮಾಡಿದ್ದೇನೆ, ಒಬ್ಬರು ಅಗ್ರಿಕಲ್ಚರ್ ಆಫೀಸರ್ ಬಂದು ನನಗೆ this is our contingency programme ಎಂದು ನನಗೆ ಹೇಳಲಿಲ್ಲ. ನಾನೇ ಕೆಲವು ಕಡೆ ಹೇಳಿದೆ. ಆ ಕೆಲವು ಜನ ಅಧಿಕಾರಿಗಳು ನೋಡಿಲ್ಲ. ಕಾಂಟಿನ್‌ಜೆನ್ಸಿ ಪ್ರೋಗ್ರಾಮ್ ಎಂದರೆ ಏನೆಂದು ಅವರಿಗೆ ಗೊತ್ತಿಲ್ಲ. ನಾನೇ ಹೇಳಿದೆ. ಬೆಳೆ ಹಾಳಾದಾಗ ಷಾರ್ಟ್ ಟೈಮ್ ಡ್ಯೂರೇಷನ್‌ನಲ್ಲಿ ಕೆಲವು ಪರ್ಯಾಯ ಬೆಳೆಯನ್ನು ತೆಗೆದುಕೊಳ್ಳಬೇಕಾಗುತ್ತದೆ, ಆ ಕಾರ್ಯಕ್ರಮ ಎಂದು ಹೇಳಿದೆ. ಈ ರೀತಿಯ ಪರಿಸ್ಥಿತಿ ಇದೆ. ಏಕೆಂದರೆ the total administrative machinery has collapsed. ಯಾರ ಮಾತನ್ನು ಯಾರು ಕೇಳುವುದಕ್ಕೂ

ತಯಾರು ಇಲ್ಲ. ಪ್ರತಿ ದಿನ ಒಂದು ಭರವಸೆ ಬಂದಾಗ ಅಧಿಕಾರಿಗಳು ಕೂಡ ಹೇಳುತ್ತಲೇ ಇರುತ್ತಾರೆ ಬಿಡಿ.ಏನು ಭರವಸೆ ಎಂದು, ಸೀರಿಯಸ್‌ನೆಸ್ ಹೋಗಿಬಿಟ್ಟಿದೆ. There is no seriouseness, that is the main problem. ಹಾಗಾಗಿ ಹಲವಾರು ಭರವಸೆಗಳನ್ನು ಕೊಟ್ಟು ಇವತ್ತು ಯಾವ ಭರವಸೆಯನ್ನೂ ಜಾರಿಗೆ ತರುತ್ತಿಲ್ಲ. ಪ್ರತಿಯೊಬ್ಬ ಜಿಲ್ಲಾಧಿಕಾರಿಗಯೂ ಒಂದು ಕೋಟಿ ರೂ.ಗಳಷ್ಟು ಖರ್ಚು ಮಾಡಲು ಅಧಿಕಾರ ಕೊಟ್ಟಿದ್ದೇವೆಂಬ ಒಂದು ಮಾತನ್ನು ಹೇಳಿದರು.

ಯಾವ ಜಿಲ್ಲಾಧಿಕಾರಿ ಖರ್ಚು ಮಾಡುವುದಕ್ಕೆ ಸಾಧ್ಯ ಇದೆ? ನಿಮ್ಮ ಅವಧಿ ಮೂರು ತಿಂಗಳು ಇದೆ. ನಿಮ್ಮನ್ನು ನಂಬಿ ಅವನು ಒಂದುಕೋಟಿ ರೂಪಾಯಿ ಹೆಚ್ಚು ಮಾಡಿದರೆ ಆ ಆರ್ಡರ್‌ಗೆ ಒಂದು ಮರ್ಯಾದೆ ಸಿಗಬೇಕಲ್ಲಾ. ಮುಂದೆ ಬರುವವರು ಏನು ಪರಿಸ್ಥಿತಿಗೆ ಬರುತ್ತಾರೆ?

ಶ್ರೀ ಧರ್ಮಸಿಂಗ್ : ಕಾರವಾರಕ್ಕೆ ನಾವು ಎಷ್ಟು ಖರ್ಚು ಮಾಡಿದ್ದೇವೆ ಎನ್ನುವುದು ಗೊತ್ತಿದೆ. ಒಂದೂವರೆ ಕೋಟಿಗಿಂತ ಹೆಚ್ಚು ಮಾಡಿದ್ದೇವೆ.

ಶ್ರೀ ಧರ್ಮಸಿಂಗ್ : ನೀವು ನಮ್ಮ ಸ್ನೇಹಿತರಾಗಿರುವುದರಿಂದ ಕಷ್ಟವಾಗಿಬಿಟ್ಟಿದೆ. ಹಾಗಾಗಿ ಒಂದು ಕೋಟಿ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಡುತ್ತೇವೆ. ಬ್ಲಾಂಕೆಟ್ ಪವರ್. ಏನು ಮಾಡುತ್ತಾರೆ ಪಾಪ ಅವರು ಹಣವಿಲ್ಲದೆ ಹೇಗೆ ಮಾಡುವುದು? ಯಾರು ಮಾಡುತ್ತಾರೆ. ಯಾವ ಅಧಿಕಾರಿಯೂ ಮಾಡುವುದಿಲ್ಲ. ಯಾವ ಒಂದು ಕೋಟಿ? ಇದೇನು ಪರಿಸ್ಥಿತಿ? ಜಿಲ್ಲಾಧಿಕಾರಿಗಳ ಹತ್ತಿರ ಇದ್ದರೆ ಒಂದು ಆರ್ಡರ್ ಮಾಡಬಹುದು. ಅದಕ್ಕೊಂದು ಬೆಲೆ. ಕೆಲಸ ನಡೆಯಬಹುದು. ಆರ್ಡರ್ ಮಾಡಿದಾಗ ಹಣವನ್ನು ಬಿಡುಗಡೆ ಮಾಡಬೇಕಲ್ಲಾ.

ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಹೇಳಿದರೆ ಹೇಗೆ ಸಾಧ್ಯವಿದೆ? ಬೆಳೆ ಹಾಳಾಗಿರುವುದಕ್ಕೆ ಸರ್ಕಾರದಿಂದ ಪರಿಹಾರವೇನು? ಬೆಳೆ ಹಾಳಾದ ಒಂದು ಹೆಕ್ಟೇರ್ ಪ್ರದೇಶಕ್ಕೆ 500 ರೂಪಾಯಿಗಳನ್ನು ಕೊಡುತ್ತಾರೆ. ಹಾಗಾದರೆ ಒಂದು ಎಕರೆಗೆ 200 ರೂಪಾಯಿಗಳಾಯಿತು. ಸಚಿವರಾದ ಕಾಗೋಡು ತಿಮ್ಮಪ್ಪನವರು ರೈತರ ಬಗ್ಗೆ ಬಹಳ ಹೋರಾಟ ಮಾಡಿದವರು. ಎಕರೆಗೆ 200 ರೂಪಾಯಿಗಳಂತೆ ರೈತರಿಗೆ ಪರಿಹಾರ ಕೊಟ್ಟರೆ ಅದು ಆತನಿಗೆ ಸಾಕಾಗುತ್ತದೆಯೇ? ಆ ಹಣದಲ್ಲಿ ಬೀಜ ಬರುತ್ತದೆಯೇ? ಗೊಬ್ಬರ ಬರುತ್ತದೆಯೇ? ಇವೊತ್ತು ತಮ್ಮ ಬೆಳೆ ಹಾಳಾಗಿರುವ ಕಾರಣಕ್ಕಾಗಿ ರೈತರಿಗೆ ಸರ್ಕಾರ 100, 200 ರೂಪಾಯಿಗಳ ಚೆಕ್ ಕೊಡುತ್ತಿದೆ. ಚೆಕ್ ಪಡೆದುಕೊಳ್ಳುವುದಕ್ಕೆ ರೈತ 3-4.ದಿವಸಗಳ ಕಾಲ ಕೂಲಿ ಕೆಲಸಕ್ಕೆ ಗೈರು ಹಾಜರಾಗಬೇಕು. ನೋಡಿ, ಅವರ ಕಷ್ಟ ಎಷ್ಟಿದೆ ಎಂಬುದು. ಮನೆಗಳು ಬಿದ್ದು ನಿರ್ಗತಿಕರಾದವರಿಗೂ ಪರಿಹಾರ ಕೊಡಲಾಯಿತು. ಪೂರ್ತಿ ಮನೆ ಬಿದ್ದಿದ್ದರೆ 10 ಸಾವಿರ ರೂಪಾಯಿ, ಭಾಗಶಃ ಹಾನಿಗೊಂಡಿದ್ದರೆ 5 ಸಾವಿರ ರೂಪಾಯಿಗಳು. ಈ ವರ್ಷ ಅತಿವೃಷ್ಟಿಯಿಂದ ನಾಶಗೊಂಡ ಮನೆಗಳ ಅಂಕಿ-ಅಂಶ ಕೊಟ್ಟಿದ್ದೀರಿ. ಜೊತೆಗೆ ನನ್ನ ಕ್ಷೇತ್ರದಲ್ಲಿ ಬಿದ್ದಿರುವ ಮನೆಗಳ ಬಗ್ಗೆಯೂ ಅಂಕಿ-ಅಂಶ ಕೊಟ್ಟಿದ್ದೀರಿ. ನನ್ನ ಕ್ಷೇತ್ರದಲ್ಲಿ ಇನ್ನೂ ಸಮೀಕ್ಷೆ ಕಾರ್ಯ ನಡೆಯುತ್ತಿದ್ದು, ಬಹಳಷ್ಟು ಮನೆಗಳು ಬಿದ್ದಿದೆ. ಈಗ ತಾವೇ ತಿಳಿಸಿರುವ ರೀತ್ಯ 92 ಜನರು ಸತ್ತಿದ್ದು, 4,124 ಮನೆಗಳು ಸಂಪೂರ್ಣ ಹಾಳಾಗಿದ್ದು 37,274 ಮನೆಗಳು ಭಾಗಶಃ ಹಾನಿಗೊಂಡಿದೆ ಎಂದು. ಇದು ಸರಿಯಾದ ಅಂಕಿ-ಅಂಶ ಅಲ್ಲ. ನನಗೆ ತಿಳಿದಿರುವಂತೆ 8,000 ದಿಂದ 9,000 ಮನೆಗಳು ಬಿದ್ದಿದ್ದು, 80,000 ರಿಂದ 90,000 ವರೆಗೆ ಮನೆಗಳು ಭಾಗಶಃ ನಾಶವಾಗಿವೆ. ಸಮೀಕ್ಷೆ ಕಾರ್ಯ ಮುಂದುವರಿಯುತ್ತಿದೆ. ತಾವು ಟೆಂಟೇಟಿವ್ ಫಿಗರ ಕೊಡಲಾಗಿದೆಯೆಂದು ಹೇಳಿದ್ದರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಎಷ್ಟು ಜನರಿಗೆ ತಾವು 10,000 ರೂಪಾಯಿಗಳ ಚೆಕ್ ವಿತರಿಸಿದ್ದೀರಿ?

ತಮ್ಮ ಮನೆ-ಮಠ ಕಳೆದುಕೊಂಡವರಿಗೆ ನೀವು 100, 150, 200 ರೂಪಾಯಿಗಳಂತೆ ಚೆಕ್ ಕೊಡುತ್ತಿದ್ದೀರಿ. ಸರ್ಕಾರ ಸರಿಯಾದ ರೀತಿಯಲ್ಲಿ ಸಹಾಯ ಮಾಡಬೇಕು. ಅದು ಆಗದಿದ್ದರೆ ಇಂತಹ ಕೆಲಸಕ್ಕೆ ಕೈ ಹಾಕಬಾರದು. ಅದರ ಅವಶ್ಯಕತೆಯೂ ಇಲ್ಲ. ಪರಿಹಾರದ ಹಣ ಪಡೆದುಕೊಳ್ಳಲು ರೈತರು ಕಛೇರಿಗೆ ನಾಲ್ಕೈದು ಬಾರಿ ಅಲೆಯಬೇಕು. ಅವರಿಗೆ ಕೆಲಸವಿಲ್ಲದಿದ್ದ ಕಾರಣ ಸರ್ಕಾರ ಅವರಿಗೆ 100 ರೂಪಾಯಿಗಳನ್ನು ಕೊಟ್ಟು ಕಳುಹಿಸುವ ಪರಿಸ್ಥಿತಿಗೆ ಜನರನ್ನು ತಂದಿಟ್ಟಿದೆ. ಇವೊತ್ತು ರಾಜ್ಯದ ಅನೇಕ ಕಡೆ ಬಿತ್ತನೆಯಾಗಿಲ್ಲವೆಂದು ಕಂದಾಯ ಸಚಿವರೇ ತಮ್ಮ ಹೇಳಿಕೆಯಲ್ಲಿ ಒಪ್ಪಿಕೊಂಡಿದ್ದಾರೆ. ರಾಜ್ಯದ 72 ತಾಲ್ಲೂಕುಗಳ 43.28 ಲಕ್ಷ ಹೆಕ್ಟೇರುಗಳಲ್ಲಿ ಬಿತ್ತನೆಯಾದ ಪ್ರದೇಶ 24.76 ಲಕ್ಷ ಹೆಕ್ಟೇರ್‌ಗಳೆಂದು ಹೇಳಿದ್ದು ಇದು ಸರಿಯಾದ ಅಂಕಿ-ಅಂಶವಲ್ಲ. ಬಿತ್ತನೆ 12 ಲಕ್ಷ ಹೆಕ್ಟೇರ್ ಪ್ರದೇಶದಲ್ಲೂ ಆಗಿಲ್ಲ, ಇದರಲ್ಲಿ ಪುನಃ 10 ಲಕ್ಷ ಹೆಕ್ಟೇರ್ ಪ್ರದೇಶ ಹಾಳಾಗಿದೆ. ರಾಜ್ಯದ 72 ತಾಲ್ಲೂಕುಗಳಲ್ಲಿ ಸಂಪೂರ್ಣ ಬರಗಾಲ ಇದೆ. ಕುಡಿಯಲು ನೀರಿಲ್ಲ, ಗುಲ್ಬರ್ಗ, ರಾಯಚೂರು, ಬೀದರ್, ಬಳ್ಳಾರಿ, ಬಿಜಾಪುರ ಮತ್ತು ಬೆಳಗಾವಿಯ ಕೆಲವು ಭಾಗಗಳು ಬರಗಾಲಕ್ಕೆ ತುತ್ತಾಗಿದೆ. ಇದರ ಬಗ್ಗೆ ಚಿಂತನೆ ಮಾಡಿ ನೇರವಾಗಿ ಹೇಳಬೇಕಾಗುತ್ತದೆ. ಈ ದಿಸೆಯಲ್ಲಿ ತಾವು ಯಾವ ರೀತಿಯ ಕ್ರಮ ತೆಗೆದುಕೊಂಡಿರಿ? ರೈತರು ಉದ್ಯೋಗವಿಲ್ಲದೆ ಕುಳಿತಿದ್ದಾರೆ. ರಾಯಚೂರು ಮತ್ತು ಬಿಜಾಪುರಕ್ಕೆ ಸೇರಿದ ಮಂತ್ರಿಗಳು ಸದನದಲ್ಲಿದ್ದಾರೆ. ಜನರು ಉದ್ಯೋಗಕ್ಕಾಗಿ ಪಕ್ಕದ ರಾಜ್ಯಗಳಾದ ಗೋವಾ, ಮಹಾರಾಷ್ಟ್ರಕ್ಕೆ ಹೋಗುತ್ತಿದ್ದಾರೆ. ಅವರಿಗೆ ಉದ್ಯೋಗ ಒದಗಿಸಿಕೊಡಲು ನೀವೇನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಇವರಿಗೆ ಜವಾಹರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ಕೆಲಸ ಕೊಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಆದೇಶಿಸಲಾಗಿದೆ. ಮತ್ತೆ ಎಲ್ಲಾ ಟ್ರೆಜರಿಗಳ ಮೇಲೆ ಬ್ಯಾನ್ ಏತಕ್ಕೋಸ್ಕರ ಆಗಿದೆ? All treasury bans are there. ಇವೊತ್ತು ಎಲ್ಲಿಯೂ ಟ್ರೆಜರಿ ಬ್ಯಾನ್ ಇಲ್ಲವೆಂದು ತಾವು ಪ್ರಾಮಾಣಿಕವಾಗಿ ಹೇಳಬೇಕು. ಎಲ್ಲಾ ಜಿಲ್ಲೆಗಳಲ್ಲೂ ಟ್ರೆಜರಿ ಬ್ಯಾನ್ ಇದೆ.

ಖಜಾನೆಯಲ್ಲಿ ಒಂದು ಪೈಸೆ ಚೆಕ್ ಸಹ ಹಾನರ್ ಆಗುತ್ತಿಲ್ಲ. ಆದರೆ ಜಿಲ್ಲಾಧಿಕಾರಿಗಳಿಗೆ ಕೆಲಸ ಮಾಡಿ ಎಂದು ಕೊಟ್ಟಿದ್ದಾರೆ. ಹಣವಿಲ್ಲದೆ ಯಾವ ಜಿಲ್ಲಾಧಿಕಾರಿ ತಾನೆ ಕೆಲಸ ಮಾಡಲು ಸಾಧ್ಯ? ಕೂಲಿಯನ್ನು ಕೊಡುವುದಕ್ಕಾದರೂ ಹಣವಿರಬೇಕಲ್ಲವೆ? ಹಾಗಾಗಿ ಇವತ್ತು ಬಡವರಿಗೆ ಉದ್ಯೋಗವಿಲ್ಲ. ಆದ್ದರಿಂದ ಅವರುಗಳು ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳಿಗೆ ಹೋಗುತ್ತಿದ್ದಾರೆ. ಇದರಿಂದ ನಾವುಗಳು ನಾಚಿಕೆಯಿಂದ ತಲೆ ತಗ್ಗಿಸಬೇಕಾಗುತ್ತದೆ. ಇಲ್ಲಿ ನಾವ್ಯಾಕೆ ಇರಬೇಕು? ಏನು ಅವಶ್ಯಕತೆ ಇದೆ? ಇಷ್ಟು ಜನರಿದ್ದಾಗ ಆ ಜನರಿಗೆ ಉದ್ಯೋಗಾವಕಾಶವನ್ನು ಕೊಡಲು ಆಗಲಿಲ್ಲವೆಂದರೆ ಇಲ್ಲಿ ನಾವು ಇರತಕ್ಕ ಅವಶ್ಯಕತೆ ಏನು ಇದೆ? ಆದ್ದರಿಂದ ಇವತ್ತು ಎಲ್ಲಾ ಹಂತದಲ್ಲಿ ಎಂಪ್ಲಾಯ್‌ಮೆಂಟ್ ಜನರೇಷನ್ ಬಹಳ ಇದೆ, ಸರಿಯಾದ ಪರಿಹಾರವಿಲ್ಲ, ತಮ್ಮ ಗಮನಕ್ಕೂ ಇದು ಬಂದಿರಬಹುದು.

ಶ್ರೀ ಬಿ.ಎಚ್. ಯಂಕಾನಾಯಕ್ : ಅಧ್ಯಕ್ಷರೇ, ಮೊನ್ನೆ ನೆರೆಹಾವಳಿ ಬಂದಿದ್ದಾಗ ಪ್ರತಿಯೊಂದು ಜಿಲ್ಲೆಗೆ ಒಂದೊಂದು ಲಕ್ಷವನ್ನು ಕೊಟ್ಟಿದ್ದಾರೆ. ನಮ್ಮ ಸರ್ಕಾರವಿದ್ದಾಗ ಬಂಗಾರಪ್ಪನವರ ಸರ್ಕಾರವಿದ್ದಾಗ ಕೊಟ್ಟಿದ್ದಾರೆ. ಆದರೆ ಇವರು ಸುಮ್ಮನೆ ಆಪಾದನೆ ಮಾಡುತ್ತಿದ್ದಾರೆ. ತಾಲ್ಲೂಕುಗಳಿಗೆ ಹಣವನ್ನು ಕೊಟ್ಟಿದ್ದಾರೆ. ಕಟ್ಟಡಗಳಿಗೆ, ರಸ್ತೆಗಳಿಗೆ ಕೊಟ್ಟಿದ್ದಾರೆ. ಈಗ ಆದಷ್ಟು ಕೆಲಸ ಯಾವಾಗಲೂ ಆಗಿಲ್ಲ. ಅವರು ಸುಮ್ಮನೆ ಆಪಾದನೆ ಮಾಡುತ್ತಿದ್ದಾರೆ. ಅವರ ಸರ್ಕಾರವಿದ್ದಾಗ ಏನು ಮಾಡಿದ್ದಾರೆ? ಇವರ ಸರ್ಕಾರವಿದ್ದಾಗ ಒಂದು ಪೈಸೆ ಕೆಲಸ ಮಾಡಲಿಲ್ಲ. ಹಳ್ಳಿಗಳಲ್ಲೆಲ್ಲಾ ಜಗಳ ಹಚ್ಚಿದರು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಜಗಳವನ್ನು ಯಾರ್ಯಾರಿಗೆ ಹಚ್ಚಿದರು ಎಂಬ ಬಗ್ಗೆ ಅವರು ವಿವರಣೆ ಕೊಟ್ಟರೆ ಒಳ್ಳೆಯದು.

ಶ್ರೀ ಆರ್.ವಿ. ದೇಶಪಾಂಡೆ : ರಸ್ತೆಯ ಕಂಡೀಷನ್ಸ್ ಬಹಳ ಅವ್ಯವಸ್ಥೆಯಾಗಿದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೆಲಿಕಾಪ್ಟರ್‌ನಲ್ಲಿ ಹೋಗುವುದರಿಂದ ಅವರ ಕಲ್ಪನೆ ಬರುವುದಿಲ್ಲ. ಅವರು ಅವಶ್ಯಕತೆ ಇದ್ದಾಗ ಅದರಲ್ಲಿ ಪ್ರಯಾಣ ಮಾಡಲಿ. ಅದಕ್ಕೆ ನನ್ನ ತಕರಾರಿಲ್ಲ. ಆದರೆ ನಾವು ನೀವು ಪ್ರವಾಸ ಮಾಡಿದಾಗ ನೋಡಿರಬೇಕಲ್ಲಾ. ರಸ್ತೆಗಳ ಯಾವ ಸ್ಥಿತಿಯಲ್ಲಿದೆ?

(ಗೊಂದಲ)

ರಸ್ತೆಗಳ ಸ್ಥಿತಿ ಸರಿಯಾಗಿಲ್ಲ. ನನ್ನ ಸ್ನೇಹಿತರು ಆ ಭಾಗದಲ್ಲಿ ಕುಳಿತಿರುವವರು ಮತ್ತು ಈ ಭಾಗದಲ್ಲಿ ಕುಳಿತಿರುವವರೆಲ್ಲರೂ ಇದರ ಬಗ್ಗೆ ಪ್ರಾಮಾಣಿಕವಾಗಿ ಹೇಳಿದ್ದೀರಿ. ಅದು ಜಿಲ್ಲಾ ಪರಿಷತ್‌ನ ರಸ್ತೆ ಇರಬಹುದು, ಪಂಚಾಯಿತಿಯ ರಸ್ತೆ ಇರಬಹುದು, ರಾಜ್ಯ ಮುಖ್ಯ ರಸ್ತೆ ಇರಬಹುದು. ಅದರ ಸ್ಥಿತಿ ಏನಿದೆ? ಎರಡು ಕಾಲಿನಲ್ಲಿ ಸರಿಯಾಗಿ ಅದರ ಮೇಲೆ ನಡೆಯಲಾಗುವುದಿಲ್ಲ. ಅಂಥ ದುಸ್ಥಿತಿಯ ರಸ್ತೆಗಳಿವೆ. ರಸ್ತೆಗಳ ರಿಪೇರಿಯ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿರಿ? ಪಿಡಬ್ಲ್ಯೂಡಿಯವರಿಗೆ ಜಿಲ್ಲಾಪರಿಷತ್‌ನವರಿಗೆ ನೀವೇನು ವಿಶೇಷವಾದ ಅಸಿಸ್ಟೆನ್ಸ್ ಕೊಟ್ಟಿದ್ದೀರಿ ಈ, ಸಾರ್ವಜನಿಕರ ಆಸ್ತಿಯನ್ನು ರಿಪೇರಿ ಮಾಡುವುದಕ್ಕೆ?

ನಾನು ಮುಖ್ಯಮಂತ್ರಿಗಳಿಗೆ ಹೇಳಿದೆ ಈ ರೀತಿ ತಾವು ಕಣ್ಣು ಕಾಣಿಸಿದರೂ ಸಹ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲು ತಯಾರಾಗಿಲ್ಲ. ಹಲವಾರು ಟ್ಯಾಂಕ್‌ಗಳು ಬ್ರೀಚ್ ಆಗಿವೆ. ತಾವು ಟ್ಯಾಂಕುಗಳ ಬಗ್ಗೆ ಏನಾದರೂ ಮಾಡಿದ್ದೀರಾ? ಸ್ಯಾಂಡ್ ಬ್ಯಾಗ್‌ನ್ನು ಹಾಕಿದ್ದಾರೆ, ಅದಕ್ಕೂ ಸಹ ಹಣವಿರಲಿಲ್ಲ, ಅಧಿಕಾರಿಗಳು ಎಲ್ಲಿಂದಲೂ ತಂದು ಹಾಕಿದರು. ಆ ಟ್ಯಾಂಕ್ ರಿಪೇರಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಅದಕ್ಕೆ ಜಿಲ್ಲಾ ಪರಿಷತ್ತಿಂದ, ಮೈನರ್ ಇರಿಗೇಷನ್‌ನಿಂದ ಎಷ್ಟು ಹಣವನ್ನು ಕೊಟ್ಟಿದ್ದೀರಿ ಏನೇನೂ ಕೊಡಲಿಲ್ಲ. ಎಂಪ್ಲಾಯ್‌ಮೆಂಟ್ ಜನರೇಷನ್‌ಗೂ ಹಣವಿಲ್ಲ, ಬೆಳೆನಾಶಕ್ಕೂ ಪರಿಹಾರವನ್ನು ಕೊಡಲಿಲ್ಲ, ಮನೆ ಬಿದಿದ್ದಕ್ಕೆ ಸರಿಯಾದ ಪರಿಹಾರವಿಲ್ಲ, ಸಾರ್ವಜನಿಕ ಆಸ್ತಿಯ ರಿಪೇರಿಗಾಗಿ ಸಹ ಸರಿಯಾದ ಹಣವಿಲ್ಲ, ಅಧ್ಯಕ್ಷರೇ, ಏಕೆಂದರೆ ತಾವು ಕಾರಿನಲ್ಲಿ ಹೋಗುತ್ತೀರಿ, ಧಾರವಾಡದಿಂದ ಬೆಳಗಾಂ ರಸ್ತೆ ಯಾವ ರೀತಿ ಇದೆ ಎನ್ನುವ ಬಗ್ಗೆ ತಮ್ಮ ಅನುಭವಕ್ಕೂ ಬಂದಿರಬಹುದು. ನಾವು ಮೊದಲು ಧಾರವಾಡದಿಂದ ಬೆಳಗಾಂಗೆ ಒಂದೂವರೆ ಗಂಟೆಯಲ್ಲಿ ಹೋಗುತ್ತಿದ್ದೆವು. ಆದರೆ ಈಗ ಕನಿಷ್ಟ ಪಕ್ಷ ಎರಡೂ ಮುಕ್ಕಾಲು ಗಂಟೆ ಬೇಕಾಗುತ್ತದೆ. ಹೌದೋ ಅಲ್ಲವೋ ಹೇಳಿ. ಇದರಲ್ಲಿ ನಾವು ಯಾರ ಮೇಲೂ ಚಾರ್ಜ್ ಮಾಡಬೇಕೆಂದು ಮಾಡುತ್ತಿಲ್ಲ. ಇವೆಲ್ಲವುಗಳೂ ಫ್ಯಾಕ್ಟ್ಸ್, ಇದರ ಬಗ್ಗೆ ಸರ್ಕಾರಕ್ಕೆ ಮನವರಿಕೆಯಾಗಿದ್ದರೂ ಸಹ ಸರ್ಕಾರ ಏನು ಮಾಡುವುದಿಲ್ಲವೆಂದರೆ ನಾವು ಏನು ಮಾಡಬೇಕು. ಇಷ್ಟೊಂದು ರೈತರು ಕಷ್ಟದಲ್ಲಿದ್ದಾಗ ನಮ್ಮ ಸದಸ್ಯರುಗಳಾದ ವಾಟಾಳ್‌ನಾಗರಾಜ್‌ರವರು, ಭೈರೇಗೌಡರು ಹೇಳಿದಂತೆ ಈ ಸರ್ಕಾರಕ್ಕೆ ಕಣ್ಣು, ಕಿವಿ, ಹೃದಯ ಯಾವುದೂ ಇಲ್ಲ. ಇಂಥ ಪರಿಸ್ಥಿತಿಯಾಗಿದೆ. ಈ ಪರಿಸ್ಥಿತಿಯಲ್ಲಿ ಸರ್ಕಾರಕ್ಕೆ ನಾನು ಏನು ಎಚ್ಚರಿಕೆಯನ್ನು ಕೊಡುತ್ತಿದ್ದೇನೆಂದರೆ ತಾವು ನಿಜವಾದ ಪರಿಸ್ಥಿತಿಯನ್ನು ತಿಳಿದುಕೊಂಡು ಇವತ್ತು ಕಷ್ಟದಲ್ಲಿರತಕ್ಕ ರೈತರ, ಕೂಲಿಕಾರರ ಸಹಾಯಕ್ಕೆ ಹೋದರೆ ಬರುವ ಮೂರು ತಿಂಗಳ ಚುನಾವಣೆಯಲ್ಲಿ ತಮಗೆ ಸ್ವಲ್ಪ ಮರ್ಯಾದೆ ಉಳಿಯಬಹುದು. ಉಳಿಯುವುದು ಗ್ಯಾರಂಟಿ ಇಲ್ಲ. ಸ್ವಲ್ಪ ಉಳಿಯಬಹುದು. ಆ ಕಷ್ಟದ ಜನರು ಏನು ಶಾಪ ಹಾಕುತ್ತಾರೆ. ಅದು ನಿಮಗೆ ಬಹಳ ಕಷ್ಟವಾಗಬಹುದು.

ಶ್ರೀ ಬಿ.ಎಚ್. ಯಂಕಾನಾಯಕ್ : ನಿಮ್ಮ ಭಾಗದಲ್ಲಿ ಎಷ್ಟು ಜನರಿದ್ದಾರೆ? ಜೀವರಾಜಆಳ್ವ, ವೈ.ಕೆ. ರಾಮಯ್ಯನಂಥವರೆಲ್ಲಾ ಹೋಗಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ಈ ಹಣವನ್ನು ಬಿಡುಗಡೆ ಮಾಡುವ ವಿಚಾರದಲ್ಲೂ ಸಹ ಸರ್ಕಾರದಿಂದ ಯಾವ ಕೆಲಸ ಆಗಿಲ್ಲ. ಆದರೆ ಒಂದು ಮಾತನ್ನು ಹೇಳುತ್ತೇನೆ. ಕೆಲವು ಅಧಿಕಾರಿಗಳು ಮಾಡಿರುವ ಕೆಲಸವನ್ನು ಮೆಚ್ಚಬೇಕು. ಬೆಳಗಾಂ, ಧಾರವಾಡ, ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲವು ಅಧಿಕಾರಿಗಳು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಹಣದ ಕೊರತೆ ಇದ್ದರೂ ಸಹ ಹೆಚ್ಚು ಮಳೆಯಿದ್ದರೂ ಬನ್ನಿಕೋಡ್ ಅವರ ನೇತೃತ್ವದಲ್ಲಿ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಅಂಕೋಲದಲ್ಲಿ ರಾತ್ರಿ 12-1 ಗಂಟೆಗೆ ಅಧಿಕಾರಿಗಳು ಹೋಗಿ ಜನರಿಗೆ ಸಹಾಯ ಮಾಡಿದ್ದಾರೆ. ಇಲ್ಲದಿದ್ದರೆ ಸಾವಿರಾರು ಜನರು ಸತ್ತು ಹೋಗುತ್ತಿದ್ದರು. ಆ ಕೆಲಸ ಮಾಡಿದ್ದಾರೆ. They deserve compliment from us.. ಅದೇ ಪ್ರಕಾರ ರೋಟರಿ ಕ್ಲಬ್, ಲಯನ್ಸ್ ಕ್ಲಬ್, ಮುನ್ಸಿಪಾಲಿಟಿ, ಪಬ್ಲಿಕ್ ಪ್ರಾಸಿಕ್ಯೂಷನ್, ಇವೆಲ್ಲಾ ಸೇರಿ ಗಂಜಿ ಕೇಂದ್ರಗಳನ್ನು ಪ್ರಾರಂಭ ಮಾಡಿದ್ದಾರೆ. ಸರ್ಕಾರಕ್ಕೆ ಗಂಜಿ ಕೇಂದ್ರವನ್ನು ಮಾಡುವುದಕ್ಕೂ ಶಕ್ತಿ ಇಲ್ಲ. ಆದುದರಿಂದ ಈ ಕೆಲಸವನ್ನು ಅವರು ಮಾಡಿದ್ದಾರೆ ಅದನ್ನು ಮರೆಯುವುದಕ್ಕೆ ಸಾಧ್ಯವಿಲ್ಲ. ಇವತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮುದ್ರದ ಕೊರೆತದ ಸಮಸ್ಯೆ ಇದೆ. ನಮ್ಮ ಉತ್ತರ ಕನ್ನಡ ಜಿಲ್ಲೆಯ ಮಂತ್ರಿಗಳಿದ್ದಾರೆ. ಅವರಿಗೆ ಇದರ ಬಗ್ಗೆ ಗೊತ್ತು. ಅವರು ಪಾಪ ಮಾನ್ಯ ಮುಖ್ಯಮಂತ್ರಿಗಳು ಬಂದಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರದ ಕೊರೆತದ ಸಮಸ್ಯೆ ಇದೆ. ರೈತರಿಗೆ ಅಲ್ಲಿಯ ಜನರಿಗೆ ಕಷ್ಟವಾಗುತ್ತದೆ ಎಂದು ಹೇಳಿದಾಗ ಮಾನ್ಯ ಮುಖ್ಯಮಂತ್ರಿಗಳು ತಕ್ಷಣ ಹೇಳಿದರು 1 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇನೆಂದು; ಇವತ್ತು ಇರಿಗೇಷನ್ ಸೆಕ್ರೆಟರಿಯವರನ್ನು 1 ಕೋಟಿ ರೂಪಾಯಿಗಳು ಏನಾಯಿತು, ಎಂದು ಕೇಳಿದೆ. ಯಾವುದು ಸಾರ್ ಎಂದು ನನ್ನನ್ನು ಕೇಳಿದರು. ಉತ್ತರ ಕನ್ನಡದ ಕರಾವಳಿಯಲ್ಲಿ ಸಮುದ್ರದ ಕೊರೆತಕ್ಕೆ 1 ಕೋಟಿ ರೂ.ಗಳನ್ನು ಬಿಡುಗಡೆ ಮಾಡುತ್ತೇನೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು, ಎಂದರೆ ಅವರು ನನ್ನ ಕಡೆಗೆ ಏನೂ ಆದೇಶ ಬಂದಿಲ್ಲವೆಂದರು. ಅದು 2ನೇ ತಾರೀಖು ಮೀಟಿಂಗ್‌ನಲ್ಲಿ ಬರುತ್ತದೆ, ಡಿಸೆಂಬರ್, ಜನವರಿಯಲ್ಲಿ ಆರ್ಡರ್ ಬರುತ್ತದೆ, ನಾವು ಇಂಪ್ಲಿಮೆಂಟ್ ಮಾಡಬೇಕು. ಇರಿಗೇಷನ್‌ಗೆ 50 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ, ಆ ಹಣ ಎಲ್ಲಿ?

ಶ್ರೀ ಧರ್ಮಸಿಂಗ್ : ದೇಶಪಾಂಡೆಯವರೇ, ಜನವರಿಯ ಕನಸು ನೋಡಬೇಡಿ...

ಶ್ರೀ ಆರ್.ವಿ. ದೇಶಪಾಂಡೆ : ಆಯಿತಪ್ಪಾ, ನೀವೇ ಸರಿ, ಯಾರು ಬೇಡ ಎನ್ನುತ್ತಾರೆ.

ಶ್ರೀ ಹೆಚ್. ಏಕಾಂತಯ್ಯ : ನೀವೇ ಇದ್ದರೆ ನೀವಂತೂ ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ನಿಮ್ಮ ಭರವಸೆಗಳು ಅಷ್ಟು ಕೋಟಿ ಇದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ನೀವು ಕೊಟ್ಟ ಭರವಸೆಗಳು 10 ವರ್ಷಗಳು ಆದರೂ ಮುಗಿಯುವುದಿಲ್ಲ. 10 ವರ್ಷದ ಬಡ್ಜೆಟ್ ಆದರೂ ಆಗುವುದಿಲ್ಲ, ಅಷ್ಟು ಭರವಸೆಗಳನ್ನು ಕೊಟ್ಟಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ : ನಾನು ದೇವರಲ್ಲಿ ನಂಬಿಕೆ ಇಟ್ಟಿರುವಂಥ ಮನುಷ್ಯ, ದೇವರಲ್ಲಿ ನನಗೆ ವಿಶ್ವಾಸವಿದೆ. ಅವನ ಪ್ರಭಾವದಲ್ಲಿ ನೀವು ಬರುವುದಿದ್ದರೆ ನಾನು ಅಡ್ಡ ಬರುವುದಕ್ಕೆ ಆಗುತ್ತದೆಯೇ? ಅದನ್ನು ನಾನು ನಿಲ್ಲಿಸುವುದಕ್ಕೆ ಆಗುತ್ತದೆಯೇ? ಬನ್ನಿ, ನಾವು ಬರುವುದಿದ್ದರೆ ನೀವು ಅದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಆದುದರಿಂದ ಅದರ ಬಗ್ಗೆ ನಾವು ತಲೆ ಕೆಡಿಸಿಕೊಳ್ಳುವುದು ಬೇಡ. ಯಾರು ಬರಬೇಕೆಂಬುದನ್ನು ಜನರು ತೀರ್ಮಾನ ಮಾಡುತ್ತಾರೆ. ಹಾರ್ಟಿಕಲ್ಚರ್ ಕ್ರಾಪ್ಸ್ ಬಗ್ಗೆ ಕಂದಾಯ ಸಚಿವರ ಗಮನಕ್ಕೆ ತಂದೆ; ನಮ್ಮ ಮಲೆನಾಡು ಜಿಲ್ಲೆಯಲ್ಲಿ ಒಂದು

ತೆಂಗಿನ ಮರ ಫಲ ನೀಡಬೇಕಾದರೆ 6-7-8 ವರ್ಷಗಳು ಬೇಕಾಗುತ್ತದೆ. ಅದರ ಆದಾಯ 1-2-3 ಸಾವಿರ ರೂ.ಗಳು ಇರುತ್ತದೆ. ಕರಾವಳಿ ಪ್ರದೇಶದ ಮಾನ್ಯ ಸಚಿವರು ಇದನ್ನು ಒಪ್ಪಬಹುದು. ಅಲ್ಲಿಯ ಜನರು 5-6-8 ತೆಂಗಿನಮರಗಳನ್ನು ಇಟ್ಟುಕೊಂಡು ಜೀವನ ಮಾಡುತ್ತಿದ್ದಾರೆ. ಅವರ ಒಂದು ತೆಂಗಿನ ಮರ ಬಿದ್ದರೆ ಅವರಿಗೆ ಕೊಡುವ ಪರಿಹಾರಧನ 20 ರೂಪಾಯಿಗಳನ್ನು ಕೊಡುತ್ತಾರೆ. ಇದು ಅವಮರ್ಯಾದೆ.

(ಗೊಂದಲ)

ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರೊಡನೆ ಮಾತನಾಡಿ ಏನೋ ಸ್ವಲ್ಪ ಸಹಾಯ ಮಾಡಿ ಎಂದಾಗ ಆಯಿತು, ಆದೇಶ ಕಳುಹಿಸುತ್ತೇನೆ ಎಂದರು; ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ವ್ಯಾಲ್ಯುಯೇಷನ್ ಮಾಡಿದರು. ಯಾವ ಆದೇಶವೂ ಇಲ್ಲ, ಇಂಪ್ಲಿಮೆಂಟ್ ಇಲ್ಲ, ನಾವು ಹೇಳುವುದು, ಅವರು ಕೇಳುವುದು, ಅಷ್ಟೇ ಆಗಿದೆ. Implementation is Zero. ಹೆಚ್ಚು ಮಳೆಯಿಂದಾಗಿ ಅಲ್ಲಿ ದನಕರುಗಳು ಸತ್ತಿವೆ, ಎಷ್ಟೋ ದನಕರುಗಳು ಕೊಚ್ಚಿ ಹೋಗಿದೆ. ಅದಕ್ಕೂ ಹೇಳಿದರು. ವೆಟರ್‌ನರಿ ಆಫೀಸರ್‌ಗಳು ಅದನ್ನು ಪಂಚನಾಮೆ ಮಾಡಬೇಕಂತೆ; ಅವುಗಳ ಡೆಡ್‌ಬಾಡಿಯನ್ನು ತರಬೇಕಂತೆ; ಅದನ್ನು ಎಲ್ಲಿಂದ ತರಬೇಕು? ಸಮುದ್ರದಿಂದಲೋ, ನದಿಯಿಂದಲೋ, ಯಾವುದರಿಂದ ತರಬೇಕು ಡೆಡ್ ಬಾಡಿಗಳನ್ನು.

4.25 ಪಿ.ಎಂ.

ನಾನು ಮುಖ್ಯಮಂತ್ರಿಗಳಿಗೆ ಕೇಳಿದೆ. ನಂತರ ನಾನು ಒಂದು ಪಂಚನಾಮೆ ಮಾಡಿದರೆ ಸಾಕು ಎಂದೆ. ಎಸ್, ಅಗ್ರೀಡ್ ಎಂದು ಹೇಳಿದರು. ಎಲ್ಲಿದೆ ಆದೇಶ? ನಮ್ಮ ಅಧಿಕಾರಿಗಳು ಕೇಳುತ್ತಾರೆ, ತಮಗೆ ಆದೇಶ ಎಲ್ಲಿದೆ, ನಮಗೆ ವೆಟರ್‌ನರಿ ಆಫೀಸರ್‌ನಿಂದ ಸರ್ಟಿಫಿಕೇಟ್ ಬೇಕು ಎಂದು ನಾನು ಬಹಳ ಕಡೆ ಪ್ರವಾಸ ಮಾಡಿದ್ದೇನೆ. ಆದ್ದರಿಂದ ನನಗೆ ಗೊತ್ತು. ಇದು ಯಾವ ರೀತಿ ನಡೆಯುತ್ತಿದೆ, ಯಾವ ರೀತಿ ಕಷ್ಟ ಇದೆ ಎಂಬುದು ನನಗೆ ಚೆನ್ನಾಗಿ ಗೊತ್ತಿದೆ. ಆದುದರಿಂದ ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇವತ್ತು ಅತಿವೃಷ್ಟಿ ಮತ್ತು ಬರಗಾಲದಿಂದ ಕನಿಷ್ಟ ನನ್ನ ಲೆಕ್ಕದ ಪ್ರಕಾರ 600-700 ಕೋಟಿ ಹಾನಿಯಾಗಿದೆ. Your assesment is not correct. ಫ್ಲಡ್ ಬಗ್ಗೆ ಅಸೆಸ್‌ಮೆಂಟ್ ಆಗಿದೆ. ನಾನು ಪ್ರವಾಸ ಮಾಡಿದ ಪ್ರಕಾರ Your assessment on drought ಇನ್ನು ಬಂದಿಲ್ಲ. 600-700 ಕೋಟಿ ರೂಪಾಯಿ ಲಾಸ್ ಆಗಿದೆ. ಇದು ಕಳೆದ 5 ವರ್ಷದಿಂದ ಹಾನಿಯಾಗಿ, ಬಹಳ ತೊಂದರೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ as a special consideration ಸರ್ಕಾರ ಮುಂದೆ ಬಂದು ದೊಡ್ಡ ಮನಸ್ಸಿನಿಂದ ರೈತರಿಗೆ ಸಹಾಯ ಮಾಡಬೇಕಾಗುತ್ತದೆ. ನಾನು ತಮ್ಮ ಮುಖಾಂತರ ಸರ್ಕಾರದ ಮುಂದೆ ನಾಡಿನ ಬಡ ರೈತರ ಮತ್ತು ಕೂಲಿಕಾರರ ಪರವಾಗಿ ಕೆಲವು ಬೇಡಿಕೆಗಳನ್ನು ಇಡುತ್ತಿದ್ದೇನೆ. ಮುಖ್ಯವಾಗಿ ಪುನಃ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇನೆ. ಕಳೆದ 5 ವರ್ಷಗಳಲ್ಲಿ ರೈತರು ಇಷ್ಟು ಕಷ್ಟದಲ್ಲಿ ಇದ್ದಾಗ ತಾವು ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಇದನ್ನು ಒಪ್ಪಿಕೊಳ್ಳುವಾಗ ಒಂದು ಟೈಂ ಆಪರೇಷನ್ ಆದರೆ ನಾಡಿನ ರೈತರ ಇಡೀ ಬಡ್ಡಿ ಎಂದರೆ ದೀರ್ಘಾವಧಿ, ಮಧ್ಯಮಾವಧಿ ಅಲ್ಪಾವಧಿ, ಟೋಟಲ್ ಬಡ್ಡಿ ಮತ್ತು ದಂಡದ ಬಡ್ಡಿಯನ್ನು ತಾವು ಮನ್ನಾ ಮಾಡಬೇಕು ಎಂದು ನಾನು ಒತ್ತಾಯ ಮಾಡಿ ಕೇಳಿಕೊಳ್ಳುತ್ತೇನೆ. ಮಾನ್ಯ ವೀರಪ್ಪಮೊಯಿಲಿಯವರ ಸರ್ಕಾರಕ್ಕೆ ಇದೇನೂ ಹೆಚ್ಚಿನ ಭಾರ ಇಲ್ಲ. ಪೂರ್ತಿ ಇಂಟರೆಸ್ಟ್ ಇವರು ವೇವ್‌ಆಫ್ ಮಾಡುವುದಕ್ಕೆ ಹೋದರೆ ಅಪೆಕ್ಸ್‌ಬ್ಯಾಂಕ್ ಕರೆಂಟ್‌ಸಾಲ ಮತ್ತು ಅರಿಯಸ್ಸ್ ಸೇರಿ 51.92 ಕೋಟಿ ಇದೆ. ಕರ್ನಾಟಕ ಅಗ್ರಿಕಲ್ಚರ್ ರೂರಲ್

ಡೆವಲಪ್‌ಮೆಂಟ್ 69.61 ಕೋಟಿ ರೂಪಾಯಿ ಇದೆ. ಟೋಟಲ್‌ಹಣ ನಿಮಗೆ ಕೊಡಬೇಕಾಗುತ್ತದೆ. 121.53 ಕೋಟಿ ರೂಪಾಯಿ ಹಣವನ್ನು ನೀವು ಪ್ರೊವೈಡ್ ಮಾಡಿದರೆ ನಾಡಿನ ಜನ ನಿಮಗೆ ಆಶೀರ್ವಾದ ಮಾಡುತ್ತಾರೆ. 121.53 ಕೋಟಿ ರೂಪಾಯಿಗಳಲ್ಲಿ ಎಲ್ಲಾ ಬಡ್ಡಿಯೂ ನಿಮಗೆ ಬರುವುದಿಲ್ಲ, ಏಕೆಂದರೆ ದಂಡದ ಬಡ್ಡಿ 72 ಕೋಟಿ ರೂಪಾಯಿ ಇದೆಯಲ್ಲಾ automatcially Banks waive of ಮಾಡುತ್ತಾರೆ. ಏಕೆಂದರೆ ಬ್ಯಾಂಕ್‌ಗೆ ನೀವು ನಿಮ್ಮ ಇಂಟರೆಸ್ಟ್ ನಾವು ಕೊಡುತ್ತೇವೆ ಎಂದು ಹೇಳಿದರೆ ಅವರು ವೈವ್ ಆಫ್ ಮಾಡುತ್ತಾರೆ. ಆದುದರಿಂದ ನಿಮಗೆ ಇಲ್ಲಿ ಲೈಯಬಿಲಿಟಿ ಬರುವುದು ಕೇವಲ 70-80 ಕೋಟಿ ರೂಪಾಯಿ. 70.80 ಕೋಟಿ ರೂಪಾಯಿ ನೀವು ಒಂದು ಟೈಂ ಆಪರೇಷನ್ ಮಾಡಿದರೆ ಇಡೀ ರೈತರ ಇಡೀ ಬಡ್ಡಿ ಮನ್ನಾ ಆಗುತ್ತದೆ. ದಂಡದ ಬಡ್ಡಿ ನೀವು ಮನ್ನಾ ಮಾಡಿದರೂ ಸಹ ಬ್ಯಾಂಕ್ ಅದನ್ನು ಅಡ್ಜೆಸ್ಟ್ ಮಾಡಿಕೊಳ್ಳುತ್ತಾರೆ. ನೀವು ಬ್ಯಾಂಕ್‌ಗೆ ಕೊಡುವ ಅವಶ್ಯಕತೆ ಇಲ್ಲ. ನ್ಯಾಷನಲೈಸ್ಡ್ ಬ್ಯಾಂಕ್ ಬಡ್ಡಿ ಮನ್ನಾ ಮಾಡುತ್ತಾರೆ. ಈ ರೀತಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆ. ಈ ಒಂದು ಕೆಲಸ ತಮ್ಮ ಕಡೆಯಿಂದ ಆಗಬೇಕು. ನಂತರ ಲೋನ್ಸ್ ಏನಿವೆ ರೈತರ ಬಡ್ಡಿ ತಮ್ಮ ಸರ್ಕಾರದಿಂದ ಕೊಟ್ಟ ನಂತರ ಪ್ರಿನ್ಸಿಪಲ್ ಹಣ ಏನು ಉಳಿಯುತ್ತದೆ, ಅದು ಅಲ್ಪಾವಧಿ, ದೀರ್ಘಾವಧಿ, ಮಧ್ಯಮಾವಧಿ ಇರಬಹುದು, they should be rescheduled... ತಾವು ರಿಶೆಡ್ಯೂಲ್ ಮಾಡಿಕೊಳ್ಳಬೇಕಾಗುತ್ತದೆ. ಆ ಕೆಲಸವೂ ಸಹ ಸರ್ಕಾರದಿಂದ ಆಗಬೇಕು. ಆದಾದನಂತರ 72 ತಾಲ್ಲೂಕುಗಳಲ್ಲಿ ಏನು ಬರಗಾಲ ಇದೆ ಅದು ಬರಗಾಲ ಪೀಡಿತ ಪ್ರದೇಶ ಎಂದು ಸರ್ಕಾರ ಘೋಷಣೆ ಮಾಡಬೇಕು. ಎಲ್ಲಿ 94 ತಾಲ್ಲೂಕುಗಳಲ್ಲಿ ಫ್ಲಡ್ಸ್‌ನಿಂದ ಹೆವಾಕ್ ಆಗಿದೆ ಅಲ್ಲಿ ನೀವು ನಿಮ್ಮ ಲ್ಯಾಂಡ್ ರೆವಿನ್ಯೂ ಅಸೆಸ್‌ಮೆಂಟ್ ವಸೂಲು ಮಾಡಬಾರದು.

ಅದರ ಪ್ರಕಾರ 72 ತಾಲ್ಲೂಕುಗಳಲ್ಲೂ ಸಹ ಲ್ಯಾಂಡ್ ರೆವಿನ್ಯೂ ಅಸೆಸ್‌ಮೆಂಟ್‌ನ್ನು ರೈತರಿಗೆ ಎಕ್ಸೆಂಟ್ ಮಾಡಬೇಕು. ಅದೇ ಪ್ರಕಾರ ಈ ಕ್ರಾಪ್ ಇನ್‌ಷೂರೆನ್ಸ್ ಎಂಬ ಏನೊಂದು ಸ್ಕೀಂ ಇದೆ ಮಾನ್ಯ ಅಧ್ಯಕ್ಷರೇ, ಅದರ ಲಾಭವನ್ನು ನಾವು ತೆಗೆದುಕೊಳ್ಳುತ್ತಿಲ್ಲ. ಅದರ ಲಾಭವನ್ನು ಗುಜರಾತ್ ಸರ್ಕಾರ ಹೆಚ್ಚು ತೆಗೆದುಕೊಂಡಿದೆ ಕಳೆದ ಐದು ವರ್ಷಗಳಲ್ಲಿ ಈ ಸ್ಕೀಂನಲ್ಲಿ ಎಷ್ಟು ಹಣವನ್ನು ನಮ್ಮ ರಾಜ್ಯಕ್ಕೆ ತಂದಿದ್ದೀರಿ ಎಂಬುದನ್ನು ಮಾನ್ಯ ಕೃಷಿ ಸಚಿವರು ಹೇಳಬೇಕು. ತಾವು ಬರಗಾಲ ಇದೆ; ಅತಿವೃಷ್ಟಿಯಾಗಿದೆ ಎಂದು ಒಪ್ಪಿಕೊಂಡಿದ್ದೀರಿ. But how much money you have brought for crop insurance? You have not brought anything. ಏಕೆಂದರೆ ಆ ದೃಷ್ಟಿಯಲ್ಲಿ ತಾವು ವಿಚಾರ ಮಾಡುತ್ತಿಲ್ಲ, ಇದರಲ್ಲಿ ಕೆಲವು ನ್ಯೂನತೆಗಳಿವೆ; ಹಲವಾರು ಬಾರಿ ನಾನು ಹೇಳಿದ್ದೇನೆ. ಕೇಂದ್ರ ಸರ್ಕಾರ Taluka as a unit for the purpose of giving relief under crop ಎಂದು ಮಾಡಿದ್ದಾರೆ Insurance. ತಾಲ್ಲೂಕಿನ ಒಂದು ಭಾಗದಲ್ಲಿ ಬೆಳೆ ಚೆನ್ನಾಗಿದ್ದರೆ ಸಿಗುವುದಿಲ್ಲ; ಆಗ ನಾನು ಸಜೆಸ್ಟ್ ಮಾಡಿದ್ದೆ, instead of taluka, you should make it either mandal and now as a panchayat as a unit. ಹಾಗೆ ಮಾಡಿದರೆ ನಿಮ್ಮ ಕಡೆ ಹಣವನ್ನು ಕೇಳುವ ಪರಿಸ್ಥಿತಿ ಬರುತ್ತಾ ಇರಲಿಲ್ಲ; ಬಡ್ಡಿ ರಿಯಾಯಿತಿ ಕೊಡಿ, ರೀ ಶೆಡ್ಯೂಲ್ ಮಾಡಿ ಎಂದು ಹೇಳುವ ಪರಿಸ್ಥಿತಿ ಬರುತ್ತಾ ಇರಲಿಲ್ಲ; automatically they would have got the money. ಆದರೆ ಸರ್ಕಾರದಿಂದ ಯಾವ ಪ್ರಯತ್ನವೂ ಆಗಲಿಲ್ಲ; ಮಾನ್ಯ ಅಧ್ಯಕ್ಷರೆ, ಕ್ರಾಪ್ ಇನ್‌ಷೂರೆನ್ಸ್‌ನಿಂದ ಹಣ ತರಲಿಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು ಮತ್ತು ಮುಖ್ಯವಾಗಿ ನಮ್ಮ ಕಂದಾಯ ಸಚಿವರು ಒಂದು ಕೈಯಲ್ಲಿ ರೈತರಿಗೆ ಪರಿಹಾರ ಕೊಟ್ಟಿರುವುದನ್ನು ತೋರಿಸಿದ್ದಾರೆ. ಮತ್ತೊಂದು ಕೈಯಲ್ಲಿ ಸರಿಯಾಗಿ ವಾಪಸ್ಸು

ತೆಗೆದುಕೊಂಡಿದ್ದಾರೆ. ಮಾನ್ಯ ಅಧ್ಯಕ್ಷರೇ, ಇವರ ಕ್ಯಾಬಿನೆಟ್ ಡಿಸಿಷನ್‌ನಲ್ಲಿ ಕಾಣುವುದು ಏನೆಂದರೆ ಆ ರೈತನ ಹಿಡುವಳಿ ಏನಿದೆ ಆ ಹಿಡುವಳಿಯ 12ನೇ ಭಾಗದಲ್ಲಿ ಬೆಳೆ ನಷ್ಟ ಆದರೆ ಅವರಿಗೆ ಪರಿಹಾರ ಆದರೆ ನಾಲ್ಕು ಎಕರೆ ಭೂಮಿಯಲ್ಲಿ ಸಾಗುವಳಿ ಮಾಡುತ್ತಿದ್ದರೆ; ನಾಲ್ಕು ಎಕರೆ ಭೂಮಿಯಲ್ಲಿ 20 ಚೀಲ ಭತ್ತ ಬೆಳೆಯುತ್ತಾರೆ ಎಂದು ತಿಳಿದುಕೊಳ್ಳಿರಿ 18 ಚೀಲ ಹಾಳಾದರಷ್ಟೆ ನಮಗೆ ಪರಿಹಾರ, 10 ಚೀಲ ಹಾಳಾದರೆ ಕೊಡುವುದಿಲ್ಲ 5 ಚೀಲ ಹಾಳಾದರೆ ಕೊಡುವುದಿಲ್ಲ; ಯಾವ ನ್ಯಾಯ ಇದು, ಯಾವ ಕಾಯಿದೆ ಇದು ? ಎಲ್ಲಿದೆ ಕಾಯಿದೆ ? ಯಾರೋ ಅಧಿಕಾರಿ ನಮಗೆ ಹೇಳುತ್ತಾರೆ ನೀವಲ್ಲಿ ಸಹಿ ಮಾಡಿಸಿ, ಇದರ ಕಾನ್ಸಿಕ್ವೆನ್‌ಸಸ್ ಬಗ್ಗೆ ನೀವು ವಿಚಾರ ಮಾಡಬೇಕಾಗಿತ್ತು. ಹಾಗಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ನಿಜವಾಗಿ ನಿಮಗೆ ರೈತರಿಗೆ ಸಹಾಯ ಮಾಡುವ ಇಚ್ಛೆ ಇದ್ದರೆ ಈ 75 ಪರ್‌ಸೆಂಟ್ ಹೋಲ್ಡಿಂಗ್ ಏನು ಇಟ್ಟಿದ್ದಾರೆ ನೀವು ಇದನ್ನು ತೆಗೆಯಬೇಕು. ನಾನು ಕಂದಾಯ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ. ತಾವು ಮತ್ತು ಮುಖ್ಯಮಂತ್ರಿಗಳು ನಮಗೆ ಒಂದು ಮಾತನ್ನು ಕೊಟ್ಟಿದ್ದೀರಿ; ಈ 75 ಪರ್ಸೆಂಟ್ ರಿಸ್ಟ್ರಿಕ್ಷನ್ ಹಾರ್ಷ್ ಇದೆ; ಇದನ್ನು ನಾವು ರಿಲಾಕ್ಸ್ ಮಾಡುತ್ತೇವೆ ಎಂದು. ಆದರೆ ಇನ್ನೂ ನಿಮ್ಮ ಕಡೆಯಿಂದ ಈ ಕೆಲಸ ಆಗಲಿಲ್ಲ. ನೀವು ಇದನ್ನು ಮಾಡಿಲ್ಲವೆಂದರೆ ನಾವು ನಮ್ಮ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ಇವರು ಏನು ಮಾಡಿದ್ದಾರೆ ಈಗ ಕ್ರಾಪ್ ಕಾಂಪೆನ್‌ಸೇಷನ್‌ಗೆ ಎಲಿಜಿಬಲ್ ಆಗಬೇಕಾದರೆ ಎಷ್ಟು ಹಿಡುವಳಿ ಇದೆಯಲ್ಲಾ. ಅದರಲ್ಲಿ 12 ಹಿಡುವಳಿ ಎಂದರೆ 3 ಎಕರೆಯಲ್ಲಿ ಬೆಳೆ ಹಾಳಾಗಬೇಕು. ಇದು ಯಾವ ನ್ಯಾಯ ? ನಾವು ಒಪ್ಪಿಕೊಳ್ಳುತ್ತೇವೆ ಎಲ್ಲೋ 5 ಪರ್‌ಸೆಂಟ್ ಬೆಳೆ ಹಾಳಾದಾಗ ಯಾರೂ ಕೊಡುವುದಿಲ್ಲ, ಆದರೆ ಮಿನಿಮಂ ಬಗ್ಗೆ ನೀವು ಇದರ ಬಗ್ಗೆ ವಿಚಾರ ಮಾಡಬೇಕು; ಇಂತಹ ಕಂಡಿಷನ್ ಹಾಕಿ ರೈತರಿಗೆ ನೀವೇನೂ ಒಳ್ಳೆಯದನ್ನು ಮಾಡುತ್ತಿಲ್ಲ. ಈ ನಿಯಮವನ್ನು ತಾವು ತಕ್ಷಣ ಹಿಂತೆಗೆದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ನಮಗೆ ಭರವಸೆ ಕೊಟ್ಟಿದ್ದೀರಿ ಇದನ್ನು ರಿಲಾಕ್ಸ್ ಮಾಡುತ್ತೇವೆ ಎಂದು. ಅದರ ಬಗ್ಗೆ ತಾವು ತಮ್ಮ ಉತ್ತರದಲ್ಲಿ ತಿಳಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಅದೇ ಪ್ರಕಾರ ಹಾರ್ಟಿಕಲ್ಚರ್ ಕ್ರಾಪ್ ಬಗ್ಗೆ ಸರ್ಕಾರದಿಂದ ಏನು ಆದೇಶ ಆಗಬೇಕಾಗಿದೆ ಹಾಗೂ ಅದನ್ನು ಹಾರ್ಟಿಕಲ್ಚರ್ ಇಲಾಖೆ ಏನು ಅಸೆಸ್‌ಮೆಂಟ್ ಮಾಡುತ್ತದೆ ಆ ಪ್ರಕಾರ ಪರಿಹಾರ ಕೊಡಬೇಕಾಗುತ್ತದೆ; ಈಗ ತೆಂಗಿನ ತೋಟಗಳು, ಅಡಿಕೆ ತೋಟಗಳು ಅದಕ್ಕೆ ಒಂದು ತರಹ ರೋಗ ನಮ್ಮ ಜಿಲ್ಲೆಯಲ್ಲಿ ಹತ್ತಿದೆ. ಆ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ನಮ್ಮನ್ನು ನಾನು ವಿನಂತಿ ಮಾಡುತ್ತಿದ್ದೇನೆ. ಆ ಕ್ರಮವನ್ನು ಅರ್ಜೆಂಟಾಗಿ ತೆಗೆದುಕೊಳ್ಳಬೇಕು; ಇಲ್ಲದಿದ್ದರೆ ವಾರದೊಳಗೆ ಮುಗಿದೇ ಹೋಗುತ್ತದೆ. ದಯಮಾಡಿ ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ ಎಂಬುದನ್ನು ನಿಮ್ಮ ಡೈರೆಕ್ಟರ್ ಹತ್ತಿರ ಮಾತನಾಡಿ ಅಲ್ಲಿ ಏನು ಔಷಧಿಯನ್ನು ಸಿಂಪಡಿಸಬೇಕು ಅದನ್ನು ಆದಷ್ಟು ಬೇಗ ಮಾಡಿದರೆ ರೈತರಿಗೆ ಅನುಕೂಲವಾಗಬಹುದು ಎಂದು ತಮಗೆ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮಗೆ ಬಂದಂಥ ಮಾಹಿತಿ ಪ್ರಕಾರ, 5 ಜಿಲ್ಲೆಗಳಲ್ಲಿ ಒಂದು ವಿಶೇಷವಾದ ಮಂಜೂರಾತಿಯನ್ನು ಕೊಟ್ಟು ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶವನ್ನು ಕೊಟ್ಟಿದ್ದೇವೆ. ಭಾರತ ಸರ್ಕಾರದ ಮಟ್ಟದಲ್ಲಿರುವಂಥ ವಿಜ್ಞಾನಿಗಳ ತಂಡವೂ ಕೂಡ ಬಂದು ಎರಡು ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಹೋಗಿದ್ದಾರೆ. ಆ ಭಾಗಕ್ಕೂ ಬೇಕಾದರೆ ಕಳುಹಿಸಲಿಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಅದರ ನಂತರ ಮಾನ್ಯ ಮುಖ್ಯಮಂತ್ರಿಗಳು ಮತ್ತೊಂದು ಭರವಸೆಯನ್ನು ಕೊಟ್ಟಿದ್ದರು. ಮಲೆನಾಡು ಜಿಲ್ಲೆಗಳಲ್ಲಿ ಎಲ್ಲೆಲ್ಲಿ ಮನೆ

ಬಿದ್ದುಹೋಗಿವೆ ಅಲ್ಲಿ ನೆರಳಿನ ಭಾಗ್ಯ ಕಾರ್ಯಕ್ರಮದಡಿಯಲ್ಲಿ ಮನೆಗಳನ್ನು ಕಟ್ಟಿಕೊಡುತ್ತೇವೆಂದು ಹೇಳಿದ್ದರು.

ಆ ಆಜ್ಞೆ ಇನ್ನೂ ಆಗಿಲ್ಲ. ಅದರ ಬಗ್ಗೆ ಸ್ವಲ್ಪ ವಿಚಾರ ಮಾಡಿ ಹೇಳಿ. ಅನೇಕ ಕೆಲಸಗಳು ಸರ್ಕಾರದಿಂದ ಆಗಬೇಕಾಗಿದೆ. ಅದೇ ಪ್ರಕಾರ ಅಗ್ರಿಕಲ್ಚರ್ ಕಿಟ್ಸ್ ಕೊಡುತ್ತೇವೆಂದು ಹೇಳಿದ್ದಾರೆ. ಅದನ್ನು ಯಾವಾಗ ಕೊಡುತ್ತೀರಿ? ಅಥವಾ ಕೊಡುವುದಕ್ಕಾಗುವುದಿಲ್ಲವೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಮನೆ ಪರಿಹಾರ ಕೊಡುವುದು ಏನಿದೆ ಅದು ನ್ಯಾಯವಾಗಿ ಆಗಬೇಕು. ಅನೇಕ ಕಡೆ ಪರಿಹಾರ ಕೊಡುವುದಕ್ಕಾಗುವುದಿಲ್ಲ. ಎನ್ನುತ್ತಾರೆ. ಇವತ್ತು ಮನೆಗಳು ಬಿದ್ದರೂ ಸಹ ಏನಾಗುತ್ತಿದೆ? ಉದಾಹರಣೆಗೆ ಬೆಳಗಾಂ ತಾಲ್ಲೂಕಿನ ತಹಸೀಲ್ದಾರರ ಕಡೆ 2 ಲಕ್ಷ ರೂಪಾಯಿ ಇದೆ. ಅವರು ಏನು ಮಾಡುತ್ತಾರೆ ಎಂದರೆ ನೂರು ಮನೆ ಬಿದ್ದರೂ ಸಹ ನನಗೆ ಹೆಚ್ಚಿನ ಹಣ ಬರುವುದಿಲ್ಲ ಎಂದು 2 ಲಕ್ಷ ರೂಪಾಯಿಗಳನ್ನು ನೂರು ಮನೆಗಳಿಗೆ ಖರ್ಚು ಮಾಡುತ್ತೇನೆಂದು ಹೇಳುತ್ತಾರೆ. ಹಾಗಾಗಿ ಬಹಳ ತೊಂದರೆಯಾಗಿದೆ. ಮನೆಗಳ ಪಂಚನಾಮೆ ಮಾಡಿ, ಎಷ್ಟು ಹಾನಿಯಾಗಿದೆ ಎಂದು ನಿಮ್ಮ ನಾರ್ಮ್ಸ್ ಪ್ರಕಾರ, ನಿಮ್ಮ ರೂಲ್ಸ್ ಪ್ರಕಾರ, ಆ ಪ್ರಕಾರ ಹಣ ಬಿಡುಗಡೆ ಮಾಡುವ ಕಾರ್ಯಕ್ರಮ ಸರ್ಕಾರದಿಂದ ಆಗಬೇಕು. ಅದೇ ಪ್ರಕಾರ ರಸ್ತೆಗಳು, ಸೇತುವೆಗಳು ಏನು ಡ್ಯಾಮೇಜ್ ಆಗಿವೆ ಅದಕ್ಕೆ ಲೆಕ್ಕ ಇಲ್ಲ, ಅದಕ್ಕೆ ನೀವು ಹಣ ಬಿಡುಗಡೆ ಮಾಡುವುದಕ್ಕೂ ತಯಾರಿಲ್ಲ. ಹಾಗಾಗಿ ನೀವು ಲೋಕೋಪಯೋಗಿಗೆ, ಸಣ್ಣ ನೀರಾವರಿಗೆ ಮತ್ತು ಜಿಲ್ಲಾ ಪರಷತ್ತಿಗೆ ಸ್ಪೆಶಲ್ ಗ್ರಾಂಟ್ ಕೊಡಬೇಕು, ಮತ್ತು ರಸ್ತೆಗಳ ಸೇತುವೆಗಳ ರಿಪೇರಿ ಮಾಡುವ ವ್ಯವಸ್ಥೆ ಆಗಬೇಕು. ಹಲವಾರು ಕಡೆ ಬಹಳ ಮಳೆಯಾಗಿ ತುಂಬಾ ಕಷ್ಟವಾಗಿದೆ. ರಾಯಚೂರಿನಂಥ ಜಿಲ್ಲೆಯಲ್ಲಿ, ಕಾರವಾರ ಜಿಲ್ಲೆ, ಬಿಜಾಪುರ ಜಿಲ್ಲೆಯ ಮುಧೋಳ್‌ನಲ್ಲಿ ಹೀಗೆ ಹಲವಾರು ಕಡೆ ಏನಾಗಿದೆ ಎಂದರೆ ಟ್ಯಾಂಕುಗಳನ್ನು ಡೀಸಿಲ್ಟಿಂಟ್ ಮಾಡಿಲ್ಲ. ಟ್ಯಾಂಕ್‌ಗಳಲ್ಲೆಲ್ಲಾ ಹೂಳಿನಿಂದ ತುಂಬಿಹೋಗಿವೆ. ಹಲವಾರು ಮನೆಗಳು, they are on the banks of the tanks. ಹಾಗಾಗಿ ಸ್ವಲ್ಪ ಮಳೆಯಾದರೆ ನೀರೆಲ್ಲಾ ಮನೆಯೊಳಗಡೆ ಬರುತ್ತದೆ ಈ ಬಗ್ಗೆ ಹಲವಾರು ಬಾರಿ ನಾನು ಸರ್ಕಾರಕ್ಕೆ ಹೇಳಿದೆ, ಡೀಸಿಲ್ಟಿಂಗ್ ಆಫ್ ಟ್ಯಾಂಕ್ಸ್ ಬಗ್ಗೆ ಒಂದು ದೊಡ್ಡ ಕಾರ್ಯಕ್ರಮ ಹಾಕಿಕೊಳ್ಳಿ ಎಂದು ಹೇಳಿದ್ದೆ. ಕೃಷಿ ಸಚಿವ ಶ್ರೀ ರೇವಣ್ಣ ಅವರಿಗಿಂತ ಮುಂಚೆಮಂತ್ರಿ ಇದ್ದರಲ್ಲಾ ಅವರು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದರು. ಡೀಸಿಲ್ಟಿಂಗ್ ಆಫ್ ಟ್ಯಾಂಕ್ಸ್‌ಗೆ ವರ್ಲ್ಡ್ ಬ್ಯಾಂಕಿನಿಂದ ಹಣ ತರುತ್ತೇವೆ ಎಂದು. ಎಲ್ಲಿ ವರ್ಲ್ಡ್ ಬ್ಯಾಂಕು? ಎಲ್ಲಿ ಹಣ? ಎಲ್ಲಿ ಡೀಸಿಲ್ಟಿಂಗ್? ಇದೊಂದೂ ನನಗೆ ಗೊತ್ತಿಲ್ಲ. ಆ ಹಣ ಏನಾದರೂ ಬಂದರೆ ಅದರ ಉಪಯೋಗ ಪಡೆದುಕೊಂಡು ಡೀಸಿಲ್ಟಿಂಗ್ ಬಗ್ಗೆ ದೊಡ್ಡ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಮಾನ್ಯ ರೇವಣ್ಣನವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಹಾಗಾಗಿ ಡೀಸಿಲ್ಟಿಂಗ್ ಆಫ್ ಟ್ಯಾಂಕ್ಸ್. ರಿಪೇರ್ಸ್ ಆಫ್ ಟ್ಯಾಂಕ್ಸ್, ರೋಡ್ಸ್ ಇದರ ಬಗ್ಗೆ ಹಣ ಬಿಡುಗಡೆ ಮಾಡಬೇಕು. ಎಲ್ಲೆಲ್ಲಿ ಕುಡಿಯುವ ನೀರಿನ ಅಭಾವ ಇದೆ ಅಲ್ಲಿ ಟಾಪ್ ಪ್ರೈಯಾರಿಟಿ ಕೊಟ್ಟು ಹಣ ಬಿಡುಗಡೆ ಮಾಡುವ ವ್ಯವಸ್ಥೆ ಆಗಬೇಕು. ಮಾನ್ಯ ಅಧ್ಯಕ್ಷರು ತಾವು ಬಹಳ ಸಿಟ್ಟಿನಿಂದ ನನ್ನ ಕಡೆ ನೋಡುತ್ತಿದ್ದೀರೆಂಬುದು ಗೊತ್ತು, ನಾನು ಬೇಗ ಮುಗಿಸುತ್ತೇನೆ. ನಾನು ಹಲವಾರು ವಿಚಾರಗಳನ್ನು ಸದನದ ಮುಂದೆ ಇಟ್ಟಿದ್ದೇನೆ. ಇನ್ನೂ ಹೇಳುವುದು ಬಹಳ ಇದೆ ಆದರೆ ಸಮಯಾಭಾವದಿಂದ ನಾನು ಹೆಚ್ಚು ಹೇಳುವುದಕ್ಕೆ ಹೋಗುತ್ತಿಲ್ಲ. ಒಂದು ಮಾತು ಹೇಳುತ್ತೇನೆ, ಸರ್ಕಾರ ಎಲ್ಲಾ ಹಂತಗಳಲ್ಲಿ ವಿಫಲವಾಗಿದೆ. ಸರ್ಕಾರ ಯಾವ ರೀಹ್ಯಾಬಿಲಿಟೇಷನ್ ಮಾಡಿಲ್ಲ. ಬಡವರಿಗೆ ಅನುಕೂಲ ಮಾಡಿಕೊಟ್ಟಿಲ್ಲ. ಜನರು ಬಹಳ ಕಷ್ಟದಲ್ಲಿ ಇದ್ದಾರೆ. ಹಾಗಾಗಿ

ಸರ್ಕಾರಕ್ಕೆ ಎಚ್ಚರಿಕೆಯ ಮಾತು ಹೇಳುತ್ತಿದ್ದೇನೆ. ತಾವು ದೊಡ್ಡ ಮನಸ್ಸಿನಿಂದ ಸಹಾಯ ಮಾಡಿ ಸಹಾಯ ಮಾಡಿದರೆ ಜನರು ನಿಮಗೆ ಆಶೀರ್ವಾದ ಮಾಡುತ್ತಾರೆ, ಜನರು ನಿಮ್ಮನ್ನು ನೆನಸುತ್ತಾರೆ. ಕರ್ನಾಟಕದ ರೈತರು ಬಹಳ ಒಳ್ಳೆಯವರು. ಕಳೆದ 5 ವರ್ಷಗಳಲ್ಲಿ ನಿಮ್ಮ ಸರ್ಕಾರ ಬಂದನಂತರ ಒಂದು ರೂಪಾಯಿ ಸಹಾಯ ಕೂಡ ನೀವು ರೈತರಿಗೆ ಮಾಡಿಲ್ಲ. ಎಷ್ಟು ಕಷ್ಟ ಇದೆ, ಬರಗಾಲ ಇದೆ, ಎಲ್ಲಾ ಇದೆ, ಅತಿವೃಷ್ಟಿ ಇದೆ. ಆದರೂ ಇವತ್ತು ಒಂದು ದುಡ್ಡು ಸಹಾಯ ಮಾಡಿಲ್ಲ ಈಗ ನಿಮಗೆ ಅವಕಾಶ ಸಿಕ್ಕಿದೆ, ನೀವು ಮಾಡಿ, ರಾಜಕೀಯವಾಗಿ ಅದರ ಲಾಭವಾದರೆ ಮಾಡಿಕೊಳ್ಳಿ. ನಾನು ಅದರ ಬಗ್ಗೆ ಚಿಂತೆ ಇಲ್ಲ. ಪೊಲಿಟಿಕಲ್ ಬೆನಿಫಿಟ್ ತೆಗೆದುಕೊಳ್ಳುವುದಾದರೆ ತೆಗೆದುಕೊಳ್ಳಿ. ದೇವರು ಎಲ್ಲವನ್ನೂ ನೋಡುತ್ತಾನೆ. ಅವನು ದೊಡ್ಡವನು. ಅವನು ಯಾವ ರೀತಿ ಶಿಕ್ಷೆ ಕೊಡುತ್ತಾನೋ ಗೊತ್ತಿಲ್ಲ. ಮಾನ್ಯ ಕಂದಾಯ ಸಚಿವರು ತಮ್ಮ ಆರೋಗ್ಯ ಇದೆಯಲ್ಲಾ, ಆ ಪ್ರಕಾರ ನಮ್ಮ ರೈತರ ಆರೋಗ್ಯ ಇರಬೇಕು. ಆ ದೃಷ್ಟಿಯಿಂದ ಕಾರ್ಯಕ್ರಮ ಹಾಕಿಕೊಳ್ಳಿ ಎಂದು ಮತ್ತೊಮ್ಮೆ ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

+ ºZ® ಎಸ್. ಬಂಗಾರಪ್ಪ (ಸೊರಬ) : ಮಾನ್ಯ ಸಭಾಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಈ ವರ್ಷವೂ ಕೂಡ ಜನ ಎದುರಿಸಿರತಕ್ಕ ಪರಿಸ್ಥಿತಿಗಳು ಎರಡು. ಒಂದು ಅತಿವೃಷ್ಟಿಯಾದರೆ, ಅದರಿಂದ ಬಾರೀ ಅನಾಹುತವಾದರೆ, ಮತ್ತೊಂದು ಕಡೆಯಲ್ಲಿ ಅನಾವೃಷ್ಟಿ. ಈ ಅತಿವೃಷ್ಟಿ ಮತ್ತು ಅನಾವೃಷ್ಟಿ ಮಧ್ಯೆ ಪದೇ ಪದೇ ಜನ ಸಿಲುಕಿ ಕಂಗಾಲಾಗತಕ್ಕ ವಿಷಯ ನಮ್ಮ ರಾಜ್ಯಕ್ಕೆ ಹೊಸದೇನೂ ಅಲ್ಲ, ಹಲವಾರು ಬಾರಿ ಹಿಂದೆ ಕೂಡ ಆಗಿದೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಅಭಾವ ಪರಿಸ್ಥಿತಿ, ಅಭಾವ ಎಂಬ ಮಾತನ್ನು ಆಡಿದಾಗ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಕುಡಿಯುವ ನೀರು, ಜನ ಮತ್ತು ಜಾನುವಾರುಗಳಿಗೆ ಇದು ಅಗತ್ಯ, ಜಾನುವಾರುಗಳಿಗೆ ಮೇವು, ಜನರಿಗೆ ಉದ್ಯೋಗ, ಉದ್ಯೋಗದ ಮೂಲಕ ದೈನಂದಿನ ಜೀವನಕ್ಕೆ ಅವರಿಗೆ ಅನುವು ಮಾಡಿಕೊಡತಕ್ಕ ಪರಿಸ್ಥಿತಿ ಅಲ್ಲಿ ಉದ್ಭವವಾಗಬೇಕು. ಇದರ ಜೊತೆಗೆ ಬರಗಾಲ ಕಾಮಗಾರಿ ಕೆಲಸ ಕಾರ್ಯಗಳನ್ನು ವ್ಯಾಪಕವಾಗಿ ತೆಗೆದುಕೊಳ್ಳತಕ್ಕ ಪರಿಸ್ಥಿತಿ ಈಗಿನದಲ್ಲ, ಹಿಂದೆ ಕೂಡ ಬಂದಿತ್ತು. 1970ರ ದಶಕದಲ್ಲಿ ದಿ: ಶ್ರೀ ದೇವರಾಜ ಅರಸ್ ಅವರು ಮುಖ್ಯಮಂತ್ರಿಯವರು ಇದ್ದ ಕಾಲದಲ್ಲಿ ಕೂಡ ಬಂದಿತು. ಆಗ ನಾವೆಲ್ಲಾ ಸಾಕಷ್ಟು ನೋಡಿದ್ದೇವೆ. ಆ ಕಾಲದಲ್ಲಿ ಅಖಂಡ ಕರ್ನಾಟಕದಲ್ಲಿ ವ್ಯಾಪಕವಾಗಿ ಪ್ರವಾಸ ಮಾಡಿದೆವು. ವಿರೋಧಪಕ್ಷದಲ್ಲಿ ನಾವು ಕುಳಿತು ಕೆಲಸ ಮಾಡತಕ್ಕ ಕಾಲದಲ್ಲಿ ಕೂಡ ನೋಡಿದ್ದೇವೆ. ಈ ಬಾರಿ ನಾವು ನೋಡಿದ ಹಾಗೆ ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಬಿಜಾಪುರ, ನೀರಾವರಿ ಪ್ರದೇಶಗಳನ್ನು ಬಿಟ್ಟು ನಾನು ಹೇಳತಕ್ಕ ಮಾತು ಬಿಜಾಪುರ ಇರಬಹುದು, ಬಳ್ಳಾರಿ ಇರಬಹುದು, ರಾಯಚೂರು ಇರಬಹುದು ಅಲ್ಪಸ್ವಲ್ಪ ನೀರಾವರಿ ಇರತಕ್ಕ ಪ್ರದೇಶ ಬಿಟ್ಟು ಹೇಳುತ್ತಿದ್ದೇನೆ. ಚಿತ್ರದುರ್ಗ ಜಿಲ್ಲೆಯ ಹಲವಾರು ತಾಲ್ಲೂಕುಗಳು, ಧಾರವಾಡ ಜಿಲ್ಲೆಯ ಮುಂಡರಗಿ, ಪೂರ್ವಭಾಗದ ರೋಣ ಮತ್ತ ಗದಗ್ ಇತ್ಯಾದಿ ತಾಲ್ಲೂಕುಗಳು ಭಾರಿ ಅಭಾವಪೀಡಿತ ಪ್ರದೇಶಗಳು ಎಂಬುದು ನಮಗೆಲ್ಲಾ ತಿಳಿದಿರತಕ್ಕ ವಿಷಯ ಎಂದು ನಾನು ಭಾವಿಸಿದ್ದೇನೆ. ನಮ್ಮ ವಿಚಾರ ಇಷ್ಟು : ಅಭಾವ ಉಂಟಾದಾಗ ನಾವು ಒಂದು ಮಾತು ತಿಳಿದುಕೊಳ್ಳಬೇಕು. ನಾನು ಮೊದಲೇ ಹೇಳಿದೆ ಪೂರ್ವಭಾವಿಯಾಗಿ, ಜನ, ಜನರೇ ತಾವು ಉದ್ಯೋಗ ಸೃಷ್ಟಿ ಮಾಡಿಕೊಳ್ಳತಕ್ಕ ಸ್ವಶಕ್ತಿ ಜನರಿಗೆ ಬರುವುದಿಲ್ಲ. ಸರ್ಕಾರ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಆ ದಿಸೆಯಲ್ಲಿ ಕಾರ್ಯಕ್ರಮವನ್ನು ಸ್ಪಷ್ಟವಾಗಿ ಹಾಕದೆ ಇದ್ದರೆ ಎರಡು ರೀತಿಯಲ್ಲಿ ಜನರು ಜೀವನ ಮಾಡಬೇಕಾಗುತ್ತದೆ. ಒಂದನೆಯದಾಗಿ ಅವರು ಅಲ್ಲಿ ಸಿಗತಕ್ಕ ಕೆಲಸಕಾರ್ಯಗಳನ್ನು ಹುಡುಕಿಕೊಂಡು ಅವರೇ ಹೋಗತಕ್ಕದ್ದು, ಸರ್ಕಾರ ಏನಾದರೂ ತನ್ನ ಕಾರ್ಯಕ್ರಮ

ಹಾಕದಿದ್ದರೆ, ಬರಗಾಲ ಕಾಮಗಾರಿ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳದಿದ್ದರೆ ತ್ವರಿತವಾಗಿ, ಅವರು ಗುಳೆ ಕಟ್ಟಿಕೊಂಡು ಹೋಗಿಬಿಡುತ್ತಿದ್ದರು ಊರು ಬಿಟ್ಟು. ನಾವು ಹಿಂದೆ ಎಲ್ಲಾ ನೋಡಿದ್ದೇವೆ. ಬೆಳಗಾಂ, ಬಿಜಾಪುರ, ಗುಲ್ಬರ್ಗ ಈ ಜಿಲ್ಲೆಗಳ ಜನರು ಬಾಂಬೆ, ಗೋವಾ ಇತ್ಯಾದಿ ಕಡೆಗಳಿಗೆ ಜಾನುವಾರುಗಳ ದೊಡ್ಡ ಹಂಡನ್ನೇ ತೆಗೆದುಕೊಂಡು ಹೋಗತಕ್ಕದ್ದನ್ನು ನೋಡಿದ್ದೇವೆ. ನಾವು ಬೆಳಗಾಂ ಜಿಲ್ಲೆಯ ಅಥಣಿ, ಗೋಕಾಕ್ ಆ ಕಡೆಯ ಭಾಗಗಳಲ್ಲಿ ಕಣ್ಣಾರೆ ಕಂಡಿರತಕ್ಕದ್ದು. ಅಂಥಹ ಪರಿಸ್ಥಿತಿ ಅಲ್ಲಿ ಉದ್ಭವಿಸುತ್ತದೆ. ಜಾನುವಾರುಗಳಿಗೆ ಮೇವನ್ನು ಕೊಡತಕ್ಕ ಸರ್ವಶಕ್ತಿ ಒಬ್ಬ ರೈತರಿಗೆ ಬರುವುದಿಲ್ಲ. ಏಕೆಂದರೆ ನಮಗೆಲ್ಲಾ ಗೊತ್ತಿರುವ ಹಾಗೆ ಕೃಷಿ ಆಧಾರಿತ ಜನ ಜೀವನದ ವ್ಯವಸ್ಥೆ ನಮ್ಮಂಥ ಸಮಾಜದಲ್ಲಿದೆ. ಕೃಷಿ ಆಧಾರಿತ ಆರ್ಥಿಕ ವ್ಯವಸ್ಥೆ ಇರತಕ್ಕ ಜನರಿಗೆ ಪ್ರಕೃತಿ ಕೈಕೊಟ್ಟರೆ ತಕ್ಷಣ ಸರ್ಕಾರ ಅದಕ್ಕೆ ಒಂದು ಊರುಗೋಲಾಗಿ ನಿಲ್ಲದಿದ್ದರೆ ಜನರಿಗೆ ಧೈರ್ಯ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಇಲ್ಲಿ ಸಹಜವಾಗಿ ನಿರೀಕ್ಷೆ ಮಾಡುವುದು. ಆ ಪಕ್ಷದ ಈ ಪಕ್ಷದ ಸರ್ಕಾರ ಎಂದು ಅಲ್ಲ, ಯಾವುದೇ ಸರ್ಕಾರ ಇರಬಹುದು. ಅವರು ಯಾವ ಕಾರ್ಯಕ್ರಮವನ್ನು ಹಾಕಿದ್ದಾರೆ ಎಂದು ನೋಡುತ್ತೇವೆ. ಬರೀ ಹೇಳಿಕೆ ಕೊಟ್ಟರೆ ಬರುವುದಿಲ್ಲ. ಯಾವ ಕಾರ್ಯಕ್ರಮವನ್ನು ತ್ವರಿತಗತಿಯಲ್ಲಿ ಹಾಕಿ ಸ್ಪಷ್ಟವಾಗಿ ಹಣ ಬಿಡುಗಡೆ ಮಾಡುವುದರ ಮೂಲಕ ಯೋಜನೆಗಳನ್ನು ತಯಾರು ಮಾಡುವುದರ ಮೂಲಕ ಯಾವ ಕಾರ್ಯಕ್ರಮವನ್ನು ಹಾಕಿದ್ದಾರೆ, ರಾಜ್ಯ ಸರ್ಕಾರದಿಂದ ಕಾರ್ಯಕ್ರಮಗಳ ಪಟ್ಟಿ ಏನು, ಜಿಲ್ಲಾವಾರು ತಾಲ್ಲೂಕುವಾರು ಹಳ್ಳಿವಾರು ಇವೆಲ್ಲಾ ಮಾಡಬೇಕಾಗುತ್ತದೆ. ಇದಕ್ಕಾಗಿ ಹಣ ಬಿಡುಗಡೆ ಮಾಡಿದ ಒಟ್ಟು ಮೊತ್ತ ಎಷ್ಟು? ಇದಲ್ಲದೆ ಕೇಂದ್ರ ಸರ್ಕಾರದಿಂದ ಇವತ್ತು ನಾವು ಪ್ರಕೃತಿ ವಿಕೋಪಕ್ಕೆ ತುತ್ತಾದಾಗ ಎನ್ನುವ ಮಾತು ಅಡಿದಾಗ ಬರೀ ಅತಿವೃಷ್ಟಿಗೆ ಒಳಗಾದ ಪ್ರದೇಶಗಳ ಬಗ್ಗೆ ಮಾತ್ರ ನಮ್ಮ ಗಮನ ಕೇಂದ್ರೀಕೃತಗಳಿಸಿದರೆ ಸಾಲದು. ಅನಾವೃಷ್ಟಿಗೆ ಒಳಗಾಗಿರತಕ್ಕ ಪ್ರದೇಶಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಗಮನ ಹರಿಸಬೇಕು. 6-7 ಜಿಲ್ಲೆಗಳಲ್ಲಿ ಈ ಒಂದು ಪರಿಸ್ಥಿತಿ ಇದೆ. ನಾವು ಪತ್ರಿಕೆಯವರನ್ನು ಕೂಡ ಅಭಿನಂದಿಸಬೇಕು. ಅವರೆಲ್ಲಾ ಬಹಳ ತೀವ್ರವಾಗಿ ಬರೆದಿದ್ದಾರೆ. ಸರ್ಕಾರ ಇದರಿಂದ ಕ್ಲೂ ತೆಗೆದುಕೊಳ್ಳಬೇಕು. ಅಧಿಕಾರಿಗಳ ವರದಿಯನ್ನು ತೆಗೆದುಕೊಳ್ಳಬೇಕು. ಅನೇಕ ಜನ ಅಧಿಕಾರಿಗಳು ಬಹಳ ಒಳ್ಳೆಯ ವರದಿಯನ್ನು ಕಳುಹಿಸಿದ್ದಾರೆ. ಅನೇಕ ಕಡೆ ಮಳೆಬೆಳೆ ಆಗಿಲ್ಲ, ಈಗಾಗಲೇ ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗಿದೆ. ಇನ್ನೂ ಮಳೆಗಾಲ ಮುಗಿಯದೆ ಇರುವ ಸಂದರ್ಭದಲ್ಲಿ ಇಂಥ ಪರಿಸ್ಥಿತಿ ಉದ್ಭವವಾದರೆ ಗತಿ ಏನು ಎಂಬ ಪ್ರಶ್ನೆ ನಮ್ಮ ಎದುರಿಗೆ ಇರತಕ್ಕದ್ದು.

ಉತ್ತರ ಕರ್ನಾಟಕದ ಭಾಗದಲ್ಲಿ ಮಾನ್ಯ ಅಧ್ಯಕ್ಷರೇ ತಮಗೆಲ್ಲಾ ಗೊತ್ತಿರುವ ಹಾಗೆ ಎರಡು ಬೆಳೆ ತೆಗೆಯತಕ್ಕ ಪದ್ಧತಿ ಹೆಚ್ಚಾದ ಪ್ರದೇಶವಲ್ಲಿದೆ. ಮೊದಲನೆಯ ಬೆಳೆ ಹೋಯಿತು. ಈಗ ಎರಡನೆಯ ಬೆಳೆಗೆ ಅನುವು ಆಗತಕ್ಕ ಸಂದರ್ಭ. ಮಳೆಯನ್ನು ನಿರೀಕ್ಷೆ ಮಾಡತಕ್ಕ ಸಂದರ್ಭ ಆ ಕಾಲ ಕೂಡ ಮಿಂಚಿ ಹೋಗುತ್ತಿದೆ. ನಮ್ಮ ಕಣ್ಣೆದುರಿಗೇ ಹೋಗುತ್ತಿದೆ. ಈ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರದವರು ಈಗಾಗಲೇ ಎಲ್ಲೆಲ್ಲಿ ಒಂದು ಬೆಳೆತೆಗೆಯತಕ್ಕ ಪ್ರದೇಶಗಳು ಇವೆ ಅಲ್ಲಿ ಯಾವ ಕಾರ್ಯಕ್ರಮ ಹಾಕಿದ್ದಾರೆ? ಏಕೆಂದರೆ ಎರಡನೇ ಬೆಳೆ ಮಳೆ ಬಿದ್ದರೂ ಕೂಡ ತೆಗೆಯುವುದಕ್ಕಾಗುವುದಿಲ್ಲ. ಇದು ತಮಗೆಲ್ಲಾ ಗೊತ್ತಿರತಕ್ಕ ವಿಷಯ. ರಾಜ್ಯ ಸರ್ಕಾರದ ವತಿಯಿಂದ ಈ ಬಗ್ಗೆ ಇವತ್ತಿನವರೆಗೂ ಹೇಳಿಕೆ ಇಲ್ಲ. ಕಡಿಮೆ ಮಳೆ ಒಂದು ವೇಳೆ ಬಿದ್ದರೆ ಏನು ಮಾಡಬೇಕು ಎಂಬ ಬಗ್ಗೆ ಹೇಳಿಕೆ ಇಲ್ಲ. ಕೃಷಿ ಇಲಾಖೆ ಇಲ್ಲಿ ಕುಳಿತುಕೊಂಡು? ಏನು ಮಾಡುತ್ತಿದೆ ಕಡಿಮೆ ಅವಧಿಯಲ್ಲಿ ಬೆಳೆಯನ್ನು ತೆಗೆಯತಕ್ಕ ಬೇಕಾದಷ್ಟು ತಳಿಗಳು ನಮ್ಮ ಹತ್ತಿರ ಇವೆ. ಕೃಷಿ ವಿಜ್ಞಾನಿಗಳು ಬೇಕಾದಷ್ಟು ತಯಾರು ಮಾಡಿರತಕ್ಕದ್ದು ನಮ್ಮ ರಾಜ್ಯದಲ್ಲಿ ಇವೆ. ಕೃಷಿ ವಿಶ್ವವಿದ್ಯಾನಿಲಯ

ಮತ್ತು ನಮ್ಮ ಇಲಾಖೆಗಳು ಮಾಡಿರುವುದು ಬೇಕಾದಷ್ಟು ಇದೆ. ಸಂಶೋಧಕರು ತಯಾರು ಮಾಡಿದ್ದಾರೆ. ಅವುಗಳನ್ನು ತತಕ್ಷಣ ತಯಾರು ಮಾಡಿ ಇಲಾಖೆ ಮುಖಾಂತರ ಬೀಜ ಗೊಬ್ಬರ ಮತ್ತು ಸಲಕರಣೆಗಳನ್ನು ಕೊಟ್ಟು ಜನರಿಗೆ ಶಕ್ತಿಯನ್ನು ತಕ್ಷಣ ಕೊಟ್ಟು ಧೈರ್ಯವನ್ನು ತಂದುಕೊಡದಿದ್ದರೆ ಇವತ್ತು ಗ್ರಾಮೀಣ ಪ್ರದೇಶದಲ್ಲಿ ವಾಸ ಮಾಡತಕ್ಕ ಒಬ್ಬ ಸಾಮಾನ್ಯ ರೈತ ಬರಗಾಲಕ್ಕೆ ತುತ್ತಾಗಿರತಕ್ಕ ಸಾಮಾನ್ಯ ರೈತ ಜೀವನ ಮಾಡುವುದಾದರೂ ಕೂಡ ಹೇಗೆ ಎಂಬ ಪ್ರಶ್ನೆಗೆ ಉತ್ತರ ಎಲ್ಲಿಂದ ಸಿಗುತ್ತದೆ? ನಿಮ್ಮಿಂದ ಒಂದು ಕಾರ್ಯಕ್ರಮ ಕೂಡ ಗೊತ್ತಾಗುತ್ತಿಲ್ಲ. ವೀರಪ್ಪ ಮೊಯಿಲಿಯವರ ಸರ್ಕಾರದಿಂದ ಒಂದು ಹೇಳಿಕೆ ಕೂಡ ಇಲ್ಲ. ಬರಗಾಲ ಬಿದ್ದಿದೆ ಎಂದು ಒಂದು ವರದಿ ಮಾತ್ರ ಕೊಟ್ಟರೆ ಸಾಲದು. ನಾನು ನೋಡಿದೆ. ನಿಮ್ಮ ವರದಿಯಲ್ಲಿ ಬರಗಾಲ ಬಿದ್ದಿರತಕ್ಕದ್ದು ಎಷ್ಟು ಲಕ್ಷ, ಹೆಕ್ಟೇರ್ಸ್‌ನಲ್ಲಿ ಒಂದೇ ಬೆಳೆ ತೆಗೆಯತಕ್ಕ ಪ್ರದೇಶಕ್ಕೆ ಕೃಷಿ ಇಲಾಖೆ ಮುಖಾಂತರ ಮತ್ತು ಬರಗಾಲ ಪರಿಹಾರದ ಮುಖಾಂತರ ನೀವು ಯಾವ ಕಾರ್ಯಕ್ರಮವನ್ನು ಹಾಕಿದ್ದೀರಿ? ಎಲ್ಲಿ ನಿಮ್ಮ ಯೋಜನೆಗಳು? ಬರಗಾಲ ಪರಿಹಾರಕ್ಕಾಗಿ ಇಷ್ಟು ಹಣ ಬಿಡುಗಡೆ ಮಾಡಿದ್ದೇವೆ ಎಂಬ ಸ್ವಲ್ಪ ಮಾತು ಬಿಟ್ಟರೆ ನಿಮ್ಮ ಕಾರ್ಯಕ್ರಮಗಳು ಬಹಳ ವ್ಯಾಪಕ ಎಂಬ ವಿಚಾರ ನಿಮ್ಮ ವರದಿಯಲ್ಲಿ ಎಲ್ಲೂ ಕೂಡ ಇಲ್ಲ. ವಿವರಗಳು ಇಲ್ಲದಿರುವ ನಿಮ್ಮ ಹೇಳಿಕೆಗಳನ್ನು ಸ್ಪಷ್ಟವಾಗಿ ಖಂಡಿಸತಕ್ಕ ಸಂದರ್ಭ ಕೂಡ ಹೌದು. ಇವತ್ತು ನಾನು ಕೇಳುತ್ತಿದ್ದೇನೆ. ತತ್‌ಕ್ಷಣ ಸರ್ಕಾರ ಈ ಕಾರ್ಯಕ್ರಮ ಹಾಕತಕ್ಕ ವಿಚಾರದಲ್ಲಿ ವಿಫಲವಾಗಿದೆ ಎಂಬ ಮಾತನ್ನು ಹೇಳಿ ಸರ್ಕಾರದ ನೀತಿಯನ್ನು ಆಡಳಿತವನ್ನು ನಾವು ಇವತ್ತು ಖಂಡಿಸತಕ್ಕ ಒಂದು ಸಂದರ್ಭ. ಇವತ್ತು ಪಕ್ಷಾತೀತವಾಗಿ ಮಾತನಾಡತಕ್ಕ ವಿಚಾರ. ಪಕ್ಷದ ಪ್ರಶ್ನೆಯಲ್ಲ ಇದು. ಜಾನುವಾರು ಹತ್ತಿರ ಹೋದರೆ, ಜನರ ಹತ್ತಿರ ಹೋದರೆ ಏನು ಪಕ್ಷ ಬರುತ್ತದೆ? ಚುನಾವಣೆ ಬಂದಾಗ ಅದು ಮಾಡಿಕೊಳ್ಳೋಣ. ಅದ ಬೇರೆ ವಿಷಯ. ಇವತ್ತು ನಾವು ಜನರೆದುರು ಹೋದರೆ ಆಡಳಿತ ಮಾಡುವವರು ವಿರೋಧ ಪಕ್ಷದವರೂ ಕೂಡ ಯಾವರೀತಿ ಹೋಗಿ ನಿಲ್ಲಬೇಕು ಅಲ್ಲಿ? ವಿರೋಧಪಕ್ಷದ ಸದಸ್ಯರ ಹಕ್ಕು ಬಾಧ್ಯತೆಗಳೇನು? ವಿರೋಧಪಕ್ಷದವರು ಸ್ಪಷ್ಟವಾಗಿ ಸರ್ಕಾರದ ಗಮನಕ್ಕೆ ತರತಕ್ಕದ್ದು ಅಧಿಕಾರಿಗಳ ಗಮನಕ್ಕೆ ತರತಕ್ಕದ್ದು ಶಾಸನಸಭೆಯಲ್ಲಿ ನಮಗಿರತಕ್ಕ ಹಕ್ಕು ಬಾಧ್ಯತೆಗಳ ಚೌಕಟ್ಟಿನಲ್ಲಿ ನಮ್ಮ ವಿಚಾರಗಳನ್ನು ಪ್ರತಿಪಾದನೆ ಮಾಡುವ ಹಕ್ಕನ್ನು ಬಿಟ್ಟರೆ ಮಾನ್ಯ ಸಭಾಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಸರ್ಕಾರ ಹೇಳತಕ್ಕದ್ದು ಬಿಟ್ಟರೆ ಬೇರೆ ದಾರಿ ಉಳಿಯುವುದೇ ಇಲ್ಲ ನಮಗೆ. ದಯವಿಟ್ಟು ನಿಮ್ಮ ಇತಿಮಿತಿಗಳನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬೇಕು. ಸರ್ಕಾರದವರು ಇದರ ಬಗ್ಗೆ ವ್ಯಾಪಕವಾದ ಕಾರ್ಯಕ್ರಮ ಇಟ್ಟು ಮುಂದೆ ಬರದೇ ಇದ್ದರೆ ಬೀದರ್, ಗುಲ್ಬರ್ಗ, ರಾಯಚೂರು, ಬಳ್ಳಾರಿ, ಬಿಜಾಪುರ, ಧಾರವಾಡ ಮತ್ತು ಚಿತ್ರದುರ್ಗ ಇಂಥ ಜಿಲ್ಲೆಗಳಲ್ಲಿ ಏನು ಪರಿಸ್ಥಿತಿ ಉದ್ಭವವಾಗಿದೆ ಈ ಪರಿಸ್ಥಿತಿ ನಿಭಾಯಿಸಲಿಕ್ಕೆ ನಿಮ್ಮಿಂದ ಆಗಲಾರದು ಎಂಬ ಒಂದು ಅನುಮಾನ ಪದೇಪದೇ ನನಗೆ ಬರತಕ್ಕ ವಿಚಾರ ಅಲ್ಲ. ಒಬ್ಬ ವ್ಯಕ್ತಿಯ ಮನಸ್ಸಿನಲ್ಲಿ ಇದು ಬಂದರೆ ಸಾಲದು ಶಾಸನಸಭೆಯ ಒಳಗಡೆ. ಇವತ್ತು ಹಳ್ಳಿಗಳಿಗೆ ಹೋಗಬೇಕು. ಪಟ್ಟಣ ನಗರ ಪ್ರದೇಶದ ಹತ್ತಿರ ಇರುವವರ ಪರಿಸ್ಥಿತಿ ಕೂಡ ಇದೇ ಆಗಿದೆ. ಈ ಮಟ್ಟಕ್ಕೆ ಹೋಗಿ ನಿಂತಾಗ ನಿಮ್ಮ ಆಡಳಿತ ಸಂಪೂರ್ಣವಾಗಿ ನಿಷ್ಕ್ರಿಯೆ ಅಲ್ಲ, ಇವತ್ತು ಜೀವ ಇಲ್ಲದೇ ಇರುವ ಒಂದು ವಸ್ತು ಆಗಿ ಬಿದ್ದಿದೆ. ಇದು ಇಲ್ಲರ ಮನಸ್ಸಿನಲ್ಲಿ ಕೂಡ ಬಂದಿರತಕ್ಕ ವಿಚಾರ. ಇವತ್ತು ಎಲ್ಲರಿಗೂ ಕೂಡಗೊತ್ತಿರತಕ್ಕ ವಿಚಾರ. ನಾಚಿಕೆಯಾಗಬೇಕು ಈ ವಿಚಾರವನ್ನು ನೋಡಿ. ತಾವು ಪ್ರವಾಸ ಹೋಗಬೇಕು. ನೋಡಬೇಕು. ಪ್ರವಾಸ ಕಾಲದಲ್ಲಿ ನೋಡಿ ಜನರಿಗೆ ಧೈರ್ಯ ಕೊಡತಕ್ಕ ಕಾರ್ಯಕ್ರಮ ಮತ್ತು ಹಣ ಬಿಡುಗಡೆ ಮಾಡಿದರೆ ಅಲ್ಲಿ ಅಧಿಕಾರಿಗಳು ಹೆದರುತ್ತಾರೆ. ಅಥವಾ ನಿಮ್ಮ ಆದೇಶಕ್ಕೆ

ಅನುಗುಣವಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ನೀತಿಯನ್ನು ಎಲ್ಲೂ ಕೂಡ ನಿಮ್ಮ ಆಡಳಿತಕ್ಕೆ ಸ್ಪಷ್ಟವಾಗಿ ನಾನು ಕಂಡಿಲ್ಲ. ಇವತ್ತು ಬರಗಾಲ ನಿಮಗಾಗಿ ಏನೂ ಬಿದ್ದಿಲ್ಲ. ಅತಿವೃಷ್ಟಿ ನಿಮಗೋಸ್ಕರ ಏನೂ ಬಿದ್ದಿಲ್ಲ. ಎಲ್ಲಕಾಲದಲ್ಲೂ, ಹಿಂದೆ ಕೂಡ ಆಗಿತ್ತು. ಎಷ್ಟೋ ಸಾರಿ ಆಗಿಲ್ಲವೇನು? ಆ ಎಷ್ಟು ಸಾರಿ ನೋಡಿಲ್ಲ? ನಾನು ಹೇಳತಕ್ಕದ್ದು ಒಂದು. ಈಗಾಲಾದರೂ ಕೂಡ ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ನಿಮಗೆ ಮಾಡುವುದಕ್ಕೆ ಸಾಧ್ಯವಿದ್ದರೆ, ನಿಮಗೆ ಹೃದಯ ಇದ್ದರೆ, ಬಡವರ ನೋವನ್ನು ಅಥವಾ ಅಳಲನ್ನು ನೀವು ಅರ್ಥ ಮಾಡಿಕೊಂಡಿದ್ದರೆ ಈಗಲಾದರೂ Please go to the people first of all. Leave Bangalore.

ಇಲ್ಲಿ ಬಿಟ್ಟು ಜನರ ಹತ್ತಿರ ಹೋಗಿ. ಪ್ರವಾಸ ಮಾಡತಕ್ಕ ಕಾರ್ಯಕ್ರಮವನ್ನು ನೀವು ಹಾಕಬೇಕು.

4.55 ಪಿ.ಎಂ

ನನಗೆ ಗೊತ್ತಿದೆ. ಹಾಕತಕ್ಕ ವಿಚಾರದಲ್ಲಿ ತಮಗೆ ಗಮನ ಇಲ್ಲ. You are otherwise busily engaged in your administration.

ಇವತ್ತು ನಿಮ್ಮ ಆಡಳಿತದ ನೀತಿ ನಿಮ್ಮ ಅಪ್ರೋಚ್‌ನ್ನು ನಾವು ಸಂಪೂರ್ಣವಾಗಿ ಖಂಡಿಸತಕ್ಕ ವಿಚಾರ, ಎಲ್ಲಿ ಎಂದರೆ, ಬರಗಾಲ ಬಿದ್ದಿರತಕ್ಕಂತಹ ಪ್ರದೇಶದಲ್ಲಿ, ಮಾನ್ಯ ಸಭಾಧ್ಯಕ್ಷರೇ, ಈಗಲಾದರೂ ಕೂಡ ನಾವು ದೇವರನ್ನು ಪ್ರಾರ್ಥನೆ ಮಾಡೋಣ. ಮಳೆ ಬೀಳಲಿ. ಲಕ್ಷಾಂತರ ಬೋರ್ವೆಲ್‌ಗಳು ಇವೆ. ಮಳೆ ಬಿದ್ದು ವಾಟರ್ ಟೇಬಲ್ ಆದರೂ ಮೇಲೆ ಬಂದರೆ ರೈತರಿಗೆ ಬೆಳೆ ತೆಗೆಯುವುದಕ್ಕೆ ಅನುಕೂಲವಾಗುತ್ತದೆ. ಬಾವಿಯಲ್ಲಿ ನೀರು ಬರುತ್ತದೆ. ದನಕರುಗಳಿಗೆ ಮೇವು ಸಿಗುತ್ತದೆ. ನಮಗೆ ಪ್ರಕೃತಿ ಸಹಾಯ ಮಾಡಲಿ ಎನ್ನುವ ಬೇಡಿಕೆ ನಾನು ಹೇಳುವುದು ಬಿಟ್ಟರೆ, ಇಲ್ಲಿ ಸರ್ಕಾರ ಸಂಪೂರ್ಣವಾಗಿ ನಿಷ್ಕ್ರೀಯ ಗೊಂಡಾಗ, ಜೀವ ಇಲ್ಲದೇ ಇರತಕ್ಕ ಆಳ್ವಿಕೆ ಇದ್ದಾಗ ನಮಗೆ ಉಳಿದಿರತಕ್ಕ ಒಂದೇ ಒಂದು ದಾರಿ ಎಂದರೆ ದೇವರಿಗೆ ಮೊರೆಹೋಗತಕ್ಕಂತಹದ್ದು. ಬೇರೆ ದಾರಿ ನಮಗಾಗಿ ಅಲ್ಲ. ಪಕ್ಷಾತೀತವಾಗಿ ನಾನು ಹೇಳುತ್ತಿದ್ದೇನೆ. ಬೇರೆ ದಾರಿ ನಮಗೆ ಉಳಿದಿಲ್ಲ. ತಾವು ಅದರ ಬಗ್ಗೆ ಗಮನ ಕೊಡತಕ್ಕ ವಿಚಾರದಲ್ಲಿ ಸಂಪೂರ್ಣವಾಗಿ ಗಮನ ಹರಿಸಬೇಕು ಎನ್ನತಕ್ಕದ್ದು ನಾನು ನಿಮಗೆ ಹೇಳತಕ್ಕ ಒಂದು ಕಿವಿ ಮಾತು. ನೀವು ಅರ್ಥ ಮಾಡಿಕೊಂಡರೆ ಒಳ್ಳೆಯದು. ಅರ್ಥಮಾಡಿಕೊಳ್ಳದಿದ್ದರೆ ನೀವು ಮುಂದಿನ ಇದರಿಂದ ಬರತಕ್ಕ ಸಂಪೂರ್ಣ ಫಲಿತಾಂಶದ ಹೊಣೆಗಾರಿಕೆ ತಮ್ಮ ತಲೆ ಮೇಲೆ ಬರುತ್ತದೆ ಎನ್ನತಕ್ಕಂತಹ ನೇರವಾದ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇನ್ನು, ಅತಿವೃಷ್ಟಿಗೆ ಸಂಬಂಧಪಟ್ಟ ವಿಚಾರ. ತಮಗೆಲ್ಲಾ ಗೊತ್ತಿರುವ ಹಾಗೆ ಸುಮಾರು 9 ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದ ಅಪಾರವಾಗಿ ಹಾನಿ ಆಗಿದೆ. ನನಗೆ ಗೊತ್ತಿರುವ ಹಾಗೆ ದಕ್ಷಿಣ ಕನ್ನಡ ಜಿಲ್ಲೆ, ಶಿವಮೊಗ್ಗ ಜಿಲ್ಲೆ, ಕಾರವಾರ ಜಿಲ್ಲೆಯ ಕೆಲವು ಭಾಗಗಳು, ಧಾರವಾಡ ಜಿಲ್ಲೆ, ಎಂದರೆ ಹಿರೇಕೆರೂರು ತಾಲ್ಲೂಕು ಇತ್ಯಾದಿ; ಅಲ್ಲಿಯ ಭಾಗಗಳು, ಚಿಕ್ಕಮಗಳೂರು ಜಿಲ್ಲೆಯ ಕೆಲವು ಭಾಗಗಳು. ಕೊಡಗು ಜಿಲ್ಲೆ ಅಲ್ಲದೇ ಹಾಸನ, ಮೈಸೂರು, ಕೊಳ್ಳೇಗಾಲ ಈ ಕಡೆಯ ಪ್ರದೇಶ. ಅಧ್ಯಕ್ಷರೇ, ಇವೆಲ್ಲಾ ಜಿಲ್ಲೆಗಳಿಗೂ ನಾನು ಹೋಗಿ ಬಂದಿದ್ದೇನೆ. ಹಲವಾರು ಪ್ರದೇಶಗಳಿಗೆ ನಾನು ಸುಮಾರು 8-9 ದಿನಗಳ ಕಾಲ ಪ್ರವಾಹ ಪೀಡಿತ ಪ್ರದೇಶಗಳಿಗೆ ಅನೇಕ ಕಡೆಯ ಭಾಗಗಳಿಗೆ ನಾನು ಹೋಗಿರತಕ್ಕ ಸಂದರ್ಭ ಇದೆ. ನಾನು ಈ ವರದಿಯನ್ನು ಇಟ್ಟು, ಜುಲೈ ತಿಂಗಳೂ 27ನೇ ತಾರೀಖು ನಾನು ಒಂದು ವಿವರವಾದ ಪತ್ರವನ್ನು ಬರೆದೆ. ಅದನ್ನು ಬರೆಯುವತಕ್ಕ ಸಂದರ್ಭದಲ್ಲಿ ನಾನು ಒಂದು ಮಾತನ್ನು ಸಹ ಹೇಳಿದ್ದೇನೆ. ಅದು ನಾನು ಬರೆದಂತಹ ಹೋದರೆ ಅದು

ಅನೇಕ ಪುಟಗಳವರೆಗೆ ಆಗುತ್ತದೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಈ ಪತ್ರವನ್ನು ಬರೆದಿದ್ದೇನೆ. ನಾನು ಹೇಳುವುದಕ್ಕೆ ನಾಚಿಕೆ ಆಗುತ್ತದೆ. ರಾಜ್ಯದ ಮಾನ್ಯ ಮುಖ್ಯಮಂತ್ರಿ ವೀರಪ್ಪ ಮೊಯಿಲಿಯವರು. ನಾನು ವೈಯುಕ್ತಿಕವಾಗಿ ಮಾತನಾಡತಕ್ಕ ವಿಚಾರ ಇದಲ್ಲ. 27ನೇ ತಾರೀಖು ನಾನು ಪತ್ರವನ್ನು ಕಳುಹಿಸಿದರೆ ಇವತ್ತಿನವರೆಗೆ ಒಂದು ರಿಪ್ಲೈ ಕೂಡ ಬಂದಿಲ್ಲ. ನಾಚಿಕೆಯಾಗಬೇಕು, ಈ ಸರ್ಕಾರಕ್ಕೆ, ಒಂದು ಪತ್ರಕ್ಕೆ ಉತ್ತರ ಇಲ್ಲ. ನಾನೂ ಕೂಡ ವಿರೋಧಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ. ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಈ ಮನೆಯ ಮಾನ್ಯ ಸದಸ್ಯ ನಾನು. ಒಂದು ಪತ್ರವನ್ನು ಮಾನ್ಯ ಸದಸ್ಯರು ಬರೆಯುತ್ತಾರೆ. ಅದಕ್ಕೆ ಉತ್ತರ ಕೊಡಬೇಕಾದ ಒಂದು ಸೌಜನ್ಯ ಈ ಸರ್ಕಾರಕ್ಕೆ ಬೇಡವೇ? ಇವತ್ತು ನಾವು ಯಾವ ವಿಷಯವನ್ನು ಬರೆದಿದ್ದೇವೆ? ಏನು ರಾಜಕೀಯ ಮಾಡುವುದಕ್ಕೆ ನಾನು ಪತ್ರವನ್ನು ಬರೆದೆನೇ? ನಾನು ವಿವರಗಳನ್ನು ಊರುಗಳನ್ನು ಹೇಳಿದ್ದೇನೆ. ಜನರು ಸತ್ತಿರತಕ್ಕ ವಿಚಾರವನ್ನು ಬರೆದಿದ್ದೇನೆ. ನಷ್ಟವಾಗಿರತಕ್ಕದ್ದು, ಮನೆ ಬಿದ್ದಿರತಕ್ಕದ್ದು, ಬೆಳೆ ನಾಶವಾಗಿರತಕ್ಕಂತಹದ್ದು, ಅನೇಕ ವಿವರಗಳನ್ನು ಇಟ್ಟು ನಾನು ಪತ್ರವನ್ನು ಬರೆದರೆ, ಈ ವಿಚಾರದ ಬಗ್ಗೆ ಒಂದು ಉತ್ತರವನ್ನೂ ಕೂಡ ಕೊಡದೇ ಇರತಕ್ಕ ಒಬ್ಬ ಮುಖ್ಯಮಂತ್ರಿ ಇದ್ದಾರೆ ಎಂದರೆ ನಾಚಿಕೆಯಾಗಬೇಕು ಈ ಸರ್ಕಾರಕ್ಕೆ. ಒಬ್ಬ ಮುಖ್ಯ ವ್ಯಕ್ತಿಯಾಗಿ ಅಲ್ಲಿ ಕುಳಿತಿದ್ದಾರೆ ಎಂದರೆ, What sort of administration is this ಎಂಬುದು ಇದರಲ್ಲಿ ಸ್ಪಷ್ಟವಾಗಿ ಗೊತ್ತಾಗುವುದಿಲ್ಲವೇ? ಮಾನ್ಯ ಅಧ್ಯಕ್ಷರೇ, ಆ ಪತ್ರದಲ್ಲಿಯೂ ಕೂಡ ಒಂದು ಮಾತನ್ನು ಆಡಿದ್ದೇನೆ. ವಿಶೇಷವಾದ ಅಧಿವೇಶನವನ್ನು ತಾವು ತಕ್ಷಣ ಕರೆಯಬೇಕು ಎಂದಿದ್ದೇನೆ. ಏಕೆಂದರೆ ಆಗಿರತಕ್ಕ ನಷ್ಟವನ್ನು ನಾವು ಇಲ್ಲಿ ಭಾಷಣ ಮಾಡುವುದಕ್ಕೆ ಬಂದಿಲ್ಲ. ನಷ್ಟ ಆಗಿರತಕ್ಕ ವಿಚಾರವನ್ನು ಹೇಳುವುದಕ್ಕೆ ನಮಗೆ ಏನು ಹಕ್ಕು ಇದೆ ಅದನ್ನು ನಾವು ಪ್ರತಿಪಾದನೆ ಮಾಡಬೇಕು. ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಅನೇಕ ಕಡೆಗಳಲ್ಲಿ ಹೋಗಿ ಬಂದಿದ್ದಾರೆ. ಬೇರೆ ಸದಸ್ಯರೂ ಕೂಡ ಅವರವರ ಭಾಗಗಳಲ್ಲಿ ಅವರು ಹೋಗಿದ್ದಾರೆ ಎಂದು ಭಾವಿಸುತ್ತೇನೆ. ನಾನು ಒಂದೇ ಒಂದು ಕೇಳುವುದು. ಈ ಸರ್ಕಾರದಿಂದ ಎಷ್ಟು ಜನ ಪ್ರವಾಸ ಮಾಡಿದ್ದಾರೆ? ಯಾವ ಯಾವ ಕಡೆಗೆ ಹೋದರು? ನಾನು ದಕ್ಷಿಣ ಕನ್ನಡ ಜಿಲ್ಲೆಗೆ ಹೋದಾಗ, ಉದಾಹರಣೆಗೆ ಹೇಳುವುದಾದರೆ, ಬಂಟ್ವಾಳ ತಾಲ್ಲೂಕು ಭಾಗಕ್ಕೆ ಹೋಗಿದ್ದೆ. ನನಗೆ ಜ್ಞಾಪಕ ಇರುವ ಹಾಗೆ ಜುಲೈ 16ನೇ ತಾರೀಖಿಗೆ ನಾನು ಅಲ್ಲಿ ಬಂಟ್ವಾಳ ತಾಲ್ಲೂಕಿಗೆ ಹೋದೆ. ಅಲ್ಲಿ ಒಬ್ಬರು ಸಚಿವರೂ ಸಹಾ ಇದ್ದಾರೆ. ಅಲ್ಲಿಗೆ ಹೋದರೆ ಅಲ್ಲಿ ಒಂದೇ ಒಂದು ಮನೆಯಲ್ಲಿ ಇಬ್ಬರು ಮಳೆಯ ಹಾವಳಿಗೆ ತುತ್ತಾಗಿ ಸ್ಪಾಟ್‌ನಲ್ಲಿ ಸತ್ತು ಹೋಗಿದ್ದಾರೆ. ಅವರ ಹೆಸರು ನನ್ನಲ್ಲಿ ಇದೆ. ನಾರಾಯಣಪೂಜಾರಿ ಎನ್ನುವವರ ತಾಯಿ ವೆಂಕಮ್ಮ ಎನ್ನುವವರು ಹಾಗೂ ಅಕ್ಕ ಸೀತಮ್ಮ ಆ ದುರಂತದಲ್ಲಿ ಮಡಿದಿರತಕ್ಕಂಥವರು ಉಳಾಯಿಕಟ್ಟು ಎಂದು ಹೇಳಿ ಬಂಟ್ವಾಳ ತಾಲ್ಲೂಕು. ನಾನು ಇಲ್ಲಿ ಹೇಳಿದರೆ ಏನೋ ಪಕ್ಷದ ರಾಜಕೀಯ ಬೆರೆಸುತ್ತಿದ್ದಾರೆ ಎನ್ನುವ ಮಾತು ಆಡಿಯಾರು ಎನ್ನುವ ದೃಷ್ಟಿಯಿಂದ ಸುಮ್ಮನೆ ಇದ್ದೇನೆ. ನಮ್ಮ ಪಕ್ಷದ ಕಾರ್ಯಕರ್ತರು ಹೋಗುವವರೆಗೆ ಅಲ್ಲಿಗೆ ಯಾರೂ ಹೋಗಿರಲಿಲ್ಲ. ಪೋಲೀಸ್ ಇಲಾಖೆಯವರು ಮಾತ್ರ ಆ ಸತ್ತಿರತಕ್ಕ ಹೆಣಗಳ ಬಗ್ಗೆ ಮಹಜರ್ ಮಾಡಲು ಅಲ್ಲಿ ಹೋಗಿಬಂದಿದ್ದಾರೆ. I must thank the local police people. Atleast ಪೋಲೀಸರು ಮಹಜರ್ ಇತ್ಯಾದಿ ಮಾಡಿಸಲು ಮಾತ್ರ ಹೋಗಿರತಕ್ಕ ವಿಚಾರ ನನ್ನ ಗಮನಕ್ಕೆ ಬಂತು. ನಾನು ಅಲ್ಲಿ ಹೋದಾಗ ಅವರೂ ಕೂಡ ಇದ್ದರು.

ಅವರು ಕೂಲಿ ಮಾಡತಕ್ಕವರಾಗಿದ್ದು, ಶವಸಂಸ್ಕಾರಕ್ಕೆ ಅವರ ಹತ್ತಿರ ಹಣ ಇಲ್ಲ. ಬಡವರ ಮನೆ ಏಕೆ ಬೀಳುತ್ತದೆ? ದೊಡ್ಡವರ ಮನೆ ಏಕೆ ಬೀಳಬಾರದು ಎಂದು ಅರ್ಥ ಅಲ್ಲ. ಅದು ಹೇಗೋ ತಡೆದುಕೊಳ್ಳುತ್ತವೆ. ಬಡವರ ಮನೆಗಳೇ

ಹೆಚ್ಚಾಗಿ ಬೀಳತಕ್ಕವು ಇವೆಲ್ಲಾ. ಅಲ್ಲಿ ಏನಾಗಿದೆ ಎಂದರೆ ಅದ್ಯಾರೋ ದೇವಸ್ಥಾನದ ಕಮಿಟಿಯವರು, ಭಟ್ಟರು ಇತ್ಯಾದಿಯವರು 200-250 ರೂಪಾಯಿ ಕೊಟ್ಟು ಶವಸಂಸ್ಕಾರ ಮಾಡಿಸಿಬಿಟ್ಟಿದ್ದಾರೆ. ಆಮೇಲೆ ಅವರ ತಿಥಿ ವಗೈರೆಗೆ ಗತಿ ಇಲ್ಲ. ಸರ್ಕಾರದ ಒಬ್ಬ ಮೇಲಧಿಕಾರಿ ಅಲ್ಲಿಗೆ ಹೋಗಿಲ್ಲ. ಪೋಲೀಸ್ ಇಲಾಖೆಯವರು ಹೋಗುವುದು ಪರಿಹಾರದ ಹಣ ಕೊಡುವುದಕ್ಕೆ ಅಲ್ಲ. ಅವರು ಮಹಜರು ಮಾಡಲು ಹೋಗುತ್ತಾರೆ. ಇವತ್ತು ಅಲ್ಲಿ ಯಾರೂ ಕೂಡ ಹೋಗಿಲ್ಲ. ಆಮೇಲೆ ನಾವು ಅಲ್ಲಿ ನಮ್ಮ ಕೈಲಾದ ಸಹಾಯವನ್ನು ಮಾಡಿದೆವು. ನಮಗೆ ಪ್ರಚಾರ ಬೇಕಾಗಿಲ್ಲ. ನಮ್ಮ ಮನಸ್ಸು ತಡೆಯಲಾರದೇ ನಾವು ಮಾಡಿರತಕ್ಕ ವಿಚಾರ. ಅವರ ತಿಥಿ ವಗೈರೆ ಬಗ್ಗೆ ಯಾರೂ ಕೇಳಲೂ ಗತಿ ಇಲ್ಲ. ಈ ಸರ್ಕಾರ ಅಲ್ಲಿಗೆ ಹೋಗಿಯೇ ಇರಲಿಲ್ಲ. ಅದರ ಬದಲು ಇವರು ಏನು ಮಾಡಿದ್ದರು ಎಂದರೆ, ಮೂರು ವರ್ಷಗಳ ಅವಧಿ ಮುಕ್ತಾಯ ಮಾಡುವ ಸಮಾರಂಭದಲ್ಲಿ ಡೆಲ್ಲಿಯಲ್ಲಿ ಪಾಲ್ಗೊಂಡಿದ್ದರು ಇವರೆಲ್ಲಾ. ಅದು ಮುಗಿದು 3-4 ದಿವಸ ಆಗಿದ್ದರೂ ಕೂಡ ಇವರು ಕಾಲಿಟ್ಟಿರಲಿಲ್ಲ. ಅದು ಮುಕ್ತಾಯ ಆಗಿಹೋಗಿ ಬಿಟ್ಟಿತ್ತು; ಅದು ನನಗೆಲ್ಲಾ ಗೊತ್ತು. ಯಾರೂ ಕೂಡ ಅಲ್ಲಿಗೆ ಕಾಲಿಡಲಿಲ್ಲ. ಅಲ್ಲಿಗೆ ಸಚಿವರಿದ್ದರೂ ಕೂಡ, ನಾಚಿಕೆ ಆಗುತ್ತದೆ. ಮುಖ್ಯಮಂತ್ರಿಯವರು ಅದೇ ಜಿಲ್ಲೆಯವರು. ನಾನು ಹೋಗಿದ್ದುದು ಗೊತ್ತಾದ ಮೇಲೆ, ಬಂಗಾರಪ್ಪನವರು ಬಂದರು ಎಂದು ಜನ ಹೇಳಿದ ನಂತರ ಇವರು ಅರ್ಜೆಂಟಾಗಿ ಹೆಲಿಕಾಪ್ಟರ್ ತೆಗೆದುಕೊಂಡು, ಮತ್ತೊಂದು ಮಾಡಿಕೊಂಡು ಓಡಿ ಬಂದರು ಎನ್ನತಕ್ಕದ್ದು ನನಗೆ ಗೊತ್ತಾಯಿತು. ನಾನು ಇನ್ನೊಂದು ಹೇಳುವುದು, ಇವರು ಇಂಡಿಯನ್ ಏರ್‌ಫೋರ್ಸ್ ಪ್ಲೇನ್ ತೆಗೆದುಕೊಂಡು ಹೋಗಿದ್ದಾರೆ. ನಾನು ಬೆಳಗಿನ ವಿಮಾನದಲ್ಲಿ ಇಲ್ಲಿಂದ ಮಂಗಳೂರಿಗೆ ಹೋಗಿ ಅಲ್ಲಿಂದ ನಾನು ಪ್ರವಾಸ ಪ್ರಾರಂಭ ಮಾಡಬೇಕಾದರೆ, ಇಂಡಿಯನ್ ಏರ್‌ಫೋರ್ಸ್ ಪ್ಲೇನ್ ಮಂಗಳೂರು ಏರ್‌ಪೋರ್ಟ್‌ನಲ್ಲಿ ಇತ್ತು. ನನಗೆ ಅಲ್ಲಿನ ಜನ ಹೇಳಿದರು. ಏರ್‌ಫೋರ್ಸ್ ಪ್ಲೇನ್ ಬಂದಿದೆ, ಏತಕ್ಕೆಂದರೆ ಅತಿವೃಷ್ಟಿ ನೋಡುವುದಕ್ಕೆ ಬಂದಿದೆ ಎಂದು, ಅತಿವೃಷ್ಟಿ ನೋಡಲಿಕ್ಕೆ ಪ್ಲೇನ್‌ನಿಂದ ಅಲ್ಲಿ ಯಾರೂ ಹೋಗಿರಲಾರರು. ಆದರೆ ಅಲ್ಲಿಗೆ ಡ್ರಾಪ್ ತೆಗೆದುಕೊಳ್ಳುವುದಕ್ಕೆ ಹೋಗಿದ್ದಾರೆ. ಏಕೆ, ಬೆಳಗಿನ ಫ್ಲೈಟ್ ಇರಲಿಲ್ಲವೇ ಅಲ್ಲಿ? ನಾನು ಹೋಗಿರಲಿಲ್ಲವೇ ಅಲ್ಲಿ? ನಾನು ಹೋಗುವುದಕ್ಕೆ ಸಾಧ್ಯ ಇದ್ದರೆ, ಇವರನ್ನು ಕರೆದುಕೊಂಡು ಹೋಗುವುದಕ್ಕೆ ಇಂಡಿಯನ್ ಏರ್‌ಫೋರ್ಸ್ ವಿಮಾನವೇ ಬರಬೇಕೇ ಈ ಸರ್ಕಾರ ತೆಗೆದುಕೊಂಡು ಹೋಗುವುದಕ್ಕೆ? ಮಂಗಳೂರಿಗೆ ಹೋಗಲು ಆ ಪ್ಲೇನೇ ಬೇಕು ಎನ್ನುವುದು ನನಗೆ ಅರ್ಥವಾಗದೇ ಇರತಕ್ಕ ವಿಚಾರ ಹೋಗಿ ಏನು ಮಾಡಿದರು?

ಅದೂ ಹೋಗಿ ನಿಂತಿದೆ. ನಮ್ಮ ಪ್ಲೇನ್ ಕೂಡಾ ಹೋಗಿದೆ. ಮಂಗಳೂರಿಗೆ. ಎಲ್ಲಾ ಸರಿ. ನಾವು ಹೋಗಿದ್ದೇವೆ. ಹೋದ ಮೇಲೆ ಏನು ಮಾಡಿದರು? ಎಷ್ಟು ಕಡೆಗೆ ಹೋಗಿ ಬಂದರು? ಯಾರು ಯಾರು ಹೋದರು ಆ ಪ್ಲೇನ್‌ನಲ್ಲಿ? ಕೇಂದ್ರ ಸರ್ಕಾರದಿಂದ ನೀವು ಪ್ಲೇನ್ . ತಂದ ಮೇಲೆ ಅದರ ಸದುಪಯೋಗ ಆಗಬೇಕು. ಆ ಪ್ಲೇನ್ ತೆಗೆದುಕೊಂಡು ಹೋದಮೇಲೆ ಯಾವ ಯಾವ ಕಡೆ ಪ್ರವಾಸ ಮಾಡಿದ್ದೀರಿ? ಎಷ್ಟೆಷ್ಟು ತಾಲ್ಲೂಕುಗಳಿಗೆ ಹೋಗಿದ್ದೀರಿ? ಅಲ್ಲಿ ಹೆಚ್ಚಾಗಿ ಬೈಂದೂರಿನಿಂದ ಪ್ರಾರಂಭವಾಗಿ, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾರ್ಕಳದಲ್ಲಿ ಚರ್ಚ್ ಬಿದ್ದುಹೋಗಿದೆ. ಬೆಳ್ತಂಗಡಿಯ ಅನೇಕ ಭಾಗಗಳಲ್ಲಿ ತೊಂದರೆ ಆಗಿದೆ. ಅನಂತರ ಬಂಟ್ವಾಳ್, ಸೂರತ್ಕಲ್ ಹೀಗೆ ಹಲವಾರು ಭಾಗಗಳಲ್ಲಿ ಈ ಅನ್ಯಾಯಗಳು ನಡೆದಿದ್ದರೂ ಕೂಡ ಪ್ರವಾಸ ಮಾಡುವವರ ಗತಿ ಇಲ್ಲ ಅಲ್ಲಿ. ನನ್ನಲ್ಲಿ ಬಹಳ ವಿವರ ಇದೆ. ಸಮುದ್ರ ಕೊರೆತ ಆಗಿದೆ. ನಮ್ಮ ಕಾಲದಲ್ಲಿ ದೊಡ್ಡದೊಡ್ಡ ಬೌಲ್ಡರ್ಸ್ ಹಾಕಬೇಕು ಎಂದು ತೀರ್ಮಾನ ಮಾಡಿ ಕ್ಯಾಬಿನೆಟ್ ಡಿಸಿಷನ್ ಮಾಡಿ ನಾವು ಹಾಕಿರತಕ್ಕ ಜಾಗದಲ್ಲಿ ಸ್ಪಷ್ಟವಾಗಿ ಅಲ್ಲಿ ಕೊರೆತ ನಿಂತಿದೆ.

ಇದು ನಾನು ಹೇಳಿರತಕ್ಕ ಮಾತು ಅಲ್ಲ. ಅಲ್ಲಿ ಜಾಗ ಇದೆ. ನೀವು ಈಗಲೂ ಕೂಡ ಹೋಗಿ ನೋಡಬಹುದು. ಅದು ಕಾಪೂ ಕ್ಷೇತ್ರದಲ್ಲಿ ಬರುತ್ತದೆ ಎಂದು ಕಾಣುತ್ತದೆ. ನನಗೆ ಗೊತ್ತಿರುವ ಹಾಗೆ ನಾವು ಅಧಿಕಾರ ಬಿಟ್ಟಮೇಲೆ ತೆಗೆದುಕೊಂಡು ಹೋಗಿ ಸಣ್ಣಸಣ್ಣ ಕಲ್ಲುಗಳನ್ನು ಹಾಕಿದ್ದಾರೆ. ಈ ಮಾತನ್ನು ನಾನು ಹೇಳಿದ್ದುದು ನಾನಲ್ಲ. ಅಲ್ಲಿಯ ಜನರ ಬಾಯಿಂದಲೇ ಇದನ್ನೂ ಕೇಳಬೇಕು.

ದೊಡ್ಡ ದೊಡ್ಡ ಕಲ್ಲು ಹಾಕಿದರೆ ನಾವು ಸಮುದ್ರ ಕೊರೆತ ತಡೆಹಿಡಿಯಬಹುದು. ಇದರ ಬಗ್ಗೆ ಕೇಂದ್ರ ಸರ್ಕಾರದ ಡೈರೆಕ್ಷನ್ಸ್ ಇದ್ದಾವೆ. ಕೇರಳದಲ್ಲಿ ಕೂಡಾ ಮಾಡಿದ್ದಾರೆ. ಇದರ ಬಗ್ಗೆ ರಾಜ್ಯ ಸರ್ಕಾರದಲ್ಲೂ ಕೂಡ ತೀರ್ಮಾನ ಮಾಡಿದ್ದೇವೆ. ಏಕೆ ಸ್ವಾಮಿ ತಾವು ಸಣ್ಣ ಸಣ್ಣ ಬೌಲ್ಡರ್ಸ್ ಹಾಕಿದ್ದು? ಸಮುದ್ರ ಕೊರೆತ ಜಾಸ್ತಿ ಆಗುವುದಿಲ್ಲವೇ? ಮನೆಗಳು ಬಿದ್ದುಹೋಗುವುದಿಲ್ಲವೇ? ಆಸ್ತಿಪಾಸ್ತಿ ನಷ್ಟ ಆಗುವುದಿಲ್ಲವೇ? ದೊಡ್ಡ ದೊಡ್ಡ ಕಲ್ಲು ಹಾಕುವುದರ ಬದಲು, ನೀವು ಸಣ್ಣ ಸಣ್ಣ ಕಲ್ಲು ತೆಗೆದುಕೊಂಡು ಹೋಗಿ ಹಾಕಿದರೆ ಸಮುದ್ರ ಕೊರೆತ ನಿಲ್ಲುವುದಿಲ್ಲ. ಸಮುದ್ರಕೊರೆತ ನಿಲ್ಲಿಸುವ ಹೆಸರಿನಲ್ಲಿ ನೀವು ಹಣವನ್ನು ಕೋಟಿಗಟ್ಟಲೆ ಹಾಳು ಮಾಡಿದ್ದೀರಿ. ಏಕೆ ಇಷ್ಟು ಹಣವನ್ನು ಹಾಳು ಮಾಡಿದಿರಿ? ಇದರ ವಿವರಗಳನ್ನು ಸಂಪೂರ್ಣವಾಗಿ ನೀವು ಈ ಸದನಕ್ಕೆ ಕೊಡಬೇಕು. ಸಂಪೂರ್ಣವಾಗಿ ಈ ಸದನಕ್ಕೆ ಕೊಡದೇ ಇದ್ದರೆ ಈ ಸಮುದ್ರ ಕೊರೆತದ ವಿಚಾರದಲ್ಲಿ ಈಚೆಗೆ ಆದ ಬದಲಾವಣೆ, ಈ ಬದಲಾವಣೆ ಏಕೆ ಮಾಡಿದ್ದೀರಿ ಎನ್ನುವ ವಿಚಾರದಲ್ಲಿ ನಿಮ್ಮ ಬಗ್ಗೆ ನಾವು ಅನುಮಾನವನ್ನು ಪಡಲೇಬೇಕಾಗುತ್ತದೆ. ಇದು ಒಂದು ವಿಚಾರ. ಇದಲ್ಲದೇ ಬಂಟ್ವಾಳ ತಾಲ್ಲೂಕಿನಲ್ಲಿ ಜನತಾ ಕಾಲೋನಿಯ 17 ಮನೆಗಳು ಹೋಗಿವೆ. ನಾನು ಹೋಗಿ ನೋಡಿದ್ದೇನೆ. ಎಲ್ಲವೂ ಬಿದ್ದುಹೋಗಿವೆ. ಅಲ್ಲಿ ಅವರಿಗೆ 5 ಪೈಸೆ ಹಣ ಕೊಟ್ಟಿಲ್ಲ. ಯಾರೂ ಕೂಡ ಹೋಗಿ ನೋಡಿಲ್ಲ. ಮಹಜರ್ ಬರೆಯುವವರು ಅಲ್ಲಿ ಗತಿ ಇಲ್ಲ. ನಿಮ್ಮ ಕಾಪು ಕ್ಷೇತ್ರದಲ್ಲೂ ಅಷ್ಟೇ.

ಅನೇಕ ಭಾಗದಲ್ಲಿ ಮನೆಗಳು ಬಿದ್ದಿದ್ದು, ಸಮುದ್ರ ಕೊರೆತ ಆಗಿದ್ದು ಇದೆ, ಅನೇಕ ಕಡೆಗೆ ಹೋದರೆ, ಇಲ್ಲಿ ಯಾರೂ ಬಂದಿಲ್ಲವೆನ್ನುವ ಮಾತನ್ನು ಜನ ಹೇಳುತ್ತಾರೆ. ಈ ಸರ್ಕಾರ ಏಕೆ ಇರಬೇಕು. ನಾನು ಹೋದದ್ದೇ 3-4 ದಿವಸವಾದ ಮೇಲೆ. ಅದಕ್ಕಿಂತ ಮುಂಚೆ ಹೋಗಬೇಕಾದ ಸಚಿವರು, ಶಾಸಕರು, ಸರ್ಕಾರ ಇದ್ದೂ ಕೂಡ ಏನು ಮಾಡುತ್ತಿದ್ದಾರೆ ಎನ್ನುವುದನ್ನು ನಾನು ಸ್ಪಷ್ಟವಾಗಿ ಕೇಳಬೇಕಾಗುತ್ತದೆ. ಇದರ ಜೊತೆಗೆ ನಾನು ಬಂಟ್ವಾಳಿನ ಗೂಡಿನ ಬಳಿ ಆ ಗೂಡು ಎಂದು ಹೇಳಿ. ಅದೊಂದು ಜಾಗದ ಹೆಸರು. ಅಲ್ಲಿ ಅನೇಕ ಮನೆಗಳು ಹೆಂಚುಗಳು ಹಾರಿಹೋಗಿದ್ದವು. ಮತ್ತೆ ಮಳೆ ಬರತಕ್ಕಂಥ ಸಂದರ್ಭ ತಕ್ಷಣ ತಾವು ಹೋಗಿ, ಅಲ್ಲಿ ಹೆಂಚುಗಳನ್ನೆಲ್ಲಾ ಹಾಕಿಸಿ, ಏನಾದರೊಂದು ಕಾರ್ಯಕ್ರಮ ಹಾಕಿ, ಅವರಿಗೆ ಧೈರ್ಯ ಕೊಡತಕ್ಕ ಕಾರ್ಯಕ್ರಮ ಹಾಕುವುದು ಬೇಡವೇ? ಇವತ್ತಿನವರೆಗೂ ಕೂಡ ನೀವು ಹೋಗಿಲ್ಲ. ಒಂದೇ ಒಂದು ಜಾಗದಲ್ಲಿ ಲೋಕಲ್ ಆಗಿರತಕ್ಕಂಥ ತಹಶೀಲ್ದಾರ್ ಅವರು ಬಂದಿದ್ದರು. ಏಕೆಂದರೆ, ನಾನು ಹೋದಾಗ ತಹಶೀಲ್ದಾರ್ ಬಂದರೆ, ಅವರಿಗೆ ಬರುವುದಕ್ಕೆ ಮನಸ್ಸು ಇದ್ದರೂ ಕೂಡ, ಸಚಿವರು ಏನೆಂದುಬಿಡುತ್ತಾರೋ ಎಂಬ ಹೆದರಿಕೆ ಅವರಿಗೆ. ನಮ್ಮ ಹತ್ತಿರ ಹಣ ಇಷ್ಟಿತ್ತು. ಈ ಹಣವನ್ನು ನಾವು ಹಂಚಿಕೆ ಮಾಡಿದ್ದೇವೆಂದು ಹೇಳಿದರು. ಒಬ್ಬೊಬ್ಬರಿಗೆ 200-300 ರೂಪಾಯಿ ಮಾತ್ರ ಕೊಟ್ಟಿದ್ದಾರೆ. ಜನ ಸತ್ತವರ ಮನೆಯಲ್ಲೂ ಕೂಡ, ಒಂದು ಕಡೆಯಲ್ಲಿ ಒಂದು ನೂರು ರೂಪಾಯಿ ಕೊಟ್ಟಿರುವುದು ನನ್ನ ಗಮನಕ್ಕೆ ಬಂತು. ನಾಚಿಕೆಯಾಗಬೇಕು ಈ ಸರ್ಕಾರಕ್ಕೆ ಮನುಷ್ಯ ಸತ್ತರೆ, ಇವತ್ತು ಸರ್ಕಾರ ನೂರು ರೂಪಾಯಿ ಕೊಡುತ್ತದೆ. ಸರ್ಕಾರ ಜಾಸ್ತಿ ಕೊಟ್ಟರೆ ಏನಾಗುತ್ತದೆ. ವಿರೋಧಪಕ್ಷದ ನಾಯಕರು ಹೇಳಿದಹಾಗೆ, ಎಷ್ಟಾದರೂ

ಹಣಕ್ಕೆ ಕೊರತೆ ಇಲ್ಲವೆಂದು ಮುಖ್ಯಮಂತ್ರಿಗಳು ಹೇಳುತ್ತಾರೆ. ಈ ಮುಖ್ಯಮಂತ್ರಿಗಳು ಮಾತನಾಡುವುದನ್ನು ನೋಡಿಬಿಟ್ಟರೆ, ಅವರು ಬರೀ 10-ಕೋಟಿ, 5 ಕೋಟಿ ವಿಚಾರ ಮಾತನಾಡುವುದು ಅವರು ಇತ್ತೀಚೆಗೆ ಬಿಟ್ಟೇ ಬಿಟ್ಟಿದ್ದಾರೆ. ಅವರು ಏನಿದ್ದರೂ ಮುನ್ನೂರು ಕೋಟಿ ರೂಪಾಯಿ ಯೋಜನೆ, 3 ಸಾವಿರ ಕೋಟಿ ರೂಪಾಯಿ ಯೋಜನೆ 5 ಸಾವಿರ ಕೋಟಿ ರೂಪಾಯಿ ಯೋಜನೆ. 45 ಸಾವಿರ ಕೋಟಿ ರೂಪಾಯಿ, ಹೋಗಲಿ ಆ ಕಡೆ, ಇನ್ನೇನು ಬೇಕು ನಿಮಗೆ. ಯಾವುದೇ ಮುಖ್ಯಮಂತ್ರಿ ಬಾಯಿಂದ ಈ ರೀತಿ ಬಂದುದ್ದನ್ನು ನಾನು ಕೇಳಿಲ್ಲ. ಏಕೆಂದರೆ, ನಾನು ಶಾಸಕನಾಗಿ, ಕರ್ನಾಟಕದ ಅಸೆಂಬ್ಲಿಯಲ್ಲಿ 27-28 ವರ್ಷವಾಯಿತು. ಸತತವಾಗಿ ನಾನು ನೋಡಿದ್ದೇನೆ. ಮುಖ್ಯಮಂತ್ರಿಯವರ ಬಾಯಿಂದ ಇಷ್ಟೊಂದು ಬೇಜವಾಬ್ದಾರಿತನದ ಮಾತುಗಳು ಹಿಂದೆ ಎಂದೂ ಬಂದಿಲ್ಲ. We must be ashamed of all these things. He should not mislead the people of Karnataka. What right he has got?

ಈ ರೀತಿಯ ಹೇಳಿಕೆ ಕೊಡುವುದಕ್ಕೆ ನಿಮಗೇನು ಹಕ್ಕಿದೆ ಎಂಬುದನ್ನು ನಾನು ಸ್ಪಷ್ಟವಾಗಿ ಕೇಳುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಹಣದ ಕೊರತೆ ಇಲ್ಲ, ಹಣದ ಕೊರತೆ ಇಲ್ಲ ಎಂದು ಹೇಳುತ್ತಾರೆ. I know why the Hon'ble Chief minister is doing all these things.

ಏನಿಲ್ಲ ಟರ್ಮ್‌ಕ್ಲೋಸ್ ಮಾಡಬೇಕು ಅಷ್ಟೆ. ಆಮೇಲೆ ಮುಂದೆ ಈ ರಾಜ್ಯಕ್ಕೆ ಏನಾದರೂ ಬೇಕಾದರೆ ಅದೇನಾದರೂ ಆಗಿಹೋಗಲಿ. ಒಟ್ಟು ನವೆಂಬರ್ ಚುನಾವಣೆವರೆಗೆ, 5 ಸಾವಿರ, 3 ಸಾವಿರ, ಪುಣ್ಯಕ್ಕೆ 45 ಸಾವಿರ ಕೋಟಿಗೆ ನಿಲ್ಲಿಸುವುದಕ್ಕೆ ಹೇಳಿ. ಮತ್ತೆ ಈ 45 ಸಾವಿರ ಕೋಟಿ ಹೋಗಿ, 145 ಸಾವಿರ ಕೋಟಿ ರೂಪಾಯಿಗಳ ಯೋಜನೆಯನ್ನು ತಂದುಬಿಟ್ಟಾರು. ಎಂಬ ಹೆದರಿಕೆ ನನಗಿದೆ. ಈ ರೀತಿಯಾದಂಥ ಹೇಳಿಕೆಗಳನ್ನು ಮುಖ್ಯಮಂತ್ರಿಗಳು ಕೊಡುತ್ತಿದ್ದಾರೆ. ಸ್ವಾಮಿ, ನಿಮ್ಮ ಹೇಳಿಕೆಗಳನ್ನು ನೋಡಿದ್ದೇನೆ. ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಎಂಬ ವಿಚಾರಕ್ಕೆ ಆಮೇಲೆ ಬರುತ್ತೇನೆ. ಇವತ್ತು ಇಡೀ ದಕ್ಷಿಣಕನ್ನಡ ಜಿಲ್ಲೆಯಲ್ಲಿರತಕ್ಕ ಜನರು, ಇವರಿಗೆ ಶಾಪ ಹಾಕುತ್ತಾರೆ. ನನಗೆ ಗೊತ್ತಿದೆ. ಆಮೇಲೆ ಕೂಡ ನಾನು ಸೌತ್ ಕೆನರಾಕ್ಕೆ ಹೋಗಿ ಬಂದಿದ್ದೇನೆ. ಇವತ್ತು ಆಗಿರತಕ್ಕ ಪರಿಸ್ಥಿತಿ ಏನು? ಇವತ್ತು ಹಣ ಎಷ್ಟು ಬಿಡುಗಡೆ ಮಾಡಿದ್ದೀರಿ. ಎಷ್ಟು ಅಲೋಕೇಟ್ ಮಾಡಿದ್ದೀರಿ, ಎಷ್ಟು ಟ್ರೆಷರ್‌ಕೇಟ್ ಮಾಡಿದ್ದೀರಿ ಎಂಬುದು ಕೂಡ ನನ್ನ ಹತ್ತಿರ ಇದೆ. ಆಮೇಲೆ ಶಿವಮೊಗ್ಗಕ್ಕೆ ಹೋಗಿದ್ದೇನೆ, ಶಿವಮೊಗ್ಗ ನಗರದಲ್ಲಿ, ತುಂಗಾ ನದಿ ಸಿಕ್ಕಾಪಟ್ಟೆ ನುಗ್ಗಿ ಬಂದಿದೆ.

ಶ್ರೀ ವಸಂತ ವಿ.ಸಾಲಿಯಾನ : ಮಾನ್ಯ ಉಪಾಧ್ಯಕ್ಷರೇ, ಎಲ್ಲಾ ಸುಳ್ಳು ವಿಚಾರಗಳನ್ನು ಸನ್ಮಾನ್ಯ ಬಂಗಾರಪ್ಪನವರು ಹೇಳುತ್ತಿದ್ದಾರೆ.

(ಗೊಂದಲ)

ನನ್ನ ಕ್ಷೇತ್ರದ ಬಗ್ಗೆ ಹೇಳಿದಾಗ ನಾನು ಹೇಳಲೇಬೇಕಾಗುತ್ತದೆ. ಇಲ್ಲಿ ಸುಳ್ಳು ವಿಚಾರಗಳನ್ನು ಸನ್ಮಾನ್ಯ ಬಂಗಾರಪ್ಪನವರು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಚಿವರು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲವೇ? ಮಾನ್ಯ ಉಪಾಧ್ಯಕ್ಷರೇ, ನನಗೆ ಗೊತ್ತಿದೆ. ಕಾಪು ಕ್ಷೇತ್ರದ ಸಚಿವರೂ ಕೂಡ ಇದ್ದಾರೆ. ನಾನು ಹೋದೆ;

I have got respect for any individual whether he is in power or outside the power

ನನಗೆ ಅದರ ಬಗ್ಗೆ ಪ್ರಶ್ನೆ ಇಲ್ಲ. ಅವರ ಕ್ಷೇತ್ರಕ್ಕೆ ನಾನು ಹೋಗುವುದಕ್ಕೆ ಮುಂಚೆ, ಇವರೂ ಕೂಡ ಪ್ರವಾಸ ಮಾಡಿಲ್ಲ. ಇದು ನಾನು ಹೇಳಿದ್ದಲ್ಲ. ಅಲ್ಲಿಯ ಜನರೇ ಹೇಳಿದ ವಿಚಾರ.

ಸುಮ್ಮಸುಮ್ಮನೆ ನನ್ನ ಹತ್ತಿರ ಬಾಲ ಬಿಚ್ಚುವುದಕ್ಕೆ ಹೋಗಬೇಡಿ, ಅವು ನಡೆಯುವುದಿಲ್ಲ. Be careful

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ನನಗೆ ಗೊತ್ತಿದೆ, He should be careful while interfering in the middle of my speech. ಅದೇ ರೀತಿಯಲ್ಲಿ ಸೌತ್ ಕೆನರಾ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೂ ಹೋಗಿದ್ದೇನೆ. ಇಡೀ ರಾಜ್ಯದಲ್ಲಿ 71ರಿಂದ 77 ಜನ ಸತ್ತಿದ್ದಾರೆ. ಅಧಿಕೃತವಾಗಿ 71 ಜನ ಸತ್ತಿದ್ದಾರೆಂದು ಸರ್ಕಾರದ ಹೇಳಿಕೆಯಲ್ಲಿಯೇ ಒಪ್ಪಿಕೊಂಡಿದ್ದಾರೆ. ನನಗೆ ಗೊತ್ತಿರುವಂತೆ ಮತ್ತು ಪತ್ರಿಕೆಯಲ್ಲಿ ಬಂದ ವರದಿ ಪ್ರಕಾರ, 77 ಜನರು ಸತ್ತಿದ್ದಾರೆ.

ಪ್ರೊ|| ಎಂ.ಡಿ. ನಂಜುಂಡಸ್ವಾಮಿ : ತಮ್ಮ ಮೂಲಕ ಮಾನ್ಯ ಬಂಗಾರಪ್ಪನವರಿಗೆ ಒಂದು ವಿನಂತಿ. ಒಂದೆರಡು ವಾಕ್ಯ ತೆಗೆದುಹಾಕುವುದಕ್ಕೆ ತಮ್ಮ ಅಭ್ಯಂತರ ಇದೆಯೇ? ಬಾಲ ಬಿಚ್ಚಬೇಡಿ ಎನ್ನುವಂಥದ್ದು ನಮ್ಮ ಕಡತದಲ್ಲಿರುವುದು ಬೇಡ.

ಶ್ರೀ ಎಸ್. ಬಂಗಾರಪ್ಪ : ಇದು ಬಾಲ ಇದ್ದವರಿಗೆ ಅಷ್ಟೆ ಆಗುತ್ತದೆ. ನಿಮಗೆ ಆಗುವುದಿಲ್ಲ, ದಯಮಾಡಿ ನೀವು ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ : ಮಾನ್ಯ ಬಂಗಾರಪ್ಪನವರು ಎಲ್ಲರ ಬಾಲವನ್ನೂ ಕತ್ತರಿಸಿದ್ದಾರೆ. ಏಕೆಂದರೆ, ಬಾಲ ಇಲ್ಲವೆಂದು ಹೇಳುತ್ತಿದ್ದಾರೆ.

ಉಪಾಧ್ಯಕ್ಷರು : ಇಲ್ಲಿ ಬಾಲ ಇರುವವರು ಯಾರೂ ಬಂದಿಲ್ಲ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಉಪಾಧ್ಯಕ್ಷರೇ, ತಮಗೆಲ್ಲರಿಗೂ ಗೊತ್ತಿರುವಹಾಗೆ, ದಕ್ಷಿಣ ಕನ್ನಡ ಜಿಲ್ಲೆಯ ವಿವರಗಳನ್ನು ಸಂಪೂರ್ಣವಾಗಿ ನೋಡಿದಮೇಲೆ, ಶಿವಮೊಗ್ಗ ಜಿಲ್ಲೆಗೆ ಹೋಗಿದ್ದೇನೆ. ಶಿವಮೊಗ್ಗ ಜಿಲ್ಲೆಯಲ್ಲಿ ತುಂಗಾ ನದಿಯಿಂದ ಆಗಿರತಕ್ಕ ಹಾನಿ ಅಪಾರ. ನೂರಾರು ಮನೆಗಳು ಬಿದ್ದುಹೋಗಿವೆ. ಭದ್ರಾವತಿಯಲ್ಲಿ ಭದ್ರಾ ನದಿಯಿಂದ ಆಗಿರತಕ್ಕಂಥ ಅನಾಹುತ, ನೂರಾರು ಮನೆಗಳು ಬಿದ್ದುಹೋಗಿವೆ. ಸ್ವಾಮಿ, ನಾನು ಒಂದೇ ಒಂದು ಹೇಳುವುದು. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿ ಅಂಜನಾಪುರ ಡ್ಯಾಮ್ ಇದೆ, ಇದು ತುಂಬಾ ಹಳೆಯ ಡ್ಯಾಮ್, ಸುಮಾರು 1930ರಲ್ಲಿ ಕಟ್ಟಿರುವುದು ಎಂದು ಕಾಣುತ್ತದೆ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಕಟ್ಟಿರತಕ್ಕ ಒಂದು ಯೋಜನೆ. ಸುಮಾರು 30-36 ಸಾವಿರ ಎಕರೆಗೆ ನೀರು ಕೊಡುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಡ್ಯಾಮ್ ನೋಡುವುದಕ್ಕೆ ಹೋದವರು, ಭದ್ರಾವತಿಗೆ ಹೋಗಿ ಅಲ್ಲಿ, ಅವರು 5 ನಿಮಿಷ ಕೂಡ ಇಲ್ಲ. ಇದು ನಾನು ಹೇಳಿದಂಥ ಮಾತಲ್ಲ. ಒಬ್ಬ ವ್ಯಕ್ತಿ ಅಧಿಕಾರದಲ್ಲಿದ್ದಾಗ, ಒಂದು ಜಾಗಕ್ಕೆ ಹೋದರೆ, ಅಲ್ಲಿಯ ಪೂರ್ಣ ವಿವರಗಳನ್ನು ನೋಡಿ; ಅಲ್ಲಿಯ ಜನರನ್ನು ನೋಡಿ ಸಂತೈಸಬೇಕು, ಸಮಾಧಾನ ಮಾಡಬೇಕು. ಈ ಕಾರ್ಯಕ್ರಮ ಹಾಕಿದ್ದೇವೆಂದು ಹೇಳಬೇಕು. ಜನರಿಗೆ ಔದಾರ್ಯ ತೋರಿಸಬೇಕು. ಈ ಹೃದಯ ಶ್ರೀಮಂತಿಕೆ ಸ್ಪಷ್ಟವಾಗಿ ಅಧಿಕಾರದಲ್ಲಿ ಕುಳಿತವರಲ್ಲಿ ಬಲರಬೇಕು. ಅದು, ಅವರ ದೊಡ್ಡತನ; ಅದನ್ನು ಯಾವಾಗಲೂ ತೋರಿಸಬೇಕು.

ಜನರ ನೋವಿನಲ್ಲಿ ಒಂದು ಅವಿಭಾಜ್ಯ ಅಂಗವಾಗಿರತಕ್ಕ ಆಡಳಿತವನ್ನು ನಾನು ಬಹಳವಾಗಿ ಮೆಚ್ಚುತ್ತೇನೆ. ಮುಖ್ಯವಾಗಿ, ಕೆಲಸಕಾರ್ಯ, ಸಹಾಯ, ಪರಿಹಾರ ಕಾರ್ಯಕ್ರಮಗಳ ಮುಖಾಂತರ, ಇದು ಒಂದು ಮಾತು. ಕೊನೆಯ ಪಕ್ಷ, I was very much part and parcel of of those people who are very much hithard.

ನೀವೇನು ಮಾಡಿದ್ದೀರಿ. ಮುಖ್ಯಮಂತ್ರಿಯಾದವರು, ಭದ್ರಾವತಿಯಲ್ಲಿ 5 ನಿಮಿಷ ಕೂಡ ಉಳಿದಿಲ್ಲ, ನೀವು ಏನೇನು ಮಾಡಿದ್ದೀರೆಂದು ನನಗೆ ಗೊತ್ತಿದೆ. ಶಿವಮೊಗ್ಗದಲ್ಲೂ ಕೂಡ ಅಷ್ಟೆ. ಅಂಜನಾಪುರಕ್ಕೆ ಎರಡುಸಾರಿ ಹೋಗಿದ್ದಾರೆ. ಮೊದಲನೇ ಸಾರಿ ಹೋದರು. ಅಡ್ಯಾಮ್ ಒಡೆದುದ್ದನ್ನು ನೋಡುವುದಕ್ಕೆ ಹೆಲಿಕ್ಯಾಪ್ಟರಿನಲ್ಲಿ ಹೋಗಿದ್ದಾರೆ. ಸ್ವಾಮಿ ನಾನು ಹೇಳುವುದು, ರೋಡ್ ಏನಾದರೂ ಕಟ್ ಆಗಿದ್ದರೆ, ನೀವು ಹೇಳಬಹುದಿತ್ತು. ಹೆಲಿಕ್ಯಾಪ್ಟರಿನಲ್ಲಿ ಡ್ಯಾಮ್ ನೋಡುವುದಕ್ಕೆ ಹೋದರೆ, ಜನರು ಬೈಯ್ಯುತ್ತಾರೆಂದು ಹೇಳಿದಮೇಲೆ, ಮುಂದಿನ ದಿನ ಬೆಳಿಗ್ಗೆ ಬೈ ರೋಡ್‌ನಲ್ಲಿ ಹೋಗಿದ್ದಾರೆ. ಮುಖ್ಯಮಂತ್ರಿಯವರ ಆಡಳಿತವನ್ನು ವರ್ತನೆಯನ್ನು ಜನರು ಖಂಡಿಸಿದ್ದಾರೆ. ಅಲ್ಲಿಯ ಲೋಕಲ್ ಪ್ರತ್ರಿಕೆಯವರು ಖಂಡಿಸಿದ್ದಾರೆ. ಇದು ಗೊತ್ತಾದ ತಕ್ಷಣ, ಮತ್ತೆ ಬೆಳಿಗ್ಗೆ ಈ ವಿಚಾರ ಮನಸ್ಸಿಗೆ ಬಂದು, ಆಮೇಲೆ ಹೋಗಿದ್ದಾರೆ. ಅವರು ಹೋದರೂ ಕೂಡ, ಏನು ಮಾಡಿದ್ದಾರೆ. ಆ ಡ್ಯಾಮ್ ಏಕೆ ಒಡೆಯಿತು. ಎಮರ್ಜೆನ್ಸಿ ಡೋರ್ಸ್ ಇದ್ದರೂ ಕೂಡ, ಡೋರ್ಸ್ ಇಟ್ಟಿಲ್ಲ. ಇದರ ಜವಾಬ್ದಾರಿ ಯಾರದು, ಏನು ಕಾರಣ ಎಂಬುದನ್ನು ನೋಡಿಲ್ಲ. ಆ ಡ್ಯಾಮ್ ಸುಮಾರು 60-70 ಅಡಿ ಕಿತ್ತುಹೋಗಿದೆ. ನಾನು, ಸಂಪೂರ್ಣವಾಗಿ ಇಂಜಿನಿಯರ್ಸ್ ಇಟ್ಟುಕೊಂಡು, ಜನರನ್ನು ಇಟ್ಟುಕೊಂಡು, ಪೂರ್ತಿಯಾಗಿ ನೋಡಿ ಬಂದಿದ್ದೇನೆ. ಇವತ್ತಿನವರೆಗೂ ಕೂಡ ಒಂದು ಇಟ್ಟಿಗೆಯನ್ನು ತೆಗೆದು ಆ ಕಡೆ ಇಟ್ಟಿಲ್ಲ; ಒಂದು ಕೆಲಸವನ್ನೂ ಮಾಡಿಲ್ಲ. ಸರ್ಕಾರದ ಚೆಕ್ ಇಲ್ಲ, ಏನೂ ಇಲ್ಲ. ಆ ಡ್ಯಾಮ್ ಮಾತ್ರ ಒಡೆಯಿತು, ಸುಮಾರು 30-36 ಸಾವಿರ ಎಕರೆ ನೀರಾವರಿಯಾಗುವುದು ಹಾಳಾಗಿ ಹೋಯಿತು. ಇದರ ಪರಿಣಾಮ ಏನಾಯಿತು. ಮಾಸೂರು ಎಂಬಲ್ಲಿ ನೀರು ನುಗ್ಗಿತು. ಯಾವಾಗ ಡ್ಯಾಮ್ ಒಡೆಯಿತು, ಅಲ್ಲಿ ನೀರು ನುಗ್ಗಿತು. ನೂರಾರು ಮನೆಗಳು, ಹಿಂದೂ ಮುಸಲ್ಮಾನ್, ಹರಿಜನ ಗಿರಿಜನರ ಹೀಗೆ ಎಲ್ಲಾ ಮನೆಗಳೂ ಕಿತ್ತುಹೋದವು ಇದನ್ನು ಯಾರೂ ಕೂಡ ನೋಡುವವರು ಗತಿ ಇಲ್ಲ, ನನ್ನ ಹತ್ತಿರ ವಿವರಗಳು, ಬೇಕಾದಷ್ಟು ರಾಶಿ ರಾಶಿಯಾಗಿವೆ.

ಮನೆಗಳು ಹೆಸರು ಮತ್ತೊಂದು ಅಮೇಲೆ ಶಕ್ತಿಮೀರಿ ಅವರಿಗೆ ಸೀರೆ ಪಂಚೆಗಳು ಮಕ್ಕಳಿಗೆ ಬಟ್ಟೆಗಳನ್ನು ಕೊಡಿಸತಕ್ಕಂಥ ಕಾರ್ಯಕ್ರಮವನ್ನು ನಾವು ಮೊದಲೇ ಹೇಳಿ ರೆಡಿ ಮಾಡಿ ಎಂದು ನಮ್ಮ ಪಕ್ಷದ ಕಾರ್ಯಕರ್ತರು ಅಭಿಮಾನಿಗಳು ಹೇಳಿ ಅವರಿಗೆ ಕೊಡತಕ್ಕಂಥ ಕಾರ್ಯಕ್ರಮವನ್ನು ನಾವು ಎಷ್ಟು ಸಾಧ್ಯವೋ ಅಷ್ಟು ಮಾಡಿದ್ದೇವೆ. ಅದರೆ ಸರ್ಕಾರದವರು ನೀವು ಏನು ಮಾಡಿದಿರಿ ? ಧಾರವಾಡ ಜಿಲ್ಲೆಯ ಒಬ್ಬ ಸಚಿವರು ಹೋಗಿದ್ದಾರೆ. ನಾನು ಅವರ ಹೆಸರನ್ನು ಹೇಳುವುದಕ್ಕೆ ಇಷ್ಟ ಇಲ್ಲ, ನನಗೆ ನಾಚಿಕೆಯಾಗುತ್ತದೆ. ಅಲ್ಲಿ ಹಾಗಿರತಕ್ಕಂಥ ಆ ಚಿತ್ರ ನೋಡಿದೆ. ಸಚಿವರು ಅಲ್ಲಿಗೆ ಹೋಗುತ್ತಾರೆ 5 ಪೈಸೆ ಇಲ್ಲ, ತಹಶೀಲ್ದಾರ್ ಅಸಿಸ್ಟೆಂಟ್ ಕಮೀಷನರ್ ಡಿ.ಸಿ. ಗಳ ಹತ್ತಿರ ಕೊಡುವುದಕ್ಕೆ ನಮ್ಮ ಹತ್ತಿರ ಹಣ ಏನೂ ಇಲ್ಲ ಎಂದು ಹೇಳಿದ ಮೇಲೆ ಜನ ಆ ಸಚಿವರಿಗೆ ಚೀಮಾರಿ ಹಾಕಿ ಅಲ್ಲಿಂದ ಓಡಿಸಿದ್ದಾರೆ. ಈ ಸರ್ಕಾರಕ್ಕೆ ಗೌರವ ಇಲ್ಲ ಎನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ಆಡುತ್ತಿದ್ದೇನೆ. ಅವರು ಆಮೇಲೆ ಅಲ್ಲಿಂದ ಹೋದವರು ಅಲ್ಲಿಗೆ ಕಾಲು ಇಟ್ಟಿಲ್ಲ. ಕಡೆಗೆ ನಾನು ಅಲ್ಲಿಗೆ ಹೋಗುವವರಿಗೂ ಇಲ್ಲ ಸುಮಾರಾಗಿ 6ನೇ ದಿನ ಅದು ಆದ ಮೇಲೆ ನಾನು ಎಲ್ಲಾ ಕಡೆ ಟೂರ್ ಮಾಡುತ್ತಲೇ ಇದ್ದೇನೆ ಎಲ್ಲಾ ಕಡೆ

ಕೂಡ. ಈ ಪರಿಸ್ಥಿತಿ ಆದರೆ ಹಾಗಾದರೆ ಈ ಸರ್ಕಾರದ ಇರುವಿಕೆಯ ಪ್ರಶ್ನೆಯನ್ನು ಕೂಡ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಸಭಾಧ್ಯಕ್ಷರೇ, ಇದಾದ ಮೇಲೆ ಚಿಕ್ಕಮಗಳೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ನಾನು ನೋಡಿ ಅಮೇಲೆ ಹಾಸನ ಜಿಲ್ಲೆಯಲ್ಲಿ ಬಹಳ ವರ್ಸ್ಟ್ ಎಫೆಕ್ಟೆಡ್ ನನಗೆ ಗೊತ್ತಿರುವ ಹಾಗೆ ಸಕಲೇಶಪುರ ಹಾಗೂ ಬೇಲೂರು ತಾಲ್ಲೂಕಿನಲ್ಲಿ ಕೆರೆಗಳು ಒಡೆದಿರತಕ್ಕಂಥಾದ್ದನ್ನು ನೋಡಲು ನಾನು ಸುಮಾರು 5-6 ಕೆರೆಗಳಿಗೆ ಹೋಗಿ ಬಂದೆ ಕಾರುಗಳು ಹೋಗುವುದಿಲ್ಲ ನಡೆದುಕೊಂಡು ಹೋಗಿ ಬಂದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಕೂಡ ಹಲವಾರು ಕಿಲೋಮಿಟರ್‌ಗಳವರೆಗೂ ನಾನು ಜನಗಳ ಜೊತೆಯಲ್ಲಿ ನಡೆದುಕೊಂಡು ಹೋಗಿ ಬಂದಿದ್ದೇನೆ. ಇವತ್ತು ಸರ್ಕಾರದವರು ಎಷ್ಟು ಕಿಲೋಮಿಟರ್‌ಗಳೂ ನಡೆದಿದ್ದೀರಿ? ಎಷ್ಟು ಜನರ ಜೊತೆಯಲ್ಲಿ ಹೋಗಿದ್ದೀರಿ, ಏಕೆ ಕೆಸರು ತುಳಿದರೆ ನಿಮಗೆ ಆಗುವುದಿಲ್ಲವೇ? ಕಡುಬಡವರಜೊತೆ ಹೋದರೆ ನಿಮಗೆ ಆಗುವುದಿಲ್ಲವೇ? ಕೆರೆಗಳು ಒಡೆದು ಹೋಗಿ ಎರಡು ಜನ ಸತ್ತಿದ್ದಾರೆ. ಬೇಲೂರು ತಾಲ್ಲೂಕು ಮತ್ತು ಸಕಲೇಶಪುರ ತಾಲ್ಲೂಕಿನಲ್ಲಿ ಒಂದು ಹೆಣ್ಣು ಮಗು ಕೊಚ್ಚಿಹೋಗಿದೆ. ಮತ್ತೊಬ್ಬರು ಪ್ರವಾಹದಿಂದ ಸತ್ತು ಹೋಗಿದ್ದಾರೆ.

ಪರಿಹಾರ ಕೊಡತಕ್ಕಂಥ ಒಂದು ಕಡೆಗೆ ಇರಲಿ ನಾನು ಕೇಳುವುದು ಒಂದೇ ಒಂದು ಮಾತು ಕೆರೆಗಳು ಒಡೆಯತಕ್ಕಂಥ ಪರಿಸ್ಥಿತಿ ಬಂದಾಗ ಎಮರ್ಜನ್ಸಿ ತೂಬುಗಳು ಇರುತ್ತವೆ. ಆ ತೂಬುಗಳನ್ನು ತೆಗೆಯಲು ಊರಿನವರು ಹೋಗಿ ಆ ಇಲಾಖೆಗೆ ಎಷ್ಟು ಒತ್ತಾಯ ಮಾಡಿದರೂ ಕೂಡ ಆತೂಬುಗಳನ್ನು ಎತ್ತಿಲ್ಲ. ನೀರು ಹೋಗಲು ಆ ಕೋಡಿ ಕಲ್ಲುಗಳನ್ನು ಮೊದಲು ಕಿತ್ತು ಹಾಕಿಬಿಡಬೇಕು. ಆಗ ಕೆರೆಯನ್ನು ನೀವು ಉಳಿಸಿಕೊಳ್ಳಬಹುದು. ಕೆಳಗಡೆ ಇರತಕ್ಕಂಥ ಬೆಳೆ ಹಾಳಾಗುವುದಿಲ್ಲ. ಇದರ ಬಗ್ಗೆ ಯಾವುದೇ ಕಾರ್ಯಕ್ರಮ ಸರ್ಕಾರ ಹಾಕದೇ ಇರುವುದರಿಂದ ಸುಮಾರು 35 ಎಕರೆಗಳು ಒಡೆದು ಹೋಗಿವೆ. ಸುಮಾರು 200 ಕೆರೆಗಳು ಬೇಲೂರು ತಾಲ್ಲೂಕು ಒಂದರಲ್ಲಿಯೇ ಡ್ಯಾಮೇಜ್ ಆಗಿವೆ. ಅದೇ ರೀತಿ ಸಕಲೇಶಪುರ ತಾಲ್ಲೂಕಿನಲ್ಲಿಯೂ ಕೂಡ ಹೋಗಿವೆ. ನಾನು ಟೂರು ಮಾಡಿ ಮಾಡಿ ಎಷ್ಟು ಎಂದು ನೋಡಬೇಕು ಸರ್ಕಾರಕ್ಕೆ ಅದರ ವರದಿಗಳನ್ನು ತರಿಸತಕ್ಕಂಥಾದ್ದು ಮಾಡುವುದು ಎಲ್ಲಾ ಕಡೆ ಕೂಡ ವಿವರ ತರಿಸಬೇಕಾಗುತ್ತದೆ. ಇವತ್ತು ಬೆಳೆ ದಕ್ಷಿಣ ಕನ್ನಡ ಜಿಲ್ಲೆ ಇರಬಹುದು ನಾನು ಕೇಳುತ್ತೇನೆ ಬೆಳಗಳ ಬಗ್ಗೆ ನೀರು ಏತಕ್ಕೆ ಮಹಜರ್ ಮಾಡಿಲ್ಲ? ಅಗ್ರಿಕಲ್ಚರ್ ಡಿಪಾರ್ಟಮೆಂಟ್ ಮಾಡಬೇಕಾಗಿತ್ತು. ಏತಕ್ಕೆ ಮಾಡಿಲ್ಲ? ನಾನು ಕೂಡ 1980ನೇ ಇಸವಿಯಲ್ಲಿ ರೆವಿನ್ಯೂ ಮಿನಿಸ್ಟರ್ ಆಗಿ ಕೆಲಸ ಮಾಡಿದ್ದೇನೆ. ಇವತ್ತು ಬೆಳೆ ಹಾಳಾದರೆ ಅಲ್ಲಿ ರಾಗಿ ಜೋಳ ಭತ್ತ ಕಬ್ಬು ಅಥವಾ ಯಾವುದೇ ದವಸ ಧಾನ್ಯಗಳು ಇರಬಹುದು ಬೆಳೆ ಹಾಳಾದರೆ ತತಕ್ಷಣ ಮಹಜರ್ ಬರೆಯಬೇಕು. ಬೇಕಾದರೆ ನೋಡಿ ನಿಮ್ಮ ಕಾನೂನು ಆಕ್ಟ್ ರೂಲ್ಸ್ ಬೇಕಾದಷ್ಟು ಇದ್ದಾವೆ. ನೀವು ಏತಕ್ಕೆ ಮಹಜರ್ ಬರೆದಿಲ್ಲ? ನಾನು ಹೋದ ಕಡೆಗಳಲ್ಲಿ ಅಗ್ರಿಕಲ್ಚರ್ ಡಿಪಾರ್ಟಮೆಂಟ್ ಅಫೀಸರ್ಸ್‌ ಅನ್ನು ಕೇಳಿದೆ. ಅದಕ್ಕೆ ಅವರು ಸಾರ್, ಸರ್ಕಾರದಿಂದ ಡೈರೆಕ್ಷನ್ ಬಂದಿಲ್ಲ ಎಂದರು ಯಾರು ನಿಮಗೆ ಡೈರೆಕ್ಷನ್ ಕೊಡುವುದಕ್ಕೆ ಅಲ್ಲ ಅಧಿಕಾರಿಗಳು ಅವರಿಗೆ ಹೃದಯ ಇದ್ದರೆ ತಾನೆ ಅವರು ಕೆಲಸ ಮಾಡುವುದು? ನೀವು ಎಲ್ಲಿ ಹೇಳಿದ್ದೀರಿ? ನೀವು ಈ ರೀತಿ ಮಾಡುತ್ತಿರುವುದರಿಂದ ಏನಾಗಿದೆ ಅಲ್ಲಿ ಮಹಜರ್ ವಗೈರೆ ಮಾಡಿಲ್ಲ ಮತ್ತೊಂದು ನಾನು ಮೊದಲೇ ಹೇಳಿದ ಹಾಗೆ 3 ತಿಂಗಳು ಭತ್ತ ಬರತಕ್ಕಂಥದ್ದು ಆ ಕಡೆ ಎಲ್ಲಿ ಮಳೆ ಜಾಸ್ತಿಯಾಗುತ್ತದೆ. ಅಲ್ಲಿ ಬೆಳೆ ತೆಗೆಯುವುದಕ್ಕೆ ಸಂಪೂರ್ಣವಾಗಿ ಕಾರ್ಯಕ್ರಮ ಹಾಕಬೇಕಾಗಿತ್ತು ಭತ್ತ ಬೀಜದ ಭತ್ತ ಮತ್ತು ಗೊಬ್ಬರ ಇದಕ್ಕೆ ನೀವು ರೆಡಿ ಮಾಡಬೇಕಾಗಿತ್ತು. ನೀವು ದಕ್ಷಿಣ ಕನ್ನಡ

ಜಿಲ್ಲೆ ಶಿವಮೊಗ್ಗ ಜಿಲ್ಲೆ ಸಕಲೇಶಪುರ ತಾಲ್ಲೂಕುಗಳು ಹಾಸನ ಜಿಲ್ಲೆಯಲ್ಲಿ ನೀವು ಯಾವುದೇ ಕಾರ್ಯಕ್ರಮವನ್ನು ಇವತ್ತಿನವರೆಗೂ ಹಾಗಿಲ್ಲ ಒಂದು ಕಾಳು ಬೀಜದ ಭತ್ತವನ್ನು ನೀವು ರೈತನಿಗೆ ಇವತ್ತಿನವರೆಗೂ ಕೊಟ್ಟಿಲ್ಲ. ಒಬ್ಬರಿಗಾದರೂ ನೀವು ತೆಗೆದುಕೊಂಡು ಹೋಗಿ ಕೊಟ್ಟಿಲ್ಲ.

ರೈತರ ಮನೆ ಬಾಗಿಲಿಗೆ ಬೀಜ ಮನೆ ಬಾಗಿಲಿಗೆ ಗೊಬ್ಬರ, ಇದು ಮುಖ್ಯಮಂತ್ರಿಗಳು ಹೇಳಿದ್ದು ಬೇರೆಯವರು ಹೇಳಿದ್ದುದು ಅಲ್ಲ. ಅದನ್ನು ನಾನು ಪ್ರಸ್ತಾವ ಮಾಡುವುದಿಲ್ಲ. ಇದನ್ನೇ ನಂಬಿಕೊಂಡಿರತಕ್ಕಂಥ ಬಡ ಜನರ ಗತಿ ಏನು? ಅಗ್ರಿಕಲ್ಚರ್ ಡಿಪಾರ್ಟ್ಮೆಂಟ್ ರೈತರಿಗೆ ಯಾವುದೇ ಸಹಾಯ ಮಾಡಿಲ್ಲ ಅದು ಸಂಪೂರ್ಣವಾಗಿ ಮಲಗಿಬಿಟ್ಟಿದೆ. ಅದರ ಕಾರ್ಯಕ್ರಮಗಳೆಲ್ಲಾ ನಾಶವಾಗಿವೆ. ಒಂದು ಬೆಳೆ ಆಲ್ಟರನೇಟಿವ್ ಆಗಿ ತೆಗೆಯಬಹುದಾಗಿತ್ತು ನೀವು ಅದರ ಬಗ್ಗೆ ಗಮನ ಏನೂ ಹರಿಸದೇ ಇರತಕ್ಕದ್ದು ನನ್ನ ಗಮನಕ್ಕೂ ಕೂಡ ಬಂದಿದೆ. ಮಾನ್ಯ ಸಭಾಧ್ಯಕ್ಷರೇ, ಹಾಸನ ಜಿಲ್ಲೆಯಲ್ಲಿ ಕೋಲಾರ ಜಿಲ್ಲೆ ಆಲೂಗಡ್ಡೆಯನ್ನು ಬೆಳೆಯುತ್ತಾರೆ. ಅದೇ ರೀತಿ ಉತ್ತರ ಕರ್ನಾಟಕ ರಾಜ್ಯದಲ್ಲಿ ಕೂಡ ಆಲೂಗಡ್ಡೆ ಬೆಳೆಯುತ್ತಾರೆ. ಈ ಆಲೂಗಡ್ಡೆ ಸಂಪೂರ್ಣವಾಗಿ ಹೊರಟುಹೋಗಿದೆ ನನಗೆ ಗೊತ್ತಿರುವ ಹಾಗೆ ನಾನು ಹೋದ ಕಡೆ ಸುಮಾರು 6-7 ಕೋಟಿ ರೂಪಾಯಿ ನಷ್ಟವಾಗಿದೆ. ಕಿತ್ತು ನೋಡಿದೆ ಎಲೆಗಳು ಹಸಿರು ಕಾಣುತ್ತಿತ್ತು. ಆದರೆ ಒಳಗಡೆ ಎಲ್ಲಾ ಒಣಗಿ ಕೊಳೆತು ಹೋಗಿವೆ. ಒಂದು ಎರಡು ದಿವಸ ಬಿಸಿಲು ಬಂದರೆ ಆ ಎಲೆಗಳು ಒಣಗಿ ಉದುರು ಬಿದ್ದು ಹೋಗುತ್ತವೆ. 6-7 ಕೋಟಿ ರೂಪಾಯಿಗಳಷ್ಟು ನಷ್ಟವಾದರೆ ಮಹಜರ್ ಎಲ್ಲಿರೆದಿದ್ದೀರಿ ನೀವು? ಹಾಸನ ಜಿಲ್ಲೆಯಿಂದ ಬಂದಿರತಕ್ಕಂಥ ನಮ್ಮ ಮಿತ್ರರನ್ನು ಕೇಳಿದೆ ಆಲೂಗಡ್ಡೆ ನಾಶವಾಗಿರತಕ್ಕಂಥ ಒಂದು ಮಹಜರನ್ನು ಎಲ್ಲೂ ಕೂಡ ಬರೆದಿಲ್ಲ. ಏಕೆ? ರೈತ ಓಟು ಹಾಕಲು ಬೇಕು ರೈತ ಈ ದೇಶದ ಸತ್ಪ್ರಜೆ ಎಂದು ಭಾಷಣ ಮಾಡುತ್ತೀರಿ ನೀವು ಏಕೆ ಸ್ವಾಮಿ ಇರತಕ್ಕಂಥ ಕಾನೂನನ್ನು ಪ್ರಯೋಗ ಮಾಡಲಿಲ್ಲ? ಏಕೆ ಮಹಜರ ಬರೆದಿಲ್ಲ? ಮಹಜರ್ ಬರೆಯುವ ಅರ್ಥ ಏನೆಂದರೆ ಪರಿಹಾರ ಕೊಡಬೇಕಾಗುತ್ತದೆ. ನೀವು ಅದು ಬರೆಸಿದರೆ ಹಣ ಕೊಡಬೇಕಾಗುತ್ತದೆ. ಅದಕ್ಕಾಗಿ ನೀವು ಮಹಜರ್ ಬರೆದಿಲ್ಲ. ಬರಗಾಲ ಪರಿಸ್ಥಿತಿ ಇರುವ ಕಡೆಗಳಲ್ಲಿ ಕೂಡ ಏನೂ ಇಲ್ಲ. ಆರಾಮವಾಗಿ ಕುಳಿತುಕೊಂಡಿದ್ದೀರಿ. ಸರ್ಕಾರ ಇಟ್ಟುಕೊಂಡು ವಿಧಾನ ಸೌಧದಲ್ಲಿ ಆರಾಮವಾಗಿ ಕುಳಿತುಕೊಂಡಿದ್ದೀರಿ. ಇವತ್ತು ಆಲೂಗಡ್ಡೆ ನಾಶವಾಗಿದೆ ಕೆರೆಗಳು ಒಡೆದು ನೂರಾರು ಎಕರೆಗಳಲ್ಲಿ ಇರುವಂತಹ ಬೆಳೆ ನಾಶವಾಗಿವೆ. ಇವತ್ತು ಆ ಜನರ ಗತಿ ಏನಾಗಬೇಕು? ಅಲ್ಲಿ ಕೂಡ ಮಹಜರ್ ಬರೆದಿಲ್ಲ, ನಾನು ಹೋಗವವರೆಗೂ ಬರೆದಿಲ್ಲ ಇವತ್ತಿನವರೆಗೂ ಕೂಡ ಬರೆದಿಲ್ಲ ಎನ್ನತಕ್ಕಂಥ ವಿಚಾರ ಕೂಡ ಬಂತು. ಮತ್ತೇ ಏನಾಗಿದೆ ಅಂದರೆ ಮೈಸೂರು ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ನನ್ನ ಹತ್ತಿರ ಹೆಸರುಗಳೂ ಕೂಡ ಇವೆ. ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕುಗ್ಗೂರು ಗ್ರಾಮಕ್ಕೆ ಕೂಡ ನಾನು ಹೋಗಿ ಬಂದೆ.

ನೀರು ನುಗ್ಗಿ ಮನೆಗಳೆಲ್ಲಾ ಹೋಗಿವೆ. ಕೊಳ್ಳೇಗಾಲದಲ್ಲಿ ಒಂದು ಗಂಜಿ ಕೇಂದ್ರ ತೆರೆದಿದ್ದಾರೆ. ಅಲ್ಲಿ ಏನು ಮಾಡಿದ್ದಾರೆ ಅಂದರೆ ಎರಡು ಮೂರು ದಿವಸ ಗಂಜಿ ಕೇಂದ್ರ ತೆಗೆದರು. ನೀರು ನುಗ್ಗಿ ಮನೆಗಳು ಬಿದ್ದು ಹೋಗಿವೆ. ಅವರು ಎದ್ದು ಹೋಗಿ ಎಲ್ಲಿ ಮಲಗಿಕೊಳ್ಳಬೇಕು ಎನ್ನುವುದು ಗೊತ್ತಿಲ್ಲ, ಮಕ್ಕಳು ಸಂಸಾರ ಕಟ್ಟಿಕೊಂಡು ಅವರು ಎಲ್ಲಿ ಹೋಗಬೇಕು. ಇವರು ಆಗಲೇ ಗಂಜಿ ಕೇಂದ್ರ ಮುಚ್ಚಿಬಿಟ್ಟಿದ್ದಾರೆ. ನಾನು ಹೋದ ದಿವಸ ಇರಲಿಲ್ಲ ಏಕೆ ಮುಚ್ಚಿದಿರಿ ಸ್ವಾಮಿ? ಮುಚ್ಚುವುದಕ್ಕೆ ನಿಮಗೆ ಏನು ಅಧಿಕಾರ ಇದೆ? ಗಂಜಿ ಕೇಂದ್ರ ತೆರೆಯುವ ಉದ್ದೇಶ

ಗೊತ್ತೇನು? ಅವರು ಮನೆಯಲ್ಲಿ ಏನಾದರೂ ಮಾಡಿಕೊಳ್ಳುವರೆಗೂ ಕೂಡ ಗಂಜಿ ಕೇಂದ್ರ ಮುಂದುವರಿಸಬೇಕು ಎಂಬುದು ಅದರ ಅರ್ಥ. ನೀವು ಅದು ಏನೂ ಮಾಡದೇ ತತ್‌ಕ್ಷಣ ಗಂಜಿ ಕೇಂದ್ರ ಮುಚ್ಚಿಸಿಬಿಟ್ಟರೆ ಆ ಜನರ ಗತಿ ಏನಾಗಬೇಕು? ಕೊಳ್ಳೇಗಾಲ ತಾಲ್ಲೂಕಿನಲ್ಲಿ ಸಂಪೂರ್ಣವಾಗಿ ಆಗಿರತಕ್ಕಂಥ ಅನ್ಯಾಯಗಳು ನನ್ನಗಮನಕ್ಕೆ ಬಂತು. ಅದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ಇದಾದ ಮೇಲೆ ಸರ್ಕಾರ ಕೊಟ್ಟಿರತಕ್ಕಂಥ ಹೇಳಿಕೆ ಕೊಟ್ಟಿದ್ದಾರೆ ಆ ಹೇಳಕೆಯಿಂದ ನಾವು ಏನು ನಾವು ನಿರೀಕ್ಷೆ ಮಾಡುತ್ತೇವೆ? ಅತಿವೃಷ್ಟಿ ಮತ್ತು ಅನಾವೃಷ್ಟಿ ಎರಡೂ ಕಡೆಗಳಲ್ಲಿ ಕೂಡ ಆಗಿವೆ. ಇವತ್ತು ನಾನು ಡಿಮ್ಯಾಂಡ್ ಮಾಡುತ್ತೇನೆ ಎಲ್ಲೆಲ್ಲಿ ಬೆಳೆ ಹಾಳಾಗಿದೆ ಅಲ್ಲೆಲ್ಲೂ ಪರಿಹಾರ ಕೊಡಬೇಕು ಎನ್ನುವ ಕಾನೂನು ಇದೆ ಅದನ್ನು ನೀವು ಕೊಡಬೇಕೆಂದು ರೈತರ ಪರವಾಗಿ ನಾನು ಒತ್ತಾಯ ಮಾಡುತ್ತೇನೆ. ಅದು ಬರಗಾಲ ಆದರೂ ಇರಬಹುದು ಅತಿವೃಷ್ಟಿಯಿಂದ ಆಗಿರತಕ್ಕಂಥ ತೊಂದರೆ ಅದರೂ ಇರಬಹುದು ಎಲ್ಲೆಲ್ಲಿ ಬೆಳೆ ಹಾನಿಯಾಗಿದೆ ಅಲ್ಲಿ ಆಲ್ಟರ್‌ನೇಟೀವ್ ಆಗಿ ಈಗಲೂ ಕೂಡ ಏನಾದರೂ ಒಂದು ಸಣ್ಣ ಬೆಳೆ ಬೆಳೆಯುವುದಕ್ಕೆ ಕ್ರಮ ಕೈಗೊಳ್ಳಬೇಕು. ಕೆಲವು ಕಡೆ ಹುರುಳಿ ಬೆಳೆ ತೆಗೆಯಬಹುದು. ಬಯಲುಸೀಮೆ ಪ್ರದೇಶದಲ್ಲಿ ಅದು ಎರಡೂವರೆ ತಿಂಗಳಲ್ಲಿ ಬರುತ್ತದೆ. ಅದೂ ಕೂಡ ಮಾಡಬಹುದು, ಇದರ ಬಗ್ಗೆ ಮೀಟಿಂಗ್ ಇಲ್ಲ ಚರ್ಚೆ ಇಲ್ಲ ಏನೂ ಇಲ್ಲ ಕಂದಾಯ ಇಲಾಖೆ ಅಲ್ಲಿ ಮಲಗಿತು.

ಅಗ್ರೀಕಲ್ಚರ್ ಇಲಾಖೆ ಅಲ್ಲಿ ಮಲಗಿತು. ಇನ್ನು ಉಳಿದವರಂತೂ ಮಲಗಿದರು. ಮುಖ್ಯಮಂತ್ರಿಯವರು ನೂರು ಕೋಟಿ 45 ಸಾವಿರ ಕೋಟಿ ಎಂದೂ ಭಾಷಣ ಮಾಡುತ್ತಾ ಹೊರಟರು. ಇಲ್ಲಿಂದ ಅಲ್ಲಿಯವರೆಗೂ ಇದನ್ನು ಇವರು ಮಾಡುತ್ತಾ ಹೋದರು. ರೈತರದ್ದು ಪಂಪ್ ಸೆಟ್‌ಗಳು ಸಿಕ್ಕಾಪಟ್ಟೆ ಹಾಳಾಗಿ ಹೋಗಿವೆ. ಅದರ ಬಗ್ಗೆ ಮೈಸೂರು ಜಿಲ್ಲೆಯಲ್ಲಿ ಮಹಜರ್ ಮಾಡಿದ್ದು ನನಗೆ ಕಂಡು ಬಂದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಡು ಬಂದಿಲ್ಲ. ಅನೇಕ ಕಡೆಗಳಲ್ಲಿ ಮಹಜರ್ ಆಗದೆ ಇರತಕ್ಕಂಥಾದ್ದು ಸಾಕಷ್ಟು ಪ್ರಮಾಣದಲ್ಲಿ ನನ್ನಗಮನಕ್ಕೆ ಬಂದಿದೆ ಎನ್ನತಕ್ಕಂಥಾದ್ದನ್ನು ತಮ್ಮ ಗಮನಕ್ಕೆ ತರುತ್ತೇನೆ. ಒಟ್ಟು ಈ ಪರಿಸ್ಥಿತಿಯನ್ನು ನಿಭಾಯಿಸಲು ಸರ್ಕಾರ ನಾನು ಮೊದಲೇ ಹೇಳಿದಹಾಗೆ ಬರಗಾಲ ವಿಚಾರ ಬಂದಾಗ ಕಾರ್ಯಕ್ರಮ ಯಾವ ರೀತಿ ಹಾಕಬೇಕು ಎಂಬುದನ್ನು ಹೇಳಿದೆ. ಇಲ್ಲಿ ಅತಿವೃಷ್ಟಿ ಆಗಿರತಕ್ಕಂಥ ಪ್ರದೇಶ ಇರಬಹುದು ಮತ್ತೊಂದು ಇರಬಹುದು ಹಣವನ್ನು ಬಿಡುಗಡೆ ಮಾಡುವುದಕ್ಕೆ ಎರಡು ದಾರಿಗಳು ಇವೆ. ಇವತ್ತು ನೀವು ಬರಗಾಲದ ವಿಚಾರದಲ್ಲಿ ಬರಪರಿಹಾರ ಕಾರ್ಯಕ್ರಮಗಳಿಗಾಗಿ ದಿನಾಂಕ 1-4-94 ರಿಂದ 23-8-94 ರವರೆಗೂ ಹಣ ಬಿಡುಗಡೆ ಮಾಡಿದ್ದು 6 ಲಕ್ಷ 80 ಸಾವಿರಗಳು ಮಾತ್ರ.

6.80 ಕೋಟಿ ರೂ ನೀವು ಬಿಡುಗಡೆ ಮಾಡಿದ್ದು. ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಮಾಡಿದಿರಿ ಎಂಬ ಬ್ರೇಕ್, ಅಫ್ ಫಿಗರ್ ಸದನಕ್ಕೆ ಕೊಟ್ಟರೆ ಇನ್ನೂ ಎಷ್ಟು ಬೇಕಾಗಬಹುದು, ತಾಲ್ಲೂಕಿಗೆ ಎಷ್ಟು ಹೋಗುತ್ತದೆ ಎಂಬುದನ್ನು ಹೇಳಲು ಅನುಕೂಲ ಆಗುತ್ತದೆ, ನೀವು ಏನು ಮಾಡಿದ್ದೀರಿ? ಮುಗುಂ ಆಗಿ ಇಟ್ಟುಬಿಟ್ಟಿದ್ದೀರಿ, ಬೆಂಗಳೂರು ನಗರ 10 ಲಕ್ಷ, ಕೋಲಾರ 35 ಲಕ್ಷ, ಉತ್ತರಕನ್ನಡ 10 ಲಕ್ಷ, ಈ ರೀತಿ ಕೊಟ್ಟಿರುವುದು ಸರಿಯಾದುದ್ದಲ್ಲ. ಸದನಕ್ಕೆ ಮಾಹಿತಿ ಕೊಡಬೇಕಾದರೆ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಬ್ರೇಕ್ ಅಫ್ ಫಿಗರ್ ಕೊಡಬೇಕು. ಅನಂತರ ಭಾರಿ ಮಳೆ ಆಗಿರುವಂತಹ ಸಂದರ್ಭದಲ್ಲಿ ಒಟ್ಟು ಹಣ ಬಿಡುಗಡೆ ಮಾಡಿರುವುದು 10.15 ಕೋಟಿ ರೂ. 8-6-94 ರಿಂದ 23-8-94 ರವರೆಗೆ ಇದ್ದಕ್ಕಿಂತ ಮುಂಚೆ ಹೇಳಿದ್ದೀರಿ, ಒಂದು ನಿಧಿ ಇದೆ, ಜಿಲ್ಲಾಧಿಕಾರಿಗಳಿಗೆ ನಾವು ತಿಳಿಸಿದ್ದೇವೆ, ಜಿಲ್ಲಾಧಿಕಾರಿ ಪ್ರಕೃತಿ ವಿಕೋಪ ಪರಿಹಾರ ನಿಧಿ ಅಡಿಯಲ್ಲಿ ಉದ್ಯೋಗ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಿದ್ದಾರೆ

ಎಂದು ಯಾವ ನಿಧಿ ಇದೆ ಅಲ್ಲಿ? ಆ ನಿಧಿಯ ಸ್ವರೂಪವೇನು? ಎಷ್ಟು ಹಣ ಯಾವ್ಯಾವ ಜಿಲ್ಲೆಗೆ ನಿಗಧಿಮಾಡಿದ್ದೀರಿ? ನಾನು ಕೇಳುವುದು ನೀವು ಒಂದು ನಿಧಿ ಮಾಡಿದ್ದರೆ ಅದನ್ನು ಕೇವಲ ಬರಗಾಲಕ್ಕೆಂದು ಮಾಡಲು ಬರುವುದಿಲ್ಲ. ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದ ನಿಧಿ ಎಂದರೆ ನ್ಯಾಚುರಲ್ ಕ್ಯಾಲಮಿಟಿ ರಿಲೀಫ್ ಫಂಡ್ ಎಂಬುದು ನನಗೆ ಗೊತ್ತಿರುವುದು; ಶ್ರೀ ವಿ.ಪಿ. ಸಿಂಗ್ ಅವರು ಪ್ರಧಾನಿಗಳಾಗಿದ್ದ ಸಂದರ್ಭದಲ್ಲಿ ಕರ್ನಾಟಕ ರಾಜ್ಯಕ್ಕೆ ನಿಗದಿ ಮಾಡಿದಾದರೆ 27.5 ಕೋಟಿ ಅದರಲ್ಲಿ ಮೂರನೆಯ, ಒಂದು ಭಾಗ ರಾಜ್ಯಸರ್ಕಾರ, ಮೂರನೇಯ ಎರಡು ಭಾಗ ಕೇಂದ್ರಸರ್ಕಾರ ಕೊಡಬೇಕು. ಆಯಾ ರಾಜ್ಯಗಳ ಜನಸಂಖ್ಯೆ, ಪ್ರದೇಶಕ್ಕನುಗುಣವಾಗಿ ಸರ್ಟನ್ ಕ್ರೈಟೀರಿಯಾಸ್ ಅವರು ಇಟ್ಟುಕೊಂಡು ಮಾಡಿದ್ದಾರೆ. ನಾನು ಮುಖ್ಯಮಂತ್ರಿಗಳ ಸಭೆಯಲ್ಲಿ ಶ್ರೀ ಪಿವಿ ನರಸಿಂಹವಾವ್ ಪ್ರಧಾನಿಮಂತ್ರಿಯಾದ ಮೇಲೆ ಒತ್ತಾಯ ಮಾಡಿದ್ದೇನೆ, 27.5 ಕೋಟಿಯ ನ್ಯಾಚುರಲ್ ಕ್ಯಾಲಮಿಟಿ ರಿಲೀಫ್ ಫಂಡ್ ಏನಿದೆ ತತ್‌ಕ್ಷಣ ನೀವು ಬದವಾವಣೆ ಮಾಡಿ ಜಾಸ್ತಿ ಮಾಡಬೇಕು, ಎಷ್ಟು ಮಾಡಬೇಕೆಂಬ ಬಗ್ಗೆ ವಿವರಗಳನ್ನು ಆಯಾ ರಾಜ್ಯ ಸರ್ಕಾರಗಳ ಜೊತೆ ಚರ್ಚೆ ಮಾಡೋಣ. ಕರ್ನಾಟಕದವರು ಚರ್ಚೆಗೆ ನಾವು ತಯಾರಾಗಿದ್ದೇವೆ, ಬೇರೆ ರಾಜ್ಯದವರನ್ನು ಕರೆಸಿರಿ. ಏಕೆಂದರೆ ಕೂಲಿಗೆ ಹೆಚ್ಚಿ ನಾವು ಕೆಲಶ ಕೊಡುವುದಿದ್ದರೆ ಮಿನಿಮಂ ವೇಜಸ್ ಆಕ್ಟ್ ಪ್ರಕಾರ ಕೂಲಿ ದರ ಜಾಸ್ತಿಯಾಗಿಬಿಟ್ಟಿದೆ. ಮನೆ ಬಿದ್ದುಹೋದರೆ ನೀವು ಪರಿಹಾರ ಕೊಡುವಾಗ ರೇಟ್ ಎಸ್ಕಲೇಟ್ ಆಗಿಹೋಗಿದೆ. ಬೀಜ ಕೊಡಬೇಕಾದರೆ ಬೀಜದ ರೇಟು ಜಾಸ್ತಿಯಾಗಿದೆ. ಗೊಬ್ಬರದ ಬೆಲೆಯನ್ನು ಕೇಂದ್ರಸರ್ಕಾರದವರೇ ಜಾಸ್ತಿ ಮಾಡಿದ್ದಾರೆ. Because they haver withdrawn the subsidy given on the fertilisers over the last several years.

ಏನಾಗಿದೆ ಈ ದೇಶದಲ್ಲಿ ಇವತ್ತು, 3 ಸಾವಿರ ಕೋಟಿ ಕೆಮಿಕಲ್ ಫರ್ಟಿಲೈಸರ್ಸ್ ಮೇಲೆ ಸಬ್ಸಿಡಿ ಇರುತ್ತಿತ್ತು, ಏಕೆಂದರೆ ಹಸಿರು ಕ್ರಾಂತಿ ತರಬೇಕೆಂದು ಶ್ರೀಮತಿ ಇಂದಿರಾಗಾಂಧಿಯವರ ಕಾಲದಿಂದ ಹಿಡಿದು ರಾಜೀವಗಾಂಧಿ ವಿ.ಪಿ. ಸಿಂಗ್‌ರವರ ಕಾಲದವರೆಗೆ ಗೊಬ್ಬರದ ಮೇಲೆ ಸಬ್ಸಿಡಿ ಇರುತ್ತಿತ್ತು. ಅಭಿವೃದ್ಧಿಯಾದ ಅಮೆರಿಕ, ಜಪಾನ್, ಯೂರೋಪಿನ ಕೆಲವು ರಾಷ್ಟ್ರಗಳಲ್ಲಿ ಈಗಲೂ they are giving subsidies on certain commodities.

ನಮ್ಮಂಥ ಡೆವಲಪಿಂಗ್ ದೇಶದಲ್ಲಿ ಸಬ್ಸಿಡಿ ವಿತ್‌ಡ್ರಾ ಮಾಡಿಬಿಟ್ಟರೆ ಗತಿ ಏನಾಗುತ್ತದೆ? ಇವತ್ತೇನಾಗಿದೆ? ನಾನು ಕೇಂದ್ರ ಸರ್ಕಾರದ ಮೇಲೆ ಭಾಷಣಮಾಡುತ್ತಿಲ್ಲ. Our farming community is the worst affected one in our State, what is the use of Chemical fertilisers?

17 ಲಕ್ಷ ಟನ್ 90-91ರಲ್ಲಿ ಉಪಯೋಗಿಸಿದ್ದರೆ 91-92ರಲ್ಲಿ ನಾನು ನಿರೀಕ್ಷೆ ಮಾಡಿದ್ದೆ ಅದು 20 ಲಕ್ಷ ಟನ್‌ವರೆಗೂ ಹೊರಟುಹೋಗುತ್ತದೆ ಎಂದು. ಇವತ್ತೇನಾಗಿದೆ ಗತಿ? ರೈತರಿಗೆ ಹೇಗೆ ಸ್ವಾಮಿ ನೀವು ಧೈರ್ಯ ತುಂಬಲು ಸಾಧ್ಯವಾಗುತ್ತದೆ? ಕರ್ನಾಟಕಕ್ಕೆ ಅನ್ವಯಿಸಿ ಹೇಳಿದರೂ the policy adopted by the Government of India in their central Budget is highly objectionable.

ಕೇಂದ್ರ ಸರ್ಕಾರಕ್ಕೆ ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಮೊದಲು ಫರ್ಟಿಲೈಸರ್ ಮೇಲೆ ಸಬ್ಸಿಡಿ ಕೊಡಿ ಎಂದು. ಜೋಳ ಕಬ್ಬು ರಾಗಿ ಭತ್ತ ಅಕ್ಕಿ ಅನೇಕ ಕೃಷಿ ಉತ್ಪನ್ನಗಳ ಮೇಲೆ ಇರುವುದನ್ನು ವಿತ್ ಡ್ರಾ ಮಾಡಿಬಿಟ್ಟರು. the common man cannot buy chemical fertilisers and make purchases during the rainy season. ಹಣ ಇಲ್ಲದೇ ಇರುವಂತಹ ಸಂದರ್ಭದಲ್ಲಿ ತಮಗೆಲ್ಲಾ ಗೊತ್ತಿರುವಂಥದು.

ಈ ಸಂದರ್ಭದಲ್ಲಿ ಸಬ್ಸಿಡಿ ವಿತ್ ಡ್ರಾ ಮಾಡಿ the rates have gone sky-high. ಗೊಬ್ಬರ ತೆಗೆದುಕೊಂಡು ಹೋಗಿ ಬೆಳೆಯುವ ಹಾಗಿಲ್ಲ - ಈ ಪರಿಸ್ಥಿತಿ ಆಗಿಬಿಟ್ಟರೆ ಹೇಗೆ ಸ್ವಾಮಿ ಇದನ್ನು ನಿಭಾಯಿಸಬೇಕು? ಈ ಸಂದರ್ಭದಲ್ಲಿ ನ್ಯಾಚುರಲ್ ಕೆಲಾಮಿಟಿ ರಿಲೀಫ್ ಫಂಡ್ 27.5 ಕೋಟಿ ಏನಿದೆ ಅದು ಸಾಲದು ಎಂಬ ಒತ್ತಾಯವನ್ನು ನಾನು ಮುಖ್ಯಮಂತ್ರಿಯಾಗಿ ಮಾಡಿದ್ದಾರೆ ಇವರ ಸರ್ಕಾರದ ಬಂದ ಮೇಲೆ ಏನು ಮಾಡಿದ್ದಾರೆ? ಕೇಂದ್ರಕ್ಕೆ ಒಂದು ಪತ್ರ ಬರೆದಿದ್ದಾರಾ? ಅದನ್ನು ರಿವೈಸ್ ಮಾಡಿ ಜಾಸ್ತಿ ಮಾಡಬೇಕೆಂಬ ಒತ್ತಡ ತಂದಿದ್ದಾರಾ? ಅದರ ಬಗ್ಗೆ ಏನೂ ಹೇಳಿಲ್ಲ. ಈ ಹೇಳಿಕೆ ಕೊಟ್ಟಿದ್ದಾರೆ. ಇದನ್ನು ತಾವೆಲ್ಲಾ ಓದಿ ನೋಡಬೇಕು. ಎಲ್ಲಾದರೂ ನ್ಯಾಚುರಲ್ ಕೆಲಾಮಿಟಿ ಫಂಡ್ ಬಗ್ಗೆ ಒಂದು ಮಾತು ಆಡಿದ್ದಾರೋ, ದಯವಿಟ್ಟು ಓದಿ ನೋಡಿ ಕೇಂದ್ರದಿಂದ ಸ್ಥಾಪನೆಯಾದದ್ದು ಈನಿಧಿ ಅದರಲ್ಲಿ ಮೂರನೇ ಒಂದು ಭಾಗ ಷೇರ್ ನಮ್ಮದಿದೆ. ನಾನು ಮುಖ್ಯಮಂತ್ರಿಯಾಗಿದ್ದಾಗ ಬಜೆಟ್‌ನಲ್ಲಿ ಹಣ ಇಡುತ್ತಾ ಹೋಗಿದ್ದನು ಏಕೆ, Is not out State Government a Party to the Natioanl calamity Relief Fund? I would like to know that. Have they withdrawn that money? ಅಥವಾ ನಾನು ಕೊಟ್ಟಿದ್ದನ್ನು ಕೂಡ ಇವರು ಹಿಂದಕ್ಕೆ ತೆಗೆದುಕೊಂಡಿದ್ದಾರೋ ಏಕೆ ಇವರು ಹಣ ಇಡಲಿಲ್ಲ ಅದರಲ್ಲಿ? ಆ ಹಣ ಇಡುವುದರಿಂದ ಏನಾಗುತ್ತದೆ ಎಂದರೆ ಅದರಲ್ಲಿ ನಮ್ಮ ಕ್ಲೇಮಿದೆ ಆ ಹಣವನ್ನು ತೆಗೆದುಕೊಂಡು ರೈತರಿಗೆ ಬೇಕಾದಷ್ಟು ಸಹಾಯ ಮಾಡಬಹುದಿತ್ತು. ತಮಗೆಲ್ಲ ಗೊತ್ತಿರುವಂತೆ 27.5 ಕೋಟಿ ನ್ಯಾಚುರಲ್ ಕೆಲ್ಯಾಮಿಟಿ ಫಂಡ್‌ಗೆ ಇವರು ಹಣ ಏಕೆ ಕೊಟ್ಟಿಲ್ಲ, ಆ ಹಣ ಏಕೆ ತೆಗೆದುಕೊಂಡಿಲ್ಲ, It is our right and it is our money ಏಕೆ ಸ್ವಾಮಿ ಹೇಳಿಕೆಯಲ್ಲಿ ಅದನ್ನು ಕೊಟ್ಟಿಲ್ಲ? ಮುಖ್ಯಮಂತ್ರಿಗಳಿದ್ದರೆ ಬಹಳ ಚೆನ್ನಾಗಿತ್ತು. ಏಕೆಂದರೆ ಆ ಫಂಡಿನ ಗತಿ ಏನಾಗಿದೆ ಎಂದು ಮಾನ್ಯ ಕಂದಾಯ ಮಂತ್ರಿಗಳಿಗೆ ಏನೂ ಗೊತ್ತಿರುತ್ತೆ. ಏಕೆಂದರೆ ಅವರು ಹೇಳಿಕೆ ಕೊಟ್ಟರು, ಇವರು ಓದಿದರು, ಹೋದರು ಇದರ ಬಗ್ಗೆ ಬಜೆಟ್‌ನಲ್ಲಿ ಏನಾಗಿದೆನ್ನುವ ವಿಚಾರ ನಮಗೆ ಗೊತ್ತಾಗಬೇಕು. ಏಕೆ ನೀವು ಹಣ ಇಟ್ಟಿಲ್ಲ? ಇಟ್ಟಿದ್ದರೆ ನ್ಯಾಚುರಲ್ ಕೆಲಾಮಿಟಿ ಫಂಡಿನಿಂದ ನೀವು ಕ್ಲೇಂ ಮಾಡಬೇಕಾಗಿತ್ತು. If you have not claimed it, if is a serious lose on the part of the Government and I hold you responsible.

ನಿಮ್ಮನ್ನು ಸಂಪೂರ್ಣ ಜವಾಬ್ದಾರಿಗೆ ಗುರಿ ಪಡಿಸುತ್ತಿದ್ದೇನೆ. ಇದಲ್ಲದೆ ಇವರೇನು ಮಾಡಿದರು, ಓಹೋ, ನೂರು ಕೋಟಿ ಬೆಳೆಯಲ್ಲಾ ಪೂರ್ತಿ ಲಾಸಾಗಿ ಬಿಟ್ಟಿದೆ. ಬಹಳ ಅನ್ಯಾಯ ಎಂದರು, ವೀರಪ್ಪ ಮೊಯ್ಲಿಯವರು, ಹೇಳಿಕೆ ಕೊಡುವುದರಲ್ಲಿ ನಿಸ್ಸೀಮರು. ನಾನು ಕೇಳುವುದು 10.15 ಕೋಟಿ ಕೇಂದ್ರ ಹಣ ಬಿಡುಗಡೆ ಮಾಡಿದ್ದರೆ it is purely out of our State Fund. ಸ್ವಾಮಿ, ಕೇಂದ್ರದಿಂದ ಸಚಿವರು ಬಂದರು. Sri Mallikarjuna, the Hon'ble Minister in the central Govemment, ಬಹಳ ಸಂತೋಷ ಅವರು ಬಂದು ಹೇಗೆ ಹೋದರು ಎನ್ನುವುದು ಗೊತ್ತಿಲ್ಲ ಅನೇಕ ಕಡೆಯಲ್ಲಿ ಏರಿಯಲ್ ಸರ್ವೆ ಮಾಡಿದ್ದಾರೆ. What is the purpose of survey? conducting aerial ಪ್ರವಾಹ ತುಂಬಿದ್ದರೆ ಏರಿಯಲ್ ಸರ್ವೆ ಮಾಡಬಹುದು, ನಾವೇನೂ ರೋಡಿನಲ್ಲಿ ಹೋಗಿಬರಲಿಲ್ಲವೇ, What was the reporrt submitted by the Hon'ble Minister Mr. Mallikarjuna to the Hon'ble Prime inister? What is the reply sent by the central Government . I demand that in our reply, you must make a mention of all these details. It is the right of this august House to know all the details.

ಏತಕ್ಕೆ ಸದನಕ್ಕೆ ಆ ವಿವರಗಳನ್ನು ನೀವು ಕೊಟ್ಟಿಲ್ಲ? ನೀವು ಪೇಜ್ 3ರಲ್ಲಿ ಹೇಳಿಕೆ ಕೊಟ್ಟಿದ್ದೀರಿ ಮಲ್ಲಿಕಾರ್ಜುನ್ ಬಂದಿದ್ದರು, ಶ್ರೀ ಸಿಕೆ ಜಾಫರ್‌ಶರೀಫ್

ಬಂದಿದ್ದರೂ; ಎಲ್ಲರೂ ಇದ್ದರೂ. ನೂರು ಕೋಟಿ ಕೇಂದ್ರದ ನೆರವು ಕೋರಿ ಮನವಿ ಸಲ್ಲಿಸಿದ್ದೇವೆಂದು ಮನವಿಯನ್ನು ಸಲ್ಲಿಸಿದ ಮೇಲೆ ನೀವು ಹಣತೆಗೆದು ಕೊಳ್ಳಬೇಕಾಗಿತ್ತು. ನಿಮ್ಮ ಹಣೆಬರಹಕ್ಕೆ ಇನ್ನು 5 ಪೈಸೆ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ನ್ಯಾಚುರಲ್ ಕೆಲಾಮಿಟಿ ಫಂಡ್ನಿಂದಾಗಲಿ, ಬೇರೆ ಫಂಡಿನಿಂದಾಗಲಿ not even a pai has been released from the Government of India out of the Natural Calamity fund.

ಏಕೆ ಸ್ವಾಮಿ ವಿವರ ಕೊಟ್ಟಿಲ್ಲ ನೀವು?

ಶ್ರೀ ಧರ್ಮಸಿಂಗ್ : ನಾಲ್ಕು ವರ್ಷದಿಂದ ಮನವಿ ಕಳುಹಿಸುತ್ತಿದ್ದೇವೆ. 1990, 91, 92,ಮತ್ತು 93

ಶ್ರೀ ಎಸ್. ಬಂಗಾರಪ್ಪ : ನಾನು ಹಳೆಯದನ್ನು ಕೇಳುತ್ತಿಲ್ಲ. ನಾನು ಕೊನೇಪಕ್ಷ ನ್ಯಾಚುರಲ್ ಕೆಲ್ಯಾಮಿಟಿ ಫಂಡಿನಿಂದ ಹಣವನ್ನು ತೆಗೆದುಕೊಳ್ಳುತ್ತಿದ್ದೆ. ನೀವು ಐದು ಪೈಸಾ ತೆಗೆದು ಕೊಳ್ಳಲು ಆಗಲಿಲ್ಲ. ನ್ಯಾಚುರಲ್ ಕೆಲ್ಯಾಮಿಟಿ ರಿಲೀಫ್ ಫಂಡಿನಲ್ಲಿ State Government share is 1/3.

ಇದನ್ನೂ ಇನ್ನೂ ಜಾಸ್ತಿ ಮಾಡಬೇಕು, ಎಷ್ಟು ಜಾಸ್ತಿ ಮಾಡಬೇಕು ಎನ್ನುವುದು ಬೇರೆ ವಿಚಾರ. ಆದರೆ ಹಣ ತೆಗೆದುಕೊಳ್ಳುವಂಥ ಹಕ್ಕು ನಿಮಗಿದೆ. ಇದರಲ್ಲಿ ಆ ಫಂಡ್ ವಿಚಾರವಿಲ್ಲ, ಕೇಂದ್ರದ ವಿಚಾರವಿಲ್ಲ; ಮತ್ತೊಂದಿಲ್ಲ; ಅದನ್ನು ಏನು ಮಾಡಬೇಕೆಂದಿದ್ದಿರಿ ನೀವು? ಅದಕ್ಕಾಗಿ ದೇಶಪಾಂಡೆಯವರು ಹೇಳಿದರು, ನಾವು ಮಾಡಲಿಲ್ಲ. ನೀವು ಮಾಡುತ್ತೇವೆ ಎಂದು ನಿಮ್ಮನ್ನು ಕೂರಿಸಿದ್ದಾರೆ, ನೀವು ಏನು ಮಾಡಿದ್ದೀರಿ ಎಂದು ನಾನು ಕೇಳಿದರೆ, ನೀವು ಹಿಂದೆ ಕೂಡ ಹಾಗಾಗಿದೆ ಎನ್ನುತ್ತೀರಿ. ಅದೆಲ್ಲಾ ಬೇಕಾಗಿಲ್ಲ. ನೀವು ಎಷ್ಟು ತಂದಿರಿ? ಸೆಂಟ್ರಲ್ ಕೆಲ್ಯಾಮಿಟಿ ಫಂಡ್‌ನಿಂದ ನೀವು ಎಷ್ಟು ಹಣ ತಂದಿದ್ದೀರಿ? ಅದನ್ನು ಏಕೆ ಮಾತನಾಡುತ್ತಿಲ್ಲ? ಏತಕ್ಕೆ ನೀವು ಪ್ರಧಾನಮಂತ್ರಿಗಳ ಹತ್ತಿರ ಹೋಗಿ ಮಾತುಕತೆ ಆಡಿ ಬಂದಿಲ್ಲ? ಪ್ರಧಾನಮಂತ್ರಿಯವರ ಇವತ್ತಿಗೂ ಒಂದು ಮಾತೂ ಆಡಿಲ್ಲ. ಇದರ ಬಗ್ಗೆ ಮಾತನಾಡಲಿಲ್ಲ. ಅವರು ಮಿನಿಸ್ಟರ್‌ನ್ನು ಕಳುಹಿಸಿ ಕೊಡುತ್ತಾರೆ; ಮುಗಿದು ಹೋಯಿತು. ಮುಖ್ಯಮಂತ್ರಿವರು ಹೋಗಿ ಬರುತ್ತಾರೆ, ಮುಗಿದು ಹೋಯಿತು. ಹೇಳಿಕೆ ಕೊಡುತ್ತಾರೆ, ಹಣದ ಕೊರತೆ ಏನೇನೂ ಇಲ್ಲ. ನಿಮ್ಮ ಪರಿಸ್ಥಿತಿ ನನಗೆ ಗೊತ್ತಿದೆ. ನಿಮ್ಮ ಟ್ರೆಜರಿಯಲ್ಲಿ ಹಣ ಇಲ್ಲ ಎಂದು. ಮಾನ್ಯ ಮುಖ್ಯಮಂತ್ರಿಯವರು ಹಣದ ಕೊರತೆ ಇಲ್ಲ; ಬಿಡುಗಡೆ, ಬಿಡುಗಡೆ ಎಂದು ಹೇಳುತ್ತಿರುತ್ತಾರೆ. ಏನು ಬಿಡುಗಡೆ? ಅಲ್ಲ ಜನ ನರಳುತ್ತಿದ್ದಾರೆ. ಜನ ಬಿಡುಗಡೆಯಾಗ ಬೇಕಾಗಿದೆ ನಿಮ್ಮಿಂದ, ಹಣ ಬಿಡುಗಡೆಯಾಗುವುದು ಅಲ್ಲ. ಕರ್ನಾಟಕ ಜನತೆ ನಿಮ್ಮಿಂದ ಬಿಡುಗಡೆ ಆಗುವಂಥ ಕಾಲ ಸನ್ನಿಹಿತವಾಗುತ್ತಿದೆ. ಸ್ವಲ್ಪ ಕಾಯ್ದುಕೊಳ್ಳಿ. ಅಧಿಕಾರದ ಕಾಲ ಬಹಳ ದೂರವಿಲ್ಲ ಎಂದು ನಾನು ಹೇಳುತ್ತೇನೆ. ಈ ಸಂದರ್ಭದಲ್ಲಿ ನಾನು ಕೇಂದ್ರ ಸರ್ಕಾರದ ನೀತಿಯನ್ನು ಖಂಡಿಸುತ್ತೇನೆ. ಏಕೆಂದರೆ ಹಿಂದೆ ಇದ್ದ ಕೇಂದ್ರ ಸರ್ಕಾರದವವರು ಆ ನೀತಿಯನ್ನು ಮಾಡಿದಾಗ ಈಗಿರುವ ಕೇಂದ್ರ ಸರ್ಕಾರ ಅದನ್ನು ಏಕೆ ಕೈಬಿಟ್ಟಿತ್ತು? ನಮ್ಮ ರಾಜ್ಯಕ್ಕೆ ಏಕೆ ಅನ್ಯಾಯ ಮಾಡಿತು? ಈ ದೃಷ್ಟಿಯಿಂದ ನಾನು ಹೇಳುತ್ತಿರುವುದು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಎರಡು ಸೇರಿ ಅಲ್ಲಿ ಏನಾದರೂ ಮಳೆಗಾಲ, ಬರಗಾಲ ಬಂದರೆ, ಕೇಂದ್ರದ ಕಡೆ ಕೈ ತೋರಿಸುವುದು. ಆಮೇಲೆ ಇವರು ಉಳಿದುಕೊಳ್ಳುವುದು. ನಾನು ಹೇಳುವುದು ನೀವಿಬ್ಬರೂ ಸೇರಿ ಕರ್ನಾಟಕ ರಾಜ್ಯದ ಜನತೆಗೆ ಸಂಪೂರ್ಣವಾಗಿ ಅನ್ಯಾಯ ಮಾಡುತ್ತಿದ್ದೀರಿ. ಈ ವಿಚಾರದಲ್ಲಿ ನಿಮ್ಮನ್ನು ನಾನು ಈ ಜವಾಬ್ದಾರಿಗೆ ಗುರಿಪಡಿಸುತ್ತಿದ್ದೇನೆ. ಕರ್ನಾಟಕ ರಾಜ್ಯದ ಜನತೆಯ ಪರವಾಗಿ ಹೇಳುವಂಥ ಮಾತು

ಇದೆ. ಹಾಗಾಗಿ ನಾನು ತಮ್ಮ ಗಮನಕ್ಕೆ ತರುವುದೇನೆಂದರೆ ಈ ರಾಜ್ಯ ಸರ್ಕಾರ ಆಗಿರುವಂಥ ಪರಿಸ್ಥಿತಿಯನ್ನು ನಿಭಾಯಿಸುವ ವಿಚಾರದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಜವಾಬ್ದಾರಿಯಿಂದ ನಿರ್ವಹಣೆ ಮಾಡುತ್ತಿಲ್ಲ. ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದು ಬಿದ್ದಿದೆ. ಬೇಜವಾಬ್ದಾರಿ ಇವರ ಆಡಳಿತದಲ್ಲಿ ಎದ್ದು ಕಾಣುತ್ತಿದೆ. ಆದ್ದರಿಂದ ಕರ್ನಾಟಕ ಜನತೆಯ ಮುಂದೆ ಇವರು ಅಕ್ಷಮ್ಯ ಅಪರಾಧ ಮಾಡಿದ್ದಾರೆ. ಇವರಿಗೆ ಕ್ಷಮೆ ಸಾಲದು. ಇವರನ್ನು ಕ್ಷಮಿಸುವಂಥದ್ದಕ್ಕೆ ಕಾರಣ ನನಗೆ ಏನು ಕಾಣುತ್ತಿಲ್ಲ. ಆದ್ದರಿಂದ ಯಾವ ರೀತಿ ಈ ಪ್ರಶ್ನೆಗೆ ಉತ್ತರ ಅನ್ನುವುದು ಪ್ರತ್ಯೇಕ ಅದನ್ನು ನಾನು ಭವಿಷ್ಯಕ್ಕೆ ಬಿಡುತ್ತೇನೆ. ಆದರೆ ಈಗಲಾದರೂ ಎಚ್ಚೆತ್ತುಕೊಳ್ಳಿ. ಈಗಲಾದರೂ ಕಾರ್ಯಕ್ರಮ ಹಾಕಿಕೊಳ್ಳಿ. ಈಗಲಾದರೂ ಕೇಂದ್ರ ಸರ್ಕಾರದ ಕಡೆಯಿಂದ ಎಷ್ಟು ಹಣ ಬರುತ್ತದೆ ಎನ್ನುವ ವಿಚಾರದಲ್ಲಿ ಸಮಗ್ರ ವಿವರಗಳನ್ನು ಈ ರಾಜ್ಯದ ಜನತೆಗೆ ಕೊಡಬೇಕು ಎಂಬ ಮನವಿಯನ್ನು ನಾನು ಇವತ್ತು ಅಧ್ಯಕ್ಷರಿಗೆ ಮಾಡುತ್ತಿದ್ದೇನೆ. ಈ ಸಂದರ್ಭದಲ್ಲಿ ಅನೇಕ ವಿವರಗಳ ಮೇಲೆ ಬಹಳ ಹೊತ್ತು ಮಾತನಾಡಬಹುದು. It runs into pages.

ಬಹಳ ಜನ ಸದಸ್ಯರು ಮಾತನಾಡುವ ಸಂದರ್ಭ ಇರುವುದರಿಂದ, ಕಾಲದ ಅಭಾವದಿಂದ ಇಷ್ಟು ಸೂಕ್ಷ್ಮವಾಗಿ ಈ ವಿಚಾರ ಇವತ್ತು ಎತ್ತಿದ್ದೇನೆ. ಆದರೆ ಸರ್ಕಾರ ಯಾವುದೇ ಕಾರ್ಯಕ್ರಮವನ್ನು ಅಲ್ಪಸ್ವಲ್ಪ ಅಲ್ಲಲ್ಲಿ ಹಾಕಿರುವುದನ್ನು ಬಿಟ್ಟರೆ ಬೇರೆ ಕಾರ್ಯಕ್ರಮ ಹಾಕದೇ ಇರುವುದನ್ನು ನೋಡಿದರೆ ಇವತ್ತು ಜನರ ಮುಂದೆ ನೀವು ಹೋಗತಕ್ಕಂಥ ಸ್ವಶಕ್ತಿ ಸಂಪೂರ್ಣವಾಗಿ ಕಳೆದುಕೊಂಡಿದ್ದೀರಿ ಎಂಬ ಮಾತನ್ನು ಈ ಸಂಧರ್ಭದಲ್ಲಿ ಹೇಳಿ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರುಗಳು ಸಾಕಷ್ಟು ವಿವರಣೆ ಕೊಟ್ಟಿದ್ದಾರೆ. ನಾನು ಧೀರ್ಘವಾಗಿ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಕೆಲವು ಮಾಹಿತಿಗಳು ನಮಗೆ ತುಂಬಾ ಅಗತ್ಯ ಇದೆ. ಅದರಲ್ಲಿ ಮೊದಲನೆಯದಾಗಿ ನಾನು ಒಂದನ್ನು ಕೇಳುತ್ತಿದ್ದೇನೆ ಅಂದರೆ ನಾವು ಮತ್ತು ರಾಜ್ಯ ಸರಕಾರವೂ ಕೂಡ ಅದಕ್ಕೆ ಒಪ್ಪುತ್ತದೆಂದು ನನಗನ್ನಿಸುತ್ತದೆ. ಇಡೀ ರಾಜ್ಯದ ಜನತೆ ಅದನ್ನು ಒಪ್ಪುತ್ತದೆ. ಈ ಶಾಸನ ಸಭೆಯಲ್ಲಿ ಒಂದು ಠರಾವನ್ನು ಮಂಡನೆ ಮಾಡಬೇಕು. ಕರ್ನಾಟಕದ ಬಗ್ಗೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆಯನ್ನು ಖಂಡಿಸಿ ಒಂದು ಠರಾವು ಮಾಡಬೇಕೆನ್ನುವುದು ನನ್ನ ಮೊದಲನೇ ಪ್ರಾರ್ಥನೆ. ಕಾರಣವೇನೆಂದರೆ, ನಾವು 9ನೇ ಫೈನಾನ್ಸ್ ಕಮಿಷನ್‌ನಲ್ಲಿ ತೀರ್ಮಾನವಾಗುವವರೆಗೆ ಇದ್ದಂತಹ ವ್ಯವಸ್ಥೆ ಕೇಂದ್ರ ಸರಕಾರದವರು ಬರುತ್ತಿದ್ದರು. ಅಸೆಸ್‌ಮೆಂಟ್ ಕೊಡುತ್ತಿದ್ದರು. ಆ ಬೇಸಿಸ್ ಮೇಲೆ ಕೇಂದ್ರ ಪ್ಲಾನಿಂಗ್ ಅಡ್ವಾನ್ಸ್ ಎಂದು ಕೊಡುವವರು ಇಂತಹ ಸಂದರ್ಭ ಬಂದಾಗ. ಅದನ್ನು ರಾಜ್ಯ ಸರಕಾರ ಆ ವರ್ಷದ ಪ್ಲಾನಿಂಗ್‌ನಲ್ಲಿ ಖರ್ಚು ಮಾಡಿ ಅದಕ್ಕೆ ಸರಿದೂಗಿಸತಕ್ಕಂತಹ ವ್ಯವಸ್ಥೆ ಇತ್ತು. 10 ವರ್ಷಗಳ ಅಂದಾಜನ್ನು ತೆಗೆದು ಒಂದೊಂದು ರಾಜ್ಯಕ್ಕೆ ಒಂದೊಂದು ಕೆಲ್ಯಾಮಿಟಿ ರಿಲೀಫ್ ಫಂಡ್ ಮಾಡಿ ಕರ್ನಾಟಕ ರಾಜ್ಯಕ್ಕೆ ಸುಮಾರು 27 ಕೋಟಿ ಎಂದು ನಿಗದಿ ಮಾಡಿದ್ದಾರೆ. ಮೊತ್ತ ಮೊದಲ ಬಾರಿಗೆ ಕೇಂದ್ರ ಸರಕಾರದಿಂದ ಶಾಶ್ವತವಾಗಿ ಈ ಪರಿಹಾರ ನಿಧಿಗೆ ಬಂದಂತಹ ಕೊಡುಗೆ 20 ಕೋಟಿ 75 ಲಕ್ಷ ರೂಪಾಯಿಗಳು. 9ನೇ ಫೈನಾನ್ಸ್ ಕಮಿಷನ್ನಿನಿಂದ ಮಾಡಿದಂತಹ ರೆಕಮೆಂಡೇಷನ್‌ನಿಂದ; ಅದುವರೆಗೆ ಕೇಂದ್ರ ಸರಕಾರದಿಂದ ಒಂದು ರೂಪಾಯಿ ದುಡ್ಡು ಬರುತ್ತಿರಲಿಲ್ಲ. ಈಗ ಆ ದುಡ್ಡು 27 ಕೋಟಿ ರೂಪಾಯಿ. ನೀವು ಹೇಳಿದ್ದೀರಿ ಕೇಂದ್ರದ ಮಂತ್ರಿಗಳಾದ ಶ್ರೀಮಾನ್ ಮಲ್ಲಿಕಾರ್ಜುನ್ ಅವರು ಇಲ್ಲಿಗೆ ಬಂದಿದ್ದರು ತಾವೂ ಪ್ರವಾಸದಲ್ಲಿದ್ದಿರಿ. ಇದು ಎಲ್ಲರಿಗೂ ತಿಳಿದಿರುವ

ವಿಚಾರ ಅದು ವರದಿಯಲ್ಲಿ ಇದೆ. ಇದು ನಿಮ್ಮ ವೈಭವೀಕರಿಸುವ ವರದಿಯಾಗಿದೆಯೇ ಹೊರತು ಇದರಿಂದ ಜನರಿಗೆ ಪರಿಹಾರ ಸಿಕ್ಕಿಲ್ಲ. ನಿಮ್ಮ ವೈಭವೀಕರಿಸುವ ವರದಿಯನ್ನು ನಾವು ಕೇಳಲಿಲ್ಲ. ಜನರಿಗೆ ಪರಿಹಾರವೇನು ಕೊಟ್ಟಿದ್ದೀರಿ? ಇದರಲ್ಲಿ ಎರಡು ಭಾಗ ಒಂದು ಪ್ರಕೃತಿ ನಿರ್ಮಿತವಾದ ವಿಕೋಪ; ಇನ್ನೊಂದು ಮಾನವ ನಿರ್ಮಿತವಾದಂತಹ ವಿಕೋಪ; ಇವೆರಡನ್ನು ಬೇರೆ ಬೇರೆ ಮಾಡಬೇಕು. ನಾನು ಸ್ವಲ್ಪ ಒಂದೆರಡು ನಿಮಿಷದಲ್ಲಿ ಹೇಳುತ್ತೇನೆ. ಪ್ರಕೃತಿ ನಿರ್ಮಿತ ಏನು ಮಾನವ ನಿರ್ಮಿತ ಏನು ಎಂಬುದನ್ನು ಹೇಳುತ್ತೇನೆ. ಎರಡನೆಯದು ಮಳೆ ಹಾನಿ ಬೇರೆ ಮಳೆಯಿಂದ ಫ್ಲಡ್ಸ್ ಏನು ಬಂದಿದೆ ಇದರ ಹಾನಿ ಬೇರೆ.

ಈ ಎರಡು ಮೂರು ಭಾಗಗಳನ್ನು ವಿಶೇಷವಾಗಿ ಗಮನಿಸಬೇಕು. 4-5 ದಿವಸಗಳ ಹಿಂದೆ ನನ್ನ ಕ್ಷೇತ್ರದಲ್ಲಾಗಿರತಕ್ಕಂತಹ ಮಳೆ ವಿವರ ತರಿಸಿದ್ದೇನೆ. ಆಗುಂಬೆಯಲ್ಲಿ 300 ಇಂಚು ಮಳೆ ದಾಟಿದೆ. ಹುಲಿಕಲ್ ಎನ್ನತಕ್ಕಂತಹ ನನ್ನ ಪ್ರದೇಶದಲ್ಲಿ 297 ಇಂಚು ಮಳೆಯಾಗಿದೆ. ನಗರದಲ್ಲಿ 200 ಇಂಚು ಚಕ್ರದಲ್ಲಿ 223 ಇಂಚು; ಮಾಸ್ತಿಕಟ್ಟೆಯಲ್ಲಿ 248 ಇಂಚು ಮಳೆಯಾಗಿದೆ. ಅರ್ಥಾತ್ ಸಾಮಾನ್ಯವಾಗಿ ಬರತಕ್ಕಂತಹ ಮಳೆಯ ಶೇಕಡ ನೂರಕ್ಕೂ ಹೆಚ್ಚು ಪಾಲು ಈ ಸಲ ಮಳೆ ಬಂದಿದೆ. ಇದರ ಹಾನಿಯನ್ನು ನೀವು ಊಹಿಸಬಹುದು. ಎರಡನೆಯದು ಮಾನವ ನಿರ್ಮಿತವಾದುದು. ಒಂದು ಪ್ರಶ್ನೆಗೆ ಉತ್ತರವನ್ನು ನಾನು ಅವರಿಂದ ನಿರೀಕ್ಷೆ ಮಾಡುತ್ತೇನೆ. ಜುಲೈ 13,14,15, ಮತ್ತು 16 ಈ ನಾಲ್ಕು ದಿವಸಗಳಲ್ಲಿ ಭಾರಿ ಮಳೆಯಾದದ್ದು ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ಈ ಮಳೆಯ ಪರಿಣಾಮವಾಗಿ ಭದ್ರಾ ಜಲಾಶಯದಿಂದ 12ನೇ ತಾರೀಖು ರಾತ್ರಿ ನೀರನ್ನು ಬಿಟ್ಟಿದ್ದೀರಿ. ನೀರನ್ನು ಬಿಡುವಾಗ ಆ ಇನ್‌ಫ್ಲೋ ಎಷ್ಟು ಇತ್ತು ಔಟ್‌ಫ್ಲೋ ಎಷ್ಟು ಇತ್ತು? 10,000 ಕ್ಯೂಸೆಕ್ಸ್ ನೀರು ಬಿಡುತ್ತೇವೆಂದು ಹೇಳಿ 1 ಲಕ್ಷದ 10 ಸಾವಿರ ಕ್ಯೂಸೆಕ್ಸ್ ನೀರನ್ನು 2ನೇ ತಾರೀಖು ರಾತ್ರಿ 7 ಗಂಟೆಗೆ ಭದ್ರಾ ಜಲಾಶಯದಿಂದ ಬಿಟ್ಟಿದ್ದಾರೆ. ಆ ಜಲಾಶಯದಿಂದ ನೀರನ್ನು ಬಿಟ್ಟ ಪರಿಣಾಮ ಮುಂದೆ ಅದು ತುಂಗ ಮತ್ತು ಭದ್ರಾಗೆ ಆಗಿರತಕ್ಕಂತಹ ಹಾನಿಗೆಲ್ಲಾ ಅಲ್ಲಿರತಕ್ಕಂತಹ ಇಂಜಿನಿಯರ್‌ಗಳೇ ಕಾರಣ ಎನ್ನುವುದನ್ನು ನಾನು ಪದೇ ಪದೇ ಕೇಳಿದ್ದೇನೆ. ಸರಕಾರ ಆ ಸಂಬಂಧಪಟ್ಟ ಇಂಜಿನಿಯರ್‌ಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ವಿಚಾರ ಮಾಡಿದ್ದೀರಾ? ಆ ದಿವಸ ಏನು ಪ್ರಸಂಗ ನಡೆಯಿತು. ಆ ಪ್ರಸಂಗಕ್ಕೆ ಕಾರಣರು ಯಾರು ಎಂದು ವಿಚಾರಣೆ ಮಾಡಿದ್ದೀರಾ. ಇದಕ್ಕೇನಾದರೂ ಆಯೋಗ ನೇಮಕ ಮಾಡಿದ್ದೀರಾ? ಇದನ್ನು ನಾನು ಹೇಳತಕ್ಕಂಥಾದ್ದು ಮ್ಯಾನ್ ಮೇಡ್. ದೈವ ನಿರ್ಮಿತವಾದಂಥಾದ್ದು ಇದಲ್ಲ. ನೀವು ಮಾಡಿದಂಥಾದ್ದು ನೀವು ಅಂದರೆ ಸರಕಾರ ಮತ್ತು ನಿಮ್ಮ ಅಧಿಕಾರಿಗಳು. ಆ ದಿವಸ ಭದ್ರಾ ಜಲಾಶಯದ ಒಟ್ಟು 186 ಅಡಿಗಳ ಎತ್ತರದಲ್ಲಿ ನೀರು ಎಷ್ಟು ನಿಂತಿತ್ತು ಅದರ ಇನ್‌ಫ್ಲೋ ಎಷ್ಟು ಭದ್ರಾ ಜಲಾಶಯಕ್ಕೆ ಬರುತ್ತಿತ್ತು. ಹೊರಗೆ ಬಿಟ್ಟಂತಹ ನೀರು ಎಷ್ಟು ಇದರ ವಿವರ ನನಗೆ ಬೇಕು.

ಶ್ರೀ ಆರ್. ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಇಂಜಿನಿಯರ್ ರವರು ಮುಖ್ಯಮಂತ್ರಿಗಳ ಗಮನಕ್ಕೆ ತಂದರು. ಭದ್ರಾದಿಂದ ನೀರು ಬರತಕ್ಕಂಥ ಕಾಲದಲ್ಲಿ ಹೊನ್ನಾಳಿ ದಂಡೆಯಲ್ಲಿರುವ ಬಹಳಷ್ಟು ಜನರಿಗೂ ತೊಂದರೆಯಾಗಿದೆ. 500 ಕುಟುಂಬಗಳಿಗೆ. ಆಗ ಡಿ.ಸಿ. ಜಮೇದಾರ್‌ರವರು ಹೇಳಿದರು. ಈ ರೀತಿ ನೀರು ಬಿಡುವ ಕಾಲದಲ್ಲಿ ಇಂಜಿನಿಯರ್ ಕೂಡ ಜಿಲ್ಲಾಧಿಕಾರಿಗಳಿಗೆ ನಮಗೆ ಅಲ್ಲಿ ನೀರು ಬಿಡದಿದ್ದರೆ ತೊಂದರೆಯಾಗುತ್ತದೆ, ನೀರನ್ನು ಬಿಡುತ್ತೇವೆ, ತಾವು ಕೂಡ ಎಚ್ಚರಿಕೆ ವಹಿಸಬೇಕು ಎನ್ನತಕ್ಕಂಥದ್ದನ್ನು ತಿಳಿಸಬೇಕಾಗಿತ್ತು. ಅದನ್ನು ತಿಳಿಸಲಿಲ್ಲ ಎನ್ನತಕ್ಕಂಥ ಮಾತುಕತೆ ಇಂಜಿನಿಯರ್ಸ್ ಮತ್ತು ಮುಖ್ಯ ಇಂಜಿನಿಯರ್ ಚಂದ್ರನಾಯಕ್

ಕೂಡ ಬಂದಿದ್ದರು. ಡಿ.ಸಿ. ಅವರು ಕೂಡ ಇದ್ದರು. ನಾನು ಕಾಗೋಡು ತಿಮ್ಮಪ್ಪ ಮತ್ತು ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಎಲ್ಲಾ ಮಾತುಕತೆಯಾಗಿ ವಿಚಾರಣೆಯಾಗುತ್ತಿದೆ. ಅದರಿಂದ ಆಗತಕ್ಕಂಥ ಪರಿಣಾಮವನ್ನು ಕೂಡ ಖುದ್ದಾಗಿ ನಾವು ಹೋಗಿ ಹೊನ್ನಾಳಿಗೆ ನೋಡಿ ಬಂದಿದ್ದೇವೆ. ಅದು ಆಗಿದೆ. ಅದರ ಬಗ್ಗೆ ಪೂರಾ ತಿಳಿಸಬೇಕು ಎಂದು ತಿಳಿಸಿದರೆ ಉತ್ತರದಲ್ಲಿ ಕೊಡುವಾಗ ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ನಿಮಗೆ ನಾನು ಏನು ಕೇಳುತ್ತಿದ್ದೇನೆ ಎಂದರೆ ಅಲ್ಲಿ ಜಿಲ್ಲೆಯ ಆಡಳಿತ ಸಂಬಂಧಪಟ್ಟವರು ಸ್ವಲ್ಪಮಟ್ಟಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದರೆ ಮಾಡದೇ ಇದ್ದಿದ್ದರೆ ಜೀವಹಾನಿ ಎಷ್ಟಾಗುತ್ತಿತ್ತು ಎನ್ನುವುದನ್ನು ನಿರೀಕ್ಷೆ ಕೂಡ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ ಇಂಜಿನಿಯರ್ ಮಾಡಿರತಕ್ಕಂಥ ಈ ತಪ್ಪಿದೆಯಲ್ಲ ನೀವು ಅವರನ್ನು ಕೇಳಿ. ಜುಲೈ 12ನೇ ತಾರೀಖು 1 ಲಕ್ಷದ 10 ಸಾವಿರ ಕ್ಯೂಸೆಕ್ಸ್ ನೀರನ್ನು ಭದ್ರಾ ಜಲಾಶಯದಿಂದ ಬಿಟ್ಟಿದ್ದೀರಾ? ಆ ರೀತಿ ಬಿಟ್ಟಿದ್ದರೆ ಅದರ ಪರಿಣಾಮವೇನಾಯಿತು? ಹೀಗೆ ಬಿಡುವುದಕ್ಕೆ ಮುನ್ನ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಇಂಜಿನಿಯರ್‌ಗಳು ಸಂಪರ್ಕಿಸಿದ್ದರೇನು? ಯಾರೋ ಒಬ್ಬರು ಇಂಜಿನಿಯರ್ ಮಾಡಿದಂಥ ಅಪರಾಧಕ್ಕೆ ಇಡೀ ರಾಜ್ಯದ ಜನ ಬೆಲೆ ತೆರಬೇಕಾದಂಥ ಪರಿಸ್ಥಿತಿ ಬಂದಿದೆ. ಕೋಟ್ಯಾಂತರ ರೂಪಾಯಿ ಲುಕ್ಸಾನಿಗೆ ಒಬ್ಬ ಅಥವಾ ಇಬ್ಬರು ಇಂಜಿನಿಯರ್‌ಗಳು ಕಾರಣರಾಗಿದ್ದಾರೆ. ನಾನು ಇದನ್ನು ನ್ಯಾಯಾಂಗ ತನಿಖೆಗೆ ಒತ್ತಾಯ ಮಾಡುತ್ತೇನೆ. ಇದು ಏನಾಗಿದೆ. ನಾವೂ ಹೋಗಿದ್ದೆವು, ಮುಖ್ಯಮಂತ್ರಿಗಳು ಹೋಗಿದ್ದರು, ಜಿಲ್ಲಾಧಿಕಾರಿಗಳು ಇದ್ದರು, ನೋಡಿದ್ದೇವೆ, ಏನೋ ಗಾಬರಿಯಿಂದ ನೀರನ್ನು ಬಿಟ್ಟುಬಿಟ್ಟಿದ್ದಾನೆ.

ಶ್ರೀ ಧರ್ಮಸಿಂಗ್ : ಇದು ನನ್ನ ಗಮನಕ್ಕೆ ಬಂದಿದೆ. ಸ್ಥಳಕ್ಕೆ ಹೋದಾಗ ವಿಚಾರಣೆ ಮಾಡಿದ್ದೇವೆ. ಮತ್ತೆ ಅದಕ್ಕೆ ಇನ್ನೂ ಕೂಡ ತನಿಖೆ ಮಾಡುವುದಕ್ಕೆ ಹೇಳಿದ್ದೇವೆಂದು ತಮ್ಮ ಗಮನಕ್ಕೆ ತರುತ್ತಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅಂಜನಾಪುರದ ಅಣೆಕಟ್ಟು ಬಗ್ಗೆ ಶ್ರೀಮಾನ್ ಬಂಗಾರಪ್ಪನವರು ಪ್ರಸ್ತಾಪ ಮಾಡಿದ್ದಾರೆ ಎಂದು ಕೇಳಿದ್ದೇವೆ. ಇದು 1936-38ನೇ ಇಸವಿಯಲ್ಲಿ ಅಂದರೆ ಸ್ವಾತಂತ್ರ್ಯಕ್ಕೆ ಮುನ್ನ ಕಟ್ಟಿದಂಥ ಒಂದು ಅಣೆಕಟ್ಟು. ಆ ಅಣೆಕಟ್ಟಿಗೆ ಎರಡು ಗೇಟುಗಳಿವೆ. ಅದನ್ನು ಆಪರೇಟ್ ಮಾಡಿಲ್ಲ. ಆಪರೇಟ್ ಮಾಡದೇ ಇರುವ ಪರಿಣಾಮ ಆ ದಿವಸ ಮಳೆ ಜಾಸ್ತಿಯಾಯಿತು. ಏನು ಮಾಡುವುದು? ಮೈಯಿನ್‌ಟೆನೆನ್ಸ್‌ಗೆ ದುಡ್ಡು ಕೊಡುವುದಿಲ್ಲ ಆದರೂ ದುಡ್ಡನ್ನು ಕೊಟ್ಟಿದ್ದರೆ ಅದನ್ನು ಏತಕ್ಕೆ ಖರ್ಚು ಮಾಡಿಲ್ಲ ಅಥವಾ ಖರ್ಚು ಯಾವ ರೂಪದಲ್ಲಿ ಆಗಿದೆ? ಗೇಟನ್ನು ತೆಗೆಯಲಿಕ್ಕೆ ಆಗಲಿಲ್ಲ. ಏನು ಮಾಡುವುದು? ಡೈನಮೈಟ್ ಹಾಕಿ ವೇಸ್ಟ್‌ವೇರನ್ನು ಒಡೆದಿದ್ದಾರೆ. ಇದು ಪ್ರಕೃತಿಯಿಂದ ಆದ ಹಾನಿಯಲ್ಲ. ನಿಮಗೆ ಎರಡು ಸೂಕ್ಷ್ಮವಾದ ಅಂಶವನ್ನು ಹೇಳುತ್ತಿದ್ದೇನೆ. ಆ ರೀತಿ ಒಡೆದ ಪರಿಣಾಮ ನೀರು ನುಗ್ಗಿತು. ಡೈನಮೈಟ್ ಹಾಕಿದ ಶಬ್ದವನ್ನು ಕೇಳಿದ ಜನರು ಇದ್ದಾರೆ. ಪರಿಣಾಮವೇನು? 21 ಸಾವಿರ ಎಕರೆಗೆ ನೀರು ಕೊಡುವ ಈ ಅಣೆಕಟ್ಟಿನಲ್ಲಿ ಎರಡು ತೂಬನ್ನು ಒಡೆಯುವುದಕ್ಕೆ ಮುನ್ನ ಏನು ಮಾಡಿದ್ದಾರೆ? ಮೊನ್ನೆ ಈಗ ಗೇಟನ್ನು ಆಪರೇಟ್ ಮಾಡಿದ್ದಾರೆ. ಇದಕ್ಕೆ ಯಾರು ಹೊಣೆ? ಹೊಣೆಗಾರಿಕೆಯನ್ನು ನಾವು ಈಗ ನಿಗದಿ ಮಾಡದಿದ್ದರೆ ಸುಮ್ಮನೆ ನಾವು ಮಾತನಾಡುವುದು ಆಗುತ್ತದೆ. ನೀವು ಉತ್ತರ ಹೇಳುವುದು ಆಗುತ್ತದೆ. ನಾವು ಮನೆಗೆ ಹೋಗುವುದು ಆಗುತ್ತದೆ. ವೇಸ್ಟ್‌ವೇರ್‌ಗೆ ಡೈನಮೈಟ್ ಹಾಕಿ ಒಡೆದಂಥ ಪ್ರಸಂಗವನ್ನು ನಾನು ಕೇಳಿಲ್ಲ. ನಾನೂ ಕೂಡ ನೀರಾವರಿ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಇಲ್ಲಿ ಗೇಟನ್ನು ಆಪರೇಟ್ ಮಾಡಲಿಕ್ಕಾಗಲಿಲ್ಲ. ಮುಂದಿನದು ಏನು? ಒಡೆಯಿರಿ ಅದನ್ನು. ವೇಸ್ಟ್‌ವೇರನ್ನು

ಒಡೆದಿದ್ದಾರೆ. ಮೂರು ಕೋಟಿ ರೂಪಾಯಿನವರೆಗೆ ಈಗ ಅದನ್ನು ನಿರ್ಮಾಣ ಮಾಡುವುದಕ್ಕೆ ದುಡ್ಡು ಬೇಕು. ಭದ್ರಾ ಜಲಾಶಯದಲ್ಲಿ 12ನೇ ತಾರೀಖಿನ ದಿವಸ ನೀರನ್ನು ಬಿಟ್ಟ ಪರಿಣಾಮ ಕೆಳಗಡೆ ಆದಂಥ ಪ್ರಸಂಗ. ಇಲ್ಲದಿದ್ದರೆ ಇಷ್ಟು ದೊಡ್ಡ ಪ್ರಮಾಣದ ಹಾನಿ ಈ ರಾಜ್ಯದಲ್ಲಿ ಆಗುತ್ತಿರಲಿಲ್ಲ. ಇಂಜಿನಿಯರುಗಳು ಇಲ್ಲಿ ಮಾಡಿದಂಥ ಪ್ರಮಾದದಿಂದ ಆ ರೀತಿ ಆಗಿದೆ. ನಾನು ಎರಡು ಪ್ರಕರಣಗಳು ಅಷ್ಟೇ ಹೇಳುವುದು. ಸೂಕ್ಷ್ಮವಾಗಿ ಹೇಳಿದರೆ ಅರ್ಥವಾದೀತು. ಈ ಪ್ರಕರಣಗಳಲ್ಲಿ ಸಂಬಂಧಪಟ್ಟ ಇಲಾಖೆಯ ಇಂಜಿನಿಯರುಗಳನ್ನು ಇದುವರೆಗೆ ಸಸ್ಪೆಷನ್‌ನಲ್ಲಿ ಏತಕ್ಕೆ ಇಟ್ಟಿಲ್ಲ? ಹಾಗೆಯೇ ಅವರು ನೀರನ್ನು ಬಿಡುವುದಕ್ಕಾಗಲಿ, ವೇಸ್ಟ್‌ವೇರನ್ನು ಒಡೆಯುವುದಕ್ಕಾಗಲಿ ಜಿಲ್ಲಾಧಿಕಾರಿಗಳ ಜೊತೆಗೆ ಚರ್ಚೆ ಮಾಡಿ ಏನಾದರೂ ನಿರ್ಧಾರಕ್ಕೆ ಬಂದಿದ್ದರೇ? ಏಕಾಏಕಿ ಇಂಜಿನಿಯರುಗಳು ಈ ತೀರ್ಮಾನಕ್ಕೆ ಬಂದರೇ? ಬಾರದೆ ಇದ್ದರೆ ಇದುವರೆಗೆ ಏತಕ್ಕೆ ಅವರನ್ನು ಸಸ್ಪೆನ್‌ಷನ್‌ನಲ್ಲಿ ಇಟ್ಟಿಲ್ಲ. ಕೋಟ್ಯಾಂತರ ರೂಪಾಯಿಗಳ ಬೆಳೆ ಹಾಳಾಗಿದೆ. ಇಂಜಿನಿಯರು ಒಂದು ಹೇಳಿಕೆ ಮಾಡುತ್ತಾರೆ.

ಶ್ರೀ ಧರ್ಮಸಿಂಗ್ : ಇಂಜಿನಿಯರುಗಳು ನೀರನ್ನು ಬಿಡತಕ್ಕಂಥ ಕಾಲದಲ್ಲಿ ಪೂರ್ವಾನುಮತಿಯನ್ನು ಪಡೆದುಕೊಂಡಿದ್ದರೆ ಎಂಬ ಬಹಳ ಮಹತ್ವವಾದ ವಿಷಯವನ್ನು ಹೇಳುತ್ತಿದ್ದೀರಿ. ಅದರ ಬಗ್ಗೆ ನೋಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ತಮಗೆ ಏನು ನಾನು ಹೇಳುತ್ತೇನೆ ಎಂದರೆ ಇದರ ಬಗ್ಗೆ ತನಿಖೆಯಾಗಬೇಕು. ಬಾಗಿಲುಗಳ ರಿಪೇರಿ ಏತಕ್ಕೆ ಆಗಲಿಲ್ಲ? ಪ್ರತಿವರ್ಷ ಈ ಬಾಗಿಲು ರಿಪೇರಿಗೆ ಮತ್ತು ಮೆಯಿನ್‌ಟನೆನ್ಸ್‌ಗೆ ಕೊಟ್ಟಂಥ ಹಣ ಏನಾಯಿತು? ಮುಂದಾಲೋಚನೆ ಇಲ್ಲದೆ ಇಂಜಿನಿಯರು ಒಂದು ಹೇಳಿಕೆಯನ್ನು ಕೊಟ್ಟಿರುವುದನ್ನು ನಾನು ನೋಡಿದೆ. "ಇದನ್ನು ನಾವು ಒಡೆಯದೆ ಗತ್ಯಂತರವಿರಲಿಲ್ಲ" ಎನ್ನುವ ಮಾತನ್ನು ಅವರು ಹೇಳುತ್ತಾರೆ. ಒಡೆಯತಕ್ಕಂಥ ಪರಿಸ್ಥಿತಿಗೆ ತಂದವರು ಯಾರು ಎನ್ನುವ ಪ್ರಶ್ನೆ ಬಹಳ ಮುಖ್ಯವಾದುದು. ಇದು ಒಂದು ಭಾಗ. ಬಹಳ ಮುಖ್ಯವಾಗಿರತಕ್ಕಂಥ ಮತ್ತೊಂದು ವಿಚಾರ ಇದೆ. 16ನೇ ತಾರೀಖು ಮುಖ್ಯಮಂತ್ರಿಗಳು ಶಿವಮೊಗ್ಗ ಜಿಲ್ಲೆಗೆ ಬಂದರು. ಬಂದ ತಕ್ಷಣ ಹೇಳಿದರು, ಕೃಷಿ ಇಲಾಖೆಗೆ ಹೇಳಿದ್ದೇನೆ, ಮುಫತ್ತಾಗಿ ಬೀಜ ಕೊಡುತ್ತೇನೆ, ಗೊಬ್ಬರ ಕೊಡುತ್ತೇವೆ ಎಂದು ಹೇಳಿದರು. ನಾನು ಕ್ಷೇತ್ರದಲ್ಲೆಲ್ಲಾ ಪ್ರವಾಸ ಮಾಡಿ ರಾಜ್ಯದ ಮುಖ್ಯಮಂತ್ರಿ ಹೇಳಿದ್ದಾರೆ. That is the law ಎಂದು ನಾನಂದುಕೊಂಡೆ. ನಾಳೆ ಬೆಳಿಗ್ಗೆ ಎಲ್ಲರಿಗೂ ಬೀಜವನ್ನು ಕಳುಹಿಸುತ್ತೇವೆ ಎಂದು ಹೇಳಿದೆ. ಸ್ವಾಮಿ, ಒಂದು ಹಿಡಿ ಬೀಜ ಅದು ಟ್ರಾನ್ಸ್‌ಪ್ಲಾಂಟೇಷನ್‌ಗೆ ನಾಟಿ ಮಾಡುವುದಕ್ಕೆ ಬೇಕಾದಂಥ ಬೀಜವನ್ನು ಏನು ಹಾಕಿದ್ದರು, ಅದು ಸಂಪೂರ್ಣವಾಗಿ ಹತ್ತು ಹನ್ನೆರಡು ದಿವಸ ನೀರು ನಿಂತಿದ್ದರಿಂದಾಗಿ ನಾಶವಾಯಿತು. ಎರಡೆರಡು ಸಾರಿ ಮೂರು ಮೂರು ಸಾರಿ ರೈತರು ಪ್ರಯತ್ನವನ್ನು ಮಾಡಿದರು. ಆಗಲಿಲ್ಲ. ಬೀಜದ ಭತ್ತವನ್ನು ಕೊಡುತ್ತೇವೆ ಎಂದು ಹೇಳಿದಿರಿ. ನೀವು ವರದಿ ತರಿಸಿ. ಇದುವರೆಗೆ ದಯವಿಟ್ಟು ನಿಮ್ಮಿಂದ ಮಾಡುವುದಕ್ಕಾಗದಿದ್ದರೆ ಜನರನ್ನು ಸರ್ಕಾರ ತಪ್ಪು ದಾರಿಗೆ ಎಳೆಯುವುದು ಬೇಡ. ಇವರು ಬರುತ್ತದೆ ಎಂದು ಹೇಳಿ ನಾವು ಪ್ರತಿ ಊರಿಗೆ ಹೋಗಿ ಹೆದರಬೇಡಿ, ಮಾಲತಿ ನದಿ ದಂಡೆಯ ಮೇಲೆ ಇರತಕ್ಕಂಥವರು, ತುಂಗ ನದಿ ದಂಡೆ ಮೇಲೆ ಇರತಕ್ಕಂಥವರು ಸುಮಾರು 90 ಕಿಲೋ ಮೀಟರ್ ಆಗುಂಬೆಯಿಂದ ಕೆಳಗೆ ನಮ್ಮ ಅಣೆಕಟ್ಟಿನವರೆಗೆ ಅಂದರೆ ಗಾಜನೂರು ಅಣೆಕಟ್ಟಿನವರೆಗೆ ಇರತಕ್ಕಂಥ ಪ್ರದೇಶದಲ್ಲಿ ಪ್ರವಾಸ ಮಾಡಿ ಕೊಡುತ್ತಾರೆ, ದಯಮಾಡಿ ಗಾಬರಿಯಾಗಬೇಡಿ ಎಂದು ಹೇಳಿಬಂದೆ. ಆದರೆ ಒಂದು ಹಿಡಿ ಬೀಜದ ಭತ್ತವನ್ನು ಒದಗಿಸುವುದಕ್ಕೆ ಈ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಈಗ ನಾನು ಅಲ್ಲಿ ಕೆ.ಡಿ.ಪಿ. ಮೀಟಿಂಗ್‌ನಲ್ಲಿ ಇದನು ಪ್ರಸಾಪ ಮಾಡಿದೆ. ಬಿತನೆ ಬತ ಅಲ. ಬೀಜದ

ಭತ್ತ. ನಾವು ಸಸಿ ಮಡಿ ಮಾಡುತ್ತೇವೆ. ನೇರವಾಗಿ ಗದ್ದೆಗೆ ಹಾಕುವುದಿಲ್ಲ. ಆ ಬೀಜದ ಭತ್ತ ಅದನ್ನು ಹಾಕುತ್ತೇವೆ. ಅದು ಷಾರ್ಟ್ ಪೀರಿಯಡ್ ಮೂರು ತಿಂಗಳಿಗೆ ಬೆಳೆಯತಕ್ಕಂಥ ಭತ್ತವನ್ನು ನಮ್ಮ ಮಲೆನಾಡಿನಲ್ಲಿ ಹಾಕತಕ್ಕಂಥದ್ದು ನಾಲ್ಕೂವರೆ ತಿಂಗಳು, ಐದು ತಿಂಗಳು ಆಗುತ್ತದೆ. ಆದರೆ ನೀವು ಷಾರ್ಟ್ ಪೀರಿಯಡ್‌ಗೆ ಬರತಕ್ಕಂಥ ಭತ್ತವನ್ನು ಕೊಡುತ್ತೇವೆ ಎಂದು ಹೇಳಿ ಆಶ್ವಾಸನೆಯನ್ನು ಕೊಟ್ಟು ಹೋದಿರಿ. ಒಂದು ಹಿಡಿ ಭತ್ತ ಅಥವಾ ಒಂದು ಕೆ.ಜಿ. ಭತ್ತ ಬರಲಿಲ್ಲ. ನಾವು ಜನರಿಗೆ ಏನು ಉತ್ತರವನ್ನು ಹೇಳಬೇಕು? ಮುಖ್ಯಮಂತ್ರಿಗಳು ಸುಳ್ಳು ಹೇಳುತ್ತಾರೆ ಎಂದು ಹೇಳಿದರೆ ಶಾಸನ ಸಭೆಯಲ್ಲಿ ನಾನು ಹೇಳಿದರೆ ಇದು ರಾಜಕಾರಣ ಎನ್ನುತ್ತೀರಿ. ಇದು ಹೊಸದಲ್ಲ. ಆದರೆ ಅದು (ಸತ್ಯ) ಮಾಡತಕ್ಕಂಥ ಕೆಲಸವನ್ನು ಪದೇ ಪದೇ ಏತಕ್ಕೆ ಮಾಡುತ್ತೀರಿ? ನಮ್ಮ ಆಪಾದನೆ ಏನಿದೆ, ಅದು ಸತ್ಯ. ಮುಖ್ಯಮಂತ್ರಿಗಳು ಸುಳ್ಳು ಹೇಳುತ್ತಾರೆ ಎನ್ನುವಂಥದ್ದು ಜನಜನಿತವಾದಂಥ ಒಂದು ಮಾತು. ಈ ಮಾತು ಸತ್ಯವಾಗುವಂತೆ ಏತಕ್ಕೆ ನಡವಳಿಕೆಯನ್ನು ಮಾಡುತ್ತೀರಿ? ಆಗದಿದ್ದರೆ ಆಗುವುದಿಲ್ಲ ಎಂದು ಹೇಳಿ. ಕೃಷಿ ಇಲಾಖೆಯಲ್ಲಿ ಶಿವಮೊಗ್ಗ ಜಿಲ್ಲೆಗೆ ನಾನು ಕಂಟ್ರಾಕ್ಟ್ ಮಾಡಿದ್ದೆ. ಡೆಪ್ಯೂಟಿ ಕಮೀಷನರ್ ಹೇಳುತ್ತಾರೆ, ಎಷ್ಟು ಬೇಕಾದರೂ ಬೀಜದ ಭತ್ತ ಇದೆ ಎಂದು ಹೇಳುತ್ತಾರೆ. ಏತಕ್ಕೆ ನೀವು ಡಿಸ್ಟ್ರಿಬ್ಯೂಟ್ ಮಾಡಲಿಲ್ಲ ಎಂದರೆ ನಮಗೆ ಏಜೆನ್ಸೀಸ್ ಇಲ್ಲ ಎಂದು ಹೇಳುತ್ತಾರೆ. ನಾನು ಆಗ ಹೇಳಿದೆ, ಪ್ರತಿ ತಾಲ್ಲೂಕಿನಲ್ಲೂ ಪ್ರೈಮರಿ ಸೊಸೈಟಿಗಳು ಇವೆ. ಟಿಎಪಿಸಿಎಂಎಸ್ ಇದೆ. ಅಲ್ಲಿ ಅವರ ಅಧ್ಯಕ್ಷರನ್ನು ನಾನು ಕಂಟಾಕ್ಟ್ ಮಾಡಿ ಏನಾದರೂ ಮಾಡಿ 300 ಕ್ವಿಂಟಾಲ್ ಭತ್ತವನ್ನಾದರೂ ಕೊಡಿ. ಒಂದು ಕೆ.ಜಿ. ಬೀಜದ ಭತ್ತ ಇಲ್ಲ. ಗೊಬ್ಬರ ಕೊಡುತ್ತೇವೆ ಎಂದರು. ಅದನ್ನು ಕೊಡಲಿಲ್ಲ. ಈಗ ಏನು ತೀರ್ಮಾನ? ಬೀಜಕ್ಕೆ ತಗಲಿದಂಥ ವೆಚ್ಚವನ್ನು ಕೊಡುತ್ತೇವೆ. ಬೀಜದ ಭತ್ತಕ್ಕೆ ಎಷ್ಟು ವೆಚ್ಚ ತಗಲಿತ್ತೋ ಅಷ್ಟು ವೆಚ್ಚವನ್ನು ಕೊಡುತ್ತೇವೆ. ಆ ವೆಚ್ಚ ಟ್ರಾನ್ಸ್‌ಪ್ಲಾಂಟೇಷನ್‌ಗೆ ಬೇಕಾದಂಥ ಸಸಿ ಕೊಡುತ್ತದೋ? ಯಾವ ಹಂತದಲ್ಲಿ ಯಾವ ಕೆಲಸ ಆಗಬೇಕೋ ಆ ಕೆಲಸವಾಗದಿದ್ದರೆ ಈಗ ನಾವು ಬೀಜ ತೆಗೆದುಕೊಂಡು ಏನು ಮಾಡುವುದಕ್ಕಾಗುತ್ತದೆ? ಬೀಜ ಬೇಕಾಗಿರುವಂಥದ್ದು ಹಿಂಗಾರಿ ಪ್ರದೇಶದಲ್ಲಿ, ನಾವು ಮುಂಗಾರಿ ಮಳೆಯಲ್ಲಿ ಹಾಕತಕ್ಕಂಥ ಜನಕ್ಕೆ ನಮಗೆ ಬೇಕಾದಂಥ ಸಮಯಕ್ಕೆ ಸರಿಯಾಗಿ ನೀವು ಕೊಡದಿದ್ದರೆ ಅದಕ್ಕೆ ನೂರು ರೂಪಾಯಿಯಿಂದ ಹತ್ತು ಸಹಸ್ರ ರೂಪಾಯಿ ಕೊಟ್ಟರೂ ಮೂರು ಕಾಸಿನ ಮರ್ಯಾದೆ ಇಲ್ಲ. ಇದು ಒಂದು ಭಾಗ. ಮೂರನೆಯದು ಆ ಪ್ರದೇಶದಲ್ಲಿ ಆಗಿರತಕ್ಕಂಥ ಗೊಬ್ಬರ, ಬೀಜದ ನಷ್ಟದ ಜೊತೆಗೆ ನೂರಾರು ಮನೆಗಳು ಬಿದ್ದುಹೋಗಿವೆ. ನಾನು ತಿಳಿದಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಿದ್ದುಹೋಗಿರತಕ್ಕಂಥ ಮನೆಗೆ ಸರಿಸುಮಾರು ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅರ್ಧ ಬಿದ್ದ ಮನೆಗೆ ಮೂರರಿಂದ ಐದು ಸಾವಿರ ರೂಪಾಯಿ ಕೊಟ್ಟಿದ್ದಾರೆ. ಹಾಗೆಂದು ನೀವು ಪತ್ರಿಕೆಯಲ್ಲಿ ಹೇಳಿದ್ದೀರಿ. ನನಗೆ ಗೊತ್ತಿಲ್ಲ. ಪತ್ರಿಕೆಯಲ್ಲಿ ಬಂದಿರತಕ್ಕಂಥ ವರದಿಯ ಮೇಲೆ ನಾನು ಹೇಳುತ್ತಿದ್ದೇನೆ. ಅದೇ ಶಿವಮೊಗ್ಗ ಜಿಲ್ಲೆಗಳಲ್ಲಿ ಅಥವಾ ಇನ್ನಿತರೆ ಜಿಲ್ಲೆಗಳಲ್ಲಿ ಒಂದು ಬಿದ್ದು ಹೋದ ಮನೆಗೆ ಐದು ನೂರು ರೂಪಾಯಿಗಳನ್ನು ಕೊಟ್ಟಿದ್ದೀರಿ. ತಾತ್ಕಾಲಿಕ ಪರಿಹಾರ ಎಂದು ಹೇಳಿ ಕೊಟ್ಟಿದ್ದೀರಿ.

ನೀವು ಕೊಡತಕ್ಕ 500 ರೂಪಾಯಿಗಳಿಗೆ ಬೇಕಾಗಿರತಕ್ಕ ಮಾಹಿತಿಯನ್ನು ಒದಗಿಸುವುದಕ್ಕೆ ಆ ಫಲಾನುಭವಿಯು ಅನುಭವಿಸತಕ್ಕ ಕಷ್ಟ ತಮಗೆ ತಿಳಿದಿದೆಯೋ ಇಲ್ಲವೋ ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಎರಡನೆಯದಾಗಿ ಇಲ್ಲಿ ಆಗಿರತಕ್ಕ ಬೆಳೆಗೆ ಪರಿಹಾರವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಯಾವುದೋ ಓಬಿರಾಯನ ಕಾಲದಲ್ಲಿ ಮಾಡಿದಂಥ ನಿರ್ಣಯ. ಒಂದು ಎಕರೆಗೆ 500 ರೂ. ಕೊಡತಕ್ಕಂಥ ವ್ಯವಸ್ಥೆ ನಾನು ಎರಡು ಮೂರು ಸಾರಿ ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ,

ಪತ್ರವನ್ನು ಬರೆದಿದ್ದೇನೆ, ಸರ್ಕಾರಕ್ಕೆ ತಿಳಿಸಿದ್ದೇನೆ. ಕನಿಷ್ಟ 5000 ರೂಪಾಯಿಗಳನ್ನು ಕೊಡಿ. ಕೊಡುವುದಕ್ಕೆ ಸಕಾಲಕ್ಕೆ ಕೊಡಿ. ಬಿದ್ದುಹೋಗಿರತಕ್ಕ ಮನೆಗೆ ನೀವು ಪರಿಹಾರವನ್ನು ಕೊಡುವುದಕ್ಕೆ ಒಂದೊಂದು ಜಿಲ್ಲೆಗೆ ಒಂದೊಂದು ಆಯಾಮವೋ? ಅಥವಾ ಎಲ್ಲಾ ಬಿದ್ದು ಹೋಗಿರತಕ್ಕ ಮನೆಗೆ ಹತ್ತು ಸಾವಿರ ರೂಪಾಯಿಗಳನ್ನು ಕೊಡುವ ಬಗ್ಗೆ ನಿಗದಿಯೇನಾದರೂ ಸರ್ಕಾರ ಮಾಡಿದ್ದರೆ, ಅಂಥದ್ದು ಶಿವಮೊಗ್ಗ ಜಿಲ್ಲೆಗೆ ಒಂದು ಮನೆಗೆ ಹತ್ತು ಸಾವಿರ ರೂಪಾಯಿ ಬಂದಿಲ್ಲ. 500 ರೂ. ನಿಂದ ಸಾವಿರ, ಒಂದೂವರೆ ಸಾವಿರವನ್ನು ಕೊಟ್ಟು ತಹಶೀಲ್ದಾರರು ಏನೋ ಮಾಡಿ ಮುಗಿಸಿಬಿಟ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಆಗಿರತಕ್ಕ ಹಾನಿ ಸುಮಾರು 12 ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಇದೆ. ಈ ಮಳೆಯಿಂದ ಆಗಿರತಕ್ಕ ಪರಿಣಾಮ ಏನೆಂದರೆ ಎಲ್ಲಾ ಟಾರ್‌ರಸ್ತೆ ಆಸ್‌ಫಾಲ್ಟೆಡ್ ರೋಡ್‌ನಲ್ಲಿ ಜಲ ಬರುತ್ತಿದೆ. ರಸ್ತೆಗಳು ಕುಸಿದುಹೋಗಿದೆ. ನಾನು ಜಿಲ್ಲೆಯ ಮುಖ್ಯ ಕಾರ್ಯದರ್ಶಿಯವರನ್ನು ಇದರ ಬಗ್ಗೆ ಟೆಲಿಫೋನ್‌ನ ಮೂಲಕ ಸಂಪರ್ಕಿಸಿದೆ. ಅವರು ಜಿಲ್ಲಾಪರಿಷತ್‌ನ ಇಲಾಖೆಯಿಂದ ರಸ್ತೆಗಳಿಗೆ ಆಗಿರತಕ್ಕ ನಷ್ಟ ಸುಮಾರು ನಾಲ್ಕೂವರೆಯಿಂದ ಐದು ಕೋಟಿ ಎಂದು ಹೇಳಿದರು. ಪಿಡಬ್ಲ್ಯೂಡಿ ಇಲಾಖೆಯಿಂದ ಆಗಿರತಕ್ಕ ನಷ್ಟ ಸುಮಾರು ಮೂರರಿಂದ ನಾಲ್ಕು ಕೋಟಿ. ಇದು ಕೇವಲ ರಸ್ತೆಗಳಿಂದ ಆಗಿರತಕ್ಕ ನಷ್ಟ. ಬೆಳೆಗಳಿಂದ ಆಗಿರುವ ನಷ್ಟ ಬೇರೆ ಇದೆ. ಈ ರೀತಿ ಸುಮಾರು 12 ಕೋಟಿ ನಷ್ಟ ಸರ್ಕಾರಕ್ಕೆ ಒದಗಿಸಿರುವ ಮಾಹಿತಿಯ ಪ್ರಕಾರ. ಆದರೆ ತಾವು ಬಿಡುಗಡೆ ಮಾಡಿರುವ ಹಣ 80 ಲಕ್ಷ. ನಾನು ಇಲ್ಲಿ ತಮ್ಮನ್ನು ಮೂಲಭೂತವಾಗಿ ಏನು ಪ್ರಶ್ನೆ ಮಾಡುತ್ತೇನೆಂದರೆ, ಹಣವನ್ನು ಬಿಡುಗಡೆ ಮಾಡಲು ತಮಗೆ ಇರತಕ್ಕ ತೊಂದರೆ ಏನು? ಕೇಂದ್ರ ಸರ್ಕಾರದಿಂದ ದುಡ್ಡು ಬಂದಿಲ್ಲ. ನಿಮ್ಮದೇ 27 ಕೋಟಿ ರೂ. ಇದೆಯಲ್ಲಾ ಕೆಲ್ಯಾಮಿಟಿ ರಿಲೀಫ್ ಫಂಡ್ 27 ಕೋಟಿ ರೂಪಾಯಿಗಳಲ್ಲಿ 10 ಕೋಟಿಯನ್ನು ಖರ್ಚು ಮಾಡಿದ್ದೀರಿ. ಉಳಿದ 17 ಕೋಟಿ ರೂಪಾಯಿಯನ್ನು ರಾಜ್ಯ ಸರ್ಕಾರ ತತ್‌ಕ್ಷಣ ಬಿಡುಗಡೆ ಮಾಡುವುದಕ್ಕೇನೂ ತೊಂದರೆ ಇಲ್ಲ. ನೀವು ಕೊಟ್ಟಿರುವ ವರದಿಯ ಪ್ರಕಾರ ಇನ್ನೂ 17 ಕೋಟಿ ತಮ್ಮಲ್ಲಿದೆ. ಅದು ಇರಬೇಕು ಅದನ್ನು ಹೋದ ವರ್ಷ ಖರ್ಚು ಮಾಡಿದ್ದೀರೋ ಅದರ ಹಿಂದಿನ ವರ್ಷ ಖರ್ಚು ಮಾಡಿದ್ದೀರೋ ನನಗೆ ಗೊತ್ತಿಲ್ಲ. 1991ನೇ ಇಸವಿ ಡಿಸೆಂಬರ್ ತಿಂಗಳಿನಲ್ಲಿ ಬಂದ ಮಳೆಯಿಂದ ರಾಯಚೂರು, ಬೆಂಗಳೂರು ಮತ್ತು ಕೋಲಾರ ಮುಂತಾದ ಭಾಗಗಳಲ್ಲಿ ಆದ ಹಾನಿಯ ಬಗ್ಗೆ ಶ್ರೀಮಾನ್ ಜಾಲಪ್ಪನವರು ಪದೇ ಪದೇ ಈ ಸದನದಲ್ಲಿ 13,000 ಮನೆಗಳು ಬಿದ್ದು ಹೋಗಿದೆ ಎಂದು ಹೇಳಿದರು. ಆದರೆ ನೀವು ಒಂದೇ ಒಂದು ಮನೆಯನ್ನು ಆದರೂ ಕಟ್ಟಿ ಕೊಟ್ಟಿದ್ದೀರ? ಆಶ್ವಾಸನೆಯನ್ನು ಏಕೆ ಕೊಡುತ್ತೀರಿ? ಕೈಲಾಗದೆ ಇರತಕ್ಕದ್ದನ್ನು ಹೇಳಲು ಹೋಗಬೇಡಿ. ನಿಮ್ಮಿಂದ ಏನು ಸಾಧ್ಯವೋ ಅದನ್ನು ಮಾಡಿ. ನಿಮ್ಮಿಂದ ಎಷ್ಟು ಸಾಧ್ಯವಿದೆಯೋ ಅಷ್ಟನ್ನೇ ಮಾಡುತ್ತೇವೆಂದು ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ : ಶಿವಮೊಗ್ಗ ಜಿಲ್ಲೆಯಲ್ಲಿ ಬಿದ್ದಂಥ ಮನೆಗಳಿಗೆ ಪರಿಹಾರವನ್ನು ಕೊಡುವ ವಿಚಾರದಲ್ಲಿ ತಾವು ಪ್ರಸ್ತಾಪ ಮಾಡಿದ್ದೀರಿ. ಅದರಲ್ಲಿ ಸರ್ಕಾರದ ಆಜ್ಞೆ ಏನಿದೆ ಎಂದರೆ ಯಾರು ಕೆಲವು ಲೋಲೆವೆಲ್‌ನಲ್ಲಿರತಕ್ಕರು ಸ್ಥಳಾಂತರ ಮಾಡುತ್ತಾರೆ, ಪೂರ್ಣ ಮನೆಯನ್ನು ಬಿದ್ದಂಥ ಸಂದರ್ಭದಲ್ಲಿ ಅಂಥವರಿಗೆ ನಾವು 10,000 ರೂ. ಮತ್ತು ಆಶ್ರಯ ಯೋಜನೆಯಲ್ಲಿ ಒಂದು ಮನೆಯನ್ನು ಕೊಡೋಣವೆಂದು ಮಾಡಿದ್ದೆವು. ಕೆಲವರು ಸ್ಥಳಾಂತರವನ್ನು ಮಾಡುವ ಸನ್ನಿವೇಶವಿದ್ದರಿಂದ ನಾವು ಆ ರೀತಿ ಕೊಡುವುದನ್ನು ನಿಲ್ಲಿಸಿದ್ದೆವು. ಇಲ್ಲ ನಾವು ಸ್ಥಳಾಂತರಿಸುವುದಿಲ್ಲ ನಾವು ಅಲ್ಲೇ ಇರುತ್ತೇವೆಂದಿದ್ದರೆ ಕೊಡುತ್ತಿದ್ದೆವು. ಈಗ ಭದ್ರಾವತಿಯಲ್ಲಿ ನೂರು ಜನರು ಸ್ಥಳಾಂತರ ಮಾಡುತ್ತೇವೆಂದು ಹೇಳಿದರು. ನಾವು ಅವರಿಗೆ ಸೈಟನ್ನು ಕೊಟ್ಟಿದ್ದೇವೆ. ಹೊನ್ನಾಳಿಯಲ್ಲಿ, ಭದ್ರಾವತಿಯಲ್ಲಿ, ಶಿವಮೊಗ್ಗದಲ್ಲಿ 300 ಜನರಿಗೆ

ಕೊಟ್ಟಿದ್ದೇವೆ. ಅವರೇ ಮನೆಯನ್ನು ಕಟ್ಟಿಕೊಳ್ಳುತ್ತೇವೆಂದು ಮುಂದೆ ಬಂದಿದ್ದಾರೆ. ನಾವು ಮನೆಗೆ ಕೊಡತಕ್ಕ ಪರಿಹಾರವನ್ನು ಕೊಟ್ಟುಬಿಟ್ಟರೆ ಅವರು ಅನಾವಶ್ಯಕವಾಗಿ ಅದನ್ನು ಖರ್ಚು ಮಾಡಿಕೊಳ್ಳಬಹುದು.

ಅವರಿಗೆ ಒಂದು ಒಳ್ಳೆಯ ಮನೆಯಾಗಬೇಕೆಂದು ಇದೊಂದು ಹತ್ತು ಸಾವಿರ ಅದೊಂದು ಹದಿನೈದು ಸಾವಿರ, ಒಟ್ಟು ಇಪ್ಪತ್ತೈದು ಸಾವಿರದಲ್ಲಿ ಒಳ್ಳೆಯ ಮನೆಯಾಗಬಹುದು ಎನ್ನತಕ್ಕ ಕಾರಣಕ್ಕಾಗಿ ಸ್ವಲ್ಪ ನಿಲ್ಲಿಸಿ ಎಂದು ಹೇಳಿದ್ದೇವೆಯೇ ವಿನಹ, ಎಲ್ಲಿ ಸ್ಥಳಾಂತರ ಮಾಡದೇ ಇರತಕ್ಕವರಿದ್ದಾರೆ ಅವರುಗಳಿಗೆಲ್ಲಾ ಇವತ್ತು ಪರಿಹಾರವನ್ನು ಕೊಡುತ್ತಿರತಕ್ಕ ಕೆಲಸ ನಡೆದಿದೆ. ನಿಮ್ಮದು ಮುಖ್ಯವಾಗಿ ಮಂಡಗದ್ದೆಯ ವಿಚಾರ. ನಾನು ಮೊನ್ನೆ ಹೋಗಿ ನೋಡಿದ್ದೇನೆ. ಅವರು ಪ್ರತಿ ವರ್ಷ ಈ ರೀತಿಯಾಗಿದೆ ಎಂದಿದ್ದಾರೆ. ನಾನು ಆವಾಗ ಒಂದು ಸಾರಿ ಪರಿಹಾರವನ್ನು ಕೊಡಿಸಿದ್ದೇನೆ. ತದನಂತರ ಸಹ ಒಂದು ಸಾರಿ ಕೊಡಿಸಿದ್ದೇನೆ. ನಾನೇ 1981ರಲ್ಲಿ ಹೋಗಿ ಅಷ್ಟೂ ಜನರಿಗೆ ಮೇಲುಗಡೆ ಸೈಟು, ಮನೆಯನ್ನು ಸಹ ಕಟ್ಟಿದ್ದೇವೆ. ಮನೆಯನ್ನು ತೆಗೆದುಕೊಂಡು ಸೈಟನ್ನೂ ಸಹ ತೆಗೆದುಕೊಂಡರು; ಅವರು ಇಲ್ಲಿಯೇ ಇದ್ದಾರೆ.

5.55 ಪಿ.ಎಂ

ಅಲ್ಲಿದ್ದ ಎಲ್ಲರೂ ಒಪ್ಪಿಕೊಂಡು ಬೇರೆ ಕೊಟ್ಟರೆ ಒಳ್ಳೆಯದಾಗುತ್ತದೆಂದು ಹೇಳಿದರು. "ಆಯಿತು" ಕೊಡೋಣ ಎಂದು ಕೊಟ್ಟೆವು. ಆ ಕಾರಣಕ್ಕಾಗಿ ಹೇಳಿದೆ. ಅವರು ಅಲ್ಲಿಗೆ ಹೋಗುವುದಿಲ್ಲವೆಂದರೆ ಸುಮ್ಮನೆ ನಾವು ಏಕೆ ಒತ್ತಾಯ ಮಾಡುವುದು? ಕೊಡುವುದಾದರೆ ಜಿಲ್ಲಾಧಿಕಾರಿಗಳಿಗೆ ತಿಳಿಸಿಕೊಡಿ ಎಂದು ಹೇಳುತ್ತೇನೆ. ತಾವು ಪ್ರಜ್ಞೆ ಇರತಕ್ಕಂಥವರು, ಆ ಜನರಿಗೆ ಪುನರ್ವಸತಿ ಮಾಡಬೇಕೆಂಬ ದೃಷ್ಟಿಯಿಂದ ತಡೆ ಹಿಡಿಯಬೇಕಾದ ಸಂದರ್ಭವೊದಗಿತಷ್ಟೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಿಮ್ಮ ವಿವರಣೆ ಸರಿಯೆಂದು ನನಗೆ ಕಾಣುತ್ತದೆ. ಭದ್ರಾವತಿಯಲ್ಲಾಗಿರುವ ಪ್ರಕರಣ ಬೇರೆ. ಮಂದಗದ್ದೆಯಲ್ಲಾಗಿರುವ ಪ್ರಕರಣದ ಬಗ್ಗೆ ಹೇಳುವುದಾದರೆ ಹಿಂದೆ ಯಾರಿಗೆ ನಿವೇಶನ ಕೊಡಲಾಗಿದೆಯೋ ಅವರಿಗೆ ನೀವು ಕೊಡಬೇಡಿ, ಮನೆ ಕಳೆದುಕೊಂಡಂಥ ಯಾರಿಗೆ ಪರಿಹಾರ ಕೊಟ್ಟಿದ್ದೀರೋ ಅವರಿಗೆ ಕೊಡಬೇಡಿ. ನಾನು ಈ ಕುರಿತು ತಹಶೀಲ್ದಾರ್ ಅವರೊಂದಿಗೆ ಮಾತನಾಡಿದ್ದು, ಮೇಲಿನ ಪ್ರದೇಶದಲ್ಲಿ ಜಾಗ ನೋಡಿ ಸ್ಥಳಾಂತರಿಸುವುದಕ್ಕೆ ಒಪ್ಪಿಕೊಂಡಿದ್ದಾರೆ, ಆ ಜಾಗಕ್ಕೆ ನೀವು ಏನು ಮಾಡಿದ್ದೀರೆಂದರೆ, 15,000 ರೂಪಾಯಿಗಳಲ್ಲಿ ಮನೆ ಕಟ್ಟಿಕೊಡುವಂಥ 'ಆಶ್ರಯ' ಯೋಜನೆಯಲ್ಲಿ, ಫಲಾನುಭವಿ ಕಡೆಯಿಂದ 15,000 ರೂಪಾಯಿ ಮತ್ತು ರಾಜ್ಯ ಸರ್ಕಾರ ಕೊಡುವ 10,000 ರೂಪಾಯಿಗಳು ಸೇರಿ 25,000 ರೂಪಾಯಿಗಳಲ್ಲಿ ಮನೆಗಳನ್ನು ಕಟ್ಟಿಕೊಡುತ್ತೇವೆಂದು ಹೇಳಿದ್ದೀರಿ. ಈ ರೀತಿ ಒಬ್ಬರಿಗಾದರೂ ಮನೆಯನ್ನು ಕಟ್ಟಿಕೊಟ್ಟಿದ್ದೀರಾ?

SRI. KAGODU THIMMAPPA : You must take a hard decision. As a friend, I am saying, I have got every right to take a hard decision.

ಕೆಲವು ಸಂದರ್ಭದಲ್ಲಿ ಜನರು ಹೇಳುತ್ತಾರೆಂದು ನಾವು ಕುಣಿಯಬಾರದು. ಅವರು ಹೋಗುವುದಿಲ್ಲವೆಂದು ನಾವು ಎಂದೂ ಒತ್ತಾಯ ಮಾಡುವುದಕ್ಕಾಗುವುದಿಲ್ಲ. ಅವರಿಗೆ 10,000 ರೂಪಾಯಿಗಳನ್ನು ಕೊಡುವಂಥ ಸೌಲಭ್ಯವೇನಿದೆ, ಅದನ್ನು ಕೊಡುವುದಕ್ಕೆ ಸಂಬಂಧಿಸಿದವರಿಗೆ ಹೇಳುತ್ತೇನೆ. ಆದರೆ, ಇರುವ ಸಮಸ್ಯೆಯನ್ನು ನಾವು ಜೀವಂತವಾಗಿ ಉಳಿಸಬಾರದು. ಅದಕ್ಕೋಸ್ಕರ ನಾನು ಹೇಳುತ್ತಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ : ಅದಕ್ಕೆ ನಾನೂ ಒಪ್ಪುತ್ತೇನೆ. ಈಗ ನಾನು ಏನು ಹೇಳುತ್ತಿದ್ದೇನೆಂದರೆ, ಸಂಬಂಧಪಟ್ಟ ಇಲಾಖಾಧಿಕಾರಿಗಳು ಸ್ಥಳವನ್ನು ಅಜಮಾಯಿಷಿ ಮಾಡಿ ಯಾರು ಅಲ್ಲಿಗೆ ಹೋಗುವುದಕ್ಕೆ ತಯಾರಾಗಿದ್ದಾರೋ ಅಂತಹವರಿಗೆ ನೀವು ಇಷ್ಟು ದುಡ್ಡು ಕೊಡುತ್ತೇವೆ, ಮನೆ ಕಟ್ಟಿಕೊಳ್ಳಿರಿ ಎಂದಿರುವ ಯಾವುದಾದರೂ ಒಂದು ನಿದರ್ಶನವಿದೆಯೇ? ಇದನ್ನು ಹೇಳಿದರೆ ಏನೆಂಬುದು ತೀರ್ಮಾನವಾಗುತ್ತದೆ.

ನೀವು ಮಂತ್ರಿಯಾಗಿ ಹೇಳುವುದು, ನಾನು ಶಾಸಕನಾಗಿ ಹೇಳುವುದು ಮತ್ತು ಮುಖ್ಯಮಂತ್ರಿಗಳು ಹೇಳುವುದು, ಇದೆಲ್ಲವೂ ಏನಾಗುತ್ತದೆಂದರೆ ಕೆಳಗಿನ ಆಡಳಿತ ವ್ಯವಸ್ಥೆಯಲ್ಲಿರುವ ದೋಷಗಳಿಂದ ಯೋಜನೆ ಜಾರಿಯಾಗುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅದರಲ್ಲಿ ದೋಷವೇನೂ ಇಲ್ಲ. ನಾಳೆ ದಿವಸವೇ ಐದು ಜನರು ಬಂದರೆ ಅಷ್ಟೂ ಜನರಿಗೆ ಕೊಡುತ್ತೇನೆ. ಒಬ್ಬರೂ ಬಂದರೂ ಅವರಿಗೂ ಕೊಡುತ್ತೇನೆ.

SRI. D.B. CHANDRE GOWDA : The Chief Minister held two rounds of discussions with the Leaders of the Opposition parties once on 23-7-94 and again on 5-8-94.

ನಾನು ಕೇಳುವುದೇನೆಂದರೆ, ರಾಜ್ಯದ ಯಾವ್ಯಾವ ಜಿಲ್ಲೆ, ತಾಲ್ಲೂಕುಗಳಲ್ಲಿ ತೊಂದರೆಯಾಗಿದೆ, ಮತ್ತು ಯಾವ್ಯಾವ ಶಾಸಕರುಗಳು ಇಂತಹ ಪರಿಸ್ಥಿತಿಗೆ ಸಿಕ್ಕಿದ್ದಾರೋ, ಅಂತಹ ಶಾಸಕರುಗಳನ್ನು ಕರೆದು ಕೇಳಬೇಕಾಗಿತ್ತು. ನಿಮ್ಮ ನಾಯಕರು ಏನು ಹೇಳುತ್ತಾರೆ? ನೀವು ಅವರನ್ನು ಕೇಳಬೇಕಾಗಿತ್ತು ಇಲ್ಲವೇ ಅವರು ನಿಮ್ಮ ಪರಿಸ್ಥಿತಿಯನ್ನು ಕೇಳಬೇಕಾಗಿತ್ತು. ಹೀಗಾಗದೆ, ಮುಖ್ಯಮಂತ್ರಿಗಳು ಸಭೆ ಕರೆಯುವುದು, ನಾಲ್ಕು ಜನರು ಹೋಗಿ ಸಭೆಯಲ್ಲಿ ಕುಳಿತು ಚರ್ಚೆ ಮಾಡಿ ಬಂದರೆ ವಿಷಯ ಸಿಗುತ್ತದೆಯೇ? ನಿಮಗೆ ವಿಷಯ ಪರಿಪೂರ್ಣವಾಗಿ ಸಿಗಬೇಕಾದರೆ ಯಾವ್ಯಾವ ತಾಲ್ಲೂಕುಗಳಲ್ಲಿ ಯಾರಿಗೆ ತೊಂದರೆಯಾಗಿದೆಯೋ ಅಂತಹ ಶಾಸಕರುಗಳ ಒಂದು ಸಭೆ ಕರೆದು ಚರ್ಚೆ ಮಾಡಲು ಇರುವ ತೊಂದರೆಯಾದರೂ ಏನು? ಆದುದರಿಂದ, ತಮ್ಮಲ್ಲಿ ನಾನು ಏನು ಹೇಳುತ್ತಿದ್ದೇನೆಂದರೆ, ಸಂಬಂಧಪಟ್ಟ ಶಾಸಕರುಗಳ ಸಭೆ ಕರೆದು, ಅದು ಪ್ರವಾಹದ ಬಗ್ಗೆಯಾಗಿರಬಹುದು, ಬರಗಾಲ ಪರಿಸ್ಥಿತಿ ಕುರಿತಾಗಿರಬಹುದು. ನೀವು ಗುರ್ತಿಸಿರುವಂತೆ ಯಾವ್ಯಾವ ತಾಲ್ಲೂಕುಗಳಲ್ಲಿ ಪ್ರವಾಹದಿಂದ ಹಾನಿಯಾಗಿದೆ? ಬರಗಾಲದಿಂದ ಆಗಿರತಕ್ಕ ನಷ್ಟ ಎಷ್ಟು? ಈ ಕುರಿತು ಅಷ್ಟೂ ತಾಲ್ಲೂಕುಗಳ ಶಾಸಕರ ಸಭೆ ಕರೆದು ಚರ್ಚೆ ಮಾಡಿದರೆ ಈ ಶಾಸನಸಭೆಯ ಸಮಯವಾದರೂ ಉಳಿಸಬಹುದು. ಸಭೆಯನ್ನು ಕರೆಯದಿರುವಂಥ ದೋಷವನ್ನು ನೀವು ಸರಿಪಡಿಸಿಕೊಳ್ಳಬೇಕೆಂದು ನಾನು ಸಭಾಧ್ಯಕ್ಷರ ಮುಖಾಂತರ ಪ್ರಾರ್ಥಿಸಿಕೊಳ್ಳುತ್ತೇನೆ. ಮತ್ತೆ ಅತಿವೃಷ್ಟಿಯಿಂದ ಹಾನಿಯಾದುದರ ಬಗ್ಗೆ ಮತ್ತು ಇದಕ್ಕೆ ಪರಿಹಾರ ಒದಗಿಸಿರುವುದರ ಬಗ್ಗೆ ಸಚಿವರಾದ ಶ್ರೀ ಧರ್ಮ್‌ಸಿಂಗ್‌ರವರು ಒಂದು ಹೇಳಿಕೆಯನ್ನಿತ್ತಿದ್ದಾರೆ. The State Government has released a sum of Rs. 10.15 crores to the following districts ಎಂದು ನನಗೆ ತಿಳಿದಿರುವಂತೆ ನೀವು ಶಿವಮೊಗ್ಗ ಜಿಲ್ಲೆಗೆ ಕೊಟ್ಟಿರುವ 80 ಲಕ್ಷ ರೂಪಾಯಿಗಳಲ್ಲಿ ಈಗಾಗಲೇ 70 ರಿಂದ 75 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ರಸ್ತೆ ಕಾಮಗಾರಿಗೆ ಒಂದು ರೂಪಾಯಿಯಷ್ಟು ಹಣ ಕೊಟ್ಟಿಲ್ಲ. ಒಂದು ಕಮ್ಯುನಿಕೇಷನ್ ಅನ್ನು ಎಸ್ಟಾಬ್ಲಿಷ್ ಮಾಡಿಕೊಳ್ಳಿ. ಈಗ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಇದ್ದು ಅದರಲ್ಲಿ ಸಾಕಷ್ಟು ಹಣವಿದ್ದು ಈಗೇನು ಮಾಡಿದ್ದೀರಿ? ಹಳೆಯ ಮೈಸೂರಿನ ಇತಿಹಾಸ ನೋಡಿದಾಗ ಮಲೆನಾಡು ಅಭಿವೃದ್ಧಿ ಮಂಡಳಿ ವ್ಯಾಪ್ತಿಗೆ 37 ತಾಲ್ಲೂಕುಗಳು ಹಿಂದೆ ಬರುತ್ತಿತ್ತು, ಈಗ 78 ತಾಲ್ಲೂಕುಗಳು ಬರುತ್ತವೆ. ಅದರಲ್ಲಿ ಮಲೆನಾಡು

ಅಭಿವೃದ್ಧಿ ಮಂಡಳಿಯೂ ಮತ್ತು ಬರ ಪರಿಹಾರ ಕಾಮಗಾರಿಗೆ ಸೇರಿದ ತಾಲ್ಲೂಕುಗಳಿವೆ. ಇಂತಹ ದುರವಸ್ಥೆಯಾಗಬಾರದು. ಅಲ್ಲದೆ, ಮಳೆ ಬೀಳದಂಥ ಪ್ರದೇಶಗಳೂ ಅದರ ವ್ಯಾಪ್ತಿಗೆ ಸೇರಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಅಲ್ಲಿ ದೊಡ್ಡ ಪಿತೂರಿ ನಡೆಯುತ್ತಿದೆ. ತಾವು ರಕ್ಷಣೆ ಕೊಡಬೇಕು. ಈ ಮಾರಿ ಕಣ್ಣು ಹೋತನ ಮೇಲೆ ಎಂಬ ಗಾದೆಯಂತೆ; ಇದು ಸರಿಯಲ್ಲ. ಶ್ರೀ ಕಾಗೋಡುತಿಮ್ಮಪ್ಪ ಮತ್ತು ಶ್ರೀ ಬೈರೇಗೌಡರ ಬೆಂಬಲ, ಇದೆಲ್ಲಾ ನೋಡಿದರೆ ಏನೋ ದೊಡ್ಡ ಪಿತೂರಿಯೇ ಆಗುತ್ತಿದೆ; ಇದು ಸರಿಯಲ್ಲ.

ಉಪಾಧ್ಯಕ್ಷರು : ಹೋತ ಯಾರು ಇಲ್ಲಿ?

ಶ್ರೀ ಬಿ.ಹೆಚ್. ಬನ್ನಿಕೋಡ್ : ಸಚಿವ ಕಾಗೋಡ್ ತಿಮ್ಮಪ್ಪನವರು ಅಲ್ಲಿ ಪದೇ ಪದೇ ಪ್ರವಾಹ ಬಂದು ಮನೆಗಳು ಮುಳುಗಡೆಯಾಗುತ್ತಿದೆ ಅದಕ್ಕೆ ಶಾಶ್ವತ ಪರಿಹಾರ ಕಂಡು ಹಿಡಿಯುವುದು ಸೂಕ್ತವೆಂದು ಹೇಳಿದರು. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಶಿಕಾರಿಪುರ ತಾಲ್ಲೂಕಿನ ಅಂಜನಾಪುರ ಕೆರೆ ಒಡೆದು ಅಧಿಕಾರಿಗಳ ನಿರ್ಲಕ್ಷ್ಯದಿಂದ ಯಾವುದೋ ಗೇಟನ್ನು ರಾತ್ರೋರಾತ್ರಿ ಎತ್ತಿದ್ದಕ್ಕೆ ಆದಂತಹ ಅನಾಹುತ ಅಲ್ಲಿ ಮನೆಗಳು ಪ್ರವಾಹ ಬಂದು ಮುಳುಗಡೆಯಾಗಿದೆ. ತಮ್ಮ ಜಿಲ್ಲೆಯಲ್ಲಿ ಹೇಳಿದ್ದೀರಿ ಎಲ್ಲಿ ಮನೆಗಳು ಬದಲಿಸಿ ಎತ್ತರದ ಪ್ರದೇಶಗಳಿಗೆ ಹೋಗುವುದಕ್ಕೆ ಸಿದ್ಧವಾಗಿದ್ದಾರೆ, ಅವರಿಗೆ ಜಾಗವನ್ನು ಕೊಡುವುದಕ್ಕೆ ಮಾಸೂರು, ತಿಪ್ಪಯ್ಯ ಕೊಪ್ಪೆಗ್ರಾಮದ ಜನರಿಗೆ ಜಾಗ ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ನಿಮ್ಮ ಜಿಲ್ಲೆಯಲ್ಲಿ ಒಂದು ಮನೆಗೆ 15 ಸಾವಿರ ರೂಪಾಯಿಗಳು ಆಶ್ರಯ ಯೋಜನೆಯಲ್ಲಿ, 10 ಸಾವಿರ ರೂ.ಗಳು ಪ್ರವಾಹ ಪರಿಹಾರ ಯೋಜನೆಯಲ್ಲಿ ಕೊಡುತ್ತೀರಿ. ಅದೇ ರೀತಿ ಹೆಚ್ಚುವರಿ ಮನೆಗಳನ್ನು ಅಂತಹ ಜನರಿಗೆ ಆಶ್ರಯ ಯೋಜನೆಯಲ್ಲಿ ಕೊಟ್ಟು, 25 ಸಾವಿರ ರೂ. ಗಳನ್ನು ಕೊಡುವಂತಹ ಯೋಜನೆಯನ್ನು ನಮ್ಮ ತಾಲ್ಲೂಕಿನಲ್ಲಿ, ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಇದೆ ಅಲ್ಲಿ ಕೂಡಲೇ ಕೊಡುವುದಕ್ಕೆ ಸರ್ಕಾರ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ. ಈ ಶ್ರೀ ಕಾಗೋಡು ತಿಮ್ಮಪ್ಪನವರು ಏನು ಹೇಳಿದರು, ಅದು ತಮ್ಮ ಜಿಲ್ಲೆಗೆ ಮಾತ್ರ ಸರ್ಕಾರ ಸೀಮಿತವಾಗಿದೆಯೋ?

ಉಪಾಧ್ಯಕ್ಷರು : ಬನ್ನಿಕೋಡ್‌ರವರೇ, ರಿಪ್ಲೈ ಕೊಡುವುದಕ್ಕೆ ಮೊದಲೇ ಏನು ಇದು?

ಶ್ರೀ ಬಿ.ಹೆಚ್. ಬನ್ನಿಕೋಡ್ : ಉಪಾಧ್ಯಕ್ಷರೇ, ಇಡೀ ರಾಜ್ಯದಲ್ಲಿ ಪ್ರವಾಹವಾಗಿದೆ. ಒಂದು ಜಿಲ್ಲೆಯ ಮಾತನ್ನು ಇಲ್ಲಿ ಆಡಿದ್ದಾರೆ. ಅವರು ಈ ರೀತಿ ಹೇಳಿದರೆ ಆಗುವುದಿಲ್ಲ. ಶಾಲೆಗಳು ಸೋರುತ್ತಿವೆ. ಅವರಿಗೆ ವಸತಿ ಇಲ್ಲ, ಜನರು ನಮ್ಮನ್ನು ಬಿಡುವುದಿಲ್ಲ. ಶಿವಮೊಗ್ಗ ಜಿಲ್ಲೆಯ ವ್ಯವಸ್ಥೆ ಮಾತ್ರವಲ್ಲ. ಇದೇ ಕರ್ನಾಟಕದ ಎಲ್ಲಾ ಜನರನ್ನು ರಕ್ಷಣೆ ಮಾಡುವಂತಹ ಕೆಲಸ ಸರ್ಕಾರದ್ದು ಅದಕ್ಕೆ ನಿಮ್ಮ ಉತ್ತರವನ್ನು ಕೇಳುತ್ತಿರುವುದು.

ಉಪಾಧ್ಯಕ್ಷರು : ಅವರು ಉತ್ತರ ಕೊಡುವಾಗ ಹೇಳುತ್ತಾರೆ.

ಶ್ರೀ ಧರ್ಮಸಿಂಗ್ : ಶಿವಮೊಗ್ಗ ಜಿಲ್ಲೆ ಮಾತ್ರವಲ್ಲ, ಸರ್ಕಾರದಿಂದ ತೆಗೆದುಕೊಳ್ಳುವಂತಹ ನಿರ್ಣಯವೇನು, ಎಂದರೆ ಕರ್ನಾಟಕರಾಜ್ಯದಲ್ಲಿ ಎಲ್ಲಾ ಕಡೆ ಒಂದೇ ಇರುತ್ತದೆ. ಅದರಲ್ಲಿ ತಾರತಮ್ಯವಿರುವುದಿಲ್ಲ. ಉತ್ತರದಲ್ಲಿ ಎಲ್ಲಾ ಬಿಡಿಸಿ ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ನಮ್ಮ ಶಾಸಕರ ಮನಸ್ಸಿನಲ್ಲಿ ಏನಾಗಿದೆ ಎಂದರೆ ಶಿವಮೊಗ್ಗ ಜಿಲ್ಲೆಯಲ್ಲಿ ಏನೋ ಭಾರಿ ಪರಿಹಾರ ಸಿಕ್ಕಿದೆ, ನಮ್ಮ ಧಾರವಾಡ ಜಿಲ್ಲೆಗೆ ಸಿಕ್ಕಿಲ್ಲ ಎಂದು ಇರಬೇಕು. ಸ್ವಾಮಿ ನಮ್ಮ ಜಿಲ್ಲೆಗೂ ಸಿಕ್ಕಿಲ್ಲ, ನಿಮ್ಮ ಜಿಲ್ಲೆಗೂ ಸಿಕ್ಕಿಲ್ಲ. ಬರೀ ವ್ಯಾಖ್ಯಾನ ಪತ್ರಿಕೆಗಳ ಮೂಲಕ ಬಂದಿರುವುದನ್ನು ಹೇಳಿದೆ.

(ಗೊಂದಲ)

ನಾನು ಏನು ಕೇಳುತ್ತಿದ್ದೇನೆ ಎಂದರೆ ದೈವ ನಿರ್ಮಿತವಾದ ಪ್ರಕೃತಿ ನಿರ್ಮಿತವಾದಂಥ ದೋಷಗಳು. ಅದು ಮಳೆ, ಭೂಕಂಪ ಯಾವುದೇ ಇರಬಹುದು ಈಗ ಲಾಥೂರ್‌ನಲ್ಲಿ ಭೂಕಂಪವಾದಾಗ ಕೇಂದ್ರ ಸರ್ಕಾರ ಅವರ ಸಹಾಯಕ್ಕೆ ಬರಲಿಲ್ಲವೇ? ಬೊಂಬಾಯಿಗೆ ಒಂದು ನೂರು ಕೋಟಿ ರೂಪಾಯಿಗಳನ್ನು ರಿಲೀಜ್ ಮಾಡಲಿಲ್ಲವೇ? ನಮ್ಮಲ್ಲಿ ಭೂಕಂಪವಾದಾಗ ಮಾನ್ಯ ಮುಖ್ಯಮಂತ್ರಿಗಳು ಬೇಡ, 2 will ಟೇಕ್ ಕೇರ್ ಆಫ್ ಮೈ ಸೆಲ್ಫ್ ಎಂದು ಬಿಟ್ಟರು. ನೀವು ಇಂಥಹ ತಪ್ಪು ಮಾಡಬೇಡಿ. ನಾನು ಹೇಳುತ್ತಿರುವುದು ಇಂತಹ ವಿಶೇಷವಾದಂತಹ ಸಂದರ್ಭಗಳಲ್ಲಿ ಪ್ರಕೃತಿ ನಿರ್ಮಿತವಾದಂತಹ ಶಾಪ ಒಂದು ಕಡೆಯಾದರೆ, ಮಾನವ ನಿರ್ಮಿತವಾದಂತಹ ಶಾಪ ಮತ್ತೊಂದು ಕಡೆ. ಅಂಜನಾಪುರದ ಡ್ಯಾಮ್ ಒಡೆಯಲಿಲ್ಲವೇ? 12ನೇ ತಾರೀಖು ಭದ್ರಾನದಿಯ ನೀರು 1 ಲಕ್ಷ 10 ಸಾವಿರ ಕ್ಯೂಸೆಕ್ಸ್ ನೀರನ್ನು ಬಿಟ್ಟು ಕೆಳಗಿನ ಜನರಿಗೆ ಅನ್ಯಾಯ ಮಾಡಿದಂತಹ ಇಂಜಿನಿಯರನ್ನು ತಕ್ಷಣ ನೀವು ನೇಣು ಹಾಕಬೇಕಾಗಿತ್ತು. ಇಷ್ಟು ದೊಡ್ಡ ಪ್ರಮಾಣದಲ್ಲಿ ನೀರು ಬಿಟ್ಟಿರುವುದು ಅದರ ಇತಿಹಾಸದಲ್ಲೇ ಇಲ್ಲ. ಅದರಿಂದ ಆಗಿರತಕ್ಕಂಥ ನಷ್ಟಕ್ಕೆ ಮತ್ತು ಬಿದ್ದಂತಹ ಮನೆಗಳಿಗೆ ಯಾರು ಕಾರಣ? ಅದನ್ನು ವಿಚಾರಣೆ ಮಾಡಿ. ನಾನು ಹೇಳುವುದು ಇಷ್ಟೇ, ನೀವು ಯಾವುದಾದರೂ ನಿರ್ಣಯ ತೆಗೆದುಕೊಳ್ಳಿ. ಈಗ ಪರಿಸ್ಥಿತಿಯನ್ನು ನಿವಾರಿಸುವುದಕ್ಕೆ ಏನು ಮಾಡಬೇಕು ಎಂಬುದು; ನಾಳೆ ಬೆಳಿಗ್ಗೆ ಪ್ರಧಾನಮಂತ್ರಿಯವರು ಬರುತ್ತಾ ಇದ್ದಾರೆ.

ನಿಮ್ಮ ಮೆಮೊರ್‍ಯಾಂಡಂ ಪ್ರತಿ ವರ್ಷ ಕೊಡುತ್ತಿದ್ದೀರಿ. ನೀವು ಮೂರು ವರ್ಷದಿಂದ ಕೇಂದ್ರ ಸರ್ಕಾರಕ್ಕೆ ಕೊಟ್ಟ ಈ ಅಚ್ಚು ಹಾಕಿಸಿದ ಮುದ್ರಣ ಕಾಗದ ಬಹಳ ಸೊಗಸಾಗಿದೆ. ನೀವು ಇದನ್ನು ತೆಗೆದುಕೊಂಡು ಹೋಗಿ ಅಲ್ಲಿ ಕೊಟ್ಟು ಪ್ರಾರ್ಥನೆ ಮಾಡಿದ್ದೀರಲ್ಲಾ, ಈ ಅಚ್ಚು ಹಾಕಿಸಿದ ದುಡ್ಡಾದರೂ ಬಂದಿದೆಯೇ? ಇದಕ್ಕೆ ಆಗಿರತಕ್ಕಂತಹ ಖರ್ಚಿನಲ್ಲಿ ನೀವು ಒಂದು ತಾಲ್ಲೂಕಿನ ವ್ಯವಸ್ಥೆ ಮಾಡಬಹುದು. ಆದುದರಿಂದ ನಾನು ಏನು ಕೇಳುತ್ತೇನೆಂದರೆ 27 ಕೋಟಿ ರೂಪಾಯಿಯನ್ನು ಕೇಂದ್ರ ಸರ್ಕಾರ ಏನು ಕೆಲ್ಯಾಮಿಟಿಸ್ ಫಂಡ್ ಎಂದು ನಿಗದಿ ಮಾಡಿದೆ. ಅದು ಒಂದು ಮಿನಿಮಂ. ಇಂತಹ ವಿಶೇಷವಾದ ಸಂದರ್ಭದಲ್ಲಿ ನಮ್ಮ ನೆರವಿಗೆ ಕೇಂದ್ರ ಸರ್ಕಾರ ಬರದೇ ಇದ್ದರೆ ಕೇಂದ್ರ ಸರ್ಕಾರ ನಮ್ಮ ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆ ತೋರುತ್ತಿದೆ ಎಂದು ಹೇಳಿ ಶಾಸನದಲ್ಲಿ ಸಭೆ ಸೇರಿಸಿ ನಾವು ಒಂದು ಠರಾವು ಮಾಡಬೇಕಾಗುತ್ತದೆ. ಇಲ್ಲದೇ ಇದ್ದರೆ ಎಲ್ಲಾ ಪಕ್ಷದ ಮುಖಂಡರನ್ನು ಕರೆದು ನಾಳೆ ಪ್ರಧಾನ ಮಂತ್ರಿಯವರನ್ನಾದರೂ ಭೇಟಿ ಈಗ ಆಗಿರತಕ್ಕಂಥಾದ್ದನ್ನು ಅವರ ಗಮನಕ್ಕೆ ತರಬೇಕು.

ಶ್ರೀ ಧರ್ಮಸಿಂಗ್ : ಇದು ಸಿಆರ್‌ಎಫ್‌ನಲ್ಲಿ ಇರತಕ್ಕಂತಹ 27 ಕೋಟಿ ರೂಪಾಯಿ ಮತ್ತು ಕೇಂದ್ರ ಸರ್ಕಾರ ಕೊಡತಕ್ಕಂಥಾದ್ದು 20 ಕೋಟಿ 75 ಲಕ್ಷ ರೂಪಾಯಿ. ತಾವೇ ಹೇಳಿದಿರಿ, ವಿ.ಪಿ.ಸಿಂಗ್ ಅವರು ಈ ದೇಶದ ಪ್ರಧಾನ ಮಂತ್ರಿಯಾದಾಗ ಕೆಲ್ಯಾಮಿಟಿಸ್ ರಿಲೀಫ್ ಫಂಡ್ ಇಷ್ಟು ಎಂದು ನಿಗದಿ ಮಾಡಿದ್ದಾರೆ. ಕೆಲವು ಪ್ರಸಂಗ ಬಂದಾಗ ರಾಜ್ಯಸರ್ಕಾರ ಖರ್ಚುಮಾಡಬೇಕಾದ ಮಾತು ಬೇರೆ.

ಅದನ್ನು ಉತ್ತರದಲ್ಲಿ ಕೂಡ ನಾವು ಹೇಳುತ್ತೇವೆ. ಈಗ ಸಿಆರ್‌ಎಫ್‌ನಲ್ಲಿ 27 ಕೋಟಿ ರೂಪಾಯಿ ಎಂದು ನಿಗದಿ ಮಾಡಿದ್ದೇವೆ, 9ನೇ ಫೈನಾನ್ಸ್ ಕಮಿಷನ್‌ನಲ್ಲಿ 27 ಕೋಟಿ ರೂಪಾಯಿ ಏನು ನಿಗದಿ ಮಾಡಿದ್ದಾರೆ, ಈಗ 10ನೇ ಫೈನಾನ್ಸ್ ಕಮಿಷನ್‌ನ ಮಾನ್ಯ ಪಂತ್‌ರವರು ಬಂದಾಗ ಕೂಡ we have pleaded. ಇದು ಮಾಡಿರುವುದು ಕಡಿಮೆ ಇದೆ. ಇದು ಆಗುವುದಿಲ್ಲ ಎಂದು ಹೇಳಿದ್ದೇನೆ. ಇವತ್ತು ನಮಗೆ ಸಿಆರ್‌ಎಫ್‌ನಲ್ಲಿ 10ನೇ ಫೈನಾನ್ಸ್ ಕಮೀಷನ್‌ನಲ್ಲಿ ನೂರು ಕೋಟಿ ರೂಪಾಯಿ ಕೊಡಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳು ಕೂಡ ಪಂಥ್ ಅವರು ಬಂದಾಗ ಹೇಳಿದ್ದೇವೆ. ಈಗ ತಾವು ಏನು ಹೇಳಿದಿರಿ, 27 ಕೋಟಿ ರೂಪಾಯಿ ಇಲ್ಲಿಯೇ ಸಿಗುತ್ತದೆ ಎಂದು ಬೇರೆ ರಾಜ್ಯಕ್ಕೆ ಹೆಚ್ಚಿಗೆ ಎಲ್ಲಿ ಕೊಟ್ಟಿದೆ? ಆದರೂ ಕೂಡ ನಾವು ಮನವಿಯನ್ನು ಸಲ್ಲಿಸುವಾಗ ಮಾನ್ಯ ಮುಖ್ಯಮಂತ್ರಿಯವರ ಜೊತೆಗೆ ನಾನೂ ಹೋಗಿದ್ದೆ. ಫೈನಾನ್ಸ್ ಮಂತ್ರಿಗಳಿಗೆ ಹೇಳಿದ್ದಾರೆ, ಅಗ್ರಿಕಲ್ಚರ್ ಮಂತ್ರಿಗಳಿಗೆ ಹೇಳಿದ್ದಾರೆ, ಪದೇ ಪದೇ 4 ವರ್ಷಗಳಿಂದ ಈ ತರಹದ ಗಂಡಾಂತರ ಬರುತ್ತಿದೆ. ನಾವು ಈಗಾಗಲೇ 99ಕೋಟಿ ಸಿಆರ್‌ಎಫ್ ಬಿಟ್ಟು ಕೊಟ್ಟಿದ್ದೇವೆ. ನಮ್ಮ ರಾಜ್ಯಸರ್ಕಾರದ ಆಯವ್ಯಯದಲ್ಲೂ ಕೊಟ್ಟಿದ್ದೇವೆ. ಇವತ್ತು ಬೇರೆ ರಾಜ್ಯಗಳಿಗೆ ಪ್ರಧಾನ ಮಂತ್ರಿಯವರು ಹೆಚ್ಚಿನ ಹಣ ಕೊಡುತ್ತಿದ್ದಾರೆ, ಕರ್ನಾಟಕ ರಾಜ್ಯಕ್ಕೆ ಕೊಡುತ್ತಿಲ್ಲ. ಎನ್ನುವ ಮಾತು ಬೇರೆ. ಇದಕ್ಕೂ ನಾವು ಮಾಡಿದ್ದೇವೆ. ಸಿಆರ್‌ಎಫ್ ಮೊದಲು ಫಿಕ್ಸ್ ಮಾಡಿದ್ದು. ಆದರೂ ಕೂಡ ನಮ್ಮ ರಾಜ್ಯ ಬೊಕ್ಕಸದಿಂದ ಏನು ಇವತ್ತು ಹಣ ಬಿಡುಗಡೆ ಮಾಡತಕ್ಕಂಥಾದ್ದು ಇದೆ. ಆ ಅಂಕಿಅಂಶಗಳನ್ನು ಉತ್ತರದಲ್ಲಿ ಕೊಡುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಹೇಳಿದ್ದು ನಾಳೆ ಪ್ರಧಾನ ಮಂತ್ರಿಗಳು ಇಲ್ಲಿಗೆ ಬರತಕ್ಕಂತಹ ಸಂದರ್ಭದಲ್ಲಿ ಅದರ ಲಾಭ ಪಡೆಯುವುದಕ್ಕೆ, ಎಲ್ಲಾ ಪಕ್ಷದ ಮುಖಂಡರನ್ನು ನೀವು ಕರೆದು ಅವರಿಗೆ ಈ ಪರಿಸ್ಥಿತಿಯನ್ನು ವಿವರಣೆ ಮಾಡುವುದಕ್ಕೆ ಒಂದು ಸಮಯ ನಿಗದಿ ಮಾಡಿ. ಎಲ್ಲರೂ ಹೇಳೋಣ. ಇದು ನಿಮ್ಮದಷ್ಟೇ ಜವಾಬ್ದಾರಿ ಅಲ್ಲ; ನಮ್ಮ ಜವಾಬ್ದಾರಿಯೂ ಇದೆ. ಅವರು ಅನಾಯಾಸವಾಗಿ ಇಲ್ಲಿಗೆ ಬಂದಾಗ ಇಂತಹ ದೊಡ್ಡ ವಿಚಾರವನ್ನು ನಾವು ಪ್ರಸ್ತಾಪ ಮಾಡದೇ ಅಲ್ಲಿ ಒಂದು ಸಭೆ ಮಾಡಿ ಇಲ್ಲಿ ಒಂದು ಪುತ್ಥಳಿ ಉದ್ಘಾಟನೆ ಮಾಡಿ ಹೋದರೆ ಹೇಗೆ ಪ್ರಧಾನ ಮಂತ್ರಿಯವರು ರಾಜ್ಯಕ್ಕೆ ಬಂದಾಗ ರಾಜ್ಯದ ಜನಕ್ಕೆ ಏನಾದರೂ ಉಪಯೋಗವಾಗಬೇಕು, ಆದುದರಿಂದ ನಾನು ತಮ್ಮಲ್ಲಿ ಈ ಕೆಲಸವನ್ನು ಮಾಡಬೇಕು ಎಂದು ಮನವಿ ಮಾಡಿಕೊಳ್ಳುತ್ತಿದ್ದೇನೆ. ನಾನು ನಿಮಗೆ ಮಂದಗಡ್ಡೆಯ ಒಂದು ಸಣ್ಣ ವಿಚಾರವನ್ನು ಹೇಳುತ್ತೇನೆ. ನೀವು ಅಲ್ಲಿ ಒಂದು ತುಂಗಾ ಡ್ಯಾಂ ಕಟ್ಟಿದ್ದೀರಿ. ಆ ಅಣೆಕಟ್ಟಿನ ಬ್ಯಾಕ್ ವಾಟರ್ಸ್ ಮಂದಗಡ್ಡೆಯವರೆಗೆ ಬರುತ್ತದೆ. ಅಲ್ಲಿ ಒಂದು ಶಾಶ್ವತವಾದಂತಹ ದೋಣಿ ಇತ್ತು. ಆ ದೋಣಿ ಇಲ್ಲಿ ಬೇಡ, ತೆಗೆದುಬಿಡಿ, ನಾವು ಮೆಷಿನ್‌ಬೋಟ್ ಹಾಕುತ್ತೇವೆ ಎಂದರು. ಅದಕ್ಕೆ ನಾವು ಬಹಳ ಸಂತೋಷ ಹಾಕಿ ಎಂದು ಹೇಳಿದೆವು. ಅವರ ಕಛೇರಿ ನಾರ್ತ್ ಕರ್ನಾಟಕದಲ್ಲಿ ಎಲ್ಲೋ ಒಂದು ಮೂಲೆಯಲ್ಲಿ ಇದೆ. ನಾನು ಅವರಿಗೆ ಪತ್ರ ಬರೆದು ಕಂಟಾಕ್ಟ್ ಮಾಡಿ ಹೇಳಿದೆ. ನೋಡಿ, ಇಲ್ಲಿ ಪರಿಸ್ಥಿತಿ ತುಂಬಾ ಕಷ್ಟದಲ್ಲಿದೆ, ಇಲ್ಲಿಗೆ ದೋಣಿಯೂ ನೀವು ಕೊಡುತ್ತಿಲ್ಲ. ಇಲ್ಲಿ ಇದ್ದ ಒಂದು ದೋಣಿಯೂ ಈಗ ಇಲ್ಲ. ನಿಮ್ಮ ಮೋಟಾರ್ ದೋಣಿಯೂ ಬರಲಿಲ್ಲ ಎಂದು. ನೀವು ಅಲ್ಲಿಗೆ ಹೋದಾಗ ಅಲ್ಲಿಯ ಜನ ನಿಮಗೂ ಹೇಳಿರಬಹುದು. ಕನಿಷ್ಟ ನೀವು ಮರದ ದೋಣಿ ಕೊಡಿಸಿದ್ದೀರಾ?

ಶ್ರೀ ಕಾಗೋಡು ತಿಮ್ಮಪ್ಪ : ಅದು ಜಿಲ್ಲಾಪರಿಷತ್ತಿಗೆ ಹೋಗಬೇಕು. ಅದು ಅವರಿಗೆ ಗೊತ್ತಿರಲಿಲ್ಲ. ಮೊನ್ನೆ ಹೇಳಿದ್ದೇನೆ. ಸದ್ಯದಲ್ಲೇ ಅದನ್ನು ಕೊಡುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಒಂದು ಕಿಲೋಮೀಟರ್ ಆ ಕಡೆಯಿಂದ, ಈ ಕಡೆ ಬರುವವರು 18 ಕಿಲೋಮೀಟರ್ ಸುತ್ತು ಹಾಕಿಕೊಂಡು ಬರಬೇಕು. ಆದ್ದರಿಂದ

ಈ ಆಡಳಿತದಲ್ಲಿ ಇರತಕ್ಕಂಥ ದೋಷಗಳನ್ನು ಎಥಾವತ್ತಾಗಿ ಸರಿಪಡಿಸುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ನಿಮ್ಮಲ್ಲಿ ನನ್ನ ಮನವಿ ಏನು ಅಂದರೆ ಇಂತಹ ಸಣ್ಣ ವಿಚಾರಗಳನ್ನೆಲ್ಲಾ ನಾವು ಶಾಸನ ಸಭೆಗೆ ತರುವಂತಹ ಪರಿಸ್ಥಿತಿ ನಿರ್ಮಾಣ ಆಗಬಾರದು. ಆ ಕಾರಣಕ್ಕಾಗಿ ನಾವು ಖಂಡಿತ ನೀವು ನಾಳೆ ಪ್ರಧಾನಿಯವರು ಇಲ್ಲಿಗೆ ಬರತಕ್ಕಂಥ ಒಂದು ಪರಿಸ್ಥಿತಿಯ ಲಾಭವನ್ನು ಪಡೆದುಕೊಳ್ಳುವುದಕ್ಕಾಗಿ ನೀವು ಎಲ್ಲರ ಸಹಕಾರವನ್ನು ಈ ಶಾಸನಸಭೆಯ ಎಲ್ಲಾ ಮುಖಂಡರನ್ನು ಕರೆದು ಅವರ ಜೊತೆಗೆ ಎಂದು ಮನವಿಯನ್ನು ಸಲ್ಲಿಸತಕ್ಕ ಕೆಲಸವನ್ನು ಮಾಡಬೇಕು. ನಾನು ಮುಖ್ಯಮಂತ್ರಿಗಳಲ್ಲಿ ಮತ್ತೊಂದು ಮನವಿಯನ್ನು ಮಾಡುತ್ತೇನೆ, ಯಾವಯಾವ ಭಾಗಗಳಲ್ಲಿ ಅತಿವೃಷ್ಟಿಯಿಂದ ತೊಂದರೆಯಾಗಿದೆ. ಮಳೆಯಿಂದ ಹಾನಿಯಾಗಿದೆ ಆ ಭಾಗದ ಶಾಸಕರ ಸಭೆ ಕರೆದು ಕೇಳಿ. ಇಲ್ಲದಿದ್ದರೆ ಪ್ರಯೋಜನವಾಗುವುದಿಲ್ಲ, ನಿಮ್ಮ ಮುಖಂಡರನ್ನು ನಾಲ್ಕು ಜನ ಹೋಗಿ ಕೇಳಿ ಏನಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಅತಿವೃಷ್ಟಿಯ ಬಗ್ಗೆ ನಾವು ಪ್ರತಿ ಜಿಲ್ಲೆಗೂ ಭೇಟಿ ಕೊಟ್ಟಿದ್ದೇವೆ. ಪ್ರತಿ ಜಿಲ್ಲೆಗೂ ಭೇಟಿಯಾಗಿ ಶಾಸಕರ ಸಭೆ, ಎಂಪಿಗಳ ಸಭೆಯನ್ನು ಕರೆದು ಸಮಾಲೋಚನೆ ಮಾಡಿದ್ದೇವೆ. ಅದರ ಪ್ರಕಾರ, ತಮಗೆ ಗೊತ್ತಿರಬಹುದು, ಸನ್ಮಾನ್ಯ ಕಂದಾಯ ಸಚಿವರು ಹೇಳಿರಬಹುದು. We authorised all the Deputy Commissioners to incurr expenditure up to Rs. 1 crore without seeking approval. ಅದೆಲ್ಲಾ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದೇವೆ. ಮತ್ತು ಯಾವ ಇಲಾಖೆಗಳಲ್ಲಿ ಏನೇನು ಕೆಲಸವಾಗಬೇಕೋ We said DC is the nodal authority. ಅವರಿಗೆ ಅಧಿಕಾರ ಎಂದು ಹೇಳಿ ಅದನ್ನು ನಾವು ಅವರಿಗೆ ಕೊಟ್ಟಿದ್ದೇವೆ. We delegated all the powers; ಈಗ ತಾವು ನೋಡಿರಬಹುದು; ಅನೇಕ ಕೆಲಸಗಳು ಬಹಳ ಕ್ಷಿಪ್ರವಾಗಿ ಅನೇಕ ಭಾಗಗಳಲ್ಲಿ ಆಗಿವೆ; ವಿಭಾಗ ಮಟ್ಟದ ಸಭೆಯನ್ನು ನಾವು ಮಾಡಿದಾಗ ಆ ಅತಿವೃಷ್ಟಿ ಜೊತೆಯಲ್ಲಿ ಪುನರ್ ಪರಿಶೀಲನೆ ಮಾಡಿದ್ದೇವೆ. ನಾನು ಹೇಗೂ ಇಲ್ಲಿದ್ದೇನೆ. ಅದಕ್ಕೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಪುನಃ ಪರಿಶೀಲಿಸಲಿಕ್ಕೆ ಹೇಳಲು ಸಿದ್ಧನಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಮುಖ್ಯಮಂತ್ರಿಗಳ ಗಮನಕ್ಕೆ ಏನು ತರುತ್ತಿದ್ದೇವೆ ಎಂದು ಹೇಳಿದರೆ, ನಿಮ್ಮ ಅಧಿಕಾರದಲ್ಲಿ ಆಗಿರತಕ್ಕಂಥ ಅತಿವೃಷ್ಟಿ, ಪ್ರವಾಸ, ನಿಮಗೆ ನಾನು ಕೆಲಸ ಮಾಡಿಲ್ಲ ಎಂದು ಹೇಳುತ್ತಿಲ್ಲ, ನಿಮ್ಮ ಆದೇಶಗಳನ್ನು, ನಿಮ್ಮ ನಿರ್ದೇಶನಗಳನ್ನು ಪಾಲನೆ ಮಾಡತಕ್ಕಂತಹ ವ್ಯವಸ್ಥೆ ಕೆಳಗಡೆ ಇಲ್ಲ. ದಯಮಾಡಿ ಇದನ್ನು ಬಹಳ ಮುಖ್ಯವಾಗಿ ಗಮನಿಸಬೇಕಾಗಿದೆ. ನಾನು ತಾವು ಬರುವುದಕ್ಕೆ ಮುಂಚೆ ಹೇಳಿದೆ ಜೂಲೈ 16ನೇ ತಾರೀಖು ತಾವು ಶಿವಮೊಗ್ಗ ಜಿಲ್ಲೆಗೆ ಬಂದಿದ್ದೀರಿ. 16ನೇ ತಾರೀಖು ಆದೇಶ ಕೊಟ್ಟಿರಿ ಬೆಳೆಕರಿಯುವುದರೊಳಗೆ ಎಲ್ಲೆಲ್ಲಿ ಸಸಿಗಳು ಹಾಳಾಗಿವೆ ಅಂಥವರಿಗೆ ಮುಫತ್ತಾಗಿ ಬೀಜ ಕೊಡಿ ಎಂದು ಹೇಳಿದಿರಿ ಅಂದರೆ ಭತ್ತದ ಸಸಿ ಹಾಕುವುದಕ್ಕೆ ರೈತರಿಗೆ ಕೊಡಿ ಎಂದು ಹೇಳಿದ್ದೀರಿ; ಆದರೆ ಒಂದು ಕೆ.ಜಿಯಾದರೂ ಕೊಟ್ಟಿದ್ದಾರೋ ಕೇಳಿ. ಆದ್ದರಿಂದ ನಿಮ್ಮ ಆದೇಶ ಏನಾಯಿತು! ಇದೇ ನನ್ನ ಪ್ರಶ್ನೆ, ಆಮೇಲೆ ಇಲ್ಲಿ ಏನು ಮಾಡುತ್ತೀರಿ, ಇಲ್ಲಿ ಇನ್‌ಫ್ಲೋ ಮತ್ತು ಔಟ್‌ಫ್ಲೋ ಕೆಆರ್ ಸಾಗರದ್ದು ಕೊಟ್ಟಿದ್ದೀರಿ ಮತ್ತು ಹೇಮಾವತಿದು ಕೊಟ್ಟಿದ್ದೀರಿ. ಅದೇ ಭದ್ರಾ ರಿಸರ್ವಾಯರ್ ಬಗ್ಗೆ ಗುಟ್ಟು ಗೊತ್ತಾಗುತ್ತದೆ ಎಂಬ ಕಾರಣಕ್ಕಾಗಿ ಕೊಡಲಿಲ್ಲ. ಇಲ್ಲಿ ಆಗಿರತಕ್ಕ ಹಾನಿಯ ಗುಟ್ಟು ದೇಶಕ್ಕೆ ಗೊತ್ತಾಗುತ್ತದೆ ಎಂದು ನೀವು ಕೊಡಲಿಲ್ಲ. ದಯವಿಟ್ಟು ಮೊದಲು ಇದನ್ನು ತರಿಸಿ ಉತ್ತರ ಹೇಳುವಾಗ ಹೇಳಿ; ಹೇಳುತ್ತೇನೆ ಏತಕ್ಕಾಗಿ ಎಂದು ಆ ಕಾರಣ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವಂಥದ್ದು, ಇದು ಪ್ರಕೃತಿಯಿಂದ ಆದಂಥ ಅತ್ಯಂತ ದೊಡ್ಡ ಭೀಕರ

ಹಾನಿಯ ಜೊತೆಗೆ, ತಮ್ಮ ಆಡಳಿತ ಮಾಡಿರತಕ್ಕಂಥ ದೋಷ ಇಡೀ ಸರ್ಕಾರಕ್ಕೆ ಗೌರವ ತರತಕ್ಕಂಥ ಪ್ರಶ್ನೆಯಲ್ಲ. ಆದ್ದರಿಂದ ಮುಖ್ಯವಾಗಿ ಕೇಂದ್ರಸರ್ಕಾರದಿಂದ ಪರಿಹಾರದ ಬಗ್ಗೆ ತಾವು ವಿವರಣೆಯನ್ನು ಕೊಟ್ಟಿರಿ. ಎಲ್ಲಿ ಕೊಟ್ಟಿದ್ದಾರೆ ಎಂದು ಕೇಳಿದಿರಿ. ನಾನು ಅದಕ್ಕೆ ಒಂದೇ ಒಂದು ಉದಾಹರಣೆ ಹೇಳುತ್ತೇನೆ ಮಹಾರಾಷ್ಟ್ರದ ಲಾಥೂರ್‌ನಲ್ಲಿ ಆದಂಥ ಭೀಕರ ಭೂಕಂಪಕ್ಕೆ ಕೇಂದ್ರ ಸರ್ಕಾರ ನೆರವು ಕೂಡ ಬೇಕು. ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ನೆರವಿಗೆ ಬರಲಿಲ್ಲವೇ. ಆದ್ದರಿಂದ ಇಲ್ಲೂ ಸಹ ಇಂತಹ ವಿಶೇಷ ಸಂದರ್ಭದಲ್ಲಿ ಅವರು ರಾಜ್ಯ ಸರ್ಕಾರದ ನೆರವಿಗೆ ಬರುವುದಕ್ಕೆ ತಯಾರಾಗದೆ ಇದ್ದರೆ ನಮ್ಮ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧಗಳ ಬಗ್ಗೆಯೇ ಪುನರಾಲೋಚನೆ ಮಾಡಬೇಕಾದಂಥ ಸಮಯ ಬರಬಹುದು ಎಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಸದನವನ್ನು ಮುಂದೂಡಿ ನಾಳೆ ಬೆಳಿಗ್ಗೆ ಮತ್ತೆ 10.00 ಗಂಟೆಗೆ ಸೇರುವುದು.

(ಸದನವು ಸಂಜೆ 6 ಗಂಟೆ 15 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 31ನೇ ಆಗಸ್ಟ್ ಮಾಹೆ 1994ರ ಬುಧವಾರದಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

BLANK PAGE

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ ೩೧ನೇ ಆಗಸ್ಟ್ ೧೯೯೪, ಭಾದ್ರಪದ, ಶಕ ೧೯೧೬

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೦-೨೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆ

ಅಧ್ಯಕ್ಷರು : ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ, ಶ್ರೀ ಎಸ್.ಎಸ್. ಕೊಳ್ಕೆಬೈಲ್ ಅವರು ದಿನಾಂಕ : 29ನೇ ಆಗಸ್ಟ್, 1994ರಂದು ನಿಧನ ಹೊಂದಿರುವ ವಿಷಯವನ್ನು ಈ ಸದನಕ್ಕೆ ವಿಷಾದದಿಂದ ತಿಳಿಸುತ್ತೇನೆ.

ಶ್ರೀಯುತರು ದಕ್ಷಿಣ ಕನ್ನಡ ಜಿಲ್ಲೆಯ ಬ್ರಹ್ಮಾವರ ಹಾಗೂ ಕುಂದಾಪುರ ಕ್ಷೇತ್ರಗಳಿಂದ ಒಂದನೇ ಮತ್ತು ಎರಡನೇ ವಿಧಾನ ಸಭೆಗೆ ಆಯ್ಕೆಯಾಗಿದ್ದರು. ಎಂ.ಪಿ.ಸಿ.ಸಿ.ಯ ಸದಸ್ಯರಾಗಿ ಗ್ರಾಮೀಣ ಕೈಗಾರಿಕಾ ಸಹಕಾರಿ ಸೊಸೈಟಿಯ ಅಧ್ಯಕ್ಷರಾಗಿ ಮತ್ತು ವಿವಿಧ ಸೊಸೈಟಿಗಳ ನಿರ್ದೇಶಕರುಗಳಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತರ ಗೌರವಾರ್ಥವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರುಗಳು ಎದ್ದು ನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನ ಆಚರಿಸಿದರು)

ಅಧ್ಯಕ್ಷರು : ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಅಧ್ಯಕ್ಷರ ಅಪ್ಪಣೆಕೋರಿ ಪ್ರಸ್ತಾಪಿಸಲಾದ ವಿಷಯ

ಸುಪ್ರೀಂ ಕೋರ್ಟ್ 1986ರ ಮೀಸಲಾತಿ ಆದೇಶವನ್ನು ತಡೆಹಿಡಿದಿರುವ ಬಗ್ಗೆ

+ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಒಂದು ನೋಟೀಸನ್ನು ಕಳುಹಿಸಿದ್ದೇನೆ.

(ಗೊಂದಲ)

ಅಧ್ಯಕ್ಷರು : ಚಂದ್ರೇಗೌಡರು ನೋಟೀಸನ್ನು ಕಳುಹಿಸಿದ್ದಾರೆ, ಪ್ರಶ್ನೋತ್ತರ ಕಾಲ ಮುಗಿದ ನಂತರ ನಾನು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸ್ವಾಮಿ, ಪ್ರಶ್ನೋತ್ತರವನ್ನು ಸಸ್ಪೆಂಡ್ ಮಾಡಿ ಎಂದು ನಾನು ನೋಟೀಸ್ ಕಳುಹಿಸಿದ್ದೆ. ನೀವು ದಯವಿಟ್ಟು ನೋಟೀಸ್ ನೋಡುವುದಿಲ್ಲ ಬಂದುಬಿಡುತ್ತೀರಿ, ಮಧ್ಯಪ್ರವೇಶ ಮಾಡಿಬಿಡುತ್ತೀರಿ, ನಮಗೆ ಕಷ್ಟವಾಗಿ ಬಿಡುತ್ತದೆ. ದಯವಿಟ್ಟು ಅವಕಾಶ ಮಾಡಿಕೊಡಿ, ನಮ್ಮ ನೋಟೀಸಿಗೆ ಏನಾದರೂ ಬೆಲೆ ಇದೆಯೇ? 344ನೇ ವಿಧಿಯಂತೆ ನಿಯಮಾವಳಿಗಳನ್ನು ಸ್ಥಗಿತಗೊಳಿಸಿ ಈ ದಿವಸ ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಪುನರ್ ನಿಯಮದಂತೆ ಕೊಟ್ಟಿದ್ದೇನೆ ಕಾರಣ

ಏನು? ಮಾನ್ಯ ಅಧ್ಯಕ್ಷರೆ, ನಿನ್ನೆ ತಾನೆ ಸುಪ್ರೀಂ ಕೋರ್ಟಿನ ನಿರ್ದೇಶನ ಬಂದಿದೆ 86ರ ಮೀಸಲಾತಿ ಆದೇಶವನ್ನು ಜಾರಿಗೆ 10 ದಿವಸದ ತನಕ ತಡೆಹಿಡಿದಿದ್ದಾರೆ. ಈಗ ಮೆಡಿಕಲ್, ಇಂಜಿನಿಯರಿಂಗ್ ಮತ್ತಿತರ ಪ್ರೊಫೆಷನ್ ಕಾಲೇಜುಗಳಿಗೆ ಪ್ರವೇಶವನ್ನು ಪ್ರಾರಂಭ ಮಾಡಿಲ್ಲ. ಇನ್ನೂ ಪ್ರಾರಂಭ ಆಗಬೇಕಾಗಿದೆ. ನನಗೆ ಯಾವ ರೀತಿ ಹೇಳಬೇಕು ಎಂದು ಗೊತ್ತಿಲ್ಲ. ಇಂತಹ ಸಂದರ್ಭಗಳಲ್ಲಿ ರಾಜ್ಯ ಸರ್ಕಾರ ಮಾಡಿದಂತಹ ಅಂದರೆ ಆಲೋಚನೆ ಇಲ್ಲದಂತೆ ಮಾಡಿದ ತೀರ್ಮಾನಗಳು ಇದೆಯಲ್ಲ ಇದರ ಪರಿಣಾಮಗಳನ್ನು ಜನ ಎದುರಿಸಬೇಕಾದಂತಹ ವಿದ್ಯಾರ್ಥಿಗಳು ಎದುರಿಸಬೇಕಾದಂಥ ಪರಿಸ್ಥಿತಿ ಇದೆ. ಮಾನ್ಯ ಅಧ್ಯಕ್ಷರೆ, ಜುಲೈ 20ನೇ ತಾರೀಖು ಒಂದು ಹಿಂದೆ ಏಪ್ರಿಲ್ 20ನೇ ತಾರೀಖು ಒಂದು......

ಅಧ್ಯಕ್ಷರು : ನಾನು ತಮಗೆ ಪ್ರಶ್ನೋತ್ತರ ಮುಗಿದ ನಂತರ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

SRI. D.B. CHANDRE GOWDA : The Supreme Court decision has been thrown out by this Government.

SRI. R.V. DESHPANDE : They have no moral right to continue in office.

(Interruptions)

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಸರ್ಕಾರದ ಆಜ್ಞೆಯನ್ನು ತಡೆದಂಥ ಸರ್ಕಾರ ರಾಜೀನಾಮೆ ಕೊಡಬೇಕು, ಈ ಸರ್ಕಾರ ನೇರವಾಗಿ ರಾಜೀನಾಮೆ ಕೊಡಬೇಕು.

ಅಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಿ. ತಮ್ಮ ಸ್ಥಳಕ್ಕೆ ಹೋಗಿ ಮಾತನಾಡಿ.

(ಗೊಂದಲ)

(ಮಾನ್ಯ ವಿರೋಧಪಕ್ಷದ ಸದಸ್ಯರು ಸಭಾಧ್ಯಕ್ಷರ ಮುಂದೆ ನಿಂತು ಮಾತನಾಡುತ್ತಿದ್ದರು)

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಸರ್ಕಾರ ಎಲ್ಲಿದೆ ಸ್ವಾಮಿ?

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಇವತ್ತು ಲಕ್ಷಾಂತರ ವಿದ್ಯಾರ್ಥಿಗಳು ಬೀದಿಪಾಲಾಗಿದ್ದಾರೆ.

ಅಧ್ಯಕ್ಷರು : ಈ ರೀತಿ ತಾವು ಮಾತನಾಡುವುದಾದರೆ ನಾನು ಅವಕಾಶ ಕೊಡುವುದಿಲ್ಲ. ತಮ್ಮ ಸ್ಥಳಕ್ಕೆ ಹೋಗಿ ಮಾತನಾಡಿ.

(ಗೊಂದಲ)

ಅಧ್ಯಕ್ಷರು : ತಮ್ಮ ಸ್ಥಳಕ್ಕೆ ಹೋಗಿ ಮಾತನಾಡಿ. ನಾನು ತಮ್ಮ ಗಹನವಾದ ವಿಷಯವನ್ನು ಅರ್ಥಮಾಡಿ ಕೊಂಡಿದ್ದೇನೆ. ಪ್ರಶ್ನೋತ್ತರ ವೇಳೆ ಮುಗಿದ ಕೂಡಲೇ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

SRI. R.V. DESHPANDE : Sir, I request you to suspend the Question Hour. If you don't suspend the Question Hour, we are not going to participate in the debate. Suspend the question Hour. We will not allow. It is a very important matter. We request you to please suspend the Question Hour and take it up.

(ಗೊಂದಲ)

ಶ್ರೀ ಸಿ. ಬೈರೇಗೌಡ : ಪ್ರತಿವರ್ಷವೂ ಸೆಪ್ಟೆಂಬರ್ ತಿಂಗಳೊಳಗೆ ಅಡ್ಮಿಷನ್ಸ್ ಮುಗಿದು ಹೋಗುತ್ತಿತ್ತು. ಆದರೆ ಈ ವರ್ಷ ಕೂಡ ಅಡ್ಮಿಷನ್ಸ್ ಪ್ರಾರಂಭವೇ ಆಗಿಲ್ಲ, ಇದುವರೆಗೆ ಮುಗಿಯಬೇಕಾಗಿದ್ದ ಕೆಲಸ ಇನ್ನೂ ಪ್ರಾರಂಭವೇ ಆಗಿಲ್ಲ.

SRI D.B. CHANDRE GOWDA : The Government has failed to effectively represent Karnataka's case before the Supreme Court. The Advocate General has failed to represent our case. This is the result.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುತ್ತಿರುವ ವಿಷಯ ಬಹಳ ಮುಖ್ಯವಾದುದು ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ನಿಯಮಗಳನ್ನು ಅನುಸರಿಸಿ ಪ್ರಶ್ನೋತ್ತರ ಕಾಲವಾದ ಮೇಲೆ ವಿಶೇಷವಾಗಿ ಹೇಳುವುದಕ್ಕೆ ಅವರಿಗೆ ಅವಕಾಶವಿದೆ.

ಪ್ರಶ್ನೋತ್ತರ ಕಾಲವನ್ನು ಕೈಬಿಡಬೇಕಾದರೆ...

(ಗೊಂದಲ)

ಶ್ರೀ ಸಿ. ಬೈರೇಗೌಡ : ಇದು ಕೇವಲ ಬೂಟಾಟಿಕೆಯ ಸರ್ಕಾರ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಹಿಂದುಳಿದವರ್ಗದವರ ಹೆಸರನ್ನು ಹೇಳಿಕೊಂಡು ಇವರು....

ಅಧ್ಯಕ್ಷರು : ಈ ರೀತಿ ಮಾತನಾಡಿದರೆ ಹೇಗೆ? ನೀವು ನಿಮ್ಮ ನಿಮ್ಮ ಸ್ಥಳಗಳಿಗೆ ಹೋಗಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ನನ್ನ ವಾದ ಇಷ್ಟೆ. ಶೇಕಡ 69ರ ಮೀಸಲಾತಿಯನ್ನು ತಮಿಳ್ನಾಡು ವಿಧಾನ ಸಭೆ ಒಕ್ಕೊರಲಿನಿಂದ ಪಾಸ್ ಮಾಡಿದ್ದರಿಂದ ಸಂಸತ್ತಿನಂಥ ವೇದಿಕೆ ಕೂಡ ಅಂದರೆ ಕೇಂದ್ರಸರ್ಕಾರದಂಥ ದೊಡ್ಡ ಸಾಮ್ರಾಜ್ಯ ಕೂಡ ತಲೆಬಗ್ಗಿಸಬೇಕಾದಂಥ ಪ್ರಸಂಗ ಬಂತು. ನನ್ನ ಪ್ರಶ್ನೆ ಏನೆಂದರೆ, ಇವತ್ತು ಸರ್ಕಾರ ರಾಜ್ಯಸರ್ಕಾರ ಶಾಸನ ಸಭೆ ಅಧಿವೇಶನ ನಡೆಯುತ್ತಿದೆ. ಇವತ್ತು ಈ ಶಾಸನ ಸಭೆಯ ಅಭಿಪ್ರಾಯವನ್ನು ಪಡೆಯಬೇಕೆಂಬ ಸದುದ್ದೇಶ ಸುಪ್ರೀಂ ಕೋರ್ಟ್‌ಗೆ ಇರಬಹುದು, ಈ ಸದುದ್ದೇಶವನ್ನು ಗಮನಲ್ಲಿಟ್ಟುಕೊಂಡು ನಾವು ಚರ್ಚೆಯನ್ನು ಮಾಡುವುದಕ್ಕೇ ಹಿಂಜರಿಯುವುದಾದರೆ ಮುಂದೆ ಏನು ಮಾಡಬೇಕು. ಇದರ ಬಗ್ಗೆ ನಮ್ಮ ಸರ್ಕಾರದ ನಿಲುವು ಏನು? ಶೇಕಡ 80ರಷ್ಟು, ಅಥವಾ ಶೇಕಡ 73ರಷ್ಟು ಮೀಸಲಾತಿಯನ್ನು ಘೋಷಣೆ ಮಾಡಿದ್ದು ಕೇವಲ ಮೊಸಳೆಯ ಕಣ್ಣೀರು ಆಗಬಾರದು. ಈಗ ನಮ್ಮ ಶಾಸನ ಸಭೆಯ ಅಧಿವೇಶನ ನಡೆಯುತ್ತಿರುವುದರಿಂದ ಸರ್ವೋಚ್ಚ ನ್ಯಾಯಾಲಯ ನಮಗೆ 10 ದಿನಗಳ ಕಾಲಾವಕಾಶವನ್ನು ಕೊಟ್ಟಿದೆ ಆ ಕಾಲಾವಧಿಯಲ್ಲಿ ನಮ್ಮ ಶಾಸನ ಸಭೆಯ ಅಭಿಪ್ರಾಯವನ್ನು, ನಮ್ಮ ಇಡೀ ಸದನದ ಸದಸ್ಯರು ನಮ್ಮ ಅಭಿಪ್ರಾಯವನ್ನು ಕೊಡಬೇಕು. ಯಾವ ರೀತಿ ತಮಿಳ್ನಾಡಿನ ಶಾಸನ ಸಭೆಯ ಅಭಿಪ್ರಾಯಕ್ಕೆ ಮಾನ್ಯತೆಯನ್ನು ಕೇಂದ್ರಸರ್ಕಾರ ಮತ್ತು ಸಂಸತ್ತು ಕೊಟ್ಟುವೋ ಅದೇ ರೀತಿ ನಾವೂ ಕೂಡ ನಮ್ಮ ಈ ಮೀಸಲಾತಿಯನ್ನು ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಿದೆ. ಈ ಕಾರಣದಿಂದಾಗಿ ನಾನು ನಿಯಮ 344ರ ಪ್ರಕಾರ ನೋಟೀಸ್ ಕೊಟ್ಟಿದ್ದೇನೆ. ಇದರ ಬಗ್ಗೆ ಚರ್ಚೆಮಾಡೋಣ. ಅಭಿಪ್ರಾಯವನ್ನು ಸದನ ಕೊಡಲಿ. ಬಹಳ ವಿಸ್ತಾರವಾಗಿ ಇದನ್ನು ಚರ್ಚೆಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ತಾವು ಈ ಪ್ರಶ್ನೋತ್ತರ ಕಾಲವನ್ನು ಮುಂದೂಡಿ, ಸರ್ಕಾರ ಇನ್ನೂ ಇದರ ಬಗ್ಗೆ ಯೋಚನೆ ಮಾಡುತ್ತೇವೆಂದು

ಹೇಳುತ್ತಿದೆಯೇ ಹೊರತು ತಮ್ಮ ನಿರ್ಧಾರ ಏನು? ಏನು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂಬುದನ್ನು ಇನ್ನೂ ಸ್ಪಷ್ಟಪಡಿಸಿಲ್ಲ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ನಿಮ್ಮ ನೋಟೀಸ್ ಎಲ್ಲಿ? ಹಾಗಾದರೆ ನಾವು ಹೇಳುವುದು ಬೇಡವೇ?

ಶ್ರೀ ಡಿ.ಬಿ. ಚಂದ್ರೇಗೌಡ : ನಮ್ಮ ನೋಟೀಸನ್ನು ನಿಮಗೆ ಕೊಡುವುದಿಲ್ಲ. ಅಧ್ಯಕ್ಷರಿಗೆ ಕೊಟ್ಟಿದ್ದೇವೆ. ಪ್ರಶ್ನೋತ್ತರ ಕಾಲವನ್ನು ಮುಂದೂಡಬೇಕೆಂದು ನೋಟೀಸ್ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಸರ್ಕಾರಕ್ಕೆ ಇನ್ನು ಒಂದು ನಿಮಿಷ ಕೂಡ ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಅರ್ಹತೆ ಇಲ್ಲ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ನಿಮ್ಮ ಸರ್ಕಾರ ಇವತ್ತು ರಾಜೀನಾಮೆಯನ್ನು ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ : Please do not talk

ಅಧ್ಯಕ್ಷರು : ಕಾಗೋಡು ತಿಮ್ಮಪ್ಪನವರೇ ಕುಳಿತುಕೊಳ್ಳಿ

ಶ್ರೀ ಕಾಗೋಡು ತಿಮ್ಮಪ್ಪ : ನಾವು ಹೇಳುವುಕ್ಕಾದರೂ ಅವಕಾಶವನ್ನು ಕೊಡಲಿ.

ಶ್ರೀ ಕೆ. ಎಸ್. ಈಶ್ವರಪ್ಪ : ಹಿಂದುಳಿದವರ್ಗದವರ ಹೆಸರಿನಲ್ಲಿ ಇವರು ಮುಖ್ಯಮಂತ್ರಿಯಾಗಿ ಅಧಿಕಾರಕ್ಕೆ ಬಂದಿರುವುದು.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ. ಈಗ ನಾನು ಮತ್ತೊಮ್ಮೆ ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಪ್ರಶ್ನೋತ್ತರಕಾಲ ಮುಗಿದಕೂಡಲೇ ಈ ವಿಷಯವನ್ನು ತೆಗೆದುಕೊಳ್ಳುತ್ತೇನೆ. ಸರ್ಕಾರವು ಕೂಡ ಉತ್ತರ ಕೊಡುವುದಕ್ಕೆ ಸಿದ್ಧವಾಗಿದೆ.

(ಗೊಂದಲ)

ಅಧ್ಯಕ್ಷರು : ಈಗ ಪ್ರಶ್ನೋತ್ತರ ಮಾನ್ಯ ರಾಜೂಗೌಡರನ್ನು ನಾನು ಕರೆದಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

SRI R.V. DESHAPANDE : This is a very important matter. If this is not taken, we will go out as protest against the Governments attitude who are opposed to backward classes. This Government has no right to continue. They have played with the lives of the students. We are not going to participate in the proceedings today.

(ಗೊಂದಲ)

(ಜನತಾದಳದ ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಜಿ. ರಾಜುಗೌಡ : ಮಾನ್ಯ ಅಧ್ಯಕ್ಷರೆ, ನಾನು 149ನೇ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ತಾವು ಈ ಸದನದ ಅಭಿಪ್ರಾಯಕ್ಕೆ.....

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಅಡ್ಮಿಷನ್ಸ್ ಇನ್ನೂ ಪ್ರಾರಂಭವೇ ಆಗಿಲ್ಲ. ಸಾವಿರಾರು ವಿದ್ಯಾರ್ಥಿಗಳು ಇವತ್ತು ಬೀದಿಪಾಲಾಗಿದ್ದಾರೆ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ನಾನು ಇಷ್ಟು ಹೇಳಿದರೂ ಕೂಡ, ನೀವು ಕೇಳುತ್ತಿಲ್ಲ. ನಾನು ನಿಮಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೇನೆ. ಅವರೂ ಕೂಡ ಒಪ್ಪಿಕೊಂಡಿದ್ದಾರೆ. ಪ್ರಶ್ನೋತ್ತರಕಾಲ ಮುಗಿದ ಕೂಡಲೇ ತೆಗೆದುಕೊಳ್ಳೋಣ.

(ಗೊಂದಲ)

ಅಧ್ಯಕ್ಷರು : ಈಗ ನಾನು ಪ್ರಶ್ನೋತ್ತರ ಕಾಲವನ್ನು ತೆಗೆದುಕೊಂಡಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಇದರ ಬಗ್ಗೆ ಪ್ರತಿಭಟನೆ ವ್ಯಕ್ತಪಡಿಸಿ ಸಭಾತ್ಯಾಗ ಮಾಡುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೋತ್ತರ ಕಾಲವನ್ನು ಮುಂದೂಡಿ ಸರ್ಕಾರ ಸಮಾಜಾಯಿಷಿ ಕೊಡಬೇಕು. ಸರ್ಕಾರದ ನಿರ್ಧಾರವೇನೆಂಬುದನ್ನು ಹೇಳಬೇಕು. ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳುವುದಕ್ಕೆ ಅವಕಾಶ ಕೊಡುವುದಿಲ್ಲ.

ಅಧ್ಯಕ್ಷರು : ನೀವು ಮಾತನಾಡುವುದು ಯಾವುದೂ ಕೂಡ ರೆಕಾರ್ಡ್‌ಗೆ ಹೋಗುವುದಿಲ್ಲ. ಯಾವುದನ್ನೂ ರೆಕಾರ್ಡ್‌ಗೆ ತೆಗೆದುಕೊಳ್ಳಬಾರದು.

(ಗೊಂದಲ)

ಅಧ್ಯಕ್ಷರು : ರಾಜೂಗೌಡ, ನೀವು ಪ್ರಶ್ನೆಕೇಳಿ. ಸ್ವಾಮಿರಾವ್ ನೀವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ನಾನು ಪ್ರಶ್ನೋತ್ತರವನ್ನು ತೆಗೆದುಕೊಂಡಿದ್ದೇನೆ. ಯಡಿಯೂರಪ್ಪನವರೆ, ತಾವು ಏನಾದರೂ ಹೇಳುವುದಿದ್ದರೆ ಅದನ್ನು ನನಗೆ ಹೇಳಬೇಕು. ನೀವು ನೇರವಾಗಿ ಸಂಭಾಷಣೆಯನ್ನು ನಡೆಸುವುದಾದರೆ ನಮಗೆ ಕಷ್ಟವಾಗುತ್ತದೆ. ನಾನು ತಮ್ಮಲ್ಲಿ ಬಹಳ ಕಳಕಳಿಯಿಂದ ಕೇಳಿಕೊಂಡಿದ್ದೇನೆ. ಪ್ರಶ್ನೋತ್ತರವೇಳೆ ಮುಗಿದ ತಕ್ಷಣ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಸರ್ಕಾರ ಕೂಡ ಉತ್ತರ ಕೊಡಲು ಸಿದ್ಧವಾಗಿದೆ. ಸರ್ಕಾರದವರು ತಮ್ಮ ಭಾವನೆಯನ್ನು ಹೇಳುತ್ತಾರೆ.

(ಗೊಂದಲ)

ಅಧ್ಯಕ್ಷರು : ಯಡಿಯೂರಪ್ಪನವರೇ, ತಮ್ಮ ಭಾವನೆಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರ ಬಗ್ಗೆ ನೀವು ಒಪ್ಪಿಕೊಳ್ಳಿ ಸ್ವಾಮಿ, ಅಧ್ಯಕ್ಷರಾದ ನೀವು ನಮಗೆ ಸಹಕಾರವನ್ನು ಕೊಡಿ. ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಲು ನೀವು ಒಪ್ಪಿಕೊಳ್ಳುವುದಾದರೆ, ಅವರೂ ಒಪ್ಪುತ್ತಾರೆ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ನಾವು ಸಿದ್ಧತೆಯನ್ನು ಮಾಡಿಕೊಳ್ಳುವುದಕ್ಕೆ ಟೈಂ ಬೇಡವೇ ?

ಶ್ರೀ ಬಿ.ಎಸ್. ಯಡಿಯೂರಪ್ಪ : ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಿ, ಚರ್ಚೆಮಾಡೋಣ. ಒಂದು ಗಂಟೆ ಆದಮೇಲೆ ನಮಗೆ ಉತ್ತರ ಕೊಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈಗ ಚರ್ಚೆ ಪ್ರಾರಂಭವಾಗಲಿ.

ಶ್ರೀ ಕಾಗೋಡು ತಿಮ್ಮಪ್ಪ : ನಮಗೆ ಟೈಂ ಬೇಡವೇ?

ಅಧ್ಯಕ್ಷರು : ಕಾಗೋಡು ತಿಮ್ಮಪ್ಪನವರೇ ತಾವು ಕುಳಿತುಕೊಳ್ಳಿ. ನಾನು ಅವರಿಗೆ ಹೇಳಿದ್ದೇನೆ. ನೀವು ಏತಕ್ಕೆ ಅವರಿಗೆ ಉತ್ತರ ಕೊಡುತ್ತೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಹಿಂದುಳಿದವರ್ಗಗಳ ಹೆಸರನ್ನು ಹೇಳಿಕೊಂಡು ಮಂತ್ರಿಯಾಗಿ ಇವರು ಮುಂದುವರಿಯುತ್ತಿದ್ದಾರೆ. ಆದರೆ ಹಿಂದುಳಿದ ವರ್ಗದವರಿಗೆ ಇವರು ಅನ್ಯಾಯ ಮಾಡುತ್ತಿದ್ದಾರೆ. ಇದು ರಾಜ್ಯದ ಜನರಿಗೆ ಗೊತ್ತಾಗಲಿ.

(ಗೊಂದಲ)

(ಮಾನ್ಯ ಬಿ.ಎಸ್. ಯಡಿಯೂರಪ್ಪನವರು ತಮ್ಮ ಸ್ಥಾನ ಬಿಟ್ಟು ಸಭಾಧ್ಯಕ್ಷರ ಪೀಠದ ಬಳಿ ನಿಂತು ಮಾತನಾಡುತ್ತಿದ್ದರು. ನಂತರ ಸಭಾತ್ಯಾಗ ಮಾಡಿದರು.)

(ಗೊಂದಲ)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಮೈಸೂರು ಜಿಲ್ಲೆಯ ಕೊಳ್ಳೇಗಾಲದ ತಾಲ್ಲೂಕಿನಲ್ಲಿ ಅಕ್ರಮ ಸಾಗುವಳಿ ಪ್ರದೇಶದ ವಿಸ್ತೀರ್ಣ

149 - ಶ್ರೀ ಬಿ. ರಾಜುಗೌಡ (ಹನ್ನೂರು) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ದಂಟಳ್ಳಿ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಪ್ರದೇಶ ಎಷ್ಟು?

ಆ) ಇದು ಯಾವಾಗಿನಿಂದ ಈ ರೀತಿಯ ಅಕ್ರಮ ಸಾಗುವಳಿ ನಡೆಯುತ್ತಿದೆ?

ಇ) ಈ ಬಗ್ಗೆ ಸರ್ಕಾರದ ಗಮನಕ್ಕೆ ನಾಲ್ಕಾರು ಸಾರಿ ತಂದಿದ್ದರು ಸರ್ಕಾರ ನಿಷ್ಕ್ರೀಯವಾಗಿರಲು ಕಾರಣವೇನು?

ಶ್ರೀ ಹೆಚ್. ವಿಶ್ವನಾಥ್ (ಅರಣ್ಯ ಸಚಿವರು) :

ಅ) ಅನಧಿಕೃತ ಸಾಗುವಳಿ ಮಾಡುತ್ತಿರುವ ಪ್ರದೇಶದ ವಿಸ್ತೀರ್ಣ 785.87 ಎಕರೆ.

ಆ) 1989-90 ರಿಂದಲೂ ಈ ರೀತಿಯ ಸಾಗುವಳಿ ನಡೆಯುತ್ತಿದೆ.

ಇ) ಸರ್ಕಾರದಿಂದ ಅಕ್ರಮ ಒತ್ತುವರಿ ಮಾಡಿರುವವರನ್ನು ಒಕ್ಕಲೆಬ್ಬಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಉದ್ದೇಶಕ್ಕಾಗಿ ಪ್ರತ್ಯೇಕ ಪೊಲೀಸ್ ಸಿಬ್ಬಂದಿಯನ್ನು ಒದಗಿಸುವ ಪ್ರಸ್ತಾವನೆ ಕೂಡ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಜಿ. ರಾಜುಗೌಡ : ಮಾನ್ಯ ಅಧ್ಯಕ್ಷರೆ, ಸತತವಾಗಿ 6 ವರ್ಷಗಳಿಂದ ಅಕ್ರಮವಾಗಿ ಸಾಗುವಳಿ ಮಾಡುವವರನ್ನು ತೆರವು ಮಾಡಿಸಬೇಕೆಂದು ಅನೇಕ ಸಾರಿ ಅನೇಕ ವಿಧದಲ್ಲಿ ಸರ್ಕಾರದ ಗಮನವನ್ನು ಸೆಳೆದಿದ್ದೇನೆ. ನಿಯಮ 334ರ ಪ್ರಕಾರ, ಗಮನ ಸೆಳೆಯುವ ಸೂಚನೆ ಪ್ರಕಾರ ಮತ್ತು ಕಾಗದ ಬರೆಯುವುದರ ಮುಖಾಂತರ

ಕಾದಿಟ್ಟ ಅರಣ್ಯ ಪ್ರದೇಶದಲ್ಲಿ ಅಕ್ರಮ ಸಾಗುವಳಿ ನಡೆಯುತ್ತಿದೆ, ಇದನ್ನು ತೆರವು ಮಾಡಬೇಕೆಂದು ಅನೇಕ ವಿಧದಲ್ಲಿ ಸರ್ಕಾರವನ್ನು ಕೇಳಿದ್ದೇನೆ. ಬಹುಶಃ ಸರ್ಕಾರ ಕುರುಡಾಗಿದೆಯೋ ಕಿವುಡಾಗಿದೆಯೋ ಅಥವಾ ನಿರ್ವೀರ್ಯವಾಗಿದೆಯೋ ನನಗೆ ಗೊತ್ತಿಲ್ಲ. ಕಾದಿಟ್ಟ ಅರಣ್ಯ ಪ್ರದೇಶದಲ್ಲಿ ಒಂದು ಸಾವಿರ ಹೆಕ್ಟೇರ್ ಭೂಮಿಯನ್ನು ಸತತವಾಗಿ ಆರು ವರ್ಷಗಳಿಂದ ಅಕ್ರಮವಾಗಿ ತಮಿಳುನಾಡಿನವರು ಮತ್ತು ನಮ್ಮವರು ಎಲ್ಲರೂ ಸೇರಿಕೊಂಡು ಸಾಗುವಳಿ ಮಾಡುತ್ತಿದ್ದಾರೆ. ಇದನ್ನು ತೆರವು ಮಾಡಲಿಕ್ಕೆ ಇನ್ನೂ ಕೂಡ ಸರ್ಕಾರ ಮನಸ್ಸು ಮಾಡಿಲ್ಲ. ನಿರ್ದಿಷ್ಟವಾದ ಉತ್ತರ ಇಲ್ಲ. ಪ್ರತ್ಯೇಕ ಪೊಲೀಸ್ ಸಿಬ್ಬಂದಿಯನ್ನು ಒದಗಿಸುವ ಪ್ರಸ್ತಾವನೆ ಕಳುಹಿಸಿದ್ದೇವೆಂದು ಹೇಳಿದ್ದಾರೆ. ಈ ಸರ್ಕಾರಕ್ಕೆ ಏನು ಹೇಳಬೇಕಾಗುತ್ತದೆ. ಸಾಮಾನ್ಯವಾಗಿ ರಸ್ತೆಯಲ್ಲಿರತಕ್ಕ ಮರ ಕಡಿದರೆ ಅವರನ್ನು ತೆಗೆದುಕೊಂಡು ಹೋಗಿ ಜೇಲಿಗೆ ಹಾಕುತ್ತೀರಿ. 1 ಸಾವಿರ ಹೆಕ್ಟೇರ್ ಕಾದಿಟ್ಟ ಅರಣ್ಯ ಪ್ರದೇಶದಲ್ಲಿ ಆರು ವರ್ಷಗಳಿಂದ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ. ನೀವು ಕಿವುಡಾಗಿದ್ದೀರೋ ಕಣ್ಣಿಲ್ಲವೋ ಹೇಳಿ. ಯಾವಾಗ ತೆರವು ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂದು ನಿರ್ದಿಷ್ಟವಾಗಿ ಹೇಳಿ.

ಶ್ರೀ ಹೆಚ್. ವಿಶ್ವನಾಥ್ : ಅಧ್ಯಕ್ಷರೆ, ಸರ್ಕಾರಕ್ಕೆ ಕಣ್ಣೂ ಇದೆ. ಕಾಲೂ ಇದೆ. ಕಣ್ಣು ಕಾಲು ಸಮೇತ 23ನೇ ತಾರೀಖು 6ನೇ ತಿಂಗಳಲ್ಲಿ ಶಾಸಕರ ಸಮೇತ ನಾನು ಹೋಗಿ ಅಲ್ಲಿ ಭೇಟಿ ಕೊಟ್ಟು ಸಂಬಂಧಪಟ್ಟ ಅಧಿಕಾರಿಗಳ ಜೊತೆ, ಪೊಲೀಸ್ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಆದರೆ ವೀರಪ್ಪನ್ ಆಪರೇಷನ್‌ನಲ್ಲಿ ಇದ್ದುದರಿಂದ 1991ರಿಂದ 1993ರವರೆಗೆ ನಮಗೆ ಸ್ವಲ್ಪ ಪ್ರಾಬ್ಲಂ ಇತ್ತು. ಈಗ ಅಂಥದ್ದು ಏನೂ ಇಲ್ಲ. ನಾನು ಬೇಕಾದರೆ ಸಿ.ಆರ್.ಪಿ. ಕೂಡ ಅಲ್ಲಿ ಕೊಡುವುದಕ್ಕೆ ತಯಾರಿದ್ದೇನೆ. ಅಧಿಕಾರಿಗಳು ಕೂಡ ಸಜ್ಜಾಗಿದ್ದಾರೆ. ನಾನು ಶಾಸಕರ ವಿಶ್ವಾಸವನ್ನು ಕೂಡ ತೆಗೆದುಕೊಂಡು ಏನು ಅಕ್ರಮವಾಗಿದೆ ಅದನ್ನು ಸದ್ಯದಲ್ಲೇ ತುರ್ತಾಗಿ ತೆರವು ಮಾಡಿಸುವುದಕ್ಕೆ ಎಲ್ಲಾ ಕ್ರಮವನ್ನೂ ಕೂಡ ತೆಗೆದುಕೊಳ್ಳುತ್ತೇನೆಂದು ಅವರಿಗೆ ಆಶ್ವಾಸನೆ ಕೊಡುತ್ತೇನೆ.

ಶ್ರೀ ಜಿ. ರಾಜುಗೌಡ : ಸ್ವಾಮಿ, 6 ವರ್ಷಗಳಿಂದ ಇದು ಸತತವಾಗಿ ನಡೆಯುತ್ತಿದೆ; ನಿರಂತರವಾಗಿ ನಡೆಯುತ್ತಿದೆ. ಇಂಥದ್ದನ್ನು ಸರ್ಕಾರ ಮಾಡಲಿಲ್ಲ ಎಂದರೆ ಏನು ಸ್ವಾಮಿ ಅರ್ಥ? ಪೊಲೀಸಾದರೂ ತೆಗೆದುಕೊಂಡು ಬನ್ನಿ, ಸೈನ್ಯವಾದರೂ ತೆಗೆದುಕೊಂಡು ಬನ್ನಿ. ಆದರೆ ನಿರ್ದಿಷ್ಟವಾಗಿ ಯಾವಾಗ ತೆರವು ಮಾಡಿಸುತ್ತೀರಿ ಎಂಬುದನ್ನು ದಯಮಾಡಿ ಹೇಳಿ. ನಿಮ್ಮಲ್ಲೇ ಬೇಕಾದಷ್ಟು ಜನರಿದ್ದಾರೆ. 12 ಜನ ಡಿಸಿಎಫ್, 50 ಜನ ಎ.ಸಿ.ಎಫ್. ಗಾರ್ಡ್‌ಗಳು ಇವರೆಲ್ಲಾ ಸೇರಿ ನಿಮ್ಮದೇ ಒಂದು ಸೈನ್ಯ ಇದೆ. ಅದಕ್ಕಿಂತ ಮತ್ತೊಂದು ಸೈನ್ಯ ಬೇಕೇ? ತೆರವು ಮಾಡಲು ಇಚ್ಛೆ ಇಲ್ಲದಿದ್ದರೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸರ್ಕಾರವೂ ಇದರಲ್ಲಿ ಶಾಮೀಲಾಗಿದೆ ಎಂದು ಹೇಳುವಂಥ ಸನ್ನಿವೇಶ ಬಂದಿದೆ. ದಯಮಾಡಿ ದಿವಸವೇ ಮಾಡಬೇಕು ಎಂದು ಹೇಳಿ. ತಮಿಳುನಾಡಿನವರು ಬರುತ್ತಿದ್ದಾರೆ. ಆದರೂ ನೀವು ಸುಮ್ಮನೆ ಕುಳಿತಿದ್ದೀರಲ್ಲ.

ಶ್ರೀ ಹೆಚ್. ವಿಶ್ವನಾಥ್ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ತೆರವು ಮಾಡುವ ವಿಚಾರದಲ್ಲಿ ಮತ್ತು ಏನು ಬೆಳೆ ಬೆಳೆಯಬೇಕು ಆ ಬೆಳೆ ನೆಡುವಂಥ ವಿಚಾರದಲ್ಲಿ ಕಟ್ಟಪ್ಪಣೆ ಮಾಡಿದ್ದೇವೆ. ಅದಕ್ಕೂ ಕೂಡ ಅವಕಾಶ ಕೊಡುವುದಿಲ್ಲ. ಅಂದರೆ ಸರ್ಕಾರ ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದೆ. ಬೆಳೆ ಕೂಡ ಬೆಳೆಯುವುದಕ್ಕೆ ಬಿಡುತ್ತಿಲ್ಲ ಎಂಬುದು ಶಾಸಕರಿಗೂ ಗೊತ್ತಿರತಕ್ಕ ವಿಚಾರ. ಈ ಸಾರಿ ಬೆಳೆ ಬೆಳೆಯಲಿಲ್ಲ ಎಂದರೆ ನಾವು ಅದನ್ನು ಅದನ್ನು ತೆರವು ಮಾಡೇ ಮಾಡುತ್ತೇವೆ ಎಂಬುದು ಕೂಡ ಅವರಿಗೆ ಗೊತ್ತಿದೆ. ತುರ್ತಾಗಿ ನಾವು ತೆರವು ಮಾಡುವುದಕ್ಕೆ ಸರ್ವಕ್ರಮಗಳನ್ನೂ ಅವರ ಜೊತೆ ಸೇರಿ ತೆಗೆದುಕೊಳ್ಳುತ್ತೇವೆ ಎಂದು ಮತ್ತೊಮ್ಮೆ ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ. ರಾಜುಗೌಡ : ಸ್ಪಷ್ಟವಾದ ಧೋರಣೆ ಸರ್ಕಾರದಲ್ಲಿಲ್ಲ. ಮುಚ್ಚುಮರೆ ಏನಿಲ್ಲ ಇದರಲ್ಲಿ. ಪೋಲೀಸರ ಸಹಾಯ ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಇದೆ ಎಂದರೆ ತಾವು ದೃಢನಿರ್ಧಾರ ಮಾಡಿದ್ದೀರಾ. ಯಾವಾಗ ತೆರವು ಮಾಡಿಸುತ್ತೀರಿ ಹೇಳಿ. ನಾನು ಕೇಳುವುದು ಇಷ್ಟೆ. ದಯಮಾಡಿ ಬಿತ್ತನೆ ಕಾರ್ಯ ನಿಲ್ಲಿಸುವ ವ್ಯವಸ್ಥೆ ಮಾಡುತ್ತೀರಾ? ಖಾಯಂ ಆಗಿ ಶಿಬಿರ ಏರ್ಪಡಿಸಿ. ಆ ಕೆಲಸ ನೀವು ಮಾಡುತ್ತಿಲ್ಲ. ಯಾವಾಗ ಮಾಡುತ್ತೀರಿ ಹೇಳಿ.

ಶ್ರೀ ಹೆಚ್. ವಿಶ್ವನಾಥ್ : ಮಾಡುತ್ತೇವೆ.

ಶ್ರೀ ಜಿ. ರಾಜುಗೌಡ : ಯಾವಾಗ ಮಾಡುತ್ತೀರಿ?

ಶ್ರೀ ಹೆಚ್. ವಿಶ್ವನಾಥ್ : ಸರ್ಕಾರ ನಿರ್ಧಾರ, ದೃಢನಿರ್ಧಾರ, ಗಟ್ಟಿ ನಿರ್ಧಾರ ಎಲ್ಲ ನಿರ್ಧಾರಗಳನ್ನೂ ತೆಗೆದುಕೊಂಡಿದೆ.

ಎಸ್.ಎಸ್.ಎಲ್.ಸಿ. ಪರೀಕ್ಷಾ ಮಂಡಳಿಯಲ್ಲಿ ಕಾರ್ಯದ ಒತ್ತಡ

390 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಾಗಿ ಸುಮಾರು 6 ಲಕ್ಷ ಅಭ್ಯರ್ಥಿಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 1 ಲಕ್ಷಕ್ಕಿಂತಲೂ ಹೆಚ್ಚು ಅಭ್ಯರ್ಥಿಗಳು ಇದ್ದರೆ ಇನ್ನೊಂದು ಪರೀಕ್ಷಾ ಮಂಡಳಿ ಕೇಂದ್ರವನ್ನು ಏರ್ಪಾಡು ಮಾಡಬೇಕೆಂದು ಕಾನೂನು ಇರುವುದು ನಿಜವೇ?

ಇ) ನೆರೆಯ ರಾಜ್ಯಗಳಾದ ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ ಬೇರೆ ಬೇರೆ ವಿಭಾಗಗಳಲ್ಲಿ ಬೇರೆ ಬೇರೆ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟಿಲ್ಲವೇ?

ಈ) ಒಬ್ಬ ಅಭ್ಯರ್ಥಿ ಗುಲ್ಬರ್ಗಾ, ಬೀದರ್, ರಾಯಚೂರು ಬೆಳಗಾಂದಿಂದ ಅಂಕಪಟ್ಟಿ ಕಳೆದರೆ ಪರೀಕ್ಷಾ ಕೇಂದ್ರ ಬೆಂಗಳೂರಿಗೆ ಬರಬೇಕಾದರೆ ಬೆಂಗಳೂರಿಗೆ ಬಂದು ಹೋಗಲು ಕನಿಷ್ಟ 1000-00 ರೂ. ವೆಚ್ಚವಾಗುವುದು ಬಡರೈತರು ಭರಿಸಬಹುದೇ?

ಉ) ಇದರಿಂದ ಆ ಹಿಂದುಳಿದ ಭಾಗದ ಸಾವಿರಾರು ವಿದ್ಯಾರ್ಥಿಗಳ ವಿದ್ಯಾಭ್ಯಾಸವೇ ಸ್ಥಗಿತಗೊಳ್ಳುವುದಿಲ್ಲವೇ?

ಊ) ಆದಕ್ಕಾಗಿ ಗುಲ್ಬರ್ಗಾ ಬೆಳಗಾಂ ಧಾರವಾಡ ವಿಭಾಗಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಕೇಂದ್ರ ಮಂಡಳಿಗಳನ್ನು ಏರ್ಪಾಡು ಮಾಡಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಬಂದಿದೆ

ಆ) ಇಲ್ಲ

ಇ) ಮಾಹಿತಿ ಲಭ್ಯವಿಲ್ಲ

ಈ) ಅಂಕಪಟ್ಟಿ ಕಳೆದುಕೊಂಡಂತಹ ವಿದ್ಯಾರ್ಥಿಗಳು ನಿಗಧಿತ ಶುಲ್ಕವನ್ನು ಮತ್ತು ಅರ್ಜಿಯನ್ನು ಸಂಬಂಧಿಸಿದ ಶಾಲೆಯ ಮುಖಾಂತರ ಮಂಡಳಿಗೆ ಕಳುಹಿಸಿದಲ್ಲಿ ಅಂತಹವರಿಗೆ ನಕಲು ಅಂಕಪಟ್ಟಿಯನ್ನು ಸಂಬಂಧಿಸಿದ ಶಾಲೆಗೆ ಕಳುಹಿಸಲಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಬೆಂಗಳೂರಿಗೆ ಬರುವ ಅವಶ್ಯಕತೆ ಇಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

10.50 ಎ.ಎಂ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಮಾನ್ಯ ಅಧ್ಯಕ್ಷರೆ, ನಾನು ಎಸ್‌ಎಸ್‌ಎಲ್‌ಸಿ ಕೇಂದ್ರದ ಶಾಖೆಗಳ ಬಗ್ಗೆ ನೆರೆರಾಜ್ಯಗಳಾದ ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ ರಾಜ್ಯಗಳಂತೆ ಬೇರೆ ಬೇರೆ ವಿಭಾಗಗಳಲ್ಲಿ ಬೇರೆ ಬೇರೆ ಕೇಂದ್ರಗಳನ್ನು ಮಾಡಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವುದಿಲ್ಲವೇ ಅಂದರೆ ಆ ಮಾಹಿತಿ ಲಭ್ಯವಿಲ್ಲವೆಂದು ಹೇಳಿದ್ದೀರಿ. ಒಬ್ಬ ವಿದ್ಯಾರ್ಥಿ ಗುಲ್ಬರ್ಗ, ರಾಯಚೂರು, ಬೀದರ್‌ನಿಂದ ಬೆಂಗಳೂರಿಗೆ ಬರಬೇಕಾದರೆ ಕನಿಷ್ಟ 1 ಸಾವಿರ ರೂಪಾಯಿ ಖರ್ಚಾಗುತ್ತದೆ. ಅಂಕಪಟ್ಟಿಯನ್ನು ಕಳೆದುಕೊಂಡರೆ ನಿಗದಿತ ಅರ್ಜಿಫಾರಂನಲ್ಲಿ ಶುಲ್ಕವನ್ನು ತುಂಬಿ ಸಂಬಂಧಿಸಿದ ಶಾಖೆಯಿಂದ ಮಂಡಳಿಗೆ ಕಳುಹಿಸಿದರೆ ಅಂತಹವರಿಗೆ ನಕಲು ಅಂಕಪಟ್ಟಿಯನ್ನು ಸಂಬಂಧಪಟ್ಟ ಶಾಲೆಗಳಿಗೆ ಕಳುಹಿಸಲಾಗುವುದೆಂದು ತಿಳಿಸಿದ್ದಾರೆ. ಅಂಕಪಟ್ಟಿ ಕಳೆದುಹೋದರೆ ಮತ್ತು ಅದನ್ನು ಪಡೆಯುವವರೆಗೆ ಹೆಚ್ಚು ಹೆಚ್ಚು ಸಂಖ್ಯೆಯ ವಿದ್ಯಾರ್ಥಿಗಳಿಗೆ ಆ ವೇಳೆಯಲ್ಲಿ ಅಂಕಪಟ್ಟಿ ಸಿಗದ ಕಾರಣ ಸಂದರ್ಶನ ಹಾಗೂ ಮುಂದಿನ ವಿದ್ಯಾಭ್ಯಾಸದ ಪ್ರವೇಶ ತಪ್ಪಿ ವಿದ್ಯಾರ್ಥಿಗಳ ಜೀವನವೇ ಹಾಳಾಗಿದೆ. ಅದಕ್ಕಾಗಿ ಗುಲ್ಬರ್ಗ, ಬೀದರ್, ಬೆಳಗಾಂನಿಂದ ಅಂಕಪಟ್ಟಿ ಪಡೆಯಲು ವಿದ್ಯಾರ್ಥಿಗಳು ಬಂದು ಹೋದರೆ ಕನಿಷ್ಟ 1 ಸಾವಿರ ರೂಪಾಯಿ ಖರ್ಚಾಗುತ್ತದೆ. ನಮ್ಮ ರಾಜ್ಯದಲ್ಲಿ ಸುಮಾರು 6 ಲಕ್ಷ ಎಸ್‌ಎಸ್‌ಎಲ್‌ಸಿ. ವಿದ್ಯಾರ್ಥಿಗಳು ಇದ್ದ ಕಾರಣ, ಮಹಾರಾಷ್ಟ್ರ ಮದ್ರಾಸ್ ಮತ್ತು ಆಂಧ್ರಪ್ರದೇಶಗಳಲ್ಲಿರುವಂತೆ ನಮ್ಮ ರಾಜ್ಯದಲ್ಲಿಯೂ ಸಹ ಶಾಖೆಗಳನ್ನು ಏರ್ಪಾಡು ಮಾಡಿ ಗುಲ್ಬರ್ಗ, ಬೆಳಗಾಂದಲ್ಲಿ ಶಾಖೆಗಳನ್ನು ಏರ್ಪಾಟು ಮಾಡಿ ಆ ಶಾಖೆಗಳಲ್ಲಿ ಮಾರ್ಕ್ಸ್‌ಲಿಸ್ಟ್ ಮತ್ತು ಚೇಂಜ್ ಆಫ್ ಸೆಂಟರ್ಸ್ ವ್ಯವಸ್ಥೆ ಮಾಡಿ ಪೇಪರ್‌ಗಳನ್ನು ಮಾತ್ರ ಕೇಂದ್ರದಿಂದ ಮಾಡುವ ವ್ಯವಸ್ಥೆ ಮಾಡಿದರೆ ಬಡ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟ ಹಾಗೆ ಆಗುವುದಿಲ್ಲವೆ?

ಶ್ರೀ ಎಸ್.ಎಂ. ಯಾಹ್ಯ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಯಾವ ಒಂದು ವ್ಯವಸ್ಥೆಯಿದೆ ಅದು ಸಂಪೂರ್ಣವಾಗಿ ಬಡ ವಿದ್ಯಾರ್ಥಿಗಳಿಗೆ ಸಹಾಯಕವಾಗಿರುವಂತಹದ್ದು ಇದೆ. ನಾವು ಬೇರೆ ಬ್ರಾಂಚ್‌ಗಳನ್ನು ತೆರೆದುಕೊಂಡು ಮತ್ತೆ ಬೋರ್ಡ್‌ಗಳನ್ನು ಮಾಡಿದರೆ ಅದಕ್ಕೆ ಹೆಚ್ಚು ಹಣ ಖರ್ಚಾಗುತ್ತದೆ, ಸಿಬ್ಬಂದಿ ಹೆಚ್ಚು ಆಗುತ್ತದೆ, ಇನ್ನೂ ಡಿಲೇಯಾಗುವುದಕ್ಕೆ ಕಾರಣವಾಗುತ್ತದೆ. ಅದಕ್ಕೆ ನೀವು ಪ್ರಿನ್ಸಿಪಾಲರಿಗೆ ಅರ್ಜಿಯನ್ನು ಕೊಡಬಹುದು, ಬೆಂಗಳೂರಿಗೆ ಬರಬೇಕಾಗಿಲ್ಲ, 1 ಸಾವಿರ ರೂಪಾಯಿ ಖರ್ಚು ಮಾಡಬೇಕಾಗಿಲ್ಲ. ಅಲ್ಲಿ ನೀವು ಅರ್ಜಿಯನ್ನು ಕೊಟ್ಟರೆ ಪ್ರಿನ್ಸಿಪಾಲರ ಜವಾಬ್ದಾರಿ, ಎಲ್ಲಿಯಾದರೂ ಮಾರ್ಕ್ಸ್‌ಲಿಸ್ಟ್ ಹಾಳಾಗಿಬಿಟ್ಟರೆ ಅವರಿಗೆ ನಕಲು ಅಂಕಪಟ್ಟಿ ಕೊಡುವಂತಹ ವ್ಯವಸ್ಥೆ ಮಹಾರಾಷ್ಟ್ರಕ್ಕಿಂತಲೂ, ಇತರ ರಾಜ್ಯಗಳಿಗಿಂತಲೂ ಉತ್ತಮವಾದ ವ್ಯವಸ್ಥೆ ನಮ್ಮ ಕರ್ನಾಟಕ ರಾಜ್ಯದಲ್ಲಿದೆ. ಇದನ್ನು ಇನ್ನೂ ಬಿಗಿಯಾಗಿ ಮಾಡಿ ಆದಷ್ಟು ಬೇಗ ಮಾರ್ಕ್ಸ್‌ಕಾರ್ಡ್‌ಗಳನ್ನು ಕೊಡಲಿಕ್ಕೆ ಸರ್ಕಾರ ಎಲ್ಲ ಸಿದ್ಧತೆಗಳನ್ನು ಮಾಡುತ್ತದೆಂದು ಮಾನ್ಯ ಶಾಸಕರಿಗೆ ಹೇಳಬಯಸುತ್ತೇನೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ನಾನು ಆಗಲೇ ಹೇಳಿದಹಾಗೆ ಬಹುತೇಕ ವಿದ್ಯಾರ್ಥಿಗಳು ಸರಿಯಾದ ಸಮಯಕ್ಕೆ ಅಂಕಪಟ್ಟಿಗಳು ದೊರೆಯದೆ ಸಂದರ್ಶನ ಮತ್ತು ಮುಂದಿನ ವಿದ್ಯಾಭ್ಯಾಸದ ಪ್ರವೇಶ ಎಷ್ಟೋ ವಿದ್ಯಾರ್ಥಿಗಳಿಗೆ ತಪ್ಪಿ ಹೋಗಿದೆ. ನನ್ನ ತಮ್ಮನ ಮಗನಿಗೆ ಅಂಕಪಟ್ಟಿ ಕಳೆದುಹೋಗಿ ಅದನ್ನು ತರಿಸುವಲ್ಲಿ ಆದ ವಿಳಂಬದಿಂದ

ಒಂದು ವರ್ಷ ಹಾಳಾಯಿತು. ಶಾಲೆಯ ಮುಖಾಂತರ ಕಳುಹಿಸಿದರೂ ಕೂಡ ಸರಿಯಾದ ಸಮಯಕ್ಕೆ ಅಂಕಪಟ್ಟಿ ಸಿಗಲಿಲ್ಲ. ಕೊನೆಗೆ ಬೆಂಗಳೂರಿಗೆ ಬಂದು ತೆಗೆದುಕೊಂಡು ಹೋಗಬೇಕಾಯಿತು. ಆದ್ದರಿಂದ ಶಾಖೆಗಳನ್ನು ತೆರೆದು ಬೆಳಗಾಂ ಮತ್ತು ಗುಲ್ಬರ್ಗಗಳಲ್ಲಿ ಸಿಗುವಂತೆ ಏರ್ಪಾಟು ಮಾಡಿದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ.

ಶ್ರೀ ಎಸ್.ಎಂ. ಯಾಹ್ಯ : ಸರ್ಕಾರದ ವಿಚಾರದ ಪ್ರಕಾರ ಶಾಖೆಗಳನ್ನು ಮಾಡಿದರೆ ಇನ್ನೂ ಹೆಚ್ಚು ತಡವಾಗಬಹುದು. ಹೊಸ ಸಮಸ್ಯೆಗಳು ಆಗುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿ, ಈಗಿನ ಪದ್ಧತಿಯನ್ನು ಇನ್ನೂ ಒಳ್ಳೆಯ ರೂಪಕ್ಕೆ ತರಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಪಾಂಡವಪುರ ಜನರಲ್ ಆಸ್ಪತ್ರೆಗೆ ಸಿಬ್ಬಂದಿ ಮಂಜೂರಾತಿ

116 - ಶ್ರೀ ಡಿ. ಹಲಗೇಗೌಡ (ಪಾಂಡವಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪಾಂಡವಪುರ ಜನರಲ್ ಆಸ್ಪತ್ರೆಗೆ ಸಿಬ್ಬಂದಿ ಮತ್ತು ಸಲಕರಣೆಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಆಸ್ಪತ್ರೆಗೆ ಬೇಕಾಗುವ ಸಿಬ್ಬಂದಿಗಳನ್ನು ಸರ್ಕಾರವು ಮಂಜೂರು ಮಾಡಿದೆಯೇ*

ಇ) *ಮಂಜೂರಾತಿಯಾಗಿದ್ದರೆ ಎಷ್ಟು ಜನ ಸಿಬ್ಬಂದಿಯನ್ನು ಯಾವ ಯಾವ ಹುದ್ದೆಗಳಿಗೆ ನೇಮಿಸಿರುತ್ತದೆ?*

ಈ) *ಸಾರ್ವಜನಿಕರ ಹಿತದೃಷ್ಟಿಯಿಂದ ಕೊರತೆ ಇರುವ ಸಿಬ್ಬಂದಿ ವರ್ಗ ಮತ್ತು ಸಲಕರಣೆಗಳನ್ನು ಸರ್ಕಾರದವರು ಶೀಘ್ರವಾಗಿ ಒದಗಿಸುವರೇ?*

ಡಾ|| ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಸಿಬ್ಬಂದಿ ಕೊರತೆಯಿರುವುದು ಗಮನಕ್ಕೆ ಬಂದಿದೆ.

ಆ) ಕನಿಷ್ಠ ಅವಶ್ಯಕ ಸಲಕರಣಗಳನ್ನು ಒದಗಿಸಲಾಗಿದೆ. ಆದರೆ ಇನ್ನೂ ಹೆಚ್ಚಿನ ಸಲಕರಣೆಗಳನ್ನು ಒದಗಿಸಲು ಆಸ್ಪತ್ರೆಯಿಂದ ಕೋರಿಕೆ ಬಂದಿದೆ.

ಆ) ಹೌದು.

ಇ) ಮಂಜೂರಾಗಿರುವ ಹುದ್ದೆಗಳ ಸಂಖ್ಯೆ -66 ಮತ್ತು ಅವುಗಳಲ್ಲಿ 49 ಹುದ್ದೆಗಳನ್ನು ತುಂಬಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಖಾಲಿ ಇರುವ ಹುದ್ದೆಗಳನ್ನು ತುಂಬಲಾಗುವುದು. ಕೋರಿರುವ ಹೆಚ್ಚಿನ ವೈದ್ಯಕೀಯ ಸಲಕರಣೆಗಳನ್ನು ಒದಗಿಸಲು ಜಿಲ್ಲಾ ಪರಿಷತ್ತನ್ನು ಕೋರಲಾಗುವುದು.

ಅನುಬಂಧ

ಸಾರ್ವಜನಿಕ ಆಸ್ಪತ್ರೆ ಪಾಂಡವಪುರ ಇಲ್ಲಿಗೆ ಮಂಜೂರಾದ ಹುದ್ದೆಗಳು ಹಾಗೂ ಖಾಲಿ ಹುದ್ದೆಗಳ ವಿವರ

	ಹುದ್ದೆಗಳ ವಿವರ	ಮಂಜೂರಾದ ಹುದ್ದೆ	ಕಾರ್ಯನಿರ್ವಹಿಸುತ್ತಿರುವ ಹುದ್ದೆ	ಖಾಲಿ ಇರುವ ಹುದ್ದೆ
1)	ಕಛೇರಿ ಅಧೀಕ್ಷಕರು	1	1	–
2)	ಪ್ರ.ದ. ಸಹಾಯಕರು	3	2	1
3)	ದ್ವಿ.ದ. ಸಹಾಯಕರು	2	2	ವರ್ಗಾವಣೆಯಿಂದ ತೆರವಾಗಿದೆ

4)	ಕಿರಿಯ ಆರೋಗ್ಯ ಸಹಾಯಕರು(ಪು)	2	1	1
5)	ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು	2	2	_
6)	ಹಿರಿಯ ಫಾರ್ಮಾಸಿಸ್ಟ್	1	1	_
7)	ಕಿರಿಯ ಫಾರ್ಮಾಸಿಸ್ಟ್	2	2	_
8)	ಕ್ಷೇತ್ರ ಆರೋಗ್ಯ ಶಿಕ್ಷಕರು	1	1	_
9)	ಕಿರಿಯ ವೈದ್ಯೇತರ ಮೇಲ್ವಿಚಾರಕರು	1	1	_
10)	ಶುಶ್ರೂಷಕರು	6	4	2
11)	ನೇತ್ರ ಸಹಾಯಕರು	1	1	_
12)	ಹಿರಿಯ ಪ್ರಯೋಗಶಾಲಾ ತಂತ್ರಜ್ಞ	1	_	1
13)	ಪ್ಯಾರಾ ಮೆಡಿಕಲ್ ವರ್ಕರ್	1	1	_
14)	ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು	12	11	1
15)	ಕಿರಿಯ ಪುರುಷ ಆರೋಗ್ಯ ಸಹಾಯಕರು	7	6	1
16)	ವಾಹನ ಚಾಲಕರು	1	1	_
17)	ಸಾಮಾನ್ಯ ವೈದ್ಯಾಧಿಕಾರಿ	3	2	1
18)	ಮಹಿಳಾ ವೈದ್ಯಾಧಿಕಾರಿ	1	1	_
19)	ಉಪಶಸ್ತ್ರ ಚಿಕಿತ್ಸಕರು	1	1	_
20)	ದಂತ ಚಿಕಿತ್ಸಕರು	1	_	1
21)	ಕ್ಷ-ಕಿರಣ ತಂತ್ರಜ್ಞ	1	1	_
22)	ಕ್ಷ-ಕಿರಣ ಸಹಾಯಕ	1	_	1
23)	ಕಿರಿಯ ಪ್ರಯೋಗ ಶಾಲಾ ತಂತ್ರಜ್ಞ	1	1	_
24)	ಪ್ರಯೋಗ ಶಾಲಾ ಸಹಾಯಕ	1	_	1
25)	ಗ್ರೂಪ್-ಡಿ	8	5	3
26)	ಅಡಿಗೆಯವರು	2	_	2
27)	ಬೆರಳಚ್ಚುಗಾರರು ಹಾಗೂ ಸಹಾಯಕರು	1	1	_
28)	ಶುಶ್ರೂಷಕ ಅಧೀಕ್ಷಕರು	1	_	1
	ಒಟ್ಟು	66	49	17

ಶ್ರೀ ಡಿ. ಹಲಗೇಗೌಡ : ಮಾನ್ಯ ಅಧ್ಯಕ್ಷರೆ, ಪಾಂಡವಪುರ ಜನರಲ್ ಆಸ್ಪತ್ರೆಯಲ್ಲಿರುವ ಸಿಬ್ಬಂದಿ ಕೊರತೆ - ಬಗ್ಗೆ ಕೇಳಿರುವ ಮಂಜೂರಾಗಿರತಕ್ಕ 66 ಹುದ್ದೆಗಳ ಪೈಕಿ 17 ಖಾಲಿ ಇವೆ, ಅವುಗಳನ್ನು ಇನ್ನು ತುಂಬಿಲ್ಲವೆನ್ನುವ ಉತ್ತರವಿದೆ. ಬಹುಶಃ ಇದು ಸಮಾಧಾನಕರ ಉತ್ತರವಲ್ಲ, ಸರಿಯಾದ ಉತ್ತರವಲ್ಲವೆಂದು ನನಗಾದರೂ ಕೂಡ ನನಗನಿಸುತ್ತದೆ. ಏಕೆಂದರೆ, ಇಲ್ಲಿ ಸಿಬ್ಬಂದಿ ನೇಮಕ ಮಾಡಿರತಕ್ಕದ್ದು ದಿನಗೂಲಿ ಆಧಾರದ ಮೇಲೆ ನೇಮಕ ಮಾಡಿದ್ದಾರೆ. ದಿವಸಕ್ಕೆ 5 ರೂಪಾಯಿ ಅಂದರೆ ತಿಂಗಳಿಗೆ 150 ರೂಪಾಯಿಗಳಿಗೆ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಇನ್ನು ಕೂಡ ಸಂಬಳ ಕೊಟ್ಟಿಲ್ಲ. ಅಂತಹದ್ದು ಲೆಕ್ಕಹಾಕಿಕೊಂಡು ಕೇವಲ 17 ಹುದ್ದೆಗಳು ಖಾಲಿಯಿವೆಯೆಂದು ಹೇಳುತ್ತಿದ್ದಾರೆ. ನಾನು ಅಲ್ಲಿಗೆ ಭೇಟಿ ಕೊಟ್ಟಾಗ ಸಿಬ್ಬಂಧಿಯ ಕೊರತೆಯಿದೆ. ಬಹುತೇಕ ಸಿಬ್ಬಂದಿ ಕೊರತೆಯಿರುವುದರಿಂದ ಆಸ್ಪತ್ರೆಯ ಶುಚಿತ್ವವಾಗಲೀ, ಒಳ್ಳೆಯ ವಾತಾವರಣವಾಗಲಿ ಅಲ್ಲಿ ಕಾಣುತ್ತಿಲ್ಲ. ದಯಮಾಡಿ ಖಾಲಿಯಿರುವ ಹುದ್ದೆಗಳನ್ನು ಭರ್ತಿಮಾಡಿ ಅಲ್ಲಿಗೆ ಬೇಕಾಗಿರತಕ್ಕ ಸಲಕರಣೆಗಳನ್ನು ಕೂಡಲೇ ನೀಡುವುದರ ಮುಖಾಂತರ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು. ಅಲ್ಲಿಗೆ ಬೇಕಾಗದೇ ಇರತಕ್ಕ ದಂತ ವೈದ್ಯರನ್ನು ಹಾಕಿದ್ದಾರೆ. ದಂತವೈದ್ಯರಿಗೆ ಬೇಕಾದ ಸಲಕರಣೆಗಳು ಅಲ್ಲಿ ಇಲ್ಲ. ಅದರ ಬದಲು

ಮಕ್ಕಳ ತಜ್ಞರು, ಗೈನಕಾಲಜಿಸ್ಟ್ ಅಂತಹವರನ್ನು ಹಾಕಿದರೆ ಜನರಿಗೆ ತುಂಬಾ ಅನುಕೂಲವಾಗುತ್ತದೆ. ಏನೂ ಪ್ರಯೋಜನ ಇಲ್ಲದೆ ಇರತಕ್ಕ ವೈದ್ಯರುಗಳನ್ನು ಹಾಕಿ ಆಸ್ಪತ್ರೆಯಲ್ಲಿ ಲೆಕ್ಕಕ್ಕೆ ಮಾತ್ರ ಇಡುವುದರ ಬದಲು ಸೇವೆಯನ್ನು ಕೊಡತಕ್ಕ ಕಾರ್ಯವನ್ನು ಮಾಡುತ್ತಾರೆಯೇ ಎಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಡಾ|| ಎ.ಬಿ. ಮಲಕರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ಕೇವಲ ಪಾಂಡವಪುರ ಸಾರ್ವಜನಿಕ ಆಸ್ಪತ್ರೆ ಅಷ್ಟೇ ಅಲ್ಲ, ರಾಜ್ಯದ ಅನೇಕ ಆಸ್ಪತ್ರೆಗಳಲ್ಲಿ ಸಿಬ್ಬಂದಿಯ ಸ್ವಲ್ಪ ಕೊರತೆಯಿದೆ. ಅದಕ್ಕೆ ಕಾರಣ ಇಷ್ಟೆ, 1987ನೇ ಇಸವಿಯಿಂದ ಇಲ್ಲಿಯವರೆಗೆ ಹೊಸ ನೇಮಕಾತಿಗೆ ಬ್ಯಾನ್ ಇತ್ತು. ಸರ್ಕಾರ ನೇಮಕಾತಿಯನ್ನು ನಿಷೇಧಿಸಿತ್ತು. ನಮ್ಮ ಸರ್ಕಾರ ಬಂದಮೇಲೆ ಸುಮಾರು 1800 ಹೊಸ ಡಾಕ್ಟರುಗಳನ್ನು ಅಪಾಯಿಂಟ್‌ಮೆಂಟ್ ಮಾಡಿದ್ದೇವೆ. ಅದು 1987ರಿಂದ ಈಚೆಗೆ. ಆಮೇಲೆ ಪ್ಯಾರಾಮೆಡಿಕಲ್ ಸಿಬ್ಬಂದಿಗೆ ಸ್ವಲ್ಪ ತೊಂದರೆಯಿದೆ. ಸದ್ಯ ಹಣಕಾಸು ಇಲಾಖೆಯಿಂದ ಕ್ಲಿಯರೆನ್ಸ್ ಬಂದಿದೆ. ಸುಮಾರು 5 ಸಾವಿರ ಹುದ್ದೆಗಳನ್ನು ಭರ್ತಿ ಮಾಡುತ್ತಿದ್ದೇವೆ. ಆದರೆ ಹುದ್ದೆಗಳನ್ನು ಭರ್ತಿ ಮಾಡುವ ಹಂತದಲ್ಲಿ ಸುಪ್ರೀಂ ಕೋರ್ಟ್‌ನಿಂದ ತಡೆಯಾಜ್ಞೆ ಬಂದಿದೆ. ಆದರೂ ಕೂಡ ಮಾನ್ಯ ಸದಸ್ಯರು ಹೇಳುವಂತೆ 66 ಹುದ್ದೆಗಳಲ್ಲಿ ಕೇವಲ 17 ಹುದ್ದೆಗಳು ಅಲ್ಲಿ ಖಾಲಿಯಿವೆ. ಅಲ್ಲಿ ಕೆಲಸ ನಡೆಯುತ್ತಿಲ್ಲ, ಗುಣಮಟ್ಟ ಸರಿಯಿಲ್ಲವೆಂದು ಹೇಳಿದರೆ ಅದನ್ನು ಒಪ್ಪಲಿಕ್ಕೆ ನಾನು ತಯಾರಾಗಿಲ್ಲ. ಸಾಮಾನ್ಯ ವೈದ್ಯರ ಒಂದೇ ಒಂದು ಹುದ್ದೆ ಖಾಲಿಯಿದೆ. ಶುಶ್ರೂಷಕರ ಎರಡು ಹುದ್ದೆಗಳು ಖಾಲಿ ಇವೆ. ಪ್ಯಾರಾಮೆಡಿಕಲ್ ಸಿಬ್ಬಂದಿ ವಿವಿಧ ಹಂತಗಳಲ್ಲಿ ಒಂದೊಂದು ಖಾಲಿ ಇವೆ. ಕೆಲಸ ಚೆನ್ನಾಗಿ ನಡೆದಿದೆ. ಆಸ್ಪತ್ರೆಗಳಲ್ಲಿ ಸಲಕರಣೆಗಳನ್ನು ಒದಗಿಸಬೇಕಾದದ್ದು ನಮ್ಮ ಕರ್ತವ್ಯವಲ್ಲ ಅದು ಜಿಲ್ಲಾ ಪಂಚಾಯಿತಿಗೆ ಬರುತ್ತದೆ. ಸದಸ್ಯರ ಜೊತೆಗೆ ಸರ್ಕಾರ ಕೂಡ ಮಾಹಿತಿಯನ್ನು ಕೊಟ್ಟು ಶೀಘ್ರವಾಗಿ ಸಲಕರಣೆಗಳನ್ನು ಒದಗಿಸಿ ಕೊಡಲು ಸರ್ಕಾರ ಅವರ ಜೊತೆಯಲ್ಲಿ ಪ್ರಯತ್ನ ಮಾಡುತ್ತದೆ.

ಮಂಡ್ಯ ತಾಲ್ಲೂಕಿನಲ್ಲಿರುವ ಸಹಾಯಕ ಶಿಕ್ಷಣಾಧಿಕಾರಿಯ ವಿಂಗಡಣೆ

504 - ಶ್ರೀ ಎನ್. ತಮ್ಮಣ್ಣ (ಕೆರೆಗೋಡು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ತಾಲ್ಲೂಕಿನಲ್ಲಿರುವ ಸಹಾಯಕ ಶಿಕ್ಷಣಾಧಿಕಾರಿಗಳ ಹುದ್ದೆಯನ್ನು ವಿಂಗಡಣೆ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಈ ಹುದ್ದೆಗಳನ್ನು ಯಾವಾಗ ವಿಂಗಡಣೆ ಮಾಡುತ್ತೀರಿ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಸರ್ಕಾರದ ಮಟ್ಟದಲ್ಲಿ ಈ ಪ್ರಸ್ತಾವನೆಯನ್ನು ತಿರಸ್ಕರಿಸಿದೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಎನ್. ತಮ್ಮಣ್ಣ : ಮಾನ್ಯ ಅಧ್ಯಕ್ಷರೆ, ಸರ್ಕಾರದ ಮಟ್ಟದಲ್ಲಿ ಈ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದೆಯೆಂದು ಹೇಳಿದ್ದಾರೆ ಯಾವ ಕಾರಣದಿಂದ ತಿರಸ್ಕರಿಸಲಾಗಿದೆ ಎಂಬುದನ್ನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯ : ಮಾನ್ಯ ಅಧ್ಯಕ್ಷರೆ, ಪ್ರತಿಯೊಂದು ತಾಲ್ಲೂಕಿನಲ್ಲಿ ಒಬ್ಬರು ಎಇಓ ಇರುವುದು ಇವತ್ತಿನ ಪದ್ಧತಿಯಲ್ಲಿರುವ ಒಂದು ವ್ಯವಸ್ಥೆ. ಅದಕ್ಕೆ ಇನ್ನು ಹೆಚ್ಚು ರೇಂಜಸ್ ಮಾಡಬೇಕಾದರೆ ಅದು ನೀಡ್ ಇದ್ದರೆ ಮಾತ್ರ

ಮಾಡುವುದಕ್ಕೆ ಸಾಧ್ಯವಿದೆ. ಸರ್ಕಾರದಲ್ಲಿ ಒಂದು ಹೊಸ ಪ್ರಪೋಸಲ್ಸ್ ಸಹ ಇದೆ. ಈಗ ಇರುವ ಎಇಒ ಪೋಸ್ಟನ್ನು ತಾಲ್ಲೂಕುಮಟ್ಟದಲ್ಲಿ ಅಪ್‌ಗ್ರೇಡ್ ಮಾಡಿ ಎಜುಕೇಷನ್ ಆಫೀಸರ್ ಎಂದು ಮಾಡಲಾಗುವುದು. ಆಗ ನಿಮ್ಮ ಸಮಸ್ಯೆ ಏನಿದೆ ಅದು ಬಗೆಹರಿಯುವುದಕ್ಕೆ ಸಾಧ್ಯವಾಗುತ್ತದೆ. ಎಜುಕೇಷನ್ ಆಫೀಸರ್ ಆದನಂತರ ಅವರ ಕೆಳಗೆ ಎಇಒ ಸಹ ಇರುತ್ತಾರೆ. ಈ ಹೊಸ ಪ್ರಪೋಸಲ್ ಮಂಜೂರಾದರೆ ಇದರಿಂದ ನಿಮ್ಮ ಸಮಸ್ಯೆ ಬಗೆಹರಿಯುತ್ತದೆಂದು ನನಗೆ ತೋರುತ್ತದೆ.

ಶ್ರೀ ಎನ್. ತಮ್ಮಣ್ಣ : ಮಾನ್ಯ ಅಧ್ಯಕ್ಷರೆ, ಮಂಡ್ಯ ತಾಲ್ಲೂಕು ಸುಮಾರು ಮೂರು ಜನ ವಿಧಾನಸಭಾ ಸದಸ್ಯರನ್ನು ಒಳಗೊಂಡಿರುತ್ತದೆ. 1971ರಲ್ಲಿ ಅಲ್ಲಿ ಎಇಒ ಆಫೀಸ್ ಶುರುವಾಗಿ ಅಲ್ಲಿ 6 ಜನ ಮಾತ್ರ ಸಿಬ್ಬಂದಿ ವರ್ಗವಿತ್ತು. ಸುಮಾರು 359 ಶಾಲೆಗಳಿವೆ, ಆ ಶಾಲೆಗಳನ್ನು ಇನ್ಸ್‌ಪೆಕ್ಷನ್ ಮಾಡಬೇಕಾದರೆ ಕನಿಷ್ಟ 6 ತಿಂಗಳಾಗುತ್ತದೆ. ಒಬ್ಬರು ಎಇಒಯಿಂದ ಇನ್ಸ್‌ಪೆಕ್ಷನ್ ಮಾಡುವುದಕ್ಕಾಗುವುದಿಲ್ಲ. ಆರುತಿಂಗಳು ರಜೆ ಆರುತಿಂಗಳು ಶಾಲೆ ಇರುತ್ತದೆ. ಹಾಗಾಗಿ ಮಂಡ್ಯ ಜಿಲ್ಲೆ ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆ. ನಮ್ಮ ಜಿಲ್ಲೆ ಶೈಕ್ಷಣಿಕವಾಗಿ ಉತ್ತಮವಾಗಬೇಕಾದರೆ ನಾನು ಹೇಳಿದಹಾಗೆ ಮಾಡಬೇಕು. ಕಳೆದಬಾರಿ ಡಿಪಿಎಆರ್‌ನವರು ಮಂಡ್ಯ ತಾಲ್ಲೂಕಿಗೆ ಒಂದು ಪ್ರಪೋಸಲ್ಸ್ ಮಾಡಿದ್ದಾರೆ. ತಾವು ಏನೋ ಹೊಸದಾಗಿ ಮಾಡುತ್ತೇವೆಂದು ಹೇಳಿದ್ದೀರಿ. ಅದನ್ನು ಯಾವಾಗ ಮಾಡುತ್ತೀರಿ? ಅದು ಆಗದಿದ್ದರೆ ಡಿ.ಪಿ.ಎ.ಆರ್‌ನವರು ಮಾಡಿರುವ ಪ್ರಪೋಸಲ್ಸ್‌ನ್ನು ಜಾರಿಗೆ ಕೊಡುತ್ತೀರಾ?

ಶ್ರೀ ಎಸ್.ಎಂ. ಯಾಹ್ಯಾ : ಯಾವ ಒಂದು ಹೊಸ ಪ್ರಪೋಸಲ್ ಇದೆ, ಅದು ಸರ್ಕಾರದ ಮುಂದೆ ಇರುವುದರಿಂದ, ಅದನ್ನು ಆದಷ್ಟು ಬೇಗ ಮಾಡುವ ರೀತಿಯಲ್ಲಿ ಆ ಪ್ರಪೋಸಲ್ ಅಕ್ಸೆಪ್ಟ್ ಆದರೆ ಆಗಬಹುದು. ಇಲ್ಲದಿದ್ದರೆ ಆ ರೀತಿ ಅವಶ್ಯಕತೆ ಇದ್ದರೆ ಪುನಃ ಸರ್ಕಾರ ಇದನ್ನು ಮರುಪರಿಶೀಲನೆ ಮಾಡುತ್ತದೆ.

ಖಾಸಗಿ ವೈದ್ಯಕೀಯ ಕಾಲೇಜುಗಳು

373 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇರುವ ಅಧಿಕೃತ ಖಾಸಗಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಯಾವ ಯಾವ ಶಿಕ್ಷಣ ಸಂಸ್ಥೆಗಳವರು ಇವುಗಳನ್ನು ನಡೆಸುತ್ತಿದ್ದಾರೆ ಮತ್ತು ಯಾವ ವರ್ಷದಿಂದ ಸರ್ಕಾರ ಅವುಗಳಿಗೆ ಮನ್ನಣೆ ನೀಡಿರುವರು (ಪೂರ್ಣ ವಿವರಗಳನ್ನು ಒದಗಿಸುವುದು)

ಇ) ಈ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿ ಹಾಗೂ ಇತರ ನಿರ್ವಹಣಾ ಕ್ರಮತೆಯು ಯಾವ ರೀತಿಯಲ್ಲಿದೆ?

ಈ) ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಕಲಿಯ ಬಯಸುವ ವಿದ್ಯಾರ್ಥಿಯೊಬ್ಬನಿಗೆ ಪದವಿ ಮುಗಿಸಲು ಆಗುವ ಅಧಿಕೃತ ಖರ್ಚು ಎಷ್ಟು? ಅಧಿಕೃತವಾಗಿ ಶಿಕ್ಷಣ ಸಂಸ್ಥೆಗೆ ವಿದ್ಯಾರ್ಥಿಯಿಂದ ಸಂದಾಯವಾಗುವ ಮೊತ್ತ ಎಷ್ಟು?

ಉ) ಖಾಸಗಿ ಕಾಲೇಜುಗಳಲ್ಲಿ ವೈದ್ಯಕೀಯ ಶಿಕ್ಷಣ ಬಯಸುವ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗಧಿಪಡಿಸಿರುವ ಸುಲ್ಕ ಇತ್ಯಾದಿಗಳು ಎಷ್ಟು?

ಶ್ರೀ ಬಿ. ಶಿವಣ್ಣ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) 15 (ಹದಿನೈದು)

ಆ) ಪಟ್ಟಿ ಲಗತ್ತಿಸಲಾಗಿದೆ

ಇ) ಸ್ಥಳೀಯ ತನಿಖಾ ವರದಿಯ ಆಧಾರದಂತೆ ಎಲ್ಲಾ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯು ಸುವ್ಯವಸ್ಥೆಯಲ್ಲಿದೆ.

ಈ)1993-94ನೇ ಸಾಲಿನಲ್ಲಿ ಸರ್ಕಾರ ನೇಮಿಸಿದ ಶುಲ್ಕ ಸಮಿತಿಯ ವರದಿ ಪ್ರಕಾರ ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಪೂರ್ಣ ಕೋರ್ಟಿಗೆ ತಗಲುವ ಅಂದಾಜು ವೆಚ್ಚ ಕನಿಷ್ಠ ರೂ. 2.00 ಲಕ್ಷಗಳು. ಆದರೆ ನೀಡಿರುವ ಸೌಲಭ್ಯಗಳ ಆಧಾರದ ಪ್ರಕಾರ ಒಂದು ಕಾಲೇಜು ಮತ್ತು ಬೇರೊಂದು ಕಾಲೇಜಿನಲ್ಲಿ ವ್ಯತ್ಯಾಸ ಆಗುವ ಸಂಭವವಿದೆ.

ಪ್ರತಿಯೊಬ್ಬ ವಿದ್ಯಾರ್ಥಿಯಿಂದ ವಾರ್ಷಿಕವಾಗಿ ಸಂದಾಯವಾಗುವ ಹಣದ ಮೊತ್ತ:

ಉಚಿತ ಸೀಟುಗಳು	ರೂ. 8.000
ಪೇಮೆಂಟ್ ಸೀಟುಗಳು	ರೂ. 1,00,000 (ಸರಾಸರಿ)
ಎನ್‌ಆರ್‌ಐ ಸೀಟುಗಳು	50,000 ಡಾಲರ್‌ಗಳು (ಪೂರ್ಣ ಕೋರ್ಸಿಗೆ)
ಉಚಿತ ಸೀಟುಗಳು	ರೂ.8,000 ವಾರ್ಷಿಕವಾಗಿ
ಎನ್‌ಆರ್‌ಐ ಸೀಟುಗಳು	50,000 ಡಾಲರ್‌ಗಳು (ಪೂರ್ಣ ಕೋರ್ಸಿಗೆ)

ಪೇಮೆಂಟ್ ಸೀಟುಗಳು :

1) ಸ್ವಂತ ಆಸ್ಪತ್ರೆ ಹೊಂದಿರುವ ವೈದ್ಯಕೀಯ ಕಾಲೇಜುಗಳಿಗೆ ವಾರ್ಷಿಕವಾಗಿ ರೂ. 1,10,000
2) ಸ್ವಂತ ಆಸ್ಪತ್ರೆ ಹೊಂದಿದ್ದು ಮತ್ತು ಸರ್ಕಾರಿ ಆಸ್ಪತ್ರೆಯನ್ನು ಅವಲಂಬಿಸಿದ ವೈದ್ಯಕೀಯ ಕಾಲೇಜುಗಳಿಗೆ ವಾರ್ಷಿಕವಾಗಿ ರೂ. 1,00,000
3) ಸಂಪೂರ್ಣವಾಗಿ ಸರ್ಕಾರಿ ಆಸ್ಪತ್ರೆಯನ್ನು ಅವಲಂಬಿಸಿರುವ ವೈದ್ಯಕೀಯ ಕಾಲೇಜುಗಳಿಗೆ ವಾರ್ಷಿಕವಾಗಿ ರೂ. 90,000

ಶಿಕ್ಷಣ ಸಂಸ್ಥೆಗಳು ವೈದ್ಯಕೀಯ ಕಾಲೇಜುಗಳನ್ನು ನಡೆಸುತ್ತಿರುವ ಬಗ್ಗೆ ಹಾಗೂ ಇದನ್ನು ನಡೆಸುತ್ತಿರುವ ವರ್ಷಗಳ ವಿವರಗಳನ್ನು ಈ ಕೆಳಗೆ ನಮೂದಿಸಿದಂತಿದೆ.

	ವೈದ್ಯಕೀಯ ಕಾಲೇಜುಗಳ ಹೆಸರು	ನಡೆಸುತ್ತಿರುವ ಸಂಸ್ಥೆ	ಯಾವವರ್ಷದಿಂದ ನಡೆಸುತ್ತಿದೆ.
1.	ಸೆಂಟ್‌ಜಾನ್ಸ್ ವೈದ್ಯಕೀಯ ಮಹಾವಿದ್ಯಾಲಯ ಬೆಂಗಳೂರು	ಸಿ.ಬಿ.ಸಿ.ಐ. ಟ್ರಸ್ಟ್	1963
2.	ಜೆ.ಎನ್. ಮೆಡಿಕಲ್ ಕಾಲೇಜು ಬೆಳಗಾಂ	ಕೆ.ಎಲ್.ಇ.ಎಜುಕೇಷನ್ ಸೊಸೈಟಿ	1963
3.	ಎಂ.ಆರ್. ವೈದ್ಯಕೀಯ ಮಹಾವಿದ್ಯಾಲಯ, ಗುಲ್ಬರ್ಗಾ	ಹೈದ್ರಾಬಾದ್ ಕರ್ನಾಟಕ ಎಜುಕೇಷನ್	1963
4.	ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯ ದಾವಣಗೆರೆ	ಬಾಪೂಜಿ ಎಜುಕೇಷನ್ ಟ್ರಸ್ಟ್	1965
5.	ಎಂ.ಎಸ್. ರಾಮಯ್ಯ ವೈದ್ಯಕೀಯ ಮಹಾವಿದ್ಯಾಲಯ ಬೆಂಗಳೂರು	ಗೋಕುಲ ಎಜುಕೇಷನ್ ಟ್ರಸ್ಟ್	1979
6.	ಕೆಂಪೇಗೌಡ ವೈದ್ಯಕೀಯ ಮಹಾವಿದ್ಯಾಲಯ ಬೆಂಗಳೂರು	ಒಕ್ಕಲಿಗರ ಸಂಘ ಟ್ರಸ್ಟ್	1980
7.	ಡಾ:ಬಿ.ಆರ್. ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ ಬೆಂಗಳೂರು	ಆನಂದ ಸೋಸಿಯಲ್ ಅಂಡ್ ಕಲ್ಚರಲ್ ಎಜುಕೇಷನ್ ಟ್ರಸ್ಟ್	1981
8.	ಅಲ್-ಅಮೀನ್ ಮೆಡಿಕಲ್ ಕಾಲೇಜು ಬಿಜಾಪುರ	ಅಲ್ ಅಮೀನ್ ಚಾರಿಟಬಲ್ ಟ್ರಸ್ಟ್	1984
9.	ಜೆ.ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ ಮೈಸೂರು	ಜೆ.ಎಸ್.ಎಸ್. ವಿದ್ಯಾಪೀಠ	1984
10.	ಆದಿ ಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯ ಬೆಳ್ಳೂರು	ಆದಿಚುಂಚನಗಿರಿ ಎಜುಕೇಷನ್ ಟ್ರಸ್ಟ್	1985
11.	ಬಿ.ಎಲ್.ಡಿ.ಇ. ವೈದ್ಯಕೀಯ ಮಹಾವಿದ್ಯಾಲಯ ವಿಜಾಪುರ	ಬಿ.ಎಲ್.ಡಿ.ಇ.ಟ್ರಸ್ಟ್	1986
12.	ಶ್ರೀ ದೇವರಾಜ ಅರಸ್ ವೈದ್ಯಕೀಯ ಮಹಾವಿದ್ಯಾಲಯ ಕೋಲಾರ	ದೇವರಾಜ ಅರಸ್ ಎಜುಕೇಷನ್ ಟ್ರಸ್ಟ್	1986
13.	ಶ್ರೀ ಸಿದ್ದಾರ್ಥ ವೈದ್ಯಕೀಯ ಮಹಾವಿದ್ಯಾಲಯ, ತುಮಕೂರು	ಸಿದ್ದಾರ್ಥ ಎಜುಕೇಷನ್ ಟ್ರಸ್ಟ್	1988
14.	ಕಸ್ತೂರಬಾ ವೈದ್ಯಕೀಯ ಮಹಾವಿದ್ಯಾಲಯ, ಮಣಿಪಾಲ	ಡಾ. ಟಿ.ಎಂ.ಎ.ಪೈ ಫೌಂಡೇಷನ್	1953
15.	ಕಸ್ತೂರಬಾ ವೈದ್ಯಕೀಯ ಮಹಾವಿದ್ಯಾಲಯ, ಮಂಗಳೂರು	ಡಾ:ಟಿಎಂಎಪೈ ಫೌಂಡೇಶನ್	1977

ಶ್ರೀ ಕೆ. ಲಕ್ಕಣ್ಣ : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಖಾಸಗಿ ವೈದ್ಯಕೀಯ ಸಂಸ್ಥೆಗಳು ಎಷ್ಟಿವೆ ಎಂದು ಕೇಳಿದ್ದೆ. ಅದಕ್ಕೆ ಹದಿನೈದು ಎಂದು ಹೇಳಿದ್ದಾರೆ. ಈ ಸಂಸ್ಥೆಗಳ ಆರ್ಥಿಕ ವ್ಯವಸ್ಥೆ ಹೇಗಿದೆ ಎಂದರೆ, ಸುವ್ಯವಸ್ಥೆಯಲ್ಲಿವೆ ಎಂದು ಹೇಳುತ್ತಿದ್ದಾರೆ. ಯಾವುದೇ ಸಂಸ್ಥೆ ಕೂಡ ಅವರ ಹಣವನ್ನು ವಿದ್ಯಾಭ್ಯಾಸಕ್ಕೆ ಖರ್ಚುಮಾಡುತ್ತಾ ಇಲ್ಲ. ವಿದ್ಯಾರ್ಥಿಗಳ ಮುಖಾಂತರ ವಂತಿಕೆ ತೆಗೆದುಕೊಂಡೇ ಸಂಸ್ಥೆಗಳನ್ನು ನಡೆಸಬೇಕಾಗಿದೆ. ಈ ದಿಸೆಯಲ್ಲಿ ಎರಡು ವರ್ಷಗಳಿಂದ ಉಚ್ಚ ನ್ಯಾಯಾಲಯದ ತೀರ್ಪಿನಿಂದ ವಿದ್ಯಾರ್ಥಿಗಳಿಗೆ ಬಹಳ ಗೊಂದಲಮಯ ಆಗಿದೆ. ಬಹುತೇಕ ಅಂಕಗಳನ್ನು ತೆಗೆದುಕೊಂಡ ವಿದ್ಯಾರ್ಥಿಗಳು ಕೂಡ ಶುಲ್ಕವನ್ನು ಕೊಡದೆ ಪ್ರವೇಶ ತೆಗೆದುಕೊಳ್ಳುವುದಕ್ಕೆ ಹೋಗಿಲ್ಲ. ಆ ದೃಷ್ಟಿಯಿಂದ ಇವತ್ತು 10-15 ಲಿಸ್ಟ್‌ಗಳು ವೈದ್ಯಕೀಯ ಇಲಾಖೆಯಿಂದ ಆಗುತ್ತಾ ಇವೆ. ಇದಕ್ಕೆ ಒಂದು ಕಾನೂನನ್ನು ತಂದು ಈ ವಿದ್ಯಾಸಂಸ್ಥೆಗಳಿಗೆ ಇಷ್ಟು ಸೀಟುಗಳು ಅಂತ ಕೊಟ್ಟು, ಮೆರಿಟ್‌ಗೆ ಇಷ್ಟು ಕೊಡಬೇಕು ಎಂದು ಮಾಡಿದರೆ ಇದು ವ್ಯವಸ್ಥಿತವಾಗಿ ನಡೆಯುತ್ತದೆ. ಇಲ್ಲದಿದ್ದರೆ ಬಹುತೇಕ ಅಂಕಗಳನ್ನು ತೆಗೆದುಕೊಂಡ ವಿದ್ಯಾರ್ಥಿಗಳೇ ಪ್ರವೇಶ ತೆಗೆದುಕೊಳ್ಳುವುದಕ್ಕೆ ಹೋಗಿಲ್ಲ. ಇದನ್ನು ನಾವು ನೋಡುತ್ತಿದ್ದೇವೆ. ಹಿಂದೆ ಒಂದು-ಎರಡು ಲಿಸ್ಟ್‌ಗಳಲ್ಲಿ ಮುಗಿಯುತ್ತಿದ್ದುದು ಈಗ 15 ಲಿಸ್ಟ್‌ಗಳವರೆಗೂ ಹೋಗುತ್ತಿದೆ. ಇದನ್ನು ಸರಿಪಡಿಸಬೇಕಾಗಿದೆ. ಏಕೆಂದರೆ ಇದರಿಂದ ವಿದ್ಯಾರ್ಥಿಗಳಿಗೂ ತೊಂದರೆಯಾಗಿದೆ, ವಿದ್ಯಾ ಸಂಸ್ಥೆಗಳಿಗೂ ತೊಂದರೆಯಾಗಿದೆ. ಆದ್ದರಿಂದ ಈ ಶಾಸನಸಭೆಯಲ್ಲಿ ಅದಕ್ಕೆ ಒಂದು ಕಾನೂನನ್ನು ತಂದು ಆ ವಿದ್ಯಾಸಂಸ್ಥೆಗಳಿಗೆ ಇಷ್ಟು ಸೀಟು ಎಂದು ಕೊಟ್ಟು ಮತ್ತು ಮೆರಿಟ್ ಮೇಲೆ ಇಷ್ಟು ಸೀಟುಗಳನ್ನು ಸರ್ಕಾರ ಹಂಚುವ ವ್ಯವಸ್ಥೆ ಮಾಡಿದರೆ ಒಳ್ಳೆಯದು ಎಂದು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಹೇಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಬಿ. ಶಿವಣ್ಣ : ಅಧ್ಯಕ್ಷರೇ, ಸಲಹೆ ಒಳ್ಳೆಯದು. ಇದನ್ನು ಪರಿಶೀಲನೆ ಮಾಡುತ್ತೇವೆ.

ಮುಳಬಾಗಿಲಿನ ಟೌನ್‌ನಲ್ಲಿ ಗುರುಭವನದ ನಿರ್ಮಾಣ

370 - ಶ್ರೀ ಎಮ್. ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳಬಾಗಿಲಿನ ಟೌನ್‌ನಲ್ಲಿ ಉಪಾಧ್ಯಾಯರಿಗೋಸ್ಕರ ಮಾಡಿರುವ ಗುರುಭವನ ಕಟ್ಟಲು ಸರ್ಕಾರದವರು ಎಷ್ಟುಹಣ ಮಂಜೂರು ಮಾಡಿರುವುದು? ಮಾಡಿದ್ದಲ್ಲಿ ಎಂದು ಮಂಜೂರು ಮಾಡಲಾಗಿದೆ.

ಆ) ಕಟ್ಟಡ ಪ್ರಾರಂಭವಾಗದಿರಲು ಕಾರಣಗಳೇನು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಸರ್ಕಾರ ಹಣ ಮಂಜೂರು ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಇದಕ್ಕೆ ಹಣ ಸ್ಯಾಂಕ್ಷನ್ ಮಾಡಿದ್ದಾರೆ. ನಾನು ತಂದು ಪ್ರೂಫ್ ತೋರಿಸುತ್ತೇನೆ. ಅಂತಹ ಸಮಯದಲ್ಲಿ ಈಗ ಏನು ಉತ್ತರ ಕೊಟ್ಟಿದ್ದಾರೆ, ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದು ನನಗೆ ಬೇಕು.

ಶ್ರೀ ಎಸ್.ಎಂ. ಯಾಹ್ಯಾ : ಈ ಗುರುಭವನಗಳನ್ನು ಮಾಡುವಂಥ ಪ್ರೊಸೀಜರ್‌ಗಳು ಇವೆ. ಈ ಹಣ ಟೀಚರ್ಸ್ ಫಂಡ್‌ನಿಂದಲೇ ಬರುತ್ತದೆ. ಮೊದಲು 40 ಪರ್ಸೆಂಟ್

ಎ.ಇ.ಒ. ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇದೆ. ಆ ಸಮಿತಿಯವರು ಪ್ರಪೋಸಲ್ ಕಳುಹಿಸಬೇಕು. ಶೇಕಡಾ 60ರಷ್ಟು ನಾವು ಈ ಟೀಚರ್ಸ್ ಫಂಡ್‌ನಿಂದ ಕೊಡುತ್ತೇವೆ. ಇದು ಸರ್ಕಾರದ ಹಣ ಅಲ್ಲ, ಟೀಚರ್ಸ್ ಫಂಡ್‌ನಿಂದ ಕೊಡುವಂಥ ಹಣ. ಆಮೇಲೆ ಶೇಕಡಾ 40ರಷ್ಟು ಹಣ ಸಾರ್ವಜನಿಕರಿಂದ ಬರಬೇಕಾಗಿದೆ. ಸಾರ್ವಜನಿಕರಿಂದ ಬಂದ ಹಣ ಖರ್ಚಾದ ನಂತರ ಎರಡೂವರೆ ಲಕ್ಷದವರೆಗೆ ಟೀಚರ್ಸ್ ಫಂಡ್‌ನಿಂದ ಕೊಡುವಂಥ ಸ್ಕೀಮ್ ಇದು. ಈ ಸ್ಕೀಮ್ ಪ್ರಕಾರ ಈವರೆಗೂ ಪ್ರಪೋಸಲ್ ಬಂದಿಲ್ಲ. ಪ್ರಪೋಸಲ್ ಬಂದರೆ, ಇವತ್ತು ಸಹ ನಮ್ಮಲ್ಲಿ ಏಳು ಕೋಟಿ ರೂಪಾಯಿ ಹಣ ಈ ಫಂಡ್‌ನಲ್ಲಿ ಇರುವುದರಿಂದ, ಆ ಫಂಡ್‌ನಿಂದ ನಾವು ಕೊಡುತ್ತೇವೆ. ಆದರೆ ಪ್ರೊಸೀಜರ್ ಸರಿಯಾಗಿ ಇದುವರೆಗೂ ಆಗಲಿಲ್ಲ. ಅದರ ಪ್ರಪೋಸಲ್ ಸಹ ಸರ್ಕಾರದ ಎದುರು ಇಲ್ಲ.

ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳು

632 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಎಷ್ಟು?

ಆ) ಸರಕಾರದಿಂದ ಎಷ್ಟು ಹುದ್ದೆ ಯಾವ ಆಧಾರದ ಮೇಲೆ ಭರ್ತಿ ಮಾಡಲಾಗಿದೆ?

ಇ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಶಿಕ್ಷಕರ ಹುದ್ದೆಗಳು ಖಾಲಿ ಇವೆ? (ತಾಲ್ಲೂಕುವಾರು ಮಾಹಿತಿ ನೀಡುವುದು)

ಈ) ಶಿಗ್ಗಾಂವ ಮತ್ತು ಸವಣೂರ ತಾಲ್ಲೂಕುಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ?

ಉ) ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) 3608 ಹುದ್ದೆಗಳು

ಆ) ದಿನಾಂಕ 31-5-94ರ ವರೆಗೆ ಖಾಲಿ ಇದ್ದ 15,323ಹುದ್ದೆಗಳನ್ನು ಅಭ್ಯರ್ಥಿಗಳ ವಿದ್ಯಾರ್ಹತೆ ಹಾಗೂ ಮೀಸಲಾತಿಗೆ ಅನುಗುಣವಾಗಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರುಗಳು ಪಡೆದು ಆಯ್ಕೆ ಮಾಡಿದ್ದಾರೆ.

ಇ) ಧಾರವಾಡ ಜಿಲ್ಲೆಯಲ್ಲಿ ಪ್ರಸ್ತುತ 276ಹುದ್ದೆಗಳು ಖಾಲಿ ಇವೆ. ತಾಲ್ಲೂಕುವಾರು ವಿವರ ಹೀಗಿದೆ.

ರಾಣೆಬೆನ್ನೂರು	37	ಹುಬ್ಬಳ್ಳಿ	02
ರೋಣ	06	ಕಲಘಟಗಿ	16
ಸವಣೂರು	21	ಮಾದರಗಿ	13
ಬ್ಯಾಡಗಿ	22	ನರಗುಂದ	04
ಧಾರವಾಡ	05	ನವಲಗುಂದ	07
ಗದಗ	09	ಶಿಗ್ಗಾಂವ	22
ಹಾನಗಲ್	37	ಶಿರಾಡಿ	07
ಹಾವೇರಿ	22	ಹೊನ್ನಾಳ	13
ಹಿರೇಕೆರೂರು	33		

ಈ) ಶಿಗ್ಗಾಂವ - 22

ಸವಣೂರು - 21

ಉ) ಪ್ರಸ್ತುತ ಸಾಮಾನ್ಯ ನೇಮಕಾತಿ ನಿಯಮಾವಳಿಗಳ ಪ್ರಕಾರ ಆಯ್ಕೆಯಾಗದ ಅಭ್ಯರ್ಥಿಗಳ ಶೇಕಡ 2ರಷ್ಟು ಹೆಚ್ಚುವರಿ ಪಟ್ಟಿಯನ್ನು ತಯಾರಿಸಲಾಗಿದ್ದು, ಅಂತಹ ಅಭ್ಯರ್ಥಿಗಳಿಂದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಹಾಗೂ ಜಿಲ್ಲೆಗೆ 400 ಹೆಚ್ಚುವರಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಮಂಜೂರಾಗಿದ್ದು ಅವುಗಳನ್ನೂ ಸಹ ಸದ್ಯದಲ್ಲಿಯೇ ಭರ್ತಿಮಾಡಲಾಗುವುದು.

ಶ್ರೀ ಮಂಜುನಾಥ ಸಿ. ಕುನ್ನೂರು : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಎಷ್ಟು ಎಂದು ಕೇಳಿದ್ದಕ್ಕೆ ಉತ್ತರದಲ್ಲಿ 3608 ಎಂದು ಹೇಳಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ ಶಿಕ್ಷಕರ ಹುದ್ದೆಗಳು ಖಾಲಿ ಇರುವುದು 276 ಎಂದು ಹೇಳಿದ್ದಾರೆ; ತಾಲ್ಲೂಕುವಾರು ಮಾಹಿತಿ ಕೇಳಿದಾಗ ನನ್ನ ಮತಕ್ಷೇತ್ರದಲ್ಲಿ 43 ಹುದ್ದೆಗಳು ಖಾಲಿ ಇವೆ.ಈ ಹುದ್ದೆಗಳ ಅಂಕಿಸಂಖ್ಯೆಗಳನ್ನು ನೋಡಿದಾಗ ಇನ್ನೂ ಸುಮಾರು ನಾನು 19.8.94ರಂದು ಇಲಾಖೆಯ ಅಧಿಕಾರಿಗಳನ್ನು ಮತ್ತು ಎ.ಇ.ಒ.ಗಳನ್ನು ಕೇಳಿದೆ. ಸುಮಾರು ನೂರರ ಮೇಲ್ಪಟ್ಟು ಹುದ್ದೆಗಳು ಖಾಲಿ ಇವೆಯೆಂದು ತಿಳಿದುಬಂತು. ನಾನು ಪ್ರತಿಯೊಂದು ಹಳ್ಳಿಗೆ ಹೋದಾಗಲೂ ಮೊದಲು ಶಿಕ್ಷಕರನ್ನು ನಮಗೆ ಕೊಡಿ, ಆಮೇಲೆ ಸಾಕ್ಷರತಾ ಆಂದೋಲನದಂಥ ಕಾರ್ಯಕ್ರಮಗಳನ್ನು ಮಾಡಿರಿ ಎಂಬ ಕೂಗು ಕೇಳಿಬಂತು? ಆದಕಾರಣ ಕೂಡಲೇ ಹುದ್ದೆಗಳನ್ನು ಭರ್ತಿಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ : ಎಲ್ಲೆಲ್ಲಿ ಅಪ್ರೂವ್ಡ್ ಪೋಸ್ಟ್‌ಗಳು ಇವೆ, ಅಲ್ಲೆಲ್ಲ ಫಿಲ್‌ಅಫ್ ಮಾಡಬೇಕೆಂಬ ಸರ್ಕಾರದ ನೀತಿ ಪ್ರಕಾರ, ಎಲ್ಲಿ ಅಪ್ರೂವ್ಡ್ ವೇಕೆಂಟ್ ಪೋಸ್ಟ್ ಇವೆ, ನಾವು ಅಲ್ಲಿ ಫಿಲ್‌ಅಪ್ ಮಾಡಿದ್ದೇವೆ. 1987ರಲ್ಲಿ ಎಕಾನಮಿ ಆರ್ಡರ್ ಇತ್ತು.ಇದನ್ನು ನಾವು ಕಳೆದವರ್ಷ ತೆಗೆದುಹಾಕಿದ್ದರಿಂದ, ಬೇಕಾದಷ್ಟು ವೇಕೆಂಟ್ ಪೋಸ್ಟ್ಸ್ ಇದ್ದವು. ಈವರೆಗೆ ಆ ಎಲ್ಲ ವೇಕೆಂಟ್ ಟೀಚರ್ಸ್ ಪೋಸ್ಟ್‌ಗಳನ್ನು ನಾವು ಈ ಒಂದು ಹೊಸ ನೀತಿಯ ಪ್ರಕಾರ ಫಿಲ್‌ಅಪ್ ಮಾಡಿದ್ದೇವೆ. ಆದರೆ ಕೆಲವು ಅಡಿಶನಲ್ ಪೋಸ್ಟ್‌ಗಳು ಇವೆ. ಆ ಅಡಿಶನಲ್ ಪೋಸ್ಟ್‌ಗಳನ್ನು ವೇಕೆಂಟ್ ಪೋಸ್ಟ್ಸ್ ಎಂದು ಹೇಳುವುದಕ್ಕೆ ಆಗುವುದಿಲ್ಲ. ಆದರೆ ಅಪ್ರೂವ್ಡ್ ವೇಕೆಂಟ್ ಪೋಸ್ಟ್ ಎಲ್ಲಾದರೂ ಇದ್ದರೆ ನಾವು ಬೇಗನೆ ಫಿಲ್‌ಅಪ್ ಮಾಡುತ್ತೇವೆ. ಈವರೆಗೆ ಅಂತಹ ಎಲ್ಲ ಪೋಸ್ಟ್‌ಗಳನ್ನು ಫಿಲ್‌ಅಫ್ ಮಾಡಿದ್ದೇವೆ.

ಶ್ರೀ ಮಂಜುನಾಥ ಸಿ. ಕುನ್ನೂರು : ಸನ್ಮಾನ್ಯ ಅಧ್ಯಕ್ಷರೇ, ನಾನು ಅಡಿಶನಲ್ ಅಪ್ರೂವ್ಡ್ ಲಿಸ್ಟ್ ಬಗ್ಗೆ ಕೇಳುತ್ತಿಲ್ಲ. ನಮ್ಮ ಮತಕ್ಷೇತ್ರದಲ್ಲಿ ಎಷ್ಟು ಮಂಜೂರಾದ ಶಿಕ್ಷಕರ ಹುದ್ದೆಗಳು ಇವೆ, ಅವುಗಳು ಖಾಲಿ ಇವೆ, ತಮ್ಮ ಉತ್ತರದಲ್ಲೇ 43 ಹುದ್ದೆಗಳು ಖಾಲಿ ಇವೆಯೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಅದು 43 ಅಲ್ಲ, ಇನ್ನೂ ಸುಮಾರು ನೂರು ಹುದ್ದೆಗಳು ಖಾಲಿ ಇವೆ. ಅದನ್ನು ತಾವು ಪರಿಶೀಲಿಸಿ ಆದಷ್ಟು ಬೇಗನೆ ಕೊನೆಯಪಕ್ಷ ಮಂಜೂರಾದ ಶಿಕ್ಷಕರ ಹುದ್ದೆಗಳನ್ನಾದರೂ ತುಂಬಿಸತಕ್ಕಂಥ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖಾಂತರ ಅವರನ್ನು ಕೇಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ : ಖಂಡಿತವಾಗಿಯೂ ಮಾಡುತ್ತೇನೆ.

ಶಿರಾ ತಾಲ್ಲೂಕು ತರೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ

633 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು ತರೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಇದುವರೆಗೆ ಮಂಜೂರಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಗ್ಗೆ ಸಾರ್ವಜನಿಕರು ಅನೇಕ ಮನವಿಗಳನ್ನು ಸರ್ಕಾರಕ್ಕೆ ಕೊಟ್ಟಿದ್ದರೂ ಸರಕಾರದವರು ಕ್ರಮ ಕೈಗೊಳ್ಳದಿರಲು ಕಾರಣವೇನು?

ಇ) ಸರ್ಕಾರದವರು ಮನವಿಯನ್ನು ಪುರಸ್ಕರಿಸಲು ಶೀಘ್ರ ಕ್ರಮವನ್ನು ಕೈಗೊಳ್ಳುವುದೇ?

ಡಾ॥ ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೌದು

ಆ) ಪರಿಶೀಲನೆಯಲ್ಲಿದೆ

ಇ) ಪರಿಶೀಲಿಸಲಾಗುವುದು

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ತರೂರು ಗ್ರಾಮದಲ್ಲಿ ಒಂದು ಆಸ್ಪತ್ರೆಯನ್ನು ಮಂಜೂರು ಮಾಡುವ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಸರ್ಕಾರದ ಉತ್ತರ 'ಹೌದು' ಪರಿಶೀಲನೆಯಲ್ಲಿದೆ. ಮತ್ತು 'ಪರಿಶೀಲಿಸಲಾಗುವುದು' ಎಂದಿದೆ. ಒಂದೊಂದು ಸಾರಿ ಪ್ರಶ್ನೆಗಳಿಗೆ ಕೊಡುವ ಉತ್ತರಗಳನ್ನು ನೋಡಿದಾಗ ನಗಬೇಕೋ, ಅಳಬೇಕೋ ಎನ್ನುವ ಅನುಮಾನ ನಮಗೆ ಬರುತ್ತದೆ. ಆದರೆ ಈ ಉತ್ತರವನ್ನು ನೋಡಿದಾಗ ನಾನು ನಗುವುದಿಲ್ಲ ಅಳುತ್ತಾನೂ ಇಲ್ಲ. ಸ್ವಾಮಿ, ದಯಮಾಡಿ ಕೇಳಿ, ಇದು ಎಷ್ಟನೇ ಸಾರಿ, ಈ ಆಶ್ವಾಸನೆಯನ್ನು, ಈ ರೀತಿ ಉತ್ತರವನ್ನು ಕೊಡುತ್ತಾ ಇರತಕ್ಕದ್ದು. ಎರಡನೆಯದು, ಆಸ್ಪತ್ರೆಯನ್ನು ಮಂಜೂರು ಮಾಡುವ ಮುನ್ನ ಪೂರ್ವಭಾವಿಯಾಗಿ ಜನಸಂಖ್ಯೆಯ ಆಧಾರವನ್ನು, ಎಲ್ಲ ಅಂಕಿಸಂಖ್ಯೆಗಳನ್ನು ಗಣನೆಯಲ್ಲಿ ಇಟ್ಟುಕೊಂಡೇ ಆಸ್ಪತ್ರೆಯನ್ನು ಮಂಜೂರು ಮಾಡಬೇಕೆಂದು ತೀರ್ಮಾನ ಮಾಡಿದನಂತರ ಸಾರ್ವಜನಿಕರಿಂದ ವಂತಿಕೆಯನ್ನು ಸ್ವೀಕಾರ ಮಾಡುತ್ತಾ ಇರತಥಾದ್ದು. ಆ ಎಲ್ಲ ಕ್ರಮಗಳನ್ನು ಅನುಸರಿಸಿ, ಹಣವನ್ನು ತೆಗೆದುಕೊಂಡು, ಜಮೀನು ಇಟ್ಟುಕೊಂಡು ಅದಕ್ಕೆ ಒಂದು ಖಾಲಿ ಕಟ್ಟಡವನ್ನು ಹನ್ನೊಂದು ವರ್ಷಗಳಿಂದ ಬಾಕಿ ಇಟ್ಟುಕೊಂಡಿದ್ದು, ಇದರ ಬಗ್ಗೆ ನಾನು ಅನೇಕ ಸಲ ಮನವಿಯನ್ನು ಕೊಟ್ಟಿದ್ದೇನೆ. ಆದರೆ ಇಲ್ಲಿಯವರೆಗೂ ಅದು ಬಂದಿಲ್ಲ. ಸರ್ಕಾರದ ನಿಯಮ ಏನು ಎಂದು ನನಗೆ ಅರ್ಥವಾಗುತ್ತಾ ಇಲ್ಲ. ಪೂರ್ವಭಾವಿಯಾಗಿ ಎಲ್ಲಾ ಕ್ರಮಗಳನ್ನು ಅನುಸರಿಸಿಯೂ ಕೂಡ ಇದುವರೆಗೆ ಆಸ್ಪತ್ರೆಯನ್ನು ಮಂಜೂರು ಮಾಡದೆ ಇರುವುದಕ್ಕೆ ಕಾರಣ ಏನು? ದಯಮಾಡಿ ಅದನ್ನು ತಿಳಿಸಬೇಕು.

ಡಾ॥ ಎ.ಬಿ. ಮಲಕರೆಡ್ಡಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಜಯಚಂದ್ರ ಅವರು ಈ ವಿಷಯದಲ್ಲಿ ನನ್ನನ್ನು ಎರಡು-ಮೂರು ಸಲ ಭೇಟಿ ಕೂಡ ಆಗಿದ್ದರು. ನಮ್ಮ ಅಧಿಕಾರಿಗಳ ಜೊತೆ ಇದರ ಬಗ್ಗೆ ನಾನು ಸಮಾಲೋಚನೆಯನ್ನು ಕೂಡ ಮಾಡಿದ್ದೇನೆ. ಯಾವ ರೀತಿ ಮಾನ್ಯ ಸದಸ್ಯರು ತಮ್ಮ ಬೇಡಿಕೆಯನ್ನು ಇಟ್ಟಿದ್ದಾರೆ, ಅದೇ ರೀತಿ 224 ಸದಸ್ಯರು ಕೂಡ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಖಚಿತವಾಗಿ, ಅವಶ್ಯಕವಾಗಿ ಬೇಕಾಗುತ್ತದೆ ಎಂದು ಅವರೆಲ್ಲರೂ ಕೂಡ ಮನವಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಅದಕ್ಕಾಗಿ ಸರ್ಕಾರದವರು ಕೆಲವು ನಾರ್ಮ್ಸ್‌ಗಳನ್ನು ಹಾಕಿದ್ದೇವೆ. ಕೆಲವು ಶರತ್ತುಗಳಿವೆ. ಆ ಷರತ್ತುಗಳಿಗೆ ಒಳಪಟ್ಟಿಯೇ ನಾವು ಕೊಡಬೇಕಾಗುತ್ತದೆ. ಅದರ ಪ್ರಕಾರ ಮೂವತ್ತು ಸಾವಿರ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಕೊಡತಕ್ಕಂಥಾದ್ದು ಆದರೆ ಈ ತರೂರು ಗ್ರಾಮದ ಪಕ್ಕದಲ್ಲಿ ದೊಡ್ಡ ಅಗ್ರಹಾರದಲ್ಲಿ ಸುಮಾರು ಏಳು ಕಿಲೋ ಮೀಟರ್‌ನಲ್ಲಿ ಬಹಳ ವರ್ಷಗಳಿಂದ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇದೆ.

ಅದು ಟಿ.ಡಿ.ಬಿ. ಇದ್ದಾಗ ಆದದ್ದು. ತರೂರು ಗ್ರಾಮಕ್ಕೆ ಇಷ್ಟು ಸಮೀಪದಲ್ಲಿ ದೊಡ್ಡ ಅಗ್ರಹಾರ ಎಂಬಲ್ಲಿ ಪ್ರೈಮರಿ ಹೆಲ್ತ್ ಸೆಂಟರ್ ಇರುವಾಗ, ಒಂದು ವೇಳೆ ನಾವು ತರೂರು ಗ್ರಾಮಕ್ಕೆ ಕೊಟ್ಟಿದ್ದೇ ಆದರೆ, ಅಗ್ರಹಾರದ ಜನಸಂಖ್ಯೆ ಕಡಿಮೆಯಾಗಿ ಬಿಡುತ್ತದೆ. ಈಗ ತರೂರು ಮತ್ತು ಅಗ್ರಹಾರಕ್ಕೆ ಕೊಟ್ಟಿದ್ದೇ ಆದರೆ ಸುಮಾರು ಅರವತ್ತು ಸಾವಿರ ಜನಸಂಖ್ಯೆ ಬೇಕು. ಮತ್ತೊಂದು ಪ್ರಶ್ನೆ ಇದೆ. ತರೂರು

ಗ್ರಾಮಕ್ಕಿಂತಲೂ ಹೆಚ್ಚು ಆದ್ಯತೆ ಮೇಲೆ ಆರೋಗ್ಯ ಸೌಲಭ್ಯವನ್ನು ಕೊಡಬೇಕಾಗಿರತಕ್ಕಂಥ ಅನೇಕ ಗ್ರಾಮಗಳು ಸರ್ಕಾರದ ಪರಿಶೀಲನೆಯಲ್ಲಿದೆ. ವಸ್ತುಸ್ಥಿತಿ ಹೀಗಿದ್ದಾಗ . ಆದರೂ ಕೂಡ ಸರ್ಕಾರ ಸಹಾನುಭೂತಿಯಿಂದ ಪರಿಶೀಲನೆ ಮಾಡಬಹುದು ಎಂಬ ಕಾರಣದಿಂದ 'ಇದನ್ನು ಪರಿಶೀಲಿಸಲಾಗಿದೆ' ಎಂಬುದಾಗಿ ಹೇಳಿದ್ದೇವೆ. ಮಾನ್ಯ ಸದಸ್ಯರಾದ ಶ್ರೀ ಜಯಚಂದ್ರ ಅವರ ಹತ್ತಿರ ಜನಸಂಖ್ಯೆಯ ಆಧಾರದಮೇಲೆ ಇನ್ನೂ ಹೆಚ್ಚಿನ ಅಂಕಿಸಂಖ್ಯೆಗಳು ಏನಾದರೂ ಇದ್ದರೆ, ಅವರು ನನ್ನ ಕೊಠಡಿಗೆ ಬಂದು ಭೇಟಿಯಾಗಲಿ. ಬಹಳ ಸಹಾನುಭೂತಿಯಿಂದ ಅದನ್ನು ಪರಿಶೀಲನೆ ಮಾಡಿ ವಿಚಾರ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಮಗೆ ಸಹಾನುಭೂತಿ, ಅನುಕಂಪ ಅವೆಲ್ಲಾ ಬೇಡ. ನಮಗೆ ಆಜ್ಞೆ ಬೇಕು. ಇದರ ಬಗ್ಗೆ ಕ್ಲಿಯರ್ ಆಗಿ ವಚನ ಕೊಡಿ. ದೊಡ್ಡ ಅಗ್ರಹಾರ ಇರತಕ್ಕಂಥಾದ್ದು ಬುಕ್ಕಾಪಟ್ಟಣ ಹೋಬಳಿಯಲ್ಲಿ, ಇದು ಇರತಕ್ಕಂಥಾದ್ದು ಕಳ್ಳಂಬೆಳ್ಳ ಹೋಬಳಿಯಲ್ಲಿ, ತರೂರಿಗೂ ದೊಡ್ಡ ಅಗ್ರಹಾರಕ್ಕೂ 16 ಕಿಲೋಮೀಟರ್ ದೂರ ಇದೆ. ನಿಮ್ಮ ನಿಯಮಗಳನ್ನು ಮೀರಿ ಒಂದೊಂದು ಕಿಲೋಮೀಟರ್ ಒಳಗೆ ಆಸ್ಪತ್ರೆಗಳನ್ನು ಕೊಟ್ಟಿರುವ ನಿದರ್ಶನಗಳು ಇಲ್ಲವೇ? ಅದರ ಬಗ್ಗೆ ಪ್ರಶ್ನೆ ಕೇಳಿ ಅದನ್ನು ಆಧಾರ ಮಾಡಿಕೊಂಡು ನಾನು ಒತ್ತಾಯ ಮಾಡುತ್ತಿಲ್ಲ. ತಾವು ಅಧಿಕಾರಿಗಳಿಂದ ಪಡೆದ ಉತ್ತರವನ್ನು ಕೊಡಬೇಡಿ. ನಾವು ಸ್ಥಳೀಯ ಜನರ ಪ್ರತಿ ನಿಧಿಗಳು, ಸ್ಥಳೀಯವಾದ ಸಮಸ್ಯೆಗಳು ನಮಗೆ ಚೆನ್ನಾಗಿ ಗೊತ್ತಿರುತ್ತವೆ. ದೊಡ್ಡ ಅಗ್ರಹಾರಕ್ಕೂ ತರೂರಿಗೆ ಯಾವುದೇ ತರಹದ ಸಂಬಂಧ ಇಲ್ಲದೇ ಇರುವುದರಿಂದ ಅಲ್ಲಿ ಅವಶ್ಯಕವಾಗಿ ಆಸ್ಪತ್ರೆ ಬೇಕಾಗಿದೆ. ಇವತ್ತು ಡಾಕ್ಟರ್ ಆಗಿರುವವರೇ ಆರೋಗ್ಯ ಸಚಿವರಾಗಿರುವುದರಿಂದ ನಿಮ್ಮಿಂದಾದರು ಈ ಕೆಲಸ ಆಗಬೇಕು. ಆದ್ದರಿಂದ ಈ ಸಾಲಿನಲ್ಲೇ ಈ ಆಸ್ಪತ್ರೆಯನ್ನು ಮಂಜೂರು ಮಾಡಿ ಕೊಡಬೇಕು. ಆದ್ದರಿಂದ ಆಸ್ಪತ್ರೆ ಮಂಜೂರಾತಿಗೆ ಆಜ್ಞೆ ಕೊಟ್ಟಿದ್ದೇನೆಂದು ಹೇಳಿದರೆ ನನಗೆ ಭಾರಿ ಸಂತೋಷವಾಗುತ್ತದೆ.

ಡಾ|| ಎ.ಬಿ. ಮಲಕರೆಡ್ಡಿ : ಮಾನ್ಯ ಅಧ್ಯಕ್ಷರೆ, ಅವರು ತರೂರಿಗೆ ಮತ್ತು ದೊಡ್ಡ ಅಗ್ರಹಾರಕ್ಕೆ ಸಂಬಂಧವಿಲ್ಲ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಅದನ್ನು ಒಂದು ಯೂನಿಟ್ ಎಂದು ಪರಿಗಣಿಸಿಯೇ ಆ ತಾಲ್ಲೂಕಿನಲ್ಲಿ ಆಸ್ಪತ್ರೆಯಲ್ಲಿ ಮಾಡಲಾಗಿದೆ. ಆದರೆ ಅವರು ಮನವಿ ಮಾಡಿರುವುದನ್ನು ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸುತ್ತದೆ.

ನಂಜನಗೂಡು ಪಟ್ಟಣದ ದಳವಾಯಿ ಶಾಲಾ ಕಟ್ಟಡ ಕೆಡವಿರುವುದು

576 - ಶ್ರೀ ಎಂ. ಮಹಾದೇವ್ (ನಂಜನಗೂಡು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಂಜನಗೂಡು ಪಟ್ಟಣದ ದಳವಾಯಿ ಶಾಲಾ ಕಟ್ಟಡ ಕೆಡವಿ ಬಹಳ ವರ್ಷವಾಗಿದ್ದು ಮಕ್ಕಳಿಗೆ ಸ್ಥಳವಿಲ್ಲದೇ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಕಟ್ಟಡ ಮಂಜೂರಾತಿಗೆ ಸರ್ಕಾರದ ಅನುಮತಿ ಕೊಟ್ಟಿದೆಯೇ?

ಇ) ಕೊಟ್ಟಿದ್ದಲ್ಲಿ ಯಾವಾಗ ಪ್ರಾರಂಭಿಸುವುದು?

ಈ) ಈ ದಳವಾಯಿ ಶಾಲೆ ಕಟ್ಟಲು ತಗಲುವ ಅಂದಾಜು ರೂಪಿಸಲಾಗಿದೆಯೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಹೌದು

ಆ) ಅಂದಾಜು ರೂ. 48.00 ಲಕ್ಷಗಳ ಅಂದಾಜುಪಟ್ಟಿ ಮತ್ತು ನಕ್ಷೆಗೆ ಸರ್ಕಾರ ಆದೇಶ ಸಂಖ್ಯೆ ಇಡಿ 303 ಯೊಸಕ 93ರಲ್ಲಿ ದಿ : 2-4-94ರಂದು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

ಇ) ಪ್ರಸ್ತುತ ಸಾಲಿನಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

ಈ) (ಆ)ರಲ್ಲಿ ತಿಳಿಸಿರುವಂತೆ.

ಶ್ರೀ ಎಂ. ಮಹದೇವ್ : ನಂಜನಗೂಡು ಟೌನ್‌ನಲ್ಲಿ ದಳವಾಯಿ ಕಟ್ಟಡ ಎಂದು ಇತ್ತು. ಸುಮಾರು 2 ಸಾವಿರ ಮಕ್ಕಳು ಅಲ್ಲಿ ಓದುತ್ತಿದ್ದರು. ಅದು ಹಳೆ ಕಟ್ಟಡ ಎಂದು ಆ ಕಟ್ಟಡವನ್ನು ಕಿತ್ತುಹಾಕಿಬಿಟ್ಟರು. ಆ ಕಟ್ಟಡವನ್ನು ಕಿತ್ತುಹಾಕಿ ಎಂಟು-ಹತ್ತು ವರ್ಷಗಳಾಯಿತು. ಆ 2 ಸಾವಿರ ಮಕ್ಕಳ ಪರಿಸ್ಥಿತಿ ಏನಾಗಿದೆ? ಇವತ್ತಿನ ದಿವಸ ಛತ್ರದಲ್ಲೋ, ದೇವಸ್ಥಾನದ ಜಗಲಿನಲ್ಲೋ, ಅಲ್ಲೋ ಇಲ್ಲೋ ಓದಿಕೊಂಡು ಇದ್ದಾರೆ. ಕಟ್ಟಡ ಕಟ್ಟಲಿಕ್ಕೆ ಸರ್ಕಾರಕ್ಕೆ ಯೋಗ್ಯತೆ ಇಲ್ಲವೆ? ಮಕ್ಕಳ ಬಗ್ಗೆ ಕಾಳಜಿ ಸರ್ಕಾರಕ್ಕೆ ಇಲ್ಲವೆ? ಎಷ್ಟು ವರ್ಷಗಳಿಂದ ಆ ಮಕ್ಕಳು ಬೀದಿಯಲ್ಲಿವೆ? ಅವರು ಎಷ್ಟು ಕಷ್ಟ ಪಡುತ್ತಿದ್ದಾರೆಂಬ ವಿಚಾರ ಸರ್ಕಾರಕ್ಕೆ ಗೊತ್ತಿದೆಯೇ? ಕಟ್ಟಡ ಕೆಡವುವಂಥ ಕಾಲದಲ್ಲಿ ಸುಮಾರು ಎಂಟು - ಹತ್ತು ಲಕ್ಷ ರೂಪಾಯಿ ಬೆಲೆ ಬಾಳುವ ಸಾಗುವಾನಿ ಮರಗಳು, ಬೀಟಾ ಮರಗಳು ಇದ್ದವು. ಆ ಮರಗಳು ಎಲ್ಲಿಗೆ ಹೋದವೆಂದು ಹೇಳಲಿಕ್ಕೆ ಸರ್ಕಾರ ಸಿದ್ಧವಿದೆಯಾ? ಇವತ್ತು ಆ ಮರಗಳು ಇವೆಯಾ? ಮತ್ತು ಮಕ್ಕಳ ಪರಿಸ್ಥಿತಿ ಏನಾಗಿದೆ? ಚುನಾವಣೆಯಾಗಿ 5 ವರ್ಷಗಳಾಯಿತು. ಮತ್ತೆ ಎಲೆಕ್ಷನ್ ಬರುತ್ತಿದೆ. ಮಕ್ಕಳ ಬಗ್ಗೆ ಕಾಳಜಿ ಇದೆಯಾ ಎಂದು ನಮ್ಮನ್ನು ಸ್ಥಳೀಯ ಜನರು ಕೇಳುತ್ತಿದ್ದಾರೆ. ಇದರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇದೆಯಾ? ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ. ಮಂಜೂರು ಮಾಡಲಾಗಿದೆಯಾ? ಕಟ್ಟಡ ಪ್ರಾರಂಭ ಮಾಡಿದ್ದಾರೆಯಾ? ಇವತ್ತೂ ಕೂಡ ಕೆಲಸ ಪ್ರಾರಂಭ ಮಾಡುವ ಹಂತದಲ್ಲಿ ಇದ್ದೇವೆಂದು ಹೇಳುತ್ತಿದ್ದಾರೆ. ಸರ್ಕಾರ ನಿದ್ದೆ ಮಾಡುತ್ತಿದೆಯಾ ಎಂದು ಜನಗಳು ನಮ್ಮನ್ನು ಕೇಳುತ್ತಿದ್ದಾರೆ. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳುತ್ತಿದ್ದೇನೆ, ಸರ್ಕಾರ ನಿದ್ದೆ ಮಾಡುತ್ತಿದೆಯಾ? ಸರ್ಕಾರಕ್ಕೆ ಕಾಳಜಿ ಇದೆಯಾ? ಸುಮ್ಮ ಸುಮ್ಮನೆ ಆಶ್ವಾಸನೆ ಕೊಟ್ಟು ನಮ್ಮನ್ನು ತಪ್ಪು ದಾರಿಗೆ ಎಳೆದು ಇವತ್ತು ನಾವು ಪಬ್ಲಿಕ್ ಮುಂದೆ ಫೇಸ್ ಮಾಡುವುದಕ್ಕಾಗುತ್ತಿಲ್ಲ. ಇವತ್ತು ಆ ಎರಡು ಸಾವಿರ ಮಕ್ಕಳು, ಛತ್ರದಲ್ಲಿ, ದೇವಸ್ಥಾನದಲ್ಲಿ, ಜಗಲಿ ಮೇಲೆ, ಮರದ ಕೆಳಗೆ ಓದುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಯಾವಾಗ ಕಟ್ಟಡ ಪ್ರಾರಂಭ ಮಾಡುತ್ತದೆ? ದುಡ್ಡು ಇದೆಯಾ? ಸುಳ್ಳು ಆಶ್ವಾಸನೆ ಕೊಟ್ಟು ನಮ್ಮನ್ನು ತಪ್ಪು ದಾರಿಗೆ ಎಳೆಯುತ್ತಿದ್ದೀರೋ?

ಶ್ರೀ ಎಸ್.ಎಂ. ಯಾಹ್ಯಾ : ಮಾನ್ಯ ಅಧ್ಯಕ್ಷರೆ, ಸುಳ್ಳು ಆಶ್ವಾಸನೆ ಕೊಡುವಂಥ ಸರ್ಕಾರ ನಮ್ಮದಲ್ಲ. ನಾವು ಕೊಟ್ಟಿರುವ ಉತ್ತರವನ್ನು ನೋಡಿಯಾದ ಮೇಲೂ ಇಷ್ಟೆಲ್ಲಾ ಪ್ರಶ್ನೆ ಕೇಳಿದರೆ ಅದು ಸರಿ ಇತ್ತು ಎಂದು ಕಾಣುತ್ತದೆ. ನನ್ನ ಉತ್ತರ ಕೇಳಿದ ಮೇಲೆ ಸರ್ಕಾರಕ್ಕೆ ಅಭಿನಂದನೆ ಕೊಡುತ್ತಾರೆಂದು ನಾನು ಭಾವಿಸುತ್ತೇನೆ. ಸರ್ಕಾರದವರು 48 ಲಕ್ಷ ರೂಪಾಯಿಯ ಹೊಸ ಕಟ್ಟಡವನ್ನು ಆ ಸ್ಕೂಲ್‌ಗೆ ಮಾಡಿ ಕೊಡಲು ಬರೀ ಆಶ್ವಾಸನೆ ಅಲ್ಲ, ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಸಹಾ ಕೊಟ್ಟಿದ್ದೇವೆ. ಇನ್ನು ಕೆಲಸವನ್ನು ಬಹಳ ಶೀಘ್ರವಾಗಿ ಪ್ರಾರಂಭ ಮಾಡುತ್ತೇವೆ.

ಶ್ರೀ ಎಂ. ಮಹದೇವ್ : ಸ್ವಾಮಿ ಈವಾಗ ತಾವು ಇದನ್ನು ಹೇಳುತ್ತಿದ್ದೀರಿ? 8-10 ವರ್ಷಗಳಿಂದ ಆ ಪರಿಸ್ಥಿತಿ ಏನಾಗಿರಬೇಕು? ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರಾ? ಕಟ್ಟಡದ ಶಂಕು ಸ್ಥಾಪನೆ ಯಾವಾಗ ಮಾಡುತ್ತೀರಾ? ಕಟ್ಟಡವನ್ನು ಯಾವಾಗ ಮುಗಿಸುತ್ತೀರಾ?

ಶ್ರೀ ಎಸ್.ಎಂ. ಯಾಹ್ಯಾ : ಇಷ್ಟು ಒಳ್ಳೆಯ ರೀತಿಯಲ್ಲಿ ತಾವು ಅಕ್ಸೆಪ್ಟ್ ಆಗುವ ಹಾಗೆ ಅದನ್ನು ಮಾಡಿಕೊಡುತ್ತೇವೆಂದು ಹೇಳಿದ್ದೇವೆ. ಅದಕ್ಕೆ ಅವರು ಒಳ್ಳೆಯ ಮಾತುಗಳನ್ನು ಹೇಳಿದರೆ ಇನ್ನೊಂದು ವಾರ ಅಥವಾ ಹತ್ತು ದಿವಸದಲ್ಲಿ

ಮಾಡಿಕೊಡುತ್ತೇವೆ. ತಾವು ಇದೇ ರೀತಿ ಮಾತನಾಡಿದರೆ ಅದು ಪುನಃ ತಡ ಆಗಿಬಿಡುತ್ತದೆ. ಇದನ್ನು ಖಂಡಿತಾ ಮಾಡಿಕೊಡುತ್ತೇವೆಂದು ಹೇಳಿದ್ದೇನೆ.

ಶ್ರೀ ಎಂ. ಮಹದೇವ್ : ಇದೇ ರೀತಿ ಮಾತನಾಡಿದರೆ ನಾವು ಮುಂದೂಡುತ್ತೇವೆಂದು ಹೆದರಿಸಿದರೆ ನಾವಂತೂ ನಿಮಗೆ ಹೆದರುವುದಿಲ್ಲ, ನಾವು ಸಾರ್ವಜನಿಕ ಹಿತ ರಕ್ಷಣೆಗೆ ಬಂದಿರತಕ್ಕಂಥವರು. ಯಾವಾಗ ಪ್ರಾರಂಭ ಮಾಡುತ್ತೀರಾ ಹೇಳಿ?

ಶ್ರೀ ಎಸ್.ಎಂ. ಯಾಹ್ಯಾ : ಒಳ್ಳೆಯ ಶಂಕು ಸ್ಥಾಪನಾ ಸಭೆಯನ್ನು ಮಾಡುತ್ತೇವೆ.

ಅಧ್ಯಕ್ಷರು : ದಿನಾಂಕ 29ನೇ ಆಗಸ್ಟ್, 1994ರ 3ನೇ ಪಟ್ಟಿಯಿಂದ ಮುಂದೂಡಲಾದ ಶ್ರೀ ಹಂಪನಗೌಡರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 50(466), ಮಾನ್ಯ ಸದಸ್ಯರು ಸಭೆಯಲ್ಲಿಲ್ಲ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಗುಬ್ಬಿ ತಾಲ್ಲೋಕು ಇಡಗೂರಿನಲ್ಲಿ ಶಾಲಾ ಕಟ್ಟಡ ನಿರ್ಮಿಸಲು ಹಣ ಮಂಜೂರಾತಿ

34 - ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಬ್ಬಿ ತಾಲ್ಲೂಕು ಇಡಗೂರಿನಲ್ಲಿ 1993-94ನೇ ಸಾಲಿನಿಂದ ಪ್ರೌಢಶಾಲೆ ಪ್ರಾರಂಭವಾಗಿದ್ದು ಸೂಕ್ತ ಕಟ್ಟಡವಿಲ್ಲದೆ ವಿವಿಧ ಸ್ಥಳಗಳಲ್ಲಿ ತರಗತಿಗಳನ್ನು ನಡೆಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಶಾಲಾ ಕಟ್ಟಡ ನಿರ್ಮಾಣಕ್ಕೆ ಗ್ರಾಮದ ಸರ್ವೆ ನಂ. 126ರ ಜಮೀನನ್ನು ಕಟ್ಟಡ ನಿರ್ಮಾಣ ಮಾಡುವಂತೆ ಅಲ್ಲಿನ ಗ್ರಾಮಸ್ಥರಿಂದ ಮನವಿಗಳೇನಾದರೂ ಬಂದಿದೆಯೇ?

ಇ) ಹಾಗಿದ್ದಲ್ಲಿ ಕಟ್ಟಡವನ್ನು ನಿರ್ಮಿಸಲು ಈ ವರ್ಷದ ಆಯವ್ಯಯದಲ್ಲಿ ಹಣ ನಿಗಧಿಗೊಳಿಸಲಾಗಿದೆಯೇ?

ಈ) ಶಾಲಾ ಕಟ್ಟಡವನ್ನು ಎಷ್ಟು ದಿನದೊಳಗಾಗಿ ಮುಗಿಸಲು ಸಮಯವನ್ನೇನಾದರೂ ನಿಗಧಿಗೊಳಿಸಲಾಗಿದೆಯೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಬಂದಿಲ್ಲ

ಇ) ನಿಗಧಿಗೊಳಿಸಲಾಗಿಲ್ಲ.

ಈ) ಉದ್ಭವಿಸುವುದಿಲ್ಲ.

ಸರ್ಕಾರಿ ಕಾಲೇಜುಗಳಲ್ಲಿ ಬೋಧಕೇತರ ಹುದ್ದೆಗಳ ಭರ್ತಿ

499 - ಶ್ರೀ ಬಿ.ಎ. ಪಾಟೀಲ್ (ಉಚ್ಚಗಾಂ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಕಾಲೇಜುಗಳಲ್ಲಿನ ಬೋಧಕೇತರ ಸಿಬ್ಬಂದಿ ನೇಮಕಾತಿಗೆ ಯಾವುದಾದರೂ ನಿರ್ಬಂಧ ಇದೆಯೇ?

ಆ) ಹಾಗಿದ್ದಲ್ಲಿ, ಈ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಕೂಲವಾಗುವಂತೆ ನಿರ್ಬಂಧವನ್ನು ಯಾವಾಗ ತೆಗೆಯಲಾಗುವುದು ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು

ಆ) ಸರ್ಕಾರಿ ಕಾಲೇಜುಗಳಲ್ಲಿನ ಬೋಧಕೇತರ ಸಿಬ್ಬಂದಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸದ್ಯಕ್ಕೆ ಸರ್ಕಾರವು ಉದ್ದೇಶಿಸಿರುವುದಿಲ್ಲ.

ಪ್ರಥಮ ದರ್ಜೆಯ ಕಾಲೇಜುಗಳಿಗೆ ಸ್ವಂತ ಕಟ್ಟಡಗಳು

372 - ಶ್ರೀ ಎ. ರುಕ್ಮಯ ಪೂಜಾರಿ (ವಿಟ್ಲ) : ಮಾನ್ಯ ಉನ್ನತ ಶಿಕ್ಷಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1993-94ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ ? ಇವುಗಳಿಗೆ ಸ್ವಂತ ಕಟ್ಟಡಗಳನ್ನು ಒದಗಿಸಲಾಗಿದೆಯೇ ?

ಆ) ವಿಟ್ಲ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡ ಇಲ್ಲದೇ ಇರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಬಂದಿದ್ದರೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಮತ್ತು ವಕ್ಫ್ ಸಚಿವರು) :

ಅ) 1993-94ರಲ್ಲಿ ಪ್ರಾರಂಭಿಸಲಾದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು 7. ಇವುಗಳಿಗೊಂದಕ್ಕೂ ಸ್ವಂತ ಕಟ್ಟಡ ಒದಗಿಸಿರುವುದಿಲ್ಲ.

ಆ) ಹೌದು

ಇ) ಆಯವ್ಯಯದ ಕೊರತೆ ಇರುವ ಕಾರಣ ಈ ವರ್ಷ ಇದನ್ನು ತೆಗೆದುಕೊಂಡಿರುವುದಿಲ್ಲ. ಆರ್ಥಿಕ ಅನುಕೂಲತೆಗನುಗುಣವಾಗಿ ಬರುವ ವರ್ಷಗಳಲ್ಲಿ ಈ ಕಾಮಗಾರಿ ಕೈಗೊಳ್ಳುವ ಸಾಧ್ಯಾಸಾಧ್ಯತೆ ಬಗ್ಗೆ ಪರಿಶೀಲಿಸಲಾಗುವುದು.

ಆನೆಗಳ ಹಾವಳಿ

568 - ಪ್ರೊ. ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸತತವಾಗಿ ಹೆಚ್ಚುತ್ತಿರುವ ಆನೆಗಳ ಹಾವಳಿಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಆ) ಆನೆಗಳಿಂದ ಬೆಳೆ ಹಾನಿ ಹಾಗೂ ಪ್ರಾಣ ಹಾನಿಗೆ ಸಂಬಂಧಿಸಿದಂತೆ ಸರ್ಕಾರದ ಪ್ರಸಕ್ತ ನೀತಿಯೇನು ?

ಶ್ರೀ ಹೆಚ್. ವಿಶ್ವನಾಥ್ (ಅರಣ್ಯ ಸಚಿವರು) :

ಅ) ಕಾಡಾನೆಗಳ ಹಾವಳಿಯನ್ನು ತಪ್ಪಿಸಲು, ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ :

1) ಆಯಕಟ್ಟಿನ ಸ್ಥಳಗಳಲ್ಲಿ ಆನೆ ನಿರೋಧಕ ಕಂದಕಗಳನ್ನು ನಿರ್ಮಿಸಲಾಗಿದೆ.
2) ಹಾವಳಿ ವರದಿ ಬಂದ ತಕ್ಷಣ, ತಮಟೆ ಭಾರಿಸಿ, ಪಟಾಕಿ ಸಿಡಿಸಿ, ಕಾಡಿನೊಳಕ್ಕೆ ಅಟ್ಟಲು ಕ್ರಮ ಕೈಗೊಳ್ಳಲಾಗುತ್ತಿದೆ.
3) ಸ್ಥಳೀಯ ಜನರ ಸಹಾಯ ಪಡೆಯುವುದಲ್ಲದೇ ದಿನಗೂಲಿಯ ಮೇಲೆ ಹೆಚ್ಚುವರಿ ಸಿಬ್ಬಂದಿಯನ್ನು ನೇಮಿಸಿಕೊಂಡು, ಆನೆ ಹಾವಳಿ ತಡೆಯಲು

ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಅರಣ್ಯ ಸಂಚಾರಿ ದಳದ ಸಹಾಯವನ್ನು ಪಡೆಯಲಾಗುತ್ತಿದೆ.

4) ಹೆಚ್ಚು ತೊಂದರೆ ನೀಡುತ್ತಿರುವ ಕಾಡಾನೆಗಳನ್ನು ಅರವಳಿಕೆ ಬಂದೂಕು ಉಪಯೋಗಿಸಿ, ಸೆರೆ ಹಿಡಿದು ಇಲಾಖೆಯ ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗುತ್ತಿದೆ.

5) ಹೆಚ್ಚಿನ ಆನೆ ನಿರೋಧಕ ಕಂದಕಗಳನ್ನು ತೋಡಲು ಉದ್ದೇಶಿಸಲಾಗಿದೆ.

6) ಕಾಡಾನೆಗಳು ಅರಣ್ಯ ಪ್ರದೇಶವನ್ನು ಬಿಟ್ಟು ಹೊರಗೆ ಬರದಂತೆ, ಅರಣ್ಯ ಮಧ್ಯದಲ್ಲಿಯೇ ನೀರು ಸಿಗುವಂತೆ ಕೆರೆಗಳ ನಿರ್ಮಾಣ, ಆಹಾರ ಸಿಗುವಂತೆ ಬಿದುರುಗಳನ್ನು ಬೆಳೆಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಕಾಡಾನೆಗಳಿಂದ ಬೆಳೆ ಹಾನಿ ಮತ್ತು ಪ್ರಾಣಹಾನಿಯಾದಾಗ ಸರ್ಕಾರದ ವತಿಯಿಂದ ಪರಿಹಾರ ನೀಡಲಾಗುತ್ತದೆ. ಈಗಾಗಲೇ ಈ ಬಗ್ಗೆ ದಿನಾಂಕ 1.8.92ರ ಸಂಖ್ಯೆ ಎಹೆಚ್‌ಎಫ್‌ಎಫ್ 100 ಎಫ್‌ಡಬ್ಲ್ಯೂಎಲ್ 89ರ ಸರ್ಕಾರಿ ಆದೇಶದಲ್ಲಿ ಪರಿಹಾರಧನ ನೀಡುವ ಬಗ್ಗೆ ಆದೇಶ ಹೊರಡಿಸಲಾಗಿದೆ.

ಪರಿಹಾರಧನವನ್ನು ತ್ವರಿತಗತಿಯಲ್ಲಿ ನೀಡಲು ಎಲ್ಲಾ ಕ್ರಮ ಕೈಗೊಳ್ಳಲಾಗುತ್ತಿದೆ.

ಕುಂದಾಪುರ ತಾಲ್ಲೋಕಿನಲ್ಲಿ ಶಿಕ್ಷಕರ ಕೊರತೆ

567 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೋಕಿನ ಪ್ರೌಢಶಾಲೆಗಳಲ್ಲಿ ಅಧ್ಯಾಪಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಕೊರತೆಯನ್ನು ಎಂದು ತುಂಬಲಾಗುವುದು?

ಇ) ಶಾಲಾವಾರು ವಿವರ, ಯಾವ ಐಚ್ಛಿಕ ವಿಷಯದ ಅಧ್ಯಾಪಕರ ಕೊರತೆ ಇದೆ? ವಿವರ ನೀಡುವುದು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಪಟ್ಟಿ ಲಗತ್ತಿಸಿದೆ

ಕುಂದಾಪುರ ತಾಲ್ಲೂಕಿನಲ್ಲಿ ಶಿಕ್ಷಕರ ಹುದ್ದೆಗಳು ಖಾಲಿ ಇರುವ ಶಾಲಾವಾರು ವಿವರಗಳು

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ಗಣಿತ	ವಿಜ್ಞಾನ	ಕಲೆ	ಕನ್ನಡ	ಹಿಂದಿ	ಸಂಸ್ಕೃತ	ದೈಹಿಕ ಗ್ರೇಡ್ -1	ದೈಹಿಕ ಗ್ರೇಡ್ - 2	ವೃತ್ತಿ	ಒಟ್ಟು
1.	ಸರಕಾರಿ ಪ್ರೌಢಶಾಲೆ ಕೆರೂರು			1	1	1					3
2.	" ವಡೇರಹೋಬಳಿ				1	1		1		1	4
3.	" ಹಡವಿನಕೋಣೆ	2	1								3
4.	" ಕಲ್ಲೂರು			1							1
5.	"	1	1		1				1		4
6.	" ಆಲ್ಬಾಡಿ ಆರ್ಡಿ	1	1			1					3
7.	" ಸಿದ್ದಪುರ			1	1	1				1	4
8.	" ಕಂಬದಕೋಣೆ		1								1
9.	" ಬಸ್ರೂರು	1	1	1		1					4
10.	" ಅಮಾಸೆಬೈಲು	1	1							1	3
11.	" ಕಿರಿಗುಂಜೇಶ್ವರ		1		1						2
12.	" ಉಪ್ಪಿನಕುದ್ರು	1	1	2	1	1		1			7
13.	" ಕಂಡ್ಲೂರು	1	1	2	1			1			6
14.	" ಹಾಲಾಡಿ	1	1	3	1	1		1		1	9
15.	" ಬೀಳೂರು	1	1	3	1	1		1		1	9
16.	" ವಕ್ವಾಡಿ	1	1	3	1	1		1		1	9

17.	ಸರ್ಕಾರಿ ಕಿ. ಕಾಲೇಜು ಹೊಸಂಗಡಿ		1	2				1			4
18.	" ಕುಂದಾಪುರ	1	1	2	2		1	1			8
19.	" ಬೈಂದೂರು	2	1			1					4
20.	" ಶಂಕರನಾರಾಯಣ	1		1						1	3
21.	" ನಾವುರದ	1			1					1	3
22.	" ಕೋಟೇಶ್ವರ	1	1			1					3
23.	" ಉಪ್ಪುಂದ	1									1
24.	" ತೆಕ್ಕಟ್ಟೆ			1		1			1		3
25.	" ವಂಡ್ಸೆ		1	1		1					3
26.	" ಬಿದ್ಕಲ್‌ಕಟ್ಟೆ		1	1							2
	ಒಟ್ಟು	18	18	25	13	13	1	8	2	8	106

ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ

378 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರನ್ನು ನೇಮಿಸಿಕೊಳ್ಳುವ ನೀತಿಯನ್ನು ಅನುಸರಿಸಲಾಗಿದೆ?

ಆ) ಸರ್ಕಾರದ ನೀತಿಗನುಗುಣವಾಗಿ ಅವಶ್ಯವಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ ಎಷ್ಟು? ಈಗ ಇರುವ ಶಿಕ್ಷಕರ ಸಂಖ್ಯೆ ಎಷ್ಟು?

ಇ) ಕೊರತೆ ಇರುವ ಶಿಕ್ಷಕರ ಸಂಖ್ಯೆ ಎಷ್ಟು ಭರ್ತಿ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) ಶಿಕ್ಷಕ - ವಿದ್ಯಾರ್ಥಿಗಳ ಅನುಪಾತ 1:50 ರಂತೆ ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಿಸಿಕೊಳ್ಳುವ ನೀತಿ ಅನುಸರಿಸಲಾಗುತ್ತಿದೆ.

ಆ) ರಾಜ್ಯದಲ್ಲಿ ಪ್ರಸ್ತುತ ಒಟ್ಟು 74,79,462 ವಿದ್ಯಾರ್ಥಿಗಳಿದ್ದು 1:50 ಅನುಪಾತದಂತೆ 1,46,672 ಶಿಕ್ಷಕರ ಅವಶ್ಯಕತೆ ಇರುತ್ತದೆ. ಪ್ರಸ್ತುತ 1,43,064 ಶಿಕ್ಷಕರು ಕೆಲಸವನ್ನು ನಿರ್ವಹಿಸುತ್ತಿರುತ್ತಾರೆ.

ಇ) ಪ್ರಸ್ತುತ 3,608 ಶಿಕ್ಷಕರ ಕೊರತೆ ಇರುತ್ತದೆ. ಇವುಗಳನ್ನು ಭರ್ತಿ ಮಾಡಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ

382 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಇರುವ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಅದರಲ್ಲಿ ಚಿಕ್ಕನಾಯಕನಹಳ್ಳಿಯಲ್ಲಿರುವ ಕಾಲೇಜುಗಳೆಷ್ಟು? ಅವುಗಳಲ್ಲಿರುವ ಐಚ್ಛಿಕ ವಿಷಯಗಳಾವುವು?

ಇ) ಈ ಕಾಲೇಜುಗಳಲ್ಲಿ ವಿಜ್ಞಾನ ವಿಷಯವನ್ನು ಬೋಧಿಸಲಾಗುತ್ತಿದೆಯೇ, ಇಲ್ಲವಾದಲ್ಲಿ ಕಾರಣವೇನು?

ಈ) ವಿಜ್ಞಾನ ವಿಷಯವನ್ನು ಬೋಧಿಸಲು ಕ್ರಮ ಕೈಗೊಳ್ಳುವುದೇ?

ಉ) ಇಲ್ಲವಾದಲ್ಲಿ ವಿದ್ಯಾರ್ಥಿಗಳು ವಿಜ್ಞಾನ ವಿಷಯ ಕಲಿಯಲು ಪಡುತ್ತಿರುವ ಹಾಗೂ ಬೇರೆ ಸ್ಥಳಗಳಲ್ಲಿರುವ ಕಾಲೇಜುಗಳಲ್ಲಿ ಹೊರಗಡೆಯ ವಿದ್ಯಾರ್ಥಿಗಳಿಗೆ ಸೀಟು ದೊರಕದೆ ಉಂಟಾಗುತ್ತಿರುವ ಗೊಂದಲವನ್ನು ಹೋಗಲಾಡಿಸಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮವೇನು?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) ಮೂರು

ಆ) ಎರಡು

ಅವುಗಳ ಪೈಕಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಲೆ ಮತ್ತು ವಾಣಿಜ್ಯ ಹಾಗೂ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಲೆ ಐಚ್ಛಿಕ ವಿಷಯವನ್ನು ಬೋಧಿಸಲಾಗುತ್ತಿದೆ.

ಇ) ಇಲ್ಲ

ಬೇಡಿಕೆ ಪ್ರಸ್ತಾವನೆ ಬಂದಿರುವುದಿಲ್ಲ

ಈ) ಬೇಡಿಕೆ ಪ್ರಸ್ತಾವನೆಗಳು ಬಂದಲ್ಲಿ ಕ್ರಮಕೈಗೊಳ್ಳಲಾಗುವುದು

ಉ) ಇಲ್ಲಿಯವರೆಗೆ ಯಾವುದೇ ರೀತಿಯ ಅಂಥಹ ಪ್ರಕರಣಗಳು ವರದಿಯಾಗಿಲ್ಲ

ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರಿ ಆಸ್ಪತ್ರೆ

174 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ - ತುಮಕೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರಿ ಆಸ್ಪತ್ರೆ ಓಡಾಡಿಸಲು ಕಳೆದ ವಿಧಾನ ಸಭೆಯ ಅಧಿವೇಶನದಲ್ಲಿ ಮಾನ್ಯ ಆರೋಗ್ಯ ಸಚಿವರು ಆಶ್ವಾಸನೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಸಂಚಾರಿ ಆಸ್ಪತ್ರೆ ವ್ಯಾನ್ ಓಡಾಡಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಇ) ಇದಕ್ಕೆ ಎಷ್ಟು ಕಾಲಾವಕಾಶ ಬೇಕಾಗಬಹುದು?

ಡಾ|| ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ

ಆ) ನೆಲಮಂಗಲದಲ್ಲಿನ ಸಾರ್ವಜನಿಕ ಆಸ್ಪತ್ರೆಗೆ ವಿಶೇಷವಾಗಿ ಅಪಘಾತದಲ್ಲಿ ಸಿಲುಕಿದ ಗಾಯಾಳುಗಳನ್ನು ತರಲು ವಾಹನಗಳನ್ನು ಒದಗಿಸಲಾಗಿದೆ (ಅಂಬ್ಯುಲೆನ್ಸ್ ವಾಹನ), ಸಂಚಾರಿ ವ್ಯಾನ್ ಒದಗಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಆದಷ್ಟು ಬೇಗ

ಹುಕ್ಕೇರಿ ತಾಲ್ಲೂಕಿನಲ್ಲಿ ಜ್ಯೂನಿಯರ್ ಕಾಲೇಜುಗಳನ್ನು ತೆರೆಯುವುದು

119 - ಶ್ರೀ ಉಮೇಶ್. ವಿ. ಕತ್ತಿ (ಹುಕ್ಕೇರಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ತಾಲ್ಲೂಕಿನ ಬಸವಪೂರ ಗ್ರಾಮದಲ್ಲಿ ಅಕ್ಕಪಕ್ಕದ ಗುಡ್ಡಗಾಡು ಜನರಿಗಾಗಿ ಹಾಗೂ ಹರಿಜನ ಗಿರಿಜನರಿಗಾಗಿ ಕಾಲೇಜು ಶಿಕ್ಷಣದ ಸಲುವಾಗಿ ಸರಕಾರ ಒಂದು ಜ್ಯೂನಿಯರ್ ಕಾಲೇಜು ಸ್ಥಾಪಿಸಲು ಇಚ್ಛಿಸಿದೆಯೇ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದ್ದು ಸದರಿ ಸ್ಥಳದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಅಗತ್ಯತೆಯನ್ನು ಪರಿಗಣಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆ ಮುದಗಡ್ಡೆ ಟಿ.ಬಿ. ಸ್ಯಾನಿಟೋರಿಯಂ

145 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆ ಮುದಗಡ್ಡೆ ಟಿ.ಬಿ. ಸ್ಯಾನಿಟೋರಿಯಂನಲ್ಲಿ ರೋಗಿಗಳಿಗೆ ಬೇಕಾದ ಪ್ರಾಥಮಿಕ ಸೌಲಭ್ಯಗಳ ಕೊರತೆಯನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ಎಕ್ಸರೇ ಯಂತ್ರ, ಪ್ರಯೋಗ ಶಾಲಾ ಉಪಕರಣಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸದರಿ ಸ್ಯಾನಿಟೋರಿಯಂನ ಅಭಿವೃದ್ಧಿಗಾಗಿ ಸರ್ಕಾರ ವಿಶೇಷ ಯೋಜನೆ ಹಮ್ಮಿಕೊಳ್ಳುವುದೇ?

ಡಾ|| ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ರೋಗಿಗಳಿಗೆ ಬೇಕಾದ ಪ್ರಾಥಮಿಕ ಸೌಲಭ್ಯಗಳಾದ ಔಷಧೋಪಚಾರ ಉಚಿತ ಊಟೋಪಚಾರ . ಸೌಲಭ್ಯಗಳನ್ನು ಒದಗಿಸಲಾಗಿದೆ.

ಆ) ಬಂದಿದೆ.

ಇ) ಈ ಸ್ಯಾನಿಟೋರಿಯಂಗೆ ನೀರಿನ ಸೌಲಭ್ಯಕ್ಕಾಗಿ ಒಂದು ಬೋರ್‌ವೆಲ್ ಮತ್ತು ಅಡುಗೆ ಮಾಡಲು ಅಡಿಗೆ ಕೊಠಡಿಯಲ್ಲಿ ಅನಿಲದ ಅಡುಗೆ ಸಲಕರಣೆಗಳನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿ ಮುಕ್ತ ವಿಶ್ವವಿದ್ಯಾನಿಲಯ ತೆರೆಯುವಿಕೆ

503 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮುಕ್ತ ವಿಶ್ವವಿದ್ಯಾನಿಲಯ ಮತ್ತು ತಾಂತ್ರಿಕ ಶಿಕ್ಷಣ ವಿಶ್ವವಿದ್ಯಾನಿಲಯಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಆ) ಇವುಗಳಿಗಾಗಿ ಉಪ ಕುಲಪತಿಗಳನ್ನು ಮತ್ತು ಇತರೆ ಸಿಬ್ಬಂದಿ ವರ್ಗದವರನ್ನು ನೇಮಕ ಮಾಡಲು ಸರ್ಕಾರ ಕ್ರಮ ತೆಗೆದುಕೊಂಡಿದೆಯೇ?

ಇ) ಈ ವರ್ಷದ ಆಯವ್ಯಯದಲ್ಲಿ ಈ ವಿಶ್ವವಿದ್ಯಾನಿಲಯಗಳ ಸ್ಥಾಪನೆಗಾಗಿ ಇಟ್ಟಿರುವ ಹಣ ಎಷ್ಟು?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) ಈ ಬಗ್ಗೆ ಕರಡು ವಿಧೇಯಕಗಳನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಂಡಿಸಲಾಗುತ್ತಿದ್ದು ಅನುಮತಿ ದೊರೆತ ಕೂಡಲೇ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಆ) ಪ್ರಶ್ನೆ (ಅ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಸ್ತುತ ಸಾಲಿನಲ್ಲಿ ಯೋಜನೆ ಶೀರ್ಷಿಕೆ ಅಡಿಯಲ್ಲಿ ಮುಕ್ತ ವಿಶ್ವವಿದ್ಯಾನಿಲಯದ ಸ್ಥಾಪನೆಗಾಗಿ ರೂ. 50.00 ಲಕ್ಷ ರೂ.ಗಳು ಮತ್ತು

ಆ) ತಾಂತ್ರಿಕ ವಿಶ್ವವಿದ್ಯಾನಿಲಯಗಳನ್ನೊಳಗೊಂಡಂತೆ ಹೊಸ ವಿಶ್ವವಿದ್ಯಾನಿಲಯಗಳ ಸ್ಥಾಪನೆಗಾಗಿ ರೂ. 10.00 ಲಕ್ಷ ರೂ.ಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ, ವ್ಯವಹಾರಗಳ ಸಚಿವರು) : ದಿನಾಂಕ : 31-8-1994ರಂದು ಲಿಖಿತ ಮೂಲಕ ಉತ್ತರಿಸುವ 5ನೇ ಪಟ್ಟಿಯಲ್ಲಿರುವ 59 ಪಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 381, 502, 653, 67, 65, 498 ಮತ್ತು 240 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ 52 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಬೀದರ್ ಜಿಲ್ಲೆಯಲ್ಲಿ ಅರಣ್ಯ ಬೆಳೆಸುವ ಬಗ್ಗೆ

376 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಎಷ್ಟು ಪ್ರಮಾಣದ ಅರಣ್ಯವನ್ನು ಬೆಳೆಸುವ ಉದ್ದೇಶವನ್ನು ಹೊಂದಲಾಗಿತ್ತು?

ಆ) ಇದೇ ಅವಧಿಯಲ್ಲಿ ಎಷ್ಟು ಸಾವಿರ ಹೆಕ್ಟೇರ್‌ಗಳಲ್ಲಿ ಅರಣ್ಯವನ್ನು ಬೆಳೆಸಲಾಗಿದೆ (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)

ಇ) ಇದಕ್ಕಾಗಿ ಖರ್ಚು ಮಾಡಿದ ಹಣವೆಷ್ಟು?

ಈ) 1994-95ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಕಾಡು ಬೆಳೆಸಲು ಉದ್ದೇಶಿಸಲಾಗಿದೆ.

ಉ) ಇದಕ್ಕಾಗಿ ಖರ್ಚು ಮಾಡುತ್ತಿರುವ ಹಣವೆಷ್ಟು?

ಶ್ರೀ ಹೆಚ್. ವಿಶ್ವನಾಥ್ (ಅರಣ್ಯ ಸಚಿವರು) :

ಅ) ಭೌತಿಕ ಗುರಿಗಳು ಈ ಕೆಳಕಂಡಂತಿವೆ

1) 1991-92 767 ಹೆಕ್ಟೇರ್

2) 1992-93 1049 ಹೆಕ್ಟೇರ್

3) 1993-94 1077 ಹೆಕ್ಟೇರ್

ಆ) ಮೇಲ್ಕಂಡ ಅವಧಿಯಲ್ಲಿ ಬೆಳೆಸಲಾದ ವೃಕ್ಷ ನೆಡುತೋಪುಗಳ ತಾಲ್ಲೂಕುವಾರು ವಿವರ ಈ ರೀತಿ ಇದೆ

	1991-92 (ಹೆಕ್ಟೇರ್‌ಗಳಲ್ಲಿ)	1992-93 (ಹೆಕ್ಟೇರ್‌ಗಳಲ್ಲಿ)	1993-94 (ಹೆಕ್ಟೇರ್‌ಗಳಲ್ಲಿ)
ಔರಾದ್	154	150	154
ಬಸವಕಲ್ಯಾಣ	235	258.5	142.5
ಭಾಲ್ಕಿ	84	124	57
ಬೀದರ್	130	197	262.5
ಹುಮ್ನಾಬಾದ್	150	400.5	421
ಒಟ್ಟು	753	1130	1037

ಇ) ಮೇಲಿನ ವೃಕ್ಷ ನೆಡುತೋಪುಗಳನ್ನು ಬೆಳೆಸಲು ತಗುಲಿದ ತಾಲ್ಲೂಕುವಾರು ವೆಚ್ಚ ಈ ಕೆಳಕಂಡಂತಿದೆ

(ರೂ. ಲಕ್ಷಗಳಲ್ಲಿ)

	1991-92	1992-93	1993-94
ಔರಾದ್	25.526	22.794	30.780
ಬಸವಕಲ್ಯಾಣ	25.699	36.655	22.070
ಬಾಲ್ಕಿ	11.636	12.659	20.476
ಬೀದರ್	34.853	35.263	50.743
ಹುಮ್ನಾಬಾದ್	-22.995	-34.879	-42.487
ಒಟ್ಟು	120.709	142.250	166.556

ಈ) 1994-95ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ 1622 ಹೆಕ್ಟೇರ್ ಪ್ರದೇಶದಲ್ಲಿ ವೃಕ್ಷ ನೆಡುತೋಪುಗಳನ್ನು ಬೆಳೆಸಲು ಉದ್ದೇಶಿಸಲಾಗಿದೆ.

ಉ) ರೂ. 152. 297 ಲಕ್ಷಗಳು.

ಸರ್ಕಾರಿ ಹಾಗೂ ಖಾಸಗೀ ವೈದ್ಯಕೀಯ ವಿದ್ಯಾಲಯಗಳಲ್ಲಿ ವೈದ್ಯಕೀಯ ಸೀಟುಗಳು

115 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ವಿದ್ಯಾಲಯಗಳಲ್ಲಿ 1994-95ನೇ ಸಾಲಿಗೆ ವೈದ್ಯಕೀಯ ಸೀಟುಗಳನ್ನು ಹಂಚಲು ಸರ್ಕಾರವು ತೀರ್ಮಾನಿಸದೆಯೇ?

ಆ) ಹಾಗಿದ್ದಲ್ಲಿ ಕಾಲೇಜುವಾರು ವಿವರಗಳನ್ನು ಒದಗಿಸುವುದು?

ಶ್ರೀ ಬಿ. ಶಿವಣ್ಣ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಹೌದು

ಆ)

1)	ಬಿ.ಎಂ.ಸಿ. ಬೆಂಗಳೂರು	200 ಸೀಟು
2)	ಎಂ.ಎಂ.ಸಿ. ಮೈಸೂರು	175
3)	ಕೆ.ಎಂ.ಸಿ. ಹುಬ್ಬಳ್ಳಿ	130
4)	ಜೆ.ಎಂ.ಸಿ. ಬಳ್ಳಾರಿ	130
5)	ಜೆ.ಎಸ್.ಎಸ್. ಮೆಡಿಕಲ್ ಕಾಲೇಜು ಮೈಸೂರು	200
6)	ಜೆ ಜೆ ಎಂ ಮೆಡಿಕಲ್ ಕಾಲೇಜು ದಾವಣಗೆರೆ	328
7)	ಜೆ.ಎನ್. ಮೆಡಿಕಲ್ ಕಾಲೇಜು ಬೆಳಗಾಂ	195
8)	ಎಂ.ಆರ್. ಮೆಡಿಕಲ್ ಕಾಲೇಜು ಗುಲ್ಬರ್ಗಾ	185
9)	ಆದಿ ಚುಂಚನಗಿರಿ ಮೆಡಿಕಲ್ ಕಾಲೇಜು ಬೆಳ್ಳೂರು	195
10)	ಶ್ರೀ ದೇವರಾಜ ಅರಸ್ ಮೆಡಿಕಲ್ ಕಾಲೇಜು ಕೋಲಾರ	150
11)	ಶ್ರೀ ಸಿದ್ಧಾರ್ಥ ಮೆಡಿಕಲ್ ಕಾಲೇಜು ತುಮಕೂರು	195
12)	ಕೆಂಪೇಗೌಡ ಮೆಡಿಕಲ್ ಕಾಲೇಜು ಬೆಂಗಳೂರು	120
13)	ಡಾ ಬಿ.ಆರ್. ಅಂಬೇಡ್ಕರ್ ಮೆಡಿಕಲ್ ಕಾಲೇಜು ಬೆಂಗಳೂರು	120
14)	ಬಿ.ಎಲ್.ಡಿಇ ಮೆಡಿಕಲ್ ಕಾಲೇಜು ಬಿಜಾಪುರ	180
15)	ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜು ಬೆಂಗಳೂರು	150
*16)	ಕೆ.ಎಂ.ಸಿ. ಮಂಗಳೂರು	300
*17)	ಕೆ.ಎಂ.ಸಿ. ಮಣಿಪಾಲ	250
18)	ಅಲ್ ಅಮೀನ್ ಮೆಡಿಕಲ್ ಕಾಲೇಜು ಬಿಜಾಪುರ	130
**19)	ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು ಬೆಂಗಳೂರು	60

* ಈ ಕಾಲೇಜುಗಳು ಭಾವಿತ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವುದರಿಂದ ಸೀಟುಗಳ ಹಂಚಿಕೆ ಬಗ್ಗೆ ಸರ್ವೋಚ್ಛ ನ್ಯಾಯಾಲಯದಲ್ಲಿ ವ್ಯಾಜ್ಯವು ಬಾಕಿ ಇದೆ.

** ಸರ್ವೋಚ್ಛ ನ್ಯಾಯಾಲಯವು 1994-95ನೇ ಸಾಲಿನಲ್ಲಿ ಸದರಿ ಕಾಲೇಜಿನ ಆಡಳಿತ ಮಂಡಳಿಯು ಎಲ್ಲಾ ಸೀಟುಗಳನ್ನು ಭರ್ತಿ ಮಾಡಲು ಆದೇಶ ನೀಡಿದೆ.

ಖಾಸಗಿ ಮತ್ತು ಸರ್ಕಾರಿ ಇಂಜನಿಯರಿಂಗ್ ಕಾಲೇಜುಗಳಿಗೆ ಸೀಟು ಹಂಚಿಕೆ

114 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು 1994-95ನೇ ವರ್ಷದಲ್ಲಿ ಖಾಸಗಿ ಮತ್ತು ಸರ್ಕಾರಿ ಇಂಜನಿಯರಿಂಗ್ ಕಾಲೇಜುಗಳಿಗೆ ಸೀಟುಗಳನ್ನು ಹಂಚಿಕೆ ಮಾಡಿದೆಯೇ?

ಆ) ಹಾಗಿದ್ದಲ್ಲಿ, ಪ್ರತಿ ಕಾಲೇಜಿಗೆ ಹಂಚಿಕೆ ಮಾಡಿರುವ ಸೀಟುಗಳ ಸಂಖ್ಯೆಯೆಷ್ಟು?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು

ಆ) ಮಾಹಿತಿಯನ್ನು ಲಗತ್ತಿಸಿದ ಪಟ್ಟಿಯಲ್ಲಿ ನೀಡಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 114ಕ್ಕೆ ಅನುಬಂಧ

ಕ್ರಮ ಸಂಖ್ಯೆ	ಇಂಜನಿಯರಿಂಗ್ ಕಾಲೇಜುಗಳ ಹೆಸರು	94-95ನೇ ಸಾಲಿಗೆ ನಿಗಧಿಪಡಿಸಿದ ಪ್ರವೇಶ ಸಂಖ್ಯೆ
1	2	3
1.	ಯೂನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜನಿಯರಿಂಗ್, ಬೆಂಗಳೂರು (ವಿಶ್ವವಿದ್ಯಾನಿಲಯದ ಕಾಲೇಜು)	440
2.	ಎಸ್‌ಕೆಎಸ್‌ಜೆಟಿ ಇನ್ಸ್‌ಟಿಟ್ಯೂಟ್, ಬೆಂಗಳೂರು (ಸರ್ಕಾರಿ)	70
3.	ಬಿ.ಎಂ.ಎಸ್. ಕಾಲೇಜ್ ಆಫ್ ಇಂಜನಿಯರಿಂಗ್, ಬೆಂಗಳೂರು (ಅನುದಾನಿತ)	815
4.	ಆರ್.ವಿ. ಕಾಲೇಜ್ ಆಫ್ ಇಂಜನಿಯರಿಂಗ್, ಬೆಂಗಳೂರು (ಖಾಸಗಿ ಅನುದಾನರಹಿತ)	670
5.	ಎಂ.ಎಸ್. ರಾಮಯ್ಯ ಕಾಲೇಜ್ ಆಫ್ ಇಂಜನಿಯರಿಂಗ್, ಬೆಂಗಳೂರು (ಖಾಸಗಿ ಅನುದಾನ ರಹಿತ)	720
6.	ದಯಾನಂದಸಾಗರ್ ಕಾಲೇಜ್ ಆಫ್ ಇಂಜನಿಯರಿಂಗ್, ಬೆಂಗಳೂರು (ಖಾಸಗಿ ಅನುದಾನ ರಹಿತ)	670
7.	ಬೆಂಗಳೂರು ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು (ಖಾಸಗಿ ಅನುದಾನ ರಹಿತ)	560
8.	ಡಾ॥ ಅಂಬೇಡ್ಕರ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು (ಖಾಸಗಿ ಅನುದಾನಿತ)	490
9.	ಸರ್. ಎಂ. ವಿಶ್ವೇಶ್ವರಯ್ಯ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು 562 157 (ಖಾಸಗಿ ಅನುದಾನರಹಿತ)	430
10.	ಪಿ.ಇ.ಎಸ್. ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಹನುಮಂತನಗರ, ಬೆಂಗಳೂರು (ಖಾಸಗಿ ಅನುದಾನ ರಹಿತ)	300
11.	ಸಿದ್ಧಗಂಗಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು (ಖಾಸಗಿ ಅನುದಾನ ರಹಿತ)	640

-	ಸಿದ್ಧಗಂಗಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು (ಡಿಪ್ಲೊಮೊ ಹೋಲ್ಡರ್ಸ್) (ಖಾಸಗಿ ಅನುದಾನರಹಿತ)	90
12.	ಶ್ರೀ ಸಿದ್ಧಾರ್ಥ ಇಂಜಿನಿಯರಿಂಗ್ ಕಾಲೇಜ್, ಮರಳೂರು, ತುಮಕೂರು (ಖಾಸಗಿ ಅನುದಾನ ರಹಿತ)	360
13.	ಕಲ್ಪತರು ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ತಿಪಟೂರ್ (ಖಾಸಗಿ ಅನುದಾನರಹಿತ)	150
14.	ಗೋಲ್ಡನ್ ವ್ಯಾಲಿ ಎಜ್ಯುಕೇಷನ್ ಸೊಸೈಟಿ ಇಂಜಿನಿಯರಿಂಗ್ ಕಾಲೇಜ್, ಕೆ.ಜಿ.ಎಫ್, ಕೋಲಾರ ಜಿಲ್ಲೆ (ಖಾಸಗಿ ಅನುದಾನ ರಹಿತ)	250
15.	ಆದಿಚುಂಚನಗಿರಿ ವಿದ್ಯಾಸಂಸ್ಥೆ, ಎಸ್‌ಜೆಸಿಐಎಸ್ ಇಂಜಿನಿಯರಿಂಗ್ ಕಾಲೇಜ್, ಚಿಕ್ಕಬಳ್ಳಾಪುರ (ಖಾಸಗಿ ಅನುದಾನ ರಹಿತ)	270
16.	ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಮೈಸೂರು (ಖಾಸಗಿ ಅನುದಾನ ರಹಿತ)	390
17.	ಶ್ರೀ ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜಿನಿಯರಿಂಗ್, ಮೈಸೂರು (ಖಾಸಗಿ ಅನುದಾನಿತ)	500
18.	ಪಿ.ಇ.ಎಸ್. ಕಾಲೇಜ್ ಆಫ್ ಇಂಜಿನಿಯರಿಂಗ್, ಮಂಡ್ಯ (ಖಾಸಗಿ ಅನುದಾನಿತ)	440
19.	ಮಲೆನಾಡು ಕಾಲೇಜ್ ಆಫ್ ಇಂಜಿನಿಯರಿಂಗ್, ಹಾಸನ (ಖಾಸಗಿ ಅನುದಾನಿತ)	560
20.	ಯೂನಿವರ್ಸಿಟಿ ಬಿಡಿಟಿ ಕಾಲೇಜ್ ಆಫ್ ಇಂಜಿನಿಯರಿಂಗ್, ದಾವಣಗೆರೆ	350
21.	ಬಾಪೂಜಿ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ, ದಾವಣಗೆರೆ (ಖಾಸಗಿ ಅನುದಾನ ರಹಿತ)	520
22.	ಎಸ್.ಜೆ.ಎಂ. ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಚಿತ್ರದುರ್ಗ (ಖಾಸಗಿ ಅನುದಾನ ರಹಿತ)	310
23.	ಆದಿಚುಂಚನಗಿರಿ ಕಾಲೇಜ್ ಆಫ್ ಇಂಜಿನಿಯರಿಂಗ್, ಚಿಕ್ಕಮಗಳೂರು (ಖಾಸಗಿ ಅನುದಾನ ರಹಿತ)	300
24.	ಜವಹರಲಾಲ್ ನೆಹರು ನ್ಯಾಷನಲ್ ಕಾಲೇಜ್ ಆಫ್ ಇಂಜಿನಿಯರಿಂಗ್, ಶಿವಮೊಗ್ಗ (ಖಾಸಗಿ ಅನುದಾನ ರಹಿತ)	300
25.	ಬಿ.ವಿ. ಭೂಮರೆಡ್ಡಿ ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ, ಹುಬ್ಬಳ್ಳಿ (ಖಾಸಗಿ ಅನುದಾನಿತ)	470
26.	ಬಸವೇಶ್ವರ ಇಂಜಿನಿಯರಿಂಗ್ ಕಾಲೇಜ್, ಬಾಗಲಕೋಟೆ (ಖಾಸಗಿ ಅನುದಾನಿತ)	440
27.	ಕೆ.ಎಲ್.ಇ ಸೊಸೈಟಿ ಇಂಜಿನಿಯರಿಂಗ್ ಕಾಲೇಜ್ ಬೆಳಗಾಂ (ಖಾಸಗಿ ಅನುದಾನ ರಹಿತ)	300
28.	ಕೆ.ಎಲ್.ಎಸ್. ಗೋಗಟೇ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಳಗಾಂ (ಖಾಸಗಿ ಅನುದಾನ ರಹಿತ)	395

29.	ಬಿ.ಎಲ್.ಡಿ.ಇ ಸಂಸ್ಥೆಯವರ ಇಂಜಿನಿಯರಿಂಗ್ ಕಾಲೇಜು, ಬಿಜಾಪುರ (ಖಾಸಗಿ ಅನುದಾನ ರಹಿತ)	350
30.	ಆರ್.ಟಿ.ಇ ಸೊಸೈಟಿಯವರ ರೂರಲ್ ಇಂಜಿನಿಯರಿಂಗ್ ಕಾಲೇಜ್, ಹುಲಿಕೋಟೆ (ಖಾಸಗಿ ಅನುದಾನ ರಹಿತ)	260
31.	ಎಸ್.ಟಿ.ಜೆ. ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ರಾಣಿಬೆನ್ನೂರು (ಖಾಸಗಿ ಅನುದಾನ ರಹಿತ)	250
32.	ಸಿಕಾಬ್ ಅಸೋಸಿಯೇಷನ್ಸ್ ಮಲ್ಲಿಕ್ ಸಾಂಡಲ್ ಇನ್ಸ್‌ಟಿಟ್ಯೂಟ್ ಆಫ್ ಆರ್ಕಿಟೆಕ್ಚರ್ (ಖಾಸಗಿ ಅನುದಾನ ರಹಿತ)	40
33.	ಪಿ.ಡಿ. ಅಪ್ಪ ಕಾಲೇಜ್ ಆಫ್ ಇಂಜಿನಿಯರಿಂಗ್, ಗುಲ್ಬರ್ಗಾ (ಖಾಸಗಿ ಅನುದಾನಿತ)	480
34.	ವಿಜಯನಗರ ಇಂಜಿನಿಯರಿಂಗ್ ಕಾಲೇಜು, ಬಳ್ಳಾರಿ (ಖಾಸಗೀ ಅನುದಾನ ರಹಿತ)	400
35.	ಹೆಚ್.ಕೆ.ಇ. ಸೊಸೈಟಿಯವರ ಎಸ್.ಎಲ್.ಎನ್ ಕಾಲೇಜ್ ಆಫ್ ಇಂಜಿನಿಯರಿಂಗ್, ರಾಯಚೂರು (ಖಾಸಗೀ ಅನುದಾನ ರಹಿತ)	220
36.	ರೂರಲ್ ಇಂಜಿನಿಯರಿಂಗ್ ಕಾಲೇಜು, ಭಾಲ್ಕಿ (ಖಾಸಗೀ ಅನುದಾನ ರಹಿತ)	355
37.	ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕಾಲೇಜು, ಸೂರತ್ಕಲ್ (ಕೇಂದ್ರ ಮತ್ತು ರಾಜ್ಯ ಸರ್ಕಾರ)	350
38.	ಅಕಾಡಮಿಕ್ ಆಫ್ ಲಿಬರಲ್ ಎಜ್ಯುಕೇಷನ್ ಸೊಸೈಟಿ, ಕೆವಿಜಿ ಇಂಜಿನಿಯರಿಂಗ್ ಕಾಲೇಜ್, ಸುಳ್ಯಾ (ಖಾಸಗಿ ಅನುದಾನರಹಿತ)	300
	<u>ಸಂಜೆ ಕಾಲೇಜುಗಳು :</u>	
39.	ಯೂನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು	44
40.	ಬಿಎಂಎಸ್ ಕಾಲೇಜ್ ಆಫ್ ಇಂಜಿನಿಯರಿಂಗ್ (ಸಂಜೆ) ಬೆಂಗಳೂರು (ಖಾಸಗಿ ಅನುದಾನಿತ)	288
41.	ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಮೈಸೂರು (ಖಾಸಗೀ ಅನುದಾನಿತ)	50
42.	ಶ್ರೀ ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜಿನಿಯರಿಂಗ್ (ಸಂಜೆ), ಮೈಸೂರು (ಖಾಸಗೀ ಅನುದಾನ ರಹಿತ)	139
	<u>ಭಾಷಾ ಮತ್ತು ಮತೀಯ ಅಲ್ಪಸಂಖ್ಯಾತರ ಅನುದಾನ ರಹಿತ ಇಂಜಿನಿಯರಿಂಗ್ ಕಾಲೇಜುಗಳು :</u>	
1.	ಇಸ್ಲಾಮಿಯಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು	290
2.	ಗೌಸಿಯಾ ಇಂಜಿನಿಯರಿಂಗ್ ಕಾಲೇಜು, ರಾಮನಗರ, ಬೆಂಗಳೂರು ಜಿಲ್ಲೆ	270
3.	ಎಂ.ವಿ.ಜೆ ಕಾಲೇಜ್ ಆಫ್ ಇಂಜಿನಿಯರಿಂಗ್, ವೈಟ್ ಫೀಲ್ಡ್, ಬೆಂಗಳೂರು	490

4.	ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇಂಜಿನಿಯರಿಂಗ್ ಕಾಲೇಜು, ಧಾರವಾಡ	380
5.	ಅಂಜುಮಾನ್ ಇಂಜಿನಿಯರಿಂಗ್ ಕಾಲೇಜ್, ಭಟ್ಕಳ್	330
6.	ಖಾಜಾ ಬಂದೇ ನವಾಜ್ ಕಾಲೇಜ್ ಆಫ್ ಇಂಜಿನಿಯರಿಂಗ್, ಗುಲ್ಬರ್ಗಾ	360
7.	ಗುರುನಾನಕ್ ದೇವ್ ಇಂಜಿನಿಯರಿಂಗ್ ಕಾಲೇಜ್, ಬೀದರ್	300
8.	ಮಣಿಪಾಲ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಣಿಪಾಲ್	825
9.	ಶ್ರೀ ನಿಟ್ಟೆ ಮಹಾಲಿಂಗ ಆದ್ಯಂತಾಯ ಮೆಮೋರಿಯಲ್ ಟೆಕ್ನಾಲಜಿ ಇನ್ಸ್‌ಟಿಟ್ಯೂಟ್, ನಿಟ್ಟೆ	360

ಮುಂಡರಗಿ ತಾಲ್ಲೂಕಿನಲ್ಲಿರುವ ಆರೋಗ್ಯ ಘಟಕಗಳು

493 - ಶ್ರೀ ಕೆ.ಹೆಚ್. ಕುರುಡಗಿ (ಮುಂಡರಗಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕಗಳೆಷ್ಟು?

ಆ) ಈ ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ಸಂಖ್ಯೆ ಎಷ್ಟು?

ಇ) ಈ ಖಾಲಿ ಹುದ್ದೆಗಳನ್ನು ಎಂದು ತುಂಬಲಾಗುವುದು?

ಡಾ॥ ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬಕಲ್ಯಾಣ ಸಚಿವರು) :

ಅ) ಧಾರವಾಡ ಜಿಲ್ಲೆಯ ಮುಂಡರಗಿ ತಾಲ್ಲೂಕಿನಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಔಷಧಿಗಳಿಗಾಗಿ ಮಂಜೂರಾದ ಹಣ

493ಎ - ಶ್ರೀ ಕೆ.ಹೆಚ್. ಕುರುಡಗಿ (ಮುಂಡರಗಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ವರ್ಷಕ್ಕೆ ಎಷ್ಟು ಮೊತ್ತದ ಔಷಧಿಗಳನ್ನು ಮಂಜೂರು ಮಾಡಲಾಗುತ್ತಿದೆ?

ಆ) ಮಂಜೂರಾದ ಔಷಧಿಗಳ ಮೊತ್ತವು ಸದರಿ ಘಟಕಗಳಿಗೆ ಸಾಕಾಗುತ್ತದೆಯೇ?

ಇ) ಹಾಗಿಲ್ಲದಿದ್ದಲ್ಲಿ ಈ ಮೊತ್ತವನ್ನು ಹೆಚ್ಚಿಸಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ?

ಡಾ॥ ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ವರ್ಷಕ್ಕೆ ರೂ. 30,000-00 ಮೊತ್ತದ ಔಷಧಿಗಳನ್ನು ಮಂಜೂರು ಮಾಡಲಾಗುತ್ತಿದೆ.

ಆ) ಸಾಕಾಗುತ್ತದೆ.

ಇ) ಉದ್ಭವಿಸುವುದಿಲ್ಲ.

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅನುದಾನಿತ ಪ್ರೌಢಶಾಲೆಯಲ್ಲಿ ರ್‍ಯಾಂಕ್ ಪಡೆದಿರುವುದು

219 - ಶ್ರೀ ಬಸವರಾಜ ಪಾಟೀಲ ಅಟ್ಟೂರ (ಬಸವಕಲ್ಯಾಣ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಏಪ್ರಿಲ್ 1994ರಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಎಷ್ಟು ಅನುದಾನಿತ ಪ್ರೌಢಶಾಲೆಗಳು ರ್‍ಯಾಂಕ್ ಪಡೆದಿದೆ

ಆ) ಶಿಕ್ಷಕರ ದಿನಾಚರಣೆಯಂದು ರ್‍ಯಾಂಕ್ ಪಡೆದಿರುವ ಪ್ರೌಢಶಾಲೆಗಳ ಶಿಕ್ಷಕರನ್ನು ಸನ್ಮಾನಿಸುವ ಬಗ್ಗೆ ಏನಾದರೂ ಪ್ರಸ್ತಾವನೆ ಇದೆಯೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) 24

ಆ) ಇಲ್ಲ

ಬೀದರ್ ಜಿಲ್ಲೆಯಲ್ಲಿ ಕಪ್ಪು ಹಲಗೆ ಯೋಜನೆ

386 - ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಔರಾದ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಕಳೆದ ವರ್ಷಗಳಲ್ಲಿ ಕಪ್ಪು ಹಲಗೆ ಯೋಜನೆಯು ಎಷ್ಟು ಪ್ರಗತಿಯನ್ನು ಸಾಧಿಸಲಾಗಿದೆ? (ತಾಲ್ಲೂಕುವಾರು ಅಂಕಿ ಅಂಶಗಳನ್ನು ನೀಡುವುದು)

ಆ) ಇದಕ್ಕಾಗಿ ಈ ಅವಧಿಯಲ್ಲಿ ಪ್ರತಿ ವರ್ಷ ಖರ್ಚು ಮಾಡಿದ ಹಣವೆಷ್ಟು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಕಪ್ಪುಹಲಗೆ ಯೋಜನೆಯಡಿಯಲ್ಲಿ 1 ರಿಂದ 3ನೇ ಹಂತದವರೆಗೆ ಬೀದರ್ ಜಿಲ್ಲೆಯನ್ನು ಅಳವಡಿಸಲಾಗಿದ್ದು ಸದರಿ ಯೋಜನೆಯಲ್ಲಿ ಒಟ್ಟು 388 ಕೊಠಡಿಗಳನ್ನು ನಿರ್ಮಿಸಬೇಕಾಗಿದ್ದು ದಿನಾಂಕ 31-3-94ರವರೆಗೆ 361 ಕೊಠಡಿಗಳನ್ನು ನಿರ್ಮಿಸಲಾಗಿದೆ. ಇನ್ನೂಳಿದ 27 ಕೊಠಡಿಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

ತಾಲ್ಲೂಕುವಾರು ವಿವರ ಈ ಕೆಳಕಂಡಂತೆ ಇರುತ್ತದೆ

ವರ್ಷ	ಹಂತ	ತಾಲ್ಲೂಕು	ಮಂಜೂರಾದ ಕೊಠಡಿಗಳು	ನಿರ್ಮಿಸಲಾದ ಕೊಠಡಿ	ಪ್ರಗತಿಯಲ್ಲಿರುವ ಕೊಠಡಿಗಳು
1987-88	1ನೇ ಹಂತ	(1) ಔರಾದ್	113	113	-
1988-89	2ನೇ ಹಂತ	(1) ಬಸವಕಲ್ಯಾಣ	115	90	25
		(2) ಭಾಲ್ಕಿ	49	49	-
1989-90	3ನೇ ಹಂತ	(1) ಬೀದರ್	70	68	02
		(2) ಹುಮ್ನಾಬಾದ್	41	41	-
		ಒಟ್ಟು	388	361	27

ಸದರಿ ಯೋಜನೆಯಡಿಯಲ್ಲಿ 1 ರಿಂದ 3ನೇ ಹಂತದಲ್ಲಿ ಒಟ್ಟು 167 ಶಿಕ್ಷಕರ ನೇಮಕಾತಿ ಮಾಡಬೇಕಾಗಿದ್ದ 154 ಶಿಕ್ಷಕರನ್ನು ನೇಮಕಾತಿ ಮಾಡಲಾಗಿದೆ. ಹಾಗೂ ಉಳಿದ 13 ಶಿಕ್ಷಕರ ನೇಮಕಾತಿ ಬಗ್ಗೆ ಈಗಾಗಲೇ ಕ್ರಮ ಕೈಗೊಂಡಿದೆ.

ವರ್ಷವಾರು ವಿವರ ಈ ಕೆಳಕಂಡಂತಿದೆ

ಹಂತ	ಮಂಜೂರಾದ ಶಿಕ್ಷಕರ ಹುದ್ದೆ	ನೇಮಕಾತಿ ಆಗಿರುವ ಶಿಕ್ಷಕರು	ಉಳಿದ ಹುದ್ದೆಗಳ ನೇಮಕಾತಿಗಾಗಿ ಕ್ರಮ ಕೈಗೊಂಡಿರುವ ಶಿಕ್ಷಕರ ಸಂಖ್ಯೆ	ನೇಮಕಾತಿ ಆದ ವರ್ಷ
1ನೇ ಹಂತ	55	55	-	1988-89
2ನೇ ಹಂತ	60	60	-	1989-90
3ನೇ ಹಂತ	52	39	13	1993-94
ಒಟ್ಟು	167	154	13	

ಸದರಿ ಯೋಜನೆಯಡಿಯಲ್ಲಿ 479 ಶಾಲೆಗಳಿಗೆ ಕಲಿಕಾ ಮತ್ತು ಬೋಧನಾ ಸಾಮಾಗ್ರಿಗಳನ್ನು ಸರಬರಾಜು ಮಾಡಲಾಗಿದ್ದು ಅದಕ್ಕಾಗಿ ರೂ 31.25 ಲಕ್ಷ. ಖರ್ಚಾಗಿರುತ್ತದೆ.

ವಿವರ ಈ ಕೆಳಕಂಡಂತಿರುತ್ತದೆ

ವರ್ಷ	ಹಂತ	ಕಲಿಕಾ ಮತ್ತು ಬೋಧನಾ ಸಾಮಾಗ್ರಿಗಳನ್ನು ಸರಬರಾಜು ಮಾಡಿರುವ ಶಾಲೆಗಳು	ಮಂಜೂರಾದ ಹಣ ರೂ. ಲಕ್ಷಗಳಲ್ಲಿ	ಖರ್ಚಾದ ಹಣ ರೂ. ಲಕ್ಷಗಳಲ್ಲಿ
1987-88	1ನೇ ಹಂತ	114	6.91	6.91
1988-89	2ನೇ ಹಂತ	206	13.07	13.07
1989-90	3ನೇ ಹಂತ	159	11.27	11.27
		479	31.25	31.25

ಆ) ಕೊಠಡಿಗಳ ನಿರ್ಮಾಣಕ್ಕಾಗಿ ದಿನಾಂಕ 31-3-94ರ ವರೆಗೆ 1 ರಿಂದ 3 ಹಂತಗಳಲ್ಲಿ ಒಟ್ಟು 167.03 ಲಕ್ಷ ರೂ.ಗಳು ಖರ್ಚಾಗಿರುತ್ತದೆ.

ವರ್ಷವಾರು ಖರ್ಚು ಮಾಡಿದ ಹಣದ ವಿವರ ಈ ಕೆಳಕಂಡಂತಿದೆ

ವರ್ಷ	ಹಂತ	ಕೊಠಡಿ ಕಟ್ಟಿಸಲು ಮಂಜೂರಾದ ಹಣ ರೂ. ಲಕ್ಷಗಳಲ್ಲಿ	ಖರ್ಚಾದ ಹಣ ರೂ ಲಕ್ಷಗಳಲ್ಲಿ
1987-88	1ನೇ ಹಂತ	33.90	41.88
1988-89	2ನೇ ಹಂತ	70.00	71.22
1989-90	3ನೇ ಹಂತ	70.00	53.83
	ಒಟ್ಟು	173.90	167.03

ರಾಯಚೂರು ಜಿಲ್ಲೆಯಲ್ಲಿ ಮಂಜೂರಾದ ಪ್ರೌಢಶಾಲೆಗಳು

502 - ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಯಲ್ಲಿರುವ ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ ಎಷ್ಟು?

ಆ) 1994-95ನೇ ಸಾಲಿನಲ್ಲಿ ಜಿಲ್ಲೆಗೆ ಮಂಜೂರಾದ ಪ್ರೌಢಶಾಲೆಗಳ ಸಂಖ್ಯೆ ಎಷ್ಟು?

ಇ) ಹೊಸದಾಗಿ ಮಂಜೂರಾದ ಶಾಲೆಗಳಿಗೆ ಆಗತ್ಯವಿರುವ ಶಿಕ್ಷಕ : ಸಿಬ್ಬಂದಿಗಳನ್ನು ನೇಮಕಾತಿ ಮಾಡಲಾಗಿದೆಯೇ;

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) 103 ಪ್ರೌಢಶಾಲೆಗಳು.

ಆ) 13 ಪ್ರೌಢಶಾಲೆಗಳು ಮಂಜೂರಾಗಿವೆ.

ಇ) ಹೌದು.

ಚನ್ನಗಿರಿ ತಾಲ್ಲೋಕು ಬಸವರಾಜಪುರದ ಮೀನುಗಾರರ ಮನೆಗಳು

377 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲ್ಲೋಕು ಬಸವರಾಜಪುರದ ಮೀನುಗಾರರ ಮನೆಗಳಿಗೆ ಫೌಂಡೇಷನ್ ಹಾಕಿದ್ದು ಇದುವರೆಗೆ ಮನೆಗಳು ಸಂಪೂರ್ಣ ಆಗದಿರಲು ಕಾರಣವೇನು;

ಆ) ಇವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಬಸವರಾಜಪುರ ಮತ್ತು ಹೊಸಹಳ್ಳಿ ಗ್ರಾಮದಲ್ಲಿ 100 ಮನೆಗಳನ್ನು ನಿರ್ಮಾಣಮಾಡಲು ಮಂಜೂರಾದ 16.715 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಕಾಮಗಾರಿಯನ್ನು ಭೂಸೇನಾ ನಿಗಮದವರು ವಹಿಸಿಕೊಂಡಿರುತ್ತಾರೆ. ನಿಗಮವು ಮನೆ ಕಟ್ಟುವ ಸಾಮಾಗ್ರಿಗಳ ಬೆಲೆ ಹೆಚ್ಚಾದ ಕಾರಣ ಹೆಚ್ಚುವರಿ ಹಣ ಒದಗಿಸಬೇಕೆಂದು ಕೋರಿದ್ದಾರೆ. ಹೆಚ್ಚುವರಿ ಹಣ ಒದಗಿಸಲು ಸಾಧ್ಯವಿಲ್ಲವೆಂದು, ಮಂಜೂರಾದ ಹಣದಲ್ಲಿಯೇ ಕಾಮಗಾರಿಯನ್ನು ಮುಗಿಸಲು ನಿಗಮಕ್ಕೆ ತಿಳಿಸಲಾಗಿದೆ. 16 ಮನೆಗಳ ಕಾಮಗಾರಿ ಮಾತ್ರ ಬಾಕಿ ಉಳಿದಿದೆ.

ಆ) 1994-95ನೇ ಸಾಲಿನಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಖಾಸಗೀ ವೈದ್ಯಕೀಯ ಕಾಲೇಜುಗಳಿಗೆ ನಿಗದಿ ಪಡಿಸಿರುವ ಸೀಟುಗಳು.

501 - ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದ್ಯಂತ ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ 1993-94, 94-95ನೇ ಸಾಲಿನಲ್ಲಿ ನಿಗಧಿ ಪಡಿಸಿದ ಸೀಟುಗಳ ಸಂಖ್ಯೆ ಎಷ್ಟು? (ಕಾಲೇಜುವಾರು ಮಾಹಿತಿ ನೀಡುವುದು)

ಆ) ಸರ್ಕಾರ ನಿಗಧಿಪಡಿಸಿದ ಸೀಟುಗಳಿಗಿಂತ ಹೆಚ್ಚು ಸೀಟುಗಳನ್ನು ಯಾವ ಯಾವ ಕಾಲೇಜುಗಳಿಗೆ ನೀಡಲಾಗಿದೆ (ಕಾಲೇಜುವಾರು ವಿವರ ನೀಡುವುದು)

ಶ್ರೀ ಬಿ. ಶಿವಣ್ಣ (ವೈದ್ಯಕೀಯ ಶಿಕ್ಷಣ ಸಚಿವರು) :

ಅ)

	1993-94	1994-95
1) ಜೆ.ಎಸ್.ಎಸ್. ವೈದ್ಯಕೀಯ ಕಾಲೇಜು, ಮೈಸೂರು	200	200
2) ಜೆ ಜೆ ಎಂ ಮೆಡಿಕಲ್ ಕಾಲೇಜು, ದಾವಣಗೆರೆ	328	328
3) ಜೆ ಎನ್ ಮೆಡಿಕಲ್ ಕಾಲೇಜು, ಬೆಳಗಾಂ	195	195
4) ಎಂ.ಆರ್. ಮೆಡಿಕಲ್ ಕಾಲೇಜು, ಗುಲ್ಬರ್ಗಾ	185	185
5) ಆದಿ ಚುಂಚನಗಿರಿ ವೈದ್ಯಕೀಯ ಕಾಲೇಜು, ಬೆಳ್ಳೂರು	195	195
6) ಶ್ರೀ ದೇವರಾಜ್ ಅರಸ್ ಮೆಡಿಕಲ್ ಕಾಲೇಜು, ಕೋಲಾರ	150	150
7) ಶ್ರೀ ಸಿದ್ದಾರ್ಥ ಮೆಡಿಕಲ್ ಕಾಲೇಜು ತುಮಕೂರು	195	195

8) ಕೆಂಪೇಗೌಡ ಮೆಡಿಕಲ್ ಕಾಲೇಜು, ಬೆಂಗಳೂರು	120	120
9) ಡಾ॥ ಬಿ.ಆರ್. ಅಂಬೇಡ್ಕರ್ ಮೆಡಿಕಲ್ ಕಾಲೇಜು, ಬೆಂಗಳೂರು	120	120
10) ಬಿ.ಎಲ್.ಡಿ.ಇ. ಮೆಡಿಕಲ್ ಕಾಲೇಜು, ಬಿಜಾಪುರ	180	180
11) ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜು, ಬೆಂಗಳೂರು	118	150
12) ಕಸ್ತೂರಬಾ ಮೆಡಿಕಲ್ ಕಾಲೇಜು, ಮಂಗಳೂರು	300	300
13) ಕಸ್ತೂರಬಾ ಮೆಡಿಕಲ್ ಕಾಲೇಜು, ಮಣಿಪಾಲ್	250	250
14) ಅಲ್ ಅಮೀನ್ ಮೆಡಿಕಲ್ ಕಾಲೇಜು, ಬಿಜಾಪುರ	130	130
15) ಸೇಂಟ್‌ಜಾನ್ಸ್ ಮೆಡಿಕಲ್ ಕಾಲೇಜು, ಬೆಂಗಳೂರು	60	60

ಆ) ಸರ್ಕಾರ ನಿಗಧಿ ಪಡಿಸಿದ ಸೀಟುಗಳಿಗಿಂತ ಹೆಚ್ಚು ಸೀಟುಗಳನ್ನು ಯಾವ ಕಾಲೇಜುಗಳಿಗೂ ನೀಡಲಾಗಿಲ್ಲ.

ಸಿಂಧನೂರು ತಾಲ್ಲೂಕಿನಲ್ಲಿ ಮಂಜೂರಾಗಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆ

500 - ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ತಾಲ್ಲೂಕಿನಲ್ಲಿ ಮಂಜೂರಾಗಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು ;

ಆ) ಖಾಲಿ ಇರುವ ಶಿಕ್ಷಕರ ಸಂಖ್ಯೆ ಎಷ್ಟು ;

ಇ) ಈ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಸರ್ಕಾರ ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಎಸ್. ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) 515

ಆ) 17

ಇ) ಖಾಲಿ ಇರುವ ಹುದ್ದೆಗಳನ್ನು 29 ವರ್ಷ ಮತ್ತು ಮೇಲ್ಪಟ್ಟ ವಯೋಮಿತಿಯ ಅಭ್ಯರ್ಥಿಗಳಿಂದ ಭರ್ತಿ ಮಾಡಲು ವಿಶೇಷ ನೇಮಕಾತಿ ನಿಯಮಾವಳಿಗಳನ್ನು ರಚಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಧನಸಹಾಯ ಪಡೆದಿರುವ ಶಾಲೆಗಳು

66 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಿಲ್ಲಾವಾರು ಧನ ಸಹಾಯ ಪಡೆಯುವ ಹಾಗೂ ಧನ ಸಹಾಯ ಪಡೆಯದ ಪ್ರಾಥಮಿಕ ಶಾಲೆಗಳ, ಮಾಧ್ಯಮಿಕ ಶಾಲೆಗಳ, ಪದವಿ ಪೂರ್ವ ಕಾಲೇಜುಗಳ ಸಂಖ್ಯೆಯೆಷ್ಟು?

ಆ) ಧನ ಸಹಾಯ ಪಡೆಯದೆ ಇರುವ ವಿದ್ಯಾಸಂಸ್ಥೆಗಳಿಗೆ ಎಂದಿನಿಂದ ಧನ ಸಹಾಯ ನೀಡಲಾಗುವುದು?

ಇ) ಈ ಸಂಸ್ಥೆಗಳಲ್ಲಿ ನೇಮಕಾತಿಗೆ ಸಂಬಂಧಿಸಿದ ರಿಕ್ರೂಟ್‌ಮೆಂಟ್ ಕಮಿಟಿಗಳು ಇದೆಯೇ; ಇದ್ದರೆ ಈ ನೇಮಕಾತಿ ಸಮಿತಿಯಲ್ಲಿ ಯಾರಾರು ಇರಬೇಕೆಂದು ಸರ್ಕಾರ ಆದೇಶ ಹೊರಡಿಸಿದೆ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ)

	ಪ್ರಾಥಮಿಕ ಶಾಲೆಗಳು	ಪ್ರೌಢಶಾಲೆಗಳು	ಪದವಿಪೂರ್ವ ಕಾಲೇಜುಗಳು
1. ಅನುದಾನ ಸಹಿತ	2269	2485	483
2. ಅನುದಾನ ರಹಿತ	120	204	51

(ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಿದೆ)

ಆ) ಇಲಾಖೆಯಿಂದ ಬಂದಿರುವ ಅನುದಾನ ಪಡೆಯಲು ಅರ್ಹವಿರುವ ಪ್ರಸ್ತಾವನೆಗಳನ್ನು ಶಿಕ್ಷಣ ಸಂಹಿತೆ ನಿಯಮಗಳ ಪ್ರಕಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಇ) ಖಾಸಗಿ ಶಾಲೆಗಳ ಶಿಸ್ತು ಮತ್ತು ನಿಯಂತ್ರಣ ಕಾಯ್ದೆ 1978 ಚಾಪ್ಟರ್ 1ರ ನಿಯಮ 6ರ ಪ್ರಕಾರ ಖಾಸಗಿ ಶಾಲೆಗಳ ನೇಮಕಾತಿಗಳಿಗಾಗಿ ಆಯ್ಕೆ ಸಮಿತಿ ರಚಿಸಬೇಕಾಗುತ್ತದೆ. ಸದರಿ ಸಮಿತಿಯಲ್ಲಿ ಈ ಕೆಳಕಂಡ ಪ್ರತಿನಿಧಿಗಳು ಇರಬೇಕು.

1. ಸಂಸ್ಥೆಯ ಅಧ್ಯಕ್ಷರು : ಮುಖ್ಯಸ್ಥರು ಅಥವಾ ಅವರ ಪ್ರತಿನಿಧಿಗಳು.
2. ಇಲಾಖೆ ಮುಖ್ಯಸ್ಥರು ಅಥವಾ ಅವರ ಪ್ರತಿನಿಧಿ.
3. ಶಾಲಾ ಮುಖ್ಯಸ್ಥರು.
4. ಶಿಕ್ಷಣ ತಜ್ಞರು ಅಥವಾ ವಿಷಯ ತಜ್ಞರು.

ರಾಜ್ಯದಲ್ಲಿ ಅನುದಾನ ಪಡೆಯುತ್ತಿರುವ ಅನುದಾನ ರಹಿತ ಶಾಲಾ ಕಾಲೇಜುಗಳ ಜಿಲ್ಲಾವಾರು ಪಟ್ಟಿ

ಕ್ರ. ಸಂ	ಜಿಲ್ಲೆಗಳ ಹೆಸರು	ಪ್ರಾಥಮಿಕ ಶಾಲೆಗಳು		ಪ್ರೌಢಶಾಲೆಗಳು		ಪದವಿ ಪೂರ್ವ	ಕಾಲೇಜುಗಳು
		ಅನುದಾನ ಸಹಿತ	ಅನುದಾನ ರಹಿತ	ಅನುದಾನ ಸಹಿತ	ಅನುದಾನ ರಹಿತ	ಅನುದಾನ ಸಹಿತ	ಅನುದಾನ ರಹಿತ
1.	ಬೆಂಗಳೂರು ನಗರ	572	20	234	14	39	03
2.	ಬೆಂಗಳೂರು ಗ್ರಾ.	33	02	76	10	09	02
3.	ಕೋಲಾರ	63	02	57	09	06	04
4.	ತುಮಕೂರು	47	01	224	22	55	06
5.	ಚಿತ್ರದುರ್ಗ	64	33	206	12	28	03
6.	ಶಿವಮೊಗ್ಗ	58	03	112	02	16	02
7.	ಮೈಸೂರು	169	05	108	10	41	04
8.	ಮಂಡ್ಯ	47	02	61	02	06	02
9.	ಹಾಸನ	33	04	90	10	16	02
10.	ಚಿಕ್ಕಮಗಳೂರು	27	_	78	14	07	01
11.	ಕೊಡಗು	16	_	46	01	11	_
12.	ದಕ್ಷಿಣ ಕನ್ನಡ	519	01	165	02	31	_
13.	ಬೆಳಗಾವಿ	55	01	236	31	45	06
14.	ಧಾರವಾಡ	73	_	269	16	67	02
15.	ಬಿಜಾಪುರ	120	12	198	16	57	03
16.	ಉತ್ತರ ಕನ್ನಡ	29	_	123	_	14	01
17.	ಗುಲ್ಬರ್ಗಾ	157	05	53	12	17	03
18.	ರಾಯಚೂರು	35	02	37	07	11	02
19.	ಬಳ್ಳಾರಿ	62	04	58	05	09	01
20.	ಬೀದರ್	90	23	54	09	28	04
	ಒಟ್ಟು	2269	120	2485	2-04	483	51

ಗ್ರಾಮಾಂತರ ಹಾಗೂ ಪಟ್ಟಣ ಪ್ರದೇಶಗಳ ಶಾಲಾ ಮಕ್ಕಳಿಗೆ ಕೊಡುತ್ತಿದ್ದ ಹಾಲಿಗೆ ಖರ್ಚಾದ ಹಣ

68 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1993-94ರವರೆಗೆ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಕುಡಿಯಲು ಹಾಲು ಕೊಡುತ್ತಿದ್ದು ಈ ಬಗ್ಗೆ ಖರ್ಚಾದ ಹಣ ಎಷ್ಟು?*

ಆ) *ಗ್ರಾಮಾಂತರ ಶಾಲೆಗಳಿಗೆ ಹಾಗೂ ಪಟ್ಟಣ ಪ್ರದೇಶದ ಮಕ್ಕಳಿಗಾಗಿ ಖರ್ಚಾದ ಹಣ ಪ್ರತ್ಯೇಕ ಪ್ರತ್ಯೇಕವಾಗಿ ಎಷ್ಟು?*

ಇ) *ಈ ಯೋಜನೆಯಲ್ಲಿ ಸರ್ಕಾರದ ತೆಗೆದಿಟ್ಟ ಹಣ ಎಷ್ಟು?*

ಈ) *ಈ ಯೋಜನೆಯಲ್ಲಿ ಗ್ರಾಮಾಂತರ ಶಾಲೆಗಳಿಗೆ ಹಾಲಿನ ಪುಡಿಯನ್ನು ಪಟ್ಟಣದ ಮಕ್ಕಳಿಗೆ ಶುದ್ಧ ಹಾಲನ್ನು ನೀಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ಹಂಚಿಕೆಯಲ್ಲಿ ತಾರತಮ್ಯವೇಕೆ?*

ಶ್ರೀಮತಿ. ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ರೂ. 8,86,24,534.00 ಗಳು

ಆ) ಪಟ್ಟಣದ ಪ್ರದೇಶದ ಶಾಲಾ ಮಕ್ಕಳಿಗಾಗಿ ರೂ. 1,77,24,905.00

ಗ್ರಾಮಾಂತರ ಪ್ರದೇಶದ ಶಾಲಾ ಮಕ್ಕಳಿಗಾಗಿ ರೂ. 7,08,99,629.00

ಇ) ಕ್ಷೀರ ಯೋಜನೆಯನ್ನು 1993-94ನೇ ಸಾಲಿನ ಕೊನೇ ಹಂತದಲ್ಲಿ ಹಮ್ಮಿಕೊಂಡಿದ್ದರಿಂದ ಈ ಯೋಜನೆಗಾಗಿ ಪ್ರತ್ಯೇಕವಾಗಿ ಆಯವ್ಯಯದಲ್ಲಿ ಒದಗಿಸಿಕೊಂಡಿರಲಿಲ್ಲ. ಆದರೆ 1993-94ನೇ ಸಾಲಿನಲ್ಲಿ ಶಿಕ್ಷಣ ಇಲಾಖೆಯ ಅಕ್ಷಯ ಯೋಜನೆಯಡಿ ಆಹಾರ ಕಾರ್ಯಕ್ರಮಕ್ಕಾಗಿ ಒದಗಿಸಿಕೊಂಡಿದ್ದ ಆಯವ್ಯಯದಲ್ಲಿಯೇ ಈ ವೆಚ್ಚವನ್ನು ಭರಿಸಲಾಯಿತು.

ಈ) ಡೇರಿಗಳ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಬರುವ ಶಾಲೆಗಳಿಗೆ ಕಾಯಿಸಿ ಸಿಹಿ ಮಾಡಿದ ಹಾಲನ್ನು ಒದಗಿಸಲಾಗುತ್ತಿದೆ. ಹಾಲು ಉತ್ಪಾದಕರ ಸಹಕಾರ ಸಂಘಗಳು ಅಸ್ತಿತ್ವದಲ್ಲಿ ಇರದ ಪ್ರದೇಶದ ಶಾಲೆಗಳಿಗೆ ಮಾತ್ರ ಹಾಲಿನ ಪುಡಿಯನ್ನು ಸರಬರಾಜು ಮಾಡಲಾಗುತ್ತಿದೆ. ಇದರಿಂದಾಗಿ ತಾರತಮ್ಯದ ಪ್ರಶ್ನೆ ಉದ್ಭವಿಸುವುದಿಲ್ಲ.

ಹೊಳೆನರಸೀಪುರದಲ್ಲಿರುವ ಪ್ರೌಢಶಾಲೆಗಳು

653 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹೊಳೆನರಸೀಪುರದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ ಎಷ್ಟು?*

ಆ) *1993-94ನೇ ಎಷ್ಟು ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿದೆ.*

ಇ) *1994-95ರಲ್ಲಿ ಎಷ್ಟು ಹೊಸ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿದೆ?*

ಈ) *ಇವುಗಳ ಪೈಕಿ ಮಾರನಹಳ್ಳಿ ವಿಭಾಗದಲ್ಲಿ ಎಷ್ಟು ಸರ್ಕಾರಿ ಪ್ರೌಢಶಾಲೆಗಳನ್ನು 1994-95ರಲ್ಲಿ ಮಂಜೂರು ಮಾಡಲಾಗಿದೆ.*

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಎರಡು.

ಆ) 1993-94ನೇ ಸಾಲಿನಲ್ಲಿ ಯಾವ ಸರ್ಕಾರಿ ಪ್ರೌಢಶಾಲೆಗಳು ಮಂಜೂರಾಗಿರುವುದಿಲ್ಲ.

ಇ) ಒಟ್ಟು 218.

ಈ) ಇಲ್ಲ.

ದ. ಕನ್ನಡ ಜಿಲ್ಲೆಯಲ್ಲಿ ಮಲೇರಿಯಾ ಖಾಯಿಲೆ ಬಗ್ಗೆ

574 - ಶ್ರೀ ಸೋಮಪ್ಪ ಸುವರ್ಣ (ಮುಲ್ಕಿ ಮೂಡಬಿದರೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೇರಿಯಾ ಕಾಣಿಸಿಕೊಂಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಎಷ್ಟು ಜನರಿಗೆ ಈ ಕಾಯಿಲೆ ತಾಗಿದೆ?

ಇ) ಇದರ ಚಿಕಿತ್ಸೆಗಾಗಿ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಡಾ|| ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೌದು.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜುಲೈ 94 ರವರಿಗೆ ಒಟ್ಟು 2825 ಮಲೇರಿಯಾ ಪ್ರಕರಣಗಳು ವರದಿಯಾಗಿವೆ. (ಮಂಗಳೂರು ನಗರದಲ್ಲಿ 1429 ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ 1396 ಪ್ರಕರಣಗಳು ವರದಿಯಾಗಿರುತ್ತವೆ.

ಇ) ಈ ಕೆಳಕಂಡ ನಿಯಂತ್ರಣ ಹಾಗೂ ಚಿಕಿತ್ಸಾಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. ಎಲ್ಲಾ ಜ್ವರಪೀಡಿತರಿಂದ ಸ್ಥಿತ ಹಾಗೂ ಸಕ್ರಿಯ ರಕ್ತಲೇಪನ ಸಂಗ್ರಹಿಸಿ, ಮಲೇರಿಯಾ ರೋಗ ಪ್ರಕರಣಗಳನ್ನು ಪತ್ತೆ ಹಚ್ಚಲಾಗುತ್ತಿದೆ. ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ರಕ್ತಲೇಪನ ಸಮೀಕ್ಷೆ ಕಾರ್ಯವನ್ನು ಚುರುಕುಗೊಳಿಸಲಾಗಿದೆ.
2. ಎಲ್ಲಾ ಖಚಿತ ಮಲೇರಿಯಾ ಪ್ರಕರಣಗಳಿಗೂ ಕ್ಲೋರೋಕ್ವಿನ್ ಮತ್ತು ಪ್ರೈಮಾಕ್ವೀನ್ ಗುಳಿಗೆಗಳಿಂದ ತೀವ್ರ ಚಿಕಿತ್ಸೆ - ನೀಡಲಾಗುತ್ತಿದೆ. ಮಲೇರಿಯಾ ನಿರೋಧಕ ಗುಳಿಗೆಗಳು,ಕೀಟನಾಶಕ ಪುಡಿ, ಹೆಗದಾರ್ನ ಸೂಜಿಗಳು, ರಕ್ತ ಲೇಪನ ಸಂಗ್ರಹಣ ಗಾಜಿನ ಹಲಿಗೆಗಳು ಹಾಗೂ ಸೊಳ್ಳೆಮರಿಗಳನ್ನು ನಾಶಪಡಿಸುವ ಕ್ರಿಮಿನಾಶಕ ದ್ರಾವಣಗಳು ಮುಂತಾದ ಅತ್ಯಾವಶ್ಯಕ ವಸ್ತುಗಳು ಸಾಕಷ್ಟು ದಾಸ್ತಾನು ಜಿಲ್ಲೆಗೆ ಸರಬರಾಜು ಮಾಡಲಾಗಿದೆ.
3. ಮಂಗಳೂರು ನಗರದಲ್ಲಿ ಸೊಳ್ಳೆ ಉತ್ಪತ್ತಿತಾಣಗಳನ್ನು ಗುರ್ತಿಸಿ, ಅವುಗಳ ನಿಯಂತ್ರಣಕ್ಕಾಗಿ ಮಹಾನಗರ ಪಾಲಿಕೆಯ ಸಿಬ್ಬಂದಿಯು ಕ್ರಿಮಿನಾಶಕಗಳನ್ನು ಸಿಂಪಡಿಸುತ್ತಿದ್ದಾರೆ. ಇದಲ್ಲದೇ ನೀರು ಇಲ್ಲದಂತೆ ಹಾಗೂ ಸೊಳ್ಳೆ ಉತ್ಪತ್ತಿಯ ತಾಣಗಳನ್ನು ಮುಚ್ಚುವಂತೆ ಸಣ್ಣ ಕಾಮಗಾರಿ ಕೆಲಸಗಳನ್ನು ಕೈಗೊಳ್ಳಲು ನಗರವಾಸಿಗಳಿಗೆ ಸೂಚಿಸಲಾಗಿದೆ.
4. ಜನಜಾಗೃತಿ ಮೂಡಿಸಲು ಆರೋಗ್ಯ ಶಿಕ್ಷಣ ಚಟುವಟಿಕೆಗಳನ್ನು ಮುಂದುವರಿಸಲಾಗಿದೆ.
5. ನಗರದ ಜಿಲ್ಲಾ ಪ್ರಯೋಗಶಾಲೆ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಸೂಕ್ತ ಪ್ರಯೋಗಶಾಲಾ ವ್ಯವಸ್ಥೆಯನ್ನು ರಕ್ತಲೇಪನ ಪರೀಕ್ಷೆಗಾಗಿ ಮಾಡಲಾಗಿದೆ.
6. ಗ್ರಾಮಾಂತರ ಪ್ರದೇಶಗಳಲ್ಲಿ ಡಿ.ಡಿ.ಟಿ. ಕ್ರಿಮಿನಾಶಕದಿಂದ ಫೋಕಲ್ ಸಿಂಪಡೆಯನ್ನು ಕೈಗೊಳ್ಳಲಾಗಿದೆ.

ಮುಲ್ಕಿ ಮೀನುಗಾರಿಕೆ ಬಂದರು ಬಗ್ಗೆ

573 - ಶ್ರೀ ಸೋಮಪ್ಪ ಸುವರ್ಣ, (ಮೂಡಬಿದರೆ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಲ್ಕಿ ಮೀನುಗಾರಿಕೆ ಬಂದರು : ಮುಲ್ಕಿಯ ಯೋಜಿತ ಮೀನುಗಾರಿಕೆ ಬಂದರಿನ ಮಂಜೂರಾತಿಯು ಯಾವ ಹಂತದಲ್ಲಿದೆ;

ಆ) ಈ ಯೋಜನೆಯ ಅಂದಾಜುವೆಚ್ಚವೆಷ್ಟು ;

ಇ) ಈ ಯೋಜನೆ ಕಾರ್ಯಗೊಳಿಸಲು ಕೇಂದ್ರ ಸರ್ಕಾರದ ಸಹಾಯ ದೊರೆಯುವುದೇ;

ಈ) ಹಾಗಿದ್ದಲ್ಲಿ ಇದರ ಕೆಲಸ ಯಾವಾಗ ಪ್ರಾರಂಭವಾಗುವುದು ?

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು) :

(ಅ) ಮುಲ್ಕಿಯಲ್ಲಿ ಈ ಪ್ರಸ್ತಾಪ ಉದ್ಭವಿಸುವುದಿಲ್ಲ. ಆದರೆ ಪಕ್ಕದ ಉಡುಪಿ ತಾಲ್ಲೂಕು ಹೆಜಮಾಡಿ ಕೋಡಿಯಲ್ಲಿ ಈ ಪ್ರಸ್ತಾವನೆ ಇದೆ. ಪ್ರಸ್ತಾವನೆಯು ಭರತ ಸರ್ಕಾರದ ಪರಿಶೀಲನೆಯಲ್ಲಿದ್ದು, ಈ ತಂಗುದಾಣದ ನಿರ್ಮಾಣಕ್ಕೆ ಬೇಕಾಗಿರುವ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ; ಭೂ ಸ್ವಾಧೀನದ ಕ್ರಮ ಅಂತಿಮ ಹಂತದಲ್ಲದೆ.

(ಆ) ಸುಮಾರು 100.00 ಲಕ್ಷ ರೂಪಾಯಿಗಳು.

(ಇ) ಹೌದು, ಶೇಕಡ 50 ರಷ್ಟು ವೆಚ್ಚವನ್ನು ಕೇಂದ್ರ ಸರ್ಕಾರ ಭರಿಸುವುದು;

(ಈ) ಭಾರತ ಸರ್ಕಾರದ ಮಂಜೂರಾತಿ ದೊರೆತ ಕೂಡಲೇ ಕೆಲಸ ಪ್ರಾರಂಭಿಸಲಾಗುವುದು.

ಬೀದರ್ ಜಿಲ್ಲೆಯಲ್ಲಿ ಮೀನುಗಾರಿಕೆ ಅಭಿವೃದ್ಧಿ

384 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಯಾವ ಯಾವ ಕ್ರಮಗಳನ್ನು ರೂಪಿಸಲಾಗಿದೆ;

ಆ) ಜಿಲ್ಲೆಯಲ್ಲಿ ಯಾವ ಯಾವ ಸ್ಥಳಗಳನ್ನು ಇದಕ್ಕಾಗಿ ಆಯ್ದುಕೊಳ್ಳಲಾಗಿದೆ;

ಇ) ಕಳೆದ 4 ವರ್ಷಗಳಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಯಿತು;

ಈ) ಇದರಿಂದ ಯಾವ ಯಾವ ಕೆಲಸಗಳನ್ನು ಮಾಡಲಾಗಿದೆ ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಮೀನು ಮರಿಗಳನ್ನು ದಾಸ್ತಾನು ಮಾಡುವುದು, ಮೀನುಗ್ಗಾರಿಕೆ ಮತ್ತು ಮೀನುಗಾರರ ಸಹಕಾರ ಸಂಘಗಳಿಗೆ ನೆರವು, ಮೀನು ಸಾಕಾಣೆ ಕೊಳಗಳ ನಿರ್ಮಾಣ, ಮೀನುಗಾರರಿಗೆ ತರಬೇತಿ, ಪರಿಶಿಷ್ಟ ವರ್ಗದವರಿಗೆ ನೆರವು, ಮತ್ಸ್ಯಾಲಯ ಸ್ಥಾಪನೆ.

ಆ) ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಇ) ರೂ. 22.50 ಲಕ್ಷ.

ಈ) ಮುಖ್ಯವಾಗಿ ಕೆರೆಗಳಲ್ಲಿ ಮೀನು ಕೃಷಿಗಾಗಿ 35.70 ಲಕ್ಷ ಮೀನು ಮರಿಗಳ ಬಿತ್ತನೆ, 5 ಮೀನು ಕೃಷಿ ಕೊಳಗಳ ನಿರ್ಮಾಣಕ್ಕಾಗಿ ರೈತರಿಗೆ ರೂ. 50,000-00

ಗಳ ಸಹಾಯಧನ, 40 ಮೀನುಗಾರರಿಗೆ ನೆರವು, ಎರಡು ಮೀನುಗಾರರ ಸಹಕಾರ ಸಂಘಗಳಿಗೆ ರೂ. 0.34 ಲಕ್ಷ ಶೇರು ಬಂಡವಾಳ, ಮೀನುಗಾರರಿಗೆ ತರಬೇತಿ, ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯಿಂದ ಸಣ್ಣ ಕೆರೆಗಳ ಅಭಿವೃದ್ಧಿ ಮತ್ತು ಮೀನುಗಾರಿಕೆ ವಿಸ್ತರಣೆ, ವಿಶೇಷ ಘಟಕ ಯೋಜನೆಯಡಿಯಲ್ಲಿ 75 ಪರಿಶಿಷ್ಟ ಜಾತಿಯವರಿಗೆ ಸಹಾಯ.

ಸೋಮವಾರಪೇಟೆ ತಾಲ್ಲೋಕು ಶುಂಟಿಕೊಪ್ಪಕ್ಕೆ ಹೆರಿಗೆ ವಾರ್ಡ್ ಮಂಜೂರಾತಿ

35 - ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರಪೇಟೆ ತಾಲ್ಲೂಕ್ ಶುಂಟಿಕೊಪ್ಪಕ್ಕೆ ಸರ್ಕಾರದಿಂದ ಹೆರಿಗೆ ವಾರ್ಡ್ ಮಂಜೂರಾಗಿದೆಯೇ?

ಆ) ಮಂಜೂರಾಗಿದ್ದರೆ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು.

ಡಾ|| ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಹಣ ಬಿಡುಗಡೆ

375 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95ನೇ ಸಾಲಿನಲ್ಲಿ ಎಷ್ಟು ಶಾಲಾ ಕೊಠಡಿಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗಿದೆ? ಜಿಲ್ಲಾವಾರು ಅಂಕಿಅಂಶಗಳನ್ನು ಒದಗಿಸುವುದು?

ಆ) ಅದಕ್ಕಾಗಿ ಆಯವ್ಯಯದಲ್ಲಿ ಎಷ್ಟು ಹಣವನ್ನು ನಿಗದಿಪಡಿಸಲಾಗಿತ್ತು?

ಇ) ಇದುವರೆವಿಗೂ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಈ) ಆಗಸ್ಟ್ 15, 1994ರ ವೇಳೆಗೆ ಈ ಯೋಜನೆಯನ್ವಯ ಎಷ್ಟು ಕೊಠಡಿಗಳ ನಿರ್ಮಾಣ ಕಾರ್ಯಪೂರ್ಣಗೊಂಡಿದೆ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) 1994-95ನೇ ಸಾಲಿನಲ್ಲಿ ಒಟ್ಟು 20,010 ಶಾಲಾ ಕೊಠಡಿಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಇದರಲ್ಲಿ 8010 1993-94ರ ಬ್ಯಾಕ್‌ಲಾಗ್ ಹಾಗೂ 12.000 1994-95ಕ್ಕೆ ಹೊಸದಾಗಿ ನಿಗದಿ ಮಾಡಲಾಗಿದೆ.

(ಜಿಲ್ಲಾವಾರು ಅಂಕಿಅಂಶಗಳ ಪಟ್ಟಿ ಲಗತ್ತಿಸಿದೆ)

ಆ) 1994-95ರ ಆಯವ್ಯಯದಲ್ಲಿ ಈ ಕಾರ್ಯ ಕ್ರಮಕ್ಕಾಗಿ ರೂ. 3000.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

ಇ) 1993-94ರ ಬ್ಯಾಕ್‌ಲಾಗ್‌ನ್ನು ಪೂರ್ಣಗೊಳಿಸಲು ಇದುವರೆವಿಗೂ ರೂ. 1900-00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಪ್ರಗತಿಯನ್ನಾಧರಿಸಿ 94-95ರ ಆಯವ್ಯಯವನ್ನು ಹಂತಹಂತವಾಗಿ ಬಿಡುಗಡೆ ಮಾಡಲಾಗುತ್ತಿದೆ.

ಈ) 1993-94ರ ಕೊಠಡಿಗಳ ನಿರ್ಮಾಣ ಬಾಬ್ತು ಆಗಸ್ಟ್ 15ರ ವೇಳೆಗೆ 1539ಕೊಠಡಿಗಳ ನಿರ್ಮಾಣ ಪೂರ್ಣಗೊಂಡಿದೆ.. ಉಳಿದವು ವಿವಿಧ ನಿರ್ಮಾಣಹಂತದಲ್ಲಿದೆ. 1994-95ರ ಗುರಿಯನ್ನು ಇನ್ನೂ ಕೈಗೆತ್ತಿಕೊಂಡಿಲ್ಲ.

12000 ಪ್ರಾಥಮಿಕ ಶಾಲಾ ಕೊಠಡಿಗಳ ನಿರ್ಮಾಣದ ಗುರಿ ಮತ್ತು ಸಾಧನೆಯ ವಿವರ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	1993-94ನೇ ಸಾಲಿಗೆ ನಿಗಧಿಪಡಿಸಿದ ಗುರಿ		31-3-94 ಕ್ಕೆ ಪೂರ್ಣಗೊಂಡಿರುವ ಸಂಖ್ಯೆ	ಮಾನ್ಯ ಮುಖ್ಯಮಂತ್ರಿಗಳ 200 ದಿನಗಳ ಕ್ರಿಯಾ ಯೋಜನೆಗೆ ಗುರಿ		1994-95ನೇ ಸಾಲಿಗೆ ನಿಗಧಿಪಡಿಸಿದ ಗುರಿ	30-9-94ರ ಒಳಗೆ ನಿರ್ಮಿಸಲು ಉದ್ದೇಶಿಸಿರುವ ಶಾಲಾ ಕೊಠಡಿಗಳ ಸಂಖ್ಯೆ
		ಸರ್ಕಾರಕ್ಕೆ ನಿಗಧಿಪಡಿಸಿದ್ದು ಸಂಖ್ಯೆ	ಜಿಲ್ಲಾ ಪರಿಷತ್‌ರವರು ನಿರ್ಮಿಸಲು ಒಪ್ಪಿಕೊಂಡಿದ್ದು ಸಂಖ್ಯೆ		93-94 ಬ್ಯಾಕ್‌ಲಾಗ್	ಸಾಧನೆ		
1.	ಬೆಂಗಳೂರು ನಗರ	209	100	15	85	15	209	52
2.	ಬೆಂಗಳೂರು ಗ್ರಾ	649	412	47	365	52	549	182
3.	ಕೋಲಾರ	754	519	_	491	_	754	245
4.	ತುಮಕೂರು	884	345	_	281	_	684	140
5.	ಶಿವಮೊಗ್ಗ	616	616	136	480	136	616	240
6.	ಚಿತ್ರದುರ್ಗ	618	242	_	242	72	618	121
7.	ಮೈಸೂರು	754	917	_	598	_	754	299
8.	ಮಂಡ್ಯ	480	104	_	104	83	480	52
9.	ಚಿಕ್ಕಮಗಳೂರು	480	480	105	375	105	480	187
10.	ಹಾಸನ	549	800	78	471	127	549	235
11.	ಕೊಡಗು	549	549	_	141	_	209	70

12.	ದಕ್ಷಿಣ ಕನ್ನಡ	209	141	106	694	306	549	345
13.	ಬೆಳಗಾಂ	684	1001	465	559	151	684	280
14.	ಧಾರವಾಡ	754	350	18	928	131	1164	464
15.	ಬಿಜಾಪುರ	1164	364	_	350	6	754	175
16.	ಉತ್ತರ ಕನ್ನಡ	754	538	_	538	163	754	269
17.	ಗುಲ್ಬರ್ಗಾ	684	584	369	215	25	684	107
18.	ರಾಯಚೂರು	549	597	_	576	78	616	288
19.	ಬಳ್ಳಾರಿ	344	244	178	419	35	549	210
20.	ಬೀದರ್	616	516	166	98	54	344	49
	ಒಟ್ಟು	12000	10019	1683	8010	1539	12000	4000

ಸುರಕ್ಷಾ ಆರೋಗ್ಯ ಕಾರ್ಯಕ್ರಮದ ಬಗ್ಗೆ

374 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುರಕ್ಷಾ ಎಂಬ ಆರೋಗ್ಯ ಕಾರ್ಯಕ್ರಮವನ್ನು ಯಾವಾಗ ಪ್ರಾರಂಭಿಸಲಾಯಿತು?

ಆ) ಈ ಕಾರ್ಯಕ್ರಮ ಪ್ರಾರಂಭಿಸಿದ ಉದ್ದೇಶವೇನು?

ಇ) 1994-95ನೇ ಸಾಲಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಮಟ್ಟದಲ್ಲಿ ತಾಯಿ-ಮಗುವಿನ ಆರೋಗ್ಯಕ್ಕೆ ಯಾವ ರೀತಿಯಲ್ಲಿ ವಿಶೇಷ ಒತ್ತು ನೀಡಲಾಗಿದೆ?

ಈ) ಆದರೆ ಯೋಜನೆಯ ಅಂಗವಾಗಿ ಇದುವರೆಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಎಷ್ಟು ಎಎನ್ಎಂ ಉಪಕೇಂದ್ರಗಳನ್ನು ಪ್ರಾರಂಭಿಸಲಾಗಿದೆ?

ಉ) ಇದಕ್ಕಾಗಿ 1994-95ನೇ ಸಾಲಿನಲ್ಲಿನ ಆಯವ್ಯಯದಲ್ಲಿ ಎಷ್ಟು ಮೊತ್ತವನ್ನು ಒದಗಿಸಲಾಗಿದೆ?

ಊ) ಇದುವರೆವಿಗೂ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ. (ಜಿಲ್ಲಾವಾರು ಅಂಕಿಅಂಶ ಒದಗಿಸುವುದು)

ಋ) ಖರ್ಚು ಮಾಡಿರುವ ಹಣದ ಮೊತ್ತವೆಷ್ಟು?

ಡಾ॥ ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಪ್ರಸ್ತುತ ಆರ್ಥಿಕ ವರ್ಷದಲ್ಲಿ ಪ್ರಾರಂಭಿಸಲು ಯೋಜಿಸಲಾಗಿದೆ.

ಆ) ಗ್ರಾಮಾಂತರ ಪ್ರದೇಶದಲ್ಲಿ ತಾಯಿ ಮತ್ತು ಮಕ್ಕಳ ಆರೋಗ್ಯ ಸುಧಾರಿಸಲು ಈ ಕಾರ್ಯಕ್ರಮದ ಉದ್ದೇಶವಾಗಿದೆ.

ಇ) ಈ ಕಾರ್ಯಕ್ರಮದಡಿಯಲ್ಲಿ ಈ ಕೆಳಕಂಡ ಅಂಶಗಳಿಗೆ ವಿಶೇಷ ಒತ್ತು ನೀಡಲಾಗಿದೆ.

- ಹೆಚ್ಚುವರಿ ಆರೋಗ್ಯ ಉಪ ಕೇಂದ್ರಗಳನ್ನು ಸ್ಥಾಪಿಸಲಾಗುವುದು.
- ಅತಿಸಾರ ಭೇದಿಗೆ ಚಿಕಿತ್ಸೆಗಾಗಿ ಒಆರ್ಎಸ್ ಪ್ಯಾಕೆಟ್‌ಗಳ ಪೂರೈಕೆ
- ಉಪಕೇಂದ್ರಗಳಿಗೆ ಹೆಚ್ಚುವರಿ ಔಷಧಿ ಪೂರೈಕೆ
- ನ್ಯೂಮೋನಿಯಾ ನಿಯಂತ್ರಣಕ್ಕೆ ಔಷಧಿ ಪೂರೈಕೆ
- ಮಗು ಉಷ್ಣತೆಯನ್ನು ನಿಯಂತ್ರಿಸಲು 200 ವ್ಯಾಟ್ ಬಲ್ಬನ ಟೇಬಲ್ ಲ್ಯಾಂಪ್‌ಗಳು
- ಶುಭ್ರವಾದ ಟವಲ್ಲುಗಳು
- ಮಗು ತೂಕ ಮಾಡುವ ಯಂತ್ರಗಳು
- ಹೆರಿಗೆ ಮಾಡುವ ಸಾಮಾಗ್ರಿ
- ಹಾಸಿಗೆ ಹೊದಿಕೆಗಳು ಇತ್ಯಾದಿ ಪೂರೈಕೆ

ಈ) ಈ ಯೋಜನೆ ಅಡಿಯಲ್ಲಿ 1994-95ನೇ ಸಾಲಿನಲ್ಲಿ 200 ಹೆಚ್ಚುವರಿ ಉಪಕೇಂದ್ರಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ತೆರೆಯಲು ಯೋಜಿಸಲಾಗಿದೆ.

ಉ) ಈ ಯೋಜನೆಯ ವೆಚ್ಚಕ್ಕಾಗಿ 1994-95ನೇ ಸಾಲಿನಲ್ಲಿ 400-00 ಲಕ್ಷ ರೂ.ಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.

ಊ) ಈ ಕಾರ್ಯಕ್ರಮದ ಎಲ್ಲಾ ಅಂಶಗಳು (ಕಾಂಪೋಸೆಂಟ್‌ಗಳು) ಮಂಜೂರಾತಿ ಆದ ತಕ್ಷಣವೇ ಅವಶ್ಯಕವಾದ ಹಣ, ಉಪಕರಣ ಮತ್ತು ಔಷಧಿಗಳನ್ನು ಗುರುತಿಸಲಾದ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗುವುದು.

ಖ) ಈವರೆವಿಗೂ ಹಣ ವೆಚ್ಚವಾಗಿರುವುದಿಲ್ಲ.

ಪೂರ್ವ ಪ್ರಾಥಮಿಕ ಶಿಕ್ಷಕರ ಸಂಖ್ಯೆ

379 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಲಿ ಪೂರ್ವ ಪ್ರಾಥಮಿಕ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು;

ಆ) ಪೂರ್ವ ಪ್ರಾಥಮಿಕ ಶಿಕ್ಷಕರ ನೇಮಕಾತಿಯು ಕಳೆದ 10 ವರ್ಷಗಳಿಂದ ಆಗಿಲ್ಲದಿರುವುದು ನಿಜವೇ;

ಇ) ಪೂರ್ವ ಪ್ರಾಥಮಿಕ ಶಿಕ್ಷಕರ ನೇಮಕಾತಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) 6,643

ಆ) ಇಲ್ಲ.

ಇ) ಪ್ರತಿ ನೇಮಕಾತಿ ನಿಯಮಗಳಲ್ಲಿಯೂ ಸಹ ಖಾಲಿ ಇದ್ದಂತಹ ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕಿಯರ ಹುದ್ದೆಗಳನ್ನು ಇತರೆ ಶಿಕ್ಷಕರ ಹುದ್ದೆಗಳೊಂದಿಗೆ ಭರ್ತಿ ಮಾಡಲಾಗಿದೆ.

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದಂತಹ ಅನುದಾನ ಪಡೆಯುತ್ತಿರುವ ಪ್ರೌಢಶಾಲೆ ಶಿಕ್ಷಕರಿಗೆ ಪ್ರಶಸ್ತಿ ನೀಡುವುದು.

652 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅನುದಾನ ಪಡೆಯುತ್ತಿರುವ ಪ್ರೌಢಶಾಲೆಗಳ ಸಂಖ್ಯೆ ಎಷ್ಟು?

ಆ) ಎಸ್.ಎಸ್.ಎಲ್.ಸಿ. ಪರೀಕ್ಷೆಗಳಲ್ಲಿ ರ್‍ಯಾಂಕ್ ಪಡೆದಂತಹ ಅನುದಾನ ಪ್ರೌಢಶಾಲೆಗಳಿಗೆ ಹಾಗೂ ಅಲ್ಲಿನ ಶಿಕ್ಷಕರುಗಳಿಗೆ ಶಿಕ್ಷಕರ ದಿನಾಚರಣೆ ಸಂದರ್ಭದಲ್ಲಿ ಪ್ರಶಸ್ತಿ ನೀಡಲಾಗುತ್ತಿದೆಯೇ?

ಇ) ರ್‍ಯಾಂಕ್ ಪಡೆದಂತಹ ವಿದ್ಯಾರ್ಥಿಗಳಿಗೆ ಸರ್ಕಾರ ಗೌರವಿಸುತ್ತಿದೆಯೇ?

ಈ) 1994-95 ರಿಂದ ಅನುದಾನ ಪಡೆಯುತ್ತಿರುವ ಪ್ರೌಢಶಾಲೆಗಳು ಗಳಿಸಿದ ರ್‍ಯಾಂಕ್ ಹಾಗೂ ಫಲಿತಾಂಶದ ಆಧಾರದ ಮೇಲೆ ಅಂತಹ ಪ್ರೌಢಶಾಲೆ ಹಾಗೂ ಶಿಕ್ಷಕರುಗಳನ್ನು ಗೌರವಿಸುವ ಯೋಜನೆಯನ್ನು ಹಾಕಿ ಕೊಳ್ಳಲಾಗುವುದೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) 2485

ಆ) ಇಲ್ಲ.

ಇ) ಮೊದಲ ಮೂವರು ರ್‍ಯಾಂಕ್ ವಿಜೇತರಿಗೆ ಕ್ರಮವಾಗಿ ರೂ. 1500-1250 ಮತ್ತು ರೂ. 1000-00 ಗಳ ಬಹುಮಾನ ನೀಡಲಾಗುತ್ತಿದೆ.

ಈ) ಇಲ್ಲ.

ಕುಂದಾಪುರ ಕ್ಷೇತ್ರದಲ್ಲಿ ಶಿಕ್ಷಕರ ಕೊರತೆ

570 - ಶ್ರೀ ಪ್ರತಾಪ್ ಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕುಂದಾಪುರ ವಿಧಾನ ಸಭಾ ಕ್ಷೇತ್ರದಲ್ಲಿ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು, ಪದವಿ ಪೂರ್ವ ಕಾಲೇಜು ಶಿಕ್ಷಕರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಖಾಲಿ ಇರುವ ಶಿಕ್ಷಕರ ಹುದ್ದೆಯನ್ನು ಸರ್ಕಾರ ಎಂದು ಭರ್ತಿ ಮಾಡಲಾಗುವುದು?*

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ಆ) ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕುಂದಾಪುರ ತಾಲ್ಲೋಕಿನಲ್ಲಿರುವ ವೈದ್ಯರುಗಳ ಅಂಕಿ ಸಂಖ್ಯೆಗಳ ಕುರಿತು

569ಎ - ಶ್ರೀ ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕುಂದಾಪುರ ತಾಲ್ಲೂಕಿನ ಆಸ್ಪತ್ರೆಗಳಲ್ಲಿ ನರ್ಸ್‌ಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಈ ಹುದ್ದೆಯನ್ನು ಎಂದು ತುಂಬುವಿರಿ?*

ಇ) *ಆಸ್ಪತ್ರೆವಾರು ವಿವರ ನೀಡುವುದು*

ಡಾ|| ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಕೊರತೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಕುಂದಾಪುರ ತಾಲ್ಲೋಕಿನಲ್ಲಿರುವ ಮಹಿಳಾ ವೈದ್ಯರುಗಳು

569 - ಶ್ರೀ ಪ್ರತಾಪ್‌ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕುಂದಾಪುರ ತಾಲ್ಲೋಕಿನಲ್ಲಿ ವೈದ್ಯಾಧಿಕಾರಿಗಳು ಹಾಗೂ ಮಹಿಳಾ ವೈದ್ಯಾಧೀಕಾರಿಗಳ ಹುದ್ದೆಗಳ ಸಂಖ್ಯೆ ಎಷ್ಟು?*

ಆ) *ಈ ಪೈಕಿ ಎಷ್ಟು ಹುದ್ದೆಗಳು ಭರ್ತಿಯಾಗಿವೆ? ಹಾಗೂ ಎಷ್ಟು ಹುದ್ದೆಗಳು ಖಾಲಿ ಇವೆ?*

ಇ) *ಖಾಲಿ ಇರುವ ಹುದ್ದೆಗಳ ಭರ್ತಿ ಮಾಡದೇ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ನಿಜವಲ್ಲವೇ?*

ಈ) *ಹಾಗಿದ್ದಲ್ಲಿ ಸರ್ಕಾರ ಖಾಲಿ ಇರುವ ಮೇಲ್ಕಂಡ ಹುದ್ದೆಯನ್ನು ಎಂದು ಭರ್ತಿ ಮಾಡಲಾಗುವುದು?*

ಡಾ|| ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 31

ಪುರುಷ - 26

ಮಹಿಳಾ - 5

ಆ) ಭರ್ತಿ - 25

ಖಾಲಿ - 6

ಇ) ಹೌದು

ಈ) ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಆದಷ್ಟು ಜಾಗ್ರತೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಮುಂಡರಗಿ ಆಯುರ್ವೇದಿಕ್ ಆಸ್ಪತ್ರೆ

491 - ಶ್ರೀ ಕೆ.ಹೆಚ್. ಕುರುಡಗಿ (ಮುಂಡರಗಿ) : ಮಾನ್ಯ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಕ್ಷೇತ್ರವಾದ ಮುಂಡರಗಿ ಒಳರೋಗಿಗಳ ವಿಭಾಗದ ಆಯುರ್ವೇದ ಆಸ್ಪತ್ರೆಯನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಗಮನದಲ್ಲಿದೆಯೇ? ಹಾಗಿದ್ದಲ್ಲಿ ಎಂದು ಮಂಜೂರು ಮಾಡಲಾಗುವುದು?

ಶ್ರೀಮತಿ ಸುಮವಸಂತ (ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಸಚಿವರು) :

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಗದಗ ತಾಲ್ಲೂಕು ಪಾಪನಾಶಿಯಲ್ಲಿ ಆಯುರ್ವೇದಿಕ್ ಆಸ್ಪತ್ರೆ.

491(ಅ) - ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ತಾಲ್ಲೂಕು ಪಾಪನಾಶಿ ಗ್ರಾಮದಲ್ಲಿ ಆಯುರ್ವೇದಿಕ್ ಆಸ್ಪತ್ರೆ ಮಂಜೂರಾಗಿದ್ದು, ಇದನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀಮತಿ ಸುಮವಸಂತ (ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಸಚಿವರು) :

ಅ) ಗದಗ ತಾಲ್ಲೂಕು ಪಾಪನಾಶಿ ಗ್ರಾಮಕ್ಕೆ ಆಯುರ್ವೇದ ಔಷಧಾಲಯ ಮಂಜೂರಾಗಿರುವುದಿಲ್ಲ. ಇಲ್ಲಿ ಆಯುರ್ವೇದ ಔಷಧಾಲಯ ತೆರೆಯುವ ಬಗ್ಗೆ ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ನಿರ್ದೇಶಕರಿಂದ ಪ್ರಸ್ತಾವನೆ ಬಂದಿರುತ್ತದೆ. ಸರ್ಕಾರ ಯೋಜನಾ ಮತ್ತು ಆರ್ಥಿಕ ಇಲಾಖೆಯ ಸಹಮತಿ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವೈದ್ಯರುಗಳ ನೇಮಕ

371 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಆರೋಗ್ಯ ಮತ್ತು ಕು.ಕ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ?

ಆ) ಇವುಗಳಲ್ಲಿ ಎಷ್ಟು ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಹುದ್ದೆಗಳು ಖಾಲಿ ಇವೆ?

ಇ) ಯಾವಾಗ ಭರ್ತಿ ಮಾಡಲಾಗುವುದು?

ಡಾ|| ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 1297

ಆ) 133

ಇ) ಸ್ನಾತಕೋತ್ತರ ಶಿಕ್ಷಣ ಮುಗಿಸಿ ವಾಪಸ್ಸು ಬರುವ ವೈದ್ಯರನ್ನು ನೇಮಕ ಮಾಡಿ ಭರ್ತಿ ಮಾಡಲಾಗುವುದು.

ಹೊಸ ವಿಶ್ವವಿದ್ಯಾನಿಲಯಗಳು

627ಎ - ಶ್ರೀ ಎಸ್. ಶಫೀ ಅಹಮದ್ (ತುಮಕೂರು) : ಮಾನ್ಯ ಉನ್ನತಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹೊಸ ವಿಶ್ವವಿದ್ಯಾಲಯ (ಬೆಂಗಳೂರು ಗ್ರಾಮಾಂತರ ವಿಶ್ವವಿದ್ಯಾಲಯ)ವನ್ನು ಪ್ರಾರಂಭಿಸುವ ಪ್ರಸ್ತಾವನೆಯೇನಾದರೂ ಇದೆಯೇ?*

ಆ) *ಹಾಗಿದ್ದಲ್ಲಿ, ಕೋಲಾರ, ಬೆಂಗಳೂರು ಗ್ರಾಮಾಂತರ ಮತ್ತು ತುಮಕೂರಿನ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹೊಸ ವಿಶ್ವವಿದ್ಯಾಲಯ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು? ಮತ್ತು ಅದನ್ನು ಯಾವಾಗ ಪ್ರಾರಂಭಿಸಲಾಗುತ್ತದೆ?*

ಶ್ರೀ ಎಸ್. ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ

ನಂಜನಗೂಡು ತಾಲ್ಲೋಕಿನಲ್ಲಿ ಆನೆಗಳ ಕಾಟ

576 - ಶ್ರೀ ಎಂ. ಮಹದೇವು (ನಂಜನಗೂಡು) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನಂಜನಗೂಡು ತಾಲ್ಲೋಕಿನ ನಾಗನಪುರ ಹರಜೀಪುರ, ಮಡುವಿನಹಳ್ಳಿ, ಕೊತ್ತನಹಳ್ಳಿ ಇತರೆ ಸುತ್ತಮುತ್ತಲ ಗ್ರಾಮಗಳಲ್ಲಿ ಆನೆಗಳ ಕಾಟದಿಂದ ಜನರಿಗೆ ಫಸಲು ನಷ್ಟವಾಗಿ ಭಯಗ್ರಸ್ಥ ಸ್ಥಿತಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು? ಕಾಡಾನೆಗಳ ಕಾಟ ತಪ್ಪಿಸಲು ವಿಶೇಷ ಅರಣ್ಯ ಸಿಬ್ಬಂದಿ ನೇಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? ಮಾಡಿದ್ದಲ್ಲಿ ಫಸಲು ಉಳಿಸಲು ಅತಿ ಶೀಘ್ರದಲ್ಲಿ ಕ್ರಮ ಕೈಗೊಳ್ಳುವುದೇ? ನಷ್ಟಕ್ಕೆ ಪರಿಹಾರ ಒದಗಿಸಿದೆಯೇ? ಮತ್ತು ಈ ಬಗ್ಗೆ ಎಷ್ಟು ದೂರುಗಳು ಬಂದಿವೆ. ಈ ಬಗ್ಗೆ ಅರಣ್ಯ ಸಂರಕ್ಷಣಾಧಿಕಾರಿಯವರು ಎಷ್ಟು ಬಾರಿ ಭೇಟಿ ನೀಡಿ ಪರಿಶೀಲನೆ ನಡೆಸಿ ಕಾಡಾನೆ ಹಾವಳಿ ತಪ್ಪಿಸಲು ಯಾವ ಕ್ರಮ ಕೈಗೊಂಡಿದ್ದಾರೆ. ಮತ್ತು ಒದಗಿಸಿರುವ ಪರಿಹಾರದ ಮೊತ್ತವೆಷ್ಟು?*

ಶ್ರೀ ಹೆಚ್. ವಿಶ್ವನಾಥ್ (ಅರಣ್ಯ ಸಚಿವರು) :

ಅ)

(1) ಬಂದಿದೆ.

(2) ಕಾಡಾನೆಗಳನ್ನು ಸ್ಥಳೀಯ ಜನರೊಂದಿಗೆ ಸ್ಥಳೀಯ ರಕ್ಷಣಾ ಸಿಬ್ಬಂದಿ ತಕ್ಷಣವೇ ಕಾರ್ಯ ಪ್ರವೃತ್ತರಾಗಿ, ಪಟಾಕಿ ಸಿಡಿಸಿ, ತಮಟೆ ಬಾರಿಸಿ, ಕಾಡಿಗೆ ಹಿಂದಕ್ಕಟ್ಟಲು ಕ್ರಮ ಕೈಗೊಳ್ಳಲಾಗುತ್ತಿದೆ.

(3) ವಿಶೇಷ ಸಿಬ್ಬಂದಿಯನ್ನು ದಿನಗೂಲಿ ಆಧಾರದ ಮೇಲೆ ನೇಮಿಸಿಕೊಳ್ಳಲಾಗುತ್ತಿದೆ.

(4) 3ರಲ್ಲಿ ತಿಳಿಸಿರುವಂತೆ ಬೇರೆ ಕ್ರಮ ಉದ್ಭವಿಸುವುದಿಲ್ಲ.

(5) ಬೆಳೆನಾಶದ ಪ್ರಕರಣಗಳ ಅರ್ಜಿಗಳು ಬಂದ ತಕ್ಷಣ ಕಾನೂನು ರೀತ್ಯ ಪರಿಶೀಲಿಸಿ, ಪರಿಹಾರ ನೀಡಲಾಗುತ್ತಿದೆ.

(6) 1-4-94ರಿಂದ ಈವರೆಗೆ 169 ಬೆಳೆನಾಶದ ಅರ್ಜಿಗಳು, 121 ಜಾನುವಾರು ನಷ್ಟದ ಅರ್ಜಿಗಳು, 2 ಮಾನವ ಹತ್ಯೆಯ ಅರ್ಜಿಗಳು ಬಂದಿರುತ್ತದೆ.

(7) ಅರಣ್ಯ ಸಂರಕ್ಷಣಾಧಿಕಾರಿಗಳು ಆಗಿಂದಾಗ್ಗೆ ಕಾಡಾನೆ ಹಾವಳಿ ಇರುವ ಸ್ಥಳಗಳಿಗೆ ಭೇಟಿ ನೀಡಿ, ಆನೆಗಳ ಹಾವಳಿ ತಪ್ಪಿಸಲು, ಸ್ಥಳೀಯ ಸಿಬ್ಬಂದಿಗೆ ಸೂಕ್ತ ನಿರ್ದೇಶನ ನೀಡಿ, ಮೇಲ್ವಿಚಾರಣೆ ನಡೆಸುತ್ತಿರುತ್ತಾರೆ.

(8) 1994-1995ನೇ ಸಾಲಿನಲ್ಲಿ ಒದಗಿಸಿರುವ ಪರಿಹಾರ ಧನದ ವಿವರಗಳು:

		ಸಂಖ್ಯೆ	ಮೊತ್ತ
(ಅ)	ಬೆಳೆನಷ್ಟ ಪ್ರಕರಣಗಳು	169	84,605-00
(ಆ)	ಜಾನುವಾರು ಹತ್ಯೆ	121	39,675-00
(ಇ)	ಪ್ರಾಣ ಹಾನಿ	2	50,000-00
(ಈ)	ಖಾಯಂ ಅಂಗವಿಕಲತೆ	2	7,700-00

ಮುಳಬಾಗಿಲು ತಾಲ್ಲೋಕು ಊರುಕುಂಟೆ ಮಿಟ್ಟೂರು ಗ್ರಾಮದ ಶ್ರೀ ಕೋದಂಡರಾಮ ಪ್ರೌಢಶಾಲೆಗೆ ಅನುದಾನ

566 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ಊರುಕುಂಟೆ ಮಿಟ್ಟೂರು ಗ್ರಾಮದ ಶ್ರೀ ಕೋದಂಡರಾಮ ಪ್ರೌಢಶಾಲೆಗೆ ಅನುದಾನ ಮಂಜೂರಾತಿಗಾಗಿ ಕೋಲಾರ ಜಿಲ್ಲಾ ಪಂಚಾಯ್ತಿಯಿಂದ ಸರ್ಕಾರಕ್ಕೆ ಮನವಿ ಬಂದಿರುವುದೇ?

ಆ) ಹಾಗಿದ್ದಲ್ಲಿ ಅನುದಾನ ಮಂಜೂರಾತಿ ನೀಡದಿರಲು ಕಾರಣವೇನು? ಯಾವಾಗ ನೀಡಲಾಗುವುದು?

ಇ) ವಿಳಂಬಕ್ಕೆ ಕಾರಣರಾದವರ ಮೇಲೆ ಕ್ರಮಕೈಗೊಳ್ಳಲಾಗುವುದೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿದೆ

ಆ) ಮುಖ್ಯ ಕಾರ್ಯನಿರ್ವಾಹಕ ' ಅಧಿಕಾರಿ ಜಿಲ್ಲಾ ಪಂಚಾಯತ್, ಕೋಲಾರ ಇವರು ಆಯವ್ಯಯದಲ್ಲಿ ಸಾಕಷ್ಟು ಅನುದಾನವಿಲ್ಲದಿರುವುದರಿಂದ ಹೊಸದಾಗಿ ಖಾಸಗಿ ಪ್ರೌಢಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲು ಅವಕಾಶವಿಲ್ಲವೆಂದು ತಿಳಿಸಿದ್ದರು. ನಂತರದಲ್ಲಿ ಮರು ಹೊಂದಾಣಿಕೆಯಿಂದ ಅನುದಾನಕ್ಕೆ ಒಳಪಡಿಸಲು ಆಯವ್ಯಯದಲ್ಲಿ ಅವಕಾಶ ಮಾಡಿಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಆದ್ದರಿಂದ ಈಗ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದ್ದು, ಯೋಜನಾ ಇಲಾಖೆ, ಆರ್ಥಿಕ ಇಲಾಖೆಗಳ ಸಹಮತ ಪಡೆದು ಆದೇಶ ಹೊರಡಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಉದ್ಭವಿಸುವುದಿಲ್ಲ.

ಶೈಕ್ಷಣಿಕ ಪರೀಕ್ಷೆಗಳ ನಂತರ ಅಭ್ಯರ್ಥಿಗಳಿಗೆ ಉತ್ತರ ಪತ್ರಿಕೆಗಳನ್ನು ವೀಕ್ಷಿಸುವ ಕುರಿತು

571 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳ ಮೌಲ್ಯಮಾಪನದ ನಂತರ ಉತ್ತರಪತ್ರಿಕೆಗಳನ್ನು ಅಭ್ಯರ್ಥಿಗಳ ಕೋರಿಕೆ ಮೇರೆಗೆ ಶುಲ್ಕದೊಂದಿಗೆ ಪರೀಕ್ಷಿಸುವ

ಅವಕಾಶ ಈ ಹಿಂದೆ ಜಾರಿಯಲ್ಲಿದ್ದುದು ನಿಜವೇ? ಹಾಗಿದ್ದಲ್ಲಿ ಈ ಅವಕಾಶವನ್ನು ಎಂದು ರದ್ದುಪಡಿಸಲಾಗಿದೆ? ರದ್ದುಪಡಿಸಲು ಕಾರಣಗಳೇನು?

ಆ) ಡಿಪ್ಲೋಮಾ ಪರೀಕ್ಷೆಗಳಲ್ಲಿ ಮೌಲ್ಯ ಮಾಪನದ ನಂತರ ಅಭ್ಯರ್ಥಿಗಳಿಗೆ ಈ ರೀತಿ ಅವಕಾಶ ಇರುವುದು ನಿಜವಲ್ಲವೇ? ಹಾಗಿದ್ದಲ್ಲಿ ಶಿಕ್ಷಣ ಇಲಾಖೆಯು ಪಿಯುಸಿ ಮತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆಗಳಲ್ಲಿ ಉತ್ತರ ಪತ್ರಿಕೆಗಳನ್ನು ವೀಕ್ಷಿಸುವ ಅವಕಾಶವನ್ನು ನಿಗಧಿತ ಶುಲ್ಕದೊಂದಿಗೆ ಪರಿಶೀಲಿಸಲು ಪುನಃ ಜಾರಿಗೆ ತರಲಾಗುವುದೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಎಸ್.ಎಸ್.ಎಲ್.ಸಿ ಪರೀಕ್ಷೆಗಳ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ : ಇಡಿ 34 ಎಸ್ಎಕ್ಸ್ಎಂ 82, ದಿನಾಂಕ : 31-10-87ರ ಅನ್ವಯ ಅಭ್ಯರ್ಥಿಗಳ ಕೋರಿಕೆಯ ಮೇರೆಗೆ ಶುಲ್ಕದೊಂದಿಗೆ ಮೌಲ್ಯಮಾಪನವಾದ ಉತ್ತರಪತ್ರಿಕೆಯನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳ ಸಮ್ಮುಖದಲ್ಲಿ ನೋಡಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿತ್ತು. ಆದರೆ ಸಾಕಷ್ಟು ಆಡಳಿತಾತ್ಮಕ ಸಮಸ್ಯೆಗಳು ಉದ್ಭವಿಸುವಬಹುದಾದ ಹಿನ್ನೆಲೆಯಲ್ಲಿ ಈ ಆದೇಶವನ್ನು ಜಾರಿಗೊಳಿಸಲಾಗಿಲ್ಲ.

ಪಿ.ಯು.ಸಿ. ಪರೀಕ್ಷೆಯ ಮೌಲ್ಯಮಾಪನಗೊಳಿಸಿದ ಉತ್ತರಪತ್ರಿಕೆಗಳನ್ನು ಅಭ್ಯರ್ಥಿಗಳ ಕೋರಿಕೆ ಮೇರೆಗೆ ಶುಲ್ಕದೊಂದಿಗೆ ವೀಕ್ಷಿಸುವ ಅವಕಾಶ ಜಾರಿಯಲ್ಲಿರಲಿಲ್ಲ.

ಆ) ಡಿಪ್ಲೋಮಾ ಪರೀಕ್ಷೆಗಳಲ್ಲಿ ಮೌಲ್ಯಮಾಪನದ ನಂತರ ಅಭ್ಯರ್ಥಿಗಳಿಗೆ ವೀಕ್ಷಿಸುವ ಅವಕಾಶವಾಗಲಿ ಅಥವಾ ಮರು ಮೌಲ್ಯಮಾಪನ ಮಾಡಿಸುವ ಅವಕಾಶವಾಗಲಿ ಇರುವುದಿಲ್ಲ. ಆಡಳಿತಾತ್ಮಕ ತೊಂದರೆಗಳು ಉದ್ಭವಿಸುವ ಹಿನ್ನೆಲೆಯಲ್ಲಿ ಈ ಸೌಲಭ್ಯವನ್ನು ಪುನಃ ಜಾರಿಗೆ ತರಲಾಗುವುದಿಲ್ಲ.

ರಾಜ್ಯದಲ್ಲಿರುವ ಗ್ರಂಥಾಲಯಗಳು

67 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಿಲ್ಲಾವಾರು ಗ್ರಂಥಾಲಯ ವಾಚನಾಲಯಗಳ ಸಂಖ್ಯೆ ಹಾಗೂ 91-92, 92-93 ಮತ್ತು 1993-94ರಲ್ಲಿ ನಿಗಧಿಪಡಿಸಿದ, ಖರ್ಚು ಮಾಡಿದ ಹಾಗೂ ಖರ್ಚುಮಾಡದೇ ಉಳಿದಿರುವ ಹಣ ಎಷ್ಟು?

ಆ) ಈ ಗ್ರಂಥಾಲಯ ಹಾಗೂ ವಾಚನಾಲಯಗಳಿಗೆ ಯಾವ ಯಾವ ಪತ್ರಿಕೆಗಳನ್ನು ತರಿಸಲು ಆದೇಶ ಕೊಡಲಾಗಿದೆ?

ಇ) ಪತ್ರಿಕೆಗಳು ಬಾರದೇ, ಓದುವ ಅವಕಾಶ ಇಲ್ಲದೇ ಇರುವ ಗ್ರಂಥಾಲಯಗಳ ಸಂಖ್ಯೆ ಎಷ್ಟು?

ಈ) ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕು ಚಿಕ್ಕೆರೂರ ಗ್ರಂಥಾಲಯಕ್ಕೆ ಪತ್ರಿಕೆಗಳು ಬಾರದೇ ಎಷ್ಟು ತಿಂಗಳಾಗಿವೆ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ)

	ಶಾ.ಗ್ರಂ.	ಗ್ರಾಂ.ಪಂ.ಗ್ರಂ.	ಪು.ವಿ. ಕೇಂದ್ರ
	297	851	297
	1991-92	1992-93	1993-94
ಹಂಚಿಕೆ :	14,78,000	16,32,000	17,32,000

ವೆಚ್ಚ :	14,58,840	16,28,879	14,81,283
ಉಳಿತಾಯ :	19,160	3,121	2,50,717

ಆ) ರಾಜ್ಯದಲ್ಲಿರುವ ಪ್ರಮುಖ ಪತ್ರಿಕೆಗಳಾದ ಕನ್ನಡಪ್ರಭ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಉದಯವಾಣಿ ದಿನಪತ್ರಿಕೆಗಳೊಂದಿಗೆ ಆಯಾ ಸ್ಥಳೀಯ ದಿನಪತ್ರಿಕೆಗಳು, ಮತ್ತು ವಾರಪತ್ರಿಕೆಗಳಾದ ಸುಧಾ, ತರಂಗ,ಲಂಕೇಶ್ ಪತ್ರಿಕೆ, ಚಂದಮಾಮ, ಮಯೂರ, ತುಷಾರ, ಮಲ್ಲಿಗೆ, ಕಸ್ತೂರಿ, ರೂಪತಾರ ಇವುಗಳನ್ನು ಸಾರ್ವಜನಿಕರ ಕೋರಿಕೆಯಂತೆ ಸರಬರಾಜು ಮಾಡಲು ಆದೇಶ ನೀಡಲಾಗಿದೆ.

ಇ) 12

ಈ) 11 ತಿಂಗಳು

ರಾಜ್ಯದಲ್ಲಿ ಮಕ್ಕಳ ಜನನ, ಮರಣದ ಬಗ್ಗೆ

147 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಸಮಯದಲ್ಲಿ ಒಂದು ಮಗು ಜನನವಾಗುತ್ತದೆ?

ಆ) ಹಾಗೂ ಎಷ್ಟು ಅವಧಿಯಲ್ಲಿ ಒಂದು ಮಗು ಸಾಯುತ್ತದೆ.

ಇ) ಹತ್ತು ವರ್ಷಗಳ ಹಿಂದೆ ಈ ಪ್ರಮಾಣ ಎಷ್ಟು ಇತ್ತು?

ಈ) ಇಂದಿನ ಈ ಸ್ಥಿತಿಗೆ ತಲುಪಬೇಕಾದರೆ ನಾವು ಕೈಗೊಂಡಿರುವ ವೆಚ್ಚ ಎಷ್ಟು?

ಡಾ॥ ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಪ್ರತಿ 25.77 ಸೆಕೆಂಡಿಗೆ ಒಂದು ಮಗು ಜನನವಾಗುತ್ತದೆ.

ಆ) ಪ್ರತಿ 5.88 ನಿಮಿಷಕ್ಕೆ ಒಂದು ಮಗು ಸಾಯುತ್ತದೆ.

ಇ) ಹತ್ತು ವರ್ಷಗಳ ಹಿಂದೆ ಪ್ರತಿ 25.83 ಸೆಕೆಂಡಿಗೆ ಒಂದು ಮಗುವಿನ ಜನನ ಹಾಗೂ ಪ್ರತಿ 5.82 ನಿಮಿಷಕ್ಕೆ ಒಂದು ಮಗುವಿನ ಮರಣವಾಗುತ್ತಿತ್ತು.

ಈ) 1983-84ನೇ ಸಾಲಿನಿಂದ 1993-94ನೇ ಸಾಲಿನವರೆಗೂ ಕುಟುಂಬ ಕಲ್ಯಾಣ ಮತ್ತು ತಾಯಿ ಮಕ್ಕಳ ಆರೋಗ್ಯ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಸುಮಾರು 369.00 ಕೋಟಿ ಹಣವನ್ನು ವೆಚ್ಚ ಮಾಡಲಾಗಿದೆ.

ಖಾಸಗಿ ಸಂಸ್ಥೆಗಳ ಉಪಾಧ್ಯಾಯರಿಗೆ ತರಬೇತಿ ಕೇಂದ್ರ

118 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗಿ ಸಂಸ್ಥೆಗಳು ನಡೆಸುತ್ತಿರುವ ಉಪಾಧ್ಯಾಯರ ತರಬೇತಿ ಕೇಂದ್ರ (ಟಿ.ಸಿ.ಹೆಚ್) ಗಳೆಷ್ಟು?

ಆ) ಮಾನ್ಯತೆ ಪಡೆದಿರುವ ಉಪಾಧ್ಯಾಯರ ತರಬೇತಿ ಕೇಂದ್ರಗಳೆಷ್ಟು?

ಇ) ಮಾನ್ಯತೆ ಪಡೆಯದಿರುವ ಉಪಾಧ್ಯಾಯರ ತರಬೇತಿ ಕೇಂದ್ರಗಳೆಷ್ಟು?

ಈ) ಮಾನ್ಯತೆ ದೊರೆಯದಿರುವ ಸಂಸ್ಥೆಗಳೆಷ್ಟು?

ಉ) ಮಾನ್ಯತೆ ಕೊಡದಿರಲು ಕಾರಣಗಳೇನು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) 148

ಆ) 91
ಇ) 57
ಈ) 57

ಉ) 8ನೇ ಪಂಚವಾರ್ಷಿಕ ಯೋಜನಾ ಅವಧಿಯ ಅಂತ್ಯದವರೆಗೆ ಯಾವುದೇ ಹೊಸ ಶಿಕ್ಷಕರ ತರಬೇತಿ ಕೇಂದ್ರಗಳನ್ನು ತೆರೆಯಲು ಅನುಮತಿ ನೀಡಬಾರದೆಂದು ಸರ್ಕಾರದ ನೀತಿಗೆ ಅನುಗುಣವಾಗಿ ಮಾನ್ಯತೆಯನ್ನು ಕೊಡುತ್ತಿಲ್ಲ.

ಖಾಲಿ ಇರುವ ವೈದ್ಯರುಗಳ ನೇಮಕಾತಿ

221 - ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು?
ಆ) 1991-92, 92-93 ಹಾಗೂ 93-94ನೇ ಸಾಲಿನಲ್ಲಿ ಲೋಕಸೇವಾ ಆಯೋಗ ಹಾಗೂ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿರುವ ವೈದ್ಯರುಗಳ ಸಂಖ್ಯೆ ಎಷ್ಟು?
ಇ) ಬೀದರ್ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆ ಎಷ್ಟು?
ಈ) ಈ ಪೈಕಿ ಬಸವಕಲ್ಯಾಣ ತಾಲ್ಲೂಕಿನಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳೆಷ್ಟು?
ಉ) ರಾಜ್ಯದಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡು ಕ್ರಮಗಳೇನು?

ಡಾ॥ ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 441
ಆ)

ಲೋಕ ಸೇವಾ	ಆಯೋಗದಿಂದ
1991-92	518
1992-93	-
1993-94	-

ಗುತ್ತಿಗೆ ಆಧಾರದ	ಮೇಲೆ ವರದಿ	ಮಾಡಿಕೊಂಡವರು
1991-92	-	-
1992-93	380	288
1993-94	374	194
1994-95	293	149

ಇ) 12

ಈ) 1

ಉ) ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಖಾಲಿಇದ್ದ ವೈದ್ಯರ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಪಟ್ಟಣ ಪ್ರದೇಶದ ಖಾಲಿ ಹುದ್ದೆಗಳಿಗೆ ಸ್ನಾತಕೋತ್ತರ ಶಿಕ್ಷಣ ಮುಗಿಸಿ ಬರುವ ವೈದ್ಯರನ್ನು ನೇಮಕ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ದ.ಕನ್ನಡ ಜಿಲ್ಲೆ ಮಂಗಳೂರು ತಾಲ್ಲೋಕು ಸರ್ಕಾರಿ ಪದವಿ ಕಾಲೇಜು ಕುರಿತು

497 - ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೋಕಿನಲ್ಲಿ 'ಸರ್ಕಾರಿ ಪದವಿ ಕಾಲೇಜು' ಇಲ್ಲದಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮಂಗಳೂರು ತಾಲ್ಲೂಕಿನ 'ಕಾವೂರ'ನಲ್ಲಿ ಸರ್ಕಾರಿ ಪದವಿ ಕಾಲೇಜಿನ ಪ್ರಾರಂಭಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ?

ಇ) 1994-95ರ ಶಿಕ್ಷಣ ವರ್ಷದಲ್ಲಿಯೇ ಮೇಲ್ಕಂಡ ಕಾಲೇಜನ್ನು ಪ್ರಾರಂಭಿಸಲು ಸರ್ಕಾರದ ಆದ್ಯತೆ ನೀಡುವುದೇ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) ಇಲ್ಲ

ಆ) ಇಲ್ಲ

ಇ) ಇಲ್ಲ

ಕುಪ್ಪದ ಗುಡ್ಡಕ್ಕೆ ಸಸಿಗಳನ್ನು ನೆಡುವ ಬಗ್ಗೆ

494 - ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ್ ಮತ್ತು ಮುಂಡರಗಿ ತಾಲ್ಲೂಕಿನ ಕುಪ್ಪದ ಗುಡ್ಡಕ್ಕೆ ಸಸಿಗಳನ್ನು (ಪ್ಲಾಂಟೇಷನ್) ಹೆಚ್ಚಿಗೆ ಬೆಳೆಸುವ ವಿಷಯದ ಬಗ್ಗೆ ಸರ್ಕಾರದವರು ಯೋಚಿಸಿರುವರೇ?

ಆ) ಹಾಗಿದ್ದಲ್ಲಿ ಯಾವ ತಾಲ್ಲೂಕಿನಲ್ಲಿ ಎಷ್ಟು ಎಂಬುದರ ಬಗ್ಗೆ ವಿವರ ನೀಡುವುದು?

ಇ) ಈ ವಿಷಯದಲ್ಲಿ ಈಗಾಗಲೇ ಒಂದು ಯೋಜನೆ ತಯಾರಾಗಿದ್ದು ನಿಜವೇ?

ಈ) ಹಾಗಿದ್ದಲ್ಲಿ, ಈ ಯೋಜನೆಯು ಯಾವ ಹಂತದಲ್ಲಿದೆ?

ಶ್ರೀ ಹೆಚ್. ವಿಶ್ವನಾಥ್ (ಅರಣ್ಯ ಸಚಿವರು) :

ಅ) ಹೌದು

ಆ) ಕುಪ್ಪದಗುಡ್ಡ ಪ್ರದೇಶದಲ್ಲಿ ಈ ಕೆಳಕಂಡ ತಾಲ್ಲೂಕುಗಳಲ್ಲಿ ಸಸಿಗಳನ್ನು ಬೆಳೆಸಲು ಯೋಜಿಸಿರುವ ನೆಡು-ತೋಪುಗಳ ಪ್ರಮಾಣ ಈ ಕೆಳಕಂಡಂತಿದೆ.

ವರ್ಷ	ಮುಂಡರಗಿ	ಶಿರಹಟ್ಟಿ	ಗದಗ್
1992-93	75 ಹೆ.	50 ಹೆ.	25 ಹೆ.
1993-94	75 ಹೆ.	50 ಹೆ.	25 ಹೆ.
1994-95	75 ಹೆ.	50 ಹೆ.	25 ಹೆ.
1995-96	75 ಹೆ.	50 ಹೆ.	25 ಹೆ.

ಒಟ್ಟು 600 ಹೆಕ್ಟೇರುಗಳು

ಇ) ಹೌದು

ಈ) ಉಪ ಅರಣ್ಯ ಸಂರಕ್ಷಣಾಧಿಕಾರಿ, ಗದಗ್‌ರವರು 600 ಹೆಕ್ಟೇರ್ ಪ್ರದೇಶದಲ್ಲಿ ನೆಡುತೋಪು ಬೆಳೆಸಲು ಪ್ರಸ್ತಾವನೆ ಕಳಿಸಿದ್ದು, ಈ ವಿಷಯಕ್ಕೆ ಆದ್ಯಗಮನ ನೀಡಿ ಕುಪ್ಪದ ಗುಡ್ಡ ಪ್ರದೇಶದಲ್ಲಿ ಬರುವ ತಾಲ್ಲೂಕುಗಳಲ್ಲಿ ಕೆಳಕಂಡ ಪ್ರಮಾಣದ ನೆಡುತೋಪು ಬೆಳೆಸಲಾಗಿದೆ. ಅನುದಾನ ಲಭ್ಯವಾದ ಹಾಗೆ ಕುಪ್ಪದಗುಡ್ಡ ಪ್ರದೇಶದಲ್ಲಿ ನೆಡುತೋಪು ಕಾರ್ಯಕ್ರಮ ಹಂತಹಂತವಾಗಿ ಕೈಗೊಳ್ಳಲಾಗುವುದು.

ಕಪ್ಪದಗುಡ್ಡ ಪ್ರದೇಶದಲ್ಲಿ ಬೆಳೆಸಲಾದ ನೆಡುತೋಪು ವಿವರ ಕೆಳಕಂಡಂತಿದೆ.

ವರ್ಷ	ಮುಂಡರಗಿ	ಶಿರಹಟ್ಟಿ	ಗದಗ್	ಒಟ್ಟು
1992-93	161 ಹೆ.	41 ಹೆ.	-	202
1993-94	165 ಹೆ.	205 ಹೆ.	10 ಹೆ.	380
1994-95	120 ಹೆ.	270 ಹೆ.	100 ಹೆ.	490
	446 ಹೆ.	516 ಹೆ.	110 ಹೆ.	1072

ನವಮಂಗಳೂರು ಬಂದರು ನಿರ್ಮಾಣ

496 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವಮಂಗಳೂರು ಬಂದರು ನಿರ್ಮಾಣದ ಸಂದರ್ಭದಲ್ಲಿ ಸ್ಥಳೀಯ ಮೀನುಗಾರರಿಗಾಗಿ ಪ್ರತ್ಯೇಕ ಜಟ್ಟಿ ನಿರ್ಮಾಣದ ಆಶ್ವಾಸನೆ ಈವರೆವಿಗೆ ಜಾರಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಈ ಜೆಟ್ಟಿಯ ಶೀಘ್ರ ನಿರ್ಮಾಣಕ್ಕಾಗಿ ರಾಜ್ಯದ ಮೀನುಗಾರಿಕಾ ಇಲಾಖೆ ಕೈಗೊಂಡ ಕ್ರಮಗಳೇನು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯಸಚಿವರು):

ಅ) ಬಂದಿದೆ.

ಆ) ಈ ಬಗ್ಗೆ ಸಮೀಕ್ಷೆಯನ್ನು ಕೈಗೊಂಡು ಯೋಜನಾ ವರದಿ ಸಲ್ಲಿಸಲು ಭಾರತ ಸರ್ಕಾರದ ಬೆಂಗಳೂರಿನಲ್ಲಿರುವ ಕೇಂದ್ರೀಯ ಕರಾವಳಿ ಮೀನುಗಾರಿಕಾ ಇಂಜಿನಿಯರಿಂಗ್ ಸಂಸ್ಥೆಯನ್ನು ಕೋರಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಖಾಸಗಿ ಅನುದಾನಿತ ಶಾಲೆಗಳ ಬಗ್ಗೆ

148 - ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಖಾಸಗಿ ಅನುದಾನಿತ ಶಾಲೆಗಳಲ್ಲಿ ಬಡ್ತಿ, ನೇಮಕಗಳ ಸಂಬಂಧದಲ್ಲಿ ಕಳೆದ ಐದು ವರ್ಷಗಳಲ್ಲಿ ಸರ್ಕಾರದ ಗಮನಕ್ಕೆ ಬಂದಿರುವ ಅವ್ಯವಹಾರದ ಪ್ರಕರಣಗಳೆಷ್ಟು?

ಆ) ಮೇಲ್ಕಂಡ ಕಾನೂನು ಬಾಹಿರ ಕೃತ್ಯಗಳಲ್ಲಿ ತೊಡಗಿರುವ ವಿರುದ್ಧ ಸರ್ಕಾರ ಕೈಗೊಂಡ ಇಲಾಖಾ ಹಾಗೂ ಶಿಸ್ತಿನ ಕ್ರಮಗಳೇನು?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) ಯಾವುದೇ ಅವ್ಯವಹಾರದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

1 ರಿಂದ 4ನೇ ತರಗತಿಗೆ ಕನ್ನಡ ಕಡ್ಡಾಯ ಕುರಿತು

495 - ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ 1ನೇ ತರಗತಿಯಿಂದ 4ನೇ ತರಗತಿಯವರೆಗೆ ಕನ್ನಡ ಮಾಧ್ಯಮವನ್ನು ಕಡ್ಡಾಯಗೊಳಿಸುವ ಸರ್ಕಾರದ ಅಸಮಂಜಸ ಕ್ರಮವನ್ನು ವಾಪಸ್ ಪಡೆಯಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು?

ಆ) ರಾಜ್ಯದಲ್ಲಿ ನೂತನ ಇಂಗ್ಲೀಷ್ ಮಾಧ್ಯಮದ ಶಾಲೆಗಳನ್ನು ಗ್ರಾಮಾಂತರ ತಾಲ್ಲೂಕು; ಜಿಲ್ಲಾ ಸ್ಥಳಗಳಲ್ಲಿ ಪ್ರಾರಂಭಿಸಲು ಸರ್ಕಾರ ಏಕೆ ಅನುಮತಿ ನೀಡುತ್ತಿಲ್ಲ?

ಇ) ಭಾಷಾ ಮಾಧ್ಯಮದ ಆಯ್ಕೆ ವಿದ್ಯಾರ್ಥಿಗಳ ಪ್ರೇಕ್ಷಕರ ಸ್ವಾತಂತ್ರ್ಯವಾಗಿರುವುದರಿಂದ ಇದರಲ್ಲಿ ಸರ್ಕಾರದ ಮಧ್ಯಪ್ರವೇಶ ತಕ್ಷಣದಿಂದ ನಿಲ್ಲಿಸಲಾಗುವುದೇ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) 1 ರಿಂದ 4ನೇ ತರಗತಿಯವರೆಗೆ ಮಕ್ಕಳ ಮಾತೃ ಭಾಷೆ ಅಥವಾ ಕನ್ನಡಮಾಧ್ಯಮದಲ್ಲಿ ಶಿಕ್ಷಣ ನೀಡುವುದು ಸರ್ಕಾರದ ಶಿಕ್ಷಣ ನೀತಿಯಾಗಿದೆ. ಇದು ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿರುತ್ತದೆ. ಇದರನ್ವಯ ಹೊರಡಿಸಿರುವ ಆದೇಶವನ್ನು ಹಿಂದೆ ಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಅವಶ್ಯಕತೆ ಕಂಡು ಬಂದಲ್ಲಿ 5ನೇ ತರಗತಿಯಿಂದ ಆಂಗ್ಲ ಮಾಧ್ಯಮದ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಅನುಮತಿ ನೀಡಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಅನುದಾನ ಶಾಲೆಗಳಿಗೆ ಬೋಧಕರ ಹುದ್ದೆಗಳ ಭರ್ತಿ

498 - ಶ್ರೀ ಬಿ.ಐ. ಪಾಟೀಲ (ಉಚ್ಚಗಾವ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅನುದಾನಿತ ಪ್ರಾಥಮಿಕ ಕಿರಿಯ ಪ್ರಾಥಮಿಕ ಪ್ರೌಢಶಾಲೆಗಳ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿನ ಬೋಧಕೇತರ ಹುದ್ದೆಗಳನ್ನು ತುಂಬಲು ಆರ್ಥಿಕ ಮಿತವ್ಯಯ ಆದೇಶವಿದೆಯೇ?

ಆ) ಹಾಗಿದ್ದಲ್ಲಿ ಈ ಹುದ್ದೆಗಳನ್ನು ತುಂಬಲು ಆರ್ಥಿಕ ಮಿತವ್ಯಯ ಆದೇಶ ಸಡಿಲಿಸಲಾಗುವುದೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಹೌದು

ಆ) ಸದ್ಯಕ್ಕೆ ಪೂರ್ಣ ಮಿತವ್ಯಯ ಆದೇಶ ಸಡಿಲಿಸಲು ಸಾಧ್ಯವಿಲ್ಲ. ಆದರೂ, ಖಾಸಗಿ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಕೆಲವು ಬೋಧಕೇತರ ಹುದ್ದೆಗಳನ್ನು ತುಂಬಲು ಆರ್ಥಿಕ ಮಿತವ್ಯಯ ಆದೇಶವನ್ನು ದಿ : 12.8.94ರಲ್ಲಿ ಸಡಿಲಿಸಲಾಗಿದೆ.

ಅರಣ್ಯ ಜಮೀನಿನಲ್ಲಿ ಮರಗಿಡಗಳನ್ನು ಬೆಳೆಸುವುದು

380 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿರುವ ಅರಣ್ಯ ಭೂಮಿಯ ವಿಸ್ತೀರ್ಣವೆಷ್ಟು?

ಆ) ಇದರಲ್ಲಿ ಮರಗಿಡಗಳು ಇರುವ ವಿಸ್ತೀರ್ಣ ವೆಷ್ಟು?

ಇ) ಇದರಲ್ಲಿ ಅನಧಿಕೃತ ಸಾಗುವಳಿ ಆಗಿರುವ ವಿಸ್ತೀರ್ಣವೆಷ್ಟು?

ಈ) ಈ ಭಾಗದಲ್ಲಿ ಗಿಡ ಬೆಳೆಸಲು ಸರ್ಕಾರ ಇತ್ತೀಚಿನ ಸುಮಾರು ಐದು ವರ್ಷಗಳಲ್ಲಿ ಮಾಡಿರುವ ಕಾರ್ಯಕ್ರಮವೇನು? ನೆಟ್ಟಿರುವ ಗಿಡಗಳ ಸಂಖ್ಯೆ ಎಷ್ಟು ಇರಬಹುದು? ಉಳಿದಿರುವ ಗಿಡಗಳು ಎಷ್ಟು?

ಶ್ರೀ ಹೆಚ್. ವಿಶ್ವನಾಥ್ (ಅರಣ್ಯ ಸಚಿವರು):

ಅ) 10992 ಹೆಕ್ಟೇರ್‌ಗಳು

ಆ) 10092 ಹೆ. ವಿಸ್ತೀರ್ಣದಲ್ಲಿ ಸ್ವಾಭಾವಿಕವಾಗಿ ಬೆಳೆದ ವಿವಿಧ ಜಾತಿಯ ಕುರುಚಲು ಗಿಡ ಮತ್ತು ಲಾಂಟಾನ ಗಿಡಗಳಿರುತ್ತವೆ.

ಇ) 1978ರ ಮುಂಚೆ ಈ ವಲಯದಲ್ಲಿ 147 ಎಕರೆ 19 ಗುಂಟೆ ವಿಸ್ತೀರ್ಣದ ಅರಣ್ಯ ಭೂಮಿಯನ್ನು ಅನಧಿಕೃತ ಸಾಗುವಳಿ ಮಾಡಿರುತ್ತಾರೆ.

ಈ) ಚಿಕ್ಕನಾಯಕನಹಳ್ಳಿ ವಲಯದಲ್ಲಿ ಐದು ವರ್ಷಗಳಿಂದ 1070-30 ಹೆಕ್ಟೇರ್ ವಿಸ್ತೀರ್ಣದಲ್ಲಿ ಈ ಕೆಳಗೆ ವಿವರಿಸಿರುವಂತೆ ನೆಡುತೋಪು ಬೆಳೆಸಲಾಗಿದೆ.

1) ಪ್ರಾದೇಶಿಕ ವಿಭಾಗ :

	ವರ್ಷಾವಾರು ವಿವರ ಈ ರೀತಿ ಇದೆ		ನೆಟ್ಟಿರುವ ಸಸಿ ಗಳ ಸಂಖ್ಯೆ	ಉಳಿದಿರುವ ಸಂಖ್ಯೆ
1)	89-90	85.50 ಹೆ.		
2)	90-91	40.50 ಹೆ.	404170	ಶೇಕಡ 80
3)	91-92	105.00 ಹೆ.		ರಷ್ಟು
4)	92-93	110.00 ಹೆ.		ಉಳಿದಿದೆ
5)	93-94	108.30 ಹೆ.		
		449.30 ಹೆ.		

2) ಸಾಮಾಜಿಕ ಅರಣ್ಯ ವಿಭಾಗ

1)	89-90	125.00 ಹೆ.		
2)	90-91	88.00 ಹೆ.		
3)	91-92	50.00 ಹೆ.	6.723	ಶೇಕಡ 65
4)	92-93	211.00 ಹೆ.	ಲಕ್ಷ	ರಿಂದ
5)	93-94	147.00 ಹೆ.		70 ಉಳಿದಿರುತ್ತದೆ
		621.00 ಹೆ.		

ಅರಣ್ಯ ಜಮೀನಿನ ಅಭಿವೃದ್ಧಿಗೆ ಖರ್ಚಾದ ಹಣ

380ಎ - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಣ್ಯ ಜಮೀನಿನ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ಮಾಡಲಾಗಿರುವ ಹಣವೆಷ್ಟು? ಇದರಲ್ಲಿ ಸಿಬ್ಬಂದಿ ವೆಚ್ಚವೇನು, ಅರಣ್ಯ ಅಭಿವೃದ್ಧಿಗಾಗಿಯೇ ಮಾಡಿದ ಖರ್ಚು ಎಷ್ಟು?

ಆ) ಅರಣ್ಯ ಇಲಾಖಾವತಿಯಿಂದ ಹಾಕಲಾಗಿದ್ದ ತುಮಕೂರು ಜಿಲ್ಲೆಯಲ್ಲಿ ಮರಗಳು ಅದರಲ್ಲೂ ನೀಲಗಿರಿ ಮರಗಳನ್ನು ಹಾಡುಹಗಲೇ ಕಡಿದುಕೊಂಡು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರದವರು ಕ್ರಮ ಕೈಗೊಳ್ಳದಿರಲು ಕಾರಣವೇನು?

ಶ್ರೀ ಹೆಚ್. ವಿಶ್ವನಾಥ್ (ಅರಣ್ಯ ಸಚಿವರು) :

ಅ) ಅರಣ್ಯ ಅಭಿವೃದ್ಧಿಗಾಗಿ ಹಾಗೂ ಸಿಬ್ಬಂದಿ ವೆಚ್ಚಕ್ಕಾಗಿ ಕಳೆದ ಐದು ವರ್ಷಗಳಲ್ಲಿ ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನಲ್ಲಿ ಖರ್ಚು ಮಾಡಿದ ವೆಚ್ಚದ ವಿವರವು ಈ ಕೆಳಕಂಡಂತೆ ಇದೆ.

ವರ್ಷ	ಸಿಬ್ಬಂದಿವೆಚ್ಚ	ಅರಣ್ಯಾಭಿವೃದ್ಧಿಗೆ ಖರ್ಚು ಮಾಡಿದ ಹಣ	ಒಟ್ಟು ವೆಚ್ಚ
		(ರೂ.	ಲಕ್ಷಗಳಲ್ಲಿ)
1989-90	7,14,160	12,93,044	20,07,204
1990-91	7,25,489	10,83,597	18,09,086
1991-92	8,38,883	15,26,900	23,65,783
1992-93	8,39,515	19,36,603	27,76,118
1993-94	10,03,312	22,53 187	32,56,499

ಆ) ಹೌದು

ಇ) ತುಮಕೂರು ಜಿಲ್ಲೆಯಲ್ಲಿ ಮರಗಳನ್ನು ಅದರಲ್ಲೂ ನೀಲಗಿರಿ ಮರಗಳನ್ನು ಕಡಿದುಕೊಂಡು ಹೋಗುವುದನ್ನು ತಪ್ಪಿಸಲು ಎಲ್ಲಾ ಕ್ರಮಗಳನ್ನೂ ಕೈಗೊಳ್ಳಲಾಗಿದೆ. ಅಕ್ರಮವಾಗಿ ನೀಲಗಿರಿ ಮರಗಳನ್ನು ಕಡಿದವರನ್ನು ಹಿಡಿದು ಅರಣ್ಯ ಕಾಯಿದೆಯ ಪ್ರಕಾರ ಕ್ರಮ ಜರುಗಿಸಿ ಅವರುಗಳಿಂದ ಕಾನೂನು ರೀತ್ಯ ದಂಡ ವಸೂಲಿ ಮಾಡಲಾಗಿದೆ. ಹಲವು ಪ್ರಕರಣಗಳು ನ್ಯಾಯಾಲಯದಲ್ಲಿ ಇರುತ್ತದೆ. ಜಂಟೀ ಅರಣ್ಯ ಯೋಜನೆಯಡಿಯಲ್ಲಿ, ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಿ ಕ್ಷೀಣಿತ ಅರಣ್ಯಗಳನ್ನು ಮತ್ತು ನೆಡುತೋಪುಗಳನ್ನು ನಿರ್ವಹಿಸಲು ಆ ಸಮಿತಿಗೆ ವಹಿಸಿ ಕೊಡಲಾಗಿರುತ್ತದೆ. ನೆಡು ತೋಪುಗಳ ರಕ್ಷಣೆ ಸ್ಥಳೀಯ ಜನರಿಂದ ಆಗುವುದರಲ್ಲಿ ಸಂಶಯವಿಲ್ಲ. ಇದರ ಜೊತೆಗೆ ಅರಣ್ಯ ಇಲಾಖೆಯ ಸಿಬ್ಬಂದಿಯೂ ಸಹ ರಾತ್ರಿ ಪಹರೆ ನಡೆಸಲು ವ್ಯವಸ್ಥೆ ಮಾಡಲಾಗಿದೆ.

ತುಮಕೂರು ಜಿಲ್ಲೆಯಲ್ಲಿ ಶಿಕ್ಷಕರ ನೇಮಕಾತಿ ವಿಷಯದಲ್ಲಿ ಕೃಪಾಂಕನೀಡಿದ ಬಗ್ಗೆ

381 ಎ - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಇತ್ತೀಚೆಗೆ ನೇಮಕಾತಿ ಮಾಡಿದ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಯ ಶಿಕ್ಷಕರ ಸಂಖ್ಯೆ ಎಷ್ಟು?

ಆ) ಇದರಲ್ಲಿ ಆಯ್ಕೆ ಆದವರಿಗಿಂತ ಹೆಚ್ಚಿನ ಅಂಶಗಳಿಸಿದ್ದಾಗ್ಯೂ ಆಯ್ಕೆ ಮಾಡಿಲ್ಲವೆಂದು ಸಲ್ಲಿಸಿರುವ ತಕರಾರುಗಳೆಷ್ಟು?

ಇ) ಹೀಗಾಗಲು ಕಾರಣವೇನು? ಹಾಗೂ ಇದನ್ನು ಸರಿಪಡಿಸಲಾಗುವುದೇ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) 901

ಆ) 157

ಇ) ಕೆಲವು ಗಣಕೀಕರಣದ ತಪ್ಪಿನಿಂದಾಗಿ ಮತ್ತೆ ಕೆಲವು ದಾಖಲೆಗಳಲ್ಲಿ ವ್ಯತ್ಯಾಸವಿರುವ ಘೋಷಣಾ ಪತ್ರ ನೀಡಿದ್ದರಿಂದ ನಿಯಮಾನುಸಾರ ಅರ್ಹತೆ ಇದ್ದು ಸೂಕ್ತ ಮಾಹಿತಿ ಇರುವ ಪ್ರಕರಣಗಳನ್ನು ಸರಿಪಡಿಸಲಾಗುವುದು.

ಗ್ರಾಮೀಣ ಪ್ರದೇಶದ ಶಿಕ್ಷಕರ ನೇಮಕಾತಿಯಲ್ಲಿ ನೀಡಿದ ಕೃಪಾಂಕ

381 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯುವ ಕಾಲದಲ್ಲಿ ನಿಗದಿಯಾಗಿದ್ದ ಪ್ರತಿ ಶತ 15 ರಷ್ಟು ಅಂಕವನ್ನು ಪ್ರತಿ ಶತ ಕೇವಲ 5 ರಷ್ಟಕ್ಕೆ ಇಳಿಸಿರುವುದರಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಬಹಳ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇಲ್ಲದಿದ್ದಲ್ಲಿ ಇತ್ತೀಚಿನ ಬಿ.ಇ. ಹಾಗೂ ಎಂಬಿಬಿಎಸ್ ನಂತಹ ಕೋರ್ಸುಗಳಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಸಿಕ್ಕಿರಬಹುದಾದ ಪ್ರವೇಶದ ಅನುಪಾತವೇನು?

ಇ) ಇದನ್ನು ಸರಿಪಡಿಸುವುದು ಸಾಮಾಜಿಕ ನ್ಯಾಯವಲ್ಲವೇ? ನ್ಯಾಯವಾದಲ್ಲಿ ಮತ್ತೆ ಶೇ. 15 ರಷ್ಟಕ್ಕೆ ಹೆಚ್ಚುವರಿ ಅಂಕಗಳನ್ನು ಕೊಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಕರ್ನಾಟಕ ಇಂಜನಿಯರಿಂಗ್, ವೈದ್ಯಕೀಯ ಮತ್ತು ದಂತ ಕೋರ್ಸ್‌ಗಳಿಗೆ ಅಭ್ಯರ್ಥಿಗಳ ಪ್ರವೇಶ ಕುರಿತ ಆಯ್ಕೆ ನಿಯಮಗಳನ್ವಯ ಮೀಸಲಿಡಲಾಗಿರುವ ಒಟ್ಟು ಫ್ರೀ ಸೀಟುಗಳಲ್ಲಿ ಭಾರತ ಸರ್ಕಾರ ನಿಯೋಜಿಸಿರುವ ಅಭ್ಯರ್ಥಿಗಳು, ಎನ್‌ಸಿಸಿ, ಸೈನಿಕರ ಮಕ್ಕಳು ಹಾಗೂ ಮತ್ತಿತರಿಗೆ ಮೀಸಲಾತಿ ನೀಡಿದ ನಂತರ ಉಳಿದ ಸೀಟುಗಳಲ್ಲಿ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಶೇ. 15 ರಷ್ಟು ಸೀಟುಗಳನ್ನು ಮೀಸಲಿಡಲಾಗಿದೆ.

ಇ) ಮೇಲಿನ (ಆ) ಗೆ ಕೊಟ್ಟ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರಾಥಮಿಕ ಹಂತದಲ್ಲಿರುವ ಆಂಗ್ಲ ಭಾಷೆಯ ಸಂಸ್ಥೆಯ ಬಗ್ಗೆ

117 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ - ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾಥಮಿಕ ಹಂತದಲ್ಲಿರುವ ಆಂಗ್ಲ ಭಾಷೆಯ ಶಾಲೆಗಳೆಷ್ಟು?

ಆ) ಬೋಧನಾ ಮಾಧ್ಯಮದ ಬಗ್ಗೆ ಸರ್ಕಾರದ ನಿಲುವೇನು?

ಇ) ಹೊಸದಾಗಿ ಆಂಗ್ಲ ಭಾಷೆಯ ಶಾಲೆಗಳನ್ನು ತೆರೆಯಲು ಮಾನ್ಯತೆ ಕೋರಿ ಬಂದ. ಅರ್ಜಿಗಳೆಷ್ಟು?

ಈ) ಸರ್ಕಾರ ಕೊಟ್ಟ ಪರವಾನಗಿಗಳೆಷ್ಟು?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) 1207

ಆ) ಪ್ರಾಥಮಿಕ ಶಾಲಾಮಟ್ಟದಲ್ಲಿ 1 ರಿಂದ 4ನೇ ತರಗತಿಯವರೆಗೆ ಮಕ್ಕಳಮಾತೃ ಭಾಷೆ ಅಥವಾ ಕನ್ನಡ ಮಾಧ್ಯಮದಲ್ಲಿ ಬೋಧಿಸುವುದು ಸರ್ಕಾರದ ಶಿಕ್ಷಣ ನೀತಿಯಾಗಿದೆ.

ಇ) 1991-92ರಿಂದ 560 ಅರ್ಜಿಗಳು ಬಂದಿದೆ.

ಇ) ನ್ಯಾಯಾಲಯದ ಆದೇಶದ ಪ್ರಕರಣಗಳನ್ನು ಒಳಗೊಂಡಂತೆ 138 ಶಾಲೆಗಳಿಗೆ ಪ್ರಸ್ತುತ ಸರ್ಕಾರದ ನೀತಿಯಂತೆ 5ನೇ ತರಗತಿಯಿಂದ ಆಂಗ್ಲ ಮಾಧ್ಯಮಕ್ಕೆ ಅನುಮತಿ ನೀಡಲಾಗಿದೆ.

ಶಾಲಾ ಮಕ್ಕಳ ಆಟದ ಮೈದಾನದ ಅತಿಕ್ರಮಣ

142 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಶಾಲೆಗಳಿಗೆ ಮೀಸಲಿಟ್ಟ ಮಕ್ಕಳ ಆಟದ ಮೈದಾನವನ್ನು ಅತಿಕ್ರಮಿಸಿ ಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿಲ್ಲ.

ಆ) ಅನ್ವಯಿಸುವುದಿಲ್ಲ. ಆದಾಗ್ಯೂ ಇಂತಹ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದರೆ ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದು.

ಶಿಕ್ಷಣ ಇಲಾಖೆಯ ಪುನರಚನೆ

139 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ಶಿಕ್ಷಣ ಇಲಾಖೆಯ ಸಮಗ್ರ ಪುನರ್ ರಚನೆ ಬಗ್ಗೆ ಸರ್ಕಾರ ಏನಾದರೂ ಯೋಚಿಸಿದೆಯೇ?

ಆ) ಹಾಗೆ ಯೋಚಿಸಿದ್ದಲ್ಲಿ ಶಿಕ್ಷಣ ಮತ್ತು ಶಿಕ್ಷಣ ಇಲಾಖೆಯ ಗುಣಮಟ್ಟ ಸುಧಾರಿಸುವ ಬಗ್ಗೆ ಶಿಕ್ಷಣ ತಜ್ಞರ ಅಭಿಪ್ರಾಯ ಪಡೆಯಲಾಗಿದೆಯೇ?

ಇ) ಮುಖ್ಯಮಂತ್ರಿಗಳು ಹಿಂದೆ ಶಿಕ್ಷಣ ಸಚಿವರಾಗಿದ್ದಾಗ ಸದನದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಪುನರ್ ರಚನೆ ಬಗ್ಗೆ ನೀಡಿದ ಭರವಸೆ ಈಡೇರಿದೆಯೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು

ಆ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ವಿವಿಧ ಸಂಘಸಂಸ್ಥೆಗಳ ಪದಾಧಿಕಾರಿಗಳ ಜೊತೆ ಚರ್ಚಿಸಿದಂತೆ ಹಾಗೂ ಅನೌಪಚಾರಿಕವಾಗಿ ಶಿಕ್ಷಣ ತಜ್ಞರ ಅಭಿಪ್ರಾಯವನ್ನು ಸಹ ಪಡೆದು ಪರಿಶೀಲಿಸಿ ಕ್ರಮ ಜರುಗಿಸಲಾಗುತ್ತಿದೆ.

ಇ) ಸರ್ಕಾರವು ಪ್ರಥಮ ಹಂತವಾಗಿ ಆದೇಶ ಸಂಖ್ಯೆ ಇಡಿ 736 ಡಿಪಿಐ 91 ದಿನಾಂಕ 26-07-1994ರಲ್ಲಿ ಲಿಪಿಕ ವೃಂದವನ್ನು ಪುನರ್ ರಚಿಸಿದೆ. ಉಳಿದ ಪ್ರಸ್ತಾವನೆಯನ್ನು ಪರಿಶೀಲಿಸಿ ಅತಿ ಶೀಘ್ರದಲ್ಲಿ ಜಾರಿಗೊಳಿಸಲಾಗುವುದು.

ಉಡುಪಿ ತಾಲ್ಲೋಕು ಹೊಸೂರು ಕರ್ಜೆಯ ಆಯುರ್ವೇದ ಡಿಸ್ಪೆನ್ಸರಿಯನ್ನು ಮೇಲ್ದರ್ಜೆಗೆ ಏರಿಸುವುದು

243 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು ಹೊಸೂರು ಕರ್ಜೆಯಲ್ಲಿನ ಆಯುರ್ವೇದ ಗ್ರಾಮಾಂತರ ಡಿಸ್ಪೆನ್ಸರಿಯನ್ನು 6 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಅವಶ್ಯಕತೆ ಇರುವುದು ಸರ್ಕಾರದ ಗಮನದಲ್ಲಿದೆಯೇ?

ಆ) ಮೇಲ್ದರ್ಜೆಗೇರಿಸುವ ಬಗ್ಗೆ ಬೇಕಾಗುವ ಕಟ್ಟಡ, ನೀರು, ವಿದ್ಯುತ್‌ಚ್ಛಕ್ತಿ ಸೌಲಭ್ಯ ಸದರಿ ಡಿಸ್ಪೆನ್ಸರಿಯಲ್ಲಿ ಈಗಾಗಲೇ ಇರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಮೇಲ್ದರ್ಜೆಗೇರಿಸುವ ಕ್ರಮವನ್ನು ಯಾವಾಗ ಕೈಗೊಳ್ಳಲಾಗುವುದು?

ಶ್ರೀಮತಿ ಸುಮ ವಸಂತ (ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಸಚಿವರು) :

ಅ) ಹೌದು

ಆ) ಹೌದು ಆಯುರ್ವೇದ ಔಷಧಾಲಯಗಳ ಉನ್ನತೀಕರಣ - 6 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಕಾರ್ಯಕ್ರಮವು ಜಿಲ್ಲಾ ಪಂಚಾಯತ್ ಅಧೀನದಲ್ಲಿ ಬರುತ್ತದೆ. ಭಾರತೀಯ ವೈದ್ಯಪದ್ಧತಿ ನಿರ್ದೇಶಕರು, ಈಗಾಗಲೇ ಈ ವಿಷಯದಲ್ಲಿ ಜಿಲ್ಲಾ ಪರಿಷತ್ತು ಅವರಿಂದ ಸೂಕ್ತ ಪ್ರಸ್ತಾವನೆ ಸಲ್ಲಿಸಲು ಕೋರಿರುತ್ತಾರೆ. ಜಿಲ್ಲಾ ಪರಿಷತ್ತು ಮತ್ತು ಭಾರತೀಯ ವೈದ್ಯ ಪದ್ಧತಿಗಳ ನಿರ್ದೇಶಕರಿಂದ ಪ್ರಸ್ತಾವನೆ ಬಂದ ನಂತರ ಸರ್ಕಾರವು ಮುಂದಿನ ಕ್ರಮ ಕೈಗೊಳ್ಳುವುದು.

ಬೀದರ್ ಜಿಲ್ಲೆಯಲ್ಲಿ ಸಾಕ್ಷರತಾ ಆಂದೋಲನ ಕಾರ್ಯಕ್ರಮದ ಬಗ್ಗೆ

239 - ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ವಯಸ್ಕರ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಸಾಕ್ಷರತಾ ಆಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆಯೇ? ಹಾಗಿದ್ದಲ್ಲಿ ಎಷ್ಟು ಪ್ರಗತಿಯನ್ನು ಸಾಧಿಸಿದೆ ಮತ್ತು ಎಷ್ಟು ಹಣ ಖರ್ಚಾಗಿದೆ? ಇದಕ್ಕಾಗಿ ಮೀಸಲಿರಿಸಿರುವ ಹಣವೆಷ್ಟು?

ಆ) ಸಾಕ್ಷರತಾ ಆಂದೋಲನ ಕಾರ್ಯಕ್ರಮ ಅಧ್ಯಯನ ನಡೆಸಲು ಸರ್ಕಾರದ ಅಧಿಕಾರಿಗಳು ಚೀನಾ ಪ್ರವಾಸವನ್ನು ಕೈಗೊಂಡಿದ್ದರೆ? ಹಾಗಿದ್ದರೆ ಅವರ ಪೂರ್ಣ ಹೆಸರು ಹಾಗೂ ಅವರ ಪ್ರವಾಸದಿಂದಾಗಿ ಸರ್ಕಾರಕ್ಕೆ ಆದ ವೆಚ್ಚವೆಷ್ಟು? ಮತ್ತುಇದರಿಂದಾಗಿ ಆದ ಅನುಕೂಲವೇನು ಎಂಬುದರ ಬಗ್ಗೆ ಪೂರ್ಣ ವಿವರಗಳನ್ನು ನೀಡುವುದು?

ಇ) ಬೀದರ್ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಪ್ರಗತಿಯ ವಿವರಗಳನ್ನು ನೀಡುವುದು?

ಶ್ರೀ ಎಸ್.ಎಂ. ಯಾಹ್ಯಾ (ವಯಸ್ಕರ ಶಿಕ್ಷಣ ಸಚಿವರ ಪರವಾಗಿ ಉನ್ನತ ಶಿಕ್ಷಣ ಸಚಿವರು) :

ಅ) ಹೌದು. ಸಾಕ್ಷರತಾ ಆಂದೋಲನಾ ಹಮ್ಮಿಕೊಳ್ಳಲಾಗಿದೆ.

ಬೀದರ್ ಜಿಲ್ಲೆಯಲ್ಲಿ ಒಟ್ಟು 2,53,881 ಜನ ಅನಕ್ಷರಸ್ಥರಿದ್ದು ಈಗಾಗಲೇ ಸುಮಾರು 2.00 ಲಕ್ಷ ಜನರು 3 ಪ್ರೈಮರ್‌ಗಳನ್ನು ಮುಗಿಸಿದ್ದು, ಇನ್ನುಳಿದವರು ಕಲಿಕೆಯ ವಿವಿಧ ಹಂತದಲ್ಲಿ ಕಲಿಯುತ್ತಿದ್ದಾರೆ.

ರೂ. 139.92 ಲಕ್ಷಗಳು ದಿ : 31-7-94ರ ವರೆಗೆ ಖರ್ಚಾಗಿರುತ್ತದೆ.

ಬೀದರ್ ಜಿಲ್ಲಾ ಸಾಕ್ಷರತಾ ಆಂದೋಲನ ಕಾರ್ಯಕ್ರಮಕ್ಕೆ ರೂ. 200.00 ಲಕ್ಷ ಎಂದು ನಿಗದಿಪಡಿಸಲಾಗಿದೆ.

ಆ) ಕೇಂದ್ರ ಸರ್ಕಾರದ ಮಾನವಸಂಪನ್ಮೂಲ ಇಲಾಖೆಯ ವತಿಯಿಂದ ಏರ್ಪಡಿಸಿದ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದಡಿಯಲ್ಲಿ ಸಾಕ್ಷರತಾ ಕಾರ್ಯಕ್ರಮದಲ್ಲಿ ರಾಜ್ಯಾದ್ಯಂತ ಕೆಲಸ ಮಾಡುತ್ತಿರುವ ಅಧಿಕಾರಿಗಳನ್ನು ಆಯ್ಕೆ ಮಾಡಿ ಭಾರತದಿಂದ 28 ಜುಲೈ 1994 ರಿಂದ ಪ್ರಾರಂಭಿಸಿ 14 ದಿವಸಗಳ ಕಾಲ ಭೇಟಿ ನೀಡಲು ಕಳುಹಿಸಲಾಗಿತ್ತು. ಈ ತಂಡದಲ್ಲಿ ಕರ್ನಾಟಕದ ಶ್ರೀಮತಿ ರತ್ನಪ್ರಭಾ, ಜಿಲ್ಲಾಧಿಕಾರಿ, ಬೀದರ್‌ರವರು ತಂಡದ ಸದಸ್ಯರಾಗಿದ್ದರು.

ಇಂತಹ ಭೇಟಿಗಳಿಂದ ಆಯಾ ದೇಶಗಳಲ್ಲಿ ಸಾಕ್ಷರತಾ ಕಾರ್ಯಕ್ರಮದಲ್ಲಿ ಸಾಧಿಸಿರುವ ಪ್ರಗತಿ ಮತ್ತು ಇಂತಹ ಪ್ರಗತಿ ಸಾಧಿಸಲು ಹಾಕಿಕೊಂಡಂತಹ ಕಾರ್ಯಕ್ರಮಗಳ ಅಧ್ಯಯನದಿಂದ ಅಧಿಕಾರಿಗಳಿಗೆ ತಿಳಿವು ಮತ್ತು ಜ್ಞಾನ ಸಂಪಾದನೆ ಆಗಿ ಅಂತಹ ಪ್ರಯೋಜನಕಾರಿ ಕಾರ್ಯಕ್ರಮಗಳನ್ನು ನಮ್ಮ ದೇಶದರಾಜ್ಯಗಳಲ್ಲೂ ಅನುಸರಿಸಬಹುದಾದ ಯೋಜನೆಗಳನ್ನು ಸಿದ್ಧಪಡಿಸಿಕೊಳ್ಳಲು ಅನುಕೂಲವಾಗುತ್ತದೆ.

ಸಾಂಸ್ಕೃತಿಕ ವಿನಿಮಯ ಪ್ರವಾಸಗಳ ಉದ್ದೇಶವೇ ಇದು. ಚೀನಾ ದೇಶವು ಸಾಕ್ಷರತಾ ಕಾರ್ಯಕ್ರಮದಲ್ಲಿ ಯಶಸ್ಸನ್ನು ಸಾಧಿಸಿರುವುದು ಇಡೀ ವಿಶ್ವಕ್ಕೆ ತಿಳಿದಿರುವ ವಿಷಯ.

ಈ ಪ್ರವಾಸದ ಪೂರ್ಣ ಖರ್ಚನ್ನು ಕೇಂದ್ರ ಸರ್ಕಾರವೇ ಭರಿಸಿದ್ದು ಬೀದರ್‌ನಿಂದ ದೆಹಲಿವರೆವಿಗಿನ ಖರ್ಚನ್ನು ಮಾತ್ರ ರಾಜ್ಯ ಸರ್ಕಾರ ಭರಿಸಿದೆ?

ಇ) ವಿವರಗಳನ್ನು ಲಗತ್ತಿಸಿದೆ.

ಬೀದರ್ ಜಿಲ್ಲೆಯ ಸಾಕ್ಷರತಾ ಆಂದೋಲನದ ತಾಲ್ಲೂಕುವಾರು ವಿವರ

ಕ್ರಮ ಸಂಖ್ಯೆ	ತಾಲ್ಲೂಕುಗಳು	ಒಟ್ಟು ಅನಕ್ಷರಸ್ಥರು				ಪ್ರಾಥಮಿಕ ಹಂತದಲ್ಲಿ ಓದುತ್ತಿರುವವರು				ನೀಡಲಾದ ಪ್ರಮಾಣ ಪತ್ರಗಳು
		ಕನ್ನಡ	ಮರಾಠಿ	ಉರ್ದು	ಒಟ್ಟು	1	2	3	ಒಟ್ಟು	
1	2	3	4	5	6	7	8	9	10	11
1.	ಬೀದರ್	42294	1283	18597	57174	3773	1045	5570	10388	45936
2.	ಹುಮನಾಬಾದ್	39022	1898	10538	51458	4982	1197	3742	9921	40626
3.	ಬಸವಕಲ್ಯಾಣ	30629	13391	7945	51965	3643	2321	6383	12447	38442
4.	ಔರಾದ	22031	20087	3284	45352	4277	308	2164	6749	37697
5.	ಭಾಲ್ಕಿ	25452	18544	3936	47932	3756	565	5556	9877	87356
	ಒಟ್ಟು	159428	55203	39250	253881	20431	5536	23415	49382	200057

ಬೀದರ್ ಜಿಲ್ಲೆಯಲ್ಲಿ ಮಹಿಳಾ ಪಾಲಿಟೆಕ್ನಿಕ್

240 - ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ಮಹಿಳಾ ತಾಂತ್ರಿಕ ವಿದ್ಯಾಲಯಗಳು ಕಾರ್ಯ ನಿರ್ವಹಿಸುತ್ತಿವೆ? (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಬೀದರ್ ಜಿಲ್ಲೆಯಲ್ಲಿ ಮಹಿಳಾ ತಾಂತ್ರಿಕ ವಿದ್ಯಾಲಯಗಳನ್ನು ತೆರೆಯುವ ಬಗ್ಗೆ ಶಿಕ್ಷಣ ಸಚಿವರು ಹಿಂದಿನ ಸಾಲಿನಲ್ಲಿಯೇ ಆಶ್ವಾಸನೆ ನೀಡಿದ್ದು, ಇದುವರೆವಿಗೆ ಪ್ರಾರಂಭಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಿಂದುಳಿದ ಜಿಲ್ಲೆಯಾದ ಬೀದರ್ ಜಿಲ್ಲೆಯಲ್ಲಿ ಮಹಿಳಾ ತಾಂತ್ರಿಕ ವಿದ್ಯಾಲಯಗಳನ್ನು ತೆರೆಯುವ ಬಗ್ಗೆ ಹಿಂದಿನಿಂದಲೂ ನನೆಗುದಿಗೆ ಬಿದ್ದಿರುವುದನ್ನು ನಿವಾರಿಸುವ ಬಗ್ಗೆ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ ಪ್ರತ್ಯೇಕವಾಗಿ ಮಹಿಳಾ ತಾಂತ್ರಿಕ ವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿಲ್ಲ.

ಆ) ಇಲ್ಲ

ಇ) ಪರಿಶೀಲಿಸಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೀಗಡಿ ವ್ಯವಸಾಯದ ಅಭಿವೃದ್ಧಿ

241 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೀಗಡಿ ಮೀನು ವ್ಯವಸಾಯವನ್ನು ಅಭಿವೃದ್ಧಿಗೊಳಿಸಲು ಕೈಗೊಂಡ ಕ್ರಮಗಳು ಏನು?

ಆ) ಲಾಭದಾಯಕವಾದ ಈ ಉದ್ಯಮವನ್ನು ಅಭಿವೃದ್ಧಿಪಡಿಸಲು ಖಾಸಗಿ ವ್ಯಕ್ತಿಗಳು ಮುಂದು ಬಂದಿರುವರೆ? ಬಂದಿದ್ದಲ್ಲಿ ವಿವರ ನೀಡುವುದು.

ಇ) ಈ ಹಿಂದೆ ಸೀಗಡಿ ವ್ಯವಸಾಯವನ್ನು ಮಾಡಲು ನಿರುದ್ಯೋಗಿ ಫಲಾನುಭವಿಗಳನ್ನು ಆರಿಸಿ ಇಲಾಖಾ ವತಿಯಿಂದ ತರಬೇತು ನೀಡಿರುವುದು ನಿಜವೆ. ಹಾಗಿದ್ದಲ್ಲಿ ತರಬೇತು ಹೊಂದಿದವರಿಗೆ ಯಾವ ಯಾವ ಸ್ಥಳಗಳಲ್ಲಿ ವ್ಯವಸಾಯವನ್ನು ಮಾಡಲು ಅನುಕೂಲವನ್ನು ಮಾಡಿಕೊಟ್ಟಿದೆ.

ಈ) ಸೀಗಡಿ ವ್ಯವಸಾಯವನ್ನು ಅಭಿವೃದ್ಧಿ : ಮಾಡಲು ಇಲಾಖೆಯಲ್ಲಿ ನಿಗಧಿ ಮಾಡಲಾಗಿರುವ ಆಯವ್ಯಯ ಎಷ್ಟು, ಇದನ್ನು ಯಾವ ರೀತಿಯಲ್ಲಿ ವಿನಿಯೋಗಿಸಲಾಗಿದೆ?

ಶ್ರೀ ವಸಂತ ವಿ ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಕೇಂದ್ರ ಪುರಸ್ಕೃತ ಸೀಗಡಿ ಕೃಷಿಕರ ಅಭಿವೃದ್ಧಿ ಸಂಸ್ಥೆಯನ್ನು 1987ರಲ್ಲಿ ಸ್ಥಾಪಿಸಲಾಗಿದ್ದು ಇದರ ಕಾರ್ಯವ್ಯಾಪ್ತಿಯು ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಾಗಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಗಾಗಿಯೇ ಹೊಸದಾಗಿ ಸೀಗಡಿ ಕೃಷಿಕರ ಅಭಿವೃದ್ಧಿ ಸಂಸ್ಥೆಯನ್ನು ಸ್ಥಾಪಿಸಲು ಭಾರತ ಸರ್ಕಾರದ ಅನುಮೋದನೆ ದೊರೆತಿದೆ.

ಸರ್ಕಾರಿ ಸ್ವಾಮ್ಯದ ಸೀಗಡಿ ಕೃಷಿ ಭೂಮಿಯನ್ನು ಗುತ್ತಿಗೆ ನೀಡಲು ಗುತ್ತಿಗೆ ನೀತಿಯನ್ನು ಸರ್ಕಾರ ರೂಪಿಸಿದೆ.

ಆ) ಹೌದು, ಖಾಸಗಿ ವ್ಯಕ್ತಿಗಳು ಈ ಉದ್ಯಮವನ್ನು ಅಭಿವೃದ್ಧಿಪಡಿಸಲು ಮುಂದೆ ಬಂದಿದ್ದಾರೆ. ಪ್ರತಿಅಡಕಗೊಳಿಸಿದೆ.

ಇ) ಹೌದು, ಇದುವರೆಗೆ ಸೀಗಡಿ ಕೃಷಿ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯ 229 ನಿರುದ್ಯೋಗಿ ಫಲಾನುಭವಿಗಳಿಗೆ ಸೀಗಡಿ ಕೃಷಿಯಲ್ಲಿ ತರಬೇತಿ ನೀಡಲಾಗಿದೆ.

ಸರ್ಕಾರಿ ಸ್ವಾಮ್ಯದ ಗಜನಿ ಭೂಮಿಯನ್ನು ನಿರುದ್ಯೋಗಿ ಫಲಾನುಭವಿಗಳಿಗೆ ಗುತ್ತಿಗೆ ನೀಡಲು ಸರ್ಕಾರಿ ಆದೇಶ ಹೊರಡಿಸಲಾಗಿದೆ. ಪ್ರತಿ ಅಡಕಗೊಳಿಸಲಾಗಿದೆ.

ಈ) ಕೇಂದ್ರ ಪುರಸ್ಕೃತ ಸೀಗಡಿ ಕೃಷಿಕರ ಅಭಿವೃದ್ಧಿ ಸಂಸ್ಥೆಯ ಅನುಷ್ಠಾನಕ್ಕಾಗಿ ಹಾಗೂ ಸೀಗಡಿ ಹ್ಯಾಚರಿ ಅಭಿವೃದ್ಧಿಗಾಗಿ ಕ್ರಮವಾಗಿ ರೂ.15.26 ಲಕ್ಷ ಹಾಗೂ ರೂ. 5.00 ಲಕ್ಷಗಳನ್ನು ಪ್ರಸ್ತುತ ಸಾಲಿನ ಆಯವ್ಯಯದಲ್ಲಿ ಜಿಲ್ಲಾ ವಲಯ ಯೋಜನೆಗಳಡಿ ಮೀಸಲಿಡಲಾಗಿದೆ. ಈ ಅನುದಾನವನ್ನು ಎರಡು ಕರಾವಳಿ ಜಿಲ್ಲೆಗಳಿಗೂ ವಿನಿಯೋಗಿಸಲಾಗುವುದು.

Annexure - 7

Proceedings of the Government of Karnataka

Sub : Development of Brackishwater area for prawn farming in the State - Leasing policy for Government lands for prawn farming - Lease of Government brackishwater land in Dakshina Kannada District

Order No. AHFF 262 SFM 92, Bangalore : Dated 17th November 1992

Read :

1. Govt. Order No. AHFF 315 SFM 91 dated 23-12-91
2. DO Latter No. 5/91-92 dated 26-8-92 of the Chief Secreatry, Zilla Parishad, Dakshina Kannada Dist. Mangalore and Chairman, Scrutiny Committee for leasing out Government Brackishwater land in Dakshina Kannada Dist., Mangalore.

Preamble :

In Govt. Order dated 23-12-91 cited at (1) above pending amendments to Karnataka Irrigation Act, 1965, Sec.2 (a) of Karnataka land Reforms Act 1961 and Rule 15 of Karnataka Land Grant Rules, 1969, leasing policy for Government lands for prawn farming has been framed and Scrutiny Committee for verification of applications and their recommendations to Government for clearance have been constituted for Uttara Kannada and Dakshina Kannada Districts, subject to certain terms and conditions as indicated in Annexures I and II of the said Government Order.

2. In his DO Letter dated 26-8-92 cited at (2) above, the Chief Secretary, Zilla Parishad Dakshina Kannada District and Chairman Scrutiny Committee for leasing out Government Brackishwater land in Dakshina Kannada District, Mangalore has stated that in response to the advertisements published in various news papers etc., 172 applications were received and in the meeting of the Scrutiny Committee held on 5-8-92, it was decided to lease 110 hectares of Government Brackishwater land to different categories and recommended for sanction of Governemnt to lease out the said land as under-

Category - I	a) General	51 hectares
Category - II	b) SC/ST	6 "
		21 - hectares
Category - III		24 "

Order

After careful consideration of all aspects of the entire matter, Govt. are pleased to accord sanction to lease out Government Brackish water land in Dakshina Kannada District to various categories for a period of 10 (ten) years initially from the date of handing over possession of the said land to them as detailed in Annexure to this Government Order, subject to payment of lease amount and fulfilment of all terms and conditions stipulated in Government Order No. AHFF 315 SFM 91 dated 23-12-1991 cited at (1) above.

3. Sanction is also accorded to lease out (1) 75 acres of Government Brackishwater land in Survey No. 2900-1A of Kundapura Kasaba in favour of Fisheries College, Mangalore (U.A.S) for the purpose of research in prawn farming and (2) 10 acres of Brakishwater land in Survey No. 116-a of Hommadi in favour of M/s. Lovis Natural Food Brahamawara Udupi Taluk for prawn farming on similar terms and conditions.

By order and in the name of the Governor
of Karnataka
Sd/- P. Munirathnam
Desk Officer
Animal Husbandry, Fisheries &
Forest Department (Fisheries)

GOVERNMENT ORDER NO. AHFF 262 SFM 92,DATED : BANGALORE 17/11/1992

ANNEXURE

List showing the details of beneficiaries eligible for lease of Government brackish water land in Dakshina Kannada District

Sl. No.	Name and address of beneficiaries	Village	Survey Number	Extend of land sanctioned by Govt Acres	Cents
1	2	3	4	5	
	CATEGORY - I Individual Fishermen				
1.	Dasa Puthrana, Anjinan - dana Nivasa, Malpe. Udupi Taluk.	Kudavooru	220-1B	2	18
2.	Sridhara, Sasithota, Malpe, Udupi taluk	Uliyaragoli	139-2	1	80
3.	K. Ananda Saranga, Kharvi Malkeri, Kundapura	Thallura	11	2	50
4.	P. Narasimha Pithrodi Udyavara, D.K. Dist.	Mannara	89	2	00
5.	Prabhakara Bangere Kodike, Badanidivura Udupi Taluk	Koteashwara	21-1A1	1	75
6.	Sadananda Mendon, Badanidiyura, Udupi Taluk	Kundapura Kasaba	8-1A	1	75
7.	Neelandhara K. Saliyan Kadavooru, Udupi Taluk	Ulayaragoli	132-1	2	12
8.	M.K.Raghuram, Kodavooru, Udupi Taluk	Yanugudde	99-1A1A	2	50
9.	Bhaskara M. Kotiyan, Malpe Udupi Taluk	Uliyaragoli	132-1	2	12
10.	K.Subbanna Shetty Kenchanooru, Kundapura Tq	Katwebelthooru	100-2	2	12

11.	Narayana M. Kharvi TharaPathi, Kundapura Taluk	Yadthare	38-1	1	52
12.	Shekara Bhovi, Kunji-bettu, Udupi, Taluk	Uliyaragoli	132-2	2	50
13.	Sanjeeva G. Salyana Badenidayaru, Udupi Taluk.	Kidhiyooru	20-1A	2	50
14.	Sheena poojari, Handnattukota	Kotathattu	161-1A	2	00
15.	K.Dhinakara Shetty Kharvi Melkeri, Kundapura	Kattabelthoora	116-4	2	20
16.	D.N. Shivaji Padubidhri Udupi Taluk	Yenugudde	99-1A1A	2	50
17.	Bhaskara S. Kotiyan Udhyavara, Udupi Taluk	Uliyaragoli	116	1	90
18.	K. Dhinakarar Saranga, Kharvi Melkeri Kundapura Taluk	Kundapura Kasaba	8-1A	1	75
19.	Sudhakara R. Saliyan Katapadi, Udupi Taluk	Bappanadu	105	1	73
20.	Suresh M. Kanchan Yermalu Thanka, Udupi Taluk	Uliyaragoli	56-1	2	20
21.	Rajesha S. Karkera Meerniya New Mangalore	Thokooru	142-3	2	30
22.	Sukumar S. Kulai Surathkal Dakshina Kannada	Thallura	11	2	50
23.	Dhejappa Kundhare, Kidhiyoora, Udupi Taluk	Yenugudde	99-1A2A	2	50
24.	Ashoka Kundhara Pithrodi, Udhyavara Dakshina Kannada	Uliyaragoli	64-2	1	89
25.	Poova G. Kundhare Kalmadi, Malpe	Kodavooru	220-1A	2	18

26.	Chandra Kharvi Maravanthe, Kundapura Taluk	Yadthare	25-6	1	61
27.	Srinivasa, Santhekatte, Udupi Taluk	Thosse East	208	2	50
28.	Sadhashiva Puthrana, Malpe, Udupi Taluk	Yanugudde	99-1A1A	2	50
29.	Sudheer Kanchan Kodibengre Udupi Taluk	Thosse East	208	2	50
30.	Jayanthi H. Nayak, Muduguddc, Kundapura Taluk.	Yadthare	319-4	1	77
31.	C. Janardhana Kharvi, Koderi, Kirimanjeswara Kundapur Taluk.	Yadthare	349-1	2	50
32.	K.Chandrakantha Kundapura	Kattebelthooru	116-1 114	0 1	60 00
33.	S. Madhan Kumar, Uppundha, Kundapur Taluk	Uppundha	123-5	2	50
34.	K. Jagannath, Kundharukere - 576 118.	Uliyaragoli	116	2	30
35.	U. Subrahmanya Kharvi Tharapathi. Uppandha	Yadthara	43-2A	1	63
36.	Devaraha S. Dodhikalu, Meenukooliya New Mangalore.	Thokooru	142-3	2	30
37.	Rama V. Kanchana Kulai, Mangalore.	Thokooru	142-3	2	30
38.	Devadasa Salyan, Parampalli, Padukere, Udupi Taluk.	Kunranagudi	6-1A	2	50
39.	S.B.S. Chethana Kumar, Ujvila, Udupi Taluk.	Uliyaragoli	132-2	2	50
40.	Thukarama Kotiyan, Malple, Udupi Taluk.	-do-	84-1	2	50
41.	K. Lakshmana uharvi, Kharvikeri, Kundapur.	Thallura	51-7	2	40

42.	Yogesh Hejmadi, Udupi Taluk.	Uliyaragoli	56-1	2	20
43.	Govinda Billava, Church Street, Baindheru.	Baindhooru	354-3	2	37
44.	A.B.Shetty, Malpe, Udupi Taluk.	Uliyaragoli	84-1	2	50
45.	Abbas Ali Hammebba, Kanakanadi, Mangalore	Thallura	35-2	1	93
46.	Venkata Mogaveera, Garje Hithlu, Yadthare Bindhoora	Yadthare	48	2	00
47.	K. Rathnakara Soranga Mangalapandya Street, Kundapura.	Koteshwara	3-1A	2	00
48.	K.Sanjeeva Karkala, J.L.B. Road. Kundapura	Yadthare	48	2	00
49.	Vittal G. Kotiyan, Mookambika Nivasa Malpe	Uppinakudhuna	182-3	2	00
50.	Srinivasa K. Mendon Udupi.	-do-	182-2	2	00
51.	Yathesh Udupi	Yadthare	264-1	1	96
52.	Jayanthi Kanchana, Udupi.	-do-	-do-	1	96
53.	Ravi Kanchan, Kodavoora Post Udupi.	-do-	-do-	1	96
54.	Dhinesh G. Puthran, Udupi.	-do-	-do-	1	96
55.	Ashok Kumara Post Kodavooru, Udupi	Yadthare	264-1	1	96
56.	G.P. Ballala Kanja Betha Post, Kodiyala Udupi	-do-	-do-	2	50
57.	Joseph Salian Mettu Udupi Taluk	-do-	-do-	2	50
58.	Ramananda Murthy Udupi Taluk	-do-	-do-	2	00

1	2	3	4	5
	CATEGORY - I Fishermen Co-operative Society			
1.	Gangolli Fishermen Co-operative Society Gangolli	Kundapura	290-1A	25.00

CATEGORY - I

SC/ST Members

As there is under representation to SC/ST members in as much as only 13.85 acres of Government brackishwater land are proposed for lease, as against 25 acres of land, the scrutiny Committee is requested to set right this defect and send revised proposals separately for consideration of Government.

1	2	3	4		5
	CATEGORY - II Small entrepreneurs or self employed techn crafts				
1.	K. Giridhara, Shivabhaga Road, Kadri, Mangalore	Karnadu	47-1	2	70
2.	Lakshmanarayana Rai, Fisheries College, Mangalore.	-do-	-do-	2	70
3.	H. Venkatesh Prabhu, Fisheries College Mangalore.	-do-	-do-	2	70
4.	Malpe Jayaraj, Raja Mandira, Malpe	Kidhiyooru	87-1A8A	6	00
5.	Jiroma Mark Pinto Pandeshwara Village Santhena Udupi, Taluk	Kumragodu	6-1A	2	50
6.	M. Panduranga, Uppundha Village Kundapura Taluk	Uppundha	95-6	2	50
7.	V.C. Kandhana, Kidhiyooru, Udupi Taluk	Karnad	47-1	2	70
8.	Manohara Tholara, Kotathattu, Udupi Taluk	Kattebelthooru	109-5	1	19

9.	Radhakrishna Shrreeyan Udhyavara Village Udupi Taluk.	Yadthara	48	2	00
10.	Suresh Suvarna Post Udayavara Udupi Taluk	-do-	46	2	12
11.	Jaya Sudharashana, Jhansi Lakshmi Bai Road, Kundapura.	-do-	46	2	12
12.	Sudhakara K. Ameena, Hiriyadka Post, Udupi.	Yadhare	48	2	00
13.	Gulabi N. Shetty, Vadhiraju Nilaya Kundapur	-do-	91-A	2	26
14.	K. Somashekhara Shetty Post Kandhanooru Kundapura	Kuttebeltheoora	111	2	50
15.	Narayana Shetty S. Ex. Z.P. Member, Vandse Kundapura	Kuttebelthoora	112	1	80
16.	K. Manjunatha Gadheman Post Tharapathi, Kundapur	Yadthara	89-3A	1	66
17.	Ronalda Fartado Post Brahmavara Udupi Taluk	-do-	89-3A	1	66
18.	Keshava M. Kotiyan Mathsraj Buildings, Malpe Udupi	Uppinakudhru	182-33	2	00
19.	K.A. Dhivakara Post Kodekara, Udupi Taluk.	Kattebelthooru	112	1	80
20.	Vasantha, H.M.T. Road Koni Kundapura	-do-	108	2	00
21.	Rasheedha Bolara, K.S.R.M. Building Light House Mangalore.	Uppundha	33-1A	2	50
22.	Shantha J. Melanta B.J. New Road,	Yadthare	48	2	00

	Mangalore.				
23.	Ramesh Rai, Badaganooru Post, Mangalore.	Uppundha	33-1A	2	50
	CATEGORY - II Big/Progressive entrepreneurs				
1.	Messrs. Canara Aqua Farms (Sri. Channarabata) 2-100, Kodhooru Kundapura	Thokooru	141	10	60
2.	M.Chandrasekhara Bolara Mangalore	-do-	141	10	00
3.	Captain K. Sathynarayana Hegde Kukkeballi Udupi Taluk	Thookoru	141	10	00
4.	Sujith S. Ammen Dhashirama Banaje Udupi,	Thokooru	141	10	00
5.	Edward. P. Loowis 6-12, 7, Vivekananda Nagar, Kodikâl Mangalore.	Paduvari	256-1	10	00
6.	Messrs Monodana Farms Lim. Sabhapathi Enterprises Badagupete Udupi	Thokooru	141	10	00
7.	Ashwini Kumar Rai Jodumarga Bhuntwal Taluk			10	00

ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿನ ಪರೀಕ್ಷಾ ನಿಯಮಾವಳಿಗಳಲ್ಲಿನ ವ್ಯತ್ಯಾಸ

405 - ಶ್ರೀ ಪಿ. ಬಸವರಾಜ್ : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಏಕರೂಪದ ಪರೀಕ್ಷಾ ನಿಯಮಾವಳಿಗಳು ಜಾರಿಯಲ್ಲಿವೆಯೇ? ಇಲ್ಲವಾದಲ್ಲಿ ಕಾರಣ ಏನು.

ಆ) ಮಂಗಳೂರು ವಿಶ್ವವಿದ್ಯಾನಿಲಯದ ಇಂಜಿನೀಯರಿಂಗ್ ವಿದ್ಯಾರ್ಥಿಗಳು ನಾಲ್ಕಕ್ಕಿಂತ ಹೆಚ್ಚು ವಿಷಯಗಳಲ್ಲಿ ಅನುತ್ತೀರ್ಣರಾದರೆ ಮುಂದಿನ ವರ್ಷದ ವ್ಯಾಸಂಗಕ್ಕೆ ಅನರ್ಹತೆಯನ್ನು ಹೊಂದುವುದು ನಿಜವೇ.

ಇ) ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಷ್ಟೇ ವಿಷಯಗಳಲ್ಲಿ ಅನುತ್ತೀರ್ಣರಾದರೂ ಮುಂದಿನ ವರ್ಷ ವ್ಯಾಸಂಗಕ್ಕೆ ಅರ್ಹತೆಯನ್ನು ಹೊಂದುವುದು ನಿಜವೇ?

ಈ) ಹಾಗಿದ್ದಲ್ಲಿ ವಿಶ್ವವಿದ್ಯಾನಿಲಯಗಳಲ್ಲಿನ ಪರೀಕ್ಷಾ ನಿಯಮಗಳ ವ್ಯತ್ಯಾಸದಿಂದಾಗಿ ವ್ಯಾಸಂಗದ ವರ್ಷವು ನಷ್ಟವಾಗುವುದರ ಜೊತೆಗೆ ಪಾಲಕರು ಮತ್ತು ವಿದ್ಯಾರ್ಥಿಗಳು ಮಾನಸಿಕಕ್ಕೊಳಗಾಗುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಇಂಥ ಎಲ್ಲಾ ಅನರ್ಥಗಳನ್ನು ತಪ್ಪಿಸಲು ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಒಂದೇ ರೂಪದ ನೀತಿ ನಿಯಮಾವಳಿಗಳನ್ನು ಜಾರಿಗೆ ತಂದು ಅಸಮತೆಯನ್ನು ನಿವಾರಿಸಲು ಸರಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) ಇಲ್ಲ. ವಿಶ್ವವಿದ್ಯಾಲಯಗಳು ಸ್ವಾಯತ್ತ ಸಂಸ್ಥೆಗಳಾಗಿದ್ದು, 1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳು ಅಧಿನಿಯಮದ 39ನೇ ಪ್ರಕರಣದಲ್ಲಿ ಪರಿನಿಯಮಗಳನ್ನು ಪ್ರತಿಯೊಂದು ವಿಶ್ವವಿದ್ಯಾಲಯವು ರಚಿಸಲು ಸಕ್ಷಮ ಪ್ರಾಧಿಕಾರವಾಗಿರುವುದರಿಂದ.

ಆ) ಹೌದು.

ಇ) ಆರು ವಿಷಯಗಳಲ್ಲಿ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಅನುತ್ತೀರ್ಣರಾದರೂ ಮುಂದಿನ ವರ್ಷದ ವ್ಯಾಸಂಗಕ್ಕೆ ಅರ್ಹತೆ ಹೊಂದಲು ಅವಕಾಶವಿದೆ.

ಈ) ಅಂತರ ವಿಶ್ವವಿದ್ಯಾಲಯ ಮಂಡಳಿಯ ಸಭೆಯಲ್ಲಿ ತೀರ್ಮಾನಿಸಿದಂತೆ ಪ್ರತಿಯೊಂದು ವಿಶ್ವವಿದ್ಯಾಲಯದಲ್ಲಿ ಅಸ್ತಿತ್ವದಲ್ಲಿರುವ ಪ್ರತಿಯೊಂದು ಕೋರ್ಸಿಗೆ ಏಕಸ್ವಾಮ್ಯದ ಪಠ್ಯಕ್ರಮವನ್ನು ನಿರೂಪಿಸುವ ಹಿನ್ನೆಲೆಯಲ್ಲಿ ವಿಷಯಾವಾರು ತಜ್ಞರ ಸಮಿತಿಗಳನ್ನು ರಚಿಸಲಾಯಿತು. ಸಮಿತಿಯ ವರದಿಯನ್ನು ಮಂಡಳಿಯ ಸಭೆಯಲ್ಲಿ ವಿಶ್ಲೇಷಿಸಿ ಅಂಗೀಕರಿಸಿದ ನಂತರ ಅವುಗಳನ್ನು ಅಳವಡಿಸಿಕೊಳ್ಳಲು ಎಲ್ಲಾ ವಿಶ್ವವಿದ್ಯಾಲಯಗಳಿಗೆ ಪರಿಚಲಿಸಲಾಗಿದೆ.

ಉಡುಪಿ ತಾಲ್ಲೋಕ್ ಹಂಗಾರಕಟ್ಟೆ ಬೆಂಗ್ರೆಯಲ್ಲಿ ಕಡವು ಸೇವೆ ಖಾಯಂಗೊಳಿಸುವ ಕುರಿತು

572 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ್) : ಮಾನ್ಯ ಮೀನುಗಾರಿಕೆ ಮತ್ತು ಬಂದರು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು ಹಂಗಾರಕಟ್ಟೆ ಬೇಂಗ್ರೆಯಲ್ಲಿ ಕಡವು ಸೇವೆ ಯಾವಾಗ ಪ್ರಾರಂಭವಾಯಿತು, ಸದರಿ ಕಡವು ಸೇವೆಯನ್ನು ಹಂಗಾಮಿಯಾಗಿಯೇ ಉಳಿಸಿರುವುದರಿಂದ ಸಾರ್ವಜನಿಕರಿಗೆ ಮತ್ತು ಸಿಬ್ಬಂದಿಗಳಿಗೆ ಅನಾನುಕೂಲತೆಯುಂಟಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಕಡವು ಸೇವೆಯನ್ನು ಖಾಯಂಗೊಳಿಸುವಲ್ಲಿ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ಸಚಿವರು):

ಅ) ದಿ: 1-4-1976ರಿಂದ, ಹಂಗಾರಕಟ್ಟೆ, ಬೇಂಗ್ರೆ ಕಡವು ಸೇವೆ ಪ್ರಾರಂಭವಾಯಿತು.

ಸದರಿ ಕಡಲ ಸೇವೆಯನ್ನು ಹಂಗಾಮಿಯಾಗಿಯೇ ಉಳಿಸಿರುವುದರಿಂದ ಸಾರ್ವಜನಿಕರಿಗೆ ಏನು ತೊಂದರೆಯಾಗಿರುವುದಿಲ್ಲ. ಕಡವು ಸೇವೆಯನ್ನು ಮುಂದುವರಿಸಲು ಆದೇಶ ಪ್ರಾಪ್ತವಾಗಲು ವಿಳಂಬವಾದ ಸಂದರ್ಭಗಳಲ್ಲಿ ಸಿಬ್ಬಂದಿಯವರಿಗೆ ವೇತನ ಪಡೆಯುವಲ್ಲಿ ಅನಾನುಕೂಲವಾಗಿರುವ ವಿಷಯ ಗಮನಕ್ಕೆ ಬಂದಿದೆ.

ಆ) ಪರಿಶೀಲನೆಯಲ್ಲಿದೆ.

ಪ್ರಕಟಣೆ

ಅಧ್ಯಕ್ಷರು : ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 114 ರ ಮೇರೆಗೆ ವಿಧಾನ ಪರಿಷತ್ತಿನಲ್ಲಿ ದಿನಾಂಕ 30ನೇ ಆಗಸ್ಟ್, 1994 ರಂದು ಕರ್ನಾಟಕ ರೇಷ್ಮೆ ಹುಳು ತಳಿ, ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 1994ನ್ನು ಯಾವುದೇ ತಿದ್ದುಪಡಿಯಿಲ್ಲದೆ ಅನುಮೋದಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

ವರದಿಯನ್ನೊಪ್ಪಿಸುವುದು

ಶ್ರೀ ಅಂಜನಮೂರ್ತಿ : ವಿಧಾನ ಸಭೆಯ ಉಪಾಧ್ಯಕ್ಷರು (ಅಧ್ಯಕ್ಷರು, ಅರ್ಜಿಗಳ ಸಮಿತಿ) ಮಾನ್ಯ ಅಧ್ಯಕ್ಷರೆ, ವಿಧಾನ ನಭೆಯ ಅರ್ಜಿಗಳ ಸಮಿತಿಯ 4ನೇ ವರದಿಯನ್ನು ನಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು

ಶಾಸನ ರಚನಾ ಕಾರ್ಯಕಲಾಪ.

1992ರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿಧೇಯಕ

ಪರ್ಯಾಲೋಚನ ಪ್ರಸ್ತಾವ

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, 1992ರ ಕರ್ನಾಟಕ ರಾಜ್ಯ ಮುಕ್ತ ವಿಶ್ರವಿದ್ಯಾನಿಲಯದ ವಿದೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಪ್ರಸ್ತಾವ 'ಏನೆಂದರೆ' 1992ರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 41 ರವರೆಗೆ :

ಅಧ್ಯಕ್ಷರು : ಖಂಡ 2 ರಿಂದ 41ರವರೆಗೆ ಎರಡೂ ಸೇರಿದಂತೆ ಮತ್ತು ಮೂದಲನೆ ಹಾಗೂ ಎರಡನೇ ಅನುಸೂಚಿಗಳು. ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 41 ರವರೆಗೆ ಎರಡೂ ಸೇರಿದಂತೆ ಮತ್ತು ಮೊದಲನೆ ಹಾಗೂ ಎರಡನೇ ಅನುಸೂಚಿಗಳು. ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ :

ಅಧ್ಯಕ್ಷರು : ಪ್ರಸ್ತಾವ 'ಏನೆಂದರೆ' ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, 1992ರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1992ರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

11.20 ಎ.ಎಂ

ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ, 1994

(ಪರ್ಯಾಲೋಚನಾ ಪ್ರಸ್ತಾವ)

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 1994ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ 1994 ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1994ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ 1994 ಅನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 1 ರಿಂದ 13ರವರೆಗೆ :

ಅಧ್ಯಕ್ಷರು : "ಖಂಡ 1 ರಿಂದ 13ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 1 ಇತ್ಯಾದಿ :

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

ಪ್ರಸ್ತಾವದ ಅಂಗೀಕಾರ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 1994ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1994ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

2. ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ವಿಧೇಯಕ 1992

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 1992ರ ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಪೋಲಿಸ್ ಇಲಾಖೆಯಲ್ಲಿ ಕೆಲವು ಡಿಸಿಪ್ಲಿನರಿ ರೂಲ್ಸ್ ಇವೆ. ಆ ಪ್ರಕಾರ ಅಗ್ನಿಶಾಮಕ ದಳದಲ್ಲಿಯೂ ಕೂಡ ಅದೇರೀತಿಯ ನಿಯಮಗಳನ್ನು ತರಬೇಕೆಂಬ ಉದ್ದೇಶವಿದೆ. ಆದ್ದರಿಂದ ಇದನ್ನು ಒಪ್ಪಿಕೊಳ್ಳಬಹುದು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1992ರ ಕರ್ನಾಟಕ ಅಗ್ನಿಶಾಮಕದಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 :

ಅಧ್ಯಕ್ಷರು : "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ :

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೆ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 1992ರ ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ವಿಧೇಯಕ 1992 ಅನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1992ರ ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ವಿತ್ತೀಯ ಕಾರ್ಯಕಲಾಪಗಳು

1994-95ನೇ ಸಾಲಿನ ಬೇಡಿಕೆಗಳ ಮಂಡನೆ ಹಾಗೂ ಚರ್ಚೆ

ಅಭಿಯಾಚನೆ ಕ್ರಮಾಂಕ 61 : ಮಹಿಳಾ ಮತ್ತು ಮಕ್ಕಳ ಕಲ್ಯಾಣ

ಶ್ರೀಮತಿ ಮನೋರಮಾ ಮಧ್ವರಾಜ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ. ಮಾನ್ಯ ರಾಜ್ಯಪಾಲರ ಶಿಫಾರಸಿನ ಮೇರೆಗೆ 31-3-1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ, 224,18,70,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 100,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

DEMAND NO.5 : Large and medium scale industries (excluding Textiles, sugar and sericulture)

SRI M.MALLIKARJUNA KHARGE (Minister for Large and Medium Scale Industries) : Sir, on the recommendation of the Governor, I beg to move:

"That a sum not exceedling Rs.33,95,33,000 on Revenue Account and Rs. 16,91,00,000 on Capital Account inclusive of the sum granted "on account" be granted to the Government to defray the charges which will come in course of payment during the financial year ending 31st day of March 1995 in respect "Large & Medium Scale Industries, (excluding Textiles, Sugar and Sericulture)."

The question was proposed.

ಬೇಡಿಕೆ ಸಂಖ್ಯೆ 06 - ಗಣಿಗಳು ಮತ್ತು ಭೂ ವಿಜ್ಞಾನ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಶ್ರೀ ಡಿ.ಎ. ಚಿನ್ನಪ್ಪನವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು ಭೂ ವಿಜ್ಞಾನಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 13,53,62,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಭಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಸೂಚಿಸಲಾಯಿತು

ಬೇಡಿಕೆ ಕ್ರಮಾಂಕ – 7 - ಚಿಕ್ಕಪುಟ್ಟ ಉದ್ಯಮಗಳು

ಶ್ರೀ ಎ.ಎಂ. ಹಿಂಡಸಗೇರಿ (ಸಣ್ಣ ಪ್ರಮಾಣ ಕೈಗಾರಿಕಾ ಸಚಿವರು) : ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಚಿಕ್ಕಪುಟ್ಟ ಉದ್ಯಮಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 115,04,71,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 30,33,60,000 ರೂಪಾಯಿಗಳಿಗಿಂತ

ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೋರುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

ಬೇಡಿಕೆ ಕ್ರಮಾಂಕ – 21 - ಸಣ್ಣ ಉಳಿತಾಯಗಳು ಮತ್ತು ರಾಜ್ಯ ಲಾಟರಿ ವಿಮೆ ಮತ್ತು ರಾಜ್ಯ ಲೆಕ್ಕಪತ್ರ.

ಶ್ರೀ ಮದನಗೋಪಾಲ ನಾಯಕ (ಸಣ್ಣ ಉಳಿತಾಯಗಳು ಮತ್ತು ರಾಜ್ಯ ಲಾಟರಿ, ವಿಮೆ ಮತ್ತು ರಾಜ್ಯ ಲೆಕ್ಕಪತ್ರ) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಣ್ಣ ಉಳಿತಾಯಗಳು ರಾಜ್ಯ ಲಾಟರಿ, ವಿಮೆ ಮತ್ತು ರಾಜ್ಯ ಲೆಕ್ಕಪತ್ರ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 42,33,70,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 80,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೋರುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

ಬೇಡಿಕೆ ಕ್ರಮಾಂಕ - 25 - ರಾಜ್ಯದ ಅಬಕಾರಿ

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು) (ಮಾನ್ಯ ಅಬ್ಕಾರಿ ರಾಜ್ಯ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯದ ಅಬಕಾರಿ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 26,42,41,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೋರುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

ಬೇಡಿಕೆ ಕ್ರಮಾಂಕ – 33 - ಗೃಹ ನಿರ್ಮಾಣ

(ಸರ್ಕಾರ ನಿವಾಸದ ಕಟ್ಟಡಗಳ ಹೊರತು)

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ವಸತಿ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31-3-1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)"ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 62,49,79,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 66,29,40,000 ರೂಪಾಯಿಗಳಿಗಿಂತ (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೋರುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

ಬೇಡಿಕೆ ಕ್ರಮಾಂಕ – 44 - ಯೋಜನೆ ಮತ್ತು ಸಾಂಖ್ಯಿಕ ಹಣಕಾಸು ಅಭಿಯಾಚನೆಗಳು ಇತ್ಯಾದಿ

ಶ್ರೀ ಕೆ.ಎಚ್. ಹನುಮೇಗೌಡ (ಯೋಜನಾ ಮತ್ತು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು

ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಯೋಜನೆ ಮತ್ತು ಸಾಂಖ್ಯಿಕ ಹಣಕಾಸು ಅಭಿಯಾಚನೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 10,74,56,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 34,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬೇಡಿಕೊಳ್ಳುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

DEMAND NO.34

URBAN DEVELOPMENT

SRI M .MALLIKARJUNA KHARGE (Minister for large and Medium Industries) (on behalf of the Minister for Urban Development) : Sir, on the recommendation of the Governor, I beg to move:

"That a sum not exceeding Rs. 171,15,99,000 on Revenue account and Rs. 48,75,50,000 on capital account inclusive of the sum granted "on account" be granted to the Government to defray the charges which will come in course of payment during the financial year ending 31st day of March 1995 in respect of "Urban Development"

The question was proposed.

ಅಭಿಯಾಚನೆ ಕ್ರಮಾಂಕ 54 - ವಕ್ಫ್

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) (ಮಾನ್ಯ ವಕ್ಫ್ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಕ್ಫ್"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 355,50,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

ಅಧ್ಯಕ್ಷರು : ನೆರೆಹಾವಳಿ ಮತ್ತು ಅನಾವೃಷ್ಟಿಯಿಂದ ರಾಜ್ಯದ ಕೆಲವು ಭಾಗಗಳಲ್ಲಿ ಉಂಟಾಗಿರುವ ಹಾನಿಯ ಬಗ್ಗೆ ಮುಂದುವರೆದ ಚರ್ಚೆ.

ನೆರೆಹಾವಳಿ ಮತ್ತು ಅನಾವೃಷ್ಟಿಯಿಂದ ರಾಜ್ಯದ ಕೆಲವು ಭಾಗಗಳಲ್ಲಿ ಉಂಟಾಗಿರುವ ಹಾನಿ.

(ಮುಂದುವರೆದ ಚರ್ಚೆ)

+ ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಅಧ್ಯಕ್ಷರೆ, ಈ ವರ್ಷ ನಮ್ಮ ದುರಾದೃಷ್ಟವೆನ್ನುವ ಹಾಗೆ ವಿಪರೀತ ಮಳೆ ನಮ್ಮ ಪ್ರದೇಶದಲ್ಲಿ ಬಿದ್ದು ಸಾಕಷ್ಟು ಹಾನಿಯಾಗಿರುವಂತಹ ಸಂಗತಿ. ನಿಮಗೆ ನಮಗೆ ಎಲ್ಲರಿಗೂ ಮನದಟ್ಟಾಗಿದೆ. ಆದರೂ ಸಹ ನಾನು ಈ ಸಂದರ್ಭದಲ್ಲಿ ಸರಕಾರದ ಗಮನಕ್ಕೆ ತರುತ್ತಿರುವುದೆಂದು

ಹೇಳಿದರೆ ಈ ತರಹದ ಮಳೆ ಹಾನಿ ಇಡೀ ರಾಜ್ಯದಲ್ಲಿ ಯಾವತ್ತೂ ಆಗಿರಲಿಲ್ಲ. 1961 ರಲ್ಲಿ ಈ ರೀತಿ ಭಾರಿ ಮಳೆಯಾಗಿ ಅನಾಹುತವಾದಾಗ ಸರಕಾರ ರೈತರಿಗೆ ಮತ್ತು ಸಾಮಾನ್ಯ ವರ್ಗದವರಿಗೆ ಅನುಕೂಲ ಮಾಡಿಕೊಟ್ಟಿದೆ. ಮನೆ ಬಿದ್ದವರಿಗಾಗಲೀ ಕೃಷಿ ಮಾಡುತ್ತಿದ್ದ ಭೂಮಿ ಹಾಳಾದ್ದಕ್ಕಾಗಲೀ ಸಾಕಷ್ಟು ಪರಿಹಾರವನ್ನು ಕೊಡಲಿಕ್ಕೆ ಸಾಧ್ಯವಾಗದಿದ್ದರೂ ಸಹ ಬಡ ಜನರ ರೈತರ ಸಹಾಯಕ್ಕೆ ಬಂದುದನ್ನು ನಾವು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬೇಕಾಗುತ್ತದೆ. 1961 ರಲ್ಲಿ ಅತಿವೃಷ್ಟಿ ಪ್ರದೇಶವೆಂದು ಅದರಲ್ಲೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೂಡಿಗೆರೆಯನ್ನು ಘೋಷಣೆ ಮಾಡಿ ಆ ಸಂದರ್ಭದಲ್ಲಿ ಫ್ಲಡ್ ಲೋನ್ ಎಂದು ನೀಡಿ ರೈತರಿಗೆ ಸಹಾಯ ಮಾಡಿದ್ದಾರೆ. ಮತ್ತು ರೈತರ ಸಾಲ ಮನ್ನಾ ಆಗಿದೆ. ಅಂತಹ ಸಹಾಯವನ್ನು ಇವತ್ತು ಸರಕಾರ ಮಾಡಿದ್ದೇ ಆದರೆ ಬಹಳಷ್ಟು ಜನ ಯಾರು ಕೃಷಿ ಭೂಮಿಯನ್ನು ಕಳೆದುಕೊಂಡಿದ್ದಾರೆ ಮತ್ತು ಎಷ್ಟು ಜನ ಮನೆ ಮತ್ತು ಮಠ ಇತ್ಯಾದಿಗಳನ್ನು ಏನು ಕಳೆದುಕೊಂಡಿದ್ದಾರೆ, ಅವರಿಗೆ ಬಹಳ ಸಹಾಯವಾಗುತ್ತದೆ. ಆದರೂ ಸರಕಾರ ಈ ವರ್ಷದಲ್ಲಿ ಮಳೆ ಹಾನಿಗೆ ಒಳಗಾದ ರೈತರಿಗೆ ಮತ್ತು ಪ್ರಾಣ ಹಾನಿಯಾದಂತಹವರಿಗೆ ಮುಂದಾಗಿ ಸಾಕಷ್ಟು ಸಹಾಯ ಮಾಡಿದ್ದಾರೆ. ಆ ಬಗ್ಗೆ ಜನರ ಪರವಾಗಿ ಸರಕಾರವನ್ನು ಅಭಿನಂದಿಸುತ್ತೇನೆ. ಆದರೆ ಇವತ್ತು ನಾನು ಸರಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಎಲ್ಲಿ ಅತಿಯಾಗಿ ಮಳೆ ಬಿದ್ದಿದೆ ಅಂತಹ ಪ್ರದೇಶವನ್ನು ಮಳೆ ಹಾನಿಗೊಳಗಾದ ಪ್ರದೇಶವೆಂದು ಘೋಷಣೆ ಮಾಡಬೇಕು ಮತ್ತು ಇಂತಹ ಕಡೆಗಳಲ್ಲಿ ಫ್ಲಡ್ ಲೋನ್ ಕೊಡಲಿಕ್ಕೆ ಸರಕಾರ ಮುಂದಾಗಬೇಕು. ಇದರಿಂದ ಬಹಳಷ್ಟು ಜನರಿಗೆ ಸಹಾಯವಾಗುವುದರಿಂದ ಕೂಡಲೇ ಸರಕಾರ ಈ ಶಾಸನ ಸಭೆಯ ಸಂದರ್ಭದಲ್ಲೇ ತೀರ್ಮಾನ ಕೈಗೊಂಡು ಘೋಷಣೆ ಮಾಡಬೇಕೆಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ. ನಮ್ಮಲ್ಲಿ ಸುಮಾರು 500 ಮನೆಗಳು ಬಿದ್ದಿವೆ. ಅವರಿಗೆ ಮನೆ ಕಟ್ಟಿಕೊಳ್ಳಲಿಕ್ಕೆ ಬಹಳ ಕಡಿಮೆ ಹಣ ಅಂದರೆ 10,000 ರೂಪಾಯಿಯನ್ನು ಕೊಡುತ್ತಾರೆ. ಈ 10,000 ರೂ. ಕೊಟ್ಟರೆ ಅದು ಏನೇನೂ ಸಾಕಾಗುವುದಿಲ್ಲ, ಬಡವ ತನ್ನ ಕೈಯ್ಯಿಂದ ಹಾಕಿ ಕಟ್ಟಿಕೊಳ್ಳುವ ಶಕ್ತಿ ಆತನಿಗೆ ಇರುವುದಿಲ್ಲ. ನಾವು ಆಶ್ರಯದಲ್ಲಿ ಅವರಿಗೆ ಮನೆ ಕೊಡಬೇಕೆಂದು ನಿರ್ಧಾರ ಮಾಡಿದ್ದಿರೂ ಸಹ ನಾನು ಸರಕಾರವನ್ನು ಏನು ಒತ್ತಾಯ ಮಾಡುತ್ತೇನೆ ಎಂದರೆ, ಮಲೆನಾಡು ಪ್ರದೇಶದಲ್ಲಿ ಆಶ್ರಯದಲ್ಲಿ ಮನೆ ಕಟ್ಟಲಿಕ್ಕೆ 15,000 ಇಟ್ಟಿದ್ದೇವೆ ಆ ಮನೆಗಳನ್ನು ಕಟ್ಟಿದರೆ ಮುಂದೆ ಮಳೆಯಾದರೆ ಆಗ ಇಂತಹ ಬಹಳಷ್ಟು ಮನೆಗಳು ಬಿದ್ದು ಹೋಗುವ ಸಂದರ್ಭ ಬರುವುದರಿಂದ ಕೊನೇ ಪಕ್ಷ ಈ ಮನೆಗಳಿಗೆ ಅಂದರೆ ಮಲೆನಾಡು ಪ್ರದೇಶದಲ್ಲಿ 25,000 ರೂಪಾಯಿಯಲ್ಲಿ ಆಶ್ರಯದಲ್ಲಿ ಮನೆ ಕಟ್ಟಲಿಕ್ಕೆ ಅವಕಾಶ ಮಾಡಿಕೊಡಬೇಕು. ಅಷ್ಟು ಹಣ ಕೊಟ್ಟರೆ ಮಾತ್ರ ಗಟ್ಟಿ ಮುಟ್ಟಾದ ಮನೆಗಳನ್ನು ಕಟ್ಟಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದೇ ರೀತಿ ಶಾಲಾ ಕಟ್ಟಡಗಳು ಸಾಕಷ್ಟು ಬಿದ್ದು ಹೋಗಿವೆ.

ಶಿಕ್ಷಣ ಇಲಾಖೆಯಲ್ಲಿ ಶಾಲಾ ಕಟ್ಟಡವನ್ನು ರಿಪೇರಿ ಮಾಡಲಿಕ್ಕೆ ಮತ್ತು ಶಾಲಾ ಕಟ್ಟಡವನ್ನು ಪುನರ್ ನಿರ್ಮಾಣ ಮಾಡಲಿಕ್ಕೆ ಏನು ಹಣ ಇದೆ ಅದು ಏನೇನೂ ಸಾಲದು. ಜೊತೆಗೆ ಫ್ಲಡ್‌ನಲ್ಲಿ ಹಣ ಕೊಡುತ್ತಿದೆ ಆದ್ದರಿಂದ ಸಾಕಷ್ಟು ಬಿದ್ದಿರುವ ಶಾಲೆಗಳನ್ನು ಕಟ್ಟಲಿಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲಿ ಹೆಚ್ಚು ಮಳೆಯಿಂದ ಹಾನಿ ಉಂಟಾಗಿ ಶಾಲಾ ಕಾಲೇಜುಗಳ ಕಟ್ಟಡ ಬಿದ್ದಿದೆ ಮತ್ತು ಬಹಳ ಶಿಥಿಲಗೊಂಡಿದೆ. ಅಂತಹ ಪ್ರದೇಶಗಳಿಗೆ ವಿಶೇಷವಾಗಿ ವಿದ್ಯಾ ಇಲಾಖೆಗೆ ಹಣವನ್ನು ಕೊಟ್ಟು ಶಾಲಾ ಕಾಲೇಜುಗಳ ರೀಪೇರಿ ಮತ್ತು ಪುನರ್ ನಿರ್ಮಾಣಕ್ಕೆ ಕೂಡಲೇ ವ್ಯವಸ್ಥೆ ಮಾಡದಿದ್ದರೆ ನಾವು ಜನರಿಂದ ಬೈಯ್ಯಳಕ್ಕೆ ಗುರಿಯಾಗುತ್ತೇವೆ.

ಅಮೇಲೆ ನನ್ನ ಕ್ಷೇತ್ರದಲ್ಲಿ ಬಹಳ ಮುಖ್ಯವಾದ ಕೆಲವು ಸೇತುವೆಗಳು ತೊಳೆದು, ಕೊಚ್ಚಿಕೊಂಡು ಹೋಗಿವೆ. ಅದಕ್ಕೆ ಈಗ ಉದಾಹರಣೆ ಹೇಳಬೇಕು ಎಂದರೆ ಮೂಡಿಗೆರೆ ಹತ್ತಿರ ಫಲ್ಗುಣಿ, ಎನ್ನುವ ಕಡೆ ಹೇಮಾವತಿಗೆ ಕಟ್ಟಿದ ಆ ಸೇತುವೆ

ಕುಸಿದು ಯೋಯಿತು. ಆ ಕಡೆ ಜನ ಆ ಕಡೇನೇ ಇದ್ದರು ಈ ಕಡೆ ಜನ ಈ ಕಡೇನೇ ಇದ್ದರು. ಆ ಜನರಿಗೆ ಯಾವುದೇ ಆಹಾರ ಸಾಮಗ್ರಿಗಳನ್ನಾಗಲಿ, ಯಾವುದೇ ವಸ್ತುಗಳನ್ನಾಗಲಿ ಒದಗಿಸಲಿಕ್ಕೆ ಬಹಳ ಕಷ್ಟ ಆದಾಗ ಸರ್ಕಾರ ಮುಂದಾಗಿ ನಮ್ಮ ಒಂದು ಪ್ರಯತ್ನದಿಂದ ಎಂಞಜಿನವರು ಬಂದು ಒಂದು ತಾತ್ಕಾಲಿಕವಾದ ಒಂದು ಸೇತುವೆಯನ್ನು ನಿರ್ಮಾಣ ಮಾಡಿದ್ದರು. ಈಗ ಮಳೆಗಾಲ ಮುಗಿದು ಹೋದ ನಂತರ ಎಂಞಜಿನವರು ಆ ಒಂದು ಸೇತುವೆಯನ್ನು ಬಿಚ್ಚಿಕೊಂಡು ಹೋಗಿದ್ದಾರೆ. ಆದರೆ ಜನ ಈಗ ಏನು ಮಾಡಬೇಕು ಎಂದು ಬಹಳ ಕಷ್ಟದ ಪರಿಸ್ಥಿತಿ ಉಂಟಾಗಿದೆ. ತಕ್ಷಣ ಜಿಲ್ಲಾ ಪರಿಷತ್ತಿನವರು ಸೇತುವೆ ಕಟ್ಟಲಿಕ್ಕೆ ಸಾಧ್ಯವಿಲ್ಲ. ಅವರ ಹತ್ತಿರ ಅಷ್ಟೊಂದು ಹಣವೂ ಇಲ್ಲ. ಈ ಸಂದರ್ಭದಲ್ಲಿ ತುರ್ತಾಗಿ ನೀವು ಫ್ಲಡ್‌ನಲ್ಲಿ ಪರಿಹಾರಕ್ಕೆ ಹಾಗೂ ಕಾಮಗಾರಿಗಳಿಗೆ ಕೊಟ್ಟಿರತಕ್ಕ ಹಣ ಏನೇನೂ ಸಾಲದು. ಈಗ ನಮ್ಮ ಜಿಲ್ಲೆಯಲ್ಲಿ ಸುಮಾರು ಎಂಟು ಕೋಟಿರೂಪಾಯಿ ಮಳೆ ಹಾನಿಯಿಂದ ನಷ್ಟ ಉಂಟಾಗಿದ್ದರೆ ನಮಗೆ ಸರ್ಕಾರದಿಂದ ಬಿಡುಗಡೆ ಆಗಿರುವ ಹಣ ಕೇವಲ ಒಂದು ಕೋಟಿ ರೂಪಾಯಿಗಳು. ಎಂಟು ಕೋಟಿ ರೂಪಾಯಿ ಲಾಸಿಗೆ ಒಂದು ಕೋಟಿ ಹಣ ಕೊಟ್ಟರೆ ನಾವು ಬೆಳೆ ಪರಿಹಾರ ಕೊಟ್ಟಿದ್ದೇವೆ. ಕೃಷಿ ಭೂಮಿಯ ಮೇಲೆ ಮರಳು ಕೂತಿದ್ದು ಆ ಮರಳನ್ನು ತೆಗೆಯುವುದಕ್ಕೆ ಜನರಿಗೆ ಪರಿಹಾರವನ್ನು ಕೊಟ್ಟಿದ್ದೇವೆ. ಮತ್ತು ಪ್ರಾಣ ಹಾನಿ ಆದವರಿಗೆ ಕೊಟ್ಟಿದ್ದೇವೆ.

ಅದರೆ ಈ ಸೇತುವೆಗಳ ಪುನರ್ ನಿರ್ಮಾಣಕ್ಕೆ ನಾವು ಹಣವನ್ನು ಸಾಕಷ್ಟು ಕೊಡಲಿಕ್ಕೆ ಸಾಧ್ಯವೇ ಇಲ್ಲ. ಸೇತುವೆಗಳ ಕೆಲಸಕ್ಕೆ ಇಮ್ಮೀಡಿಯಟ್ ಆಗಿ ಅಂದರೆ ನಾವು ಪುನರ್ ನಿರ್ಮಾಣವನ್ನು ಕೈಗೊಳ್ಳ ಬೇಕಾದರೆ ಏನು ಫ್ಲಡ್ ರಿಲೀಫ್‌ನಲ್ಲಿ ಹಣ ಬಿಡುಗಡೆ ಆಗಿದೆ, ಈ ಒಂದು ಹಣದಲ್ಲಿ ಸೇತುವೆಗಳನ್ನು ನಿರ್ಮಾಣ ಮಾಡಲಿಕ್ಕೆ ಆಗುವುದಿಲ್ಲ. ತತ್‌ಕ್ಷಣ ಈ ಸೇತುವೆಗಳ ಪುನರ್ ನಿರ್ಮಾಣಕ್ಕೆ ಸರ್ಕಾರ ವಿಶೇಷವಾದಂತಹ ಹಣವನ್ನು ಕೊಟ್ಟು ಈ ಸೇತುವೆಗಳ ಪುನರ್ ನಿರ್ಮಾಣ ಕಾರ್ಯಕ್ಕೆ ಸಹಾಯ ಮಾಡಬೇಕು. ಮೂಡಿಗೆರೆ ತಾಲ್ಲೂಕಿನ ಬಂಕೇನಹಳ್ಳಿ ಸೇತುವೆ ಇರಬಹುದು, ಫಲ್ಗುಣಿ ಸೇತುವೆ ಇರಬಹುದು, ಬಾಳೂರು ಹತ್ತಿರದ ಹೇಮಾವತಿ ಸೇತುವೆ ಇವುಗಳನ್ನು ಕಟ್ಟಲಿಕ್ಕೆ ಒಂದೊಂದು ಸೇತುವೆಗೆ ಕಡೆಯಪಕ್ಷ 15 ರಿಂದ 20 ಲಕ್ಷ ರೂಪಾಯಿ ಖರ್ಚು ಆಗುವ ದಿಸೆಯಲ್ಲಿ ವರ್ಷ ಈ ಸೇತುವೆಗಳ ಪುನರ್ ನಿರ್ಮಾಣ ಕಾರ್ಯ ಆಗದೇ ಇದ್ದರೆ ಮುಂದಿನ ವರ್ಷ ಮಳೆಗಾಲದಲ್ಲಿ ಮತ್ತೆ ಜನರಿಗೆ ತೊಡಕು ಉಂಟಾಗುವುದರಿಂದ ಇದನ್ನು ಎಮರ್ಜೆನ್ಸಿ ವರ್ಕ್ ಎಂದು ತೆಗೆದುಕೊಂಡು ಕೆಲಸ ಮಾಡಬೇಕಾಗಿದೆ. ಅದಕ್ಕಾಗಿ ವಿಶೇಷವಾದ ಹಣ ಸರ್ಕಾರದಿಂದ ಕೂಡಲೇ ಬಿಡುಗಡೆ ಮಾಡಬೇಕು ಎಂದು ತಮ್ಮ ಮೂಲಕ ಒತ್ತಾಯವನ್ನು ಮಾಡುತ್ತೇನೆ.

ಇನ್ನೊಂದು ದೊಡ್ಡ ಅನಾಹುತ ಆಗಿದೆ. ಅದೇನೆಂದರೆ, ನಮ್ಮಲ್ಲಿ ಕೃಷಿ ಭೂಮಿಯ ಮೇಲೆ ಸುಮಾರು ಒಂದು ಎಕರೆಯಲ್ಲಿ ಮರಳು ಕುಳಿತಿದೆ. ಹಳ್ಳದ ಬದಿಯಲ್ಲಿ ಇರುವವರ 2-3 ಎಕರೆ ಭೂಮಿಯ ಮೇಲೆ ಬಹಳಷ್ಟು ಮರಳು ಕುಳಿತಿದೆ. ಈಗ ಸಾಮಾನ್ಯ ರೈತರು ಆ ಮರಳನ್ನು ತೆಗೆಯುವುದಕ್ಕೆ ಸಾಧ್ಯವೇ ಇಲ್ಲ. ನಾವು ಅವನಿಗೆ ಮಿನಿಮಂ 500 ರೂಪಾಯಿಯಿಂದ ಸುಮಾರು ಸಾವಿರ ರೂಪಾಯಿವರೆಗೂ ಕೊಟ್ಟಿದ್ದೇವೆ. ಆತನಿಗೆ ಕೊನೆಯ ಪಕ್ಷ ಎಂದರೆ ಐದು ಸಾವಿರ ರೂಪಾಯಿಯಿಂದ ಆರು ಸಾವಿರ ರೂಪಾಯಿ ಮರಳನ್ನು ತೆಗೆಸುವುದಕ್ಕೆ ಹಣ ಬೇಕಾಗುತ್ತದೆ. ಸಂದರ್ಭದಲ್ಲಿ ಅವನ ಕೃಷಿ ಭೂಮಿಯ ಮೇಲೆ ಭತ್ತದ ಗದ್ದೆಯ ಮೇಲೆ ಕುಳಿತಿರುವ ಮರಳನ್ನು ತೆಗೆಯದಿದ್ದರೆ ವ್ಯವಸಾಯ ಮಾಡುವುದಕ್ಕೆ ಆ ಭೂಮಿ ಖಂಡಿತವಾಗಿ ಯೋಗ್ಯವಾಗುವುದೇ ಇಲ್ಲ. ಹಾಗಾಗಿ ನಾವು ಮರಳನ್ನು ತೆಗೆಸುವುದಕ್ಕೆ ಒಂದು ಯೋಜನೆ ಮಾಡಿದ್ದೇವೆ. ಈಗ ಕೇಂದ್ರ ಸರ್ಕಾರದಿಂದ ಎಂಪ್ಲಾಯ್‌ಮೆಂಟ್ ಅಫರ್‌ಮೇಷನ್ ಸ್ಕೀಮ್‌ನಿಂದ

ಏನು ಹಣ ಬರುತ್ತಿದೆ. ಅದನ್ನು ನೀವು ಒದಗಿಸಿದರೆ ಈ ಕೃಷಿ ಇಲಾಖೆಯವರು ಲೇಬರ್ ವೇಜಸ್ ಇದೆ. ಅದನ್ನು ರೈತನಿಗೆ ಮರಳನ್ನು ತೆಗೆಸುವುದಕ್ಕೆ ಎಷ್ಟು ಹಣ ಆಗುತ್ತದೆ. ಅಷ್ಟು ಲೇಬರನ್ನು ಉಪಯೋಗಿಸಿ ಒಂದು ಎರಡು ಎಕರೆ ಗದ್ದೆಯಲ್ಲಿ ಮರಳನ್ನು ತೆಗೆಯುವುದಕ್ಕೆ ಆತ ಏನು ಖರ್ಚು ಮಾಡುತ್ತಾನೆ, ಆ ಹಣವನ್ನು ಇಎಎಸ್‌ನಲ್ಲಿ ಸರ್ಕಾರ ಕೊಡಬಹುದು ಎಂದು ಒಂದು ಆದೇಶವನ್ನು ಕೊಟ್ಟಿದ್ದೇ ಆದರೆ ಬಹಳಷ್ಟು ಆತನಿಗೆ ಸಹಾಯ ಆಗುತ್ತದೆ. ಅದು ಪರಿಹಾರವೆಂದು ಆಗುವುದಿಲ್ಲ. ಕೃಷಿ ಇಲಾಖೆಯವರೇ ಮರಳನ್ನು ತೆಗೆಸಬೇಕಾಗಿತ್ತು. ಆದರೆ ಸಾಯಿಲ್ ಕನ್ಸರ್ವೇಷನ್ ನವರಿಗೆ ನಾವು ಕೇಳಿದಾಗ ಅವರ ಒಂದು ಎಸ್ಟಿಮೇಟ್ ಕಾಸ್ಟ್ ಜಾಸ್ತಿ ಆಗುತ್ತದೆ ಎಂದು ತಿಳಿಯಿತು. ಆದ್ದರಿಂದ ರೈತರು ಎಷ್ಟು ಕೂಲಿ ಆಳುಗಳನ್ನು ಉಪಯೋಗಿಸಿ ಆ ಮರಳನ್ನು ತೆಗೆಸುವುದಕ್ಕೆ ಪ್ರಯತ್ನ ಮಾಡುತ್ತಾನೆ, ಆ ಹಣವನ್ನು ಈ ಕೃಷಿ ಇಲಾಖೆಯ ಮೂಲಕ, ಈ ಇಎಎಸ್ ಸ್ಕೀಮ್‌ನಲ್ಲಿ ಹಣವನ್ನು ಒದಗಿಸಿದ್ದೇ ಆದರೆ ಆತನಿಗೆ ಬಹಳಷ್ಟು ಸಹಾಯ ಆಗುತ್ತದೆ. ಈಗ ನನ್ನ ತಾಲ್ಲೂಕಿನಲ್ಲಿ ಅಷ್ಟೇ ಅಲ್ಲ, ಮಂಗಳೂರು ಜಿಲ್ಲೆಯ ಕೆಲವಾರು ತಾಲ್ಲೂಕುಗಳಲ್ಲಿ ಇದೇ ರೀತಿಯಾಗಿ ಎಕರೆಗಳಷ್ಟು ಗದ್ದೆಯ ಮೇಲೆ ಮರುಳು ಕುಳಿತಿದೆ. ಆ ಬಡ ರೈತ ಖಂಡಿತವಾಗಿ ಮರಗಳನ್ನು ತೆಗೆದು ಅದರಲ್ಲಿ ಮತ್ತೆ ವ್ಯವಸಾಯ ಮಾಡಲಿಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ನೀವು ಈ ರೀತಿಯಾಗಿ ಅವನಿಗೆ ಸಹಾಯ ಮಾಡಿದ್ದೇ ಆದರೆ ಖಂಡಿತ ಅವನಿಗೆ ಬಹಳ ಅನುಕೂಲವಾಗುತ್ತದೆ. ಈ ಒಂದು ಆದೇಶವನ್ನು ಸರ್ಕಾರ ಕೊಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಕೊನೆಯದಾಗಿ ಫ್ಲಡ್ ಲೋನ್‌ಗೆ ಬಹಳಷ್ಟು ಸಹಾಯ ಸರ್ಕಾರ ಮಾಡಬೇಕಾಗಿದೆ. 1961ರಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಬಡ ರೈತರಿಗೆ ಫ್ಲಡ್ ಲೋನ್ ಕೊಟ್ಟಿತು. ಹಿಂದೆ ಬಡ್ಡಿ ರಹಿತವಾದ ಸಾಲವನ್ನು ಕೊಟ್ಟರು. ಮತ್ತೆ ಈ ರೈತರು ಎಲ್ಲಾ ಹಣವನ್ನು ವಾಪಸ್ ಕೊಟ್ಟು ಸರ್ಕಾರದ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ಇವತ್ತೂ ಸಹ ಅದೇ ನಂಬಿಕೆ ವಿಶ್ವಾಸವನ್ನು ಇಟ್ಟು ನೀವು ಫ್ಲಡ್ ಲೋನನ್ನು ರೈತರಿಗೆ ಒದಗಿಸಿದ್ದೇ ಆದರೆ ಅವರಿಗೆ ಏನೇನು ಅನಾಹುತ ಆಗಿದೆ. ಹಳ್ಳಿ ಕೊರೆದು ಹೋಗಿರಬಹುದು, ಕೆರೆ ದಂಡೆ ಕೊಚ್ಚಿ ಹೋಗಿರಬಹುದು, ಕೃಷಿ ಭೂಮಿಯ ಮೇಲೆ ಮರಳು ಕುಳಿತಿರುವುದೇ ಆಗಿರಬಹುದು, ಈ ಒಂದು ಕಷ್ಟದ ಪರಿಸ್ಥಿತಿಯಲ್ಲಿ ಅವರಿಗೆ ಈ ಲೋನ್ ಸಹಾಯ ಆಗುತ್ತದೆ. ಈ ದೃಷಿಯಲ್ಲಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಫ್ಲಡ್‌ನಿಂದಾಗಿ, ಮಳೆಯಿಂದಾಗಿ ಏನು ಹಾನಿ ಆಗಿದೆ, ಎಲ್ಲೆಲ್ಲಿ ಈ ರೀತಿ ಆಗಿದೆ ಅಲ್ಲೆಲ್ಲಾ ಈ ಸಾಲವನ್ನು ಒದಗಿಸುವುದಕ್ಕೆ ಸರ್ಕಾರ ಮುಂದಾಗಬೇಕೆಂದು ಹೇಳುತ್ತೇನೆ.

ಇನ್ನು ಇಡೀ ನಮ್ಮ ಜಿಲ್ಲೆಯಲ್ಲಿ ಎಲ್ಲೂ ಆಗದಷ್ಟು ಅನಾಹುತ ಮೂದಿಗೆರೆ ತಾಲ್ಲೂಕಿನಲ್ಲಿ ಆಗಿದೆ. ಸುಮಾರು 8-10 ಕೋಟಿ ಲಾಸ್ ಆಗಿರುವ ದೃಷ್ಟಿಯಿಂದ ಈ ತಾಲ್ಲೂಕ್ ಅನ್ನು ಮಳೆ ಹಾನಿಗೊಳಗಾದ ತಾಲ್ಲೂಕು ಎಂದು ಘೋಷಣೆ ಮಾಡಿ ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ವಿಶೇಷವಾದ ಹಣಕಾಸು ಸೌಲಭ್ಯವನ್ನು ಈ ತಾಲ್ಲೂಕಿಗೆ ಒದಗಿಸುವಂತೆ ಸರ್ಕಾರ ಘೋಷಣೆ ಮಾಡಿ ನಮ್ಮ ತಾಲ್ಲೂಕಿನ ರೈತರಿಗೆ, ಈ ತಾಲ್ಲೂಕಿನ ಜನರ ಕಷ್ಟಕ್ಕೆ ಮುಂದಾಗಬೇಕು ಎಂದು ಹೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ವಿನಯ ಕುಮಾರ್ ಸೊರಕ್ಕೆ (ಪುತ್ತೂರು) : ಮಾನ್ಯ ಅಧ್ಯಕ್ಷರೇ ಇತ್ತೀಚೆಗೆ ವಿಪರೀತ ಮಳೆಯಿಂದಾಗಿ ನಾನಾ ರೀತಿಯ ಅನಾಹುತ ಆಗಿದೆ. ಈ ಬಗ್ಗೆ ಈಗಾಗಲೇ ಹಲವಾರು ಸದಸ್ಯರು ಈ ಸದನದಲ್ಲಿ ಸಂಬಂಧಪಟ್ಟವರ ಗಮನಕ್ಕೆ ತಂದಿದ್ದಾರೆ. ಹೆಚ್ಚಿನ ಅಂಶ ಏನೆಂದರೆ, ಕರ್ನಾಟಕ ರಾಜ್ಯದ ಒಂದು ಕಡೆಯಲ್ಲಿ

ವಿಪರೀತವಾಗಿ ಮಳೆಯಾಗಿದ್ದರೆ ಇನ್ನೊಂದು ಕಡೆಯಲ್ಲಿ ಕುಡಿಯಲಿಕ್ಕೆ ನೀರೇ ಇಲ್ಲದಂತಹ ಒಂದು ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಮೂರು ವರ್ಷಕ್ಕೆ ಏನು ಮಳೆ ಬರಬೇಕಾಗಿತ್ತು, ಆ ಮಳೆ ಒಂದೇ ವರ್ಷದಲ್ಲಿ ಬಂದಂತಹ ಸಂದರ್ಭದಲ್ಲಿ ಹೆಚ್ಚಿನ ಅಂಶ ಇಷ್ಟರವರೆಗೆ ಯಾವತ್ತೂ ಕೂಡ ಇಷ್ಟೊಂದು ಅನಾಹುತ ಆಗದೇ ಇದ್ದಂತಹ ಸಂದರ್ಭದ ರೀತಿಯಲ್ಲಿ ಆಗಿದೆ. ಇವತ್ತು ಮಳೆಯಿಂದ, ವಿಪರೀತ ನೆರೆಯಿಂದ ಜನರಿಗೆ ಆಗಲಿ, ಜಾನುವಾರುಗಳಿಗೇ ಆಗಲಿ, ಕೃಷಿಕರಿಗೇ ಆಗಲಿ, ಅನೇಕ ರೀತಿಯ ಅನಾಹುತ ಆಗಿದೆ. ಎಷ್ಟೋ ಮಂದಿ ಇವತ್ತು ಪ್ರಾಣವನ್ನು ಕಳೆದುಕೊಂಡಿದ್ದಾರೆ. ಇವತ್ತು ಅವರ ಸರ್ವಸ್ವವೂ ಹೋಗಿದೆ. ಮನೆ ಹೋಗಿದೆ, ಕೊಟ್ಟಿಗೆ ಹೋಗಿದೆ, ಜಾನುವಾರು ಹೋಗಿದೆ, ಕೃಷಿ ಹಾಳಾಗಿದೆ. ಯಾವುದೇ ರೀತಿಯ ಒಂದು ವ್ಯವಸ್ಥೆಯೇ ಇಲ್ಲದಂತಹ ಪರಿಸ್ಥಿತಿಯಲ್ಲಿ ರೈತ ಇವತ್ತು ಇದ್ದಾನೆ. ಅವತ್ತು ಪ್ರಾಣ ಹಾನಿ ಆದಂತಹವರ ಬಗ್ಗೆ ಘೋಷಣೆ ಕೂಡ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು, ಅದೇ ರೀತಿಯಾಗಿ ಕೇಂದ್ರದ ವೀಕ್ಷಕರು ಕೂಡ ನಮ್ಮ ಜಿಲ್ಲೆಗೆ ಆಗಮಿಸಿದರು. ಎಲ್ಲ ಲೋಕಸಭಾ ಸದಸ್ಯರುಗಳ, ವಿಧಾನ ಸಭಾ ಸದಸ್ಯರ ಸಭೆಯನ್ನು ಕೂಡ ಕರೆದರು, ಅಧಿಕಾರಿಗಳ ಸಭೆಯನ್ನು ಸಹ ಕಳೆದಿದ್ದರು. ಅಲ್ಲಿ ಘೋಷಣೆ ಕೂ ಮಾಡಿದ್ದಾರೆ. ಒಂದು ಲಕ್ಷ ಪರಿಹಾರವನ್ನು ನಾವು ಅವರ ಕುಟುಂಬದವರಿಗೆ ಕೊಡುತ್ತೇವೆಂದು ಹೇಳಿದ್ದಾರೆ. ಹೆಚ್ಚಿನ ಅಂಶ ನಮ್ಮ ಪುತ್ತೂರು ತಾಲ್ಲೂಕಿನಲ್ಲಿ ನಾಲ್ಕು ಜನರ ಮರಣ ಆಗಿದೆ. ಇವತ್ತಿನವರೆಗೆ ಒಬ್ಬರಿಗೆ ಮಾತ್ರ ಹಣ ಕೊಟ್ಟಿದ್ದಾರೆ. ಇನ್ನು ಮೂರು ಜನರಿಗೆ ಕೊಡುವುದು ಬಾಕಿ ಇದೆ. ಅದೇ ರೀತಿಯಾಗಿ ಮನೆ ಕುಸಿದು ಹೋಗಿದೆ. ಮನೆಯ ಮಟ್ಟಿಗೆ ಸಂಪೂರ್ಣ ನಾಶ ಆದಂತಹವರಿಗೆ 10 ಸಾವಿರ ರೂಪಾಯಿ ಪರಿಹಾರವನ್ನು ಕೊಡುವ ರೀತಿಯಲ್ಲಿ ಕಾರ್ಯಕ್ರಮವನ್ನು ಸರ್ಕಾರದ ರೆವಿನ್ಯೂ ಇಲಾಖೆಯವರಿಂದ ಆಗಿದೆ.

ಅದೇ ರೀತಿಯಾಗಿ 15 ಸಾವಿರ ರೂಪಾಯಿ ಆಶ್ರಯ ಯೋಜನೆ ಮುಖಾಂತರವಾಗಿ ಮನೆ ಕೊಡುವಂತಹ ರೀತಿಯಿಂದ ಕಾರ್ಯಕ್ರಮ ಹಮ್ಮಿಕೊಂಡಿದೆ. 10 ಸಾವಿರ ರೂಪಾಯಿ ಮನೆಗೆ ಕೊಡುವಂತಹ ಹಣ ಇನ್ನೂ ಕೂಡ ಕೊಟ್ಟಿಲ್ಲ. 15 ಸಾವಿರ ರೂಪಾಯಿಗಳ ಮನೆ ಕೊಡುವ ವಿಚಾರದಲ್ಲಿ ನಮ್ಮ ತಾಲ್ಲೂಕಿಗೆ ಬಂದಂತಹ ಆಶ್ರಯ ಯೋಜನೆಯಲ್ಲಿ ನಾವು ಅಲಾಟ್ ಮಾಡಿದ್ದೇವೆ. ಆದರೆ ಅದಕ್ಕೆ ಪ್ರತ್ಯೇಕವಾದ ಅರ್ಧ ಬಿದ್ದಂತಹ ಮನೆಗೆ ನೆರಳು ಭಾಗ್ಯ ಯೋಜನೆ ಮುಖಾಂತರ ಕೊಡುತ್ತೇವೆ, ಆಶ್ರಯ ಯೋಜನೆ ಮುಖಾಂತರ ಕೊಡುತ್ತೇವೆ ಎಂದು ಹೇಳಿದ್ದರೂ ಕೂಡ ಇನ್ನು ಕೂಡ ನಮ್ಮ ತಾಲ್ಲೂಕಿಗೆ ಆ ಹಣ ಬಂದಿಲ್ಲ. ಇವತ್ತು ಕೊಟ್ಟಿಗೆ 'ಜಾನುವಾರು ಹಟ್ಟಿ ಅನಾಹುತ ಆದ ಬಗ್ಗೆ ಕೂಡ ಈಗಾಗಲೇ ಸಂಬಂಧಪಟ್ಟವರು ಅಸೆಸ್-ಮೆಂಟ್ ಮಾಡಿ ಕಳಿಸಿಕೊಟ್ಟಿದ್ದಾರೆ. ಆದರೆ ಅವರಿಗೆ ಒಂದು ಚಿಕ್ಕಾಸೂ ಕೂಡ ಇದುವರೆಗೆ ಪರಿಹಾರ ಸಿಗುವುದಕ್ಕೆ ಅವಕಾಶ ಆಗಲಿಲ್ಲ. ಜಾನುವಾರುಗಳು ಸತ್ತು ಹೋಗಿವೆ, ಹಟ್ಟಿ ಬಿದ್ದು ಹೋಗಿದೆ, ಕೊಟ್ಟಿಗೆ ಬಿದ್ದು ಹೋಗಿದೆ. ಇದಕ್ಕೆ ಕೂಡ ಪರಿಹಾರವನ್ನು ಕೊಡುವ ರೀತಿಯಲ್ಲಿ ಸರ್ಕಾರ ಕ್ರಮ ಕೈಗೊಳ್ಳುವ ರೀತಿಯಲ್ಲಿ ಕೆಲಸ ಮಾಡುತ್ತಿದೆ. ಕೃಷಿಕರಿಗೆ ಭತ್ತದ ಬೇಸಾಯ ಇರಬಹುದು, ಅಡಿಕೆ ಕೃಷಿ ಇರುವವರು ಇರಬಹುದು, ರಬ್ಬರ್ ಇರಬಹುದು. ತೆಂಗು ಇರಬಹುದು, ಇದಕ್ಕೆಲ್ಲಾ ನಾನಾ ರೀತಿಯಿಂದ ಅನಾಹುತಗಳು ಆಗಿವೆ. ಇವೂತ್ತು ಎಷ್ಟೋ ಕಡೆಗಳಲ್ಲಿ ಪ್ರಕೃತಿ ವಿಕೋಪದಿಂದ ದೊಡ್ಡ ದೊಡ್ಡ ಗುಡ್ಡಗಳು ಜರುಗಿ ಸುಮಾರು ಅರ್ಧ ಒಂದು ಕಿಲೋಮೀಟರ್ ದೂರದವರೆಗೂ ಭೂಕಂಪವಾದಂಥ ರೀತಿಯ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಇದರಿಂದ ಎಕರೆಗಟ್ಟಲೇ ಜಮೀನುಗಳು ನಾಶವಾಗಿದೆ.

ಜಮೀನಿನ ಒಡೆತನ ಹೊಂದಿದ ರೈತರು ಯಾರಿದ್ದಾರೆ. ತಮ್ಮ ಜಮೀನುಗಳನ್ನು ಕಿಂಚಿತ್ತೂ ಸರಿಪಡಿಸಿಕೊಳ್ಳುವಂಥ ಸ್ಥಿತಿಯಲ್ಲಿಲ್ಲ. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಒಂದು ಘೋಷಣೆ ಮಾಡಿದ್ದು ಉದ್ಯೋಗ ಭರವಸೆ ಯೋಜನೆಯಲ್ಲಿ ಅವರಿಗೆ

ಕೆಲಸ ಕೊಡಿಸುವುದು ಮತ್ತು ಅವರ ಜಮೀನುಗಳನ್ನು ಸಾಯಿಲ್ ಕನ್ಸರ್ವೇಷನ್ ಡಿಪಾರ್ಟ್ಮೆಂಟ್ ಮುಖಾಂತರ ಅಥವಾ ಕೃಷಿ ಇಲಾಖೆ ಮುಖಾಂತರ ಸಮತಟ್ಟು ಮಾಡಿಸಿ, ಕೃಷಿಕರ ಬೆಳೆ ಹಾಳಾಗಿರುವ ಬಗ್ಗೆ ಅವರಿಗೆ ಬಿತ್ತನೆ ಬೀಜ, ರಸಗೊಬ್ಬರ ಅಥವಾ ಅವರಿಗೆ ಆಧಾರವಾಗುವಂಥ ರೀತಿಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದೆಂದರು. ಇದಾವುದೂ ಕೂಡ ಅನುಷ್ಠಾನಕ್ಕೆ ಬರುವ ಹಂತದಲ್ಲಿಲ್ಲ. ಅದೇ ರೀತಿ ಮಾರ್ಗವಿರಬಹುದು, ಸೇತುವೆ ಇರಬಹುದು, ಸರ್ಕಾರಿ ಶಾಲಾ-ಕಟ್ಟಡಗಳಿರಬಹುದು. ಇವೆಲ್ಲವೂ ಇವೊತ್ತು ಹೇಳಿಕೊಳ್ಳುವಂಥ ಸ್ಥಿತಿಯಲ್ಲಿಲ್ಲ. ಇವುಗಳ ಬಗ್ಗೆ ಸರ್ಕಾರ ಸ್ವಲ್ಪವೂ ಗಮನಹರಿಸಿದಂತೆ ಕಾಣುವುದಿಲ್ಲ. ಇವುಗಳು ಯಾವಾಗಲೂ ಸುಸ್ಥಿತಿಯಲ್ಲಿರುವಂತೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಉದಾಹರಣೆಗೆ, ಮಳೆ ಈಗ ಕಡಿಮೆಯಾಗುತ್ತಿದ್ದು, ಇದರ ಪರಿಣಾಮ ನಮ್ಮ ಭಾಗದ ರೈತರ ಮೇಲಾಗಿದೆ. ನಮ್ಮ ಪರಿಸರದಲ್ಲಿ ಅಡಿಕೆ, ತೆಂಗು ಬೆಳೆಗಾರರಿದ್ದಾರೆ ಹಾಗೂ ತೋಟಗಾರಿಕೆ ಇಲಾಖೆಯ ಉತ್ಪನ್ನವನ್ನು ಮಾಡುವ ಜನರೂ ಇದ್ದಾರೆ. ಅಡಿಕೆ, ತೆಂಗಿನ ಬೆಳೆಗೆ ರೋಗ ಬರುವುದನ್ನು ತಡೆಗಟ್ಟಲು ಕೀಟನಾಶಕ ಸಿಂಪರಣೆ ಮಾಡಬೇಕಾಗಿದ್ದು,

ಇದನ್ನು ಸರಿಯಾದ ಕಾಲಕ್ಕೆ ಮಾಡುವುದಕ್ಕೆ ಸಾಧ್ಯವಾಗದ್ದರಿಂದ ಅಡಿಕೆ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಶೇಕಡ 100ರಷ್ಟು ಬೆಳೆದಿದ್ದ ಅಡಿಕೆ ಬೆಳೆ ರೋಗದಿಂದಾಗಿ ಶೇಕಡ 50ರಷ್ಟು ಹಾಳಾಗುವ ಪರಿಸ್ಥಿತಿ ಇದೆ. ಈಗಾಗಲೇ ತೋಟಗಾರಿಕೆ ಮತ್ತು ಕಂದಾಯ ಇಲಾಖೆಯವರು ನಾಶವಾದ ಬೆಳೆಯ ಅಸೆಸ್‌ಮೆಂಟ್ ಮಾಡಿದ್ದಾರೆ. ಅಡಿಕೆ ಬೆಳೆಗಾರರೆಂದರೆ ಸರ್ಕಾರದ ಮತ್ತು ಅಧಿಕಾರಿಗಳ ದೃಷ್ಟಿಯಲ್ಲಿ 'ದೊಡ್ಡ ಶ್ರೀಮಂತರು' ಎಂಬ ತಪ್ಪು ಕಲ್ಪನೆ ಇದೆ. ಆದರೆ, ಇದು ತಪ್ಪು. ಕೆಲವರು 100 ಅಡಿಕೆ ಸಸಿಗಳನ್ನು ಬೆಳೆಸುವಂತವರಿದ್ದಾರೆ. 500 ಅಡಿಕೆ ಸಸಿಗಳನ್ನು ಬೆಳೆಸುವಂತವರಿದ್ದಾರೆ. ಇದರಲ್ಲಿ ಸಣ್ಣ ಸಣ್ಣ ಹಿಡುವಳಿದಾರರಿದ್ದಾರೆ. ದರ ಉತ್ಪತ್ತಿ ವರ್ಷಕ್ಕೊಂದು ಸಾರಿ ಮಾತ್ರ ಬರುತ್ತದೆ. ಇವೊತ್ತು ಅದೆಲ್ಲಾ ಸಂಪೂರ್ಣ ನಾಶವಾಗುವಂಥ ಪರಿಸ್ಥಿತಿಯುಂಟಾಗಿದೆ. ಇದರ ಕಡೆ ಸರ್ಕಾರ ಗಮನಹರಿಸಬೇಕು. ತೋಟಗಾರಿಕೆ ಇಲಾಖೆಯವರು ಬರೀ ಹಣ್ಣು-ಹಂಪಲು, ತರಕಾರಿಗಳಿಗೆ ಮಾತ್ರ ಸೀಮಿತ ಎಂದು ತಿಳಿದುಕೊಳ್ಳಬಾರದು. ತೋಟಗಾರಿಕೆಯಲ್ಲಿ ಅಡಿಕೆಯನ್ನು ಬೆಳೆದು ಅದನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಕಳುಹಿಸಿಕೊಡುವಂಥ ವ್ಯವಸ್ಥೆ ಇದೆ. ಈ ದಿಸೆಯಲ್ಲಿ ತೋಟಗಾರಿಕೆ ಇಲಾಖೆಯವರು ಹೆಚ್ಚಿನ ಮುತುವರ್ಜಿ ತೆಗೆದುಕೊಳ್ಳಬೇಕು. ಕೋಲಾರದಲ್ಲಿ ಇತ್ತೀಚೆಗೆ ಲಕ್ಷಗಟ್ಟಳೆ ಟನ್ ಆಲೂಗೆಡ್ಡೆ ಹಾಳಾದಂಥ ಸಂದರ್ಭದಲ್ಲಿ ಅದನ್ನು ಬೆಳೆದಂಥ ರೈತರುಗಳಿಗೆ ಪರಿಹಾರ ಕೊಡುವಂಥ ವ್ಯವಸ್ಥೆಯನ್ನು ತೋಟಗಾರಿಕೆ ಇಲಾಖೆಯವರು ಹಾಕಿಕೊಂಡಿದ್ದಾರೆ. ಅದೇ ರೀತಿಯಲ್ಲಿ ಅಡಿಕೆ ಬೆಳೆ ಹಾಳಾಗಿರುವುದಕ್ಕೆ - ರೈತರಿಗೆ ಪರಿಹಾರ ನೀಡುವುದಕ್ಕಾಗಿ ಜಿಲ್ಲೆಯಲ್ಲಿ ನಡೆದ ಕೆ.ಡಿ.ಪಿ. (ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ) ಸಭೆಯಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು ನಿರ್ಣಯ ಮಾಡಿರುವುದಲ್ಲದೆ, ತಾಲ್ಲೂಕು ಮಟ್ಟದಲ್ಲೂ ಸಹ ಈ ಕುರಿತು ನಿರ್ಣಯ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ನಾಶವಾದ ಬೆಳೆಯ ಸಂಪೂರ್ಣ ಅಂದಾಜನ್ನು ಮಾಡಿದ್ದೇವೆ. ರೈತರು ಬೆಳೆದಂಥ ಬೆಳೆ ನಾಶವಾದರೆ ಅವರಿಗೆ ಒಂದು ಹೆಕ್ಟೇರ್‌ಗೆ 500 ರೂಪಾಯಿಗಳಂತೆ ಪರಿಹಾರ ಕೊಡುತ್ತಿದ್ದೀರಿ. ಆದರೆ, ನಮ್ಮ ಭಾಗದ ರೈತರು ಇದನ್ನು ತಿರಸ್ಕರಿಸುತ್ತಿದ್ದಾರೆ. ಆದುದರಿಂದ, ಪರಿಹಾರ ಕೊಡುವ ಹಣದಲ್ಲಿ ಸ್ವಲ್ಪ ಬದಲಾವಣೆ ಮಾಡಿ ಹೆಕ್ಟೇರ್‌ಗೆ 5000 ರೂಪಾಯಿಗಳನ್ನು ಕೊಡುವಂಥ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಎಲ್ಲೆಲ್ಲಿ ಬೆಳೆಗಳು ನಾಶವಾಗಿದೆಯೋ ಅಲ್ಲಿ ರೈತರಿಗೆ ಸೂಕ್ತ ಪರಿಹಾರ ಕೊಡುವ ಕಾರ್ಯಕ್ರಮ ಹಾಕಿಕೊಳ್ಳಬೇಕು. ಇನ್ನು 'ಕ್ಯಾಂಪ್ಕೊ' ಸಂಸ್ಥೆ ಇದೆ. ಇದರಲ್ಲಿ ಸರ್ಕಾರದ ಬಂಡವಾಳವಿದ್ದು, ಈ ವರ್ಷ ಸದರಿ ಸಂಸ್ಥೆಗೆ 9 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚುಲಾಭ ಬಂದಿದೆ. ತಾವು ಕ್ಯಾಂಪ್ಕೊ ಸಂಸ್ಥೆಗೆ ಸೂಕ್ತ ನಿರ್ದೇಶನವಿತ್ತು ಇದರ ಮುಖಾಂತರ ರೈತರುಗಳಿಗೆ ಪರಿಹಾರ ಕೊಡುವಂಥ ವ್ಯವಸ್ಥೆ ಮಾಡಿ ಕೊಡುವಂಥ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇದಲ್ಲದೆ, ರೈತರು ಭತ್ತ, ಅಡಿಕೆ ಬೆಳೆಯಲು ಸಾಲ ತೆಗೆದುಕೊಂಡಿದ್ದಾರೆ. ಈ ಅಲ್ಪಾವಧಿ ಸಾಲವನ್ನು

ದೀರ್ಘಾವಧಿ ಸಾಲವನ್ನಾಗಿ ಪರಿವರ್ತಿಸಲಾಗುವುದೆಂದು ಸರ್ಕಾರ ಈಗಾಗಲೇ ಘೋಷಿಸಿದೆ. ಆದರೆ, ನೆರೆ ಹಾವಳಿಯಿಂದ ಯಾವ್ಯಾವ ರೈತರ - ಬೆಳೆ ನಾಶವಾಗಿದೆಯೋ ಮತ್ತು ಅವರು ತೆಗೆದುಕೊಂಡ ಸಾಲದ ಮೇಲಿನ ಬಡ್ಡಿ ಏನಿದೆ, ಇದನ್ನು ಮನ್ನಾ ಮಾಡಿ ತಮ್ಮ ಬೆಳೆ ಹಾನಿಯಾಗಿ ತೊಂದರೆಗೀಡಾಗಿರುವ ರೈತರುಗಳಿಗೆ ಅನುಕೂಲ ಮಾಡಿಕೊಡುವಂತೆ ಕಾರ್ಯಕ್ರಮ ಹಮ್ಮಿಕ್ಕೊಳ್ಳಲು ಸಂಬಂಧಪಟ್ಟವರಲ್ಲಿ ಒತ್ತಾಯಿಸುತ್ತೇನೆ. ಕೆಲವು ರೈತರ ಪಂಪುಸೆಟ್ಟುಗಳು ಸಹ ಹಾನಿಗೊಂಡಿದ್ದು, ಅನೇಕ ಅನಾಹುತಗಳುಂಟಾಗಿರುವುದಕ್ಕೆ ಶಾಶ್ವತವಾದ ಪರಿಹಾರ ಹುಡುಕುವಂತ ಕಾರ್ಯಕ್ರಮವಾಗಬೇಕು. ಬರೀ ಅತಿವೃಷ್ಟಿಯಾದಂಥ ಸಂದರ್ಭದಲ್ಲಿ ಮಾತ್ರ ಸರ್ಕಾರ ಓಗೊಡದೆ ಇಂತಹ ಸಂದರ್ಭ ಎಲ್ಲೆಲ್ಲಿ ಉದ್ಭವವಾಗುತ್ತದೋ ಅಲ್ಲಿ ಶಾಶ್ವತವಾದ ಪರಿಹಾರ ಕಾರ್ಯಕ್ರಮವನ್ನು ಸಂಬಂಧಪಟ್ಟ ಇಲಾಖೆಯ ಮುಖಾಂತರ ಹಮ್ಮಿಕ್ಕೊಳ್ಳಲು ಒತ್ತಾಯ ಪಡಿಸುತ್ತಾ ಇಷ್ಟುಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ್) : ಸನ್ಮಾನ್ಯ ಅಧ್ಯಕ್ಷರೆ, ನೆರೆಹಾವಳಿ ಮತ್ತು ಪ್ರಕೃತ್ತಿ ವಿಕೋಪದಿಂದಾಗಿ ಇತ್ತೀಚೆಗೆ ಅನೇಕ ಜನರ ಮನೆಗಳು, ಸಾವಿರಾರು ಏಕರೆ ಜಮೀನು, ಅನೇಕ ದನಕರುಗಳು, ರಸ್ತೆಗಳು ಶಾಲಾ ಕೊಠಡಿಗಳು ನಾಶವಾಗಿ ಜನರಿಗೆ ಬಹಳ ತೊಂದರೆಯಾಗಿದೆಯೆಂದು ಹೇಳುವುದಕ್ಕೆ ಬಹಳ ವಿಷಾದವಾಗುತ್ತದೆ. ಆದರೂ ಸಹ ಈ ನಿಟ್ಟಿನಲ್ಲಿ ಮಾನ್ಯ ಸರ್ಕಾರದವರು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡು ನೊಂದವರಿಗೆ ಸಹಕಾರ ಮತ್ತು ಸಹಾಯಧನವನ್ನು ಕೊಟ್ಟಿರುವುದಕ್ಕೆ ಸರ್ಕಾರವನ್ನು ನಾನು ಅಭಿನಂದಿಸಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಇವತ್ತು ಬೆಳೆ ಪರಿಹಾರವನ್ನು ಕೊಡತಕ್ಕಂಥ ಕಾರ್ಯ ಕ್ರಮದಲ್ಲಿ ನಾವೇನು ಒಂದು ಎಕರೆಗು 500 ರೂಪಾಯಿ ಕೊಡುತ್ತಿದ್ದೇನೆ ಇದು ಓಬಿರಾಯನ ಕಾಲದಲ್ಲಿ ಇದ್ದಂಥ ಕಾರ್ಯಕ್ರಮವೆಂದರೆ ತಪ್ಪಾಗುವುದಿಲ್ಲ. ಈ ಪದ್ಧತಿಯನ್ನು ನಾವು ಬದಲಾವಣೆ ಮಾಡಿ ಜಮೀನು ನಷ್ಟವಾಗಿರುವಂಥವರಿಗೆ ಹೆಚ್ಚು ಪರಿಹಾರ ಧನವನ್ನು ಕೊಡತಕ್ಕಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳತಕ್ಕದ್ದು ಸೂಕ್ತವೆಂದು ಹೇಳ ಬಯಸುತ್ತೇನೆ. ಇದೆ ವಿಚಾರದಲ್ಲಿ ಕಳೆದ ವರ್ಷ ನಾವು ರಸಗೊಬ್ಬರವನ್ನು ಕೊಟ್ಟಿದ್ದೇವೆ. ಮತ್ತು ಔಷಧಿ ಹಾಗೂ ಬೀಜಗಳನ್ನು ಕೊಡತಕ್ಕ ಕಾರ್ಯಕ್ರಮವನ್ನು ಮಾಡಿದ್ದೇವೆ. ನಾವೇನು ಈ ಪರಿಹಾರವನ್ನು ಕೊಡುತ್ತೇವೆ ಅದನ್ನು ನೇರವಾಗಿ ನಷ್ಟವನ್ನು ಅನುಭವಿಸಿರತಕ್ಕ ರೈತರಿಗೆ ಚೆಕ್ಕನ್ನು ಕೊಡುವ ವ್ಯವಸ್ಥೆ ಮಾಡಿದರೆ ಪರಿಹಾರವು ನೇರವಾಗಿ ಸರಿಯಾದ ಫಲಾನುಭವಿಗಳಿಗೆ ಮುಟ್ಟುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇನ್ನು ದನಗಳು ಸತ್ತ ವಿಚಾರದ ಬಗ್ಗೆ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ ಸುಮಾರು 500 ದನಗಳು ಸತ್ತು ಹೋಗಿವೆ. ವರದಾನದಿಯು ಹರಿಯಾಣಬಾಜೀರಾಯನ ಹಳ್ಳಿಯಲ್ಲಿ ಅನೇಕ ದನಗಳು ನೀರಿನಲ್ಲಿ ತೇಲಿಹೋಗಿವೆ. ಜೊತೆಗೆ ಪಶುಸಂಗೋಪನ ಇಲಾಖೆಯವರು ಸಿಬ್ಬಂದಿಯ ಕೊರತೆಯಿಂದಾಗಿ, ವಾಹಗಳ ಕೊರತೆಯಿಂದಾಗಿ ಕಾಲಕಾಲಕ್ಕೆ ಔಷಧೋಪಚಾರವನ್ನು ಮಾಡಲು ಆಗಿಲ್ಲ, ಅದಲ್ಲದೆ ಅವರಿಗೆ ಪಿ.ಎಂ. ರಿಪೋರ್ಟನ್ನು ಕೊಡಲು ಆಗಲಿಲ್ಲ. ನನ್ನ ಕ್ಷೇತ್ರದಲ್ಲಿನ ನೆರಪೀಡಿತ ಪ್ರದೇಶದ 126 ಹಳ್ಳಿಗಳಿಗೆ ನಾನೇ ಸ್ವತಃ ಭೇಟಿ ಕೊಟ್ಟಿದ್ದೇನೆ. ನಾನು ಭೇಟಿ ಕೊಟ್ಟಂಥ ಸಮಯದಲ್ಲಿ ಹಳ್ಳಿಯವರು ಹೇಳಿದಂಥ ತೊಂದರೆಗಳನ್ನು ನಾನು ಈ ಸಂದರ್ಭದಲ್ಲಿ ಹೇಳಿಕೊಳ್ಳಬೇಕಾಗಿದೆ. ಇವತ್ತು ಅಲ್ಲಿ ದನಗಳು ಸತ್ತಿರುವ ವಿಷಯದಲ್ಲಿ ಒಂದು ದನಕ್ಕೆ ಮೂರುಸಾವಿರ ರೂಪಾಯಿ ಪರಿಹಾರಧನವನ್ನು ಕೊಡತಕ್ಕ ಕಾರ್ಯ ಕ್ರಮವನ್ನು ಹಾಕಿಕೊಂಡಿದ್ದೇವೆ. ಆದರೆ ಅಲ್ಲಿ ಪಿ.ಎಂ. ರಿಪೋರ್ಟ್ ಇಲ್ಲದೆ ಇರುವುದರಿಂದ ಅದನ್ನು ಕೊಡಲು ಆಗುವುದಿಲ್ಲವೆನ್ನತಕ್ಕ ಮಾತನ್ನು ಸಂಬಂಧಪಟ್ಟ ಅಧಿಕಾರಿಗಳು ಹೇಳುತ್ತಿದ್ದಾರೆ.

ಆದ್ದರಿಂದ ಈ ಒಂದು ಪಿ.ಎಂ. ರಿಪೋರ್ಟ್‌ನ ಬಗ್ಗೆ ವಿಷಯವನ್ನು ಸಡಿಲಿಸಿ ದನಗಳು ಸತ್ತ ಬಗ್ಗೆ ಪಂಚಾಯಿತಿಯ ಅನ್ವಯ, ಪಶು ಸಂಗೋಪನಾ ಇಲಾಖೆಯ ವತಿಯಿಂದ. ವರದಿಯನ್ನು ತರಿಸಿಕೊಂಡು, ವಾಸ್ತವಿಕ ಸ್ಥಿತಿ ಇರತಕ್ಕವರಿಗೆ ಪರಿಹಾರವು ಮುಟ್ಟತಕ್ಕ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ವಿನಂತಿಸಿಕೊಳ್ಳುತ್ತೇನೆ. ಮೀನುಗಾರರ ಬಗ್ಗೆ ಹೇಳುವುದಾದರೆ, ವರದಾ ನದಿಯ ದಂಡೆಯಲ್ಲಿ ಅನೇಕ ಮೀನುಗಾರರು ಬಲೆಯನ್ನೇ ಕಳೆದುಕೊಂಡಿದ್ದಾರೆ. ಆದ್ದರಿಂದ ಅಲ್ಲಿ ಯಾರು ಬಡ ಮೀನುಗಾರರು ಬಲೆಯನ್ನು ಕಳೆದು ಕೊಂಡಿದ್ದಾರೆ. ಅವರಿಗೂ ಸದ ಸೂಕ್ತವಾದ ಪರಿಹಾರಧನವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಇವತ್ತು ಬೆಳೆ ಪರಿಹಾರವನ್ನು ಕೊಡತಕ್ಕದ್ದರಲ್ಲಿ ಸಣ್ಣ, ಮಧ್ಯಮ ಮತ್ತು ದೊಡ್ಡ ರೈತರು ಎಂದು ಏನು ವಿಂಗಡಣೆ ಮಾಡುತ್ತಿದ್ದೀರಿ ಇದರಿಂದ ದೊಡ್ಡ ರೈತರಿಗೆ ಬಹಳಷ್ಟು ತೊಂದರೆಯಾಗಿದೆ. ಉದಾಹರಣೆಗೆ ವರದಾನದಿಯ ದಂಡೆಯಲ್ಲಿ ಸುಮಾರು 14 ಹಳ್ಳಿಗಳಲ್ಲಿನ ಜಮೀನು ಜಲಾವೃತವಾಗಿದ್ದು ಎಲ್ಲರೂ ಸಹ ಸಂಕಷ್ಟಕ್ಕೆ ಈಡಾಗಿದ್ದಾರೆ. ಇಂಥ ಸಂದರ್ಭದಲ್ಲಿ ತಾವು ಸಣ್ಣ, ಮಧ್ಯಮ ಮತ್ತು ದೊಡ್ಡ ರೈತ ಎನ್ನತಕ್ಕ ಬೇದಭಾವ ಮಾಡದೆ ಯಾರ್ಯಾರಿಗೆ ಜಮೀನು ನಷ್ಟವಾಗಿದೆಯೋ ಅಂಥವರಿಗೆಲ್ಲರಿಗೂ ಸಂಪೂರ್ಣವಾದ ಪರಿಹಾರವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ವಿನಂತಿಸುತ್ತೇನೆ. ಮತ್ತು ಕೆಲವು ಹಳ್ಳಿಗಳನ್ನು ನಾವು ಕೂಡಲೇ ಸ್ಥಳಾಂತರ ಮಾಡಬೇಕಾಗಿದೆ. ಅದಕ್ಕೆ ನಾವು ಹೆಚ್ಚು ಆದ್ಯತೆಯನ್ನು ಕೊಡಬೇಕಾಗಿದೆ. ಉದಾಹರಣೆಗೆ ಕುರುಬರಮಲ್ಲೂರು, ಬರದೂರು, ಚಿಕ್ಕಮಗುದೂರು ಇನ್ನು ಅನೇಕ ಹಳ್ಳಿಗಳನ್ನು ನಾವು ಕೂಡಲೇ ಸ್ಥಳಾಂತರ ಮಾಡದಿದ್ದರೆ ನಾವು ಪುನಃ ಎರಡು ವರ್ಷದ ಹಿಂದಿನ ಪರಿಸ್ಥಿತಿಯನ್ನೇ ಎದುರಿಸಬೇಕಾಗುತ್ತದೆ. ಇದಕ್ಕಾಗಿ ವಿಶೇಷವಾದ ಅನುದಾನವನ್ನು ಕೊಟ್ಟು ನಾನು ಹೇಳಿರುವ ಹಳ್ಳಿಗಳನ್ನು ಸ್ಥಳಾಂತರ ಮಾಡಿ ಕೊಡಬೇಕು ಎನ್ನತಕ್ಕ ಮಾತನ್ನು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಮನೆ ನಾಶವಾಗಿರುವುದಕ್ಕೆ ಮತ್ತು ಮೃತರಾದವರಿಗೆ ಪರಿಹಾರಧನವಾಗಿ ಹತ್ತು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಆದರೆ ಅನೇಕರು ಇವತ್ತು ಶಾಶ್ವತವಾಗಿ ಅಂಗ ವಿಕಲರಾಗಿದ್ದು, ಕೈ, ಕಾಲುಗಳನ್ನು ಕಳೆದುಕೊಂಡಿದ್ದಾರೆ. ಇಂಥ ಸಂದರ್ಭದಲ್ಲಿ ಅವರಿಗೆ ಹೆಚ್ಚಿನ ಪರಿಹಾರಧನವನ್ನು ಕೊಡತಕ್ಕ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎನ್ನತಕ್ಕ ಮಾತನ್ನು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಂ. ಇದ್ದಿನಬ್ಬ (ಉಳ್ಳಾಲ) : ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡದಲ್ಲಿ ಈ ಬಾರಿ ನೆರೆಯಿಂದ, ಮಳೆಯಿಂದ ಆಗಿರತಕ್ಕಂಥ ಹಾನಿ ಬಹಳ ದೊಡ್ಡದು. ಅನೇಕರು ಹೇಳಿದ ಹಾಗೆ, ಪತ್ರಿಕೆಗಳಲ್ಲಿ ಬಂದ ಹಾಗೆ 5 ವರ್ಷಗಳಲ್ಲಿ ಬರಬೇಕಾದ ಮಳೆ ಒಂದೇ ವರ್ಷದಲ್ಲಿ ಬಂದು ಇಡೀ ದಕ್ಷಿಣ ಕನ್ನಡ ಜಿಲ್ಲೆಯನ್ನೇ ಅಲ್ಲೋಲ ಕಲ್ಲೋಲ ಮಾಡಿದೆ. ಈ ಮಳೆಯಿಂದಾಗಿ ಎಲ್ಲಾ ಮಾರ್ಗಗಳು ಅದು ಲೋಕೋಪಯೋಗಿ ಮಾರ್ಗವಾಗಲಿ, ಹೆದ್ದಾರಿಯಾಗಲಿ, ಎಲ್ಲಾ ಹಾಳಾಗಿ ಹೊಂಡಗಳು ಬಿದ್ದಿವೆ. ಇವತ್ತು ಅಲ್ಲಿ ಯಾವ ವಾಹನಗಳೂ ಹೋಗುವುದಕ್ಕೆ ಸಾಧ್ಯವಿಲ್ಲ. ಅದು ಮಾತ್ರವಲ್ಲ, ನಮ್ಮ ಕೃಷಿಕರಿಗೆ, ರೈತರಿಗೆ, ಆಗಿರುವಂತಹ ಹಾನಿ, ನಮ್ಮ ಉಳ್ಳಾಲ ಕ್ಷೇತ್ರದಲ್ಲಿ ಉಳ್ಳಾಲ ನದಿ ಕಿನಾರೆ ಪೂರಾ ಕೊಚ್ಚಿಕೊಂಡು ಹೋಗಿ ಉಳ್ಳಾಲದಲ್ಲಿ ಹೊಯ್ಗೆ ನೀರು ತುಂಬಿ ಬಹಳ ಹಾನಿಯಾಗಿದೆ. ಅಲ್ಲಿ ಕಲ್ಲು ಕಟ್ಟಿ ತಡೆ ಗೋಡೆಯನ್ನು ಕಟ್ಟಿಕೊಡಬೇಕೆಂದು ಸರ್ಕಾರದಲ್ಲಿ ನಿವೇದನೆ ಮಾಡಿಕೊಂಡಿದ್ದೇವೆ. ಅದನ್ನು ಮಾಡಿಕೊಡಬೇಕು. ಅದೇ ರೀತಿ ಎಕ್ಕೂರ್‌ನಲ್ಲಿ ತೋಡು ಒಡೆದು ತೋಡಿನ ಸಂಪೂರ್ಣ ನೀರು ಎಲ್ಲಾ ಗದ್ದೆಗಳಿಗೂ ಹೋಗಿ ಹಾಳಾಗಿದೆ. ಕೃಷಿಕರಿಗೆ ಹಾನಿಯಾಗಿದೆ. ಅಲ್ಲೂ ಕೂಡ ತಡೆ ಗೋಡೆಯನ್ನು ಕಟ್ಟಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸಂಪೂರ್ಣವಾಗಿ ಮನೆಗಳು ಬಿದ್ದಂತವರಿಗೆ ಸರಿಯಾದಂತಹ ಹಣ ಸಿಕ್ಕಿಲ್ಲ. ಎಂದು

ಅನೇಕ ದೂರುಗಳು ಉಂಟು. 10 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳುತ್ತಿದ್ದೀರಿ. ಅದನ್ನು ಕೊಡುವಂತೆ ಮಾಡಬೇಕು. ಈ ಸಾರಿ ಪ್ರಕೃತಿ ವಿಕೋಪದಿಂದ ಬಂದಿರತಕ್ಕಂಥ ಮಳೆ ಸರ್ಕಾರದಿಂದ ಅಲ್ಲ, ದೇವರಿಂದ ಬಂದಿರತಕ್ಕಂಥದ್ದು. ಅದರೆ ಇವತ್ತು ಸರ್ಕಾರದಿಂದ ಸಹಕಾರ ಕೊಡುವಂಥಾದ್ದು. ಮುಖ್ಯ. ಮಾನ್ಯ ಮುಖ್ಯಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಗೆ ಮೂರು ಸಾರಿ ಬಂದಿದ್ದಾರೆ. ಶ್ರೀಮತಿ ಮನೋರಮ ಮಧ್ವರಾಜ್, ಅವರ ಕ್ಷೇತ್ರದಲ್ಲಿ, ಮತ್ತು ಕಾಪುವಿನಲ್ಲಿ ವಸಂತ ಸಾಲಿಯಾನರವರು, ಮಂಗಳೂರಿಗೆ ಶ್ರೀ ಬ್ಲೇಸಿಯಸ್ ಡಿಸೋಜರವರು, ಮತ್ತು `ರಮಾನಾಥ ರೈ ಅವರು ಕೂಡಿ ನಮ್ಮ ಜಿಲ್ಲೆಗಳಲ್ಲಿ ಕೆಲಸ ಮಾಡಿದ್ದಾರೆ. ಅವರು ಕೆಲಸ ಮಾಡಲಿಲ್ಲ, ಹೋಗಲಿಲ್ಲ ಎಂದು ಹೇಳುವುದು ಸರಿಯಲ್ಲ. ಶ್ರೀ ಬ್ಲೇಸಿಯಸ್ ಎಂ. ಡಿಸೋಜರವರು ಡೊನೇಷನ್ ತೆಗೆದುಕೊಳ್ಳುವುದಕ್ಕೆ ಎರಡು ಸಭೆಗಳನ್ನು ನಡೆಸಿ, ಉಸ್ತುವಾರಿ ಮಂತ್ರಿಗಳಾಗಿ ಹಣ ಸೇರಿಸಿ ಯಾರಿಗೆಲ್ಲಾ ಕೊಡಬೇಕು ಅದನ್ನು ಮಾಡಿದ್ದಾರೆ.

ಆದರೂ ಕೂಡ ನಮ್ಮ ಕೃಷಿಕರಿಗೆ, ರೈತರಿಗೆ ಇನ್ನೂ ಅನೇಕ ರೀತಿಯ ಸಹಾಯ, ಸಹಕಾರ ಬೇಕಾಗಿದೆ. ರೈತರಿಗೆ 500 ರೂಪಾಯಿಗಳನ್ನು ಒಂದು ಎಕರೆಗೆ ಅಥವಾ ಹೆಕ್ಟೇರಿಗೆ ಕೊಡುವುದು ಸರಿಯಲ್ಲ. 5 ಸಾವಿರ ರೂಪಾಯಿಗಳನ್ನಾದರೂ ಕೊಡದಿದ್ದರೆ ಅವರಿಗೆ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ನನ್ನ ಕ್ಷೇತ್ರದಲ್ಲಿ ಉಳಿಯಾರ್‌ನಲ್ಲಿ ಒಂದು ಕಡೆ ಇಡೀ ತೋಡು ಹರಿದು ಒಬ್ಬ ಹೆಂಗಸಿನ 10-20 ಎಕರೆ ಹಾಳಾಗಿ ಹೋಗಿದೆ. ಒಟ್ಟಾರೆ ನದಿಯ ಬದಿಯಲ್ಲೇ ನಮ್ಮ ಕ್ಷೇತ್ರ, ಅಲ್ಲಿ ಕಲ್ಲಿನ ತಡೆ ಗೋಡೆ ಕಟ್ಟುವಂತಹ ವ್ಯವಸ್ಥೆಯಾಗಬೇಕು ಎಂದು ನಾನು ಕೇಳುತ್ತಿದ್ದೇನೆ. ಎಲ್ಲಾ ಶಾಸಕರು, ದಕ್ಷಿಣ ಜಿಲ್ಲೆಯಲ್ಲಿ ಸಾಕಷ್ಟು ಕೇಳಿಕೊಂಡಿದ್ದಾರೆ. ಅಲ್ಲಿ ಸಾಕಷ್ಟು ಕೆಲಸ ಮಾಡಿದ್ದೀರಿ, ಮಾಡಲಿಲ್ಲ, ಎಂಬುದು ಸರಿಯಲ್ಲ. ಇದು ದೇವರ ವೈಚಿತ್ರ್ಯದಿಂದ ಆಗಿದೆ. ಆದುದರಿಂದ ನಾವು ಅದನ್ನು ಸುಧಾರಿಸಿಕೊಂಡು ಹೋಗಬೇಕಾಗಿದೆ.

ಮಾನ್ಯ ಮುಖ್ಯಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಯವರಾದ್ದರಿಂದ ಅವರು ಮೂರು ಸಾರಿ ಬಂದು ಸಮೀಕ್ಷೆ ಮಾಡಿದ್ದಾರೆ. ಹಣವನ್ನು ಕೊಡುತ್ತೇನೆಂದು ಹೇಳಿದ್ದಾರೆ. ಆದರೂ ಕೂಡ ಅಲ್ಲಿಯ ರೈತರಿಗೆ ಕೃಷಿಕರಿಗೆ ಬೇಕಾದಷ್ಟು ಸಹಾಯ, ಸಹಕಾರ ಇನ್ನೂ ಸಿಗಬೇಕಾಗಿದೆ. ಅದನ್ನು ಸರ್ಕಾರ ಮಾಡಬೇಕು. ಈ ಸಾರಿಯ ಮಳೆ ಏನೇಲ್ಲಾ ಮಾಡಿದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. 5ವರ್ಷಗಳಲ್ಲಿ ಬರಬೇಕಾದ ಮಳೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಮ್ಮೆಗೆ ಬಂದಿದೆ. ಬೇರೆ ಕಡೆಗಳಲ್ಲೂ ಬಂದಿರಬಹುದು. ಆದರೆ ದಕ್ಷಿಣ ಕನ್ನಡದಲ್ಲಿ ಈ ಸಾರಿ ಅತೀ ವಿಪರೀತವಾದುದ್ದು. ಈ ಸಮಯದಲ್ಲಿ ಪಂಜೆ ಮಂಗೇಶರಾಯರ ಒಂದು ಪದ್ಯದ ನೆನಪು ಆಗುತ್ತದೆ.

ಹುಡುಗರ ತಲೆ ತಲೆ ಲೊಪ್ಪಿಯನಾಟವ
ಅಡಿಮೇಲಾಗಿಸಿ ತೆಂಗನುಲಾಗಿಸಿ
ಬುಡ್ಡೆಯ್ನ ಇಬ್ಬಾಗಿಸಿ, ಬುಡದೂಟಾಟಿಸಿ
ಗುಡಿಸಲ ಮಾಡನು ಹುಲು ಹುಲು ಮಾಡಿಸಿ
ಬೋಬ್ಬುಳಿ ತೆರೆಯನು ದಡಕ್ಕೆ ಹೊಮ್ಮಿಸಿ
ಅಬ್ಬರದಲಿ ಭೋರ್ ಭೋರನ ಗುಮ್ಮಿಸಿ
ತೋಡನು ಸೀಳುತ್ತಾ ಗದ್ದೆಗಳೆಲ್ಲವ ಅಡಿಮೆಲಾಗಿಸಿ
ತುಫಾನ್ ಜಡಿ ಮಳೆ ಬಂತೈ, ಬಂತೈ, ಬಂತೈ....

ಈಗ ಅದೇ ರೀತಿ ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಿದೆ. ಆದುದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಹೆಚ್ಚಿನ ಸಹಾಯ ಸಹಕಾರವನ್ನು ಸರ್ಕಾರ ಕೊಡಬೇಕು. ಅದೇ ರೀತಿ ರೈತರಿಗೆ 5 ನೂರು ರೂಪಾಯಿಗಳಲ್ಲ 5 ಸಾವಿರ ರೂಪಾಯಿಗಳನ್ನು

ಒಂದು ಹೆಕ್ಟೇರಿಗೆ ಹಾನಿಯಾಗಿರುವಂಥಾದ್ದಕ್ಕೆ ಕೊಡಬೇಕು. ಈ ನೆರೆ ಹಾವಳಿಯಿಂದ, ತುಫಾನ್‌ನಿಂದ ಮಳೆಯಿಂದ ನೆರೆಯಿಂದ ಆಗಿರತಕ್ಕಂಥ ಹಾನಿಗೆ ಸಾಕಷ್ಟು ಸಹಕಾರ ಕೊಟ್ಟು ಉಪಕರಿಸಬೇಕೆಂದು ಕೇಳಿಕೊಂಡು ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ನಿನ್ನೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಈ ಸದನದ ಹಿರಿಯ ಸದಸ್ಯರು ಮತ್ತು ಬಹಳಷ್ಟು ಜನ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಸದಸ್ಯರು ಇಲ್ಲಿ ಮಳೆಯಿಂದ ಮತ್ತು ಬರಗಾಲ - ಪ್ರದೇಶದಲ್ಲಿ ಏನು ತೊಂದರೆಯಾಗಿದೆ ಅದರ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾವ ಮಾಡಿದ್ದಾರೆ. ನಿನ್ನೆ ಮಾನ್ಯ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ವಿಚಾರ ಎತ್ತಿದಾಗ ಸರ್ಕಾರದ ಪರವಾಗಿ ಒಂದು ಹೇಳಿಕೆ ಕೂಡ ಕೊಟ್ಟಿದ್ದೇವೆ.. ಹೇಳಿಕೆ ಕೊಟ್ಟಮೇಲೆ ಸ್ಪಷ್ಟೀಕರಣ ಕೇಳತಕ್ಕಂತ ರೀತಿಯಲ್ಲಿ ಕೆಲವು ಮಾತುಗಳನ್ನು ಆಡಿದ್ದಾರೆ. ಸ್ಪಷ್ಟೀಕರಣದ ಜೊತೆಗೆ ಸ್ವಲ್ಪ ವಿಚಾರಗಳನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ. ಯಾವಾಗಲೂ ಕೂಡ ನೆರಹಾವಳಿಯಾಗಲಿ, ಬರಗಾಲದ ಪರಿಸ್ಥಿತಿಯಾಗಲಿ ಉದ್ಭವವಾದಾಗ ರಾಜ್ಯಸರ್ಕಾರ ಏನು ಮಾಡುತ್ತದೆ. ಎಂದರೆ, ಅದರಿಂದ ಆಗತಕ್ಕಂತಹ ಪರಿಣಾಮ ಏನಿದೆ, ಎಷ್ಟೆಷ್ಟು ಹಾನಿಯಾಗಿದೆ, ಎಷ್ಟರಮಟ್ಟಿಗೆ ನಾವು ಕೆಲಸಕಾರ್ಯಗಳನ್ನು ಮಾಡಬೇಕು. ಎನ್ನುವಂತಹ ರೀತಿಯಲ್ಲಿ ಕಾರ್ಯಕ್ರಮಗಳನ್ನು ಕೂಡ ನಾವು ರೂಪಿಸಿಕೊಂಡು ಹೋಗುತ್ತೇವೆ. ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು, ಈಗ ಸಿಆರ್‌ಎಫ್‌ನಲ್ಲಿ ಇರತಕ್ಕಂತಹ 27 ಕೋಟಿ ರೂಪಾಯಿ ಏನಿದೆ ಆ ಹಣ ಸಾಲುತ್ತಾ ಇಲ್ಲ ಮತ್ತು ತಮಗೆ ಹೆಚ್ಚಿನ ಹಣ ತೆಗೆದುಕೊಳ್ಳತಕ್ಕಂತಹ ಸಾಮರ್ಥ್ಯ ಇಲ್ಲ ಎನ್ನುವಂತಹ ಮಾತನ್ನು ಹೇಳಿದ್ದಾರೆ. ನಿನ್ನೆ ಮಾನ್ಯ ಚಂದ್ರೇಗೌಡರಾಗಲಿ, ಮಾನ್ಯ ವಿರೋಧ ಪಕ್ಷದ ನಾಯಕರಾಗಲಿ ಮತ್ತು ಹಿರಿಯ ಸದಸ್ಯರಾದಂತಹ ಬಂಗಾರಪ್ಪನವರು ಪ್ರಸ್ತಾವ ಮಾಡಿದಂತಹ ಕೆಲವು ವಿಷಯಗಳು ಏನಿದೆ. ಮಾನ್ಯ ವಿ.ಪಿ. ಸಿಂಗ್‌ರವರು ಈ ದೇಶದ ಪ್ರಧಾನ ಮಂತ್ರಿಯವರಾದಾಗ ಅವರೇ 27 ಕೋಟಿ ರೂಪಾಯಿಗಳನ್ನು ಫ್ಲಡ್‌ಗೋಸ್ಕರ ನಿಗದಿ ಮಾಡಿದ್ದರು. ನಮಗೆ ಇತ್ತಿಚಿನ ನಾಲ್ಕು ವರ್ಷಗಳಲ್ಲಿ ಇದೇ ತೊಂದರೆಯಾಗಿದೆ. ನಾನೂ ಕೂಡ 10ನೇ ಫೈನಾನ್ಸ್ ಕಮಿಷನ್‌ನ ಕೆ.ಸಿ. ಪಂಥ್‌ರವರು ಬಂದಾಗ ಅವರ ಎದುರುಗಡೆ ಹೇಳಿದ್ದೇವೆ. At least 100 crores to be provided

ಎನ್ನತಕ್ಕಂತಹ ರೀತಿಯಲ್ಲಿ ಪ್ರತಿಪಾದನೆ ಮಾಡಿದ್ದೇವೆ. ಮತ್ತೆ ಯಾವಾಗಲೂ ಕೂಡ ಪ್ರಜಾಪ್ರಭುತ್ವದಲ್ಲಿ ಪದ್ಧತಿ ಏನಿರುತ್ತದೆ ಎಂದರೆ, ಇಂತಹ ಒಂದು ಅನಾಹುತವಾದ ಮೇಲೆ ರಾಜ್ಯ ಸರ್ಕಾರ ಅದರ ಪಟ್ಟಿ ಮಾಡಿ, ಪಬ್ಲಿಕ್ ಪ್ರಾಪರ್ಟಿಗೆ, ಪ್ರೈವೇಟ್ ಪ್ರಾಪರ್ಟಿಗೆ, ಬೆಳೆಗೆ ಎಷ್ಟು ಹಾನಿಯಾಗಿದೆ ಎನ್ನುವುದನ್ನು ಅಂದಾಜು ಮಾಡಿ ಕೇಂದ್ರದಿಂದ ನಾವು ಹೆಚ್ಚು ಅನುದಾನ ಪಡೆಯತಕ್ಕಂತಹ ನೀತಿ ಇದೆ. 1992ರಲ್ಲಿ ನಮ್ಮ ವೀರಪ್ಪ ಮೊಯಿಲಿಯವರು ಪ್ರಮಾಣ ವಚನ ಸ್ವೀಕಾರ ಮಾಡಿದ ಮಾರನೆ ದಿನ ಅನಾಹುತವಾದಂತಹ ಚಿತ್ರದುರ್ಗ, ಬಳ್ಳಾರಿ ಪ್ರದೇಶಗಳಿಗೆ ಹೋಗಿ ಭೇಟಿ ಕೊಟ್ಟಿದ್ದರು. ಪ್ರಧಾನ ಮಂತ್ರಿಗಳೂ ಕೂಡ ಬಂದಿದ್ದರು. ಆಗ ವೇಸ್ ಅಂಡ್ ಮೀನ್ಸ್‌ನಲ್ಲಿ ನಮಗೆ ಎಷ್ಟು ಹೆಚ್ಚಿನ ಹಣ ಕೊಡಬೇಕು ಎಂದು 1992-93ರಲ್ಲಿ Advance ಆಗಿ ಕೊಟ್ಟು, ಮತ್ತು ಎಲ್ಲೆಲ್ಲಿ ಮನೆಗಳು ಬಿದ್ದುಹೋಗಿದ್ದವು, ಎಂದರೆ ರಾಯಚೂರು, ಬಳ್ಳಾರಿಯಾಗಲಿ ಚಿತ್ರದುರ್ಗವಾಗಲಿ, ಈಗಾಗಲೇ 50 ಕೋಟಿ 14 ಲಕ್ಷ ರೂಪಾಯಿ ಹಣ ನಮಗೆ ಕೇಂದ್ರ ಸರ್ಕಾರದಿಂದ ಮಂಜೂರಾಗಿದೆ. ಇಲ್ಲಿ 33 ಸಾವಿರ ಮನೆಗಳನ್ನು ಕಟ್ಟಿಸತಕ್ಕಂತಹ ಕೆಲಸಕ್ಕೆ ಕೇಂದ್ರ ಸರ್ಕಾರದಿಂದ 30 ಪರ್ಸೆಂಟ್ ರಾಜ್ಯಸರ್ಕಾರದಿಂದ 30 ಪರ್ಸೆಂಟ್ ಮತ್ತು 40 ಪರ್ಸೆಂಟ್ ಹುಡ್ಕೋದಿಂದ ನೆರವು ಪಡೆದು ಅದಕ್ಕೆ 15 ಕೋಟಿ ರೂಪಾಯಿ ಸಂಪುಟದಲ್ಲಿ ನಾವು ಅದಕ್ಕೆ ಒಪ್ಪಿಗೆ ಕೊಟ್ಟು ಈಗಾಗಲೇ ಆ - ಕಾರ್ಯ ಕೂಡ ಮಾಡುತ್ತಿದ್ದೇವೆ. ನಾನು

ಏಕೆ ಈ ಮಾತು ಹೇಳುತ್ತಿದ್ದೇನೆಂದರೆ, ಕೇಂದ್ರದಿಂದ ನಮಗೆ ಏನೂ ಹಣ ಬರುತ್ತಿಲ್ಲ.

ಆದರೆ ಬೇರೆ ರಾಜ್ಯಗಳಿಗೆ ಸಿಕ್ಕಿದೆ ಎನ್ನುವ ರೀತಿಯಲ್ಲಿ - ಅವರುಗಳು ಹೇಳುತ್ತಿದ್ದಾರೆ. ನಾನು ಇವತ್ತು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇತರ ನೆರಹಾವಳಿ ಮತ್ತು ಬರಗಾಲ ಪೀಡಿತ ಪ್ರದೇಶಗಳಿಗೆ ಅಂದರೆ ಓರಿಸ್ಸಾ ಮತ್ತು ಗುಜರಾತ್- ರಾಜ್ಯಗಳಿಗೂ ಕೂಡ ನಮ್ಮ ಬಲರಾಂ ಜಾಕಡ್‌ರವರು ಹೋಗಿ ನೋಡಿಕೊಂಡು ಬಂದಿದ್ದಾರೆ. ಇಂತಹ ನೆರೆಹಾವಳಿ ಕರ್ನಾಟಕದಲ್ಲಿ ಆದಮೇಲೆ ಪ್ರಪ್ರಥಮವಾಗಿ ಪ್ರಧಾನ ಮಂತ್ರಿಗಳು, ದೇಶದ ರಕ್ಷಣಾ ರಾಜ್ಯ - ಸಚಿವರಾದ ಮಲ್ಲಿಕಾರ್ಜುನರವರನ್ನು- ಕೂಡ ಕಳುಹಿಸಿದ್ದಾರೆ. ಪ್ರವಾಹ ಆದಂತಹ ನಮ್ಮ 16 ಜಿಲ್ಲೆಗಳಿಗೆ ನಾವು ಎಲ್ಲಾ ಕಡೆ ಕಾರಿನ ಮುಖಾಂತರ ಹೋಗುವುದಕ್ಕೆ ಆಗುವುದಿಲ್ಲ. ಇವತ್ತು ತ್ವರಿತವಾಗಿ ಪರಿಹಾರ ಕೊಡಬೇಕು ಎನ್ನುವಂತಹ ಉದ್ದೇಶವನ್ನು ರಾಜ್ಯಸರ್ಕಾರ ಮತ್ತು ಮುಖ್ಯಮಂತ್ರಿಗಳು ಸಹ ಹೊಂದಿರುತ್ತಾರೆ. ಈ ಬಗ್ಗೆ ನಿನ್ನ ಪ್ರಸ್ತಾಪ ಆಯಿತು. ಮಂಗಳೂರಿನಲ್ಲಿ ಆದಂತಹ ಒಂದು ದುರಂತಕ್ಕೆ ಮುಖ್ಯಮಂತ್ರಿಗಳು ಹೋಗಲಿಲ್ಲ ಎಂದು ನನಗೆ ಗೊತ್ತಿದೆ, 30 ನೇ ತಾರೀಖು ಆದಂತಹ ದುರಂತಕ್ಕೆ ಅದೇ ದಿವಸ ರಾತ್ರಿ ಕಾರಿನ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳು ಹೋಗಿದ್ದಾರೆ. ಅಲ್ಲಿರತಕ್ಕಂತಹ ಎಲ್ಲಾ ಮಂತ್ರಿಗಳು ಹೋಗಿದ್ದಾರೆ, ನಾನು ಕೂಡ 4 ಸಲ ಮಂಗಳೂರಿಗೆ ಭೇಟಿ ಕೊಟ್ಟಿದ್ದೇನೆ. ಕೊಡಗು, ಶಿವಮೊಗ್ಗ, ಧಾರವಾಡ, ಬೆಳಗಾಂಗೆ - ಮತ್ತು ಮುಧೋಳಕ್ಕೆ ಹೋಗಿದ್ದೇವೆ. ಎಲ್ಲಾ ಕಡೆಗೂ ಹೋಗಿ ಅಲ್ಲಿಯ ಜಿಲ್ಲಾಧಿಕಾರಿಗಳಿಗೆ ವ್ಯವಸ್ಥಿತವಾಗಿ ಯಾವ ರೀತಿಯಾಗಿ ಕೆಲಸ ಕಾರ್ಯಗಳು ಮಾಡಬೇಕು ಎಂದು ಸೂಕ್ತವಾದ ಆದೇಶ ಕೊಟ್ಟಿದ್ದೇವೆ. ನಾನು ಒಂದು ಮಾತು ಹೇಳುತ್ತಿದ್ದೇನೆ, 1990-91-92-93ರಲ್ಲಿ ಏನು ಆಗಿತ್ತು. ಆದರೆ ಒಂದು ಪರಿಣಾಮಕಾರಿಯಾಗಿ ಕೆಲಸ ಮಾಡತಕ್ಕಂತಹ ರೀತಿಯಲ್ಲಿ ಪ್ರಸುತ್ತ ಸರ್ಕಾರ ಇದರ ಬಗ್ಗೆ ನಿಗಾ ವಹಿಸಿ ಕೆಲಸ ಮಾಡಿದೆ. ಆದಷ್ಟು ನಾವು ಮಾಡತಕ್ಕಂತಹ ಕೆಲಸವನ್ನು ಮಾಡಿದ್ದೇವೆ.

ನಾವು ಇವತ್ತು ಬರಪೀಡಿತ ಪ್ರದೇಶಕ್ಕೆ ಮತ್ತು ನೆರೆ ಹಾವಳಿಗೆ ಹಾಗೂ ಇವತ್ತು ಕೃಷಿ ಇಲಾಖೆಯಿಂದ ರೈತರಿಗೆ ಸಾಕಷ್ಟು ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡುವಂಥ ರೀತಿಯಲ್ಲಿ ಪ್ರಪ್ರಥಮವಾಗಿ ಕರ್ನಾಟಕ ರಾಜ್ಯದಲ್ಲಿ. ಪದೇ ಪದೇ ಬರತಕ್ಕಂಥ ಈ ನೆರೆ ಹಾವಳಿಯನ್ನು ತಪ್ಪಿಸಿಕೊಳ್ಳಲು Agriculture that is before the cabinet package. ಮಾಡುವ ಬಗ್ಗೆ - ಅದು ಬರುತ್ತಾ ಇದೆ. ಇವತ್ತು ಏನು ಅಂದರೆ ಒಂದು ಎಕರೆಗೆ ಐದುನೂರು ರೂಪಾಯಿಗಳನ್ನು ಕೊಟ್ಟರೆ ಏನೂ ಆಗುವುದಿಲ್ಲ ಹೋದಸಾರಿ ಕೂಡ ತೊಗರಿ ಬೆಳೆ ಬೇರೆ ಕಡೆಗಳಲೆಲ್ಲಾ ಹೋದಾಗ ನಾವು 13 ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಕೊಟ್ಟಿದ್ದೇವೆ. ರೈತರಿಗೆ ಪರಿಹಾರ ಕೊಟ್ಟರೂ ಕೂಡ ರೈತರಿಗೆ ಮೇಲಿಂದ ಮೇಲೆ ಪೆಟ್ಟು ಬೀಳುತ್ತಲೇ ಇದೆ, ಅವನಿಗೆ ತೊಂದರೆಯಾಗುತ್ತಿದೆ, ಇವತ್ತು ರೈತನಿಗೆ ಈ ರೀತಿಯಾಗಿ ನೇಗಿಲನ್ನು ಆಡಿಸಲಿಕ್ಕೆ ಏನೊಂದು ತೊಂದರೆಯಾಗುತ್ತಿದೆ. ಅದಕ್ಕಾಗಿ, We have taken the agriculture experts opinion.

24 ಕೋಟಿ ರೂಪಾಯಿಗಳನ್ನು ಅಗ್ರಿಕಲ್ಚರ್ ಪ್ಯಾಕೇಜಿಗೆ ಕೊಟ್ಟಿದ್ದಾರೆ. ಅದರ ಬಗ್ಗೆಯೂ ಕೂಡ ನಾವು ಮಾಡುತ್ತಿದ್ದೇವೆ. ಇವತ್ತು ಚಂದ್ರೇಗೌಡರು ಹೇಳಿದರು ಶಿವಮೊಗ್ಗದಲ್ಲಿ ಬೀಜ ಕೊಡುತ್ತೇವೆ ಎಂದು ಮುಖ್ಯಮಂತ್ರಿಗಳು ಹೇಳಿಬಂದರು ಎಂದು. ಇವತ್ತು ಏನಾದರೂ ಕೂಡ ರಾಜ್ಯದಲ್ಲಿ ಸಂಭವಿಸತಕ್ಕಂತ ಇಂತಹ ಒಂದು ಅನಾಹುತಕ್ಕೆ ಒಂದೇ ದಿವಸದಲ್ಲಿ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಸಂಪನ್ಮೂಲಗಳನ್ನು ಕೊಡಬೇಕಾಗುತ್ತದೆ. ದುಡ್ಡನ್ನು ಕೊಡಬೇಕಾಗುತ್ತದೆ. ಇವತ್ತು ಹೇಳಿದರು, 27 ಕೋಟಿ

ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ ಎಂದು, ಅದನ್ನು ಇನ್ನೂ ಬಿಡುಗಡೆ ಮಾಡುತ್ತಿಲ್ಲ, ರಾಜ್ಯ ಬೊಕ್ಕಸ ಅಂಕಿಅಂಶಗಳನ್ನು ನಾವು ಇವತ್ತು ಕೊಡುತ್ತಿದ್ದೇವೆ. ನಾಲ್ಕು ವರ್ಷಗಳ ಅವಧಿಯಲ್ಲಿ 99 ಕೋಟಿ ರೂಪಾಯಿ, ಕೇಂದ್ರ ಸರ್ಕಾರದಿಂದ ಬರತಕ್ಕಂತ 20 ಕೋಟಿ, ನಮ್ಮ ರಾಜ್ಯ ಸರ್ಕಾರ ಖರ್ಚು ಮಾಡತಕ್ಕಂತದ್ದು 6 ಕೋಟಿ 25 ಲಕ್ಷ ರೂಪಾಯಿ, ಮತ್ತೆ ನಮ್ಮ ಬೊಕ್ಕಸದಿಂದ ಇಲ್ಲಿಯವರೆಗೆ ಸತತವಾಗಿ ನಾಲ್ಕು ವರ್ಷಗಳ ಅವಧಿಯಲ್ಲಿ 91 ಕೋಟಿ ರೂಪಾಯಿಯ ಹೆಚ್ಚಿನ ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ. ಇವತ್ತು ಒಂದು ಕಾರ್ಯಕ್ರಮವನ್ನು ರೂಪಿಸಿಕೊಂಡಿದ್ದೇವೆ, ಕೆಲಸವನ್ನೂ ಮಾಡುತ್ತಿದ್ದೇವೆ.

ಪ್ರಜಾಪ್ರಭುತ್ವದಲ್ಲಿ ಅದನ್ನು ಮಾಡುವಂತಹ ರೀತಿಯಲ್ಲಿ, We have to create public confidence. ತಾವು ಬಿದ್ದಂತ ಮನೆಗೆ 500 ರೂಪಾಯಿ ಕೊಟ್ಟಿರಿ ಎಂದು ಹೇಳಿದಿರಿ. ಆದರೆ ಎಲ್ಲಿ ಮನೆಗಳು ಪೂರ್ಣವಾಗಿ ಬಿದ್ದಿವೆ, ಎಲ್ಲಿ ಮನೆಗಳು ಭಾಗಶಃ ಬಿದ್ದಿವೆ ಅಲ್ಲಿ ತೆಗೆದು ಕೊಡತಕ್ಕಂಥಾದ್ದಾಗಲಿ, ಬೇರೆ ರೀತಿಯ ಪರಿಹಾರವನ್ನು ತ್ವರಿತವಾಗಿ ಕೊಡುವ ರೀತಿಯಲ್ಲಿ ನಾವು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ನಾನು ಈಗಾಗಲೇ ಹೇಳಿದ್ದೇನೆ - ಪ್ರತಿಯೊಬ್ಬ ಜಿಲ್ಲಾಧಿಕಾರಿಗೆ ಸರ್ಕಾರದ ಆಜ್ಞೆ ಕೊಟ್ಟಿದೆ, ಒಂದು ಕೋಟಿ ರೂಪಾಯಿ ಖರ್ಚುಮಾಡತಕ್ಕಂಥದ್ದು ಎಂದು ಅವರಲ್ಲಿ ಇರತಕ್ಕಂಥ ಅವೈಲೆಬಲ್ ಫಂಡ್ಸ್ ಏನಿದೆ, ಆ ಫಂಡ್ಸಿನಿಂದ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಅವರಿಗೆ ಸರ್ಕಾರದ ಆದೇಶ ಕೊಟ್ಟಿದ್ದೇವೆ. ಇವತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಅನಾಹುತಗಳು ಆದಮೇಲೆ ಅಲ್ಲಿ 1 ಕೋಟಿ 85 ಲಕ್ಷ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ, ಶಿವಮೊಗ್ಗಕ್ಕೆ 80 ಲಕ್ಷ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ನಾವು ಮತ್ತು ಕರಿಯಣ್ಣನವರು ಮುಖ್ಯಮಂತ್ರಿಗಳ ಜೊತೆಯಲ್ಲಿ ಯಡಿಯೂರಪ್ಪನವರ ಕ್ಷೇತ್ರವಾದ ಅಂಜನಾಪುರದಲ್ಲಿ ಎಲ್ಲೆಲ್ಲಿ ಅಣೆಕಟ್ಟು ಕೆರೆ ಹೊಡೆದು ಹೋಗಿರತಕ್ಕ ಸ್ಥಳಗಳಿವೆ, ಅಲ್ಲಿಗೆ ಭೇಟಿ ಕೊಟ್ಟು ಚಂದ್ರನಾಯಕ್ ಎನ್ನುವ ಚೀಫ್ ಇಂಜಿನಿಯರ್‌ರವರಿಗೆ ಮತ್ತು ನಮ್ಮ ಆರ್ಮಿಯವರಿಗೆ ಹೇಳಿ ಅಲ್ಲಿ ಮಾಡುವಂತಹ ಕೆಲಸವನ್ನು ಮೂರು ದಿವಸಗಳ ಒಳಗೆ ನಾವು ಮಾಡಿದ್ದೇವೆ. ಅಲ್ಲಿ ಬರತಕ್ಕಂಥ ನೀರನ್ನು ಕೂಡ ಬಿಡುಗಡೆ ಮಾಡಿದ್ದಾರೆ. ಜಿಲ್ಲಾಧಿಕಾರಿಗಳ ಸಮ್ಮುಖದಲ್ಲೂ ಕೂಡ ನಾವು ವಿಚಾರಣೆಯನ್ನು ಮಾಡಿದ್ದೇವೆ. ಹೊನ್ನಾಳಿಯಲ್ಲಿ ನದಿ ದಂಡೆಯಲ್ಲಿ 500 ಅಲ್ಪಸಂಖ್ಯಾತರರಿಗೆ ಆಗತಕ್ಕಂತಹ ತೊಂದರೆಯನ್ನು ಕೂಡ ಗಮನಿಸಿ ನಾವು ಸ್ಥಳಕ್ಕೆ ಹೋಗಿ 20 ಎಕರೆ ಜಮೀನನ್ನು ತೆಗೆದುಕೊಂಡು ಅಲ್ಲಿ ಮನೆಗಳನ್ನು ಕಟ್ಟಿಸತಕ್ಕಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ, ಶಿವಮೊಗ್ಗದಲ್ಲಿ, ಭದ್ರಾವತಿಯಲ್ಲಿ ಎಲ್ಲಾ ಕಡೆಯೂ ಬೃಹತ್ತರವಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಇವತ್ತು ಆಶ್ರಯದಲ್ಲಿ ಕೊಡತಕ್ಕಂಥ 15 ಸಾವಿರ ರೂಪಾಯಿ ಮತ್ತು 10 ಸಾವಿರ ಸಿಆರ್‌ಎಫ್‌ನಲ್ಲಿ ಕೊಟ್ಟು ಇವತ್ತು ಮನೆಗಳನ್ನು ಕಟ್ಟಿಸತಕ್ಕಂತಹ ಕೆಲಸಗಳನ್ನು ತಾವು ಮಾಡುತ್ತಿದ್ದೇವೆ. ಇವತ್ತು ಮನೆಗಳನ್ನು ಕಟ್ಟಿಸತಕ್ಕ ಕೆಲಸ ಒಂದೇ ದಿವಸದಲ್ಲಿ ಆಗತಕ್ಕಂಥಾದ್ದಲ್ಲ. ಈ ಒಂದು ತಿಂಗಳ ಹಿಂದೆ ಆಗಿರತಕ್ಕಂಥ ಅನಾಹುತಗಳಿಗೆ ಒಂದೇ ದಿವಸದಲ್ಲಿ ಪರಿಹಾರ ಕೊಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಮಾಡುತ್ತಿದ್ದೇವೆ. ಇವತ್ತು ಮಹಾರಾಷ್ಟ್ರದಲ್ಲಿ ಕೂಡ ಅವರ ಪ್ಯಾಟರನ್ ಏನಿದೆ, ಕೇಂದ್ರ ಸರ್ಕಾರದವರು ಒಂದು ಎಕರೆಗೆ 200 ಕೊಡುತ್ತಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿ ಒಂದು ಎಕರೆಗೆ 500 ಕೊಡತಕ್ಕಂತ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದು ಕೂಡ ಆಗಲಾರದು. ಅಗ್ರಿಕಲ್ಚರ್ ಪ್ಯಾಕೇಜ್ ಏನು ಇವತ್ತು ಕೃಷಿ ಇಲಾಖೆಯ ವತಿಯಿಂದ ಶಿಫಾರಸ್ಸು ಮಾಡಿದ್ದಾರೆ ಅದರ ಬಗ್ಗೆ ಕೂಡ ನಾವು ಕೆಲಸ ಮಾಡುತ್ತಿದ್ದೇವೆ. ಇವತ್ತು ತಾವು ಪದೇ ಪದೇ ಮೆಮೊರಾಂಡಂ

ಕೊಡುತ್ತಿದ್ದೀರಿ, ತಮಗೆ ಏನೂ ಸಿಗುತ್ತಿಲ್ಲ ಮೆಮರಾಂಡಂ ಕೊಡುವಂತದ್ದು 1992-93ರಲ್ಲಿ ಅದು ಪ್ರಾರಂಭ ಆಗಿಲ್ಲ ಮೆಮೊರಾಂಡಂ ಅನ್ನು 1990-91ರಲ್ಲಿ ಕೊಟ್ಟಿದ್ದೇವೆ, 1991-92, 92-93 ರ ಸಾಲಿನಲ್ಲಿ ಅಂದರೆ ಪದೇ ಪದೇ ಆದಾಗ ಯಾವಾಗಲೂ ಕೂಡ We have to report to the central Government. ಇವತ್ತು ರಾಜ್ಯಸರ್ಕಾರದಲ್ಲಿ ಏನು ಅನಾಹುತವಾಗಿದೆ ಎಂಬುದನ್ನು ನಾವು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಮೊನ್ನೆ ನಾನು ಕೂಡ ನಮ್ಮ ಮುಖ್ಯಮಂತ್ರಿಗಳ ಜೊತೆಗೆ ಮನಮೋಹನ್ ಸಿಂಗ್‌ರವರನ್ನು ಮತ್ತು ಕೃಷಿ ಸಚಿವರಾದ ಬಲರಾಂ ಜಾಖಡ್‌ರವರನ್ನು ಭೇಟಿಯಾಗಿದ್ದೆ, ಪ್ರಧಾನಮಂತ್ರಿಯವರನ್ನು ಸ್ವತಃ ಮುಖ್ಯಮಂತ್ರಿಗಳು ಭೇಟಿಯಾಗಿದ್ದರು. ನಮಗೆ ಪದೇ ಪದೇ ತೊಂದರೆ ಬರುತ್ತಿದೆ, ನಾವು ಏನು ಇವತ್ತು ಇಂಟರೀಮ್ ರೂಪವಾಗಿ 100 ಕೋಟಿ ಕೇಳುತ್ತಿದ್ದೇವೆ. ಈಗ ಬರತಕ್ಕಂಥದ್ದು ಹೆಚ್ಚು ಇದೆ. ಅವಾಗ ನಾವು 100 ಕೋಟಿ ರೂಪಾಯಿಗಳನ್ನು ಕೇಳಿದಾಗ ಅಟ್ ಲೀಸ್ಟ್ 50 ಕೋಟಿ ರೂಪಾಯಿ ಆಡಿಷನಲ್ ಆಗಿ ನಾವು ಕೇಳಿದ್ದೇವೆ.

ಈ ವಿಚಾರದಲ್ಲಿ ನಾವು ರಾಜ್ಯದ ನಮ್ಮ ಎಲ್ಲಾ ಲೋಕಸಭಾ ಸದಸ್ಯರಿಗೂ ಮನವರಿಕೆ ಮಾಡಿ ಕೊಟ್ಟಿದ್ದೇವೆ. ಅವರೂ ಕೂಡ ಹೇಳಿದ್ದಾರೆ. ಮಾನ್ಯ ಪ್ರಧಾನ ಮಂತ್ರಿಗಳು ಇದರ ಬಗ್ಗೆ ಆಶಾದಾಯಕವಾಗಿ ಹೇಳಿದ್ದಾರೆ. ನಾವು ಹಿಂದೆ ಎಷ್ಟೋ ಸಾರಿ ಕೇಂದ್ರ ಸರ್ಕಾರವನ್ನು ಪ್ರಾರ್ಥಿಸಿಕೊಂಡಿದ್ದೇವೆ. ಕೇಂದ್ರದವರೂ ಕೂಡ ತಮ್ಮ ಅಧಿಕಾರಿಗಳನ್ನು ಇಲ್ಲಿಗೆ ಕಳುಹಿಸಿ ಅಸೆಸ್‌ಮೆಂಟ್ ಮಾಡಿಸಿದ್ದಾರೆ. ಈ ಸಾರಿ ನಾವು ಮಾನ್ಯ ಪ್ರಧಾನ ಮಂತ್ರಿಗಳನ್ನು ಕೇಳುವುದಕ್ಕೆ ಆಗದೆ ಹೋಗಿದೆ. ಆದರೆ ಕೇಂದ್ರದ ರಕ್ಷಣಾ ರಾಜ್ಯ ಸಚಿವರು ನಮ್ಮ ರಾಜ್ಯಕ್ಕೆ ಬಂದುಹೋಗಿ ಇಲ್ಲಿನ ಸಮಸ್ಯೆಗಳ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಗಳಿಗೆ ವರದಿಯನ್ನು ಕೊಟ್ಟಿದ್ದಾರೆ. ಇದರಿಂದ ನಮಗೆ ಸ್ವಲ್ಪಮಟ್ಟಿನ ಕೇಂದ್ರದ ಸಹಾಯ ಸಿಕ್ಕುವ ಸಂಭವ ಇದೆ. ನಮ್ಮ ರಾಜ್ಯದಲ್ಲಿ ಆಗುವಂಥ, ಸಂಭವಿಸುವಂಥ ಕಷ್ಟ ನಷ್ಟಗಳನ್ನು ಕೇಂದ್ರಸರ್ಕಾರಕ್ಕೆ ಮನವರಿಕೆ ಮಾಡಿ ಕೊಡತಕ್ಕದ್ದು ನಮ್ಮ ರಾಜ್ಯಸರ್ಕಾರದ ಕರ್ತವ್ಯ, ಹಾಗೂ ಧರ್ಮ, ಕೇಂದ್ರ ಸರ್ಕಾರಕ್ಕೆ ನಾವು ಮೆಮೋರಾಂಡಂನ್ನು ಏತಕ್ಕೆ ಕೊಡಲಿಲ್ಲ ಎಂದು ಕೇಳುತ್ತೀರಿ. ಅಲ್ಲದೆ ನೀವು ಕೇಳುವುದೂ ಕೂಡ ಸರಿಯಾಗಿಲ್ಲ, ನೀವು ವ್ಯವಸ್ಥಿತವಾಗಿ ಕೇಳುತ್ತಿಲ್ಲ ಎಂದೂ ಕೂಡ ಆಪಾದನೆಗಳು ನಮ್ಮ ಮೇಲೆ ಬರುತ್ತಿವೆ. ನಮ್ಮ ರಾಜ್ಯದಲ್ಲಿ ಭೂಕಂಪ ಆದಾಗ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ದೆಹಲಿಯಲ್ಲಿದ್ದರು. ಆಗ ಅವರು ಕೇಂದ್ರದ ಗೃಹಮಂತ್ರಿಗಳಾದ ಮಾನ್ಯ ಚವಾಣ್‌ರವರ ಜೊತೆ ಚರ್ಚೆ ಮಾಡಿದ್ದಾರೆ. ಅಲ್ಲದೆ ಮಾನ್ಯ ಮುಖ್ಯ ಮಂತ್ರಿಗಳು ಚವಾಣ್‌ರವರ ಜೊತೆ ಭೂಕಂಪ ಆದ ಸಂದರ್ಭದಲ್ಲಿ ಅಂದರೆ ಬೀದರ್, ಬಿಜಾಪುರ, ಗುಲ್ಬರ್ಗಾದಲ್ಲಿ ಭೂಕಂಪ ಸಂಭವಿಸಿದಂಥ ಸ್ಥಳಗಳಿಗೆ ಭೇಟಿ ಕೊಟ್ಟಾಗ ಅದನ್ನೆಲ್ಲಾ ನೋಡಿ, ಮಹಾರಾಷ್ಟ್ರದಲ್ಲಿ ಏನು ಭೂಕಂಪ ಆಗಿದೆ ಅದಕ್ಕೆ ಹೋಲಿಕೆ ಮಾಡಿದರೆ ಕರ್ನಾಟಕದಲ್ಲಿ ಅಷ್ಟೊಂದು ಭಯಂಕರವಾಗಿಲ್ಲ ಎಂದು ಹೇಳಿದ್ದಾರೆ. ಇಡೀ ವಿಶ್ವದಲ್ಲೇ ಇಷ್ಟೊಂದು ಭಯಂಕರವಾದ ರೀತಿಯಲ್ಲಿ ಭೂಕಂಪ ಮಹಾರಾಷ್ಟ್ರದಲ್ಲಿ ಸಂಭವಿಸಿದೆ,

ನಮ್ಮ ಕರ್ನಾಟಕದಲ್ಲಿ ಆಗಿರುವಂಥ ಭೂಕಂಪವನ್ನು ನಮ್ಮ ಸ್ವಂತ ಫಂಡ್‌ನಿಂದಲೇ ಮ್ಯಾನೇಜ್ ಮಾಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ಆದರೆ ನಾವು ಅಷ್ಟಕ್ಕೇ ಬಿಡಲಿಲ್ಲ. ಭೂಕಂಪಕ್ಕೆ ಒಳಗಾದ 48 ಹಳ್ಳಿಗಳು ಏನಿವೆ ಅವುಗಳಿಗೆ ಪುನರ್ವಸತಿ ಕಲ್ಪಿಸಲು ನಾವು 94 ಕೋಟಿ ರೂಪಾಯಿಗಳನ್ನು ಈಗಾಗಲೇ ಕಳುಹಿಸಿಕೊಟ್ಟಿದ್ದೇವೆ. ಕ್ಲಾರಿಫಿಕೇಷನ್ ಬಂದಿದೆ. ವಿಶ್ವಬ್ಯಾಂಕ್ ನೆರವನ್ನೂ ಕೂಡ ನಾವು ಈ ದಿಸೆಯಲ್ಲಿ ಪಡೆಯಲಿದ್ದೇವೆ. ಬಹಳ ಭಯಂಕರ ದುರಂತ ಮಹಾರಾಷ್ಟ್ರದಲ್ಲಿ ಆಗಿರುವುದರಿಂದ ಅಲ್ಲಿಗೆ 500 ಕೋಟಿ ರೂಪಾಯಿಗಳ ನೆರವು ಸಿಕ್ಕುತ್ತಿದೆ. ಅದೇ ರೀತಿ ನಮ್ಮ ಕರ್ನಾಟಕದಲ್ಲಿ ಆಗಿರುವ ಅನಾಹುತಕ್ಕೂ ಕೂಡ ಹಣವನ್ನು ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆ. 126

ಹಳ್ಳಿಗಳಿಗೆ ಪುನರ್ವಸತಿ ಕಲ್ಪಿಸುವ ಸಲುವಾಗಿ 1050 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ವರದಿ ಕಳುಹಿಸಿಕೊಟ್ಟಿದ್ದೇವೆ. ಇಷ್ಟು ಹಳ್ಳಿಗಳನ್ನು ಸ್ಥಳಾಂತರ ಮಾಡಲು ಕೇಂದ್ರ ಸಂಪುಟದ ಎದುರಿಗೆ ಮಂಡಿಸಿ ವಿಶ್ವ ಬ್ಯಾಂಕ್ನ ನೆರವನ್ನು ಪಡೆಯಲು ಪ್ರಯತ್ನ ಮಾಡುತ್ತಿದ್ದೇವೆ.

ಕೇಂದ್ರ ಸರ್ಕಾರದಿಂದ ಆಗಲಿ, ವಿವಿಧ ಆರ್ಥಿಕ ಸಂಘ ಸಂಸ್ಥೆಗಳಿಂದ ಆಗಲಿ ಭೂಕಂಪದ ಬಗ್ಗೆ ನಮಗೆ ಎಷ್ಟೆಷ್ಟು ಹಣವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೋ ಅಷ್ಟನ್ನೂ ಕೂಡ ನಾವು ಪಡೆಯುವುದರಲ್ಲಿ ಹಿಂದೆ ಸರಿದಿಲ್ಲ. ಪ್ರತಿಯೊಂದು ಸಂದರ್ಭದಲ್ಲೂ ನಾವು ಬಹಳ ಜಾಗರೂಕತೆಯಿಂದಿದ್ದೇವೆ. ನಾವು ಎಲ್ಲೆಲ್ಲಿ ಹೇಗೇಗೆ ಹಣವನ್ನು ಪಡೆಯಬೇಕೆಂಬುದನ್ನು ಗಮನದಲ್ಲಿಟ್ಟುಕೊಂಡು ಅದರ ಪ್ರಕಾರವೇ ನಾವೆಲ್ಲರೂ ಬಹಳ ಜಾಗರೂಕತೆಯಿಂದ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದ್ದೇವೆ. ಇನ್ನು ಕ್ರಾಪ್ ಕಾಂಪೆನ್ಸೇಷನ್ 75 ಪರ್ಸೆಂಟ್ ಏನು ಇವರು ಕೇಳುತ್ತಿದ್ದಾರೆ. ಇದರ ಬಗ್ಗೆ ಕೂಡ ನಾವು ವಿಚಾರ ಮಾಡುತ್ತಿದ್ದೇವೆ. ಇನ್ನೂ ಕೂಡ ಹೆಚ್ಚಿನ ಹಣವನ್ನು ಖರ್ಚು ಮಾಡಿ ಬೇರೆ ಬೇರೆ ಕೆಲಸವನ್ನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇನೆ. ಶ್ರೀಮತಿ ಮೋಟಮ್ಮನವರ ಕ್ಷೇತ್ರದಲ್ಲಿ 3 ಬ್ರಿಡ್ಜ್‌ಗಳು ಬಿದ್ದುಹೋಗಿದ್ದುವು, ಅಲ್ಲಿಗೆ ಹೋಗಿ ನೋಡಿ ಅದನ್ನು ರೆಸ್ಟೋರ್ ಮಾಡುವಂಥ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಗೋಕಾಕ್‌ನಲ್ಲಿ ಸುಮಾರು 2000 ಮನೆಗಳು ಬಿದ್ದುಹೋಗಿವೆ. ಒಂದು ವಿಚಾರ ಎಂದರೆ ಈ ಅನಾಹುತದಿಂದ ಎಲ್ಲೆಲ್ಲಿ ಜನರು ಸತ್ತು ಹೋಗಿದ್ದಾರೆ ಅವರ ಕುಟುಂಬದವರಿಗೆ ಕೇಂದ್ರ ಸರ್ಕಾರ, ಆಂಧ್ರ ಸರ್ಕಾರದವರು ಕೇವಲ 5 ಸಾವಿರ ರೂಪಾಯಿಗಳನ್ನು ಮಾತ್ರ ಪರಿಹಾರ ಕೊಡುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ 8 ಸಾವಿರ ರೂಪಾಯಿಗಳಂತೆ ಕೊಡುತ್ತಿದ್ದಾರೆ. ಆದರೆ ನಮ್ಮ ಕರ್ನಾಟದಲ್ಲಿ ಅನಾಹುತದಲ್ಲಿ ಸತ್ತವರ ಕುಟುಂಬದವರಿಗೆ ನಾವು 1 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಇತ್ತೀಚೆಗೆ ಮಾನ್ಯ ಪ್ರಧಾನ ಮಂತ್ರಿಗಳು ಹೇಳಿದ್ದಾರೆ, 50 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು. ಕರ್ನಾಟಕದಲ್ಲಿ ಪ್ರಾಣಹಾನಿಯಾದವರ ಕುಟುಂಬದವರಿಗೆ 1 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ.

ಇಡೀ ದೇಶದಲ್ಲಿ ಇಷ್ಟೊಂದು ಪರಿಹಾರ ಹಣವನ್ನು ಬೇರೆ ಯಾವ ರಾಜ್ಯ ಸರ್ಕಾರಗಳೂ ಕೊಡುತ್ತಿಲ್ಲ. ಎಲ್ಲೆಲ್ಲಿ ನಾವು ಮಾಡಲೇಬೇಕಾದ ಕೆಲಸ ಕಾರ್ಯಗಳಿವೆ ಅವುಗಳನ್ನು ನಾವು ಮಾಡಲೇಬೇಕಾಗಿದೆ. ಇಂಥ ದುರಂತ ಸಂಭವಿಸಿದ ಸಂದರ್ಭದಲ್ಲಿ ನಾವೆಲ್ಲರೂ ಒಟ್ಟಿಗೇ ಸೇರಿ ಕೆಲಸವನ್ನು ಮಾಡಲೇಬೇಕಾಗುತ್ತದೆ. ಆದರೆ ಸರ್ಕಾರ ಯಾವುದೇ ಕೆಲಸವನ್ನೂ ಮಾಡುತ್ತಿಲ್ಲವೆಂದು ಯಾರಾದರೂ ಹೇಳಿದರೆ ಅದನ್ನು ನಾವು ಒಪ್ಪುವುದಕ್ಕೆ ತಯಾರಿಲ್ಲ. ಇದರಲ್ಲಿ ಯಾರೂ ಕೂಡ ರಾಜಕೀಯವನ್ನು ಬೆರೆಸಬಾರದು. ಇಂಥ ಸಂದರ್ಭದಲ್ಲಿ ಎಲ್ಲರೂ ಕೂಡಿ ಕೆಲಸ ಮಾಡಬೇಕು. ಅದು ಪ್ರಧಾನ ಮಂತ್ರಿ ಇರಬಹುದು, ಕೇಂದ್ರ ಸರ್ಕಾರ ಇರಬಹುದು, ರಾಜ್ಯ ಸರ್ಕಾರ ಇರಬಹುದು ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕು. ನಿಮ್ಮ ಎದುರಿಗೆ ಯಾವ ಕಾರ್ಯಕ್ರಮ ಇದೆ ಎಂದು ಮಾನ್ಯ ಮಾಜಿ ಮುಖ್ಯ ಮಂತ್ರಿಗಳಾದ ಬಂಗಾರಪ್ಪನವರು ಕೇಳಿದರು. ನಾನಾದರೂ ಹೇಳುತ್ತೇನೆ, ನೆಹರೂ ರೋಜ್‌ಗಾರ್ ಯೋಜನೆ ಇದೆ, ಸೆಂಟ್ರಲ್ ಸೆಕ್ಟಾರ್‌ನಿಂದ ಬರತಕ್ಕ ಹಣವನ್ನು ಉಪಯೋಗಿಸಿಕೊಂಡು ಕೆಲಸಕಾರ್ಯಗಳನ್ನು ಮಾಡಬೇಕೆಂದು ನಾವು ಆರ್.ಡಿ.ಪಿ.ಆರ್.ನವರಿಗೆ ತಿಳಿಸಿದ್ದೇವೆ. ಕೇವಲ 2 ತಿಂಗಳ ಅವಧಿಯಲ್ಲಿ ಎಲ್ಲೆಲ್ಲಿ ಕುಡಿಯುವ ನೀರಿಗೆ ಬರಗಾಲ ಇತ್ತು ಅಲ್ಲಿಗೆ 7.20 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಆ ತಿಂಗಳಲ್ಲಿ ಎಲ್ಲ ಬಾಬುಗಳಿಗೂ ಒಟ್ಟು 22 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನೂ ಹೆಚ್ಚಿನ ಕೆಲಸಕಾರ್ಯಗಳನ್ನು ಮಾಡಬೇಕೆಂಬ ಸಲಹೆಯನ್ನೂ ಗಮನದಲ್ಲಿಟ್ಟುಕೊಂಡು ನಾವು ಕೆಲಸ ಮಾಡುತ್ತಿದ್ದೇವೆ.

ಇನ್ನೂ ಏನೇನು ಸಲಹೆ ಸೂಚನೆಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ. ತಮಗೆ ಹೇಳುವುದಾದರೆ, ನಮ್ಮ ಇಡೀ ಕರ್ನಾಟಕ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಇಂಥ ಭೀಕರ ಅನಾಹುತಗಳು ಸಂಭವಿಸಿದ್ದುವು ಅಂಥ ಕಡೆಗಳಲ್ಲಿ ಪ್ರತಿಯೊಬ್ಬ ಜಿಲ್ಲಾಧಿಕಾರಿಯೂ ಹಗಲು ರಾತ್ರಿ ಎನ್ನದೆ ಕೆಲಸ ಮಾಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಜಿಲ್ಲಾಧಿಕಾರಿ ಭರತ್‌ಲಾಲ್ ಮೀನಾ ಅವರು ಅತಿ ಉತ್ತಮ ರೀತಿಯಲ್ಲಿ, ದಕ್ಷತೆಯಿಂದ ಕೆಲಸ ಮಾಡಿದ್ದಾರೆ. ಹಗಲು ರಾತ್ರಿ ಎನ್ನದೆ ಎಲ್ಲ ಕಡೆಯಲ್ಲೂ ಸುತ್ತಾಡಿ ಹಣವನ್ನೊದಗಿಸಿ ಉತ್ತಮ ಕೆಲಸ ಮಾಡಿಸಿದ್ದಾರೆ. ಆ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾದ ಡಿಸೋಜಾರವರೂ ಇಲ್ಲಿದ್ದಾರೆ. ಇವತ್ತು ಬೆಳಗಾಂ, ಧಾರವಾಡ, ಬಿಜಾಪುರದ ಮುಧೋಳ, ಶಿವಮೊಗ್ಗದಲ್ಲಿ ಇನ್ನೂ ಬೇರೆ ಬೇರೆ ಕಡೆಗಳಲ್ಲಿ ಆದಂಥ ದುರಂತದ ಬಗ್ಗೆ ಅಲ್ಲಿಯ ಜಿಲ್ಲಾಧಿಕಾರಿಗಳು ಹಗಲು ರಾತ್ರಿ ಕೆಲಸ ಮಾಡಿದ್ದಾರೆ. ಇನ್ನೂ ಕೂಡ ಅವರ ಸಲಹೆ ಸೂಚನೆಗಳ ಮೇರೆಗೆ ಎಲ್ಲಿಲ್ಲಿ ಕೆಲಸಕಾರ್ಯಗಳು ಆಗಬೇಕು. ಅಪೂರ್ಣ ಕೆಲಸಗಳು ಯಾವುದಿದೆ ಅವುಗಳನ್ನು ವ್ಯವಸ್ಥಿತವಾಗಿ ಮಾಡುತ್ತೇವೆ. ಕೇಂದ್ರದಿಂದ ಕೂಡ ನಮಗೆ ನೆರವು ಬರುತ್ತದೆಂಬ ಆಶಯವನ್ನು ತಿಳಿಸುತ್ತೇನೆ. ನಾನು ಈಗಾಗಲೇ ಸ್ಟೇಟ್‌ಮೆಂಟ್ ಮಾಡಿರುವ ಬಗ್ಗೆ ಅವರು ಏನು ವಿಷಯ ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಕೂಡ ಹೇಳಿದ್ದೇನೆ.

ಶ್ರೀಮತಿ ಮೋಟಮ್ಮ : ರೈತರಿಗೆ ಬಡ್ಡಿರಹಿತ ಫ್ಲಡ್ ಲೋನ್ ಕೊಡುವ ಬಗ್ಗೆ ಆದರೂ ತಾವು ದಯವಿಟ್ಟು ಹೇಳಬೇಕು.

ಶ್ರೀ ಧರ್ಮಸಿಂಗ್ : ಇವತ್ತು ನಮ್ಮ ರಾಜ್ಯದಲ್ಲಿ 16 ಜಿಲ್ಲೆಗಳು ಪ್ರವಾಹ ಪೀಡಿತವಾಗಿದ್ದು 12 ಜಿಲ್ಲೆಗಳಲ್ಲಿ ಬರಗಾಲ ಇದೆ. ಆದ್ದರಿಂದ ಅಲ್ಲಿ ರೆವಿನ್ಯೂ ಕಲೆಕ್ಷನ್ಸ್, ಸಾಲದ ವಸೂಲಾತಿಯ ಬಗ್ಗೆ ತಾವು ಈಗಾಗಲೇ ಪ್ರಸ್ತಾಪ ಮಾಡಿದ್ದೇವೆ. ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಬಿ.ಎಂ. ಇದಿನಬ್ಬ : ನಮ್ಮ ಪ್ರತಿಪಕ್ಷದ ಸದಸ್ಯರು ಹೇಳಿದ್ದು ಸರಿಯಲ್ಲ. ಪ್ರತಿಯೊಬ್ಬ ಮಂತ್ರಿಯೂ ಅವರವರ ಕ್ಷೇತ್ರದಲ್ಲೇ ಇದ್ದರು. ಆದರೆ ಪ್ರತಿಪಕ್ಷದವರು ಪತ್ರಿಕೆಗಳನ್ನು ಓದುವುದಿಲ್ಲ. ಮನೋರಮಾ ಮಧ್ವರಾಜ್‌ರವರು, ಡಿಸೋಜರವರು, ವಸಂತ ಸಾಲಿಯಾನರವರು ಎಲ್ಲರೂ ಕೂಡ ಅವರವರ ಕ್ಷೇತ್ರದಲ್ಲಿದ್ದರು. ಸಾಲಿಯಾನ್‌ರವರು ಕಾಪುವಿನಲ್ಲೇ ಬೀಡುಬಿಟ್ಟಿದ್ದಾರೆ. ಅವರವರು ಮಾಡುವಂಥ ಕೆಲಸವನ್ನು ಎಲ್ಲರೂ ಮಾಡಿದ್ದಾರೆ. ಅಧಿಕಾರಿಗಳೂ ಕೂಡ ತಮ್ಮ ತಮ್ಮ ಕೆಲಸವನ್ನು ಮಾಡಿದ್ದಾರೆ. ಆದರೂ ಯಾರೂ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಿಲ್ಲವೆಂದು ಪ್ರತಿಪಕ್ಷದವರು ಹೇಳುತ್ತಿರುವುದು ಸರಿಯಲ್ಲ. ನೀವು ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಮಾನ್ಯ ಉಪಾಧ್ಯಕ್ಷರೆ, ಪ್ರವಾಹ ಬಂದು ಹೆಣಗಳು ಕೊಚ್ಚಿ ಹೋಗಿದ್ದು ಅವುಗಳು ಕೊಳೆತು ಹೋಗಿದ್ದುದರಿಂದ ಅವುಗಳನ್ನು ಪೋಸ್ಟ್‌ಮಾರ್ಟಂ ಮಾಡುವುದಕ್ಕಾಗದೇ ಹಳ್ಳಿಯ ಜನರಿಗೆ ಸರಿಯಾದ ತಿಳುವಳಿಕೆ ಇಲ್ಲದೆ ಆ ಹೆಣಗಳನ್ನು ಸುಟ್ಟು ಹಾಕಿದ್ದಾರೆ. ಪೋಸ್ಟ್ ಮಾರ್ಟಂ ಮಾಡಿದಂಥ ಹೆಣಗಳವರ ಕುಟುಂಬಗಳಿಗೆ 1 ಲಕ್ಷ ರೂಪಾಯಿ ಪರಿಹಾರವನ್ನು ಕೊಟ್ಟಿದ್ದೀರಿ. ಏನೂ ಗೊತ್ತಿಲ್ಲದ ಹಳ್ಳಿಯ ಕುಟುಂಬದ ಜನರು ತಮ್ಮ ತಮ್ಮ ಗಂಡಂದಿರು, ಮಕ್ಕಳು ಸತ್ತುಹೋದಾಗ ಪೋಸ್ಟ್ ಮಾರ್ಟಂ ಮಾಡಿಸಬೇಕೆಂಬುದು ಗೊತ್ತಿಲ್ಲದ ಹಾಗೇ ಸುಟ್ಟುಹಾಕಿದ್ದಾರೆ. ಆದ್ದರಿಂದ ಅಂಥ ಕುಟುಂಬದವರಿಗೆ ಹಣವನ್ನು ಪಾವತಿ ಮಾಡಿಸಬೇಕೆಂದು ಕೋರುತ್ತೇನೆ.

ಶ್ರೀ ಧರ್ಮಸಿಂಗ್ : ಎಲ್ಲೆಲ್ಲಿ ಪ್ರಾಣಹಾನಿಯಾಗಿದ್ದು ಪೋಸ್ಟ್‌ಮಾರ್ಟಂ ಆಗಿದ್ದು ಪರಿಹಾರ ಸಿಕ್ಕಿಲ್ಲ ಅಂಥಾದ್ದರ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಯವರ ಜೊತೆ ಪ್ರಸ್ತಾಪ ಮಾಡಿಕೊಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷರು : ಇಲ್ಲಿಗೆ ನೆರೆಹಾವಳಿಯ ಬಗ್ಗೆ ಚರ್ಚೆ ಮುಕ್ತಾಯವಾಯಿತು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಪ್ರತಿ ಪಕ್ಷದವರ ಗೈರುಹಾಜರಿಯಲ್ಲಿ ಈ ಸಭೆಯನ್ನು ನಡೆಸುವುದು ನಮಗೇನೂ ಅಷ್ಟು ಸಮಾಧಾನಕರವಾದ ವಿಚಾರ ಎನಿಸುವುದಿಲ್ಲ. ಇದು ಒಂದು ರೀತಿಯ ಮುಜುಗರದ ಪರಿಸ್ಥಿತಿ ಆಗಿದೆ. ಪ್ರತಿಪಕ್ಷದ ನಾಯಕರು ಇವತ್ತು ಬಹಳ ಪ್ರಮುಖವಾದ ವಿಷಯವನ್ನು ಎತ್ತಿದ್ದರು. ಆದರೆ ನಿಯಮಗಳಿಗನುಸಾರವಾಗಿ ಅವರು ಪ್ರಶ್ನೋತ್ತರ ಕಾಲ ಮುಗಿದಮೇಲೆ ಆ ವಿಚಾರವನ್ನು ತೆಗೆದುಕೊಂಡಿದ್ದಿದ್ದರೆ ಅದನ್ನು ಚರ್ಚೆ ಮಾಡಬಹುದಿತ್ತು. ಅವರ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದಕ್ಕೆ ನಾವೆಲ್ಲರೂ ಬಹಳ ಕಾತುರರಾಗಿದ್ದೆವು. ಅವರ ಸಲಹೆ, ಸಹಕಾರವನ್ನು ನಾವು ಬಯಸುತ್ತೇವೆ. ನಮ್ಮ ಸಮಾಜ ಕಲ್ಯಾಣ ಮಂತ್ರಿಗಳು ಉತ್ತರವನ್ನು ಕೊಡುವುದಕ್ಕೂ ಕೂಡ ಸಿದ್ಧವಾಗಿದ್ದರು. ಆದರೆ ದುರದೃಷ್ಟವಶಾತ್ ಪ್ರತಿಪಕ್ಷದವರು ಸಭಾತ್ಯಾಗ ಮಾಡಿ ಹೋಗಿದ್ದಾರೆ. ನಮ್ಮ ಸರ್ಕಾರ ಮೀಸಲಾತಿಯನ್ನು ನಿರ್ಧಾರ ಮಾಡಿರತಕ್ಕದ್ದೂ ಹಿಂದುಳಿದವರ, ಅತಿ ಹಿಂದುಳಿದವರ, ನಿಮ್ಮ ವರ್ಗದವರ ಹಿತಕ್ಕಾಗಿ 80 ಪರ್ಸೆಂಟ್ ಎಂದು ಮಾಡಿತು. ನಮ್ಮ ಕರ್ನಾಟಕದಲ್ಲಿ ಈ ಮೀಸಲಾತಿ ಹೊಸದಾಗಿ ಬಂದಿದ್ದೇನೂ ಅಲ್ಲ, ಮೊದಲಿನಿಂದಲೂ ಇದೆ. 1986ರ ಆಜ್ಞೆಯ ಪ್ರಕಾರ 68 ಪರ್ಸೆಂಟ್ ಇದೆ. ಆದರೆ ನಿಮ್ಮ ವರ್ಗದವರಿಗೆ ಹಿಂದೆ 18 ಪರ್ಸೆಂಟ್ ಇದ್ದುದನ್ನು ಈಗ 23ಕ್ಕೆ ಏರಿಸಿದೆ. ಅಂದರೆ 5 ಪರ್ಸೆಂಟ್ ಹೆಚ್ಚಿಗೆ ಕೊಡಬೇಕೆಂಬ ಉದ್ದೇಶದಿಂದ ಈ ನಿರ್ಧಾರವನ್ನು ನಾವು ಕೈಗೊಳ್ಳಬೇಕಾಯಿತು. ಆದರೆ ದುರದೃಷ್ಟವಶಾತ್, ಸುಪ್ರೀಂ ಕೋರ್ಟ್‌ನಿಂದ ಎಲ್ಲಾ ಆಜ್ಞೆಗಳಿಗೂ ತಡೆ ಬಂದಿದೆ. ಇದರಿಂದ ಲಕ್ಷಾಂತರ ವಿದ್ಯಾರ್ಥಿಗಳಿಗೆ ತೊಂದರೆಯಾಗಿದ್ದು ಅವರ ತಂದೆತಾಯಿಗಳಿಗೆ ಬಹಳ ಆತಂಕವುಂಟಾಗಿದೆ. ಆದ್ದರಿಂದ ಈ ಸಮಸ್ಯೆ ಆದಷ್ಟು ಬೇಗ ನ್ಯಾಯಾಲಯದ ಮುಖಾಂತರ ಬಗೆಹರಿಯಬೇಕೆಂದು ಆಸೆಪಡುತ್ತೇವೆ. ಏಕೆಂದರೆ ನಾವು ವಿದ್ಯಾರ್ಥಿಗಳ ಮತ್ತು ಅವರ ತಂದೆತಾಯಿಗಳ ಆತಂಕವನ್ನು ತಿಳಿದುಕೊಂಡು ಅದು ಬೇಗ ಪರಿಹಾರವಾಗಬೇಕೆಂದು ಉದ್ದೇಶವಿಟ್ಟುಕೊಂಡಿದ್ದೇವೆ. ಆದ್ದರಿಂದ ನಾಳೆಯಾದರೂ ಮಾನ್ಯ ಪ್ರತಿಪಕ್ಷದ ಸದಸ್ಯರು ಪ್ರಶ್ನೋತ್ತರ ಕಾಲವಾದ ಮೇಲೆ ವಿಷಯವನ್ನು ಚರ್ಚೆ ಮಾಡಿ ಅಮೂಲ್ಯ ಸಲಹೆಗಳನ್ನು ಅವರು ಕೊಡಬೇಕು. ನಾವು ಕೂಡ, ಕರ್ನಾಟಕ ರಾಜ್ಯ ಸರ್ಕಾರ ಕೂಡ ಸರ್ವಸಮ್ಮತವಾದ, ಎಲ್ಲ ಪಕ್ಷದವರೂ ಒಪ್ಪುವಂಥ ಮೀಸಲಾತಿ ಮಾಡುವ ಉದ್ದೇಶದಿಂದ ಅವರ ಸಲಹೆಯನ್ನು ಕೇಳಬಯಸುತ್ತೇನೆ. ಆದ್ದರಿಂದ ಈ ಪ್ರಶ್ನೆಯನ್ನು ನಾಳೆ ಪ್ರಶೋತ್ತರ ಕಾಲ ಆದಮೇಲೆ ತೆಗೆದುಕೊಳ್ಳುವುದು ತಮಗೆ ವಿವೇಚನೆಗೆ ಬಿಟ್ಟಂಥ ವಿಷಯ. ಇವತ್ತು ಅವರು ಸಭಾತ್ಯಾಗ ಮಾಡಿದ್ದಕ್ಕೋಸ್ಕರವಾಗಿ ನಮಗೆ ವಿಷಾದ ಎನಿಸುತ್ತದೆ. ಅವರು ಭಾಗವಹಿಸಬೇಕು ಎಂದು ಇಷ್ಟು ಮಾತ್ರ ಹೇಳುತ್ತೇನೆ.

ಉಪಾಧ್ಯಕ್ಷರು : ಸದನದ ಕಾರ್ಯಕಲಾಪಗಳನ್ನು ಮುಂದೂಡಿ ಮತ್ತೆ. ನಾಳೆ ಬೆಳಗ್ಗೆ 11 ಗಂಟೆಗೆ ಮುಂದುವರೆಸಲಾಗುವುದು.

(ಮಧ್ಯಾಹ್ನ 12-22ಕ್ಕೆ ಕಾರ್ಯಕಲಾಪಗಳನ್ನು ಮುಂದೂಡಿ ಮತ್ತೆ ದಿನಾಂಕ 1-9-94ರಂದು ಬೆಳಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಲಾಯಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ ೧ನೇ ಸೆಪ್ಟೆಂಬರ್ ೧೯೯೪, ಭಾದ್ರಪದ, ಶಕ ೧೯೧೬,

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಗ್ಗೆ ೧೧-೨೦ ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು : (ಶ್ರೀ ವಿ. ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ನಿನ್ನೆ ಸದನದಲ್ಲಿ ನಡೆದಂಥ ಪರಿಸ್ಥಿತಿಯನ್ನು ತಮ್ಮ ಗಮನಕ್ಕೆ ತಂದಿದ್ದೇವೆ, ಒಂದು ನಿರ್ಧಾರಕ್ಕೂ ಕೂಡ ಬಂದಿದ್ದೇನೆ. ತಮ್ಮ ನಿರ್ಧಾರ ಏನು ಎಂದು ತಾವೇ ಮೊದಲು ಹೇಳಿದರೆ ಉಳಿದ ಈ ವಿಚಾರಕ್ಕೆ ನಾವು ಬರುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧಪಕ್ಷದ ನಾಯಕರು) : ನಿನ್ನೆ ನಾವು ಮೀಸಲಾತಿ ವಿಚಾರದಲ್ಲಿ ಸುಪ್ರಿಂಕೋರ್ಟ್ ಪ್ರಕಾರ ಏನು 86 ಆರ್ಡರ್ಸ್ ಸ್ಟೇ ಆಗಿದೆ, ಹಾಗಾಗಿ ಈಗ ಪರಿಸ್ಥಿತಿ ಏನಾಗಿದೆ ಎಂದರೆ ಪ್ರೊಫೆಷನ್ ಕಾಲೇಜುಗಳಲ್ಲಿ ಅಡ್ಮಿಷನ್ ಆಗುತ್ತಿಲ್ಲ. ರಿಕ್ರೂಟ್‌ಮೆಂಟ್ ಆಗುತ್ತಿಲ್ಲ. ಇಡೀ ನಮ್ಮ ಯುವಕರ ಭವಿಷ್ಯ ಇವತ್ತು ಸ್ಟೇಕ್‌ನಲ್ಲಿದೆ. ನಾವು ನಿನ್ನೆ ಪ್ರಶ್ನೋತ್ತರ ಕಾಲವನ್ನು ಮುಂದೂಡಿ ಈ ಒಂದು ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡಿದ್ದೆವು. ನಾವು ತಮ್ಮ ಮೇಲೆ ಏನೂ ದೋಷರೋಪಣೆ ಮಾಡುತ್ತಿಲ್ಲ. ಆದರೆ ಸರ್ಕಾರ್ರ ಆ ಸಮಯದಲ್ಲಿ ತಕ್ಷಣ ಸ್ಪಂಧಿಸಿದ್ದರೆ ನಿನ್ನೆ ನಾವು ಪ್ರೊಸಿಡಿಂಗ್ಸ್‌ನ್ನು ಬಾಯ್‌ಕಾಟ್ ಮಾಡುವ ಪ್ರಶ್ನೆ ಬರುತ್ತಾ ಇರಲಿಲ್ಲ. ಆದರೆ ಇವತ್ತು ಪುನಃ ನಮ್ಮನ್ನು ತಮ್ಮ ಕಛೇರಿಗೆ ಕರೆದು ಈ ಕಾರ್ಯಕಲಾಪಗಳು ಸರಿಯಾಗಿ ನಡೆಯಬೇಕು, ಈ ವಿಷಯಗಳು ಸರಿಯಾಗಿ ಚರ್ಚೆಯಾಗಬೇಕು ಎಂದು ತಾವೂ ಸಹ ತಮ್ಮ ಮಧ್ಯಸ್ಥಿಕೆ ಮಾಡಿದ್ದರಿಂದ ಒಂದು ತೀರ್ಮಾನಕ್ಕೆ ನಾವು ಬಂದಿದ್ದೇವೆ. ಕೊಶ್ಚನ್ ಹವರ್ ಬಹಳ ಮಹತ್ವದ್ದು. ಆದ್ದರಿಂದ ನಾವು ಯಾವತ್ತೂ ಪ್ರಶ್ನೋತ್ತರ ಕಾಲವನ್ನು ಮುಂದೂಡಬೇಕು ಎಂದು ಹೇಳಿಲ್ಲ ಆದರೆ ಇವತ್ತು ಈ ಮೀಸಲಾತಿ ವಿಚಾರದಲ್ಲಿ ಏನು ಗಂಭೀರವಾದ ಪರಿಣಾಮವಾಗಿದೆ, ಅದರಿಂದ ಮತ್ತೊಮ್ಮೆ ತಮ್ಮನ್ನು ವಿನಂತಿ ಮಾಡುತ್ತಿದ್ದೇನೆ ತಾವು ಇವತ್ತು ಸ್ಪೆಷಲ್ ಕನ್ಸಿಡರೇಷನ್ ಮಾಡಿ ಈ ಪ್ರಶ್ನೋತ್ತರ ಕಾಲವನ್ನು ಮುಂದೂಡಿ ಈ ಮೀಸಲಾತಿ ವಿಚಾರವನ್ನು ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಇದಾದನಂತರ ತಾವು ಪ್ರಶ್ನೋತ್ತರವನ್ನು ತೆಗೆದುಕೊಂಡರೆ ಸದಸ್ಯರಿಗೆ ಏನೂ ತೊಂದರೆಯಾಗುವುದಿಲ್ಲ. ಇದನ್ನು ತಾವು ಒಪ್ಪಿಕೊಳ್ಳಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಏನು ಗಂಭೀರವಾದ ವಿಷಯವನ್ನು ಇಟ್ಟಿದ್ದಾರೆ ಅದಕ್ಕೆ ಪ್ರಶ್ನೋತ್ತರವನ್ನು ಕೆಲವು ಕಾಲ ಮುಂದೂಡಿ ಆ ಗಂಭೀರವಾದ ವಿಷಯವನ್ನು ಚರ್ಚೆ ಮಾಡಲಿಕ್ಕೆ ಸದನ ಒಪ್ಪಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ರಾಜ್ಯದಲ್ಲಿ ಮೀಸಲಾತಿಯ ಅನುಷ್ಠಾನದಿಂದ ಉಂಟಾದ ಪರಿಸ್ಥಿತಿ

+ ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಎಲ್ಲಾ ವಿರೋಧ ಪಕ್ಷದ ಪರವಾಗಿ ತಮಗೆ ಈ ಪ್ರಶ್ನೋತ್ತರ ಕಾಲವನ್ನು ಸಸ್ಪೆಂಡ್

ಮಾಡಿ ಈ ಮೀಸಲಾತಿಯಿಂದ ಏನು ಅನಾಹುತವಾಗಿದೆ. ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಮ್ಮ ಎಲ್ಲಾ ವಿರೋಧ ಪಕ್ಷದ ಪರವಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ ನಾನು ಕೆಲವು ವಿಚಾರಗಳನ್ನು 5-10 ನಿಮಿಷಗಳಲ್ಲಿ ಹೇಳಿ ಮುಗಿಸುತ್ತೇನೆ. ಅದರ ನಂತರ ಮಾನ್ಯ ಚಂದ್ರೇಗೌಡರು ಅದರ ಬಗ್ಗೆ ಬಹಳ ವಿವರವಾಗಿ ಪ್ರಸ್ತಾಪ ಮಾಡುತ್ತಾರೆ. ಮಾನ್ಯ ಅಧ್ಯಕ್ಷರೇ, ಮುಖ್ಯವಾಗಿ ಸರ್ಕಾರ ಇವತ್ತು ಮೀಸಲಾತಿಯ ಬಗ್ಗೆ ತಮ್ಮ ಸ್ಪಷ್ಟವಾಗಿ ನೀತಿ ಏನು ಎಂಬುದನ್ನು ಹೇಳಬೇಕು.ಈ ಸರ್ಕಾರಕ್ಕೆ ಮೀಸಲಾತಿ ವಿಚಾರದಲ್ಲಿ ಯಾವ ಕ್ಲಾರಿಟಿ ಇಲ್ಲ, ಮೀಸಲಾತಿ ಯಾವ ವರ್ಗದವರಿಗೆ ಇರಬೇಕು, ಯಾವ ಪರ್‌ಸೆಂಟೇಜ್ ಇರಬೇಕು. ಅದರ ಬಗ್ಗೆ ಪ್ರತಿಯೊಂದು ಸರ್ಕಾರಕ್ಕೆ, ಪ್ರತಿಯೊದು ರಾಜಕೀಯ ಪಕ್ಷಕ್ಕೆ ತನ್ನದೇ ಆದ ಒಂದು ಕ್ಲಾರಿಟಿ ಇರಬೇಕಾಗುತ್ತದೆ. ಆ ತರಹದ ಕ್ಲಾರಿಟಿ ಇವತ್ತು ನಮಗೆ ಕಾಣಿಸುತ್ತಿಲ್ಲ. ಇವತ್ತು ಅವರಿಗೆ ಬಹಳ ನೋವಾಗಬಹುದು ನಾನು ಹೇಳಿದರೆ you have become the laughing stock of the entire younger generation. The entire career of the younger generation is at stake.

ಸನ್ಮಾನ್ಯ ಅಧ್ಯಕ್ಷರೇ, ಪ್ರೊಫೆಷನ್ ಕಾಲೇಜಿನಲ್ಲಿ ಅಡ್ಮಿಷನ್ಸ್ ಇಲ್ಲ. 86ನೇ ಆರ್ಡರ್ ಪ್ರಕಾರ ಪ್ರವೇಶ ಪರೀಕ್ಷೆ ಮಾಡಿದರು, ಈ ಕಾಲೇಜುಗಳಲ್ಲಿ ಪ್ರವೇಶ ಕೊಡಬೇಕಾದರೆ ಅಮೆಂಡೆಡ್ ನ್ಯಾಯ ಮೂರ್ತಿ ಚಿನ್ನಪ್ಪರೆಡ್ಡಿ ವರದಿ ಪ್ರಕಾರ ಮಾಡಲಿಕ್ಕೆ ಹೋದರು, ಇದು ಸ್ಟೇ ಆಯಿತು, 86ನೇ ಆರ್ಡರ್ ಪ್ರಕಾರ ಮಾಡುತ್ತೇವೆ ಎಂದು ಹೇಳಿದರು, ಇವತ್ತು 86ನೇ ಆರ್ಡರ್ ಸ್ಟೇ ಆದನಂತರ ಮೇಲ್ಮನೆಯಲ್ಲಿ ಏನು ನಡೆಯುತ್ತಿದೆಯೋ ಅದರ ಬಗ್ಗೆ ಪ್ರಸ್ತಾಪ ಮಾಡಬಾರದು. ಆದರೆ ಮಾನ್ಯ ಆ ಮನೆಯ ನಾಯಕರಾದಂಥ ಖಂಡ್ರೆಯವರು ಈಗ ಹಾವನೂರ್ ಕಮಿಷನ್ ಪ್ರಕಾರ ಮಾಡುತ್ತೇವೆಂದು ಹೇಳಿದರು. ಯಾವ ಮಟ್ಟಕ್ಕೆ ನಾವು ಹೋಗಿದ್ದೇವೆ. ಯಾವ ತರಹ ನಿಮಗೆ ಕ್ಲಾರಿಟಿ ಇಲ್ಲ, ಯಾವ ಪ್ರಕಾರ ಕೆಲಸ ಮಾಡುತ್ತಿದ್ದೀರಿ ಇದರ ಬಗ್ಗೆ ತಾವು ವಿಚಾರ ಮಾಡಬೇಕು ಇದನ್ನು ಪಕ್ಷಾತೀತವಾಗಿ ವಿಚಾರ ಮಾಡೋಣ ಇಲ್ಲಿ ಒಂದು ರಾಜಕೀಯ ಕ್ಯಾಪಿಟಲ್ ಮಾಡಿಕೊಂಡು ನಿಮ್ಮ ಮೇಲೆ ಅಟ್ಯಾಕ್ ಮಾಡಲು ಹೋಗುತ್ತಿಲ್ಲ ಆದರೆ ಹಿಂದುಳಿದ ಜನಾಂಗಕ್ಕೆ ಮೀಸಲಾತಿ ಕೊಡುವ ವಿಚಾರ ಇಲ್ಲ ಎಂದೂ ನಾನು ಹೇಳುತ್ತಿಲ್ಲ. ಆದರೆ ಪ್ರಾಮಾಣಿಕವಾಗಿ ನೀವು ಒಪ್ಪಿಕೊಳ್ಳಬೇಕಾಗಿದೆ. ತಾವು ಏನು ಬಂಗ್ಲಿಂಗ್ ಮಾಡಿದಿರಿ ಈ ವಿಚಾರದಲ್ಲಿ ಅದರ ಬಗ್ಗೆ ತಾವು ಸ್ಪಷ್ಟವಾಗಿ ನಾಡಿನ ಜನರ ಅದರಲ್ಲೂ ಯುವಕರ ಕ್ಷಮೆ ಕೇಳಬೇಕಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) : ಅಷ್ಟು ಅನ್‌ಫೇರ್ ಆಗಿರಬಾರದು. ಸುಪ್ರೀಂ ಕೋರ್ಟಿನ ತೀರ್ಮಾನದ ಪ್ರಕಾರ, ಮಧ್ಯೆ ಮಧ್ಯೆ ತೀರ್ಮಾನಗಳು ಏನು ಬಂದವು ಅದರ ಪ್ರಕಾರವಾಗಿ ಅನಿವಾರ್ಯವಾಗಿ ಇಂಥ ಪರಿಸ್ಥಿತಿ ಒದಗಿಬಂದಿದೆ. ಆದುದರಿಂದ ಸರ್ಕಾರಕ್ಕೆ ಕ್ಲಾರಿಟಿ ಇಲ್ಲ ಎಂಬುದು ಸರಿಯಲ್ಲ. ಅವರಿಗೆ ತೊಂದರೆ ಕೊಡಬೇಕೆಂಬ ಪ್ರಶ್ನೆ ಅಲ್ಲ. ತಮಗೇ ಗೊತ್ತಿದೆ, ಸುಪ್ರೀಂ ಕೋರ್ಟ್‌ನ ತೀರ್ಪುಗಳು ಎಷ್ಟು ಸಾರಿ ಮಧ್ಯೆ ಬಂತು. ನಮಗೂ ಕೂಡ ಆಶ್ಚರ್ಯವಾಯಿತು. 1986ರ ಆರ್ಡರ್ ಹತ್ತು ದಿನಗಳ ಕಾಲ ಮುಂದಕ್ಕೆ ಹೋಯಿತು ಎಂದು. ನಮಗೆ ನಿಮಗೆ ಸುಪ್ರೀಂ ಕೋರ್ಟಿಗೆ ಬುದ್ಧಿ ಹೇಳುವುದಕ್ಕೆ ಸಾಧ್ಯವೇ? ಅದು ಆಗುತ್ತದೆಯೆ? ಅವರು ಏನು ತೀರ್ಮಾನ ಕೊಡುತ್ತಾರೆ ಅದಕ್ಕೆ ನಾವು ತಲೆಬಾಗಬೇಕಾಗುತ್ತದೆ. ಅದಕ್ಕೆ ನಾವು ಪರಿಹಾರವನ್ನು ಹುಡುಕಿಕೊಳ್ಳಬೇಕಾಗುತ್ತದೆ. ಪರಿಹಾರವನ್ನು ಹುಡುಕಿಕೊಳ್ಳುವಾಗ ಸ್ವಲ್ಪ ತಡವಾಗಬಹುದು. ಮೊನ್ನೆ ಸುಪ್ರೀಂ ಕೋರ್ಟಿನಲ್ಲಿ ಹತ್ತು ದಿನಗಳ ಕಾಲ ಸ್ಟೇ ಮಾಡಿದ ವಿಚಾರವನ್ನು ಕೇಳಿ ತಮಗೆ ಹೇಗೆ ಮನಸ್ಸಿನಲ್ಲಿ ಒಂದು ರೀತಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಯಿತೋ ಅದೇ ರೀತಿ ನಮ್ಮ ಮನಸ್ಸಿನಲ್ಲಿಯೂ ಕೂಡ ಆಗಿದೆ. ಇದನ್ನು ಉದ್ದೇಶಪೂರ್ವಕವಾಗಿ

ಆಗಿದೆ ಎಂದು ಹೇಳತಕ್ಕದ್ದಲ್ಲ. ಅನಿವಾರ್ಯವಾಗಿ ಇಂಥ ಪರಿಸ್ಥಿತಿ ಬಂದಾಗ ಸರ್ಕಾರಕ್ಕೆ ತೊಂದರೆಯಾಗುತ್ತದೆ. ಆದುದರಿಂದ ಯಾರಿಗೆ ಅದರ ಫಲ ದೊರೆಯಬೇಕು ಅವರಿಗೂ ಕೂಡ ತೊಂದರೆಯಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ತಾವು ಏನು ವಿಚಾರ ಹೇಳಿದರಲ್ಲಾ ಆ ತರಹ ಪರಿಸ್ಥಿತಿ ಇದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಆದರೆ ತೊಂದರೆ ಇಲ್ಲದೆ ಇದ್ದರೂ ತೊಂದರೆಯನ್ನು ನಿರ್ಮಾಣ ಮಾಡಿಕೊಂಡಿದೆ ಈ ಸರ್ಕಾರ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಖಾತೆಯ ಸಚಿವರು) : ಕಾರಣವೇನೆಂದರೆ 1986ರ ಆಜ್ಞೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟಿನಲ್ಲಿ ಯಾವ ಅರ್ಜಿ ಕೂಡ ಇರಲಿಲ್ಲ. ಆದಾಗ್ಯೂ ಅರ್ಜಿ ಹಾಕುವುದಕ್ಕೆ ಅವಕಾಶ ಕೊಟ್ಟು ಹತ್ತು ದಿನಗಳವರೆಗೆ ತಡೆಯಾಜ್ಞೆ ಕೊಟ್ಟಿದ್ದಾರೆ.

ಶ್ರೀ ಸಿ. ಬೈರೇಗೌಡ : ನಿಮ್ಮ ಅಡ್ವೋಕೇಟ್ ಜನರಲ್ ಅವರು ಅಲ್ಲಿ ಏನು ಮಾಡುತ್ತಿದ್ದರು ?

Sri P.G.R. Sindhia (ಕನಕಪುರ) : Why we are accusing the Government ಎಂದು ಹೇಳಿದರೆ ನೀವು ಜಿಲ್ಲಾ ಪರಿಷತ್ತಿನ ಚುನಾವಣೆಗಳನ್ನು ಮುಂದೂಡಬೇಕೆಂಬ ಕಾರಣದಿಂದ ಸರ್ಕಾರಿ ರಿಸರ್ವೇಷನ್ ಆಜ್ಞೆಯನ್ನು ಬದಲಾವಣೆ ಮಾಡಿದ್ದರಿಂದ ಇದೆಲ್ಲಾ ಕನ್‌ಫ್ಯೂಷನ್ ಶುರುವಾಗಿರುವುದು. The thread has been picked up from there. How do you say that the Government is not responsible for that? What was the hurry? If you were so sincere about the admissions, if you wanted to do, you should finish it by 1st of August you would have done all these orders in the month of January or February itself. You have been ruling this State for the last four and half years.

ಶ್ರೀ ಎಸ್.ಹೆಚ್. ಕೌಜಲಗಿ (ಬೈಲಹೊಂಗಲ) : ಇವತ್ತಿನ ದಿವಸ ಸುಪ್ರೀಂ ಕೋರ್ಟಿನಲ್ಲಿ ಪ್ರಾಬ್ಲಂ ಕ್ರಿಯೇಟ್ ಆಗಬೇಕಾದರೆ ಅಡ್ವೋಕೇಟ್ ಜನರಲ್‌ರವರು ಕಾರಣರು. ಸರ್ಕಾರದ ಸ್ಟಾಂಡ್ ಏನು ಎಂಬುದನ್ನು ಅವರು ಸರಿಯಾಗಿ ಹೇಳಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ನೀವು ಕನ್‌ವೀನಿಯನ್ಸ್‌ಗೆ ಇದನ್ನು ಬದಲಾವಣೆ ಮಾಡಿಕೊಂಡು ಹೋದಿರಿ. ನಿಮಗೆ ಪೊಲಿಟಿಕಲ್ ವಿಲ್ ಇದ್ದಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಸುಪ್ರೀಂ ಕೋರ್ಟಿನಲ್ಲಿ 10 ದಿನಗಳವರೆಗೆ ಸ್ಟೇ ತರುವುದಕ್ಕೆ ಕಾರಣರು ಯಾರು ? 1986ರ ಆಜ್ಞೆ ಪ್ರಕಾರ ಸುಸೂತ್ರವಾಗಿ ನಡೆದುಕೊಂಡು ಹೋಗುತ್ತಿತ್ತು. ಅದನ್ನು ಇವತ್ತು ಸಿಕ್ಕಿಸಿಕೊಂಡು ಗೊಂದಲ ಮಾಡಿಟ್ಟವರು ನೀವೇ ತಾನೇ ? ಬೆಳಿಗ್ಗೆ ಒಂದು ಸಂಜೆ ಒಂದು ಹೀಗೆ ಮಾರ್ಪಾಡು ಮಾಡಿಕೊಂಡು ಹೋಗಿ ಒಂದು ಪೊಲಿಟಿಕಲ್ ವಿಲ್ ಇಲ್ಲದೆ ನಿಮ್ಮ ಕನ್‌ವೀನಿಯೆನ್ಸ್‌ಗೆ ತಕ್ಕಂತೆ ಜಿಲ್ಲಾ ಪರಿಷತ್ ಚುನಾವಣೆಯನ್ನು ಮುಂದೂಡಬೇಕಾಗಿತ್ತು. ಅದಕ್ಕೆ ಚಿನ್ನಪ್ಪ ರೆಡ್ಡಿ ಆಯೋಗದ ವರದಿಯನ್ನು ತಂದಿಟ್ಟು ಕೊಂಡಿರಿ. ಆದರೆ 6-7 ವರ್ಷಗಳ ಕಾಲ ಅದನ್ನು ಕೋಲ್ಡ್ ಸ್ಟೋರೇಜ್‌ನಲ್ಲಿ ಇಟ್ಟುಕೊಂಡಿದ್ದೀರಿ

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : 5 ವರ್ಷಗಳ ಕಾಲ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಚುನಾವಣೆ ಬಗ್ಗೆ ನೆನಪಾಗಲಿಲ್ಲ. ಆ ಚುನಾವಣೆಯ ಸಂದರ್ಭದಲ್ಲಿ ಮೀಸಲಾತಿ, ಚಿನ್ನಪ್ಪರೆಡ್ಡಿ ವರದಿ ಇವರಿಗೆ ನೆನಪಿಗೆ ಬಂತು. ಅಲ್ಲಿಯವರೆಗೆ ಚಿನ್ನಪ್ಪ ರೆಡ್ಡಿಯ ವರದಿ ನೆನಪಿರಲಿಲ್ಲ, ಮೀಸಲಾತಿ ನೆನಪಿರಲಿಲ್ಲ. ತಾಲ್ಲೂಕು ಪಂಚಾಯತಿ ಜಿಲ್ಲಾ ಪಂಚಾಯತಿ ಚುನಾವಣೆ ಮಾಡಬೇಕೆಂಬ ಪ್ರಶ್ನೆ ಬಂದಾಗ ಇವರಿಗೆ ನೆನಪಾದುದು ಚಿನ್ನಪ್ಪ ರೆಡ್ಡಿ ವರದಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸ್ನೇಹಿತರು ತಪ್ಪು ತಿಳಿದುಕೊಳ್ಳಬಾರದು. ಮಾನ್ಯ ಅಧ್ಯಕ್ಷರೇ, ತಾವು ಯಾರಿಗೆ ಕರೆಯುತ್ತೀರಿ ಅವರಿಗೆ ಮಾತ್ರ ಮಾತನಾಡುವುದಕ್ಕೆ ಅವಕಾಶ ಕೊಡಿ. ಅದರ ಹೊರತಾಗಿ ಯಾರಾದರೂ ಮಾತನಾಡಿದರೆ, ದಯಮಾಡಿ ಅದು ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲವೆಂದು ಹೇಳಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಇಲ್ಲದಿದ್ದರೆ ನಾವು ಇಲ್ಲಿ ಡಿಬೇಟ್ ಮಾಡುವಾಗ ಏನು ಮಾಡಬೇಕು, ಏನು ಹೇಳಬೇಕು. ನನ್ನ ತಕರಾರು ಏನೂ ಇಲ್ಲ. ಯಾರು ಬೇಕಾದರೂ ಅಧ್ಯಕ್ಷರ ಅನುಮತಿ ತೆಗೆದುಕೊಂಡು ಮಾತನಾಡಿ. ಪರ್ಮಿಷನ್ ತೆಗೆದುಕೊಂಡು ಯಾರು ಬೇಕಾದರೂ ಒಂದು ಗಂಟೆ ಮಾತನಾಡಿ. ಈಗ ಅವರೂ ನಿಂತಿರುತ್ತಾರೆ. ನಾನು ನಿಂತಿರುತ್ತೇನೆ, ಇದು ನೋಡಿದರೆ ನಾವು ಯಾವ ಮಟ್ಟಕ್ಕೆ ಹೋಗುತ್ತಿದ್ದೇವೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ವಿರೋಧ ಪಕ್ಷದ ನಾಯಕರು, ಯಾವುದೇ ಒಂದು ಕಾರ್ಯಕಲಾಪ ತೆಗೆದು ನೋಡಿ, ಎಲ್ಲಾ ವಿಷಯದಲ್ಲೂ ಮಧ್ಯದಲ್ಲಿ ಮಾತನಾಡಿದ್ದಾರೆ. ನಾವು ಅದಕ್ಕೆ ವಿರೋಧ ಮಾಡಿದ್ದೇವೇನು? ಯಾವುದೇ ವಿಷಯ ತೆಗೆದುಕೊಳ್ಳಿ. ತಾವು ಮಧ್ಯದಲ್ಲಿ ಮಾತನಾಡಿದಾಗ ನಾವು ವಿರೋಧ ಮಾಡಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಪರ್ಮಿಷನ್ ತೆಗೆದುಕೊಂಡು ಮಾತನಾಡಿದರೆ ಅನುಕೂಲವಾಗುತ್ತದೆ. ಮಾನ್ಯ ಯಡಿಯೂರಪ್ಪನವರು ಕೆಲವು ವಿಚಾರಗಳನ್ನು ಹೇಳಿದರು. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಇವತ್ತು ಚಿನ್ನಪ್ಪರೆಡ್ಡಿ ಆಯೋಗದ ವರದಿಯ ಪ್ರಶ್ನೆ ಇದೆ. ನಾವು ಸರ್ಕಾರದಲ್ಲಿದ್ದಾಗ ಈ ಆಯೋಗ ರಚನೆ ಆಯಿತು. ಈ ಆಯೋಗದ ವರದಿಯನ್ನು ಜಾರಿಯಲ್ಲಿ ತರಬಾರದೆಂದು ಯಾರೂ ವಿರೋಧ ಮಾಡಲಿಲ್ಲ. ಆದರೆ 1989ನೇ ಚುನಾವಣೆಯಲ್ಲಿ ತಾವು ಸಹ ತಮ್ಮ ಮ್ಯಾನಿಫೆಸ್ಟೋದಲ್ಲಿ ಜಾರಿಯಲ್ಲಿ ತರುತ್ತೇವೆಂದು ಹೇಳಿದ್ದೀರಿ. ಆ ವರದಿ ಮಾನ್ಯ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ ಬಂದರೂ ಕೂಡ ಅದನ್ನು 4 ವರ್ಷಗಳ ಕೋಲ್ಡ್ ಸ್ಟೋರೇಜ್‌ನಲ್ಲಿಟ್ಟುಕೊಂಡು ಹಿಂದುಳಿದ ಜನಾಂಗದ ಬಗ್ಗೆ ಯಾವುದೇ ಚಿಂತನೆ ಮಾಡದೆ, ಸಿಂಧ್ಯ ಅವರು ಹೇಳಿದ ಹಾಗೆ ಏಕಾಏಕಿಯಾಗಿ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆ ಮುಂದೆ ಹೋಗಬೇಕಾಗಿತ್ತು ಎಂಬ ದುರುದ್ದೇಶದಿಂದ ತಾವು ಇದನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಿದಿರಿ. ಯಾವ ವರದಿಯನ್ನು 4 ವರ್ಷಗಳ ಕಾಲ ಶೀಥಲಗೃಹದಲ್ಲಿಟ್ಟಿರಿ. ಆ ವರದಿಯನ್ನು ತಾವು ಕೇವಲ ಚುನಾವಣೆ ಮುಂದೆ ಹಾಕಬೇಕೆಂದು ಮಾಡಿದಿರಿ. ಆ ಕೆಲಸವನ್ನು ತಾವು ಆ ಸಮಯದಲ್ಲಿ ಮಾಡದೇ ಇದ್ದಿದ್ದರೆ ಇಷ್ಟು ಅನಾಹುತವಾಗುತ್ತಿರಲಿಲ್ಲ.

ಶ್ರೀ ಜಿ. ರಾಜುಗೌಡ : ಪ್ರಶ್ನೋತ್ತರ ಕಾಲ ಇಲ್ಲವೇ?

ಶ್ರೀಮತಿ ಮೋಟಮ್ಮ : ಪ್ರಶ್ನೋತ್ತರ ಕಾಲವನ್ನು ಏತಕ್ಕೆ ಬದಲಾವಣೆ ಆಗಿದೆ ಎಂಬುದು ಗೊತ್ತಾಗಲಿಲ್ಲ.

ಅಧ್ಯಕ್ಷರು : ಆ ಬಗ್ಗೆ ನಿರ್ಣಯ ತೆಗೆದುಕೊಂಡು ಆಗಿದೆ. ಪ್ರಶ್ನೋತ್ತರವನ್ನು ಆಮೇಲೆ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಸರ್ಕಾರಕ್ಕೆ ಹಿಂದುಳಿದ ಜನಾಂಗಕ್ಕೆ ಮೀಸಲಾತಿ ಕೊಡುವುದರಲ್ಲಿ ಕಮಿಟ್‌ಮೆಂಟ್ ಇಲ್ಲ. ಸರ್ಕಾರಕ್ಕೆ ಆ ಮನೋಧೈರ್ಯ ಏನು ಇರಬೇಕು, ಆ ವಿಲ್ ಏನು ಇರಬೇಕು ಆ ವಿಲ್ ಸರ್ಕಾರಕ್ಕೆ ಇಲ್ಲ. ಕೇವಲ ಚುನಾವಣೆ ಮುಂದೆ ಹೋಗಬೇಕು, ಎಂದು ಚಿನ್ನಪ್ಪ ರೆಡ್ಡಿ ಆಯೋಗ ವರದಿ ಜಾರಿ ಆಗಬೇಕು ಎಂಬುದು ಅಷ್ಟೇ ಸರ್ಕಾರದ ಗುರಿ. ಆ ಪ್ರಕಾರ ಮಾಡುತ್ತಾ ಹೋದರೆ ಯಾವ ಮಟ್ಟಕ್ಕೆ ನಾವು ಹೋಗಬಹುದು. ಕೊನೆಯ ಪಕ್ಷ ಚಿನ್ನಪ್ಪರೆಡ್ಡಿ

ಆಯೋಗದ ವರದಿಯನ್ನು ಜಾರಿಗೆ ತರಬೇಕಾಗಿತ್ತು. ಆದರೆ ಅದನ್ನು ನೀವು ಮಾಡಲಿಲ್ಲ. ಅದು ಡೈಲ್ಯೂಟ್ ಆಯಿತು. ಅದನ್ನು ಡೈಲ್ಯೂಟ್ ಮಾಡಿದವರು ಇವರೇ. ಆಗ ನಮಗೂ ಬುದ್ಧಿ ಗೊತ್ತಾಗಲಿಲ್ಲ. ನಾನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ, ನಮಗೂ ಅದರ ಪರಿಣಾಮ ಗೊತ್ತಾಗಲಿಲ್ಲ. ಡೀಟೈಲ್ ಆಗಿ ನೋಡಿದಾಗ ಸಾಕಷ್ಟು ಡೈಲ್ಯೂಟ್ ಮಾಡಿದ್ದೀರಿ ತಾವು. ಡೈಲ್ಯೂಟ್ ಆದನಂತರ ಅಲ್ಲಿಗೂ ತಾವು ನಿಂತಿಲ್ಲ. ಆ ವರದಿಗೂ ಪುನಃ ತಿದ್ದುಪಡಿ ತಂದಿರಿ. ಏತಕ್ಕೆ? ಇದರ ಅರ್ಥ ಏನೆಂದರೆ ಸರ್ಕಾರದಲ್ಲಿ ಕ್ಲಾರಿಟಿ ಇಲ್ಲ. ಹಾಗಾಗಿ ನಾನು ಹೇಳುತ್ತಿದ್ದೇನೆ ಮತ್ತು ಮಾನ್ಯ ರಂಗನಾಥ್ ಅವರ ಗಮನಕ್ಕೆ ತರುತ್ತಿದ್ದೇನೆ. ಕೇವಲ ಒಂದೆರಡು ತಿಂಗಳಲ್ಲಿ 2-3 ಆದೇಶಗಳು ಹೊರಟರೆ ನಿಮಗೆ ಕ್ಲಾರಿಟಿ ಇಲ್ಲವೆಂದು ಹೇಳಿದರೆ ಏನು ತಪ್ಪಾಗುತ್ತದೆ? ಕ್ಲಾರಿಟಿ ಇಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಏಪ್ರಿಲ್‌ನಲ್ಲಿ ಮಾಡಿದ ಆಜ್ಞೆ ಕೇವಲ ಎರಡು ತಿಂಗಳಲ್ಲಿ ಪುನಃ ತಿದ್ದುಪಡಿಯಾಗುತ್ತದೆಂದರೆ ಇವರಿಗೆ ಕ್ಲಾರಿಟಿ ಇಲ್ಲವೆಂದು ಅರ್ಥ. ಮುಂಚೆ ಮಾಡಿದ್ದು ತಪ್ಪು ಎಂದು ಒಪ್ಪಿಕೊಂಡು ಎರಡನೇ ಆರ್ಡರ್ ಮಾಡಿದ ಹಾಗೆ ಆಯಿತು. ಹಾಗಾಗಿ ಗೊಂದಲ ನಿರ್ಮಾಣವಾಗಿ ಇವತ್ತು ಪ್ರೊಫೆಷನಲ್ ಕಾಲೇಜುಗಳಲ್ಲಿ, ಮೆಡಿಕಲ್ ಆಗಲಿ, ಇಂಜಿನಿಯರಿಂಗ್ ಆಗಲಿ, ಅಲ್ಲಿ ಅಡ್ಮಿಷನ್ ಬಂದ್ ಆಗಿದೆ, ರೆಕ್ರೂಟ್‌ಮೆಂಟ್ ಬಂದ್ ಆಗಿದೆ. ಇದಕ್ಕೆ ಜವಾಬ್ದಾರರು ಯಾರು? ಈ ಜವಾಬ್ದಾರಿಯನ್ನು ತಾವು ತೆಗೆದುಕೊಳ್ಳಬೇಕಾಗುತ್ತದೆ. ಈ ಜವಾಬ್ದಾರಿಯನ್ನು ತಪ್ಪಿಸಿಕೊಂಡು ಹೋಗುವುದಕ್ಕೆ ನಿಮಗೆ ಅಧಿಕಾರ ಇಲ್ಲ. ತಾವು ಮಾರಲಿ ಆಗಿ ಜವಾಬ್ದಾರರು ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ನೀವು ಮಾಡಿಲ್ಲವೆಂದರೆ ಈ ಅನಾಹುತವಾಗುತ್ತಿರಲಿಲ್ಲ. ಇವತ್ತು ತಾವು ಹಿಂದುಳಿದ ಜನಾಂಗಕ್ಕೆ ಮೀಸಲಾತಿ ಕೊಡುವಾಗ ನಿಜವಾಗಿ ಹಿಂದುಳಿದ ಜನಾಂಗಕ್ಕೆ ಬೆನಿಫಿಟ್ ಹೋಗುತ್ತದೆಯೇ ಎಂದು ತಾವು ನೋಡಬೇಕು. ಅದನ್ನು ತಾವು ನೋಡಿಲ್ಲ. ಇವತ್ತು ಸುಪ್ರೀಂ ಕೋರ್ಟ್ ಆಜ್ಞೆ ಮಾಡಿದೆ, ಅದರ ಮೇಲೆ ನಮಗೆ ಕಾಮೆಂಟ್ ಮಾಡುವುದಕ್ಕಾಗುವುದಿಲ್ಲ. ಅದು ಏನಾಯಿತು? ಸುಪ್ರೀಂ ಕೋರ್ಟಿನಲ್ಲಿ ನಮ್ಮ ಅಡ್ವೋಕೇಟ್ ಜನರಲ್ ಅವರು ಏನು ಹೇಳಿದರು? ಚಿನ್ನಪ್ಪರೆಡ್ಡಿ ಆಯೋಗದ ವರದಿಯ ಮೇಲೆ ಆರ್ಡರ್ ಏನು ಇಷ್ಯೂ ಮಾಡಿದ್ದೀರಿ ಏಪ್ರಿಲ್‌ನಲ್ಲಿ ಅದರ ಮೇಲೆ ಇನ್ನೊಂದು ಆರ್ಡರ್‌ನ್ನು ಜುಲೈನಲ್ಲಿ ಮಾಡಿದಿರಿ. ಅದನ್ನು ನಾವು ಜಾರಿಯಲ್ಲಿ ತರುವುದಿಲ್ಲವೆಂದು ಅಡ್ವೋಕೇಟ್ ಜನರಲ್ ಅವರು ಹೇಳಿದರು. ಈ ಪ್ರಕಾರ ಏತಕ್ಕೆ ತಾವು ಸ್ಟ್ಯಾಂಡ್ ತೆಗೆದುಕೊಂಡಿರಿ? ಆ ಪ್ರಕಾರ ಸ್ಟ್ಯಾಂಡ್ ತೆಗೆದುಕೊಂಡು ಪುನಃ ನೀವು ಸುಪ್ರೀಂ ಕೋರ್ಟಿನಲ್ಲಿ ಕನ್‌ಫ್ಯೂಷನ್ ನಿರ್ಮಾಣ ಮಾಡಿದಿರಿ. ಮಾನ್ಯ ಸ್ನೇಹಿತರಾದ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ 1986 order was not before the Supreme Court for consideration or revision or acceptance. Because of the Advocate General's plea that the Chinnappa Reddy Commission orders which you issued should not be implemented.

ಯಾವ ಆರ್ಡರ್ ಇಂಪ್ಲಿಮೆಂಟ್ ಮಾಡಬೇಕು ಅಂದಾಗ ಇದು ಬಂತು.

ಶ್ರೀ ಹಾರ್‍ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಸರ್ಕಾರ ಒಂದು ನಿಲುವನ್ನು ಆಗಲೇ ತೆಗೆದುಕೊಂಡಿದೆ. ಯಾವುದೇ ನೇಮಕಾತಿ ಮತ್ತು ತತ್ಸಂಬಂಧವಾದ ವಿಚಾರಗಳಲ್ಲಿ ಚಿನ್ನಪ್ಪ ರೆಡ್ಡಿ ಆಯೋಗದ ವರದಿ ಒಪ್ಪಿಗೆಯಾಗುವುದಕ್ಕೆ ಮುಂಚೆ ನಾವು ನೋಟಿಫಿಕೇಷನ್ ಹೊರಡಿಸಿದ್ದರೆ ಹಿಂದಿನ ಪ್ರಕಟಣೆಯ ಪ್ರಕಾರ ಕಾರ್ಯಕ್ರಮ ನಡೆಯುತ್ತದೆಂದು ನಾವು ತೀರ್ಮಾನ ತೆಗೆದುಕೊಂಡು ಅದರ ಪ್ರಕಾರ ನೇಮಕಾತಿಗಳೆಲ್ಲಾ ನಡೆಯುತ್ತಿವೆ. ಅನೇಕ ಇಲಾಖೆಗಳಲ್ಲಿ ನೋಟಿಫಿಕೇಷನ್ ಹೊರಡಿಸಿದ್ದ ವಿಭಾಗಗಳಲ್ಲಿ ಹಿಂದಿನ ನಿಯಮಗಳಂತೆ ಮಾಡಿದ್ದಾರೆ. ವಿದ್ಯಾರ್ಥಿಗಳನ್ನು ಆರಿಸುವಂಥ ಕ್ರಮ ಕೂಡ ಚಿನ್ನಪ್ಪ ರೆಡ್ಡಿ ಆಯೋಗದ ವರದಿಯನ್ನು ತಿದ್ದುಪಡಿಯೊಡನೆ

ಒಪ್ಪಿಕೊಳ್ಳುವುದಕ್ಕೆ ಮುಂಚೆಯೇ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ. ಆದುದರಿಂದ ಹಿಂದಿನ ನಿಯಮಾನುಸಾರವಾಗಿ ನಾವು ನೇಮಕ ಮಾಡುತ್ತೇವೆಂದು ಅಡ್ವೊಕೇಟ್ ಜನರಲ್ ಹೇಳಿದ್ದಾರೆ. ಆದುದರಿಂದ ಪರಸ್ಪರ ವಿರೋಧಾಭಾಸವಾಗುವುದಕ್ಕೆ ಯಾವುದೇ ಕಾರಣ ಇಲ್ಲವೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಹೇಳುತ್ತಿದ್ದೆ, ತಮಿಳುನಾಡು ಸರ್ಕಾರ ಮೊದಲಿನಿಂದಲೂ ರಿಸರ್ವೇಷನ್ ಮಾಡಿದೆ. ಆ ಒಂದು ಕಾನ್‌ಸೆಪ್ಟ್ ಡೆವಲಪ್ ಆಯಿತು. ಅದರ ಬಗ್ಗೆ ನೀವು ಏತಕ್ಕೆ ಪ್ರಯತ್ನ ಮಾಡಲಿಲ್ಲ?

ಶ್ರೀ ಕಾಗೋಡು ತಿಮ್ಮಪ್ಪ : ಮಾಡಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಮುಖ್ಯಮಂತ್ರಿಗಳು ಹಲವಾರು ಬಾರಿ ಹೇಳಿದರು ನಾವು ಒಂದು ಬಿಲ್ ತರುತ್ತೇವೆ ಎಂದು.

ಶ್ರೀ ಕಾಗೋಡು ತಿಮ್ಮಪ್ಪ : ತಂದಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ : ಸುಮ್ಮನೆ ಕಣ್ಣೊರೆಸುವುದಕ್ಕೆ.

ಶ್ರೀ ಆರ್.ವಿ. ದೇಶಪಾಂಡೆ : ನೀವು ತರಬಹುದು. ಇವತ್ತು ತರಬಹುದು, ನಾಳೆ ತರಬಹುದು, 7ನೇ ತಾರೀಖು ಮಧ್ಯಾಹ್ನ ತಂದು ಸಂಜೆ ತೆಗೆದುಕೊಂಡು ಹೋಗಬಹುದು. ನಿಮಗೆ ದೈತ್ಯವಾದ ಶಕ್ತಿ ಇದೆ, ಮೆಜಾರಿಟಿ ಇದೆ. ಆದರೆ ನಾನು ಹೇಳುತ್ತಿದ್ದೇನೆ ಆ ತರಹ ಬಿಲ್ ಅಲ್ಲ. ಆ ಬಿಲ್ ತಯಾರು ಮಾಡುವುದಕ್ಕಿಂತ ಮುಂಚೆ ಎಲ್ಲಾ ವಿರೋಧಪಕ್ಷದವರನ್ನು ಕರೆಯಿಸಿ, ಚರ್ಚೆ ಮಾಡಿ ಮೀಸಲಾತಿ ನೀತಿ ಏನಿರಬೇಕು, ನಿಮ್ಮ ಅಭಿಪ್ರಾಯ ಏನು, ಯಾವ ಪ್ರಕಾರ ನಾವು ಮಾಡೋಣ ಎಂದು ಯೋಚನೆ ಮಾಡಬೇಕು. ತಮಿಳುನಾಡು ವಿಚಾರದಲ್ಲಿ ಕೂಡ ಸುಪ್ರೀಂ ಕೋರ್ಟ್ ಒಪ್ಪಿಕೊಂಡಿಲ್ಲ. ಆದರೆ ತಮಿಳುನಾಡಿನಲ್ಲಿ ಯುನಾನಿಮಸ್ ಆಗಿ ಒಂದು ತೀರ್ಮಾನಕ್ಕೆ ಬಂದು ಒಂದು ನಿರ್ಣಯ ಮಾಡಿದರು. ಆ ಪ್ರಕಾರದ ಕಮಿಟ್‌ಮೆಂಟ್ ಬ್ಯಾಕ್‌ವರ್ಡ್‌ಕ್ಲಾಸ್ ಬಗ್ಗೆ ಇದ್ದರೆ ಅವರಿಗೆ ನ್ಯಾಯ ಮಾಡಬೇಕು ಎಂದು ಇದ್ದರೆ ನೀವು ಮಾಡುತ್ತಾ ಇದ್ದಿರಿ. ಸುಯೋ ಮೋಟೊ ನೀವು ಬಿಲ್ ತಂದರೆ ಅದರ ಬಗ್ಗೆ ಏನಿದೆ ಗೊತ್ತಿಲ್ಲ. ಅದರ ಮೆರಿಟ್ ನಮಗೆ ಗೊತ್ತಿಲ್ಲ. ಅದನ್ನು ಸ್ವಾಗತ ಮಾಡುತ್ತೇವೋ ವಿರೋಧ ಮಾಡುತ್ತೇವೋ ಹೇಳಲಿಕ್ಕೆ ಸಾಧ್ಯವಾಗುವುದಿಲ್ಲ. ಅದೇ ಎಲ್ಲರನ್ನೂ ಇನ್‌ವಾಲ್ವ್ ಮಾಡಿ ಪಾಸ್ ಮಾಡುವುದಕ್ಕೆ ನಿಮಗೆ ಸಾಧ್ಯ ಇತ್ತು. ಅದನ್ನು ತಾವು ಮಾಡಲಿಲ್ಲ. ಹಾಗೆ ಇವತ್ತು ಒಂದು ವೇಳೆ ಈ ಮನೆಯಲ್ಲಿ ಆ ಬಿಲ್ ಪಾಸ್ ಆಗದೇ ಇದ್ದರೆ ಅದರ ಜವಾಬ್ದಾರಿ ನಿಮ್ಮ ಮೇಲಿರುತ್ತದೆ. ವಿರೋಧಪಕ್ಷದ ಮೇಲೆ ದೂರು, ಟೀಕೆಗಳು ಬರುವುದಿಲ್ಲ. ಇದನ್ನು ತಾವು ತಿಳಿದುಕೊಳ್ಳಬೇಕು. ಏಕೆಂದರೆ ಹಲವಾರು ಬಾರಿ ತಾವು ಹೇಳಿ ವಿರೋಧಪಕ್ಷದವರನ್ನು ಏತಕ್ಕೆ ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ ಎಂಬುದು ನನಗೆ ಗೊತ್ತಾಗಲಿಲ್ಲ.

ತಾವು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಪ್ರತಿಯೊಂದು ರಾಜ್ಯ ಸರ್ಕಾರವೂ ಪರ್ಮನೆಂಟ್ ಬ್ಯಾಕ್‌ವರ್ಡ್‌ಕ್ಲಾಸ್ ಕಮಿಷನ್ ಮಾಡಬೇಕು ಎಂದಾಯಿತು. ತಾವೂ ಸಹ ಆ ಆದೇಶದ ಪ್ರಕಾರ ಕುದೂರ್ ಅಧ್ಯಕ್ಷತೆಯಲ್ಲಿ ಒಂದು ಆಯೋಗ ಮಾಡಿದಿರಿ. ಸಂತೋಷ. ತಮಗೆ ಬಂದ ಹಲವಾರು ಸಮಸ್ಯೆಗಳು ಆ ಕಮಿಷನ್‌ಗೆ ರೆಫರ್ ಆಗಬೇಕಾಗಿತ್ತು. ಅದು ಬಿಟ್ಟು ಒಂದು ಕಡೆ ಕಮಿಷನ್ ಮಾಡುತ್ತೀರಿ. ಇನ್ನೊಂದು ಕಡೆ you are encroaching upon the right of the Commission by issuing amended orders. What right you have got? You have absolutely no constitutional right to pass these orders when a Permanent Commission is appointed. You should have referred all these matters to the Permanent Backward Classes Commission.

ಅವರ ಅಭಿಪ್ರಾಯ ಏನು ಬರುತ್ತದೆ ಅದರ ಪ್ರಕಾರ ಮಾಡಬೇಕಾಗಿತ್ತು. ಅದು ಮಾಡಲಿಲ್ಲ ತಾವು. you have tried to play with the career of the younger generation.

ಎಲ್ಲರೂ ಶಾಪ ಕೊಡುತ್ತಿದ್ದಾರೆ. ಅದನ್ನು ನೀವು ತೆಗೆದುಕೊಳ್ಳಬೇಕಾಗುತ್ತದೆ. ಸರ್ಕಾರ ಪ್ರತಿಯೊಂದು ಹಂತದಲ್ಲಿ ಇವತ್ತು ವಿಫಲವಾಗಿದೆ. ಸರ್ಕಾರಕ್ಕೆ ವಿಲ್‌ಪವರ್ ಇಲ್ಲ, ಕಮಿಟ್‌ಮೆಂಟ್ ಇಲ್ಲ, ಕ್ಲಾರಿಟಿ ಇಲ್ಲ. ಇದರಿಂದ ಗೊಂದಲವಾಗುತ್ತದೆ. ಇದಕ್ಕೆ ವಿರೋಧ ಪಕ್ಷದವರು ಜವಾಬ್ದಾರಿ ಅಲ್ಲ, ನಾಡಿನ ಜನರು ಜವಾಬ್ದಾರಿ ಅಲ್ಲ, ಯುವಕರು ಜವಾಬ್ದಾರಿ ಅಲ್ಲ, ವಿದ್ಯಾರ್ಥಿಗಳು ಜವಾಬ್ದಾರಿ ಅಲ್ಲ, ನಿಮ್ಮ ಜವಾಬ್ದಾರಿ ಇದೆ. You have bungled the entire matter. ಹಾಗಾಗಿ ಸುಪ್ರೀಂ ಕೋರ್ಟಿನಿಂದ ಏನು ತಡೆಯಾಜ್ಞೆ ಹೊರಟಿದೆ ಅದರ ಎಲ್ಲಾ ಜವಾಬ್ದಾರಿ ಇವರು ತಮ್ಮ ತಲೆಯ ಮೇಲೆ ತೆಗೆದುಕೊಳ್ಳಬೇಕಾಗಿದೆ. ಬೇರೆ ಯಾರೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ಇಡೀ ರಾಜ್ಯದ ಸ್ಟೂಡೆಂಟ್ಸ್ ಕೆರಿಯರ್‌ಗೆ ಎಫೆಕ್ಟ್ ಆಗುತ್ತಿದೆ. ಹಿಂದುಳಿದ ಜನಾಂಗಕ್ಕೆ ಮೀಸಲಾತಿ ಕೊಡಬೇಕೆಂದು ಹೇಳುವವರು ನಾವು. ನಮ್ಮ ಪಕ್ಷ ರಾಷ್ಟ್ರ ಮಟ್ಟದಲ್ಲಿ ರಾಜ್ಯ ಮಟ್ಟದಲ್ಲಿ ಸಾಮಾಜಿಕ ನ್ಯಾಯ ಆಗಬೇಕು, ಹಿಂದುಳಿದ ಜನಾಂಗಕ್ಕೆ ನ್ಯಾಯ ಸಿಗಬೇಕು, ಹಿಂದುಳಿದ ಜನಾಂಗಕ್ಕೆ ಮೀಸಲಾತಿ ಕೊಡಬೇಕು ಎಂದು ಹೇಳಿದವರು ನಾವು ಇದರ ಬಗ್ಗೆ ವಿರೋಧವಾದಾಗ, ಬೇರೆ ಪಕ್ಷದವರು ವಿರೋಧ ಮಾಡಿದಾಗಲೂ ಮಂಡಲ್ ಕಮಿಷನ್ ವರದಿ ಜಾರಿಗೆ ತಂದೆವು. ಅದನ್ನು ನಮ್ಮ ಸರ್ಕಾರ ಮಾಡಿತು. ನೀವೂ ಸಹ ಸಹಾಯ ಮಾಡಲಿಲ್ಲ ಆಗ. ತಾವು ಬಿ.ಜೆ.ಪಿ. ಸ್ನೇಹಿತರ ಜೊತೆ ಶಾಮೀಲಾಗಿ ವಿ.ಪಿ. ಸಿಂಗ್ ಸರ್ಕಾರ ಬೀಳುವುದಕ್ಕೆ ನೀವು ಕಾರಣರಾದಿರಿ. ಮಂಡಲ್ ಕಮಿಷನ್ ರಿಪೋರ್ಟ್ ತಾವು ಅಧಿಕಾರದಲ್ಲಿದ್ದಾಗ ಜಾರಿಗೆ ತರಲಿಲ್ಲ. ಶ್ರೀಮತಿ ಇಂದಿರಾಗಾಂಧಿಯವರು ಅಧಿಕಾರದಲ್ಲಿದ್ದರು. ದಿವಂಗತ ರಾಜೀವ್ ಗಾಂಧಿಯವರು ಅಧಿಕಾರದಲ್ಲಿದ್ದರು. ಆಗ ಜಾರಿಗೆ ತರಲಿಲ್ಲ. ವಿ.ಪಿ. ಸಿಂಗ್ ಸರ್ಕಾರ ಹನ್ನೊಂದು ತಿಂಗಳು ಅಧಿಕಾರದಲ್ಲಿರಬಹುದು, ಒಂದು ವರ್ಷ ಇರಬಹುದು. ಈ ಸರ್ಕಾರ ಇದ್ದಾಗ ಜಾರಿಗೆ ತಂದೆವು. ಜನತಾದಳ ಅಧಿಕಾರದಲ್ಲಿದ್ದಾಗ he had committment. Janata Dal had a committment to bring it though at the cost of our power we lost, we implemented it. ಅದನ್ನು ತಾವು ಮೆಚ್ಚಬೇಕಾಗುತ್ತದೆ ಇವತ್ತು. ಸಾಮಾಜಿಕ ನ್ಯಾಯಕ್ಕೆ, ಬ್ಯಾಕ್‌ವರ್ಡ್ ಕ್ಲಾಸ್‌ಗೆ ಯಾವತ್ತೂ ನಾವು ಬೇಡ ಎಂದು ಹೇಳಿಲ್ಲ. ಆದರೆ ಈಗ ನಿಮಗೆ ಮನೋಧೈರ್ಯ ಇಲ್ಲ. ಬ್ಯಾಕ್‌ವರ್ಡ್ ಕ್ಲಾಸ್‌ಗೆ ಸಹಾಯ ಮಾಡಬೇಕು ಎಂಬ ಮನಸ್ಸಿಲ್ಲ. ಅದನ್ನು ಮಾಡುವಾಗ ಒಂದು ಸಲಹೆಯನ್ನು ಸರ್ಕಾರಕ್ಕೆ ಕೊಡುತ್ತೇನೆ. ಟೋಟಲ್ ಮೆರಿಟ್ ಅನ್ನು ನಾವು ಡೆಮಾಲಿಷ್ ಮಾಡುವುದಕ್ಕಾಗುವುದಿಲ್ಲ. ಮೆರಿಟ್‌ಗೂ ಸಹ ಸ್ವಲ್ಪ ಮಹತ್ವ ಕೊಡಬೇಕಾಗುತ್ತದೆ. ಟೋಟಲ್ ಮೆರಿಟ್ ಡೆಮಾಲಿಷ್ ಮಾಡಿದರೆ ಅದರ ಪರಿಣಾಮ ನಮ್ಮ ಆಡಳಿತ ವ್ಯವಸ್ಥೆ ಮೇಲಾಗಬಹುದು. ಮತ್ತು ಮೆರಿಟ್ ಇರುವ ಯುವಕರ ಮೇಲೆ ಆಗಬಹುದು. ಇದನ್ನೂ ಕೂಡ ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬೇಕು.

ವಿರೋಧಪಕ್ಷದ ನಾಯಕರನ್ನು ಕರೆಯಿಸಿ, ಯಾರು ನಿಜವಾದ ಹಿಂದುಳಿದ ಜನಾಂಗ, ಯಾರಿಗೆ ನಿಜವಾದ ಮೀಸಲಾತಿಯನ್ನು ಕೊಡಬೇಕು ಎಂದು ಕೇಳಬೇಕಾಗಿತ್ತು. ಈ ಬಗ್ಗೆ ವಿರೋಧ ಪಕ್ಷದವರು ಏನೂ ನಿಮ್ಮ ಜೊತೆ ಜಗಳ ಮಾಡುತ್ತಿರಲಿಲ್ಲ. ನಾವೂ ಕೂಡ ಸಲಹೆಯನ್ನು ಕೊಡುತ್ತಿದ್ದೆವು. ಅದನ್ನು ಒಪ್ಪುವುದು, ಬಿಡುವುದು ನಿಮಗೆ ಬಿಟ್ಟಿದ್ದು. ಅದನ್ನೂ ನೀವು ಮಾಡಿಲ್ಲ. ಇವತ್ತು ಎಲ್ಲಾ ವಿಷಯಗಳೂ ಮೆಸ್‌ಅಪ್ ಆಗಿದೆ. ಈ ಗೊಂದಲಕ್ಕೆ ತಾವೂ ಕಾರಣ ಆಗಿದ್ದೀರಿ. ಹುಡುಗರ ಕೆರಿಯರ್ ಹಾಳಾಗಿದೆ. ಅದಕ್ಕೂ ತಾವೇ ಕಾರಣರಾಗಿದ್ದೀರಿ. ಆದ್ದರಿಂದ ಇದು ಇವತ್ತು ಬಹಳ ಮಹತ್ವದ ವಿಷಯ ಇದೆ. ಇದರ ಬಗ್ಗೆ ಚರ್ಚೆ ಮಾಡಲು ತಾವು

ಅವಕಾಶ ಮಾಡಿಕೊಟ್ಟಿರಿ. ಅದಕ್ಕೆ ಧನ್ಯವಾದಗಳು. ಇವತ್ತು ಸುಪ್ರೀಮ್ ಕೋರ್ಟ್ ಈ ವಿಚಾರದಲ್ಲಿ ತಡೆ ಆಜ್ಞೆ ಕೊಟ್ಟಿದೆ. ಮ್ಯಾಟರ್ ಅಲ್ಲಿ ಪೆಂಡಿಂಗ್ ಇರುವುದರಿಂದ ರಿಸರ್ವೇಷನ್ ಪಾಲಿಸಿ ಹೇಗಿರಬೇಕು ಎನ್ನುವ ಬಗ್ಗೆ ಮಾತನಾಡಲು ಆಗುವುದಿಲ್ಲ. ರಿಸರ್ವೇಷನ್ ಹೇಗಿರಬೇಕೆಂದು ನಮ್ಮ ಹತ್ತಿರ ಸಲಹೆಗಳು ಇವೆ. ವಿಚಾರ ಸುಪ್ರೀಮ್ ಕೋರ್ಟ್‌ನಲ್ಲಿ ಇರುವುದರಿಂದ ಇವತ್ತು ಮಾತನಾಡಲು ಆಗುವುದಿಲ್ಲ. ಒಟ್ಟಾರೆ ಇವತ್ತು ನಿಮ್ಮ ಗೊಂದಲದಿಂದ, ನಿಮ್ಮ ಬಂಗ್ಲಿಂಗ್‌ನಿಂದ ಏನು ಪರಿಣಾಮ ಆಗಿದೆ ಅಷ್ಟರ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೇನೆ. ಬಾಕಿ ಕೆಲವು ವಿಚಾರಗಳನ್ನು ಮಾನ್ಯ ಚಂದ್ರೇಗೌಡರು ಹೇಳುತ್ತಾರೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ತೀರಾ ಸೂಕ್ಷ್ಮವಾದ ಮತ್ತು ವಿಶೇಷವಾದ ಪರಿಸ್ಥಿತಿಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ಇದರ ಗಂಭೀರತೆಯನ್ನು ಗಮನಿಸಿ ಈ ಚರ್ಚೆಗೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕೆ ಧನ್ಯವಾದಗಳನ್ನು ಸಮರ್ಪಣೆ ಮಾಡುತ್ತೇನೆ. ನಾನು ನಿನ್ನೆ ಪ್ರಶ್ನೋತ್ತರ ವೇಳೆಯನ್ನು ಮುಂದೂಡಿ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂದಾಗ ನನ್ನ ಮನಸ್ಸಿನಲ್ಲಿ ಇದ್ದ ಭಾವನೆಗಳನ್ನು ತಾವು ಅರ್ಥ ಮಾಡಿಕೊಂಡಿದ್ದೀರಿ ಎಂದು ನನ್ನ ಅನಿಸಿಕೆ. ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಮತ್ತು ಸರ್ಕಾರಿ ಹುದ್ದೆಗಳಲ್ಲಿ ಶೇಕಡಾ 68ರಷ್ಟು ಮೀಸಲಾತಿ ಕಲ್ಪಿಸುವ 1986ನೇ ಮೀಸಲಾತಿ ಆದೇಶವನ್ನು 10 ದಿವಸಗಳ ಕಾಲ ಸ್ಥಗಿತಗೊಳಿಸಬೇಕೆಂದು ಹೇಳಿ 30.8.94ರಂದ ಸರ್ವೋಚ್ಚ ನ್ಯಾಯಾಲಯ ಸರ್ಕಾರಕ್ಕೆ ನಿರ್ದೇಶನ ಮಾಡಿದೆ. ದುರ್ದೈವದ ಸಂಗತಿ ಎಂದರೆ, ನಿನ್ನೆ ಶ್ರೀಮಾನ್‌ದೇವರಾಜ್ ಅರಸ್ ಅವರ ಪುತ್ಥಳಿಯನ್ನು ಪ್ರಧಾನಮಂತ್ರಿಗಳು ವಿಧಾನಸೌಧದ ಹಿಂದೆ ಅನಾವರಣ ಮಾಡಿದರು. ಬಹುಶಃ ಕರ್ನಾಟಕದ ಇತಿಹಾಸದಲ್ಲಿ ಈ ಮೀಸಲಾತಿಯ ರುವಾರಿ ಎಂದು ಹೇಳಿ ಮಾನ್ಯ ದೇವರಾಜ ಅರಸ್ ಅವರನ್ನು ಹೊಗಳಿದ್ದೇವೆ, ಹಾಡಿದ್ದೇವೆ, ಅದೇ ದಿವಸ ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಂದಿದ್ದು ಒಂದು ರೀತಿಯ ವಿಪರ್ಯಾಸ. 1973ರಲ್ಲಿ ಎಲ್ಲಾ ಪ್ರತಿರೋಧಗಳನ್ನು ಮೆಟ್ಟಿ ರಾಜ್ಯಕ್ಕೆ ಒಂದು ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಿದಂತಹ ವರದಿಯನ್ನು ಕೊಟ್ಟು ಈ ಹಿಂದುಳಿದಿರತಕ್ಕ ಸಮಾಜಕ್ಕೆ ಬಾಯಿ ಕೊಟ್ಟಂತಹ, ವ್ಯಕ್ತಿತ್ವವನ್ನು ಕೊಟ್ಟಂತಹ, ಸಾಮಾಜಿಕ ಮತ್ತು ಶೈಕ್ಷಣಿಕ ವ್ಯವಸ್ಥೆಯಲ್ಲಿ ಒಂದು ಜಾಗ ರೂಪಿಸಿಕೊಟ್ಟಂತಹ ಒಬ್ಬ ಮಹಾ ಶಿಲ್ಪಿ. ಅದೇ ದಿವಸ ಸರ್ವೋಚ್ಚ ನ್ಯಾಯಾಲಯದ ತೀರ್ಪು ಇಲ್ಲಿ ಒಂದು ಶೂನ್ಯತೆಯನ್ನು ನಿರ್ಮಾಣ ಮಾಡಿತು. 100 ವರ್ಷಗಳಿಂತ ಹೆಚ್ಚು ಹಿಂದಿನಿಂದ ಈ ಚರ್ಚೆ ರಾಜ್ಯದಲ್ಲಿ, ಅದೂ ಹಳೆಯ ಮೈಸೂರಿನಲ್ಲಿ ಹಾಗೂ ವಿಶಾಲ ಕರ್ನಾಟಕ ಆದಮೇಲೆ ನಡೆದಿವೆ. ನಾನು ಅದರ ಇತಿಹಾಸಕ್ಕೆ ಹೋಗುವುದಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತು ಅಪ್ಪಣೆಕೊಡಿಸಿದ್ದರು. "ಪರಿಶಿಷ್ಟ ಜನಾಂಗ, ಹಿಂದುಳಿದ ಜಾತಿ, ಹಾಗೂ ವರ್ಗ ಮತ್ತು ಅಲ್ಪಸಂಖ್ಯಾತರಿಗೆ ಮೀಸಲಾತಿಯ ಲಾಭ ದಕ್ಕದಂತೆ ತಡೆ ಒಡ್ಡುವ ಯಾರಿಗೇ ಆಗಲಿ ನಾನು ಹಾವಾಗಿ ಕಚ್ಚುತ್ತೇನೆ" ಎಂದು ಸಾರ್ವಜನಿಕವಾಗಿ ಹೇಳಿದ ಮಾತು. ನಾನು ಹಾವಾಗಿ ಕಚ್ಚುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮಾತು. ಈಗ ಸರ್ವೋಚ್ಚ ನ್ಯಾಯಾಲಯಕ್ಕೆ ಹಾವಾಗಿ ಕಚ್ಚುತ್ತೀರೋ? ಸಾಧ್ಯವಿದೆಯೋ ನಿಮಗೇ? ಯಾವ ಭಾಷೆಯನ್ನು ಎಲ್ಲಿ ನಾವು ಬಳಸುವಾಗ ಯಾರಿಗೆ ಬಂದರೆ ಏನು? "ನನ್ನ ಜೀವವನ್ನು - ಒತ್ತೆ ಇಟ್ಟುಬಿಡುತ್ತೇನೆ" ಎಷ್ಟು ಜೀವ ಇದೆ ನಿಮಗೆ ಒತ್ತೆ ಇಡುವುದಕ್ಕೆ? ಈದ್ದಾಗ್ಗೆ ಜೀವ ಒತ್ತೆ ಇಡುತ್ತೀರೋ? ಮೀಸಲಾತಿಗೆ ಜೀವ ಒತ್ತೆ ಇಡುತ್ತೀರೋ? ಹಿಂದುಳಿದವರಿಗೆ ಒತ್ತೆ ಇರುತ್ತೀರೋ? ನಾನು ಪಟ್ಟಿ ಮಾಡುವುದಕ್ಕೆ ಹೋಗುವುದಿಲ್ಲ. ಈ ಮಾತನ್ನು ಅವರು ಸಾರ್ವಜನಿಕವಾಗಿ ಹೇಳಿದರು. ನಾನು ಹಾವಾಗಿ ಕಚ್ಚುತ್ತೇನೆ. ಮಾನ್ಯ ಅಧ್ಯಕ್ಷರೇ, ಇವತ್ತು ಏನು ಸ್ಥಿತಿ

ಇದೆ? 1986ರ ಮೀಸಲಾತಿ ಸಾಧ್ಯ ಇಲ್ಲ, ಇದು ಸರಿಯಾಗಿ ಇಲ್ಲ ಎಂದು, ಏಕೆಂದರೆ ವೆಂಕಟಸ್ವಾಮಿ ಕಮೀಷನ್ ಮತ್ತು ಚಿನ್ನಪ್ಪರೆಡ್ಡಿ ಕಮೀಷನ್ ಎರಡನ್ನೂ ಒಪ್ಪದೇ ಇದ್ದಂಥ ಒಂದು ಕಾಲ.

ಶ್ರೀ ಆರ್.ಎಲ್. ಜಾಲಪ್ಪ : ಈಗ ಮುಖ್ಯಮಂತ್ರಿಗಳು ಅವರ ಬಾಲವನ್ನು ಅವರೇ ಕಚ್ಚಿಕೊಳ್ಳಬೇಕು. ಹಾಳು ಕೋಪ ಬಂದಾಗ ಅದರ ಬಾಲವನ್ನು ಅದೇ ಕಚ್ಚಿಕೊಳ್ಳುತ್ತದಂತೆ. ಹಾಗೆ ಅವರೇ ಅವರ ಬಾಲವನ್ನು ಕಚ್ಚಿಕೊಳ್ಳಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : 1986ರ ಮೀಸಲಾತಿ 8 ವರ್ಷಗಳ ಕಾಲ ನಿರ್ಭಾಧಿತವಾಗಿ ಈ ರಾಜ್ಯದಲ್ಲಿ ಜಾರಿಯಲ್ಲಿ ಇತ್ತು. ನಾನು ಅದರ ಬಗ್ಗೆ, ರಾಮಕೃಷ್ಣ ಹೆಗಡೆಯವರ ಸರ್ಕಾರ ಈ ನಿರ್ಣಯವನ್ನು ತೆಗೆದುಕೊಂಡಿದ್ದಕ್ಕೆ ಕಾರಣಗಳ ವಿಚಾರಣೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ತೀರ್ಮಾನದ ಬಗ್ಗೆ ಈ ಮುಖ್ಯಮಂತ್ರಿಗಳು ಏನು ಮಾಡಿದ್ದಾರೆ, ಈ ಸದನದಲ್ಲಿ ಏನು ಮಾತನಾಡಿದ್ದಾರೆ ಎನ್ನುವುದನ್ನು ಅವರು ಕಡತಗಳ ಮೂಲಕ ಓದಿಕೊಂಡರೆ ಸಾಕು. ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಅನ್ನಬಾರದ್ದನ್ನೆಲ್ಲಾ ಅಂದರು. ಏನು ಈ ಮೀಸಲಾತಿ ಶೇಕಡಾ 68ರಷ್ಟು ಇತ್ತು, ಶೇಕಡಾ 93ರಷ್ಟು ಜನಕ್ಕೆ ಇದನ್ನು ವಿಸ್ತರಿಸಿಬಿಟ್ಟಿದ್ದಾರೆ, ಇದು ಮೀಸಲಾತಿ ಅಲ್ಲ ಎಂದು ಹೇಳಿದರು. ಆದರೆ ತಾವೇ ಹೇಳಿದ ಮಾತನ್ನು ಹಾವಾಗಿ ಕಚ್ಚುತ್ತೇನೆ ಎಂದು ಹೇಳಿದ ಮಾತನ್ನು ತಾವೇ ಅದನ್ನು ನುಂಗಬೇಕಾಯಿತು ಪುನಃ ಹೆಗಡೆಯವರ ವಿರುದ್ಧ ಹೇಳಿದ ಮಾತುಗಳನ್ನು ತಾವೇ ನುಂಗಬೇಕಾಯಿತು. ಹೋಗಲಿ ಸರಿಯಾಗಿಯಾದರೂ ನುಂಗಿದರೋ? 1986ರ ಮೀಸಲಾತಿಯ 13.10.86 ಆದೇಶ ಸಂಖ್ಯೆ 66 ಬಿ.ಸಿ.ಎ. 1986, ಇದು ಆರ್ಡರ್.

ಅದೂ ಕೂಡ ತಾತ್ಕಾಲಿಕ ಎಂದು ಹೇಳಿದ್ದಾರೆ. 3 ವರ್ಷಕ್ಕೆ ಮಾತ್ರ ಎಂದು ಹೇಳಿದ್ದಾರೆ. ಒಂದೇ ಒಂದು ಪ್ಯಾರಾ ತಮ್ಮ ಗಮನಕ್ಕೆ ತರುತ್ತೇನೆ. ಈ ಮೀಸಲಾತಿಯ ಪುಟ 2ರಲ್ಲಿ "ಹೊಸ ಆಯೋಗದ ವರದಿಯನ್ನು ಸ್ವೀಕರಿಸುವವರೆಗೆ ಮತ್ತು 3 ವರ್ಷಗಳನ್ನು ಮೀರದ ಅವಧಿಯವರೆಗೆ ರಾಜ್ಯ ಸರ್ಕಾರವು ಈ ಮುಂದಿನ ಆದೇಶವನ್ನು ಹೊರಡಿಸಿದೆ. "ಇದರ ಪರಿಷ್ಕರಣ 3ವರ್ಷ ಆದ ಮೇಲೆ ಆಗಬೇಕಾಗಿತ್ತು. ಅದು ಆಗಲಿಲ್ಲ. ಆದರೂ ಆಯಾಯ ಕಾಲಕ್ಕೆ ಈ ತಾತ್ಕಾಲಿಕ ಆದಂತಹ ಸರ್ಕಾರದ ಆದೇಶವನ್ನೇ ಮುಂದುವರಿಸಿಕೊಳ್ಳುತ್ತಾ ಬಂದೆವು. ವಸಂತ್ ಕುಮಾರ್ ಅವರ ಕೇಸ್‌ನಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ನೀಡಿದ ಮಾರ್ಗದರ್ಶನದ ಮೇಲೆ ಇದನ್ನು ಮಾಡಿದ್ದೇವೆ ಎಂದು ಹೇಳತಕ್ಕ ಒಂದು ವಿಚಾರ. ಇದು ಆಮೇಲೆ ಸರ್ವೋಚ್ಚ ನ್ಯಾಯಾಲಯ 16.11.92ರಲ್ಲಿ ಅತ್ಯಂತ ಮಹತ್ವವಾದ- ತೀರ್ಪನ್ನು ಈ ರಾಷ್ಟ್ರಕ್ಕೆ ಕೊಟ್ಟಿತು. 9 ಜನ ಸುಪ್ರೀಮ್ ಕೋರ್ಟಿನ ನ್ಯಾಯಾಧೀಶರನ್ನು ಒಳಗೊಂಡಂತಹ ಪೂರ್ಣ ಪೀಠ ಒಂದು ತೀರ್ಮಾನವನ್ನು ಕೊಟ್ಟಿತು. ಶೇಕಡಾ 50ಕ್ಕಿಂತ ಹೆಚ್ಚು ಮೀಸಲಾತಿ ಇರಕೂಡದು ಎನ್ನುವ ಆದೇಶ. ಅದರ ಜೊತೆಗೆ ಕ್ರೀಮಿ ಲೇಯರ್ ಎನ್ನತಕ್ಕಂತಹ ಪದವನ್ನು ಸೇರಿಸಿದರು. ಕೆನೆ ಪದರ. ಈ ಕೆನೆ ಪದರ ಯಾರು ಎನ್ನುವುದನ್ನು ಗುರುತಿಸುವಾಗ, ನಾನು ಆ ಕೆನೆ ಪದರದ ವಿಶ್ಲೇಷಣೆಗೆ ನಾನು ಆಮೇಲೆ ಬರುತ್ತೇನೆ. 16.11.92ರ ಆಧಾರದ ಮೇಲೆ 20.4.94ರಲ್ಲಿ ಗೌರ್ನಮೆಂಟ್ ಆರ್ಡರ್ ನಂ. ಎಸ್‌ಡಬ್ಲ್ಯೂಡಿ 75 ಬಿಸಿಎ 94 ಬೆಂಗಳೂರು, ದಿನಾಂಕ 20.4.94, ಸರ್ಕಾರ ಒಂದು ಆದೇಶ ಹೊರಡಿಸಿತು. ಈ ಆದೇಶ ಹೊರಡಿಸಿದಾಗ ಇದು ಮೋರ್ ಪ್ರೋಗ್ರೆಸೀವ್ ಹಿಂದುಳಿದವರಿಗೆ ಇದರಿಂದ ಕಲಶ ಹಾಕಿಬಿಡುತ್ತೇವೆ ಎನ್ನುವಂತಹ ಮಾತನ್ನು ಆಡಿದರು. ನಾವು ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಆಗಲಿಲ್ಲ. ಏಕೆಂದರೆ ಶಾಸನಸಭೆಯೇ ಸೇರಲಿಲ್ಲ. ಇಲ್ಲಿಟ್ಟು ಚರ್ಚೆ ಮಾಡಿದ್ದರೆ ಅದರ ಮೇಲೆ ಬಹುಶಃ ನಾವು ಸಾಕಷ್ಟು ಬೆಳಕನ್ನು ಚೆಲ್ಲಬಹುದಾಗಿತ್ತು. ಅದು ಸಾಧ್ಯ

ಆಗಲಿಲ್ಲ. ಆಮೇಲೆ 3 ತಿಂಗಳು ಕಳೆಯಲಿಲ್ಲ. ಮತ್ತೊಂದು ಆಜ್ಞೆ ಬಂತು. ಗೌರ್ನಮೆಂಟ್ ಆರ್ಡರ್ ನಂ. ಎಸ್‌ಡಬ್ಲ್ಯುಡಿ 150 ಬಿಸಿಎ 94 ಬೆಂಗಳೂರು ದಿನಾಂಕ 25.7.94. ಇದಕ್ಕೆ 2ನೇ ಆಜ್ಞೆ, ಈ ಆಜ್ಞೆ ಬರುವುದಕ್ಕೆ ಕಾರಣ ಏನು ಎಂದು ಹೇಳಿದರೆ, ಬೆಂಗಳೂರಿನಲ್ಲಿ ಒಕ್ಕಲಿಗರ ವಿರಾಟ್ ಪ್ರದರ್ಶನ 25ನೇ ತಾರೀಖು. 24ನೇ ತಾರೀಖು ಸಾಯಂಕಾಲ ಆತುರ ಆತುರವಾಗಿ ಕುಳಿತುಕೊಂಡು ಮಾಡಿದರು. ಯಾರ ಜೊತೆ ಚರ್ಚೆ ಮಾಡಿದರೋ ಯಾರ ಜೊತೆ ಬಿಟ್ಟರೋ ನನಗೆ ಗೊತ್ತಿಲ್ಲ. ನಾನೂ ಕೆಲವು ಮಾರ್ಗಸೂಚಿಗಳನ್ನು ಹೇಳಿದ್ದೆ, ಏನು ಮಾಡಬಹುದು ಎಂದು. ಆ ವಿಚಾರಕ್ಕೆ ನಾನು ಹೋಗುವುದಿಲ್ಲ. ಅದನ್ನು ಜಾರಿಗೆ ಕೊಟ್ಟರು. 24ನೇ ತಾರೀಖು ರಾತ್ರಿ ತೀರ್ಮಾನ ಆದದ್ದನ್ನು 25ನೇ ತಾರೀಖು ಒಕ್ಕಲಿಗರ ವಿರಾಟ್ ಸಮಾರಂಭದಲ್ಲಿ ಅನೌನ್ಸ್ ಮಾಡುತ್ತಾರೆ. ಎಂದರೆ ಯಾರ್‍ಯಾರು ಪ್ರೊಸೆಷನ್ ಮಾಡುತ್ತಾರೋ ಆಗಾಗ ಒಂದೊಂದು ಆಜ್ಞೆ, ಇದು ಸರ್ಕಾರದ ನೀತಿಯೋ? ಇದು ನಮಗೆ ಗೊತ್ತಾಗಬೇಕು. ಸರ್ಕಾರದ ನೀತಿಗೆ ಏನಾದರೂ ಒಂದು ಆಯಾಮ ಇರಬೇಕು, ಆದರ್ಶ ಇರಬೇಕು, ಉದ್ದೇಶ ಇರಬೇಕು.

11.50 ಎ.ಎಂ

ಈ ಉದ್ದೇಶ ಫಲ ಕೊಡದಿರತಕ್ಕ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂಬ ಕಲ್ಪನೆ ಇರಬೇಕು. ಪರ್‌ಸೆಪ್ಷನ್ ಇಲ್ಲ. ಮೂರೇ ದಿವಸ, ಈ ಆರ್ಡರ್‌ಬಂದು They will go to Supreme Court and say, Sir, we will not implement this order. What type of Government are we running here? Is it a mockery? Through you, I would ask the Government, if they have a little sense of shame, they should have resigned on the same day when they presented the case before the Supreme Court to the effect that will not implement the second order. This is the order.

ನೀವು ಸರ್ಕಾರವನ್ನು ನಡೆಸುತ್ತಿದ್ದೀರಾ? ಆಜ್ಞೆ ಮಾಡಿದಿರಿ, ಹಾಗಾದರೆ ಏನು ಮಾಡಬೇಕು? 1986ರ ಅಕ್ಟೋಬರ್ 11ನೇ ತಾರೀಖಿನ ಮೀಸಲಾತಿಯನ್ನು ವಾಪಸ್ಸ್ ತೆಗೆದುಕೊಂಡಿರಿ, ಅದನ್ನಾದರೂ ಸರಿಯಾಗಿ ಮಾಡಿದ್ದೀರಾ. 1986ರ ಮೀಸಲಾತಿ, 8 ವರ್ಷಗಳ ಅನುಭವದಲ್ಲಿ ಎಲ್ಲಿಯೂ ಪ್ರಶ್ನಾತೀತವಾಗಿ ನಡೆದುಕೊಂಡು ಬಂದಿತ್ತೆ? 1986ರ ಆ ಮೀಸಲಾತಿಯನ್ನು ತಿದ್ದುಪಡಿ ಮಾಡಿದಿರಿ. ಆ ಮೀಸಲಾತಿಯನ್ನು ಹಾಗೆಯೇ ಇಂಪ್ಲಿಮೆಂಟ್ ಮಾಡತಕ್ಕ ಮನಸ್ಸು ಮಾಡಿದ್ದರೆ, ಸರ್ವೋಚ್ಛ ನ್ಯಾಯಾಲಯದ ಪ್ರವೇಶಕ್ಕೆ ಅವಕಾಶವೇ ಇರಲಿಲ್ಲ. 1986ರ ಮೀಸಲಾತಿಯನ್ನು ಮಾಡಿಫೈ ಮಾಡಿದ್ದರಿಂದ, ಸರ್ವೋಚ್ಛ ನ್ಯಾಯಾಲಯ ಪ್ರವೇಶ ಮಾಡಿತು. 68 ಇದ್ದ ಮೀಸಲಾತಿಯನ್ನು 73 ಎಂದು ನೀವೇನು ಮಾಡಿಫೈ ಮಾಡಿದಿರಿ ಅದನ್ನು ವಿದ್ಯಾರ್ಥಿಗಳ ಶಾಲಾ ಪ್ರವೇಶಕ್ಕೆ ಅಷ್ಟೇ ಸೀಮಿತವೆಂದು ಹೇಳಿದಿರಿ. ಹಾಗಾದರೆ ಕೆಲಸಕ್ಕೆ ಅರ್ಜಿ ಹಾಕಿದವರ ಗತಿ ಏನು? What will happen to them. ಕೆಲಸಕ್ಕೆ ಅರ್ಜಿ ಹಾಕಿ, ಲೋಕಸೇವಾ ಆಯೋಗದ ಮುಂದೆ ಕಾಯುತ್ತಿದ್ದಾರೆ. ಈ ಮೀಸಲಾತಿಯಿಂದ ನಮಗೆ ಸಿಗುತ್ತದೆಂದು ಕಾಯುತ್ತಿದ್ದಾರೆ. ಅವರ ಗತಿ ಏನು? ನೀವು ಈ ನಿರ್ಬಂಧವನ್ನು ಹಾಕಿದಿರಿ. ಅದರ ಜೊತೆ ಜೊತೆಯಲ್ಲಿಯೇ, ಹೊಸ ಮಸೂದೆ ತರುತ್ತೇವೆಂದು ಹೇಳಿದಿರಿ. ಆದರೆ, ಆ ಹೊಸ ಮಸೂದೆಯನ್ನು ತರತಕ್ಕ ಪ್ರಯತ್ನ ಮಾಡಿದ್ದೀರಾ, ಮಸೂದೆ ತರಲಿಲ್ಲ. ಇದಕ್ಕೆ ಉತ್ಸಾಹ ಏನು? ಈಗೇನು ತಂದಿದ್ದೀರಿ, ಅದು ನಿಮಗೆ ಬೇಕು. ಆದರೆ, ಇದನ್ನು ತಂದರೆ ಮುಂದೆ ಏನಾಗುತ್ತದೆಂದು ಗೊತ್ತಿಲ್ಲ. ಸ್ವಾಮಿ, ದಕ್ಷಿಣ ಭಾರತದಲ್ಲಿ 150 ವರ್ಷದಿಂದ ಹೋರಾಟ ಮಾಡಿಕೊಂಡು ಬಂದಿರತಕ್ಕ ತಮಿಳುನಾಡು, ಮೀಸಲಾತಿಗಾಗಿ ಎಲ್ಲರೂ ಸೇರಿ ಒಂದು ಶಾಸನ ಮಾಡುತ್ತಾರೆ. ಅವರು ಮಾಡಿದಂಥ ಮೀಸಲಾತಿ, ಶೇಕಡ 69ನ್ನು ಸರ್ವೋಚ್ಛ ನ್ಯಾಯಾಲಯ ಒಪ್ಪುತ್ತದೆಯೇ, ಬಿಡುತ್ತದೆಯೇ

ನಮಗೆ ಗೊತ್ತಿಲ್ಲ. Subject to the scrutiny of the Supreme Court, ಕೇಂದ್ರ ಸರ್ಕಾರ ಒಪ್ಪುತ್ತದೆ, ರಾಷ್ಟ್ರಪತಿಗಳು ಒಪ್ಪುತ್ತಾರೆ ಮತ್ತು ಅಂಕಿತ ಹಾಕುತ್ತಾರೆ.

ಸಂಸತ್ತಿನ ಮುಂದೆ ಅದನ್ನು ಮಂಡಿಸುತ್ತಾರೆ, ಸಂಸತ್ತಿನಲ್ಲಿ ಚರ್ಚೆ ಇಲ್ಲದೆ, ಈ ಮೀಸಲಾತಿ ಒಪ್ಪಿಗೆಯಾಗುತ್ತದೆ. ಅಂದರೆ, ಎಷ್ಟರಮಟ್ಟಿಗೆ ಅವರ ಇನ್‌ಫ್ಲೂಯೆನ್ಸ್ ಇದೆ, ನೋಟಿಫಿಕೇಷನ್ ಇಷ್ಯೂ ಆಗುತ್ತದೆ. ಕೇಂದ್ರದಲ್ಲಿ ನಿಮ್ಮದೇ ಸರ್ಕಾರ ಇದೆ, ನೀವು ಏಕೆ ಈ ಕೆಲಸವನ್ನು ಮಾಡಲಿಲ್ಲ? ಶಾಸನ ಸಭೆಯನ್ನು ಏಕೆ ಕರೆಯಲಿಲ್ಲ? ಇಂತಹ ವಿಚಾರಗಳ ಪ್ರಸ್ತಾಪ ನೀವು ಏಕೆ ಮಾಡಲಿಲ್ಲ? ಜಯಲಲಿತರವರು ಎದ್ದರೆ, ನಿಮ್ಮ ಪ್ರಧಾನ ಮಂತ್ರಿಗಳ ಆಸ್ಥಾನ ನಡಗುತ್ತದೆ. ನೀವು ಎದ್ದರೆ, ಅಲ್ಲಿ ಜವಾನನೂ ನಿಮ್ಮನ್ನು ಲೆಕ್ಕಕ್ಕೆ ಇಟ್ಟುಕೊಂಡಿಲ್ಲ. Please bear it in mind. ನಾವು ಮಾಡಿದ್ದೇವೋ, ಬಿಟ್ಟಿದ್ದೇವೋ. ನಾವು ಮಾಡಿದ್ದು ಸಾಕಷ್ಟು ಹೇಳಿಯೇ ನೀವು ಅಧಿಕಾರಕ್ಕೆ ಬಂದಿದ್ದೀರಿ. ಈಗ ನೀವು ಮಾಡಿದನ್ನು ಹೇಳಬೇಕಾಗಿದೆ. ನೀವು, "ಏತಿ" ಎಂದರೆ, ಪ್ರೇತಿ ಎಂದು ಹೇಳಬೇಡಿ. ವಸ್ತು ಸ್ಥಿತಿಯನ್ನು ಅರ್ಥಮಾಡಿಕೊಂಡು ಪರಿಹಾರವನ್ನು ಹುಡುಕೋಣ.

Sri Kagodu Thimmappa : The Political principle, what you have adopted, you must also remember that.

ಶ್ರೀ ಡಿ.ಬಿ. ಚಂದ್ರೇಗೌಡ : 31ನೇ ತಾರೀಖು ಇಲ್ಲಿ, ನೀವು ಶ್ರೀಮಾನ್ ದೇವರಾಜ ಅರಸು ಅವರ ಪ್ರತಿಮೆಯನ್ನು ಅನಾವರಣ ಮಾಡಿದಿರಿ, ಇಂತಹ ಸಮಯಕ್ಕೇ ಇಲ್ಲಿ ಶೂನ್ಯತೆ ನಿರ್ಮಾಣವಾಗಿದೆ. ಹಿಂದುಳಿದ ವರ್ಗದ ರೂವಾರಿ, ರಾಷ್ಟ್ರಕ್ಕೆ ಮಾರ್ಗದರ್ಶನ ಮಾಡತಕ್ಕಂಥ ಒಂದು ಹಾವನೂರು ಕಮೀಷನ್ ನೇಮಕ ಮಾಡಿ, ಆ ನೇಮಕದ ಆಧಾರದ ಮೇಲೆ ಮೀಸಲಾತಿಯಾಯಿತು. ಕಳೆದ ಅಂದರೆ, 1985-86ರ ವರೆಗೆ ಈ ಮೀಸಲಾತಿಯನ್ನು ಅನುಭವಿಸಿದ ಈ ರಾಜ್ಯದ ಜನರಿಗೆ, ನೀವು ಏನು ಕೊಟ್ಟಿರಿ? ಈಗ 1973ರ ಮೀಸಲಾತಿ ಜನರಲ್ಲ, 1994ರಲ್ಲಿ ಯಾರು ಯಾರು ಮುಂದುವರಿದವರಿದ್ದಾರೆ, ಅವರೆಲ್ಲರೂ ಈಗ ಹಿಂದುಳಿದಿದ್ದಾರೆ. ನಿಮ್ಮ ಆದೇಶದ ಪ್ರಕಾರ, 1968ರಲ್ಲಿ ಹಿಂದುಳಿದವರು ಎಲ್ಲರೂ ಈಗ ಮುಂದುವರಿದಿದ್ದಾರೆ. 1968ರಲ್ಲಿ ಮುಂದುವರಿದವರು, 1994ರಲ್ಲಿ ಹಿಂದುಳಿದವರು. ಇದರಂತೆ ಶಾಸನ ತರುತ್ತೀರಾ? ಒಂದು ವೇಳೆ ಶಾಸನ ತಂದು, ಶಾಸನ ಸಭೆಯಲ್ಲಿ ಚರ್ಚೆ ಮಾಡಿ, ಅಂಗೀಕಾರವಾಯಿತೆಂದು ಇಟ್ಟುಕೊಳ್ಳಿ. ಮುಂದಿನ ಪ್ರಕ್ರಿಯೆ ಏನು? ಮುಂದೆ ರಾಜ್ಯಪಾಲರ ಶಿಫಾರಸ್ ಆಗಿ, ರಾಷ್ಟ್ರಪತಿಗಳು ಒಪ್ಪಬೇಕು. ರಾಷ್ಟ್ರಪತಿಗಳು ಒಪ್ಪಿದಮೇಲೆ, ಸಂಸತ್ತಿನಲ್ಲಿ ರಾಜ್ಯಾಂಗದ 19ನೇ ಷೆಡ್ಯೂಲಿಗೆ ಇದನ್ನು ಸೇರಿಸಬೇಕು. ಇದನ್ನು ಸೇರಿಸಿದ ಮೇಲೂ, subject to the scrutiny of the supreme court. What type of law are you trying to bring here? Are you playing with the people of Karnataka? The Minister, Mr. Yahya, makes a public statement.

ಎಲ್ಲಾ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಆಗಸ್ಟ್ 22ರಿಂದ ಪ್ರವೇಶಗಳು ಪ್ರಾರಂಭವಾಗುತ್ತವೆಂದು ಹೇಳಿದರು. ಆದರೆ, ಈ ಪ್ರವೇಶಗಳು ಆಗಿದೆಯೇ....

ಶ್ರೀ ಎಸ್.ಎಂ. ಯಾಹ್ಯಾ : ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟಿನ ಇಂಟರ್‌ವೆನ್‌ಷನ್ ಇಲ್ಲದಿದ್ದರೆ, ಪ್ರವೇಶಗಳು ಸುಗಮವಾಗಿ ನಡೆದುಕೊಂಡು ಹೋಗುತ್ತಿತ್ತು. ಕಾನೂನು ಮಾಡಿದ್ದು ಸರಿಯೋ ತಪ್ಪೋ ನಾವಲ್ಲ ತೀರ್ಮಾನ ಮಾಡುವವರು ತೀರ್ಮಾನ ಮಾಡುವವರು ಇದ್ದಾರೆ. ಅದು ನಾಳೆಯೋ, ನಾಡಿದ್ದೋ ಗೊತ್ತಾಗುತ್ತದೆ. ಆದರೆ, ನಾವು ಪ್ರಾಮಾಣಿಕತನದಿಂದ, ಈ ಕೆಲಸವಾಗಬೇಕೆಂದು ಹೇಳಿ, 22ನೇ ತಾರೀಖಿನಿಂದ ಪ್ರವೇಶಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೆವು.

ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್, ಇದರ ಪ್ರಕಾರ ತಡೆಯಾಜ್ಞೆ ಕೊಟ್ಟಮೇಲೆ, ನಮಗೆ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಅದಕ್ಕಾಗಿ ಸರ್ಕಾರದ ಕಡೆಯಿಂದ ಯಾವುದೇ ದೋಷವಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮೊದಲು 19ನೇ ತಾರೀಖಿಗೆ ಸುಪ್ರೀಂ ಕೋರ್ಟ್‌ನವರು ಅಡ್ಜರ್ನ್ ಮಾಡಿದರು. 19ನೇ ತಾರೀಖು ತೀರ್ಮಾನವಾಗುತ್ತದೆಂಬ ಹಿನ್ನೆಲೆಯಲ್ಲಿ 22ನೇ ತಾರೀಖಿನಿಂದ ಪ್ರಾರಂಭ ಮಾಡೋಣವೆಂದು ಹೇಳಿದರು. ಆದರೆ, 19ನೇ ಇದ್ದುದ್ದನ್ನು ಸುಪ್ರೀಂಕೋರ್ಟ್‌ನವರು 30ನೇ ತಾರೀಖಿಗೆ ಹಾಕಿದರು.

Sri D.B. Chandregowda : Supreme Court - I should not say that. ಜನರ ದೃಷ್ಟಿಯಲ್ಲಿ, ಸ್ವಲ್ಪ ಶಾಸನದ ಜ್ಞಾನ ಇರತಕ್ಕವರ ದೃಷ್ಟಿಯಲ್ಲಿ, ಸುಪ್ರೀಂಕೋರ್ಟ್ ಶಾಸಕಾಂಗಕ್ಕೂ ಪ್ರವೇಶ ಮಾಡಿದೆ, ಕಾರ್ಯಾಂಗಕ್ಕೂ ಪ್ರವೇಶ ಮಾಡಿದೆ ಎನ್ನುವಂತಾದ್ದೇ ದೋಷ ಕಾರ್ಯಾಂಗಕ್ಕೆ ಪ್ರವೇಶ ಮಾಡುವುದಕ್ಕೇ ತಾವೇ ಅವಕಾಶ ಮಾಡಿಕೊಟ್ಟದ್ದೀರಿ ಎಂಬುದು ನಮ್ಮ ದೂರು. ಕಾರ್ಯಾಂಗಕ್ಕೆ ಪ್ರವೇಶ ಮಾಡುವುದಕ್ಕೆ ಅವಕಾಶ ಎಲ್ಲ ಆಯಿತು? ನಿಮಗೆ ಮೆಡಿಕಲ್ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜಿನ ಮಾಲೀಕರಿಗೆ ಏನು ಸಂಬಂಧವೋ ನನಗೆ ಗೊತ್ತಿಲ್ಲ. ಅವರು ನೂರಾರು ವರ್ಷಗಳಿಂದ ಶಾಲೆಗಳನ್ನು ಕಟ್ಟಿಕೊಂಡು ಬಂದಿದ್ದಾರೆ. ನೀವು ಏನೋ ಮಾಡುವುದಕ್ಕೆ ಹೋಗಿ, ಅವರನ್ನು ಕೆದಕುವುದಕ್ಕೆ ಹೋದಿರಿ. ಅಗಳಿ ಹಾಕುವುದಕ್ಕೆ ಹೋಗಿ, ಏನೋ ಸಿಕ್ಕಿಹಾಕಿಕೊಂಡಿರಿ, ಬಿಡಿಸಿಕೊಳ್ಳುವುದಕ್ಕಾಗಲಿಲ್ಲ. ಈಗ ನಿತ್ಯ ಕೋರ್ಟ್ Court orders came into operation only then. Today there is no contribution by the State Government to develop the private educational institutions.

ಇವೆಲ್ಲಾ ಬೆಳೆದು ಕೊಟ್ಟವೆಯೆಂದು ಹೇಳಿದಮೇಲೆ ಕೊಬ್ಬಿವೆ, ಕತ್ತರಿಸೋಣವೆಂದು ಇವರು ಕಡಿಯುವುದಕ್ಕೆ ತಯಾರಾದರು. ಆದರೆ, ಸರಿಯಾಗಿಯಾದರೂ ಕತ್ತರಿಸಿದರೋ, ನಿಮಗೆ ಕತ್ತರಿಸುವುದು ಗೊತ್ತೇ. ಕತ್ತರಿಸುವುದಕ್ಕೆ ಹೋದರು, ಸಿಕ್ಕಿಹಾಕಿಕೊಂಡರು. ಇದನ್ನು ಬಿಡಿಸಿಕೊಳ್ಳುವುದಕ್ಕೆ ಕೋರ್ಟಿಗೆ ಹೋದರು. I get irritated because at every stage the name an fame of Karnataka has been defamed by this bloody Government. I am sorry to state this, At every stage.

ಹೊಸ ಮಸೂದೆಗೆ ಸಂಸತ್ತಿನ ಅಂಗೀಕಾರ ತೆಗೆದುಕೊಳ್ಳತಕ್ಕ ಅವಕಾಶ ನಿಮಗೆ ಇದೆಯೇ? ಇವತ್ತು ಈ ಮೀಸಲಾತಿ ಬಗ್ಗೆ ಮಸೂದೆ ತರುತ್ತೇವೆಂದು ಹೇಳುವವರು, ಅವರಿಗೆ ಗೊತ್ತಾಗಬೇಕು. ಆರ್ಟಿಕಲ್ 15(4) ರಲ್ಲಿ ಮತ್ತು 16 (4)ರಲ್ಲಿ ಏನು ಹೇಳುತ್ತಾರೆ. 15(4), ರಲ್ಲಿ

> "Nothing in this Article in Clause (2) of Art.29 shall prevent the State from making any special provision for the advancement of the socially and educationally backward."

Why do you need a law? You are authorised under the Constitution.

ಏತಕ್ಕೆ ನಿಮಗೆ ಶಾಸನ ನಾನು ಕೇಳುತ್ತೇನೆ ಏತಕ್ಕೆ ನಿಮಗೆ ಶಾಸನ? Am I prof Nanjunda Swamy? May be, That is my interpretation of law. Even under Art. 16(4) which says :

> (4) "Nothing in this article shall prevent the State from making any provisions for the reservation of appointments or posts in favour of any backward class of citizens which, in the opinion of the State, is not adequately represented in the services under the State".

In built powers ನಿಮಗೆ ಇದೆ. ಇದನ್ನು ಮಾಡಲಿಕ್ಕೆ ಹೊರಟಿದ್ದೀರಿ. ಮಾನ್ಯ ಅಧ್ಯಕ್ಷರೇ, ಮೀಸಲಾತಿಯ ಬಗ್ಗೆ ಇವತ್ತು ಯಾವ ರೀತಿ ಚರ್ಚೆ ಮಾಡಬೇಕೋ ನನಗೆ ಗೊತ್ತಿಲ್ಲ. ಈ ದೇಶದಲ್ಲಿ ರಾಜ್ಯಾಂಗದ ಮೊದಲನೆಯ ತಿದ್ದುಪಡಿಯಾದುದು ಈ ಮೀಸಲಾತಿಯ ಕಾರಣಕ್ಕಾಗಿಯೇ? ಆರ್ಟಿಕಲ್ 15(4) 1992ರಲ್ಲಿ ಮೊದಲನೆಯ ತಿದ್ದುಪಡಿಯಾದುದ್ದು ಈ ಮೀಸಲಾತಿಯ ಕಾರಣಕ್ಕಾಗಿಯೇ? ಆಗ ತಮಿಳುನಾಡಿನಲ್ಲಿ ಇದ್ದಂತಹ ಒಬ್ಬ ವಿದ್ಯಾರ್ಥಿಗೆ ಮೆಡಿಕಲ್ ಸೀಟು ಸಿಕ್ಕಲಿಲ್ಲ ಆತನಿಗೆ ಮೆರಿಟ್ ಇತ್ತು. ಆದರೆ ಅವರು 1845ರಿಂದ ಮೀಸಲಾತಿಯನ್ನು ಅನುಸರಿಸಿಕೊಂಡು ಬಂದಿದ್ದರು. 1895ರಲ್ಲಿ ಅದಕ್ಕೆ ಒಂದು ಶಾಸನ ಮಾಡಿದ್ದರು. ಆ ಕಾರಣ ಮೀಸಲಾತಿ ಮೇಲೆ ಅವರಿಗೆ ಕೊಟ್ಟರು ಅಲ್ಲಿಗೆ ಹೋಯಿತು ಕೇಸ್. A famous judgement came and the Constitution amended under the stewardship of Pandit Jawaharlal Nehru, the then Prime Minister of India. This is the history.

ಮಾನ್ಯ ಅಧ್ಯಕ್ಷರೇ, ಅದು ಸೂಕ್ಷ್ಮವಾಗಿ ಕಡತದಲ್ಲಿ ಇರಬೇಕು. ನಿನ್ನೆ ಮೊನ್ನೆಯದು ಅಲ್ಲ ಮೀಸಲಾತಿ even in Karnataka it dates back to 1880-81, 82 ಮೈಸೂರು ಸಂಸ್ಥಾನ 1799ರಲ್ಲಿ ಟಿಪ್ಪು ಸುಲ್ತಾನನ ಸೋಲಿನಿಂದ ಏನು ಬ್ರಿಟೀಷರಿಗೆ ವರ್ಗಾವಣೆ ಆಯಿತು 1831 ರವರೆಗೆ ಈ ಸಂಸ್ಥಾನ ನೇರವಾಗಿ ಮೈಸೂರು ಅರಸರ ಆಡಳಿತ ವ್ಯಾಪ್ತಿಯಲ್ಲಿ ಇತ್ತು. 1831ರಲ್ಲಿ ಇವರ ಕೈಯಲ್ಲಿ ನಡೆಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ಬ್ರಿಟಿಷರು ನೇರವಾಗಿ ನಡೆಸಲು ಶುರು ಮಾಡಿದರು. 1880-81ಕ್ಕೆ ಅಧಿಕಾರ ವರ್ಗಾವಣೆ ಆಯಿತು. ಆಗ ದಿವಾನರುಗಳು ಇರುತ್ತಿದ್ದರು. ಯಾರು ದಿವಾನರು ಆಂಧ್ರಪ್ರದೇಶದಿಂದ ಬರುತ್ತಿದ್ದರು ಇಲ್ಲ ತಮಿಳುನಾಡಿನಿಂದ ಬರುತ್ತಿದ್ದರು. ಆಗ ಕರ್ನಾಟಕದಲ್ಲಿ ಇದ್ದಂತಹ ಬ್ರಾಹ್ಮಣರು ಹಾಗಾದರೆ ಇಲ್ಲಿ ದಿವಾನರು ಆಗುವಂತಹವರು ಯಾರೂ ಇಲ್ಲವೋ ಯೋಗ್ಯ ಇರುವವರು ಎಂಬ ಪ್ರಸ್ತಾಪ ಪ್ರಾರಂಭ ಮಾಡಿದರು. ಹಳೆಯ ಮೈಸೂರಿನಲ್ಲಿ ಉಳಿದ ಎಲ್ಲಾ ಹಿಂದುಳಿದ ಜನಾಂಗದವರು ಸೇರಿ ಮೈಸೂರಿನಲ್ಲಿ ಮೈಸೂರಿನ ದಿವಾನರೇ ಇರಬೇಕು ಎಂದು ಹೋರಾಟ 1886ರಲ್ಲಿ ಪ್ರಾರಂಭ ಆಯಿತು. ಅದರ ಪರಿಣಾಮ 1912ಕ್ಕೆ ಹಳೆಯ ಮೈಸೂರಿನಲ್ಲಿ ಮೊದಲನೇ ದಿವಾನರಾಗಿ ಸರ್ ಎಂ. ವಿಶ್ವೇಶ್ವರಯ್ಯನವರು ಬಂದರು. ಆಗ ಇವರೆಲ್ಲಾ ಹೋರಾಟ ಮಾಡಿದ ಜನರು ಇದ್ದರಲ್ಲಾ ಸ್ವಾಮಿ, ಆಗ ನಿಮಗೆ ದಿವಾನಿಕೆ ಸಿಕ್ಕಿತು ನಮಗೆ ಜವಾನಿಕಿ ಆದರೂ ಕೊಡಿ ಅಂದರು. ಆಗ ಅವರು ಏನು ಮಾಡಬೇಕು, ಆಗ 1915-16ರ ಮಧ್ಯೆ ಮಿಲ್ಲರ್ ಕಮೀಷನ್ ಬಂತು. A Commission was appointed under the stewardmenship of Miller A Committee was constituted to go into the reservations. He submitted a report in 1918.

1920ಕ್ಕೆ ಮಿಲ್ಲರ್ ಕಮಿಷನ್ ರಿಪೋರ್ಟ್ ಒಪ್ಪಿಕೊಂಡು ಶೇಕಡ 75ರಷ್ಟು ಮೀಸಲಾತಿ ಇದರ ಪರಿಣಾಮ ಇನ್‌ಸ್ಟಿಟ್ಯೂಷನ್ಸ್ ಬಂದವು ಅದು ಒಕ್ಕಲಿಗರದ್ದು ಇರಬಹುದು ಲಿಂಗಾಯಿತರದು ಮತ್ತೊಬ್ಬರದ್ದು ಇರಬಹುದು ಇನ್‌ಸ್ಟಿಟ್ಯೂಷನ್ಸ್ ಬಂದವು. ಇದು ಶೇಕಡ 75ರ ಮೀಸಲಾತಿದೆ. 1956ರಲ್ಲಿ ಇತ್ತು. ವಿಶಾಲ ಮೈಸೂರು ಆದ ಮೇಲೆ ಕರ್ನಾಟಕ ಎಂದು ಆದ ಮೇಲೆ ಒಂದು ಪ್ರಶ್ನೆ ಎದ್ದಿತು. ಮೀಸಲಾತಿಯ ಬಗ್ಗೆ ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಬೇಕು ಎಂದು ಹೇಳಿ ಶ್ರೀಮಾನ್ ನಿಜಲಿಂಗಪ್ಪನವರ ನಾಯಕತ್ವದಲ್ಲಿ ಶ್ರೀ ನಾಗನಗೌಡ ಕಮಿಷನ್ ನೇಮಕ ಮಾಡಿದರು. ಅದು 1961-62 ಇರಬೇಕು. ನಾಗನಗೌಡ ಕಮೀಷನ್ ವರದಿ ಬಂತು. ಆಗಲೇ ಫೇಮಸ್ ಕೇಸ್ ಜಸ್ಟೀಸ್‌ನಲ್ಲಿ ಹೆಗಡೆಯವರು ಕೊಟ್ಟಂಥ ತೀರ್ಪು ಬಂತು.

ಅದಾದಮೇಲೆ 1971ರಲ್ಲಿ ಮೊದಲನೇ ಬಾರಿಗೆ ಶ್ರೀಮಾನ್ ದೇವರಾಜ ಅರಸ್‌ರವರು ಮುಖ್ಯಮಂತ್ರಿ ಆದ ಮೇಲೆ 1971ಕ್ಕೆ ನಾನು ಸಂಸತ್‌ಗೆ ಹೋದೆ ಅವರು 72ರಲ್ಲಿ ದೇವರಾಜ ಅರಸುರವರು ಮುಖ್ಯ ಮಂತ್ರಿ ಆದರು. ಆಗ

ಮೊದಲನೇ ಕಮೀಷನ್ ನೇಮಕ ಆಯಿತು. which examined in detail in depth, ಬ್ಯಾಕ್‌ವರ್ಡ್‌ಕ್ಲ್ಯಾಸ್‌ನ ಸ್ಥಿತಿಗತಿಗಳನ್ನು ಚರ್ಚೆ ಮಾಡುವುದಕ್ಕಾಗಿ it gave a considered recommendations and that was accepted.

ಈ ಚರಿತ್ರೆಯ ಅನುಭವ ಇದ್ದರೆ, ಆಧಾರ ಇದ್ದರೆ ಈ ಹೋರಾಟ ಇಂದು ನಿನ್ನೆಯದು ಅಲ್ಲ ಒಂದು ನೂರ ಹತ್ತು ವರ್ಷಗಳ ಹೋರಾಟ. ಈ ಹೋರಾಟ ಕರ್ನಾಟಕ ರಾಜ್ಯದಲ್ಲಿ ಮೊದಲನೇ ಬಾರಿಗೆ 1994ನೇ ಇಸವಿ ಸ್ವಾತಂತ್ರ ಬಂದ ತಿಂಗಳು ಆಗಸ್ಟ್ 15 ಆ ತಿಂಗಳಲ್ಲಿ ಇವತ್ತು ಶೂನ್ಯತೆ ಏರ್ಪಾಡು ಆಗಿದೆ. 100 ವರ್ಷಗಳ ತರುವಾಯ ಇವತ್ತು ಕರ್ನಾಟಕ ರಾಜ್ಯದಲ್ಲಿ ಶೂನ್ಯ ಹತ್ತು ದಿವಸಗಳ ಕಾಲ ಯಾರೂ ಸತ್ತರೇ ಕೇಳುವವರು ಇಲ್ಲ ಸ್ವಾಮಿ, ನಾನು ಹೇಳುತ್ತೇನೆ ಈ ಹತ್ತು ದಿವಸದಲ್ಲಿ ಒಬ್ಬನಿಗೆ ವಯಸ್ಸು 30 ದಾಟುತ್ತದೆ, ಅವನ ಗತಿ ಏನು? ಅಡ್ಮಿಷನ್ಸ್ ಮಾಡಬೇಕು ಮೆಡಿಕಲ್ ಮತ್ತು ಇಂಜನೀಯರಿಂಗ್ ಕಾಲೇಜುಗಳಿಗೆ ಯಾವ ಆಧಾರ? 86 ಆಧಾರವೋ 94 ಆಧಾರವೋ ಜುಲೈ ಆಧಾರವೋ ಏಪ್ರಿಲ್‌ನಲ್ಲಿ ಆದ ಆರ್ಡರ್ ಆಧಾರವೋ ಸುಪ್ರೀಂ ಕೋರ್ಟ್ ಆರ್ಡರ್ ಆಧಾರವೋ? ಬೀದಿಯಲ್ಲಿರುವ ಮಕ್ಕಳು ಏನು ಮಾಡಬೇಕು? 18 ಸಾವಿರ ಇಂಜನೀಯರ್ ವಿದ್ಯಾರ್ಥಿಗಳಿಗೆ ಪ್ರವೇಶಕ್ಕೆ ಅವಕಾಶ ಇದೆ 3330 ಮೆಡಿಕಲ್ ಕಾಲೇಜುಗಳಿಗೆ ಅವಕಾಶ ಇದೆ. ಡೆಂಟಲ್ ಕಾಲೇಜುಗಳಲ್ಲಿ ಅವಕಾಶ ಇದೆ. ಇನ್ನು ಉಳಿದ ಎಲ್ಲಾ ವೃತ್ತಿ ಶಿಕ್ಷಣಕ್ಕೆ ಅರ್ಜಿ ಹಾಕಿ ಕಾಯುತ್ತ ಇರತಕ್ಕಂಥ ಮಕ್ಕಳ ಗತಿ ಏನು? ಈ ಸ್ಥಿತಿಗೆ ಕಾರಣ ಯಾರು? ಅದಕ್ಕೆ ನಾನು ಹೇಳಿದೆ 86ರ ಜಿ.ಓ. ಅನ್ನು ಯಥಾವತ್ತಾಗಿ ಜಾರಿಗೆ ಕೊಟ್ಟಿದ್ದರೆ ಈ ಸ್ಥಿತಿ ಬರುತ್ತಿರಲಿಲ್ಲ. ಇಲ್ಲಿ ನೀವು ಟಿಂಕರಿಂಗ್ ಮಾಡಿದ್ದರಿಂದಾಗಿ ಸಾವಿರಾರು ಮಕ್ಕಳು ಬೀದಿಗೆ ಬಂದರು. 68 ಇದ್ದದ್ದನ್ನು 73 ಏತಕ್ಕೆ ಮಾಡಿದಿರಿ? ಈ ಟಿಂಕರಿಂಗ್ ಮಾಡಿದ್ದರಿಂದ ಸುಪ್ರೀಂ ಕೋರ್ಟ್ ಪ್ರವೇಶ ಮಾಡಿತು.

Otherwise Supreme court would not have . That is what I feel.

18 ಹೆಕ್ಟೇರ್ ಭೂಮಿ ಏನೇನೋ ಶಾಸನ ತರುತ್ತೇವೆ ಎನ್ನುವುದು, ಹಾವಾಗಿ ಕಚ್ಚುತ್ತೇವೆ ಎನ್ನುವುದು. ಯಾವುದನ್ನು ನೀವು ಕಚ್ಚುವುದು? ಆದ್ದರಿಂದ ಮಾನ್ಯ ಅಧ್ಯಕ್ಷರೇ, ಇಂತಹ ವಿಚಾರದಲ್ಲಿ ವಿಶೇಷವಾಗಿ ಕೆಳಗಡೆ ಇರತಕ್ಕಂಥ ಮಕ್ಕಳ ಸ್ಥಿತಿಗತಿಗಳ ಅರಿವು ಸರ್ಕಾರಕ್ಕೆ ಇರಬೇಕಾಗುತ್ತದೆ. ಅದು ಹೆಗಡೆ ಸರ್ಕಾರವೇ ಮಾಡಿರಲಿ ಮತ್ತೊಬ್ಬರೇ ಮಾಡಿರಲಿ fairly we will accept, yes, go ahead ಎಂದು ಹೇಳಬೇಕಾಗಿತ್ತು.

ಮತ್ತೊಂದು ಮಾತು ಇಲ್ಲ. ಸರ್ವೋಚ್ಛ ನ್ಯಾಯಾಲಯ ಶೇಕಡ 50ರಷ್ಟು ಮೀಸಲಾತಿ ಇದ್ದದ್ದನ್ನು ಶೇಕಡ 80ಕ್ಕೆ ಏರಿಸುವಾಗ ಪರಿಣಾಮಗಳ ಕಲ್ಪನೆ ನಿಮಗೆ ಬರಬೇಕಾಗಿತ್ತು. ಸರ್ವೋಚ್ಚ ನ್ಯಾಯಾಲಯ ಬರೀ ಶೇಕಡ 10 ಪರ್ಸೆಂಟ್ ಮಾತ್ರ ಖಾಸಗೀ ಕಾಲೇಜುಗಳ ಪ್ರವೇಶಕ್ಕೆ ಅವಕಾಶ ಕೊಟ್ಟಿದ್ದೇವೆಂದು ಹೇಳಿದರೆ ನೀವು 15ರಷ್ಟು ಕೊಡುತ್ತೇನೆಂದು ಹೇಳುತ್ತೀರಿ ನಿಮ್ಮ ಅಪ್ಪನ ಮನೆ ಆಸ್ತಿಯೇ ಕೊಡುವುದಕ್ಕೆ? either you wait till the Supreme Court judgement or ....

Sri Kagodu Thimmappa : Mr. Speaker, Sir, Hon'ble Member should not use that type of word.

ನಾವು ಕೂಡ ಹೇಳಬೇಕಾಗುತ್ತದೆ. It must be in tune with Parliamentary conventions.

Sri D.B. Chandre Gowda : I have been in 25 years of Parliamentary life.

ಶ್ರೀ ಕಾಗೋಡು ತಿಮ್ಮಪ್ಪ : ಯಾರು ಯಾರಪ್ಪನ ಮನೆ ಆಸ್ತಿ ಕೊಡುವುದುಕ್ಕೆ ಬರುವುದಿಲ್ಲ.

Sri D.B. Chandre Gowda : This is a idiot Government..

ಶ್ರೀ ಕಾಗೋಡು ತಿಮ್ಮಪ್ಪ : ಆ ಮಾತುಗಳನ್ನು ಅವರು ವಾಪಸ್ಸ್ ತೆಗೆದುಕೊಳ್ಳಬೇಕು. You must withdraw that word.

ಶ್ರೀ ಆರ್. ನಾರಾಯಣ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಚಂದ್ರೇಗೌಡರು ಈ ರೀತಿ ಮಾತನಾಡುತ್ತಾರೆ ಎಂದು ನಾವು ಕನಸ್ಸು ಮನಸ್ಸಿನಲ್ಲಿ ಕಂಡಿರಲಿಲ್ಲ. ಅವರು ಒಳ್ಳೆಯ ಪಾರ್ಲಿಮೆಂಟೇರಿಯನ್ ಅವರ ಬಗ್ಗೆ ಒಳ್ಳೆಯ ಗೌರವ ಇದೆ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಆ ಎರಡು ಪದಗಳನ್ನು ಅವರು ವಾಪಸ್ಸ್ ತೆಗೆದುಕೊಳ್ಳಲೇಬೇಕು

(ಗೊಂದಲ)

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಕೆಲವು ಪದಗಳನ್ನು ಈ ಸದನದಲ್ಲಿ ಉಪಯೋಗಿಸುವುದಕ್ಕೆ ನಾವು ಅವರ ಮೇಲೆ ಹೇಳುವುದು ಅವರು ನಮ್ಮ ಮೇಲೆ ಹೇಳುವುದಕ್ಕೆ ಅವಕಾಶ ಕೊಟ್ಟರೆ ಈ ಸದನದ ಗಾಂಭೀರ್ಯ ಹೊರಟು ಹೋಗುತ್ತದೆ. ಆದ್ದರಿಂದ ಮಾನ್ಯ ಮಿತ್ರರು ಆ ಪದಗಳನ್ನು ವಾಪಸ್ಸ್ ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ಅದಕ್ಕೆ ಕನ್ನಡದ ಅರ್ಥ ಹೇಳಿ ಅದನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿ.

(ಗೊಂದಲ)

Sri D.B. Chandre Gowda : This Government's decision is foolish and idiot. If this is unparliamentary, I leave it to your judgment. I shall not withdraw.

Sri Kagodu Thimmappa : The word 'This is a idiot Government' should be withdrawn.

(ಗೊಂದಲ)

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಅಧ್ಯಕ್ಷರೇ, ಒಂದು ಸಣ್ಣ ಕರೆಕ್ಷನ್ ಅಷ್ಟೇ. ಚಂದ್ರೇಗೌಡರು ಸಿಟ್ಟಲ್ಲಿ ಈಡಿಯಟ್ ಗವರ್ನಮೆಂಟ್ ಎಂದರು, ಇಡಿಯಾಟಿಕ್ ಗವರ್ನಮೆಂಟ್ ಎಂದು ಒಂದು ಸಣ್ಣ ಕರೆಕ್ಷನ್ ಅಷ್ಟೇ. ಕನ್ನಡದಲ್ಲಿ ಮೂರ್ಖ ಸರ್ಕಾರ ಎಂದು ಅದು ಪಾರ್ಲಿಮೆಂಟರಿ ಆಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಕನ್ನಡದಲ್ಲಿ ಕೂಡ ಇನ್ನೂ ಬಹಳ ದೀರ್ಘವಾಗಿ ಚುಚ್ಚಿ ಹೇಳಲು ಅವಕಾಶ ಇದೆ. ಸ್ವಾಭಾವಿಕವಾಗಿ ಸ್ವಲ್ಪ ಪದಗಳನ್ನು ಉಪಯೋಗಿಸುವಾಗ ಸ್ವಲ್ಪ ಗಂಭೀರವಾಗಿ ಉಪಯೋಗಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಯಾವ ಯಾವ ಪದಗಳನ್ನು ಉಪಯೋಗಿಸಬೇಕೆಂಬ ಬಗ್ಗೆ ಒಂದು ನಾಮಫಲಕ ಹಾಕಿದರೆ ಒಳ್ಳೆಯದು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಅಧ್ಯಕ್ಷರೇ, ಚಂದ್ರೇಗೌಡರು ಸಾಮಾನ್ಯವಾಗಿ ಅಂತಹ ಪದಗಳನ್ನು ಉಪಯೋಗಿಸುವುದಿಲ್ಲ. ಅವರು ಯಾವತ್ತೂ ತೂಕವಾಗಿ ಮಾತನಾಡುವವರು ಒಂದೇ ಪ್ರಶ್ನೆ ಎಂದರೆ ಇದೇ ಪದಗಳನ್ನು ವಿರೋಧ ಪಕ್ಷದವರ

ಮೇಲೆ ನಮ್ಮ ಪಕ್ಷದವರು ಹೇಳಿದರೆ ಅದರ ಗಾಂಭೀರ್ಯ ಉಳಿಯುತ್ತದೆಯೇ? ಪಾರ್ಲಿಮೆಂಟರಿ ಹೌದೋ ಅಲ್ಲವೋ ಅದು ಬೇರೆ ಪ್ರಶ್ನೆ. ಆದರೆ ನಾವು ಮಾತನಾಡುವಾಗ ಸ್ವಲ್ಪ ಗಾಂಭೀರ್ಯವನ್ನು ಉಳಿಸಿಕೊಂಡು ಹೋಗಬೇಕು. ಯಾವತ್ತೂ ಅದನ್ನು ಅವರು ಮಾಡುತ್ತಾ ಇದ್ದಾರೆ. ಇವತ್ತು ಸ್ವಲ್ಪ ಸಿಟ್ಟಿದೆ ಎಂದು ಕಾಣುತ್ತದೆ ಅವರ ಮನಸ್ಸಿನಲ್ಲಿ. ಆ ಸಿಟ್ಟಿನ ಕೈಗೆ ಅವರು ಮನಸ್ಸನ್ನು ಕೊಟ್ಟಿದ್ದಾರೆ. ದಯವಿಟ್ಟು ಅವರು ಸ್ವಲ್ಪ ಶಬ್ದಗಳ ಬಳಕೆಯಲ್ಲಿ ಸಾಫನ್ ಆಗಬೇಕೆಂದು ನನ್ನ ಅರಿಕೆ.

ಶ್ರೀಮತಿ ಮೋಟಮ್ಮ : ಚಂದ್ರೇಗೌಡರು ಬಹಳ ಸುಂದರವಾದ ಭಾಷೆಯಲ್ಲಿ ಮಾತನಾಡುತ್ತಾರೆ. ಆದರೆ ಇವತ್ತು ಏಕೆ ಇಷ್ಟು ಕೆಟ್ಟ ಭಾಷೆಯಲ್ಲಿ ಮಾತನಾಡಿದರು ಎಂಬುದು ನನಗೂ ಅರ್ಥವಾಗುತ್ತಿಲ್ಲ. ಬಹಳ ಗೌರವ ಇದೆ ನಿಮ್ಮ ಬಗ್ಗೆ.

ಶ್ರೀ ಡಿ.ಬಿ. ಚಂದ್ರೇಗೌಡ : ಕಾರಣ ಏನೆಂದರೆ ನಿಮ್ಮ ಮಕ್ಕಳು ಯಾರಾದರೂ ಅಲ್ಲಿ ಅರ್ಜಿ ಹಾಕಿಕೊಂಡು ಕಾದಿದ್ದರೆ ಗೊತ್ತಾಗುವುದು. ನಿಮ್ಮ ಮಕ್ಕಳು ಯಾರಾದರೂ ಮೆಡಿಕಲ್ ಇಂಜನಿಯರಿಂಗ್ ಕಾಲೇಜಿಗೆ ಅರ್ಜಿ ಹಾಕಿ ಕಾಯುತ್ತಾ ಬಂದು ಅಪ್ಪ ಅಮ್ಮನ ಎದುರಿಗೆ ಕಣ್ಣೀರು ಹಾಕುತ್ತಾ ಇದ್ದರೆ ಗೊತ್ತಾಗುತ್ತಿತ್ತು. ಇನ್ನೂ ಆ ವಯಸ್ಸಿಗೆ ಬಂದಿಲ್ಲ. ಮೋಟಮ್ಮನವರ ಮಕ್ಕಳು, ಬಂದಾಗ ಹೇಳಿ. ಅಧ್ಯಕ್ಷರೇ, ಆದ್ದರಿಂದ 30ನೇ ತಾರೀಖು ಸರ್ವೋಚ್ಛ ನ್ಯಾಯಾಲಯದಲ್ಲಿ 10 ದಿವಸಗಳ ಕಾಲ ಈ ಆಜ್ಞೆಗಳನ್ನು ತಡೆಹಿಡಿದು ಅಂದರೆ 94ರ ಏಪ್ರಿಲ್ ಆಜ್ಞೆಯನ್ನು...

ಶ್ರೀ ಕಾಗೋಡು ತಿಮ್ಮಪ್ಪ : ನಿಮ್ಮಪ್ಪನ ಗಂಟಾ ಎಂಬುದು ತೆಗೆಯಲೇಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಇದನ್ನು ಜವಾಬ್ದಾರಿ ಸರ್ಕಾರ ಎಂದು ಕರೆಯಬೇಕೇ? ನೀವು ಜವಾಬ್ದಾರಿಯಿಂದ ನಡೆದುಕೊಂಡಿದ್ದೀರಾ?

ಶ್ರೀ ಕಾಗೋಡು ತಿಮ್ಮಪ್ಪ : ಅದನ್ನು ಹೇಳಿ; ಜವಾಬ್ದಾರಿಯಿಂದ ನಡೆದುಕೊಳ್ಳಲಿಲ್ಲ ನೀವು ಮೂರ್ಖರು ಎಂದು ಏನಾದರೂ ಹೇಳಿ.

ಅಧ್ಯಕ್ಷರು : ಚಂದ್ರೇಗೌಡರೇ, ತಾವು ಅದಕ್ಕೆಲ್ಲಾ ಸ್ಕೋಪ್ ಕೊಡಬೇಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಜನತಂತ್ರದ ವ್ಯವಸ್ಥೆಯಲ್ಲಿ ಅಧಿಕಾರಕ್ಕೆ ಬಂದಂಥ ಒಂದು ಸರ್ಕಾರ, ಕ್ಯಾಬಿನೆಟ್‌ಸಿಸ್ಟಂ ಇಟ್ಟುಕೊಂಡಿರುವ ಸರ್ಕಾರ, ಕಲೆಕ್ಟೀವ್ ಜವಾಬ್ದಾರಿ ಜೊತೆಗೆ ಕಲೆಕ್ಟೀವ್ ಜವಾಬ್ದಾರಿ ಜೊತೆಗೆ ಕಲೆಕ್ಟೀವ್ ವಿಸ್ಡಂ ಯೂಸ್‌ಮಾಡಿದ್ದರೆ ಈ ಗೊಂದಲಕ್ಕೆ ಕಾರಣವಾಗುತ್ತಿರಲಿಲ್ಲ. I would ask the Hon'ble both Deputy Chief Minister and the Parliamentary Affairs Minister, if have you used your, collective wisdom let alone other things ಈ ಗೊಂದಲ ಆಗುತ್ತಿರಲಿಲ್ಲ. This is all my concern. I am sorry I got excited because of this. ಈ ತರಹ ಪರಿಸ್ಥಿತಿ ನಿರ್ಮಾಣ ಮಾಡಿ ಸುಪ್ರೀಂ ಕೋರ್ಟ್ ಎಕ್ಸಿಕ್ಯೂಟಿವ್ ಆರ್ಡರ್ ಮಾಡುತ್ತಿದೆ ಎಂದರೆ you have given them the handle. ಆದ್ದರಿಂದ ಈ ಮಸೂದೆ ವಿಚಾರಕ್ಕೆ ಆಮೇಲೆ ಹೋಗೋಣ. ಈ ಮೀಸಲು ನೀತಿಯಿಂದ ಆಗಿರುವ ಗೊಂದಲದಿಂದ, ಒಂದೆಡೆ ರಾಜ್ಯಸರ್ಕಾರದ ದೌರ್ಬಲ್ಯ, ಅಸಮರ್ಥತೆ, ಹೋಲ್ ಈಡಿಯಾಟಿಕ್ ಎಂದು ಹೇಳಿದರಲ್ಲಾ, ಇದು, ಮತ್ತೊಂದು ಕಡೆ ವೃತ್ತಿಶಿಕ್ಷಣ ಪ್ರವೇಶಕ್ಕೆ ಕಾದಿರುವ ವಿದ್ಯಾರ್ಥಿಗಳಿಗೆ ಆತಂಕ, ಅನಾನುಕೂಲ ಹಾಗೂ ಈ ಗೊಂದಲದ ಪರಿಸ್ಥಿತಿಯನ್ನು ನಿವಾರಿಸುವುದಕ್ಕೆ ಸರ್ಕಾರ ಏನಾದರೂ ಆಲೋಚನೆ ಮಾಡಿದೆಯೇ? I don't want to go into the creamy layer because it has a wider connotation. ಸಾಕಷ್ಟು ಅದರ ಬಗ್ಗೆ ಚರ್ಚೆಯಾಗಿದೆ. ಆದರೆ ಒಂದು ಮಾತು ಈ ಕ್ರಿಮಿಲೇಯರ್ ಅನ್ನು ಹೇಳುವಾಗ ಸ್ವಾತಂತ್ರ್ಯನಾಂತರ ಆರ್ಥಿಕ ಸಮಾನತೆ ಮೇಲೆ ಅನೇಕ ಚರ್ಚೆಗಳು ನಡೆದಿವೆ. Karlmarx had said, entire property belongs to this State. ನಾವೆಲ್ಲರೂ

ಆರ್ಥಿಕವಾಗಿ ಸಮಾನರಾಗಬೇಕೆಂದು ವಾದ ಮಾಡಿದರು. ಹಾಗೆಯೇ ನಾವು ಸಮಾಜವಾದಿಗಳು ಸೋಷಿಯಲಿಸ್ಟ್‌ಗಳು ಈ ದೇಶದಲ್ಲಿ ಆರ್ಥಿಕ ಸಮಾನತೆ ಬಗ್ಗೆ ಮಾತನಾಡಿದ್ದೇವೆ. ಈ ವಾದವನ್ನು ಡಾ|| ಅಂಬೇಡ್ಕರ್ ಅವರು ಒಪ್ಪಲಿಲ್ಲ. ಕಾರಣ ಏನೂಂದರೆ ಅಂಬೇಡ್ಕರ್‌ರವರಿಗೆ ಈ ದೇಶದ ಜಾತಿಪದ್ಧತಿಯ ಅನಿಷ್ಠದ ಪೂರ್ಣ ಅರಿವಿತ್ತು. ಜನಜೀವನವನ್ನು ಅರ್ಥಮಾಡಿಕೊಂಡಿದ್ದ ಕಾರಣಕ್ಕೆ ಅವರು ಎಕನಾಮಿಕ್ ಥಿಯರಿಯನ್ನು ಡಿಸ್ಮಿಸ್ ಮಾಡುತ್ತಾರೆ. Don't try to speak about the European economic equality but speak about the caste system prevailing in India ಎಂಬ ಮಾತನ್ನು ಅವರು ಹೇಳುತ್ತಾರೆ. in his Speeches and Writings volume I page 44 ನಲ್ಲಿ ಈ ಮಾತು ಹೇಳುತ್ತಾರೆ. I quote...

ಅಧ್ಯಕ್ಷರು : ಮುಗಿಸಬೇಕಲ್ಲಾ ನೀವು.

ಶ್ರೀ ಡಿ.ಬಿ. ಚಂದ್ರೇಗೌಡ : ಇವರು ಸಾವಿರಾರು ವಿದ್ಯಾರ್ಥಿಗಳನ್ನು ಮುಗಿಸಿದ್ದಾರೆ. ಇವರು ವಿದ್ಯಾರ್ಥಿಗಳ ಜೀವನದ ಜೊತೆಗೆ ಚೆಲ್ಲಾಟ ಆಡುತ್ತಿದ್ದಾರೆ. Alright I leave it at that stage. I don't want to go to that questions or quotations of a great man like Dr. Ambedkar if the House is not prepared to hear. I leave at that. ಆದರೆ ನನ್ನ ಪ್ರಶ್ನೆ ಏನೆಂದರೆ ರಾಜ್ಯಾಂಗದ 15(4) ಮತ್ತು 16(4) ನೇ ವಿಧಿಯಂತೆ ಸ್ವಾತಂತ್ರ್ಯ ನಂತರ ಸುಮಾರು 50 ವರ್ಷಗಳ ಕಾಲ ಕಾದಿದ್ದಾರೆ ಜನ. ಇನ್ನೆಷ್ಟು ದಿನ ಕಾಯಬೇಕು? On a sound footing, and Principles, let us all sit together and take a decision. Don't try to behave like a dictatorial Government go on issuing orders creating problems to the people of Karnataka and the students who are waiting for the admissions.

ಆದ್ದರಿಂದ ಇವತ್ತು ಸರ್ವೋಚ್ಚ ನ್ಯಾಯಾಲಯ ಇಂತಹ ತೀರ್ಮಾನ ಕೊಟ್ಟಿದ್ದರೆ ಅದಕ್ಕೆ ಎರಡು ಕಾರಣ ಇರಬಹುದು. ಒಂದು ಈ ಸರ್ಕಾರ ಮಾಡಿದಂತಹ ಗೊಂದಲ, ಮತ್ತೊಂದು ಕರ್ನಾಟಕದಲ್ಲಿ ಶಾಸನಸಭೆ ಅಧಿವೇಶನ ನಡೆಯುತ್ತಿದೆ. ಈ ಅಧಿವೇಶನದಲ್ಲಿ ಸರ್ವೋಚ್ಚ ನ್ಯಾಯಾಲಯದ ಈ ತಾತ್ಕಾಲಿಕ ಆಜ್ಞೆ ಚರ್ಚೆಗೆ ಬರುತ್ತದೆನ್ನುವ ಕಲ್ಪನೆ, ಏನಾದರೂ ಒಂದು ನಿರ್ಧಾರಕ್ಕೆ ಒಗ್ಗಟಿನಿಂದ ಇವರು ಬರಬಹುದುದೆನ್ನುವ ಅವಕಾಶವನ್ನು ನಮಗೆ ಕೊಟ್ಟಿದ್ದು ಮೂರನೆಯದು this Government has failed to protect the interest of the Karnataka backward classes by presenting their case properly in the Supreme Court. I don't know whether the Advocate General has presented the case or not but this Government has not allowed to present a non-questionable case before the Supreme Court. This Government has not done so. Therefore, ಸರ್ಕಾರ ಕ್ಷಮೆ ಕೇಳಬೇಕೆಂಬ ನಾಟಕಕ್ಕೆ ನಾನು ಹೋಗುವುದಿಲ್ಲ. ಮೂರು ತಿಂಗಳಲ್ಲಿ ಜನ ತೀರ್ಮಾನ ಮಾಡುತ್ತಾರೆ. ಅವರು ಮತ್ತೆ ನೀವೇ ಇರಬೇಕೆಂದು ಹೇಳಿದರೆ ಸರ್ವಜ್ಞರಾಗಿ ನೂರ್ಕಾಲ ಬದುಕಿ ನಮ್ಮದೇನಿಲ್ಲ. ಆದರೆ ಇಂತಹ ಗೊಂದಲಗಳನ್ನು ನಿರ್ಮಾಣ ಮಾಡಿ ಪ್ರಜಾತಂತ್ರದ ವ್ಯವಸ್ಥೆಗೆ ಹಾಗೂ ಅಡಿಗಲ್ಲಿಗೆ ನೀವು ಕೊಡಲಿಪೆಟ್ಟುಹಾಕಿ ಜನತಂತ್ರದ ಮೂಲಸತ್ವವಾಗಿರುವ ಕಲೆಕ್ಟೀವ್ ಡಿಸಿಶನ್ಸ್ ಡಿಸ್ಕಷನ್ಸ್ ಇವುಗಳ ಕತ್ತು ಹಿಸುಕಿ ಅಪ್ರಬುದ್ಧರಾಗಿ ತೀರ್ಮಾನ ತೆಗೆದುಕೊಂಡು ಸಮಸ್ಯೆಗಳನ್ನು ನಿರ್ಮಾಣ ಮಾಡಬೇಡಿ ಎಂದು ನಿಮ್ಮನ್ನು ಪ್ರಾರ್ಥನೆ ಮಾಡಿ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

12.20 ಪಿ.ಎಂ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ಇವತ್ತು ಈ ಮೀಸಲು ನೀತಿಯ ಬಗ್ಗೆ ನಮ್ಮ ಕರ್ನಾಟಕ ರಾಜ್ಯದ ನೀತಿ ಸರಿಯಿಲ್ಲವೆಂದು

ಸರ್ವೋಚ್ಚ ನ್ಯಾಯಾಲಯ 10 ದಿವಸ ಈ ಕೆಲಸವನ್ನು ಸ್ಥಗಿತಮಾಡಿರುವುದರಿಂದ ಪ್ರಶ್ನೋತ್ತರ ಸಭೆಯನ್ನು ಮುಂದೂಡಿ ಇದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಪ್ರಾರಂಭದಲ್ಲಿಯೇ ನಾನು ಒಂದು ಮಾತನ್ನು ಹೇಳಲು ಇಚ್ಛೆ ಪಡುತ್ತೇನೆ. ಸಣ್ಣ ಪುಟ್ಟ ಮಾರ್ಪಾಡುಗಳನ್ನು ಸರಿಪಡಿಸಿ ಒಂದು ವರದಿಯನ್ನು ಜಾರಿಗೆ ತರಬೇಕೆಂಬ ಪ್ರಾಮಾಣಿಕ ಕಳಕಳಿಯನ್ನು ಈ ಸರ್ಕಾರ ಹೊಂದಿದ್ದರೆ ಎಷ್ಟು ದಿವಸ ಬಂದ ವರದಿಗಳಲ್ಲಿ ಚಿನ್ನಪ್ಪರೆಡ್ಡಿ ವರದಿ ಉತ್ಕೃಷ್ಟವಾದಂಥದ್ದು ಎಂದು ಎಲ್ಲರೂ ಹೇಳುವಂಥದ್ದನ್ನು ಕೇಳಿದ್ದೇವೆ. ಈ ಸದನದ ಅಭಿಪ್ರಾಯವೂ ಸಹ ಇದು ಎಂದು ನಾನು ತಿಳಿದುಕೊಂಡಿದ್ದೇನೆ. ಈ ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಜಾರಿಗೆ ತರಬೇಕೆಂಬ ಕಳಕಳಿ ನಿಮಗಿದ್ದು, ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಮ್ಮ ಸಲಹೆಯನ್ನು ತೆಗೆದುಕೊಂಡು ಅದನ್ನು ಜಾರಿಗೊಳಿಸಲು ಪ್ರಯತ್ನವನ್ನು ನೀವು ಮಾಡಿದ್ದರೆ, ನಿಮ್ಮ ರಾಜಕೀಯ ಬೇಳೆಯನ್ನು ಬೇಯಿಸಿಕೊಳ್ಳುವುದಕ್ಕೆ ಇದನ್ನು ದುರುಪಯೋಗ ಮಾಡಿಕೊಳ್ಳದೇ ಇದ್ದಿದ್ದರೆ ಇವತ್ತು ಈ ಗೊಂದಲ ಬರುತ್ತಾ ಇರಲಿಲ್ಲ. ನೀವು ಇವತ್ತು ಸಚಿವ ಸಂಪುಟದ ಒಂದು ಉಪ ಸಮಿತಿಯನ್ನು ರಚನೆ ಮಾಡಿದ್ದೀರಿ. ಈ ವರದಿ ನಿಮ್ಮ ಕೈಗೆ ಸಿಕ್ಕಿದ್ದು ದಿನಾಂಕ 7-4-90. ಅವತ್ತಿನಿಂದ ಇವತ್ತಿನವರೆಗೆ ಚಿನ್ನಪ್ಪ ರೆಡ್ಡಿ ಆಯೋಗದ ವರದಿಯನ್ನು ಜಾರಿಗೆ ತರುತ್ತೇವೆ, ತರುತ್ತೇವೆಂದು ಮಾಡಿ, ಜನರಲ್ಲಿ ಗೊಂದಲ ಉಂಟು ಮಾಡುವ ಒಂದು ಪ್ರಯತ್ನ ಮಾಡಿ ಈ ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯ ಸಿಕ್ಕದೆ ಇರುವಂಥ ಕೆಲಸ ಮಾಡಿದಿರಿ. ಇವತ್ತು ಹಿಂದುಳಿದ ವರ್ಗಗಳಿಗೆ ಈ ಮೀಸಲಾತಿಯ ಲಾಭ ಮಾಡಿಕೊಳ್ಳುವುದಕ್ಕೆ ಆಗದೇ ಇದ್ದರೆ, ಅದಕ್ಕೆ ನಿಮ್ಮ ಸರ್ಕಾರ ಸಂಪೂರ್ಣ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಅದಕ್ಕೆ ನಾನು ಹೇಳಿದ್ದುದು ನಿಮ್ಮ ಸರ್ಕಾರಕ್ಕೆ ಒಂದು ಪೊಲಿಟಿಕಲ್ ವಿಲ್ ಇಲ್ಲ; ಒಂದು ಕಮಿಟ್‌ಮೆಂಟ್ ಇಲ್ಲ. ನಿಮ್ಮ ಅನುಕೂಲಕ್ಕೆ ತಕ್ಕಂತೆ ಅನುಕೂಲ ಸಿಂಧು ರಾಜಕಾರಣ ಮಾಡುವುದಕ್ಕೆ ಹೋಗಿ ಈ ರಾಜ್ಯದ ಲಕ್ಷಾಂತರ ಯುವಕ ಯುವತಿಯರನ್ನು ಯಾರು ಟೆಕ್ನಿಕಲ್ ಕೋರ್ಸ್ ಅಭ್ಯಾಸ ಮಾಡಬೇಕು ಎಂದಿದ್ದಾರೆ, ಅಂಥವರನ್ನು ಗೊಂದಲದಲ್ಲಿ ಸಿಕ್ಕಿಸುವಂಥ ಪ್ರಯತ್ನವನ್ನು ನೀವು ಮಾಡಿಬಿಟ್ಟಿರಿ. ಮೀಸಲಾತಿ ನೀತಿ 13-10-86ಕ್ಕೆ ಬಂತು. ಯಾವುದೇ ಅಡಚಣೆ ಇಲ್ಲದೇ ಈ ಮೀಸಲಾತಿ ನೀತಿ 20-4-94ವರೆಗೆ 7 ವರ್ಷ ಜಾರಿಯಲ್ಲಿತ್ತು. ಹಾಗಾದರೆ ಈ ಗೊಂದಲವನ್ನು ಏಕೆ ಉಂಟುಮಾಡಿದಿರಿ? ಚಿನ್ನಪ್ಪ ರೆಡ್ಡಿ ವರದಿ ಯಾವಾಗ ಜ್ಞಾಪಕಕ್ಕೆ ಬಂತು? ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿ 18 ತಿಂಗಳು ಕಳೆದ ನಂತರ ಈ ವರದಿ ಇದ್ದಕಿದ್ದ ಹಾಗೆ ಅವರಿಗೆ ಜ್ಞಾಪಕಕ್ಕೆ ಬಂತು. ನೀವು ಏನು ಹೇಳಿದಿರಿ? ತಾಲ್ಲೂಕು ಪಂಚಾಯಿತಿ ಚುನಾವಣೆಗಳನ್ನು ಮಾಡಿದ್ದೀರಿ. ಎಷ್ಟು ಜನ ಚುನಾಯಿತ ಪ್ರತಿನಿಧಿಗಳು ಅಲ್ಲಿ ಸ್ಪರ್ಧೆ ಮಾಡಿದರು? ಸುಮಾರು 8200 ಕ್ಕೂ ಹೆಚ್ಚು ಜನ ಗ್ರಾಮ ಪಂಚಾಯಿತಿಗಳಲ್ಲಿ ಚುನಾಯಿತ ಪ್ರತಿನಿಧಿಗಳಾಗಿ ಕೆಲಸ ಮಾಡುವಂಥ ಒಂದು ಚುನಾವಣೆಯನ್ನು ನೀವು ಮಾಡಿದಿರಿ. ಆ ಸಮಯದಲ್ಲಿ ಚಿನ್ನಪ್ಪ ರೆಡ್ಡಿ ವರದಿ ನಿಮಗೆ ಜ್ಞಾಪಕಕ್ಕೆ ಬರಲಿಲ್ಲ. ಹಿಂದುಳಿದವರು ಸಮಾಜಿಕ ನ್ಯಾಯಸಿಗಬೇಕು ಎನ್ನುವುದು ಜ್ಞಾಪಕಕ್ಕೆ ಬರಲಿಲ್ಲ. ಆದರೆ ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಚುನಾವಣೆ ನೋಟಿಫಿಕೇಶನ್ ಹೊರಡಿಸಿದ ಮೇಲೆ ಆ ಚುನಾವಣೆ ಆಗದಂತೆ ನೋಡಿಕೊಳ್ಳುವುದೊಕ್ಕೋಸ್ಕರ ಈ ಚಿನ್ನಪ್ಪರೆಡ್ಡಿ ವರದಿಯನ್ನು ತಿರುಚಿ ನಿಮ್ಮದೇ ಆದ ರೀತಿಯಲ್ಲಿ ಅದನ್ನು, ವೀರಪ್ಪಮೊಯಿಲಿ ವರದಿ ಎಂದು ಕರೆಯುತ್ತೀರೋ ಅಥವಾ ಕಾಂಗ್ರೆಸ್ ವರದಿಯೆಂದು ಕರೆಯುತ್ತಾರೋ, ಅದನ್ನು ಜಾರಿಗೆ ತರುವ ಪ್ರಯತ್ನ ಮಾಡಿದಿರಿ; ಎಲ್ಲಾ ಜಿಲ್ಲಾಧಿಕಾರಿಗಳು ಹೇಳಿದರು ನೋಟಿಫಿಕೇಷನ್ ಹೊರಡಿಸಿ ಆಗಿದೆ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆ ಹೊಸ ಮೀಸಲಾತಿ ನೀತಿಯ ಅನ್ವಯ ನಾವು ಮಾಡುವುದಕ್ಕೆ ಸಿದ್ಧರಿದ್ದೇವೆ

ಎಂದು ಹೇಳಿದರು. ಆದರೂ ಸಹ ನಿಮ್ಮ ಗ್ರಾಮೀಣ ಅಭಿವೃದ್ಧಿ ಸಚಿವರಾದ ಶ್ರೀ ಘೋರ್ಪಡೆಯವರು ಇಲ್ಲಿ ಕುಳಿತಿದ್ದಾರೆ. ಅವರು ಏನು ಹೇಳಿದರು? ನೀವು ಈ ಚಿನ್ನಪ್ಪರೆಡ್ಡಿ ವರದಿಯನ್ನು ಈ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆ ಸಂದರ್ಭದಲ್ಲಿ ಜಾರಿಗೆ ತರುತ್ತಿರತಕ್ಕದ್ದು, ಆ ಚುನಾವಣೆ ಆಗದಂತೆ ನೋಡಿಕೊಳ್ಳುವ ಒಂದು ಷಡ್ಯಂತ್ರ ಇದರಲ್ಲಿ ಅಡಗಿದೆ. ಅದಕ್ಕಾಗಿ ಇದನ್ನು ಮಾಡಬೇಡಿ. ಅಕಸ್ಮಾತ್ ಅದನ್ನು ಜಾರಿಗೆ ತಂದರೂ ಸಹ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ನಾನು ಮಾಡುವುದಕ್ಕೆ ಸಿದ್ಧನಾಗಿದ್ದೇನೆ. ನನಗೆ ಫ್ರೀಹ್ಯಾಂಡ್ ಕೊಡಿ ಎಂದು ಹೇಳಿದರು. ಪ್ರಾಮಾಣಿಕವಾಗಿ ಕೆಲಸ ಮಾಡಿದಂಥ ಶ್ರೀ ಘೋರ್ಪಡೆರವರನ್ನು ಬಲಿ ತೆಗೆದುಕೊಂಡಿರಿ, ಚಿನ್ನಪ್ಪ ರೆಡ್ಡಿ ಆಯೋಗದ ವರದಿ ನೆಪದಲ್ಲಿ. ಸ್ವಾಮಿ, ನಾನು ನಿಮ್ಮನ್ನು ಕೇಳುತ್ತೇನೆ, ತಾವು ನಿವೃತ್ತ ನ್ಯಾಯಧೀಶರಾದ ಕುದೂರುರವರನ್ನು ನೇಮಕ ಮಾಡಿದಿರಿ, ಏಕೆ ಸ್ವಾಮಿ. ಈ ವರದಿಯನ್ನು ಜಾರಿಗೆ ತಂದ ಮೇಲೆ ಈ ವರದಿಯ ಚೌಕಟ್ಟಿನಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಮೀಸಲಾತಿ ಕೊಡಬೇಕು ಎನ್ನುವುದರ ಬಗ್ಗೆ ಒಬ್ಬ ನಿವೃತ್ತ ನ್ಯಾಯಾಧೀಶರ ಅವಶ್ಯಕತೆ ಇತ್ತೇ? ಯಾರ ಕಣ್ಣಿಗೆ ಮಣ್ಣೆರೆಚುವುದಕ್ಕೆ ಪ್ರಯತ್ನ ಮಾಡುತ್ತೀರಿ? ಈ ರಾಜ್ಯದ ಜನ ಇದನ್ನು ನಂಬಿ ಕುಳಿತಿದ್ದಾರೆ; ನಿಮ್ಮ ಗೋಸುಂಬೆ ಬಣ್ಣ ಬಯಲಾಗುವುದಿಲ್ಲವೆಂದು ತಾವು ಏನು ಭಾವಿಸಿದ್ದೀರಾ? ನಾನು ಕೇಳುತ್ತೇನೆ, ಈ ನಿಮಿಷಕ್ಕೆ ಕುದೂರು ಆಯೋಗವನ್ನು ರದ್ದು ಮಾಡಿ, ಸಾಮಾನ್ಯ ಜನ ಕೊಡುವಂಥ ತೆರಿಗೆ ಹಣವನ್ನು ಇದಕ್ಕಾಗಿ ಖರ್ಚು ಮಾಡಲು ನಾವು ಸಿದ್ಧರಿಲ್ಲ, ಅದರ ಅಗತ್ಯವಿಲ್ಲ, ಏಕೆಂದರೆ ಚಿನ್ನಪ್ಪರೆಡ್ಡಿ ವರದಿ ನೆನೆಗುದಿಗೆ ಬಿದ್ದಿರುವಾಗ, ಏತಕ್ಕೆ 86ರ ಮೀಸಲಾತಿಯ ನೀತಿಗೆ 10 ದಿವಸ ತಡೆಯಾಜ್ಞೆ ಕೊಟ್ಟಿರಬೇಕಾದರೆ ಇದರ ಅಗತ್ಯ ಏನಿದೆ? ಅದಕ್ಕಾಗಿ ತಾವು ಉತ್ತರ ಕೊಡುವಾಗ ಹೇಳಬೇಕಾಗುತ್ತದೆ. ಮತ್ತು ನನ್ನ ಸ್ಪಷ್ಟ ಅಭಿಪ್ರಾಯ ಈ ಕುದೂರು ಆಯೋಗ ಯಾವುದೇ ವರದಿ ಕೊಡುವ ಅಗತ್ಯವಿಲ್ಲ. ದಯಮಾಡಿ ಈ ಆಯೋಗವನ್ನು ರದ್ದು ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ.

ಎರಡನೆಯದು, ಇವತ್ತು ನಾವು ಪ್ರಶ್ನೋತ್ತರ ಕಾಲವನ್ನು ರದ್ದು ಮಾಡಿ ಇದರ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳುತ್ತಿದ್ದೇವೆ. ಶಿಕ್ಷಣ ಮಂತ್ರಿಗಳು ಇಲ್ಲಿ ನಿಂತುಕೊಂಡು ಹೇಳಿದರು. ಇವತ್ತು ಕೋರ್ಟ್ ಮಧ್ಯೆ ಪ್ರವೇಶ ಮಾಡದಿದ್ದರೆ ಎಲ್ಲಾ ಮೆಡಿಕಲ್ ಇಂಜಿನಿಯರಿಂಗ್ ಕಾಲೇಜಿನ ಅಡ್ಮಿಷನ್‌ಗಳನ್ನು ಮಾಡಿ ಮುಗಿಸುತ್ತಿದ್ದೆವು ಎಂದು. ಇದು ಸ್ಟೇ ಬಂದದ್ದು 3 ದಿವಸದ ಹಿಂದೆ ಸುಮಾರು 18000 ಜನ ಇಂಜಿನಿಯರಿಂಗ್ ಕಾಲೇಜಿಗೆ ಸೇರಬೇಕಾದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಸುಮಾರು 3300 ಜನ ಮೆಡಿಕಲ್ ಕಾಲೇಜಿಗೆ ಸೇರಬೇಕಾದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಈ ಮೀಸಲಾತಿ ನೀತಿಯ ಗೊಂದಲದಲ್ಲಿ ಆಯ್ಕೆಯಾದರು, ಕೈ ಬಿಟ್ಟರು ಬದಲಾವಣೆಯಾಯಿತು; ಹಿಂದೆಯೂ ಅದೇ ಗೊಂದಲವಾಯಿತು. ಈಗಲೂ ಅದೇ ಗೊಂದಲದಲ್ಲಿ ಅವರು ಬೀದಿ ಪಾಲಾಗಿದ್ದಾರೆ. ಯಾರ ಜೀವನದ ಜೊತೆಗೆ ಚೆಲ್ಲಾಟ ಮಾಡುತ್ತಿದ್ದೀರಿ? ಜುಲೈ ತಿಂಗಳಲ್ಲಿ ಅಡ್ಮಿಷನ್ ಸಂದರ್ಭ. ನಿಮ್ಮ ಸರಕಾರಕ್ಕೇನಾದರೂ ಕಮಿಟ್‌ಮೆಂಟ್ ಇದ್ದರೆ ಕಳಕಳಿ ಇದ್ದರೆ ಈ ಮಕ್ಕಳ ಭವಿಷ್ಯದ ಬಗ್ಗೆ ಚಿಂತೆ ಇದ್ದಿದ್ದರೆ ಜುಲೈಗೆ ಮುನ್ನ ನಿಮ್ಮ ರಾಜಕೀಯ ಅನುಕೂಲಕ್ಕೆ ತಕ್ಕಂತೆ ಏನೇನು ಮೀಸಲಾತಿ ಬೇಕಾದರೂ ಜಾರಿಗೆ ತರಬೇಕಾಗಿತ್ತು. ದಸರ ರಜಾ ಹತ್ತಿರ ಬರುತ್ತಿದೆ. ಆ ಮಕ್ಕಳ ಒಂದು ವರ್ಷದ ಭವಿಷ್ಯದ ಪ್ರಶ್ನೆ ಏನು? ಅವರ ತಂದೆ ತಾಯಿಗಳು ಮ್ಯಾನೇಜ್‌ಮೆಂಟಿನವರ ಹತ್ತಿರ ಹೋಗಬೇಕಾಗುತ್ತದೆ. ಸೀಟುಗಳು ಸಿಗುತ್ತದೆಂದು ಎಷ್ಟು ಲಕ್ಷಗಟ್ಟಲೆ ಹಣ ಕೊಟ್ಟು ಆ ಮಕ್ಕಳು ಬೀದಿ ಪಾಲಾಗಿದ್ದಾರೆ. ಇದು ನಿಮಗೆ ಗೊತ್ತಿದೆಯೇನು? ಅವರ ತಂದೆ ತಾಯಿಗಳು ಕಣ್ಣೀರು ಹಾಕಿ ರಸ್ತೆಯಲ್ಲಿ ನಿಂತಿದ್ದಾರೆ. ಯಾವುದೇ ಮ್ಯಾನೇಜ್‌ಮೆಂಟ್ ಕಾಲೇಜುಗಳ ಮುಂದೆ ಯಾರೂ ಹೋಗಿ ಉತ್ತರ ಕೊಡುವ ಸ್ಥಿತಿಯಲ್ಲಿ ಇಲ್ಲ. ಮನ ಬಂದಂತೆ ದುಡ್ಡು ತೆಗೆದುಕೊಂಡು ಅವರು ಒಂದು ಕಡೆ ರಕ್ತ ಹೀರುತ್ತಿದ್ದಾರೆ.

ಈ ಎಲ್ಲಾ ಗೊಂದಲಕ್ಕೆ ಯಾರು ಕಾರಣ? ಸುಪ್ರೀಂ ಕೋರ್ಟ್ ಹತ್ತು ದಿವಸ ನಿಮ್ಮ 86ರ ಆಜ್ಞೆಗೆ ತಡೆಯಾಜ್ಞೆ ನೀಡಿದೆ. ನಿಮ್ಮ ಅಡ್ವೊಕೇಟ್ ಜನರಲ್ ಏನು ಮಾಡುತ್ತಿದ್ದರು? ಏನು ಆರ್ಗ್ಯು ಮಾಡಿದ್ದಾರೆ? ನನಗೆ ಸಿಕ್ಕಿರುವ ಮಾಹಿತಿ ಪ್ರಕಾರ ಯಾವುದೇ ರೀತಿ ಈ ಮೀಸಲಾತಿ ಜಾರಿಗೆ ತರುವ ದೃಷ್ಟಿಯಿಂದ ಸರಿಯಾದಂಥ ಆರ್ಗ್ಯುಮೆಂಟ್ ಮಾಡಿಲ್ಲ. ಏಕೆ ಅಡ್ವೊಕೇಟ್ ಜನರಲ್ ಹಾಗೆ ಮಾಡಿದರು?ಆ ಪ್ರೊಸೀಡಿಂಗ್ಸ್ ಅನ್ನು ಇಲ್ಲಿ ಇಡಿ. ಏಕೆ ಮಾಡಿದರು ಅಂದರೆ ನೀವು ಬೆಣ್ಣೆ ತೆಗೆಯುವುದಕ್ಕೆ ಹೋಗಿ ಕೋತಿ ಏನೋ ಸಿಕ್ಕಿಸಿಕೊಂಡಿತಲ್ಲಾ ಹಾಗೆ ಮಾಡಿ. ಇಟ್ಟು ಕೊಂಡಿರಿ. ನೀವು ಯಾವುದೋ ಒಂದು ಮೀಸಲಾತಿಯನ್ನು ಜಾರಿಗೆ ತಂದಿರಿ; 73 ಪರ್ಸೆಂಟ್ ಎಂದು ಜಾರಿಗೆ ತಂದಿರಿ. ಯಾರು ತಂದರು ಸ್ವಾಮಿ? ನಮ್ಮ ವಿರೋಧ ಪಕ್ಷವನ್ನೇನಾದರೂ ವಿಶ್ವಾಸಕ್ಕೆ ತೆಗೆದುಕೊಂಡಿರಾ? ನೀವೇ ಜಾರಿಗೆ ತಂದಿರಿ.

80 ಪರ್ಸೆಂಟಿಗೆ ಏಕೆ ಅದನ್ನು ಏರಿಸಿದಿರಿ? ಲಿಂಗಾಯಿತರು, ಗೌಡರು ಎಲ್ಲರೂ ತಿರುಗಿ ಬಿದ್ದರೂ ಎಂದ ತಕ್ಷಣ 80 ಪರ್ಸೆಂಟಿಗೆ ಏರಿಸಿದಿರಿ. ಏರಿಸಿದ ಮೇಲೆ ಸುಪ್ರೀಂಕೋರ್ಟಿಗೆ ಹೋಗಿ ನೀವು ಅಂಡರ್‌ಟೇಕಿಂಗ್ ಕೊಡುತ್ತೀರಿ ನೀವು ಅದನ್ನು ಜಾರಿಗೆ ತರುವುದಿಲ್ಲ ಎಂದು. ಯಾವ ರೀತಿ ಉದ್ದೇಶ ಪೂರ್ವಕವಾಗಿ ರಾಜಕೀಯ ದೊಂಬರಾಟ ಮಾಡಿ ಹೇಗೋ ಮಾಡಿ ವಿಧಾನ ಸಭಾ ಚುನಾವಣೆ ನಡೆಸಬೇಕೆಂಬ ದುರುದ್ದೇಶ ನಿಮಗಿದೆಯೇ ಹೊರತು ಬೇರೇನೂ ಇಲ್ಲ, ಈ ಮೀಸಲಾತಿಯನ್ನು ಜಾರಿಗೆ ತರಬೇಕೆಂಬ ಪ್ರಾಮಾಣಿಕ ಕಳಕಳಿ ಯಾವುದೇ ಸಂದರ್ಭದಲ್ಲಿ ನಿಮಗಿದೆಯೇನು? ಯಾವುದೇ ಸಂದರ್ಭದಲ್ಲಿ ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡರೇನು? ಇದು ಅಪ್ಪನ ಆಸ್ತಿ ಅಲ್ಲ ಎಂದು ಹೇಳಿದಂತಹ ಮಾನ್ಯ ಚಂದ್ರೇಗೌಡರ ಸ್ಪಿರಿಟ್ ಅನ್ನು ಅರ್ಥ ಮಾಡಿಕೊಳ್ಳಿ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾಲ್ಕೂವರೆ ಕೋಟಿ ಜನರ ಸಮಸ್ಯೆಗಳ ಬಗ್ಗೆ ಇಲ್ಲಿ ಚರ್ಚೆ ಮಾಡಬೇಕಾದರೆ ತೀರ್ಮಾನ, ಮಾಡಬೇಕಾದರೆ ಒಂದು ಸಾರಿ ಮನದಟ್ಟಾಗಿ ಇದು ಸರಿ ಎಂದು ತೀರ್ಮಾನ ತೆಗೆದುಕೊಂಡರೆ ಅದಕ್ಕೆ ಸ್ಟ್ಯಾಂಡ್ ಆಗಿ ಇರಬೇಕಾಗುತ್ತದೆ. ನಿಮಗೆ ಪೊಲಿಟಿಕಲ್ ವಿಲ್ ಇಲ್ಲ. ಹರಿಜನಗಿರಿಜನರ ಚಾಂಪಿಯನ್, ಹಿಂದುಳಿದವರ ಚಾಂಪಿಯನ್ ಎಂದು 47ವರ್ಷಗಳಿಂದ ಹೇಳಿಕೊಂಡು ಬಂದಿದ್ದೀರಿ. ಹಾಗಿದ್ದ ಮೇಲೆ ಒಂದು ಸಾರಿ ಜಾರಿಗೆ ತಂದಂಥ ಮೀಸಲಾತಿ ನೀತಿಯನ್ನು ಪದೇ ಪದೇ ವಾರಕ್ಕೊಮ್ಮೆ ಮನ ಬಂದಂತೆ ಬದಲಾವಣೆ ಮಾಡಿದರಲ್ಲಾ ಇದು ತೊಘಲಕ್ ದರ್ಬಾರ್ ಅಲ್ಲವೇನು? ಇದಕ್ಕೇನೆಂದು ಕರೆಯಬೇಕು ತಮಗೆ. ಅದಕ್ಕೆ ನಾನು ಹೇಳಿದ್ದುದು, ಹಿಂದುಳಿದ ಜನಾಂಗದ ಚಾಂಪಿಯನ್ ನಮ್ಮ ವೀರಪ್ಪಮೊಯಿಲಿಯವರು ಅವರು ಈ ರಾಜ್ಯದ ಮುಖ್ಯಮಂತ್ರಿಗಳು. ಫಾರ್ಚುನೇಟ್‌ಲಿ ಆರ್ ಅನ್‌ಫಾರ್ಚುನೇಟ್‌ಲಿ ಹಿಂದುಳಿದ ಚಾಂಪಿಯನ್ ಎಂದು ಹೇಳಿಕೊಳ್ಳುವಂಥ ಕಾಗೋಡು ತಿಮಪ್ಪನವರೇ ಮಂತ್ರಿಯಾಗಿ ಇಲ್ಲಿ ಕುಳಿತಿದ್ದಾರೆ. ಇದು ನಿಮ್ಮ ಮನಸ್ಸಿಗೆ ಒಪ್ಪುತ್ತದೆಯೇ? ಮಾನ್ಯ ವಿಶ್ವನಾಥ್ ಅವರು ನಿಮ್ಮ ಸಚಿವ ಸಂಪುಟದಲ್ಲಿದ್ದಾರೆ, ನೀವು ಮಾಡಿದಂತಹ ದೊಂಬರಾಟದ ಬಗ್ಗೆ ಅವರು ಬಹಿರಂಗ ಪತ್ರ ಬರೆದರು; ಹೊರಗೆ ಹೋಗುತ್ತೇನೆಂದು ಹೇಳಿದರು. ನಾನು ಹೇಳಲಿಲ್ಲ, ನಿಮ್ಮ ಸಚಿವರು ಹೇಳಿದ್ದರು. ನಾನು ಹೊರಗೆ ಹೋಗುತ್ತೇನೆ ಈ ರಾಜಕೀಯ ದೊಂಬರಾಟವನ್ನು ಸಹಿಸುವುದಿಲ್ಲ ಎಂದು. ಏನು ಉತ್ತರ ಕೊಡುತ್ತೀರಿ? ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಗಳನ್ನು ಎದುರಿಸುವಂತಹ ನೈತಿಕ ಸ್ಥೈರ್ಯ ನಿಮ್ಮಲ್ಲಿ ಇರಲಿಲ್ಲ. ಇದನ್ನು ಮುಂದೂಡುವ ಕುತಂತ್ರ ಮಾಡುವುದಕ್ಕೆ ಹೋಗಿ ಈ ರಾಜ್ಯದ ಯುವಕ ಯುವತಿಯರು ಟೆಕ್ನಿಕಲ್ ಕೋರ್ಸಿಗೆ ಸೇರುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ಗೊಂದಲದಲ್ಲಿ ಸಿಗುವಂತಹ ಒಂದು ವಿಚಿತ್ರವಾದಂಥ ಪರಿಸ್ಥಿತಿಗೆ ತಂದು ಇಟ್ಟದ್ದೀರಿ. ನಮ್ಮ ರಾಜ್ಯದಲ್ಲಿರುವ ಸೆನ್ಸಸ್ ಪ್ರಕಾರ 4 ಕೋಟಿ 81 ಲಕ್ಷ ಜನರಿದ್ದಾರೆ. ಶೇಕಡ

80 ಪರ್ಸೆಂಟ್ ಮೀಸಲಾತಿ ಎಂದು ನಿಮ್ಮ ಸರಕಾರ ಮಾಡಿದೆ. ಅಂದರೆ ಸುಮಾರು ಹತ್ತಿರ 3 ಕೋಟಿ 46 ಲಕ್ಷ ಜನರಿಗೆ ಮೀಸಲಾತಿ ಕೊಟ್ಟಿದ್ದೀರಿ. ಅಂದರೆ ನಿಜವಾದ ಹಿಂದುಳಿದವರಿಗೆ ಈ ಮೀಸಲಾತಿಯಿಂದ ಅನುಕೂಲವಾಗುತ್ತದೆಯೇ? ನಿಶ್ಚಿತವಾದಂತಹ ಪರ್ಮನೆಂಟ್ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಇರುತ್ತದೆ; ಸಪ್ಪೋಸ್ ಯಾವುದೇ ಸರಕಾರ ಇರಬಹುದು ಏನೋ ಒಂದು ನಾವು ಜಾರಿಗೆ ತರುತ್ತೇವೆ. ಹಿಂದುಳಿದವರಿಗೆ ಮೀಸಲಾತಿ ನೀತಿ ಏನು ಇರಬೇಕೆಂದು ಜಾರಿಗೆ ತರುತ್ತೇವೆ. ಆ ಕಾಲಕಾಲಕ್ಕೆ ಯಾವುದೋ ನಿಜವಾದ ಹಿಂದುಳಿದವರ ಹೆಸರು ಬಿಟ್ಟಿರಬಹುದು. ಆಗ ಅವರು ಕಮಿಷನ್ ಮುಂದೆ ಹೋಗುತ್ತಾರೆ ಅವರ ಸಮಸ್ಯೆಗಳೇನೆಂದು ಇಡುತ್ತಾರೆ. ಅವರಿಗೆ ನ್ಯಾಯ ಕೊಡಿಸುವುದಕ್ಕೆ ಆಯೋಗವನ್ನು ರಚನೆ ಮಾಡುವ ವ್ಯವಸ್ಥೆ ಆಗಿದೆ. ಹೀಗಿದ್ದರೂ ಸಹ ಎಲ್ಲವನ್ನೂ ನೀವೇ ಮಾಡುತ್ತಿದ್ದೇವೆಂದು ಹೇಳಿಕೊಂಡು ಇದನ್ನು ನೆನೆಗುದಿಗೆ ತಂದಿದ್ದೀರಲ್ಲ ಇದು ಸರಿಯಲ್ಲ. ಸುಪ್ರೀಂ ಕೋರ್ಟಿನಲ್ಲಿ ಇದು 10 ದಿವಸ ಸ್ಟೇ ಬರುವುದಕ್ಕೆ ಕಾರಣ 86ರ ಆದೇಶ.

1986ರ ಆಜ್ಞೆ ಸುಸೂತ್ರವಾಗಿ ನಡೆದುಕೊಂಡು ಬಂದಿರುವಂಥದ್ದು.ಆ ಹಿಂದುಳಿದ ಜನರಿಗೆ ನ್ಯಾಯ ಸಿಕ್ಕತಕ್ಕಂಥ ಆ ಒಂದು 86 ಆಜ್ಞೆಗೂ ಸಂಚಕಾರ ತಂದು ಇಟ್ಟು ಬಿಟ್ಟಿರಿ.ನಿಮ್ಮ ಒಂದು ಬೇಜವಾಬ್ದಾರಿತನದಿಂದ.ಇವತ್ತು ಗೊಂದಲ ವಾತಾವರಣ ಉಂಟಾಗಿದೆ.ಅದಕ್ಕೆ ಯಾರು ಕಾರಣ ಸ್ವಾಮಿ? ಸರ್ಕಾರ ಈ ಭಾರವನ್ನು ಹೊರಬೇಕಾಗುತ್ತದೆ.ನೀವು ಜವಾಬ್ದಾರಿಯನ್ನು ಹೊರಬೇಕಾಗುತ್ತದೆ.ಗೌರವದಿಂದ ನಮಗೆ ಈ ಕಮಿಟಿಮೆಂಟ್ ಇಲ್ಲ; ರಾಜಕಾರಣ ಮಾಡಿದಂಥವರು ತಪ್ಪಾಗಿದೆ ಎಂದು ಹೇಳಿ ಜನರಲ್ಲಿ ಕ್ಷಮಾಪಣೆ ಕೇಳಿ ರಾಜೀನಾಮೆ ಕೊಟ್ಟು ಹೊರಗೆ ಹೋಗಬೇಕಾದಂಥ ಪರಿಸ್ಥಿತಿ ಇದೆ. ವಿಧಾನಸಭೆಯೊಳಗೆ ಯಾವುದೋ ವಿಷಯಗಳನ್ನು ಚರ್ಚೆ ಮಾಡಿ ದಿನಗಟ್ಟಲೆ, ಗಂಟೆಗಂಟಲೆ ಚರ್ಚೆ ಮಾಡಿ ಪರಿಹಾರ ಹುಡುಕುವುದಲ್ಲ. ಈ ಅಪರಾಧಕ್ಕೆ ಏನು ಶಿಕ್ಷೆಯನ್ನು ಕೊಡಬೇಕು ನಿಮಗೆ? ಮನಬಂದಂತೆ ನಿಮ್ಮ ಆಯೋಗದ ವರದಿಯನ್ನು ಜಾರಿಗೆ ತಂದು ತಿರುಚಿ ಬೆಳಗ್ಗೆ ಒಂದು, ಸಾಯಂಕಾಲ ಒಂದು,ಬದಲಾವಣೆಯನ್ನು ಮಾಡಿಕೊಂಡು ಇವತ್ತು ಈ ಹಿಂದುಳಿದ ವರ್ಗದವರ ಜೊತೆಗೆ ಒಂದು ದೊಂಬರಾಟವನ್ನು ಮಾಡುವುದಕ್ಕೆ ಹೊರಟಿದ್ದೀರಲ್ಲಾ.ಇದರ ಬಗ್ಗೆ ಸುಧೀರ್ಘವಾದ ಚರ್ಚೆ ನಡೆಯುವಂಥ ಅಗತ್ಯ ಇದೆ. ಯಾವಾಗ? ನೀವು ಸುಪ್ರೀಂ ಕೋರ್ಟಿನಲ್ಲಿ ನಿಮ್ಮ ಅಡ್ವೋಕೇಟ್ ಜನರಲ್ ಏನು ಅರ್ಗ್ಯುಮೆಂಟನ್ನು ಮಾಡಿದರು? 1986ರ ಆಜ್ಞೆಗೆ 10 ದಿವಸ ಸ್ಟೇ ಸಿಗುವಂಥ ಪರಿಸ್ಥಿತಿ ಏನು ಬಂದಿತು? ನೀವೇನಾದರು ಮಾಡಬೇಕಾಗಿದ್ದರೆ ಜಾರಿಗೆ ತರುವುದಕ್ಕೆ ಮುಂಚೆ, ನಿಮ್ಮ ಲೀಗಲ್ ಡಿಪಾರ್ಟಮೆಂಟ್ ಅಭಿಪ್ರಾಯ ಕೇಳಬೇಕಾಗಿತ್ತು. ಆ ಇಲಾಖೆ ಸತ್ತಿದೆಯೇನು? ಅವರ ಅಭಿಪ್ರಾಯವನ್ನು ತೆಗೆದು ಕೊಂಡಿರಾ? ಆ ಒಂದು ಆಧಾರದ ಮೇಲೆ ಜಾರಿಗೆ ತಂದಾಗ ಮಾತ್ರ ಇದಕ್ಕೆ ಒಂದು ಅರ್ಥ ಬರುತ್ತದೆ. ಇಲ್ಲದಿದ್ದರೆ ಈ ಲೀಗಲ್ ಡಿಪಾರ್ಟ್ಮೆಂಟ್, ಈ ಸೆಲ್‌ನ ಅಗತ್ಯ ಬರುವುದಿಲ್ಲ. ನಿಮ್ಮ ಅಡ್ವೋಕೇಟ್ ಜನರಲ್ ಅದಕ್ಕೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಹೈಕೋರ್ಟು ಮತ್ತು ಸುಪ್ರೀಂ ಕೋರ್ಟಿನಲ್ಲಿ ಆರ್ಗ್ಯು ಮಾಡುವಂಥ ಅಗತ್ಯ ಬರುವುದಿಲ್ಲ.ಅಂದರೆ ಈ ವ್ಯವಸ್ಥೆಯನ್ನು ತಿರುಚುವಂಥ ಒಂದು ಗೊಂದಲದ ಪರಿಸ್ಥಿತಿ ಬಂದಿದೆ. ಈಗ ಯಾರೋ ಚೀಟಿಯನ್ನು ಕಳುಹಿಸಿದರು, ಪ್ರತಿನಿತ್ಯ ನಾವು ನೋಡುತ್ತಿದ್ದೇವೆ. ಇವತ್ತು ನಮ್ಮ ಮಗನಿಗೆ ಮೆಡಿಕಲ್ ಸೀಟು ಸಿಗಬಹುದು, ನನ್ನ ಮಗನಿಗೆ ಇಂಜಿನಿಯರಿಂಗೆ ಸೀಟು ಸಿಗಬಹುದು, ಮೆರಿಟ್‌ನಲ್ಲಿ ಪಾಸ್‌ಮಾಡಿದ್ದಾರೆ ಎಂದು ಅವರು ಕಾಯ್ದುಕೊಂಡು ಕುಳಿತ್ತಿದ್ದಾರೆ, ಇಲ್ಲಿ ಸಿಗಲಿಲ್ಲ ಎಂದರೆ ಅವನಿಗೆ ಡಿಗ್ರಿ ಕಾಲೇಜ್‌ನಲ್ಲೂ ಸೀಟು ಸಿಗುವುದಿಲ್ಲ. ಏನು ಪರಿಹಾರವನ್ನು ಕೊಡುತ್ತೀರಿ ಅಂಥ ಮಕ್ಕಳಿಗೆ.

ಇವತ್ತು ಪ್ರಶ್ನೆ ಇರುವಂಥದ್ದು,ಒಂದು ಮುಂದಾಲೋಚನೆ ಇದ್ದು, ಮಕ್ಕಳ ಭವಿಷ್ಯದ ದೃಷ್ಟಿಯಿಂದ ಯೋಚನೆ ಮಾಡುವಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡದೆ ಕೇವಲ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆಯನ್ನು ಮುಂದೂಡುವುದಕ್ಕೋಸ್ಕರ,ಒಂದು ರಾಜಕೀಯ ತಂತ್ರಗಾರಿಕೆ ಮಾಡಿಕೊಂಡು ಜನರ ಕಣ್ಣಿಗೆ ಮಣ್ಣೆರಚುವಂಥ ಮೀಸಲಾತಿ ನೀತಿ ಜಾರಿಗೆ ಬರದೇಇರುವಂಥ, ಒಂದು ವಿಚಿತ್ರವಾದ ಪರಿಸ್ಥಿತಿಗೆ ತಂದಿದ್ದೀರಿ.

ಅಧ್ಯಕ್ಷರೇ, ನನಗೆ ಆಮೇಲೆ ತಾವು ಅವಕಾಶ ಮಾಡಿಕೊಂಡಬೇಕು. ದಯಮಾಡಿ ನಾನು ತಮ್ಮಲ್ಲಿ ಡಿಮ್ಯಾಂಡ್ ಮಾಡುವಂಥದ್ದು ಸುಪ್ರೀಂ ಕೋರ್ಟಿನ ಮುಂದೆ ನಡೆದದ್ದೇನು? ನಿಮ್ಮ ಅಡ್ವೋಕೇಟ್ ಜನರಲ್‌ರವರು ಏನು ಆರ್ಗ್ಯು ಮಾಡಿದ್ದಾರೇ? ಯಾವ ಕಾರಣಕೋಸ್ಕರ 86ರ ಆದೇಶವನ್ನು ಹತ್ತು ದಿವಸ ಸ್ಥಗಿತಗೊಳಿಸಿದ್ದಾರೆ? ನಾಳೆ ಏನಾಗುತ್ತದೆಯೋ ಗೊತ್ತಿಲ್ಲ. ಆಗ ಹೇಳಬಹುದು ಇಲ್ಲಿ ಕುಳಿತಿರುವವರು. ನಮ್ಮ ಕಾಗೋಡು ತಿಮ್ಮಪ್ಪನವರು ಎದ್ದು ನಿಂತುಕೊಂಡು ಉತ್ತರ ಕೊಡಬಹುದು ನೋಡೋಣ. ಹತ್ತು ದಿವಸದ ನಂತರ ಸುಪ್ರೀಂ ಕೋರ್ಟು ಏನು ಆದೇಶ ಕೊಡುತ್ತದೆಯೋ ಅದರ ಮೇಲೆ ತಾವು ಮುಂದೆ ಮಾಡೋಣ ಎಂದು ಹೇಳಬಹುದು. ಅಷ್ಟರಲ್ಲಿ ಸದನ ಮುಗಿದಿರುತ್ತದೆ. ನಿಮಗೆ ಬೇಕಾಗಿರುವುದು ಚುನಾವಣೆ. ಆ ಮಕ್ಕಳನ್ನು ಯಾರು ಕೇಳಬೇಕು? ಅವರ ಕಷ್ಟ ಕೇಳುವವರ್‍ಯಾರು? ಅಂಥ ಒಂದು ಪರಿಸ್ಥಿತಿಗೆ ನಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರು ಬಂದಿರುವಂಥ ಸಂದರ್ಭದಲ್ಲಿ ತಕ್ಷಣ ಯಾರಿಗೆ ಮೆಡಿಕಲ್ ಇಂಜಿನಿಯರಿಂಗ್ ಕಾಲೇಜುಗಳಿಗೆ ಸೀಟು ಸಿಗುವುದಿಲ್ಲ. ಅವರುಗಳು ಡಿಗ್ರಿ ಕಾಲೇಜಿಗೆ ಸೇರುವಂತಿಲ್ಲ, ಡಿಗ್ರಿಗೆ ಆಗಲೇ ಮೂರು ತಿಂಗಳ ಅವಧಿ ಮುಗಿದುಹೋಗಿದೆ. ಅವರಿಗೆ ಅಡ್ಮಿಷನ್ ಬಗ್ಗೆ ಏನು ಮಾಡುತ್ತೀರಿ? ಚಿನ್ನಪ್ಪ ರೆಡ್ಡಿ ಆಯೋಗದ ವರದಿಯ ಮೇಲೆ ಅರ್ಹವಿದ್ಯಾರ್ಥಿಗಳ ಪಟ್ಟಿ ಮಾಡಿ ಎಂದು ಹೇಳಿದಿರಿ, ಪಟ್ಟಿಯನ್ನು ಮಾಡಿದರು. ಸತ್ಯಾಗ್ರಹ ಆಯಿತು ಎಂದು 73 ಪರ್ ಸೆಂಟ್ ಹೋಗಿ 80 ಪರ್‌ಸೆಂಟ್‌ಗೆ ಏರಿಸಿದಿರಿ. ಅದರ ಮೇಲೆ ಬದಲಾವಣೆ ಆಯಿತು. ಈಗ ನೀವು ಮತ್ತೆ ಸಂಬಂಧ ಪಟ್ಟಕಾಲೇಜುಗಳಿಗೆ ತಿಳಿಸಿದಿರಿ. ಇಲ್ಲ, ಇಲ್ಲ, 86ರ ಆಧಾರದ ಮೇಲೆ ನೀವು ಮಾಡಿ ಎಂದು. ಆ ಪಟ್ಟಿ ರೆಡಿ ಆಯಿತು. ಈಗ ಅವರು ಏನು ಮಾಡಬೇಕು? ಹತ್ತು ದಿವಸ ಆಮೇಲೆ ಏನು ಮಾಡುವವರು ಇದ್ದಾರೆ. ಸುಪ್ರೀಂ ಕೋರ್ಟ್ ಮುಂದೆ ಏನು ಮಾಡಬಹುದು? ನೀವೇನು ಮಾಡಬೇಕು ಎಂದು ಇದ್ದೀರಿ? ಸುಪ್ರೀಂ ಕೋರ್ಟಿನಲ್ಲಿ ಏನು ಚರ್ಚೆಯಾಯಿತು. ಅದರ ವಿವರವನ್ನು ಇಲ್ಲಿ ಒದಗಿಸಿದ ನಂತರ ಸುದೀರ್ಘವಾದ ಚರ್ಚೆಗೆ ಅವಕಾಶ ಇದೆ. ನಮಗೂ ಸುಲಭವಾಗುತ್ತದೆ. ದಯಮಾಡಿ ಆ ಎಲ್ಲಾ ವಿವರಗಳನ್ನು ಒದಗಿಸಿಕೊಡಬೇಕೆಂದು ವಿನಂತಿ ಮಾಡುತ್ತೇನೆ.

+ ಪ್ರೊ : ಎಂ.ಡಿ. ನಂಜುಂಡ ಸ್ವಾಮಿ (ಧಾರವಾಡ ಗ್ರಾಮಾಂತರ) : ಮಾನ್ಯ ಸಭಾಧ್ಯಕ್ಷರೇ, ಈ ಮೀಸಲಾತಿ ಗೊಂದಲವನ್ನು ಕ್ಷಣಿಕ ರಾಜಕೀಯ ಲಾಭಗಳಿಗೆ ಬಳಸಿ ಕೊಳ್ಳಲಾಗಿದೆ. ಇತ್ಯಾದಿ ಚರ್ಚೆಯನ್ನು ನಾನು ಮಾಡುವುದಿಲ್ಲ. ಏಕೆಂದರೆ ಇದು ಬಹಳ ಗಂಭೀರವಾದಂಥ ಪ್ರಶ್ನೆ. ಇದಕ್ಕೆ ಗಂಭೀರವಾದಂಥ ಪರಿಹಾರವನ್ನು ಪರಿಹಾರವನ್ನೇ ನಾವು ಹುಡುಕಿಕೊಳ್ಳಬೇಕು. ಜಾತಿ ಪದ್ಧತಿ, ನಮ್ಮ ದೇಶವನ್ನು ಅಧೋಗತಿಗೆ ಎಳೆಯುವುದಕ್ಕೆ ಅತೀ ಮುಖ್ಯ ಪಾತ್ರ ವಹಿಸಿದಂಥ ಒಂದು ವ್ಯವಸ್ಥೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಜಾತಿ ಪದ್ಧತಿ ಚೌಕಟ್ಟಿನಲ್ಲಿ ಆಯಾ ಜಾತಿಯ ಜನಗಳಿಗೆ ಸೀಮಿತವಾದಂಥ ಉದ್ಯೋಗಗಳನ್ನು ನಿಗದಿ ಮಾಡಿ ಆ ಸೀಮಿತ ಕ್ಷೇತ್ರದಲ್ಲಿ ಸೀಮಿತ ಸಾಮರ್ಥ್ಯ ಬೆಳೆಸಿಕೊಳ್ಳುವಂಥ, ವ್ಯಕ್ತಿಗಳನ್ನು ಬೆಳೆಸುವಂಥ ವ್ಯವಸ್ಥೆ ಜಾತಿ ಪದ್ಧತಿ. ಒಂದು ಸಮಾಜದ ಎಲ್ಲಾ ಜನ ಸೀಮಿತ ಸಾಮರ್ಥ್ಯ ಇರುವುಂಥ ವ್ಯಕ್ತಿಗಳಾದಾಗ ಆ ಇಡೀ ಸಮಾಜ ಸೀಮಿತ ಸಾಮರ್ಥ್ಯವಿರುವಂಥ ಸಮಾಜವಾಗುತ್ತದೆ.

ಆ ಕಾರಣವೇ ನಮ್ಮ ದೇಶದಲ್ಲಿ ಯಾವ ಯಾವ ಕಾಲಕ್ಕೆ ಜಾತಿ ಪದ್ಧತಿ ಸಡಿಸಲಾಯಿತು. ಆ ಕಾಲಕ್ಕೆ ನಮ್ಮ ದೇಶ ಉಚ್ಛ್ರಾಯ ಸ್ಥಿತಿಗೆ ಬಂದಿತ್ತು. ಯಾವ ಯಾವ ಕಾಲಕ್ಕೆ ಜಾತಿ ಪದ್ಧತಿ ಬಿಗಿಯಾಯಿತು. ಆ ಕಾಲದಲ್ಲಿ ನಮ್ಮ ದೇಶ ಅಧೋಗತಿಗೆ ಇಳಿಯಿತು. ಇದನ್ನು ನಾವು ಚರಿತ್ರೆಯಲ್ಲಿ ನೋಡಿದ್ದೇವೆ. ಮಹಾವೀರರ ಚಳುವಳಿ ಮತ್ತು ಬುದ್ಧನ ಚಳುವಳಿಯಾದಾಗ ನಮ್ಮ ದೇಶ ಒಂದು ಸುವರ್ಣ ಯುಗವನ್ನು ಕಂಡಿತ್ತು. ಬುದ್ಧನ ಚಳುವಳಿ ನಾಶ ಮಾಡಿ ಶಂಕರಚಾರ್ಯರ ಚಳುವಳಿ ಅಸ್ತಿತ್ವಕ್ಕೆ ಬಂದ ಮೇಲೆ ನಮ್ಮ ದೇಶ ಅಧೋಗತಿಗೆ ಇಳಿಯುವಂಥ ಕ್ರಿಯೆ ಪ್ರಾರಂಭವಾಗಿತ್ತು. ಇದನ್ನು ಗುರುತಿಸಿ ನಮ್ಮ ಸಂವಿಧಾನಕರ್ತರಗಳು ಈ ಸಮಾಜದಲ್ಲಿ ಬಂದಿರುವಂಥ ವಕ್ರತೆಯನ್ನು ಸರಿಪಡಿಸಬೇಕು. ಸರಿಪಡಿಸಬೇಕಾದರೆ ಎಲ್ಲಾ ಜಾತಿಗಳಿಗೂ ಎಲ್ಲಾ ಕ್ಷೇತ್ರಗಳಲ್ಲಿ ವಿಶೇಷ ಅವಕಾಶವನ್ನು ಕೊಟ್ಟು ಎಲ್ಲಾ ಕ್ಷೇತ್ರಗಳಲ್ಲಿ ಸಾಮರ್ಥ್ಯ ಬೆಳೆಸಿಕೊಂಡಂಥ ಸಮಗ್ರ ಸಾಮರ್ಥ್ಯ ಇರುವಂಥ ವ್ಯಕ್ತಿಗಳನ್ನು ಈ ಸಮಾಜದಲ್ಲಿ ಬೆಳಸಬೇಕು. ಆ ಮೂಲಕ ಸಮಗ್ರ ಸಾಮರ್ಥ್ಯವಿರುವಂಥ ಒಂದು ಸಮಾಜವಾಗಬೇಕು ನಾವು ಎನ್ನುವ ಉದ್ದೇಶದಿಂದ ಸಂವಿಧಾನದಲ್ಲಿ ವಿಶೇಷ ಅವಕಾಶಗಳ ನಿಯಮಗಳನ್ನು ಸೇರಿಸಿದೆವು. ಸಮಗ್ರ ಸಾಮರ್ಥ್ಯ ಇರುವಂಥ ಒಂದು ಸಮಾಜವನ್ನು ಸೃಷ್ಟಿ ಮಾಡಬೇಕು ಎನ್ನುವಂಥ ಹೋರಾಟ ಒಂದು ಕಡೆ. ಮತ್ತೊಂದು ಕಡೆ ಜಾತಿ ಪದ್ಧತಿ ಒಳಗಡೆ ಏನು ಕೀಳು ಜಾತಿಗಳು ಎಂದು ಏನು ಪರಿಗಣಿಸಲ್ಪಟ್ಟಿವೆ,

ಅವಕ್ಕೆ ನ್ಯಾಯವಾಗಿ ಸಿಗಬೇಕಾದಂಥ ಅವಕಾಶಗಳನ್ನು ವಂಚನೆ ಮಾಡುವಂಥ ಒಂದು ಕುತಂತ್ರದ ಚಟುವಟಿಕೆ ನಿರಂತರವಾಗಿ ನಡೆದಿದೆ. ಎರಡೂ ಚಟುವಟಿಕೆ ನಿರಂತರವಾಗಿ ನಡೆದಿದೆ. ನಿಮ್ಮ ಸರ್ಕಾರದ ಇತ್ತೀಚಿನ ಸರ್ಕಾರಿ ಆಜ್ಞೆಯಲ್ಲಿ ಏನು ಎರಡು ಪದಗಳಿವೆ, ಕ್ರೀಮಿ ಲೇಯರ್ ಎಂದು. ಈ ಕುತಂತ್ರಕ್ಕೂ ಸಂವಿಧಾನ ರಚನ ಕಾಲದಲ್ಲಿ ನಡೆದಂಥ ಒಂದು ಕುತಂತ್ರಕ್ಕೂ ಏನೇನೂ ವ್ಯತ್ಯಾಸವಿಲ್ಲ. ತಮ್ಮ ಮೂಲಕ ನಾನು ಎಲ್ಲಾ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುವುದು ಈ ವಿಷಯದ ಕಡೆ ಬಹಳ ಗಮನ ಕೊಡಬೇಕೆಂದು ನಮಗೆ ಬಹಳ ಜನರಿಗೆ ಗೊತ್ತಿಲ್ಲ. ನಾವು ನವೆಂಬರ್ 49 ರಲ್ಲಿ ಏನು ಸಂವಿಧಾನವನ್ನು ಸ್ವೀಕಾರ ಮಾಡಿದೆವು, ಅದರಲ್ಲಿ ಆರ್ಟಿಕಲ್ 15 ಪ್ಯಾರಾಗ್ರಾಫ್ 4 ಇರಲಿಲ್ಲ. ಕೇವಲ ಆರ್ಟಿಕಲ್ 16(4) ಮಾತ್ರ ಇತ್ತು. ಏನೆಂದರೆ 16(4) ಸರ್ಕಾರಿ ಸೇವೆಗಳಲ್ಲಿ ಉದ್ಯೋಗಾವಕಾಶಗಳನ್ನು ವ್ಯವಸ್ಥೆ ಮಾಡುವುದರಲ್ಲಿ ವಿಶೇಷ ಅವಕಾಶಗಳನ್ನು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಂಥ ವರ್ಗಗಳಿಗೆ ಕೊಡಬೇಕು ಎಂದು. ನಾಥದೇ ಒಂದು ನಿಯಮ ಆರ್ಟಿಕಲ್ 15 ರಲ್ಲಿ ಇರಲಿಲ್ಲ. ಈ ಕುತಂತ್ರ ಸಂವಿಧಾನಕರ್ತರುಗಳಿಂದಲೇ ನಡೆದಿದ್ದುದು. ಶಾಲಾಕಾಲೇಜುಗಳ ಪ್ರವೇಶದಲ್ಲಿ ಶಿಕ್ಷಣಾವಕಾಶವನ್ನು ಸಂವಿಧಾನದಲ್ಲಿ ಕೊಡದೆ ಕೇವಲ ಉದ್ಯೋಗಾವಕಾಶವನ್ನು ಮಾತ್ರ ತೆರೆದಿಟ್ಟಂಥ ಕುತಂತ್ರ. ಸಂವಿಧಾನ ರಚನೆ ಕಾಲಕ್ಕೂ ನಡೆದಂಥ ಕುತಂತ್ರ.ಶಾಲಾ ಕಾಲೇಜು ಬಾಗಿಲನ್ನು ಮುಚ್ಚುವುದು. ಸರ್ಕಾರಿ ಸೇವೆಯಲ್ಲಿ ಅವಕಾಶ ಇದೆ ಎಂದು ಹೇಳಿ ವಿಧಾನಸೌಧದ ಬಾಗಿಲನ್ನು ತೆರೆಯುವುದು . ಈ ಕುತಂತ್ರವನ್ನು ನೀವು 49 ರಿಂದ ಹಿಡಿದು 94ನೇ ಇಸವಿಯವರೆಗೂ ಗುರುತಿಸಬಹುದು. ಯಾವ ಯಾವ ಅಳತೆಗೋಲನ್ನು ನಮ್ಮ ಸರ್ವೋಚ್ಛ ನ್ಯಾಯಾಲಯ ಮುಂದುಳಿದ ವರ್ಗಗಳು ಎಂದು ಗುರುತಿಸುವುದಕ್ಕೆ ಅಳವಡಿಸಿದೆ ಎನ್ನುವುದನ್ನು ನೋಡಿದಾಗ ಗೊತ್ತಾಗುತ್ತದೆ.

ನಮ್ಮ ಕರ್ನಾಟಕದಿಂದ ಹೋದಂಥ ಮೊದಲನೆಯ ಮೊಕದ್ದಮೆ ಎಂ.ಆರ್. ಬಾಲಾಜಿ ವರ್ಸಸ್ ಸ್ಟೇಟ್ ಆಫ್ ಕರ್ನಾಟಕ ಎನ್ನತಕ್ಕದ್ದು. ಅದು 1963ರಲ್ಲಿ ಹೋಗಿತ್ತು. ಅದರಲ್ಲಿ ಸರ್ವೋಚ್ಛ ನ್ಯಾಯಾಲಯದವರು ಯಾವ ಅಳತೆಗೋಲನ್ನು ಹಾಕಿದ್ದಾರೆ ಎನ್ನುವ ಬಗ್ಗೆ ತಾವು ಗಮನಹರಿಸಬೇಕು. ಅದು ಆಗಿನ ಕಾಲದ ಸ್ಟೇಟ್ ಆವರೇಜ್ ಇನ್ ಎಸ್‌ಎಸ್‌ಎಲ್‌ಸಿ ನಾನು 1963ನೇ ಇಸವಿಯ ಅಂಕಿಅಂಶಗಳನ್ನು ಹೇಳುತ್ತಿಲ್ಲ. ಚಿನ್ನಪ್ಪರೆಡ್ಡಿ ಆಯೋಗದ ವರದಿಯ ಕಾಲಕ್ಕೆ.

" The total number if candidates of all communities that appeared at the SSLC examination in March, 1988 to the total population of the State is 0.77."

" While the percentage of total number of candidates of all communities that passed SSLC examination to the total population of the State is 0.39"

ಎಂ.ಆರ್. ಬಾಲಾಜಿ ವರ್ಸಸ್ ಸ್ಟೇಟ್ ಆಫ್ ಕರ್ನಾಟಕ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ಅಳವಡಿಸಿದ ಅಳತೆಗೋಲು ಈ 0.33. ಪರ್ಸೆಂಟ್ ಏನು ಇದೆ ಅದರಲ್ಲಿ ಅರ್ಧ ಭಾಗಕ್ಕೂ ಸ್ವಲ್ಪ ಕಡಿಮೆ ಇದ್ದರೂ ಚಿಂತೆ ಇಲ್ಲ, ಯಾವುದೇ ಒಂದು ಜಾತಿ ಜನಸಂಖ್ಯೆಯಲ್ಲಿ, ಒಂದು ಸಾವಿರ ಜಾತಿ ಜನಸಂಖ್ಯೆಯಲ್ಲಿ 0.33 ರಲ್ಲಿ ಅರ್ಧ ಭಾಗಕ್ಕಿಂತ ಸ್ವಲ್ಪ ಕಡಿಮೆ ಇದ್ದರೂ ಚಿಂತೆ ಇಲ್ಲ, ಅವರು ಎಜ್ಯುಕೇಷನಲಿ ಫಾರ್ವರ್ಡ್ ಎಂದು. ಇದನ್ನು ಯಾರೂ ಒಪ್ಪಿಕೊಳ್ಳತಕ್ಕ ಅಳತೆಗೋಲಲ್ಲ.

"Even if it is less that half of the State average the enrolment of students in a particular caste 1000 caste population of a caste-even if it is 50% of state average, that caste hass to be considered as educationally forward."

ಈ ಅಳತೆಗೋಲು ಪ್ರಾರಂಭವಾಗಿದ್ದುದು ಅಲ್ಲಿಂದ. ಅನಂತರ ಎರಡನೆಯ ಕುತಂತ್ರವೇನೆಂದರೆ, ಮೀಸಲಾತಿಗೆ ಸಂಬಂಧಪಟ್ಟಂತೆ ಇಡೀ ದೇಶಕ್ಕೆ ಏಕಸೂತ್ರವನ್ನು ಕೊಡತಕ್ಕಂಥ ಅಧಿಕಾರವನ್ನು ನಾವು ಸರ್ವೋಚ್ಚನ್ಯಾಯಾಲಯಕ್ಕೆ ಕೊಟ್ಟಿದ್ದೇವೆ. ನಮ್ಮ ದೇಶದ ಎಲ್ಲಾ ರಾಜ್ಯಗಳಲ್ಲೂ ಸಹ ಜಾತಿ ಪದ್ಧತಿಯ ಪರಿಣಾಮವೇನಿದೆ ಅದು ಸಮಾನವಾಗಿ ಆಗಿಲ್ಲ. ಕೇರಳದಲ್ಲಿ ಒಂದು ರೀತಿ ಪರಿಣಾಮವಾದರೆ, ಅಸ್ಸಾಂನಲ್ಲಿ ಒಂದು ಪರಿಣಾಮಮಾಡಿದೆ. ಮೇಘಾಲಯದಲ್ಲಿ ಒಂದು ರೀತಿ ಪರಿಣಾಮವಾಗಿದೆ. ಜಮ್ಮು ಕಾಶ್ಮೀರದಲ್ಲಿ ಒಂದು ರೀತಿಯಾದ ಪರಿಣಾಮವಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಮೊಕದ್ದಮೆಗಳು ನ್ಯಾಯಾಲಯಕ್ಕೆ ಹೋದಾಗಲೂ ಸಹ ಸರ್ವೋಚ್ಚ ನ್ಯಾಯಾಲಯವು ಬೇರೆ ಬೇರೆ ರಾಜ್ಯಗಳಲ್ಲಿ ಹಿಂದುಳಿದ ವರ್ಗಗಳ ಸಂಖ್ಯೆಯ ಪ್ರಮಾಣ ಎಷ್ಟು ಇದೆಯೋ ಅಲ್ಲಿಯವರೆಗೂ ಮೀಸಲಾತಿಯು ಇರಬೇಕೆಂದು ಹೇಳಿದೆ. ಸ್ವಲ್ಪ ಮಾನಸಿಕ ಆರೋಗ್ಯವಿದ್ದಂಥ ನ್ಯಾಯಾಧೀಶರಿದ್ದಾಗ ಅದು ಆಗಿದೆ. ಆದರೆ ಈ ಕುತಂತ್ರ ಇನ್ನೂ ನಿಂತಿಲ್ಲ. ಇತ್ತೀಚೆಗೆ ಮಂಡಲ ವರದಿಯು ಜಾರಿಗೆ ಬಂದಿದೆ. ಅದು ಬಂದ ಮೇಲೆ...

ಶ್ರೀ ಎಂ. ವೀರಪ್ಪಮೊಯಿಲಿ : ಪ್ರಾಚಾರ್ಯರಾದ ನಂಜುಂಜಸ್ವಾಮಿಯವರು ನನ್ನ ಮಾತನ್ನೂ ಕೂಡ ಆಲಿಸುವುದಾದರೆ ಒಂದು ಹೇಳುತ್ತೇನೆ. ತಾವೇನು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಬಗ್ಗೆ ಹೇಳಿದ್ದೀರಿ ಅದು ದಾಖಲೆಗೆ ಹೋಗಬಾರದು. ಆ ಮಾನಸಿಕ ಸ್ಥಿತಿ ಇದ್ದರೆ ಅವರು ಅಲ್ಲಿ ನ್ಯಾಯಾಧೀಶರಾಗಿ ಉಳಿಯಲಿಕ್ಕೆ ಆಗುವುದಿಲ್ಲ. ಆದ್ದರಿಂದ ದಯಮಾಡಿ ಆ ಪದವು ದಾಖಲೆಗೆ ಹೋಗಬಾರದೆಂದು ಅಧ್ಯಕ್ಷರಲ್ಲಿ ವಿನಂತಿಸುತ್ತೇನೆ.

It is a reflectionon the Judge.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ತಮಗೆ ನೆನಪಿರಬಹುದು, ಸ್ವಲ್ಪ ವರ್ಷಗಳ ಹಿಂದೆ ಶ್ರೀ ಇ.ಎಂ.ಎಸ್. ನಂಬೂದರಿಪಾಡ್ ರವರು ಒಂದು ಬಂಡವಾಳ ಶಾಹಿ ವ್ಯವಸ್ಥೆಯಲ್ಲಿ ನ್ಯಾಯಾಲಯವೂ ಕೂಡ ಉತ್ತಮ ವರ್ಗಗಳ ಮುಖವಾಣಿಯಾಗಿರುತ್ತದೆಂದು ಹೇಳಿದ್ದಾರೆ. ಅದರಲ್ಲಿ ಏನೂ ತಪ್ಪಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದು ಜನರಲ್ ಸ್ಟೇಟ್‌ಮೆಂಟ್ ಆಯಿತು.

ಪ್ರೊ. ಎಂ.ಡಿ. ನಂಜುಂಡ ಸ್ವಾಮಿ : ನಾನೂ ಸಹ ಜನರಲ್ ಸ್ಟೇಟ್‌ಮೆಂಟ್ ಮಾಡುತ್ತಿರತಕ್ಕದ್ದು. ನಾನು ಪರ್ಟಿಕ್ಯುಲರ್ ಆಗಿ ನ್ಯಾಯಾಧೀಶರ ಹೆಸರನ್ನು ಹೇಳುತ್ತಿಲ್ಲ. ಆ ರೀತಿ ಹೇಳುವುದಾಗಿದ್ದರೆ ಗಜೇಂದ್ರಘಡ್‌ಕರ್ ವರಿಂದ ಹಿಡಿದು ಕ್ರೀಮಿಲೇಯರ್ ಎನ್ನತಕ್ಕದ್ದನ್ನು ಹೇಳಿದರಲ್ಲಾ ನ್ಯಾಯಾಧೀಶ ಪ್ರಸಾದ್, ಅವರವರೆಗೂ ಸಹ ಹೇಳುತ್ತೇನೆ. ಆದರೆ ಅದನ್ನು ನಾನು ಹೇಳುತ್ತಿಲ್ಲ.

ನಾನು ಯಾರ ಹೆಸರನ್ನು ಹೇಳುತ್ತಿಲ್ಲ. ಇಲ್ಲದೇ ಇದ್ದರೆ ಹೇಳಬಹುದು. ಗಜೇಂದ್ರ ಗಡ್‌ಕರ್‌ರಿಂದ ಹಿಡಿದು ಭಗವತಿಯಿಂದ ಹಿಡಿದು ಪ್ರಸಾದ್‌ರವರೆಗೂ ಹೇಳಬಹುದು. ನಾನು ಏನೋ ಹೇಳುತ್ತಿದ್ದೆ, ಮಧ್ಯೆ ಮರೆತುಹೋಯಿತು. ಈ ಕುತಂತ್ರ ಒಂದೇ ಸಮನೆ ನಡೆಯುತ್ತಾ ಬಂದಿದೆ. ಮೊನ್ನೆ ಕೂಡ ಮಂಡಲ್ ಕಮೀಷನ್ ವರದಿ ಜಾರಿಗೆ ನಮ್ಮ ದೇಶದಲ್ಲಿ ಬಂತು ಎನ್ನುವ ಒಂದು ಸಂಗತಿಯೇ ಉತ್ತಮ ಜಾತಿಗಳು ಏನು ಶೂದ್ರ ಜನಾಂಗ ಎಂದು ಇದೆ, ಇದರ ಅವಕಾಶಗಳನ್ನು ವಂಚನೆ ಮಾಡುತ್ತಿದೆ ಸತತವಾಗಿ ಅದು ಬಹಳ ಎಚ್ಚರಗೊಂದು ಮತ್ತೊಂದು ಕುತಂತ್ರ ಮಾಡುತ್ತೇವೆ. ಇದರ ಹಿಂದೆ ಬಹಳ ಕುತಂತ್ರ ನಡೆದಿದೆ. ಕಾಕಾ ಕಾಲೇಲ್‌ಕರ್ ಕಮೀಷನ್ ವರದಿಯನ್ನು ಯಾವ ರೀತಿ ಈ ಉತ್ತಮ ಜಾತಿಗಳು ಕಸದ ಬುಟ್ಟಿಗೆ ಹಾಕಿದವು. ಆ ಕುತಂತ್ರವೇ ಈ ಕ್ರೀಮಿ ಲೇಯರ್ ರಿಪೋರ್ಟ್. ಮಂಡಲ್ ಕಮೀಷನ್ ವರದಿ ಜಾರಿಗೆ ಬಂದಕೂಡಲೇ ಸುಪ್ರೀಂ ಕೋರ್ಟಿಗೆ ಹೋಗುತ್ತಾರೆ. ಇಂದಿರಾ ಸಹಾನಿಕೇಸ್. ಸ್ವಲ್ಪ ಮಟ್ಟಿಗೆ ಶ್ರೀಮಂತರು ಅವಕಾಶಗಳನ್ನು ಆರಿಸಿಕೊಂಡು ಹೋಗುತ್ತಿದ್ದಾರೆ. ಆ ಕಾರಣ ಹಿಂದುಳಿದ ವರ್ಗಗಳಲ್ಲಿ ಸ್ವಲ್ಪ ಮುಂದುವರಿದಂಥ ಗುಂಪುಗಳನ್ನು ಗುರುತಿಸಬೇಕು. ಟೈಟ್ಲ್ ಹೀಗಿದೆ ಸಭಾಧ್ಯಕ್ಷರೇ,

" The Terms of Reference of the so-called Justice prasad Committee which was asked to identify the Socially advanced groups among the socially and educationally backward Classes".

ಅಂದರೆ ಯಾವ ಯಾವ ಅಳತೆಗೋಲು ಉಪಯೋಗಿಸಿ ಈ ಜಸ್ಟೀಸ್ ಪ್ರಸಾದ್ ಕಮಿಟಿ ಕ್ರೀಮಿಲೇಯರ್‌ನ್ನು ಗುರುತಿಸಬೇಕಾಗಿತ್ತು ಎನ್ನುವುದನ್ನು ತಾವು ಕೂಡ ಸ್ವಲ್ಪ ಆಲೋಚನೆ ಮಾಡಬೇಕು. ಸಾಮಾಜಿಕ ಅಳತೆಗೋಲುಗಳನ್ನು ಉಪಯೋಗಿಸಿ ಈ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿರುವಂಥ ವರ್ಗಗಳಲ್ಲಿ ಯಾರು ಸ್ವಲ್ಪ ಸಾಮಾಜಿಕವಾಗಿ ಮುಂದುವರಿದಿದ್ದಾರೆ ಎನ್ನುವುದನ್ನು ಗುರುತಿಸಿ ಎಂದರೆ ಆ ಜಸ್ಟೀಸ್ ಪ್ರಸಾದ್ ಕಮಿಟಿ ವರದಿಯ ಪೂರ್ತಿ ಪಾಠ ಆರ್ಥಿಕ ಅಳತೆಗೋಲು. ನಾಲ್ಕು ಎಕರೆ ಮಂಡ್ಯ ಜಿಲ್ಲೆಯಲ್ಲಿ ನೀರಾವರಿ ಭೂಮಿ ಇದ್ದರೆ ನಮ್ಮ ಮಂಡ್ಯದ ಗೌಡರು ಶೈಕ್ಷಣಿಕವಾಗಿ ಮುಂದುವರೆದವರು, ಸಾಮಾಜಿಕವಾಗಿ ಮುಂದುವರೆದವರು, ಆರ್ಥಿಕವಾಗಿ ಮುಂದುವರೆದವರು, ಅವರಿಗೆ ಮೀಸಲಾತಿ ಇಲ್ಲ. ಯಾರಿಗೆ ಒಂದು ಸ್ವಲ್ಪ ಶಾಲೆಗಳಿಗೆ ಹೋಗುವಂಥ ಶಕ್ತಿ, ಕಾಲೇಜಿನ ಹಂತಕ್ಕೆ ಹೋಗುವಂಥ ಶಕ್ತಿ ಇದೆ, ಅವರಿಗೆ ಮೀಸಲಾತಿ ಇದೆ. ಯಾರಿಗೆ ಶಾಲೆಗೆ ಹೋಗುವುದಕ್ಕೆ ಶಕ್ತಿ ಇಲ್ಲ. ಅವರಿಗೆ ಮೀಸಲಾತಿ ಇಲ್ಲ, ಅದಕ್ಕೇ ನಾನು ಹೇಳಿದ್ದೇ. ಈ ಜಸ್ಟೀಸ್ ಪ್ರಸಾದ್‌ರ ಕ್ರೀಮಿ ಲೇಯರ್ ರಿಪೋರ್ಟ್‌ಗೆ ಮತ್ತು ಈ ಮೂಲ ಸಂವಿಧಾನಕ್ಕೂ ಏನೂ ವ್ಯತ್ಯಾಸ ಇಲ್ಲ. ಅದನ್ನು ರಚನೆ ಮಾಡಿದವರು ಅಂಬೇಡ್ಕರ್ ಅಲ್ಲ. ಗೋಪಾಲ್ ಸ್ವಾಮಿ ಅಯ್ಯಂಗಾರ್ ಅಲ್ಲಾಡಿ ಕೃಷ್ಣಸ್ವಾಮಿಯ್ಯರ್, ಬೆನಗಲ್ ಶಿವರಾವ್, ಕೆ.ಎಂ.ಮುನ್ಷಿ ಐದನೇಯ ಮೌನ ಪ್ರೇಕ್ಷಕ ಅಂಬೇಡ್ಕರ್. ಆ ಕಾರಣಕ್ಕೆ ಅವರ ಕಣ್ಣು ತಪ್ಪಿಸಿ ಮೂಲ ಸಂವಿಧಾನದಲ್ಲಿ ಆರ್ಟಿಕಲ್ 15(4)ಇರಲಿಲ್ಲ. ಶಾಲಾಕಾಲೇಜುಗಳನ್ನು ಮುಚ್ಚುವಂಥ ಒಂದು ಮೂಲ ಸಂವಿಧಾನವನ್ನು ನಾವು ಸ್ವೀಕಾರ ಮಾಡಿದೆವು. ಅಂಬೇಡ್ಕರ್‌ರವರು ಸಂವಿಧಾನರಚನಾ ಸಭೆಯಲ್ಲಿ ಇದ್ದರೂ ಕೂಡ ಮಾಡಿದೆವು. ಇದನ್ನು ಮೊದಲು ಗುರುತಿಸಿದವರು ಪೆರಿಯಾರ್ ರಾಮಸ್ವಾಮಿ. ಸ್ವಾತಂತ್ರ್ಯ ಪೂರ್ವದಲ್ಲಿ ಹಿಂದಿನ ಮದ್ರಾಸ್

ಪ್ರೆಸಿಡೆನ್ಸಿಯಲ್ಲಿ ಮತ್ತು ನಮ್ಮ ಹಳೆಯ ಮೈಸೂರು ಪ್ರದೇಶದಲ್ಲಿ ಮೀಸಲಾತಿ ಆಂದೋಲನ ನಡೆಯುತ್ತಿತ್ತು ಎಂಬುದನ್ನು ಪೆರಿಯಾರ್ ರಾಮಸ್ವಾಮಿಯವರು ಗುರುತಿಸಿ ಅವರು ತಮಿಳುನಾಡಿಗೆ ಒಂದು ಕರೆಯನ್ನು ಕೊಟ್ಟರು. ಇಂತಿಷ್ಟೇ ದಿವಸದಲ್ಲಿ ಆರ್ಟಿಕಲ್ 16(4) ಇರುವ ರೀತಿ ಆರ್ಟಿಕಲ್ 15(4) ಸಂವಿಧಾನದೊಳಗೆ ಬರದಿದ್ದರೆ ತಮಿಳುನಾಡಿನ ಎಲ್ಲಾ ಯುವಕರಿಗೂ ಕರೆ ಕೊಟ್ಟಿದ್ದರು ಸಭಾಧ್ಯಕ್ಷರೇ.. ಒಂದು ಟಿನ್‌ನಲ್ಲಿ ಪೆಟ್ರೋಲ್ ಮತ್ತೊಂದು ಕೈಯಲ್ಲಿ ಬೆಂಕಿಕಡ್ಡಿ. ಕುಮಾರಸ್ವಾಮಿರಾಜ್ ಎಂದು, ಮುಖ್ಯಮಂತ್ರಿ ಪ್ರಧಾನಿ ನೆಹರೂ ಹತ್ತಿರ ಓಡಿಹೋಗಿ ತಮಿಳುನಾಡಿಗೆ ಬೆಂಕಿ ಹತ್ತಿಸದೆ ನೀವು ಸಂವಿಧಾನಕ್ಕೆ ತಿದ್ದುಪಡಿ ಮಾಡಲೇಬೇಕು ಎಂದು ಕೇಳಿದಮೇಲೆ ಸಂವಿಧಾನಕ್ಕೆ ಮೊದಲನೇ ತಿದ್ದುಪಡಿ ಬಂದಿದ್ದು ಆರ್ಟಿಕಲ್ 15(4) ಕ್ಕೆ.

12.50 ಪಿ.ಎಂ.

ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿ ಹೇಳುವುದಕ್ಕೆ ಹೊರಟಿರುವುದು ಹಿಂದಿನ ಚರಿತ್ರೆ. ನಾನು ತಮ್ಮ ಮೂಲಕ ಸದನದ ಗಮನಕ್ಕೆ ತರಬಯಸುವುದೇನೆಂದರೆ ಶೂದ್ರ ಜನಾಂಗವೆಂದು ಏನಿದೆ, ಇದಕ್ಕೆ ನ್ಯಾಯವಾಗಿ ಏನು ಅವಕಾಶ ಲಭಿಸಬೇಕು ಅದನ್ನು ವಂಚಿಸುವಂತಹ ಕೆಲಸ ಸತತವಾಗಿ ನಡೆಯುತ್ತಿದೆ. ಎಲ್ಲಾ ಹಂತದಲ್ಲೂ ಸರ್ವೋಚ್ಚ ನ್ಯಾಯಾಲಯದಲ್ಲೂ ನಡೆಯುತ್ತಿದೆ. ನಮ್ಮ ಸಂವಿಧಾನದಲ್ಲೂ ನಡೆಯುತ್ತಿದೆ. ಎಲ್ಲ ಕಡೆಯೂ ನಡೆಯುತ್ತಿದೆ. ಇದರ ಬಗ್ಗೆ ನಾವು ಎಚ್ಚೆತ್ತು ಒಂದು ತೀರ್ಮಾನಕ್ಕೆ ಬರಬೇಕು. ಈ ಹೋರಾಟದ ಹಿನ್ನೆಲೆಯಲ್ಲಿ ತಮಿಳುನಾಡಿನವರು ಏನು ಮಾಡಿದ್ದಾರೆಂದರೆ ಅಲ್ಲಿ ಸರ್ವಾನುಮತದ ನಿರ್ಣಯ ಮಾಡಿದರು. ನಾನು ಮೊದಲೇ ಹೇಳಿದ ಹಾಗೆ ಈ ಜಾತಿಪದ್ಧತಿಯ ಪರಿಣಾಮ ನಮ್ಮ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ ಆಗಿದೆ. ಕೇರಳದಲ್ಲಿ ನಂಬೂದ್ರಿ ಬ್ರಾಹ್ಮಣರ ಕೈಗೆ ಸಿಕ್ಕಂಥ ಶೂದ್ರರ ಪರಿಸ್ಥಿತಿಯೇ ಬೇರೆ. ಕಾಶ್ಮೀರದ ಪಂಡಿತರ ಕೈಗೆ ಸಿಕ್ಕಂಥವರ ಪರಿಸ್ಥಿತಿಯೇ ಬೇರೆ. ಉತ್ತರ ಪ್ರದೇಶದ ತಿವಾರಿಗಳ ಕೈಗೆ ಸಿಕ್ಕಂಥವರ ಪರಿಸ್ಥಿತಿಯ ಬೇರೆ, ಹಾಗೆಯೇ ಅಸ್ಸಾಂ ಮತ್ತು ಮೇಘಾಲಯದ ಪರಿಸ್ಥಿತಿಯೂ ಬೇರೆ ಆಗುತ್ತದೆ. ಈ ಕಾರಣದಿಂದ ಅಲ್ಲಿ ಇರತಕ್ಕಂಥ ಹಿಂದುಳಿದ ಜನಾಂಗಗಳ ಸಂಖ್ಯೆ ಬೇರೆ ಬೇರೆಯಾಗುತ್ತದೆ. ಆ ಕಾರಣ ಹಿಂದುಳಿದ ವರ್ಗಗಳ ಜನಾಂಗದ ಅಳತೆ ಏನಿದೆ. ಪ್ರತಿ ರಾಜ್ಯದಲ್ಲೂ ಮೀಸಲಾತಿ ಎಷ್ಟು ಇರಬೇಕು ಎನ್ನುವುದರ ಬಗ್ಗೆ ಪರಮಾಧಿಕಾರ ಆ ರಾಜ್ಯಸರ್ಕಾರಗಳಿಗೆ ಇರಬೇಕು; ಎನ್ನತಕ್ಕಂಥ ತಿದ್ದುಪಡಿಯನ್ನು ಸಂವಿಧಾನವಾಗಿ ಆಗಲೇ ಬೇಕು. ಆದುದರಿಂದ ನಾನು ಒಂದು ನಿರ್ಣಯವನ್ನು ತಯಾರು ಮಾಡಿ ತಂದಿದ್ದೇನೆ. "ಶತಮಾನದಿಂದಲೂ ಜಾತಿ ಪದ್ಧತಿಯಲ್ಲಿ ಉಂಟಾಗಿರತಕ್ಕಂಥ ಅಸಮಾನತೆ, ಮತ್ತು ಸಮಾಜದ ವಕ್ರತೆಗಳು, ಭಾರತದ ವಿವಿಧ ರಾಜ್ಯಗಳಲ್ಲಿ ವಿವಿಧ ಪ್ರಮಾಣದಲ್ಲಿ ಉಂಟಾಗಿರುವ ಕಾರಣ, ಜಾತಿಯ ಅಸಮಾನತೆಯನ್ನು ಸರಿಪಡಿಸಲು ಸಂವಿಧಾನದಲ್ಲಿ ಅಳವಡಿಸುವ ವಿಷಯಗಳು ನೀತಿಯ ಚೌಕಟ್ಟಿನಲ್ಲಿ ಮೀಸಲಾತಿಯ ಪ್ರಮಾಣವನ್ನು ಆಯಾ ರಾಜ್ಯಗಳೇ ತೀರ್ಮಾನಿಸಬೇಕಾದ ಅವಶ್ಯಕತೆ ಇರುವುದರಿಂದ, ಇಂತಹ ಕ್ರಮಕ್ಕೆ ಅವಕಾಶವಾಗುವಂತೆ ಸಂವಿಧಾನಕ್ಕೆ ತಿದ್ದುಪಡಿಯನ್ನು ತರಬೇಕೆಂದು ಕೇಂದ್ರಸರ್ಕಾರವನ್ನು ಈ ಸದನವು ಸರ್ವಾನುಮತದಿಂದ ಒತ್ತಾಯಿಸುತ್ತದೆ." ತಮ್ಮ ಮೂಲಕ ಎಲ್ಲಾ ಸದಸ್ಯರಲ್ಲೂ ನನ್ನ ವಿನಂತಿ ಮಾಡಿಕೊಳ್ಳುವುದೇನೆಂದರೆ ಇಂತಹ ಒಂದು ನಿರ್ಣಯವನ್ನು ಮಾಡಿ ನಾವು ಕೇಂದ್ರಸರ್ಕಾರಕ್ಕೆ ಕಳುಹಿಸುವ ಬಗ್ಗೆ ಈ ಸಭೆಯಲ್ಲಿ ಅಭಿಮತವನ್ನು ಪಡೆಯಬಹುದು. ಇದನ್ನು ತಮಗೆ ಕಳುಹಿಸುತ್ತೇನೆ. ನಮಸ್ಕಾರ.

+ಶ್ರೀ ಸಿ. ಭೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೇ, ಈ ಮೀಸಲಾತಿಯ ಅವಾಂತರದಿಂದ ಆಗಿರುವಂತಹ ದುಸ್ಥಿತಿಯನ್ನು ಚರ್ಚೆ ಮಾಡುವುದಕ್ಕೆ ಅದರ ಗಹನತೆಯ ಅರಿವು ಇದ್ದು ಪ್ರಶ್ನೋತ್ತರದ ಸಮಯವನ್ನು ತಾವು ಮುಂದೂಡಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈಗಾಗಲೇ ಸಾಕಷ್ಟು ಚರ್ಚೆ ಆಗಿದೆ. ಇವೆಲ್ಲವನ್ನೂ ಪುನರು ಉಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಈ ವಿಷಯ ಹೇಳಬೇಕೋ ಬೇಡವೋ ಗೊತ್ತಿಲ್ಲ ಆದರೂ ಸಹ ಹೇಳಲಿಚ್ಛಿಸುತ್ತೇನೆ. ಲಕ್ಷಾಂತರ ವಿದ್ಯಾರ್ಥಿಗಳು ಪ್ರತಿ ಕಾಲೇಜುಗಳ ಬಾಗಿಲು ತಟ್ಟತಕ್ಕಂಥ ಮತ್ತು ಆಡಳಿತ ಮಂಡಳಿಯವರ ಮನೆಗಳಿಗೆ ತಿರುಗಾಡುವಂತಹ ಪರಿಸ್ಥಿತಿ ಇವತ್ತು ರಾಜ್ಯದಲ್ಲಿ ಉಂಟಾಗಿದೆ. ಆ ರೀತಿ ಆಡಳಿತ ಮಂಡಳಿಗಳ ಮತ್ತು ಕಾಲೇಜುಗಳ ಬಾಗಿಲುಗಳನ್ನು ತಟ್ಟುವಂತಹ ಜನರಲ್ಲಿ ನಾನೂ ಒಬ್ಬ; ನನ್ನ ಮಗ ಇವತ್ತು ಪಿ.ಯು.ಸಿ. ಪಾಸು ಮಾಡಿದ್ದಾನೆ. ಸಾವಿರಾರು ವಿದ್ಯಾರ್ಥಿಗಳ ಪೈಕಿ ಅವನೂ ಒಬ್ಬನಾಗಿದ್ದಾನೆ. ಇವತ್ತು ಅವನು ಕಾಲೇಜಿಗೆ ಹೋಗುವ ಹಾಗಿಲ್ಲ. ಅವನು ಇಂಜಿನಿಯರ್‌ಗೊ, ಇನ್ನಾವುದಕ್ಕೋ ಅರ್ಜಿಯನ್ನೂ ಹಾಕಿದ್ದಾನೆ. ಈಗ ಅವನಿಗೆ ಸೀಟು ಸಿಕ್ಕುತ್ತದೆಯೋ ಇಲ್ಲವೋ ಗೊತ್ತಿಲ್ಲ. ಇವತ್ತಿನ ದಿವಸ ಅವನು ಬೆಳಿಗ್ಗೆ ಎದ್ದರೆ ಒಂದಲ್ಲ ಒಂದು ಚೇಷ್ಟೆ ಮಾಡುತ್ತಿರುತ್ತಾನೆ. ನಾವು ಏನು ಹೇಳುವುದು, ಅವನಿಗೆ; ಅವನು ಹೋಗುವುದಕ್ಕೆ ಸ್ಥಳವಿಲ್ಲ. ದಾರಿ ಇಲ್ಲ; ಮಾರ್ಗ ಇಲ್ಲ. ಹೀಗಾಗಿ ಅವನು ಮನೆಯಲ್ಲೇ ಕುಳಿತಿರುತ್ತಾನೆ. ಇವತ್ತು ನಾನು ಏನು ಹೇಳುವುದು ಎಂದರೆ ಈ ಪರಿಸ್ಥಿತಿ ಉಂಟಾಗಿದೆ ಎಂಬುದನ್ನು ಈಗಾಗಲೇ ನಮ್ಮ ಸ್ನೇಹಿತರು ಹೇಳಿದ್ದಾರೆ. ಈ ಮೀಸಲಾತಿಯನ್ನು ರಾಜಕೀಯ ದಾಳವನ್ನಾಗಿ, ಉಪಯೋಗಿಸಿಕೊಂಡ ಕಾರಣದಿಂದ ಈ ಪರಿಸ್ಥಿತಿ ಉದ್ಭವಿಸಿರತಕ್ಕಂಥದ್ದು. ಈ ಸರ್ಕಾರ ಆಡಳಿತಕ್ಕೆ ಬಂದು ನಾಲ್ಕು ಮುಕ್ಕಾಲು ವರ್ಷಗಳಾಯಿತು.

ಅದರಲ್ಲೂ ಈ ಕಾಂಗ್ರೆಸ್ಸ್ (ಐ) ಪಕ್ಷ ಹಿಂದುಳಿದ ವರ್ಗದವರನ್ನು, ಅಲ್ಪಸಂಖ್ಯಾತರನ್ನು ನಾವು ಅಟ್ಟಕ್ಕೆ ಏರಿಸುವುದಿಲ್ಲ. ಇನ್ನು ಅದಕ್ಕಿಂತ ಮೇಲೆ ಏನಾದರೂ ಸ್ಥಳವಿದ್ದರೆ ಅಲ್ಲಿಗೆ ತೆಗೆದುಕೊಂಡು ಹೋಗುತ್ತೇವೆ ಎಂದು ಭರವಸೆಗಳ ಮೇಲೆ ಭರವಸೆಯನ್ನು ಕೊಟ್ಟು ನಾಲ್ಕು ಮುಕ್ಕಾಲು ವರ್ಷ ಕಳೆದರೂ ಸಹ ಈ ಹಿಂದುಳಿದ ವರ್ಗದವರನ್ನು ಸಮಾಧಿ ಮಾಡತಕ್ಕಂತಹ ಪರಿಸ್ಥಿತಿ ಇವತ್ತು ಉದ್ಭವವಾಗಿದೆ. ಈಗ ನನ್ನ ಪಾಡು ಮತ್ತು ನನ್ನ ಮಗನ ಪಾಡು ಒಂದು ಕಡೆ ಇರಲಿ. ಇನ್ನು ಸಮಾಜದಲ್ಲಿ ಕೆಳವರ್ಗ ಅಥವಾ ಕೆಳಮಟ್ಟದಲ್ಲಿ ಇರತಕ್ಕಂಥವರ ಪಾಡು ಏನಾಗಿರಬೇಕು. ರಾಜ್ಯದಲ್ಲಿ ಇಬ್ಬರೂ ಮುಖ್ಯಮಂತ್ರಿ ಆಗಿರತಕ್ಕಂಥವರು ಹಿಂದುಳಿದ ವರ್ಗಕ್ಕೆ ಸೇರಿದಂಥವರು, ಮಾನ್ಯ ಮೊಯಿಲಿಯವರು ಕೂಡ ಹೇಳುತ್ತಾರೆ. ನಾನು ಹಿಂದುಳಿದ ವರ್ಗಕ್ಕೆ ಸೇರಿದವ ಎಂದು ಮತ್ತು ಇವರ ಹಿಂದೆ ಮುಖ್ಯಮಂತ್ರಿ ಆಗಿರತಕ್ಕಂಥವರು ಹಿಂದುಳಿದ ವರ್ಗಕ್ಕೆ ಸೇರಿದವರು. ಇವರಿಬ್ಬರೂ ಮುಖ್ಯಮಂತ್ರಿಗಳಾಗಿ ಹಿಂದುಳಿದ ವರ್ಗಗಳ ತಲೆ ಬೋಳಿಕೆ ಆಯಿತೇ ವಿನಃ ಹಿಂದುಳಿದ ವರ್ಗಗಳ ಉದ್ಧಾರ ಆಗತಕ್ಕಂತಹ ಪರಿಸ್ಥಿತಿಯಾಗಲಿಲ್ಲ. ಅದೃಷ್ಟವೋ, ದುರಾದೃಷ್ಟವೋ ಹಿಂದೆ ಈ ಕಾರ್ಯಕಲಾಪ ಮಾಡತಕ್ಕಂತಹ ಸಮಯದಲ್ಲಿ ಮಾನ್ಯ ಧರ್ಮಸಿಂಗ್ ಅವರೂ ಇದ್ದರು. ಹಿಂದುಳಿದ ವರ್ಗಗಳ ನೇತಾರ ಎನ್ನತಕ್ಕಂತಹ ನಮ್ಮ ಮಾನ್ಯ ಸ್ನೇಹಿತರಾದ ಕಾಗೋಡು ತಿಮ್ಮಪ್ಪನವರು ಅದಕ್ಕೆ ಸಂಬಂಧಪಟ್ಟ ಮಂತ್ರಿಗಳಾಗಿದ್ದಾರೆ. ಇಷ್ಟೆಲ್ಲಾ ಆಗಿದ್ದರೂ ಸಹ, ಇಂಥವರು ಇದ್ದರೂ ಈ ವ್ಯವಸ್ಥೆಯಲ್ಲಿ ಕೈಯನ್ನು ಕೂಡ ಕಟ್ಟತಕ್ಕಂತಹ ಪರಿಸ್ಥಿತಿ ಉಂಟಾಗಿದೆ. ಅದನ್ನು ಮಾನ್ಯ ಪ್ರೊಫೆಸರ್ ನಂಜುಂಡಸ್ವಾಮಿಯವರು ಬಹಳ ಚೆನ್ನಾಗಿ ಹೇಳಿದ್ದಾರೆ. ಅವರು ಕಾನೂನು ಪ್ರೊಫೆಸರ್ ಆಗಿರುವುದರಿಂದ ನಾನು ಅವರ ಮಟ್ಟಕ್ಕೆ ಹೋಗುವುದಕ್ಕೆ ಆಗುವುದಿಲ್ಲ. ಆದರೆ ಇದರ ಪರಿಣಾಮ ಏನು ಎನ್ನತಕ್ಕಂಥಾದ್ದನ್ನು ಅನುಭವಿಸುತ್ತಿರುವವರಲ್ಲಿ ನಾನೂ ಕೂಡ ಒಬ್ಬ. ಹಿಂದುಳಿದ ವರ್ಗದವರು ಅಧಿಕಾರದಲ್ಲಿ ಇದ್ದರೂ ಸಹ ಈ ಪರಿಸ್ಥಿತಿಯ ಒತ್ತಡದ ಮೇಲೆ ಹಿಂದುಳಿದ ವರ್ಗಗಳಿಗೆ ಅನ್ಯಾಯ ನಡೆಯತಕ್ಕಂತಹ ಮಟ್ಟಕ್ಕೆ ಇವತ್ತು ತಲುಪಿದ್ದಾರೆ. ಆದುದರಿಂದ ಇವತ್ತಿನ ದಿವಸ ಹಿಂದುಳಿದ ವರ್ಗಗಳ ಉದ್ಧಾರಕೋಸ್ಕರ ನಾವು ಹುಟ್ಟಿದ್ದೀವಿ ಅಥವಾ ರಾಜಕೀಯದಲ್ಲಿ ಇದ್ದೇವೆ ಎಂದು ಹೇಳತಕ್ಕಂತಹ ನಮ್ಮ ಸ್ನೇಹಿತರಾದಂತಹ ತಿಮ್ಮಪ್ಪನವರು ಅಥವಾ ಮಾನ್ಯ ಮುಖ್ಯಮಂತ್ರಿಗಳಾಗಲಿ, ನೀವು ಅಲ್ಲಿ ಇರುವುದಕ್ಕೆ ಲಾಯಕ್ಕಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ನಮಗೆ ಅಷ್ಟು ಧೈರ್ಯ ಇಲ್ಲ, ಸಾಹಸ ಇಲ್ಲ, ಸ್ಥೈರ್ಯ ಇಲ್ಲ ಎಂದು ಹೇಳಿ. ಈಗ ನಂಜುಂಡಸ್ವಾಮಿಯವರು ಹೇಳಿದ್ದಾರೆ. ಶೂದ್ರರು ಎಂದರೆ ನೀವೂ ಬರುತ್ತೀರಿ, ಎಲ್ಲರೂ ಬರುತ್ತಾರೆ ಎಂದು. ನೀವು ಇನ್ನು ಸ್ವಲ್ಪ ಕಠೋರವಾಗಿ ಹೇಳಿಬಿಡಿ, ನಿಮ್ಮನ್ನು ಗಟ್ಟಿ ಕುಳ ಎಂದು ನಿಮ್ಮ ಹಿಂದುಗಡೆಯಿಂದ ನಿಮ್ಮ ಜೊತೆ ಸೇರುತ್ತೇವೆ.

ಶ್ರೀ ಸಿ. ಬೈರೇಗೌಡ : ಆಗಲೇ ಕೆಲವರು ಮಾನ್ಯ ಚಂದ್ರೇಗೌಡರು ಉಪಯೋಗಿಸಿದ ಕೆಲವು ಪದಗಳ ಬಗ್ಗೆ...

ಶ್ರೀ ಬಿ.ಎಸ್. ಯಡಿಯೂರಪ್ಪ : ಆಗ ಇದು ಮುಠ್ಠಾಳ ಸರ್ಕಾರ, ಇದನ್ನು ಸರಿಯಾಗಿ ಜಾರಿಗೆ ತಂದಿಲ್ಲ ಎನ್ನುವ ಶಬ್ದ ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿದಿರಿ. ಇನ್ನು ಈಗ ಅವರೇನಾದರೂ ಹೇಳಿದರೆ ಮತ್ತು ಅವರನ್ನು ಇಕ್ಕಟ್ಟಿಗೆ ಸಿಕ್ಕಿಸುವುದಕ್ಕೆ ಈ ರೀತಿ ಮಾಡುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ನೀವು ಅವರಿಗೆ ಗಟ್ಟಿಕುಳ ಎಂದು ಹೇಳಿ ಅದಕ್ಕೆ ಒಂದು ಬಣ್ಣ ಕಟ್ಟಿ ಅವರನ್ನು ಹೊರಗಡೆ ಹಾಕಿಸಬೇಕು ಎಂದು ಮಾಡಿದ್ದೀರಾ?

ಶ್ರೀ ಸಿ. ಬೈರೇಗೌಡ : ಅವರು ಉಪಯೋಗಿಸತಕ್ಕಂತಹ ಪದದ ಬಗ್ಗೆ ಬಹಳ ತೀವ್ರವಾದಂತಹ ಆಕ್ಷೇಪಣೆ ಅದು ತಮ್ಮಿಂದಲೇ ಬಂತು. ಅವರು ಒಂದು ಸಾರಿ ಹೇಳಿದ್ದಾರೆ. ನಾನು ಅದನ್ನು 2 ಸಲ ಹೇಳುತ್ತೇನೆ. this is double idiotic Government. ನಾನು ಅದನ್ನು ಆಗಲೇ ಹೇಳಿದ್ದೇನೆ. ಮತ್ತೆ ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ನಿಮ್ಮಿಂದಲೂ ಕೂಡ ನಿಮ್ಮ ಕಣ್ಣು ತಪ್ಪಿಸಿ ಅಥವಾ ಕೈ ತಪ್ಪಿಸಿ ಈ ಕೆಲಸ ನಡೆಯುತ್ತಿದೆ. ನಿಮ್ಮ ಅಡ್ವೋಕೇಟ್ ಜನರಲ್‌ಗೆ ಸರ್ಕಾರದಿಂದ ಏನು ಬ್ರೀಫ್ ಕೊಟ್ಟದ್ದೀರಿ, ನೀವು ಈ ಮೊಕದ್ದಮೆ ಬಂದಂತಹ ಸಂದರ್ಭದಲ್ಲಿ ಏನು ವಾದ ಮಾಡಬೇಕು ಎಂದು ಹೇಳಿದ್ದೀರಿ, ಇವತ್ತು ಅಲ್ಲಿ ಅರ್ಜಿ ಇಲ್ಲದೆ ಇದ್ದರೂ ಸಹ 86ನೇ ಸರ್ಕಾರಿ ಆಜ್ಞೆಯನ್ನು ಪ್ರಶ್ನೆ ಮಾಡದೇ ಇದ್ದರೂ ಸಹ ಆ ಆಜ್ಞೆಯನ್ನು ಕೊಟ್ಟಿರತಕ್ಕಂತಹ ಪರಿಸ್ಥಿತಿ ಇವತ್ತು ಉಂಟಾಗಿದೆ. ಇದನ್ನು ತಡೆಗಟ್ಟುವುದಕ್ಕೆ ನಿಮ್ಮ ಅಡ್ವೋಕೇಟ್ ಜನರಲ್‌ಗೆ ನೀವು ಏನು ಬ್ರೀಫ್ ಕೊಟ್ಟಿದ್ದೀರಿ? ಏನು ಹೇಳಿದ್ದೀರಿ ಅವರಿಗೆ ಅಥವಾ ಇದು ಸರ್ಕಾರದ ತೀರ್ಮಾನವೇ? ವೈಯುಕ್ತಿಕವಾದಂತಹ ತೀರ್ಮಾನವೇ ಎಂಬುದನ್ನು ನೀವು ಹೇಳಬೇಕಾಗುತ್ತದೆ.

ಇವತ್ತು ಏನು ಲಕ್ಷಾಂತರ ವಿದ್ಯಾರ್ಥಿಗಳಿಗೆ ಅವರ ಜೀವನದಲ್ಲಿ ಅತ್ಯಮೂಲ್ಯವಾದ ವೇಳೆಯನ್ನು, ಅತ್ಯಮೂಲ್ಯವಾದ ವಯಸ್ಸನ್ನು, ಕಳೆಯತಕ್ಕಂಥ ಸಂದರ್ಭವನ್ನು ಹಾಳು ಮಾಡುವುದಕ್ಕೆ ಯಾರಿಗೂ ಕೂಡ ಅಧಿಕಾರ ಇಲ್ಲ, ಸರ್ಕಾರಕ್ಕೂ ಕೂಡ ಇಲ್ಲ; ಇದನ್ನು ತೀವ್ರವಾಗಿ ತಾವು ಗಮನಿಸಬೇಕಾಗುತ್ತದೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಹೇಳಿದ್ದೇನೆ. ಸುಪ್ರೀಂ ಕೋರ್ಟಿನವರು ಇದಕ್ಕೆ ತಡೆಯಾಜ್ಞೆ ಕೊಟ್ಟಿದ್ದಾರೆ, ಈ ತಡೆಯಾಜ್ಞೆಯನ್ನು ತತ್‌ಕ್ಷಣ ತೆರೆವು ಮಾಡುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಇದನ್ನು ಕೂಡ ತಾವು ಹೇಳಬೇಕಾಗುತ್ತದೆ. ಸಣ್ಣ ವಿಚಾರವಿಲ್ಲ, ಏನೋ ಒಂದುಸಣ್ಣ ಕೇಸಿನಲ್ಲಿ 5 ಎಕರೆ 10 ಎಕರೆ ಬಾಬ್ತಿನಲ್ಲಿ ಒಂದು ತಡೆಯಾಜ್ಞೆ ಕೊಟ್ಟಿದಿದ್ದರೆ ಆಯಿತು ಇವತ್ತಲ್ಲ ನಾಳೆ ತೀರ್ಮಾನ ಆಗಲಿ ಎಂದು ಹೇಳಬಹುದಾಗಿತ್ತು. ಇದು ಅಂಥದ್ದಲ್ಲ ಅತ್ಯಮೂಲ್ಯವಾದಂಥ ಯುವಕರ ಜೀವನದ ಘಟ್ಟದಲ್ಲಿ ಅಪಘಾತಗಳ ಮೇಲೆ ಅಪಘಾತಗಳು ಇವತ್ತಿನ ದಿವಸ ಒದಗಿಬರುತ್ತಿವೆ. ಅದರ ಸಂಪೂರ್ಣ ಜವಬ್ದಾರಿಯನ್ನು ನೀವು ಹೊರಬೇಕು. ಈ ಮೀಸಲಾತಿಯನ್ನು ನೀವು ರಾಜಕೀಯ ದಾಳವನ್ನಾಗಿ ಉಪಯೋಗಿಸಿಕೊಂಡಿರಿ. ನಮ್ಮ ಸ್ನೇಹಿತರು ಹೇಳಿದ್ದಾರೆ. ಪರಶುರಾಮ, ಕ್ಷತ್ರಿಯರೆಲ್ಲರನ್ನೂ ನಿಗ್ರಹಿಸುತ್ತೇನೆ ಆದರೆ ಮದುವೆಯಾಗಿರತಕ್ಕವರನ್ನು ನಾನು ನಿಗ್ರಹಿಸುವುದಿಲ್ಲ ಎಂದು ಹೇಳಿದ್ದ.ಅದಕ್ಕೆ ದಶರಥ ಅವನು ಬಂದಾಗಲೆಲ್ಲಾ ಮದುವೆ ಮಾಡಿಕೊಳ್ಳುತ್ತಿದ್ದ

ಅದಕ್ಕಾಗಿ ಅವನು ಉಳಿದುಕೊಂಡ. ಅದೇ ರೀತಿ ನಿಮ್ಮ ಕುರ್ಚಿ ಅಲ್ಲಾಡುತ್ತಿದೆ. ಒಂದೊಂದು ಸಾರಿ ಒಂದೊಂದನ್ನು ಮೊರೆ ಹೊಕ್ಕಿರಿ. ಮಾನ್ಯ ರೇವಣ್ಣನವರೇ, ನಿಮ್ಮ ಕುರ್ಚಿ ಅಲ್ಲಾಡಿದಾಗಲೆಲ್ಲಾ ಒಂದು ಸಾರಿ ಪಂಚಾಯಿತಿ ರಾಜ್ಯ ಚುನಾವಣೆ ಮಾಡುತ್ತಿದ್ದೇವೆ ನನ್ನನ್ನು ತೆಗೆಯಬೇಡಿ ಎಂದಿರಿ. ಈಗ, ಆಯಿತು ಅದಕ್ಕೆ ಜೀವದಾನ. ಪಂಚಾಯಿತಿ ಚುನಾವಣೆ ಮುಗಿದೇ ಹೋಯಿತು. ಗ್ರಾಮ ಪಂಚಾಯಿತಿಯ ಚುನಾವಣೆ ಅತಿ ಹೆಚ್ಚಿನ ಜನಸಂಖ್ಯೆ ಇದ್ದಂಥದ್ದು, ಅದೂ ಮುಗಿದು ಹೋಯಿತು. ಇನ್ನು ಉಳಿದಿರತಕ್ಕದ್ದು ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತು, ಅದರಲ್ಲಿ ಭಾಗವಹಿಸುವವರೆಲ್ಲಾ ಮೂರು ಮತ್ತೊಂದು ಜನ, ಅಂತಹ ಪರಿಸ್ಥಿತಿಯಲ್ಲಿ ನಿಮಗೆ ಏನಾದರೂ ಒಂದು ನೆಪ ಬೇಕಾಗಿತ್ತು. ಮುಳುಗುವವನಿಗೆ ಹುಲ್ಲುಕಡ್ಡಿ ಆಶ್ರಯ ಎಂದು ಹೇಳುತ್ತಾರೆ. ನೀವೇ ಮಾಡಿರತಕ್ಕಂಥ ನಿಮ್ಮ ಪಕ್ಷದವರೇ ಮಾಡಿರತಕ್ಕಂಥ ಉದಾಹರಣೆಗಳು ಇವೆಯಲ್ಲಾ, ಏತಕ್ಕಾಗಿ ಅದಕ್ಕೆ ಅವಕಾಶ ಮಾಡಿ ಕೊಟ್ಟಿರಿ? ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ನಿಮ್ಮ ಪಕ್ಷದವರೇ, ನಿಮ್ಮವರೇ? ಬಹಳ ಜವಾಬ್ದಾರಿಯುತ ಸ್ಥಾನದಲ್ಲಿ ಇರತಕ್ಕವರೇ ಮಾಡಿರತಕ್ಕ ಉದಾಹರಣೆ ಇದೆ. ಈ ಸದನದ ಸದಸ್ಯರಲ್ಲ ಎಂಬ ಕಾರಣದಿಂದ ನಾನು ಅವರ ಹೆಸರನ್ನು ಹೇಳುವುದಿಲ್ಲ. ಅವರ ಮೇಲೆ ಏನು ಕ್ರಮ ತೆಗೆದುಕೊಂಡಿರಿ? ಇವರು ತಮ್ಮ ಕುರ್ಚಿಯನ್ನು ಭದ್ರಮಾಡಿಕೊಳ್ಳುವುದಕ್ಕೆ, ಕುರ್ಚಿಯಲ್ಲಿ ಮುಂದುವರಿಯುವುದಕ್ಕೆ ಒಂದು ಸಾಧನವಾಗಿ ಬಳಕೆಯಾಗುತ್ತಿದೆಯೇ ವಿನಹ ಇದು ನಿಜವಾದಂಥ ಹಿಂದುಳಿದ ವರ್ಗಗಳಿಗೆ ಉಪಯೋಗವಾಗತಕ್ಕಂಥ ರೀತಿಯಲ್ಲಿ ಇದು ಬಳಕೆಯಾಗಿಲ್ಲ, ಆದ್ದರಿಂದ ನಾನು ಹೇಳಿದ್ದುದು ಸ್ನೇಹಿತರಾದಂಥ ತಿಮ್ಮಪ್ಪನವರೇ ನೀವು ಆ ಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕೆ ಲಾಯಕ್ಕಿಲ್ಲ. ದಯವಿಟ್ಟು ನೀವು ನಮ್ಮದು ಅಪರಾಧ ಆಗಿದೆ ಎಂದು ಹೇಳಿ, ನಿಮ್ಮ ಸ್ಥಾನವನ್ನು ಖಾಲಿ ಮಾಡಬೇಕು ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಸುಪ್ರೀಂಕೋರ್ಟಿನ ತಡೆಯಾಜ್ಞೆಯಿಂದ ರಾಜ್ಯದಲ್ಲಿ ಗೊಂದಲವಾದ ಪರಿಸ್ಥಿತಿ ನಿರ್ಮಾಣವಾಗಿದೆ, ಹಾವನೂರ್‌ರವರ ವರದಿಯಿಂದ, ನಂತರ ವೆಂಕಟಸ್ವಾಮಿ ಅವರು ನಂತರ ಚಿನ್ನಪ್ಪರೆಡ್ಡಿಯವರು, ಈ ರೀತಿ ಹಿಂದುಳಿದ ವರ್ಗಗಳ ಮತ್ತು ಒಂದು ಪರಿಸ್ಥಿತಿಯನ್ನು ಅರಿತು ವರದಿಯನ್ನು ಕೊಡತಕ್ಕಂಥ ಅನೇಕವಾದಂಥ ಸಮಿತಿಗಳು, ಆಯೋಗಗಳಿವೆ, ಚಿನ್ನಪ್ಪರೆಡ್ಡಿ ವರದಿಯನ್ನು ಸಂಪೂರ್ಣವಾಗಿ ಒಪ್ಪಬೇಕು ಎಂದು ಹೇಳಿ ಬಂದಂಥ ಎಲ್ಲಾ ಮುಖ್ಯಮಂತ್ರಿಗಳು ವೀರೇಂದ್ರಪಾಟೀಲರು) ಸಹ ಈ ಸದನದಲ್ಲಿ ಒಪ್ಪುತ್ತೇವೆ ನಾವು ಸಂಪೂರ್ಣವಾಗಿ ಎಂದು ಹೇಳಿದರು. ಇದಾದನಂತರ, ಬಂಗಾರಪ್ಪನವರೂ, ಕೂಡ ಇದನ್ನು ಒಪ್ಪುತ್ತೇವೆ ಎಂದು ಹೇಳಿದರು, ಅಂತಿಮವಾಗಿ ಶ್ರೀಮಾನ್ ವೀರಪ್ಪಮೊಯಿಲಿಯವರು ಈ ಚಿನ್ನಪ್ಪರೆಡ್ಡಿ ಆಯೋಗದ ತೀರ್ಪನ್ನು ಒಪ್ಪಿದ್ದೇವೆ ಎಂದು ಹೇಳಿದ್ದಾರೆ. ಈಗ ಆ ಆಯೋಗದ ತೀರ್ಪಿನಲ್ಲಿ ಎಷ್ಟು ಬದಲಾವಣೆಗಳಾಗಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಒಪ್ಪಿದ್ದೇವೆ ಒಂದು ಮಾತ್ರ ಹೇಳಿದ್ದಲ್ಲ 93ನೇ ಜೂನ್ ಒಳಗಾಗಿ ಅದನ್ನು ಜಾರಿಗೆ ಕೊಡುತ್ತೇವೆ ಎಂದು ಹೇಳಿದ್ದರು.

ಶ್ರೀ ವಾಟಾಳ್ ನಾಗರಾಜ್ : ನಂತರ ಈ ವರದಿ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಮತ್ತೊಂದು ಕುದೂರ್ ಆಯೋಗವನ್ನು ರಚನೆ ಮಾಡಿದರು. ಈ ದೃಷ್ಟಿಯಿಂದ ನನಗನ್ನಿಸುತ್ತದೆ, ನಾವು ಈ ಒಂದು ಪರಿಸ್ಥಿತಿಯಲ್ಲಿ ಕಾಲಕಾಲಕ್ಕೂ ವರದಿ ಕೊಡುವುದಕ್ಕೆ ಒಂದು ಆಯೋಗವನ್ನು ರಚನೆ ಮಾಡಿದಾಗ ಕೊಟ್ಟ ವರದಿಯನ್ನು ಸಂಪೂರ್ಣವಾಗಿ ಒಪ್ಪುವುದಕ್ಕೆ ಆಗದೆ, ಇದ್ದರೆ ಹೆಜ್ಜೆಹೆಜ್ಜೆಗೆ ಅದನ್ನೆಲ್ಲಾ ಬದಲಾವಣೆ ಮಾಡಿ, ಕಾಲಕಾಲಕ್ಕೆ ಬದಲಾವಣೆ ಮಾಡಿ ನಮ್ಮ ರಾಜಕೀಯದ ಒಂದು ಉದ್ದೇಶಕ್ಕೆ ಇಂಥಹ ಆಯೋಗಗಳನ್ನು ರಚನೆ ಮಾಡತಕ್ಕದ್ದು ಮತ್ತು ಇಂಥ ಆಯೋಗಗಳಲ್ಲಿ ಕೊಟ್ಟಂಥ ತೀರ್ಪುಗಳನ್ನು ಉಪಯೋಗಿಸಿಕೊಳ್ಳತಕ್ಕದ್ದು, ವರದಿಗಳನ್ನು ಉಪಯೋಗಿಸಿಕೊಳ್ಳತಕ್ಕದ್ದು

ಸರಿಯಾದ ನೀತಿ ಅಲ್ಲ. ಈಗಿನ ಪ್ರಕಾರ ಚಿನ್ನಪ್ಪರೆಡ್ಡಿ ವರದಿ, ವರದಿಯಾಗಿ ಉಳಿದಿಲ್ಲ. ಈ ಸರ್ಕಾರ ಎಷ್ಟು ಮುಕ್ಕನ್ನು ಮಾಡಬೇಕು ಎಷ್ಟು ವಿರೂಪ ಮಾಡಬೇಕು ಅಷ್ಟು ವಿರೂಪ ಮಾಡಿ ಕೊನೆಗೆ ಚುನಾವಣಾ ದೃಷ್ಟಿಯಿಂದ ಇದನ್ನು ಒಪ್ಪಿದ್ದೇವೆಂದು ಮಾಡಿರತಕ್ಕದ್ದು.ಇವತ್ತು ಸುಪ್ರೀಂ ಕೋರ್ಟ್‌ನಲ್ಲಿ ಈ ರೀತಿ ತಡೆಯಾಜ್ಞೆ ಬರುತ್ತದೆಂಬುದು, ಭಾರದೆ ಇರತಕ್ಕ ವ್ಯವಸ್ಥೆಗೆ ಏನು ಮಾಡಬೇಕೆಂಬುದನ್ನು ಸರ್ಕಾರ ಮೊದಲೇ ವರದಿಯನ್ನು ತಿರುಚಿ ಮೊನ್ನೆ ಕೊಟ್ಟ ತೀರ್ಮಾನವನ್ನು ರೆಡಿ ಮಾಡಬೇಕಾಗಿತ್ತು. ಅದನ್ನು ಬಿಟ್ಟು ಒಂದು ಕಡೆ ಸುಪ್ರೀಂ ಕೋರ್ಟಿನಲ್ಲಿ ತಡೆಯಾಜ್ಞೆ ಬಂದಿರುವುದರಿಂದ ರಾಜ್ಯದಲ್ಲಿ ಇವತ್ತು ಹತ್ತು ದಿನಗಳಲ್ಲಿ ಬರತಕ್ಕ ಪರಿಸ್ಥಿತಿ ಏನು, ಏನು ಪರಿಸ್ಥಿತಿ ಉದ್ಭವವಾಗಿದೆ ಇದನ್ನು ತಡೆಹಿಡಿಯುವುದಕ್ಕೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರೆಂಬುದನ್ನು ಸರ್ಕಾರ ನೇರವಾಗಿ ತಿಳಿಸಬೇಕಾದುದು ಅದರ ಕರ್ತವ್ಯ. ಇದರ ಬಗ್ಗೆ ನನಗನ್ನಿಸುತ್ತದೆ, ಈ ಚಿನ್ನಪ್ಪ ರೆಡ್ಡಿ ಆಯೋಗದ ವರದಿಯನ್ನು ಈ ಸದನದಲ್ಲಿ ಚರ್ಚೆಗೆ ತರಬೇಕಾಗಿತ್ತು. ಸದನದಲ್ಲಿ ಸಂಪೂರ್ಣವಾಗಿ ಚರ್ಚೆ ಆಗಬೇಕಾಗಿತ್ತು ಎಂದು ನಾನು ಅಂದುಕೊಂಡಿದ್ದೆ. ಚರ್ಚೆಯಾಗಿದ್ದರೆ ಒಂದು ವಿಚಾರ ಮಂಥನ ಈ ಸಭೆಯಲ್ಲಿ ನಡೆದಿದ್ದರೆ ಅದರಿಂದ ಬಹಳ ಲಾಭವಾಗುತ್ತಿತ್ತು ಮತ್ತು ಅನುಕೂಲವಾಗುತ್ತಿತ್ತು. ಎಂಬ ಮಾತನ್ನು ನಾನು ತಮ್ಮ ಮೂಲಕ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ. ಈ ಸಭೆಯಲ್ಲಿ ಚರ್ಚೆಯಾಗುವುದು ಇರಲಿ, ಇವರು ಇರತಕ್ಕ ತಿದ್ದುಪಡಿಗಳಾಗಲಿ, ಇವರು ಏನು ಮಾಡುತ್ತಾರೆಂಬ ಬಗ್ಗೆ ವಿರೋಧ ಪಕ್ಷದ ಮುಖಂಡರನ್ನು ಕರೆದು ಚರ್ಚೆ ಮಾಡಬೇಕಾಗಿತ್ತು, ಅದನ್ನು ಮಾಡಲಿಲ್ಲ. ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ಬಂತು. ಈ ಚುನಾವಣೆಗಳ ಉದ್ದೇಶವನ್ನು ಇಟ್ಟುಕೊಂಡು ತರಾತುರಿಯಲ್ಲಿ ತಂದಂಥ ಈ ವರದಿ ನಿಜವಾಗಿ ಅತ್ಯಂತ ನೋವಿನಿಂದ ಕೂಡಿದೆ ಮತ್ತು ಶೋಚನೀಯವಾದ ಪರಿಸ್ಥಿತಿ ಇದೆ. ನಿನ್ನೆ ತಾನೇ ಮಾನ್ಯ ಮುಖ್ಯ ಮಂತ್ರಿಗಳು ಈ ರಾಜ್ಯದ ಹಿಂದುಳಿದ ವರ್ಗಕ್ಕೆ ಹೊಸ ಆಯಾಮವನ್ನು ಕೊಟ್ಟಂಥ ದಿ: ಶ್ರೀ ದೇವರಾಜ ಅರಸು ಅವರ ಪ್ರತಿಮೆಯನ್ನು ಅನಾವರಣ ಮಾಡಿಸಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ನಿಜವಾಗಿ ಅತ್ಯಂತ ಸಂತೋಷ. ಒಳ್ಳೆಯ ಕೆಲಸ ಮಾಡಿದ್ದೀರಿ, ಅದರ ಬಗ್ಗೆ ನಮ್ಮ ತಕರಾರು ಇಲ್ಲ. ಒಂದು ಕಡೆ ಯಾವ ಒಂದು ಹಿಂದುಳಿದ ವರ್ಗದ ರೂವಾರಿಯಾಗಿ ಶಿಲ್ಪಿಯಾಗಿ ಸೇವೆ ಮಾಡಿದ ದಿ: ಶ್ರೀ ದೇವರಾಜ ಅರಸು ಅವರ ಪ್ರತಿಮೆಯನ್ನು ಸ್ಥಾಪನೆ ಮಾಡಿರತಕ್ಕದ್ದು, ಮತ್ತೊಂದು ಕಡೆ ಹಿಂದುಳಿದ ವರ್ಗಕ್ಕೆ ಆಗಿರತಕ್ಕ ಅನ್ಯಾಯದ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ ತಡೆಯಾಜ್ಞೆ ಬಂದಿದೆ. ಆ ಬಗ್ಗೆ ಹತ್ತು ದಿನಗಳಲ್ಲಿ ಸರ್ಕಾರದ ನಿರ್ಧಾರ ಏನು? ನೀವು ಏನು ಮಾಡುತ್ತೀರೆಂಬ ಸ್ಪಷ್ಟವಾದ ನಿಲುವನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬೇಕೆಂದು ತಮ್ಮ ಮೂಲಕ ಹೇಳಿ, ಇವತ್ತಿನ ದಿವಸ ಇಷ್ಟೊಂದು ಪರಿಸ್ಥಿತಿ ಉದ್ಭವವಾಗುವುದಕ್ಕೆ ಕಾರಣ ನಾವುಗಳೇ, ನಮ್ಮ ಸರ್ಕಾರದ ಸ್ವಾರ್ಥ ನಿರ್ಧಾರಗಳೇ ಸ್ವಾರ್ಥ ಚಿಂತನೆಗಳೇ ಆಗಿವೇಯೇ ಹೊರತು ಬೇರೆ ಏನೂ ಅಲ್ಲ. ಹಿಂದುಳಿದ ವರ್ಗದ ಬಗ್ಗೆ ಪ್ರಾಮಾಣಿಕ ಚಿಂತನೆ ಇರುವುದಾದರೆ ಸ್ಪಷ್ಟವಾದ ನಿರ್ದೇಶವನ್ನು ಕೊಡಬೇಕು. ಹೇಳುವುದಕ್ಕೆ ಮಾತ್ರ ಚಿನ್ನಪ್ಪರೆಡ್ಡಿ ವರದಿ. ಇಂಥ ಆಯೋಗಗಳನ್ನು ಏತಕ್ಕೆ ನೇಮಿಸುತ್ತೀರೆಂದು ಕೇಳುತ್ತೇನೆ. ನೀವು ಆಯೋಗಗಳನ್ನು ನೇಮಕ ಮಾಡಿ ಅವರು ಕೊಟ್ಟಂಥ ಕೊಟ್ಟಂಥ ವರದಿಗಳನ್ನು ಒಪ್ಪುವುದಿಲ್ಲವೆಂದು ಹೇಳುವುದಾದರೆ,ವಿರೂಪ ಮಾಡುವುದಾದರೆ ನಾಳೆ ದಿವಸ ಪರಿಸ್ಥಿತಿ ಏನಾಗುತ್ತದೆ? ವರದಿಯನ್ನು ಕೊಡಿ ಎಂದು ನೇಮಿಸಿದವರ ಪರಿಸ್ಥಿತಿ ಏನು? ಆಯೋಗಗಳ ಪರಿಸ್ಥಿತಿ ಏನು? ಇನ್ನು ಮುಂದೆ ಇಂಥ ಆಯೋಗಗಳಿಗೆ ಯಾರಾದರೂ ಬರಬೇಕಾದರೆ ಬಹಳ ಚಿಂತನೆ ಮಾಡಬೇಕಾಗಿದೆ. ಈ ಆಯೋಗಗಳಲ್ಲಿ ಯಾರಾದರೂ ಉಳಿಯಬೇಕೇ? ಚಿನ್ನಪ್ಪರೆಡ್ಡಿಯವರಾಗಲಿ, ಹಾವನೂರು ಅವರಾಗಲಿ, ವೆಂಕಟಸ್ವಾಮಿಯವರಾಗಲಿ ಕೊಟ್ಟಿರತಕ್ಕ ಅನೇಕ ವರದಿಗಳನ್ನು ನೋಡಿದಾಗ ಆ ವರದಿಗಳನ್ನು ನೀವು ಸಂಪೂರ್ಣವಾಗಿ ಚಾಚೂ ತಪ್ಪದೆ ಕಾರ್ಯಗತ ಮಾಡುವುದಕ್ಕೆ ಆಗಲಿಲ್ಲವೆಂದರೆ, ವರದಿಯಿಂದ ಯಾರಿಗೆ ಗೌರವ ಕೊಟ್ಟ ಹಾಗೆ

ಆಗುತ್ತದೆ. ಚಿನ್ನಪ್ಪರೆಡ್ಡಿಯವರಿಗೆ ಗೌರವ ಕೊಟ್ಟ ಹಾಗೆ ಆಗುವುದಿಲ್ಲ. ನನಗನ್ನಿಸುತ್ತದೆ, ಯಾವ ಆಯೋಗವನ್ನು ರಚಿಸುತ್ತೀರಿ ಅದಕ್ಕೆ ಗೌರವ ಕೊಡುವುದಾದರೆ ಮಾತ್ರ ಆಯೋಗವನ್ನು ರಚಿಸಬೇಕು. ಇಲ್ಲದಿದ್ದರೆ ರಚನೆ ಮಾಡಬಾರದು. ನಮ್ಮ ಇಚ್ಛೆ ಬಂದ ಹಾಗೆ ನಾವು ಮಾಡುತ್ತೇವೆ, ಇದು ಸರ್ಕಾರದ ತೀರ್ಮಾನ. ನಮ್ಮ ಇಷ್ಟ ಬಂದ ಹಾಗೆ ನಾವು ಮಾಡಿಕೊಳ್ಳೋಣ. ನಮ್ಮ ಸಚಿವ ಸಂಪುಟ ಇದೆ, ಸಚಿವ ಸಂಪುಟದಲ್ಲಿ ಏನುಬೇಕಾದರೂ ಮಾಡಿಕೊಳ್ಳೋಣ ಎಂದು ಮಾಡಿಕೊಳ್ಳಬೇಕೇ ಹೊರತು ಇಂಥ ಒಂದು ಆಯೋಗವನ್ನು ರಚನೆ ಮಾಡಿ ಆಯೋಗ ಕೊಟ್ಟ ತೀರ್ಪಿಗೆ ನೀವು ಮಾನ್ಯತೆ ಕೊಡದಿದ್ದರೆ ಇದರಲ್ಲಿ ಗೌರವ ಬರುತ್ತದೆಂದು ನಾನು ಅಂದುಕೊಂಡಿಲ್ಲ. ಆದುದರಿಂದ ಆಯೋಗ ತೀರ್ಪು ಕೊಟ್ಟಾಗ ಆ ತೀರ್ಪಿನಿಂದ ಎಷ್ಟು

ಯಾರ್ಯಾರಿಗೆ ತೊಂದರೆಯಾಗುತ್ತದೆಂಬುದನ್ನು ನೀವು ಚರ್ಚೆ ಮಾಡುವುದಕ್ಕೆ ನಿಮಗೆ ಶಾಸನಸಭೆ ಇದೆ ಮತ್ತು ಸಮಗ್ರವಾಗಿ ವಿರೋಧ ಪಕ್ಷದ ಮುಖಂಡರು ಇದ್ದಾರೆ. ನಮ್ಮನ್ನೆಲ್ಲಾ ಕರೆದು ಕೂರಿಸಿ ಮಾತನಾಡಬಹುದಾಗಿತ್ತು. ಒಂದು ದಿನವೂ ಸಹ ಚಿನ್ನಪ್ಪ ರೆಡ್ಡಿ ವರದಿಯ ಬಗ್ಗೆ ನಮ್ಮ ಯಾರನ್ನೂ ಕರೆಯಲಿಲ್ಲ, ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ಮತ್ತು ಸಭೆಯನ್ನು ಕೂಡ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಚುನಾವಣೆಯ ತರಾತುರಿಗೋಸ್ಕರ ಮಾಡಿರತಕ್ಕದ್ದು ಸರಿಯಲ್ಲ. ಈಗ ಕೂಡಲೇ ಏನು ತಡೆಯಾಜ್ಞೆ ಬಂದಿದೆ, ಆ ತಡೆಯಾಜ್ಞೆ ಬರಬೇಕಾದರೆ ನಮ್ಮ ಅಡ್ವೊಕೇಟ್ ಜನರಲ್ ಯಾವ ರೀತಿಯಲ್ಲಿ ವಾದ ಮಾಡಿದ್ದಾರೆ ಎಷ್ಟರಮಟ್ಟಿಗೆ ನಮ್ಮ ಕೇಸನ್ನು ಶಕ್ತಿಯುತವಾಗಿ ಮಾಡಿದ್ದಾರೆಂಬುದು ಬರತಕ್ಕ ಪ್ರಶ್ನೆ. ನಾನು ತಮ್ಮ ಮೂಲಕ ಹೇಳುತ್ತಿದ್ದೇನೆ, ಈ ಬಗ್ಗೆ ಸ್ಪಷ್ಟವಾದ ನಿಲುವನ್ನು ಇವತ್ತಿನ ದಿವಸ ಕೊಡಲೇಬೇಕು. ಇವತ್ತು ಸರ್ವೋಚ್ಛ ನ್ಯಾಯಾಲಯ ಏನು ತಡೆಯಾಜ್ಞೆ ಕೊಟ್ಟಿದೆ, ಆ ತಡೆಯಾಜ್ಞೆಯಿಂದ ಉದ್ಭವಿಸಿರತಕ್ಕ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಏನು ಮಾಡುತ್ತೀರಿ ಎಂಬುದನ್ನು ಈ ಸಭೆಯಲ್ಲಿ ಹೇಳಬೇಕೆಂದು ಕೇಳಿಕೊಂಡು ನನ್ನ ಮಾತು ಮುಗಿಸುತ್ತೇನೆ.

(ಶ್ರೀ ಜಿ.ಎಸ್. ಶಿವನಂಜಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

(ಈ ಹಂತದಲ್ಲಿ ಶ್ರೀಯುತರುಗಳಾದ ಜಾಲಪ್ಪನವರು ಮತ್ತು ಕೌಜಲಗಿಯವರು ಮಾತನಾಡಲಿಚ್ಛಿಸಿದರು)

ಶ್ರೀ ಎಂ. ವೀರಪ್ಪಮೊಯಿಲಿ : ನೀವು ಮಾತನಾಡುವುದಕ್ಕೆ ನಾನು ಅಡ್ಡ ಬರುವುದಿಲ್ಲ. ಆದರೆ ವಸ್ತು ಸ್ಥಿತಿ ಏನೆಂದರೆ, ಮಾನ್ಯ ಸಭಾಪತಿಯವರ ಕಛೇರಿಯಲ್ಲಿ ನಾವೆಲ್ಲಾ ಕುಳಿತು ಒಂದು ನಿರ್ಣಯ ಮಾಡಿದ್ದೇವೆ. ಅದೇನೆಂದರೆ, ಒಂದೂವರೆ ಒಳಗೆ ಚರ್ಚೆ ಉತ್ತರ ಎಲ್ಲಾ ಮುಗಿಯಬೇಕು ಎಂದು. ಮಾನ್ಯ ಜಾಲಪ್ಪನವರು ಮಾತನಾಡುವುದಕ್ಕೆ ನಮ್ಮ ಅಡ್ಡಿ ಏನೂ ಇಲ್ಲ. ಆದರೆ ಅವರೇ ಕೊನೆಯ ಸ್ಪೀಕರ್ ಆದರೆ ಆಮೇಲೆ ನಾನು ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ.

\+ ಶ್ರೀ ಆರ್. ಎಲ್. ಜಾಲಪ್ಪ (ದೊಡ್ಡಬಳ್ಳಾಪುರ) : ಮಾನ್ಯ ಅಧ್ಯಕ್ಷರೇ, ಹಿಂದುಳಿದ ವರ್ಗದವರಿಗೆ ನೀವು ನಿಜವಾಗಿ ಸಹಾಯ ಮಾಡುತ್ತೀರೆಂದು ನಾನು ಸಂಪೂರ್ಣ ವಿಶ್ವಾಸ ಇಟ್ಟುಕೊಂಡಿದ್ದೆ. ತಾವು 73 ಪರ್ಸೆಂಟ್ ರಿಸರ್ವೇಷನ್ ಅನ್ನು ಹಿಂದುಳಿದವರಿಗೆ ಮಾಡಿದಾಗ ನಾನು ಸಂತೋಷಪಟ್ಟೆ. ಮತ್ತು 80 ಪರ್ಸೆಂಟ್ ಮಾಡಿದಾಗಲೂ ಸಂತೋಷಪಟ್ಟೆ. ಆದರೆ ತಾವು ಎಡವಿದ್ದು ಎಲ್ಲಿ ಎಂದು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ತಾವು 73 ಪರ್ಸೆಂಟ್ ರಿಸರ್ವೇಷನ್ ಮಾಡುವ ವೇಳೆಗೆ ಆಗಲೇ ತಮಿಳ್ನಾಡು ಸರ್ಕಾರ 69 ಪರ್ಸೆಂಟ್ ರಿಸರ್ವೇಷನ್ ಮಾಡಿ that was struck down in supreme court ಅದು ತಮಗೆ ಗೊತ್ತಿದೆ.

ಅದರ ಬಗ್ಗೆ ದೊಡ್ಡ ಆಂದೋಳನವಾಯಿತು ತಮಿಳ್ನಾಡಿನಲ್ಲಿ. ಅವರು ಏನು ಮಾಡಿದರು ತಮಿಳ್ನಾಡಿನ ಮುಖ್ಯ ಮಂತ್ರಿಗಳು ಅಂದರೆ ಎಲ್ಲಾ ವಿರೋಧ ಪಕ್ಷದವರನ್ನು

ಕರೆದು ಮಾತನಾಡಿ ಲೆಜಿಸ್ಲೇಟೀವ್ ಅಸೆಂಬ್ಲಿಯಲ್ಲಿ ಮತ್ತು ಕೌನ್ಸಿಲ್‌ನಲ್ಲಿ ಒಂದು ಠರಾವು ತಂದು ಯುನಾನಿಮಸ್ ರೆಸಲ್ಯೂಷನ್ ಮಾಡಿ ಅದನ್ನು ರಾಷ್ಟ್ರಪತಿಯವರಿಗೆ ಕಳುಹಿಸಿದರು. ಕೇಂದ್ರ ಸರ್ಕಾರಕ್ಕೆ ಕಳುಹಿಸಿದರು. ಇದನ್ನು ತಾವು ಮಾಡುವುದಕ್ಕೆ ತಮಗೆ ಏನು ತೊಂದರೆ ಇತ್ತು? ಒಂದು ತಿಂಗಳು ಮೊದಲೇ ಅಸೆಂಬ್ಲಿ ಕರೆದು ವಿರೋಧ ಪಕ್ಷದವರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು 73 ಅಲ್ಲ 80 ಪರ್ಸೆಂಟ್ ಮಾಡಿದ್ದರೆ ನಾವು ಯಾರೂ ಅಡ್ಡಿ ಬರುತ್ತಿರಲಿಲ್ಲ. ಈಗ ನೀವು 80 ಪರ್ಸೆಂಟ್ ಮಾಡಿದ್ದೀರಿ. ಅದರಲ್ಲಿ ಸೇರಬಾರದವರೆಲ್ಲಾ ಸೇರಿದ್ದಾರೆ, ಅದು ಬೇರೆ ವಿಷಯವಾದ್ದರಿಂದ ಆಮೇಲೆ ಅದರ ಮೇಲೆ ಮಾತನಾಡೋಣ. ತಮಿಳ್ನಾಡು ಸರ್ಕಾರದವರು, ತಮಿಳ್ನಾಡು ಮುಖ್ಯ ಮಂತ್ರಿಗಳು ಮಾಡಿದ ಹಾಗೆ ತಾವು ಇದನ್ನು ಮಾಡುವುದಕ್ಕೆ ತಮಗೆ ಏನು ತೊಂದರೆ ಇತ್ತು ಎಂಬುದು ನನಗೆ ಅರ್ಥವಾಗಲಿಲ್ಲ. ಇದರಿಂದ ಏನಾಗುತ್ತದೆಂದರೆ, ತಾವು ಬಹಳ ಅವಸರದಲ್ಲಿ ಈ ರಿಸರ್ವೇಷನ್ ಪಾಲಿಸಿ ಬಗ್ಗೆ ಯೋಚನೆ ಮಾಡದೆ ಕ್ರಮ ತೆಗೆದುಕೊಂಡು ಇವತ್ತಿನ ದಿವಸ ಈ ಕಷ್ಟಕ್ಕೆ ನಮ್ಮನ್ನು ಸಿಕ್ಕಿಹಾಕಿಸಿದ್ದೀರಿ ಮತ್ತು ತಾವೂ ಕೂಡ ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿದ್ದೀರಿ ಹಾಗೂ ಹಿಂದುಳಿದವರನ್ನು ಕೂಡ ತಾವು ಕಷ್ಟಕ್ಕೆ ಸಿಕ್ಕಿಸಿದ್ದೀರೆಂದು ನನ್ನ ಅಭಿಪ್ರಾಯ. ಎರಡನೆಯದಾಗಿ ಈಗ ಬಹಳ ಇಕ್ಕಟ್ಟಿನ ಪರಿಸ್ಥಿತಿ ಇದೆ. ಅದೇನೆಂದರೆ, 1986ರ ಆರ್ಡರ್ ಏನಿತ್ತು ಅದು ಸುಪ್ರೀಂ ಕೋರ್ಟ್ ಮುಂದೆ ಚರ್ಚೆಗೆ ಇರಲಿಲ್ಲ. ಅಥವಾ ಅದನ್ನು ಯಾರೂ ಪ್ರಶ್ನೆ ಮಾಡಿರಲಿಲ್ಲ. 7 ವರ್ಷಗಳ ಕಾಲ ಅವಿರತವಾಗಿ ನಡೆದುಕೊಂಡು ಬಂದಿದೆ. 1986 ರಿಂದ 1993ರವರೆಗೆ ನಾವು ಅದನ್ನು ಅಡಾಪ್ಟ್ ಮಾಡಿದ್ದೇವೆ. 7 ವರ್ಷಗಳಲ್ಲಿ ಯಾರೂ ಪ್ರಶ್ನೆ ಮಾಡಿರಲಿಲ್ಲ, ಸುಪ್ರೀಂ ಕೋರ್ಟಿನಲ್ಲಿ. ಆದರೆ ದುರಾದೃಷ್ಟವಶಾತ್ ಈಗ ಆ ಪ್ರಶ್ನೆ ಬಂದಿದೆ. ತಾವು ಇದರ ಬಗ್ಗೆ ಯೋಚನೆ ಮಾಡಬೇಕು. ನಮ್ಮ ಅಡ್ವೊಕೇಟ್ ಜನರಲ್ ಅವರು, ನಾವು ಇತ್ತೀಚೆಗೆ ಆದುದನ್ನು ಅಂದರೆ 1994ರಲ್ಲಿ ಆದುದ್ದನ್ನು ಜಾರಿಗೆ ತರುವುದಿಲ್ಲ, 1986ರಲ್ಲಿ ಏನಿತ್ತು ಅದನ್ನು ಮಾತ್ರ ಜಾರಿಗೆ ಕೊಡುತ್ತೇವೆ ಅಂದಾಗ ಸುಪ್ರೀಂ ಕೋರ್ಟ್‌ನ ಜಡ್ಜ್ ಅವರು ಸಜೆಸ್ಟ್ ಮಾಡುತ್ತಾರೆ 1986ರ ತೀರ್ಮಾನವನ್ನು ನೀವು ಏನೂ ಚಾಲೆಂಜ್ ಮಾಡಲಿಲ್ಲವೆಂದು ಹೇಳಿದಾಗ ಜ: ರಾಮಾಜೋಯಿಸ್ ಅವರು ಹೇಳುತ್ತಾರೆ ಅಮೆಂಡ್‌ಮೆಂಟ್ ಮೂವ್ ಮಾಡಿ, ಪುನಃ ಒಂದು ಪೆಟಿಷನ್ ಅನ್ನು ಫೈಲ್ ಮಾಡಿ ಎಂದು ಹೇಳುತ್ತಾರೆ.

ನಾಳೆ ಒಂದು ಸಮಯ ಈ ಹತ್ತು ದಿವಸದ ಸಮಯದೊಳಗಾಗಿ ಇದು ಆಗದಿದ್ದರೆ ಮುಂದೆ ಗತಿ ಏನು? ಎಲೆಕ್ಷನ್ ಡಿಕ್ಲೇರ್ ಮಾಡಿದರೆ ಏನು ಮಾಡುತ್ತೀರಿ ನೀವು? ನಾಳೆ ದಿವಸ 1986ರ ಆರ್ಡರನ್ನು ಸ್ಟ್ರಕ್‌ಡೌನ್ ಮಾಡಿದರೆ ಏನು ಮಾಡುತ್ತೀರಿ? ಏಕೆಂದರೆ 50 ಪರ್ಸೆಂಟ್ ಮೇಲೆ ರಿಸರ್ವೇಷನ್ ಕೊಡಬಾರದು ಎಂದು ಹಿಂದೆ ಸುಪ್ರೀಂ ಕೋರ್ಟ್ ರೂಲಿಂಗ್ ಕೊಟ್ಟಿದೆ. ಮಂಡಲ್ ಕಮಿಷನ್ ರಿಪೋರ್ಟ್ ಬಂದಾಗಲೂ ಸುಪ್ರೀಂ ಕೋರ್ಟಿನವರು 50 ಪರ್ಸೆಂಟ್ ಮೇಲೆ ರಿಸರ್ವೇಷನ್ ಕೊಡಬಾರದು ಎಂದು ತೀರ್ಮಾನ ಕೊಟ್ಟಿದ್ದಾರೆ. Suppose if unfortunately for us the Supreme Court rules that the reservation shall not exceed 50% , what is the future of these backward classes who are now waiting for admission into the technical colleges? What will be their future?

ಇನ್ನೇನು ಮೂರು ದಿವಸ ಇರಬೇಕು ಎಲೆಕ್ಷನ್. ಅದೂ ಡಿಕ್ಲೇರ್ ಆದರೆ ಬದಲಾವಣೆಯನ್ನು ಮಾಡುವುದಕ್ಕಾಗುವುದಿಲ್ಲ. ಎಲೆಕ್ಷನ್ ಡಿಕ್ಲೇರ್ ಆದಮೇಲೆ ಹೊಸ ಆದೇಶವನ್ನು ತರುವುದಕ್ಕಾಗುವುದಿಲ್ಲ. ಆಗ ಹಿಂದುಳಿದವರ ಗತಿ ಏನು? 50 ಪರ್ಸೆಂಟಿಗೇ ರಿಸ್ಟ್ರಿಕ್ಟ್ ಆದರೆ ನಮ್ಮ ಗತಿ ಏನಾಗಬೇಕು? ಇದಕ್ಕೋಸ್ಕರ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಹತ್ತು ದಿವಸ ಸಮಯ ಏನು ಕೊಟ್ಟಿದ್ದಾರೆ

ಈ ಹತ್ತು ದಿವಸದಲ್ಲಿ ಇದನ್ನು ಮುಗಿಸುವುದಕ್ಕೆ ಸಾಧ್ಯವೇ ಅಥವಾ ಇನ್ನೂ ಹತ್ತು ದಿವಸ ಮುಂದೆ ಹೋದರೆ ಅದರ ಪರಿಣಾಮ ಏನಾಗುತ್ತದೆ? ದಯವಿಟ್ಟು ಚಿಂತನೆ ಮಾಡಿ. ನಮ್ಮ ಅಡ್ವೊಕೇಟ್ ಜನರಲ್ ಅವರು ಪರಿಣಿತರು. ನನಗಂತೂ ಆ ವಿಶ್ವಾಸ ಇದೆ ಅವರ ಮೇಲೆ. ಅವರ ಜೊತೆಗೆ ಇನ್ನೂ ಒಬ್ಬ ಪರಿಣಿತರನ್ನು ಕೊಟ್ಟು ಹತ್ತು ದಿವಸದಲ್ಲಿ ಇದನ್ನು ಮುಗಿಸುವುದಕ್ಕೆ ನೀವು ಪ್ರಯತ್ನ ಪಡದಿದ್ದರೆ ಹಿಂದುಳಿದ ವರ್ಗಗಳಿಗೆ ನಿಮ್ಮ ಕಾಲದಲ್ಲಿ ಆಗುವಷ್ಟು ಅನ್ಯಾಯ ಇನ್ನು ಯಾರ ಕಾಲದಲ್ಲೂ ಆಗುವುದಿಲ್ಲ. ಮಿಕ್ಕಿದ್ದು ಹೆಚ್ಚಿಗೆ ಹೇಳುವುದಿಲ್ಲ. ಇದರ ಬಗ್ಗೆ ಹೆಚ್ಚಿನ ಆದ್ಯತೆ ಕೊಡಬೇಕು. ಕ್ರೀಮಿ ಲೇಯರ್ ಬಗ್ಗೆ ನಂಜುಂಡಸ್ವಾಮಿ ಅವರು ಮಾತನಾಡಿದರು. ನಿಜವಾಗಿ ಇದು ಮೋಸ ನಮಗೆ. 20 ಎಕರೆ ಡ್ರೈ ಲ್ಯಾಂಡನ್ನು ಹಳ್ಳಿಗಳಲ್ಲಿ ಇಟ್ಟುಕೊಂಡಿರುವವರು ಕ್ರೀಮಿ ಲೇಯರ್ ಅಂತೆ. ತಿಂಗಳಿಗೆ ಹತ್ತು ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುವವರ ಜೊತೆ ಅವನನ್ನು ಹೋಲಿಸುತ್ತಾರೆ. ಲಕ್ಷಾಂತರ ರೂಪಾಯಿ ಕೋಟ್ಯಾಂತರ ರೂಪಾಯಿ ಸಂಪಾದನೆ ಮಾಡುತ್ತಾರಲ್ಲ ಕ್ರೀಮಿ ಲೇಯರ್ ಅವರ ಜೊತೆಯಲ್ಲಿ 20 ಎಕರೆ ಖುಷ್ಕಿ ಜಮೀನು ಇಟ್ಟುಕೊಂಡಿರುವವರನ್ನು ಹೋಲಿಸುತ್ತಾರೆ. ಈ ವರ್ಷವಂತೂ ಮೂರು ನಾಲ್ಕು ಜಿಲ್ಲೆಗಳಲ್ಲಿ ಬರಗಾಲವೇ. 50 ಎಕರೆ ಇರುವವನಿಗೂ ಏನೂ ಸಿಗುವುದಿಲ್ಲ. 20 ಎಕರೆ ಇರುವವರು ಕ್ರೀಮಿ ಲೇಯರ್ ಅಂತೆ. 80 ಪರ್ಸೆಂಟ್ ರಿಸರ್ವೇಷನ್ ಮಾಡುವಾಗ ಬದಲಾವಣೆ ಮಾಡಬೇಕಾದುದು ಆದ್ಯಕರ್ತವ್ಯ. 20 ಖುಷ್ಕಿ ಜಮೀನಿನಿಂದ ಏನೇನೂ ಮಾಡುವುದಕ್ಕಾಗುವುದಿಲ್ಲ. 20 ಎಕರೆ ಖುಷ್ಕಿ ಭೂಮಿ ಇಟ್ಟುಕೊಂಡರೆ ವರ್ಷಕ್ಕೆ ಏಳೆಂಟು ಸಾವಿರವೂ ಕೂಡ ಸಿಗುವುದಿಲ್ಲ. ಅವನ ಮಗನನ್ನು ಇಂಜಿನಿಯರ್ ಅಥವಾ ಡಾಕ್ಟರ್ ಮಾಡುವುದಕ್ಕಾಗುವುದಿಲ್ಲ. ಅಥವಾ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಿಸುವುದಕ್ಕಾಗುವುದಿಲ್ಲ. ಆದ್ದರಿಂದ ಮೊದಲು ಈ ಮೋಸ ಏನಿದೆ ಕ್ರೀಮಿ ಲೇಯರ್ ಎಂಬುದು ಇದನ್ನು ತೆಗೆದುಹಾಕುವುದಕ್ಕೆ ಆಗದಿದ್ದರೂ ರಿಲ್ಯಾಕ್ಸ್ ಆದರೂ ಮಾಡಬೇಕು. 20 ಎಕರೆ ಖುಷ್ಕಿ ಜಮೀನು ಬದಲು 50 ಎಕರೆ ಅಂಥಲಾದರೂ ಮಾಡಿ ಅಥವಾ ರಿಲ್ಯಾಕ್ಸ್ ಆದರೂ ಮಾಡಿ ಎಂದು ಈ ಸಂದರ್ಭದಲ್ಲಿ ಸೂಚನೆ ಮಾಡಿ ಮೊದಲು ಏನು ಅನಾಹುತ ಸಂಭವಿಸಬಹುದು ಅದರ ಬಗ್ಗೆ ನಿಖರವಾದ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ನಾನು ಸೂಚನೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್.ಎಚ್. ಕೌಜಲಗಿ (ಬೈಲಹೊಂಗಲ) : ಸನ್ಮಾನ್ಯ ಅಧ್ಯಕ್ಷರೇ ಇವತ್ತಿನ ದಿವಸ ಮೆಡಿಕಲ್ ಕಾಲೇಜು ಹಾಗೂ ಇಂಜಿನಿಯರಿಂಗ್ ಕಾಲೇಜುಗಳಿಗೆ ವಿದ್ಯಾರ್ಥಿಗಳು ಅರ್ಜಿಹಾಕಿದ್ದಾರೆ. ಇವತ್ತಿನದಿವಸ ಯೂನಿವರ್ಸಿಟಿಯಲ್ಲಿ ಬಿ.ಎಸ್‌ಸಿ.ಗೆ ಸೇರುವುದಕ್ಕೆ ತಾರೀಖು ಮುಗಿದಿದೆ. ಈ ತಾರೀಖು ಮುಗಿದನಂತರ ಇಂಜಿನಿಯರಿಂಗ್ ಕಾಲೇಜು ಮೆಡಿಕಲ್ ಕಾಲೇಜುಗಳಲ್ಲಿ ಸೀಟು ಸಿಗದಿದ್ದರೆ ಆ ವಿದ್ಯಾರ್ಥಿಗಳ ಪಾಡೇನು? ಯೂನಿವರ್ಸಿಟಿ ತಾರೀಖು ಎಕ್ಸ್‌ಟೆಂಡ್ ಮಾಡುತ್ತೀರೋ ಹೇಗೆ? ಬೇರೆ ಬೇರೆ ಕೋರ್ಸ್‌ಗಳಿಗೆ ಸೇರಲು ಡೇಟ್ ಮುಗಿದಿದ್ದರೆ ವಿದ್ಯಾರ್ಥಿಗಳಿಗೆ ಸೇರಲು ಡೇಟ್ ಎಕ್ಸ್‌ಟೆಂಡ್ ಮಾಡುತ್ತೀರಾ ಎಂಬುದನ್ನು ಮುಖ್ಯವಾಗಿ ಕೇಳುತ್ತಿದ್ದೇನೆ. ತಾವು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಹಾವನೂರು ವರದಿ ಜಾರಿಗೆ ತರುತ್ತೇವೆಂದು ಜವಾಬ್ದಾರಿ ಮಂತ್ರಿಗಳು ಹೇಳಿದ್ದಾರೆ. ಅವರೇ ಇದೇ ಮನೆಯಲ್ಲಿ ಸದಸ್ಯರಾಗಿದ್ದಾಗ ಅದನ್ನು ಸುಟ್ಟಿದ್ದಾರೆ. ಸದಸ್ಯರಾಗಿ ಸುಟ್ಟು ಮಂತ್ರಿಯಾಗಿ ಜಾರಿಗೆ ತರುತ್ತೇವೆಂದು ಹೇಳುತ್ತಾರೆ. ಅದೇನೂ ಅರ್ಥವಾಗಲಿಲ್ಲ. ಇದರ ಬಗ್ಗೆ ತಾವು ಜವಾಬ್ದಾರಿಯಿಂದ ಉತ್ತರ ಹೇಳಬೇಕು. ಎರಡನೆಯದಾಗಿ ವ್ಯಾಕ್ಯೂಂ ಕ್ರಿಯೇಟ್ ಆಗಿದೆ. ಹುಡುಗರ ವಯಸ್ಸು ಜಾಸ್ತಿಯಾಗುತ್ತದೆ. ನಂತರ ಅವರು ಎಲ್ಲಿ ಸೇರಬೇಕು? ತಡೆಯಾಜ್ಞೆ ಬರುವುದರೊಳಗೆ ವಯಸ್ಸು ಹೋಗಿಬಿಡುತ್ತದೆ. ಪ್ರೊಮೋಷನ್ ಹೋಗಿಬಿಡುತ್ತದೆ.

ಎಲ್ಲರಿಗೂ ಅನಾನುಕೂಲವಾಗುತ್ತದೆ. ಇಂಥ ಒಂದು ಪರಿಸ್ಥಿತಿಯನ್ನು ಏನಾದರೂ ವಿಶೇಷವಾಗಿ ಜಾರಿಗೆ ಕೊಡುತ್ತೀರಾ ಅಥವಾ ದಾರಿ ಹುಡುಕುತ್ತೀರಾ?

1.20 ಪಿ.ಎಂ.

ಏನಾದರೂ ಒಂದು ದಾರಿಯನ್ನು ಹುಡುಕಿ ಅವರಿಗೆ ದಾರಿತೋರಿಸುತ್ತೀರೋ ಹೇಗೆ? ಸಾವಿರಾರು ಹುಡುಗರ ವಯೋಮಿತಿ ಮುಗಿದುಹೋಗುವುದರಿಂದ ಅವರು ಮನೆಗೆ ಹೋಗುತ್ತಾರೆ. ಇದರ ಬಗ್ಗೆ ತಾವು ವಿಶೇಷ ಕ್ರಮ ತೆಗೆದುಕೊಳ್ಳಬೇಕು. ತಾವು ಏನೂ ಕ್ರಮ ತೆಗೆದುಕೊಳ್ಳಲಿಲ್ಲ ಎಂದರೆ ಸಾವಿರಾರು ಹುಡುಗರ ಗತಿ ದೇವರೇ ಗತಿ ಆಗುತ್ತದೆ. ಆದ್ದರಿಂದ ಈ ಬಗ್ಗೆ ತಾವು ನಿಶ್ಚಿತವಾದ ಒಂದು ರೂಪ ತಯಾರು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೇ, ವಿಧಾನಪರಿಷತ್ತಿನಲ್ಲಿ ಮಾನ್ಯ ಖಂಡ್ರೆಯವರು ಒಂದು ಸ್ಪಷ್ಟನೆ ಕೊಟ್ಟಿದ್ದಾರೆ. ಹಾವನೂರು ವರದಿಯನ್ನು ನಾವು ಜಾರಿಗೆ ತರುತ್ತೇವೆ ಎಂದು ಹೇಳಿದ್ದಾರೆ. ಆ ಬಗ್ಗೆ ಕೂಡ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು.

+ ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಈಗ ಮೀಸಲಾತಿ ನೀತಿ ಬಗ್ಗೆ, ಆದೇಶದ ಬಗ್ಗೆ ಇಲ್ಲಿ ವ್ಯಾಪಕವಾದಂತಹ ಚರ್ಚೆ ಮಾನ್ಯ ವಿರೋಧಪಕ್ಷದ ನಾಯಕರಿಂದ ಪ್ರಾರಂಭ ಆಗಿ ಸಾಕಷ್ಟು ವಿಸ್ತಾರವಾಗಿ ಈಗ ಚರ್ಚೆ ಆಗಿದೆ. ಇದನ್ನು ನಾನು ಒಪ್ಪುತ್ತೇನೆ. ಏಕೆಂದರೆ, ನಮ್ಮ ಕರ್ನಾಟಕ ರಾಜ್ಯದ ಈ ಒಂದು ಜನಸಮುದಾಯದ ದೃಷ್ಟಿಯಲ್ಲಿ ಬಹಳ ಪ್ರಾಮುಖ್ಯವಾದಂತಹ ಪ್ರಶ್ನೆ. ಸದಾ ಕಾಲದಲ್ಲಿ ಈ ಮೀಸಲಾತಿ ನೀತಿಯ ಬದಲಾವಣೆ ಮಾಡಿದಾಗ ಕೋರ್ಟ್‌ಗಳಲ್ಲಿ ಈ ಸರ್ಕಾರದ್ದು ತಂಕ, ಈ ಜಿಜ್ಞಾಸೆ, ಈ ಚರ್ಚೆ ಅದು ಬರುವಂತಹದ್ದು. ಏಕೆಂದರೆ, ಹಿಂದುಳಿದ ವರ್ಗದವರ ಅಥವಾ ಪರಿಶಿಷ್ಟ ವರ್ಗ ಹಾಗೂ ಜನಾಂಗದವರ ಒಂದು ಪ್ರಶ್ನೆ ಬಂದಾಗ ಇದು ಜಿಜ್ಞಾಸೆಗೆ ಯಾವಾಗಲೂ ಎಲ್ಲರೂ ಕೂಡ ಒಳಗಾಗುತ್ತಾರೆ. ಅದನ್ನು ಕೋರ್ಟ್ ಸೆಟಲ್ ಮಾಡುತ್ತದೆ ಅಥವಾ ಸರ್ಕಾರ ಈ ಬಗ್ಗೆ ಸೂಕ್ತವಾದ ನಿರ್ಣಯವನ್ನು ತೆಗೆದುಕೊಂಡು ಅದು ಒಂದು ತೀರ್ಮಾನಕ್ಕೆ ಬರುತ್ತದೆ. ಹಾಗೆ ಎಂದು ಹೇಳಿದ ಕೂಡಲೇ, ತಮಗೆ ಗೊತ್ತಿದೆ, ಈ ನಿರ್ಣಯ ಯಾವುದೇ ಮೀಸಲಾತಿ ಬಗ್ಗೆ. ಆ ನಿರ್ಣಯ ಸಾಧಾರಣವಾಗಿ ಅದು ಒಂದು ರೀತಿಯ ಸಮುದಾಯದ ಒಂದು ಒಟ್ಟು ಅಭಿಪ್ರಾಯ ಆಗಿರಬೇಕು. ಎಂದರೆ ಒಂದು ಕಾನ್‌ಸೆನ್‌ಸಸ್; ಅದು ಕೆಲವು ಸಾರಿ ಕಮೀಷನ್ ಮಾಡಬಹುದು. ಕೆಲವು ಸಾರಿ ಆ ಕಾನ್‌ಸೆನ್‌ಸಸ್ ಅನ್ನೂ ಸರ್ಕಾರ ಬೇರೆ ಬೇರೆ ಮಾಹಿತಿಗಳಿಂದ, ಬೇರೆ ಬೇರೆ ಒಂದು ಬೆಳವಣಿಗೆಗಳಿಂದ ನಡೆದುಕೊಂಡು ಬಂದಂತಹ ಮೀಸಲಾತಿ ನೀತಿಯಲ್ಲಿ ಒಂದು ರಾಜ್ಯ ನಡೆದುಕೊಂಡು ಬಂದಂತಹ ಒಂದು ಆಧಾರದಮೇಲೆ ನಾವು ಈ ಮೀಸಲು ನೀತಿಯನ್ನು ರೂಪಿಸುತ್ತದೆ. ಈ ಮೀಸಲಾತಿಯ ನೀತಿಯ ಬಗ್ಗೆ ಬೀದಿಯಲ್ಲಿ ಕುಳಿತುಕೊಂಡು ಚರ್ಚೆ ಮಾಡಿ ತೀರ್ಮಾನ ಮಾಡುವುದಕ್ಕೆ ಬರುವುದಿಲ್ಲ. ಒಂದು ನಿರ್ಣಯ ಕೆಲವು ಸಾರಿ ಕೆಲವರಿಗೆ ಒಪ್ಪುತ್ತದೆ, ಕೆಲವರಿಗೆ ಒಪ್ಪುವುದಿಲ್ಲ. ಏತನ್ಮಧ್ಯೆ ನಾವು ಒಂದು ಕಾನ್‌ಸೆನ್‌ಸಸ್ ಅನ್ನು ಮಾಡಲೇಬೇಕಾಗುತ್ತದೆ. ಏಕೆಂದರೆ ಇದನ್ನು ಬಹಳ ಕ್ರೂರವಾಗಿ ನಾವು ಅನುಷ್ಠಾನ ಮಾಡುವುದಕ್ಕೆ ಬರುವುದಿಲ್ಲ.

ಈ ದಿನ ಯಾವ ವರ್ಗಕ್ಕೆ ತಾವು ಮೀಸಲಾತಿಯನ್ನು ಕೊಡಬೇಕೆಂದು ವಿಚಾರ ಮಾಡುತ್ತೀರಿ, ಆ ವರ್ಗಕ್ಕೆ ಕೊಡಬೇಕಾದರೆ ಒಂದು ರೀತಿಯ ನೆಮ್ಮದಿಯ ಒಂದು ಸಮುದಾಯದ ಮಧ್ಯೆ ಅದನ್ನು ಅನುಷ್ಠಾನ ಮಾಡಿದರೆ ಮಾತ್ರ ನಿಜವಾದ ಹಿಂದುಳಿದ ವರ್ಗದವರು, ಪರಿಶಿಷ್ಟ ವರ್ಗದವರು, ಜನಾಂಗದವರಿಗೆ ಅದು ತಲುಪುತ್ತದೆ. ಅದು ತಲುಪಲಿಕ್ಕೆ ಆತಂಕವನ್ನು ಒಡ್ಡತಕ್ಕ ಒಂದು ರೀತಿಯಲ್ಲಿ ನಾವು ಇವತ್ತು ಕೆಲಸ ಹೇರಿದರೆ, if we force that kind of a reservation order, that will be resisted by the society. ಅದನ್ನು ರೆಸಿಸ್ಟ್ ಮಾಡುವುದರಿಂದ ಏನಾಗುತ್ತದೆ ಎಂದರೆ, ನಿಜವಾದಂಥ

ಮೀಸಲಾತಿ ನೀತಿ ಅದು ಒಂದು ಆಷಾಢಭೂತಿತನ ಆಗುತ್ತದೆಯೇ ಹೊರತು ಅಥವಾ ಆ ಮೀಸಲಾತಿ ನೀತಿ ಅದು ಒಂದು ತಾತ್ಕಾಲಿಕವಾದಂತಹ ನಮ್ಮ ನಮ್ಮ ಸ್ವಾರ್ಥದ ರಾಜಕೀಯವನ್ನು ಉಳಿಸಲಿಕ್ಕೆ, ಬೆಳೆಸಲಿಕ್ಕೆ ಆಗುತ್ತದೆಯೇ ಹೊರತು ಪ್ರಾಮಾಣಿಕವಾದಂತಹ ಅನುಷ್ಠಾನ ಆದರಿಂದ ಖಂಡಿತವಾಗಿಯೂ ಕೂಡ ಆಗುವುದಿಲ್ಲ. ಇದು ಅನೇಕ ಸಮಯದಿಂದ ನಡೆದುಕೊಂಡು ಬಂದಂತಹ ವಿದ್ಯಮಾನ. ಇವತ್ತು ಯಾವುದೇ ಪಕ್ಷ ಇರಲಿ, ನಮ್ಮ ಪಕ್ಷ ಇರಬಹುದು ಅಥವಾ ತಮ್ಮ ಪಕ್ಷ ಇರಬಹುದು ಅಥವಾ ಯಾವುದೇ ಪಕ್ಷಇರಬಹುದು ಕರ್ನಾಟಕ ರಾಜ್ಯದಲ್ಲಿ ಮೀಸಲಾತಿ ನೀತಿ ಇಡೀ ಕರ್ನಾಟಕ ರಾಜ್ಯದ ಜನಸಮುದಾಯ ಸಾರ್ವತ್ರಿಕವಾಗಿ ಒಪ್ಪಿಕೊಂಡಂತಹ ವಿಚಾರ. ಇದರ ಬಗ್ಗೆ ಬಹುಶಃ ಯಾರದ್ದೂ ಜಿಜ್ಞಾಸೆ ಇಲ್ಲ. ಉತ್ತರ ಭಾರತದಲ್ಲಿ ಇದು ಇಲ್ಲದೇ ಇರಬಹುದು. ಆದರೆ it has come to stay in Karnataka.

ಇವತ್ತು ಕರ್ನಾಟಕ ರಾಜ್ಯದಲ್ಲಿ ಇದು ಇವತ್ತು ನೆಲೆಸಿ ಹೋಗಿದೆ. ಈ ರೀತಿ ಬೇರೂರಿದ ಮೀಸಲಾತಿಯ ನೀತಿ ಇವತ್ತು ಹೆಮ್ಮರವಾಗಿ, ಯಾವ ಒಂದು ಸಮುದಾಯ ಈ ಒಂದು ರಕ್ಷಣೆಯನ್ನು, ಲಾಭವನ್ನು ಪಡೆಯಬೇಕು ಅದು ಪಡೆದು ಇಡೀ ರಾಜ್ಯದ ಮುಖ್ಯ ವಾಹಿನಿಯಲ್ಲಿ ಎಲ್ಲಾ ಜನತೆ ಕೂಡ ಸೇರಬೇಕು, ಈ ನೀತಿ ಬಗ್ಗೆ ಬಹಳ ಸಮಾಧಾನಕರವಾದ ವಿಚಾರ ಎಂದು ಹೇಳಿದರೆ ಇದನ್ನು ಇವತ್ತು ಈ ರಾಜ್ಯ, ಈ ಸಮಾಜ ಒಪ್ಪಿದೆ. ಪ್ರೀ ಇಂಡಿಪೆಂಡೆನ್ಸ್ ಡೇಸ್‌ಗಳನ್ನು ತೆಗೆದುಕೊಂಡರೂ ಕೂಡ ಮಹಾರಾಜರ ಸಮಯದಲ್ಲಿ ಕೂಡ ಮಿಲ್ಲರ್ ಕಮಿಟಿ ಅದೂ ಕೂಡ ಇಲ್ಲಿ ಜಾರಿಯಲ್ಲಿ ಇತ್ತು. ಆಮೇಲೆ ನಾಗನಗೌಡ ಸಮಿತಿ, ಮತ್ತೊಂದು, ಇನ್ನೊಂದು ಬಂತು. ಆ ನಂತರ ಹಾವನೂರ್ ಕಮೀಷನ್, ವೆಂಕಟಸ್ವಾಮಿ ಕಮೀಷನ್, ಚಿನ್ನಪ್ಪರೆಡ್ಡಿ ಕಮೀಷನ್ ಬಂತು. ಬೇರೆ ಬೇರೆ ರೀತಿಯಲ್ಲಿ ಅಧ್ಯಯನ ಮಾಡಿಕೊಂಡು ಒಂದು ಸಮಾಧಾನಕರವಾದಂತಹ ರೀತಿಯಲ್ಲಿ ಬಂದಿದೆ. ಒಂದು ವಸ್ತುಸ್ಥಿತಿಯನ್ನು ಕರ್ನಾಟಕ ರಾಜ್ಯದಲ್ಲಿ ಯಾವಾಗಲೂ ಮರೆಯುವಂತಿಲ್ಲ. ಇದನ್ನು ಕಮೀಷನ್‌ಗಳು ಒಪ್ಪಬೇಕಾಗುತ್ತದೆ. ಇವತ್ತು ನಾವೂ ಕೂಡ ಒಪ್ಪಬೇಕಾಗುತ್ತದೆ. ಪ್ರಾಚಾರ್ಯರಾದ ನಂಜುಂಡಸ್ವಾಮಿಯವರು ಹೇಳಿದ ಪ್ರಕಾರ ನಮ್ಮ ಕರ್ನಾಟಕ ರಾಜ್ಯದಲ್ಲಿ ಶೂದ್ರರೇ ಜಾಸ್ತಿ. ಒಕ್ಕಲಿಗರೂ ಶೂದ್ರರೇ; ಲಿಂಗಾಯಿತರೂ ಶೂದ್ರರೇ; ಕುರುಬರೂ ಶೂದ್ರರೇ ಈಡಿಗರೂ ಶೂದ್ರರೇ.ಇಲ್ಲಿ ಶೂದ್ರ ಸಮಾಜ ಜಾಸ್ತಿ ಇದೆ ಎಂದು ತಾವು ಒಪ್ಪಿಕೊಳ್ಳುತ್ತೀರಾ ?

ಬೈರೇಗೌಡರೇ ನಿಮಗೆ ಅನುಮಾನ ಇದೆಯೇ ಇದಕ್ಕೆ? ಈ ಶೂದ್ರ ಸಮಾಜ ಬಹಳ ಜಾಸ್ತಿ ಇದೆ. ಲೆಕ್ಕ ಹಾಕಿದರೆ 90 ಪರ್ಸೆಂಟ್ ವರೆಗೆ ಶೂದ್ರ ಸಮಾಜ ಇಲ್ಲಿ ಇದೆ. ಈಗ ಪರಿಶಿಷ್ಟ ವರ್ಗ, ಜನಾಂಗ ತೆಗೆದುಕೊಂಡರೆ ಬಹಳ ಸುಲಭ. ಇವತ್ತು ಲಿಂಗಾಯಿತರು ಶೂದ್ರ ಸಮಾಜ ಅಲ್ಲ; ನಾನು ತೀರ್ಪು ಕೊಡುವುದಕ್ಕೆ ಆಗುತ್ತದೆಯೇ ? ಒಕ್ಕಲಿಗರು ಶೂದ್ರ ಸಮಾಜ ಎಂದು ನಾನು ತೀರ್ಪು ಕೊಡಲಿಕ್ಕಾಗುತ್ತದೆಯೇ ? ಈ ಕರ್ನಾಟಕ ರಾಜ್ಯದ ವಸ್ತುಸ್ಥಿತಿಯಲ್ಲಿ ವಾಸ್ತವವಾದ ಒಂದು ಸಮಾಜದಲ್ಲಿ ನಾವು ಈ ದಿನ ಇರಬೇಕಾದರೆ ಅನೇಕ ಚಾರಿತ್ರಿಕ ಘಟನೆಗಳನ್ನು, ಅನೇಕ ಸಾಮಾಜಿಕ ಘಟನೆಗಳನ್ನು, ಅನೇಕ ಶೈಕ್ಷಣಿಕ ಘಟನೆಗಳನ್ನು ಇವತ್ತು ನಾವು ಗಮನಿಸಿ ಅಧಿಕಾರ ಸ್ಥಾನದಲ್ಲಿ ನಾವು ಇಲ್ಲಿ ಇದ್ದುಕೊಂಡು ಅಥವಾ ನಮ್ಮ ಪ್ರತಿನಿಧಿಗಳು ಇದನ್ನು ವಿಶೇಷವಾಗಿ ಗಮನದಲ್ಲಿ ಇಟ್ಟುಕೊಂಡೇ ನಾವು ನೀತಿಯನ್ನು ರೂಪಿಸಬೇಕಾಗುತ್ತದೆ. ಮಾನ್ಯ ವಾಟಾಳ್ ನಾಗರಾಜ್ ಅವರು ಕಮೀಷನ್ ಬಗ್ಗೆ ಹೇಳಿದರು. ಏಕೆ ಚಿನ್ನಪ್ಪರೆಡ್ಡಿ ಕಮೀಷನ್‌ನ್ನು ಚಾಚೂ ತಪ್ಪದೇ ಜಾರಿಗೆ ತರಲಿಲ್ಲ ಎಂದು ಕೇಳಿದರು. ಮಾಡಲಿಕ್ಕೆ ಬಹಳ ಸುಲಭ. ಏನೂ ಕಷ್ಟ ಇಲ್ಲ. ನಾನು ಚಾಚೂ ತಪ್ಪದೇ ಅನುಷ್ಠಾನ ಮಾಡಬಹುದು. ಆದರೆ ಇವತ್ತು ಶೂದ್ರ ಸಮಾಜಕ್ಕೆ, ಸಮುದಾಯಕ್ಕೆ ಸೇರಿದ ಅನೇಕ ಜನಾಂಗಗಳು ಅಲ್ಲಿ ಬಿಟ್ಟುಹೋಗಿವೆ. ಆ ಸತ್ಯದರ್ಶನವನ್ನು ನಾವು ಇವತ್ತು ಮರೆತು ತಾಂತ್ರಿಕವಾದ ಒಂದು ಕಾರಣದಿಂದ,

ಚಿನ್ನಪ್ಪರೆಡ್ಡಿ ಕಮೀಷನ್ ಮಾತ್ರ ಅನುಷ್ಠಾನ ಮಾಡಬೇಕೆಂದು ಟೆಕ್ನಿಕಲ್ಲಾಗಿ ನಾನು ಇವತ್ತು ಹೋಗತಕ್ಕದ್ದು ಏನೂ ಬಹಳ ಕಷ್ಟ ಇಲ್ಲ; ಬಹಳ ಸುಲಭ. ಈ ಚರ್ಚೆ ಬೇಕಾಗಿಲ್ಲ; ವಾಗ್ವಾದ ಬೇಕಾಗಿಲ್ಲ; ಜಿಜ್ಞಾಸೆ ಬೇಕಾಗಿಲ್ಲ. ಕಾನೂನು ಪ್ರಕಾರ ನಾನು ಸರಿ. ಇವತ್ತು ನಮ್ಮ ನಾಡಿನ ಕಾನೂನುಗಳು, ಇವತ್ತು if it is benefit of the sociological reasons, historical reasons, educational reasons, ಇವತ್ತು ಆ ಎಕನಾಮಿಕಲ್ ಆ ರಿಕ್ವೈರ್‌ಮೆಂಟ್ ಮತ್ತು ಆ ಪರಿಸರ. ಇವತ್ತು ನಾವು ನಿರ್ಣಯ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೇ? ಒಂದು ವೇಳೆ ಅಂತಹ ನಿರ್ಣಯವನ್ನು ತೆಗೆದುಕೊಂಡರೆ ಅದನ್ನು ಈ ಸಮುದಾಯದಲ್ಲಿ ಅನುಷ್ಠಾನ ಮಾಡಲಿಕ್ಕೆ ಸಾಧ್ಯವಿದೆಯೇ? ಅಥವಾ ಅದನ್ನು ಆ ಸಮುದಾಯ ಸ್ವೀಕಾರ ಮಾಡಲಿಕ್ಕೆ ಸಾಧ್ಯವಿದೆಯೇ? ಇವತ್ತು ರಾಜಕೀಯವನ್ನು ಒಂದು ಕಡೆ ಇಟ್ಟು ಅಥವಾ ನೀವು ಟೀಕೆ ಮಾಡಬೇಕು, ನಾವು ಡಿಫೆಂಡ್ ಮಾಡಬೇಕು ಎನ್ನುವ ಈ ವಿಚಾರಗಳನ್ನು ಇಲ್ಲಿ ಬಿಟ್ಟು ಇವತ್ತು ತಾವು ಆತ್ಮಾವಲೋಕನವನ್ನು ಮಾಡಿಕೊಂಡು ಸತ್ಯದರ್ಶನ ಮಾಡಿ. ವಸ್ತುಸ್ಥಿತಿಗೆ ಇವತ್ತು ನಾವು ಇಳಿಯಬೇಕೇ, ಬೇಡವೇ ಎನ್ನುವುದನ್ನು ಆಲೋಚನೆ ಮಾಡಬೇಕು. ನಾನು ಈಗ ವಿಸ್ತಾರವಾಗಿ ಹೇಳದೇ ಸ್ಥೂಲವಾಗಿ ಮಾತ್ರ ನಾನು ಈಗ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಅದೇನೆಂದರೆ, right from the days of Maharaja ಮಿಲ್ಲರ್ ಕಮಿಟಿ ಅಥವಾ ನಾಗನಗೌಡ ಸಮಿತಿ ಅಥವಾ ನಾಗನಗೌಡ ಸಮಿತಿ ಅಥವಾ ಹಾವನೂರು ಕಮೀಷನ್ ಅಥವಾ ವೆಂಕಟಸ್ವಾಮಿ ಕಮೀಷನ್ ತೆಗೆದುಕೊಳ್ಳಿ ಚಿನ್ನಪ್ಪರೆಡ್ಡಿ ಕಮೀಷನ್ ತೆಗೆದುಕೊಳ್ಳಿ, ಇವೆಲ್ಲವನ್ನೂ ತೆಗೆದುಕೊಂಡರೂ ಕೂಡ, ಶೂದ್ರ ಸಮಾಜ ಎಂದು ಏನು ಹೇಳುತ್ತೇವೆ, ಆ ಶೂದ್ರ ಸಮಾಜಕ್ಕೆ ಸೇರಿದಂಥ ಎಲ್ಲಾ ವರ್ಗಗಳಿಗೂ ಕೂಡ ಇವತ್ತು ಮೀಸಲಾತಿಯ ಲಾಭ ಕೊಟ್ಟಿದ್ದೇವೆ. ಯಾವುದು ಕೊಟ್ಟಿಲ್ಲ, ತಾವು ದಯಮಾಡಿ ಹೇಳಿ. ಮಿಲ್ಲರ್ ಕಮಿಟಿಯಲ್ಲೂ ಕೊಟ್ಟಿದ್ದೀರಿ, ಒಕ್ಕಲಿಗರು, ಲಿಂಗಾಯಿತರು, ಎಲ್ಲಾ ಸಮಾಜದವರೂ ಕೂಡ, ಶೂದ್ರ ಸಮಾಜ ಎಂದು ಏನಿದೆ, ಅವರಿಗೆಲ್ಲಾ ಮೀಸಲಾತಿ ನೀತಿ ಇತ್ತು. ಅದನ್ನು ಅವರು ಅನುಭವ ಮಾಡಿಕೊಂಡಿದ್ದಾರೆ. ಆದರೆ, ಇದು 8 ವರ್ಷದ 86ನೇ ಕಥೆಯಲ್ಲ. ಅಥವಾ ಹಾವನೂರು ಕಮೀಷನ್‌ನ 25 ವರ್ಷಗಳ ಕಥೆಯಲ್ಲ, ಅಥವಾ ನಾಗನಗೌಡ ಕಮಿಟಿಯ 30-32 ವರ್ಷಗಳ ಕಥೆಯಲ್ಲ. ಇದು ಬಹುಶಃ ಒಂದು ಶತಮಾನದ ಕಥೆ. ಶತಮಾನಗಳಿಂದ ನಡೆದುಕೊಂಡು ಬಂದಂಥ ದಾರಿಯನ್ನು ಬಿಟ್ಟು, ಇವತ್ತು ಊರಿಗೊಂದು ದಾರಿ, ಪೋರನಿಗೊಂದು ದಾರಿ ಎಂದು ವಾಟಾಳ್ ನಾಗರಾಜರು ಏನು ಹೇಳುತ್ತಾರೆ. ನಾನು ಇವತ್ತು ಪೋರನ ಕಥೆ, ಪೋರನ ಪಾತ್ರ ನಡೆಸಿದರೆ, ಈ ಸಮಾಜದಲ್ಲಿ ಸಮಾಧಾನ ಅಥವಾ ನೆಮ್ಮದಿಯನ್ನು ತರುವುದಕ್ಕಾಗುತ್ತದೆಯೇ ಅಥವಾ ನಾನು ವೈಯಕ್ತಿಕವಾಗಿ ಮೆಚ್ಚಿಕೊಂಡಂಥ ಸಿದ್ಧಾಂತದ ಅಥವಾ ನೀವು ವೈಯಕ್ತಿಕವಾಗಿ ಮೆಚ್ಚಿಕೊಂಡಂಥ ಸಿದ್ಧಾಂತ. ಇವತ್ತು ಇಡೀ ಸಮಾಜದ ಸಿದ್ಧಾಂತಕ್ಕೆ ಎರಕವಾಗಿದೇ ಇದ್ದರೆ, ಆ ಸಿದ್ಧಾಂತ ಬರೀ ಆಕಾಶದಲ್ಲಿಯೇ ಇರತಕ್ಕ ಸಿದ್ಧಾಂತವಾಗುತ್ತದೆ. ಭೂಮಿಗೆ ಇಳಿಯುವುದಕ್ಕಾಗುವುದಿಲ್ಲ. ಇಂತಹ ವಾಸ್ತವಿಕವಾದ ಅಂಶಗಳನ್ನು ನಾವು ವಿಶೇಷವಾಗಿ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ತಾವು ಆಲೋಚನೆ ಮಾಡಿ, ನಾಗನಗೌಡ ಸಮಿತಿಯಲ್ಲಿ, ಹಾವನೂರು ವರದಿಯಲ್ಲಿ ಕೂಡ ಲಿಂಗಾಯಿತ ಜನಾಂಗದ ಅನೇಕರು ಸೇರಿದ್ದಾರೆ, ಒಕ್ಕಲಿಗರೂ ಪೂರ್ತಿ ಸೇರಿದ್ದಾರೆ. ಒಕ್ಕಲಿಗರು ಸೇರಿದ ಮೇಲೆ, ನಾವೇನು ಹಿಂದುಳಿದ ವರ್ಗದವರಲ್ಲವೇ ಬಸವೇಶ್ವರರು ಮಾಡಿದಂಥ ಆಂಧೋಳನ ಅದು ಬ್ಯಾಕ್‌ವರ್ಡ್‌ಕ್ಲಾಸ್ ಮೂವ್‌ಮೆಂಟ್ -nothing short of that. ಸಂಪ್ರದಾಯ ಶಕ್ತಿಗಳ ವಿರುದ್ಧ ಮಾಡಿದಂಥ ಹೋರಾಟ. May be ಅದನ್ನು ನೀವು ವ್ಯಾಖ್ಯಾನ ಮಾಡಬಹುದು. ಅದು ಡಿಸ್ಟಾರ್‌ಷನ್ ಆಗಿದೆ, ಅದು ಇವತ್ತು ಒಂದು ಜಾತಿ ಪದ್ಧತಿಯಾಗಿ ಬೆಳೆಯುತ್ತದೆಯೇ ಇಲ್ಲವೇ ಆ ವ್ಯಾಖ್ಯಾನ ಮಾಡಲಿಕ್ಕೆ ನಾನು ಹೋಗುವುದಿಲ್ಲ. ವಾಸ್ತವಿಕವಾದ ಪ್ರಪಂಚಕ್ಕೆ ಇಳಿದು,

ಆ ಸ್ಥಾನದಲ್ಲಿ ಇದ್ದು ನೋಡಬೇಕಾದ ಅವಶ್ಯಕತೆ ಬಹಳ ಇದೆ. ಈ ರಾಜ್ಯದಲ್ಲಿ ಬಹುಶಃ ಇದಕ್ಕೆ ವ್ಯಾಪಕವಾದಂಥ ಅಧ್ಯಯನವಾಗಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ವಿಚಾರಕ್ಕೆ ಪೂರ್ಣ ಬೆಂಬಲವಿದೆ, ಯಾರದೂ ವ್ಯತ್ಯಾಸವಿಲ್ಲ. ಆದರೆ, 73 ಪರ್ಸೆಂಟ್ ಇದ್ದುದ್ದನ್ನು 80ಕ್ಕೆ ಏರಿಸಿ, ಲಿಂಗಾಯಿತರು ಮತ್ತು ಗೌಡರಿಗೆ ಅನ್ಯಾಯವಾಗಿದೆ ಎಂದು ಅಭಿಪ್ರಾಯವಿದೆ.ಇದನ್ನು ಸರಿ ಮಾಡಬೇಕು. ಆದರೆ, ಸುಪ್ರೀಂಕೋರ್ಟ್‌ಗೆ ಅಂಡರ್‌ಟೇಕಿಂಗ್ ಕೊಟ್ಟರಲ್ಲಾ, ನಾವು ಇದನ್ನು ಜಾರಿಗೆ ತರುವುದಿಲ್ಲವೆಂದು, ಇದು ಅನ್ಯಾಯವಾಗುವುದಿಲ್ಲವೇ, ಇದು ಇಬ್ಬಗೆ ನೀತಿ ಆಗುವುದಿಲ್ಲವೇ? ನೀವು ಒಪ್ಪಿಕೊಂಡಿರಿ, ಲಿಂಗಾಯಿತರಿಗೂ, ಗೌಡರಿಗೂ ಅನ್ಯಾಯವಾಗಿದೆ ಎಂದು ಮಾಡಿ, ಅಲ್ಲಿ ಸುಪ್ರೀಂಕೋರ್ಟಿಗೆ ಅಂಡರ್ ಟೇಕಿಂಗ್ ಕೊಟ್ಟಿರಿ. ಇದರ ಬಗ್ಗೆ ಕೂಡ ಉತ್ತರವನ್ನು ಹೇಳಿ.

Sri. M. Veerappa Moily : Alright. Is it the consensus of this House to implement Chinnappa Reddy Commission report in toto? Please raise your hands. I will accept it. Touch your conscience and say that Chinnappa Reddy Commission report should be implemented in toto. ಚಿನ್ನಪ್ಪರೆಡ್ಡಿ ವರದಿಯನ್ನು ಚಾಚೂ ತಪ್ಪದೆ ಅನುಷ್ಠಾನ ಮಾಡಬೇಕೆಂದು ಹೇಳುವವರು ಎಷ್ಟು ಜನ, ಕೈ ಎತ್ತಿ ನೋಡೋಣ. Don't try to accuse me. Don't try to accuse the Government.

ಶ್ರೀ ಬಿ.ಎಸ್. ಯಡಿಯೂರಪ್ಪ : ಜಾರಿಗೆ ತರುತ್ತೇವೆಂದು ನಿಮ್ಮವರೇ ಹೇಳುತ್ತಿದ್ದರು. ಚಾಚುತಪ್ಪದೆ ಜಾರಿಗೆ ತರುತ್ತೇವೆಂದು ನೀವೇ ಹೇಳಿದ್ದೀರಿ, ನಿಮ್ಮ ಪಕ್ಷದವರೇ ಕೈ ಎತ್ತಬೇಕು.

-ಗೊಂದಲ-

ಶ್ರೀ ವಾಟಾಳ್ ನಾಗರಾಜ್ : ಚಿನ್ನಪ್ಪರೆಡ್ಡಿ ವರದಿಯನ್ನು ಅಕ್ಷರಶಃ ಜಾರಿಗೆ ತರುತ್ತೇವೆಂದು ಹೇಳಿದವರು ನೀವು. ಬಂದ ಬಂದ ಮುಖ್ಯಮಂತ್ರಿಗಳನ್ನೆಲ್ಲಾ ಈ ಮನೆಯಲ್ಲಿ ಸತ್ಯಕ್ಕೆ ದೂರವಾದ ಆಶ್ವಾಸನೆಗಳನ್ನು ಕೊಟ್ಟು, ಕೊಟ್ಟು ಜನರನ್ನು ತಪ್ಪುದಾರಿಗೆ ಎಳೆದಿರಿ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಮುಖ್ಯಮಂತ್ರಿಗಳು ಇವತ್ತು ಕೈ ಮೇಲೆ ಮಾಡಿ ಎಂದು ಹೇಳುತ್ತಿದ್ದಾರೆ. ಇವತ್ತು ಇದೇ ಪದ್ಧತಿ, ನಾಡಿನ ಪ್ರತಿಯೊಂದು ಸಮಸ್ಯೆ ಬಗ್ಗೆಯೂ ಮಾಡುವುದಕ್ಕೆ ನಾವು ರೆಡಿ ಇದ್ದೇವೆ. ಕಮೀಷನ್ ವರದಿಯನ್ನು ಇನ್‌ಟೋಟೋ ಜಾರಿಗೆ ತರುತ್ತೇವೆಂದು ಇವರಷ್ಟೇ ಅಲ್ಲ, ಮಾನ್ಯ ವೀರೇಂದ್ರಪಾಟೀಲರು ಹೇಳಿದರು, ಮಾನ್ಯ ಬಂಗಾರಪ್ಪನವರು ಹೇಳಿದರು, ತಾವೂ ಕೂಡ ಇನ್‌ಟೋಟೋ ಇಂಪ್ಲಿಮೆಂಟ್ ಮಾಡುತ್ತೇವೆಂದು ಹೇಳಿದ ನಂತರ, ಈಗ ನಮಗೆ ಕೈ ಎತ್ತೀತಿ ಎಂದು ಹೇಳುತ್ತೀರಿ. ನೀವು ಕೈ ಮೇಲೆ ಮಾಡುವ ಧೈರ್ಯ ಇಲ್ಲ, ಹಾಗಾಗಿ ನೀವು ಇಂಪ್ಲಿಮೆಂಟ್ ಮಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಈಗಲೇ ಎಲ್ಲರೂ ಕೈ ಎತ್ತಲಿ. ಯಾರು ಯಾರು ಕೈ ಎತ್ತುತ್ತಾರೆ ಎತ್ತಲಿ. ಈ ವಿಷಯ ಈಗಲೇ ತೀರ್ಮಾನವಾಗಲಿ. ನಿಮ್ಮವರು ಎಷ್ಟು ಜನ ಎತ್ತುತ್ತಾರೆ ಎತ್ತಲಿ. ಸುಮ್ಮಸುಮ್ಮನೆ ಮೊಸಳೆ ಕಣ್ಣೀರು ಸುರಿಸುವುದು ಬೇಡ. ಮುಖ್ಯ ಮಂತ್ರಿಗಳ ಮಾತು ಕೇಳಿದರೆ, ಇವತ್ತೇ ಚುನಾವಣಾ ಭಾಷಣ ಪ್ರಾರಂಭವಾದಂತೆ ಕಾಣುತ್ತದೆ. ನಿಮ್ಮ ಧ್ವನಿ, ಧಾಟಿ ನೋಡಿದರೆ, ಸ್ವಲ್ಪ ಹೆಚ್ಚುಕಡಿಮೆ ಹಾಗೆಯೇ ಕಾಣುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ : ಚಿನ್ನಪ್ಪ ರೆಡ್ಡಿ ವರದಿಯನ್ನು ಬದಲಾವಣೆ ಮಾಡಿದೆ, ಏಕೆ ಬದಲಾವಣೆ ಮಾಡಿದೆ ಎಂದರೆ, ಅದರಲ್ಲಿ ಬಹಳಷ್ಟು ಶೂದ್ರ ಸಮಾಜದವರು ಇರಲಿಲ್ಲ, ಅವರಿಗೆ ಬಹಳ ಅನ್ಯಾಯವಾಗುತ್ತದೆಂಬ ದೃಷ್ಟಿಯಿಂದ

ಮಾಡಿವೆ ಎಂದು ಹೇಳಿ. ಹಾಗಾಗಿ, ನೀವು ಬದಲಾವಣೆ ಮಾಡುವುದಿದ್ದರೆ, ಚಿನ್ನಪ್ಪರೆಡ್ಡಿ ವರದಿ ಯಾವಾಗ ಬಂತು ನಿಮಗೆ ಗೊತ್ತಾಗಲಿಲ್ಲವೇ? ಆ ರಿಪೋರ್ಟ್ ಬಂದಮೇಲೆ ಎರಡು ವರ್ಷಗಳ ಕಾಲ ಸಬ್ ಕಮಿಟಿ ಮಾಡಿದಿರಿ, ಮುಖ್ಯಮಂತ್ರಿಗಳೂ ಅದರಲ್ಲಿ ಇದ್ದರು. ಇನ್‌ಟೋಟೋ ಇಂಪ್ಲಿಮೆಂಟ್ ಮಾಡುತ್ತೇನೆಂದು ಹೇಳಿದಿರಿ, ಏಕೆ ಮಾಡಲಿಲ್ಲ. ಒಂದು ವೇಳೆ, ಅದರಲ್ಲಿ ಲೋಪದೋಷ ನಿಮಗೆ ಕಂಡುಬಂದರೆ you would have refered it to permanent Backward Classes Commission which you have constituted. Why did you dilute the Chinnappa Reddy Commission report? ಅದಕ್ಕೆ ನಿಮ್ಮ ಉತ್ತರವಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಪ್ರತಿಬಾರಿ, ಪ್ರತಿ ಚುನಾವಣಾ ಪ್ರಣಾಳಿಕೆಯಲ್ಲಿ ಇವರು ಹೇಳಿಕೊಂಡಿದ್ದಾರೆ. ಇವತ್ತು ಕೈ ಎತ್ತಿ ಎಂದು ಹೇಳುತ್ತಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ.

-ಗೊಂದಲ-

ಚೇರ್ಮನ್ : ಮೊದಲು ಉತ್ತರ ಮುಗಿಯಲಿ, ಕ್ಲಾರಿಫಿಕೇಷನ್ ಆಮೇಲೆ ಕೇಳಿ. ದಯಮಾಡಿ ಕುಳಿತುಕೊಳ್ಳಿ. ನೀವು ಮಾತನಾಡಿದ್ದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷರೇ, ಒಂದು ಮಾತು ಸತ್ಯ. ಆ ಸತ್ಯ ಇವತ್ತು ಹೊರಹೊಮ್ಮಬೇಕು. ಅದಿಲ್ಲದಿದ್ದರೆ, ಚಿನ್ನಪ್ಪರೆಡ್ಡಿ ಕಮೀಷನ್ ಶಿಫಾರಸ್ಸುಗಳನ್ನು ಚಾಚೂ ತಪ್ಪದೆ, ಇನ್‌ಟೋಟೋ ಇಂಪ್ಲಿಮೆಂಟ್ ಮಾಡುವುದಕ್ಕೆ ಯಾರದ್ದೂ ಒಪ್ಪಿಗೆ ಇಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ...

(ಗೊಂದಲ)

If the reply is not necessary, you can wind up this discussion. I am on my legs. I am not yielding. The matter is very simple.

ನಾನು ಯಾರನ್ನೂ ಉದ್ರೇಕ ಮಾಡಬೇಕೆಂದು ಈ ಮಾತನ್ನು ಹೇಳಲಿಲ್ಲ. ಅಥವಾ ತಮ್ಮನ್ನು ಕೆಣಕಬೇಕೆಂದು ಹೇಳಲಿಲ್ಲ. ನನ್ನ ಪ್ರಶ್ನೆ ಇಷ್ಟೇ. ಯಾವುದೇ ಸಂದರ್ಭದಲ್ಲಿ, ಯಾವುದೇ ಕಮೀಷನ್ ಆದಾಗ, ಹಾವನೂರು ಕಮೀಷನ್, ಸೇರಿಕೊಂಡಂತೆ, ನಾಗನಗೌಡ ಕಮೀಷನ್, ಅಥವಾ ಯಾವುದೇ ಕಮೀಷನ್ ವರದಿಗಳನ್ನು ಚಾಚೂ ತಪ್ಪದೆ ಯಾರೂ ಅನುಷ್ಠಾನ ಮಾಡಿಲ್ಲ; including Mr. Devaraj Urs. That is the matter. ಅದನ್ನು ಹೇಳುವಾಗ, ತಾವು ತಟ್ಟನೆ, ಎದ್ದುನಿಂತಿರಿ. ಇದರಲ್ಲಿ ವಸ್ತುಸ್ಥಿತಿ ಯಾರೂ ಕೂಡ ಮಾಡಿಲ್ಲ. ದೇವರಾಜ ಅರಸರೂ ಕೂಡ in toto he did not implement. Lot of changes have been made in keeping certain consensus. We will have to make it acceptable. I am just a statesman. Any chief Minister should also be a statesman to make it acceptable. ತಮಗೆ ಗೊತ್ತಿದೆ, ಏಕೆಂದರೆ, ಯಾರಿಗಾದರೂ ಬೆನಿಫಿಟ್ ಕೊಡುವಾಗ, ಒಂದಲ್ಲ ಒಂದುರೀತಿಯ ; ಯಾವುದೇ ಸಾಮಾಜಿಕ ಕ್ರಾಂತಿ ಆಗಬೇಕಾದರೆ, ಅಥವಾ ಯಾವುದೇ ಒಂದು ಆರ್ಥಿಕ ಕ್ರಾಂತಿ - ಆಗಬೇಕಾದರೆ, ಶೈಕ್ಷಣಿಕ ಕ್ರಾಂತಿಯಾಗಬೇಕಾದರೆ, ಪ್ರಜಾಪ್ರಭುತ್ವ ವಿಧಾನಗಳಿವೆ. ಇವತ್ತು, ಆ ಕ್ರಾಂತಿಯನ್ನು ಹಿಂಸಾತ್ಮಕವಾಗಿ ಮಾಡಲಿಕ್ಕೆ ಬರುವುದಿಲ್ಲ. ಅಥವಾ ಒಂದು ಕ್ರಾಂತಿಯನ್ನು ಮಾಡಿದಾಗ, ಹಿಂಸೆಯನ್ನು ಪ್ರಚೋದನೆ ಮಾಡತಕ್ಕ ಕ್ರಾಂತಿ ನಡೆಯಲಿಲ್ಲ. ನಾವು ಅದನ್ನು ಮಾಡಿದಾಗ ಪ್ರಜಾಪ್ರಭುತ್ವ ವಿಧಾನಗಳಿಂದ ಜನರಿಗೆ, ಒಪ್ಪಿಗೆಯಾಗತಕ್ಕ ರೀತಿಯಲ್ಲಿ ಇವತ್ತು ಕ್ರಾಂತಿಯನ್ನು ನಡೆಸತಕ್ಕಂಥಾದ್ದು ಪ್ರಜಾಪ್ರಭುತ್ವದಲ್ಲಿ ಒಂದು ವಿಧಾನ ಇದೆ. We have to do it.

I don't blame anybody either Sri Devaraj Urs or Sri Ramakrishna Hegde or anyone. We have done it. If you were in my position you would have also done the samething. I am not just blaming.

ತಮಗೆ ಗೊತ್ತಿದೆ ಇವತ್ತು ಇದನ್ನೇ ನಾವು ಮಾಡಿದ್ದೇವೆ. ತಾವು ಆಲೋಚನೆ ಮಾಡಿಕೊಳ್ಳಿ. ಈಗ 1986 ಆರ್ಡರ್ ಏನು ಇದೆ ಆ ಆರ್ಡರ್ ಅನ್ನೇ ತಾವು ಅನುಷ್ಠಾನ ಮಾಡಿ ಎಂದು ಹೇಳುತ್ತಿದ್ದೀರಿ. ಚಿನ್ನಪ್ಪರೆಡ್ಡಿ ಕಮೀಷನ್ ಅನ್ನು ನೇಮಕಮಾಡಿದವರು ತಾವೇ. ಚಿನ್ನಪ್ಪರೆಡ್ಡಿ ಕಮೀಷನ್ ಅನ್ನು ನೇಮಕ ಮಾಡತಕ್ಕಂಥ ಸಂದರ್ಭದಲ್ಲಿ 86ರ ಆದೇಶವನ್ನು ತಾವು ಮಾಡಿರತಕ್ಕಂಥಾದ್ದು, 3 ವರ್ಷಕ್ಕೆ ಎಂದು ಕೊಟ್ಟಿದ್ದೀರಿ. ಅದರಲ್ಲಿ ಸ್ಪಷ್ಟವಾಗಿ ಕಾಣಿಸಿದ್ದೀರಿ according to you also it is not a scientific order.

ಅಥವಾ ಅದು ಬ್ಯಾಕ್‌ವರ್ಡ್ ಕ್ಲಾಸಸ್ ಕಮೀಷನ್ ವರದಿ ಬರುವವರೆಗೂ ತಾತ್ಕಾಲಿಕವಾಗಿ ಕೊಟ್ಟಂತಹ ಇಂಟೀರಿಂ ಆರ್ಡರೇ? I don't think it comes from your mouth to say that make it is permanent.

ಅದನ್ನೇ ಶಾಶ್ವತವಾಗಿ ಉಳಿಸಿಕೊಳ್ಳಿ ಸಮಾಧಾನಕರವಾಗಿ ಇದೆ ಎಂಬುದನ್ನು ತಾವು ಇವತ್ತು ಹೇಳುವುದಕ್ಕೆ ಆಗುವುದಿಲ್ಲ. ಅದು ಸಮಾಧಾನವಾಗಿ ಆಗಿಲ್ಲ ಶಾಶ್ವತವಾಗಿ ಆಗಿಲ್ಲ ನಿಜವಾದಂತಹ ಮೀಸಲಾತಿ ಆಜ್ಞೆ ಅದು ಅಲ್ಲ; ನಿಜವಾದಂತಹ ವಾಸ್ತವಿಕವಾದಂತಹ ಸಮಾಜಕ್ಕೆ ಪ್ರಯೋಜನವಾಗತಕ್ಕಂತಹ ಮೀಸಲಾತಿಯ ಕಮೀಷನ್ ಅನ್ನು ಮಾಡಿದಾಗ ಅದರ ಆಧಾರದ ಮೇಲೆ ಮುಂದೆ ಹೋಗಬೇಕಾಗುತ್ತದೆ.

ಅದೇ ಮೀಸಲಾತಿ ಯೋಜನೆಯನ್ನು ಇವತ್ತು ನಾವು ಕಂಟಿನ್ಯೂ ಮಾಡಬೇಕೆಂದು ಹೇಳಿದರೆ ಅದು ಸಾಧ್ಯವಾಗುವುದಿಲ್ಲ.

(ಗೊಂದಲ)

ಆಮೇಲೆ ಸ್ಪಷ್ಟೀಕರಣ ಕೇಳಿ. 2 ಗಂಟೆ ಒಳಗೆ ಮುಗಿಯಬೇಕು. ಏಕೆಂದರೆ ಪ್ರೆಸಿಡೆಂಟ್ ಆಫ್ ಇಂಡಿಯಾ ಬರುತ್ತಿದ್ದಾರೆ. I have to receive him.

ಆದ್ದರಿಂದ ಇವತ್ತು ಅದರ ಬಗ್ಗೆ ವ್ಯಾಪಕ ಚರ್ಚೆ ಆಗಲಿ. ಈಗ ತಾತ್ಕಾಲಿಕವಾಗಿ ಇರತಕ್ಕಂಥ ಪ್ರಶ್ನೆಗೆ ಚರ್ಚೆ ಅಥವಾ ಉತ್ತರವನ್ನು ಮಾಡೋಣ. But I am telling you one thing, the core objective of my reservation policy is 38% is provided by the Chinnappa Reddy Commission for the prescribed castes and allied castes and it is implemented in toto. 38% what is given and all the criteria excepting.

ಗ್ರಾಜುಯೇಟ್ ಪೇರೆಂಟ್ಸ್ ಆದರೆ ಇಲ್ಲ, ಅಥವಾ ಲಾಯರ್ಸ್ ಅದನ್ನು ಎರಡು ನಾವು ಬಿಟ್ಟುಬಿಟ್ಟರೆ hundred per cent we have accepted the criteria put by Justice Chinnappa Reddy. Then, for the core substantive portion we prescribed 38% for the really backward class people. Yes, we have absolutely retained it in toto. What is added upon is, apart from this 38% , we divided the line between the "Haves" and "the Have-nots" among other shudra castes. This is the only meddling which was done.

ದೊಡ್ಡ ಮೀನು ಸಣ್ಣಮೀನು ತಿನ್ನಬಾರದು ಎಂದು ಒಂದು ಕ್ರೈಟೀರಿಯಾ. ಆ ಕಮ್ಯುನಿಟೀಸ್‌ನಲ್ಲಿ ಇವತ್ತು ಕ್ಲಾಸಿಫೈ ಮಾಡುವಾಗ ತಾರತಮ್ಯ ಇಲ್ಲದೆ ಎಲ್ಲರಿಗೂ

ಕೂಡ ಒಂದು ಸಮುದಾಯದಲ್ಲಿರತಕ್ಕಂಥ ಒಂದು ವರ್ಗದಲ್ಲಿರತಕ್ಕಂಥ ಎಲ್ಲರಿಗೂ ಸರಿಸಮಾನವಾಗಿ ಹಂಚಿ ಈ ಮೀಸಲಾತಿಯ ನ್ಯಾಯ ಹೋಗಬೇಕೆಂದು ಎಂದು ಹೇಳಿ we have made a micro approach instead of a macro approach i.e.,in favour of Havenots. If we have taken any decision in favour of Haves in any of the communities, then I can understand, you can criticise.

Sri. D.B. Chandre Gowda : What about Group "A"?

Sri M. Veerappa Moily : Group 'A' is nearer to the SC and ST.

They are the classes which are very much nearer to the Backward classes; very much nearer to the SCs & STs. That is the group. So, the decision which our government has taken is absolutely in favour of implementing the report of Chinnappa Reddy Commission in toto in so far as the real backward classes are concerned and not disturbing the 38% which is given; (2) apply in toto almost all criteria which are laid down by the Chinnappa Reddy Commission. These are the core areas and the rest of the decision we have taken is to take care the shudras who have been havenots and bifurcate them from Haves so that the real Havenots, whether they belong to the Lingayats, Vokkaligas, Muslims or anybody, they are given little more reservation. For 83% population including the SC and ST we have provided 80% reservation and for 17% of the population we have provided 20% - i.e., forward people. that is the calculation which is made. It is not that it is not done by any calculation. Yes, implementation of :Chinnappa Reddy Commission Report is part and parcel of our manifesto. We are bound by it and we are at it today.

I have got a working sheet to show how it is more beneficial I will try to distribute it to everybody. It is more biased towards the Havenots and more biased towards the real backward classes.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಸುಪ್ರೀಂ ಕೋರ್ಟಿಗೆ ಹೋಗಿ ಅಲ್ಲಿ ಜಾರಿಗೆ ತರುವುದಿಲ್ಲ ಎಂದು ಅಂಡರ್ ಟೇಕಿಂಗ್ ಕೊಟ್ಟಿದ್ದೀರಲ್ಲಾ ಅದನ್ನು ಹೇಳಿ.ಸ್ವಾಮಿ, ನೀವು ಜಾರಿಗೆ ತಂದು ಸುಪ್ರೀಂ ಕೋರ್ಟಿಗೆ ಅಂಡರ್ ಟೇಕಿಂಗ್ ಏತಕ್ಕೆ ಕೊಟ್ಟಿರಿ?

ಛೇರ್ಮನ್ : ಅವರು ಮಾತನಾಡಲಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು 2 ಗಂಟೆಗೆ ಹೋಗುತ್ತೇನೆಂದದು ಹೇಳುತ್ತಾರೆ. ಆಮೇಲೆ ನಮಗೆ ಕ್ಲಾರಿಫಿಕೇಷನ್ಸ್‌ಗೆ ಅವಕಾಶ ಇಲ್ಲ.

(ಗೊಂದಲ)

ಛೇರ್ಮನ್ : ಆಮೇಲೆ ತಾವು ಕ್ಲಾರಿಫಿಕೇಷನ್ಸ್ ಕೇಳಿ. ನಾನು ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಈ ದೇಶದ ಪ್ರಧಾನ ಮಂತ್ರಿಗಳೂ ಈಲ್ಡ್ ಆಗಬೇಕಾಗುತ್ತದೆ. ಒಬ್ಬ ಸದಸ್ಯರು ಎದ್ದು ಮಾತನಾಡಿದಾಗ. ಅಂಥಾದ್ದರಲ್ಲಿ ತಾವು 3-4 ಸಾರಿ ಈಲ್ಡ್ ಆಗುವುದಿಲ್ಲ ಎಂದು ಹೇಳುವುದು ಸರಿಯಲ್ಲ. You have got to yield. You are the leader of the House.

(ಗೊಂದಲ)

ಛೇರ್ಮನ್ : ಈ ಕಡೆ 4 ಜನ ಆ ಕಡೆ 4 ಜನ ಮಾತನಾಡುತ್ತಿದ್ದರೆ ಹೇಗೆ? ದಯಮಾಡಿ ಕುಳಿಕುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ದಯಮಾಡಿ ಕ್ಲಾರಿಫಿಕೇಷನ್ಸ್‌ಗೆ ಅವಕಾಶ ಮಾಡಿಕೊಡಬೇಕು. ಅವರು 2 ಗಂಟೆಗೆ ಹೋಗುತ್ತಾರೆ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ : ನಾನು ಎಲ್ಲೂ ಓಡಿ ಹೋಗುವುದಿಲ್ಲ ಇರುತ್ತೇನೆ ಹೆದರಬೇಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ರಾಜೀನಾಮೆ ಕೊಟ್ಟು ಹೋಗುತ್ತೀರಾ?

ಶ್ರೀ ಎಂ. ವೀರಪ್ಪಮೊಯಿಲಿ : ದಿನ ಬೆಳಗ್ಗೆಯಾದರೆ ರಾಜೀನಾಮೆ ಕೊಟ್ಟುಪುನಃ ಅಧಿಕಾರಕ್ಕೆ ಬರಬೇಕು ಎಂದು ಹಂಬಲಿಸುವವರು ನಾವಲ್ಲ. ನೀವೇ ಅದು. ರಾಜೀನಾಮೆ ನಾಟಕ ನೀವೇ ಮಾಡುವುದು. ಆ ರಾಜೀನಾಮೆ ನಾಟಕ ನಿಮಗೆ ಮೀಸಲಾಗಿರುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ : ಅದರ ಪರಿಣಾಮವನ್ನು ನಾವು ಅನುಭವಿಸಿದ್ದೇವೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : 4 ಜನ ಮುಖ್ಯಮಂತ್ರಿಗಳು ಆದಿರಿ. ಅದಕ್ಕೇ ಬಡಿದಾಡಿದಿರಿ.

(Interruptions)

Sri. M. Veerappa Moily : The order issued in April, as modified on 25-7-94, there is a real effective sharing of social justice. ಇಲ್ಲಿ ಪ್ರಶ್ನೆ ಏನು ಎಂದು ಹೇಳಿದರೆ ಸುಪ್ರೀಂ ಕೋರ್ಟಿನಲ್ಲಿ ಕೇಸ್ ಇದೆ. ಸುಪ್ರೀಂ ಕೋರ್ಟ್‌ನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ,

The stay is there for another ten days; ಆಮೇಲೆ ಅದನ್ನು ಮುಂದುವರಿಸುವ ಪ್ರಶ್ನೆ ಇರುವುದಿಲ್ಲ. Immediately after the Eleventh day we have set every machinery ready. The process of selection will be done. This is an assurance I am giving to you. The strategy, you leave it to me. We will prevail upon the Supreme Court. As on today also we can implement, it, to be frank with you. But we don't want to do, let us wait. Even today I can start the admission, but I would like to wait for another 9 days. It is a matter of absolute courtesy to the Supreme Court, that is all. I can do it straightaway, Nothing prevents me from making the admissions.

1-50 ಪಿ.ಎಂ

ಈಗ ಏನಾಗಿದೆ ಎಂದರೆ ಏಪ್ರಿಲ್ 94, ಜುಲೈ 94 ಆರ್ಡರ್‌ಗಳನ್ನು ನಾವು ಮಾಡಿದ್ದೇವೆ. ತಮಗೂ ಗೊತ್ತಿದೆ. There are a number of decisions of the High Court. ಸಿ ಇ ಟಿ ಪರೀಕ್ಷೆಗೆ ನೋಟಿಫಿಕೇಷನ್ ಏನು ಹೊರಡಿಸಿದ್ದೇವೆ. ಆದರಲ್ಲಿ ಸ್ಪಷ್ಟವಾಗಿ ಲಿಟಿ ಆಧಾರದ ಮೇಲೆ ನಾವು ಸೆಲೆಕ್ಟ್ ಮಾಡುತ್ತೇವೆಂದು ಹೇಳಿದ್ದೇವೆ. there are umpteen number of decisions to say. ನೌಕರಿ ಪ್ರಶ್ನೆ ಬಂದಾಗ ಯಾವಾಗ notification for employment/ recruitment ಇಷ್ಯೂ ಆಗಿದೆ ಆಗ ಇದ್ದಂಥ ಮೀಸಲಾತಿ ಆರ್ಡರೇ ಸಬ್ಸಿಸ್ಟೆಂಟ್ ಆಗಿ ಬೇರೆ ಮೀಸಲಾತಿ ಆರ್ಡರ್ ಬಂದರೂ ಕೂಡ ಅದು ರಿಟ್ರಾಸ್ಪೆಕ್ಟೀವ್ ಎಫೆಕ್ಟ್ ಆಗುವುದಿಲ್ಲ. ಹಿಂದಿನ ಆರ್ಡರ್‌ಗಳನ್ನೇ ಅನ್ವಯಿಸಬೇಕೆಂದಿದೆ. ಆದರೆ ನಾವು ಇಲ್ಲಿ ಅವರಿಂದ ಅನ್ಯಾಯವಾಗುತ್ತದೆಂದು we wanted to give a retrospective effect. In fact, that is what we have done.

ಮೊನ್ನೆ 86 ಆರ್ಡರ್ ಪುನಃ ನೀವು ತಂದಿರಿ, ಗೊಂದಲ ಮಾಡಿದಿರಿ ಎಂದರೆ ಅದು ಗೊಂದಲವಲ್ಲ. It is absolutely in accordance with the Supreme Court's decision given earlier where no retrospective effect can be given, in view of the fact that CET notification was issued on 7-4-94 much earlier to the implementation of the Chinnappa Reddy Commission report, we are well within the law. That process we have started already. We can definitely say to the Supreme Court that we have already started the process. Wherever the process has been started, I don't think, the Supreme Court has got any objection to proceed with but even then, I would like to wait for another nine days. So, the students need not get perturbed. We are in a position to implement the 1986 order becasue the process has already been started. When the process has been started, the Supreme Court will not come in the way. It is a question we can definitely tell the Supreme Court. Therefore, even today I can implement it. But, I don't want to implement it now. I would like to wait for another nine days.

ತಮಗೆ ಗೊತ್ತಿದೆ ಹೋದವರ್ಷ ಸುಪ್ರೀಂ ಕೋರ್ಟ್ ಕ್ಯಾಪಿಟೇಷನ್ ಬಗ್ಗೆ ಆಗಾಗ ಡಿಸಿಷನನ್ನು ಬದಲಾವಣೆ ಮಾಡಿದ ಸಮಯಕ್ಕೆ Our admissions ended in December. ಆದ್ದರಿಂದ after the end of the tenthday, we shall undertake ಮುಂದೆ ಗೊಂದಲ ಇರುವುದಿಲ್ಲ.

ಆಮೇಲೆ ಮಾನ್ಯ ಕೌಜಲಗಿಯವರು ಹೇಳಿದರು ಬೇರೆ ಅಡ್ಮಿಷನ್ಸ್‌ಗೆ ಅತಂತ್ರತೆ ಇದ್ದರೆ we will be moving the universities to extend the date. ಹಾಗೆ ಒಂದು ವೇಳೆ, ಬಿ.ಎ./ ಬಿ.ಎಸ್‌ಸಿಗೆ ಅವರಿಗೆ ಅಡ್ಮಿಷನ್ ಬೇಕಾದರೆ we will definitely move that. ಈ ಅಡ್ಮಿಷನ್‌ನಲ್ಲಿ ಯಾರಿಗಾದರೂ ಕೂಡ otherwise they would have got it, we are even thinking of increasing the intake in our Government medical colleges. ಆದ್ದರಿಂದ ಯಾವುದೇರೀತಿಯಲ್ಲಿ ಅನ್ಯಾಯ ಅತಂತ್ರತೆ atleast no injustice will be done. Even I have made a deliberation on this.

ಒಂದು ವೇಳೆ ಏಪ್ರಿಲ್ ಮತ್ತು ಜುಲೈ ಮೀಸಲಾತಿ ಆರ್ಡರಿನಲ್ಲಿ 86ರಲ್ಲಿ ಸಿಗಬೇಕಾದ ಸೀಟುಗಳು ಜನರಲ್ ಸೀಟಿನವರಿಗೆ ಕಡಿಮೆಯಾದರೂ ಕೂಡ ಸರ್ಕಾರಿ

ಮೆಡಿಕಲ್ ಕಾಲೇಜಿನಲ್ಲಿ ಇನ್‌ಟೇಕನ್ನು ಜಾಸ್ತಿಮಾಡಿ ಅಂಥವರಿಗೆ ನಿರಾಶೆ ಹತಾಶೆ ಆಗದ ರೀತಿ ನಾವು ಅಡ್ಮಿಷನ್ ಮಾಡಬೇಕೆಂದು we will take care of them. Just because the subsequent orders have come, I don't want any person who has aspired to take up study in any of the professional colleges in accordance with the 1986 order, if any suffering is there, the government will take care of those students.This is an assurance which I am holding out to the people, holding out to the students and also to you. Yes, there is a transformation and restructuring of reservation policy.

ಕರ್ನಾಟಕ ರಾಜ್ಯದ ಅಪಾರವಾದಂಥ ಶೂದ್ರಸಮುದಾಯದ ಹಿತದೃಷ್ಟಿಯಿಂದ ಇದನ್ನು ಮಾಡಬೇಕಾದ ಅವಶ್ಯಕತೆ ಬಂತು. ತಮಿಳುನಾಡಿನಲ್ಲಿ ಮಾಡಲಿಲ್ಲ, 18 ಪರ್ಸೆಂಟ್‌ನಿಂದ ಎಸ್‌ಸಿ ಎಸ್‌ಟಿಗೆ 23 ಪರ್ಸೆಂಟ್ ಮಾಡಿದ್ದರಿಂದ ಹೆಚ್ಚಿಗೆ ಮೀಸಲಾತಿ ಕಾಣಬಹುದು. ತಮಗೆ ಗೊತ್ತಿದೆ, 50 ಪರ್ಸೆಂಟ್ real BCs ಇದ್ದುದ್ದು, in April 94 order we increased it to 57%. Only 7% was increased inview of the fact that 18% was increased to 23%. That is how it appeared as if it is 80%. But it goes to the real people. I am prepared to institute a study on this whether this is better or other things are better.

In any community, particularly ಶೂದ್ರ ಸಮುದಾಯದ ನಿಜವಾದ ಕಡುಬಡವರಿಗೆ ಒಂದು ರೀತಿಯ ಆಶಾಕಿರಣ ಈ ಮೀಸಲಾತಿ ನೀತಿಯಿಂದ ಖಂಡಿತ ಬಂದಿದೆ. ಅದನ್ನು ನಾನು ಪ್ರೂವ್ ಮಾಡಲಿಕ್ಕೆ ಸಿದ್ಧನಿದ್ದೇನೆ. I would like that an independent study is made on my reservation policy.

ಆ 80 ಪರ್ಸೆಂಟನ್ನು ಶಾಸನಬದ್ಧವಾಗಿ ಮಾಡಲು ಶಾಸನವನ್ನು ಈಗ ತರುತ್ತಿದ್ದೇನೆ. ಈ ಸೆಷನ್‌ನಲ್ಲೇ ಮಸೂದೆ ಬರುತ್ತದೆ. ಆಗ ವ್ಯಾಪಕವಾಗಿ ಚರ್ಚೆ ಮಾಡೋಣ. I am prepared to discuss with all of you. ಮಸೂದೆ ಆಗುವ ಮೊದಲು ನಾಳೆ ನಾಡಿದ್ದು I would like to call all of you. Let us discuss about it. After total deliberations, the bill can be passed.

Let there be a consensus even in the House.

ಆದ್ದರಿಂದ ನಮ್ಮ 86 ಆರ್ಡರ್ ಅಲ್ಲದೆ ಬಾಕಿ ಆರ್ಡರ್ ಮಾಡಿದರೂ ಕೂಡ ಯಾವ ವರ್ಗದ ಜನರಿಗೂ, ಯಾವ ವಿದ್ಯಾರ್ಥಿಸಮುದಾಯಕ್ಕೆ ಏನಾದರೂ ಅನ್ಯಾಯವಾಗಿದ್ದರೆ ಇನ್‌ಟೇಕ್ ಜಾಸ್ತಿ ಮಾಡಿ ಖಂಡಿತ ನ್ಯಾಯ ಒದಗಿಸುವ ಕೆಲಸವನ್ನು ನಾವು ಮಾಡುತ್ತೇವೆ; ಈ ಅವಕಾಶ ಮಾಡಿಕೊಟ್ಟಿದ್ದಕ್ಕೆ ವಂದನೆಗಳು. ಸಮಾಲೋಚನೆ ಖಂಡಿತ ಮಾಡೋಣ, ಪರಿಹಾರ ಹುಡುಕಲಿಕ್ಕೆ ತಮ್ಮ ಸಹಕಾರ ಸೌಹಾರ್ದತೆ ತಮ್ಮ ಸಲಹೆಗಳನ್ನು ಖಂಡಿತವಾಗಿ ನಮ್ಮ ಸರ್ಕಾರ ಸ್ವೀಕಾರ ಮಾಡುತ್ತದೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :ನಾವು ಎತ್ತಿದ ಅನೇಕ ಪ್ರಶ್ನೆಗಳಿಗೆ ಉತ್ತರ ನೀಡಲಿಲ್ಲ. ಅದಕ್ಕೆ ಕಾರಣ ಏನು ಹೇಳಿದ್ದಾರೆ. ಮಸೂದೆ ಬರುತ್ತದೆ, ಆಗ ವಿಸ್ತಾರವಾಗಿ ಚರ್ಚೆ ಮಾಡೋಣ ಎಂದು. The fundamental question is, 86ನೇ ಇಸವಿ ಆರ್ಡರನ್ನು ನೀವು ಟಿಂಕರ್ ಮಾಡದೇ ಇದ್ದರೆ ಸುಪ್ರೀಂ ಕೋರ್ಟ್‌ಗೆ ಮಧ್ಯ ಪ್ರವೇಶ ಮಾಡಲು ಅವಕಾಶ ಆಗುತ್ತಿರಲಿಲ್ಲ. ಟಿಂಕರ್ ಎಂದರೆ 68 ಪರ್ಸೆಂಟನ್ನು ಮತ್ತೈದು ಪರ್ಸೆಂಟ್ ಸೇರಿಸಿ 73 ಮಾಡಿದಿರಿ, ಬಹಳ ಮುಖ್ಯ ಪ್ರಶ್ನೆ ಎಂದರೆ ಇಂತಹ ಪ್ರಶ್ನೆ ಬಂದಾಗ,

now under the direction of the Supreme Court, there is a permanent Commission Constituted i.e., Kudur Commission. Without referring to the Kudur commission, this Government went on issuing notifications defying the directives of the supreme court.

ಹಾಗಾದರೆ ಕುದೂರ್ ಕಮೀಷನ್‌ನ್ನು ವಜಾ ಮಾಡಿ. ಕುದೂರ್ ಕಮೀಷನಿಗೆ ಇದುವರೆಗೂ ಯಾವುದಾದರೂ ಒಂದು ಪ್ರಸ್ತಾಪ ಕೊಟ್ಟಿದ್ದೀರೋ? ನೀವೇ ತೀರ್ಮಾನ ಮಾಡುವುದಾದರೆ ಆ ಕಮೀಷನನ್ನು ವಜಾ ಮಾಡಿ. Why should there be a Commission? Justice Kudur, he is one of the most respected judges of the State. ನಾನೇ ಅವರ ಜಾಗದಲ್ಲಿ ಇದ್ದಿದ್ದರೆ ನಿಜವಾಗಿಯೂ ಒಂದು ನಿಮಿಷ ಇರುತ್ತಿರಲಿಲ್ಲ. ಯಾವ ಕಾರಣಕ್ಕಾಗಿ ಆ ಕಮೀಷನ್ ನೇಮಕ ಆಯಿತೋ ಅದಕ್ಕೆ ಸಂಬಂಧ ಪಟ್ಟ ದಾಖಲೆ ಒದಗಿಸಿ ತೀರ್ಮಾನ ತೆಗೆದುಕೊಳ್ಳುವಂತೆ ಮಾಡದೆ ನೀವೇ ತೀರ್ಮಾನ ಮಾಡಿದರೆ why should there be a permanent Commission? There are the two issues I prominently raised.

ಈಗ 10 ದಿವಸ ಕಾಯೋಣ ಅಂದಿದ್ದಾರೆ, ಸರ್ವೋಚ್ಛ ನ್ಯಾಯಾಲಯಕ್ಕೆ ಗೌರವ ಎಂದರೆ I am prepared. ನಮ್ಮ ನಾಯಕರು ಏನು ಹೇಳುತ್ತಾರೋ ನನಗೆ ಗೊತ್ತಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ : ಚಂದ್ರೇಗೌಡರಿಗೆ ಒಂದು ಉತ್ತರವೂ ಸಿಕ್ಕಿಲ್ಲ. ಸರ್ಕಾರ totally failure ಆಗಿದೆ. ಲಾಫಿಂಗ್ ಸ್ಟಾಕ್ ಆಗಿದೆ, ಆದ್ದರಿಂದ we are walking out.

(ಗೊಂದಲ)

(ಜನತಾದಳದ ಸದಸ್ಯರು ಸಭಾತ್ಯಾಗ ಮಾಡಿದರು)

ಸಭೆಯು 1 ಗಂಟೆ 59 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮೂರು ಗಂಟೆಗೆ ಸೇರಲು ನಿಶ್ಚಯಿಸಿತು.

ಸದನವು ಮಧ್ಯಾಹ್ನ 3 ಗಂಟೆ 40 ನಿಮಿಷಕ್ಕೆ ಪುನರಾರಂಭಗೊಂಡಿತು.

ಅಧ್ಯಕ್ಷರು (ಶ್ರೀ ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರುತಿನ ಪ್ರಶ್ನೋತ್ತರಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ರೈತರು ಸಹಕಾರ ಸಂಘಗಳಿಂದ ಪಡೆದ ಸಾಲಕ್ಕೆ ಸುಸ್ತಿ ಬಡ್ಡಿ ಮನ್ನಾ

580 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಹಕಾರ ಸಂಘಗಳಿಂದ ಮತ್ತು ವಾಣಿಜ್ಯ ಬ್ಯಾಂಕುಗಳಿಂದ ಕರ್ನಾಟಕದ ಎಲ್ಲಾ ವಿವಿಧ ರೈತರು ದಿನಾಂಕ : 01-04-1994 ರಲ್ಲಿ ಇದ್ದಂತೆ ಪಡೆದಿರುವ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ಮೊತ್ತವೆಷ್ಟು?

ಆ) ಆ ದಿನದಂದು ರೈತರಿಂದ ಬರಬೇಕಾಗಿದ್ದ ಅಸಲು ಮತ್ತು ಬಡ್ಡಿಯ ಬಾಕಿ ಎಷ್ಟು?

ಇ) ಈಚಿನ ಕೆಲವು ವರ್ಷಗಳಿಂದ ರಾಜ್ಯದಲ್ಲಿ ಅತಿವೃಷ್ಟಿ, ಅನಾವೃಷ್ಟಿಯಾಗಿರುವುದರಿಂದ ಸಾಲ ಮರುಪಾವತಿ ಮಾಡಲು ಎಲ್ಲಾ ರೈತರಿಗೆ ಅನಾನುಕೂಲವಾಗಿರುವುದು

ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಕಾರಣಕ್ಕಾಗಿ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಎಲ್ಲಾ ರೈತರಿಗೆ ಮನ್ನಾ ಮಾಡಲಾಗುವುದೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರ ಸಚಿವರು) :

ಅ) ರೂ. 3540.58 ಕೋಟಿ (ಇದರಲ್ಲಿ ವಾಣಿಜ್ಯ ಬ್ಯಾಂಕುಗಳಿಂದ ರೈತರು ಪಡೆದುಕೊಂಡಿರುವ ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲ ಸೇರಿರುವುದಿಲ್ಲ).

ಆ) ರೂ. 295.44 ಕೋಟಿ ಅಸಲು ಬರಬೇಕಾಗಿರುತ್ತೆ. ರೂ. 106.92 ಕೋಟಿ ಬಡ್ಡಿ ಬಾಕಿ ಇದ್ದು ಇದರಲ್ಲಿ ವಾಣಿಜ್ಯ ಬ್ಯಾಂಕುಗಳಿಗೆ ಬಾಕಿ ಇರುವ ಅಸಲು ಮತ್ತು ಬಡ್ಡಿ ಸೇರಿರುವುದಿಲ್ಲ.

ಇ) ಬಂದಿದೆ.

ಇಲ್ಲ

ಶ್ರೀ ಸಿ. ಬೈರೇಗೌಡ : ಸ್ವಾಮಿ ನಾನು ಕೇಳಿರುವುದು ವಾಣಿಜ್ಯ ಬ್ಯಾಂಕ್‌ಗಳಲ್ಲಿರುವ ಬಾಕಿ ಬಗ್ಗೆ. ಅದರ ಬಗ್ಗೆ ಮಾಹಿತಿ ಕೊಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಆ ವಿವರ ಗೊತ್ತಿಲ್ಲ, ಸ್ವಲ್ಪ ಅವಕಾಶ ಕೊಡಿ.

ಶ್ರೀ ಸಿ. ಬೈರೇಗೌಡ : ಸ್ವಾಮಿ ಇತ್ತೀಚಿನ ಪ್ರಕೃತಿ ವಿಕೋಪದಿಂದ ರಾಜ್ಯದ ರೈತರಿಗೆ ಸಾವಿರಾರು ಕೋಟಿ ರೂ. ಹಾನಿಯಾಗಿದೆ. ಆದರೂ ನೀವು ಸುಸ್ತಿ ಬಡ್ಡಿ ಮನ್ನಾ ಮಾಡುವುದಿಲ್ಲವೆಂಬ ನಿರ್ಣಯ ತೀರ್ಮಾನಕ್ಕೆ ಬರಲು ಕಾರಣವೇನು? ಇಂತಹ ಸಂದರ್ಭದಲ್ಲೂ ಸರ್ಕಾರ ರೈತರ ನೆರವಿಗೆ ಬರದಿದ್ದರೆ ಹೇಗೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಅದರ ಬಗ್ಗೆ ಮಾನ್ಯ ಸದಸ್ಯರು ಸಲಹೆ ಮಾಡಲಿ.

ಶ್ರೀ ಸಿ. ಬೈರೇಗೌಡ : ಪ್ರಾಕೃತಿಕ ವಿಕೋಪದ ಹಿನ್ನೆಲೆಯಲ್ಲಿ ಇದು ಸುಮಾರು 107 ಕೋಟಿ ರೂ ಆಗಬಹುದು, ಇದನ್ನು ವಹಿಸಿಕೊಳ್ಳಲು ಸರ್ಕಾರ ಮುಂದೆ ಬರುವುದೇ? ಮತ್ತು ಇದಕ್ಕೆ ಪರ್ಯಾಯ ವ್ಯವಸ್ಥೆ ಏನಾದರೂ ಮಾಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಅಧ್ಯಕ್ಷರೇ ರೈತರಿಂದ ಬರಬೇಕಾದದ್ದು 195.44 ಕೋಟಿ ಬಡ್ಡಿ 106.91 ಲಕ್ಷ ಬಾಕಿ ಇದ್ದು ಇದರಲ್ಲಿ ವಾಣಿಜ್ಯ ಬ್ಯಾಂಕ್‌ಗಳಲ್ಲಿ ಪಾವತಿಯಿರುವ ಅಸಲು ಮತ್ತು ಬಡ್ಡಿ ಸೇರಿರುವುದಿಲ್ಲ.

ಅಧ್ಯಕ್ಷರು : 106 ಕೋಟಿ ರೂ ಕೊಟ್ಟು ರೈತರ ಬೆನ್ನೆಲುಬು ಉಳಿಸುತ್ತೀರಾ ಎಂದು ಅವರು ಕೇಳುವುದು.

ಶ್ರೀ ಸಿ. ಬೈರೇಗೌಡ : ಈಗಾಗಲೇ ಸಾಕಷ್ಟು ರೈತನ ಮೇಲೆ ಹೊರೆ ಬಿದ್ದಿದೆ, ಪ್ರವಾಹ ಬಂದಿದೆ, ಬರ ಬಂದಿದೆ. ಇದರಿಂದ ಸಾವಿರಾರು ಕೋಟಿ ನಷ್ಟವಾಗಿದೆ. ಜೊತೆಗೆ ಗೊಬ್ಬರದಬೆಲೆ ನೀವೇ ಏರಿಸಿದ್ದೀರಿ, ಔಷಧಿ ಬೆಲೆ ಏರಿಸಿದ್ದೀರಿ, ಇದರ ಭಾರ ಹೊರುವಂತಹ ಪರಿಸ್ಥಿತಿಯಲ್ಲಿ ರೈತ ಇಲ್ಲ. ಅವನ ಬೆನ್ನುಬಾಗಿದೆ, ನಡು ಮುರಿಯುತ್ತಿದೆ. ಆದ್ದರಿಂದ ಸ್ವಲ್ಪವಾದರೂ ಅಂದರೆ 106 ಕೋಟಿ ಆಗಬಹುದು. ಅದನ್ನು ಇಳಿಸುವ ಪ್ರಯತ್ನ ಮಾಡುತ್ತೀರಾ ಮತ್ತು ಸರಿಯಾದ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಬಡ್ಡಿ ಮನ್ನಾ ಮಾಡಲು ಸಾಧ್ಯವಿರದಂತಹ ಪರಿಸ್ಥಿತಿ ಇದೆ. ಇನ್ನು ಯಾವ ರೀತಿ ಸಹಾಯ ಮಾಡಬಹುದೆಂಬ ಬಗ್ಗೆ ಯೋಚನೆ ಮಾಡಿ ಹೇಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ತಮಗೆ ಸಹಾಯ ಮಾಡುತ್ತೇನೆ, ತಮಗೆ ಹೇಳುತ್ತೇನೆ, ಈಗ ಬಡ್ಡಿ ಮನ್ನ ಮಾಡುವುದಕ್ಕೆ ಆಗುವುದಿಲ್ಲ, ಅಸಲನ್ನು ಮನ್ನಾ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೀರಿ. ಮಳೆ ಇಲ್ಲದೆ ರಾಜ್ಯದ ರೈತರು ಬಹಳ ತೊಂದರೆಯಲ್ಲಿದ್ದಾರೆ. ಅಂಥದ್ದರಲ್ಲಿ ಕನ್‌ವರ್ಷನ್ ಮಾಡಿ ಸಹಾಯ ಮಾಡುತ್ತೇವೆ ಎಂದರೆ ಕಂತು ಮುಂದೆ ಹಾಕಿ ಸಹಾಯ ಮಾಡಲು ಸಾಧ್ಯ. ಅದನ್ನು ಮಾಡಬಹುದಲ್ಲಾ. ಪರ್ಯಾಯ ವ್ಯವಸ್ಥೆ ಎಂದರೆ ತಾವು ಇದನ್ನು ಮಾಡಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಪ್ರಯತ್ನ ಮಾಡುತ್ತೇನೆ.

ರಾಜ್ಯದಲ್ಲಿರುವ ವ್ಯವಸಾಯೋತ್ಪನ್ನ ಮಾರುಕಟ್ಟೆಗಳು

151 - ಶ್ರೀ ಜಿ. ರಾಜು ಗೌಡ (ಹನೂರು) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ವ್ಯವಸಾಯೋತ್ಪನ್ನ ಮಾರುಕಟ್ಟೆಗಳ ಸಂಖ್ಯೆ ಎಷ್ಟು?

ಆ) ಒಂದು ವರ್ಷದಲ್ಲಿ ಐದು ಲಕ್ಷಕ್ಕಿಂತಲೂ ಹೆಚ್ಚು ಆದಾಯ ಬರುವ ಮಾರುಕಟ್ಟೆಗಳೆಷ್ಟು?

ಇ) ರೈತರುಗಳ ಬೆಳೆದ ಉತ್ಪನ್ನಗಳನ್ನು ಗಿರಿವಿಟ್ಟುಕೊಳ್ಳಲು ಎಷ್ಟು ಮಾರುಕಟ್ಟೆಗಳು ಸಜ್ಜಾಗಿವೆ?

ಈ) ಪ್ರತಿ ಒಂದು ಮಾರುಕಟ್ಟೆಯಲ್ಲೂ.ರೈತರಿಗೆ ಈ ಸೌಲಭ್ಯ ಸಿಗುವಂತೆ ಮಾಡಲು ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳೇನು?

ಶ್ರೀ ರಾಮಲಿಂಗರೆಡ್ಡಿ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ)123

ಆ) 97

ಇ) ರೈತರ ಕೃಷಿ ಉತ್ಪನ್ನಗಳನ್ನು ಶೀಘ್ರವೇ ಹಾಳಾಗುವ ಉತ್ಪನ್ನಗಳನ್ನು ಹೊರತುಪಡಿಸಿ ಅಡವಿಟ್ಟುಕೊಂಡು ಅಲ್ಪಾವಧಿ ಮುಂಗಡ ಹಣ ಮಂಜೂರು ಮಾಡುವ ಯೋಜನೆ ಈಗಾಗಲೇ 11 ಮಾರುಕಟ್ಟೆಗಳಲ್ಲಿ ಜಾರಿಗೆ ತರಲಾಗಿದೆ.

ಈ) ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ನಿಯಮಾವಳಿಗೆ ಇತ್ತೀಚೆಗೆ ತಿದ್ದುಪಡಿಯಾದಂತೆ ಮಾರುಕಟ್ಟೆ ಸಮಿತಿಯು ಮಾರುಕಟ್ಟೆ ಶುಲ್ಕ ಹಾಗೂ ಲೈಸನ್ಸ್ ಶುಲ್ಕಗಳ ಮೂಲಕ ರೂ. 5.00 ಲಕ್ಷಕ್ಕಿಂತ ಹೆಚ್ಚಿಗೆ ಆದಾಯ ಹೊಂದಿದ್ದು ಹಾಗೂ ತನ್ನ ಸ್ವಂತದ ಯೋಗ್ಯ ದಾಸ್ತಾನು ಗೋದಾಮು ಉಗ್ರಾಣಗಳನ್ನು ಹೊಂದಿದ್ದಲ್ಲಿ ಅದು ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು (ಶೀಘ್ರವೇ ಹಾಳಾಗದ ಉತ್ಪನ್ನಗಳನ್ನು ಹೊರತುಪಡಿಸಿ) ಅಡವಿಟ್ಟುಕೊಂಡು ಅಲ್ಪಾವಧಿ ಸಾಲ ಮುಂಗಡ ನೀಡಬಹುದಾಗಿದೆ. ಮಾರುಕಟ್ಟೆ ಸಮಿತಿಗಳಲ್ಲಿ ದಾಸ್ತಾನು ಯೋಗ್ಯ ಗೋದಾಮುಗಳು ಲಭ್ಯವಿಲ್ಲದ ಸಂದರ್ಭದಲ್ಲಿ ರಾಜ್ಯ ಹಾಗೂ ಕೇಂದ್ರ ಉಗ್ರಾಣ ನಿಗಮಗಳ ಗೋದಾಮುಗಳಲ್ಲಿ ಉತ್ಪನ್ನಗಳನ್ನು ದಾಸ್ತಾನು ಮಾಡಿ ಪಡೆದ ರಶೀದಿಯನ್ನು ಅಡವಿಟ್ಟುಕೊಂಡು ರೈತರಿಗೆ ಮುಂಗಡ ನೀಡಲು ಅವಕಾಶ ಕಲ್ಪಿಸಲಾಗಿದೆ. ರೂ. 5.00 ಲಕ್ಷಕ್ಕಿಂತ ಕಡಿಮೆ ಆದಾಯವಿರುವ ಮಾರುಕಟ್ಟೆಯಲ್ಲಿ ಈ ಸೌಲಭ್ಯ ಕಲ್ಪಿಸಲು ನಿಯಮಗಳ ಪ್ರಕಾರ ಅವಕಾಶವಿಲ್ಲ ಹಾಗೂ ಈ ಯೋಜನೆಗೆ ಸರ್ಕಾರದಿಂದ ಯಾವುದೇ ಆರ್ಥಿಕ ಸಹಾಯ ನೀಡಲಾಗುವುದಿಲ್ಲ.

ಶ್ರೀ ಜಿ. ರಾಜುಗೌಡ : ಅಧ್ಯಕ್ಷರೇ, ಎಷ್ಟು ಆದಾಯ ಬರುತ್ತದೆ. ಅದರ ಶೇಕಡ 10ರಷ್ಟನ್ನು ಮುಂಗಡವಾಗಿ ರೈತರಿಗೆ ಕೊಡತಕ್ಕಂಥ ಉತ್ಪನ್ನದ ಮೇಲೆ ಎಂದು ಹೇಳಿದ್ದೀರಿ. ಸ್ವಾಮಿ ಒಂದು ಮಾರುಕಟ್ಟೆಯಲ್ಲಿ ಐದು ಲಕ್ಷ ರೂ. ಆದಾಯ ಅರ್ಹವಾದುದು ಎಂದು ಹೇಳಿದ್ದಾರೆ. ಒಂದು ವೇಳೆ ಮಾರುಕಟ್ಟೆಗೆ ಐದು ಲಕ್ಷ

ರೂ. ಬಂದರೆ ಶೇಕಡ 10 ಅಂದರೆ 50,000 ರೂ.ಗಳಾಗುತ್ತದೆ. ಐವತ್ತು ಸಾವಿರ ರೂ.ಗಳಲ್ಲಿ ಏನು ಕೃಷಿ ಉತ್ಪನ್ನವಾಗುತ್ತದೆ. ದಯವಿಟ್ಟು ತಾವು ಏನು ಶೇಕಡ 10 ರಷ್ಟು ಎಂದು ಹೇಳಿದ್ದೀರಿ ಅದರ ಬದಲು ಶೇಕಡ 20ರಷ್ಟು ಮಾಡಿದಾಗ ಇದರ ಜೊತೆಗೆ ತಾವು ಮ್ಯಾಚಿಂಗ್ ಕಂಟ್ರಿಬ್ಯೂಷನ್ ಸಾಲದ ರೂಪದಲ್ಲಿ ಯಾವುದೇ ಗ್ರಾಂಟ್ ರೂಪದಲ್ಲಿ, ಏನು ಕೃಷಿ ಉತ್ಪನ್ನ ಇಟ್ಟುಕೊಂಡು ನಾವು ರೈತರಿಗೆ ಸಹಾಯ ಮಾಡಲು ಸಾಧ್ಯವಾಗುತ್ತದೆ? ಅದನ್ನು ಮಾಡದಿದ್ದರೆ ತೊಂದರೆಯಾಗುತ್ತದೆ. ಆದಾಯ ಅನ್ನುವುದರ ಬಗ್ಗೆ ತಾವು ಕ್ಲಾರಿಫೈಡ್ ಮಾಡಲಿಲ್ಲ. ಒಟ್ಟಿನಲ್ಲಿ ಗ್ರಾಸ್ ಇನ್‌ಕಂ, ನೆಟ್ ಇನ್‌ಕಂ ಎನ್ನುವುದನ್ನು ತಾವು ಹೇಳಿಲ್ಲ. ದಯಮಾಡಿ ಇದಕ್ಕೆ ಉತ್ತರ ಕೊಡಿ ಸ್ವಾಮಿ.

ಶ್ರೀ ರಾಮಲಿಂಗರೆಡ್ಡಿ (ಅಧ್ಯಕ್ಷರೇ, ಹಿಂದಿನ ವರ್ಷದಲ್ಲಿ ಏನು ಎ.ಪಿ.ಎಂ.ಸಿ.ಗಳ ಆದಾಯ ಇರುತ್ತದೆ, ಅದರಲ್ಲಿ ಶೇ. 10 ರಷ್ಟು ಹಣವನ್ನು ಸಾಲವಾಗಿ ಕೊಡುವಂಥ ಕಾರ್ಯಕ್ರಮದಲ್ಲಿ ಅಪೆಕ್ಸ ಬ್ಯಾಂಕ್‌ನಲ್ಲಿ ಅಕೌಂಟ್ ಕೂಡ ಮಾಡಬೇಕು. ಅದು ಪ್ರತಿ ವರ್ಷ 10 ಪರ್ಸೆಂಟ್ ಇನ್‌ಕಂ ಇರುವುದರಿಂದ, ಅಷ್ಟು ಇನ್‌ಕಂ ಆ್ಯಡ್ ಆಗುತ್ತಾ ಹೋಗುತ್ತದೆ. ನಮ್ಮ ಬೆಂಗಳೂರು ಮಾರುಕಟ್ಟೆಯಲ್ಲಿ ಸುಮಾರು 7 ಕೋಟಿ ರೂ. ಆದಾಯವಿದೆ. ಅದರ 10 ಪರ್ಸೆಂಟ್ ಎಂದರೆ ಎಪ್ಪತ್ತು ಸಾವಿರ ರೂ.ಹಣ ಸಾಲ ಕೊಡುವುದರಲ್ಲಿ ಒದಗಿಸಿದ್ದೇವೆ. ಮೂರು ತಿಂಗಳು ಎಂದರೆ ವರ್ಷಕ್ಕೆ ನಾಲ್ಕು ಸಾರಿ ಬೇರೆಯವರಿಗೆ ಕೊಡಬಹುದು. ಅಂದರೆ ಒಟ್ಟು 2.75 ಲಕ್ಷ ಕೊಡಬೇಕು. ಹಾಗೆ ಮುಂದಿನ ವರ್ಷಕ್ಕೆಲ್ಲಾ ಅಷ್ಟೇ 10 ಪರ್ಸೆಂಟ್ ಸೇರಿಕೆಯಾಗುತ್ತದೆ. ಅಂದರೆ ಒಟ್ಟು 5 ವರ್ಷದಲ್ಲಿ ಬೆಂಗಳೂರು ಮಾರುಕಟ್ಟೆ ಒಂದರಲ್ಲೇ ಸುಮಾರು ಶೇ. 20 ರಷ್ಟು ಹಣ ಸಾಲ ಕೊಡುವಂಥ ಸ್ಕೀಮ್ ಇರುತ್ತದೆ. ಈ ಹಣವನ್ನು ನಾವು ಯಾವ ರೀತಿ ಬೇಕಾದರೂ ಉಪಯೋಗಿಸುವ ಹಾಗಿಲ್ಲ. ಒಂದು ಪೈಸೆಯೂ ಬೇರೆಯದ್ದಕ್ಕೆ ಎಂದು ಡೈವರ್ಟ್ ಮಾಡುವ ಹಾಗಿಲ್ಲ. ಆದ್ದರಿಂದ ಈ ವರ್ಷ ಕಡಿಮೆಯಾಗಿರಬಹುದು. ಆದರೆ 4-5 ವರ್ಷಗಳಲ್ಲಿ ಹೆಚ್ಚಿನ ಹಣ ಸಂಗ್ರಹವಾಗುತ್ತದೆ. ಇದರಿಂದ ಹೆಚ್ಚಿನ ರೈತರಿಗೆ ಸಾಲ ಕೊಡುವ ವ್ಯವಸ್ಥೆಯಾಗುತ್ತದೆ.

ಶ್ರೀ ಜಿ. ರಾಜುಗೌಡ : ಮಾನ್ಯ ಮಂತ್ರಿಗಳು ಬರೀ ಬೆಂಗಳೂರು ಮಾರುಕಟ್ಟೆ ಗುರಿಯನ್ನಿಟ್ಟುಕೊಂಡು ಹೇಳುತ್ತಾರೆ. ತಾವು 97 ಮಾರುಕಟ್ಟೆಗಳು ಈ ಸಾಲ ಕೊಡಲು ಅರ್ಹತೆ ಇದೆ ಎಂದು ಹೇಳಿದ್ದೀರಿ. ಒಂದು ಮಾರುಕಟ್ಟೆಯಲ್ಲಿ ಕೇವಲ ಐದು ಲಕ್ಷ ರೂ. ಉತ್ಪನ್ನ ಆಗುತ್ತದೆಂದು ಇಟ್ಟುಕೊಳ್ಳೋಣ, ತಮ್ಮ ಲೆಕ್ಕದ ಪ್ರಕಾರ 50,000 ರೂ.ಗಳಾಗುತ್ತದೆ. ಆದ್ದರಿಂದ ಶೇ. 20 ರಷ್ಟು ಮಾಡಿ, ಮ್ಯಾಚಿಂಗ್ ಗ್ರಾಂಟ್ ಎಂದು ಕೊಡಿ. ದಳ್ಳಾಳಿಗಳನ್ನು ತಪ್ಪಿಸಿ ರೈತರ ಉತ್ಪನ್ನಗಳನ್ನು ಇಟ್ಟುಕೊಂಡು ಸಕಾಲದಲ್ಲಿ ಸಹಾಯ ಮಾಡತಕ್ಕಂಥ ವ್ಯವಸ್ಥೆ ಮಾಡಿ. ಬರೀ ಬೆಂಗಳೂರು ಮಾರುಕಟ್ಟೆ ಉದಾಹರಣೆ ಇಟ್ಟುಕೊಳ್ಳಬೇಡಿ, ಕೊಳ್ಳೇಗಾಲ ಮಾರುಕಟ್ಟೆಯನ್ನು ಉದಾಹರಣೆಗೆ ತೆಗೆದುಕೊಳ್ಳಿ.

ಶ್ರೀ ರಾಮಲಿಂಗರೆಡ್ಡಿ : ಒಂದು ಎಗ್ಸಾಂಪಲ್ ಕೊಟ್ಟೆ. ಅಷ್ಟೇ ದೊಡ್ಡ ಸಂಸ್ಥೆಗಳು ಇವೆ. ಸಣ್ಣವು ಇರುತ್ತವೆ. ಅವರು 20 ಪರ್ಸೆಂಟ್ ಕೊಡಿ ಎಂದು ಹೇಳಿದ್ದಾರೆ ಅದನ್ನು ಪರಿಶೀಲನೆ ಮಾಡುತ್ತೇವೆ.

ಬೆಳಗಾಂ ತಾಲ್ಲೂಕಿನಲ್ಲಿ ಗೊಬ್ಬರವನ್ನು ರಿಯಾಯಿತಿ ದರದಲ್ಲಿ ವಿತರಿಸುವುದು

507 - ಶ್ರೀ ಬಿ. ಐ. ಪಾಟೀಲ್ (ಉಚ್ಛಂಗಾವ್) : ಮಾನ್ಯ ಕೃಷಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂ ತಾಲ್ಲೂಕಿನ ರೈತರಿಗೆ ರಿಯಾಯ್ತಿ ದರದಲ್ಲಿ ರಸಗೊಬ್ಬರಗಳನ್ನು ಶೀಘ್ರವಾಗಿ ವಿತರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳು

ಶ್ರೀ ಹೆಚ್. ಎಂ. ರೇವಣ್ಣ (ಕೃಷಿ ಸಚಿವರು)

ಅ) ರಾಜ್ಯದಲ್ಲಿನ ಎಲ್ಲಾ ತಾಲ್ಲೂಕುಗಳಲ್ಲಿನ ರೈತರಿಗೆ ರಿಯಾಯ್ತಿ ದರದಲ್ಲಿ ರಸಗೊಬ್ಬರವನ್ನು ವಿತರಿಸಿರುವಂತೆಯೇ ಬೆಳಗಾಂ ತಾಲೂಕಿನ ರೈತರಿಗೂ ರಿಯಾಯ್ತಿ ದರದಲ್ಲಿ ರಸಗೊಬ್ಬರವನ್ನು ಶೀಘ್ರವಾಗಿ ವಿತರಿಸಲು ಕ್ರಮ ಕೈಗೊಂಡಿದೆ.

Sri B.I. Patil : The farmers in Belgaum district are already in distress due to recent flood havoc The distribution of fertilizer was not effective in the past. In Maharastra, the Government is distributing the fertilizers to the farmares at a cheaper rate. urea is cheaper by Rs 15/- per bag in Maharastra. Why should it be costly in our state? Even other fertilizers are also cheaper in Maharastra when compared to our State.

ಶ್ರೀ ಹೆಚ್.ಎಂ. ರೇವಣ್ಣ ಈ ಎರಡು ಕಾರ್ಖಾನೆಗಳಲ್ಲಿ ಅಂದರೆ ಜುವಾರಿ ಮತ್ತು ಎಂ.ಸಿ.ಎಫ್. ಸ್ವಲ್ಪ ತೊಂದರೆಯಾಗಿದ್ದರಿಂದ ಕಡಿಮೆ ಸಪ್ಲೈ ಆಗಿತ್ತು. ಈಗ ಮತ್ತೆ ಈ ಕಾರ್ಖಾನೆಗಳು ಪ್ರಾರಂಭವಾಗಿವೆ. ಅದೂ ಅಲ್ಲದೆ ಮೊನ್ನೆ ದೆಹಲಿಯಲ್ಲಿಯೂ ಕೂಡ ಫರ್ಟಿಲೈಸರ್ಸ್ ಮಂತ್ರಿಗಳ ಸಭೆಯಲ್ಲಿ ನಾನು ಇದರ ಬಗ್ಗೆ ಮಾತನಾಡಿದ್ದೇನೆ. ಈಗಾಗಲೇ ಒಂದು ಶಿಪ್ ಮಂಗಳೂರಿಗೆ ಬಂದಿದೆ. ಆದ್ದರಿಂದ ಬೆಳಗಾಂ ಮತ್ತು ಬಿಜಾಪುರಕ್ಕೆ ಕೊಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಇನ್ನು ಮುಂದೆ ಯಾವುದೇ ತೊಂದರೆಯಾಗುವುದಿಲ್ಲವೆಂದು ಹೇಳಲು ಇಷ್ಟಪಡುತ್ತೇನೆ.

Sri K.C. Modagekar Desai : Speaker sir, you know very well that Urea is required in this area. Is it not the duty of the Government to bring that Urea which is essential for the crop? It is learnt recently that they have collected some quanitities of Urea. I want to know throug you Sir, What is the quantity of collected fertilizer that has been by the Agriculture Department and when they are going to distibute it ã{ã the farmers at subsidiesed rates?

ಶ್ರೀ ಹೆಚ್. ಎಂ. ರೇವಣ್ಣ : ಸಬ್ಸಿಡಿ ಬಗ್ಗೆ ತೊಂದರೆ ಇಲ್ಲ. ಸಬ್ಸಿಡಿ ನಿಂತಿಲ್ಲ. ನೀವು ಹೇಗೆ ಪರ್ಚೇಸ್ ಮಾಡುತ್ತೀರಿ ಹಾಗೆಯೇ ಸಬ್ಸಿಡಿ ಬರುತ್ತದೆ. ಸಬ್ಸಿಡಿ ನೇರವಾಗಿ ಕಂಪನಿಗೆ ಹೋಗುತ್ತದೆ. ಸಬ್ಸಿಡಿ ರೇಟಿನಲ್ಲೇ ನಾವು ಗೊಬ್ಬರ ಕೊಡುತ್ತಿದ್ದೇವೆ. ಆದರೆ ಕ್ವಾಂಟಿಟಿ ಬಂದಿದೆ ಅದನ್ನು ಡೈವರ್ಟ್ ಮಾಡುತ್ತೇವೆಂದು ಹೇಳಿದ್ದೇನೆ. ಕಳುಹಿಸಿಕೊಡುತ್ತೇನೆ.

Sri BI Patil : Sir, our question is Maharashtra gets it fifteen Rupees less per bag. Why not our State?

Sri K.C. Modagekar Desal : Our farmers have to purchase Urea at very higher rate.

ಕೇಂದ್ರ ಕಾರಾಗೃಹದ ಸ್ಥಳಾಂತರ.

98 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಕಾರಾಗೃಹ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಸೆಂಟ್ರಲ್ ಜೈಲನ್ನು ಈಗಿನ ಸ್ಥಳದಿಂದ ಬೆಂಗಳೂರಿನ ಹೊರವಲಯಕ್ಕೆ ಸ್ಥಳಾಂತರಿಸುವ ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆಯೇ?

ಆ) ಹಾಗಿದ್ದಲ್ಲಿ ಆ ಯೋಜನೆ ಯಾವ ಹಂತದಲ್ಲಿದೆ.

ಇ) ಕಾರಾಗೃಹದ ನಿರ್ಮಾಣಕ್ಕಾಗಿ ಎಷ್ಟು ಎಕರೆ ಜಾಗವನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಕಟ್ಟಡ ನಿರ್ಮಾಣ ಕೆಲಸವನ್ನು ಪ್ರಾರಂಭಿಸಲಾಗಿದೆಯೇ?

ಈ) ಇನ್ನೂ ಎಷ್ಟು ಸಮಯದ ನಂತರ ಈಗಿನ ಕಾರಾಗೃಹವನ್ನು ಹೊರವಲಯಕ್ಕೆ ಸ್ಥಳಾಂತರಿಸಲಾಗುವುದು.

ಡಾ: ಆರ್.ಬಿ.ಚೌದುರಿ (ಕಾರಾಗೃಹಗಳ ರಾಜ್ಯ ಸಚಿವರು)

ಅ) ಹೌದು

ಆ) ಪ್ರಗತಿಯಲ್ಲಿದೆ.

ಇ) 118.29 ಎಕರೆ ಜಮೀನನ್ನು 1976ನೇ ಇಸವಿಯಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು ಪರಪ್ಪನ ಅಗ್ರಹಾರದಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ಕಟ್ಟಡದ ನಿರ್ಮಾಣದ ಕೆಲಸವನ್ನು ಪ್ರಾರಂಭಿಸಲಾಗಿದೆ.

ಈ) ಬೆಂಗಳೂರು ದಕ್ಷಿಣ ತಾಲ್ಲೂಕು ಪರಪ್ಪನ ಅಗ್ರಹಾರದಲ್ಲಿ ನಿರ್ಮಾಣವಾಗುತ್ತಿರುವ ನೂತನ ಕೇಂದ್ರ ಕಾರಾಗೃಹ ಪೂರ್ಣಗೊಂಡ ನಂತರ ಸ್ಥಳಾಂತರಿಸಲಾಗುವುದು.

ಶ್ರೀ ನಾರಾಯಣರಾವ್ ಮನಹಳ್ಳಿ : ಉತ್ತರ ಸಮಾಧಾನಕರವಾಗಿದೆ.

ರಾಜ್ಯದಲ್ಲಿ ಚಾರ್ಟರ್ಡ್ ಅಕೌಂಟೆಂಟ್‌ಗಳ ನೇಮಕ.

505 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸಹಕಾರಿ ಸಂಘಗಳ ಆಂತರಿಕ ಲೆಕ್ಕ ಪರಿಶೋದನೆಗೆ ಚಾರ್ಟರ್ಡ್ ಅಕೌಂಟೆಂಟ್ ರವರನ್ನು ನೇಮಿಸಬೇಕೆನ್ನುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದು ನಿಜವೇ ?

ಆ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರ ಕೈಗೊಂಡಕ್ರಮನೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರ ಸಚಿವರು)

ಅ) ಈ ತರಹದ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಪಿ. ಬಸವರಾಜ್ : ಕೋ-ಆಪರೇಟಿವ್ ಇಲಾಖೆಯಲ್ಲಿ ಇಂಟರ್‌ನಲ್ ಆಡಿಟ್ ಬಗ್ಗೆ ಪ್ರಶ್ನೆ ಕೇಳಿದ್ದೆ. ಸರಕಾರದಿಂದ ಅದಕ್ಕೆ ಉತ್ತರ ಬರಲಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಚಾರ್ಟರ್ಡ್ ಅಕೌಂಟೆಟ್ಸ್ ಅನ್ನು ಸಾಮಾನ್ಯವಾಗಿ ಸೊಸೈಟಿಗಳಲ್ಲಿ ಆಗಿಂದಾಗ್ಗೆ ಉಪಯೋಗಿಸಿಕೊಳ್ಳುವುದಿಲ್ಲ. ಅವರನ್ನು ವರ್ಷಕ್ಕೊಂದು ಸಲವಾದರೂ ಸಂಧಿಸುವ ಸಂದರ್ಭ ಅವರನ್ನು ನೇಮಿಸಿ ಅವರ ಮುಖಾಂತರ ಆಡಿಟ್ ಮಾಡಿಸುವುದು ಉಂಟು. ಸಹಕಾರ ಸಂಘಗಳ ಲೆಕ್ಕಪರಿಶೋಧನೆಗೆ ಈ ಚಾರ್ಟರ್ಡ್ ಅಕೌಂಟೆಟ್ಸ್‌ಗಳನ್ನು ಉಪಯೋಗಿಸಿಕೊಳ್ಳಬೇಕೇ ಬೇಡವೇ ಎನ್ನುವುದು ಸರಕಾರದ ಪರಿಶೀಲನೆಯಲ್ಲಿದೆ. ಅದು ಇನ್ನೂ ತೀರ್ಮಾನವಾಗಬೇಕಾಗಿದೆ.

ಶ್ರೀ ಪಿ. ಬಸವರಾಜ್ : ಚಾರ್ಟರ್ಡ್ ಅಕೌಂಟೆಟ್ಸ್‌ಗಳನ್ನು ಇಂಟರನಲ್ ಆಡಿಟರ್‌ಗಳನ್ನಾಗಿ ಮಾಡಿದರೆ ಆ ಸಂಸ್ಥೆ ಸ್ವಲ್ಪ ಉತ್ತಮ ಪ್ರಗತಿ ಸಾಧನೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಈಗ ಬ್ಯಾಂಕಿನಲ್ಲಿ ಈ ಪದ್ಧತಿ ಇದೆ. ಇಲ್ಲೂ ಕೂಡ ತಂದರೆ ಸಂಸ್ಥೆಗಳು ಉತ್ತಮ ಕಾರ್ಯ ನಡೆಸಲಿಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎನ್. ಹುಚ್ಚುಮಾಸ್ತಿಗೌಡ : ನಾನು ಆಗಲೇ ಹೇಳಿದೆ. ಇವರನ್ನು ಉಪಯೋಗಿಸಿಕೊಳ್ಳತಕ್ಕಂತಹ ಪದ್ಧತಿ ಇಲ್ಲ. ಸಾಮಾನ್ಯವಾಗಿ ಸೊಸೈಟಿಗಳಲ್ಲಿ ವರ್ಷಕ್ಕೊಂದು ಸಾರಿಯಾದರೂ ಉಪಯೋಗಿಸಿಕೊಂಡು ಆ ಲೆಕ್ಕ ಸ್ಪಷ್ಟವಾದ ರೀತಿಯಲ್ಲಿ ಸರಕಾರಕ್ಕೆ ದೊರಕಿಸಿ ಕೊಡುವ ಪ್ರಯತ್ನ ನಡೆದಿದೆ. ಮತ್ತು ಚಾರ್ಟರ್ಡ್ ಅಕೌಂಟೆಟ್ಸ್ ಅದನ್ನು ಖಾಯಂ ಆಗಿ ಉಪಯೋಗಿಸಿಕೊಳ್ಳುವ ಯೋಜನೆ ಸರಕಾರದ ಮುಂದಿದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಹಾರಾಷ್ಟ್ರ ಸರಕಾರದಲ್ಲಿ ಕೋ ಆಪರೇಟಿವ್ ಸೊಸೈಟಿಗಳ ಆಡಿಟ್ ಮಾಡಲಿಕ್ಕೆ ಚಾರ್ಟರ್ಡ್ ಅಕೌಂಟೆಂಟ್ಸ್‌ಗಳನ್ನು ನೇಮಿಸುತ್ತಾರೆ. ಅದೇ ರೀತಿ ನಮ್ಮ ಸರಕಾರದಲ್ಲಿ ತಾವು ನೇಮಿಸುತ್ತೀರಾ ಹೇಗೆ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ನಾನು ಆಗಲೇ ಹೇಳಿದೆ ಇವರನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕೆಂಬ ಆಲೋಚನೆ ಸರಕಾರದಲ್ಲಿ ಇದೆ. ಆದರೆ ಅದರ ಬಗ್ಗೆ ಕಡೆಯದಾಗಿ ತೀರ್ಮಾನ ತೆಗೆದುಕೊಂಡಿಲ್ಲ.

ರಾಜ್ಯದಲ್ಲಿ ಮಹಿಳಾ ಸಹಕಾರ ಸಂಘಗಳ ಸಂಖ್ಯೆ

723 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಎಷ್ಟು ಮಹಿಳಾ ಸಹಕಾರ ಸಂಘಗಳು ಹಾಗೂ ಕ್ರೆಡಿಟ್ ಸೊಸೈಟಿಗಳು ಇರುತ್ತವೆ.

ಆ) ಬೆಳಗಾಂ ಜಿಲ್ಲೆಯಲ್ಲಿ ಇಂತಹ ಸಂಘಗಳು ಎಷ್ಟು ಇರುತ್ತವೆ (ತಾಲ್ಲೂಕುವಾರು ವಿವರ ನೀಡುವುದು).

ಇ) ಮಹಿಳಾ ಸೊಸೈಟಿಗಳನ್ನು ಸ್ಥಾಪಿಸಲು ಸರ್ಕಾರ ಉತ್ತೇಜನವನ್ನು ಕೊಡುತ್ತಿದೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 799 ಮಹಿಳಾ ಸಹಕಾರ ಸಂಘಗಳಿದ್ದು, ಈ ಪೈಕಿ 19 ಮಹಿಳಾ ಕ್ರೆಡಿಟ್ ಸೊಸೈಟಿಗಳು ಇರುತ್ತವೆ.

ಆ) ಬೆಳಗಾಂ ಜಿಲ್ಲೆಯಲ್ಲಿ ಒಟ್ಟು 91 ಮಹಿಳಾ ಸಹಕಾರ ಸಂಘಗಳಿದ್ದು, ಈ ಪೈಕಿ 17 ಮಹಿಳಾ ಕ್ರೆಡಿಟ್ ಸಹಕಾರ ಸಂಘಗಳಿರುತ್ತವೆ (ತಾಲ್ಲೂಕುವಾರು ಈ ಕೆಳಕಂಡಂತಿವೆ).

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಸಹಕಾರ ಸಂಘಗಳ ಸಂಖ್ಯೆ
1.	ಬೆಳಗಾಂ ತಾಲ್ಲೂಕು	21
2.	ಖಾನಾಪುರ ತಾಲ್ಲೂಕು	1
3.	ಹುಕ್ಕೇರಿ ತಾಲ್ಲೂಕು	5
4.	ಬೈಲಹೊಂಗಲ ತಾಲ್ಲೂಕು	3
5.	ಗೋಕಾಕ್ ತಾಲ್ಲೂಕು	25
6.	ಸವದತ್ತಿ ತಾಲ್ಲೂಕು	6
7.	ಚಿಕ್ಕೋಡಿ ತಾಲ್ಲೂಕು	16
8.	ರಾಮದುರ್ಗ ತಾಲ್ಲೂಕು	5
9.	ಅಥಣಿ ತಾಲ್ಲೂಕು	1
10.	ರಾಯಬಾಗ್ ತಾಲ್ಲೂಕು	8
	ಒಟ್ಟು	**91**

ಇ) ಹೌದು

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ, ನಾನು ಕೇಳುವುದು ಏನು ಎಂದರೆ ಬೆಳಗಾಂ ಜಿಲ್ಲೆಯಲ್ಲಿ 91 ಮಹಿಳಾ ಸಹಕಾರಿ ಸಂಘಗಳಿವೆ ಎಂದು ತಾವು ಹೇಳಿದ್ದೀರಿ. ಇವುಗಳು ಬಹಳ ಕಡಿಮೆ ಇವೆ. ಅವುಗಳಿಗೆ ಹೆಚ್ಚಿನ ಉತ್ತೇಜನ ಕೊಟ್ಟು ಸರ್ಕಾರದವರು ಸ್ಥಾಪಿಸಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳುತ್ತಿದ್ದೀರಿ? ಎರಡನೆಯದಾಗಿ ಬೆಳಗಾಂ ಜಿಲ್ಲೆಯಲ್ಲಿ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನಲ್ಲಿ ಮಹಿಳಾ ಸಹಕಾರಿ ಸಂಘಗಳನ್ನು ರಿಜಿಸ್ಟರ್ ಮಾಡಲಿಕ್ಕೆ ಬಹಳ ತೊಂದರೆ ಇದೆ. ಅದು ತಮ್ಮ ಸರ್ಕಾರದ ಗಮನಕ್ಕೆ ಬಂದಿದೆಯೇ? ಮೂರನೆಯದು, ಈ ಮಹಿಳಾ ಸಹಕಾರಿ ಸಂಘ ರಿಜಿಸ್ಟರ್ ಮಾಡಲು ಕೆ.ಎಂ.ಎಫ್. ನವರಿಂದ ಪರ್ಮಿಷನ್ ಬಂದರೆ ಮಾತ್ರ ಮಾಡುತ್ತೇವೆ, ಇಲ್ಲದಿದ್ದರೆ ಇಲ್ಲ ಎಂದು ಹೇಳುತ್ತಾರೆ. ಹಾಗಾಗಿ ಕೆ.ಎಂ.ಎಫ್.ನವರಿಂದ ಪರ್ಮಿಷನ್ ತೆಗೆದುಕೊಳ್ಳಲೇಬೇಕು ಎಂದು ಕಡ್ಡಾಯವಿದೆಯೇ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ತಾಲ್ಲೂಕುಗಳಲ್ಲಿ ಈ ಮಹಿಳಾ ಸಂಘಗಳು ಇರತಕ್ಕಂಥ ಕಡೆ ಸಾಮಾನ್ಯವಾಗಿ ಆಡಳಿತ ಚೆನ್ನಾಗಿ ನಡೆಯುತ್ತಿದೆ ಎಂದೇ ನನಗೆ ವರದಿ ಬಂದಿರುವಂಥದ್ದು. ನಾನು ವಿವರಗಳನ್ನು ಹೇಳುವುದಕ್ಕೆ ಸಿದ್ಧವಾಗಿದ್ದೇನೆ. ಈಗ ಸಾಮಾನ್ಯವಾಗಿ ಈ ಸಂಘಗಳ ಮೇಲ್ವಿಚಾರಣೆ ಮತ್ತು ಆಡಳಿತ ನನಗೆ ಬಂದಿರುವ ವರದಿ ಪ್ರಕಾರ ಸಮರ್ಪಕವಾಗಿದೆ ಎಂದೇ ನನಗೆ ಬಂದಿರುವ ವರದಿ. ಆದರೆ ಎಲ್ಲೆಲ್ಲಿ ಏನೇನು ದೋಷಗಳಿವೆ ಎನ್ನುವುದನ್ನು ವಿವರವಾಗಿ ತಿಳಿದು ನಾನು ಸಭೆಯ ಮುಂದೆ ತಿಳಿಸಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಸದಸ್ಯರು ಅದನ್ನು ಕೇಳಲೇಇಲ್ಲ. ಸಂಘಗಳನ್ನು ಸ್ಥಾಪಿಸುವುದಕ್ಕೆ ಏನು ಉತ್ತೇಜನ ಕೊಡುತ್ತೀರಿ ಎಂದು ಕೇಳಿದ್ದಾರೆ ಅಷ್ಟೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಸಾಮಾನ್ಯವಾಗಿ ಗಂಡುಮಕ್ಕಳು ಸಂಘಗಳನ್ನು ಸ್ಥಾಪನೆ ಮಾಡುತ್ತಾರೆ. ಅದಕ್ಕಿಂತಲೂ ಹೆಚ್ಚಾಗಿ ಹೆಣ್ಣುಮಕ್ಕಳು ಸ್ಥಾಪನೆ ಮಾಡುವುದಕ್ಕೆ ನೀವೇನಾದರೂ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತೀರೋ ಹೇಗೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಉತ್ತೇಜನ ಸಾಮಾನ್ಯವಾಗಿ ಇತರೆ ಸಹಕಾರಿ ಸಂಘಗಳಿಗೆ ಯಾವ ರೀತಿ ಕೊಡುತ್ತಿದ್ದೇವೋ ಅದೇ ರೀತಿ ಉತ್ತೇಜನ ಕೊಡುತ್ತಿದ್ದೇವೆಯೇ ಹೊರತು ಹೆಚ್ಚಿಗೆ ವಿಶೇಷವಾದಂಥ ರೀತಿಯಲ್ಲಿ ಆ ಸಂಘಗಳ ಪರಿಸ್ಥಿತಿ ನೋಡಿ ಅದರ ಮೇಲ್ವಿಚಾರಣೆ ಎಲ್ಲೆಲ್ಲಿ ಚೆನ್ನಾಗಿ ನಡೆಯುತ್ತಿದೆ, ಯಾವ ವಿಧವಾದಂಥ ರೀತಿಯಲ್ಲಿ ಕೊಡಬೇಕೋ ಆ ರೀತಿಯಲ್ಲಿ ಕೊಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಸ್ಥಾಪನೆಯಾದಾಗ ಏನು ಕೊಡುತ್ತೀರಿ ಎಂದು ಕೇಳುತ್ತಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸ್ಥಾಪನೆಯಾದ ಮೇಲೆ ಯಾವ ರೀತಿ ಉತ್ತೇಜನ ಕೊಡುತ್ತೀರಿ ಎಂದು ಕೇಳುತ್ತಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ : 91 ಸೊಸೈಟಿಗಳು ಇವೆ ಎಂದು ಹೇಳಿದೆ. ಆದರೆ ಪ್ರಾರಂಭವೇ ಆಗಿಲ್ಲ ಎಂದು ಹೇಳಿ ಆಲೋಚನೆ ಮಾಡುವ ಹಾಗೆ ಇಲ್ಲ. ಕೆಲವು ಕಡೆ ಪ್ರಾರಂಭವಾಗಿದೆ.

ಶ್ರೀ ಸಿ. ಬೈರೇಗೌಡ : ಎಲ್ಲಿ ಸ್ಥಾಪನೆಯಾಗಿದೆ ಅಲ್ಲಿ ಚೆನ್ನಾಗಿ ನಡೆಯುತ್ತಿದೆ ಎಂದು ನೀವು ಒಪ್ಪುತ್ತಿದ್ದೀರಿ, ಅವರೂ ಕೂಡ ಒಪ್ಪುತ್ತಿದ್ದಾರೆ. ಇನ್ನೂ ಹೆಚ್ಚಿಗೆ ಈ ಸಂಘಗಳನ್ನು ಸ್ಥಾಪಿಸುವುದಕ್ಕೆ ತಾವು ಉತ್ತೇಜನ ಏನು ಕೊಡುತ್ತೀರಿ? ಮತ್ತು ಸ್ಥಾಪನೆ ಮಾಡುವುದಕ್ಕೆ ಕೆಎಂಎಫ್‌ನಿಂದ ಪರವಾನಿಗೆ ಬೇಕೆಂದು ಹೇಳುತ್ತಿದ್ದಾರಂತೆ ಅಲ್ಲಿ

ಸ್ಥಳದಲ್ಲಿರತಕ್ಕಂಥವರು. ಆ ಪರವಾನಿಗೆಯನ್ನು ಜಾಗ್ರತೆ ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಎನ್.ಹುಚ್ಚಮಾಸ್ತಿಗೌಡ : ಮಾನ್ಯ ಅಧ್ಯಕ್ಷರೇ, ಖಂಡಿತವಾಗಿಯೂ ಏರ್ಪಾಡು ಮಾಡುತ್ತೇವೆ ಮತ್ತು ಆಡಳಿತ ವಿಷಯದಲ್ಲಿ ಯಾವ ರೀತಿ ನಡೆಯುತ್ತಿದೆ ಎಂದು ತಿಳಿದು ಇನ್ನು ಯಾವ ಯಾವ ರೀತಿ ಅವರಿಗೆ ಪ್ರೋತ್ಸಾಹವನ್ನು ಕೊಡಬಹುದು, ಅದೆಲ್ಲವನ್ನೂ ಕೊಡುವುದಕ್ಕೆ ಸರ್ಕಾರ ಸಿದ್ಧವಾಗಿದೆ. ಮಾನ್ಯ ಸದಸ್ಯರು ನನಗೇನಾದರೂ ಸಲಹೆ ಕೊಟ್ಟರೆ ಅದನ್ನೂ ಕಾರ್ಯಗತ ಮಾಡುವುದಕ್ಕೆ ಪ್ರಯತ್ನಮಾಡುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ನಾನು ಕೇಳುವುದೇನೆಂದರೆ ಬೆಳಗಾಂ ಜಿಲ್ಲೆಯೊಳಗೆ ಸಹಕಾರಿ ಸಂಘಗಳನ್ನು ಸ್ಥಾಪನೆ ಮಾಡಲು ಕೆಎಂಎಫ್.ನವರ ಒಪ್ಪಿಗೆ ಬೇಕು. ಕೆಎಂ.ಎಫ್ ನವರ ಒಪ್ಪಿಗೆ ಪಡೆಯದೇ ಇದ್ದಲ್ಲಿ ನಾವು ಸಹಕಾರಿ ಸಂಘಗಳನ್ನು ರಿಜಿಸ್ಟರ್ ಮಾಡುವುದಿಲ್ಲ ಎಂದು ಅಲ್ಲಿರುವಂಥ ಅಸಿಸ್ಟೆಂಟ್ ರಿಜಿಸ್ಟಾರ್, ಡೆಪ್ಯುಟಿ ರಿಜಿಸ್ಟಾರ್ ರವರು ಹೇಳುತ್ತಿದ್ದಾರೆ. ಆ ಕಾರಣಕ್ಕೆ ಕೆಎಂಎಫ್ ನವರ ಪರ್ಮಿಷನ್ ಬೇಕೆ ಬೇಕೆಂದುಕಡ್ಡಾಯ ಮಾಡಿದ್ದೀರಾ? ನಾವು ಏನು ಹೇಳುತ್ತೇವೆ, ಮಹಿಳೆಯರು ಮುಂದೆ ಬರಬೇಕು, ಗಂಡುಮಕ್ಕಳಿಗಿಂತ ಮುಂದೆ ಬರಬೇಕು ಎಂದು ಎಲ್ಲರೂ ಲೆಕ್ಚರ್ ಹೇಳುತ್ತಾರೆ. ಅಲ್ಲಿ ರಿಜಿಸ್ಟರ್ ಆಗದ ಹಾಗೆ ನೋಡಿ ಕೊಳ್ಳುತ್ತಿದ್ದಾರೆ. ಇದಕ್ಕೆ ನೀವು ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಪ್ರತಿಯೊಂದು ಸೊಸೈಟಿ ಹೇಗೆ ನಡೆಯುತ್ತಿದೆ ಎನ್ನುವುದನ್ನು ತಿಳಿದು ಅಲ್ಲಿನ ಪರಿಸ್ಥಿತಿಯನ್ನು ನಾನು ತಿಳಿದುಕೊಂಡು ಯಾವ ಯಾವ ರೀತಿ ಅವರಿಗೆ ಸಹಾಯ ಮಾಡಬಹುದು, ಅದನ್ನು ಆಲೋಚನೆ ಮಾಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸೊಸೈಟಿ ನಡೆಯುವುದು ಅಲ್ಲ.

ಶ್ರೀ ಶಿವಾನಂದ ಹೆಚ್.ಕೌಜಲಗಿ : ಬೆಳಗಾಂ ಜಿಲ್ಲೆಯಲ್ಲಿ ಕೆಎಂಎಫ್. ನವರು ಗಟ್ಟಿಮುಟ್ಟ ಮಂದಿ ಸೇರಿಕೊಂಡು ಸಂಘಗಳು ರಿಜಿಸ್ಟರ್ ಆಗದ ಹಾಗೆ ನೋಡಿಕೊಳ್ಳುತ್ತಿದ್ದಾರೆ. ಇದೆಲ್ಲಾ ಸಂಗತಿ ಇದೆ. ಗಂಡು ಮಕ್ಕಳು ರಿಜಿಸ್ಟರ್ ಮಾಡಿಸುತ್ತೇವೆ ಎಂದರೆ ರಿಜಿಸ್ಟರ್ ಮಾಡಿಸುವುದಿಲ್ಲ. ಹೆಣ್ಣುಮಕ್ಕಳು ಮಾಡುವುದಕ್ಕೆ ಮುಂದೆ ಬಂದರೆ ಅದಕ್ಕೆ ಅನುಕೂಲವನ್ನು ಕೊಡುತ್ತೇವೆ ಎಂದೂ ಮತ್ತು ಇದಕ್ಕೆ ಸರ್ಕಾರದ ನಿಯಮ ಕೂಡ ಇದೆ ಎಂದು ಮನೋರಮಾ ಮಧ್ವರಾಜ್ ರವರು ಇದೇ ಸದನದಲ್ಲಿ ಹೇಳಿದ್ದರು. ಅದೇ ಪ್ರಕಾರ ರಿಜಿಸ್ಟರ್ ಮಾಡುವುದಕ್ಕೆ ಕೆಎಂಎಫ್ ನಿಂದ ಒಪ್ಪಿಗೆ ಬರಬೇಕೆಂದು ಹೇಳುತ್ತಾರೆ. ಕೆಎಂ.ಎಫ್ ನಿಂದ ಪರ್ಮಿಷನ್ ತರಲೇಬೇಕೆಂದು ನಿಯಮವಿದೆಯೇ? ಆ ರೀತಿ ನಿಯಮ ಇದ್ದರೆ ಇದೆ ಎಂದು ಹೇಳಿ. ಇಲ್ಲದಿದ್ದರೆ ಇಲ್ಲ ಎಂದು ಹೇಳಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಕೆಎಂಎಫ್ ಪರ್ಮಿಷನ್ ಅವಶ್ಯಕತೆ ಇಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದೇ ನಿಮಿಷ. ಅದನ್ನು ಮಾಡುವ ಹಾಗೆ ಇಲ್ಲ. ಮಂತ್ರಿಗಳು ಈ ರೀತಿ ಹೇಳಿಬಿಟ್ಟರೆ ಹೇಗೆ? ಮಿಲ್ಕ್ ಸೊಸೈಟಿಯನ್ನು ಲೇಡೀಸ್‌ಗೋಸ್ಕರ ಮಾಡುವ ಹಾಗೆ ಇಲ್ಲ. ಇರುವ ನಿಯಮವನ್ನು ಗಾಳಿಗೆ ತೂರಿಬಿಡುತ್ತೀರಾ?

(ಗೊಂದಲ)

ತೆಂಗು ಬೆಳೆಯ ರೋಗ ನಿವಾರಣೆ

508 -ಶ್ರೀ ವಾಟಾಳ್ ನಾಗರಾಜ್, (ಚಾಮರಾಜನಗರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿನ ಯಾವ ಯಾವ ಪ್ರದೇಶಗಳನ್ನು ತೆಂಗು ಬೆಳೆಯುವ ಪ್ರದೇಶಗಳೆಂದು ಗುರುತಿಸಲಾಗಿದೆ?

ಆ) ಇತ್ತೀಚೆಗೆ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ತೆಂಗಿಗೆ ರೋಗ ತಗುಲಿದೆ?

ಇ) ಯಾವ ಯಾವ ತರಹದ ರೋಗ ತೆಂಗಿಗೆ ತಗುಲಿದೆ?

ಈ) ಈ ರೋಗವನ್ನು ಹೋಗಲಾಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ಸಚಿವರು)

ಅ) ತೆಂಗು ಬೆಳೆಯುವ ಪ್ರದೇಶಗಳೆಂದು ಗುರುತಿಸಲಾಗಿರುವ ಪ್ರದೇಶಗಳು

ತುಮಕೂರು, ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು ದಕ್ಷಿಣ ಕನ್ನಡ, ಉತ್ತರ ಕನ್ನಡ, ಚಿತ್ರದುರ್ಗ, ಶಿವಮೊಗ್ಗ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ನಗರ ಜಿಲ್ಲೆ, ಕೋಲಾರ ಹೆಚ್ಚಾಗಿ ಹಾಗೂ ಧಾರವಾಡ, ಬಳ್ಳಾರಿ, ಬೀದರ್ ಮತ್ತು ರಾಯಚೂರಿನ ಕೆಲವು ಭಾಗಗಳು

ಆ) ಕಳೆದ ಬಾರಿ ತೆಂಗು ಬೆಳೆಯುವ ಪ್ರದೇಶಗಳಲ್ಲಿ ಕಪ್ಪುತಲೆ ಹುಳುವಿನ ಭಾದೆ ಹೆಚ್ಚಾಗಿ ಕಂಡು ಬಂದಿದೆ. ಈ ಬಗ್ಗೆ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೆ, ಇತ್ತೀಚೆಗೆ ತುಮಕೂರು ಜಿಲ್ಲೆಯನ್ನು ಹೊರತುಪಡಿಸಿ ಯಾವುದೇ ಹರಡದ ರೋಗ ತೆಂಗಿನ ಗಿಡಗಳಿಗೆ ತಗಲಿರುವುದಿಲ್ಲ. ಆದಾಗ್ಯೂ, ಕಪ್ಪು-ತಲೆ ಕೀಟಗಳ ಭಾದೆ ಅಲ್ಲಲ್ಲಿ ಕಂಡು ಬರುತ್ತಿದೆ.

ಇ) ತುಮಕೂರು ಜಿಲ್ಲೆಯ ಅಲ್ಲಲ್ಲಿ ಕಾಂಡ ಸ್ರವಿಸುವ ರೋಗ ಮತ್ತು ಸುಳಿ ಕೊಳೆಯುವ ರೋಗಗಳು ಕಂಡುಬಂದಿದೆ.

ಈ) ಕಾಂಡ ಸ್ರವಿಸುವ ರೋಗ, ಸುಳಿ ಕೊಳೆ ರೋಗ ಮತ್ತು ಕೀಟ ನಿಯಂತ್ರಣಕ್ಕೆ ತೋಟಗಾರಿಕೆ ಇಲಾಖೆಯು ಸ್ಥಳೀಯ ವಿಸ್ತರಣಾ ಸಿಬ್ಬಂದಿಯ ಮುಖಾಂತರ ಕೀಟಬಾಧಿತ ತೋಟಗಳ ರೈತರುಗಳಿಗೆ ಸೂಕ್ತ ನಿಯಂತ್ರಣೋಪಾಯಗಳನ್ನು ತಿಳಿಸಿ ಕ್ರಮ ಕೈಗೊಳ್ಳಲಾಗಿದೆ. ತೋಟಗಾರಿಕೆ ಇಲಾಖೆಯಿಂದ 1994-95ನೇ ಸಾಲಿನಲ್ಲಿ ತೋಟಗಾರಿಕೆ ಬೆಳೆಗಳಲ್ಲಿ ಸಮಗ್ರ ಕೀಟ ಮತ್ತು ರೋಗ ಹತೋಟಿಗಾಗಿ ತೆಂಗು ಬೆಳೆಗೆ ರೂ. 1.50 ಕೋಟಿ ವೆಚ್ಚದಲ್ಲಿ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಮತ್ತು ಈಗಾಗಲೇ 40 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಈ ಕಾರ್ಯ ಕ್ರಮದ ಅಡಿಯಲ್ಲಿ 15 ಸ್ಥಳಗಳಲ್ಲಿ ಪ್ಯಾರಾಸೈಟ್ ಪ್ರಯೋಗಾಲಯಗಳನ್ನು ನಿರ್ಮಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಈ ಬಗ್ಗೆ 2 ಬಾರಿ ತಜ್ಞರುಗಳ ತಂಡವನ್ನು ಅಧ್ಯಯನಕ್ಕಾಗಿ ಕಳುಹಿಸಲಾಗಿದ್ದು, ಅವರ ವರದಿಯಂತೆ ಕೀಟನಾಶಕ ಸಿಂಪರಣೆ ಮಾಡಲಾಗುತ್ತಿದೆ ಮತ್ತು ಪ್ಯಾರಾಸೈಟ್‌ಗಳನ್ನು ಬಿಡಲಾಗುತಿದೆ ಅದಷ್ಟು ಶೀಘ್ರವೇ ಇಂತಹ ಕೀಟ 'ಭಾದೆಯನ್ನು ಮತ್ತು ರೋಗಗಳನ್ನು ತಡೆಗಟ್ಟಲು ಸರ್ಕಾರಕ್ಕೆ ಎಲ್ಲಾ ರೀತಿಯ ಕಳಕಳಿ ಇರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಸಭೆಯಲ್ಲಿ ಅನೇಕ ಸಾರಿ ಕರಿ ತಲೆ ಹುಳದ ಪ್ರಶ್ನೆ ಬಂದಿದೆ. ಮಾನ್ಯ ಸಚಿವರು ಉತ್ತರದಲ್ಲಿ ಕೊಟ್ಟಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ಬಂದಿದೆ ಎಂದು ಹೇಳಿದ್ದೀರಿ. ಇನ್ನು ಕೆಲವು ಜಿಲ್ಲೆಗಳಲ್ಲಿ ಈಗ ಪ್ರಾರಂಭವಾಗುತ್ತಿದೆ ಎಂದು ಹೇಳಿದ್ದೀರಿ. ಸುಮಾರು ಎಷ್ಟು ಸಾವಿರ, ಲಕ್ಷ ಮರಗಳಿಗೆ ಬಂದಿರಬಹುದು ಎಂಬುದು ನಿಮ್ಮಲ್ಲಿ ಅಂಕಿ ಅಂಶಗಳಿದೆಯೇ? ಇದು ಸಂಪೂರ್ಣ ನಾಶವಾಗುತ್ತಿರತಕ್ಕಂಥ ಅಂಚಿನಲ್ಲಿ ಬಂದಿದೆ ಎಂದು ಹೇಳಿ ಸರ್ಕಾರದ ಗಮನಕ್ಕೆ ಬಂದಿದೆಯೇ? ಇದನ್ನು ತಡೆಹಿಡಿಯುವುದಕ್ಕೆ ನೀವು ಅನೇಕ ಸಾರಿ ಹೇಳುತ್ತೀರಿ, ತಜ್ಞರನ್ನು ಕಳುಹಿಸಿದ್ದೇವೆ, ಔಷಧಿ ಕೊಡುತ್ತಿದ್ದೇವೆ ಎಂದು ಇಷ್ಟುಹೇಳುತ್ತಿದ್ದೀರಿ ಹೊರತು ಈಗ ಇದರ ರೋಗ ಕ್ಯಾನ್ಸರ್ ತಗಲಿದಂತೆ ಇಡೀ ರಾಜ್ಯದ ಮೂಲೆ ಮೂಲೆಗೂ ಬರುತ್ತಿದೆ. ಸ್ವಲ್ಪ ಹೆಚ್ಚು ಕಡಿಮೆ ಇನ್ನು ಐದು ವರ್ಷದಲ್ಲಿ ಇಡೀ ಕರ್ನಾಟಕದಲ್ಲಿ ತೆಂಗಿನ ಬೆಳೆ ಸಂಪೂರ್ಣವಾಗಿ ನಾಶವಾಗುತ್ತದೆ. ಇದನ್ನು ಉಳಿಸುವುದಕ್ಕೆ ನೀವು ಪರಿಣಾಮಕಾರಿಯಾದಂಥ, ಪ್ರಾಮಾಣಿಕವಾದಂಥ

ಪ್ರಯತ್ನವನ್ನು ತಾವು ಏನು ಕೈಗೊಂಡಿದ್ದೀರಿ? ಒಂದು ಕಡೆಗೆ ತೆಂಗಿನ ಬೆಳೆಗೆ ರೋಗ ಬರುತ್ತಿದೆ. ಮತ್ತೊಂದು ಕಡೆ ಕೊಬ್ಬರಿ ಬೆಲೆ ಇಳಿಯುತ್ತಿದೆ, ಎರಡೂ ಕಡೆ ರೈತರು ತೀರಾ ಪಾತಾಳಕ್ಕೆ ಹೋಗುತ್ತಿದ್ದಾರೆ, ಆದ್ದರಿಂದ ಈ ತೆಂಗಿನ ಗಿಡಗಳನ್ನು ಪರಿಣಾಮಕಾರಿಯಾಗಿ, ಪ್ರಾಮಾಣಿಕವಾಗಿ ಉಳಿಸುವುದಕ್ಕೆ ನಿಮ್ಮ ಇಲಾಖೆ ಏನು ಕ್ರಮ ಕೈಗೊಂಡಿದೆ ಎಂಬುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಸಭಾಧ್ಯಕ್ಷರೇ, ಈಗ ನಾಲ್ಕು ದಿವಸದ ಹಿಂದೆ ನಮ್ಮ ಹಿರಿಯ ಸದಸ್ಯರು ಇದೇ ಪ್ರಶ್ನೆಯನ್ನು ಹಾಕಿದರು. ಅವರು ಕಡೂರಿಗೆ ಸೀಮಿತವಾಗಿ ಎರಡು-ಮೂರು ಉಪಪ್ರಶ್ನೆಗಳನ್ನು ಹಾಕಿದ್ದರು. ಆದರೆ ಸಾಮಾನ್ಯವಾಗಿರುವಂಥ ಒಂದು ಪರಿಸ್ಥಿತಿ ರಾಜ್ಯದಲ್ಲಿ ಐದು ಜಿಲ್ಲೆಗಳಲ್ಲಿ ಏನಾಗಿದೆ ಎಂದುಹೇಳಿ ಅಂದು ಹೇಳಿದ್ದೇನೆ, ಇವತ್ತು ಕೂಡ ಟಿಪ್ಪಣಿಯಲ್ಲಿ ವಿವರಗಳನ್ನು ಕೊಟ್ಟಿದ್ದೇನೆ. ಆದರೆ ಇಲ್ಲಿ ವಿಚಾರ ಏನಿದೆ ಎಂದರೆ ಒಟ್ಟು 40 ಸಾವಿರ ಗಿಡಗಳಿಗೆ ಈ ರೀತಿಯಾದಂಥ ಒಂದು ಖಾಯಿಲೆ ಬಂದಿದೆ ಎಂದು ನಮ್ಮ ಹತ್ತಿರ ಹಿಂದೆ ವರದಿಯನ್ನು ಕೊಟ್ಟಿದ್ದರು. ಸದನದಲ್ಲೂ ಕೂಡ ಅದನ್ನು ಹೇಳಿದ್ದೇನೆ. ಆದರೆ ಅವರ ಕಳಕಳಿ ಏನಿದೆ, ಸಂಪೂರ್ಣವಾಗಿ ಇದನ್ನು ನಿಲ್ಲಿಸುವುದಕ್ಕೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ ಎಂದು ಹೇಳಿ. ಇದು ಹೊಸದಾಗಿ ದೇಶದಲ್ಲಿ ಬಂದಿರುವಂಥ ಒಂದು ರೋಗ. ಈಗ ರೋಗಕ್ಕೆ ಮಾನ್ಯ ವಾಟಾಳ್ ನಾಗರಾಜ್‌ರವರು ಇಲ್ಲಿ ನನ್ನ ಜಾಗದಲ್ಲಿ ಮಂತ್ರಿಯಾಗಿದ್ದರೂ ಕೂಡ ವಿಜ್ಞಾನಿಗಳ ಕಡೆಗೆ ಹೋಗಿ ಏನು ಇದಕ್ಕೆ ಪರಿಹಾರ ಮಾಡಬಹುದು ರೈತರಿಗೆ ಎಂದು ಪ್ರಸ್ತಾವನೆ ಮಾಡುವಂಥದ್ದು. ನಾವು ಇವತ್ತು ರಾಜ್ಯಮಟ್ಟದಲ್ಲಿ ಇರುವಂಥ ತಜ್ಞರನ್ನು ಬಿಟ್ಟು ರಾಷ್ಟ್ರಮಟ್ಟದಲ್ಲಿ ಇರುವಂಥ ತಜ್ಞರ ಕೂಟವನ್ನು ನಿಮ್ಮ ಜಿಲ್ಲೆಗಳಿಗೆ ನಿಮ್ಮ ತಾಲ್ಲೂಕುಗಳಿಗೆ ಕಳುಹಿಸಿಕೊಟ್ಟಿದ್ದೇವೆ. ಅದೇ ರೀತಿ ಇವತ್ತು ಕೇರಳ ಮತ್ತು ದೇಶಾದ್ಯಂತ ಕೆಲವು ಹೆಸರಾಂತ ವಿಜ್ಞಾನಿಗಳು ಇದ್ದಾರೆ. ಅವರ ಸಹಾಯವನ್ನು ಪಡೆದುಕೊಂಡು ಅಂತರಾಷ್ಟ್ರೀಯ ಮಟ್ಟದಲ್ಲೂ ಈ ಪ್ರಶ್ನೆಯನ್ನು ಇಟ್ಟು ಏನಾದರೂ ಇದಕ್ಕೆ ಪರಿಹಾರವನ್ನು ಹುಡುಕುವುದಕ್ಕಾಗುತ್ತದೆಯೇ ಎಂದು ಹೇಳಿ ನಾನು ಮೊನ್ನೆ ಕೂಡ ಸದನದಲ್ಲಿ ಹೇಳಿದ್ದೇನೆ. ಅದಕ್ಕಾಗಿ ಇವತ್ತು ವಿಜ್ಞಾನಿಗಳನ್ನು ಆ ಒಂದು ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಗಳಿಂದಲೂ ಕೂಡ ಬರಮಾಡಿಕೊಳ್ಳುವುದಕ್ಕೆ ಕರ್ನಾಟಕ ಸರ್ಕಾರ ಪ್ರಾರಂಭ ಮಾಡುತ್ತಿದೆ. ಮತ್ತೆ ವಾಟಾಳ್ ನಾಗರಾಜ್‌ರವರಿಗೆ ಒಂದು ವಿಚಾರ ಹೇಳಬೇಕೆಂದರೆ ಆರು ತಿಂಗಳ ಹಿಂದಿಗೂ ಮತ್ತೆ ಇವತ್ತಿನ ಪರಿಸ್ಥಿತಿಗೂ ಸ್ವಲ್ಪ ಬದಲಾವಣೆಯಾಗಿದೆ. ರೈತರ ಪರವಾಗಿ ಆಗಿದೆ. ನೀವು ಹೇಳಿದಿರಿ, ಜಿಲ್ಲೆ ಜಿಲ್ಲೆಗೂ ಆ ರೋಗ ಹರಡುತ್ತಿದೆ ಎಂದು ಹೇಳಿದಿರಿ, ಹೇಗೆ ತಡೆಯುತ್ತೀರಿ ಎಂದು ಕೇಳಿದಿರಿ. ವಿಜ್ಞಾನಿಗಳು ಹೇಳಿದ ಒಂದು ವಿಚಾರ ಎಂದರೆ ಮಳೆ ಕಡಿಮೆಯಾದ ಕಾರಣ ಈ ರೋಗ ಬರುವುದು ಉಂಟು ಎಂದು ಹೇಳಿದರು. ಇವತ್ತು ಆ ಭಾಗಗಳಲ್ಲಿ ಮಳೆ ಚೆನ್ನಾಗಿ ಆಗಿದೆ. ಇವತ್ತು ನಮಗೆ ಬಂದಿರುವಂಥದ್ದು ತುಮಕೂರು ಒಂದು ಬಿಟ್ಟರೆ ಈ ಎರಡು ತಿಂಗಳಲ್ಲಿ ಈ ಒಂದು ತೊಂದರೆಗೆ ಗುರಿಯಾಗಿರತಕ್ಕಂಥ ಕಂಪ್ಲೇಂಟ್ಸ್ ನಮ್ಮ ಗಮನಕ್ಕೆ ಯಾವುದು ಬಂದಿಲ್ಲ. ನಿಯಂತ್ರಣವಾಗುತ್ತದೆ ಎಂದು ಹೇಳಿ ಒಂದು ವಿಚಾರ. ಇದೇ ಒಂದು ಸಿದ್ಧಾಂತವನ್ನು ಇಟ್ಟು ಮಂಗಳೂರು ಪ್ರದೇಶದಲ್ಲಿ ನಾವು ಏನು ಒಂದು ಈ ಮದ್ದನ್ನು ಪ್ಯಾರಾಸೈಟ್ಸ್ ನಾವು ಅಲ್ಲಿ ಅಪ್ಪೈ ಮಾಡಿದ್ದೇವೆ. ಅಲ್ಲಿ ಅದು ನಿಯಂತ್ರಣ ಆಗಿದೆ.

ಮಂಗಳೂರು ಜಿಲ್ಲೆಯಲ್ಲಿ ಇವೊತ್ತು ಕಪ್ಪು ತಲೆ ಹುಳುವಿನ ಕಾಟ ಸಂಪೂರ್ಣ ನಿವಾರಣೆಯಾಗಿದೆಯೆಂದು ಅಲ್ಲಿನ ರೈತರುಗಳು ಹೇಳಿದ್ದು, ನಾನೂ ಕೂಡ ಅಲ್ಲಿರುವ ತೋಟಗಳಿಗೆ ಭೇಟಿ ಕೊಟ್ಟು ನೋಡಿದ್ದೇನೆ. ಆದುದರಿಂದ, ಹಲವಾರು ಹಂತಗಳಲ್ಲಿ ವಿಜ್ಞಾನಿಗಳ, ಅಧಿಕಾರಿಗಳ ಸಹಾಯ ಪಡೆದು ಈ ರೋಗವನ್ನು ಸಂಪೂರ್ಣ ತಡೆಗಟ್ಟಬಹುದೇ ವಿನಹ ಅನ್ಯ ಮಾರ್ಗವಿಲ್ಲವೆಂದು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನನಗನ್ನಿಸುತ್ತದೆ. ಕಪ್ಪುತಲೆ ಹುಳುವಿನ ಬಾಧೆ ಸಂಪೂರ್ಣ ನಿವಾರಣೆಯಾಗಿದೆಯೆಂದು ಮಂತ್ರಿಗಳು ಹೇಳುತ್ತಿರುವುದು ಸತ್ಯಕ್ಕೆ ದೂರವಾದ ಮಾತು. ನಾನು ಪ್ರಮಾಣವಾಗಿ ಹೇಳುತ್ತಿದ್ದೇನೆ, ಈ ರೋಗ ಇನ್ನೂ ಉಲ್ಬಣಗೊಳ್ಳುತ್ತಿದೆ, ರೋಗವನ್ನು ತಡೆಗಟ್ಟುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಮಂತ್ರಿಗಳು ಮತ್ತವರ ಇಲಾಖೆಯವರು ಏನೇ ಇದರ ಬಗ್ಗೆ ಹೇಳಲಿ ನನಗಂತೂ ಇವರ ಬಗ್ಗೆ ನಂಬಿಕೆ ಹೋಗುತ್ತಿದೆ. ನನ್ನ ತಾಲ್ಲೂಕು ಒಂದರಲ್ಲೇ ಸುಮಾರು ಒಂದು ಲಕ್ಷ ತೆಂಗಿನ ಸಸಿಗಳಿಗೆ ರೋಗ ತಗುಲಿ, ತೆಂಗಿನ ಸಸಿಗಳ ಬುಡ ಒಣಗಿ ಹೋಗಿದೆ. ಇನ್ನು ಐದು ವರ್ಷಕ್ಕೆ ಮತ್ತೆ ಔಷಧಿ ಸಿಂಪಡಿಸುತ್ತೇವೆಂದು ಹೇಳುವ ಬದಲು, ಇಡೀ ಕರ್ನಾಟಕದಲ್ಲಿ ತೆಂಗಿನ ಬೆಳೆ ಸಂಪೂರ್ಣವಾಗಿ ನಾಶವಾಗುತ್ತಿದೆ. ಇದರ ಬಗ್ಗೆ ತಾವು ಸ್ಪಷ್ಟಪಡಿಸಬೇಕು. ಇದರಲ್ಲಿ ನಮ್ಮ ನಿಮ್ಮ ರಾಜಕೀಯ ಪ್ರಶ್ನೆ ಇಲ್ಲ.

ಶ್ರೀ ಎ. ಕೃಷ್ಣಪ್ಪ : ರೈತರ ಬಗ್ಗೆ ನಿಮಗೆ ಎಷ್ಟು ಕಳಕಳಿ ಇದೆಯೋ ಅದಕ್ಕಿಂತ ಒಂದು ಪಟ್ಟು ಜಾಸ್ತಿ ಕಳಕಳಿ ನಮಗಿದೆ. ಕಳೆದ ವರ್ಷ ಇದಕ್ಕಾಗಿ 50 ಲಕ್ಷ ರೂಪಾಯಿಗಳು ಮಂಜೂರಾಗಿದ್ದು ಈ ವರ್ಷ 1 ಕೋಟಿ 50 ಲಕ್ಷ ರೂಪಾಯಿಗಳನ್ನಿಟ್ಟಿದ್ದೇವೆ. ಕಾರಣ, ಮೇಜರ್ ಲ್ಯಾಬೊರೇಟರಿಗಳನ್ನು ಹೆಚ್ಚು ಮಾಡಬೇಕೆಂಬ ಉದ್ದೇಶದಿಂದ, ಇದನ್ನು ನಾವು ಉತ್ತರದಲ್ಲಿ ಕೊಟ್ಟಿದ್ದೇವೆ. ಒಂದು ವೇಳೆ ನೀವು ಮಂತ್ರಿಯಾಗಿದ್ದು, ಈ ರೋಗ ಬಂದಿದ್ದರೆ ಏನು ಮಾಡುತ್ತಿದ್ದಿರಿ? ಮಾಯ ಮಾಡುತ್ತಿದ್ದಿರಾ?

ಶ್ರೀ ವಾಟಾಳ್ ನಾಗರಾಜ್ : ಈ ರೀತಿ ಬೇಜವಾಬ್ದಾರಿ ಉತ್ತರ ಕೊಡಬಾರದು. ಮಾಯ, ಮಂತ್ರ ಮಾಡ್ತಾ ಇದ್ರಾ ಎಂದರೆ ಏನರ್ಥ? ನಾನು ಸಚಿವರಿಗೆ ಹೇಳುತ್ತಿದ್ದೇನೆ, ಇದು ಸರಿಯಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಇದು ಉತ್ತರ ಅಲ್ಲ. ಇದರಲ್ಲಿ ಏನಾದರೂ ಅರ್ಥವಿದೆಯೇ?

ಶ್ರೀ ವಾಟಾಳ್ ನಾಗರಾಜ್ : ಬೇಜವಾಬ್ದಾರಿ ಉತ್ತರ ಕೊಡತಕ್ಕಂಥಾದ್ದು ಸರಿಯಲ್ಲ. ಇಡೀ ರಾಜ್ಯದಲ್ಲಿ ತೆಂಗು ಬೆಳೆ ನಾಶವಾಗುತ್ತಿದೆ, ಮತ್ತೊಂದು ಕಡೆ ಕೊಬ್ಬರಿ ಬೆಲೆಯೂ ಏರುತ್ತಿದ್ದು, ರೈತ ನೆಲ ಕಚ್ಚುತ್ತಿದ್ದಾನೆ. ಸಚಿವರು ಈ ರೀತಿ ಮಾತನಾಡುವುದು ಸರಿಯೇ?

ಶ್ರೀ ಎ.ಕೃಷ್ಣಪ್ಪ : ಒಂದು ವೇಳೆ ನೀವು ಈ ಕಡೆ ಕುಳಿತು ಮಂತ್ರಿಯಾಗಿದ್ದರೆ ಬಂದಿರುವ ರೋಗವನ್ನು ರಾತ್ರಯೊಳಗೆ, ನಾಳೆ ಹೊತ್ತಿಗೆ, ಇನ್ನೊಂದು ತಿಂಗಳಿನಲ್ಲಿ ಸಂಪೂರ್ಣವಾಗಿ ತಗೆಗಟ್ಟುತ್ತೇನೆಂದು ನೇರವಾಗಿ ಹೇಳುತ್ತಿದ್ದಿರಾ? ಸರ್ಕಾರ ಈ ದಿಶೆಯಲ್ಲಿ ಏನೇನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂಬುದನ್ನು ಹೇಳುತ್ತಿದ್ದೇನೆ. ಇಂತಹ ಕಡೆ ಕಪ್ಪುತಲೆ ಹುಳುವಿನ ಬಾಧೆಯಿದೆಯೆಂದು ತಿಳಿದು ಬಂದ ಮೂರು ದಿವಸದೊಳಗೆ ಅಲ್ಲಿಗೆ ತಜ್ಞರ ಸಮಿತಿ ಹಾಗೂ ಸಿಂಪಡಿಸುವ ಔಷಧಿಗಳನ್ನು ಕಳುಹಿಸಿಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಮಾತಿಗೆ ಗೌರವವಿದೆ ಕಳಕಳಿಯನ್ನೂ ಕೂಡ ವ್ಯಕ್ತಮಾಡಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಚಿಕ್ಕನಾಯಕನಹಳ್ಳಿ ಮತ್ತು ತಿಪಟೂರು ಉಪ ವಿಭಾಗದಲ್ಲಿ ಸುಮಾರು 40 ಸಾವಿರ ತೆಂಗಿನ ಗಿಡಗಳಿಗೆ ಕಪ್ಪು ತಲೆ ಹುಳು ರೋಗ ಬಂದಿದೆಯೆಂದು ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಅಲ್ಲಿ ಲ್ಯಾಬೊರೇಟರಿಗಳನ್ನು ಮಾಡಿದ್ದು, ಪ್ರೈವೇಟ್ ಲ್ಯಾಬೋರೇಟರಿಗಳಿಗೆ ಪೇಮೆಂಟ್ ಮಾಡಲಿಲ್ಲ. ಪ್ಯಾರಾಸೈಟ್ ಬಿಡಬೇಕಾಗಿತ್ತು. ಅದನ್ನೂ ಮಾಡಲಿಲ್ಲ. ಕಾಯಿಲೆ ಬರುವುದಕ್ಕಿಂತ ಮುಂಚೆ ಪ್ಯಾರಾಸೈಟ್ ಬಿಡಬೇಕಾಗಿರುತ್ತದೆ. ಆದರೆ, ರೋಗ, ತಗುಲಿದ ನಂತರ ಪ್ಯಾರಾಸೈಟ್ ಬಿಡುತ್ತೇವೆ, ಲ್ಯಾಬೊರೇಟರಿ ಮಾಡುತ್ತೇವೆಂದರೆ ಏನಾರ್ಥ? ಇಲ್ಲಿ ಅಣಬೆ ರೋಗ ಸಹ ಬಂದಿದೆ.

ತೆಂಗು ಅಭಿವೃದ್ಧಿ ಮಂಡಳಿಯವರಿಗೆ ಇದರ ಬಗ್ಗೆ ತಿಳಿಸಿದರೆ ಅವರು ಈ ಕೆಲಸ ಮಾಡುತ್ತಾರೆ. ಗುಬ್ಬಿ, ಚಿಕ್ಕನಾಯಕನಹಳ್ಳಿ, ತಿಪಟೂರು ತಾಲ್ಲೂಕುಗಳಲ್ಲಿ ಬಂದಿರುವ ಕಾಯಿಲೆಗಳ ಬಗ್ಗೆ ಇವೊತ್ತಿನವರೆವಿಗೂ ಯಾವುದೇ ಒಂದು ಕ್ರಮವನ್ನು ಸರ್ಕಾರ ಕೈಗೊಂಡಿಲ್ಲ. ತಿಪಟೂರು ಉಪ ವಿಭಾಗವೊಂದರಲ್ಲೇ ತೆಂಗು ಬೆಳೆಗೆ ಕಪ್ಪುತಲೆಹುಳು ಬಾಧೆಯಿಂದ ಸುಮಾರು 40 ಸಾವಿರಕ್ಕಿಂತಲೂ ಹೆಚ್ಚು ತೆಂಗಿನ ಸಸಿಗಳು ನಾಶವಾಗುತ್ತಿದೆ. ಮೈಸೂರಿನಲ್ಲೂ ತೆಂಗಿನ ಸಸಿ ಹಾಳಾಗುತ್ತಿದೆ. ದಕ್ಷಿಣ ಕನ್ನಡದಲ್ಲಿ ನಾಶವಾಗುವುದು ಕಡಿಮೆಯಾಗಿದೆ. ಇದಕ್ಕೆ ಬೇಕಾದಷ್ಟು ಮಳೆಯಾಗಿರುವುದೇ ಕಾರಣ. ಆದರೆ, ನಮ್ಮ ಭಾಗದಲ್ಲಿ ಮಳೆಯಿಲ್ಲದೆ ಕಪ್ಪು ತಲೆ ಹುಳುವಿನ ಬಾಧೆ ದಿನೇ ದಿನೇ ಉಲ್ಬಣಗೊಳ್ಳುತ್ತಿದೆ. ಇದಕ್ಕೇನಾದರೂ ಔಷಧಿ ಸಿಂಪಡಿಸಿ ರೋಗ ತಡೆಗಟ್ಟಿ ಎಂದು ಕೇಳಿದರೆ ಮಾಯಾ-ಮಂತ್ರ ಮಾಡುವುದಕ್ಕಾಗುತ್ತದೆಯೇ ಎಂದು ಹೇಳುತ್ತಿದ್ದೀರಿ?

ಶ್ರೀ ಎ. ಕೃಷ್ಣಪ್ಪ : ಹಣ ಪಾವತಿಯಾಗಿಲ್ಲವೆಂದು ಹೇಳುತ್ತಿದ್ದೀರಿ. ಇದಕ್ಕಾಗಿ ಆಯವ್ಯದಲ್ಲಿ 1.50 ಕೋಟಿ ರೂಪಾಯಿಗಳನ್ನು ಇಟ್ಟಿದ್ದು, ಹಣದ ಕೊರತೆ ಇದೆಯೆಂದು ಯಾವುದೇ ತಾಲ್ಲೂಕಿನಿಂದಲೂ ನಮಗೆ ವರದಿ ಬಂದಿಲ್ಲ. ಈ ಬಗ್ಗೆ ತಾವು ವಿವರಗಳನ್ನು ಕೊಟ್ಟರೆ ಮೂರು ದಿವಸದಲ್ಲಿ ಸೂಕ್ತ ಏರ್ಪಾಡು ಮಾಡುವ ಜವಾಬ್ದಾರಿ ಸರ್ಕಾರದ್ದಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಸಚಿವರು ಕೊಟ್ಟ ಉತ್ತರಿಂದ ನನಗೆ ತೃಪ್ತಿಯಾಗಿಲ್ಲ. ಸಚಿವರ ಬಗ್ಗೆ ವೈಯಕ್ತಿಕವಾಗಿ ದ್ವೇಷವೇನೂ ನನಗಿಲ್ಲ. ನಾನು ಪ್ರತಿ ಬಾರಿ ಅಧಿವೇಶನ ಸೇರಿದಾಗಲೂ ಇದರ ಬಗ್ಗೆ ಕೇಳುತ್ತಿದ್ದೇನೆ. ಕಪ್ಪುತಲೆ ಹುಳುವಿನ ಭೀಕರ ರೋಗದಿಂದ ರಾಜ್ಯಾದ್ಯಂತ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ಸಚಿವರು ಸುಮ್ಮನೆ ಈ ರೀತಿ ಉತ್ತರ ಕೊಟ್ಟರೆ ನಾನು ಒಪ್ಪುವುದಿಲ್ಲ. ಸಚಿವರು ಕೊಟ್ಟ ಉತ್ತರದಲ್ಲಿ ನನಗಂತೂ ಪ್ರಾಮಾಣಿಕವಾದ ನಂಬಿಕೆ ಇಲ್ಲ. ಬಂದಿರುವ ರೋಗಕ್ಕೆ ಔಷಧಿ ಕೊಡುತ್ತೇವೆ, ನೋಡಿಕೊಳ್ಳುತ್ತೇವೆಂದು ಹೇಳುವುದು ಸರಿಯಲ್ಲ. ಇದು ರಾಜ್ಯದ ರೈತರಿಗೆ ಕೊಡತಕ್ಕಂಥ ಉತ್ತರವಲ್ಲ, ಭರವಸೆಯೂ ಅಲ್ಲ. ಆದುದರಿಂದ, ಸರ್ಕಾರದ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ರವರು ಈ ಹಂತದಲ್ಲಿ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ಹೊರ ನಡೆದರು)

ಬೆಂಗಳೂರು ನಗರ ಜಿಲ್ಲಾ ಸರ್ಕಾರ ಬ್ಯಾಂಕಿನಿಂದ ಸಾಲ ಮಂಜೂರಾತಿ.

655 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಬೆಂಗಳೂರು ನಗರ ಜಿಲ್ಲೆ ಸಹಕಾರ ಬ್ಯಾಂಕಿನಿಂದ ಯಾವ ಯಾವ ಬಾಬ್ತಿಗೆ ಸಾಲ ಕೊಡಲಾಗುತ್ತಿದೆ.

ಆ) ಪ್ರತಿಯೊಂದು ಬಾಬ್ತಿನಲ್ಲಿ ಎಷ್ಟು ಎಷ್ಟು ಸಾಲವನ್ನು 1993-94ನೇ ಸಾಲಿನಲ್ಲಿ ಕೊಡಲಾಗಿದೆ.

ಇ) ಪ್ರತಿಯೊಂದು ಬಾಬ್ತಿನಲ್ಲೂ ವಸೂಲಿ ಮಾಡಿರುವುದು ಎಷ್ಟು ಹಾಗೂ ಸುಸ್ತಿ ಹಣವೆಷ್ಟು?

ಈ) ಸದರಿ ಬ್ಯಾಂಕಿನಿಂದ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಸಾಲ ಕೊಟ್ಟಿದ್ದಾರೆಯೇ ಹಾಗೂ ಕೊಟ್ಟಿರುವ ಹಣವೆಷ್ಟು

ಉ) ಈಗಲೂ ಸದರಿ ಸಹಕಾರ ಸಂಘಗಳಿಗೆ ಸಾಲ ಕೊಡುತ್ತಿದ್ದಾರೆಯೇ

ಊ) 1994 ನೇ ಜೂನ್ 30 ರಂದು ಸದರಿ ಬ್ಯಾಂಕಿನ ವಿಶೇಷ ಅಧಿಕಾರಿಗಳು ಪತ್ರಿಕೆ ಪ್ರಕಟಣೆ ಕೊಟ್ಟಿರುವುದು ಸರಿಯಾಗಿದೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರ ಸಚಿವರು)

ಅ) ವ್ಯವಸಾಯ ಮತ್ತು ವ್ಯವಸಾಯೇತರ ಉದ್ದೇಶಗಳಿಗಾಗಿ ಸಾಲವನ್ನು ಕೊಡಲಾಗುತ್ತಿದೆ.

ಆ)1993-94 ನೇ ಸಾಲಿನಲ್ಲಿ ಈ ಕೆಳಕಂಡಂತೆ ಸಾಲಗಳನ್ನು ಕೊಡಲಾಗಿದೆ.

ಇ) 1. ವ್ಯವಸಾಯ - ರೂ 12.82 ಕೋಟಿ

2. ವ್ಯವಸಾಯೇತರ - ರೂ. 15.17 ಕೋಟಿ

ಈ) ವಸೂಲಾದ ಸಾಲ ಹಾಗೂ ಸುಸ್ತಿ ಸಾಲ ಈ ಕೆಳಕಂಡಂತಿದೆ.

ರೂ. ಕೋಟಿಗಳಲ್ಲಿ

ಸಾಲದ	ತರಹೆ	ವಸೂಲಾದ ಮೊತ್ತ	ಸುಸ್ತಿ ಸಾಲ
1.	ವ್ಯವಸಾಯ	7.92	6.56
2.	ವ್ಯವಸಾಯೇತರ	6.99	0.59

ಕೊಟ್ಟಿರುತ್ತೆ. ರೂ. 24.89 ಕೋಟಿ.

ಉ) ಇಲ್ಲ

ಊ) ಸರಿಯಾಗಿದೆ.

ಶ್ರೀ ಕೆ. ಲಕ್ಕಣ್ಣ : ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಬೆಂಗಳೂರು ನಗರ ಜಿಲ್ಲೆಯಲ್ಲಿ ಗೃಹ ನಿರ್ಮಾಣ ಸಹಕಾರಿ ಸಂಘಗಳಿಗೆ ಎಷ್ಟು ಸಾಲವನ್ನು ಕೊಟ್ಟಿದ್ದೀರೆಂದು ಕೇಳಿದ್ದಕ್ಕೆ 24 ಕೋಟಿ 89 ಲಕ್ಷವೆಂದು ಹೇಳಿದ್ದೀರಿ. ಆ ಸಾಲದಲ್ಲಿ ಎಷ್ಟು ವಸೂಲಿಯಾಗಿದೆ? ಸುಸ್ತಿ ಬಡ್ಡಿ ಎಷ್ಟು ಇದೆ? ಇನ್ನು ಎಷ್ಟು ಸಾಲ ವಸೂಲಾಗಬೇಕಾಗಿದೆ ಮತ್ತು ಪಿಡಬ್ಲ್ಯೂಡಿ ಇಲಾಖೆಯಲ್ಲಿ ಮೂರನೇ ಮತ್ತು ನಾಲ್ಕನೆ ದರ್ಜೆಯ ಗೃಹ ನಿರ್ಮಾಣ ಸಹಕಾರಿ ಸಂಘಗಳು ಸಾಲವನ್ನು ಕೇಳಿದ್ದರೆ ಅದನ್ನು ಮಂಜೂರು ಮಾಡಿದ್ದೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಸನ್ಮಾನ್ಯ ಅಧ್ಯಕ್ಷರೇ, ವ್ಯವಸಾಯ ಮತ್ತು ವ್ಯವಸಾಯೇತರ ಉದ್ದೇಶಕ್ಕಾಗಿ ಸಾಲವನ್ನು ಕೊಡಲಾಗಿದೆ. ಇದರಲ್ಲಿ 1993-94ರಲ್ಲಿ ವ್ಯವಸಾಯಕೋಸ್ಕರ 12 ಕೋಟಿ 82 ಲಕ್ಷ ಸಾಲವನ್ನು ವ್ಯವಸಾಯೇತರಕ್ಕಾಗಿ 15 ಕೋಟಿ 17 ಲಕ್ಷ ಸಾಲವನ್ನು ಕೊಟ್ಟಿದ್ದೇವೆ. ಇದರಲ್ಲಿ ವಸೂಲಾಗಿರುವ ಸಾಲದ ಪೈಕಿ ವ್ಯವಸಾಯದಲ್ಲಿ 7 ಕೋಟಿ 92 ಲಕ್ಷ, ವ್ಯವಸಾಯೇತರ ಇಲ್ಲಿ 69 ಲಕ್ಷ ಮಾತ್ರ ವಸೂಲಾಗಿದೆ. ವ್ಯವಸಾಯದಲ್ಲಿ 6 ಕೋಟಿ 56 ಲಕ್ಷ ಸುಸ್ತಿ ಬರಬೇಕಾಗಿದೆ.

ಶ್ರೀ ಕೆ. ಲಕ್ಕಣ್ಣ : ಗೃಹ ನಿರ್ಮಾಣ ಸಹಕಾರಿ ಸಂಘಗಳಿಗೆ ಸುಸ್ತಿ ಇದೆಯೇ? ಮತ್ತು ಪಿಡಬ್ಲ್ಯೂಡಿ ಇಲಾಖೆಯಲ್ಲಿನ ನಾಲ್ಕು ಮತ್ತು ಮೂರನೇ ದರ್ಜೆಯ ಗೃಹ ನಿರ್ಮಾಣ ಸಹಕಾರಿ ಸಂಘದವರು ಸಾಲವನ್ನು ಕೇಳಿದ್ದಾರೆ. ಅವರಿಗೆ ಸಾಲವನ್ನು ಮಂಜೂರು ಮಾಡಿದ್ದೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಸುಸ್ತಿ 24 ಕೋಟಿ 89 ಲಕ್ಷವೆಂದು ಹೇಳಿದ್ದೇನೆ. ಈಗ ಗೃಹ ನಿರ್ಮಾಣ ಸಹಕಾರಿ ಸಂಘಗಳಿಗೆ ಸಾಲವನ್ನು ಕೊಡುವುದನ್ನು ನಿಲ್ಲಿಸಿದ್ದೇವೆ.

ಬೀದರ್ ಜಿಲ್ಲೆಯಲ್ಲಿ ಕಳಪೆ ಮಟ್ಟದ ಗೊಬ್ಬರ ಹಾಗೂ ಬೀಜಗಳ ಸರಬರಾಜು.

185 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಗೆ ರಸಗೊಬ್ಬರ ಕೀಟನಾಶಕ ಹಾಗೂ ಬೀಜಗಳನ್ನು ಸರಿಯಾಗಿ ಪೂರೈಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಪೂರೈಸಿದ ಬೀಜಗಳಲ್ಲಿ ಕಳಪೆ ಬೀಜಗಳನ್ನು ಪೂರೈಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಹೆಚ್. ಎಂ. ರೇವಣ್ಣ (ಕೃಷಿ ಸಚಿವರು)

ಅ) ಬೀದರ್ ಜಿಲ್ಲೆಯಲ್ಲಿ ರಸಗೊಬ್ಬರ ಹಾಗೂ ಬೀಜದ ಕೊರತೆಯು ಸರ್ಕಾರದ ಗಮನಕ್ಕೆ ಬಂದಿದೆ.

ಕಳಪೆ ಗುಣಮಟ್ಟದ ಬೀಜಗಳು ಸರಬರಾಜಾಗಿರುವ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ.

ಕೀಟನಾಶಕಗಳ ಪೂರೈಕೆಯೂ ಸಹ ತೃಪ್ತಿಕರವಾಗಿರುತ್ತದೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ : ಸನ್ಮಾನ್ಯ ಅಧ್ಯಕ್ಷರೇ, ಬೀದರ್ ಜಿಲ್ಲೆಯಲ್ಲಿ ಈ ವರ್ಷ ರಸಗೊಬ್ಬರವು ಸರಿಯಾದ ಸಮಯಕ್ಕೆ ಸಿಗದೆ ರೈತರಿಗೆ ತುಂಬಾ ತೊಂದರೆಯಾಗಿದೆ. ಬಿತ್ತನೆಗೆ ವಿಳಂಬವಾಗಿದೆ. ಮೇಲಾಗಿ ಕಳಪೆ ಬೀಜಗಳನ್ನು ಪೂರೈಸಿದ್ದಾರೆ. ಇದರಿಂದ ರೈತರಿಗೆ ತುಂಬಾ ತೊಂದರೆಯಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಆ ರೀತಿ ಸರ್ಕಾರದ ಗಮನಕ್ಕೆ ಬಂದ ಮೇಲೂ ಸಹ ಏನು ಕ್ರಮ ತೆಗೆದುಕೊಂಡಿದ್ದೀರಿ? ಎರಡನೆಯದಾಗಿ, ಒಂದು ಕಡೆ ಬೀದರ್ ಬರಗಾಲಕ್ಕೆ ತುತ್ತಾದ ಪ್ರದೇಶ. ಮತ್ತು ಹಿಂದಿನ ವರ್ಷ ಭೂಕಂಪದಿಂದ ನಮ್ಮ ಭಾಗದ ರೈತರು ಬಹಳ ತೊಂದರೆಯಲ್ಲಿದ್ದರು. ಹೀಗೆಲ್ಲಾ ಇದ್ದರೂ ಸಹ ಬೀದರ್, ಗುಲ್ಬರ್ಗಾ ಜಿಲ್ಲೆಯಲ್ಲಿ ರೈತರು ಬಹಳ ತೊಂದರೆಯಲ್ಲಿದ್ದರೂ ಸಹ, ಅದು ಸರ್ಕಾರದ ಗಮನಕ್ಕೆ ಬಂದಿದ್ದರೂ ಸಹ ಇದರ ಬಗ್ಗೆ ನಿರ್ದಿಷ್ಟವಾಗಿ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ಹೇಳಬೇಕು.

ಶ್ರೀ ಹೆಚ್.ಎಂ. ರೇವಣ್ಣ : ಸನ್ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯ ಬಗ್ಗೆ ಪ್ರಶ್ನೆಯನ್ನು ಕೇಳಿದಾಗಲಿ ಇದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ಅದು ಮತ್ತು ಇದು ಒಂದೇ ರೀತಿಯ ಪ್ರಶ್ನೆ. ಆ ಭಾಗದಲ್ಲಿ ಯೂರಿಯಾ ಗೊಬ್ಬರದ ಕೊರತೆ ಇದೆ. ಇದರ ಬಗ್ಗೆ ನಾನು ಕೇಂದ್ರದ ಮಂತ್ರಿಗಳ ಜೊತೆ ಮಾತನಾಡಿದ್ದೇನೆ. ಬೀದರ್, ಬಿಜಾಪುರ, ಗುಲ್ಬರ್ಗಾ ಮತ್ತು ಬೆಳಗಾಂಗಳಲ್ಲಿ ಇಂಥ ಪರಿಸ್ಥಿತಿ ಇದೆ ಎಂದು ಹೇಳಿದ್ದಾರೆ. ಜೊತೆಗೆ ನಾನೇ ಹೋದ ವಾರ ಬೀದರ್ ಜಿಲ್ಲೆಗೆ ಭೇಟಿ ಕೊಟ್ಟು ಅಲ್ಲಿನ ಅಧಿಕಾರಿಗಳೊಂದಿಗೆ ಕುರಿತು ಚರ್ಚೆ ಮಾಡಿದ್ದೇನೆ. ಮತ್ತು ರೈತರನ್ನು ಕರೆದು ವಿಚಾರ ಮಾಡಿದ್ದೇನೆ. ಅಲ್ಲಿ ಏನು ತೊಂದರೆ ಇದೆ ಅದನ್ನು ಪರಿಹಾರ ಮಾಡುತ್ತೇವೆಂದು ಹೇಳಿದ್ದೇವೆ. ಮತ್ತು ಸರಿಯಾದ ರೀತಿಯಲ್ಲಿ ಬೀಜಗಳು ವಿತರಣೆಯಾಗುವ ಬಗ್ಗೆ ಕ್ರಮತೆಗೆದುಕೊಳ್ಳುತ್ತೇವೆ ಎಂದು ತಿಳಿಸುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್: ಬೀದರ್ ಜಿಲ್ಲೆಯಲ್ಲಿ ಸುಮಾರು ವರ್ಷಗಳಿಂದ ಸರಿಯಾದ ಸಮಯಕ್ಕೆ ರಸಗೊಬ್ಬರ ಸಿಗುತ್ತಿಲ್ಲ. ಕೆಮಿಕಲ್ಸ್ ಸಿಗುತ್ತಿಲ್ಲ. ಈ ವರ್ಷವಾದರೂ ಸಮಯಕ್ಕೆ ಸರಿಯಾಗಿ ಬಿತ್ತನೆ ಬೀಜವನ್ನು ಒದಗಿಸುತ್ತಾರೆಯೇ? ಸುಮಾರು ವರ್ಷದಿಂದ ಈ ತೊಂದರೆ ಇದೆ. ಹಿಂದಿನ ವರ್ಷ ಇದರ ಬಗ್ಗೆ ಕಮಿಟಿ ಮಾಡಿ ವರದಿ ತರಿಸಿಕೊಟ್ಟರೂ ಸಹ ಕ್ರಮತೆಗೆದುಕೊಂಡಿಲ್ಲ. ತಾವು ಯಾರು ಅಲ್ಲಿ ತಪ್ಪು ಮಾಡುತ್ತಿದ್ದಾರೆ ಅವರ ಮೇಲೆ ಕ್ರಮತೆಗೆದುಕೊಳ್ಳುತ್ತೀರಾ? ರೈತರ ತೊಂದರೆಯನ್ನು ಪರಿಹರಿಸಿ ಪರಿಹಾರವನ್ನು ಕೊಡುತ್ತೀರಾ?

ಶ್ರೀ ಹೆಚ್.ಎಂ. ರೇವಣ್ಣ : ನಾನೇ ಅಲ್ಲಿಗೆ ಹೋಗಿ ಬಂದಿದ್ದೇನೆ. ಎಂ.ಸಿ.ಎಫ್. ಮತ್ತು ಜುವಾರಿಯಲ್ಲಿ ಸ್ಟ್ರೈಕ್ ಆಗಿದ್ದರಿಂದ ತೊಂದರೆಯಾಗಿದೆ. ಈಗ ಎಲ್ಲಾ ಸರಿಹೋಗಿದೆ. ಅದನ್ನು ಕಳುಹಿಸಿ ಕೊಡುತ್ತೇನೆ.

ಮುಳುಬಾಗಿಲು ತಾಲ್ಲೂಕಿನಲ್ಲಿ ರೈತರ ಬೆಳೆ ಪರಿಹಾರ

577 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ಉತ್ತನೂರು ದೊಡ್ಡಕೆರೆ ಅಚ್ಚುಕಟ್ಟಿನಲ್ಲಿ ಕೊಯ್ಲಿಗೆ ಬಂದಿದ್ದ ಭತ್ತದ ಬೆಳೆ ಮೇಲೆ ಆಲಿಕಲ್ಲು ಬಿದ್ದು ಎಷ್ಟು ಮಂದಿ ರೈತರಿಗೆ ಮತ್ತು ಎಷ್ಟು ಎಕರೆಗಳಿಗೆ ನಷ್ಟ ಉಂಟಾಗಿದೆ ಹಾಗೂ ಇದರ ಅಂದಾಜು ಮೊತ್ತವೆಷ್ಟು?

ಆ) ಇದುವರೆವಿಗೂ ನೀಡಿರುವ ಪರಿಹಾರ ಹಣವೆಷ್ಟು?

ಇ) ಉಳಿಕೆ ಪರಿಹಾರ ಹಣ ಯಾವಾಗ ಬಿಡುಗಡೆ ಮಾಡಲಾಗುವುದು.

ಶ್ರೀ ಹೆಚ್.ಎಂ. ರೇವಣ್ಣ (ಕೃಷಿ ಸಚಿವರು) :

ಅ) ಮುಳಬಾಗಲು ತಾಲ್ಲೂಕು ದುಗ್ಗಸಂದ್ರ ಹೋಬಳಿ ಉತ್ತನೂರು ಗ್ರಾಮದ ದೊಡ್ಡ ಕೆರೆ ಅಚ್ಚುಕಟ್ಟು 324 ಎಕರೆ 31 ಗುಂಟೆಯಲ್ಲಿ ದಿನಾಂಕ 22-5-94ರಂದು ಬಿದ್ದ ಆಲಿಕಲ್ಲು ಮಳೆಯಿಂದ ಸುಮಾರು 200 ರಿಂದ 250 ಎಕರೆ ಪ್ರದೇಶದಲ್ಲಿ ಬೇಸಿಗೆ ಬೆಳೆಯಾದ ಭತ್ತದ ಬೆಳೆ ಹಾನಿಯಾಗಿರುತ್ತದೆ. ಇದರಿಂದಾಗಿ 97 ಜನ ರೈತರಿಗೆ ನಷ್ಟವಾಗಿದೆ ಎಂದು ತಿಳಿದು ಬಂದಿದೆ. ನಷ್ಟವಾದ ಮೊತ್ತವು 17060 ರೂ.ಗಳಾಗಿರುತ್ತದೆ.

ಆ) ದಿನಾಂಕ 24-8-94 ರಂದು ಚೆಕ್ಕಿನ ಮೂಲಕ 17060 ರೂಪಾಯಿಗಳನ್ನು ತಹಶೀಲ್ದಾರರು ಮುಳಬಾಗಲು ತಾಲ್ಲೂಕು ಇವರಿಗೆ ರೈತರಿಗೆ ವಿತರಣೆ ಮಾಡಲು ಬಿಡುಗಡೆ ಮಾಡಲಾಗಿದೆ.

ಇ) ಈಗಾಗಲೇ ಪೂರ್ತಿ ಹಣವನ್ನು ಬಿಡುಗಡೆ ಮಾಡಿರುವುದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

4.10 ಪಿ.ಎಂ.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳೇ ಉತ್ತನೂರು ಗ್ರಾಮಕ್ಕೆ ಬಂದು ರೈತರ ಗೋಳನ್ನು ನೋಡಿದ್ದಾರೆ. ಇವರು ಕೊಟ್ಟಿರುವಂತಹ 17,000 ರೂಪಾಯಿಗಳು ಏನಿದೆ. ಅದು ಒಟ್ಟು 250 ಎಕರೆಗೆ ಅದರಲ್ಲಿ ಒಂದು ಎಕರೆಗೆ 68 ರೂ.ಗಳು ಬರುತ್ತದೆ. ತೋಟಿ ತಳವಾರರು ನಿರ್‌ಗಂಟಿಗಳಿದ್ದಾರಲ್ಲಾ ಅವರಿಗೂ ಸಾಲುವುದಿಲ್ಲ. ಸಾಮಾನ್ಯವಾಗಿ ಭತ್ತ ಬೆಳೆಯಬೇಕಾದರೆ 1 ಎಕರೆಗೆ 5 ಸಾವಿರ ರೂ.ಗಳು ಖರ್ಚು ಆಗುತ್ತದೆ. ಆದರೆ ನೀವು 68 ರೂ.ಗಳನ್ನು ಕೊಟ್ಟರೆ ಯಾವ ಮೂಲೆಗೆ, ಒಂದು ಕೆಲಸ ಮಾಡಿ ನೀವು ಕೊಟ್ಟಿರುವ 17 ಸಾವಿರ ರೂ.ಗಳನ್ನು ವಾಪಸ್ಸು ಕೊಟ್ಟು ಬಿಡುತ್ತೇವೆ; ದಯವಿಟ್ಟು ತೆಗೆದುಕೊಂಡು ಬಿಡಿ.

ಶ್ರೀ ಹೆಚ್.ಎಂ. ರೇವಣ್ಣ : ನಾನು ಹೋಗಿದ್ದುದು ನಿಜ, ನಾನೂ ನೋಡಿದ್ದೇನೆ. ಅದನ್ನು ನನ್ನ ಇಲಾಖೆಯಿಂದ ನೇರವಾಗಿ ಕೊಡುವುದಕ್ಕೆ ಬರುವುದಿಲ್ಲ. ರೆವಿನ್ಯೂ ಇಲಾಖೆಯವರು ಕಂದಾಯ ಇಲಾಖೆಯವರು ಇದಕ್ಕೆ ಪರಿಹಾರ ಕೊಡತಕ್ಕದ್ದು. ರೈತರ ಬಗ್ಗೆ ನಾನು ನಿಮ್ಮಷ್ಟೇ ಕಾಳಜಿ ಇರುವವನು, ಆದರೆ ನನ್ನ ಇಲಾಖೆಯಿಂದ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ : ಪ್ರಕೃತಿ ವಿಕೋಪಕ್ಕೆ ತುತ್ತಾದಂತಹ ಪ್ರದೇಶಗಳಿಗೆ ಹೆಚ್ಚಿಗೆ ಹಣವನ್ನು ಕೊಡುತ್ತಾರೆ. ಅದಕ್ಕೋಸ್ಕರ ತಾವು ಕಂದಾಯ ಇಲಾಖೆಗೆ ರೆಕಮೆಂಡ್ ಮಾಡುತ್ತೀರಾ? ನ್ಯಾಯವಾಗಿ ಎಷ್ಟು ರೂಲ್ಸ್ ಪ್ರಕಾರ ಕೊಡಬೇಕೋ ಅದನ್ನು ಕೊಡಿಸುವ ಪ್ರಯತ್ನ ಮಾಡುತ್ತೀರಾ?

ಶ್ರೀ ಹೆಚ್.ಎಂ. ರೇವಣ್ಣ : ಅದನ್ನು ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ : ಪ್ರಯತ್ನ ಅಲ್ಲ, ಬರೆಯುತ್ತೇನೆ ಎಂದು ಹೇಳಿ.

ಶ್ರೀ ಹೆಚ್.ಎಂ. ರೇವಣ್ಣ : ಆಯಿತು ಬರೆಯುತ್ತೇನೆ.

ಗಡಿ ಪ್ರದೇಶಗಳಲ್ಲಿ ವ್ಯವಸಾಯೋತ್ಪನ್ನ ಮಾರುಕಟ್ಟೆಗಳ ಸಂಘ

395 -, ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಅಂಕಿಅಂಶಗಳನ್ನು ಒದಗಿಸುವುದು);

ಆ) ಈ ಸಮಿತಿಗಳಲ್ಲಿ ರಾಜ್ಯದ ಗಡಿ ಭಾಗಗಳಲ್ಲಿ ಬರುವ ಸಮಿತಿಗಳ ಸಂಖ್ಯೆ ಎಷ್ಟು;

ಇ) ರಾಜ್ಯದ ಬಹುತೇಕ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗಳು ಆರ್ಥಿಕ ಸಂಕಷ್ಟಕ್ಕೆ ಸಿಕ್ಕಿ ಮುಚ್ಚುವ ಸ್ಥಿತಿಗೆ ಬಂದಿರುವುದನ್ನು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗಳ ಪುನರುಜ್ಜೀವನಕ್ಕಾಗಿ ಸರ್ಕಾರ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ?

ಶ್ರೀ ರಾಮಲಿಂಗರೆಡ್ಡಿ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) 123 (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ)

ಆ) ರಾಜ್ಯದ ಗಡಿಗೆ ಅತಿ ಸಮೀಪದಲ್ಲಿರುವ ಮಾರುಕಟ್ಟೆ ಸಮಿತಿಗಳು-17.

ಇ) ಇಲ್ಲ.

ಈ) (ಇ) ಭಾಗಕ್ಕೆ ಕೊಟ್ಟಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ -1

ಕರ್ನಾಟಕ ರಾಜ್ಯದಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ವಿವರಣಾ ಪಟ್ಟಿ

ಜಿಲ್ಲೆಯ ಹೆಸರು	ಮಾರುಕಟ್ಟೆ ಸಮಿತಿಯ ಹೆಸರು
ಬೆಂಗಳೂರು ನಗರ	1. ಬೆಂಗಳೂರು
ಬೆಂಗಳೂರು ಗ್ರಾಮಾಂತರ	2. ಚನ್ನಪಟ್ಟಣ
	3. ದೊಡ್ಡಬಳ್ಳಾಪುರ
ಚಿತ್ರದುರ್ಗ	4. ಚಿತ್ರದುರ್ಗ
	5. ಚಳ್ಳಕೆರೆ

	6. ದಾವಣಗೆರೆ
	7. ಹರಿಹರ
	8. ಹಿರಿಯೂರು
	9. ಹೊಸದುರ್ಗ
ಕೋಲಾರ	10. ಕೋಲಾರ
	11. ಮಾಲೂರು
	12. ಚಿಕ್ಕಬಳ್ಳಾಪುರ
	13. ಚಿಂತಾಮಣಿ
	14. ಬಂಗಾರಪೇಟೆ
	15. ಗೌರಿಬಿದನೂರು
	16. ಮುಳಬಾಗಿಲು
	17. ಶ್ರೀನಿವಾಸಪುರ
ಶಿವಮೊಗ್ಗ	18. ಶಿವಮೊಗ್ಗ
	19. ಚನ್ನಗಿರಿ
	20. ಸಾಗರ
	21. ಶಿಕಾರಿಪುರ
	22. ಭದ್ರಾವತಿ
	23. ಹೊನ್ನಾಳಿ
ತುಮಕೂರು	24. ತುಮಕೂರು
	25. ಗುಬ್ಬಿ
	26. ಚಿಕ್ಕನಾಯಕನಹಳ್ಳಿ
	27. ಹುಳಿಯಾರು
	28. ಕುಣಿಗಲ್
	29. ಮಧುಗಿರಿ
	30. ಪಾವಗಡ
	31. ಸಿರಾ
	32. ತುರುವೇಕೆರೆ
	33. ತಿಪಟೂರು
ಮೈಸೂರು	34. ಮೈಸೂರು
	35. ಚಾಮರಾಜನಗರ
	36. ಕೃಷ್ಣರಾಜನಗರ
	37. ಹುಣಸೂರು
	38. ಪಿರಿಯಾಪಟ್ಟಣ
	39. ಕೊಳ್ಳೇಗಾಲ
	40. ಟಿ. ನರಸೀಪುರ
	41. ನಂಜನಗೂಡು.

ದಕ್ಷಿಣ ಕನ್ನಡ	42. ಮಂಗಳೂರು
	43. ಪುತ್ತೂರು
	44. ಉಡುಪಿ
ಕೊಡಗು	45. ಮಡಿಕೇರಿ
	46. ಸೋಮವಾರಪೇಟೆ
	47. ಗೋಣಿಕೊಪ್ಪಲ್
ಚಿಕ್ಕಮಗಳೂರು	48. ಕಡೂರು
	49. ಚಿಕ್ಕಮಗಳೂರು
	50. ತರೀಕೆರೆ
ಹಾಸನ	51. ಹಾಸನ
	52. ಅರಸೀಕೆರೆ
	53. ಹೊಳೆನರಸೀಪುರ
	54. ಚನ್ನರಾಯಪಟ್ಟಣ
	55. ಸಕಲೇಶಪುರ
ಮಂಡ್ಯ	56. ಮಂಡ್ಯ
	57. ಮದ್ದೂರು
	58. ಕೃಷ್ಣರಾಜಪೇಟೆ
ಬೆಳಗಾವಿ	59. ಬೆಳಗಾಂ
	60. ಅಥಣಿ
	61. ಬೈಲಹೊಂಗಲ
	62. ಗೋಕಾಕ್
	63. ಕುಡಚಿ
	64. ನಂದಗಡ
	65. ನಿಪ್ಪಾಣಿ
	66. ರಾಮದುರ್ಗ
	67. ಸೌಂದತ್ತಿ
	68. ಸಂಕೇಶ್ವರ
ಬಿಜಾಪುರ	69. ಬಿಜಾಪುರ
	70. ಬಾಗಲಕೋಟೆ
	71. ಬಾದಾಮಿ
	72. ಹುನಗುಂದ
	73. ಜಮಖಂಡಿ
	74. ಮಹಾಲಿಂಗಪುರ
	75. ತಾಳಿಕೋಟೆ
ಧಾರವಾಡ	76. ಧಾರವಾಡ
	77. ಅಣ್ಣಿಗೇರಿ
	78. ಬ್ಯಾಡಗಿ

	79. ಗದಗ್
	80. ಹಾವೇರಿ
	81. ಹಾನಗಲ್
	82. ಹಿರೇಕೆರೂರು
	83. ಹುಬ್ಬಳ್ಳಿ
	84. ಶಿಗ್ಗಾಂವ
	85. ನರಗುಂದ
	86. ಕುಂದಗೋಳ
	87. ಲಕ್ಷ್ಮೇಶ್ವರ
	88. ಮುಂಡರಗಿ
	89. ರೋಣ
	90. ರಾಣೆಬೆನ್ನೂರು
	91. ಸವಣೂರು
ಉತ್ತರ ಕನ್ನಡ	92. ಹಳಿಯಾಳ
	93. ಕುಮಟಾ
	94. ಹೊನ್ನಾವರ
	95. ಸಿದ್ದಾಪುರ
	96. ಯಲ್ಲಾಪುರ
	97. ಸಿರ್ಸಿ
	98. ಕಾರವಾರ
ಬಳ್ಳಾರಿ	99. ಬಳ್ಳಾರಿ
	100. ಕೊಟ್ಟೂರು
	101. ಹೊಸಪೇಟೆ
	102. ಹಗರಿಬೊಮ್ಮನಹಳ್ಳಿ
	103. ಹಡಗಲಿ
	104. ಶಿರಗುಪ್ಪ
ಬೀದರ್	105. ಬೀದರ್
	106. ಹುಮ್ನಾಬಾದ್
	107. ಬಸವಕಲ್ಯಾಣ
	108. ಭಾಲ್ಕಿ
	109. ಔರಾದ್
ರಾಯಚೂರು	110. ರಾಯಚೂರು
	111. ಗಂಗಾವತಿ
	112. ಕೊಪ್ಪಳ
	113. ಯಲ್ಬುರ್ಗಾ
	114. ಕುಷ್ಟಗಿ
	115. ಸಿಂಧನೂರು

116. ಲಿಂಗಸೂಗೂರು
117. ಮಾನ್ವಿ

ಗುಲ್ಬರ್ಗಾ 118. ಗುಲ್ಬರ್ಗಾ
119. ಚಿತ್ತಾಪುರ
120. ಶಹಾಪುರ
121. ಶೋರಾಪುರ
122. ಸೇಡಂ
123. ಯಾದಗಿರಿ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ : ಗಡಿ ಪ್ರದೇಶಗಳಲ್ಲಿ ಇರತಕ್ಕಂಥ ಮಾರುಕಟ್ಟೆಗಳಿಗೆ ತಾವು ಏನಾದರೂ ಅನುದಾನವನ್ನು ಕೊಡುತ್ತೀರಾ ಎಂದು ಕೇಳಿದ್ದೇನೆ. ಹಾಗೂ ಕೆಲವು ಮಾರುಕಟ್ಟೆಗಳು ದುರ್ಬಲವಿದ್ದ ಕಾರಣ ಮುಚ್ಚುವ ಸ್ಥಿತಿಗೆ ಬಂದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ. ಅದಕ್ಕೆ ಇಲ್ಲವೆಂದು ಹೇಳಿದ್ದೀರಿ. ಉದಾಹರಣೆಗೆ ಹುಮ್ನಾಬಾದ್ ಬಗ್ಗೆ ಹೇಳುತ್ತೇನೆ. ಅಲ್ಲಿ ಏನೂ ಇಲ್ಲ, ಸಂಬಳ ಕೊಡುವುದಕ್ಕೆ ದುಡ್ಡು ಇಲ್ಲ. ಆದರೆ ಔರಾದ್ ವಿಚಾರ ಆ ರೀತಿಯಲ್ಲಿ, ಅಲ್ಲಿ ಈಗ ಸ್ವಲ್ಪ ಪರವಾಗಿಲ್ಲ. ನಾನು ಹೇಳುವುದು ಇಷ್ಟೇ, ಗಡಿ ಪ್ರದೇಶದಲ್ಲಿರತಕ್ಕಂಥ ಮಾರುಕಟ್ಟೆಗಳಿಗೆ ತೊಂದರೆ ಇದೆ. ಮಹಾರಾಷ್ಟ್ರದಲ್ಲಾಗಲಿ, ಆಂಧ್ರಾದಲ್ಲಿಯಾಗಲೀ, ಅವರು ಅದಕ್ಕೆ ಪರಿಹಾರ ಕೊಡುತ್ತಿದ್ದಾರೆ. ಸಹಾಯಧನ, ಗ್ರಾಂಟ್ ಕೊಡುತ್ತಿದ್ದಾರೆ. ನೀವು ಕರ್ನಾಟಕ ರಾಜ್ಯ ಸರ್ಕಾರದವರು ಕೂಡ ಗಡಿ ಪ್ರದೇಶದಲ್ಲಿರುವಂತಹ ಮಾರುಕಟ್ಟೆಗಳಿಗೆ ಅಭಿವೃದ್ಧಿ ಪಡಿಸಲಿಕ್ಕೆ ಏನಾದರೂ ಸಹಾಯಧನವನ್ನು ಕೊಡುತ್ತೀರಾ? ಕೊಡುವುದಾದರೆ ಎಷ್ಟು ಕೊಡುತ್ತೀರಿ ಎಂಬುದನ್ನು ತಾವು ದಯಮಾಡಿ ಖಚಿತವಾಗಿ ಹೇಳಿ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೇ, ಗಡಿ ಪ್ರದೇಶಗಳಿಗೆ ಹತ್ತಿರವಿರತಕ್ಕಂಥ 17 ಎಪಿಎಂಸಿಗಳನ್ನು ನಾವು ತಮಗೆ ಕೊಟ್ಟಿದ್ದೇವೆ. ಅದರಲ್ಲಿ ಸಾಕಷ್ಟು ಲಾಭದಲ್ಲಿ ಇದೆ. 3-4 ಬಿಟ್ಟರೆ ಇನ್ನು ಎಲ್ಲಾ ಜಾಸ್ತಿ ಇದೆ. ಆದರೆ ಔರದಲ್ಲೂ ಕೂಡ 1992-93ರಲ್ಲಿ 9 ಲಕ್ಷ ರೂ.ಗಳನ್ನು ಸಹಾಯ ಧನವೆಂದು ಕೊಟ್ಟಿದ್ದೇವೆ. ಯಾವುದೇ ಒಂದು ಎ.ಪಿ.ಎಂ.ಸಿ.ಯಲ್ಲಿ ಆದಾಯ ಕಡಿಮೆ ಇದ್ದರೆ, ಬೇಕಾದರೆ ಅವರಿಗೆ ನಮ್ಮ ಮಂಡಳಿಯ ಕಡೆಯಿಂದ ಅವರಿಗೆ ಅನುದಾನವನ್ನು ಕೊಡುತ್ತೇವೆ. ಇಲ್ಲದೇ ಹೋದರೆ ಬೇರೆ ಎ ಪಿ ಎಂ ಸಿ ಯಿಂದ ಸಾಲ ಕೊಡಿಸುವಂತಹ ವ್ಯವಸ್ಥೆ ಕೂಡ ನಮ್ಮಲ್ಲಿ ಇದೆ. ಇಂತಹ ಸಮಿತಿಗಳು ಇದ್ದರೆ ಸಾಲ ಕೊಡಿಸುವಂತಹ ವ್ಯವಸ್ಥೆಯನ್ನು ಮಾಡೋಣ ಇಲ್ಲದಿದ್ದರೆ ಸ್ವಲ್ಪ ಅನುದಾನ ಕೊಡುವಂತಹ ವ್ಯವಸ್ಥೆಯನ್ನು ಮಾಡೋಣ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ : ಈಗ ನಾನು ಹೇಳಿದೆ. ಔರಾದ್‌ನಲ್ಲಿ ಜಾಸ್ತಿ ಇದೆ ಎಂದು, ಅನುದಾನವನ್ನು ಕೊಟ್ಟರೆ ಅನುಕೂಲವಾಗುತ್ತದೆ. ಅನುದಾನವನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಿ. ಏಕೆಂದರೆ 5 ಲಕ್ಷ ಕೂ.ಗಳಿಗಿಂತ ಕೆಳಗೆ 97 ಮಾರ್ಕೆಟ್ ಕಮಿಟಿಗಳು ಇದೆ. ಶ್ರೀ ರಾಜು ಗೌಡರ ಉತ್ತರದಲ್ಲಿ 5 ಲಕ್ಷಕ್ಕಿಂತ ಆದಾಯ ಕೆಳಗೆ ಇರುವುದು 97 ಮಾರ್ಕೆಟ್ ಕಮಿಟಿಗಳು ಎಂದು ಹೇಳಿದ್ದೀರಿ. ಅದಕ್ಕಾಗಿ ಅಂತಹ ಸಣ್ಣ ಸಣ್ಣ ಮಾರುಕಟ್ಟೆ ಕಮಿಟಿ ಅದನ್ನು ತಾವು ಅಭಿವೃದ್ಧಿ ಪಡಿಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕು. ಅನುದಾನ ಕೊಡುವಂತಹ ವ್ಯವಸ್ಥೆ ಒಳ್ಳೆಯದು. ಸಾಲ ಕೊಟ್ಟರೆ ಕಷ್ಟವಾಗುತ್ತದೆ. ಆದುದರಿಂದ ಅನುದಾನವೆಂದು ಕೊಡಿ.

ಶ್ರೀ ರಾಮಲಿಂಗಾರೆಡ್ಡಿ : 5 ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇರುವಂಥ ಮಾರುಕಟ್ಟೆ ಗಡಿಪ್ರದೇಶದಲ್ಲಿ ಕೇವಲ ಮೂರು ಎನಿಸುತ್ತದೆ ಅಷ್ಟೇ. ಬೇರೆ 5 ಲಕ್ಷ ರೂ.ಗಳಿಗಿಂತ ಕಡಿಮೆ ಇರುವ ಎ ಪಿ ಎಂ ಸಿಗೆ ನಾವು ಏನು ಮಾಡುತ್ತೇವೆಂದರೆ

ನಮ್ಮ ಮಂಡಳಿಯಿಂದ ಮತ್ತು ಬೇರೆ ಎ ಪಿ ಎಂ ಸಿಗಳಿಂದ ಕೂಡ ಸಹಾಯ ಮಾಡುತ್ತೇವೆ. ಆದುದರಿಂದ ಇಂತಹ ಯಾವುದಾದರೂ ನಷ್ಟವಾದ ಸಂಸ್ಥೆಗೆ ಸಹಾಯಧನ ಬೇಕೆಂದರೆ ಅಥವಾ ಸಾಲ ಕೊಡಿಸಬೇಕೆಂದರೆ, ಕೊಡಿಸುವುದಕ್ಕೆ ಸಿದ್ಧವಾಗಿದ್ದೇವೆ.

ಬೆಳಗಾವಿ ಜಿಲ್ಲೆಯ ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆ ಕಬ್ಬು ಸರಬರಾಜು

659 - ಶ್ರೀ ಬಾಬಗೌಡ ರುದ್ರಗೌಡ ಪಾಟೀಲ್ (ಕಿತ್ತೂರು): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯಲ್ಲಿರುವ ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆಯ ಕಾರ್ಯಕ್ಷೇತ್ರದಲ್ಲಿ ಈಗ ಪ್ರತಿ ವರ್ಷ ಬೆಳೆಯುತ್ತಿರುವ ಕಬ್ಬು ಎಷ್ಟು;

ಆ) ಈ ಕಾರ್ಖಾನೆಗೆ ಕಡಿಮೆಯಾಗುವ ಕಬ್ಬನ್ನು ಪಕ್ಕದ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯ ಪ್ರದೇಶದ ಮಲಪ್ರಭಾದ ಸದಸ್ಯರಲ್ಲದ ಕಬ್ಬು ಬೆಳೆಗಾರರಿಂದ ಪಡೆಯಬೇಕೆಂದು ತೀರ್ಮಾನಿಸಿ ಶೇ 16ರಷ್ಟು ಹಣ ಕೊಡಿಸಿದ್ದು ನಿಜವೇ;

ಇ) ಕಳೆದ ಸರ್ವ ಸಾಧಾರಣ ಸಭೆಯಲ್ಲಿ ಈ ವಿಷಯ ಕುರಿತು ಚರ್ಚೆ ನಡೆದು ಮಲಪ್ರಭಾ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರುವ ರೈತ ಸದಸ್ಯರನ್ನು 'ಅ' ವರ್ಗದ ಸದಸ್ಯರೆಂದು ಪರಿಗಣಿಸಬೇಕೆಂದು ಠರಾವು ಪಾಸಾಗಿದ್ದು ಇದುವರೆಗೆ ಜಾರಿಗೆ ಬಂದಿಲ್ಲದ್ದಕ್ಕೆ ಕಾರಣಗಳೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರ ಸಚಿವರು) :

ಅ) ಈಗ ಪ್ರತಿ ವರ್ಷ ಸುಮಾರು 4,85,179 ಮೆ:ಟನ್ ಕಬ್ಬು ಬೆಳೆಯಲಾಗುತ್ತಿದೆ.

ಆ) ಈ ಕಾರ್ಖಾನೆಗೆ ಕಡಿಮೆಯಾಗುವ ಕಬ್ಬನ್ನು ಪಕ್ಕದ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಗೆ ಸೇರಿದ ಸದರಿ ಕಾರ್ಖಾನೆಯ ಸದಸ್ಯರಲ್ಲದ ಕಬ್ಬು ಬೆಳೆಗಾರರಿಂದ ಪಡೆಯಬೇಕೆಂದು ತೀರ್ಮಾನಿಸಿರುವುದು ನಿಜ. ಆದರೆ, ಶೇ. 16.00 ರಷ್ಟು ಹಣವನ್ನು ಇಂತಹ ಸದಸ್ಯರಿಂದ ಕೂಡಿಸಬೇಕೆಂಬುದು ನಿಜವಲ್ಲ.

ಇ) ದಿನಾಂಕ 28-11-91ರಲ್ಲಿ ನಡೆದ ಸರ್ವ ಸಾಧಾರಣ ಸಭೆಯಲ್ಲಿ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರುವ ಹಾಗೂ ಕಾರ್ಖಾನೆಯ ವ್ಯಾಪ್ತಿಯ ಹೊರಗಿನ ರೈತರನ್ನು 'ಅ' ಮತ್ತು 'ರ' ವರ್ಗದ ಸದಸ್ಯರುಗಳನ್ನಾಗಿ ಪರಿಗಣಿಸಲು ಠರಾವು ಮಾಡಲಾಗಿದೆ. ಒಂದು ಕಾರ್ಖಾನೆಯು ತನ್ನ ಕಾರ್ಯ ವ್ಯಾಪ್ತಿಯಲ್ಲಿ ಬರುವವರನ್ನು ಸದಸ್ಯರನ್ನಾಗಿ ಮಾಡಿಕೊಳ್ಳಲು ಅವಕಾಶವಿರುತ್ತದೆ. ಸಹಕಾರಿ ಸಂಸ್ಥೆಗಳು ತಮ್ಮ ಕಾರ್ಯ ವ್ಯಾಪ್ತಿಯನ್ನು ಬಿಟ್ಟು ಹೊರಗಿನವರನ್ನು ಸದಸ್ಯರನ್ನಾಗಿ ಮಾಡಿಕೊಂಡರೆ ನಿಯಮಗಳ ಉಲ್ಲಂಘನೆಯಾಗುವುದರ ಜೊತೆಗೆ ಅನೇಕ ಅಡಚಣೆಗಳು ಉಂಟಾಗುತ್ತದೆ. ಇದರಿಂದಾಗಿ ಠರಾವನ್ನು ಕಾರ್ಯಕತಗೊಳಿಸಲಾಗದು.

ಶ್ರೀ ಬಾಬಾ ಗೌಡ ರುದ್ರಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಲಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆಗೆ ಕಬ್ಬು ಹೆಚ್ಚಾಯಿತು ಎಂದು ಹೇಳಿ ಖಾನಾಪುರ ತಾಲ್ಲೂಕಿನಲ್ಲಿ ಭಾಗ್ಯಲಕ್ಷ್ಮಿ ಸಹಕಾರ ಸಕ್ಕರೆ ಕಾರ್ಖಾನೆ ಸ್ಥಾಪನೆಯಾಯಿತು. ಈಗ ಅಲ್ಲಿ ಏನು ಕುತಂತ್ರ ನಡೆದಿದೆಯೆಂದರೆ, ನಾಮಕರಣ ಹೊಂದಿದಂತಹ ಕೆಲವು ಡೈರೆಕ್ಟರ್ ತಮಗೆ ಬೇಕಾದಂತಹ 6 ಸಾವಿರ ಜನ ಸದಸ್ಯರಿಗೆ ಮಾತ್ರ "ಅ" ವರ್ಗದ ಸದಸ್ಯರು ಎಂದು ಇಟ್ಟುಕೊಂಡು ಮಿಕ್ಕ 23 ಸಾವಿರ ರೈತರಿಗೆ ಎಂದರೆ ಬೆಳೆಗಾರರಲ್ಲದಂತಹ ಸದಸ್ಯರು ಎನ್ನುವಂತಹ ಒಂದು ಕುತಂತ್ರವನ್ನು ಮಾಡುತ್ತಿದ್ದಾರೆ. ಹೋದವರ್ಷ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಈ ವಿಷಯದಲ್ಲಿ ಚರ್ಚೆಯಾಗಿ ಅವರನ್ನೆಲ್ಲಾ "ಅ" ವರ್ಗದ ಮೆಂಬರ್ ಮಾಡಿಕೊಳ್ಳಬೇಕು ಎನ್ನುವಂತಹ ನಿರ್ಣಯ ಬಂದರೂ ಕೂಡ, ಅಲ್ಲಿ ರಾಜಕಾರಣ ಮಾತ್ರ ಇನ್ನೂ ಪ್ರಭಲವಾಗಿದೆ. ಇದನ್ನು

ಹತೋಟಿಯಲ್ಲಿ ಇಟ್ಟುಕೊಳ್ಳಬೇಕು ಎನ್ನುವಂತಹ ಕುತಂತ್ರ ನಡೆದಿದೆ. ಅದಕ್ಕೆ ಸರ್ಕಾರ ರೈತರ ಪರವಾಗಿ ಬಂದು 23 ಸಾವಿರ ಜನ ಸದಸ್ಯರ ಬೆಳೆಗಾರರನ್ನು "ಅ" ,,ವರ್ಗದ ಸದಸ್ಯರು ಎಂದು ಮಾಡುತ್ತೀರಾ ಹ್ಯೇಗೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಈಗ ಕಾರ್ಖಾನೆಗೆ ಬೇಕಾಗಿರತಕ್ಕಂತಹ ಕಬ್ಬು ಸಾಲದೆ ಹೋದಾಗ ಪಕ್ಕದ ಮಲಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಗೆ ಸೇರಿದ ಸದರಿ ಕಾರ್ಖಾನೆಯ ಸದಸ್ಯರಲ್ಲದ ಕಬ್ಬು. ಬೆಳಗಾರರಿಂದ ಕಬ್ಬು ಪಡೆಯಬೇಕೆಂದು ತೀರ್ಮಾನಿಸಿರುವುದು ನಿಜ. ಆದರೆ ಶೇ 18 ರಷ್ಟು ಹಣವನ್ನು ಅಂತಹ ಸದಸ್ಯರಿಗೆ ಕೊಡಬೇಕೆಂಬುದು ನಿಜವಲ್ಲ. 2ನೆಯದು ಕಳೆದ ಸರ್ವಸದಸ್ಯರ ಸಾಧಾರಣ ಸಭೆಯಲ್ಲಿ ಕಾರ್ಯ ಬರುವ ಹಾಗೂ ಕಾರ್ಯ ವ್ಯಾಪ್ತಿಯ ಹೊರಗೆ ರೈತನನ್ನು ಮತ್ತು "ಈ" ಈ ವರ್ಗದ ಸದಸ್ಯರುಗಳನ್ನಾಗಿ ಪರಿಗಣಿಸಲು ಠರಾವು ಮಾಡಲಾಗಿದೆ. ಒಂದು ಕಾರ್ಖಾನೆಯು ತನ್ನ ಕಾರ್ಯ ವ್ಯಾಪ್ತಿಯಲ್ಲಿ ಬರುವವರನ್ನು ಸದಸ್ಯರನ್ನಾಗಿ ಮಾಡಿಕೊಳ್ಳಲು ಅವಕಾಶ ಇರುತ್ತದೆ. ಸಹಕಾರಿ ಸಕ್ಕರೆ ಸಂಸ್ಥೆಗಳು ತಮ್ಮ ಕಾರ್ಯವ್ಯಾಪ್ತಿಯನ್ನು ಬಿಟ್ಟು ಹೊರಗಿನವರನ್ನು ಸದಸ್ಯರನ್ನಾಗಿ ಮಾಡಿಕೊಂಡರೆ ನಿಯಮಗಳ ಉಲ್ಲಂಘನೆಯಾಗುವುದರ ಜೊತೆಗೆ ಅನೇಕ ಅಡಚಣೆಗಳು ಉಂಟಾಗುತ್ತದೆ. ಇದರಿಂದ ಠರಾವನ್ನು ಕಾರ್ಯಗತಗೊಳಿಸಲು ಸಾಧ್ಯವಿಲ್ಲ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಇದು ದೊಡ್ಡ ಕುತಂತ್ರ. ಇವರು ಹೇಳಿದ ಪ್ರಕಾರ 1 ಲಕ್ಷದ 85 ಸಾವಿರ ಟನ್ ಕಬ್ಬು ಬೆಳೆಯುತ್ತಾರೆ. ಹೇಗೆ ಕಾರ್ಖಾನೆ ನಡೆಸುತ್ತೀರಿ ನಡೆಸಲಿ, ನೋಡೋಣ. 6 ಲಕ್ಷ ಟನ್ ಕಬ್ಬು ಬೇಕು ನಿಮಗೆ. ಕೇವಲ ಒಂದು ಲಕ್ಷ 85 ಸಾವಿರ ಕಬ್ಬು ಬೆಳೆಯಲಾಗುತ್ತಿದೆ ಎಂದು ನೀವೇ ಉತ್ತರ ಕೊಡುತ್ತೀರಿ. ನೀವು ಯಾವ ರೀತಿ ಕಾರ್ಖಾನೆ ನಡೆಸುತ್ತೀರಿ ಹೇಳಿ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ನನಗೆ ಉತ್ತರ ಬಂದಿರುವುದು ಇಷ್ಟು.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಇದು ಕೇವಲ ಈ ಕಾರ್ಖಾನೆಯ ಆಡಳಿತ ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳಬೇಕು ಎಂದು ಸೇರಿ ಮಾಡಿದಂತಹ ಕುತಂತ್ರ. ಈ ರೀತಿಯಾದಂತಹ ರಾಜಕಾರಣ ಮಾಡಿ ರಾಜ್ಯದಲ್ಲಿರುವ ಎಲ್ಲಾ ಸಕ್ಕರೆ ಕಾರ್ಖಾನೆ ಹಾಳು ಮಾಡಿದಿರಿ. ಮಹಾರಾಷ್ಟ್ರದಲ್ಲಿ ನೋಡಿದರೆ ಈ ರೀತಿ ಮಾಡುತ್ತಾರೆ ಅವರು. ಮಾನ್ಯ ಅಧ್ಯಕ್ಷರೇ, 1 ಲಕ್ಷ 85 ಸಾವಿರ ಟನ್ ಕಬ್ಬಿನಿಂದ ಹೇಗೆ ಇವರು ಕಾರ್ಖಾನೆ ನಡೆಸುತ್ತಾರೆ ನೋಡೋಣ. ಪಕ್ಕದ ಮಲಪ್ರಭಾ ಸಕ್ಕರೆ ಕಾರ್ಖಾನೆಯವರು ನೋ ಅಬ್ಜಕ್ಷನ್ ಸರ್ಟಿಫಿಕೇಟ್ ಕೊಟ್ಟರು. ನಮ್ಮಲ್ಲಿ ಕಬ್ಬು ಹೆಚ್ಚಾಗಿದೆ, ನಮ್ಮ ಪ್ರದೇಶದಿಂದ ಬೇಕಾದರೆ ನೀವು ಮೆಂಬರ್ ಮಾಡಿಕೊಳ್ಳಬಹುದು. ನಮ್ಮ ಮೆಂಬರ್ ಅಲ್ಲದಂತಹ ರೈತರನ್ನು ನೀವು ಮೆಂಬರ್ ಮಾಡಿಕೊಳ್ಳಬಹುದು ಎಂದು ಸರ್ಟಿಫಿಕೇಟ್ ಕೊಟ್ಟರು. ಆ ಪ್ರಕಾರವಾಗಿ ಇವರು ಸದಸ್ಯರನ್ನು ಮಾಡಿಕೊಂಡರು. ಆದರೆ ಅವರು ಈ ವರ್ಗದ ಸದಸ್ಯರೆಂದು ಹೇಳಿ ರಾಜಕೀಯ ಮಾಡುತ್ತಿದ್ದಾರೆ. ಈ ರೀತಿ ಕಾರ್ಖಾನೆಯಲ್ಲಿ ರಾಜಕಾರಣ ಮಾಡಿ ಕಾರ್ಖಾನೆಯನ್ನು ಹಾಳು ಮಾಡಿದರು. ಕೇವಲ 1 ಲಕ್ಷದ 85 ಸಾವಿರ ಟನ್ ಕಬ್ಬು ಬೆಳೆಯುತ್ತಿದ್ದಾರೆ ಎಂದು ನೀವೇ ಉತ್ತರ ಕೊಡುತ್ತಿದ್ದೀರಿ. ಸರ್ಕಾರ ಹೇಗೆ ಈ ಕಾರ್ಖಾನೆಯನ್ನು ನಡೆಸುತ್ತಿದೆ ಹೇಳಲಿ ನೋಡೋಣ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಅದಕ್ಕೆ ಸಾಕಾಗುವುದಿಲ್ಲ ಎನ್ನುವ ದೃಷ್ಟಿಯಿಂದಲೂ ಬೇರೆಯವರ ಜೊತೆ ಕಬ್ಬು ತೆಗೆದುಕೊಳ್ಳಬೇಕು ಎಂದು ಠರಾವು ಮಾಡಿದೆ. ಆದರೆ ಅದನ್ನು ತೆಗೆದುಕೊಳ್ಳುವಂತಹ ಪರಿಸ್ಥಿತಿ ಬಂದರೂ ಸಹ ಅವರನ್ನು ಪರಿಗಣನೆಗೆ

ತೆಗೆದುಕೊಂಡಿಲ್ಲ. ಅವರನ್ನು ವಜಾ ಮಾಡಬೇಕೆನ್ನುವ ಪರಿಸ್ಥಿತಿಗೆ ಬಂದಿದೆ. ಅದನ್ನು ಏನು ಮಾಡಬೇಕು ಎಂದು ತೀರ್ಮಾನ ಮಾಡಬೇಕಾಗುತ್ತದೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಜನರಲ್ ಬಾಡಿ ಮೀಟಿಂಗ್‌ನಲ್ಲಿ ಇದೇ ವಿಷಯ ಚರ್ಚೆಯಾಯಿತು. ಆಗ ಅಲ್ಲಿ ನಾನು ಇದ್ದೆ. ನಮ್ಮ ಸದಸ್ಯರಾದ ಮಾನ್ಯ ಚವಾಣ್‌ರವರೂ ಕೂಡ ಇದ್ದರು. ನಮ್ಮ ಕಬ್ಬು ಸಾಲುವುದಿಲ್ಲ, ಆ ಕಾರಣ ಬೈಲಹೊಂಗಲದ ಸದಸ್ಯರನ್ನು "ಅ" ವರ್ಗದ ಸದಸ್ಯರನ್ನಾಗಿ ಮಾಡಿಕೊಳ್ಳಬೇಕು ಎಂದು ಹೇಳಿ ಸರ್ವಾನುಮತದಿಂದ ಠರಾವು ಪಾಸ್ ಆಯಿತು. ಆದರೂ ಕುತಂತ್ರ ಮಾಡಿ ಅವರು "ಈ" ವರ್ಗದ ಸದಸ್ಯರನ್ನಾಗಿ ಮಾಡುವುದಕ್ಕೆ ಹೊರಟರು. ಈ ರೀತಿಯಲ್ಲಿ ರಾಜಕಾರಣ ಮಾಡಿ ನೀವು ರೈತರನ್ನು ಹೇಗೆ ಉದ್ಧಾರ ಮಾಡುತ್ತೀರಿ ಎಂದು ಹೇಳಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಸದಸ್ಯರನ್ನಾಗಿ ಮಾಡಿಕೊಳ್ಳುವ ಅವಕಾಶ ಇದೆ. ಆದರೆ ಈ ನಿಯಮಗಳ ಉಲ್ಲಂಘನೆಯಾಗುತ್ತದೆ ಎಂಬ ಕಾರಣದಿಂದ ಇದನ್ನು ಏನು ಮಾಡಬೇಕು ಎನ್ನುವುದು ತೀರ್ಮಾನ ಮಾಡಲಿಲ್ಲ. ಇದರಿಂದ ಠರಾವನ್ನು ಕಾರ್ಯಗತಗೊಳಿಸಿಲ್ಲ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಇದು 23 ಸಾವಿರ ಜನ ರೈತರ ಸಮಸ್ಯೆ. ಸಾವಿರ ಸಾವಿರ ರೂಪಾಯಿ ಸದಸ್ಯತ್ವದ ಹಣವನ್ನು ಅವರು ಪುಕ್ಕಟೆ ಕೊಟ್ಟಿಲ್ಲ? ಸುಮ್ಮನೆ ಅವರೂ ಕೊಟ್ಟಿಲ್ಲ.

ನಮ್ಮ ಕಬ್ಬು ನಾಳೆ ಅಲ್ಲಿಗೆ ಹೋಗುತ್ತದೆ; ನುಲಿಯುತ್ತದೆ; ದುಡ್ಡು ಬರುತ್ತದೆ ಎನ್ನುವ ವಿಚಾರದಿಂದ ಅವರು ಕೊಟ್ಟಿದ್ದಾರೆ 23 ಸಾವಿರ ಜನ 2 ಕೋಟಿ 30 ಲಕ್ಷ ರೂಪಾಯಿ.....

ಅಧ್ಯಕ್ಷರು : ತಾವು ಸಲ್ಯೂಷನ್ ತರಿಸಿ ನೋಡಿ ಒಂದು ನಿರ್ಣಯ ಕೊಡಿ. ಪರಿಶೀಲನೆ ಮಾಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ನಾವು ಎಷ್ಟು ಜನರನ್ನು ಸೇರಿಸಿಕೊಳ್ಳಬಹುದು, ಎಷ್ಟು ಕಬ್ಬು ಬರುತ್ತದೆ ಇದನ್ನು ಪರಿಶೀಲನೆ ಮಾಡಿ ಒಂದು ಕಡೆಯಿಂದ ಕಬ್ಬನ್ನು ತೆಗೆದುಕೊಳ್ಳುತ್ತಿರುವಾಗ....,

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಈ ರೀತಿ ಮಾಡಿ ಬೇರೆ ಬೇರೆ ಕಾರ್ಖಾನೆಗಳನ್ನೆಲ್ಲಾ ಮಾರಿಕೊಂಡಿರಿ, ಇದನ್ನು ಮಾಡಿಕೊಳ್ಳಬೇಕು ಅಂತಿರಾ? ಸಭಾಧ್ಯಕ್ಷರೇ, ಇನ್ನೊಮ್ಮೆ ಇವರ ಉತ್ತರವನ್ನು ತರಿಸಿಕೊಡುತ್ತೀರಾ?

ಅಧ್ಯಕ್ಷರು : ನಾನು ಪರಿಶೀಲನೆ ಮಾಡಲು ಹೇಳುತ್ತೇನೆ. ಇದರ ಬಗ್ಗೆ ಆ್ಯಯಕ್ಷನ್ ತೆಗೆದುಕೊಳ್ಳಲು ಹೇಳುತ್ತೇನೆ.

ಮೂಡಬಿದರೆ ನ್ಯಾಯ ಬಸದಿಯ ಆವರಣದಲ್ಲಿ ಶಾಂತಿವನದ ಸೌಂದರ್ಯ

581 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೂಡಬಿದರೆಯ ನ್ಯಾಯ ಬಸದಿಯ ಆವರಣದಲ್ಲಿ ರಚಿಸಲಾದ ಶಾಂತಿವನದ ಸೌಂದರ್ಯ ಅಭಿವೃದ್ಧಿಗೆ ಸರ್ಕಾರದ ಕಾರ್ಯಕ್ರಮಗಳೇನು?

ಆ) ಇಲ್ಲಿಗೆ ಬರುತ್ತಿರುವ ಜನರ ಅನುಕೂಲತೆಗಳಿಗೆ ಆಸನದ ವ್ಯವಸ್ಥೆ ಮಾಡಲಾಗುವುದೇ?

ಇ) ಇವರ ಸಮಗ್ರ ಅನುಕೂಲತೆಗಳಿಗೆ (ಅಭಿವೃದ್ಧಿ) ಬಗ್ಗೆ ಏನು ಯೋಜನೆ ತಯಾರಿಸಿದೆ?

ಈ) ಈ ಬಗ್ಗೆ ಸರ್ಕಾರ ಯಾವಾಗ ಹಣ ಬಿಡುಗಡೆ ಮಾಡಲಾಗುವುದು?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಮೂಡಬಿದ್ರೆಯ ನ್ಯಾಯ ಬಸದಿಯ ಆವರಣದಲ್ಲಿ ರಚಿಸುವ ಶಾಂತಿವನದ ಅಭಿವೃದ್ಧಿಗಾಗಿ ತೋಟಗಾರಿಕೆ ಇಲಾಖೆ ವತಿಯಿಂದ ರೂ. 1,00, 150-00ಗಳಿಗೆ ಒಂದು ಯೋಜನೆಯನ್ನು ತಯಾರಿಸಿ, ಜಿಲ್ಲಾ ಪಂಚಾಯಿತಿಯ ಮಂಜೂರಾತಿಗಾಗಿ ಕಳುಹಿಸಿಕೊಡಲಾಗಿದೆ. ಈ ಯೋಜನೆಯಂತೆ ತಂತಿ ಬೇಲಿ ಹಾಕುವ ಕಾರ್ಯಕ್ರಮ, ಅಲಂಕಾರಿಕ ಗಿಡಗಳನ್ನು ಖರೀದಿಸಿ ನೆಡುವುದು ಮತ್ತು ಜನರ ಅನುಕೂಲತೆಗೆ ಬೆಂಚುಗಳನ್ನು ಹಾಕಿಸುವ ಕಾರ್ಯಕ್ರಮಗಳು ಸೇರಿರುತ್ತವೆ.

ಆ) ಹೌದು.

ಇ) ಮೇಲೆ ನಮೂದಿಸಿರುವಂತೆ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳಲಾಗಿದೆ.

ಈ) ಜಿಲ್ಲಾ ಪಂಚಾಯಿತಿಯವರು ಕ್ರಿಯಾ ಯೋಜನೆಯನ್ನು ಅನುಮೋದಿಸಿ ಹಣ ಬಿಡುಗಡೆ ಮಾಡಬೇಕಾಗಿರುತ್ತದೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಅಧ್ಯಕ್ಷರೇ, ಸಚಿವರು ಕೊಟ್ಟಂಥ ಉತ್ತರದಲ್ಲಿ ಮೂಡಿಬಿದಿರೆಯ, ನ್ಯಾಯಬಸದಿಯ 10 ಎಕರೆ ಸ್ಥಳದಲ್ಲಿ ಅದರ ಅಭಿವೃದ್ಧಿಗಾಗಿ ಒಂದು ಲಕ್ಷ ರೂಪಾಯಿಗಳನ್ನು ಒದಗಿಸಬೇಕು ಎಂದು ಹೇಳಿ ಜಿಲ್ಲಾಪಂಚಾಯಿತಿಗೆ ಸೂಚನೆ ಕೊಟ್ಟಿದ್ದೇವೆ ಎಂದು ಹೇಳಿದರು. ಬಹುಶ ಇದು ರಾವಣನ ಹೊಟ್ಟೆಗೆ ಕಾಸಿನ ಮಜ್ಜಿಗೆ ಎಂದು ಹೇಳಿ ಕನ್ನಡದ ಒಂದು ಉಕ್ತಿಯಂತಾಗಿದೆ. ಆ 10 ಎಕರೆಯ ಉತ್ತಮವಾದಂಥ ಸ್ಥಳದಲ್ಲಿ 5 ಸಾವಿರ ಸಸಿಗಳನ್ನು ಕಳೆದ ವರ್ಷ ನೆಟ್ಟಿದ್ದರು. ಸ್ವಲ್ಪ ಭಾಗ ಅದಕ್ಕೆ ಆವರಣವನ್ನು ಹಾಕಿದ್ದರು. ಈಗ ಅದಕ್ಕೆ ಬೇಕಾದಂಥ ಆವರಣವನ್ನು ಹಾಕಿ ಬರುವಂಥ ಜನಕ್ಕೆ ಆಸನದ ವ್ಯವಸ್ಥೆಯನ್ನು ಮಾಡುವುದಕ್ಕಾಗಿ ಸುಮಾರು 7ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಅಲ್ಲಿಂದ ಕಳುಹಿಸಿಕೊಡಲಾಗಿದೆ, ಆದರೆ ಈಗ ಒಂದು ಲಕ್ಷವನ್ನು ಮಾತ್ರ ಕೊಟ್ಟಿದ್ದೀರಿ. ಬಹಳ ಪ್ರಾಮುಖ್ಯವಾದಂಥ ಒಂದು ಚಾರಿತ್ರಿಕ ಸ್ಥಳದಲ್ಲಿ, ಸಾವಿರಾರು ಯಾತ್ರಿಕರು ತಿರುಗಾಡುವಂತಹ ಸ್ಥಳದಲ್ಲಿ ಅದನ್ನು ಉತ್ತಮ ಪಡಿಸುವಂಥದ್ದು ತಮ್ಮ ಕರ್ತವ್ಯವಾಗಿದೆ. ಆದ್ದರಿಂದ ತೋಟಗಾರಿಕಾ ಸಚಿವರು ಅದಕ್ಕೆ ಕೊಟ್ಟಂಥ ಹಣ ಸಾಕಾಗುವುದಿಲ್ಲ. ಅದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕು ಎಂದು ತಮ್ಮ ಹತ್ತಿರ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಒಂದು ಲಕ್ಷ ಹಣ ಸಾಲದು, ಬಹಳ ಮುಖ್ಯವಾದಂಥ ಸ್ಥಳ ಎಂದು ಹೇಳಿದ್ದಾರೆ. ಸ್ವಲ್ಪ ಜಾಸ್ತಿ ಮಾಡಬೇಕು ಎಂದೂ ಹೇಳಿದ್ದಾರೆ, ನನ್ನ ಕಡೆಗೆ ಆ ರೀತಿಯಾದಂಥ ಒಂದು ಕಾಗದವನ್ನು ಕೊಡಲಿ, ಇನ್ನೂ ಸ್ವಲ್ಪ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡಲಿಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಆ ತೋಟವನ್ನು ನೋಡಿಕೊಳ್ಳುವಂಥ ಮೇಲ್ವಿಚಾರಕರು ಯಾರೂ ಅಲ್ಲಿಲ್ಲ; ಯಾರಾದರೂ ಬರುತ್ತಾರೆ. ತೋಟವನ್ನು ಹಾಳು ಮಾಡುತ್ತಾರೆ, ಕಳೆದ ವರ್ಷ ತಾವು ಒಂದು ಬೋರ್‌ವೆಲ್ ಹಾಕಿಸಿ ನೀರಿನ ವ್ಯವಸ್ಥೆಯನ್ನು ಮಾಡಿದ್ದಕ್ಕೆ ನಾನು ತಮಗೆ ಆಭಾರಿಯಾಗಿದ್ದೇನೆ. ಆ ಸಸಿಗಳು ಬೆಳೆಯಲಿಕ್ಕೆ ಮತ್ತು ಅವುಗಳನ್ನು ಇತರ ಪ್ರಾಣಿಗಳಿಂದ ರಕ್ಷಿಸಲಿಕ್ಕೆ ತಾವು ಒಬ್ಬ ಗಾರ್ಡನರ್ ಅನ್ನು ನೇಮಕ ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಕೃಷ್ಣಪ್ಪ : ಅದನ್ನು ಸುರಕ್ಷಿತವಾಗಿ ನೋಡಿಕೊಳ್ಳಲಿಕ್ಕೆ ಏರ್ಪಾಡು ಮಾಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವೆಂಟೆಡ್ ಡ್ಯಾಮ್‌ಗಳ ನಿರ್ಮಾಣ

582 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಸಾರ ಸಂರಕ್ಷಣೆ ಇಲಾಖೆಯ ವತಿಯಿಂದ 1993-94 ಮತ್ತು 1994-95ರಲ್ಲಿ ನಿರ್ಮಿತವಾದ ವೆಂಟೆಡ್‌ಡ್ಯಾಮಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಆ) ಸದರಿ ವೆಂಟೆಡ್ ಡ್ಯಾಮಗಳಿಗೆ ಹಲಗೆ ಅಳವಡಿಸದಿರಲು ಕಾರಣವೇನು?

ಇ) ಹಲಗೆ ಅಳವಡಿಸದಿರುವುದರಿಂದ ರೈತರಿಗೆ ಈ ಯೋಜನೆ ಸದುಪಯೋಗವಾಗುವುದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಹಲಗೆಯನ್ನು ಅಳಪಡಿಸುವ ಯೋಜನೆಯನ್ನು ಸರ್ಕಾರ ಯಾವಾಗ ಪ್ರಾರಂಭಿಸುವುದು?

ಶ್ರೀ ಹೆಚ್. ಎಂ. ರೇವಣ್ಣ (ಕೃಷಿ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1993-94ರ ಸಾಲಿನಲ್ಲಿ 529 ಮತ್ತು 1994-95ರಲ್ಲಿ ಜುಲೈ ಅಂತ್ಯದವರೆಗೆ 94 ವೆಂಟೆಡ್ ಡ್ಯಾಮಗಳನ್ನು ನಿರ್ಮಿಸಲಾಗಿದೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ :

ಕ್ರ. ಸಂ. ತಾಲ್ಲೂಕು	ನಿರ್ಮಿಸಿದ ಒಟ್ಟು ವೆಂಟೆಡ್ ಡ್ಯಾಮ್‌ಗಳು 1993-94	1994-95
1. ಉಡುಪಿ	43	06
2. ಬೆಳ್ತಂಗಡಿ	59	08
3. ಕಾರ್ಕಳ	52	08
4. ಮಂಗಳೂರು	65	12
5. ಬಂಟ್ವಾಳ	59	12
6. ಸುಳ್ಯ	84	22
7. ಕುಂದಾಪೂರ	60	06
8. ಪುತ್ತೂರು	107	20
ಒಟ್ಟು	529	94

ಆ) ಫಲಾನುಭವಿಗಳೇ ವೆಂಟೆಡ್ ಡ್ಯಾಮಗಳಿಗೆ ಹಲಗೆಯನ್ನು ಅಳವಡಿಸಿಕೊಳ್ಳಲು ಪ್ರೇರೇಪಿಸಲಾಗುತ್ತಿದೆ. ಸದರಿ ಘಟಕದ ಖರ್ಚನ್ನು ಅಂದಾಜು ಪತ್ರಿಕೆಯಲ್ಲಿ ಸೇರಿಸಿರುವುದಿಲ್ಲ.

ಇ) ಹಲಗೆ ಅಳವಡಿಸಿ ನಿರ್ಮಿಸುವ ವೆಂಟೆಡ್ ಡ್ಯಾಂಗಳು ಹೆಚ್ಚು ಉಪಯೋಗವಾಗುವುದೆಂದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ದಶಲಕ್ಷ ಭಾವಿ ಯೋಜನೆ ಅಡಿಯಲ್ಲಿ 1-7-94ರಿಂದ ವೆಂಟೆಡ್ ಡ್ಯಾಂಗಳ ದರವನ್ನು 25,000 ರೂ.ದಿಂದ 40,000 ರೂ.ಗೆ ಪರಿಷ್ಕರಿಸಿರುವುದರಿಂದ ಹಲಗೆಯ ಬೇಡಿಕೆಯನ್ನು ಅಳವಡಿಸಲಾಗುವುದು.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೇ, ಭೂಸಾರ ಸಂರಕ್ಷಣೆ ಇಲಾಖೆಯಿಂದ ಕಿಂಡಿ ಅಣೆಕಟ್ಟುಗಳನ್ನು ಕಟ್ಟತಕ್ಕಂಥ ಮೂಲ ಉದ್ದೇಶ ಏನು? ಮತ್ತು ಈ ಕಿಂಡಿ ಅಣೆಕಟ್ಟುಗಳಿಗೆ ಹಲಗೆಗಳನ್ನು ಅಳವಡಿಸದಿರಲು ಕಾರಣಗಳೇನು ಮತ್ತು 93-94ರಲ್ಲಿ 529 ವೆಂಟೆಡ್ ಅಣೆಕಟ್ಟುಗಳನ್ನು ಕಟ್ಟಲಾಗಿದೆ, 94-95 ರಲ್ಲಿ ಕೇವಲ 94 ವೆಂಟೆಡ್ ಅಣೆಕಟ್ಟುಗಳನ್ನು ಕಟ್ಟಲಾಗಿದೆ. ಈ ವ್ಯತ್ಯಾಸಕ್ಕೆ ಕಾರಣವೇನು?

ಶ್ರೀ ಹೆಚ್.ಎಂ. ರೇವಣ್ಣ : ಸನ್ಮಾನ್ಯ ಅಧ್ಯಕ್ಷರೆ, ಈ ವೆಂಟೆಡ್ ಅಣೆಕಟ್ಟುಗಳನ್ನು ಕಟ್ಟುವುದಕ್ಕೆ ಭೂ ಸಂರಕ್ಷಣಾ ಇಲಾಖೆಯವರು ತೆಗೆದುಕೊಳ್ಳತಕ್ಕಂತ ಕಾರ್ಯಕ್ರಮದಲ್ಲಿ 25 ಸಾವಿರ ರೂಪಾಯಿ ಗರಿಷ್ಠ ಹಣವನ್ನು ನಾವು ಗೊತ್ತುಮಾಡಿರುತ್ತೇವೆ. ಆದ್ದರಿಂದ ಅವರಲ್ಲಿ ಈ ಹಲಗೆ ಹಾಕತಕ್ಕಂಥ ಕಾರ್ಯಕ್ರಮ ಒಳಪಡುವುದಿಲ್ಲ, ರೈತರೆ ಮುಂದೆ ಬಂದು ಅದನ್ನು ಕೊಟ್ಟರೆ ಹಾಕಿಕೊಡುವಂಥದ್ದು ಇದೆ. ಇದರಲ್ಲಿ ದಶಲಕ್ಷ ಬಾವಿ ಯೋಜನೆಯಡಿಯಲ್ಲಿ ಮಾಡತಕ್ಕಂಥ ಚಿಕ್ಕ ಅಣೆಕಟ್ಟುಗಳಿಗಾಗಿ 40 ಸಾವಿರ ರೂಪಾಯಿ ಇರುವುದರಿಂದ ಅಂತಹ ಕಡೆ ನಾವು ಕೆಲಸ ಮಾಡಿಕೊಡುತ್ತಿದ್ದೇವೆ. ವಾಟರ್ ಷೆಡ್ ಕಾರ್ಯಕ್ರಮದಲ್ಲಿ ಕಡಿಮೆ ಹಣ ಬರುವುದರಿಂದ ಅದನ್ನು ಹಾಕುವುದಕ್ಕೆ ಆಗುವುದಿಲ್ಲ ಎಂದು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತಿಳಿಸುತ್ತೇನೆ. ಎರಡನೆಯದಾಗಿ ಎಲ್ಲಿ ವೆಂಟೆಡ್ ಅಣೆಕಟ್ಟುಗಳು 529 ಇರುವ ಕಡೆ ಜಾಸ್ತಿ ಕೆಲಸ ಮಾಡಿದ್ದೇವೆ. ಈ ಸಾರಿ 94ನ್ನು ಮಾಡಿದ್ದೇವೆ. ಇನ್ನೇನಾದರೂ ತಿಳಿಸಿದರೆ ನಾನು ಅವರಿಗೆ ಹೆಚ್ಚಿನ ರೀತಿಯಲ್ಲಿ ಮಾಡಿಕೊಡುತ್ತೇನೆ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ : ಅಧ್ಯಕ್ಷರೇ, ನಾನು ಕೇಳಿದಂತಹ ಪ್ರಶ್ನೆಗೆ ಸಮರ್ಪಕವಾದಂಥ ಉತ್ತರ ಬರಲಿಲ್ಲ, ಕಿಂಡಿ ಅಣೆಕಟ್ಟುಗಳನ್ನು ಭೂಸಾರ ಸಂರಕ್ಷಣಾ ಇಲಾಖೆಯಿಂದಲೇ ಮಾಡತಕ್ಕಂಥ ಉದ್ದೇಶ ಏನು ಎಂದು ಕೇಳಿದ್ದೇನೆ, ಮತ್ತು ಯಾವ ಉದ್ದೇಶದಿಂದ ಈ ಕಿಂಡಿ ಅಣೆಕಟ್ಟುಗಳನ್ನು ಈ ಭೂಸಾರ ಸಂರಕ್ಷಣಾ ಇಲಾಖೆಯವರು ಮಾಡುತ್ತಿದ್ದಾರೆ?

ಕಿಂಡಿ ಅಣೆಕಟ್ಟುಗಳಿಗೆ ಹಲಗೆ ಹಾಕದೆ ಇರುವುದಕ್ಕೆ ಕಾರಣವೇನು? ಯಾವುದೇ ರೀತಿಯಲ್ಲಿ ರೈತರು ಮುಂದೆ ಬಾರದೆ ಇದ್ದಾಗ ಕಿಂಡಿ ಅಣೆಕಟ್ಟುಗಳನ್ನು ಮಾಡಿದ ಉದ್ದೇಶವೇನು? ಮತ್ತು ವ್ಯತ್ಯಾಸಕ್ಕೆ ಕಾರಣವೇನು ಎಂದು ಕೇಳಿದ್ದೇನೆ. ಮೂಲಭೂತ ಪ್ರಶ್ನೆ ಏನೆಂದರೆ ಕಿಂಡಿ ಅಣೆಕಟ್ಟುಗಳನ್ನು ಭೂಸಾರ ಸಂರಕ್ಷಣಾ ಇಲಾಖೆಯವರು ಏತಕ್ಕೆ ಮಾಡುತ್ತಿದ್ದಾರೆ. ಏತಕ್ಕೆ ಅವರು ಹಲಗೆ ಹಾಕುತ್ತಿಲ್ಲ? ಇಷ್ಟಕ್ಕೆ ಉತ್ತರ ಕೊಡಬೇಕು.

ಶ್ರೀ ಹೆಚ್.ಎಂ. ರೇವಣ್ಣ : ಅದರಲ್ಲಿ ಬರತಕ್ಕ ಹಣ 25 ಸಾವಿರ ರೂಪಾಯಿ ಎಸ್ಟಿಮೇಟ್. ಈಗಿನ ದರದಲ್ಲಿ ಅದನ್ನು ಜಾಸ್ತಿ ಮಾಡಬೇಕೆಂದು ವರದಿ ಬಂದಿದೆ. ಅದನ್ನು ನಾವು ಹೆಚ್ಚಿಸಬೇಕೆಂದಿದ್ದೇವೆ. ಈಗ ತೊಂದರೆಯಾಗಿರುವುದು ಏನೆಂದರೆ, 25 ಸಾವಿರ ರೂಪಾಯಿನಲ್ಲಿ ಚಿಕ್ಕ ಡ್ಯಾಮ್ ಮಾಡಿ ಹಲಗೆ ಹಾಕುವುದಕ್ಕೆ ಹಣ ಒದಗಿಸಿಲ್ಲ. ಆದರಿಂದ ಅವರು ಮಾಡುತ್ತಿಲ್ಲವೆಂದು ತಿಳಿಸುತ್ತಿದ್ದೇನೆ.

ಅಧ್ಯಕ್ಷರು : ವಿನಯಕುಮಾರ್ ಅವರೇ, ತಾವು ಕುಳಿತುಕೊಳ್ಳಿ. ಪ್ರಶ್ನೋತ್ತರ ಕಾಲ ಇದು. ಅವರು ಕೇಳುತ್ತಾರೆ, ತಾವು ಕುಳಿತುಕೊಳ್ಳಿ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಅಧಿಕಾರಿಗಳು ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಅದನ್ನು ಸಮರ್ಥನೆ ಮಾಡುವುದಕ್ಕೆ ಅಲ್ಲ, ಇಲ್ಲಿ ಮಂತ್ರಿಗಳು ಕುಳಿತುಕೊಳ್ಳುವುದು. ಎಲ್ಲೆಲ್ಲಿ ತಪ್ಪಾಗಿದೆ ಅದನ್ನು ಸರಿಪಡಿಸಬೇಕು. ಹಲಗೆಗಳು ಇಲ್ಲದೆ ಕಿಂಡಿ ಅಣೆಕಟ್ಟು ಕಟ್ಟತಕ್ಕದ್ದು, 25 ಸಾವಿರ ರೂಪಾಯಿಗಳಲ್ಲಿ ಅದನ್ನು ಮಾಡತಕ್ಕದ್ದು, ಇದರ ಬಗ್ಗೆ ಜಿಲ್ಲಾ ಪಂಚಾಯಿತಿ ಸಂಪೂರ್ಣ ವಿರೋಧ ವ್ಯಕ್ತಪಡಿಸಿದೆ ಮತ್ತು ಜಿಲ್ಲೆಯ ಎಲ್ಲಾ ಶಾಸಕರು ವಿರೋಧ ವ್ಯಕ್ತಪಡಿಸಿರುವುದರಿಂದ 529 ಹೋಗಿ 94 ಆಗಿದೆ. ಎಲ್ಲಿ ತಪ್ಪಾಗಿದೆ ಅಲ್ಲಿ ನೋಡಬೇಕು. ಕಿಂಡಿ ಅಣೆಕಟ್ಟುಗಳಿಗೆ ಏಕೆ ಹಲಗೆ ಹಾಕಿಲ್ಲವೆಂದು ವಿಚಾರಣೆ ಮಾಡಿ; ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಕೇವಲ ಚುನಾವಣಾ ಪ್ರಚಾರಕ್ಕಾಗಿ ಇಂಥ ಕಾರ್ಯಕ್ರಮಗಳು, ಸರ್ಕಾರ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲವೆಂಬುದು ನಮ್ಮ ಗಮನಕ್ಕೆ ಬರುತ್ತದೆ. ತಾವು ಇದರ ಬಗ್ಗೆ ತನಿಖೆ ಮಾಡಿ ಯಾರು ತಪ್ಪಿತಸ್ಥರು ಎಂದು ಪತ್ತೆ ಮಾಡಿ ಅವರನ್ನು ಅಮಾನತ್ತಿನಲ್ಲಿಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಎಂ. ರೇವಣ್ಣ : ಈ ವಿಷಯದಲ್ಲಿ ಭೂಸಾರ ಸಂರಕ್ಷಣಾ ಇಲಾಖೆಯಲ್ಲಿ ಏನಾದರೂ ತಪ್ಪಿದ್ದು ಅವರೇ ನನಗೆ ಏನಾದರೂ ಮಾಹಿತಿ ಕೊಟ್ಟಿದ್ದೇ ಆದರೆ ಆ ಇಲಾಖೆಯಲ್ಲಿರತಕ್ಕ ಅಧಿಕಾರಿಗಳನ್ನು ರಕ್ಷಣೆ ಮಾಡಬೇಕೆಂಬ ಇಚ್ಛೆ ನನಗೆ ಇಲ್ಲ. ನಾನು ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಇದ್ದಂಥ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆಯೇ ಹೊರತು, ಆ ದೂರಿನ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ. ಅಂಥದ್ದು ಇದ್ದರೆ ಕೂಡಲೇ ಕ್ರಮ ಕೈಗೊಳ್ಳುತ್ತೇನೆ. ಯಾರನ್ನೂ ರಕ್ಷಣೆ ಮಾಡುವುದಿಲ್ಲ ಮತ್ತು ಅವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಹಿಂಜರಿಯುವುದಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಅಲ್ಲಿ ಅಂತರ್ಜಲ ಮಟ್ಟವನ್ನು ಕಾಯ್ದುಕೊಳ್ಳುವುದಕ್ಕೆ ವೆಂಟೆಡ್ ಡ್ಯಾಂ ಕಟ್ಟುತ್ತಿದ್ದೀರಿ. ಅಂತರ್ಜಲ ಮಟ್ಟವನ್ನು ಕಾಯ್ದುಕೊಳ್ಳುವುದಕ್ಕೆ ಹಲಗೆ ಹಾಕದಿದ್ದರೆ ಅಲ್ಲಿ ನೀರು ಶೇಖರಣೆ ಆಗುವುದಿಲ್ಲ, ಇದನ್ನು ಚಿಂತನೆ ಮಾಡಿ. ಏಕೆಂದರೆ ಇಲಾಖೆಯಿಂದ ಯಾವುದೇ ಒಂದು ಕಾರ್ಯಕ್ರಮ ಕೊಡುತ್ತೀರಿ. ಅದು ಅನುಷ್ಠಾನ ಆಗತಕ್ಕದ್ದೆಂದು ತಾವು ತಮ್ಮ ವ್ಯವಸ್ಥೆಯನ್ನು ಒಪ್ಪಿಕೊಂಡರೆ ರೈತರ ಟೀಕೆಗೆ ನಾವು ಗುರಿಯಾಗುತ್ತೇವೆ.

ಶ್ರೀ ಹೆಚ್.ಎಂ. ರೇವಣ್ಣ : ಪ್ರತಾಪಚಂದ್ರ ಶೆಟ್ಟರು ಏನು ಹೇಳಿದ್ದಾರೆ ಅದರ ಬಗ್ಗೆ ನಾನು ಖುದ್ದಾಗಿ ಅಧಿಕಾರಿಗಳನ್ನು ಕರೆಯಿಸಿ ಚರ್ಚೆ ಮಾಡಿ ಸರಿಪಡಿಸುವ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ಕಾಲ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) : 6, 19, 722ನೇ ಪ್ರಶ್ನೆಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಟಿ. ನರಸೀಪುರ ಟಿ.ಎ.ಪಿ.ಸಿ.ಎಂ.ಎಸ್‌ನ ಹಣ ದುರುಪಯೋಗ

152-ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಜಿಲ್ಲೆ ಟಿ. ನರಸೀಪುರ ಟಿ.ಎ.ಪಿ.ಸಿ.ಎಂ.ಎಸ್. ನಲ್ಲಿ ಇತ್ತೀಚೆಗೆ ದುರುಪಯೋಗವಾಗಿರುವ ಹಣ ಎಷ್ಟು?

ಆ) ಆಡಳಿತ ಮಂಡಳಿಯವರು ಇದಕ್ಕೆ ನೇರ ಜವಾಬ್ದಾರರಾಗಿರುವುದರಿಂದ ಮಂಡಳಿಯನ್ನು ರದ್ದು ಮಾಡುವುದರ ಜೊತೆಗೆ ಅವರುಗಳ ಮೇಲೆ ಶಿಸ್ತಿನ ಕ್ರಮ ಏಕೆ ತೆಗೆದುಕೊಳ್ಳಬಾರದು?

ಇ) ಕ್ಯಾಷ್ ಬ್ಯಾಲೆನ್ಸ್ ಕಡಿಮೆ ಮಾಡಲು ಮಂಡಳಿಯವರು ಏನಾದರೂ ಅಕ್ರಮ ಎಸಗಿದ್ದಾರೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರ ಸಚಿವರು) :

ಅ) ಮೈಸೂರು ಜಿಲ್ಲೆ, ಟಿ. ನರಸೀಪುರ ಟಿ.ಎ.ಪಿ.ಸಿ.ಎಂ.ಎಸ್. ನಿಯಮಿತ ಇದರಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 65ರ ಅನುಸಾರ ಪರಿವೀಕ್ಷಣೆ ಮಾಡಲಾಗಿದ್ದು ಸದರಿ ಪರಿವೀಕ್ಷಣಾ ವರದಿಯನ್ವಯ ಸಂಘದಲ್ಲಿ ಯಾವುದೇ ಹಣ ದುರುಪಯೋಗವಾಗಿರುವುದು ಕಂಡು ಬರುವುದಿಲ್ಲ. ಆದರೆ ಆಡಳಿತ ಮಂಡಳಿ ಸದಸ್ಯರುಗಳಿಂದ ಅನುತ್ಪಾದಕ ಮತ್ತು ಅನಾವಶ್ಯಕ ಖರ್ಚುಗಳಾಗಿದ್ದು ಅದರ ಬಾಬ್ತು ರೂ. 2,05,360-59 ಗಳ ವಸೂಲಾತಿಗೆ ಕ್ರಮ ಕೈಗೊಳ್ಳಲಾಗುವುದು.

ಆ) ಕ್ರಮ ಪರಿಶೀಲನೆಯಲ್ಲಿದೆ.

ಇ) ನಗದು ಶಿಲ್ಕನ್ನು ಕಡಿಮೆ ಮಾಡಲು ನಡೆಸಿದ ಅನೇಕ ವ್ಯವಹಾರಗಳಿಗೆ ಆಡಳಿತ ಮಂಡಳಿ ಘಟನೋತ್ತರ ಅನುಮತಿ ನೀಡಿದೆ.

ಮಲ್ಲೇಶ್ವರದಲ್ಲಿರುವ ಮಹಿಳಾ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ ಕಾರ್ಯದರ್ಶಿಗಳಿಂದ ನಿಯಮಗಳ ಉಲ್ಲಂಘನೆ

511 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದ ಮಲ್ಲೇಶ್ವರಂನಲ್ಲಿರುವ ಮಹಿಳಾ ಕೋ-ಆಪರೇಟಿವ್ ಬ್ಯಾಂಕಿನ ಷೇರು ಸದಸ್ಯರ ಸಂಖ್ಯೆ ಎಷ್ಟು? (ಇವರುಗಳಲ್ಲಿ ಮಹಿಳೆಯರು ಮತ್ತು ಪುರುಷರ ಸಂಖ್ಯೆ ಎಷ್ಟು?
ಇವರುಗಳ ಹೆಸರು, ವಿವರ ಒದಗಿಸುವುದು)

ಆ) ಈ ಬ್ಯಾಂಕಿನಿಂದ ಕಳೆದ ಮೂರು ವರ್ಷಗಳಲ್ಲಿ ವಿವಿಧ ಯೋಜನೆಗಳ ಮೂಲಕ ನೀಡಲಾಗಿರುವ ಸಾಲದ ಮೊತ್ತವೆಷ್ಟು? (ವರ್ಷಾವಾರು ಅಂಕಿ ಅಂಶ ಒದಗಿಸುವುದು)

ಇ) ಈ ಬ್ಯಾಂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು? (ಸಿಬ್ಬಂದಿ ವರ್ಗದವರ ಹೆಸರು ಹಾಗೂ ಹುದ್ದೆವಾರು ಅಂಕಿ ಅಂಶ ಒದಗಿಸುವುದು?

ಈ) ಸಾಲ ನೀಡಿಕೆಯಲ್ಲಿ ಸಾಲ ವಸೂಲಾತಿಯಲ್ಲಿ ಮತ್ತು ಸಿಬ್ಬಂದಿ ನೇಮಕಾತಿಯಲ್ಲಿ ಸಹಕಾರ ಸಂಘಗಳ ನಿಬಂಧಕರು ವಿಧಿಸಿರುವ ನಿಬಂಧನೆಗಳನ್ನು ಬ್ಯಾಂಕಿನ ಕಾರ್ಯದರ್ಶಿಗಳು ಉಲ್ಲಂಘನೆ ಮಾಡಿರುವುದು ನಿಜವಲ್ಲವೇ?

ಉ) ಹಾಗಿದ್ದಲ್ಲಿ ಬ್ಯಾಂಕಿನ ಕಾರ್ಯದರ್ಶಿಗಳ ಮೇಲೆ ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರ ಸಚಿವರು) :

ಅ) ಮಹಿಳಾ ಸಹಕಾರ ಬ್ಯಾಂಕ್ ನಿ, ಬೆಂಗಳೂರು, ಇದರಲ್ಲಿ ಒಟ್ಟು 5,180 ಸದಸ್ಯರುಗಳಿರುತ್ತಾರೆ. ಈ ಪೈಕಿ 4,358 ಮಹಿಳಾ ಸದಸ್ಯರು ಹಾಗೂ 822 ಪುರುಷ ಸದಸ್ಯರುಗಳಿರುತ್ತಾರೆ. (ಕಾಲಾವಕಾಶ ಕಡಿಮೆ ಇರುವುದರಿಂದ ಸದಸ್ಯರ ವಿವರಗಳನ್ನು ಒದಗಿಸುವುದು ಸಾಧ್ಯವಾಗಿರುವುದಿಲ್ಲಾ)

ಆ) ಕಳೆದ ಮೂರು ವರ್ಷಗಳಲ್ಲಿ ವಿವಿಧ ಯೋಜನೆಗಳ ಮೂಲಕ ನೀಡಿದ ಸಾಲದ ಮೊತ್ತ ಈ ಕೆಳಗಿನಂತಿರುತ್ತದೆ (ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ).

1991-92 ರೂ. 1,42,62,450-06

1992-93 ರೂ. 2,14,08,627-40

1993-94 ರೂ. 3,05,51,414-55

ಇ) ಈ ಬ್ಯಾಂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಸಿಬ್ಬಂದಿ ಸಂಖ್ಯೆ 26. ಸಿಬ್ಬಂದಿ ವರ್ಗದವರ ಹೆಸರು, ಹುದ್ದೆವಾರು ಅಂಕಿ ಅಂಶಗಳನ್ನು ಅನುಬಂಧ-2ರಲ್ಲಿ ನೀಡಿದೆ.

ಈ) ಇಲ್ಲಾ - ಕೆಲವು ನಿರ್ದಿಷ್ಟ ಆಧಾರ ಸಾಲಗಳನ್ನು ಮಾತ್ರ ಮಂಜೂರು ಮಾಡಲು ಕಾರ್ಯದರ್ಶಿಯವರಿಗೆ ಅಧಿಕಾರ ಇರುತ್ತೆ. ಉಳಿದಂತೆ ಎಲ್ಲಾ ಸಾಲಗಳನ್ನು ಮಂಜೂರು ಮಾಡಲು ಅಧಿಕಾರ ಕಾರ್ಯಕಾರಿ ಮಂಡಳಿಗೆ ಇರುತ್ತದೆ. ಅದರಂತೆ ಸಿಬ್ಬಂದಿ ನೇಮಕಾತಿ ಅಧಿಕಾರ ಕಾರ್ಯದರ್ಶಿಗೆ ಇರುವುದಿಲ್ಲ. ಈ ಅಧಿಕಾರವು ಆಡಳಿತ ಮಂಡಳಿಗೆ ಇರುತ್ತದೆ.

ಉ) ಕಾರ್ಯದರ್ಶಿಗಳು ಸ್ವತಃ ಯಾವುದೇ ನಿಯಮ ಉಲ್ಲಂಘನೆ ಮಾಡದಿರುವುದರಿಂದ ಪ್ರಶ್ನೆ ಉದ್ಭವಿಸದು.

ಮಹಿಳಾ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ, ಶೇಷಾದ್ರಿಪುರಂ, ಬೆಂಗಳೂರು-20

ಅನುಬಂಧ-1

3 ವರ್ಷಗಳ ಸಾಲದ ಹಂಚಿಕೆ ಈ ಕೆಳಕಂಡಂತಿರುತ್ತದೆ.

ಕ್ರಮ ಸಂಖ್ಯೆ	ಸಾಲದ ಹೆಸರು	1991-92	1992-93	1993-94	01-04-1994 ರಿಂದ 31-7-1994ರವರೆಗೆ
1	ಜಾಮೀನು ಸಾಲ (ಸದಸ್ಯರಿಗೆ)	20,25,000-00	41,13,000-00	52,61,700-00	18,82,500-00
2	ಜಾಮೀನು ಸಾಲ (ಸಹ ಸದಸ್ಯರಿಗೆ)	6,68,000-00	19,50-000-00	33,30,000-00	12,45,000-00
3	ಚಿನ್ನಾಭರಣ ಸಾಲ	88,06,870-00	1,12,32,470-00	1,57,25,070-00	54,74,705-00
4	ಬೆಳ್ಳಿ ಸಾಲ	45,500-00	47,600-00	61,900-00	20,000-00
5	ಬಿಲ್ಲುಗಳ ಸಾಲ	1,22,104-60	3,98,909-40	5,33,606-55	2,74,451-95
6	ಠೇವಣಿ ಮೇಲಿನ ಸಾಲ	16,38,670-00	22,95,205-00	27,48,938-00	9,82,328-00
7	ಸ್ಥಿರಾಸ್ತಿ ಸಾಲ	7,92,401-00	12,31,416-00	22,91,661-00	3,19,603-00
8	ರಾಷ್ಟ್ರೀಯ ಉಳಿತಾಯ ಪತ್ರದ ಮೇಲಿನ ಸಾಲ	55,005-00	48,417-00	15,930-00	-
9	ವ್ಯಾಪಾರ ಸಾಲ	25,000-00	1,610-00	4,28,109-00	3,68,122-00
10	ವಾಹನ ಸಾಲ	34,900-00	56,000-00	58,000-00	59,500-00
11.	ಸಿಬ್ಬಂದಿ ಮುಂಗಡ	35,000-00	20,000-00	72,000-00	15,000-00
12.	ಸಿಬ್ಬಂದಿ ಹಬ್ಬದ ಮುಂಗಡ	14,000-00	14,000-00	16,500-00	
13.	ಸಿಬ್ಬಂದಿ ವಾಹನ ಸಾಲ	-	-	8,000-00	-
14.	ಸಿಬ್ಬಂದಿ ಸ್ಥಿರಾಸ್ತಿ ಸಾಲ	-	-	-	90,000-00
	ಒಟ್ಟು	1,4262,450-06	2,14,08,627-40	3,05,51,414-55	1,07,31,209-95

Annexure-II

Malila Co-Operative Bank Limited

No. 13 & 14 South End Road, Seshadripuram, Bangalore-20.

List of Staff as on 31-3-94.

Sl. No.	Name of the Employees & Designation	Qualification	Caste	Date of Joining	Date of Birth
1	2	3	4	5	6
1.	Smt. Gayathridevi Sriharsha	M.A.	Brahmin	13-5-79	30-3-55
2.	Smt. R. Narayani Kutty Asst.Accountant	B.A.	Nair	13-5-79	9-7-55
3.	Smt. Jayashree Prabhu Asst. Accountant	B.Sc	Nayak	23-4-81	23-12-57
4.	Smt. J.V. Jayanthi F.D.C.	SSLC, Sr. English & Kannada Typing	Maratha	10-6-81	23-03-59
5.	Smt. H.B. Lakshmidevi F.D.C.	B.A. Sr. English & Kannada Typing	Vokkaliga	26-6-83	6-06-61
6.	Sri. Gangahanumaiah F.D.C.	B.Com Sr. English & Kannada Typing	Vokkaliga	10-8-84	1-06-59
7.	Smt. Geetha Ramakrishna F.D.C.	BA Jr. English Typing	Brahmin	4-6-85	22-05-59

8.	Sri. H.C. Ananthaswamy F.D.C.	B.Com, Jr.English Typing	Brahmin	14--11-85	30-09-55
9.	Smt. J. Rathnamma F.D.C.	B.Sc. Sr. English Typing & Computer	Vokkaliga	4-04-86	7-05-65
10.	Smt. Yashoda F.D.C.	B.A.	Gatti	4-04-86	3-01-58
11.	Smt. P. Yamnua S.D.C.	B.Com.	Brahmin	6-03-93	29-11-70
12.	Smt. B. Rashmi S.D.C.	B.Com.	Gatti	6-03-93	18-91-72
13.	Smt. Padmadevi Attender	VII Standard	Banajiga	1-09-79	3-08-54
14.	Smt. G.V. Sujathamma Attender	P.U.C.	Brahmin	4-11-87	14-05-52
15.	Smt.Umadevi Attender	S.S.L.C	S.C (A.D)	6-03-93	16-01-63
16.	Sri Kumar Setty Attender	S.S.L.C.	Lingayat	13-07-84	7-10-56
17.	Sri. Y.C. Kempaiah Watchman		Kumbarsetty	10-08-84	12-12-54
18.	Sri. Gangadhar Night Watchman	V Standard	Banjiga	12-02-87	20-08-67

19.	Smt. S. Geetha S.D.C.	B.Com, Sr. English Typing & Computer	Brahmin	18-02-94	26-11-67
20.	Smt. Bhagya S.D.C.	B.Sc	Brahmin	18-02-94	17-11-68
21.	Smt. Suma S.D.C.	B.Com	S.T.(Nayak)	18-02-94	2-10-71
22.	Sr. Shankar S.D.C.	B.Com	Daivavagna	18-02-94	23-04-62
23.	Sri. Sridhar Murthy S.D.C.	B.Sc	Banajiga	18-02-94	7-11-62
24.	Smt. S.V. Prabha S.D.C	B.Com	Vysya	03-11-93	27-07-71
25.	Sri. H.B. Nagaraju S.D.C.	B.A.	Banajiga	03-11-93	29-09-58
26.	Sri. R. Gurumurthy Attender	S.S.L.C.	Devanga	1-09-92	21--06-61

ಧಾರವಾಡ ಡಿ.ಸಿ.ಸಿ. ಬ್ಯಾಂಕಿನಿಂದ ರೈತರಿಗೆ ಸಾಲ ಬಗ್ಗೆ ನೀಡಿದ ಮೊತ್ತ

513ಬಿ -ಶ್ರೀ ಕೆ.ಹೆಚ್. ಕುರುಡಗಿ (ಮುಂಡರಗಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಡಿ.ಸಿ.ಸಿ. ಬ್ಯಾಂಕ್‌ನಿಂದ ರೈತರಿಗೆ ಸಾಲ ವಿತರಣೆ ಮಾಡಿದ ಮೊತ್ತ ಎಷ್ಟು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರ ಸಚಿವರು)

ಅ)1994-95ನೇ ಸಾಲಿನಲ್ಲಿ (ಜುಲೈ 94ರ ವರೆಗೆ)ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಧಾರವಾಡ, ಒಟ್ಟು ರೂ. 2,748.81 ಲಕ್ಷ ಬೆಳೆ ಸಾಲ ವಿತರಣೆ ಮಾಡಿದೆ.

ಧಾರವಾಡ ಡಿ.ಸಿ.ಸಿ. ಬ್ಯಾಂಕಿನಿಂದ ರೈತರಿಗೆ ಸಾಲ ವಿತರಣೆ ಮಾಡಿದ ಮೊತ್ತದ ಹಣ?

513ಎ- ಶ್ರೀ ಕೆ.ಹೆಚ್. ಕುರುಡಗಿ (ಮುಂಡರಗಿ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಂಡರಗಿ ಎ.ಪಿ.ಎಂ.ಸಿ. ಯ ಯಾರ್ಡ್‌ನಲ್ಲಿ ಕಟ್ಟಡ ನಿರ್ಮಾಣ ಮಾಡಲು ಸಾಲ ಮಂಜೂರು ಮಾಡುವ ಬಗ್ಗೆ ಸರ್ಕಾರವು ಯೋಜಿಸಿದೆಯೇ? ಹಾಗೂ ಈ ಎ.ಪಿ.ಎಂ.ಸಿ. ಯ ವ್ಯಾಪಾರಾಭಿವೃದ್ಧಿಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಆ) ಎ.ಪಿ.ಎಂ.ಸಿ. ಫಂಡ್‌ನಲ್ಲಿ ಮುಂಡರಗಿ ತಾಲ್ಲೂಕಿಗೆ ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ, ಯಾವ ಯಾವ ವ್ಯಾಪ್ತಿಗೆ ಎಷ್ಟು ಹಣ ಮಂಜೂರು ಮಾಡಲಾಗಿದೆ?

ಶ್ರೀರಾಮಲಿಂಗರೆಡ್ಡಿ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಇಲ್ಲ

ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯಾಪಾರಾಭಿವೃದ್ಧಿಯ ಅನುಕೂಲಕ್ಕಾಗಿ ಈಗಾಗಲೇ ರೂ. 10.85 ಲಕ್ಷ ಅಂದಾಜಿನಲ್ಲಿ ವಿವಿಧ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ.

ಆ) ಎ.ಪಿ.ಎಂ.ಸಿ. ಫಂಡ್‌ನಲ್ಲಿ, ಮುಂಡರಗಿ ತಾಲ್ಲೂಕಿಗೆ ಸಂಬಂಧಿಸಿದಂತೆ, 1994-95ನೇ ಸಾಲಿಗೆ ಮಾರುಕಟ್ಟೆ ಪ್ರಾಂಗಣದ ಅಭಿವೃದ್ಧಿ ಕಾರ್ಯಗಳಿಗಾಗಿ ರೂ. 3.30 ಲಕ್ಷ ಮಂಜೂರು ಮಾಡಲಾಗಿದೆ. ವಿವರ ಈ ಕೆಳಗಿನಂತಿದೆ.

1) ಮುಂಡರಗಿ ಮುಖ್ಯ ಮಾರುಕಟ್ಟೆ ಪ್ರಾಂಗಣದ 3 ಅಭಿವೃದ್ಧಿ ಕಾರ್ಯಗಳಿಗಾಗಿ ರೂ. 1.85 ಲಕ್ಷ ಹಾಗೂ

2) ಡಂಬಳ ಉಪ ಮಾರುಕಟ್ಟೆ ಪ್ರಾಂಗಣದ 2 ಅಭಿವೃದ್ಧಿ ಕಾರ್ಯಗಳಿಗಾಗಿ ರೂ. 1.45 ಲಕ್ಷ ಮಂಜೂರು ಮಾಡಲಾಗಿದೆ (ಎ.ಪಿ.ಎಂ.ಸಿ. ಹಣವನ್ನು ಬೇರೆ ಯಾವುದೇ ಬಾಬತ್ತಿಗಾಗಿ ಮಂಜೂರು ಮಾಡಲು ಕಾಯ್ದೆಯಡಿಯಲ್ಲಿ ಅವಕಾಶವಿರುವುದಿಲ್ಲ).

ಬ್ರಹ್ಮಾವರ ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರದ ಸುಧಾರಣೆ

506 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಕೃಷಿಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉಡುಪಿ ತಾಲ್ಲೂಕ್ ಬ್ರಹ್ಮಾವರದಲ್ಲಿ ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ ಯಾವಾಗ ಯಾವ ಉದ್ದೇಶದಿಂದ ಸ್ಥಾಪನೆಯಾಗಿರುತ್ತದೆ.ಈವರೆಗೆ ಕೃಷಿ ಕ್ಷೇತ್ರದಲ್ಲಿ ಕೈಗೊಂಡ ಸಂಶೋಧನೆಗಳ ವಿವರಗಳನ್ನು ನೀಡುವುದು?

ಆ) ಸದರಿ ಕೃಷಿ ಸಂಶೋಧನೆ ಸಂಸ್ಥೆಯು ಅಗತ್ಯಕ್ಕಿಂತ ಹೆಚ್ಚು ಭೂಮಿಯನ್ನು ವಶಪಡಿಸಿಕೊಂಡರೂ ಮತ್ತು ಹೆಚ್ಚಿನ ನೌಕರ ವರ್ಗದವರನ್ನು ಹೊಂದಿದ್ದರೂ

ಈವರೆಗೂ ಅಧಿಕಾರಿಗಳ ಅಸಡ್ಡೆತನದಿಂದ ಯಾವುದೇ ಕೃಷಿ ಕ್ಷೇತ್ರದಲ್ಲಿ ಅಭಿವೃದ್ಧಿ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಈ ದಿಸೆಯಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಎಂ. ರೇವಣ್ಣ (ಕೃಷಿ ಸಚಿವರು) :

ಅ) ವಿಶ್ವಬ್ಯಾಂಕ್ ನೆರವಿನ ರಾಷ್ಟ್ರೀಯ ಕೃಷಿ ಸಂಶೋಧನಾ ಯೋಜನೆಯಡಿಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಿಂದ 1982ರಲ್ಲಿ ಬ್ರಹ್ಮಾವರ ಪ್ರಾದೇಶಿಕ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲೆಯ ಇಡೀ ಕರಾವಳಿಯ ನಿರ್ದಿಷ್ಟ ತೊಂದರೆಗಳನ್ನು ಗುರುತಿಸಿ, ಅವುಗಳ ನಿವಾರಣೆಗೆ ಹಾಗೂ ಎತ್ತರದ ಪ್ರದೇಶಗಳ ಹವಾಗುಣದಲ್ಲಿ ಭತ್ತದ ಬೆಳೆ, ದ್ವಿದಳ ಧಾನ್ಯಗಳು, ಎಣ್ಣೆ ಕಾಳುಗಳು,ಗೋಡಂಬಿ ಬೆಳೆ ಸೇರಿದಂತೆ ತೋಟಗಾರಿಕೆ ಬೆಳೆಗಳು, ಕಬ್ಬು ಮತ್ತು ಒಳನಾಡು ಮೀನುಗಾರಿಕೆಯಲ್ಲಿ ಸಂಶೋಧನಾ ಕಾರ್ಯಗಳನ್ನು ಈ ಸಂಶೋಧನಾ ಕೇಂದ್ರದಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

ಈವರೆಗೆ ಕೃಷಿ ಕ್ಷೇತ್ರದಲ್ಲಿ ಕೈಗೊಂಡ ಸಂಶೋಧನೆಗಳ ವಿವರಗಳು ಅನುಬಂಧ 'ಅ'ನಲ್ಲಿ ಕೊಡಲಾಗಿದೆ.

ಆ) ಇಲ್ಲ

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ - ಅ

1) ಮಹಾವೀರ (ಕೆ.ಕೆ.ಪಿ. 2) ಭತ್ತದ ತಳಿಯನ್ನು ಬೇಸಾಯಕ್ಕೆ ಬಿಡುಗಡೆ ಮಾಡಲಾಗಿದೆ.ಇದರ ಅಕ್ಕಿ ಕೆಂಪು ಮತ್ತು ಈ ತಳಿಯು ಬೆಂಕಿ ರೋಗದ ಹಾವಳಿಯನ್ನು ತಡೆಯುವ ಶಕ್ತಿಯನ್ನು ಹೊಂದಿದೆ. ಇದು ಬೆಟ್ಟದ ಗದ್ದೆಗೆ ಸೂಕ್ತವಾದ ತಳಿ.

2) ಮತ್ತೊಂದು ಭತ್ತದ ತಳಿ ಕೆ.ಕೆ.ಪಿ.-6 (ನೇತ್ರಾವತಿ) ಕಣೆಯ (ಗಂಟುನೊಣದ) ಹಾವಳಿಯನ್ನು ತಡೆಯುವ ಶಕ್ತಿಯನ್ನು, ಸಿಡಿತ (ಬೆಂಕಿರೋಗ) ಸಹಿಷ್ಣತೆಯನ್ನು ಹೊಂದಿದ ಈ ತಳಿಯನ್ನು ವೃದ್ಧಿಸಿ, ಈ ಕೇಂದ್ರದಿಂದ ಬೇಸಾಯಕ್ಕೆ ಬಿಡುಗಡೆ ಮಾಡಲಾಗಿದೆ.

3) ಬಿತ್ತನೆಯಾದ 10 ದಿನಗಳ ನಂತರ ಬೆಂಥಿಯೋ ಕಾರ್ಕ 20 ಕೆ.ಜಿ. ಹರಳನ್ನು ಹೆಕ್ಟೇರ್‌ಗೆ ಉಪಯೋಗಿಸಿದಲ್ಲಿ ಕಳೆಯನ್ನು ನಿಯಂತ್ರಿಸಬಹುದು.

4) ಭತ್ತದಲ್ಲಿ ರಾಕ್ ಫಾಸ್‌ಫೇಟ್‌ನ ಉಪಯೋಗವು ಸಿಂಗಲ್ ಸೂಪರ್ ಫಾಸಫೇಟ್‌ಗಿಂತ ಉತ್ತಮವಾಗಿದೆ. ಪೊಟ್ಯಾಶ್‌ನ್ನು ಭತ್ತಕ್ಕೆ ಒಮ್ಮೆ ಉಪಯೋಗಿಸುವುದಕ್ಕೆ ಬದಲಾಗಿ ಭಾಗ ಮಾಡಿ ಎರಡು ಭಾರಿ ಉಪಯೋಗಿಸಿದಲ್ಲಿ ಉತ್ತಮ ಫಲಿತಾಂಶವು ಲಭಿಸುತ್ತದೆಂಬ ತಂತ್ರಜ್ಞಾನವನ್ನು ಈ ಕೇಂದ್ರದಲ್ಲಿ ಕಂಡುಹಿಡಿಯಲಾಗಿದೆ.

5) ಭತ್ತಕ್ಕೆ ತಗಲುವ ಸಿಡಿತ ರೋಗವನ್ನು 40 ಕೆ.ಜಿ. ಕಿಟೋಜಿನ್ ಹರಳುಗಳು ನಿಯಂತ್ರಿಸಬಲ್ಲದು ಎಂಬ ತಂತ್ರಜ್ಞಾನವನ್ನು ಈ ಕೇಂದ್ರವು ನಿರೂಪಿಸಿದೆ.

ಕಬ್ಬು:

1) ಅಧಿಕ ಇಳುವರಿ ಕಬ್ಬು ತಳಿ ಸಿಒ -62175ನ್ನು ವೃದ್ಧಿಸಿ ಬೇಸಾಯಕ್ಕೆ ಬಿಡುಗಡೆ ಮಾಡಲಾಗಿದೆ.

2) ಅತ್ಯಂತ ಅನುಕೂಲತಮ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರವನ್ನು ಅಂದರೆ 187.5:125:125 ಎನ್. ಪಿ.ಕೆ.ಕೆ.ಜಿ. ಹೆಕ್ಟೇರ್‌ಗೆ ಉಪಯೋಗಿಸುವುದರ ಮೂಲಕ ಗರಿಷ್ಠ ಇಳುವರಿಯನ್ನು ಪಡೆಯಬಹುದೆಂಬ ಅಂಶವನ್ನು ಈ ಕೇಂದ್ರದಲ್ಲಿ ಗುರುತಿಸಲಾಗಿದೆ.

ಕಡಲೆಕಾಯಿ

ನವೆಂಬರ್ ತಿಂಗಳಿನಲ್ಲಿ ಬಿತ್ತನೆ ಮಾಡುವುದರ ಮೂಲಕ ಅತ್ಯಧಿಕ ಇಳುವರಿಯನ್ನು ಪಡೆಯಬಹುದೆಂಬ ಅಂಶವನ್ನು ಗುರುತಿಸಲಾಗಿದೆ.

ತರಕಾರಿ

ಅಧಿಕ ಇಳುವರಿ ಸಿಹಿ ಗೆಣಸು (ಸಿ-48), ಪೂಸ ಜ್ವಾಲ ಮೆಣಸಿನಕಾಯಿ, ಪೂಸ, ಚೇತ್ಕಿ, ಮೂಲಂಗಿ, ಅಧಿಕ ಇಳುವರಿ ಹಾಗಲ, ಅಲಸುಂಡೆ, ಅಧಿಕ ಸಕ್ಕರೆ ಅಂಶವನ್ನು ಹೊಂದಿದ ಕಲ್ಲಂಗಡಿ (ಅರ್ಕ ಜ್ಯೋತಿ) ಯನ್ನು ಈ ಪ್ರಾಂತ್ಯದಲ್ಲಿ ಗುರುತಿಸಲಾಗಿದೆ.

ಇದಲ್ಲದೆ, ಭತ್ತದ ಆಧಾರಿತ ಬೆಳೆಯ ಪದ್ಧತಿಯನ್ನು ಹಾಗೂ ದ್ವಿದಳ ಧಾನ್ಯಗಳು, ಎಣ್ಣೆಕಾಳುಗಳು, ಗೇರುಬೀಜವನ್ನೊಳಗೊಂಡಂತೆ ತೋಟಗಾರಿಕೆ ಬೆಳೆಗಳು ಕಬ್ಬು ಮತ್ತು ಒಳನಾಡು ಮೀನುಗಾರಿಕೆಯಲ್ಲಿ ಸುಧಾರಿತ ತಾಂತರಿಕ ಸಂಶೋಧನೆಯನ್ನು ಮಾಡಲಾಗಿದೆ.

ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ ಪಡಿಸುವುದು

724 - ಶ್ರೀ ಶಿವಾನಂದ ಹೆಚ್ ಕೌಜಲಗಿ (ಬೈಲಹೊಂಗಲ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಹಾರಾಷ್ಟ್ರ ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿಪಡಿಸಿರುವಂತೆ ಈ ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಆ) ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ ಉಳಿದ ರಾಜ್ಯಗಳಿಗಿಂತ ಹಿಂದೆ ಬಿದ್ದಿರುವುದು ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಅಭಿವೃದ್ಧಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):

ಅ) ಹೌದು

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಉತ್ತಮ ಮಟ್ಟದ ಬಿತ್ತನೆ ಬೀಜಗಳ ಅಭಾವ

396 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಉತ್ತಮ ಗುಣಮಟ್ಟದ ಬೀಜವು ಅಗತ್ಯಕ್ಕೆ ಸಾಕಾಗುವಷ್ಟು ಲಭ್ಯವಾಗದೆ ಇರುವುದನ್ನು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ರೈತರು ಪ್ರಾಮಾಣೀಕೃತ ಬಿತ್ತನೆ ಬೀಜಗಳನ್ನು ಉತ್ಪಾದಿಸುವಲ್ಲಿ ಸರ್ಕಾರವು ಅವರಿಗೆ ಯಾವ ಸೌಲಭ್ಯಗಳನ್ನು ಒದಗಿಸಿದೆ.

ಇ) ರೈತರಿಗೆ ಪ್ರಾಮಾಣೀಕೃತ ಬಿತ್ತನೆ ಬೀಜಗಳನ್ನು ಸರಬರಾಜು ಮಾಡುವಲ್ಲಿ ಕರ್ನಾಟಕ ರಾಜ್ಯ ಬೀಜ ನಿಗಮವು ಕಳೆದ 3 ವರ್ಷಗಳಲ್ಲಿ ಯಾವ ಯೋಜನೆಯನ್ನು ರೂಪಿಸಿದೆ.

ಈ) ಮುಂಬರುವ ವರ್ಷಗಳಲ್ಲಿ ರಾಜ್ಯದ ರೈತರುಗಳಿಗೆ ಪ್ರಾಮಾಣೀಕೃತ ಬಿತ್ತನೆ ಬೀಜಗಳನ್ನು ಸುಲಭವಾಗಿ ದೊರೆಯುವಂತೆ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಅನುಸರಿಸಿದೆ?

ಶ್ರೀ ಹೆಚ್.ಎಂ. ರೇವಣ್ಣ (ಕೃಷಿ ಸಚಿವರು):

ಅ) ಋತುಮಾನದ ಪ್ರಾರಂಭದಲ್ಲಿ ಹತ್ತಿ ಬೀಜದ ಕೊರತೆ ಸ್ವಲ್ಪ ಮಟ್ಟಿಗೆ ಮಾತ್ರ ಕಂಡು ಬಂದಿತ್ತು. ಅನಂತರ, ಇದರ ಪೂರೈಕೆಗೆ ವ್ಯವಸ್ಥೆ ಮಾಡಲಾಯಿತು.

ಆ) ಸರ್ಕಾರವು ಬೀಜ ನಿಗಮದ ಮುಖಾಂತರ ಮೂಲ ಬಿತ್ತನೆ ಬೀಜವನ್ನು ಪೂರೈಸುತ್ತಿದೆ. ಹಾಗೂ ಕರಾರಿನಂತೆ ಬೆಳೆದ ಬೀಜವನ್ನು ನಿಗಧಿತ ಬೆಲೆಗೆ ಖರೀದಿಸುತ್ತಿದೆ.

ಇ) ಕಳೆದ 3 ವರ್ಷಗಳು ಪ್ರಮಾಣಿತ ಬಿತ್ತನೆ ಬೀಜಗಳನ್ನು ವಿತರಣೆ ಮಾಡಲು ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಬೀಜ ನಿಗಮವು ಹಾಕಿಕೊಳ್ಳಲಾಗಿದ್ದು ಅದರ ಸಾಧನೆಯು ಕೆಳಕಂಡಂತಿದೆ.

ವಿವರಣೆ ಮಾಡಿರುವ ಬಿತ್ತನೆ ಬೀಜ

			(ಕ್ವಿಂಟಾಲುಗಳಲ್ಲಿ)
ಬೀಜ	91-92	92-93	93-94
ಏಕದಳ ಧಾನ್ಯಗಳು	58675	54381	67569
ದ್ವಿದಳ ಧಾನ್ಯಗಳು	8073	12423	7991
ಎಣ್ಣೆ ಕಾಳುಗಳು	5909	5922	12274
ಹೈಬ್ರಿಡ್ ಹತ್ತಿ	3591	4685	2622
ಒಟ್ಟು	**76248**	**77411**	**90456**

ಇದಲ್ಲದೆ, ಬೀಜಗಳ ಕೊರತೆ ಕಂಡು ಬಂದಲ್ಲಿ ಅದನ್ನು ಸಹ ಪೂರೈಸಲು ಬೀಜ ನಿಗಮವು ಕ್ರಮ ತೆಗೆದುಕೊಳ್ಳುತ್ತದೆ.

ಈ) ರೈತರಿಂದ ಪ್ರಮಾಣಿತ ಬಿತ್ತನೆ ಬೀಜದ ಬೇಡಿಕೆಯು ಹೆಚ್ಚುತ್ತಿರುವುದನ್ನು ಮನಗಂಡು ಅದನ್ನು ಪೂರೈಸಲು ಅನುಕೂಲವಾಗುವಂತೆ 94-95ನೇ ಸಾಲಿನಲ್ಲಿ "ನೊಂದಾಯಿತ ಬೀಜ ಉತ್ಪಾದಕರಿಗೆ ಉತ್ತೇಜನ" ಎಂಬ ಯೋಜನೆಯನ್ನು ರೂಪಿಸಿ ಜಾರಿಗೊಳಿಸಲು ಸರ್ಕಾರವು ಪರಿಶೀಲಿಸುತ್ತಿದೆ. ಇದರಲ್ಲಿ ಪ್ರಮಾಣೀಕೃತ ಬೀಜೋತ್ಪಾದನೆ ತೆಗೆದುಕೊಳ್ಳುವ ರೈತರಿಗೆ ಪ್ರೋತ್ಸಾಹ ಧನ ನೀಡಲು ಯೋಜಿಸಲಾಗಿದೆ. ಇದಲ್ಲದೆ ರೈತರಿಗೆ ಉತ್ತಮ ಗುಣಮಟ್ಟದ ಬೀಜದ ಕೊರತೆ ಕಂಡು ಬರದಂತೆ ನೋಡಿಕೊಳ್ಳಲು 93-94ನೇ ಸಾಲಿನಲ್ಲಿ ಜಾರಿಗೊಳಿಸಿದ "ಬೀಜ ಖರೀದಿ ಹಾಗೂ ಮಾರಾಟ ಯೋಜನೆಯನ್ನು 94-95ನೇ ಸಾಲಿನಲ್ಲಿ ಮುಂದುವರಿಸಲಾಗುತ್ತಿದೆ. ಇದರಿಂದಾಗಿ ಸ್ಥಳೀಯವಾಗಿ ಕೊರತೆ ಕಂಡು ಬರಬಹುದಾದ ಬಿತ್ತನೆ ಬೀಜಗಳನ್ನು ಇತರೆ ಮೂಲಗಳಿಂದ ಖರೀದಿಸಿ ಗುಣಮಟ್ಟದ ಬೀಜಗಳನ್ನು ವಿತರಣೆಗೆ ದೊರಕಿಸಬಹುದಾಗಿದೆ.

ಬೀದರ್ ಜಿಲ್ಲೆಯಲ್ಲಿ ಹಾಪ್‌ಕಾಮ್

394 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಹಾಪ್‌ಕಾಮ್ಸ್ ಕಾರ್ಯನಿರ್ವಹಿಸುತ್ತಿದೆ?

ಆ) ಈ ವ್ಯವಸ್ಥೆಯನ್ನು ಹೈದರಾಬಾದ್ ಕರ್ನಾಟಕ ಪ್ರದೇಶದ ಯಾವ ಯಾವ ಜಿಲ್ಲೆಗಳಿಗೆ ವಿಸ್ತರಿಸಲಾಗುವುದು?

ಇ) ಬೀದರ್ ಜಿಲ್ಲೆಯಲ್ಲಿ ಹಾಪ್‌ಕಾಮ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರ ಪರಿಶೀಲಿಸುವುದೇ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ರಾಜ್ಯದ 7 ಜಿಲ್ಲೆಗಳಲ್ಲಿ ಬೆಂಗಳೂರು (ನಗರ) ಬೆಂಗಳೂರು (ಗ್ರಾಮಾಂತರ) ಕೋಲಾರ, ತುಮಕೂರು, ಮೈಸೂರು, ಮಂಡ್ಯ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹಾಪ್‌ಕಾಮ್ಸ್ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ.

ಆ) ಹೈದರಾಬಾದ್ ಕರ್ನಾಟಕ ಪ್ರದೇಶದ ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ ಜಿಲ್ಲೆಗಳಿಗೆ ಹಾಪ್‌ಕಾಮ್ಸ್ ಮಾದರಿಯಲ್ಲಿ ಹಣ್ಣು ತರಕಾರಿ ಮಾರುಕಟ್ಟೆ ಸೌಲಭ್ಯವನ್ನು ವಿಸ್ತರಿಸಲು ಯೋಜಿಸಲಾಗಿದ್ದು, ರೂ. 2157.77 ಲಕ್ಷಗಳ ಯೋಜನೆಯನ್ನು ರೂಪಿಸಲಾಗಿದೆ.

ಇ) ಹಾಪ್‌ಕಾಮ್ಸ್ ಮಾದರಿಯಲ್ಲಿ ಬೀದರ್ ಜಿಲ್ಲೆಯಲ್ಲಿ ವ್ಯವಸ್ಥಿತ ಹಣ್ಣು ಮತ್ತು ತರಕಾರಿ ಮಾರಾಟ ಸೌಲಭ್ಯ ಕಲ್ಪಿಸಲು 440.51 ಲಕ್ಷ ರೂ.ಗಳ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಇದರಲ್ಲಿ ಸೆಂಟ್ರಲ್ ಗೋಡೌನ್, ಮಾರಾಟ ಮಳಿಗೆಗಳು, ಶೀತಲಗೃಹಗಳು ಮತ್ತು ರೆಫ್ರಿಜರೇಟೆಡ್ ವ್ಯಾನುಗಳು ಸೇರಿರುತ್ತದೆ.

1993-94ನೇ ಸಾಲಿನಲ್ಲಿ ಆಹಾರ ಧಾನ್ಯಗಳ ಉತ್ಪಾದನೆ

509 - ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92, 1992-93, 1993-94ನೇ ಸಾಲುಗಳಲ್ಲಿ ರಾಜ್ಯದಲ್ಲಿ ಉತ್ಪಾದನೆ ಆಗಿರುವ ವಿವಿಧ ಆಹಾರ ಧಾನ್ಯಗಳ ಪ್ರಮಾಣ ಎಷ್ಟು?

ಆ) ರಸಗೊಬ್ಬರಗಳ ಬೆಲೆ ಏರಿಸಿರುವುದರಿಂದ ಈ ಉತ್ಪಾದನಾ ಪ್ರಮಾಣದ ಮೇಲೆ ಏನಾದರೂ ಪರಿಣಾಮ ಬೀರಿದೆಯೇ?

ಇ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ರೈತರು ಉಪಯೋಗಿಸುತ್ತಿರುವ ರಸಗೊಬ್ಬರಗಳ ಪ್ರಮಾಣದಲ್ಲಿ ಏನಾದರೂ ಕಡಿಮೆ ಆಗಿದೆಯೇ?

ಶ್ರೀ ಹೆಚ್.ಎಂ. ರೇವಣ್ಣ (ಕೃಷಿ ಸಚಿವರು) :

ಅ) 1991-92, 1992-93 ಹಾಗೂ 1993-94ನೇ ಸಾಲುಗಳಲ್ಲಿ ರಾಜ್ಯದ ಒಟ್ಟು ಆಹಾರ ಧಾನ್ಯಗಳ ಉತ್ಪಾದನೆ ಕ್ರಮವಾಗಿ 79.01, 84.98 ಹಾಗೂ 84.13 ಲಕ್ಷ ಟನ್‌ಗಳಷ್ಟು ಆಗಿರುತ್ತದೆ.

ಆ) ರಸಗೊಬ್ಬರಗಳ ಬೆಲೆ ಏರಿಕೆಯಿಂದ ರಾಜ್ಯದ ಆಹಾರ ಧಾನ್ಯಗಳ ಸರಾಸರಿ ಇಳುವರಿಯ ಮೇಲೆ ಯಾವ ಪರಿಣಾಮವೂ ಬೀರಿರುವುದಿಲ್ಲ, ಉತ್ಪತ್ತಿಯಲ್ಲಿ ಯಾವ ವಿಧವಾದ ವ್ಯತ್ಯಾಸ ಕಂಡು ಬಂದಿರುವುದಿಲ್ಲ.

ಇ)1991-92ನೇ ಸಾಲಿನಲ್ಲಿ ರೈತರು ಬಳಸಿದ ಪ್ರಮಾಣದಲ್ಲಿ ಕಡಿಮೆ ಆಗಿರುವುದಿಲ್ಲ. ಆದರೆ 1992-93 ಹಾಗೂ 1993-94 ರ ಸಾಲುಗಳಲ್ಲಿ ರೈತರು ಬಳಸಿದ ರಸಗೊಬ್ಬರದ ಪ್ರಮಾಣದಲ್ಲಿ ಕಡಿಮೆ ಆಗಿರುತ್ತದೆ.

ಗೋಡಂಬಿ ಅಭಿವೃದ್ಧಿಗಾಗಿ ವಿಶ್ವಬ್ಯಾಂಕಿನ ಹಣ

150 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗೋಡಂಬಿ ಅಭಿವೃದ್ಧಿಗಾಗಿ ವಿಶ್ವಬ್ಯಾಂಕಿನಿಂದ ಹಾಗೂ ಕೇಂದ್ರ ಸರ್ಕಾರದಿಂದ ಪಡೆದ ನೆರವಿನ ಮೊತ್ತವೆಷ್ಟು? ಹಾಗೂ ಇವುಗಳನ್ನು ಯಾವ ಜಿಲ್ಲೆಗಳಲ್ಲಿ ಖರ್ಚು ಮಾಡಲಾಗಿದೆ? (1990 ರಿಂದ 1994ರ ಜುಲೈವರೆಗೆ)

ಆ) ರಾಜ್ಯದಲ್ಲಿ ಪ್ರತಿ ಎಕರೆಗೆ ಆಗುತ್ತಿರುವ ಗೋಡಂಬಿ ಉತ್ಪಾದನೆ ಎಷ್ಟು?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ವಿಶ್ವ ಬ್ಯಾಂಕಿನ ನೆರವಿನಿಂದ 1990 ರಿಂದ ಈಚೆಗೆ ರಾಜ್ಯದಲ್ಲಿ ಗೋಡಂಬಿ ಅಭಿವೃದ್ಧಿ ಯೋಜನೆಯನ್ನು ಕೈಗೊಂಡಿರುವುದಿಲ್ಲ.

ಕೇಂದ್ರ ಸರ್ಕಾರವು ಕರ್ನಾಟಕ ರಾಜ್ಯದಲ್ಲಿ ಕೇಂದ್ರ ವಲಯ ಗೋಡಂಬಿ ಅಭಿವೃದ್ಧಿ ಯೋಜನೆಯಲ್ಲಿ ಈ ಕೆಳಕಂಡಂತೆ ಆರ್ಥಿಕ ನೆರವು ನೀಡಿದೆ.

ವರ್ಷ	ನೀಡಿದ ಅನುದಾನ
1990-91	7.67 ಲಕ್ಷ
1991-92	14.07 ಲಕ್ಷ
1992-93	14.13 ಲಕ್ಷ
1993-94	30.00 ಲಕ್ಷ

1994-95ನೇ ಸಾಲಿನಲ್ಲಿ ರೂ. 157,78 ಲಕ್ಷಗಳನ್ನು ಈ ಕೆಳಕಂಡ ಜಿಲ್ಲೆಗಳಿಗೆ ಅವುಗಳ ಎದುರಿಗೆ ನಮೂದಿಸಿರುವಂತೆ ಬಿಡುಗಡೆ ಮಾಡಿದೆ.

1.ಕೋಲಾರ	10.1 ಲಕ್ಷ
2.ಶಿವಮೊಗ್ಗ	21.3 ಲಕ್ಷ
3.ಬೆಳಗಾಂ	15.675 ಲಕ್ಷ
4.ದಕ್ಷಿಣ ಕನ್ನಡ	53.452 -1.05 (ಹೆಚ್ಚುವರಿ ಆಯವ್ಯಯ)
5.ಉತ್ತರ ಕನ್ನಡ	54.02-0.7 (ಹೆಚ್ಚುವರಿ ಆಯವ್ಯಯ)
6.ಮೈಸೂರು	0.7 ಲಕ್ಷ

ರಾಜ್ಯದಲ್ಲಿ ಪ್ರತಿ ಎಕರೆಗೆ 400 ಕೆ.ಜಿ.ಯಿಂದ 600 ಕೆ.ಜಿ. ಯಷ್ಟು ಇಳುವರಿ ಬರುತ್ತಿದೆ.

ಗ್ಯಾಟ್ ಒಪ್ಪಂದದಂತೆ ರೈತರಿಗಾಗುವ ಅನುಕೂಲತೆಗಳು

510 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿನ ಗ್ಯಾಟ್ ಒಪ್ಪಂದದಿಂದ ರಾಜ್ಯದ ರೈತರಿಗೆ ಕೃಷಿ ಕ್ಷೇತ್ರದಲ್ಲಿ ಯಾವ ಯಾವ ಬಗೆಯಲ್ಲಿ ಅನುಕೂಲಗಳು ಉಂಟಾಗಿವೆ.

ಆ) ಈ ಒಪ್ಪಂದದಿಂದಾಗಿ ರೈತರ ಹಿತಾಸಕ್ತಿಗೆ ಧಕ್ಕೆ ಉಂಟಾಗಿರುವುದು ನಿಜವೇ?

ಇ) ಈ ಒಪ್ಪಂದದ ಸಾರಾಂಶವೇನು?

ಶ್ರೀ ಹೆಚ್. ಎಂ. ರೇವಣ್ಣ (ಕೃಷಿ ಸಚಿವರು) :

ಅ) ಇತ್ತೀಚಿನ ಗ್ಯಾಟ್ ಒಪ್ಪಂದವು (ದಿ ಜನರಲ್ ಅಗ್ರಿಮೆಂಟ್ ಆನ್ ತಾರಿಫ್ಸ್ ಅಂಡ್ ಟ್ರೇಡ್) ಅಭಿವೃದ್ಧಿ ಹೊಂದಿದ ದೇಶಗಳು ಕೃಷಿಗೆ ಸಿಗುವ ಸಹಾಯ ಧನವನ್ನು ಅನಗತ್ಯವಾಗಿ ಹೆಚ್ಚಿಸುವುದನ್ನು ತಡೆಯುತ್ತದೆ. ಇದರಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಅಭಿವೃದ್ಧಿ ಹೊಂದಿರುವ ದೇಶಗಳಿಗೆ ರಫ್ತನ್ನು ಹೆಚ್ಚಿಸಲು ದಾರಿ ಮಾಡಿಕೊಡುತ್ತದೆ.

ಆ) ಇಲ್ಲ.

ಇ) ದಿ ಜನರಲ್ ಅಗ್ರಿಮೆಂಟ್ ಆನ್ ತಾರಿಫ್ಸ್ ಅಂಡ್ ಟ್ರೇಡ್ (ಗ್ಯಾಟ್) ಎಂಬುದು 107 ದೇಶಗಳನ್ನು ಒಳಪಡಿಸಿರುವ ಬಹು ಪಕ್ಷೀಯ ಒಪ್ಪಂದ. ಇದರಲ್ಲಿ

ವಿಶ್ವದ ಒಟ್ಟು ವಾಣಿಜ್ಯ ವಹಿವಾಟಿನಲ್ಲಿ ಶೇ. 90 ರಷ್ಟು ಹೊಂದಿರುತ್ತದೆ. ಅಂತರ ರಾಷ್ಟ್ರೀಯ ವ್ಯಾಪಾರವನ್ನು ನಡೆಸಲು ಒಂದು ರೀತಿಯ ಬಹು ಪಕ್ಷೀಯ ಒಪ್ಪಂದ ನಿಯಮಗಳನ್ನು ಒದಗಿಸುವ ಒಂದೇ ಸಾಧನವಾಗಿದೆ. ಇದು ವ್ಯಾಪಾರಗಳಲ್ಲಿ ವ್ಯವಹರಿಸಲು ಒಂದು ವೇದಿಕೆಯಾಗಿ ಇದರಿಂದ ವ್ಯಾಪಾರ ಸನ್ನಿವೇಶವು ಅನುಕೂಲಕರವಾಗಿರುತ್ತದೆ. ಮತ್ತು ಹೆಚ್ಚಿನ ರೀತಿಯಲ್ಲಿ ಮುನ್ಸೂಚನೆ ನೀಡಲು ಅನುಕೂಲವಾಗುತ್ತದೆ. ಈ ರೀತಿ ಗ್ಯಾಟ್ ಅಂತರ ರಾಷ್ಟ್ರೀಯ ವ್ಯಾಪಾರದ ನಿಯಮಗಳ ಸಂಹಿತೆಯಾಗಿಯೂ ಮತ್ತು ಸದಸ್ಯ ರಾಷ್ಟ್ರಗಳ ವ್ಯಾಪಾರಿ ಸಮಸ್ಯೆಗಳನ್ನು ಚರ್ಚಿಸಿ ಅವುಗಳಿಗೆ ಪರಿಹಾರಗಳನ್ನು ಕಂಡು ಹಿಡಿಯುವ ಒಂದು ವೇದಿಕೆಯಾಗಿಯೂ ಇದೆ. ಈ ಒಪ್ಪಂದಗಳ ಸರಕುಗಳನ್ನೂ ಒಳಗೊಂಡಂತೆ ವ್ಯಾಪಕವಾದ ಕೆಳಕಂಡ ವಿಷಯಗಳನ್ನು ಒಳಗೊಂಡಿರುತ್ತದೆ.

ಇ) ಬುದ್ಧಿವಂತಿಕೆಯ ಆಸ್ತಿ ಹಕ್ಕುಗಳು, ಬಂಡವಾಳ ಹೂಡಿಕೆ ಕ್ರಮಗಳು ಮತ್ತು ಸೇವೆಗಳು ಇದಲ್ಲದೆ ಈ ಒಪ್ಪಂದದಲ್ಲಿ ಕೃಷಿಯು ಒಂದು ಪ್ರಮುಖ ಸ್ಥಾನವನ್ನು ಪಡೆದಿದೆ.

ಬೀದರ್ ಜಿಲ್ಲೆಯಲ್ಲಿ ತೋಟಗಾರಿಕೆ ಅಭಿವೃದ್ಧಿ

393 - ಶ್ರೀ ನಾರಾಯಣರಾವ್ ಮನಹಳ್ಳಿ, (ಬೀದರ್) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ಯಾವ ಕ್ರಮಗಳನ್ನು ರೂಪಿಸಲಾಗಿದೆ?

ಆ) ಹೊಂಬಳ್ಳಿ ಎಂಬ ವಿಶೇಷ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿ ಯಾವ ಯಾವ ಹಣ್ಣಿ ಗಿಡಗಳನ್ನು ಬೆಳೆಸುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ?

ಇ) ಇದಕ್ಕಾಗಿ ಖರ್ಚು ಮಾಡಲಾಗುತ್ತಿರುವ ಹಣವೆಷ್ಟು?

ಈ) ಸದರಿ ವಿಶೇಷ ಯೋಜನೆಯನ್ನು ಜಾರಿಗೆ ತರಲು ಜಿಲ್ಲೆಯ ಯಾವ ಯಾವ ತಾಲ್ಲೂಕುಗಳನ್ನು ಆರಿಸಿಕೊಳ್ಳಲಾಗಿದೆ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿ ಪಡಿಸಲು 1994-95ನೇ ಸಾಲಿನಲ್ಲಿ ಈ ಕೆಳಕಂಡ ಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1) ರೈತರಿಗೆ ಉತ್ತಮ ಗುಣಮಟ್ಟದ ಗಿಡಗಳನ್ನು ವಿತರಿಸುವ ಕಾರ್ಯಕ್ರಮದಡಿಯಲ್ಲಿ ಒಟ್ಟು 61300 ಹಣ್ಣಿನ ಕಸಿ:ಸಸಿ ಗಿಡಗಳನ್ನು ವಿತರಿಸುವ ಕಾರ್ಯಕ್ರಮವಿದ್ದು ಜುಲೈ ಅಂತ್ಯದವರೆಗೆ 41100 ಗಿಡಗಳನ್ನು ಹಂಚಿ 275 ಹೆಕ್ಟೇರ್ ಪ್ರದೇಶವನ್ನು ಹಣ್ಣಿನ ಬೆಳೆಗಳ ಅಡಿಯಲ್ಲಿ ತರಲಾಗಿದೆ.

2) ಇದೇ ರೀತಿ 880 ಕೆ.ಜಿ. ತರಕಾರಿ ಬೀಜವನ್ನು ವಿವಿಧ ಮೂಲಗಳಿಂದ ವಿತರಿಸಲು ಉದ್ದೇಶಿಸಲಾಗಿದ್ದು 1144 ಕೆ.ಜಿ. ಬೀಜವನ್ನು ಇದುವರೆಗೆ ವಿತರಿಸಿದ್ದು 2288 ಹೆಕ್ಟೇರ್ ಪ್ರದೇಶವನ್ನು ವಿಸ್ತರಿಸಲಾಗಿದೆ.

3) ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿ ಇರುವ ನೀರನ್ನು ಹೆಚ್ಚು ಹೆಚ್ಚು ತೋಟಗಳಿಗೆ ಹಾಯಿಸಲು ಉಪಯೋಗವಾಗುವಂತೆ ಈ ನೀರಾವರಿ ಪದ್ಧತಿಯನ್ನು 200 ಹೆಕ್ಟೇರ್ ಪ್ರದೇಶದಲ್ಲಿ ವಿಸ್ತರಿಸಲು 30.00 ಲಕ್ಷ ರೂ.ಗಳ ಸಹಾಯಧನವನ್ನು ನೀಡಲಾಗುವುದು.

4) ರೈತರಿಗೆ ಹಾಗೂ ರೈತ ಮಹಿಳೆಯರಿಗೆ ತೋಟಗಾರಿಕೆಯಲ್ಲಿ ಹೆಚ್ಚಿನ ತರಬೇತಿ ನೀಡಲು ಜಿಲ್ಲೆಯಲ್ಲಿ ಒಟ್ಟು 2 ವಿಚಾರ ಸಂಕಿರಣಗಳನ್ನು 45 ಪ್ರಾತ್ಯಕ್ಷತೆಗಳು ಹಾಗೂ 635 ರೈತರಿಗೆ ಹಾಗೂ ರೈತ ಮಹಿಳೆಯರಿಗೆ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುವುದು.

5) ರೈತರು ಬೆಳೆದ ತೋಟಗಾರಿಕೆ ಉತ್ಪನ್ನಗಳಿಗೆ ಸರಿಯಾದ ಬೆಲೆ ಸಿಗುವಂತಾಗಲು ಹಾಪ್‌ಕಾಮ್ಸ್, ಬೆಂಗಳೂರು ಮಾದರಿಯಲ್ಲಿ ಗುಲ್ಬರ್ಗಾ ವಿಭಾಗ ಮಟ್ಟದ ಹಾಪ್ ಕಾಮ್ಸ್ ಸಂಘವನ್ನು ಅಭಿವೃದ್ಧಿಪಡಿಸಲಾಗುವುದು. ಈ ಸಂಘದಲ್ಲಿ ಬೀದರ್ ಜಿಲ್ಲೆಯ ತೋಟಗಾರಿಕೆ ಉತ್ಪನ್ನ ಮಾರಾಟ ಮತ್ತು ಸಹಕಾರ ಸಂಘವು ಸದಸ್ಯ ಸಂಘವಾಗಿರುತ್ತದೆ. ಹಾಗೂ ಜಿಲ್ಲಾ ಮಟ್ಟದ ಈ ಸಂಘಕ್ಕೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಒಟ್ಟು 23.25 ಲಕ್ಷಗಳ ಕಾರ್ಯಕ್ರಮವಿದ್ದು ಈಗಾಗಲೇ ರೂ. 11.174 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

6) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ರೈತರಿಗೆ ಹಣ್ಣಿನ ತೆಂಗಿನ ತೋಟಗಳ ನಿರ್ಮಾಣ ಹಾಗೂ 2 ವರ್ಷ ಪೋಷಣೆಗಾಗಿ ಸಹಾಯಧನವನ್ನು ನೀಡಲು ರೂ. 13.94 ಲಕ್ಷ ಖರ್ಚು ಮಾಡುವ ಕಾರ್ಯಕ್ರಮವಿದ್ದು ಈ ಯೋಜನೆಯಡಿಯಲ್ಲಿ 1214 ಹೆಕ್ಟೇರ್ ಪ್ರದೇಶ ವಿಸ್ತರಣೆ ಕೈಗೊಳ್ಳಲಾಗುವುದು.

ಒಟ್ಟಾರೆ ಜಿಲ್ಲೆಯಲ್ಲಿ 1994-95ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ತೋಟಗಾರಿಕೆ ಅಭಿವೃದ್ಧಿಗಾಗಿ ಒಟ್ಟು 1.0 ಕೋಟಿ ರೂ.ಗಳ ಆಯವ್ಯಯವಿರುತ್ತದೆ.

ಹೊಂಬಳ್ಳಿ ಯೋಜನೆಯಡಿಯಲ್ಲಿ ಒಣ ತೋಟಗಾರಿಕೆ ಬೇಸಾಯದ ಪ್ರಮುಖ ಹಣ್ಣಿನ ಬೆಳೆಗಳಾದ ಮಾವು, ಸಪೋಟ, ದಾಳಿಂಬೆ, ನಿಂಬೆ, ಹಲಸು ಮತ್ತು ಹುಣಸೆ ಬೆಳೆಗಳನ್ನು 150 ಹೆಕ್ಟೇರ್ ಪ್ರದೇಶದಲ್ಲಿ ವಿಸ್ತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಬೀದರ್ ತಾಲ್ಲೂಕಿನಲ್ಲಿ 19940-95ನೇ ಸಾಲಿಗೆ 150 ಹೆಕ್ಟೇರ್ ಪ್ರದೇಶ ವಿಸ್ತರಣೆ ಕೈಗೊಳ್ಳಲು ರೂ. 9.974 ಲಕ್ಷಗಳ ಆರ್ಥಿಕ ಅನುದಾನವನ್ನು ಒದಗಿಸಲಾಗಿದೆ.

ತಾಲ್ಲೂಕು	ಅನುಷ್ಠಾನ ಗೊಳಿಸುವ ವರ್ಷ	ಉದ್ದೇಶಿಸಿರುವ ಪ್ರದೇಶ ವಿಸ್ತರಣೆ(ಹೆ.)
1.ಬೀದರ್	94.95 ರಿಂದ 96-97	500
2.ಔರಾದ್	96-97 ಮತ್ತು 97-98	400
3.ಭಾಲ್ಕಿ	97-98 ಮತ್ತು 98-99	250
4.ಹುಮ್ನಾ ಬಾದ್	98-99 ಮತ್ತು 99-2000	250
5.ಬಸವ ಕಲ್ಯಾಣ	99-2000	100
	ಒಟ್ಟು	1500 ಹೆಕ್ಟೇರ್

ನಾರಂಜ ಸಹಕಾರ ಸಕ್ಕರೆ ಕಾರ್ಖಾನೆ, ಬೀದರ್ ಪ್ರಗತಿ

183 - ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾರಂಜ ಸಹಕಾರ ಸಕ್ಕರೆ ಕಾರ್ಖಾನೆಗೆ ಒಟ್ಟು ಎಷ್ಟು ಹಣವನ್ನು ರೈತರಿಂದ ಸಂಗ್ರಹಿಸಲಾಗಿದೆ?

ಆ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಬೋರ್ಡ್‌ನಿಂದ ಸದರಿ ಸಹಕಾರ ಸಕ್ಕರೆ ಕಾರ್ಖಾನೆಗೆ 1993-94ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು? ಹಾಗೂ ಖರ್ಚು ಮಾಡಿದ ಹಣವೆಷ್ಟು?

ಇ) ಇಲ್ಲಿಯವರೆಗೆ ಈ ಕಾರ್ಖಾನೆಯನ್ನು ಸ್ಥಾಪಿಸುವ ಸಲುವಾಗಿ ಕಾಮಗಾರಿಗಾಗಿ ಖರ್ಚು ಮಾಡಿದ ಹಣವೆಷ್ಟು?

ಈ) 1994-95ರಲ್ಲಿ ಸದರಿ ಕಾರ್ಖಾನೆಗೆ ಹೆಚ್.ಕೆ.ಡಿ.ಬಿ. ಯವರು ನೀಡಿರುವ ಹಣವೆಷ್ಟು?

ಉ) ಕಾರ್ಖಾನೆಯ ಕಾಮಗಾರಿಗಳ ಪ್ರಗತಿ ಮಂದಗತಿಯಿಂದ ಸಾಗುತ್ತಿರುವುದು ನಿಜವಲ್ಲವೆ?

ಊ) ಹಾಗಿದ್ದಲ್ಲಿ, ಕಾಮಗಾರಿಗಳನ್ನು ತ್ವರಿತಗತಿಯಿಂದ ಕೈಗೊಂಡು ಗುರಿಯನ್ನು ಮುಟ್ಟಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ) :

ಅ) ದಿನಾಂಕ 30-6-94ರ ವರೆಗೆ ಒಟ್ಟು ರೂ. 177.80 ಲಕ್ಷ ಹಣವನ್ನು ಸಂಗ್ರಹಿಸಲಾಗಿದೆ.

ಆ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಬೋರ್ಡ್‌ನಿಂದ ಸದರಿ ಸಹಕಾರ ಸಕ್ಕರೆ ಕಾರ್ಖಾನೆಗೆ 1993-94ನೇ ಸಾಲಿನಲ್ಲಿ ಯಾವ ಹಣವನ್ನೂ ಬಿಡುಗಡೆ ಮಾಡಿರುವುದಿಲ್ಲ. ಇದರಿಂದ ಖರ್ಚು ಮಾಡಿದ ಹಣದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಕಾರ್ಖಾನೆಯನ್ನು ಸ್ಥಾಪಿಸುವ ಸಲುವಾಗಿ ಕಾಮಗಾರಿಗಾಗಿ ದಿನಾಂಕ 15-8-94ರ ವರೆಗೆ ರೂ. 2,50,01,288.00 ಖರ್ಚು ಮಾಡಲಾಗಿದೆ.

ಈ) 1994-95ರ ಸಾಲಿನಲ್ಲಿ ಇಲ್ಲಿಯವರೆಗೂ ಹೆಚ್.ಕೆ.ಡಿ.ಬಿ. ಯವರು ಕಾರ್ಖಾನೆಗೆ ಯಾವ ಹಣವನ್ನೂ ನೀಡಿರುವುದಿಲ್ಲ.

ಉ) ನಿಜ

ಊ) ಕಾರ್ಖಾನೆಯ ಕಾಮಗಾರಿಯೂ ಸೇರಿದಂತೆ ಒಟ್ಟಾರೆ ಯೋಜನೆಯನ್ನು ಪೂರ್ಣಗೊಳಿಸುವ ಗುರಿಯನ್ನು ಮುಟ್ಟಬೇಕಾದರೆ ಉನ್ನತ ಹಣಕಾಸು ಸಂಸ್ಥೆಗಳಿಂದ ಸಾಲ ಮಂಜೂರು ಆಗಬೇಕಾಗಿರುತ್ತದೆ. ಸದರಿ ಸಂಸ್ಥೆಗಳಿಂದ ಸಾಲವನ್ನು ಮಂಜೂರು ಮಾಡಿಸುವ ಏರ್ಪಾಡು ಮಾಡಲು ಸರ್ಕಾರವು ತೀವ್ರ ಪ್ರಯತ್ನಗಳನ್ನು ನಡೆಸಿವೆ.

ಶಿಗ್ಗಾಂವದಲ್ಲಿ ಅಗ್ನಿಶಾಮಕದಳ ಪ್ರಾರಂಭಿಸುವ ಕುರಿತು

629 - ಶ್ರೀ ಮಂಜುನಾಥ್ ಸಿ. ಕೂನ್ನೂರ (ಶಿಗ್ಗಾಂವ್) : ಮಾನ್ಯ ಬಂಧೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ್‌ಗೆ ಅಗ್ನಿಶಾಮಕ ದಳ ಎಂದು ಮಂಜೂರಾಗಿದೆ?

ಆ) ಅದನ್ನು ಎಂದು ಪ್ರಾರಂಭಿಸಲಾಗುವುದು?

ಇ) ಸದರಿ ಅಗ್ನಿಶಾಮಕ ದಳ ಪ್ರಾರಂಭಿಸಲು ಇರುವ ಅಡೆತಡೆಗಳೇನು?

ಈ) ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಡಾ|| ಆರ್.ಬಿ. ಚೌಧರಿ (ಬಂಧೀಖಾನೆ ರಾಜ್ಯ ಸಚಿವರು) :

ಅ) ಸರ್ಕಾರದ ಆದೇಶ ಸಂಖ್ಯೆ ಒಇ 53 ಕಅಸೇ 93, ದಿನಾಂಕ : 22-12-93ರಲ್ಲಿ ಧಾರವಾಡ ಜಿಲ್ಲೆಯ ಶಿಗ್ಗಾಂವ ಪಟ್ಟಣದಲ್ಲಿ ಒಂದು ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು ಮಂಜೂರಾತಿಯನ್ನು ನೀಡಲಾಗಿದೆ.

ಆ) ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಬೇಕಾಗಿದ್ದಲ್ಲಿ ಅದಕ್ಕೆ ಅಗತ್ಯವುಳ್ಳ ಸಿಬ್ಬಂದಿ, ವಾಹನ ಮತ್ತು ಉಪಕರಣಗಳ ಹಾಗೂ ಠಾಣೆಗೆ ಸೂಕ್ತವಾದ ಭೂಮಿ ಮತ್ತು ಕಟ್ಟಡ ಇವೆಲ್ಲವುಗಳನ್ನು ಒದಗಿಸಿದ ನಂತರ ಠಾಣೆಯನ್ನು ಪ್ರಾರಂಭಿಸಲು ಸಾಧ್ಯವಾಗುವುದು.

ಇ) ಮೇಲೆ (ಅ) ನಲ್ಲಿನ ಉತ್ತರವು ಇದಕ್ಕೂ ಅನ್ವಯಿಸುತ್ತದೆ.

ಈ) ಸದರಿ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲು ಬೇಕಾಗುವ ಸಿಬ್ಬಂದಿ, ವಾಹನ, ಉಪಕರಣಗಳು, ಭೂಮಿ ಮತ್ತು ಕಟ್ಟಡ ಇವುಗಳನ್ನು ಒದಗಿಸುವ ಬಗ್ಗೆ ಸಂಪನ್ಮೂಲಗಳನ್ನು ಆಧರಿಸಿ ಪರಿಶೀಲಿಸಲಾಗುತ್ತಿದೆ.

ಬೆಂಗಳೂರು ಕಾರಾಗೃಹದಲ್ಲಿ ಮಾದಕವಸ್ತು ಮಾರಾಟ

397 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಕಾರಾಗೃಹ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಬೆಂಗಳೂರಿನ ಸೆಂಟ್ರಲ್ ಜೈಲ್‌ನ ಒಳಗೆ ಮಾದಕ ವಸ್ತುವಿನ ಮಾರಾಟದ ಪ್ರಕರಣ ಪತ್ತೆಯಾಗಿರುವುದು ನಿಜವೇ?

ಆ) ಇದುವರೆವಿಗೆ ಈ ವಿಷಯದಲ್ಲಿ ಜೈಲಿನ ಎಷ್ಟು ಸಿಬ್ಬಂದಿ ಮೇಲೆ ಶಿಸ್ತಿನ ಕ್ರಮ ಜರುಗಿಸಲಾಗಿದೆ?

ಇ) ಬಿಗಿ ಭದ್ರತೆಯನ್ನು ಹೊಂದಿದ್ದರೂ ಸಹ ಇಂತ ಪ್ರಕರಣ ಪತ್ತೆಯಾಗಿರುವುದರಲ್ಲಿ ಜೈಲಿನ ಹಿರಿಯ ಅಧಿಕಾರಿಗಳ ಕೈವಾಡ ಇರುವುದು ನಿಜವೇ?

ಈ) ಈ ಬಗ್ಗೆ ಸಮಗ್ರವಾದ ತನಿಖೆ ನಡೆಸಲಾಗುವುದೇ?

ಡಾ|| ಆರ್.ಬಿ. ಚೌಧುರಿ (ಕಾರಾಗೃಹಗಳ ರಾಜ್ಯ ಸಚಿವರು) :

ಅ) ಒಬ್ಬ ವಿಚಾರಣಾ ಖೈದಿಯ ಬಳಿ ಒಂದು ಗ್ರಾಮ್ ಗಾಂಜಾ ಇರುವುದನ್ನು ಇತ್ತೀಚೆಗೆ ಪತ್ತೆ ಹಚ್ಚಲಾಗಿದೆ. ಅದನ್ನು ಬೇರೊಬ್ಬ ವಿಚಾರಣಾ ಖೈದಿಯಿಂದ 10 ರೂಪಾಯಿಗೆ ಕೊಂಡಿರುವುದಾಗಿ ತಿಳಿಸಿದ್ದಾನೆ.

ಆ) ಇಬ್ಬರು ಹೆಡ್‌ವಾರ್ಡರ್ ಮತ್ತು ಇಬ್ಬರು ಜೈಲರ್ ಅವರುಗಳನ್ನು ಇಲಾಖಾ ವಿಚಾರಣಾ ಕಾಯ್ದಿರಿಸಿ ಅಮಾನತ್ತಿನಲ್ಲಿಡಲಾಗಿದೆ ಮತ್ತು ಇಬ್ಬರು ಸಹಾಯಕ ಅಧೀಕ್ಷಕರನ್ನು ರಜೆಯ ಮೇಲೆ ಕಳುಹಿಸಲಾಗಿದೆ.

ಇ) ಇದರಲ್ಲಿ ಹಿರಿಯ ಅಧಿಕಾರಿಗಳ ಕೈವಾಡವಿಲ್ಲ.

ಈ) ಇಲಾಖಾ ವಿಚಾರಣೆ ಪ್ರಾರಂಭಿಸಲಾಗಿದೆ.

ಭೂ ಸೇನಾ ನಿಗಮದ ಆರ್ಥಿಕತೆ ಸುಧಾರಣೆ.

656 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಆಹಾರ ಸಂಸ್ಕರಣ ಕೈಗಾರಿಕೆಗಳ ಮತ್ತು ಭೂ ಸೇನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಭೂ ಸೇನಾ ನಿಗಮವು ಕಳೆದ 4 ವರ್ಷಗಳಲ್ಲಿ ಅನುಭವಿಸಿದ ಲಾಭ ಅಥವಾ ನಷ್ಟದ ಪ್ರಮಾಣವೆಷ್ಟು (ವರ್ಷವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಈ ಅವಧಿಯಲ್ಲಿ ಭೂಸೇನಾ ನಿಗಮವು ಎಷ್ಟು ಕೋಟಿ ರೂ.ಗಳ ಕಾಮಗಾರಿಯನ್ನು ತೆಗೆದುಕೊಂಡಿರುತ್ತದೆ.

ಇ) ಭೂ ಸೇನಾ ನಿಗಮದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು (ಹುದ್ದೆವಾರು ಅಂಕಿ ಅಂಶಗಳನ್ನು ಒದಗಿಸುವುದು)

ಈ) ಈ ಅವಧಿಯಲ್ಲಿ ಸಿಬ್ಬಂದಿ ವರ್ಗದವರಿಗೆ ನೀಡಲಾದ ಸಂಬಳ ಪ್ರವಾಸ ಭತ್ಯ ಮತ್ತು ಇತರ ಭತ್ಯೆಗಳ ವಿವರಗಳೇನು (ವರ್ಷವಾರು ಅಂಕಿ ಅಂಶಗಳನ್ನು ಒದಗಿಸುವುದು)

ಉ) ಭೂ ಸೇನಾ ನಿಗಮ ಕಾಮಗಾರಿಗಳು ಕಳಪೆ ಮಟ್ಟದೆಂದು ನಿಗಮಕ್ಕೆ ಕಾಮಗಾರಿಗಳನ್ನು ವಹಿಸಿಕೊಡಲು ಸರ್ಕಾರದ ವಿವಿಧ ಇಲಾಖೆಗಳು ಹಿಂಜರಿಯುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ನಿಗಮದ ಆರ್ಥಿಕತೆಯನ್ನು ಉತ್ತಮ ಪಡಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು ?

ಶ್ರೀ ಎಸ್. ರಮೇಶ್ (ಆಹಾರ ಸಂಸ್ಕರಣ ಕೈಗಾರಿಕೆಗಳು ಮತ್ತು ಭೂ ಸೇನಾ ರಾಜ್ಯ ಸಚಿವರು) :

ಅ) ಭೂ ಸೇನಾ ನಿಗಮವು ಕಳೆದ 4 ವರ್ಷಗಳಲ್ಲಿ ಒಟ್ಟು ರೂ. 510.84 ಲಕ್ಷ ರೂ.ಗಳ ನಷ್ಟವನ್ನು ಅನುಭವಿಸಿದೆ. (ತಃಖ್ತೆ ಲಗತ್ತಿಸಿದೆ)

ಆ) ಈ ಅವಧಿಯಲ್ಲಿ ಒಟ್ಟು ರೂ. 13,225.77 ಲಕ್ಷ ರೂ.ಗಳ ಕಾಮಗಾರಿಯನ್ನು ತೆಗೆದುಕೊಂಡಿರುತ್ತದೆ. (ತಃಖ್ತೆ ಲಗತ್ತಿಸಿದೆ)

ಇ) ಒಟ್ಟು 993 ಸಿಬ್ಬಂದಿ ವರ್ಗದವರು ಹಾಲಿ ಇರುತ್ತಾರೆ. (ತಃಖ್ತೆ ಲಗತ್ತಿಸಿದೆ)

ಈ) ಈ ಅವಧಿಯಲ್ಲಿ ಕೆಳಕಂಡಂತೆ ವೇತನ ಹಾಗೂ ಭತ್ಯೆಗಳನ್ನು ನೀಡಲಾಗಿದೆ. (ಲಕ್ಷ ರೂ.ಗಳಲ್ಲಿ)

1. ವೇತನ	972.81
2: ಪ್ರಧಾನ ಭತ್ಯೆ	23.48
3. ಇತರ ಭತ್ಯೆ	7.83
ಒಟ್ಟು	**1004.12**

(ತಃಖ್ತೆ ಲಗತ್ತಿಸಿದೆ)

ಉ) ಇಲ್ಲಿಯವರೆವಿಗೂ ಯಾವ ಸರ್ಕಾರದ ಇಲಾಖೆಗಳು ಭೂ ಸೇನಾ ನಿಗಮಕ್ಕೆ ಕಾಮಗಾರಿಗಳನ್ನು ವಹಿಸಿಕೊಡಲು ಹಿಂಜರಿಯುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಊ) 1991-92ರಲ್ಲಿ ರೂ. 195.64 ಲಕ್ಷ ನಷ್ಟವಾಗಿತ್ತು. 1992-93ರಲ್ಲಿ ರೂ. 103.56 ಲಕ್ಷ ನಷ್ಟವಾಗಿದ್ದು, ಪ್ರಮಾಣವು ಕಡಿಮೆಯಾಗಿರುತ್ತದೆ. ಹಾಗೂ ನಿಗಮದ ಆರ್ಥಿಕತೆಯನ್ನು ಉತ್ತಮಪಡಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ.

ತಃಖ್ತೆ : 1

ನಿಗಮದ ನಷ್ಟದ ಪ್ರಮಾಣ ಕಳೆದ ನಾಲ್ಕು ವರ್ಷಗಳಲ್ಲಿ (ರೂ. ಲಕ್ಷಗಳಲ್ಲಿ)

1989-90	1990-91	1991-92	1992-93
52.22	159.42	195.64	103.56

ತಃಖ್ತೆ : 2

1989-90	1990-91	1991-92	1992-93
2943.80	2825.18	3409.01	4047.78

ತಃಖ್ತೆ : 3

ಭೂ ಸೇನಾ ನಿಗಮದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಯ ವಿವರ

ಖಾಯಂ ನೌಕರರು/ಅಧಿಕಾರಿಗಳು		ತಾತ್ಕಾಲಿಕ ನೌಕರರು
1. ವ್ಯವಸ್ಥಾಪಕ ನಿರ್ದೇಶಕರು (ಸರ್ಕಾರದಿಂದ ಪ್ರತಿಯೋಜನೆ ಮೇರೆಗೆ)	01	-
2. ಜಂಟಿ ನಿರ್ದೇಶಕರು	03	-
3. ಉಪ ನಿರ್ದೇಶಕರು	15	-
4. ಸಹಾಯಕ ನಿರ್ದೇಶಕರು	48	-
5. ಆಡಳಿತಾಧಿಕಾರಿಗಳು (ಸರ್ಕಾರದಿಂದ ಪ್ರತಿಯೋಜನೆ ಮೇರೆಗೆ)	01	-
6. ಲೆಕ್ಕಾಧಿಕಾರಿಗಳು	01	-
7. ಲೆಕ್ಕಪರಿಶೋಧನಾಧಿಕಾರಿಗಳು	01	-
8. ಕಾರ್ಯದಳಪತಿಗಳು	175	3
9. ಸಹಾಯಕ ಕಾರ್ಯದಳಪತಿಗಳು	124	4
10. ಕಾರ್ಯನಿರ್ವಹಣಾಧಿಕಾರಿ	01	-
11. ಶೀಘ್ರಲಿಪಿಗಾರರು	03	-
12. ಅಧೀಕ್ಷಕರು	09	-
13. ಪ್ರಥಮ ದರ್ಜೆ ಸಹಾಯಕರು	46	-
14. ದ್ವಿತೀಯ ದರ್ಜೆ ಸಹಾಯಕರು	74	132
15. ಕಾರ್ಯ ನಿರೀಕ್ಷಕರು	38	57
16. ಉಗ್ರಾಣ ಪಾಲಕ-2	11	57
17. ರೇಖಾಚಿತ್ರಕಾರ	05	-
18. ವಾಹನ ಚಾಲಕರು/ವಾಹನ ವೀಕ್ಷಕರು	125	24
19. ಜವಾನ/ಸಿಪಾಯಿ/ ಕಾವಲುಗಾರ	64	28
ಜಮ್ಮಾ	745	248

ಮೊತ್ತ : 745 + 248 = 993

ವೇತನ ಮತ್ತು ಇತರೆ ಭತ್ಯಗಳ ವಿವರ	1989-90	1990-91	1991-92	1992-93	ಒಟ್ಟು
1. ಸಂಬಳ	208.89	220.29	249.51	294.12	972.81
2. ಪ್ರವಾಸಭತ್ಯೆ	7.49	7.46	4.89	3.64	23.48
3. ಇತರ ಭತ್ಯೆ	2.15	1.29	3.42	0.97	7.83
					1004.12

ಮುಳುಬಾಗಿಲು ತಾಲ್ಲೂಕಿನಲ್ಲಿ ಪ್ರೋತ್ಸಾಹ ಹಣದ ದುರುಪಯೋಗ.

579 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲಾ ಮುಳಬಾಗಿಲು ತಾಲ್ಲೂಕು ಮೋತಕಪಲ್ಲಿ, ಆಲಂಗೂರು, ಗೊಕುಂಟೆ, ಉತ್ತನೂರು, ದೊಮ್ಮಸಂದ್ರ,ಮಲ್ಲನಾಯಕನಹಳ್ಳಿ, ನಂಗಲಿ ಗ್ರಾಮ ಸೇವಾ ಸಹಕಾರ ಸಂಘಗಳಲ್ಲಿ ಸರ್ಕಾರದಿಂದ ಬಿಡುಗಡೆಯಾಗಿರುವ ಶೇಕಡ 5 ಪ್ರೋತ್ಸಾಹ ಧನ ಎಷ್ಟು ಮಂದಿಗೆ ಮಂಜೂರಾಗಿದೆ.

ಆ) ಅವರ ಹೆಸರು, ಗ್ರಾಮ ತಿಳಿಸುವುದು ಮತ್ತು ಪ್ರತಿಯೊಬ್ಬರಿಗೂ ಕೊಟ್ಟಿರುವ ಹಣದ ಮೊತ್ತವೆಷ್ಟು?

ಇ) ಬೇನಾಮಿ ಹೆಸರುಗಳಲ್ಲಿ ಹಣ ಪಾವತಿ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ ಅಂತಹ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರ ಸಚಿವರು) :

ಅ) 693 ಮಂದಿಗೆ ಮಂಜೂರಾಗಿದೆ.

ಆ) ವಿವರವಾದ ಪಟ್ಟಿ ಲಗತ್ತಿಸಿದೆ.

ಇ) ಬೇನಾಮಿ ಹೆಸರುಗಳಲ್ಲಿ ಹಣ ಪಾವತಿಯಾಗಿದೆ ಎಂಬ ದೂರು ಸರ್ಕಾರದ ಗಮನಕ್ಕೆ ಬಂದಿದೆ.

ಈ) ದೂರು ರುಜುವಾತಾಗದೆ ಇರುವುದರಿಂದ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಮೋತಕಪಲ್ಲಿ ಸೇವಾ ಸಹಕಾರ ಸಂಘ ನಿಯಮಿತ

ಮುಳಬಾಗಿಲು ತಾಲ್ಲೂಕು

ಕ್ರ. ಸಂ	ಫಲಾನುಭವಿಯ ಹೆಸರು	ಗ್ರಾಮ	ಶೇ. 5 ನೀಡಿರುವ ಮೊತ್ತ
1.	ಕೆ. ಅಶ್ವತ್ಥನಾರಾಯಣ ಗೌಡ	ಮೋತಕಪಲ್ಲಿ	2250
2.	ಮುನಿಯಮ್ಮ	ಮೋತಕಪಲ್ಲಿ	2250
3.	ಸಿದ್ದರೆಡ್ಡಿ	ಮಿಂಡಹಳ್ಳಿ	2250
4.	ಟಿ.ರಾಮಪ್ಪ	ಸೋಮರಸನಹಳ್ಳಿ	1750
5.	ರಮೇಶ	ಮದ್ದೇರಿ	2200
6.	ಕೃಷ್ಣಪ್ಪ	ಮಾತಾಯಲೂರು	2250
7.	ತಿಮ್ಮರಾಯಪ್ಪ	ಮಲ್‌ತಾಯಲೂರು	2250
8.	ಚಿನ್ನಪ್ಪ	ಸುಣ್ಣಗೂರು	2200
9.	ನಾರಾಯಣಪ್ಪ	”	2200
10.	ಲಕ್ಷ್ಮಕ್ಕ	”	2250
11.	ಸೀನಪ್ಪ	ಸೋಮರಸನಹಳ್ಳಿ	2250
12.	ಮುನಿವೆಂಕಟಪ್ಪ	ಮೇಲ್‌ತಾಯಲೂರು	2250
13.	ತೋಟಿರಾಮಪ್ಪ	ಮದ್ದೇರಿ	1500
14.	ಸಾಲಮ್ಮ	ಮೋತಕಪಲ್ಲಿ	2250
15.	ನಾರಾಯಣರೆಡ್ಡಿ	ಅಜ್ಜಂಪಲ್ಲಿ	2250
16.	ಎನ್. ರಮಪ್ಪ	ಮೋತಕಪಲ್ಲಿ	2250
17.	ನಾರಾಯಣಪ್ಪ	ಮೇಲ್‌ತಾಯಲೂರು	2250
18.	ಚಿನ್ನಪ್ಪ	ಸುಣ್ಣಗೂರು	2250
19.	ಮುನಿವೀರವಸಂತಪ್ಪ	ಮದ್ದೇರಿ	2250

20.	ವೆಂಕಟಮ್ಮ	ಮೋತಕಪಲ್ಲಿ	2250
21.	ಸಲೀಮಸಾಬ್	ಮಿಂಡಹಳ್ಳಿ	2250
22.	ಗೌರಮ್ಮ	ಮೋತಕಪಲ್ಲಿ	2250
23.	ನಾರಾಯಣಪ್ಪ	ಮಿಂಡಹಳ್ಳಿ	2250
24.	ಕೃಷ್ಣಪ್ಪ	ಮದ್ದೇರಿ	2250
25.	ವೆಂಕಟಪ್ಪ	ಮೇಲ್‌ತಾಯಲೂರು	2250
26.	ಮುನಿರೆಡ್ಡಿ	ಚೈಗಪಲ್ಲಿ	1083
27.	ಡಿ.ಎಂ. ಶ್ರೀನಿವಾಸ್	ಮದ್ದೇರಿ	1083
28.	ಗೋಪಾಲಪ್ಪ	”	1593
29.	ಟಿ.ಎಂ. ವೆಂಕಟೇಶ್ ಗೌಡ	ಮೋತಕಪಲ್ಲಿ	1062
30.	ಎಂ. ವೆಂಕಟರೆಡ್ಡಿ	ಕಸವನೂರು	1083
31.	ನಾಗಪ್ಪ	ಸೋಮರಸನಹಳ್ಳಿ	1083
32.	ಮುದ್ದಪ್ಪ	”	1083
33.	ಎಂ.ಎನ್. ಶಿವಪ್ರಕಾಶ್	ಮೋತಕಪಲ್ಲಿ	1593
34.	ಎನ್.ಎನ್. ಶಾರದ	”	1593
35.	ಈರಪ್ಪ	ನಾಗರಹಳ್ಳಿ	1593
36.	ರಾಮಚಂದ್ರಪ್ಪ	ಮಿಂಡಹಳ್ಳಿ	1593
37.	ವೆಂಕಟರವಣಪ್ಪ	ಸೋಮರಸನಹಳ್ಳಿ	1593
38.	ಶೀನಪ್ಪ	”	1593
39.	ನಾರಯಣರೆಡ್ಡಿ	ಅಚ್ಚಂಪಲ್ಲಿ	1593
40.	ಮುನಿಯಪ್ಪ	ಮದ್ದೇರಿ	1593
41.	ಚಿಕ್ಕಚನ್ನಪ್ಪ	ಸುಣ್ಣಗೂರು	1000
42.	ರಾಮರೆಡ್ಡಿ	ಕಸವನೂರು	1229
43.	ಪಿಳ್ಳಪ್ಪ	ಸೋಮರಸನಹಳ್ಳಿ	1229
44.	ನಾರಾಯಣಪ್ಪ	ಮಿಂಡಹಳ್ಳಿ	615
45.	ಪಿ. ರಾಮಪ್ಪ	ಮೋತಕಪಲ್ಲಿ	615
46.	ವರದಪ್ಪನಾಯ್ಡು	ಮಡಿವಾಳ	1479
47.	ಜಯಮ್ಮ	”	1183
48.	ನಾರಾಯಣಪ್ಪ	ಮಿಂಡಹಳ್ಳಿ	828
49.	ಬಿ. ಬೆಲ್ಲಪ್ಪ	ಮೇಲ್‌ತಾಯಲೂರು	1479
50.	ಬಾಲಮ್ಮ	ಮೋತಕಪಲ್ಲಿ	1479
51.	ಎಂ.ವಿ. ಪಾಪಣ್ಣ	”	750
52.	ಆವಲಪ್ಪ	”	1479
53.	ಆಂಜನೇಯಪ್ಪ	ಮಡಿವಾಳ	1479
54.	ಕೊಂಡಾರೆಡ್ಡಿ	ಅಚ್ಚಂಪಲ್ಲಿ	1479
55.	ಸಿಂಪಣ್ಣ	ಮೇಲ್‌ತಾಯಲೂರು	1479
56.	ಮುನೆಮ್ಮ	”	1479

57.	ಪಾಪಕ್ಕ	”	1183
58.	ಬಿ. ವೆಂಕಟಮ್ಮ	”	1100
59.	ಮುನಿವೆಂಕಟಪ್ಪ	”	1479
60.	ರಾಮಕೃಷ್ಣರೆಡ್ಡಿ	ಮಿಂಡಹಳ್ಳಿ	1479
61.	ಅನ್ವರ್ ಸಾಬ್	”	896
62.	ಮುನಿವೆಂಕಟಪ್ಪ	ಮೇಲ್‌ತಾಯಲೂರು	1183
63.	ವೆಂಕಟಸ್ವಾಮಿ	”	1479
64.	ಬಿ.ತಿಮ್ಮರಾಯಪ್ಪ	”	1183
65.	ಎಮ್. ಮುನೇಗೌಡ	”	1479
66.	ಶೇಕ್ ಅಹಮದ್ ಜಿ	ಮಿಂಡಹಳ್ಳಿ	1000
67.	ಡಿ. ನಾರಾಯಣಪ್ಪ	ಮಡಿವಾಳ	1468
68.	ಎಮ್.ವಿ. ಕೃಷ್ಣಮೂರ್ತಿ	”	734
69.	ಲಕ್ಷ್ಮಮ್ಮ	ಸುಣ್ಣಗೂರು	1000
70.	ಪಿ. ಚನ್ನಪ್ಪ	”	1000
71.	ಎಂ.ಇ. ಅಮರನಾಥ್	ನಾಗರಹಳ್ಳಿ	1000
72.	ಎಸ್.ಎಂ. ಸೋಮಪ್ಪ	ಮೇಲ್‌ತಾಯಲೂರು	500
73.	ಮುನಿನಾಗಪ್ಪ	ನಾಗರಹಳ್ಳಿ	500
74.	ಬಿ. ಅಲ್ಲಪ್ಪ	ನಾಗರಹಳ್ಳಿ	500
75.	ಮುನೆಮ್ಮ	ಮೇಲ್‌ತಾಯಲೂರು	1000
76.	ಹನುಮಪ್ಪರೆಡ್ಡಿ	ಮಿಂಡಹಳ್ಳಿ	900
77.	ವೆಂಕಟೇಶ್	ಮದ್ದೇರಿ	1000
78.	ವಿ. ನಾರಾಯಣಪ್ಪ	ಮೇಲ್‌ತಾಯಲೂರು	500
79.	ಎಮ್. ವಿ. ಸುಬ್ರಮಣ್ಯಂ	ಮೋತಕಪಲ್ಲಿ	1000
80.	ಎಮ್. ನಾರಾಯಣಪ್ಪ	ನಾಗರಹಳ್ಳಿ	750
81.	ದೊಡ್ಡಮುನೆಮ್ಮ	ಮದ್ದೇರಿ	750
82.	ಡಿ.ಸಿ. ರಾಧಾಕೃಷ್ಣ	ಮದ್ದೇರಿ	750
83.	ಕೃಷ್ಣಾರೆಡ್ಡಿ	ಅಚಂಪಲ್ಲಿ	450
84.	ಟಿ. ತಿಪ್ಪನ್ನ	ಮೋತಕಪಲ್ಲಿ	1480
85.	ಮಹಮದ್‌ಮಲಿ	ಮಿಂಡಹಳ್ಳಿ	1000
86.	ವೆಂಕಟರವಣಪ್ಪ	ಸೋಮರಸನಹಳ್ಳಿ	1000
87.	ಮುನಿಯಪ್ಪ	ಮದ್ದೇರಿ	1083
88.	ಸಯರ್ ಸಾಬ್	ಮಿಂಡಹಳ್ಳಿ	500
89.	ಎಂ.ಎಸ್. ಕ್ರಿಷ್ಣಪ್ಪ	ಮದ್ದೇರಿ	975
90.	ಎಂ. ಶ್ರೀನಿವಾಸರೆಡ್ಡಿ	ಅಚ್ಚಂಪಲ್ಲಿ	1468
91.	ಎಂ.ಸಿ. ಚನ್ನಕೇಶವಗೌಡ	ಮೋತಕಪಲ್ಲಿ	900
92.	ಎಸ್.ಎ. ನಾರಾಯಣಗೌಡ	ಮೋತಕಪಲ್ಲಿ	900
93.	ಮುನಿಯಮ್ಮ	ಮೇಲ್‌ತಾಯಲೂರು	1124

94.	ಸಿದ್ದಾರೆಡ್ಡಿ	ಮಿಂಡಹಳ್ಳಿ	1124
95.	ಡಿ.ಎಂ. ನಾರಾಯಣಸ್ವಾಮಿ	ಮದ್ದೇರಿ	1124
96.	ಎಸ್.ಪಾಪಿರೆಡ್ಡಿ	ಮಿಂಡಹಳ್ಳಿ	1124
97.	ಎಂ.ವಿ. ಮುನಿನಂಜಪ್ಪ	ಮೇಲ್‌ತಾಯಲೂರು	900
98.	ಎನ್. ನರಸಿಂಹಗೌಡ	ಮೋತಕಪಲ್ಲಿ	1124
99.	ಕ್ರಿಷ್ಣಪ್ಪ	ಮದ್ದೇರಿ	1124
100.	ಪಿಳ್ಳಪ್ಪ	ಮದ್ದೇರಿ	900
101.	ಚಿನ್ನಪ್ಪ	ಮದ್ದೇರಿ	1050
102.	ನಾರಾಯಣಪ್ಪ	ಸೋಮರಸನಹಳ್ಳಿ	900
103.	ಲಕ್ಷ್ಮಕ್ಕ	ಸುಣ್ಣಂಗೂರು	1050
104.	ಸೀನಪ್ಪ	ಸೋಮರಸನಹಳ್ಳಿ	900
105.	ಜಿ.ಮುನೆಪ್ಪ	ಮೇಲ್‌ತಾಯಲೂರ	1124
106.	ಮುನಿವೆಂಕಟಪ್ಪ	ಮಿಂಡಹಳ್ಳಿ	1124
107.	ಮುನಿವೆಂಕಟಪ್ಪ	ಮೇಲ್‌ತಾಯಲೂರು	1124
108	ಜಯಪ್ಪ	ಮದ್ದೇರಿ	900
109	ವೆಂಕಟರಮಣಪ್ಪ	ಸೋಮರಸನಹಳ್ಳಿ	1050
110	ನಾರಾಯಣರೆಡ್ಡಿ	ಕೊರವೇನೂರು	1124
111.	ಎಂ.ಎಸ್. ಸುಬ್ರಮಣ್ಯಂ	ಮೇಲ್‌ತಾಯಲೂರು	900
112.	ಟಿ.ವಿ.ಸಿದ್ದಪ್ಪ	”	975
113.	ಬಿ.ಜಯಪ್ಪ	”	900
114.	ಮುನಿವೆಂಕಟಪ್ಪ	ಮೋತಕಪಲ್ಲಿ	1124
115.	ಸೊಣ್ಣಪ್ಪ	ಸುಣ್ಣಂಗೂರು	1124
116.	ನರಸಿಂಹಪ್ಪ	ಮೇಲ್‌ತಾಯಲೂ	1124
117.	ವೀರಭದ್ರಪ್ಪ	ಕೊರವೇನೂರು	1124
118.	ಮುನಿವೆಂಕಟಪ್ಪ	”	1124
119.	ಟಿ. ಮುನೇಗೌಡ	ಮೇಲ್‌ತಾಯಲೂರು	900
120.	ಸಲಾಂಸಾಬ್	ಮಿಂಡಹಳ್ಳಿ	1124
121.	ಕೆ.ಟಿ.ವೆಂಕಟ್ರಾಮೇಗೌಡ	ಕೊರವೇನೂರು	1124
122.	ನಾರಾಯಣಪ್ಪ	ಮದ್ದೇರಿ	1124
123.	ಕ್ರಿಷ್ಣಪ್ಪ	”	1124
124.	ವೆಂಕಟಪ್ಪ	”	900
125.	ರಾಮಕ್ರಿಷ್ಣಪ್ಪ	”	900
126.	ಹನುಮಪ್ಪ	ಕೊರವೇನೂರು	1124
127.	ಅಮ್ಮನಮ್ಮ	ಸೋಮರಸನಹಳ್ಳಿ	1124
128.	ಗೋಪಾಲಪ್ಪ	ಕೊರವೇನೂರು	900
129.	ಚಿನಕ್ಕ	”	750
130.	ಲೋಕನ್ನ	”	1000

131.	ಚಿನ್ನಪ್ಪ	ಮದ್ದೇರಿ	850
132.	ನಾಚಪ್	ಸೋಮರಸನಹಳ್ಳಿ	850
133.	ಶ್ರೀನಿವಾಸಯ್ಯ	ಮದ್ದೇರಿ	437
134.	ಬಿ.ವಿ. ನಾಗರಾಜ	ಅಚ್ಚಪಲ್ಲಿ	437
135.	ಟಿ.ಮುನಿವೆಂಕಟಪ್ಪ	”	437
136.	ಗಂಗುಲಪ್ಪ	ಸೋಮರಸನಹಳ್ಳಿ	437
137.	ದೋಬಿನಾರಾಯಣಪ್ಪ	ಮಿಂಡಹಳ್ಳಿ	437
138.	ನಾರಾಯಣಸ್ವಾಮಿ	ಮದ್ದೇರಿ	437
139.	ಎನ್.ಎಂ.ವೇಣುಗೋಪಾಲ್	”	437
140.	ಎನ್.ಎಂ. ಸೋಮಪ್ಪ	ನಾಗರಹಳ್ಳಿ	437
141.	ಶ್ರೀನಿವಾಸ್	ನಾಗರಹಳ್ಳಿ	437
142.	ಯಲ್ಲಮ್ಮ	”	437
143.	ಮುದ್ದಪ್ಪ	ಮದ್ದೇರಿ	437
144.	ವೆಂಕಟರೆಡ್ಡಿ	ಮಿಂಡಹಳ್ಳಿ	1250
145.	ಕೆ.ಎನ್.ಶ್ರೀನಿವಾಸರೆಡ್ಡಿ	ಅಚ್ಚಂಪಲ್ಲಿ	1000
146.	ಸೊಣಪ್ಪ	”	1000
147.	ಮುದ್ದಪ್ಪ	”	750
	ಒಟ್ಟು	ರೂ.	1,80,639

ಆಲಂಗೂರು ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತ

ಮುಳಬಾಗಿಲು ತಾಲ್ಲೂಕು:

ಕ್ರ. ಸಂ	ಫಲಾನುಭವಿಯ ಹೆಸರು	ಗ್ರಾಮ	ಶೇ. 5 ನೀಡಿರುವ ಮೊತ್ತ
1.	ಎಸ್.ಪಿ ರಾಮೇಗೌಡ	ಸೂರುಕುಂಟೆ	1333
2.	ಜಿ.ಮುನಿವೆಂಕಟಪ್ಪ	”	1500
3.	ರಾಮಪ್ಪ	ಪಾವತಹಳ್ಳಿ	800
4.	ಯಲ್ಲಮ್ಮ	ಆಲಂಗೂರು	1514
5.	ಎಸ್.ವಿ.ಮುನಿಯಪ್ಪ	ಸೂರುಕುಂಟೆ	1733
6.	ವೆಂಕಟರಾಮಪ್ಪ	ಯರಜುನ್ನನಹಳ್ಳಿ	1175
7.	ಎಸ್.ಪಿ.ಚಂಗಪ್ಪ	ಸೂರುಕುಂಟೆ	1650
8.	ಸಿ.ಎಸ್.ಚಂದ್ರಪ್ಪ	”	1933
9.	ಪಾಪಕ್ಕ	ಆಲಂಗೂರು	1145
10.	ಪಿ.ಎಂ ವೆಂಕಟರಾಮಯ್ಯ	ಪಾವರಹಳ್ಳಿ	1100
11.	ಗಂಗುಲಪ್ಪ	”	400
12.	ಹೆಚ್.ವೆಂಕಟಪ್ಪ	ಸೂರುಕುಂಟೆ	1800
13.	ವೆಂಕಟರಾಮಪ್ಪ	ಯರಹಳ್ಳಿ	1400

14.	ಜಿ.ಆರ್.ವೆಂಕಟರಾಮಿರೆಡ್ಡಿ	"	995
15.	ರಾಮಪ್ಪ	ಪಾವರಹಳ್ಳಿ	708
16.	ಜಿ.ನಾರಾಯಣರೆಡ್ಡಿ	ಗುಂಕಲ್ಲು	708
17.	ಎಸ್.ಪಿ.ಚೆಂಗಪ್ಪ	ಸೂರುಕುಂಟೆ	1800
18.	ಜಯರಾಮರೆಡ್ಡಿ	ಮಗವಾನಹಳ್ಳಿ	708
19.	ವೆಂಕಟಮುನಿಯಪ್ಪ	ವೀರಸಂದ್ರ	425
20.	ಮೆಹಬೂಬಸಾಬ್	ಗುಮಕಲ್ಲು	425
21.	ಬಿ.ಜಯಗೌಡ	ಯರಹಳ್ಳಿ	1416
22.	ಜಿ.ವಿ. ಗುರುರಾಜ	ಮಾಚನಹಳ್ಳಿ	992
23.	ವೆಂಕಟಪ್ಪ	ಸೂರುಕುಂಟೆ	850
24.	ಸುಬ್ಬರಾಯಪ್ಪ	ಗುಮಕಲ್ಲು	708
25.	ಪಾಪಣ್ಣ	ಆಲಂಗೂರು	850
26.	ಪಿ.ಎಂ.ಗಟ್ಟಪ್ಪ	ವೀರಸಂದ್ರ	1333
27.	ರಾಮಪ್ಪ	ಪಾವರಹಳ್ಳಿ	708
28.	ರಮಣಬಾಯಿ	ಸೂರುಕುಂಟೆ	992
29.	ರಾಮಕ್ಕಮ್ಮ	"	560
30.	ಆರ್.ಚೆಂಗಲರಾಯಪ್ಪ	ಲಕ್ಕಶೆಟ್ಟಹಳ್ಳಿ	850
31.	ರಾಮಕ್ರಿಷ್ಣರೆಡ್ಡಿ	"	566
32.	ಈರಪ್ಪ	"	708
33.	ಇರಗಮ್ಮ	ಪಾವರಹಳ್ಳಿ	1400
34.	ನಾರಾಯಣಪ್ಪ	ರಾಯಲಮಂಡಿನೂರು	1133
35.	ಆರ್.ಎಂ.ಗುರುವಿರೆಡ್ಡಿ	"	850
36.	ಗುರಪ್ಪ	ಲಕ್ಕಸೆಟ್ಟಿಹಳ್ಳಿ	1385
37.	ಚಿನ್ನಪ್ಪ	"	1385
38.	ನಾಚಪ್ಪ	"	1075
39.	ಚಿನ್ನಯಲ್ಲಪ್ಪ	"	1385
40.	ಚನ್ನಪ್ಪ	"	1166
41.	ಎಂ.ಗೋಪಾಲಕ್ರಿಷ್ಣ	ಮಿಂಡಹಳ್ಳಿ	1075
42.	ಗುರಪ್ಪ	ಲಕ್ಕಸೆಟ್ಟಿಹಳ್ಳಿ	1166
43.	ಪಿ.ಎಸ್.ಶ್ರೀನಿವಾಸ	ರಾಯಲಮಂಡಿನೂರು	725
44.	ಬಿ.ಅಂಜನೆಯಚಾರ್	ಎಂ.ಮಿಂಡಹಳ್ಳಿ	725
45.	ಪಿ.ಜಯರಾಮಿರೆಡ್ಡಿ	ಚಲ್ಲಪಲ್ಲಿ	1166
46.	ಗುರಪ್ಪಬಾಯಿ	ನಾಚಹಳ್ಳಿ	1075
47.	ಟಿ.ವೆಂಕಟಪ್ಪ	ಗುಮಕಲ್	725
48.	ವಿಜಯರಾಘವುಲು	ಯರಹಳ್ಳಿ	1916
49.	ಗಂಗಪ್ಪ	"	1075
50.	ವೆಂಕಟರಾಮಯ್ಯ	ರಾಯಲಮಂಡಿನೂರು	1385

51.	ವೆಂಕಟಪ್ಪ	ಗುಮಕಲ್	1075
52.	ಕ್ರಿಷ್ಣಪ್ಪ	ಆಲಂಗೂರು	1385
53.	ಕ್ರಿಷ್ಣಯ್ಯಶೆಟ್ಟಿ	"	1075
54.	ಗೊಟ್ಟಚಾರಿ	ಯಡಹಳ್ಳಿ	725
55.	ವರದಪ್ಪ	ಚಲ್ಲಪಲ್ಲಿ	906
56.	ಮುನಿವೆಂಕಟಪ್ಪ	ಮೈಲಾಪುರ್	562
57.	ಶೀನಪ್ಪ	ಗುಮಕಲ್	375
58.	ಬುಡ್ಡಪ್ಪ	ಜಿ.ಮಾರಡಹಳ್ಳಿ	187
59.	ಲಕ್ಷ್ಮಿದೇವಮ್ಮ	ಆಲಂಗೂರು	2350
60.	ನಾರಾಯಣಪ್ಪ	"	1000
61.	ಕದಿರಪ್ಪ	ಮದನಹಳ್ಳಿ	600
62.	ಸಿ.ಎಂ. ಕ್ರಿಷ್ಣಪ್ಪ	ಗುಮಕಲ್	1000
63.	ಮುನಿವೆಂಕಟಪ್ಪ	ಮೂರಡಹಳ್ಳಿ	1000
64.	ಮುನಿರೆಡ್ಡಿ	ಮಾಹನಳ್ಳಿ	1000
65.	ದೊಡ್ಡೇಗೌಡ	ಯಡಹಳ್ಳಿ	1000
66.	ಮಾಹಬೂಬ್‌ಸಾಬ್	ಮೈಲಾಪುರ್	900
67.	ವೆಂಕಟರಾಮಪ್ಪ	ಮಾಚನಹಳ್ಳಿ	900
68.	ಆರ್.ಶ್ರೀರಾಮಚಾರಿ	ಆಲಂಗೂರು	900
69.	ಪಿಳ್ಳಪ್ಪ	ಮೂರಂಡಹಳ್ಳಿ	1050
70.	ವೆಂಕಟಮ್ಮ	ಚಲ್ಲಪ್ಪಹಳ್ಳಿ	900
	ಒಟ್ಟು	ರೂ.	72333

ಗೋಕುಂಟೆ ಸೇವಾ ಸಹಕಾರ ಸಂಘ ನಿಯಮಿತ,
ಮುಳಬಾಗಿಲು ತಾಲ್ಲೂಕು

ಕ್ರ. ಸಂ.	ಫಲಾನುಭವಿಯ ಹೆಸರು	ಗ್ರಾಮ	ಶೇ. 5 ನೀಡಿರುವ ಮೊತ್ತ
1.	ಮುನೆಪ್ಪ	ಹೊಸಹಳ್ಳಿ	1130
2.	ಬಿ.ಕೃಷ್ಣಪ್ಪ	"	626
3.	ಎಂ.ಅರ್. ಆಶೀರ್ವಾದಂ	ಗೋಕುಂಟೆ	1130
4.	ಸವರಮ್ಮ	"	1130
5.	ಸವರಮ್ಮ	"	1875
6.	ರಾಮಪ್ಪ	"	1130
7.	ರಾಮಪ್ಪ	"	1875
8.	ಪೂ.ಗಂಗಪ್ಪ	ವಿ.ಹೊಸಹಳ್ಳಿ	1069
9.	ಕೆ.ಎಂ.ಮುನಿರತ್ನಂ	"	626
10.	ಎನ್.ಹೇಮಾರೆಡ್ಡಿ	"	1130

11.	ಎನ್.ಹೇಮಾರೆಡ್ಡಿ	”	1875
12.	ಡಿ.ಎಂ.ಅಂತೋಣಿ ಸ್ವಾಮಿ	ಗೋಕುಂಟೆ	469
13.	ಡಿ.ಎಂ.ಅಂತೋಣಿ ಸ್ವಾಮಿ	”	1560
14.	ಪಿ.ಗೋಪಾಲಪ್ಪ	ಹೊನ್ನಕೆರೆ	1130
15.	ಪಿ.ಮುನಿವೆಂಕಟಪ್ಪ	”	1130
16.	ಎಂ.ಮುನಿರಾಯಪ್ಪ	ನಾಚಿಹಳ್ಳಿ	1130
17.	ಮುನಿವೆಂಕಟಪ್ಪ	”	1130
18.	ಪಾರ್ವತಮ್ಮ	ವಿ.ಹೊಸಹಳ್ಳಿ	1086
19.	ಎಂ.ನಾದಪ್ಪ	ಗೋಕುಂಟೆ	982
20.	ಆರ್.ಸವರಪ್ಪ	”	428
21.	ಎಂ.ಸಿ.ಆರೋಗ್ಯಸ್ವಾಮಿ	”	1130
22.	ಎಂ.ಸಿ.ಆರೋಗ್ಯಸ್ವಾಮಿ	”	1500
23.	ಜಿ.ಎಸ್.ರಾಯಪ್ಪ	”	1130
24.	ಜಿ.ಎಸ್.ರಾಯಪ್ಪ	”	1250
25.	ಕೊತ್ತಕೋಟ ಜೋಜಪ್ಪ	”	626
26.	ಎಂ.ರಾಮಚಂದ್ರಪ್ಪ	ವಿ.ಹೊಸಹಳ್ಳಿ	1130
27.	ವಿ.ಎಸ್.ಮುನಿಶ್ಯಾಮರೆಡ್ಡಿ	”	1130
28.	ಆರ್.ಎಸ್.ಕ್ರಿಷ್ಣಪ್ಪ	”	1086
29.	ನಾರಾಯಣಪ್ಪ	ಹೊನ್ನಕೆರೆ	1130
30.	ಬಜಂತ್ರಿನಾರಾಯಣಪ್ಪ	”	530
31.	ಚನ್ನಪ್ಪ	”	1130
32.	ಜಿ.ನಾರಾಯಣಪ್ಪ	”	1130
33.	ಗೌ:ವೆಂಕಟಪ್ಪ	”	1130
34.	ಹೆಚ್.ಕ್ರಿಷ್ಣಪ್ಪ	”	1130
35.	ಕ್ರಿಷ್ಣಪ್ಪ	”	1130
36.	ಕೊ::ನಾರಾಯಣಪ್ಪ	”	1130
37.	ಕೊ::ನಾರಾಯಣಪ್ಪ	”	1875
38.	ಲಕ್ಷ್ಮಣ್ಣ	”	1130
39.	ಎಂ.ಎ.ಬಾಲಪ್ಪ	ಗೋಕುಂಟೆ	1130
40.	ಎಂ.ಎ.ಬಾಲಪ್ಪ	”	1560
41.	ಎಂ.ಮುನಿವೆಂಕಟಪ್ಪ	ಹೊನ್ನಕೆರೆ	1130
42.	ವಿ.ವೆಂಕಟರವಣಪ್ಪ	”	626
43.	ಬಾಬುಗೌಡ	”	1130
44.	ಸಲ್ಲಾದಿ ವೆಂಕಟಪ್ಪ	”	626
45.	ಗಾರಡಿ ರಾಮನ್ನ	ಗೋಕುಂಟೆ	626
46.	ತಿಮ್ಮಪ್ಪ	”	626
47.	ಬಿ.ವಿ.ಸುಬ್ಬನ್ನ	ಹೊನ್ನಕೆರೆ	782

48.	ವಿ.ಲಕ್ಷ್ಮಮಯ್ಯ	ನಚಹಳ್ಳಿ	782
49.	ಸಲ್ಲಾದಿ ಘಟ್ಟಪ್ಪ	ಹೊನ್ನಕೆರೆ	782
50.	ದೊ::ಮುನಿವೆಂಕಟಪ್ಪ	”	782
51.	ಯ:ನಾರಾಯಣಪ್ಪ	ನಾಚಹಳ್ಳಿ	1130
52.	ಬಂಗಿ ಪೆದ್ದರಾಮನ್ನ	ಹೊನ್ನಕೆರೆ	782
53.	ಬಂಗಿ ತಿರುವುಳಪ್ಪ	”	782
54.	ಪು:ವರದಪ್ಪ	ನಾಚಹಳ್ಳಿ	782
55.	ಲ::ಗೋಪಾಳಪ್ಪ	ಹೊನ್ನಕೆರೆ	782
56.	ಮುನಿವೆಂಕಟಪ್ಪ ಚಿನ್ನನ್ನ	”	339
57.	ಎಂ.ಕ್ರಿಷ್ಣಪ್ಪ	”	1130
58.	ಪಿ.::ಮುನಿವೆಂಕಟ್ರಾಯಪ್ಪ	”	295
59.	ವೆಂಕಟ್ರಾಯಪ್ಪ(ಉ)	”	282
60.	ಎಂ.ಅಕ್ಕಪ್ಪ	ಗೋಕುಂಟೆ	478
61.	ಮಲ್ಲಕ್ಕಗಾರಿ ರಾಮನ್ನ	ನಾಚಹಳ್ಳಿ	1,130
62.	ಕೆ.ಎಂ. ಚಂಗಪ್ಪ	ನಾ::ಗು:: ಹಳ್ಳಿ	782
63.	ನರಸಿಂಹಪ್ಪ	ವಿ.ಹೊಸಹಳ್ಳಿ	782
64.	ಎಂ.ಗೋಪಾಲ್	”	765
65.	ಎನ್.ಬಾಬನ್ನ	ನಾ::ಗು::ಹಳ್ಳಿ	765
66.	ಚಿನ್ನಪ್ಪ	ನಾ::ಗು::ಹಳ್ಳಿ	765
67.	ನಲ್ಲವರದಪ್ಪ	ನಾಚಹಳ್ಳಿ	765
68.	ಗಂಗುಲಪ್ಪ	ಗೋಕುಂಟೆ	765
69.	ಕುರಿಕ್ರಿಷ್ಣಪ್ಪ	ಹೊನ್ನಕೆರೆ	1,130
70.	ವೆಂಕಟಪ್ಪ	ಕದರೇನಹಳ್ಳಿ	1875
71.	ವಿ.ಚಂದ್ರಶೇಖರ್	ಕದರೇನಹಳ್ಳಿ	2,020
72.	ಮುನ್ನೆಪ್ಪ	”	2,020
73.	ಚಂಗಪ್ಪ	”	2,020
74.	ಆರ್.ಜೋಸೆಫ್	ಗೋಕುಂಟೆ	1,400
75.	ಕ್ರಿಷ್ಣಪ್ಪ	ವಿ.ಹೊಸಹಳ್ಳಿ	1,000
76.	ಎಂ. ಮುನಿವೆಂಕಟಪ್ಪ	ನಾ::ಗು:ಹಳ್ಳಿ	1,000
77.	ಹೆಚ್.ಕ್ರಿಷ್ಣಪ್ಪ	ಹೊನ್ನಕೆರೆ	1,00
78.	ಚಿಕ್ಕ ವೆಂಕಟಶ್ಯಾಮಿ	”	1,500
79.	ಪಿ.ಗೋಪಾಳಪ್ಪ	”	800
80.	ಸಿದ್ದಪ್ಪ	ವಿ.ಹೊಸಹಳ್ಳಿ	1,400
81.	ಎಂ.ರಾಮಚಂದ್ರಪ್ಪ	”	1,400
82.	ಎಂ.ಎ.ಆರೋಗ್ಯಸ್ವಾಮಿ	ಗೋಕುಂಟೆ	1,400
83.	ಕೊತ್ತಕೋಟ ಜೋಜಪ್ಪ	”	1,200
84.	ಮುನಿಶಾಮಿ	ನಾಚಹಳ್ಳಿ	1,200

85.	ಕೆ.ರಾಮಪ್ಪ	ನಾ::ಗು:ಹಳ್ಳಿ	600
86.	ಎಸ್.ಲೂರ್ದಪ್ಪ	ಗೋಕುಂಟೆ	1,000
87.	ಜಿ.ಎಸ್.ರಾಯಪ್ಪ	"	600
88.	ಎಂ.ಆರ್.ಆಶೀರ್ವಾದಂ	"	1,400
89.	ಸಿ.ನಾರಾಯಣಗೌಡ	ವಿ.ಹೊಸಹಳ್ಳಿ	800
90.	ಮುನಿಯಪ್ಪ	"	800
91.	ಕೆ.ಎಸ್.ಆರೋಗ್ಯಸ್ವಾಮಿ	ಗೋಕುಂಟೆ	1,100
92.	ರಾಮಕ್ರಿಷ್ಣಪ್ಪ	ವಿ.ಹೊಸಹಳ್ಳಿ	1,030
93.	ತಿಮ್ಮಪ್ಪ	"	1,030
94.	ಶ್ರೀಮತಿ ರತ್ನಮ್ಮ	"	1,030
95.	ಚನ್ನಪ್ಪ	ಹೊನ್ನಕೆರೆ	1,030
96.	ರಾಮಕೃಷ್ಣಪ್ಪ	"	1,030
97.	ವಿ.ಚಂಗಲರಾಯಪ್ಪ	"	1,875
98.	ಜೋಜಪ್ಪ	ಗೋಕುಂಟೆ	1,030
99.	ಚಂಗಪ್ಪ	"	1,200
	ಒಟ್ಟು		**ರೂ. 1,05,286**

ಉತ್ತನೂರು ವಿ.ಎಸ್.ಎಸ್.ಎನ್ : ಮುಳಬಾಗಿಲು ತಾಲ್ಲೂಕು

ಕ್ರ. ಸಂ.	ಫಲಾನುಭವಿಯ ಹೆಸರು	ಗ್ರಾಮ	ಶೇ. 5 ನೀಡಿರುವ ಮೊತ್ತ
1.	ಎಂ.ವೆಂಕಟರಾಮರೆಡ್ಡಿ	ವಿ.ನಾಗರೆಡ್ಡಿಹಳ್ಳಿ	306
2.	ಹೆಚ್.ಗೋವಿಂದಪ್ಪ	ಬಂಡಾರಹಳ್ಳಿ	328
3.	ಬಿ.ಪಿ.ಮೃಂತ್ಯುಂಜಯ	ಮಾಂಬರಹಳ್ಳಿ	1041
4.	ಎಸ್.ನಾರಾಯಣ್ ರೆಡ್ಡಿ	ರಾಮಪುರ	537
5.	ಕೆಂಪಣ್ಣ	ಗುಜ್ಜನಹಳ್ಳಿ	750
6.	ಎ.ವೆಂಕಟೇಶಪ್ಪ	"	600
7.	ಪಿ.ಮುನಿಪಾಪಯ್ಯ	ಉತ್ತನೂರು	500
8.	ಅಜೀರ್ ಸಾಬ್	"	200
9.	ಎನ್.ಕ್ರಿಷ್ಣಪ್ಪ	"	500
10.	ಕೆ.ವೆಂಕಟಾಚಲಪತಿ	ಮುಡಿಯನೂರು	150
11.	ಎಂ.ನಾರಾಯಣಶೆಟ್ಟಿ	ಬಂಡಾರಹಳ್ಳಿ	708
12.	ಬಿ.ವೆಂಕಟೇಶಗೌಡ	ಜೆ.ಮಮ್ಮಸಂದ್ರ	750
13.	ಪಿ.ಎಂ.ಲಕ್ಷ್ಮಿರೆಡ್ಡಿ	ಮೊಂಬರಹಳ್ಳಿ	500
14.	ಜಿ.ವಿ.ವೆಂಕಟಪ್ಪ	ಗುಜ್ಜನಹಳ್ಳಿ	529
15.	ನಾಗರಾಜಪ್ಪ	ಮುಡಿಯನೂರು	603
16.	ಎ.ರಾಮಯ್ಯ	ಉತ್ತನೂರು	233

17.	ವಿ.ಜಿ.ದಾಸಯ್ಯ	”	200
18.	ಎ.ಮುನಿಯಪ್ಪ	”	1000
19.	ಎಂ.ವರದಪ್ಪ	”	333
20.	ಎಂ.ವೆಂಕಟರಮಣರೆಡ್ಡಿ	ಪೊಂಬರಹಳ್ಳಿ	137
21.	ಎನ್.ಮುನಿಯಪ್ಪ	ಉತ್ತನೂರು	612
22.	ಬಿ.ಎಂ.ವೆಂಕಟಗಿರಿಯಪ್ಪ	ಬಂಡಾರಹಳ್ಳಿ	395
23.	ನಾರಾಯಣಪ್ಪ	”	625
24.	ವೆಂಕಟರಾಮಪ್ಪ	ಕೆಂಚನಹಳ್ಳಿ	800
25.	ಕೆ.ಎಂ.ವೀರಪ್ಪ	ಉತ್ತನೂರು	1950
26.	ಕೆ.ವೆಂಕಟೇಶಯ್ಯ	”	1400
27.	ಶ್ರೀಮತಿ ಲಕ್ಷೀದೇವಮ್ಮ	ಕೆಂಚನಹಳ್ಳಿ	1400
28.	ವೆಂಕಟೇಶಪ್ಪ	ಗುಜ್ಜನಹಳ್ಳಿ	2250
29.	ಶ್ರೀನಿವಾಸಪ್ಪ	ವಿ.ನಾಗಂಡಹಳ್ಳಿ	1800
30.	ಚನ್ನಕ್ರಿಷ್ಣಪ್ಪ	ವಾನಿಗಾನಹಳ್ಳಿ	2400
31.	ಚಂಗಲರಾಯಪ್ಪ	”	2400
32.	ವೆಂಕಟಪ್ಪ	ಕೃಷ್ಣಗಿರಿ	2250
33.	ನಾರಾಯಣಪ್ಪ	ಗುಜ್ಜನಹಳ್ಳಿ	2400
34.	ಕ್ರಿಷ್ಣಪ್ಪ	”	1950
35.	ಮುನಿಸ್ವಾಮಿ	ಬೆಸ್ತರಹಳ್ಳಿ	2250
36.	ಕದಿರಪ್ಪ	ಕೃಷ್ಣಗಿರಿ	2400
37.	ವೆಂಕಟಪ್ಪ	ವಾನಿಗಾನಹಳ್ಳಿ	1800
38.	ವೆಂಕಟಮ್ಮ	ಬೆಸ್ತರಹಳ್ಳಿ	1800
39.	ಶ್ರೀನಿವಾಸ	ಬೆಸ್ತರಹಳ್ಳಿ	2400
40.	ಪಾರ್ವತಮ್ಮ	ಕ್ರಿಷ್ಣಗಿರಿ	2100
41.	ವೆಂಕಟೇಶಪ್ಪ	ಮುಡಿಯನೂರು	1800
42.	ರಾಮಪ್ಪ	”	2250
43.	ನಾರಾಯಣಶೆಟ್ಟಿ	ಶಿವನಾರಹಳ್ಳಿ	1950
44.	ಮುನಿರಾಮ	ನಲ್ಲಾಂಡ್ಲಹಳ್ಳಿ	2250
45.	ಜಯಮ್ಮ	”	2250
46.	ಮುನಿವೆಂಕಟಶ್ವಾಮಿ	ಮೊಂಬರಹಳ್ಳಿ	2400
47.	ವೆಂಕಟಪ್ಪ	ರಾಮಪುರ	1950
48.	ಗೋಪಾಲಪ್ಪ	ವಿ. ನಾಗರೆಡ್ಡಿಹಳ್ಳಿ	2400
49.	ಶ್ರೀರಾಮ	ಹೊಸೂರು	2100
50.	ಚಿನ್ನಮ್ಮ	”	2400
51.	ವೆಂಕಟರಾಮಪ್ಪ	ಕ್ರಿಷ್ಣಗಿರಿ	2100
52.	ಮುನಿಯಪ್ಪ	ವಾನಿಗಾನಹಳ್ಳಿ	2250
53.	ನಾರಾಯಣಸ್ವಾಮಿ	ಉತ್ತನೂರು	1800

54.	ಚಂದ್ರಪ್ಪ	ಕೆಂಚದಹಳ್ಳಿ	1500
55.	ಚನ್ನರಾಯಪ್ಪ	”	2100
56.	ಮುನೀರಪ್ಪ	ಹೊಸೂರು	1500
57.	ಮುನಿವೆಂಕಟಪ್ಪ	”	2100
58.	ವೆಂಕಟಶ್ಯಾಮಪ್ಪ	ಕ್ರಿಷ್ಣಗಿರಿ	2400
59.	ಬೈಚನ್ನ	ಹೊಸೂರು	2250
60.	ಸೊಣ್ಣಪ್ಪ	ಮುಡಿಯನೂರು	1800
61.	ಸಂಜೀವಪ್ಪ	ಗುಜ್ಜನಹಳ್ಳಿ	2100
62.	ಸುಬ್ಬಯ್ಯ	ಮೊಂಬರಹಳ್ಳಿ	2400
63.	ಲಕ್ಷ್ಮಮ್ಮ	ಕ್ರಿಷ್ಣಾಪುರ	1950
64.	ಪಾಪಮ್ಮ	ಬೆಸ್ತರಹಳ್ಳಿ	2100
65.	ಯರ್ರಪ್ಪ	”	2250
66.	ನಂಜಪ್ಪ	ಕೆಂಚದಹಳ್ಳಿ	2400
67.	ಅಪ್ಪೋಜಪ್ಪ	ಕ್ರಿಷ್ಣಗಿರಿ	1800
68.	ನಾರಾಯಣಪ್ಪ	ನಲ್ಲಾಂಡ್ಲಹಳ್ಳಿ	1950
67.	ನಾರಾಯಣಪ್ಪ	ನಲ್ಲಾಂಡ್ಲಹಳ್ಳಿ	1950
68.	ನಾರಾಯಣಪ್ಪ	ಚಿಕ್ಕದಹಳ್ಳಿ	2250
69.	ರಾಮಕ್ರಿಷ್ಣಪ್ಪ	ಚಿಕ್ಕದಹಳ್ಳಿ	2250
70.	ವಿಶ್ವನಾಥ	”	2400
71.	ಹನುಮಪ್ಪ	ರಾಮಪುರ	1950
72.	ಗೋವಿಂದಪ್ಪ	ಕೆಂಚದಹಳ್ಳಿ	2100
73.	ವೆಂಕಟನಬೋವಿ	ಹೊಸೂರು	2250
74.	ಪೂಜಪ್ಪ	ಶಿವನಾರಹಳ್ಳಿ	1800
75.	ರಾಮಕ್ಕ	ಮೊಂಬರಹಳ್ಳಿ	2400
76.	ಮುನಿರಾಜಪ್ಪ	ಮುಡಿಯನೂರು	1950
77.	ಬೈರಪ್ಪ	ವಾನಿಗಾನಹಳ್ಳಿ	2250
78.	ಲಕ್ಷ್ಮಪ್ಪ	ವಿ.ನಾಗಿರೆಡ್ಡಿಹಳ್ಳಿ	2100
79.	ಮುನಿನಾರಾಯಣಪ್ಪ	”	2400
80.	ಈರಪ್ಪ	ಹೊಸೂರು	1800
81.	ತಿಮ್ಮಪ್ಪ	”	1950
82.	ಮುದ್ದಪ್ಪ	ಗುಜ್ಜಮಾರಾಂಡಹಳ್ಳಿ	2250
83.	ಶೀನಪ್ಪ	”	2100
84.	ರಾರೆಪ್ಪ	ರಾಮಪುರ	2400
85.	ರೆಡ್ಡಪ್ಪ	ಚಿಕ್ಕನಹಳ್ಳಿ	1800
86.	ಶಾಮಪ್ಪ	ನಲ್ಲಾಂಡ್ಲಹಳ್ಳಿ	2250
	ಒಟ್ಟು	ರೂ.	143342

ಮುಳಬಾಗಿಲು ತಾಲ್ಲೂಕು

ಕ್ರಮ ಸಂಖ್ಯೆ	ಫಲಾನುಭವಿಯ ಹೆಸರು	ಗ್ರಾಮ	ಶೇಕಡ 5 ನೀಡಿರುವ ಮೊತ್ತ
ದೊಮ್ಮಸಂದ್ರ ವಿ.ಎಸ್.ಎಸ್.ಎನ್			
1.	ಕೆ.ರಾಮಪ್ಪ	ಕೀಲಗಾಣ	2,330-00
2.	ಮುನಿವೆಂಕಟಪ್ಪ	ದೊಡ್ಡಗುಟ್ಟಹಳ್ಳಿ	2,330-00
3.	ಎಂ.ಸಿ.ಕೃಷ್ಣಪ್ಪ	ಮೇಲಾಗಾಣ	1,895-00
4.	ಲಕ್ಷ್ಮಯ್ಯ	"	2,330-00
5.	ಪಿ.ಕೆ.ಹನುಮಪ್ಪ	ದೊಮ್ಮಸಂದ್ರ	1,895-00
6.	ಹನುಮಪ್ಪ	ಮೇಲಗಾಣ	2,330-00
7.	ಮುನಿಹನುಮಪ್ಪ	ದೊಮ್ಮಸಂದ್ರ	1,120-00
8.	ಎ.ಡಿ.ದೊಡ್ಡತಿಮ್ಮಪ್ಪ	ಕೀಲಗಾಣ	1,895-00
9.	ಕದಿರಮ್ಮ	ದೊಮ್ಮಸಂದ್ರ	2,330-00
10.	ಎ.ಕೆ.ಗಂಗಪ್ಪ	"	1,120-00
11.	ಬಿ.ಗೋಪಾಲಪ್ಪ	"	2,380-00
12.	ಕೆ.ಸುಬ್ಬನ್ನ	ಡಿ.ಕುರುಬರಹಳ್ಳಿ	2,330-00
13.	ಕೊರಣ ರಾಮಪ್ಪ	"	1,895-00
14.	ಎ.ಕೆ.ಮುನಿಯಪ್ಪ	ದೊಡ್ಡಗುಟ್ಟಹಳ್ಳಿ	1,120-00
15.	ಪಿ.ಕೆ.ವೆಂಕಟಪ್ಪ	ದೊಮ್ಮಸಂದ್ರ	2,330-00
16.	ಡಿ.ಎಸ್.ಸೋಮಶೇಖರ್	"	2,330-00
17.	ರಮೇಶ್.ಬಿ.	"	1,120-00
18.	ದೋಬಿ ರಾಮಪ್ಪ	ಮಲ್ಲಕಚ್ಚನಹಳ್ಳಿ	1,895-00
19.	ಡಿ.ಎನ್.ವೆಂಕಟೇಗೌಡ	ದೊಮ್ಮಸಂದ್ರ	800-00
20.	ಎಂ.ಎಸ್.ಶಿವಣ್ಣ	ನಾಗಮಂಗಲ	800-00
21.	ಮುನಿವೆಂಕಟಪ್ಪ	ದೊಡ್ಡಗುಟ್ಟಹಳ್ಳಿ	1,000-00
22.	ಚಂಗನಬೋವಿ	ನಾಗಮಂಗಲ	1,120-00
23.	ಮುನೆಪ್ಪ	ಕೀಲಗಾಣ	1,120-00
24.	ನರಸಿಂಹಪ್ಪ	ದೊಮ್ಮಸಂದ್ರ	1,120-00
25.	ವೆಂಕಟೇಶಪ್ಪ	"	940-00
26.	ತಾತನ್ನ	"	980-00
27.	ಷೇಕ್‌ಅಮೀರ್ ಜಾನ್	ಕಾಡಕಚ್ಚನಹಳ್ಳಿ	1,120-00
28.	ಮುನಿರಾಮಯ್ಯ	ಸಂಗಂಡಹಳ್ಳಿ	1,895-00
29.	ವೆಂಕಟರಾಮಯ್ಯ	ಮೇಲಗಾಣಿ	1,895-00
30.	ಮುನಿಸೊಣ್ಣಪ್ಪ	ಡಿ.ಕುರಬರಹಳ್ಳಿ	2,337-00
31.	ರಾಜಪ್ಪ	ಕೀಲಗಾಣಿ	1,895-00
32.	ಸೊಣ್ಣಪ್ಪ	ಮೇಲಗಾಣಿ	1,895-00

33.	ಶಿವರಾಜು	ಕಾಡಕಚ್ಚನಹಳ್ಳಿ	2,330-00
34.	ಕಿಟ್ಟಪ್ಪ	ದೊಮ್ಮಸಂದ್ರ	1,895-00
35.	ಮುನಿವೆಂಕಟಪ್ಪ	ನಾಗಮಂಗಲ	1,895-00
36.	ರತ್ನಪ್ಪ	ಬೆಳಗಾನಹಳ್ಳಿ	2,330-00
37.	ನಾರಾಯಣ	ಸಂಗಂಡಹಳ್ಳಿ	1,895-00
38.	ಶಂಕರಪ್ಪ	ಮಲ್ಲಕಚ್ಚನಹಳ್ಳಿ	1,895-00
39.	ಮುನೆಮ್ಮ	ಚೊಕ್ಕದೊಡ್ಡಿ	1,895-00
40.	ಗಂಟ್ಲಪ್ಪ	ನಾಗಮಂಗಲ	2,330-00
41.	ಸೋಮಯ್ಯ	ಕೆ.ಕೆ.ಹಳ್ಳಿ	1,895-00
42.	ವೆಂಕಟಮುನೆಪ್ಪ	ಚಿಕ್ಕಗುಟ್ಟಹಳ್ಳಿ	2,330-00
43.	ವೆಂಕಟರಾಮೇಗೌಡ	ಚೊಕ್ಕದೊಡ್ಡಿ	1,895-00
44.	ಕೊಂಡಮ್ಮ	ದೊಡ್ಡಗುಟ್ಟಹಳ್ಳಿ	1,120-00
45.	ಮುನೆಪ್ಪ	ಮೇಲಗಾಣಿ	2,330-00
46.	ಮುನಿರತ್ನಪ್ಪ	ಕಾಡಕಚ್ಚನಹಳ್ಳಿ	1,895-00
47.	ಆರ್.ಶ್ರೀನಿವಾಸ	ದೊಡ್ಡಗುಟ್ಟಹಳ್ಳಿ	2,330-00
48.	ರಾಮಯ್ಯ	ಚಿಕ್ಕಗುಟ್ಟಹಳ್ಳಿ	1,895-00
49.	ಪಿ.ಸಿ.ಸುಬ್ರಮಣಿ	ನಾಗಮಂಗಲ	2,330-00
50.	ಬಿ.ಎಂ.ರಾಮಕೃಷ್ಣಪ್ಪ	ದೊಮ್ಮಸಂದ್ರ	1,264-00
51.	ಮುದ್ದಪ್ಪ	ಮಲ್ಲಕಚ್ಚನಹಳ್ಳಿ	950-00
52.	ದೇವಮ್ಮ	ಬೆಳಗಾನಹಳ್ಳಿ	800-00
53.	ಬಿ.ಎಂ.ವೆಂಕಟರಮಣಪ್ಪ	"	900-00
54.	ಕೆ.ವಿ.ನಾಗರಾಜು	ದೊಮ್ಮಸಂದ್ರ	1,264-00
55.	ಮುನಿಶಾಮಿ	ಸಂಗಂಡಹಳ್ಳಿ	950-00
56.	ಗುರಪ್ಪ	"	950-00
57.	ಬಿ.ನಾರಾಯಣಪ್ಪ	"	800-00
58.	ಎಂ.ಹೆಚ್.ವೆಂಕಟಸ್ವಾಮಿ	ಮೇಲಗಾಣಿ	800-00
59.	ಬಿ.ವೆಂಕಟಪ್ಪ	ದೊಮ್ಮಸಂದ್ರ	900-00
60.	ವೆಂಕಟರಾಮರೆಡ್ಡಿ	ನಾಗಮಂಗಲ	700-00
61.	ಆರ್.ರಾಮಪ್ಪ	ಕೆ.ಕೆ.ಹಳ್ಳಿ	800-00
62.	ಎಸ್.ಗುಟ್ಟಪ್ಪ	ಸಂಗಂಡಹಳ್ಳಿ	1,264-00
63.	ಚಿನ್ನಪ್ಪಯ್ಯ	ದೊಮ್ಮಸಂದ್ರ	1,264-00
64.	ಜಿ.ನಾಗರಾಜು	ಚೊಕ್ಕದೊಡ್ಡಿ	700-00
65.	ಇಮಾಂಸಾಬ್	ಮಲ್ಲಕಚ್ಚನಹಳ್ಳಿ	950-00
66.	ರಾಮಪ್ಪ	ದೊಡ್ಡುಟ್ಟಹಳ್ಳಿ	700-00
67.	ಅಬ್ದುಲ್ ರಜಾಕ್ ಸಾಬ್	ಬೆಳಗಾನಹಳ್ಳಿ	900-00
68.	ಚಿಕ್ಕಮುನಿಸ್ವಾಮಿ	ಕಾಡುಕಚ್ಚನಹಳ್ಳಿ	1,264-00
69.	ಎಸ್.ವಿ.ಮುನೆಪ್ಪ	ದೊಮ್ಮಸಂದ್ರ	1,666-00

70.	ನಾರಾಯಣಗೌಡ	ಮೇಲಗಾಣಿ	700-00
71.	ಎಸ್.ಬಯ್ಯಣ್ಣ	ಸಂಗಂಡಹಳ್ಳಿ	500-00
72.	ಬಿ.ಮುನಿವೆಂಕಟಪ್ಪ	ದೊಡ್ಡಗುಟ್ಟಹಳ್ಳಿ	900-00
73.	ಕೆ.ಎಸ್.ಚಂಗಪ್ಪ	ನಾಗಮಂಗಲ	900-00
74.	ಚನ್ನರಾಯಪ್ಪ	ದೊಡ್ಡಗುಟ್ಟಹಳ್ಳಿ	700Ë00
75.	ಡಿ.ಎಸ್.ಸೋಮಶೇಖರ ರೆಡ್ಡಿ	-	1,350-00
76.	ಸೊಣ್ಣಪ್ಪ	ದೊಮ್ಮಸಂದ್ರ	1,350-00
77.	ಎಂ.ನಾರಾಯಣಪ್ಪ	ಸಂಗಂಡಹಳ್ಳಿ	1666-00
78.	ಡಿ.ಎಸ್.ವೆಂಕಟೇಗೌಡ	ದೊಮ್ಮಸಂದ್ರ	1,264-00
79.	ಶ್ರೀರಾಮಪ್ಪ	"	1,666-00
80.	ಸಿದ್ದಪ್ಪ ನಾಯುಡು	ಸಂಗಂಡಹಳ್ಳಿ	900-00
81.	ಕೆ.ರಾಮಪ್ಪ	ಕೀಲಗಾಣಿ	750-00
82.	ಬಿ.ನಾರಾಯಣಪ್ಪ	ಸಂಗಂಡಹಳ್ಳಿ	750-00
83.	ಕೆಂಪಮ್ಮ	ಕೀಲಗಾಣಿ	600-00
84.	ಚಿನ್ನಾಸಾಬಿ	ಬೆಳಗಾನಹಳ್ಳಿ	684-00
85.	ಪಿ.ಕೃಷ್ಣಪ್ಪ	ದೊಮ್ಮಸಂದ್ರ	1,064-00
86.	ತಿಮ್ಮಕ್ಕ	ಕಾಡುಕಚ್ಚನಹಳ್ಳಿ	450-00
87.	ಚಿನ್ನಬಿಡ್ಡಪ್ಪ	ಕೀಲಗಾಣಿ	900-00
88.	ಎಂ.ಹೆಚ್.ಚಿನ್ನನ್ನಗೌಡ	ಮೇಲಗಾಣಿ	750-00
89.	ಕೃಷ್ಣಮ್ಮ	ದೊಮ್ಮಸಂದ್ರ	750-00
90.	ಎಸ್.ವೆಂಕಟರಾಮೇಗೌಡ	ಸಂಗಂಡಹಳ್ಳಿ	900-00
91.	ಬಿ.ಲಕ್ಷ್ಮಯ್ಯ	ಕೀಲಗಾಣಿ	900-00
92.	ಕೆ.ಮುನಿಸ್ವಾಮಿ	ದೊಮ್ಮಸಂದ್ರ	684-00
93.	ಅಬ್ದುಲ್ ಸತ್ತಾರ್	ಬೆಳಗಾನಹಳ್ಳಿ	750-00
94.	ದೋಬಿ ವೆಂಕಟೇಶಪ್ಪ	ದೊಮ್ಮಸಂದ್ರ	900-00
95.	ಎಂ.ಕೃಷ್ಣಪ್ಪ	ವಟ್ಟಕುಂಟೆ	750-00
96.	ಬಿ.ಎಂ.ಕೃಷ್ಣಪ್ಪ	ಬೆಳಗಾನಹಳ್ಳಿ	750-00
97.	ರಾಮಕ್ಕ	ದೊಡ್ಡಗುಟ್ಟಹಳ್ಳಿ	750-00
98.	ಎ.ಕೆ.ಗಂಗಪ್ಪ	ದೊಮ್ಮಸಂದ್ರ	750-00
99.	ಪಾಪಣ್ಣ	ನಾಗಮಂಗಲ	900-00
100.	ವೆಂಕಟರಮಣಪ್ಪ	ದೊಮ್ಮಸಂದ್ರ	750-00
101.	ಜಿ.ಮುನಿಯಪ್ಪ	ಸಂಗಂಡಹಳ್ಳಿ	1,200-00
102.	ವೆಂಕಟರಮಣಪ್ಪ	ದೊಮ್ಮಸಂದ್ರ	750-00
103.	ಮುನಿಗಂಗಪ್ಪ	ನಾಗಮಂಗಲ	750-00
104.	ಅಡೆಪ್ಪ	"	750-00
105.	ವೆಂಕಟಸ್ವಾಮಿ	ಕೀಲಗಾಣಿ	900-00
106.	ನಾರಾಯಣಪ್ಪ	ಮೇಲಗಾಣಿ	750-00

107.	ಡಿ.ತಿಮ್ಮಲಪ್ಪ	ಬೆಳಗಾನಹಳ್ಳಿ	900-00
108.	ಕೆ.ವೆಂಕಟಸ್ವಾಮಿ	ಕೀಲಗಾಣಿ	1,200-00
109.	ಡಿ.ಎಸ್.ಸೋಮಶೇಖರ ರೆಡ್ಡಿ	ದೊಮ್ಮಸಂದ್ರ	1,150-00
110.	ಸೊಣ್ಣಪ್ಪ	”	1,150-00
111.	ಬಿ.ವಿ.ಸುರೇಂದ್ರನಾಥ ರೆಡ್ಡಿ	-	1,234-00
	ಒಟ್ಟು		**1,46,105-00**

ನಂಗಲಿ ದೊಡ್ಡ ಪ್ರಮಾಣದ ಸಹಕಾರ ಸಂಘ ನಿಯಮಿತ, ನಂಗಲಿ. ಮುಳಬಾಗಿಲು ತಾಲ್ಲೂಕು.

ಕ್ರಮ ಸಂಖ್ಯೆ	ಫಲಾನುಭವಿಯ ಹೆಸರು	ಗ್ರಾಮ	ಶೇಕಡ 5 ನೀಡಿರುವ ಮೊತ್ತ
1.	ಬಿ.ನರಸಿಂಹ ರೆಡ್ಡಿ	ಎನ್.ಚಮಕಲಹಳ್ಳಿ	1,113-00
2.	ಎಸ್.ವೆಂಕಟಪತಿ	ಸೀಗೆಹೊಸಹಳ್ಳಿ	1,600-00
3.	ಮುನಿವೆಂಕಟಮ್ಮ	ಎಲುವಹಳ್ಳಿ	800-00
4.	ಬಂಗಾರಪ್ಪ	ಕೆರಸಮಂಗಲ	450-00
5.	ಎಂ.ರಾಮರೆಡ್ಡಿ ಎನ್.	ವೆಂಕಟಪುರ	450-00
6.	ಡಿ.ವಿ.ಜನಾರ್ಧನಶೆಟ್ಟಿ	ನಂಗಲಿ	866-00
7.	ಎಂ.ವೆಂಕಟಪ್ಪ	ಕೆರಸಮಂಗಲ	850-00
8.	ಏಕಾಂಬರಮ್	ನಂಗಲಿ	600-00
9.	ಎಂ.ಜಿ.ಮುನಿರೆಡ್ಡಿ	ಎನ್.ಚಮಕಲಹಳ್ಳಿ	562-00
10.	ಸಿ.ಪಾಪಿರೆಡ್ಡಿ	ಎಲುವಹಳ್ಳಿ	1,464-00
11.	ಸಿ.ಸೋಮಪ್ಪರೆಡ್ಡಿ	”	1,156-00
12.	ಚಂದ್ರಶೇಖರ ರೆಡ್ಡಿ	”	1,166-00
13.	ಕೆ.ಗುರವಿರೆಡ್ಡಿ	ಎನ್.ವೆಂಕಟಪುರ	775-00
14.	ಲಕ್ಷ್ಮಿದೇವಮ್ಮ	ಗಡ್ಡೂರು	450-00
15.	ಕೆ.ಮುನಿಯಪ್ಪ	ಹೊಲಿಕುಪ್ಪ	1,109-00
16.	ಎಂ.ಸಿ.ವೆಂಕಟಮುನಿಯಪ್ಪ	ಮುಡುಗೆರೆ	292-00
17.	ಜಿ. ರಂಗಾರೆಡ್ಡಿ	ಎಲುವಳ್ಳಿ	495-00
18.	ಚಂಗಲರಾಯಪ್ಪ	”	141-00
19.	ವೀರಸ್ವಾಮಿ	ನಂಗಲಿ	366-00
20.	ಬಿ.ಮಾಧವರಾವ್	”	916-00
21.	ಸಿ.ಕೃಷ್ಣರೆಡ್ಡಿ	ಎಲುವಹಳ್ಳಿ	875-00
22.	ತಿಮ್ಮಯ್ಯ	ಕಂಡಹಳ್ಳಿ	1,166-00
23.	ಎ.ಎನ್.ಲಕ್ಷ್ಮಣ	ನಂಗಲಿ	604-00
24.	ಮಾಪುರಿ ರೆಡ್ಡಿ	ಎನ್.ಚಮಕಲಹಳ್ಳಿ	550-00
25.	ಚಿನ್ನಮುನೆಪ್ಪ	ಹಳೆಕುಪ್ಪ	437-00

26.	ನ್ಯಾತಮ್ಮ	ಕೊತಸು	800-00
27.	ಡಿ.ಚಿದಂಬರಾಚಾರಿ	ನಂಗಲಿ	1,417-00
28.	ಧನಪಾಲ್‌ನಂಗಲಿ	ನಂಗಲಿ	367-00
29.	ನಾರಾಯಣರೆಡ್ಡಿ	ಎಲುವಹಳ್ಳಿ	1,171-00
30.	ಚಂಗಲರಾಯಮುದಲಿಯಾರ್	ನಂಗಲಿ	400-00
31.	ಬಿ.ನರಸಿಂಹರೆಡ್ಡಿ	ಎನ್.ಚಮಕಲಹಳ್ಳಿ	708-00
32.	ಬಿ.ನಾರಾಯಣರೆಡ್ಡಿ	ಗಡ್ಡೂರು	1,433-00
33.	ಗಂಗಿರೆಡ್ಡಿ	ಎನ್.ಎಲುವಹಳ್ಳಿ	892-00
34.	ಕೆ.ಎನ್.ಶಂಕರನಾರಾಯಣ	ನಂಗಲಿ	904-00
35.	ಎಂ.ವೆಂಕಟಪ್ಪ	ಕೆರಸಮಂಗಲ	450-00
36.	ಸಿ.ಅಪ್ಪಿ ರೆಡ್ಡಿ	ನಂಗಲಿ	517-00
37.	ಸಿ.ವೆಂಕಟಮುನಿರೆಡ್ಡಿ	ಎಲುವಹಳ್ಳಿ	1,033-00
38.	ಮುನಿವೆಂಕಟಪ್ಪ	ಹಳೆಕುಪ್ಪ	1,033-00
39.	ಎಲ್.ರಾಮಪ್ಪ	ಕುರಬರಹಳ್ಳಿ	441-00
40.	ಬಿ.ವಿ.ಜನಾರ್ಧನಶೆಟ್ಟಿ	ನಂಗಲಿ	441-00
41.	ನಾರಾಯಣಪ್ಪ	ಹಳೆಕುಪ್ಪ	517-00
42.	ಪದ್ಮಾವತಮ್ಮ	ನಂಗಲಿ	1,033-00
43.	ಮೊಹಿದಿಖಾನ್	ನಂಗಲಿ	510-00
44.	ಎಂ.ರಾಮಕ್ರಪ್ಪರೆಡ್ಡಿ	ಸೀಗೆಹೊಸಹಳ್ಳಿ	795-00
45.	ಎಂ.ರಾಮರೆಡ್ಡಿ	ವೆಂಕಟಪುರ	120-00
46.	ಕೆ.ಗುರವಿರೆಡ್ಡಿ	ವೆಂಕಟಪುರ	375-00
47.	ಎಸ್.ಬಿ.ನಾರಾಯಣರೆಡ್ಡಿ	ಸೀಗೆಹೊಸಹಳ್ಳಿ	1,389-00
48.	ಎ.ಕೆ.ನಾರಾಯಣಪ್ಪ	ಸೀಗೆಹೊಸಹಳ್ಳಿ	446-00
49.	ಬಿ.ವಿ.ಸತ್ಯನಾರಾಯಣಶೆಟ್ಟಿ	ನಂಗಲಿ	743-00
50.	ಎನ್.ಎಲ್.ಸುಬ್ಬರಾಯಪ್ಪ	ನಂಗಲಿ	943-00
51.	ಕೆ.ವೆಂಕಟರಾಮರೆಡ್ಡಿ	ನಂಗಲಿ	624-00
52.	ಎ.ಎನ್.ಲಕ್ಷ್ಮಣ್.	ನಂಗಲಿ	360-00
53.	ಹೆಚ್.ಪಾಪಣ್ಣನಾಯ್ಡು	ಗಡ್ಡೂರು	670-00
54.	ವೆಂಕಟಪ್ಪ	ಹಳೆಕುಪ್ಪ	786-00
55.	ಪಿ.ವೆಂಕಟೇಶಪ್ಪ	ಹಳೆಕುಪ್ಪ	629-00
56.	ಎಸ್.ವೆಂಕಟರಾಮಪ್ಪ	ನಂಗಲಿ	1,090-00
57.	ಬಿ.ಮುನಿಸ್ವಾಮಪ್ಪ	ಹಳೆಕುಪ್ಪ	550-00
58.	ಬಿ.ಜಿ.ಮುನಿಸ್ವಾಮಿ	ಹಳೆಕುಪ್ಪ	1,217-00
59.	ವೆಂಕಟರವಣಪ್ಪ	ತೊಂಡಪಲ್ಲಿ	365-00
	ಒಟ್ಟು	**ರೂ.**	**44,673-00**

ಮುಳಬಾಗಿಲು ತಾಲ್ಲೂಕು

ಕ್ರಮ ಸಂಖ್ಯೆ	ಫಲಾನುಭವಿಯ ಹೆಸರು	ಗ್ರಾಮ	ಶೇಕಡ 5 ನೀಡಿರುವ ಮೊತ್ತ
1	2	3	4
ಮಲ್ಲನಾಯಕನಹಳ್ಳಿ ವಿ.ಎಸ್.ಎಸ್.ಎನ್			
1.	ಮುನಿವೆಂಕಟಪ್ಪ	ಎಂ.ಎನ್.ಹಳ್ಳಿ	683-00
2.	ಬೂಪತಿ	ಸಿನಿಗಿಹಳ್ಳಿ	1,250-00
3.	ಯರ್‍ರನಬೋವಿ	ರಾಮಚಂದ್ರಪುರ	1,000-00
4.	ವೆಂಕಟೇಶ್ಗೌಡ	ಸಿನಿಗಿಹಳ್ಳಿ	1,125-00
5.	ರಾಯಲಪ್ಪ	,,	750-00
6.	ಶ್ರೀನಿವಾಸಯ್ಯ	ಪುಟ್ಟೇನಹಳ್ಳಿ	1,250-00
7.	ಮುನಿಶಾಮಿ	ಪಾಯಲಸ್ಕಿ ಹಳ್ಳಿ	1,250-00
8.	ಮುನಿವೆಂಕಟಪ್ಪ	ಸಿನಿಗಿಹಳ್ಳಿ	1,250-00
9.	ವೆಂಕಟರಾಮಪ್ಪ	ಯಚ್ಚನಹಳ್ಳಿ	1,250-00
10.	ಶ್ರೀರಾಮಗೌಡ	ಸಿನಿಗಿಹಳ್ಳಿ	750-00
11.	ಅಬ್ದುಲ್ ಖಾದರ್	ಕೆ.ಬೈಯಪಲ್ಲಿ	580-00
12.	ಫನಿಸಾಬಿ	ರಾಮಚಂದ್ರಪುರ	1,250-00
13.	ಸುಬ್ರಮಣಿ	ಕೆ.ಬೈಯಪಲ್ಲಿ	1,000-00
14.	ಚೌಡಪ್ಪ	ಕಸವುಗಾನಹಳ್ಳಿ	460-00
15.	ಮುನನಿಯಪ್ಪ	ಕಮ್ಮಸಂದ್ರ	900-00
16.	ಸಿದ್ದಪ್ಪ	ಕಸವುಗಾನಹಳ್ಳಿ	900-00
17.	ವೆಂಕಟರವಣಪ್ಪ	ಕಮ್ಮಸಂದ್ರ	750-00
18.	ಗುರುಮೂರ್ತಿ ಬೋವಿ	ಯಚ್ಚನಹಳ್ಳಿ	1,166-00
19.	ಪಿ.ಮಾರಪ್ಪ	ಮೋಪುರಹಳ್ಳಿ	683-00
20.	ಎಂ.ವಿ. ಸೀನಪ್ಪ	,,	1,250-00
21.	ಸಿ. ಲಕ್ಷ್ಮೀನಾರಾಯಣಪ್ಪ	ಯಚ್ಚನಹಳ್ಳಿ	1,250-00
22.	ಪಿ.ವಿ. ನಾರಾಯಣಪ್ಪ	ಪುಲಿಪಾಪನಹಳ್ಳಿ	750-00
23.	ಸೂಮರೆಡ್ಡಿ	ರಾಮಚಂದ್ರಪುರ	1,125-00
24.	ವರ್‍ರಮುನಿಶಾಮಿರೆಡ್ಡಿ	ಸಿಗಿನಿಹಳ್ಳಿ	1,125-00
25.	ಬಿ. ವೆಂಕಟೇಶರೆಡ್ಡಿ	ಕಸವುಗಾಹನಹಳ್ಳಿ	1,125-00
26.	ಜಿ. ವೆಂಕಟರವಣಪ್ಪ	ಮೋಪುರಹಳ್ಳಿ	900-00
27.	ಎನ್. ರಾಮಪ್ಪ	ಯಚ್ಚನಹಳ್ಳಿ	1,142-00
28.	ವೆಂಕಟೇಶು	ರಾಮಚಂದ್ರಪುರ	450-00
29.	ಗೋವಿಂದಪ್ಪ	ಕೆ.ಚಿಕ್ಕನಹಳ್ಳಿ	450-00
30.	ಎ. ಸುಬ್ಬನ್ನ	ಬೇವನತ್ತಿ	750-00
31.	ಮುನೆಪ್ಪ	ಭಜುವಾರಹಳ್ಳಿ	450-00

32.	ಹನುಮಪ್ಪ		750-00
33.	ಪಿ.ಎಂ. ಗೋಪಾಲಪ್ಪ	ಪುಲಿಪಾಪೇನಹಳ್ಳಿ	1,000-00
34.	ನಂಜೇಗೌಡ	ರಾಮಚಂದ್ರಪುರ	1,125-00
35.	ಗಂಗಪ್ಪ	ಕಮ್ಮಸಂದ್ರ	1,125-00
36.	ಬಿ.ಎಂ. ವೆಂಕಟಮುನಿರೆಡ್ಡಿ	ಬಜುವಾರಹಳ್ಳಿ	1,125-00
37.	ವಿ. ಗೋಪಾಲಪ್ಪ	”	1,125-00
38.	ಮುನೇಗೌಡ	ರಾಮಚಂದ್ರಪುರ	1,125-00
39.	ಬೂಪತಿ	ಕೆ.ಬೈಯ್ಯಪಲ್ಲಿ	750-00
40.	ಡಿ. ರಾಮಪ್ಪ	ಪಾಯಸ್ತನಹಳ್ಳಿ	450Ë00
41.	ವೆಂಕಟರಾಮಪ್ಪ	ರಾಮಚಂದ್ರಪುರ	900-00
42.	ಎಸ್. ರಾಜಗೋಪಾಲ	ಮೋಪುರಹಳ್ಳಿ	900-00
43.	ಎ. ಬೈರಪ್ಪ	ಶೆಟ್ಟಿಕಲ್ಲು	166-00
44.	ತಿಮ್ಮಣ್ಣ	ಕೆ.ಚಿಕ್ಕನಹಳ್ಳಿ	900-00
45.	ಎ.ಡಿ. ನಾರಾಯಣಪ್ಪ	ಯಚ್ಚನಹಳ್ಳಿ	1,208-00
46.	ಗಂಗಪ್ಪ	”	1,125-00
47.	ಶೇಕ್ ಅಬ್ದುಲ್ ರಹೀಂ	ಮೈಲಾಪುರ	941-00
48.	ಚಂಗಾರೆಡ್ಡಿ	ರಾಯಲಮಾನದಿನ್ನೆ	1,125-00
49.	ಸುಬ್ಬಣ್ಣ	ಕೆ.ಚಿಕ್ಕನಹಳ್ಳಿ	750-00
50.	ಕೆ. ವೆಂಕಟೇಶ ಪಟೇಲ್	ಪೌಯಸ್ತನಹಳ್ಳಿ	1,125-00
51.	ನಾಸಪ್ಪ	”	750-00
52.	ವೆಂಕಟರೆಡ್ಡಿ	ಕಸವುಗಾನಹಳ್ಳಿ	770-00
53.	ಗುರ್ರಪ್ಪ	”	750-00
54.	ಮಹಬೂಬ್ ಸಾಬ್	ಮೈಲಾಪುರ	1,000-00
55.	ಲಕ್ಷ್ಮಮ್ಮ	ಶೆಟ್ಟಿಕಲ್ಲು	900-00
56.	ಸೈಯದ್ ಕರೀಂ	ರಾಮಚಂದ್ರಪುರ	1,000-00
57.	ವೆಂಕಟಸಾಮಿ	ಸಿನಿಗಿಹಳ್ಳಿ	450-00
58.	ಲಕ್ಷ್ಮಯ್ಯ	ಬಜುವಾರಹಳ್ಳಿ	750-00
59.	ಸೈಯದ್ ಆಲಿ	ಕೆ.ಬೈಯಪಲ್ಲಿ	1,125-00
60.	ಬಿ. ಮುನಿವೆಂಕಟಪ್ಪ	ಶೆಟ್ಟಿಕಲ್ಲು	1,333-00
61.	ಮುಗಿಲೆಪ್ಪಶೆಟ್ಟಿ	ಪಾಯಸ್ತನಹಳ್ಳಿ	1,125-00
62.	ಮುನಿವೆಂಕಟಪ್ಪ	ಮಲ್ಲನಾಯಕನಹಳ್ಳಿ	900-00
63.	ವೆಂಕಟಮುನಿ	ಶೆಟ್ಟಿಕಲ್ಲು	1,125-00
64.	ಎಂ.ಎಸ್. ಶ್ರೀನಿವಾಸಯ್ಯ	ಎನ್.ಎನ್.ಹಳ್ಳಿ	1,125-00
65.	ಹೆಚ್. ವೆಂಕಟಪ್ಪ	ಕಮ್ಮಸಂದ್ರ	1,875-00
66.	ಚಂಗಪ್ಪ	ಯಚ್ಚನಹಳ್ಳಿ	1,875-00
67.	ಮುನಿಶಾಮಿ	ಪಾಯಸ್ತನಹಳ್ಳಿ	750-00
68.	ಎಂ. ಸುಬ್ಬಯ್ಯ	ಕಸವುಗಾನಹಳ್ಳಿ	200-00

69.	ವೆಂಕಟರಾಮಪ್ಪ	"	1,125-00
70.	ಪಾಪನ್ನ	ಸಿನಿಗಿಹಳ್ಳಿ	875-00
71.	ಪ್ರಭಾಕರ	ಕಮ್ಮಸಂದ್ರ	958-00
72.	ಮುನಿಶಾಮಿ	"	225-00
73.	ವೆಂಕಟರಾಮಪ್ಪ	"	750-00
74.	ವೆಂಕಟೇಶಪ್ಪ	ಬಟುವಾರಹಳ್ಳಿ	1,125-00
75.	ಎಂ.ಎನ್. ಆಂಜನೇಯಲು	ಎಂ.ಎನ್. ಹಳ್ಳಿ	900-00
76.	ಜಿ. ರಾಮರೆಡ್ಡಿ	ರಾಮಚಂದ್ರಪುರ	958-00
77.	ಎಂ.ಎಸ್. ಕೋದಂಡರಾಮಯ್ಯ	ಎಂ.ಎನ್. ಹಳ್ಳಿ	1,125-00
78.	ರಾಮಕೃಷ್ಣಪ್ಪ	ಕಳವುಗಾನಹಳ್ಳಿ	750-00
79.	ಮುನಿಶಾಮಿ	"	900-00
80.	ಮುನಿವೆಂಕಟಪ್ಪ	ಶೆಟ್ಟಿಕಲ್ಲು	600-00
81.	ವೆಂಕಟರಾಯಪ್ಪ	ಪುಟ್ಟೇನಹಳ್ಳಿ	900-00
82.	ಮುನಿಶಾಮಿ	ಕೆ.ಅಗ್ರಹಾರ	900-00
83.	ರಾಮಪ್ಪ	ಶೆಟ್ಟಿಕಲ್ಲು	1,125-00
84.	ಜಿ. ನಾರಾಯಣಪ್ಪ	ಯಚ್ಚನಹಳ್ಳಿ	375-00
85.	ವೆಂಕಟೇಶು	ರಾಮಚಂದ್ರಪುರ	750-00
86.	ವಸಪ್ಪ	ಶೆಟ್ಟಿಕಲ್ಲು	750-00
87.	ಗಂಗಪ್ಪ	ಕಮ್ಮಸಂದ್ರ	554-00
88.	ವೆಂಕಟನೀಯ	"	1,125-00
89.	ಗುರ್ರಪ್ಪ	ಕೆ.ಚಿಕ್ಕನಹಳ್ಳಿ	750-00
90.	ಮುನಿಶಾಮಿ	ಪೌಯಸ್ತನಹಳ್ಳಿ	1,292-00
91.	ಎ.ಕೆ. ಮುನಿವೆಂಕಟಪ್ಪ	ಸಿನಿಗಿಹಳ್ಳಿ	900-00
92.	ಮುನಿವೆಂಕಟಪ್ಪ	ಶೆಟ್ಟಿಕಲ್ಲು	900-00
93.	ವಿ. ಮುನಿಶಾಮಿ	ಮೋಪುರ ಹಳ್ಳಿ	374-00
94.	ವೆಂಕಟರೆಡ್ಡಿ	ಕಸವುಗಾನಹಳ್ಳಿ	300-00
95.	ಮುನಿಯಪ್ಪ	ಕಮ್ಮಸಂದ್ರ	817-00
96.	ಎಂ.ಎ. ರಾಮಚಂದ್ರಯ್ಯ	ಎಂ.ಎನ್. ಹಳ್ಳಿ	375-00
97.	ಮುನಿಶಾಮಿ	ಎ.ಅಗ್ರಹಾರ	458-00
98.	ಚಂಗಲರಾಯಪ್ಪ	ಯಚ್ಚನಹಳ್ಳಿ	1,000-00
99.	ಹೆಚ್.ವಿ. ಗುರುವಾರೆಡ್ಡಿ	ಜೀವನತ್ತ	916-00
100.	ಮುನಿಯಪ್ಪ	ಕಮ್ಮಸಂದ್ರ	1,200-00
101.	ಶ್ರೀನಿವಾಸಯ್ಯ	ಪುಟ್ಟೇನಹಳ್ಳಿ	583-00
102.	ಮುನಿಶಾಮಿ	ರಾಮಚಂದ್ರಪುರ	250-00
103.	ಪಿ.ವಿ. ಪೂಜಪ್ಪ	ಪುಲಿಪಾಪನಹಳ್ಳಿ	770-00
104.	ವಿ. ಚಂಗಲರಾಯಪ್ಪ	ಯಚ್ಚನಹಳ್ಳಿ	250-00
105.	ಎಂ.ಎಸ್. ಶ್ರೀನಿವಾಸಯ್ಯ	ಎಂ.ಎನ್. ಹಳ್ಳಿ	916-00

106.	ಎಂ. ಸುಬ್ಬಯ್ಯ	ಕಸವುಗಾನಹಳ್ಳಿ	958-00
107.	ಹೆಚ್.ವಿ. ಗುರುವಾರೆಡ್ಡಿ	ಜೀವನತ್ತ	262-00
108.	ಮುನಿವೆಂಕಟಪ್ಪ	ಯಚ್ಚನಹಳ್ಳಿ	812-00
109.	ಪಿ.ಜಿ, ಸೂರ್ಯನಾರಾಯಣಶರ್ಮ	ಎಂ.ಎನ್. ಹಳ್ಳಿ	1,140-00
110.	ನಾರಾಯಣಮ್ಮ	ಜೀವನತ್ತ	1,210-00
111.	ಮುನಿವೆಂಕಟಮ್ಮ	ಪುಲಿಪೌಪೇನಹಳ್ಳಿ	875-00
112.	ಡಿ. ರಾಮಪ್ಪ	ಪೌಯಸ್ತನಹಳ್ಳಿ	770-00
113.	ಮುಗಿಲಪ್ಪ ಶೆಟ್ಟಿ	"	958-00
114.	ಕೆ. ಮುನಿಶಾಮಿ	"	885-00
115.	ಸಿ. ರೆಡ್ಡಪ್ಪ	ಪೌಯಸ್ತನಹಳ್ಳಿ	791-00
116.	ಮುನಿಯಪ್ಪ	ಕಮ್ಮಸಂದ್ರ	1,145-00
117.	ಕೆ.ವೆಂಕಟರಾಯಪ್ಪ	ಪೌಯಸ್ತನಹಳ್ಳಿ	958-00
118.	ಶೇಕ್ ಅಬ್ದುಲ್ರಹೀಂ	ರಾಮಚಂದ್ರಪುರ	1,166-00
119.	ವೆಂಕಟಸ್ವಾಮಿ	ಸಿನಿಗಿಹಳ್ಳಿ	770-00
120.	ಷಪಿ ಸಾಬ್	ರಾಮಚಂದ್ರಪುರ	958-00
121.	ಮುನಿವೆಂಕಟಪ್ಪ	ಕೆ.ಚಿಕ್ಕನಹಳ್ಳಿ	958-00
	ಒಟ್ಟು	ರೂ.	1,08,059-00

ರಾಜ್ಯದಲ್ಲಿ ಒಟ್ಟು ಉದ್ಯಾನವನಗಳು ಹಾಗೂ ಸಿಬ್ಬಂದಿ

612 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿರುವ ಉದ್ಯಾನವನಗಳೆಷ್ಟು ಮತ್ತು ತೋಟಗಳೆಷ್ಟು?

ಆ) ತೋಟ ಮತ್ತು ಉದ್ಯಾನವನಗಳಲ್ಲಿ ಇರುವ ಹಂಗಾಮಿ ನೌಕರರ ಸಂಖ್ಯೆ ಎಷ್ಟು?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ತೋಟಗಾರಿಕೆ ಇಲಾಖಾವತಿಯಿಂದ ಅಭಿವೃದ್ಧಿ ಪಡಿಸಿ ನಿರ್ವಹಣೆ ಮಾಡುತ್ತಿರುವ ಉದ್ಯಾನವನಗಳ ಸಂಖ್ಯೆ :60 ಹಾಗೂ ತೋಟಗಾರಿಕೆ ಕ್ಷೇತ್ರಗಳ ಸಂಖ್ಯೆ :397. ಉದ್ಯಾನವನಗಳು ಮತ್ತು ತೋಟಗಾರಿಕೆ ಕ್ಷೇತ್ರ ಒಟ್ಟು ಸಂಖ್ಯೆ:457.

ಆ) ತೋಟ ಮತ್ತು ಉದ್ಯಾನವನಗಳಲ್ಲಿ ಒಟ್ಟು 1061 ಹಂಗಾಮಿ ನೌಕರರು ಹಾಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಎಲ್ಲಾ ನೌಕರರು ದಿನಾಂಕ :1-7-84ರ ನಂತರ ಕೆಲಸಕ್ಕೆ ಸೇರಿದವರಾಗಿದ್ದು ಇವರನ್ನು 'ಸಿ' ಮತ್ತು 'ಡಿ' ಗ್ರೂಪ್‌ಗಳೆಂದು ವಿಭಾಗಿಸಿದ್ದು, 'ಸಿ' ಗ್ರೂಪ್ ನೌಕರರಿಗೆ ಮಾಸಿಕ ರೂ. 780 ರಂತೆ ಮತ್ತು 'ಡಿ' ಗ್ರೂಪ್ ನೌಕರರಿಗೆ ರೂ. 500ರಂತೆ ವೇತನ ನೀಡಲಾಗುತ್ತಿದೆ.

(ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಉತ್ತರವನ್ನು ಮಂಡಿಸಲಾಯಿತು.)

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

ಬೆಂಗಳೂರಿನ ವೀಲರ್ಸ್ ರಸ್ತೆಯಲ್ಲಿರುವ ಕ್ರಿಕೆಟ್ ಮೈದಾನವನ್ನು ಜಮಖಾನ ಕ್ಲಬ್‌ಗೆ ಲೀಸ್ ಮೇರೆಗೆ ನೀಡಿರುವ ಬಗ್ಗೆ

+ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೇ, ನಾನು ಮೊನ್ನೆಯ ದಿವಸ ತಮ್ಮ ಕೋಣೆಗೆ ಬಂದು ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ತಮ್ಮ ಅನುಮತಿಯನ್ನು ಕೇಳಿದ್ದೆ. ತಾವು ಅವತ್ತಿನ ದಿವಸ ಪ್ರಸ್ತಾಪ ಮಾಡಿ ಎಂದಿರಿ. ಆದರೆ ಈಗ ಬೇರೆಯವರ ಪ್ರಶ್ನೆಗಳು ಬಂದದ್ದರಿಂದ ನನ್ನ ಪ್ರಶ್ನೆಯನ್ನು ನಾಳೆ ತೆಗೆದುಕೊಳ್ಳೋಣ ಎಂದು ಹೇಳಿದ್ದಿರಿ. ಆ ವಿಚಾರವನ್ನು ಈ ಪ್ರಸ್ತಾಪ ಮಾಡಲು ತಮ್ಮನ್ನು ವಿನಂತಿಸುತ್ತೇನೆ.

ಮುಖ್ಯಮಂತ್ರಿಗಳು ಒಂದೊಂದು ಸಾರಿ, ಆಲೋಚನಾ ಪರರಾಗಿ ಭಾವವಶರಾಗಿ ಎಲ್ಲೆಲ್ಲೋ ಸಂಚಾರ ಮಾಡುತ್ತಿರುತ್ತಾರೆ. ಬಹಳ ಸಾರಿ ಅಂಥ ಭಾವನೆಗಳಿಗೆ ಒಳಪಟ್ಟು ಮಾತನಾಡಿದುದರ ಪರಿಣಾಮ ಏನಾಗಿದೆ, ಕಾರ್ಯಗತ ಏನಾಗುತ್ತಿದೆ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

"Parks should remain parks - C.M." ಎಂದು ಹೇಳಿದ್ದಾರೆ. ಎಲ್ಲಿ ಉದ್ಯಾನವನಗಳು ಇವೆ, ಬೆಂಗಳೂರಿನಲ್ಲಿ ಬೇರೆ ರಾಜ್ಯದಲ್ಲಿ ಎಲ್ಲೇ ಆಗಲಿ, ಈ ಉದ್ಯಾವನಗಳು ಉದ್ಯಾನವನಗಳಾಗಿಯೇ ಉಳಿಯಬೇಕೆಂದು ಅಪ್ಪಣೆ ಕೊಡಿಸಿದ್ದಾರೆ. ಅದೇ ರೀತಿ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ದಿನಾಂಕ 22-9-93ರಲ್ಲಿ ಪ್ರಕಟವಾಗಿರತಕ್ಕದ್ದು ಈ ರೀತಿ ಇದೆ : "Truth should prevail, honesty should be held high and corruption should be routed out; That is Moil's style functioning of Chief Minister M. Veerappa Moily said here on Tuesday".

ಅವರು ಇದರಲ್ಲಿ ಬಹಳ ದೊಡ್ಡ ದೊಡ್ಡ ಪದಗಳನ್ನು ಉಪಯೋಗಿಸಿದ್ದಾರೆ. Truth must prevail, Honesty should prevail, corruption should be routed out ಎಂಬ ಪದಗಳನ್ನು ಉಪಯೋಗಿಸಿದ್ದಾರೆ. ಎರಡಕ್ಕೂ ತದ್ವಿರುದ್ಧವಾಗಿರತಕ್ಕ ರೀತಿಯಲ್ಲಿ ಮುಖ್ಯಮಂತ್ರಿಗಳ ಮುಖಂಡತ್ವದಲ್ಲಿರತಕ್ಕ ಸರ್ಕಾರ ನಡೆಮುಕೊಂಡಿರತಕ್ಕ ಅನೇಕ ಉದಾಹರಣೆಗಳು ಇವೆ ಅದರಲ್ಲಿ ಒಂದನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರಕ್ಕೆ ಸಂಬಂಧಪಟ್ಟ ಹಾಗೆ ಕಾಕ್ಸ್‌ಟೌನ್‌ನಲ್ಲಿ ವೀಲರ್ಸ್ ರೋಡ್ ಎಂದು ಇದೆ. ಅಲ್ಲಿ ರಸ್ತೆ ಪಕ್ಕದಲ್ಲಿ ಜಮಖಾನ ಕ್ಲಬ್ ಎಂದು ಇದೆ. ಅದು ಕಾರ್ಪೊರೇಷನ್ನಿಗೆ ಸಂಬಂಧಪಡುತ್ತದೆ. ಅದು ಪುರಾತನ ಕಾಲದಿಂದ ಅಂದರೆ ಬ್ರಿಟಿಷರ ಕಾಲದಿಂದ ಬಂದಿರತಕ್ಕದ್ದು. ಅಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳು ಬಂದು ಭಾಷಣ ಮಾಡಿ ಹೋಗಿದ್ದಾರೆ. ಅದು ವಿಶಾಲವಾದ ಪ್ರದೇಶ ಕೂಡ ಹೌದು. ಅಂಥದ್ದು ಬೆಂಗಳೂರಿನ ಸಿಡಿಪಿ ಮತ್ತು ಒಡಿಪಿ.ಯಲ್ಲಿ ಕ್ರಿಕೆಟ್ ಗ್ರೌಂಡ್ ಎಂದು ಮಾರ್ಕ್ ಆಗಿದೆ. ಅಂಥ ಕಡೆ ಇವತ್ತು ಏನು ನಡೆಯುತ್ತಿದೆ ಎಂದರೆ,

ಹೆಂಡ ಸಾರಾಯಿ ಕುಡಿಯತಕ್ಕ ಬಾರ್ ಅಲ್ಲಿ ನಡೆಯುತ್ತಿರತಕ್ಕದ್ದು. ಸುವ್ಯವಸ್ಥಿತವಾದ ಹೆಂಡ ಸಾರಾಯಿ ಕುಡಿಯತಕ್ಕ ಬಾರ್ ಆಗಿ ಇವತ್ತು ಆ ಕ್ರಿಕೆಟ್ ಫೀಲ್ಡ್ ಮತ್ತು ಆಟದ ಮೈದಾನವಾಗಿರತಕ್ಕದ್ದು ಪರಿವರ್ತನೆಗೊಂಡಿದೆ. ಇದಕ್ಕೆ ಕಾರ್ಪೊರೇಷನ್ನಿನಿಂದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸದೆ ಅದನ್ನು 33 ವರ್ಷಗಳ ಅವಧಿಗೆ ಜಮಖಾನ ಕ್ಲಬ್ ಎಂಬುದಕ್ಕೆ ಬಾಡಿಗೆಗೆ ಕೊಡುತ್ತಾರೆ. ಆ ಬಾಡಿಗೆ ಕಂಡಿಷನ್ ಏನಿದೆ ಎಂದರೆ, ಎಲ್ಲವನ್ನು ಓದುವುದಕ್ಕೆ ಹೋಗುವುದಿಲ್ಲ ಅದರಲ್ಲಿ ಪ್ರಮುಖವಾದುದನ್ನು ಮಾತ್ರ ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. "As per clause 3,

the Lessee shall use the Schedule land only for the purpose of constructing sports and games, no other purpose"

ಇದನ್ನು ತಾವು ದಯವಿಟ್ಟು ಗಮನಿಸಬೇಕು. ಇದನ್ನು ಲೀಸ್‌ಗೆ ಕೊಡತಕ್ಕ ಸಂದರ್ಭದಲ್ಲಿ ಸ್ಪೋರ್ಟ್ಸ್ ಮತ್ತು ಗೇಮ್ಸ್ ಪರ್ಪಸ್‌ಗೆ ಮಾತ್ರ ಈ ಪ್ರದೇಶವನ್ನು ಉಪಯೋಗಿಸಿಕೊಳ್ಳಬೇಕೆಂಬುದು ಲೀಸ್ ಅಗ್ರಿಮೆಂಟಿನಲ್ಲಿದೆ. As per clause 5, the Lessee shall keep the schedule land as open space."ಎಂಬುದು ಕೂಡ ಇವರ ಒಪ್ಪಂದದಲ್ಲಿದೆ. " and shall not put up any permanent structure thereof."

ಅಲ್ಲಿ ಶಾಶ್ವತವಾದ ಕಟ್ಟಡವನ್ನು ಕಟ್ಟಬಾರದೆಂಬುದು ಕೂಡ ಇದೆ; ಮತ್ತು ಓಪನ್ ಸ್ಪೇಸ್‌ಆಗಿ ಇಡಬೇಕೆಂದು ಲೀಸ್ ಅಗ್ರಿಮೆಂಟಿನಲ್ಲಿದೆ. ಇಷ್ಟಿದ್ದರೂ ಸಹ ಅಲ್ಲಿ ಕಟ್ಟಡವನ್ನು ಕಟ್ಟತಕ್ಕ ಪ್ರಯತ್ನ ನಡೆಯಿತು. ನಡೆದ ಮೇಲೆ ಅದಕ್ಕೆ ಇವರು ಕಾರ್ಪೊರೇಷನ್ನಿನಿಂದ ಇದನ್ನು ಬದಲಾವಣೆ ಮಾಡುವುದಕ್ಕೆ ಪರ್ಮಿಷನ್ ಕೊಡಿ ಎಂದು ಬರೆಯುತ್ತಾರೆ. ಅದಕ್ಕೆ ಏನು ಉತ್ತರ ಸರ್ಕಾರದಿಂದ ಹೋಗುತ್ತದೆಂದರೆ 22-6-93ರಲ್ಲಿ ಪತ್ರದ ಕ್ರಮಾಂಕ ಹೆಚ್‌ಯುಡಿ : ಸಿಎಂವೈ :90 ಇದರಲ್ಲಿ "With reference to the above, I am directed to state tthat the play-ground should not be given away for any kind of construction and it should be reserved as such. Hence, the proposal of the Bangalore City Corporation to construct sports complex in the playground is rejected."

(ಉಪಾಧ್ಯಕ್ಷರಾದ ಶ್ರೀ ಅಂಜನಾಮೂರ್ತಿಯವರು ಪೀಠವನ್ನಲಂಕರಿಸಿದರು)

ಸರ್ಕಾರದಿಂದ ಸ್ಪಷ್ಟವಾದ ನಿರ್ದೇಶನ ಹೋಗುತ್ತದೆ. ಇದು ತಾರೀಖು 22-6-93ರಲ್ಲಿ ಆದಾದ ಮೇಲೆ 2-9-93ರಲ್ಲಿ ಮತ್ತೊಂದು ನಿರ್ದೇಶನ ಸರ್ಕಾರದಿಂದ ಹೋಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಅದನ್ನು ನಮಗೆ ಬರೆದು ಗಮನಕ್ಕೆ ತಂದರೆ ನಮಗೆ ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಸಿ. ಬೈರೇಗೌಡ : ಇದನ್ನು ಮುಗಿಸುತ್ತೇನೆ. ಸ್ವಲ್ಪ ಇದೆ.

ಶ್ರೀ ಆರ್.ವಿ. ದೇಶಪಾಂಡೆ : ಅವರು ಸ್ಟಾರ್ಟ್ ಮಾಡಿದ್ದಾರೆ, ಮುಗಿಸುತ್ತಾರೆ. ನಾಳೆ ಕೊಡಿ.

ಶ್ರೀ ಸಿ. ಬೈರೇಗೌಡ : ಸರ್ಕಾರದಿಂದ ಒಂದು ಸಾರಿ ತೀರ್ಮಾನವಾಗಿ, ಅದನ್ನು ಕೊಡಬಾರದು, ಪರ್ಮನೆಂಟ್ ಸ್ಟ್ರಕ್ಚರ್ ಬರಬಾರದು ಅದು ಓಪನ್ನಾಗಿರಬೇಕು ಎಂದು ಇದ್ದರೂ ಸಹ, ಒಂದು ಸಾರಿ ಸರ್ಕಾರದಿಂದ ತಿರಸ್ಕಾರ ಆಗಿದ್ದರೂ ಸಹ 2-9-93ರಲ್ಲಿ ಹೆಂಡ ಸಾರಾಯಿ ಮಾರತಕ್ಕ ಬಾರ್ ಇಟ್ಟುಕೊಂಡಿರುವವರು ಪುನಃ ಪ್ರಯತ್ನಪಡುತ್ತಾರೆ. ಪ್ರಯತ್ನ ಪಟ್ಟು ಸರ್ಕಾರಕ್ಕೆ ಬರೆಯುತ್ತಾರೆ. ಸರ್ಕಾರ ಏನು ಹೇಳುತ್ತದೆಂದರೆ ಇಂಡಿಯನ್ ಜಮಖಾನ ಸಂಸ್ಥೆ, ಬೆಂಗಳೂರು ಇವರು ಕ್ರೀಡಾ ಸಂಕೀರ್ಣ ಕಟ್ಟಡ ಕಟ್ಟಲು ಪರವಾನಗಿ ನೀಡುವ ಬಗ್ಗೆ ಎಂದು ಹೇಳಿ ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಉಲ್ಲೇಖಿತ....

ಉಪಾಧ್ಯಕ್ಷರು : ಮಾನ್ಯ ಬೈರೇಗೌಡರೇ, ಅದೇ ಓದುತ್ತಿದ್ದೀರಿ ನೀವು. ಪತ್ರ ಏನಿದೆ ಅದನ್ನು ತಂದುಕೊಡಿ. ಮಾನ್ಯ ಮುಖ್ಯಮಂತ್ರಿಗಳಿಗೆ ಅಥವಾ ಸಂಬಂಧಪಟ್ಟವರಿಗೆ ನಾನು ಕಳುಹಿಸುತ್ತೇನೆ.

ಶ್ರೀ ಸಿ. ಬೈರೇಗೌಡ : ಸ್ವಲ್ಪದರಲ್ಲಿ ಮುಗಿಯುತ್ತದೆ. ಏತಕ್ಕೆ ನೀವು ಮಧ್ಯದಲ್ಲಿ? ಉಲ್ಲೇಖಿತ ಕಾರಣಕ್ಕೆ ಅದೇ ಪತ್ರ ಸಂಖ್ಯೆ ದಿನಾಂಕ 22-6-93ರಲ್ಲಿ ಮುಂದುವರೆಸಿದಂತೆ

ಉಲ್ಲೇಖಿತ ಪತ್ರದಲ್ಲಿ ಶಿಫಾರಸ್ಸು ಮಾಡಿರುವಂತೆ ಇಂಡಿಯನ್ ಜಮಖಾನಾ, ಕಾರ್ಕ್ಸ್‌ಟೌನ್, ಬೆಂಗಳೂರು, ಇವರು ಕ್ರೀಡಾ ಸಂಕೀರ್ಣ ಕಟ್ಟಲು ಪರವಾನಗಿ ನೀಡಲು ಸರ್ಕಾರ ಅನುಮತಿ ನೀಡಿದೆ ಎಂದು ತಿಳಿಸಲು ನಾನು ಆದೇಶಿಸಲ್ಪಟ್ಟಿದ್ದೇನೆ ಎಂದು ಹೇಳಿದ್ದಾರೆ. ತಮ್ಮ ಗಮನಕ್ಕೆ ತರುವುದೇನೆಂದರೆ, ತಾವು ಹೇಳಿದ್ದೀರಿ. ದೊಡ್ಡ ದೊಡ್ಡ ಮಾತುಗಳನ್ನು ಹೇಳಿ ಕರಪ್ಷನ್ ಫ್ರೀ ಇದೆಲ್ಲಾ ಮಾತು ಹೇಳಿದ್ದೀರಿ. ಇದೇನಿದು? ಸರ್ಕಾರದಿಂದ ಒಂದು ಸಾರಿ ಹೇಳುತ್ತಾರೆ ಅದು ತಿರಸ್ಕೃತವಾಗಿದೆ ಎಂದು. ಪುನಃ ಈಗ ತಾವು ಪರವಾನಗಿ ಕೊಟ್ಟಿದ್ದೀರಲ್ಲಾ ಈ ಪತ್ರದ ಬೆಲೆ ಎಷ್ಟು? ಈ ರೀತಿ ಹೋಗಿದೆಯಲ್ಲಾ ಈ ಪತ್ರದ ಬೆಲೆ ಎಷ್ಟು? ತಾವು ದಯಮಾಡಿ ತಿಳಿಸಬೇಕು.

ಉಪಾಧ್ಯಕ್ಷರು : ಪತ್ರದ ಕಾಪಿ ಕಳುಹಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಆ ಬೆಲೆ ನಿಮಗೆ ಕೊಟ್ಟಿದ್ದಾರೋ?

ಶ್ರೀ ಸಿ. ಬೈರೇಗೌಡ : ಇದನ್ನು ಕಳುಹಿಸಿರತಕ್ಕದ್ದು ನಾನಲ್ಲ.

ಉಪಾಧ್ಯಕ್ಷರು : ಮಾನ್ಯ ಬೈರೇಗೌಡರೇ, ಅದನ್ನು ಕಳುಹಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಗಗನದ ಮೇಲೆ ತಮ್ಮ ಸೌಧವನ್ನು ಕಟ್ಟುವುದಕ್ಕಾಗುವುದಿಲ್ಲ. ದಯಮಾಡಿ ವಸ್ತುಸ್ಥಿತಿ ಏನು ಎಂಬುದನ್ನು ಬರೆದುಕೊಡಿ. ನಾವು ಎನ್‌ಕ್ವೈರಿ ಮಾಡುತ್ತೇವೆ. ಅಂಥದ್ದು ಏನು ನಡೆದಿದೆ ನನಗೆ ಗೊತ್ತಾಗುತ್ತಿಲ್ಲ, ಜಮಖಾನಾ ಗ್ರೌಂಡ್ ಎಂದು ಹೇಳುತ್ತೀರಿ. ಯಾರಿಗೋ ಲೀಸ್‌ಗೆ ಕೊಟ್ಟಿದ್ದಾರೆ ಎಂದು ಹೇಳುತ್ತೀರಿ. ಜಮಖಾನಾ ಅಂದರೆ ಸ್ಪೋರ್ಟ್ಸ್ 'Gymkhana' itself specifics sports ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಕಟ್ಟಲಿಕ್ಕೆ ಸರ್ಕಾರ ಪರ್ಮಿಷನ್ ಕೊಟ್ಟಿದೆಯೆಂದು ಹೇಳುತ್ತೀರಿ. ಅದರಲ್ಲಿ ಏನು ವ್ಯತ್ಯಾಸ ಇದೆ ಎಂದು ನನಗೆ ಗೊತ್ತಾಗುತ್ತಿಲ್ಲ. ನೀವು ಹೇಳಿದ ಹಾಗೆ ಸೆಲ್ಫ್ ಕಾಂಟ್ರಡಿಕ್ಷನ್. ನಮಗೆ ಗೊತ್ತಿಲ್ಲ. ಅದೇನೇ ಇರಲಿ ಜಮಖಾನಾ ಗ್ರೌಂಡ್ ಎಂದು ತಾವು ಹೇಳಿದ್ದೀರಿ. ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಕಟ್ಟಲಿಕ್ಕೆ ಸರ್ಕಾರ ಅನುಮತಿ ಕೊಟ್ಟಿದೆ ಎಂದು ಹೇಳುತ್ತೀರಿ.

ಶ್ರೀ ಸಿ. ಬೈರೇಗೌಡ : ಮೊದಲು ಕೊಟ್ಟಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದೇನೋ ಗೊತ್ತಿಲ್ಲ. ದಯಮಾಡಿ ಕೊಡಿ. ಇಲ್ಲದಿದ್ದರೆ ಉತ್ತರ ಹೇಳುವುದು ಬಹಳ ಕಷ್ಟ. ಏನೋ ಹೇಳುತ್ತೀರಿ. ಏನಿದು? ದಯಮಾಡಿ ಹೇಳಿ. ಅದನ್ನು ಕಳುಹಿಸಿ.

ಶ್ರೀ ಸಿ. ಬೈರೇಗೌಡ : ಇದು ಇವರೇ ಹೇಳಿರತಕ್ಕದ್ದು.

ಶ್ರೀ ಎಂ. ವೀರಪ್ಪ ಮೊಯಿಲಿ : ಆಧಾರ ಇಲ್ಲದೆ ಈ ತರಹ ಆಪಾದನೆ ಮಾಡಿದರೆ ನಾವು ಅದನ್ನು ಸ್ವೀಕಾರ ಮಾಡುವುದಕ್ಕಾಗುವುದಿಲ್ಲ. ಆಧಾರ ಇಲ್ಲದೆ ಮಾತನಾಡಬೇಡಿ.

ಶ್ರೀ ಸಿ. ಬೈರೇಗೌಡ : ನಾನು ಹೇಳಿದ್ದಕ್ಕೆ ದಾಖಲೆ ಇದೆ. ಆಧಾರ ಇದೆ.

ಉಪಾಧ್ಯಕ್ಷರು : ಮಾನ್ಯ ಬೈರೇಗೌಡರೆ, ತಮ್ಮ ಹತ್ತಿರ ಏನಿದೆಯೋ ಅದನ್ನು ಕಳುಹಿಸಿ.

SRI M. VEERAPPA MOILY : This is very difficult to answer.

ಉಪಾಧ್ಯಕ್ಷರು : ಮಾನ್ಯ ಬೈರೇಗೌಡರೆ, ಕಾಪಿ ಕಳುಹಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಅಡಗಿಸಿ ಕೆಲಸ ಮಾಡತಕ್ಕ ಪ್ರಶ್ನೆಯೇ ಇಲ್ಲ. I don't know what is the motive behind it. I would like to question

your motives. I am telling you, if it is illegal, we will straight-away cancel it. I am prepared to do that. ವಿಷಯ ಗೊತ್ತಿಲ್ಲದೆ ಒಮ್ಮೆಲೇ ಎತ್ತಿಬಿಟ್ಟರೆ ಏನು?

ಶ್ರೀ ವಾಟಾಳ್ ನಾಗರಾಜ್ : ತಾವೇ ಇದನ್ನು ಖುದ್ದಾಗಿ ಪರಿಶೀಲನೆ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಅಗತ್ಯ ಬಿದ್ದರೆ ಜಾಗ ಪರಿಶೀಲನೆ ಮಾಡೋಣ. ಅದೇನು ವಿಷಯ ಒಂದು ಅಂಶವೂ ಗೊತ್ತಿಲ್ಲದೆ ಸಡನ್ನಾಗಿ ನೀವು ಎತ್ತಿಬಿಟ್ಟರೆ ಉತ್ತರ ಹೇಗೆ ಕೊಡಬೇಕು? ದಯಮಾಡಿ ಅದನ್ನು ಕಳುಹಿಸಿಕೊಡಿ. ಸರಿಯಾದಂಥ ಉತ್ತರ ಕೊಡುತ್ತೇವೆ. ಒಂದು ನಿರ್ಧಾರಕ್ಕೆ ಬರುತ್ತೇವೆ.

ಶ್ರೀ ಸಿ. ಬೈರೇಗೌಡ : ಪತ್ರವನ್ನು ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಕ್ರಮ ಕೈಗೊಳ್ಳಿ.

(2) ಅತಿವೃಷ್ಟಿಯಿಂದ ಬೆಳೆ ಹಾಳಾದವರಿಗೆ ಪರಿಹಾರ.

ಶ್ರೀ ಆರ್.ವಿ. ದೇಶಪಾಂಡೆ : ಒಂದು ನಿಮಿಷ. ಮಾನ್ಯ ಅಧ್ಯಕ್ಷರೇ, ಇವತ್ತು ಮುಂಜಾನೆ ಸಭಾಧ್ಯಕ್ಷರ ಛೇಂಬರ್‌ನಲ್ಲಿ ಒಂದು ವಿಷಯ ಚರ್ಚೆ ಮಾಡಿದೆವು. ನಿನ್ನೆ ನಾವು ವಾಕ್‌ಔಟ್ ಮಾಡಿದಾಗ ಮಾನ್ಯ ಕಂದಾಯ ಸಚಿವರು ಅತಿವೃಷ್ಟಿ ಬರಗಾಲದ ಬಗ್ಗೆ ಉತ್ತರ ಕೊಟ್ಟರು.

4.40 ಪಿ.ಎಂ

ಅಲ್ಲಿ ಕೆಲವು ವಿಚಾರಗಳಲ್ಲಿ ಒಂದು ಅಂಡರ್‌ಸ್ಟ್ಯಾಂಡಿಂಗ್ ಆಯಿತು. ಈ ದಿನ ಪ್ರಶ್ನೋತ್ತರ ವೇಳೆ ನಂತರ ನಾವು ಒಂದೆರಡು ವಿಚಾರವನ್ನು ಎತ್ತಿದರೆ ಅದಕ್ಕೆ ಕ್ಲಾರಿಫಿಕೇಷನ್ ಕೊಡುತ್ತೇವೆ ಎಂದು ಹೇಳಿದರು. ಮೊದಲನೆಯದಾಗಿ, ಹಾರ್ಟಿಕಲ್ಚರ್ ಕ್ರಾಪ್ಸ್ ಬಗ್ಗೆ ಒಂದು ಆದೇಶವನ್ನು ಹೊರಡಿಸುತ್ತೇವೆ ಎಂದು ಹೇಳಿದರು. ಅದರ ಬಗ್ಗೆ ಹೇಳಬೇಕು. ಎರಡನೆಯದಾಗಿ, ಈಗಾಗಲೇ ಪ್ರತಿಯೊಬ್ಬ ಜಿಲ್ಲಾಧಿಕಾರಿಗಳಿಗೆ 1 ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡಲು ಅಧಿಕಾರ ಕೊಡುತ್ತೇವೆ ಎಂದು ಹೇಳಿದರು. ಅದರ ಬಗ್ಗೆ ಆದೇಶ ಹೊರಡಿಸುತ್ತೇವೆ ಎಂದು ಹೇಳಿದ್ದಾರೆ. ಮೂರನೆಯದಾಗಿ, ಇವತ್ತು ಸರ್ಕಾರಿ ಆದೇಶದ ಪ್ರಕಾರ ರೈತರಿಗೆ ಪರಿಹಾರ ಸಿಗಬೇಕಾದರೆ ಶೇಕಡಾ 75ರಷ್ಟು ಬೆಳೆ ಹಾಳು ಆಗಿರಬೇಕು. ಇದರಿಂದಾಗಿ ಯಾರಿಗೂ ಪರಿಹಾರ ಸಿಗುತ್ತಿಲ್ಲ. ಒಬ್ಬ 4 ಎಕರೆಯಲ್ಲಿ 2 ಎಕರೆ ಭತ್ತ ಬೆಳೆದು, 2 ಎಕರೆಯಲ್ಲಿ ಹತ್ತಿ ಸಂಪೂರ್ಣ ವಿಫಲ ಆದರೂ ಸಹ ಆತನಿಗೆ ಈ ನಿಯಮದ ಪ್ರಕಾರ ಸಿಗುವುದಿಲ್ಲ. ಆದ್ದರಿಂದ ಎಕರ್‌ವೈಸ್ ಮಾಡದೇ, ಯಾವ ಬೆಳೆ ಹಾಳಾಗುತ್ತದೆ ಅವಕ್ಕೆ ಪರಿಹಾರ ಸಿಗುವ ಹಾಗೆ ಆಗಬೇಕು.

ಉಪಾಧ್ಯಕ್ಷರು : ನಿನ್ನೆ ನೆರೆ ಹಾವಳಿ ಬಗ್ಗೆ ಚರ್ಚೆ ಮುಕ್ತಾಯ ಮಾಡಿದ್ದೇವೆ. ಮೊದಲು ಕಾರ್ಯಕಲಾಪದ ಪಟ್ಟಿಯಲ್ಲಿರುವ ವಿಷಯಗಳನ್ನು ಮುಗಿಸೋಣ. ಆ ನಂತರ ಅವಕಾಶ ಕೊಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮುಂಜಾನೆ ಈ ಬಗ್ಗೆ ಅಂಡರ್‌ಸ್ಟ್ಯಾಂಡಿಂಗ್ ಆಗಿದೆ. ಅದಕ್ಕಾಗಿ ಎತ್ತಿದ್ದೇನೆ. ಆ ಸಭೆಯಲ್ಲಿ ವಿರೋಧಪಕ್ಷದ ಎಲ್ಲಾ ಸದಸ್ಯರು ಇದ್ದರು. ಮುಖ್ಯಮಂತ್ರಿಗಳ ಜೊತೆ ಮಾತನಾಡಿದಾಗ, ಪುನಃ ಚರ್ಚೆ ಬೇಡ ಪ್ರಶ್ನೋತ್ತರ ಆಗ ತಕ್ಷಣ ವಿಷಯ ರೈಸ್ ಮಾಡಿ ಕಂದಾಯ ಸಚಿವರು ಉತ್ತರ ಕೊಡುತ್ತಾರೆ ಎಂದು ಹೇಳಿದರು. ಮತ್ತೆ ರೈತರಿಗೆ ಬಡ್ಡಿ ಮನ್ನಾ ಮಾಡಬೇಕು ಎಂದು ಹೇಳಿದ್ದೆವು.

ಉಪಾಧ್ಯಕ್ಷರು : ಸಭಾಧ್ಯಕ್ಷರ ಕೊಠಡಿಯಲ್ಲಿ ನಡೆದ ಮಾತುಕತೆ ಪ್ರಕಾರ ಇಲ್ಲಿ ಕಾಲಾವಕಾಶ ಕೊಡಿ ಎಂದು ಕೇಳುತ್ತಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ : ಪ್ರಶ್ನೋತ್ತರ ಆದಮೇಲೆ ವಿಚಾರ ಪ್ರಸ್ತಾಪ ಮಾಡಿ ಎಂದಿದ್ದರಿಂದ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ನಾವು ಇದರ ಬಗ್ಗೆ ಮಾತನ್ನೇ ಆಡಲಿಲ್ಲ. ತಮಗೆ ಹೇಳುವುದಾದರೆ, ನಮ್ಮನ್ನು ಹೊರಗೆ ಕೂರಿಸಿ...

ಉಪಾಧ್ಯಕ್ಷರು : ಈ ವಿಷಯದಲ್ಲಿ ಚರ್ಚೆ ಅದಾಗ ನಾನೇ ತಮ್ಮನ್ನು ಕರೆದೆ. ನಾನು ಕರೆದಾಗ ತಾವು ಹೊರಗಡೆ ಹೋಗಿದ್ದಿರಿ ಎಂದು ಕಾಣುತ್ತದೆ. ವಾಕೌಟ್ ಅದಾಗ ಇದು ಆಗಿದ್ದು ಅಲ್ಲ.

ಶ್ರೀ ವಾಟಾಳ್ ನಾಗರಾಜ್ : ತಮಗೆ ಗೊತ್ತಿದೆ, ಈಗ ನಿನ್ನೆ ಬೆಂಗಳೂರು ನಗರಕ್ಕೆ ಪ್ರಧಾನಮಂತ್ರಿಗಳು ದಯಮಾಡಿಸಿದ್ದರು...

ಶ್ರೀ ಕರಿಯಣ್ಣ : ಕಾರ್ಯಕ್ರಮದ ಪಟ್ಟಿ ಪ್ರಕಾರ ಚರ್ಚೆ ಆಗಬೇಕು.

ಉಪಾಧ್ಯಕ್ಷರು : ಸಭಾಧ್ಯಕ್ಷರ ಕೊಠಡಿಯಲ್ಲಿ ಚರ್ಚೆ ಆದ ಪ್ರಕಾರ ಅವರು ವಿಚಾರ ಪ್ರಸ್ತಾಪ ಮಾಡುತ್ತಿದ್ದಾರೆ. ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕರಿಯಣ್ಣ : ಈ ರೀತಿ ಚರ್ಚೆಗಳು ಆದರೆ ಹೇಗೆ?

ಶ್ರೀ ಧರ್ಮಸಿಂಗ್ : ಸಭಾಪತಿಯವರ ಮುಂದೆ ಒಪ್ಪಿಕೊಂಡಿದ್ದೇವೆ. ನಾವೂ ಉತ್ತರ ಕೊಡುವವರಿದ್ದೇವೆ. ಮುಖ್ಯಮಂತ್ರಿಗಳೂ ಕೂಡ ಈ ಸಂದರ್ಭದಲ್ಲಿ ಇದ್ದಾರೆ. ಪಾಲಿಸಿ ಡಿಸಿಷನ್ ಇದು ಇದೆ. ನಾವು ಡೆಫನೆಟ್‌ಲಿ ಅದನ್ನು ಅನೌನ್ಸ್ ಮಾಡುತ್ತೇವೆ.

(3) ನೆರೆಹಾವಳಿ ಬಗ್ಗೆ ಪ್ರಧಾನಮಂತ್ರಿಗಳಿಂದ ನೆರವನ್ನು ಕೋರಿರುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಿನ್ನೆ ಬೆಂಗಳೂರು ನಗರಕ್ಕೆ ಮಾನ್ಯ ಪ್ರಧಾನಮಂತ್ರಿಗಳು ದಯಮಾಡಿಸಿದ್ದರು. ಆಗ ನೆರೆ ಹಾವಳಿ ಬಗ್ಗೆ ನಮ್ಮ ಸರ್ಕಾರ ಮತ್ತೊಂದು ಮನವಿಯನ್ನು ಏನಾದರೂ ಕೊಟ್ಟಿದೆಯೇ? ಮತ್ತು ಕೇಂದ್ರ ಸರ್ಕಾರ ಇವರಿಗೆ ಕೊಟ್ಟಿರತಕ್ಕ ಭರವಸೆ ಏನು? ಇವರು ಈಗ 100 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಕಳುಹಿಸಿದ್ದಾರೆ. ಅದರ ಬಗ್ಗೆ ಏನು ಉತ್ತರ ಬಂದಿದೆ? ನಿನ್ನೆ ಮಾನ್ಯ ಪ್ರಧಾನಮಂತ್ರಿಗಳು ಏನಾದರೂ ಸ್ಪಷ್ಟವಾದ ಭರವಸೆಯನ್ನು ಬೆಂಗಳೂರಿನಲ್ಲಿ ನೀಡಿದ್ದಾರೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ವಾಟಾಳ್ ನಾಗರಾಜ್ ಅವರು ತಮ್ಮೆಲ್ಲರ ಅಭಿಪ್ರಾಯವನ್ನು ಪ್ರತಿನಿಧಿಕರಿಸಿದ್ದಾರೆ. ಇದರಲ್ಲಿ ಪುನಃ ಚರ್ಚೆ ಆರಂಭ ಆಗುವುದು ಬೇಡ. ಇದನ್ನು ಇಷ್ಟಕ್ಕೆ ಮುಗಿಸೋಣ. ಈಗ ಒಂದೊಂದು ಕೋಟಿ ರೂಪಾಯಿ ಒಂದೊಂದು ಜಿಲ್ಲೆಗೆ ಪ್ರವಾಹದಲ್ಲಿ ಖರ್ಚು ಮಾಡಬಹುದೆಂದು ಹೇಳಿ ನಾವು ಈಗಾಗಲೇ ತಿಳಿಸಿದ್ದೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನೂ ಹೇಳುವುದು ಎರಡು ವಿಚಾರಗಳು ಇವೆ. ನಾನು ನಿನ್ನೆ ಗಮನಸೆಳೆವ ವಿಚಾರದಲ್ಲಿ ಪ್ರಸ್ತಾಪ ಮಾಡುತ್ತಿದ್ದಾಗ ಬರಗಾಲದ ಬಗ್ಗೆ ಚರ್ಚೆಯಲ್ಲಿ ಪ್ರಸ್ತಾಪ ಮಾಡಿ ಎಂದರು. ಆಗ ನಾನು ಸುಮ್ಮನೆ ಕುಳಿತೆ. ಈಗ ಚರ್ಚೆಗೆ ಅವಕಾಶ ಇಲ್ಲ ಎಂದರೆ ಹೇಗೆ?

ಶ್ರೀ ಎಂ. ವೀರಪ್ಪ ಮೊಯಿಲಿ : ನಿನ್ನೆ ಅವರು ಬಾಯ್‌ಕಾಟ್ ಮಾಡಿದ್ದುದು ಏಕೆ? ಬಾಯ್‌ಕಾಟ್ ಮಾಡಿದ ಮೇಲೆ ಪುನಃ ರೀಓಪನ್ ಮಾಡತಕ್ಕ ಪ್ರವೃತ್ತಿ ಇಲ್ಲಿ ಇಲ್ಲವೇ ಇಲ್ಲ. ಬಾಯ್‌ಕಾಟ್ ಮಾಡದೇ ಇಲ್ಲೇ ಕುಳಿತುಕೊಳ್ಳಬೇಕಾಗಿತ್ತು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಗಮನ ಸೆಳೆಯುವ ಸೂಚನೆಯಲ್ಲಿ ಅವಕಾಶ ಸಿಗಲಿಲ್ಲ. ಇಲ್ಲಿ ಉತ್ತರ ಹೇಳಿದಮೇಲೆ ಇನ್ನು ನಾವು ಹೇಳುವುದು ಏನು? ನಾಳೆ ಎಲ್ಲಾ ವಿಚಾರ ಮಾತನಾಡಿ ಎಂದು ನಿನ್ನೆ ಹೇಳಿದಾಗ ಅದಕ್ಕೆ ನಾನು ಒಪ್ಪಿಕೊಂಡೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಹಾಗಿದ್ದರೆ ತಾವು ನಿನ್ನೆ ಬಾಯ್ಕಾಟ್ ಏಕೆ ಮಾಡಿದಿರಿ? ತಾವು ಭಾಗವಹಿಸಬಹುದಾಗಿತ್ತಲ್ಲವೇ? ತಾವು ಬಾಯ್‌ಕಾಟ್ ಮಾಡಬೇಕು ಹಾಗೂ ಸದನದ ಕಾರ್ಯಕಲಾಪಗಳೂ ಆಗಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಮುಖ್ಯಮಂತ್ರಿಯವರೇ, ನಾವು ಒಂದು ವಿಷಯದ ಮೇಲೆ ಬಾಯ್‌ಕಾಟ್ ಮಾಡಿದ್ದುದು ನಿಜ. ಈಗ ಮಾನ್ಯ ಸದಸ್ಯರ ಸಮಸ್ಯೆ ಏನೆಂದರೆ, ಅವರ ಕ್ಷೇತ್ರದಲ್ಲಿ ಜನ ಬಹಳ ಕಷ್ಟಪಡುತ್ತಿದ್ದಾರೆ. ಬೀದರ್ ಜಿಲ್ಲೆಯಲ್ಲಿ ಹಾಗೂ ಅವರ ಕ್ಷೇತ್ರದಲ್ಲಿ ಕುಡಿಯುವ ನೀರಿನ ಬಗ್ಗೆ ಬಹಳ ಕಷ್ಟ ಇದೆ. ನಿನ್ನೆ ಅವರು ಕಂದಾಯ ಸಚಿವರಿಗೂ ಕೇಳಿಕೊಂಡರು. ತಕ್ಷಣ ಬೀದರ್ ಜಿಲ್ಲೆಗೆ, ಅದರಲ್ಲೂ ಅವರ ಕ್ಷೇತ್ರಕ್ಕೆ ಕುಡಿಯುವ ನೀರಿನ ಬಗ್ಗೆ ಒಂದೆರಡು ವಿಚಾರ ಹೇಳಬೇಕು ಎಂದು ಅಪೇಕ್ಷೆ ಪಡುತ್ತಿದ್ದಾರೆ. ಶ್ರೀ ಎಂ. ವೀರಪ್ಪ ಮೊಯಿಲಿ : ಅವರು ಆಮೇಲೆ ಹೇಳಲಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾವೂ ನಮ್ಮ ಕ್ಷೇತ್ರದ ಬಗ್ಗೆ ಮಾತನಾಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಬರಗಾಲದ ಬಗ್ಗೆ ಇನ್ನೊಂದು ಸಭೆ ಇಡಿ. ಈಗ ವಿಚಾರ ಏನೆಂದರೆ ಪುನಃ ನಮ್ಮ ಡಿಮಾಂಡ್ ಕೂಡ ಬರುತ್ತದೆ. ಅದರಲ್ಲೂ ಕೂಡ ಚರ್ಚೆ ಮಾಡಬಹುದು. ಹಣವನ್ನು ಬಿಡುಗಡೆ ಮಾಡುವಂಥದ್ದು, ಡ್ರೌಟ್ ಬಗ್ಗೆ, ಪ್ರವಾಹದ ಬಗ್ಗೆ ಪುನಃ ಬೇಕಾದರೆ ಮಾತನಾಡಬಹುದು. ಸಾಕಷ್ಟು ಅವಕಾಶ ಇದೆ. ಅಗ್ರಿಕಲ್ಚರ್ ಡಿಮ್ಯಾಂಡ್ ಬರುತ್ತದೆ. ಆಗ ಮಾತನಾಡಲು ಸಾಧ್ಯ ಇದೆ. ಎಲ್ಲಾ ಇಲಾಖೆಗಳಲ್ಲಿ ಈ ವಿಚಾರ ತರಲು ಸಾಧ್ಯವಿದೆ. ಸಾಮಾನ್ಯವಾಗಿ ಚರ್ಚೆ ಮಾಡಬಾರದು ಎಂದು ಅಲ್ಲ, ಈ ವಿಚಾರ ಚರ್ಚೆ ಆಗಿ ಉತ್ತರ ಕೊಡಲಾಗಿದೆ. ಈಗ 2 ಪ್ರಶ್ನೆಗಳನ್ನು ವಿರೋಧ ಪಕ್ಷದ ನಾಯಕರು ಇಟ್ಟಿದ್ದಾರೆ. ಅದಕ್ಕೆ ನಾನು ಸ್ಪಷ್ಟೀಕರಣ ಕೊಡುತ್ತಿದ್ದೇನೆ. ಈಗ ಮುಖ್ಯವಾಗಿ 1 ಕೋಟಿ ರೂಪಾಯಿಯವರೆಗೆ ಎಲ್ಲಿ ಪ್ರವಾಹ ಪೀಡಿತವಾಗಿದೆ ಆ ಜಿಲ್ಲೆಗಳಲ್ಲಿ ಖರ್ಚು ಮಾಡಬಹುದು ಎಂದು ನಾವು ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಾವು ಅಥರೈಸ್ ಮಾಡಿದ್ದೇವೆ. ಅಧಿಕಾರ ಕೊಟ್ಟಿದ್ದೇವೆ. 1 ಕೋಟಿ ರೂಪಾಯಿವರೆಗೆ ಅವರು ಖರ್ಚು ಮಾಡಬಹುದು ಎಂದು.

ಶ್ರೀ ಆರ್.ವಿ. ದೇಶಪಾಂಡೆ : ಎಲ್ಲಾ ಜಿಲ್ಲಾಧಿಕಾರಿಗಳಿಗೂ?

ಶ್ರೀ ಎಂ. ವೀರಪ್ಪ ಮೊಯಿಲಿ : ಎಲ್ಲಾ 20ಕ್ಕೂ ಅಲ್ಲ. ಎಲ್ಲಿ ಪ್ರವಾಹ ಬಂದಿದೆ, ಅಂತಹಕಡೆಗಳಲ್ಲಿ ನಾವು ಹೇಳಿದ್ದೇವೆ. ಅದಕ್ಕೆ ಬೇಕಾದರೆ ಸರ್ಕಾರಿ ಆದೇಶವನ್ನು ಕೊಡಿ ಎಂದು ಹೇಳಿದ್ದೇವೆ. We are issuing the orders also in writing. ಈಗಾಗಲೇ ಆಥರೈಸ್ ಮಾಡಿದ್ದೇವೆ. ಮತ್ತೆ ಬರಗಾಲದ ಬಗ್ಗೆ, ಕುಡಿಯುವ ನೀರಿನ ಅವಶ್ಯಕತೆ ಬಗ್ಗೆ. ಮುಖ್ಯವಾಗಿ ಬೀದರ್, ರಾಯಚೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ನಾವು ಕೂಡ ನೋಡಿದ್ದೇವೆ. ಈ ಜಿಲ್ಲೆಗಳೇ ಅಲ್ಲದೆ, ಎಲ್ಲಾ ಜಿಲ್ಲಾ ಜಿಲ್ಲೆಗಳಲ್ಲಿಯೂ ಇರಬಹುದು ಎಲ್ಲೆಲ್ಲಿ ಕುಡಿಯುವ ನೀರಿನ ಸಮಸ್ಯೆ ಬರುತ್ತದೆ, ಅಲ್ಲಿಯೂ ಕೂಡ ನಾವು ಈಗಾಗಲೇ ಸುಮಾರು 7 ಕೋಟಿ 40 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಉದಾಹರಣೆಗಾಗಿ • ಕೋಲಾರಕ್ಕೆ ಕುಡಿಯುವ ನೀರಿನ ಬಗ್ಗೆ 35 ಲಕ್ಷ ಬಿಡುಗಡೆ

ಮಾಡಿದ್ದೇವೆ, ತುಮಕೂರಿಗೆ ಬಿಡುಗಡೆ ಮಾಡಿದ್ದೇವೆ. ಇದು ಆಗಸ್ಟ್ 27, 1994ರ ವರೆಗಿನ ಲೆಕ್ಕ. ಇದಲ್ಲದೆ, ಪುನಃ ಕೊಡಬೇಕಾದ ಪರಿಸ್ಥಿತಿ ಬಂದರೆ, ಜಿಲ್ಲಾಧಿಕಾರಿಗಳನ್ನು ಸಂಪರ್ಕ ಮಾಡುತ್ತೇವೆ. ಕುಡಿಯುವ ನೀರಿನ ಬಗ್ಗೆ ಇನ್ನೂ ಹಣ ಬೇಕಾದರೆ, ನಾವು ಕೂಡಲೇ ಬಿಡುಗಡೆ ಮಾಡುತ್ತೇವೆ, ನಾಳೆಯೇ ಬಿಡುಗಡೆ ಮಾಡುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ...

ಶ್ರೀ ಎಂ. ವೀರಪ್ಪ ಮೊಯಿಲಿ : ಆಮೇಲೆ ಮಾತನಾಡಿ, ಇಲ್ಲದೇ ಹೋದರೆ, ನಾವು ಕುಳಿತುಕೊಳ್ಳುವುದು, ನೀವು ಏಳುವುದು ಅಥವಾ ನಾವು ಏಳುವುದು, ನೀವು ಕುಳಿತುಕೊಳ್ಳುವುದು ಈ ರೀತಿ ಏಳುವುದು, ಕುಳಿತುಕೊಳ್ಳುವುದು ಆದರೆ, ವಿಷಯಗಳು ಮುಗಿಯುವುದಿಲ್ಲ. ಹೇಳುವುದು, ಕೇಳುವುದು, ಎಲ್ಲವನ್ನೂ ಮಾಡೋಣ.

ನಾವು ಹೇಳುವುದಕ್ಕೆ, ನೀವು ಕೇಳುವುದಕ್ಕೆ ಇನ್ನೂ 7ನೇ ತಾರೀಖಿನವರೆಗೂ ಕಾಲಾವಕಾಶವಿದೆ. ನಾವು ಕುಳಿತುಕೊಳ್ಳುವುದಕ್ಕೆ, ನೀವು ಕೇಳುವುದಕ್ಕೆ, ಮಾತನಾಡುವುದಕ್ಕೆ ಪೂರ್ಣ ಅವಕಾಶವಿದೆ. ಬೀದರ್ ಜಿಲ್ಲೆಗೆ 70 ಲಕ್ಷ ಬಿಡುಗಡೆ ಮಾಡಿದ್ದೇವೆ. ಗುಲ್ಬರ್ಗಾಕ್ಕೆ 85 ಲಕ್ಷ ಬಿಡುಗಡೆ ಮಾಡಿದ್ದೇವೆ. ರಾಯಚೂರು ಜಿಲ್ಲೆಗೆ 85 ಲಕ್ಷ ಬಿಡುಗಡೆ ಮಾಡಿದ್ದೇವೆ, ಬಳ್ಳಾರಿಗೆ 50 ಲಕ್ಷ, ಬೆಳಗಾಂಗೆ 50 ಲಕ್ಷ, ಬಿಜಾಪುರಕ್ಕೆ 80 ಲಕ್ಷ ಬಿಡುಗಡೆ ಮಾಡಿದ್ದೇವೆ. ಈ ಹಣವನ್ನು ಎಲ್ಲೆಲ್ಲಿ ಖರ್ಚು ಮಾಡಿ ಮುಗಿಸುತ್ತಾರೆ, ಅಲ್ಲಿಗೆ ಮತ್ತೆ ನಾಳೆಯೇ ಬೇಕಾದರೆ ಮತ್ತೆ ಬಿಡುಗಡೆ ಮಾಡುತ್ತೇವೆ. ನಿಮಗೂ ಬೇಕಾದರೆ ಬಿಡುಗಡೆ ಮಾಡುತ್ತೇವೆ. ಕುಡಿಯುವ ನೀರಿಗೆ ಯಾವ ತೊಂದರೆ ಬರಬಾರದು. ಮತ್ತೆ ಮಿನಿ ವಾಟರ್ ಸಪ್ಲೈ ಬಗ್ಗೆಯೂ ನಮಗೆ ಹಣ ಇದೆ, ಆಯಾ ಜಿಲ್ಲೆಯಲ್ಲಿಯೇ ಇದೆ. ಅದನ್ನೂ ಖರ್ಚು ಮಾಡುವುದಕ್ಕೆ ಹೇಳುತ್ತೇವೆ. ಇಲ್ಲಿ ಬೇಕಾದಷ್ಟು ಕಾರ್ಯಕ್ರಮಗಳಿವೆ, ಜಿಲ್ಲೆಯಲ್ಲಿ ಸಾಕಷ್ಟು ಹಣ ಇದೆ. ಕೆಲವು ಕಾರ್ಯಕ್ರಮಗಳಿಗೆ, ಯೋಜನಾ ಕಾರ್ಯಕ್ರಮಗಳಲ್ಲಿ ಬಿಡುಗಡೆ ಮಾಡುವುದಕ್ಕಾಗುತ್ತದೆ, ಅದನ್ನು ಬೇಕಾದರೂ ಬಿಡುಗಡೆ ಮಾಡುತ್ತೇವೆ. ಇನ್ನು 75 ಪರ್ಸೆಂಟ್ ಬೆಳೆ ಡ್ಯಾಮೇಜ್ ಆದರೆ ಎಲಿಜಿಬಿಲಿಟಿ ಎಂದು ಹೇಳಿದ್ದೇವೆ. ಪ್ರವಾಹದಲ್ಲಿ ಎಷ್ಟು ಲಕ್ಷ ಎಕರೆಗೆ ಹಾನಿಯಾಗಿದೆ ಎಂಬುದು ತಮಗೆ ಗೊತ್ತಿದೆ, ನಾವು ಎಲ್ಲಾ ಮಾಡಬೇಕಾಗುತ್ತದೆ. ನೀರಾವರಿ ಯೋಜನೆ ಆಗಬೇಕು. ಎಲ್ಲಾ ಯೋಜನೆಗಳೂ ಆಗಬೇಕು. ನಾವು ಸಾಕಷ್ಟು ರಿಲ್ಯಾಕ್ಸ್ ಮಾಡಿದ್ದೇವೆ. 11 ಸಾವಿರ ಇನ್‌ಕಮ್ ಲಿಮಿಟ್ ಇದ್ದುದು, 18 ಸಾವಿರಕ್ಕೆ ಮೊನ್ನೆ ತಾನೇ ನಾವು ಏರಿಸಿದ್ದೇವೆ. We have made so many other people eligible.

ಆಮೇಲೆ ಕ್ರಾಪ್ ಬಗ್ಗೆ 24 ಕೋಟಿ ರೂಪಾಯಿಯ ಒಂದು ಅಗ್ರಿಕಲ್ಚರ್‌ಲ್ ಪ್ಯಾಕೇಜನ್ನು ಪ್ರವಾಹಪೀಡಿತ ಪ್ರದೇಶಕ್ಕೆ ಕೊಡುತ್ತೇವೆಂದು ಈಗಾಗಲೇ ಹೇಳಿದ್ದೇವೆ. ಈ ಕೆಲಸವನ್ನು ಯಾವಾಗಲೂ ಮಾಡಿರಲಿಲ್ಲ, ಅಗ್ರಿಕಲ್ಚರಲ್ ಪ್ಯಾಕೇಜ್‌ನಲ್ಲಿ ಯಾವ ಪ್ರವಾಹ ಬಂದಾಗ ಕೂಡ ಕೊಟ್ಟಿರಲಿಲ್ಲ, ಕರ್ನಾಟಕದ ಇತಿಹಾಸದಲ್ಲಿಯೇ ಇದು ಮೊದಲು ಯಾವ ಕ್ರಾಪ್ ಡ್ಯಾಮೇಜಿಗೆ ಕೂಡ ಕೊಡುತ್ತಾ ಇರಲಿಲ್ಲ, We are giving it in a big way apart from that Rs. 500 per hectare.

ಇವತ್ತು ಇದನ್ನು ಹೊರತಾಗಿ ನಾವು ಮಾಡುತ್ತಿದ್ದೇವೆ. ಅದು ಹಾರ್ಟಿಕಲ್ಚರ್ ಇರಬಹುದು. ಅಗ್ರಿಕಲ್ಚರ್ ಇರಬಹುದು, ಇದನ್ನು ಮಾಡುತ್ತೇವೆ. 75 ಪರ್ಸೆಂಟ್ ಕ್ರಾಪ್ ಡ್ಯಾಮೇಜ್ ಎಲಿಜಿಬಿಲಿಟಿ ಇದ್ದುದು, ತಾವೆಲ್ಲರೂ ಒತ್ತಾಯ ಮಾಡಿದ ಮೇಲೆ, ಅದನ್ನು 50 ಪರ್ಸೆಂಟ್ ಕ್ರಾಪ್ ಡ್ಯಾಮೇಜ್ ಎಂದು ಸಡಿಲ ಮಾಡುತ್ತೇವೆ. 75 ಪರ್ಸೆಂಟ್ ಎಲಿಜಿಬಿಲಿಟಿ ಇದ್ದುದನ್ನು 50 ಪರ್ಸೆಂಟ್‌ಗೆ ಕಡಿಮೆ ಮಾಡಿದ್ದೇವೆ. ಇಲ್ಲದೇ ಇದ್ದರೆ, ಕ್ರಾಪ್ ಡ್ಯಾಮೇಜ್‌ಗೆ ಕೊಟ್ಟೇ ಇಡೀ ವರ್ಷದ ಪ್ಲಾನ್ ಹಣ ಹೊರಟು ಹೋಗುತ್ತಿತ್ತು. Do you want that to happen?

ನಮ್ಮ ಮನೆಗಳಿಗೆ ಏನಾಗಬೇಕು, ನಮ್ಮ ನೀರಾವರಿಗೆ ಏನಾಗಬೇಕು, ಸಣ್ಣ ನೀರಾವರಿ ಕೆಲಸ ಏನಾಗಬೇಕು, ಹೂಳು ತೆಗೆಯುವುದು ಏನಾಗಬೇಕು. If the entire House says You forget about ಎಲ್ಲಾ ಕಾರ್ಯಕ್ರಮಗಳನ್ನೂ ಬಿದಿಗಿಟ್ಟು, ಬರೀ ಕ್ರಾಪ್ ಡ್ಯಾಮೇಜಿಗೇ ಕೊಡಿ ಎಂದು ತಾವು ಹೇಳುವುದಿದ್ದರೆ, after all, I am bound by the decision of the House. You want that to happen?

ಇವತ್ತು ಇದು ಆಗಬೇಕೇ? ತಾವೇ ಆಲೋಚನೆ ಮಾಡಿಕೊಳ್ಳಿ. ಇವತ್ತು ಯಾವುದಾದರೊಂದು ಡಿಸ್ಶಿಷನ್ ಇರಬೇಕಾಗುತ್ತದೆ. ಇದರ ಬಗ್ಗೆ ನಾವು ಇಷ್ಟು ಸ್ಪಷ್ಟೀಕರಣ ಕೊಡುವುದಕ್ಕೆ ಅಪೇಕ್ಷೆ ಪಡುತ್ತಿದ್ದೇವೆ. ಆಯಾ ಜಾಗಗಳಲ್ಲಿ ಯಾವುದೇ ಸಾರ್ವಜನಿಕ ಆಸ್ತಿ ಡ್ಯಾಮೇಜ್ ಆಗಲೀ, ಮತ್ತೊಂದಾಗಲೀ, ಅದಕ್ಕೆ ವ್ಯವಸ್ಥಿತವಾದ ಕಾರ್ಯಕ್ರಮಗಳನ್ನು ರೂಪಿಸಿ, ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ವಾಟಾಳ್ ನಾಗರಾಜ್‌ರ ಪ್ರಶ್ನೆ, ಕೇಂದ್ರದಿಂದ ನ್ಯಾಯವಾಗಿ ಬರತಕ್ಕ ಹಣ ಬಂದಿದೆಯೇ ಎಂದು. ಈಗಿನ 9ನೇ ಹಣಕಾಸಿನ ಆಯೋಗದ ಪ್ರಕಾರ, ತಮಗೆ ಗೊತ್ತಿದೆ. ಹಿಂದೆ, ಕೇಂದ್ರ ಸರ್ಕಾರದಿಂದ ಅಧ್ಯಯನ ತಂಡ ಬರುವಂತಾದ್ದು, ಪರಿಶೀಲನೆ ಮಾಡುವಂತಾದ್ದು, ಅದು ಈಗ ಹೋಗಿದೆ. ಈಗಿನ ಹಣಕಾಸಿನ ಆಯೋಗದ ಚಾರ್ಟ್ ಪ್ರಕಾರ, ನಮ್ಮ ರಾಜ್ಯದಲ್ಲಿ ಬರೀ 27 ಕೋಟಿ ರೂಪಾಯಿಗಳನ್ನು ಕಲಾಮಿಟಿ ರಿಲೀಫ್ ಫಂಡ್‌ಗೆ ಎಂದು ವರ್ಷಕ್ಕೆ ಗೊತ್ತುಮಾಡಲಾಗಿದೆ. ಇದರಲ್ಲಿ ನಾವು ಸುಮಾರು ಆರೂವರೆ ಕೋಟಿ ರೂಪಾಯಿಗಳನ್ನು ಕೊಡಬೇಕು ಉಳಿದುದ್ದನ್ನು ಕೇಂದ್ರ ಸರ್ಕಾರದವರು ಕೊಡಬೇಕು. ಈಗಾಗಲೇ ಕೇಂದ್ರ ಸರ್ಕಾರ ಈ ಎಲ್ಲ ಹಣವನ್ನು ಬಿಡುಗಡೆ ಮಾಡಿದೆ. ಇದರಲ್ಲಿ ಒಂದು ನಯಾಪೈಸೆಯೂ ಬಾಕಿ ಇಲ್ಲ. ಕೇಂದ್ರ ಸರ್ಕಾರದವರು ಅಡ್ವಾನ್ಸ್ ಆಗಿ ಬಿಡುಗಡೆ ಮಾಡಿದ್ದಾರೆ. ಈಗ ನಾವೇನು ಹೇಳುತ್ತೇವೆ. ಇಲ್ಲಿ ಬಹಳ ಡ್ಯಾಮೇಜ್ ಆಗಿದೆಯೆಂದು ಪ್ರತಿವರ್ಷ ಏನು ಖರ್ಚು ಮಾಡುತ್ತಿದ್ದೇವೆ, ಅದು over and above ಪ್ರತಿವರ್ಷ ಕಲಾಮಿಟಿ ರಿಲೀಫ್ ಫಂಡ್‌ನಲ್ಲಿ ಖರ್ಚು ಮಾಡುತ್ತಿದ್ದೇವೆ. ನಮ್ಮ ಸ್ನೇಹಿತರು ಬಹಳ ಭಾಷಣ ಮಾಡುತ್ತಿದ್ದರು, 1991ರ ಫ್ಲಡ್‌ನಲ್ಲಿ ಏನೂ ಆಗಲೇ ಇಲ್ಲ. ನಾವು ಕೊಟ್ಟಿರುವಷ್ಟು ಯಾರೂ ಕೊಟ್ಟಿಲ್ಲ. ಆ ಸ್ನೇಹಿತರಿಗೆ ಗೊತ್ತಿರಬೇಕು. 1991ರ ಫ್ಲಡ್‌ನಲ್ಲಿ ಕೋಲಾರ ಜಿಲ್ಲೆಯಲ್ಲಿ, ಗೌರಿಬಿದನೂರು ಮತ್ತಿತರ ಕಡೆಗಳಲ್ಲಿ ಸಾಕಷ್ಟು ಮನೆಗಳು ಕೊಚ್ಚಿಕೊಂಡು ಹೋಯಿತು. ಆದರೆ, ಅವರು ಒಂದು ನಯಾಪೈಸೆ ಖರ್ಚು ಮಾಡಲಿಲ್ಲ. ಈಗ ಬರೀ ಭಾಷಣ ಮಾಡುತ್ತಿದ್ದಾರೆ. ಗುಲ್ಬರ್ಗಾದಲ್ಲಿ ನೆರೆ ಬಂತು, ಒಂದು ಮನೆಯನ್ನೂ ಕಟ್ಟಲಿಲ್ಲ. ಅದೇ ರೀತಿ 1991ರಲ್ಲಿ ಮಳೆಯಿಂದ ಅನೇಕ ಮನೆಗಳು ಕೊಚ್ಚಿಕೊಂಡು ಹೋದವು. ಒಂದು ಮನೆಯನ್ನೂ ಕಟ್ಟಲಿಲ್ಲ. ಕಾವೇರಿ ಗಲಾಟೆಯಾಗುವಾಗ, ಎಲ್ಲೋ ಡ್ಯಾನ್ಸ್ ನೋಡುವುದಕ್ಕೆ ಹೋದಂಥವರು ನನಗೆ ಬಾಯಿ ಪಾಠ ಹೇಳುತ್ತಿದ್ದಾರೆ. ನಾನು ಉತ್ತರ ಕೊಡುವಾಗ ಅವರು ಇರಬೇಕಾಗಿತ್ತು. ಅವರು ಮಾತನಾಡುವಾಗ ನಾನು ಇರಲಿಲ್ಲ, ಇಲ್ಲದಿದ್ದರೆ, ಆಗಲೇ ಹೇಳಿ ಬಿಡುತ್ತಿದ್ದೆ. ಇಲ್ಲಿ ಇಡೀ ಬೆಂಗಳೂರು ಉರಿಯುತ್ತಿದೆ, ನ್ಯೂರೋ ಪಿಟೀಲು ಬಾರಿಸಿದ ಹಾಗೆ ಎಲ್ಲೋ ಪೂನಾಕ್ಕೆ ಹೋಗಿ When Rome was burning, Neuro was fiddling. ಆ ಪ್ರಕಾರ ಇದ್ದವರು ಈವತ್ತು ಭಾಷಣ ಮಾಡುತ್ತಾರೆ. ಅವರ ಭಾಷಣ ನಾವು ಕೇಳಬೇಕು. ಎಷ್ಟು ವೀರಾವೇಶದಿಂದ ಭಾಷಣ ಮಾಡಿದ್ದಾರೆ. 1992ನೇ ಇಸವಿಯಲ್ಲಿ ಪ್ರವಾಹ ಬಂದಾಗ, ಒಂದು ಕಡೆಯೂ ತಿರುಗಾಡದೇ ಇದ್ದ ಮನಸ್ಯರು, ಬೆಂಗಳೂರಿನಲ್ಲಿ, ಡೆಲ್ಲಿಯಲ್ಲಿ, ಬಾಂಬೆಯಲ್ಲಿ ಇದ್ದವರು ಇವತ್ತು ನಮ್ಮ ಮೇಲೆ ಭಾಷಣ ಮಾಡುತ್ತಿದ್ದಾರೆ. ನಾವು ಪ್ರವಾಹಪೀಡಿತ ಪ್ರದೇಶಕ್ಕೆ ಹೋಗಿದ್ದು ಒಂದೊಂದು ಸಾರಿ ಅಲ್ಲ, ಎರಡೆರಡು ಸಾರಿ ಹೋಗಿದ್ದೇವೆ. ಕೆಲವು

ಕಡೆ ನಾಲ್ಕು ಸಾರಿ ಹೋಗಿದ್ದೇವೆ. ಆಮೇಲೆ, 1992ಕ್ಕೆ ಒಂದು ನಯಾಪೈಸೆ ಬಿಡುಗಡೆ ಮಾಡಲಿಲ್ಲ. ಆ ಹೊರೆ ಎಲ್ಲವೂ ನನ್ನ ಮೇಲೆ ಬಂತು, ನಮ್ಮ ಸರ್ಕಾರದ ಮೇಲೆ ಬಂತು. ಅದನ್ನು ನಾವು ಕೊಡಬೇಕಾಗಿ ಬಂತು.

ಆ ಹಣವನ್ನು ನಾವು ಕೊಟ್ಟಿದ್ದೇವೆ. ಒಂದು ಮನೆ ಕಟ್ಟುವುದಕ್ಕಾಗಲಿಲ್ಲ. ಈಗ ಭಾಷಣ ಮಾಡುತ್ತಿದ್ದಾರೆ. ಭಾಷಣದ ವೀರಾವೇಶದಿಂದ ಜನರು ವೋಟು ಕೊಡುವುದಿದ್ದರೆ, ಏನಾಗಬೇಕು ಎನ್ನುವುದನ್ನು ಆಲೋಚನೆ ಮಾಡಿ. ಏಕೆಂದರೆ ಮುಂದೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ವೀರಾವೇಶದಿಂದ ಏನು ಮಾಡುತ್ತೀರಿ ಅದಕ್ಕೆ ಜನರು ವೋಟು ಕೊಡುತ್ತಾರೆ, ಭಾಷಣಕ್ಕೆ ವೋಟು ಕೊಡುವುದಿಲ್ಲ. ಕೆಲ್ಯಾಮಿಟಿ ಫಂಡ್ ಎಷ್ಟಿದೆಯೋ ಅಷ್ಟಕ್ಕೆ ಹಿಂದೆ ಸೀಮಿತಗೊಳಿಸಿದ್ದರು. ನಾವು ಅದಕ್ಕಿಂತ ಹೆಚ್ಚುವರಿಯಾಗಿ ಸುಮಾರು 110 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇಷ್ಟು ಯಾವ ಸರ್ಕಾರ ಖರ್ಚು ಮಾಡಿದೆ? ಈ ದೇಶದ ಇತಿಹಾಸ ತೆಗೆಯಿರಿ ಅಥವಾ ಕರ್ನಾಟಕ ರಾಜ್ಯದ ಇತಿಹಾಸ ತೆಗೆಯಿರಿ. ಇಷ್ಟು ಕೆಲ್ಯಾಮಿಟಿ ರಿಲೀಫ್ ಫಂಡ್ ನಾವು ಖರ್ಚು ಮಾಡಿದ್ದೇವೆ. ಇದಕ್ಕಿಂತ ಹೆಚ್ಚು ಹಣವನ್ನು ಕೊಡುವುದಿಲ್ಲ ಎಂದು ಹೇಳತಕ್ಕಂಥ ಪ್ರವೃತ್ತಿಗಳು ಜಾಸ್ತಿಯಾಗತಕ್ಕಂಥಾದ್ದು ಇದ್ದಾಗಲೂ ನಮ್ಮ ರಾಜ್ಯದಲ್ಲಿ 110 ಕೋಟಿ ರೂಪಾಯಿ ಹೆಚ್ಚು ಖರ್ಚು ಮಾಡಿದ್ದೇವೆ. ಇದರ ಮೇಲೆ, ಇಂತಹ ಕಷ್ಟದ ಸಮಯದಲ್ಲಿಯೂ ಕೂಡ 100 ಪರ್ಸೆಂಟ್‌ಪ್ಲಾನನ್ನು ಫರ್‌ಫಾರ್ಮ್ ಮಾಡಿದ್ದೇವೆ. ಏಕೆಂದರೆ, ರೈತರಿಗೆ ಸಹಾಯ ಮಾಡುವಂತಾದ್ದು, ನಮ್ಮ ಕರ್ತವ್ಯ ಇದೆ. ನಮ್ಮ ರೈತರಿಗೆ ಫೇವರ್ ಮಾಡಿದ್ದೇವೆ ಅಥವಾ ನಾಡಿನ ಜನರಿಗೆ ಫೇವರ್ ಮಾಡಿದ್ದೇವೆಂದು ನಾವು ಹೇಳಿಕೊಳ್ಳುವುದಕ್ಕೆ ತಯಾರಿಲ್ಲ. ಆದರೆ, ಇವತ್ತು ನಾವು ಮಾಡಿದ್ದನ್ನು, ಖಂಡಿತವಾಗಿಯೂ ಹೇಳಿಕೊಳ್ಳಬೇಕಾಗುತ್ತದೆ. ಆದರೆ, ಏನೂ ಮಾಡದೇ, ಹೇಳಿಕೊಳ್ಳುವಂಥ ಜನರು, ಈ ದೇಶದಲ್ಲಿ, ಈ ನಾಡಿನಲ್ಲಿ ಇರುವಾಗ, ನಾವು ಎಲ್ಲಾ ಮಾಡಿದರೂ ಕೂಡ, ಟೀಕೆಗೆ ಒಳಗಾಗತಕ್ಕ ಪರಿಸ್ಥಿತಿ ಬಂದಿದೆ. ಈ ಟೀಕೆ ಬಹಳ ಒಳ್ಳೆಯದು, ಟೀಕೆ ನಮ್ಮನ್ನು ಎಚ್ಚರಗೊಳಿಸುತ್ತದೆ ಮತ್ತೆ ಇನ್ನೂ ಹೆಚ್ಚು ಕರ್ತೃತ್ವ ಶಕ್ತಿಯನ್ನು ಆ ಟೀಕೆ ಕೊಡುತ್ತದೆ ಎಂದು ನಾವು ಭಾವನೆ ಮಾಡಿಕೊಂಡಿದ್ದೇವೆ. ನಮಗೆ ಅದರಲ್ಲಿ ಪ್ರತಿಷ್ಠೆ ಇಲ್ಲ. ಅದರಲ್ಲಿ ಏನೂ ಅಹಂಭಾವ ಇಲ್ಲ. ಅಹಂಭಾವ ನಮ್ಮ ಮುಂದೆ ಹೋಗಬಾರದು, ಅಹಂಭಾವ ನಮ್ಮ ಹಿಂದೆಯೂ ಬರಬಾರದು. ಅಹಂಭಾವವನ್ನು ಒಂದು ಕಡೆ ಕಟ್ಟಿ ಇಡಬೇಕು. ಆಗ ಮಾತ್ರ ವ್ಯಕ್ತಿ ಜನಗಳ ಸೇವೆ ಮಾಡುವುದಕ್ಕಾಗುತ್ತದೆ. ಇಲ್ಲದಿದ್ದರೆ, ಅಹಂಭಾವದ ನಮ್ಮ ಪ್ರತಿಷ್ಠೆಯ ಸೇವೆ ಮಾಡಿಕೊಂಡು, ದಿನಕಳೆಯುವಂಥ ಕಾಲ ಹೊರಟುಹೋಗಿದೆ. ಈಗ ನಮ್ಮ ಆಶಾಡಭೂತಿತನವನ್ನು ನಂಬತಕ್ಕ ಜನರು ಈ ದೇಶದಲ್ಲಿ ಇಲ್ಲ, ಈ ರಾಜ್ಯದಲ್ಲಿ ಇಲ್ಲ.

ಶ್ರೀ ಸಿ. ಬೈರೇಗೌಡ : ಯಾರು ಹೇಳಿದ್ದಾರೆ. ಅವರು ಯಾರು ಎಂದು, ಅವರ ಹೆಸರು ಹೇಳಿ. ನೀವು, ನಮ್ಮನ್ನು ಕುರಿತು ಮಾತನಾಡಿದರೆ, ನಾವೇನು ಮಾಡಬೇಕು. ಯಾರು ಎಂಬುದನ್ನು ದಯಮಾಡಿ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ನಾನು ಏನೋ ಪ್ರಶ್ನೆ ಕೇಳಿದರೆ, ನಮ್ಮನ್ನು ಈ ರೀತಿ ಹಿಡಿದುಕೊಂಡಿದ್ದೀರಿ. ನಿನ್ನೆ ಪ್ರಧಾನ ಮಂತ್ರಿಗಳು ಬಂದಿದ್ದರು. ಅವರಿಗೆ ಮತ್ತೆ ಮನವಿಯನ್ನು ಕೊಟ್ಟಿದ್ದೀರಾ, ಜನರು ಏನು ಹೇಳಿದರು ಎಂಬುದನ್ನು ಹೇಳಿ ಎಂದರೆ, ನಮ್ಮ ಮೇಲೆ ಬೀಳುತ್ತಿದ್ದೀರಿ. ನೀವು ಯಾರ ಮೇಲೆ ಬೀಳುತ್ತಿದ್ದೀರಿ, ಅವರ ಹೆಸರನ್ನು ಹೇಳಿದರೆ ಈ ಸದನಕ್ಕೆ ಗೊತ್ತಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದು ಯಾರ ಯಾರ ತಲೆಗೆ ಆ ಟೊಪ್ಪಿ ತಾಗುತ್ತದೆಯೋ ಅವರು ಇಟ್ಟುಕೊಳ್ಳಬಹುದು ಅಷ್ಟೇ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಪ್ರಶ್ನೆಗೆ ತಾವು ಈ ಉತ್ತರ ಕೊಟ್ಟರೆ ಏನು ಪ್ರಯೋಜನ?

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಪ್ರಧಾನಿಯವರ ಹತ್ತಿರ ನಾನು ನಿನ್ನೆ ಮಾತನಾಡಿದ್ದೇನೆ. ಪ್ರವಾಹ ಪೀಡಿತ ಪ್ರದೇಶಗಳ ಬಗ್ಗೆ 200 ಕೋಟಿ ರೂಪಾಯಿಗಳ ಮೆಮೆರ್ರ್ಯಾಂಡಂ ಕೊಟ್ಟಿದ್ದೇವೆ, ಕಡಿಮೆ ಪಕ್ಷ ನಮಗೆ ತಕ್ಷಣ 50 ಕೋಟಿ ರೂಪಾಯಿ ಆದರೂ ಕೂಡ ತಾವು ಒದಗಿಸಬೇಕು ಎಂದು ಕೇಳಿದ್ದೇವೆ. ಮತ್ತೆ 31 ಕೋಟಿ ರೂಪಾಯಿ ನಾವು ಬರಗಾಲದ ಬಗ್ಗೆ ನಾವು ಮೆಮೊರ್ರ್ಯಾಂಡಮ್ ಕೊಟ್ಟಿದ್ದೇವೆ, ಅದರ ಬಗ್ಗೆ ಕೂಡ ತಾವು ತಾತ್ಕಾಲಿಕ ಪರಿಹಾರ ಕೊಡಬೇಕು ಎಂದು ಕೇಳಿದೆವು. ಅದಕ್ಕೆ ಅವರು ಹೇಳಿದರು, ಫೈನಾನ್ಸ್ ಮಿನಿಸ್ಟರ್ ಹತ್ತಿರ ನಾನು ಮಾತನಾಡಿದ್ದೇನೆ, ಫೈನಾನ್ಸ್ ಮಿನಿಸ್ಟರ್‌ನ್ನು ನಾನು ಪುನಃ ಕರೆಯಿಸಿ ಮಾತನಾಡುತ್ತೇನೆ ಎಂದು ಹೇಳಿದರು. ಅವರು ನನಗೆ ಹೇಳಿದಂತಹ ಮಾತಿನಿಂದ ಖಂಡಿತವಾಗಿಯೋ ಕೂಡ ತಕ್ಷಣ ನಮಗೆ ಪರಿಹಾರ, ಪ್ರವಾಹದಲ್ಲಿಯೂ, ಬರಗಾಲದಲ್ಲಿಯೂ ಕೂಡ ಬರುತ್ತದೆ ಎನ್ನುವ ಆತ್ಮವಿಶ್ವಾಸ ನನಗೆ ಇದೆ.

ಶ್ರೀ ವಾಟಾಳ್ ನಾಗರಾಜ್ : ತಮಗೆ ನಂಬಿಕೆ ಇದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಶೇಕಡ 100 ರಷ್ಟು ನಂಬಿಕೆ ಇದೆ. ಮತ್ತೆ ವಿರೋಧ ಪಕ್ಷದವರೂ ಸಹ ಒತ್ತಾಯ ಮಾಡುತ್ತಿದ್ದಾರೆ ಎನ್ನುವ ವಿಚಾರವನ್ನೂ ಸಹ ನಾನು ಹೇಳಿದ್ದೇನೆ. ಇದನ್ನು ಪ್ರಸ್ತಾಪ ಮಾಡಿ ಎಂದು ತಾವೂ, ಮಾನ್ಯ ಸಿಂಧ್ಯಾ ಅವರು ಎಲ್ಲಾ ಹೇಳಿದ್ದಿರಿ. ಅದನ್ನೂ ಪ್ರಸ್ತಾಪ ಮಾಡಿದ್ದೇನೆ. ಪ್ರಾಮಾಣಿಕವಾಗಿ ಅವರಿಗೆ ಹೇಳಿದ್ದೇನೆ. ಕೆಲ್ಯಾಮಿಟಿ ರಿಲೀಫ್ ಫಂಡ್‌ನಲ್ಲಿ ಈಗಾಗಲೇ ನೆರವನ್ನು ಕೊಟ್ಟಿದ್ದಾರೆ. ಅದಕ್ಕಿಂತ ಓವರ್ ಅಂಡ್ ಎಬೌ ಯಾವುದೋ ಒಂದು ಸಹಾಯವನ್ನು ಅವರು ಮಾಡುತ್ತಾರೆ ಎನ್ನುವ ವಿಶ್ವಾಸ ಇದೆ ಮಾಡುತ್ತೇನೆ ಎನ್ನುವ ರೀತಿಯಲ್ಲಿ ಅವರು ನನಗೆ ಭರವಸೆಯನ್ನು ಕೊಟ್ಟಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಕಂದಾಯ ಸಚಿವರು ತಮ್ಮ ಹೇಳಿಕೆಯಲ್ಲಿ ಒಪ್ಪಿಕೊಂಡಿದ್ದಾರೆ. 1990-91ರಿಂದ ರೈತರು ಬಹಳ ಕಷ್ಟದಲ್ಲಿ ಇದ್ದಾರೆ, ಬಹಳ ಬರಗಾಲ ಇದೆ, ಅತಿವೃಷ್ಟಿ ಆಗಿದೆ ಎಂದು ಒಪ್ಪಿಕೊಂಡಿದ್ದಾರೆ. ಆದ್ದರಿಂದ ನಾನು ಏನು ಸಲಹೆ ಕೊಟ್ಟೆ ಎಂದರೆ, ಫೀನಲ್ ಇಂಟರೆಸ್ಟ್ ಮನ್ನಾ ಮಾಡಿದ್ದಾರೆ. ಅಪೆಕ್ಸ್‌ಬ್ಯಾಂಕ್‌ನವರು, ಲ್ಯಾಂಡ್ ಬ್ಯಾಂಕ್‌ನವರು ಮಾಡಿದ್ದಾರೆ. ತಾವೂ ಅದೇ ಪ್ರಕಾರ ಮಾಡಿ ರೈತರಿಗೆ ಬಡ್ಡಿ ರಿಯಾಯಿತಿ ಮಾಡಿ ಎಂದು ಹೇಳಿದೆ. ಅದರ ಬಗ್ಗೆ ಏನು ಮಾಡುತ್ತೀರಿ ಎಂದು ಹೇಳಬೇಕು. ಇನ್ನು ಬೆಳೆ ಬಗ್ಗೆ 50 ಪರ್ಸೆಂಟ್ ತಾವು ಮಾಡಿದ್ದೀರಿ. ಆತ ಭತ್ತ ಹಾಗೂ ಹತ್ತಿ ಎರಡೂ ಬೆಳೆಸುತ್ತಾನೆ. ಭತ್ತ ಚೆನ್ನಾಗಿ ಬಂದು ಹತ್ತಿ ಹಾಳಾಗುತ್ತದೆ. ಆಗ ಅವನಿಗೆ ಲಾಭ ಸಿಗುವುದಿಲ್ಲ. ಆದ್ದರಿಂದ ತಾವು ಕ್ರಾಪ್ ಸಪರೇಟಾಗಿ ನೋಡಿ. ಇಲ್ಲದಿದ್ದರೆ ಬಹಳ ಕಷ್ಟ ಆಗುತ್ತದೆ. ಅದಕ್ಕೆ ಉತ್ತರ ಕೊಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, ಎಷ್ಟು ಹಣ ಬೇಕು ಅಷ್ಟು ಹಣ ಕೊಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಬೀದರ್‌ನಲ್ಲಿ 1 ಕೋಟಿ ರೂಪಾಯಿ ಕೊಟ್ಟಿದ್ದೇವೆ ಎಂದು ಹೇಳಿದರು. ನನಗೆ ಬೇರೆ ಏನೂ ಬೇಡ. ಕುಡಿಯುವುದಕ್ಕೆ ನೀರು ಕೊಟ್ಟರೆ ಸಾಕು. ನಿಮಗೆ ದಂಡ ನಮಸ್ಕಾರ ಹಾಕುತ್ತೇವೆ ಸ್ವಾಮಿ. ನಮ್ಮ ಕಷ್ಟ ನಿಮಗೆ ಗೊತ್ತಿಲ್ಲ. ಕುಡಿಯುವುದಕ್ಕೆ ನಾವು ಕೇಳಿದುದ್ದು ನೀರು. ಮತ್ತೆ ಏನನ್ನೂ ನಾವು ಕೇಳಲಿಲ್ಲ. ಅಲ್ಲಿ ಸ್ಥಿತಿ ಏನಾಗಿದೆ ಎಂದು ನಾನು ಹೇಳುತ್ತೇನೆ. 70 ಲಕ್ಷ ರೂಪಾಯಿಯನ್ನು ಬೀದರ್‌ಗೆ ಬಿ-

ಮಾಡಿದ್ದೇವೆ ಎಂದು ತಾವು ಹೇಳಿದ್ದೀರಿ. 1991-92ರ ಬಾಕಿ 1 ಕೋಟಿ ರೂಪಾಯಿ ಹಾಗೆಯೇ ಇದೆ. ಇದು ಬಂಗಾರಪ್ಪನವರ ಸರ್ಕಾರ ಇದ್ದ ಕಾಲದ್ದು. ನಿಮ್ಮ ಸರ್ಕಾರದ್ದು 70 ಲಕ್ಷ ರೂಪಾಯಿ ಬಾಕಿ ಇದೆ. ಹಾಲಿ 1 ಕೋಟಿ 70 ಲಕ್ಷ ರೂಪಾಯಿ ಪೆಂಡಿಂಗ್ ಬಿಲ್ ಬಾಕಿ ಇದೆ. 70 ಲಕ್ಷ ಕೊಟ್ಟಿದ್ದೇವೆ ಎಂದು ಹೇಳುತ್ತೀರಲ್ಲಾ, ತಲೆ ಬಡೆದುಕೊಳ್ಳಬೇಕೋ ಅಥವಾ ಏನು ಮಾಡಿಕೊಳ್ಳಬೇಕೆಂದು ಹೇಳಿ. ಇನ್ನೂ ಅಲ್ಲಿ ಕುಡಿಯುವ ನೀರಿಗೆ ಗತಿ ಇಲ್ಲ, ದನಗಳಿಗೆ ಮೇವು ಇಲ್ಲ. ರೈತರು ಏನು ಭೂಮಿಗೆ ಬೀಜ ಹಾಕಿದ್ದಾರೆ ಅವು ಹೋಗಿಬಿಟ್ಟವೆ. ಎಲ್ಲಾ ಒಣಗಿ ಹೋಗಿ ಬೆಳೆ ಇಲ್ಲ. ರೈತರಿಗೆ ಏನಾದರೂ ಪರಿಹಾರ ಕೊಡುತ್ತೀರೋ ಅಥವಾ ಕುಡಿಯುವ ನೀರಿನ ವ್ಯವಸ್ಥೆ ಏನಾದರೂ ಮಾಡುತ್ತೀರೋ? ರೈತರಿಗೆ ಉದ್ಯೋಗ ಬೇಕು. ಮಧ್ಯಮ ವರ್ಗದ ರೈತರಿಗೆ ಕೆಲಸ ಮಾಡಲು ಆಗುವುದಿಲ್ಲ, ಏನೂ ಆಗುವುದಿಲ್ಲ. ಬೀಜ ಮನೆಯಿಂದ ಹೋಗಿದೆ. ಈಗ ಅವರು ನಿರ್ಗತಿಕರಾಗಿದ್ದಾರೆ. ಇವತ್ತು ಔರಾದ ತಾಲ್ಲೂಕು ಒಂದರಲ್ಲೇ ಒಂದೂವರೆ ಕೋಟಿ ರೂಪಾಯಿ ಎಸ್ಟಿಮೇಟ್ ಮಾಡಿ ಕಳುಹಿಸಿದ್ದಾರೆ. ಬೀದರ್ ಜಿಲ್ಲೆಗೆ 5 ಕೋಟಿ ರೂಪಾಯಿ ಬೇಕಾಗುತ್ತದೆ. ಕುಡಿಯುವ ನೀರಿಗೆ ಎಲ್ಲಿದೆ ಹಣ? ನೀವು ಕೊಟ್ಟಿದ್ದೇವೆ ಎಂದರೆ ನಾವು ಏನು ಮಾತನಾಡುವುದು? ಖಚಿತವಾಗಿ ತಾವು ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೀರಾ? ನಮ್ಮಲ್ಲಿ ಏನು ಪರಿಸ್ಥಿತಿ ಇದೆ ಎಂದರೆ ಒಂದು ತಾಂಡಾದಲ್ಲಿ 4 ಕಿ.ಮೀ. ನಿಂದ ನೀರು ತಂದು ಹೊರಚಿಲ ಮೇಲೆ ಕುಳಿತು ಮೈ ತೊಳೆದುಕೊಂಡು ಕೆಳಗಡೆ ಬುಟ್ಟಿ ಇಟ್ಟುಕೊಂಡು ಬುಟ್ಟಿಯಲ್ಲಿನ ಆ ನೀರಿನಲ್ಲಿ ಬಟ್ಟೆ ಒಗೆಯುತ್ತಾರೆ. ಈ ಪರಿಸ್ಥಿತಿ ನಮ್ಮದು ಇದೆ. ಜನ ಅಲ್ಲಿ ಘೆರಾವೋ ಮಾಡುತ್ತಾರೆ. ಇಂತಹ ಪರಿಸ್ಥಿತಿ ಇದ್ದಾಗ ಇವತ್ತು ಕುಡಿಯುವ ನೀರಿಗೆ ದುಡ್ಡಿದೆ ಎಂದರೆ ಅದು ಎಲ್ಲಿದೆ? ಡೆಪ್ಯುಟಿ ಕಮೀಷನರ್ ಹತ್ತಿರ ಇದೆ ಎನ್ನುತ್ತೀರಿ. ಮೊನ್ನೆ 25 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದಾರೆ. 1 ಕೋಟಿ 70 ಲಕ್ಷದ ಬಿಲ್ ಇದೆ. 1 ಕೋಟಿ ಕೊಟ್ಟಿದ್ದೇವೆ ಎನ್ನುತ್ತೀರಿ. ನಮಗೆ ಕೋಟಿಯೂ ಇಲ್ಲ, ಏನೂ ಇಲ್ಲ. ನಮಗೆ ಕುಡಿಯುವ ನೀರು ಕೊಡುವ ಬಗ್ಗೆ ಖಚಿತವಾಗಿ ಹೇಳಬೇಕು. 1 ಕೋಟಿ 70 ಲಕ್ಷ ಪೆಂಡಿಂಗ್ ಬಿಲ್ ಕೊಟ್ಟು ಪುನಃ ಎಷ್ಟು ಕೊಡುತ್ತೀರಿ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾವು ಏನು 70 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೇವೆ ಅದು 1ನೇ ಏಪ್ರಿಲ್ ನಿಂದ ಮೊನ್ನೆ ಆಗಸ್ಟ್ 27ರವರೆಗೆ ಕುಡಿಯುವ ನೀರಿಗೆ ಎಂದೇ ಕೊಟ್ಟದುದ್ದು. ಹಳೆಯದು ಏನು ಪೆಂಡಿಂಗ್ ಇದೆ ಅದನ್ನು ನಾವು ಪ್ರತ್ಯೇಕವಾಗಿ ಸೆಟಲ್ ಮಾಡುತ್ತೇವೆ. ಇದು ಖರ್ಚು ಮಾಡಿರುವುದು ಏಪ್ರಿಲ್‌ನಿಂದ ಇಲ್ಲಿಯವರೆಗೆ. ಕುಡಿಯುವ ನೀರಿನ ಬಗ್ಗೆ ಇನ್ನೂ ಕೂಡ ಹಣಬೇಕಾದರೆ ನಾವು ಜಿಲ್ಲಾಧಿಕಾರಿಗಳಿಗೆ ಸಂಪರ್ಕ ಮಾಡುತ್ತೇವೆ. ನಾಳೆಯೇ ಬೇಕಾದರೆ ನಾವು ರಿಲೀಸ್ ಮಾಡುತ್ತೇವೆ. ಕುಡಿಯುವ ನೀರಿಗೆ ಬೇಡಿಕೆ ಬಹಳ ಇರುತ್ತದೆ. ಆದರೆ ಎಷ್ಟು ಅವಶ್ಯಕತೆ ಇದೆಯೋ ಅಷ್ಟರ ಬಗ್ಗೆ ನಾವು ಜಿಲ್ಲಾಧಿಕಾರಿಗಳನ್ನು ವಿಚಾರಿಸಿ ನಾವು ಮಾಡುತ್ತೇವೆ. ಹಳೆಯ ಲೆಕ್ಕಾಚಾರ ಸಪರೇಟ್.

ಶ್ರೀ ಸಿ. ಬೈರೇಗೌಡ : ನಮ್ಮ ಕೋಲಾರ ಜಿಲ್ಲೆಗೆ 30 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ನಮ್ಮಲ್ಲಿ 11 ತಾಲ್ಲೂಕುಗಳು ಇವೆ. ಒಂದು ತಾಲ್ಲೂಕಿಗೆ 3 ಲಕ್ಷ ಬಂದಿದ್ದು ಅದರಲ್ಲಿ 4 ಅಥವಾ 5 ಬೋರ್ವೆಲ್ ಆಗುತ್ತದೆ. ಇದು ಸಾಕಾಗುವುದಿಲ್ಲ. ಕನಿಷ್ಠ 1 ತಾಲ್ಲೂಕಿಗೆ 25ರಿಂದ 30 ಕೊಳವೆಬಾವಿಗಳು ತತಕ್ಷಣ ಬೇಕಾಗಿದ್ದು ಇದರ ಬಗ್ಗೆ ಹಣ ಬಿಡುಗಡೆ ಮಾಡುತ್ತೀರಾ?

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಿ. ತಾವು ಏನು ಮಾತನಾಡಿದರೂ ಅದು ಕಡತಕ್ಕೆ ಹೋಗಬಾರದು.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗಾಗಲೇ ಸಾಕಷ್ಟು ಉತ್ತರ ಕೊಟ್ಟಿದ್ದೇವೆ. ತಾವೂ ಕೂಡ ಹೇಳಿದ್ದೀರಿ. ಇದು ಕುಡಿಯುವ ನೀರಿನ ಅವಶ್ಯಕತೆ ವಿಚಾರ. ಇದಕ್ಕೆ ಏನೇ ಕಷ್ಟ ಆದರೂ ಕೂಡ ಹಣವನ್ನು ಬಿಡುಗಡೆ ಮಾಡುತ್ತೇವೆ. ಮೊನ್ನೆ ವಿಭಾಗಾಧಿಕಾರಿಗಳ ಜೊತೆ ವಿಭಾಗ ಮಟ್ಟದ ಚರ್ಚೆ ಮಾಡಿದಾಗ ಅಧಿಕಾರಿಗಳಿಗೆ ಹೇಳಿದ್ದೇವೆ. ಎಲ್ಲೆಲ್ಲಿ ಮಿನಿವಾಟರ್ ಸಪ್ಲೈ ಸ್ಕೀಮ್‌ಗಳು ಇವೆ ಅವು ಪ್ಲಾನ್‌ನಲ್ಲಿ ಬರುತ್ತವೆ. ಇದು ಅಲ್ಲದೇ ಓವರ್ ಅಂಡ್ ಎಬೌ ದಟ್. ಆ ಕುಡಿಯುವ ನೀರಿನ ಬಗ್ಗೆ ಪ್ಲಾನ್ ಹಣದಲ್ಲಿ ಕೂಡ ಖರ್ಚು ಮಾಡುವುದಕ್ಕೆ ಹೇಳಿದ್ದೇವೆ. ಕುಡಿಯುವ ನೀರಿನ ಬಗ್ಗೆ ಯಾವುದೇ ಕೊರತೆ ಆಗಬಾರದು ಎಂದು ಹೇಳಿದ್ದೇವೆ. ಇನ್ನು ಇಂಟರೆಸ್ಟ್ ವೇವ್ ಬಗ್ಗೆ ಹೇಳಿದ್ದೀರಿ. ಅದನ್ನು ಪ್ರತ್ಯೇಕವಾಗಿ ವಿಚಾರ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ನಿನ್ನೆ ಲೋಕಸೇವಾ ಆಯೋಗದ ಬಗ್ಗೆ ಉತ್ತರವನ್ನು ಕೊಡಬೇಕಾಗಿತ್ತು. ಮತ್ತು ಪೋಲೀಸ್ ಸ್ಟೇಷನ್‌ನಲ್ಲಿ ರಂಗನಾಥ್ ಅವರನ್ನು ಹೊಡೆದಿರುವ ಬಗ್ಗೆ ಇವತ್ತು ಉತ್ತರ ಕೊಡುತ್ತೇವೆಂದು ಹೇಳಿದ್ದರು.

ಶ್ರೀ ಎಂ. ವೀರಪ್ಪ ಮೊಯಿಲಿ : ಕೆಪಿಎಸ್‌ಸಿ ಬಗ್ಗೆ ನಾಳೆ ಉತ್ತರ ಕೊಡುತ್ತೇನೆ. ರಂಗನಾಥ್ ಬಗ್ಗೆ ತಮ್ಮ ಜೊತೆ ಇವತ್ತು ಸಮಾಲೋಚನೆ ಮಾಡಿ ನಾಳೆ ಉತ್ತರ ಕೊಡುತ್ತೇನೆ.

ಗಮನ ಸೆಳೆಯುವ ಸೂಚನೆಗಳು

ಕೊಬ್ಬರಿಯನ್ನು ಸರ್ಕಾರ ಅಥವಾ ವ್ಯಾಪಾರಸ್ಥರು ಕೊಳ್ಳದೇ ಇರುವುದರಿಂದ ರೈತರಿಗೆ ತೊಂದರೆ

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೇ, ಸರ್ಕಾರದವರು ನಿಗದಿ ಮಾಡಿರುವ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಕೊಬ್ಬರಿಯು ಮಾರಾಟವಾಗುತ್ತಿದ್ದರೂ ಸಹಾ ಸರ್ಕಾರದ ಏಜೆನ್ಸಿಯಾಗಲೀ ಅಥವಾ ವ್ಯಾಪಾರಸ್ಥರಾಗಲೀ ಕೊಳ್ಳಲು ಮುಂದೆ ಬಾರದಿರುವುದರಿಂದ ರೈತರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಮಾನ್ಯ ತೋಟಗಾರಿಕಾ ರಾಜ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

+ ಶ್ರೀ ರಾಮಲಿಂಗಾರೆಡ್ಡಿ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) : ತಿಪಟೂರು ಮಾರುಕಟ್ಟೆ ಸಮಿತಿಯು ಕೊಬ್ಬರಿ ಮಾರಾಟಕ್ಕೆ ಪ್ರಸಿದ್ಧವಾಗಿದ್ದು, ಚಿಕ್ಕನಾಯಕನಹಳ್ಳಿ, ತುರುವೇಕೆರೆ, ಗುಬ್ಬಿ, ಚೆನ್ನರಾಯಪಟ್ಟಣ, ಅರಸೀಕೆರೆ ಮುಂತಾದ ತಾಲ್ಲೂಕುಗಳಿಂದ ಈ ಮಾರುಕಟ್ಟೆಗೆ ಕೊಬ್ಬರಿಯನ್ನು ರೈತರು ಮಾರಾಟಕ್ಕೆ ತರುತ್ತಾರೆ. ನೈಸರ್ಗಿಕವಾಗಿ ಒಣಗಿಸಿ ಉತ್ಪಾದಿಸಿದ ದುಂಡು ಕೊಬ್ಬರಿಗೆ ಈ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇದೆ. ಇತ್ತೀಚಿನ ದಿನಗಳಲ್ಲಿ ಕೇರಳ ಮತ್ತು ತಮಿಳುನಾಡುಗಳಲ್ಲಿಯೂ ಸಹ ದುಂಡು ಕೊಬ್ಬರಿ ಉತ್ಪಾದನೆಯು ಹೆಚ್ಚಿದೆ ಎಂದು ತಿಳಿದು ಬಂದಿದ್ದು, ತಿಪಟೂರು ಮಾರುಕಟ್ಟೆಯ ದುಂಡು ಕೊಬ್ಬರಿಗೆ ಸಹಜವಾಗಿ ಬೇಡಿಕೆ ಕಡಿಮೆಯಾಗಿರುತ್ತದೆ. ದೇಶದ ಉತ್ತರ ಭಾಗದ ರಾಜ್ಯಗಳಿಂದ ತಿಪಟೂರು ದುಂಡು ಕೊಬ್ಬರಿಗೆ ಹೆಚ್ಚಿನ ಬೇಡಿಕೆ ಇದ್ದು, ಪ್ರಸ್ತುತ ತಮಿಳುನಾಡು ಮತ್ತು ಕೇರಳ ರಾಜ್ಯಗಳು ದುಂಡು ಕೊಬ್ಬರಿ ಉತ್ಪಾದಿಸಿ ಉತ್ತರ ಭಾರತದ ರಾಜ್ಯಗಳಿಗೆ ಸರಬರಾಜು ಮಾಡುತ್ತಿರುವುದು ಸಹ ಬೆಲೆ ಇಳಿಯಲು ಒಂದು ಪ್ರಮುಖ ಕಾರಣವಾಗಿದೆ. 1992-93, 1993-94ನೇ ಸಾಲಿನಲ್ಲಿ ಬೆಂಬಲ ಬೆಲೆಯು ಕ್ರಮವಾಗಿ ರೂ. 2,116-00 ಮತ್ತು ರೂ. 2,350-00 ಇದ್ದು, ಮಾರುಕಟ್ಟೆಯಲ್ಲಿ ಧಾರಣೆಯು ಬೆಂಬಲ ಬೆಲೆಗಿಂತ ಹೆಚ್ಚಿಗೆ ದೊರೆತ್ತಿರುತ್ತದೆ. 1994-95ನೇ ಸಾಲಿನಲ್ಲಿ ಬೆಂಬಲ ಬೆಲೆಯು ರೂ. 2,575-00 ನಿಗದಿಪಡಿಸಿದ್ದು, 1994ರ ಮೇ ತಿಂಗಳಿನಿಂದ ಜುಲೈ ತಿಂಗಳವರೆಗೆ ತಿಪಟೂರು ಮಾರುಕಟ್ಟೆಯಲ್ಲಿ

ಕ್ವಿಂಟಾಲ್‌ಗೆ ಕ್ರಮವಾಗಿ ರೂ. 2,500-00, ರೂ. 2,400-00, ರೂ. 2,400-00 ಮಾದರಿ ಬೆಲೆ ಬಂದಿದೆ. ಅಂದರೆ ಪ್ರತಿ ಕ್ವಿಂಟಾಲ್‌ಗೆ ಸುಮಾರು ಸರಾಸರಿ ರೂ. 175-00 ಗಳಷ್ಟು ಕಡಿಮೆಯಾಗಿರುತ್ತದೆ.

ಬೆಂಬಲ ಭೆಲೆಗೆ ಕೊಬ್ಬರಿಯನ್ನು ಖರೀದಿಸಲು ಕೇಂದ್ರ ಸರ್ಕಾರವು ನಾಫೆಡ್ ಸಂಸ್ಥೆಗೆ ವಹಿಸಿದೆ. ಇದು ತಿಪಟೂರು ಮಾರುಕಟ್ಟೆಯಲ್ಲಿ ಟಿ.ಎ.ಪಿ.ಸಿ.ಎಂ.ಎಸ್. ಮತ್ತು ಮಾರ್ಕ್‌ಫೆಡ್ ಮೂಲಕ ಬೆಂಬಲ ಬೆಲೆಗೆ ಕೊಬ್ಬರಿಯನ್ನು ಖರೀದಿಸಲು ಕಾರ್ಯಕ್ರಮವನ್ನು ಹಮ್ಮಿಕ್ರೊಂಡಿದೆ. ಮಾರುಕಟ್ಟೆಯಲ್ಲಿ ಬೆಲೆಯು ಬೆಂಬಲ ಬೆಲೆಗಿಂತ ಕಡಿಮೆಯಾದ ಸಂದರ್ಭದಲ್ಲಿ ಬೆಂಬಲ ಬೆಲೆಗೆ ಖರೀದಿಸಲು ನಾಫೆಡ್ ಮತ್ತು ಮಾರ್ಕ್‌ಫೆಡ್ ಸಂಸ್ಥೆಗಳು ಮಾರುಕಟ್ಟೆಯಲ್ಲಿ ಭಾಗವಹಿಸಬೇಕೆಂದು ಕೃಷಿ ಮಾರಾಟ ಇಲಾಖೆಯು ಪತ್ರ ಸಂಖ್ಯೆ ಎಸ್‌ಎಂಡಿ 9 ಎಂಐಪಿ 94, ದಿನಾಂಕ 19-5-94 ಮತ್ತು 5-8-94 ರಲ್ಲಿ (ಪ್ರತಿ ಲಗತ್ತಿಸಿದೆ) ಹಾಗೂ ತಿಪಟೂರು ಮಾರುಕಟ್ಟೆ ಸಮಿತಿ ಪತ್ರ ಸಂಖ್ಯೆ 934 : 94-95, ದಿನಾಂಕ 26-5-94, (2) 1659L94-95 ದಿನಾಂಕ 30-6-94 (3) 1821 : 94-95, ದಿನಾಂಕ 7-7-94 (4) 2535:94-95, ದಿನಾಂಕ 5-08-94 ಗಳಲ್ಲಿ ಮತ್ತು ತಂತಿ ಸಂದೇಶ ದಿನಾಂಕ 19-7-94, 30-7-94ರಲ್ಲಿ 5-8-94ರಲ್ಲಿ ಹಾಗೂ ಅರಸೀಕೆರೆ ಸಮಿತಿ ಪತ್ರ ಸಂಖ್ಯೆ 667:94-95 ದಿನಾಂಕ 31-5-94 ಮತ್ತು ಸಂಖ್ಯೆ 1522 : 94-95, ದಿನಾಂಕ 10-8-94ರಲ್ಲಿ ನಾಫೆಡ್ ಸಂಸ್ಥೆಯನ್ನು ಮಾರುಕಟ್ಟೆಯಲ್ಲಿ ಬೆಂಬಲ ಬೆಲೆಗೆ ಖರೀದಿಸಲು ವಿನಂತಿಸಿಕೊಳ್ಳಲಾಗಿದೆ. ಇದರ ಅನುಗುಣವಾಗಿ ಬೆಂಬಲ ಬೆಲೆ ರೂ. 2,575-00 ಗಳಿಗೆ ಕೊಬ್ಬರಿಯನ್ನು ಈ ಸಂಸ್ಥೆಗಳಿಗೆ ಮಾರಾಟ ಮಾಡಿ, ಈ ಸೌಲಭ್ಯದ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು ರೈತರಿಗೆ ತಿಪಟೂರು ಮಾರುಕಟ್ಟೆ ಸಮಿತಿಯಿಂದ ಕರಪತ್ರಗಳನ್ನು ಮುದ್ರಿಸಿ ವ್ಯಾಪಕ ಪ್ರಚಾರ ನೀಡಲಾಗಿದೆ.

ನಾಫೆಡ್ ಸಂಸ್ಥೆಯೂ ಬೆಂಬಲ ಬೆಲೆಗೆ ಖರೀದಿಸಲು ಬಿಡುಗಡೆ ಮಾಡಿರುವ ಹಣವನ್ನು ಟಿ.ಎ.ಪಿ.ಸಿ.ಎಂ.ಎಸ್. ಮತ್ತು ಮಾರ್ಕ್‌ಫೆಡ್ ಇವು ತುಮಕೂರು ಡಿ.ಸಿ.ಸಿ. ಬ್ಯಾಂಕ್ ಮೂಲಕ ಪಡೆಯಬೇಕಾಗುತ್ತದೆ. ಆದರೆ, ಈ ಮಧ್ಯೆ ಸದರಿ ಬ್ಯಾಂಕಿನ ನೌಕರರು ಹಠಾತ್ ಮುಷ್ಕರ ಹೂಡಿ ಬ್ಯಾಂಕಿನ ಕೆಲಸ ಸ್ಥಗಿತಗೊಂಡಿರುವುದರಿಂದ ಹಣ ಬಿಡುಗಡೆ ಮಾಡಲು ತೊಂದರೆಯಾಗಿರುತ್ತದೆ. ತುಮಕೂರು ಜಿಲ್ಲಾ ಡಿ.ಸಿ.ಸಿ. ಬ್ಯಾಂಕಿನ ನೌಕರರ ಮುಷ್ಕರದಿಂದ ಇಡೀ ತುಮಕೂರು ಜಿಲ್ಲೆಯಾದ್ಯಾದ್ಯಂತ ಸಹಕಾರಿ ಸಂಘಗಳಾದ ಮಾರ್ಕ್‌ಫೆಡ್ ಮತ್ತು ಟಿ.ಎ.ಪಿ.ಸಿ.ಎಂ.ಎಸ್. ಕಾರ್ಯನಿರ್ವಹಣೆಗೆ ಅಡಚಣೆ ಉಂಟಾಗಿರುತ್ತದೆ. ಈ ಕಾರಣದಿಂದ ಸದರಿ ಸಂಸ್ಥೆಗಳು ಕೊಬ್ಬರಿಯನ್ನು ಬೆಂಬಲ ಬೆಲೆಗೆ ಖರೀದಿಸಲು ತಾತ್ಕಾಲಿಕವಾಗಿ ಅಡಚಣೆಯಾಗಿದೆ. ಈ ಸಮಸ್ಯೆಯನ್ನು ಬಗೆಹರಿಸಲು ತೀವ್ರವಾಗಿ ಕ್ರಮ ಕೈಗೊಳ್ಳಬೇಕೆಂದು ನಾಫೆಡ್ ಹಾಗೂ ಮಾರ್ಕ್‌ಫೆಡ್ ಸಂಸ್ಥೆಗಳಿಗೆ ವಿನಂತಿಸಲಾಗಿದ್ದು, ಈ ಬಗ್ಗೆ ತೀವ್ರ ಕ್ರಮ ಕೈಗೊಳ್ಳಲಾಗುತ್ತಿದೆ.

5.10 ಪಿ.ಎಂ

ನಿನ್ನೆಯಿಂದ ಡಿಸಿಸಿ ಬ್ಯಾಂಕಿನ ಸ್ಟ್ರೈಕ್ ವಿಥ್‌ಡ್ರಾ ಮಾಡಿಕೊಂಡಿರುವುದರಿಂದ 60 ಕ್ವಿಂಟಾಲ್‌ನಷ್ಟು ಪರ್ಚೇಸ್ ಮಾಡಿದ್ದಾರೆ.

+ **ಶ್ರೀ** ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರೇ, ಅದೇನಾದರೂ ಅರ್ಥವಾಗಿದ್ದರೆ ಸ್ವಲ್ಪ ಚೆನ್ನಾಗಿರುತ್ತಿತ್ತು ಇಲ್ಲಿ ಭಾಷೆ ಬಳಕೆ ಮಾಡುವುದಕ್ಕೆ 19-5-94ರಲ್ಲಿ ತಿಪಟೂರು ಎಪಿಎಂಸಿಗೆ ಪರ್ಚೇಸ್ ಮಾಡಿ ಎಂದು ಒಂದು ಸರ್ಕ್ಯುಲರ್ ಕೊಟ್ಟರು ಎಂದು ಸಚಿವರೇ ಇಲ್ಲಿ ಹೇಳುತ್ತಿದ್ದಾರೆ. ನಿನ್ನೆ 60 ಬ್ಯಾಗ್ ತೆಗೆದುಕೊಂಡಿದ್ದಾರೆ. ಏಕೆ? ಇಲ್ಲಿ ಗಮನ ಸೆಳೆಯುವ ಸೂಚನೆ ಹಾಕಿದ್ದೇವೆ, ನಮ್ಮ ಮುಂದೆ ನಿಂತುಕೊಂಡು ಹೇಳುವುದಕ್ಕೆಂದು ಇನ್ನೇನೂ ಇಲ್ಲ. ಇದೊಂದು ದೊಡ್ಡ ಕುತಂತ್ರ. 2575 ಕೊಟ್ಟಿರುವುದೇ ಸರಿಯಿಲ್ಲ, 3600 ರೂ ಧಾರಣೆ ಬೇಕೆಂದು ಡಿಮ್ಯಾಂಡ್ ಇಟ್ಟು, ಇವರ ಸರ್ಕಾರದಿಂದ

ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸ್ ಮಾಡಿದರೆ ಅಲ್ಲಿರುವ ಸರ್ಕಾರ 2575 ರೂ. ನಿಗದಿ ಮಾಡುತ್ತದೆ. ಅದಾದರೂ ಕೊಡಿ ದಾಸಯ್ಯದಿರಾ ಅಂದರೆ... ನಮ್ಮನ್ನು ಜಂಗಮಯ್ಯದಿರಾಗಿ ಮಾಡಿ ಕೂರಿಸಿದ್ದೀರಿ ಇವತ್ತು. ಡಿಸಿಸಿ ಬ್ಯಾಂಕ್ ಸ್ಟ್ರೈಕ್ ಆದರೆ ನಮಗೇನಾಗಬೇಕಾಗಿದೆ? ನಾವು ಡಿಸಿಸಿ ಬ್ಯಾಂಕ್‌ನವರನ್ನು ಕೇಳುವುದಕ್ಕೆ ಹೋಗಿದ್ದೇವೆಯೇ? ಇವರ ಡಿಸಿಸಿ ಬ್ಯಾಂಕ್ ಅಧ್ಯಕ್ಷರೇ ನಂ.ಟು ಕೆಲಸ ಮಾಡಿ ರೈಡ್ ಆಗಿ ಕಮರ್ಷಿಯಲ್ ಟ್ಯಾಕ್ಸ್‌ನವರು ಹಿಡಿದು ಒಳಕ್ಕೆ ಹಾಕಬೇಕಾಗಿದ್ದ ವ್ಯಕ್ತಿ. ಮತ್ತೆ ತೆಗೆದುಕೊಳ್ಳುತ್ತಾರಾ ನಮ್ಮ ಕೊಬ್ಬರಿಯನ್ನು ಅವರು ತಿಪಟೂರಿನಲ್ಲಿ? ಇಡೀ ನಿಮ್ಮ ಎಪಿಎಂಸಿ ಆಚೆಯಿಂದ ಕೊಬ್ಬರಿ ವ್ಯಾಪಾರ ಆಗುತ್ತಿದೆ ಎಂದು 10 ಸಲ ನಾನು, ಹಾಗೂ ಗೆಳೆಯರಾದ ಶ್ರೀ ಶಿವರಾಮೇಗೌಡರು ಹೇಳಿದ್ದೇವೆ, ಎಂದಾದರೂ ನೀವು ಆಕ್ಷನ್ ತೆಗೆದುಕೊಂಡಿದ್ದೀರಾ? ತಮಗೊಂದು ಮಾತು ಹೇಳುತ್ತೇನೆ ಸ್ವಾಮಿ, 600 ಚೀಲ ಅಂಗಡಿಯಲ್ಲಿ ಕೊಬ್ಬರಿ ಇತ್ತು. ಮೊನ್ನೆ 10 ಚೀಲಕ್ಕೆ ಟೆಂಡರ್ ಆಗುತ್ತದೆ. 600 ಚೀಲ ಕೊಂಡುಕೊಳ್ಳಯ್ಯಾ ಅಂದರೆ ಹೋಲ್‌ಸೆಲರ್ ಹೇಳುತ್ತಾನೆ 10 ಚೀಲಕ್ಕೆ ಟೆಂಡರ್ ಹಾಕಿದ್ದೇನಿ ತೆಗೆದುಕೊಳ್ಳಿ ಎಂದು ತಿಪಟೂರು ಮಾರ್ಕೆಟ್‌ಗೆ ಕೊಬ್ಬರಿ ಎಷ್ಟು ಬರುತ್ತದೆ ಎಂಬುದು ಮಾನ್ಯ ಮಾರುಕಟ್ಟೆ ಸಚಿವರಿಗೆ ಗೊತ್ತಿದೆಯಾ? ಗೊತ್ತಿಲ್ಲ, ಅವರೇನೋ ಬರೆದು ಕಳುಹಿಸಿದ್ದಾರೆ, ಇವರು ನಿಂತು ಹೇಳುತ್ತಿದ್ದಾರೆ.

ಶ್ರೀ ರಾಮಲಿಂಗಾರೆಡ್ಡಿ : ನೀವು ಸ್ಪಷ್ಟವಾಗಿ ಪ್ರಶ್ನೆ ಕೇಳಿ. ನಾನು ಎಲ್ಲವನ್ನೂ ಕರೆಕ್ಟಾಗಿ ಹೇಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಪ್ರಶ್ನೆ ಕೇಳಲಿಲ್ಲ, ಗಮನಸೆಳೆಯುವ ಸೂಚನೆ ಕೊಟ್ಟಿದ್ದೇನೆ. ಅವರು ತಯಾರಾಗಿ ಇಲ್ಲಿ ಬರಬೇಕಾಗಿತ್ತು. ಅದು ಅವರ ಕರ್ತವ್ಯ. ತಿಪಟೂರು ಮಾರುಕಟ್ಟೆಯಲ್ಲಿ ಕೊಬ್ಬರಿ ಒಳಗಡೆ ಎಷ್ಟು ಬರುತ್ತಿದೆ ಹೊರಗಡೆ ಹೋಗುತ್ತಿದೆ. ಮಾನ್ಯ ರಾಜಶೇಖರಮೂರ್ತಿಯವರು ಹಣಕಾಸು ಸಚಿವರಾಗಿದ್ದ ದಿವಸದಿಂದ ನಾವು ಹೇಳುತ್ತಿದ್ದೇವೆ, ಸ್ವಾಮಿ ದೊಡ್ಡ ಫ್ರಾಡಾಗುತ್ತಿದೆ ಮಾಲೆಲ್ಲಾ ನಂ. ಟು ನಲ್ಲಿ ಹೋಗುತ್ತಾ ಇದೆ.

ಯಾರೋ ವ್ಯಾಪಾರ ಮಾಡಿಕೊಳ್ಳುವವರು ಬದುಕಿಹೋಗಿದ್ದಾರೆ, ರೈತರ ಮನೆ ಹಾಳಾಗಿವೆ. ನಮ್ಮ ಮಾಲು ಮೇಲೆ ಇವತ್ತು ಟೆಂಡರ್ ಹಾಕುವ ವ್ಯವಸ್ಥೆ ಇಲ್ಲ ತಿಪಟೂರು ಮಾರುಕಟ್ಟೆಯಲ್ಲಿ ಅಂಗಡಿಯವನ ಹೆಸರಲ್ಲಿ ನೀವು ಟೆಂಡರ್ ಹಾಕುತ್ತಿದ್ದೀರಿ, ಇಲ್ಲೊಂದು ಸರ್ಕಾರ ಇದೆಯಾ ಎಂದು ಹೇಳಿದೆವು, ಕೇಳಲಿಲ್ಲ, ಇವತ್ತು ಹೇಳುತ್ತಿದ್ದೀರಿ, ಟಿಎಪಿಎಂಎಸ್ ಕೊಡಲಿ ಎಂದು ತೆಗೆದು ನೋಡಿ ಕಡತವನ್ನು ಟಿ.ಎ.ಪಿಎಂಎಸ್‌ಗೆ ಕೂಡ ನಾನು ಕ್ವೊಶ್ಚನ್ ಮಾಡಿದ್ದೇನೆ. ಟಿ.ಎ.ಪಿ.ಎಂ. ಎಸ್ ತಿಪಟೂರಿನದ್ದು ವಹಿವಾಟು ಮಾಡುತ್ತಿಲ್ಲ. ಹಾಳು ಮಾಡುತ್ತಿದೆ, ಕಾಂಪಿಟೇಟಿವ್ ಮಾಡಬೇಕಾದ ಒಂದು ಸಂಸ್ಥೆ ಯಾರದೋ ಕೈನಲ್ಲಿ ಹೋಗಿದೆ ಎಂದು.

ಇದಕ್ಕೇನು ಹೇಳುತ್ತೀರಿ? ಐದನೇ ತಿಂಗಳಿಂದ ಇವತ್ತಿನವರೆಗೆ ಕೊಬ್ಬರಿ ತೆಗೆದುಕೊಂಡಿಲ್ಲ. ಸಪ್ಪೋರ್ಟ್ ಪ್ರೈಸ್ ಫಿಕ್ಸ್ ಮಾಡಿ 5ನೇ ತಿಂಗಳಲ್ಲಿ ಇವರ ಆರ್ಡರ್ ಆಗಿದೆ. ನಿನ್ನೆ 60 ಬ್ಯಾಗ್ ತೆಗೆದುಕೊಂಡಿದ್ದಾರೆ. ಒಂದು ದಿವಸ ಮಾರುಕಟ್ಟೆಗೆ 4000 ರಿಂದ 5000 ಚೀಲ ಕೊಬ್ಬರಿ ಬರುತ್ತದೆ ತಿಪಟೂರಿಗೆ ಸಾಧಾರಣ ದಿವಸಗಳಲ್ಲಿ ಫ್ಲಷ್ ಇದೆ ಎಂದರೆ 8000 ದಿಂದ 10 ಸಾವಿರ ಚೀಲ ಕೊಬ್ಬರಿ ಬರುತ್ತದೆ, ಒಂದು ಚೀಲಕ್ಕೆ 42 ಕೆಜಿಯಂತೆ ತಾವು ಲೆಕ್ಕ ಹಾಕಿಕೊಳ್ಳಿ ಎಷ್ಟು ಕ್ವಿಂಟಾಲ್ ಅಲ್ಲಿಗೆ ಕೊಬ್ಬರಿ ಬರುತ್ತದೆ ಎಂದು ಬೇಡಿಕೊಂಡಿದ್ದೇವೆ ಎಲ್ಲಾರೂ. ಎಲ್ಲಾದರೂ 20 ಚೀಲ ಕೊಂಡುಕೊಳ್ಳಿ. ಮಾರುಕಟ್ಟೆ ಏನಾದರೂ ಇಂಪ್ರೂ ಆಗುತ್ತದೆಯೋ ನೋಡೋಣ, ರವಾನೆ ಮಾಡಿ ಎಂದು ಇವತ್ತಿನವರೆಗೂ ಯಾರಿಗೂ ಆಸಕ್ತಿ ಇಲ್ಲ. ಕೇಂದ್ರ

ಸರ್ಕಾರ ಕೊಡುತ್ತಿರುವ ಸಪ್ಪೋರ್ಟ್ ಪ್ರೈಸ್ ನಮಗೆ ಕೊಡಿಸಲು ಈ ಸರ್ಕಾರಕ್ಕೆ ಆಗಲಿಲ್ಲ ಎಂದರೆ ಏತಕ್ಕೆ ಇರಬೇಕು ಈ ಸರ್ಕಾರ? ಒಂದು ಕಡೆ ಬೆಳೆಯುವುದಕ್ಕಾಗುತ್ತಿಲ್ಲ, ಇನ್ನೊಂದು ಕಡೆ ಬೆಳೆದಿದ್ದನ್ನು ಮಾರುವುದಕ್ಕಾಗುತ್ತಿಲ್ಲ, ಕೇಳುವವರೇ ದಿಕ್ಕಿಲ್ಲ ಎ.ಪಿ.ಎಂ.ಸಿ.ನಲ್ಲಿ.

ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಅಧ್ಯಕ್ಷರೇ, ಈ ಸದನದಲ್ಲಿ ನಾಲ್ಕೈದು ಬಾರಿ ಈ ಬಗ್ಗೆ ಚರ್ಚೆ ಮಾಡಿದ್ದೇವೆ. ಒಂದಿಂಚೂ ಸಹ ರೈತರ ಸಮಸ್ಯೆ ಬಗೆಹರಿದಿಲ್ಲ. ಐದು ಬಾರಿ ಸಹ ಸದನದಲ್ಲಿ ನಾವು ಆಶ್ವಾಸನೆ ಪಡೆದಿದ್ದೇವೆ, ಇಷ್ಟೆಲ್ಲಾ ಆಗಿ ಕೇಂದ್ರ ಸರ್ಕಾರದಿಂದ ಬೆಂಬಲ ಬೆಲೆ ಫಿಕ್ಸ್ ಮಾಡಬೇಕು 3500 ರೂ. ಎಂದು ಹೇಳಿದಾಗ 2575 ರೂ.ಗೆ ಫಿಕ್ಸ್ ಮಾಡಿದೆ. 5 ತಿಂಗಳಿಂದ ಒಂದು ಕೆಜಿ ಕೊಂಡುಕೊಂಡಿಲ್ಲ. ಮತ್ತೆ ತಿಪಟೂರಿನಲ್ಲಿ ರೈತರ ಮೇಲೆ ಹಗಲು ದರೋಡೆ ಈ ಸಮೂಹದವರಿಂದ ನಡೆಯುತ್ತಿದೆ, ಒಬ್ಬನನ್ನು ಪನಿಷ್ ಮಾಡಿರುವ ಒಂದಾದರೂ ದಾಖಲೆ ಇದ್ದರೆ ಸಚಿವರು ಹೇಳಬೇಕು. ಒಂದು ಸಾರಿ ಕೃಷಿ ಸಚಿವರು ಉತ್ತರ ಕೊಡುತ್ತಾರೆ. ಒಂದು ಸಾರಿ ತೋಟಗಾರಿಕೆ ಮಂತ್ರಿಗಳು ಉತ್ತರ ಕೊಡುತ್ತಾರೆ, ಇವತ್ತು ಎಪಿಎಂಸಿ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ, ರಾಮಲಿಂಗರೆಡ್ಡಿಯವರು ಇದಕ್ಕೆ ಜವಾಬ್ದಾರರು ಎಂದು ನಾನು ಹೇಳುವುದಿಲ್ಲ, ಇವತ್ತು ರೈತರು ಕಂಗಾಲಾಗಿದ್ದಾರೆ ಕೊಬ್ಬರಿಗೆ ಒಳ್ಳೆಯ ಬೆಲೆ ಇಲ್ಲ, ತೆಂಗಿನತೋಟಕ್ಕೆ ರೋಗ ಬಂದು ಒದ್ದಾಡುತ್ತಾ ಕುಳಿತಿದ್ದಾರೆ. ಇವತ್ತು ರೈತರು ಕಗ್ಗತ್ತಲಲ್ಲಿ ಇರುವಂತಹ ಪರಿಸ್ಥಿತಿ ಇದೆ.

ಹಲವಾರು ಬಾರಿ ನಾವು ಸದನದಲ್ಲಿ ಚರ್ಚೆ ಮಾಡಿದ್ದರೂ ಮಾರುಕಟ್ಟೆಯನ್ನು ಹಗಲುದರೋಡೆ ಮಾಡುತ್ತಿರುವವರ ಮೇಲೆ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ನಾನೊಂದು ಸಲಹೆ ಕೊಡುತ್ತೇನೆ ಸಚಿವರಿಗೆ. ನಾವು ಕ್ಷೇತ್ರದ ಶಾಸಕರು ಇದ್ದೇವೆ, ನಮ್ಮನ್ನು ಕರೆದುಕೊಂಡು ನೀವು, ಕೃಷಿ ಸಚಿವರು, ತೋಟಗಾರಿಕೆ ಸಚಿವರು, ಹಣಕಾಸಿನ ಸಚಿವರು ಯಾರಾದರೂ ಇದ್ದರೆ ಅವರನ್ನೂ ಕರೆದುಕೊಂಡು ತಿಪಟೂರು ಮಾರುಕಟ್ಟೆಗೊಂದು ಸಲ ಭೇಟಿ ಮಾಡಿ ಏನಲ್ಲಿ ರೈತರ ಮೇಲೆ ಹಗಲುದರೋಡೆ ನಡೆಯುತ್ತಿದೆ ಎನ್ನುವುದನ್ನು ಕಣ್ಣಾರೆ ನೋಡಬೇಕು.

ಇಲ್ಲಿ ಸದನದಲ್ಲಿ ಆ ಬಗ್ಗೆ ಪ್ರಶ್ನೆ ಹಾಕಿದ ದಿವಸ ಅಥವಾ ಚರ್ಚೆ ದಿವಸ ಅಲ್ಲಿ ಬಿಗಿಯಾಗುತ್ತದೆ ಅಲ್ಲಿ ಯಾರಾದರೂ ಕೊಬ್ಬರಿ ತೆಗೆದುಕೊಳ್ಳುತ್ತಾರೆ, ಇಲ್ಲದೇ ಹೋದರೆ ಯಾವ ಕೊಬ್ಬರಿಯನ್ನೂ ತೆಗೆದುಕೊಳ್ಳುವುದಿಲ್ಲ. ಈ ಪರಿಸ್ಥಿತಿ ಇರುವಾಗ ರೈತರ ಸಂಕಷ್ಟಕ್ಕೆ ನೀವು ಬರಬೇಕು. ರೈತರು ಬಹಳ ಕಂಗಾಲಾಗಿದ್ದಾರೆ. ಸರ್ಕಾರ ಇದರ ಬಗ್ಗೆ ಗಮನಹರಿಸಬೇಕೆಂದು ವಿನಂತಿಮಾಡುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ : ಅಧ್ಯಕ್ಷರೇ, ನಮ್ಮ ಮಾರುಕಟ್ಟೆಗಳಲ್ಲಿ ಟೆಂಡರ್ ಪದ್ಧತಿಯಲ್ಲಿ ನಾವು ಆಕ್ಷನ್ ಮಾಡುತ್ತೇವೆ, ಆದರೆ ಕೆಲವು ಕಡೆ ಈ ರೀತಿ ಮಾಡದಿರುವುದು ನನ್ನ ಗಮನಕ್ಕೆ ಬಂದಿದೆ. ನಾನು ಮಂತ್ರಿಯಾದಾಗ ಮಾಡಿದ ಮೊದಲನೇ ಕೆಲಸವೇ ಪೇಪರ್‌ನಲ್ಲಿ ಸ್ಟೇಟ್‌ಮೆಂಟ್ ಕೊಟ್ಟೆ ಏನು ತಮ್ಮ ಎಪಿಎಂಸಿಗಳಲ್ಲಿ ಅನ್ಯಾಯ ಆಕ್ರಮಗಳಾದರೆ ನನ್ನ ಗಮನಕ್ಕೆ ತನ್ನಿ, ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಆದರೆ ನನ್ನ ಗಮನಕ್ಕೆ ಇದುವರೆಗೂ ಯಾರೂ ಲಿಖಿತ ರೂಪದಲ್ಲಿ ಕೊಟ್ಟಿಲ್ಲ.

ಎಲ್ಲೆಲ್ಲಿ ಸಭೆಸಮಾರಂಭಗಳಲ್ಲಿ ಭಾಗವಹಿಸುತ್ತೇನೋ ಅಲ್ಲೆಲ್ಲಾ ಬಂದಿರುವ ರೈತರಿಗೆ ಹೇಳುತ್ತೇನೆ. ಎಲ್ಲೆಲ್ಲಿ ಅನ್ಯಾಯ ವಾಗುತ್ತದೆಯೋ ಅದರ ಬಗ್ಗೆ ನನಗೆ ಪತ್ರದ ಮುಖಾಂತರ ಅಥವಾ ನಮ್ಮ ಇಲಾಖೆಗೆ ತಿಳಿಸಿ, ನಾನು ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಈಗಾಗಲೇ ಸಾಕಷ್ಟು ಸಲ ಹೇಳಿದ್ದೇನೆ ತಾವೂ ಬರೆದುಕೊಡಿ ಎಲ್ಲೆಲ್ಲಿ ಏನಾಗುತ್ತದೆ ಎಂದು ಹೇಳಿ. ಆಗ ನಾನು ತಕ್ಷಣ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಅಲ್ಲಿ ಹಗಲು ದರೋಡೆ ನಡೆಯುತ್ತಿದೆ.

ಉಪಾಧ್ಯಕ್ಷರು : ಮಾನ್ಯ ಗೌರವನ್ವಿತ ಸದಸ್ಯರು ಅನೇಕ ಸಲ ಹೇಳುತ್ತಿದ್ದಾರೆ. ಸುಮಾರು 5-6 ಸಲ ಇದನ್ನು ಪ್ರಸ್ತಾಪ ಮಾಡಿದ್ದೇವೆ., ಯಾವ ಅಧಿಕಾರಿಯ ಮೇಲೆ ನೀವು ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಹೇಳಬೇಕಾದರೆ ಅವರು ಮಾತನಾಡುತ್ತಿರುವುದು ರೈತರ ಪರವಾಗಿ. ಅಧಿಕಾರಿಗಳನ್ನು ಇಷ್ಟು ವಹಿಸಿಕೊಳ್ಳುವುದು ಉಚಿತವಲ್ಲ. ಸೂಕ್ತವಾದ ಒಂದು ನಿರ್ದೇಶನವನ್ನು ಅಧಿಕಾರಿಗಳಿಗೆ ಕೊಡಿ.

ಶ್ರೀ ರಾಮಲಿಂಗರೆಡ್ಡಿ : ಬೆಂಬಲ ಬೆಳೆಯನ್ನು ನಿಗಧಿಪಡಿಸುವುದು ಕೇಂದ್ರದ ಕೃಷಿ ಇಲಾಖೆಯ ಕೆಲಸ. ಸನ್ಮಾನ್ಯ ರೇವಣ್ಣನವರ ಹತ್ತಿರ ನಾನು ಮಾತನಾಡುತ್ತೇನೆ. ನಮ್ಮದೇನಿದ್ದರೂ ಮಾರ್ಕೆಟಿಂಗ್ ಅಷ್ಟೇ. ನಮ್ಮದು ನ್ಯಾಷನಲ್ ಅಗ್ರಿಕಲ್ಚರಲ್ ಕೋ ಅಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್‌ಗೆ ಸಂಬಂಧಪಟ್ಟ ಸಂಸ್ಥೆ. ಎಲ್ಲಾ ಬೆಂಬಲ ಬೆಲೆಗೆ ಪರ್ಚೇಸ್ ಮಾಡುವ ಸಂಸ್ಥೆ ಇದು. ಇದು ಕೇಂದ್ರದ ಕೃಷಿ ಮಂತ್ರಿಗಳಿಗೆ ಸಂಬಂಧಪಟ್ಟದ್ದುದು. ಆದರೆ ಈ ಪ್ರಶ್ನೆಯನ್ನು ಮೊದಲು ತೋಟಗಾರಿಕೆ ಇಲಾಖೆಗೆ ಹಾಕಿದರು. ಈಗ ನನಗೆ ಬಂತು. ಈಗ ಮಾರ್ಕೆಟಿಂಗ್‌ಗೆ ಬಂತು. ಏನಾಯಿತು ಅಂದರೆ ನಾನೇ ಅಗ್ರಿಕಲ್ಚರ್ ಮತ್ತು ಇದಕ್ಕೂ ಎರಡಕ್ಕೂ ಉತ್ತರ ಕೊಟ್ಟಿದ್ದೇನೆ. ತಿಪಟೂರು ಮಾರ್ಕೆಟಿಂಗ್‌ಗೆ ನಾನು ಮತ್ತು ಕೃಷಿ ಮಂತ್ರಿಗಳು ಬೇಕಾದರೆ ಹೋಗಿ ಅಲ್ಲಿ ಏನು ಸಮಸ್ಯೆಗಳಿವೆ ಅದವುಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರೇ, ಐದನೇ ತಿಂಗಳಿಂದ ವಿನಂತಿ ಮಾಡುತ್ತಿದ್ದೇನೆ. ಸರ್ಕಾರ ಎಂದರೆ ಏನು ಅಂಥ ಈ ಭಾಷೆ ನನಗೆ ಅರ್ಥವಾಗುತ್ತಿಲ್ಲ. ಅದಕ್ಕೆ ನಾನು ಕೇಳಿದೆ, ಒಂದು ಆದೇಶ ಹೊರಡಿಸಿ ಕೇಂದ್ರ ಸರ್ಕಾರ ಕೊಟ್ಟಿರುವ 2575ರೂ. ಧಾರಣೆ ಕೊಬ್ಬರಿ ಬೆಲೆಗೆ ಕೊಡಿ ಎಂದು ಆದೇಶ ಹೊರಡಿಸಬೇಕಾದವರು. ಸರ್ಕ್ಯುಲರ್ ಹೊರಡಿಸುವುದೇ? 10 ಸಲ ಬರೆದಿದ್ದೇವೆ ಅಂಥ ಸರ್ಕಾರ ನಮಗೆ ಉತ್ತರ ಕೊಟ್ಟಿರುತ್ತದೆ. ಇದನ್ನು ಯಾರಾದರೂ ಗೌರ್ನಮೆಂಟ್ ಎನ್ನುತ್ತಾರೆಯೇ ಸ್ವಾಮಿ. ಐದನೇ ತಿಂಗಳಿನಿಂದ ಇಲ್ಲಿಯವರೆಗೂ ತಿಪಟೂರು ಮಾರುಕಟ್ಟೆಗೆ ಬಿಟ್ಟವರಿಗೆಲ್ಲಾ 2575 ರೂ. ಧಾರಣೆ ನೀವು ಹಾಕಿಸಿ ಕೊಡುತ್ತೀರಾ? ಈಗ ನಿಮ್ಮ ಆದೇಶ ಆದಮೇಲೆ ಈ ಧಾರಣೆಯನ್ನು ನಮಗೆ

ಕೊಡಿಸಬೇಕಾಗಿತ್ತಲ್ಲಾ, ಮತ್ತೆ ಕೊಡಲಿಲ್ಲ, ನೀವು ಎತಕ್ಕೆ ನಿಗಧಿ ಮಾಡುತ್ತೀರಿ? ಯಾರನ್ನು ಹೋಗಿ ನಾವು ಕೇಳಬೇಕು? ತಾವು ಇಲ್ಲಿ ಸ್ಪಷ್ಟವಾಗಿ ಹೇಳಿದ್ದೀರಿ ಮತ್ತು 19-5-94ರಲ್ಲಿ ಬರೆದಿದ್ದೀರಿ. ಅವತ್ತಿನಿಂದ ಇವತ್ತಿವರೆಗೂ ತಿಪಟೂರು ಮಾರ್ಕೆಟ್‌ನಲ್ಲಿ ರೈತ ಕೊಬ್ಬರಿ ಬಿಟ್ಟಿದ್ದಾನೆ. ನಿಮ್ಮ ಎ.ಪಿ.ಎಂ.ಸಿ. ನಲ್ಲಿ ರೆಕಾರ್ಡ ಆಗಿದೆ. ರಸೀಟ್ ಆಗಿದೆ. ನೀವು 2575 ರೂಗೆ ತಿರುವಳಿ ಮಾಡಿಕೊಡುತ್ತೀರಾ? ಇಲ್ಲ ಎಂದರೆ ಏತಕ್ಕಾಗಿ ಧಾರಣೆ ನಿಗಧಿಯಾಯಿತು? ಕೇಂದ್ರ ಸರ್ಕಾರ ಕೊಡುತ್ತದೆ ಎಂದರೆ ತಾವು ಏಕೆ ಕೊಡುತ್ತಿಲ್ಲ. ಇದು ನನಗೆ ಅರ್ಥವಾಗುವುದಿಲ್ಲ. ನಾವು ಪೂಜೆಗೆ ಕುಳಿತಿರುವ ಜನ ಒಂದು ಹೂವು ತೆಗೆದುಕೊಡುವುದಕ್ಕೆ ಇಷ್ಟು ಕಷ್ಟವಾದರೆ ಹೇಗೆ ಸ್ವಾಮಿ? ನಿಮ್ಮ ಎ.ಪಿ.ಎಂ.ಸಿ. ಏನಾಗಿದೆ ಎಂಬುದು ನನಗೆ ಮುಖ್ಯವಲ್ಲ. ನೀವು ನಿಗಧಿಯಾಗಿರುವ ಈ ಧಾರಣೆಯನ್ನು ಏತಕೆ ಕೊಡಲಿಲ್ಲ? ಐದನೇ ತಿಂಗಳಿನಿಂದ ಇವತ್ತಿನವರೆಗೂ, ನಿನ್ನೆ ಕೊಂಡಿದ್ದೇವೆ 60 ಚೀಲ ಎಂದು ಹೇಳಿಬಿಟ್ಟರೆ ಎಲ್ಲಿಗೆ ಹೋಗಬೇಕು ಈ ರಾಜ್ಯದ ರೈತ ಅಥವಾ ಕೊಬ್ಬರಿ ಬೆಳೆಯುವ ರೈತ ಎಂಬುದನ್ನು ತಾವು ಹೇಳಬೇಕು.

ಉಪಾಧ್ಯಕ್ಷರು : ಇದರ ಬಗ್ಗೆ ಮಾನ್ಯ ವಾಟಾಳ್ ನಾಗರಾಜರವರು ಮಾತನಾಡುತ್ತಾರೆ, ಒಟ್ಟಿಗೆ ಉತ್ತರ ಕೊಟ್ಟುಬಿಡಿಯ

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೇ, ಇದಕ್ಕೆ ಯಾರು ಸಚಿವರು ಎನ್ನುವುದೇ ಅನುಮಾನ ಬಂದುಬಿಟ್ಟಿದೆ. ಒಂದೊಂದು ಸಾರಿ ಒಬ್ಬೊಬ್ಬ ಸಚಿವರು ಉತ್ತರ ಕೊಡುತ್ತಾರೆ. ಮುಖ್ಯಮಂತ್ರಿಗಳು ಏನು ಮಾಡಿದ್ದಾರೆ ಎಂದರೆ ಒಂದು ಇಲಾಖೆಯನ್ನು ಹಿಡಿದು 12 ಭಾಗ ಮಾಡಿ ಹಂಚಿರುವುದೇ ಇದಕ್ಕೆ ಎಲ್ಲಾ ಕಷ್ಟವಾಗಿರುವುದು. ಮಾನ್ಯ ಸಚಿವರಲ್ಲಿ ನಾನು ಅಪಾದನೆ ಮಾಡುತ್ತಿಲ್ಲ. ವಸ್ತು ಸ್ಥಿತಿಯನ್ನು ನೀವು ಅರಿತುಕೊಂಡಿದ್ದೀರಾ ಎಂಬ ನನ್ನ ಒಂದು ನೇರವಾದ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಕೊಬ್ಬರಿ ವ್ಯಾಪಾರಸ್ಥರ ವಸ್ತು ಸ್ಥಿತಿಯನ್ನು ನೀವು ಅರಿತುಕೊಂಡಿದ್ದರೆ, ಅಧಿಕಾರಿಗಳು ಏನು ಒಂದು ಹೇಳಿ ಬರೆದು ಕೊಡುತ್ತಾರೆ ಅದನ್ನು ನೀವು ಓದುತ್ತೀರಿ ಎಂದು ನಾನು ಹೇಳುತ್ತಿಲ್ಲ. ನೀವು ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಸ್ಥಳೀಯ ಮಾರುಕಟ್ಟೆಯಲ್ಲಿ ಏನು ಪರಿಸ್ಥಿತಿ ಇದೆ, ಅಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಅನ್ಯಾಯ ಇದರ ಬಗ್ಗೆ ವಸ್ತು ಸ್ಥಿತಿಯನ್ನು ಅರಿತು ಹೇಳಿಕೆ ಕೊಟ್ಟರೆ ಬಹಳ ಸಂತೋಷವಾಗುತ್ತದೆ. ಮತ್ತೊಮ್ಮೆ ನಾನು ಕೇಳುವುದು, ತಾವು ಕೂಡಲೇ, ನಾಳೆ ಬೆಳಿಗ್ಗೆ ನೀವು, ನಿಮ್ಮ ಒಂದು ಟೀಮನ್ನು ಕರೆದುಕೊಂಡು ಹೋಗಿ ಆ ಸ್ಥಳವನ್ನು ಪರಿಶೀಲನೆ ಮಾಡಬೇಕು. ಮತ್ತು ಕೇಂದ್ರದ ಬೆಂಬಲ ಬೆಲೆಯನ್ನು ಕೊಡಿಸಲಿಕ್ಕೆ ನಿಮಗೆ ಇರತಕ್ಕಂಥ ತೊಂದರೆ ಏನು, ಎನ್ನುವುದನ್ನು ನೇರವಾಗಿ ಹೇಳಿ. ಈ ರೀತಿ ತೊಂದರೆ ಇದೆ ಎಂದು ಹೇಳಿ. ಈ ರೀತಿ ತೊಂದರೆ ಇದ್ದರೆ ನಾವು ಒಂದು ನಿಯೋಗ ಹೋಗುತ್ತೇವೆ. ಅದನ್ನಾದರೂ ಹೇಳಿ, ಇಷ್ಟೆಲ್ಲಾ ಹೇಳಿದರೂ ನೀವು ಒಂದು ಸ್ಪಷ್ಟವಾದ ಭರವಸೆಯನ್ನು ಕೊಡಿ. ಇನ್ನು ನಾಲ್ಕು ದಿವಸ ಶಾಸನ ಸಭೆ ಇರುವುದು. ಆಮೇಲೆ ನಿಮ್ಮನ್ನು ನಾವು ಕೇಳುವುದಿಲ್ಲ, ನಮ್ಮನ್ನು ನೀವು ಕೇಳುವುದಿಲ್ಲ. ಈ ಪರಿಸ್ಥಿತಿ ನಿವಾರಣೆಗೆ ನೀವು ಸ್ಪಷ್ಟವಾದ ಭರವಸೆಯನ್ನು ಈ ಸಭೆಗೆ ಕೊಡಿ.

ಶ್ರೀ ರಾಮಲಿಂಗರೆಡ್ಡಿ : ನ್ಯಾಷನಲ್ ಮಾರ್ಕೆಟಿಂಗ್ ಫೆಡರೇಷನ್‌ನವರು ಏನು ಪರ್ಚೇಸ್ ಮಾಡುತ್ತಿದ್ದಾರೆ, ಅವರ ಜೊತೆ ನಾವು ಸಾಕಷ್ಟು ಪತ್ರವ್ಯವಹಾರವನ್ನೂ ಕೂಡ ಮಾಡಿದ್ದೇವೆ. ಇದು ನಮ್ಮ ಇಲಾಖೆಯ ಕಾಳಜಿ ಎಂಬುದು ತಮಗೂ ಗೊತ್ತಾಗಿದೆ. ಆ ನ್ಯಾಷನಲ್ ಮಾರ್ಕೆಟಿಂಗ್ ಫೆಡರೇಷನ್‌ನವರು ನಿನ್ನೆಯಿಂದ 60 ಕ್ವಿಂಟಾಲ್‌ಗಳನ್ನು ಖರೀದಿ ಮಾಡಲು ಪ್ರಾರಂಭ ಮಾಡಿದ್ದಾರೆ. ಇವತ್ತು ನಾಳೆ ನೋಡೋಣ, ಅವರು ಖರೀದಿ ಮಾಡಲಿಲ್ಲ ಎಂದರೆ ನಾವು ಕೇಂದ್ರದ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಪರ್ಚೇಸ್ ಮಾಡುವಂತೆ ಮಾಡೋಣ ಮತ್ತು ಬೆಂಬಲ ಬೆಲೆಯನ್ನು ಕೊಡುವಂತೆ ಮಾಡೋಣ.

ಗೊಂದಲ

ಉಪಾಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೇ ಹಾಗೂ ಶಿವರಾಮೇಗೌಡರೇ ತಾವು ದಯವಿಟ್ಟು ಕುಳಿತುಕೊಳ್ಳಿ.

ಗೊಂದಲ

ಉಪಾಧ್ಯಕ್ಷರು : ಮಾಧುಸ್ವಾಮಿಯವರು, ಶ್ರೀ ಶಿವರಾಮೇಗೌಡರು ಹೇಳಿದ್ದನ್ನು ದಾಖಲು ಮಾಡಬಾರದು.

ಶ್ರೀ ವಾಟಾಳ್ ನಾಗರಾಜ್ : ಇದು ಸರಿಯಲ್ಲ ನಾವು ಹೊರ ಹೋಗುತ್ತಿದ್ದೇವೆ. (ಶ್ರೀ ಮಾಧುಸ್ವಾಮಿಯವರು ಮತ್ತು ಶ್ರೀ ವಾಟಾಳ್ ನಾಗರಾಜ್‌ಅವರು ಸಭಾತ್ಯಾಗ ಮಾಡಿದರು.)

(ii) ರಾಜ್ಯದಲ್ಲಿ ಅಲ್ಪಸಂಖ್ಯಾತರು ನಡೆಸುತ್ತಿರುವ ವೈದ್ಯಕೀಯ ಕಾಲೇಜುಗಳ ಬಗ್ಗೆ

+ ಶ್ರೀ ಕರಿಯಣ್ಣ (ಹೊಳೇಹೊನ್ನೂರು) : ಮಾನ್ಯ ಅಧ್ಯಕ್ಷರೇ, ಸರಕಾರದವರು ನಮ್ಮ ವೈದ್ಯಕೀಯ ಶಿಕ್ಷಣದ ಬಗ್ಗೆ ಇಂಜಿನಿಯರಿಂಗ್ ಶಿಕ್ಷಣದ ಬಗ್ಗೆ ಸಮರ್ಪಕವಾದ ತೀರ್ಮಾನ ತೆಗೆದುಕೊಂಡಿದ್ದಾರೆ. ಸಂತೋಷ. ನೂರಕ್ಕೆ 85 ಭಾಗ ಸರಕಾರದ ವತಿಯಿಂದ ಸೀಟ್‌ಗಳನ್ನು ಮೆರಿಟ್ ಮತ್ತು ಸರಕಾರದ ಅಲಾಟ್‌ಮೆಂಟಿನಲ್ಲಿ ಪಡೆಯುವುದಕ್ಕೆ ಅವಕಾಶವಾಗಿದೆ ಅದಕ್ಕೆ ಸರಕಾರಕ್ಕೆ ಧನ್ಯವಾದವನ್ನರ್ಪಿಸುತ್ತೇನೆ. ಯಾವ ಸರಕಾರ ಸಹ ಆ ಧೈರ್ಯ, ಮಾಡಿರಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಅಸ್ತಿತ್ವಕ್ಕೆ ಭದ್ರತೆ ಇಲ್ಲದೇ ಇರುವ ಪರಿಸ್ಥಿತಿಯನ್ನು ಆ ಸಂಸ್ಥೆಗಳು ಉಂಟು ಮಾಡಿದರೂ ಸಹ ನಮ್ಮ ಮುಖ್ಯ ಮಂತ್ರಿಗಳು ಹೆದರದೆ ಒಂದು ಕಾನೂನು ಮಾಡಿ ರಕ್ಷಣೆ ನೀಡಿದ್ದಾರೆ. ಆದರೆ ನ್ಯಾಯಾಲಯಗಳ ತೀರ್ಮಾನದ ಪ್ರಕಾರ ಏನು ಅಲ್ಪಸಂಖ್ಯಾತರ ಸಂಸ್ಥೆಗಳೆಂದು ಏನು ಇದೆ ವೈದ್ಯಕೀಯ ಸಂಸ್ಥೆಗಳಾಗಲೀ, ಇಂಜಿನಿಯರಿಂಗ್ ಸಂಸ್ಥೆಗಳಾಗಲೀ, ದಂತ ವೈದ್ಯಕೀಯ ಸಂಸ್ಥೆಗಳಾಗಲೀ ಅವರುಗಳಿಗೆ ರಕ್ಷಣೆಯನ್ನು ಕೊಟ್ಟು 50 ಭಾಗವನ್ನು ಅವರೇ ಸ್ವತಃ ಅಡ್ಮಿಷನ್ ಮಾಡಿಕೊಳ್ಳಬಹುದು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬಹುದೆಂಬ ಆದೇಶ ಹೊರಡಿಸಿದ್ದಾರೆಂದು ತಿಳಿದು ಬಂದಿದೆ. ಅದು ಸತ್ಯವೇ ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇವೆ. ಈ ಹರಿಜನಗಿರಿಜನರನ್ನು ಈ ರಾಷ್ಟ್ರದಲ್ಲಿ ಬಹಳ ಹಿಂದುಳಿದವರು ಮತ್ತು ಅವರಿಗೆ ಸಾಮಾಜಿಕವಾಗಿ ನ್ಯಾಯ ಕೊಡಬೇಕೆಂದು ರಾಜ್ಯಾಂಗದಲ್ಲಿ 18 ಪರ್ಸೆಂಟ್ ಮೀಸಲಾತಿ ಇಟ್ಟಿದ್ದಾರೆ. ಇದನ್ನು ನೋಡಿದರೆ ಕ್ರಿಶ್ಚಿಯನ್ನರಿಗೆ ನಾವು ಈ ರಾಜ್ಯದಲ್ಲಿ 50 ಪರ್ಸೆಂಟ್ ಸೀಟನ್ನು ಕೊಡಬೇಕು, ಮುಸಲ್ಮಾನರಿಗೆ 50 ಪರ್ಸೆಂಟ್ ಸೀಟು ಕೊಡಬಹುದು. ಅವರು ನಡೆಸ ತಕ್ಕಂತಹ ವೈದ್ಯಕೀಯ, ಇಂಜನಿಯರಿಂಗ್ ಸಂಸ್ಥೆಗಳಿಗೆ, ಆದರೆ ಹರಿಜನಗಿರಿಜನರು ನಡೆಸ ತಕ್ಕಂತಹ ಸಂಸ್ಥೆಗಳಿಗೆ ಜನರಲ್ ಆಗಿ ಕೊಟ್ಟಹಾಗೆ 15 ಪರ್ಸೆಂಟ್ ಕೊಡಬೇಕು ಎಂದು ಆದೇಶ ಹೊರಡಿಸಿರುವುದು ನೋಡಿದರೆ ಇವರು ಕ್ರಿಶ್ಚಿಯನ್ ಮತ್ತು ಮುಸಲ್ಮಾನ ಜನಾಂಗದವರು ಮುಂದುವರಿದ ಹಾಗಾಗುತ್ತದೆ. ಇದನ್ನು ಏಕೆ ರಾಜ್ಯಾಂಗದಲ್ಲಿ ಸೇರಿಸಿದ್ದಾರೋ ಎಂಬಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕಾಗುತ್ತದೆ. ಯಾರು ನಮ್ಮ ಹಿತರಕ್ಷಣೆ ಮಾಡಬೇಕಾಗಿತ್ತೋ ಆ ಮಂತ್ರಿಗಳು ಈ ವೈದ್ಯಕೀಯ ಶಿಕ್ಷಣ ಇಲಾಖೆಯನ್ನು ಹಿಡಿದುಕೊಂಡಿದ್ದಾರೆ. ಹರಿಜನಗಿರಿಜನರಿಗೂ ಸಹ 50 ಭಾಗ ಕೊಡುತ್ತೀರೋ ? ಕೊಡದಿದ್ದರೆ ಎಲ್ಲರಿಗೂ ಒಂದು ಕಾನೂನನ್ನು ಮಾಡಬೇಕಾಗುತ್ತದೆ. ಬೇರೆ ಜಾತಿಯವರಿಗೆ ಮೀಸಲಾತಿ ಏಕೆ ಬೇಕು ? ಇದರ ಬಗ್ಗೆ ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಲಕ್ಷಣಯ್ಯನವರೇ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಲಿ. ಆ ನಂತರ ಕ್ಲಾರಿಫಿಕೇಷನ್ ಇದ್ದರೆ ಕೇಳಿ.

ಶ್ರೀ ಬಿ. ಶಿವಣ್ಣ (ವೈದ್ಯಕೀಯ ಶಿಕ್ಷಣ ಸಚಿವರು) : ರಾಜ್ಯದಲ್ಲಿ 19 ವೈದ್ಯಕೀಯ ಕಾಲೇಜುಗಳು ಇದ್ದು, 1993 - 94ನೇ ಸಾಲಿನಲ್ಲಿ ಶ್ರೀ ಉನ್ನಿಕೃಷ್ಣನ್ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ರಾಜ್ಯ ಸರ್ಕಾರವು 3 ವೈದ್ಯಕೀಯ ಕಾಲೇಜುಗಳನ್ನು ಅಲ್ಪಸಂಖ್ಯಾತರ ಕಾಲೇಜುಗಳೆಂದು ಪರಿಗಣಿಸಿದೆ. ಅವುಗಳ ವಿವರ ಈ ಕೆಳಕಂಡಂತೆ ಇದೆ :

1) ಅಲ್ - ಅಮೀನ್ ವೈದ್ಯಕೀಯ ಕಾಲೇಜು, ವಿಜಾಪುರ- - ಮುಸ್ಲಿಂ ಮತೀಯ ಅಲ್ಪ ಸಂಖ್ಯಾತರ ವೈದ್ಯಕೀಯ ಕಾಲೇಜು

2) ಕಸ್ತೂರಬಾ ವೈದ್ಯಕೀಯ ಕಾಲೇಜು, ಮಂಗಳೂರು ಕೊಂಕಣಿ ಭಾಷಾ

3) ಕಸ್ತೂರಬಾ ವೈದ್ಯಕೀಯ ಕಾಲೇಜು, ಮಣಿಪಾಲ್ ಅಲ್ಪ ಸಂಖ್ಯಾತರ ವೈದ್ಯಕೀಯ ಕಾಲೇಜುಗಳು.

ಕಸ್ತೂರಬಾ ವೈದ್ಯಕೀಯ ಕಾಲೇಜು, ಮಂಗಳೂರು ಮತ್ತು ಮಣಿಪಾಲ್ ಇವುಗಳನ್ನು ಡಾ: ಟಿ.ಎಂ. ಎ. ಪೈ. ಫೌಂಡೇಷನ್ ಎಂಬ ಸಂಸ್ಥೆ ನಡೆಸುತ್ತಿತ್ತು. ಈ ಸಂಸ್ಥೆಯನ್ನು ಕೊಂಕಣಿ ಅಥವಾ ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆಯೆಂದು ರಾಜ್ಯದ ಉಚ್ಚ ನ್ಯಾಯಾಲಯವು 1984 ರಲ್ಲಿ ತೀರ್ಪು ನೀಡಿದ್ದು, ಈ ತೀರ್ಪಿಗೆ ವಿರುದ್ಧವಾಗಿ ರಾಜ್ಯ ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ 1986 ರಲ್ಲಿ ಒಂದು ಮೇಲ್ಮನವಿಯನ್ನು ಸಲ್ಲಿಸಿದೆ. ಆದರೆ ಸರ್ವೋಚ್ಚ ನ್ಯಾಯಾಲಯವು ತಡೆ ಆಜ್ಞೆ ನೀಡಿರುವುದಿಲ್ಲ. ಅದರಂತೆ ರಾಜ್ಯ ಸರ್ಕಾರವು ಈ ಮೇಲ್ಕಂಡ 2 ವೈದ್ಯಕೀಯ ಕಾಲೇಜುಗಳನ್ನು ಅಲ್ಪಸಂಖ್ಯಾತರ ವೈದ್ಯಕೀಯ ಕಾಲೇಜುಗಳೆಂದು ಪರಿಗಣಿಸಿದೆ. ಏತನ್ಮಧ್ಯೆ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ (ಮಾಹೆ) ಎಂಬ ಸಂಸ್ಥೆಗೆ ಡೀಮ್ಡ್ ಯೂನಿವರ್ಸಿಟಿ ಎಂದು ಕೇಂದ್ರ ಸರ್ಕಾರವು ಮತ್ತು ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ (ಯು.ಜಿ.ಸಿ.) ಇವುಗಳಿಂದ ಮಾನ್ಯತೆ ಸಿಕ್ಕಿದ್ದು, ಈ ಮಾಹೆ ಸಂಸ್ಥೆಗೆ ಸೇರಿರುವ ಕಾಲೇಜುಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯ ಆಧಾರದ ಮೇಲೆ ಆಯ್ಕೆ ಮಾಡಿರುವ ವಿದ್ಯಾರ್ಥಿಗಳನ್ನು ಕಳುಹಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆಯೇ ಎಂಬ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ಮತ್ತು ಸರ್ವೋಚ್ಚ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಯುತ್ತಾ ಇದೆ. ಅದರಂತೆ ಈಗ ಕೇವಲ ಕಸ್ತೂರಬಾ ಮೆಡಿಕಲ್ ಕಾಲೇಜು, ಮಂಗಳೂರಿನಲ್ಲಿರುವ ಒಂದು ಶಾಖೆ ಮಾತ್ರ ಮಾಹೆ ವ್ಯಾಪ್ತಿಗೆ ಬರುವುದಿಲ್ಲದ ಕಾರಣ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯಯದ ವ್ಯಾಪ್ತಿಗೆ ಬರುವುದರ ಕಾರಣ ಈ ಶಾಖೆಯನ್ನು ಕಾನೂನು ಇಲಾಖೆಯ ಅಭಿಪ್ರಾಯಕ್ಕೆ ಒಳಪಟ್ಟು, 1994-95ನೇ ಸಾಲಿನಲ್ಲಿ ಕೊಂಕಣಿ ಅಲ್ಪಸಂಖ್ಯಾತರ ವೈದ್ಯಕೀಯ ಕಾಲೇಜು ಎಂದು ಪರಿಗಣಿಸಲಾಗುವುದು.

ಅಲ್ - ಅಮೀನ್ ವೈದ್ಯಕೀಯ ಕಾಲೇಜು, ವಿಜಾಪುರ ಇದನ್ನು ಈ ವರ್ಷವೂ ಸಹ ಮತೀಯ ಅಲ್ಪಸಂಖ್ಯಾತರ ಕಾಲೇಜು ಎಂದು ಪರಿಗಣಿಸಲಾಗುವುದು.

ಈ ಅಲ್ಪಸಂಖ್ಯಾತರ ಕಾಲೇಜುಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಮೇ 1993 ರಲ್ಲಿ ನೀಡಿದ ಆದೇಶದ ಪ್ರಕಾರ ಶೇ 50 ರಷ್ಟು ಸೀಟುಗಳನ್ನು ರಾಜ್ಯ ಸರ್ಕಾರವು ಸಾಮಾನ್ಯ ಪ್ರವೇಶ ಪರೀಕ್ಷಯ ಆಧಾರದ ಮೇಲೆ ತುಂಬಬಹುದು (ಶೇ.25 ಉಚಿತಸೀಟುಗಳು ಹಾಗೂ ಶೇ 25 ಶುಲ್ಕ ಪಾವತಿ ಸೀಟುಗಳು) ಉಳಿದ ಶೇ 50 ರಷ್ಟು ಸೀಟುಗಳನ್ನು ಸದರಿ ಕಾಲೇಜುಗಳ ಆಡಳಿದ ವರ್ಗದವರು ತುಂಬಬಹುದು. (ಶೇ 25 ಉಚಿತ ಸೀಟುಗಳು ಹಾಗೂ ಶೇ 25 ಶುಲ್ಕ ಪಾವತಿ ಸೀಟುಗಳು) ಆದರೆ ಇದರಲ್ಲಿ ಕನಿಷ್ಟ ಶೇ 35 ರಷ್ಟು ಸೀಟುಗಳನ್ನು ಸದರಿ ಭಾಷಾ ಮತೀಯ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಂದ ಮಾತ್ರ ತುಂಬಬಹುದಾಗಿದೆ. (ಎಲ್ಲಾ ಶೇ 25 ರಷ್ಟು ಉಚಿತ ಸೀಟುಗಳು ಹಾಗೂ ಶೇ 10 ರಷ್ಟು ಶುಲ್ಕ ಪಾವತಿ ಸೀಟುಗಳು. ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಕೇವಲ ಭಾಷಾ ಅಥವಾ ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಕಾಲೇಜುಗಳನ್ನು ಮಾತ್ರ ಅಲ್ಪಸಂಖ್ಯಾತರ ಕಾಲೇಜುಗಳು ಎಂದು ಪರಿಗಣಿಸಬಹುದಾಗಿದೆ. ಅದುದರಿಂದ ಹರಿಜನ ಗಿರಿಜನರು ನಡೆಸುತ್ತಿದ್ದ ಕಾಲೇಜುಗಳನ್ನು ಅಲ್ಪಸಂಖ್ಯಾತರ ಕಾಲೇಜುಗಳೆಂದ ರಾಜ್ಯ ಸರ್ಕಾರವು ಪರಿಗಣಿಸಿಲ್ಲ. ಸಧ್ಯಕ್ಕೆ ಸರ್ವೋಚ್ಚ ನ್ಯಾಯಾಲಯದಲ್ಲಿ ಒಂದು ಸಂವಿಧಾನಾತ್ಮಕ ಪೀಠವು ಅಲ್ಪಸಂಖ್ಯಾತರ ಸಂಸ್ಥೆಗಳೆಂದರೆ ಯಾವುವು? ಅವುಗಳಿಗೆ ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶ ವಿಷಯದಲ್ಲಿ ಯಾವ ತರಹದ ವಿಶೇಷದ ಸೌಲಭ್ಯಗಳು ಸಿಗಬೇಕು ಎಂಬ ವಿಷಯಗಳ ಬಗ್ಗೆ ವಾದ, ಪ್ರತಿವಾದ ನಡೆಯುತ್ತಿದ್ದು, ಸದರಿ ಸಂವಿಧಾನ ಪೀಠದ ತೀರ್ಮಾನಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರವು ಮುಂದಿನ ಕ್ರಮ ಕೈಗೊಳ್ಳಲು ಬದ್ಧವಾಗಿದೆ.

ಶ್ರೀ ಕರಿಯಣ್ಣ ; ಮಾನ್ಯ ಉಪಾಧ್ಯಕ್ಷರೇ, ನ್ಯಾಯಾಲಯದ ತೀರ್ಮಾನದ ಪ್ರಕಾರ ಈ ಮೇಲ್ಕಂಡ ಮೂರು ಸಂಸ್ಥೆಗಳಿಗೆ ಕೊಟ್ಟಿದ್ದೇವೆ. ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ತುಳು ಮಾತನಾಡತಕ್ಕಂಥವರು ಒಂದು ಅಲ್ಪಸಂಖ್ಯಾತರ ಇನ್‌ಸ್ಟಿಟ್ಯೂಷನ್. ಬೆಳಿಗ್ಗೆ ಮಾನ್ಯ ಮಂತ್ರಿಗಳು ಇದ್ದರು. ಮಾನ್ಯ ನಂಜುಂಡಸ್ವಾಮಿಯವರು ಶೂದ್ರರ ಬಗ್ಗೆ ನ್ಯಾಯಾಲಯಗಳೂ ಸಹಿತ ಯಾವ ರೀತಿ ವರ್ತಿಸುತ್ತವೆ ಎನ್ನುವುದಕ್ಕೆ ಇದು ಸ್ಪಷ್ಟವಾದ ನಿದರ್ಶನವನ್ನು ಬಹಳ ಚೆನ್ನಾಗಿ ಹೇಳಿದರು. ಅವರೆಲ್ಲರಿಗಿಂತ ಹರಿಜನರು ಮುಂದುವರಿದವರು ಎಂದು ಹೇಳಿ ಆ ರೀತಿಯ ಸಲವತ್ತು ಹರಿಜನರಿಗೆ ಇಲ್ಲದೆ ತುಳು ಮಾತನಾಡುವವರಿಗೆ 50 ಪರ್ಸಂಟ್ ಸಲವತ್ತು ಕೊಡುತ್ತಿದ್ದಾರೆ. ಕ್ರಿಶ್ಚಿಯನ್ನರಿಗೆ 50 ಪರ್ಸಂಟ್ ಸವಲತ್ತು, ಮುಸಲ್ಮಾನರಿಗೆ 50 ಪರ್ಸಂಟ್ ಸವಲತ್ತು ಅವರಿಗೆ ಪೇಮೆಂಟ್ ಸೀಟಿನಲ್ಲೂ ಸಿಗುತ್ತದೆ. ಮೆರಿಟ್ ಸೀಟಿನಲ್ಲೂ ಸಿಗುತ್ತದೆ. ಈ 50 ಪರ್ಸಂಟ್‌ನಲ್ಲೂ ಸಿಗುತ್ತದೆ. ಮತ್ತೆ ಅವರೇನಾದರೂ ಒಂದು ಸಂಸ್ಥೆಯನ್ನು ಕಟ್ಟಿಕೊಳ್ಳಬೇಕಾದರೆ ಹೊರರಾಷ್ಟ್ರಗಳ ಸಹಾಯವೂ ಸಿಗುತ್ತದೆ. ನಿಮಗೆ ಗೊತ್ತಿದೆ, ಹರಿಜನರು ಗಿರಿಜನರು ಇಂಡಿಯಾದಲ್ಲಿ ಸಾಯಬೇಕು, ಇಂಡಿಯಾದಲ್ಲಿ ಉಳಿಯಬೇಕು, ಬೇರೆ ಕಡೆಗೆ ಹೋಗುವುದಕ್ಕೂ ಬರುವುದಿಲ್ಲ. ಬೇರೆ ಕಡೆ ಸಹಾಯವೂ ಸಿಗುವುದಿಲ್ಲ. ಇಂಥ ಸಂಸ್ಥೆಗೆ ನೀವು ಕೊಡುವುದಕ್ಕೆ ಬರುವುದಿಲ್ಲ ಎಂದರೆ ಸರ್ಕಾರ ಇದರ ರಕ್ಷಣೆಗೆ ಬರದೇ ಇದ್ದರೆ ಬೇರೆ ಯಾರು ಬರಬೇಕು ಹೇಳಿ. ಸರ್ಕಾರದವರು ಯಾವ ರೀತಿ ಇದಕ್ಕೆ ರಕ್ಷಣೆಯನ್ನು ಕೊಡುತ್ತೀರಿ? ನ್ಯಾಯಾಲಯ ಅವರಿಗೆ ರಕ್ಷಣೆಯನ್ನು ಕೊಟ್ಟಿದ್ದರೆ ನೀವು ಹರಿಜನ ಗಿರಿಜನರಿಗೆ ಸರ್ಕಾರ ಯಾವ ರೀತಿ ರಕ್ಷಣೆಯನ್ನು ಕೊಡುತ್ತೀರಿ? ಎನ್ನುವುದನ್ನು ಸ್ಪಷ್ಟವಾಗಿ ತಾವು ಹೇಳಬೇಕು ಎಂದು ಅಧ್ಯಕ್ಷರ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಹೆಚ್. ಲಕ್ಷಣಯ್ಯ : ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಸಚಿವರು ಓದಿರುವುದರಲ್ಲಿ ಹರಿಜನ ಗಿರಿಜನರು, ಅಲ್ಪಸಂಖ್ಯಾತರು ಅಲ್ಲ. ಅಲ್ಪಸಂಖ್ಯಾತರ ಕಾಲೇಜುಗಳಿಗೆ ಮಾತ್ರ ಸುಪ್ರೀಂ ಕೋರ್ಟಿನಲ್ಲಿ ತೀರ್ಮಾನವಾಗಿದೆ ಎಂದು ಹೇಳಿದ್ದಾರೆ. ಆದರೆ ಈ ಪರಿಶಿಷ್ಟ ಜಾತಿ ಮತ್ತು ವರ್ಗದವರು ವಿದ್ಯಾಭ್ಯಾಸದಲ್ಲಿ ಬಹಳ ಹಿಂದೆ ಉಳಿದಿದ್ದಾರೆ. ಇವರು ಸಂಸ್ಥೆ ಕಟ್ಟಿ ಇವರು ಜನಾಂಗಗಳಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಹೇಳಿ ಸರ್ಕಾರ ಕಾಲೇಜುಗಳು, ಸ್ಕೂಲುಗಳನ್ನು ಎಲ್ಲಾ ಕೊಡುತ್ತಿದೆ. ಈ ರೀತಿಯ ಹರಿಜನ ಮ್ಯಾನೇಜ್‌ಮೆಂಟ್ ಕಾಲೇಜುಗಳಿಗೆ ಸುಪ್ರೀಂ ಕೋರ್ಟಿನಲ್ಲಿ ತೀರ್ಮಾನವಾಗದಿದ್ದರೂ ಸಹಾ ರಾಜ್ಯಸರ್ಕಾರ ಇದೇ 50 ಪರ್ಸೆಂಟ್ ಸೀಟುಗಳನ್ನು ತುಂಬುವುದಕ್ಕೆ ಏತಕ್ಕೆ ಅವಕಾಶವನ್ನು ಮಾಡಿಕೊಡಬಾರದಾಗಿತ್ತು? ಅಲ್ಪಸಂಖ್ಯಾತರು ಎಂದು ಹೇಳಿ ಇವತ್ತು ಕೆಲವರು ಅಲ್ಪಸಂಖ್ಯಾತರು ಇರಬಹುದು, ಆದರೆ ಇವತ್ತು ರಾಜ್ಯದಲ್ಲಿ ಕೊಟ್ಟಿರುವ ಅಲ್ಪಸಂಖ್ಯಾತರು ಇವರು ಹಿಂದೂಗಳೇ. ಇದು ಯಾವ ರೀತಿಯಲ್ಲಿ ಸುಪ್ರೀಂ ಕೋರ್ಟ್ ತೀರ್ಮಾನವನ್ನು ಕೊಟ್ಟಿತೋ ಗೊತ್ತಿಲ್ಲ. ಆದರೆ ಸುಪ್ರೀಂ ಕೋರ್ಟಿನಲ್ಲಿ ಈ ಕೇಸ್ ಇಷ್ಟು ದಿವಸ ಪೆಂಡಿಂಗ್ ಬೀಳುವುದಕ್ಕೆ ನಮ್ಮ ರಾಜ್ಯ ಸರ್ಕಾರ ಈ ಕೇಸ್ ಬರುವುದಕ್ಕೆ ಪ್ರಯತ್ನ ನಡೆಸಿಲ್ಲ ಎನ್ನುವುದು ವ್ಯಕ್ತವಾಗುತ್ತದೆ. ಅದರ ಜೊತೆಗೆ ಈಗ ಸುಪ್ರೀಂ ಕೋರ್ಟ್ ತೀರ್ಮಾನ ಏನಾದರೂ ಆಗಲಿ, ರಾಜ್ಯ ಸರ್ಕಾರಕ್ಕೆ ಈ ಅಲ್ಪಸಂಖ್ಯಾತರಿಗೆ ಕೊಡುವಂಥ ಸೌಲಭ್ಯಗಳನ್ನು ಎಸ್.ಸಿ ಎಸ್.ಟಿ ಯವರಿಗೆ ಅವರು ನಡೆಸುವ ಇನ್‌ಸ್ಟಟ್ಯೂಷನ್‌ಗೆ ಕೊಡುವುದರಿಂದ ಷೆಡ್ಯೂಲ್ಡ್‌ಕ್ಯಾಸ್ಟ್‌ನವರು ಇನ್ನು 25ಪರ್ಸಂಟ್ ಉಚಿತ ಸೀಟುಗಳನ್ನು ಜಾಸ್ತಿ ತೆಗೆದುಕೊಂಡು ಅವರು ವಿದ್ಯಾಭ್ಯಾಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕೆ ರಾಜ್ಯಸರ್ಕಾರ ಏತಕ್ಕೆ ಪ್ರಯತ್ನ ಮಾಡಲಿಲ್ಲ? ಈಗಲಾದರೂ ಪ್ರಯತ್ನ ಮಾಡುತ್ತವೆಯೇ ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಬಿ. ಶಿವಣ್ಣ : ಮಾನ್ಯ ಅಧ್ಯಕ್ಷರೇ, ನಾವು ಹೈಕೋರ್ಟಿಗಾಗಲೀ ಸುಪ್ರೀಂ ಕೋರ್ಟಿಗಾಗಲೀ ಅವರ ಮೇಲೆ ಯಾವ ಆಕ್ಷೇಪಣೆ ಮಾಡುವುದು ಒಳ್ಳೆಯದಲ್ಲ ಎಂದು ನನಗನಿಸುತ್ತದೆ. ಕಾರಣ ನಾವು ಯಾವ ಕಾಲಕ್ಕೆ ಹೈಕೋರ್ಟಿಗೆ, ಸುಪ್ರೀಂ ಕೋರ್ಟಿಗೆ ಅಪೀಲು ಹೋಗಲಿ ನಮ್ಮ ವಾದದಮೇಲೆ ಡಿಪೆಂಡ್ ಇರುತ್ತದೆ. ನಾವೇನು ಕೋರ್ಟಿನಲ್ಲಿ ಅಪೀಲು ಮಾಡುವಂಥ ಛಾಲೆಂಜ್ ಏನು ಮಾಡುತ್ತೇವೆ, ಅದರ ಮೇಲೆ ಅವರು ಇಂಟರ್‌ಪ್ರಿಟ್ ಮಾಡುತ್ತಾರೆ. ಅಷ್ಟೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಅಲ್ಲಿರುವ ನಿಮ್ಮ ವಕೀಲರು ಏನು ಮಾಡುತ್ತಿದ್ದಾರೆಂದು ಕೇಳುತ್ತಿದ್ದೇನೆ.

5-40 ಪಿ.ಎಂ

ಶ್ರೀ ಕರಿಯಣ್ಣ : ಅಲ್ಪಸಂಖ್ಯಾತರದ್ದು ಆಗುವುದಿಲ್ಲವೆಂದು ತಿರಸ್ಕೃತವಾಗಿದೆ. ಅದಕ್ಕೋಸ್ಕರ, ಸರ್ಕಾರ ರಕ್ಷಣೆಗೆ ಬರಬೇಕೆಂದು ಹೇಳುತ್ತಿದ್ದೇವೆ. ಇವರು ತಮ್ಮ ಸಂಸ್ಥೆಗಳನ್ನು ನಡೆಸುವುದಾದರೂ ಹೇಗೆ? ಬಾಗಿಲು ಮುಚ್ಚಬೇಕೆ? ಸರ್ಕಾರ ಅಂತಹ ಸಂಸ್ಥೆಗಳಿಗೆ ಉತ್ತೇಜನ ಕೊಡುತ್ತೀರಿ ಗ್ರಾಂಟ್ ಕೊಡುತ್ತೀರಿ, ಮೊದಲನೇ ವರ್ಷದಿಂದಲೇ ಕೊಡಬೇಕೆಂದು ಕಾನೂನು ಮಾಡಿದ್ದರೂ ಸಹ ಏಕೆ ಹೀಗೆ ಮಾಡಿದಿರಿ?

ಶ್ರೀ ಬಿ. ಶಿವಣ್ಣ : ಇದು ಸರ್ಕಾರದ ನೀತಿಯ ಪ್ರಶ್ನೆಯಾಗಿದೆ. 1993 ರಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಂದ ಸಂದರ್ಭದಲ್ಲಿ ಅವರ ಮುಂದಿದ್ದಂಥ ವಾದದ ಮೇರೆಗೆ ಪ್ರೈವೇಟ್ ಮ್ಯಾನೇಜ್ಮೆಂಟ್‌ನವರಿಗೆ ಇಂತಿಷ್ಟು ಸೀಟುಗಳು, ಉಚಿತ ಸೀಟುಗಳು ಇಷ್ಟು ಎಂದು ತೀರ್ಪಿನಲ್ಲಿ ತಿಳಿಸಿದ್ದಾರೆ. ಅದರ ಪ್ರಕಾರ ಕೆಲವು ಅಲ್ಪಸಂಖ್ಯಾತರ ಸಂಸ್ಥೆಗಳಿಗೆ ವಿನಾಯಿತಿ ಕೊಟ್ಟು ಉಚಿತ ಸೀಟುಗಳನ್ನು ಕೊಡಬೇಕು. ಆದರೆ, ಪರಿಶಿಷ್ಟ ಜಾತಿ : ವರ್ಗಗಳವರಿಗೆ - ಕೊಡುವುದಿಲ್ಲವೆನ್ನುವ ವಾದವನ್ನು ಒಪ್ಪುತ್ತೇನೆ. ಸರ್ಕಾರದ ವತಿಯಿಂದ ತಾವು ಮಾಡಿಸಿಕೊಳ್ಳಬೇಕಾಗಿತ್ತು. ಅಥವಾ ಸರ್ಕಾರ ಈ ಕುರಿತು ಪಾಲಿಸಿ ಡಿಸಿಷನ್ ತೆಗೆದುಕೊಳ್ಳಲಿ. ಆದುದರಿಂದ, ತಾವು ಏನು ಹೇಳಿದ್ದೀರಿ, ಈ ವಿಷಯವನ್ನು ಮಂತ್ರಿಮಂಡಲದ ಮುಂದಿಟ್ಟು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಿ, ಚರ್ಚೆ ಮಾಡಿ ಆದಷ್ಟು ಮಟ್ಟಿಗೆ ಸೂಕ್ತ ಕ್ರಮ ಕೈಕೊಳ್ಳಲು ಪ್ರಯತ್ನಿಸುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಬಿ.ಹೆಚ್. ಲಕ್ಷಣಯ್ಯ : ಸದರಿ ವಿಷಯವನ್ನು ಸಚಿವ ಸಂಪುಟದ ಮುಂದಿಟ್ಟು ಚರ್ಚಿಸುವುದಾಗಿ ಮಾನ್ಯ ಸಚಿವರು ಹೇಳಿದರು, ತುಂಬಾ ಸಂತೋಷ. ಆದರೆ, ಅಲ್ಪಸಂಖ್ಯಾತ ಸಂಸ್ಥೆಗಳ ಬಗ್ಗೆ ಸರ್ವೋಚ್ಚ ನ್ಯಾಯಾಲಯ ಏನು ತೀರ್ಪು ನೀಡಿದೆ ಅದರ ಬಗ್ಗೆ ನಾನು ಟೀಕೆ ಮಾಡುವುದಿಲ್ಲ. ಸರ್ವೋಚ್ಚ ನ್ಯಾಯಾಲಯದಲ್ಲಿರುವ ನಮ್ಮ ರಾಜ್ಯದ ವಕೀಲರು ಈ ಪ್ರಕರಣವನ್ನು ಆದಷ್ಟು ಬೇಗ ಬಗೆಹರಿಸುವುದಕ್ಕೆ ತಾವು ಒತ್ತಾಯ ಹಾಕಬೇಕಾಗುತ್ತದೆ. ಎರಡನೆಯದಾಗಿ, ಇದು ರಾಜ್ಯ ಸರ್ಕಾರದ ನೀತಿಯ ವಿಷಯವೆಂದು ಹೇಳಿದಿರಿ. ಈ ನೀತಿಯನ್ನು ಮಾಡುವವರು ಯಾರು? ಶೇಕಡ 50 ರಷ್ಟು ಸೌಲಭ್ಯವನ್ನು ಅಲ್ಪಸಂಖ್ಯಾತರ ಸಂಸ್ಥೆಗಳಿಗೆ ಏನು ಕೊಟ್ಟಿದ್ದೀರಿ, ಇದೆ ಸೌಲಭ್ಯವನ್ನು ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಕೊಡಿಸುವುದಕ್ಕೂ ಸಹ ತಾವು ಪ್ರಯತ್ನಿಸಬೇಕೆಂದು ತಮಗೆ ಈ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಶಿವಣ್ಣ : ಈ ಸಲಹೆಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸುತ್ತೇನೆ.

ವಿತ್ತೀಯ ಕಾರ್ಯ ಕಲಾಪಗಳು

1994-95ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ.

ಉಪಾಧ್ಯಕ್ಷರು : ಈಗ ಬೇಡಿಕೆಗಳ ಪ್ರಸ್ತಾವಗಳನ್ನು ಮಂಡಿಸುವುದು.

ಬೇಡಿಕೆ ಸಂಖ್ಯೆ: 36 - ಭಾರಿ ಮತ್ತು ಮಧ್ಯಮ ನೀರಾವರಿ

ಶ್ರೀ ಹೆಚ್.ಎಂ. ರೇವಣ್ಣ (ಕೃಷಿ ಸಚಿವರು) (ಉಪ ಮುಖ್ಯಮಂತ್ರಿಯವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ,"ರಾಜ್ಯಪಾಲರ ಶಿಫಾರಿಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ, ' ಭಾರಿ ಮತ್ತು ಮಧ್ಯಮ ನೀರಾವರಿ ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 330,05,83,000 ರೂಪಾಯಿಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1052,81,28,000ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ: 50 - ವಿದ್ಯುಚ್ಛಕ್ತಿ ಯೋಜನೆಗಳು

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿ) : ಮಾನ್ಯ ಉಪಾಧ್ಯಕ್ಷರೆ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ವಿದ್ಯುಚ್ಛಕ್ತಿ ಯೋಜನೆ'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 101,92,94,000 ರೂಪಾಯಿಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 425,15,00,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ: 14 - ಯುವಜನ ಸೇವೆ

ಶ್ರೀ ವಸಂತ. ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಯುವಜನ ಸೇವೆ'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 26,08,99,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ : 30 - ಪ್ರವಾಸೋದ್ಯಮ

ಶ್ರೀ ವಸಂತ. ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ; "ರಾಜ್ಯಪಾಲರ ಶಿಫಾರಸ್ಸಿನ ಮೇರೆಗು 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಪ್ರವಾಸೋದ್ಯಮ'ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 10,50,57,000 ರೂಪಾಯಿಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,00,000 ರೂಪಾಯಿಗಳಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ : 29 ವಾರ್ತಾ ಮತ್ತು ಪ್ರಚಾರ

ಶ್ರೀ ಆರ್.ಎನ್. ನಾಯಕ್ (ವಾರ್ತಾ, ಕನ್ನಡ ಮತ್ತು ಸಂಸ್ಕೃತಿ ಸಚಿವರು): ಮಾನ್ಯ ಉಪಾಧ್ಯಕ್ಷರೆ "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995 ರಂದು

ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾರ್ತಾ ಮತ್ತು ಪ್ರಚಾರ'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 9,88,71,000 ರೂಪಾಯಿಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 20,00,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ: 15, ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ ಇಲಾಖೆ

ಶ್ರೀ ಆರ್.ಎನ್. ನಾಯಕ್ (ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ ರಾಜ್ಯ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 14,94,47,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆಯ ಸಂಖ್ಯೆ : 55 (ಸಹಕಾರಿ ಇಲಾಖೆ)

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರಿ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಸಹಕಾರ'ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 43,64,35,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 18,69,72,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರಿಕೊಳ್ಳುತ್ತೇನೆ".

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆಯ ಸಂಖ್ಯೆ : 26 (ಸಾರಿಗೆ ಇಲಾಖೆ)

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ('ಸಾರಿಗೆ ಸೇವೆ'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 38,70,71,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 16,38,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರಿಕೊಳ್ಳುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆಯ ಸಂಖ್ಯೆ : 8 (ರೇಷ್ಮೆ ಇಲಾಖೆ)

ಶ್ರೀ ಎಸ್.ಎಂ. ಕೃಷ್ಣ (ರೇಷ್ಮೆ ಸಚಿವರ ಪರವಾಗಿ) : ಸನ್ಮಾನ್ಯ ಉಪಾಧ್ಯಕ್ಷರೆ "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ

ವರ್ಷದಲ್ಲಿ 'ರೇಷ್ಮೆ ವ್ಯವಸಾಯಕ್ಕೆ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 116,57,37,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 11;12,50,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರಿಕೊಳ್ಳುತ್ತೇನೆ".

ಪ್ರಸ್ತಾವವನ್ನು ಮಂಡಿಸಲಾಯಿತು

ಶಾಸನ ರಚನಾಕಾರ್ಯಕಲಾಪಗಳು

1994ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಆರ್.ಎನ್. ನಾಯಕ್ (ಕಲೆ, ಸಂಸ್ಕೃತಿ ಕನ್ನಡಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, "1994ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

SRI B.I. PATIL : Sir, I Want to move an amendment to this Bill.

(INTERRUPTIONS)

Sir, I strongly oppose the Kannada Development Authority Bill in the interest of the minority people..........

SRI K.C. MODEGEKAR DESAI :Sir,............

ಉಪಾಧ್ಯಕ್ಷರು : ನೀವು ಮಾತನಾಡಬೇಕೆಂದರೆ ನಿಮ್ಮ ಹೆಸರನ್ನು ತಿಳಿಸಬೇಕಾಗುತ್ತದೆ.

(INTERRUPTIONS)

ಶ್ರೀ ವಾಟಾಳ್ ನಾಗರಾಜ್ : ಅವರು ಕನ್ನಡದಲ್ಲಿ ಮಾತನಾಡಬೇಕು. ಅದನ್ನು ತಳ್ಳಿ ಹಾಕಿ.

(Interruptions)

SRI B.I. PATIL : Uchagaon Sir, we oppose this bill and we will walk out. This bill should not be implemented in border areas like Belgaum where majority of Manathi speaking people are living. There are guidelines of the Govt. of India that all the circulars, Notifications, orders & other publications of the Govt and Semi Govt, should be in the respective language in such....

ಶ್ರೀ ವಾಟಾಳ್ ನಾಗರಾಜ್ : ನೀವು ಅವರಿಗೆ ಅವಕಾಶ ಕೊಟ್ಟಿದ್ದೀರಾ?

(ಗೊಂದಲ)

ಉಪಾಧ್ಯಕ್ಷರು : ಅವಕಾಶ ಕೊಟ್ಟಿದ್ದೇನೆ. ಅವರು ಇಂಗ್ಲೀಷ್‌ನಲ್ಲಿ ಮಾತನಾಡುತ್ತಾರೆ. ಅವರ ಹೆಸರನ್ನು ಕೊಟ್ಟಿದ್ದಾರೆ. ಅವರಿಗೆ ಅನುಮತಿಯನ್ನು ಕೊಟ್ಟಿದ್ದೇನೆ.

SRI B.I. PATIL :This bill is against the interest of the minority people We will oppose this Bill & walk out

(ಶ್ರೀ ಬಿ.ಐ. ಪಾಟೀಲ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ : ಅವರು ಹೋದರೆ ತೊಂದರೆ ಏನೂ ಇಲ್ಲ.

ಉಪಾಧ್ಯಕ್ಷರು : ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ.ಖಂಡ 2ಕ್ಕೆ ಮಾನ್ಯ ಸದಸ್ಯರುಗಳಾದ ಶ್ರೀ ವಾಟಾಳ್ ನಾಗರಾಜ್ ಮತ್ತು ಶ್ರೀ ಸಿ. ಬೈರೇಗೌಡರು ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ.

ಶ್ರೀ ಸಿ. ಬೈರೇಗೌಡ (ವೇಮಗಲ್) : ಸ್ವಾಮಿ, ದಯಮಾಡಿ ನಿಯಮಾವಳಿ ಪ್ರಕಾರ ಕಾರ್ಯ ಕಲಾಪಗಳನ್ನು ನಡೆಸಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ. ಈಗ ಇದು ಮಂಡನೆಯಾಗಿದೆ. ಅದು ಏನು ಎಂಬುದನ್ನು ಮಂತ್ರಿಗಳು ವಿವರಣೆಯನ್ನು ಕೊಡಬೇಕು. ಮಂತ್ರಿಗಳು ಸುಮ್ಮನೆ ಕುಳಿತ್ತಿದ್ದರೆ ನೀವು ಖಂಡ 2ಕ್ಕೆ ಎಂದು ಹೇಳಿದರೆ...

ಉಪಾಧ್ಯಕ್ಷರು : ಅವರು ವಾಕ್‌ಔಟ್ ಮಾಡಿದರು ಈಗ ಏನಿದೆ ಹೇಳಿ.

ಶ್ರೀ ಆರ್.ಎಸ್. ನಾಯಕ್ : ಮಾನ್ಯ ಉಪಾಧ್ಯಕ್ಷರೇ,......

ಶ್ರೀ ವಾಟಾಳ್ ನಾಗರಾಜ್ : ಈ ವಿಧೇಯಕವು ಶ್ರೀ ಹೆಚ್. ವಿಶ್ವನಾಥ್ ಅವರ ಹೆಸರಿನಲ್ಲಿದೆ. ಇವರು ಮಾತನಾಡುತ್ತಿದ್ದಾರೆ. ನಮಗೆ ಬಂದಿರುವುದು ಹೆಚ್. ವಿಶ್ವನಾಥ್ (ಕನ್ನಡ ಸಂಸ್ಕೃತಿ ಇಲಾಖೆ ಸಚಿವರು) ಎಂದು ನಮಗೆ ಕೊಟ್ಟಿರುವುದು.

ಉಪಾಧ್ಯಕ್ಷರು : ಕನ್ನಡ ಮತ್ತು ಸಂಸ್ಕೃತಿ ಇಲಾಖೆಯದ್ದು,

ಒಬ್ಬ ಮಾನ್ಯ ಸದಸ್ಯರು : ಯಾರೋ ಒಬ್ಬರು ಆದರೆ ಆಯಿತು.

ಶ್ರೀ ವಾಟಾಳ್ ನಾಗರಾಜ್ : ಯಾರೋ ಒಬ್ಬರು ಆದರೆ ಆಯಿತು ಎನ್ನುವುದಕ್ಕೆ ಇದು ಏನು ಅಯ್ಯಪ್ಪನ ಭಾವಡಿಯಾ? ಅವರು ಮಂತ್ರಿಗಳು ಆಗಿದ್ದು ಯಾವಾಗ ಇವರು ಮಂತ್ರಿ ಬಿಟ್ಟಿದ್ದು ಯಾವಾಗ? ಇದೆಲ್ಲಾ ಸದನಕ್ಕೆ ಗೊತ್ತಾಗಬೇಕು.

ಉಪಾಧ್ಯಕ್ಷರು : ಮಾನ್ಯ ವಿಶ್ವನಾಥ್ ಅವರು ಮಂತ್ರಿಯಾಗಿದ್ದಾಗ ಇದು ಇಂಟ್ರಡ್ಯೂಸ್ ಆಗಿತ್ತು ಈಗ ಚೇಂಜ್ ಆಗಿದೆ.

ಶ್ರೀ ವಾಟಾಳ್ ನಾಗರಾಜ್ : ಹೌದು.

ಉಪಾಧ್ಯಕ್ಷರು : ಈಗ ಮಂತ್ರಿಗಳು ಬದಲಾವಣೆಯಾಗಿದ್ದಾರೆ. ಈಗ ಮಂಡನೆಯಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ಯಾವ ಯಾವ ಸಚಿವರನ್ನು ತೆಗೆದು ಕೊಂಡಿದ್ದೇವೆ. ಯಾರು ಯರನ್ನು ಕೈ ಬಿಟ್ಟಿದ್ದೇವೆ ಎಂಬುದನ್ನು ಈ ಸದನಕ್ಕೆ ಪರಿಚಯ ಮಾಡಿಸಬೇಕು ಮತ್ತು ಈ ಮಸೂದೆ ಮಂಡಿಸುವಾಗ ಇದರಲ್ಲಿ ಏನಿದೆ ಹೆಚ್. ವಿಶ್ವನಾಥ್ ಎಂದು ಇದೆ. ನೀವು ಹೇಳಬೇಕು. ಇದು ಹಾಸ್ಯವಲ್ಲ; ಇದು ತೀರ್ಮಾನವಾಗಬೇಕು. ಇದು ಯಾರ ಹೆಸರಲ್ಲಿ...

ಉಪಾಧ್ಯಕ್ಷರು : ಫೆಬ್ರವರಿ 15 ರಲ್ಲಿ ಇಂಟ್ರಡ್ಯೂಸ್ ಆಗಿರುವುದು. ಈಗ ಖಾತೆ ಬದಲಾವಣೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್ : ನಮಗೆ ಬದಲಾವಣೆಯಾಗಿರುವುದು ಗೊತ್ತಿಲ್ಲ ಈ ಸಭೆಗೆ ಮಂತ್ರಿಮಂಡಲ ಬದಲಾವಣೆ ಆಗಿರುವುದನ್ನು ತಿಳಿಸಬೇಡವೇ?

ಉಪಾಧ್ಯಕ್ಷರು : ಬದಲಾವಣೆಯಾಗಿರುವುದು ಗೊತ್ತಿಲ್ಲವೆಂದು ಹೇಳಬೇಡಿ.

ಶ್ರೀ ಎಸ್.ಎಂ. ಕೃಷ್ಣ : ಬದಲಾವಣೆ ಯಾರು ಯಾರು ಆಗಿದ್ದಾರೆ ಎಂಬುದು ಗೆಜೆಟ್‌ನಲ್ಲಿ ನೋಟಿಫಿಕೇಷನ್ ಆಗಿದೆ. ನೀವು ಗೆಜ್ಜೆಟ್ಟನ್ನು ಓದುವ ಅಭ್ಯಾಸ ಮಾಡಿಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ತಾವು ಈ ರೀತಿ ಅಭ್ಯಾಸ ಹೇಳಿಕೊಟ್ಟಿರಿ ಬಹಳ ಸಂತೋಷ. ಏಕೆಂದರೆ ತಾವು ಅಧ್ಯಕ್ಷರಾಗಿದ್ದವರು, ಈ ಸದನದಲ್ಲಿ ಒಳ್ಳೆಯ ಸಂಪ್ರದಾಯವನ್ನು ಹಾಕಿರತಕ್ಕಂಥವರು. ತಾವೇ ಈ ಮಾತು ಹೇಳಿ ಬಿಟ್ಟರೆ ನಮ್ಮ ಹಣೆಬರಹ ಏನು. ಹರ ಕೊಲ್ಲಲ್ ಪರ ಕಾಯುವನೇ ಎಂದು ಹೇಳಿ ನೀವೇ ಈ ಹಣೆಬರಹ ಆದರೆ ನಮ್ಮ ಹಣೆಬರಹ ಏನು?

ಶ್ರೀ ಎಸ್.ಎಂ. ಕೃಷ್ಣ : ನಾನು ನಿಮ್ಮ ಮೇಲೆ ಯಾವ ರೀತಿಯಾದಂತಹ ಆರೋಪವನ್ನು ಮಾಡಲಿಲ್ಲ. ನೀವು ಬೇರೆ ಎಲ್ಲವನ್ನೂ ಓದುತ್ತೀರಿ. ಅದರ ಜೊತೆಗೆ ಗೆಜೆಟ್‌ನ್ನು ಕೂಡ ಓದಿ.

ಶ್ರೀ ವಾಟಾಳ್ ನಾಗರಾಜ್ : ನಾನು ನಿಮ್ಮ ಸರ್ಕಾರದ ಮುಖಪತ್ರವನ್ನು ಓದುವುದಿಲ್ಲ ಎನ್ನುವಂತಹ ಪ್ರಶ್ನೆ ಬೇಡ. ಅದು ಒಂದೊಂದು ಕಂತೆ ಬರುತ್ತದೆ. ನಾನು ತಮಗೆ ಏನು ಹೇಳುತ್ತೇನೆಂದರೆ ಒಂದು ಸಂಪ್ರದಾಯಲ್ಲಿ ಇದೆ, ನಿಮ್ಮ ಮಂತ್ರಿಮಂಡಲ ಬದಲಾವಣೆ ಆದತಕ್ಷಣ ಸದನ ಸೇರಿದ ತಕ್ಷಣ ನೀವು ನಮ್ಮ ಹೊಸ ಹೊಸ ಮಂತ್ರಿಗಳು ಇಂತಿಂಥವರನ್ನು ತೆಗೆದುಕೊಂಡಿದ್ದೇವೆ ಎಂದು ಪರಿಚಯ ಮಾಡತಕ್ಕಂಥ ಪರಿಪಾಠ ನೀವು ಕಲಿತುಕೊಳ್ಳಿ. ನೀವು ಖಂಡಿತ ಹೊಸ ಮಂತ್ರಿಗಳು ಬಂದ ಮೇಲೆ ಪರಿಚಯ ಮಾಡಿಸಲಿಲ್ಲ. ನೀವು ಮಧ್ಯೆ ಏನಾದರೂ ನಮ್ಮನ್ನೆಲ್ಲಾ ಬಿಟ್ಟು ಸಭೆ ಸೇರಿದ್ದೀರಾ? ನಮ್ಮ ಮಾನ್ಯ ಉಪಮುಖ್ಯಮಂತ್ರಿಗಳು ನಾನು ಇರಲಿಲ್ಲ ಎಂದು ಹೇಳುತ್ತಾರೆ. ಅದಕ್ಕೆ ನಾನು ಈ ಸದನದಲ್ಲಿ ಯಾರ್ಯಾರು ಹಾಜರಿ ಎಷ್ಟೆಷ್ಟು ಇದೆ ಅದರ ಮೇಲೆ ಅವರಿಗೆ ಉನ್ನತವಾದಂತಹ ಬಹುಮಾನ ಕೊಡಬೇಕು ಎಂದು ಕೇಳಿದ್ದೇನೆ. ನಾನು ಒಂದು ದಿನ ಕೂಡ ಈ ಸದನದಲ್ಲಿ ಗೈರುಹಾಜರಾಗಿಲ್ಲ ಎನ್ನುವುದು ತಮಗೆ ಗೊತ್ತಿದೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಉಪಾಸಭಾಧ್ಯಕ್ಷರೇ, ಈ ಸದನದಲ್ಲಿ ಬಹಳ ಹಾಜರಾಗತಕ್ಕಂತಹ ಕೆಲವು ಸದಸ್ಯರುಗಳ ಪೈಕಿ ಮಾನ್ಯ ವಾಟಾಳ್‌ನಾಗರಾಜ್ ಅವರೂ ಒಬ್ಬರು. ಅದರಲ್ಲಿ ಎರಡು ಮಾತಿಲ್ಲ. ಆದರೆ ಅವರನ್ನು ಪರಿಚಯ ಮಾಡಿಸಿದ ದಿನ ನೀವು ವಾಕೌಟ್ ಮಾಡಿದ್ದೀರಿ.

ಶ್ರೀ ಆರ್.ಎನ್. ನಾಯಕ್ (ಕನ್ನಡ ಸಂಸ್ಕೃತಿ ಇಲಾಖೆ ಸಚಿವರು) : ಕರ್ನಾಟಕ ರಾಜ್ಯದಲ್ಲಿ ಕನ್ನಡ ಅಭಿವೃದ್ಧಿ ಭಾಷೆಯ ಬಗ್ಗೆ ಒಂದು ಪ್ರಾಧಿಕಾರ ಸ್ಥಾಪನೆ ಮಾಡಿ ಅದಕ್ಕೆ ಒಂದು ಶಕ್ತಿ ಕೊಡಬೇಕು ಎನ್ನುವ ಉದ್ದೇಶದಂದ ಒಂದು ವಿಧೇಯಕವನ್ನು ಇಲ್ಲಿ ಮಂಡಿಸಲಾಗುತ್ತಿದೆ. ಈ ಕನ್ನಡದ ಭಾಷೆಯ ಅಭಿವೃದ್ಧಿ ಅಷ್ಟೇ ಅಲ್ಲ ಇದರಲ್ಲಿ ಕನ್ನಡಿಗರ ಅಭಿವೃದ್ಧಿ ವಿಚಾರ, ಸರೋಜಿನಿ ಮಹಿಷಿ ವರದಿ, ಅನುಷ್ಠಾನಗೊಳಿಸುವಂತಹ ವಿಚಾರ ಮತ್ತು ಕನ್ನಡವೇ ಆಡಳಿತ ಭಾಷೆಯಾಗಬೇಕು ಎನ್ನುವ ವಿಚಾರ ಹಾಗೂ ಕನ್ನಡ ಪಠ್ಯಪುಸ್ತಕಗಳನ್ನು ತಯಾರಿಸಿ ಮತ್ತು ಇರುವ ಪಠ್ಯಪುಸ್ತಕಗಳನ್ನು ಪರೀಕ್ಷಿಸುವ ವಿಚಾರ, ಕನ್ನಡ ಬಾರದ ಅಧಿಕಾರಿಗಳಿಗೆ ತರಬೇತಿ ಕೊಡುವಂತಹ ವಿಚಾರ ಮೊದಲಾದ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡುವುದಕ್ಕೋಸ್ಕರ, ಈ ಬಿಲ್‌ನ್ನು ಪರ್ಯಾಲೋಚನೆಗೆ ಇಡಲಾಗಿದೆ. ನನಗೆ ಅನಿಸುತ್ತದೆ, ಇದನ್ನು ವಿರೋಧಿಸಿದವರು ಈಗಾಗಲೇ ಎದ್ದು ಹೋಗಿದ್ದಾರೆ. ಈಗ ಇದನ್ನು ಯಾರೂ ವಿರೋಧಿಸಿದೆ ಪಾಸ್ ಮಾಡುವುದಕ್ಕೆ ಸಹಾಯ ಮಾಡುತ್ತಾರೆ ಅದು ಅವಶ್ಯಕ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ತಾವು ನಿಯಮಾವಳಿಗಳ ಪ್ರಕಾರ ದಯವಿಟ್ಟು ನಡೆಸಿ.

ಉಪಾಧ್ಯಕ್ಷರು : ಈ ತಿದ್ದುಪಡಿಗೆ ನಿಮ್ಮನ್ನು ಕರೆಯುತ್ತೇನೆ.

ಶ್ರೀ ಸಿ. ಭೈರೇಗೌಡ : ತಿದ್ದುಪಡಿ ಅಲ್ಲ. ನೀವು ತಿದ್ದುಪಡಿಗೆ ಹೋಗಬೇಡಿ. ಅವರು ಬಿಲ್‌ನ್ನು ಇಂಟ್ರಡ್ಯೂಸ್ ಮಾಡಿದ್ದಾರೆ. ಈಗ ಜನರಲ್ ಡಿಸ್‌ಕಷನ್ ನಂತರ ಕ್ಲಾಸ್ ಬೈ ಕ್ಲಾಸ್ ಬರಬೇಕು.

ಶ್ರೀ ಆರ್.ಎನ್. ನಾಯಕ್ : ಮಾನ್ಯ ಉಪಾಧ್ಯಕ್ಷರೇ, ಸರ್ಕಾರವೇ ಒಂದು ವ್ಯವಸ್ಥಿತವಾದಂತಹ ಒಂದು ಬಿಲ್‌ನ್ನು ತರುತ್ತಿದೆ. ಅದರಿಂದ ಕೆಲವು ತಿದ್ದುಪಡಿಗಳನ್ನು ಇಲ್ಲಿ ಮಾನ್ಯ ಸದಸ್ಯರು ಕಳುಹಿಸಿದ್ದಾರೆ. ಆದರೆ ಬಹುಶಃ ಇದು ಒಂದು ಉತ್ತಮ ಬಿಲ್‌ನ್ನು ಇಲ್ಲಿ ನಾವು ಹಾಜರು ಪಡಿಸುತ್ತಿರುವುದರಿಂದ ಮತ್ತು ಅದರ ಮೇಲೆ ತಿದ್ದುಪಡಿ ಅವಶ್ಯಕತೆ ಬರಲಿಕ್ಕಿಲ್ಲ. ಮತ್ತು ಒಂದು ವೇಳೆ ಈ ಬಿಲ್ ಪಾಸಾದ ಮೇಲೆ ಅದನ್ನು ಒರೆಗಲ್ಲಿಗೆ ಹಚ್ಚಿದಾಗ ಅದರಿಂದ ಏನಾದರೂ ತೊಂದರೆ ತೊಡಕುಗಳು ಬಂದರೆ ನಂತರ ಆ ತಿದ್ದುಪಡಿಯನ್ನು ಮಾಡಿಕೊಳ್ಳಬಹುದು. ಆ ಕಾರಣಕ್ಕಾಗಿ ಇದು ಕನ್ನಡದ ಪ್ರಾಧಿಕಾರದ ಮೇಲೆ ಬರುವಂತಹ ಪ್ರಥಮ ಬಿಲ್. ಮತ್ತು ಇದರ ಮೇಲೆ ಚರ್ಚೆ ವಿಚರ್ಚೆಯಾಗಿ ಏನಾದರೂ ಮುಂದಕ್ಕೆ ಹೋಗಿ ಅಥವಾ ಜಾಯಿಂಟ್ ಸೆಲೆಕ್ಷನ್ ಕಮಿಟಿಯಲ್ಲಿ ಹೋಗುವುದಕ್ಕಿಂತ ಈಗ ಇದ್ದ ಸ್ಥಿತಿಯಲ್ಲಿ ಇದನ್ನು ಹಿರಿಯ ಸದಸ್ಯರುಗಳು ಒಪ್ಪಿಕೊಂಡರೆ, ನಂತರ ಏನಾದರೂ ತೊಂದರೆ ತೊಡಕುಗಳು ಭವಿಷ್ಯದಲ್ಲಿ ಬಂದಾಗ ಅದನ್ನು ನಾವು ತಿದ್ದುಪಡಿ ತಂದು ಸರಿ ಮಾಡಿಕೊಳ್ಳಬಹುದು.

ಇದನ್ನು ಹಿರಿಯ ಸದಸ್ಯರುಗಳು ಒಪ್ಪಿಕೊಂಡರೆ ಆಮೇಲೆ ಇನ್ನೇನಾದರೂ ತೊಂದರೆ ತೊಡಕುಗಳು ನಾವು ತಂದುಕೊಳ್ಳಬಹುದು ಆದ್ದರಿಂದ ಇದನ್ನು ದಯಮಾಡಿ ಯಾವುದೇ ತಿದ್ದುಪಡಿ ಇಲ್ಲದೆ ಒಪ್ಪಿಕೊಳ್ಳಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ.

+ ಶ್ರೀ ಸಿ. ಭೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳಾದಂತ ಶ್ರೀ. ನಾಯಕ್‌ರವರು ಬಿಲ್ಲನ್ನು ಮಂಡಿಸುತ್ತಾ ಕೆಲವು ಮಾತುಗಳನ್ನಾಡಿದರು, ಅವರು ಆಡಿದಾಗ ನಾನು ಹೃತ್ಪೂರ್ವಕವಾಗಿ ಸ್ವಾಗತಿಸಬೇಕು ಎಂದು ಇದ್ದೆ. ತದನಂತರ ಅವರು ಏನೋ ದಾರಿ ತಪ್ಪುತ್ತಿದ್ದಾರೆ ಅದರ ಬಗ್ಗೆ ನಾನು ಆಮೇಲೆ ಬರುತ್ತೇನೆ. ಆದರೆ ಇವತ್ತು ಏನು ಈ ವಿಧೇಯಕ ಮಂಡನೆಯಾಗಿದೆ ಇದನ್ನು ತಾತ್ವಿಕವಾಗಿ ನಾನಂತೂ ಸ್ವಾಗತಿಸುತ್ತೇನೆ. ಕರ್ನಾಟಕದಲ್ಲಿ ಕನ್ನಡಕ್ಕೆ ಸಾರ್ವಭೌಮತ್ವ ಇರಬೇಕಾಗಿರತಕ್ಕಂತದ್ದು ಅತಿ ಅವಶ್ಯಕ. ಸ್ವಾತಂತ್ರ್ಯ ಬರುವುದಕ್ಕಿಂತ ಪೂರ್ವದಲ್ಲಿ ನಮ್ಮ ಕನ್ನಡ ಮಾತನಾಡತಕ್ಕಂಥ ಪ್ರದೇಶದಲ್ಲಿ, ಹಳೆಯ ಮೈಸೂರು ಆಗಲೀ, ಮಂಗಳೂರು ಆಗಲೀ, ದಕ್ಷಿಣ ಕನ್ನಡ ಜಿಲ್ಲೆಯಾಗಲೀ ಮತ್ತೂ ಬೇರೆ ಕಡೆ ಕನ್ನಡ ಭಾಷೆ ಇವತ್ತು ಯಾವ ಪ್ರಮಾಣದಲ್ಲಿ ಆಡಳಿತದಲ್ಲಿ ಬಳಕೆಯಾಗುತ್ತಿದೆ ಅದಕ್ಕಿಂತ ಹೆಚ್ಚಿನ ರೀತಿಯಲ್ಲಿ ಬಳಕೆಯಲ್ಲಿತ್ತು. ಆದರೆ ನಮ್ಮನ್ನು ನಾವೇ ಆಡಳಿತವನ್ನು ನಡೆಸುವಂಥ ಹಕ್ಕು ನಮಗೆ ಬಂದಮೇಲೆ ಕನ್ನಡ ಭಾಷೆಗೆ ಎಷ್ಟು ಪ್ರಾಧಾನ್ಯತೆ, ಪ್ರಾಶಸ್ತ್ಯ ಸಿಗಬೇಕಾಗಿತ್ತೋ ಅಷ್ಟು ನಮ್ಮ ರಾಜ್ಯದಲ್ಲಿ ಸಿಕ್ಕಿಲ್ಲ ಎಂಬ ಮಾತನ್ನು ಬಹಳ ವ್ಯಥೆಯಿಂದ ನಾನು ಹೇಳಬೇಕಾಗಿದೆ. ಇವತ್ತು ನಾನು ಕನ್ನಡ ಸಾಹಿತ್ಯದ ಬಗ್ಗೆ ಆಗಲೀ ಅಥವಾ ಕನ್ನಡ ಸಂಸ್ಕೃತಿ ಬಗ್ಗೆಯಾಗಲೀ ಇವೆಲ್ಲವನ್ನೂ ಕೂಡ ಹೇಳಲಿಕ್ಕೆ ಹೋಗುವುದಿಲ್ಲ. ಕನ್ನಡ ಭಾಷೆ ಪ್ರಪಂಚದಲ್ಲಿ ಒಂದು ಅತ್ಯಂತ ಪ್ರಾಚೀನವಾದಂಥ ಒಂದು ಭಾಷೆ. ಭಾರತದಲ್ಲೂ ಸಹ ಇದು ಅತ್ಯಂತ ಪ್ರಾಚೀನವಾದ ಭಾಷೆ, ಕನ್ನಡ ಸಾಹಿತ್ಯ ಪ್ರಪಂಚದ ಯಾವುದೇ ಸಾಹಿತ್ಯಕ್ಕಿಂತ ಕಡಿಮೆ ಇಲ್ಲದಂಥ ರೀತಿಯಲ್ಲಿ ಬೆಳೆದು ಬಂದಿರತಕ್ಕ ಸಾಹಿತ್ಯ. ಕನ್ನಡದ ಸಂಸ್ಕೃತಿನೂ ಅಷ್ಟೇನೇ. ಯಾವುದೇ ಸಂಸ್ಕೃತಿಗಿಂತ ಕೀಳು ಎನ್ನತಕ್ಕಂಥ ಪರಿಸ್ಥಿತಿಯಲ್ಲಿ ಬೆಳವಣಿಗೆ ಏನೂ ಆಗಿಲ್ಲ, ಇಂತಹ ಪರಿಸ್ಥಿತಿ ಇರುವಾಗ ಇದಕ್ಕೆ ಪ್ರತಿಯೊಂದಕ್ಕೂ ಕೂಡ ಮೂಲ ನಮ್ಮ ಭಾಷೆ. ಈ ಭಾಷೆ ಅಸಾಧಾರಣಕ್ಕೆ ಒಳಗಾಗದೆ ಇರತಕ್ಕಂಥದ್ದನ್ನು ನಾವು ಒಂದು ಸಾರಿಯಲ್ಲ, ಈ ಸದನದ ಹೊರಗಡೆಯೂ ಸಹ ಅನೇಕರು

ಇದಕ್ಕೋಸ್ಕರ ಕೆಲಸ ಮಾಡಿದ್ದಾರೆ. ಕೆಲವು ನಮ್ಮ ಸ್ನೇಹಿತರಾಗಿರತಕ್ಕವರು ಬಹುಶಃ ಈ ಕನ್ನಡ ಚಳುವಳಿಯನ್ನು ನಮ್ಮ ರಾಜ್ಯದಲ್ಲಿ ಮಾಡದೇ ಇದ್ದಿದ್ದರೆ ಕನ್ನಡದ ಪರಿಸ್ಥಿತಿ ಏನಾಗುತ್ತಿತ್ತೋ ಗೊತ್ತಿಲ್ಲ. ಅದರಲ್ಲಿ ನಮ್ಮ ಸ್ನೇಹಿತರಾದಂಥ ವಾಟಾಳ್ ನಾಗರಾಜ್‌ರವರು ಅಗ್ರಗಣ್ಯರು. ಇವರು ಕನ್ನಡಕ್ಕೆ ಒದಗಿದಂಥ ದುಸ್ಥಿತಿಯನ್ನು ಅವರು ಯುವಕರಾಗಿದ್ದಾಲೇ ಅದನ್ನು ಮನಗಂಡು ಈ ಚಳುವಳಿ ಪ್ರಾರಂಭಿಸಿದ ಮೇಲೆ ಕೊನೆಗೂ ಎಲ್ಲರೂ ಕೂಡ ಕನ್ನಡದ ಬಗ್ಗೆ ಹುಬ್ಬೇರಿಸಿತಕ್ಕಂಥ ಕನ್ನಡದ ಬಗ್ಗೆ ಮಾತನಾಡತಕ್ಕಂಥ ಒಂದು ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಉಂಟಾಗಿದೆ. ನಾನು ಈ ಸಂದರ್ಭದಲ್ಲಿ ಅವರು ಮಾಡಿರತಕ್ಕ ಕನ್ನಡ ಭಾಷೆಯನ್ನು ಉಳಿಸುವುದಕ್ಕ, ಅವರು ಮಾಡಿರತಕ್ಕ ಸೇವೆಯನ್ನು ನಾನು ಕೃತಜ್ಞಕ್ಕೆ ಪೂರ್ವಕವಾಗಿ ನಾನು ಸ್ಮರಿಸುತ್ತೇನೆ. ಇಷ್ಟೆಲ್ಲಾ ನಡೆದಿದ್ದರೂ ಸಹ ಇವರಿಗಿಂತ ಹಿಂದೆ ಉದ್ದಾಮ ಸಾಹಿತಿಗಳಾಗಿರತಕ್ಕಂಥ ಅ.ನಾ. ಕೃಷ್ಣರಾಯರು ಆಗಲೀ, ಮತ್ತೆ ಮ. ರಾಮಮೂರ್ತಿಯವರಾಗಲೀ, ಇನ್ನೂ ಅನೇಕರು ಸಹ ಕನ್ನಡವನ್ನು ಈ ರಾಜ್ಯದಲ್ಲಿ ಉಳಿಸುವುದಕ್ಕೋಸ್ಕರ ಪ್ರಯತ್ನಪಟ್ಟವರು ಇದ್ದಾರೆ. ಅದಕ್ಕೋಸ್ಕರ ಲಾಠಿ ಏಟನ್ನು ತಿಂದವರು ಕೂಡ ಇದ್ದಾರೆ. ಬೂಟು ಕಾಲಲ್ಲಿ ಒದೆ ತಿಂದವರು ಇದ್ದಾರೆ. ಜೈಲಿಗೆ ಹೋದಂಥವರೂ ಕೂಡ ಇದ್ದಾರೆ. ಬಹುಶ ಇವತ್ತಿನ ದಿವಸ ಯಾವ ಮಟ್ಟದಲ್ಲಿ ನಮ್ಮ ರಾಜ್ಯದಲ್ಲಿ ಕನ್ನಡ ಇದೆ, ಈ ಮಟ್ಟದಲ್ಲಿ ಕನ್ನಡ ಭಾಷೆ ಇರುತ್ತಾ ಇರಲಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

6.10 ಪಿ.ಎಂ.

ಇವತ್ತಿನ ದಿವಸ ಏನಾಗಿದೆ ಎಂದರೆ ಕನ್ನಡಕ್ಕೆ ಕುತ್ತು ಬಂದಿರತಕ್ಕದ್ದು ಅನ್ಯಭಾಷೆಗಳಿಂದ ಮತ್ತು ಅನ್ಯರು ಬಂದು ಇಲ್ಲಿ ನೆಲೆಸಿರುವುದರಿಂದ ಕನ್ನಡಕ್ಕೆ ಕುತ್ತು ಬರುತ್ತಿದೆ. ಎಲ್ಲದಕ್ಕೂ ಮಿಗಿಲಾಗಿ ಕನ್ನಡಿಗರು ಅನ್ನಿಸಿಕೊಂಡಿರತಕ್ಕವರು ಕನ್ನಡದ ಮೇಲೆ ಇಟ್ಟಿರತಕ್ಕಂಥ ಅಭಿಮಾನ. ಆ ಅಭಿಮಾನ ಶೂನ್ಯವಾಗಿರತಕ್ಕ ಕಾರಣದಿಂದ ಕನ್ನಡವನ್ನು ಕರ್ನಾಟಕದಲ್ಲಿ ಉಳಿಸಬೇಕೆಂಬ ಚಳುವಳಿ ಹುಟ್ಟಿದೆ. ಅದು ಪ್ರಬಲವಾಗಿ ಬೆಳೆದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಅನೇಕ ಅಂಕಿಅಂಶಗಳು ಬಂದಿವೆ. ಆಡಳಿತದಲ್ಲಿ 136 ಹಿರಿಯ ಅಧಿಕಾರಿಗಳಾಗಿರತಕ್ಕವರು ಕನ್ನಡಿಗರು ಅಲ್ಲ. ಎಲ್ಲರೂ ಕನ್ನಡಿಗರಾಗಿ ಇರಬೇಕೆಂದು ನಾನು ಬಯಸುವುದಿಲ್ಲ. ಅದು ನಮ್ಮ ಮೂಲ ತತ್ವಕ್ಕೆ ವಿರೋಧವಾಗುತ್ತದೆ. ಆದರೆ ಹೊರಗಡೆಯಿಂದ ಬರತಕ್ಕ ಅಧಿಕಾರಿಗಳು ಯಾರಿರುತ್ತಾರೆ ಅವರು ಕನ್ನಡವನ್ನು ಪ್ರಪ್ರಥಮವಾಗಿ ಕಲಿಯಬೇಕು. ಅನೇಕರು ಕರ್ನಾಟಕದಲ್ಲಿ ಹುಟ್ಟಿರತಕ್ಕವರು, ತಲೆತಲಾಂತರಗಳಿಂದ ಹುಟ್ಟಿ ಇಲ್ಲೇ ಬೆಳೆದಿರತಕ್ಕವರು ಸಹ ಕನ್ನಡವನ್ನು ಬಹಳ ಅಸಡ್ಡೆಯಿಂದ ಕಾಣತಕ್ಕದ್ದು ನಾವು ನೋಡುತ್ತಿದ್ದೇವೆ. ಇಲ್ಲೇ ಬದುಕಿ ತಲೆತಲಾಂತರದಿಂದ ಇದ್ದರೂ ಸಹ ಕನ್ನಡ ಮಾತನಾಡುವುದಕ್ಕೆ ಬಾರದೆ ಇರತಕ್ಕ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಉಂಟಾಗಿದೆ. ಯಾರಾದರೂ ಕೂಡ ಸ್ವಲ್ಪ ಕನ್ನಡದ ಬಗ್ಗೆ ಅಭಿಮಾನ ಇರತಕ್ಕವರು ಇದ್ದರೆ ಅಂಥವರಿಗೆ ಸಿಟ್ಟು ಬರತಕ್ಕ ಪರಿಸ್ಥಿತಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಉಂಟಾಗಿದೆ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರು ವಿಮಾನ ನಿಲ್ದಾಣದಲ್ಲಿ ನಮ್ಮ ಸಮಿತಿ ಪ್ರವಾಸ ಹೋದಂಥ ಸಂದರ್ಭದಲ್ಲಿ ನಡೆದ ಘಟನೆ. ಬೆಳಿಗ್ಗೆ 7 ಗಂಟೆಗೆ ವಿಮಾನ ನಿಲ್ದಾಣಕ್ಕೆ ಹೋದಾಗ ಅಲ್ಲಿ ಪತ್ರಿಕೆಗಳು ಇದ್ದವು. ಕನ್ನಡ ಪತ್ರಿಕೆ ಇದೆಯೇ ಅಂದರೆ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ನನಗೆ ಬಂದಂಥ ಉತ್ತರ 'ಎನ್ನ ಅದೆ' ಅನ್ನುತ್ತಾರೆ. ಅಂದು ನಾನು ಪ್ರವಾಸ ಹೋಗುವುದು ಇಲ್ಲದಿದ್ದರೆ ದೊಡ್ಡ ಗಲಾಟೆಯಾಗುತ್ತಿತ್ತು. ಏರ್ ಟಿಕೆಟ್ ಕೊಂಡಾಗಿದೆ. ಒಳಗಡೆ ಹೋಗಬೇಕಾಗಿದೆ. ಅಲ್ಲಿ ಪತ್ರಿಕೆ ಕೇಳಿದರೆ 'ಎನ್ನ

ಅದೆ' ಅನ್ನುತ್ತಾನೆ. ಏನು ಹೇಳಬೇಕು ಇದಕ್ಕೆ? ಆವತ್ತಿನ ದಿವಸ ನನಗೆ ಸಿಟ್ಟು ನೆತ್ತಿಗೆ ಏರಿತ್ತು. ಇಂಥ ಪರಿಸ್ಥಿತಿ ಇವತ್ತು ನಮ್ಮ ಕರ್ನಾಟಕದಲ್ಲಿ ಬಂದಿದೆ. ಕೇವಲ ವಿಮಾನ ನಿಲ್ದಾಣದಲ್ಲಿ ಅಲ್ಲ ಇವತ್ತು ಕರ್ನಾಟಕದಲ್ಲಿರತಕ್ಕ ಅನೇಕ ಉದ್ದಿಮೆಗಳಲ್ಲಿ ಮತ್ತು ಕರ್ನಾಟಕದಲ್ಲಿ ನೆಲೆಸಿರತಕ್ಕವರು ಹೊರಗಡೆ ರಾಜ್ಯದಿಂದ ಬಂದಿರತಕ್ಕವರು ಕನ್ನಡವನ್ನು ಬಹಳ ಉಪೇಕ್ಷೆಯಿಂದ ಕಾಣುತ್ತಿರತಕ್ಕದ್ದನ್ನು ನಾವು ಕಾಣುತ್ತಿದ್ದೇವೆ. ನಮ್ಮ ಭಾಷೆಯನ್ನು, ನಮ್ಮ ಸಾಹಿತ್ಯವನ್ನು, ನಮ್ಮ ಸಂಸ್ಕೃತಿಯನ್ನು ನಾವು ರಕ್ಷಣೆ ಮಾಡಬೇಕು. ಕನ್ನಡಕ್ಕೆ ಕರ್ನಾಟಕದಲ್ಲಿ ನೆಲೆ ಇಲ್ಲದಿದ್ದರೆ ಉಳಿಯತಕ್ಕದ್ದು ಎಲ್ಲಿ? ನಾವೇ ಕನ್ನಡವನ್ನು ರಕ್ಷಣೆ ಮಾಡದಿದ್ದರೆ ಅದನ್ನು ರಕ್ಷಣೆ ಮಾಡುವವರು ಯಾರು? ಇದು ಅನೇಕ ಸಂದರ್ಭಗಳಲ್ಲಿ ಸದನದಲ್ಲಿ ಪ್ರಸ್ತಾಪವಾಗಿದೆ. ಹೊರಗಡೆ ಕೂಡ ಪ್ರಸ್ತಾಪವಾಗಿದೆ. ಆದರೂ ಸಹ ಇಲ್ಲಿಯವರೆಗೆ, ಇವತ್ತಿಗೂ ಕೂಡ ಅನೇಕ ಕಡೆ ನಮ್ಮ ರಾಜ್ಯದ ಕರ್ನಾಟಕ ಸರ್ಕಾರದ ಅನೇಕ ಇಲಾಖೆಗಳಲ್ಲಿ ಈಗಲೂ ಕೂಡ ಕನ್ನಡದಲ್ಲಿ ಪತ್ರಗಳನ್ನು ಬರೆಯತಕ್ಕ ಅಭ್ಯಾಸ, ಉತ್ತರ ಬರೆಯತಕ್ಕ ನಿಲುವು ಇಲ್ಲ. ಇಂಗ್ಲೀಷ್‌ನಲ್ಲಿ ಬರೆಯುತ್ತಾರೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ದೂರದರ್ಶನ ಇದೆ. ಅದು ಯಾರಿಗೋಸ್ಕರ ಇದೆ ಎಂದು ಗೊತ್ತಿಲ್ಲ. ಕರ್ನಾಟಕಕ್ಕೆ, ಕನ್ನಡಕ್ಕೆ ಇಲ್ಲವೇ ಇಲ್ಲ, ಅದು ಶೂನ್ಯ. ಅದು ಸಂಸ್ಕೃತಿ ಭಾಷೆಯನ್ನು ಪ್ರತಿಬಿಂಬಿಸುವುದಕ್ಕೆ ಅತಿ ಅವಶ್ಯಕ. ಆ ದೂರದರ್ಶನವನ್ನು ನಾನು ಸುದ್ದಿ ಸಮಾಚಾರಗಳನ್ನು ಕೇಳುವುದಕ್ಕೆ ಬಿಟ್ಟು ಬೇರೆ ಸಂದರ್ಭದಲ್ಲಿ ನೋಡುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಏಕೆಂದರೆ ಅಲ್ಲಿ ಬರತಕ್ಕದ್ದೆಲ್ಲಾ ಹಿಂದಿಮಯ. ದೂರದರ್ಶನದಲ್ಲಿ ಬರತಕ್ಕದ್ದೆಲ್ಲಾ ಹಿಂದಿಯಲ್ಲಿ ಬರುತ್ತದೆ.

ನಮ್ಮಂಥವರು ಕರ್ನಾಟಕದಲ್ಲಿ ಇದ್ದಾರೆ. ನಾವು ಹಿಂದಿ ಕಲಿಯಬಾರದು, ಹೇಳಬಾರದು, ಮಾತನಾಡಬಾರದು, ಪ್ರದರ್ಶನ ಮಾಡಬಾರದೆಂದು ಅಲ್ಲ. ಆದರೆ ದೂರದರ್ಶನದಲ್ಲಿ ಇವತ್ತು ನಡೆಯತಕ್ಕದ್ದು ಏನು ಪ್ರತಿಯೊಂದಕ್ಕೂ ಹಿಂದಿಯನ್ನು ಉಪಯೋಗಿಸುತ್ತಾರೆ. ಇದು ಎಲ್ಲಿಯವರೆಗೆ ದೇಶದಲ್ಲಿ ಬೆಳೆಯುತ್ತಿದೆ ಎಂದರೆ ನಾನು ಒಂದೆ ಒಂದು ಸಾರಿ ಹೇಳಿದ್ದೆ; ಆ ಮಾತನ್ನು ಪುನಃ ಉದ್ಧರಿಸುವುದಕ್ಕೆ ಇಷ್ಟಪಡುತ್ತೇನೆ. ಯಾವುದಾದರೂ ಒಂದು ಮಗು ಹುಟ್ಟಿದರೆ ಹಾಲಿನಲ್ಲಿ ಕೂಡ ಹಿಂದಿಯನ್ನು ಬೆರೆಸಿ ಕುಡಿಸತಕ್ಕ ಪ್ರಯೋಗ ಇವತ್ತು ನಡೆಯುತ್ತಿದೆ. ಇದನ್ನು ನಾವು ಖಂಡಿಸಲೇಬೇಕಾಗುತ್ತದೆ. ದೂರದರ್ಶನ ಇವತ್ತು ಕನ್ನಡಿಗರ ಪಾಲಿಗೆ ಇಲ್ಲ, ಹೊಸದಾಗಿ ಒಂದು ಚಾನಲ್ ನಂ.9 ಎಂದು ಮಾಡಿದ್ದಾರೆ. ಅದು ಸ್ಯಾಟಲೈಟ್‌ನಿಂದ ಮಾತ್ರ ನೋಡುವುದಕ್ಕೆ ಸಾಧ್ಯವಾಗುತ್ತದೆ. ಸಾಮಾನ್ಯವಾಗಿರತಕ್ಕವರ ವರ ಮಟ್ಟಿಗೆ ಕನ್ನಡದ ದೂರದರ್ಶನದ ಕಾರ್ಯಕ್ರಮಗಳನ್ನು ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ಕನ್ನಡಿಗರಾಗಿ ಸಹಿಸಿಕೊಂಡು ಇರಬೇಕೇ? ಇವತ್ತು ಅನೇಕ ಬ್ಯಾಂಕುಗಳು ಇವೆ, ರಾಷ್ಟ್ರೀಕೃತ ಬ್ಯಾಂಕುಗಳು ಇವೆ. ಅಲ್ಲಿ ಕನ್ನಡ ಅಕ್ಷರವೆಂಬುದು ನೋಡುವುದಕ್ಕೂ ಸಿಗುವುದಿಲ್ಲ. ದುರ್ಬೀನು ಹಾಕಿಕೊಂಡರೂ ಸಿಗುವುದಿಲ್ಲ. ನಮ್ಮಲ್ಲಿ ಕೇಂದ್ರ ಸರ್ಕಾರದ ಉದ್ದಿಮೆಗಳು ಇವೆ. ಆ ಉದ್ದಿಮೆಗಳಲ್ಲಿ ಸಹ ಕನ್ನಡ ಅಂದರೆ ಕಸಕ್ಕಿಂತ ಕಡೆಯಾಗಿ ಕಾಣತಕ್ಕದ್ದು ಬೆಂಗಳೂರಿನಲ್ಲಿ ನಡೆಯುತ್ತಿದೆ. ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ ಕನ್ನಡಕ್ಕೆ ಇಂಥಹ ಪರಿಸ್ಥಿತಿ ಉಂಟಾದರೆ ಬೇರೆ ಕಡೆ ಏನಾಗಿದೆ ಎಂದು ನಾವು ನೋಡಬೇಕಾಗುತ್ತದೆ. ಇವತ್ತು ಈ ಮಸೂದೆಯನ್ನು ಗಮನಿಸಿದಾಗ ಯಾವುದಕ್ಕೂ ಸಮರ್ಪಕವಾದ ಉತ್ತರ ಇಲ್ಲಿ ಇಲ್ಲ. ಆದುದರಿಂದ ನಾವು ಕೆಲವು ತಿದ್ದುಪಡಿಗಳನ್ನು ಈ ವಿಧೇಯಕಕ್ಕೆ ಮಂಡಿಸಿದ್ದೇವೆ. ನಾನು ಆಗಲೇ ಹೇಳಿದೆ, ಮೊದಲು ಮಾನ್ಯ ಮಂತ್ರಿಗಳು ಅದನ್ನು ಮಂಡಿಸಿದ್ದಾಗ ನನಗೆ ಆಸೆ ಇತ್ತು; ಈ ತಿದ್ದುಪಡಿಗಳನ್ನು ಎಲ್ಲವನ್ನು ಒಪ್ಪುತ್ತಾರೆಂದು ಭಾವಿಸಿದ್ದೆ. ಆದರೆ ನಾವು ತಂದಿರ ತಕ್ಕ ತಿದ್ದುಪಡಿಗಳು ಸಮರ್ಪಕವಾಗಿವೆ ಎಂದು ಹೇಳುವುದಿಲ್ಲ. ಇನ್ನೂ ಕೂಡ ಇದನ್ನು ಮಾರ್ಪಾಡು ಮಾಡಬೇಕಾದ ಅವಶ್ಯಕತೆ ಇದೆ. ಅದನ್ನು ನಾನು ಒಪ್ಪುತ್ತೇನೆ. ಆದರೆ ಯಾವ ರೂಪದಲ್ಲಿ ಈ ಮಸೂದೆ ಬಂದಿದೆ, ಅದಕ್ಕೆ

ನಾವು ತಂದಿರತಕ್ಕ ತಿದ್ದುಪಡಿಗಳನ್ನು ಒಪ್ಪಿಕೊಂಡರೆ ಅದಕ್ಕೆ ಇನ್ನೂ ವಿಸ್ತೃತವಾದ ರೂಪ ಸಿಗುತ್ತದೆ. ಇನ್ನೂ ಸ್ಪಷ್ಟವಾದ ಚಿತ್ರ ದೊರೆಯುತ್ತದೆ. ಆದುದರಿಂದ ಇವತ್ತಿನ ದಿವಸ ಈ ತಿದ್ದುಪಡಿಗಳನ್ನು ತಂದಿರತಕ್ಕದ್ದು ಎಂಬ ಮಾತನ್ನು ಹೇಳಿ, ಇನ್ನೂ ಅನೇಕ ವಿಚಾರಗಳನ್ನು ಮಾತನಾಡಬೇಕಾಗಿತ್ತು. ಆದರೆ ಸಮಯಾಭಾವ ಇರುವುದರಿಂದ ತಾವು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೇ, ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಸರ್ಕಾರ ನಾಲ್ಕೂವರೆ ವರ್ಷಗಳ ಹಿಂದೆ ಅಧಿಕಾರಕ್ಕೆ ಬಂದು ಈಗ ಚುನಾವಣಾ ವರ್ಷದಲ್ಲಿ 100 ದಿನಗಳನ್ನು ಚುನಾವಣೆಗೆ ಇಟ್ಟುಕೊಂಡು ಈ ವಿಧೇಯಕವನ್ನು ಮಂಡಿಸಿ ಇಲ್ಲಿ ಈ ಸದನದ ಒಪ್ಪಿಗೆ ಪಡೆದು ಎಷ್ಟರಮಟ್ಟಿಗೆ ಇದನ್ನು ಕಾರ್ಯಗತ ಮಾಡುವುದಕ್ಕಾಗುತ್ತದೆ ಎಂಬುದರ ಬಗ್ಗೆ ಶಂಕೆ ಇದೆ. ಇವರು ಅಧಿಕಾರಕ್ಕೆ ಬಂದ ಹೊಸದರಲ್ಲಿ ಅಥವಾ ಒಂದೆರಡು ವರ್ಷಗಳಲ್ಲಿ ಈ ವಿಧೇಯಕವನ್ನು ವಿಧಾನ ಸಭೆಯಲ್ಲಿ ಇಟ್ಟು ಅಂಗೀಕಾರ ಪಡೆದಿದ್ದರೆ ಇಷ್ಟು ಹೊತ್ತಿಗೆ ಜಾರಿಗೊಳಿಸುವುದಕ್ಕೆ ಅನುಕೂಲವಾಗುತ್ತಿತ್ತು ಎಂಬ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಎರಡನೆಯದಾಗಿ, ನಮ್ಮ ಮಹರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರ ಧೋರಣೆ ಏನಿದೆ ಅದನ್ನು ನಾನು ಖಂಡಿಸುತ್ತೇನೆ. ಕಾರಣ ಬಹುಶಃ ಅವರು ಇನ್ನೂ ಮಹಾರಾಷ್ಟ್ರಕ್ಕೆ ಹೋಗತಕ್ಕ ಗುಂಗಿನಲ್ಲೇ ಇದ್ದಾರೆಂದು ಕಾಣುತ್ತದೆ. ಅದು ಸಾಧ್ಯವಾಗದೆ ಇರತಕ್ಕ ಮಾತು. ಓಟಿಗೋಸ್ಕರ ಮಹಾರಾಷ್ಟ್ರ ಏಕೀಕರಣ ಸಮಿತಿಯ ಹೆಸರು ಹೇಳುತ್ತಾರೆ. ಬೇರೆ ಬೇರೆ ವಿಷಯಗಳನ್ನು ಪ್ರಸ್ತಾಪ ಮಾಡುತ್ತಾರೆ. ಅದರ ಬಗ್ಗೆ ನಮ್ಮ ಒಪ್ಪಿಗೆ ಇಲ್ಲ. ಆದರೂ ಈ ಒಂದು ವಿಧೇಯಕವನ್ನು ಅವರು ತಪ್ಪು ತಿಳಿವಳಿಕೆಯಿಂದ ವರದಿ ಮಾಡಿ ಅವರು ಪ್ರತಿಭಟನೆ ಮಾಡಿದ್ದಾರೆಂದು ನಾನು ತಿಳಿದಿದ್ದೆ. ಏಕೆಂದರೆ ಯಾವುದೇ ಒಂದು ರಾಜ್ಯದಲ್ಲಿ 1957ರ ನಂತರ ನಾವು ಭಾಷಾವಾರು ಪ್ರಾಂತಗಳ ವಿಂಗಡಣೆ ಆದಮೇಲೆ ಆಯಾಯ ರಾಜ್ಯಗಳಲ್ಲಿ ಆಯಾಯಾ ಭಾಷೆಗಳಿಗೆ ಎಲ್ಲಾ ಪ್ರಾತಿನಿಧ್ಯ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಆ ದೇಶದ ಆ ನಾಡಿನ ಆ ಭಾಗದ ಪ್ರಗತಿ ಸಾಧ್ಯವಾಗುವುದಿಲ್ಲವೆಂಬುದು ನಮ್ಮೆಲ್ಲರ ಒಂದು ನಂಬಿಕೆ. ಆದುದರಿಂದ ಯಾವ ದೃಷ್ಟಿಯಿಂದ ಇದನ್ನು ಮಾಡಿದರೂ ಎಂಬುದು ಗೊತ್ತಿಲ್ಲ. ಆದುದರಿಂದ ಅದನ್ನು ಖಂಡಿಸಿ ಸರ್ಕಾರಕ್ಕೆ ಒಂದು ಸಲಹೆ ಕೊಡುತ್ತಿದ್ದೇನೆ. ಈ ವಿಧೇಯಕದಲ್ಲಿ ಬೈರೇಗೌಡರು ಪ್ರಸ್ತಾಪ ಮಾಡಿದಂಥ ಅನೇಕ ವಿಚಾರಗಳು ಏನಿವೆ ಆ ವಿಚಾರಗಳನ್ನು ನೀವು ಕಾರ್ಯಗತ ಮಾಡಬೇಕಾದರೆ ಈ ವಿಧೇಯಕದಲ್ಲಿ ಯಾವುದೇ ತರಹದ ಶಕ್ತಿ ಇಲ್ಲ. ಒಬ್ಬರು ಅಧ್ಯಕ್ಷರು ಇರುತ್ತಾರೆ, ಕಾರ್ಯದರ್ಶಿ ಇರುತ್ತಾರೆ, ಸರ್ಕಾರದ ಇಲಾಖೆಯ ಕಾರ್ಯದರ್ಶಿಗಳು ಮತ್ತು ಕೆಲವು ಅಧಿಕಾರಿಗಳು ಇರುತ್ತಾರೆ,

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಇರುತ್ತಾರೆ ಅಂದರೆ ಇದನ್ನು ಮಾಡದೆ ವಿಧೇಯಕವನ್ನು ಮಾಡತಕ್ಕ ಉದ್ದೇಶ ಏನು? ಕಾನೂನು ಮಾಡತಕ್ಕ ಉದ್ದೇಶ ಏನು? ಕಾನೂನು ಮಾಡತಕ್ಕದ್ದು ಕಾರ್ಯಗತ ಆಗದೇ ಹೋದರೆ ಶಿಕ್ಷೆ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಬೇಕಾಗುತ್ತದೆ. ಕಾನೂನು ಉಲ್ಲಂಘನೆ ಮಾಡಿದವರಿಗೆ ಶಿಕ್ಷೆ ಮಾಡತಕ್ಕ ಅಧಿಕಾರ ಬೇಕಾಗುತ್ತದೆ. ಅದರಲ್ಲಿ ಇದರ ಬಗ್ಗೆ ಪ್ರಸ್ತಾಪವಾಗದೆ ಇರತಕ್ಕದ್ದು ಶೋಚನೀಯ. ನಿಮ್ಮ ಒಂದು ಮೂಲಭೂತ ನಂಬಿಕೆಯನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ, ಆದರೆ ನನಗನ್ನಿಸುತ್ತದೆ, ಹೆಚ್ಚಿನ ಶಕ್ತಿಯನ್ನು ವಿಧೇಯಕದಲ್ಲಿ ಮಂಡಿಸಬಹುದಾಗಿತ್ತು ಎಂದು ಒಂದು ಅಭಿಪ್ರಾಯ. ಸಾಧ್ಯವಾದರೆ ನಾಳೆ ನಾಡಿದ್ದರಲ್ಲಿ ಅಧಿಕಾರಿ ಮಿತ್ರರಿಗೆ ಹೇಳಿದರೆ ಅವರು ಮಾಡುತ್ತಾರೆ. ಅದನ್ನು ಮಾಡುವುದು ಒಳ್ಳೆಯದೆಂದು ಸಲಹೆ ಮಾಡುತ್ತೇನೆ. ನಾನು ಮತ್ತೊಂದು ಸಲಹೆ ಕೊಡುತ್ತಿದ್ದೇನೆ.

ನಮ್ಮ ರಾಜ್ಯದಲ್ಲಿ ಮೂಲಭೂತವಾಗಿರತಕ್ಕದ್ದು, ಮಾನ್ಯ ವಾಟಾಳ್ ನಾಗರಾಜ್‌ರವರು ಅನೇಕ ಸಂದರ್ಭಗಳಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದು ಬಹಳ ದುರ್ದೈವದ ವಿಚಾರ. ನಮ್ಮ ಗಡಿ ನಾಡಿನ ಪ್ರದೇಶ ಏನಿದೆ ಅದು ಬೀದರ್ ಇರಬಹುದು, ಬೆಳಗಾಂ ಇರಬಹುದು, ಬಿಜಾಪುರ ಇರಬಹುದು ಅಥವಾ ಈ ಕಡೆ ಗುಲ್ಬರ್ಗ, ರಾಯಚೂರು, ಕೋಲಾರ ಈ ಎಲ್ಲಾ ಜಿಲ್ಲೆಗಳಲ್ಲಿ ಇತರೆ ಭಾಷೆಗಳ ಪ್ರಭಾವ 45-46 ವರ್ಷಗಳಿಂದ ಬಹಳ ಇದೆ.

ಬೀದರ್‌ನಲ್ಲಿ ಮರಾಠಿ ಭಾಷೆ ಪ್ರಭಾವ ಇದೆ. ಬೆಳಗಾವಿಯಲ್ಲಿ ಸಂಪೂರ್ಣವಾಗಿ ಎಲ್ಲಾ ವ್ಯವಹಾರಗಳನ್ನು ಸಹ ಮರಾಠಿಯಲ್ಲೇ ಮಾಡುತ್ತಾರೆ. ಕೆಲವರೆಲ್ಲಾ ಅಲ್ಲಿ ಕನ್ನಡ ಮಾತನಾಡುತ್ತಾರೋ ಏನು ಮಾತನಾಡುತ್ತಾರೋ ನಮಗೆ ಅರ್ಥವಾಗುವುದಿಲ್ಲ ಅನೇಕ ಸಂದರ್ಭದಲ್ಲಿ. ನಾನು ಯಾವುದೇ ಬೇರೆ ದೃಷ್ಟಿಯಿಂದ ಹೇಳುತ್ತಿಲ್ಲ. ಅವರದೇ ಆದ ಒಂದು ಭಾಷೆಯಾಗಿದೆ ಅದು. ತೆಲುಗು ಭಾಷೆ ತೆಗೆದುಕೊಂಡರೆ ಕೋಲಾರದ ಜನರ ಮೇಲೆ ತೆಲುಗು ಭಾಷೆಯ ಪ್ರಭಾವ ಬಹಳ ಇದೆ. 40-50 ವರ್ಷದಲ್ಲಿ ಇದೆಲ್ಲಾ ಆಗದೇ ಇರುವುದು ದುರ್ದೈವ. ಆದರೆ ಇದನ್ನು ಕಾರ್ಯಗತ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೇವೆ. ಇಲ್ಲಿ ಒಂದೇ ಒಂದು ಉದಾಹರಣೆ ಕೊಡುತ್ತೇನೆ. ಔರಾದ್ ತಾಲ್ಲೂಕಿನಲ್ಲಿರತಕ್ಕ, ಬಸವಕಲ್ಯಾಣ ತಾಲ್ಲೂಕಿನಲ್ಲಿರತಕ್ಕ, ಭಾಲ್ಕಿ ತಾಲ್ಲೂಕಿನಲ್ಲಿರತಕ್ಕ ಕನ್ನಡ ಶಾಲೆಗಳಲ್ಲಿ ಕನ್ನಡ ಶಿಕ್ಷಕರಿಲ್ಲ. ಕನ್ನಡದ ಶಿಕ್ಷಕರನ್ನು ನೀವು ಕೊಡದೇ ಹೋದರೆ ಹೇಗೆ ಕನ್ನಡವನ್ನು ಕಲಿತುಕೊಳ್ಳುವುದಕ್ಕಾಗುತ್ತದೆ? ಆ ದೃಷ್ಟಿಯಿಂದ ಈ ಪ್ರಾಧಿಕಾರಕ್ಕೆ ಹೆಚ್ಚಿನ ಶಕ್ತಿ ಕೊಡುವುದನ್ನು ಇವತ್ತು ಸೇರಿಸಿಕೊಳ್ಳಬೇಕು. ಗಡಿನಾಡಿನ ಪ್ರದೇಶ ಏನಿದೆ ಅದು ಯಾವ ರೀತಿ ಹಿಂದುಳಿದಿದೆ ಅದನ್ನು ಆರ್ಥಿಕವಾಗಿ ಮುಂದುವರೆಸಬೇಕು, ಕುಡಿಯುವ ನೀರಿಗೆ, ವಿದ್ಯುಚ್ಛಕ್ತಿ ಸೌಕರ್ಯಕ್ಕೆ, ರಸ್ತೆಗಳನ್ನು ಮಾಡುವುದಕ್ಕೆ ನಾವು ಒಂದು ಅವಕಾಶವನ್ನು ಏನು ಮಾಡಿಕೊಂಡಿದ್ದೇವೆ, ಗಡಿನಾಡಿಗಾಗಿ ವಿಶೇಷವಾದ ಕಾರ್ಯಕ್ರಮ ಏನು ಮಾಡಿದ್ದೇವೆ ಅದೇ ರೀತಿ ಗಡಿನಾಡಿನಲ್ಲಿರತಕ್ಕ ಜನರಿಗೆ ನಮ್ಮ ಭಾಷೆಯನ್ನು ಅಲ್ಲಿ ವ್ಯವಹಾರ ಭಾಷೆಯಾಗಿ ಮಾಡುವುದಕ್ಕೆ ವಿಶೇಷವಾದ ಕಾರ್ಯಕ್ರಮವನ್ನು ಪ್ರಾಧಿಕಾರದ ಮೂಲಕ ಹಾಕಿಕೊಳ್ಳುವುದಕ್ಕೆ ಸಾಧ್ಯವೇನೋ ಎಂಬ ಬಗ್ಗೆ ಪರಿಶೀಲನೆ ಮಾಡಬೇಕು ಎಂದು ಮತ್ತೊಂದು ಸಲಹೆಯನ್ನು ಕೊಡುತ್ತಾ ಕೊನೆಯದಾಗಿ ಇನ್ನೊಂದು ವಿಚಾರ ಹೇಳುತ್ತಿದ್ದೇನೆ. ನಮ್ಮ ಉರ್ದು ಶಾಲೆಗಳಲ್ಲಿ ಕನ್ನಡ ಕಲಿಸುವುದರ ಬಗ್ಗೆ ಶಾಸನಸಭೆಯಲ್ಲಿರುವ ಅನೇಕ ಉರ್ದು ಮಾತನಾಡತಕ್ಕ ಅಲ್ಪಸಂಖ್ಯಾತ ಸದಸ್ಯರು ಕೂಡ ಒತ್ತಾಯ ಮಾಡಿದ್ದಾರೆ. ಅನೇಕ ಸಂದರ್ಭದಲ್ಲಿ ಹೇಳುತ್ತಾರೆ ನಮಗೆ ಉರ್ದು ಶಾಲೆಗಳಲ್ಲಿ ಕನ್ನಡ ಶಿಕ್ಷಕರು ಇಲ್ಲ, ಕನ್ನಡ ಕಲಿಯುವುದು ಹೇಗೆ ಎಂದು. ಈಗ ಕ್ರಮವನ್ನು ತೆಗೆದುಕೊಂಡಿದ್ದೀರಿ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಎಷ್ಟರಮಟ್ಟಿಗೆ ಇದು ಕಾರ್ಯಗತವಾಗಿದೆ? ಈಗ ಆಗಿಲ್ಲ. ಖಾಸಗಿ ಶಾಲೆಗಳಿವೆ. ಅಲ್ಲಿ ಕನ್ನಡವನ್ನು ಏನೋ ಒಂದು ಕಾಟಾಚಾರಕ್ಕೆ ಕಲಿಸತಕ್ಕ ಮಟ್ಟದಲ್ಲಿ ಕಲಿಸುತ್ತಾರೆ. ಒಂದು ಕಾಲ ಇತ್ತು. ಶಿಕ್ಷಣದ ಮಟ್ಟ ಖಾಸಗಿ ಶಾಲೆಗಳಲ್ಲಿ, ಇಂಗ್ಲೀಷ್ ಶಾಲೆಗಳಲ್ಲಿ ಮಾತ್ರ ಇರುತ್ತಿತ್ತು. ಆದರೆ ಖಾಸಗಿ ಕನ್ನಡ ಶಾಲೆಗಳಲ್ಲಿ ಸಹ ಕೊಡತಕ್ಕ ಶಿಕ್ಷಣದ ಮಟ್ಟ ಕೆಳಗಡೆ ಹೋಗಿದೆ. ಆ ದೃಷ್ಟಿಯಿಂದ ಇಂಗ್ಲೀಷ್ ಶಾಲೆಗಳಲ್ಲಿ ಇಂಗ್ಲೀಷ್ ಕಾನ್‌ವೆಂಟ್‌ಗಳಲ್ಲಿ ಕಡ್ಡಾಯವಾಗಿ ಕನ್ನಡ ಕಲಿಸುವುದು ಮಾತ್ರವಲ್ಲ ಕನ್ನಡದ್ದೇ ವಾತಾವರಣ ಬರಬೇಕಾಗುತ್ತದೆ. ಅವರು ಹೇಳುವುದು ನೂರಾರು ಸಾರಿ ನಮಗೆ ಅನುಭವವಾಗಿದೆ. ಬೆಂಗಳೂರಿನ ವಿಮಾನ ನಿಲ್ದಾಣದಲ್ಲಿ ಎಲ್ಲಾ ಪತ್ರಿಕೆಗಳೂ ಸಿಗುತ್ತವೆ. ಆದರೆ ಪ್ರಜಾವಾಣಿ ಸಿಗುವುದಿಲ್ಲ, ಕನ್ನಡ ಪ್ರಭ ಸಿಗುವುದಿಲ್ಲ, ಸಂಯುಕ್ತ ಕರ್ನಾಟಕ ಸಿಗುವುದಿಲ್ಲ. ಬಾಕಿ ಎಲ್ಲಾ ಪತ್ರಿಕೆಗಳೂ ಅಲ್ಲಿ ಸಿಗುತ್ತವೆ. ಇದರಿಂದಾಗಿ ಇದೆಲ್ಲಾ ಮಾಡಬೇಕಾದರೆ.....

ಶ್ರೀ ಸಿ. ಬೈರೇಗೌಡ : ವಿಮಾನದಲ್ಲಿಯೂ ಸಹ ಎಲ್ಲಾ ಭಾಷೆಯ ಪತ್ರಿಕೆಗಳು ಸಿಗುತ್ತವೆ ಕನ್ನಡ ಬಿಟ್ಟು. ಎಲ್ಲರ ಅನುಭವ ಕೂಡ ಇದೇ ಆಗಿದೆ.

ಉಪಾಧ್ಯಕ್ಷರು : ಈಚೆಗೆ ಕನ್ನಡ ಪತ್ರಿಕೆಗಳು ಹಾಕುತ್ತಿದ್ದಾರೆ ಕೆಲವು ವಿಮಾನದಲ್ಲಿ.

ಶ್ರೀ ಸಿ. ಬೈರೇಗೌಡ : ಈಚೆಗೆ ನನಗೆ ವಿಮಾನದಲ್ಲಿ ಹೋಗುವ ಅವಕಾಶ ಸಿಕ್ಕಿಲ್ಲ. ಆದ್ದರಿಂದ ಗೊತ್ತಿಲ್ಲ.

ಉಪಾಧ್ಯಕ್ಷರು : ಹೋದಾಗ ನೋಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ :ಮಾನ್ಯ ಸಚಿವರಲ್ಲಿ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದು ಚುನಾವಣಾ ದೃಷ್ಟಿಯಿಂದ ಇದನ್ನು ಮಾಡಿದ್ದೀರಿ ಎಂದು ಆಪಾದನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಮುಂಚಿತವಾಗಿ ಮಾಡಿದ್ದರೆ ಇದನ್ನು ಕಾರ್ಯಗತ ಮಾಡಬಹುದಾಗಿತ್ತು. ಸಣ್ಣ ಲೋಪದೋಷ ಎಂದು ಹೇಳುವುದಿಲ್ಲ. ಆದರೆ ಸರ್ಕಾರ ಮಾಡತಕ್ಕ ಕೆಲಸ. ಉದಾಹರಣೆಗೆ ರಸ್ತೆ ಸಾರಿಗೆ ಸಂಸ್ಥೆಗೆ ಸಂಬಂಧಪಟ್ಟಂತೆ ಸರ್ಕಾರದಿಂದ ಸಮಿತಿ ಮಾಡಿದ್ದರು. ಸಂಸ್ಥೆಯ ಕುಂದುಕೊರತೆಗಳನ್ನು ತಿಳಿದುಕೊಂಡು ಸರಿಪಡಿಸುವುದಕ್ಕೆ ಮಾಡಿದ್ದರು. ಅದರ ವರದಿಯನ್ನು 5ನೇ ಏಪ್ರಿಲ್‌ನಲ್ಲಿ ನಾನು ಸಭಾಧ್ಯಕ್ಷರಿಗೆ ಕೊಟ್ಟಿದ್ದೇನೆ. ಇದುವರೆಗೂ ಅದರ ವರದಿಯನ್ನು 5ನೇ ಏಪ್ರಿಲ್‌ನಲ್ಲಿ ನಾನು ಸಭಾಧ್ಯಕ್ಷರಿಗೆ ಕೊಟ್ಟಿದ್ದೇನೆ. ಇದುವರೆಗೂ ಅದರ ಭಾಷಾಂತರ ಆಗಿಲ್ಲ. ಎಲ್ಲಾ ಸದಸ್ಯರಿಗೂ ಕೊಟ್ಟಿರತಕ್ಕ ವರದಿ ಏನಿದೆ. ಅದು ಇಂಗ್ಲೀಷಿನಲ್ಲಿದೆ. ಇದುವರೆಗೂ ಕನ್ನಡದಲ್ಲಿ ಕೊಟ್ಟಿಲ್ಲ. ನಾನು ಕೇಳುತ್ತಲೇ ಇದ್ದೇನೆ. ದಯವಿಟ್ಟು ಇದನ್ನು ಅರ್ಥ ಮಾಡಿಕೊಳ್ಳಬೇಕು. ಭಾಷಾಂತರ ವಿಭಾಗ ಏನಿದೆ ಅವರು ಕೆಲಸ ಮಾಡುತ್ತಿದ್ದಾರೆ. ಆದರೆ ಅವರಿಗೆ ಹೆಚ್ಚಿನ ಶಕ್ತಿಯನ್ನು ಕೊಡಬೇಕಾಗುತ್ತದೆ ನೀವು. ಟೈಪರೈಟರ್ ಇರಬಹುದು, ಹೆಚ್ಚಿನ ಸಂಖ್ಯೆಯಲ್ಲಿ ರೆಕ್ರೂಟ್‌ಮೆಂಟ್ ಮಾಡುವ ವಿಚಾರ ಇರಬಹುದು ಅದನ್ನು ಮಾಡದೇ ಹೋದರೆ ಭಾಷಾಂತರ ವಿಭಾಗದಲ್ಲಿ ಒಂದು ಪೇಜ್ ಭಾಷಾಂತರ ಮಾಡಿಸಬೇಕಾದರೆ ಎರಡು ಮೂರು ದಿನ ಕಾಯಬೇಕಾಗುತ್ತದೆ.

ಅದಕ್ಕೆ ಎಲ್ಲವನ್ನೂ ಸಹಿತ ಮಾಡತಕ್ಕಂಥ ಅಗತ್ಯ ಇದೆ. ವಿಧಾನ ಸೌಧದ ಮುಂದುಗಡೆ ವಿಶ್ವನಾಥ್‌ರವರ ಫೋಟೋವನ್ನು ಬದಲಾವಣೆ ಮಾಡಿ ಆರ್.ಎನ್. ನಾಯಕರ ಫೋಟೋ ಮೊಯಿಲಿಯವರ ಜೊತೆ ಹಾಕಿರುವುದನ್ನು ಬಿಟ್ಟರೆ ಒಳಗಡೆ ಏನೂ ಬದಲಾವಣೆ ಆದ ಹಾಗೆ ನನ್ನ ಗಮನಕ್ಕೆ ಬರಲಿಲ್ಲ. ಆದ್ದರಿಂದ, ನಾವು ಹೇಳಿರತಕ್ಕಂಥ ಸಲಹೆಗಳನ್ನು ತಿದ್ದುಪಡಿ ಮೂಲಕ ತಂದಿದ್ದರೆ ಒಳ್ಳೆಯದು. ಕನ್ನಡ ಅಭಿವೃದ್ಧಿಯ ದೃಷ್ಟಿಯಿಂದ ತಂದಿರತಕ್ಕಂಥ ವಿಧೇಯಕವನ್ನು ನಾನು ಸ್ವಾಗತ ಮಾಡಿ, ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ದಿವಸ ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂತ್ರಿಯವರು ತಂದಿರತಕ್ಕಂಥ ವಿಧೇಯಕವನ್ನು ಸ್ವಾಗತಿಸುತ್ತಾ, ಕೆಲವು ಸಲಹೆಗಳನ್ನು ತಮ್ಮ ಮುಂದೆ ಇಡಲು ಬಯಸುತ್ತೇನೆ. ಈ ಬಿಲ್‌ನ್ನು ಯಾವ ಉದ್ದೇಶದ ಸಲುವಾಗಿ ತರಲಾಗಿದೆ ಎಂದು ಮಾನ್ಯ ಮಂತ್ರಿಯವರು ತಿಳಿಸಿದರು. ಕನ್ನಡ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗುತ್ತದೆಯೇ ಎಂದು ನೋಡುವುದು ಹಾಗೂ ಕನ್ನಡ ಆಡಳಿತ ಭಾಷೆಯನ್ನಾಗಿ ಮಾಡುವುದು ಇದರಲ್ಲಿ ಅಡಕವಾಗಿದೆ. ಕನ್ನಡವನ್ನು ರಾಜ್ಯದಲ್ಲಿ ಆಡಳಿತ ಭಾಷೆಯನ್ನಾಗಿ ಮಾಡುತ್ತೇವೆಂದು 1956ನೇ ಇಸವಿಯಿಂದ ಹೇಳಿಕೊಂಡೇ ಬರುತ್ತಿದ್ದಾರೆ. ಇದು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ನಡೆಯುತ್ತದೆಂದು ನಾವು ನೋಡಬೇಕಾಗುತ್ತದೆ. 1-4-1994ರಂದು ಇದೇ ಮುಖ್ಯಮಂತ್ರಿಯವರು ಇನ್ನು ಮುಂದೆ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಡೆ ಕನ್ನಡದಲ್ಲೇ ವ್ಯವಹಾರ ಮಾಡಲಾಗುತ್ತದೆಂದು ಹೇಳಿದ್ದರು. ಆದರೆ ಕೆಲವು ಮಂತ್ರಿಗಳು

ಈಗಲೂ ಇಂಗ್ಲೀಷ್‌ನಲ್ಲಿ ಟಿಪ್ಪಣಿಗಳನ್ನು ಬರೆಯುತ್ತಿರುವುದನ್ನು ನಾವು ನೋಡಬಹುದು. ಇನ್ನು ಮುಂದಾದರೂ ಕನ್ನಡದಲ್ಲಿ ಟಿಪ್ಪಣಿಗಳನ್ನು ಮಂತ್ರಿಗಳು ಬರೆಯಬೇಕೆಂದು ವಿನಂತಿ ಮಾಡುತ್ತೇನೆ. ಮೇಲಿನ ಮಟ್ಟದಲ್ಲಿ ಕನ್ನಡವನ್ನು ಬಳಸಿದರೆ ಕೆಳಗಿನ ಮಟ್ಟದಲ್ಲಿ ಯಾವುದೇ ತೊಂದರೆ ಇಲ್ಲದೆ ಕನ್ನಡ ಜಾರಿಯಾಗುತ್ತದೆ. ಈ ಒಂದು ವಿಷಯದಲ್ಲಿ ಸನ್ಮಾನ್ಯ ಪಾಟೀಲ ಪುಟ್ಟಪ್ಪನವರನ್ನು ಅಭಿನಂದಿಸಬೇಕಾಗಿದೆ. ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ಎಲ್ಲ ಕಛೇರಿಗಳಿಗೆ ಭೇಟಿಕೊಟ್ಟು ಅಲ್ಲಿನ ಅಧಿಕಾರಿಗಳಿಗೆ ಕನ್ನಡದ ಬಗ್ಗೆ ತಿಳುವಳಿಕೆ ಕೊಡುತ್ತಿದ್ದರು. ಆಮೇಲೆ ಇಂಗ್ಲೀಷ್ ಟೈಪ್‌ರೈಟರ್‌ಗಳ ಬದಲಿಗೆ ಕನ್ನಡ ಟೈಪ್‌ರೈಟರುಗಳನ್ನು ಕೊಡುವ ದಿಟ್ಟ ಕ್ರಮವನ್ನು ಅವರು ಮಾಡಿದ್ದರು. ಆ ರೀತಿ ಪರಿಣಾಮಕಾರಿಯಾಗಿ ಕೆಲಸ ಮಾಡಿದರೆ ಮಾತ್ರ ಈ ಕೆಲಸ ಆಗುತ್ತದೆ ಇಲ್ಲವೆಂದರೆ ಆಗುವುದಿಲ್ಲವೆಂದು ಹೇಳಬಹುದು. ಸದನಕ್ಕೆ ಸಲ್ಲಿಸಬೇಕಾಗಿದ್ದ ವರದಿಗಳನ್ನು ಇಂಗ್ಲೀಷ್‌ನಲ್ಲಿ ಕೊಟ್ಟಿದ್ದರಿಂದ ಅದನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ಇದೇ ಸದನದಲ್ಲಿ ಹರಿದು ಹಾಕಿದ್ದು ತಮಗೂ ಗೊತ್ತಿದೆ. ಆದರೂ ಇವತ್ತಿನ ದಿವಸ ಕೆಎಸ್‌ಆರ್‌ಟಿಸಿಯವರು ಪುನಃ ವರದಿಯನ್ನು ಇಂಗ್ಲೀಷ್‌ನಲ್ಲಿ ತಯಾರು ಮಾಡಿದ್ದಾರೆ. ಇದರ ಬಗ್ಗೆ ನಮ್ಮದನ್ನು ನಾವು ಸರಿಪಡಿಸಿಕೊಳ್ಳುವುದು ಅತೀ ಅಗತ್ಯ ಇದೆ. ಈ ಯೋಜನೆಗಳು ಕಾರ್ಯಗತವಾಗುವುದು ಅವಶ್ಯವಾಗಿದೆ. ಬಹಳ ದಿನಗಳಾದ ಮೇಲೂ ಈ ಸರ್ಕಾರಕ್ಕೆ ಎಚ್ಚರ ಬಂದು ಈ ಬಿಲ್‌ನ್ನು ತಂದಿದ್ದಾರೆ. ಇದರಲ್ಲಿರುವ ಕಾರ್ಯಕ್ರಮಗಳನ್ನು ಮನಃಪೂರ್ವಕವಾಗಿ ಜಾರಿಗೆ ತರಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೇ, ಈ ವಿಧೇಯಕವನ್ನು ಇಲ್ಲಿ ಮಂಡಿಸಿದ ಮೇಲೆ, ನಾನು ಮತ್ತು ಭೈರೇಗೌಡರು ಕೆಲವು ತಿದ್ದುಪಡಿಗಳನ್ನು ತಂದು ಇದನ್ನು ಒಪ್ಪಿಕೊಳ್ಳಬೇಕೆಂದು ಸಂಬಂಧಪಟ್ಟ ಸಚಿವರಿಗೆ ತಿಳಿಸಿದ್ದೆವು. ಅವರೂ ಸಹಾ ಇದನ್ನು ಒಪ್ಪಿಕೊಂಡಿದ್ದರು. 'ಆದರೆ, ಅವರು ಈ ಕಡೆ ಹೋದ ಮೇಲೆ ಯಾರು ಸಲಹೆ ಕೊಟ್ಟರೋ ಏನೋ ಗೊತ್ತಿಲ್ಲ, ಈಗ ಅವರು ಬದಲಾವಣೆಯಾಗಿದ್ದಾರೆ. ನಾವು ತಂದಿರತಕ್ಕಂಥ ತಿದ್ದುಪಡಿಗಳು ಯಾರ ಕತ್ತನ್ನು ತೆಗೆಯುವಂಥವುಗಳು ಅಲ್ಲ. ಈ ಪ್ರಾಧಿಕಾರಕ್ಕೆ ಹೆಚ್ಚಿನ ಶಕ್ತಿ ಮತ್ತು ಪ್ರಾಮಾಣಿಕತನ ಬರತಕ್ಕಂಥ ವ್ಯವಸ್ಥಿತಿ ತಿದ್ದುಪಡಿಗಳು ಇವಾಗಿವೆ. ಈ ತಿದ್ದುಪಡಿಗಳನ್ನು ನಾವು ತರುವ ಮೊದಲು ಈ ರಾಜ್ಯದ ಅನೇಕ ಜೊತೆಗೆ ಸಾಹಿತಿಗಳ ಜೊತೆ ಚರ್ಚೆ ಮಾಡಿ, ಹಾಗೂ ತೆರೆ ಮರೆಯಲ್ಲಿ ಕಾನೂನು ಇಲಾಖೆಯಲ್ಲೂ ಸಹಾ ಈ ತಿದ್ದುಪಡಿ ತಂದರೆ ಏನಾದರು ತೊಂದರೆಯಾಗಬಹುದೇ ಎಂಬ ಬಗ್ಗೆ ವಿಚಾರ ಮಾಡಿದ್ದೇವೆ. ಈ ತಿದ್ದುಪಡಿಯಿಂದ ಯಾವ ದೃಷ್ಟಿ ಯಾವ ದೃಷ್ಟಿಯಲ್ಲೂ ತೊಂದರೆಯಾಗುವುದಿಲ್ಲವೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಈ ತಿದ್ದುಪಡಿಗಳನ್ನು ಒಪ್ಪಿಕೊಂಡಿದ್ದಿದ್ದರೆ ಈ ವಿಧೇಯಕಕ್ಕೆ ಒಳ್ಳೆ ಶಕ್ತಿ ಬರುತ್ತಿತ್ತೆಂದು ನನಗೆ ಗೊತ್ತಿದೆ. ಕಣ್ಣು, ಕಿವಿ, ಮೂಗು, ನಾಲಿಗೆ ಈ ನಾಲ್ಕು ಅಂಗಗಳು ಇಲ್ಲದೆ ಇರುವ ಹಾಗೆ ಈ ವಿಧೇಯಕ ಆಗಿದೆ. ಇದನ್ನು ತಂದು ಪ್ರಯೋಜನವಿಲ್ಲ. ಯಾವ ಉದ್ದೇಶಕ್ಕಾಗಿ ತರುತ್ತಿದ್ದೀರಿ? ಅಧ್ಯಕ್ಷರಿಗೆ ಸಂಪುಟ ದರ್ಜೆಗೆ ಏರಿಸಿಬಿಟ್ಟಿದ್ದೇವೆ ಎಂದು ಹೇಳಿದರೆ ಆಗುವುದಿಲ್ಲ. ಅವರುಗಳು ಬಂದು ನಮ್ಮನ್ನು ಸಚಿವ ಸಂಪುಟ ದರ್ಜೆಗೆ ಏರಿಸಿ ಎಂದು ಯಾರು ಕೇಳಿಲ್ಲ. ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ರಚನೆ ಮಾಡಿಯಾದ ಮೇಲೆ ಅದಕ್ಕೆ ಏನದರೂ ಶಾಸನಬದ್ಧವಾದ ಅಧಿಕಾರವನ್ನು ಕೊಡಬೇಕು. ಇಲ್ಲದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಪ್ರಾಧಿಕಾರದ ಅಧ್ಯಕ್ಷರು ಪರಿಣಾಮಕಾರಿಯಾಗಿ ಕೆಲಸ ಮಾಡತಕ್ಕಂಥ ವ್ಯವಸ್ಥೆ ಇದರಲ್ಲಿ ಇರಬೇಕು.

ಸಚಿವ ಸಂಪುಟದ ದರ್ಜೆಯಲ್ಲಿದ್ದು ನಾವು ಬಾವುಟ ಹಾರಿಸಿಕೊಂಡು ಹೋಗಬೇಕು ಎನ್ನತಕ್ಕಂಥ ಜನ ಅವರಲ್ಲ. ನಾವು ತಂದಿರತಕ್ಕಂಥ ತಿದ್ದುಪಡಿಗಳನ್ನು ಸಾರಾಸಗಟಾಗಿ ತಿರಸ್ಕರಿಸಿ ನೀವು ತಂದಿರತಕ್ಕಂಥ ವಿಧೇಯಕವೇ ಪರಮ ಪವಿತ್ರ ಎಂದು ತಾವು

ಹೇಳುವುದಾದರೆ, ನಿಮಗೆ ಸರಿಯಾದ ಮಾರ್ಗದರ್ಶನವನ್ನು ಕೊಟ್ಟಿಲ್ಲವೆಂದು ನಾವು ಹೇಳಬೇಕಾಗುತ್ತದೆ. ನಮ್ಮ ಮಾರ್ಗದರ್ಶನವನ್ನು ನೀವು ತೆಗೆದುಕೊಳ್ಳಲಿಲ್ಲ. ಈ ತಿದ್ದುಪಡಿಗಳನ್ನು ಸೇರಿಸಿದ್ದಿದ್ದರೆ, ಈ ವಿಧೇಯಕ ಚೆನ್ನಾಗಿತ್ತು ಮತ್ತು ಪ್ರಾಧಿಕಾರಕ್ಕೆ ಒಳ್ಳೆಯ ಶಕ್ತಿಯನ್ನು ಕೊಟ್ಟಿದ್ದಾರೆಂದು ಜನರು ಹೇಳುತ್ತಿದ್ದರು. ಆದರೆ ಅದನ್ನು ನೀವು ಮಾಡದೆ ಈ ವಿಧೇಯದ ಪರಿಸ್ಥಿತಿಯನ್ನು 'ಹೆಳವನ ಪರಿಸ್ಥಿತಿಗೆ' ತಂದಿದ್ದೀರಿ. ಈ ವಿಧೇಯಕವನ್ನು ತರುವ ಅವಶ್ಯಕತೆಯೇ ಇರಲಿಲ್ಲ. ಇದನ್ನು ಏಕೆ ತಂದಿದ್ದೀರೆಂದು ನನಗೆ ಅರ್ಥವಾಗುತ್ತಿಲ್ಲ. ಈ ವಿಧೇಯಕದಲ್ಲಿ ಸ್ವಲ್ಪವೂ ಶಕ್ತಿ ಇಲ್ಲ, ಕಣ್ಣು, ಮೂಗು, ಕಿವಿ, ನಾಲಿಗೆ ಇಲ್ಲದೆ ಇರತಕ್ಕಂಥ ಹೆಳವನನ್ನು ಮೂಲೆಯಲ್ಲಿ ಕೂರಿಸಿ ನಿನ್ನನ್ನು ಸಂತೋಷವಾಗಿ ನೋಡಿಕೊಳ್ಳುತ್ತೇನೆ, ನೀನು ಆರಾಮವಾಗಿ ಮಲಗಿರು ಎನ್ನುವ ರೀತಿಯಲ್ಲಿ ಈ ವಿಧೇಯಕವನ್ನು ಮಾಡಿದ್ದೀರಿ. ಈ ಇಲಾಖೆಯ ಅಧಿಕಾರಿಗಳು ತಮಗೆ ಏಕೆ ಇಂಥಹ ಸಲಹೆ ಕೊಟ್ಟರು ಎಂದು ನನಗೆ ನೋವಾಗಿದೆ. ನಾನು ವಿಷಯ ಸಮಿತಿ ಅಧ್ಯಕ್ಷನಾಗಿ ಕನ್ನಡ ಸಂಸ್ಕೃತಿ ಇಲಾಖೆ ಬಗ್ಗೆ ಚೆನ್ನಾಗಿರುವ ವರದಿ ಕೊಟ್ಟಿದ್ದೀರಿ ಎಂದು ತಾವೇ ಹೇಳಿದ್ದೀರಿ ಅಧ್ಯಕ್ಷರೆ, ನಾನು ಕೊಟ್ಟಿರುವ ವರದಿಯಲ್ಲಿನ ಅಂಶಗಳನ್ನು ಇವರು ಒಪ್ಪಿದರೆ ಸಾಕು ಯಾವ ವಿಧೇಯಕವೂ ಬೇಕಾಗಿಲ್ಲವೆಂದು ನಾನು ಹೇಳುತ್ತೇನೆ.

ಈ ಪ್ರಾಧಿಕಾರಕ್ಕೆ ಸ್ವಲ್ಪ ಶಕ್ತಿ ಬರುವಂಥ ಅಂಶಗಳನ್ನು ಸೇರಿಸಿದ್ದಿದ್ದರೆ ನೀವು ಅಭಿನಂದನೆಗೆ ಪಾತ್ರರಾಗುತ್ತಿದ್ದೀರಿ ಎನ್ನುವ ಮಾತನ್ನು ನಾನು ವಿನಯದಿಂದ ಹೇಳುತ್ತಿದ್ದೇನೆ. ಈಗಲೂ ಕಾಲ ಮಿಂಚಿಲ್ಲ, ಈ ತಿದ್ದುಪಡಿಗಳನ್ನು ತಾವು ಒಪ್ಪಿಕೊಳ್ಳಬೇಕು.

ಇದರಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯೂ ಇದೆ. ಬಹಳ ಸ್ಪಷ್ಟವಾಗಿ, ತಾವೇ ಬಂದು ಹೇಳಿದಿರಿ. ಬಹಳ ಚೆನ್ನಾಗಿ ವರದಿಯನ್ನು ಕೊಟ್ಟಿದ್ದೀರಿ ಎಂದು ಹೇಳಿದಿರಿ. ನಾನು ವರದಿಯ ಬಗ್ಗೆ ಸಮಗ್ರವಾಗಿ ಹೋಗುವುದಿಲ್ಲ. ಆ ವರದಿಯನ್ನು ಇವರು ಒಪ್ಪಲಿ, ಸಂಪೂರ್ಣವಾಗಿ ಆ ವರದಿಯಲ್ಲಿ ಕೊಟ್ಟಿರುವ ಪ್ರತಿಯೊಂದನ್ನೂ ಒಪ್ಪಿದರೆ ಸಾಕೆಂದು ನನಗನಿಸುತ್ತದೆ. ನನಗೆ ಕೊಟ್ಟ ಕಾಲಾವಕಾಶದಲ್ಲಿ ಮೊದಲನೆಯ ವರದಿಯನ್ನು ಕೊಟ್ಟಿದ್ದೇನೆ. ಮಾನ್ಯ ಸಚಿವರೂ ಕೂಡ ವರದಿಯನ್ನು ಒಪ್ಪಿದ್ದಾರೆ, ಅನೇಕ ಜನ ಪತ್ರಕರ್ತರು, ಮಿತ್ರರೂ ಒಪ್ಪದ್ದಾರೆ, ಬಹಳ ಚೆನ್ನಾಗಿ ಬಂದಿದೆ ಎಂಬ ಮಾತನ್ನು ಹೇಳಿದ್ದಾರೆ. ನನಗನಿಸುತ್ತದೆ, ನಾನು ಬಹಳ ನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಈ ಪ್ರಾಧಿಕಾರಕ್ಕೆ ಸ್ವಲ್ಪ ಶಕ್ತಿ ಬರುವ ರೀತಿಯಲ್ಲಿ ಮಾಡಿದ್ದರೆ, ನೀವು ನನ್ನ ಅಭಿನಂದನೆಗೆ ಪಾತ್ರರಾಗುತ್ತಿದ್ದಿರಿ ಎಂಬ ಮಾತನ್ನು ಬಹಳ ವಿನಯದಿಂದ ಹೇಳುತ್ತಿದ್ದೇನೆ. ಈಗಲೂ ಕೂಡ ಕಾಲ ಮಿಂಚಿಲ್ಲ. ನಾವು ಕೊಟ್ಟಿರತಕ್ಕ ತಿದ್ದುಪಡಿಗಳನ್ನು ಒಪ್ಪುವುದು ಒಳ್ಳೆಯದೆಂದು ಹೇಳುತ್ತೇನೆ. ಇಲ್ಲಿ, ಇದರ ಉದ್ದೇಶಗಳು, ಈ ಅಭಿವೃದ್ಧಿ ಪ್ರಾಧಿಕಾರದ್ದು, ಕನ್ನಡದ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳು. ನೀವು ಯಾವ ಯೋಜನೆಗಳನ್ನು ಹಾಕಿದ್ದೀರಿ. ಈ ಸರ್ಕಾರ ಬಂದ ನಾಲ್ಕು ಮುಕ್ಕಾಲು ವರ್ಷಗಳಿಂದ, ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ, ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಮತ್ತು ಈಗಿರುವ ಮಾನ್ಯ ವೀರಪ್ಪಮೊಯಿಲಿಯವರ ಕಾಲದಲ್ಲಿ, ಒಂದೇ ಸಮನೆ ಕನ್ನಡದ ಅಭಿವೃದ್ಧಿ ಬಗ್ಗೆ, ಏನಿರಬೇಕು, ಏನು ಮಾಡಬೇಕೆನ್ನುವುದನ್ನು ಹೇಳಿದ್ದೇನೆ. ಆದರೆ, ಇವತ್ತಿನವರೆಗೆ, ಅದರಲ್ಲಿ ಸ್ವಲ್ಪ ಪ್ರಗತಿಯನ್ನೂ ಕಂಡಿಲ್ಲ, ಇದು ಸ್ಪಷ್ಟ. ಕನ್ನಡ ಆಡಳಿತ ಭಾಷೆಯಾಗಿ ಏನು ನಡೆದಿದೆ, ಏನೇನೂ ಆಗಿಲ್ಲ. ಕರ್ನಾಟಕದಲ್ಲಿ ಆಡಳಿತ ಭಾಷೆ ಯಾವ ಪ್ರಮಾಣದಲ್ಲಿ ಆಗುತ್ತಿದೆ ಎಂಬ ಬಗ್ಗೆ ಸರ್ಕಾರದ ನೀತಿಯನ್ನು ತಾವೇ ಹೇಳಿಕೊಂಡಿದ್ದೀರಿ. ನಮ್ಮ ರಾಜ್ಯದ ನೀತಿ, ನಮ್ಮ ರಾಜ್ಯದ ಆಡಳಿತ, ಸಂಪೂರ್ಣವಾಗಿ ಕನ್ನಡದಲ್ಲಿಯೇ ಎನ್ನತಕ್ಕ ಮಾತನ್ನು ತಾವೇನು ಹೇಳಿದ್ದೀರಿ. ಆ ಮಾತಿನ ಪ್ರಕಾರ, ನಿಮ್ಮ ನೀತಿಯ ಪ್ರಕಾರ ಕೇವಲ ಶೇಕಡ ಒಂದು ಭಾಗವನ್ನು ನೀವು ಮಾಡಿದ್ದರೂ, ನಾನು ನಿಮಗೆ ಶಹಭಾಸ್‌ಗಿರಿಯನ್ನು ಕೊಡುತ್ತಿದ್ದೆ, ಆದರೆ ಖಂಡಿತ ಇಲ್ಲ. ಹೋದವರ್ಷ ಏಪ್ರಿಲ್ ಒಂದನೇ ತಾರೀಖಿನಿಂದ ಸಮಗ್ರವಾಗಿ

ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಜಾರಿಗೆ ತಂದಿದ್ದೇವೆಂದು ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿಯೇ ಹೇಳಿದರು. ಆದರೆ, ನೀವು ತಂದಿಲ್ಲವೆಂದು ನಾನು ಮತ್ತು ಪ್ರೊ. ನಂಜುಂಡಸ್ವಾಮಿಯವರು ಸೇರಿ, ಎಲ್ಲೆಲ್ಲಿ ಇಂಗ್ಲೀಷ್ ನಾಮಫಲಕಗಳಿವೆ, ಅಲ್ಲಿಗೆ ಟಾರನ್ನು ಬಳಿದು ಬಂದದ್ದು ತಮ್ಮ ಗಮನದಲ್ಲಿಯೂ ಇದೆ. ಅಲ್ಲಿಂದ ಇಲ್ಲಿಯವರೆಗೂ, ಕನ್ನಡದ ಬೆಳವಣಿಗೆ ಬಗ್ಗೆ ಸಮಗ್ರವಾಗಿ ಒಂದು ಯೋಜನೆಯೂ ಆಗಿಲ್ಲ. ಏನಾಗಿದೆ ಎಂದರೆ, ವಿಧಾನ ಸೌಧದ ನಾಲ್ಕು ಭಾಗಗಳಲ್ಲಿಯೂ ಹಿಂದೆ ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ವಿಶ್ವನಾಥ್‌ರವರ ಭಾವಚಿತ್ರವನ್ನು ತೆಗೆದು, ಅಲ್ಲಿಗೆ ಆರ್.ಎನ್. ನಾಯಕ್‌ರವರ ಭಾವಚಿತ್ರವನ್ನು ಹಾಕುವುದು ಬಿಟ್ಟರೆ, ಏನೇನೂ ನಡೆದಿಲ್ಲ. ಇದು ಸ್ಪಷ್ಟ, ಇದರಲ್ಲಿ ಅನುಮಾನ ಇಲ್ಲ. ಮುಖ್ಯಮಂತ್ರಿಗಳು ಹೋದ ಕಡೆಯಲ್ಲೆಲ್ಲಾ ಹಾಗೂ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಮಾಡಿರತಕ್ಕ ಭಾಷಣವನ್ನು ತಾವು ಪರಾಂಭರಿಸಬೇಕು. ಅವರು ಏನು ಹೇಳಿದ್ದಾರೆ, ಏನು ಮಾತನಾಡಿದ್ದಾರೆ, ಯಾವ ಭರವಸೆಯನ್ನು ಕೊಟ್ಟಿದ್ದಾರೆ. ಅದರಲ್ಲಿ ಯಾವ ಭರವಸೆಯನ್ನು ಈಡೇರಿಸಿದ್ದಾರೆ ಎಂಬುಧನ್ನು ಅವರು ಸ್ಪಷ್ಟವಾಗಿ ಹೇಳಬೇಕು. ಇವತ್ತು ಸದನದಲ್ಲಿ ನಾವು ನೆನೆದುಕೊಳ್ಳಬೇಕು. ಪ್ರಪ್ರಥಮವಾಗಿ ಕನ್ನಡದ ಬಗ್ಗೆ ಕಳಕಳಿಯನ್ನು ಹೊಂದಿ, ಕನ್ನಡದ ಕಹಳೆಯನ್ನು ಕೂಗಿದಂಥ ಧೀಮಂತ ಶಾಂತವೇರಿ ಗೋಪಾಲ ಗೌಡರನ್ನು ಈ ಸಂದರ್ಭದಲ್ಲಿ ನೆನೆಯಬೇಕು. ನಾನು ಅವರ ಜೊತೆಯಲ್ಲಿ ಹೋದಾಗ, ಅವರು ಎಷ್ಟು ಸಂತೋಷಪಟ್ಟರೆಂದರೆ, ನೀವೂ ಒಬ್ಬರು, ಕನ್ನಡದ ಬಗ್ಗೆ ಕೂಗುವುದಕ್ಕೆ ನನ್ನ ಜೊತೆ ಬಂದಿರಿ ಎಂದು ಹೇಳಿದರು. ಅವರ ಬಗ್ಗೆ ನನಗೆ ಅಪಾರವಾದ ಗೌರವ, ವಿಶ್ವಾಸ ಅಭಿಮಾನ ಇದೆ. ಅಂತಹ ಶ್ರೀಮಾನ್ ಗೋಪಾಲಗೌಡರು, ಕನ್ನಡ ನಾಡಿಗೋಸ್ಕರ, ಕನ್ನಡಕ್ಕೋಸ್ಕರವಾಗಿ ಏನು ತ್ಯಾಗ ಮಾಡಿದರು, ಅವರಿಗೋಸ್ಕರ ನನ್ನ ಋಣ ತೀರಿಸಬೇಕೆಂದು ಇಲ್ಲಿಯ ವೃತ್ತಕ್ಕೆ ನಾನೇ ಅವರ ಹೆಸರನ್ನು ಇಡತಕ್ಕ ವ್ಯವಸ್ಥೆಯನ್ನು ಮಾಡಿದೆ. ಸರ್ಕಾರದವರು, ನಗರಸಭೆಯವರು ಇದನ್ನು ಮಾಡದೇ ಇದ್ದಾಗ, ನಾನೇ ಒಂದು ನಾಮಫಲಕ ಕಟ್ಟಿ, ಅಲ್ಲಿ ಶಾಂತವೇರಿ ಗೋಪಾಲಗೌಡರ ಹೆಸರನ್ನು ನಾನೇ ಬರೆದು, ಕೊನೆಗೆ ಹೋರಾಟ ಮಾಡಿ, ಅಂತಿಮವಾಗಿ ನಗರಸಭೆಯಲ್ಲಿ ಅವರ ಹೆಸರನ್ನು ಇಟ್ಟೆ. ಗೋಪಾಲಗೌಡರು ಕನ್ನಡಕ್ಕಾಗಿ ಮಾಡಿರತಕ್ಕ ಕೆಲಸ ಈ ರಾಜ್ಯದಲ್ಲಿ, ಕರ್ನಾಟಕ ಏಕೀಕರಣದಲ್ಲಿ, ಮೈಸೂರು, ಮೈಸೂರಾಗಿಯೇ ಉಳಿಯಲಿ ಎಂದು ಹೇಳಿದರು. ಧೀಮಂತ ಶಕ್ತಿಯಾಗಿ, ಕರ್ನಾಟಕಕ್ಕಾಗಿ ಹೋರಾಟ ಮಾಡಿದಂಥ ಒಬ್ಬ ಎತ್ತರವಾಗಿ, ಹಿಮಾಲಯದಷ್ಟು ಎತ್ತರಕ್ಕೆ ಬೆಳೆದಂಥವರು. ಶ್ರೀಮಾನ್ ಗೋಪಾಲಗೌಡರ ಸ್ಮಾರಕವನ್ನು ಕರ್ನಾಟಕದಲ್ಲಿ ಪರಿಣಾಮಕಾರಿಯಾಗಿ ಸರ್ಕಾರವೇ ಮಾಡಬೇಕೆಂಬ ಮಾತನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳುತ್ತಿದ್ದೇನೆ.

ಗೋಪಾಲಗೌಡರು ಏನು ಮಾಡಿದ್ದಾರೆಂಬುದನ್ನು ಮರೆತಿದ್ದಾರೆ, ಅದನ್ನು ತೋರಿಸಬೇಕು, ಈ ಕೆಲಸವನ್ನು ಮಾಡಬೇಕು. ಮತ್ತು ಅವರ ಬಗ್ಗೆ ಸ್ಮಾರಕವನ್ನು ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ನೀವು ಯಾರು ಯಾರೋ ಸ್ಮಾರಕ ಮಾಡುತ್ತಿದ್ದೀರಿ. ಗೋಪಾಲಗೌಡರು ಕೆಳಗಡೆಯಿಂದ ಮೇಲ್ಗಡೆಯವರೆಗೂ ಕನ್ನಡದ ಬೆಳವಣಿಗೆ ಬಗ್ಗೆ ನಿರಂತರವಾಗಿ ಚಿಂತನೆ, ಹೋರಾಟ ಮಾಡಿದಂಥ ವ್ಯಕ್ತಿ. ಈ ಸಭೆಯಲ್ಲಿ ಕನ್ನಡದ ಬಗ್ಗೆ, ನಿರರ್ಗಳವಾಗಿ, ಎಳೆ ಎಳೆಯಾಗಿ ಮಾತನಾಡುತ್ತಿದ್ದರು. ಆ ಒಂದು ಅಧಿಕಾರವನ್ನು, ಶಕ್ತಿಯನ್ನು, ಒಂದು ಇತಿಹಾಸವನ್ನು ಸ್ಥಾಪನೆ ಮಾಡಿರತಕ್ಕವರು ಶ್ರೀಮಾನ್ ಗೋಪಾಲಗೌಡರು. ಕನ್ನಡ ಆಡಳಿತ ಭಾಷೆ ಬಗ್ಗೆ ಸರ್ಕಾರದಲ್ಲಿ ಏನು ಯೋಜನೆ ಯೋಜನೆಗಳನ್ನು ಹಾಕಿದ್ದೀರಿ, 1-2-3, ಈ ವರ್ಷ ಈ ರೀತಿ ಮಾಡುತ್ತಿದ್ದೇವೆ, ಈ ತರಹ ಕಾರ್ಯಕ್ರಮಗಳನ್ನು ನಾವು ಹಾಕಿದ್ದೇವೆ ಎಂಬುದನ್ನು ಹೇಳಬೇಕು. ನೀವು ಏನು ಯೋಜನೆಗಳನ್ನು ಹಾಕಿದ್ದೀರಿ. ಎಷ್ಟು ಕನ್ನಡ ಬೆರಳಚ್ಚು ಯಂತ್ರಗಳನ್ನು ತಂದಿದ್ದೀರಿ ಎಂಬುದನ್ನು ಮೊದಲು ಹೇಳಿ. ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಕನ್ನಡ ಬೆರಳಚ್ಚು ಯಂತ್ರಗಳು ಇವೆ ಎಂಬುದನ್ನು ಈ ಸದನಕ್ಕೆ ಹೇಳಬೇಕು. ಈ ಮಸೂದೆಯ ಮೇಲೆ ಅಂತಿಮವಾಗಿ ಉತ್ತರವನ್ನು ಕೊಡುವಾಗ, ಯಾವ ಯಾವ

ಇಲಾಖೆಯಲ್ಲಿ ಎಷ್ಟೆಷ್ಟು ಕನ್ನಡ ಬೆರಳಚ್ಚು ಯಂತ್ರಗಳನ್ನು ತಂದಿದ್ದೀರಿ, ಎಷ್ಟೆಷ್ಟು ಕನ್ನಡ ಬೆರಳಚ್ಚುಗಾರರಿಗೆ ಬೆಂಬಲ ಕೊಟ್ಟಿದ್ದೀರಿ. ಆಡಳಿತ ಭಾಷೆಯ ಬಗ್ಗೆ ಯಾವ ರೀತಿಯಾದ ಯೋಜನೆಗಳು, ಮತ್ತು ಯಾವ ಪ್ರಮಾಣದಲ್ಲಿ ಮುಗಿಯಬೇಕೆಂದು ಯೋಜನೆಗಳನ್ನು ಹಾಕಿದ್ದೀರಿ ಎಂಬುದನ್ನು ಇಲ್ಲಿ ಸ್ಪಷ್ಟಪಡಿಸಬೇಕು. ಕನ್ನಡ ಭಾಷೆಯ ಬಗ್ಗೆ ನಾನು ಹೇಳುವಂಥಾದ್ದು ಇದೊಂದು ರೀತಿಯ ಪ್ರಚೋದನೆ ಅಲ್ಲ.

1962, ಸೆಪ್ಟೆಂಬರ್ 7ನೇ ತಾರೀಖು ಕನ್ನಡ ಭಾಷೆಯ ಬಗ್ಗೆ ನಮಗೆ ಯಾರೂ ಈ ರೀತಿ ಮಾಡಿ ಎಂದು ಹೇಳಲಿಲ್ಲ, ನಾವೇ ಸ್ವತಃ ನಿಂತು, ಈ ರಾಜ್ಯದಲ್ಲಿ ಕನ್ನಡ ಭಾಷೆಯ ಬೆಳವಣಿಗೆಯಾಗ ಬೇಕೆಂದು ಹೇಳಿ, ಈ ರಾಜ್ಯ ಕರ್ನಾಟಕವಾಗಬೇಕೆಂದು ಹೋರಾಟ ಮಾಡಲು ನಿಂತಂಥ ನಮ್ಮನ್ನು 1962 ಸೆಪ್ಟಂಬರ್ 7ನೇ ತಾರೀಖು ನನಗೆ ಬೂಟ್ಸ್‌ನ ಏಟು ಹೊಡೆದರು. ಚಿಂತೆ ಇಲ್ಲ, ನಾನು ಅವತ್ತೆ ಆ ಪೋಲೀಸ್ ಸ್ಟೇಷನ್‌ನಲ್ಲಿಯೇ ಹೇಳಿದೆ., ಬೂಟ್ಸ್ ಏಟು ಅಲ್ಲ, ಬಂದೂಕಿನ ಏಟು ಬಿದ್ದರೂ, ನನ್ನ ರಕ್ತ ಕನ್ನಡ ಎಂದು ಆ ದಿನವೇ ಹೇಳಿದೆ. ಅಂದರೆ, ಈಗ್ಗೆ 32 ವರ್ಷದ ಹಿಂದೆಯೇ ಹೇಳಿದ್ದೇನೆ, ಇದು ಹೊಸದಲ್ಲ, ಇದಕ್ಕಾಗಿ ನಾವು ನಿರಂತರವಾದ ಹೋರಾಟವನ್ನು ನಡೆಸಿದ್ದೇವೆ. ಈ ಹೋರಾಟದಲ್ಲಿ, ಈ ಚಳುವಳಿಯಲ್ಲಿ, ನಮ್ಮ ಕಣ್ಮುಂದೆ, ಎಷ್ಟೊಂದು ಮತ್ತು ಯಾವ ಪ್ರಮಾಣದಲ್ಲಿ ಕನ್ನಡ ಬೆಳವಣಿಗೆಯಾಗಬೋಕೋ, ಅದು ಆಗಿಲ್ಲ.

ಕನ್ನಡ ಸಂಸ್ಕೃತಿಗೆ ಪ್ರಪ್ರಥಮವಾಗಿ ಒತ್ತು ಕೊಟ್ಟವರು ಯಾರು ಎಂದರೆ, ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು. ಅವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಈ ಸದನವನ್ನು ಕಟ್ಟಿಸಿದಂಥ ವ್ಯಕ್ತಿ. ಮಾನ್ಯ ಕೆಂಗಲ್ ಹನುಮಂತಯ್ಯನವರು ಅವತ್ತಿನ ದಿನ ಮಹಾಭಾರತದ ಮತ್ತು ರಾಮಾಯಣ ಪುಸ್ತಕಗಳನ್ನು ಮುದ್ರಣ ಮಾಡಿಸಿ, ಎಲ್ಲರಿಗೂ ಉಚಿತವಾಗಿ ದೊರಕಬೇಕೆಂದು ವ್ಯವಸ್ಥೆ ಮಾಡಿ, ಕನ್ನಡ ಸಂಸ್ಕೃತಿ ಇಲಾಖೆಗೆ ಹೊಸ ಚಾಲನೆಯನ್ನು ಕೊಟ್ಟರು. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಬರೀ ಮಾತಿನಿಂದ ಈ ಕೆಲಸ ಆಗುವುದಿಲ್ಲ, ಆಡಳಿತ ಭಾಷೆ ಬಗ್ಗೆ, ಭಾಷೆಯ ಬೆಳವಣಿಗೆ ಬಗ್ಗೆ ಸಮಗ್ರವಾದ ಯೋಜನೆಯನ್ನು ಹಾಕಲಿಲ್ಲವೆಂದು ಹೇಳಿದರೆ, ಖಂಡಿತವಾಗಿಯೂ ಕನ್ನಡ ಅಭಿವೃದ್ಧಿ ಪ್ರಾಧಿಕಾರವಾಗಲೀ ಅಥವಾ ಅಕಾಡೆಮಿಗಳು ಮಾಡುವಂತಾದ್ದು ಏನು? ನೀವು ಸುಮ್ಮನೆ, ಕೇಳಿಕೇಳಿದವರಿಗೆಲ್ಲಾ ಅಕಾಡೆಮಿ ಕೊಟ್ಟಿದ್ದೀರಿ. ಯಾರು ಯಾರು ಕೇಳುತ್ತಾರೆ, ಎಲ್ಲರಿಗೂ ಕೊಟ್ಟಿದ್ದೀರಿ. ಇನ್ನು ಎರಡು ಮೂರು ಭಾಷೆಯವರು ಇರಬಹುದು. ಅವರಿಗೂ ಕೊಟ್ಟುಬಿಡಿ. ನೀವು ಈ ಅಕಾಡೆಮಿಗಳನ್ನು ಕೊಡುವುದಕ್ಕೆ ಏನಾದರೊಂದು ರೀತಿ ನೀತಿ ಇದೆಯೇ? ನಿಮಗೆ ಯಾವ ರೀತಿ, ಯಾವ ಚಿಂತನೆಯೂ ಇಲ್ಲ, ಯಾರೋ ಬರುತ್ತಾರೆ, ಒಂದು ನಿಯೋಗ ಬರುತ್ತದೆ, ಆಗ ಕೊಡುತ್ತೀರಿ ಈ ರೀತಿ ಆದರೆ, ಪರಿಸ್ಥಿತಿ ಏನು? ಆದ್ದರಿಂದ, ಇದರ ಬಗ್ಗೆ ಚಿಂತನೆ ಮಾಡಬೇಕು. ಅತ್ಯಂತ ಕಳಕಳಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇನ್ನು ಕನ್ನಡದವರಿಗೆ ಉದ್ಯೋಗ ಈ ಬಗ್ಗೆ ಸರೋಜಿನಿ ಮಹಿಷಿ ವರದಿ ಬಂದಿದೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಈ ವರದಿ ಬಂತು.

ಈ ವರದಿ ಹಾಗೆಯೇ ಸರ್ಕಾರದಿಂದ, ಸರ್ಕಾರಕ್ಕೆ....

ಶ್ರೀ ಆರ್.ಎನ್. ನಾಯಕ್ : ಈಗ ಬಿಲ್ಲನ್ನು ಇಟ್ಟಿದ್ದೇವೆ ಮತ್ತು ಇದರಲ್ಲಿ ಪಾಯಿಂಟ್ಸ್ ಇವೆ. ತಾವು ಕೆಲವು ತಿದ್ದುಪಡಿಗಳನ್ನು ಕೊಟ್ಟಿದ್ದೀರಿ. ನೀವು ಈ ಬಿಲ್ಲಿನ ಬಗ್ಗೆ ಒತ್ತು ಕೊಟ್ಟರೆ, ಕೇಳುವವರಿಗೆ ಅರ್ಥವಾಗುತ್ತದೆ. ಇಲ್ಲದೇಹೋದರೆ ಅರ್ಥವಾಗುವುದಿಲ್ಲ, ಅದು ಬಹಳ ಒಳ್ಳೆಯದು ನೀವು ಆ ದಿಸೆಯಲ್ಲಿ ಏನಾದರೂ ಹೇಳುವುದು ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್ : ಇದನ್ನು ಇಟ್ಟಿದ್ದಾರೆಂದು ಹೇಳಿದಿರಿ. ಯಾರು ಇದನ್ನು ಇಟ್ಟಿರುವುದು. ಅವರು ಇಟ್ಟಿದ್ದಾರೆಂದು ಸಭೆಗೆ ಅಪ್ಪಣೆ ಕೊಡಿಸುತ್ತೀರಿ.

ಉತ್ತರ ಕರ್ನಾಟಕದ ಭಾಷೆಯಾಗಲೀ, ಹಳೆಯ ಮೈಸೂರು ಭಾಷೆಯಾಗಲೀ ಎಲ್ಲವೂ ಗಂಡುಮೆಟ್ಟಿನ ಭಾಷೆ. ಇದು ಸರಿಯಲ್ಲ, ಅದು ಸರಿಯಲ್ಲವೆಂದು ತಾಳೆ ಮಾಡತಕ್ಕಂಥ ಪ್ರಶ್ನೆ ಬೇಡ. ಮಾನ್ಯ ನಾಯಕ್‌ರವರೇ ತಾವು ಸಾವಧಾನವಾಗಿ ಹೇಳಿ. ಹಿಂದೆ, ಶಾಸಕರಾಗಿ ಪ್ರತಿಸಾರಿ ಎದ್ದು ನಿಲ್ಲುತ್ತಿದ್ದೀರಲ್ಲಾ, ಈಗ ಪ್ರಶ್ನೆ ಬೇಡ. ಜವಾಬ್ದಾರಿಯಿಂದ ಸಚಿವರಾಗಿದ್ದೀರಿ, ಎಲ್ಲವನ್ನೂ ಸ್ವಲ್ಪ ಸಮಾಧಾನವಾಗಿ ಕೇಳಿ, ನೀವು ಕೇಳುತ್ತೀರೆಂದು ನಮಗೂ ಸಂತೋಷವಾಗುತ್ತದೆ.

6.40 ಪಿ.ಎಂ

ಆದುದರಿಂದ ತಾವು ಇರುವ ತಪ್ಪನ್ನು ಒಪ್ಪಿಕೊಳ್ಳಿ. ಅದರಲ್ಲಿ ನಮ್ಮ ಅಭ್ಯಂತರ ಇಲ್ಲ, ಇಲ್ಲ ಎಂದರೆ ಬಿಟ್ಟುಬಿಡಿ. ನಾನು ಹೇಳುವುದನ್ನು ಹೇಳುತ್ತೇವೆ. ನಾವು ಮೊದಲಿನಿಂದಲೂ ಹೇಳಿಕೊಂಡು ಬಂದಿದ್ದೇವೆ. ನಾವು ಹೇಳುತ್ತೇವೆ. ಅದರಲ್ಲಿ ಏನೂ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ, ನಾವು ಕನ್ನಡದ ತಮಟೆಯನ್ನು ಹೊಡೆಯುತ್ತಿರುತ್ತೇವೆ. ಕೇಳಿದರೆ ಕೇಳಬಹುದು, ಬಿಟ್ಟರೆ ಬಿಡಬಹುದು. ನಮ್ಮ ಶಬ್ಧ ಯಾವತ್ತೂ ತಪ್ಪುವುದಿಲ್ಲ. ಯಾವ ಕಾಲ ಬಂದರೂ ಕೂಡ ನಮ್ಮ ಟಮಟೆ ಶಬ್ಧ ನಿಲ್ಲುವುದಿಲ್ಲ.

ಇದು ಸ್ಪಷ್ಟವಾದ ಅಭಿಪ್ರಾಯ. ಸರೋಜಿನಿ ಮಹಿಷಿ ವರದಿಯನ್ನು ತಾವು ಏನು ಮಾಡಿದ್ದೀರಿ ಸ್ವಾಮಿ? ಈಗ ಏನಾಗಿದೆ? ಅದು ಎಲ್ಲಿದೆ? ಅದು ಯಾವ ಉಪಸಮಿತಿಗೆ ಹೋಗಿದೆ? ಅದರ ಯಾವ ಯಾವ ಶಿಫಾರಸ್ಸುಗಳನ್ನು ಸರ್ಕಾರ ಒಪ್ಪಿದೆ? ಸರೋಜಿನಿ ಮಹಿಷಿ ವರದಿಯಲ್ಲಿ ಒಂದು ಶಿಫಾರಸ್ಸನ್ನು ತಾವು ಒಪ್ಪಿದ್ದೀರಿ ಎಂದರೆ ಸಂತೋಷ. ಅದು ತಾವು ಹೇಳಬಹುದು. ಆದರೆ ಏನೂ ಕಾಣಲಿಲ್ಲ. ಶ್ರೀ ವಿಶ್ವನಾಥ್ ಅವರು ಹಿಂದೆ ಕನ್ನಡ ಸಂಸ್ಕೃತಿ ಮಂತ್ರಿಯಾಗಿದ್ದಾಗ ಏನು ಉದ್ದುದ್ದವಾಗಿ ಹೇಳಿ ಐಎಎಸ್ ಅಧಿಕಾರಿಗಳು ಯಾರು ಕನ್ನಡ ಕಲಿಯುವುದಿಲ್ಲ ಅವರನ್ನು ವಿಧಾನಸೌಧದಿಂದ ಹೊರಗಡೆ ತಳ್ಳುತ್ತೇವೆ ಎಂದು ಹೇಳಿದರು. ಆದರೆ ಇವರೇ ಹೊರಗಡೆ ಹೊರಟುಹೋದರು ಕನ್ನಡ ಸಂಸ್ಕೃತಿ ಇಲಾಖೆಯಿಂದ ಯಾವ ಐಎಎಸ್ ಅಧಿಕಾರಿಗಳು ಇಂಗ್ಲೀಷ್ ಬಿಟ್ಟು ಕನ್ನಡ ಕಲಿಯುವುದಿಲ್ಲ ಅಂತಹ ಅಧಿಕಾರಿಗಳನ್ನು ನಾವು ಬೇರೆ ರಾಜ್ಯಕ್ಕೆ ಕಳುಹಿಸುತ್ತೇವೆ ಎಂದು ಹೇಳಿದರು. ಸಾಹಿತ್ಯ ಸಮ್ಮೇಳನಕ್ಕೆ ಹೋದರು. ಭಾರಿ ಭಾಷಣ ಮಾಡಿದರು. ಕೈಚಪ್ಪಾಳೆ ತಟ್ಟಿಸಿಕೊಂಡರು. ಇಲ್ಲಿ ಮಾತನಾಡಿದರು. ಅವರ ಪರಿಸ್ಥಿತಿ ಏನಾಯಿತು? ಕನ್ನಡ, ಸಂಸ್ಕೃತಿ ಇಲಾಖೆ ಅವರ ಕೈಬಿಟ್ಟಿತು. ಅವರನ್ನು ಕಾಡಿಗೆ ಕಳುಹಿಸಿದರು. ಕನ್ನಡ ಬಿಟ್ಟು ಅವರಿಗೆ ಕಾಡಿಗೆ ಕಳುಹಿಸಿದ್ದಾರೆ.

ಉಪಾಧ್ಯಕ್ಷರು : ಶ್ರೀರಾಮನನ್ನು ವನವಾಸಕ್ಕೆ ಕಳುಹಿಸಿದ ಹಾಗೆ.

ಶ್ರೀ ವಾಟಾಳ್ ನಾಗರಾಜ್ : ಇವತ್ತು ನನಗೆ ಆರ್.ಎನ್. ನಾಯಕ್ ಅವರ ಬಗ್ಗೆ ಬಹಳ ಗೌರವ ಇದೆ. ಅವರು ಚೆನ್ನಾಗಿ ಕೆಲಸ ಮಾಡಲಿ. ಆ ಬಗ್ಗೆ ಬೇರೆ ಅಭಿಪ್ರಾಯ ಇಲ್ಲ, ಈ ವಿಧೇಯಕವನ್ನು ನಾನೂ ಬೈರೇಗೌಡರು ಸಮಗ್ರವಾಗಿ ಎಲ್ಲಾ ಸಾಹಿತಿಗಳ ಜೊತೆ ಕುಳಿತು ಚರ್ಚೆ ಮಾಡಿದ್ದೇವೆ. ಇದಕ್ಕೆ ಒಂದು ದಿನ ಅಲ್ಲ ನಾವು ಅನೇಕ ಜನ ಕುಳಿತು ಇದರ ಬಗ್ಗೆ ಒಂದು ತಿದ್ದುಪಡಿಯನ್ನು ತರೋಣವೆಂದು ಹೇಳಿ ಮಾಡಿದ್ದು. ನಾವು ನಾವೇ ತಂದದ್ದು ಅಲ್ಲ, ಅನೇಕ ಜನ ಸಾಹಿತಿಗಳು ಕುಳಿತು ಚರ್ಚೆ ಮಾಡಿ ಇದಕ್ಕೆ ಒಂದು ತಿದ್ದುಪಡಿ ತಂದರೆ ಇದಕ್ಕೆ ಶಕ್ತಿ ಬರುತ್ತದೆ ಎಂದು ಹೇಳಿ ತಿದ್ದುಪಡಿಯನ್ನು ತಂದುಕೊಟ್ಟರೆ ಸಾರಾಸಗಟಾಗಿ ಎದ್ದು ನಿಂತುಕೊಂಡು ಈ ತಿದ್ದುಪಡಿಯನ್ನು ತಳ್ಳಿಹಾಕಿದ್ದೇವೆ, ಈ ತಿದ್ದುಪಡಿಗೆ ಒಪ್ಪುವುದಿಲ್ಲ ಎಂದು ಹೇಳಿದರೆ ನಮಗೆ ಎಷ್ಟು ನೋವಾಗುತ್ತದೆ. ಈ ತಿದ್ದುಪಡಿಯನ್ನು ತರಲು ಎಷ್ಟು ಜನ ಕಷ್ಟಪಟ್ಟಿದ್ದಾರೆ ಗೊತ್ತೇ? ನನಗೆ ಚಿದಾನಂದಮೂರ್ತಿಯವರು ದಿನಕ್ಕೆ ನಾಲ್ಕು ಸಾರಿ ಫೋನ್ ಮಾಡುತ್ತಾರೆ.

ತಿದ್ದುಪಡಿ ಏನು ಮಾಡಿದಿರಿ ಎಂದು ಕೇಳುತ್ತಾರೆ.

ಇದು ಚಿದಾನಂದ ಮೂರ್ತಿಯವರ ಕಳಕಳಿ. ನಾರಾಯಣ್ ಅವರ ಕಳಕಳಿ. ನಮ್ಮ ಕೃಷ್ಣೇಗೌಡರ ಕಳಕಳಿ. ಈ ಕಳಕಳಿ ಅವರಿಗೆ ಎಷ್ಟು ಇದೆ ಎನ್ನುವುದಕ್ಕೆ, ಎಲ್ಲಿ ಯಾವುದು ತಂದಿರಿ, ಏನು ಮಾಡಿದಿರಿ ಎಂದು ಕೇಳುತ್ತಾರೆ. ನಮ್ಮ ಸಿ.ಹೆಚ್. ಹನುಮಂತರಾಯ ಅವರು, ಅವರು ಒಬ್ಬ ವಕೀಲರು. ಅವರೂ ಕೂಡ ಇದಕ್ಕೆ ಬಹಳ ಅಪಾರವಾದ ಕೆಲಸ ಮಾಡಿರತಕ್ಕವರು. ಇದನ್ನು ತಂದರೆ ಸಾರಾಸಗಟಾಗಿ ತಳ್ಳಿದರು. ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಸರೋಜಿನಿ ಮಹಿಷಿಯವರ ವರದಿಯನ್ನು ಜಾರಿಗೆ ತರುವುದಕ್ಕೆ ಒಂದು ಅಕ್ಷರವನ್ನೂ ಸಹ ಬಿಡದೆ ಜಾರಿಗೆ ತರುವುದಕ್ಕೆ ನಿಮಗೆ ಆಗಿರತಕ್ಕ ಕಷ್ಟಗಳು ಏನು? ಪ್ರಾಮಾಣಿಕವಾಗಿ ನೀವು ಹೇಳಬೇಕು. ಚುನಾವಣೆಯ ದೃಷ್ಟಿಯಿಂದ, ಕನ್ನಡಿಗರನ್ನು ಓಲೈಸತಕ್ಕ ದೃಷ್ಟಿಯಿಂದ ಸತ್ಯಕ್ಕೆ ದೂರವಾದಂಥ ಹೇಳಿಕೆಗಳನ್ನು ನೀವು ಇಲ್ಲಿ ಕೊಡಬೇಡಿ.

ತಮ್ಮ ಕೈಲಿ ಆಗುತ್ತದೆ ಎಂದರೆ ಸರೋಜಿನಿ ಮಹಿಷಿ ಅವರ ವರದಿಯನ್ನು ಜಾರಿಗೆ ತರುತ್ತೇವೆ ಎಂದು ಹೇಳಿ. ನಿಮ್ಮ ಕೈಲಿ ಆಗುವುದಿಲ್ಲ ಎಂದರೆ, ಆಗುವುದಿಲ್ಲ ಎಂದು ತಾವು ಸ್ಪಷ್ಟವಾಗಿ ಹೇಳಿ. ವರದಿಯನ್ನು ತರುವುದಕ್ಕೆ ಮಹಿಷಿಯವರನ್ನು ನೇಮಕ ಮಾಡಿ, ಸಮಿತಿ ವ್ಯವಸ್ಥೆ ಮಾಡಿ ಅವರು ಇಡೀ ನಾಡಿನ ಉದ್ದಗಲಕ್ಕೂ ತಿರುಗಿ ಒಳ್ಳೆಯ ಒಂದು ವರದಿಯನ್ನು ಕೊಟ್ಟು, ಆ ವರದಿಯನ್ನು ತಾವು ಜಾರಿಗೆ ತರಲಿಲ್ಲ ಎಂದರೆ ಏಕೆ ಇಂತಹ ಸಮಿತಿಗಳನ್ನು ತಾವು ಮಾಡಬೇಕು? ವರದಿ ಕೊಡಲು ಏಕೆ ಇಂತಹವರನ್ನು ಅಧ್ಯಕ್ಷರನ್ನಾಗಿ ಮಾಡಬೇಕು? ಯಾರು ಇನ್ನು ಮುಂದೆ ವರದಿಯನ್ನು ಕೊಡಲು ಅಧ್ಯಕ್ಷರಾಗಿ ಬರುತ್ತಾರೆ? ಯಾರು ವರದಿ ಕೊಟ್ಟರೋ ಅದಕ್ಕೆ ಗೌರವವನ್ನು ಕೊಡದೇ, ಆ ವರದಿಯನ್ನು ಸ್ಪಷ್ಟವಾಗಿ ತಾವು ಸ್ವೀಕಾರ ಮಾಡಿ ಅದನ್ನು ಕಾರ್ಯಗತ ಮಾಡಲಿಲ್ಲ ಎಂದ ಮೇಲೆ ಏತಕ್ಕೆ ವರದಿ ಬೇಕು ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ತಾವು ಉತ್ತರ ಕೊಡುವಾಗ, ಸರೋಜಿನಿ ಮಹಿಷಿ ವರದಿ ಬಗ್ಗೆ ನಿಮ್ಮ ಸರ್ಕಾರ ಏನು ಕ್ರಮ ಕೈಗೊಂಡಿದೆ ಎನ್ನುವ ಬಗ್ಗೆ

(ಮಾನ್ಯ ಅಧ್ಯಕ್ಷರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ಸ್ಪಷ್ಟ ಉತ್ತರವನ್ನು ಕೊಡಬೇಕು. ಮಾನ್ಯ ಅಧ್ಯಕ್ಷರೇ, ಮಾನ್ಯ ಬೈರೇಗೌಡರು ಪ್ರಸ್ತಾಪ ಮಾಡಿದರು. ಕರ್ನಾಟಕದಲ್ಲಿ ವಲಸೆ ಬಗ್ಗೆ 1956ರಲ್ಲಿ ಕರ್ನಾಟಕದ ಏಕೀಕರಣ ಆದನಂತರ ಅಲ್ಲಿಂದ ಇಲ್ಲಿಯವರೆಗೆ ಕರ್ನಾಟಕಕ್ಕೆ ಬೇರೆಬೇರೆ ರಾಜ್ಯಗಳಿಂದ ಬಂದಿರತಕ್ಕ ಜನ ಕನಿಷ್ಠ ಒಂದು ಕೋಟಿ. ನಾವು 3 ಕೋಟಿ ಕನ್ನಡಿಗರು ಎಂದು ಹೇಳುತ್ತಿದ್ದೆವು. ಈಗ ನಾವು 4 ಕೋಟಿ ಎಂದು ಹೇಳುತ್ತೇವೆ. 4 ಕೋಟಿಯೂ ಕನ್ನಡಿಗರಲ್ಲ. 1 ಕೋಟಿ ಜನ ಹೊರಗಡೆಯಿಂದ ಬಂದಿದ್ದಾರೆ. 60 ಲಕ್ಷ ಜನ ಮತದಾರರು ಇದ್ದಾರೆ. ಈ ವಲಸೆಯನ್ನು ತಡೆಯದಿದ್ದರೆ ಭಾಷೆಯ ಮೇಲೆ ಪರಿಣಾಮ, ಕನ್ನಡಿಗರ ಮೇಲೆ ಪರಿಣಾಮ ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಎಲ್ಲಾ ದೃಷ್ಟಿಯಿಂದಲೂ ನಮ್ಮ ಮೇಲೆ ಕೆಟ್ಟ ಪರಿಣಾಮ ಈ ವಲಸೆಯಿಂದ ಬರುತ್ತಾ ಇದೆ. ವಲಸೆಯನ್ನು ತಡೆಯುವ ಬಗ್ಗೆ ಎಲ್ಲಾ ಮಂತ್ರಿಗಳು ಒಂದಲ್ಲಾ ಒಂದು ದೃಷ್ಟಿಯಲ್ಲಿ ಮಾತನ್ನೇ ಆಡುತ್ತಿದ್ದಾರೆ. ತಡೆಯುವ ಬಗ್ಗೆ ಒಂದು ಸ್ಪಷ್ಟ ಕಾರ್ಯಕ್ರಮ ಇಲ್ಲ.

ಕರ್ನಾಟಕಕ್ಕೆ ಬೇರೆ ರಾಜ್ಯದವರು ಬಂದಿರತಕ್ಕ ವಲಸೆಯ ಲೆಕ್ಕವನ್ನು ಹಾಕಿದಾಗ ಕನ್ನಡಿಗರು ಬೇರೆ ರಾಜ್ಯಗಳಲ್ಲಿ ನೋಡಿದಾಗ ಕೇವಲ ಶೇಕಡ 1 ಭಾಗ ಇಲ್ಲಿನ ನಮ್ಮ ಜನ ಅಲ್ಲಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ. ಆದ್ದರಿಂದ ವಲಸೆಯನ್ನು

ತಡೆಯದೇ ಇದ್ದರೆ ಕರ್ನಾಟಕವೂ ಕೂಡ ಮತ್ತೊಂದು ಅಸ್ಸಾಮ್ ಆದೀತು. ಅಸ್ಸಾಮ್ ಪರಿಸ್ಥಿತಿ ಕರ್ನಾಟಕದಲ್ಲೂ ನಿರ್ಮಾಣ ಆಗುತ್ತದೆ. ಕನ್ನಡಿಗರಿಗೆ ಉದ್ಯೋಗ ಇಲ್ಲದೇ ಬೀದಿಯಲ್ಲಿ ಅಲಿಯುವ ಪರಿಸ್ಥಿತಿ ಬಂದಾಗ ಕರ್ನಾಟಕದಲ್ಲಿ ಬೇರೆಯವರೇ ಕರ್ನಾಟಕದ ಸಂಪತ್ತನ್ನು ಕಬಳಿಸತಕ್ಕ ಪರಿಸ್ಥಿತಿ ಬಂದಾಗ ನೆಲ, ಜಲ ಪ್ರತಿಯೊಂದನ್ನೂ ಬೇರೆಯವರೇ ಇಲ್ಲಿ ಬಳಸಿಕೊಳ್ಳತಕ್ಕ ಪರಿಸ್ಥಿತಿ ಬಂದಾಗ ಕನ್ನಡಿಗರು ಅಲ್ಪಸಂಖ್ಯಾತರಾಗಿ, ಬೇರೆಯವರು ಬಹುಸಂಖ್ಯಾತರಾಗಿ ಕನ್ನಡಿಗರನ್ನು ತುಳಿಯತಕ್ಕ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ಆದ್ದರಿಂದ ಸರ್ಕಾರ ವಲಸೆಯನ್ನು ತಡೆಯುವ ಬಗ್ಗೆ ಒಂದು ಸ್ಪಷ್ಟ ನಿರ್ದೇಶನ ನೀಡಬೇಕೆಂದು ನಾವು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ. ಒಂದು ನಿದರ್ಶನ ನಿಮಗೆ ಕೊಡುತ್ತೇನೆ. ವಲಸೆ ಒಂದು ಕಡೆಯಾದರೆ, ನಮ್ಮ ಭಾಷೆಯ ಚಿತ್ರಗಳು. ಇವತ್ತು ಕೇರಳದಲ್ಲಿ ಆಂಧ್ರದಲ್ಲಿ ತಮಿಳುನಾಡಿನಲ್ಲಿ ಕನ್ನಡ ಚಿತ್ರಗಳು ಪ್ರದರ್ಶನವಾಗುವುದಿಲ್ಲ. ಆದರೆ ಕರ್ನಾಟಕದಲ್ಲಿ ತಮಿಳು, ತೆಲುಗು, ಮಳಿಯಾಳಂ, ಗುಜರಾತಿ, ಹಿಂದಿ ಯಾವುದು ಕೇಳುತ್ತೀರಿ ಅವೆಲ್ಲವೂ ಕರ್ನಾಟಕದಲ್ಲಿ ನಡೆಯುತ್ತವೆ. ಇದಕ್ಕೆ ಸರ್ಕಾರ ಏನಾದರೂ ಒಂದು ಲಗಾಮು ಹಾಕಲಿಲ್ಲ ಎಂದರೆ ನಾಳೆ ಪರಿಸ್ಥಿತಿ ಏನು? ತಾವು ಒಂದು ಕಾನೂನು ಮಾಡಿ.

ನಿಮ್ಮ ರಾಜ್ಯದಲ್ಲಿ ಕನ್ನಡ ಭಾಷೆಯ ಚಿತ್ರಗಳು ಪ್ರದರ್ಶನ ಆಗದೇ ಇದ್ದರೆ ಕರ್ನಾಟಕದಲ್ಲಿ ನಿಮ್ಮ ರಾಜ್ಯದ ಚಿತ್ರಗಳನ್ನು ಪ್ರದರ್ಶನ ಮಾಡುವುದಕ್ಕೆ ಆಗುವುದಿಲ್ಲ ಎನ್ನತಕ್ಕ ಒಂದು ಕಾನೂನನ್ನು ಸರ್ಕಾರ ತಂದರೆ ಆಗ ಅವರು ಕಡ್ಡಾಯವಾಗಿ ಅವರ ರಾಜ್ಯಗಳಲ್ಲಿ ಕನ್ನಡ ಚಿತ್ರಗಳನ್ನು ಪ್ರದರ್ಶಿಸುವುದಕ್ಕೆ ವ್ಯವಸ್ಥೆ ಮಾಡುತ್ತಾರೆ. ಅದನ್ನು ಬಿಟ್ಟರೆ, ನಾವು ಎಲ್ಲದಕ್ಕೂ ತಯಾರು ಎಲ್ಲವನ್ನೂ ಮಾಡುತ್ತೇವೆ ಎನ್ನತಕ್ಕ ಮಾತು ಸರಿಯಲ್ಲ. ಹೊರನಾಡ ಕನ್ನಡಿಗರ ಬಗ್ಗೆ ಹೇಳುತ್ತೇನೆ. ಹೊರನಾಡಿನಲ್ಲಿ ಉಳಿದಿರತಕ್ಕ ಕನ್ನಡ ಪ್ರದೇಶಗಳು. ಕಾಸರಗೋಡು, ಅಕ್ಕಲಕೋಟೆ, ಸೊಲ್ಲಾಪುರ, ತಾಳವಾಡಿ, ಹೊಸೂರು - ಈ ರೀತಿ ತೆಗೆದುಕೊಂಡು ಹೋದರೆ ಹೊರಗಡೆ ಕನ್ನಡಿಗರ ಪರಿಸ್ಥಿತಿ ಏನಾಗಿದೆ? ಕನ್ನಡ ಶಾಲೆಗಳನ್ನು ಮುಚ್ಚಿದ್ದಾರೆ. ಕನ್ನಡಿಗರಿಗೆ ಉದ್ಯೋಗವಿಲ್ಲ. ಅಲ್ಲಿನ ಸರ್ಕಾರದ್ದೂ ರಕ್ಷಣೆ ಇಲ್ಲ. ನಮ್ಮ ಸರ್ಕಾರದ್ದೂ ರಕ್ಷಣೆ ಇಲ್ಲ.

ಎರಡೂ ಕಡೆ ಸಿಕ್ಕಿ ಎರಡು ಕೋನಗಳ ಮಧ್ಯೆ ಸಿಕ್ಕಿ ತೊಂದರೆಗೆ ಸಿಕ್ಕಿರತಕ್ಕ ಜನ ಇವರು ಆಗಿದ್ದಾರೆ. ಅವರಲ್ಲಿ ಧ್ವನಿ ಇಲ್ಲ, ಅವರನ್ನು ಯಾರೂ ಕೇಳುವವರು ಇಲ್ಲ. ಈ ಪರಿಸ್ಥಿತಿ ಇರುವಾಗ ಹೊರನಾಡ ಕನ್ನಡಿಗರ ರಕ್ಷಣೆಯ ಬಗ್ಗೆ ಸಾಂಸ್ಕೃತಿಕವಾಗಿ ನಮ್ಮ ರಾಜ್ಯದ ಮೂಲಕ ಹೊರನಾಡ ಕನ್ನಡಿಗರಿಗೆ ಏನು ಮಾಡಬೇಕು ಎನ್ನತಕ್ಕದ್ದನ್ನು ನಾನು ತಮ್ಮ ಮೂಲಕ ಅವರಿಗೆ ಹೇಳುತ್ತಿದ್ದೇನೆ. ಅಂಡಮಾನ್‌ನಲ್ಲಿ ಕನ್ನಡ ಸಂಘ ಇದೆ ಅಧ್ಯಕ್ಷರೇ. ನಮ್ಮಲ್ಲಿ ಅನೇಕ ಜನರು ಅಲ್ಲಿಗೆ ಹೋಗಿದ್ದರು. ಅಲ್ಲಿ ಮನೆ ಮಳೆಯಲ್ಲಿ ಸುರಿಯುತ್ತದೆ. ಅವರು ಕೈಮುಗಿದು ಸಾಂಸ್ಕೃತಿಕವಾಗಿ ಹಣ ಕೊಡಿ ಎಂದು ಹೋದ ನಿಯೋಗಗಳಿಗೆಲ್ಲಾ ಕೇಳುತ್ತಿದ್ದಾರೆ.

ಶ್ರೀ ಹೆಚ್.ಎಂ. ರೇವಣ್ಣ : ಮದ್ರಾಸ್‌ಸಂಘದ ಬಗ್ಗೆ ಹೇಳುತ್ತಿದ್ದೀರಾ?

ಶ್ರೀ ವಾಟಾಳ್ ನಾಗರಾಜ್ : ಇದು ಅಂಡಮಾನ್‌ನಲ್ಲಿ ಇರುವ ಸಂಘ. ಮದ್ರಾಸ್‌ನಲ್ಲಿ ಇರುವ ಸಂಘ, ಅವರು ಬೇಕು ಎಂದು ಯಾವ ಸರ್ಕಾರ ಬಂದರೂ ನಿಮಗೆ ಹೊರ ಹಾಕಿ ಇಬ್ಬರು ಮಂತ್ರಿಗಳನ್ನು ಕರೆದುಕೊಂಡು ಹೋಗುತ್ತಾರೆ. ನಿಮ್ಮ ಹತ್ತಿರ ಹಣ ತೆಗೆದುಕೊಳ್ಳುತ್ತಿದ್ದಾರೆ. ಸಂತೋಷ. ಅದರ ಬಗ್ಗೆ ನಾನು ಮಾತನಾಡುತ್ತಿಲ್ಲ. ನಾನು ಹೇಳುವುದು, ಹೊರನಾಡು ಎಂದರೆ ಈ ಗಡಿ ಪ್ರದೇಶದಲ್ಲಿ ಇರತಕ್ಕಂತಹ ಈ ಪ್ರದೇಶಗಳು ಎಂದರೆ ತಮಿಳುನಾಡಿನಲ್ಲಿ ಡೆಂಕಣಿಕೋಟೆ ಇದೆ, ಗೋಪಿಚೆಟ್ಟಿ

ಪ್ರದೇಶದಲ್ಲಿರತಕ್ಕ ಕನ್ನಡಿಗರಿಗೆ, ಕನ್ನಡ ಸಂಘಗಳಿಗೆ ನಾವು ಸಾಂಸ್ಕೃತಿಕವಾಗಿ ಹಣವನ್ನು ಸಹಾಯವನ್ನು ನೀಡತಕ್ಕ ಪರಿಸ್ಥಿತಿ. ಕಾಸರಗೋಡಿನಿಂದ ಕಯ್ಯಾರ ಕಿಞ್ಞಣ್ಣರೈ ಎಂತಹ ದೊಡ್ಡ ಧೀಮಂತ ಶಕ್ತಿ, ವ್ಯಕ್ತಿ, ಕನ್ನಡಕ್ಕೋಸ್ಕರ ದುಡಿದಂತಹ ಒಬ್ಬ ಮಹಾ ಶಕ್ತಿ. ಅವರು ಕರ್ನಾಟಕಕ್ಕೆ ಬರಬೇಕಾದರೆ ನಾವು ಏನೂ ಅವರಿಗೆ ಬಸ್ಸಿನ ವ್ಯವಸ್ಥೆಯೂ ಮಾಡಿಲ್ಲ, ರೈಲಿನ ವ್ಯವಸ್ಥೆಯನ್ನೂ ಮಾಡಿಲ್ಲ. ಅವರಾಗಿದ್ದು ಅವರು ಬರುತ್ತಾರೆ. ಕಲ್ಯಾಣ ಶೆಟ್ಟಿ ಎಂತಹ ಒಬ್ಬ ಧೀಮಂತ. ಸಣ್ಣ ಹುಡುಗನಿಂದ ಇಲ್ಲಿಯವರೆಗೂ ಸೊಲ್ಲಾಪುರದ ಬಗ್ಗೆ ಅವರು ಕೊಟ್ಟಿರತಕ್ಕ ಮನವಿಗಳು ಒಂದು ಸಾವಿರ ಲಾರಿ ಲೋಡು ತುಂಬಾ ಆಗಬಹುದು. ಅವರು ಕೊಟ್ಟಿರತಕ್ಕ ಮನವಿಗಳು, ಸೊಲ್ಲಾಪುರದ ಕನ್ನಡಿಗರ ಬಗ್ಗೆ, ಅವರು ಆಗಿರತಕ್ಕ ಪರಿಸ್ಥಿತಿಗಳ ಬಗ್ಗೆ.

ಬಂದವರಿಗೆಲ್ಲಾ ಅರ್ಜಿಗಳನ್ನು ಕೊಟ್ಟು ಅವರ ವಯಸ್ಸು ಇವತ್ತಿಗೆ 75-80 ಆಗುತ್ತಿದೆ. ಅವರ ಪರಿಸ್ಥಿತಿಯೇನು? ಹೊರನಾಡು ಕನ್ನಡಿಗರ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿದೆ, ಚಿಂತಾಜನಕವಾಗಿದೆ. ಆ ದೃಷ್ಟಿಯಿಂದ ಹೊರನಾಡ ಕನ್ನಡಿಗರ ಅಭಿವೃದ್ಧಿ ಬಗ್ಗೆ, ಅವರ ಬೆಳವಣಿಗೆ ಬಗ್ಗೆ ಸರ್ಕಾರ ಗಮನಹರಿಸಬೇಕು. ಈ ಗಮನ ಮಾನ್ಯ ಮುಖ್ಯಮಂತ್ರಿಗಳು ಸಂಸದೀಯ ಸಚಿವರಾಗಿದ್ದಾಗ ಕನ್ನಡದ ಬಗ್ಗೆ ಅವರಿಗಿದ್ದ ಕಳಕಳಿ ವಿಚಾರ ಈಗ ಸ್ವಲ್ಪ ಕಡಿಮೆಯಾಗಿದೆ. ಅವರಿಗೆ ಕೆಲಸದ ಒತ್ತಡ ನೂರೆಂಟು. ಮುಖ್ಯ ಮಂತ್ರಿಗಳಾದ ಮೇಲೆ ಬದಲಾದರು. ಇಲ್ಲಿ ಕುಳಿತಿದ್ದರು. ನನಗಿಂತ ಸ್ವಲ್ಪ ಜೋರಾಗಿ ಕನ್ನಡ ಎಂದು ಕೂಗುತ್ತಿದ್ದೀರಿ. ಈಗ ಅನುಮಾನಗಳು ಬಂದುಬಿಟ್ಟಿವೆ, ನನಗೆ ನಂಬಿಕೆ ಬರುವಂತೆ, ಈ ವಿಚಾರದಲ್ಲಿ ತಮಗೆ ಗೊತ್ತಿದೆ, ನಾನು ಹೃದಯಬಿಚ್ಚಿ ಬಹಳ ಪ್ರಾಮಾಣಿಕವಾಗಿ ಮಾತನಾಡತಕ್ಕಂತಹ ಮನುಷ್ಯ ಆದ್ದರಿಂದ ಕನ್ನಡಿಗರ ಬಗ್ಗೆ ಹೊರನಾಡ ಕನ್ನಡಿಗರ ಬಗ್ಗೆ ನಿಮ್ಮ ಸ್ಪಷ್ಟ ನಿಲುವು ನಿರ್ಧಾರವಾಗಬೇಕು. ಒಳಗೇ ಇರತಕ್ಕಂತಹ ಗಡಿನಾಡು ಪ್ರದೇಶಗಳು, ಅದಕ್ಕಾಗಿ ನಾವು ಗಡಿನಾಡು ಅಭಿವೃದ್ಧಿ ಎಂದು ಹೇಳಿಬಿಟ್ಟಿದ್ದೇವೆ. ಹಾಗೆಂದರೇನು? ಬರೀ ರಸ್ತೆ ಕೂಡುವುದಲ್ಲ, ನೀರು ಕೊಡುವುದಲ್ಲ.

ಆ ಪ್ರದೇಶದ ಅಭಿವೃದ್ಧಿ ಜೊತೆಗೆ ಕನ್ನಡ ಶಾಲೆಗಳು, ಕನ್ನಡ ಸಂಘಗಳು, ಕಲಾಸಂಘಗಳು ಕನ್ನಡ ಭಾಷೆ ಬೆಳೆಸತಕ್ಕಂತಹ ವ್ಯವಸ್ಥೆಯನ್ನು 57 ತಾಲ್ಲೂಕಲ್ಲಿ ಮಾಡಬೇಕು. ಬರೀ ನಾವು ಗಡಿನಾಡಿಗೆ ಸೇರಿದ್ದೇವೆಂದು ಅದಕ್ಕೆ ರಸ್ತೆ ದುಡ್ಡು ಕೊಟ್ಟಿದ್ದೇವೆ, ಎಂದರೆ, ಇದಲ್ಲ, ಇದರ ಜೊತೆಗೆ ಕನ್ನಡದ ಬೆಳವಣಿಗೆಗೆ ಎಷ್ಟು ಹಣವನ್ನು ನಾವು ಮೀಸಲಿಡಬೇಕೆಂಬುದು ಸ್ಪಷ್ಟ. ಆಮೇಲೆ ಅಧ್ಯಕ್ಷರೇ, ದೆಹಲಿಯಲ್ಲಿರುವ ಕರ್ನಾಟಕ ಭವನ ನಾವು ದೆಹಲಿಗೆ ಹೋಗುತ್ತೇವೆ ಅದೊಂದು ಕರ್ಮಕಾಂಡ. ಅದೇನು ಕರ್ನಾಟಕ ಭವನವೇ? ಉತ್ತರಪ್ರದೇಶ ಭವನವೇ? ಅದ್ಯಾವ ಭವನ?

ಶ್ರೀ ಆರ್.ಎನ್. ನಾಯಕ್ : ಡಿಮ್ಯಾಂಡ್ ಬಂದಾಗ ಚರ್ಚೆ ಮಾಡಬಹುದು. ಇದು ಬಿಲ್;

ಶ್ರೀ ವಾಟಾಳ್ ನಾಗರಾಜ್ : ಈಗ ಬಾಣ ಬಿಡುತ್ತಿದ್ದೇವೆ ನಾವು.

ಶ್ರೀ ಆರ್.ಎನ್. ನಾಯಕ್ : ನೀವು ಯಾವ ರೀತಿ ಬಾಣ ಬಿಲ್ಲು ಉಪಯೋಗಿಸುವುದಕ್ಕೆ ಹೊರಟಿದ್ದೀರಿ ಎಂದರೆ ಆ ಬಿಲ್ಲಿಗೆ ಒಂದು ದಾರ ಇರುತ್ತದೆ, ಎಳೆದು ಹಿಡಿಯುವುದಕ್ಕೆ ಆ ದಾರ ಇಲ್ಲದೇ ನೀವು ಬಾಣ ಹೊಡೆಯುತ್ತಿದ್ದೀರಿ. ಅದು ಬೇರೆ. ನೀವು ಕೇಳುವುದಕ್ಕೆಲ್ಲಾ ಡಿಮ್ಯಾಂಡ್‌ನಲ್ಲಿ ಉತ್ತರ ಕೊಡಬಹುದು. ಈಗ ಬಿಲ್ಲಿನ ಮೇಲೆ ತಿದ್ದುಪಡಿ ಏನು ತಂದಿದ್ದೀರಿ ಅದರ ಮೇಲೆ ಮಾತನಾಡಿದರೆ ನಾನೂ ಎನ್‌ಲೈಟ್ ಆಗಿ ಗೊತ್ತಾಗುತ್ತದೆ. ನಾನೂ ನಿಮ್ಮ ಪರವಾಗಿ ಆದರೂ ಆಗಿಬಿಡಬಹುದು. ಆ ರೀತಿ ಪ್ರಯತ್ನ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್ : ಇದುವರೆಗೂ ನಮ್ಮ ಪರ ಆಗಿಲ್ಲ ನೀವು. ನನಗೆ ಗೊತ್ತು ನೀವು ಆಗುವುದಿಲ್ಲ ಎಂದು ಅಂದುಕೊಂಡು ಬಿಟ್ಟಿದ್ದೇನೆ ನಾನು.

ನನ್ನ ಪರ ಮುಖ್ಯಮಂತ್ರಿಗಳು ಬರುತ್ತಾರೆ ಎಂದು ಅಂದುಕೊಂಡಿದ್ದೇನೆ. ಅವರೂ ಬರಲಿಲ್ಲ ಎಂದರೆ ಏನೂ ಮಾಡುವುದಕ್ಕಾಗುವುದಿಲ್ಲ. ಅಧ್ಯಕ್ಷರೇ, ಕರ್ನಾಟಕ ಭವನದ ಪರಿಸ್ಥಿತಿ ತಮಗೆ ಗೊತ್ತಿದೆ. ತಾವು ಹೋಗಿದ್ದೀರಿ. ನಾನೂ ಹೋಗಿ ಅನುಭವಿಸಿದ್ದೇನೆ. ಅಲ್ಲಿ ಕನ್ನಡ ಮಾತನಾಡುವ ಕೆಲಸಗಾರರು ಬಹಳ ಕಮ್ಮಿ. ಕನ್ನಡ ಮಾತನಾಡುವ ಕೆಲಸಗಾರರನ್ನು ನೀವು ಇಲ್ಲಿಂದ ಕಳುಹಿಸಬೇಕಾದರೆ ಅವರಿಗೆ ವಿಶೇಷವಾದ ಆದ್ಯತೆ ಕೊಡಬೇಕು. ಆಗ ಅಲ್ಲಿ ಕನ್ನಡದ ವಾತಾವರಣ ನಿರ್ಮಾಣವಾಗುತ್ತದೆ. ಈಗ ನೀವು ಕರ್ನಾಟಕ ಭವನ, ಎರಡನೆಯದು ಶರಾವತಿ ಭವನ, ಮೂರನೆಯದು ಇನ್ನೊಂದು ಕಟ್ಟಿಸುವುದಕ್ಕೆ ಹೊರಟಿದ್ದೀರಿ. ನನಗೇನೋ ಅಲ್ಲಿ ಕನ್ನಡದ ವಾತಾವರಣ ಸಂಪೂರ್ಣವಾಗಿ ಇಲ್ಲ. ಯಾವಾಗಲೋ ಬಂದಾಗ ಸಾರು ಅನ್ನ ಅದು ಇದು ಕೊಟ್ಟು ಬಿಡುತ್ತಾರೆ, ತಿಂದುಕೊಳ್ಳೋಣ. ಇಷ್ಟು ಬಿಟ್ಟರೆ ಇನ್ನೇನು ಅಲ್ಲ ಪ್ರಾಮಾಣಿಕ ಕನ್ನಡ ವಾತಾವರಣ ಇಲ್ಲ. ಅನೇಕ ಸಾರಿ ಹೋಗುತ್ತಿದ್ದೇವೆ, ಅಲ್ಲಿ ಕನ್ನಡದ ವಾತಾವರಣ ನಿರ್ಮಾಣವಾಗಬೇಕು. ಮತ್ತು ಕನ್ನಡ ಪತ್ರಿಕೆಗಳ ಬಗ್ಗೆ ಒಂದು ಸಲಹೆ ಕೊಡುತ್ತೇನೆ. ಎಲ್ಲಾ ಕನ್ನಡ ಪತ್ರಿಕೆಗಳ 50 ಪ್ರತಿ ತೆಗೆದುಕೊಂಡು ವಾರ್ತಾ ಇಲಾಖೆ ಮೂಲಕ ನೇರವಾಗಿ ಬೆಳಿಗ್ಗೆ 11 ಗಂಟೆಗೆ ವಿಮಾನದ ಮೂಲಕ ಕಳುಹಿಸಿ ಅವು ತಲುಪುತ್ತವೆ. ಪ್ರಜಾವಾಣಿ ಕನ್ನಡಪ್ರಭ ಉದಯವಾಣಿ ಹೊಸದಿಗಂತ ಯಾವ ಪತ್ರಿಕೆ ಹುಡುಕಿದರೂ ಸಿಗುವುದಿಲ್ಲ.

ರಾತ್ರಿ 9 ಗಂಟೆಗೆ ಒಂದು ಪತ್ರಿಕೆ ಬರುತ್ತದೆ, ಮೊದಲನೇ ಪುಟ ಒಬ್ಬರು ಹಿಡಿದುಕೊಂಡಿರುತ್ತಾರೆ. ಇನ್ನೊಂದು ಪುಟ ಇನ್ನೊಬ್ಬರು ಹಿಡಿದುಕೊಂಡಿರುತ್ತಾರೆ. ಈ ಪರಿಸ್ಥಿತಿ ನಿರ್ಮಾಣವಾಗಿದೆ. ದಯಮಾಡಿ ಇವತ್ತೇ ಆ ಕಾರ್ಯಕ್ರಮ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಮತ್ತು ಕರ್ನಾಟಕ ಸಂಪೂರ್ಣ ಪ್ರಾತಿನಿಧ್ಯವುಳ್ಳ ಕನ್ನಡಭವನವನ್ನು ನಿರ್ಮಾಣ ಮಾಡಿ ನಿಮ್ಮ ಕಾಲದಲ್ಲಿ ಈ ಕನ್ನಡ ಭವನಕ್ಕೆ ಎಲ್ಲವನ್ನೂ ಸೇರಿಸಿ ಕನ್ನಡ ಸಂಸ್ಕೃತಿ ಇಲಾಖೆ, ವಾರ್ತಾ ಪ್ರವಾಸೋದ್ಯಮ ಇಲಾಖೆ ಎಲ್ಲವನ್ನೂ ಸೇರಿಸಿ ದೊಡ್ಡ ಎತ್ತರದಲ್ಲಿ ನಮ್ಮ ಕನ್ನಡದ ಭವನ ದೆಹಲಿಯಲ್ಲಿದೆ ಎಂದು, 10-15 ಕೋಟಿ ಆಗಲಿ, ಅದನ್ನು ಮಾಡಿ ಆ ಕೀರ್ತಿ ನಿಮಗೂ ಸಲ್ಲುತ್ತದೆ. ಅದರ ಶಂಕುಸ್ಥಾಪನೆ ಮಾಡಿ, ನಾವೆಲ್ಲರೂ ಬರುತ್ತೇವೆ. ಚುನಾವಣೆಗೆ ಮುಂಚಿತವಾಗಿ, ಈ ಕೆಲಸ ತಾವು ಮಾಡಬೇಕೆಂದು ಕಳಕಳಿಯಿಂದ ತಮ್ಮಲ್ಲಿ ಹೇಳಿ ಇನ್ನು ಅಧ್ಯಕ್ಷರೇ, ಇದರ ಬಗ್ಗೆ ಸುದೀರ್ಘವಾಗಿ ನಾನು ಮಾತನಾಡಿದ್ದೇನೆ, ಈ ವಿಧೇಯಕವನ್ನು ಯಾವ ಪ್ರಮಾಣದಲ್ಲಿ ನಾನು ಸ್ವಾಗತ ಮಾಡಬೇಕಾಗಿತ್ತು ಆ ಪ್ರಮಾಣದಲ್ಲಿ ಮಾಡಲು ನಮಗೆ ದಾರಿ ಸಿಗುತ್ತಿಲ್ಲ. ನಾವು ತಂದಿರುವ ತಿದ್ದುಪಡಿಗಳನ್ನು ಮುಖ್ಯಮಂತ್ರಿಗಳಿಗೆ ಕಳುಹಿಸುತ್ತೇವೆ.

ತಾವು ಇದೆಲ್ಲವನ್ನು ನೋಡಿ. ಇವನ್ನು ನಾನೂ ಬೈರೇಗೌಡರು ತಯಾರು ಮಾಡಿದ್ದಲ್ಲ. ಇದನ್ನು ಎಲ್ಲಾ ಸಾಹಿತಿಗಳು ಕುಳಿತು ತಯಾರು ಮಾಡಿದ್ದು. ಈ ವಿಧೇಯಕಕ್ಕೆ ತಿದ್ದುಪಡಿ ಬಂದರೆ ಇದಕ್ಕೆ ಶಕ್ತಿ ಇರುತ್ತದೆಂದು ಶಾಸಕರಾಗಿರುವ ನಮ್ಮ ಮೂಲಕ ಅವರ ಧ್ವನಿಯನ್ನು ಸೇರಿಸಿ ಎಂಬ ಮಾತನ್ನು ಹೇಳಿ ನಮ್ಮನ್ನು ಕಳುಹಿಸಿದ್ದಾರೆ. ಈ ವಿಧೇಯಕವನ್ನು ಒಪ್ಪುವಾಗ ತಿದ್ದುಪಡಿಗಳನ್ನು ಒಪ್ಪಿಕೊಳ್ಳಿ. ಇದರಲ್ಲೇನೂ ದೊಡ್ಡ ವಿಚಾರವಿಲ್ಲ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಿರುವಾಗ ಇದಕ್ಕೆ ಹೆಚ್ಚು ಶಕ್ತಿ ಬರುವ ದೃಷ್ಟಿಯಿಂದ ಮಾಡಬೇಕು. ಒಂದು ಕಾಲದಲ್ಲಿ ಶಕ್ತಿಯೇ ಇರಲಿಲ್ಲ. ಆಗ ಕೌಜಲಗಿಯವರು ಹೇಳಿದಂತೆ ಪಾಟೀಲಪುಟ್ಟಪ್ಪ ಪ್ರಥಮ ಅಧ್ಯಕ್ಷರಾದಾಗ ಪ್ರಾಮಾಣಿಕವಾಗಿ ಕೆಲಸ ಮಾಡಿ ಪ್ರತಿ ಇಲಾಖೆಗೆ ಹೋಗಿ ಶಕ್ತಿಯುತವಾದ ಹೊಸ ಹಾದಿ ಹಾಕಿದ್ದಾರೆ. ನಾನು ಕಳಕಳಿಯಿಂದ ಈ ತಿದ್ದುಪಡಿಗಳನ್ನು ತಾವು ಒಪ್ಪಬೇಕೆಂದು ಮನವಿ ಮಾಡುತ್ತಿದ್ದೇನೆ. ಇಷ್ಟು ಮಾತು ಆಡಲು ಅವಕಾಶ ಕೊಟ್ಟಿದಕ್ಕೆ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ (ಬೇಲೂರು) : ಅಧ್ಯಕ್ಷರೇ, ಈ ಬಿಲ್‌ನಲ್ಲಿ ಅಧ್ಯಾಯ ಎರಡರಲ್ಲಿ ಒಂದು ಸಮಿತಿ ಮಾಡಿದ್ದೀರಿ, ಅದರ ಸದಸ್ಯರುಗಳನ್ನು ನೋಡಿದಾಗ ಕನ್ನಡ ಸಂಸ್ಕೃತಿ ಇಲಾಖೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ, ಆಯುಕ್ತರು, ಸರ್ಕಾರದ ಕಾರ್ಯದರ್ಶಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಆದರೆ ಕನ್ನಡ ಭಾಷಾಂತರ ಇಲಾಖೆ ಡೈರೆಕ್ಟರನ್ನು ಸದಸ್ಯರನ್ನಾಗಿ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಆರ್.ಎನ್. ನಾಯಕ್ : ಅಧ್ಯಕ್ಷರೇ, ವಿರೋಧಪಕ್ಷದ ಘಟಾನುಘಟಿಗಳು ಈ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಸನ್ಮಾನ್ಯ ವಾಟಾಳ್ ನಾಗರಾಜ್ ಮತ್ತು ಬೈರೇಗೌಡರು ಕೆಲವು ತಿದ್ದುಪಡಿಗಳನ್ನು ಕೊಟ್ಟಿದ್ದಾರೆ. ಅವರು ಮಾತನಾಡುವಾಗ ಇವುಗಳ ಬಗ್ಗೆ ಸೀಮಿತಗೊಳಿಸಿ ಮಾತನಾಡಿದ್ದರೆ ಇಲ್ಲಿ ಕುಳಿತ ಎಲ್ಲಾ ಸದಸ್ಯರಿಗೂ ಮತ್ತು ತಮಗೆ ಅವರ ವಿಚಾರ ಗೊತ್ತಾಗುತ್ತಾ ಇತ್ತು. ಆದರೆ ಆ ಬಗ್ಗೆ ಅವರು ಮಾತನಾಡಲೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ತಿದ್ದುಪಡಿಯ ಎಲ್ಲಾ ಪ್ರತಿ ಎಲ್ಲರಿಗೂ ಕೊಟ್ಟಿದ್ದೇವೆ, ಎಲ್ಲರಿಗೂ ಗೊತ್ತಿದೆ. ಇನ್ನೊಂದು ಸಾರಿ ಅದರ ಬಗ್ಗೆ ಮಾತನಾಡಿ ಎಂದರೆ ಮಾತನಾಡುತ್ತೇವೆ.

ಶ್ರೀ ಆರ್.ಎನ್. ನಾಯಕ್ : ನಾನು ಅಲ್ಲಿ ಕುಳಿತಿದ್ದಾಗ ಬಹಳ ಮಾತನಾಡುತ್ತಿದ್ದೆ ಎಂದು ಹೇಳಿದರೂ ಈಗ ಇಲ್ಲಿ ಕುಳಿತಾಗ ಕಡಿಮೆ ಮಾತನಾಡಬೇಕು ಅಂಥ ಏನೂ ಇಲ್ಲ. ಒಟ್ಟಾರೆ ಇದರ ಅರ್ಥ ಏನೆಂದರೆ ಈಗ ತರುತ್ತಿರುವ ವಿಧೇಯಕಕ್ಕೆ ಶಕ್ತಿ ಕಡಿಮೆ ಇದೆ ಎಂಬುದು ನಿಮ್ಮ ವಾದ. ಮತ್ತು ವಿಮಾನದಲ್ಲಿ ಕನ್ನಡ ಪತ್ರಿಕೆಗಳು ಸಿಗುವುದಿಲ್ಲ ಎಂದು. ಅವೆಲ್ಲಾ ಏಜೆಂಟರಿಗೆ ಸಂಬಂಧಪಟ್ಟ ವಿಚಾರ. ಏಕೆಂದರೆ ಎಲ್ಲೆಲ್ಲಿ ಮಾರಬೇಕು ಎಂಬುದು ಅವರಿಗೆ ಬಿಟ್ಟ ವಿಚಾರ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಬಗ್ಗೆ ಮುಖ್ಯಮಂತ್ರಿಗಳಾಗಲೀ, ಉಪಮುಖ್ಯಮಂತ್ರಿಗಳಾಗಲೀ ಉತ್ತರ ಹೇಳಿದರೆ ಇದಕ್ಕೆ ಶಕ್ತಿ ಬರುತ್ತದೆ. ಇಂತಹ ಅವಕಾಶವನ್ನು ದಯಮಾಡಿ ನೀವೇ ಉತ್ತರ ಕೊಡಿ.

ಶ್ರೀ ಸಿ. ಬೈರೇಗೌಡ : ಪತ್ರಿಕೆ ಸಿಗುವುದಿಲ್ಲ ಅದಕ್ಕೆ ವ್ಯವಸ್ಥೆ ಮಾಡಿ ಎಂದರೆ, ಅದು ಏಜೆಂಟರ್ ಕೆಲಸವೆಂದು ಅರ್ಥವಿಲ್ಲದ ಮಾತನಾಡುತ್ತಿದ್ದಾರಲ್ಲಾ.

ಶ್ರೀ ಆರ್.ಎನ್. ನಾಯಕ್ : ಕರ್ನಾಟಕ ಭವನದ ಬಗ್ಗೆ ಹೇಳಿದ್ದೀರಿ. ಅದು ಬಹಳ ಯೋಗ್ಯ ಸಲಹೆ. ಕರ್ನಾಟಕ ಭವನಕ್ಕೆ ಎಲ್ಲಾ ಪತ್ರಿಕೆಗಳನ್ನು ಕಳುಹಿಸಿ ಕೊಡೋಣ. ಅದು ಬೇರೆ ಮಾತು. ನೀವು ಹೇಳಿದಿರಿ ಈ ಬಿಲ್ಲು ಇಲ್ಲಿ ಇಡುವುದರಿಂದ ಇದೊಂದು ಹೆಳವನ ತರಹ ಶಕ್ತಿ ಇಲ್ಲವೆಂದು. ಆದರೆ ನನ್ನ ಅಭಿಪ್ರಾಯ ಆಗಲ್ಲ. ಈ ಬಿಲ್ಲು ಏನು ಇಟ್ಟಿದ್ದೇವೆ. ಹೊಸದಾಗಿ ಹುಟ್ಟಿದ ಸ್ವಶಕ್ತಿ ಮಗುವಿನ ತರಹ. ನೀವು ಅದರ ಬೆಳವಣಿಗೆಯನ್ನು ನೋಡಬೇಕು. ಅದರ ಬೆಳವಣಿಗೆಯನ್ನು ನೋಡಿ ಮುಂದೆ ಹೆಳವನ ಆಗುತ್ತದೆಯೋ ಅಥವಾ ಗಟ್ಟಿಯಾದ ಮಗುವಾಗುತ್ತದೆಯೋ ಎಂಬ ತೀರ್ಮಾನವನ್ನು ನಂತರ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಮೊದಲೇ ನೀವು ಆ ಮಗುವನ್ನು ಹೆಳವನ ತರಹ ಇದೆ ಎಂದು ಹೇಳಿದರೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಕಾಲು ಇಲ್ಲದ ಮಗು ಹುಟ್ಟಿದರೆ ಕಾಲು ಇದೇ ಎನ್ನಬೇಕೇ. ಆಸ್ಪತ್ರೆಯ ಡಾಕ್ಟರು ಕಾಲಿಲ್ಲದೆ ಮಗು ಹುಟ್ಟಿದೆ ಎಂದು ಹೇಳಿದರೆ ಕಾಲು ಇದೆ ಎಂದು ಹೇಳೋಣವೇ?

ಶ್ರೀ ಆರ್.ಎನ್. ನಾಯಕ್ : ಇದು ಸ್ವಶಕ್ತ ಮಗು. ಆದರೆ ಒಂದು ಎಚ್ಚರಿಕೆ ಇರಬೇಕು. ನಮ್ಮ ಕಡೆಗೆಲ್ಲಾ ಹೇಳುತ್ತಿದ್ದರು. ಒಬ್ಬ ರಾಕ್ಷಸ ಹುಟ್ಟಿದ್ದನಂತೆ. ಆ ರಾಕ್ಷಸ ಹೇಗೆ ಇರುತ್ತಿದ್ದ ಎಂದು ಒಮ್ಮೆ ನಮ್ಮ ಅಜ್ಜಿಯನ್ನು ಕೇಳಿದೆ. ಹುಟ್ಟಬೇಕಾದರೆ ಬಹಳ ದೊಡ್ಡದು ಇರುತ್ತದೆಯೇ? ಮೀಸೆ, ಹಲ್ಲು ಎಲ್ಲಾ ಬಂದುಬಿಟ್ಟಿರುತ್ತದೆಯೇ ಆಮೇಲೆ ಅವನು ತನ್ನ ತಾಯಿಯನ್ನು ತಿಂದುಬಿಡುತ್ತಾನೆ. ನಂತರ ಅವನು ಆಕಾಶಕ್ಕೆ ಹಾರಿಬಿಡುತ್ತಾನೆ ಎಂಬ ಕಥೆ ಇತ್ತು. ಆದರೆ ಈ ಮಗು ಈತರಹದ್ದಲ್ಲ. ಈಗ ತರುತ್ತಿರುವ ಮಸೂದೆ ಬಹಳ ಸ್ವಶಕ್ತವಾಗಿದೆ. ಅದನ್ನು ನಾವು, ನೀವು ಸೇರಿ ಅದನ್ನು ಹೊರಗೆ ಹಚ್ಚಿ ಬೆಳಸಬೇಕಾಗಿದೆ. ಇಲ್ಲಿ ವಿರೋಧ ಸಾಲಿನಲ್ಲಿ ಕನ್ನಡ ಶಿಕ್ಷಕರ ಬಗ್ಗೆ ಬಹಳಷ್ಟು ಹೇಳಿದ್ದೀರಿ. ನಿಮಗೆ ಗೊತ್ತಿದೆ, ನಮ್ಮ ಶಿಕ್ಷಣ ಇಲಾಖೆಯ ಮೂಲಕ ಸರ್ಕಾರ ಎಷ್ಟು ಶಿಕ್ಷಕರನ್ನು ನೇಮಿಸಿದೆ. ಬಹುಶಃ 5 ವರ್ಷದ ಹಿಂದೆ ಈ ತರಹ ನೇಮಕ ಮಾಡಿಕೊಳ್ಳುವ ವ್ಯವಸ್ಥೆ ಇರಲಿಲ್ಲ. ನಮ್ಮ ಕಾಲದಲ್ಲಿ ಎಷ್ಟು ತೆಗೆದುಕೊಂಡಿದ್ದಾರೆ ಎಂದು ನಾನು ಹೇಳುವುದಿಲ್ಲ. ಸಮಯ ಬಂದಾಗ ಮುಖ್ಯಮಂತ್ರಿಗಳು ಹೇಳುತ್ತಾರೆ. ಆಮೇಲೆ ಕನ್ನಡ ಬೆರಳಚ್ಚು ಯಂತ್ರಗಳನ್ನು ಪ್ರತಿ ವರ್ಷ ಕೊಡುತ್ತಿದ್ದೇವೆ. ನಾಳೆ ಅದರ ಡಿಮ್ಯಾಂಡ್ ಬಂದಾಗ ಅದರ ಬಗ್ಗೆ ಹೇಳುತ್ತೇನೆ. ಈಗ ಸಮಯದ ಅಭಾವ ಇರುವುದರಿಂದ, ಸರೋಜಿನಿ ಮಹಿಷಿ ವರದಿಯ ಬಗ್ಗೆ ನೀವು ಹೇಳಿದ್ದೀರಿ. ಅದಕ್ಕಾಗಿ ಒಂದು ಪುಸ್ತಕ ಹೊರಡಿಸಿದ್ದೇವೆ. ಅದನ್ನು ನಾನು ನಿಮಗೆ ಕಳುಹಿಸಿ ಕೊಡುತ್ತೇನೆ. ಅದರ ವರದಿಯ ಅನುಷ್ಠಾನದ ಬಗ್ಗೆ....

ಶ್ರೀ ಬಸವರಾಜ ರಾಯರೆಡ್ಡಿ : ಅದನ್ನು ಯಾರು ಹೊರಡಿಸಿದ್ದಾರೆ?

ಶ್ರೀ ಆರ್.ಎನ್. ನಾಯಕ್ : ಇನ್ನೂ ಯಾರು ಹೊರಡಿಸುತ್ತಾರೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದವರು ಹೊರಡಿಸಿದ್ದಾರೆ. ಆ ಬಗ್ಗೆ ನಿಮಗೆ ಅಷ್ಟು ಅರ್ಥ ಆಗಿಲ್ಲ ಎಂದರೆ ಕನ್ನಡವನ್ನು ಹೇಗೆ ಉದ್ಧಾರ ಮಾಡುತ್ತೀರಾ? ಕನ್ನಡವೇ ನಿಮಗೆ ಸರಿಯಾಗಿ ಅರ್ಥವಾಗುವುದಿಲ್ಲ. ಇಲ್ಲಿ ಸರೋಜಿನಿ ಮಹಿಷಿ, ವರದಿಯವರು ಒಟ್ಟು 58 ಶಿಫಾರಸ್ಸುಗಳನ್ನು ಮಾಡಿದ್ದಾರೆ. ಶ್ರೀಮತಿ ಸರೋಜಿನಿ ಮಹಿಷಿ ವರದಿ ಬಗ್ಗೆ ಹೇಳಿದ್ದೀರಿ ಈ ವರದಿಯ ಅನುಷ್ಠಾನದ ಬಗ್ಗೆ ಒಂದು ಪುಸ್ತಕವನ್ನೇ ಹೊರಡಿಸಿದ್ದೇವೆ. ಬಹುಶಃ ಆ ಪುಸ್ತಕ ಕಳುಹಿಸಿಕೊಡುತ್ತೇನೆ. ಅದರಲ್ಲಿ ಸರೋಜಿನಿ ಮಹಿಷಿಯ ವರದಿಯ ಅನುಷ್ಠಾನದ ಬಗ್ಗೆ.....

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಯಾರು ಹೊರಡಿಸಿದ್ದುದು?

ಶ್ರೀ ಆರ್.ಎನ್. ನಾಯಕ್ : ನಾವು ನೀವೂ ಎಲ್ಲಾ ಸೇರಿ ಸರಕಾರ ಮಾಡಿರುವುದು. ನಿಮಗೆ ಅಷ್ಟು ಅರ್ಥವಾಗದಿದ್ದರೆ ನೀವು ಏನು ಕನ್ನಡವನ್ನು ಉದ್ಧಾರವಾಗುತ್ತೀರಿ? ನಿಮಗೆ ಸರಿಯಾಗಿ ಕನ್ನಡ ಭಾಷೆಯೇ ಅರ್ಥವಾಗುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಮೊದಲು ನಿಮಗೆ ಕನ್ನಡ ಬರುತ್ತದೆಯೇ?

ಶ್ರೀ ಆರ್.ಎನ್. ನಾಯಕ್ : ಒಟ್ಟು 58 ಶಿಫಾರಸ್ಸುಗಳನ್ನು ಸರೋಜಿನಿ ಮಹಿಷಿ ಮಾಡಿದ್ದರು. 45 ಅನ್ನು ಸರಕಾರ ಒಪ್ಪಿ ಆದೇಶ ಹೊರಡಿಸಿದೆ. ಇದರ ಬಗ್ಗೆ ಪುಸ್ತಕವನ್ನು ನಾನು ಕಳುಹಿಸಿಕೊಡುತ್ತೇನೆ. ಉಳಿದುದನ್ನು ಹಂತ ಹಂತವಾಗಿ ಮಾಡಬೇಕೆಂದು ಈ ಪ್ರಾಧಿಕಾರಕ್ಕೆ ಶಕ್ತಿ ಕೊಡುವ ಕೆಲಸ ಆಗುತ್ತಿದೆ. ಇನ್ನು ಇಲ್ಲಿ ಕೆಲವು ವಿಚಾರದಲ್ಲಿ ನೀವು ಸಂಶಯ ಪಡಬೇಕಾದದ್ದು ಇಲ್ಲ. ಕನ್ನಡದ ಅನುಷ್ಠಾನವನ್ನು ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವುದಕ್ಕೆ ಅಧಿಕಾರಿಗಳು ಹಿಂತೆಗೆಯುತ್ತಾರೆಂಬ ಬಗ್ಗೆ ಸಂಶಯ ಇದೆ. ಅದರ ಬಗ್ಗೆ 19ನೇ ಖಂಡದಲ್ಲಿ ವಿವರವಾಗಿ ಹೇಳಿದ್ದಾರೆ. ಕಡೆಯ 2-3 ವಾಕ್ಯಗಳನ್ನು ಓದುತ್ತೇನೆ. ಯಾವುದೇ ಆದೇಶವನ್ನು ರಾಜ್ಯ ಸರಕಾರ

ಮತ್ತು ಸ್ಥಳೀಯ ನಿಕಾಯಗಳ ನೌಕರರು ಅಧಿಕಾರಿಗಳು ಉಲ್ಲಂಘಿಸಿದರೆ ಅಂತಹ ಉಲ್ಲಂಘನೆ ಕರ್ತವ್ಯ ಲೋಪವೆಂದು ದಾಖಲಿಸತಕ್ಕದ್ದು. ಅಂತಹ ವ್ಯಕ್ತಿಗಳ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳುವಂತೆ ನೇಮಕಾತಿ ಪ್ರಾಧಿಕಾರಕ್ಕೆ ಸಲಹೆಗಳನ್ನು ನೀಡತಕ್ಕದ್ದು ಎಂದು ಹೇಳಿದ್ದಾರೆ. ಒಂದು ವೇಳೆ ನಿಮ್ಮ ಕಲ್ಪನೆ ಪ್ರಕಾರ ನೀವೇ ಶಿಕ್ಷೆ ಕೊಡುವುದಾದರೆ ಪ್ರಾಧಿಕಾರವೇ ಶಿಕ್ಷೆ ಕೊಡುವುದಾದರೆ ಆ ಶಿಕ್ಷೆ ಕೊಡುವವರು 2 ಜನ ಆಗುತ್ತಾರೆ. ಒಂದು ಸರಕಾರ ಅದೇ ಸಮಾನಾಂತರದಲ್ಲಿ ಈ ಪ್ರಾಧಿಕಾರ ಶಿಕ್ಷೆ ಕೊಡುವುದಕ್ಕೆ ಅಧಿಕಾರ ಕೊಟ್ಟರೆ ಅದೂ ಶಿಕ್ಷೆ ಕೊಡುವಂತಾಗುತ್ತದೆ. ಆದ್ದರಿಂದ ಈಗ ತುರ್ತು ಏನು ಇದೆ ಇಲ್ಲಿ ಅಂತಹ ಸರಕಾರಿ ನೌಕರರು ಕನ್ನಡದ ಅಭಿವೃದ್ಧಿ ಬಗ್ಗೆ ಕೆಲಸ ಮಾಡುವುದಿಲ್ಲವೆಂದರೆ ಸಿಸಿಎ ರೂಲ್ಸ್ ಪ್ರಕಾರ ಶಿಕ್ಷೆ ಕೊಡುವುದಕ್ಕೆ ಅಲ್ಲಿ ಅನುಕೂಲ ಇದೆ. ಆ ರೀತಿ ಶಿಫಾರಸ್ಸುಗಳನ್ನು ಮಾಡಬಹುದು. ಇಲ್ಲಿ ತಿದ್ದುಪಡಿ ಮಾಡುವುದರ ಬದಲಾಗಿ ಈ ಶೀರ್ಷಿಕೆ ರೂಲ್‌ಗೆ ಒಂದು ತಿದ್ದುಪಡಿ ತಂದು ಅಲ್ಲೇ ಸರಕಾರದಿಂದಲೇ ಶಿಕ್ಷೆ ಕೊಡುವಂತಹ ವ್ಯವಸ್ಥೆ ಮಾಡಬಹುದೇ ವಿನಃ ಶಿಕ್ಷೆ ಕೊಡುವ ಅಧಿಕಾರವನ್ನು ಇಲ್ಲಿ ತೆಗೆದುಕೊಂಡರೆ ಅದು ಸತ್ಯ ಸಮಂಜಸವಾಗಲಿಕ್ಕಿಲ್ಲ. ನಾವು ಅದನ್ನು ಒರೆ ಹಚ್ಚಿ ನೋಡೋಣ. ಅತ್ಯಂತ ಅವಶ್ಯಕತೆ ಇದೇ ಬೇಕೇ ಬೇಕು ಎಂದರೆ ಮತ್ತೊಮ್ಮೆ ಯಾವಾಗಲೂ ತಿದ್ದುಪಡಿ ತಂದು ಮಾಡಬಹುದು. ಇಲ್ಲಿ ಯಾರೂ ಯಾವುದಕ್ಕೂ ಸಂಶಯ ಪಡುವುದಕ್ಕೆ ಅವಕಾಶವಿಲ್ಲ.

+ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಈ ವಿಧೇಯಕದ ಬಗ್ಗೆ ತಾವು ಮಾತನಾಡುತ್ತಿದ್ದೀರಿ. ಆದರೆ ಈ ವಿಧೇಯಕ, ಇದರ ಭಾಷೆ ಅಧಿಕೃತ ಅಲ್ಲ ಈ ಸಂವಿಧಾನದ ಪ್ರಕಾರ. ನಾವು ಈ ಸದನದಲ್ಲಿ ವಿಧೇಯಕವನ್ನು ಕನ್ನಡದಲ್ಲಿ ಮಂಡಿಸಬಹುದು. ನಾವು ಅಂಗೀಕಾರ ಮಾಡಬಹುದು. ಆದರೆ ಇದರ ಇಂಗ್ಲೀಷ್ ಅನುವಾದ ಮಾತ್ರ ಅಧಿಕೃತವೆನ್ನುವಂತಹ ಅಂಶ ಸಂವಿಧಾನದಲ್ಲಿ ಇರುವಾಗ ಶಿಕ್ಷೆಯ ಮಾತನ್ನು ಆಡುತ್ತಿದ್ದೀರಿ ಇದು ಹೇಗೆ ಎಂದು ಇದರ ಬಗ್ಗೆ ರೂಲಿಂಗ್ ಕೊಡಬಹುದು. ಸಂವಿಧಾನದ ಪ್ರಕಾರ ಈ ಸದನದಲ್ಲಿ ಮಂಡಿಸಿದಂತಹ ವಿಧೇಯಕಗಳು ಕನ್ನಡದಲ್ಲಿರಬಹುದು. ಆದರೆ ಅದರ ಇಂಗ್ಲೀಷ್ ಅನುವಾದ ಮಾತ್ರ ಅಧಿಕೃತವೆಂಬುದು ತಮಗೂ ತಿಳಿದಿರಬಹುದು.

7.10 ಪಿ.ಎಂ

ಕನ್ನಡ ಆ ಒಂದು ಗುಲಾಮಗಿರಿಯನ್ನು ಹೊತ್ತುಕೊಂಡು ನಾವು ನಮ್ಮ ದೇಶದಲ್ಲಿ ಬದುಕಿದ್ದೇವೆ. ಆ ಕಾರಣ ನನ್ನದೊಂದು ಸಲಹೆ. ಈ ಸದನದಲ್ಲಿ ಸರ್ವಾನುಮತದಿಂದ ಒಂದು ನಿರ್ಣಯವನ್ನು ಮಂಡಿಸಬೇಕು. ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕು, ಇದನ್ನು ತಿದ್ದುಪಡಿ ಮಾಡಬೇಕು ಎನ್ನುವಂಥ ನಿರ್ಣಯವನ್ನು ಮಂಡಿಸಬೇಕು ಎಂದು ನಾನು ತಮ್ಮನ್ನು ಕೇಳುತ್ತಿದ್ದೇನೆ.

+ ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಕನ್ನಡದಲ್ಲಿ ಮಂಡಿಸಿದಾಗ ಕನ್ನಡದಲ್ಲಿ ಅನುಮೋದನೆಯಾಗುವಾಗ ಇದೇ ಮೂಲ ಕಾನೂನಾಗುತ್ತದೆ. ನಾನು ಸಂಸದೀಯ ಮಂತ್ರಿಯಾಗಿದ್ದೆ. ಕಾನೂನು ಮಂತ್ರಿಯಾಗಿದ್ದೆ.

ಶ್ರೀ ಬಾಬಾಗೌಡ ಪಾಟೀಲ್ : ಸಂವಿಧಾನದ ಪ್ರಕಾರ ಇದು ಅಧಿಕೃತವೋ ಅಥವಾ ಇದರ ಇಂಗ್ಲೀಷ್ ಅನುವಾದ ಅಧಿಕೃತವೋ ಎಂಬುದನ್ನು ತಾವು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಸಂವಿಧಾನದ ಪ್ರಕಾರ ಇದು ಸರಿಯಾಗಿರುತ್ತದೆ. ಇದೇ ಮೂಲ ಕಾನೂನಾಗಿರುತ್ತದೆ. ಇದರ ಅನುವಾದ ಮಾತ್ರ ಆಂಗ್ಲ ಭಾಷೆ ಅಥವಾ ಬೇರೆಯ ಭಾಷೆಯಲ್ಲಿ ಆಗಬಹುದು. ಇದೇ ಮೂಲವಾಗುತ್ತದೆ. ಅದರ ಬಗ್ಗೆ ಅನುಮಾನ ಇಟ್ಟುಕೊಳ್ಳಬೇಕಾಗಿಲ್ಲ.

ಶ್ರೀ ಬಾಬಾಗೌಡ ಪಾಟೀಲ್ : ನನ್ನ ಪ್ರಕಾರ ಇಂಗ್ಲೀಷ್ ಅನುವಾದ ಮಾತ್ರ ಅಧಿಕೃತ. ಸಂವಿಧಾನದಲ್ಲಿಯೇ ಅದು ಇದೆ. ತಾವು ಇನ್ನೊಮ್ಮೆ ಪರಿಶೀಲನೆ ಮಾಡಿರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಏನೂ ಅಲ್ಲ.

ಶ್ರೀ ಆರ್.ಎನ್. ನಾಯಕ್ : ಯಾರೂ ಈ ವಿಧೇಯಕದ ಶಕ್ತಿಯ ಬಗ್ಗೆ ಸಂಶಯ ಪಡದೆ....

ಶ್ರೀ ಬಾಬಾಗೌಡ ಪಾಟೀಲ್ : ತಾವು ಇನ್ನೊಮ್ಮೆ ನೋಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಆಂಗ್ಲ ಭಾಷೆಯಲ್ಲಿ ಕಾನೂನು ಮಾಡಬೇಕು ಎಂದು ತಮ್ಮ ಅಭಿಪ್ರಾಯವೇ?

ಶ್ರೀ ಬಾಬಾಗೌಡ ಪಾಟೀಲ್ : ಇದರ ಬಗ್ಗೆ ಸರ್ವಾನುಮತದ ತೀರ್ಮಾನವಾಗಬೇಕು. ಕನ್ನಡ ಭಾಷೆಯ ವಿಧೇಯಕ ಕಾನೂನು ಇದು ಅಧಿಕೃತ ಎಂದು.

ಶ್ರೀ ಎಂ. ವೀರಪ್ಪ ಮೊಯಿಲಿ : ಇದೇ ಅಧಿಕೃತ ಮೂಲ ಶಾಸನ. ಇದನ್ನು ಅನುವಾದ ಮಾಡಿಕೊಂಡು ನೀವು ಯಾವ ಭಾಷೆಯಲ್ಲಾದರೂ ಮಾಡಬಹುದು.

ಶ್ರೀ ಆರ್.ಎನ್. ನಾಯಕ್ : ಮಾನ್ಯ ಅಧ್ಯಕ್ಷರೇ, ಈ ಮಸೂದೆಯ ಶಕ್ತಿಯ ಬಗ್ಗೆ ಯಾರು ಸಂಶಯಪಡದೆ ಇದು ಶಕ್ತಿಯುತ ಮಸೂದೆ ಎಂದು ತಿಳಿಯಬೇಕು. ಇದರಿಂದ ಪ್ರಯೋಜನವಿದೆ ಎನ್ನುವ ಭಾವನೆಯನ್ನು ಇಟ್ಟುಕೊಂಡು ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಬೈರೇಗೌಡರವರು ತಾವು ಏನು ತಮ್ಮ ತಿದ್ದುಪಡಿಯನ್ನು ಇಲ್ಲಿ ತಂದಿದ್ದೀರಿ, ದಯಮಾಡಿ ಅದಕ್ಕೆ ಒತ್ತುಕೊಡದೆ ಇದ್ದ ಸ್ಥಿತಿಯಲ್ಲಿಯೇ ಅದನ್ನು ಒಪ್ಪಿಕೊಳ್ಳಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ನಾನು ನೆನೆಸಿದ್ದು ಏನೆಂದರೆ ಎಲ್ಲಾ ಸನ್ಮಾನ್ಯ ಸದಸ್ಯರು, ವಿರೋಧ ಪಕ್ಷದವರು ಇದೇನು ಇವತ್ತು ಒಂದು ಐತಿಹಾಸಿಕ ಘಟನೆ ನಡೆಯುತ್ತಿದೆ, ಕನ್ನಡ ಪ್ರಾಧಿಕಾರಕ್ಕೆ ಶಾಸನಾತ್ಮಕವಾದಂಥ ಬೆಂಬಲ ಕೊಡುವಂಥದ್ದು, ಇದು ಕನ್ನಡ ಭಾಷೆ, ಕನ್ನಡದ ಇತಿಹಾಸದಲ್ಲಿ ಒಂದು ಮಹತ್ವದ ಕಾನೂನು. ನಾನು ಎಣಿಸಿದೆ, ಇದು ಬಹಳ ಒಂದೇ ಒಂದು ಸ್ವರದಲ್ಲಿ ಇದಕ್ಕೆ ಮಂಜೂರಾತಿ ಕೊಡುತ್ತೀರಿ ಎಂದು ಏಕೆಂದರೆ ತಾವು ಇದನ್ನು ನೋಡಬೇಕು.

ಇದು ಬಹಳ ಮಹತ್ವ ಇದೆ. ಬಹಳ ಮಹತ್ವದ ಒಂದು ಕಾನೂನು. ಇಷ್ಟರವರೆಗೆ ಯಾರೂ ಮಾಡಿಲ್ಲ. ಕರ್ನಾಟಕದ 40 ವರ್ಷಗಳ ಇತಿಹಾಸದಲ್ಲಿ ಒಂದು ಶಾಸನಾತ್ಮಕವಾದ ಕನ್ನಡದ ಪ್ರಾಧಿಕಾರಕ್ಕೆ, ಕನ್ನಡದ ಅಭಿವೃದ್ಧಿಗೆ ಇದು ಪ್ರಥಮ ಮಸೂದೆ. ಒಪ್ಪುತ್ತೀರಾ? ಎಲ್ಲಾ ಇದರಲ್ಲಿ ಇದೆ. ಕರ್ತವ್ಯ ಲೋಪ ಮಾಡುವಂಥ ಅಧಿಕಾರಿಗಳು ಏನು ಇದ್ದಾರೆ, ಕಂಡಿಕೆ 19ನ್ನು ನೋಡಿ ದಯಮಾಡಿ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ತಿದ್ದುಪಡಿಯನ್ನು ನೋಡಿದಿರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ತಿದ್ದುಪಡಿಯನ್ನು ನೋಡಿದ್ದೇನೆ. ತಿದ್ದುಪಡಿ ಇದಕ್ಕಿಂತ ಸ್ವಲ್ಪ ಸಡಿಲ ಮಾಡುತ್ತದೆ ಈ ಕಾನೂನು. ನಾನು ನೋಡಿದ ಪ್ರಕಾರ. ನಾನು ನೋಡಿದೆ ಏನಾದರೂ ಇದೆಯೇ ಎಂದು.

ಶ್ರೀ ವಾಟಾಳ್ ನಾಗರಾಜ್ : ಏಟಿಗೆ ಎದಿರೇಟು ಕೊಡುವುದರಲ್ಲಿ ಬಹಳ ನಿಸ್ಸೀಮರು. ಅಷ್ಟು ಬಿಟ್ಟರೆ ವಸ್ತುಸ್ಥಿತಿ ಬಗ್ಗೆ ತಾವು ಬರಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ದಯಮಾಡಿ ನೋಡಿ. ಯಾವ ತಿದ್ದುಪಡಿ ವಿಶೇಷವಾಗಿರುವಂಥದ್ದು. ಎಲ್ಲಾ ಅಧಿಕಾರವನ್ನು ನಾವು ಕೊಟ್ಟಿದ್ದೇವೆ. ಈಗ ಉದ್ಯೋಗಗಳ ನೇಮಕಾತಿ ಬಗ್ಗೆ ಕೂಡ ಇದರಲ್ಲಿ ನಾವು ಹೇಳಿದ್ದೇವೆ. ಇದರಲ್ಲಿ ಕರ್ತವ್ಯಲೋಪ

ದಾಖಲಿಸುವಂಥದ್ದು. ಏಕೆಂದರೆ ತಮಗೆ ಗೊತ್ತಿದೆ. ಒಬ್ಬ ಅಧಿಕಾರಿಗೆ ಕನ್ನಡದ ಕೆಲಸವನ್ನು ಸರಿಯಾಗಿ ಮಾಡದಿದ್ದರೆ ಅಧಿಕಾರಿ ಕರ್ತವ್ಯಲೋಪ ಮಾಡುತ್ತಾನೆ ಎಂದು ಹೇಳುವಂಥದ್ದು ಇಡೀ ದೇಶದ ಯಾವ ಇತಿಹಾಸದಲ್ಲೂ ಕೂಡ ಇಲ್ಲ.

ಇದಕ್ಕೆ ನಾವು ಕಾನೂನನ್ನು ಮಾಡಿದ್ದೇವೆ. ಕನ್ನಡದ ಬಗ್ಗೆ ದ್ರೋಹ ಬಗೆದಿದ್ದರೆ ಯಾವ ಅಧಿಕಾರಿಯೇ ಆಗಿರಲಿ, ಕನ್ನಡದ ಬಗ್ಗೆ ಕರ್ತವ್ಯ ಲೋಪ ಮಾಡಿದ್ದಾದರೆ ಅವನ ರಹಸ್ಯವರದಿಯಲ್ಲಿ ಅದು ಸೇರಿದ್ದರೆ ಅದು ಅವನ ಮುಂದಿನ ಬಡ್ತಿಗೆ ತೊಂದರೆಯಾಗುತ್ತದೆ. ತಮಗೆ ಗೊತ್ತಿರಬಹುದು. ಅದಕ್ಕಿಂತ ಒಂದು ದೊಡ್ಡ ಶಿಕ್ಷೆ ಒಬ್ಬ ಅಧಿಕಾರಿಗೆ ಬೇರೆ ಇರುವುದಿಲ್ಲ. ಅದನ್ನು ಇವತ್ತು ಹಾಕಿದ್ದೇವೆ. ಯಾವ ರಾಜ್ಯದಲ್ಲೂ ಕೂಡ ಇಂಥ ಒಂದು ಶಾಸನ ಇಲ್ಲ.

ತಮಿಳುನಾಡಿನಲ್ಲಿ ಕೂಡ ಇಂಥ ಶಾಸನ ಇಲ್ಲ. ಆಂಧ್ರಪ್ರದೇಶದಲ್ಲಿ ಇಂಥ ಶಾಸನ ಇಲ್ಲ. ಈ ದೇಶದ ಯಾವ ರಾಜ್ಯದಲ್ಲೂ ಆಗದೇ ಇರತಕ್ಕಂಥ ಅದ್ವಿತೀಯವಾದಂಥ ಹೆಜ್ಜೆಯನ್ನು ಕನ್ನಡದ ಭಾಷೆಯ ಸಂಸ್ಕೃತಿಯ ಅಭಿವೃದ್ಧಿಗೆ ಇವತ್ತು ನಾವು ಹಾಕಿದ್ದೇವೆ. ಐತಿಹಾಸಿಕ ಘಟನೆಗಳು. ಆಮೇಲೆ ಅಂಥ ವ್ಯಕ್ತಿಗಳ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳತಕ್ಕಂಥ ಅಧಿಕಾರ ಕೂಡ ಅದನ್ನು ಶಿಫಾರಸ್ಸು ಮಾಡತಕ್ಕಂಥ ಅಧಿಕಾರ ಕೂಡ ಇದಕ್ಕೆ ಕೊಟ್ಟಿದ್ದೇವೆ. ಒಂದು ಶಾಸನಾತ್ಮಕವಾದಂಥ ಒಂದು ಪ್ರಾಧಿಕಾರ. ಅದಕ್ಕೆ ಇಂಥ ಶಿಫಾರಸ್ಸುಗಳನ್ನು ಮಾಡತಕ್ಕಂಥ ಅಧಿಕಾರ ಕೊಟ್ಟಮೇಲೆ ಸರ್ಕಾರಕ್ಕೆ ಬೇರೆ ಪರ್ಯಾಯವಾದಂಥ ಅಧಿಕಾರವಿಲ್ಲ. ತಾವು ಇವತ್ತು ತಿಳಿದುಕೊಳ್ಳಬೇಕು. ಇದೊಂದು ಎಕ್ಸಿಕ್ಯೂಟಿವ್ ಬಾಡಿ ಅಲ್ಲ. ಇದು ಶಾಸನಾತ್ಮಕವಾದಂಥ ಬಾಡಿ. ಅಂಥ ಶಿಫಾರಸ್ಸುಗಳನ್ನು ಮಾಡಿದರೆ ಶಾಸನಾತ್ಮಕವಾದಂಥ ಪ್ರಾಧಿಕಾರ ಅದನ್ನು ಪರ್ಯಾಯರಾಗಿ ಎದುರಿಸತಕ್ಕಂಥ ಅದಕ್ಕೆ ವಿರುದ್ಧವಾದಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕಂಥ ಅಧಿಕಾರ ಕೂಡ ಇಲ್ಲ. ತಮಗೆ ಗೊತ್ತಿದೆ. ಇಲ್ಲಿ ಯೋಜನೆಗಳು ಕನ್ನಡದ ಭಾಷೆಯ ಅಭಿವೃದ್ಧಿಗೆ, ಕನ್ನಡದ ಸಂಸ್ಕೃತಿಯ ಅಭಿವೃದ್ಧಿಗೆ ಇವತ್ತು ಕಾರ್ಯಕ್ರಮಗಳನ್ನು ಸಿದ್ಧ ಮಾಡತಕ್ಕಂಥ ಸಂಪೂರ್ಣ ಅಧಿಕಾರ ಇವತ್ತು ಈ ಪ್ರಾಧಿಕಾರಕ್ಕೆ ಕೊಟ್ಟಿದ್ದೇವೆ. ಕಂಡಿಕೆ 14 ನೋಡಿ. ದಯಮಾಡಿ ನೋಡಿ.

ಶ್ರೀ ವಾಟಾಳ್ ನಾಗರಾಜ್ : ನಾವು ಎಲ್ಲದಕ್ಕೂ ತಿದ್ದುಪಡಿಯನ್ನು ತಂದಿಲ್ಲ. ಯಾವುದಕ್ಕೆ ಸೇರಿಸಬೇಕು ಎಂದು ಹೇಳಿ ತಂದಿದ್ದೇವೆ. ತಾವು ನೋಡಿಬಿಡಿ. ನಾವು ತಿದ್ದುಪಡಿಯನ್ನು ತಂದರೆ ಅದಕ್ಕೆ ಇನ್ನೂ ಶಕ್ತಿ ಬರುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ವಕೀಲನಾಗಿದ್ದೇನೆ. ಕಾನೂನಿನಲ್ಲಿ ಎಷ್ಟು ಬೇಕೋ ಅಷ್ಟೇ ಹಾಕಬೇಕು. ನೀವು ಸ್ವಲ್ಪ ಹಾಕಿದರೆ ಆ ಕಾನೂನು ಸಡಿಲವಾಗುತ್ತದೆ. That will lose the vigour. ಆ ಕಾನೂನಿನ ಶಕ್ತಿ ಆ ಮಟ್ಟಿಗೆ ಕಡಿಮೆಯಾಗುತ್ತದೆ. ಈಗ ಎಲ್ಲಾ ಸೇರಿಸಬಹುದು. ಆದರೆ ಎಲ್ಲಾ ಶಬ್ದಗಳ ಅಲಂಕಾರದಿಂದ ಕಾನೂನಿಗೆ ಶಕ್ತಿ ಬರುವುದಿಲ್ಲ. ಕಾನೂನಿನ ಅಧಿಕಾರ ಅದಕ್ಕೆ ಬರುವುದಿಲ್ಲ. ಅದು ಯಾವ ಶಬ್ದಗಳನ್ನು ಎಷ್ಟು ಕಡಿಮೆ ನೀವು ಉಪಯೋಗ ಮಾಡುತ್ತೀರಿ, ಅಷ್ಟರಮಟ್ಟಿಗೆ ಒಂದು ಕಾನೂನಿಗೆ ಶಕ್ತಿ ಬರುತ್ತದೆ, ಚೈತನ್ಯ ಬರುತ್ತದೆ. ಮುಖ್ಯಮಂತ್ರಿಯಾಗಿ ಈ ಮಾತನ್ನು ಹೇಳುವುದಲ್ಲ. ಒಬ್ಬ ಕಾನೂನು ತಿಳಿದುಕೊಂಡವನಾಗಿ ಈ ವಿಚಾರವನ್ನು ಹೇಳುತ್ತಿದ್ದೇನೆ. The most minimum words should be used. ಹೆಚ್ಚು ಮಾಡಿದ ಕೂಡಲೇ ಆ ಕಾನೂನು ಹೋಯಿತು. ನಿಮಗೆ ಕಾನೂನನ್ನು ಶಕ್ತಿಯನ್ನು ಕುಂದಿಸಬೇಕಾದರೆ ಇನ್ನು ಹಲವಾರು ಶಬ್ದಗಳನ್ನು ಸೇರಿಸಿ. It should be precise and concise. ಇದು ಇಂಗ್ಲೀಷ್‌ನಲ್ಲಿ Precise & Concise that has the vigour of law. ಇಲ್ಲದಿದ್ದರೆ ನಮ್ಮ ಸಂತೋಷಕ್ಕೆ ಇದು ಭಾವನಾತ್ಮಕವಾದಂಥ ಕಾನೂನು ಆಗುವುದಿಲ್ಲ. ಇದರಿಂದ ಇವತ್ತು ಏನು ನಾವು ಭಾವನಾತ್ಮಕವಾಗಿ ಕನ್ನಡದ, ಸಂಸ್ಕೃತಿಯ, ಭಾಷೆಯ ಅಭಿವೃದ್ಧಿಯನ್ನು ಸಾಧನೆ ಮಾಡುವುದಕ್ಕೆ ಹೋಗುತ್ತೇವೆ, ಅದಕ್ಕೆ

ಒಂದು ಶಕ್ತಿ. ಇವತ್ತು ಈ ಪ್ರಾಧಿಕಾರಕ್ಕೆ ಶಕ್ತಿಯನ್ನು ಕೊಟ್ಟಿದ್ದೇವೆ. ಶಾಸನಾತ್ಮಕವಾದ ಶಕ್ತಿಯನ್ನು ಕೊಟ್ಟಿದ್ದೇವೆ. ಅವರಿಗೆ ಅಧಿಕಾರ ಕೊಟ್ಟಿದ್ದೇವೆ. ಅವರಿಗೆ ಶಿಫಾರಸ್ಸು ಮಾಡುವ ಅಧಿಕಾರ ಕೊಟ್ಟಿದ್ದೇವೆ. ಅನುಷ್ಠಾನ ಮಾಡುವಂಥ ಅಧಿಕಾರವನ್ನು ಕೊಟ್ಟಿದ್ದೇವೆ. ಕನ್ನಡನಾಡಿನ ಭವಿಷ್ಯವನ್ನೇ ಚಿತ್ರಿಸತಕ್ಕಂಥ ಅಧಿಕಾರ ಇವತ್ತು ಈ ಶಾಸನದ ಮೂಲಕ ಕೊಟ್ಟಿದ್ದೇವೆ. ಇನ್ನೇನು ಬೇಕು? ಇದನ್ನು ನಾವು ಸ್ವಾಗತ ಮಾಡದಿದ್ದರೆ...

ಶ್ರೀ ವಾಟಾಳ್ ನಾಗರಾಜ್ : ನೀವು ಯಾವುದಕ್ಕೆ ಶಕ್ತಿಯನ್ನು ಕೊಟ್ಟಿಲ್ಲ, ಅದನ್ನು ಮಾಡಿ ಎಂದು ನಾವು ಹೇಳುತ್ತಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ : ನಾನು ನೋಡಿದೆ.

ಶ್ರೀ ವಾಟಾಳ್ ನಾಗರಾಜ್ : ನೀವು ಯಾವುದ್ಯಾವುದಕ್ಕೆ ಶಕ್ತಿಯನ್ನು ಕೊಟ್ಟಿದ್ದೀರಿ, ಅದೆಲ್ಲವನ್ನೂ ಮುಕ್ತಕಂಠದಿಂದ ಸ್ವಾಗತ ಮಾಡುತ್ತೇವೆ. ಅದರಲ್ಲಿ ಎರಡನೇ ಅಭಿಪ್ರಾಯವಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ : ಮೊದಲು ಸ್ವಾಗತ ಮಾಡಿ. ಆಮೇಲೆ ತಿದ್ದುಪಡಿಯನ್ನು ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಸ್ವಾಗತ ಮಾಡಿದ್ದೇವೆ. ತಮಗೆ ಹೇಳುತ್ತೇನೆ. ತಾವು ಇದನ್ನು ಪರಾಂಭರಿಸಬೇಕು. ಮಹಾರಾಜರ ಭಾಷೆಯಲ್ಲಿ ಮಹಾರಾಜರನ್ನು ಕಂಡರೆ ಹೇಳುತ್ತಾರಲ್ಲಾ, ಪರಾಂಭರಿಸಬೇಕು ಎಂದು ಆ ಭಾಷೆಯಲ್ಲಿ ಹೇಳುತ್ತಿದ್ದೇವೆ. ದಯಮಾಡಿ ಇದನ್ನು ಪರಾಂಬರಿಸಿದರೆ ಇದು ಅರ್ಥವಾಗುತ್ತದೆ. ಒಂದೆರಡೇ ಪುಟ. ಇದರಲ್ಲಿ ಯಾವುದ್ಯಾವುದನ್ನು ಸೇರಿಸಬೇಕು ಎಂದು ತಾವು ಸ್ವಲ್ಪ ಸೇರಿಸಿದರೆ ಅದು ನಿಮ್ಮ ಮಾತಿಗೂ ಇನ್ನೂ ಶಕ್ತಿ ಬರುತ್ತದೆ ಎಂದು ಅಷ್ಟೆ. ಇದರಲ್ಲಿ ರಾಜಕಾರಣ ಮಾಡುವುದಕ್ಕೆ ನಮಗೇನಿದೆ? ನಾಲ್ಕು ಸೇರಿಸಬಹುದು, ನಾಲ್ಕು ಬಿಡಬಹುದು, ಆ ಪ್ರಶ್ನೆ ಬೇರೆ. ಒಟ್ಟಾರೆ ನಿಮ್ಮ ಅಭಿವೃದ್ಧಿ ಪ್ರಾಧಿಕಾರದ ಚಿಂತನೆ, ಪ್ರಾಧಿಕಾರದ ರಚನೆಯಿಂದ ನಾವೆಂದು ಅದನ್ನು ವಿರೋಧ ಮಾಡಿಲ್ಲ. ನಾವು ಮುಕ್ತಕಂಠದಿಂದ ಸ್ವಾಗತಿಸಿದ್ದೇವೆ. ಆದರೆ ಆ ಶಕ್ತಿ ಇನ್ನೂ ಬರಲಿ ಎಂದು ಕೆಲವು ತಿದ್ದುಪಡಿಗಳನ್ನು ನಾವು ತಂದಿದ್ದೇವೆ. ಅದನ್ನು ಓದಿ ತಾವು. ಎರಡೋ ಮೂರು ಬಿಟ್ಟರೆ ಮಿಕ್ಕವೆಲ್ಲಾ ಪದದಲ್ಲಿ ವ್ಯತ್ಯಾಸವಿದೆಯೇ ಹೊರತು ಒಂದೆರಡು ಮೂರು ಕಡೆ ಅಷ್ಟೇನೂ ಮುಜುಗರ ತರತಕ್ಕಂಥದ್ದು ಏನೂ ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ : ಇದಕ್ಕೂ ಒಂದು ಉದಾಹರಣೆ. "ರಾಜ್ಯದಲ್ಲಿ ಸೃಷ್ಟಿಯಾಗುವ ಉದ್ಯೋಗಾವಕಾಶಗಳಲ್ಲಿ ಕನ್ನಡಿಗರಿಗೆ ನ್ಯಾಯಯುತ ಪಾಲು ದೊರಕಿಸಿಕೊಳ್ಳುವ ಉದ್ದೇಶದಿಂದ ರಾಜ್ಯಸರ್ಕಾರ ಅಂಗೀಕರಿಸಿರುವ ಡಾ|| ಸರೋಜಿನಿ ಮಹಿಷಿ ವರದಿಯ ಶಿಫಾರಸ್ಸುಗಳನ್ನು ಹಾಗೂ ಮುಂದೆ ಇಂಥಹವೇ ಉದ್ದೇಶಗಳಿಗಾಗಿ ಸರ್ಕಾರ ರಚಿಸಬಹುದಾದ ಸಮಿತಿಗಳ ಮತ್ತು ಪ್ರಾಧಿಕಾರದ ಶಿಫಾರಸ್ಸುಗಳನ್ನು ರಾಜ್ಯ ಸರ್ಕಾರ ಅಂಗೀಕರಿಸುವ ಶಿಫಾರಸ್ಸುಗಳನ್ನು ಮತ್ತು ಸರ್ಕಾರವೇ ಕಾಲಕಾಲಕ್ಕೆ ನೇರವಾಗಿ ಆದೇಶಿಸುವ ಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರುವ ಬಗ್ಗೆ ರಾಜ್ಯಸರ್ಕಾರಕ್ಕೆ ಸಲಹೆ ಮಾಡುವುದು."

ನಾವು ಏನು ಹೇಳಿದ್ದೇವೆಂದರೆ, 'ರಾಜ್ಯ ಸರ್ಕಾರ ಅಂಗೀಕರಿಸಿದ ಡಾ|| ಸರೋಜಿನಿ ಮಹಿಷಿ ವರದಿಯ ಶಿಫಾರಸ್ಸುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಕ್ರಮಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡಬಹುದು'ಎಂದು, ಅದಕ್ಕೂ ಇದಕ್ಕೂ ಏನು ವ್ಯತ್ಯಾಸವಿದೆ? ಶಬ್ದಗಳು ಹೆಚ್ಚಾಗಿದ್ದು, ಅಲಂಕಾರಿಕವಾಗಿವೆಯಷ್ಟೆ. ಅದರಲ್ಲಿ precise & concise ಎಂಬುದನ್ನು ಈ ಶಬ್ದದಲ್ಲಿ ಉಪಯೋಗಿಸಿದ್ದೇವೆ. ಡಾ|| ಸರೋಜಿನಿ ಮಹಿಷಿ ಮಾಡಿರತಕ್ಕಂಥ ಸಲಹೆಗಳು, ಶಿಫಾರಸ್ಸುಗಳನ್ನು ಕನ್ನಡಿಗರಿಗೆ ನ್ಯಾಯಯುತವಾದ ಪಾಲನ್ನು ದೊರಕಿಸಿಕೊಡುವುದಕ್ಕೆ ಮಾಡಿದ್ದಾರೆ. ಅದನ್ನು ಪುನಃ ಹೇಳಬೇಕಾದಂಥ

ಅವಶ್ಯಕತೆಯಿಲ್ಲ. ಅವರ ಶಿಫಾರಸ್ಸುಗಳೂ ಸಹ ಅದೇ ಆಗಿದೆ. ಡಾ॥ ಸರೋಜಿನಿ ಮಹಿಷಿಯವರು ಮಾಡಿರತಕ್ಕಂಥ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವುದಾಗಿ ನಾವು ಹೇಳಿದ್ದೇವೆ. ಉಳಿದಂಥ ಪ್ರಾಧಿಕಾರದ ಶಿಫಾರಸ್ಸುಗಳನ್ನು ಮಾಡಬೇಕು ಎಂದು ಇದ್ದೇ ಇದೆ. ತಮ್ಮ ಮನೋಭೂಮಿಕೆ, ತಮ್ಮ ಅನಿಸಿಕೆಗಳು ಆಕಾಶದಷ್ಟಿದೆ, ಅದನ್ನು ನಾವೇನು ಮಾಡಿದ್ದೇವೆಂದರೆ, ನಿಮ್ಮ ಆಕಾಶದಲ್ಲಿರತಕ್ಕಂಥ ಆ ಅನಿಸಿಕೆಗಳನ್ನು ಭಟ್ಟಿ ಇಳಿಸಿ, ಇವೊತ್ತು ತಾವು ಏನು ಮಂತ್ರಗಳನ್ನು ಹೇಳಿದ್ದೀರಿ, ನಾವು ಆ ಮಂತ್ರಗಳನ್ನೆಲ್ಲಾ ಕ್ರೋಢೀಕರಿಸಿ ಆ ಮಂತ್ರದಂಡದಲ್ಲಿ ಹಾಕಿ ನಾವು ಇಟ್ಟಿದ್ದೇವೆ. ಯಾವಾಗಲಾದರೂ ಮಾಯಾಜಾಲದಿಂದ ಒಬ್ಬೊಬ್ಬರನ್ನೇ ಬಿಡಬಹುದು.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಭಾಗದಲ್ಲಿ 'ಮೋಡಿ' ಎಂಬುದು ನಡೆಯುತ್ತದೆ, ತಾವು ಕೇಳಿರಬಹುದು. ನಿಮ್ಮ ಕಡೆ ಏನಿದೆಯೋ ನನಗೆ ಗೊತ್ತಿಲ್ಲ. ಒಬ್ಬರಿಗೊಬ್ಬರು ನಾವು ಮೋಡಿಯಲ್ಲಿ ನಿರತರಾಗಿರುವುದು ಬೇಕಾಗಿಲ್ಲ. ನಮ್ಮ ಕಡೆ ಮಾಡುವ'ಮೋಡಿ' ಹೇಗಿರುತ್ತದೆಂದರೆ, ಇದರಲ್ಲಿ ಒಂದು ಕಡೆ ಕುರಿ ತಲೆ ಇಟ್ಟಿದ್ದು, ಅದನ್ನು ತೆಗೆದುಕೊಂಡು ಬರುವುದಕ್ಕಾಗಿ ಒಬ್ಬ ಇನ್ನೊಬ್ಬನನ್ನು ಕಳುಹಿಸುತ್ತಾನೆ, ಆತ ಅದನ್ನು ತರದಂತೆ ಈತ 'ಮೋಡಿ' ಮಾಡುತ್ತಾನೆ. ಈ ತರಹ ನಮ್ಮ ನಿಮ್ಮ ವಾದ ಆಗುವುದಕ್ಕಿಂತ ವಸ್ತುಸ್ಥಿತಿ ಗಮನಿಸಬೇಕು. ನಿಮಗೆ ನಾವು ಮೋಡಿ ಮಾಡಬೇಕೆಂಬ ಉದ್ದೇಶವೂ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಇದರ ಕುರಿತು ಸಂಪೂರ್ಣವಾಗಿ ಹೇಳುವುದಿದ್ದರೆ ಸದರಿ ಮಸೂದೆಗೆ ಪೂರಕವಾಗಿ ತಾವು ಏನು ತಮ್ಮ ಅನಿಸಿಕೆಗಳನ್ನು ತಿದ್ದುಪಡಿಯಲ್ಲಿ ಮಾಡಿದ್ದೀರಿ, ಅದನ್ನು ನಾವು ಸಂಪೂರ್ಣವಾಗಿ ಅಳವಡಿಸಿಕೊಂಡಿದ್ದೇವೆ, ಆ ಸ್ಫೂರ್ತಿಯಿಂದಲೇ ಕೆಲಸ ಮಾಡುತ್ತೇವೆಂಬ ಆಶ್ವಾಸನೆಯನ್ನು ಕೊಡುತ್ತೇವೆ. ಇನ್ನೊಂದು ವಿಚಾರವೇನೆಂದರೆ, ದೆಹಲಿಯಲ್ಲಿ 'ಕನ್ನಡ ಭವನ' ನಿರ್ಮಿಸುವ ಬಗ್ಗೆ ಹೇಳಿದ್ದೀರಿ. ಕನ್ನಡ ಭವನವನ್ನು ಸ್ಥಾಪಿಸುವುದಕ್ಕೆ ನನಗೂ ಕೂಡ ಆಸಕ್ತಿ ಇದೆ, ಆ ಕುರಿತು ಆಲೋಚನೆ ಇದೆ. ಅದಕ್ಕೆ ಸೂಕ್ತ ನಿವೇಶನ ಹುಡುಕಿ ಕನ್ನಡ ಭವನವನ್ನು ನಿರ್ಮಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಕನ್ನಡದ ಧ್ವಜ ದೆಹಲಿಯಲ್ಲಿ ಹಾರುವಂಥ ಕೆಲಸವನ್ನೂ ಮಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಮೇಜು ಕುಟ್ಟಿ ತಮ್ಮ ಹರ್ಷ ವ್ಯಕ್ತಪಡಿಸಿದರು).

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1994ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಅಧ್ಯಕ್ಷರು : ಈಗ ಸದಸ್ಯರುಗಳಾದ ಶ್ರೀ ಸಿ. ಭೈರೇಗೌಡ ಮತ್ತು ವಾಟಾಳ್ ನಾಗರಾಜ್‌ರವರು ತಿದ್ದುಪಡಿಯನ್ನು ಮಂಡಿಸುವುದು.

ಖಂಡ 2ಕ್ಕೆ ತಿದ್ದುಪಡಿ

ಶ್ರೀ ಸಿ. ಭೈರೇಗೌಡ (ವೇಮಗಲ್) : 1994ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿಧೇಯಕದ ಎರಡನೇ ಖಂಡದಲ್ಲಿರುವ 'ಸಿ' ಉಪಖಂಡದ ಬದಲಾಗಿ.....

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ತಂದಿರತಕ್ಕ ತಿದ್ದುಪಡಿಯ ಹಿಂದೆ ಅಡಕವಾಗಿರುವ ಕನ್ನಡದ ಅಭಿಮಾನ ಮತ್ತು ಸ್ಫೂರ್ತಿ ಬಗ್ಗೆ ನಮ್ಮ ಸಹಮತವಿದೆ.

ಆದುದರಿಂದ, ದಯಮಾಡಿ ತಮ್ಮ ತಿದ್ದುಪಡಿಯನ್ನು ಹಿಂತೆಗೆದುಕೊಂಡು ಐತಿಹಾಸಿಕವಾದ ಈ ಶಾಸನವನ್ನು ಸರ್ವಾನುಮತದಿಂದ ಅಂಗೀಕರಿಸುವ ಕೈಂಕರ್ಯವನ್ನು ತಾವು ಕೈಗೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಮುಖ್ಯಮಂತ್ರಿಗಳಿಗೆ ಕನ್ನಡದ ಬಗ್ಗೆ ಇರತಕ್ಕಂಥ ಕಳಕಳಿಯನ್ನು ನಾವು ಮೆಚ್ಚಿದ್ದೇವೆ. ಇವೊತ್ತು ಅವರು ಯಾವ ಪದಗಳನ್ನು ಉಪಯೋಗಿಸಿದ್ದಾರೆ, ಅದನ್ನು ಸರ್ವಥಾ ನಿಮ್ಮ ಸರ್ಕಾರ ಇರುವವರೆಗೂ ಜ್ಞಾಪಕದಲ್ಲಿ ಇಟ್ಟುಕೊಂಡಿರಬೇಕು ಎನ್ನುವ ಮನವಿಯನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮಾಡಿ ಇದೊಂದು ಐತಿಹಾಸಿಕ ಕಾನೂನು ಆಗುತ್ತಿರುವ ಕಾರಣದಿಂದ, ನಮ್ಮ ತಿದ್ದುಪಡಿಗಳನ್ನು ಸರ್ಕಾರ ಒಪ್ಪಿದ್ದರೆ ಚೆನ್ನಾಗಿರುತ್ತಿತ್ತು. ಆದರೆ, ಐತಿಹಾಸಿಕವಾದ ಸಂದರ್ಭದಲ್ಲಿ ನಾವು ಬೇರೆ ಅಥವಾ ನೀವು ಬೇರೆ ಎನ್ನುವ ಅರ್ಥ ಬರತಕ್ಕಂಥ ರೀತಿಯಲ್ಲಿ ನಮ್ಮ ವರ್ತನೆ ಇರುವುದು ಸರಿಯಲ್ಲ. ನಮ್ಮ ನಿಮ್ಮ ಉದ್ದೇಶಗಳೂ ಒಂದೇ ಆಗಿದೆಯಾಗಿರುವುದರಿಂದ ನಾನು ಈ ತಿದ್ದುಪಡಿಗಳನ್ನು ಮಂಡಿಸುವುದಿಲ್ಲವೆಂಬ ಮಾತನ್ನು ಆಡುವುದಕ್ಕೆ ಇಷ್ಟಪಡುತ್ತೇನೆ.

(Amendment by leave of the House withdrawn)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಸನ್ಮಾನ್ಯ ಅಧ್ಯಕ್ಷರೆ ನಾವು ಈ ತಿದ್ದುಪಡಿಯನ್ನು ಬಹಳ ಒಳ್ಳೆಯ ಸದುದ್ದೇಶದಿಂದ ತಂದಿದ್ದೇವೆ. ಅದರಲ್ಲಿ ಬೇರೆ ಮಾತಿಲ್ಲ, ಆದರೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಮಾತಿನ ಮೋಡಿಯಲ್ಲಿ ನಮ್ಮನ್ನು ಆಕರ್ಷಣೆ ಮಾಡಿ ನಾವು ಅವರ ವಿರುದ್ಧ ನಿಲ್ಲತಕ್ಕ ಶಕ್ತಿಯನ್ನೇ ಕಳೆದುಹಾಕಿದ್ದೀರಿ. ಈ ಮಸೂದೆಯು ಸರಿಯಿಲ್ಲವೇನೋ ಎನ್ನತಕ್ಕ ವಾದವನ್ನು ನಾವು ಮಾಡಬೇಕೆಂದು ಹೊರಟಿದ್ದೆವು. ಈ ವಾದವನ್ನು ನಾವು ಅನೇಕ ರೀತಿಯಲ್ಲಿ ಮಂಡಿಸಬೇಕೆಂದು ಇದ್ದೆವು. ಆಗ ಅವರು ಸಮ್ಮೋಹನಾಸ್ತ್ರದಲ್ಲಿ ನಮ್ಮನ್ನು ಸೆಳೆದು ಸಂಪೂರ್ಣವಾಗಿ ಇದನ್ನು ಮುಗಿಸಿದ್ದಾರೆ. ಆದರೆ ಅವರು ದೆಹಲಿಯಲ್ಲಿ ಕನ್ನಡ ಭವನವನ್ನು ಸ್ಥಾಪನೆ ಮಾಡುವ ಬಗ್ಗೆ ಭರವಸೆಯನ್ನು ಕೊಟ್ಟಿದ್ದಾರೆ. ಇದರಿಂದ ನಮಗೆ ಬಹಳ ಸಂತೋಷವಾಗಿದೆ. ಅವರ ಭರವಸೆಗೆ ಸಾವಿರ ಅಭಿನಂದನೆಗಳು, ನಾಲ್ಕು ಕೋಟಿ ಕನ್ನಡಿಗರ ಪರವಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಅವರು ಆ ಕೆಲಸವನ್ನು ಚುನಾವಣೆಯಾಗುವ ಮೊದಲು ಮಾಡಬೇಕು. ಆ ಕಟ್ಟಡದ ಶಂಕು ಸ್ಥಾಪನೆಯನ್ನು ಚುನಾವಣೆಯಾಗುವ ಮೊದಲು ಮಾಡಬೇಕು. ಮತ್ತು ಅಲ್ಲಿಗೆ ನಮ್ಮ ಅಧ್ಯಕ್ಷರು, ವಿರೋಧ ಪಕ್ಷದ ಮುಖಂಡರು ಮತ್ತು ಆ ಮನೆಯಲ್ಲಿನ ಸಭಾಪತಿಯವರು ಮತ್ತು ವಿರೋಧ ಪಕ್ಷದ ಮುಖಂಡರನ್ನು ನಮ್ಮೆಲ್ಲರನ್ನೂ ಕರೆದುಕೊಂಡು ಹೋಗಿ ಒಂದು ಇತಿಹಾಸವನ್ನು ನಿರ್ಮಾಣ ಮಾಡಬೇಕು. ಆದ್ದರಿಂದ ನಾನು ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ ಅವರು ಈ ಶಾಸನ ಸಭೆಯಲ್ಲಿ ಏನು ಕನ್ನಡ ಭವನವನ್ನು ದೆಹಲಿಯಲ್ಲಿ ಮಾಡುವ ಬಗ್ಗೆ ಭರವಸೆಯನ್ನು ಕೊಟ್ಟಿದ್ದಾರೆ. ಅದಕ್ಕೆ ರಾಜ್ಯದ ಇತಿಹಾಸದಲ್ಲಿ ಅವರ ಹೆಸರು ಹೋಗುತ್ತದೆ. ನೀವು ಏನೇ ಕಷ್ಟ ಬಂದರೂ ಸಹ ಅದನ್ನು ಕೂಡಲೇ ಮಾಡಬೇಕೆಂದು ಹೇಳುತ್ತೇನೆ. ಅವರು ಈ ಕೆಲಸವನ್ನು ಮಾಡಲಿ. ಈಗ ಇಲ್ಲಿರುವ ಮಹಾನುಭಾವರಂತೆ ಅವವ ಹೆಸರು ಇತಿಹಾಸದಲ್ಲಿ ಉಳಿಯುತ್ತದೆ. ಅವರ ಕನ್ನಡದ ಬಗ್ಗೆ ಪ್ರಾಮಾಣಿಕತೆಯನ್ನು ಒಪ್ಪಿಕೊಳ್ಳುತ್ತೇನೆ. ತಾವು ಪಕ್ಷಬೇದವನ್ನು ಮರೆತು ಎಲ್ಲರನ್ನೂ ಅಲ್ಲಿಗೆ ಕರೆದುಕೊಂಡು ಹೋಗಬೇಕು. ತಾವು ಕೂಡಲೇ ಇದರ ವ್ಯವಸ್ಥೆ ಮಾಡಬೇಕು. ನೀವು ಅಧಿಕಾರಿಗಳಿಗೆ ಹೇಳಿ ಅಲ್ಲಿ ಸ್ಥಳವನ್ನು ನೋಡುವ ವ್ಯವಸ್ಥೆ ಮಾಡಿ ಶಂಕುಸ್ಥಾಪನೆಯಾಗತಕ್ಕ ಕೆಲಸವಾಗಲಿ. ಅದಕ್ಕೆ ಎಷ್ಟೇ ಹಣವಾದರೂ ಚಿಂತೆ ಇಲ್ಲ. ಕನ್ನಡ ಭವನ ಮತ್ತು ಕನ್ನಡ ಇರುವವರೆಗೆ ವೀರಪ್ಪ ಮೊಯ್ಲಿಯವರ ಹೆಸರು ಉಳಿಯುತ್ತದೆ. ತಾವು ಆ ಕೆಲಸವನ್ನು

ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ಭರವಸೆಯ ಮೇಲೆ, ಅವರ ಮೇಲೆ ನಂಬಿಕೆಯನ್ನಿಟ್ಟು ನನ್ನ ತಿದ್ದುಪಡಿಯನ್ನು ವಾಪಸ್ ತೆಗೆದುಕೊಂಡಿದ್ದೇನೆ.

ಅಧ್ಯಕ್ಷರು : ಖಂಡ 2ಕ್ಕೆ ಸೂಚಿಸಿರುವ ತಿದ್ದುಪಡಿಗಳನ್ನು ವಾಪಸ್ಸು ಪಡೆಯಲು ಮಾನ್ಯ ಸದಸ್ಯರಾದ ಶ್ರೀ ಸಿ. ಬೈರೇಗೌಡ ಹಾಗೂ ಶ್ರೀ ವಾಟಾಳ್ ನಾಗರಾಜ್ ರವರಿಗೆ ಸಭೆಯು ಅನುಮತಿ ನೀಡುತ್ತದೆಯೇ?

ಮಾನ್ಯ ಸದಸ್ಯರು : ಹೌದು.

(ಸದನವು ತಿದ್ದುಪಡಿಗಳನ್ನು ವಾಪಸ್ಸು ಪಡೆಯಲು ಮಾನ್ಯ ಸದಸ್ಯರುಗಳಿಗೆ ಅನುಮತಿ ನೀಡಿತು)

ಖಂಡ ಖಂಡವಾಗಿ ವಿಧೇಯೇಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 27ರ ವರೆಗೆ

ಅಧ್ಯಕ್ಷರು : " ಖಂಡ 2 ರಿಂದ 27ರವರೆಗೆ, ಎರಡೂ, ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀರಿಸಲ್ಪಟ್ಟಿತು.

(ಖಂಡ 2 ರಿಂದ 27 ರವರೆಗೆ ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೆ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಆರ್.ಎನ್. ನಾಯಕ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಮಂತ್ರಿಗಳು) : "1994ನೇ ಸಾಲಿನ ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1994ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯ ವಿಧೇಯಕದ ಜಂಟಿ ಪರಿಶೀಲನಾ ಸಮಿತಿಗೆ ಕಾಲಾವಕಾಶ ನೀಡುವ ಬಗ್ಗೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, 1991ನೇ ಇಸವಿಯ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯೆ ವಿಧೇಯಕ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಒಪ್ಪಿಸಲು 1994ರ ಅಕ್ಟೋಬರ್ ಅಂತ್ಯದವರೆಗೆ ಕಾಲಾವಕಾಶವನ್ನು ಕೊಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ : "1991ನೇ ಇಸವಿಯ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯೆ ವಿಧೇಯಕ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಒಪ್ಪಿಸಲು 1994ರ ಅಕ್ಟೋಬರ್ ಅಂತ್ಯದವರೆಗೆ ಕಾಲಾವಕಾಶವನ್ನು ನೀಡುವುದು."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಮೇಲ್ಕಂಡ ಸಮಿತಿಗೆ ವರದಿ ಒಪ್ಪಿಸಲು ಅಕ್ಟೋಬರ್ ಅಂತ್ಯದವರೆಗೆ ಕಾಲಾವಕಾಶ ನೀಡಲಾಯಿತು).

ಪ್ರಕಟಣೆ

ವಿಷಯ : ಕಾರ್ಯಕಲಾಪಗಳ ಸಲಹಾ ಸಮಿತಿಯ ನಿರ್ಧಾರಗಳೂ

ವಿಧಾನಸಭಾ ಕಾರ್ಯಕಲಾಪಗಳ ಸಲಹಾ ಸಮಿತಿಯು ಇಂದು ದಿನಾಂಕ 01-09-94ರಂದು 5-00 ಗಂಟೆಗೆ ಸಭೆ ಸೇರಿ ಈ ಕೆಳಕಂಡ ಕಾರ್ಯಕಲಾಪಗಳನ್ನು ಕೈಗೊಳ್ಳಬೇಕಾಗಿ ತೀರ್ಮಾನಿಸಿತು.

ಶುಕ್ರವಾರ ದಿನಾಂಕ : 02-9-94 ರಂದು ಬೆಳಿಗ್ಗೆ 11-00 ಗಂಟೆಗೆ	:	ಪ್ರಶ್ನೋತ್ತರಗಳು, ಗಮನ ಸೆಳೆಯುವ ಬೇಡಿಕೆಯ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು, ವಿಧೇಯಕಗಳ ಮಂಡನೆ, ಚರ್ಚೆ ಹಾಗೂ ಮತಕ್ಕೆ ಹಾಕುವುದು.
ಶನಿವಾರ ದಿನಾಂಕ 03-9-94 ರಂದು ಬೆಳಿಗ್ಗೆ 11-00 ಗಂಟೆಗೆ	:	ಗಮನಸೆಳೆಯುವ ಸೂಚನೆಗಳು, ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು. ವಿಧೇಯಕಗಳ ಮಂಡನೆ, ಚರ್ಚೆ ಹಾಗೂ ಮತಕ್ಕೆ ಹಾಕುವುದು.
ಭಾನುವಾರ ದಿನಾಂಕ 04-9-94		ರಜಾ ದಿನ
ಸೋಮವಾರ ದಿನಾಂಕ : 05-9-94 ಬೆಳಿಗ್ಗೆ 11-00 ಗಂಟೆಗೆ	:	ಪ್ರಶ್ನೋತ್ತರಗಳು, ಗಮನ ಸೆಳೆಯುವ ಸೂಚನೆಗಳು, ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು. 19949-5ನೇ ಸಾಲಿನ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ ಹಾಗೂ ಮತಕ್ಕೆ ಹಾಕುವುದು. 1994-95ನೇ ಸಾಲಿನ ಅನುಪೂರಕ ಅಂದಾಜುಗಳ (ಮೊದಲನೇ ಕಂತು) ಚರ್ಚೆ ಹಾಗೂ ಮತಕ್ಕೆ ಹಾಕುವುದು. 1994-95ನೇ ಸಾಲಿನ ಅನುದಾನಗಳ ಬೇಡಿಕೆಗಳಿಗೆ ಸಂಬಂಧಿಸಿದಂತೆ ಧನ ವಿನಿಯೋಗ ವಿಧೇಯಕ ಮಂಡನೆ ಪರ್ಯಾಲೋಚನೆ ಹಾಗೂ ಅಂಗೀಕರಿಸುವುದು. 1994-95ನೇ ಸಾಲಿನ ಅನುಪೂರಕ ಅಂದಾಜುಗಳ (ಮೊದಲನೇ ಕಂತು) ಸಂಬಂಧಿಸಿದಂತೆ ವಿಧೇಯಕ ಮಂಡನೆ

	ಹಾಗೂ ಪರ್ಯಾಲೋಚನೆ ಮತ್ತು ಅಂಗೀಕರಿಸುವುದು.
ಮಂಗಳವಾರ ದಿನಾಂಕ : 06-9-94	ಶಾಸಕರ ದಿನಾಚರಣೆ
ಬುಧವಾರ ದಿನಾಂಕ : 07-09-94 ಬೆಳಿಗ್ಗೆ 09-30 ಗಂಟೆಗೆ	ಗಮನ ಸೆಳೆಯುವ ಸೂಚನೆಗಳು, ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಹಾಗೂ ಅಂಗೀಕರಿಸುವುದು. 1994-95ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಮಹತ್ವದ ಚರ್ಚೆಯನ್ನು ತೆಗೆದುಕೊಳ್ಳಬೇಕಾದ ಕಾರಣ ದಿನಾಂಕ : 02-09-94ರಂದು ಖಾಸಗಿ ಸದಸ್ಯರ ಕಾರ್ಯಕಲಾಪಗಳನ್ನು ಕೈಗೊಳ್ಳಬಾರದಾಗಿ ಸಭೆಯು ತೀರ್ಮಾನಿಸಿತು.

ಕಾರ್ಯಕಲಾಪಗಳ ಸಲಹಾ ಸಮಿತಿಯ ಶಿಫಾರಸ್ಸುಗಳನ್ನು ಈ ಸದನವು ಒಪ್ಪಿದೆ ಎಂದು ಭಾವಿಸುತ್ತೇನೆ.

(ಸಭೆ ಮತ್ತೆ ನಾಳೆ ಬೆಳಿಗ್ಗೆ 11-00ಗಂಟೆಗೆ ಸೇರುವುದು)

(ಸದನವು ಸಂಜೆ 7.35ಕ್ಕೆ ಕೊನೆಗೊಂಡು ಮತ್ತೆ ದಿನಾಂಕ 2-9-94ರಂದು ಬೆಳಿಗ್ಗೆ 11-00 ಗಂಟೆಗೆ ಸೇರಲು ತೀರ್ಮಾನಿಸಿತು)

L. A. Vol. : VI
No. of Copies 680

KARNATAKA LEGISLATURE SECRETARIAT

Published under Rule 312 of the Rules of Procedure and Conduct of Business in the Legislative Assembly

AND

Printed by the Senior Deputy Director Printing Stationery and Publications Government Suburban Press Bangalore-560059.

KSA LIBRARY, B'lore
B020634
328.32402 548 LAD,1994
JJ48